
2021ರ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಕೃತಿ

ಗಾಂಧಿ ಕಥನ

25ನೇ ಮುದ್ರಣ

ಡಿ.ಎಸ್.ನಾಗಭೂಷಣ





ಇದು ಗಾಂಧೀಜಿಯವರ ಜೀವನ
ಚರಿತ್ರೆಯಲ್ಲ ಅಥವಾ ಅವರನ್ನು
ಮಹಾತ್ಮರಾಗಿ ವೈಭವೀಕರಿಸಿ
ಪ್ರಸ್ತುತಪಡಿಸುವ ಪ್ರಯತ್ನವೂ ಅಲ್ಲ
ಬದಲಿಗೆ, ಅವರ ಬದುಕಿನ ಮುಖ್ಯ
ಸಂಗತಿಗಳನ್ನು ವಿವಿಧ ಆಕರಗಳಿಂದ ಹೆಕ್ಕಿ
ತೆಗೆದು, ಓದುಗರ ಮುಂದಿಟ್ಟು ಅವರೇ
ಅವರನ್ನು ಅರ್ಥಮಾಡಿಕೊಳ್ಳಲು
ಆಹ್ವಾನಿಸುವ ಒಂದು ಪ್ರಯತ್ನ.

ದೇಶ ಗಾಂಧೀಜಿಯವರ 150ನೇ
ಜನ್ಮದಿನೋತ್ಸವವನ್ನು ಆಚರಿಸುತ್ತಿರುವ
ಹೊತ್ತಿನಲ್ಲಿ ಹೊಸ ತಲೆಮಾರು ಕಾಲದ
ಪರದೆ ಸರಿಸಿ ಅವರತ್ತ ಮುಕ್ತ ಮನಸ್ಸಿನಿಂದ
ನೋಡಿ ಅವರು ಪ್ರತಿಪಾದಿಸಿದ
ಮೌಲ್ಯಗಳನ್ನು ಇವೊತ್ತಿನ ಜಗತ್ತಿನಲ್ಲಿ ಒರೆಗೆ
ಹಚ್ಚಲು ಅವರಿಗೆ ನೆರವಾಗುವ ಒಂದು
ನಮ್ರ ಪ್ರಯತ್ನ.

೨೦೨೧ನೆಯ ಸಾಲಿನ ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪಡೆದ ಕೃತಿ

ಗಾಂಧಿ ಕಥನ

(ಮಹಾತ್ಮ ಗಾಂಧಿಯವರ ಬದುಕಿನ
ಒಂದು ಸಮಗ್ರ ನಿರೂಪಣೆ)

ಡಿ. ಎಸ್. ನಾಗಭೂಷಣ

ಎಂ. ಮೂನಿಸ್ವಾಮಿ ಅಂಡ್ ಸನ್ಸ್
ಪುಸ್ತಕ ಪ್ರಕಾಶಕರು ಮತ್ತು ವಿತರಕರು
'ಸರ್ವೋದಯ', ನಂ ೭೨, ಪ್ರೊ. ಎ.ಆರ್. ಕೃಷ್ಣಶಾಸ್ತ್ರಿ ರಸ್ತೆ
ಬಸವನಗುಡಿ, ಬೆಂಗಳೂರು-೫೬೦೦೦೪

GANDHI KATHANA

Story of the life of Mahatma Gandhi in Kannada by
D.S. Nagabhushana
HIG-5, Nudi, Kallali, Vinobhanagar, Shimoga Cell: 9481351079

ಗಾಂಧಿ ಕಥನ

(ಮಹಾತ್ಮ ಗಾಂಧಿಯವರ ಬದುಕಿನ ಒಂದು ಸಮಗ್ರ ನಿರೂಪಣೆ)
ಡಿ. ಎಸ್. ನಾಗಭೂಷಣ

Published by
M/s Moonisamy and Sons
Publishers and Distributors, Bengaluru-04
Mob: +91 98450 12740

ಹಕ್ಕುಗಳು : ಶ್ರೀಮತಿ ಸವಿತಾ ನಾಗಭೂಷಣ

ಮೊದಲ ಮುದ್ರಣ : ೨೦೧೯ ಸೆಪ್ಟೆಂಬರ್

ಇಪ್ಪತ್ತೈದನೆಯ
ಪರಿಷ್ಕೃತ ಮುದ್ರಣ : ೨೦೨೨ ಡಿಸೆಂಬರ್

ಪುಟಗಳು : ೬೮೮+೩೨+೨೪

ಬಳಸಿರುವ ಕಾಗದ : ೭೦ ಜಿ.ಎಸ್.ಎಂ. ಮ್ಯಾಪ್ಲಿತೋ

Copy right : Smt Savitha Nagabhushana

First Impression : 2019 September

Twentyfifth
Revised Edition : 2022 December

Pages : 688+32+24

Paper used : 70 gsm Maplitho

ಬೆಲೆ : ರೂ. ೪೫೦/-

Price : Rs. 450/-

ಮುಖಪುಟ ವಿನ್ಯಾಸ : ಎಂ. ಎಸ್. ಮೂರ್ತಿ

ಒಳಪುಟಗಳ ವಿನ್ಯಾಸ : ರಾಜ ಸಿರಿಗೆರೆ

ಮುದ್ರಣ : ರಿಪ್ಲಿಕ ಆಫ್‌ಸೆಟ್ ಪ್ರಿಂಟರ್ಸ್
ನಂ. ೧೪, ೧ನೇ ಮುಖ್ಯ ರಸ್ತೆ
ಕೈಗಾರಿಕಾ ನಗರ, ರಾಜಾಜಿನಗರ
ಬೆಂಗಳೂರು – ೫೬೦ ೦೪೪
ದೂ: ೦೮೦–೨೩೩೫೭೯೬೩

Printed at : Replica Offset Printers
Bengaluru
Tel: 080-23357963

ಅರ್ಪಣೆ

ಹಲವು ಬಿರುಗಾಳಿಗಳಿಗೆ ಸಿಕ್ಕಿ
ಹೊಯ್ದಾಡಿಯೂ ಆರದ
ಜಗದ ಎಲ್ಲ ಗಾಂಧಿ ದೀಪಗಳಿಗೆ

ಲೇಖಕನ ಮಾತುಗಳು
(ಮೊದಲ ಮುದ್ರಣಕ್ಕೆ)

ಏಳು ನೂರು ಪುಟಗಳ ಪುಸ್ತಕವನ್ನು ಬರೆದ ನಂತರವೂ ಪುಸ್ತಕದ ಬಗ್ಗೆ 'ಲೇಖಕನ ಮಾತುಗಳು' ಎಂದು ಬರೆಯಲು ಏನಿದೆ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಆದರೂ ಈ ಔಪಚಾರಿಕತೆ ಈಡೇರಿಸಲು ಒಂದಿಷ್ಟು ತಡಕಾಡುತ್ತಾ ಈ ಮುಂದಿನ ಸಾಲುಗಳನ್ನು ಬರೆಯುತ್ತಿದ್ದೇನೆ. ಮುಖ್ಯವಾಗಿ ನಾನು ಈ ಪುಸ್ತಕವನ್ನು ಏಕೆ ಬರೆಯ ಹೊರಟೆ ಎಂದು ಯೋಚಿಸುತ್ತಲೇ ಈ ಬರಹವನ್ನು ಆರಂಭಿಸಿದರೆ ನಾನು ಈ ಪುಸ್ತಕದಲ್ಲಿ ಹೇಳಲಾಗದ ಒಂದಿಷ್ಟನ್ನು ಹೇಳಬಹುದೆಂದು ಕಾಣುತ್ತದೆ. ಅದು ಸಾಕಷ್ಟು ದೀರ್ಘ ಕಥನವೂ ಆದೀತು!

ಸುಮಾರು ಮೂರು ವರ್ಷಗಳ ಹಿಂದಿನ ಒಂದು ಕಡು ಬೇಸಿಗೆಯ ದಿನ ಹಿರಿಯ ರಂಗಕರ್ಮಿ ಪ್ರಸನ್ನ ಅವರ ಆಹ್ವಾನದ ಮೇರೆಗೆ ಈ ಪುಸ್ತಕದ ಪ್ರಕಾಶಕರಾದ ಎಂ. ಸಿ. ನರೇಂದ್ರ ಅವರ 'ರಾಗಿಕಣ'ದಲ್ಲಿ ಭೂದಿನದ ಆಚರಣೆಗಾಗಿ ನಾನು ಬೆಂಗಳೂರಿನಲ್ಲಿದ್ದೆ. ಅಂದು ನರೇಂದ್ರ ಅವರು ನನ್ನನ್ನು ಗಾಲಿ ಕುರ್ಚಿಯಲ್ಲಿ ಕೂರಿಸಿಕೊಂಡು ಆ 'ರಾಗಿಕಣ'ದ ನಿಸರ್ಗ ಸುಂದರ ಪರಿಸರದಲ್ಲಿ ತಾವು ಬಡ ಮಕ್ಕಳಿಗಾಗಿ ನಡೆಸುತ್ತಿರುವ ಶ್ರೀ ರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರದ ಶಾಲೆಯ ತುಂಬ ಸುತ್ತಾಡಿಸಿದರು. ಈ ಶಾಲೆಗಳ ಮಕ್ಕಳಿಗೆ ತಾವು ಗಾಂಧಿ ಪಾಠಗಳನ್ನು ಹೇಳುತ್ತಿರುವುದಾಗಿಯೂ, ಅದಕ್ಕೊಂದು ವ್ಯವಸ್ಥಿತವಾದ ಕೈಪಿಡಿಯ ಕೊರತೆಯನ್ನು ತಾವು ಎದುರಿಸುತ್ತಿರುವುದಾಗಿಯೂ ಅವರು ನನಗೆ ತಿಳಿಸಿದರು. ಈ ಶಾಲೆಯ ಸ್ವರೂಪದ ಬಗ್ಗೆ ನರೇಂದ್ರ ಅವರು ಕೊಟ್ಟ ಮಾಹಿತಿಯಿಂದ ಕುತೂಹಲಿತನಾಗಿದ್ದ ನಾನು, ಯಾವುದನ್ನೂ ಯೋಚಿಸದೆ ಆ ಕೈಪಿಡಿಯನ್ನು ಬರೆದುಕೊಡುವೆ ಎಂದುಬಿಟ್ಟೆ! ಆ ಹೊತ್ತಿಗೆ ಗಾಂಧಿಯ ಬಗ್ಗೆ ನನ್ನಲ್ಲಿ ಹೆಚ್ಚಿದ್ದ ಕುತೂಹಲ, ಅದರಿಂದಾಗಿ ನಡೆದಿದ್ದ ಸಾಕಷ್ಟು ವ್ಯಾಪಕವೆನಿಸಿದ್ದ ಓದು ಮತ್ತು ಅದರ ಪರಿಣಾಮವಾಗಿ ಬರೆದ ಮತ್ತು ಗೆಳೆಯರಿಗೆ ಗಮನಾರ್ಹವಾಗಿ ಕಂಡಿದ್ದ ಒಂದೆರಡು ಬರಹಗಳು ನರೇಂದ್ರ ಅವರಿಗೆ ನಾನು ಕೊಟ್ಟ ಆಶ್ವಾಸನೆಯ ಹಿಂದೆ ಕೆಲಸ ಮಾಡಿದ್ದ ಸಂಗತಿಗಳು ಎಂದು ಹೇಳಬಹುದು.

ನಾನು ಬೆಂಗಳೂರಿನಿಂದ ಶಿವಮೊಗ್ಗಕ್ಕೆ ವಾಪಸಾದ ಅನತಿ ಕಾಲದಲ್ಲೇ ನರೇಂದ್ರ

ಅವರ ಯೋಜನೆಯ ಕೆಲಸದಲ್ಲಿ ತೊಡಗಿಕೊಂಡೆ. ಬರೆಯಬೇಕಾದುದಕ್ಕೆ ಒಂದು ಚೌಕಟ್ಟು ಹಾಕಿಕೊಳ್ಳಲೆಂಬಂತೆ ಮೊದಲೇ ಅದಕ್ಕೊಂದು ಮುನ್ನುಡಿಯನ್ನೂ ಬರೆದುಕೊಂಡೆ! ಆದರೆ ಬರೆಯಬೇಕಾದುದನ್ನು ಬರೆಯ ಹೊರಟಾಗ ಅನುಮಾನಗಳು ಶುರುವಾದವು. ನಾನು ಬರೆಯುತ್ತಿರುವುದು ನಿಜವಾಗಿಯೂ ಮಕ್ಕಳ ಮನಸ್ಸನ್ನು ಸೆಳೆಯುವಂತಹುದೇ ಎಂಬ ಪ್ರಶ್ನೆ ನನ್ನನ್ನು ಅಡಿಗಡಿಗೂ ಕಾಡತೊಡಗಿತು. ಈ ದೇಶಕ್ಕೇ ಈಗ ಬೇಡವಾಗಿರುವ ಗಾಂಧಿಯನ್ನು, ಇವೊತ್ತಿನ ಮಕ್ಕಳಿಗೆ ತಲುಪಿಸುವುದು ನನಗೆ ಅಸಾಮಾನ್ಯ ಕೆಲಸವೆನಿಸಿತು. ನಿಜ, ಗಾಂಧಿ ಬದುಕಿನ ನೀತಿಯುತವಾದ ಮತ್ತು ಸ್ವಾರಸ್ಯಕರವಾದ ಕಥೆ-ಉಪ ಕಥೆ ಮತ್ತು ದೃಷ್ಟಾಂತ ಕಥೆಗಳಿವೆ. ಆದರೆ ಅವನ್ನು ಈಗಾಗಲೇ ಸಾಕಷ್ಟು ಜನ ವಿವಿಧ ರೂಪ ವಿನ್ಯಾಸಗಳಲ್ಲಿ ಬರೆದು ಪ್ರಕಟಿಸಿದ್ದಾರೆ. ಆದರೆ ಇಂದಿನ ಮಕ್ಕಳಿಗೆ, ಆ ಮಕ್ಕಳನ್ನು ಯಾವ ಆಶೋತ್ತರಗಳೊಂದಿಗೆ ಬೆಳೆಸಲಾಗುತ್ತಿದೆಯೋ ಅವುಗಳ ಸಂದರ್ಭದಲ್ಲಿ ಈ ಪ್ರಕಟಣೆಗಳಾವುವೂ ಕುತೂಹಲ ಹುಟ್ಟಿಸುತ್ತಿಲ್ಲವೆಂದು ನನಗೆ ಗೊತ್ತಿದ್ದುದರಿಂದ ಅಂತಹ ಕೆಲಸಕ್ಕೆ ಕೈ ಹಾಕಲು ನಾನು ಹಿಂಜರಿದೆ. ಹೀಗೇ ಸ್ವಲ್ಪ ಕಾಲ ಕಳೆದುಹೋಯಿತು. ನರೇಂದ್ರ ಅವರು ಏಕೋ ಮತ್ತೆ ನೆನಪಿಸಲಿಲ್ಲ.

ಆದರೆ ಗಾಂಧಿ ಕುರಿತ ನನ್ನ ಆಸಕ್ತಿ ಮುಂದುವರೆದಿತ್ತು. ನಂಬಿಕೆಯಿಂದ ಸಮಾಜವಾದಿಯಾದ ನಾನು ಈ ಹೊತ್ತಿಗೆ ಅದನ್ನೊಂದು ಸ್ಥಿರ ಸಿದ್ಧಾಂತವನ್ನಾಗಿ ಪರಿಗಣಿಸುವ ವಯಸ್ಸು ಮತ್ತು ಕಾಲ ದಾಟಿ, ಅದನ್ನು ಒಂದು ಉದಾತ್ತ ಜೀವನ ದೃಷ್ಟಿಕೋನವನ್ನಾಗಿ ಗ್ರಹಿಸುವ ಹಂತ ತಲುಪಿದ್ದೆನಾದ್ದರಿಂದ, ಸಮಾಜವಾದ ಕುರಿತ ನನ್ನ ಧ್ಯಾನ ಪದೇ ಪದೇ ಗಾಂಧಿಯತ್ತ ತಿರುಗುತ್ತಿರುವುದನ್ನು ನಾನು ಗಮನಿಸಿದ್ದೆ. ಗಾಂಧಿ, ಸಮಾಜವಾದಿಗಳಿಗೆ 'ನೀವೋ ಕಲಿತ ಸಮಾಜವಾದಿಗಳಾಗಿದ್ದರೆ ನಾನು ಹುಟ್ಟು ಸಮಾಜವಾದಿ!' ಎಂದು ಛೇಡಿಸುತ್ತಿದ್ದುದನ್ನು ನಾನು ಓದಿದ್ದೆ. ಆದರೆ ಆಗ ಅರ್ಥವಾಗದಿದ್ದುದು ಈಗ ಅರ್ಥವಾಗತೊಡಗಿತ್ತು. ಕಾರಣ, ಕಳೆದ ತೊಂಬತ್ತರ ದಶಕದಿಂದೀಚೆಗೆ ಆರಂಭವಾಗಿದ್ದ ಮುಕ್ತ ಮಾರುಕಟ್ಟೆಯ ಆರ್ಥಿಕತೆ ಜನರ ಆರ್ಥಿಕ ಜೀವನದಲ್ಲಿ ಒಂದಿಷ್ಟು ನೆಮ್ಮದಿಯನ್ನು ತಂದಿದ್ದರೂ ಅದು ಸಾಮಾಜಿಕವಾಗಿ ಉಂಟು ಮಾಡುತ್ತಿದ್ದ ಹಿಂಸಾತ್ಮಕ ಒತ್ತಡಗಳು ಮತ್ತು ಸೃಷ್ಟಿಸುತ್ತಿದ್ದ ಸಾಂಸ್ಕೃತಿಕ ಅಶ್ಲೀಲತೆಗಳು ನನಗೆ ಅಪಾಯದ ಕರೆ ಘಂಟೆಗಳಂತೆಯೇ ಕೇಳಿಸತೊಡಗಿದ್ದವು. ಈ ಹೊಸ ಬೆಳವಣಿಗೆಯನ್ನು ಅರಿಯಲು, ಮುಖಾಮುಖಿಗೊಳ್ಳಲು ನಾನು ಓದಿಕೊಂಡ, ನಂಬಿಕೊಂಡ ಸಮಾಜವಾದ ಸಾಲದೆನಿಸತೊಡಗಿತ್ತು. ಅದು ಬಹುವಾಗಿ ಚರಿತ್ರೆಯ ಪ್ರಗತಿಶೀಲತೆಯನ್ನು ನಂಬಿದಂತಿತ್ತು. ತಮ್ಮನ್ನು ಗಾಂಧಿ ಸಮಾಜವಾದಿ ಎಂದೇ ಕರೆದುಕೊಳ್ಳುತ್ತಿದ್ದ ರಾಮಮನೋಹರ ಲೋಹಿಯಾ ಅವರ ವಿಚಾರಗಳ ಅಭಿಮಾನಿಯಾಗಿ, ಅವರು ಚರಿತ್ರೆಯನ್ನು ಮನುಷ್ಯ ಚೇತನ ಮೀರಬಲ್ಲ ಸಾಧ್ಯತೆಗಳ ಬಗ್ಗೆ ಬೊಟ್ಟು ಮಾಡಿರುವುದನ್ನು ನಾನು ಗಮನಿಸಿದ್ದೆನಾದರೂ ಅವರ ಆ ದಿಕ್ಕಿನ ಚಿಂತನೆ ಕೇವಲ ಚಕ್ರಗತಿಯ ಚರಿತ್ರೆಯ ಮೀಮಾಂಸೆಯಲ್ಲಿ ಸಿಕ್ಕಿಕೊಂಡಿರುವುದನ್ನೂ ನಾನು ಗಮನಿಸದಿರಲಿಲ್ಲ.

ಹಾಗಾಗಿ ಲೋಹಿಯಾ ಅವರ ಒಂದು ಸೀಮಿತ ಅಪವಾದದ ಹೊರತಾಗಿ ನಾನು ಹೀಗೇ ನನ್ನ ಲೋಕಾಭಿರಾಮ ದೃಷ್ಟಿಯಲ್ಲಿ ಗಮನಿಸಿದ್ದ (ಖಂಡಿತ ಆಳವಾದ ಅಧ್ಯಯನದಿಂದಲ್ಲ) ಆಧುನಿಕ ರಾಜಕೀಯ ಚಿಂತಕರೆಲ್ಲರೂ ಚರಿತ್ರೆಯ ದಾಸಾನುದಾಸರಾಗಿ ಮನುಷ್ಯ ಓರ್ವ ವ್ಯಕ್ತಿಯಾಗಿ ಅವನು ಹೊಂದಿರುವ ಅಸ್ತಿತ್ವದ ಚರಿತ್ರೇತರ ಆಯಾಮದ ಬಗ್ಗೆ ಯೋಚಿಸಿದಂತೆಯೇ ನನಗೆ ಕಾಣಲಿಲ್ಲ. ಮನುಷ್ಯ ವಿಶ್ವಾತ್ಮಕ (ಕಾಸ್ಮೋಸ್) ಜೀವಿಯಾಗಿ ತನ್ನ ಪಾಡಿಗೆ ತಾನು ಇರುವ ಅವಕಾಶಗಳನ್ನೇ ಕಿರಿದು ಮಾಡುವ ಚರಿತ್ರಾತ್ಮಕ ಲೋಕದೃಷ್ಟಿಯೇ ಯುದ್ಧಗಳೂ ಸೇರಿದಂತೆ ಎಲ್ಲ ಹಿಂಸೆಗಳ ಮೂಲವಲ್ಲವೇ? ಎಂಬ ಪ್ರಶ್ನೆ ನನ್ನನ್ನು ಕಾಡತೊಡಗಿತ್ತು. ಆದರೆ ಅವನು ಒಂದು ಸಾಮಾಜಿಕ ರಚನೆಯ ಭಾಗವಾಗದೆ ತನ್ನ ಪಾಡಿಗೆ ತಾನು ಬದುಕುವ ಸ್ಥಿತಿ ಒಂದು ಆದರ್ಶದ ಸ್ಥಿತಿ ಮಾತ್ರ ಎಂದೂ ನನಗೆ ಅನ್ನಿಸತೊಡಗಿತ್ತು. ಆದರೆ ಹತ್ತು ವರ್ಷಗಳ ಹಿಂದೆ 'ಹಿಂದ್ ಸ್ವರಾಜ್'ನ ಶತಮಾನೋತ್ಸವ ಸಂದರ್ಭದಲ್ಲಿ ಅಕಸ್ಮಾತ್ ಅದನ್ನು ಓದಿದಾಗ ನನ್ನ ಕಣ್ಣ ಮುಂದೆ ಕೋರೈಸಿದ ಬೆಳಕು ಅಂತಿಂತಹುದಾಗಿರಲಿಲ್ಲ. ಅದು ಮನುಷ್ಯ ಮತ್ತು ಸಾಮಾಜಿಕ ರಚನೆಯ ಆತ್ಯಂತಿಕ (ಅಧಿಕಾರ) ರೂಪವಾದ ಪ್ರಭುತ್ವದ ನಡುವಣ ಸಂಬಂಧವನ್ನು ಸಮರಸಗೊಳಿಸಿದ್ದ ರೀತಿ ನನಗೆ ಅಭೂತಪೂರ್ವವಾಗಿ ಕಂಡಿತ್ತು. ರಾಜಕಾರಣ ಮತ್ತು ಧರ್ಮಗಳನ್ನು ಒಂದು ಬಿಂದುವಿನಲ್ಲಿ ಸೇರಿಸುವ ಅಸಾಧ್ಯ ಕೆಲಸ ಇಲ್ಲಿ ನಡೆದಿತ್ತು. ಇದು ನನ್ನನ್ನು ಗಾಂಧಿಯನ್ನು ಬೆಂಬಿಡದೆ ಹಿಂಬಾಲಿಸುವಂತೆ ಪ್ರೇರೇಪಿಸಿತು. ಅದು ಹೇಳುವ 'ಗ್ರಾಮ ಸ್ವರಾಜ್ಯ'ವೇ ಇಂದಿನ ಎಲ್ಲ ಸಮಸ್ಯೆಗಳಿಗೆ ಉತ್ತರ ಎಂಬ ಹುಂಬ ನಂಬಿಕೆಯಿಂದಲ್ಲ. ಬದಲಿಗೆ ಅದು ಹಿಂಸೆಯ ಮೂಲ ಅಥವಾ ಕೇಂದ್ರವನ್ನು ಗುರುತಿಸಿದ್ದ ಕಾರ್ಯ–ಕಾರಣ ಸಂಬಂಧದ ಮಹತ್ವದಿಂದಾಗಿ. ಮನುಷ್ಯ ತನ್ನ ಅಸ್ತಿತ್ವದ ಸಾವಯವ ಕೇಂದ್ರವನ್ನು ಬಿಟ್ಟು ದೂರ ಪಯಣ ಹೊರಟ ಸಂದರ್ಭವನ್ನು ಅವರು ಆಧುನಿಕತೆ, ಕೈಗಾರಿಕೀಕರಣ ಅಥವಾ ನಗರೀಕರಣ ಎಂದು ಗುರುತಿಸಿದ್ದರು. ಅವನ ಕೇಂದ್ರದಿಂದ ಅವನ ಪಯಣ ದೂರವಾದಷ್ಟೂ ಅವನು ತನಗೆ ತಾನೇ ಅಪರಿಚಿತನಾಗುತ್ತಾ, ಅನ್ಯನಾಗುತ್ತಾ ಹಿಂಸೆಯನ್ನು ಆಹ್ವಾನಿಸುತ್ತಾನೆ ಎಂಬ ಅವರ ಒಳನೋಟ ಅಪೂರ್ವವಾದದ್ದಾಗಿತ್ತು. 'ಗ್ರಾಮ ಸ್ವರಾಜ್ಯ' ಅಂದಿನ ಮಟ್ಟಿಗೆ ಅವರು ಇದಕ್ಕೆ ನೀಡಿದ ಒಂದು ಕಾರ್ಯಶೀಲ ಪರಿಹಾರವಾಗಿತ್ತಷ್ಟೆ. ತಮ್ಮ ಅಹಿಂಸೆಯ ಪ್ರಯೋಗಾತ್ಮಕತೆಯಲ್ಲಿ ಗಾಂಧಿ ಕಂಡುಕೊಂಡಿದ್ದ ಕನಿಷ್ಠ ಹಿಂಸೆ ಮತ್ತು ಗರಿಷ್ಠ ಸ್ವಾತಂತ್ರ್ಯ ಅಥವಾ ಆನಂದದ ಆವರಣ ಅದಾಗಿತ್ತು.

ಆದುದರಿಂದ ಆಧುನಿಕತೆ, ಕೈಗಾರಿಕೀಕರಣ ಮತ್ತು ನಗರೀಕರಣಗಳು ಒಂದು ಸ್ಫೋಟಕ ಸ್ಥಿತಿ ತಲುಪಿರುವ ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಗಾಂಧಿ ಚಿಂತನೆ ಮಾತ್ರ ಏನಾದರೂ ಪರಿಹಾರ ಒದಗಿಸಬಹುದು ಎಂದು ನನಗನ್ನಿಸಿದ್ದರೆ ಆಶ್ಚರ್ಯವೇನು? ಮನುಷ್ಯನನ್ನು ಮತ್ತೆ ತನ್ನ ಕೇಂದ್ರಕ್ಕೆ ವಾಪಸ್ ತರುವುದೊಂದೇ ಜಾಗತೀಕರಣದ ಹಿಂಸೆಗೆ ಉತ್ತರ ಮತ್ತು ಗಾಂಧೀಜಿಯನ್ನು ಮತ್ತೆ ಜನರ ಮಧ್ಯೆ ತರುವುದರ ಮೂಲಕ ಮಾತ್ರ ಇದನ್ನು ಮಾಡಬಹುದು ಎಂದು ನನಗನ್ನಿಸಿತು. ಅದನ್ನು ಮಾಡುವುದು, ಅವರ ಬಿಡಿ ಬಿಡಿ ನುಡಿಮುತ್ತುಗಳನ್ನು ಹೆಣೆದು ನೀಡುವ ಸಾಹಿತ್ಯದ

ಮೂಲಕ ಅಲ್ಲ. ಅದನ್ನೋದಿ ಜನ ಸುಸ್ತಾಗಿದ್ದಾರೆಂದು ನನಗೆ ಗೊತ್ತಿತ್ತು. ಗಾಂಧಿಯವರ ಹೊಸ ನಿರೂಪಣೆಯೊಂದರ ಅವಶ್ಯಕತೆ ಇತ್ತು. ಅದು ಗಾಂಧಿಯವರು ಪಶ್ಚಿಮದ ಆಧುನಿಕತೆಯ ಆಕ್ರಮಣಶೀಲತೆಯ ವಿವಿಧ ರೂಪಗಳನ್ನು ತಮ್ಮ ಬದುಕಿನ ಆರಂಭದ ಘಟ್ಟದಿಂದಲೇ ಗ್ರಹಿಸಿದ ನೆಲೆಗಳು, ಅವುಗಳ ಮೂಲ ಅರಿಯಲು, ಅವನ್ನು ಎದುರಿಸಲು ಅವರು ರೂಪಿಸಿಕೊಂಡ ಪರಿಕರಗಳೊಂದಿಗೆ ಅವರ ಇಡೀ ಬದುಕಿನ ಒಂದು ಚಿತ್ರ ಕೊಡುವ ಮೂಲಕ ಮಾತ್ರ ಸಾಧ್ಯವೇ ಹೊರತು ಸರಳ ಉಪದೇಶಗಳು, ಬೌದ್ಧಿಕ ವ್ಯಾಖ್ಯಾನಗಳು ಅಥವಾ ಹಸ್ತಕ್ಷೇಪಗಳ ಮೂಲಕ ಅಲ್ಲವೆಂಬ ತೀರ್ಮಾನಕ್ಕೆ ನಾನು ಬಂದೆ.

ಇದನ್ನು ನಾನು ಮಾಡಲು ಸಾಧ್ಯವಿದ್ದುದು ಕನ್ನಡದಲ್ಲಿ, ಕನ್ನಡದ ಜನರ ಮಧ್ಯೆ. ಅದು ನನ್ನ ಆವರಣದ ಮಿತಿ. ಆದರೆ ಗಾಂಧಿ ಕುರಿತ ಸಾಹಿತ್ಯಕ್ಕೇನೂ ಕನ್ನಡದಲ್ಲಿ ಕೊರತೆ ಇಲ್ಲ ಎಂಬುದೂ ನನಗೆ ಗೊತ್ತಿತ್ತು. ನಮ್ಮ ಹಿರಿಯರು, ವಿಶೇಷವಾಗಿ ಸಿದ್ಧವನಹಳ್ಳಿ ಕೃಷ್ಣಶರ್ಮರು, ಗೊರೂರು ರಾಮಸ್ವಾಮಿ ಅಯ್ಯಂಗಾರರು, ಎಸ್.ವಿ. ಕೃಷ್ಣಮೂರ್ತಿರಾಯರು, ನೀಲತ್ತಹಳ್ಳಿ ಕಸ್ತೂರಿಯವರು, ಕೆ.ಎಸ್ ನಾರಾಯಣ ಸ್ವಾಮಿಯವರು, ಪಿ. ವೆಂಕೋಬರಾಯರು, ಹೊ. ಶ್ರೀನಿವಾಸಯ್ಯನವರು ಮುಂತಾದವರು ಮಾಡಿರುವ ಅಪಾರ ಕೆಲಸ ನಮ್ಮ ಮುಂದಿದೆ. ಆದರೇಕೋ ಅದು ಅದರ ಸ್ವರೂಪದಿಂದಲೇ ಇಂದಿನ ತಲೆಮಾರುಗಳಲ್ಲಿ ಕುತೂಹಲ ಮತ್ತು ಸ್ಫೂರ್ತಿ ಹುಟ್ಟಿಸದಾಗಿದೆ ಎಂಬುದೂ ನನ್ನ ಗಮನಕ್ಕೆ ಬಂದಿತ್ತು. ಈ ಸಾಹಿತ್ಯ ಒಂದು ರೀತಿಯಲ್ಲಿ ಗಾಂಧಿ ಎಂಬ ಗೋವಿನ ಪಾಲನೆಯ ಉದ್ಯಮದಂತೆ ಹೊಸ ತಲೆಮಾರಿನವರಿಗೆ ಕಂಡಿದ್ದರೆ ಆಶ್ಚರ್ಯವಿಲ್ಲ. ಲೋಹಿಯಾ ಹೇಳುತ್ತಿದ್ದ ಮಠೀಯ/ಆಶ್ರಮವಾಸಿ ಮತ್ತು ಸರ್ಕಾರಿ ಗಾಂಧಿವಾದದ 'ಶುಚೀಕರಿಸಲ್ಪಟ್ಟ' ಉಣಿಸು ಇದಾಗಿತ್ತು. ರುಚಿಯಲ್ಲಿ ಸಪ್ಪೆ. ಗಾಂಧಿ ಕುರಿತ ಲೋಹಿಯಾ ಅವರ ಬರವಣಿಗೆ ಅವರ ಮಾತುಗಳಲ್ಲೇ ಹೇಳುವುದಾದರೆ 'ಜಾತಿಭ್ರಷ್ಟ' ನಿರೂಪಣೆಗಳಾಗಿ ಗಮನ ಸೆಳೆಯುವವಾದರೂ, ಅದು ಸೀಮಿತ ಉದ್ದೇಶಗಳ ಟಿಪ್ಪಣಿಗಳ ರೂಪದಲ್ಲಿರುವವು. ಗಾಂಧಿ ಇಡಿಯಾಗಿ ಅಲ್ಲಿ ಸಿಗುವುದಿಲ್ಲ. ಆದರೆ ಇಂಗ್ಲಿಷ್‌ನಲ್ಲಿ ಗಾಂಧಿ ಕುರಿತ ವಿವೇಚನೆ, ಸಂಶೋಧನೆ, ಚಿಂತನೆಗಳು ಇತ್ತೀಚೆಗೆ ಸಾಕಷ್ಟು ವಿಪುಲವಾಗಿ ನಡೆದಿವೆ. ಧರ್ಮಪಾಲ, ಭಿಕು ಪಾರೀಖ್, ಆಶೀಶ್ ನಂದಿ, ರಜನಿ ಭಕ್ಷಿ, ಸಂಜಯ್ ಪಲ್ಶೀಕರ್, ಅಕೀಲ್ ಬಿಲ್ಗ್ರಾಮಿಯವರಂತಹ ವಿದ್ವಾಂಸರಿಂದ ಹಿಡಿದು ರಾಮಚಂದ್ರ ಗುಹಾ, ರಾಜಮೋಹನ ಗಾಂಧಿ, ಸುಧೀಂದ್ರ ಕುಲಕರ್ಣಿ ಮುಂತಾದ ಸರಳ ಕಥಾ ನಿರೂಪಣೆ ಮತ್ತು ವಿಶ್ಲೇಷಣೆಯ ಶೈಲಿಯ ಬರಹಗಾರರು ಗಾಂಧಿಯ ಚಿತ್ರವನ್ನು ಪುನಾರಚಿಸಿಕೊಡುವ ಪ್ರಯತ್ನ ಮಾಡಿದ್ದಾರೆ. ಆದರೆ ಕನ್ನಡದಲ್ಲಿ ಇಂತಹ ಪ್ರಯತ್ನ ನಡೆದಿರುವುದು ನನಗೆ ತಿಳಿಯದು. ಕೆ.ವಿ. ಸುಬ್ಬಣ್ಣ, ಯು.ಆರ್. ಅನಂತಮೂರ್ತಿ, ಪಿ. ಲಂಕೇಶ್, ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರ ಬರಹಗಳಲ್ಲಿ ಗಾಂಧಿ ಕುರಿತ ಹೊಸ ಸೆಳಕುಗಳು ಕಾಣಸಿಗುತ್ತವೆ. ಆದರೆ ಅವು ಗಾಂಧಿಯನ್ನು ಇಂದಿನ ಜಾಗತೀಕರಣದ ಬಿಕ್ಕಟ್ಟಿಗೆ, ಹಿಂಸಾಚಾರಕ್ಕೆ ಎದುರಾಗಿ ನಿಲ್ಲಿಸುವಷ್ಟು ಪೂರ್ಣಪ್ರಮಾಣದವುಗಳಲ್ಲ. ಈ ದೃಷ್ಟಿಯಿಂದ ಪಿ. ವೆಂಕೋಬರಾಯರ 'ಗಾಂಧಿ ಚರಿತ ಮಾನಸ'ದ ಎರಡು ಸಂಪುಟಗಳು ಅವು ಗಾಂಧಿ

ಬದುಕಿನ ಬಗ್ಗೆ ನೀಡುವ ವಿವರಗಳ ಸಮೃದ್ಧಿಯಿಂದ ಮಹತ್ವಾಕಾಂಕ್ಷೆಯನ್ನು ಪ್ರಕಟಪಡಿಸುತ್ತವಾದರೂ, ಅವುಗಳ ಶೀರ್ಷಿಕೆಯೇ ಸೂಚಿಸುವಂತೆ ಅವು ಭಕ್ತಿರಸದಲ್ಲಿ ಮುಳುಗಿಹೋಗಿ ನಿರೂಪಣೆ ತನ್ನ ದೃಷ್ಟಿಕೇಂದ್ರವನ್ನು ಕಳೆದುಕೊಂಡ ಪರಿಣಾಮವಾಗಿ ಹರಿದು ಹಂಚಿಹೋಗಿರುವ ಗಾಂಧಿ ಚಿತ್ರ ದೈವತ್ವದ ಮಂಜಿನಲ್ಲಿ ಕರಗಿಹೋದಂತೆನಿಸುತ್ತದೆ.

ಈ ಎಲ್ಲ ಹಿನ್ನೆಲೆಯಲ್ಲಿ ನಾನು ನರೇಂದ್ರ ಅವರಿಗೆ ಕೊಟ್ಟ ಆಶ್ವಾಸನೆಯನ್ನು ಗಾಂಧಿ ಕುರಿತ ಒಂದು ಸಮಗ್ರ ಚಿತ್ರ ನೀಡುವ ಪುಸ್ತಕವೊಂದನ್ನು ಬರೆದು ಕೊಡುವ ರೂಪದಲ್ಲಿ ಈಡೇರಿಸುವ ತೀರ್ಮಾನ ಮಾಡಿದೆ. ಹೊಸ ತಲೆಮಾರಿನ ಜನರಿಗೆ ಗಾಂಧಿಯ ಸಮಗ್ರ ವ್ಯಕ್ತಿತ್ವದ ಚಿತ್ರವಿರಲಿ, ಸರಿಯಾದ ಚಿತ್ರವನ್ನಾಗಲೀ ನೀಡುವ ಯಾವ ಪ್ರಯತ್ನಗಳೂ ಕನ್ನಡದಲ್ಲಿ ನಡೆದಂತೆ ನನಗೆ ಕಂಡಿಲ್ಲ. ಬದಲಿಗೆ ಅವರನ್ನು ಭೋಳೆಯಾಗಿ ವೈಭವೀಕರಿಸುವ ಅಥವಾ ಕೆಲವು ಶಕ್ತಿಗಳು ತಮ್ಮ ಸಂಕುಚಿತ ಆಸಕ್ತಿಗಳಿಗಾಗಿ ವಿರೂಪಗೊಳಿಸಿ ಪ್ರಸ್ತುತಪಡಿಸುವ ಪ್ರಯತ್ನಗಳೇ ಕಾಣತೊಡಗಿವೆ. ಇವೆರೆಡರ ಹಿಂದೆ ಇರುವುದು ಭಾರತದ ಸ್ವಾತಂತ್ರ್ಯ ಹೋರಾಟದ ವಿಶಾಲ ಭಿತ್ತಿ. ಆದರೆ ಗಾಂಧಿಯನ್ನು ಸ್ವಾತಂತ್ರ್ಯ ಹೋರಾಟದ ಭಿತ್ತಿಯಲ್ಲಿ ಮಾತ್ರ ಕಾಣತೊಡಗುವುದು ಅವರ ವ್ಯಕ್ತಿತ್ವಕ್ಕೆ, ಅದರ ಸಮಗ್ರತೆಗೆ ಮಾಡುವ ಅಪಚಾರವೇ ಆಗುತ್ತದೆ. ಗಾಂಧಿ ಕುರಿತ ನಮ್ಮ ಅರೆಕುರುಡು ಅಲ್ಲಿಂದಲೇ ಆರಂಭವಾಗುತ್ತದೆ ಎನ್ನಬಹುದು. ಅವರ ವ್ಯಕ್ತಿತ್ವದ ನಿಜ ಪರೀಕ್ಷೆ ಸ್ವಾತಂತ್ರ್ಯ ಹೋರಾಟದ ಸಮಯದಲ್ಲೇ ಆಯಿತು ಎಂಬುದು ನಿಜವಾದರೂ ಆ ಪರೀಕ್ಷೆಯ ಪರಿಣಾಮಗಳ ವಸ್ತುನಿಷ್ಠ ವಿಶ್ಲೇಷಣೆ ಮತ್ತು ಆ ಮೂಲಕ ಇಂದಿಗೆ ನಮಗೆ ಬೇಕಾದ ಗಾಂಧಿಯನ್ನು ನಾವು ಸಂಸ್ಕರಿಸಿಕೊಳ್ಳಲು ಸಾಧ್ಯವಾಗುವುದು ಅವರ ವ್ಯಕ್ತಿತ್ವದ ಮೊದಲರ್ಧ ಭಾಗ ರೂಪುಗೊಂಡ ಇಂಗ್ಲೆಂಡ್ ಮತ್ತು ದ.ಆಫ್ರಿಕಾದಲ್ಲಿನ ಅವರ ಬದುಕು ಮತ್ತು ಪ್ರಯೋಗಗಳನ್ನು ಅರಿತಾಗ ಮಾತ್ರ. ಆದರೆ ನಮ್ಮ ಪ್ರಧಾನ ಲಹರಿಯ ಬಹಳಷ್ಟು ಗಾಂಧಿ ಓದು ಮತ್ತು ಅಧ್ಯಯನಗಳು ಗಾಂಧಿಯ ಬದುಕಿನ ಈ ಭಾಗವನ್ನು ಬಿಟ್ಟೇ ನಡೆದಂತಿವೆ. ಕನ್ನಡದ ಮಟ್ಟಿಗಾದರೂ ಇದನ್ನು ಸರಿಪಡಿಸುವ ಪ್ರಯತ್ನವಾಗಿಯೂ ಈ ಪುಸ್ತಕದ ರಚನೆ ಅಗತ್ಯವೆಂದು ನನಗನ್ನಿಸಿತು. ಆಧುನಿಕತೆಯ ಆಕ್ರಮಣ ಮತ್ತು ಅದರ ಪರಿಣಾಮ ಮಾತ್ರವಾದ ವಸಾಹತುಶಾಹಿಯ ವಿರುದ್ಧದ ಹೋರಾಟ, ಗಾಂಧಿ ಈ ಭೂಮಿ ಮತ್ತು ಅದರ ಮೇಲಿನ ಮನುಷ್ಯ ವಾಸದ ವಿವಿಧ ಪರಿಯ ಪರಿಣಾಮಗಳನ್ನು ಅರಿಯಲು ನಡೆಸಿದ ಒಂದು ಮಹಾಪ್ರಯೋಗಕ್ಕೆ ಪರಿಪ್ರೇಕ್ಷ್ಯವನ್ನು ಒದಗಿಸಿದ್ದುವಷ್ಟೆ. ಇದನ್ನು ಅರಿಯದ ಹೊರತು ಗಾಂಧಿಯನ್ನು ಅರಿಯಲು ಸಾಧ್ಯವಿಲ್ಲ ಎಂಬುದೂ ನನ್ನ ಅಭಿಪ್ರಾಯವಾಗಿತ್ತು.

ನಾನು ಗಾಂಧಿ ಕಾಲದಲ್ಲಿ ಬದುಕಿದವನಲ್ಲ. ಅವರ ಹತ್ಯೆಯಾದ ನಾಲ್ಕು ವರ್ಷಗಳ ನಂತರ ಹುಟ್ಟಿದವನು ನಾನು. ಹಾಗಾಗಿ ಅವರ ಬಗ್ಗೆ ಈ ಪುಸ್ತಕ ಬರೆಯಲು ಅನ್ಯರ ದಾಖಲೆಗಳು ಮತ್ತು ನಿರೂಪಣೆಗಳನ್ನು ಅವಲಂಬಿಸುವುದು ಅನಿವಾರ್ಯ. ಹಾಗಾಗಿ ಈ ಪುಸ್ತಕದಲ್ಲಿರುವ ಯಾವ ಮಾಹಿತಿಯೂ ನನ್ನದಲ್ಲ. ಅವು ವಿವಿಧ ಗ್ರಂಥಗಳಿಂದ ಹೆಕ್ಕಿ ತೆಗೆದ ಮಾಹಿತಿ. ಆದರೆ ಏನನ್ನು ಹೆಕ್ಕಿ ತೆಗೆದೆ ಮತ್ತು ಏಕೆ ಹಾಗೂ ಹೇಗೆ ಎಂಬುದು ಈ

ಪುಸ್ತಕದ ರೂಪ ಮತ್ತು ಶೈಲಿಯಲ್ಲಿ ಹಾಸುಹೊಕ್ಕಾಗಿ ಹೋಗಿದ್ದು, ಆ ಅಂತರಗಂಗೆಯ ನಿರ್ವಹಣೆ ಮಾತ್ರ ನನ್ನದು ಎಂದು ಹೇಳಬಲ್ಲೆ. ನಾನು ಈ ಸಂಬಂಧ ತಡಕಾಡಿದ ಪುಸ್ತಕಗಳ ಒಂದು ಪಟ್ಟಿಯನ್ನು ಪುಸ್ತಕದ ಕೊನೆಯಲ್ಲಿ 'ಗ್ರಂಥ ಋಣ' ಶೀರ್ಷಿಕೆಯಡಿ ನೀಡಿದ್ದೇನೆ. ನಾನು ಮುಖ್ಯವಾಗಿ ಅವಲಂಬಿಸಿದ್ದು ಮೊದಲಾಗಿ ಗಾಂಧಿಯವರ ಮೂಲ ಕೃತಿಗಳನ್ನೇ. ಆದರೆ ಅವು ಸಾಲದಾದಾಗ ಮುಖ್ಯವಾಗಿ ಮೊರೆ ಹೊಕ್ಕದ್ದು ರಾಮಚಂದ್ರ ಗುಹಾ ಅವರ 'ಗಾಂಧಿ ಬಿಫೋರ್ ಇಂಡಿಯಾ' ಮತ್ತು 'ಗಾಂಧಿ', ರಾಜಮೋಹನ ಗಾಂಧಿಯವರ 'ಮೋಹನ ದಾಸ' ಮತ್ತು ಲೂಯಿ ಫಿಶರ್‌ನ 'ದ ಲೈಫ್ ಆಫ್ ಮಹಾತ್ಮ ಗಾಂಧಿ' ಇವುಗಳನ್ನು. ಇವುಗಳಲ್ಲಿ ಲೂಯಿ ಫಿಶರ್ ಮತ್ತು ಗುಹಾ ಅವರ ಪುಸ್ತಕಗಳು ಮೂಲತಃ ಪಶ್ಚಿಮದ ಓದುಗರನ್ನು ಉದ್ದೇಶಿಸಿದವು. ಫಿಶರ್ ಬಹು ಭಾವಾವೇಶದಿಂದ ಆ ಕಾಲದ ಚರಿತ್ರೆಯನ್ನು ಕಾವ್ಯದ ಲಯದಲ್ಲಿ ಚಿತ್ರಿಸುತ್ತಾ ಗಾಂಧಿಯವರನ್ನು ತನ್ನ ಕಾವ್ಯ ನಾಯಕನ್ನಾಗಿ ಮಾಡಿಕೊಂಡಂತಿದೆ. ಭಾರತವನ್ನು ಕುರಿತ ಅವನ ಕುತೂಹಲ, ಅದರ ಭಾಗವಾಗಿ ಅವನು ನೀಡುವ ತನ್ನ ಚಲನವಲನ ಮತ್ತು ಮಾತುಕತೆಗಳ ವಿವರಗಳು ಕುತೂಹಲ ಹುಟ್ಟಿಸುವಂತಿವೆ. ಆದರೆ ನನ್ನ ಯೋಜನೆಯ ಪುಸ್ತಕಕ್ಕೆ ಇವು ವಿಪರೀತವಾಗಿ ಕಂಡವು.

ಇನ್ನು ಗುಹಾ ಅವರ ಪುಸ್ತಕಗಳು, ವಿಶೇಷವಾಗಿ 'ಗಾಂಧಿ ಬಿಫೋರ್ ಇಂಡಿಯಾ' ವ್ಯಾಪಕ ಸಂಶೋಧನೆಯನ್ನು ಆಧರಿಸಿದ ಕೃತಿಗಳು. ಗಾಂಧಿ ಬದುಕನ್ನು ಕುರಿತ ಮಾಹಿತಿಯ ಮತ್ತು ಅದನ್ನು ಕುರಿತ ವಿವಿಧ ಜನರ ನೋಟಗಳ ಮಹಾಪೂರವೇ ಅಲ್ಲಿದೆ. ಆದರೆ ಇದರ ಮಧ್ಯೆ ಸಿಕ್ಕಿಕೊಂಡ ಗಾಂಧಿ ಚಿತ್ರ ಕೊಂಚ ವಿಚಲತೆಗೆ ಈಡಾಗಿದೆ ಎನಿಸದಿರದು. ಮಾಹಿತಿಯ ಆಯ್ಕೆಯಲ್ಲೂ ಅವರ ಮಿತಿಗಳು ಕಂಡುಬರುತ್ತವೆ. ಉದಾಹರಣೆಗೆ, ಅದರ ಹುಟ್ಟಿನಿಂದಲೇ ಸಮಾಜವಾದಿಗಳ ಚಳುವಳಿ ಎನಿಸಿದ 'ಭಾರತ ಬಿಟ್ಟು ತೊಲಗಿ' ಚಳುವಳಿಯ ನಿರೂಪಣೆಯನ್ನು ಹೇಗೆ ಹೊಡೆದುಕೊಂಡು ಹೋಗಿದ್ದಾರೆಂದರೆ ಅಲ್ಲಿ ಒಬ್ಬ ಸಮಾಜವಾದಿಯ ಹೆಸರೂ ಪ್ರಸ್ತಾಪಕ್ಕೆ ಬರುವುದಿಲ್ಲ. ಈ ಕಾರಣದಿಂದಲೇ ಮುಂದೆ ಕಾಂಗ್ರೆಸ್‌ನೊಳಗೆ ಉಂಟಾಗತೊಡಗುವ ತಳಮಳದ ತಾತ್ವಿಕ ಚರ್ಚೆಯೂ ಇಲ್ಲಿ ಕಾಣದಾಗಿದೆ. ಇದಕ್ಕೆ ಹೋಲಿಸಿದರೆ ರಾಜ್‌ಮೋಹನ್ ಗಾಂಧಿಯವರ ಕೃತಿ ಹೆಚ್ಚು ಸಮಗ್ರವೂ ಸರ್ವಾವೃತವೂ ಆಗಿದೆ. ಆದರೆ ಇದರ ಒಂದು ಸಮಸ್ಯೆ ಎಂದರೆ ಇದು ಗಾಂಧಿ ಉಲ್ಲೇಖಗಳಿಂದ ತುಂಬಿ ಹೋಗಿ ನಮ್ಮ ಮನಸ್ಸಿನಲ್ಲಿ ಗಾಂಧಿ ಚಿತ್ರದ ಸೃಜನಶೀಲ ವಿಸ್ತರಣೆಗೆ ಅಡ್ಡಿಯಾಗಿರುವುದು. ನನ್ನ ಪುಸ್ತಕದ ರಚನೆಯಲ್ಲಿ ಇವು ಕೊಟ್ಟ ತೊಂದರೆಗಳನ್ನು ಕುರಿತ ಮಾತುಗಳಾಗಿ ಮಾತ್ರ ನಾನು ಇವನ್ನು ಇಲ್ಲಿ ಹೇಳುತ್ತಿರುವೆನೇ ಹೊರತು ಅವುಗಳ ವಿಮರ್ಶೆಯ ಮಾತುಗಳಾಗಿ ಅಲ್ಲ. ನಾನು ಈ ಕೃತಿಗಳ ಮುಂದೆ ತುಂಬ ಚಿಕ್ಕವನು ಎಂಬ ಅರಿವು ನನಗಿದೆ.

ಗಾಂಧಿ ಕಾಲವು ಚರಿತ್ರೆಯ ಇತ್ತೀಚಿನ ಅಧ್ಯಾಯವಾದರೂ, ಅದರ ವಿವರಗಳ ಬಗ್ಗೆ ವಿವಿಧ ಪುಸ್ತಕಗಳಲ್ಲಿನ ವ್ಯತ್ಯಾಸಗಳು ಆಶ್ಚರ್ಯಪಡುವಂತಿವೆ. ಉದಾಹರಣೆಗೆ ಸಬರ್ಮತಿ ಆಶ್ರಮದಲ್ಲಿದ್ದಾಗ ಗಾಂಧಿಯವರ ಹೆಗಲ ಮೇಲೆ ಕರಿ ನಾಗರ ಹಾವೊಂದು ಕಂಡುಬಂದು ಅದನ್ನು ಅದು ಕೂತಿದ್ದ ಅವರ ಮೇಲುಹೊದಿಕೆಯ ಸಮೇತ

ಹುಷಾರಾಗಿ ಹಿಡಿದು ಹೊರಬಿಡಲಾಯಿತು ಎಂದು ಒಂದು ಪುಸ್ತಕ ಹೇಳಿದರೆ, ಇನ್ನೊಂದು ಪುಸ್ತಕದಲ್ಲಿ ಆ ಕರಿ ನಾಗರ ಗಾಂಧಿಯವರ ಕಂಠಾಭರಣದಂತೆ ಕುತ್ತಿಗೆಗೆ ಸುತ್ತಿಕೊಂಡಿತ್ತು ಮತ್ತು ಅದು ವಿಷದ ಹಾವು ಕಡಿತದ ಬಗ್ಗೆ ಆಶ್ರಮದಲ್ಲಿ ಪರಿಣತರಿಂದ ಪಾಠ ನಡೆಯುತ್ತಿದ್ದ ಸಂದರ್ಭವಾಗಿದ್ದು, ಗಾಂಧಿ ಆಗ ತಾವೇ ಹಾವಿನಿಂದ ಕಡಿಸಿಕೊಂಡು ಚಿಕಿತ್ಸೆಯ ಪ್ರಯೋಗಕ್ಕೆ ಒಳಗಾಗುವುದಾಗಿ ಹೇಳಿದರೆಂದೂ ನಿರೂಪಿತವಾಗಿದೆ. ಇವೆಲ್ಲ ಮೇಲ್ನೋಟಕ್ಕೆ 'ಗಾಂಧಿ ಮಹಾತ್ಮೆ'ಯನ್ನು ಪ್ರಸ್ತುತಪಡಿಸುವ ಪ್ರಯತ್ನಗಳೆಂದು ಕಾಣುತ್ತಿದ್ದು, ಅಂತಹ ನಿರೂಪಣೆಗಳನ್ನು ನಾನು ಕೈಬಿಟ್ಟಿದ್ದೇನೆ.

ಇಂತಹ ಸಂದರ್ಭಗಳ ಹೊರತಾಗಿ, ಮಾಹಿತಿ ಗೊಂದಲ ಉಂಟಾದಾಗಲೆಲ್ಲ ನಾನು ಮೊರೆ ಹೋಗುತ್ತಿದ್ದುದು ತೆಂಡೂಲ್ಕರ್ ಮತ್ತು ನಾರಾಯಣ ದೇಸಾಯಿಯವರ ಸಂಪುಟಗಳಿಗೆ. ಆ ಇಬ್ಬರೂ ಗಾಂಧಿ ಕಾಲಕ್ಕೆ ಸಾಕ್ಷಿಯಾಗಿದ್ದವರು. ಆದರೆ ತೆಂಡೂಲ್ಕರ್ ಸಂಪುಟಗಳು ಹೆಚ್ಚಾಗಿ ಪತ್ರಿಕಾ ವರದಿಗಳನ್ನು ಅವಲಂಬಿಸಿ ಅಥವಾ ಆ ಶೈಲಿಯಲ್ಲಿ ಬರೆಯಲ್ಪಟ್ಟಿದ್ದು ಬರವಣಿಗೆಯ ಯಾವ ರುಚಿಯೂ ಇಲ್ಲದೆ ಸುಮ್ಮನೆ ಓಡುತ್ತಾ ನಮ್ಮನ್ನು ಬೆಪ್ಪುಗೊಳಿಸಿ ನಿಲ್ಲಿಸಿದರೆ, ನಾರಾಯಣ ದೇಸಾಯಿಯವರು ಗಾಂಧಿಯವರ ಆಪ್ತ ಕಾರ್ಯದರ್ಶಿಯಾಗಿದ್ದ ಮಹದೇವ ದೇಸಾಯಿಯವರ ಪುತ್ರನಾಗಿ ಬಾಲ್ಯದಿಂದಲೂ ಅವರ ಒಡನಾಟದಲ್ಲಿ 'ಗಾಂಧಿ ಭಕ್ತ'ನಾಗಿ ಬೆಳೆದುದರಿಂದಾಗಿ ಇವರ ನೆನಪಿನ ಸಂಪುಟಗಳು ಪುರಾಣ ಶೈಲಿಯ ಬರವಣಿಗೆಯಿಂದ ಒಂದಿಷ್ಟು ಮನೋಲ್ಲಾಸವನ್ನು ನೀಡುತ್ತವೆ. ಆದರೆ ಈ ಸಂಪುಟಗಳಲ್ಲಿ ಸಿಗುವಷ್ಟು ಗಾಂಧಿ ಬದುಕಿನ ಸಮೃದ್ಧ ವಿವರಗಳು ಇನ್ನಾವ ಆಕರಗಳಿಂದಲೂ ಸಿಗಲಾರವು. ಏಕೆಂದರೆ, ಗಾಂಧಿ ಸಮಗ್ರ ಸಾಹಿತ್ಯ ಸಂಪುಟಗಳೂ 'ಪರಿಷ್ಕರಣೆ'ಗೆ ಒಳಗಾಗಿವೆ ಎಂದು ಕೇಳಿದ್ದೇನೆ.

ಮಿಕ್ಕಂತೆ ಇತರ ಪುಸ್ತಕಗಳು ನನ್ನ ಬರಹದ ಶೈಲಿ, ದಿಕ್ಕು, ಆದ್ಯತೆ ಮತ್ತು ಒತ್ತುಗಳಿಗಷ್ಟೇ ಕಾರಣವಾದವುಗಳು. ಆದರೂ ಎರಡು ಪುಸ್ತಕಗಳ ಬಗ್ಗೆ ಇಲ್ಲಿ ನಿರ್ದಿಷ್ಟವಾಗಿ ಪ್ರಸ್ತಾಪಿಸಬೇಕು. ಒಂದು, ಗಾಂಧಿಯವರ ಕೊನೆಯ ಇನ್ನೂರು ದಿನಗಳ ಕಲಾಪಗಳ ವರದಿಗಳನ್ನು ಅನುಕ್ರಮಣಿಕೆಯಲ್ಲಿ ನೀಡುವ 'ದ ಹಿಂದೂ' ಪತ್ರಿಕೆಯ ಪ್ರಕಟಣೆ. ಇನ್ನೊಂದು ಕೆ.ವಿ. ಶಂಕರಗೌಡರು ಮೈಸೂರು ವಿಶ್ವವಿದ್ಯಾಲಯದ ಗಾಂಧಿ ಭವನಕ್ಕಾಗಿ ಅನುವಾದಿಸಿರುವ ಪ್ಯಾರೇಲಾಲರ ದಿನಚರಿ ಸಂಪುಟಗಳು. ಇವೆರಡೂ ಕೃತಿಗಳು ಗಾಂಧಿಯವರ ಕೊನೆಯ ದಿನಗಳ ಘಟನೆಗಳನ್ನು ನಿರೂಪಿಸುವಲ್ಲಿ ಅಗತ್ಯವಾದ ಕೆಲವು ವಿವರಗಳನ್ನು ಒದಗಿಸಿ ನನಗೆ ಸಹಾಯ ಮಾಡಿವೆ. ಇನ್ನು ಲೋಹಿಯಾ ಅವರ ಪುಸ್ತಕಗಳು ಈ ಇಡೀ ಪುಸ್ತಕದ ನಿರೂಪಣೆಯ ಒಂದು ವಕ್ರ ಸೊಗಸಿಗೆ ಕಾರಣವಾಗಿರುವುದನ್ನು ಓದುಗರು ಅಲ್ಲಲ್ಲಿ ಗಮನಿಸಬಹುದು.

ಒಟ್ಟಿನಲ್ಲಿ ಈ ಪುಸ್ತಕ ಗಾಂಧಿಯವರನ್ನು ಆದಷ್ಟೂ ಸರಳವಾಗಿ, ನೇರವಾಗಿ, ಆದರೆ ಅವರ ವ್ಯಕ್ತಿತ್ವವನ್ನು ರೂಪಿಸಿದ ಯಾವುದೇ ನಿರ್ಣಾಯಕ ಘಟನೆಯೂ ಬಿಟ್ಟುಹೋಗದಂತೆ ಆದಷ್ಟೂ ಎಚ್ಚರವಹಿಸಿ ಬರೆದ ಒಂದು ಪ್ರಯತ್ನದ ಫಲವಾಗಿದೆ. ಇದು ಕಳೆದ ಶತಮಾನದ ಮೊದಲರ್ಧ ಭಾಗದ ರಾಜಕೀಯ ಇತಿಹಾಸ ಅಥವಾ ರಾಷ್ಟ್ರೀಯ ಹೋರಾಟದ ಇತಿಹಾಸವೂ ಆಗಿರುವುದು ಕೇವಲ ಆನುಷಂಗಿಕವಾಗಿದೆ.

ಇದನ್ನು ಸಾಕಷ್ಟು ವಿವರವಾಗಿ ನಿರೂಪಿಸಿರಲು ಕಾರಣ, ನಿರ್ದಿಷ್ಟ ರಾಜಕೀಯ ಹಿತಾಸಕ್ತಿಗಳಿಗಾಗಿ ಸ್ಥೂಲ ಇತಿಹಾಸದ ಸಂಗತಿಗಳನ್ನು ಬಳಸಿಕೊಂಡು ಗಾಂಧಿಯವರ ಬಗ್ಗೆ ಉಂಟು ಮಾಡಲಾಗುತ್ತಿರುವ ತಪ್ಪು ತಿಳುವಳಿಕೆಗಳನ್ನು ನಿವಾರಿಸುವುದೇ ಆಗಿದೆ. ಆದರೆ ಕೊನೆಯ ಅಧ್ಯಾಯದ ಹೊರತಾಗಿ ನಾನು ಪ್ರಜ್ಞಾಪೂರ್ವಕವಾಗಿಯೇ ಗಾಂಧಿಯವರನ್ನು ಅವರ ಪ್ರಯೋಗಗಳಲ್ಲಿ ಅವರ ಪಾಡಿಗೆ ಬಿಟ್ಟು ನಾನು ದೂರ ನಿಂತು ಘಟನೆಗಳ ವಿವರಗಳನ್ನಷ್ಟೇ ನೀಡುವ ಗಡಿರೇಖೆ ಹಾಕಿಕೊಂಡು ಬರೆದ ಪುಸ್ತಕ ಇದಾಗಿದೆ. ಹಾಗಾಗಿಯೇ ಇಲ್ಲಿ ಗಾಂಧಿ ಕೊನೆಯವರೆಗೆ ಗಾಂಧಿಯಾಗಿಯೇ ಉಳಿದಿದ್ದಾರೆ. ಮಹಾತ್ಮ ಅಥವಾ ಬಾಪು ಆಗಿ ನಿರೂಪಿತವಾಗಿಲ್ಲ. ಗಾಂಧಿಯವರ ಪ್ರೇಮ ಪ್ರಸಂಗ ಮತ್ತು ರಾಜ್‌ಮೋಹನ್ ಗಾಂಧಿ ಹಾಗೂ ಸ್ವಲ್ಪ ಮಟ್ಟಿಗೆ ಗುಹಾ ಅವರ ಪುಸ್ತಕಗಳ ಹೊರತಾಗಿ ಇನ್ನಾವ ಮುಖ್ಯ ಪುಸ್ತಕಗಳಲ್ಲೂ ಕಾಣದ ಅವರ ಬ್ರಹ್ಮಚರ್ಯ ಪರೀಕ್ಷಾ ಪ್ರಯೋಗಗಳನ್ನು ನಾನು ಸಾಕಷ್ಟು ವಿವರವಾಗಿಯೇ ಇಲ್ಲಿ ಚರ್ಚಿಸಿರುವೆ. ಎಲ್ಲಿಯಾದರೂ ನನ್ನ ಕೈಮೀರಿ ನಾನೇ ಹಾಕಿಕೊಂಡ ಗಡಿರೇಖೆ ಉಲ್ಲಂಘನೆಯಾಗಿದ್ದರೆ ಓದುಗರು ಕ್ಷಮಿಸಿ ಮುಂದುವರೆಯಬೇಕೆಂದು ಕೇಳಿಕೊಳ್ಳುತ್ತೇನೆ. ಕೊನೆಯ ಪುಟ್ಟ ಅಧ್ಯಾಯದಲ್ಲಿ ಮಾತ್ರ, ಗಾಂಧಿಯನ್ನು ಅಮಾಯಕವಾಗಿಯೇ ಖಳನಂತೆ ಪ್ರಸ್ತುತಪಡಿಸಲಾಗಿರುವ ಒಂದು ಪ್ರಯತ್ನದ ಬಗ್ಗೆ ಇಂದಿನ ಸಂದರ್ಭದಲ್ಲಿ ಅನಿವಾರ್ಯವೆನಿಸಿದ ಕಾರಣದಿಂದಾಗಿ ಪ್ರತಿಕ್ರಿಯಿಸಿದ್ದೇನೆ. ಇನ್ನೊಂದು ಮಾತನ್ನೂ ಇಲ್ಲಿ ಹೇಳಬೇಕು. ಗಾಂಧಿಯವರ ಒಂದು ಜನಪ್ರಿಯ ಚಿತ್ರವನ್ನು ಕಟ್ಟಿಕೊಟ್ಟು ಅವರನ್ನು ಒಂದು ಸ್ಥಗಿತ ಚೌಕಟ್ಟಿನಲ್ಲಿ ಬಂಧಿಸಿರುವ ಅವರ ಜನಪ್ರಿಯ ನುಡಿಮುತ್ತುಗಳನ್ನು ನಾನು ಬೇಕೆಂದೇ ಈ ಪುಸ್ತಕದಿಂದ ಆದಷ್ಟೂ ಹೊರಗಿಟ್ಟಿದ್ದೇನೆ.

ಅಂದ ಮಾತ್ರಕ್ಕೆ ಗಾಂಧಿಯವರ ಬದುಕಿನ ಬಗ್ಗೆ ನಾನು ಏನೂ ಅಭಿಪ್ರಾಯವನ್ನು ಹೊಂದಿಲ್ಲ ಎಂದಲ್ಲ. ಗಾಂಧಿಯವರ ಬದುಕಿನ ಬಗೆಗಿನ ಆತ್ಯಂತಿಕ ತೀರ್ಪು ಎಂದು ನಾನು ಪರಿಗಣಿಸಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ 'ಗಾಂಧಿಯವರ ಸಮಸ್ಯೆ ಎಂದರೆ ಅವರು ಪೂರ್ಣ ಸತ್ಯವನ್ನು ಹೇಳುತ್ತಾರೆ. ಆದರೆ ಸಮಾಜಕ್ಕೆ ಅದನ್ನು ತಡೆದುಕೊಳ್ಳುವ ಶಕ್ತಿ ಇಲ್ಲ' ಎಂಬ ಮಾತು ನನ್ನ ಮಾತೂ ಆಗಿದೆ. ಆದರೆ ಇಂತಹ ಗ್ರಹಿಕೆಯನ್ನು ಹೊಂದಿಯೂ ಅಂಬೇಡ್ಕರ್ ಅದಕ್ಕೆ ತಕ್ಕ ಉದಾರತೆಯಿಂದ ಗಾಂಧಿಯವರೊಂದಿಗೆ ನಡೆದುಕೊಳ್ಳಲಿಲ್ಲವಲ್ಲ ಎಂಬ ವಿಷಾದವೂ ನನ್ನನ್ನು ಮುತ್ತಿದೆ. ಅಂಬೇಡ್ಕರ್ ಹೇಳುವ ಗಾಂಧಿಯವರ 'ಸಮಸ್ಯೆ'ಯ ಬಗ್ಗೆ ನಾನೂ ಕೊಂಚ ಯೋಚಿಸಿದ್ದೇನೆ. ಈ ಸಂಬಂಧವಾಗಿ ನನ್ನನ್ನು ಸದಾ ಕಾಡುವ ವಿಷಾದವೆಂದರೆ ರಮಣ ಮಹರ್ಷಿಗಳ ವಿಚಾರಗಳನ್ನು, ಅವರ ಮಾರ್ಗವನ್ನು ಬಲ್ಲವರಾಗಿದ್ದ ಗಾಂಧಿ, ಅವರನ್ನೇಕೆ ಒಮ್ಮೆಯೂ ಭೇಟಿ ಮಾಡಲಾಗಲಿಲ್ಲ ಎಂಬುದು. ಗಾಂಧಿ ತಮ್ಮ ಅನುಯಾಯಿಗಳು ದಣಿವಾಗಿದೆ ಎಂದಾಗಲೆಲ್ಲ ಅವರಿಗೆ ರಮಣಾಶ್ರಮಕ್ಕೆ ಹೋಗಿ ಪುನಶ್ಚೇತನರಾಗಿ ಬನ್ನಿ ಎಂದು ಸಲಹೆ ನೀಡುತ್ತಿದ್ದರು. ಆದರೆ ಸ್ವತಃ ತಾವೇ ತಿರುವಣ್ಣಾಮಲೈಗೆ ಹೋಗಿಯೂ, ಅಲ್ಲಿನ ರಮಣಾಶ್ರಮದ ಬಳಿಯೇ ಸಾರ್ವಜನಿಕ ಭಾಷಣ ಮಾಡಿಯೂ ಆಶ್ರಮಕ್ಕೆ ಭೇಟಿ ನೀಡಲಾಗದೆ ರೈಲ್ವೇ ನಿಲ್ದಾಣಕ್ಕೆ ಧಾವಿಸಬೇಕಾಗುವುದು ಎಂದರೆ ಅದು ವಿಧಿ ವಿಲಾಸವೇ ಸರಿ! ಈ ಮಾತನ್ನು ಏಕೆ

ಹೇಳುತ್ತಿದ್ದೇನೆಂದರೆ, ಗಾಂಧಿ ತಮ್ಮ ಬದುಕಿನಲ್ಲಿ ಎಷ್ಟು ಸಾವಿರ ಜನರನ್ನು ಮುಖಾಮುಖಿಯಾಗಿಲ್ಲ! ಎಷ್ಟು ಸಾವಿರ ಸ್ಥಳಗಳಿಗೆ ಹೋಗಿಲ್ಲ? ಎಷ್ಟು ಸಾವಿರ ಸಂದರ್ಭಗಳಿಗೆ ಪ್ರತಿಕ್ರಿಯಿಸಿಲ್ಲ? ಅವರ ಬದುಕೇ ಸಾರ್ವಜನಿಕ ಘಟನಾವಳಿಗಳಿಂದ ಕಿಕ್ಕಿರಿದು ಹೋಗಿದೆ. ಆದರೂ ತಾವು ಬಹುವಾಗಿ ಗೌರವಿಸುವ ಒಬ್ಬ ವ್ಯಕ್ತಿಯ ಸನಿಹಕ್ಕೆ ಬಂದೂ ಭೇಟಿಯಾಗಲಾಗಲಿಲ್ಲ ಎಂದರೆ ಏನು ಅರ್ಥ?

ರಮಣ ಮತ್ತು ಗಾಂಧಿ ಒಂದು ಕ್ಷಣ ಭೇಟಿಯಾಗಿದ್ದರೂ ಅಂಬೇಡ್ಕರ್ ಹೇಳುವ ಗಾಂಧಿಯವರ 'ಸಮಸ್ಯೆ'ಗೆ ಪರಿಹಾರ ಸಿಗುತ್ತಿತ್ತೇನೋ ಎಂಬ ಆಸೆ ನನ್ನದು! ಗಾಂಧಿ ರಮಣಾಶ್ರಮದ ಬಳಿಯಲ್ಲೇ ಭಾಷಣ ಮಾಡಿ ರಮಣರನ್ನು ಭೇಟಿಯಾಗದೇ ಹೋಗಬೇಕಾದ ಸಂದರ್ಭವನ್ನು ಅರುಣ್ ಶೌರಿ ತಮ್ಮ 'ಟು ಸೇಂಟ್ಸ್' ಪುಸ್ತಕದಲ್ಲಿ ಪ್ರಸ್ತಾಪಿಸಿ ಚರ್ಚಿಸುತ್ತಾರೆ. ಗಾಂಧಿ ರಮಣರನ್ನು ಭೇಟಿಯಾದರೆ ಸ್ವಾತಂತ್ರ್ಯ ಹೋರಾಟ ಸ್ಥಗಿತವಾದೀತು ಎಂಬ ಆತಂಕದಲ್ಲಿ ರಾಜಾಜಿ ಈ ಭೇಟಿಯಾಗದಂತೆ ಎಚ್ಚರ ವಹಿಸಿರಬಹುದೆಂಬ ಊಹೆ ಇಲ್ಲಿ ರಮಣಾನುಯಾಯಿ ತತ್ವಶಾಸ್ತ್ರಜ್ಞ ಪ್ರೊ. ಕೆ. ಸ್ವಾಮಿನಾಥನ್ ಅವರ ಮೂಲಕ ವ್ಯಕ್ತವಾಗಿದೆ. ಅದೇನೇ ಇರಲಿ, ರಾಜಕಾರಣವನ್ನು ಧಾರ್ಮಿಕ ಕ್ರಿಯೆಯನ್ನಾಗಿ ಪರಿವರ್ತಿಸುವ ದುಸ್ಸಾಹಸದಲ್ಲಿ ತೊಡಗಿದ್ದ ಗಾಂಧಿ, ರಮಣರಿಂದ ಅರಿಯಬೇಕಿದ್ದ ಒಂದು ಆತ್ಯಂತಿಕ ಸತ್ಯವಿತ್ತು ಎಂದೇ ನನ್ನ ಭಾವನೆ.

ಅದೇನೇ ಇರಲಿ, ಈ ಪುಸ್ತಕ ಹೀಗೆ ಹೊರಬರಲು ರಮಣರ ಕೃಪೆ ಇದ್ದೇ ಇದೆಯೆಂದು ನಾನು ಭಾವಿಸಿದ್ದೇನೆ. ಜೊತೆಗೇ ಹಲವರ ಕೃಪೆ ನನ್ನನ್ನು ಪೊರೆದಿರುವುದನ್ನೂ ನಾನಿಲ್ಲಿ ದಾಖಲಿಸಬೇಕು. ಈ ಪುಸ್ತಕ ರಚನೆಯನ್ನು ಆರಂಭಿಸಲು ಕಾರಣರಾದ ಎಂ.ಸಿ. ನರೇಂದ್ರ ಪುಸ್ತಕ ರಚನೆಗೆ ಪೂರಕವೆಂದು ಅವರು ಭಾವಿಸಿದ ಒಂದೆರಡು ಬಹು ಬೆಲೆ ಬಾಳುವ ಪುಸ್ತಕಗಳನ್ನು ನನಗೆ ಒದಗಿಸಿದ್ದಾರೆ. ಇನ್ನು ಗಾಂಧಿ ಎಂದರೆ ಸಾಕು ಮನೆಮಠಗಳನ್ನು ಮರೆತು ಊರೂರು ಸುತ್ತುವ ಗಾಂಧಿ ಬೈರಾಗಿ ಪ್ರೊ. ಜಿ.ಬಿ. ಶಿವರಾಜು, ತೆಂಡೂಲ್ಕರ್ ಮತ್ತು ಪ್ಯಾರೇಲಾಲ್ ಸಂಪುಟಗಳನ್ನು ತಂದು ನೀಡಿದ್ದಾರೆ. ಸ್ವತಃ ರಾಮಚಂದ್ರ ಗುಹಾ ಗಾಂಧಿ ಕುರಿತ ತಮ್ಮೆರಡು ಪುಸ್ತಕಗಳನ್ನು ಕಳಿಸಿಕೊಟ್ಟು ಶುಭ ಕೋರಿದ್ದಾರೆ. ಈ ಮುವ್ವರಲ್ಲಿನ ಮೊದಲಿಬ್ಬರು ಕಾಲಾನುಕಾಲಕ್ಕೆ ನನ್ನ ಬೆನ್ನು ಬೀಳದಿದ್ದರೆ ಈ ಪುಸ್ತಕ ಸದ್ಯಕ್ಕಂತೂ ಹೊರಬರುತ್ತಿರಲಿಲ್ಲವೆಂದು ಖಚಿತವಾಗಿ ಹೇಳಬಲ್ಲೆ. ಇನ್ನು ನನ್ನ ನಿಡುಗಾಲದ ಗೆಳೆಯ ರಾಜ ಸಿರಿಗೆರೆ ಈ ಪುಸ್ತಕದ ಪ್ರಕಟಣೆಯ ಸಿದ್ಧತೆ ಅಂತಿಮ ಹಂತಕ್ಕೆ ಬರುತ್ತಿದ್ದ ಸಮಯದಲ್ಲಿ ಬಹುದಿನಗಳ ನಂತರ ಅಕಸ್ಮಾತ್ತಾಗಿ ನನ್ನ ಸಂಪರ್ಕಕ್ಕೆ ಬಂದು ಈ ಪುಸ್ತಕದ ಪುಟ ವಿನ್ಯಾಸದ ಹೊಣೆ ಹೊರಲು ಮುಂದೆ ಬಂದು ನನಗೆ ಸೋಜಿಗವನ್ನುಂಟು ಮಾಡಿದ್ದಾರೆ. ಅವರು ಆ ಹೊಣೆಯನ್ನು ನನ್ನ ಹಲವು ಕಾಟಗಳ ನಡುವೆಯೂ ಬೇಸರಿಸಿಕೊಳ್ಳದೆ ಅಚ್ಚುಕಟ್ಟಾಗಿ ನಿರ್ವಹಿಸಿಕೊಟ್ಟಿದ್ದಾರೆ. ಇನ್ನು ಕಿರಿಯ ಗೆಳೆಯ ಎಚ್. ಆರ್. ರವಿಪ್ರಸಾದ್ ನನ್ನೆಲ್ಲ ಆಯ್ಕೆ–ಆಗ್ರಹಗಳನ್ನು ತಾಳಿಕೊಂಡು ಪುಸ್ತಕಕ್ಕೆ ಸೂಕ್ತವಾದ ಮುಖಪುಟ ವಿನ್ಯಾಸ ಮಾಡಿಕೊಟ್ಟಿದ್ದಾರೆ. ಇವರೆಲ್ಲರಿಗೆ ನನ್ನ ಧನ್ಯವಾದಗಳು.

ಕೊನೆಯದಾಗಿ, ಆದರೆ ಬಹು ಮುಖ್ಯವಾಗಿ ಇಬ್ಬರು ಮಹಿಳೆಯರಿಗೆ ನನ್ನ

ಕೃತಜ್ಞತೆ ಹೇಳಬೇಕಿದೆ. ಇವರಿಬ್ಬರ ನೆರವಿಲ್ಲದಿದ್ದರೆ ಖಂಡಿತ ಈ ಪುಸ್ತಕ ಈ ಸೀಮಿತ ಅವಧಿಯಲ್ಲಿ ಈ ರೂಪದಲ್ಲಿ ಹೊರಬರುತ್ತಿರಲಿಲ್ಲ. ಒಬ್ಬರು ಶ್ರೀಮತಿ ಟಿ.ಎಲ್. ರೇಖಾಂಬ. ಅವರನ್ನು ಈ ಪುಸ್ತಕದ ಕರಡು ತಿದ್ದಿದವರು ಎಂದು ಮಾತ್ರ ಗುರುತಿಸಿ ಅವರನ್ನು ಅವಮಾನಿಸಲಾರೆ. ಅವರು ಆರಂಭದ ಪುಟದಿಂದಲೂ ಪಠ್ಯವನ್ನು ಎಚ್ಚರಿಕೆಯಿಂದ ಓದುತ್ತಾ ಬರವಣಿಗೆಯ ಶೈಲಿ, ವಾಕ್ಯರಚನೆಯ ವಿನ್ಯಾಸ, ಸಂದರ್ಭಗಳ ತಾರ್ಕಿಕ ಬೆಳವಣಿಗೆ, ಘಟನೆಗಳ ಕಾಲಾನುಕ್ರಮಣಿಕೆ, ಕಥನದ ಸ್ವಾರಸ್ಯ ಹೀಗೆ ಎಲ್ಲದರ ಮೇಲೆ ನಿಗಾ ಇಟ್ಟು ಈ ಪುಸ್ತಕ ತಮ್ಮದೇ ಎಂಬ ಮಮತೆಯಿಂದ ಇದರ ಅಂತಿಮ ರೂಪಕ್ಕೆ ಕಾರಣರಾಗಿದ್ದಾರೆ. 'ಗಾಂಧಿ ಚಿತ್ರಸಂಪುಟ'ಕ್ಕಾಗಿ ಚಿತ್ರಗಳನ್ನು ಸಂಗ್ರಹಿಸಿದವರೂ ಇವರೇ. ಇನ್ನು ನನ್ನ ಪತ್ನಿ ಸವಿತಾ ಈ ಪುಸ್ತಕದ ಬರವಣಿಗೆಯ ದೀರ್ಘ ಅವಧಿಯುದ್ದಕ್ಕೂ 'ಅಯ್ಯೋ ಈ ಹಾಳು ಪುಸ್ತಕ ಬರೆಯಲು ತೊಡಗಿಕೊಂಡು ವರ್ಷಗಟ್ಟಲೆ ನಿಮ್ಮ ಆಯಸ್ಸನ್ನು ಕಳೆದುಕೊಳ್ಳುತ್ತಿದ್ದೀರಿ!' ಎಂದು ರೇಗಾಡುತ್ತಲೂ ಕೂಗಾಡುತ್ತಲೂ ಹಗಲೂ ರಾತ್ರಿ ನನ್ನನ್ನು ಪೊರೆದಿದ್ದಾಳೆ. ಗಾಂಧಿ ಕುರಿತ ಅವಳ ಪ್ರೀತಿ–ಅಭಿಮಾನಗಳನ್ನು ನಾನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಅವಳ ಪದ್ಯಗಳೇ ಎಲ್ಲವನ್ನೂ ಹೇಳುತ್ತವೆ. ಹಾಗಾಗಿ ಪುಸ್ತಕದ ಅಂತಿಮ ಕರಡನ್ನು ತಿದ್ದಿದವಳೂ ಅವಳೇ. ಈ ಇಬ್ಬರು ಮಹಿಳೆಯರಿಗೆ ನನ್ನ ಧನ್ಯವಾದ ಹೇಳಿದರೆ ಅದು ನನಗೆ ಬರೀ ಖಾಲಿ ಮಾತು ಎನಿಸುತ್ತದೆ. ಆದರೆ ಗತ್ಯಂತರವಿಲ್ಲ!

ಈ ಪುಸ್ತಕದ ಬರವಣಿಗೆ ಸಾಗಿದಂತೆಲ್ಲ, ಇದರ ಕೆಲ ಭಾಗಗಳು ಅಲ್ಲಲ್ಲಿ ಪ್ರಕಟವಾಗುತ್ತಿದ್ದಂತೆ ಹಲವರು ಈ ಪುಸ್ತಕದ ಬಗ್ಗೆ ವಿಚಾರಿಸಿ ಶುಭ ಕೋರಿದ್ದಾರೆ ಮತ್ತು ಪುಸ್ತಕ ಬಿಡುಗಡೆಗಾಗಿ ಕಾತರ ವ್ಯಕ್ತಪಡಿಸಿದ್ದಾರೆ. ಅವರೆಲ್ಲರಿಗೂ ನನ್ನ ನಮನಗಳು.

ಈ ಕೃತಿಯು ಅಂದವಾಗಿ ಮುದ್ರಣಗೊಳ್ಳಲು ನೆರವಾದ ಶ್ರೀ ಕೆ.ಎಲ್. ರಾಜಶೇಖರ್, ಹಾಗೂ ಸ್ವಾನ್ ಪ್ರಿಂಟರ್ಸ್‌ನ ಶ್ರೀ ಎಂ. ಕೃಷ್ಣಮೂರ್ತಿಯವರು ತಮ್ಮ ಸಿಬ್ಬಂದಿಯೊಂದಿಗೆ ವಿಶೇಷ ಆಸಕ್ತಿ ಮತ್ತು ಶ್ರಮಗಳೊಂದಿಗೆ ಪುಸ್ತಕವನ್ನು ಬಹು ಸುಂದರವಾಗಿ ಹೊರತಂದಿದ್ದಾರೆ. ಅವರಿಗೆಲ್ಲರಿಗೂ ನನ್ನ ಧನ್ಯವಾದಗಳು ಸಲ್ಲುತ್ತವೆ.

೭೦೦ ಪುಟಗಳ ಈ ಪುಸ್ತಕವನ್ನು ಬರೆಯುವಾಗ ನನ್ನ ಕಣ್ತಪ್ಪಿ ಏನಾದರೂ ದೋಷಗಳು ನುಸುಳಿದ್ದರೆ ಅವನ್ನು ಓದುಗರು ಮನ್ನಿಸಿ, ನನ್ನ ಗಮನಕ್ಕೆ ತರಬಹುದು. ಅವನ್ನು ಪರಿಶೀಲಿಸಿ ಪುಸ್ತಕದ ಮುಂದಿನ ಆವೃತ್ತಿಯಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಲಾಗುವುದು. ಓದುಗರು ನನ್ನೆಲ್ಲ ಇತರ ಪುಸ್ತಕಗಳನ್ನು ಬರಮಾಡಿಕೊಂಡಂತೆಯೇ ಈ ಪುಸ್ತಕವನ್ನೂ ಬರಮಾಡಿಕೊಳ್ಳುವರೆಂದು ಆಶಿಸುವೆ.

ಶಿವಮೊಗ್ಗ
೧೫–೯–೨೦೧೯

ಡಿ.ಎಸ್. ನಾಗಭೂಷಣ

ಎರಡನೆಯ ಮುದ್ರಣಕ್ಕೆ ಲೇಖಕರ ಮಾತು

ಈ ಪುಸ್ತಕದ ಮೊದಲ ಮುದ್ರಣದ ಎಲ್ಲ ಪ್ರತಿಗಳೂ ಒಂದು–ಒಂದೂವರೆ ತಿಂಗಳಲ್ಲೇ ಖರ್ಚಾಗಿ ಹೋಗಿರುವುದನ್ನು ಗಮನಿಸಿದ ಪ್ರಕಾಶಕರಾದ ಎಂ.ಸಿ. ನರೇಂದ್ರ ಅವರು ಪುಸ್ತಕದ ಎರಡನೆಯ ಮುದ್ರಣಕ್ಕೆ ಸಿದ್ಧರಾದಾಗ ನಾನು ಮೊದಲ ಮುದ್ರಣದಲ್ಲಿ ನುಸುಳಿದ್ದ ಕೆಲವು ತಪ್ಪುಗಳನ್ನು ತಿದ್ದಿಕೊಡುವುದಾಗಿ ಹೇಳಿ ಅದನ್ನು ತಡೆದೆ. ಮೊದಲ ಮುದ್ರಣವನ್ನು ಓದಿದ ಅನೇಕರು – ಗಣ್ಯರು ಮತ್ತು ಸಾಮಾನ್ಯರಿಬ್ಬರೂ – ನನ್ನ ನಿರೀಕ್ಷೆಯನ್ನೂ ಮೀರಿ ಈ ಪುಸ್ತಕದ ಮಹತ್ವ ಮತ್ತು ಚೊಕ್ಕತನವನ್ನು ಶ್ಲಾಘಿಸಿ ನನ್ನ ಮತ್ತು ಪ್ರಕಾಶಕರ ಪರಿಶ್ರಮ ಸಾರ್ಥಕ ಎನ್ನುವಂತೆ ಮಾಡಿದ್ದಾರೆ. ಹಾಗೇ ಅದೇ ವೇಳೆಯಲ್ಲಿ, ಇವರಲ್ಲಿ ಕೆಲವರು ಒಂದೆರೆಡು ಮಾಹಿತಿ ಲೋಪಗಳನ್ನೂ, ವಾಕ್ಯ ರಚನೆ ಮತ್ತು ಮುದ್ರಣ ದೋಷಗಳನ್ನೂ ತಿಳಿಸಿ ನೆರವಾಗಿದ್ದಾರೆ. ಒಂದಿಬ್ಬರು ಕೆಲ ವಿಷಯಗಳಲ್ಲಿ ಇನ್ನಷ್ಟು ವಿವರ ಅಥವಾ ಹೆಚ್ಚಿನ ವ್ಯಾಖ್ಯಾನ ಅಗತ್ಯವೆಂದು ಸಲಹೆ ನೀಡಿದ್ದಾರೆ. ಇವರಲ್ಲಿ ಮುಖ್ಯವಾಗಿ ಹೆಸರಿಸಬೇಕಾದವರು ಹಿರಿಯರಾದ ಎಚ್.ಎಸ್. ದೊರೆಸ್ವಾಮಿಯವರು, ಗೆಳೆಯ ಜಿ.ಬಿ. ಶಿವರಾಜು, 'ಹೊಸ ಮನುಷ್ಯ' ಪತ್ರಿಕೆಯಲ್ಲಿ ಪುಸ್ತಕದ ಅವಲೋಕನ ಮಾಡಿದ ಲಕ್ಷ್ಮೀಶ ತೋಳ್ಪಾಡಿಯವರು ಮತ್ತು ಪುಸ್ತಕ ಓದಿದ ಕೂಡಲೇ ಹೃತ್ಪೂರ್ವಕವಾಗಿ ಮೆಚ್ಚಿ ಒಂದು ದೀರ್ಘ ಪತ್ರವನ್ನೇ ಬರೆದ ಹಿರಿಯ ಸಂವಹನ ವಿದ್ವಾಂಸರಾದ ಪ್ರೊ. ಎಚ್.ಎಸ್. ಈಶ್ವರ ಅವರು. ಇದೇ ಸಮಯದಲ್ಲಿ ಕ್ರಮವಾಗಿ 'ಪ್ರಜಾವಾಣಿ' ಮತ್ತು 'ಸಂವಾದ' ಪತ್ರಿಕೆಗಳಲ್ಲಿ ಈ ಪುಸ್ತಕವನ್ನು ವಿಮರ್ಶಿಸಿದ ಡಾ. ನಿತ್ಯಾನಂದ ಬಿ. ಶೆಟ್ಟಿ ಮತ್ತು ಡಾ. ರಾಜೇಂದ್ರ ಚೆನ್ನಿಯವರನ್ನೂ ನೆನೆಯ ಬಯಸುವೆ.

ಇನ್ನು ಮೊದಲ ಮುದ್ರಣದ ಸಂದರ್ಭದಲ್ಲಿ ತಿಳಿಸಬೇಕಾಗಿದ್ದ ಒಂದು ಸಂಗತಿ: ಈ ಪುಸ್ತಕದಲ್ಲಿ ಬರುವ ಊರುಗಳನ್ನು ಸಂಬಂಧಿತ ಚರಿತ್ರೆಯ ಅಧಿಕೃತತೆಗಾಗಿ, ಆಗ ಅವುಗಳಿಗೆ ಇದ್ದ ಹೆಸರುಗಳಿಂದಲೇ ಗುರುತಿಸಲಾಗಿದೆ. ಇವುಗಳಲ್ಲಿ ಕೆಲವುದರ ಹೆಸರುಗಳು ಈಗ ಬದಲಾಗಿವೆ ಎಂಬುದನ್ನು ಓದುಗರು ಬಲ್ಲರು ಎಂದು ನಾನು ಭಾವಿಸಿದ್ದೇನೆ. ಕೆಲವು ಓದುಗರು ಕಥನದ ಓಘದಲ್ಲಿ ಘಟನೆಗಳ ವಿವರಗಳ ಜೊತೆಗೆ (ತಿಂಗಳು ಮತ್ತು ದಿನಾಂಕಗಳ ವಿವರ ಮಾತ್ರವಿದ್ದು) ವರ್ಷದ ನಮೂದು ಹಲವು ಕಡೆ ಕಾಣದೆ ಒಂದು ಇತಿಹಾಸವಾಗಿ ಇದನ್ನು ಓದಲು ತೊಂದರೆಯಾಗಿದೆ ಎಂದು ತಿಳಿಸಿದ್ದಾರೆ. ಆದರೆ ಇದು ಪ್ರತಿಯೊಂದು ಅಧ್ಯಾಯವನ್ನೂ ಪ್ರತ್ಯೇಕವಾಗಿ ಓದಿದಾಗ ಉಂಟಾಗುವ ಸಮಸ್ಯೆ ಹಾಗೂ ಇತಿಹಾಸವನ್ನು ಹಾಗೆ ಓದಬಾರದು ಕೂಡ. ಹಾಗೆ ಓದಬಯಸುವವರು ಹಿಂದಿನ ಅಧ್ಯಾಯಗಳನ್ನೊಮ್ಮೆ ತಿರುವಿ ಹಾಕಿದ್ದರೆ ವರ್ಷದ ವಿವರ ಸಿಗುತ್ತದೆ. ಇರಲಿ. ನಾನು ಈ ಕಥನವನ್ನು ಒಂದೇ ಧಾರೆಯಲ್ಲಿ ಬರೆದು ಆ ನಂತರ

ಅದನ್ನು ವರ್ಷಾವಾರು ಅಲ್ಲ, ವಿಷಯಾವಾರು ಅಧ್ಯಾಯಗಳನ್ನಾಗಿ ವಿಂಗಡಿಸಿದ್ದರಿಂದ ಓದುಗರಿಗೆ ಈ ಸಮಸ್ಯೆ ಉಂಟಾಗಿರಬಹುದು. ಘಟನಾವಳಿಯಿಂದ ದಟ್ಟವಾಗಿರುವ ಈ ಕಥನದ ಕಾಲಾವಧಿಯಲ್ಲಿ ಪರಸ್ಪರ ಸಂಬಂಧಪಡದ ಹಲವು ಘಟನೆಗಳು ಒಟ್ಟಿಗೇ ನಡೆದಿವೆ. ಆದರೂ ನಾನು ಕಥನವನ್ನು ಒಂದು ಕಾಲಾನುಕ್ರಮಣಿಕೆಯಲ್ಲಿ ಹೆಣೆಯುವ ಪ್ರಯತ್ನ ಮಾಡಿದ್ದೇನೆ. ಪುಸ್ತಕದ ಈ ಅವೃತ್ತಿಯಲ್ಲಿ ಎಲ್ಲ ತರಹದ ಓದುಗರಿಗೂ ಸಹಾಯವಾಗಲೆಂದು ಎಲ್ಲ ಮುಖ್ಯ ಘಟನೆಗಳ ವಿವರಗಳ ಸಂದರ್ಭದಲ್ಲೇ ಆ ಘಟನೆ ನಡೆದ ತಿಂಗಳು–ದಿನಾಂಕಗಳ ಜೊತೆಗೇ ವರ್ಷದ ವಿವರವನ್ನೂ ನೀಡಿದ್ದೇನೆ. ಇದೆಲ್ಲದರ ಒಟ್ಟು ಪರಿಣಾಮವಾಗಿ ಪುಸ್ತಕ ಕೇವಲ ಗಾಂಧಿಯವರ ಕಥನವಾಗದೆ, ಇದಕ್ಕೆ ಪೂರಕವಾಗಿ ಬರುವ ಇತರ ಉಪ ಕಥನಗಳೊಂದಿಗೆ ಸೇರಿ ಆ ಕಾಲದ ಇಡೀ ಇತಿಹಾಸದ ಒಂದು ಕಥನವಾಗುವುದನ್ನು ಓದುಗರು ಗಮನಿಸಬಹುದು. ಹಾಗೇ ಇಂದು ನಮ್ಮ ದೇಶ ಎದುರಿಸುತ್ತಿರುವ ಹಲವು ಸಮಸ್ಯೆಗಳ ಮೂಲವನ್ನೂ ಇಲ್ಲಿ ಗುರುತಿಸಬಹುದು. ಈ ಪುಸ್ತಕದ ಮುಖಪುಟದಲ್ಲಿನ ಗಾಂಧಿ ಚಿತ್ರ ಯಾವ ಸಂದರ್ಭದ್ದು? ಎಂದು ಕೆಲ ಓದುಗರು ಕೇಳಿದ್ದಾರೆ. ಅವರು ಕೊನೆಯ ಬಾರಿಗೆ ಯರವಾಡಾ ಸೆರೆಮನೆಯಲ್ಲಿದ್ದಾಗ ಕಸ್ತೂರಬಾ ನಿಧನರಾದ ಸಂದರ್ಭದಲ್ಲಿ ಗಾಂಧಿ ವಿಷಣ್ಣರಾಗಿ ಕೂತಿದ್ದಾಗ ತೆಗೆದ ಭಾವಚಿತ್ರವದು.

ಮೊದಲ ಮುದ್ರಣದಲ್ಲಿ, ನಮ್ಮ ಎಲ್ಲ ಎಚ್ಚರದ ಹೊರತಾಗಿಯೂ ಪುಸ್ತಕವು ಒಂದು ಗಡುವಿನಲ್ಲಿ ಬಿಡುಗಡೆಗೆ ಸಿದ್ಧವಾಗಬೇಕಾಗಿದ್ದ ಒತ್ತಡದಿಂದಾಗಿ ಹಲವು ದೋಷಗಳು ಉಳಿದುಬಿಟ್ಟವು. ಹಾಗೆ ಉಳಿದ ಒಂದೆರಡು ಸಣ್ಣಪುಟ್ಟ (ಬಹುಮುಖ್ಯವೇನೂ ಅಲ್ಲದ ಮಾಹಿತಿ ದೋಷ, ಕಥನದಲ್ಲಿ ಒಂದೆರಡು ಕಡೆ ಕುಣಿಕೆಗಳು ತಪ್ಪಿ ಹೋದದ್ದು, ಒಂದು ಪುನರಾವರ್ತನೆ, ವಾಕ್ಯ ರಚನೆಯ ಲೋಪ ಮತ್ತು ಮುದ್ರಣ ದೋಷಗಳನ್ನು ಈ ಆವೃತ್ತಿಯಲ್ಲಿ ತಿದ್ದಲಾಗಿದೆ. ಈ ಬಾರಿ ಈ ಸಂಬಂಧದ ಕರಡು ತಿದ್ದುವುದರಲ್ಲಿ ನನಗೆ ನೆರವಾದವರು ನಮ್ಮ ಕುಟುಂಬದ ಗೆಳತಿಯಾದ ಕೆ.ಪದ್ಮಾಕ್ಷಿಯವರು. ಹಾಗೇ ತಿದ್ದುಪಡಿಗಳನ್ನು ದಕ್ಷವಾಗಿ ನಿರ್ವಹಿಸಿದವರು ಮೊದಲ ಮುದ್ರಣದ ಪುಟ ವಿನ್ಯಾಸ ಮಾಡಿದ ಗೆಳೆಯ ರಾಜ ಸಿರಿಗೆರೆಯವರು. ಇವರಿಬ್ಬರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಹಾಗೇ ಈ ಪರಿಷ್ಕೃತ ಆವೃತ್ತಿಯ ಪ್ರಕಟಣೆಗೆ ಮುಂದಾಗಿರುವ ಎಂ.ಸಿ. ನರೇಂದ್ರ ಮತ್ತು ಮುದ್ರಕರಾದ ಎಲ್.ಕೆ. ಪ್ರೆಸ್ ಇಂಕ್., ಬೆಂಗಳೂರು ಇವರಿಗೂ ನನ್ನ ವಂದನೆಗಳು.

ಮೇಲೆ ತಿಳಿಸಿದ ಕೆಲ ಕಾರಣಗಳಿಂದ ಸ್ವಲ್ಪ ಮಟ್ಟಿಗೆ 'ಹೊಸ'ದಾಗಿರುವ (ಕೆಲವರು ಸೂಚಿಸಿದಂತೆ ಹೆಚ್ಚಿನ ವ್ಯಾಖ್ಯಾನಕ್ಕೆ, ವಿವರಣೆಗೆ, ಪುಸ್ತಕದ ಮೂಲೋದ್ದೇಶಕ್ಕೆ ಚ್ಯುತಿಯಾದೀತೆಂಬ ಕಾರಣದಿಂದ, ಕೈ ಹಾಕದೆ) ಈ ಮುದ್ರಣವನ್ನು ಇದನ್ನು ಪರಿಷ್ಕೃತ ಆವೃತ್ತಿ ಎಂದು ಕರೆಯಲಾಗಿದೆ. ಓದುಗರು ಮೊದಲ ಮುದ್ರಣಕ್ಕೆ ಸ್ಪಂದಿಸಿದಂತೆ ಇದಕ್ಕೂ ಸ್ಪಂದಿಸುವರೆಂದು ಆಶಿಸುವೆ.

ಶಿವಮೊಗ್ಗ **ಡಿ.ಎಸ್. ನಾಗಭೂಷಣ**

೨೫.೧೨.೨೦೧೯

ಪ್ರಕಾಶಕರ ಮಾತುಗಳು

ಮಾಜಿ ಸಚಿವರಾದ ಶ್ರೀ ಎಂ. ಚಂದ್ರಶೇಖರ್ ಸಾಧಕರ ವ್ಯಕ್ತಿ ವಿಚಾರಗಳ ಮಹತ್ವವನ್ನು ಇಂದಿನ ಆಧುನಿಕ ಜಗತ್ತಿನಲ್ಲಿ ಮನಗಂಡು ಅವುಗಳನ್ನು ಮೌಲ್ಯಯುತ ಸಾಹಿತ್ಯ ಮತ್ತು ಸಂಸ್ಕೃತಿಯ ಮೂಲಕ ಜನರಿಗೆ ತಲುಪಿಸುವ ಧ್ಯೇಯ ಮತ್ತು ಕಾಳಜಿ ಹೊಂದಿದ್ದರು. ನಮ್ಮ ತಂದೆ ಶ್ರೀ ಎಂ. ಚಂದ್ರಶೇಖರ್ ಅವರ ಹಾಗೂ ನಮ್ಮ ಪೂರ್ವಿಕರ ನೆನಪಿನಲ್ಲಿ ಎಂ. ಮೂನಿಸ್ವಾಮಿ ಅಂಡ್ ಸನ್ಸ್ ಎಂಬ ಹೆಸರಿನ ಒಂದು ಪ್ರಕಾಶನ ಸಂಸ್ಥೆಯನ್ನು ಸ್ಥಾಪಿಸಿದ್ದೇವೆ. ಆ ಮೂಲಕ ಗಾಂಧೀಜಿ, ಸ್ವಾಮಿ ವಿವೇಕಾನಂದ, ಕುವೆಂಪು, ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಮೊದಲಾದ ಮಹನೀಯರ ವಿಚಾರಗಳನ್ನೊಳಗೊಂಡ ಪುಸ್ತಕಗಳನ್ನು ಈ ಸಂಸ್ಥೆಯಿಂದ ಪ್ರಕಟಿಸಿ ನಮ್ಮ ನಾಡಿಗೆ ನೀಡುತ್ತಾ ಬಂದಿದ್ದೇವೆ.

ಸರ್ವರ ಉದ್ಧಾರಕ್ಕಾಗಿ ತಮ್ಮ ಜೀವನವನ್ನು ಕಾಪಿಟ್ಟವರಲ್ಲಿ ಗಾಂಧಿ ಅಗ್ರಗಣ್ಯರು. ಹಾಗೆ ಕಾಪಿಟ್ಟ ಬದುಕಿನ ಪ್ರಯೋಗಗಳನ್ನು, ಹೋರಾಟದ ಬದುಕನ್ನು ಸತ್ಯ-ಅಹಿಂಸೆಗಳಿಂದ ಪ್ರತಿಯೊಬ್ಬರು ಬದುಕಿದರೆ ಪೊಲೀಸ್, ಸೈನ್ಯ, ನ್ಯಾಯಾಲಯಗಳ ಅವಶ್ಯಕತೆಯೇ ಇರುವುದಿಲ್ಲ ಎಂಬಂಥ ಬದುಕನ್ನು 'ಗಾಂಧಿ' ಬದುಕಿದರು. ಅಂಥ ಬದುಕಿನ ಪ್ರತಿ ಕ್ಷಣಗಳನ್ನು ದಾಖಲಿಸಿದರು. ತಾನು ಇಟ್ಟ ಹೆಜ್ಜೆ ಗುರುತುಗಳನ್ನು ಬರೆದರು; ಅದರಂತೆ ಯಾರೂ ಅನುಕರಿಸಲಾಗದಂಥ ವ್ರತನಿಷ್ಠ ಬದುಕನ್ನು ಬದುಕಿದರು. 'ಕರಮಚಂದ ಗಾಂಧಿ' ನಮ್ಮೆಲ್ಲರಂತೆ ತಮ್ಮ ತಂದೆ ತಾಯಿಗಳಿಗೆ ಮಗುವಾಗಿ ಹುಟ್ಟಿದರು. ಆದರೆ ಅವರು ರೂಪುಗೊಂಡ ಬಗೆ ಅನನ್ಯ. ಅನೇಕ ಘಟನೆ, ಓದು, ಗ್ರಹಿಕೆ, ಬದುಕನ್ನು ಸ್ವೀಕರಿಸಿದ ಬಗೆ – ಸಾಧಕರಿಗೆ ಮಾತ್ರ ಸಾಧ್ಯ ಎಂಬಂತೆ ಅವರ ಬದುಕಿನ ಚಿತ್ರವಿದೆ.

ಕಾತೇವಾಡದ ಕರಮಚಂದ ಗಾಂಧಿ ಮಹಾತ್ಮ ಗಾಂಧಿಯಾದದ್ದು, ವಿಶ್ವದ ಸಾಧಕರ ಅಗ್ರಸಾಲಿನಲ್ಲಿ ನಿಂತದ್ದು ಭಾರತದ ಪುಣ್ಯ. ಪ್ರಪಂಚದ ಎಲ್ಲರೂ ನಿಬ್ಬೆರಗಾಗವಂತೆ ಇನ್ನೊಬ್ಬರಿಗಾಗಿ ಬದುಕನ್ನು ಸವೆಸಿದ ಗಾಂಧಿ ಅವರು ನಮ್ಮಿಂದ ದೂರವಾಗುತ್ತಿದ್ದಾರೆಯೇ? ಎಂಬ ಅನುಮಾನಗಳು ಎಲ್ಲೆಡೆ ಕಾಣಿಸುತ್ತಿವೆ. ಒಂದು ಮನೆ, ಊರು, ನಾಡು-ನುಡಿ, ದೇಶ ಹಾಗೂ ಜಗತ್ತೇ ಇಂಥ ವ್ಯಕ್ತಿಯನ್ನು ಪಡೆದಿದ್ದಕ್ಕೆ ಹೆಮ್ಮೆಪಟ್ಟ ದಿನಗಳು ಹಿಂದು ಸರಿದು; ವ್ಯಕ್ತಿ ಸ್ವಾರ್ಥವೇ ಮೇಲುಗೈ ಸಾಧಿಸುತ್ತಿರುವ ಇಂದಿನ ದಿನಗಳಲ್ಲಿ ಮತ್ತೆ ಮತ್ತೆ ಗಾಂಧಿ ಅವರನ್ನು ನಾವು, ನಮ್ಮ ಮುಂದಿನ ಪೀಳಿಗೆಗೆ ಓದಿಸಿ ಅಂಥ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿಸಬೇಕಾಗಿದೆ.

ಸಾಮಾಜಿಕ, ರಾಜಕೀಯ, ಧಾರ್ಮಿಕ, ಮತೀಯತೆಯನ್ನೇ ಜೀವನದ ಆದರ್ಶಗಳೆಂಬಂಥ ವಾತಾವರಣ ಎಲ್ಲ ಕಡೆ ಸೃಷ್ಟಿಯಾಗಿದೆ. ಸಾಮಾಜಿಕ ಸಮಸ್ಯೆಗಳಾದ

ಜಾತಿ, ಮತ, ಧಾರ್ಮಿಕ ಸಂಕುಚಿತತೆ, ದಾಸ್ಯ, ಅಸ್ಪೃಶ್ಯತೆ, ಬಡತನ, ಹಸಿವು, ಯುದ್ಧ – ಹಿಂಸೆಗಳಿಂದ ಜಗತ್ತನ್ನು ಮುಕ್ತಿಗೊಳಿಸಲು ಪ್ರಯತ್ನಿಸಿದವರು ಅನೇಕರು. ಹೀಗೆ ಅವರವರ ಶಕ್ತಿಯಾನುಸಾರ ಇಂಥ ದೌರ್ಬಲ್ಯಗಳಿಂದ ಹೊರಬಂದು, ನಮಗೂ ದಾರಿಗಳನ್ನು ಕಾಣಿಸಿದರು. ಆದರೆ ಈ ಮೇಲಿನ ಎಲ್ಲ ಸಮಸ್ಯೆಗಳು ಬೇರೊಂದು ರೂಪದಲ್ಲಿ ಮತ್ತೆ ಮೈವೆತ್ತಿ ಮೇಲುಗೈ ಸಾಧಿಸಿವೆ. ತಮ್ಮ ಮನೆ, ಜಾತಿ, ಧರ್ಮಗಳನ್ನು ದಾಟಿ ಜೀವಕೇಂದ್ರಿತ ಬದುಕನ್ನು ಕಟ್ಟಲು ಹೊರಟವರ ಬದುಕು ಮತ್ತು ವಿಚಾರಗಳ ನಡುವೆ ಸಂಘರ್ಷ ಏರ್ಪಡಿಸಿ ಒಡಕುಗಳನ್ನು ಸೃಷ್ಟಿಸುವ ಸನ್ನಿವೇಶದಲ್ಲಿದ್ದೇವೆ. ಇಂಥ ಸಂದರ್ಭದಲ್ಲಿ ನಮ್ಮ ತಲೆಮಾರಿಗೆ ಗಾಂಧಿ ವಿಚಾರಗಳನ್ನು ದಾಟಿಸುವ, ಪ್ರಸ್ತುತಗೊಳಿಸುವ ಅಗತ್ಯವಿದೆ.

ಗಾಂಧಿ ಅವರು ಜಗತ್ತಿನ ಮಹತ್ವದ ಲೇಖಕರ ಸಾಲಿಗೆ ಸೇರುತ್ತಾರೆ. ಒಬ್ಬ ವ್ಯಕ್ತಿ ಇಷ್ಟೆಲ್ಲ ಬರೆಯಬಲ್ಲರೆ? ಎಂದು ವಿಸ್ಮಯಪಡುವಷ್ಟು ಸಾಹಿತ್ಯವನ್ನು ಅವರು ಬರೆದಿದ್ದಾರೆ. ಒಂದು ನೂರಕ್ಕೂ ಹೆಚ್ಚು ಬೃಹತ್ ಸಂಪುಟಗಳಲ್ಲಿ ಅವರ ಬರಹಗಳು, ಭಾಷಣಗಳು, ಚಿತ್ರಗಳು ಪ್ರಕಟವಾಗಿವೆ. ಹಾಗೆಯೇ ಜಗತ್ತಿನ ಎಲ್ಲ ಭಾಷೆಗಳಿಗೆ ಅವರ ಬರಹಗಳು ಅನುವಾದಗೊಂಡಿವೆ. ಜಗತ್ತಿನ ಎಲ್ಲ ಭಾಷೆಗಳಲ್ಲಿಯೂ ಅವರನ್ನು ಕುರಿತ ಲಕ್ಷಾಂತರ ಕೃತಿಗಳು, ಲೇಖನಗಳು ಪ್ರಕಟವಾಗಿವೆ. ಅವರನ್ನು ಕುರಿತ ಸಾಕ್ಷ್ಯಚಿತ್ರಗಳು, ಚಲನಚಿತ್ರಗಳು ಸೃಷ್ಟಿಯಾಗಿವೆ. ಇಡೀ ಜಗತ್ತನ್ನೇ ಅವರ ಕರುಣೆಯ ತತ್ವ, ಅಹಿಂಸೆಯ ಅಸ್ತ್ರ, ಸರಳ ಜೀವನ ಪ್ರಭಾವ ಬೀರಿದೆ. ಎಲ್ಲರಲ್ಲಿಯೂ ದೈವವನ್ನು ಕಾಣುವ ಅವರ ಕಾಣ್ಕೆ, ನಿಷ್ಠುರ ಬದುಕು ಜನರ ಮೇಲೆ ಪ್ರಭಾವಿಸಿದೆ. ಅನೇಕ ಚಟುವಟಿಕೆಗಳು ಅದಕ್ಕೆ ಸಾಕ್ಷಿಯಂತಿವೆ.

ಇದೀಗ ಮಹಾತ್ಮ ಗಾಂಧಿ ಅವರ ೧೫೦ನೇ ಜನ್ಮೋತ್ಸವ. ಅದರ ನೆನಪಿಗಾಗಿ ಗಾಂಧೀಜಿ ಅವರ ವ್ಯಕ್ತಿತ್ವ ಮತ್ತು ಬದುಕಿನ ಎಲ್ಲ ಆಯಾಮಗಳನ್ನು ನಿರೂಪಿಸುವ ಪುಸ್ತಕವೊಂದನ್ನು ಪ್ರಕಟಿಸಬೇಕೆಂಬ ಮಹದಾಸೆ ನಮ್ಮದು. ಈ ಮನದಾಸೆಯನ್ನು ನಾಡಿನ ಖ್ಯಾತ ಚಿಂತಕರಾದ ಡಿ.ಎಸ್. ನಾಗಭೂಷಣ ಅವರ ಮುಂದಿಟ್ಟು, ಅಂಥ ಪುಸ್ತಕವನ್ನು ಬರೆದುಕೊಡಲು ಕೇಳಿಕೊಂಡೆವು. ನಮ್ಮ ಆಸೆಯನ್ನು ಪ್ರೀತಿಯಿಂದ ಒಪ್ಪಿ ಗಾಂಧಿ ಅವರ ಬಗೆಗೆ ಮಾರ್ಗದರ್ಶಿ ಕೃತಿಯನ್ನು ಬರೆದುಕೊಟ್ಟಿದ್ದಾರೆ. ಎರಡು ವರ್ಷಗಳಿಗೂ ಹೆಚ್ಚಿನ ಕಾಲಾವಧಿಯ ವ್ಯಾಪಕ ಓದು, ಸಂಶೋಧನೆ ತಮ್ಮ ಚಿಂತನೆಯ ಎರಕದಲ್ಲಿ ಕೃತಿ ನಿರ್ಮಾಣವಾಗಿದೆ. ಈ ಕೃತಿ ಕನ್ನಡದಲ್ಲಿ ಗಾಂಧಿ ಸಾಹಿತ್ಯಕ್ಕೆ ಒಂದು ಅಮೂಲ್ಯ ಸೇರ್ಪಡೆ ಎಂದು ನಾವು ಭಾವಿಸಿದ್ದೇವೆ. ಶ್ರೀ ಡಿ.ಎಸ್. ನಾಗಭೂಷಣ ಅವರಿಗೆ ನಮ್ಮ ಪ್ರಕಾಶನ ಆಭಾರಿಯಾಗಿದೆ.

ಶ್ರೀಮತಿ ವಾರಿಣಿ, ಶ್ರೀ ಎಂ.ಸಿ. ರವೀಂದ್ರ, ಶ್ರೀಮತಿ ಪವಿತ್ರ, ಶ್ರೀ ರಾಘವೇಂದ್ರ, ಶ್ರೀಮತಿ ಸಂಧ್ಯಾ, ಶ್ರೀ ಅಶೋಕ ರೆಡ್ಡಿ, ಶ್ರೀಮತಿ ವಿದ್ಯಾ, ಶ್ರೀ ನರೇಂದ್ರ ಮತ್ತು ಶ್ರೀಮತಿ ವೀಣಾ ಅವರಿಗೆ,

ಪ್ರೊ. ವಿ. ಭೈರಪ್ಪ, ಡಾ. ಬಿ. ಆಂಜನಪ್ಪ ಮತ್ತು ಶ್ರೀ ವಿ. ರಾಮಯ್ಯ ಅವರುಗಳ ಕುಟುಂಬದವರಿಗೆ, ಡಾ. ಶಾಂತ್ ಮತ್ತು ಕುಟುಂಬದವರಿಗೆ ನಮ್ಮ ನಮನಗಳು.

ಪ್ರೊ. ಜಿ.ಬಿ. ಶಿವರಾಜ್ ಅವರ ಒತ್ತಾಸೆಯಿಂದ ರೂಪುಗೊಂಡದ್ದು 'ಗಾಂಧಿಕಥನ'. ಅವರ ಗಾಂಧಿ ವಿಚಾರಧಾರೆಯ ತುಡಿತ ಅಗಾಧ. ಇಂಥ ಮಹತ್ವದ ಕಾರ್ಯ ಕೈಗೂಡಿಸಿ ನಮ್ಮ ಪ್ರಕಾಶನದಲ್ಲಿ ಪ್ರಕಟವಾಗುವಂತೆ ಮಾಡಿದ ಇವರಿಗೆ ನಮ್ಮ ವಂದನೆಗಳು.

ಕವಿ ಚಿಂತಕಿಯಾದ ಶ್ರೀಮತಿ ಸವಿತಾ ನಾಗಭೂಷಣ ಅವರು ಈ ಕೃತಿಯ ರಚನೆಯ ಸಂದರ್ಭದಲ್ಲಿ ನೀಡಿದ ಸಹಕಾರ ಮಾತುಗಳಲ್ಲಿ ಹೇಳಲಾರದ್ದು. ಆ ತಾಯಿಗುಣಕ್ಕೆ ನಾವು ಕೃತಜ್ಞರಾಗಿದ್ದೇವೆ.

ಶ್ರೀಮತಿ ಸರೋಜ ಎಂ. ಚಂದ್ರಶೇಖರ್ ಅವರ ಸಹಕಾರ ಮತ್ತು ಪ್ರೇರಣೆ ನಮ್ಮ ಪ್ರಕಾಶನದ ಹಿಂದಿದೆ. ಅವರಿಗೂ ಹಾಗೆಯೇ ಹುಲ್‌ಕುಲ್ ಕುಟುಂಬದ ಸದಸ್ಯರೆಲ್ಲರಿಗೂ, ಶಿವಮೊಗ್ಗದ ತೀರ್ಥಹಳ್ಳಿಯ ಹುಗಳವಳ್ಳಿ ಶ್ರೀ ಎಚ್.ಕೆ. ರತ್ನಾಕರ್ ಕುಟುಂಬದವರಿಗೂ ನಮ್ಮ ನಮನಗಳು ಸಲ್ಲುತ್ತವೆ.

ಡಾ. ಕೆ.ಸಿ. ಶಿವಾರೆಡ್ಡಿ ಹಾಗೂ ಶ್ರೀ ಕೆ.ಎಲ್. ರಾಜಶೇಖರ್ ಅವರು ಈ ಬೃಹತ್ ಗ್ರಂಥದ ಮುದ್ರಣದ ಸಂದರ್ಭದಲ್ಲಿ ವಿಶೇಷವಾಗಿ ನೆರವಾಗಿದ್ದಾರೆ. ಅವರೀರ್ವರಿಗೂ ನಮ್ಮ ನಮನಗಳು. ಈ ಗ್ರಂಥವನ್ನು ಅಚ್ಚುಕಟ್ಟಾಗಿ ಮುದ್ರಿಸಿದ ಎಲ್.ಕೆ. ಪ್ರೆಸ್ ಇಂಕ್‌ನ ಶ್ರೀ ಎಸ್.ಬಿ. ಲಕ್ಷ್ಮೀಕಾಂತ್ ಹಾಗೂ ಅವರ ಸಿಬ್ಬಂದಿ ವರ್ಗಕ್ಕೂ ವಂದನೆಗಳು.

ಕನ್ನಡಿಗರು ಈ ಮಹತ್ವಾಕಾಂಕ್ಷೆಯ ಕೃತಿಯನ್ನು ಪ್ರೀತಿ–ವಿಶ್ವಾಸಗಳಿಂದ ಸ್ವೀಕರಿಸುತ್ತಾರೆಂದು ಆಶಿಸುತ್ತೇವೆ.

ಎಂ.ಸಿ. ನರೇಂದ್ರ
ಪ್ರಕಾಶನದ ಪರವಾಗಿ

ಬೆಂಗಳೂರು
೨೯.೧೨.೨೦೧೯

ನಾಲ್ಕನೇ ಆವೃತ್ತಿಗೆ ಲೇಖಕನ ಮಾತು

ಈ ಆವೃತ್ತಿ ಬಹು ಹಿಂದೆಯೇ ಬೆಳಕು ಕಾಣಬೇಕಿತ್ತು. ಆದರೆ ಕರೋನಾ ಹಾವಳಿಯ ಕಾರಣ ಸಾಧ್ಯವಾಗಲಿಲ್ಲ. ಆದರೆ ಕರೋನಾದಿಂದ ಆದ ಒಂದು ಮುಖ್ಯ ಪ್ರಯೋಜನವೆಂದರೆ ಈ ಕೃತಿಯ ಮೊದಲ ಮೂರು ಆವೃತ್ತಿಗಳನ್ನು ಕೊಂಡಿದ್ದ ಬಹಳ ಜನ ಓದುಗರು ಪಟ್ಟಾಗಿ ಕೂತು ೬೭೧ ಪುಟಗಳ ಕೃತಿಯನ್ನು ಪುಟ ಬಿಡದೆ ಓದಿದ್ದಾರೆ. ಅವರಲ್ಲಿ ಹಲವರು ನನಗೆ ಕರೆ ಮಾಡಿ ಇದನ್ನು ತಿಳಿಸುತ್ತಾ, ಇಂತಹ ಬೃಹತ್ ಕೃತಿಯನ್ನು ತಾವು ಒಂದೇ ಏಟಿನಲ್ಲಿ ಓದಿದ್ದು ಇದೇ ಮೊದಲೆಂದೂ, ಇದು ತಾವು ಜೀವನದಲ್ಲಿ ಮಾಡಿರುವ ಕೆಲವು ಸಾರ್ಥಕ ಕೆಲಸಗಳಲ್ಲಿ ಒಂದೆಂದು ತಿಳಿಸಿ ನಾನು ಮಾಡಿರುವ ಕೆಲಸದ ಬಗೆಗೂ ಸಾರ್ಥಕತೆಯನ್ನು ನನ್ನಲ್ಲಿ ಉಂಟು ಮಾಡಿದ್ದಾರೆ. ಬಹಳ ಜನರ ಅಭಿಪ್ರಾಯವೆಂದರೆ, ಗಾಂಧಿಯ ಬಗ್ಗೆ ತಮಗಿದ್ದ ಸ್ಥೂಲ ಮಾಹಿತಿಯಿಂದಾಗಿ ಅವರ ಬಗೆಗಿದ್ದ ಅಭಿಪ್ರಾಯ ಬದಲಾಗಿದ್ದು, ಈಗ ಈ ಪುಸ್ತಕದ ವಿಸ್ತಾರ ಓದು ಗಾಂಧಿಯವರನ್ನು ಹೊಸದೇ ಕಣ್ಣುಗಳಿಂದ ನೋಡುವಂತೆ ಮಾಡಿದೆ ಎಂಬುದು. ಈ ಕೃತಿ ಮೂರು ತಿಂಗಳುಗಳಲ್ಲಿ ಮೂರು ಆವೃತ್ತಿಗಳನ್ನು ಕಂಡುದುದು, ಈ ಮಾತುಗಳಿಗೆ ಮಾತ್ರವಲ್ಲ, ಅದು ಕನ್ನಡದ ಜನಮನದಲ್ಲಿ ಉಂಟು ಮಾಡಿರುವ ಹೊಸ ಸಂಚಲನಕ್ಕೂ ಸಾಕ್ಷಿಯಾಗಿದೆ ಎಂದು ನಾನು ಭಾವಿಸಿದ್ದೇನೆ. ಇದು ರಾಜ್ಯದಲ್ಲಿ ಹೊಸ ನೆಲೆಯ ರಾಜಕಾರಣಕ್ಕೆ ನಾಂದಿಯಾದೀತೆಂದು ನನ್ನ ನಿರೀಕ್ಷೆ.

ಈ ಕೃತಿಯ ಈವರೆಗಿನ ಮೂರು ಮುದ್ರಣಗಳ ಮಧ್ಯದ ನನ್ನ ಇನ್ನಷ್ಟು ಗಾಂಧಿ ಓದಿನ ಪರಿಣಾಮವಾಗಿ, ಕೃತಿಯನ್ನು ಪುಟಗಳು ಹೆಚ್ಚದಂತೆ ಇನ್ನೊಂದಿಷ್ಟು ಅಗತ್ಯ ಮಾಹಿತಿ ಸೇರಿಸಿ ಸಂಕಲಿಸಿದ ಪರಿಷ್ಕೃತ ಆವೃತ್ತಿ ಇದು. ಮುಖ್ಯವಾಗಿ ಗಾಂಧಿ ಕೊಲೆ ಕುರಿತ ಮೊಕದ್ದಮೆಯ ಎಲ್ಲ ಹಂತಗಳ ವಿಚಾರಣೆಗಳ ವರದಿಗಳನ್ನೊಳಗೊಂಡ The Assassination of Mahatma Gandhi: Trial and Verdict ಎಂಬ ಕೃತಿಯ ಓದಿನಿಂದ ದೊರೆತ ಮಾಹಿತಿ. ಈ ಪುಸ್ತಕ ನಾಲ್ಕನೇ ಆವೃತ್ತಿ ಕಾಣಲು ಹಲವರು ಕಾರಣರಾಗಿದ್ದಾರೆ. ವಿಶೇಷವಾಗಿ ಪುಸ್ತಕ ಓದಿ ಮೆಚ್ಚಿ ಅದರ ಹತ್ತರಿಂದ ನೂರಾರು ಪ್ರತಿಗಳವರೆಗೆ ಕೊಂಡು ಮಾರಿದ, ತಮಗೆ ಬೇಕಾದವರಿಗೆ ಕೊಡುಗೆಯಾಗಿ ನೀಡಿದ ಗಾಂಧಿ ಅಭಿಮಾನಿಗಳನ್ನು ಇಲ್ಲಿ ನೆನೆಯಬೇಕು. ಹಾಗೇ ಈ ಪುಸ್ತಕ ಪ್ರಕಟಣೆಯನ್ನು ತಮ್ಮ ಬದುಕಿನ ಪ್ರಮುಖ ಘಟನೆಯೆಂದೇ ಭಾವಿಸಿ, ಜನರ ಬೇಡಿಕೆಗೆ ಸ್ಪಂದಿಸಿ ಅತ್ಯಂತ ಸುಲಭ ಬೆಲೆಯಲ್ಲಿ ಪ್ರಕಾಶಿಸುತ್ತಿರುವ ಎಂ.ಸಿ. ನರೇಂದ್ರ ಮತ್ತು ಅವರ ಎಂ. ಮೂನಿಸ್ವಾಮಿ ಅಂಡ್ ಸನ್ಸ್ ಪ್ರಕಾಶನ ಸಂಸ್ಥೆಗೆ ನನ್ನ ಕೃತಜ್ಞತೆಗಳು ಸಲ್ಲಬೇಕು. ಜೊತೆಗೆ ಈ ಪುಸ್ತಕದ ಯಶಸ್ಸಿಗೆ ಹಲವು ರೀತಿಯಲ್ಲಿ ಕಾರಣೀಭೂತರಾಗಿರುವ ಗೆಳೆಯ ಜಿ.ಬಿ. ಶಿವರಾಜು ಅವರನ್ನು ನಾನು ಮರೆಯುವಂತಿಲ್ಲ.

– ಡಿ.ಎಸ್. ನಾಗಭೂಷಣ

20 ಸೆಪ್ಟೆಂಬರ್ 2020

ಇಪ್ಪತ್ತೈದನೇ ಮುದ್ರಣಕ್ಕೆ ಲೇಖಕರ ಮಾತು

ಇದು 'ಗಾಂಧಿ ಕಥನ' ಪುಸ್ತಕದ ೨೫ನೇ ಮುದ್ರಣ. ಕನ್ನಡ ಪುಸ್ತಕ ಪ್ರಕಾಶನ ಲೋಕದಲ್ಲಿ ಇದು ದಾಖಲೆಯೋ ಹೌದೋ ತಿಳಿಯದು. ಆದರೆ ಅಪರೂಪದ ಘಟನೆಯೆಂದಂತೂ ಹೇಳಬಹುದು. ಕೋವಿಡ್ ಮಹಾಮಾರಿಯ ಅಬ್ಬರ ಇಲ್ಲದಿದ್ದರೆ ಈ ಘಟನೆ ಇನ್ನೂ ಬಹು ಮುಂಚೆಯೇ ಸಂಭವಿಸುತ್ತಿತ್ತು ಎಂದು ಇದರ ಮುದ್ರಣಗಳ ಅನುಕ್ರಮಣಿಕೆ ನೋಡಿದರೇ ಗೊತ್ತಾಗುವಂತಿದೆ. ೨೦೧೯ರ ಸೆಪ್ಟೆಂಬರ್ ಕೊನೆಯಲ್ಲಿ ಮೊದಲ ಮುದ್ರಣ ಕಂಡ ಈ ಪುಸ್ತಕದ ಐದುನೂರು ಕ್ಯಾಲಿಕೋ ಪ್ರತಿಗಳೂ ಸೇರಿದಂತೆ ಅದರ ಒಂದೂವರೆ ಸಾವಿರ ಪ್ರತಿಗಳೂ ಸರಸರನೆ ಖರ್ಚಾಗಿ ಹೋಗಿ ಅದೇ ವರ್ಷದ ಡಿಸೆಂಬರ್‌ನಲ್ಲೇ ಎರಡನೇ ಮುದ್ರಣ ಕಂಡಿತು. ನಂತರ ೨೦೨೦ರ ಜನವರಿಯಿಂದ ಆರಂಭವಾದಂತೆ ಪ್ರತಿ ತಿಂಗಳೂ ಒಂದು-ಕೆಲವೊಮ್ಮೆ ಎರಡು-ಮುದ್ರಣಗಳನ್ನು ಕಾಣುತ್ತಾ ಹೋದ ಈ ಪುಸ್ತಕ ಆ ವರ್ಷದ ಕೊನೆಯ ಹೊತ್ತಿಗೆ ೨೦ ಮುದ್ರಣಗಳನ್ನು ಪೂರೈಸಿತ್ತು. ಇದರಲ್ಲಿನ ನಾಲ್ಕನೆಯ ಮುದ್ರಣದಲ್ಲಿ ಒಂದು ಸಾವಿರ ಸಾದಾ ಕಾಗದದ ಪ್ರತಿಗಳೊಡನೆ ವಿಶೇಷ ಬೇಡಿಕೆಯ ಮೇರೆಗೆ ಉತ್ತಮ ಗುಣಮಟ್ಟದ ಕಾಗದದ ಐದು ನೂರು ಪ್ರತಿಗಳೂ ಸೇರಿದ್ದವು. ನಂತರ ಕೋವಿಡ್‌ನ ಎರಡನೆಯ ಅಲೆಯ ಕಾರಣದಿಂದಾಗಿ ಪುಸ್ತಕಕ್ಕಾಗಿ ಬೇಡಿಕೆ ತಗ್ಗಿತಾದರೂ ನಿಲ್ಲಲಿಲ್ಲ. ಕೋವಿಡ್ ಹಾವಳಿ ತಕ್ಕಮಟ್ಟಿಗೆ ಹತೋಟಿಗೆ ಬಂದ ನಂತರ ೨೦೨೧ರಲ್ಲಿ ಮತ್ತೆರಡು ಮುದ್ರಣಗಳನ್ನು ಕಂಡು ೨೦೨೨ರ ಮಾರ್ಚ್ ಹೊತ್ತಿಗೆ ೨೪ ಮುದ್ರಣಗಳನ್ನು ಪೂರೈಸಿ ಈಗ ೨೫ನೇ ಮುದ್ರಣದ ಬೆಳ್ಳಿ ಸಂಭ್ರಮದ ಭಾಗ್ಯ ಕಾಣುತ್ತಿದೆ. ಯಾರು ಹೇಳಿದರು, ಈ ಮಣ್ಣಿನಲ್ಲಿ ಗಾಂಧಿ ಸತ್ವ ಕಾಣೆಯಾಗಿದೆ ಎಂದು? ಆ ಸತ್ವ ಈ ಮಣ್ಣಿನ ಆಳಕ್ಕೆ ನೂಕಲ್ಪಟ್ಟಿದೆ ಅಷ್ಟೆ. ಅದರ ಮೇಲೆ ಕಾಲದ ಕಳೆ ಬೆಳೆ ಬೆಳೆದಿದೆಯಷ್ಟೆ.

ಈ 'ಗಾಂಧಿ ಕಥನ'ದ ಈ ಅಪೂರ್ವ ಯಶಸ್ಸು ಗಾಂಧಿ ಅಭಿಮಾನಿಗಳಲ್ಲಿ ಹೊಸ ಖುಷಿ, ವಿಶ್ವಾಸ ಮತ್ತು ಉತ್ಸಾಹ ಹುಟ್ಟಿಸಿದ್ದರೆ ಇಂದಿನ ದಿನಗಳ ರಾಜಕೀಯ ಪರಿಸ್ಥಿತಿಯಿಂದಾಗಿ ಹೆಚ್ಚುತ್ತಿರುವ ಗಾಂಧಿ ವಿರೋಧಿಗಳನ್ನು ಬೆಚ್ಚಿ ಬೀಳಿಸಿದೆ. ನಿಜವಾದ ಖುಷಿಯ ಸಂಗತಿ ಎಂದರೆ, ಎರಡನೆಯ ಗುಂಪಿನ ಅನೇಕರಲ್ಲಿ ಗಾಂಧಿ ಕುರಿತು ಹೊಸ ಕುತೂಹಲ ಹುಟ್ಟಿದೆ ಎಂಬುದು. ಅದೂ ಈ ಗುಂಪಿನ ಹಲವಾರು ಜನ, ವಿಶೇಷವಾಗಿ ಗಾಂಧಿ ರಾಜಕಾರಣದ ವಿರುದ್ಧ ಬಹು ವ್ಯವಸ್ಥಿತವಾಗಿ ಕಟ್ಟಿಕೊಂಡಿರುವ ಸಂಘಟನೆಗಳಿಗೆ ಸೇರಿದವರು ಮತ್ತು ಅವುಗಳ ಬಗ್ಗೆ ಸಹಾನುಭೂತಿ ಹೊಂದಿದವರಲ್ಲಿ. ತಮಗೆ ಗಾಂಧಿಯವರ ಪೂರ್ಣ ಬದುಕಿನ, ವ್ಯಕ್ತಿತ್ವದ ಪರಿಚಯವೇ ಆಗಿರಲಿಲ್ಲವೆಂದೂ, ಹಾಗಾಗಿಯೇ ತಮ್ಮಲ್ಲಿ ಗಾಂಧಿ ಕುರಿತಂತೆ ಕೆಲ ಪೂರ್ವಗ್ರಹಗಳು ಬೇರೂರಿದ್ದವು ಎಂದು

ಅವರು ಹಲುಬಿದ್ದಾರೆ. ಈ ಪುಸ್ತಕ ಈ ಸಮಸ್ಯೆಯನ್ನು ಕನ್ನಡ ಭಾಷಾ ಸಮುದಾಯದ ಮಟ್ಟಿಗಾದರೂ ನಿವಾರಿಸಿದೆ ಎಂಬುದು ಈ ಪುಸ್ತಕದ ಒಂದು ಸಾಧನೆ ಎಂದು ಇದರ ಲೇಖಕನಾಗಿ ನನ್ನ ಭಾವನೆ ಮತ್ತು ಹೆಮ್ಮೆ.

ಆದರೆ ಇದೊಂದೇ ಈ ಪುಸ್ತಕಕ್ಕೆ ಸಿಕ್ಕಿರುವ ಅಪಾರ ಜನಮನ್ನಣೆಗೆ ಕಾರಣವಿರಲಾರದು ಎಂದೂ ನಾನು ತಿಳಿದಿದ್ದೇನೆ. ಈ ಪುಸ್ತಕವನ್ನು ಒಂದು ಸಾಹಿತ್ಯ ಕೃತಿಯಾಗಿ ಪರಿಗಣಿಸಿ ಕೇಂದ್ರ ಸಾಹಿತ್ಯ ಅಕಾಡೆಮಿಯು ಇದಕ್ಕೆ ೨೦೨೧ರ ಪ್ರಶಸ್ತಿ ನೀಡಿ ಪುರಸ್ಕರಿಸಿರುವುದು ಈ ನನ್ನ ಮಾತನ್ನು ಪುಷ್ಟೀಕರಿಸುವಂತಿದೆ. ಇದಕ್ಕಾಗಿ ಅಕಾಡೆಮಿಯ ಸಂಬಂಧಪಟ್ಟವರೆಲ್ಲರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸಬಯಸುತ್ತೇನೆ. ಈ ೨೫ನೇ ಮುದ್ರಣದ ಪ್ರತಿಯೊಂದಿಗೆ ನೀಡಲಾಗುತ್ತಿರುವ 'ಗಾಂಧಿ ಕಥನಕ್ಕೊಂದು ಬೆಳ್ಳಿಯ ಬಳ್ಳಿ' ಕಿರುಪುಸ್ತಕದಲ್ಲಿನ ಲೇಖನಗಳೂ ಇದನ್ನೇ-ಕೃತಿಯ ಸಾಹಿತ್ಯಿಕ ಸೌಂದರ್ಯವನ್ನೇ- ಹೇಳುವಂತಿವೆ. ಕನ್ನಡದ ಹಲವು ಸಾಹಿತ್ಯ-ಸಂಸ್ಕೃತಿ ಚಿಂತಕರು ಸಾಂದರ್ಭಿಕವಾಗಿ ಬರೆದಿರುವ ಈ ಲೇಖನಗಳು ಈ ಪುಸ್ತಕದ ವಸ್ತುನಿಷ್ಠ ವಿಶ್ಲೇಷಣೆ-ವಿಮರ್ಶೆ ಮಾತ್ರವಾಗಿರದೆ ಪರೋಕ್ಷವಾಗಿ, ಪುಸ್ತಕಕ್ಕೆ ದೊರೆಯುತ್ತಿರುವ ವಿಶೇಷ ಜನಮನ್ನಣೆಗೆ ಕಾರಣಗಳನ್ನು ಹೇಳುವ ಪ್ರಯತ್ನಗಳಂತೆಯೂ ಕಾಣುತ್ತಿವೆ. ತಮ್ಮ ಈ ಲೇಖನಗಳ ಮೂಲಕ ನನ್ನ ಪುಸ್ತಕದ ಗರಿಮೆಯನ್ನು ಹೆಚ್ಚಿಸಿರುವ ಈ ಎಲ್ಲ ಲೇಖಕರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಈ ಕೃತಿಗೆ ಅದರ ಮೊದಲ ಮುದ್ರಣದ ಸಂದರ್ಭದಿಂದಲೇ ಈ ಜನಮಧ್ಯದ ಯಶಸ್ಸಿಗೆ ಅದರ ಒಳಗಿನ ಶಕ್ತಿಯೇ ಕಾರಣ ಎಂದು ಹೇಳುವುದು ಬರೀ ಹುಂಬತನವಾದೀತೆಂದು ನನಗೆ ಗೊತ್ತಿದೆ. ಈ ಕೃತಿಯ ಮೊದಲ ಮುದ್ರಣಕ್ಕಾಗಿ ಬರೆದ 'ಲೇಖಕನ ಮಾತು'ಗಳಲ್ಲೇ ವಿವರಿಸಿರುವಂತೆ ಯಾವುದೇ ವ್ಯಾಪಾರಿ ಲೆಕ್ಕಾಚಾರದ ಸುಳಿವೂ ಇಲ್ಲದೆ ಹುಟ್ಟಿದ ಪುಸ್ತಕವಿದು. ಗಾಂಧಿ ಪ್ರೀತಿಯ ಕುಟುಂಬದ, ಗಾಂಧಿ ಬದುಕಿನ ಸಂದೇಶ ಹರಡುವ ಉದಾತ್ತ ಉದ್ದೇಶದಿಂದ ರೂಪು ತಳೆದ ಈ ಪುಸ್ತಕ ಆ ಉದ್ದೇಶಕ್ಕಷ್ಟೇ ಬದ್ಧವಾಗಿ ಜನರಿಗೆ ತಲುಪಿಸುವ ಪ್ರಯತ್ನವಾಗಿ ಪ್ರಕಾಶಕರು-ನಿರ್ದಿಷ್ಟವಾಗಿ ಎಂ.ಸಿ.ನರೇಂದ್ರ ಅವರು ಯಾವುದೇ ಲಾಭ ನಷ್ಟವಿಲ್ಲದ ಆಧಾರದ ಮೇಲೇ ಈ ಪುಸ್ತಕವನ್ನು ಬಹು ಸುಲಭ ಬೆಲೆಗೆ ಓದುಗರಿಗೆ ಒದಗಿಸಿದ್ದಾರೆ. ಕೆಲವು ಸಂದರ್ಭಗಳಲ್ಲಿ ಓದುಗರ/ಕೊಳ್ಳಬಯಸುವವರ ಉತ್ಸಾಹ ಕಂಡು ಅವರು ಸಭೆಗಳಲ್ಲಿ ತಾವು ಕೂತಲ್ಲಿಂದಲೇ ಉತ್ಪಾದನಾ ವೆಚ್ಚಕ್ಕಿಂತ ಬಹು ಕಡಿಮೆ ಬೆಲೆಗೆ ಮಾರಲು ತಮ್ಮ ಸಿಬ್ಬಂದಿಗೆ ಕೂಗಿ ಹೇಳಿದ್ದನ್ನೂ ನಾನು ಕಂಡಿದ್ದೇನೆ. ಆಗೆಲ್ಲ ನಾನು ಹಾಗೆ ಮಾಡಬೇಡಿರೆಂದು ಕೋರಿಕೊಂಡಿರುವುದೂ ಉಂಟು. ಇದಕ್ಕೆ ಕಾರಣ, ನನ್ನ ಜೀವನದ ಸಾರ್ಥಕ ಸಾಧನೆಯೆಂದು ಬಲ್ಲವರಿಂದ ಗುರುತಿಸಲ್ಪಟ್ಟಿರುವ ಪುಸ್ತಕಕ್ಕೆ ಒಂದು ನಿಗದಿತ ಕನಿಷ್ಟ ಬೆಲೆಯಾದರೂ ಇರಲೆಂದು! ಈ ಗ್ರಂಥದ ಒಟ್ಟು ಪುಟಗಳು, ಅದಕ್ಕೆ ನಿಗದಿಪಡಿಸಿರುವ ಬೆಲೆ ಮತ್ತು ಅದು ಎಷ್ಟು ಬೆಲೆಗೆ ನಿಮಗೆ ದೊರೆತಿದೆ ಎಂಬುದರ ಲೆಕ್ಕಾಚಾರ ಮಾಡಿದರೆ ಈ ಕೃತಿಯ ಪ್ರಕಾಶನದ ಉದಾತ್ತ ಉದ್ದೇಶ ಮತ್ತು ನಡೆ ಎರಡೂ ಅರ್ಥವಾದಾವು. ಹಾಗೇ ಈ ಪುಸ್ತಕಕ್ಕೆ ಸಿಕ್ಕಿರುವ ಅಪಾರ ಜನಮನ್ನಣೆಗೆ ಈ ಪುಸ್ತಕದ ಹೊರಗೆ ಇರುವ ಕಾರಣವೂ ಗೊತ್ತಾದೀತು. ಪ್ರಕಾಶಕ ನರೇಂದ್ರ ಅವರ ಈ ಎಲ್ಲ

ಉದಾತ್ತ ಯೋಜನೆಯ ಹಿಂದಿರುವ, ಈ ಹಿಂದೊಮ್ಮೆ ನಾನು 'ಗಾಂಧಿ ಜೋಗಿ' ಎಂದು ಕರೆದಿರುವ ಅವರ ಮತ್ತು ನನ್ನ ಮಿತ್ರ ಜಿ.ಬಿ.ಶಿವರಾಜು ಅವರನ್ನೂ ಇಲ್ಲಿ ನೆನಪಿಸಿಕೊಳ್ಳದಿದ್ದರೆ ತಪ್ಪಾದೀತು. ಅವರಿಗೆ ಇಲ್ಲಿ ಕೃತಜ್ಞತೆ ಹೇಳುವುದು ಅಪಚಾರವಾದೀತು ಎನ್ನುವಷ್ಟು ಶಿವರಾಜು ನಮ್ಮೊಳಗೊಂದಾಗಿದ್ದಾರೆ.

ಈ ಸಂದರ್ಭದಲ್ಲಿ ನಾವು ನೆನೆಸಿಕೊಳ್ಳಬೇಕಾದ ಇನ್ನೋರ್ವ ವ್ಯಕ್ತಿ ಎಂದರೆ, ಗದಗದ ಕೆ. ಹೆಚ್.ಪಾಟೀಲ ಪ್ರತಿಷ್ಠಾನದ ಡಿ.ಆರ್ ಪಾಟೀಲರು. ಗಾಂಧಿಯವರ ಸ್ವರಾಜ್ಯ ಪರಿಕಲ್ಪನೆಯನ್ನು ತಮ್ಮ ನೆರೆಹೊರೆಯಲ್ಲಿ ತಮ್ಮ ಮಿತಿಯಲ್ಲಾದರೂ ಸಾಕಾರಗೊಳಿಸುವ ಕೆಲಸದಲ್ಲಿ ತೊಡಗಿರುವ ಶ್ರೀಯುತರು ಈ ಪುಸ್ತಕದ ಮಹಾಪ್ರೇಮಿಯಾಗಿದ್ದು ಇದರ ಹಲವು ಮುದ್ರಣಗಳನ್ನು ಸಾರಾಸಗಟಾಗಿ ಎತ್ತಿಕೊಂಡು ಹೋಗಿ ಗದಗ ಮತ್ತು ಸುತ್ತಮುತ್ತಲ ಪ್ರದೇಶಗಳ ಜನರಿಗೆ ಸುಲಭ ಬೆಲೆಯಲ್ಲಿ ತಲುಪಿಸಿದ್ದಾರೆ. ನಾನೇ ಕಣ್ಣಾರೆ ಕಂಡಂತೆ ೨೦೧೯ರ ಅಕ್ಟೋಬರ್‌ನಲ್ಲಿ ಗದಗದಲ್ಲಿ ಜರುಗಿದ ಈ ಪುಸ್ತಕದ ನಾಲ್ಕು ಸಾವಿರ ಪ್ರತಿಗಳ ಲೋಕಾರ್ಪಣೆಯ ಸಮಾರಂಭ ಮತ್ತೆ ನಾಲ್ಕು ಸಾವಿರ ಪ್ರತಿಗಳ ಬೇಡಿಕೆಗೆ ವೇದಿಕೆಯಾಯಿತು. ಗಾಂಧಿ ಪುಸ್ತಕ ಕೊಳ್ಳುವುದೂ ಒಂದು ಹುಚ್ಚಾಗಿ ನಾನು ಕಂಡಿದ್ದು ಅಲ್ಲೇ. ನರೇಂದ್ರ-ಶಿವರಾಜು-ಡಿ.ಆರ್.ಪಾಟೀಲರಂತಹ ತ್ರಿಮೂರ್ತಿಗಳಿರುವವರೆಗೆ ಗಾಂಧಿಯವರಿಗೆ ಸಾವಿಲ್ಲ ಎಂದು ನಿಸೂರಾಗಿ ಹೇಳಬಹುದು!

ಇನ್ನು ಈ ಪುಸ್ತಕವನ್ನು ಇವರ ಮತ್ತು ನನ್ನ ಹಲವಾರು ಗೆಳೆಯರು ನೂರು-ಐವತ್ತು-ಇಪ್ಪತ್ತೈದು-ಹತ್ತು-ಹೀಗೆ ಸಗಟಾಗಿ ಕೊಂಡು ತಮ್ಮ ಗೆಳೆಯರಿಗೆ, ಬಂಧು ಬಾಂಧವರಿಗೆ ನೀಡುತ್ತಿರುವ, ಮಾರುತ್ತಿರುವ ವಿದ್ಯಮಾನ ಗಾಂಧಿ ಕುರಿತು ಈ ನಾಡಿನಲ್ಲಿ ಹೆಚ್ಚುತ್ತಿರುವ ಆಸಕ್ತಿ-ಕುತೂಹಲಗಳ ದ್ಯೋತಕವೆಂದೇ ನಾನು ಭಾವಿಸಿದ್ದೇನೆ. ಹಾಸನದ ಗೆಳೆಯರಾದ ಮಂಜುನಾಥ ದತ್ತ ಮತ್ತು ಆರ್.ಪಿ. ವೆಂಕಟೇಶ ಮೂರ್ತಿ ಮತ್ತವರ ಗೆಳೆಯರು ಹಾಸನದಲ್ಲಿ ಮಾಡಿದ ಈ ಪುಸ್ತಕದ ಸಾಮೂಹಿಕ ಲೋಕಾರ್ಪಣೆ ಇದಕ್ಕೊಂದು ಉಜ್ವಲ ಉದಾಹರಣೆ. ಇವರಲ್ಲದೆ ಧಾರವಾಡದ ಗೆಳೆಯರಾದ ಸಂಜೀವ ಕುಲಕರ್ಣಿ ಮತ್ತು ಅವರ ಮಿತ್ರರು ತಮ್ಮ 'ಗಾಂಧಿ ಶಾಂತಿ ಪ್ರತಿಷ್ಠಾನ'ದ ಅಡಿಯಲ್ಲಿ, ತುಮಕೂರಿನಲ್ಲಿ ಮಲ್ಲಿಕಾ ಬಸವರಾಜು ಮತ್ತವರ ಗೆಳತಿಯರು ಜಿಲ್ಲಾ ಲೇಖಕಿಯರ ಸಂಘದ ಆಶ್ರಯದಲ್ಲಿ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆಯ ಪದಾಧಿಕಾರಿ ಗೆಳೆಯರು ಮೈಸೂರಿನಲ್ಲಿ ಪುಸ್ತಕದ ವಿವಿಧ ಮುದ್ರಣಗಳ ಬಿಡುಗಡೆ ಸಮಾರಂಭಗಳನ್ನು ಏರ್ಪಡಿಸಿ ಪುಸ್ತಕಗಳನ್ನು ಜನರಿಗೆ ವ್ಯಾಪಕವಾಗಿ ತಲುಪಿಸುವ ಕೆಲಸ ಮಾಡಿದ್ದಾರೆ. ಕವಿ ಸಿದ್ಧಲಿಂಗಯ್ಯನವರು ತಾವು ಅನಿರೀಕ್ಷಿತ ಮತ್ತು ದುಃಖದಾಯಕ ಮರಣಕ್ಕೆ ತುತ್ತಾಗುವ ಸ್ವಲ್ಪ ಮುನ್ನ 'ನೀವು ಗಾಂಧಿ ಪುಸ್ತಕ ಬರೆದು ಗಾಂಧಿಯಂತೆಯೇ ಶೆಟ್ಟಿಯಾಗಿದ್ದೀರಿ!' ಎಂದು ಹಾಸ್ಯ ಚಟಾಕಿ ಹಾರಿಸಿ 'ಪುಣ್ಯದ ಕೆಲಸಕ್ಕೆ ಚೌಕಾಶೀ ಬೇಡ' ಎಂದು ನನಗೆ ಉಪದೇಶ ನೀಡುತ್ತಲೇ ಸಾಕಷ್ಟು ಚೌಕಾಶಿ ಮಾಡಿ ಈ ಪುಸ್ತಕದ ೨೫ ಪ್ರತಿಗಳನ್ನು ಅಂಚೆ ಮೂಲಕ ತರಿಸಿಕೊಂಡದ್ದು ಯಾವ ಉದ್ದೇಶಕ್ಕೆಂದು ಹೇಳಿದ್ದು ಗೊತ್ತೆ? 'ಮುಚ್ಚಿಹೋಗಿರುವ ನವ ಅಂಬೇಡ್ಕರ್‌ವಾದಿ ಗೆಳೆಯರ ಕಣ್ಣು ತೆರೆಸಲು!' ಇದರಲ್ಲಿ ಅವರೆಷ್ಟು ಯಶಸ್ವಿಯಾದರೋ ತಿಳಿಯದು! ಇನ್ನು

ನನ್ನ ಪತ್ನಿ ಸವಿತಾಗೆ ಈ ಪುಸ್ತಕ ದಿನನಿತ್ಯ ಬಿಡುವಿಲ್ಲದ ಕೆಲಸ ನೀಡಿಬಿಟ್ಟಿದೆ. ಹೆಚ್ಚೂ ಕಡಿಮೆ ಪ್ರತಿದಿನವೂ ಲೇಖಕನಾಗಿ ನನ್ನ ಬಳಿ ಬರುವ ಓದುಗರ ಬಿಡಿ ಪ್ರತಿಗಳ ಬೇಡಿಕೆಯನ್ನು ಪೂರೈಸಲು ಪ್ರಕಾಶಕರಿಂದ ಸಗಟಾಗಿ ಪುಸ್ತಕಗಳನ್ನು ತರಿಸಿ, ಬಿಡಿ ಪ್ರತಿಗಳನ್ನು ಅಂಚೆಗೆ ಸಿದ್ಧಪಡಿಸುವ ದಿನನಿತ್ಯದ ಕೆಲಸವನ್ನು ಅವಳು ಗಾಂಧಿ ಮೇಲಿನ ತನ್ನ ಪ್ರೀತಿಯಿಂದ ಧಾರ್ಮಿಕ ಕೆಲಸವೆಂದೇ ಭಾವಿಸಿ ಮಾಡುತ್ತಿದ್ದಾಳೆ. ಹೀಗೆ ಸ್ವತಃ ಅವಳು ಅಂಚೆಗೆ ಹಾಕಿರುವ ಬಿಡಿಪ್ರತಿಗಳ ಸಂಖ್ಯೆ ಕಳೆದೆರಡು ವರ್ಷಗಳಲ್ಲಿ ಸಾವಿರವನ್ನೂ ಮೀರಿರಬಹುದು. ಈ ಗಾಂಧಿ ಸೇವೆಗಾಗಿ ಈ ಎಲ್ಲರಿಗೂ ನನ್ನ ಕೃತಜ್ಞತೆಗಳು.

ಇದು ಈ ಗ್ರಂಥದ ೨೫ನೇ ಮುದ್ರಣವಾಗಿರುವ ಹಾಗೇ ಅದರ ಐದನೇ ಪರಿಷ್ಕೃತ ಆವೃತ್ತಿಯೂ ಹೌದು. ಅಂದರೆ ಈ ಗ್ರಂಥದ ಪಠ್ಯ ಐದನೇ ಬಾರಿಗೆ ಹೊಸ ಸಂಗತಿಗಳ ಸೇರ್ಪಡೆಯೊಂದಿಗೆ ಅಥವಾ ಕೆಲವು ಭಾಗಗಳ ಪರಿಷ್ಕಾರದೊಂದಿಗೆ ಹೊಸ ರೂಪದಲ್ಲಿ ಪ್ರಕಟಗೊಳ್ಳುತ್ತಿದೆ. ಕನ್ನಡ ಪುಸ್ತಕೋದ್ಯಮ ಭಾರತದ್ದೇ ಇಂಗ್ಲಿಷ್ ಪುಸ್ತಕೋದ್ಯಮಕ್ಕೆ ಹೋಲಿಸಿದರೂ ಇನ್ನೂ ಶೈಶವಾವಸ್ಥೆಯಲ್ಲಿದ್ದು, ಅಂತಿಮವಾಗಿ ಪುಸ್ತಕವಾಗಿ ಮುದ್ರಣವಾಗುವ ಪಠ್ಯದ ಕಾಗುಣಿತದ ತಪ್ಪುಗಳೂ ಸೇರಿದಂತೆ ಎಲ್ಲ ರೀತಿಯ ಜವಾಬ್ದಾರಿಗಳನ್ನೂ ಲೇಖಕನೇ ಹೊರಬೇಕಾಗಿದೆ. ಆದ್ದರಿಂದ ಪಠ್ಯದ ಅಂತಿಮ ಮತ್ತು ಅಗತ್ಯ ಪರಿಷ್ಕಾರ ಲೇಖಕನನ್ನು ಸುಸ್ತು ಮಾಡಿ ಆ ಕೆಲಸ ಕೊನೆಗೂ ಅಪೂರ್ಣವಾಗಿಯೇ ಉಳಿಯುವಂತಾಗುತ್ತದೆ. ಈ ಪುಸ್ತಕದ ವಿಷಯದಲ್ಲೂ ಹಾಗೇ ಆಗಿದೆ. ನನ್ನೆಲ್ಲ ಪ್ರಯತ್ನಗಳ ಹೊರತಾಗಿಯೂ ಸಂಯುಕ್ತ ವಾಕ್ಯಗಳನ್ನು ಸರಳಗೊಳಿಸುವ ಮತ್ತು ಕಂಡೂ ಕಾಣದಂತಿರುವ ಕೆಲವು ಮುದ್ರಣ ದೋಷಗಳನ್ನು ಸರಿಪಡಿಸುವ ಕೆಲಸವನ್ನು ಪೂರ್ಣ ತೃಪ್ತಿಕರವಾಗಿ ಮಾಡಲಾಗಿಲ್ಲ ಎಂಬ ಅಸಮಾಧಾನ ನನ್ನಲ್ಲಿ ಉಳಿದೇ ಹೋಗಿದೆ. ಹಿಂದಿನ ಮುದ್ರಣಗಳಲ್ಲಿ ಕಣ್ತಪ್ಪಿನಿಂದ ಉಳಿದುಹೋದ ಮುದ್ರಣದೋಷಗಳನ್ನು ನನ್ನ ಗಮನಕ್ಕೆ ತಂದು ಈ ಬೆಳ್ಳಿ ಮುದ್ರಣವನ್ನು ಆದಷ್ಟು ನೇರ್ಪುಗೊಳಿಸುವಲ್ಲಿ ನೆರವಾದ ಶ್ರೀ ರವಿಕೃಷ್ಣಾರೆಡ್ಡಿ, ಶ್ರೀಮತಿ ರೇಖಾಂಬ ಮತ್ತು ಶ್ರೀಮತಿ ಕೆ ಶ್ರೀದೇವಿ ಅವರಿಗೆ ನನ್ನ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಇದರ ಮಧ್ಯೆಯೂ ಈ ಆವೃತ್ತಿಗೆ ಕೊನೆಯಲ್ಲಿ ಅನುಬಂಧವೊಂದನ್ನು ಸೇರಿಸುವ ಧೈರ್ಯ ಮಾಡಿದ್ದೇನೆ. ಈ ಪುಸ್ತಕದ ಓದಿನ ಆಚೆಗೂ ಇರುವ ಗಾಂಧಿ ಚಿತ್ರವನ್ನು ಪರಿಚಯಿಸುವುದು ಇದರ ಉದ್ದೇಶ. ಗಾಂಧಿ ಬರಹದ ರಾಶಿಯ ಮೇಲೆ ಒಮ್ಮೆ ಕಣ್ಣಾಡಿಸಿದರೆ ಅವರು ಬರೆಯದ ವಿಷಯ ಈ ಆಕಾಶದ ತಳಗೆ ಇರಲಾರದು ಎನಿಸುತ್ತದೆ. ಹಾಗೆ ನೋಡಿದರೆ ಅವರು ಆಕಾಶದ ಮೇಲಿರುವುದೆಲ್ಲದರ ಬಗ್ಗೆಯೂ ಬರೆದಿರುವಂತೆ ತೋರುತ್ತದೆ. ಆದರೆ ಅದೆಲ್ಲವನ್ನೂ ಆಕಾಶದ ತಳಕ್ಕೆ, ಭೂಮಿಯ ಮೇಲೆ ತಂದು ಬರೆಯುತ್ತಾರಷ್ಟೆ. ಹಾಗೆ ಬರೆದುದರ ಬಹುಪಾಲು ಗುರುತುಗಳು ಈ ಪುಸ್ತಕದ ವಿವಿಧ ಅಧ್ಯಾಯ–ಸಂದರ್ಭಗಳಲ್ಲಿ ಕಾಣಿಸಿದ್ದೇನೆ. ಅಂತಹ ಕೆಲವನ್ನು ವಿಶೇಷವಾಗಿ ಕಾಣಿಸುವುದು ಈ ಪುಸ್ತಕದ ಉದ್ದೇಶವನ್ನು ಹಾಗೆಯೇ ಮೌಲಿಕತೆಯನ್ನೂ ಹೆಚ್ಚಿಸಬಹುದು ಎಂಬ ಕಾರಣಕ್ಕಾಗಿ ಈ ಅನುಬಂಧವನ್ನು ಸೇರಿಸಿರುವೆ. ಮುಖ್ಯವಾಗಿ

ಗಾಂಧಿಯನ್ನು ಇಂದಿಗೆ ಅವಾಸ್ತವಿಕವೆನ್ನಿಸುವ ಅವರ ಹಲವು ಕಠಿಣ ವ್ರತಗಳಿಂದ ಮುಕ್ತಗೊಳಿಸಿ ಎಲ್ಲ ಕಾಲಕ್ಕೂ ಸಲ್ಲುವ ಅವರ ದರ್ಶನಕ್ಕೊಂದು ಒಂದು ಅದ್ಭುತ ಸಾತ್ವಿಕ ಚೌಕಟ್ಟಿನಂತಿರುವ 'ಸಪ್ತ ಪಾತಕಗಳ ಸೂತ್ರ'ವನ್ನು ಪರಿಚಯಿಸಲು. ಇಂದಿಗೆ ಪ್ರಸ್ತುತವಾದ ಗಾಂಧಿವಾದ ಎಂದರೆ ಇದೇ ಇರಬೇಕು.

ಶಿವಮೊಗ್ಗ ಡಿ.ಎಸ್. ನಾಗಭೂಷಣ

೨.೫.೨೦೨೨

ಎರಡು ಮಾತು

ಗಾಂಧಿ ಕಥನದ ಇಪ್ಪತ್ತೈದನೆಯ ಮುದ್ರಣದ ಮುಖಪುಟ ವಿನ್ಯಾಸ ಮಾಡಿರುವ ಕಲಾವಿದ ಶ್ರೀ ಎಂ.ಎಸ್. ಮೂರ್ತಿ ಅವರಿಗೂ ಮುದ್ರಿಸುತ್ತಿರುವ ರಿಪ್ಲಿಕಾ ಆಫ್‌ಸೆಟ್ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ದಯಾನಂದ್ ಮತ್ತು ಆರ್. ರವಿಪ್ರಕಾಶ್ ಸಹೋದರರಿಗೆ ಮತ್ತವರ ಸಿಬ್ಬಂದಿ ವರ್ಗಕ್ಕೂ ಕೃತಜ್ಞತೆಗಳು.

ಶಿವಮೊಗ್ಗ **ಸವಿತಾ ನಾಗಭೂಷಣ**

೨.೫.೨೦೨೨

25ನೇ ಮುದ್ರಣಕ್ಕೆ ಪ್ರಕಾಶಕರ ನುಡಿ

ಕನ್ನಡಕ್ಕೆ ಗಾಂಧಿ ಸಾಹಿತ್ಯ ಹೊಸದಲ್ಲ. ಗಾಂಧೀಜಿಯವರನ್ನು ಕುರಿತು, ಕವಿತೆಗಳು, ಲೇಖನಗಳು, ಪ್ರಬಂಧಗಳು ಜೀವನ ಚರಿತ್ರೆಗಳು ಸಾಕಷ್ಟು ಬಂದಿವೆ. ಆದರೂ ಗಾಂಧೀಜಿಯವರ ಬಗ್ಗೆ ಬರುತ್ತಿರುವ ಸಾಹಿತ್ಯಕ್ಕೆ ಬರವಿಲ್ಲ. ಇತ್ತೀಚಿನ ವರ್ಷಗಳಲ್ಲಿ ಗಾಂಧೀಜಿಯವರನ್ನು ಕುರಿತು ಖ್ಯಾತ ಚಿಂತಕರಾದ ಶ್ರೀ ಡಿ.ಎಸ್. ನಾಗಭೂಷಣ ಅವರು ಬರೆದ 'ಗಾಂಧಿ ಕಥನ' ಒಂದು ಅಪರೂಪದ ಗ್ರಂಥ. ಕೇವಲ ಮೂರು ವರ್ಷಗಳಲ್ಲಿ 25 ಬಾರಿ ಮರುಮುದ್ರಣಗಳನ್ನು ಕಂಡ ಕೃತಿ ಇದು. ಸಹಜವಾಗಿ ಈ ಕೃತಿ 2021ರ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ಸಂದಿದೆ. ಸರಳವಾಗಿ ಹಾಗೂ ಓದಿಸಿಕೊಳ್ಳುವ ಗುಣದಿಂದಾಗಿ ಈ ಕೃತಿ ಇಂದು ಕನ್ನಡ ಓದುಗರ ವಲಯದಲ್ಲಿ ಹೆಚ್ಚು ಜನಪ್ರಿಯತೆಯನ್ನು ಪಡೆದುಕೊಂಡ ಕೃತಿ. ಯಾವುದೇ ಅತಿರೇಕಗಳಿಗೆ ಹೋಗದೆ ಗಾಂಧೀಜಿಯವರ ಜೀವನ ಸಾಧನೆಗಳನ್ನು ವಸ್ತುನಿಷ್ಠ ದೃಷ್ಟಿಯಲ್ಲಿ ಓದುಗರಿಗೆ ಪರಿಚಯಿಸುವ ಕಾರ್ಯವನ್ನು ಲೇಖಕರು ಸೊಗಸಾಗಿ ಮಾಡಿದ್ದಾರೆ. ಇದು ಪ್ರತಿಯೊಬ್ಬ ಭಾರತೀಯನೂ ಓದಲೇ ಬೇಕಾದ ಕೃತಿ. ಅದರಲ್ಲೂ ಗಾಂಧೀಜಿಯವರ ಬಗ್ಗೆ ತಪ್ಪು ಅಭಿಪ್ರಾಯಗಳನ್ನು ಬಿತ್ತುತ್ತಿರುವ ಈಗಿನ ಕಾಲಘಟ್ಟದಲ್ಲಿ ಈ ಕೃತಿಯ ಓದು-ಪ್ರಚಾರದ ಅಗತ್ಯ ತುಂಬಾ ತುರ್ತಿನದಾಗಿದೆ. ಈ ನಿಟ್ಟಿನಲ್ಲಿ ಇಬ್ಬರು ಮಹನೀಯರನ್ನು ಇಲ್ಲಿ ಕೃತಜ್ಞತೆಯಿಂದ ನೆನಪಿಸಿಕೊಳ್ಳಲೇ ಬೇಕು.

ಮಾನ್ಯ ಶ್ರೀ ಡಿ.ಆರ್. ಪಾಟೀಲರು ಮತ್ತು ಅವರ ಸೋದರರಾದ ಮಾನ್ಯ ಶ್ರೀ ಎಚ್..ಕೆ. ಪಾಟೀಲರು. ಇಬ್ಬರೂ ಹುಲಿಕೋಟಿಯ ಶ್ರೀ ಕೆ.ಎಚ್. ಪಾಟೀಲ ಕುಟುಂಬದವರು. ಗಾಂಧೀಜಿಯವರ ಗ್ರಾಮಸ್ವರಾಜ್ಯದ ಕಲ್ಪನೆಯನ್ನು ಈ ಇಬ್ಬರು ಮಹನೀಯರು ತಮ್ಮ ಕ್ಷೇತ್ರದಲ್ಲಿ ವಾಸ್ತವಕ್ಕೆ ಇಳಿಸಲು ದುಡಿಯುತ್ತಿರುವವರು.

ಅವರು ಹುಲಿಕೋಟೆಯಲ್ಲಿ ನಿರ್ಮಿಸಿರುವ ಸರ್ವಜನಾಂಗದವರನ್ನೂ ಒಳಗೊಂಡಂತೆ ರೂಪಿತವಾಗಿರುವ ಶಾಂತಿವನ ಅವರ ವಿಶ್ವಬಂಧುತ್ವದ ಪ್ರತೀಕದಂತಿದೆ. ಗಾಂಧೀಜಿಯವರ ಅಹಿಂಸೆ, ಸತ್ಯಾಗ್ರಹಗಳ ದಾರಿಯಲ್ಲಿ ನಡೆದಿರುವ ಈ ಸೋದರರ ನಡೆ ಯಾರಿಗೂ ಅನುಕರಣೀಯ. ಇವರು ನಮ್ಮ ಶ್ರೀ ಡಿ.ಎಸ್. ನಾಗಭೂಷಣ ಅವರ 'ಗಾಂಧಿ ಕಥನ' ಕೃತಿಯ 19 ಸಾವಿರ ಪ್ರತಿಗಳನ್ನು ಜನತೆಗೆ ವಿತರಿಸಿ ಕನ್ನಡ ಮನಸ್ಸುಗಳಿಗೆ ಗಾಂಧೀಜಿಯವರ ವಿಚಾರಧಾರೆಗಳನ್ನು ತಲುಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇವರ ಈ ಅಕ್ಷರ ದಾಸೋಹದ ಸೇವೆ ಅನುಪಮವಾದುದು. ಅವರ ಈ ಪ್ರಾಂಜಲಮನಸ್ಸಿನ ಸೇವೆಗೆ ನಾವು ಋಣಿಯಾಗಿದ್ದೇವೆ.

ಕರ್ನಾಟಕ ರಾಜ್ಯದ ಜನತೆ ಮರೆಯಲಾಗದ, ಮರೆಯಬಾರದ ಹೆಸರು ಶ್ರೀ ಕೆ.ಎಚ್. ಪಾಟೀಲರದು. ರಾಜಕಾರಣದಲ್ಲಿ ಸಾಕಷ್ಟು ಜನ ಶಾಸಕರಾಗಿ ಆಯ್ಕೆಯಾಗಿದ್ದಾರೆ, ಸಚಿವರಾಗಿ ಆಗಿ ಹೋಗಿದ್ದಾರೆ. ಆದರೆ ಅವರೆಲ್ಲ ಚರಿತ್ರೆಯನ್ನು ರೂಪಿಸಿದವರಲ್ಲ. ಯಾರು ಸಿಕ್ಕ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು ಸಾಧನೆ ಸೇವೆಗೈದಿರುತ್ತಾರೋ ಅಂಥವರು ಮಾತ್ರ ನೆನಪಿನಲ್ಲಿ ಉಳಿಯುವ ಹೆಜ್ಜೆಗುರುತುಗಳನ್ನು ಉಳಿಸಿ ಹೋಗುತ್ತಾರೆ. ಆ ಸಾಲಿನಲ್ಲಿ ಕರ್ನಾಟಕದ ರಾಜಕಾರಣದಲ್ಲಿ ಶ್ರೀ ಕೆ.ಎಚ್. ಪಾಟೀಲರೂ ಒಬ್ಬರು. ಅವರು ತಾವು ಆಯ್ಕೆಯಾಗಿ ಬಂದ ಗದಗ ಕ್ಷೇತ್ರಗಳಲ್ಲಿ ಸಾಕಷ್ಟು ಬೆಳವಣಿಗೆ ಕಾಣುವಂತೆ ಮಾಡಿದ್ದಾರೆ. ಅವರ ಸ್ಥಾಪಿಸಿದ ಶಿಕ್ಷಣ ಸಂಸ್ಥೆಗಳು ಗದಗ ಜನತೆಯ ಅಷ್ಟೇ ಅಲ್ಲ ಬೇರೆ ಕಡೆಯಿಂದಲೂ ಬಂದು ಶಿಕ್ಷಣಾರ್ಥಿಗಳಿಗೆ ವಿದ್ಯಾದಾನ ನೀಡಿದ ಸಾರ್ಥಕ ಸಂಸ್ಥೆಗಳಾಗಿವೆ. ಜಾತ್ಯಾತೀತವಾಗಿ ಸಾರ್ವಜನಿಕ ಸೇವೆಗೆ ತೊಡಗಿಸಿಕೊಂಡಿದ್ದ ಶ್ರೀ ಕೆ.ಎಚ್. ಪಾಟೀಲರು ರಾಜಕೀಯ ಜೀವನ ಮಾದರಿಯದ್ದಾಗಿತ್ತು. ಗಾಂಧೀಜಿ ಅವರ ಗ್ರಾಮಸ್ವರಾಜ್ಯದ ಕಲ್ಪನೆಯನ್ನು ಆಗು ಮಾಡುವ ತತ್ವ ಬದ್ಧ ರಾಜಕಾರಣ ಅವರದ್ದಾಗಿತ್ತು. ಅವರು ಅಂದು ಹಾಕಿದ ಆ ರಾಜಕಾರಣದ ದಾರಿಯಲ್ಲಿ ಇಂದು ಅವರ ಕುಟುಂಬದ ಮಕ್ಕಳು ತತ್ವನಿಷ್ಠರಾಗಿ ನಡೆಯುತ್ತಿದ್ದಾರೆ. 'ಗಾಂಧಿ ಕಥನ' 25 ಮುದ್ರಣಗಳನ್ನು ಕಾಣಲು ಇವರು ಮುಖ್ಯಕಾರಣರು, ಇವರಿಗೆ ನಮ್ಮ ವಿನಮ್ರ ನಮನಗಳು.

'ಗಾಂಧಿ ಕಥನ'ದ 25ನೇ ಆವೃತ್ತಿ ಪ್ರಕಟವಾಗುತ್ತಿರುವುದಕ್ಕೆ ಕಾರಣರಾದ ಕನ್ನಡ ಓದುಗರಿಗೆ ನಮ್ಮ ಪ್ರಕಾಶನದ ಮೂಲಕ ವಂದನೆಗಳನ್ನು ಸಲ್ಲಿಸುತ್ತೇನೆ. 25ನೇ ಮುದ್ರಣ ಪ್ರಕಟಣೆಯ ಕಾಲಕ್ಕೆ ನಮ್ಮನ್ನು ಅಗಲಿದ ಲೇಖಕರಾದ ಶ್ರೀ ಡಿ.ಎಸ್. ನಾಗಭೂಷಣ ಅವರಿಗೆ ಋಣಿಯಾಗಿದ್ದೇವೆ. ಅವರ ಪತ್ನಿ ಕವಿಯತ್ರಿ ಶ್ರೀಮತಿ ಸವಿತಾ ನಾಗಭೂಷಣ ಅವರಿಗೆ ಕೃತಜ್ಞರಾಗಿದ್ದೇವೆ. ಗಾಂಧಿ ವಿಚಾರಾಸಕ್ತರಾದ ಪ್ರೊ. ಜಿ.ಬಿ. ಶಿವರಾಜು ಅವರಿಗೆ ನಮ್ಮ ಪ್ರಕಾಶನದ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಈ ಹಿಂದಿನ ಮುದ್ರಣಗಳನ್ನು ಮುದ್ರಿಸಿದ ಎಲ್.ಕೆ. ಪ್ರೆಸ್ ಮಾಲೀಕರಾದ ಡಾ.ಬಿ.ಎನ್. ಲಕ್ಷ್ಮೀಕಾಂತ ಅವರಿಗೆ, ಈ ಮುದ್ರಣವನ್ನು ಪ್ರಕಟಿಸುತ್ತಿರುವ ರಿಪ್ಲಿಕಾ ಆಫ್‌ಸೆಟ್ ಪ್ರಿಂಟರ್ಸ್ ಮುದ್ರಣದ ಮಾಲೀಕರಾದ ಶ್ರೀ ಆರ್. ದಯಾನಂದ ಸಾಗರ್ ಮತ್ತು ಶ್ರೀ ಆರ್. ರವಿಪ್ರಕಾಶ್ ಅವರಿಗೆ ಕೃತಜ್ಞತೆಗಳು. ಹಾಗೆಯೇ ಎಲ್ಲಾ ಮುದ್ರಣಗಳ ಸಂದರ್ಭದಲ್ಲಿ ಅನೇಕರು ಪ್ರತ್ಯಕ್ಷ, ಪರೋಕ್ಷವಾಗಿ ನೆರವಾಗಿದ್ದಾರೆ ಅವರೆಲ್ಲರಿಗೂ ನನ್ನ ನಮನಗಳು.

ಎಂ.ಸಿ. ನರೇಂದ್ರ
ಪ್ರಕಾಶಕರು

ಪರಿವಿಡಿ

ಗಾಂಧಿ ಕಥನ: ಹೆಜ್ಜೆ - ೧

ಗಾಂಧಿ ಕಥನ: ಹೆಜ್ಜೆ - ೨

ಗಾಂಧಿ ಕಥನ: ಹೆಜ್ಜೆ - ೩

ಅನುಬಂಧ:



ದ.ಆಫ್ರಿಕಾದಲ್ಲಿ ವಕೀಲರಾಗಿ ಗಾಂಧಿ



ಗಾಂಧಿ ಕಥನ

ಹೆಜ್ಜೆ ೧

ಗಾಂಧಿ ಕಥನ ಗಾಂಧಿ ಕಥನ ಗಾಂಧಿ ಕಥನ
ಗಾಂಧಿ ಕಥನ ಗಾಂಧಿ ಕಥನ ಗಾಂಧಿ ಕಥನ
ಗಾಂಧಿ ಕಥನ ಗಾಂಧಿ ಕಥನ ಗಾಂಧಿ ಕಥನ
ಗಾಂಧಿ ಕಥನ ಗಾಂಧಿ ಕಥನ ಗಾಂಧಿ ಕಥನ
ಗಾಂಧಿ ಕಥನ ಗಾಂಧಿ ಕಥನ ಗಾಂಧಿ ಕಥನ
ಗಾಂಧಿ ಕಥನ ಗಾಂಧಿ ಕಥನ ಗಾಂಧಿ ಕಥನ
ಗಾಂಧಿ ಕಥನ ಗಾಂಧಿ ಕಥನ ಗಾಂಧಿ ಕಥನ
ಗಾಂಧಿ ಕಥನ ಗಾಂಧಿ ಕಥನ ಗಾಂಧಿ ಕಥನ
ಗಾಂಧಿ ಕಥನ ಗಾಂಧಿ ಕಥನ ಗಾಂಧಿ ಕಥನ
ಗಾಂಧಿ ಕಥನ ಗಾಂಧಿ ಕಥನ ಗಾಂಧಿ ಕಥನ
ಗಾಂಧಿ ಕಥನ ಗಾಂಧಿ ಕಥನ ಗಾಂಧಿ ಕಥನ

೧

ಬಾಲ್ಯದ ದಿನಗಳು

ಮಹಾತ್ಮ ಗಾಂಧಿಯವರ ಹುಟ್ಟು ಹೆಸರು ಮೋಹನದಾಸ ಕರಮಚಂದ ಗಾಂಧಿ. ಅವರು ಹುಟ್ಟಿದ್ದು ಗುಜರಾತ್ ಪ್ರಾಂತ್ಯದ ಪೋರ್‌ಬಂದರ್ ಎಂಬ ಪುಟ್ಟ ಪಟ್ಟಣದಲ್ಲಿ, ೧೮೬೯ರ ಅಕ್ಟೋಬರ್ ೨ರಂದು. ಪೋರ್‌ಬಂದರ್ ಅರಬ್ಬೀಸಮುದ್ರ ತೀರದ ಒಂದು ಸಣ್ಣ ರೇವು ಪಟ್ಟಣ ಮತ್ತು ಪೋರ್‌ಬಂದರ್ ಸಂಸ್ಥಾನದ ರಾಜಧಾನಿ. ಆ ಊರಿನ ಜನಸಂಖ್ಯೆ ಆಗ ಸುಮಾರು ಹದಿನೈದು ಸಾವಿರ. ಈ ಊರನ್ನು ಐತಿಹಾಸಿಕವಾಗಿ ಶ್ರೀಕೃಷ್ಣನ ಬಾಲ್ಯ ಗೆಳೆಯ ಸುಧಾಮನ ಊರು ಎಂದೂ ಗುರುತಿಸಲಾಗುತ್ತದೆ. ಊರ ಸುತ್ತ ಸಮುದ್ರದ ಅಲೆಗಳನ್ನು ತಡೆಯುವ ಒಂದು ಪ್ರಾಚೀನ ಕಲ್ಲಿನ ಗೋಡೆ ಇದೆ. ಈ ಊರು ಗುಜರಾತಿ ಭಾಷೆಯಾಡುವ ಗುಜರಾತ್ ಪ್ರಾಂತ್ಯದ ನೈರುತ್ಯ ಭಾಗವಾದ ಕಾಥೇವಾಡ ಎಂಬ ಪ್ರದೇಶಕ್ಕೆ ಸೇರಿದ್ದು. ಅಹಮದಾಬಾದ್, ಗುಜರಾತಿ ಮಾತನಾಡುವ ಈ ಪ್ರಾಂತ್ಯದ ಅತಿ ದೊಡ್ಡ ಪಟ್ಟಣವಾಗಿತ್ತಾದರೂ, ಅದಕ್ಕಿಂತ ಬಹುಪಾಲು ದೊಡ್ಡದಾಗಿ



ತನ್ನ ಬಹು ದೊಡ್ಡ ಬಂದರಿನ ಮೂಲಕ ಭಾರತದ ಪಶ್ಚಿಮದ ವಾಣಿಜ್ಯದ ಬಾಗಿಲು ಎನಿಸಿದ್ದ ಮತ್ತು ಬಹುಭಾಷಾ ನಗರವಾಗಿದ್ದ ಬಾಂಬೆ ಇದರ ರಾಜಕೀಯ ರಾಜಧಾನಿಯಾಗಿತ್ತು. ಅಲ್ಲಿದ್ದ ಬ್ರಿಟಿಷ್ ಗವರ್ನರ್ ಗುಜರಾತ್‌ನ ಎಲ್ಲ ರಾಜಸಂಸ್ಥಾನಗಳ ಮೇಲೆ ಅಧಿಕಾರ ಹೊಂದಿದ್ದನು.

ಕಾಥೇವಾಡವನ್ನು ಈಗ ಸೌರಾಷ್ಟ್ರ ಎಂದೂ ಕರೆಯಲಾಗುವ ಪ್ರದೇಶದ ಕರಾವಳಿ ಭಾಗವೆನ್ನಬಹುದು. ಅದು ಉತ್ತರದ ಕಛ್ ಖಾರಿ ಮತ್ತು ದಕ್ಷಿಣದ ಖಂಬಕ್ ಖಾರಿಗಳ ನಡುವಣ ಪರ್ಯಾಯ ದ್ವೀಪ. ಈ ಪ್ರದೇಶ ಬಹಳ ವರ್ಷಗಳಿಂದ ಅರೇಬಿಯಾ ಮತ್ತು ಆಫ್ರಿಕಾ ದೇಶಗಳೊಂದಿಗೆ ವಾಣಿಜ್ಯ ಸಂಬಂಧಗಳನ್ನು ಹೊಂದಿದ್ದು, ಅದರ ಪ್ರಭಾವ ಆ ಪ್ರದೇಶದ ಸಂಸ್ಕೃತಿಯ ಮೇಲೂ ಆಗಿತ್ತು. ಆ ಕಾಲದಲ್ಲಿ ಪ್ರಸಿದ್ಧವಾಗಿದ್ದ ಕಾಥೇವಾಡದ ರೇಷ್ಮೆ, ಕುದುರೆ ಮತ್ತು ವ್ಯಾಪಾರ ಪದ್ಧತಿಗಳು ಇದಕ್ಕೆ ಸಾಕ್ಷ್ಯದಂತಿದ್ದವು. ಮುಖ್ಯವಾಗಿ ಹಿಂದೂ–ಮುಸ್ಲಿಂ ಸಮುದಾಯಗಳ ನಡುವಣ ಸಂಬಂಧ ಅಲ್ಲಿ ಅರಬ್ ಮೂಲದ ವ್ಯಾಪಾರಿಗಳ ಸಂಬಂಧದ ನೆಲೆಯಿಂದಾಗಿ ಭಾರತದ ಮೊಘಲ್ ಆಡಳಿತ ಇತಿಹಾಸದ ಯಾವುದೇ ಸೋಂಕಿಲ್ಲದೆ ಸುಮಧುರವಾಗಿತ್ತು. ಆದರೆ ಗಾಂಧಿ ಹುಟ್ಟಿದ ಹನ್ನೆರಡು ವರ್ಷಗಳ ಮುನ್ನ ಹಿಂದೂ ಮುಸ್ಲಿಂ ಸಿಪಾಯಿಗಳಿಬ್ಬರೂ ಸೇರಿ ಬ್ರಿಟಿಷ್ ಪ್ರಭುತ್ವದ ವಿರುದ್ಧ ನಡೆಸಿದ್ದ ಸಿಪಾಯಿ ದಂಗೆ ಜನರ ಮನಸ್ಸಿನಾಳದಲ್ಲಿ ಬ್ರಿಟಿಷ್ ವಿರೋಧಿ ಭಾವನೆಯನ್ನು ಹುಟ್ಟಿಸಿತ್ತು.

ಗಾಂಧಿ ವಂಶ ಚರಿತ್ರೆ

ಕರಮಚಂದ ಎನ್ನುವುದು ನಮ್ಮ ಕಥಾನಾಯಕ ಮೋಹನದಾಸ ಗಾಂಧಿ ಅವರ ತಂದೆಯ ಹೆಸರು. ಇವರನ್ನು ಕಾಬಾ ಗಾಂಧಿ ಎಂದೂ ಕರೆಯಲಾಗುತ್ತಿತ್ತು. ಗಾಂಧಿ ಎನ್ನುವುದು ಅವರ ಕುಟುಂಬದ ಹೆಸರು. ಅವರ ಮಾತೃಭಾಷೆಯಾದ ಗುಜರಾತಿಯಲ್ಲಿ ಇದು ಅವರ ವಂಶಸ್ಥರು ಮಾಡುತ್ತಿದ್ದ ದಿನಸಿ ವ್ಯಾಪಾರವನ್ನು ಸೂಚಿಸುತ್ತದೆ ಎಂದು ಹೇಳಲಾಗುತ್ತದೆ. ಮೋಹನದಾಸ ಹುಟ್ಟುವ ವೇಳೆಗೆ ಅವರ ಕುಟುಂಬ ವ್ಯಾಪಾರವನ್ನು ಬಿಟ್ಟು ಕಳೆದೈದು ತಲೆಮಾರುಗಳಿಂದ ಆಡಳಿತ ಸೇವೆಯಲ್ಲಿ ತೊಡಗಿತ್ತು. ಅವರ ತಾತ ಓಟಾ ಗಾಂಧಿಯೆಂದೇ ಪ್ರಸಿದ್ಧರಾಗಿದ್ದ ಉತ್ತಮಚಂದ್, ಪೋರಬಂದರ್ ಸಂಸ್ಥಾನದ ದಿವಾನ (ಪ್ರಧಾನಮಂತ್ರಿ) ಆಗಿದ್ದರು. ಸುಮಾರು ಆರು ನೂರು ಮೈಲಿಗಳಷ್ಟು ವಿಸ್ತೀರ್ಣವಿದ್ದ ಪೋರ್‌ಬಂದರ್ ಭಾರತದಲ್ಲಿ ಆಗ ಇದ್ದ ಐನೂರಕ್ಕೂ ಹೆಚ್ಚು ರಾಜ ಸಂಸ್ಥಾನಗಳ ಪೈಕಿ ಒಂದು ಪುಟ್ಟ ಸಂಸ್ಥಾನವಾಗಿತ್ತು. ಪೋರ್‌ಬಂದರಿನ ಉತ್ತರಕ್ಕಿದ್ದ ರಾಜಕೋಟೆ ಇದಕ್ಕಿಂತ ಸ್ವಲ್ಪ ದೊಡ್ಡ ಪಟ್ಟಣ ಮತ್ತು ಸಂಸ್ಥಾನವಾಗಿದ್ದು ಅಲ್ಲಿದ್ದ ಬ್ರಿಟಿಷ್ ರೆಸಿಡೆಂಟನೊಬ್ಬ (ಸ್ಥಳೀಯ ಪ್ರತಿನಿಧಿ) ಪೋರ್‌ಬಂದರ್‌ನ ಉಸ್ತುವಾರಿ ವಹಿಸಿದ್ದ. ಮೋಹನದಾಸನ ತಂದೆ ಕರಮಚಂದ್ ಕೂಡ ಪೋರಬಂದರ್‌ನ ದಿವಾನರಾಗಿದ್ದರೂ ಅದರ ರಾಜನೊಂದಿಗೆ ಆಡಳಿತ ವಿಷಯದಲ್ಲಿ ಭಿನ್ನಾಭಿಪ್ರಾಯ ಹೊಂದಿ ರಾಜಕೋಟೆಗೆ ವಲಸೆ ಬಂದು ಆ ಸಂಸ್ಥಾನದ ದಿವಾನರಾಗಿದ್ದರು. ಇವೆಲ್ಲವೂ ದೇಶದ ತೀರಾ ಪುಟ್ಟ ಸಂಸ್ಥಾನಗಳಾದ್ದರಿಂದ ದಿವಾನಗಿರಿ ಅತಿಯಾದ ಶ್ರೀಮಂತಿಕೆಯನ್ನೇನೂ ತಂದಿರಲಿಲ್ಲ. ಆದರೆ ಸಾಮಾನ್ಯ ಜನರ ಜೀವನ ಮಟ್ಟಕ್ಕೆ ಹೋಲಿಸಿದರೆ, ಅದನ್ನು ಅನುಕೂಲಸ್ಥ

ಕುಟುಂಬ ಎನ್ನಬಹುದಾಗಿತ್ತು. ಮೂರು ಮಹಡಿಗಳ ಒಂದು ಪುರಾತನ ಕಟ್ಟಡದಲ್ಲಿ ಇಡೀ ದಿವಾನ ಪರಿವಾರ ವಾಸವಾಗಿತ್ತು. ಈ ಪರಿವಾರದ ಅಂಗರಕ್ಷರಲ್ಲಿ ಹೆಚ್ಚಿನವರು ಅರಬ್ ಮೂಲದವರಾಗಿದ್ದರು.

ಗಾಂಧಿ ವಂಶ ಸ್ವಾಮಿನಿಷ್ಠೆ, ಸತ್ಯನಿಷ್ಠೆಗೆ, ಪ್ರಾಮಾಣಿಕತೆಗೆ ಹೆಸರಾದುದು. ತಾತ ಉತ್ತಮಚಂದ್ ಪೋರ್‌ಬಂದರ್ ಸಂಸ್ಥಾನದ ರಾಜಕೀಯದಿಂದ ಬೇಸತ್ತು ಸ್ವಲ್ಪ ಕಾಲ ಪಕ್ಕದ ಜುನಾಗಡ್ ಸಂಸ್ಥಾನದಲ್ಲಿ ಆಶ್ರಯ ಪಡೆದಿದ್ದಾಗ ಅಲ್ಲಿನ ನವಾಬನಿಗೆ ಎಡಗೈಯಲ್ಲಿ ಸಲಾಂ ಮಾಡಿದರಂತೆ. ಇದರಿಂದ ಕೆರಳಿದ ನವಾಬನಿಗೆ ಅವರು ಕೊಟ್ಟ ಉತ್ತರ 'ನನ್ನ ಬಲಗೈ ಈಗಾಗಲೇ ಪೋರ್‌ಬಂದರ್‌ಗೆ ಮೀಸಲಾಗಿಬಿಟ್ಟಿದೆ!'. ಹಾಗೇ ಕರಮಚಂದರೂ, ಬ್ರಿಟಿಷ್ ಸರ್ಕಾರದ ಪ್ರತಿನಿಧಿಯೊಬ್ಬ ರಾಜಕೋಟೆಯ ದೊರೆಯ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದಾಗ ಸಿಡಿದೆದ್ದು ಪ್ರತಿಭಟಿಸಿ ಬ್ರಿಟಿಷ್ ಸರ್ಕಾರದಿಂದ ಸ್ವಲ್ಪ ಕಾಲ ಸ್ಥಾನಬದ್ಧತೆಗೊಳಗಾದದ್ದೂ ಉಂಟು. ಈ ಬಗ್ಗೆ ಬಾಲಕ ಮೋಹನದಾಸ್ ಗಾಂಧಿಗೆ ಹೆಮ್ಮೆ ಇತ್ತು.

ಕರಮಚಂದರು ದಿವಾನರಾಗಿದ್ದರೂ ವಿದ್ಯಾವಂತರಾಗಿರಲಿಲ್ಲ. ಲೆಕ್ಕ ಬರೆಯುವಷ್ಟು ಮಾತ್ರ ಬರಹ ಗೊತ್ತಿತ್ತು. ವೃತ್ತಿಗೆ ಬೇಕಾದ ಅನುಭವ ಮಾತ್ರ ಅಪಾರವಾಗಿತ್ತು. ಮೋಹನದಾಸ ಗಾಂಧಿ, ಅವರ ನಾಲ್ಕನೆಯ ಹೆಂಡತಿ ಪುತಲಿ ಬಾಯಿಯವರ ನಾಲ್ಕನೆಯ ಮತ್ತು ಕೊನೆಯ ಮಗನಾಗಿದ್ದ. ಮೋಹನದಾಸನ ಮೂವರು ಮಲತಾಯಿಯರು ಬದುಕಿರಲಿಲ್ಲ. ಅವನಿಗೆ ಇಬ್ಬರು ಮಲ ಅಕ್ಕಂದಿರಿದ್ದರಷ್ಟೆ. ಅವರು ಮದುವೆಯಾಗಿ ಹೋಗಿದ್ದರು. ಮೋಹನದಾಸನ ದೊಡ್ಡಣ್ಣ ಲಕ್ಷ್ಮೀದಾಸ್ ನಾಡ ವಕೀಲರಾಗಿ, ನಂತರ ಪೋರ್‌ಬಂದರ್ ಸಂಸ್ಥಾನದ ಹಣಕಾಸು ಅಧಿಕಾರಿಯಾಗಿ ಅನುಕೂಲಸ್ಥ ಜೀವನ ನಡೆಸಿದರು. ಇನ್ನೊಬ್ಬ ಅಣ್ಣ ಕರ್ಸನ್‌ದಾಸ್ ಕೆಳಮಟ್ಟದ ಪೊಲೀಸ್ ಅಧಿಕಾರಿಯಾದರು. ಸ್ವಂತ ಅಕ್ಕ ರಲಿಯತ್‌ಬೆನ್‌ರನ್ನು ರಾಜಕೋಟೆಯ ಕುಟುಂಬವೊಂದಕ್ಕೆ ಮದುವೆ ಮಾಡಿಕೊಡಲಾಗಿತ್ತು.

ಭಕ್ತಿ–ಭಯಗಳಲ್ಲಿ ಬೆಳೆದ ಮೋಹನದಾಸ

ಗಾಂಧಿ ಕುಟುಂಬ ಮೋದ್ ಎಂಬ ವೈಶ್ಯ ಕುಲಕ್ಕೆ ಸೇರಿದ್ದು, ಅದು ಮೊದಲಿಂದಲೂ ಪರಮ ಧಾರ್ಮಿಕ ಶ್ರದ್ಧೆಯ ಕುಟುಂಬವಾಗಿತ್ತು. ಕರಮಚಂದರು ಔಪಚಾರಿಕ ಧಾರ್ಮಿಕ ಶಿಕ್ಷಣ ಪಡೆಯದಿದ್ದರೂ, ದೇವಸ್ಥಾನಗಳಲ್ಲಿ ಮತ್ತು ಸಾರ್ವಜನಿಕ ಜೀವನದಲ್ಲಿ ಪುರಾಣ ಪುಣ್ಯ ಕಥೆಗಳನ್ನು ಆಸಕ್ತಿಯಿಂದ ಕೇಳುತ್ತಿದ್ದವರಾಗಿ ಸಾಕಷ್ಟು ಧಾರ್ಮಿಕ ಸೂಕ್ಷ್ಮಗಳನ್ನುಳ್ಳವರಾಗಿದ್ದರು. ತಮ್ಮ ಬದುಕಿನ ಕೊನೆಯ ದಿನಗಳಲ್ಲಿ ಅವರು ಬ್ರಾಹ್ಮಣ ಪಂಡಿತರೊಬ್ಬರ ನೆರವಿನಿಂದ ಗೀತಾಧ್ಯಯನವನ್ನು ನಡೆಸಿದ್ದರು. ತಾಯಿ ಪುತಲೀಬಾಯಿ ಅಪಾರ ಜನಪದ ತಿಳುವಳಿಕೆ ಇದ್ದ, ನಿಶಿತ ವ್ಯವಹಾರ ಜ್ಞಾನವನ್ನೂ ಹೊಂದಿ ಸಂಸ್ಥಾನಾಧೀಶನ ರಾಣಿವಾಸದ ನಿಕಟ ಸಂಪರ್ಕ ಮತ್ತು ವಿಶ್ವಾಸಗಳನ್ನು ಗಳಿಸಿದ್ದವರಾಗಿದ್ದರು. ಬಾಲ್ಯದಲ್ಲಿ ತಾಯಿಯೊಂದಿಗೆ ಹೆಚ್ಚು ಪ್ರೀತಿಯಿಂದ ಒಡನಾಡುತ್ತಿದ್ದ ಮೋಹನದಾಸ, ಅವರ ಬಾಯಿಂದ ಲೋಕಜ್ಞಾನದ ಅನೇಕ ಕಥೆ–

ಪ್ರಸಂಗಗಳನ್ನು ಕೇಳಿ ಅವನ್ನು ಒಳಗೊಳಗೆ ಮಥಿಸುತ್ತಾ ಚಿಂತಾಪರನಾಗುತ್ತಿದ್ದ. ಜೊತೆಗೆ ತಾಯಿಯು ಶ್ರದ್ಧಾ ಭಕ್ತಿಗಳಿಂದ ಆಚರಿಸುತ್ತಿದ್ದ ಪೂಜೆ–ಪ್ರಾರ್ಥನೆ–ವ್ರತ–ಹರಕೆ–ಉಪವಾಸಗಳನ್ನು ಕುತೂಹಲದಿಂದ ಗಮನಿಸುತ್ತಿದ್ದನು. ಬೇಚರ್‌ಜಿ ಎಂಬ ಸ್ವಾಮೀಜಿ, ಕುಟುಂಬಕ್ಕೆ ಧಾರ್ಮಿಕ ಮತ್ತು ಕೌಟುಂಬಿಕ ವಿಷಯಗಳೆರಡರಲ್ಲೂ ಮಾರ್ಗದರ್ಶನ ಮಾಡುತ್ತಿದ್ದರು. ಜೈನ ಮತಸ್ಥರಾಗಿದ್ದ ಅವರು ಈ ಹಿಂದೆ ಗಾಂಧಿ ಕುಟುಂಬದಂತೆಯೇ ಹಿಂದೂ ವೈಶ್ಯರಾಗಿದ್ದವರು.

ಮೋನಿಯಾ ಎಂಬುದು ಮೋಹನದಾಸನಿಗೆ ಅವರ ಕುಟುಂಬ ನೀಡಿದ ಮುದ್ದಿನ ಹೆಸರಾಗಿತ್ತು. ಕುಟುಂಬದ ಮಕ್ಕಳನ್ನು ನೋಡಿಕೊಳ್ಳಲೆಂದೇ ನೇಮಿತವಾಗಿದ್ದ ರಂಭಾ ಎಂಬ ದಾದಿಗೆ ಇವನು ಅಚ್ಚುಮೆಚ್ಚಿನ ಮಗು. ಅವಳ ಪ್ರಕಾರ ವಿಶಾಲ ಹಣೆಯ ಅವನು ಬಹಳ ಜಾಣ. ಈ ವರ್ಣನೆಯಿಂದ ಖುಷಿಯಾಗುತ್ತಿದ್ದ ಅವನ ತಂದೆ ಕರಮಚಂದರು ತಮ್ಮ ಈ ಮಗನನ್ನು ಮುಂದೆ ಲಂಡನ್‌ಗೆ ಕಳಿಸಿ ಉನ್ನತ ಶಿಕ್ಷಣ ಕೊಡಿಸುವುದಾಗಿ ಹೇಳುತ್ತಾ ಮಗು ಮೋನಿಯಾನಲ್ಲಿ ಕುತೂಹಲ ಹುಟ್ಟಿಸಿದ್ದರು. ಮನೆಯಲ್ಲಿ ಆಳು–ಕಾಳುಗಳೊಂದಿಗೆ, ಹೊರಗೆ ವಿಶಾಲ ಕಡಲ ತೀರದ ಮರಳಿನಲ್ಲಿ ಆಡುತ್ತಾ, ನಲಿಯುತ್ತಾ ಕುಟುಂಬದ ಮುದ್ದಿನ ಮಗುವಾಗಿ ಬಾಲ್ಯವನ್ನು ಕಳೆದ ಮೋಹನದಾಸ ಗಾಂಧಿ ಶಾಲೆಗೆ ಸೇರಿದಾಗ ಒಂಟಿಯಾದ. ಬಹಳ ಮೃದು ಸ್ವಭಾವದ ಮತ್ತು ಅಪರಿಚಿತರನ್ನು ಕಂಡರೆ ಭಯಪಡುತ್ತಿದ್ದ ಬಾಲಕ ಶಾಲೆ ಬಿಟ್ಟೊಡನೆ ಮನೆಗೆ ಓಡಿಬಂದುಬಿಡುತ್ತಿದ್ದ. ಅವನಿಗೆ ಆಳುಕಾಳುಗಳು ಹೇಳಿದ್ದ ದೆವ್ವ ಭೂತಗಳ ಕಥೆಗಳು ಅವನನ್ನು ಯಾವಾಗಲೂ ಕಾಡುತ್ತಿದ್ದವು. ಹಗಲಿನಲ್ಲೂ ಒಬ್ಬನೇ ಕೋಣೆಯೊಳಕ್ಕೆ ಹೋಗಲು ಹೆದರುತ್ತಿದ್ದ! ಅವರ ತಂದೆ ಪೋರ್‌ಬಂದರ್‌ನ ದಿವಾನಗಿರಿ ಬಿಟ್ಟು ಸ್ವಲ್ಪ ಕಾಲ ರಾಜಕೋಟೆಯ ಜೊತೆಗೇ ನೆರೆಯ ವಾಂಕ್ನೇರ್ ಎಂಬ ಸಣ್ಣ ಸಂಸ್ಥಾನಕ್ಕೂ ದಿವಾನರಾಗಿದ್ದು ನಂತರ ತಮ್ಮ ಕುಟುಂಬವನ್ನು ಪೋರ್‌ಬಂದರ್‌ನಿಂದ ರಾಜಕೋಟೆಗೆ ಸ್ಥಳಾಂತರಿಸಿದ ಮೇಲೆ ಸ್ವಲ್ಪ ಗೆಲುವಾದ ಬಾಲಕ, ಮನೆಯ ಬಳಿ, ಕೆಲವರೊಂದಿಗೆ ಗೆಳೆತನ ಮಾಡಿಕೊಂಡು ಆಟವಾಡಲು ಆರಂಭಿಸಿದ. ಇದೀಗ ಅವನ ಮನೆ ದೊಡ್ಡದಾಗಿತ್ತು, ವಿಶಾಲವಾಗಿತ್ತು. ಭವ್ಯ ಮಹಾದ್ವಾರದಿಂದಲೂ ಸಜ್ಜಾಗಿತ್ತು. ಆದರೆ ಕಣ್ತುಂಬುತ್ತಿದ್ದ ಕಡಲಿನ ಅಲೆಗಳ ಒಡನಾಟದಿಂದ ವಂಚಿತನಾಗಿದ್ದ ಬಾಲಕನ ಮನದಲ್ಲಿ ಅದರ ಕೊರತೆ ಮನೆ ಮಾಡಿ ಕೊರೆಯುತ್ತಿದ್ದುದಂತೂ ನಿಜ. ಆದರೆ ಅವನ ಪಠ್ಯದಲ್ಲಿದ್ದ 'ಶ್ರವಣ ಕುಮಾರನ ಪಿತೃಭಕ್ತಿ' ಮತ್ತು 'ಸತ್ಯ ಹರಿಶ್ಚಂದ್ರನ ಕಥೆ'ಯಂತಹ ಪಾಠಗಳು ಈ ಕೊರತೆಯನ್ನು ತುಂಬತೊಡಗಿದವು. ಇದೇ ಸಮಯದಲ್ಲಿ ತನ್ನೂರಿಗೆ ಬಂದ ನಾಟಕ ಮಂಡಳಿಯೊಂದು ಪ್ರದರ್ಶಿಸಿದ ಈ ಎರಡೂ ಕಥೆಗಳನ್ನಾಧರಿಸಿದ ನಾಟಕಗಳನ್ನು ನೋಡಿದ ಮೇಲಂತೂ ಬಾಲಕ ಮೋಹನದಾಸನ ಮನೋದಿಗಂತ ವಿಸ್ತರಿಸತೊಡಗಿ ಅವನು ಆ ವಿಸ್ತಾರದಲ್ಲಿ ಕ್ರಿಯಾಶೀಲನಾಗತೊಡಗಿದ.

ಮೋಹನದಾಸನ ಸತ್ಯಸಂಧತೆ–ದಾರಿ ತಪ್ಪಿದ ಬಂಡಾಯ ಗುಣ

ಮೋಹನದಾಸ ಪ್ರೌಢಶಾಲೆಯ ಮೊದಲ ತರಗತಿಯಲ್ಲಿದ್ದಾಗ ಶಾಲೆಗೆ ಭೇಟಿ

ನೀಡಿದ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಮಕ್ಕಳ ಕಲಿಕಾ ಮಟ್ಟವನ್ನು ಪರೀಕ್ಷಿಸಲು ವಿದ್ಯಾರ್ಥಿಗಳಿಗೆ ಕೆಲವು ಇಂಗ್ಲಿಷ್ ಶಬ್ದಗಳ ಉಕ್ತಲೇಖನ ನೀಡಿದರು. ಮೋಹನದಾಸ ಒಂದು ಶಬ್ದವನ್ನು ತಪ್ಪು ಬರೆದಿದ್ದನ್ನು ಗಮನಿಸಿದ ತರಗತಿಯ ಶಿಕ್ಷಕರು ತಮ್ಮ ಗೌರವ ಕಾಪಾಡಿಕೊಳ್ಳಲು, ಅದನ್ನು ಸರಿಯಾಗಿ ಬರೆದಿದ್ದ ಪಕ್ಕದ ಹುಡುಗನಿಂದ ನೋಡಿ ತಿದ್ದಿಕೊಳ್ಳಲು ಅವನನ್ನು ಕಾಲಿನಿಂದ ಮೆಟ್ಟಿ ಸೂಚನೆ ನೀಡಿದರೂ ಬಾಲಕ ಹಾಗೆ ಮಾಡಲಿಲ್ಲ. ನಂತರ ಶಿಕ್ಷಕರು ತನ್ನ ಮಾನ ಕಳೆದಿದ್ದಕ್ಕಾಗಿ ಮೋಹನದಾಸನನ್ನು ಬೈಯ್ದರಾದರೂ, ಅವನಿಗೆ ತನ್ನ ವರ್ತನೆಯೇ ಸರಿ ಎನಿಸಿತು. ಏಕೆಂದರೆ ಪರೀಕ್ಷೆ ಎದುರಿಸುವುದು ವಿದ್ಯಾರ್ಥಿಯ ಕರ್ತವ್ಯವಾಗಿದ್ದು, ಅದರ ನಿಯಮಗಳನ್ನು ವಿಧೇಯತೆಯಿಂದ ಪಾಲಿಸುವುದೇ ಸತ್ಯವಂತಿಕೆ ಎಂಬುದು ಬಾಲಕನ ಭಾವನೆಯಾಗಿತ್ತು. ಈ ಕರ್ತವ್ಯ ಪಾಲನೆಯ ಭಾಗವಾಗಿ ಅವನು ತನ್ನ ಶಿಕ್ಷಕರ ಸೂಚನೆಯನ್ನು 'ಅನೀತಿಯುತ' ಎಂದು ಭಾವಿಸಿ ಉಲ್ಲಂಘಿಸಿ ಬಂಡಾಯ ಗುಣವನ್ನೂ ಪ್ರದರ್ಶಿಸಿದ್ದ ಎಂಬುದನ್ನೂ ನಾವಿಲ್ಲಿ ಗಮನಿಸಬೇಕು.

ಬಾಲಕ ಗಾಂಧಿಯ ಈ ಬಂಡಾಯಗುಣ ಒಮ್ಮೊಮ್ಮೆ ದಾರಿ ತಪ್ಪಿದ್ದೂ ಉಂಟು. ಮನೆಯಲ್ಲಿ ಆಗ ಜಾರಿಯಲ್ಲಿದ್ದ ಧಾರ್ಮಿಕ ಕಟ್ಟಳೆಗಳು, ಬೆಳೆಯುತ್ತಿದ್ದ ಮೋಹನದಾಸನ ಮನಸ್ಸನ್ನು ಉಸಿರುಗಟ್ಟಿಸುವಂತಿದ್ದವು. ಮನೆಗೆ ವಿವಿಧ ಸೇವೆಗಳಿಗಾಗಿ ಬರುತ್ತಿದ್ದ ಅಸ್ಪೃಶ್ಯರು ಮತ್ತು ಮುಸ್ಲಿಮರ ಹತ್ತಿರ ಮಾತಾಡಲೂ ಬಿಡಲೊಲ್ಲದ ಹಿರಿಯರ ವರ್ತನೆ ಅವನಿಗೆ ಸರಿ ಕಾಣುತ್ತಿರಲಿಲ್ಲ. ಹಲವು ಬಾರಿ ಮನೆಯ ಜಾಡಮಾಲಿಗಳನ್ನು ಬೇಕೆಂದೇ ಮುಟ್ಟಿಸಿಕೊಂಡು ತಾಯಿಯ ಮಡಿ ಮೈಲಿಗೆಗಳನ್ನು ಪರಿಹಾಸ್ಯ ಮಾಡುತ್ತಾ ಪ್ರತಿಭಟಿಸುತ್ತಿದ್ದ. ಮೋಹನದಾಸ ತನ್ನ ಚಿಕ್ಕ ಅಣ್ಣ ಕರ್ಸನ್ ಮತ್ತು ಸೋದರ ಸಂಬಂಧಿಯ ಸಹವಾಸದಲ್ಲಿ ಮನೆಯಿಂದ ಹಣ ಕದ್ದು ಸಿಗರೇಟ್ ಸೇದುವ ಅಭ್ಯಾಸ ಆರಂಭಿಸಿದ. ಹಣದ ಕಳವಿನಿಂದ ಎಚ್ಚೆತ್ತ ಮನೆಯ ಹಿರಿಯರು ಹಣವನ್ನು ಜೋಪಾನ ಮಾಡಲಾರಂಭಿಸಿದರು. ಇದರಿಂದಾಗಿ ತನ್ನ ಮೇಲೆ ಮನೆಯವರ ನಿಗಾ ಇದ್ದಂತಿದೆ ಎಂಬ ಆತಂಕ ಮೋಹನದಾಸನನ್ನು ಕಾಡತೊಡಗಿತು. ಆದರೆ ಹಣ ಸಿಗದಂತಾಗಿ ಚಟ ಬಿಡಲಾಗದ ಇಬ್ಬರು ಹುಡುಗರೂ ಕಾಗದದ ಕೊಳವೆ ಮಾಡಿಕೊಂಡು ಎಂತೆಂತಹದೋ ಗಿಡಗಳ ಎಲೆ-ಬೀಜಗಳ ಪುಡಿ ತುಂಬಿ ಸೇದಲಾರಂಭಿಸಿದರು. ಅದು ಬೇಸರವಾಗಿ ಯಾರೋ ದತ್ತೂರಿ ಬೀಜ ವಿಷಕಾರಿ ಎಂದು ಹೇಳಿದುದನ್ನು ಅನುಸರಿಸಿ, ಮನೆಯ ಹಿರಿಯರ ನಿಗಾದಿಂದ ಶಾಶ್ವತವಾಗಿ ತಪ್ಪಿಸಿಕೊಳ್ಳಲು ನಿರ್ಧರಿಸಿ ದತ್ತೂರಿ ಬೀಜ ಅರಸಿಕೊಂಡು ಹೋಗಿ ಅದನ್ನು ತಿಂದರು. ಸಾಯಲಿಲ್ಲ ಅಷ್ಟೆ! ಇದನ್ನೆಲ್ಲ ಗಾಂಧಿಯವರು 'ಸತ್ಯದೊಡನೆ ನನ್ನ ಪ್ರಯೋಗ' ಎಂಬ ತಮ್ಮ ಆತ್ಮಕಥೆಯಲ್ಲಿ ಬರೆದುಕೊಂಡಿದ್ದಾರೆ.

■

೨

ಮದುವೆ ಮತ್ತು ಆನಂತರ

ಗಾಂಧಿಗೆ ಹದಿಮೂರು ವರ್ಷವಾಗಿದ್ದಾಗ ಆ ಕಾಲದ ವಾಡಿಕೆಯಂತೆ ಅವರಿಗೆ ಅವರ ಇಬ್ಬರು ಅಣ್ಣಂದಿರೊಂದಿಗೆ (ಇವರಲ್ಲಿ ಒಬ್ಬ ಅವರ ದಾಯಾದಿ) ಸಾಕಷ್ಟು ವಿಜೃಂಭಣೆಯಿಂದಲೇ ಮದುವೆ ಮಾಡಲಾಯಿತು. ವಧುವಿನ ಸ್ವಗೃಹ ಪೋರ್‌ಬಂದರಿನಲ್ಲಿ ನಡೆದ ಈ ಮದುವೆಗೆ ರಾಜಕೋಟೆಯಿಂದ ಕುದುರೆ ಗಾಡಿಯಲ್ಲಿ ಬರುವಾಗ ಗಾಡಿ ಮಗುಚಿ ಬಿದ್ದು ಕರಮಚಂದರಿಗೆ ತೀವ್ರ ಗಾಯಗಳಾಗಿದ್ದುದು ಮದುವೆಯ ಸಂಭ್ರಮವನ್ನು ಸ್ವಲ್ಪ ಕುಗ್ಗಿಸಿತ್ತೆಂದೇ ಹೇಳಬೇಕು. ವಧು ಅದೇ ವಯಸ್ಸಿನ ಕಸ್ತೂರಬಾಯಿ. ಈ ಬಾಲಕಿ ಪೋರ್‌ಬಂದರಿನ ವ್ಯಾಪಾರಿ ಗೋಕುಲದಾಸ್ ಎಂಬುವವರ ಅನಕ್ಷರಸ್ಥ ಮಗಳು. ಮದುವೆ ಎಂದರೆ ತಮಗೆ, ವಧೂವರರು ಒಟ್ಟಿಗೆ ಕೂತು ಸಿಹಿತಿಂಡಿಯನ್ನು ಪರಸ್ಪರರ ಬಾಯಿಗಿಟ್ಟು ತಿನ್ನಿಸಿ ಸಪ್ತಪದಿ ತುಳಿದದ್ದರ ನೆನಪಿನ ಚಿತ್ರ ಮಾತ್ರ ಎಂದು ತಮ್ಮ ಆತ್ಮಚರಿತ್ರೆಯಲ್ಲಿ ಗಾಂಧಿ ದಾಖಲಿಸಿರುವಂತೆ, ಈ ಬಾಲ್ಯ ವಿವಾಹ ಭಾರತೀಯ ಸಂಪ್ರದಾಯದ ಒಂದು 'ಕ್ರೂರ ಆಚರಣೆ'ಯಾಗಿತ್ತು. ಮದುವೆ ಎಂದರೆ ಏನು ಮತ್ತು ಗಂಡ-ಹೆಂಡತಿ ಎಂದರೆ ಸಾಯುವವರೆಗೂ ಒಟ್ಟಿಗೆ ಜೀವನ ನಡೆಸಬೇಕಾದ ಸಂಗಾತಿಗಳು ಎಂಬ ಕಲ್ಪನೆ ಇಲ್ಲದ ವಯಸ್ಸಿನಲ್ಲಿ ಈ ಸಂಬಂಧವನ್ನು ಅವರ ಮೇಲೆ ಹೇರುವುದು ಕ್ರೂರವಲ್ಲದೆ ಮತ್ತೇನು?

ಕರಮಚಂದ್ ಗಾಂಧಿ ಕುಟುಂಬದ ಎಲ್ಲ ಸದಸ್ಯರೂ, ಹತ್ತಿರದ ನೆಂಟರೂ ಒಂದೇ ಮನೆಯಲ್ಲಿ ಒಟ್ಟಿಗೆ ಬದುಕುತ್ತಿದ್ದರು. ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿದ್ದ ಈ ಜನರ ನಡುವೆ ಮದುವೆಯಾದ ಈ ಮಕ್ಕಳೂ ಮಕ್ಕಳಂತೆಯೇ ಆಡುತ್ತಾ, ಕಿತ್ತಾಡುತ್ತಾ ಬಾಳತೊಡಗಿದರು. ಗಾಂಧಿ ತಮ್ಮ ಆತ್ಮಚರಿತ್ರೆಯಲ್ಲಿ ಬರೆದುಕೊಂಡಿರುವಂತೆ ಅವರು ಪತ್ನಿಯ ಮೇಲೆ ಒಡೆತನ ಸಾಧಿಸಲು ಪ್ರಯತ್ನಿಸಿದಷ್ಟೂ ಕಸ್ತೂರಬಾ ಅವರ ಸ್ವಾತಂತ್ರ್ಯಪ್ರಿಯತೆ ಹೆಚ್ಚುತ್ತಾ ಹೋಯಿತು! ಹಾಗೆ ನೋಡಿದರೆ ಎಲ್ಲಿಯೂ ಒಬ್ಬನೇ ಹೋಗಲು ಹೆದರುವ ಮೋಹನದಾಸನ ಪುಕ್ಕಲುತನವನ್ನು ನಿವಾರಿಸಿದ್ದು ಈ ಬಾಲ ಪತ್ನಿಯೇ. ಆದರೆ ಇದಕ್ಕೆ ಪ್ರತಿಯಾಗಿ, ನಂತರದ ದಿನಗಳಲ್ಲಿ ದಾಂಪತ್ಯ ದೀಪಿಕೆ ಮುಂತಾದ ಪ್ರೇಮ-ಕಾಮಗಳನ್ನು ಕುರಿತ ಕಿರು ಪುಸ್ತಕಗಳನ್ನೋದಿ ಪ್ರಭಾವಿತನಾಗಿದ್ದ ತರುಣ ಗಾಂಧಿ ಪತ್ನಿಯನ್ನು ತನ್ನಂತೆಯೇ ಯೋಚಿಸುವಂತೆ ಮಾಡಲು ಪತ್ನಿಗೆ ಓದು ಬರಹ ಕಲಿಸುವ ಪ್ರಯತ್ನ ಮಾಡಿದ. ಆದರೆ ಅದರಲ್ಲಿ ಪತ್ನಿ ಕಿಂಚಿತ್ತೂ ಆಸಕ್ತಿ ತೋರದ್ದರ ಜೊತೆಗೆ ಆ ಕಾಲದ ಪರ್ದಾ ಪದ್ಧತಿಯೂ ಅಡ್ಡಿ ಬಂದು ಅವರು ಸುಮ್ಮನಾದುದನ್ನೂ ಇಲ್ಲಿ ದಾಖಲಿಸಬಹುದು.

ಮೋಹನದಾಸನ ಪಾಪ ಮತ್ತು ಪಾಪ ನಿವೇದನೆ

ಈ ಮಧ್ಯೆ ಮೋಹನದಾಸ ಗಾಂಧಿಗೆ ಶಾಲೆಯ ಆಟೋಟಗಳಲ್ಲಿ ಭಾಗವಹಿಸುತ್ತಿದ್ದಾಗ ತಾನು ಇತರರಿಗೆ ಹೋಲಿಸಿದರೆ ದೈಹಿಕವಾಗಿ ಬಡಕಲು ಎನಿಸತೊಡಗಿತ್ತು. ಗೆಳೆಯರೊಂದಿಗೆ ಮಾತಾಡುತ್ತಿದ್ದಾಗ ಬ್ರಿಟಿಷ್ ಪ್ರಭುತ್ವ–ದೇಶದ ಗುಲಾಮಗಿರಿ ಇತ್ಯಾದಿ ರಾಜಕೀಯ ವಿಷಯಗಳೂ ಚರ್ಚೆಗೆ ಬರುತ್ತಿದ್ದು, ಅದರಲ್ಲಿ ಬ್ರಿಟಿಷರ ವಿರುದ್ಧ ಹೋರಾಡಲು ಯುವಕರು ದೈಹಿಕವಾಗಿ ಸಮರ್ಥರಾಗಬೇಕೆಂಬ ಅಭಿಪ್ರಾಯವೂ ವ್ಯಕ್ತವಾಗುತ್ತಿತ್ತು. ಆಗ ಗಾಂಧಿಗೆ ತನ್ನ ಬಡಕಲು ದೇಹದ ಬಗ್ಗೆ ಕೀಳರಿಮೆ ಉಂಟಾಗುತ್ತಿತ್ತು. ಇದರಿಂದಾಗಿ ಉಂಟಾದ ಮಾನಸಿಕ ದೌರ್ಬಲ್ಯದಿಂದಾಗಿ ಅವನು ತಾನು ಪುಕ್ಕಲ ಎಂದು ತಾನೇ ನಂಬಿಕೊಂಡು ರಾತ್ರಿಯಾಯಿತೆಂದರೆ, ಕಳ್ಳರು, ಭೂತ, ಪಿಶಾಚಿ, ಹಾವುಗಳ ಭಯದಲ್ಲಿ ಕೋಣೆಯಲ್ಲಿ ಸೇರಿಕೊಳ್ಳುತ್ತಿದ್ದ. ಈ ಎಲ್ಲ ತೊಂದರೆಗಳನ್ನು ಮೀರಲು ಬಾಲಕ ಗಾಂಧಿ ತಮ್ಮ ಅಣ್ಣನೊಡಗೂಡಿ ಶೇಖ್ ಮೆಹ್ತಾಬ್ ಎಂಬ ತನ್ನ ಮುಸ್ಲಿಂ ಗೆಳೆಯನ ಮಾರ್ಗದರ್ಶನದಲ್ಲಿ ಊರ ಹೊರಗಿನ ನದಿ ದಡದಲ್ಲಿ ಕದ್ದು ಕೂತು ಮೊಟ್ಟೆ–ಮಾಂಸ ತಿನ್ನಲು ಶುರು ಮಾಡಿದ. ಇದು ಅವರ ಮನೆಯಲ್ಲಿನ ಆಹಾರ ಪದ್ಧತಿಗೆ ವಿರುದ್ಧವಾಗಿತ್ತು. ಅವರ ಕುಟುಂಬ ಶುದ್ಧ ಸಸ್ಯಾಹಾರಿ ಕುಟುಂಬವಾಗಿದ್ದು ಮಾಂಸಾಹಾರವನ್ನು ಪಾಪವೆಂದು ಪರಿಗಣಿಸಿತ್ತು. ಮೊದಲ ದಿನ ಹುಡುಗರು ಮೇಕೆ ಮಾಂಸ ತಿಂದರು. ಅಂದು ರಾತ್ರಿ ಮೋಹನದಾಸನ ಕನಸಿನಲ್ಲಿ ಮೇಕೆಯೊಂದು ಅವನ ಹೊಟ್ಟೆಯಲ್ಲಿ ಮ್ಯಾಂ... ಮ್ಯಾಂ... ಎಂದು ಕೂಗಿದಂತಾಗಿ ಅವನು ಗಾಬರಿಗೊಂಡು ಎದ್ದು ಕೂತನು. ಆದರೆ ಇದೆಲ್ಲ ದೇಶಸೇವೆಗಾಗಿ ಎಂದು ತಾನೇ ಸಮಾಧಾನ ಮಾಡಿಕೊಂಡ ಬಾಲಕ, ಒಲ್ಲದ ಮನಸ್ಸಿನಿಂದಲೇ ಈ ಮಾಂಸಾಹಾರವನ್ನು ಮುಂದುವರೆಸಿದನು. ಅದಕ್ಕಾಗಿ ಅವನು ಮನೆಯಿಂದ ಹಣ ಮತ್ತು ಚಿನ್ನವನ್ನೂ ಕದಿಯಲಾರಂಭಿಸಬೇಕಾಯಿತು. ಇದರ ಜೊತೆಗೇ ಅಣ್ಣ ಕರ್ಸನ್ ಗಾಂಧಿ ಮಾಡಿಕೊಂಡಿದ್ದ ೨೫ ರೂಪಾಯಿಗಳ ಸಾಲ ತೀರಿಸಲು ಆತನ ಚಿನ್ನದ ತೋಳ್ಬಂದಿಯಿಂದ ಈತನೇ ಸ್ವಲ್ಪ ಚಿನ್ನ ಕತ್ತರಿಸಿಕೊಡುವ ಗುಪ್ತ ಕಾರ್ಯಾಚರಣೆಯನ್ನೂ ಮಾಡಬೇಕಾಯಿತು.

ಆದರೆ ಒಬ್ಬನೇ ಇದ್ದಾಗ ಪ್ರತಿದಿನವೂ ಅವನ ಮನಸ್ಸು ತಾನು ಮಾಡುತ್ತಿರುವುದು ಸರಿಯೇ ಎಂದು ಯೋಚಿಸುತ್ತಿತ್ತು. ತಾನು ಮನೆಯವರ, ವಿಶೇಷವಾಗಿ ಧಾರ್ಮಿಕ ಶ್ರದ್ಧೆಯ ತನ್ನ ತಾಯಿಗೆ ಮತ್ತು ಫಿಸ್ತುಲಾ ರೋಗಪೀಡಿತರಾಗಿ ಹಾಸಿಗೆ ಹಿಡಿದಿದ್ದ ತನ್ನ ತಂದೆಯ ನಂಬಿಕೆಗೆ ದ್ರೋಹ ಮಾಡುತ್ತಿದ್ದೇನೆ ಎಂಬ ಚಿಂತೆ ಅವನನ್ನು ದಿನೇ ದಿನೇ ಕಾಡತೊಡಗಿತು. ತಾನು ಸುಳ್ಳುಗಳ ಭಾರದಲ್ಲಿ ಕುಸಿದುಹೋಗುತ್ತಿದ್ದೇನೆ ಎಂಬ ಹಿಂಸೆಗೆ ಸಿಕ್ಕಿ ಅವನು ತತ್ತರಿಸಿದನು. ಒಂದು ದಿನ ಮೋಹನದಾಸ ಇದೆಲ್ಲ ಹಿಂಸೆಯಿಂದ ಬಿಡುಗಡೆ ಪಡೆಯಲು, ಮಾಂಸಾಹಾರದ ವಿಷಯ ತಿಳಿಸಿದರೆ ತನ್ನ ತಂದೆತಾಯಿಗಳು ಮಾರಕ ರೀತಿಯಲ್ಲಿ ಆಘಾತಗೊಳ್ಳುವರೆಂಬ ಭೀತಿಯಿಂದ ಆ ವಿಷಯದ ಹೊರತಾಗಿ ಎಲ್ಲವನ್ನೂ ತನ್ನ ತಂದೆಗೆ ತಿಳಿಸಿ ಅವರ ಕ್ಷಮೆ ಕೇಳುವ ಪತ್ರವೊಂದನ್ನು ಬರೆಯಲು ನಿರ್ಧರಿಸಿದ. ಆ ಪತ್ರದಲ್ಲಿ ಬಾಲಕ ಗಾಂಧಿಯು ಈ ಅಪರಾಧಕ್ಕಾಗಿ ಯಾವ ಶಿಕ್ಷೆಯನ್ನು ಬೇಕಾದರೂ ನೀಡಬಹುದೆಂದೂ, ಇನ್ನೆಂದೂ ಯಾರಿಂದಲೂ ಏನನ್ನೂ

ಕದಿಯುವುದಿಲ್ಲವೆಂದೂ, ಸುಳ್ಳು ಹೇಳುವುದಿಲ್ಲವೆಂದೂ ನಿವೇದಿಸಿಕೊಂಡಿದ್ದ. ಆದರೆ ತಂದೆಯ ನಡವಳಿಕೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಬಂದಿದ್ದ ಆತ ಅವರು ಮಗನ ಈ ಎಲ್ಲ ತಪ್ಪುಗಳಿಗಾಗಿ ಸ್ವತಃ ತಮಗೇ ಯಾವುದೇ ಶಿಕ್ಷೆಯನ್ನು ಕೊಟ್ಟುಕೊಳ್ಳಬಾರದೆಂದೂ ಆರ್ತನಾಗಿ ಪ್ರಾರ್ಥಿಸಿದ್ದ. ಆಗ ಅವರಿಗೆ ಹದಿನೈದು ವರ್ಷ.

ಆಗ ಕರಮಚಂದರು ದೊಡ್ಡ ಕರುಳಿನ ವ್ರಣಕ್ಕೆ ಸಂಬಂಧಿಸಿದಂತೆ ದೀರ್ಘಕಾಲಿಕ ಅನಾರೋಗ್ಯದಿಂದ ನರಳುತ್ತಾ ಹಾಸಿಗೆ ಹಿಡಿದಿದ್ದರು. ಗಾಂಧಿ ಈ ಪತ್ರ ಬರೆಯಲು ನಿರ್ಧರಿಸಲು ತಂದೆಯ ಈ ದೀರ್ಘ ಅನಾರೋಗ್ಯದ ಹಿಂಸೆಯೂ ಕಾರಣವಾಗಿರಬಹುದು. ನೋವಿನಿಂದ ನರಳುತ್ತಾ ಮಲಗಿದ್ದ ತಂದೆಗೆ ಗಾಂಧಿ ನಡುಗುತ್ತಿದ್ದ ಕೈಗಳಿಂದಲೇ ಈ ಪತ್ರ ನೀಡಿದರು. ಪತ್ರದ ಒಂದೊಂದು ಸಾಲು ಓದುತ್ತಿದ್ದಂತೆಯೇ ಕರಮಚಂದರ ಕಣ್ಣುಗಳಿಂದ ನೀರು ಹನಿಯತೊಡಗಿ ಅದು ಧಾರಾಕಾರವಾಗಿ ಅವರ ಕೆನ್ನೆಗಳನ್ನು ತೋಯಿಸತೊಡಗಿತು. ಅವರು ಪತ್ರವನ್ನು ಪೂರ್ತಿ ಓದಿಯಾದ ಮೇಲೆ ಅದನ್ನು ಹರಿದುಹಾಕಿ ಸುಮ್ಮನೆ ಮಲಗಿಬಿಟ್ಟರು. ಪಕ್ಕದಲ್ಲಿ ಮೋಹನದಾಸ ಅಳುತ್ತಾ ಕೂತಿದ್ದ. ತಂದೆಯ ಈ ಮೌನ ಕ್ಷಮೆ ಅವನ ಒಳಗನ್ನೆಲ್ಲ ಪಶ್ಚಾತ್ತಾಪದಿಂದ ತುಂಬಿಸಿತು. ಗಾಂಧಿ ಬದುಕಿನಲ್ಲಿ ಇದೊಂದು ನಿರ್ಣಾಯಕ ಘಟನೆ ಎಂದೇ ಹೇಳಬೇಕು.

ಜೀವನ ಪೂರ್ತಿ ಕಾಡಿದ ಪಾಪಪ್ರಜ್ಞೆ

ಇದೇ ಸಂದರ್ಭದ ಗಾಂಧಿ ಬದುಕಿನ ಇನ್ನೊಂದು ನಿರ್ಣಾಯಕ ಘಟನೆ ಎಂದರೆ ಕರಮಚಂದರ ಸಾವು. ಅನಾರೋಗ್ಯ ಪೀಡಿತರಾಗಿದ್ದ ತಂದೆಯವರನ್ನು ಬಾಲಕ ಮೋಹನದಾಸ ಪ್ರೀತಿಯಿಂದ ಆರೈಕೆ ಮಾಡುತ್ತಿದ್ದನಾದರೂ, ಆಗಾಗ್ಗೆ ಅವನ ಮನಸ್ಸು ತನ್ನ ಪ್ರೀತಿಯ ಹೆಂಡತಿಯ ಕಡೆಗೂ ಹರಿಯುತ್ತಿತ್ತು. ಆಗ ತನ್ನ ಚಿಕ್ಕಪ್ಪನಿಗೋ, ಅಣ್ಣನಿಗೋ ತಂದೆಯ ಬಳಿ ಇರಲು ಹೇಳಿ ಆತ ಹೆಂಡತಿಯ ಬಳಿ ಹೋಗುತ್ತಿದ್ದ. ಆಗ ಹದಿನೈದು ವರ್ಷ ವಯಸ್ಸಿನ ಕಸ್ತೂರಬಾ ತುಂಬು ಗರ್ಭಿಣಿ. ಆದರೂ, ಅದೇ ವಯಸ್ಸಿನ ಗಾಂಧಿ ಒಂದು ರಾತ್ರಿ ತಂದೆಯನ್ನು ನೋಡಿಕೊಳ್ಳಲು ತನ್ನ ಚಿಕ್ಕಪ್ಪನಿಗೆ ಹೇಳಿ ಹೆಂಡತಿಯ ಕೋಣೆಗೆ ಹೋದ. ಸ್ವಲ್ಪ ಹೊತ್ತಿನಲ್ಲೆ ಮನೆಯಾಳು ಕೋಣೆಯ ಬಾಗಿಲು ಬಡಿದು ತಂದೆ ಕರಮಚಂದರ ಪ್ರಾಣಪಕ್ಷಿ ಹಾರಿಹೋದ ಸುದ್ದಿಯನ್ನು ಹೇಳಿದ. ಮೋಹನದಾಸ ಆಘಾತಗೊಂಡ. ತಾನು ತನ್ನ ಜೀವನದ ಒಂದು ದೊಡ್ಡ ಪಾಪ ಮಾಡಿದ್ದೇನೆಂದು ಮನೋವಿಹ್ವಲತೆಗೆ ಈಡಾದ. 'ಈ ಸಂದರ್ಭದ ನನ್ನ ಕಾಮದಾಹದಿಂದ ಉಂಟಾದ ನಾಚಿಕೆಗೇಡಿನ ಆಘಾತ ಎಂದೂ ನನ್ನ ಮನಸ್ಸಿನಿಂದ ಮಾಸಿ ಹೋಗಲಿಲ್ಲ' ಎಂದು ಮುಂದೆ ಗಾಂಧಿ ತಮ್ಮ ಆತ್ಮಚರಿತ್ರೆಯಲ್ಲಿ ಬರೆದಿದ್ದಾರೆ. ಆಗ ಪತ್ನಿಯ ಹೊಟ್ಟೆಯಲ್ಲಿದ್ದ ಮಗು ಹುಟ್ಟಿದ ಮೂರು ದಿನಗಳಲ್ಲೇ ಮರಣ ಹೊಂದಿದ್ದು ಅವರ ನಾಚಿಕೆಯನ್ನು ಘೋರಗೊಳಿಸಿತ್ತು.

ಈ ಘಟನೆಯನ್ನು ಗಾಂಧಿ ತಮ್ಮ ಆತ್ಮಕಥೆ ಮತ್ತು ಇತರ ಬರಹಗಳಲ್ಲಿ ಮತ್ತೆ ಮತ್ತೆ ನೆನಪಿಸಿಕೊಂಡು ಗಂಡು-ಹೆಣ್ಣಿನ ನಡುವಣ ದೈಹಿಕ ಆಕರ್ಷಣೆಯ ಬಗ್ಗೆ ಹಲವು ವ್ಯಾಖ್ಯಾನಗಳನ್ನು ಮಾಡುತ್ತಾರೆ. ಕಾಮ ಅವರ ಜೀವನದುದ್ದಕ್ಕೂ ಬಿಡಿಸಲಾಗದ ಪ್ರಶ್ನೆಯಾಗಿ ಅವರನ್ನು ಕಾಡತೊಡಗುತ್ತದೆ. ಅದನ್ನು ನಿವಾರಿಸಿಕೊಳ್ಳಲು

ಪ್ರಯತ್ನಿಸಿದಷ್ಟೂ ಅದು ಹೆಚ್ಚೆಚ್ಚು ಕಾಡತೊಡಗುವುದನ್ನು ತಮ್ಮ ಜೀವನದ ಅನೇಕ ಪ್ರಸಂಗಗಳಲ್ಲಿ ಕಂಡು ಅದನ್ನು ಸಂಪೂರ್ಣ ನಿಷೇಧಿಸುವ ಪ್ರಯತ್ನವನ್ನು ಅವರು ಮಾಡುವುದನ್ನು ನಾವು ನೋಡಬಹುದು. ಅವರು ಮುಂದೆ ಪ್ರತಿಪಾದಿಸಿದ ಹೋರಾಟಗಾರನೊಬ್ಬನ ಶಿಸ್ತಿನ ಜೀವನದ ಪಾಠಗಳಲ್ಲಿ ಬ್ರಹ್ಮಚರ್ಯ ಪಾಲನೆಯ ಪಾಠವನ್ನು ಸೇರಿಸಿದ್ದರ ಹಿಂದೆ ಇರುವುದು ಇದೇ ಮಾನಸಿಕತೆ ಎಂದು ಹೇಳಲಾಗುತ್ತದೆ. ಗಾಂಧಿಯವರ ಜೀವನದ ಈ ಘಟನೆಗಳ ಬಗ್ಗೆ ಎರಿಕ್ ಎರಿಕ್ಸನ್ ಮಾಡಿರುವ ಒಂದು ಮನೋವೈಜ್ಞಾನಿಕ ವಿಶೇಷಣೆ ಜಗತ್ತಿನ ಗಮನ ಸೆಳೆದಿದ್ದು ಆಸಕ್ತರು ಅದನ್ನು ಅಭ್ಯಸಿಸಬಹುದು.

ಬಾಲಕ ಗಾಂಧಿ ಚಿಕ್ಕವನಿದ್ದಾಗ ತಾಯಿಗೆ ಹತ್ತಿರದವನಾಗಿ ತಾಯಿಯ ಮತ ಸಂಬಂಧಿ ಆಚರಣೆಗಳನ್ನು ಆಸಕ್ತಿಯಿಂದ ಗಮನಿಸುತ್ತಿದ್ದ. ಪುತಲೀಬಾಯಿ ಪ್ರಣಾಮಿ ವೈಷ್ಣವ ಪಂಥದ ಕುಟುಂಬದಿಂದ ಬಂದವರಾಗಿದ್ದು ಆ ಪಂಥದ ಮೇಲೆ ಮುಸ್ಲಿಂ ಸಾಧು ಸಂತರ ಪ್ರಭಾವ ಗಾಢವಾಗಿತ್ತು ಎಂಬುದು ಗಮನಾರ್ಹ ಸಂಗತಿ. ಅದೇ ಸಮಯದಲ್ಲಿ ಮೋಹನದಾಸ ಆಗಾಗ್ಗೆ ಮನೆಗೆ ಬರುತ್ತಿದ್ದ ತಮ್ಮ ಮುಸ್ಲಿಂ, ಪಾರ್ಸಿ ಗೆಳೆಯರೊಂದಿಗೆ ತನ್ನ ತಂದೆ ವಿವಿಧ ಮತಗಳ ನಂಬಿಕೆ ಮತ್ತು ಆಚರಣೆಗಳನ್ನು ಕುರಿತು ಮಾಡುತ್ತಿದ್ದ ಚರ್ಚೆಗಳನ್ನು ಕುತೂಹಲದಿಂದ ಗಮನಿಸಲಾರಂಭಿಸಿದ್ದ. ಹೀಗಾಗಿ ಬಾಲಕ ಗಾಂಧಿ ಬಾಲ್ಯದಿಂದಲೇ ದೇವರು-ಧರ್ಮ-ದೇವಾಲಯಗಳ ಬಗ್ಗೆ ತನ್ನದೇ ಅಭಿಪ್ರಾಯಗಳನ್ನು ರೂಢಿಸಿಕೊಳ್ಳಲಾರಂಭಿಸಿದ್ದ. ಹುಡುಗನಿಗೆ ದೇವಾಲಯಗಳ ಬಗ್ಗೆ ನಿರ್ದಿಷ್ಟ ಆಸಕ್ತಿಯೇನೂ ಮೂಡಲಿಲ್ಲ. ಇಷ್ಟೊಂದು ಮತಗಳೇಕೆ ಎಂಬ ಪ್ರಶ್ನೆ ಮತ ಮತ್ತು ಧರ್ಮಗಳ ನಡುವಣ ವ್ಯತ್ಯಾಸಗಳ ಬಗ್ಗೆ ಆಲೋಚಿಸುವಂತೆ ಮಾಡಿತ್ತು.

ಕುಟುಂಬದ ಹೊಣೆ–ಲಂಡನ್‌ಗೆ ಪಯಣ

೧೮೮೫ರಲ್ಲಿ ಕರಮಚಂದರು ಕಾಲವಾದ ಮೇಲೆ ಪುತಲೀಬಾಯಿ ಬೇಚರ್‌ಜೀ ಸ್ವಾಮೀಜಿಗಳಿಗೆ ಹೇಳಿ ಕಳಿಸಿ, ಕುಟುಂಬವನ್ನು ಮುನ್ನಡೆಸಬೇಕಾದ ಹಾದಿಯ ಬಗ್ಗೆ ಚರ್ಚಿಸಿದರು. ಆ ಹೊತ್ತಿಗೆ ಮೋಹನದಾಸನ ಅಣ್ಣಂದಿರಿಬ್ಬರೂ ಮದುವೆಯಾಗಿ ಹೊರ ಊರುಗಳಲ್ಲಿ ಸ್ವತಂತ್ರ ಜೀವನ ನಡೆಸುತ್ತಿದ್ದರು. ಹಾಗಾಗಿ ಕುಟುಂಬ ಜವಾಬ್ದಾರಿ ಇದ್ದುದು ಆಗತಾನೇ ಶಾಲಾ ಶಿಕ್ಷಣ ಮುಗಿಸಿ ಹತ್ತಿರದ ಭಾವನಗರದ ಕಾಲೇಜು ಸೇರಿದ್ದ ಆತನ ಮೇಲೆ. ಅವನ ವೈಯಕ್ತಿಕ ಆಯ್ಕೆ ವೈದ್ಯ ಶಿಕ್ಷಣವಾಗಿತ್ತು. ಆದರೆ ಅವನ ಅಣ್ಣ ಈ ವೈದ್ಯಶಿಕ್ಷಣದಲ್ಲಿ ಮಾನವ ದೇಹವನ್ನು ಕತ್ತರಿಸಿ ಮಾಡಬೇಕಾದ ಅಧ್ಯಯನ ಇರುವುದರಿಂದ ತಮ್ಮ ಕುಟುಂಬದ ನಂಬಿಕೆಗೆ ಅದು ವಿರುದ್ಧವಾದುದೆಂದು ಬೇಡವೆಂದ. ಆ ಹೊತ್ತಿಗಾಗಲೇ ಹರಿಲಾಲ್ ಎಂಬ ಒಂದು ಗಂಡುಮಗುವಿನ ತಂದೆಯಾಗಿದ್ದ ಮೋಹನದಾಸ ಜೀವನದಲ್ಲಿ ಬಹುಬೇಗ ಒಂದು ನೆಲೆ ಕಂಡುಕೊಳ್ಳಬಹುದಾದ ತ್ವರಿತ ಮಾರ್ಗವೊಂದರ ಅನ್ವೇಷಣೆಯಲ್ಲಿದ್ದ. ಆಗ ಕುಟುಂಬದ ಗೆಳೆಯರೊಬ್ಬರು ಇಂಗ್ಲೆಂಡ್‌ನಲ್ಲಿನ ಮೂರು ವರ್ಷಗಳ ಕಾನೂನು ವ್ಯಾಸಂಗ ಮುಗಿಸಿ ಬಂದು ತನ್ನ ತಂದೆಯ ಉತ್ತರಾಧಿಕಾರಿಯಾಗಿ ದಿವಾನನಾಗುವುದೇ ಅತ್ಯುತ್ತಮ ಮಾರ್ಗವೆಂದು ಸಲಹೆ ಕೊಟ್ಟರು. ಹದಿಹರೆಯದ ಮೋಹನದಾಸನಿಗೆ ಇದು ಬೆಂಬಿಡದ ಕನಸಾಗಿ ಪರಿಣಮಿಸಿತು.

ಆದರೆ ಇಂಗ್ಲೆಂಡ್‌ಗೆ ಹೋಗಬೇಕಾದರೆ ಆಗ ಸಮುದ್ರಯಾನ ಅನಿವಾರ್ಯವಾಗಿತ್ತು. ಇದಕ್ಕೆ ತಾಯಿ ಪುತಲೀಬಾಯಿ ಒಪ್ಪಬೇಕಿತ್ತು. ಅದಕ್ಕಿಂತ ಮುಖ್ಯವಾಗಿ ಇದಕ್ಕೆ ಕರಮಚಂದರ ಸಾವಿನ ನಂತರ ಕುಟುಂಬದ ಯಜಮಾನರಾಗಿದ್ದ ಅವರ ತಮ್ಮ, ಅಂದರೆ ಮೋಹನದಾಸನ ಚಿಕ್ಕಪ್ಪನಿಂದ ಹಣಕಾಸಿನ ನೆರವಿನ ಭರವಸೆ ಬೇಕಿತ್ತು. ಅದಕ್ಕಾಗಿ ಚಿಕ್ಕಪ್ಪನನ್ನು ಭೇಟಿ ಮಾಡಲು ಮೋಹನದಾಸ ಎತ್ತಿನ ಗಾಡಿಯೊಂದರಲ್ಲಿ ಮೂರು ದಿವಸ ಪ್ರಯಾಣ ಮಾಡಿ ಪೋರಬಂದರ್‌ಗೆ ಹೋದ. ಯೂರೋಪಿನ ಜೀವನ ಕ್ರಮದ ಬಗ್ಗೆ ಸದಭಿಪ್ರಾಯ ಹೊಂದಿಲ್ಲದ ಚಿಕ್ಕಪ್ಪ ಹಣಕಾಸಿನ ಭರವಸೆ ಇರಲಿ, ವಿದೇಶ ಯಾತ್ರೆಯನ್ನೇ ವಿರೋಧಿಸಿದರು. ಕೊನೆಗೆ ಮೋಹನದಾಸನ ಹಠ ತಡೆಯಲಾರದೆ, ಆತನ ತಾಯಿ ಒಪ್ಪಿಗೆ ಕೊಟ್ಟರೆ ತಮ್ಮದೇನೂ ಅಭ್ಯಂತರವಿಲ್ಲವೆಂದು ಹೇಳಿದರು.

ತಾಯಿಗೆ ನೀಡಿದ ವಚನ

ಇಂಗ್ಲೆಂಡ್‌ಗೆ ಹೋಗಲೇಬೇಕೆಂಬ ಹಠದಲ್ಲಿದ್ದ ಮೋಹನದಾಸ ಹೆಂಡತಿಯ ಬಳಿಯಿದ್ದ ಚಿನ್ನ ಅಡವಿಟ್ಟು ಹಣದ ವ್ಯವಸ್ಥೆ ಮಾಡಿಕೊಳ್ಳುವ ಯೋಚನೆ ಮಾಡಿದ. ಆದರೆ ಅದು ಸಾಲುವಂತಿರಲಿಲ್ಲ. ಕೊನೆಗೆ ಅವರಣ್ಣ ಲಕ್ಷ್ಮೀದಾಸ್ ಹಣದ ವ್ಯವಸ್ಥೆ ಮಾಡಲು ಒಪ್ಪಿದರು. ಆದರೆ ತಾಯಿ ಪುತಲೀಬಾಯಿ ಮಾತ್ರ ವಿದೇಶ ಎಂದರೆ ಮದ್ಯ, ಮಾಂಸ ಮತ್ತು ಮಾನಿನಿಯರ ಸಹವಾಸ ಸಹಜ ಎಂಬ ಸಮಾಜದ ಅಭಿಪ್ರಾಯದಿಂದ ಆತಂಕಗೊಂಡು ಮಗನ ವಿದೇಶ ಯಾತ್ರೆಗೆ ಒಪ್ಪಿಗೆ ಕೊಡಲಿಲ್ಲ. ಆದರೆ ಮೋಹನದಾಸ ಹಠ ಬಿಡಲಿಲ್ಲ. ಸಾಕಷ್ಟು ಮಾತುಕತೆಯಾದ ನಂತರ ಆತ ತಾನು ವಿದೇಶ ವಾಸದಲ್ಲಿ ಮದ್ಯ-ಮಾಂಸ-ಮಾನಿನಿಯರ ಸಹವಾಸ ಮಾಡುವುದಿಲ್ಲ ಎಂದು ತಾಯಿಗೆ ವಚನ ನೀಡಿದ. ನಂತರ ಒಲ್ಲದ ಮನಸ್ಸಿನಿಂದಲೇ ಪುತಲೀಬಾಯಿ ಮಗನ ವಿದೇಶ ವ್ಯಾಸಂಗಕ್ಕೆ ಒಪ್ಪಿಗೆ ನೀಡಿ ಆಶೀರ್ವದಿಸಿದರು.

ಕೊನೆಗೂ ಹದಿಹರೆಯದ ಮೋಹನದಾಸ ಹಡಗು ಹತ್ತಲು ಮುಂಬೈಗೆ ಹೊರಟ. ಹಲವು ಗೆಳೆಯ-ಬಂಧುಗಳ ಮೂಲಕ ಇಂಗ್ಲೆಂಡ್‌ನಲ್ಲಿನ ಸಂಪರ್ಕಗಳ ವಿವರ ಕಲೆಹಾಕಿಕೊಂಡು ಲಂಡನ್‌ನಲ್ಲಿ ನೆಲೆಗೊಳ್ಳಲು ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದ. ಈ ಮಧ್ಯೆ ಮುಂಬೈನಲ್ಲಿ ಹೇಗೋ ಸುದ್ದಿ ತಿಳಿದ ಗಾಂಧಿ ಸೇರಿದ್ದ ಮೋದ್ ಬನಿಯಾ ಸಮಾಜ, ತನ್ನ ಕುಲದ ಹುಡುಗ ಸಮುದ್ರಯಾನ ಮಾಡುವುದು ಧರ್ಮವಿರೋಧಿಯಾದದ್ದೆಂದು ಅವನ ವಿದೇಶ ಯಾತ್ರೆಗೆ ಅಡ್ಡಿಯುಂಟುಮಾಡಿತು. ಕುಟುಂಬವನ್ನು ಜಾತಿಯಿಂದ ಬಹಿಷ್ಕರಿಸುವ ಬೆದರಿಕೆಯನ್ನೂ ಹಾಕಿತು. ಆದರೆ ಆ ಹೊತ್ತಿಗಾಗಲೇ ಮೋಹನದಾಸ ಈ ಬಗ್ಗೆ ನಡೆದಿದ್ದ ಚರ್ಚೆಗಳ ಮನನ-ಮಥನಗಳ ಪರಿಣಾಮವಾಗಿ ಜಾತಿ-ಧರ್ಮಗಳ ಬಗ್ಗೆ ಸ್ವತಂತ್ರ ಮತ್ತು ವಿಮರ್ಶಾತ್ಮಕ ಬುದ್ಧಿ ಬೆಳೆಸಿಕೊಂಡಿದ್ದ. ಜೊತೆಗೆ ಇಂಗ್ಲೆಂಡ್ ಪ್ರವಾಸ ಮತ್ತು ಶಿಕ್ಷಣದ ದುರ್ದಮ್ಯ ಆಕರ್ಷಣೆ. ಇವುಗಳ ಮಧ್ಯೆ ವಿಚಿತ್ರ ಧೈರ್ಯದ ಹುಡುಗನಾಗಿ ಪರಿವರ್ತಿತನಾಗಿದ್ದ ಯುವಕ ಗಾಂಧಿ, ಬಹಿಷ್ಕಾರದ ಬೆದರಿಕೆಯನ್ನು ಲೆಕ್ಕಿಸದೆ ೧೮೮೮ರ ಸೆಪ್ಟೆಂಬರ್ ೪ರಂದು ಇಂಗ್ಲೆಂಡ್‌ನ ಸೌಥಾಂಪ್ಟನ್‌ಗೆ ಹೋಗುವ ಹಡಗನ್ನೇರಿದ. ಮೂರು ವಾರಗಳ ಸಮುದ್ರಯಾನವದು.

೩

ಇಂಗ್ಲೆಂಡ್‌ನಲ್ಲಿ ಗಾಂಧಿ

ಹಡಗಿನ ಪ್ರಯಾಣದ ಮೂರು ವಾರಗಳೂ ಗಾಂಧಿ ಯಾರೊಂದಿಗೂ ಬೆರೆಯದೆ ಒಂಟಿಯಾಗಿ ಕಾಲಕಳೆದರು. ಊಟಕ್ಕೆ ಭೋಜನಶಾಲೆಗೆ ಹೋಗದೆ, ತಮ್ಮ ಕ್ಯಾಬಿನ್‌ಗೇ ತರಿಸಿಕೊಂಡು ಊಟ ಮಾಡುತ್ತಿದ್ದರು. ಯಾರೂ ಇಲ್ಲದ ಸಮಯ ನೋಡಿ ಹಡಗಿನ ಮೇಲ್ಭಾಗಕ್ಕೆ ಹೋಗಿ ಸ್ವಲ್ಪ ಹೊತ್ತು ಕೂತು ಬರುತ್ತಿದ್ದರು. ಮುಂಬೈನಲ್ಲಿ ಹಡಗು ಹತ್ತುವಾಗ, ಗಾಂಧಿಯನ್ನು ಬೀಳ್ಕೊಡಲು ಬಂದಿದ್ದ ಅವರ ಅಣ್ಣ ಲಕ್ಷ್ಮೀದಾಸ್ ಅದೇ ಹಡಗಿನಲ್ಲಿ ಲಂಡನ್‌ಗೆ ಹೊರಟಿದ್ದ ಮಜುಂದಾರ್ ಎಂಬ ಬಂಗಾಳಿ ಹಿರಿಯರೊಬ್ಬರನ್ನು ಪರಿಚಯಿಸಿಕೊಂಡಿದ್ದರು. ಅವರು ಪ್ರಯಾಣ ಸಮಯದಲ್ಲಿ ಯುವಕ ಗಾಂಧಿಯ ಯೋಗಕ್ಷೇಮವನ್ನು ನೋಡಿಕೊಳ್ಳುವುದಾಗಿ ಲಕ್ಷ್ಮೀದಾಸ್‌ಗೆ ಭರವಸೆ ನೀಡಿದ್ದರು. ಮಜುಂದಾರ್ ಮತ್ತು ಅವರ ಮಿತ್ರರು ಎಷ್ಟೇ ಪುಸಲಾಯಿಸಿದರೂ ಗಾಂಧಿ ಇತರರೊಂದಿಗೆ ಬೆರೆಯಲು ಮನಸ್ಸು ಮಾಡಲಿಲ್ಲ. ಅವರ ಪುಕ್ಕಲುತನ ಒಂಚೂರೂ ಸುಧಾರಿಸಲಿಲ್ಲ. ಇಂಗ್ಲೆಂಡ್‌ನಲ್ಲಿ ಬರೀ ಸಸ್ಯಾಹಾರಿಯಾಗಿ ವರ್ಷಗಟ್ಟಲೆ ಇರುವುದು ಸಾಧ್ಯವೇ ಇಲ್ಲವಾದ್ದರಿಂದ ಮಾಂಸಾಹಾರವನ್ನು ಅಭ್ಯಾಸಮಾಡಿಕೊಳ್ಳಬೇಕೆಂದು ಅವರೆಲ್ಲ ತುಂಬಾ ಒತ್ತಾಯಿಸಿದರು. ಆದರೆ ಗಾಂಧಿ, ತಾಯಿಗೆ ಕೊಟ್ಟ ಮಾತನ್ನು ಉಲ್ಲೇಖಿಸಿ ಒಪ್ಪಲು ನಿರಾಕರಿಸಿದರು. ಹಡಗಿನಲ್ಲಿ ಲಭ್ಯವಿದ್ದ ಬೇಕರಿ ಆಹಾರ ಹೊಟ್ಟೆ ತುಂಬಿಸದಿದ್ದಾಗ ಮನೆಯಿಂದ ತಂದಿದ್ದ ಸಿಹಿ ಮತ್ತು ಖಾರದ ತಿಂಡಿಗಳನ್ನು ತಿಂದು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು.

ಅಂತೂ ಗಾಂಧಿ ಸಮುದ್ರಯಾನ ಮುಗಿಸಿ ಸೆಪ್ಟೆಂಬರ್ ತಿಂಗಳ ಕೊನೆಯ ದಿನ ಸೌಥಾಂಪ್ಟನ್ ಬಂದರಿನಲ್ಲಿ ಹಡಗಿನಿಂದ ಇಳಿದು, ಸಹಪ್ರಯಾಣಿಕರೊಬ್ಬರ ಸಲಹೆಯ ಮೇರೆಗೆ ಅವರು ಮತ್ತು ಮಜುಂದಾರ್ ಲಂಡನ್‌ನ ವಿಕ್ಟೋರಿಯಾ ಹೋಟೆಲ್‌ನಲ್ಲಿ ತಂಗಲು ಲಂಡನ್ ನಗರದತ್ತ ಹೊರಟರು. ಹೋಟೆಲ್ ತಲುಪಿದಾಗ ಅದರ ವೈಭವ ಗಾಂಧಿಯನ್ನು ಎಷ್ಟು ತಬ್ಬಿಬ್ಬು ಮಾಡಿತೆಂದರೆ, ಹೋಟೆಲ್‌ನ ಪರಿಚಾರಕ ಅವರ ಕೊಠಡಿಗೆ ಕರೆದೊಯ್ಯಲು ಹತ್ತಿಸಿದ ಲಿಫ್ಟನ್ನೇ ಅವರು ತಮ್ಮ ಕೊಠಡಿಯೆಂದು ಭಾವಿಸಿ ಗಲಿಬಿಲಿಗೊಂಡರು! ಸಂಜೆಯ ಹೊತ್ತಿಗೆ, ಸ್ವದೇಶದಲ್ಲೇ ತಾವು ಸಂಪರ್ಕ ಗೊತ್ತುಮಾಡಿಕೊಂಡು ಬಂದಿದ್ದ, ಮುಂದೆ ತಮ್ಮ ಜೀವದ ಗೆಳೆಯ ಹಾಗೂ ಪ್ರೇರಕ ಶಕ್ತಿಗಳಲ್ಲಿ ಒಬ್ಬರಾದ ಮತ್ತು ಆಗ ಅಲ್ಲಿ ಬ್ಯಾರಿಸ್ಟರ್ ಪರೀಕ್ಷೆಗಾಗಿ ಬಂದಿದ್ದ ಗುಜರಾತಿ ಡಾ. ಪ್ರಾಣಜೀವನ ಮೆಹ್ತಾ ಬರದೇ ಹೋಗಿದ್ದರೆ ಗಾಂಧಿ ಆ ಹೋಟೆಲ್‌ನಲ್ಲಿ ಇನ್ನಷ್ಟು ಗಲಿಬಿಲಿಗೆ ಒಳಗಾಗಿ ಪೇಚಿಗೆ ಸಿಲುಕುತ್ತಿದ್ದುದು ಖಂಡಿತ. ಅವರ ಅದೃಷ್ಟಕ್ಕೆ ಮೆಹ್ತಾ ಸಕಾಲಕ್ಕೆ ಬಂದರು. ಬಂದವರೇ ಗಾಂಧಿಯನ್ನು ನೋಡಿ ಗಾಬರಿಯಾಗಿ, ಅವರು

ಇಂಗ್ಲಿಷ್ ಶೈಲಿಯದೆಂದು ಭಾವಿಸಿ ಧರಿಸಿದ್ದ ಅಭಾಸಕರ ಉಡುಪುಗಳನ್ನು ತೆಗೆಸಿ ಸಾಮಾನ್ಯ ಉಡುಪು ಧರಿಸಲು ಹೇಳಿದರು. ಹಾಗೇ ಇಂಗ್ಲೆಂಡಿನ ಜನಜೀವನದ ನಡೆ-ನುಡಿಗಳನ್ನು ಕುರಿತ ಕೆಲವು ಪ್ರಾಥಮಿಕ ಪಾಠಗಳನ್ನು ಹೇಳಿ ಹೋದರು.

ಹೊಟ್ಟೆ ತುಂಬ ಊಟಕ್ಕಾಗಿ ಪರದಾಟ!

ಹೋಟೆಲ್‌ನ ಊಟ-ತಿಂಡಿ ಗಾಂಧಿಗೆ ಒಗ್ಗಲಿಲ್ಲ. ಜೊತೆಗೆ ಒಂದೆರಡು ದಿನಗಳಲ್ಲೇ ಹೋಟೆಲ್ ವಸತಿ ದುಬಾರಿ ಎನಿಸತೊಡಗಿತು. ಮಜುಂದಾರರ ಸ್ನೇಹಿತರೊಬ್ಬರ ಸಹಾಯದಿಂದ ಅವರು ಒಂದು ಖಾಸಗಿ ಕೊಠಡಿಯನ್ನು ಬಾಡಿಗೆಗೆ ತೆಗೆದುಕೊಂಡು ಕೆಲ ದಿನ ವಾಸಿಸಿದರು. ಆದರೂ ಅಲ್ಲಿಯೂ ಒಂಟಿತನದ ಭಯ ಹಾಗೂ ಆಹಾರದ ತೊಂದರೆ ಅವರನ್ನು ಬಾಧಿಸತೊಡಗಿತು. ಮತ್ತೆ ಮೆಹ್ತಾರೇ ಅವರ ನೆರವಿಗೆ ಬಂದರು. ಗಾಂಧಿ, ಅವರ ಸಲಹೆಯ ಮೇರೆಗೆ ವೆಸ್ಟ್ ಕೆನ್ಸಿಂಗ್ಟನ್ ಪ್ರದೇಶದ ಒಬ್ಬ ಇಂಗ್ಲಿಷ್ ವೃದ್ಧೆಯೊಬ್ಬರ ಮನೆಯಲ್ಲಿ ಊಟ-ವಸತಿಗಳಿಗೆ ಹಣಕೊಡುವ ಅತಿಥಿಯಾಗಿ ನೆಲೆಗೊಂಡರು. ಅಲ್ಲಿ ಸಭ್ಯ ಕುಟುಂಬದ ಆಶ್ರಯವೊಂದು ದೊರಕಿದಂತಾಯಿತೇ ಹೊರತು ಊಟ-ತಿಂಡಿಗಳ ಸಮಸ್ಯೆ ಬಗೆಹರಿಯಲಿಲ್ಲ. ಆ ಮನೆಯವರು ಇವರಿಗಾಗಿ ತಯಾರಿಸಿ ನೀಡುತ್ತಿದ್ದ ಬ್ರೆಡ್ ಮತ್ತು ಉಪ್ಪು-ಖಾರಗಳಿಲ್ಲದೆ ಬೇಯಿಸಿದ ತರಕಾರಿ ಇವರಿಗೆ ರುಚಿಸುತ್ತಲೂ ಇರಲಿಲ್ಲ ಮತ್ತು ಇವರಿಗೆ ಯಾವ ಮೂಲೆಗೂ ಸಾಲುತ್ತಿರಲಿಲ್ಲ. ಹೇಳಲು ಮತ್ತು ಕೇಳಲು ಸಂಕೋಚ. ಅವರು ಒತ್ತಾಯಿಸಿ ಹಾಕುತ್ತಿದ್ದ ಒಂದು ಹೆಚ್ಚುವರಿ ಬ್ರೆಡ್ ತಿನ್ನಲು ಅದರ ಸಪ್ಪೆತನದಿಂದ ಆಗದು! ಜೊತೆಗೆ ಆಗ ಹೆಚ್ಚು ತಿನ್ನುವ ವಯಸ್ಸು. ಹೊರಗಿನ ಹೋಟೆಲ್‌ಗಳಲ್ಲಿ ಸಸ್ಯಾಹಾರಕ್ಕಾಗಿ ವಿವರ ವಿಚಾರಿಸಲು ಮುಜುಗರ. ಹಾಗೆ ವಿಚಾರಿಸಿ ಹೊಟ್ಟೆ ತುಂಬ ತಿಂದರೆ ಗಾಬರಿಪಡುವಷ್ಟು ಬಿಲ್! ಈ ಕಷ್ಟದಲ್ಲಿ ಅವರು ಲಂಡನ್ ನಗರದಲ್ಲಿ ಸ್ವಲ್ಪ ಸುಲಭ ದರದಲ್ಲಿ ಸಸ್ಯಾಹಾರ ಒದಗಿಸುವ ಒಂದು ಹೋಟೆಲ್‌ನ್ನು ಹುಡುಕತೊಡಗಿದರು.

ಹಾಗೆ ನೋಡಿದರೆ, ಗಾಂಧಿಯ ಮೂರು ವರ್ಷಗಳ ಇಂಗ್ಲೆಂಡ್ ವಾಸ ಎಂದರೆ, ಬ್ಯಾರಿಸ್ಟರ್ ಆಗಲು ಪಡೆದ ಶಿಕ್ಷಣದ ಕಥೆಗಿಂತ ಹೆಚ್ಚಾಗಿ ಅವರು ತಮಗೆ ಬೇಕಾದ ಆಹಾರವನ್ನು ಹುಡುಕಿಕೊಳ್ಳಲು ಮಾಡಿದ ಪ್ರಯತ್ನಗಳ ಕಥೆಯೇ ದೊಡ್ಡದೂ, ಕುತೂಹಲಕರವೂ ಆಗಿದೆ. ಅದು ಅವರು ತಮ್ಮ ಪುಕ್ಕಲುತನ, ಒಂಟಿತನ, ಮುಜುಗರ, ಸಂಕೋಚಗಳನ್ನು ತೊಡೆದುಕೊಳ್ಳಲು ಮಾಡಿದ ಸ್ವಾರಸ್ಯಕರ ಕಥೆಯೂ ಆಗಿದೆ! ಅವರು ಬ್ಯಾರಿಸ್ಟರ್ ವ್ಯಾಸಂಗಕ್ಕಾಗಿ ೧೮೮೮ರ ನವೆಂಬರ್ ೬ರಂದು ಇನ್ನರ್ ಟೆಂಪಲ್ ಎಂಬ ಶಾಲೆಗೆ ಸೇರಿದರು. ಅವರಿಗೆ ಅಲ್ಲಿನ ಪಾಠ-ಪರೀಕ್ಷೆಗಳು ಕಠಿಣವೇನೂ ಎನ್ನಿಸಲಿಲ್ಲ. ಹಾಗೇ ಯೂರೋಪ್‌ನ ಹೆಮ್ಮೆಯ ಕೈಗಾರಿಕಾ ನಗರವಾಗಿ ಹೊಮ್ಮಿದ್ದ ಲಂಡನ್ ನಗರದ ಜನಜೀವನದ ವೇಗವಾಗಲೀ, ಅದರ ನವ ಜಾಗೃತ ಎಡಪಂಥೀಯ ರಾಜಕಾರಣದ ಅಬ್ಬರವಾಗಲೀ ಅವರನ್ನು ಕಾಡಲಿಲ್ಲ. ಬಹುಶಃ ಇದಕ್ಕೆ ಕಾರಣ ಅವರಿಗೆ ಈ ಬಗ್ಗೆ ನಿರ್ದಿಷ್ಟ ಆಸಕ್ತಿ ಇರಲಿಲ್ಲ. ಆದರೆ ಅಲ್ಲಿನ ಉಡುಪು-ಆಹಾರ-ಭಾಷೆ-ಜೀವನ ಶೈಲಿಗಳ ಜೊತೆ ಹೊಂದಿಕೊಳ್ಳುವುದು ಬಹುಕಷ್ಟವೆನಿಸಿತು. ಅಂತೂ ಅವರು ಇವೆಲ್ಲವುಗಳ ಪರಿಹಾರ ರೂಪವಾಗಿ ಆಹಾರಕ್ಕಾಗಿ ನಡೆಸಿದ ಹುಡುಕಾಟದಲ್ಲಿ ಶಾಕಾಹಾರಕ್ಕಾಗಿಯೇ ಮೀಸಲಿರಿಸಿದ ಒಂದು ಹೋಟೆಲ್ ಫ್ಯಾರಿಂಗ್‌ಡನ್ ಬೀದಿಯಲ್ಲಿ ಸಿಕ್ಕಿಯೇಬಿಟ್ಟಿತು.

ಜೊತೆಗೇ ಆ ಹೋಟೆಲ್‌ನ ಬಾಗಿಲಿನಲ್ಲಿ ಮಾರಲಾಗುತ್ತಿದ್ದ, ಹೆನ್ರಿ ಸಾಲ್ಟ್ ಎಂಬುವವರು ಬರೆದಿದ್ದ 'ಶಾಕಾಹಾರಕ್ಕಾಗಿ ಒಂದು ಮನವಿ' ('A plea for Vegetarianism') ಎಂಬ ಪುಟ್ಟ ಪುಸ್ತಕವೂ ಅವರ ಕಣ್ಣಿಗೆ ಬಿದ್ದು ಅದನ್ನು ಕೊಂಡರು. ಸಾಲ್ಟ್ ಭಾರತದಲ್ಲಿ ಸೇವೆ ಸಲ್ಲಿಸುತ್ತಿದ್ದ ಇಂಗ್ಲಿಷ್ ಸೇನಾಧಿಕಾರಿಯ ಮಗನಾಗಿ ಭಾರತದಲ್ಲಿ ಜನಿಸಿದವನಾಗಿದ್ದ. ಆತ ಇಂಗ್ಲೆಂಡ್‌ನಲ್ಲಿಯೇ ಬೆಳೆದನಾದರೂ ಸರಳ ಜೀವನವನ್ನು ಇಷ್ಟಪಡತೊಡಗಿ ಒಂದು ಹಳ್ಳಿಗೆ ಹೋಗಿ ನೆಲೆಸಿದವನಾಗಿದ್ದನು. ತನ್ನಂತೆಯೇ ಸಂಪೂರ್ಣ ಸಸ್ಯಾಹಾರಿಯಾಗಿದ್ದ ಕವಿ ಶೆಲ್ಲಿಯ ಅಭಿಮಾನಿಯಾಗಿದ್ದ ಈತ ಈ ಸಂಬಂಧ ಬರೆದ ನಲವತ್ತು ಪುಸ್ತಕಗಳಲ್ಲಿ ಸಸ್ಯಾಹಾರ ಸಂನ್ಯಾಸ ಜೀವನದ ಲಕ್ಷಣವಾಗಿರದೆ ಮಾನವೇತರ ಜೀವಿಗಳೊಡನೆಯ ಬಂಧುತ್ವದ ಸಂಕೇತವಾಗಿದೆ ಎಂದು ಪ್ರತಿಪಾದಿಸಿದ್ದ.

ಆಹಾರ ವ್ರತದಿಂದ ಜೀವನ ವ್ರತದೆಡೆಗೆ

ಗಾಂಧಿಯುವರ ಬದುಕಿನ ನಿಜವಾದ ತಿರುವು ಇಲ್ಲಿಂದಲೇ ಆರಂಭವಾಯಿತೆನ್ನಬೇಕು. ಏಕೆಂದರೆ ಈ ತಿರುವೇ ಅವರ ಬದುಕಿನ ಮುಖ್ಯ ತತ್ವಗಳಾದ ಸತ್ಯ-ಅಹಿಂಸೆಗಳ ಅರ್ಥದ ಹುಡುಕಾಟಕ್ಕೆ ಕಾರಣವಾದ ಮುಂದಿನ ತಿರುವುಗಳಿಗೆ ನಾಂದಿಯಾಯಿತೆಂದು ಹೇಳಬೇಕು. ಸಾಲ್ಟ್‌ರ ಪುಸ್ತಕ ಓದಿದ ಮೇಲೆ ಗಾಂಧಿಗೆ ತಮ್ಮ ತಾಯಿಗೆ ಕೊಟ್ಟ ಮಾತನ್ನು ನಡೆಯಿಸಿಕೊಡಲಷ್ಟೇ ಮಾನ್ಯವಾಗಿದ್ದ ಶಾಕಾಹಾರವು ತಮ್ಮ ಆಳದ ಆಯ್ಕೆಯ ಆಹಾರ ಪದ್ಧತಿಯೂ ಆಗಿ ಮಾರ್ಪಾಟಾಯಿತು. ಈ ಪುಸ್ತಕದ ಮುಂದುವರಿಕೆಯಾಗಿ ಅವರು ಓದಿದ 'ಶಾಕಾಹಾರಕ್ಕೊಂದು ನೈತಿಕ ಆಧಾರ' ಮತ್ತು 'ಆಹಾರ ಪದ್ಧತಿ ಮತ್ತು ಆಹಾರ ಪದ್ಧತಿಯ ಸುಧಾರಣೆಗಳು' ಎಂಬ ಎರಡು ಪುಸ್ತಕಗಳು ಅವರಲ್ಲಿ ಮನುಷ್ಯನ ಆಹಾರ ಪದ್ಧತಿ ಕುರಿತಂತೆ ಒಂದು ದೊಡ್ಡ ಜಿಜ್ಞಾಸೆಯನ್ನು ಹುಟ್ಟಿಸಿತು. ಈ ಜಿಜ್ಞಾಸೆಯ ಪರಿಣಾಮವಾಗಿ ಅವರು ಆಗತಾನೇ ಇಂಗ್ಲೆಂಡ್‌ನಲ್ಲಿ ಸಕ್ರಿಯಗೊಳ್ಳುತ್ತಿದ್ದ ಸಸ್ಯಾಹಾರಿ ಆಂದೋಲನದ ಸಂಪರ್ಕಕ್ಕೆ ಬಂದು ಸಸ್ಯಾಹಾರಿಗಳ ಸಂಘದ ಸದಸ್ಯತ್ವ ಪಡೆದರು.

'ಪ್ರಾಣಿಗಳ ಮೇಲೆ ಮನುಷ್ಯನ ಅಧಿಕಾರ ಅಥವಾ ಆಧಿಪತ್ಯದ ಸ್ಥಾಪನೆ ಎಂದರೆ, ಪ್ರಾಣಿಗಳನ್ನು ಕೊಂದು ತಿನ್ನುವುದಲ್ಲ. ಶಕ್ತರು ಅಶಕ್ತರನ್ನು ಕಾಪಾಡಬೇಕು. ಮನುಷ್ಯರು ಒಬ್ಬರನ್ನೊಬ್ಬರು ಕಾಪಾಡುವಂತೆ ಮನುಷ್ಯರಿಗೂ ಪ್ರಾಣಿಗಳಿಗೂ ಅನ್ಯೋನ್ಯ ಸಂಬಂಧ-ಸಹಾಯ ಇರಬೇಕು' ಎಂಬುದು ಅವರು ತಮ್ಮ ಈ ಜಿಜ್ಞಾಸೆಯ ಮೂಲಕ ತಮ್ಮ ಆಹಾರ ಪದ್ಧತಿಗಾಗಿ ಕಂಡುಕೊಂಡ ತಾತ್ವಿಕ ಮತ್ತು ನೈತಿಕ ನೆಲೆ. ಇದರ ಹಿಂದೆ ಇದ್ದುದು, ಆಹಾರ ಸೇವನೆ ಒಂದು ಭೋಗವಲ್ಲ, ಅದು ಅಗತ್ಯವಾಗಿರುವುದು ಶರೀರ ರಕ್ಷಣೆ ಮತ್ತು ಸಂರಕ್ಷಣೆಗಾಗಿ ಮಾತ್ರ; ಅದನ್ನು ಔಷಧಿಯಂತೆಯೇ-ಅಂದರೆ ಎಷ್ಟು ಬೇಕೋ ಅಷ್ಟು ಮಾತ್ರ-ಸ್ವೀಕರಿಸಬೇಕು ಎಂಬುದು ಆಹಾರ ಪದ್ಧತಿ ಕುರಿತ ಇನ್ನಷ್ಟು ಸಾಹಿತ್ಯದ ಅಧ್ಯಯನದಿಂದ ಅವರು ಕಂಡುಕೊಂಡ ಹೊಸ ಅರಿವು. ಇದರ ಜೊತೆಗೆ ಕಂಡುಕೊಂಡ ಇನ್ನೊಂದು ಹೊಸ ಸಂಗತಿ ಎಂದರೆ, ಮನುಷ್ಯ ಶರೀರ ವಿಕಾಸವಾಗಿರುವುದು ಸಸ್ಯಾಹಾರದ-ಅದೂ ಬೇಯಿಸದ್ದು-ಆಧಾರದ ಮೇಲೆ ಎಂಬುದು.

ಆದರೆ ಈ ಮಧ್ಯೆ ಅವರು ಆಂಗ್ಲ ಸಮಾಜದ ಸಭ್ಯತೆಗನುಸಾರ ಮಾಂಸಾಹಾರ ಮತ್ತು ಮದ್ಯಪಾನ ಕುರಿತ ಮಡಿ-ಮೈಲಿಗೆಗಳನ್ನು ತೊರೆದು 'ಸಹಜ'ವಾಗಬೇಕೆಂದು

ತಮ್ಮ ಕೆಲ ಆಂಗ್ಲ ಗೆಳೆಯರ ನಿರಂತರ ಒತ್ತಾಯಗಳನ್ನೂ ಎದುರಿಸಬೇಕಾಯಿತು. ಗಾಂಧಿ ಈ ಒತ್ತಾಯಗಳನ್ನು ಮಾಂಸ ಮತ್ತು ಮದ್ಯ ವಿಷಯಗಳ ಹೊರತಾಗಿ ಇಂಗ್ಲಿಷ್ ಸಮಾಜದ ಸಭ್ಯತೆಯ ಬೇರೆ ಹವ್ಯಾಸಗಳನ್ನು ಅಳವಡಿಸಿಕೊಳ್ಳುವುದಾಗಿ ಹೇಳಿ ಈ ಒತ್ತಾಯಗಳನ್ನು ನಿವಾರಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಇದಕ್ಕಾಗಿ ಪ್ರತಿಷ್ಠಿತ ಸಮಾಜದ ವಿಶಿಷ್ಟ ಉಡುಪುಗಳನ್ನು ಖರೀದಿಸಿ ಹಾಕಿಕೊಳ್ಳತೊಡಗಿದರಲ್ಲದೆ ಪಿಟೀಲು ಮತ್ತು ಭಾಷಣ ಕಲೆ ಕಲಿಯಲು ಗುರುಗಳನ್ನು ನೇಮಿಸಿಕೊಂಡರು. ಆದರೆ ಕೆಲವೇ ದಿನಗಳಲ್ಲಿ, ಭಾಷಣ ಕಲೆ ಕಲಿಸಲು ಬರುತ್ತಿದ್ದ ಮಹಿಳೆಯೊಬ್ಬರ ಬುದ್ಧಿಮಾತುಗಳ ಪರಿಣಾಮವಾಗಿ, ಇದು ಅಣ್ಣ ಕಷ್ಟಪಟ್ಟು ಕಳಿಸುತ್ತಿದ್ದ ಹಣದ ದುಂದುವೆಚ್ಚವೆಂಬುದು ಅವರ ಅರಿವಿಗೆ ಬಂತು.

ಇದರ ಮುಂದಿನ ಪರಿಣಾಮವಾಗಿ ಅವರು ಹಣ ಖರ್ಚುಗಳನ್ನು ಕಡಿಮೆ ಮಾಡಿಕೊಳ್ಳುವ ಯೋಜನೆಯೊಂದನ್ನು ರೂಪಿಸಿದರು. ಅತಿಥಿಯಾಗಿದ್ದ ಕುಟುಂಬವನ್ನು ಬಿಟ್ಟು ಬಾಡಿಗೆಗೆ ಒಂದು ಸಣ್ಣ ಮನೆ ಮಾಡಿಕೊಂಡರು. ಪ್ರಯಾಣಕ್ಕಾಗಿ ವಾಹನವನ್ನು ಬಾಡಿಗೆಗೆ ತೆಗೆದುಕೊಳ್ಳುವುದನ್ನು ನಿಲ್ಲಿಸಿ ನಡಿಗೆಯನ್ನು ಆರಂಭಿಸಿದರು. ಲಂಡನ್‌ನ ಚಳಿಯಲ್ಲಿ ನಡೆಯುವುದೇ ಒಂದು ಖುಷಿಯ ವಿಚಾರ ಎನ್ನುವ ಅವರು ದಿನವೊಂದಕ್ಕೆ ಕನಿಷ್ಟ ೮ ಮೈಲಿ ನಡೆಯುತ್ತಿದ್ದುದಾಗಿಯೂ, ಅದು ತಮ್ಮನ್ನು ದೃಢಕಾಯರನ್ನಾಗಿ ಇಡುವಲ್ಲಿ ನೆರವಾಯಿತೆಂದೂ ಹೇಳಿಕೊಂಡಿದ್ದಾರೆ. ನಂತರ ಗಾಂಧಿ ಇನ್ನಷ್ಟು ಮಿತವ್ಯಯ ಸಾಧಿಸಬೇಕೆಂದು ಒಂದು ಕೊಠಡಿಯನ್ನು ಬಾಡಿಗೆಗೆ ಹಿಡಿದು ತಾವೇ ಅಡಿಗೆ ಮಾಡಿಕೊಳ್ಳಲಾರಂಭಿಸಿದರು. ಇದು ಗಾಂಧಿಯ ಮಾನಸಿಕತೆಯ ವಿಕಾಸದ ಒಂದು ಪ್ರಮುಖ ಘಟ್ಟವೆಂದೇ ಹೇಳಬೇಕು. ಸಸ್ಯಾಹಾರದ ಹಿಂದಿದ್ದ ಜೀವನ ದರ್ಶನ ಮತ್ತು ಸಾಮಾಜಿಕ ಪ್ರತಿಷ್ಠೆಯ ಮುಗ್ಧ ಹುಡುಕಾಟಗಳ ನಡುವಣ ತಾಕಲಾಟ ಅವರನ್ನು ಬದುಕಿನಲ್ಲಿ ತಮ್ಮದೇ ಒಂದು ಹೊಸ ದಿಕ್ಕೊಂದನ್ನು ಕಂಡುಕೊಳ್ಳಲು ಪ್ರೇರೇಪಿಸಿತ್ತು.

ಈ ಮಧ್ಯೆ ಅವರ ಬ್ಯಾರಿಸ್ಟರ್ ಶಿಕ್ಷಣ ಮತ್ತು ಸಸ್ಯಾಹಾರ ಸಂಘದ ಚಟುವಟಿಕೆಗಳು ಮುಂದುವರೆದಿದ್ದವು. ಅದರ ಭಾಗವಾಗಿ ಅಡುಗೆಯಲ್ಲಿ ಶಾಕಾಹಾರದ ಅನೇಕ ಪ್ರಯೋಗಗಳನ್ನು ನಡೆಸಿದರು. ಮನುಷ್ಯನಿಗೆ ದಿನವೊಂದಕ್ಕೆ ಬೇಕಾದ ಸರಾಸರಿ ಪಿಷ್ಟ, ಸಸಾರಜನಕ, ಜೀವಸತ್ವಗಳ ಪ್ರಮಾಣವನ್ನು ತಿಳಿದುಕೊಂಡು ಅದಕ್ಕನುಸಾರವಾದ ವಿವಿಧ ಧಾನ್ಯಗಳು ಹಾಗೂ ಸೊಪ್ಪು-ತರಕಾರಿಗಳನ್ನಾಧರಿಸಿದ ಆಹಾರ ತಯಾರಿಸಿ ತಿನ್ನಲಾರಂಭಿಸಿದರು. ಕ್ರಮೇಣ ಹಾಲು, ಮೊಟ್ಟೆ, ಸಿಹಿ, ಮಸಾಲೆ ಪದಾರ್ಥಗಳನ್ನು ತ್ಯಜಿಸಿದರು.

ಈ ಆಹಾರ ಪ್ರಯೋಗಗಳ ಜೊತೆಗೇ ಅವರು 'ಸಸ್ಯಾಹಾರಿಗಳ ಸಂಘ'ದ ಕಾರ್ಯಕಲಾಪಗಳಲ್ಲಿ ಭಾಗವಹಿಸುವ ಮೂಲಕ ತಮ್ಮ ವ್ಯಕ್ತಿತ್ವವನ್ನು ಗಟ್ಟಿಗೊಳಿಸಿಕೊಳ್ಳುವ ಹಲವು ಪ್ರಯತ್ನಗಳನ್ನು ಮಾಡಿದರು. ಇದರ ಫಲವಾಗಿ ಅಖಿಲ ಇಂಗ್ಲೆಂಡ್ ಸಸ್ಯಾಹಾರಿಗಳ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರೂ ಆದ ಅವರು ಸಂಘದ ಸಭೆಯಲ್ಲಿ ಮಾತಾಡಲು ನಿಂತರೆ ಮಾತ್ರ ಮಾತೇ ಹೊರಡುತ್ತಿರಲಿಲ್ಲ! ಭಾಷಣವನ್ನು ಬರೆದುಕೊಂಡು ಬಂದು ಓದಲು ತೊಡಗಿದರೆ ಮೊದಲ ವಾಕ್ಯಗಳನ್ನು ಓದುವಾಗಲೇ ತಡವರಿಸಿ ಬಾಯಿ ಒಣಗಿಹೋಗುವಂತಾಗುತ್ತಿತ್ತು!! ಆದರೆ ತಮ್ಮ

ಬದುಕಿನ ಆ ಕಾಲಘಟ್ಟದ ಇಂತಹ ಮುಖೇಡಿತನ, ಸಂಕೋಚ, ಲಜ್ಜೆಗಳೇ ತಮ್ಮನ್ನು ಮಾಂಸ, ಮದ್ಯ, ಮಾನಿನಿಯರ ಆಕರ್ಷಣೆ ಮತ್ತು ಆಕ್ರಮಣಗಳಿಂದಲೂ ರಕ್ಷಿಸಿದ್ದು ಮತ್ತು ತಾವು ಭಾರತ ಬಿಡುವ ಮುನ್ನ ತಾಯಿಗೆ ಕೊಟ್ಟಿದ್ದ ಮಾತಿನ ಎಚ್ಚರವೂ ಇದರ ಹಿಂದೆ ಪರೋಕ್ಷವಾಗಿ ಕೆಲಸ ಮಾಡಿತ್ತು ಎಂದು ಲಂಡನ್‌ನಲ್ಲಿದ್ದಾಗ ಎರಡು ಬಾರಿ ತಾವು ಹೆಂಗಸರ ಮೋಹಪಾಶದಿಂದ ಪಾರಾದ ಘಟನೆಗಳನ್ನು ಉಲ್ಲೇಖಿಸುತ್ತಾ ತಮ್ಮ 'ಆತ್ಮಚರಿತ್ರೆ'ಯಲ್ಲಿ ಬರೆದಿದ್ದಾರೆ.

ಆದರೆ ಇದು ಅವರನ್ನು ಲಂಡನ್ ನಗರದ ಆ ದಿನಗಳ ದೊಡ್ಡ ಆಕರ್ಷಣೆಗಳಾಗಿದ್ದ ರಂಗಭೂಮಿ, ಕ್ರೀಡೆ ಮತ್ತು ರಾಜಕಾರಣದ ಪ್ರಯೋಗಶೀಲತೆಯಿಂದಲೂ ದೂರ ಮಾಡಿತ್ತು ಎಂಬುದೂ ಅಷ್ಟೇ ನಿಜ. ಆದರೆ ಇದು ಅವರ ಲೇಖನ ಪ್ರವೃತ್ತಿಗೆ ಇಂಬು ನೀಡಿದ ಸಂದರ್ಭವೂ ಹೌದು. ಗಾಂಧಿ ಈಗ ತಮ್ಮ ಸಹ-ವಾಸಿಯಾಗಿದ್ದ ಸಸ್ಯಾಹಾರಿ ಆಂದೋಲನದ ಓರ್ವ ನಾಯಕನಾಗಿದ್ದ ಜೊಸೈ ಓಲ್ಡ್‌ಫೀಲ್ಡ್‌ನ ಪ್ರೋತ್ಸಾಹದಿಂದ 'ದ ವೆಜಿಟೇರಿಯನ್' ಪತ್ರಿಕೆಗಾಗಿ ಲೇಖನಗಳನ್ನು ಬರೆಯಲಾರಂಭಿಸಿದರು. ಅಂತಹ ಒಂದು ಲೇಖನದಲ್ಲಿ ಹಿಂದೂಗಳು ದೈಹಿಕವಾಗಿ ದುರ್ಬಲರಾಗಿರಲು ಕಾರಣ ದನದ ಮಾಂಸದಿಂದ ದೂರವಿರುವುದಲ್ಲ; ಬದಲಿಗೆ ಬಾಲ್ಯವಿವಾಹ ಎಂದು ವಿವರಿಸಿದರು. ಲೇಖನಗಳು ದೊಡ್ಡದಾದಾಗ ಅವನ್ನು ಇತರ ದೊಡ್ಡ ಪತ್ರಿಕೆಗಳಿಗೂ ಕಳಿಸತೊಡಗಿದರು. 'ಭಾರತದ ಹಬ್ಬ ಹರಿದಿನಗಳು', 'ಭಾರತದ ಆಹಾರ ಪದ್ಧತಿ' ಮುಂತಾದವು ಇಂತಹ ಲೇಖನಗಳು. ಗಾಂಧಿಯ ಈ ಹೊಸ ಪ್ರವೃತ್ತಿಯ ಒಂದು ಸತ್ಪರಿಣಾಮವೆಂದರೆ, ಅಷ್ಟೇನೂ ಉತ್ತಮವಾಗಿಲ್ಲದಿದ್ದ ಅವರ ಇಂಗ್ಲಿಷ್ ಸುಧಾರಿಸಿತಷ್ಟೇ ಅಲ್ಲ, ಒಂದು ಸರಳ ಸುಭಗತೆಯನ್ನು ಸಾಧಿಸಿಕೊಂಡು ಮುಂದೆ ಅವರ ಸಾರ್ವಜನಿಕ ಜೀವನದಲ್ಲಿ ಮುಖ್ಯ ಪಾತ್ರ ವಹಿಸಿದ ಹಲವು ರೀತಿಯ ಬರವಣಿಗೆಗೆ ನೆರವಾಯಿತು ಎಂದೂ ಇಲ್ಲಿ ಹೇಳಬಹುದು. ಸಸ್ಯಾಹಾರ ಆಂದೋಲನದಿಂದ ಗಾಂಧಿ ಪಡೆದ ಇನ್ನೊಂದು ಪ್ರೇರಣೆ ಎಂದರೆ, ಆಗ ಕೈಗಾರಿಕಾ ಕ್ರಾಂತಿ ಮತ್ತು ಅದಕ್ಕೆ ಪ್ರತಿಸ್ಪಂದನವಾಗಿ ಮೂಡಿದ್ದ ಎಡಪಂಥೀಯ ಆಲೋಚನಾ ಕ್ರಮಕ್ಕೆ ಪ್ರತಿಕ್ರಿಯೆ ಎಂಬಂತೆ ಒಂದು ಆಂದೋಲನ ರೂಪದಲ್ಲಿ ಆರಂಭವಾಗಿದ್ದ ಮಿತ ಆಹಾರ-ಚಿಕ್ಕ ಮನೆ-ಕಡಿಮೆ ಖರ್ಚಿನ ಸರಳ ಜೀವನದ ಆಶಯ.

ಧರ್ಮಗ್ರಂಥಗಳ ಅಧ್ಯಯನ

ಇದೇ ಕಾಲಾವಧಿಯಲ್ಲಿ ಗಾಂಧಿಗೆ ಕೆಲ ಧಾರ್ಮಿಕ ಗ್ರಂಥಗಳನ್ನು ಓದುವ ಸಂದರ್ಭಗಳು ಒದಗಿಬಂದವು. ಅವರಿಗೆ ಪರಿಚಯವಾದ ಇಬ್ಬರು ಸಹೋದರರು ಥಿಯೋಸಫಿಸ್ಟರು. ಥಿಯೋಸಫಿ ಹಿಂದೂ ಧರ್ಮದಿಂದಲೇ ಪ್ರೇರಿತವಾಗಿದ್ದ ಪ್ರೇತಾಹ್ವಾನದ 'ಮಾಯಾ' ಪಂಥವೆನ್ನಬಹುದು. ಅವರ ಪ್ರಭಾವದಲ್ಲಿ ಗಾಂಧಿ ಎಡ್ವಿನ್ ಅರ್ನಾಲ್ಡ್‌ನ ಭಗವದ್ಗೀತೆಯ ಪ್ರಸಿದ್ಧ ಅನುವಾದವನ್ನು ಓದಿದರು ಮತ್ತು ಆ ಸಹೋದರರ ಆಹ್ವಾನದ ಮೇರೆಗೆ ಅದನ್ನು ಅವರೊಂದಿಗೆ ಚರ್ಚಿಸಿದರು. ಅದರಲ್ಲಿನ ಎರಡನೆಯ ಅಧ್ಯಾಯದಲ್ಲಿರುವ 'ಧ್ಯಾಯತೋ ವಿಷಯಾನ್...' ಎಂದು ಆರಂಭವಾಗುವ ಶ್ಲೋಕ ಅವರ ಮನಸ್ಸನ್ನು ತುಂಬ ಪ್ರಭಾವಿಸಿತು. ಕಾಮ ಅಥವಾ ಆಶೆ ಎಂಬುದಕ್ಕೆ ಕೊನೆಯಿಲ್ಲ, ಅದು ಕ್ರೋಧ ಮತ್ತು ಮೋಹಗಳಿಗೆ ಕಾರಣವಾಗಿ ಕೊನೆಗೆ

ಸ್ಮೃತಿ ನಾಶಕ್ಕೂ, ಬುದ್ಧಿ ಅಥವಾ ಜ್ಞಾನ ನಾಶಕ್ಕೂ ಕಾರಣವಾಗುತ್ತದೆ ಎಂದು ಆ ಶ್ಲೋಕ ಹೇಳುತ್ತದೆ. ಈ ಶ್ಲೋಕವೇ ಮುಂದೆ ತಮ್ಮ ಜೀವನದ ಸತ್ಯಾನ್ವೇಷಣೆಗೆ ಪ್ರೇರಣೆ ಒದಗಿಸಿ ಮಾರ್ಗದರ್ಶನ ಮಾಡಿದ್ದೆಂದೂ, ಹಾಗಾಗಿ ಜೀವನದಲ್ಲಿ ಮತ್ತೆ ಮತ್ತೆ ಭಗವದ್ಗೀತೆಯನ್ನು ಓದಿರುವುದಾಗಿಯೂ ಅವರು ಹೇಳುತ್ತಾರೆ. ತಮ್ಮ ಬದುಕಿನ ಹಲವು ಸಂದರ್ಭಗಳಲ್ಲಿ ಕಣ್ಣುಗಳ ಮುಂದೆ ಸಂಪೂರ್ಣ ಕತ್ತಲು ಆವರಿಸಿದಾಗ ಈ ಕೃತಿ ಬೆಳಕಿನ ಕಿರಣ ಹೊಮ್ಮಿಸಿದೆ ಎಂದು ಗಾಂಧಿ ಹೇಳುತ್ತಾರೆ. ಇದೇ ಸಂದರ್ಭದಲ್ಲಿ ಅವರು ಅರ್ನಾಲ್ಡನದೇ ಆದ 'ಬುದ್ಧಚರಿತೆ'ಯ ಇಂಗ್ಲಿಷ್ ಅನುವಾದ 'ಲೈಟ್ ಆಫ್ ಏಷಿಯಾ'ವನ್ನು ಓದಿದರು.

ಈ ಕೃತಿಗಳ ಓದಿನಿಂದ ಮತಗಳನ್ನು ಕುರಿತು ಕುತೂಹಲಿತರಾದ ಗಾಂಧಿ ಆಗ ಲಂಡನ್‌ನಲ್ಲಿದ್ದ ಥಿಯೋಸಫಿಯ ಹರಿಕಾರರೆನಿಸಿದ ಬ್ಲಾವಟ್‌ಸ್ಕಿ ಮತ್ತು ಅನಿಬೆಸಂಟರನ್ನೂ ಭೇಟಿ ಮಾಡಿದರು. ಮತ್ತು ಅವರೊಂದಿಗೆ ಹಲವು ಬಾರಿ ಚರ್ಚೆಗಳನ್ನೂ ನಡೆಸಿದರು. ತಮ್ಮ ಪಂಥಕ್ಕೆ ಸೇರಿಕೊಳ್ಳಬೇಕೆಂಬ ಅನಿಬೆಸಂಟರ ಆಹ್ವಾನವನ್ನು ಅವರು, 'ನಾನಿನ್ನೂ ಹಿಂದೂ ಧರ್ಮದ ಮೂಲ ಗ್ರಂಥಗಳನ್ನೇ ಸರಿಯಾಗಿ ಓದಿಲ್ಲ' ಎಂದು ಹೇಳಿ ನಯವಾಗಿ ತಿರಸ್ಕರಿಸಿದರು. ನಂತರದ ಅವರ ಮುಖಾಮುಖಿ ಉಪಾಹಾರ ಮಂದಿರವೊಂದರಲ್ಲಿ ಸಿಕ್ಕ ಓರ್ವ ಕ್ರೈಸ್ತ ಶ್ರದ್ಧಾಳುವೊಂದಿಗೆ. ಆತನ ಪ್ರಭಾವದಲ್ಲಿ ಗಾಂಧಿ ಬೈಬಲ್ ಮತ್ತು 'ಹೊಸ ಒಡಂಬಡಿಕೆ' (The New Testament)ಗಳನ್ನು ಓದಿದರು. ಅವರಿಗೆ ಆಗ 'ಬೈಬಲ್' ಇಷ್ಟವಾಗುವುದಿಲ್ಲವಾದರೂ 'ಹೊಸ ಒಡಂಬಡಿಕೆ'ಯಲ್ಲಿನ 'ಬೆಟ್ಟದ ಮೇಲಿನ ಉಪದೇಶಗಳು' (Sermons on the Mount) ಅವರ ಮನಸ್ಸನ್ನು ಸೆಳೆದವು. ವಿಶೇಷವಾಗಿ ಅದರಲ್ಲಿನ 'ಅಂಗಿಯನ್ನು ಕೇಳಿದವನಿಗೆ ನಿನ್ನ ನಿಲುವಂಗಿಯನ್ನೇ ಕೊಟ್ಟು ಬಿಡು', 'ಒಂದು ಕೆನ್ನೆಗೆ ಹೊಡೆದವನಿಗೆ ಇನ್ನೊಂದು ಕೆನ್ನೆಯನ್ನು ತೋರಿಸು' ಮುಂತಾದ ಮಾತುಗಳು ಅವರ ಮನಸ್ಸಿನಲ್ಲಿ ನೈತಿಕತೆಗೆ ಸಂಬಂಧಿಸಿದಂತೆ ದೊಡ್ಡ ತುಮುಲವನ್ನೇ ಎಬ್ಬಿಸಿದವು.

ಈ ಧಾರ್ಮಿಕ ಹುರುಪಿನಲ್ಲಿಯೇ ಅವರು ಜಗತ್ತಿನ ಮತ ಮುಖಂಡರ ಚರಿತ್ರೆಗಳನ್ನೊಳಗೊಂಡ ಕಾರ್ಲೈಲ್‌ನ 'ಹೀರೋಸ್ ಅಂಡ್ ಹೀರೋ ವರ್ಶಿಪ್' ಎಂಬ ಪುಸ್ತಕವನ್ನು ಓದಿ ಮಹಮ್ಮದ್ ಪೈಗಂಬರರ ತತ್ವಗಳನ್ನು ಪರಿಚಯಿಸಿಕೊಂಡರು. ಹಾಗೇ ಆಗ ದೊಡ್ಡ ಸುದ್ದಿ ಮಾಡಿದ್ದ ಬ್ರಾಡ್ಲಾ ಅವರ ನಾಸ್ತಿಕವಾದದ ಪರಿಚಯ ಮಾಡಿಕೊಂಡರಲ್ಲದೆ, ಅವರು ನಿಧನರಾದಾಗ ಸ್ಮಶಾನದಲ್ಲಿ ನಡೆದ ಅವರ ಶ್ರದ್ಧಾಂಜಲಿ ಸಭೆಗೂ ಹೋಗಿ ಬಂದರು. ಆದರೆ ಅವರಿಗೆ ನಾಸ್ತಿಕವಾದ ಒಣತರ್ಕವೆನ್ನಿಸಿ ಅದರಲ್ಲಿ ರುಚಿಯನ್ನು ಬೆಳೆಸಿಕೊಳ್ಳಲಾಗಲಿಲ್ಲವೆಂದು ಹೇಳುತ್ತಾರೆ. ಒಟ್ಟಿನಲ್ಲಿ ಈ ಹೊತ್ತಿಗೆ ಯುವಕ ಗಾಂಧಿಯನ್ನು ಬದುಕಿನ ಅರ್ಥ ಕಂಡುಕೊಳ್ಳುವ ತೀವ್ರ ಆಕಾಂಕ್ಷೆ ಆವರಿಸಿತ್ತೆಂದು ಹೇಳಬಹುದು.

ಪ್ಯಾರಿಸ್‌ಗೆ ಭೇಟಿ–ಶಿಕ್ಷಣ ಮುಗಿಸಿದ ಗಾಂಧಿ

ಇದೇ ಹೊತ್ತಿಗೆ ಗುಜರಾತ್‌ನಿಂದ ಬಂದ ನಾರಾಯಣ ಹೇಮಚಂದ್ರ ಗಾಂಧಿ ಎಂಬ ವಿಚಿತ್ರ ಪ್ರತಿಭೆಯ ಗುಜರಾತಿ ಸಾಹಿತಿಯೊಬ್ಬರನ್ನು ಗಾಂಧಿ ಭೇಟಿ ಮಾಡಬೇಕಾಯಿತು. ತನ್ನ ಬದುಕಿನ ಅಶಿಸ್ತು ಮತ್ತು ಅರಾಜಕತೆಯಿಂದಲೇ ಗಾಂಧಿಯ

ಗಮನ ಸೆಳೆದ ಆತ ಅವರು ಒಮ್ಮೆ ಪ್ಯಾರಿಸ್ಸಿಗೆ ಭೇಟಿಕೊಡಲು ಪ್ರೇರೇಪಿಸಿದ. ಹೀಗಾಗಿ ಅಂತಾರಾಷ್ಟ್ರೀಯ ವಸ್ತು ಪ್ರದರ್ಶನವೊಂದರ ಸಂದರ್ಭದಲ್ಲಿ ಪ್ಯಾರಿಸ್ಸಿಗೆ ಕೆಲ ದಿನಗಳ ಪ್ರವಾಸ ಕೈಗೊಂಡ ಗಾಂಧಿಯನ್ನು ಅಲ್ಲಿನ ವಿಶ್ವಪ್ರಸಿದ್ಧ ಐಫೆಲ್ ಗೋಪುರ ಆಕರ್ಷಿಸಲೇ ಇಲ್ಲ. ಬದಲಿಗೆ ಆ ನಗರದ ಪುರಾತನ ಚರ್ಚುಗಳು ಪಾವಿತ್ರ್ಯ ಸೂಸುವ ತಮ್ಮ ಪುರಾತನ ವೈಭವದಿಂದ ಅವರನ್ನು ಆಕರ್ಷಿಸಿದವು. ಐಫೆಲ್ ಗೋಪುರವನ್ನು ನೋಡಿದಾಗ ಅವರಿಗೆ ನೆನಪಿಗೆ ಬಂದದ್ದು, ಅದನ್ನು ನೋಡಿ ಲಿಯೋ ಟಾಲ್‌ಸ್ಟಾಯ್ ಆಡಿದ 'ಇದೊಂದು ಮನುಷ್ಯನ ಮಕ್ಕಳಾಟಿಕೆಯಂತಿರುವ ಸೌಂದರ್ಯಹೀನ ಬೃಹತ್ ಅವಿವೇಕದ ಪ್ರತೀಕ' ಎಂಬ ಮಾತು!

ಇಷ್ಟೆಲ್ಲ ಭೇಟಿ, ಓದು, ಆಸಕ್ತಿ, ಕುತೂಹಲಗಳ, ಚಟುವಟಿಕೆಗಳ ನಡುವೆಯೇ ಗಾಂಧಿ ನಾಲ್ಕು ಕಿರು ವ್ಯಾಸಂಗಾವಧಿಗಳ ತಮ್ಮ ಬ್ಯಾರಿಸ್ಟರ್ ಪರೀಕ್ಷೆಯನ್ನೂ ಯಶಸ್ವಿಯಾಗಿ ಮುಗಿಸಿದ್ದರು. ಅದರಲ್ಲಿ ಅವರು ರೋಮನ್ ಕಾನೂನು ಮತ್ತು ಸಾಮಾನ್ಯ ಕಾನೂನುಗಳನ್ನು ಕಲಿತಿದ್ದರು. ಇದರ ಜೊತೆಗೇ, ಸಾಮಾನ್ಯಜ್ಞಾನ ಗಳಿಕೆಗಾಗಿ ಲಂಡನ್ ವಿಶ್ವವಿದ್ಯಾಲಯದ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನೂ ಕಟ್ಟಿ ಅದರಲ್ಲಿ ಒಂದಿಷ್ಟು ಲ್ಯಾಟಿನ್, ಫ್ರೆಂಚ್ ಭಾಷೆಗಳಲ್ಲದೆ ಭೌತವಿಜ್ಞಾನದ ಶಾಖ ಮತ್ತು ಬೆಳಕು ಕುರಿತ ಪಾಠಗಳನ್ನೂ ಅಭ್ಯಸಿಸಿದ್ದರು. ಪರೀಕ್ಷೆಯ ಸಂದರ್ಭದಲ್ಲಿ ಮತ್ತು ಆನಂತರ ಭೇಟಿ ಮಾಡಿದ ಕಾನೂನು ಪಂಡಿತರು ಮತ್ತು ದಾದಾಭಾಯಿ ನವರೋಜಿಯವರಂತಹ ಉದ್ಯಮಿಗಳ ಸಲಹೆಯ ಮೇರೆಗೆ ಭಾರತದ ಇತಿಹಾಸದ ಪುಸ್ತಕಗಳನ್ನೂ ಓದಿದರು. ನವರೋಜಿಯವರ ಭಾರತದ ಆರ್ಥಿಕತೆಯ ಮೇಲೆ ಬ್ರಿಟಿಷ್ ವಸಾಹತುಶಾಹಿ ಮಾಡಿದ್ದ ದುಷ್ಪರಿಣಾಮಗಳನ್ನು ಕುರಿತ ಅಧ್ಯಯನ ಅವರನ್ನು ತುಂಬ ಪ್ರಭಾವಿಸಿತು. ವಿದ್ಯಾರ್ಥಿಗಳು ಸಮಾಜದ ಮತ್ತು ವೃತ್ತಿಸಂಬಂಧವಾದ ವಿವಿಧ ವರ್ಗಗಳ ಜನರ ಒಡನಾಟ ಹೊಂದಲೆಂದು ಬ್ಯಾರಿಸ್ಟರ್ ವ್ಯಾಸಂಗಕ್ರಮದ ಭಾಗವಾಗಿ ಅಳವಡಿಸಲಾಗಿದ್ದ ಒಟ್ಟು ೭೨ ಭೋಜನಕೂಟಗಳನ್ನು ಹೇಗೋ ನಿರ್ವಹಿಸಿ ೧೮೯೧ರ ಜೂನ್ ೧೦ರಂದು ಲಂಡನ್‌ನ ವಕೀಲರ ವೇದಿಕೆಯ ಮುಂದೆ ಹಾಜರಾದ ಅವರು ೧೧ರಂದು ವಕೀಲಿಕೆಯ ಅಧಿಕೃತ ನೋಂದಣಿ ಪಡೆದರು.

ಹೀಗೆ ವೈವಿಧ್ಯಮಯವೆನ್ನಬಹುದಾದ ಮುಖಾಮುಖಿ, ಅನುಭವ ಮತ್ತು ಜ್ಞಾನ ಸಂಪಾದನೆಗಳೊಂದಿಗೆ; ಆದರೆ ಇನ್ನೂ ಹಲವು ಸಂಕೋಚ, ಅಧೈರ್ಯ ಮತ್ತು ಮುಖೇಡಿತನಗಳನ್ನು ಪೂರ್ಣ ಮೀರಲಾಗದೆ ತಮ್ಮ ವ್ಯಕ್ತಿತ್ವವನ್ನು ಪೂರ್ತಿ ಬಿಚ್ಚಿಕೊಳ್ಳಲಾಗದ ಸ್ಫೋಟಕ ಸ್ಥಿತಿಯಲ್ಲಿ ೨೧ರ ಹರೆಯದ ಮೋಹನದಾಸ ಕರಮಚಂದ ಗಾಂಧಿ, ಒಂದು ರೀತಿಯಲ್ಲಿ ಮುಂದಿನ ಬದುಕು ಕಟ್ಟಿಕೊಳ್ಳಬೇಕಾದ ಸಂಪನ್ಮೂಲಗಳನ್ನು ತುಂಬಿಕೊಂಡು ಮತ್ತು ಇನ್ನೊಂದು ರೀತಿಯಲ್ಲಿ ಮೂರು ವರ್ಷಗಳ ನಂತರವೂ ಅಪರಿಚಿತ ಮತ್ತು ಅಹಿತಕರ ದೇಶ ಹಾಗೂ ಸಮಾಜವಾಗಿಯೇ ಉಳಿದ ಇಂಗ್ಲೆಂಡ್‌ನ ವಾಸ ಸಾಕುಸಾಕೆನಿಸಿ ವಕೀಲಿ ವೃತ್ತಿಗೆ ನೋಂದಣಿ ಪಡೆದ ನಂತರ ಒಂದು ದಿನವೂ ತಡ ಮಾಡದೆ, ೧೮೯೧ರ ಜೂನ್ ೧೨ರಂದು ಸ್ವದೇಶ ಪ್ರಯಾಣಕ್ಕಾಗಿ ಮುಂಬೈ ಹಡಗನ್ನು ಹತ್ತಿದರು. ■

೬

ಭಾರತದಲ್ಲಿ ನಿರುದ್ಯೋಗಿಯಾದ ಗಾಂಧಿ

ಬ್ಯಾರಿಸ್ಟರ್ ಆಗಿ ಭಾರತಕ್ಕೆ ಹಿಂದಿರುಗಿದ ಮೋಹನದಾಸ ಕರಮಚಂದ ಗಾಂಧಿಯನ್ನು ಮುಂಬೈ ಬಂದರಿನಲ್ಲಿ ಅವರ ಅಣ್ಣ ಲಕ್ಷ್ಮೀದಾಸ ಹಾಗೂ ಇನ್ನಿತರ ಗೆಳೆಯರು ಮತ್ತು ಬಂಧುಮಿತ್ರರು ಸ್ವಾಗತಿಸಿದರು. ಗಾಂಧಿ ಹಡಗಿನಿಂದ ಇಳಿಯುತ್ತಿದ್ದಂತೆಯೇ ಅವರಿಗೆ ದುಃಖವಾರ್ತೆಯೊಂದನ್ನು ತಿಳಿಸಲಾಯಿತು. ಅದು ಅವರ ತಾಯಿಯ ಮರಣ ವಾರ್ತೆ. ಪುತಲೀಬಾಯಿಯ ಸಾವಿನ ಸುದ್ದಿಯನ್ನು ಗಾಂಧಿಯ ಶಿಕ್ಷಣಕ್ಕೆ ತೊಂದರೆಯಾದೀತೆಂದು ಅವರಿಗೆ ಈ ಮುಂಚೆ ತಿಳಿಸಲಾಗಿರಲಿಲ್ಲ. ಈ ದುಃಖವಾರ್ತೆಯಿಂದ ಆಘಾತಗೊಂಡ ಗಾಂಧಿಯನ್ನು ಸಾವರಿಸುವ ಹೊಣೆ ಹೊತ್ತವರು ಇಂಗ್ಲೆಂಡ್‌ನ ವಾಸದ ಆರಂಭಿಕ ದಿನಗಳಲ್ಲಿ ಅವರಿಗೆ ಮಾರ್ಗದರ್ಶನ ಮಾಡಿ ನೆರವಾಗಿದ್ದ ಮತ್ತು ಮುಂದೆ ಅವರ ದೊಡ್ಡ ಹಿತೈಷಿಯೂ ಆದ ಡಾ.ಪ್ರಾಣಜೀವನ ಮೆಹತಾ. ಮೆಹತಾರ ಕೋರಿಕೆಯ ಮೇರೆಗೆ ಗಾಂಧಿ ಮುಂಬೈನ ಅವರ ಮನೆಯಲ್ಲಿ ಕೆಲ ದಿನಗಳ ಕಾಲ ತಂಗಿದರು. ಆಗ ಪರಿಚಯವಾದ ಮೆಹತಾರ ಆಪ್ತಬಂಧುಗಳಲ್ಲಿ ಒಬ್ಬರಾದ ರಾಯಚಂದಭಾಯಿ ಮುಂದೆ ಬಹುಕಾಲ ಗಾಂಧಿಯ ಅಧ್ಯಾತ್ಮಿಕ ಜೀವನದಲ್ಲಿ ಗುರುವಲ್ಲದಿದ್ದರೂ ಗುರು ಸಮಾನರಾದ ಆತ್ಮಸಖರಾದರು. ರಾಜಚಂದ್ರ ಎಂದೂ ಕರೆಯಲ್ಪಡುತ್ತಿದ್ದ ಇವರು ಮತದಿಂದ ಜೈನರಾದರೂ, ಆ ಮತದ ಸಂಪ್ರದಾಯಗಳನ್ನು ಮೀರಿ ಎಲ್ಲ ಮತಗಳ ಸತ್ಯ ಒಂದೇ ಎಂಬುದನ್ನು ಕಂಡುಕೊಂಡಿದ್ದ ಅನುಭಾವಿಯಾಗಿದ್ದರು. ಗಾಂಧಿ ತಾಯಿಯ ಸಾವಿನ ಆಘಾತವನ್ನು ಸಹಿಸಿಕೊಳ್ಳಲು ಸಾಧ್ಯವಾದದ್ದು ಇವರ ಸಹವಾಸದಿಂದಾಗಿಯೇ. ರತ್ನಪಡಿ ವ್ಯಾಪಾರಿಯಾಗಿ ಕೋಟ್ಯಧೀಶರಾಗಿದ್ದ ರಾಯ್‌ಚಂದ್ ಅದಾವುದರ ಭಾರಗಳಿಲ್ಲದ ಆಧ್ಯಾತ್ಮಿಕ ಚಿಂತಕರೂ ಕವಿಗಳೂ ಆಗಿದ್ದರು. ಮುಂದೆ ಅವರು ೧೯೦೧ರಲ್ಲಿ ತಮ್ಮ ೩೩ರ ವಯಸ್ಸಿನಲ್ಲಿ ಅಕಾಲ ಮೃತ್ಯುವಿಗೆ ಒಳಗಾಗುವರೆಗೂ ಗಾಂಧಿ ತಮ್ಮ ಜೀವನದಲ್ಲಿ ನೈತಿಕ ಬಿಕ್ಕಟ್ಟುಗಳು ಉಂಟಾದಾಗಲೆಲ್ಲ ಉತ್ತರಗಳನ್ನೋ ಸಾಂತ್ವನವನ್ನೋ ಬಯಸಿದಾಗ ಅವರು ಸಂಪರ್ಕಿಸುತ್ತಿದ್ದುದು ಇವರನ್ನೇ.

ಮುಂಬೈನಲ್ಲಿ ಕೆಲದಿನಗಳ ಕಾಲ ತಂಗಿದ್ದ ಗಾಂಧಿ ರಾಜಕೋಟೆಗೆ ಬಂದು ಅಣ್ಣನ ಮನೆಯಲ್ಲಿದ್ದ ತಮ್ಮ ಸಂಸಾರವನ್ನು ಸೇರಿಕೊಂಡರು. ಆಗ ಮಗ ಹರಿಲಾಲನಿಗೆ ನಾಲ್ಕು ವರ್ಷ. ಸ್ಥಳೀಯ ವಕೀಲನಾಗಿದ್ದ ಅಣ್ಣ ಲಕ್ಷ್ಮೀದಾಸ ಸ್ವತಃ ದುಂದುಗಾರನಾಗಿದ್ದು ಇಂಗ್ಲೆಂಡ್‌ನಲ್ಲಿ ಕಲಿತು ಬರುವ ತಮ್ಮನ ಭವ್ಯ ಭವಿಷ್ಯದ ನಿರೀಕ್ಷೆಯಲ್ಲಿ ಸಂಸಾರದ

ಖರ್ಚುಗಳನ್ನು ಇನ್ನಷ್ಟು ಹೆಚ್ಚು ಮಾಡಿ ಮನೆಯನ್ನು ಇಂಗ್ಲಿಷ್ ಬದುಕಿನ ಶೈಲಿಗೆ ಸಜ್ಜುಗೊಳಿಸಿದ್ದನು. ಗಾಂಧಿ ಕೂಡ ಅದಕ್ಕೆ ತಕ್ಕಂತೆ ದಿನಚರಿ, ಉಡುಪು, ನಡೆನುಡಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಕೆಲವು ಐರೋಪ್ಯ ರೂಢಿಗಳು ಮತ್ತು ಸಾಧನ-ಸಲಕರಣೆಗಳನ್ನು ಸೇರಿಸಿದರು.

ಒಳಗೆ ಪಕ್ವವಾಗದ ವ್ಯಕ್ತಿತ್ವ

ಆದರೆ ಗಾಂಧಿಯ ಆತ್ಮಚರಿತ್ರೆಯ ಪ್ರಕಾರ ಇದೆಲ್ಲವೂ ಹೊರಗಿನ ಆವರಣದ ಬದಲಾವಣೆಯಾಗಿದ್ದು, ಒಳಗೆ ವ್ಯಕ್ತಿತ್ವ ಇನ್ನೂ ಪಕ್ವವಾಗಿರಲಿಲ್ಲ. ಹಾಗಾಗಿಯೇ ಅವರು ತಮ್ಮ ಹೆಂಡತಿಯ ಮೇಲೆ ಏಕಪಕ್ಷೀಯ ಅಧಿಕಾರ ಚಲಾಯಿಸುವುದನ್ನು ಬಿಡಲಾಗಿರಲಿಲ್ಲ. ಇದರಿಂದಾಗಿ ಗಂಡ-ಹೆಂಡತಿಯರ ನಡುವೆ ಆಗಾಗ ಘರ್ಷಣೆಗಳಾಗುತ್ತಿದ್ದವು. ಈ ಘರ್ಷಣೆಗಳ ಕಾರಣದಿಂದಾಗಿಯೇ ತಾವು ಕಸ್ತೂರಬಾಗೆ ಓದು ಬರಹ ಕಲಿಸುವ ತಮ್ಮಿಚ್ಛೆಯನ್ನು ಈಡೇರಿಸಿಕೊಳ್ಳಲಾಗಲಿಲ್ಲ ಎಂದೂ ಗಾಂಧಿ ಬರೆಯುತ್ತಾರೆ. ಅಷ್ಟೇ ಅಲ್ಲ, ಇಂತಹ ಒಂದು ಘರ್ಷಣೆಯ ಪರಿಣಾಮವಾಗಿ ಕಸ್ತೂರಬಾರನ್ನು ಗಾಂಧಿ ತವರುಮನೆಗೆ ದೂಡಿದ್ದೂ ಉಂಟು. ಅಲ್ಲಿ ಸ್ವಲ್ಪ ಕಾಲವಿದ್ದು ಅಲ್ಲಿನ ಕಷ್ಟ ದೂಷಣೆಗಳನ್ನು ತಾಳಲಾಗದೆ ಕಸ್ತೂರಬಾ ಗಂಡನ ಮನೆಗೆ ವಾಪಸಾಗಬೇಕಾಯಿತು.

ಇಂಗ್ಲೆಂಡ್‌ನ ಬ್ಯಾರಿಸ್ಟರ್ ಪರೀಕ್ಷೆ ಪಾಸುಮಾಡಿ ಬಂದಿದ್ದ ಗಾಂಧಿಗೆ ರಾಜಕೋಟೆಯಂತಹ ಸಣ್ಣ ಊರಿನಲ್ಲಿ ತಕ್ಕ ಕೆಲಸ ಹುಡುಕಿಕೊಳ್ಳುವುದು ದುಸ್ಸಾಧ್ಯವೆನಿಸಿತು. ಸ್ವಲ್ಪ ಕಾಲದ ಅನುಭವಕ್ಕೆಂದು ಮುಂಬೈಗೆ ಹೋಗಿ ಮನೆ ಮಾಡಿ ನೆಲೆಸಿದರು. ಆದರೆ ಅಲ್ಲಿನ ನ್ಯಾಯಾಲಯಗಳಲ್ಲೂ ಗಾಂಧಿ ತಮ್ಮ ಮುಖೇಡಿತನ ಮತ್ತು ಅಧೈರ್ಯಗಳನ್ನು ಮೀರಲಾಗದೆ, ಕಕ್ಷಿದಾರರ ಪರ ವಾದ ಮಂಡಿಸಲು ಬಾಯಿ ತೆರೆಯಲಾಗದೆ ನ್ಯಾಯಾಲಯದಲ್ಲಿ ನಗೆಪಾಟಲಾದರು. ರೋಮನ್ ಕಾನೂನನ್ನು ಅಭ್ಯಾಸ ಮಾಡಿದ್ದ ಅವರಿಗೆ ಹಿಂದೂ ಕಾನೂನುಗಳ ಪರಿಚಯವಿಲ್ಲದಿದ್ದುದೂ ಮತ್ತು ಅವುಗಳನ್ನು ಕರಗತ ಮಾಡಿಕೊಳ್ಳಲು ಗಾಂಧಿಗೆ ಸಾಧ್ಯವಾಗದ್ದೂ ಇದಕ್ಕೆ ಇನ್ನೊಂದು ಕಾರಣವಾಗಿತ್ತು. ಮುಂಬೈನ ಮನೆ ಖರ್ಚು ನೀಗಲಾಗದೆ ಸ್ವಲ್ಪ ಕಾಲದಲ್ಲೇ ರಾಜಕೋಟೆಗೆ ವಾಪಸ್ ಬಂದರು.

ನಿರುದ್ಯೋಗದ ಬವಣೆ-ಅವಮಾನ

ರಾಜಕೋಟೆಯಲ್ಲಿ ಗಾಂಧಿ ಕಾನೂನು ಸಂಬಂಧಿಯಾದ-ಹೆಚ್ಚಾಗಿ ದಾವೆಗಳನ್ನು ಬರೆಯುವ-ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಕೊಂಡು ಉತ್ತಮ ಭವಿಷ್ಯದ ಆಸೆ ಇಲ್ಲದೆ ಕಾಲ ಕಳೆಯತೊಡಗಿದರು. ಇದನ್ನು ನೋಡಿ, ಅವರ ವಿದೇಶಿ ಶಿಕ್ಷಣದ ಮೇಲೆ ಅಪಾರ ಹಣ ಖರ್ಚು ಮಾಡಿದ್ದ ಅಣ್ಣ ಲಕ್ಷ್ಮೀದಾಸರು ಚಿಂತಾಕ್ರಾಂತರಾದರು. ಕೊನೆಗೆ ಅವರು ತಮ್ಮ ಸಂಪಾದನೆಯನ್ನಾದರೂ ಹೆಚ್ಚಿಸಿಕೊಳ್ಳಲು ತಮ್ಮನಿಗೊಂದು ಕೆಲಸ ವಹಿಸಿದರು. ಲಕ್ಷ್ಮೀದಾಸ ಪೋರಬಂದರಿನ ರಾಜನಿಗೆ ಸಲಹಾಕಾರರಾಗಿದ್ದಾಗ ಯಾವುದೋ ಕಾನೂನು ವಿಷಯವೊಂದರಲ್ಲಿ ತಪ್ಪು ಸಲಹೆ ನೀಡಿದರೆಂದು ಕಂಪನಿ ಸರ್ಕಾರದ ರಾಜಕೀಯ ಪ್ರತಿನಿಧಿಯ ಕೋಪಕ್ಕೆ ತುತ್ತಾಗಿ ಸಲಹಾಕಾರನ ಹುದ್ದೆಯಿಂದ ವಜಾ

ಆಗಿದ್ದರು. ಆ ಕಂಪನಿ ಸರ್ಕಾರದ ಪ್ರತಿನಿಧಿ ರಜೆಯ ಮೇಲೆ ಇಂಗ್ಲೆಂಡ್‌ಗೆ ಹೋಗಿದ್ದಾಗ ಅಲ್ಲಿ ಆಕಸ್ಮಿಕವಾಗಿ ಸಭೆಯೊಂದರಲ್ಲಿ ಅವನಿಗೆ ಗಾಂಧಿಯ ಪರಿಚಯವಾಗಿತ್ತು. ಇದನ್ನು ತಿಳಿದ ಲಕ್ಷ್ಮೀದಾಸರು ಈ ಪರಿಚಯ ಬಳಸಿಕೊಂಡು ಆ ಪ್ರತಿನಿಧಿಯ ಬಳಿ ತನ್ನ ಪರವಾಗಿ ಒಂದು ಮಾತು ಹೇಳಿ ಕಳೆದುಕೊಂಡಿದ್ದ ಹುದ್ದೆಯನ್ನು ಮರಳಿ ಪಡೆದುಕೊಳ್ಳಲು ಸಾಧ್ಯವೇ ನೋಡು ಎಂದು ತಮ್ಮನನ್ನು ಒತ್ತಾಯಿಸಿದರು.

ಕೆಲಸವಿಲ್ಲದೆ ಅಣ್ಣನ ಕುಟುಂಬಕ್ಕೆ ಭಾರವಾಗಿರುವೆನೆಂಬ ವ್ಯಾಕುಲತೆಯಲ್ಲಿದ್ದ ಗಾಂಧಿ ಈ ಮಧ್ಯಸ್ಥಿಕೆಗೆ ಮನಸ್ಸಿಲ್ಲದಿದ್ದರೂ ಅಣ್ಣನ ಒತ್ತಾಯಕ್ಕೆ ಮಣಿದು ಆ ಕಂಪನಿ ಪ್ರತಿನಿಧಿಯನ್ನು ಅವನ ಕಛೇರಿಯಲ್ಲಿ ಹೋಗಿ ಕಂಡರು. ಆದರೆ ಆ ಇಂಗ್ಲಿಷ್ ಪ್ರತಿನಿಧಿ ಗಾಂಧಿಯ ಹಳೆಯ ಪರಿಚಯವನ್ನು ಲೆಕ್ಕಿಸದೆ ಗಾಂಧಿಯ ಮನವಿಯನ್ನು ಚುಟುಕಾದ ಮಾತುಗಳಲ್ಲಿ ತಿರಸ್ಕರಿಸಿ ಮುಂದೆ ಅವರು ಯಾವ ಮಾತನ್ನಾಡಲೂ ಅವಕಾಶ ನೀಡದೆ ಹೊರಹೋಗಲು ಹೇಳಿದ. ಒತ್ತಡದಲ್ಲಿದ್ದ ಗಾಂಧಿ ಮತ್ತೆ ತಮ್ಮ ಮಾತುಗಳನ್ನು ಆರಂಭಿಸಿದಾಗ ಅಧಿಕಾರಿ ತನ್ನ ಜವಾನನನ್ನು ಕರೆದು ಅವರನ್ನು ತನ್ನ ಕಛೇರಿಯಿಂದ ಹೊರನೂಕಿಸಿಬಿಟ್ಟನು. ಕೋಪ–ಅವಮಾನ–ನಾಚಿಕೆ–ಅಸಹಾಯಕತೆಗಳಿಂದ ತತ್ತರಿಸಿಹೋದ ಗಾಂಧಿ ಆ ಬ್ರಿಟಿಷ್ ಪ್ರತಿನಿಧಿಯ ಮೇಲೆ ಮಾನನಷ್ಟ ಮೊಕದ್ದಮೆ ಹೂಡುವ ಯೋಚನೆ ಮಾಡಿದರಾದರೂ, ಹಿರಿಯ ವಕೀಲರೊಬ್ಬರು ಅದರಿಂದ ಯಾವ ಪ್ರಯೋಜನವೂ ಇಲ್ಲವೆಂದು ಅವರಿಗೆ ಸಲಹೆ ಮಾಡಿದರು. ಆದರೆ ಈ ಘಟನೆ ಗಾಂಧಿಯನ್ನು ಆಳದಲ್ಲಿ ಆಘಾತಗೊಳಿಸಿತ್ತು. ಇದರಲ್ಲಿ ಮೊದಲ ಬಾರಿಗೆ ಅವರ ಜೀವನದಲ್ಲಿ ಬಿಳಿಯ ಜನಾಂಗೀಯತೆಯ ಎಳೆಯೊಂದು ಕಾಣಿಸಿಕೊಂಡು ಅವರ ಆಲೋಚನಾ ಕ್ರಮಕ್ಕೆ ನಿಧಾನವಾಗಿಯಾದರೂ ಹೊಸದೊಂದು ಆಯಾಮ ಸೇರಲು ಕಾರಣವಾಯಿತು. ಹಾಗೇ ಇದು, ಹೇಗೋ ಕಷ್ಟಪಟ್ಟಾದರೂ ಬ್ಯಾರಿಸ್ಟರ್ ಪದವಿಯ ಹೆಸರಿನಲ್ಲಿ ಸಂಸ್ಥಾನದಲ್ಲಿ ಒಂದಲ್ಲ ಒಂದು ಹಂತದ ನ್ಯಾಯಾಧೀಶನ ಸ್ಥಾನ ಪಡೆದುಕೊಳ್ಳಬಹುದೆಂಬ ಸಣ್ಣ ಆಸೆಯನ್ನು ಕೊನೆಗೊಳಿಸಿತ್ತು. ಇದರ ಜೊತೆಗೇ ಅವರಿಗೆ ಕಾಥೇವಾಡದ ಆ ಚಿಲ್ಲರೆ ಸಂಸ್ಥಾನಗಳ ಆಡಳಿತದಲ್ಲಿನ ಒಳಜಗಳ ಮತ್ತು ಕ್ಷುದ್ರ ರಾಜಕೀಯದ ಪರಿಚಯವೂ ಆಗಿ ಇಲ್ಲಿ ಬಾಲಬಡುಕರು ಮಾತ್ರ ಬದುಕಬಲ್ಲರು ಎನಿಸತೊಡಗಿತು. ಇದು ತಮ್ಮ ವ್ಯಕ್ತಿತ್ವದ ವಿನಾಶಕ್ಕೇ ಕಾರಣವಾದೀತೆಂದು ಹೆದರಿದ ಗಾಂಧಿ ಇನ್ನು ಈ ಸಂಸ್ಥಾನಗಳ ಗೊಡವೆ ಬೇಡವೆಂದು ನಿರ್ಧರಿಸಿದರು. ಹಾಗಾಗಿಯೇ ಇದು ಮುಂದಿನ ತಮ್ಮ ಹೋರಾಟದ ಬದುಕಿನ ಮೊದಲ ನಿರ್ಣಾಯಕ ಘಟನೆಯಾಗಿದೆ ಎಂದು ಗಾಂಧಿ ತಮ್ಮ ಆತ್ಮಕಥೆಯಲ್ಲಿ ಹೇಳುತ್ತಾರೆ.

ದ.ಆಫ್ರಿಕಾದತ್ತ ಪಯಣ

ಆಕಸ್ಮಿಕವೆಂಬಂತೆ ಈ ಹೊತ್ತಿಗೆ ಸರಿಯಾಗಿ ಪೋರಬಂದರ್‌ನ ಮುಸ್ಲಿಂ ವ್ಯಾಪಾರಿಯೊಬ್ಬ ದ.ಆಫ್ರಿಕಾದಲ್ಲಿದ್ದ ತನ್ನ ವ್ಯಾಪಾರ ಸಂಸ್ಥೆಯೊಂದರ ಸಂಬಂಧವಾದ ಮೊಕದ್ದಮೆಯ ನಿರ್ವಹಣೆಯಲ್ಲಿ ನೆರವಾಗಬಲ್ಲ ವಕೀಲನೊಬ್ಬನ ಹುಡುಕಾಟದಲ್ಲಿದ್ದನು. ಆತ ತನ್ನ ಸಂಸ್ಥೆಯ ಲೆಕ್ಕ ಪತ್ರಗಳು ಗುಜರಾತಿಯಲ್ಲಿದ್ದುದರಿಂದ ಅದನ್ನು ಅರ್ಥಮಾಡಿಕೊಂಡು ವಾದ ಮಾಡಬಲ್ಲ ಗುಜರಾತಿ ಬಲ್ಲ ವ್ಯಕ್ತಿಯ ಹುಡುಕಾಟದಲ್ಲಿದ್ದ.

ಹೇಗೋ ಆತನಿಗೆ ಗಾಂಧಿಯ ಹೆಸರು ಕಿವಿಗೆ ಬಿದ್ದು ಲಕ್ಷ್ಮೀದಾಸರೊಂದಿಗೆ ಈ ಬಗ್ಗೆ ಮಾತನಾಡಿದ. ಎರಡು ವರ್ಷಗಳಿಗೂ ಹೆಚ್ಚು ಕಾಲ ಸರಿಯಾದ ಕೆಲಸವಿಲ್ಲದೆ ದಿಕ್ಕೆಟ್ಟಿದ್ದ ಗಾಂಧಿ, ಅಣ್ಣ ಈ ಪ್ರಸ್ತಾಪ ಮಾಡಿದೊಡನೆ ಅದನ್ನು ಒಪ್ಪಿಕೊಂಡರು. ನಿರುದ್ಯೋಗದ ಚಿಂತೆಯ ಜೊತೆಗೇ ಅವರಿಗೆ ಇನ್ನೊಂದು ಹೊಸ ದೇಶದ ಜನಜೀವನವನ್ನು ಕಾಣುವ ಕುತೂಹಲವೂ ಇದ್ದುದರಿಂದ ಈ ಕೆಲಸ ಹೆಚ್ಚಿನ ಸಂತೋಷವನ್ನೂ ಉಂಟುಮಾಡಿತು. ಒಂದು ವರ್ಷದ ಈ ಕೆಲಸಕ್ಕೆ ಅವರನ್ನು ನೋಡಿಕೊಳ್ಳುವ ಎಲ್ಲ ಖರ್ಚುಗಳ ಜೊತೆಗೆ ನೀಡುವ ಸಂಭಾವನೆಯೂ ಗಣನೀಯವಾಗಿದ್ದು, ಲಕ್ಷ್ಮೀದಾಸರ ಕುಟುಂಬಕ್ಕೂ ನೆರವಾಗುವಂತಿತ್ತು. ಜೊತೆಗೆ ಗಾಂಧಿಗೆ ಈ ಮಧ್ಯೆ ಮತ್ತೊಂದು ಗಂಡು ಮಗುವಾಗಿ ಅವರ ಜವಾಬ್ದಾರಿ ಹೆಚ್ಚಿತ್ತು. ಆ ಮಗುವಿಗೆ ಮಣಿಲಾಲ ಎಂದು ಹೆಸರಿಡಲಾಗಿತ್ತು.

ಗಾಂಧಿಯ ಮೇಲೆ ಈ ಎರಡೂವರೆ ವರ್ಷಗಳಲ್ಲಿ ತಾವು ಜೀವನದಲ್ಲಿ ನಿಷ್ಪ್ರಯೋಜಕನಾಗಿಬಿಟ್ಟು ಇತರರಿಗೆ ಭಾರವಾಗಿಬಿಟ್ಟಿದ್ದೇನೆ ಎಂಬ ಭಾವನೆ ಎಷ್ಟು ತೀವ್ರವಾಗಿ ಕಾಡಿತ್ತೆಂದರೆ ಅವರಿಗೆ ಆ ಹೊತ್ತಿಗೆ ದ.ಆಫ್ರಿಕಾಕ್ಕೆ ಹೊರಟಿದ್ದ ಹಡಗಿನಲ್ಲಿ ಜಾಗ ಸಿಕ್ಕಿಲ್ಲ ಎಂದು ಗೊತ್ತಾದಾಗ ಅವರು ಮುಂಬೈಗೆ ಹೋಗಿ ಹಡಗಿನ ಕಪ್ತಾನನನ್ನು ಭೇಟಿಯಾಗಿ ಮಾತಾಡುವ ಧೈರ್ಯ ವಹಿಸಬೇಕಾಯಿತು. ಕೊನೆಗೂ ಅವನ ಮನಗೆದ್ದು ಅವನ ಕೊಠಡಿಯಲ್ಲೇ ತಮಗೂ ಒಂದು ಜಾಗ ಗಿಟ್ಟಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಮದುವೆಯಾದ ನಂತರ ಎರಡನೆಯ ಬಾರಿಗೆ ಅಗಲಿಕೆಯನ್ನು ಎದುರಿಸಬೇಕಾದ ಬೇಸರದಲ್ಲಿದ್ದ ಪತ್ನಿ ಕಸ್ತೂರಬಾಗೆ, ಒಂದು ವರ್ಷದ ಈ ಅಗಲಿಕೆಯ ಭಾರವನ್ನು ಭರಿಸುವಂತೆ ಸಾಂತ್ವನ ಹೇಳಿ ೧೮೯೩ರ ಏಪ್ರಿಲ್‌ನಲ್ಲಿ ದ.ಆಫ್ರಿಕಾದ ಮುಖ್ಯ ಪಟ್ಟಣಗಳಲ್ಲಿ ಒಂದಾಗಿದ್ದ ಡರ್ಬಾನ್‌ಗೆ ಹೋಗಲು ಹಡಗು ಹತ್ತಿದರು.

ಆ ಹಡಗು ದಾರಿಯಲ್ಲಿ ಮೂರು ಬಂದರುಗಳಲ್ಲಿ ನಿಂತು ಮುಂದೆ ಸಾಗಬೇಕಿತ್ತು. ಅಂತಹ ಒಂದು ಬಂದರು ಪಟ್ಟಣವಾದ ಜಾಂಜಿಬಾರ್‌ನಲ್ಲಿ ಹಡಗಿನ ಕಪ್ತಾನನ ಸಹವಾಸದಲ್ಲಿ ಗೊತ್ತಿಲ್ಲದೆ ವೇಶ್ಯಾವಾಟಿಕೆಯೊಂದಕ್ಕೆ ಕಾಲಿರಿಸಿದ ಗಾಂಧಿ, ಮತ್ತೆ ತಮ್ಮ ಸಂಕೋಚ-ಅಧೈರ್ಯಗಳೇ ತಮ್ಮನ್ನು ಅಲ್ಲಿ ದುರಾಚಾರದಿಂದ ಪಾರುಮಾಡಿದವೇ ಹೊರತು ತಮ್ಮ ಸದ್ಗುಣವಲ್ಲ ಎಂದು ಬಿಚ್ಚು ಮನಸ್ಸಿನಿಂದ ಬರೆದುಕೊಂಡಿದ್ದಾರೆ. ಆ ಮೂಲಕ ಅಶಕ್ತನನ್ನು ಯಾವಾಗಲೂ ದೈವವೇ ಕಾಪಾಡುವುದೆಂಬ ತಮ್ಮ ನಂಬಿಕೆ ದೃಢವಾಯಿತೆಂದು ಹೇಳುತ್ತಾರೆ.

■

೫

ದ.ಆಫ್ರಿಕಾಕ್ಕೆ ಬಂದ ಗಾಂಧಿ

ದ.ಆಫ್ರಿಕಾದಲ್ಲಿದ್ದ ಗಾಂಧಿಯ ಕಕ್ಷಿದಾರನ ಹೆಸರು ದಾದಾ ಅಬ್ದುಲ್ಲಾ ಸೇಠ್. ನೆಟಾಲ್ ಪ್ರಾಂತ್ಯದ ಮುಖ್ಯ ಪಟ್ಟಣಗಳಲ್ಲೊಂದಾದ ಡರ್ಬಾನ್‌ನಲ್ಲಿ ವಾಸವಾಗಿದ್ದ ಅವರು ಆ ದೇಶಕ್ಕೆ ಗುಜರಾತ್‌ನಿಂದ ಬಂದು ಆಮದು-ರಫ್ತು ವ್ಯಾಪಾರದಲ್ಲಿ ಚೆನ್ನಾಗಿ ಪಳಗಿ ಕೊಟ್ಯಧೀಶರಾಗಿ ಐರೋಪ್ಯ ಮತ್ತು ಭಾರತೀಯ ಸಮುದಾಯಗಳೆರಡರಲ್ಲೂ ತುಂಬ ದೊಡ್ಡ ಹೆಸರು ಮಾಡಿದ್ದರು. ಅವರು ನೆರೆಯ ಟ್ರಾನ್ಸ್‌ವಾಲ್ ಪ್ರಾಂತ್ಯದ ರಾಜಧಾನಿ ಪ್ರಿಟೋರಿಯಾದಲ್ಲಿ ವಾಸವಾಗಿದ್ದ ಸೇಠ್ ತಯ್ಯಬ್‌ಜಿಯೊಂದಿಗೆ ಈ ವ್ಯಾಪಾರದಲ್ಲಿ ಭಾಗೀದಾರನಾಗಿದ್ದು ಲೆಕ್ಕ ಪತ್ರಗಳಲ್ಲಿನ ವಿವರಗಳ ಸಂಬಂಧವಾಗಿ ಜಗಳ ಮಾಡಿಕೊಂಡಿದ್ದರು. ಅದನ್ನು ಇತ್ಯರ್ಥಪಡಿಸುವ ಹೊಣೆ ಗಾಂಧಿಯದಾಗಿತ್ತು. ಆದರೆ ಗಾಂಧಿ ಆ ದೇಶಕ್ಕೆ ಬಂದ ಆ ಕಾಲದಲ್ಲಿ ಅಲ್ಲಿದ್ದ ಮೂರು ಮುಖ್ಯ ಭಾರತೀಯ ಮೂಲದ ಸಮುದಾಯಗಳಾದ ಮುಸ್ಲಿಂ, ಪಾರ್ಸಿ ಮತ್ತು ಹಿಂದೂಗಳು ಅಲ್ಲಿನ ಬಿಳಿಯರ ಆಡಳಿತದಲ್ಲಿ ವರ್ಣೀಯರೆಂದು ಗುರುತಿಸಲ್ಪಟ್ಟು ಎರಡನೇ ದರ್ಜೆ ಪ್ರಜೆಗಳಂತೆ ಬಾಳುತ್ತಿದ್ದರು. ಸೇಠ್ ಅಬ್ದುಲ್ಲಾ, ಸೇಠ್ ತಯ್ಯಬ್‌ಜಿಯಂತಹ ಗಣ್ಯರೂ ಸೇರಿದಂತೆ ಅವರಲ್ಲಿ ಬಹುಪಾಲು ಜನ ಅನಕ್ಷರಸ್ಥರಾಗಿದ್ದರು.

ಮುಸ್ಲಿಮರು ತಮ್ಮ ಕೀಳರಿಮೆಯನ್ನು ಮುಚ್ಚಿಕೊಳ್ಳಲು ತಮ್ಮನ್ನು ಸುಳ್ಳೇ 'ಅರಬ್ಬೀ'ಯರು ಎಂದು ಕರೆದುಕೊಂಡರೆ, ಪಾರ್ಸಿಗಳು ತಮ್ಮನ್ನು ಪರ್ಷಿಯನ್ನರು ಎಂದು ಕರೆದುಕೊಳ್ಳುತ್ತಿದ್ದರು. ಹಿಂದೂಗಳನ್ನು ಅವರಲ್ಲಿ ತಮಿಳರೇ ಹೆಚ್ಚಾಗಿದ್ದ ಕಾರಣದಿಂದಲೋ ಏನೋ ಬಿಳಿಯರು ಅವರನ್ನೆಲ್ಲ 'ಸಾಮಿ'ಗಳು ಎಂದು ಕರೆಯುತ್ತಿದ್ದರು. ಆದರೆ ಈ ಮೂರೂ ಸಮುದಾಯಗಳಿಗೆ ಬಿಳಿಯರಿಟ್ಟಿದ್ದ ಸಾಮಾನ್ಯ ಹೆಸರು 'ಕೂಲಿ'ಗಳು ಎಂದಾಗಿತ್ತು. ಏಕೆಂದರೆ, ಈ ಮೂರೂ ಸಮುದಾಯಗಳ ಬಹುಭಾಗದ ಜನರು ವಿವಿಧ ರೀತಿಯ ದೈಹಿಕ ಶ್ರಮದ ಕೆಲಸಗಳಿಗೆಂದೇ ಭಾರತದಿಂದ ಕರಾರಿನ ಮೇಲೆ ಬಂದವರಾಗಿದ್ದರು. ಕಾಲಕ್ರಮೇಣ ಅವರು ಅಭಿವೃದ್ಧಿ ಹೊಂದಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಹರಡಿಹೋಗಿದ್ದರೂ ಅವರನ್ನು - ವ್ಯಾಪಾರಿಗಳಾಗಿ ಮತ್ತು ಅವರ ಗುಮಾಸ್ತರಿಕೆಗಾಗಿಯೇ ಬಂದಿದ್ದ ಗುಜರಾತಿ

ಹಿಂದೂ ಮತ್ತು ಮುಸಲ್ಮಾನ ವರ್ತಕರು ಹಾಗೂ ಅವರ ಸಹಾಯಕರಾಗಿದ್ದ ಪಾರ್ಸಿಗಳ ಪ್ರತಿರೋಧದ ನಡುವೆಯೂ – 'ಕೂಲಿ ವ್ಯಾಪಾರಿ', 'ಕೂಲಿ ಗುಮಾಸ್ತ', 'ಕೂಲಿ ವಕೀಲ' ಎಂದೇ ಗುರುತಿಸಲಾಗುತ್ತಿತ್ತು. ಈ ಎಲ್ಲ ಕೀಳರಿಮೆ, ಕಿರಿಕಿರಿ, ಕಸಿವಿಸಿ, ತಾರತಮ್ಯ ಮತ್ತು ಅವಮಾನಗಳ ವರ್ಣಭೇದ ಜೀವನ ಪದ್ಧತಿಯನ್ನು ಇವರೆಲ್ಲ ಸಹಜ ಮತ್ತು ಅನಿವಾರ್ಯವೆಂದು ಒಪ್ಪಿಕೊಂಡಿದ್ದರು.



ಕುತೂಹಲ ಕೆರಳಿಸಿದ ಗಾಂಧಿ ಬರಹ

೧೮೯೩ರ ಮೇನಲ್ಲಿ ಡರ್ಬಾನ್ ತಲುಪಿದ ಗಾಂಧಿ ಅಬ್ದುಲ್ಲಾ ಸೇಠರ ಆತಿಥ್ಯದಲ್ಲಿ ಒಂದೆರೆಡು ದಿನ ವಿಶ್ರಮಿಸಿಕೊಂಡರು. ನಂತರ ಕುತೂಹಲದಿಂದ ಅಲ್ಲಿನ ಜಿಲ್ಲಾ ನ್ಯಾಯಾಲಯಕ್ಕೆ ಸುಮ್ಮನೆ ವೀಕ್ಷಕರಾಗಿ ಹೋದರು. ಆಗ ಅವರಿಗೆ ಆ ದೇಶದಲ್ಲಿನ ಭಾರತೀಯರಿಗಿದ್ದ ಸ್ಥಾನಮಾನದ ಮೊದಲ ಅನುಭವವಾಯಿತು. ಅವರು ಧರಿಸಿದ್ದ ಕಾಥೇವಾಡಿ ರುಮಾಲನ್ನು ತೆಗೆಯಲು ನ್ಯಾಯಾಧೀಶರು ಸೂಚಿಸಿದಾಗ ಅವರು ಮುಜುಗರಕ್ಕೊಳಗಾದರು. ತಮ್ಮ ಮರ್ಯಾದೆ ಮತ್ತು ಗಣ್ಯತೆಯ ಸಂಕೇತದಂತಿದ್ದ ಆ ತಲೆಯುಡುಗೆಯನ್ನು ತೆಗೆಯಲು ಮನಸ್ಸೊಪ್ಪದ ಗಾಂಧಿ ಮೌನ ಪ್ರತಿಭಟನೆಯಲ್ಲಿ ನ್ಯಾಯಾಲಯದಿಂದ ನಿರ್ಗಮಿಸಿದರು. ಈ ಬಗ್ಗೆ

ಅವರು ಸ್ಥಳೀಯ ಪತ್ರಿಕೆಗೂ ಒಂದು ಪುಟ್ಟ ಲೇಖನ ರೂಪದ ಪತ್ರ ಬರೆದು ತಮ್ಮ ಅಸಮಾಧಾನವನ್ನು ಸೂಚಿಸಿದರು. ನೆಟಾಲ್ ಪ್ರಾಂತ್ಯದಲ್ಲಿ ಇದು ದೊಡ್ಡ ಚರ್ಚೆಯ ಸುದ್ದಿಯಾಗಿ ಗಾಂಧಿ ಎಂಬ ಹೆಸರು ಎಲ್ಲರ ಕುತೂಹಲದ ಕೇಂದ್ರವಾಯಿತು. ಇದರ ಪರಿಣಾಮವಾಗಿ ಕೆಲ ಕ್ರೈಸ್ತ ಪಾದ್ರಿಗಳೂ, ಬಿಳಿಯರ ಸಮಾಜದ ಕೆಲ ಗಣ್ಯರೂ ಸೇರಿದಂತೆ ಡರ್ಬಾನ್ ನಗರದ ಹಲವು ಪ್ರಜ್ಞಾವಂತ ನಿವಾಸಿಗಳು ಗಾಂಧಿಯನ್ನು ಭೇಟಿ ಮಾಡಿ ವಿಚಾರ ವಿನಿಮಯ ಮಾಡಿಕೊಂಡರು. ಇದರಿಂದ ಗಾಂಧಿಗೆ ಜನಾಂಗೀಯತೆ ಎಂಬುದು ಇಲ್ಲಿನ ಇಡೀ ಸಮಾಜದ ಲಕ್ಷಣವಾಗಿರದೆ, ಕೆಲವು ಭಿನ್ನಮತಗಳೂ ಇವೆ ಎಂಬ ಸೂಚನೆಯೊಂದು ದೊರಕಿತು.

ಅಬ್ದುಲ್ಲಾರ ಮೊಕದ್ದಮೆಯ ಮುಖ್ಯ ವಿಚಾರಣೆ, ಪ್ರತಿಕಕ್ಷಿದಾರನಾಗಿದ್ದ ಸೇಠ್ ತಯ್ಯಬ್‌ಜಿ ವಾಸವಾಗಿದ್ದ ನೆರೆಯ ಟ್ರಾನ್ಸ್‌ವಾಲ್ ಪ್ರಾಂತ್ಯದ ರಾಜಧಾನಿ ಪ್ರಿಟೋರಿಯಾ ನ್ಯಾಯಾಲಯದಲ್ಲಿ ನಿಗದಿಯಾಗಿತ್ತು. ಆದ್ದರಿಂದ ಒಂದು ವಾರದ ಕಾಲ ಡರ್ಬಾನ್‌ನಲ್ಲಿದ್ದ ಗಾಂಧಿ ಸೇಠ್ ಅಬ್ದುಲ್ಲಾನ ಮುಖ್ಯ ವಕೀಲರಿಗೆ ನೆರವಾಗಲು ಆ ನಗರಕ್ಕೆ ಪ್ರಯಾಣ ಬೆಳೆಸಬೇಕಾಯಿತು. ಅದಕ್ಕೆ ಮುನ್ನ ಗಾಂಧಿ ಅಬ್ದುಲ್ಲಾನ ಅಂಗಡಿಯ ಗುಮಾಸ್ತನ ನೆರವಿನೊಂದಿಗೆ ಸಂಸ್ಥೆಯ ಲೆಕ್ಕ ಪತ್ರಗಳ ಅಧ್ಯಯನ ಮಾಡಿದರು. ಆಗ ಅವರಿಗೆ ಅನ್ನಿಸಿದ ಮೊದಲ ಸಂಗತಿ ಎಂದರೆ, ಇದೊಂದು ನ್ಯಾಯಾಲಯದ ಉಸಾಬರಿ ಇಲ್ಲದೆ ಪರಸ್ಪರ ರಾಜಿ ಮೂಲಕ ಇತ್ಯರ್ಥಪಡಿಸಿಕೊಳ್ಳಬೇಕಾದ ವ್ಯಾಜ್ಯ ಎಂಬುದು. ಅದನ್ನು ಅವರು ಅಬ್ದುಲ್ಲಾನಿಗೂ ಹೇಳಿದರು. ಮೊದಲು ಗಾಂಧಿ ಮಾತುಗಳಲ್ಲಿನ ವಿವೇಕವನ್ನು ಗ್ರಹಿಸಲಾಗದ ಅಬ್ದುಲ್ಲಾ ಅದಕ್ಕೆ ಒಪ್ಪಲಿಲ್ಲವಾದರೂ, ನಂತರ ಗಾಂಧಿಯ ಸರಳ ಪ್ರಾಮಾಣಿಕ ವಾದಕ್ಕೆ ನಿಧಾನವಾಗಿ ಒಲವು ತೋರಿದರು. ಆತ ಕೂಡಲೇ ಗಾಂಧಿಗಾಗಿ ಡರ್ಬಾನ್‌ನಿಂದ ಚಾರ್ಲ್ಸ್‌ಟೌನ್‌ವರೆಗಿನ ರಾತ್ರಿ ರೈಲು ಪ್ರಯಾಣಕ್ಕಾಗಿ ಪ್ರಥಮ ದರ್ಜೆ ಟಿಕೆಟ್‌ನ್ನು ಖರೀದಿಸಿದರು. ಗಾಂಧಿ ಡರ್ಬಾನ್ ವಾಸ್ತವ್ಯದ ಒಂದು ವಾರದಲ್ಲಿ ತಮ್ಮ ಖರ್ಚುಗಳನ್ನು ಕನಿಷ್ಠವಾಗಿರಿಸಿಕೊಂಡಿದ್ದುದೂ ಅಬ್ದುಲ್ಲಾನ ಗಮನವನ್ನು ಸೆಳೆಯದೇ ಇರಲಿಲ್ಲ. ಆತ ಗಾಂಧಿಯ ರಾಜಿ ಸಲಹೆಗೆ ಒಪ್ಪಲು ಬಹುಶಃ ಇದೂ–ಗಾಂಧಿಯ ಸರಳತೆ ಮತ್ತು ಸಾತ್ವಿಕತೆಗಳು–ಕಾರಣವಾಗಿತ್ತು.

ಮಹಾತ್ಮನ ಉದಯದ ಆ ಕ್ಷಣ!

ಡರ್ಬಾನ್‌ನಿಂದ ನೆಟಾಲ್‌ನ ರಾಜಧಾನಿ ಪೀಟರ್ ಮಾರಿಟ್ಜ್‌ಬರ್ಗ್‌ವರೆಗಿನ ಪ್ರಯಾಣದಲ್ಲಿ ಗಾಂಧಿ ಬಿಳಿಯ ಸಹ ಪ್ರಯಾಣಿಕರಿಂದ ಆಶ್ಚರ್ಯದ ನೋಟಕ್ಕೆ ಗುರಿಯಾದರಾದರೂ ಅವರ ಪ್ರಯಾಣಕ್ಕೇನೂ ತೊಂದರೆಯಾಗಲಿಲ್ಲ. ಆದರೆ ಮಾರಿಟ್ಜ್‌ಬರ್ಗ್‌ನಲ್ಲಿ ಅವರ ಡಬ್ಬಿಗೆ ಹತ್ತಿದ ಇಬ್ಬರು ಬಿಳಿಯ ಪ್ರಯಾಣಿಕರು ಪ್ರಥಮ ದರ್ಜೆ ಬಿಳಿ ಪ್ರಯಾಣಿಕರಿಗೆ ಮಾತ್ರ ಮೀಸಲಿರುವುದರಿಂದ ರೈಲಿನಿಂದ ಇಳಿದು ಕೊನೆಯಲ್ಲಿರುವ ಮೂರನೇ ದರ್ಜೆಯ ಡಬ್ಬಿಗೆ ಹತ್ತಿಕೊಳ್ಳುವಂತೆ ಗಾಂಧಿಗೆ

ಸೂಚಿಸಿದರು. ಗಾಂಧಿ ತಾವೊಬ್ಬ ಬ್ಯಾರಿಸ್ಟರ್ ಎಂದೂ, ತಮ್ಮ ಬಳಿ ಪ್ರಥಮ ದರ್ಜೆ ಟಿಕೆಟ್ ಇದೆಯೆಂದು ಹೇಳುತ್ತಾ ಡಬ್ಬಿಯಿಂದ ಕೆಳಗಿಳಿಯಲು ನಿರಾಕರಿಸಿದರು. ಒಂದರೆಕ್ಷಣ ಮರೆಯಾದ ಆ ಬಿಳಿಯ ಪ್ರಯಾಣಿಕರು ರೈಲ್ವೇ ಸಿಬ್ಬಂದಿ ಮತ್ತು ಪೊಲೀಸ್ ಪೇದೆಯೊಂದಿಗೆ ಮರಳಿಬಂದರು. ಗಾಂಧಿ ಈಗಲೂ ಡಬ್ಬಿಯಿಂದ ಇಳಿಯಲು ನಿರಾಕರಿಸಿದಾಗ ಪೊಲೀಸ್ ಪೇದೆ ಅವರನ್ನು ಅವರ ಸ್ಥಳದಿಂದ ಎಳೆದು ತಂದು ಬಾಗಿಲಿಂದ ಹೊರ ನೂಕಿದನು. ಅವರ ಹಾಸಿಗೆ ಇತ್ಯಾದಿ ಸಾಮಾನು-ಸರಂಜಾಮನ್ನು ಹೊರಗೆ ಎಸೆದನು. ರೈಲು ಸಿಳ್ಳು ಹಾಕುತ್ತಾ ನಿಲ್ದಾಣದಿಂದ ಹೊರಟಿತು.

ಗಾಂಧಿ ಪ್ಲಾಟ್‌ಫಾರಂ ಮೇಲೆ ಸ್ವಲ್ಪಕಾಲ ದಂಗಾಗಿ ಕೂತರು. ಹೊರಗೆ ವಿಪರೀತ ಚಳಿ ಅವರನ್ನು ಗಡಗಡನೆ ನಡುಗಿಸುತ್ತಿದ್ದರೆ ಒಳಗೆ ಅವಮಾನ-ಸಂಕಟ-ಸಂಕಲ್ಪಗಳ ಕೋಲಾಹಲದ ಬೆಂಕಿ ಎದ್ದಿತ್ತು. ಅವರು ನಿಧಾನವಾಗಿ ಸಾವರಿಸಿಕೊಂಡು ಎದ್ದು ಕೈಚೀಲದೊಂದಿಗೆ ಪ್ರತೀಕ್ಷಾ ಕೊಠಡಿಗೆ ಹೋಗಿ ಕೂತರು. ಅವರೊಳಗೆ ಬಾಲ್ಯದಿಂದ ಇಂಗ್ಲೆಂಡ್ ವಾಸ ಸೇರಿದಂತೆ ಈವರೆಗೆ ತಣ್ಣಗೆ ಘನೀಭವಿಸಿ ತುಂಬಿತುಳುಕುತ್ತಿದ್ದ ಅವರ ವ್ಯಕ್ತಿತ್ವದ ಒಳತೋಟಿಗಳೆಲ್ಲ ಒಮ್ಮೆಗೇ ಅಭಿವ್ಯಕ್ತಿಗೊಳ್ಳುವ ಘಳಿಗೆ ಕೂಡಿಬಂದಂತಿದ್ದ ಕ್ಷಣವದು. ಗಾಂಧಿ ಮಹಾತ್ಮನಾಗತೊಡಗಿದ್ದ ಕ್ಷಣವದು.

ಅವರು ಲೋಕ ಮರೆತು ಕೂತಲ್ಲೇ ಕೂತರು. ಮನುಷ್ಯನ ಸಣ್ಣತನ ಮತ್ತು ಗರ್ವಗಳ ಹಲವು ದುಷ್ಟ ರೂಪಗಳು ಅವರ ಕಣ್ಣಮುಂದೆ ಹಾದು ಹೋದವು. ಇವಕ್ಕೆ ತಲೆಬಾಗುವುದೇ ಹೇಡಿತನ ಎಂದು ಆಗ ಅವರಿಗೆ ಹೊಳೆಯಿತು. ಆ ಕ್ಷಣದಲ್ಲೇ ಅವರನ್ನು ಈವರೆಗೆ ಆವರಿಸಿದ್ದ ಹೇಡಿತನವೆಲ್ಲವೂ ಕರಗಿ ನೀರಾಗಿ ಹೋಯಿತು. ದ.ಆಫ್ರಿಕಾದಲ್ಲಿನ ವರ್ಣದ್ವೇಷ ತಕ್ಷಣಕ್ಕೆ ಎದುರಿಸಬೇಕಾದ ಮಹಾಕೇಡುಕೆಂದು ಅವರು ಭಾವಿಸಿದರು. ಇದರ ಮೂಲೋತ್ಪಾಟನೆ ಮಾಡಲು ತಮ್ಮ ಈ ಪ್ರವಾಸದ ಸಮಯದಲ್ಲಿ ಎಷ್ಟು ಗರಿಷ್ಠ ಸಾಧ್ಯವೋ ಅಷ್ಟನ್ನೂ ಮಾಡಲು ಅವರು ನಿಶ್ಚಯಿಸಿದರು. ಈ ಹೋರಾಟದಲ್ಲಿ ಎದುರಾಗುವ ಎಲ್ಲ ಕಷ್ಟನಷ್ಟಗಳು ಒಂದು ವಿಶಾಲ ಅರ್ಥದಲ್ಲಿ ಧಾರ್ಮಿಕವಾದ ಕರ್ತವ್ಯಗಳು ಎಂದು ಅವರು ಭಾವಿಸಿದರು. ಈವರೆಗೆ ಅವರಲ್ಲಿ ಲಜ್ಜೆ-ಅಧೈರ್ಯ-ಹಿಂಜರಿಕೆಗಳ ಋಣಾತ್ಮಕ ರೂಪದಲ್ಲಿ ವ್ಯಕ್ತವಾಗುತ್ತಿದ್ದ ಧರ್ಮಭೀರುತನ ಈಗ ಅವರ ತಾತ-ತಂದೆಯರು ತಮ್ಮ ವ್ಯಕ್ತಿತ್ವ-ಘನತೆಗಳ ರಕ್ಷಣೆಗಾಗಿ ಪ್ರಭುತ್ವದ ವಿರುದ್ಧ ಸಾರಿದ್ದ ಬಂಡಾಯಗುಣದ ಮರುಕಳಿಕೆಯ ರೂಪದಲ್ಲಿ ಸ್ಫೋಟಗೊಂಡಿತು.

ಭಯಭೀತರಾದ ಗಾಂಧಿ

ಆ ರಾತ್ರಿಯೇ ಗಾಂಧಿ ವಿಷಯವೆಲ್ಲವನ್ನೂ ಅಬ್ದುಲ್ಲಾಗೆ ತಿಳಿಸಿ, ತಂತಿ ಕಳಿಸಿದರು. ಗಾಬರಿಯಾದ ಸೇಠರು ತಮ್ಮ ಪ್ರಭಾವವನ್ನೆಲ್ಲ ಬಳಸಿ ಗಾಂಧಿಯನ್ನು ತೊಂದರೆಯಿಲ್ಲದೆ ಚಾರ್ಲ್ಸ್‌ಟೌನ್ ಮುಟ್ಟಿಸುವ ಭರವಸೆ ಪಡೆದಿದ್ದರು.

ಬೆಳಗಾಗುವದರೊಳಗೆ ಮಾರಿಟ್ಸ್‌ಬರ್ಗ್‌ನಲ್ಲಿದ್ದ ಅಬ್ದುಲ್ಲಾರ ಮಿತ್ರರು ನಿಲ್ದಾಣಕ್ಕೆ ಬಂದು ಗಾಂಧಿಗೆ ಮುಂದಿನ ಪ್ರಯಾಣಕ್ಕೆ ಬೇಕಾದ ಎಲ್ಲ ಸೌಕರ್ಯಗಳನ್ನು ಮಾಡಿದರು. ಆದರೆ ಅವರೆಲ್ಲರೂ ವರ್ಣದ್ವೇಷ ನೀತಿಯನ್ನು ತಮ್ಮ ಅನಿವಾರ್ಯ ಕರ್ಮವೆಂಬಂತೆ ಒಪ್ಪಿಕೊಂಡಿರುವುದನ್ನು ಗಾಂಧಿ ಗಮನಿಸಿದರು. ಅವರು ಸಂಜೆಯ ರೈಲಿನಲ್ಲಿ ಆ ಮಾರ್ಗದ ಕೊನೆಯ ರೈಲು ನಿಲ್ದಾಣ ಚಾರ್ಲ್ಸ್‌ಟೌನ್‌ಗೆ ಪ್ರಯಾಣ ಮಾಡಿದರು. ಅದು ನೆಟಾಲ್ ಪ್ರಾಂತ್ಯದ ಗಡಿಯಾಗಿದ್ದು ಅಲ್ಲಿಂದಾಚೆಗೆ ಟ್ರಾನ್ಸ್‌ವಾಲ್ ಪ್ರಾಂತ್ಯ ಆರಂಭವಾಗುತ್ತಿತ್ತು. ಹಾಗಾಗಿ ಅಲ್ಲಿಂದ ಪ್ರಿಟೋರಿಯಾಕ್ಕೆ ಹೋಗಲು ಮೊದಲು ತಲುಪಬೇಕಾಗಿದ್ದ ಜೊಹಾನ್ಸ್‌ಬರ್ಗ್‌ಗೆ ಕುದುರೆಗಾಡಿಯಲ್ಲಿ ಹೋಗಬೇಕಿತ್ತು. ಅದಕ್ಕಾಗಿಯೂ ಅಬ್ದುಲ್ಲಾ ಮೊದಲೇ ಸ್ಥಳ ಕಾದಿರಿಸಿದ್ದರು. ಆದರೆ ಆ ಕುದುರೆಗಾಡಿ ಪ್ರಯಾಣದ ಸಂಚಾಲಕ ವರ್ಣದ್ವೇಷಿ ಬಿಳಿಯನಾಗಿದ್ದು ಗಾಂಧಿ ಒಂದು ದಿನ ತಡವಾಗಿ ಬಂದಿರುವುದರಿಂದ ಗಾಡಿಯೊಳಗೆ ಜಾಗವಿಲ್ಲವೆಂದೂ ಗಾಡಿ ಚಾಲಕನ ಪಕ್ಕ ಕೂತು ಪ್ರಯಾಣ ಮಾಡಬಹುದೆಂದೂ ತಿಳಿಸಿದ. ವಾಸ್ತವವಾಗಿ ಅದು ಸಂಚಾಲಕ ಕೂರುವ ಜಾಗವಾಗಿದ್ದು, ಅವನು ಗಾಂಧಿಗೆ ಮೀಸಲಿರಿಸಿದ್ದ ಗಾಡಿಯೊಳಗಿನ ಜಾಗವನ್ನು ಆಕ್ರಮಿಸಿಕೊಂಡಿದ್ದ. ಆದರೂ ಗಾಂಧಿ ಮತ್ತೆ ಜಗಳವೇಕೆ ಎಂದು ಚಾಲಕನ ಪಕ್ಕವೇ ಕೂತರು.

ಆದರೆ ಪ್ರಯಾಣ ಸಾಗುತ್ತಿದ್ದಂತೆ ಆ ಸಂಚಾಲಕನಿಗೆ ಚುಟ್ಟಾ ಸೇದುವ ಮನಸ್ಸಾಗಿ ಹೊರಗೆ ಕೂರಲು ನಿಶ್ಚಯಿಸಿ, ಗಾಂಧಿಗೆ ಆ ಜಾಗ ಖಾಲಿ ಮಾಡಲು ತಿಳಿಸಿ ಗಾಡಿ ಚಾಲಕನು ಕಾಲುಗಳನ್ನಿರಿಸಲು ಕೆಳಹಂತದಲ್ಲಿ ಹಾಕಿದ್ದ ಹಲಗೆಯ ಮೇಲೆ ಒಂದು ಹಳೇ ಗೋಣಿಚೀಲ ಹಾಕಿ ಕೂರಲು ಹೇಳಿದ. ಇದರಿಂದ ತೀರಾ ಆಘಾತಗೊಂಡ ಗಾಂಧಿ ಜೋರಾದ ಧ್ವನಿಯಲ್ಲಿ ಆ ಜಾಗ ಬಿಟ್ಟೇಳುವುದಿಲ್ಲವೆಂದು ಪ್ರತಿಭಟಿಸಿದರು. ಗಾಡಿಯೊಳಗೆ ಕೂರುವ ತಮ್ಮ ಹಕ್ಕನ್ನು ಒತ್ತಿಹೇಳಿದರು. ಇದರಿಂದ ಕ್ರುದ್ಧನಾದ ಸಂಚಾಲಕ ಗಾಂಧಿಯತ್ತ ನುಗ್ಗಿಬಂದು ಅವರನ್ನು ಶಪಿಸುತ್ತಾ, ಹೊಡೆಯುತ್ತಾ ಗಾಡಿಯಿಂದ ಕೆಳಕ್ಕೆ ನೂಕತೊಡಗಿದನು. ಗಾಂಧಿ ವರ್ಣದ್ವೇಷದ ವಿರುದ್ಧದ ತಮ್ಮ ದೃಢನಿಶ್ಚಯ ಮಾಡಿದವರಂತೆ ಗಾಡಿಯ ಒಂದು ಹಿತ್ತಾಳೆ ಕಂಬಿಯನ್ನು ಗಟ್ಟಿಯಾಗಿ ಹಿಡಿದು ಅರ್ಧ ಜೋತಾಡತೊಡಗಿದರು. ಗಾಡಿಯೊಳಗಿದ್ದ ಬಿಳಿಯ ಪ್ರಯಾಣಿಕರಲ್ಲಿ ಕೆಲವರು ಇದನ್ನು ನೋಡಿ ಗಾಬರಿಯಾಗಿ ಗಾಂಧಿಯ ಮೇಲೆ ಕರುಣೆ ಬಂದವರಂತೆ ಸಂಚಾಲಕನಿಗೆ ಅವನ ದುರ್ವರ್ತನೆಗಾಗಿ ಛೀಮಾರಿ ಹಾಕತೊಡಗಿದರು. ಗಾಂಧಿಗೆ ಗಾಡಿಯೊಳಗೆ ಜಾಗ ನೀಡುವಂತೆ ಆಗ್ರಹಿಸಿದರು. ಮುಖಭಂಗಿತನಾದ ಸಂಚಾಲಕ ಗಾಂಧಿಯನ್ನು ಹೊಡೆಯುವುದನ್ನು, ಹೊರನೂಕುವ ಪ್ರಯತ್ನವನ್ನು ನಿಲ್ಲಿಸಿ ಚಾಲಕನ ಇನ್ನೊಂದು ಪಕ್ಕವಿದ್ದ ಚಾಲಕನ ಸಹಾಯಕನನ್ನು ಕೆಳಗೆ ಕೂರಲು ಹೇಳಿ ತಾನು ಅಲ್ಲಿ ಕೂತು ಗಾಂಧಿಯನ್ನು ಒಂದೇ ಸಮನೆ ಶಪಿಸತೊಡಗಿದ. ಗಾಂಧಿಗೆ ಅಂತೂ ಗಾಡಿಯೊಳಗೆ ಜಾಗ ಸಿಕ್ಕಿತು. ಆದರೆ ಅವರು ಭಯಭೀತರಾಗಿದ್ದರು.

ರಾತ್ರಿಯಾಗುತ್ತಿದ್ದಂತೆ ಸ್ಯಾಂಡರ್ಸ್‌ಟೌನ್ ಎಂಬ ಊರಿನಲ್ಲಿ ಗಾಡಿ ನಿಂತಿತು. ಅಲ್ಲಿ ಕೆಲ ಭಾರತೀಯ ಮುಖಗಳನ್ನು ನೋಡಿ ಗಾಂಧಿಗೆ ಜೀವ ಬಂದಂತಾಯಿತು. ಸೇಠ್ ಅಬ್ದುಲ್ಲಾ ಕಡೆಯವರು ಅಲ್ಲಿಗೆ ಬಂದಿದ್ದರು. ಅವರೆಲ್ಲ ಗಾಂಧಿಯ ಕೆಟ್ಟ ಅನುಭವ ಕೇಳಿ ಮರುಗಿದರು ಮತ್ತು ತಾವೆಲ್ಲ ಇಂತಹ ಅವಮಾನಗಳನ್ನು ದಿನನಿತ್ಯ ಸಹಿಸುತ್ತಿರುವ ಪರಿಯನ್ನು ಅವರಿಗೆ ವಿವರಿಸಿದರು. ಗಾಂಧಿ ಅಂದು ರಾತ್ರಿಯೇ ಕುದುರೆಗಾಡಿ ಕಂಪನಿಗೆ ತಮಗಾದ ತೊಂದರೆಗಳನ್ನು ವಿವರಿಸಿ ಕಂಪನಿಗೆ ದೂರು ನೀಡುವ ಒಂದು ಪತ್ರ ಬರೆದು ಕಳಿಸಿದರು. ರಾತ್ರಿ ಸೇಠರ ಸಹಾಯಕರು ಒದಗಿಸಿದ ಆತಿಥ್ಯ ಸ್ವೀಕರಿಸಿ ಬೆಳಿಗ್ಗೆ ಮತ್ತೆ ಗಾಡಿಯನ್ನು ಏರಿದರು. ಅಷ್ಟು ಹೊತ್ತಿಗೆ ಕಂಪನಿಯಿಂದ ಅವರಿಗೆ ಒಂದು ಉತ್ತರ ಬಂದಿತ್ತು. ಪ್ರಯಾಣದ ಸಂಚಾಲಕನನ್ನು ಬದಲಾಯಿಸಲಾಗಿದೆಯೆಂದೂ, ಮುಂದಿನ ಪ್ರಯಾಣ ಸುಖಕರವಾಗಿರುವುದೆಂದೂ ಆಶ್ವಾಸನೆ ನೀಡಿದ್ದರು. ಆ ದಿನ ಗಾಂಧಿ ಗಾಡಿಯೊಳಗೇ ಕೂತು ತಡ ರಾತ್ರಿಯ ಹೊತ್ತಿಗೆ ಜೊಹಾನ್ಸ್‌ಬರ್ಗ್ ತಲುಪಿದರು.

ಘನತೆ ಇಲ್ಲದ ಭಾರತೀಯರ ಬದುಕು

ಜೊಹಾನ್ಸ್‌ಬರ್ಗ್‌ಗೆ ಸೇಠರು ತಮ್ಮ ಪ್ರತಿನಿಧಿಯನ್ನು ಕಳಿಸಿದ್ದರಾದರೂ, ಅವನು ಅವರಿಗೆ ಪತ್ತೆಯಾಗಲಿಲ್ಲವಾದ್ದರಿಂದ ಗಾಂಧಿ ಗಲಿಬಿಲಿಗೊಂಡರು. ಹೋಟೆಲ್‌ವೊಂದನ್ನು ಸೇರಿಕೊಳ್ಳಲು ಕುದುರೆಗಾಡಿಯೊಂದರಲ್ಲಿ ಕುದುರೆಗಾಡಿಯವನು ಸೂಚಿಸಿದ ಹೋಟೆಲ್‌ವೊಂದರ ಬಳಿ ಹೋದರು. ಆದರೆ ಆ ಹೋಟೆಲ್‌ನ ಮಾಲೀಕ ಇವರ ಮುಖ ನೋಡಿ ಹೋಟೆಲ್‌ನಲ್ಲಿ ಕೊಠಡಿಗಳೆಲ್ಲ ಭರ್ತಿಯಾಗಿವೆ ಎಂದ. ಅವನ ಮಾತಿನ ಧಾಟಿಯಿಂದಲೇ ಗಾಂಧಿಗೆ ಇಲ್ಲಿ ಯಾವ ಹೋಟೆಲ್‌ನಲ್ಲೂ ತಮಗೆ ಕೊಠಡಿ ಸಿಗುವುದಿಲ್ಲ ಎಂದು ಖಚಿತವಾಗಿ ಗಾಡಿಯವನನ್ನು ಆ ಊರಿನ ಸೇಠ್ ಅಬ್ದುಲ್ಲಾರ ಸಹಚರಿ ಎಂದು ಗೊತ್ತಿದ್ದವರೊಬ್ಬರ ಅಂಗಡಿ ಬಳಿಗೆ ಹೋಗುವಂತೆ ತಿಳಿಸಿದರು.

ಅಲ್ಲಿ ಅಬ್ದುಲ್ ಗನಿ ಸೇಠ್ ಎಂಬುವರೊಬ್ಬರು ಅವರನ್ನು ಸ್ವಾಗತಿಸಿ ತಂಗಲು ವ್ಯವಸ್ಥೆ ಮಾಡಿದರು. ಗಾಂಧಿ ಹೋಟೆಲ್‌ಗಳಲ್ಲಿ ಕೊಠಡಿ ಕೇಳಲು ಹೋಗಿದ್ದನ್ನು ಕೇಳಿ ನಕ್ಕರು. ಈ ದೇಶದಲ್ಲಿ ಅವರು ಸ್ವಲ್ಪ ಕಾಲ ವಾಸಿಸಿದರೆ ಎಲ್ಲ ಅರ್ಥವಾಗುವುದೆಂದೂ ಅವರಂತಹ ಸ್ವಾಭಿಮಾನಿಗಳಿಗೆ ಈ ದೇಶವಲ್ಲವೆಂದೂ, ಮೂಲ ಭಾರತೀಯರಾದ ತಾವೆಲ್ಲ ಇಂತಹ ಘನತೆಯಿಲ್ಲದ ಬದುಕನ್ನು ನಡೆಸಬೇಕಾಗಿದೆಯೆಂದೂ ವಿವರಿಸಿದರು. ಅದಕ್ಕೆ ಗಾಂಧಿ, ಪರಿಸ್ಥಿತಿಯನ್ನು ಬದಲಿಸಲು ಅವರೆಲ್ಲ ಪ್ರಯತ್ನಗಳನ್ನೇಕೆ ಮಾಡಿಲ್ಲವೆಂದು ಕೇಳಿದರು. ಅದಕ್ಕೆ ಅವರು ತಾವು ಹಲವು ಮನವಿಗಳನ್ನು ನೀಡಿದ್ದರೂ ಪ್ರಯೋಜನವಾಗಿಲ್ಲವೆಂದೂ ತಮಗೆ ಪ್ರಥಮ ಅಥವಾ ದ್ವಿತೀಯ ದರ್ಜೆ ಪ್ರಯಾಣದಂತಹ ಅನುಕೂಲಗಳೇನೂ ಬೇಕಿಲ್ಲವಾದ್ದರಿಂದ ಸುಮ್ಮನಾಗಿರುವುದಾಗಿಯೂ ಹೇಳಿದರು. ಇದನ್ನು ಕೇಳಿ ಒಂದರೆಕ್ಷಣ

ಯೋಚನಾಮಗ್ನರಾದ ಗಾಂಧಿ, ತಾವು ನಾಳೆ ಪ್ರಿಟೋರಿಯಾಕ್ಕೆ ಪ್ರಥಮ ದರ್ಜೆಯಲ್ಲೇ ಪ್ರಯಾಣ ಮಾಡುವೆ ಎಂದು ಖಚಿತ ಧ್ವನಿಯಲ್ಲಿ ಹೇಳಿದರು. ಅದು ಸಾಧ್ಯವಾಗದಿದ್ದರೆ ಮಾತ್ರ ಆ ಕಿರುದೂರವನ್ನು ಕುದುರೆಗಾಡಿಯಲ್ಲೇ ಪಯಣಿಸುವೆ ಎಂದು ಕಟ್ಟುನಿಟ್ಟಾಗಿ ಹೇಳಿದರು.

ಮಾರನೆಯ ಬೆಳಿಗ್ಗೆ ಗಾಂಧಿ ರೈಲು ಪ್ರಯಾಣಕ್ಕೆ ಸಂಬಂಧಿಸಿದ ನಿಯಮಾವಳಿಯನ್ನು ತರಿಸಿಕೊಂಡು ನೋಡಿದರು. ಅದರಲ್ಲಿ ತಮಗೆ ಪ್ರಥಮ ದರ್ಜೆ ಪ್ರಯಾಣವನ್ನು ನಿರಾಕರಿಸುವಂತಹ ಯಾವ ನಿಯಮವೂ ಸ್ಪಷ್ಟವಾಗಿ ನಮೂದಾಗಿರಲಿಲ್ಲ. ಕೂಡಲೇ ಸ್ಥಳೀಯ ನಿಲ್ದಾಣಾಧಿಕಾರಿಗೆ ತಾವೊಬ್ಬ ಬ್ಯಾರಿಸ್ಟರ್ ಆಗಿರುವುದಾಗಿಯೂ, ತಾವು ಇಷ್ಟರಲ್ಲೇ ಬಂದು ಅವರನ್ನು ಭೇಟಿ ಮಾಡುವುದಾಗಿಯೂ, ತಮಗೆ ಪ್ರಿಟೋರಿಯಾಗೆ ಒಂದು ಪ್ರಥಮ ದರ್ಜೆ ಟಿಕೆಟ್ಟನ್ನೂ ಕಾದಿರಿಸಬೇಕೆಂದೂ ಪತ್ರ ಬರೆದು ಕಳಿಸಿದರು. ಅದರಂತೆ ಪ್ರಯಾಣಕ್ಕೆ ಸಿದ್ಧರಾಗಿ ಗಾಡಿ ಹೊರಡುವ ಸ್ವಲ್ಪ ಮುನ್ನ ಗನಿ ಸಾಹೇಬರು ಮತ್ತು ಅವರ ಸಹಾಯಕರ ಜೊತೆ ನಿಲ್ದಾಣ ತಲುಪಿ ಸಂಬಂಧಪಟ್ಟ ಅಧಿಕಾರಿಯನ್ನು ಭೇಟಿ ಮಾಡಿ ಟಿಕೆಟ್ ಕೇಳಿದರು. ಆ ಬಿಳಿಯ ಅಧಿಕಾರಿ ಗಾಂಧಿಯನ್ನು ಸಹಾನುಭೂತಿಯಿಂದ ನೋಡಿ ತಾನು ಸ್ಥಳೀಯನಲ್ಲವೆಂದೂ, ಕೆಲಸ ಹುಡುಕಿಕೊಂಡು ಹೊಸದಾಗಿ ಹಾಲೆಂಡಿನಿಂದ ಬಂದವನೆಂದೂ ಪರಿಚಯ ಮಾಡಿಕೊಂಡು ತಾನು ಗಾಂಧಿ ಬಯಸಿದ ಟಿಕೆಟ್ ಕೊಡುವುದಾಗಿಯೂ, ಆದರೆ ಪ್ರಯಾಣದಲ್ಲಿ ಏನಾದರೂ ತೊಂದರೆಯಾದರೆ ಇಲಾಖೆಯ ಮೇಲೆ ಮೊಕದ್ದಮೆ ಹೂಡಿ ತನಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂದೂ ಹೇಳಿ ಟಿಕೆಟ್ ನೀಡಿದನು. ಇದನ್ನು ನೋಡಿ ಗನಿ ಸಾಹೇಬ ಮತ್ತು ಅವರ ಸಹಾಯಕರಿಗೆ ಸಂತೋಷವಾಯಿತಾದರೂ, ರೈಲುಗಾಡಿಯೊಳಗೆ ಅವರಿಗೆ ತೊಂದರೆ ಆಗಬಹುದೆಂಬ ಆತಂಕ ವ್ಯಕ್ತಪಡಿಸಿದರು.

ಗಾಂಧಿ ಇದಾವುದನ್ನೂ ಲೆಕ್ಕಿಸದೆ ಗಾಡಿ ಏರಿದರು. ಗಾಡಿ ಹೊರಡುತ್ತಿದ್ದಂತೆ ಟಿಕೆಟ್ ತಪಾಸಣಾಕಾರ ಬಂದ. ಗಾಂಧಿಯ ಟಿಕೆಟ್ ನೋಡಿ ಕ್ರುದ್ಧನಾಗಿ ತಕ್ಷಣ ಮೂರನೇ ದರ್ಜೆ ಡಬ್ಬಿಗೆ ತೆರಳುವಂತೆ ಸೂಚಿಸಿದ. ಗಾಂಧಿ ತಾವು ಹೋಗುವುದಿಲ್ಲ ಎಂದರು. ವಾದ-ವಿವಾದ ಮುಂದುವರೆಯಿತು. ಈ ಬಿರುಸಿನ ಮಾತುಕತೆಯನ್ನು ಗಮನಿಸುತ್ತಿದ್ದ ಬಿಳಿಯ ಪ್ರಯಾಣಿಕರೊಬ್ಬರು ಅಸಮಾಧಾನದಿಂದ ರೈಲ್ವೆ ಸಿಬ್ಬಂದಿಗೆ, ಪ್ರಯಾಣಿಕರಿಗೆ ತೊಂದರೆ ಕೊಡದೆ ಸುಮ್ಮನೆ ಹೋಗುವಂತೆ ಸೂಚಿಸಿದರು ಮತ್ತು ಗಾಂಧಿಗೆ ಆರಾಮವಾಗಿ ಕೂರುವಂತೆ ಸಮಾಧಾನ ಮಾಡಿದರು. ಇದರಿಂದ ಕೊಂಚ ಅಧೀರನಾದ ತಪಾಸಣಾಕಾರ, 'ನನಗೇನು, ಕೂಲಿಯೊಬ್ಬನೊಂದಿಗೆ ಪ್ರಯಾಣ ಮಾಡುವ ವಿಧಿ ನಿಮ್ಮದಾಗಿದ್ದರೆ ನಾನೇನು ಮಾಡುವಂತಿದ್ದೇನೆ!' ಎಂದು ಗೊಣಗಿಕೊಂಡು ಮುಂದೆ ಹೋದನು. ಆ ಬಿಳಿಯ

ಪ್ರಯಾಣಿಕನಿಗೆ ವಂದನೆ ಹೇಳಿದ ಗಾಂಧಿ ಪ್ರಿಟೋರಿಯಾ ನಿಲ್ದಾಣ ಬರುತ್ತಿದ್ದಂತೆ ಗಾಡಿಯಿಂದ ಇಳಿದರು.

ಎಲ್ಲ ಬಿಳಿಯರೂ ಅನ್ಯಾಯಗಾರರಲ್ಲ

ಆದರೆ ಆ ಊರಿನಲ್ಲಿ ಅಂದು ಎಲ್ಲಿ ತಂಗಬೇಕೆಂದು ಗೊತ್ತಾಗದೆ ಗಾಂಧಿ ಗಲಿಬಿಲಿಗೊಂಡರು. ಅವರ ಆತಿಥ್ಯ ನೋಡಿಕೊಳ್ಳಬೇಕಿದ್ದ ಅಲ್ಲಿನ ಸೇಠ್ ಅಬ್ದುಲ್ಲಾರ ವಕೀಲ ಅಂದು ಭಾನುವಾರವಾಗಿದ್ದುದರಿಂದ ಗಾಂಧಿಯ ನೆರವಿಗೆ ಯಾವ ಸಿಬ್ಬಂದಿಯೂ ಸಿಗಲಾರರೆಂದು ಮೊದಲೇ ತಿಳಿಸಿಬಿಟ್ಟಿದ್ದ. ಹಾಗಾಗಿ ಗಾಂಧಿ ಹೋಟೆಲ್‌ಗಳ ಬಗೆಗಿನ ಮಾಹಿತಿಗಾಗಿ ಟಿಕೆಟ್ ತಪಾಸಣಾಕಾರನ ನೆರವು ಕೇಳಿದರು. ಆದರೆ ಆ ಬಿಳಿಯ ಮಾತನಾಡಲೂ ನಿರಾಕರಿಸಿದ. ಇವರ ಅಸಹಾಯಕತೆಯನ್ನು ಗಮನಿಸಿದ ಕಪ್ಪು ವರ್ಣೀಯನೊಬ್ಬ ಅವರಿಗೆ ಒಂದು ಹೋಟೆಲ್‌ನ ಗುರುತು ಹೇಳಿದ. ಗಾಂಧಿ ಅಲ್ಲಿಗೆ ನಡೆದರು.

ಅದೊಂದು ಅಮೆರಿಕಾದ ಬಿಳಿಯರೊಬ್ಬರ ಹೋಟೆಲ್ ಆಗಿದ್ದು ಅದರ ಮಾಲೀಕ ಸಂತೋಷದಿಂದ ಗಾಂಧಿಗೆ ಕೊಠಡಿ ನೀಡಿದ. ಆದರೆ, ಹೋಟೆಲ್‌ನ ಕೊಠಡಿಗಳ ತುಂಬ ಆಫ್ರಿಕಾದ ಬಿಳಿಯರೇ ಇರುವುದರಿಂದ ಗಾಂಧಿ ತಮ್ಮ ಕೊಠಡಿಯಲ್ಲೇ ಊಟ ತರಿಸಿಕೊಂಡು ಊಟ ಮಾಡುವುದು ಲೇಸೆಂದು ಸಲಹೆ ಇತ್ತ. ಅದನ್ನೊಪ್ಪಿಕೊಂಡ ಗಾಂಧಿ ಕೊಠಡಿಗೆ ತೆರಳಿ ವಿಶ್ರಮಿಸಿಕೊಳ್ಳುತ್ತಿದ್ದ ಸ್ವಲ್ಪ ಹೊತ್ತಿನಲ್ಲೇ ಮಾಲಿಕ ಕೊಠಡಿಗೆ ಬಂದು, ತಾನು ಗಾಂಧಿಗೆ ಪ್ರತ್ಯೇಕವಾಗಿ ಊಟ ಮಾಡಲು ಹೇಳಿದ್ದು ತನಗೆ ನಾಚಿಕೆಯನ್ನುಂಟು ಮಾಡಿತೆಂದೂ, ಅದರ ಪರಿಣಾಮವಾಗಿ ಆ ಬಿಳಿಯರೊಂದಿಗೆ ಮಾತಾಡಿದ್ದಾಗಿಯೂ, ಅವರಾರಿಗೂ ಗಾಂಧಿ ಜೊತೆಯಲ್ಲಿ ಊಟ ಮಾಡಲು ಯಾವ ಅಭ್ಯಂತರವೂ ಇಲ್ಲವೆಂಬ ಸಂತೋಷದ ಸುದ್ದಿ ಅರುಹಿದ. ಇದರಿಂದ ಗಾಂಧಿ ಗೆಲುವಾದರು. ಅಂದಿನ ಊಟ ಅವರಿಗೆ ಬಹಳ ರುಚಿಸಿತು. ಹಾಗೇ ಗಾಂಧಿಯ ಮನಸ್ಸು ದೀರ್ಘ ಆಲೋಚನೆಗೆ ತೊಡಗಿತು. ತಮ್ಮ ಈ ದೀರ್ಘ ಪ್ರಯಾಣದ ನೆನಪುಗಳನ್ನು ಅವರು ಮೆಲುಕು ಹಾಕಿದರು. ಅವರಿಗೆ ಇಲ್ಲಿನ ಎಲ್ಲ ಬಿಳಿಯರೂ ಅನ್ಯಾಯಗಾರರಲ್ಲ ಎನಿಸಿತು. ಹಾಗೇ ಸಾಕಷ್ಟು ಜನ ಇಲ್ಲಿನ ವರ್ಣಭೇದ ನೀತಿಯ ಪರವಾಗಿಲ್ಲದಿರಬಹುದು ಎಂಬ ಆಲೋಚನೆ ಅವರ ಮನಸ್ಸಿನಲ್ಲಿ ಮೂಡಿತು. ಇದು ಮುಂದೆ ಅವರು ಜನಾಂಗಭೇದ ನೀತಿಯ ವಿರುದ್ಧ ನಡೆಸಿದ ಆಂದೋಲನದ ಸ್ವರೂಪವನ್ನು ನಿರ್ಧರಿಸಿದ ಒಂದು ಬಹುಮುಖ್ಯ ಸಂಗತಿಯೂ ಆಯಿತು.

■

೬

ದ.ಆಫ್ರಿಕಾದಲ್ಲಿ ಗಾಂಧಿ

ಮರುದಿನ ಗಾಂಧಿ ಅಬ್ದುಲ್ಲಾ ಸೇಠರ ವಕೀಲರ ಕಛೇರಿಗೆ ಹೋದರು. ಬೇಕರ್ ಎಂಬುವವರು ಆ ವಕೀಲರು. ಕ್ರೈಸ್ತ ಧರ್ಮ ಪ್ರಚಾರಕರೂ ಆಗಿದ್ದ ಅವರು ಗಾಂಧಿಯನ್ನು ಸ್ನೇಹದಿಂದ ಬರಮಾಡಿಕೊಂಡರು. ಅಲ್ಲಿನ ವರ್ಣಭೇದ ನೀತಿಯ ವಿರೋಧಿಯಾಗಿದ್ದ ಅವರು, ಅಬ್ದುಲ್ಲಾ ಅವರ ಮೊಕದ್ದಮೆ ತುಂಬ ತೊಡಕಿನದಾಗಿದ್ದು, ಗಾಂಧಿ ತಿಂಗಳುಗಟ್ಟಳೆ ಅಲ್ಲಿ ತಂಗಬೇಕಾಗಿರುವುದರಿಂದ ಅವರು ಹೋಟೆಲ್‌ನಲ್ಲಿರುವುದು ಬೇಡವೆಂದು ಹೇಳಿ ತಮಗೆ ಪರಿಚಯವಿದ್ದ ಒಬ್ಬ ವೃದ್ಧೆಯ ಮನೆಯಲ್ಲಿ ತಂಗುವ ವ್ಯವಸ್ಥೆ ಮಾಡಿದರು.

ಒಮ್ಮೆ ಸಂಜೆ ಗಾಂಧಿ ಹೀಗೇ ನಗರದಲ್ಲಿ ತಿರುಗಾಡುತ್ತಾ ಅಧ್ಯಕ್ಷ ಕ್ರೂಗರ್ ನಿವಾಸದ ಬಳಿಯ ರಸ್ತೆಯಲ್ಲಿ ಹೆಜ್ಜೆ ಹಾಕಿದಾಗ ಅಲ್ಲಿದ್ದ ಕಾವಲು ಪೊಲೀಸ್ ಯಾವುದೇ ಮುನ್ನೆಚ್ಚರಿಕೆ ಇಲ್ಲದೆ ಗಾಂಧಿಯ ಮೇಲೆ ಎರಗಿ ಒದ್ದು ಅವರನ್ನು ರಸ್ತೆಯಿಂದ ದೂರ ತಳ್ಳಿಬಿಟ್ಟ. ಅವರು ಸಾವರಿಸಿಕೊಂಡು ಮೇಲೇಳುತ್ತಿದ್ದಂತೆ ಅದೇ ಹಾದಿಯಲ್ಲಿ ಬರುತ್ತಿದ್ದ ಅವರ ಬಿಳಿ ಗೆಳೆಯರೊಬ್ಬರು ಸಂತೈಸಿ ನ್ಯಾಯಾಲಯದಲ್ಲಿ ದೂರು ಸಲ್ಲಿಸುವಂತೆ ಹೇಳಿದಾಗ ಅವರು 'ನಾನು ನನ್ನ ವೈಯಕ್ತಿಕ ತೊಂದರೆಗಳಿಗಾಗಿ ನ್ಯಾಯಾಲಯದ ಮೆಟ್ಟಿಲೇರದಿರಲು ತೀರ್ಮಾನಿಸಿದ್ದೇನೆ' ಎಂದು ಅವರೊಡನೆ ಮುಂದೆ ನಡೆದರು. ಆದರೆ ಒಳಗೆ ಥಣ್ಣನೆಯ ಮತ್ತೊಂದು ಜ್ವಾಲಾಮುಖಿ ಸ್ಫೋಟಿಸಿತ್ತು. ಈ ಅವಮಾನ-ಅನ್ಯಾಯಗಳ ವಿರುದ್ಧ ಹೋರಾಟದ ಸಂಕಲ್ಪ ಮತ್ತಷ್ಟು ದೃಢಗೊಂಡಿತ್ತು.

ಬೇಕರ್ ಜೊತೆ ಗಾಂಧಿಯ ಒಡನಾಟ ಹೆಚ್ಚಿದಂತೆ ಆ ಊರಿನ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಹಲವು ಪ್ರಭೇದಗಳ ಕ್ರೈಸ್ತ ಶ್ರದ್ಧಾಳುಗಳು ಅವರಿಗೆ ಪರಿಚಯವಾದರು. ಗಾಂಧಿಯ ಸಾತ್ವಿಕ ವ್ಯಕ್ತಿತ್ವದಿಂದ ಆಕರ್ಷಿತರಾದ ಅವರೆಲ್ಲ ಅವರನ್ನು ಕ್ರೈಸ್ತರಾಗಲು ಸೂಕ್ತರೆಂದು ತೀರ್ಮಾನಿಸಿ ಆ ಸಂಬಂಧವಾಗಿ ಅವರ ಮನವೊಲಿಸಲು ನಿರಂತರ ಪ್ರಯತ್ನ ನಡೆಸಿದರು. ಅವರನ್ನು ಕ್ರೈಸ್ತ ಪ್ರಾರ್ಥನಾ ಸಭೆಗಳಿಗೂ, ಕ್ರೈಸ್ತ ಮತ ಸಮ್ಮೇಳನಗಳಿಗೂ ಕರೆದುಕೊಂಡು ಹೋಗಿ ಪ್ರಭಾವ ಬೀರಲು ಯತ್ನಿಸಿದರು. ಅಲ್ಲದೆ ಅಲ್ಲಿನ ವರ್ಣಭೇದ ನೀತಿಗಳ ವಿರುದ್ಧ ಕಾನೂನು ಹೋರಾಟದಲ್ಲಿ ಸಹಭಾಗಿಯಾಗುವ ಸೂಚನೆಗಳನ್ನೂ ನೀಡಿದರು. ಇದರ ಜೊತೆಗೇ ಸೇಠ್ ಅಬ್ದುಲ್ಲಾ ಅವರು ಅವರನ್ನು ಇಸ್ಲಾಂಗೆ ಮತಾಂತರಗೊಳಿಸಲು ಯತ್ನಿಸುವ ಭಾಗವಾಗಿ ಅವರಿಗೆ ಕುರಾನ್ ಓದಲು ಕೊಟ್ಟರು.

ಒಳದನಿ ಏನು ಹೇಳುತ್ತದೋ ಅದನ್ನು ಮಾತ್ರ ಮಾಡುವವನು

ಆದರೆ ಗಾಂಧಿ ಈ ಯಾವ ಒತ್ತಾಯಗಳಿಗೂ ಮಣಿಯದವರಾಗಿದ್ದರು. ಅವರು ಆ ಎಲ್ಲರಿಗೂ ಹೇಳಿದ್ದು ಒಂದೇ ಮಾತು: 'ನನ್ನ ಒಳದನಿ ಏನು ಹೇಳುತ್ತದೋ ಅದನ್ನು ಮಾತ್ರ ನಾನು ಮಾಡುವವನು'. ಅವರಿಗೆ ಎಲ್ಲ ಧರ್ಮಗ್ರಂಥಗಳ ಆಳವಾದ ಅಧ್ಯಯನ ಮಾಡುವ ಕುತೂಹಲ ಉಂಟಾಗಿ ಅವನ್ನು ಓದತೊಡಗಿದರು. ಜೊತೆಗೆ ಭಾರತದಲ್ಲಿನ ತಮ್ಮ ಧಾರ್ಮಿಕ ಮಾರ್ಗದರ್ಶಿ ರಾಯಚಂದಭಾಯಿ ಮತ್ತು ಇತರ ಕೆಲವು ಧರ್ಮಶಾಸ್ತ್ರಜ್ಞರಿಗೂ ತಮ್ಮ ಸಂದೇಹ-ಸಂದಿಗ್ಧಗಳನ್ನು ವಿವರಿಸಿ ಪತ್ರ ಬರೆದರು. ರಾಯ್‌ಚಂದರು ಹಲವು ಧರ್ಮಗಳ ಗ್ರಂಥಾಧ್ಯಯನ ಮಾಡಿರುವ ತಮ್ಮ ಅಂತಿಮ ಅಭಿಪ್ರಾಯವೆಂದರೆ ಹಿಂದೂ ಧರ್ಮದಷ್ಟು ಸೂಕ್ಷ್ಮವೂ, ಉದಾರವೂ ಆದ ಧರ್ಮ ಇನ್ನೊಂದಿಲ್ಲ ಎಂದು ಬರೆದರು. ಇದರಿಂದ ತಮ್ಮ ಧರ್ಮದ ಬಗ್ಗೆ ಇನ್ನಷ್ಟು ಆತ್ಮವಿಶ್ವಾಸ ಗಳಿಸಿಕೊಂಡ ಗಾಂಧಿ ತಮ್ಮ ಕ್ರೈಸ್ತ ಗೆಳೆಯರನ್ನು ಕ್ರೈಸ್ತ ಧರ್ಮವೇ ಏಕೆ ಅತ್ಯುತ್ತಮ ಧರ್ಮ? ನಿಮ್ಮ ಸ್ವರ್ಗದಲ್ಲಿರುವ ದೇವರು ಹಿಂದೂ-ಮುಸ್ಲಿಂ-ಕ್ರೈಸ್ತರೆಂದು ಭೇದ ಮಾಡಿ ಅಲ್ಲಿ ಜಾಗ ಕೊಡುವನೇ? ಮುಂತಾದ ನೇರ ಪ್ರಶ್ನೆಗಳನ್ನು ಕೇಳತೊಡಗಿದರು. ಅಲ್ಲದೆ, ಕ್ರೈಸ್ತ ಧರ್ಮ ಮನುಷ್ಯನನ್ನು ಪಾಪಿ ಎಂದು ಪರಿಗಣಿಸುವುದನ್ನು ತಾವು ಒಪ್ಪುವುದಿಲ್ಲವೆಂದೂ, ತಾವು ಪಾಪದ ಪರಿಣಾಮಗಳಿಂದ ಮಾತ್ರವಲ್ಲ ಪಾಪದಿಂದಲೇ ಮುಕ್ತಗೊಳ್ಳುವ ಇಚ್ಛೆ ಹೊಂದಿರುವುದಾಗಿಯೂ ಹೇಳಿ ಅವರನ್ನು ಸುಮ್ಮನಾಗಿಸಿದರು.

ಮೂಢನಂಬಿಕೆಯ ಪ್ರತೀಕವೆಂದು ಗಾಂಧಿಯ ಕೊರಳಲ್ಲಿದ್ದ ತುಳಸೀ ಮಾಲೆಯನ್ನು ಕಿತ್ತು ಹಾಕಬೇಕೆಂದು ಸೂಚಿಸಿದ ಮೈಕೆಲ್ ಕೋಟೆಸ್ ಎಂಬ ಬಂಡು ಕ್ರೈಸ್ತ ಗೆಳೆಯರೊಬ್ಬರಿಗೆ ಅವರು ಹೇಳಿದ್ದು ಈ ಮಾತುಗಳನ್ನು : 'ಇದು ನನ್ನ ತಾಯಿ ನನ್ನ ಸುರಕ್ಷತೆಗೆಂದು ನಂಬಿ ಹಾಕಿದ ಮಾಲೆ. ಅದನ್ನು ಕೀಳುವುದು ನನಗೆ ಘಾಸಿಯನ್ನುಂಟು ಮಾಡುತ್ತದೆ. ಅದೇ ಕಾಲಾನುಕಾಲದಲ್ಲಿ ಸವೆದು ಕಿತ್ತು ಹೋದರೆ ಮತ್ತೆ ನಾನು ಅಂತಹುದೊಂದನ್ನು ಹಾಕುವುದಿಲ್ಲ.' ಆ ಹೊತ್ತಿಗೆ ಧರ್ಮವೂ ಸೇರಿದಂತೆ ಪಶ್ಚಿಮದ ವೈಚಾರಿಕ ರಚನೆಗಳ ಬಗ್ಗೆ ಗಾಂಧಿ ತಾಳಿದ್ದ ನಿಲುವಿನ ವಿಶೇಷತೆಯನ್ನು ಈ ಮಾತುಗಳು ಸೂಚಿಸುತ್ತವೆ. ಈ ಮಧ್ಯೆ ಟಾಲ್‌ಸ್ಟಾಯ್‌ನ 'ದೇವರ ಸಾಮ್ರಾಜ್ಯ ನಿಮ್ಮೊಳಗೇ ಇದೆ' ಎಂಬ ಪುಸ್ತಕವನ್ನು ಓದಿದ್ದ ಗಾಂಧಿ ಧರ್ಮ ಇರುವುದು ಹೊರ ರೂಪಗಳಲ್ಲಿ ಅಲ್ಲ, ನಮ್ಮ ಒಳಗಿನ ಸತ್ವದಲ್ಲಿ ಎಂಬುದನ್ನು ಮನವರಿಕೆ ಮಾಡಿಕೊಂಡಿದ್ದರು.

ಭಾರತೀಯರ ಸಂಘಟನೆಯತ್ತ ಮೊದಲ ಹೆಜ್ಜೆ

ಈ ಎಲ್ಲ ಮತ ಸಂಪ್ರದಾಯಗಳ ಚರ್ಚೆಗಳ ನಡುವೆಯೇ ಗಾಂಧಿ ಅಲ್ಲಿನ ಭಾರತೀಯರು ಅನುಭವಿಸುತ್ತಿದ್ದ ಅವಮಾನಕರ ತಾರತಮ್ಯಗಳ ಬಗ್ಗೆಯೂ ಆಳವಾಗಿ ಯೋಚಿಸತೊಡಗಿದ್ದರು. ಹಲವರನ್ನು ಕಂಡು ಮಾತಾಡಿ ಪರಿಸ್ಥಿತಿಯ ವಿವರಗಳನ್ನು ಸಂಗ್ರಹಿಸಿದ್ದರು ಮತ್ತು ಆ ದಿಸೆಯಲ್ಲಿ ಸುಧಾರಣೆಗಾಗಿ ಏನೆಲ್ಲ ಮಾಡಬಹುದು ಎಂಬುದರ ಬಗ್ಗೆ ಕೆಲವರೊಂದಿಗೆ ಚರ್ಚಿಸಿದ್ದರು. ಕೆಲವು ವರ್ತಕರು ತಾವು ಗೌರವದಿಂದ ಬಾಳಲು ಅವಕಾಶ ಕೋರಿ-ಕನಿಷ್ಠ ತಮ್ಮನ್ನು 'ಕೂಲಿ'ಗಳೆಂದು

ಗುರುತಿಸಬಾರದೆಂದು–ಸರ್ಕಾರಕ್ಕೆ ಬರೆದಿದ್ದ ಅರ್ಜಿಗಳು ಮತ್ತು ಆ ಪ್ರಯತ್ನಗಳೆಲ್ಲ ವ್ಯರ್ಥವಾಗಿರುವುದನ್ನು ಹೇಳಿದರು. ಗಾಂಧಿ ರೈಲ್ವೇ ಇಲಾಖೆಗೆ ಇಲಾಖೆಯದ್ದೇ ಕಾನೂನು–ನಿಯಮಗಳನ್ನು ಉಲ್ಲೇಖಿಸಿ ಪತ್ರ ಬರೆದು ತಾರತಮ್ಯವೇಕೆ ಎಂದು ಪ್ರಶ್ನಿಸಿದ್ದರು. ಇಲಾಖೆ ಏನು ಉತ್ತರ ಕೊಡುವುದೆಂದು ತೋಚದೆ ಭಾರತೀಯ ಮೂಲದ ಪ್ರಯಾಣಿಕರು ಶುಚಿಯಾಗಿದ್ದು ಚೊಕ್ಕಟವಾದ ಬಟ್ಟೆ ಹಾಕಿಕೊಂಡು ಆರೋಗ್ಯಕರ ನಡೆನುಡಿಗಳನ್ನು ಪಾಲಿಸುವುದಾದರೆ, ಅವರಿಗೂ ಉತ್ತಮ ದರ್ಜೆಯಲ್ಲಿ ಸ್ಥಳಾವಕಾಶ ಕಲ್ಪಿಸುವುದಾಗಿ ಭರವಸೆ ನೀಡಿತ್ತು. ಈ ಎಲ್ಲ ಹಿನ್ನೆಲೆಯಲ್ಲಿ ಗಾಂಧಿ ಪ್ರಿಟೋರಿಯಾಕ್ಕೆ ಬಂದ ಒಂದು ವಾರದಲ್ಲೇ ಒಂದು ದಿನ ನಗರದ ಭಾರತೀಯರೆಲ್ಲರ ಸಭೆಯೊಂದನ್ನು ಕರೆದರು. ಸಭೆಗೆ ಬಂದವರಲ್ಲಿ ಹೆಚ್ಚಿನವರು ಮುಸ್ಲಿಂ ವರ್ತಕರು. ಮಿಕ್ಕವರು ಹೆಚ್ಚಾಗಿ ಹಿಂದೂ ಕಾರ್ಮಿಕರು.

ಗಾಂಧಿಗೆ ಆಗ ಇಪ್ಪತ್ತನಾಲ್ಕು ವರ್ಷ. ತಮ್ಮ ಮೊದಲ ಸಾರ್ವಜನಿಕ ಭಾಷಣವನ್ನು ಅವರು ಸಾವಧಾನ ಗತಿಯಲ್ಲಿ ಯಶಸ್ವಿಯಾಗಿ ಮಾಡಿ ಮುಗಿಸಿದರು. ಯಾವುದೇ ಸ್ವಾರ್ಥದ ಉದ್ದೇಶವಿಲ್ಲದೆ ಒಂದು ದೊಡ್ಡ ಸಾರ್ವಜನಿಕ ಒಳಿತಿಗಾಗಿ ತಾನು ಸಿದ್ಧನಾಗುತ್ತಿರುವ ಹುರುಪು ಮತ್ತು ಆಳದ ಬದ್ಧತೆ ಅವರ ಎಲ್ಲ ಅಧೈರ್ಯ, ಮುಖೇಡಿತನ ಮತ್ತು ಸಂಕೋಚಗಳನ್ನು ದೂರ ಓಡಿಸಿದಂತಿತ್ತು. ಅಂದು ಮುಖ್ಯವಾಗಿ ಅವರು ನಾಲ್ಕು ಅಂಶಗಳ ಬಗ್ಗೆ ಮಾತಾಡಿದರು. ಅವರು ಹೇಳಿದ ಮೊದಲ ಮಾತು: ವ್ಯಾಪಾರಕ್ಕೂ ಸತ್ಯಕ್ಕೂ ಸಂಬಂಧವಿಲ್ಲ ಎಂದು ಭಾವಿಸದೆ ವ್ಯಾಪಾರದಲ್ಲೂ ಸತ್ಯವಂತರಾಗಿರಿ. ಎರಡನೆಯದು: ದೈಹಿಕವಾಗಿ ಶುಚಿಯಾಗಿದ್ದು ಚೊಕ್ಕಟವಾದ ಬಟ್ಟೆ ಧರಿಸಿ. ಮೂರನೆಯದು: ನಡೆನುಡಿಗಳನ್ನು ಸುಧಾರಿಸಿಕೊಳ್ಳಿರಿ. ಜಾತಿ ಮತಗಳ ವ್ಯತ್ಯಾಸಗಳನ್ನು ಮರೆತು ಐಕ್ಯತೆಯನ್ನು ಸಾಧಿಸಿ. ನಾಲ್ಕನೆಯದು: ಸಾರ್ವಜನಿಕ ಜೀವನದಲ್ಲಿ ಸಕ್ರಿಯವಾಗಿ ಭಾಗವಹಿಸಲು ಅಲ್ಲಿನ ಸಾರ್ವಜನಿಕ ಭಾಷೆಯಾದ ಇಂಗ್ಲಿಷ್ ಕಲಿಯಿರಿ.

ಮೊದಲ ಬಾರಿಗೆ ದ.ಆಫ್ರಿಕಾದಲ್ಲಿ ಭಾರತೀಯರ ಸಂಘಟನೆಯ ಪ್ರಯತ್ನವೊಂದು ಆರಂಭವಾಗಿತ್ತು. ಗಾಂಧಿ ಮಾತುಗಳಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಗಾಂಧಿ ಕಾರ್ಮಿಕರಿಗಾಗಿ ಇಂಗ್ಲಿಷ್ ಪಾಠಗಳನ್ನು ಆರಂಭಿಸಿದರು. ಅದಕ್ಕಾಗಿ ಅವರು ತಮಿಳು ಸೇರಿದಂತೆ ಕೆಲವು ಭಾರತೀಯ ಭಾಷೆಗಳನ್ನು ಕಲಿಯಲು ಶುರು ಮಾಡಿದರು. ಸಂಘಟನೆಯ ಪ್ರಯತ್ನ ಇಲ್ಲಿಗೇ ನಿಲ್ಲದೆ ಮತ್ತಷ್ಟು ಸಭೆಗಳು ನಡೆದವು. ಆ ಮೂಲಕ ಪ್ರಿಟೋರಿಯಾದ ಪ್ರತಿ ಭಾರತೀಯನೂ ಗಾಂಧಿಗೆ ಪರಿಚಯವಾಗುವಂತಾಯಿತು. ಅವರೆಲ್ಲರಿಗೂ ಗಾಂಧಿ ಅನ್ಯಾಯದ ವಿರುದ್ಧ ಹೋರಾಡಲು ಅಗತ್ಯವೆಂದು ಅವರು ಭಾವಿಸಿದ್ದ ಮೇಲಿನ ನಾಲ್ಕು ಅಂಶಗಳ ಪಾಠ ಬೋಧಿಸಿದರು.

ವಕೀಲಿಕೆಯ ಹೊಸದಾರಿ ತೆರೆದ ಗಾಂಧಿ

ಈ ಮಧ್ಯೆ ಸೇಠ್ ಅಬ್ದುಲ್ಲಾರ ಮೊಕದ್ದಮೆಯ ವಿವರವಾದ ಪರಿಶೀಲನೆ ಆರಂಭವಾಗಿತ್ತು. ಲೆಕ್ಕ ಪತ್ರಗಳ ಪರಿಶೋಧನೆ ಗಾಂಧಿಗೆ ಹೊಸ ಅನುಭವವಾಗಿತ್ತು. ಲೆಕ್ಕ ಇಡುವ, ಹಣ ಹೂಡುವ ಹಲವು ಸುತ್ತುಬಳಸು ವಿಧಾನಗಳು ಅವರಿಗೆ

ಪರಿಚಯವಾಯಿತು. ಅವುಗಳ ಆಧಾರದ ಮೇಲೆ ತನ್ನ ಕಕ್ಷಿದಾರನ ಸಮರ್ಥನೆಗಾಗಿ ವಾದ ಮಂಡಿಸಬೇಕಾದ ವಾಸ್ತವ ಅವರನ್ನು ವಕೀಲ ವೃತ್ತಿಯ ಮೂಲ ಪಾವಿತ್ರ್ಯವನ್ನೇ ಪ್ರಶ್ನಿಸುವಂತೆ ಮಾಡಿತು. ಸತ್ಯ ಎನ್ನುವುದು ಯಾವಾಗಲೂ ಮಾತಿನ ಚಮತ್ಕಾರಗಳ ವಾದ–ಪ್ರತಿವಾದಗಳ ಆವರಣದ ಹೊರಗೇ ಇರುವಂತಹುದು ಎನ್ನುವುದು ಅವರಿಗೆ ಖಚಿತವಾಯಿತು. ಮೊಕದ್ದಮೆಯಲ್ಲಿ ಸತ್ಯ ಅಥವಾ ನ್ಯಾಯ ತಮ್ಮ ಕಕ್ಷಿದಾರ ಸೇಠ್ ಅಬ್ದುಲ್ಲಾರ ಪರವಾಗಿಯೇ ಇದೆ ಎಂದೂ ಅವರಿಗೆ ಮನವರಿಕೆಯಾಯಿತು. ಅವರು ಕೂಡಲೇ ತಮ್ಮ ಕಕ್ಷಿದಾರರ ಬಳಿ ಈ ಮೊದಲೇ ಪ್ರಸ್ತಾಪಿಸಿದ್ದಂತೆ ಅವರನ್ನು ನ್ಯಾಯಾಲಯದ ಹೊರಗಿನ ಪಂಚಾಯ್ತಿ ನ್ಯಾಯ ನಿರ್ಣಯಕ್ಕೆ ಒಪ್ಪಿಸಿದರು. ಹಾಗೇ ಪ್ರತಿಕಕ್ಷಿದಾರ ತಯ್ಯಬ್ ಸೇಠರನ್ನೂ ಸಂಪರ್ಕಿಸಿ ತಮ್ಮ ಈ ನಿರ್ಧಾರವನ್ನು ತಿಳಿಸಿದರು. ಪ್ರಿಟೋರಿಯಾದಲ್ಲಿನ ಗಾಂಧಿ ಚಟುವಟಿಕೆಗಳನ್ನು ಗಮನಿಸಿದ್ದ ಮತ್ತು ಅವರ ವ್ಯಕ್ತಿತ್ವದ ವಿಶೇಷತೆಗಳ ಬಗ್ಗೆ ಕೇಳಿದ್ದ ತಯ್ಯಬ್‌ಜಿ ಗಾಂಧಿಯ ಬಾಯಿಂದಲೇ ಮೊಕದ್ದಮೆಯ ವಿವರಗಳನ್ನು ಕೇಳಿದ ನಂತರ ಅವರೂ ಅದಕ್ಕೆ ತಮ್ಮ ಒಪ್ಪಿಗೆ ಸೂಚಿಸಿದರು. ಪಂಚಾಯ್ತಿಯಲ್ಲಿ ತಯ್ಯಬ್ ಅವರು ಅಬ್ದುಲ್ಲಾರಿಗೆ ಮೊಕದ್ದಮೆಯ ಖರ್ಚೂ ಸೇರಿದಂತೆ ಒಟ್ಟು ೩೭ ಸಾವಿರ ಪೌಂಡುಗಳಷ್ಟು ದೊಡ್ಡ ಮೊತ್ತದ ಹಣ ಕೊಡಬೇಕೆಂದು ತೀರ್ಮಾನವಾಯಿತು. ಇದು ತುಂಬ ದೊಡ್ಡ ಮೊತ್ತವಾಗಿದ್ದು ಒಮ್ಮೆಲೇ ಇದನ್ನು ಕೊಡಲು ತಯ್ಯಬ್‌ಜಿಯವರಿಗೆ ಕಷ್ಟವೆಂದು ಗೊತ್ತಾದಾಗ, ಗಾಂಧಿ ಹಣ ಪಾವತಿಯನ್ನು ದೀರ್ಘಕಾಲದ ಕಂತುಗಳಾಗಿ ಸ್ವೀಕರಿಸಲು ಸೇಠ್ ಅಬ್ದುಲ್ಲಾರ ಮನವೊಲಿಸಿದರು.

ಇದರೊಂದಿಗೆ ಗಾಂಧಿ ದ.ಆಫ್ರಿಕಾಕ್ಕೆ ಬಂದಿದ್ದ ಉದ್ದೇಶ ಪೂರ್ಣಗೊಂಡಿತ್ತು. ಅವರು ಏಪ್ರಿಲ್ ಹೊತ್ತಿಗೆ ಡರ್ಬಾನ್‌ಗೆ ಹಿಂದಿರುಗಿ ಸ್ವದೇಶಕ್ಕೆ ಪ್ರಯಾಣ ಮಾಡುವ ಸಿದ್ಧತೆಗಳಲ್ಲಿ ತೊಡಗಿದರು. ಅವರು ಆ ದೇಶಕ್ಕೆ ಬಂದು ಆಗಲೇ ಒಂದು ವರ್ಷವಾಗಿತ್ತು. ಈ ಹೊತ್ತಿಗೆ ಗಾಂಧಿ ಬಗ್ಗೆ ವಿಶೇಷ ಪ್ರೀತಿ ಬೆಳೆಸಿಕೊಂಡಿದ್ದ ಸೇಠ್ ಅಬ್ದುಲ್ಲಾ ಒಂದು ಭವ್ಯ ವಿದಾಯ ಸಮಾರಂಭ ಆಯೋಜಿಸದೆ ಅವರನ್ನು ಬೀಳ್ಕೊಡಲು ಇಷ್ಟಪಡಲಿಲ್ಲ. ಅವರು ಸೈಡನ್‌ಹ್ಯಾಂ ಎಂಬಲ್ಲಿ ಭಾರತೀಯ ಸಮುದಾಯದವರ ಒಂದು ಸಭೆ ಕರೆದು ಗಾಂಧಿಯನ್ನು ಸನ್ಮಾನಿಸಿ ಬೀಳ್ಕೊಡಲು ತೀರ್ಮಾನಿಸಿದರು. ಗಾಂಧಿ ಆ ಸಭೆಗೆ ಬಂದಾಗ ಅಂದಿನ ಸ್ಥಳೀಯ ಪತ್ರಿಕೆಯ ಮುಖಪುಟದಲ್ಲಿ ಪ್ರಕಟವಾಗಿದ್ದ ಸುದ್ದಿಯೊಂದರ ಕಡೆ ಸಭೆಯ ಗಮನ ಸೆಳೆದರು. ಅದು ನೆಟಾಲ್ ಶಾಸನ ಸಭೆಗೆ ನಡೆಯುವ ಚುನಾವಣೆಗಳಲ್ಲಿ ಭಾರತೀಯ ಸಮುದಾಯದವರ ಮತಾಧಿಕಾರವನ್ನು ರದ್ದು ಮಾಡುವ ಮಸೂದೆಯೊಂದು ಸಿದ್ಧವಾಗುತ್ತಿದೆ ಎಂಬ ಸುದ್ದಿಯಾಗಿತ್ತು.

'ನೀವು ಪತ್ರಿಕೆಯನ್ನು ಓದಿಲ್ಲವೇ? ಈ ಸುದ್ದಿಯ ಪರಿಣಾಮದ ಬಗ್ಗೆ ನೀವಾರೂ ಯೋಚಿಸಿಲ್ಲವೇ?' ಎಂದು ಗಾಂಧಿ ಸಭೆಯನ್ನು ಪ್ರಶ್ನಿಸಿದರು. ಅವರೆಲ್ಲ ತಾವು ಅನಕ್ಷರಸ್ಥರಾಗಿದ್ದರಿಂದ ಪತ್ರಿಕೆಯನ್ನು ಓದುತ್ತಿಲ್ಲವೆಂದೂ ಸರಕು ಧಾರಣೆಗಳನ್ನು ಮಾತ್ರ ಯಾರಿಂದಲಾದರೂ ಓದಿಸಿ ತಿಳಿಯುವುದಾಗಿಯೂ ಹೇಳಿದರು. ಜೊತೆಗೆ, ಬಿಳಿಯರ ಸರ್ಕಾರದ ದಬ್ಬಾಳಿಕೆ ತಮ್ಮ ವ್ಯಾಪಾರವನ್ನು ಕ್ರಮೇಣ ಬುಡಮೇಲು ಗೊಳಿಸುತ್ತಿದೆಯೆಂದೂ, ಇದರ ವಿರುದ್ಧ ಹೋರಾಡಲು ತಮ್ಮವರೆನ್ನಬಹುದಾದ

ವಿದ್ಯಾವಂತರ ಮಾರ್ಗದರ್ಶನವಿಲ್ಲವೆಂದೂ ತಮ್ಮ ಕೊರಗನ್ನು ವ್ಯಕ್ತಪಡಿಸಿದರು. ಗಾಂಧಿ ಇಲ್ಲಿಯೇ ಹುಟ್ಟಿ ವಿದ್ಯಾವಂತರಾದ ಭಾರತೀಯರೇ ಇಲ್ಲವೇ? ಎಂದು ಕೇಳಿದರು. ಅದಕ್ಕೆ ಅವರೆಲ್ಲ, ಹಾಗೆ ವಿದ್ಯಾವಂತರಾದವರೆಲ್ಲ ಕ್ರೈಸ್ತರಾಗಿ ಮತಾಂತರ ಹೊಂದಿ ಸರ್ಕಾರದ ಚಾಕರಿ ಮಾಡುತ್ತಿದ್ದಾರೆಂದೂ, ಅವರು ಸರ್ಕಾರದ ಅನ್ಯಾಯಗಳ ವಿರುದ್ಧ ಪ್ರತಿಭಟಿಸಲಾರರೆಂದೂ ಉತ್ತರಿಸಿದರು. ಇದನ್ನು ಕೇಳಿ ಗಾಂಧಿಗೆ ನೋವಾಯಿತು. ಧರ್ಮ ಎಂದರೆ ಇದೇ ಏನು–ನ್ಯಾಯಾನ್ಯಾಯಗಳ ಪರಿವೆ ಕಳೆದುಕೊಳ್ಳುವುದೇ ಏನು– ಎಂದು ಆಶ್ಚರ್ಯ ವ್ಯಕ್ತಪಡಿಸಿದರು. ಆದರೆ ಈಗ ಹೊರಡುವ ಸಮಯದಲ್ಲಿ ಅವರೇನೂ ಮಾಡುವ ಸ್ಥಿತಿಯಲ್ಲಿ ಇರಲಿಲ್ಲ. ಆದರೆ ಗಾಂಧಿ ಕೊನೆಯ ಮಾತಾಗಿ ಹೀಗೆ ಹೇಳಿದರು: 'ಮತಾಧಿಕಾರ ರದ್ದಾದರೆ ಅದು ನಿಮ್ಮ ಅಂತ್ಯದ ಆರಂಭವೆಂದೇ ತಿಳಿಯಿರಿ.'

ಗಾಂಧಿ ಸದ್ಯಕ್ಕೆ ಭಾರತಕ್ಕೆ ಹಿಂದಿರುಗುವುದು ಬೇಡ

ಸಭೆ ಸ್ತಬ್ಧವಾಯಿತು. ಒಂದಿಷ್ಟು ಮೌನದ ನಂತರ ಒಬ್ಬರು ನಿಂತು ಹೇಳಿದರು. 'ಗಾಂಧಿ ಸದ್ಯಕ್ಕೆ ಭಾರತಕ್ಕೆ ಹಿಂದಿರುಗುವುದು ಬೇಡ. ಒಂದು ತಿಂಗಳಾದರೂ ಇಲ್ಲಿದ್ದು ನಮಗೆ ನಾಯಕತ್ವ ಒದಗಿಸಲಿ. ಅವರು ಹೇಳಿದಂತೆ ನಾವು ಕೇಳುತ್ತೇವೆ. ಹೋರಾಡಲು ಸಿದ್ಧವಿದ್ದೇವೆ.' ಆತ ಹಾಗೆ ಹೇಳಿದ್ದೇ ತಡ, ಇಡೀ ಸಭೆ. 'ಹೌದು ಅವರು ಹೋಗುವುದು ಬೇಡ' ಎಂದು ಕೂಗಿತು. ಅವರಲ್ಲಿ ಕೆಲವರು ಸೇಠರಿಗೆ ಗಾಂಧಿ ಮನವೊಲಿಸಲು ಕೇಳಿಕೊಂಡರು. ಸೇಠರಿಗೂ ಅದೇ ಬೇಕಾಗಿತ್ತು. ಅವರೂ ಸಭೆಯ ಒಕ್ಕೊರಲಿನ ದನಿಗೆ ತಮ್ಮ ದನಿಯನ್ನೂ ಸೇರಿಸುತ್ತಾ ಒಂದು ಪ್ರಶ್ನೆ ಕೇಳಿದರು 'ಅವರನ್ನೇನೋ ಇಲ್ಲಿರಿಸಿಕೊಳ್ಳಲು ಒಪ್ಪಿಸೋಣ. ಆದರೆ ಅವರು ವಕೀಲರು. ಅವರ ರುಸುಮಿನ ಪ್ರಶ್ನೆಯನ್ನು ಹೇಗೆ ಬಗೆಹರಿಸುವುದು?'

ಸಭೆಯ ಅಭಿಮಾನದ ಮಾತುಗಳಿಂದ ಭಾವಾವಿಷ್ಟರಾಗಿದ್ದ ಗಾಂಧಿ ಒಂದು ಕ್ಷಣ ಯೋಚಿಸಿ ಹೇಳಿದರು: 'ನಾನು ಇಲ್ಲಿರುವುದಾದರೆ, ನಿಮ್ಮ ಸೇವಕನಾಗಿ ಮಾತ್ರ. ನನಗೆ ಸಂಬಳದ ಗೊಡವೆ ಬೇಡ. ಆದರೆ ಪ್ರಭುತ್ವದ ವಿರುದ್ಧ ಸಂಘಟಿತ ಹೋರಾಟ ಎಂದರೆ ಹಲವು ಬಾಬತ್ತುಗಳ ಹಣದ ಅಗತ್ಯವಿರುತ್ತದೆ. ಅದಕ್ಕಾಗಿ ಸಿದ್ಧತೆ ನಡೆಸಿರಿ. ನಾನು ನಿಮ್ಮೊಂದಿಗಿದ್ದೇನೆ.' ಸಭೆ ಕರತಾಡನ ಮಾಡಿ ಗಾಂಧಿ ಮಾತನ್ನು ಒಪ್ಪಿತು. ಸೇಠ್ ಅಬ್ದುಲ್ಲಾರು 'ಅಲ್ಲಾಹು ದೊಡ್ಡವನು. ಎಲ್ಲವನ್ನೂ ಅವನು ನಡೆಸುವನು' ಎಂದು ಹೇಳುತ್ತಾ ಎಲ್ಲರನ್ನೂ ಊಟಕ್ಕೆ ಎಬ್ಬಿಸಿದರು. ಗಾಂಧಿ ಎಲ್ಲರೂ ಊಟ ಮುಗಿಸಿ ಬೇಗ ಮನೆ ಸೇರಿಕೊಳ್ಳಬೇಕೆಂದೂ ನಾಳೆ ಬೆಳಿಗ್ಗೆಯಿಂದಲೇ ಹೋರಾಟಕ್ಕೆ ಸಿದ್ಧತೆಗಳು ಆರಂಭವಾಗಬೇಕೆಂದು ಸೂಚಿಸುವ ಮೂಲಕ ತಮ್ಮ ಮುಂದಿನ ಹೋರಾಟದ ಆವೇಗದ ಸೂಚನೆಯನ್ನು ನೀಡಿದರು.

■

೭
ಹೋರಾಟಕ್ಕೊಂದು ಹಿನ್ನೆಲೆ

ಗಾಂಧಿ ದ.ಆಫ್ರಿಕಾಕ್ಕೆ ಬಂದಾಗ ನೆಟಾಲ್, ಟ್ರಾನ್ಸ್‌ವಾಲ್, ಆರೆಂಜ್ ಫ್ರೀ ಸ್ಟೇಟ್ ಮತ್ತು ಕೇಪ್ ಆಫ್ ಗುಡ್ ಹೋಪ್ ಕಾಲೋನಿ ಅದರ ನಾಲ್ಕು ಪ್ರಾಂತ್ಯಗಳಾಗಿದ್ದು ಅವುಗಳಲ್ಲಿ ನೆಟಾಲ್ ಮತ್ತು ಕೇಪ್ ಪ್ರಾಂತ್ಯಗಳು ಬ್ರಿಟಿಷ್ ವಸಾಹತುಗಳಾಗಿದ್ದರೆ, ಟ್ರಾನ್ಸ್‌ವಾಲ್ ಮತ್ತು ಆರೆಂಜ್ ಫ್ರೀ ಸ್ಟೇಟ್ ಅಥವಾ ಆರೆಂಜಿಯಾ ಪ್ರಾಂತ್ಯಗಳು ಬೋಯರ್‌ಗಳು ಎಂದು ಕರೆಯಲಾಗುವ ಡಚ್ ಮೂಲದ ಜನರ ಪ್ರಾಧಾನ್ಯವಿರುವ ಸ್ವತಂತ್ರ ಗಣರಾಜ್ಯಗಳಾಗಿದ್ದವು. ಈ ನಾಲ್ಕೂ ಪ್ರಾಂತ್ಯಗಳಲ್ಲಿನ ಮೂಲ ಭಾರತೀಯರ ಸಂಖ್ಯೆ ಒಟ್ಟು ಸುಮಾರು ಒಂದು ಲಕ್ಷವಿತ್ತು. ಇವರಲ್ಲಿ ಆರೆಂಜ್ ಫ್ರೀ ಸ್ಟೇಟ್‌ನಲ್ಲಿ, ಅಲ್ಲಿನ ೧೮೮೯ರ ಶಾಸನದ ಪ್ರಕಾರ ಎಲ್ಲ ಭಾರತೀಯರನ್ನೂ ಸಾಂಕೇತಿಕ ಪರಿಹಾರ ನೀಡಿ ಹೊರಗಟ್ಟಿದ್ದುದರಿಂದಾಗಿ ಅಲ್ಲಿ ಜನಗಣತಿ ಪ್ರಕಾರ ಭಾರತೀಯರ ಸಂಖ್ಯೆ ಕೇವಲ ಕೆಲವು ನೂರರಷ್ಟಿತ್ತು. ಅವರೆಲ್ಲ ಹೆಚ್ಚಾಗಿ ಸಕ್ರಮ ಪ್ರಜೆತನವಿಲ್ಲದ ಹೋಟೆಲ್‌ಗಳ ನೌಕರರಾಗಿದ್ದರು. ಮಿಕ್ಕ ಮೂರು ಪ್ರಾಂತ್ಯಗಳ ಪೈಕಿ ನೆಟಾಲ್‌ನಲ್ಲಿ ಐವತ್ತರಿಂದ ಅರವತ್ತು ಸಾವಿರ, ಕೇಪ್ ಮತ್ತು ಟ್ರಾನ್ಸ್‌ವಾಲ್ ಪ್ರಾಂತ್ಯಗಳಲ್ಲಿ ತಲಾ ಹತ್ತರಿಂದ ಹದಿನೈದು ಸಾವಿರ ಜನ ಭಾರತೀಯರಿದ್ದರು.

ಈ ದೇಶ ಮೂಲತಃ ಕಪ್ಪು ವರ್ಣೀಯ ನೀಗ್ರೋ ಜನಾಂಗದವರ ಆವಾಸಸ್ಥಾನವಾಗಿದ್ದು ಅವರೇ ಅಲ್ಲಿ ಬೃಹತ್ ಪ್ರಮಾಣದಲ್ಲಿ ಬಹುಸಂಖ್ಯಾತರಾಗಿದ್ದರೂ, ಆ ಜನಾಂಗದ ಜನ ಆಧುನಿಕ ನಾಗರೀಕತೆಗಿನ್ನೂ ತೆರೆದುಕೊಂಡಿರಲಿಲ್ಲ. ಆ ಕಾರಣದಿಂದಾಗಿ ವಿದೇಶೀಯರು ಅಲ್ಲಿ ಬಂದು ನೆಲೆಸಿ ಅಲ್ಲಿನ ನೈಸರ್ಗಿಕ ಸಂಪತ್ತನ್ನು ಸೂರೆ ಮಾಡಿ ಆಸ್ತಿವಂತರಾಗಿದ್ದಲ್ಲದೆ ರಾಜಕೀಯ ಅಧಿಕಾರವನ್ನೂ ಸ್ಥಾಪಿಸಿಕೊಂಡು ಮೂಲ ನಿವಾಸಿಗಳ ಮೇಲೆ ದಬ್ಬಾಳಿಕೆಯನ್ನು ನಡೆಸುತ್ತಿದ್ದರು. ಹಾಗೆ ಮೊದಲು–ಅಂದರೆ ಹದಿನಾರನೇ ಶತಮಾನದಲ್ಲಿ–ವಲಸೆ ಬಂದು ಇಲ್ಲಿ ನೆಲೆಸಿದವರೆಂದರೆ ಹಾಲೆಂಡ್‌ನ ಡಚ್ಚರು. ಅವರು ತಮ್ಮ ಪೂರ್ವ ವಸಾಹತುಗಳಾಗಿದ್ದ ಮಲಯಾ, ಜಾವಾ ದೇಶಗಳಿಂದ ಆಳುಗಳನ್ನು ಕರೆತಂದು ವ್ಯವಸಾಯ ಮಾಡಿಕೊಂಡು ಮುಖ್ಯವಾಗಿ ಒಳನಾಡೆನಿಸಿದ ಟ್ರಾನ್ಸ್‌ವಾಲ್ ಮತ್ತು ಆರೆಂಜ್ ಫ್ರೀ ಪ್ರಾಂತ್ಯ ಪ್ರದೇಶಗಳಲ್ಲಿ ನೆಲೆಸಿದ್ದರು. ನಂತರ ೧೭–೧೮ನೇ ಶತಮಾನದಲ್ಲಿ ದೊಡ್ಡ ಸಂಖ್ಯೆಯಲ್ಲಿ ವಲಸೆ ಬಂದ ಇಂಗ್ಲಿಷರು ಹೆಚ್ಚಾಗಿ ದಕ್ಷಿಣ ಮತ್ತು ಪೂರ್ವ ತೀರದ ನೆಟಾಲ್ ಮತ್ತು ಕೇಪ್ ಪ್ರದೇಶದಲ್ಲಿ ನೆಲೆಸಲಾರಂಭಿಸಿ ಅಲ್ಲಿ ಕಬ್ಬು, ಚಹಾ ಮತ್ತು ಕಾಫಿ

ವ್ಯವಸಾಯಕ್ಕೆ ತೊಡಗಿಕೊಂಡರು. ಈ ವ್ಯವಸಾಯಕ್ಕೆ ಆಳುಗಳು ಅಗತ್ಯವಾಗಿದ್ದು, ಸ್ಥಳೀಯ ಕಪ್ಪು ಜನ ವಿವಿಧ ಗುಂಪುಗಳಲ್ಲಿ ತಂತಮ್ಮ ಬುಡಕಟ್ಟುಗಳ ನಾಯಕರ ಅಧೀನದಲ್ಲಿದ್ದು, ಆ ಗುಂಪುಗಳ ನಿರ್ಬಂಧಗಳನ್ನು ಉಲ್ಲಂಘಿಸಿ ಪರದೇಶೀಯರಿಗೆ ಆಳುಗಳಾಗಿ ಕೆಲಸ ಮಾಡಲು ನಿರಾಕರಿಸಿದರು. ಅಲ್ಲದೆ ಈ ಕಪ್ಪು ಜನರ ಜೀವನ ಕ್ರಮದಲ್ಲಿ ವರ್ಷದಲ್ಲಿ ಆರು ತಿಂಗಳು ದುಡಿಮೆ, ಇನ್ನಾರು ತಿಂಗಳು ವಿಶ್ರಾಂತಿ ಎಂಬ ವಾಡಿಕೆ ಇದ್ದುದರಿಂದ ಅವರು ವರ್ಷಪೂರ್ತಿ ದುಡಿಮೆಯ ಜೀವನಕ್ಕೆ ಒಪ್ಪುವವರಾಗಿರಲಿಲ್ಲ.

ಈ ನಿರಾಕರಣೆಗೆ ಇನ್ನೊಂದು ಕಾರಣವೂ ಇತ್ತು. ಅದೆಂದರೆ, ಪಕ್ಕದ ಟ್ರಾನ್ಸ್‌ವಾಲ್ ಪ್ರಾಂತ್ಯದಲ್ಲಿ ಚಿನ್ನ ಹಾಗೂ ವಜ್ರದ ಗಣಿಗಾರಿಕೆ ಆರಂಭವಾಗಿದ್ದು ಅವರೆಲ್ಲರಿಗೆ ಅಲ್ಲಿಗೆ ಕಾರ್ಮಿಕರಾಗಿ ಹೋಗುವುದು ಹೆಚ್ಚು ಲಾಭದಾಯಕವೆನಿಸಿತ್ತು. ಇದರಿಂದಾಗಿ ಈ ಇಂಗ್ಲಿಷ್ ಜನ ೧೮೬೦ರಲ್ಲಿ ತಮ್ಮ ಕಂಪನಿ ಸರ್ಕಾರವಿದ್ದ ಭಾರತದಿಂದ ಆಳುಗಳನ್ನು ಕರೆಸಿಕೊಳ್ಳುವ ಏರ್ಪಾಡು ಮಾಡಿಕೊಂಡರು. ಐದು ವರ್ಷಗಳ ಕರಾರೊಂದರ ಮೇಲೆ ಭಾರತದ ಗ್ರಾಮಾಂತರದಿಂದ ಸಾವಿರಾರು ಜನ ಆಳುಗಳಾಗಿ ಬಂದು ಇಲ್ಲಿ 'ಕೂಲಿ'ಗಳು ಎನಿಸಿಕೊಂಡರು. ಅವರಿಗೆ ಊಟ-ವಸತಿ ಸೌಕರ್ಯಗಳೊಂದಿಗೆ ತಿಂಗಳೊಂದಕ್ಕೆ ಇಷ್ಟೆಂದು ಹಣ ನೀಡುವ ಕರಾರದು. ಐದು ವರ್ಷಗಳ ನಂತರ ಮಾಲೀಕ ಇಷ್ಟಪಟ್ಟರೆ ಕೆಲವು ಬದಲಾವಣೆಗಳೊಂದಿಗೆ ಕರಾರನ್ನು ನವೀಕರಿಸಿಕೊಳ್ಳಬಹುದಿತ್ತು. ಜೊತೆಗೆ ಆಳುಗಳನ್ನು ಆಕರ್ಷಿಸಲು ಕರಾರು ಮುಗಿದ ನಂತರ ಅಲ್ಲೇ ಉಳಿದು ಬದುಕು ಕಟ್ಟಿಕೊಳ್ಳುವ ಆಯ್ಕೆಯೂ ಈ ಕರಾರಲ್ಲಿ ಇತ್ತು. ಕೆಲವರು ಹಾಗೆ ಉಳಿದು ಕ್ರಮೇಣ ಆಸ್ತಿ ಮಾಡಿಕೊಂಡು, ದೊಡ್ಡ ವ್ಯವಸಾಯಗಾರರೂ, ವ್ಯಾಪಾರಿಗಳೂ ಆಗಿ ಸಾಕಷ್ಟು ಶ್ರೀಮಂತರೂ ಆದರು. ಅವರಿಗೆ ರಾಜ್ಯಾಧಿಕಾರದಲ್ಲಿ ಕೆಲವು ಮಾನದಂಡಗಳಿಗನುಗುಣವಾದ-ಇಂತಿಷ್ಟು ಸ್ಥಿರ ಆಸ್ತಿ ಹೊಂದಿ, ಇಂತಿಷ್ಟರ ಮೇಲೆ ವಾರ್ಷಿಕ ತೆರಿಗೆ ಕಟ್ಟುವವರು-ಮತಾಧಿಕಾರವನ್ನೂ ನೀಡಲಾಗಿತ್ತು.

ಭಾರತೀಯರೆಂಬ ಇಲಿ-ಹೆಗ್ಗಣಗಳು

ಆದರೆ ಆ ಮತಾಧಿಕಾರವನ್ನು ವಾಪಸ್ ಪಡೆಯಲು ನೆಟಾಲ್ ಸರ್ಕಾರ ನಿರ್ಧರಿಸಲು ಕಾರಣ ಹೀಗಿತ್ತು: ಸರ್ಕಾರ ಭಾರತೀಯ ಸಮುದಾಯ ನಿಧಾನವಾಗಿ ದೊಡ್ಡದೂ, ಅನೇಕ ದೊಡ್ಡ ವ್ಯವಸಾಯಗಾರರೂ ಮತ್ತು ವ್ಯಾಪಾರಿಗಳನ್ನೂ ಸೃಷ್ಟಿಸಿಕೊಂಡು ಶ್ರೀಮಂತವೂ ಆಗುತ್ತಾ, ಗಾಂಧಿ ಬಂದ ಒಂದು ವರ್ಷದಲ್ಲಿ ಜಾಗೃತವೂ ಆಗುತ್ತಿದ್ದುದನ್ನು ಗಮನಿಸಿತ್ತು. ನಿರ್ದಿಷ್ಟವಾಗಿ ನೆಟಾಲ್‌ನಲ್ಲಿ ಬಿಳಿಯರಷ್ಟೇ ದೊಡ್ಡದಿದ್ದ ಈ ಭಾರತೀಯ ಸಮುದಾಯವು ವ್ಯವಸಾಯ ಮತ್ತು ವ್ಯಾಪಾರ ಕ್ಷೇತ್ರಗಳಲ್ಲಿ ಬಿಳಿಯರಿಗೆ ತೀವ್ರ ಸ್ಪರ್ಧೆ ನೀಡತೊಡಗಿತ್ತು. ಜೊತೆಗೆ ಭಾರತೀಯ ವ್ಯಾಪಾರಿಗಳು ಬಿಳಿಯ ವ್ಯಾಪಾರಿಗಳ ವರ್ತನೆಗೆ ವಿರುದ್ಧವಾಗಿ ನೀಗ್ರೋ ಜನರೊಂದಿಗೆ ಉದಾರವಾಗಿ ವರ್ತಿಸುತ್ತಾ ಬಹುತೇಕ ಆ ಸಮುದಾಯವನ್ನು ತನ್ನ ಗ್ರಾಹಕರನ್ನಾಗಿ ಮಾಡಿಕೊಂಡಿತ್ತು. ಇದು ಬಿಳಿಯ ಸಮುದಾಯದ ಆತಂಕವನ್ನು ಹೆಚ್ಚಿಸಿತ್ತು. ಹೀಗಾಗಿ ಕಪ್ಪುವರ್ಣದ ಮೂಲ ನಿವಾಸಿಗಳ ಜೊತೆ ಸೇರಿದರೆ ತಮ್ಮ ರಾಜ್ಯಾಧಿಕಾರಕ್ಕೆ ಕುತ್ತು ಬರುವ ಕಾಲ

ದೂರವಿಲ್ಲ ಎಂಬ ಆತಂಕ ಅವರನ್ನು ಕಾಡತೊಡಗಿತ್ತು. ಅಲ್ಲಿನ ಪತ್ರಿಕೆಯೊಂದರಲ್ಲಿ ಪ್ರಕಟವಾದ ಪತ್ರವೊಂದರಲ್ಲಿ ಭಾರತೀಯರನ್ನು 'ಎಲ್ಲೆಲ್ಲೂ ಬಿಲಗಳನ್ನು ತೋಡುತ್ತಾ ವಿನಾಶಕಾರಿಯಾಗುತ್ತಿರುವ ಇಲಿ-ಹೆಗ್ಗಣಗಳ ಸೈನ್ಯ' ಎಂದು ಕರೆಯಲಾಗಿತ್ತು.

ಇನ್ನು ಗಾಂಧಿ ಪ್ರಕಾರವೇ, ಬಿಳಿಯರು ಭಾರತೀಯರ ಬಗ್ಗೆ ಅಸಹನೆ ತಾಳಲು, ಅವರನ್ನು ಸಮಾನರೆಂದು ಒಪ್ಪಿಕೊಳ್ಳದಿರಲು ಇತರ ಹಲವು ಕಾರಣಗಳೂ ಇದ್ದಂತಿದ್ದವು. ಅವೆಂದರೆ ಭಾರತೀಯರ ಜೀವನಕ್ರಮದಲ್ಲಿ ಅಂತರ್ಗತವಾಗಿದ್ದ ಇಕ್ಕಟ್ಟಾದ ಬೀದಿಗಳು ಮತ್ತು ಮನೆಗಳ ವಿನ್ಯಾಸ ಮತ್ತು ಅವುಗಳ ಕೊಳಕುತನ, ಹೆಚ್ಚಿನ ಲೌಕಿಕ ಜೀವನಾನುಕೂಲಗಳಿಗಾಗಿ ಖರ್ಚು ಮಾಡದ ಜುಗ್ಗತನ, ಜಾತಿ ಮತಗಳ ತಾರತಮ್ಯಗಳ ನಂಬಿಕೆ ಮತ್ತು ಆಚರಣೆಗಳು, ಅನ್ಯ ಸಮಾಜಗಳೊಂದಿಗೆ ಬೆರೆಯಲು ನಿರಾಕರಿಸುವಂತೆ ಮಾಡುವ ಅವರ ಮತೀಯ ನಿರ್ಬಂಧಗಳು, ಲೌಕಿಕ ಸಾಹಸಗಳಿಗೆಳಸದ ಜಡ ಜೀವನ ದೃಷ್ಟಿ ಇತ್ಯಾದಿ. ಹಾಗಾಗಿಯೇ ಇವರನ್ನೆಲ್ಲ ಸರ್ಕಾರಿ ಶಾಸನಗಳಲ್ಲಿ 'ಏಷ್ಯಾದ ಅನಾಗರಿಕ ಜನಾಂಗಗಳಿಗೆ ಸೇರಿದ ಅರೆ ಕಾಡುಜನ' ಎಂದು ವರ್ಣಿಸಲಾಗಿತ್ತು. ಅದೇನೇ ಇದ್ದರೂ, ಗಾಂಧಿಗೆ ರಾಜ್ಯಾಧಿಕಾರದಲ್ಲಿ ಭಾರತೀಯರಿಗಿದ್ದ ಸೀಮಿತ ಮತಾಧಿಕಾರದ ಪಾಲೂ ಇಲ್ಲವಾದರೆ, ಇಡೀ ಸಮುದಾಯ ಮರ್ಯಾದೆಯ ಬದುಕಿಗೆ ಆರಂಭಿಸಿದ್ದ ಹೋರಾಟ ಆರಂಭದಲ್ಲೇ ಸೋಲನ್ನು ಒಪ್ಪಿಕೊಂಡಂತಾಗುತ್ತದೆ ಎಂದು ಅನಿಸಿತ್ತು. ಹಾಗಾಗಿಯೇ ಅವರು ತಾವು ಅಡಿಗಲ್ಲು ಹಾಕಿದ್ದ ಹೋರಾಟವನ್ನು ಮುಂದುವರೆಸಲು ಸ್ವಲ್ಪ ಕಾಲ ನೆಟಾಲ್‌ನಲ್ಲೇ ಉಳಿಯಲು ನಿರ್ಧರಿಸಲು ಕಾರಣವಾಗಿತ್ತು.

ದ. ಆಫ್ರಿಕಾ ಒಕ್ಕೂಟ ರಚನೆಯ ರಾಜಕಾರಣ

ಹಾಗೆ ನೋಡಿದರೆ ನೆಟಾಲ್‌ನಲ್ಲಿ ಭಾರತೀಯರ ಮತಾಧಿಕಾರವನ್ನು ರದ್ದುಗೊಳಿಸುವ ಬೆಳವಣಿಗೆಯು ನೆಟಾಲ್‌ಗೆ ಸೀಮಿತವಾದ ರಾಜಕೀಯ ಕಾರ್ಯಾಚರಣೆಯಾಗಿರಲಿಲ್ಲ. ಬೋಯರರ ಪ್ರಭುತ್ವವಿದ್ದ ಪ್ರಾಂತ್ಯಗಳಲ್ಲೊಂದಾಗಿದ್ದ ಟ್ರಾನ್ಸ್‌ವಾಲ್‌ನಲ್ಲಿ ಆರಂಭವಾಗಿದ್ದ ಚಿನ್ನ ಮತ್ತು ವಜ್ರಗಳ ಗಣಿಗಾರಿಕೆಯ ಮೇಲೆ ಬ್ರಿಟಿಷ್ ಸಾಮ್ರಾಜ್ಯದ ಕಣ್ಣು ಬಿದ್ದು, ಅದು ಬೋಯರರೊಂದಿಗೆ ನಡೆಸಲಾರಂಭಿಸಿದ್ದ ಸಂಧಾನ ಮತ್ತು ಬಲಪ್ರಯೋಗದ ಬೆದರಿಕೆಗಳ ಒಂದು ಸುಯೋಜಿತ ರಾಜಕೀಯ ಕಾರ್ಯಾಚರಣೆಯ ಭಾಗವಾಗಿತ್ತು. ದ.ಆಫ್ರಿಕಾದ ನಾಲ್ಕು ಪ್ರಾಂತ್ಯಗಳನ್ನೂ ಬ್ರಿಟಿಷ್ ಸಾಮ್ರಾಜ್ಯದ ಪರಮಾಧಿಕಾರದ ಅಡಿಯಲ್ಲಿ ಒಂದು ಒಕ್ಕೂಟ ರಾಷ್ಟ್ರವಾಗಿ ಅಸ್ತಿತ್ವಕ್ಕೆ ತರಲು ಅದು ಹೊಂಚು ಹಾಕಿತ್ತು. ಜಗತ್ತಿನಲ್ಲೇ ಅತಿ ಬಲಿಷ್ಠವಾಗಿದ್ದ ಬ್ರಿಟಿಷ್ ಮಹಾ ಸಾಮ್ರಾಜ್ಯದ ಎದುರು ಯುದ್ಧ ಮಾಡಿ ಹೋರಾಡಲಾಗದ ಬೋಯರ್ ಸಮುದಾಯ ಅಧಿಕಾರ ಹಂಚಿಕೆಯಲ್ಲಿ ಉಚಿತ ಪಾಲಿನ ಷರತ್ತನ್ನು ಒಡ್ಡಿ ಇದಕ್ಕೆ ತನ್ನ ಸಮ್ಮತಿಯನ್ನು ನೀಡಿತ್ತು. ಆದರೆ ಮಹಾ ಸ್ವಾಭಿಮಾನಿಗಳೂ ಒರಟು ಯೋಧಗುಣವುಳ್ಳವರೂ ಆದ ಬೋಯರರ ಕೆಲವು ನಾಯಕರು ಇದಕ್ಕೆ ವಿರೋಧವನ್ನು ದಾಖಲಿಸಿ ಹೋರಾಟಕ್ಕೆ ಸಿದ್ಧತೆಗಳನ್ನೂ ನಡೆಸಿದ್ದರು. ಇದರ ಮಧ್ಯೆಯೇ ಒಕ್ಕೂಟ ರಚನೆಯ ಕಾರ್ಯಾಚರಣೆ ನಡೆದಿದ್ದು, ಅದರ ಭಾಗವಾಗಿಯೇ ನಾಲ್ಕೂ ಪ್ರಾಂತ್ಯಗಳಿಗಾಗಿ ವಿಧ್ಯುಕ್ತ ಶಾಸನಸಭೆಗಳನ್ನು ರಚಿಸಲು ಚುನಾವಣೆಗಳನ್ನು ಘೋಷಿಸಲಾಗಿತ್ತು. ಈ ಒಕ್ಕೂಟ ರಚನೆಯ ಪ್ರಕ್ರಿಯೆಯ

ಭಾಗವಾಗಿಯೇ ಈ ಪ್ರಾಂತ್ಯಗಳ ಬೋಯರರೂ ಸೇರಿದಂತಿದ್ದ ಸ್ಥಳೀಯ ಬಿಳಿಯ ಸಮುದಾಯ ತನಗೆ ಪ್ರತಿಸ್ಪರ್ಧಿಗಳಾಗಿ ಬೆಳೆಯುತ್ತಿದ್ದ ಭಾರತೀಯರೂ ಸೇರಿದಂತೆ ಏಷ್ಯಾದ ಜನಸಮುದಾಯಗಳನ್ನು ಹೊಸ ರಾಜ್ಯಾಧಿಕಾರದಿಂದ ಹೊರಗಿಡುವ ಪ್ರಯತ್ನಕ್ಕೆ ಕೈಹಾಕಿತ್ತು. ಇದರ ಭಾಗವಾಗಿ ನೆಟಾಲ್‌ನಲ್ಲಿ ಮಾತ್ರವಲ್ಲದೆ ಟ್ರಾನ್ಸ್‌ವಾಲ್, ಕೇಪ್ ಪ್ರಾಂತ್ಯ ಮತ್ತು ಆರೆಂಜ್ ಫ್ರೀ ಪ್ರಾಂತ್ಯಗಳಲ್ಲೂ ಏಷಿಯನ್ನರನ್ನು ಸಾರ್ವಜನಿಕ ಜೀವನದ ಮುಖ್ಯ ಪ್ರವಾಹದಿಂದ ಹೊರಗಿಡುವ ಶಾಸನಗಳ ಸಿದ್ಧತೆ ನಡೆದಿದ್ದವು.

ಉದಾಹರಣೆಗೆ, ನೆಟಾಲ್‌ನಲ್ಲಿ ರಾತ್ರಿ ೯ ಘಂಟೆಯ ನಂತರ ಓಡಾಡಬಯಸುವ ಭಾರತೀಯರು ಗುರುತಿನ ಚೀಟಿ ತೋರಿಸಬೇಕಾಗಿತ್ತು. ಆರೆಂಜ್ ಫ್ರೀ ಪ್ರಾಂತ್ಯದಲ್ಲಂತೂ ಭಾರತೀಯರಿಗೆ ಯಾವುದೇ ಆಸ್ತಿ ಹೊಂದುವ, ವ್ಯವಸಾಯ ಅಥವಾ ಬೇರೆ ವೃತ್ತಿ ನಡೆಸುವ ಹಕ್ಕನ್ನು ನಿರಾಕರಿಸಲಾಗಿತ್ತು. ಟ್ರಾನ್ಸ್‌ವಾಲ್‌ನಲ್ಲಿಯೂ ಇದೇ ನಿರ್ಬಂಧಗಳಿದ್ದು, ಅಲ್ಲಿ ಭಾರತೀಯರಿಗೆಂದೇ ಗುರುತಿಸಲ್ಪಟ್ಟ ನಿರ್ಬಂಧಿತ ಪ್ರದೇಶಗಳಲ್ಲಷ್ಟೇ ಅವರು ವಾಸಿಸಬೇಕಿದ್ದು, ಅದಕ್ಕೂ ವರ್ಷಕ್ಕೆ ಮೂರು ಪೌಂಡುಗಳ ತಲೆಗಂದಾಯ ನೀಡಬೇಕಿತ್ತು. ಕೇಪ್‌ಟೌನ್ ಪ್ರಾಂತ್ಯದಲ್ಲಿ ಬೋಯರರ ಬಳುವಳಿಯಾಗಿ ಅಲ್ಲಿನ ಸಕ್ರಮ ಪ್ರಜೆಗಳಾಗಿದ್ದ ಮಲಯಾ ಮೂಲದ ಮುಸ್ಲಿಂ ಸ್ತ್ರೀಯರೊಂದಿಗೆ ಭಾರತೀಯ ಮುಸ್ಲಿಂ ವರ್ತಕ ಸಮುದಾಯ ವಿವಾಹ ಸಂಬಂಧ ಬೆಳೆಸಿಕೊಂಡು ಒಂದು ಮಿಶ್ರ ಸಮುದಾಯ ಸೃಷ್ಟಿಯಾಗಿದ್ದುದರ ಹಿನ್ನೆಲೆಯಲ್ಲಿ ವಾತಾವರಣ ಸ್ವಲ್ಪ ಉದಾರವಾಗಿತ್ತಾದರೂ, ಭಾರತೀಯರು ಪಾದಚಾರಿ ಪಥಗಳಲ್ಲಿ ಓಡಾಡಬಾರದೆಂಬ ನಿಯಮವಿದ್ದು ಹಾಗೆ ಓಡಾಡುವವರನ್ನು ಪೊಲೀಸರು ಒದ್ದು ಹೊರ ಕಳಿಸುವ ರೂಢಿಯಿತ್ತು!

■

೮

ನೆಟಾಲ್‌ನಲ್ಲಿ ಹೋರಾಟ

ಗಾಂಧಿ ನೆಟಾಲ್‌ನಲ್ಲಿ ತಮ್ಮ ಈ ಹೋರಾಟವನ್ನು ಒಂದು ರಾಜಕೀಯ ಬಂಡಾಯದ ರೂಪದಲ್ಲಿ ಆಯೋಜಿಸದೆ, ರಾಜ್ಯಾಧಿಕಾರದ ಕಾನೂನುಗಳು ಯಾವಾಗಲೂ ನ್ಯಾಯಪರವಾಗಿರಬೇಕು ಮತ್ತು ಅವನ್ನು ಒಪ್ಪಿತ ರಾಜ್ಯಾಧಿಕಾರದ ವಿಧಾನಗಳ ಮೂಲಕ ಜಾರಿಗೆ ತರಬೇಕೆಂಬ ತತ್ವದ ಆಧಾರದ ಮೇಲೆ ಕಟ್ಟಲು ನಿರ್ಧರಿಸಿದ್ದರು. ಇದು ಎದುರಾಳಿಯೂ ಒಂದರೆಕ್ಷಣ ಹೌದಲ್ಲವೇ ಎಂದು ತನ್ನ ಆತ್ಮಸಾಕ್ಷಿಯನ್ನು ಕೇಳಿಕೊಳ್ಳುವಂತೆ ಮಾಡುವ ಮಾರ್ಗವಾಗಿತ್ತು. ಮೂಲತಃ ಗಾಂಧಿಯ ವ್ಯಕ್ತಿತ್ವದಲ್ಲಿ ಅಂತರ್ಗತವಾಗಿದ್ದ ಧಾರ್ಮಿಕ ದೃಷ್ಟಿಯಿಂದ ಮೂಡಿದ ಮಾರ್ಗ ಇದಾಗಿತ್ತು. ಹಾಗಾಗಿಯೇ ಗಾಂಧಿಯವರ ಹೋರಾಟದಲ್ಲಿ ಆರಂಭದಿಂದಲೂ ಬಿಳಿಯ ಸಮಾಜದ ಹಲವರು ಪಾಲ್ಗೊಂಡು, ಅದು ಹೋರಾಟಕ್ಕೆ ಸಂಕುಚಿತ ಜನಾಂಗೀಯ ಬಣ್ಣ ಬಳಿಯಲ್ಪಡುವುದನ್ನು ತಪ್ಪಿಸಿತು. ಬದಲಿಗೆ, ಅದೊಂದು ಮಾನವತೆಯನ್ನು ಎತ್ತಿ ಹಿಡಿಯುವ ಹೋರಾಟವೆಂಬ ಅಭಿಪ್ರಾಯ ರೂಢಿಗೊಳ್ಳಲು ಕಾರಣವಾಯಿತು. ಹಾಗಾಗಿಯೇ ಗಾಂಧಿ ಮೊದಲು ಮಾಡಬಯಸಿದ ಕೆಲಸವೆಂದರೆ, ಮತಾಧಿಕಾರವನ್ನು ರದ್ದು ಮಾಡುವ ಮಸೂದೆಯನ್ನು ಶಾಸನಸಭೆಯು ವಿಧ್ಯುಕ್ತವಾಗಿ ಅಂಗೀಕರಿಸುವ ಮುನ್ನ ಅದು ಸಂಬಂಧಪಟ್ಟ ಸಮುದಾಯದ ಅಹವಾಲನ್ನು ಕೇಳಿ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳುವುದು ಶಾಸನಧರ್ಮದ ಅಗತ್ಯವಾಗಿದೆ ಎಂದು ಸೂಚಿಸುವುದಾಗಿತ್ತು.

ಗಾಂಧಿ ಅದಕ್ಕಾಗಿ ಕೂಡಲೇ ಸೇಠ್ ಅಬ್ದುಲ್ಲಾರ ಮನೆಯಲ್ಲಿ ಭಾರತೀಯ ಸಮುದಾಯದ ಎಲ್ಲ ವರ್ಗಗಳಿಂದ ಗೌರವಿಸಲ್ಪಡುತ್ತಿದ್ದ ಹಾಜಿ ಮೊಹಮ್ಮದ್ ಅವರ ಅಧ್ಯಕ್ಷತೆಯಲ್ಲಿ ಸಭೆ ಕರೆದರು. ಗಾಂಧಿಯವರ ಹಿಂದಿನ ದಿನದ ಮಾತು ಕೆಲಸ ಮಾಡಿತ್ತು. ಸಭೆಗೆ ಸಾಕಷ್ಟು ಜನ ವಿದ್ಯಾವಂತ ಕ್ರೈಸ್ತ ಭಾರತೀಯರು ಉತ್ಸಾಹದಿಂದ ಬಂದಿದ್ದರು. ಇವರ ಜೊತೆಗೆ ಪಾರ್ಸಿಗಳೂ, ಹಿಂದೂ ಕೂಲಿಕಾರರೂ ಬಂದು ಒಟ್ಟಿಗೆ ಕೂತಿದ್ದರು. ಗಾಂಧಿಯವರ ಸಲಹೆಯನ್ನು ಒಪ್ಪಿದ ಸಭೆ ಮಸೂದೆಯ ಮೇಲಿನ ನಿರ್ಣಾಯಕ ಚರ್ಚೆಯನ್ನು ಮುಂದೂಡುವಂತೆ ಕೋರಿ ಶಾಸನ ಸಭೆಯ ಅಧ್ಯಕ್ಷರಿಗೆ ಒಂದು ತಾರು ಕಳಿಸಿತು. ಅಧ್ಯಕ್ಷರು ಕೂಡಲೇ ಚರ್ಚೆಯನ್ನು ಎರಡು ದಿನಗಳ ಮಟ್ಟಿಗೆ ಮುಂದೂಡಿರುವುದಾಗಿ ತಾರಿನ ಮೂಲಕ ತಿಳಿಸಿದರು. ಇದು ಹೋರಾಟಕ್ಕೆ ಅದರ ಆರಂಭದಲ್ಲೇ ಸಿಕ್ಕ ಮೊದಲ ಜಯವಾಗಿತ್ತು. ನಂತರ ಶಾಸನ ಸಭೆಗೆ ಸಮುದಾಯದ ಅಹವಾಲನ್ನು ವಿವರಿಸುವ ಪತ್ರವನ್ನು ಸಿದ್ಧಪಡಿಸಲಾಯಿತು. ದ.ಆಫ್ರಿಕಾದ

ಭಾರತೀಯರೂ ಮೂಲತಃ ಭಾರತದ ಬ್ರಿಟಿಷ್ ಸರ್ಕಾರದ ಪ್ರಜೆಗಳೇ ಆಗಿರುವುದರಿಂದ ಅವರಿಗಿರುವ ಹಕ್ಕುಗಳೇ ಇಲ್ಲಿನವರಿಗೂ ಅನ್ವಯವಾಗುವುದೇ ನ್ಯಾಯ ಎಂಬುದೇ ಆ ಪತ್ರದ ಮುಖ್ಯ ವಾದವಾಗಿತ್ತು. ಅದಕ್ಕೆ ಆದಷ್ಟೂ ಹೆಚ್ಚು ಭಾರತೀಯರ ಸಹಿ ಹಾಕಿಸಲು, ಗಾಂಧಿ ಸ್ವಯಂಸೇವಕರ ಒಂದು ದಂಡನ್ನೇ ರಚಿಸಿದರು. ಅವರು ಒಂದೇ ದಿನದಲ್ಲಿ ಸಾವಿರಾರು ಜನರ ಸಹಿ ಹಾಕಿಸಿಕೊಂಡು ಬಂದರು. ನಂತರ ಒಟ್ಟು ಎಂಟು ಸಾವಿರಕ್ಕೂ ಹೆಚ್ಚು ಭಾರತೀಯರ ಸಹಿಗಳ ಲಗತ್ತಿನೊಂದಿಗೆ ಅದನ್ನು ಶಾಸನ ಸಭಾಧ್ಯಕ್ಷರಿಗೆ ಕಳಿಸಿಕೊಡಲಾಯಿತು.

'ನೆಟಾಲ್ ಇಂಡಿಯನ್ ಕಾಂಗ್ರೆಸ್' ಸ್ಥಾಪನೆ

ಭಾರತೀಯ ಸಮುದಾಯದಲ್ಲಿ ಇದ್ದಕ್ಕಿದ್ದಂತೆ ವಿದ್ಯುತ್‌ಸಂಚಾರವಾದಂತಾಗಿತ್ತು. ಸಮುದಾಯ ಈಗ ಗಾಂಧಿ ಭಾರತಕ್ಕೆ ಮರಳದೆ ಅಲ್ಲಿಯೇ ನೆಲೆಸುವಂತೆ ಒತ್ತಾಯ ಆರಂಭಿಸಿತು. ಗಾಂಧಿಗೂ ತಾವು ಆರಂಭಿಸಿದ್ದ ಹೋರಾಟವನ್ನು ಅಲ್ಲಿಗೇ ಬಿಟ್ಟುಹೋಗುವ ಮನಸ್ಸಾಗಲಿಲ್ಲ. ಕಾರಣ, ಆ ಹೋರಾಟ ಹೊರಗೆ ದ.ಆಫ್ರಿಕಾದ ಭಾರತೀಯರ ಪರ ಹೋರಾಟವಾಗಿದ್ದರೂ, ಒಳಗೆ ಅದು ಗಾಂಧಿ ವ್ಯಕ್ತಿತ್ವ ನಿರ್ಣಾಯಕ ರೂಪು ತಳೆಯಲು ನಡೆದಿದ್ದ ಮಾನವತೆಯ ಅರ್ಥದ ಅನ್ವೇಷಣೆಯ ಪ್ರಯತ್ನವೂ ಆಗಿತ್ತು. ಗಾಂಧಿ ತಾವು ಅಲ್ಲಿಯೇ ಕುಟುಂಬದೊಂದಿಗೇ ಉಳಿಯಲು ಅಗತ್ಯವಾದ ಹಣವೆಷ್ಟೆಂದು ಲೆಕ್ಕ ಹಾಕಿ ಆ ಮುನ್ನೂರು ಪೌಂಡುಗಳ ಆದಾಯವನ್ನು ಖಚಿತಪಡಿಸುವುದಾದರೆ ತಾವು ಭಾರತದಿಂದ ತಮ್ಮ ಕುಟುಂಬವನ್ನು ಕರೆದುಕೊಂಡು ಬಂದು ಇಲ್ಲಿಯೇ ನೆಲೆಸುವುದಾಗಿ ಹೇಳಿದರು. ಜನ ಅವರ ಸಾರ್ವಜನಿಕ ಸೇವೆಗೆ ಇದೇನೂ ದೊಡ್ಡ ಮೊತ್ತ ಅಲ್ಲವೇ ಅಲ್ಲ ಎಂದು ಹೇಳಿ ಒಪ್ಪಿತು. ಆದರೆ ಗಾಂಧಿ ತಾವು ಕೇಳುತ್ತಿರುವುದು ಸೇವಾ ಶುಲ್ಕವಲ್ಲವೆಂದೂ, ಸಾರ್ವಜನಿಕ ಸೇವೆಗೆ ಶುಲ್ಕ ತೆಗೆದುಕೊಳ್ಳುವುದು ಅನೀತಿಯುತವೆಂದೂ ಸೂಚಿಸುತ್ತಾ, ತಾವು ಅಲ್ಲಿ ವಕೀಲರಾಗಿ ಕೆಲಸ ಮಾಡಲು ಇಚ್ಛಿಸಿರುವುದಾಗಿಯೂ, ವರ್ಷಕ್ಕೆ ಮುನ್ನೂರು ಪೌಂಡಿನಷ್ಟು ವಕೀಲ ಶುಲ್ಕ ದೊರೆಯುವಷ್ಟು ಮೊಕದ್ದಮೆಗಳನ್ನು ಭಾರತೀಯ ಸಮುದಾಯ ತನಗೆ ನೀಡಬೇಕಾಗುತ್ತದೆ ಎಂದು ವಿವರಿಸಿದರು. ಕೂಡಲೇ ಸೇಠ್ ಅಬ್ದುಲ್ಲಾ ಸೇರಿದಂತೆ ಹಲವು ವರ್ತಕರು ತಮ್ಮ ಮೊಕದ್ದಮೆಗಳನ್ನು ಗಾಂಧಿಗೇ ವಹಿಸುವುದಾಗಿ ಮಾತು ಕೊಟ್ಟರು.

ಗಾಂಧಿಯ ನಂತರದ ಮುಖ್ಯ ಕೆಲಸ ಭಾರತೀಯ ಸಮುದಾಯವನ್ನು ಒಂದು ನಿಯಮಿತ ಸಂಘಟನೆಯಾಗಿ ರೂಪಿಸುವುದಾಗಿತ್ತು. ಅದಕ್ಕಾಗಿ ಅವರು ೧೮೯೪ರ ಆಗಸ್ಟ್‌ನಲ್ಲಿ 'ನೆಟಾಲ್ ಇಂಡಿಯನ್ ಕಾಂಗ್ರೆಸ್' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಅದಕ್ಕೆ ವಿವಿಧ ಸ್ತರಗಳ ಚಂದಾ ಮತ್ತು ದೇಣಿಗೆಗಳ ನಿಯಮ ರೂಪಿಸಲಾಯಿತು. ಅಬ್ದುಲ್ಲಾ ಹಾಜಿ ಅದಂ ಮಿಂಯಾ ಖಾನ್ ಎಂಬ ಡರ್ಬಾನ್‌ನ ಹಿರಿಯ ವರ್ತಕರೊಬ್ಬರು ಅಧ್ಯಕ್ಷರಾದರೆ, ಗಾಂಧಿಯೇ ಅದರ ಕಾರ್ಯದರ್ಶಿಯಾದರು. ಈ ಸಂಘಟನೆ ಈವರೆಗೆ ಹೆಚ್ಚೂಕಡಿಮೆ ಮೂಕವಾಗಿದ್ದ ಸಮುದಾಯದ ಮಧ್ಯೆ ಮಾತು, ವಿಚಾರ, ಚರ್ಚೆಗಳ ಸಂಸ್ಕೃತಿಯನ್ನು ಹುಟ್ಟು ಹಾಕಿತು. ಪರಸ್ಪರ ಸಂಪರ್ಕಗಳ ಒಂದು

ದೊಡ್ಡ ಜಾಲ ನಿರ್ಮಿತವಾಯಿತು. ಈಗ ಈ ಸಂಘಟನೆ ತನ್ನ ಸಮಸ್ಯೆಗಳನ್ನು ಹೊರ ಜಗತ್ತಿಗೆ ತಿಳಿಸುವ ಆತ್ಮಸ್ಥೈರ್ಯವನ್ನೂ, ವಿಶ್ವಾಸವನ್ನೂ ಗಳಿಸಿಕೊಂಡಿತು. ಭಾರತ ಮತ್ತು ಭಾರತೀಯರು ವಲಸೆ ಹೋಗಿ ನೆಲೆಸಿದ್ದ ಹಲವು ದೇಶಗಳಿಗೆ ಸಂಘಟನೆಯ ಸಂದೇಶ ರವಾನೆಯಾಯಿತು.

ಈ ಎಲ್ಲ ಬೆಳವಣಿಗೆಗಳ ಮಧ್ಯೆ ೧೮೯೪ರ ಸೆಪ್ಟೆಂಬರ್‌ನಲ್ಲಿ ಗಾಂಧಿ ನೇಟಾಲ್ ಸರ್ವೋಚ್ಚ ನ್ಯಾಯಾಲಯದಲ್ಲಿ ವಕೀಲರಾಗಿ ನೋಂದಣಿ ಮಾಡಿಸಿಕೊಳ್ಳಲು ಅರ್ಜಿ ಸಲ್ಲಿಸಿದರು. ಇದನ್ನು ಅರಿತ ಕೆಲ ಬಿಳಿಯ ವಕೀಲರು ನೇಟಾಲ್ ಗಣರಾಜ್ಯದಲ್ಲಿ ವರ್ಣೀಯರು ವಕೀಲಿ ನಡೆಸಲು ಅವಕಾಶ ಕೊಡುವ ಕಾನೂನು ಇಲ್ಲವೆಂದು ಅದರ ವಿರುದ್ಧ ತಕರಾರು ತೆಗೆದರು. ಜೊತೆಗೆ ವರ್ಣೀಯ ವಕೀಲರಿಗೆ ಅವಕಾಶವಾದರೆ ಅವರ ಸಂಖ್ಯೆ ಹೆಚ್ಚುತ್ತಾ ಹೋಗಿ ಒಂದು ದಿವಸ ಬಿಳಿಯರ ಹಿತಾಸಕ್ತಿಗಳನ್ನು ಕಾನೂನಾತ್ಮಕವಾಗಿ ರಕ್ಷಿಸುವ ವಾತಾವರಣ ಸಂಕುಚಿತವಾಗುತ್ತದೆ ಎಂಬ ಆತಂಕದ ಸುದ್ದಿಯನ್ನೂ ಹಬ್ಬಿಸಿದರು. ಆದರೆ ಗಾಂಧಿ ತಾವು ಇಂಗ್ಲೆಂಡ್‌ನಲ್ಲಿ ಬ್ಯಾರಿಸ್ಟರ್ ಪದವಿ ಪಡೆದು ಭಾರತದ ಬ್ರಿಟಿಷ್ ಪ್ರಭುತ್ವದ ನ್ಯಾಯಾಲಯಗಳ ಸನ್ನದು ಪಡೆದಿರುವ ವಕೀಲನಾಗಿರುವುದರಿಂದ ಬ್ರಿಟಿಷರದ್ದೇ ಇನ್ನೊಂದು ರಾಜ್ಯವಾಗಿರುವ ನೇಟಾಲ್‌ನ ನ್ಯಾಯಾಲಯದಲ್ಲಿ ವಕೀಲನಾಗುವ ಸಹಜ ಅರ್ಹತೆ ಹೊಂದಿರುವುದಾಗಿ ಅಲ್ಲಿನ ನ್ಯಾಯಾಂಗ ಅಧಿಕಾರಿಗಳನ್ನು ಭೇಟಿ ಮಾಡಿ ವಿವರಿಸಿದರು. ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಅವರ ವಾದವನ್ನು ಒಪ್ಪಿ ಗಾಂಧಿಗೆ ಅಲ್ಲಿ ವಕೀಲಿಕೆ ಮಾಡಲು ಒಪ್ಪಿಗೆ ನೀಡಿದರು. ವಕೀಲರಾಗಿ ಪ್ರಮಾಣವಚನ ಸ್ವೀಕಾರ ಮಾಡುವ ಮುನ್ನ ತಮ್ಮ ಗುಜರಾತಿ ರುಮಾಲನ್ನು ತೆಗೆಯುವಂತೆ ನ್ಯಾಯಾಧೀಶರು ಗಾಂಧಿಗೆ ಸೂಚಿಸಿದರು. ಆ ನ್ಯಾಯಾಲಯದ ವಕೀಲನಾಗಿ ಅದರ ನಿಬಂಧನೆಗಳನ್ನು ಒಪ್ಪಿದ್ದರ ಸಂಕೇತವಾಗಿ ಅವರು ತಮ್ಮ ರುಮಾಲನ್ನು ತೆಗೆದಿರಿಸಿದರು.

ನೇಟಾಲ್ ಕಾಂಗ್ರೆಸ್ ಸಂಘಟನೆಗಾಗಿ ಪ್ರವಾಸ-ದೇಣಿಗೆ ಸಂಗ್ರಹಣೆ

ಗಾಂಧಿ 'ನೇಟಾಲ್ ಇಂಡಿಯನ್ ಕಾಂಗ್ರೆಸ್'ನ ಸದಸ್ಯತ್ವ ಮತ್ತು ದೇಣಿಗೆ ಸಂಗ್ರಹಣೆಗಾಗಿ ೧೮೯೫ರಲ್ಲಿ ನೇಟಾಲ್‌ನ ವ್ಯಾಪಕ ಪ್ರವಾಸ ಮಾಡಿದರು. ಆ ಸಂದರ್ಭದಲ್ಲಿ ಗದ್ದೆ ತೋಟಗಳಲ್ಲಿ ಕೆಲಸ ಮಾಡುತ್ತಿದ್ದ ಕೂಲಿ ಕಾರ್ಮಿಕರನ್ನು ಕಂಡು ಅವರ ಸಮಸ್ಯೆಗಳನ್ನು ಆಲಿಸಿದರು ಮತ್ತು ಅವರನ್ನುದ್ದೇಶಿಸಿ ಮಾತನಾಡಿದರು. ಸಾಕಷ್ಟು ಸದಸ್ಯತ್ವ ಮತ್ತು ದೇಣಿಗೆ ದೊರಕಿತು. ಮೊದಮೊದಲು ಪೊಲೀಸರ ಭಯದಿಂದ ಕಾರ್ಮಿಕರು ಗಾಂಧಿ ಮಾತುಗಳಿಗೆ ಸ್ಪಂದಿಸಲು ಹಿಂಜರಿದರಾದರೂ ನಂತರ ತಮ್ಮೊಡನೆ ಸಮಾನತೆಯಿಂದ ವರ್ತಿಸುವ ಗಾಂಧಿಯ ಸಾತ್ವಿಕ ವರ್ತನೆಗಳಿಗೆ ಮಣಿದರು. ಒಂದೆಡೆಯಂತೂ ಗಾಂಧಿ ಕೈಲಾದ ದೇಣಿಗೆಯ ಹಣ ನೀಡುವವರೆಗೂ ತಾವಾಗಲೀ ತಮ್ಮೊಂದಿಗೆ ಬಂದಿರುವ ಕಾಂಗ್ರೆಸ್‌ನ ಇತರ ಪದಾಧಿಕಾರಿಗಳಗಲೀ ಊಟ ಮಾಡುವುದಿಲ್ಲವೆಂದು ಹೇಳಿ ತಮ್ಮ ಪೇಟವನ್ನು ತೆಗೆದು ಕಾರ್ಮಿಕರ ಪದತಲದಲ್ಲಿಟ್ಟು ಕೂತುಬಿಟ್ಟರು. ನಂತರದಲ್ಲಿ ಪೇಟದೊಳಕ್ಕೆ ಹಣ ಬೀಳಲಾರಂಭಿಸಿತು. ಇದನ್ನೆಲ್ಲ ಗಮನಿಸಿದ ಗುಪ್ತಚರ ಪೊಲೀಸರು ಗಾಂಧಿಗೆ ಬೆಂಬಲ ಅಷ್ಟಕ್ಕಷ್ಟೇ ಇದ್ದು ಅವರ

ಕಾರ್ಯಾಚರಣೆಯನ್ನು ಹೆಚ್ಚು ಕಷ್ಟವಿಲ್ಲದೆ ದಮನ ಮಾಡಬಹುದೆಂದು ವರದಿ ಮಾಡಿದರು. ಅದೇನೇ ಇರಲಿ, ನೆಟಾಲ್ ಕಾಂಗ್ರೆಸ್‌ನ ಶಾಖೆಗಳು ಮಾರಿಟ್ಜ್‌ಬರ್ಗ್, ಡಂಡೀ, ನ್ಯೂಕ್ಯಾಸಲ್, ಚಾರ್ಲ್ಸ್‌ಟೌನ್ ಮುಂತಾದಡೆಗಳಲ್ಲಿ ಆರಂಭವಾಗಿ ಅದರ ಚಟುವಟಿಕೆಗಳ ವ್ಯಾಪ್ತಿ ವಿಸ್ತಾರಗೊಳ್ಳುತ್ತಾ ಹೋಯಿತು. ಈ ಪ್ರಕ್ರಿಯೆಯಲ್ಲಿ ಗಾಂಧಿಗೆ ತಾವು ಆರಂಭಿಸಿದ ಹೋರಾಟದ ಅಂತ್ಯದವರೆಗೂ ತಮ್ಮೊಡನೆ ಇದ್ದ ಮತ್ತೊಬ್ಬ ದೊಡ್ಡ ಅಭಿಮಾನಿ ಸಿಕ್ಕರು. ಅವರೆಂದರೆ, ಡರ್ಬಾನ್‌ನಲ್ಲಿ ದೊಡ್ಡ ವ್ಯಾಪಾರಿಯಾಗಿದ್ದ ಪಾರ್ಸಿ ರುಸ್ತುಂಜಿ.

ನೆಟಾಲ್‌ನ ನಿಜಸ್ಥಿತಿಯನ್ನು ಇಂಗ್ಲೆಂಡ್ ಮತ್ತು ಭಾರತದ ಸರ್ಕಾರ ಮತ್ತು ಜನತೆಗೆ ತಿಳಿಸಲು ಗಾಂಧಿ 'ದ.ಆಫ್ರಿಕಾದಲ್ಲಿರುವ ಪ್ರತಿಯೊಬ್ಬ ಆಂಗ್ಲನಿಗೂ ಮನವಿ' ಮತ್ತು 'ಭಾರತೀಯರ ಮತಾಧಿಕಾರ: ಒಂದು ಬಿನ್ನಹ' ಎಂಬ ಎರಡು ಕಿರುಪುಸ್ತಕಗಳನ್ನು ಬರೆದು ಪ್ರಕಟಿಸಿದರು. ಇದರಿಂದಾಗಿ ನೆಟಾಲ್ ಇಂಡಿಯನ್ ಕಾಂಗ್ರೆಸ್ ಸ್ಥಾಪನೆ ಒಂದು ಅಂತಾರಾಷ್ಟ್ರೀಯ ಸುದ್ದಿಯಾಗಿ ಎಲ್ಲಡೆ ಪ್ರಜ್ಞಾವಂತರ ಗಮನ ಸೆಳೆಯುವಂತಾಯಿತು. ಗಾಂಧಿ ಇವುಗಳನ್ನು ಲಂಡನ್‌ನ ಬ್ರಿಟಿಷ್ ಸಾಮ್ರಾಜ್ಯದ ಸಚಿವರುಗಳಿಗೂ ಕಳಿಸಿದರು. ಆವರೆಗೆ ನೆಟಾಲ್ ಭಾರತೀಯರ ಸಮಸ್ಯೆಯನ್ನು ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಮನವಿಗಳ ಜೊತೆ ಸೇರಿಸಿಕೊಂಡು ಆ ಬಗ್ಗೆ ಹೆಚ್ಚು ಗಮನವೀಯದಿದ್ದ ಸರ್ಕಾರ ಈಗ ಎಚ್ಚೆತ್ತುಕೊಂಡಿತು. ಅದರ ವಸಾಹತುಗಳ ಕಾರ್ಯದರ್ಶಿ ನೆಟಾಲ್ ಸರ್ಕಾರಕ್ಕೆ, ಮತಾಧಿಕಾರ ರದ್ಧತಿಯ ಮಸೂದೆಯನ್ನು ಅನುಮೋದಿಸುವ ಮುನ್ನ ಸಾಮ್ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ನಿರ್ಧಾರ ಕೈಗೊಳ್ಳಬೇಕೆಂದು ಸೂಚಿಸಿ ಕೆಲವು ಸ್ಪಷ್ಟೀಕರಣಗಳನ್ನು ಕೇಳಿತು. ಇದಕ್ಕೆ ಬ್ರಿಟನ್‌ನಲ್ಲಿ ಉದಾರವಾದಿಗಳೂ ಇದ್ದ ಸಮ್ಮಿಶ್ರ ಸರ್ಕಾರವೊಂದು ಆಗ ಅಧಿಕಾರಕ್ಕೆ ಬಂದಿದ್ದುದೂ ಕಾರಣವಾಗಿತ್ತು. ಆದರೆ ಇದಕ್ಕೆ ಉತ್ತರವಾಗಿ ನೆಟಾಲ್ ಸರ್ಕಾರ, ಇದೊಂದು ಗಾಂಧಿ ಎಂಬ (ಪಾರ್ಸಿ?) ವಕೀಲನೊಬ್ಬ ಎಬ್ಬಿಸಿರುವ ಗುಲ್ಲೆಂದೂ, ಅದಕ್ಕೆ ಯಾರ ಬೆಂಬಲವೂ ಇಲ್ಲದಿರುವುದರಿಂದ ಅದನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿಲ್ಲವೆಂದೂ ಉತ್ತರಿಸಿತು. ಆದರೆ ಇದನ್ನೊಪ್ಪದ ಬ್ರಿಟಿಷ್ ಸರ್ಕಾರ, ಬ್ರಿಟನ್ ಸಂಸತ್ತಿಗೆ ದಾದಾಭಾಯಿ ನವರೋಜಿಯವರಂತಹ ಭಾರತೀಯರು ಆಯ್ಕೆಯಾಗಿ ಬಿಳಿಯರೊಂದಿಗೆ ಸಮ ಸಮವಾಗಿ ಶಾಸನ ರೂಪಿಸುವ ಚಟುವಟಿಕೆಗಳಲ್ಲಿ ಭಾಗವಹಿಸುವಂತಾಗಿರುವ ಈ ಕಾಲದಲ್ಲಿ ನೆಟಾಲ್‌ನ ಭಾರತೀಯರ ಮತಾಧಿಕಾರವನ್ನು ಕಸಿಯುವ ಕ್ರಮ ವಿವೇಕಯುತವಾದುದಲ್ಲವೆಂದು ಹೇಳಿ, ಸಮಸ್ಯೆಯನ್ನು ಬಗೆಹರಿಸುವ ಸಮಾಧಾನಕರ ಮಾರ್ಗಗಳನ್ನು ಹುಡುಕಬೇಕೆಂದು ಸಲಹೆ ಮಾಡಿತು.

ಈ ಮಧ್ಯೆ ನೆಟಾಲ್‌ನ ಬಿಳಿಯರ ಸಂಘಟನೆಗಳು ಮತ್ತು ಪತ್ರಿಕೆಗಳು ಭಾರತೀಯರಿಗೆ ಮತಾಧಿಕಾರವೂ ಸೇರಿದಂತೆ ಹೆಚ್ಚಿನ ನಾಗರಿಕ ಹಕ್ಕು ಸೌಲಭ್ಯಗಳನ್ನು ನೀಡುವುದು ನೆಟಾಲಿಗರ ಸಮಾಜದ ಶಾಂತಿ ಮತ್ತು ಸ್ಥಿರತೆಯನ್ನು ಕೆಡಿಸುವುದಕ್ಕೆ ದಾರಿ ಮಾಡಿಕೊಡುತ್ತದೆ ಎಂದು ಸರ್ಕಾರವನ್ನು ಎಚ್ಚರಿಸುತ್ತಲೇ ಇದ್ದವು. ಬಿಳಿಯರಿಗೆ ನಾಗರಿಕ ಮಾನದಂಡಗಳಲ್ಲಿ ಯಾವುದರಲ್ಲೂ ಸಮಾನರಲ್ಲದ ಭಾರತೀಯರಿಗೆ ಸಮಾನತೆಯ ಉಸಾಬರಿ ಕೂಡದು ಎಂಬುದು ಅವರೆಲ್ಲರ ವಾದವಾಗಿತ್ತು. ಗಾಂಧಿ ಇದಕ್ಕೆಲ್ಲ ಉತ್ತರಿಸಿ,

ಭಾರತೀಯರು ನಾಗರಿಕ ಮಾನದಂಡಗಳ ಪ್ರಕಾರವಷ್ಟೇ ಸಮಾನತೆ ಕೇಳುತ್ತಿರುವುದೆಂದು ಹೇಳುತ್ತಾ, ಉದಾಹರಣೆಯಾಗಿ ಈ ಮಾನದಂಡಗಳ ಪ್ರಕಾರ ನೆಟಾಲ್‌ನ ಅರ್ಹ ಹತ್ತು ಸಾವಿರ ಮತದಾರರ ಪೈಕಿ ಭಾರತೀಯರ ಸಂಖ್ಯೆ ಇನ್ನೂರೈವತ್ತನ್ನು ಮೀರುವುದಿಲ್ಲ ಎಂದು ಸೂಚಿಸಿದರು. ಹೀಗಿರುವಾಗ ಭಾರತೀಯರೋ, ಏಷಿಯನ್ನರೋ ಬಿಳಿಯರ ಸಮಾಜವನ್ನು ಅಸ್ಥಿರಗೊಳಿಸುವರು ಎಂಬ ಭೀತಿ ಆಧಾರವಿಲ್ಲದ್ದು ಎಂದು ವಿವರಿಸಿದರು.

ಬಾಲಸುಂದರಂ ಪ್ರಕರಣ–ಹೆಚ್ಚಿದ ಗಾಂಧಿ ಜನಪ್ರಿಯತೆ

ನೆಟಾಲ್ ಕಾಂಗ್ರೆಸ್ ತನ್ನ ಅಂಗಸಂಸ್ಥೆಯಾಗಿ ಸ್ಥಾಪಿಸಿಕೊಂಡ 'ವಸಾಹತಿನಲ್ಲಿ ಹುಟ್ಟಿದ ಭಾರತೀಯರ ವಿದ್ಯಾಸಂಸ್ಥೆ'ಯು ಅನಕ್ಷರಸ್ಥರಲ್ಲಿ ವಿಚಾರ–ವಿವೇಚನೆಯನ್ನು ಉದ್ದೀಪಿಸುವ, ಚರ್ಚೆಗಳಲ್ಲಿ ಪಾಲ್ಗೊಳ್ಳುವಂತೆ ಅವರನ್ನು ಸಜ್ಜುಗೊಳಿಸುವ ವೇದಿಕೆಯಾಗಿ ಬೆಳೆಯಿತು. ಇದರ ಫಲ ಎಂಬಂತೆ ಬಾಲಸುಂದರಂ ಎಂಬ ಚಿಂದಿ ಬಟ್ಟೆಯ ಕರಾರು ಕೂಲಿಯೊಬ್ಬ ಒಂದು ದಿನ ರಕ್ತ ಸೋರುತ್ತಿದ್ದ ಬಾಯಿಯೊಂದಿಗೆ ಗಾಂಧಿಯ ಬಳಿ ಬಂದ. ಅವನನ್ನು ಅವನ ಮಾಲೀಕ ಯಾವುದೋ ವಿಷಯವಾಗಿ ಕೋಪಿಷ್ಠನಾಗಿ ಹೊಡೆದ ಏಟಿಗೆ ಅವನ ಎರಡು ಹಲ್ಲುಗಳು ಉದುರಿ ಹೋಗಿದ್ದವು. ತಕ್ಷಣ ಗಾಂಧಿ ಅವನನ್ನು ತನಗೆ ಪರಿಚಯವಿದ್ದ ವೈದ್ಯರ ಬಳಿ ಒಯ್ದು ಚಿಕಿತ್ಸೆ ಕೊಡಿಸಿ, ವೈದ್ಯರಿಂದ ಗಾಯದ ಬಗ್ಗೆ ಒಂದು ಪ್ರಮಾಣ ಪತ್ರವನ್ನು ಪಡೆದರು. ನಂತರ ಅವನ ಮಾಲೀಕನ ಬಳಿ ಹೋಗಿ, ನಿಮ್ಮ ಮೇಲೆ ಮೊಕದ್ದಮೆ ಹೂಡಿ ನಿಮಗೆ ಶಿಕ್ಷೆ ಕೊಡಿಸುವ ಇರಾದೆ ಇಲ್ಲ. ನೀವು ನಿಮ್ಮ ಕೂಲಿಕಾರನನ್ನು ಬೇಷರತ್ತಾಗಿ ಕರಾರಿನಿಂದ ಮುಕ್ತಗೊಳಿಸಿದರೆ ಸಾಕು ಎಂದರು. ಅದಕ್ಕೆ ಅವನು ಒಪ್ಪಿದ ಕೂಡಲೇ ಗಾಂಧಿ ತಮ್ಮ ಪರಿಚಿತರೊಬ್ಬರ ಮೂಲಕ ಇನ್ನೊಬ್ಬ ಮಾಲೀಕರನ್ನು ಭೇಟಿ ಮಾಡಿ ಬಾಲಸುಂದರಂನನ್ನು ಅವನಿಗೆ ಒಪ್ಪಿಸಿದರು.

ಬಾಲಸುಂದರಂ ಪ್ರಕರಣ ಕೂಲಿ ಭಾರತೀಯರಲ್ಲಿ ಸುದ್ದಿಯಾಗಿ ಹಬ್ಬಿ ಗಾಂಧಿ ಆ ಸಮುದಾಯದ ಮಧ್ಯೆಯೂ ಜನಪ್ರಿಯರಾದರು. ಅದರಿಂದಾಗಿ ಈ ಸಮುದಾಯದ ಸಮಸ್ಯೆಗಳೂ ಅವರ ಗಮನಕ್ಕೆ ಬರತೊಡಗಿದವು. ಹಾಗೆ ಬಂದ ಒಂದು ಪ್ರಮುಖ ಸಮಸ್ಯೆ ಎಂದರೆ, ಕರಾರು ಮುಗಿದು, ಅದನ್ನು ನವೀಕರಿಸಿಕೊಳ್ಳಲು ಇಚ್ಛಿಸದೆ ಸ್ವತಂತ್ರನಾಗಿ ನೆಟಾಲ್‌ನಲ್ಲೇ ಉಳಿಯುವುದಾದರೆ, ಕೂಲಿಯು ತಾನು ಮತ್ತು ತನ್ನ ಅವಲಂಬಿತರ ಪರವಾಗಿ ವಾರ್ಷಿಕ ತಲಾ ಇಪ್ಪತ್ತೈದು ಪೌಂಡುಗಳ ತೆರಿಗೆ ಕೊಡಬೇಕೆಂಬ ನೆಟಾಲ್ ಸರ್ಕಾರದ ಹೊಸ ಆದೇಶ. ಇದು ಮತಾಧಿಕಾರವನ್ನು ರದ್ದುಗೊಳಿಸುವ ಪ್ರಸ್ತಾಪದ ಹಿಂದಿದ್ದ ಉದ್ದೇಶವನ್ನೇ ಹೊಂದಿತ್ತೆಂಬುದು ಸ್ಪಷ್ಟ. ಇದು ಭಾರತದ ಮಾಜಿ 'ಕೂಲಿ'ಗಳು ಲೌಕಿಕವಾಗಿ ಅಭಿವೃದ್ಧಿ ಹೊಂದುತ್ತಾ ಬಿಳಿಯರ ಉದ್ಯಮಗಳಿಗೆ ಪ್ರತಿಸ್ಪರ್ಧಿಯಾಗುತ್ತಿರುವುದನ್ನು ನಿವಾರಿಸಿಕೊಳ್ಳುವ ಕ್ರಮವಾಗಿತ್ತು. ಇದರ ವಿರುದ್ಧ ನೆಟಾಲ್ ಕಾಂಗ್ರೆಸ್ ಹೋರಾಟವನ್ನು ಸಂಘಟಿಸಿತು. ಗಾಂಧಿ ನೆಟಾಲ್ ಕಾಂಗ್ರೆಸ್‌ನ ಪರವಾಗಿ ಈ ಬಗ್ಗೆ ಲಂಡನ್‌ನ ಬ್ರಿಟಿಷ್ ಸಾಮ್ರಾಜ್ಯದ ಸರ್ಕಾರಕ್ಕೆ ನೆಟಾಲ್‌ನಲ್ಲಿನ ತನ್ನ ಪ್ರಜೆಗಳ ಮೇಲೆ ಹೊರಿಸಲಾಗುತ್ತಿರುವ ಈ ಅನ್ಯಾಯದ ಹೊರೆಯ

ಬಗ್ಗೆ ಬರೆದರು. ಬ್ರಿಟಿಷ್ ಸಾಮ್ರಾಜ್ಯ ಸರ್ಕಾರ ಇದನ್ನು ಸಹಾನುಭೂತಿಯಿಂದ ಪರಿಗಣಿಸಿ, ಈ ತೆರಿಗೆಯನ್ನು ರದ್ದುಗೊಳಿಸುವಂತೆ ನೆಟಾಲ್ ಸರ್ಕಾರಕ್ಕೆ ಸಲಹೆ ಮಾಡಿತು. ತೆರಿಗೆಯನ್ನು ಪೂರ್ಣ ರದ್ದುಗೊಳಿಸಲು ಒಪ್ಪದ ನೆಟಾಲ್ ಸರ್ಕಾರ ಅದನ್ನು ಸಾಂಕೇತಿಕ ತೆರಿಗೆಯೆಂದು ತಲಾ ಮೂರು ಪೌಂಡುಗಳಿಗೆ ಇಳಿಸಿ ಆದೇಶ ಹೊರಡಿಸಿತು. ಇದು ಗಾಂಧಿ ಹೋರಾಟಕ್ಕೆ ಸಿಕ್ಕ ಮೊದಲ ವಾಸ್ತವಿಕ ಜಯವಾಗಿದ್ದರೂ, ಮೂರು ಪೌಂಡುಗಳೂ ದೊಡ್ಡ ಮೊತ್ತವೇ ಆಗಿತ್ತು. ಏಕೆಂದರೆ ಸರಾಸರಿ ನಾಲ್ಕು ಜನರ ಒಂದು ಕುಟುಂಬದ ತೆರಿಗೆ ಹೊರೆ ಹನ್ನೆರೆಡು ಪೌಂಡುಗಳಾಗಿ, ಅದು ಸಾಮಾನ್ಯ ಭಾರತೀಯ ಕಾರ್ಮಿಕನೊಬ್ಬನ ಅರ್ಧ ವರ್ಷದ ಆದಾಯವೇ ಆಗಿತ್ತು. ಹಾಗಾಗಿ ಇದರ ವಿರುದ್ಧವೂ ಗಾಂಧಿ ಹೋರಾಟವನ್ನು ಸಂಘಟಿಸಬೇಕಾಯಿತು. ಆದರೆ ಇದಕ್ಕೆ ಮುಂದೆ ಇತರೆ ಅನೇಕ ಕಾರಣಗಳೂ ಸೇರಿಕೊಂಡು ಹೋರಾಟವು ಜಟಿಲವಾಗುತ್ತಾ ಹೋಗಿ ಅದು ಫಲ ನೀಡಿದ್ದು ಇಪ್ಪತ್ತು ವರ್ಷಗಳ ನಂತರ ಎಂಬುದು ಬೇರೆ ವಿಚಾರ.

ವಿವಿಧ ಧರ್ಮಗಳೊಂದಿಗೆ ಒಡನಾಟ–ಸಂವಾದ

ಗಾಂಧಿ ಹೀಗೆ ಜನಸೇವೆಯಲ್ಲಿ ತಲ್ಲೀನರಾಗುತ್ತಿರುವ ಕಾಲದಲ್ಲೇ, ಅವರ ಆವರೆಗಿನ ವಿವಿಧ ಧರ್ಮಗಳ ಕುರಿತ ಓದು ಜನಸೇವೆಯೇ ಧರ್ಮ ಎಂಬ ನಂಬಿಕೆಯನ್ನು ಅವರಲ್ಲಿ ಉಂಟು ಮಾಡಿತ್ತು. ದೇಶ ನೋಡುವ ಮತ್ತು ಕೆಲಸ ಕಲಿತು ಸಂಪಾದನೆ ಮಾಡುವ ಉದ್ದೇಶದಿಂದ ದ.ಆಫ್ರಿಕಾಕ್ಕೆ ಬಂದಿದ್ದ ತಮಗೆ ದೈವವೇ ಜನಸೇವೆಯ ಅವಕಾಶ ಒದಗಿಸಿ ಧರ್ಮದರ್ಶನ ಮಾಡಿಸಿದೆ ಎಂದು ಗಾಂಧಿ ಭಾವಿಸಿದರು. ಇದರ ಮುಂದುವರಿಕೆಯಾಗಿ ಆತ್ಮದರ್ಶನ ಮತ್ತು ದೈವದರ್ಶನದ ಅವಕಾಶಕ್ಕಾಗಿ ಅವರು ಹಾತೊರೆಯತೊಡಗಿದರು. ಇಂತಹ ಆಲೋಚನಾ ಲಹರಿಯಲ್ಲಿದ್ದ ಗಾಂಧಿಗೆ ಅಲ್ಲಿನ ಕ್ವೇಕರ್, ಪ್ಲೈಮೌತ್, ಮೆಥಾಡಿಸ್ಟರು ಮುಂತಾದ ಕ್ರೈಸ್ತ ಧರ್ಮದ ಹಲವು ಶಾಖೆಗಳ ಧಾರ್ಮಿಕ ಗುರುಗಳು ಮತ್ತು ಶ್ರದ್ಧಾಳುಗಳ ಒಡನಾಟ ದೊರೆತದ್ದು ಸಹಜವೇ ಆಗಿತ್ತು. ಅವರೊಡನೆ ನಡೆಯುತ್ತಿದ್ದ ಚರ್ಚೆಗಳ ಪರಿಣಾಮವಾಗಿ ಹುಟ್ಟುತ್ತಿದ್ದ ಹಲವು ಆಧ್ಯಾತ್ಮಿಕ ಪ್ರಶ್ನೆಗಳಿಗೆ ಉತ್ತರ ಹುಡುಕಲು ಅವರು ಸಿಕ್ಕ ಸಿಕ್ಕ ಧರ್ಮ ಗ್ರಂಥಗಳನ್ನು ಓದತೊಡಗಿದರು. ಇವುಗಳಲ್ಲಿ ಮ್ಯಾಕ್ಸ್‌ಮುಲ್ಲರ್ ಅವರ 'ಭಾರತ ನಮಗೆ ಏನು ಕಲಿಸಬಹುದು?', ಥಿಯೊಸಫಿಕಲ್ ಸಂಘವು ಪ್ರಕಟಿಸಿದ್ದ ಉಪನಿಷತ್ ವ್ಯಾಖ್ಯಾನಗಳು ಮತ್ತು ಜರತೂಷ್ಟ್ರನ ವಚನಗಳು ಮುಖ್ಯವಾದವು. ಇದರ ಜೊತೆಗೇ ಅವರು ಭಾರತದಲ್ಲಿನ ತಮ್ಮ ಮಾರ್ಗದರ್ಶಿ ರಾಯ್‌ಚಂದ್ ಮತ್ತು ಅವರ ಗೆಳೆಯರೊಂದಿಗೂ ವಿಚಾರ ವಿನಿಮಯಗಳಲ್ಲಿ ತೊಡಗಿಸಿಕೊಂಡರು. ಒಮ್ಮೆ ಗಾಂಧಿ ಕ್ರೈಸ್ತರಾಗುವ ಒಳ ಮತ್ತು ಹೊರ ಒತ್ತಡಗಳೆರಡಕ್ಕೂ ಸಿಕ್ಕಿ ಪತ್ರ ಬರೆದಾಗ ರಾಯಚಂದ್ 'ನೀನು ಮತಾಂತರದ ಉಸಾಬರಿ ಇಲ್ಲದೆಯೂ ಕ್ರಿಸ್ತನ ಅನುಯಾಯಿಯಾಗಲು ಸಾಧ್ಯ' ಎಂದು ಉತ್ತರ ಬರೆದು ಧರ್ಮದ ಕಲ್ಪನೆ ಕುರಿತಂತೆ ಅವರ ಕಣ್ಣು ತೆರೆಸಿದ್ದರು.

ಒಂದು ಹಂತದಲ್ಲಿ ಕ್ರೈಸ್ತ ಮತ ಶ್ರದ್ಧಾಳುಗಳೊಡನೆಯ ಗಾಂಧಿಯ ಸಂವಾದ ಸ್ಥಗಿತಗೊಂಡದ್ದೂ ಉಂಟು. ಆಹ್ವಾನದ ಮೇರೆಗೆ ಪ್ರತಿ ಭಾನುವಾರ ಊಟಕ್ಕೆಂದು ಗಾಂಧಿ ಹೋಗುತ್ತಿದ್ದ ಆಸ್‌ಕ್ಯೂಸ್ ಎಂಬ ಕ್ರೈಸ್ತಮತ ಮುಖಂಡರೊಬ್ಬರ ಮನೆಯಲ್ಲಿ

ಹಾಗೊಂದು ದಿನ ಮನೆಯೊಡತಿಯೊಡನೆ ನಡೆಸಿದ್ದ ಮಾತುಕತೆಯ ಒಂದು ಮಾತು ವಿವಾದಕ್ಕೆ ಕಾರಣವಾಯಿತು. ಕ್ರಿಸ್ತನೇ ಇತಿಹಾಸದಲ್ಲಿ ಕಾಣುವ ಮಹಾ ದಯಾಳು ಎಂಬ ಆಕೆಯ ಮಾತಿಗೆ ಪ್ರತಿಕ್ರಿಯೆಯಾಗಿ ಗಾಂಧಿ ಕ್ರಿಸ್ತ ಮನುಷ್ಯಕುಲಕ್ಕೆ ಮಾತ್ರ ದಯಾವಂತನಾಗಿದ್ದರೆ ಬುದ್ಧ ಸಕಲ ಜೀವಿರಾಶಿಗೂ ದಯೆ ತೋರುವವನಾಗಿದ್ದನು ಎಂದರು. ಜೊತೆಗೆ ಆಗ ತಾವು ಮತ್ತೆ ಓದತೊಡಗಿದ್ದ 'ಬುದ್ಧಚರಿತೆ' ಪುಸ್ತಕದಲ್ಲಿದ್ದ ಬುದ್ಧನ ಹೆಗಲ ಮೇಲೆ ನಲಿಯುತ್ತಿದ್ದ ಕುರಿಮರಿಯ ಚಿತ್ರ ತೋರಿಸಿದರು. ಅದೇ ಕಾರಣವಾಗಿ ಅವರು ಆ ಮನೆಗೆ ಊಟಕ್ಕೆ ಹೋಗುವುದು ದುಸ್ತರವೆನಿಸಿತು. ಆ ಮನೆಯೊಡತಿ, ಗಾಂಧಿಯಿಂದಾಗಿ ತನ್ನ ಮಗ ಮಾಂಸ ತಿನ್ನುವುದನ್ನು ಬಿಟ್ಟು ದುರ್ಬಲನಾಗುತ್ತಿದ್ದಾನೆ ಎಂದು ಹೇಳಿದ ಮಾತೇ ಆ ಸಂಬಂಧದ ಕೊನೆಯನ್ನು ಸೂಚಿಸಿತ್ತು.

ಡರ್ಬಾನ್‌ನಲ್ಲಿ ಮನೆ-ಕಛೇರಿ

ಗಾಂಧಿ ದ.ಆಫ್ರಿಕಾದಲ್ಲಿ ವಕೀಲರಾಗಿ ನೆಲೆಸಲು ತೀರ್ಮಾನಿಸಿದ ನಂತರ ಡರ್ಬಾನ್‌ನಲ್ಲಿ ಬೀಚ್‌ಗ್ರೋವ್ ಎಂಬ ಪ್ರತಿಷ್ಠಿತ ಬಡಾವಣೆಯಲ್ಲಿ ತಮ್ಮದೇ ಕಛೇರಿ-ಮನೆಯನ್ನು ಸ್ಥಾಪಿಸಿಕೊಂಡಿದ್ದರು. ಅವರ ಗುಮಾಸ್ತರುಗಳು, ಸಹಾಯಕ ಮತ್ತು ಅಡಿಗೆಯ ಸಿಬ್ಬಂದಿಯೆಲ್ಲ ಆ ಮನೆಯಲ್ಲೇ ಗಾಂಧಿಯೊಂದಿಗೆ ವಾಸಿಸುತ್ತಿದ್ದರು. ಆದರೆ ಅವರು ತಮ್ಮ ನಂಬಿಕೆಯ ಸಹಾಯಕನನ್ನಾಗಿ ಕರೆಸಿಕೊಂಡಿದ್ದ ಬಾಲ್ಯದ ಸ್ನೇಹಿತನೂ ತಮಗೆ ಮಾಂಸವನ್ನು ತಿನ್ನಿಸಿದವನೂ ಆದ ಶೇಕ್ ಮೆಹ್ತಾಬ್ ಬಿಡಲಾಗದ ತನ್ನ ದುಶ್ಚಟಗಳಿಗಾಗಿ ತಮ್ಮ ಮನೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದುದನ್ನು ಒಮ್ಮೆ ಅಡಿಗೆಯವನ ಸಹಾಯದಿಂದ ಕಣ್ಣಾರೆ ನೋಡಿದವರಾಗಿ, ಅವನನ್ನು ಅಲ್ಲಿಂದ ತೆರವುಗೊಳಿಸಿದರಲ್ಲದೆ, ಭಾರತದಿಂದ ತಮ್ಮ ಪತ್ನಿಯನ್ನು ಕರೆತಂದು ಅಲ್ಲೇ ಸಂಸಾರ ಹೂಡಲೂ ನಿರ್ಧರಿಸಿದರು. ಹೇಗೂ ಭಾರತೀಯರ ಮತಾಧಿಕಾರ ರದ್ದು ಮಸೂದೆ ಬ್ರಿಟಿಷ್ ಸಾಮ್ರಾಜ್ಯ ಸರ್ಕಾರ ಮತ್ತು ನೆಟಾಲ್ ಸರ್ಕಾರಗಳ ನಡುವೆ ಹಲವು ವಿಚಾರ ವಿನಿಮಯಗಳಿಗಾಗಿ ಓಡಾಡುತ್ತಾ ಇನ್ನೂ ನಿರ್ಣಾಯಕ ಹಂತ ತಲುಪಿರಲಿಲ್ಲ. ಹಾಗಾಗಿ ಗಾಂಧಿ ಕಾಂಗ್ರೆಸ್ಸಿನ ಜವಾಬ್ದಾರಿಯನ್ನು ಆ ಹೊತ್ತಿಗೆ ತಮಗೆ ವಿಶ್ವಾಸಾರ್ಹರೆನಿಸಿದ್ದ ಅದಂಜಿ ಮಿಂಯಾ ಖಾನ್ ಮತ್ತು ಪಾರ್ಸಿ ರುಸ್ತುಂಜಿ ಅವರಿಗೆ ವಹಿಸಿಕೊಟ್ಟು ಆರು ತಿಂಗಳ ಬಿಡುವಿನ ಮೇಲೆ ಭಾರತಕ್ಕೆ ಹೊರಟರು.

ಹೀಗೆ ಒಂದು ವರ್ಷದ ಮಟ್ಟಿಗೆ ಮಾತ್ರವೆಂದು ದ.ಆಫ್ರಿಕಾಕ್ಕೆ ಬಂದಿದ್ದ ಗಾಂಧಿ ಮೂರು ವರ್ಷಗಳ ಕಾಲ ಅಲ್ಲಿದ್ದು ೧೮೯೬ರ ಜೂನ್ ೫ರಂದು ಕಲ್ಕತ್ತಾಗೆ ಹೊರಟಿದ್ದ ಹಡಗೊಂದರಲ್ಲಿ ಭಾರತದತ್ತ ಪ್ರಯಾಣ ಮಾಡಿದರು.

■

೮

ಭಾರತಕ್ಕೊಂದು ಸಂಕ್ಷಿಪ್ತ ಭೇಟಿ

ಗಾಂಧಿ ಭಾರತಕ್ಕೆ ಬಂದುದು ತನ್ನ ಕುಟುಂಬವನ್ನು ದ.ಆಫ್ರಿಕಾಕ್ಕೆ ಒಯ್ದು ಅಲ್ಲಿ ಸಂಸಾರ ಹೂಡುವುದಾಗಿದ್ದರೂ, ಅವರ ಮನಸ್ಸಿನಲ್ಲಿ ಇನ್ನೂ ಒಂದು ಉದ್ದೇಶವಿತ್ತು. ಅದು, ದ.ಆಫ್ರಿಕಾದಲ್ಲಿನ ಭಾರತೀಯ ಸಮುದಾಯದವರ ಘನತೆಯ ಬದುಕಿಗಾಗಿ ನಡೆಸಿದ್ದ ಹೋರಾಟಕ್ಕೆ ಭಾರತದ ಸಾರ್ವಜನಿಕ ಜೀವನದ ಮುಖ್ಯ ವ್ಯಕ್ತಿಗಳ ಸಹಾನುಭೂತಿ ಮತ್ತು ಬೆಂಬಲಗಳನ್ನು ಸಂಘಟಿಸುವುದೂ ಆಗಿತ್ತು. ಅದಕ್ಕಾಗಿ ಒಂದು ದೀರ್ಘ ಪ್ರವಾಸದ ಯೋಜನೆ ಹಾಕಿಕೊಂಡಿದ್ದರು. ದ.ಆಫ್ರಿಕಾದಲ್ಲಿದ್ದಾಗ ಅವರು ಭಾರತದ ಸಾರ್ವಜನಿಕ ಜೀವನದಲ್ಲಿ ನಡೆದಿರುವ ವಿದ್ಯಮಾನಗಳನ್ನು ಗಮನಿಸಿದ್ದರು. ಭಾರತದಲ್ಲಿನ ಬ್ರಿಟಿಷ್ ಪ್ರಭುತ್ವ ಕುರಿತಂತೆ ಭಾರತದ ಸಾರ್ವಜನಿಕ ಜೀವನ ಪ್ರತಿಕ್ರಿಯಿಸುತ್ತಿದ್ದ ರೀತಿ ನೀತಿಗಳ ಮೇಲೆ ಅವರು ಸೂಕ್ಷ್ಮ ನಿಗಾ ಇಟ್ಟಿದ್ದರೆಂದು ತೋರುತ್ತದೆ. ಹಾಗಾಗಿಯೇ ಅವರು ತಾವು ಭಾರತದಲ್ಲಿದ್ದಾಗ ಏನು ಮಾಡಬೇಕು, ಯಾವ ಯಾವ ಸ್ಥಳಗಳಿಗೆ ಭೇಟಿ ನೀಡಬೇಕು ಮತ್ತು ಯಾರ್ಯಾರನ್ನು ಕಂಡು ಮಾತಾಡಬೇಕೆಂಬುದನ್ನು ನಿರ್ಣಯಿಸಿಕೊಂಡಿದ್ದರು.

ಬ್ರಿಟಿಷ್ ಸರ್ಕಾರದ ನಿಷ್ಠಾವಂತ ಪ್ರಜೆ!

ಹಾಗೆ ನೋಡಿದರೆ, ಆವರೆಗೆ ತಮ್ಮ ಬದುಕಿನ ಯೌವ್ವನದ ಹುರುಪಿನ ಬಹುಪಾಲು ವರ್ಷಗಳನ್ನು–ಹದಿನೆಂಟನೇ ವಯಸ್ಸಿನಿಂದ ಸದ್ಯದ ೨೬ನೇ ವಯಸ್ಸಿನವರೆಗಿನ ಎಂಟು ವರ್ಷಗಳ ಪೈಕಿ ಆರು ವರ್ಷಗಳನ್ನು–ಭಾರತದ ಹೊರಗೇ ಕಳೆದಿದ್ದ ಗಾಂಧಿ ಭಾರತದಲ್ಲಿನ ಬ್ರಿಟಿಷ್ ಪ್ರಭುತ್ವದ ಬಗ್ಗೆ ರಾಜಕೀಯ ನೆಲೆಯ ವಿರೋಧವನ್ನೇನೂ ಬೆಳೆಸಿಕೊಂಡಿರಲಿಲ್ಲ. ಬಾಲ್ಯದಲ್ಲಿ ಗೆಳೆಯರ ನಡುವೆ ಸಿಪಾಯಿ ದಂಗೆಯ ನೆನಪಿನ ಹುರುಪಿನಲ್ಲಿ ಆಡಲಾಗುತ್ತಿದ್ದ ವೀರಾವೇಶದ ಮಾತುಗಳಲ್ಲಿ ಅವರ ಬಾಲಿಶ ಮಾತುಗಳೂ ಸೇರಿರುತ್ತಿದ್ದುವಷ್ಟೆ. ಭಾರತದ ಸಾರ್ವಜನಿಕ ಜೀವನದಲ್ಲೂ ಆವರೆಗೆ ಅಂತಹ ವಿರೋಧವೂ ಬಾಹ್ಯ ರೂಪಗಳಲ್ಲಿ ವ್ಯಕ್ತವಾಗಿರಲಿಲ್ಲ. ಸರ್ಕಾರದಿಂದ ಕೆಲವು ರಿಯಾಯ್ತಿಗಳ, ಸೀಮಿತ ಹಕ್ಕು–ಅಧಿಕಾರಗಳ ಬೇಡಿಕೆ–ಆಗ್ರಹಗಳ ಸದ್ದಷ್ಟೇ ಆರಂಭವಾಗಿತ್ತು. ವಾಸ್ತವವಾಗಿ ಆಗ ಅವರು ತಮ್ಮನ್ನು ಬ್ರಿಟಿಷ್ ಸರ್ಕಾರದ ನಿಷ್ಠಾವಂತ ಪ್ರಜೆ ಎಂದೇ ಗುರುತಿಸಿಕೊಳ್ಳುವಲ್ಲಿ ಹೆಮ್ಮೆ ಪಡುತ್ತಿದ್ದರು. ಅಲ್ಲದೆ ಅದೊಂದು ಆದರ್ಶ ಪ್ರಜೆಯ ಲಕ್ಷಣವೆಂದು ಭಾವಿಸಿದ್ದರು.

ಹಾಗಾಗಿಯೇ ಗಾಂಧಿ ದ.ಆಫ್ರಿಕಾದಲ್ಲಿನ ಭಾರತೀಯರ ಪರವಾದ ಹೋರಾಟಕ್ಕೆ, ಬಹುತೇಕ ಅವರೆಲ್ಲ ಮೂಲತಃ ಭಾರತದಿಂದ ಬ್ರಿಟಿಷ್ ಸರ್ಕಾರದ ಮಾನ್ಯತೆ ಹೊಂದಿದ ಕರಾರಿನ ಪ್ರಕಾರ ಆ ದೇಶಕ್ಕೆ ಹೋಗಿರುವುದರಿಂದ ಅವರು ಅಲ್ಲಿಯೂ ಭಾರತದಲ್ಲಿನ ಪ್ರಜೆಯ ಎಲ್ಲ ಕಾನೂನುಬದ್ಧ ಹಕ್ಕುಗಳಿಗೂ ಅರ್ಹರು ಎಂಬ ತತ್ವವು ಆಧಾರವಾಗಿತ್ತು. ಜೊತೆಗೆ ಗಾಂಧಿ ಭಾರತದ ಆಗಿನ ಬಹುತೇಕ ಎಲ್ಲ ವಿದ್ಯಾವಂತ ಪ್ರಜೆಗಳಂತೆ ಬ್ರಿಟಿಷರ ಕಾನೂನುಗಳು ಮನುಷ್ಯರ ಘನತೆಯನ್ನು ಮಾನ್ಯಮಾಡುತ್ತವೆಂದು ನಂಬಿದ್ದರು. ಹಾಗಾಗಿ ಮೂಲತಃ ಬ್ರಿಟಿಷ್ ಮೂಲದವರೇ ಆದ ಜನರ ನೆಟಾಲ್ ಸರ್ಕಾರ ಜನಾಂಗೀಯ ಪೂರ್ವಗ್ರಹ ಮತ್ತು ತಾರತಮ್ಯಗಳನ್ನು ಕಾನೂನುಬದ್ಧಗೊಳಿಸುವ ಅನೈತಿಕತೆಯಲ್ಲಿ ತೊಡಗಿರುವ ಬಗ್ಗೆ ವಿಚಲಿತರಾಗಿದ್ದರು. ಅವರ ಪ್ರಕಾರ ವರ್ಣಭೇದ ಬ್ರಿಟಿಷ್ ಜನಾಂಗದ ಸ್ವಭಾವಕ್ಕೆ ವಿರುದ್ಧವಾದುದಾಗಿತ್ತು. ಇದೇ ಗಾಂಧಿಯ ಅಳಲೂ, ಹೋರಾಟದ ಹಿಂದಿನ ತಿಳುವಳಿಕೆಯೂ ಆಗಿತ್ತು. ಹಾಗಾಗಿಯೇ ಅವರು ದ.ಆಫ್ರಿಕಾ ಸರ್ಕಾರದ ವಿರುದ್ಧ ದೂರುಗಳನ್ನು ತನ್ನ ಎಲ್ಲ ವಸಾಹತು ಸರ್ಕಾರಗಳ ಮೇಲೆ ಅಧಿಕಾರ ಹೊಂದಿದ್ದ ಲಂಡನ್‌ನಲ್ಲಿನ ಬ್ರಿಟಿಷ್ ಮಹಾಸಾಮ್ರಾಜ್ಯ ಸರ್ಕಾರದ ಗಮನಕ್ಕೂ ತರುತ್ತಿದ್ದರು.

ಈ ಮನೋಭಾವದ ಹಿನ್ನೆಲೆಯಲ್ಲೇ ಅವರು ಭಾರತದ ತಮ್ಮ ರಾಜಕೋಟೆ ಮನೆಗೆ ಬಂದೊಡನೆ ದ.ಆಫ್ರಿಕಾದಲ್ಲಿ ಆಸ್ಥೆಯಿಂದ ಕಲಿತು ಹಾಡುತ್ತಿದ್ದ ಬ್ರಿಟಿಷ್ ಮಹಾಸಾಮ್ರಾಜ್ಯದ ಸ್ತುತಿಗೀತೆಯನ್ನು ತಮ್ಮಂತೆಯೇ ರಾಗಬದ್ಧವಾಗಿ ಹಾಗೂ ಭಕ್ತಿಯಿಂದ ಹಾಡುವುದನ್ನು ತಮ್ಮ ಮಕ್ಕಳಿಗೆ ಕಲಿಸಿದರು. ಆ ರಾಷ್ಟ್ರಗೀತೆಯಲ್ಲಿನ ಶತ್ರುಗಳನ್ನು ಬೀಳಿಸು, ನಾಶ ಮಾಡು ಎಂಬಿತ್ಯಾದಿ ಸಾಲುಗಳ ಬಗ್ಗೆ ಅವರ ತಕರಾರಿತ್ತು. ಅದನ್ನು ಸಮರ್ಥಿಸುವ ತಮ್ಮ ಬಿಳಿಯ ಗೆಳೆಯರನ್ನು ಅವರು, ನಮ್ಮ ಹಿತ ಕಾಯುವಂತೆ ಭಗವಂತನನ್ನು ಪ್ರಾರ್ಥಿಸುವ ಗೀತೆಯಲ್ಲಿ ಶತ್ರುವಿನ ನಾಶದ ಮಾತೇಕೆ? ನಮ್ಮ ಎದುರಾಳಿಗಳಾದ ಮಾತ್ರಕ್ಕೆ ಅವರು ನ್ಯಾಯವಂತರಲ್ಲವೆಂದು ಹೇಳುವುದು ಹೇಗೆ? ಎಂದು ಪ್ರಶ್ನಿಸುತ್ತಿದ್ದರು. ಎದುರಾಳಿಗಳ ಬಗ್ಗೆ ನ್ಯಾಯವಾಗಿ ಯೋಚಿಸಲಾಗದವರು ತಮಗೆ ನ್ಯಾಯ ಸಿಗುತ್ತದೆಂದು ಭಾವಿಸುವುದು ತಪ್ಪಾಗುತ್ತದೆ ಎಂದು ಗಾಂಧಿ ತಿಳಿದಿದ್ದರು. ಹಾಗಾಗಿ ಅವರ ನ್ಯಾಯ ಮತ್ತು ನಮ್ಮ ನ್ಯಾಯ ಎಂದಿರಲು ಸಾಧ್ಯವಿಲ್ಲ ಎಂಬ ನಂಬಿಕೆಯೊಂದಿಗೆ ನ್ಯಾಯ ಕಲ್ಪನೆಯನ್ನು ಧರ್ಮಕ್ಕೆ ಸಂವಾದಿಯಾಗಿಯೇ ತಮ್ಮಲ್ಲಿ ಪೋಷಿಸಿಕೊಂಡಿದ್ದರು. ಅವರ ಹೋರಾಟಕ್ಕೆ ಅನೇಕ ಬಿಳಿಯರ ಸಮರ್ಥನೆ, ಬೆಂಬಲ ದೊರಕುತ್ತಿದ್ದುದು ಈ ಕಾರಣದಿಂದಲೇ ಆಗಿತ್ತು.

ಅದೇನೇ ಇದ್ದರೂ, ಗಾಂಧಿ ಇಂಗ್ಲಿಷರ ಜೀವನ ವಿಧಾನದಲ್ಲಿ ಒಂದು ಶಿಸ್ತು, ಅಚ್ಚುಕಟ್ಟುತನ ಕಂಡಿದ್ದರು ಮತ್ತು ಅದು ಅನುಕರಣಯೋಗ್ಯವೆಂದು ಭಾವಿಸಿದ್ದರು. ಆದರೆ ಅದನ್ನು ಸಾರಾಸಗಟಾಗಿ ಅನುಕರಿಸುವುದೂ ಸರಿಯಲ್ಲ ಎಂಬ ಭಾವನೆಯೂ ಅವರಲ್ಲಿತ್ತು. ಗಣ್ಯ ಪಾರ್ಸಿ ಸಮಾಜದ ಉಡುಪು ಅವರಿಗೆ ದ.ಆಫ್ರಿಕಾದಲ್ಲಿನ ಇಂಗ್ಲಿಷ್ ಜನರ ಉಡುಪಿನಷ್ಟೇ ಶಿಸ್ತು ಮತ್ತು ಅಚ್ಚುಕಟ್ಟುತನದ್ದಾಗಿ ಕಂಡಿತು. ಹಾಗಾಗಿ ಮುಂದಿನ ದ.ಆಫ್ರಿಕಾದಲ್ಲಿನ ಬದುಕಿಗಾಗಿ ಹೆಂಡತಿ ಮಕ್ಕಳಿಗಾಗಿ ಅದನ್ನೇ ನಿಗದಿ ಮಾಡಿಕೊಂಡರು. ಕಾಥೇವಾಡದ ಗ್ರಾಮ ಶೈಲಿಯಲ್ಲಿ ಸೀರೆ ಉಡುತ್ತಿದ್ದ ಪತ್ನಿ ಕಸ್ತೂರಬಾಗೆ ಪಾರ್ಸಿ

ಶೈಲಿಯಲ್ಲಿ ಸೀರೆ ಉಡುವಂತೆ ಸೂಚಿಸಿದರು. ಮಕ್ಕಳಿಗೆ ಅಂಗಿ ಷರಾಯಿ ಜೊತೆಗೆ ಬೂಟು ಟೈಗಳೂ ಬಂದವು. ಊಟದ ಮೇಜಿಗೆ ಚಮಚೆ, ಚಾಕು, ಮುಳ್ಳುಗಳು ಬಂದವು! ಆದರೆ ಅದೇ ಹೊತ್ತಿನಲ್ಲಿ ಭಾರತದ ಬ್ರಿಟಿಷ್ ಸರ್ಕಾರ ಮತ್ತು ಭಾರತೀಯರನ್ನು ಉದ್ದೇಶಿಸಿ ದ.ಆಫ್ರಿಕಾದಲ್ಲಿನ ಭಾರತೀಯರ ದುಃಸ್ಥಿತಿಯನ್ನು ವಿವರಿಸುವ ಕಿರುಪುಸ್ತಕವೊಂದನ್ನು ಬರೆದರು! ಅದರ ಹತ್ತು ಸಾವಿರ ಪ್ರತಿಗಳನ್ನು ಅಚ್ಚು ಹಾಕಿಸಿ, ನೆರೆಹೊರೆಯ ಮಕ್ಕಳನ್ನು ಒಟ್ಟುಗೂಡಿಸಿ ಅವರ ಸಹಾಯದಿಂದ ಅದನ್ನು ಕಳಿಸಬೇಕಾದವರೆಲ್ಲರಿಗೂ ಅಂಚೆಯ ಮೂಲಕ ಕಳಿಸುವ ಕೆಲಸವನ್ನೂ ಅಷ್ಟೇ ಆಸಕ್ತಿಯಿಂದ ಮಾಡಿದರು. ಆ ಪುಸ್ತಕಕ್ಕೆ ಹಸಿರು ರಟ್ಟು ಹಾಕಿದ್ದುದರಿಂದ ಅದು 'ಹಸಿರು ಕೈಪಿಡಿ' ಎಂದೇ ಹೆಸರಾಯಿತು.

ಗಾಂಧಿ ರಾಜಕೋಟೆಗೆ ಬಂದಾಗ ಮುಂಬೈನಲ್ಲಿ ಪ್ಲೇಗ್ ಕಾಣಿಸಿಕೊಂಡು ಅವರೂರಿಗೂ ಅದು ಹರಡುವ ಆತಂಕ ಉಂಟಾಯಿತು. ಗಾಂಧಿಗೆ ಆರೋಗ್ಯ ಮತ್ತು ನೈರ್ಮಲ್ಯಗಳ ವಿಷಯದಲ್ಲಿ ಸ್ವಲ್ಪ ಪ್ರಾಥಮಿಕ ತಿಳುವಳಿಕೆ ಮತ್ತು ಜನಸೇವೆಯಲ್ಲಿ ಶ್ರದ್ಧೆ-ಆಸಕ್ತಿಗಳೂ ಇದ್ದುವು. ಈ ಹಿನ್ನೆಲೆಯಲ್ಲಿ ಅವರು ಆಗಿನ ಬಾಂಬೆ ಸಂಸ್ಥಾನದ ಸರ್ಕಾರದ ಅನುಮತಿಯೊಂದಿಗೆ ಪ್ಲೇಗ್ ಪರಿಹಾರ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು. ಆ ಸಂದರ್ಭದಲ್ಲಿ ಅವರು ಗೃಹ ನೈರ್ಮಲ್ಯದ ಸಮೀಕ್ಷಾ ಕಾರ್ಯ ಮಾಡುತ್ತಿದ್ದಾಗ ಅವರಿಗೆ ಕಂಡದ್ದು: ಶ್ರೀಮಂತರ ಮನೆಗಳಿಗೆ ಹೋಲಿಸಿದಾಗ ಬಡವರ ಮನೆಗಳೇ ಚೊಕ್ಕಟವಾಗಿರುವುದು! ಶ್ರೀಮಂತರ ಮನೆಗಳ ಶೌಚ ಗೃಹಗಳು ಹಾಗೂ ಧಾರ್ಮಿಕ ಕೇಂದ್ರಗಳ ಆವರಣಗಳು ಅತ್ಯಂತ ಕೊಳಕಾಗಿರುವುದು! ಗಾಂಧಿ ಬಾಂಬೆಯಲ್ಲಿದ್ದಾಗ ಅವರ ಅಕ್ಕನ ಗಂಡ ಅಲ್ಲಿ ತೀವ್ರ ಅಸ್ವಸ್ಥರಾಗಿ ಮಲಗಿದ್ದರು. ಅಲ್ಲಿಗೆ ಧಾವಿಸಿದ ಅವರು ಅವರ ಶುಶ್ರೂಷೆಯನ್ನು ಹಗಲಿರುಳೂ ಮಾಡಿ, ಕೊನೆಗೆ ಅವರನ್ನು ಅವರ ಕುಟುಂಬದೊಂದಿಗೆ ರಾಜಕೋಟೆಗೆ ಒಯ್ದು ಅಲ್ಲಿಯೂ ಶುಶ್ರೂಷೆ ಮುಂದುವರೆಸಿದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಅವರ ಭಾವ ನಿಧನ ಹೊಂದಿದರು.

ಭಾರತದಲ್ಲೊಂದು ಕಿರು ಪ್ರವಾಸ

ಆನಂತರ ಗಾಂಧಿ ತಾವು ಆಯೋಜಿಸಿಕೊಂಡಿದ್ದ ಪ್ರವಾಸವನ್ನು ಆರಂಭಿಸಿದರು. ೧೮೯೬ರ ಸೆಪ್ಟೆಂಬರ್‌ನಲ್ಲಿ ಮುಂಬೈನಲ್ಲಿ ರಾನಡೆ, ತಯ್ಯಬ್ಜಿ ಮುಂತಾದ ನ್ಯಾಯವೇತ್ತರನ್ನೂ, ಫಿರೋಜ್ ಶಾ ಅವರಂತಹ ಹಿರಿಯ ವಕೀಲರನ್ನೂ ಕಂಡರು. ಸಾರ್ವಜನಿಕ ಸಭೆ ನಡೆಸಿ ಭಾಷಣ ಮಾಡಿದರು, ಮಾಡಿಸಿದರು. ನಂತರ ಪೂನಾಗೆ ಹೋಗಿ ಲೋಕಮಾನ್ಯ ಬಾಲಗಂಗಾಧರ ತಿಲಕರನ್ನೂ, ಗೋಪಾಲಕೃಷ್ಣ ಗೋಖಲೆಯವರನ್ನೂ, ಶಿಕ್ಷಣತಜ್ಞ ಡಾ. ಭಂಡಾರ್ಕರ್ ಅವರನ್ನೂ ಕಂಡು ಮಾತಾಡಿದರು. ಅವರ ಸಹಕಾರದೊಂದಿಗೆ ಒಂದು ಸಭೆಯನ್ನೂ ಆಯೋಜಿಸಿದರು. ಫಿರೋಜ್ ಶಾ, ತಿಲಕ್ ಮತ್ತು ಗೋಖಲೆಯವರನ್ನು ಕಂಡ ನಂತರ ತಮಗೆ ಅನಿಸಿದ್ದನ್ನು ಗಾಂಧಿ ಹೀಗೆ ದಾಖಲಿಸಿದ್ದಾರೆ: 'ಫಿರೋಜ್ ಶಾ ಅಭೇದ್ಯವಾಗಿ ತೋರುವ ಹಿಮಾಲಯವಿದ್ದಂತೆ, ತಿಲಕರು ದಾಟಲು ಕಷ್ಟಸಾಧ್ಯವಾದ ಅಬ್ಬರದಲೆಗಳ ಸಮುದ್ರವಿದ್ದಂತೆ, ಆದರೆ ಗೋಖಲೆ ಯಾರಾದರೂ ಪುಟ್ಟ ನಾವೆಯಲ್ಲಿ

ಪಯಣಿಸಬಹುದಾದಂತಹ ಪವಿತ್ರ ಸುಂದರ ಗಂಗಾನದಿಯಂತೆ!'

ನಂತರ ಅವರ ಭೇಟಿ ಮದ್ರಾಸ್ ಪ್ರಾಂತ್ಯಕ್ಕೆ. ಅಲ್ಲಿ ಅವರು 'ಬಾಲಸುಂದರಂ' ಪ್ರಕರಣವನ್ನು ಹೇಳಿ ಜನರಲ್ಲಿ ಕುತೂಹಲ ಹುಟ್ಟಿಸಿದರು. 'ಮದ್ರಾಸ್ ಸ್ಟ್ಯಾಂಡರ್ಡ್' ಪತ್ರಿಕೆಯ ಸಂಪಾದಕರಾದ ಪರಮೇಶ್ವರ ಪಿಳ್ಳೈ ಅವರಂತೂ ಗಾಂಧಿಯವರ ಹೋರಾಟದ ಬಗ್ಗೆ ಅತಿಶಯದ ಆಸಕ್ತಿ ತಾಳಿ ಅದಕ್ಕಾಗಿ ಗಾಂಧಿ ಅಲ್ಲಿದ್ದಷ್ಟು ದಿನವೂ ತಮ್ಮ ಪತ್ರಿಕೆಯನ್ನು ಹೇಗಾದರೂ ಬಳಸಿಕೊಳ್ಳುವಂತೆ ಅದರ ಸಂಪಾದಕೀಯ ಕೆಲಸವನ್ನೆಲ್ಲ ಅವರಿಗೇ ವಹಿಸಿಬಿಟ್ಟರು!. ಆದರೆ ಗಾಂಧಿ ಅಲ್ಲಿಂದ ಕಲ್ಕತ್ತಾಗೆ ಹೋದಾಗ ಅಲ್ಲಿನ ಪ್ರತಿಕ್ರಿಯೆ ಇದಕ್ಕೆ ವಿರುದ್ಧವಾಗಿ ಅಲ್ಲಿ ನಿರಾಶೆ ಕಾದಿತ್ತು. ಸುರೇಂದ್ರನಾಥ ಬ್ಯಾನರ್ಜಿಯುವರೂ ಸೇರಿದಂತೆ ಸಾರ್ವಜನಿಕ ಜೀವನದ ಯಾವ ಮಹನೀಯರುಗಳಾಗಲೀ, ಪತ್ರಿಕಾ ಸಂಪಾದಕರುಗಳಾಗಲೀ ಯಾರೂ ಅವರನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಆದರೆ ಆಂಗ್ಲೋ ಇಂಡಿಯನ್ನರ ಸಂಪಾದಕತ್ವದ 'ಸ್ಟೇಟ್ಸ್‌ಮನ್' ಮತ್ತು 'ಇಂಗ್ಲಿಷ್‌ಮನ್' ಎಂಬ ಎರಡು ಪತ್ರಿಕೆಗಳು ಸ್ವಲ್ಪ ಸಹಾನುಭೂತಿಯಿಂದ ಗಾಂಧಿಯ ಮಾತುಗಳನ್ನು ಆಲಿಸಿ ಅವನ್ನು ಪ್ರಕಟಿಸಿದವು. ಅದಕ್ಕೆ ಮುಖ್ಯ ಕಾರಣ, ಗಾಂಧಿ ಮಾತುಗಳಲ್ಲಿ ಬಿಳಿಯರ ಬಗ್ಗೆ ಕಹಿ ಇಲ್ಲದೆ ಅವು ನ್ಯಾಯಯುತವಾಗಿ ಆ ಸಂಪಾದಕರಿಗೆ ಕಂಡದ್ದು.

ಗಾಂಧಿ ಕಲ್ಕತ್ತಾದಲ್ಲಿದ್ದಾಗಲೇ ಡರ್ಬಾನ್‌ನಿಂದ, ನೆಟಾಲ್‌ನ ಶಾಸನಸಭೆಯ ಅಧಿವೇಶನ ಆರಂಭವಾಗುತ್ತಿರುವುದರಿಂದ ಕೂಡಲೇ ಹೊರಟುಬರಬೇಕೆಂಬ ತಾರು ಬಂತು. ಕೂಡಲೇ ಗಾಂಧಿ ರಾಜಕೋಟೆಗೆ ಪ್ರಯಾಣ ಮಾಡಿ ಹೆಂಡತಿ ಮಕ್ಕಳನ್ನು ಪ್ರಯಾಣಕ್ಕೆ ತಯಾರು ಮಾಡಿದರು. ಸೇಠ್ ಅಬ್ದುಲ್ಲಾ ಈಗ ವಾಣಿಜ್ಯ ನೌಕಾಯಾನ ಕ್ಷೇತ್ರಕ್ಕೂ ಪ್ರವೇಶಿಸಿ 'ಕೋರ್‌ಲೆಂಡ್' ಎಂಬ ಹಡಗನ್ನು ಕೊಂಡು ಅದರ ಮೊದಲ ಯಾನವನ್ನು ಬೊಂಬಾಯಿಯಿಂದ ಡರ್ಬಾನ್‌ಗೆ ಆಯೋಜಿಸಿದ್ದರು ಮತ್ತು ಗಾಂಧಿಯವರ ಕುಟುಂಬಕ್ಕೆ ಅದರಲ್ಲಿ ಉಚಿತ ಪ್ರಯಾಣಕ್ಕೆ ವ್ಯವಸ್ಥೆ ಮಾಡಿದ್ದರು. ಗಾಂಧಿ ೧೮೯೬ರ ಡಿಸೆಂಬರ್ ಮೊದಲ ವಾರದಲ್ಲಿ ಕಸ್ತೂರಬಾ, ಮಕ್ಕಳಾದ ಹರಿಲಾಲ ಮತ್ತು ಮಣಿಲಾಲ ಹಾಗೂ ವಿಧವೆಯಾಗಿದ್ದ ತನ್ನ ಅಕ್ಕನ ಮಗ ಗೋಕುಲದಾಸನೊಂದಿಗೆ ಹಡಗು ಹತ್ತಿದರು. ಆಶ್ಚರ್ಯವೆಂಬಂತೆ 'ನಾದೇರಿ' ಎಂಬ ಇನ್ನೊಂದು ಹಡಗೂ ಅಂದೇ ಡರ್ಬಾನ್‌ಗೆ ಹೊರಟಿತ್ತು. ಆ ಹಡಗಿಗೂ ಏಜೆಂಟರಾಗಿದ್ದವರೂ ಅಬ್ದುಲ್ಲಾ ಕಂಪನಿಯವರೇ ಆಗಿದ್ದು, ಮುಂದೆ ಈ ಸಂಗತಿಯೇ ದೊಡ್ಡ ಅನಾಹುತಕ್ಕೂ ಕಾರಣವಾಯಿತು. ಎರಡೂ ಹಡಗುಗಳಲ್ಲಿದ್ದ ಪ್ರಯಾಣಿಕರ ಸಂಖ್ಯೆ ಸುಮಾರು ಎಂಟುನೂರು!

■

೧೦
ಗಾಂಧಿ ಎದುರಿಸಿದ ಗುಂಪು ಹಲ್ಲೆ

ಗಾಂಧಿ ಕುಟುಂಬವನ್ನು ಹೊತ್ತ ಮತ್ತು ಅದರ ಜೊತೆಗಾರ ಹಡಗುಗಳು ೧೮೯೬ರ ಡಿಸೆಂಬರ್ ಮೂರನೇ ವಾರದಲ್ಲಿ ಡರ್ಬಾನ್ ತೀರ ಇನ್ನೇನು ಹತ್ತಿರವಾಯಿತು ಎನ್ನುವಷ್ಟರಲ್ಲಿ ದೊಡ್ಡ ಚಂಡಮಾರುತಕ್ಕೆ ಸಿಕ್ಕಿಹಾಕಿಕೊಂಡು ಅವುಗಳಲ್ಲಿನ ಪ್ರಯಾಣಿಕರು ಪ್ರಾಣಭಯದಿಂದ ತತ್ತರಿಸಿ ಹೋದರು. ಆವರೆಗೆ ಪ್ರಯಾಣದುದ್ದಕ್ಕೂ ಜಾತಿ ಮತಗಳ ಗುಂಪುಗಳಾಗಿ ಪ್ರತ್ಯೇಕವಾಗಿದ್ದ ಜನ ಈಗ ಒಟ್ಟಿಗೆ ಒಂದು ಗುಂಪಿನಂತೆ ದೇವರ ಪ್ರಾರ್ಥನೆ ಶುರು ಮಾಡಿದರು. ಆದರೆ ಚಂಡಮಾರುತದ ಭಯ ಕಡಿಮೆಯಾಗುತ್ತಿದ್ದಂತೆ ಗುಂಪುಗಳ ವಿಲಾಸ ಪ್ರವೃತ್ತಿ ಆರಂಭವಾದುದನ್ನು ನೋಡಿ ಗಾಂಧಿ ಬೆರಗುಗೊಂಡರು. ಆದರೆ ಹಡಗು ಇಳಿದೊಡನೆ ತಮ್ಮ ಕುಟುಂಬಕ್ಕೆ ಇನ್ನೂ ದೊಡ್ಡದಾದ ಚಂಡಮಾರುತದ ಅಪಾಯ ಕಾದಿದೆ ಎಂಬುದು ಅವರಿಗೇನು ಗೊತ್ತು? ೧೮೯೭ರ ಜನವರಿ ೧೩ರಂದು ಹಡಗು ಡರ್ಬಾನ್ ರೇವನ್ನು ತಲುಪಿತಾದರೂ, ಬೊಂಬಾಯಿಯಲ್ಲಿ ಪ್ಲೇಗ್ ಇದ್ದುದರಿಂದ ವೈದ್ಯಕೀಯ ಮುನ್ನೆಚ್ಚರಿಕೆಯಾಗಿ ಕೂಡಲೇ ಪ್ರಯಾಣಿಕರನ್ನು ಹಡಗಿನಿಂದ ಇಳಿಯಲು ಬಿಡಲಿಲ್ಲ.

ಆದರೆ ಈ ಮುನ್ನೆಚ್ಚರಿಕೆ ಒಂದೆರಡು ದಿನಗಳನ್ನೂ ಮೀರಿ ಮುಂದುವರೆದಾಗ, ಇದು ಗಾಂಧಿ ಬಗ್ಗೆ ಡರ್ಬಾನ್‌ನಲ್ಲಿ ಹಬ್ಬಿದ್ದ ಒಂದು ಸುದ್ದಿಯ ಪರಿಣಾಮ ಎಂಬ ಮತ್ತೊಂದು ಸುದ್ದಿ ಹಡಗಿನಲ್ಲಿ ಹರಡತೊಡಗಿತು. ಅದಕ್ಕೆ ಮೂಲ ಕಾರಣ ಗಾಂಧಿ ಭಾರತಕ್ಕೆ ಬಂದು ಕಲ್ಕತ್ತಾದಿಂದ ರಾಜಕೋಟೆಗೆ ಹೋಗುವ ಮಾರ್ಗವಾಗಿ ಅಲಹಾಬಾದ್‌ನಲ್ಲಿ ಆಕಸ್ಮಿಕವಾಗಿ ಒಂದು ದಿನ ಇರಬೇಕಾಗಿ ಬಂದ ಸಂದರ್ಭದಲ್ಲಿ 'ಪಯೊನಿಯರ್' ಎಂಬ ಪತ್ರಿಕೆಯ ಆಂಗ್ಲ ಸಂಪಾದಕನೊಂದಿಗೆ ಸ್ವಲ್ಪ ಹುರುಪಿನಿಂದಲೇ ನಡೆಸಿದ ಮಾತುಕತೆಯೇ ಕಾರಣವಾಗಿತ್ತು. ಭಾರತದ ಹಿತಾಸಕ್ತಿಗಳಿಗೆ ವಿರುದ್ಧವಾದುದೆಂದೇ ಹೆಸರಾಗಿದ್ದ ಆ ಪತ್ರಿಕೆ ಗಾಂಧಿ ಭಾರತದಲ್ಲಿ ನಡೆಸಿದ ಸಭೆಗಳು ಮತ್ತು ಮಾಡಿದ ಭಾಷಣಗಳನ್ನು ವಿಕೃತಗೊಳಿಸಿ ವರದಿ ಮಾಡಿತ್ತು. ಇದರ ಜೊತೆಗೇ ಬೊಂಬಾಯಿಯಿಂದ ಸೇಠ್ ಅಬ್ದುಲ್ಲಾರ ಎರಡು ಹಡಗುಗಳು ಸಾವಿರ ಜನ ಭಾರತೀಯರನ್ನು ಹೊತ್ತು ಬರುತ್ತಿರುವುದಾಗಿಯೂ ಅವರೆಲ್ಲ ಗಾಂಧಿ ನೇತೃತ್ವದಲ್ಲಿ ನೆಟಾಲನ್ನು ಅತಿಕ್ರಮಣ ಮಾಡಲು ಉದ್ದೇಶಿಸಿದ್ದಾರೆಂಬ ಸುದ್ದಿಯೂ ಹಬ್ಬಿ ಡರ್ಬಾನ್ ನಗರ ಪ್ರಕ್ಷುಬ್ಧವಾಗಿತ್ತು. ಬಿಳಿಯ ಜನಾಂಗದ ಪುಂಡು ಪೋಕರಿಗಳು ಡರ್ಬಾನ್ ಬಂದರಿನಲ್ಲಿ ಗುಂಪುಗೂಡಿ ಗಾಂಧಿ ಮೇಲೆ ದಾಳಿ ನಡೆಸಲು ಸಿದ್ಧವಾಗಿದೆ ಎಂಬ ಸುದ್ದಿಯೂ ಗಾಂಧಿಗೆ ತಲುಪಿತು.

ಕಳ್ಳನಂತೆ ನಗರ ಪ್ರವೇಶ ಮಾಡಲಾರೆ

ನೆಟಾಲ್‌ನ ಪ್ರಧಾನ ಕಾನೂನು ಸಲಹೆಗಾರರಾದ ಹ್ಯಾರಿ ಎಸ್ಕೊಂಬ್, ಗಾಂಧಿ ಮತ್ತು ಅವರ ಕುಟುಂಬ ಸಂಜೆಯ ಮಬ್ಬುಗತ್ತಲಿನಲ್ಲಿ ನಗರವನ್ನು ಪ್ರವೇಶಿಸಿದರೆ ಒಳಿತೆಂದು ಸಂದೇಶ ಕಳಿಸಿದ್ದರು. ಆದರೆ ಗಾಂಧಿ ತಾನು ಕಳ್ಳನಂತೆ ನಗರ ಪ್ರವೇಶ ಮಾಡಲಾರೆನೆಂದೂ, ಹಾಡಹಗಲೇ ಎಲ್ಲರೆದುರಿಗೇ ಪುರಪ್ರವೇಶ ಮಾಡುವುದಾಗಿ ಹೇಳಿದರು. ಆದರೆ ಕೂಡಲೇ ಸೇಠ್ ಅಬ್ದುಲ್ಲಾ ಈ ಸಾಹಸಕ್ಕೆ ಇಳಿಯದಂತೆ ಸಂದೇಶ ಕಳಿಸಿದರು. ಈ ಮಧ್ಯೆ ಈ ಸಮಸ್ಯೆಗೊಂದು ಪರಿಹಾರ ರೂಪಿಸಿದ್ದ ಹಡಗು ಕಂಪನಿಯ ವಕೀಲ ಎಫ್.ಎ. ಲಾಫ್ಟನ್ ಗಾಂಧಿಯ ಪತ್ನಿ ಮತ್ತು ಮಕ್ಕಳು ಅನಾಮಿಕರಾಗಿ ಹಡಗು ಇಳಿದು ವಾಹನವೊಂದರಲ್ಲಿ 'ನೆಟಾಲ್ ಇಂಡಿಯನ್ ಕಾಂಗ್ರೆಸ್'ನ ರುಸ್ತುಂಜಿ ಅವರ ಮನೆಗೆ ತೆರಳುವ ವ್ಯವಸ್ಥೆ ಮಾಡುವುದಾಗಿಯೂ ಆನಂತರ ಗಾಂಧಿ ಮತ್ತು ತಾನು ಇಬ್ಬರೇ ನಡೆದು ನಗರಕ್ಕೆ ಹೋದರೆ ಯಾರೂ ಗುರುತಿಸಲಾರರೆಂದು ಸಲಹೆ ನೀಡಿದ. ಕಸ್ತೂರಬಾ ಆಗ ತುಂಬು ಗರ್ಭಿಣಿಯಾಗಿದ್ದುದರಿಂದ ಗಾಂಧಿ ಅದನ್ನು ಒಪ್ಪಿದರು ಮತ್ತು ಅದರಂತೆ ಗಾಂಧಿ ಕುಟುಂಬ ಸುರಕ್ಷಿತವಾಗಿ ವಾಹನ ಹತ್ತಿ ನಗರದತ್ತ ಹೊರಟಿತು. ನಂತರ ಗಾಂಧಿ ಹಾಗೂ ಹಡಗು ಕಂಪನಿಯ ವಕೀಲ ಲೋಕಾಭಿರಾಮವಾಗಿ ಮಾತಾಡಿಕೊಳ್ಳುತ್ತಾ ನಗರದ ಕಡೆ ನಡೆಯತೊಡಗಿದರು. ದಾಳಿ ಮಾಡಲು ಬಂದ ಜನರ ಗುಂಪು ಕೂಡ ಕಾದು ಕಾದು ಅಷ್ಟು ಹೊತ್ತಿಗೆ ಕರಗಿ ಹೋಗಿತ್ತು. ಪೊಲೀಸ್ ಪಹರೆ ಕೂಡ ಹಿಂದಿರುಗಿತ್ತು.

ಗಂಭೀರವಾಗಿ ಗಾಯಗೊಂಡ ಗಾಂಧಿ

ಆದರೆ ಅಲ್ಲೇ ಅಲೆದಾಡುತ್ತಿದ್ದ ಇಬ್ಬರು ಪೋಲಿ ಹುಡುಗರು ಗಾಂಧಿಯನ್ನು ಗುರುತಿಸಿ 'ಗಾಂಧಿ! ಗಾಂಧಿ!' ಎಂದು ಕೂಗಿದರು. ನಾಲ್ಕೂ ಕಡೆಯಿಂದ ಜನ ಮತ್ತೆ ಹೇಗೋ ಸೇರಿದರು. ಗಾಂಧಿಯನ್ನು ಹಿಡಿದು ಹೊಡೆಯಲಾರಂಭಿಸಿದರು. ವಕೀಲ ಅಲ್ಲಿ ನಿಂತಿದ್ದ ರಿಕ್ಷಾವೊಂದಕ್ಕೆ ಗಾಂಧಿಯನ್ನು ಹತ್ತಿಸಲು ಪ್ರಯತ್ನಿಸಿದನಾದರೂ, ಗುಂಪು ರಿಕ್ಷಾದವನನ್ನು ಬೆದರಿಸಿ ಓಡಿಸಿತು. ನಂತರ ಗಾಂಧಿಯನ್ನು ಪ್ರತ್ಯೇಕಿಸಿ ಅವರ ಮೇಲೆ ಕಲ್ಲು, ಇಟ್ಟಿಗೆ, ಮೊಟ್ಟೆಗಳನ್ನು ತೂರತೊಡಗಿತು. ಗಾಂಧಿ ಗಂಭೀರವಾಗಿ ಗಾಯಗೊಂಡು ಕುಸಿದರು. ನಂತರವೂ ಅವರ ದೇಹದ ಮೇಲೆ ಯದ್ವಾ ತದ್ವಾ ಪ್ರಹಾರ ನಡೆದೇ ಇತ್ತು. ಆ ಹೊತ್ತಿಗೆ ಆ ಬೀದಿಯಲ್ಲಿ ಗಾಂಧಿ ಹಾದುಹೋಗುವ ಯೋಜನೆ ಇದೆಯೆಂದು ತಿಳಿದು ಗಾಂಧಿಯನ್ನು ನೋಡುವ ಕುತೂಹಲದಿಂದ ಬೀದಿಯಲ್ಲಿ ಕಾಯುತ್ತಿದ್ದ ಪೊಲೀಸ್ ವರಿಷ್ಠಾಧಿಕಾರಿ ಅಲೆಕ್ಸಾಂಡರ್‌ರ ಪತ್ನಿ ಓಡಿ ಬಂದು ಹಲ್ಲೆ ಮಾಡುತ್ತಿದ್ದ ಗುಂಪು ಮತ್ತು ಗಾಂಧಿಯ ನಡುವೆ ರಕ್ಷಣಾ ಗೋಡೆಯಂತೆ ನಿಂತಳು. ಅಲ್ಲೇ ಇದ್ದ ಭಾರತೀಯ ಸಮುದಾಯದ ಒಬ್ಬ ಹುಡುಗ ಇದರಿಂದ ಧೈರ್ಯ ತಂದುಕೊಂಡು ಈ ಸುದ್ದಿಯನ್ನು ಹತ್ತಿರದ ಪೊಲೀಸ್ ಠಾಣೆಗೆ ತಿಳಿಸಿದ. ಪೊಲೀಸ್ ದಳ ಕೂಡಲೇ ಧಾವಿಸಿ ಬಂದು ಗಾಂಧಿಯನ್ನು ಪೊಲೀಸ್ ರಕ್ಷಣೆಯಲ್ಲಿ ರುಸ್ತುಂಜಿ ಅವರ ಮನೆಗೆ ಕೊಂಡೊಯ್ದು ಪ್ರಾಥಮಿಕ ವೈದ್ಯಕೀಯ ಉಪಚಾರ ಒದಗಿಸಿತು.

ಈ ಹೊತ್ತಿಗೆ ಇಡೀ ಪಟ್ಟಣಕ್ಕೆ ಗಾಂಧಿ ಎಲ್ಲಿದ್ದಾರೆಂದು ಗೊತ್ತಾಯಿತು. ಮತ್ತೆ ಬಿಳಿಯ ಪುಂಡರ ಗುಂಪು ರುಸ್ತುಂಜಿ ಮನೆಯ ಬಳಿ ಸೇರತೊಡಗಿ ಅದನ್ನು ಸುತ್ತುವರೆಯಿತು. ಅದು 'ಗಾಂಧಿಯನ್ನು ನಮಗೆ ಒಪ್ಪಿಸಿ, ಅವರನ್ನು ಸುಟ್ಟು ಹಾಕುತ್ತೇವೆ!' ಎಂದು ಕೂಗಹತ್ತಿತು. ಗುಂಪು ಆ ಮನೆಯೊಳಗಿದ್ದವರೂ ಸೇರಿ ಮನೆಯನ್ನು ಸುಟ್ಟು ಹಾಕುವ ಉದ್ರೇಕದಲ್ಲಿತ್ತು. ಅಂತಹ ಸಂದರ್ಭದಲ್ಲಿ ಗಾಂಧಿ ಹಠ ಮಾಡದೆ, ಪೊಲೀಸ್ ವರಿಷ್ಠಾಧಿಕಾರಿ ಅಲೆಕ್ಸಾಂಡರ್‌ನ ಸಲಹೆಯ ಮೇರೆಗೆ ಪೇಟ ತೊಟ್ಟು ಸ್ಥಳೀಯ ಭಾರತೀಯ ಪೊಲೀಸ್ ಸಿಬ್ಬಂದಿಯ ವೇಷದಲ್ಲಿ ಇತರ ಇಬ್ಬರು ಮೈಗೆ ಕಪ್ಪು ಬಣ್ಣ ಬಳಿದುಕೊಂಡು ಅಂತಹುದೇ ಭಾರತೀಯ ಪೊಲೀಸ್ ಸಿಬ್ಬಂದಿಯ ಮಾರುವೇಷದಲ್ಲಿದ್ದ ಗುಪ್ತಚರ ಸಿಬ್ಬಂದಿಯೊಂದಿಗೆ ರಾತ್ರಿ ಪಾಳಿಯ ಕರ್ತವ್ಯ ನಿರತ ಪೊಲೀಸರಂತೆ ಹೊರಬಂದು ಸಣ್ಣ ಸಣ್ಣ ಬೀದಿಗಳ ಮೂಲಕ ಪೊಲೀಸ್ ಠಾಣೆ ಸೇರಿ ರಕ್ಷಣೆ ಪಡೆದರು. ಗುಂಪನ್ನು ನಿಯಂತ್ರಿಸುತ್ತಿದ್ದ ಪೊಲೀಸ್ ಅಧಿಕಾರಿ ಗಾಂಧಿ ಮಾರುವೇಷದಲ್ಲಿ ತಪ್ಪಿಸಿಕೊಂಡ ಸುದ್ದಿಯನ್ನು ಪ್ರಕಟಿಸಿದ. ಗುಂಪು ಹತಾಶವಾಯಿತು. ನಿಧಾನವಾಗಿ ಚದುರಿಹೋಯಿತು.

ಒಂದು ನೈತಿಕ ಜಿಜ್ಞಾಸೆ

ಈ ಸಂದರ್ಭದ ಬಗ್ಗೆ ಗಾಂಧಿ ತಮ್ಮ ಆತ್ಮಕಥೆಯಲ್ಲಿ ಒಂದು ನೈತಿಕ ಜಿಜ್ಞಾಸೆಯನ್ನೇ ನಡೆಸಿದ್ದಾರೆ. ಮೊದಲು ಮಬ್ಬುಗತ್ತಲಲ್ಲಿ ಯಾರಿಗೂ ಕಾಣದಂತೆ ಹೋಗಲು ನಿರಾಕರಿಸಿ ನಡೆದುಕೊಂಡು ಹೊರಟವನು ಈಗ ಮಾರುವೇಷಕ್ಕೆ ಶರಣಾದುದು ಎಷ್ಟು ನೈತಿಕ ಎಂದು ತಮ್ಮನ್ನು ತಾವೇ ಕೇಳಿಕೊಂಡಿದ್ದಾರೆ. ನನ್ನ ಪ್ರಾಣ ಮಾತ್ರವಲ್ಲದೆ ಇತರರ ಪ್ರಾಣ ಮತ್ತು ಆಸ್ತಿಯನ್ನು ಉಳಿಸಲು ತಾನು ಎರಡನೇ ತೀರ್ಮಾನ ಕೈಗೊಂಡೆನೇ ಎಂಬ ಆತ್ಮನಿರೀಕ್ಷಣೆ ಮಾಡಿಕೊಳ್ಳುತ್ತಾ ತನ್ನ ಎರಡು ತೀರ್ಮಾನಗಳೂ ಸರಿ ಎನ್ನುತ್ತಾರೆ. ಜೊತೆಗೇ ಈ ಮಾತುಗಳನ್ನೂ ಸೇರಿಸುತ್ತಾರೆ: 'ಒಬ್ಬ ವ್ಯಕ್ತಿ ಒಂದು ವಿಶಿಷ್ಟ ಪರಿಸ್ಥಿತಿಯಲ್ಲಿ ಹೇಗೆ ನಡೆದುಕೊಳ್ಳುತ್ತಾನೆ ಎಂದು ಹೇಳುವುದು ಕಷ್ಟ. ಮನುಷ್ಯನನ್ನು ಬಾಹ್ಯ ಆಚರಣೆಗಳಿಂದಲೇ ಅಳೆಯುವುದು ಅವನ ಯೋಗ್ಯತೆ ಕುರಿತ ಊಹೆ ಮಾತ್ರವಾಗುತ್ತದೆ. ಏಕೆಂದರೆ, ಆ ಊಹೆಗೆ ಸ್ಪಷ್ಟವೆನ್ನಬಹುದಾದ ಆಧಾರಗಳಿರುವುದಿಲ್ಲ'. ಗಾಂಧಿ ಮನುಷ್ಯ ಸ್ವಭಾವಕ್ಕೊಂದು ನೈತಿಕ ನೆಲೆಗಟ್ಟನ್ನು ಸಂಘಟಿಸುವ ತಮ್ಮ ಪ್ರಯತ್ನದಲ್ಲಿ ತಮ್ಮನ್ನು ತಾವೇ ಪರೀಕ್ಷೆಗೊಳಪಡಿಸಿಕೊಳ್ಳಲಾರಂಭಿಸಿದ್ದ ಪರಿ ಇದು.

ಗಾಂಧಿ ಮೇಲಿನ ಹಲ್ಲೆ ಜಾಗತಿಕ ಸುದ್ದಿಯಾಗಿ ಇಂಗ್ಲೆಂಡ್‌ನ ಬ್ರಿಟಿಷ್ ಸಾಮ್ರಾಜ್ಯ ಸರ್ಕಾರದ ವಸಾಹತುಗಳ ಉಸ್ತುವಾರಿ ಸಚಿವ ಚೇಂಬರ್ಲೇನ್ ಅವರನ್ನು ತಲುಪಿತು. ಆತ ನೆಟಾಲ್ ಸರ್ಕಾರಕ್ಕೆ ತಂತಿ ಕಳಿಸಿ ಹಲ್ಲೆಕೋರರನ್ನು ಹಿಡಿದು ಶಿಕ್ಷಿಸಲು ಸೂಚಿಸಿದ. ಅದರಂತೆ ನೆಟಾಲ್ ಸರ್ಕಾರದ ಪ್ರಧಾನ ವಕೀಲ ಎಸ್ಕೊಂಬ್ ಗಾಂಧಿಯನ್ನು ಹಲ್ಲೆಕೋರರನ್ನು ಗುರುತಿಸಲು ಸಾಧ್ಯವೇ ಎಂದು ಕೇಳಿದರು. ಆದರೆ ಗಾಂಧಿ ಹಲ್ಲೆಕೋರರಲ್ಲಿ ಕೆಲವರನ್ನಾದರೂ ಗುರುತಿಸಬಲ್ಲವರಾಗಿದ್ದರೂ, ಅದು ಅನಗತ್ಯ ಎಂದು ಹೇಳಿದರು. ತಮ್ಮದು ಧಾರ್ಮಿಕ ನೆಲೆಯ ಹೋರಾಟವಾಗಿದೆ ಎಂದು ಅಭಿಪ್ರಾಯಪಟ್ಟ ಅವರು ತಾವು ಬಿಳಿಯರ ವಿರುದ್ಧ ದಂಗೆ ಏಳಲು ಭಾರತದಿಂದ ಜನರನ್ನು

ಕರೆದುತಂದಿರುವುದಾಗಿ ಹಬ್ಬಿಸಿದ್ದ ವದಂತಿಯನ್ನು ನಂಬಿದ್ದೇ ಅವರು ತಮ್ಮ ಮೇಲೆ ಹಲ್ಲೆ ಮಾಡಲು ಕಾರಣವಾಗಿದ್ದರಿಂದ ಅವರು ಕ್ಷಮಾರ್ಹರಾಗಿದ್ದಾರೆ ಎಂದು ವಿವರಿಸಿದರು. ಹಾಗಾಗಿ ಅವರ ಮೇಲೆ ಮೊಕದ್ದಮೆಗಳನ್ನು ತಾನು ಹೂಡಲಾರೆ ಎಂದು ಅವರು ಹಲ್ಲೆಗೆ ಕಾರಣವಾದ ಅಂತಹ ವದಂತಿಗಳು ಹಬ್ಬಿಸಿದ ಬಿಳಿಯರ ನಾಯಕರೇ ಈ ಹಲ್ಲೆಯ ಹೊಣೆಯನ್ನು ಹೊರಬೇಕಾಗಿದೆ ಎಂದು ಹೇಳಿದರು. ಗಾಂಧಿಯ ಈ ಹೇಳಿಕೆ ಮತ್ತು ಆನಂತರ ಎರಡು ಹಡಗುಗಳಲ್ಲಿ ಬಂದವರು ಸಾಮಾನ್ಯ ಪ್ರಯಾಣಿಕರೇ ಹೊರತು, ಅವರಿಗೂ ಗಾಂಧಿಗೂ ಸಂಬಂಧವಿಲ್ಲ ಎಂಬುದು ನಿಧಾನವಾಗಿ ಸ್ಪಷ್ಟವಾದ ಮೇಲೆ ಬಿಳಿಯ ಸಾಮಾನ್ಯ ಜನ ಮತ್ತು ಪತ್ರಕರ್ತರು ಪಶ್ಚಾತ್ತಾಪಪಟ್ಟರಲ್ಲದೆ ಗಾಂಧಿ ವ್ಯಕ್ತಿತ್ವದ ಬಗ್ಗೆ ತಮ್ಮ ಅಭಿಪ್ರಾಯವನ್ನು ನಿಧಾನವಾಗಿಯಾದರೂ ಬದಲಾಯಿಸಿಕೊಳ್ಳಲಾರಂಭಿಸಿದರು.

ಹೋರಾಟದ ಮೊದಲ ಶಾಸನಾತ್ಮಕ ಜಯ

ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ನೆಟಾಲ್ ಶಾಸನಸಭೆ ತನ್ನ ದೇಶದಲ್ಲಿರುವ ಭಾರತೀಯರೆಲ್ಲರೂ ಬ್ರಿಟಿಷ್ ಸರ್ಕಾರದ ಪ್ರಜೆಗಳೇ ಎಂದು ತಾತ್ವಿಕವಾಗಿಯಾದರೂ ಒಪ್ಪುವ ಶಾಸನವೊಂದನ್ನು ಅಂಗೀಕರಿಸಿತು. ಆದರೆ ಸಕ್ರಮ ಪ್ರಜೆತನ ಮತ್ತು ಮತಾಧಿಕಾರಕ್ಕಾಗಿ ಅದಕ್ಕೊಂದು ಕನಿಷ್ಠ ಶಿಕ್ಷಣ ಮಟ್ಟದ ಮಾನದಂಡವನ್ನು ನಿಗದಿ ಮಾಡಿತು. ಆ ಮೂಲಕ ಅದು ಭಾರತೀಯರ ಮತಾಧಿಕಾರವನ್ನು ಕಸಿದುಕೊಳ್ಳುವ ತನ್ನ ಸಾರಾಸಗಟು ನಿರ್ಧಾರವನ್ನು ಹಿಂತೆಗೆದುಕೊಂಡಂತಾಗಿತ್ತು. ಇದು ಆ ಕಾಲಕ್ಕೆ ಗಾಂಧಿ ಹೋರಾಟಕ್ಕೆ ಸಿಕ್ಕ ದೊಡ್ಡ ಜಯವೇ ಆಗಿತ್ತು. ಈ ಮಧ್ಯೆ ಗಾಂಧಿ ಮೂರನೇ ಗಂಡು ಮಗುವಿನ ತಂದೆಯಾಗಿದ್ದರು (೧೮೯೭). ಆ ಮಗುವಿಗೆ ರಾಮದಾಸ ಎಂದು ಹೆಸರಿಡಲಾಗಿತ್ತು.

■

೧೧

ಮಕ್ಕಳ ಶಿಕ್ಷಣ, ಯುದ್ಧ, ವಾಗ್ವಾದ ಇತ್ಯಾದಿ

ಭಾರತೀಯರ ಮತಾಧಿಕಾರದ ಮರುಸ್ಥಾಪನೆಯ ಹಾದಿಯಲ್ಲಿ ದೊರೆತ ಈ ಜಯದ ನಂತರ ಗಾಂಧಿ ತಮ್ಮ ವಕೀಲ ವೃತ್ತಿ ಮತ್ತು ಮಕ್ಕಳ ಶಿಕ್ಷಣದ ಕಡೆ ಗಮನ ಹರಿಸಲಾರಂಭಿಸಿದರು. ಇವುಗಳ ಜೊತೆಗೇ ಅವರು ತಾವು ಮೊದಲಿಂದಲೂ ಇಷ್ಟಪಡುತ್ತಿದ್ದ ರೋಗಿ ಶುಶ್ರೂಷೆ, ಪ್ರಾಥಮಿಕ ವೈದ್ಯಕೀಯ ತಿಳುವಳಿಕೆ ಪಡೆಯುವ ಕಡೆ ಗಮನ ಹರಿಸಿದರು. ಅದರ ಭಾಗವಾಗಿ ಗೆಳೆಯರೊಬ್ಬರು ನಡೆಸುತ್ತಿದ್ದ ಉಚಿತ ಆಸ್ಪತ್ರೆಯಲ್ಲಿ ಸಹಾಯಕರಾಗಿ ಸೇರಿಕೊಂಡರು. ಇಲ್ಲಿ ಕಲಿತ ವಿದ್ಯೆಯ ಸಹಾಯದಿಂದ ಅವರು ಡರ್ಬಾನ್‌ನಲ್ಲಿ ಪ್ಲೇಗ್ ಹಬ್ಬಿದಾಗ ನಗರ ನೈರ್ಮಲ್ಯ ಚಟುವಟಿಕೆಗಳಲ್ಲಿ ಭಾಗವಹಿಸಿದರು. ನಂತರದಲ್ಲೇ ತಮ್ಮ ಪತ್ನಿಯ ನಾಲ್ಕನೇ ಹೆರಿಗೆಯನ್ನು (೧೯೦೦) ತಾವೇ ಯಶಸ್ವಿಯಾಗಿ ನಿರ್ವಹಿಸಿದರು. ತಮ್ಮ ನಾಲ್ಕನೇ ಮಗನಿಗೆ ಅವರು ದೇವದಾಸ ಎಂದು ಹೆಸರಿಟ್ಟರು. ಈ ಮಧ್ಯೆ ಅವರು ಭಾರತದಲ್ಲಿ ಕಾಣಿಸಿಕೊಂಡ ಭೀಕರ ಕ್ಷಾಮದ ಪರಿಹಾರ ನಿಧಿಗೆ ಹಣ ಸಂಗ್ರಹಿಸತೊಡಗಿದರು. ಈ ನಿಧಿಗೆ ಬಿಳಿಯರಿಂದಲೂ ಸಾಕಷ್ಟು ಹಣ ಸಂದಾಯವಾಯಿತು ಎಂಬುದು ಗಾಂಧಿ ಪಾಲಿನ ಹೆಗ್ಗಳಿಕೆಯಾಗಿತ್ತು.

ಅವರು ತಮ್ಮ ಮನೆಯ ಮಕ್ಕಳನ್ನು ಶಾಲೆಗಳಿಗೆ ಕಳಿಸಲು ಇಚ್ಛಿಸದೆ, ಅವರಿಗೆ ತಮ್ಮ ಮಾತೃಭಾಷೆಯಾದ ಗುಜರಾತಿಯಲ್ಲೇ ಶಿಕ್ಷಣ ಕೊಡಬಯಸಿದರು. ಬಿಡುವಿನ ವೇಳೆಯಲ್ಲಿ ಅವರಿಗೆ ತಾವೇ ಗುಜರಾತಿ ಭಾಷೆಯಲ್ಲಿ ಪಾಠ ಮಾಡಲಾರಂಭಿಸಿದರು. ಅದು ಸಾಲದು ಎನ್ನಿಸಿದಾಗ ಸಾಮಾನ್ಯ ವಿಷಯಗಳ ಪಾಠಕ್ಕೆ ಓರ್ವ ಮಹಿಳಾ ಶಿಕ್ಷಕಿಯನ್ನು ನೇಮಿಸಿದರು. ಆದರೆ ಇದು ಬಹುಕಾಲ ನಡೆಯದೆ, ಗಾಂಧಿಯ ಸಾರ್ವಜನಿಕ ಜೀವನದಲ್ಲಿ ಭಾಗಿಯಾಗುವ ಮೂಲಕವೇ ಅವರ ಮಕ್ಕಳು ಅನೌಪಚಾರಿಕ ಶಿಕ್ಷಣ ಪಡೆಯುವಂತಾಯಿತು. ಈ ಬಗ್ಗೆ ಮುಂದೆ ಕೂಡ ಅವರ ನಾಲ್ಕು ಗಂಡು ಮಕ್ಕಳಲ್ಲಿ ಹಿರಿಯ ಹರಿಲಾಲನ ಹೊರತಾಗಿ ಮತ್ತಾರೂ ವಿಷಾದ ವ್ಯಕ್ತಪಡಿಸಲಿಲ್ಲ. ಅದನ್ನು ಅವರು ತಮ್ಮ ಸೌಭಾಗ್ಯವೆಂದೇ ಪರಿಗಣಿಸಿ ತಂದೆಯ ಸಾರ್ವಜನಿಕ ಜೀವನದಲ್ಲಿ ಸಕ್ರಿಯವಾಗಿ ಸಹಕರಿಸಿದರಲ್ಲದೆ ತಮ್ಮ ಬದುಕನ್ನೂ ಕಟ್ಟಿಕೊಂಡರು. ಹರಿಲಾಲ ಮಾತ್ರ ತಂದೆಯ ನಂಬಿಕೆ ಮತ್ತು ಜೀವನ ಕ್ರಮಗಳನ್ನು ತನ್ನ ನಂಬಿಕೆ ಹಾಗೂ ಜೀವನಕ್ರಮವನ್ನಾಗಿ ಮಾನ್ಯ ಮಾಡಲು ನಿರಾಕರಿಸಿದನಷ್ಟೇ ಅಲ್ಲ, ತಂದೆಯ ವಿರುದ್ಧ ಒಂದು ದೊಡ್ಡ ಬಂಡಾಯವನ್ನೇ ಘೋಷಿಸಿದನು. ಅದೊಂದು ಬೇರೆಯೇ, ದೊಡ್ಡ ಮತ್ತು ಸಂಕೀರ್ಣವಾದ ಕಥೆ. ಅದನ್ನು ನಂತರ ನೋಡೋಣ.

ಗಾಂಧಿ ಕಣ್ಣು ತೆರೆಸಿದ ಕಸ್ತೂರಬಾ

ಇದೇ ದಿನಗಳಲ್ಲಿ ಗಾಂಧಿಯವರ ತಾತ್ವಿಕ ಬದ್ಧತೆ ಮತ್ತು ಇನ್ನೂ ಮಾಗದ ಅವರ ವ್ಯಕ್ತಿತ್ವದ ಪರಿಚಯ ಮಾಡಿಕೊಡುವ ಒಂದು ಘಟನೆಯನ್ನೂ ಇಲ್ಲಿ ನಿರೂಪಿಸಬೇಕು. ಗಾಂಧಿಯವರ ವಕೀಲಿಕೆಗೆ ನೆರವಾಗುತ್ತಿದ್ದ ಒಂದಿಬ್ಬರು ಗುಮಾಸ್ತರು ಅವರ ಮನೆಯಲ್ಲಿಯೇ ವಾಸಿಸುತ್ತಿದ್ದರು. ಅಂಥವರಲ್ಲಿ ಹೊಸದಾಗಿ ಬಂದವರೊಬ್ಬರು ಮೂಲದಲ್ಲಿ ಅಸ್ಪೃಶ್ಯ ಜಾತಿಗೆ ಸೇರಿದ್ದ ಕ್ರಿಶ್ಚಿಯನ್ ಆಗಿದ್ದರು. ಆಗ ಆಧುನಿಕ ಶೌಚ ವ್ಯವಸ್ಥೆ ಇಲ್ಲದಿದ್ದುದರಿಂದ ಶೌಚಗೃಹದಲ್ಲಿ ಪ್ರತಿದಿನ ಸ್ವಚ್ಛಗೊಳಿಸಬೇಕಿದ್ದ ಶೌಚದ ಮಡಕೆಯೊಂದಿರುತ್ತಿತ್ತು. ಹೊಸಬನಾದ ಈ ಕ್ರಿಶ್ಚಿಯನ್ ಗುಮಾಸ್ತನಿಗೆ ಈ ವ್ಯವಸ್ಥೆಯ ಪರಿಚಯವಿಲ್ಲದ್ದರಿಂದಾಗಿ ಗಾಂಧಿ ಕುಟುಂಬವೇ ಆಗ ಅದನ್ನು ಮಾಡಬೇಕಾಗಿತ್ತು. ಆದರೆ ಕಸ್ತೂರಬಾ ಆತ ಮೂಲತಃ ಅಸ್ಪೃಶ್ಯನಾಗಿದ್ದುದರಿಂದ ಅವನ ಶೌಚದ ಮಡಕೆಯನ್ನು ಸ್ವಚ್ಛಗೊಳಿಸಲು ಹಿಂಜರಿದು ಗಾಂಧಿಯವರೊಂದಿಗೆ ವಾದಕ್ಕಿಳಿದರು. ಕೊನೆಗೆ ಮುನಿಸಿಕೊಂಡೇ ಆ ಮಡಕೆಯನ್ನೆತ್ತಿಕೊಂಡು ಮಹಡಿಯಿಂದ ಇಳಿಯುತ್ತಿದ್ದಾಗ ವಾದದಿಂದ ಬೇಸತ್ತಿದ್ದ ಗಾಂಧಿ 'ನಿನ್ನದು ಇದೇ ಮನೋಭಾವವಾದರೆ ಈ ಮನೆಯಲ್ಲಿ ನಿನಗೆ ಜಾಗವಿಲ್ಲ!' ಎಂದು ಆರ್ಭಟಿಸಿದರು. ಇದರಿಂದ ಇನ್ನಷ್ಟು ಸಿಟ್ಟುಗೊಂಡ ಬಾ 'ಇದು ನಿಮ್ಮ ಮನೆ ಮಾತ್ರವಾಗಿದ್ದರೆ ನಾನಿಲ್ಲಿ ಇರಲಾರೆ' ಎಂದು ಮಡಕೆಯನ್ನು ಅಲ್ಲಿಯೇ ಬಿಟ್ಟು ನಿಂತರು. ಇದನ್ನು ನೋಡಿ ಕೋಪೋದ್ರಿಕ್ತರಾದ ಗಾಂಧಿ ಪತ್ನಿಯ ರಟ್ಟೆ ಹಿಡಿದು ಅವರನ್ನು ದರದರನೆ ಎಳೆದುಕೊಂಡು ಮನೆಯ ಮುಂಬಾಗಿಲತ್ತ ನಡೆದಂತೆ ಗಾಬರಿಗೊಂಡ ಕಸ್ತೂರಬಾ 'ಅಯ್ಯೋ ನಿಮಗೇನಾಗಿದೆ? ನಾನು ನಿಮ್ಮ ಪತ್ನಿ. ನನಗೆ ಇಲ್ಲಿ ಆಶ್ರಯದಾತರು ಯಾರಿದ್ದಾರೆ? ನಾನು ಎಲ್ಲಿಗೆ ಹೋಗಲಿ? ಹೊರಗಿನವರು ನೋಡುವ ಮುನ್ನ ಬಾಗಿಲು ಮುಚ್ಚಿರಿ' ಎಂದು ಕೂಗಿದರು.

ಗಾಂಧಿ ಎಚ್ಚರಗೊಂಡರು. ಕ್ಷಣದ ಮೈಮರೆವಿನಲ್ಲಿ ತಾನೆಂತಹ ಕ್ರೌರ್ಯಕ್ಕೆ ಕೈಹಾಕಿದ್ದೇನೆ ಎಂಬ ಅರಿವಾಗಿ ಅವರು ಅವಮಾನದಿಂದ ಬೆವತು ಹೋದರು. ಕೂಡಲೇ ಪತ್ನಿಯ ಕ್ಷಮೆ ಕೋರಿ ಅವರನ್ನು ಒಳಗೆ ಕರೆದುಕೊಂಡು ಬಂದು ಪಶ್ಚಾತ್ತಾಪದ ಬೇಗೆಯಿಂದ ಕುಸಿದು ಕುಳಿತರು. ಇಂತಹ ಹಲವು ಪಶ್ಚಾತ್ತಾಪಗಳ ಕ್ಷಣಗಳೇ ಎಚ್ಚೆತ್ತ ಗಾಂಧಿಯವರನ್ನು ರೂಪಿಸುತ್ತಾ ಹೋದದ್ದು ಎನ್ನಬಹುದು.

ಬೋಯರ್ ಯುದ್ಧಕ್ಕೊಂದು ಶುಶ್ರೂಷಾ ದಳ

ಈ ಮಧ್ಯೆ ಗಾಂಧಿ ಬ್ರಿಟಿಷ್ ಪ್ರಭುತ್ವದ ಪರವಾಗಿ ಒಂದು ಯುದ್ಧದಲ್ಲೂ ಪ್ರಭುತ್ವದ ಸೇವೆ ಮಾಡಿದರು. ೧೮೯೯ರಿಂದ ೧೯೦೨ರವರೆಗೆ ಮೂರು ವರ್ಷಗಳ ಕಾಲ ನಡೆದ ಯುದ್ಧವದು. ಈ ಹಿಂದೆ ತಿಳಿಸಿದಂತೆ ಬ್ರಿಟಿಷ್ ಸಾಮ್ರಾಜ್ಯ ಸರ್ಕಾರ ತನ್ನ ಪರಮಾಧಿಕಾರದಡಿಯಲ್ಲಿ ದ.ಆಫ್ರಿಕಾವನ್ನು ಒಂದು ಒಕ್ಕೂಟ ರಾಷ್ಟ್ರವಾಗಿ ಸ್ಥಾಪಿಸಲು ನಡೆಸಿದ್ದ ಸಂಧಾನಗಳ ಪ್ರಯತ್ನದಲ್ಲಿ ಉಂಟಾದ ಮಧ್ಯಂತರ ಬಿಕ್ಕಟ್ಟಿನ ಪರಿಣಾಮವಾಗಿತ್ತು. ಬೋಯರ್ ಯುದ್ಧವೆಂದೇ ಪ್ರಸಿದ್ಧವಾದ ಈ ಯುದ್ಧ, ಸಂಧಾನದ ಷರತ್ತುಗಳನ್ನು ವಿರೋಧಿಸುತ್ತಿದ್ದ ಬೋಯರರ ಯೋಧಗುಣದ ಆಸ್ಫೋಟನೆಯ ಪ್ರತೀಕವಾಗಿತ್ತು. ವೈಯಕ್ತಿಕವಾಗಿ ತಮಗೆ ಬೋಯರರ ಬಗ್ಗೆ ಸಹಾನುಭೂತಿ ಇತ್ತಾದರೂ, ಬ್ರಿಟಿಷ್ ಪ್ರಭುತ್ವದ ನಿಷ್ಠಾವಂತ ಪ್ರಜೆಯಾಗಿ ಪ್ರಭುತ್ವದ ಪರ ನಿಲ್ಲುವುದು ತಮ್ಮ ಕರ್ತವ್ಯವೆಂದು

ತಾವು ಭಾವಿಸಿದ್ದಾಗಿ ಗಾಂಧಿ ಹೇಳುತ್ತಾರೆ. ಅವರು ಕಾಣುತ್ತಿದ್ದ ಭಾರತೀಯ ಪ್ರಜೆಗಳ ಬಗೆಗಿನ ಬೋಯರರ ವರ್ತನೆಯೂ ಇದಕ್ಕೆ ಇನ್ನೊಂದು ಕಾರಣವಿದ್ದೀತು.

ಅದೇನೇ ಇರಲಿ, ಈ ಸಂದರ್ಭದಲ್ಲಿ ಅಹಿಂಸಾವಾದಿಯಾಗಿದ್ದ ಅವರು ಸಾರ್ವತ್ರಿಕವಾಗಿ ಯುದ್ಧಗಳ ಬಗ್ಗೆ ದಾಖಲಿಸಿರುವ ಒಂದು ಮಾತು ಕುತೂಹಲಕಾರಿಯಾಗಿದೆ: 'ಯುದ್ಧ ಅನೈತಿಕ ಎಂದು ನಂಬಿದವನು, ಒಮ್ಮೆ ಯುದ್ಧ ಆರಂಭವೇ ಆದಾಗ ಅದರಲ್ಲಿ ಭಾಗವಹಿಸುವುದು ಅನಿವಾರ್ಯ'. ಸದರಿ ಯುದ್ಧದಲ್ಲಿ, ನೆಟಾಲ್ ಸೈನ್ಯದ ನೆರವಿಗೆ ಬ್ರಿಟನ್‌ನಿಂದ ಹೆಚ್ಚುವರಿ ಸೇನೆ ಬರುವವರೆಗೆ ಗಾಂಧಿ ಭಾರತೀಯರ ಒಂದು ವೈದ್ಯ ಶುಶ್ರೂಷಕರ ಪಡೆಯನ್ನು ರಚಿಸಿಕೊಂಡು, ಯುದ್ಧಭೂಮಿಯಲ್ಲಿ ಗಾಯಾಳುಗಳಾದ ಸೈನಿಕರನ್ನು-ಬ್ರಿಟಿಷ್ ಅಥವಾ ಬೋಯರರೆನ್ನದೆ-ಯುದ್ಧಭೂಮಿಯಿಂದ ವೈದ್ಯಕೀಯ ಶುಶ್ರೂಷೆಗಾಗಿ ಸಾಗಿಸುವ ಹೊಣೆ ಹೊತ್ತರು. ಇದಕ್ಕಾಗಿ ಗಾಂಧಿ ಮತ್ತು ಅವರ ಸಹಚರರಿಗೆ ಯುದ್ಧ ಪ್ರಶಸ್ತಿ-ಪದಕಗಳನ್ನು ನೀಡಲಾಯಿತು. ಈ ಯುದ್ಧದ ಸಂಕಟಗಳ ಸಂದರ್ಭದಲ್ಲಿ ಭಾರತೀಯರೂ ಇಂಗ್ಲಿಷರೂ ಒಬ್ಬರನ್ನೊಬ್ಬರು ಅವಲಂಬಿಸಿ ಪರಸ್ಪರ ಸಹಕಾರದಿಂದ ವರ್ತಿಸಿದ ಅನುಭವ ನೆಟಾಲ್‌ನ ಸಮಾಜದಲ್ಲಿ ಭಾರತೀಯರ ಬಗ್ಗೆ ಹೆಚ್ಚಿನ ಸ್ನೇಹ ಮತ್ತು ಮಧುರ ಬಾಂಧವ್ಯದ ವಾತಾವರಣ ಬೆಳೆಯಲು ನೆರವಾಯಿತು. ಈ ಘಟ್ಟದಲ್ಲಿ ಗಾಂಧಿಗೆ-ತಮ್ಮ ವಕೀಲ ವೃತ್ತಿ ಯಶಸ್ವಿಯಾಗಿ ನಡೆಯುತ್ತಿದ್ದಾಗಲೇ – ತನ್ನ ಬದುಕಿನ ಮುಂದಿನ ಕೆಲಸ-ಕಾರ್ಯಗಳು ನಡೆಯಬೇಕಾದದ್ದು ಭಾರತದ ನೆಲದಲ್ಲಿ ಅನ್ನಿಸತೊಡಗಿತು. ಅವರು ದ.ಆಫ್ರಿಕಾ ಬಿಟ್ಟು ಭಾರತಕ್ಕೆ ಹಿಂದಿರುಗಲು ನಿಶ್ಚಯಿಸಿದರು. ಆ ಹೊತ್ತಿಗೆ ಭಾರತೀಯರ ಖಟ್ಲೆಗಳನ್ನು ನಿಭಾಯಿಸಲು ರಹೀಂ ಕರೀಂ ಖಾನ್ ಎಂಬ ಭಾರತೀಯ ಮೂಲದ ವಕೀಲರು ಡರ್ಬಾನ್‌ಗೆ ಬಂದು ನೆಲೆಸಿದ್ದರು.

ಗಾಂಧಿಯ ಈ ನಿರ್ಧಾರಕ್ಕೆ ಎರಡು ಮೂರು ಕಾರಣಗಳಿದ್ದವು. ಮುಖ್ಯವಾಗಿ ಭಾರತೀಯರ ಹಕ್ಕುಗಳ ಪರವಾದ ಹೋರಾಟ ಒಂದು ಹಂತಕ್ಕೆ ಬಂದು ನಿಂತಿತ್ತು. ಬೆಳೆದ ಇಬ್ಬರು ಮಕ್ಕಳ ಶಿಕ್ಷಣ ತಕ್ಕ ಶಾಲೆಗಳಿಲ್ಲದೆ ಕವಲು ದಾರಿಯಲ್ಲಿದ್ದು ಕಸ್ತೂರಬಾ ಈ ಬಗ್ಗೆ ಅಸಮಾಧಾನಗೊಂಡಿದ್ದರು. ಜೊತೆಗೆ ಇಂಗ್ಲಿಷ್ ಬಾರದ ಅವರಿಗೆ ನೆರೆಹೊರೆ ಎಂಬುದಿಲ್ಲದೆ ತೀವ್ರ ಒಂಟಿತನ ಅನುಭವಿಸುತ್ತಿದ್ದರು. ಇವೆಲ್ಲವುಗಳಿಗಿಂತ ಮುಖ್ಯ ಕಾರಣವಾಗಿದ್ದುದೆಂದರೆ, ಗಾಂಧಿಯ ಆತ್ಮೀಯ ಆಧ್ಯಾತ್ಮಿಕ ಮಾರ್ಗದರ್ಶಿ ರಾಯ್‌ಚಂದ್ ಭಾಯಿ ಆಕಸ್ಮಿಕ ಮರಣಕ್ಕೆ ತುತ್ತಾದ ಸುದ್ದಿ ಬಂದಿದ್ದು ಅವರ ಹೃದಯದಲ್ಲಿ ಭಾರತದ ಕರೆ ತೀವ್ರವಾಗತೊಡಗಿತ್ತು.

ಒಂದು ವಿದಾಯ-ಒಂದು ವಾಗ್ವಾದ

ಹಾಗೆ ಅವರು ಹಿಂದಿರುಗುವ ಮುನ್ನ ನೆಟಾಲ್‌ನ ಭಾರತೀಯ ಸಮುದಾಯ ಅವರಿಗೊಂದು ಭವ್ಯ ವಿದಾಯ ಸಮಾರಂಭವನ್ನು ಆಯೋಜಿಸಿ ಬೆಲೆಬಾಳುವ ಉಡುಗೊರೆಗಳನ್ನು ನೀಡಿತು. ಇದರಲ್ಲಿ ಚಿನ್ನ ಬೆಳ್ಳಿಯ ವಸ್ತುಗಳೂ ಸಾಮಗ್ರಿಗಳೂ ಸೇರಿದ್ದವು. ಇದನ್ನು ಕಂಡು ಗಾಂಧಿ ಗಾಬರಿಯಾದರು. ಈ ಹಿಂದೆ ಭಾರತಕ್ಕೆ ಹೊರಟ ಸಂದರ್ಭದಲ್ಲೂ ಗಾಂಧಿಗೆ ಉಡುಗೊರೆಗಳು ಸಂದಿದ್ದವು. ಅವುಗಳು ತಮ್ಮದಲ್ಲ ಮತ್ತು ಅವು ತಾವು ಹಿಡಿದಿರುವ ಬದುಕಿನ ಹಾದಿಗೆ ಪೂರಕವಲ್ಲ ಎಂದು ಗಾಂಧಿ ಅವನ್ನೆಲ್ಲ

ಒಟ್ಟುಗೂಡಿಸಿ ದ.ಆಫ್ರಿಕಾದಲ್ಲಿನ ಭಾರತೀಯರ ಹೋರಾಟ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗಾಗಿ ಬಳಸಬಹುದಾದ ಒಂದು ನಿಧಿಯಾಗಿ ಸ್ಥಾಪಿಸಿ ಹೋಗಲು ನಿರ್ಧರಿಸಿದರು. ಆದರೆ ಕುಟುಂಬದ ಎಲ್ಲ ವಿಷಯಗಳಲ್ಲೂ ಗಂಡನದೇ ಅಂತಿಮ ತೀರ್ಮಾನ ಎನ್ನುವ ರೀತಿಯಲ್ಲಿ ಕುಟುಂಬ ನಿರ್ವಹಿಸುತ್ತಿದ್ದ ಗಾಂಧಿಯ ಬಗ್ಗೆ ಕಸ್ತೂರಬಾ ಯಾವಾಗಲೂ ದೂರುತ್ತಿದ್ದರು ಮತ್ತು ತಾಯಿಯಾಗಿ ಅವರು ಆಗಾಗ್ಗೆ ಮಕ್ಕಳ ಭವಿಷ್ಯದ ಭದ್ರತೆಯ ಬಗ್ಗೆ ಚಿಂತಿತರಾಗಿ ಮಾತನಾಡುತ್ತಿದ್ದರು.

ನಿರೀಕ್ಷೆಯಂತೆ ಕಸ್ತೂರಬಾ ಇದನ್ನು ಪ್ರತಿಭಟಿಸಿದರು. ಮಕ್ಕಳನ್ನು ಭಿಕಾರಿಗಳನ್ನಾಗಿ ಮಾಡುವ ಹುನ್ನಾರವೇ ನಿಮ್ಮದು? ಇವರಿಗೆ ಮದುವೆಯಾದಾಗ ಸೊಸೆಯಂದಿರಿಗೆ ಚಿನ್ನ ಹಾಕಬೇಡವೇ? ನಿಮ್ಮಂತೆ ಎಲ್ಲರೂ ಸನ್ಯಾಸಿಗಳಾಗಿರುವುದಿಲ್ಲ ಎಂದು ಛೇಡಿಸಿದರು. ಅದಕ್ಕೆ ಗಾಂಧಿ ಆ ಕಾಲ ಬಹು ದೂರವಿದೆ. ಹಾಗೆ ಬೇಕಾದರೆ ತಂದು ಕೊಡಲು ನಾನಿಲ್ಲವೇ? ಎಂದು ಸಮಾಧಾನ ಮಾಡಲು ಯತ್ನಿಸಿದರು.

ಇದರಿಂದ ಸಮಾಧಾನಗೊಳ್ಳುವ ಬದಲು ಕಸ್ತೂರಬಾ ಸಿಡಿದೆದ್ದರು. ಹಿಂದೂ ಪತ್ನಿಯ ಸತಿಧರ್ಮದ ಸೈರಣೆಯೆಲ್ಲ ಮೀರಿತ್ತು. ಅವರಿಗೂ ಗಂಡ ತನ್ನ ಆದರ್ಶ ಬದುಕಿನ ಭಾರಗಳನ್ನೆಲ್ಲ ಕುಟುಂಬದ ಮೇಲೆ ಹೇರುತ್ತಿದ್ದಂತೆ ಅನಿಸಿ ನೊಂದವರಂತೆ ಕೂಗಿದರು: 'ನೀವು ಚಿನ್ನ ಮಾಡಿಸಿ ತಂದುಕೊಡುವವರು? ನನ್ನ ಚಿನ್ನವನ್ನೆಲ್ಲ ಹೊತ್ತೊಯ್ದವರು ನೀವಲ್ಲವೇ? ಈ ಸರವನ್ನು ಜನ ಉಡುಗೊರೆಯಾಗಿ ಕೊಟ್ಟಿರುವುದು ಮಹಿಳೆಯಾದ ನನಗೆ. ಅಷ್ಟೂ ಗೊತ್ತಾಗುವುದಿಲ್ಲವೇ ನಿಮಗೆ?'

ಗಾಂಧಿ ಹೆಂಡತಿಯಿಂದ ಇಷ್ಟು ಬಲವಾದ ಪ್ರತಿರೋಧವನ್ನು ಎದುರಿಸಿದ್ದು ಆಗಲೇ. ಅವರು ವಾದದ ದಾರಿ ಬದಲಿಸಿದರು: 'ನೋಡು, ಅದನ್ನು ಕೊಟ್ಟಿರುವುದು ನನ್ನ ಸಾರ್ವಜನಿಕ ಸೇವೆಗೆ ಪ್ರತಿಫಲವಾಗಿ!'

ಕಸ್ತೂರಬಾ ತಿರುಗಿ ಹೇಳಿದರು: 'ನಿಮ್ಮ ಸಾರ್ವಜನಿಕ ಸೇವೆ ನಾನಿಲ್ಲದಿದ್ದರೆ ನಿಮ್ಮಿಂದ ಆಗುತ್ತಿತ್ತೇ? ಅದರಲ್ಲಿ ನನ್ನದೂ ಪಾಲಿದೆ!'

ಗಾಂಧಿ ಮಾತಿಗೆ ಹುಡುಕಾಡಿದರು. ಕೊನೆಗೆ ತಮ್ಮ ಮನಸ್ಸಿನಲ್ಲಿದ್ದುದನ್ನು ಹೇಳಿದರು: 'ಸೇವೆಗೆ ಪ್ರತಿಫಲ ಪಡೆಯುವುದು ಅನೈತಿಕ. ಆಗ ಅದು ಸೇವೆ ಅನ್ನಿಸಿಕೊಳ್ಳುವುದಿಲ್ಲ.'

ಈ ಚರ್ಚೆಯಲ್ಲಿ ಎಂದಿನಂತೆ ಗಾಂಧಿಯ ಈ ಮಾತೇ ಕೊನೆಯ ಮಾತಾಯಿತು. ಗಾಂಧಿ ಹಳೆಯ ಉಡುಗೊರೆಗಳೂ ಸೇರಿದಂತೆ ಎಲ್ಲ ಉಡುಗೊರೆಗಳನ್ನೂ ಸೇರಿಸಿ ಮೌಲ್ಯಮಾಪನ ಮಾಡಿಸಿ ತಮ್ಮ ಬಯಕೆಯಂತೆ ಒಂದು ಕ್ಷೇಮನಿಧಿ ಮಾಡಿ ಅದರ ಉಸ್ತುವಾರಿಗಾಗಿ ಒಂದು ಟ್ರಸ್ಟ್‌ನ್ನು ಸ್ಥಾಪಿಸಿದರು. ಆದರೆ ಈ ಟ್ರಸ್ಟ್ ಮುಂದೆ ಹಣ ದುರುಪಯೋಗದ ಆರೋಪಗಳ ವಿವಾದಕ್ಕೆ ಸಿಕ್ಕಿತು. ಗಾಂಧಿ ತಮ್ಮ ಆತ್ಮಕಥೆಯಲ್ಲಿ ಇಂತಹ ಶಾಶ್ವತ ಕ್ಷೇಮನಿಧಿಗಳನ್ನು ಸ್ಥಾಪಿಸುವುದು ತಪ್ಪೆಂದು ತಮಗೀಗ ಅನ್ನಿಸಿದೆ ಎಂದು ಬರೆದಿದ್ದಾರೆ. ಅದೇನೇ ಇರಲಿ, ಗಾಂಧಿ ದ.ಆಫ್ರಿಕಾದ ಭಾರತೀಯರಿಗೆ ತಾವು ಆ ಸಮುದಾಯದ ಪ್ರೀತಿಗೆ ಶರಣಾಗಿ ಅದರ ಅವಿಭಾಜ್ಯ ಅಂಗವಾಗಿರುವುದಾಗಿಯೂ, ಅವರು ಯಾವ ಅಗತ್ಯಕ್ಕೆ ಕರೆದರೂ ತಾವು ಅವರಲ್ಲಿಗೆ ತಕ್ಷಣ ಹೊರಟುಬರುವುದಾಗಿಯೂ ವಾಗ್ದಾನ ಮಾಡಿ ೧೯೦೧ ರ ಅಕ್ಟೋಬರ್ ಮೂರನೇ ವಾರದಲ್ಲಿ ಅಲ್ಲಿಂದ ಹೊರಟರು.

■

೧೨
ಭಾರತಕ್ಕೆ ಮರಳಿದ ಗಾಂಧಿ

ಗಾಂಧಿ ಭಾರತಕ್ಕೆ ಬರುತ್ತಿದ್ದಂತೆ ಅವರನ್ನು ಮುಂಬೈಯಲ್ಲಿ ಭೇಟಿ ಮಾಡಿದ ಅಮೆರಿಕಾದ ಜೀವ ವಿಮಾ ಸಂಸ್ಥೆಯೊಂದರ ಏಜೆಂಟನೊಬ್ಬನ ಮಾತಿಗೆ ಮರುಳಾಗಿ-ಬಹುಶಃ ಇನ್ನೂ ಮನಸ್ಸಲ್ಲಿ ಹಸುರಾಗಿ ಕಾಡುತ್ತಿದ್ದ ಕಸ್ತೂರಬಾರ ಜೀವನ ಭದ್ರತೆಯ ಆತಂಕದ ಮಾತು ಹಾಗೂ ವಾದಗಳ ಹಿನ್ನೆಲೆಯಲ್ಲಿ, ಆ ಕಾಲಕ್ಕೇ ಹತ್ತು ಸಾವಿರ ರೂಪಾಯಿಗಳ ಜೀವ ವಿಮೆ ಮಾಡಿಸಿಕೊಂಡರು. ಇದು ಗಾಂಧಿ ಇನ್ನೂ ತಮ್ಮ ಮಾನಸಿಕ ತೊಳಲಾಟಗಳಿಂದ ಸಂಪೂರ್ಣ ಮುಕ್ತರಾಗಿರಲಿಲ್ಲವೆಂಬುದರ ಸೂಚನೆಯೆಂದೂ ಗಾಂಧಿಯ ಅತ್ಯುತ್ತಮ ಜೀವನ ಚರಿತ್ರೆಯೊಂದನ್ನು ಬರೆದಿರುವ ಲೂಯಿ ಫಿಷರ್ ಹೇಳುತ್ತಾರೆ. ಆದರೆ ಆ ಹೊತ್ತಿಗಿನ್ನೂ ಗಾಂಧಿ ಮಹಾತ್ಮರೆನಿಸಿರಲಿಲ್ಲವೆಂದಷ್ಟೇ ಸೂಚಿಸಿ ಸದ್ಯಕ್ಕೆ ಮುಂದುವರೆಯೋಣ.

ಗಾಂಧಿ ಈಗ ಭಾರತಕ್ಕೆ ಮರಳಿದ ೧೯೦೧ರಲ್ಲಿ ಕಲ್ಕತ್ತಾದಲ್ಲಿ ಕಾಂಗ್ರೆಸ್ ಅಧಿವೇಶನವೊಂದು ಆಯೋಜಿತಗೊಂಡಿತ್ತು. ೧೮೫೭ರ ಸಿಪಾಯಿ ದಂಗೆಯಿಂದ ವಿಚಲಿತರಾಗಿದ್ದ ಬ್ರಿಟಿಷರು ಭಾರತೀಯರಿಗೆ ಆಡಳಿತದಲ್ಲಿ ಪಾಲು ಕೊಡುವ ಆಸೆ ಹುಟ್ಟಿಸಿ ಅದರ ಮಾತುಕತೆಗಳ ವೇದಿಕೆಯ ಹೆಸರಿನಲ್ಲಿ ಹ್ಯೂಮ್ ಎಂಬುವವರ ಮಧ್ಯಸ್ಥಿಕೆಯ ಮೂಲಕ ೧೮೮೫ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಎಂಬ ಸಂಸ್ಥೆಯ ಹುಟ್ಟಿಗೆ ಕಾರಣರಾಗಿದ್ದರು. ಅದು ಮುಂದೆ ಬ್ರಿಟಿಷರ ನಿಯಂತ್ರಣ ಮೀರಿ ಬೆಳೆಯುತ್ತಾ ಹೋಯಿತೆಂಬುದು ಬೇರೆ ವಿಷಯ. ಗಾಂಧಿ ೧೯೦೧ರಲ್ಲಿ ಭಾರತಕ್ಕೆ ಬಂದಾಗ ಈ ಕಾಂಗ್ರೆಸ್ ಉಗ್ರ ರಾಷ್ಟ್ರವಾದಿ ಎನಿಸಿದ್ದ ಹಿಂದೂ ಧರ್ಮದ ಪ್ರಕಾಂಡ ಪಂಡಿತರೆಂದು ಹೆಸರಾಗಿದ್ದ ಲೋಕಮಾನ್ಯ ಬಾಲಗಂಗಾಧರ ತಿಲಕರ ಪ್ರಭಾವಕ್ಕೆ ಒಳಗಾಗಿತ್ತು. ಅದಕ್ಕೆ ಪ್ರತಿಯಾಗಿ ಅವರ ಪ್ರಾಂತ್ಯದವರೇ ಆದ, ವೃತ್ತಿಯಿಂದ ವಕೀಲರಾಗಿದ್ದ ಗೋಪಾಲಕೃಷ್ಣ ಗೋಖಲೆಯವರ ಸೌಮ್ಯವಾದಿ ಗುಂಪೊಂದು ಕಾಂಗ್ರೆಸ್‌ನಲ್ಲಿ ಸಕ್ರಿಯವಾಗಿತ್ತೆಂಬುದೂ ನಿಜ. ಒಟ್ಟಿನಲ್ಲಿ ಅದೊಂದು ವಿದ್ಯಾವಂತ ಮೇಲ್ಜಾತಿ ಮೇಲ್ವರ್ಗಗಳ ಹಿಂದೂ-ಮುಸ್ಲಿಂ ವಕೀಲರು, ಜಮೀನ್ದಾರರು, ಬಂಡವಾಳಿಗರು ಇತ್ಯಾದಿಯವರಿಂದ ಕೂಡಿದ್ದ-ಆಗಿನ ಭಾರತದ ಪ್ರತಿಷ್ಠಿತ ವರ್ಗವೊಂದರ ವೇದಿಕೆಯಾಗಿತ್ತು.

ಕಲ್ಕತ್ತಾ ಕಾಂಗ್ರೆಸ್ ಅಧಿವೇಶನ-ದೊರೆತ ಗೋಖಲೆ ಸಾಮೀಪ್ಯ

ಗಾಂಧಿ ದ.ಆಫ್ರಿಕಾದ ಭಾರತೀಯರ ಸ್ಥಿತಿಗತಿಗಳನ್ನು ಪರಿಚಯಿಸಲು ಮತ್ತು ಆ

ಬಗ್ಗೆ ಬ್ರಿಟಿಷ್ ಸರ್ಕಾರದ ಗಮನ ಸೆಳೆಯುವಂತಹ ಒಂದು ನಿರ್ಣಯ ಅಂಗೀಕರಿಸುವಂತೆ ಮಾಡಲು ಡಿಸೆಂಬರ್‌ನಲ್ಲಿ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನಕ್ಕೆ ಹೋದರು. ಆ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದವರು ಬ್ರಿಟಿಷ್ ಪ್ರಭುತ್ವದಿಂದ ಸರ್ ಬಿರುದು ಪಡೆದಿದ್ದ ದೀನ್‌ಶಾ ವಾಚಾ ಎಂಬ ಮುಂಬೈನ ಹಿರಿಯ ವಕೀಲರು! ಅಧಿವೇಶನ ದೊಡ್ಡ ಖರ್ಚಿನಲ್ಲಿ ಜನಜಂಗುಳಿಯ ನಡುವೆ ಸಕಲ ವಿಜೃಂಭಣೆ-ಆಡಂಬರಗಳೊಂದಿಗೆ ನಡೆಯಿತಾದರೂ, ಅಲ್ಲಿನ ಅವ್ಯವಸ್ಥೆ, ಕೊಳಕು, ಅಸ್ಪೃಶ್ಯತೆಯೂ ಸೇರಿದಂತೆ ಅಲ್ಲಿ ಕಂಡ ಜಾತೀಯತೆಯ ಮಡಿ ಮೈಲಿಗೆಗಳು, ಸಂಘಟಕ ಮಹಾಶಯರ ಭೋಳೆತನಗಳು, ಸಭಾ ಕಲಾಪಗಳ ಯಾಂತ್ರಿಕ ಔಪಚಾರಿಕತೆಗಳು ಗಾಂಧಿಯನ್ನು ನಿರಾಶೆಗೊಳಿಸಿತೆಂದೇ ಹೇಳಬೇಕು. ಗಾಂಧಿಯ ನಿರ್ಣಯವೂ ಸೇರಿದಂತೆ ಯಾವ ನಿರ್ಣಯವೂ ಚರ್ಚೆಯಾಗದೆ ಅಧಿವೇಶನದ ವೇಳಾಪಟ್ಟಿಯ ಅವಸರದಲ್ಲಿ ಅನುಮೋದಿತವಾಗುತ್ತಿದ್ದ ಪರಿ, ಗಾಂಧಿಯಲ್ಲಿ ಕಾಂಗ್ರೆಸ್ ಅಧಿವೇಶನವೆಂಬುದು ಒಂದು ವಾರ್ಷಿಕ ಸಂಪ್ರದಾಯವಾಗಿಬಿಟ್ಟಿರುವ ಅನುಮಾನವನ್ನು ಹುಟ್ಟಿಸಿತು.

ಗಾಂಧಿ ತಮ್ಮ ಈ ಕಲ್ಕತ್ತಾ ಭೇಟಿಯನ್ನು ದೇಶ ನೋಡಿ ಜನರ ಪರಿಚಯ ಮಾಡಿಕೊಳ್ಳುವ ಉದ್ದೇಶದ ಯಾತ್ರೆಯ ಭಾಗವಾಗಿ ಆಯೋಜಿಸಿಕೊಂಡಿದ್ದರು. ಆದುದರಿಂದ ಆಗ ಭಾರತದ ಬಹು ನೆಲೆಗಳ ಪರಿವರ್ತನೆಯ ಪ್ರಯೋಗಶಾಲೆ ಎನಿಸಿದ್ದ ಕಲ್ಕತ್ತಾ ನಗರದಲ್ಲಿ ಒಂದು ತಿಂಗಳ ಕಾಲ ತಂಗಿದರು. ತಮಗೆ ಬಹು ಪ್ರಿಯ ವ್ಯಕ್ತಿತ್ವವೆನಿಸಿದ್ದ ಗೋಖಲೆಯವರೂ ಆ ಅವಧಿಯಲ್ಲಿ ಅಲ್ಲಿ ತಂಗಲಿದ್ದುದೂ ಅದಕ್ಕೊಂದು ಕಾರಣವಾಗಿತ್ತು. ಗೋಖಲೆಯವರ ಆಗ್ರಹದ ಮೇರೆಗೆ ಅವರ ಜೊತೆಯಲ್ಲೇ ತಂಗಿದ ಗಾಂಧಿ, ಅವರ ನೇರ, ಸರಳ ಸ್ವಭಾವ, ಮಿತವ್ಯಯದ ಬದುಕಿನ ಶೈಲಿಗಳಿಂದ ತಾವು ಬಹು ಅಮೂಲ್ಯವಾದುದನ್ನು ಕಲಿತೆ ಎನ್ನುತ್ತಾರೆ. ಅವರ ಸಂಪರ್ಕಗಳ ಮೂಲಕ ಅವರಿಗೆ ಕಲ್ಕತ್ತಾದ ಹಲವು ಮಹನೀಯರುಗಳನ್ನೂ ಭೇಟಿ ಮಾಡಲು ಸಾಧ್ಯವಾಯಿತು. ಅವರು ಬ್ರಹ್ಮ ಮತ್ತು ಆದಿ ಬ್ರಹ್ಮ ಸಮಾಜಗಳ ಬಗ್ಗೆ ಕುತೂಹಲಿತರಾಗಿ ಅವನ್ನು ಕುರಿತ ಸಾಹಿತ್ಯವನ್ನು ಓದಿದರು. ಶಿವನಾಥ ಶಾಸ್ತ್ರಿ ಮತ್ತು ಕ್ರೈಸ್ತರಾಗಿ ಮತಾಂತರಗೊಂಡಿದ್ದ ಕಾಳಿಚರಣ ಬ್ಯಾನರ್ಜಿ ಅವರೊಂದಿಗೆ ಚರ್ಚಿಸಿದರು. ದೇವೇಂದ್ರನಾಥ ಟ್ಯಾಗೋರ್ ಅವರನ್ನು ಭೇಟಿಯಾಗಲಾಗದೆ ನಿರಾಶೆಗೊಂಡರಾದರೂ, ಅವರ ನಿವಾಸದಲ್ಲಿ ವಿಶಿಷ್ಟ ಬಂಗಾಳಿ ಸಂಗೀತ ಕೇಳಿ ಆನಂದಗೊಂಡರು. ನಂತರ ಸ್ವಾಮಿ ವಿವೇಕಾನಂದರನ್ನು ಕಾಣಬೇಕೆಂಬ ಹಂಬಲದಿಂದ ಊರಾಚೆ ಇದ್ದ ಬೇಲೂರು ಮಠಕ್ಕೆ ಬಹುದೂರ ನಡೆದೇ ಹೋದರು. ಆದರೆ ವಿವೇಕಾನಂದರು ಆಗ ತೀವ್ರ ಅಸ್ವಸ್ಥರಾಗಿ ಕಲ್ಕತ್ತಾ ನಗರದ ಮನೆಯೊಂದರಲ್ಲಿದ್ದು ಅವರನ್ನು ಭೇಟಿ ಮಾಡಲು ಸಾಧ್ಯವಿಲ್ಲವೆಂದು ತಿಳಿದು ವಿಷಾದದೊಡನೆ ವಾಪಸಾದರು. ಅಂತಹುದೇ ವಿಷಾದ ಸೋದರಿ ನಿವೇದಿತಾರನ್ನು ಭೇಟಿ ಮಾಡಲು ಹೋದಾಗಲೂ ಅವರಿಗೆ ಆಯಿತು. ಆದರೆ ಆ ವಿಷಾದ ಅವರನ್ನು ಭೇಟಿ ಮಾಡಿದ್ದರಿಂದ ಆಯಿತು. ಅವರ ವೈಭವದ ಜೀವನ ಶೈಲಿ ನೋಡಿ ಗಾಂಧಿ ಗಾಬರಿಯಾದರು!

ಗಾಂಧಿಯನ್ನು ಗಾಬರಿಗೊಳಿಸಿದ ಎರಡು ಘಟನೆಗಳು

ಇಂತಹುದೇ ಗಾಬರಿಯ ಇನ್ನೆರಡು ಅನುಭವಗಳು ಗಾಂಧಿಗೆ ಎದುರಾದದ್ದು, ಒಂದು, ಅವರು ಕಾಳಿ ಮಂದಿರಕ್ಕೆ ಹೋದಾಗ. ಅಲ್ಲಿನ ಬಹಿರಂಗ ಪ್ರಾಣಿಬಲಿಯ ಪ್ರಮಾಣ ಮತ್ತು ಅದರಿಂದಾಗಿ ಅಲ್ಲಿ ಹರಿದಿದ್ದ ರಕ್ತದ ಕಾಲುವೆ ಮತ್ತು ಅದರಿಂದ ಸೃಷ್ಟಿಯಾಗಿದ್ದ ಕೊಳಕು ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಅಲ್ಲಿದ್ದ ಸಾಧು–ಬೈರಾಗಿಗಳು ಕಾಳಿಯ ರಕ್ತಪಿಪಾಸುತನವನ್ನು ಧರ್ಮದ ಭಾಗವೆಂದು ಸಮರ್ಥಿಸಿದಾಗ. ಇನ್ನೊಂದು, ಅವರು ಕಲ್ಕತ್ತಾದಲ್ಲಿದ್ದಾಗಲೇ ವೈಸ್‌ರಾಯ್ ಲಾರ್ಡ್ ಕರ್ಜನ್‌ರ ದರ್ಬಾರೂ ಏರ್ಪಾಟಾಗಿದ್ದು, ಆ ದರ್ಬಾರಿಗೆ ನಮ್ಮ ರಾಜ ಮಹಾರಾಜರುಗಳು ಬ್ರಿಟಿಷ್ ಸರ್ಕಾರಿ ಕಛೇರಿಯ ಜವಾನರುಗಳ ಸಮವಸ್ತ್ರಗಳನ್ನು ಹೋಲುವ ಉಡುಪುಗಳನ್ನು ಧರಿಸಿ ಹೋಗುತ್ತಿದ್ದುದನ್ನು ಕಂಡಾಗ. ಇದನ್ನು ಕಂಡು ಗಾಂಧಿಗೆ ಅಳಬೇಕೋ ನಗಬೇಕೋ ತಿಳಿಯದಾಯಿತಂತೆ!

ಕಲ್ಕತ್ತಾದಿಂದ ಗಾಂಧಿ ನಂತರ ಹೊರಟದ್ದು ಬರ್ಮಾಗೆ. ಈ ಭೇಟಿಯಲ್ಲಿ ಬೌದ್ಧ ದೇವಾಲಯಗಳ ಹೊರಗಿನ ಭವ್ಯತೆಯನ್ನೂ, ಒಳಗಿನ ಕೊಳಕನ್ನೂ ನೋಡಿ ಅವರು ವಿಷಾದಪಟ್ಟರು. ಹಾಗೇ ಅಲ್ಲಿನ 'ಸ್ತ್ರೀಯರ ಸ್ವಾತಂತ್ರ್ಯ–ಉತ್ಸಾಹಗಳು ಮತ್ತು ಪುರುಷರ ಸೋಮಾರಿತನ'ವನ್ನು ಅವರು ಗಮನಿಸಿದರು. ಒಟ್ಟು ಈ ಬರ್ಮಾ ಪ್ರವಾಸದ ಬಗ್ಗೆ ಗಾಂಧಿ ಹೇಳುವುದು: 'ನಾವು ಭಾರತದಲ್ಲಿ ಇಂಗ್ಲಿಷ್ ವ್ಯಾಪಾರಿಗಳ ಕಮೀಷನ್ ಏಜೆಂಟರಾಗಿರುವಂತೆ, ಬರ್ಮಾದಲ್ಲಿಯೂ ಬರ್ಮೀಯರನ್ನು ನಮ್ಮ ಕಮೀಷನ್ ಏಜೆಂಟರಾಗಿ ಮಾಡುವುದರಲ್ಲಿ ನಾವು ಇಂಗ್ಲಿಷ್ ವರ್ತಕರೊಂದಿಗೆ ಸೇರಿಕೊಂಡಿದ್ದೇವೆ'.

ಬರ್ಮಾದಿಂದ ಕಲ್ಕತ್ತಾಗೆ ಮರಳಿದ ಗಾಂಧಿ ಗೋಖಲೆಯವರಿಗೆ ವಿದಾಯ ಹೇಳಿ ಮೊದಲೇ ನಿರ್ಧರಿಸಿದ್ದಂತೆ ದೇಶ ಮತ್ತು ಜನರನ್ನು ಗಮನಿಸಲು ಮೂರನೆಯ ದರ್ಜೆ ಡಬ್ಬಿಯಲ್ಲಿ ತಮ್ಮೂರು ರಾಜಕೋಟೆಗೆ ಪ್ರಯಾಣ ಹೊರಟರು. ಇದನ್ನು ಮೆಚ್ಚಿಕೊಂಡು ಅವರಿಗೆ ಆಶೀರ್ವಾದ ಮಾಡಿದ ಗೋಖಲೆ ಅವರಿಗೊಂದು ಹಿತ್ತಾಳೆಯ ತಿಂಡಿ ಡಬ್ಬಿಯನ್ನು ಉಡುಗೊರೆಯಾಗಿ ನೀಡಿ ಗೆಳೆಯರೊಂದಿಗೆ ನಿಲ್ದಾಣಕ್ಕೆ ಬಂದು ಅವರನ್ನು ಬೀಳ್ಕೊಟ್ಟರು.

ಮೂರನೇ ದರ್ಜೆ ರೈಲು ಪ್ರಯಾಣದ ಪ್ರಯೋಗ

ಈ ಪ್ರಯಾಣದಲ್ಲಿ ಗಾಂಧಿ ಭಾರತದ ಜನಸಾಮಾನ್ಯರು ಪ್ರಯಾಣ ಮಾಡುವ ಮೂರನೇ ದರ್ಜೆ ಡಬ್ಬಿಯ ಸ್ಥಿತಿಗತಿಗಳನ್ನು ನೋಡಿ ಜಿಗುಪ್ಸೆಗೊಂಡರು. ಇದಕ್ಕೆ ಅಧಿಕಾರಿಗಳ ಔದಾಸೀನ್ಯದಂತೆಯೇ ಪ್ರಯಾಣಿಕರ ದುರಭ್ಯಾಸಗಳೂ, ದುರ್ವರ್ತನೆಗಳೂ ಕಾರಣವೆಂಬುದನ್ನು ಗಮನಿಸಿದರು. ಇದನ್ನು ಸುಧಾರಿಸಲು ವಿದ್ಯಾವಂತರು ಮತ್ತು ಸುಸಂಸ್ಕೃತರು ಮೂರನೇ ದರ್ಜೆಯಲ್ಲಿ ಪ್ರಯಾಣ ಮಾಡುವ ಆಂದೋಲನವೊಂದನ್ನು ಆರಂಭಿಸಬೇಕು ಮತ್ತು ಈ ಜನ ಸಾಮಾನ್ಯ ಜನರ ಅಭ್ಯಾಸಗಳನ್ನೂ, ವರ್ತನೆಗಳನ್ನು ತಿದ್ದುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎಂದು ಯೋಚಿಸಿದರು. ಹಾಗೇ ರೈಲ್ವೇ ಇಲಾಖೆಗೆ ನಿರಂತರ ಪತ್ರ–ದೂರು–

ಮನವಿಗಳನ್ನು ಬರೆಯುವ ಮೂಲಕ ಮೂರನೇ ದರ್ಜೆಯಲ್ಲೂ ಸಭ್ಯ ಪ್ರಯಾಣ ಸಾಧ್ಯವಾಗುವಂತೆ ಮಾಡಬಹುದು ಎಂದು ಅವರು ಭಾವಿಸಿದರು. ಈ ಬಗ್ಗೆ ತಮ್ಮ ಆತ್ಮಕಥೆಯಲ್ಲಿ ಗಾಂಧಿ, ಭಾರತದಲ್ಲಿ ತಾವು ಯಾವಾಗಲೂ ಮೂರನೇ ದರ್ಜೆಯಲ್ಲೇ ಪ್ರಯಾಣ ಮಾಡಲು ಕೈಗೊಂಡ ಸಂಕಲ್ಪದಿಂದಾಗಿ ಪರಿಸ್ಥಿತಿ ಕ್ರಮೇಣ ಸುಧಾರಿಸುತ್ತಿರುವ ಹೊತ್ತಿನಲ್ಲೇ ೧೯೧೮-೧೯ರಲ್ಲಿ ತಾವು ಒಳಗಾದ ತೀವ್ರ ಕಾಯಿಲೆಯಿಂದಾಗಿ ತಮ್ಮ ಸಂಕಲ್ಪಕ್ಕೆ ಭಂಗ ಬಂದದ್ದರ ಬಗ್ಗೆ ತಮಗೆ ಶಾಶ್ವತ ದುಃಖ ಮತ್ತು ನಾಚಿಕೆಯಾಗಿದೆ ಎಂದು ಬರೆಯುತ್ತಾರೆ.

ಈ ಪ್ರಯಾಣದಲ್ಲಿ ಗಾಂಧಿ ವಾರಾಣಸಿಯಲ್ಲಿ ಇಳಿದು ಅಲ್ಲಿನ ಕಾಶಿ ವಿಶ್ವನಾಥ ದೇವಾಲಯ ಮತ್ತು ಅದರ ಸುತ್ತಮುತ್ತಲಿನ ಜಾಗ ಹಾಗೂ ಅಲ್ಲಿನ ಪೂಜಾರಿ-ಪಂಡರ ಕೊಳಕು ಮತ್ತು ದುರ್ವರ್ತನೆಗಳನ್ನು ಕಂಡು ಹೇಸಿದರು. ನಂತರ ಅಲ್ಲಿ ಇಳಿದ ಮುಖ್ಯ ಉದ್ದೇಶವಾದ, ಆ ಊರಿನಲ್ಲಿ ತೀವ್ರ ಅಸ್ವಸ್ಥರಾಗಿ ಮಲಗಿದ್ದ ಅನಿಬೆಸೆಂಟರನ್ನು ನೋಡಲು ಹೋದರು. ಅವರ ದರ್ಶನ ಪಡೆದು ಅವರಿಗೆ ವಂದಿಸಿ ರಾಜಕೋಟೆಯತ್ತ ಪ್ರಯಾಣ ಬೆಳೆಸಿದರು.

■

೧೩
ಗಾಂಧಿಯ ಪ್ರಕೃತಿ ಚಿಕಿತ್ಸೆ

ಗಾಂಧಿ ಭಾರತಕ್ಕೆ ಬಂದ ಆರಂಭದಲ್ಲಿ ತಮ್ಮ ವಕೀಲಿಗಿರಿಯ ಯೋಗ್ಯತೆಯ ಬಗ್ಗೆ ತಾವೇ ಅನುಮಾನಪಟ್ಟು ಗೋಖಲೆಯವರ ಕರೆಯ ಮೇರೆಗೆ ಬೊಂಬಾಯಿಗೆ ಹೋಗದೆ ತಮ್ಮ ಊರಾದ ರಾಜಕೋಟೆಯಲ್ಲೇ ವಕೀಲಿ ವೃತ್ತಿಯನ್ನು ಆರಂಭಿಸಿದರು. ಅದರಲ್ಲಿ ಸಾಧಾರಣ ಯಶಸ್ಸು ಕಾಣುತ್ತಿರುವಾಗಲೇ, ಅವರಲ್ಲಿನ ಸಾರ್ವಜನಿಕ ಸೇವೆಯ ಸ್ವಭಾವವನ್ನು ಗುರುತಿಸಿದ ಗೆಳೆಯರೊಬ್ಬರು ಅವರನ್ನು ಒತ್ತಾಯಿಸಿ ಬೊಂಬಾಯಿಯಲ್ಲಿ ನೆಲೆಸುವಂತೆ ಮಾಡಿದರು. ಗಾಂಧಿ ಕೂಡ ಗೋಖಲೆಯವರ ಸಾರ್ವಜನಿಕ ಕೆಲಸಗಳಲ್ಲಿ ನೆರವಾಗಲು ಉತ್ಸುಕರಾಗಿದ್ದುದರಿಂದ ತಮ್ಮ ಕುಟುಂಬವನ್ನು ಮುಂಬೈಗೆ ಒಯ್ದು ಗಿರಗಾಂವ್ ಎಂಬಲ್ಲಿ ಮನೆ ಮಾಡಿದರು. ಅಲ್ಲಿಗೆ ಅವರನ್ನು ಆಗ್ರಹಿಸಿ ಕಳಿಸಿದ್ದ ರಾಜಕೋಟೆಯ ವಕೀಲ ಗೆಳೆಯರೂ ಮತ್ತು ದ.ಆಫ್ರಿಕಾದಲ್ಲಿದ್ದ ವ್ಯಾಪಾರಿ ಗೆಳೆಯರೂ ಗಾಂಧಿಗೆ ಕೈತುಂಬ ವಕೀಲಿ ಕೆಲಸ ಕೊಟ್ಟಿದ್ದರಿಂದ ಅವರಿಗೆ ಕುಟುಂಬದ ವರಮಾನದ ಚಿಂತೆ ಇಲ್ಲವಾಗಿತ್ತು. ಜೊತೆಗೆ ಗೋಖಲೆಯವರ ಒಡನಾಟವೂ ನಿಯಮಿತವಾಗಿ ದೊರೆತು ಅವರು ಸಂತುಷ್ಟ ಜೀವನ ನಡೆಸಲು ಆರಂಭಿಸಿದ್ದರು. ಆದರೆ ಆ ಹೊತ್ತಿನಲ್ಲೇ ಅವರಿಗೊಂದು ಅಗ್ನಿ ಪರೀಕ್ಷೆ ಎದುರಾಯಿತು.

ಎರಡನೇ ಮಗ ಮಣಿಲಾಲನಿಗೆ ತೀವ್ರವಾದ ವಿಷಮಶೀತ ಜ್ವರ ಆವರಿಸಿ ಹುಡುಗನಿಗೆ ಯಾವ ಚಿಕಿತ್ಸೆಯಿಂದಲೂ ಪ್ರಯೋಜನವಾಗದೆ ಅವನ ಜೀವ ಸಾವು ಬದುಕುಗಳ ನಡುವೆ ಉಯ್ಯಾಲೆಯಾಡತೊಡಗಿತು. ಅವನನ್ನು ನೋಡಿಕೊಳ್ಳುತ್ತಿದ್ದ ಪಾರ್ಸಿ ವೈದ್ಯರು ಕೊನೆಯ ಪರಿಹಾರವಾಗಿ, 'ಔಷಧಗಳಿಂದ ಈಗ ಪ್ರಯೋಜನವಿಲ್ಲ. ಅವನಿಗೆ ಈಗ ಕೊಡುತ್ತಿರುವ ಹಾಲಿನ ಆಹಾರ ಸಾಕಷ್ಟು ಪುಷ್ಟಿ ಒದಗಿಸುತ್ತಿಲ್ಲ. ಹಾಗಾಗಿ ಕೋಳಿಮರಿ ಸಾರಿನ ಆಹಾರ ಕೊಟ್ಟರೆ ಮಾತ್ರ ಬದುಕಿಸಿಕೊಳ್ಳಬಹುದಷ್ಟೆ' ಎಂದು ಸೂಚಿಸಿದರು. ಗಾಂಧಿಗೆ ಆಘಾತವಾಯಿತು. ವೈದ್ಯರು 'ಇಂತಹ ಸಂಕಟಗಳಲ್ಲಿ ಸಂಪ್ರದಾಯಗಳನ್ನು ಕೈಬಿಡಬೇಕಾಗುತ್ತದೆ' ಎಂದು ಮನವೊಲಿಸಲು ಎಷ್ಟು ಪ್ರಯತ್ನಪಟ್ಟರೂ ಗಾಂಧಿ ಜಗ್ಗಲಿಲ್ಲ. ಅವರ ಚಿಂತನಾ ಲಹರಿ ಹೀಗಿತ್ತು: 'ಪ್ರಾಣ ಉಳಿಸಿಕೊಳ್ಳಲು ಇರುವ ಸಾಧನಗಳೂ ನಾವು ನಂಬಿದ ಧರ್ಮದ ನಿಯಮಗಳ ಮಿತಿಯಲ್ಲಿರಬೇಕು. ಪ್ರಾಣ ಉಳಿಸಿಕೊಳ್ಳಲು ಏನನ್ನಾದರೂ ಮಾಡುವುದು ಅಧರ್ಮ. ಆದರೆ ನನ್ನನ್ನು ನಂಬಿರುವ ನನ್ನ ಮಗನನ್ನು ನಾನು ಉಳಿಸಿಕೊಳ್ಳಲು ನನ್ನ ಧರ್ಮದ

ಚೌಕಟ್ಟಿನಲ್ಲಿ ಏನೇನು ಸಾಧ್ಯವೋ ಅದನ್ನೆಲ್ಲ ಮಾಡುವೆ'. ಅದರ ಪ್ರಕಾರ ಅವರು ವೈದ್ಯರಿಗೆ ರೋಗಿಯ ಅಂಗಾಂಗಗಳ ಪರಿಸ್ಥಿತಿಯನ್ನು ಪರೀಕ್ಷಿಸಿ ಹೇಳುವಂತೆ ಕೋರಿ ತಮಗೆ ಗೊತ್ತಿದ್ದ ಜಲಚಿಕಿತ್ಸೆಗಳನ್ನು ಆರಂಭಿಸಲು ನಿರ್ಧರಿಸಿದರು. ಮಗನನ್ನೂ ಈ ಬಗ್ಗೆ ಕೇಳಿದಾಗ ಅವನು ತಂದೆಯ ಸಲಹೆಗೆ ಒಪ್ಪಿದ.

'ದೇವರು ನನ್ನ ಮಾನ ಉಳಿಸಿದ!'

ಗಾಂಧಿ ಪ್ರಕೃತಿ ಚಿಕಿತ್ಸೆಯ ಹಲವು ಪುಸ್ತಕಗಳ ಅಧ್ಯಯನ ಮಾಡಿದ್ದರು. ತಮಗೆ ಆರೋಗ್ಯ ಏರುಪೇರಾದಾಗಲೂ ಅವರು ಇಂಗ್ಲಿಷ್ ಔಷಧಿಯ ಮೊರೆ ಹೋಗದೆ, ತಾವು ಕಲಿತಿದ್ದ ಪ್ರಕೃತಿ ಚಿಕಿತ್ಸೆಯ ವಿಧಾನಗಳಿಂದಲೇ ತಮ್ಮ ಆರೋಗ್ಯವನ್ನು ಸುಧಾರಿಸಿಕೊಳ್ಳುತ್ತಿದ್ದರು. ಮುಖ್ಯವಾಗಿ ಉಪವಾಸ ಮತ್ತು ಜಲಚಿಕಿತ್ಸೆ ಅವರು ಅನುಸರಿಸುತ್ತಿದ್ದ ಚಿಕಿತ್ಸಾ ವಿಧಾನಗಳು. ಆದರೆ ಈ ಚಿಕಿತ್ಸೆ ವಿಫಲವಾಗಿ ಮಗು ಮರಣವನ್ನಪ್ಪಿದರೆ ತನ್ನ ಪತ್ನಿ, ಅಣ್ಣ ಮತ್ತು ಇತರ ಬಂಧು ಬಾಂಧವರು ಹಾಗೂ ಗೆಳೆಯರನ್ನು ಹೇಗೆ ಎದುರಿಸುವುದೆಂಬ ಚಿಂತೆಯೂ ಅವರನ್ನು ಕಾಡಿತು. ಆದರೆ ಗಾಂಧಿ ದೇವರು ಮತ್ತು ತಾವು ನಂಬಿದ ಧರ್ಮದಲ್ಲಿ ನಂಬಿಕೆ ಕಳೆದುಕೊಂಡರೆ ಬದುಕಿನಲ್ಲಿ ಇನ್ನೇನು ಉಳಿಯಿತು ಎಂದು ಆಲೋಚಿಸಿದರು. ಜೀವತಂತು ದೇವರ ವಶದಲ್ಲಿರುವಾಗ ಅವನನ್ನು ನಂಬಿ ನಡೆಯುವುದೇ ಒಳ್ಳೆಯದೆನಿಸುವುದು ಎಂದು ತೀರ್ಮಾನಿಸಿದ ಅವರು ಮಣಿಲಾಲನಿಗೆ ಕಿತ್ತಳೆ ಹಣ್ಣಿನ ರಸದ ಮೇಲೆ ಮೂರು ದಿವಸ ಉಪವಾಸವಿರಿಸಿದರು. ಜ್ವರ ಇಳಿಯದಿದ್ದಾಗ ಧೃತಿಗೆಟ್ಟು ಹಲವು ಆಯ್ಕೆ ಮತ್ತು ಆಲೋಚನೆಗಳೊಡನೆ ತಳಮಳಿಸಿದರಾದರೂ, ನಂಬಿಕೆ ಕಳೆದುಕೊಳ್ಳದೆ ಅವನಿಗೆ ಕಟಿಸ್ನಾನ ಆರಂಭಿಸಿದರು. ನಂತರ ಅವನನ್ನು ಚೆನ್ನಾಗಿ ನೀರು ಹಿಂಡಿದ ಒದ್ದೆಬಟ್ಟೆಯಲ್ಲಿ ಸುತ್ತಿ ಎರಡು ಕಂಬಳಿಗಳನ್ನು ಬಿಗಿಯಾಗಿ ಹೊದೆಸಿ ಮಾನಸಿಕ ತಲ್ಲಣವನ್ನು ತಡೆಯಲಾರದೆ ಮನೆಯಿಂದ ಹೊರಹೋಗಿ ಇಡೀ ಸಂಜೆ ಸಮುದ್ರ ತೀರದಲ್ಲಿ ಶತಪಥ ತಿರುಗಿ, ದೇವರಿಗೆ ಮೊರೆ ಇಟ್ಟು, ಡವಡವನೆ ಹೊಡೆದುಕೊಳ್ಳುವ ಎದೆಯೊಂದಿಗೆ ಮನೆಗೆ ಬಂದರು.

ತಂದೆ ಮನೆಗೆ ಹಿಂತಿರುಗಿದ್ದನ್ನು ಗುರುತಿಸಿದ ಮಣಿಲಾಲ 'ಬಾಪು' ಎಂದು ಕೂಗಿ ಕರೆದ. 'ನಾನು ಬೆಂದು ಹೋಗುತ್ತಿದ್ದೇನೆ. ಕಂಬಳಿ ಬಿಚ್ಚಿ' ಎಂದು ಅಂಗಲಾಚಿದ. ಗಾಂಧಿ ಅವನ ಹಣೆ ಮುಟ್ಟಿನೋಡಿದರು. ಧೈರ್ಯ ಬಂದಿತು. 'ಉಹೂಂ, ನೀನು ಪೂರ್ತಿ ಬೆವರಿಬಿಡಬೇಕು ಮಗೂ' ಎಂದು ಅವನನ್ನು ಸಾಂತ್ವನಗೊಳಿಸುತ್ತಾ ಅವನ ಹಾಸಿಗೆಯಲ್ಲೇ ಪಕ್ಕದಲ್ಲಿ ಮಾತಾಡುತ್ತಾ ಮಲಗಿದರು. ಇಬ್ಬರಿಗೂ ಯಾವಾಗ ನಿದ್ರೆ ಬಂದಿತೋ! ಬೆಳಿಗ್ಗೆ ಎದ್ದಾಗ ಮಣಿಲಾಲನಿಗೆ ಜ್ವರವೆಲ್ಲ ಇಳಿದು ಅವನು ಸಂಪೂರ್ಣ ಗುಣಮುಖನಾಗಿದ್ದ! ಗಾಂಧಿ 'ದೇವರು ನನ್ನ ಮಾನ ಉಳಿಸಿದ!' ಎಂದು ನಿಟ್ಟುಸಿರಿಟ್ಟರು. ಅವರು ಈ ಘಟನೆಯನ್ನು 'ಒಂದು ಧರ್ಮ ಸಂಕಟ'ವೆಂಬ ಶೀರ್ಷಿಕೆಯಡಿಯಲ್ಲಿ ತಮ್ಮ ಆತ್ಮಚರಿತ್ರೆಯಲ್ಲಿ ದಾಖಲಿಸಿದ ನಂತರ ಹೇಳುವುದು: 'ನನ್ನ ಮಕ್ಕಳಲ್ಲೆಲ್ಲ ಈಗ ಮಣಿಲಾಲನೇ ಅತ್ಯಂತ ಆರೋಗ್ಯವಂತನಾಗಿರುವುದು'.

ಈ 'ಧರ್ಮ ಸಂಕಟ'ದಿಂದ ಪಾರಾಗಿ ಗಾಂಧಿ ಗಿರಗಾಂವ್‌ನ ಮನೆ ಆರೋಗ್ಯದ ವಿಶಾಲ ದೃಷ್ಟಿಯಿಂದ ಸರಿಯಿಲ್ಲವೆನಿಸಿದ್ದರಿಂದ ಸಾಂತಾಕ್ರೂಜ್ ಬಡಾವಣೆಯಲ್ಲೊಂದು ಬಂಗ್ಲೆಯೊಂದನ್ನು ಬಾಡಿಗೆಗೆ ಪಡೆದು ಸಂಸಾರದೊಂದಿಗೆ ಸುಖವಾಗಿ ನೆಲೆಸಲು ನಿರ್ಧರಿಸಿದರು. ಅವರು ಹೈಕೋರ್ಟಿನಲ್ಲಿ ಹಿರಿಯ ವಕೀಲರು ನಡೆಸುವ ಮೊಕದ್ದಮೆಗಳನ್ನು ನೋಡಿ ಅಭ್ಯಸಿಸಲು ಅಲ್ಲಿಗೆ ಹೋಗುತ್ತಿದ್ದರು. ಆ ಅನುಭವದ ಬಗ್ಗೆ ತಮ್ಮ ಆತ್ಮಕಥೆಯಲ್ಲಿ ಬರೆದಿರುವ ಈ ಸಾಲುಗಳು ಅವರ ವ್ಯಕ್ತಿತ್ವದಲ್ಲಿ ಆಳದ ಧಾರ್ಮಿಕತೆಯೊಂದಿಗೆ ಸರಿ ಜೋಡಿಯಂತೆ ಬೆಳೆದಿದ್ದ ಅವರ ತಿಳಿ ಹಾಸ್ಯಪ್ರಜ್ಞೆಯನ್ನೂ ಮತ್ತು ಬರವಣಿಗೆಯ ಲಾಘವ ಗುಣವನ್ನೂ ಹೊರಸೂಸುವಂತಿದೆ: 'ನಾನು ಅಲ್ಲಿಗೆ ಹೋಗುತ್ತಿದ್ದುದು ಜ್ಞಾನಾರ್ಜನೆಗಿಂತ ಹೆಚ್ಚಾಗಿ ಸಮುದ್ರದ ಮೇಲಿಂದ ಬೀಸುತ್ತಿದ್ದ ತೂಕಡಿಕೆ ಬರಿಸುವ ಗಾಳಿಯ ಸುಖವನ್ನು ಅನುಭವಿಸುವುದಕ್ಕಾಗಿ ಎಂದು ಹೇಳಿದರೆ ಸೂಕ್ತವಾದೀತು. ಈ ಸುಖಾನಂದವನ್ನು ಅನುಭವಿಸುತ್ತಿದ್ದವನು ನಾನೊಬ್ಬನೇ ಅಲ್ಲ ಎಂಬುದೂ ನನಗೆ ಕಾಣುತ್ತಿತ್ತು. ಆದರೆ ಆಗ ಅದೇ ಒಂದು ಪ್ರತಿಷ್ಠೆಯ ಖಯಾಲಿಯಾಗಿದ್ದುದರಿಂದ ಯಾರಿಗೂ ಅದರಲ್ಲಿ ನಾಚಿಕೆಗೇನೂ ಕಾರಣವಿರಲಿಲ್ಲ!'

ದ. ಆಫ್ರಿಕಾದಿಂದ ಮತ್ತೆ ಕರೆ

ಆದರೆ ಸಂಸಾರ ಸುಖವಾಗಲೀ ಅಥವಾ ಸಮುದ್ರದ ಗಾಳಿಯ ಸುಖವಾಗಲೀ ಗಾಂಧಿಗೆ ಬಹುಕಾಲ ಲಭ್ಯವಾಗಲಿಲ್ಲ. ಹೊಸ ಮನೆಯಲ್ಲಿ ಸಂಸಾರದೊಂದಿಗೆ ನೆಮ್ಮದಿಯ ಜೀವನ ಆರಂಭಿಸುತ್ತಿದ್ದ ಹೊತ್ತಿನಲ್ಲೇ ಅವರಿಗೆ ದ.ಆಫ್ರಿಕಾದಿಂದ ಅವರ ಗೆಳೆಯರಿಂದ ಕೂಡಲೇ ಹೊರಟುಬರುವಂತೆ ಕೋರಿದ ತಾರೊಂದು ಬಂತು. ಇಂಗ್ಲೆಂಡ್‌ನ ಬ್ರಿಟಿಷ್ ಸರ್ಕಾರದಲ್ಲಿ ವಸಾಹತುಗಳ ಉಸ್ತುವಾರಿ ಕಾರ್ಯದರ್ಶಿಯಾಗಿದ್ದ ಚೇಂಬರ್‌ಲೇನ್ ಬೋಯರ್ ಯುದ್ಧದ ರಾಜಕೀಯ ಪರಿಣಾಮಗಳ ಔಪಚಾರಿಕ ಇತ್ಯರ್ಥಕ್ಕಾಗಿ ದ.ಆಫ್ರಿಕಾಕ್ಕೆ ಅಧಿಕೃತ ಪ್ರವಾಸ ಕೈಗೊಂಡಿರುವುದಾಗಿಯೂ, ಈ ಇತ್ಯರ್ಥ ಒಪ್ಪಂದಗಳ ಸಂದರ್ಭ ತಮ್ಮ ಸ್ಥಿತಿಗತಿಗಳ ಭವಿಷ್ಯದ ಮೇಲೆ ನಿರ್ಣಾಯಕ ಪರಿಣಾಮಗಳನ್ನು ಉಂಟುಮಾಡುವುದರಿಂದ ಗಾಂಧಿ ಬಂದು ಈ ಸಂದರ್ಭದಲ್ಲಿ ತಮಗೆ ಮಾರ್ಗದರ್ಶನ ಮಾಡಬೇಕೆಂದು ಅಲ್ಲಿನ ಭಾರತೀಯರು ಆ ತಾರಿನಲ್ಲಿ ಕೋರಿದ್ದರು. ನಂತರದಲ್ಲೇ ಗಾಂಧಿಯ ಪ್ರಯಾಣದ ವೆಚ್ಚವನ್ನೂ ಕಳಿಸಿದರು. ಕೊಟ್ಟ ಮಾತಿನಂತೆ ಗಾಂಧಿ ಹೊರಡಲೇಬೇಕಾಯಿತು.

ಸುಮಾರು ಒಂದು ವರ್ಷ ಅಲ್ಲಿರಬೇಕಾಗಬಹುದೆಂದು ಅಂದಾಜಿಸಿದ ಗಾಂಧಿ ಹೆಂಡತಿ ಮಕ್ಕಳನ್ನು ಸ್ವದೇಶದಲ್ಲೇ ಬಿಟ್ಟು ಹೊರಡಲು ನಿರ್ಧರಿಸಿದರು. ಆದರೆ ತನ್ನೊಂದಿಗೆ ತನ್ನ ಆಪ್ತ ಸೋದರ ಸಂಬಂಧಿ ಮಗನ್‌ಲಾಲ್ ಸೇರಿದಂತೆ ತನ್ನ ಮನೆತನದ ನಾಲ್ಕೈದು ಯುವಕರನ್ನು ತಮ್ಮೊಂದಿಗೆ ಕರೆದೊಯ್ದರು. ಈ ಯುವಕರು ಸರ್ಕಾರಿ ನೌಕರಿ ಎಂಬ ಸಾಹಸವೇ ಇಲ್ಲದ ಸವೆದ ದಾರಿಯನ್ನು ತೊರೆದು ಸಾರ್ವಜನಿಕ ಜೀವನದ ಏಳುಬೀಳುಗಳಲ್ಲಿ ಬಿದ್ದೆದ್ದು ಪ್ರಬುದ್ಧರಾಗಿ ಇತರರಿಗೆ ಮಾದರಿಗಳಂತೆ ಅವರನ್ನು ತಯ್ಯಾರು ಮಾಡಬೇಕೆಂಬುದು ಅವರ ಉದ್ದೇಶವಾಗಿತ್ತು.

■

೧೪
ದ.ಆಫ್ರಿಕಾದಲ್ಲಿ ಹೋರಾಟದ ಪುನರಾರಂಭ

೧೯೦೨ರ ಕೊನೆಯ ಹೊತ್ತಿಗೆ ಗಾಂಧಿ ಡರ್ಬಾನ್‌ಗೆ ಬಂದರು. ಲಂಡನ್‌ನಿಂದ ಬ್ರಿಟಿಷ್ ಮಹಾಸಾಮ್ರಾಜ್ಯದ ಪ್ರತಿನಿಧಿಯಾಗಿ ಬಂದಿದ್ದ ವಸಾಹತುಗಳ ಉಸ್ತುವಾರಿ ಕಾರ್ಯದರ್ಶಿ ಜೋಸೆಫ್ ಚೇಂಬರ್‌ಲೇನ್‌ರನ್ನು ಭಾರತೀಯ ನಿವಾಸಿಗಳ ನಿಯೋಗದ ನಾಯಕರಾಗಿ ಭೇಟಿ ಮಾಡಿ ಸಮುದಾಯದ ಸಮಸ್ಯೆಗಳನ್ನು ಮುಂದಿಟ್ಟರು. ಬೋಯರ್ ಯುದ್ಧದಲ್ಲಿ ತಮ್ಮ ನೇತೃತ್ವದಲ್ಲಿ ಭಾರತೀಯರು ಇಂಗ್ಲಿಷ್‌ರ ಪರ ನಿಂತು ಕೆಲಸ ಮಾಡಿ ಪ್ರಭುತ್ವಕ್ಕೆ ನಿಷ್ಠೆ ತೋರಿಸಿದ್ದರಿಂದ ಈ ಸಮಸ್ಯೆಗಳಿಗೆ ಪರಿಹಾರ ದೊರೆಯುವವೆಂದು ಗಾಂಧಿ ಭಾವಿಸಿದ್ದರು. ಆದರೆ ಬ್ರಿಟಿಷ್ ಸಾಮ್ರಾಜ್ಯದ ಯೋಜನೆಯೇ ಬೇರೆಯಾಗಿತ್ತು. ಬೋಯರರು ಮುಖ್ಯ ಯುದ್ಧದಲ್ಲಿ ಸೋತಿದ್ದರೂ ಅವರ ಜನರಲ್ ಲೂಯಿ ಬೋತಾ, ಕ್ರಿಶ್ಚಿಯನ್ ಸ್ಮಟ್ಸ್ ಮುಂತಾದ ಬಿಡಿ ಬಂಡಾಯಗಾರರು ಗೆರಿಲ್ಲಾ ಯುದ್ಧವನ್ನು ಮುಂದುವರೆಸಿ ಇಂಗ್ಲಿಷ್ ಸೈನ್ಯಕ್ಕೆ ಘಾಸಿ ಉಂಟು ಮಾಡುತ್ತಲೇ ಇದ್ದರು. ಹಾಗಾಗಿ ಬ್ರಿಟಿಷ್ ಪ್ರಭುತ್ವ ಎಲ್ಲ ಪ್ರಾಂತ್ಯಗಳಲ್ಲೂ ಸಾಕಷ್ಟು ದೊಡ್ಡ ಸಂಖ್ಯೆಯಲ್ಲೇ ಇದ್ದ ಬೋಯರರೊಂದಿಗೆ ೧೯೦೨ರಲ್ಲಿ ಒಂದು ರಾಜಿ ಸಂಧಾನ ಮಾಡಿಕೊಂಡು ಅವರ ನಾಯಕರಿಗೆ ಹೊಸದಾಗಿ ರೂಪಿತವಾದ ಬ್ರಿಟಿಷ್ ಪ್ರಭುತ್ವದಡಿಯಲ್ಲಿ ಮತದಾನದ ಮೂಲಕ ರಚಿತವಾಗುವ ದ.ಆಫ್ರಿಕಾ ಒಕ್ಕೂಟದ ಹೊಸ ಸರ್ಕಾರದಲ್ಲಿ ಜನಸಂಖ್ಯಾಧಾರಿತ ಪಾಲು ನೀಡಲು ನಿರ್ಧರಿಸಿ ಒಂದು ಒಪ್ಪಂದಕ್ಕೆ ಬಂದಿತು. ಇದು ಬಿಳಿಯ–ಬಿಳಿಯರ ನಡುವೆ ಆದ ಸಂಧಾನವಾಗಿತ್ತು. ಈ ಹಿನ್ನೆಲೆಯಲ್ಲಿ ಚೇಂಬರ್ಲೇನ್ ಭಾರತೀಯರಿಗೆ, 'ಯೂರೋಪಿಯನ್ನರೊಂದಿಗೆ ವಾಸಿಸಬೇಕಾದ ನೀವು ಅವರ ಮನ ಒಲಿಸುವ ಎಲ್ಲ ಪ್ರಯತ್ನಗಳನ್ನು ಮಾಡುವುದೊಂದೇ ದಾರಿ' ಎಂದು ಕಡ್ಡಿ ಮುರಿದಂತೆ ಹೇಳಿಬಿಟ್ಟರು. ಗಾಂಧಿ ಮತ್ತು ಅವರ ಗೆಳೆಯರಿಗೆ ಆಘಾತವಾಗಿ ತಾವು ಮೋಸಹೋದೆವು ಎಂದೆನ್ನಿಸತೊಡಗಿತು. ಚೇಂಬರ್‌ಲೇನ್ ಬಂದಿರುವುದು ತಾವು ಉದಾರವಾಗಿ ಬೋಯರ್‌ಗಳಿಗೆ ಆಡಳಿತದಲ್ಲಿ ಪಾಲು ನೀಡಿದ್ದಕ್ಕೆ ಪ್ರತಿಯಾಗಿ ಕಪ್ಪ ವಸೂಲು ಮಾಡಲಷ್ಟೆ ಎಂಬುದೂ ಅವರ ಅರಿವಿಗೆ ಬಂತು.

ಟ್ರಾನ್ಸ್‌ವಾಲ್‌ಗೂ ಹರಡಿದ ಹೋರಾಟ

ಈಗ ಇಂಗ್ಲಿಷರು ಮತ್ತು ಬೋಯರರು ಒಂದಾಗಿದ್ದುದರಿಂದ ದ.ಆಫ್ರಿಕಾ ಒಕ್ಕೂಟದಲ್ಲಿ ಭಾರತೀಯರ ಸ್ಥಿತಿ ಇನ್ನೂ ಚಿಂತಾಜನಕವಾಗಲಿದೆ ಎಂದು ಗಾಂಧಿಗೆ ಅರಿವಾಯಿತು. ಚೇಂಬರ್‌ಲೇನ್ ಈಗ ನೆಟಾಲ್‌ನಿಂದ ಟ್ರಾನ್ಸ್‌ವಾಲ್‌ಗೆ ಹೊರಟಿದ್ದರಿಂದ ಭಾರತೀಯರ ಸ್ಥಿತಿ ತುಂಬ ಹದಗೆಟ್ಟಿದ್ದ ಅಲ್ಲಿಗೆ, ಅಲ್ಲಿನ ಭಾರತೀಯರ ಕರೆಯ ಮೇರೆಗೆ ಗಾಂಧಿಯೂ ಹೊರಟರು. ಇಂಗ್ಲಿಷ್ ಸೈನ್ಯದ ಭೀಕರ ಆಕ್ರಮಣಕ್ಕೆ ತುತ್ತಾಗಿದ್ದ ಆ ಪ್ರಾಂತ್ಯ

ಹಾಳುಬಿದ್ದಿತ್ತು; ಜನಜೀವನ ಅಸ್ತವ್ಯಸ್ತವಾಗಿತ್ತು. ಅದು ಹೊಸದಾಗಿ ಬ್ರಿಟಿಷ್ ಸಾಮ್ರಾಜ್ಯದ ಸದಸ್ಯ ದೇಶವಾಗಿದ್ದರಿಂದ ಕಾನೂನುಗಳು ಪರಿಷ್ಕಾರದ ಹಂತದಲ್ಲಿದ್ದು, ಹೊರಗಡೆಯಿಂದ ಅಲ್ಲಿಗೆ ಹೋಗಲು ಸರ್ಕಾರದ ಅಪ್ಪಣೆ ಬೇಕಿತ್ತು ಮತ್ತು ಭಾರತೀಯರ ಪ್ರವೇಶವನ್ನು ಅಲ್ಲಿಗೆ ಬಹಿಷ್ಕರಿಸಲಾಗಿತ್ತು. ಅಲ್ಲಿನ ಹೊಸ ಸರ್ಕಾರ ಏಷ್ಯಾದ ಜನರನ್ನು ವಿಶೇಷವಾಗಿ ಭಾರತೀಯರ ಪ್ರಜೆತನವನ್ನು ನಿರ್ಧರಿಸಿ ನಿರ್ವಹಿಸಲು ಏಶಿಯನ್ ವ್ಯವಹಾರಗಳ ಇಲಾಖೆಯೊಂದನ್ನು ರೂಪಿಸಿತ್ತು. ಬೇಕೆಂದೇ ಭಾರತ–ಸಿಲೋನ್‌ಗಳಿಂದ ಕರೆಸಿಕೊಂಡಿದ್ದ ಅಸಭ್ಯ ಮತ್ತು ಭ್ರಷ್ಟ ಬ್ರಿಟಿಷ್ ಅಧಿಕಾರಿಗಳಿಂದ ಕೂಡಿದ್ದ ಈ ಇಲಾಖೆ ಭಾರತೀಯರನ್ನು ಹೇಗೋ ಮಾಡಿ ದೇಶದಿಂದ ಹೊರಹಾಕಲೆಂದೇ ಈ ಇಲಾಖೆ ರೂಪಿತವಾಗಿದೆ ಎಂಬ ಸಾರ್ವಜನಿಕ ಅನುಮಾನವನ್ನು ನಿಜಗೊಳಿಸುವಂತೆ ಕಾರ್ಯ ನಿರ್ವಹಿಸುತ್ತಿತ್ತು. ಇದರ ಜೊತೆಗೇ ಯುದ್ಧ ಸಂದರ್ಭದಲ್ಲಿ ಯುದ್ಧದ ಪರಿಣಾಮಗಳಿಂದ ತಪ್ಪಿಸಿಕೊಳ್ಳಲು ಪ್ರಾಂತ್ಯದಿಂದ ಹೊರಹೋಗಿದ್ದ ಭಾರತೀಯರು ಮತ್ತೆ ಟ್ರಾನ್ಸ್‌ವಾಲ್‌ನ ತಮ್ಮ ವಾಸ ಸ್ಥಾನಗಳಿಗೆ ವಾಪಸಾಗಲು ದೊಡ್ಡ ಮೊತ್ತದ ಲಂಚ ಕೊಡಬೇಕಾಗಿದೆ ಎಂಬ ಸುದ್ದಿ ಹರಡಿತು. ಇನ್ನು ಟ್ರಾನ್ಸ್‌ವಾಲ್‌ನಲ್ಲೇ ಉಳಿದಿದ್ದ ಭಾರತೀಯರು ಭಾವಚಿತ್ರ ಮತ್ತು ಸಕಲ ವ್ಯಕ್ತಿ ವಿವರಗಳುಳ್ಳ ಹೊಸ ಗುರುತು ಪತ್ರಗಳನ್ನು ಪಡೆದುಕೊಳ್ಳಬೇಕೆಂಬ ಆದೇಶ ತುಂಬ ಕಿರುಕುಳಕ್ಕೆ ಕಾರಣವಾಗಿತ್ತು. ಟ್ರಾನ್ಸ್‌ವಾಲ್‌ನ ಹೊಸ ಸರ್ಕಾರದ ಈ ಕಾರ್ಯಾಚರಣೆಯ ಹಿಂದೆ ಇದ್ದುದು, ಆ ಪ್ರಾಂತ್ಯದಲ್ಲಿ ಆರಂಭವಾಗಿ ಬಹು ಲಾಭದಾಯಕವಾಗಿ ನಡೆಯಲಾರಂಭಿಸಿದ್ದ ಚಿನ್ನ ಮತ್ತು ವಜ್ರ ಗಣಿ ಉದ್ಯಮ ಬಿಳಿಯರ ಪಾಲಿಗೆ ತಂದೊದಗಿಸಲಾರಂಭಿಸಿದ್ದ ಹೊಸ ಸಂಪತ್ತು ಮತ್ತು ಜೀವನ ಸಮೃದ್ಧಿ. ಸರ್ಕಾರದ ವಕ್ತಾರನೊಬ್ಬ ಗಾಂಧಿಗೆ ಹೇಳಿದ್ದಂತೆ, ಬಿಳಿಯರಿಗೆ ಏಷಿಯನ್ನರ, ವಿಶೇಷವಾಗಿ ಭಾರತೀಯರ ಚುರುಕು ವ್ಯಾಪಾರ ಬುದ್ಧಿಯ ಬಗ್ಗೆ ಚಿಂತೆಯಿದ್ದು ಅವರೆಲ್ಲಿ ಈ ಹೊಸ ಸಂಪತ್ತು ಮತ್ತು ಸಮೃದ್ಧಿಗೆ ಲಗ್ಗೆ ಹಾಕುವರೋ ಎಂಬ ಭೀತಿ ಉಂಟಾಗಿತ್ತು. ಹಾಗಾಗಿ 'ಏಷಿಯಾಟಿಕ್ ಇಲಾಖೆ'ಯ ಮೂಲಕ ಜಾರಿಗೆ ತರಲಾರಂಭಿಸಿದ್ದ ಹೊಸ ಔಪಚಾರಿಕತೆಗಳ ಉದ್ದೇಶ ಅವರನ್ನು ಈ ವಿಷಯದಲ್ಲಿ ನಿಯಂತ್ರಿಸುವುದೇ ಆಗಿತ್ತು. ಭಾರತೀಯರು ದ.ಆಫ್ರಿಕಾದ ಚಿನ್ನವನ್ನು ಕೊಳ್ಳುವಂತಿಲ್ಲ ಎಂಬ ನಿಷೇಧದ ಉದ್ದೇಶವೂ ಇದೇ ಆಗಿತ್ತು.

ಇದನ್ನೆಲ್ಲ ಅರಿತ ಗಾಂಧಿ, ಇದು ತಾವು ನಂಬಿಕೆ ಇಟ್ಟಿದ್ದ, ಬ್ರಿಟಿಷ್ ಸಾಮ್ರಾಜ್ಯದ ಎಲ್ಲರನ್ನೂ ಸಮಾನವಾಗಿ ಕಾಣುವ ಕಾನೂನಿಗೆ ವಿರುದ್ಧವಾದ ನಡೆಯೆಂದೂ, ಇದನ್ನು ಆರಂಭದಲ್ಲೇ ಚಿವುಟಿ ಹಾಕದಿದ್ದರೆ ದ.ಆಫ್ರಿಕಾದಲ್ಲಿನ ಭಾರತೀಯರ ಸರ್ವನಾಶ ಖಂಡಿತವೆಂದೂ ತೀರ್ಮಾನಿಸಿದರು. ಅವರು ನೆಟಾಲ್‌ನ ಇಂಗ್ಲಿಷ್ ಪೊಲೀಸ್ ಅಧಿಕಾರಿಯೊಬ್ಬರ ಹಳೆಯ ಪರಿಚಯದ ಮೂಲಕ ಒಂದು ಪ್ರವೇಶ ಚೀಟಿ ಪಡೆದುಕೊಂಡು ಟ್ರಾನ್ಸ್‌ವಾಲ್‌ನ ರಾಜಧಾನಿ ಜೊಹಾನ್ಸ್‌ಬರ್ಗ್ ತಲುಪಿದರು. ಅಲ್ಲಿ ಏಷ್ಯನ್ ಇಲಾಖೆಯ ಅಧಿಕಾರಶಾಹಿಯು ಅವರೊಂದಿಗೆ ಅಸಭ್ಯವಾಗಿ ನಡೆದುಕೊಂಡಿತಲ್ಲದೆ, ಅವರನ್ನು ಅಲ್ಲಿ ಅಕ್ರಮ ನಿವಾಸಿಯೆಂದು ಬಂಧಿಸುವ ಪ್ರಯತ್ನ ಮಾಡಿತು. ಆದರೆ ಅಲ್ಲಿನ ಭಾರತೀಯರ ನಿಯೋಗ ಅವರನ್ನು ತಮ್ಮ ಸಲಹೆಗಾರರನ್ನಾಗಿ ಕರೆಸಿಕೊಳ್ಳಲಾಗಿದೆ ಎಂದು ಹೇಳಿದಾಗ ಅದು ಸುಮ್ಮನಾಯಿತು. ಆದಾಗ್ಯೂ ಗಾಂಧಿ ಈಗಾಗಲೇ ಒಮ್ಮೆ ನೆಟಾಲ್‌ನ ಭಾರತೀಯರ ನಿಯೋಗದಲ್ಲಿದ್ದುದರಿಂದ ಅವರಿಗೆ ಈ

ನಿಯೋಗದಲ್ಲಿ ಅವಕಾಶ ಕೊಡಲು ನಿರಾಕರಿಸಲಾಯಿತು. ಇದರಿಂದ ಕ್ರೋಧಗೊಂಡ ಕೆಲವು ಭಾರತೀಯರು ನಿಯೋಗ ಹೋಗುವುದೇ ಬೇಡವೆಂದರು. ಇನ್ನು ಕೆಲವರು ಬೋಯರ್ ಯುದ್ಧದಲ್ಲಿ ಬ್ರಿಟಿಷ್ ಸೇನೆ ಪರವಾಗಿ ಕೆಲಸ ಮಾಡಲು ಸೂಚಿಸಿದ್ದಕ್ಕಾಗಿ ಗಾಂಧಿಯನ್ನು ಟೀಕಿಸಿದರು. ಅವರಿಗೆ ಗಾಂಧಿ, ನಮ್ಮ ಧರ್ಮವನ್ನು ನಾವು ಪಾಲಿಸಿದ್ದಕ್ಕಾಗಿ ವಿಷಾದಪಡುವುದು ತಪ್ಪು ಎಂದೂ, ಅದಕ್ಕೆ ತಕ್ಕ ಪ್ರತಿಫಲ ಮುಂದೊಂದು ದಿನ ಸಿಕ್ಕೇ ಸಿಗುವುದೆಂದು ಭರವಸೆ ನೀಡುತ್ತಾ, ತಾವು ಆ ದಿಕ್ಕಿನಲ್ಲಿ ಕೆಲಸ ಮಾಡಲು ಟ್ರಾನ್ಸ್‌ವಾಲ್‌ನಲ್ಲೇ ಎಷ್ಟೇ ಕಾಲ ಉಳಿಯಲೂ ಹಿಂಜರಿಯುವುದಿಲ್ಲ ಎಂದು ಘೋಷಿಸಿದರು. ಘೋಷಣೆಯ ಹಿಂದೆ ತಾವು ಬ್ರಿಟಿಷ್ ಸರ್ಕಾರದಿಂದ ಮೋಸ ಹೋದೆ ಎಂಬ ಭಾವನೆಯ ನೋವಿತ್ತು. ಜೊತೆಗೆ ಹೊಸ ಸರ್ಕಾರ ರೂಪಿಸತೊಡಗಿದ್ದ ಶಾಸನಾತ್ಮಕ ಯೋಜನೆಯ ಭಾಗವಾಗಿ ಭಾರತೀಯರನ್ನು ಆದಷ್ಟು ಬೇಗ ದೇಶದಿಂದ ಹೊರಹಾಕುವ ಉದ್ದೇಶದಿಂದ ಏಷಿಯಾಟಿಕ್ ಇಲಾಖೆಯ ಬ್ರಿಟಿಷ್ ಅಧಿಕಾರಿಗಳು ಭಾರತೀಯರಿಗೆ ನೀಡುತ್ತಿದ್ದ ಕಿರುಕುಳದ ವಿವರಗಳು ಅವರನ್ನು ಖಿನ್ನರನ್ನಾಗಿಸಿತ್ತು. ಹಾಗೇ ಅದು ಅವರಲ್ಲಿ ತಾವು ಆರಂಭಿಸಿದ್ದ ಹೋರಾಟವನ್ನು ಅದರ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ದೇ ತೀರಬೇಕೆಂಬ ಹಠವನ್ನು ಹುಟ್ಟುಹಾಕಿತ್ತು. ಗಾಂಧಿಯ ಈ ನಿರ್ಧಾರವನ್ನು ಅಲ್ಲಿನ ಭಾರತೀಯ ಸಮುದಾಯ ಹೊಸ ಹುಮ್ಮಸ್ಸಿನೊಂದಿಗೆ ಸ್ವಾಗತಿಸಿತು.

ಮತ್ತೆ ವಕೀಲ ವೃತ್ತಿಗಾಗಿ ನೋಂದಣಿ

ಹೆಚ್ಚೆಂದರೆ ಒಂದು ವರ್ಷದ ಕೆಲಸವೆಂದೂ, ಆನಂತರ ಭಾರತಕ್ಕೆ ಹಿಂದಿರುಗುವ ಮನಸ್ಸಿನಿಂದ ದ.ಆಫ್ರಿಕಾಕ್ಕೆ ಬಂದಿದ್ದ ಗಾಂಧಿ, ಈಗ ಅಲ್ಲಿಯೇ ಅನಿರ್ದಿಷ್ಟ ಕಾಲ ನೆಲೆಸಬೇಕಾದ ಅನಿವಾರ್ಯತೆ ಉಂಟಾದ್ದರಿಂದ ೧೯೦೩ರ ಫೆಬ್ರವರಿಯಲ್ಲಿ, ಜೊಹಾನ್ಸ್‌ಬರ್ಗ್‌ನ ಸರ್ವೋಚ್ಚ ನ್ಯಾಯಾಲಯದಲ್ಲಿ ವಕೀಲಗಿರಿಗಾಗಿ ಅರ್ಜಿ ಹಾಕಿದರು. ಅವರ ಅದೃಷ್ಟವೆಂಬಂತೆ ಅಲ್ಲಿನ ನ್ಯಾಯಾಧಿಪತಿಗಳು ನಿಷ್ಪಕ್ಷಪಾತಿಯಾಗಿದ್ದು ಅದಕ್ಕೆ-ಹಿಂದೆ ಅವರು ಈ ದೇಶದಲ್ಲಿ ವಕೀಲರಾಗಿ ಸನ್ನದು ಪಡೆದಿದ್ದರು ಎಂಬ ಕಾರಣದ ಮೇಲೆ-ಯಾವುದೇ ತಕರಾರಿಲ್ಲದೆ ಅನುಮೋದನೆ ನೀಡಿದರು. ನಂತರ ಗಾಂಧಿ ವಕೀಲರ ಬಡಾವಣೆಯಲ್ಲೇ ಬರೀ ಬಿಳಿಯರೇ ವಾಸಿಸುತ್ತಿದ್ದ ಅಲ್ಬೆಮಾರ್ಲೆ ಎಂಬ ಬೀದಿಯಲ್ಲಿ ಎಂಟು ಕೋಣೆಗಳ ಒಂದು ದೊಡ್ಡ ಮನೆಯನ್ನೂ ಬಾಡಿಗೆಗೆ ಪಡೆದರು. ಭಾರತದಲ್ಲಿದ್ದ ತಮ್ಮ ಕುಟುಂಬವನ್ನು ಅಲ್ಲಿಗೇ ಕರೆಸಿಕೊಳ್ಳಲು ನಿಶ್ಚಯಿಸಿದರು. ಅದು ಮನೆ ಮತ್ತು ಕಛೇರಿಯೂ ಆಗಿದ್ದುದರಿಂದ ಡರ್ಬಾನ್‌ನ ಮನೆಯಲ್ಲಿದ್ದಂತೆಯೇ ಗಾಂಧಿಯ ಕುಟುಂಬದವರಾಗಿ ಅವರ ಕಛೇರಿ ಸಹಾಯಕರೂ, ಗುಮಾಸ್ತರು ಅಲ್ಲಿ ವಾಸಿಸತೊಡಗಿದರು.

ಗಾಂಧಿ ವಕೀಲಿಕೆಯನ್ನು ವೃತ್ತಿಗಿಂತ ಧರ್ಮವನ್ನಾಗಿ ಪರಿಗಣಿಸಿದ್ದರು. ತಮಗೆ ಬಂದ ಫಿರ್ಯಾದನ್ನು ಕೂಲಂಕಷವಾಗಿ ಪರಿಶೀಲಿಸಿ ಅದರಲ್ಲಿ ನ್ಯಾಯವಿದೆ ಎಂದು ಕಂಡುಬಂದರೆ ಮಾತ್ರ ಫಿರ್ಯಾದಿಯ ಪರವಾಗಿ ವಾದ ಮಾಡಲು ಒಪ್ಪುತ್ತಿದ್ದರು. ನ್ಯಾಯವಿಲ್ಲವೆಂದು ಕಂಡು ಬಂದರೆ ಫಿರ್ಯಾದುದಾರರನ್ನು ಫಿರ್ಯಾದನ್ನು ಹಿಂತೆಗೆದುಕೊಳ್ಳಲು ಹೇಳುತ್ತಿದ್ದರು. ಅಪರಾಧಗಳನ್ನು ಮುಚ್ಚಿಹಾಕಿಕೊಳ್ಳಲು ಅರ್ಜಿ ಹಿಡಿದುಕೊಂಡು ಬಂದವರಿಗೆ ನ್ಯಾಯಾಲಯದಲ್ಲಿ ತಪ್ಪೊಪ್ಪಿಕೊಂಡು ಶಿಕ್ಷೆ

ಅನುಭವಿಸಲು ಅಥವಾ ದಂಡ ಕಟ್ಟಲು ಹೇಳುತ್ತಿದ್ದರು. ಒಂದು ಪ್ರಕರಣದಲ್ಲಂತೂ ತಮ್ಮ ಫಿರ್ಯಾದುದಾರನನ್ನೇ ತಪ್ಪಿತಸ್ಥ ಎಂದು ನ್ಯಾಯಾಲಯದಲ್ಲಿ ಸಾಬೀತು ಮಾಡಿ ಆತನಿಗೆ ಶಿಕ್ಷೆ ಕೊಡಿಸಿದರು. ವಕೀಲಿ ವೃತ್ತಿಯ ಜೊತೆಗೇ ಗಾಂಧಿ ಧಾರ್ಮಿಕ ಜಿಜ್ಞಾಸೆಯಲ್ಲೂ ತೊಡಗಿದ್ದರು. ಏಕೆಂದರೆ ಅಲ್ಲಿ ಭಾರತೀಯರ ಮನುಷ್ಯ ಘನತೆಗಾಗಿ ನಡೆಸಬೇಕಾಗಿದ್ದ ಹೋರಾಟ ಅವರಿಗೆ ಹೊರಗೆ ಕಾನೂನಿನ ಹೋರಾಟವಾಗಿದ್ದರೆ ಒಳಗೆ ಒಂದು ಆಧ್ಯಾತ್ಮಿಕ ಹೋರಾಟವಾಗಿತ್ತು. ಅಂದರೆ ಅವರು ಹೊರಗಿನ ಹೋರಾಟಕ್ಕಾಗಿ ತಮ್ಮನ್ನು ಒಳಗೆ ಗಟ್ಟಿ ಮಾಡಿಕೊಳ್ಳಬೇಕಾಗಿತ್ತು.

ಭಗವದ್ಗೀತೆ ಮತ್ತು ಅಪರಿಗ್ರಹ

ಮನಸ್ಸಿದ್ದರೆ ಮಾರ್ಗವೆಂಬಂತೆ ಇದಕ್ಕೆ ಪೂರಕವಾದ ಗೆಳೆಯರ ಗುಂಪೊಂದು ಅವರಿಗೆ ದೊರಕಿತು. ಥಿಯೊಸಫಿಯಲ್ಲಿ ತೀವ್ರ ಆಸಕ್ತಿ ಇದ್ದ ಐ.ಡಬ್ಲ್ಯು. ರೀಚ್ ಎಂಬ ಲಂಡನ್ ಮೂಲದ ಯಹೂದ್ಯ ಮತ್ತು ಈ ಮುನ್ನವೇ ಗಾಂಧಿಯ ಪರಿಚಯವಿದ್ದ ತರುಣನ ನೇತೃತ್ವದಲ್ಲಿ ಬಿಳಿಯ ಶ್ರದ್ಧಾಳುಗಳ ಗುಂಪೊಂದು 'ಮುಮುಕ್ಷುಗಳ ಸಂಘ' (ಸೀಕರ್ಸ್ ಕ್ಲಬ್) ಎಂಬೊಂದು ವೇದಿಕೆಯನ್ನು ರಚಿಸಿಕೊಂಡು ಭಾರತೀಯರಾದ ಗಾಂಧಿಯಲ್ಲಿ ತಮ್ಮ ಮಾರ್ಗದರ್ಶಿಯನ್ನು ಕಂಡುಕೊಂಡು ಸಾಮೂಹಿಕ ಅಧ್ಯಯನ ಮತ್ತು ಚರ್ಚೆಗಳನ್ನು ಆರಂಭಿಸಿತು. ಇದರ ಪರಿಣಾಮವಾಗಿ ಗಾಂಧಿ ಸ್ವಾಮಿ ವಿವೇಕಾನಂದರ ರಾಜಯೋಗವನ್ನು ಅಭ್ಯಾಸ ಮಾಡತೊಡಗಿದರು. ನಂತರ ಅವರ ಆಸಕ್ತಿ ಪತಂಜಲಿಯ ಯೋಗಸೂತ್ರದ ಕಡೆ ಹರಿಯಿತು. ಕೊನೆಗೆ ಗಾಂಧಿಯ ಆಸಕ್ತಿ ಮತ್ತು ಶ್ರದ್ಧೆ ಭಗವದ್ಗೀತೆಯಲ್ಲಿ ಸ್ಥಿರವಾಗಿ ನಿಂತಿತು. ಅವರಿಗೆ ಅದು ಪ್ರತಿಪಾದಿಸುವ ಸ್ಥಿತಪ್ರಜ್ಞತೆ ತಮ್ಮ ಬದುಕಿನ ಏಕೈಕ ಉದ್ದೇಶವಾಗಿದ್ದ ಸತ್ಯವನ್ನು ಅರಿಯಲು ಇರುವ ನಿಜವಾದ ಮಾರ್ಗವೆಂದು ಮನವರಿಕೆಯಾಯಿತು. ಸ್ಥಿತಪ್ರಜ್ಞತೆಯನ್ನು ಸಾಧಿಸಲು ಅಗತ್ಯವಾದ; ಎಲ್ಲರನ್ನೂ, ಎಲ್ಲವನ್ನೂ ಸಮಭಾವದಿಂದ ನೋಡುವ ಶಿಸ್ತು ಬರುವುದಾದರೂ ಹೇಗೆಂದು ಅವರು ಯೋಚಿಸಿದರು. ಅದಕ್ಕೆ ಗೀತೆಯಲ್ಲೇ 'ಅಪರಿಗ್ರಹ' ಎಂಬ ಉತ್ತರವಿರುವುದನ್ನು ಅವರು ಕಂಡುಕೊಂಡರು. ಅಲ್ಲಿಂದಾಚೆಗೆ ಗೀತೆ ಗಾಂಧಿಗೆ ಅವರ ಸಾವಿನವರೆಗೂ ಬದುಕಿನ ಎಲ್ಲ ಸಂದಿಗ್ಧಗಳಲ್ಲೂ ಉತ್ತರ ಒದಗಿಸುವ ಒಂದು ಸಮಗ್ರ ಮಾರ್ಗದರ್ಶಿಯಾಯಿತು.

ಅಪರಿಗ್ರಹ ಎಂದರೆ ಮೋಹ ನಾಶ; ಯಾರ ಬಗ್ಗೆಯೂ, ಯಾವುದರ ಬಗ್ಗೆಯೂ ಒಡೆತನದ ಭಾವನೆ ಇಟ್ಟುಕೊಳ್ಳದಿರುವುದು ಎಂದು ಅರ್ಥ ಮಾಡಿಕೊಂಡ ಅವರು ಮಾಡಿದ ಮೊದಲ ಕೆಲಸವೆಂದರೆ ತಾವು ಹೆಂಡತಿ ಮಕ್ಕಳ ಬದುಕಿನ ಸುಭದ್ರತೆಯ ಆತಂಕದಲ್ಲಿ ಮಾಡಿಸಿದ್ದ ಜೀವವಿಮೆಯನ್ನು ರದ್ದುಗೊಳಿಸಿದ್ದು. ಹೆಂಡತಿ ಮಕ್ಕಳ ಬಗೆಗಿನ ಪ್ರೀತಿಯ ಮರೆಯಲ್ಲಿ ಇರುವುದು ಒಡೆತನದ ಭಾವನೆಯೇ ಎಂದು ಅವರಿಗೆ ಅನ್ನಿಸಿತ್ತು. 'ನನ್ನನ್ನು ಸೃಷ್ಟಿಸಿದ್ದ ದೇವರು ಅವರನ್ನೂ ಸೃಷ್ಟಿಸಿರುವುದರಿಂದ ದೇವರು ಅವರನ್ನೂ ರಕ್ಷಣೆ ಮಾಡುವನೆಂಬುದು ನನ್ನ ಭರವಸೆಯಾಗಿತ್ತು' ಎಂಬುದು ಈ ಸಂಬಂಧ ಅವರು ಹೇಳುವ ಮಾತು. ಇದರೊಂದಿಗೇ ಅವರು, ತಾವು ಆವರೆಗೆ ನಿಯಮಿತವಾಗಿ ಹಣ ಕಳಿಸುತ್ತಿದ್ದ ತಮ್ಮ ಅಣ್ಣ ಲಕ್ಷ್ಮೀದಾಸರಿಗೆ ಇನ್ನು ಮುಂದೆ ತಮ್ಮಿಂದ ಏನನ್ನೂ ನಿರೀಕ್ಷಿಸಬಾರದೆಂದು ಪತ್ರ ಬರೆದರು. ಇದರಿಂದ ಅವರ ಅಣ್ಣ ಬೇಸರಿಸಿ ಸಂಬಂಧ ಕಳೆದುಕೊಂಡರು. ಆದರೆ ಅವರ ಕೊನೆಗಾಲದಲ್ಲಿ ತಮ್ಮನು ಹಿಡಿದ ದಾರಿ ಸರಿ ಎಂದು

ಅವರಿಗೆ ಮನವರಿಕೆಯಾಗಿ ಕ್ಷಮೆ ಯಾಚಿಸಿ ಗಾಂಧಿಯನ್ನು ನೋಡುವ ಅಪೇಕ್ಷೆ ವ್ಯಕ್ತಪಡಿಸಿದರು. ಆದರೆ ಅವರ ತೀವ್ರ ಅಸ್ವಸ್ಥತೆಯಿಂದಾಗಿ ಅದು ಫಲಗೂಡಲಿಲ್ಲ.

ಟ್ರಸ್ಟೀಶಿಪ್ ಪರಿಕಲ್ಪನೆಯ ಉದಯ ಮತ್ತು ಒಂದು ಅಗ್ನಿ ಪರೀಕ್ಷೆ

ಅಪರಿಗ್ರಹದ ಸಾಧನೆ ಎಂದರೆ ಕನಿಷ್ಠ ಅಗತ್ಯಗಳ ಸರಳ ಜೀವನದ ಆಯ್ಕೆ. ಅಂದರೆ ಪರಿಪೂರ್ಣ ತ್ಯಾಗದ ಜೀವನ. ಇದು ಸಾಧ್ಯವೇ ಎಂದು ಅವರು ಯೋಚಿಸಿದರು. ಆಗ ಅವರ ನೆರವಿಗೆ ಬಂದದ್ದು ತಾವು ಓದಿದ್ದ ಕಾನೂನು ಶಾಸ್ತ್ರದಲ್ಲಿನ ಸ್ನೆಲ್‌ನ ಸಮನ್ವಯ ತತ್ವ. ಇದು ಅವರನ್ನು ಟ್ರಸ್ಟಿಶಿಪ್(ಧರ್ಮದರ್ಶಿತ್ವ) ಪರಿಕಲ್ಪನೆಗೆ ಒಯ್ದಿತು. ಅಂದರೆ ಮನುಷ್ಯ ತನ್ನ ಪಾಲಿನ ಸಂಪಾದನೆಯನ್ನು ತನ್ನದಲ್ಲವೆಂಬ ಭಾವದಲ್ಲಿ ಅದನ್ನು ಸಾರ್ವಜನಿಕ ಹಿತಕ್ಕಾಗಿ ಸಮರ್ಪಿಸಿ ತಾನು ಅದರ ಧರ್ಮದರ್ಶಿ(ಟ್ರಸ್ಟಿ)ಯಾಗಿ ಮಾತ್ರ ಇರುವುದು. ಇದೇ ಮುಂದೆ ಗಾಂಧಿ ತಮ್ಮ ಆರ್ಥಿಕ ಚಿಂತನೆಯ ಮಾದರಿಯಾಗಿ ಬೆಳೆಸಿ ಪ್ರತಿಪಾದಿಸಿದ್ದು.

ಆದರೆ ಈ ಪರಿಕಲ್ಪನೆ ಅವರಲ್ಲಿ ಇನ್ನೂ ಸರಿಯಾಗಿ ಸಾಕಾರಗೊಳ್ಳುವ ಮುನ್ನವೇ ಅದು ಅವರನ್ನು ಪರೀಕ್ಷೆಗೊಡ್ಡಿದ್ದಂತೂ ನಿಜ. ಗಾಂಧಿ ತಾವು ಮತ್ತು ತಮ್ಮ ಗೆಳೆಯರು ಜಿಜ್ಞಾಸೆಗಾಗಿ ಪ್ರತಿ ಸಂಜೆ ಸೇರುತ್ತಿದ್ದ 'ಅಲೆಗ್ಸಾಂಡ್ರಾ' ಎಂಬ ಜೋಹಾನ್ಸ್‌ಬರ್ಗ್‌ನ ಏಕೈಕ ಶಾಕಾಹಾರಿ ಫಲಾಹಾರ ಮಂದಿರದ ಮಾಲೀಕ ನಷ್ಟಕ್ಕೊಳಗಾಗಿ ಅದು ಮುಚ್ಚುವ ಸ್ಥಿತಿಗೆ ಬಂದಾಗ ಅವರ ಮಹಿಳಾ ಸಂಗಾತಿಯೊಬ್ಬರು ಅದನ್ನು ನಡೆಸಲು ಮುಂದೆ ಬಂದು ಅದಕ್ಕಾಗಿ ಅವರಿಂದ ಹಣಕಾಸಿನ ನೆರವು ಬೇಡಿದಳು. ಗಾಂಧಿ ಬಳಿ ಅವರ ಶ್ರೀಮಂತ ಕಕ್ಷಿದಾರರು ನಂಬಿಕೆಯಿಂದ ಇಟ್ಟಿದ್ದ ಹಣವನ್ನು ಅವಳಿಗೆ ನೀಡಿದರು. ಆದರೆ ಫಲಾಹಾರ ಮಂದಿರವನ್ನು ಭವ್ಯವಾಗಿ ಸಜ್ಜುಗೊಳಿಸುವ ಆಕೆಯ ಮಹತ್ವಾಕಾಂಕ್ಷೆಯಿಂದಾಗಿ ಕೆಲಕಾಲದಲ್ಲೇ ಆ ಹಣವೆಲ್ಲ ಖರ್ಚಾಗಿ ಅವಳು ಹಣ ಹಿಂದಿರುಗಿಸದಾದಳು. ಇದರಿಂದಾಗಿ ಸ್ನೇಹಿತರ ಹಣವನ್ನು ಗಾಂಧಿಯೇ ತುಂಬಿಕೊಡಬೇಕಾಗಿ ಬಂತು. ಆಗ ಅವರಿಗೆ ನಿಷ್ಕಾಮ ಕರ್ಮದ ಮೂಲಕ ಮಾತ್ರ ಸ್ಥಿತಪ್ರಜ್ಞತೆ ಸಾಧ್ಯ ಎಂಬುದು ಅರಿವಿಗೆ ಬಂತು. ಜೊತೆಗೆ ಟ್ರಸ್ಟೀಶಿಪ್ ಹೇಳುವ ನಂಬಿಕೆಯ ಮೌಲಿಕತೆಯ ಅರಿವೂ ಉಂಟಾಯಿತು. ಭವ್ಯ ಫಲಾಹಾರ ಮಂದಿರದ ನಿರ್ಮಾಣಕ್ಕೆ ನೀಡಿದ ಬೆಂಬಲ ನಿಷ್ಕಾಮಕರ್ಮ ನಿಯಮದ ಉಲ್ಲಂಘನೆಯಾಗಿದ್ದರೆ, ನಂಬಿಕೆಯ ಮೇಲೆ ಸ್ನೇಹಿತರು ತಮಗೆ ನೀಡಿದ್ದ ಹಣವನ್ನು ಅದಕ್ಕಾಗಿ ವ್ಯಯಿಸಿದ್ದು ಟ್ರಸ್ಟೀಶಿಪ್ ತತ್ವದ ಉಲ್ಲಂಘನೆಯಾಗಿತ್ತು.

ಆಹಾರ-ಆರೋಗ್ಯದ ಪ್ರಯೋಗಗಳು

ಅಪರಿಗ್ರಹ ಪರಿಕಲ್ಪನೆಯ ಭಾಗವಾಗಿ ಗಾಂಧಿ ಸರಳಜೀವನಕ್ಕಾಗಿ ಮಾಡಿದ ಸಂಕಲ್ಪವು ಅವರನ್ನು ಬೇರೆ ಬೇರೆ ಕ್ಷೇತ್ರಗಳಲ್ಲಿ ಪ್ರಯೋಗಗಳನ್ನು ಮಾಡುವ ಕಡೆ ಪ್ರೇರೇಪಿಸಿತು. ಉದಾಹರಣೆಗೆ, ಆಹಾರ ಮತ್ತು ಆರೋಗ್ಯ ಕ್ಷೇತ್ರಗಳು. ಬಹುಕಾಲದಿಂದ ತಲೆನೋವು ಮತ್ತು ಮಲಬದ್ಧತೆಗಳಿಂದ ಬಳಲುತ್ತಿದ್ದ ಗಾಂಧಿ ಅವುಗಳ ನಿವಾರಣೆಗಾಗಿ ದಿನನಿತ್ಯ ಔಷಧಿಗಳ ಮೇಲೆ ತುಂಬ ಹಣ ಸುರಿಯುತ್ತಿದ್ದರು. ಇದನ್ನು ತಪ್ಪಿಸುವ ಯೋಚನೆಯಲ್ಲಿ ತೊಡಗಿರುವಾಗ ಅವರಿಗೆ ತಾನು ದಿನಕ್ಕೆ ಮೂರು ಬಾರಿ ಹೊಟ್ಟೆ ಬಿರಿಯುವಂತೆ ಊಟ-ತಿಂಡಿ ಮಾಡುವವನಾಗಿದ್ದು, ಇದೇ ಈ ತೊಂದರೆಗಳಿಗೆ ಕಾರಣವಿರಬಹುದೇ ಎಂಬ ಅನುಮಾನ ಬರಲಾರಂಭಿಸಿತು. ಈ

ಅನುಮಾನದಲ್ಲಿದ್ದಾಗಲೇ ಒಂದು ಬೆಳಿಗ್ಗೆ ಪತ್ರಿಕೆಯಲ್ಲಿ 'ನೋ ಬ್ರೇಕ್‌ಫಾಸ್ಟ್' ('ಉಪಾಹಾರ ಬೇಡ') ಸಂಘವೊಂದರ ಸ್ಥಾಪನೆಯ ಸುದ್ದಿಯೊಂದು ಕಣ್ಣಿಗೆ ಬಿತ್ತು. ಕುತೂಹಲ ತಾಳಿದ ಅವರು ಆ ಸಂಘದ ಸಂದೇಶವನ್ನು ಅನುಸರಿಸಿ ಬೆಳಗಿನ ಉಪಾಹಾರವನ್ನು ತ್ಯಜಿಸಿದರು. ತಲೆನೋವು ಹೋಯಿತಾದರೂ ಮಲಬದ್ಧತೆ ಮುಂದುವರೆದಿತ್ತು. ಔಷಧಿ ಇಲ್ಲದ ಅದರ ಪರಿಹಾರ ವಿಧಾನದ ಬಗ್ಗೆ ಅವರು ಯೋಚಿಸುತ್ತಿರುವಾಗಲೇ ಅವರಿಗೆ ಶಾಕಾಹಾರಿ ಫಲಾಹಾರ ಮಂದಿರದಲ್ಲಿ ಅಡೋಲ್ಫ್ ಜಸ್ಟ್ ಎಂಬುವವರ 'ನಿಸರ್ಗಕ್ಕೆ ಹಿಂದಿರುಗಿ' ('ರಿಟರ್ನ್ ಟು ನೇಚರ್') ಎಂಬ ಪುಸ್ತಕವೊಂದು ದೊರಕಿತು. ಅದರ ಪ್ರಕಾರ ಅವರು ಶುದ್ಧ ಮಣ್ಣಿನ ಪಟ್ಟಿ ಮತ್ತು ಕಟಿ ಸ್ನಾನದ ಚಿಕಿತ್ಸೆ ಆರಂಭಿಸಿ ಆಹಾರ ಪದ್ಧತಿಯನ್ನು ಬದಲಿಸಿಕೊಂಡರು. ಹಾಲನ್ನೂ, ಮಸಾಲೆ ಪದಾರ್ಥಗಳನ್ನು ವರ್ಜಿಸಿದರು. ಆಯಾ ಋತುಗಳ ಸಹಜವಾಗಿ ಮಾಗಿದ ಹಣ್ಣುಗಳು, ಬಾದಾಮಿ ಮತ್ತು ನೆಲಗಡಲೆ ಅವರ ಪ್ರಮುಖ ಆಹಾರ ವಸ್ತುಗಳಾದವು. ಕ್ರಮೇಣ ಅವರ ಮಲಬದ್ಧತೆಯ ತೊಂದರೆಯೂ ಮಾಯವಾಯಿತು. ಆಹಾರ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಗಾಂಧಿ ಮುಂದೆ ಅನೇಕ ಪ್ರಯೋಗಗಳನ್ನು ಮಾಡಿ, 'ಆರೋಗ್ಯ ರಹಸ್ಯ' ಎಂಬ ಸಮಗ್ರ ಪುಸ್ತಕವೊಂದನ್ನು ರಚಿಸಲು ಈ ಪ್ರಯೋಗ ನಾಂದಿಯಾಯಿತು.

ಬ್ರಹ್ಮಚರ್ಯ ಸಾಧನೆಯ ಹಾದಿಯಲ್ಲಿ

ಗಾಂಧಿಯವರ ಸರಳ ಜೀವನದ ಸಂಕಲ್ಪ, ನಾಲ್ಕನೇ ಮಗ ದೇವದಾಸ ಹುಟ್ಟಿದ ನಂತರ ಆರಂಭವಾಗಿದ್ದ ಬ್ರಹ್ಮಚರ್ಯ ಪಾಲಿಸುವ ಆಲೋಚನೆಗೆ ಬಲನೀಡಿತು. ಇದರ ಭಾಗವಾಗಿ ಅವರು ನಡೆಸಿದ ಅಧ್ಯಯನ ಮತ್ತು ಜಿಜ್ಞಾಸೆಗಳು ಪ್ರಕೃತಿಯಲ್ಲಿ ಕಾಮವಿರುವುದು ಸಂತಾನಾಭಿವೃದ್ಧಿಗೇ ಹೊರತು ಮಿತಿಯಿಲ್ಲದ ವೈಯಕ್ತಿಕ ದೈಹಿಕ ಸುಖಕ್ಕಲ್ಲ ಎಂಬ ತೀರ್ಮಾನಕ್ಕೆ ಅವರನ್ನು ಒಯ್ದಿತು. ಜೊತೆಗೆ, ಮಿತಿಯಿಲ್ಲದ ಸಂತಾನ ಸಾರ್ವಜನಿಕ ಸೇವೆಗೆ, ಅಂದರೆ ತನ್ನ ಪಾಲಿನ ಧರ್ಮ ಆಚರಣೆಗೆ ಅಡ್ಡಿಯಾಗುತ್ತದೆ ಎಂದು ಅವರು ಭಾವಿಸಿದರು. ಈ ಬಗ್ಗೆ ತಮ್ಮ ಪತ್ನಿಯ ಜೊತೆ ಸಮಾಲೋಚಿಸಿ ಅವರ ಅನುಮತಿಯನ್ನೂ ಕೇಳಿ ಮುನ್ನಡೆಯಬೇಕೆಂದು ನಿಶ್ಚಯಿಸಿದರು. ಆ ಅನುಮತಿ ಸಿಕ್ಕರೆ ಸ್ವತಃ ತಮಗೇ ಈ ಶಿಸ್ತನ್ನು ಪಾಲಿಸಲು ಸಾಧ್ಯವೇ ಎಂದು ಯೋಚಿಸತೊಡಗಿದರು. ಆದರೆ ಅವರ ದೇಹ ಅದನ್ನು ನಿರಾಕರಿಸುತ್ತಿರುವ ಅನುಭವಗಳು ಅವರಿಗಾದ ಮೇಲೆ ಬ್ರಹ್ಮಚರ್ಯ ಪಾಲನೆಗೆ ಅಗತ್ಯವಾದ ನಿಗ್ರಹಗಳ ಕಡೆ ಗಮನ ಹರಿಸಿದರು. ಭೌತಿಕ ಅಗತ್ಯಗಳ ಮತ್ತು ಆಹಾರ ನಿಗ್ರಹ ಅವರಿಗೆ ಬಹುಮುಖ್ಯವೆನಿಸಿದವು. ಉಪವಾಸಗಳ ಮೂಲಕ ದೇಹವನ್ನು ಬ್ರಹ್ಮಚರ್ಯ ಪಾಲನೆಗಾಗಿ ಪಳಗಿಸತೊಡಗಿದರು. ಭಗವದ್ಗೀತೆ ಈ ವಿಷಯದಲ್ಲಿ ಅವರ ಮಾರ್ಗದರ್ಶಿಯಾಗಿತ್ತು.

ಹೀಗೆ ಗಾಂಧಿ ಸರಳ ಜೀವನದ ಒಂದೊಂದೇ ಪಾಠಗಳನ್ನು ಪ್ರಾಯೋಗಿಕವಾಗಿ ಅನುಸರಿಸತೊಡಗಿದರು. ಅಗಸನ ಬರವಿನ ಅನಿಶ್ಚಿತತೆಯಿಂದಾಗಿ ಹೊಲೆಸಿಕೊಂಡಿದ್ದ ಹೆಚ್ಚಿನ ಸಂಖ್ಯೆಯ ಉಡುಪುಗಳನ್ನು ಕನಿಷ್ಠ ಮಟ್ಟಕ್ಕೆ ಇಳಿಸಲು ಅನುಕೂಲವಾಗುವಂತೆ ಅವರು ತಮ್ಮ ಬಟ್ಟೆಗಳನ್ನು ತಾವೇ ಒಗೆದುಕೊಳ್ಳಲು ಆರಂಭಿಸಿದರು. ಬಿಳಿಯ ಕ್ಷೌರಿಕನೊಬ್ಬ ಅವರ ತಲೆ ಕ್ಷೌರ ಮಾಡಲು, ತನಗೆ ಬಿಳಿಯ ಗಿರಾಕಿಗಳು

ಬಹಿಷ್ಕರಿಸುತ್ತಾರೆಂಬ ಕಾರಣದ ಮೇಲೆ ನಿರಾಕರಿಸಿದಾಗ, ತಮ್ಮ ತಲೆ ಕ್ಷೌರವನ್ನು ತಾವೇ ಮಾಡಿಕೊಳ್ಳಲೂ ಶುರು ಮಾಡಿದರು. ಹಣ್ಣು ಮತ್ತು ನೆಲಗಡಲೆಯ ಆಹಾರ ಕ್ರಮದ ಪ್ರಯೋಗ ಆರಂಭಿಸಿದರು. ಇವೆಲ್ಲವೂ ಗೀತೆಯ ಸೂಚನೆಯಂತೆ ಕಾಯಾ ವಾಚಾ ಮನಸಾ ಬ್ರಹ್ಮಚರ್ಯದ ವ್ರತ ಆರಂಭಿಸಲು ಸಿದ್ಧತೆಯಾಗಿ ದೇಹ–ಮನಸ್ಸುಗಳ ಭೇದವಿಲ್ಲದೆ ತನ್ನನ್ನು ಪಳಗಿಸಿಕೊಳ್ಳುವ ಕಾರ್ಯಕ್ರಮವಾಗಿತ್ತು.

ಏಷ್ಯಾಟಿಕ್ ಇಲಾಖೆಯ ಅಧಿಕಾರಿಗಳು ಟ್ರಾನ್ಸ್‌ವಾಲ್‌ನ್ನು ಪ್ರವೇಶಿಸುವ ಭಾರತೀಯರಿಂದ ವಿಪರೀತ ಲಂಚ ಕೀಳುತ್ತಾ ಕೊಡುತ್ತಿದ್ದ ಕಿರುಕುಳದ ವಿರುದ್ಧ ಪೊಲೀಸ್ ಇಲಾಖೆಯೊಂದಿಗೆ ಕಾರ್ಯಾಚರಣೆಗೆ ಇಳಿದ ಗಾಂಧಿ ಅದರ ಭಾಗವಾಗಿ ಸಿಕ್ಕಿಬಿದ್ದ ಇಂಗ್ಲಿಷ್ ಅಧಿಕಾರಿಗಳಿಗೆ ಶಿಕ್ಷೆಯಾದ ನಂತರ ಅವರ ಪುನರ್ವಸತಿಗಾಗಿಯೂ ಕೆಲಸ ಮಾಡಿದರು.

ಗಾಂಧಿ ಬೆಂಬಲಕ್ಕೆ ಬಂದ ಬಿಳಿಯರು

ಶಿಕ್ಷೆ ಅಪರಾಧಕ್ಕೇ ಹೊರತು ಅಪರಾಧಿಗಳಿಗಲ್ಲ; ಏಕೆಂದರೆ ಮನುಷ್ಯ ಮೂಲತಃ ಕೆಟ್ಟವನಲ್ಲ, ಪರಿಸ್ಥಿತಿ ಅವನಿಂದ ಕೆಟ್ಟ ಕೆಲಸಗಳನ್ನು ಮಾಡಿಸುತ್ತದೆ ಎಂಬುದು ಅವರ ಕಾಣ್ಕೆಯಾಗಿತ್ತು. ಇದು ವೈಯಕ್ತಿಕ ಜೀವನದಲ್ಲಿ ಆಚರಿಸುವ ಕಷ್ಟಸಾಧ್ಯ ಮನೋಶಿಸ್ತಾಗಿದ್ದು, ಇದಕ್ಕೆ ಬೇಕಾದ ಮನಃಶುದ್ಧೀಕರಣವೂ ಬ್ರಹ್ಮಚರ್ಯಪಾಲನೆಗೆ ಅಗತ್ಯವೆಂದು ಅವರು ನಂಬಿದ್ದರು. ಅವರ ಆತ್ಮಚರಿತ್ರೆಯಲ್ಲಿನ ಅವರದೇ ಮಾತಲ್ಲೇ ಹೇಳುವುದಾದರೆ, 'ಪ್ರತಿ ಮನುಷ್ಯನೂ ಒಂದೇ ಎರಕದ ಉತ್ಪನ್ನ; ಭಗವಂತನ ಸೃಷ್ಟಿ. ಹಾಗಾಗಿ ಯಾವೊಬ್ಬನನ್ನೂ ನಿರಾಕರಿಸುವುದೆಂದರೂ ಭಗವಂತನನ್ನೇ ನಿರಾಕರಿಸಿದಂತೆ'. ಇಂತಹ ಮನಃಶುದ್ಧಿಯಿಂದಾಗಿಯೇ ವರ್ಣಭೇದದ ವಿರುದ್ಧ ಅವರು ಆರಂಭಿಸಿದ್ದ ಹೋರಾಟದೆಡೆಗೆ ಅನೇಕ ಬಿಳಿಯರೂ ಆಕರ್ಷಿತರಾಗಿ ಅದಕ್ಕೆ ಅವರ ಬೆಂಬಲವೂ ದೊರಕುವಂತಾಯಿತು. ಡಾ. ಗಾಡ್‌ಫ್ರೇ, ರೀಚ್, ಇಂಗ್ಲೆಂಡ್‌ನ ಕ್ರೈಸ್ತ ಮತಸ್ಥ ಆಲ್ಬರ್ಟ್ ವೆಸ್ಟ್ ಇವರಲ್ಲಿ ಪ್ರಮುಖರು. ಅವರ ಕಛೇರಿಯಲ್ಲಿದ್ದ ಸಹಾಯಕರು ಮತ್ತು ಗುಮಾಸ್ತರ ಪೈಕಿ ಹಲವರು ಬಿಳಿಯರಾಗಿದ್ದು, ಗಾಂಧಿಯ ಕೆಲಸಗಳಿಗಾಗಿ ಹಗಲಿರುಳೆನ್ನದೆ ದುಡಿಯುತ್ತಾ ಅವರ ಅಭಿಮಾನಿಗಳಾಗಿದ್ದರು. ಈ ಪಟ್ಟಿ ಇಲ್ಲಿಗೇ ನಿಲ್ಲದೆ ಮುಂದೆ ಅದು ದೊಡ್ಡದಾಗುತ್ತಾ ಹೋಯಿತೆಂಬುದು ಈ ಗಾಂಧಿ ಕಥೆಯ ಬಹು ಮುಖ್ಯ ಸಂಗತಿ. ಮುಂದೆ ಮುಖ್ಯವಾಗಿ ಗಾಂಧಿಯ ಜೀವನದುದ್ದಕ್ಕೂ ಅವರಿಗೆ ನೈತಿಕ ಮತ್ತು ಲೌಕಿಕ ಬೆಂಬಲವಾಗಿ ನಿಂತ ಹೆನ್ರಿ ಪೊಲಾಕ್ ಮತ್ತು ಕಲೆನ್‌ಬಾಕ್ ಎಂಬ ಇಬ್ಬರು ಯಹೂದ್ಯರ ಪರಿಚಯವಾದುದನ್ನೂ ಹೇಳಬೇಕು. ಆ ಪರಿಚಯವನ್ನು ಹೇಳುವ ಮುನ್ನ ಗಾಂಧಿ ದ. ಆಫ್ರಿಕಾದಲ್ಲಿನ ಅವರ ಮುಂದಿನ ಹೋರಾಟಕ್ಕೆ ಬೆನ್ನೆಲುಬಾಗಿ ಉಳಿದ 'ಇಂಡಿಯನ್ ಒಪಿನಿಯನ್' ಎಂಬ ವಾರಪತ್ರಿಕೆಯ ಸ್ಥಾಪನೆಯ ಕಥೆಯನ್ನೂ ಮತ್ತು ಜೊಹಾನ್ಸ್‌ಬರ್ಗ್‌ನ ಕೂಲಿ ಕೇರಿ ನಿವಾಸಿಗಳ ಕಷ್ಟಕಾರ್ಪಣ್ಯಗಳಿಗೆ ಗಾಂಧಿ ನೆರವಾದ ಕಥೆಯನ್ನೂ ಹೇಳಬೇಕು.

■

೧೫

ಪತ್ರಿಕೆ ಮತ್ತು ಆಶ್ರಮ ಸ್ಥಾಪನೆ

‘ಇಂಡಿಯನ್ ಒಪಿನಿಯನ್’ ಆರಂಭ

ಅದು ೧೯೦೩. ಡರ್ಬಾನ್‌ನಲ್ಲಿ ಮುದ್ರಣಾಲಯವೊಂದನ್ನು ನಡೆಸುತ್ತಿದ್ದ ಮದನ್‌ಜಿತ್ ಎಂಬ ಭಾರತೀಯನೊಬ್ಬ ಭಾರತೀಯರ ಕಷ್ಟಸುಖಗಳ ನಿವೇದನೆ, ಚರ್ಚೆಗಳ ವೇದಿಕೆಯಾಗಿ ‘ಇಂಡಿಯನ್ ಒಪಿನಿಯನ್’ ಎಂಬ ವಾರಪತ್ರಿಕೆ ಆರಂಭಿಸುವ ಯೋಜನೆಯೊಂದನ್ನು ಗಾಂಧಿಯ ಮುಂದಿಟ್ಟ. ಅಂತಹ ಪತ್ರಿಕೆಯೊಂದರ ಅಗತ್ಯವನ್ನು ಮನಗಂಡ ಗಾಂಧಿ ಅದಕ್ಕೆ ಬೆಂಬಲದ ವಾಗ್ದಾನ ಮಾಡಿದರು. ಭಾರತದಲ್ಲಿದ್ದಾಗ ಪತ್ರಿಕೋದ್ಯಮದ ಕೊಂಚ ಅನುಭವ ಪಡೆದಿದ್ದ ಮನಸುಖಲಾಲ್ ಎಂಬುವವರನ್ನು ಅದರ ಮೊದಲ ಸಂಪಾದಕರನ್ನಾಗಿ ಮಾಡಲಾಯಿತು. ೧೯೦೩ ರ ಜೂನ್‌ನಲ್ಲಿ ಗುಜರಾತಿ, ಹಿಂದಿ, ತಮಿಳು ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಡರ್ಬಾನ್‌ನಿಂದ ಬಹು ಉತ್ಸಾಹದೊಂದಿಗೆ ಆರಂಭವಾದ ಈ ಪತ್ರಿಕೆ ಬಹುಬೇಗ ಆರ್ಥಿಕ ಸಂಕಟಕ್ಕೆ ಸಿಕ್ಕಿಕೊಂಡಿತು. ಮನಸುಖಲಾಲ್ ವಿಚಾರಗಳ ಮನುಷ್ಯನಾಗಿರದೆ ಪತ್ರಿಕೆಯ ಬರಹಗಳು ಓದುಗರಲ್ಲಿ ಉತ್ಸಾಹ ಹುಟ್ಟಿಸುವಲ್ಲಿ ವಿಫಲವಾದವು. ಕ್ರಮೇಣ ತಮಿಳು ಮತ್ತು ಹಿಂದಿ ಆವೃತ್ತಿಗಳಿಗೆ ಸಮರ್ಥ ಲೇಖನಗಳನ್ನು ಬರೆಯುವವರಿಲ್ಲದ ಕಾರಣದಿಂದ ಅವನ್ನು ಸ್ವಲ್ಪ ಕಾಲದಲ್ಲೇ ನಿಲ್ಲಿಸಲಾಯಿತು. ಗಾಂಧಿ ಈಗ ಪತ್ರಿಕೆಯ ಇತರ ಆವೃತ್ತಿಗಳೂ ಮುಚ್ಚಿಹೋಗುವುದನ್ನು ತಡೆಯಲು ಹಣಕಾಸನ್ನು ನಿಯಮಿತವಾಗಿ ಒದಗಿಸುವುದಲ್ಲದೆ ೧೯೦೪ರ ಹೊತ್ತಿಗೆ ಅದರ ಸಂಪಾದಕತ್ವವನ್ನೂ ವಹಿಸಿಕೊಂಡು ಜೋಹಾನ್ಸ್‌ಬರ್ಗ್‌ನಿಂದಲೇ ಲೇಖನಗಳನ್ನೂ ಬರೆಯಲಾರಂಭಿಸಿದರು. ಕಾಲಾನುಕ್ರಮದಲ್ಲಿ ಹಲವು ಕಾರಣಗಳಿಂದಾಗಿ ಸಂಪಾದಕರುಗಳೂ ಬದಲಾಗುತ್ತಾ ಹೋದರು. ಅದೇನೇ ಇದ್ದರೂ, ಆರಂಭದ ತೊಂದರೆಗಳ ನಡುವೆಯೂ ಪತ್ರಿಕೆ ಉಳಿದು ದ.ಆಫ್ರಿಕಾದಲ್ಲಿನ ಗಾಂಧಿಯ ಮುಂದಿನ ಬದುಕಿನ ಹೆಜ್ಜೆಗುರುತುಗಳನ್ನು ಉಳಿಸಿದ ಚಾರಿತ್ರಿಕ ದಾಖಲೆಯಾಗಿ ಮಹತ್ವ ಗಳಿಸಿತಲ್ಲದೆ ಗಾಂಧಿ ಒಬ್ಬ ಅನನ್ಯ ಪತ್ರಕರ್ತನಾಗಿ ಬೆಳೆಯಲು ಒಂದು ವೇದಿಕೆಯೂ ಆಯಿತು.

ಪ್ಲೇಗ್ ನಿಯಂತ್ರಣ ಕಾರ್ಯಕ್ರಮ–ಪೋಲಾಕ್ ಪರಿಚಯ

ಈ ಮಧ್ಯೆ ಜೋಹಾನ್ಸ್‌ಬರ್ಗ್‌ನಲ್ಲಿ, ‘ಘೆಟ್ಟೋ’ ಎಂದು ಕರೆಯಲಾಗುತ್ತಿದ್ದ ಬಡ ಭಾರತೀಯ ಕೂಲಿಗಳು ಬಹುಕಾಲದಿಂದ ಗೇಣಿಯ ಮೇಲೆ ವಾಸಿಸುತ್ತಿದ್ದ ಕೊಳಚೆ ಪ್ರದೇಶವನ್ನು ಅಲ್ಲಿನ ಪುರಸಭೆ ನಗರ ಸ್ವಚ್ಛೀಕರಣಕ್ಕಾಗಿ ತೆರವುಗೊಳಿಸಲು ಯತ್ನಿಸಿತು.

ಇದರಿಂದಾಗಿ ಆ ಬಡಬಗ್ಗರು ವಾಸಿಸಲು ಜಾಗವಿಲ್ಲದೆ ಅತಂತ್ರರಾಗುವ ಸ್ಥಿತಿ ಬಂದಿತು. ಇದು ಗಾಂಧಿಯ ಗಮನಕ್ಕೆ ಬಂದು ಅವರು ಅಲ್ಲಿನ ನಿವಾಸಿಗಳ ಪರ ಕಾನೂನು ಹೋರಾಟ ನಡೆಸಿ ಅವರಿಗೆ ಪರಿಹಾರ ಧನ ಸಿಗುವಂತೆ ಮಾಡಿದರಲ್ಲದೆ, ಎಲ್ಲರಿಗೂ ಪರ್ಯಾಯ ವಸತಿ ವ್ಯವಸ್ಥೆ ಮಾಡದ ಹೊರತು ಕೇರಿಯನ್ನು ತೆರವುಗೊಳಿಸಲಾಗದಂತೆ ನ್ಯಾಯಾಲಯದ ಆಜ್ಞೆ ಜಾರಿಯಾಗುವಂತೆ ಮಾಡಿದರು. ಈ ಮೊಕದ್ದಮೆಗಳ ಸಂಬಂಧ ಅಲ್ಲಿನ ನಿವಾಸಿಗಳು ತಮ್ಮ ಪರಿಹಾರ ಹಣದ ಒಂದು ನಿರ್ದಿಷ್ಟ ಭಾಗವಾಗಿ ನೀಡಿದ ವಕೀಲರ ಶುಲ್ಕವನ್ನೆಲ್ಲ ಗಾಂಧಿ 'ಇಂಡಿಯನ್ ಒಪಿನಿಯನ್'ನ ಆರ್ಥಿಕ ಸಬಲೀಕರಣಕ್ಕಾಗಿ ನೀಡಿದರು. ಗಾಂಧಿಯ ಕಾನೂನು ಹೋರಾಟ ಸಫಲವಾದರೂ, 'ಘೆಟ್ಟೋ'ದಲ್ಲಿ ಪ್ಲೇಗ್ ಹರಡಿ ಅಲ್ಲೊಂದು ನರಕವೇ ಸೃಷ್ಟಿಯಾಯಿತು. ಗಾಂಧಿ ಗೆಳೆಯ ಗಾಡ್‌ಫ್ರೇ ಅವರ ಮಾರ್ಗದರ್ಶನದಲ್ಲಿ ರೀಚ್ ಮತ್ತು ವೆಸ್ಟರೂ ಸೇರಿದಂತೆ ತಮ್ಮ ಬಿಳಿಯ ಗೆಳೆಯರೂ ಸೇರಿದ ಒಂದು ತಂಡ ರಚಿಸಿಕೊಂಡು ಕಣ್ಮುಂದಿನ ಸಾವುನೋವುಗಳ ಮಧ್ಯೆಯೇ ಎದೆಗುಂದದೆ, ತಮ್ಮ ಪ್ರಾಣಗಳನ್ನು ಪಣಕ್ಕೊಡ್ಡಿ ಕೆಲಸ ಮಾಡಿದರು. ಅನೇಕರನ್ನು ತಮ್ಮ ಶುಶ್ರೂಷೆಯ ಮೂಲಕ ರೋಗದಿಂದ ಪಾರುಮಾಡಿದರು. ಈ ಕಾರ್ಯಾಚರಣೆಯ ನಡುವೆ ತಂಡದ ಬಿಳಿಯ ಶುಶ್ರೂಶಕಿಯೊಬ್ಬಳ ಸಾವೂ ಉಂಟಾಯಿತು. ಗಾಂಧಿ ಈ ಶಿಬಿರದಲ್ಲಿಯೂ ತಮ್ಮ ಮಣ್ಣು ಮತ್ತು ನೀರಿನ ಚಿಕಿತ್ಸೆಯ ಪ್ರಯೋಗ ಮಾಡಿ ಜಯಶಾಲಿಯಾದರು. ಗಾಂಧಿ ತಮ್ಮ ಪ್ರಾಣವನ್ನು ಪಣಕ್ಕೊಡ್ಡಿ ಗೈದ ಆ ಸಾರ್ವಜನಿಕ ಸೇವೆ ಅವರನ್ನು ಅಲ್ಲಿನ ಬಡಭಾರತೀಯರ ಕಣ್ಮಣಿಯನ್ನಾಗಿ ಮಾಡಿತು. ಪ್ಲೇಗ್ ನಿಯಂತ್ರಣಕ್ಕೆ ಬಂದ ಮೇಲೆ ಅಲ್ಲಿನ ನಿವಾಸಿಗಳನ್ನೆಲ್ಲ ತಾತ್ಕಾಲಿಕ ಪರ್ಯಾಯ ವಸತಿ ಕ್ಷೇತ್ರವೊಂದಕ್ಕೆ ಸಾಗಿಸಿ ಆ ಘೆಟ್ಟೋಗೆ ಬೆಂಕಿ ಇಡಲಾಯಿತು.

ಈ ಪ್ಲೇಗ್ ಪ್ರಕರಣವೇ ನೆಪವಾಗಿ ಗಾಂಧಿಗೆ ಪೊಲಾಕ್‌ರ ಪರಿಚಯವಾಯಿತು. ಗಾಂಧಿ ಸ್ಥಳಿಯ ಪತ್ರಿಕೆಗಳಲ್ಲಿ ಪ್ಲೇಗ್ ಬಗ್ಗೆ ಬರೆದಿದ್ದ ಒಂದು ಪತ್ರ ಆತನ ಗಮನ ಸೆಳೆದು ಅವರನ್ನು ಪರಿಚಯಿಸಿಕೊಳ್ಳಲೆಂದು ಗಾಂಧಿ ಪ್ರತಿ ಸಂಜೆ ಬರುತ್ತಿದ್ದ ಶಾಕಾಹಾರಿ ಉಪಾಹಾರ ಗೃಹಕ್ಕೆ ಬಂದಿದ್ದ. ಆತನೂ ಗಾಂಧಿಯಂತೆ ಶಾಕಾಹಾರಿಯಾಗಿದ್ದು ಜಸ್ಟ್‌ನ ಪುಸ್ತಕ ಓದಿ ಪ್ರಕೃತಿ ಚಿಕಿತ್ಸೆಯ ಅನುಯಾಯಿಯಾಗಿದ್ದ. ಈ ಸಮಾನ ಅಭಿರುಚಿಯ ಇಬ್ಬರೂ ಬಹುಬೇಗ ಗೆಳೆಯರಾಗಿಬಿಟ್ಟರು. 'ಟ್ರಾನ್ಸ್‌ವಾಲ್ ಕ್ರಿಟಿಕ್' ಎಂಬ ಪತ್ರಿಕೆಯ ಉಪಸಂಪಾದಕನಾಗಿದ್ದ ಪೊಲಾಕ್, ಗಾಂಧಿ ಆತನ ಗೆಳೆತನದಲ್ಲಿ ಕಂಡುಕೊಂಡಂತೆ, ತನ್ನ ಮನಸ್ಸಿಗೆ ಹಿಡಿಸಿದ್ದನ್ನು ಕೂಡಲೇ ಬದುಕಿನಲ್ಲಿ ಆಚರಣೆಗೆ ತರುವ ಅಪ್ಪಟ ಪ್ರಾಮಾಣಿಕತೆಯ ದಿಟ್ಟ ಮನುಷ್ಯನಾಗಿದ್ದ. ಅಂತೆಯೇ ಆತನ ಬದುಕಿನಲ್ಲಿ ತೀವ್ರ ತೆರನ ತ್ವರಿತ ಬದಲಾವಣೆಗಳು ನಡೆದಿದ್ದವು. ಇಂತಹ ಹಚ್ಚ ಹೊಸ ಗೆಳೆಯ ಓದಲೆಂದು ನೀಡಿದ ಪುಸ್ತಕವೊಂದು ಗಾಂಧಿಯ ಬದುಕಿನಲ್ಲಿ ಗೀತೆಯಷ್ಟೇ ಮಹತ್ತರ ಪಾತ್ರ ವಹಿಸುವಂತಾದ್ದರಲ್ಲಿ ಆಶ್ಚರ್ಯವೇನು? ಭಗವದ್ಗೀತೆ ಗಾಂಧಿಯ ಅಂತರಂಗವನ್ನು ತಟ್ಟಿ ಅವರ ಬಹಿರಂಗವನ್ನು ಕಟ್ಟುವ ಪಾತ್ರ ವಹಿಸಿದ್ದರೆ ಈ ಪುಸ್ತಕ ಇದರ ವಿರುದ್ಧ ದಿಕ್ಕಿನಲ್ಲಿ ಪರಿಣಾಮವನ್ನು ಉಂಟುಮಾಡಿ ಅವರ ವ್ಯಕ್ತಿತ್ವವನ್ನು ರೂಪಿಸುವಲ್ಲಿ ತನ್ನ ಕೊಡುಗೆಯನ್ನು ನೀಡಿತು.

'ಅನ್‌ಟು ದಿಸ್ ಲಾಸ್ಟ್' ಪುಸ್ತಕದ ಪರಿಣಾಮ–ಫೀನಿಕ್ಸ್ ಆಶ್ರಮದ ಸ್ಥಾಪನೆ

'ಇಂಡಿಯನ್ ಒಪಿನಿಯನ್' ಕಷ್ಟದಲ್ಲಿದ್ದ ಕಾಲವದು. ಅದರ ಮೇಲ್ವಿಚಾರಣೆಗೆಂದು ಗಾಂಧಿ ವೃತ್ತಿಯಿಂದ ಮುದ್ರಣ ಪರಿಣತರಾಗಿದ್ದ ತಮ್ಮ ಮಿತ್ರ ವೆಸ್ಟ್‌ರನ್ನು ನಿಯೋಜಿಸಿ ಡರ್ಬಾನ್‌ಗೆ ಕಳಿಸಿದ್ದರು. ವೆಸ್ಟ್‌ರು ಅಲ್ಲಿಗೆ ಹೋಗಿ ಪರಿಸ್ಥಿತಿಯನ್ನು ಪರಿಶೀಲಿಸಿ, ಪತ್ರಿಕೆಯ ಕಷ್ಟದ ಸ್ಥಿತಿಯನ್ನು ವಿವರಿಸಿ ಗಾಂಧಿಗೆ ಪತ್ರ ಬರೆದಿದ್ದರು. ಪತ್ರಿಕೆಯ ಬಗ್ಗೆ ಆಶಾದಾಯಕ ಚಿತ್ರ ನೀಡಿ ವೆಸ್ಟ್‌ರನ್ನು ಅಲ್ಲಿನ ಜವಾಬ್ದಾರಿಗೆ ಕಳಿಸಿದ್ದ ಗಾಂಧಿಗೆ ಆ ಬಗ್ಗೆ ತಪ್ಪಿತಸ್ಥ ಭಾವನೆ ಉಂಟಾಗಿ ಪರಿತಪಿಸಿದರು. ಈ ಸಂಬಂಧ ವೆಸ್ಟ್‌ರನ್ನು ಭೇಟಿ ಮಾಡಿ ಮಾತಾಡಲು ಅವರು ಡರ್ಬಾನ್‌ಗೆ ಹೊರಟರು. ಪೊಲಾಕ್ ಗಾಂಧಿಯ ಜೊತೆ ರೈಲ್ವೇ ನಿಲ್ದಾಣಕ್ಕೆ ಬಂದರು. ಅವರಿಗೆ ಪ್ರಯಾಣದಲ್ಲಿ ಓದಲೆಂದು 'ಈ ಪುಸ್ತಕ ಓದಿ. ನಿಮಗೆ ಖಂಡಿತ ಇಷ್ಟವಾಗುತ್ತದೆ' ಎಂದು ಹೇಳಿ ಒಂದು ಪುಸ್ತಕವನ್ನು ಕೊಟ್ಟರು. ಅದು ಜಾನ್ ರಸ್ಕಿನ್‌ನ 'ಅನ್‌ಟು ದಿಸ್ ಲಾಸ್ಟ್' ಎಂಬ ಪುಸ್ತಕವಾಗಿತ್ತು.

ಜಾನ್ ರಸ್ಕಿನ್ (೧೮೧೯–೧೯೦೦) ಮೂಲತಃ ಕಲಾವಿಮರ್ಶಕನಾಗಿದ್ದರೂ ಭೂಗರ್ಭಶಾಸ್ತ್ರದಿಂದ ಹಿಡಿದು ವಾಸ್ತುಶಾಸ್ತ್ರದವರೆಗಿನ ವೈವಿಧ್ಯಮಯ ಕ್ಷೇತ್ರಗಳಲ್ಲಿ ಆಸಕ್ತಿ ಹೊಂದಿದ್ದ ಇಂಗ್ಲೆಂಡ್‌ನ ಬಹು ಚರ್ಚಿತ ಚಿಂತಕನಾಗಿದ್ದು, ಆಧುನಿಕ ನಾಗರೀಕತೆಯ ಕಟು ವಿಮರ್ಶಕನಾಗಿದ್ದನು. ಮಾನವ ಬದುಕಿನ ಯಾವುದೇ ಬದಲಾವಣೆ ಪ್ರಕೃತಿಯೊಂದಿಗೆ ಸಮರಸವಾಗಿರಬೇಕೆಂದು ಪ್ರತಿಪಾದಿಸುತ್ತಿದ್ದ ಆತ ಶ್ರಮಾಧಾರಿತ ಸರಳ ಜೀವನವೇ ಶ್ರೇಷ್ಠ ಜೀವನ ಎಂದು ನಂಬಿದ್ದ. ನಿರ್ದಿಷ್ಟವಾಗಿ 'ಅನ್‌ಟು ದಿಸ್ ಲಾಸ್ಟ್'ನ ಪ್ರಬಂಧಗಳಲ್ಲಿ ಅವನು ಪ್ರತಿಪಾದಿಸಿದ್ದ ಮೂರು ಮುಖ್ಯ ತತ್ವಗಳೆಂದರೆ: (೧) ಎಲ್ಲರ ಒಳಿತಿನಲ್ಲೇ ನಮ್ಮ ಒಳಿತೂ ಇರುವುದು. (೨) ಎಲ್ಲರಿಗೂ ತಮ್ಮ ದುಡಿಮೆಯ ಮೂಲಕ ಬದುಕುವ ಸಮಾನ ಹಕ್ಕಿರುವುದರಿಂದ ವಕೀಲನ ಕೆಲಸಕ್ಕೆ ಇರುವ ಮೌಲಿಕತೆಯೇ ಕ್ಷೌರಿಕನ ಕೆಲಸಕ್ಕೂ ಇರುವುದು (೩) ರೈತ ಅಥವಾ ಕೈಕಸುಬುದಾರನ ಶ್ರಮಜೀವನವೇ ಬದುಕಲು ಯೋಗ್ಯವಾದ ಜೀವನ.

ಈ ಮೂರೂ ತತ್ವಗಳು ಗಾಂಧಿ ಈವರೆಗೆ ರೂಢಿಸಿಕೊಂಡಿದ್ದ ಚಿಂತನೆಗೆ ಬಹು ಹತ್ತಿರವಾಗಿದ್ದವಲ್ಲದೆ, ತನ್ನ ಚಿಂತನೆಗಳಿಗೆ ಒಂದು ಲೌಕಿಕ ರೂಪ ಕೊಡುವ ಸ್ಫೂರ್ತಿಯುತ ವಿವರಣೆಗಳನ್ನೂ ಒಳಗೊಂಡಿದ್ದವು. ಉದಾ: ಶ್ರೀಮಂತಿಕೆ ಎನ್ನುವುದು ವಿದ್ಯುತ್‌ನಂತೆ ಅಸಮಾನ ಧೃವಗಳ ನಡುವಣ ವಿದ್ಯಮಾನ. ನಿನ್ನ ಜೇಬಿನಲ್ಲಿ ಉಳಿದಿರುವ ಹಣ ಇಲ್ಲದವನ ಜೇಬು ಖಾಲಿಯಾಗಿರುವುದರ ಪರಿಣಾಮವಷ್ಟೆ. ನಿನ್ನ ಜೇಬಿನ ಹಣದ ಪ್ರಯೋಜನ ಇರುವುದು ಇಲ್ಲದವನ ಕಷ್ಟಗಳ ಪರಿಹಾರದಲ್ಲಿ ಮಾತ್ರ, ಶ್ರೀಮಂತಿಕೆ ಎಂದರೆ ಬಡವರ ಮೇಲಿನ ಅಧಿಕಾರ ಸ್ವಾಮ್ಯಕ್ಕೆ ಇನ್ನೊಂದು ಹೆಸರಷ್ಟೆ.

ಈ ಪುಸ್ತಕವನ್ನು ರೈಲಿನಲ್ಲಿ ಮಲಗದೆ ಇಡೀ ರಾತ್ರಿ ಓದಿದ ಗಾಂಧಿಗೆ ಬೆಳಗಿನ ಸೂರ್ಯೋದಯ ಬರೀ ಪ್ರಾಕೃತಿಕ ಸೂರ್ಯೋದಯವಾಗಿರಲಿಲ್ಲ. ಅವರ ಪಾಲಿನ ಹೊಸ ಬದುಕಿನ ಸೂರ್ಯೋದಯವೂ ಆಗಿತ್ತು. ಅವರು ಕೂಡಲೇ ಈ ಪುಸ್ತಕದ ತತ್ವಚಿಂತನೆಯನ್ನು ತಮ್ಮ ಬದುಕಿನಲ್ಲಿ ಅನುಷ್ಠಾನಗೊಳಿಸಲು ನಿಶ್ಚಯಿಸಿದರು. ಡರ್ಬಾನ್‌ನ 'ಇಂಡಿಯನ್ ಒಪಿನಿಯನ್' ಕಛೇರಿ ಪ್ರವೇಶಿಸಿದೊಡನೆ ಅವರು ಮಾಡಿದ

ಮೊದಲ ಕೆಲಸವೆಂದರೆ ತಾವು ಓದಿದ ಈ ಪುಸ್ತಕ ತಮ್ಮ ಮೇಲೆ ಮಾಡಿರುವ ಪರಿಣಾಮದ ಬಗ್ಗೆ ವೆಸ್ಟ್‌ರೊಡನೆ ಮಾತಾಡಿ ಅದು ಪ್ರತಿಪಾದಿಸುವ ಬದುಕಿನಂತೆ ಬದುಕುವ ಮಾದರಿಯೊಂದನ್ನು ನಿರ್ಮಿಸಲು ಸಿದ್ಧತೆ ಆರಂಭಿಸಿದ್ದು. ಒಂದು ವಾರದಲ್ಲೇ ೧೯೦೪ರ ಡಿಸೆಂಬರ್‌ನಲ್ಲಿ, ಜೊಹಾನ್ಸ್‌ಬರ್ಗ್‌ನಿಂದ ೧೪ ಮೈಲಿ ದೂರದಲ್ಲಿದ್ದ ರೈಲು ಸೌಲಭ್ಯವಿರುವ ಫೀನಿಕ್ಸ್ ಎಂಬ ಊರಿನ ಸಮೀಪದಲ್ಲೇ ೨೦ ಎಕರೆ ಜಮೀನನ್ನು ಕೊಂಡರು. ಅಲ್ಲಿಂದಲೇ ಪತ್ರಿಕೆಯನ್ನು ಹೊರಡಿಸುವ ತೀರ್ಮಾನ ಕೈಗೊಂಡು ಅಲ್ಲೊಂದು ದೊಡ್ಡ ವಪ್ಪಾರವನ್ನು ನಿರ್ಮಿಸುವ ಕೆಲಸ ಆರಂಭಿಸಿದರು. ವೆಸ್ಟ್ ಅವರೂ, ಮುದ್ರಣಾಲಯದ ಬಹುತೇಕ ಕೆಲಸಗಾರರೂ ಇದಕ್ಕೆ ಒಪ್ಪಿದರು. ಡರ್ಬಾನ್‌ನಲ್ಲಿದ್ದ 'ಇಂಡಿಯನ್ ಒಪಿನಿಯನ್' ಮುದ್ರಣಾಲಯದ ಎಲ್ಲ ಯಂತ್ರಗಳನ್ನೂ ಇಲ್ಲಿಗೆ ಸಾಗಿಸಿ ತರಲಾಯಿತು. ಇಲ್ಲಿ ವಿದ್ಯುಚ್ಛಕ್ತಿ ಸೌಲಭ್ಯವಿಲ್ಲದ್ದರಿಂದ ಮುದ್ರಣ ಯಂತ್ರ ಚಾಲನೆಗೆ ಆಲ್ಬರ್ಟ್ ವೆಸ್ಟ್ ಅವರು ಒಂದು ತೈಲ ಚಾಲಿತ ಪಂಪ್‌ಅನ್ನು ಅಭಿವೃದ್ಧಿಪಡಿಸಿದರು. ಜೊತೆಗೇ ಗಾಂಧಿ ತಾನು ಭಾರತದಿಂದ ಬಂದಾಗ ಜೊತೆಗೆ ಕರೆತಂದಿದ್ದ ಆಪ್ತಬಂಧು ಮಗನ್‌ಲಾಲ್ ಸೇರಿದಂತೆ ಕೆಲವರು ಅಲ್ಲಿಗೆ ಬಂದು ಸೇರಿಕೊಂಡರು. ರುಸ್ತುಂಜಿ ಅವರೂ ಇದಕ್ಕೆ ಒಪ್ಪಿ ವಪ್ಪಾರಕ್ಕೆ ಬೇಕಾದ ಕಬ್ಬಿಣ ಮತ್ತು ತಗಡಿನ ಸಾಮಗ್ರಿಗಳನ್ನು ಒದಗಿಸಿದರು.

ಸಾಮೂಹಿಕ ಬದುಕಿನ ಮಾದರಿ ಪ್ರಯೋಗ: ಫೀನಿಕ್ಸ್ ಆಶ್ರಮ

ಇಲ್ಲಿನ ಸಾಮೂಹಿಕ ಬದುಕಿನ ಮಾದರಿಯಲ್ಲಿ ಪ್ರತಿಯೊಬ್ಬರೂ ತಂತಮ್ಮ ಪಾಲಿನ ಕೆಲಸಗಳನ್ನು ಮಾಡಿಕೊಂಡು ಮಾಹೆಯಾನ ಸಮಾನವಾಗಿ ಮೂರು ಪೌಂಡ್ ಸಂಬಳ ಪಡೆಯುವ ಒಪ್ಪಂದವಾಯಿತು. ಫೀನಿಕ್ಸ್ ಆಶ್ರಮವೆಂದು ಮುಂದೆ ಪ್ರಸಿದ್ಧವಾದ ಈ ಆವರಣದಿಂದಲೇ ಈಗ 'ಇಂಡಿಯನ್ ಒಪಿನಿಯನ್' ಪತ್ರಿಕೆ ಪ್ರಕಟವಾಗಲಾರಂಭಿಸಿತು. ಹೀಗೆ ಸಾಮೂಹಿಕ ಬದುಕಿನ ಮಾದರಿಯ ಕೇಂದ್ರವಾಗಿ; ಪತ್ರಿಕಾ ಕಛೇರಿ ಮತ್ತು ಮುದ್ರಣಾಲಯ ಸ್ಥಾಪಿತವಾಗಿ ಅದೊಂದು ಭದ್ರ ನೆಲೆಯನ್ನು ಗಳಿಸುತ್ತಿದ್ದಂತೆ ಅದರ ಸುತ್ತ ಇದ್ದ ೮೦ ಎಕರೆ ಜಮೀನನ್ನೂ ಕೊಂಡು ಆಶ್ರಮದ ಚಟುವಟಿಕೆಗಳನ್ನು ವಿಸ್ತರಿಸುವ ಕೆಲಸವನ್ನು ಆರಂಭಿಸಲಾಯಿತು. ಆ ಜಮೀನಿನಲ್ಲಿ ಸಾಕಷ್ಟು ಹಣ್ಣಿನ ಗಿಡಗಳೂ, ಒಂದು ಬಾವಿಯೂ, ಪಾಳುಬಿದ್ದ ಮನೆಯೂ ಇತ್ತು. ಈ ಜಮೀನನ್ನು ಅಲ್ಲಿದ್ದ ಎಲ್ಲರಿಗೂ ತಲಾ ಮೂರು ಎಕರೆಯಂತೆ ಹಂಚಿಕೊಟ್ಟು ಅವರೆಲ್ಲ ಅಲ್ಲಿ ಕುಟೀರಗಳನ್ನು ಕಟ್ಟಿಕೊಂಡು ಆ ಜಮೀನನ್ನು ಅಭಿವೃದ್ಧಿಪಡಿಸುವ ಯೋಜನೆ ಹಾಕಲಾಯಿತು. ಅದರಂತೆ ಎಲ್ಲರೂ ಬಹುಬೇಗ ತಮ್ಮ ಕುಟೀರಗಳನ್ನು ಕಟ್ಟಿಕೊಳ್ಳಲಾರಂಭಿಸಿದರು. ಆದರೆ ಅವನ್ನು ತನ್ನ ಅಪೇಕ್ಷೆಯಂತೆ ಮಣ್ಣಿನ ಗೋಡೆಗಳ ಮತ್ತು ಹುಲ್ಲು ಛಾವಣಿಯ ಕುಟೀರಗಳನ್ನು ಕಟ್ಟಿಕೊಳ್ಳದೆ ತಗಡಿನ ಶೆಡ್ಡುಗಳನ್ನು ಕಟ್ಟಿಕೊಳ್ಳಲು ಹೊರಟಿದ್ದರ ಬಗ್ಗೆ ಗಾಂಧಿಗೆ ವಿಷಾದವೇ ಆಯಿತು. ಆದರೂ, ಖರ್ಚು ಮತ್ತು ಕಾಲದ ದೃಷ್ಟಿಯಿಂದ ಅದು ಅನಿವಾರ್ಯವಾಗಿತ್ತು ಎಂಬುದನ್ನು ಅವರು ಒಪ್ಪಿಕೊಂಡರು. ಅಲ್ಲಿಗೆ ಕೆಲವೇ ದಿನಗಳಲ್ಲಿ ಥಿಯೊಸಫಿಯ ಮೂಲಕ ಹಿಂದೂ ಧರ್ಮದ ಬಗ್ಗೆ ಕುತೂಹಲ ತಾಳಿದ್ದ ಜಾನ್ ಕೊರ್ಡೆಸ್ ಎಂಬ ಜರ್ಮನಿ ಮೂಲದ

ಕ್ರಿಶ್ಚಿಯನ್ ಪಾದ್ರಿಯೊಬ್ಬ ಗಾಂಧಿ ಶಿಷ್ಯತ್ವ ಕೋರಿಕೊಂಡು ಬಂದು ಆಶ್ರಮವಾಸಿಯಾಗಿ ಗಾಂಧಿ ಕುಟುಂಬದ ಮಿತ್ರನಾದ.

ಈ ಮಧ್ಯೆ ಜೊಹಾನ್ಸ್‌ಬರ್ಗ್‌ನ ತನ್ನ ವಕೀಲಿ ಕಛೇರಿಯ ಕೆಲಸಗಳು ಬಾಕಿ ಉಳಿದಿದ್ದು, ಅಲ್ಲಿಂದ ಕರೆ ಬಂದ ಕಾರಣ ಗಾಂಧಿ ಅಲ್ಲಿಗೆ ಹೋಗಬೇಕಾಯಿತು. ಅಲ್ಲಿಗೆ ಹೋದ ನಂತರ ತನ್ನ ಹೊಸ ಸ್ನೇಹಿತ ಪೊಲಾಕ್‌ರನ್ನು ಭೇಟಿ ಮಾಡಿ ಅವರು ಕೊಟ್ಟ ಪುಸ್ತಕ ಹೇಗೆ ತನ್ನ ಬದುಕಿನ ದಿಕ್ಕನ್ನೇ ಬದಲಿಸತೊಡಗಿದೆ ಎಂಬುದನ್ನು ವಿವರಿಸಿದರು. ಇದನ್ನು ಕೇಳಿದ ಪೊಲಾಕ್ ತಾವೂ ಉತ್ಸಾಹಿತರಾಗಿ, ಪತ್ರಿಕೆಯ ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ಫೀನಿಕ್ಸ್ ಆಶ್ರಮ ಸೇರಲು ತೆರಳಿದರು. ಆದರೆ ಗಾಂಧಿಯ ವಕೀಲ ಕಛೇರಿಯಲ್ಲಿ ಕೆಲಸದ ಬಾಕಿ ಅಗಾಧವಾಗತೊಡಗಿತ್ತು. ದುರದೃಷ್ಟಕರವೆಂಬಂತೆ ಆವರೆಗೆ ಕಛೇರಿಯ ಮೇಲ್ವಿಚಾರಕರಾಗಿದ್ದ ರೀಚ್ ತನ್ನ ಕಾನೂನು ವ್ಯಾಸಂಗವನ್ನು ಪೂರ್ಣಗೊಳಿಸಿಕೊಂಡು ಬರಲು ಇಂಗ್ಲೆಂಡ್‌ಗೆ ಹೋಗಬಯಸಿದ್ದ. ಹಾಗಾಗಿ ಗಾಂಧಿಯ ತಲೆ ಮೇಲೆ ಕೆಲಸದ ಹೊರೆ ಹೆಚ್ಚಾಯಿತು. ಅವರು ತಾವು ಕಾನೂನು ಪಾಠ ಹೇಳುತ್ತಿದ್ದ ಶಿಷ್ಯನೊಬ್ಬನನ್ನು ಕಛೇರಿ ಕೆಲಸಕ್ಕೆ ತೆಗೆದುಕೊಂಡರಾದರೂ, ಅದೂ ಸಾಲದಾಗಿ, ಕೊನೆಗೆ ನಿರ್ವಾಹವಿಲ್ಲದೆ ಪೊಲಾಕ್‌ಗೆ ಪತ್ರ ಬರೆದು ಜೊಹಾನ್ಸ್‌ಬರ್ಗ್‌ಗೆ ಬಂದು ತನ್ನ ಕಛೇರಿಯ ಕೆಲಸಗಳಲ್ಲಿ ನೆರವಾಗಲು ಸಾಧ್ಯವೇ ಎಂದು ಕೇಳಿದರು. ಇಬ್ಬರೂ ಸೇರಿ ವಕೀಲಿಕೆಯ ಕೆಲಸಗಳನ್ನು ಬಹುಬೇಗ ಪೂರ್ಣಗೊಳಿಸಿ ಫೀನಿಕ್ಸ್ ಆಶ್ರಮದಲ್ಲಿ ಹೋಗಿ ನೆಲೆಸಬಹುದೆಂಬುದು ಅವರ ಆಶಯವಾಗಿತ್ತು. ಅವರ ಆಶಯದಂತೆ ಪೊಲಾಕ್ ಫೀನಿಕ್ಸ್‌ನಿಂದ ಬಂದು ಗಾಂಧಿಗೆ ಕಛೇರಿ ಕೆಲಸಗಳಲ್ಲಿ ನೆರವಾಗಲಾರಂಭಿಸಿದರು. ಈ ಸಂದರ್ಭದ ತನ್ನ ಸಂದಿಗ್ಧವನ್ನು ಗಾಂಧಿ ತನ್ನ ಆತ್ಮಕಥೆಯಲ್ಲಿ ಹೀಗೆ ದಾಖಲಿಸಿದ್ದಾರೆ: 'ಫೀನಿಕ್ಸ್ ಆಶ್ರಮದ ಧ್ಯೇಯಗಳನ್ನು ಆದಷ್ಟು ಬೇಗ ಸಿದ್ಧಿಸಿಕೊಳ್ಳುವ ಘನ ಉದ್ದೇಶದಿಂದ ನಾನು ಅದಕ್ಕೆ ವಿರುದ್ಧವಾದ ಜೀವನ ಪ್ರವಾಹಕ್ಕೆ ಸಿಕ್ಕಿಕೊಂಡು ಅದರ ಆಳಾತಿಆಳಕ್ಕೆ ಹೋಗುತ್ತಿದ್ದೆ. ಆದರೆ ಭಗವಂತನ ಇಚ್ಛೆ ಬೇರೆ ರೀತಿ ಇಲ್ಲದಿದ್ದಲ್ಲಿ ಸರಳ ಜೀವನದ ಹೆಸರಿನಲ್ಲಿ ನಾನೇ ಹರಡಿಕೊಳ್ಳಲಾರಂಭಿಸಿದ್ದ ಬಲೆಯಲ್ಲಿ ಬಂಧಿಯಾಗಿಬಿಡುತ್ತಿದ್ದೆ'.

■

೧೬
ಕುಟುಂಬ ಜೀವನ ಮತ್ತು ಝುಲು ದಂಗೆ

ಅತ್ತ ಫೀನಿಕ್ಸ್ ಆಶ್ರಮವೂ ಸರಾಗವಾಗಿ ಅಭಿವೃದ್ಧಿ ಹೊಂದುತ್ತಾ, ಇತ್ತ ತನ್ನೊಂದಿಗೆ ಸಮರಸವಾಗಿ ಹೊಂದಿಕೊಳ್ಳುವ ಸಮಾನ ಮನಸ್ಕ ಗೆಳೆಯನಾದ ಪೋಲಾಕ್ ಕಛೇರಿಗೆ ಬಂದು ಸೇರಿದ ಮೇಲೆ ಗಾಂಧಿಗೆ ಮನಸ್ಸು ಸ್ವಲ್ಪ ನಿರಾಳವಾಯಿತು. ಭಾರತ ಬಿಟ್ಟುಬಂದಾಗ ಆದಷ್ಟು ಬೇಗ ವಾಪಸಾಗುವುದಾಗಿ ಪತ್ನಿಗೆ ಮಾತು ಕೊಟ್ಟು ಬಂದುದು ನೆನಪಾಯಿತು. ಆದರೆ ಬಂದು ಎರಡು ವರ್ಷಗಳ ಮೇಲೇ ಆಗಿತ್ತು. ಕೂಡಲೇ ಕುಟುಂಬವನ್ನು ಜೊಹಾನ್ಸ್‌ಬರ್ಗ್‌ಗೆ ಕರೆಸಿಕೊಳ್ಳುವ ಏರ್ಪಾಡು ಮಾಡಿದರು. ಹಿರಿಯ ಮಗ ಹರಿಲಾಲನ ಹೊರತಾಗಿ ಮಿಕ್ಕ ಮುವ್ವರು ಮಕ್ಕಳೊಂದಿಗೆ ಕಸ್ತೂರ್‌ಬಾ ಬಂದು ಗಾಂಧಿಯವರ ಜೊತೆಗೂಡಿದರು. ಹರಿಲಾಲ ಗಾಂಧಿಯವರ ಇಚ್ಛೆಗೆ ವಿರುದ್ಧವಾಗಿ ತನ್ನ ದೊಡ್ಡಪ್ಪ ಲಕ್ಷ್ಮೀದಾಸರ ನೆರವಿನೊಂದಿಗೆ ಭಾರತದಲ್ಲೇ ತನ್ನ ಶಾಲಾ ಶಿಕ್ಷಣವನ್ನು ಮುಂದುವರೆಸಬಯಸಿದ್ದ. ಆದರೆ ಅವನ ಜೊತೆಗೆ ಓದುತ್ತಿದ್ದ ಗಾಂಧಿ ಕುಟುಂಬದ ಆಪ್ತಬಂಧು ಛಗನ್‌ಲಾಲ್ ಬಂದಿದ್ದ. ಈತನನ್ನು ಗಾಂಧಿ ಮಗನ್‌ಲಾಲ್ ಜೊತೆಗೆ ಫೀನಿಕ್ಸ್ ಆಶ್ರಮದ ಕೆಲಸಗಳಿಗಾಗಿ ನಿಯೋಜಿಸಿದರು. ಹಡಗು ಪ್ರಯಾಣದ ವೇಳೆಯಲ್ಲಿ ಎಂಟು ವರ್ಷದ ಮಗ ರಾಮದಾಸನ ಕೈಮೂಳೆ ಮುರಿದು ಹೋಗಿರುವುದನ್ನು ಗಾಂಧಿ ಕಂಡರು. ಮತ್ತೆ ಅವರ ಮಣ್ಣು ನೀರಿನ ಚಿಕಿತ್ಸೆಯ ಪ್ರಯೋಗಕ್ಕೆ ಅವಕಾಶ ಸಿಕ್ಕಿದಂತಾಯಿತು. ಅದರಲ್ಲಿ ಅವರು ಯಶಸ್ವಿಯೂ ಆದರು. ಆದರೆ ಆ ಪ್ರಯೋಗ ಕೈಗೊಂಡಾಗ ಮಣಿಲಾಲನ ವಿಷಮಶೀತ ಜ್ವರದ ಚಿಕಿತ್ಸೆ ಕೈಗೊಂಡಿದ್ದಾಗ ಪಟ್ಟಿದ್ದ ತಲ್ಲಣಗಳನ್ನೇ ಅನುಭವಿಸಿದರು. ಈ ಪ್ರಯೋಗದ ನಂತರ ಅವರು ಹೇಳಿದ್ದು: 'ಇಂತಹ ಪ್ರಯೋಗಗಳನ್ನು ನಾನು ಸಾರಾಸಗಟಾಗಿ ಯಾರಿಗೂ ಶಿಫಾರ್ಸು ಮಾಡಲಾರೆ. ಪ್ರಯೋಗ ಆರಂಭಿಸಬಯಸುವವರು ಮೊದಲು ಅದನ್ನು ತಮ್ಮ ಅಥವಾ ತಮ್ಮವರ ಮೇಲೆ ಮಾಡುವುದರಿಂದ ಆರಂಭಿಸಬೇಕು!'

ಆಶ್ರಮಕ್ಕಾಗಿ ಕುಟುಂಬ ನಿರ್ಮಾಣ ಕಾರ್ಯಕ್ರಮ!

ಗಾಂಧಿಯ ಪತ್ನಿ ಮತ್ತು ಮಕ್ಕಳು ಬಂದು ಸೇರಿದ ಮೇಲೆ, ಜೊಹಾನ್ಸ್‌ಬರ್ಗ್‌ನ ಅವರ ಮನೆಗೆ ಒಂದು ಕುಟುಂಬಸ್ಥಿಕೆಯ ಸ್ವರೂಪ ಬಂದಿತು. ವಕೀಲ ಕಛೇರಿ ಸಹಾಯಕರು ಮತ್ತು ಗುಮಾಸ್ತರ ಜೊತೆಗೆ ಕುಟುಂಬದ ಸದಸ್ಯರೂ ಸೇರಿ ಒಂದು ದೊಡ್ಡ ಹಿಂದೂ ಕ್ರೈಸ್ತ–ಮುಸ್ಲಿಂ–ಯಹೂದ್ಯರ ಬಹು ಜನಾಂಗ ಸಮೂಹವೇ ಅಲ್ಲಿ ಉಂಟಾಯಿತು. ಆ ವಾತಾವರಣದಿಂದ ಉತ್ಸಾಹಿತರಾದ ಗಾಂಧಿ ಫೀನಿಕ್ಸ್ ಆಶ್ರಮವನ್ನು ಒಂದು ಸಾಮುದಾಯಿಕ ಬದುಕಿನ ಮಾದರಿಯಾಗಿ ಬೆಳೆಸಲು ಹಲವು ಕುಟುಂಬಗಳು

ಇದ್ದರೆ ಒಳಿತು ಎನ್ನಿಸಿತು. ಅವರು ಪೋಲಾಕ್‌ಗೆ ಮದುವೆಯಾಗಲು ಸಲಹೆ ನೀಡಿದರು. ಆ ಹೊತ್ತಿಗಾಗಲೇ ಪೋಲಾಕ್ ಮಿಲಿ ಎಂಬ ಒಬ್ಬ ಕ್ರೈಸ್ತ ಹುಡುಗಿಯನ್ನು ಪ್ರೀತಿಸಿ ಪತ್ನಿಯಾಗಿ ಆಯ್ದುಕೊಂಡಿದ್ದ. ಆದರೆ ರಸ್ಕಿನ್‌ರಿಂದ ಪ್ರಭಾವಿತನಾಗಿ ಸರಳ ಜೀವನವನ್ನು ಆಯ್ದುಕೊಂಡಿದ್ದ ಆತನಿಗೆ, ತನ್ನ ಭಾವಿ ಪತ್ನಿ ಅದನ್ನು–ಸರಳ ಜೀವನವನ್ನು–ಒಪ್ಪುವಳೋ ಇಲ್ಲವೋ ಎಂಬ ಆತಂಕ ಇದ್ದಿತು. ಗಾಂಧಿ ಅವರಿಗೆ, 'ಹೃದಯ ಮಿಲನಕ್ಕೆ ಬಡತನ ಅಡ್ಡಿಯಾಗಲಾರದು. ಹಾಗೆ ಆಗುವುದಾದರೆ ಬಡವರಿಗೆ ಮದುವೆಯೇ ಆಗದ ಪರಿಸ್ಥಿತಿ ಉಂಟಾದೀತು!' ಎಂದು ಹುರಿದುಂಬಿಸಿ ಒಂದು ನಿರಾಡಂಬರ ವಿವಾಹ ನೋಂದಣಿ ಸಮಾರಂಭದ ಮೂಲಕ ಪೋಲಾಕ್‌ನ ಪತ್ನಿಯನ್ನು ಮನೆದುಂಬಿಸಿಕೊಂಡರು. ನೋಂದಣಿಗೆ, ವಧೂವರರ ಭಿನ್ನ ಧರ್ಮಗಳು (ವರ ಯಹೂದಿಯಾಗಿದ್ದರೆ ವಧು ಕ್ರಿಶ್ಚಿಯನ್) ತಾಂತ್ರಿಕವಾಗಿ ಅಡ್ಡಿಯಾದಾಗ ಅದನ್ನು, ಇದು ಆಚರಣೆಗಳ ಧರ್ಮಗಳಿಗಿಂತ ಭಿನ್ನವಾದ ನೀತಿಗಳ ಧರ್ಮದ ಮದುವೆಯೆಂದು ವ್ಯಾಖ್ಯಾನಿಸಿ ನೋಂದಣಾಧಿಕಾರಿಯ ಮನಗೆದ್ದು ಸಮಾರಂಭಕ್ಕೆ ಕಾನೂನಿನ ಮಾನ್ಯತೆಯನ್ನೂ ದೊರಕಿಸಿಕೊಟ್ಟರು.

ಇದಾದ ನಂತರ ಗಾಂಧಿಯ ಕಣ್ಣು ಬಿದ್ದದ್ದು ಆಲ್ಬರ್ಟ್ ವೆಸ್ಟ್‌ರ ಮೇಲೆ. ಅವರು ತನ್ನ ತಂದೆ ತಾಯಿಗಳನ್ನು ನೋಡಲು ಸ್ಕಾಟ್ಲೆಂಡ್‌ಗೆ ಹೊರಟಾಗ, ಅಲ್ಲಿಂದಲೇ ಮದುವೆಯನ್ನೂ ಮಾಡಿಕೊಂಡು ಬರಲು ಅವರಿಗೆ ಗಾಂಧಿ ಸೂಚಿಸಿದರು. ಅಂತೆಯೇ ಅವರು ಬಹುಬೇಗ ತನ್ನ ಪತ್ನಿಯ ಜೊತೆಗೆ ಅತ್ತೆಯನ್ನೂ ಕರೆದುಕೊಂಡು ಜೊಹಾನ್ಸ್‌ಬರ್ಗ್‌ಗೆ ಬಂದರು! ಆ ಹೊತ್ತಿಗೆ ಗಾಂಧಿ ಮನೆಯಲ್ಲಿದ್ದ ಅವಿವಾಹಿತ ಸಿಬ್ಬಂದಿಗೂ, ಆಪ್ತ ಬಂಧುಗಳಿಗೂ ಮದುವೆಯಾಗಲು ಸೂಚಿಸಿದರು ಮತ್ತು ಆಗಲೇ ಮದುವೆಯಾಗಿದ್ದವರನ್ನು ಹೆಂಡತಿ ಮಕ್ಕಳನ್ನು ಕರೆತರಲು ಭಾರತಕ್ಕೆ ಕಳಿಸಿದರು. ಗಾಂಧಿ ಮನೆಯೊಂದು ಮಿಶ್ರ ಜಾತಿ, ಜನಾಂಗ, ಧರ್ಮ ಮತ್ತು ದೇಶಗಳ ಹತ್ತಾರು ಕುಟುಂಬಗಳಿಗೆ ಆಶ್ರಯದಾಣವಾಗಿತ್ತು. ಅವರೆಲ್ಲರ ಖರ್ಚು ವೆಚ್ಚಗಳನ್ನು ಗಾಂಧಿಯೇ ನೋಡಿಕೊಳ್ಳುತ್ತಿದ್ದರು. ಆದರೆ ಸರಳತೆಯ ದೀಕ್ಷೆಯನ್ನು ಎಲ್ಲರೂ ತೆಗೆದುಕೊಂಡಿದ್ದರಾದ್ದರಿಂದ, ಆ ಮೂಲಕ ಎಲ್ಲರೂ ಶ್ರಮಜೀವನಕ್ಕೆ ಬದ್ಧರಾಗಿ ಗೃಹಕೃತ್ಯಗಳನ್ನು ತಾವೇ ಮಾಡುತ್ತಾ ಮನೆ ಖರ್ಚು ಹೆಚ್ಚಾಗದಂತೆ ನೋಡಿಕೊಳ್ಳುತ್ತಿದ್ದರು.. ಊಟದ ರೊಟ್ಟಿಗಳಿಗೆ ಬೇಕಾದ ಹೊಟ್ಟು ತೆಗೆಯದ ಗೋಧಿ ಹಿಟ್ಟನ್ನು ಎಲ್ಲರೂ ಸೇರಿ ಬೀಸುತ್ತಿದ್ದರು! ಅದೊಂದು ಜಾಗತಿಕ ಮಾದರಿಯ ಸುಖಿ ಕುಟುಂಬವಾಗಿತ್ತು. ಕೆಲವೇ ದಿನಗಳಲ್ಲಿ ಅದು ತನ್ನ ನೆಲೆಯನ್ನು ಜೊಹಾನ್ಸ್‌ಬರ್ಗ್‌ನಿಂದ ಫೀನಿಕ್ಸ್ ಆಶ್ರಮಕ್ಕೆ ಬದಲಾಯಿಸಿಕೊಂಡು ಹೊಸ ಬದುಕಿನ ದರ್ಶನದ ಕಟ್ಟೋಣದಲ್ಲಿ ಭಾಗಿಯಾಗತೊಡಗಿತ್ತು.

ಮಕ್ಕಳಿಗೆ ಅನೌಪಚಾರಿಕ ಶಿಕ್ಷಣ–ಇಂಗ್ಲಿಷ್ ವಿವಾದ

ಆದರೆ ಈ ಸುಖೀ ಕುಟುಂಬದ ಮಾದರಿಯಲ್ಲಿ ಗಾಂಧಿ ಮಕ್ಕಳಿಗೆ ಔಪಚಾರಿಕ ಶಿಕ್ಷಣಕ್ಕೆ ಅವಕಾಶವಿಲ್ಲದಾಗಿ, ಒಂದು ಸಾರ್ವಜನಿಕ ಆಕ್ಷೇಪಣೆಗೂ ಕಾರಣವಾಗಿತ್ತೆಂಬುದೂ ನಿಜ. ಅದು ಈ ಮೊದಲೇ ದಾಖಲಿಸಿರುವಂತೆ ಉದ್ದೇಶಪೂರ್ವಕವಾಗಿತ್ತು. ಚಾರಿತ್ರ್ಯ ನಿರ್ಮಾಣವೇ ಶಿಕ್ಷಣದ ಉದ್ದೇಶವಾಗಿದ್ದು, ತನ್ನ

ಸಮಾಜದ ಸೇವೆಯೇ ಆ ಚಾರಿತ್ರ್ಯದ ಲಕ್ಷಣವಾದ್ದರಿಂದ ಅದನ್ನು ಪುಸ್ತಕ ಜ್ಞಾನದ ಮೂಲಕ ಕಲಿಸಲಾಗುವುದಿಲ್ಲವೆಂಬುದು ಗಾಂಧಿ ಅವರ ನಂಬಿಕೆಯಾಗಿತ್ತು. ಆದರೆ ತಮ್ಮ ಸದಾ ವ್ಯಸ್ತ ಮತ್ತು ಕುಟುಂಬದಿಂದ ಪದೇ ಪದೇ ದೂರವಾಗಿರಬೇಕಾದ ಬದುಕಿನಿಂದಾಗಿ ಮಕ್ಕಳ ಕಡೆ ಹೆಚ್ಚು ಗಮನ ಕೊಟ್ಟು ವಿವಿಧ ವಿಷಯಗಳ ಬಗೆಗಿನ ಪ್ರಾಥಮಿಕ ಶಿಕ್ಷಣವನ್ನು ಅಗತ್ಯ ಮಟ್ಟದಲ್ಲಿ ಒದಗಿಸಲಾಗದ ವೈಫಲ್ಯವನ್ನು ಸೂಚಿಸುತ್ತಾ ತಾನೊಬ್ಬ ಆದರ್ಶ ತಂದೆಯಾಗಲಿಲ್ಲ ಎಂಬ ವ್ಯಥೆ ತಮಗಿದೆ ಮತ್ತು ಮಕ್ಕಳು ಈ ಬಗ್ಗೆ ಆಗಾಗ್ಗೆ ಆಕ್ಷೇಪಿಸುವುದು ಸರಿಯಾಗಿಯೇ ಇದೆಯೆಂದು ಅವರು ಹೇಳುತ್ತಾರೆ. ಅದೇ ಹೊತ್ತಿನಲ್ಲಿ, ದಾರಿ ತಪ್ಪಿದ ಯೋಚನೆಗೆ ಈಡಾದನೆಂದು ಅವರು ಹೇಳುವ ಹರಿಲಾಲನ ಹೊರತಾಗಿ ಮಿಕ್ಕ ಮಕ್ಕಳು ತನ್ನೊಂದಿಗೆ ಸಾರ್ವಜನಿಕ ಜೀವನದಲ್ಲಿ ಸಹಭಾಗಿಗಳಾಗಿ ಕಲಿತ ಪಾಠಗಳ ಮೂಲಕ ಸ್ವಾವಲಂಬಿಗಳಾಗಿ ಸಮರ್ಥ ಜೀವನ ನಡೆಸುವ ಎಲ್ಲ ಯೋಗ್ಯತೆಗಳನ್ನೂ ಗಳಿಸಿ ಮಿಕ್ಕ ಮಕ್ಕಳಿಗಿಂತ ಹೆಚ್ಚು ಯೋಗ್ಯರೇ ಆಗಿದ್ದಾರೆಂದು ಸೂಚಿಸುತ್ತಾರೆ.

ಮಕ್ಕಳಿಗೆ ಬಾಲ್ಯದಿಂದಲೂ ವಿಶ್ವಭಾಷೆಯಾದ ಇಂಗ್ಲಿಷ್ ಕಲಿಸಿದರೆ ಅವರು ಮುಂದೆ ಜೀವನ ಹೋರಾಟದಲ್ಲಿ ಜಯಶಾಲಿಯಾಗುತ್ತಾರೆ ಎಂಬ ಪೊಲಾಕ್‌ರ ವಾದವನ್ನು ನಿಷ್ಠುರವಾಗಿ ತಿರಸ್ಕರಿಸುವ ಗಾಂಧಿ ಮನೆಯಲ್ಲಿ ಮಕ್ಕಳೊಂದಿಗೆ ತನ್ನ ಮಾತೃಭಾಷೆ ಗುಜರಾತಿಯಲ್ಲೇ ವ್ಯವಹರಿಸುತ್ತಿದ್ದರು. ಅದಕ್ಕೆ ಅವರು ನೀಡಿದ ವಿವರಣೆ: 'ಎಳೆಮಕ್ಕಳಾಗಿದ್ದಾಗಿನಿಂದಲೇ ಮಕ್ಕಳಿಗೆ ಇಂಗ್ಲಿಷ್‌ನಲ್ಲಿ ಯೋಚಿಸುವುದನ್ನೂ, ಮಾತನಾಡುವುದನ್ನೂ ಕಲಿಸುವ ಭಾರತೀಯ ಪೋಷಕರು ತಮಗೂ ತಮ್ಮ ಮಕ್ಕಳಿಗೂ ದ್ರೋಹವೆಸಗುತ್ತಾರೆಂಬುದು ನನ್ನ ದೃಢವಾದ ನಂಬಿಕೆ. ಅವರು ತಮ್ಮ ಮಕ್ಕಳನ್ನು ರಾಷ್ಟ್ರದ ಆಧ್ಯಾತ್ಮಿಕ ಮತ್ತು ಸಾಮಾಜಿಕ ಕುಲಧನದಿಂದ ವಂಚಿಸುತ್ತಾರೆ. ಅಷ್ಟರಮಟ್ಟಿಗೆ ಅವರನ್ನು ದೇಶಸೇವೆಗೆ ಅನರ್ಹರನ್ನಾಗಿ ಮಾಡುತ್ತಾರೆ'

ಝುಲು ದಂಗೆ–ಸೇವೆಯ ಮಧ್ಯೆ ಬ್ರಹ್ಮಚರ್ಯದ ನಿಶ್ಚಯ

೧೯೦೬ರಲ್ಲಿ ಝುಲು ಬುಡಕಟ್ಟಿನ ಕಪ್ಪುವರ್ಣೀಯರು ಹೊಸ ವಸಾಹತುಶಾಹಿ ಸರ್ಕಾರ ತಮ್ಮ ಮೇಲೆ ಹಾಕಿದ ಹೊಸ ತೆರಿಗೆಯನ್ನು ಪ್ರತಿಭಟಿಸಿ ಇಬ್ಬರು ಇಂಗ್ಲಿಷ್ ಅಧಿಕಾರಿಗಳನ್ನು ಕೊಲ್ಲುವ ಮೂಲಕ ದಂಗೆ ಎದ್ದಾಗ ಗಾಂಧಿ ಮತ್ತೆ ನೆಟಾಲ್‌ನ ಬ್ರಿಟಿಷ್ ಸರ್ಕಾರಕ್ಕೆ ನೆರವಾಗುವುದು ತಮ್ಮ ಕರ್ತವ್ಯವೆಂದು ಭಾವಿಸಿ ತಮ್ಮ ಗೆಳೆಯರ ಶುಶ್ರೂಷಾ ದಳದೊಂದಿಗೆ ದಂಗೆಯ ಸ್ಥಳಕ್ಕೆ ಧಾವಿಸಿದರು. ಅಲ್ಲಿ ಅವರು ಈ ಸಂಘರ್ಷದಲ್ಲಿ ಗಾಯಗೊಂಡ ಬ್ರಿಟಿಷ್ ಸೈನಿಕರಲ್ಲದೆ ಬ್ರಿಟಿಷ್ ಸೈನ್ಯದಿಂದ ಅಮಾನುಷವಾಗಿ ಹಿಂಸೆಗೊಳಗಾದ ಝುಲು ಜನರಿಗೂ ಶುಶ್ರೂಷೆ ಒದಗಿಸಿದರು. ಏಕೆಂದರೆ, ಅದು ದಂಗೆಯೇನೂ ಆಗಿರದೆ ಬುಡಕಟ್ಟು ಜನರ ಕರ ನಿರಾಕರಣೆ ಕಾರ್ಯಕ್ರಮವಾಗಿತ್ತೆಂದು ಅಲ್ಲಿಗೆ ಹೋದ ಗಾಂಧಿಗೆ ಗೊತ್ತಾಯಿತು.

ಕೆಲವೇ ದಿನಗಳಲ್ಲಿ ಈ 'ದಂಗೆ'ಯನ್ನು– ಬ್ರಿಟಿಷ್ ಸರ್ಕಾರ ಅಡಗಿಸಿತಾದರೂ, ಬೋಯರ್ ಯುದ್ಧದಂತೆ ಇದು ಭೀಕರವಾಗಿರಲಿಲ್ಲವಾದರೂ, ಇದು ನಡೆದದ್ದು ಝುಲುಲ್ಯಾಂಡ್ ಎಂದು ಕರೆಯಲಾಗುತ್ತಿದ್ದ ಜನಸಂಖ್ಯೆ ವಿರಳವಾದ ಗಿರಿ ಕಣಿವೆಗಳ ಪ್ರದೇಶವಾಗಿದ್ದು ನಿಶ್ಶಬ್ದತೆಯಲ್ಲಿ ಗಾಯಾಳುಗಳೊಂದಿಗೆ ದೀರ್ಘ ದೂರಗಳನ್ನು

ಕ್ರಮಿಸಬೇಕಾದ ಹಲವು ಸಂದರ್ಭಗಳು ಒದಗಿದವು. ಅಲ್ಲಿ ಗಾಂಧಿ ಮನುಷ್ಯನ ಬದುಕಿನ ಬಗ್ಗೆ, ತಮ್ಮ ಬದುಕಿನ ಬಗ್ಗೆ ಆಳವಾದ ಆಲೋಚನೆಗಳಲ್ಲಿ ತೊಡಗುವ ಅವಕಾಶ ಉಂಟಾಯಿತು. ಗೀತೆ ಅವರಲ್ಲಿ, ಮನುಷ್ಯನ ಬದುಕಿನ ಗುರಿ, ಸತ್ಯದರ್ಶನ ಅಥವಾ ಸ್ವ-ಸ್ವರೂಪ ದರ್ಶನ ಎಂಬುದನ್ನು ಮತ್ತೆ ಮತ್ತೆ ನೆನಪಿಸಿತು. ಸತ್ಯದರ್ಶನಕ್ಕೆ ಸಾಧನವಾದ ಅಂತಃಕರಣವನ್ನು ಪೂರ್ಣವಾಗಿ ತೆರೆಯುವ ಮಾನವ ಸೇವೆಗೆ ಬೇಕಾದ ಏಕಾಗ್ರತೆ ಸಾಧಿಸಲು ಮತ್ತು ಇದಕ್ಕೆ ಅಡೆತಡೆಯಾಗುವ ಕ್ಲೇಶಗಳನ್ನು ಸೃಷ್ಟಿಸುವ ಸಂತಾನವೃದ್ಧಿಗೆ ಕಡಿವಾಣ ಹಾಕಲು ಬ್ರಹ್ಮಚರ್ಯವೇ ಮದ್ದೆಂಬ ದೃಢನಿಶ್ಚಯಕ್ಕೆ ಅವರು ಬಂದರು. ಜೊತೆಗೆ ಕಸ್ತೂರಬಾ ರಕ್ತಹೀನತೆಯಿಂದ ಬಳಲಿ ಬೆಂಡಾಗಿ ಒಮ್ಮೆ ಪ್ರಾಣಾಪಾಯದಿಂದ ಪಾರಾಗಿದ್ದರು. ಹೀಗಾಗಿ ಬಹುಕಾಲ ಅವರ ಮನಸ್ಸನ್ನು ಆವರಿಸಿ ಅಂತಿಮ ತೀರ್ಮಾನಕ್ಕೆ ಬರಲಾಗದಿದ್ದ ಬ್ರಹ್ಮಚರ್ಯ ಪಾಲನೆಯ ಪ್ರತಿಜ್ಞೆ ಸ್ವೀಕರಿಸಲು ಅವರು ಸಿದ್ಧರಾದರು.

ಝುಲುಲ್ಯಾಂಡ್‌ನಿಂದ ವಾಪಸಾದ ಕೂಡಲೇ ಗಾಂಧಿ ಫೀನಿಕ್ಸ್‌ನಲ್ಲಿದ್ದ ಕಸ್ತೂರಬಾ ಮತ್ತು ತಮ್ಮ ಗೆಳೆಯರು ಹಾಗೂ ಬಂಧುಗಳೊಂದಿಗೆ ತಾವು ಬ್ರಹ್ಮಚರ್ಯದ ಪ್ರತಿಜ್ಞೆ ಮಾಡಬಯಸಿರುವ ವಿಷಯವನ್ನು ಚರ್ಚಿಸಿದರು. ಅವರಲ್ಲಿ ಕೆಲವರು ಅದರ ಕಷ್ಟಗಳ ನಿವೇದನೆ ಮಾಡಿದರೆ ಇನ್ನು ಕೆಲವರು ಅದರ ಉದಾತ್ತ ಉದ್ದೇಶಗಳಿಗಾಗಿ ತಾವೂ ಪ್ರತಿಜ್ಞೆ ಮಾಡಲು ಮುಂದೆ ಬಂದರು. ಆಗ ಗಾಂಧಿಗೆ ಮುವ್ವತ್ತೇಳು ವರ್ಷ. ಅಂದಿನಿಂದ ಅವರ ಹತ್ಯೆಯಾದ ೧೯೪೮ರವರೆಗೆ, ಅಂದರೆ ಸತತ ೪೨ ವರ್ಷಗಳ ಕಾಲ ಅವರು ಅಖಂಡ ಬ್ರಹ್ಮಚಾರಿಯಾಗಿಯೇ ಉಳಿದರು. ಆದರೆ ಅದು ಮುಂದೆ ಅವರೇ ಹಲವು ಕಡೆ ಬರೆದಿರುವಂತೆ ಸುಲಭದ ಸಾಧನೆಯಾಗಿರಲಿಲ್ಲ. ಅದನ್ನೊಂದು ವ್ರತವಾಗಿ ಸ್ವೀಕರಿಸಿ ವ್ರತದ ನಿಯಮಗಳಿಗೆ ತನ್ನನ್ನು ಕಟ್ಟುನಿಟ್ಟಾಗಿ ಒಪ್ಪಿಸಿಕೊಂಡರೆ ಮಾತ್ರ ಸಾಧ್ಯವಾಗುವುದು ಎಂದು ಅವರು ಹೇಳುತ್ತಾರೆ. ಇದರ ಫಲವಾಗಿ ಒಳಗಿನ ಬಿರುಗಾಳಿ ಮತ್ತು ತೊಳಲಾಟಗಳನ್ನೆಲ್ಲ ನಿಯಂತ್ರಿಸಿ ಆ ನಿಯಂತ್ರಣದ ಶಕ್ತಿಯನ್ನೆಲ್ಲ ಆತ್ಮಶಕ್ತಿಯನ್ನಾಗಿ ಪರಿವರ್ತಿಸಿಕೊಳ್ಳಲು ಸಾಧ್ಯವಾಯಿತೆಂದು ತಿಳಿಸುವ ಅವರು ಕಡಿಮೆ ದೈಹಿಕ ಕಾಮ ಎಂದರೆ ಕಡಿಮೆ ಸ್ವಾರ್ಥ ಬುದ್ಧಿ ಮತ್ತು ಆ ಮೂಲಕ ಹೆಚ್ಚಿನ ತ್ಯಾಗ ಮತ್ತು ಸೇವೆಯ ಶಕ್ತಿವರ್ಧನೆ ಎಂದು ಅದನ್ನು ವಿಶ್ಲೇಷಿಸುತ್ತಾರೆ. ಇದರ ಪ್ರಕಾರ ಅವರು ಉಪವಾಸಗಳನ್ನು ಆಚರಿಸುವ ಪ್ರಯೋಗದಲ್ಲಿ ತೊಡಗಿಕೊಂಡರು.

ಈ ಮಧ್ಯೆ ಭಾರತದಲ್ಲಿದ್ದ ಹಿರಿಯ ಮಗ ಹರಿಲಾಲ ಶಿಕ್ಷಣವನ್ನು ಪೂರೈಸದೇ, ೧೯೦೬ರ ಮೇನಲ್ಲಿ ತಾನು ಪ್ರೀತಿಸಿದ್ದ ಚಾಂಚಿ ಎಂದೂ ಕರೆಯಲಾಗುತ್ತಿದ್ದ ಚಂಚಲ್ ಗುಲಾಬ್ ಎಂಬ ಹುಡುಗಿಯನ್ನು ಮದುವೆಯಾಗಿದ್ದಾಗಿ ಗಾಂಧಿಗೆ ಪತ್ರ ಬಂತು. ಹುಡುಗಿಯ ಅಪ್ಪ ಗಾಂಧಿ ಕುಟುಂಬದ ಆಪ್ತ ಬಂಧುವೂ ಆಗಿದ್ದು ಸಾಕಷ್ಟು ಶ್ರೀಮಂತರೂ ಆಗಿದ್ದುದರಿಂದ ಗಾಂಧಿಯವರ ಅಣ್ಣ ಲಕ್ಷ್ಮೀದಾಸರೇ ಈ ಮದುವೆಯನ್ನು ಅದ್ದೂರಿಯಿಂದ ನೆರವೇರಿಸಿದ್ದರು. ತಮ್ಮ ಬಾಲ್ಯ ವಿವಾಹದ ಸಂಕಷ್ಟಗಳನ್ನು ಅರಿತಿದ್ದ ಗಾಂಧಿಗೆ ಹದಿನೆಂಟರ ತಮ್ಮ ಮಗ ತಮ್ಮ ಮಾತಿಗೆ ವಿರುದ್ಧವಾಗಿ ಮದುವೆಯಾದದ್ದು ಬೇಸರ ತಂದಿತ್ತು. ಇಲ್ಲಿಂದಲೇ ಅಪ್ಪ ಮತ್ತು ಈ ಮಗನ ಘರ್ಷಣೆ ಆರಂಭವಾಗಿತ್ತೆನ್ನಬಹುದು.

■

೧೭
ಸತ್ಯಾಗ್ರಹದ ಉದಯ

ಫೀನಿಕ್ಸ್‌ನಲ್ಲಿ ತಮ್ಮ ಪರಿವಾರದೊಂದಿಗೆ ಕೆಲ ದಿನಗಳಿದ್ದು ಜೊಹಾನ್ಸ್‌ಬರ್ಗ್‌ಗೆ ಬಂದ ಗಾಂಧಿ ವಿಶಾಲವಾಗಿದ್ದ ವಿಲ್ಲಾ ಮಾದರಿಯ ಮನೆಯನ್ನು ಬದಲಾಯಿಸಿ ಯಾವುದೇ ವಿಶೇಷ ಸೌಕರ್ಯಗಳಿಲ್ಲದ ಒಂದು ಸಣ್ಣ ಮನೆಯನ್ನು ವಾಸ ಮತ್ತು ವಕೀಲ ಕಛೇರಿಗಾಗಿ ಬಾಡಿಗೆಗೆ ಹಿಡಿದರು. ಅದು ಬ್ರಹ್ಮಚರ್ಯ ವ್ರತದೊಂದಿಗೆ ಅಗತ್ಯವಾಗಿದ್ದ ಸ್ವಇಚ್ಛೆಯ ಬಡತನದ ವ್ರತಕ್ಕೆ ಅನುಗುಣವಾಗಿತ್ತು, ಅಲ್ಲಿಗೆ ತಮಗೆ ವಕೀಲಿ ಕೆಲಸದಲ್ಲಿ ನೆರವಾಗಲು ಪೊಲಾಕ್ ಮತ್ತು ಅವರ ಪತ್ನಿಯನ್ನು ಕರೆಸಿಕೊಂಡರು. ಪೊಲಾಕ್‌ರ ಪತ್ನಿ ಇದ್ದುದರಲ್ಲಿ ಆ ಮನೆಯನ್ನು ಸುಧಾರಿಸಲು, ಸಿಂಗರಿಸಲು ಯತ್ನಿಸಿದಾಗ ಅದು ಅಗತ್ಯವಿಲ್ಲವೆಂದು ತಡೆದರು. ಮನೆಗೆಲಸಗಳಿಗೆ ಅಥವಾ ವೃತ್ತಿ ಸಂಬಂಧಿಯಾದ ಕೆಲಸಗಳಿಗೆ ಯಾವುದೇ ಸೇವಕನನ್ನು ನೇಮಿಸಿಕೊಳ್ಳಲು ಅವರು ನಿರಾಕರಿಸಿದರು. ಸಂಪೂರ್ಣ ಸ್ವಾವಲಂಬಿ ಸರಳ ಬದುಕಿನ ಮಾದರಿಗೆ ಸಜ್ಜಾದ ಅವರು, ಸರಳ ಜೀವನದ ಆದರ್ಶದ ಬಗ್ಗೆ ಅಷ್ಟೇನೂ ಒಲವಿಲ್ಲದಿದ್ದ ಪೊಲಾಕ್ ದಂಪತಿಗಳನ್ನೂ ಅದಕ್ಕೆ ಸಿದ್ಧಪಡಿಸಿದರು. ಆದರೆ ಕಸ್ತೂರಬಾ ಅವರ ಜೊತೆಗೆ ಮನೆವಾರ್ತೆ ನೋಡಿಕೊಳ್ಳುತ್ತಿದ್ದ ಮಿಲಿ ಪೊಲಾಕ್ ಮತ್ತು ಗಾಂಧಿ ನಡುವೆ ಸ್ತ್ರೀ ಸ್ಥಾನಮಾನದ ಬಗ್ಗೆ ಮುಗಿಯದ ಚರ್ಚೆಗೇನೂ ಕೊರತೆ ಇರುತ್ತಿರಲಿಲ್ಲ! ಪೂರ್ವ ದೇಶಗಳಲ್ಲಿ ಹೆಣ್ಣನ್ನು ಗಂಡಿನ ಉದ್ದೇಶಗಳನ್ನು ಪೂರೈಸುವ ಸಾಧನದ ಮಟ್ಟಕ್ಕೆ ಇಳಿಸಲಾಗಿದೆ ಎಂದು ಮಿಲಿ ಹೇಳಿದರೆ, ಅದು ಪಶ್ಚಿಮದ ಕಣ್ಣಿಗೆ ಕಾಣುವ ರೀತಿಯಷ್ಟೆ ಎಂದು ಗಾಂಧಿ ಹೇಳುತ್ತಿದ್ದರು.

ಈ ಮಧ್ಯೆ ಟ್ರಾನ್ಸ್‌ವಾಲ್‌ನ ಆಡಳಿತ ಭಾರತೀಯರೂ ಸೇರಿದಂತೆ ಆ ಪ್ರಾಂತ್ಯದಲ್ಲಿದ್ದ ಏಷಿಯನ್ನರನ್ನು ೧೯೦೬ರ ಏಪ್ರಿಲ್‌ನಲ್ಲಿ ಬಿಳಿಯ ಪ್ರಜಾವರ್ಗದಿಂದ ಬೇರ್ಪಡಿಸಿ ಅವರನ್ನು ಸೀಮಿತ ಹಕ್ಕುಗಳುಳ್ಳ ಕಡಿಮೆ ದರ್ಜೆಯ ಪ್ರಜೆಗಳನ್ನಾಗಿ ವಿಂಗಡಿಸಲು ಹೊಸ ಕಾಯಿದೆಯೊಂದನ್ನು ರೂಪಿಸತೊಡಗಿತ್ತು. ಮುಂದೆ 'ಕರಾಳ ಏಷಿಯಾಟಿಕ್ ಶಾಸನ'ವೆಂದೇ ಕುಪ್ರಸಿದ್ಧವಾದ ಈ ಕಾಯಿದೆ ಹೊಸದಾಗಿ ಯಾವ ಬಿಳಿಯೇತರನೂ ಟ್ರಾನ್ಸ್‌ವಾಲ್ ಪ್ರಾಂತ್ಯವನ್ನು ಪ್ರವೇಶಿಸದಂತೆ ತಡೆಯುವ ಅಧಿಕಾರವನ್ನೂ ಒಳಗೊಂಡಿತ್ತು. ಗಾಂಧಿ ಝುಲು ದಂಗೆಯ ಸಂಬಂಧದ ಶುಶ್ರೂಷಾ ದಳದ ಕೆಲಸಗಳ ಮೇಲಿದ್ದಾಗಲೇ ಅವರಿಗೆ ಸರ್ಕಾರದ ಈ ಪ್ರಯತ್ನದ ಸುದ್ದಿ ತಲುಪಿತ್ತು. ಇದರ ವಿರುದ್ಧ ಕಾರ್ಯಾಚರಣೆ ರೂಪಿಸಲು ಬೇಗನೆ ಜೊಹಾನ್ಸ್‌ಬರ್ಗ್‌ಗೆ ಬರಬೇಕೆಂಬ ಕರೆಯೂ ಬಂದಿತ್ತು. ಈ ಉದ್ದೇಶಿತ ಶಾಸನದ ವಿಧಿಗಳು ಹೀಗಿದ್ದವು: ಟ್ರಾನ್ಸ್‌ವಾಲ್‌ನಲ್ಲಿ

ವಾಸಿಸುವ ಎಂಟು ವರ್ಷ ವಯಸ್ಸನ್ನು ಮೀರಿದ ಎಲ್ಲ ಭಾರತೀಯರೂ ಏಷಿಯಾಟಿಕ್ ನೋಂದಣಿ ಪುಸ್ತಕದಲ್ಲಿ ತಮ್ಮ ಸಕಲ ವಿವರಗಳನ್ನೂ, ಹೆಬ್ಬೆರಳೂ ಸೇರಿದಂತೆ ತಮ್ಮ ಬೆರಳಚ್ಚು ಮತ್ತು ಮೈಮೇಲಿನ ವಿಶಿಷ್ಟ ಗುರುತುಗಳ ವಿವರ ನೀಡಿ ನಿಗದಿತ ದಿನಾಂಕದೊಳಗಾಗಿ ನೋಂದಣಿ ಮಾಡಿಕೊಳ್ಳಬೇಕು. ರಹದಾರಿ ಪತ್ರಗಳೆಂದು ಕರೆಯಲಾಗುವ ಇಂತಹ ನೋಂದಣಿ ಪತ್ರಗಳನ್ನು ಭಾರತೀಯರು ಸದಾ ತಮ್ಮ ಜೊತೆಗೆ ಇರಿಸಿಕೊಂಡಿರಬೇಕು. ಪೊಲೀಸರು ಯಾವಾಗ ಕೇಳಿದರೂ (ಉದಾ: ಮನೆಗೆ ಬಂದು ಅಥವಾ ರಸ್ತೆಯ ಮೇಲೆ) ತೋರಿಸುವುದು ಅವರ ಕರ್ತವ್ಯವಾಗುತ್ತದೆ. ಹಾಗೆ ನೋಂದಣಿ ಮಾಡಿಸಿಕೊಳ್ಳದವರು ತಮ್ಮೆಲ್ಲ ಆಸ್ತಿಪಾಸ್ತಿಗಳನ್ನು ಬಿಟ್ಟು ಗಡೀಪಾರಾಗುವುದೂ ಸೇರಿದಂತೆ ಹಲವು ರೀತಿಯ ಕಾನೂನು ಕ್ರಮಕ್ಕೆ ಒಳಗಾಗುವರು.

ಅನ್ಯಾಯದ ವಿರುದ್ಧ ಐತಿಹಾಸಿಕ ಸಭೆ

ಜೊಹಾನ್ಸ್‌ಬರ್ಗ್‌ನ ತಮ್ಮ ಕಛೇರಿಗೆ ಬಂದ ಸರ್ಕಾರದ ರಾಜಪತ್ರದಲ್ಲಿ ಈ ಪ್ರಕಟಣೆಯನ್ನು ನೋಡಿ ಗಾಂಧಿ ಗಾಬರಿಯಾದರು. ಅದನ್ನು 'ಇಂಡಿಯನ್ ಒಪಿನಿಯನ್'ಗಾಗಿ ಗುಜರಾತಿ ಭಾಷೆಗೆ ಅನುವಾದಿಸಿದರು. ಈ ಕರಡು ಮಸೂದೆ ಶಾಸನವಾದರೆ ಭಾರತೀಯರಾರೂ ಆ ನಾಡಿನಲ್ಲಿ ಕನಿಷ್ಠ ಘನತೆಯಿಂದ ಬಾಳಲಾಗದೆಂದೂ, ಅದು ಈ ಸಮುದಾಯದ ಏಳಿಗೆಗೆ ಕುಠಾರಪ್ರಾಯ ವಾಗಿದೆಯೆಂದೂ ಎಚ್ಚರಿಸಿದರು. ಅವರು ಕೂಡಲೇ ಭಾರತೀಯ ಮುಖಂಡರ ಒಂದು ಸಭೆ ಕರೆದರು. ಆ ಸಭೆಯಲ್ಲಿ ಗಾಂಧಿ ಕರಡು ಮಸೂದೆಯನ್ನು ಶಬ್ದಶಃ ಸಭೆಗೆ ವಿವರಿಸಿದರು. ಈ ಮಸೂದೆ ಶಾಸನವಾಗದಂತೆ ತಡೆಯದೇ ಹೋಗುವುದು ಟ್ರಾನ್ಸ್‌ವಾಲ್‌ನಲ್ಲಿರುವ ಹತ್ತು-ಹದಿನೈದು ಸಾವಿರ ಭಾರತೀಯರ ಮಾತ್ರವಲ್ಲ, ಇಡೀ ದ.ಆಫ್ರಿಕಾದಲ್ಲಿನ ವಿಶಾಲ ಭಾರತೀಯ ಜನಸ್ತೋಮದ ಭವಿಷ್ಯ ಕರಾಳವಾಗುತ್ತದಲ್ಲದೆ ಭಾರತ ದೇಶದ ಘನತೆಗೆ ಭಾರಿ ಕುಂದುಂಟಾಗುತ್ತದೆ ಎಂದು ಅವರು ವಿಶ್ಲೇಷಿಸಿದರು. ಆದುದರಿಂದ ಈ ಮಸೂದೆಯನ್ನು ಎದುರಿಸಲು ಎಲ್ಲ ಕಷ್ಟಗಳನ್ನೂ ಸಹಿಸಲು ಸಿದ್ಧರಾಗಬೇಕೆಂದೂ, ಆಗ ದೇವರು ನಮ್ಮೊಡನೆ ಇರುವುದು ಖಂಡಿತವೆಂದೂ ಗಾಂಧಿ ಮುಖಂಡರನ್ನು ಹೋರಾಟಕ್ಕೆ ಪ್ರೇರೇಪಿಸಿದರು. ಈ ಸಂಬಂಧವಾಗಿ ಒಂದು ಸಾರ್ವಜನಿಕ ಸಭೆ ಕರೆದು ಹೋರಾಟಕ್ಕೆ ಅಗತ್ಯವಾದ ನಿರ್ಣಯಗಳನ್ನು ಅನುಮೋದಿಸಬೇಕೆಂದು ಈ ಸಭೆ ತೀರ್ಮಾನಿಸಿತು.

ಇಂತಹ ಸಾರ್ವಜನಿಕ ಸಭೆ ೧೯೦೬ರ ಸೆಪ್ಟೆಂಬರ್ ೧೧ರಂದು ಜೊಹಾನ್ಸ್‌ಬರ್ಗ್‌ನ ಯಹೂದ್ಯರ ರಂಗಮಂದಿರವಾದ ಎಂಪೈರ್ ಕಟ್ಟಡದಲ್ಲಿ ಏರ್ಪಾಡಾಯಿತು. ಇದೊಂದು ಐತಿಹಾಸಿಕ ಸಭೆಯಾಗಿದ್ದು, ಇಲ್ಲಿಯೇ ಮುಂದೆ ಜಗತ್ತಿಗೆ ಗಾಂಧಿಯವರ ಕೊಡುಗೆ ಎಂದು ಸುಪ್ರಸಿದ್ಧವಾದ 'ಸತ್ಯಾಗ್ರಹ' ಪರಿಕಲ್ಪನೆಯ ಬೀಜ ಮೊಳೆತದ್ದು ಎಂದು ಹೇಳಬಹುದು. ಈ ಮಹಾನ್ ಸಭೆಗೆ ಟ್ರಾನ್ಸ್‌ವಾಲ್‌ನ ವಿವಿಧೆಡೆಗಳಿಂದ ಬಂದ ಸುಮಾರು ಮೂರು ಸಾವಿರ ಜನ ಭವನದ ಬಹುಮಹಡಿಗಳ ತುಂಬ ಕಿಕ್ಕಿರಿದಿದ್ದರು. ಇವರಲ್ಲಿ ಶ್ರೀಮಂತ ವರ್ತಕರು, ಸಾಮಾನ್ಯ ವರ್ತಕರು, ಬೀದಿ ವ್ಯಾಪಾರಿಗಳು, ವಕೀಲರು, ಕರಾರು ಕೂಲಿಗಳು, ಮನೆಗೆಲಸದವರು, ಹೆಂಗಸರು,

ಹಿಂದೂಗಳು, ಮುಸ್ಲಿಮರು, ಪಾರ್ಸಿಗಳು, ಉತ್ತರ ಭಾರತೀಯರು, ತಮಿಳರು, ತೆಲುಗರು ಹೀಗೆ ಭಾರತೀಯ ಸಮುದಾಯದ ಸರ್ವ ವರ್ಗಗಳ ಜನರೂ ಅಲ್ಲಿ ನೆರೆದಿದ್ದರು. ಗಾಂಧಿಯವರ ಮಾತುಗಳಲ್ಲೇ ಹೇಳುವುದಾದರೆ, 'ಪ್ರತಿಯೊಬ್ಬರ ಮುಖದಲ್ಲಿಯೂ ಏನೋ ಮಹತ್ಕಾರ್ಯ ನಡೆಯುತ್ತದೆ ಅಥವಾ ಮಹಾಘಟನೆ ಸಂಭವಿಸುತ್ತದೆ ಎಂಬ ನಿರೀಕ್ಷೆ ಎದ್ದು ಕಾಣುತ್ತಿತ್ತು.'

ಟ್ರಾನ್ಸ್‌ವಾಲ್‌ನ ಬ್ರಿಟಿಷ್ ಭಾರತೀಯರ ಸಂಘದ ಅಧ್ಯಕ್ಷರಾದ ಸೇಠ್ ಅಬ್ದುಲ್ ಗನಿಯವರು ಅಧ್ಯಕ್ಷತೆ ವಹಿಸಿದ್ದ ಆ ಬೃಹತ್ ಸಭೆಯಲ್ಲಿ ಗಾಂಧಿ ತಾವು ಸಿದ್ಧಪಡಿಸಿದ್ದ ನಾಲ್ಕು ನಿರ್ಣಯಗಳನ್ನು ಓದಿದರು. ಅದರಲ್ಲಿ ಮುಖ್ಯವಾದುದೆಂದರೆ, ಪ್ರತಿರೋಧದ ಸರ್ವ ಪ್ರಯತ್ನಗಳ ಹೊರತಾಗಿಯೂ ಮಸೂದೆಯು ಶಾಸನವಾಗಿ ಮಾರ್ಪಟ್ಟರೆ ಅದಕ್ಕೆ ತಲೆಬಾಗದೆ, ಅದರ ವಿರುದ್ಧದ ಹೋರಾಟದಲ್ಲಿ ಎಂತಹ ಕಷ್ಟ ಅಥವಾ ಶಿಕ್ಷೆ ಒದಗಿದರೂ ಅದನ್ನು ಅನುಭವಿಸಲು ಸಿದ್ಧವೆಂಬ ನಾಲ್ಕನೆಯ ನಿರ್ಣಯ. ಸಭೆಯ ಕಾರ್ಯಕಲಾಪಗಳು ಪ್ರಧಾನವಾಗಿ ಹಿಂದೂಸ್ಥಾನಿ ಮತ್ತು ಗುಜರಾತಿಗಳಲ್ಲಿ ನಡೆದುವಾದರೂ, ಮುಖ್ಯ ಅಂಶಗಳನ್ನು ತಮಿಳು ಮತ್ತು ತೆಲುಗು ಭಾಷೆಗಳಲ್ಲೂ ತರ್ಜುಮೆ ಮಾಡಿ ಹೇಳಲಾಯಿತು. ಅನೇಕರು ತಂತಮ್ಮ ಭಾಷೆಗಳಲ್ಲಿ ನಿರ್ಣಯಗಳನ್ನು ಸಮರ್ಥಿಸಿ ಮಾತನಾಡಿದರು. ಅವೆಲ್ಲವನ್ನೂ ತಾಳ್ಮೆಯಿಂದ ಕುಳಿತು ಕೇಳಿದ ಸಭೆ ಕೊನೆಯಲ್ಲಿ ಚಪ್ಪಾಳೆ ತಟ್ಟಿ ಅವನ್ನು ಸ್ವಾಗತಿಸಿತು. ಈ ಮಧ್ಯೆ ಸೇಠ್ ಹಾಜಿ ಹಬೀಬ್ ಎಂಬ ಹಳೆಯ ಹಿರಿಯ ವರ್ತಕರೊಬ್ಬರು ಎದ್ದು ನಿಂತು ಈ ನಿರ್ಣಯಗಳನ್ನು ಚಪ್ಪಾಳೆ ತಟ್ಟಿ ಸ್ವಾಗತಿಸದೆ ಮತಕ್ಕೆ ಹಾಕಿ ಅನುಮೋದಿಸಬೇಕೆಂದೂ, ಇದಕ್ಕೆ ನಾವೆಲ್ಲ ದೇವರನ್ನು ಸಾಕ್ಷಿಯಾಗಿಟ್ಟುಕೊಂಡು, ಶಾಸನಕ್ಕೆ ತಲೆಬಾಗುವುದಿಲ್ಲವೆಂದು ಪ್ರತಿಜ್ಞೆ ಮಾಡಬೇಕೆಂದೂ ಕರೆಕೊಟ್ಟರು.

ದೇವರ ಸಾಕ್ಷಿಯ ಮಾತಿನ ಮಿಂಚು–ಪ್ರತಿರೋಧದ ಹೊಸ ಮಾರ್ಗದ ಆವಿಷ್ಕಾರ

ಹಬೀಬರ ಈ ಮಾತುಗಳನ್ನು ಕೇಳಿ ಇದ್ದಕ್ಕಿದ್ದಂತೆ ಗಾಂಧಿಗೆ ಧಿಗ್ಗನೆ ಹೊಸ ಅರಿವಿನ ಮಿಂಚೊಂದು ಕಣ್ಮುಂದೆ ಹಾದು ಹೋದಂತಾಯಿತು. ಹೃದಯದಲ್ಲಿ ಹೊಸ ಬಾಗಿಲು ತೆರೆದಂತಾಯಿತು. ಅವರ ಕಣ್ಣುಗಳು ಹೊಸ ಕಾಂತಿಯಿಂದ ಹೊಳೆದವು. ದೇವರನ್ನೇ ಲೌಕಿಕ ನೆಲೆಯಲ್ಲಿ ಪರೀಕ್ಷೆಗೊಡ್ಡಿ ತಮ್ಮ ಸತ್ವ ಪರೀಕ್ಷೆ ಮಾಡಿಕೊಳ್ಳುವ, ಅಸತ್ಯವನ್ನು, ಹಿಂಸೆಯನ್ನು ನಿರ್ವಹಿಸುವ ಹೊಸದೊಂದು ಪ್ರತಿರೋಧ ಮಾರ್ಗದ ಹೊಳಹು ಅವರಿಗೆ ಈ ಕ್ಷಣದಲ್ಲಿ ದೊರಕಿದಂತಾಯಿತು. ತಕ್ಷಣವೇ ಅವರು ತಮ್ಮ ಮನಸ್ಸಿನಲ್ಲಿ ಮೂಡಿದ ಈ ಅಲಿಪ್ತ ಪ್ರತಿರೋಧವನ್ನು ಸಭೆಗೆ ಹೀಗೆ ವಿವರಿಸಿದರು:

'ಹಿಂದೂ ಮತ್ತು ಇಸ್ಲಾಂಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಿದ್ದರೂ ನಾವೆಲ್ಲರೂ ನಂಬಿರುವುದು ಒಬ್ಬನೇ ದೇವರನ್ನು. ಆ ದೇವರ ಹೆಸರಿನಲ್ಲಿ ಅಥವಾ ಆತನ ಸಾಕ್ಷಿಯಲ್ಲಿ ಆಶ್ವಾಸನೆ ಕೊಡುವುದೆಂದರೆ ಅಥವಾ ಪ್ರತಿಜ್ಞೆ ಮಾಡುವುದೆಂದರೆ ಹುಡುಗಾಟವಲ್ಲ. ಪ್ರಮಾಣ ಮಾಡಿ ಅದನ್ನು ಮುರಿದರೆ ದೇವರ ಮತ್ತು ಮಾನವ ಧರ್ಮದ ಹೆಸರಿನಲ್ಲಿ ಅಪರಾಧ ಮಾಡಿದಂತಾಗುತ್ತದೆ. ಮನಃಪೂರ್ವಕವಾಗಿ ಅರಿತು

ಪ್ರಮಾಣ ಮಾಡಿದ ನಂತರ ಭಾಷೆಗೆ ತಪ್ಪುವ ಮನುಷ್ಯ ತನ್ನ ಮಾನವತ್ವವನ್ನೇ ಕಳೆದುಕೊಳ್ಳುತ್ತಾನೆ ಎಂದು ನಾನು ಭಾವಿಸಿದ್ದೇನೆ...... ಆದ್ದರಿಂದ ಇಲ್ಲಿ ಇರುವವರು ಯಾರೂ ಪ್ರಮಾಣವನ್ನು ತೆಗೆದುಕೊಂಡಾಗ ಏನು ಮಾಡುತ್ತಿದ್ದೀನೆಂಬುದು ಗೊತ್ತಾಗಲಿಲ್ಲವೆಂದು ತಪ್ಪಿಸಿಕೊಳ್ಳುವ ಸಂಭವ ಇರದಂತೆ ನೋಡಿಕೊಳ್ಳಿ... ಹೊರಗಿನವರ ಮೇಲೆ ಘನ ಪರಿಣಾಮವುಂಟು ಮಾಡಲೆಂದು ಈ ಪ್ರಮಾಣ ಮಾಡಬಾರದು... ಪ್ರತಿಯೊಬ್ಬರೂ ತಮ್ಮ ಹೃದಯವನ್ನು ಶೋಧಿಸಿ ಬರುವ ಎಲ್ಲ ಸಾಧ್ಯ ಕಷ್ಟನಷ್ಟಗಳನ್ನು–ಕೊನೆಗೆ ಪ್ರಾಣ ತ್ಯಾಗವನ್ನೂ–ಎದುರಿಸಲು ಸಾಕಾದಷ್ಟು ಶಕ್ತಿ ಇದೆ ಎಂದು ಅಂತರಾತ್ಮ ಹೇಳಿದರೆ ಮಾತ್ರ ಪ್ರಮಾಣ ತೆಗೆದುಕೊಳ್ಳಬೇಕು ಮತ್ತು ಆಗ ಮಾತ್ರ ಪ್ರಮಾಣ ಫಲದಾಯಕವಾಗುವುದು...... ನಿಮಗೆ ಅಗತ್ಯ ಮನೋಸ್ಥೈರ್ಯವಿಲ್ಲದಿದ್ದರೆ, ಸಂಪೂರ್ಣವಾಗಿ ನಿಮ್ಮನ್ನು ಸಮೂಹದಿಂದ ಪ್ರತ್ಯೇಕಿಸಿದಾಗಲೂ ದೃಢಮನಸ್ಸಿನಿಂದ ನಿಲ್ಲಲು ನಿಮಗೆ ಸಾಧ್ಯವಾಗದೆಂದು ತೋರಿದರೆ, ಈ ಪ್ರತಿಜ್ಞೆಯನ್ನು ತೆಗೆದುಕೊಳ್ಳಬಾರದೆಂದಷ್ಟೇ ಅಲ್ಲ, ಈ ನಿರ್ಣಯದ ಬಗ್ಗೆ ಸಭೆ ಅಂತಿಮವಾಗಿ ತೀರ್ಮಾನಿಸುವ ಮೊದಲು ನೀವು ನಿರ್ಣಯವನ್ನು ವಿರೋಧಿಸಬೇಕು ಮತ್ತು ಇದರ ಅಂಗೀಕಾರಕ್ಕೆ ಸಮ್ಮತಿ ನೀಡಬಾರದು. ಇತರರ ಪ್ರಭಾವ ಅಥವಾ ಒತ್ತಾಯದಿಂದ ಪ್ರಮಾಣಕ್ಕೆ ಸಿದ್ಧರಾಗದೆ, ಮುಂದೆ ಇತರರ ಪ್ರತಿಜ್ಞಾ ಭಂಗದಿಂದ ಕಿಂಚಿತ್ತೂ ವಿಚಲಿತರಾಗದೆ, ಕೊನೆಗೆ ಒಬ್ಬನೇ ಉಳಿದರೂ ಪ್ರತಿಜ್ಞೆ ಪಾಲಿಸುವಷ್ಟು ಈ ಕರಾಳ ಶಾಸನದ ಕೆಡುಕಿನ ಆಳವನ್ನು ಮನಗಂಡವರು ಮಾತ್ರ ಪ್ರತಿಜ್ಞೆ ಸ್ವೀಕರಿಸಬೇಕು. ನನ್ನ ಮಟ್ಟಿಗೆ ಹೇಳುವುದಾದರೆ, ಎಲ್ಲರೂ ಪ್ರತಿಜ್ಞೆ ತಪ್ಪಿ ನಾನೊಬ್ಬನೇ ಉಳಿದರೂ ನಾನು ಒಂಟಿಯಾಗಿಯೇ ಪ್ರತಿಜ್ಞೆಯನ್ನು ಪಾಲಿಸಲು ಬದ್ಧನಿರುತ್ತೇನೆ ಎಂದು ಈ ಸಭೆಗೆ–ಗರ್ವದಿಂದಲ್ಲ–ವಿನಯದಿಂದ ತಿಳಿಸಲು ಇಚ್ಛಿಸುವೆ.'

ಗಾಂಧಿಯವರ ಮಾತುಗಳನ್ನು ಸಭೆ ನಿಶ್ಶಬ್ದವಾಗಿ ಆಲಿಸಿತು. ಇತರ ಸಮುದಾಯ ನಾಯಕರೂ ಗಾಂಧಿಯ ಮಾತುಗಳ ಹಿನ್ನೆಲೆಯಲ್ಲಿ ಈ ಸಭೆಯ ನಿರ್ಣಯದ ಮಹತ್ವದ ಬಗ್ಗೆ ಮಾತನಾಡಿದರು. ಅಧ್ಯಕ್ಷರು ಎದ್ದು ನಿಂತು ಮತ್ತೊಮ್ಮೆ ಪ್ರತಿಜ್ಞೆಯ ಪರಿಣಾಮಗಳನ್ನು ವಿಷದೀಕರಿಸಿ ನಿರ್ಣಯಕ್ಕೆ ಸಭೆಯ ಅನುಮೋದನೆ ಕೇಳಿದರು. ಇಡೀ ಸಭೆ ಎದ್ದು ನಿಂತು ಕೈಗಳನ್ನೆತ್ತಿ ದೇವರ ಸಾಕ್ಷಿಯಲ್ಲಿ, ಈ ಶಾಸನ ಜಾರಿಗೆ ಬಂದರೆ ಅದಕ್ಕೆ ತಲೆಬಾಗುವುದಿಲ್ಲವೆಂದು ಪ್ರಮಾಣ ಸ್ವೀಕರಿಸಿತು. ಸಭೆ ಮುಕ್ತಾಯವಾಯಿತು.

ಆಶ್ಚರ್ಯವೆಂದರೆ ಮಾರನೆಯ ದಿನವೇ ಈ ಸಭೆ ನಡೆದ ಎಂಪೈರ್ ಕಟ್ಟಡ ಬೆಂಕಿ ಅನಾಹುತಕ್ಕೆ ಸಿಕ್ಕಿ ಇಡಿಯಾಗಿ ಭಸ್ಮವಾಗಿ ಹೋಯಿತು! ಜನ ಇದು ಒಳ್ಳೆಯ ಶಕುನವೆಂದೂ, ಈ ಕಟ್ಟಡದಂತೆಯೇ ಸರ್ಕಾರದ ಕುಶಾಸನವೂ ಜನರ ಪ್ರತಿರೋಧದೆದುರು ಉರಿದು ಭಸ್ಮವಾಗುವುದೆಂದೂ ಮಾತಾಡಿಕೊಂಡರು. ಆದರೆ ಹಾಗೆ ಮಾತಾಡಿಕೊಂಡು ಸುಮ್ಮನಾಗದೆ ಅವರು ಸಭೆಯ ನಿರ್ಣಯವನ್ನು ಪ್ರಾಂತ್ಯದ ವಿವಿಧೆಡೆಗೆ ಒಯ್ದು ಅಲ್ಲೆಲ್ಲ ಪ್ರತಿಜ್ಞಾ ಸ್ವೀಕಾರದ ಕಾರ್ಯಕ್ರಮಗಳನ್ನೇರ್ಪಡಿಸಿದರು.

ಮುಂದಿನ ಕ್ರಮವಾಗಿ ಗಾಂಧಿ ಸ್ಥಳೀಯ ಭಾರತೀಯರ ಒಂದು ನಿಯೋಗವನ್ನು ವಸಾಹತು ಮಂತ್ರಿ ಡಂಕನ್‌ನಲ್ಲಿಗೆ ಕೊಂಡೊಯ್ದು ಸಮುದಾಯದ ನಿಲುವನ್ನು ತಿಳಿಸಿದರು. ಈ ಮಾತುಕತೆಯ ಮಧ್ಯೆ ನಿಯೋಗದ ಸದಸ್ಯರಲ್ಲೊಬ್ಬರಾಗಿದ್ದ ಸೇಠ್ ಹಾಜಿ

ಹಬೀಬರು ತಮ್ಮ ಹೆಂಡತಿಯ ರಹದಾರಿ ಪತ್ರವನ್ನು ಪರೀಕ್ಷಿಸಲು ಯಾರಾದರೂ ಬಂದರೆ ಆತನನ್ನು ಅಲ್ಲಿಯೇ ಗುಂಡಿಕ್ಕಿ ಕೊಂದು ಕಾನೂನಿನ ಕ್ರಮ ಎದುರಿಸುವುದಾಗಿ ಗುಡುಗಿದರು. ಇದರಿಂದ ಕೊಂಚ ಅಪ್ರತಿಭರಾದ ಮಂತ್ರಿಗಳು ಹೆಂಗಸರ ವಿಷಯದಲ್ಲಿ ಶಾಸನದಲ್ಲಿ ಸ್ವಲ್ಪ ಬದಲಾವಣೆ ಮಾಡುವ ಯೋಚನೆ ಸರ್ಕಾರಕ್ಕಿದೆಯೆಂದು ತಿಳಿಸಿದರು. ಆದರೆ, ಭಾರತೀಯರು ಶಾಸನದ ಕೆಲವು ವಿವರಗಳ ಬದಲಾವಣೆಗೆ ಕೋರಬಹುದೇ ಹೊರತು ಇಡೀ ಶಾಸನವನ್ನು ವಿರೋಧಿಸಿ ಫಲವಿಲ್ಲ ಎಂದು ಕಟ್ಟುನಿಟ್ಟಾಗಿ ಹೇಳಿ ನಿಯೋಗವನ್ನು ನಿರಾಸೆಗೊಳಿಸಿದರು. ಆದಾಗ್ಯೂ ಸರ್ಕಾರ ಮಹಿಳೆಯರಿಗೆ ಕೆಲವು ರಿಯಾಯ್ತಿ ತೋರುವ ಬಗ್ಗೆ ಯೋಚಿಸುತ್ತಿರುವುದೇ ತಮ್ಮ ಪ್ರತಿರೋಧ ಪ್ರಯತ್ನದ ಮೊದಲ ಗೆಲುವು ಎಂದು ಭಾವಿಸಿದ ಭಾರತೀಯರು, ಶಾಸನವನ್ನು ಇಡಿಯಾಗಿ ವಿರೋಧಿಸಲು ಮತ್ತಷ್ಟು ಪ್ರತಿಬದ್ಧರಾದರು.

ಸಾತ್ವಿಕ ಪ್ರತಿರೋಧವಲ್ಲ; ಇದು 'ಸತ್ಯಾಗ್ರಹ'!

ಸೇಠ್ ಹಾಜಿ ಹಬೀಬ್ ಅವರು ಎಂಪೈರ್ ಸಭಾಭವನದಲ್ಲಿ ದೇವರ ಸಾಕ್ಷ್ಯದ ಪ್ರತಿಜ್ಞೆಯ ಮಾತಾಡಿದಾಗ, ಗಾಂಧಿಯವರಿಗೆ ಅದು ಕೇವಲ ಸಾಂಪ್ರದಾಯಿಕ ಅರ್ಥದ ಧಾರ್ಮಿಕ ವ್ರತ ಅಥವಾ ಹರಕೆಯ ಪ್ರಮಾಣವಾಗಿ ಕಾಣಿಸಲಿಲ್ಲ. ಕೆಡುಕನ್ನು ಎದುರಿಸಲು ಈವರೆಗೆ ಜಗತ್ತು ಅನುಸರಿಸಿಕೊಂಡು ಬಂದಿದ್ದ ಪಾಶವೀ ಬಲಕ್ಕೆ ಪ್ರತಿಯಾಗಿ ಮನುಷ್ಯನೊಳಗಿನ ದೈವೀಶಕ್ತಿಯ ಕಿಡಿಯನ್ನು ಹೊತ್ತಿಸಿ ಅದನ್ನು ಎರಡೂ ಬದಿಯವರ ನಡುವೆ ಪ್ರಜ್ಞೆಯ ಬೆಳಕಿನ ಸೇತುವೆ ನಿರ್ಮಿಸಿ ಘರ್ಷಣೆಯನ್ನು ಸೋಲು–ಗೆಲುವುಗಳ ಹಮ್ಮು–ಬಿಮ್ಮುಗಳಿಲ್ಲದೆ ಪರಿಹರಿಸಬಹುದಾದ ಹೊಸ ಮಾರ್ಗವೊಂದರ ಹೊಳಹನ್ನು ಅವರು ಕಂಡಿದ್ದರು. ಹಾಗಾಗಿ ಗಾಂಧಿ ವಿವರಿಸಿದ ಹೋರಾಟದ ಮಾರ್ಗವನ್ನು ಕೆಲವರು ಈ ಹಿಂದೆ ನಡೆದ–ಉದಾ: ಇಂಗ್ಲೆಂಡ್‌ನಲ್ಲಿ ಮಹಿಳೆಯರ ಮತದಾನದ ಹಕ್ಕಿಗಾಗಿ ನಡೆದ–ಹಲವು ಚಳುವಳಿಗಳನ್ನು ಕರೆದಂತೆ 'ಸಾತ್ವಿಕ ಪ್ರತಿರೋಧ' (passive resistance) ಎಂದು ಕರೆಯುವುದು ಸರಿಯಲ್ಲ ಎಂದು ಭಾವಿಸಿದರು. ಏಕೆಂದರೆ passive resistance ನಲ್ಲಿ ಬೇಡಿಕೆ ಮತ್ತು ವಿರೋಧ ಹಾಗೂ ಎದುರಾಳಿಗೆ ನಷ್ಟ ಉಂಟುಮಾಡುವ ಇರಾದೆಗಳಿರುತ್ತಿದ್ದವು ಮತ್ತು ಬೇಡಿಕೆಯನ್ನು ಒತ್ತಾಯಿಸುವವರನ್ನು ದುರ್ಬಲರು ಎಂದು ಗುರುತಿಸಲಾಗುತ್ತಿತ್ತು. ಆದರೆ ಗಾಂಧಿಯವರ ಪ್ರಕಾರ ತಾವೀಗ ಪ್ರತಿಪಾದಿಸಿದ ಹೋರಾಟದ ಪರ ಸರ್ವಶಕ್ತನಾದ ದೇವರು ಇದ್ದಾನೆ. ಹಾಗಾಗಿ ಅದು ದುರ್ಬಲರ ಬೇಡಿಕೆಯ ಹೋರಾಟವಲ್ಲ; ಬದಲಿಗೆ ಅದು ಒಳಿತನ್ನು ಸಾಧಿಸಲು, ಕಾಣಲಾಗದವರಿಗೆ ಅದನ್ನು ಕಾಣಿಸುವಂತೆ ಮಾಡಲು ಸ್ವಯಂ ದಂಡನೆ ಅಥವಾ ಸ್ವಯಂತ್ಯಾಗದ ಮೂಲಕ ನಡೆಸಿರುವ ನಮ್ರ ಪ್ರಯತ್ನವಾಗಿತ್ತು.

ಹೀಗೆ ಯೋಚಿಸಿದ ಗಾಂಧಿ ಮುಂದಿನ ಅಧ್ಯಾಯಗಳಲ್ಲಿ ನಿರೂಪಿಸಲಾಗಿರುವಂತೆ, ಕರಾಳ ಏಷಿಯಾಟಿಕ್ ಶಾಸನದ ವಿರುದ್ಧದ ಹೋರಾಟದ ನಡುವೆಯೇ 'ಇಂಡಿಯನ್ ಒಪಿನಿಯನ್' ಪತ್ರಿಕೆಯಲ್ಲಿ ಈ ಬಗ್ಗೆ ಚರ್ಚೆ ನಡೆಸುತ್ತಿದ್ದವರಿಗೆ ಈ ಹೋರಾಟಕ್ಕೆ ತಕ್ಕುದಾದ ಭಾರತೀಯ ಹೆಸರೊಂದನ್ನು ಸೂಚಿಸುವಂತೆ ಕೋರಿ ಪ್ರಕಟಣೆ ನೀಡಿದರು. ಅಲ್ಲದೆ ಅತ್ಯುತ್ತಮ ಹೆಸರು ಸೂಚಿಸಿದವರಿಗೆ ಬಹುಮಾನವೊಂದನ್ನೂ ಘೋಷಿಸಿದರು.

ಇದಕ್ಕೆ ಹಲವಾರು ಸಲಹೆ ಸೂಚನೆಗಳು ಬಂದವು. ಬಂದವುಗಳಲ್ಲಿ ಫೀನಿಕ್ಸ್ ಆಶ್ರಮದಲ್ಲಿ ಕಾರ್ಯಕರ್ತನಾಗಿದ್ದ ಗಾಂಧಿಯವರ ಆಪ್ತ ಬಂಧು ಮಗನ್‌ಲಾಲ್ ಸೂಚಿಸಿದ 'ಸದಾಗ್ರಹ' ಎಂಬ ಹೆಸರು ಗಾಂಧಿಯವರ ಮನಸ್ಸಿಗೆ ಬಂದಿತಾದರೂ, ಅದರಲ್ಲೂ ಏನೋ ಕೊರತೆ ಇದೆಯೆಂದು ಅವರಿಗೆ ಅನಿಸತೊಡಗಿತು. ಕೊನೆಗೆ ಅದು ಅವರಿಂದ 'ಸತ್ಯಾಗ್ರಹ' ಎಂಬ ಹೆಸರನ್ನು ಪಡೆಯಿತು. ಇದರ ಹಿಂದೆ ಅವರು ತಮ್ಮ ವಿವಿಧ ಧರ್ಮಗಳ ಆಳವಾದ ಅಧ್ಯಯನ, ಅದರ ಮನನದ ಭಾಗವಾಗಿ ಅಳವಡಿಸಿಕೊಳ್ಳತೊಡಗಿದ್ದ ಶ್ರಮಸಹಿತ ಸರಳ ಜೀವನ, ಬ್ರಹ್ಮಚರ್ಯ, ಅಪರಿಗ್ರಹ ಮತ್ತು ಉಪವಾಸ ಆಚರಣೆಗಳ ಮೂಲಕ ಕಂಡುಕೊಳ್ಳಲು ಹೊರಟಿದ್ದ ಬದುಕಿನ ಸತ್ಯದರ್ಶನದ ಕಳಕಳಿ ಇತ್ತೆಂದು ಭಾವಿಸಬಹುದು. ಅದು ಮುಂದೆ ನಿಃಶಸ್ತ್ರನಾದ ಒಂಟಿ ಮನುಷ್ಯನೂ ಶಸ್ತ್ರಸಹಿತವಾದ ಎದುರಾಳಿ ಸಮೂಹ ಅಥವಾ ಸಂಸ್ಥೆಯನ್ನು ಎದುರಿಸಬಲ್ಲ ಅನನ್ಯ ಪ್ರತಿರೋಧ ಮಾರ್ಗವಾಗಿ ಜಗತ್ಪ್ರಸಿದ್ಧವಾದದ್ದು ಈಗ ಇತಿಹಾಸ.

■

೧೮
ಸತ್ಯಾಗ್ರಹದ ಆರಂಭ: ಗಾಂಧಿ ಬಂಧನ

ಟ್ರಾನ್ಸ್‌ವಾಲ್ ಈಗ ಬೋಯರ್ ಯುದ್ಧದ ಒಪ್ಪಂದದಂತೆ ಬ್ರಿಟಿಷ್ ಸಾಮ್ರಾಜ್ಯದ ಒಂದು ಅಧೀನ ರಾಜ್ಯವಾಗಿದ್ದರೂ, ಇನ್ನೂ ತನ್ನ ಶಾಸನಸಭೆ ರಚನೆಯ ವಿಧ್ಯುಕ್ತ ಘೋಷಣೆಯಾಗಿರಲಿಲ್ಲ. ಆದ್ದರಿಂದ ಅದರ ಯಾವುದೇ ಕಾಯಿದೆ ಬ್ರಿಟಿಷ್ ಸಾಮ್ರಾಜ್ಯದ ಅಂತಿಮ ಮುದ್ರೆಯಿಲ್ಲದೆ ಕಾನೂನಾಗಿ ಜಾರಿಯಾಗುವಂತಿರಲಿಲ್ಲ. ಹಾಗಾಗಿ ಗಾಂಧಿ ಸತ್ಯಾಗ್ರಹವನ್ನು ಆರಂಭಿಸುವ ಮುನ್ನ ಉಳಿದಿರುವ ಏಕೈಕ ಶಾಸನಾತ್ಮಕ ಮಾರ್ಗವಾದ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸದರಿ ಕರಾಳ ಶಾಸನದ ಕೆಡುಕುಗಳನ್ನು ಮನವರಿಕೆ ಮಾಡಿ ಅದನ್ನು ತಡೆಯುವ ಪ್ರಯತ್ನ ಮಾಡುವುದು ಸತ್ಯಾಗ್ರಹ ಧರ್ಮದ ಅಗತ್ಯವಾಗಿದೆ ಎಂದು ಭಾವಿಸಿದರು. ಅದಕ್ಕಾಗಿ ಲಂಡನ್‌ಗೆ ಭಾರತೀಯರ ನಿಯೋಗವೊಂದನ್ನು ಒಯ್ಯುವ ಸಲಹೆ ಇತ್ತರು. ಈ ಸಲಹೆಗೆ ಭಾರತೀಯ ಸಮುದಾಯದಿಂದ ದೀರ್ಘ ಚರ್ಚೆಯ ಕೊನೆಗೆ ಅನುಮೋದನೆ ದೊರಕಿತಾದರೂ, ಅದಕ್ಕೆ ಮುನ್ನ ನಿಯೋಗದಲ್ಲಿ ಯಾರ್‍ಯಾರಿರಬೇಕು ಎಂಬುದನ್ನು ಕುರಿತು ನಡೆದ ಚರ್ಚೆಗಳಲ್ಲಿ ಸಮುದಾಯದ ಹಲವು ನೆಲೆಗಳ ಒಡಕುಗಳು ಬಹಿರಂಗಗೊಂಡವು. ಅಂತೂ ಕೊನೆಗೆ ಮಲಯಾ ಮೂಲದ ಸೋಡಾ ತಯಾರಕ ಉದ್ಯಮಿ ಎಚ್.ಓ. ಅಲಿ ಎಂಬುವವರನ್ನು ನಿಯೋಗದಲ್ಲಿ ಗಾಂಧಿಯವರೊಡನೆ ಕಳಿಸಲು ತೀರ್ಮಾನಿಸಲಾಯಿತು.

೧೯೦೬ ರ ಅಕ್ಟೋಬರ್‌ನಲ್ಲಿ ಲಂಡನ್ ತಲುಪಿದ ನಿಯೋಗ ವಸಾಹತುಗಳ ಸಚಿವ (ಮತ್ತು ಭಾರತದ ಮಾಜಿ ವೈಸ್‌ರಾಯ್) ಲಾರ್ಡ್ ಎಲ್ಗಿನ್ ಮತ್ತು ಭಾರತದ ವಸಾಹತುವಿನ ವಿದೇಶಾಂಗ ಸಚಿವ ಜಾನ್ ಮಾರ್ಲೆ ಸೇರಿದಂತೆ, ಟ್ರಾನ್ಸ್‌ವಾಲ್‌ನ ಭಾರತೀಯರ ಹಿತ ಕಾಯಬಲ್ಲವರೆಂದು ತಾನು ಭಾವಿಸಿದ ಎಲ್ಲರನ್ನೂ ಭೇಟಿ ಮಾಡಿ ಮನವಿ ಸಲ್ಲಿಸಿತು. ಬ್ರಿಟಿಷ್ ಹೌಸ್ ಆಫ್ ಕಾಮನ್ಸ್ ಸದಸ್ಯರನ್ನು ಉದ್ದೇಶಿಸಿಯೂ ಒಂದು ಸಭೆಯಲ್ಲಿ ಗಾಂಧಿ ಮಾತಾಡಿದರು. ಭಾರತದ ಕೈಗಾರಿಕಾ ಸಂಸ್ಥಾಪನೆಗಳ ಪಿತಾಮಹರೂ, ಒಮ್ಮೆ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರೂ ಮತ್ತು ಬ್ರಿಟಿಷ್ ಸಂಸತ್ತಿನ ಸದಸ್ಯರೂ ಆಗಿದ್ದ ದಾದಾಭಾಯಿ ನವರೋಜಿಯವರನ್ನು ಕಂಡು ಮಾತಾಡಿದರು. ಹಾಗೇ ಒಂದು ವರ್ಷದ ಹಿಂದಷ್ಟೇ ಲಂಡನ್‌ನಲ್ಲಿ 'ಇಂಡಿಯಾ ಹೌಸ್' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಬ್ರಿಟಿಷ್ ಪ್ರಭುತ್ವ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದ ಭಾಷಾ ಪಂಡಿತ ಶ್ಯಾಂಜಿ ಕೃಷ್ಣವರ್ಮನನ್ನೂ (ಈತನ ಬಗ್ಗೆ ಮುಂದೆ ವಿವರ ನೀಡಲಾಗಿದೆ) ಗಾಂಧಿ ಭೇಟಿ ಮಾಡಿದರು. ಆದರೆ ಆತ ದ. ಆಫ್ರಿಕಾದ ಭಾರತೀಯರ ಹೋರಾಟ ತನ್ನ ಆದ್ಯತೆಯ ಕೆಲಸವಲ್ಲ ಎನ್ನುತ್ತಾ ಭಾರತಕ್ಕೆ ತಕ್ಷಣ ಸ್ವಾತಂತ್ರ್ಯ ಲಭಿಸುವ ತಂತ್ರದ ಬಗ್ಗೆ ಮಾತ್ರ ತನ್ನ ಗಮನ ಎಂದ. ಗಾಂಧಿ ನಂತರ ದ.ಆಫ್ರಿಕಾದ ಭಾರತೀಯರ

ಹೋರಾಟದ ವಿಷಯದಲ್ಲಿ ಲಂಡನ್‌ನಲ್ಲಿದ್ದು ನೆರವಾಗಬಲ್ಲ ದಾದಾಭಾಯಿ ನವರೋಜಿ, ಬ್ರಿಟಿಷ್ ಸಂಸತ್ತಿನ ಹಾಲಿ ಸದಸ್ಯ ಭೌಂಗ್ರಿ, ಈಗ ಲಂಡನ್‌ನಲ್ಲಿ ಕಾನೂನು ಶಿಕ್ಷಣ ಪಡೆಯುತ್ತಿದ್ದ ತಮ್ಮ ಗೆಳೆಯ ರೀಚ್ ಮತ್ತು ಇನ್ನೂ ಹಲವು ಗಣ್ಯರನ್ನೊಳಗೊಂಡ 'ದ. ಆಫ್ರಿಕಾದ ಬ್ರಿಟಿಷ್ ಭಾರತೀಯ ಸಮಿತಿ'ಯೊಂದನ್ನು ರಚಿಸಿದರು. ಈ ಎಲ್ಲ ಕೆಲಸಗಳಲ್ಲಿ ಕೆಲ ಬಿಳಿಯರೂ ಸೇರಿದಂತೆ ಅಲ್ಲಿನ ಭಾರತದ ಪರವಿದ್ದ ಜನಸಮುದಾಯ ನಿಯೋಗದೊಂದಿಗೆ ಸಹಕರಿಸಿತು. ನಿಯೋಗ ತಾನು ಬಂದ ಕೆಲಸದ ಬಗ್ಗೆ ಆಶಾಭಾವನೆ ತಾಳಿ ದ.ಆಫ್ರಿಕಾಕ್ಕೆ ವಾಪಸು ಹೊರಟಿತು. ಅದಕ್ಕೆ ತಕ್ಕಂತೆ ದಾರಿ ಮಧ್ಯದ ಮೆಡಿರಾ ಎಂಬ ಪೋರ್ಚುಗೀಸ್ ಬಂದರನ್ನು ನಿಯೋಗ ತಲುಪಿದಾಗ, ಲಾರ್ಡ್ ಎಲ್ಗಿನ್ ಟ್ರಾನ್ಸ್‌ವಾಲ್ ಸರ್ಕಾರದ ಕರಾಳ ಶಾಸನಕ್ಕೆ ಒಪ್ಪಿಗೆ ನೀಡಿಲ್ಲ ಎಂಬ ಸುವಾರ್ತೆ ತಲುಪಿ ಅದು ಮುಂದಿನ ಎರಡು ವಾರಗಳ ಸಮುದ್ರಯಾನವನ್ನು ಉಲ್ಲಾಸದಿಂದ ಕಳೆಯುವಂತೆ ಮಾಡಿತು.

ಎಲ್ಗಿನ್ ರೂಪಿಸಿದ್ದ ಕುಟಿಲೋಪಾಯ

ಆದರೆ ನಿಯೋಗ ಪ್ರಯಾಣ ಮುಗಿಸಿ ಜೊಹಾನ್ಸ್‌ಬರ್ಗ್ ತಲುಪಿದಾಗ ಎಲ್ಗಿನ್ ರೂಪಿಸಿದ್ದ ಕುಟಿಲೋಪಾಯ ಬಯಲಾಯಿತು. ಆತ ಕರಾಳ ಶಾಸನಕ್ಕೆ ಒಪ್ಪಿಗೆ ನೀಡದಂತೆ ಬ್ರಿಟಿಷ್ ಸಾಮ್ರಾಜ್ಯದ ಸರ್ಕಾರಕ್ಕೆ ಶಿಫಾರ್ಸು ಮಾಡಿದ್ದನಾದರೂ, ಅದೇ ವೇಳೆಯಲ್ಲಿ ಅವನು, ಹೇಗೂ ಟ್ರಾನ್ಸ್‌ವಾಲ್ ಇನ್ನು ಕೆಲವೇ ದಿನಗಳಲ್ಲಿ–೧೯೦೭ರ ಜನವರಿ ಒಂದರಿಂದ–ತನ್ನದೇ ಶಾಸನಸಭೆಯ ರಚನೆಯೊಂದಿಗೆ ಸ್ವಯಮಾಡಳಿತದ ನಾಡಾಗುವುದರಿಂದ, ಅಲ್ಲಿನ ಸರ್ಕಾರ ಆ ಶಾಸನವನ್ನು ಈಗಿರುವ ರೂಪದಲ್ಲೇ ಜಾರಿಗೆ ತರಬಹುದಾಗಿದೆ ಎಂಬ ತನ್ನ ತಂತ್ರವನ್ನೂ ಟ್ರಾನ್ಸ್‌ವಾಲ್ ಸರ್ಕಾರದ ಕಿವಿಗೆ ಹಾಕಿದ್ದನು. ಇದನ್ನು ತಿಳಿದ ಗಾಂಧಿ ಜಿಗುಪ್ಸೆಗೊಂಡರು. ಅವರು ಇದನ್ನು ಕುತಂತ್ರ ಎಂದು ಬಣ್ಣಿಸಿದರು. ಈ ಮೂಲಕ ಎಲ್ಗಿನ್ ಭಾರತದ ಪರಂಪರೆಯಲ್ಲಿ ಇಲ್ಲದ 'ಕ್ರಾಂತಿಕಾರಕತೆ'ಯನ್ನು ಭಾರತದ ಜನರಲ್ಲಿ ಹುಟ್ಟು ಹಾಕಿ ತನ್ನ ಸಾಮ್ರಾಜ್ಯಕ್ಕೆ ದೊಡ್ಡ ಅಪಾಯವನ್ನೇ ಆಹ್ವಾನಿಸಿಕೊಂಡಿದ್ದಾನೆ ಎಂದು ಅಭಿಪ್ರಾಯಪಟ್ಟರು. ಅವರು ಈ ಬಗ್ಗೆ ಭಾರತೀಯ ಸಮುದಾಯವನ್ನು ಉದ್ದೇಶಿಸಿ ಮಾತನಾಡುತ್ತಾ ಎಂತಹ ಸೊಟ್ಟ ನೀತಿಯನ್ನೂ ನಮ್ಮ ನೆಟ್ಟಗಿನ ವರ್ತನೆಯಿಂದ ನೆಟ್ಟಗೆ ಮಾಡಲು ಸಾಧ್ಯವೆಂದು ಭಾರತೀಯ ಸಮುದಾಯಕ್ಕೆ ಧೈರ್ಯತುಂಬಿ, ಸತ್ಯಾಗ್ರಹಕ್ಕೆ ಸಿದ್ಧವಾಗಲು ಕರೆ ನೀಡಿದರು. ಅವರು ಇದಕ್ಕಾಗಿ 'ಸಾತ್ವಿಕ ಪ್ರತಿರೋಧ' ಅಥವಾ 'ಸವಿನಯ ಕಾನೂನುಭಂಗ ದಳ'ವೊಂದನ್ನು ರೂಪಿಸಿ ಕರಾಳ ಏಷಿಯಾಟಿಕ್ ಕಾನೂನು ಜಾರಿಗೆ ಬರದಂತೆ ಪ್ರತಿರೋಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ತಮ್ಮ ಈ ಹೋರಾಟಕ್ಕೆ ಅವರು ಆಗ ಅಸ್ತಿತ್ವದಲ್ಲಿದ್ದ ಭಾರತೀಯರ ಯಾವ ಸಂಘಟನೆಯನ್ನೂ ಬಳಸ ಬಯಸಲಿಲ್ಲ. ಏಕೆಂದರೆ, ಸರ್ಕಾರ ಅವನ್ನು ನಿಷೇಧಿಸಿ ಅವುಗಳ ದಿನನಿತ್ಯದ ವ್ಯವಹಾರಗಳಿಗೆ ಭಂಗ ತರಬಹುದೆಂಬ ಆತಂಕ ಅವರದ್ದಾಗಿತ್ತು.

೧೯೦೭ರ ಜನವರಿ ಒಂದರಿಂದ ಆರೆಂಜ್ ಫ್ರೀ ಕಾಲೋನಿ ಜೊತೆಗೆ ಟ್ರಾನ್ಸ್‌ವಾಲ್‌ಗೂ ಸ್ವಯಮಾಡಳಿತದ ಸ್ಥಾನಮಾನ ದೊರೆಯಿತು. ಅಲ್ಲಿ ನಡೆದ ಚುನಾವಣೆಗಳಲ್ಲಿ ಬೋಯರರ ನಾಯಕರಾಗಿದ್ದ ಲೂಯಿ ಬೋತಾ ಅವರ ಪಕ್ಷ 'ಹೆತ್ ವೊಕ್' (ಜನತೆಯ ಪಕ್ಷ) ಗೆದ್ದು ಆತ ಪ್ರಧಾನಮಂತ್ರಿಯಾಗಿದ್ದರೆ, ಜ. ಸ್ಮಟ್ಸ್ ವಸಾಹತು

ವ್ಯವಹಾರಗಳ ಮತ್ತು ಶಿಕ್ಷಣ ಮಂತ್ರಿಯಾಗಿದ್ದ. ಈ ದಿನಕ್ಕೇ ಕಾಯುತ್ತಿದ್ದಂತೆ ಟ್ರಾನ್ಸ್‌ವಾಲ್‌ನ ಶಾಸನ ಸಭೆ ಮಾರ್ಚ್ ೨೧ರಂದು ಒಂದೇ ದಿನದಲ್ಲಿ ೧೯೦೬ರ ಏಷಿಯಾಟಿಕ್ ಕಾಯಿದೆಯನ್ನು ತದ್ವತ್ ರೂಪದಲ್ಲಿ ಶಾಸನವಾಗಿ ಅಂಗೀಕರಿಸಿ, ಅದು ಜುಲೈ ೩೧ರಿಂದ ಕಾನೂನಾಗಿ ಜಾರಿಗೆ ಬರಲಿದೆ ಎಂದು ಪ್ರಕಟಿಸಿತು. ಈ ಕಾನೂನಿಗೆ ಗಾಂಧಿ ನೇತೃತ್ವದ ಭಾರತೀಯ ಸಮುದಾಯದ ಪ್ರಬಲ ವಿರೋಧವಿದೆ ಎಂದು ಅರಿತಿದ್ದ ಸರ್ಕಾರ ಇದರ ಜಾರಿಯನ್ನು ಒಂದು ಜಿಲ್ಲೆಯ ನಂತರ ಮತ್ತೊಂದು ಜಿಲ್ಲೆಯಂತೆ ಕ್ರಮೇಣ ಜಾರಿಗೆ ತರುವ ಯೋಜನೆ ಹಾಕಿಕೊಂಡಿತು. ಅದು ಮೊದಲು, ಭಾರತೀಯರ ಸಂಘಟನೆ ಬಹಳ ಸಡಿಲವಾಗಿದ್ದ ಪ್ರಿಟೋರಿಯಾ ಜಿಲ್ಲೆಯನ್ನು ಆಯ್ದುಕೊಂಡು ಅಲ್ಲಿ ಜುಲೈ ೧ರಂದು ಹೆಸರು ನೋಂದಣಿ ಕಛೇರಿಗಳನ್ನು ತೆರೆಯಿತು. ಅಂದೇ ಇಡೀ ಪ್ರಿಟೋರಿಯಾ ಪಟ್ಟಣದ ಮೂಲೆ ಮೂಲೆಗಳೂ ನೋಂದಣಿಯ ವಿರುದ್ಧ ಪ್ರಜೆತನದ ಘನತೆ-ಸ್ವಾಭಿಮಾನಗಳ ಪರವಾದ ಮತ್ತು ಗುಲಾಮಗಿರಿಯ ವಿರುದ್ಧವಾದ ವೈವಿಧ್ಯಮಯ ಭಿತ್ತಿಪತ್ರಗಳು ತುಂಬಿಹೋದವು. ಸವಿನಯ ಕಾನೂನು ಭಂಗ ದಳದ ಕಾರ್ಯಕರ್ತರು ಭಾರತೀಯರ ಮನೆ ಮನೆಗೂ ಹೋಗಿ ನೋಂದಣಿಗೆ ಮುಂದಾಗದಂತೆ ಜನರ ಮನ ಒಲಿಸುವ ಪ್ರಯತ್ನ ಮಾಡಿದರು. ಇದರಿಂದಾಗಿ ೧೩೦೦ ಜನ ಭಾರತೀಯ ನಿವಾಸಿಗಳಿದ್ದ ಆ ಪಟ್ಟಣದಲ್ಲಿ ನೊಂದಣಿಗೆ ಕೊನೆಯ ದಿನವಾದ ಜುಲೈ ೩೧ರವರೆಗೆ ನೋಂದಣಿ ಮಾಡಿಸಿಕೊಂಡವರ ಸಂಖ್ಯೆ ನೂರನ್ನೂ ದಾಟಿರಲಿಲ್ಲ.

ಪ್ರಧಾನಿ ಬೋತಾ ಎಚ್ಚರಿಕೆ

ಅಂದೇ ಪ್ರಿಟೋರಿಯಾದಲ್ಲಿ ಗಾಂಧಿ ಭಾರತೀಯರ ಒಂದು ಸಭೆ ಕರೆದರು. ಮಸೀದಿಯೊಂದರ ವಿಶಾಲ ಮೈದಾನದಲ್ಲಿ ನಡೆದ ಈ ಸಭೆಗೆ ಭಾರತೀಯರಲ್ಲದೆ ಬಹುಸಂಖ್ಯೆಯ ಚೀನೀಯರೂ, ವಿವಿಧ ಜನಾಂಗಗಳ ಏಷಿಯನ್ನರೂ ಸೇರಿದಂತೆ ಎರಡು ಸಾವಿರ ಜನ ಸೇರಿದ್ದರು. ಭಾರತೀಯರಿಗೆ ಶಾಸನದ ವಿರುದ್ಧ ಹೋರಾಡುವ ಹುಮ್ಮಸ್ಸಿದ್ದರೂ, ಹಲವರಲ್ಲಿ ಅಭದ್ರತೆಯ ಚಿಂತೆಯೂ ಕಾಣಿಸಿಕೊಂಡಿತ್ತು. ಆದರೆ ನೋಂದಣಿಯಾದವರ ಸಂಖ್ಯೆಯನ್ನು ಗಮನಿಸಿದ್ದ ಸರ್ಕಾರಕ್ಕೂ ಚಿಂತೆಯೇನೂ ಕಡಿಮೆ ಇರಲಿಲ್ಲ. ಹಾಗಾಗಿಯೇ ಪ್ರಧಾನಿ ಜನರಲ್ ಬೋತಾ ವಿಲಿಯಂ ಹೊಸ್ಕೆನ್ ಎಂಬ ತನ್ನ ರಾಜಕೀಯ ಮಿತ್ರರೊಬ್ಬರ ಮೂಲಕ ಸಭೆಗೆ ಒಂದು ಸಂದೇಶ ಕಳಿಸಿದ್ದ. ಯೂರೋಪಿಯನ್ನರು ಈ ಶಾಸನವನ್ನು ಜಾರಿಗೆ ತಂದೇ ತೀರಬೇಕೆಂದು ತೀವ್ರವಾಗಿ ಬಯಸಿರುವುದರಿಂದ ಭಾರತೀಯರ ಬಗ್ಗೆ ಸಹಾನುಭೂತಿ ಹೊಂದಿರುವ ತಾನು ಅಸಹಾಯಕನಾಗಿರುವುದಾಗಿಯೂ, ತನ್ನೊಡನೆ ಸಹಕರಿಸುವುದರಲ್ಲೇ ಭಾರತೀಯರ ಭವಿಷ್ಯದ ಹಿತ ಅಡಗಿದೆಯೆಂದು ಆತ ಆ ಸಂದೇಶದಲ್ಲಿ ತಿಳಿಸಿದ್ದ. ಅಲ್ಲದೆ, ಕಾನೂನು ಪಾಲಿಸಲು ನಿರಾಕರಿಸುವವರು ದೇಶಭ್ರಷ್ಟತೆ ಸೇರಿದಂತೆ ಹಲವು ಕಷ್ಟ-ಕಾರ್ಪಣ್ಯಗಳಿಗೆ ಸಿಕ್ಕಿಹಾಕಿಕೊಳ್ಳುವುದು ಖಂಡಿತವೆಂದೂ ಎಚ್ಚರಿಸಿ ಭಾರತೀಯರ ಸಹಕಾರ ಕೋರಿದ್ದ. ಭಾರತೀಯರ ಪರ ಸಹಾನುಭೂತಿ ಹೊಂದಿದ್ದ ಉದ್ಯಮಿ ಮತ್ತು ಶಾಸಕನೂ ಆಗಿದ್ದ ಸಂದೇಶಕಾರ ಹೊಸ್ಕೆನ್ ಕೂಡ ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಾ, ಈಗ ಈ ಶಾಸನದ ವಿರುದ್ಧ ಹೋರಾಡುವುದು ಗೋಡೆಗೆ ತಲೆ ಚಚ್ಚಿಕೊಂಡಷ್ಟೇ ವ್ಯರ್ಥ ಎಂದು ತನ್ನ ಅಭಿಪ್ರಾಯವನ್ನು ಹೇಳಿದ.

ಮಹಮ್ಮದ್ ಕಛಾಲಿಯಾರ ದಿಟ್ಟ ಘೋಷಣೆ

ಆದರೆ ಗಾಂಧಿ ಇದು ಮೇಲ್ನೋಟಕ್ಕೆ ಕಾಣಿಸುವಷ್ಟು ಸರಳ ಉದ್ದೇಶದ ಶಾಸನವಲ್ಲವೆಂದೂ, ಇದು ಮುಂದೆ ಭಾರತೀಯರನ್ನು ಅವರಿರುವೆಡೆಯಲ್ಲೇ ನಿರ್ಬಂಧಿಸಿ, ನಂತರ ಪ್ರತ್ಯೇಕಿಸಿ ಅಂತಿಮವಾಗಿ ಅವರನ್ನು ಗಡಿಪಾರು ಮಾಡುವ ಆತ್ಯಂತಿಕ ಗುರಿ ಹೊಂದಿದೆ ಎಂದೂ ಸಭೆಯನ್ನು ಎಚ್ಚರಿಸಿದರು. ಈ ಶಾಸನಕ್ಕೆ ಕಾರಣರಾದ ಯಾರ ಹೃದಯದಲ್ಲೂ ಕ್ರಿಸ್ತನ ಸುಳಿವೇ ಕಾಣದಾಗಿದೆ ಎಂದು ಮರುಗಿದರು. ಜನಸಾಮಾನ್ಯರು ಗೌರವದಿಂದ ಬಾಳಲು ಅಡ್ಡಿಯೊಡ್ಡುವ ಇಂತಹ ಅನಾಗರಿಕ ಶಾಸನವನ್ನು ಜಾರಿಗೆ ತರುವ ಸರ್ಕಾರವನ್ನು ನಾಗರಿಕ ಸರ್ಕಾರವೆಂದಾದರೂ ಹೇಗೆ ಕರೆಯುವುದೆಂದು ಪ್ರಶ್ನಿಸಿದರು. ಇದರಿಂದ ಸ್ಫೂರ್ತಿಗೊಂಡ ಗಾಂಧಿಯ ಕಕ್ಷಿದಾರರಲ್ಲೊಬ್ಬರೂ ಮತ್ತು ಭಾರತೀಯ ಸಮುದಾಯದಲ್ಲಿ ಧೈರ್ಯವಂತಿಕೆ ಮತ್ತು ನ್ಯಾಯನಿಷ್ಠುರತೆಗೆ ಹೆಸರಾದವರೂ ಆಗಿದ್ದ ಅಹಮದ್ ಮಹಮದ್ ಕಛಾಲಿಯಾ ಎಂಬ ವರ್ತಕರು ವೀರಾವೇಶದಿಂದ ಬೋತಾನ ಸಂದೇಶವನ್ನು ಖಂಡಿಸಿ, ತಮ್ಮನ್ನು ಸೆರೆಮನೆಗೆ ದೂಡಿ ಹಿಂಸಿಸಿದರೂ ಸರಿಯೇ, ತಮ್ಮ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ಗಡಿಪಾರು ಮಾಡಿದರೂ ಸರಿಯೇ, ಕೊನೆಗೆ ಗಲ್ಲಿಗೇರಿಸಿದರೂ ಸರಿಯೇ, ಈ ಶಾಸನಕ್ಕೆ ತಾವು ತಲೆಬಾಗುವ ಪ್ರಶ್ನೆಯೇ ಇಲ್ಲವೆಂದು ಘಂಟಾಘೋಷವಾಗಿ ಹೇಳಿದರು. ಜನರ ಮಧ್ಯೆ ತಮ್ಮ ನೇರ ನಡೆನುಡಿಗೆ ಮತ್ತು ಪರೋಪಕಾರಕ್ಕೂ ಹೆಸರಾಗಿದ್ದ ಕಛಾಲಿಯಾ ಅವರ ಮುಗ್ಧ ಘೋಷಣೆ ಸಭೆಯ ಮೇಲೆ ಗಾಢ ಪರಿಣಾಮವನ್ನುಂಟು ಮಾಡಿ ಸಮುದಾಯದ ದೃಢನಿಶ್ಚಯವನ್ನು ಮತ್ತಷ್ಟು ಗಟ್ಟಿಗೊಳಿಸಿತು. ಗಾಂಧಿಯ ಪ್ರಕಾರ ಈ ಸಭೆಯಲ್ಲಿ ಭಾರತೀಯ ಪರಂಪರೆಯಲ್ಲಿ ಕಾಣದ ಒಂದು 'ಕ್ರಾಂತಿಕಾರಕ' ಮನೋಭಾವ ಎದ್ದುಕಂಡಿತು. ಕಛಾಲಿಯಾ ಮುಂದೆ ತಮ್ಮ ಮಗ ಅಲಿಯನ್ನಲ್ಲದೆ ಇತರ ಕೆಲವು ಮುಸ್ಲಿಂ ಮಕ್ಕಳನ್ನೂ ಸರಳ ಜೀವನ, ಜನಸೇವೆ ಮತ್ತು ವಿದ್ಯಾಭ್ಯಾಸದ ಪ್ರಾಥಮಿಕ ಪಾಠಗಳನ್ನು ಕಲಿಯಲೆಂದು ಗಾಂಧಿಯವರು ಸ್ಥಾಪಿಸಿದ ಟಾಲ್‌ಸ್ಟಾಯ್ ಆಶ್ರಮಕ್ಕೆ ಕಳಿಸಿದರೆಂಬುದನ್ನೂ ಇಲ್ಲಿ ದಾಖಲಿಸಬಹುದು. ಆದರೆ ಇದಕ್ಕೆ ವ್ಯತಿರಿಕ್ತವಾಗಿ, ಗಾಂಧಿಯೊಂದಿಗೆ ಲಂಡನ್‌ಗೆ ನಿಯೋಗದ ಸದಸ್ಯರಾಗಿ ಹೋಗಿದ್ದ ಎಚ್. ಓ. ಅಲಿ ದ.ಆಫ್ರಿಕಾದ ಬ್ರಿಟಿಷ್ ಭಾರತೀಯ ಸಮಿತಿಯ ಸದಸ್ಯರಲ್ಲೊಬ್ಬರಾಗಿದ್ದ ನ್ಯಾ. ಅಮೀರ್ ಅಲಿ ಅವರಿಗೆ ಪತ್ರವೊಂದನ್ನು ಬರೆದು ರಹದಾರಿ ಪತ್ರ ವಿರೋಧಿ ಪ್ರತಿಭಟನೆ ಹಿಂದೂ ಬೀದಿ ವ್ಯಾಪಾರಿಗಳಿಂದ ಮಾತ್ರ ನಡೆಯುತ್ತಿದ್ದು ಇದಕ್ಕೆ ಮುಸ್ಲಿಂ ವರ್ತಕರ ಸಹಾನುಭೂತಿ ಇಲ್ಲ ಎಂದು ಬರೆದಿದ್ದರು. ಇದನ್ನು ತಿಳಿದು ಘಾಸಿಗೊಂಡ ಗಾಂಧಿ, 'ಇದು ನಾಚಿಕೆಗೇಡು' ಎಂದಷ್ಟೇ ಪ್ರತಿಕ್ರಿಯಿಸಿದರು.

ಕೊನೆಯ ಪ್ರಯತ್ನವಾಗಿ ಗಾಂಧಿ ಟ್ರಾನ್ಸ್‌ವಾಲ್ ಪ್ರಾಂತ್ಯದ ಗವರ್ನರ್‌ರನ್ನು ಭೇಟಿ ಮಾಡಿ ಸಮಸ್ಯೆಯನ್ನು ಸೌಹಾರ್ದಯುತವಾಗಿ ಪರಿಹರಿಸುವಂತೆ ಮನವಿ ಮಾಡಿದರು. ಗವರ್ನರ್ ಜ.ಸ್ಮುಟ್ಸ್‌ಗೆ ಸಮಸ್ಯೆಯನ್ನು ಸಹಾನುಭೂತಿಯಿಂದ ಪರಿಶೀಲಿಸಿ ಭಾರತೀಯರೊಡನೆ ಒಂದು ಸಂಧಾನದ ಪ್ರಯತ್ನ ಮಾಡುವಂತೆ ಸೂಚಿಸಿದರು. ಆದರೆ ಸ್ಮಟ್ಸ್ ಭಾರತೀಯರಿಗೆ ಇನ್ನು ಯಾವುದೇ ರಿಯಾಯಿತಿ ನೀಡಿದರೂ ಸರ್ಕಾರ ಬಿಳಿ

ಜನರ ಆಕ್ರೋಶಕ್ಕೆ ತುತ್ತಾಗಿ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತದೆ ಎಂದು ಉತ್ತರ ನೀಡಿದ.

ಟ್ರಾನ್ಸ್‌ವಾಲ್ ಸರ್ಕಾರ ಈಗ ಪ್ರಾಂತ್ಯದ ಬೇರೆಡೆಗಳಲ್ಲೂ ನೋಂದಣಿ ಕಛೇರಿಗಳನ್ನು ತೆರೆದು ನೋಂದಣಿಗೆ ಕೊನೆಯ ದಿನಾಂಕವನ್ನು ತಿಂಗಳಿಗೊಮ್ಮೆಯಂತೆ ಎರಡು ಬಾರಿ ವಿಸ್ತರಿಸಿತು. ಬಿಳಿಯರ ಸಮಾಜದ ವ್ಯಾಪಾರಿಗಳು ಭಾರತೀಯರು ಮತ್ತು ಚೀನೀಯರೊಂದಿಗೆ ವ್ಯಾಪಾರ ಸಂಬಂಧಗಳನ್ನು ಕಡಿದುಕೊಳ್ಳುವ ಬೆದರಿಕೆ ಒಡ್ಡಿದರು. ಆದರೆ ಈ ಎರಡೂ ಜನಾಂಗಗಳು ತಿರುಗಿಬಿದ್ದು, ಬಿಳಿಯರ ಅಂಗಡಿಗಳನ್ನು ನಿಷೇಧಿಸಲು ತೀರ್ಮಾನಿಸಿದಾಗ ಅವರು ತೆಪ್ಪಗಾದರು. ಗಾಂಧಿ ಪರವಾದ ಸ್ವಯಂಸೇವಕರು ರಹದಾರಿ ಪತ್ರ ನೀಡುವ ಕಛೇರಿಗಳ ಮೇಲೆ ನಿಗಾ ಇಟ್ಟರು. 'ಇಂಡಿಯನ್ ಒಪಿನಿಯನ್' ಪತ್ರಿಕೆಯ ಮೂಲಕ ಈ ಶಾಸನದ ದುಷ್ಪರಿಣಾಮಗಳ ಬಗ್ಗೆ ಮಾಹಿತಿಯನ್ನು ನೀಡಲಾಯಿತು. ಅದಕ್ಕೆ ಪ್ರತಿರೋಧ ಎಷ್ಟು ಅಗತ್ಯವಾದುದೆಂದೂ, ಅಷ್ಟೇ ಅಗತ್ಯವಾಗಿ ಆ ಪ್ರತಿರೋಧ ಎಷ್ಟು ಸಾತ್ವಿಕವಾಗಿರಬೇಕಾದುದೆಂಬುದನ್ನೂ ಗಾಂಧಿ ತಮ್ಮ ಬರಹಗಳ ಮೂಲಕ ವಿವರಿಸುತ್ತಿದ್ದರು. ಈ ಸಂದರ್ಭದಲ್ಲೇ ಗಾಂಧಿಗೆ ತಮ್ಮ 'ಸಾತ್ವಿಕ ಪ್ರತಿರೋಧ' ಚಳುವಳಿಗೆ ಮಗನ್‌ಲಾಲ್‌ನ ಸೂಚನೆ ನೆಪವಾಗಿ 'ಸತ್ಯಾಗ್ರಹ' ಎಂಬ ಅಪ್ಪಟ ಭಾರತೀಯ ಹೆಸರು ಹೊಳೆದು ಅದು ಅವರ ಹೆಸರಿನೊಂದಿಗೇ ಜಗತ್ಪ್ರಸಿದ್ಧವಾಗತೊಡಗಿದ್ದು. ಅದೇನೇ ಇದ್ದರೂ, ಕೆಲವು ಭಯಭೀತ ಭಾರತೀಯರು ಹೊಸ ರಹದಾರಿ ಪತ್ರಗಳನ್ನು ಪಡೆದರು. ಆದರೆ ಬಹಳ ಜನ ಪಡೆಯದೆ ಹೋರಾಟಕ್ಕೆ ಸಿದ್ಧವಾದರು. ಸರ್ಕಾರ ಎರಡು ಬಾರಿ ನೋಂದಣಿಯ ಗಡುವನ್ನು ಎರಡು ತಿಂಗಳುಗಳವರೆಗೆ ವಿಸ್ತರಿಸಿತು. ನೋಂದಾಯಿತರಲ್ಲದ ಭಾರತೀಯರಿಗೆ ವ್ಯಾಪಾರದ ಅನುಮತಿ ಪತ್ರ ನೀಡುವುದಿಲ್ಲವೆಂದೂ, ಭಾರತೀಯರ ಮುಂದಿನ ಕಷ್ಟ ಕಾರ್ಪಣ್ಯಗಳಿಗೆ ಸ್ವತಃ ಅವರೇ, ಅವರ ನಾಯಕರೇ ಹೊಣೆಯೆಂದೂ ಅಂತಿಮ ಎಚ್ಚರಿಕೆ ನೀಡಿತು. ಇಷ್ಟಾದರೂ ಯಾರೂ ಜಗ್ಗಲಿಲ್ಲ. ಟ್ರಾನ್ಸ್‌ವಾಲ್‌ನ ಹದಿಮೂರು ಸಾವಿರ ಭಾರತೀಯರಲ್ಲಿ ಅಂತಿಮವಾಗಿ ನೋಂದಣಿ ಮಾಡಿಸಿಕೊಂಡವರು ೫೧೧ ಜನ ಮಾತ್ರ.

ಗಾಂಧಿ ವಿರುದ್ಧ ಗಡಿಪಾರು ಆಜ್ಞೆ

ಇದರಿಂದ ಅಧೀರವಾದ ಸರ್ಕಾರದ ಕಣ್ಣು ಕೊನೆಗೆ ಗಾಂಧಿ ಮತ್ತು ಅವರ ಆಪ್ತ ವಲಯದ ಮೇಲೆ ಬಿತ್ತು. ಗಾಂಧಿ ಮತ್ತು ಅವರ ಕೆಲವು ಸಹಚರರ ಕುಮ್ಮಕ್ಕಿನಿಂದಷ್ಟೇ ಭಾರತೀಯರು ಅವಿಧೇಯತೆ ತೋರುತ್ತಿದ್ದಾರೆಂದೂ, ಅವರನ್ನು ಸ್ವಲ್ಪ ಕಾಲ ಬಂಧಿಸಿಟ್ಟರೆ ಜನ ದಾರಿಗೆ ಬರುವರೆಂದೂ ಅದು ಯೋಚಿಸಿತು. ಡಿಸೆಂಬರ್ ೨೭ರಂದು ಸರ್ಕಾರ ಗಾಂಧಿ ಮತ್ತು ಅವರ ೨೪ ಜನ ಸಹಚರರ ಬಂಧನಕ್ಕೆ ಆಜ್ಞೆ ಮಾಡಿತು. ಅವರೆಲ್ಲರಿಗೂ ರಹದಾರಿ ನೋಂದಣಿ ಪತ್ರವಿಲ್ಲದಿದ್ದ ಕಾರಣ, ಅವರೆಲ್ಲರ ಮೇಲೂ ಮೊಕದ್ದಮೆ ಹೂಡಿ ೨೮ರಂದು ನ್ಯಾಯಾಲಯಕ್ಕೆ ಕರೆಯಲಾಯಿತು. ಗಾಂಧಿ ೧೯೦೭ರ ಡಿಸೆಂಬರ್ ೨೮ರಂದು ಜೊಹಾನ್ಸ್‌ಬರ್ಗ್‌ನ ನ್ಯಾಯಾಲಯದ ಮುಂದೆ ಹಾಜರಾದರು. ಅದು ಸ್ವತಃ ಗಾಂಧಿಯವರು ವಕೀಲರಾಗಿ ವಾದ ಮಂಡಿಸುತ್ತಿದ್ದ ನ್ಯಾಯಾಲಯವೇ ಆಗಿತ್ತು. ಗಾಂಧಿ ಕಟಕಟೆಯಲ್ಲಿ ನಿಂತಾಗ ನ್ಯಾಯಾಲಯದ ಕೊಠಡಿಯಲ್ಲಿ ತುಂಬಿದ್ದ ತಮ್ಮ ಹಳೆಯ ವಕೀಲ ಮಿತ್ರರನ್ನೂ, ಸಹೋದ್ಯೋಗಿಗಳನ್ನೂ, ಪರಿಚಿತ ಮುಖಗಳನ್ನೂ

ಕಂಡು ಅವರಿಗೆ ಕೊಂಚ ಮುಜುಗರವೂ ಆಯಿತು. ನ್ಯಾಯಾಧೀಶ ಜೋರ್ಡಾನ್, ಪ್ರಕರಣ ಸ್ಪಷ್ಟವಾಗಿದೆ ಎಂದು ಹೇಳಿ ಗಾಂಧಿಯವರಿಗೆ ಯಾವ ಮಾತೂ ಆಡಲು ಅವಕಾಶ ನೀಡದೆ ಟ್ರಾನ್ಸ್‌ವಾಲ್ ಪ್ರಾಂತ್ಯವನ್ನು ೪೮ ತಾಸುಗಳಲ್ಲಿ ಬಿಟ್ಟು ಹೊರಡಲು ಆಜ್ಞಾಪಿಸಿದನು.

ನ್ಯಾಯಾಲಯದಿಂದ ಹೊರಬಂದ ಗಾಂಧಿ ತಮಗೆ ಬೆಂಬಲವಾಗಿ ಎದುರಿನ ಚೌಕದಲ್ಲಿ ಸೇರಿದ್ದ ಭಾರತೀಯರು, ಚೀನೀಯರ ಜೊತೆಗೆ ಕರಾಳ ಶಾಸನದ ವಿರುದ್ಧವಿದ್ದ ಹಲವು ಐರೋಪ್ಯರಿದ್ದ ಸಭೆಯನ್ನು ಉದ್ದೇಶಿಸಿ ಮಾತನಾಡಿ ನ್ಯಾಯಾಲಯದ ಆಜ್ಞೆಯನ್ನು ಪಾಲಿಸುವ ಪ್ರಶ್ನೆಯೇ ಇಲ್ಲವೆಂದೂ ಅನ್ಯಾಯದ ಶಾಸನ ರದ್ದಾಗುವವರೆಗೂ ಹೋರಾಟ ಮುಂದುವರೆಯುವುದೆಂದೂ ಘೋಷಿಸಿದರು. ತಾವು ಕೈಗೊಂಡಿರುವುದು ಧಾರ್ಮಿಕ ಕೆಲಸವೆಂದೂ, ತಪ್ಪು ಮಾಡುತ್ತಿರುವುದಾಗಿ ತಮ್ಮ ಆತ್ಮಸಾಕ್ಷಿಯ ರೂಪದ ದೇವರಿಂದ ತಮಗೆ ಸಂದೇಶ ಬಂದೊಡನೆ ತಾವು ಅದನ್ನು ಜನರೊಂದಿಗೆ ಹಂಚಿಕೊಳ್ಳುವುದಾಗಿಯೂ, ಆದರೆ ಅಂತಹ ಸಂದೇಶ ತಮಗೆ ಬರುವುದಿಲ್ಲವೆಂಬುದು ತಮಗೆ ಖಚಿತವಾಗಿದೆಯೆಂದೂ ಅವರು ಹೇಳಿದರು. ಸತ್ಯಾಗ್ರಹವೆನ್ನುವುದು ಗಾಂಧಿ ಮತ್ತು ಅವರ ಕೆಲವೇ ಕೆಲ ತಂಟೆಕೋರ ಸಹಚರರ ಸಂಚಾಗಿದೆ ಎಂಬ ಜ.ಸ್ಮಟ್ಸ್‌ನ ಪ್ರಚಾರ ಹುಸಿಯಾಗುವಂತೆ ಹೆಚ್ಚೆಚ್ಚು ಜನ ಭಾರತೀಯರು ಸತ್ಯಾಗ್ರಹದಲ್ಲಿ ಭಾಗವಹಿಸಿ ಹೆಚ್ಚಿನ ತ್ಯಾಗಕ್ಕೆ ಸಿದ್ಧರಾಗಬೇಕೆಂದೂ ಅವರು ಕರೆಕೊಟ್ಟರು.

ಗಾಂಧಿಗೆ ಮೊದಲ ಸೆರೆಮನೆ ವಾಸದ ಶಿಕ್ಷೆ

ನ್ಯಾಯಾಲಯದ ಆಜ್ಞೆಯನ್ನು ಪಾಲಿಸಲು ನಿರಾಕರಿಸಿದ ಗಾಂಧಿಯನ್ನು ಮತ್ತೆ ೧೯೦೮ರ ಜನವರಿ ೧೧ರಂದು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಯಿತು. ಅವರು, ತಾವು ಶಾಸನವನ್ನು ಪಾಲಿಸದ ಅಪರಾಧಗೈದಿರುವ ಜನರ ನಾಯಕತ್ವ ವಹಿಸಿರುವುದರಿಂದ ತಮಗೆ ಗರಿಷ್ಠ ಶಿಕ್ಷೆ–ಆರು ತಿಂಗಳ ಸಶ್ರಮ ಸೆರೆಮನೆವಾಸ ಮತ್ತು ೫೦೦ ಪೌಂಡುಗಳ ದಂಡ–ವಿಧಿಸಬೇಕೆಂದು ಕೋರಿದರು. ಆದರೆ ನ್ಯಾಯಾಧೀಶರು ಶ್ರಮವಿಲ್ಲದ ಎರಡು ತಿಂಗಳ ಸಾದಾ ಸೆರೆಮನೆ ವಾಸದ ಶಿಕ್ಷೆ ಪ್ರಕಟಿಸಿ ಎದ್ದುಹೋದರು. ಪೊಲೀಸರು ಗಾಂಧಿಯನ್ನು ತಕ್ಷಣ ಬಂಧಿಸಿ ಸೆರೆಮನೆಗೆ ದೂಡಿದರು.

ತಮ್ಮ ಜೀವನದ ಮೊದಲ ಸೆರೆಮನೆವಾಸದ ಮೊದಲ ಕ್ಷಣಗಳನ್ನು ಗಾಂಧಿ ಎಷ್ಟು ಪ್ರಾಮಾಣಿಕವಾಗಿ ನಿವೇದಿಸಿದ್ದಾರೆಂಬುದನ್ನು ತಿಳಿಯಲು ನೇರವಾಗಿ ಅವರ ಮಾತುಗಳಿಗೇ ಹೋಗಬೇಕು: 'ಕೈದಿಗಳಿಗಾಗಿ ಹಾಕಿದ್ದ ಒಂದು ಬೆಂಚಿನ ಮೇಲೆ ಕೂರುವಂತೆ ಹೇಳಿ ಸಿಪಾಯಿ ಬಾಗಿಲು ಹಾಕಿಕೊಂಡು ಹೋಗಿಬಿಟ್ಟ. ಮನಸ್ಸು ಉದ್ವೇಗಗೊಂಡು ಸ್ವಲ್ಪ ಚಿಂತಿತನಾದೆ. ನನ್ನ ಮನೆ, ನಾನು ವಾದ ಮಾಡುತ್ತಿದ್ದ ನ್ಯಾಯಾಲಯ, ನಾನು ಭಾಗವಹಿಸುತ್ತಿದ್ದ ಸಾರ್ವಜನಿಕ ಸಭೆ ಎಲ್ಲ ಕನಸಿನಂತೆ ಕಣ್ಮರೆಯಾಗಿ ನಾನು ಏಕಾಕಿಯಾದೆ. ಎರಡು ತಿಂಗಳುಗಳಲ್ಲಿ ಏನೇನು ಆಗುವುದೋ? ನಾನು ಶಿಕ್ಷೆ ಪೂರ್ತಿ ಅನುಭವಿಸಬೇಕಾದೀತೆ? ಪ್ರತಿಜ್ಞೆ ಮಾಡಿದಂತೆ ಸೆರೆಮನೆಗೆ ಹೋಗುವವರ ಸಂಖ್ಯೆ ಹೆಚ್ಚಿದರೆ ಪೂರ್ತಿ ಶಿಕ್ಷೆ ಅನುಭವಿಸಬೇಕಾದ ಸಾಧ್ಯತೆಯುಂಟು. ಆದರೆ ಸೆರೆಮನೆ ತುಂಬದಿದ್ದರೆ ಎರಡು ತಿಂಗಳು ಒಂದು ಯುಗವಾಗಬಹುದು! ಈ

ಆಲೋಚನೆಗಳಿಂದ ನನಗೆ ನಾಚಿಕೆಯೂ ಆಯಿತು! ಸೆರೆಮನೆ ನಮಗಾಗಿ ಏರ್ಪಡಿಸಿದ ವಿರಾಮಧಾಮ, ಕರಾಳ ಶಾಸನವನ್ನು ವಿರೋಧಿಸುವುದೇ ಪರಮಸುಖ. ಅದಕ್ಕಾಗಿ ನಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿ ಕೊನೆಗೆ ಪ್ರಾಣಾರ್ಪಣೆ ಮಾಡುವುದೂ ಪರಮಾನಂದ ಎಂದು ಜನರಿಗೆ ಹೇಳಿದವನು ನಾನೇಯೇ? ಈ ಜ್ಞಾನವೆಲ್ಲ ಎಲ್ಲಿ ಹೋಯಿತು? ಈ ಎಲ್ಲ ಪ್ರಶ್ನೆಗಳು ನನ್ನನ್ನು ಕಾಡಿ ಜಾಗೃತಗೊಳಿಸಿದವು...' ('ದ.ಆಫ್ರಿಕಾದಲ್ಲಿ ಸತ್ಯಾಗ್ರಹ').

ಆದರೆ ಈ ಎಲ್ಲ ಪ್ರಶ್ನೆಗಳು ಕರಗಿ ಹೋಗುವಂತೆ ಸಂಜೆ ವೇಳೆಗೆ ಗಾಂಧಿಯವರನ್ನು ಜೊಹಾನ್ಸ್‌ಬರ್ಗ್‌ನ ಮುಖ್ಯ ಸೆರೆಮನೆಗೆ ಸ್ಥಳಾಂತರಿಸಲಾಯಿತು. ಅಲ್ಲಿ, ತಂಬಿ ನಾಯ್ಡು ಮತ್ತು ಚೀನೀಯರ ನಾಯಕ ಕ್ವಿನ್ ಸೇರಿದಂತೆ, ಗಾಂಧಿಯವರ ದಸ್ತಗಿರಿಯನ್ನು ಪ್ರತಿಭಟಿಸಿ ಮೆರವಣಿಗೆ ತೆಗೆದವರನ್ನೂ ಬಂಧಿಸಿ ಇರಿಸಿಲಾಗಿತ್ತು. ಸಂಖ್ಯೆ ಚಿಕ್ಕದಿದ್ದರಿಂದ ಎಲ್ಲರನ್ನೂ ನೀಗ್ರೋ ಬಂದಿಗಳ ಆವರಣದಲ್ಲೇ ಇರಿಸಲಾಗಿತ್ತು. ಆದರೆ ಒಂದೆರಡು ದಿನಗಳಲ್ಲಿ ಸತ್ಯಾಗ್ರಹಿಗಳು ರಹದಾರಿ ಪತ್ರ ತೋರಿಸಲು ನಿರಾಕರಿಸಿ ತಂಡೋಪತಂಡವಾಗಿ ಸೆರೆಮನೆಗೆ ಬರಲಾರಂಭಿಸಿದ್ದರಿಂದ ಸೆರೆಮನೆಯ ಸಿಬ್ಬಂದಿ ಗಲಿಬಿಲಿಗೊಂಡರು. ಹಾಗೇ ನ್ಯಾಯಾಧೀಶರೂ! ಹಾಗಾಗಿ ಮೊದಲ ತಂಡ ಬಿಟ್ಟರೆ ನಂತರ ಬಂಧಿತರಾದ ಗಂಡು–ಹೆಣ್ಣೆನ್ನದೆ ಎಲ್ಲರಿಗೂ ಕಠಿಣ ಶಿಕ್ಷೆ ವಿಧಿಸಲಾರಂಭಿಸಿದರು! ಸೆರೆಮನೆ ತುಂಬಿ ತುಳುಕಲಾರಂಭಿಸಿತು. ಕೊನೆಗೆ ಗುಡಾರಗಳನ್ನು ನಿರ್ಮಿಸಿ ಬಂಧಿತರನ್ನಿರಿಸಬೇಕಾಯಿತು. ನಿರಂತರವಾಗಿ ಬರುತ್ತಿದ್ದ ಸತ್ಯಾಗ್ರಹಿಗಳ ತಂಡದ ಒತ್ತಡ ಸರ್ಕಾರಕ್ಕೆ ಸಹಿಸಲಸದಳವಾಗತೊಡಗಿತು.

ಗಾಂಧಿ ತಮ್ಮ ಸೆರೆಮನೆವಾಸದ ಅವಧಿಯನ್ನು ಓದಲು, ಬರೆಯಲು/ಅನುವಾದಿಸಲು ಬಳಸಿಕೊಂಡರು. ಅವರು ಬೆಳಿಗ್ಗೆ ಗೀತೆಯನ್ನು ಓದಿದರೆ, ಮಧ್ಯಾಹ್ನ ಕುರಾನ್‌ನ ಇಂಗ್ಲಿಷ್ ಅನುವಾದ ಓದುತ್ತಿದ್ದರು. ಅವರು ಸಂಜೆಯ ಹೊತ್ತು ತಮ್ಮ ಚೀನೀ ಕ್ರಿಶ್ಚಿಯನ್ ಸಹಬಂದಿಯೊಬ್ಬರಿಗೆ ಬೈಬಲ್ ಮೂಲಕ ಇಂಗ್ಲಿಷ್ ಕಲಿಸುತ್ತಿದ್ದರು. ಇದರ ಜೊತೆಗೇ ಅವರು ರಸ್ಕಿನ್, ಸಾಕ್ರೆಟಿಸ್, ಟಾಲ್‌ಸ್ಟಾಯ್, ಬೇಕನ್, ಕಾರ್ಲೈಲ್ ಮುಂತಾದವರ ಕೃತಿಗಳನ್ನೂ ಓದಿದರು ಮತ್ತು ಕೆಲವು ಟಿಪ್ಪಣಿ ಹಾಗೂ ಅನುವಾದಗಳನ್ನು ಮಾಡಿಕೊಂಡರು. ಈ ಮಧ್ಯೆ ಸಹಬಂದಿಗಳು ಸೆರೆಮನೆಯ ಆಹಾರದ ಬಗ್ಗೆ ದೂರು ಸಲ್ಲಿಸಿ ಪ್ರತಿಭಟಿಸಿದಾಗ ಸೆರೆಮನೆಯ ಅಧಿಕಾರಿಗಳ ಅಪ್ಪಣೆ ಪಡೆದು ಗಾಂಧಿ ಸ್ವತಃ ತಾವೇ ಅಡುಗೆಮನೆಯ ನಿರ್ವಹಣೆಯನ್ನೂ ಕೈಗೆ ತೆಗೆದುಕೊಂಡರು. ಜೊತೆಗೆ ಬೆಳಿಗ್ಗೆ ಸ್ವಯಂಪ್ರೇರಿತ ಸಾಮೂಹಿಕ ಕವಾಯತು ಮತ್ತು ಸೆರೆಮನೆಯ ತಮ್ಮ ಕೊಠಡಿಗಳ ಮತ್ತು ಅಂಗಳದ ಸ್ವಚ್ಛೀಕರಣದ ಕೆಲಸ. ಈಗ ಅವರಿಗೆ ಎರಡು ತಿಂಗಳ ಸೆರೆಮನೆ ವಾಸ ತುಂಬ ಸಣ್ಣ ಅವಧಿಯೆನಿಸಲಾರಂಭಿಸಿತು!

■

೧೯

ಜ. ಸ್ಮಟ್ಸ್‌ನ (ಕಪಟ) ರಾಜಿ ಸೂತ್ರ

ಗಾಂಧಿ ಬಂಧನ ಕೇವಲ ಸ್ಥಳೀಯ ಸುದ್ದಿಯಾಗಿ ಉಳಿಯದೆ, ಭಾರತದಲ್ಲೂ, ಬ್ರಿಟನ್‌ನಲ್ಲೂ ಚರ್ಚೆಗಳನ್ನು ಎಬ್ಬಿಸಿದ ಸುದ್ದಿಯಾಯಿತು. ನೆಟಾಲ್ ಮತ್ತು ಟ್ರಾನ್ಸ್‌ವಾಲ್‌ನಲ್ಲಿ ಹಲವು ಭಾರತೀಯರು ತಮ್ಮ ಅಂಗಡಿಗಳನ್ನು ಮುಚ್ಚಿ ತಮ್ಮ ಪ್ರತಿಭಟನೆಯನ್ನು ದಾಖಲಿಸಿದರು. ಮುಖ್ಯ ಪಟ್ಟಣಗಳಲ್ಲಿ ಚೀನೀಯರೂ ಸೇರಿದಂತೆ ಏಷಿಯನ್ನರು ಸಭೆ ಸೇರಿ ಗಾಂಧಿ ಬಂಧನವನ್ನು ಖಂಡಿಸಿದರು. ನೆಟಾಲ್‌ನ ಭಾರತೀಯರು ಸತ್ಯಾಗ್ರಹದಲ್ಲಿ ಭಾಗವಹಿಸಿ ಸೆರೆಮನೆ ಸೇರಿದವರ ಕುಟುಂಬಗಳ ನೆರವಿಗಾಗಿ ನಿಧಿ ಸಂಗ್ರಹ ಆರಂಭಿಸಿದರು. ಪೀಟರ್‌ಮಾರಿಟ್ಜ್‌ಬರ್ಗ್‌ನಲ್ಲಿ ನಡೆದ ಸಭೆಯೊಂದರಲ್ಲೇ ಸುಮಾರು ನಾಲ್ಕು ಸಾವಿರ ಪೌಂಡುಗಳಷ್ಟು ಹಣ ಸಂಗ್ರಹವಾಯಿತು. ಪಾರ್ಸಿ ರುಸ್ತುಂಜೀಯವರು ಭಾವುಕವಾಗಿ ಮಾತನಾಡುತ್ತಾ, ದ.ಆಫ್ರಿಕಾದಲ್ಲಿ ಬ್ರಿಟಿಷ್ ಭಾರತೀಯ ಪ್ರಜೆಗಳ ಪರಿಸ್ಥಿತಿ ದಿನೇ ದಿನೇ ಹದಗೆಡುತ್ತಿದ್ದು, ಅವರನ್ನು ಈ ಸ್ಥಿತಿಯಿಂದ ಪಾರು ಮಾಡಲು ತಮ್ಮ ಎಲ್ಲ ಆಸ್ತಿಯನ್ನೂ ಮುಡಿಪಾಗಿಟ್ಟಿರುವುದಾಗಿ ಘೋಷಿಸಿದರು.

ಏಷಿಯನ್ನರ ಹೋರಾಟದ ಬಗ್ಗೆ ಸಹಾನುಭೂತಿಯಿಂದ ಹಲವು ಐರೋಪ್ಯರೂ ಡೋಕ್, ಪೊಲಾಕ್ ಮತ್ತು ಕಲೆನ್‌ಬಾಕ್ ಅವರ ನೇತೃತ್ವದಲ್ಲಿ ಈ ಸಭೆಗಳಲ್ಲಿ ಭಾಗವಹಿಸಿ ಬಿಳಿಯರ ಸರ್ಕಾರದ ಜನಾಂಗೀಯ ಶಾಸನಕ್ಕೆ ಧಿಕ್ಕಾರ ಹೇಳಿದರು. ವಿಶೇಷವೆಂದರೆ, ಗಾಂಧಿ ಈವರೆಗೆ ಸಂಪರ್ಕಿಸದೇ ಇದ್ದ; ಆದರೆ ಗಾಂಧಿ ನಾಯಕತ್ವದ ಹೋರಾಟವನ್ನು ಮೌನವಾಗಿ ಗಮನಿಸುತ್ತಿದ್ದ ಕರಿಯ ಆಫ್ರಿಕನ್ನರ ಸಮೂಹದ ದನಿಯಾಗಿದ್ದ 'ಬಸುಟೋಲ್ಯಾಂಡ್ ಸ್ಟಾರ್' ಎಂಬ ಪತ್ರಿಕೆ ಬಲಪ್ರದರ್ಶನದ ಹೋರಾಟಕ್ಕೆ ಪ್ರತಿಯಾಗಿ ಭಾರತೀಯರು ಆರಂಭಿಸಿರುವ ಸಾತ್ವಿಕ ಹೋರಾಟಕ್ಕೆ ಜಯ ಸಿಗುವುದು ಖಂಡಿತವೆಂದು ಬರೆಯಿತು. 'ಮೆರ್ಕ್ಯುರಿ' ಎಂಬ ಬಿಳಿಯರ ಒಡೆತನದ ಪತ್ರಿಕೆ ಗಾಂಧಿಯನ್ನು 'ಹುತಾತ್ಮ' ಮಾಡಹೊರಟಿರುವ ಸ್ಮಟ್ಸ್‌ನ ದಾರಿ ಅಪಾಯಕಾರಿಯಾಗಿದೆ ಎಂದು ಅಭಿಪ್ರಾಯಪಟ್ಟಿತು.

ಭಾರತದಲ್ಲೂ ಹಲವು ಕಡೆ ಭಾರತೀಯರು ಗಾಂಧಿ ಬಂಧನವನ್ನು ಖಂಡಿಸಿ ಸಭೆ-ಮೆರವಣಿಗೆಗಳನ್ನು ಸಂಘಟಿಸಿದರು. ಇದರಿಂದ ಆತಂಕಗೊಂಡ ವೈಸ್‌ರಾಯ್ ಈ ಬಗ್ಗೆ ಲಂಡನ್‌ನಲ್ಲಿನ ವಸಾಹತುಗಳ ಆಡಳಿತ ಕಛೇರಿಗೆ ಪತ್ರ ಬರೆದ. ಮೊದಲೇ ಸತ್ಯಾಗ್ರಹಿಗಳ ನಿರಂತರ ಪ್ರವಾಹದಿಂದ ದಿಕ್ಕೆಟ್ಟಿದ್ದ ಜ. ಸ್ಮಟ್ಸ್‌ಗೆ ಭಾರತದ ಆಂಗ್ಲಿಕನ್ ಚರ್ಚ್ ಕೂಡ ಆತ ತಪ್ಪು ಮಾಡುತ್ತಿರುವುದಾಗಿ ಎಚ್ಚರಿಸಿತು. ಕೊನೆಯದಾಗಿ, ಮೆರ್ರಿಮನ್ ಎಂಬ ಸ್ಮಟ್ಸ್‌ನ

ಆಕ್ಸ್‌ಫರ್ಡ್ ಗೆಳೆಯ ಸ್ವಾಭಿಮಾನಿ ಸಹೃದಯಿ ಆತ್ಮಗಳನ್ನು ದಮನ ಮಾಡಬಾರದೆಂಬ ಉದಾರವಾದದ ತತ್ವವನ್ನು ಆತನಿಗೆ ನೆನಪಿಸಿದಾಗ ಜ.ಸ್ಮಟ್ಸ್ ಗಾಂಧಿಯ ಜೊತೆ ಒಂದು ರಾಜಿ ಸೂತ್ರದ ಬಗ್ಗೆ ಆಲೋಚಿಸಲಾರಂಭಿಸಿದ.

ಸ್ಮಟ್ಸ್‌ನ ಸಂಧಾನ ಸೂತ್ರ

ಹೀಗಿರುವಾಗ ಒಂದು ದಿನ 'ಟ್ರಾನ್ಸ್‌ವಾಲ್ ಲೀಡರ್' ಎಂಬ ಜೊಹಾನ್ಸ್‌ಬರ್ಗ್‌ನಿಂದ ಪ್ರಕಟವಾಗುತ್ತಿದ್ದ ಭಾರತೀಯ ಸಮುದಾಯದ ಹಕ್ಕುಗಳ ಬಗ್ಗೆ ಸಹಾನುಭೂತಿ ಹೊಂದಿದ್ದ ಪತ್ರಿಕೆಯ ಸಂಪಾದಕ ಆಲ್ಬರ್ಟ್ ಕಾರ್ಟ್‌ರೈಟ್ ಗಾಂಧಿಯನ್ನು ನೋಡಲು ಬಂದರು. ಅವರು ಜ. ಸ್ಮಟ್ಸ್‌ನಿಂದ ಒಂದು ರಾಜಿ ಒಪ್ಪಂದದ ಸೂತ್ರ ತಂದಿದ್ದರು. ಅದು ಸೆರೆಮನೆಯ ಹೊರಗಿದ್ದ ಭಾರತೀಯರೊಂದಿಗೆ ಸರ್ಕಾರ ನಡೆಸಿದ ಸಂಧಾನಗಳ ಫಲವಾಗಿತ್ತು. ಇದಕ್ಕೆ ಗಾಂಧಿ ಒಪ್ಪಿದರೆ ಮಾತ್ರ ತಾವೂ ಒಪ್ಪುವುದಾಗಿ ಭಾರತೀಯ ಸಮುದಾಯ ಹೇಳಿತ್ತು. ಅದರ ಪ್ರಕಾರ ಬಹುತೇಕ ಭಾರತೀಯರು ಯಾವುದೇ ಕಾಯಿದೆಯ ಹಂಗಿಲ್ಲದೆ ಸ್ವಯಂಪ್ರೇರಣೆಯಿಂದಲೇ ತಮ್ಮ ಪ್ರಜೆತನವನ್ನು ನೋಂದಣಿ ಮಾಡಿಸಿಕೊಂಡರೆ, ಸರ್ಕಾರ ತನ್ನ ಕರಾಳ ಕಾಯಿದೆಯನ್ನು ರದ್ದು ಮಾಡುವುದು. ಒಪ್ಪಂದದ ಕರಡಿನಲ್ಲಿದ್ದ ಭಾಷೆ ಅಸ್ಪಷ್ಟವಾಗಿದೆಯೆಂದು ಭಾವಿಸಿದ ಗಾಂಧಿ ಈ ಬಗ್ಗೆ ತಮ್ಮ ಸೆರೆಮನೆಯಲ್ಲಿದ್ದ ಬಂದಿಗಳೊಂದಿಗೆ ಸಮಾಲೋಚಿಸಿದರು. ಅವರೆಲ್ಲರೂ ಕಾಯಿದೆಯ ರದ್ದತಿ ಕುರಿತ ಆಶ್ವಾಸನೆಯನ್ನು ಇನ್ನಷ್ಟು ಖಚಿತಪಡಿಸುವ ರೀತಿಯಲ್ಲಿ ಒಪ್ಪಂದದ ಭಾಷೆಯನ್ನು ಪರಿಷ್ಕರಿಸಿದರೆ ಅದನ್ನು ಒಪ್ಪಬಹುದು ಎಂದರು. ಅದರಂತೆ ಪರಿಷ್ಕರಿಸಲ್ಪಟ್ಟ ಕರಡು ಒಪ್ಪಂದಕ್ಕೆ ಗಾಂಧಿ ಸೇರಿದಂತೆ ನಾಲ್ವರು ಸತ್ಯಾಗ್ರಹಿಗಳು ಸಹಿ ಹಾಕಿ ಕಾರ್ಟ್‌ರೈಟ್‌ರೊಂದಿಗೆ ಅದನ್ನು ಸ್ಮಟ್ಸ್‌ಗೆ ಕಳಿಸಿದರು.

ಇದಾದ ಎರಡು ಮೂರು ದಿನಗಳ ನಂತರ ಅಂದರೆ ೧೯೦೮ರ ಜನವರಿ ೩೦ರಂದು ಸೆರೆಮನೆಗೆ ಭೇಟಿ ನೀಡಿದ ಜೊಹಾನ್ಸ್‌ಬರ್ಗ್‌ನ ವರಿಷ್ಠ ಪೊಲೀಸ್ ಅಧಿಕಾರಿಯು, ಗಾಂಧಿಯನ್ನು ಸ್ಮಟ್ಸ್‌ನ ಕರೆಯ ಮೇರೆಗೆ ಬಂದಿಯ ಸಮವಸ್ತ್ರದಲ್ಲೇ ಪ್ರಿಟೋರಿಯಾಗೆ ಕರೆದೊಯ್ದನು. ಗಾಂಧಿಯನ್ನು ತನ್ನ ಕೋಣೆಗೆ ಪ್ರೀತಿಯಿಂದ ಬರಮಾಡಿಕೊಂಡ ಸ್ಮಟ್ಸ್ ಬಂಧನದ ನಂತರವೂ ಚಳುವಳಿ ಶಾಂತವಾಗಿ ನಡೆದಿರುವ ಬಗ್ಗೆ ಭಾರತೀಯರನ್ನು ಅಭಿನಂದಿಸುತ್ತಾ ಮಾತು ಶುರುಮಾಡಿದ. ತಾನು ಇಂಗ್ಲೆಂಡ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗಿನಿಂದಲೂ ಭಾರತೀಯರ ಬಗ್ಗೆ ಪ್ರೀತಿ-ಗೌರವಗಳಿರುವುದಾಗಿ ಹೇಳುತ್ತಾ, ಅಧಿಕಾರಸ್ಥಾನದ ಜವಾಬ್ದಾರಿಗಳನ್ನು ನಿರ್ವಹಿಸುವವನಾಗಿ ಯೂರೋಪಿಯನ್ನರ ಅಭಿಪ್ರಾಯಕ್ಕೂ ತಾನು ಮನ್ನಣೆ ನೀಡಬೇಕಾಗಿದೆ ಎಂದೂ, ಟ್ರಾನ್ಸ್‌ವಾಲ್ ಪ್ರಾಂತ್ಯದೊಳಕ್ಕೆ ಸಿಕ್ಕಸಿಕ್ಕವರೆಲ್ಲ ನುಗ್ಗಿ ಆ ಪ್ರಾಂತ್ಯ ವಲಸೆಯ ಪ್ರವಾಹದ ದುಷ್ಪರಿಣಾಮಗಳಿಗೆ ಸಿಗದಂತೆ ತಡೆಯಬೇಕಾಗಿದೆಯೆಂದೂ ತನ್ನ ಜವಾಬ್ದಾರಿಗಳನ್ನು ವಿವರಿಸಿದ. ಗಾಂಧಿ ತಿದ್ದಿದ ಒಪ್ಪಂದದ ಭಾಷೆಯ ಬಗ್ಗೆ ತನ್ನದೇನೂ ತಕರಾರಿಲ್ಲವೆಂದೂ, ಬಹುತೇಕ ಭಾರತೀಯರು ಸ್ವಯಂಪ್ರೇರಣೆಯಿಂದ ರಹದಾರಿ ಪತ್ರ ಪಡೆದೊಡನೆ ಕರಾಳ ಶಾಸನವೆಂದು ಕರೆಯಲಾಗುತ್ತಿದ್ದ ಏಷಿಯಾಟಿಕ್ ಕಾಯಿದೆಯನ್ನು ರದ್ದುಗೊಳಿಸುವ ಜವಾಬ್ದಾರಿ

ತನ್ನದೆಂದೂ, ಈ ಬಗ್ಗೆ ಪ್ರಧಾನಿ ಬೋತಾನೊಂದಿಗೆ ಮಾತಾಡಿರುವುದಾಗಿಯೂ ಹೇಳಿದ ಸ್ಮಟ್ಸ್ ತನ್ನ ಆಸನದಿಂದ ಎದ್ದು ಗಾಂಧಿಯವರ ಕೈಕುಲುಕಿದ.

ಸ್ಮಟ್ಸ್‌ನನ್ನೇ ಹಣ ಕೇಳಿದ ಗಾಂಧಿ!

'ಮುಂದೇನು?' ಎಂದು ನೋಡಿದ ಗಾಂಧಿಯವರಿಗೆ, 'ನೀವೀಗ ಬಂಧಮುಕ್ತರು; ನಿಮ್ಮ ಸಹಬಂದಿಗಳನ್ನು ಬೆಳಗಿನ ಜಾವದ ಹೊತ್ತಿಗೆ ಬಂಧಮುಕ್ತ ಮಾಡಲಾಗುವುದು' ಎಂದು ಉತ್ತರ ಕೊಟ್ಟ. ಇದ್ದಕ್ಕಿದಂತೆ, ಅನಿರೀಕ್ಷಿತವಾಗಿ ನಡೆದ ಈ ಬೆಳವಣಿಗೆಯಿಂದ ಚಕಿತರಾದ ಗಾಂಧಿ, 'ಈ ಒಪ್ಪಂದ ಏನು, ಹೇಗೆ ಸಂಭವಿಸಿತು ಮತ್ತು ಈ ಒಪ್ಪಂದವನ್ನು ಜಾರಿಗೆ ತರುವ ಬಗೆಗಳ ಬಗ್ಗೆ ನಾವು ಸಭೆ ನಡೆಸಬೇಕಾಗುತ್ತದೆ' ಎಂದು ಹೇಳಿದಾಗ, ಸ್ಮಟ್ಸ್, ಸದ್ಯ ಈ ವಿವಾದ ಒಂದು ಹಂತಕ್ಕೆ ಬಂದರೆ ಸಾಕು ಎಂಬಂತೆ, 'ಅಂತಹ ಸಭೆಗಳನ್ನು ನೀವು ಎಷ್ಟಾದರೂ ಮಾಡಿಕೊಳ್ಳಿ, ನಮ್ಮ ಅಭ್ಯಂತರವಿಲ್ಲ' ಎಂದು ಮಾತು ಮುಗಿಸುವ ಸೂಚನೆ ನೀಡಿದಾಗ ಗಾಂಧಿ, 'ನಾನೀಗ ಸೆರೆಮನೆಗೆ ವಾಪಸ್ ಹೋಗುವಂತಿಲ್ಲ ಎಂದ ಮೇಲೆ ಜೊಹಾನ್ಸ್‌ಬರ್ಗ್‌ನ ನನ್ನ ಮನೆಗೆ ಹೋಗಬೇಕು. ಅದಕ್ಕೆ ನನ್ನ ಬಳಿ ಹಣವಿಲ್ಲ!' ಎಂದಾಗ ಸ್ಮಟ್ಸ್ ತನ್ನ ಕಾರ್ಯದರ್ಶಿಗೆ ಗಾಂಧಿಯ ರೈಲು ಟಿಕೆಟ್ ಖರ್ಚು ಕೊಡಲು ಸೂಚಿಸಿ ಹೊರಟುಬಿಟ್ಟ. ಗಾಂಧಿ ಆ ರಾತ್ರಿ ಪ್ರಿಟೋರಿಯಾದಿಂದ ಇದ್ದ ಕೊನೆಯ ರೈಲು ಹತ್ತಿ ಮಾರನೆಯ ದಿನ ಬೆಳಿಗ್ಗೆ ಜೊಹಾನ್ಸ್‌ಬರ್ಗ್ ತಲುಪಿದರು.

ಗಾಂಧಿಯ ಮೇಲೆ ವಿಶ್ವಾಸದ್ರೋಹದ ಆರೋಪ

ಜೊಹಾನ್ಸ್‌ಬರ್ಗ್ ತಲುಪಿದ ಕೂಡಲೇ ಗಾಂಧಿ ಸ್ಥಳೀಯ ಭಾರತೀಯರ ನಾಯಕ ಸೇಠ್ ಇಸಾಫ್ ಮಿಂಯಾರೊಂದಿಗೆ ಮಾತಾಡಿ ಅವರ ಮನೆಯ ಪಕ್ಕದಲ್ಲೇ ಇದ್ದ ಮಸೀದಿಯೊಂದರ ಆವರಣದಲ್ಲಿ ಭಾರತೀಯರ ಸಭೆಯೊಂದನ್ನು ಕರೆದರು. ಸಾವಿರಕ್ಕೂ ಮಿಕ್ಕು ಜನ ಸೇರಿದ್ದ ಆ ಸಭೆಯಲ್ಲಿ ಸ್ಮಟ್ಸ್‌ರೊಂದಿಗೆ ಆದ ಒಪ್ಪಂದವನ್ನು ಅವರು ಸಾದ್ಯಂತವಾಗಿ ವಿವರಿಸಿದರು. ಈ ಅನಿರೀಕ್ಷಿತ ಬೆಳವಣಿಗೆಯಿಂದ ಚಕಿತರಾದ ಸಭೆಯಲ್ಲಿನ ಸಾಕಷ್ಟು ಜನರು ಈ ಒಪ್ಪಂದಕ್ಕೆ ವಿರೋಧ ವ್ಯಕ್ತಪಡಿಸಿದರು. ಕರಾಳ ಶಾಸನವನ್ನು ರದ್ದು ಮಾಡಿದ ನಂತರವಷ್ಟೇ ಸ್ವಪ್ರೇರಿತ ನೋಂದಣಿಗೆ ಒಪ್ಪಿಗೆ ನೀಡಬೇಕಿತ್ತು ಎಂದು ಕೆಲವರು ವಾದಿಸಿದರೆ, ಇನ್ನು ಕೆಲವರು ಸರ್ಕಾರ ಶಾಸನ ರದ್ದತಿಯ ಆಶ್ವಾಸನೆಯಿಂದ ಹಿಂದೆಗೆದ ಪಕ್ಷದಲ್ಲಿ ಈ ಒಪ್ಪಂದ ಸರ್ಕಾರದಿಂದ ತಾವು ಕೈ ಕಟ್ಟಿಸಿಕೊಂಡಿದ್ದಕ್ಕೆ ಸಮವಾಗುತ್ತದೆ ಎಂದು ವಾದಿಸಿದರು. ಕೆಲವರಂತೂ–ವಿಶೇಷವಾಗಿ ಖೈಬರ್ ಕಣಿವೆಯ ಮೂಲದ ಪಠಾಣರು–ನೋಂದಣಿ ಎಂಬುದೇ ಅವಮಾನಕರ ಎಂದು ವಾದಿಸಿದ್ದ ಗಾಂಧಿಯಿಂದ ನಡೆದಿರುವ ವಿಶ್ವಾಸದ್ರೋಹ ಇದೆಂದು ಉಗ್ರವಾಗಿ ಟೀಕಿಸಿದರು.

ಇದು ಗಾಂಧಿ ನಿರೀಕ್ಷಿಸಿದ್ದೇ ಆದುದರಿಂದ ಈ ಸಂದರ್ಭವನ್ನು ಅವರು ಮತ್ತೆ ಸತ್ಯಾಗ್ರಹದ ತಾತ್ವಿಕತೆಯನ್ನು ಅಲ್ಲಿ ವಿವರಿಸಲು ಬಳಸಿಕೊಂಡರು. ಮೊದಲಾಗಿ ಇದು, ಎದುರು ಪಕ್ಷದವರನ್ನು ಶತ್ರುವಾಗಿ ಪರಿಗಣಿಸಿ ಮಾಡಿಕೊಂಡ ಚೌಕಾಶಿಯ ಪ್ರಯತ್ನವಲ್ಲ. ಜೊತೆಯಾಗಿಯೇ ಬಾಳಬೇಕಿರುವ ಯೂರೋಪಿಯನ್ನರ ಮತ್ತು

ಏಷಿಯನ್ನರ ಇಬ್ಬರ ಬೇಡಿಕೆಗಳನ್ನೂ ಸಮತೋಲನಗೊಳಿಸಿ ಆಡಳಿತ ನಡೆಸುವ ಸೂಕ್ಷ್ಮ ಹೊಣೆಗಾರಿಕೆಯನ್ನು ಸರ್ಕಾರ ನಿರ್ವಹಿಸಬೇಕಾಗಿದೆ. ಆದುದರಿಂದ ಸರ್ಕಾರ ನಮ್ಮದು ಎಂಬ ಭಾವನೆಯಲ್ಲೇ ವರ್ತಿಸುವ ಬದ್ಧತೆಗೆ ತಾವು ಒಳಗಾಗಿದ್ದು, ನೋಂದಣಿಗೆ ಒತ್ತಾಯ ಅಥವಾ ತಪಾಸಣೆ ಇಲ್ಲದ ವಾತಾವರಣದಲ್ಲಿ ನೋಂದಣಿ ಮಾಡಿಕೊಳ್ಳುವುದು ಅಪಮಾನಕರ ಸಂಗತಿಯಾಗಬಾರದೆಂದು ತಮ್ಮ ಆಲೋಚನಾ ಲಹರಿಯನ್ನು ಬಿಚ್ಚಿಟ್ಟರು. ಈ ಮೂಲಕ ಭಾರತೀಯರು ಹೊರಗಿನ ಯಾವ ಭಾರತೀಯನೂ ಟ್ರಾನ್ಸ್‌ವಾಲ್‌ನೊಳಕ್ಕೆ ಅಕ್ರಮವಾಗಿ ನುಸುಳದಂತಹ ವ್ಯವಸ್ಥೆಯನ್ನು ನಿರ್ಮಿಸಲು ಸರ್ಕಾರದೊಡನೆ ಸಹಕರಿಸಿದ ಋಣವನ್ನು ಅದರ ಮೇಲೆ ಹೊರಿಸಿ ಅದು ಭಾರತೀಯರ ಬಗ್ಗೆ ಉದಾರವಾಗಲು ನೆರವಾಗಬಹುದೆಂದು ಗಾಂಧಿ ವಿವರಿಸಿದರು. ಜೊತೆಗೆ ಕರಾಳ ಶಾಸನ ರದ್ದತಿಯ ನಂತರ ಸ್ವಪ್ರೇರಿತ ನೋಂದಣಿ ಎಂಬುದಕ್ಕೆ ಅರ್ಥವೇ ಇರುವುದಿಲ್ಲವೆಂದೂ, ಸತ್ಯಾಗ್ರಹಿಯು ಮನುಷ್ಯನ ಅಂತಿಮ ವಿವೇಚನಾಶೀಲತೆಯಲ್ಲಿ ನಂಬಿಕೆ ಇಟ್ಟು, ಎದುರು ಪಕ್ಷ ಇಪ್ಪತ್ತು ಬಾರಿ ವಿಶ್ವಾಸ ದ್ರೋಹ ಮಾಡಿದರೂ ಸತ್ಯಕ್ಕಾಗಿ ಆಗ್ರಹದ ಹೋರಾಟಕ್ಕೆ ಬದ್ಧನಾಗಿರುವನೆಂದೂ ಅವರು ವಿಶ್ಲೇಷಿಸಿದರು.

ಪಠಾಣರ ಆಕ್ರೋಶ–ಗಾಂಧಿಯ ಉತ್ತರ

ಆದರೂ ಪಠಾಣರ ಗುಂಪು ಗಾಂಧಿಯನ್ನು, ಅವರು ಹಿಂದೆ ಕೈಬೆರಳುಗಳ ಮುದ್ರೆ ನೀಡುವ ನೋಂದಣಿ ಪ್ರಕ್ರಿಯೆ ಎಷ್ಟು ಅವಮಾನಕರವೆಂದು ಹೇಳಿದ್ದ ಮಾತುಗಳನ್ನು ನೆನಪಿಸಿ, 'ನೀವು ಹದಿನೈದು ಸಾವಿರ ಪೌಂಡ್‌ಗಳಿಗೆ ನಿಮ್ಮನ್ನು ಸ್ಮಟ್ಸ್‌ಗೆ ಮಾರಿಕೊಂಡು ನಮಗೆ ವಿಶ್ವಾಸದ್ರೋಹ ಬಗೆದಿದ್ದೀರಿ!' ಎಂಬ ಆಪಾದನೆಯನ್ನೂ ಸೇರಿಸಿ ಅಬ್ಬರಿಸಿ, ಒಪ್ಪಂದಕ್ಕೆ ತನ್ನ ತೀವ್ರ ವಿರೋಧವನ್ನು ದಾಖಲಿಸಿತು. ಗುಂಪಿನ ನಾಯಕನಂತಿದ್ದ ಮೀರ್ ಆಲಂ ಎಂಬ ಪಠಾಣನಂತೂ, ನೋಂದಣಿಗೆ ಮೊದಲು ಮುಂದಾಗುವ ಮನುಷ್ಯನನ್ನು ತಾನು ಕೊಂದೇ ಹಾಕುವುದಾಗಿ ಅಲ್ಲಾಹುವಿನ ಹೆಸರಲ್ಲಿ ಪ್ರಮಾಣ ಮಾಡಿದ. ಗಾಂಧಿ ಆತನಿಗೆ, ಆತನ ಗುಂಪಿಗೆ, ಸರ್ಕಾರದ ಕಡೆಯಿಂದ ಚಾಚಲ್ಪಟ್ಟ ಸಹಕಾರದ ಹಸ್ತದಿಂದಾಗಿ ಪರಿಸ್ಥಿತಿ ಈಗ ಬದಲಾಗಿದ್ದು ನಾವೂ ಒಂದಿಷ್ಟು ಉದಾರವಾಗಬೇಕು; ಬೆರಳುಗಳ ಮುದ್ರೆ ನೀಡುವುದಿಲ್ಲವೆಂದು ಈ ಹಿಂದೆ ಆಣೆ ಮಾಡಿದ್ದವರಿಗೆ ಅದರಿಂದ ವಿನಾಯಿತಿ ಇದೆಯೆಂದೂ, ಈ ವಿಷಯದಲ್ಲಿ ತಾವು ಸಂಬಂಧಪಟ್ಟವರಿಗೆ ನೆರವಾಗುವುದಾಗಿಯೂ ಆಶ್ವಾಸನೆ ನೀಡಿದರೂ ಗುಂಪಿನ ಆಕ್ರೋಶ ಶಮನವಾಗಲಿಲ್ಲ. ಕೊನೆಗೆ ಗಾಂಧಿ ದೃಢವಾಗಿ ಹೇಳಿದರು: 'ಬೆರಳು ಗುರುತು ಕೊಡುವವರಲ್ಲಿ ನಾನೇ ಮೊದಲಿಗನಾಗುವೆ. ಸಾವು ಎಂಬುದು ಬದುಕಿನ ಪೂರ್ವ ನಿಯೋಜಿತ ಅಂತ್ಯ. ಕಾಯಿಲೆ ಅಥವಾ ಅಂತಹ ಇತರೆ ಕಾರಣಗಳಿಂದ ಸಾಯುವ ಬದಲು ಸೋದರನೊಬ್ಬನ ಕೈಯಲ್ಲಿ ಸಾಯುವುದು ನನಗೆ ದುಃಖದ ಸಂಗತಿಯೇನಾಗದು. ಕೋಪ ಅಥವಾ ಹಂತಕನ ಮೇಲಿನ ಹಗೆಯ ಕಳಂಕವಿಲ್ಲದ ಇಂತಹ ಅಂತ್ಯ ನನಗೆ ಶಾಶ್ವತವಾದ ಒಳಿತನ್ನೇ ಮಾಡುವುದು. ಒಂದಲ್ಲ ಒಂದು ದಿನ ಹಂತಕನಿಗೂ ನನ್ನ ನಿರಪರಾಧಿತ್ವದ ಪರಿಪೂರ್ಣ ಮನವರಿಕೆಯಾಗುವುದೆಂಬುದರಲ್ಲಿ ನನಗೆ ಸಂಶಯವಿಲ್ಲ!'

ಗಾಂಧಿಯ ಈ ಮಾತುಗಳನ್ನು ಥಣ್ಣನೆಯ ಮೌನದಲ್ಲಿ ಕೇಳಿದ ನಂತರ ಸಭೆ ಮೌನವಾಗಿ ಕರಗಿತು. ಮುಂದಿನ ದಿನಗಳಲ್ಲಿ ಪ್ರಾಂತ್ಯದಾದ್ಯಂತ ಅನೇಕ ಸಭೆಗಳು ನಡೆದು ಒಪ್ಪಂದ ಕುರಿತ, ಅದರ ಯಶಸ್ವಿ ಜಾರಿ ಸಾಧ್ಯತೆಗಳನ್ನು ಕುರಿತ ಚರ್ಚೆಗಳು ನಡೆದವು. ಸಣ್ಣಪುಟ್ಟ ಗೊಣಗಾಟ, ಭಿನ್ನಾಭಿಪ್ರಾಯಗಳಿಗೇನೂ ಕೊರತೆಯಿರಲಿಲ್ಲ. ಆದರೆ ಪಠಾಣರ ಗುಂಪಿನ ಹೊರತಾಗಿ ಗಾಂಧಿಯ ನಾಯಕತ್ವವನ್ನು ಯಾರಾದರೂ ಪ್ರಶ್ನಿಸುವ ಪರಿಸ್ಥಿತಿ ಮಾತ್ರ ಉಂಟಾಗಲಿಲ್ಲ. ಹಾಗಾಗಿ ಸ್ವಯಂ ಪ್ರೇರಿತ ನೋಂದಣಿಗಾಗಿ ಸರ್ಕಾರದ ಕಡೆಯಿಂದ ಸಿದ್ಧತೆಗಳು ನಡೆದವು. ಸತ್ಯಾಗ್ರಹಿಗಳ ಅಂತಿಮ ಅನುಮೋದನೆಯ ಪ್ರಕಾರವೇ ನೋಂದಣಿ ಅರ್ಜಿ ಮತ್ತು ರಹದಾರಿ ಗುರುತು ಪತ್ರದ ನಮೂನೆಗಳು ಮುದ್ರಿತವಾದವು. ೧೯೦೮ರ ಫೆಬ್ರುವರಿ ೧೦ ನೋಂದಣಿ ಆರಂಭದ ದಿನವೆಂದು ನಿಗದಿಯಾಯಿತು.

ಗಾಂಧಿಯ ಮೇಲೆ ಪಠಾಣರ ಹಲ್ಲೆ

ಈ ಹೊತ್ತಿಗೆ ಗಾಂಧಿಯ ವಕೀಲರ ಕಛೇರಿಯೇ ಸತ್ಯಾಗ್ರಹ ಸಮಿತಿಯ ಕಛೇರಿಯಾಗಿಯೂ ಪರಿವರ್ತಿತವಾಗಿತ್ತು. ಅಲ್ಲಿ ಸೇರಿದ ಸತ್ಯಾಗ್ರಹಿ ದಳದ ಸಭೆಯು, ಮೊದಲ ದಿನವೇ ಮುಖಂಡರೆಲ್ಲರೂ ರಹದಾರಿ ಪತ್ರ ಪಡೆಯಬೇಕೆಂದು ತೀರ್ಮಾನಿಸಿತು. ಈ ಮೂಲಕ ರಹದಾರಿ ಕಛೇರಿಯ ಅಧಿಕಾರಿಗಳು ಗೌರವದಿಂದ ನಡೆದುಕೊಳ್ಳುವುದನ್ನು ಖಾತ್ರಿಪಡಿಸಿಕೊಳ್ಳುವುದರ ಜೊತೆಗೆ ಅಲ್ಲಿನ ಸೌಲಭ್ಯಗಳ ಪರಿಶೀಲನೆ ಮಾಡಿ ನೋಂದಣಿ ಪ್ರಕ್ರಿಯೆ ಆದಷ್ಟು ಬೇಗ ಮುಗಿಯುವಂತೆ ಖಾತ್ರಿಪಡಿಸಿಕೊಳ್ಳಬಹುದೆಂದು ಅದು ಅಭಿಪ್ರಾಯಪಟ್ಟಿತು. ಅದರಂತೆ ೧೯೦೮ರ ಫೆಬ್ರುವರಿ ೧೦ರಂದು ಗಾಂಧಿ ಅಗತ್ಯ ದಾಖಲೆಗಳೊಂದಿಗೆ ನೋಂದಣಿ ಕಛೇರಿಗೆ ತೆರಳಲು ತಮ್ಮ ಸಹವರ್ತಿಗಳೊಂದಿಗೆ ತಮ್ಮ ಕಛೇರಿಗೆ ಬಂದರು. ಕಛೇರಿಯ ಬಾಗಿಲಲ್ಲೇ ಆರಡಿ ಎತ್ತರದ ದೃಢಕಾಯನಾದ, ಉರಿ ಮುಖದ ಪಠಾಣ ಮೀರ್ ಆಲಂನನ್ನ ಕಂಡು ಸ್ವಲ್ಪ ಅಳುಕೆನಿಸಿದರೂ ಮತ್ತು ಎಂದಿನಂತೆ ಅವನು ವಂದಿಸದಿದ್ದರೂ ತಾವೇ ವಂದಿಸಿ ಕಛೇರಿಯ ಒಳಹೋದರು. ನಂತರ ಅವರು ಅಗತ್ಯ ದಾಖಲೆಗಳೊಂದಿಗೆ ತಮ್ಮ ಸಹಚರರೊಡಗೂಡಿ ಒಂದು ಮೈಲಿ ದೂರದಲ್ಲಿದ್ದ ನೋಂದಣಿ ಕಛೇರಿಯತ್ತ ನಡೆದು ಹೊರಟರು. ಇವರನ್ನು ಹಿಂಬಾಲಿಸಿ ಹೊರಟ ಮೀರ್ ಆಲಂನ ಪಟಾಲಂ ಸ್ವಲ್ಪ ದೂರ ಕ್ರಮಿಸಿದ ನಂತರ ಇದ್ದಕ್ಕಿದ್ದಂತೆ ಗಾಂಧಿಯವರನ್ನು ಅಡ್ಡಗಟ್ಟಿ 'ಎಲ್ಲಿಗೆ ಹೊರಟಿದ್ದೀರಿ?' ಎಂದು ಪ್ರಶ್ನಿಸಿತು.

ಈ ಪ್ರಶ್ನೆಗೆ ಗಾಂಧಿ, 'ಬೆರಳು ಗುರುತು ಕೊಟ್ಟು ಹೆಸರು ನೋಂದಣಿ ಮಾಡಿಸಿ ರಹದಾರಿ ಪತ್ರ ಪಡೆಯಲು ಹೋಗುತ್ತಿರುವೆ. ನೀವೂ ಬಂದರೆ ನಿಮಗೆ ಎರಡು ಹೆಬ್ಬೆಟ್ಟು ಗುರುತುಗಳಿಂದಲೇ ರಹದಾರಿ ಪತ್ರ ಕೊಡಿಸಿ ನಂತರ ನಾನು ಪಡೆಯುತ್ತೇನೆ...' ಎಂದು ಉತ್ತರವನ್ನು ಮುಗಿಸುವ ಮುನ್ನವೇ ಆಲಂನಿಂದ ಅವರ ತಲೆಯ ಮೇಲೆ ಬಲವಾದ ಪೆಟ್ಟೊಂದು ಬಿದ್ದಿತು. 'ಹೇ ರಾಂ!' ಎಂದು ಉದ್ಗರಿಸುತ್ತಾ ಗಾಂಧಿ ರಸ್ತೆಯ ಮೇಲೆ ಕುಸಿದು ಬಿದ್ದರು. ಹಾಗೆ ಬೀಳುತ್ತಿರುವಾಗಲೇ ಪಠಾಣರ ಗುಂಪು ಅವರನ್ನು ಹಿಡಿದು ಯದ್ವಾತದ್ವಾ ಥಳಿಸಿತಲ್ಲದೆ ಅವರನ್ನು ಕಾಲಿನಿಂದ ತುಳಿದು ಹಿಂಸಿಸಿತು. ಬಿಡಿಸಿಕೊಳ್ಳಲು ಬಂದ ಗಾಂಧಿ ಸಹಚರರನ್ನೂ ಥಳಿಸಿ ದೂರ ತಳ್ಳಿತು. ಗಾಂಧಿಯ

ಸಹವರ್ತಿಗಳಲ್ಲೊಬ್ಬರು ತಮ್ಮ ಕೈಯಲ್ಲಿದ್ದ ಕೊಡೆಯಿಂದ ದಾಳಿಕೋರರು ಬೀಸಿದ ಕಬ್ಬಿಣದ ಸಲಾಕೆಯನ್ನು ಬಲವಾಗಿ ತಡೆ ಹಿಡಿಯದಿದ್ದರೆ ಅಂದು ಗಾಂಧಿ ಪ್ರಾಣಾಂತಿಕವಾಗಿ ಗಾಯಗೊಳ್ಳುತ್ತಿದ್ದರು. ಗಲಾಟೆ ಕೇಳಿ ಬಂದ ದಾರಿಹೋಕ ಯೂರೋಪಿಯನ್ನರು ಮೀರ್ ಆಲಂನ ಗುಂಪನ್ನು ಸುತ್ತುವರೆದು ಹಿಡಿಯಿತು. ನಂತರ ಪೊಲೀಸರಿಗೆ ಒಪ್ಪಿಸಿತು.

ಗಾಂಧಿ ಪ್ರಜ್ಞೆ ತಪ್ಪಿದ್ದರು. ತಕ್ಷಣ ಅವರನ್ನು ರಸ್ತೆಗೆ ತಾಗಿಕೊಂಡಿದ್ದ ಗಿಬ್ಸನ್ ಎಂಬ ವಕೀಲರ ಕಛೇರಿಯ ಕೋಣೆಯೊಂದಕ್ಕೆ ಸಾಗಿಸಲಾಯಿತು. ಅವರ ಹಣೆಯಿಂದ ಮತ್ತು ಬಾಯಿಂದ ರಕ್ತ ಧಾರಾಕಾರವಾಗಿ ಸುರಿಯುತ್ತಿತ್ತು. ಅವರ ಎರಡು ಹಲ್ಲುಗಳು ಸಡಿಲಗೊಂಡಿದ್ದವು. ಸುದ್ದಿ ತಿಳಿದ ಪಾದ್ರಿ ಜೋಸೆಫ್ ಡೋಕ್ ಅಲ್ಲಿಗೆ ಧಾವಿಸಿ ಬಂದರು.

ಜೋಸೆಫ್ ಡೋಕ್‌ರ ಮನೆಯಲ್ಲಿ ಉಪಚಾರ

ಗಾಂಧಿಯವರಿಗೆ ಪ್ರಜ್ಞೆ ಬಂದಾಗ ಅವರ ಎದುರಿಗೆ ಕಂಡದ್ದು ರೆ. ಜೋಸೆಫ್ ಡೋಕ್. ಗಾಂಧಿಗೆ ಒಂದು ತಿಂಗಳ ಹಿಂದಷ್ಟೇ ಡೋಕ್ ಅವರ ಪರಿಚಯವಾಗಿತ್ತು, ಗಾಂಧಿಯವರನ್ನು ಕೆಲ ಕಾಲದಿಂದ ಗಮನಿಸುತ್ತಿದ್ದ ಡೋಕ್ ಹೊಸ ವರ್ಷದ ಶುಭಾಶಯ ಹೇಳಲು ಗಾಂಧಿಯವರ ವಕೀಲ ಕಛೇರಿಗೆ ಬಂದು ಪರಿಚಯ ಮಾಡಿಕೊಂಡಿದ್ದರು. ಭಾರತವೂ ಸೇರಿದಂತೆ ಜಗತ್ತನ್ನು ಸುತ್ತಿ ಈಗ ಜೊಹಾನ್ಸ್‌ಬರ್ಗ್‌ನ ಕೇಂದ್ರ ಚರ್ಚ್‌ನ ಮುಖ್ಯ ಪಾದ್ರಿಯಾಗಿದ್ದ ರೆವೆರೆಂಡ್ ಡೋಕ್‌ರ ಪ್ರಕಾರ ಗಾಂಧಿ ಏಸು ಕ್ರಿಸ್ತನ ಸಮಾನರೇ ಆಗಿದ್ದರು. ಅವರು ಗಾಂಧಿಯವರನ್ನು ಈಗ ಹೇಗಿದ್ದೀರಿ? ಎಂದು ಕೇಳಿದರು. ಗಾಂಧಿ, 'ತೊಂದರೆಯೇನಿಲ್ಲ. ಹಲ್ಲುಗಳು ಮತ್ತು ಪಕ್ಕೆ ನೋಯುತ್ತಿವೆಯಷ್ಟೆ.' ಎಂದು ಹೇಳಿ ಮೀರ್ ಆಲಂ ಎಲ್ಲಿ? ಎಂದು ವಿಚಾರಿಸಿದರು. ಅವನನ್ನು ಬಂಧಿಸಲಾಗಿದೆ ಎಂದು ಹೇಳಿದಾಗ ಅವರು, ಅವನದೇನೂ ತಪ್ಪಿಲ್ಲವೆಂದೂ ಅವನನ್ನು ಬಿಡುಗಡೆ ಮಾಡಲು ಪೊಲೀಸರಿಗೆ ಹೇಳಲು ಆಗ್ರಹಿಸಿದರು. ಆ ಹೊತ್ತಿಗೆ ಸ್ಥಳಕ್ಕೆ ಧಾವಿಸಿದ್ದ ಪೊಲೀಸ್ ಅಧಿಕಾರಿಗಳು ಮತ್ತು ಸುತ್ತಲಿದ್ದ ಕೆಲವರು ಗಾಂಧಿಯನ್ನು ಕೂಡಲೇ ಆಸ್ಪತ್ರೆಗೆ ಸಾಗಿಸಬೇಕೆಂದು ಸೂಚಿಸಿದಾಗ ಡೋಕ್, 'ನೀವು ನಮ್ಮ ಮನೆಗೆ ಬಂದರೆ ನಮ್ಮ ಕುಟುಂಬ ಕೆಲ ಕಾಲ ನಿಮ್ಮ ಯೋಗಕ್ಷೇಮ ನೋಡಿಕೊಳ್ಳಬಯಸುತ್ತದೆ' ಎಂದು ಗಾಂಧಿಯವರನ್ನು ಕೋರಿದರು. ಅದಕ್ಕೆ ಗಾಂಧಿ 'ಅಗತ್ಯವಾಗಿ' ಎಂದೆನ್ನುತ್ತಾ ಸಮ್ಮತಿ ಸೂಚಿಸಿದರು. ಅಷ್ಟು ಹೊತ್ತಿಗೆ ರಹದಾರಿ ಪತ್ರ ನೋಂದಣಿ ಕಛೇರಿ ಅಧಿಕಾರಿ ಚಾಮ್ನೆ ಸುದ್ದಿ ಕೇಳಿ ಗಾಬರಿಯಾಗಿ ಅಲ್ಲಿಗೆ ಬಂದರು. ಕೂಡಲೇ ಗಾಂಧಿ ಅವರಿಗೆ 'ನನ್ನ ಹತ್ತೂ ಬೆರಳುಗಳ ಅಚ್ಚು ಪಡೆದು ನನ್ನ ನೋಂದಣಿ ಮಾಡಿರಿ. ಎಲ್ಲರಿಗಿಂತ ಮೊದಲು ನನ್ನ ನೋಂದಣಿಯಾಗಬೇಕು' ಎಂದು ಗಡಿಬಿಡಿ ಮಾಡತೊಡಗಿದರು. ಅದಕ್ಕೆ ಚಾಮ್ನೆ 'ಅದಕ್ಕೇನು ಅವಸರ? ಮೊದಲು ನೀವು ಸುಧಾರಿಸಿಕೊಳ್ಳಿ. ನೋಂದಾಯಿತರಲ್ಲಿ ನಿಮ್ಮ ಹೆಸರೇ ಮೊದಲಿರುವಂತೆ ನಾನು ನೋಡಿಕೊಳ್ಳುತ್ತೇನೆ' ಎಂದು ಭರವಸೆ ನೀಡಿದರು. ನಂತರ ಡೋಕ್ ಮತ್ತು ಚಾಮ್ನೆಯವರು ಒಂದು ಗಾಡಿ ತರಿಸಿ ಗಾಂಧಿಯವರನ್ನು ಡೋಕ್ ಅವರ ಮನೆಗೆ ಒಯ್ದರು.

ಡೋಕ್ ಅವರ ಮನೆಗೆ ಬಂದೊಡನೆ ಗಾಂಧಿ ಮಾಡಿದ ಮೊದಲ ಕೆಲಸವೆಂದರೆ

ಚಾಮ್ನೆಯವರನ್ನು ಅವರ ಕಛೇರಿಗೆ ಕಳಿಸಿ ಅಗತ್ಯ ದಾಖಲೆಗಳನ್ನು ತರಿಸಿ ರಹದಾರಿ ಪತ್ರಕ್ಕಾಗಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡದ್ದು. ತಾವು ಜ.ಸ್ಮಟ್ಸ್‌ನೊಂದಿಗೆ ಮಾಡಿಕೊಂಡ ಮತ್ತು ತನ್ನ ಜನಕ್ಕೆ ಒಪ್ಪಿಕೊಳ್ಳಬೇಕೆಂದು ಸೂಚಿಸಿದ ಒಪ್ಪಂದವನ್ನು ಪಾಲಿಸಿದವರಲ್ಲಿ ತಾವೇ ಮೊದಲಿಗರಾಗಬೇಕೆಂಬುದು ಅವರ ಇಚ್ಛೆಯಾಗಿತ್ತು. ಈ ಹೊತ್ತಿಗೆ ಡೋಕ್ ಅವರ ಕರೆಯ ಮೇರೆಗೆ ಬಂದ ವೈದ್ಯರು ಗಾಂಧಿಗೆ ಆಗಿದ್ದ ಗಾಯಗಳನ್ನು ಸ್ವಚ್ಛಗೊಳಿಸಿ ಕೆನ್ನೆ ಮತ್ತು ತುಟಿಗಳ ಮೇಲಿನ ಗಾಯಗಳಿಗೆ ಹೊಲಿಗೆ ಹಾಕಿದರು. ನಂತರದಲ್ಲೇ ಗಾಂಧಿ ಮಾಡಿದ ಕೆಲಸವೆಂದರೆ, ತಮ್ಮ ಮೇಲಿನ ಹಲ್ಲೆಗೆ ಮೀರಂ ಆಲಂ ಕಾರಣನಲ್ಲವೆಂದೂ ಆತನನ್ನು ಮತ್ತು ಆತನ ಸಹಚರರನ್ನು ವಿಚಾರಣೆಗೆ ಗುರಿ ಮಾಡಬಾರದೆಂದೂ ಸರ್ಕಾರದ ಪ್ರಧಾನ ಕಾನೂನು ಸಲಹೆಗಾರನಿಗೆ ಪತ್ರ ಬರೆಸಿದ್ದು. ಆದರೆ ಘಟನೆಯನ್ನು ಕಂಡ ಸಾರ್ವಜನಿಕರು, ಹಲ್ಲೆ ನಡೆದದ್ದು ಸಾರ್ವಜನಿಕ ಸ್ಥಳದಲ್ಲಾದ್ದರಿಂದ, ಗಾಂಧಿಯವರ ಮನವಿಯನ್ನು ಪರಿಗಣಿಸದೆ ಹಲ್ಲೆಕೋರರನ್ನು ಸಾರ್ವಜನಿಕ ಶಾಂತಿ ಕದಡಿದ ಆರೋಪದ ಮೇಲೆ ಕಾನೂನಿನ ಅನ್ವಯ ವಿಚಾರಣೆಗೆ ಒಳಪಡಿಸಬೇಕೆಂದು ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಆ ಪ್ರಕಾರ ಅವರನ್ನು ವಿಚಾರಣೆಗೆ ಒಳಪಡಿಸಿ ಕಾನೂನಿನ ಪ್ರಕಾರ ಮೂರು ತಿಂಗಳ ಸಶ್ರಮ ಸೆರೆಮನೆವಾಸಕ್ಕೆ ಗುರಿಪಡಿಸಲಾಯಿತು.

ಗಾಂಧಿ ನೀಡಿದ ಸಂದೇಶ

ಇದೇ ಸಂದರ್ಭದಲ್ಲಿ ಗಾಂಧಿ ಭಾರತೀಯರಿಗಾಗಿ ಒಂದು ಸಂದೇಶ ಬಿಡುಗಡೆ ಮಾಡಿ, ತಮ್ಮ ಮೇಲಿನ ಹಲ್ಲೆಯನ್ನು ಯಾರೂ ಮುಸ್ಲಿಂ ಗುಂಪಿನ ಹಲ್ಲೆ ಎಂದು ಭಾವಿಸಬಾರದೆಂದೂ, ಈ ಘಟನೆಯಿಂದ ಯಾರೂ ಭೀತರಾಗದೆ ನೋಂದಣಿ ಮಾಡಿಸಿಕೊಳ್ಳುವುದರಿಂದ ಹಿಂತೆಗೆಯಬಾರದೆಂದೂ ಮನವಿ ಮಾಡಿದರಲ್ಲದೆ, ಸತ್ಯಾಗ್ರಹಿಯೊಬ್ಬ ದೇವರಿಗಲ್ಲದೆ ಇನ್ನಾವ ಶಕ್ತಿಗೂ ಮಣಿಯುವ ಅಗತ್ಯವಿಲ್ಲವೆಂದು ಜನರನ್ನು ಹುರಿದುಂಬಿಸಿದರು. ಇದಕ್ಕೆ ಪೂರಕವಾಗಿ ಮತ್ತು ಸಮೂಹ ನೋಂದಣಿಯ ವಿರುದ್ಧ ಪಠಾಣರು ನಡೆಸಿದ ಸಭೆಗೆ ಪ್ರತಿಯಾಗಿ ಭಾರತೀಯ ಮುಸ್ಲಿಂ ವ್ಯಾಪಾರಿಗಳ ಸಮೂಹವೊಂದು ಹೇಳಿಕೆ ನೀಡಿ, 'ನೋಂದಣಿ ಮಾಡಿಸಿಕೊಂಡವರಲ್ಲಿ ಮೊದಲಿಗರು ಮುಸ್ಲಿಮರೇ ಆಗಿದ್ದು, ಮತಬೇಧವಿಲ್ಲದೆ ಗಾಂಧಿಯವರು ಎಲ್ಲ ಭಾರತೀಯರ ಅಸಂದಿಗ್ಧ ನಾಯಕರಾಗಿದ್ದಾರೆ' ಎಂದು ಸ್ಪಷ್ಟಪಡಿಸಿತು.

ಡೋಕ್‌ರ ಮನೆಯಲ್ಲಿ ಅವರ ಪತ್ನಿ, ಮಗ, ಮಗಳು ಎಲ್ಲ ಸೇರಿ ಗಾಂಧಿಯವರ ಶುಶ್ರೂಷೆಯಲ್ಲಿ ತೊಡಗಿದರು. ಮಗ ತನ್ನ ಕೋಣೆಯನ್ನು ಗಾಂಧಿಗೆ ಬಿಟ್ಟುಕೊಟ್ಟರೆ, ಪುಟ್ಟ ಮಗಳು ಆಲೀವ್ ಅವರಿಗಾಗಿ ತನ್ನ ಮಧುರ ಕಂಠದಲ್ಲಿ, ಮೆಲುದನಿಯಲ್ಲಿ 'ಕರುಣಾಳು ಬಾ ಬೆಳಕೆ' ಗೀತೆಯನ್ನು ಹಾಡಿ ಅವರಿಗೆ ನೆಮ್ಮದಿಯ ನಿದ್ದೆಯನ್ನು ದೊರಕಿಸಿಕೊಟ್ಟಳು. ಹಗಲೂ ರಾತ್ರಿ ಇಡೀ ಕುಟುಂಬ ಗಾಂಧಿಯವರ ಆರೋಗ್ಯದ ಮೇಲೆ ನಿಗಾ ಇಟ್ಟು ಅವರನ್ನು ಕಾಪಾಡಿತು. ಪ್ರತಿದಿನ ಗಾಂಧಿಯನ್ನು ನೋಡಲು, ಅವರಿಗೆ ಬೆಂಬಲ ವ್ಯಕ್ತಪಡಿಸಲು ಬಂದ ವಿವಿಧ ವರ್ಗಗಳ ನೂರಾರು ಜನ ಭಾರತೀಯರು ಮತ್ತು ಬಿಳಿಯರನ್ನು ಡೋಕ್ ಕುಟುಂಬ ಪ್ರೀತಿಯಿಂದ ಉಪಚರಿಸಿತು.

ಜೊತೆಗೆ ಅವರ ಮನೆಯ ವಿಳಾಸಕ್ಕೆ ಟ್ರಾನ್ಸ್‌ವಾಲ್ ಮತ್ತು ನೆಟಾಲ್‌ನ ವಿವಿಧ ಭಾಗಗಳಿಂದ ಸಾಂತ್ವನ ಸಹಾನುಭೂತಿ ಮತ್ತು ಬೆಂಬಲಗಳ ನೂರಾರು ತಂತಿ ಸಂದೇಶಗಳಲ್ಲದೆ, ವೈದ್ಯಕೀಯ ವೆಚ್ಚಕ್ಕೆಂದು ಹಣ ಮತ್ತು ಅಮೂಲ್ಯ ಬೆಲೆಯ ಆಭರಣಗಳೂ ಬಂದವು. ಡೋಕ್ ಇದನ್ನೆಲ್ಲ ಭಾರತೀಯ ಮಕ್ಕಳ ಶಿಕ್ಷಣಕ್ಕಾಗಿ ಒಂದು ಟ್ರಸ್ಟ್ ಮಾಡಿ ಸಂರಕ್ಷಿಸುವುದಾಗಿ ಘೋಷಿಸಿದರು.

ಗಾಂಧಿ ಡೋಕ್ ಅವರ ಮನೆಯಲ್ಲಿ ನಿಧಾನವಾಗಿ ಸುಧಾರಿಸಿಕೊಳ್ಳುತ್ತಿದ್ದಂತೆ, ಹೊರಗೆ ಗಾಂಧಿಗೆ ಬೆಂಬಲದ ಹೊಸ ಹುರುಪು ವ್ಯಕ್ತವಾಗುತ್ತಾ ನೋಂದಣಿಗಾಗಿ ನೂಕುನುಗ್ಗಲು ಆರಂಭವಾಯಿತು. ಭಾರತೀಯರು ಮಾತ್ರವಲ್ಲದೆ ಚೀನೀಯರೂ ಸೇರಿದಂತೆ ಏಷ್ಯಾದ ಹಲವು ಜನಾಂಗಗಳ ಜನ ಗಾಂಧಿಯವರಿಗೆ ಬೆಂಬಲವಾಗಿ ನೋಂದಣಿಗಾಗಿ ಗುಂಪು ಗುಂಪಾಗಿ ನೋಂದಣಿ ಕಛೇರಿಗಳ ಮುಂದೆ ಸೇರಿದರು. ಇದರಿಂದ ಜೊಹಾನ್ಸ್‌ಬರ್ಗ್‌ನಲ್ಲಿ ಭಾರತೀಯರೂ, ಚೀನೀಯರೂ ಸೇರಿದಂತೆ ಇತರ ಏಷಿಯನ್ನರು ಮತ್ತು ವರ್ಣಬೇಧ ನೀತಿ ವಿರೋಧಿಸುವ ಯೂರೋಪಿಯನ್ನರೂ ಕೂಡಿದ ಒಂದು ಹೊಸ ಅಂತರ್‌ಜನಾಂಗೀಯ ಸಮೂಹವೇ ಸೃಷ್ಟಿಯಾಗಿ ಪರಸ್ಪರ ಔತಣಕೂಟಗಳೂ, ಅವುಗಳಲ್ಲಿ ಪರಸ್ಪರ ಉಡುಗೊರೆ ವಿನಿಮಯ ಕಾರ್ಯಕ್ರಮಗಳೂ ಆರಂಭವಾದವು.

■

೨೦

ಗಾಂಧಿಯ ಐರೋಪ್ಯ ಗೆಳೆಯರು

ಹತ್ತು ದಿನಗಳಲ್ಲಿ ಗಾಂಧಿ ಗುಣಮುಖರಾದರು. ಇದರ ಸಂಪೂರ್ಣ ಹೊಣೆಯನ್ನು ಪ್ರೀತಿಯಿಂದ ನಿರ್ವಹಿಸಿದ ಜೋಸೆಫ್ ಡೋಕ್‌ರನ್ನು ಇಲ್ಲಿ ಪರಿಚಯಿಸಬೇಕು. ಗಾಂಧಿ ಇಂಗ್ಲೆಂಡ್‌ನಲ್ಲಿದ್ದಾಗಲೇ ತಮ್ಮ ಸಾತ್ವಿಕತೆ ಮತ್ತು ವ್ರತಬದ್ಧತೆಗಳಿಂದ ಧಾರ್ಮಿಕ ಶ್ರದ್ಧಾಳುಗಳ, ವಿಶೇಷವಾಗಿ ಕ್ರಿಶ್ಚಿಯನ್ ಪಾದ್ರಿಗಳ ಪ್ರೀತಿ–ವಿಶ್ವಾಸಗಳನ್ನು ಗಳಿಸಲಾರಂಭಿಸಿದ್ದರು. ನಂತರ ದ.ಆಫ್ರಿಕಾದಲ್ಲಿ ವರ್ಣಭೇದ ನೀತಿಯ ವಿರುದ್ಧ ಜನ ಸಂಘಟನೆ ಮಾಡತೊಡಗಿದಾಗಲೂ, ಹಲವು ಶ್ವೇತವರ್ಣೀಯರು, ವಿಶೇಷವಾಗಿ ಧಾರ್ಮಿಕ ಮನೋಭಾವದ ಜನರನ್ನು ಅವರು ತಮ್ಮೆಡೆಗೆ ಸೆಳೆದುಕೊಂಡರು. ಆಲ್ಬರ್ಟ್ ವೆಸ್ಟ್, ರೀಚ್, ಆಲ್ಬರ್ಟ್ ಕಾರ್ಟ್‌ರೈಟ್, ಪೊಲಾಕ್‌ರಂತೆಯೇ ಗಾಂಧಿಯ ಹೋರಾಟವನ್ನು ಒಂದು ನೈತಿಕ, ಧಾರ್ಮಿಕ ಹೋರಾಟವೆಂದು ಬಗೆದು ಅವರೊಂದಿಗೆ ಗುರುತಿಸಿಕೊಂಡವರಲ್ಲಿ ರೆವೆರೆಂಡ್ ಜೋಸೆಫ್ ಡೋಕ್‌ರೂ ಒಬ್ಬರು. ಗಾಂಧಿ ಜೊತೆ ಗುರುತಿಸಿಕೊಂಡಾಗ ೪೩ರ ಮಧ್ಯವಯಸ್ಕರಾಗಿದ್ದ ಬಾಪ್ಟಿಸ್ಟ್ ಪಾದ್ರಿ ಡೋಕ್ ದ.ಆಫ್ರಿಕಾಕ್ಕೆ ನ್ಯೂಜಿಲೆಂಡ್‌ನಿಂದ ಬಂದವರು. ಬಹುಬೇಗನೆ ಗಾಂಧಿಯವರ ಹೋರಾಟದ ತಾತ್ವಿಕತೆಯನ್ನು ಮೆಚ್ಚಿ ಗಾಂಧಿಯ ಬಳಿ ಬಂದು ಮನಬಿಚ್ಚಿ ಮಾತಾಡಿದರು. 'ವಿಶ್ವಪ್ರೇಮದ ಪ್ರತೀಕವಾದ ಏಸುವಿನ ನಿಜವಾದ ಶಿಷ್ಯ ನಾನೆಂದು ಈ ಬಿಳಿ ಬಣ್ಣದ ಹುಸಿಹೆಮ್ಮೆಯ ಜನಕ್ಕೆ ಹೇಳಬೇಕಿರುವುದು ನಿಮ್ಮ ಹೋರಾಟದ ಜೊತೆ ನೇರವಾಗಿ ಗುರುತಿಸಿಕೊಳ್ಳುವ ಮೂಲಕ' ಎಂದರು. ಇದರಿಂದ ಅವರ ಜೀವನೋಪಾಯಕ್ಕೆ ತೊಂದರೆ ಮತ್ತು ಸರ್ಕಾರದ ಕೋಪ–ಅಸಮಾಧಾನಗಳಿಗೆ ತುತ್ತಾಗುವ ಅಪಾಯವಿದ್ದರೂ ಅವರು ವಿಚಲಿತರಾಗದೆ ಉಳಿದರು. ಆ ಮೂಲಕ ದ.ಆಫ್ರಿಕಾದ ಅನೇಕ ಬಿಳಿ ಚರ್ಮದ ಹಿರಿಯ ಧಾರ್ಮಿಕ ನಾಯಕರು ಮತ್ತು ಅವರ ನೂರಾರು ಅನುಯಾಯಿ ಸಾಮಾನ್ಯ ಜನರ ಪ್ರೀತಿ–ವಿಶ್ವಾಸ–ಸಹಾನುಭೂತಿಗಳನ್ನು ಗಾಂಧಿಯವರ ಸತ್ಯಾಗ್ರಹಕ್ಕೆ ದೊರಕಿಸಿಕೊಟ್ಟರು. ಜೊತೆಗೆ ಗಾಂಧಿಯವರ ಜೀವನ ಚರಿತ್ರೆಯೊಂದನ್ನು ಬರೆದು ಅವರಿಗೆ ಆಗಲೇ ವಿಶ್ವಪ್ರಸಿದ್ಧಿಯನ್ನು ಒದಗಿಸಿದರು ಮತ್ತು ಲಂಡನ್ ಪ್ರವಾಸ ಮಾಡಿ ಗಾಂಧಿ ಹೋರಾಟದ ಬಗ್ಗೆ ಬ್ರಿಟಿಷ್ ಸಾಮ್ರಾಜ್ಯದ ಅಧಿಕೃತ ವಲಯಗಳಲ್ಲಿ ಸದಭಿಪ್ರಾಯವನ್ನು ಸಂಘಟಿಸುವ ಪ್ರಯತ್ನವನ್ನೂ ಮಾಡಿದರು. ಆದರೆ ಗಾಂಧಿಯ ಈ ಕಾರ್ಯಾಚರಣೆ ದ.ಆಫ್ರಿಕಾದಲ್ಲಿ ನಡೆಯುತ್ತಿರುವ ಸಮಯದಲ್ಲೇ ಡೋಕ್ ನೆರೆಯ ರೊಡೇಸಿಯಾದಲ್ಲಿ ಧರ್ಮ ಪ್ರಚಾರ

ನಡೆಸುತ್ತಿದ್ದಾಗ ಸಾವನ್ನಪ್ಪಿದರು. ಅವರ ನೆನಪಿನ ಕಾರ್ಯಕ್ರಮದಲ್ಲಿ ಅವರನ್ನು ಕುರಿತು ಚರಮ ನುಡಿಗಳನ್ನು ಆಡಿದವರು ಗಾಂಧಿಯವರೇ.

ಕಲೆನ್‌ಬಾಕ್ ಎಂಬ ಜೀವದ ಗೆಳೆಯ

ಇದೇ ಸಂದರ್ಭದಲ್ಲಿ ಡೋಕ್‌ರಂತೆಯೇ ಗಾಂಧಿಯವರ ವ್ಯಕ್ತಿತ್ವ ಮತ್ತು ಹೋರಾಟಗಳನ್ನು ಮೆಚ್ಚಿ ಅವರ ದೀರ್ಘಕಾಲಿಕ ಸಹಚರನಾದ ಕಲೆನ್‌ಬಾಕ್‌ನನ್ನೂ ಇಲ್ಲಿ ಪರಿಚಯಿಸುವುದು ಸೂಕ್ತ. ಜೊಹಾನ್ಸ್‌ಬರ್ಗ್‌ನಲ್ಲಿ ಗಾಂಧಿ ಹಲವರೊಂದಿಗೆ ನಡೆಸುತ್ತಿದ್ದ ಧಾರ್ಮಿಕ ಚರ್ಚೆಗಳ ಮಧ್ಯೆ ಆಕಸ್ಮಿಕವಾಗಿ ಪರಿಚಯವಾದವನು ಕಲೆನ್‌ಬಾಕ್. ಜರ್ಮನಿ ಮೂಲದ ಯಹೂದ್ಯನಾದ ಅವನು ಜೊಹಾನ್ಸ್‌ಬರ್ಗ್‌ನಲ್ಲಿ ಬಹಳ ಶ್ರೀಮಂತನೆನಿಸಿದ ವಾಸ್ತುಶಿಲ್ಪಿ. ಬೌದ್ಧ ಧರ್ಮ ಕುರಿತ ಸಮಾನ ಆಸಕ್ತಿ ಗಾಂಧಿ ಮತ್ತು ಇವನ ಸ್ನೇಹಕ್ಕೆ ಕಾರಣವಾಯಿತು. ಗಾಂಧಿ ಮುಂದೆ ೧೯೧೫ರಲ್ಲಿ ಭಾರತಕ್ಕೆ ಹಿಂದಿರುಗುವವರೆಗೂ ದ.ಆಫ್ರಿಕಾದಲ್ಲಿನ ಗಾಂಧಿಯ ಎಲ್ಲ ಚಟುವಟಿಕೆಗಳಲ್ಲೂ ಭಾಗೀದಾರನಾಗಿದ್ದ ಕಲೆನ್‌ಬಾಕ್ ನೋಡಲು ಜಲ್ಲಿ ಮೀಸೆಯ ಸೈಂಧವನಂತಿದ್ದರೂ ಬಹು ಪ್ರೀತಿಯ, ಮಗು ಮನಸ್ಸಿನ ಸರಳ ವ್ಯಕ್ತಿತ್ವದವನಾಗಿದ್ದ ಎಂದು ಗಾಂಧಿ ವರ್ಣಿಸುತ್ತಾರೆ. ಮೊದಲನೇ ಮಹಾಯುದ್ಧದ ಕಾರಣ ಗಾಂಧಿಯೊಂದಿಗೆ ಭಾರತಕ್ಕೆ ಹೋಗಲು ಸಾಧ್ಯವಾಗದ ಕಲೆನ್‌ಬಾಕ್ ಇಂಗ್ಲೆಂಡ್‌ನಲ್ಲಿ ತನ್ನ ವಾಸ್ತುಶಿಲ್ಪ ವೃತ್ತಿಯನ್ನು ಪುನರಾರಂಭಿಸಿದನು ಮತ್ತು ಅಲ್ಲಿಯೇ ನಿಧನ ಹೊಂದಿದನು. ಗಾಂಧಿಯವರ ಮುಂದಿನ ಸತ್ಯಾಗ್ರಹ ಚಳುವಳಿಯಲ್ಲಿ ಇವನ ಪಾತ್ರ ಎಷ್ಟು ಮುಖ್ಯವಾದುದೆಂಬುದನ್ನು ಮುಂದೆ ಗಮನಿಸಬಹುದು.

ಗಾಂಧಿ ಆಪ್ತ ಕಾರ್ಯದರ್ಶಿಯಾದ ದಿಟ್ಟ ಹೆಣ್ಣು ಸೋನ್ಯಾ ಶ್ಲೆಸಿನ್

ಗಾಂಧಿಯವರಿಗೆ ಕಲೆನ್‌ಬಾಕ್ ಕೊಟ್ಟ ಪುಟ್ಟ ಕೊಡುಗೆಯೆಂದರೆ, ಗಾಂಧಿ ದ.ಆಫ್ರಿಕಾದಲ್ಲಿರುವವರೆಗೂ ಅವರ ಸಮರ್ಥ ಆಪ್ತ ಕಾರ್ಯದರ್ಶಿಯಾಗಿ ಕೆಲಸ ಮಾಡುವ ಕುಮಾರಿ ಸೋನ್ಯಾ ಶ್ಲೆಸಿನ್ ಎಂಬ ರಷ್ಯನ್ ಮೂಲದ ಯಹೂದ್ಯ ಹುಡುಗಿ. ಗಾಂಧಿಯವರ ಹೋರಾಟ ತೀವ್ರವಾಗಿ ಕಾನೂನು ಸಮರ, ಪತ್ರ ವ್ಯವಹಾರ, ಕಛೇರಿ ನಿರ್ವಹಣೆ ಅಸಾಧ್ಯವೆನಿಸುವಷ್ಟು ಹೆಚ್ಚಿದಾಗ ಅವರ ಶೀಘ್ರಲಿಪಿಕಾರ್ತಿ ಅನಿವಾರ್ಯ ಕಾರಣಗಳಿಂದಾಗಿ ಕೆಲಸ ಬಿಟ್ಟು ಹೋದಳು. ಆ ಸಂದರ್ಭದಲ್ಲಿ ಕಲೆನ್‌ಬಾಕ್‌ನ ಶಿಫಾರ್ಸಿನ ಮೇರೆಗೆ ಗಾಂಧಿಯವರ ಆಪ್ತ ಕಾರ್ಯದರ್ಶಿಯಾದ ಈ ದಿಟ್ಟ ಹೆಣ್ಣುಮಗಳು ಎಷ್ಟು ಚತುರೆಯೆಂದರೆ, ಗಾಂಧಿ ಸೇರಿದಂತೆ ಅವರ ಎಲ್ಲ ಸಹವರ್ತಿಗಳೂ ಅವಳೊಂದಿಗೆ ಸಮಾಲೋಚಿಸದೇ ಯಾವ ಕೆಲಸದಲ್ಲೂ ಮುಂದಡಿ ಇಡುತ್ತಿರಲಿಲ್ಲ. ಆಕೆ ಸತ್ಯಾಗ್ರಹ ನಿಧಿಯ ಖಜಾಂಚಿ ಮಾತ್ರವಲ್ಲದೆ ಸತ್ಯಾಗ್ರಹಕ್ಕೆ ಪೂರಕವಾದ ಪುಸ್ತಕಗಳ ಮುದ್ರಣ ಮತ್ತು ಸಂಗ್ರಹದ ಮೇಲ್ವಿಚಾರಿಕಿಯೂ ಆಗಿದ್ದಳು. ವರ್ಣೀಯ ಸತ್ಯಾಗ್ರಹಿಗಳ ಜೊತೆ ಮೂರನೇ ದರ್ಜೆ ರೈಲುಗಾಡಿಯಲ್ಲಿ ಪ್ರಯಾಣ ಮಾಡಿ ದ.ಆಫ್ರಿಕಾದ ಶಾಸನವನ್ನು ದಿಟ್ಟವಾಗಿ ಉಲ್ಲಂಘಿಸುತ್ತಿದ್ದ ಈ ಹುಡುಗಿ ಅತ್ಯಂತ ಕಡಿಮೆ ಸಂಬಳ ಪಡೆಯುತ್ತಿದ್ದಳು. ಅವಳ ಕಾರ್ಯಭಾರ ನೋಡಿ ಗಾಂಧಿ ಸಂಬಳ ಹೆಚ್ಚಿಸುವ ಪ್ರಸ್ತಾಪ ಇಟ್ಟಾಗಲೆಲ್ಲ, 'ನನಗೇಕೆ ಅಗತ್ಯವಿಲ್ಲದ ಹಣ? ನನ್ನ ಅಗತ್ಯಗಳು ಕಡಿಮೆ. ಮತ್ತೆ ನಾನು

ನಿಮ್ಮೊಂದಿಗೆ ಕೆಲಸ ಮಾಡಲು ಬಂದು ಕಲಿತದ್ದಾದರೂ ಏನು? ಎಂದು ನಾನೇ ಪ್ರಶ್ನೆ ಮಾಡಿಕೊಳ್ಳುವಂತೆ ಮಾಡಬೇಡಿ!' ಎಂದು ಅವರ ಬಾಯಿಮುಚ್ಚಿಸಿಬಿಡುತ್ತಿದ್ದಳು! ಗಾಂಧಿ ದ.ಆಫ್ರಿಕಾ ಬಿಟ್ಟ ನಂತರ ಶ್ಲೆಸಿನ್, ಟ್ರಾನ್ಸ್‌ವಾಲ್ ಸರ್ಕಾರಿ ಶಾಲೆಯೊಂದರ ಮುಖ್ಯೋಪಾಧ್ಯಾಯಿನಿಯಾಗಿ ಕೆಲಸಕ್ಕೆ ಸೇರಿಕೊಂಡು ಅವಿವಾಹಿತೆಯಾಗಿಯೇ ಉಳಿದಳು.

ಇನ್ನು ತಮ್ಮ ಹೋರಾಟಕ್ಕೆ ಹೃದಯಪೂರ್ವಕ ಸಹಾನುಭೂತಿ, ಬೆಂಬಲ ನೀಡಿದವರಲ್ಲಿ ಮುಖ್ಯರೆಂದು ಗಾಂಧಿ ಭಾವಿಸಿದ ಇನ್ನಿಬ್ಬರು ಶ್ವೇತವರ್ಣೀಯರೆಂದರೆ, ಕೇಪ್ ಕಾಲೋನಿಯ ಆಲೀವ್ ಶ್ರೈನರ್ ಮತ್ತು ಆಕೆಯ ಸೋದರ ಡಬ್ಲ್ಯು ಪಿ. ಶ್ರೈನರ್. ಒಳ್ಳೆಯ ಲೇಖಕಿಯಾಗಿದ್ದ ಆಲಿವ್, ಶ್ರೀಮಂತ ಮನೆತನದಿಂದ ಬಂದಿದ್ದರೂ ಎಲ್ಲ ಮನೆಗೆಲಸಗಳನ್ನೂ ತಾನೇ ಮಾಡಿಕೊಳ್ಳುತ್ತಾ ತನ್ನ ಶ್ರಮಜೀವನದಿಂದ ಗಾಂಧಿಯ ಗಮನ ಸೆಳೆದಿದ್ದರು. ಈ ಶ್ರಮ ಪ್ರೀತಿಯೇ ಆಕೆಯನ್ನು ಒಳ್ಳೆಯ ಲೇಖಕಿಯನ್ನಾಗಿ ಮಾಡಿದೆ ಎಂದು ಗಾಂಧಿ ಹೇಳುತ್ತಿದ್ದರು. ಇನ್ನು ಅವಳ ಸೋದರ ಈ ಪ್ರಾಂತ್ಯದ ಮೊದಲ ಪ್ರಧಾನಮಂತ್ರಿಯಾಗಿದ್ದು, ಈಗ ಪ್ರಧಾನ ಕಾನೂನು ಸಲಹೆಗಾರನಾಗಿದ್ದವನು. ಇವರ ಜೊತೆಗೇ ಶ್ವೇತವರ್ಣೀಯರಾದ ಅನೇಕ ಪಾದ್ರಿಗಳು, ಧಾರ್ಮಿಕ ಸಂಸ್ಥೆಗಳ ಮುಖ್ಯಸ್ಥರು, ಪತ್ರಿಕಾ ಸಂಪಾದಕರುಗಳು ಗಾಂಧಿಯವರ ಹೋರಾಟಕ್ಕೆ ಬೆಂಬಲವಾಗಿ ನಿಂತರು. ಅವರೆಲ್ಲ ಈ ಹೋರಾಟದಲ್ಲಿ 'ನಾಮಕಾವಸ್ತೆ ಕ್ರಿಶ್ಚಿಯನ್ ಆಗಿದ್ದ ವ್ಯವಸ್ಥೆಯ ವಿರುದ್ಧ ನಿಜವಾದ 'ಕ್ರಿಸ್ತನ ಕ್ರಿಯಾಶೀಲತೆ'ಯನ್ನು ಕಂಡಿದ್ದರು. ತಾವು ಕ್ರಿಶ್ಚಿಯನ್ನರಾಗಿ ಈ ಹೋರಾಟಕ್ಕೆ ಬೆಂಬಲ ನೀಡದಿರಲು ಸಾಧ್ಯವೇ ಇಲ್ಲವೆಂದು ಅವರು ಭಾವಿಸಿದ್ದರು. ಗಾಂಧಿ ಹೋರಾಟದ ಜೊತೆಗೆ ನಿಂತ ಜನಸಾಮಾನ್ಯರಲ್ಲಿ ಆಭರಣಗಳ ಅಂಗಡಿಯ ಮಾಲೀಕನಾಗಿದ್ದ ಇಂಗ್ಲಿಷ್ ಯಹೂದಿ ಗೇಬ್ರಿಯಲ್ ಇಸಾಕ್ ಎಂಬಾತನ ಹೆಸರು ಉಲ್ಲೇಖಾರ್ಹ. ಈತ 'ಇಂಡಿಯನ್ ಒಪಿನಿಯನ್' ಪತ್ರಿಕೆಗೆ ವಂತಿಗೆ ಸಂಗ್ರಹ ಮಾಡುತ್ತಿದ್ದನಲ್ಲದೆ ಸತ್ಯಾಗ್ರಹದಲ್ಲಿ ಭಾಗವಹಿಸಿ ಸೆರೆಮನೆಗೆ ಹೋಗುತ್ತಿದ್ದ ಭಾರತೀಯರ ಅಂಗಡಿಗಳ ವ್ಯಾಪಾರದ ಉಸ್ತುವಾರಿಯನ್ನೂ ವಹಿಸಿಕೊಳ್ಳುತ್ತಿದ್ದ ಧೀರ ಜಿಳಿಯನಾಗಿದ್ದ.

■

೨೧
ಗಾಂಧಿ ಎದುರಿಸಿದ ವಿಶ್ವಾಸ ದ್ರೋಹ

ಡೋಕ್ ಅವರ ಕುಟುಂಬದ ಉಪಚಾರದಿಂದ ಗುಣಮುಖರಾದ ಮೇಲೆ ಗಾಂಧಿ ನೆಟಾಲ್ ಭಾರತೀಯರ ಆಹ್ವಾನದ ಮೇರೆಗೆ ೧೯೦೮ರ ಮಾರ್ಚ್ ೫ರಂದು ಡರ್ಬಾನ್‌ಗೆ ಹೋಗಬೇಕಾಯಿತು. ಅಲ್ಲಿಯೂ ಕೆಲವರು ಗಾಂಧಿ-ಸ್ಮಟ್ಸ್ ಒಪ್ಪಂದದ ಬಗ್ಗೆ ಅಪಸ್ವರವೆತ್ತಿ ಗಾಂಧಿಯಿಂದ ಸ್ಪಷ್ಟನೆ ಬಯಸಿದ್ದರು. ವರ್ಣಭೇದದ ವಿರುದ್ಧದ ಹೋರಾಟ ಟ್ರಾನ್ಸ್‌ವಾಲ್‌ನಲ್ಲಿ ನಡೆಯುತ್ತಿದ್ದರೂ, ಸಮಸ್ಯೆ ಇಡೀ ದ.ಆಫ್ರಿಕಾದಲ್ಲಿ ವ್ಯಾಪಿಸಿದ್ದುದರಿಂದ ಅದಕ್ಕೆ ಎಲ್ಲ ಕಡೆಯ ಜನರ ಸಹಾನುಭೂತಿ-ಬೆಂಬಲ ಅಗತ್ಯ ಎಂದು ಗಾಂಧಿ ಭಾವಿಸಿದರು. ಹಾಗಾಗಿ ಡರ್ಬಾನ್‌ನಲ್ಲಿ ಸೇಠ್ ದಾವೂದ್ ಮಹಮ್ಮದರ ಅಧ್ಯಕ್ಷತೆಯಲ್ಲಿ ಸಂಘಟಿಸಲಾಗಿದ್ದ ಭಾರತೀಯರ ಸಭೆಯಲ್ಲಿ ಒಪ್ಪಂದದ ಬಗ್ಗೆ ಮಾತನಾಡಲು ವೇದಿಕೆ ಏರಿದರು. ತಮ್ಮ ಮೇಲೆ ದೈಹಿಕ ಹಲ್ಲೆ ನಡೆಯುವ ಭೀತಿ ಇದೆ ಎಂದು ಅವರ ಸ್ನೇಹಿತರು ಮುನ್ನೆಚ್ಚರಿಕೆ ನೀಡಿದರೂ ಅದನ್ನು ಗಣಿಸದೆ ಅವರು ಮಾತು ಶುರು ಮಾಡಿದರು. ಒಮ್ಮೆ ಜನಸೇವೆಯ ಹೊಣೆ ಹೊತ್ತ ಮೇಲೆ ಎಲ್ಲ ಅಪಾಯಗಳಿಗೂ ಎದೆಗೊಟ್ಟು ನಿಲ್ಲಬೇಕೆಂಬ ನಿಲುವಿನ ಅವರು ಸಭಿಕರ ಹಲವು ಪ್ರಶ್ನೆಗಳಿಗೆ ಸಮಾಧಾನದಿಂದ ಉತ್ತರಕೊಡುತ್ತಿರುವಾಗಲೇ ಒಬ್ಬ ಪಠಾಣ ವೇದಿಕೆಯ ಮೇಲೆ ನುಗ್ಗಿದ. ವಿದ್ಯುತ್ ದೀಪಗಳು ಆರಿದವು. ಅಪಾಯವನ್ನರಿತ ಅಧ್ಯಕ್ಷ ಸೇಠರು ಮೇಜಿನ ಮೇಲೆ ನಿಂತು ಕೂಗುತ್ತಾ ಸಭೆಯನ್ನು ನಿಯಂತ್ರಿಸುತ್ತಿದ್ದಂತೆ ಸಭಿಕರ ಒಂದು ಗುಂಪು ವೇದಿಕೆಗೆ ಧಾವಿಸಿ ಗಾಂಧಿಯವರ ಸುತ್ತ ಭದ್ರಕೋಟೆ ನಿರ್ಮಿಸಿತು. ಮುನ್ನೆಚ್ಚರಿಕೆಯಾಗಿ ಪೋಲೀಸರೂ ಹಾಜರಿದ್ದುದರಿಂದ ಸಭೆ ಹಿಂಸೆಗೆ ಆಸ್ಪದವಿಲ್ಲದೆ ಮುಕ್ತಾಯವಾಯಿತು.

ಗಾಂಧಿಗೆ ಅಭಿಮಾನಿಗಳಿಂದ ಭದ್ರತೆ!

ಮಾರನೆಯ ದಿನ ಪಾರ್ಸಿ ರುಸ್ತುಂಜಿ ಪಠಾಣರನ್ನೆಲ್ಲ ಕರೆಸಿ, ಗಾಂಧಿಯವರಿಂದ ಅವರೆಲ್ಲ ಸಂದೇಹಗಳನ್ನು ಪರಿಹರಿಸುವ ಪ್ರಯತ್ನ ಮಾಡಿದರಾದರೂ, ಆ ಪಠಾಣರು ಯಾರ ಮಾತೂ ಕೇಳಲೂ ಸಿದ್ಧರಿರಲಿಲ್ಲ. ತಮ್ಮ ಪೂರ್ವನಿಶ್ಚಿತ ಕಾರ್ಯಕ್ರಮದಂತೆ ಗಾಂಧಿ ಅಲ್ಲಿಂದ ಫೀನಿಕ್ಸ್‌ಗೆ ಪ್ರಯಾಣ ಬೆಳೆಸಿದರು. ಅಲ್ಲಿಗೂ ಪಠಾಣರು ಬಂದು ಹಲ್ಲೆ ಮಾಡಬಹುದೆಂದು ಗಾಂಧಿಯ ಕೆಲವು ಮಿತ್ರರು ಸಂಶಯಿಸಿ ಅವರೊಂದಿಗೆ ತಾವೂ ಫೀನಿಕ್ಸ್‌ಗೆ ಪ್ರಯಾಣ ಮಾಡಿದರು. ಅಲ್ಲಿ ತಮ್ಮ ಹವ್ಯಾಸದಂತೆ ಬಯಲಲ್ಲೇ ಮಲಗಿದ ಗಾಂಧಿಯವರನ್ನು ಇಡೀ ರಾತ್ರಿ ಕಾದು, ಅಪಾಯವಿಲ್ಲವೆಂದು ಅರಿತು ಮಾರನೆಯ ದಿನ ಡರ್ಬಾನ್‌ಗೆ ವಾಪಸಾದರು. ಜೊಹಾನ್ಸ್‌ಬರ್ಗ್‌ನಲ್ಲಿ ಗಾಂಧಿ ಮೇಲಿನ ಹಲ್ಲೆಯಿಂದ ಆತಂಕಿತರಾಗಿದ್ದ ಕಸ್ತೂರಬಾ ಮತ್ತು ಮಕ್ಕಳನ್ನೊಳಗೊಂಡಂತೆ ಫೀನಿಕ್ಸ್ ಆಶ್ರಮವಾಸಿಗಳು ಗಾಂಧಿಯವರನ್ನು ಕಂಡು ಸಮಾಧಾನಗೊಂಡರು.

ಫೀನಿಕ್ಸ್‌ನಲ್ಲಿ ಕೆಲವು ದಿನ ತಂಗಿದ ಗಾಂಧಿ ಆ ಸಮಯದಲ್ಲಿ ಒಪ್ಪಂದದ ಬಗ್ಗೆ ಭಾರತೀಯರ ಮನಸ್ಸಿನಲ್ಲಿ ಸೃಷ್ಟಿಯಾಗಬಹುದಾದ ಎಲ್ಲ ಸಂದೇಹಗಳನ್ನೂ ಊಹಿಸಿ ಸಂಪಾದಕ-ಓದುಗರ ಪ್ರಶ್ನೋತ್ತರ ರೂಪದಲ್ಲಿ ಒಂದು ದೀರ್ಘ ಲೇಖನವನ್ನು 'ಇಂಡಿಯನ್ ಒಪಿನಿಯನ್' ಪತ್ರಿಕೆಗಾಗಿ ಬರೆದರು. ಈ ಲೇಖನದ ಮೂಲಕ ಗಾಂಧಿ ಕಂಡುಕೊಂಡ ಈ ನವೀನ ಪರಿಣಾಮಕಾರಿ ಸಂವಹನ ರೂಪವು ಮುಂದೆ ಅವರು ಬರೆದ ಆಧುನಿಕ ಕಾಲದ ಮೂಲಭೂತ ಕೃತಿಗಳಲ್ಲಿ ಒಂದು ಎನಿಸಿರುವ 'ಹಿಂದ್ ಸ್ವರಾಜ್'ನಲ್ಲಿ ತನ್ನ ಅತ್ಯುನ್ನತ ಸಾರ್ಥಕತೆಯನ್ನು ಕಂಡುಕೊಂಡಿದ್ದನ್ನು ಮುಂದೆ ನಾವು ಗಮನಿಸಬಹುದು. ಇದರ ಪರಿಣಾಮವಾಗಿ ಆವರೆಗೆ ನೋಂದಣಿ ಮಾಡಿಸದೆ ಉಳಿದಿದ್ದ ಬಹಳಷ್ಟು ಭಾರತೀಯರು ನೋಂದಣಿಗೆ ಮುಂದಾದರು. ಅಧಿಕಾರಿಗಳು ನಿರ್ವಹಿಸಲಾಗದಷ್ಟು ಜನಸಂದಣಿ ನೋಂದಣಿ ಕಛೇರಿಗಳ ಮುಂದೆ ಸೃಷ್ಟಿಯಾಯಿತು. ತಮ್ಮ ಲೇಖನದಲ್ಲಿ ಗಾಂಧಿ, ಒಪ್ಪಂದದ ಬಗ್ಗೆ ಮಾತ್ರ ಬರೆಯದೆ ಸತ್ಯಾಗ್ರಹದ ಪರಿಕಲ್ಪನೆಯ ಸೂಕ್ಷ್ಮಗಳನ್ನು ವಿವರಿಸುತ್ತಾ, ಉದ್ವೇಗ-ಸಂಶಯ-ಹಿಂಸೆಗಳ ಭಾವನೆಗಳಿಗೆ ಒಳಗಾದ ವ್ಯಕ್ತಿಯ ಮನಸ್ಸಿಗೆ ಮಂಕು ಹಿಡಿದು ಸತ್ಯ ವಿರೂಪವಾಗಿ ಕಾಣುವ ಅಪಾಯದ ಬಗ್ಗೆ ಎಚ್ಚರಿಸಿದ್ದರು. ಸತ್ಯಾಗ್ರಹದ ಮೂಲಾಧಾರ ನಿರ್ಭಯತೆ ಮತ್ತು ಸತ್ಯದಲ್ಲಿ ನಿಷ್ಠೆ ಮತ್ತು ನಂಬಿಕೆ ಎಂದು ಹೇಳಿದ್ದರು.

ನಂತರ ಜೊಹಾನ್ಸ್‌ಬರ್ಗ್‌ಗೆ ಹಿಂತಿರುಗಿದ ಗಾಂಧಿ, ಪೊಲಾಕ್ ದಂಪತಿಗಳಿಗೆ ಈಗ ಮಗುವಾಗಿ ಅವರ ಕುಟುಂಬಕ್ಕೆ ಸ್ವಲ್ಪ ಹೆಚ್ಚು ನಿವಾಸದ ಜಾಗ ಬೇಕಾದುದನ್ನು ಅರಿತರು. ಅವರು ಮಾರ್ಚ್‌ನಲ್ಲಿ ತಮ್ಮ ನಿವಾಸವನ್ನು ಹೊಸ ಗೆಳೆಯ ಹೆರ್ಮನ್ ಕಲೆನ್‌ಬಾಕ್‌ನ ಮನೆಗೆ ಸ್ಥಳಾಂತರಿಸಿದರು. ಆವರೆಗೆ ಶ್ರೀಮಂತ ಶೈಲಿಯಲ್ಲಿ ಜೀವನ ನಡೆಸುತ್ತಿದ್ದ ಕಲೆನ್‌ಬಾಕ್, ಗಾಂಧಿ ತನ್ನ ಜೊತೆ ಸೇರಿದ ನಂತರದಲ್ಲೇ ಅತಿ ಸರಳ ಜೀವನಕ್ಕೆ ಒಗ್ಗಿಕೊಳ್ಳಬೇಕಾಯಿತು. ಈ ಬದಲಾವಣೆಯನ್ನು ಅವನು ಸಂತೋಷದಿಂದಲೇ ಒಪ್ಪಿಕೊಂಡ. ಅಡುಗೆ, ಸ್ವಚ್ಛತೆ ಸೇರಿದಂತೆ ಎಲ್ಲ ಗೃಹ ಜವಾಬ್ದಾರಿಗಳನ್ನೂ ಯಾವ ಸೇವಕನ ನೆರವಿಲ್ಲದೇ ಅವರಿಬ್ಬರೇ ನಿರ್ವಹಿಸುತ್ತಾ ಆಪ್ತ ಸ್ನೇಹಿತರಾದರು. ಪ್ರಯೋಗಶೀಲ ಬದುಕಿನ ಹಂಬಲವಿದ್ದ ಕಲೆನ್‌ಬಾಕ್, ಗಾಂಧಿಯಂತೆಯೇ ದ.ಆಫ್ರಿಕಾದ ಭಾರತೀಯರ ಆಂದೋಲನ ಸ್ವಲ್ಪ ಕಾಲದಲ್ಲೇ ಮುಗಿತಾಯ ಕಾಣುವುದೆಂದು ಭಾವಿಸಿದ್ದ. ಗಾಂಧಿ ವೈದ್ಯಕೀಯ ಕ್ಷೇತ್ರದಲ್ಲಿ ಹೊಂದಿದ್ದ ಆಸಕ್ತಿಯನ್ನು ಗಮನಿಸಿದ್ದ ಆತ ಆಂದೋಲನ ಮುಕ್ತಾಯವಾದ ನಂತರ ಇಬ್ಬರೂ ಲಂಡನ್‌ಗೆ ಹೋಗಿ ವೈದ್ಯಕೀಯ ಶಿಕ್ಷಣ ಪಡೆದು ಅಲ್ಲಿಯೇ ಒಳ್ಳೆಯ ಸ್ನೇಹಿತರಾಗಿ ತಂಗಬಹುದೆಂದೂ ಕನಸು ಕಟ್ಟಿಕೊಂಡಿದ್ದ. ಇದಕ್ಕೆ ಸಾಕಷ್ಟು ಪುರಾವೆಗಳಿವೆ ಎಂದು ರಾಮಚಂದ್ರ ಗುಹಾ ತಮ್ಮ 'ಗಾಂಧಿ ಬಿಫೋರ್ ಇಂಡಿಯಾ' ಕೃತಿಯಲ್ಲಿ ಬರೆಯುತ್ತಾರೆ.

ಅದೇನೇ ಇರಲಿ, ಈ ಹೊತ್ತಿಗೆ ಮೋಹನದಾಸ ಕರಮಚಂದ ಗಾಂಧಿ ಎಂಬ ಹೆಸರು ಅವರ ಈ ನವೀನ ರೀತಿಯ ಹೋರಾಟದಿಂದಾಗಿ ಜಗತ್ತಿನಾದ್ಯಂತ ಉಲ್ಲೇಖಗೊಳ್ಳತೊಡಗಿತ್ತು. ಭಾರತದಲ್ಲಂತೂ, ವಿಶೇಷವಾಗಿ ಅವರ ಪ್ರಾಂತ್ಯ ಗುಜರಾತ್‌ನಲ್ಲಿ, ನಿರ್ದಿಷ್ಟವಾಗಿ ಅವರ ಊರು ಪೋರ್‌ಬಂದರಿನಲ್ಲಿ ಗಾಂಧಿ ಸಾಧನೆಯನ್ನು ಮೆಚ್ಚುವ ಹಲವು ಸಭೆಗಳು ನಡೆದವು. ಆಂಗ್ಲಭಾಷಾ ಪತ್ರಿಕೆಗಳಲ್ಲದೆ ವಿವಿಧ ಭಾರತೀಯ ಭಾಷಾ ಪತ್ರಿಕೆಗಳಲ್ಲೂ ಗಾಂಧಿ ಹೋರಾಟ ಕುರಿತು ವಿಶೇಷ

ಲೇಖನಗಳು ಪ್ರಕಟವಾದವು. ಇವೆಲ್ಲವೂ ಸೇರಿ, ಪೋರ್‌ಬಂದರ್ ಸಭೆಯ ನಿರ್ಣಯವೊಂದು ಸೂಚಿಸಿದ್ದಂತೆ, ಭಾರತದ ವಿಧಿ ಮತ್ತು ಭವಿಷ್ಯ ಗಾಂಧಿಯ ವ್ಯಕ್ತಿತ್ವದೊಂದಿಗೆ ಹೆಣೆದುಕೊಂಡಿದೆ ಎಂಬ ಭಾವನೆ ಸುಪ್ತವಾಗಿಯಾದರೂ ಭಾರತದಾದ್ಯಂತ ಮೂಡಲು ಕಾರಣವಾಯಿತು.

ಸ್ಮಟ್ಸ್ ಬಗೆದ ವಿಶ್ವಾಸ ದ್ರೋಹ–ಆಘಾತಗೊಂಡ ಗಾಂಧಿ

ಆದರೆ ಕೆಲವೇ ದಿನಗಳಲ್ಲಿ ಗಾಂಧಿ ಜನರಲ್ಲಿ ಬಿತ್ತಿದ್ದ ಸತ್ಯ ಕುರಿತ ನಂಬಿಕೆ–ನಿಷ್ಠೆಗಳು ತೀವ್ರವಾಗಿ ಅಲುಗಾಡುವಂತಹ ರಾಜಕೀಯ ಬೆಳವಣಿಗೆಯೊಂದು ಸಂಭವಿಸಿಬಿಟ್ಟಿತು. ೧೯೦೮ರ ಏಪ್ರಿಲ್ ಕೊನೆಯ ವಾರದಲ್ಲಿ ನೆಟಾಲ್ ಸರ್ಕಾರ ಕರಾರು ಕೂಲಿಗಳ ವ್ಯವಸ್ಥೆಯನ್ನು ನಿಷೇಧಿಸುವ, ಹೊಸದಾಗಿ ಯಾವ ಭಾರತೀಯನಿಗೂ ವ್ಯಾಪಾರದ ಅನುಮತಿ ಪತ್ರ ನೀಡದಿರುವ ಮತ್ತು ಈಗಿರುವ ಅನುಮತಿಗಳನ್ನು ಹತ್ತು ವರ್ಷಗಳ ಕಾಲ ಮಾತ್ರ ಉಳಿಸಿಕೊಂಡು ನಂತರ ಒಂದು ಸೂತ್ರಬದ್ಧ ಪರಿಹಾರ ನೀಡಿ ರದ್ದುಗೊಳಿಸುವುದಕ್ಕೆ ಅವಕಾಶ ಮಾಡಿಕೊಡುವ ಮಸೂದೆಗಳನ್ನು ಸಿದ್ಧಪಡಿಸಿತು. ಗಾಂಧಿ ಮೊದಲನೆಯ ಮಸೂದೆಯನ್ನು ಸ್ವಾಗತಿಸಿದರಾದರೂ ಮಿಕ್ಕೆರಡು ಮಸೂದೆಗಳ ಬಗ್ಗೆ ಆತಂಕ ವ್ಯಕ್ತಪಡಿಸಿ ಅವನ್ನು ಸಾತ್ವಿಕ ಪ್ರತಿರೋಧದ ಮೂಲಕ ವಿರೋಧಿಸುವುದಾಗಿ ಹೇಳಿದರು. ಈ ಪ್ರತಿಕೂಲ ಬೆಳವಣಿಗೆಯ ಬಗ್ಗೆ ಗಾಂಧಿ ಚಿಂತಿತರಾಗಿದ್ದ ಸಮಯದಲ್ಲೇ ಟ್ರಾನ್ಸ್‌ವಾಲ್‌ನಲ್ಲಿ ಮೇ ಕೊನೆಯ ವಾರದಲ್ಲಿ ಜ. ಸ್ಮಟ್ಸ್ ಗಾಂಧಿಯವರೊಂದಿಗೆ ಮಾಡಿಕೊಂಡಿದ್ದ ಒಪ್ಪಂದವನ್ನು ನಿರಾಕರಿಸುವಂತಹ ಶಾಸನಾತ್ಮಕ ಕ್ರಮವೊಂದನ್ನು ಸರ್ಕಾರ ಪ್ರಕಟಿಸಿತು. ಜ. ಸ್ಮಟ್ಸ್ ಗಾಂಧಿಯ ಜೊತೆ ಮಾತುಕತೆ ನಡೆಸಿ ರೂಪಿಸಿದ್ದ ರಾಜಿ ಒಪ್ಪಂದವನ್ನು ಮರೆತವನಂತೆ, ಭಾರತೀಯರು ಸ್ವಪ್ರೇರಣೆಯಿಂದ ನೋಂದಣಿಗೆ ಒಪ್ಪಿ ಆ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿದ್ದರೂ, ಕಡ್ಡಾಯ ನೋಂದಣಿಯ ಕರಾಳ ಶಾಸನವನ್ನು ಹಿಂತೆಗೆದುಕೊಳ್ಳಲು ನಿರಾಕರಿಸಿದನು. ತಾನು ಗಾಂಧಿಯವರಿಗೆ ಆ ರೀತಿ ಮಾತು ಕೊಟ್ಟಿದ್ದಿಲ್ಲ ಎಂದು ಅವನು ನೇರವಾಗಿ ಹೇಳಿದನು. ಬದಲಿಗೆ, ನೋಂದಣಿ ಮಾಡಿಸಿಕೊಂಡವರು ಮತ್ತು ನೋಂದಣಿಗೆ ಅರ್ಜಿ ಸಲ್ಲಿಸಿದವರನ್ನು ಕರಾಳ ಶಾಸನದ ವ್ಯಾಪ್ತಿಯಿಂದ ಹೊರಗಿಟ್ಟು, ನೋಂದಣಿಗೆ ಈ ಮೊದಲಿಗೆ ನಿಗದಿಯಾದ ಜುಲೈ ೩೧ರ ದಿನಾಂಕದ ನಂತರ ಅರ್ಜಿ ಸಲ್ಲಿಸುವವರಿಗೆ ಮತ್ತು ಟ್ರಾನ್ಸ್‌ವಾಲ್‌ಗೆ ವಲಸೆ ಬರುವವರಿಗೆ ಈ ಶಾಸನ ಅನ್ವಯವಾಗುವಂತೆ ಹೊಸ ಮಸೂದೆಯೊಂದನ್ನು ಶಾಸನ ಸಭೆಯ ಮುಂದೆ ಮಂಡಿಸಿದನು.

ಗಾಂಧಿಗೆ ಇದರಿಂದ ಸಹಜವಾಗಿಯೇ ಆಘಾತವೂ, ಮುಜುಗರವೂ ಒಟ್ಟಿಗೆ ಆದವು. ಅವರು ಜ. ಸ್ಮಟ್ಸ್ ರಾಜಿ ಒಪ್ಪಂದ ಪ್ರಸ್ತಾಪ ಮಾಡಿದ ದಾಖಲೆಯನ್ನು ಸರ್ಕಾರದಿಂದ ಕೇಳಿದರು. ಅದು ದೊರೆಯಲಿಲ್ಲ. ಮೂರು ಬಾರಿ ಜ. ಸ್ಮಟ್ಸ್‌ನನ್ನು ಭೇಟಿ ಮಾಡಿ ಮಾತಾಡಿದರು. ಪ್ರಯೋಜನವಾಗಲಿಲ್ಲ. ಜ. ಸ್ಮಟ್ಸ್ ತನ್ನ ಶತ್ರು ಮತ್ತು ಮಿತ್ರ ಪಾಳೆಯಗಳೆರಡರಲ್ಲೂ ವಿಶೇಷ ತೆರೆನ ಶಬ್ದಾವಳಿ, ನುಡಿಗಟ್ಟು ಮತ್ತು ವಿಶಿಷ್ಟ ವಾಕ್ಯರಚನೆಗಳಿಂದ ಕೂಡಿದ ಮಾತುಗಾರಿಕೆಯಲ್ಲಿ ಪ್ರವೀಣನೆಂದೇ ಹೆಸರಾಗಿದ್ದ! ಮಧ್ಯಸ್ಥಿಕೆ ವಹಿಸಿದ್ದ ಕಾರ್ಟ್‌ರೈಟ್‌ರನ್ನು ಗಾಂಧಿ ಭೇಟಿ ಮಾಡಿದರು. ಆತ ಸ್ಮಟ್ಸ್ ಅನುಪಮ ವಾಕ್ಚತುರನಾಗಿದ್ದು ಅವನ ಮಾತುಗಳಿಗೆ ಅವನೇ ವ್ಯಾಖ್ಯಾನಕಾರನಾಗಿರುವುದರಿಂದ ಆ ಭಂಡನೊಡನೆ ಮಾತನಾಡಿ

ಪ್ರಯೋಜನವಿಲ್ಲವೆಂದುಬಿಟ್ಟರು. ಕೊನೆಗೆ ಗಾಂಧಿ ಸ್ಮಟ್ಸ್‌ನನ್ನು ಸಾರ್ವಜನಿಕವಾಗಿ 'ನಿರ್ದಯಿ' ಎಂದು ಕರೆದು ಆತನ ವರ್ತನೆಯನ್ನು ಭಂಡಾಟ ಎಂದು ವರ್ಣಿಸಿದರು. (ಆದರೆ ಗಾಂಧಿ ಇದಾದ ೧೫ ವರ್ಷಗಳ ನಂತರ 'ದ.ಆಫ್ರಿಕಾದಲ್ಲಿ ಸತ್ಯಾಗ್ರಹ' ಎಂಬ ಶೀರ್ಷಿಕೆಯಡಿ ತಮ್ಮ ಈ ನೆನಪುಗಳನ್ನು ಬರೆದಾಗ, ಹಿನ್ನೋಟದಲ್ಲಿ ಸ್ಮಟ್ಸ್‌ನ ಬಗೆಗಿನ ತಮ್ಮ ಈ ಮಾತುಗಳು ಉದ್ವಿಗ್ನತೆಯ ಫಲಗಳಿರಬಹುದು, ಆತನ ತಿಳುವಳಿಕೆಯನ್ವಯ ಆತನ ಅಭಿಪ್ರಾಯವೇ ಸರಿಯಿತ್ತೇನೋ ಎಂಬ ಸಂದೇಹವನ್ನು ವ್ಯಕ್ತಪಡಿಸಿದ್ದಾರೆ!)

ಸತ್ಯಾಗ್ರಹ ಕುರಿತು ಮತ್ತಷ್ಟು ವಿವರಣೆ

ಅದೇನೇ ಇದ್ದರೂ, ಕೆಲವು ಭಾರತೀಯರು ಈಗ ಗಾಂಧಿಯನ್ನು 'ಭೋಳೆ' ಮನುಷ್ಯ ಎಂದು ಟೀಕಿಸಿದರು. ಅದಕ್ಕೆ ಗಾಂಧಿ ಜನಸೇವಕನಾದವನು ಇಂತಹ ಟೀಕೆಗಳಿಂದ ಎದೆಗುಂದದೆ ಇನ್ನಷ್ಟು ಎಚ್ಚರಿಕೆ-ಶ್ರದ್ಧೆಗಳಿಂದ ಕೆಲಸ ಮಾಡುವವನೆಂದೂ, ಜನ ತಮ್ಮ ನಾಯಕನೆಂದು ಆಯ್ದುಕೊಂಡವನನ್ನು ಆತನ ಲೋಪ-ದೋಷಗಳೊಂದಿಗೆ ಸಹಿಸಬೇಕಾಗುತ್ತದೆಂದೂ ಪ್ರತಿಕ್ರಿಯಿಸಿದರು. ಜೊತೆಗೆ ಭಾರತೀಯರು ಈ ಆಘಾತದಿಂದ ಎದೆಗುಂದದೆ ಇನ್ನಷ್ಟು ಹುರುಪಿನಿಂದ ಅನ್ಯಾಯದ ವಿರುದ್ಧ ಹೋರಾಡಲು ಕೆಚ್ಚು ಬೆಳೆಸಿಕೊಳ್ಳಬೇಕೆಂದು ಸೂಚಿಸಿದರು. ಅವರು ಈ ಸಂದರ್ಭದಲ್ಲಿ ಜನರಿಗೆ ಸತ್ಯಾಗ್ರಹದ ಅಂತಃಶಕ್ತಿಯ ಬಗ್ಗೆ ಇನ್ನಷ್ಟು ವಿವರಣೆ ನೀಡಿದರು. ಇಂತಹ ಅನಿರೀಕ್ಷಿತ ಬಿಕ್ಕಟ್ಟುಗಳೇ ಎದುರಾಳಿಯ ಮನಸ್ಸಿನ ಒಳ ಪದರಗಳನ್ನು ಸತ್ಯಾಗ್ರಹಿಗೆ ಪರಿಚಯ ಮಾಡಿಕೊಡುವುದೆಂದೂ, ಅದು ಸತ್ಯಾಗ್ರಹಿಯನ್ನು ಸತ್ಯವನ್ನು ಇನ್ನಷ್ಟು ಸ್ಪಷ್ಟವಾಗಿ ಅರಿಯಲು ಮತ್ತು ಆ ಮೂಲಕ ಎದುರಾಳಿಗೂ ಅದರ ದರ್ಶನ ಮಾಡಿಸಲು ಸಾಧ್ಯವಾಗುವುದೆಂದೂ ಅವರು ವಿಶ್ಲೇಷಿಸಿ ಹೇಳಿದರು. ಗಾಂಧಿಯ ನಾಯಕತ್ವವನ್ನು ನಿರಾಕರಿಸಲಾಗದ ಬಹುತೇಕ ಭಾರತೀಯರು ಮತ್ತೆ ಉತ್ಸಾಹಿತರಾದರು. ಅವರೆಲ್ಲ ಈಗ ದ.ಆಫ್ರಿಕಾದ ಎಲ್ಲ ಭಾರತೀಯರ ಎಲ್ಲ ಸಂಕಷ್ಟಗಳನ್ನೂ ಮುಂದಿಟ್ಟುಕೊಂಡು ಸತ್ಯಾಗ್ರಹದ ವ್ಯಾಪ್ತಿಯನ್ನು ವಿಸ್ತರಿಸಬೇಕೆಂದು ಒತ್ತಾಯಿಸತೊಡಗಿದರು. ಆದರೆ ಗಾಂಧಿ ದಾರಿ ಮಧ್ಯದಲ್ಲಿ ಗುರಿ ಬದಲಾಯಿಸುವುದು ಸತ್ಯಾಗ್ರಹದ ಕಲ್ಪನೆಯ ಶಿಸ್ತಿಗೆ ವಿರುದ್ಧವಾಗಿದ್ದು, ಅದು ನಮ್ಮನ್ನು ನಮಗೆ ಗೊತ್ತಿಲ್ಲದಂತೆಯೇ ಅಂತಿಮ ಗುರಿಯಿಂದ ವಿಚಲಿತಗೊಳಿಸುವುದೆಂದು ಹೇಳಿ ಆ ಒತ್ತಾಯವನ್ನು ತಳ್ಳಿಹಾಕಿದರು.

ಆದರೆ ಮೇ ೧೭ರಂದು ಗಾಂಧಿಯ ಅನುಯಾಯಿ ಹಾಗೂ ಬ್ರಿಟಿಷ್ ಭಾರತೀಯರ ಸಂಘದ ಅಧ್ಯಕ್ಷ ಈಸೋಪ್ ಮಿಂಯಾರ ಮೇಲೆ ಪಠಾಣರ ಗುಂಪೊಂದು ಹಲ್ಲೆ ಮಾಡಿ ಅವರನ್ನು ಗಂಭೀರವಾಗಿ ಗಾಯಗೊಳಿಸುವ ಮೂಲಕ ಗಾಂಧಿ ಹಿಡಿದಿದ್ದ ಹಾದಿಯ ಬಗ್ಗೆ ತನ್ನ ವಿರೋಧವನ್ನು ವ್ಯಕ್ತಪಡಿಸಿತು. ಗಾಂಧಿ ಈ ದುರದೃಷ್ಟಕರ ಘಟನೆಯನ್ನು ಉದಾಹರಿಸಿ ಸ್ಮಟ್ಸ್‌ಗೊಂದು ಪತ್ರ ಬರೆದು, ಇದು ಆತ ಒಪ್ಪಂದವನ್ನು ಮುರಿದು ತಮ್ಮ ಬಗ್ಗೆ ಜನರಲ್ಲಿ ಅಪನಂಬಿಕೆ ಹುಟ್ಟಿಸಿದ್ದರ ಫಲವಾಗಿದೆ ಎಂದು ವಿವರಿಸಿದರು. ಸರ್ಕಾರದೊಂದಿಗೆ ಸಹಕರಿಸಿದ ಜನರಿಗಾಗಿಯಾದರೂ ಕರಾಳ ಶಾಸನವನ್ನು ರದ್ದುಗೊಳಿಸಬೇಕೆಂದು ಸರ್ಕಾರವನ್ನು ಕೋರಿದರು. ಹಲ್ಲೆಗೊಳಗಾದ ಈಸೋಪ್ ಮಿಂಯಾ ಕೂಡಲೇ ಅಲ್ಲದಿದ್ದರೂ ಕ್ರಮೇಣ ಸಾರ್ವಜನಿಕ ಜೀವನದಿಂದ ದೂರವಾದರು.

■

೨೨
ವಲಸೆ ಹತೋಟಿಯ 'ಕರಾಳ ಶಾಸನ': ರಹದಾರಿ ಪತ್ರಗಳ ಸಾಮೂಹಿಕ ದಹನ

ಈ ನಂತರದಲ್ಲೇ ಗಾಯದ ಮೇಲೆ ಉಪ್ಪು ಸವರಿದಂತೆ ಟ್ರಾನ್ಸ್‌ವಾಲ್ ಸರ್ಕಾರ 'ವಲಸೆ ಹತೋಟಿ' ಎಂಬ ಇನ್ನೊಂದು ಶಾಸನವನ್ನು ಜಾರಿಗೆ ತಂದು, ಆ ಪ್ರಾಂತ್ಯಕ್ಕೆ ವಲಸೆ ಬರುವ, ಯಾವುದೇ ದಾಖಲೆಗಳ ಪುರಾವೆ ಇಲ್ಲದ ಹಳೆಯ ನಿವಾಸಿಗಳಿಗೆ ಕೆಲವು ಅರ್ಹತೆಗಳನ್ನು ನಿಗದಿ ಮಾಡಿತು. ಅದರ ಪ್ರಕಾರ ಅರ್ಜಿಗಳನ್ನು ಇಂಗ್ಲಿಷ್ ಅಥವಾ ಇತರ ಕೆಲವು ನಿರ್ದಿಷ್ಟ ಐರೋಪ್ಯ ಭಾಷೆಯಲ್ಲಿ ತುಂಬಬೇಕಾಗಿತ್ತು ಮತ್ತು ವೇಶ್ಯೆಯರು, ಕುಷ್ಠ ರೋಗಿಗಳು, ಪೋಲೀಸ್ ಏಜೆಂಟರು, ಇತ್ಯಾದಿ ಪ್ರತಿಬಂಧಿತ ಜನವರ್ಗಕ್ಕೆ ಮೀಸಲಿಟ್ಟಂತೆ ಅವರಿಗೂ ಒಂದು ಮೀಸಲಿಟ್ಟ ಪ್ರದೇಶಗಳಲ್ಲಿ ವಲಸೆಗಾರರು ನೆಲೆಸಬೇಕಿತ್ತು. ಹಳೆಯ ಕರಾಳ ಶಾಸನಕ್ಕೆ ಪೂರಕವಾಗಿ, ಮತ್ತೆ ಭಾರತೀಯರಾರೂ ಟ್ರಾನ್ಸ್‌ವಾಲ್‌ನ್ನು ಪ್ರವೇಶಿಸದಂತೆ ತಡೆಯುವ ಮತ್ತು ಇರುವವರನ್ನು ಕ್ರಮೇಣ ಹೊರಕ್ಕಟ್ಟುವ ಉದ್ದೇಶವನ್ನೇ ಇದು ಹೊಂದಿತ್ತು. ಇದು ದ.ಆಫ್ರಿಕಾದ ನಾಲ್ಕೂ ಪ್ರಾಂತ್ಯಗಳನ್ನು ಒಟ್ಟಿಗೆ ಬ್ರಿಟಿಷ್ ಸಾಮ್ರಾಜ್ಯದ ಭಾಗವಾಗಿ ಒಂದು ಒಕ್ಕೂಟ ಮಾಡಿಕೊಳ್ಳಲು ನಡೆದಿದ್ದ ನಾಲ್ಕೂ ಪ್ರಾಂತ್ಯಗಳ ಅಧಿಪತಿಗಳ ಸಭೆಗಳ ನಡಾವಳಿಯ ಫಲವಾಗಿತ್ತು. ಈ ಒಕ್ಕೂಟದ ಪೂರ್ಣ ಅಧಿಕೃತ ಹತೋಟಿ ಶ್ವೇತವರ್ಣೀಯರ ಕೈಯಲ್ಲೇ ಉಳಿಯುವಂತೆ ಮಾಡಲು ಜ. ಸ್ಮಟ್ಸ್ ಮತ್ತು ಅವರ ಸಮಾನಮನಸ್ಕ ಬಿಳಿಯರು ಈ ಸಭೆಗಳಲ್ಲಿ ನಡೆಸಿದ್ದ ಪ್ರಯತ್ನದ ಭಾಗ ಇದಾಗಿತ್ತು. ಅವರ ಪ್ರಕಾರ ಭಾರತೀಯರು ಜಿಪುಣರೂ, ಕೊಳಕರೂ ವ್ಯಾಪಾರ ನೀತಿ ಸಂಹಿತೆಯೊಂದನ್ನೂ ಪಾಲಿಸದ ಅಸಭ್ಯರೂ ಆಗಿದ್ದು, ಪ್ರಗತಿಶೀಲ ರಾಜ್ಯ ವ್ಯವಸ್ಥೆಗೆ ಕಂಟಕರೂ ಆಗಿದ್ದರು. ಇವರೂ ಸೇರಿದಂತೆ ಏಷಿಯನ್ ಜನಾಂಗದವರಿಗೆ ಮುಕ್ತ ಮತದಾನದ ಹಕ್ಕು ನೀಡುವುದು ಅಪಾಯಕಾರಿ ಎಂದು ಅವರು ವಾದಿಸುತ್ತಿದ್ದರು. ಆದರೆ ಈ ಹಿಂದೆ ಪ್ರಸ್ತಾಪಿಸಿದ ಶ್ರೈನರ್ ಪ್ರಧಾನಿಯಾಗಿದ್ದ ಕೇಪ್‌ಟೌನ್ ಪ್ರಾಂತ್ಯ ಮಾತ್ರ ಈ ಪ್ರಯತ್ನಕ್ಕೆ ವಿರುದ್ಧವಾಗಿತ್ತು. ಶ್ರೈನರ್ ಅವರ ತಂಗಿ ಲೇಖಕಿ ಆಲಿವ್ ಶ್ರೈನರ್ ಈ ವರ್ಣಭೇದ ನೀತಿಯ ವಿರುದ್ಧ ಸಾರ್ವಜನಿಕ ಪ್ರತಿಭಟನೆಗಳನ್ನೂ ಆಯೋಜಿಸಿದರು. ಈ ಅಣ್ಣ–ತಂಗಿಯರು ದ.ಆಫ್ರಿಕಾದಲ್ಲಿ ನೆಲೆಸಿರುವ ಎಲ್ಲರಿಗೂ ಯಾವುದೇ ಜನಾಂಗಭೇದವಿಲ್ಲದೆ ವಯಸ್ಕ ಮತದಾನದ ಹಕ್ಕು ನೀಡಬೇಕೆಂದು ವಾದಿಸುತ್ತಿದ್ದರು.

ಮೇ ೨೫ರಂದು ಜ. ಸ್ಮಟ್ಸ್, ನೋಂದಣಿಯನ್ನು ಶಾಸನಬದ್ಧಗೊಳಿಸುವ ಸರ್ಕಾರದ ನಿರ್ಧಾರವನ್ನು ಗಾಂಧಿಗೆ ತಿಳಿಸಿದ. ಮಾರನೆಯ ದಿನವೇ ಸಭೆ ಸೇರಿದ

ಜೊಹಾನ್ಸ್‌ಬರ್ಗ್‌ನ ಭಾರತೀಯ ಸಮುದಾಯವನ್ನು ಉದ್ದೇಶಿಸಿ ಮಾತನಾಡಿದ ಗಾಂಧಿ, ತಾವು ಜ. ಸ್ಮಟ್ಸ್ ಕಳಿಸಿದ್ದ ರಾಜಿ ಸೂತ್ರದ ಬಗ್ಗೆ ತಮ್ಮ ಅನುಯಾಯಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ತಪ್ಪು ಮಾಡಿದ್ದಾಗಿ ಕೆಲವರು ಹೇಳುತ್ತಿರುವುದು ಸರಿಯೆಂದೂ, ಆ ತಪ್ಪಿಗೆ ತಾವು ಜ. ಸ್ಮಟ್ಸ್ ಅಲಂಕರಿಸಿರುವ ಉನ್ನತ ಸ್ಥಾನದ ಘನತೆಯಲ್ಲಿ ನಂಬಿಕೆ ಇಟ್ಟಿದ್ದೇ ಕಾರಣವೆಂದೂ ಹೇಳಿದರು. ಹೋರಾಟಕ್ಕೆ ಮತ್ತೆ ಸಿದ್ಧರಾಗಲು ಭಾರತೀಯರನ್ನು ಹುರಿದುಂಬಿಸಿದರು. ಜೂನ್ ೨೪, ೧೯೦೮ರ ಮಧ್ಯಾಹ್ನ ಜೊಹಾನ್ಸ್‌ಬರ್ಗ್‌ನ ಫೋರ್ಡ್‌ಬರ್ಗ್ ಮಸೀದಿಯಲ್ಲಿ ಸೇರಿದ ಟ್ರಾನ್ಸ್‌ವಾಲ್‌ನ ಎಲ್ಲ ಭಾರತೀಯ ಪ್ರತಿನಿಧಿಗಳು ಸ್ವಯಂಪ್ರೇರಣೆ ನೋಂದಣಿಗಾಗಿ ಸಲ್ಲಿಸಿರುವ ಅರ್ಜಿಗಳನ್ನು ಹಿಂತೆಗೆದುಕೊಳ್ಳಲು ನಿರ್ಧರಿಸಿದರು. ಅಲ್ಲದೆ, ೧೯೦೬ರ ಸೆಪ್ಟೆಂಬರ್ ೧೧ರಂದು ಮಾಡಿದ ಪ್ರತಿಜ್ಞೆಯಂತೆ ಕರಾಳ ಏಷಿಯಾಟಿಕ್ ತಿದ್ದುಪಡಿ ಶಾಸನಕ್ಕೆ ಮಣಿಯದೆ, ಇದಕ್ಕಾಗಿ ನಾಡಿನ ನಿಷ್ಠಾವಂತ ಮತ್ತು ಆತ್ಮನಿಷ್ಠ ಪ್ರಜೆಗಳಾಗಿ ಯಾವುದೇ ಸಂಕಷ್ಟಗಳನ್ನು ಅನುಭವಿಸಲು ಸಿದ್ಧವಿರುವುದಾಗಿ ಹೇಳುವ ನಿರ್ಣಯವೊಂದನ್ನು ಅಂಗೀಕರಿಸಿದರು.

ಗಡಿ ದಾಟುವ ಸತ್ಯಾಗ್ರಹ

ಗಾಂಧಿ ಮತ್ತು ಅವರ ಅನುಯಾಯಿಗಳು ಈಗ ಈ ಜೋಡಿ ಅನಿಷ್ಟ ಶಾಸನಗಳಿಗೆ ಸಾಮಾನ್ಯ ಪ್ರತಿಭಟನೆಯಾಗಿ ನೆಟಾಲ್‌ನ ಇಂಗ್ಲಿಷ್ ಬಲ್ಲ ಹಿರಿಯ ಭಾರತೀಯರನ್ನು ಟ್ರಾನ್ಸ್‌ವಾಲ್‌ಗೆ ವಲಸೆಗಾರರಂತೆ ಕಳಿಸಲು ತೀರ್ಮಾನಿಸಿದರು. ಹಾಗೆ ಮೊದಲ ಸತ್ಯಾಗ್ರಹಿಯಾಗಿ ಟ್ರಾನ್ಸ್‌ವಾಲ್‌ನ್ನು ಪ್ರವೇಶಿಸಲು ಸ್ವಯಂಪ್ರೇರಣೆಯಿಂದ ಮುಂದಾದ ಸತ್ಯಾಗ್ರಹಿ ಎಂದರೆ ಚಾರ್ಲ್ಸ್‌ಟೌನ್‌ನ ನಿವಾಸಿ ಮತ್ತು ಗಾಂಧಿ ಅನುಯಾಯಿಯಾದ ತರುಣ ವಕೀಲ ಸೊರಾಬ್ಜಿ ಶಾಪೂರ್ಜಿ ಅಡಾಜನಿಯಾ. ಆತ ಮುಂಚೆಯೇ ಟ್ರಾನ್ಸ್‌ವಾಲ್‌ಗೆ ವಲಸೆ ಬರುತ್ತಿರುವುದಾಗಿಯೂ, ತನಗೆ ವಲಸೆ ಬರಲು ಇರುವ ಇಂಗ್ಲಿಷ್ ಜ್ಞಾನ ಇತ್ಯಾದಿ ಅರ್ಹತೆಗಳಿವೆ ಎಂದು ತಿಳಿಸಿ ನೆಟಾಲ್ ಗಡಿಯನ್ನು ದಾಟಿ ಟ್ರಾನ್ಸ್‌ವಾಲ್‌ನ್ನು ಪ್ರವೇಶಿಸಿದ. ಭಾರತೀಯರ ಆಶ್ಚರ್ಯಕ್ಕೆ ಸೊರಾಬ್ಜಿಯನ್ನು ಗಡಿಯಲ್ಲಿ ಪೊಲೀಸರು ತಡೆಯದೆ ಜೊಹಾನ್ಸ್‌ಬರ್ಗ್‌ಗೆ ಹೋಗಲು ಬಿಟ್ಟರು. ಭಾರತೀಯರು ಇದನ್ನು ಸರ್ಕಾರ ತಮ್ಮ ಪ್ರತಿರೋಧಕ್ಕೆ ಮಣಿದಿದೆ ಎಂದು ಸಂತೋಷಿಸುವ ಮುನ್ನವೇ ಪೊಲೀಸರು ಆತನಿಗೆ ಸಮನ್ಸ್ ನೀಡಿ ನ್ಯಾಯಾಲಯಕ್ಕೆ ಹಾಜರಾಗುವಂತೆ ಸೂಚಿಸಿದರು. ನ್ಯಾಯಾಲಯದಲ್ಲಿ ಸ್ವತಃ ಗಾಂಧಿಯೇ ಸೊರಾಬ್ಜಿ ಪರವಾಗಿ ವಾದಿಸಿ ಆತನನ್ನು ಬಿಡುಗಡೆ ಮಾಡಿಸಿದರು. ಆದರೆ ಮತ್ತೆ ಎರಡು ದಿನಗಳ ನಂತರ ಪೊಲೀಸರು ಅವನನ್ನು ಕರೆದು ಟ್ರಾನ್ಸ್‌ವಾಲ್‌ನ್ನು ಬಿಡಲು ಆಜ್ಞಾಪಿಸಿದರು. ಸೊರಾಬ್ಜಿ ನಿರಾಕರಿಸಿದಾಗ ಅವನಿಗೆ ಒಂದು ತಿಂಗಳ ಸಶ್ರಮ ಶಿಕ್ಷೆ ವಿಧಿಸಿ ಸೆರೆಮನೆಗೆ ಕಳಿಸಲಾಯಿತು. ಇದರಿಂದ ಆ ಜೋಡಿ ಅನಿಷ್ಟ ಶಾಸನಗಳ ಉದ್ದೇಶ ಭಾರತೀಯರನ್ನು ಟ್ರಾನ್ಸವಾಲ್‌ನಲ್ಲಿ ಇರಗೊಡದಂತೆ ಮಾಡುವುದೇ ಆಗಿದೆ ಎಂಬುದು ಸ್ಪಷ್ಟವಾಯಿತು. ಇದಕ್ಕೆ ಸಾಕ್ಷಿಯೆಂಬಂತೆ ಶ್ವೇತವರ್ಣೀಯ ಪ್ರಜೆಗಳು ಒಟ್ಟುಗೂಡಿ 'ಸಹಕಾರ ಸಂಘ'ಗಳನ್ನು ರಚಿಸಿಕೊಂಡು ಭಾರತೀಯರೊಂದಿಗೆ ಎಲ್ಲ ರೀತಿಯ ವ್ಯವಹಾರಗಳನ್ನು ನಿಷೇಧಿಸುವ ಚಳುವಳಿಯೊಂದನ್ನು ಆರಂಭಿಸಿದರು.

ಸಾಮೂಹಿಕ ಸತ್ಯಾಗ್ರಹ – ಸೆರೆಮನೆವಾಸ

ಗಾಂಧಿ ಭಾರತೀಯರ ಪರವಾಗಿ ಒಂದು ಅಂತಿಮ ಗಡುವು ನೀಡಿ ಈ ಎರಡೂ ಶಾಸನಗಳನ್ನು ಹಿಂಪಡೆಯುವಂತೆ ಟ್ರಾನ್ಸ್‌ವಾಲ್ ಸರ್ಕಾರವನ್ನು ಆಗ್ರಹಿಸಿದರು. ಸರ್ಕಾರ ಹಾಗೆ ಮಾಡದಿದ್ದಲ್ಲಿ ಭಾರತೀಯರು ತಾವು ಪಡೆದಿರುವ ರಹದಾರಿ ಪತ್ರಗಳನ್ನು ಸುಟ್ಟು ಹಾಕುವ ಕಾರ್ಯಕ್ರಮವೊಂದನ್ನು ನಡೆಸುವುದಾಗಿ ಎಚ್ಚರಿಸಿದರು. ಜೊತೆಗೆ ನೋಂದಣಿಗೆ ಹಾಕಿದ್ದ ತಮ್ಮ ಅರ್ಜಿಗಳನ್ನು ಹಿಂತಿರುಗಿಸುವಂತೆ ಸರ್ಕಾರಕ್ಕೆ ನ್ಯಾಯಾಲಯಗಳ ಮೂಲಕ ನೋಟಿಸ್ ನೀಡಿದರು. ಆದರೆ ನ್ಯಾಯಾಲಯ ಅದೆಲ್ಲವೂ ಸರ್ಕಾರದ ಆಸ್ತಿಯೆಂದು ಭಾರತೀಯರ ಮನವಿಯನ್ನು ತಿರಸ್ಕರಿಸಿತು. ಗಾಂಧಿ ಸರ್ಕಾರದ ಅನುಮತಿ ಪತ್ರವಿಲ್ಲದೆ ಬೀದಿ ವ್ಯಾಪಾರ ಮಾಡಲು ಭಾರತೀಯರಿಗೆ ಸೂಚಿಸಿದರು. ಇದರ ಪರಿಣಾಮವಾಗಿ ಸರ್ಕಾರ ನೂರಾರು ಸಣ್ಣಪುಟ್ಟ ವ್ಯಾಪಾರಿಗಳನ್ನು ಬಂಧಿಸಿ ದಂಡ ಹಾಕಿತು. ಯಾರೂ ದಂಡ ಕೊಡಲು ಒಪ್ಪದ ಕಾರಣ ಅವರಿಗೆಲ್ಲ ಸೆರೆಮನೆಯ ವ್ಯವಸ್ಥೆ ಮಾಡಬೇಕಾಯಿತು. ಸರ್ಕಾರಕ್ಕೆ ಇದು ಕಷ್ಟವಾದಾಗ ಹಲವು ವ್ಯಾಪಾರಿಗಳ ಬಳಿಯಿದ್ದ ಸರಕನ್ನೇ ಮಾರಿ ಅವರ ಕಡೆಯ ದಂಡವನ್ನು ತುಂಬಿಕೊಳ್ಳಲಾಯಿತು. ಸೆರೆಯಲ್ಲಿದ್ದ ಸಣ್ಣ ವ್ಯಾಪಾರಿಗಳಿಗೆ ಬೆಂಬಲವಾಗಿ ಭಾರತದ ವ್ಯಾಪಾರಿಗಳು ಟ್ರಾನ್ಸ್‌ವಾಲ್‌ನಾದ್ಯಂತ ಜುಲೈ ೨೩ರಂದು ತಮ್ಮ ಅಂಗಡಿಗಳನ್ನು ಮುಚ್ಚಿ ಪ್ರತಿಭಟನೆಯನ್ನು ದಾಖಲು ಮಾಡಿದರು. ಇದು ಗಾಂಧಿ ಕರೆಕೊಟ್ಟ ಮೊದಲ ಐತಿಹಾಸಿಕ ಹರತಾಳವಾಗಿತ್ತು. ಈ ಸಂದರ್ಭದಲ್ಲಿ ಗಾಂಧಿ, ಸರ್ಕಾರ ಬಡ ಸತ್ಯಾಗ್ರಹಿಗಳನ್ನಷ್ಟೇ ಬಂಧಿಸಿ ಶಿಕ್ಷೆ ಕೊಡುತ್ತಿರುವ ಮೂಲಕ ತನ್ನ ಹೇಡಿತನವನ್ನು ಪ್ರದರ್ಶಿಸುತ್ತಿದ್ದು, ಇವರಿಗೆಲ್ಲ ಸ್ಫೂರ್ತಿಯಾಗಿರುವ ತನ್ನನ್ನೇಕೆ ಬಂಧಿಸುತ್ತಿಲ್ಲ ಎಂದು ಪ್ರಶ್ನಿಸಿದರು.

ನವೀನ ಪ್ರತಿಭಟನೆಯ ಮಾದರಿಯಾಗಿದ್ದ ಈ ಸತ್ಯಾಗ್ರಹದ ಸುದ್ದಿ ಜಗತ್ತಿನಾದ್ಯಂತ, ವಿಶೇಷವಾಗಿ ಇಂಗ್ಲೆಂಡ್ ಮತ್ತು ಭಾರತಗಳಲ್ಲಿ ವಿಶೇಷ ಕುತೂಹಲವನ್ನು ಕೆರಳಿಸಿ ಪ್ರಚಾರವಾಯಿತು. ಮೋಹನದಾಸ ಗಾಂಧಿ ಎಂಬ ಹೆಸರು ಜಗತ್ತಿನಾದ್ಯಂತ ಜನರ ಗಮನ ಸೆಳೆಯಲಾರಂಭಿಸಿತು. ಕರಾಚಿ, ಜಲಂಧರ್, ಪೋರಬಂದರ್, ಸೂರತ್, ಅಹಮದಾಬಾದ್, ಪಟ್ನಾ ಮುಂತಾದೆಡೆ ಸಾರ್ವಜನಿಕ ಸಭೆಗಳು ನಡೆದು ಗಾಂಧಿ ಹೋರಾಟಕ್ಕೆ ಬೆಂಬಲದ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಜೊತೆಗೆ ಭಾರತದ ಎಲ್ಲ ಭಾಷಾ ಪತ್ರಿಕೆಗಳೂ ಗಾಂಧಿ ಹೋರಾಟದ ಬಗ್ಗೆ ಸಹಾನುಭೂತಿಯ ಲೇಖನಗಳನ್ನು ಬರೆದವು. ಇದರ ಫಲವಾಗಿ ಭಾರತದ ಬ್ರಿಟಿಷ್ ಸರ್ಕಾರ ಎಚ್ಚೆತ್ತು ಲಂಡನ್‌ನ ಬ್ರಿಟಿಷ್ ಸಾಮ್ರಾಜ್ಯದ ಮುಖ್ಯಸ್ಥರಿಗೆ ತನ್ನ ಆತಂಕವನ್ನು ವ್ಯಕ್ತಪಡಿಸಿ ಪತ್ರ ಬರೆಯಿತು.

ರಹದಾರಿ ಪತ್ರಗಳ ದಹನ : ಗಾಂಧಿಗೆ ಸೆರೆವಾಸ

ಅದು ೧೯೦೮ರ ಆಗಸ್ಟ್ ೧೬ರ ದಿನ. ಅಂದೇ ಹೊಸ ಶಾಸನಗಳು ಶಾಸನ ಸಭೆಯಿಂದ ಅನುಮೋದಿತವಾಗುವ ದಿನವೂ ಮತ್ತು ಗಾಂಧಿ ಕಡೆಯಿಂದ ನೀಡಲಾಗಿದ್ದ ಅಂತಿಮ ಗಡುವಿನ ದಿನವೂ ಆಗಿತ್ತು. ಅಂದು ಜೊಹಾನ್ಸ್‌ಬರ್ಗ್‌ನ ಹಮೀದಿಯಾ

ಮಸೀದಿಯ ಮೈದಾನದಲ್ಲಿ ಭಾರತೀಯರ ರಹದಾರಿ ಪತ್ರಗಳನ್ನು ಸಾಮೂಹಿಕವಾಗಿ ಸುಡುವ ಕಾರ್ಯಕ್ರಮವನ್ನು ಈ ಮೊದಲೇ 'ಇಂಡಿಯನ್ ಒಪಿನಿಯನ್' ಪ್ರಕಟಿಸಿತ್ತು. ಭಾರತೀಯರು ಕೊಟ್ಟ ಗಡುವಿನ ಎರಡು ತಾಸುಗಳ ನಂತರ ಅಂದರೆ ಸಂಜೆ ೪ ಗಂಟೆಗೆ ಈ ದಹನ ಕಾರ್ಯಕ್ರಮ ನಿಗದಿಯಾಗಿತ್ತು. ಹಿರಿಯ ಪ್ರಜೆ ಮತ್ತು ಬ್ರಿಟಿಷ್ ಭಾರತೀಯರ ಸಂಘದ ಅಧ್ಯಕ್ಷ ಈಸೋಪ್ ಮಿಂಯಾ ಅವರ ಅಧ್ಯಕ್ಷತೆಯಲ್ಲಿ ಈ ಸಭೆ ಸೇರಿತ್ತು. ಆ ಹೊತ್ತಿಗೆ ಸರ್ಕಾರದ ಕಡೆಯಿಂದ ಬಂದ ಒಬ್ಬ ಓಲೆಕಾರನು, ಸರ್ಕಾರದ ನಿರ್ಧಾರದಲ್ಲಿ ಬದಲಾವಣೆ ಇಲ್ಲ ಎಂಬ ಒಂದು ಪತ್ರವನ್ನು ಗಾಂಧಿಯವರಿಗೆ ನೀಡಿದನು. ಅದಕ್ಕೇ ಕಾಯುತ್ತಿದ್ದಂತೆ ಗಾಂಧಿ ಅಲ್ಲಿ ನೆರೆದಿದ್ದ ಸುಮಾರು ಎರಡು ಸಾವಿರ ಜನರಿಗೆ, ತಾವು ಹೇಗೆ ಪರ್ಯಾಯ ದಾರಿ ಕಾಣದೆ ಈ ದಹನ ಕಾರ್ಯಕ್ಕೆ ಮೊರೆ ಹೋಗಬೇಕಾಗಿದೆ ಎಂದು ವಿವರಿಸುತ್ತಾ, ಯಾರೆಲ್ಲ ಸ್ವಯಂಪ್ರೇರಣೆಯಿಂದ ರಹದಾರಿ ಪತ್ರಗಳನ್ನು ಸುಡಬಯಸುವರೋ ಅವರೆಲ್ಲರೂ ಅವನ್ನು ತಮಗೆ ನೀಡಬೇಕೆಂದು ತಿಳಿಸಿದರು. ಸಾವಿರಾರು ರಹದಾರಿ ಪತ್ರಗಳು ಅವರ ಕೈಸೇರಿದವು. ಗಾಂಧಿ ಅವನ್ನೆಲ್ಲ ಅಲ್ಲಿ ಹಾಜರಿದ್ದ ಪೊಲೀಸರ ಪ್ರತಿರೋಧದ ನಡುವೆಯೂ ಮೊದಲೇ ಪ್ಯಾರಾಫಿನ್‌ನಿಂದ ಉರಿಯುತ್ತಿದ್ದ ಕಬ್ಬಿಣದ ಕಡಾಯಿಯಲ್ಲಿನ ಬೆಂಕಿಯ ಜ್ವಾಲೆಗಳಿಗೆ ಅರ್ಪಿಸಿದರು. ಜನ ಮುಗಿಲು ಮುಟ್ಟಿದ ಹರ್ಷೋದ್ಗಾರಗಳ ಮೂಲಕ ಅದನ್ನು ಸ್ವಾಗತಿಸಿದರು. ನೆಟಾಲ್ ಭಾರತೀಯ ಕಾಂಗ್ರೆಸ್‌ನ ಹಿರಿಯ ಮುಖಂಡರಾದ ದಾವೂದ್ ಮಹಮ್ಮದ್ ಮತ್ತು ಪಾರ್ಸಿ ರುಸ್ತುಂಜಿ, ಕೇಪ್‌ಟೌನ್‌ನ ಭಾರತೀಯರ ನಾಯಕರಾದ ಆದಂ ಮಹಮ್ಮದ್ ಹಾಗೂ ಚೀನೀ ಸಮುದಾಯದ ಮುಖಂಡ ಲೆಯುಂಗ್ ಕ್ವಿನ್ ಈ ಐತಿಹಾಸಿಕ ಘಟನೆಗೆ ಸಾಕ್ಷಿಯಾದರು.

ಕ್ಷಮೆ ಕೋರಿದ ಆ ಪಠಾಣ!

ಅಂದು ಬೆಂಕಿಗೆ ಅರ್ಪಿಸಲು ತನ್ನ ರಹದಾರಿ ಪತ್ರ ಕೊಟ್ಟವರಲ್ಲಿ ಈ ಹಿಂದೆ ಗಾಂಧಿಯ ಮೇಲೆ ಹಲ್ಲೆ ಮಾಡಿ ಸೆರೆಮನೆ ಶಿಕ್ಷೆ ಅನುಭವಿಸಿ ಬಂದಿದ್ದ ಮೀರ್ ಅಲಂನೂ ಒಬ್ಬನಾಗಿದ್ದನು. ಈ ಸಂದರ್ಭದಲ್ಲಿ ಆತ ತಾನು ಗಾಂಧಿ ಭಯ್ಯಾನ ವಿಷಯದಲ್ಲಿ ತಪ್ಪು ಮಾಡಿದ್ದಕ್ಕಾಗಿ ಕ್ಷಮೆ ಕೋರಿದನು. ಗಾಂಧಿ ತಾವು ಆತನ ಬಗ್ಗೆ ಕಿಂಚಿತ್ತೂ ಹಗೆ ಹೊಂದಿಲ್ಲವೆಂಬುದನ್ನು ಸ್ಪಷ್ಟಪಡಿಸಿ ಆತನ ಅಂದಿನ ನಡೆಯನ್ನು ಚಪ್ಪಾಳೆ ತಟ್ಟಿ ಮೆಚ್ಚಿಕೊಂಡರು.

ಇಂಗ್ಲಿಷ್ ಪತ್ರಿಕೆಗಳು ಈ ಘಟನೆಯನ್ನು 'ಬೋಸ್ಟನ್ ಚಹಾಕೂಟ'ಕ್ಕೆ ಹೋಲಿಸಿ ಲೇಖನಗಳನ್ನು ಬರೆದವು. ಇದೆಲ್ಲದರ ಪರಿಣಾಮವಾಗಿ ಜ. ಸ್ಮಟ್ಸ್ ಮತ್ತೆ ಗಾಂಧಿಯನ್ನು ಮಾತುಕತೆಗೆ ಕರೆದ. ವರ್ಷಕ್ಕೆ ಆರು ಜನರಂತೆ ವಿದ್ಯಾವಂತ ಭಾರತೀಯರನ್ನು ಟ್ರಾನ್ಸ್‌ವಾಲ್ ಪ್ರವೇಶಿಸಲು ಅವಕಾಶ ಕೊಡುವ ಸಲಹೆಯನ್ನು ಮುಂದಿಟ್ಟ. ಅದಕ್ಕೆ ಗಾಂಧಿ, ಪ್ರವೇಶದ ಅರ್ಹತೆಗಾಗಿ ವಿದ್ಯಾವಂತಿಕೆಯ ಮಟ್ಟವನ್ನು ಎಷ್ಟಾದರೂ ಏರಿಸಿ; ಆದರೆ ಶಾಸನದ ಮೂಲ ಆಧಾರವಾಗಿರುವ ವರ್ಣಭೇದ (ಅಂದರೆ ಜನಾಂಗದ ಆಧಾರದ ಮೇಲೆ ಪ್ರವೇಶ ನೀತಿ ನಿರೂಪಿಸುವ) ತತ್ವವನ್ನು ಭಾರತೀಯರು ಸಹಿಸಲಾರರು ಎಂದರು. ಬಿಳಿಯರು ಮತ್ತು ವರ್ಣೀಯರು ಎಲ್ಲ ರೀತಿಯಲ್ಲೂ ಸಮಾನರು ಎಂಬುದನ್ನು ಮೂಲ ಏಷಿಯಾಟಿಕ್ ಶಾಸನವನ್ನು ಹಿಂತೆಗೆದುಕೊಳ್ಳುವ

ಮೂಲಕ ತಾತ್ವಿಕವಾಗಿ ಒಪ್ಪಿಕೊಳ್ಳಬೇಕೆಂದು ಅವರು ಆಗ್ರಹಿಸಿದರು. ಬಿಳಿಯರ ಸಮಾಜ ಇದನ್ನು ಒಪ್ಪದೆ ಸರ್ಕಾರ ಇನ್ನೊಂದು ಕಡೆಯಿಂದ ಪ್ರಬಲ ವಿರೋಧವನ್ನು ಎದುರಿಸಬೇಕಾಗುತ್ತದೆಂದು ತನ್ನ ಆತಂಕವನ್ನು ವ್ಯಕ್ತಪಡಿಸಿದ ಸ್ಮಟ್ಸ್, ಗಾಂಧಿಯ ಆಗ್ರಹದ ಅನುಷ್ಠಾನ ಅಸಾಧ್ಯ ಎಂದ. ಈ ಸಂಧಾನ ವಿಫಲವಾದ ನಂತರ ರಹದಾರಿ ಪತ್ರಗಳ ದಹನದ ಇನ್ನೊಂದು ಕಾರ್ಯಕ್ರಮದ ಮೂಲಕ ಭಾರತೀಯರು ತಮ್ಮ ಪ್ರತಿಭಟನೆಯನ್ನು ದಾಖಲಿಸಿದರು.

ವ್ಯಾಪಿಸಿದ ಸತ್ಯಾಗ್ರಹ – ತುಂಬಿದ ಸೆರೆಮನೆಗಳು

ಸತ್ಯಾಗ್ರಹ ರಹದಾರಿ ಪತ್ರಗಳ ದಹನದೊಂದಿಗೆ ಬಿಡುವು ಪಡೆಯದೆ, ನೆಟಾಲ್‌ನಿಂದ ಟ್ರಾನ್ಸ್‌ವಾಲ್‌ಗೆ ಇನ್ನಷ್ಟು ಜನರನ್ನು ವಲಸೆ ಕಳಿಸುವ ಪ್ರಯೋಗವನ್ನು ಭಾರತೀಯರು ಮುಂದುವರೆಸಿದರು. ಈ ಬಾರಿ ಟ್ರಾನ್ಸ್‌ವಾಲ್‌ನಲ್ಲಿ ಈ ಹಿಂದೆ ವಾಸಿಸಿದ ದಾಖಲೆಗಳಿದ್ದ ಮತ್ತು ಅಲ್ಪಸ್ವಲ್ಪ ಇಂಗ್ಲಿಷ್ ಬಲ್ಲ ನೆಟಾಲ್ ಕಾಂಗ್ರೆಸ್‌ನ ಪದಾಧಿಕಾರಿಗಳಾಗಿದ್ದ ಹಿರಿಯ ವ್ಯಾಪಾರಿ ಸೇಠ್ ದಾವೂದ್ ಮಹಮ್ಮದ್ ಮತ್ತು ಹಿರಿಯ ಪಾರ್ಸಿ ಗಣ್ಯ ರುಸ್ತುಂಜಿ ಅವರನ್ನು ಗಡಿ ದಾಟಲು ಕಳಿಸಲಾಯಿತು. ಟ್ರಾನ್ಸ್‌ವಾಲ್ ಪೊಲೀಸರು ಅವರನ್ನು ಬಂಧಿಸದೆ ಎಚ್ಚರಿಕೆ ನೀಡಿ ನೆಟಾಲ್‌ಗೆ ವಾಪಸ್ ಕಳಿಸಿದರು. ಆದರೆ ಅವರಿಬ್ಬರೂ ಮತ್ತೆ ಗಡಿ ದಾಟಿ ಹೋದರು. ಪೊಲೀಸರು ಮತ್ತೆ ಅವರನ್ನು ಗಡಿಯಾಚೆಗೆ ತಂದುಬಿಟ್ಟರು! ಆದರೆ ಅವರಿಬ್ಬರೂ ಹಠ ಬಿಡದಂತೆ ಪದೇ ಪದೇ ಗಡಿ ದಾಟಿ ಬರಲಾರಂಭಿಸಿದಾಗ ಅಂತಿಮವಾಗಿ ಅವರನ್ನು ಸೆಪ್ಟೆಂಬರ್ ೮ರಂದು ಬಂಧಿಸಿ ವಿಚಾರಣೆಗೆ ಗುರಿಪಡಿಸಿದರು. ನ್ಯಾಯಾಲಯ ವಿಚಾರಣೆ ನಡೆಸಿ ಶಿಕ್ಷೆಯಾಗಿ ವಿಧಿಸಿದ ೫೦ ಪೌಂಡುಗಳ ದಂಡ ಕಟ್ಟಲು ಅವರು ನಿರಾಕರಿಸಿ ಮೂರು ತಿಂಗಳ ಸಶ್ರಮ ಶಿಕ್ಷೆಯನ್ನು ಆಯ್ದುಕೊಂಡರು. ಆ ಮೂಲಕ ಕಿರಿಯರಿಗೆ ಮಾದರಿಯಾದರು. ನಂತರದಲ್ಲೇ ಗಾಂಧಿಯ ಅಸಮಾಧಾನಗಳ ನಡುವೆಯೂ ದ.ಆಫ್ರಿಕಾಕ್ಕೆ ಬಂದಿದ್ದ ಅವರ ಹಿರಿಯ ಮಗ ಹರಿಲಾಲನೂ ಸೇರಿದಂತೆ ನೆಟಾಲ್‌ನ ಅನೇಕ ವಿದ್ಯಾವಂತ ಯುವಕರು ತಮ್ಮ ಸಹ ಭಾರತೀಯ ನಿವಾಸಿಗಳ ಹೋರಾಟಕ್ಕೆ ಬೆಂಬಲವಾಗಿ ಗಡಿ ದಾಟುವ ಸತ್ಯಾಗ್ರಹದಲ್ಲಿ ಪಾಲ್ಗೊಂಡರು. ಇವರ ಜೊತೆಗೇ ಟ್ರಾನ್ಸ್‌ವಾಲ್‌ನ ವರ್ತಕರೂ ವ್ಯಾಪಾರದ ಅನುಮತಿಪತ್ರ ತೋರಲು ನಿರಾಕರಿಸಿ ಬಂಧಿತರಾಗಿ ಸೆರೆಮನೆಗಳನ್ನು ತುಂಬತೊಡಗಿದರು. ಸೆರೆಮನೆಗಳು ತುಂಬಿ ತುಳುಕತೊಡಗಿದವು. ಹರಿಲಾಲ, ಅಸ್ವಸ್ಥರಾಗಿದ್ದ ಕಸ್ತೂರಬಾ ಅವರ ಕರೆಯ ಮೇರೆಗೆ ತನ್ನ ಪತ್ನಿ ಗುಲಾಬ್ ಮತ್ತು ಮಕ್ಕಳೊಂದಿಗೆ ಭಾರತದಿಂದ ಬಂದು ಫೀನಿಕ್ಸ್ ಆಶ್ರಮದಲ್ಲಿ ತಂಗಿದ್ದ.

ಗಾಂಧಿಯ ಬಂಧನ – ಕಿರುಕುಳದ ಸೆರೆಮನೆವಾಸ

ಗಡಿ ದಾಟಿ ಬಂಧಿತವಾಗಿ ಸೆರೆಮನೆ ಸೇರುವ ಸತ್ಯಾಗ್ರಹ ಎಡಬಿಡದೆ ಮುಂದುವರೆಯಿತು. ಕೊನೆಗೆ ಟ್ರಾನ್ಸವಾಲ್ ಸರ್ಕಾರ ಹಿಂದೆಂದೂ ಎದುರಿಸದ ಈ ಪರಿಸ್ಥಿತಿಯಿಂದ ಪಾರಾಗಲೋ ಎಂಬಂತೆ ಸೆಪ್ಟೆಂಬರ್ ೨೯ರಂದು ಸತ್ಯಾಗ್ರಹವನ್ನು ಸಂಘಟಿಸುತ್ತಿದ್ದ ಗಾಂಧಿಯನ್ನು ಬಂಧಿಸಿತು. ಅವರು ನೆಟಾಲ್‌ನಿಂದ ಟ್ರಾನ್ಸ್‌ವಾಲ್‌ಗೆ ತೆರಳುವಾಗ ಗಡಿಯಲ್ಲಿ ರಹದಾರಿ ಪತ್ರವಿಲ್ಲದ ಮತ್ತು ಬೆರಳ ಅಚ್ಚು ನೀಡಲು

ನಿರಾಕರಿಸಿದ ಅಪರಾಧಕ್ಕಾಗಿ ಅವರಿಗೆ ನ್ಯಾಯಾಲಯ ಅಕ್ಟೋಬರ್ ೧೫ರಿಂದ ಎರಡು ತಿಂಗಳ ಸೆರೆವಾಸದ ಶಿಕ್ಷೆ ವಿಧಿಸಿತು. ಅವರನ್ನು ಗಡಿ ಊರಾದ ವೋಲ್ಕ್ಸ್‌ರಸ್ಟ್ ಸೆರೆಮನೆಯಲ್ಲಿಡಲಾಯಿತು. ಇದು ಸಶ್ರಮ ಶಿಕ್ಷೆಯಾದುದರಿಂದ ಗಾಂಧಿ ಜಿಸಿಲಿನಲ್ಲಿ ಸುತ್ತಿಗೆ ಹಿಡಿದು ಕಲ್ಲು ಒಡೆಯುವ, ಪಿಕಾಸಿ ಹಿಡಿದು ಹಳ್ಳ ತೋಡುವ ಕೆಲಸ ಮಾಡಬೇಕಾಯಿತು. ಇದರಿಂದ ಅವರ ಎರಡೂ ಹಸ್ತಗಳಲ್ಲಿ ಬೊಬ್ಬೆಗಳೆದ್ದು ಅವರು ವಿಪರೀತ ನೋವು ಅನುಭವಿಸಿದರಾದರೂ ಧೃತಿಗೆಡದೆ ಸೆರೆಮನೆಯ ಶೌಚಾಲಯಗಳನ್ನು ಸ್ವಚ್ಛಗೊಳಿಸುವ ಕೆಲಸಕ್ಕೆ ಸ್ವಪ್ರೇರಣೆಯಿಂದ ಹಾಜರಾಗತೊಡಗಿದರು. ಗಾಂಧಿ ಸೆರೆಮನೆಯಿಂದಲೇ ತಮ್ಮ ಸಹಚರರಿಗೆ ಪತ್ರ ಬರೆದು 'ಕೊನೆವರೆಗೂ ದೃಢಮನಸ್ಕರಾಗಿರಿ, ಸಂಕಷ್ಟಗಳೇ ಅಂತಿಮ ವಿಜಯದತ್ತ ನಮ್ಮನ್ನು ಕೊಂಡೊಯ್ಯುವುದು' ಎಂಬ ಸಂದೇಶ ನೀಡಿದರು.

ಗಾಂಧಿಯ ಬಂಧನ ಮತ್ತು ಶಿಕ್ಷೆಯ ಸುದ್ದಿ ಭಾರತ–ಇಂಗ್ಲೆಂಡ್‌ಗಳಲ್ಲಿ ಹರಡಿ ಸಾರ್ವಜನಿಕ ವಲಯಗಳಲ್ಲಿ ತೀವ್ರ ಖಂಡನೆಗಳು ವ್ಯಕ್ತವಾದವು. ಅಕ್ಟೋಬರ್ ೧೬ರಂದು ಲಂಡನ್‌ನಲ್ಲಿ ಅನಿವಾಸಿ ಭಾರತೀಯ ಸಮುದಾಯದ ಮುಖಂಡ ಸರ್. ಎಂ.ವಿ. ಭೌಂಗ್ರಿಯವರ ಅಧ್ಯಕ್ಷತೆಯಲ್ಲಿ, ಆಗ ಅಲ್ಲಿದ್ದ ಲಾಲಾ ಲಜಪತರಾಯ್, ಬಿಪಿನ್‌ಚಂದ್ರ ಪಾಲ್, ಸಾವರ್ಕರ್, ಆನಂದ ಕುಮಾರಸ್ವಾಮಿ ಮುಂತಾದ ಭಾರತೀಯ ನಾಯಕರು ಭಾಗವಹಿಸಿದ್ದ ಸಭೆಯಲ್ಲಿ ಗಾಂಧಿಯ ಬಂಧನವನ್ನು ಖಂಡಿಸಲಾಯಿತು.

ಆದರೆ ಟ್ರಾನ್ಸ್‌ವಾಲ್ ಸರ್ಕಾರ ಇದರಿಂದ ಕೆರಳಿದಂತೆ ಗಾಂಧಿಯನ್ನು ಇನ್ನಷ್ಟು ಕಠಿಣವಾಗಿ ನಡೆಸಿಕೊಳ್ಳಲಾರಂಭಿಸಿತು. ಅವರನ್ನು ಒಂದು ಪ್ರಕರಣದ ಸಾಕ್ಷಿಗೆಂದು ಮೂರನೇ ದರ್ಜೆ ಡಬ್ಬಿಯೊಂದರಲ್ಲಿ ರೈಲಿನ ಮೂಲಕ ಜೊಹಾನ್ಸ್‌ಬರ್ಗ್‌ಗೆ ಕರೆದುಕೊಂಡು ಹೋಗಿ ಅಲ್ಲಿನ ರೈಲು ನಿಲ್ದಾಣದಿಂದ ಅವರನ್ನು ಕೈದಿಯ ಕನಿಷ್ಠ ಉಡುಪಿನಲ್ಲಿ ತಲೆಯ ಮೇಲೆ ಅವರ ಬಟ್ಟೆ–ಪುಸ್ತಕ ಇತ್ಯಾದಿ ಸಾಮಗ್ರಿಗಳ ಚೀಲ ಹೊರೆಸಿ ಆ ಊರಿನ ಸೆರೆಮನೆಯವರೆಗೂ ಬೀದಿಗಳಲ್ಲಿ ಪೊಲೀಸ್ ಕಾವಲಿನಲ್ಲಿ ಮೆರವಣಿಗೆಯಂತೆ ನಡೆಸಿಕೊಂಡು ಹೋಗಲಾಯಿತು. ಅಲ್ಲಿ ಅವರನ್ನು ಕೊಲೆ, ದರೋಡೆ ಮಾಡಿದ ಮತ್ತು ಅಸಭ್ಯ ವರ್ತನೆಗಳ ಅಪಾಯಕಾರಿ ಅಪರಾಧಿಗಳ ಕೋಣೆಯಲ್ಲಿ ಇರಿಸಲಾಯಿತು, ಇದರಿಂದಾಗಿ ಗಾಂಧಿ ರಾತ್ರಿಯಿಡೀ ಮೈಯೆಲ್ಲ ಕಣ್ಣಾಗಿ ಎಚ್ಚರದಿಂದಿರಬೇಕಾಯಿತು.

ಆ ಸೆರೆಮನೆಯಲ್ಲಿನ ನ್ಯಾಯಾಲಯದಲ್ಲಿ ಗಾಂಧಿಯ ಸಾಕ್ಷಿ ಹೇಳಿಕೆ ಮುಗಿದ ನಂತರ ಅವರನ್ನು ನವೆಂಬರ್ ೪ರಂದು ಮತ್ತೆ ವೋಲ್ಕ್ಸ್‌ರಸ್ಟ್ ಸೆರೆಮನೆಗೆ ವಾಪಸ್ ಕರೆತಂದು ಅವರನ್ನು ಮತ್ತೆ ವಿವಿಧ ಕಠಿಣ ಶ್ರಮಗಳ ದುಡಿಮೆಗೆ ದೂಡಲಾಯಿತು. ಗಾಂಧಿ ಈ ಒಟ್ಟು ಶಿಕ್ಷೆಯ ಅವಧಿಯಲ್ಲಿ ಅನುಭವಿಸಿದ ಸಂಕಷ್ಟಗಳು ಹೇಳತೀರದವು. ಅವೆಲ್ಲ ಕರಗಿ ವಿಷಣ್ಣತೆಯು ನೀರಾಗಿ ಹರಿದಂತೆ ಅವರು ನವೆಂಬರ್ ೯ರಂದು ಕಸ್ತೂರಬಾಗೆ ಬರೆದ ಪತ್ರದ ಸಾಲುಗಳು ಮೂಡಿಬಂದಿರುವುದನ್ನು ಕಾಣಬಹುದು. ಕಸ್ತೂರಬಾ ಮಾರಣಾಂತಿಕವಾಗಿ ಅಸ್ವಸ್ಥರಾಗಿದ್ದಾರೆಂಬ ಮತ್ತು ದಂಡ ತೆತ್ತಾದರೂ ಅವರನ್ನು ಕಾಣಲು ಬರಬೇಕೆಂಬ ಫೀನಿಕ್ಸ್ ಆಶ್ರಮದ ಉಸ್ತುವಾರಿ ವಹಿಸಿಕೊಂಡಿದ್ದ ಆಲ್ಬರ್ಟ್ ವೆಸ್ಟ್ ಅವರ ತಂತಿಗೆ ಉತ್ತರವಾಗಿ ಬರೆದ ಈ ಪತ್ರದ ಸಾಲುಗಳು, ಅವರ

ವ್ಯಕ್ತಿತ್ವ ಕುಟುಂಬ ಮತ್ತು ಸಾಮಾಜಿಕ ಬದ್ಧತೆಗಳ ಮಧ್ಯೆ ತುಯ್ದಾಡುತ್ತಾ ಒಂದು ಹದ ಸಾಧಿಸಲು ನಡೆಸಿರುವ ಪ್ರಯತ್ನವನ್ನು ಹೇಳುವಂತಿವೆ :

'ಸುದ್ದಿ ಕೇಳಿ ನನ್ನ ಹೃದಯ ಹಾರಿಹೋಗಿದೆ. ಆದರೆ ನಾನು ಬರುವ ಸ್ಥಿತಿಯಲ್ಲಿ ಇಲ್ಲ. ಬಂದರೆ ದಂಡ ಪಾವತಿಸಿ ಬರಬೇಕು. ಅದು ನಮ್ಮ ಹೋರಾಟವನ್ನೇ ಅವಮಾನಿಸಿದಂತೆ. ನೀನು ಧೈರ್ಯದಿಂದಿರು. ಪಥ್ಯ ಪಾಲಿಸಿದರೆ ಹುಷಾರಾಗುವುದು ಖಂಡಿತ. ನೀನು ಅಕಸ್ಮಾತ್ ಕೊನೆಯುಸಿರೆಳೆದರೂ, ನಾನು ಬದುಕಿದ್ದಾಗಲೇ ಮತ್ತು ನನ್ನಿಂದ ದೂರವಾಗಿದ್ದಾಗ ಸಂಭವಿಸುವ ಸಾವು ಕೆಟ್ಟದ್ದೇನಲ್ಲ. ಅದು ಸತ್ಯಾಗ್ರಹದ ಭಾಗವೇ ಆಗುವುದು. ನನ್ನ ಹೋರಾಟ ಕೇವಲ ರಾಜಕೀಯ ಸ್ವರೂಪದ್ದಲ್ಲ. ಅದು ಸಾರ್ವತ್ರಿಕ ಒಳಿತಿಗಾಗಿ ನಡೆದಿರುವ ಹೋರಾಟ. ಹಾಗಾಗಿ ಅದು ಶುದ್ಧವಾಗಿದೆ. ಇಂತಹ ಅರಿವಿನಲ್ಲಿ ಬದುಕು-ಸಾವುಗಳ ನಡುವೆ ಅಂತಹ ಅಂತರವೇನೂ ಇರುವುದಿಲ್ಲ. ಹಾಗಾಗಿ ನೀನು ಈ ಎರಡನ್ನೂ ಮನದಲ್ಲಿ ಸಮನಾಗಿ ಕಂಡು ಎಲ್ಲವನ್ನೂ ಸಹಿಸುವೆ ಎಂದು ಭಾವಿಸುವೆ. ಇದಷ್ಟನ್ನೇ ನಾನು ನಿನ್ನಿಂದ ಅಪೇಕ್ಷಿಸುವುದು.'

ಗಾಂಧಿಯನ್ನು ಡಿಸೆಂಬರ್ ೧೨ರಂದು ಸೆರೆಮನೆಯಿಂದ ಬಿಡುಗಡೆ ಮಾಡಲಾಯಿತು. ಅವರು ಜೊಹಾನ್ಸ್‌ಬರ್ಗ್ ರೈಲ್ವೇ ನಿಲ್ದಾಣ ತಲುಪಿದಾಗ ನೂರಾರು ಜನ ಭಾರತೀಯರು ಅವರಿಗೆ ಹಾರ ಹಾಕಿ ಘೋಷಣೆಗಳನ್ನು ಕೂಗಿ ಸ್ವಾಗತಿಸಿದರು. ಈಸೋಪ್ ಮಿಂಯಾ ತಮ್ಮ ಮೇಲಿನ ಹಲ್ಲೆಯ ನಂತರ ಕ್ರಮೇಣ ಚಳುವಳಿಯಿಂದ ಹಿಂದೆಗೆದುದರಿಂದ ಖಾಲಿಯಾಗಿದ್ದ ಬ್ರಿಟಿಷ್ ಭಾರತೀಯರ ಸಂಘದ ಅಧ್ಯಕ್ಷ ಸ್ಥಾನವನ್ನು ತುಂಬಿದ್ದವರು ಮಹಮ್ಮದ್ ಕಛಾಲಿಯಾ ಅವರು. ಗಾಂಧಿಯವರು ಸೆರೆಮನೆಯಲ್ಲಿದ್ದಾಗ ಸತ್ಯಾಗ್ರಹ ಚದುರಿಹೋಗದಂತೆ ಭಾರತೀಯರ ಸಾರ್ವಜನಿಕ ಸಭೆಗಳನ್ನು ಏರ್ಪಡಿಸಿ ಅವರನ್ನು ಹುರಿದುಂಬಿಸುತ್ತಿದ್ದ ಈ ಧೀರ ಗುಜರಾತಿ ಮುಸ್ಲಿಂ ವ್ಯಾಪಾರಿ ಈ ಸಂದರ್ಭದಲ್ಲಿ ಸ್ಫೂರ್ತಿಯುತ ಭಾಷಣ ಮಾಡಿದರು. ಅವರು, ಭಾರತೀಯರು ಹೋರಾಡಬೇಕಾಗಿರುವುದು ಪೂರ್ಣ ಪ್ರಜೆತನದ ಘನತೆಯ ಬದುಕಿಗಾಗಿ ಮಾತ್ರವಲ್ಲ, ಬಿಳಿಜನರಿಂದ ನಡೆದಿರುವ ಶೋಷಣೆಯ ವಿರುದ್ಧ ಕೂಡಾ ಎಂದು ವಿವರಿಸುತ್ತಾ ಹೋರಾಟಕ್ಕೆ ಒಂದು ಆರ್ಥಿಕ ಆಯಾಮವನ್ನೂ ಸೇರಿಸಿದರು. ಅವರು, ಭಾರತೀಯರೀಗ ತಮ್ಮ ಆತ್ಮಗೌರವವನ್ನು ಉಳಿಸಿಕೊಳ್ಳಲು ಸ್ವಯಂಪ್ರೇರಿತ ಬಡತನವನ್ನು ಆರಿಸಿಕೊಳ್ಳಲೂ ಸಿದ್ಧರಿರಬೇಕೆಂದು ಕರೆಕೊಟ್ಟರು. ಆ ಹೊತ್ತಿಗೆ ಅವರು ಸತ್ಯಾಗ್ರಹದ ಹಿನ್ನೆಲೆಯಲ್ಲಿ ತಮ್ಮ ವ್ಯಾಪಾರಕ್ಕಾಗಿ ಬಿಳಿಯ ವ್ಯಾಪಾರಿಗಳಿಂದ ಪಡೆದ ಸಾಲಗಳನ್ನು ಒಮ್ಮೆಗೇ ತೀರಿಸುವ ಒತ್ತಡಕ್ಕೆ ಒಳಗಾಗಿ ನ್ಯಾಯಾಲಯದಿಂದ ಪಾಪರ್‌ಚೀಟಿ ಪಡೆಯುವಂತಹ ದುರದೃಷ್ಟಕರ ಸಂದರ್ಭಕ್ಕೆ ಒಳಗಾಗಿದ್ದರು. ನಂತರದ ದಿನಗಳಲ್ಲಿ ಗಾಂಧಿ ನ್ಯಾಯಾಲಯದಲ್ಲಿ ಅವರ ಪರ ನಿಂತು ವ್ಯಾಜ್ಯವನ್ನು ಕಛಾಲಿಯಾ ಅವರ ಘನತೆಗೆ ಕುಂದಾಗದಂತೆ ಪರಿಹರಿಸಿದ್ದನ್ನೂ ಇಲ್ಲಿ ದಾಖಲಿಸಬಹುದಾಗಿದೆ.

ಪಿ.ಎಸ್. ಅಯ್ಯರ್ ಎಂಬ ಭಿನ್ನ ದನಿ

ಇದೇ ಸಂದರ್ಭದಲ್ಲಿ ನಡೆದ ಇನ್ನೊಂದು ವಿದ್ಯಮಾನವನ್ನೂ ಇಲ್ಲಿ ದಾಖಲಿಸುವುದು ಉಚಿತ. ೧೮೯೮ರಲ್ಲಿ ತಮಿಳ್ನಾಡಿನಿಂದ ಬಂದು ಡರ್ಬಾನ್‌ನಲ್ಲಿ

ನೆಲೆಸಿ ಸ್ಥಳೀಯ ಹುಡುಗಿಯೊಬ್ಬಳನ್ನು ಮದುವೆಯಾಗಿದ್ದ ಪಿ.ಎಸ್. ಅಯ್ಯರ್ ಎಂಬಾತ 'ಆಫ್ರಿಕನ್ ಕ್ರಾನಿಕಲ್' ಎಂಬ ವಾರ ಪತ್ರಿಕೆಯನ್ನು ಹೊರಡಿಸಲಾರಂಭಿಸಿದ. 'ಇಂಡಿಯನ್ ಒಪನಿಯನ್'ನಲ್ಲಿ ತಮಿಳು ಧ್ವನಿಗಳಿಗೆ ಹೆಚ್ಚು ಅವಕಾಶವಿಲ್ಲ ಎಂಬ ಅಸಮಾಧಾನದೊಂದಿಗೆ ಇಂಗ್ಲಿಷ್-ತಮಿಳು ದ್ವಿಭಾಷಾ ಪತ್ರಿಕೆಯಾಗಿ ಆರಂಭವಾದ ಈ ಸಾಪ್ತಾಹಿಕ ಮುಖ್ಯವಾಗಿ ಕರಾರು ಕೂಲಿಕಾರರ ಮೇಲೆ ವಿಧಿಸಿದ್ದ ವಾರ್ಷಿಕ ಮೂರು ಪೌಂಡುಗಳ ತೆರಿಗೆ ವಿರುದ್ಧ ಹೋರಾಟವನ್ನು ತಾನೇ ಪ್ರತ್ಯೇಕವಾಗಿ ಸಂಘಟಿಸುವ ಪ್ರಯತ್ನ ಮಾಡುತ್ತಿತ್ತು. ಆದರೆ ಅದು ಗಾಂಧಿ ನಾಯಕತ್ವದ ವಿರುದ್ಧವೇನೂ ಇರಲಿಲ್ಲ ಮತ್ತು ಗಾಂಧಿ ವಿರುದ್ಧ ಬರೆಯುತ್ತಲೂ ಇರಲಿಲ್ಲ. ಬದಲಿಗೆ ಅವರನ್ನು ಶೀಲವಂತ, ದಿಟ್ಟ, ನೇರ ಮತ್ತು ಹಿಂದೂ-ಮುಸ್ಲಿಂ-ಪಾರ್ಸಿ ಜನಾಂಗಗಳ ಒಗ್ಗಟ್ಟು ಸಾಧಿಸಿ ಭಾರತೀಯರ ಗೌರವ ರಕ್ಷಣೆಗೆ ಹೋರಾಡುತ್ತಿರುವ ಧೀರ ನಾಯಕ ಎಂದು ವರ್ಣಿಸುತ್ತಿತ್ತು.

■

೨೩

ಪತ್ನಿಗೆ ನಿಸರ್ಗ ಚಿಕಿತ್ಸೆ; ಯಾತನಾಮಯವಾದ ಸೆರೆಮನೆವಾಸ

ಸೆರೆಮನೆಯಿಂದ ಬಿಡುಗಡೆಯಾದ ನಂತರ ಜೊಹಾನ್ಸ್‌ಬರ್ಗ್ ನ್ಯಾಯಾಲಯದಲ್ಲಿ ಗಾಂಧಿ ತುರ್ತು ಪ್ರಕರಣಗಳಲ್ಲಿ ಸತ್ಯಾಗ್ರಹಿಗಳ ಪರ ವಾದಿಸುತ್ತಾ ವಿಚಾರಣೆಗೆ ಹಾಜರಾಗುತ್ತಿದ್ದಾಗಲೇ ಏಷಿಯಾಟಿಕ್ ಶಾಸನ ಕುರಿತ ವಿವಾದ ಸದ್ಯಕ್ಕೆ ಬಗೆಹರಿಯದೆ ತಮ್ಮ ವ್ಯಾಪಾರ–ವ್ಯವಹಾರಗಳಿಗೆ ತೊಂದರೆಯಾಗುತ್ತದೆಂದು ಕೆಲವರು ಹೆದರಿದ ಪರಿಣಾಮವಾಗಿ ಸತ್ಯಾಗ್ರಹದಲ್ಲಿ ಒಡಕುಗಳು ಕಾಣಲಾರಂಭಿಸಿದ್ದವು. ಕೆಲವರು, ವಿಶೇಷವಾಗಿ ಗುಜರಾತಿ ವ್ಯಾಪಾರಿಗಳು ನೋಂದಣಿಗೆ ಅರ್ಜಿ ಸಲ್ಲಿಸಲಾರಂಭಿಸಿದ್ದರು. ಅದನ್ನು ಪ್ರತಿರೋಧಿಸಿ ತಂಬಿ ನಾಯ್ಡು ನೇತೃತ್ವದಲ್ಲಿ ಪ್ರದರ್ಶನಗಳೂ ನಡೆದಿದ್ದವು. ಇದರಿಂದಾಗಿ ಭಾರತೀಯ ಸಮುದಾಯದೊಳಗೆ ಎರಡು ಗುಂಪುಗಳಾಗಿ ಹಗೆತನಗಳೂ ಹೊಯ್ದಾಡಲಾರಂಭಿಸಿದ್ದವು. ಈ ಸಂಬಂಧವಾಗಿ ಗಾಂಧಿ, ತಮಿಳರು ಮತ್ತು ಪಾರ್ಸಿಗಳಿಗೆ ಹೋಲಿಸಿದಂತೆ, ಹಿಂದೂ ಮತ್ತು ಮುಸ್ಲಿಂ ಗುಜರಾತಿ ವ್ಯಾಪಾರಿಗಳ 'ನಾಚಿಕೆಗೇಡಿನ ವರ್ತನೆ' ಬಗ್ಗೆ ಖಂಡನೆಯ ಮಾತುಗಳನ್ನೂ ಆಡಿದ್ದೂ ಉಂಟು. ನಂತರದ ದಿನಗಳಲ್ಲಿ ಗಾಂಧಿ ತಮ್ಮ ಕಿರಿಯ ಸೋದರ ಸಂಬಂಧಿ ಮಗನ್‌ಲಾಲರಿಗೆ ಬರೆದ ಪತ್ರವೊಂದರಲ್ಲಿ, ತಾವು ತಮ್ಮ ಸಮುದಾಯದವರಿಂದಲೇ ಸಾವಿಗೀಡಾಗುವ ಸಾಧ್ಯತೆಯಿದ್ದು, ಇದು ಹಿಂದೂ–ಮುಸ್ಲಿಮರ ಏಕತೆಯನ್ನು ಬಲಪಡಿಸಲು ಸಹಾಯಕವಾದರೆ ತಾವು ಧನ್ಯ ಎಂದು ಬರೆದಿದ್ದುದು ಈ ಹಿನ್ನೆಲೆಯಲ್ಲೇ ಎಂದು ಕಾಣುತ್ತದೆ.

ಈ ಎಲ್ಲ ಬೆಳವಣಿಗೆಗಳ ಮಧ್ಯೆಯೇ ನ್ಯಾಯಾಲಯದ ಕೆಲಸಗಳನ್ನು ಮುಗಿಸಿದ ಗಾಂಧಿ ಅಸ್ವಸ್ಥರಾಗಿದ್ದ ಪತ್ನಿ ಕಸ್ತೂರಬಾರನ್ನು ಕಾಣಲು ಫೀನಿಕ್ಸ್ ಆಶ್ರಮಕ್ಕೆ ತೆರಳಿದರು. ಕಸ್ತೂರಬಾ ಮೂರು ತಿಂಗಳಿನಿಂದ ರಕ್ತಸ್ರಾವದ ತೊಂದರೆಗೊಳಗಾಗಿ ಜೀವಚ್ಛವವಾದಂತಾಗಿದ್ದರು. ಗಾಂಧಿ ಕೂಡಲೇ ೧೯೦೯ರ ಜನವರಿ ೧೦ ರಂದು ಬಾ ಅವರನ್ನು ಡರ್ಬಾನ್‌ನಲ್ಲಿದ್ದ ಭಾರತೀಯ ಮೂಲದ ಮತ್ತು ಗಾಂಧಿ ಸತ್ಯಾಗ್ರಹಕ್ಕೆ ಬಹಿರಂಗ ಬೆಂಬಲ ನೀಡಿದ್ದ ಡಾ. ನಂಜಿ ಅವರ ಚಿಕಿತ್ಸಾಲಯಕ್ಕೆ ಸೇರಿಸಿದರು. ಅಲ್ಲಿ ಕಸ್ತೂರಬಾ ಅವರಿಗೆ ಶಸ್ತ್ರಚಿಕಿತ್ಸೆ ಅಗತ್ಯವಾಗಿ ಬಾ ಅವರ ಒಪ್ಪಿಗೆಯಂತೆ ಅದನ್ನು ಅರಿವಳಿಕೆ ಇಲ್ಲದೆ ನಡೆಸಲಾಯಿತು. ಬಾ ಸ್ವಲ್ಪ ಚೇತರಿಸಿಕೊಂಡರು. ನಂತರ ಬಾ ಅವರ ಶುಶ್ರೂಷೆಯ ಬಗ್ಗೆ ಡಾ. ನಂಜಿ ದಂಪತಿ ನೀಡಿದ ಆಶ್ವಾಸನೆಯ ಮೇರೆಗೆ ಗಾಂಧಿ ಸತ್ಯಾಗ್ರಹ ಸಂಬಂಧದ ತುರ್ತು ಕೆಲಸಗಳಿಗಾಗಿ ಟ್ರಾನ್ಸ್‌ವಾಲ್‌ಗೆ ಹೊರಟರು. ಆ ಮಧ್ಯೆ ಫೀನಿಕ್ಸ್‌ನಲ್ಲಿದ್ದ ಹರಿಲಾಲನ ಹೆಂಡತಿ ಚಂಚಲ್‌ಗೆ(ಚಂಚಲ್ ಎಂದೂ ಕರೆಯಲ್ಪಡುತ್ತಿದ್ದ

ಗುಲಾಬ್‌ಗೆ) ಒಂದು ಪತ್ರ ಬರೆದು, ಸತ್ಯಾಗ್ರಹನಿರತನಾದ ಗಂಡನ ಸಹವಾಸದ ಆಲೋಚನೆಯನ್ನು ಸದ್ಯಕ್ಕೆ ಮರೆತು ನೆಮ್ಮದಿಯಿಂದ ಇರುವಂತೆ ಸೂಚಿಸಿದರು.

ಕಸ್ತೂರಬಾಗೆ ಗೋಮಾಂಸ ಕಷಾಯ:
ಗಾಂಧಿ ವಿಧಿಸಿದ ಉಪ್ಪು-ಬೇಳೆ ನಿಷೇಧ ಪಥ್ಯ

ಕೆಲವೇ ದಿನಗಳಲ್ಲಿ ಕಸ್ತೂರಬಾ ಅವರ ಸ್ಥಿತಿ ಚಿಂತಾಜನಕವಾಗಿ ಅವರಿಗೆ ಮದ್ಯ ಮತ್ತು ಗೋಮಾಂಸ ಕಷಾಯ ಕುಡಿಸದಿದ್ದರೆ ಉಳಿಯುವುದು ಕಷ್ಟವೆಂದು ಡಾ. ನಂಜಿ ಗಾಂಧಿಯವರಿಗೆ ದೂರವಾಣಿ ಕರೆ ಮಾಡಿ ತಿಳಿಸಿದರು. ಕೂಡಲೇ ಡರ್ಬಾನ್‌ಗೆ ಧಾವಿಸಿ ಬಂದರು ಗಾಂಧಿ. ಆ ಹೊತ್ತಿಗಾಗಲೇ ಬಾ ಅವರಿಗೆ ಗೋಮಾಂಸ ಕಷಾಯ ಕುಡಿಸಿರುವುದನ್ನು ತಿಳಿದ ಅವರು ಬೇಸರಗೊಂಡು ವೈದ್ಯರ ವರ್ತನೆಯನ್ನು ಆಕ್ಷೇಪಿಸಿದರು. ಆದರೆ ವೈದ್ಯರು ತಮ್ಮ ಮಾತು ಕೇಳಲು ಸಿದ್ಧವಿಲ್ಲದಿದ್ದರೆ ತಾವು ಬಾರನ್ನು ತಮ್ಮ ಚಿಕಿತ್ಸಾಲಯದಲ್ಲಿ ಇರಿಸಿಕೊಳ್ಳಲು ಸಾಧ್ಯವಿಲ್ಲ ಎಂದರು. ಗಾಂಧಿ ಬಾ ಅವರ ಅಭಿಪ್ರಾಯ ಕೇಳಿದರು. ಬಾ ಮದ್ಯ ಅಥವಾ ಗೋಮಾಂಸ ಸೇವಿಸುವ ಬದಲು ಪತಿಯ ತೊಡೆಯ ಮೇಲೆ ಸಾಯಲು ಸಿದ್ಧ ಎಂದರು. ಗಾಂಧಿ ತಮ್ಮ ಜೊತೆಗಿದ್ದ ಮಗ ಮಣಿಲಾಲನ ಅಭಿಪ್ರಾಯ ಕೇಳಿದರು. ಆತನೂ ಒಪ್ಪಿಗೆ ನೀಡಲಿಲ್ಲ. ಈಗ ಗಾಂಧಿ ಬಾ ಅವರನ್ನು ವಾಪಸು ಫೀನಿಕ್ಸ್‌ಗೆ ಒಯ್ಯಲು ತೀರ್ಮಾನಿಸಿದರು. ಫೀನಿಕ್ಸ್ ರೈಲ್ವೇ ನಿಲ್ದಾಣಕ್ಕೆ ಡೋಲಿಯವರೊಂದಿಗೆ ಬರಲು ವೆಸ್ಟ್ ಅವರಿಗೆ ಕಾಗದ ಕಳಿಸಿ, ಡಾ. ನಂಜಿಯವರು ಪದೇ ಪದೇ ಮಾಡಿದ ಮನವಿಯನ್ನು ಮಾನ್ಯ ಮಾಡದೆ ಪತ್ನಿಯನ್ನು ಸುರಿಯುತ್ತಿದ್ದ ಮಳೆಯಲ್ಲಿ ಒಂದು ರಿಕ್ಷಾದಲ್ಲಿ ಕೂರಿಸಿಕೊಂಡು ಡರ್ಬಾನ್ ನಿಲ್ದಾಣಕ್ಕೆ ಹೊರಟರು. ಅಲ್ಲಿ ರೈಲ್ವೇ ಡಬ್ಬಿಯ ಬಳಿಗೆ ಗಾಂಧಿ ಮಗನ ನೆರವಿನೊಂದಿಗೆ ಬಾರನ್ನು ಹೊತ್ತೇ ತಂದು ಡಬ್ಬಿಯಲ್ಲಿ ಕೂರಿಸಿ ಫೀನಿಕ್ಸ್ ತಲುಪಿದರು.

ಫೀನಿಕ್ಸ್ ಆಶ್ರಮದ ತಮ್ಮ ಕುಟೀರದಲ್ಲಿ ಗಾಂಧಿ ಪತ್ನಿಗೆ ನಿಸರ್ಗ ಚಿಕಿತ್ಸೆ ಆರಂಭಿಸಿದರು. ಅವರ ಜಲಚಿಕಿತ್ಸೆಯಿಂದ ಬಾ ಅವರ ಸಾಮಾನ್ಯ ಆರೋಗ್ಯ ಕೊಂಚ ಸುಧಾರಿಸಿತಾದರೂ, ರಕ್ತಸ್ರಾವ ನಿಲ್ಲಲಿಲ್ಲ. ಕೊನೆಗೆ ಗಾಂಧಿ, ಬಾ ಅವರಿಗೆ ಉಪ್ಪು ಮತ್ತು ಬೇಳೆಯನ್ನು ಬಿಡಲು ಸೂಚಿಸಿದರು. ಬಾ ಅದು ಕಷ್ಟ, ನಿಮಗೆ ಯಾರಾದರೂ ಹೇಳಿದರೆ ನೀವು ಬಿಡುವಿರಾ? ಎಂದು ಮರುಪ್ರಶ್ನೆ ಹಾಕಿದರು. ಕೂಡಲೇ ಗಾಂಧಿ ಉಪ್ಪು ಮತ್ತು ಬೇಳೆಗಳನ್ನು ಒಂದು ವರ್ಷದ ಕಾಲ ತ್ಯಜಿಸುವ ಪ್ರತಿಜ್ಞೆಯನ್ನು ಪ್ರಕಟಿಸಿಬಿಟ್ಟರು. ಇದರಿಂದ ಆಘಾತಗೊಂಡ ಬಾ ಪರಿಪರಿಯಾಗಿ ಬೇಡಿಕೊಂಡರೂ ಗಾಂಧಿ ತಮ್ಮ ಪ್ರತಿಜ್ಞೆಯನ್ನು ಹಿಂತೆಗೆದುಕೊಳ್ಳಲು ನಿರಾಕರಿಸಿ ಬಾರಿಂದ 'ಕೆಟ್ಟ ಹಠವಾದಿ' ಎಂದು ಛೇಡಿಸಿಕೊಂಡರು. ಒಂದು ವರ್ಷ ಮಾತ್ರವಲ್ಲ, ಹತ್ತು ವರ್ಷ ಗಾಂಧಿ ಬೇಳೆ ತಿನ್ನಲಿಲ್ಲ.

ಗಾಂಧಿಯ ಪ್ರತಿಜ್ಞೆಯ ಪರಿಣಾಮವಾಗಿ ಕೊನೆಗೂ ಉಪ್ಪು ಮತ್ತು ಬೇಳೆ ತ್ಯಜಿಸಿದ ಬಾ, ಪತಿಯ ಉಪಚಾರದಲ್ಲಿ ನಿಧಾನವಾಗಿ ಚೇತರಿಸಿಕೊಂಡರು. ಹಣ್ಣು ಮತ್ತು ತರಕಾರಿ ತಿನ್ನಲು ಆರಂಭಿಸಿದರು. ಮುಗಿದ ಕಥೆಯೆಂದು ವೈದ್ಯರಿಂದ ಕೈಬಿಡಲ್ಪಟ್ಟಿದ್ದ ಬಾ ಅವರು ಸಾಮಾನ್ಯ ಊಟ ಮಾಡಬಲ್ಲಷ್ಟು ಗುಣಮುಖರಾಗತೊಡಗಿದ್ದು ಎಲ್ಲರ ಸಂತೋಷಕ್ಕೆ ಕಾರಣವಾಯಿತು. ಇದು ೧೯೧೦ರ ಹೊಸ ವರ್ಷದ ಸಂದರ್ಭದಲ್ಲಿ ಸಂಭ್ರಮದಿಂದ

ಆಚರಿಸಲರ್ಹವಾದ ಪವಾಡವೇ ಆಗಿತ್ತು. ಆದರೆ ಗಾಂಧಿ ಕಸ್ತೂರಬಾರ ಅಪೇಕ್ಷೆಗೆ ವಿರುದ್ಧವಾಗಿ ಅವರನ್ನು ಬಿಟ್ಟು ಸತ್ಯಾಗ್ರಹದ ಕೆಲಸಗಳಿಗಾಗಿ ಜೊಹಾನ್ಸ್‌ಬರ್ಗ್‌ಗೆ ಹೊರಡಲೇಬೇಕಾದ ತುರ್ತು ಸಂದರ್ಭ ಸೃಷ್ಟಿಯಾಗಿತ್ತು.

ಬಿಳಿಯ ಗಣ್ಯರ ಸಹಾನುಭೂತಿಯ ನಡುವೆಯೂ ಕುಗ್ಗಿದ ಉತ್ಸಾಹ

ಮದ್ರಾಸ್ ಪ್ರಾಂತ್ಯದ ಲಾರ್ಡ್ ಆ್ಯಂಪ್ಟ್‌ಹಿಲ್ ಎಂಬ ಮಾಜಿ ಬ್ರಿಟಿಷ್ ಗವರ್ನರರೊಬ್ಬರು ಬ್ರಿಟಿಷ್ ಸಂಸತ್ತಿನಲ್ಲಿ ದ.ಆಫ್ರಿಕಾದ ಭಾರತೀಯರನ್ನು ಬಿಳಿಯರು ನಿರ್ವಹಿಸುತ್ತಿರುವ ನೀತಿಗಳ ಬಗ್ಗೆ ವಿಷಾದ ವ್ಯಕ್ತಪಡಿಸಿ ಮಾತಾಡಿದ್ದರು. ಇದೇ ಹೊತ್ತಿಗೆ ಗಾಂಧಿ ಭಾರತದ ವೈಸ್‌ರಾಯ್ ಲಾರ್ಡ್ ಕರ್ಜನ್‌ಗೆ ಬರೆದ ಪತ್ರಕ್ಕೆ ಆತನಿಂದ ಸಹಾನುಭೂತಿ ಮತ್ತು ಪರಿಶೀಲನೆಯ ಆಶ್ವಾಸನೆಯ ಪತ್ರ ಬಂದಿತ್ತು. ಇದಲ್ಲದೆ ಲಂಡನ್‌ನ 'ದ ಟೈಮ್ಸ್'ಗೆ ದ.ಆಫ್ರಿಕಾದ ಕೆಲವು ಬಿಳಿಯ ಕ್ರೈಸ್ತ ಪಾದ್ರಿಗಳೂ ಮತ್ತು ಗಣ್ಯ ವ್ಯಕ್ತಿಗಳೂ ಭಾರತೀಯರಿಗೆ ತೋರುತ್ತಿರುವ ತಾರತಮ್ಯ ನೀತಿಯನ್ನು ಖಂಡಿಸಿ ಬರೆದ ಪತ್ರ, ಸತ್ಯಾಗ್ರಹ ಹೋರಾಟದ ಪರವಾಗಿ ಜಗತ್ತಿನ ಬಿಳಿಯರ ಸಮಾಜದಲ್ಲಿ 'ಜಾಗೃತಿ' ಉಂಟು ಮಾಡಿದಂತಿತ್ತು. ಈ ಹಿನ್ನೆಲೆಯಲ್ಲಿ ಗಾಂಧಿ ತಮ್ಮ ಹೋರಾಟಕ್ಕೆ ಜಯದ ದಿನ ದೂರವಿರಲಾರದು ಎಂದು ಭಾವಿಸಿದ್ದರು. ಆದರೆ ಬಂಧನ, ಮರು ಬಂಧನ, ಸೆರೆವಾಸ, ಆಸ್ತಿ ಮುಟ್ಟುಗೋಲು, ಕುಟುಂಬಗಳ ಅಸ್ತವ್ಯಸ್ತತೆ, ಗಡೀಪಾರುಗಳಿಂದ ತತ್ತರಿಸಿಹೋಗಿದ್ದ ಭಾರತೀಯರಲ್ಲಿ ಸತ್ಯಾಗ್ರಹವನ್ನು ನಿರಂತರವಾಗಿ ಮುಂದುವರೆಸುವುದರಲ್ಲಿ ಕಂಡ ಉತ್ಸಾಹದ ಕೊರತೆ, ಕೆಲವರ ಭಿನ್ನಮತ, ಇವನ್ನು ಸಂಭಾಳಿಸಿ ಮತ್ತೆ ಸತ್ಯಾಗ್ರಹಿಗಳನ್ನು ಸಂಘಟಿಸಲು ಗಾಂಧಿ ಫೀನಿಕ್ಸ್‌ನಿಂದ ಜೊಹಾನ್ಸ್‌ಬರ್ಗ್‌ಗೆ ಬರಲೇಬೇಕಾಯಿತು. ಎಲ್ಲಕ್ಕಿಂತ ಹೆಚ್ಚಾಗಿ ಬ್ರಿಟಿಷ್ ಪ್ರಭುತ್ವದ ನ್ಯಾಯಪರತೆಯ ಬಗ್ಗೆ ತಾವಿಟ್ಟಿದ್ದ ವಿಶ್ವಾಸ ವೈಸ್‌ರಾಯ್ ಕರ್ಜನ್‌ನಿಂದ ಬಂದ ಇತ್ತೀಚಿನ ಪತ್ರದ ಮೂಲಕ ಭಂಗವಾದುದರಿಂದ ಗಾಂಧಿ ವ್ಯಾಕುಲಗೊಂಡಿದ್ದರು. ದ.ಆಫ್ರಿಕಾಕ್ಕೆ ಖಾಸಗಿ ಪ್ರವಾಸಕ್ಕಾಗಿ ಬಂದಿದ್ದ ಕರ್ಜನ್ ಗಾಂಧಿಯ ಕೋರಿಕೆಯ ಮೇರೆಗೆ ಜ. ಬೋತಾ ಮತ್ತು ಜ. ಸ್ಮಟ್ಸ್‌ರನ್ನು ಕಂಡು ಮಾತಾಡಿದ್ದನಾದರೂ, ಕರಾಳ ಶಾಸನವನ್ನು ಹಿಂತೆಗೆದುಕೊಳ್ಳುವ ಯಾವ ಆಶ್ವಾಸನೆಯನ್ನೂ ಅವರಿಂದ ಪಡೆಯಲಾಗದ್ದರ ಬಗ್ಗೆ ಬ್ರಿಟಿಷ್ ಭಾರತೀಯರ ಸಂಘಕ್ಕೆ ಪತ್ರ ಬರೆದಿದ್ದನು.

ಸತ್ಯಾಗ್ರಹಿಯಾದ ಹರಿಲಾಲ–ಮತ್ತೆ ಗಾಂಧಿ ಬಂಧನ

ಇದೆಲ್ಲದರ ಮಧ್ಯೆ ಟ್ರಾನ್ಸ್‌ವಾಲ್‌ನ ಬಿಳಿಯರ ಪತ್ರಿಕೆಗಳೂ ಭಾರತೀಯರ ಸತ್ಯಾಗ್ರಹ ಕುಸಿದು ಬೀಳುತ್ತಿದೆಯೆಂದೂ, ಗಾಂಧಿ ಸೋತು ಕಾಣೆಯಾಗಿದ್ದಾರೆಂದೂ ಬರೆದುದು ಅವರನ್ನು ಪ್ರಚೋದಿಸಿದ್ದವು. ಇದರಿಂದ ಎಚ್ಚೆತ್ತು ಮತ್ತೆ ಕಾರ್ಯಶೀಲರಾದ ಗಾಂಧಿ ೧೯೦೯ರ ಫೆಬ್ರುವರಿ ಎರಡನೇ ವಾರದಲ್ಲಿ ತಮ್ಮ ಮಗ ಹರಿಲಾಲನನ್ನೇ ಮತ್ತೆ ಸತ್ಯಾಗ್ರಹಿಯಾಗಿ ಟ್ರಾನ್ಸ್‌ವಾಲ್‌ನ್ನು ಪ್ರವೇಶಿಸಲು ಕಳಿಸಿದರು. ಆತನನ್ನು ಪೋಲೀಸರು ಬಂಧಿಸದೆ ಮೂರು ಬಾರಿ ಗಡಿಯಾಚೆ ಕಳಿಸಿದರೂ, ಆತನೂ ಆತನ ಸಹಚರರೂ ಸತ್ಯಾಗ್ರಹವನ್ನು ಮುಂದುವರೆಸಿ ಕೊನೆಗೆ ಶಿಕ್ಷೆಗೆ ಒಳಗಾದರು. ನಂತರ ಇವರಿಗೆ ಬೆಂಬಲವಾಗಿ ಸ್ವತಃ ಗಾಂಧಿಯೇ ತಮ್ಮ ಕೆಲವು ಸಹಚರರೊಂದಿಗೆ ರಹದಾರಿ ಇಲ್ಲದೆ

ಗಡಿ ಉಲ್ಲಂಘಿಸಿ ಬಂಧಿತರಾದರು. ಫೆಬ್ರುವರಿ ೨೫ರಂದು ವಿಚಾರಣೆಗೆ ಒಳಗಾದ ಗಾಂಧಿ ನ್ಯಾಯಾಧೀಶರಿಗೆ, 'ಪ್ರಜಾಸಮೂಹದ ಒಂದು ಭಾಗಕ್ಕೆ ವಂಚಿಸಲಾಗಿರುವ ನ್ಯಾಯವನ್ನು ಪ್ರಭುತ್ವವು ಒದಗಿಸುವವರೆಗೂ ತಾನು ಶಿಕ್ಷೆಯನ್ನು ಆಹ್ವಾನಿಸುತ್ತಲೇ ಇರುವೆನು' ಎಂದು ಖಚಿತವಾಗಿ ಹೇಳಿದರು. ದಂಡ ಕಟ್ಟಲು ನಿರಾಕರಿಸಿದ ಅವರಿಗೆ ಮೂರು ತಿಂಗಳ ಸಶ್ರಮ ಶಿಕ್ಷೆ ವಿಧಿಸಿ ವೋಲ್ಕ್ಸ್‌ರಸ್ಟ್ ಸೆರೆಮನೆಗೆ ದೂಡಲಾಯಿತು.

ಗಾಂಧಿ ಅಲ್ಲಿ ಇತರ ಐವತ್ತು ಸತ್ಯಾಗ್ರಹಿಗಳೊಂದಿಗೆ ಹಿರಿಯ ಮಗ ಹರಿಲಾಲ ಮತ್ತು ಹಿರಿಯ ಸ್ನೇಹಿತ ರುಸ್ತುಂಜಿ ಅವರನ್ನು ಕಂಡು ಹರ್ಷಿಸಿದರು. ಅಲ್ಲಿಂದಲೇ ಅವರು ಸತ್ಯಾಗ್ರಹದ ಬಗ್ಗೆ ನಿರಾಸಕ್ತರಾಗಿದ್ದ ಭಾರತೀಯರಿಗಾಗಿ ಒಂದು ಹೇಳಿಕೆಯನ್ನು ಬಿಡುಗಡೆ ಮಾಡಿದರು. 'ಈಗಲೂ ತಡವಾಗಿಲ್ಲ. ನಿಮ್ಮ ಕೈಲಾದ ಮಟ್ಟಿಗೆ ಪ್ರತಿರೋಧಗಳಲ್ಲಿ ಭಾಗವಹಿಸಿ; ಅದು ಸಾಧ್ಯವೇ ಆಗದವರು ಹಣಕಾಸಿನ ಸಹಾಯ ಒದಗಿಸಬಹುದು' ಎಂದು ಕೋರಿದರು. ಇನ್ನೊಂದು ಪ್ರತ್ಯೇಕ ಹೇಳಿಕೆಯಲ್ಲಿ ತಮ್ಮ ತಮಿಳು ಸೋದರರ ಕಟಿಬದ್ಧತೆ ಮತ್ತು ತುಂಬು ಸಹಕಾರವನ್ನು ಶ್ಲಾಘಿಸಿದ್ದರು. ಹಾಗೇ ಹರಿಲಾಲನ ಪತ್ನಿ ಚಂಚಲ್‌ಗೆ ಪತ್ರವೊಂದನ್ನು ಬರೆದು ತಾವಿಲ್ಲಿ ಹರಿಲಾಲ ಮತ್ತು ಇತರ ಸತ್ಯಾಗ್ರಹಿ ಮಿತ್ರರೊಂದಿಗೆ ಸುಖವಾಗಿ ಇದ್ದು ತಮ್ಮ ಬಗ್ಗೆ ಯೋಚಿಸಬಾರದಾಗಿಯೂ ತಿಳಿಸಿ ಮಗುವಿಗೆ ಮೊಲೆಹಾಲು ಕುಡಿಸುವುದನ್ನು ನಿಲ್ಲಿಸಬಾರದೆಂದು ಸೂಚಿಸಿದರು. ಜೊತೆಗೆ, ಇನ್ನೂ ಹಾಸಿಗೆ ಬಿಟ್ಟೇಳಲಾಗದ ಆಕೆಯ ಅತ್ತೆ ಕಸ್ತೂರಬಾಗೆ ಒಳ್ಳೆಯ ಕಥೆ ಮತ್ತು ಪದ್ಯಗಳನ್ನು ಓದಿ ಹೇಳಿ ಮನಃಶಾಂತಿಯನ್ನುಂಟು ಮಾಡಬೇಕೆಂದೂ ಅವರು ತಿಳಿಸಿದರು.

ಯಾತನಾಮಯವಾದ ಸೆರೆಮನೆವಾಸ

ಗಾಂಧಿ ತಮ್ಮ ಮಗ ಮತ್ತು ಗೆಳೆಯರೊಂದಿಗೆ ನೆಮ್ಮದಿಯಿಂದ ಇರುವುದನ್ನು ಪ್ರಭುತ್ವ ಸಹಿಸದಾಯಿತು. ಅದು ಹತ್ತು ದಿನಗಳಲ್ಲೇ ಅವರನ್ನು, ಒಂದು ರಾತ್ರಿ ಕೊರೆಯುವ ಚಳಿಯಲ್ಲಿ ಮತ್ತೆ ರೈಲು ನಿಲ್ದಾಣದವರೆಗೆ ಚೀಲ ಹೊರಿಸಿ ನಡೆಸಿಕೊಂಡು ಹೋಗಿ ಮೂರನೇ ದರ್ಜೆಯ ಡಬ್ಬಿಯೊಂದರಲ್ಲಿ ಕೂರಿಸಿ ಪ್ರಿಟೋರಿಯಾಗೆ ಕರೆದುಕೊಂಡು ಹೋಗಿ ಮತ್ತೆ ಅದೇ ರೀತಿ ನಡೆಸಿಕೊಂಡು ಹೋಗಿ ಆ ನಗರದ ಸೆರೆಮನೆಯ ಒಂಟಿ ಕೋಣೆಯಲ್ಲಿ ಬಂಧಿಸಿಟ್ಟಿತು. ಆ ಸೆರೆಮನೆಯಲ್ಲಿದ್ದವರೆಲ್ಲ ಗಂಭೀರ ಅಪರಾಧಗಳನ್ನು ಮಾಡಿ ಶಿಕ್ಷೆಗೊಳಗಾಗಿದ್ದ ಕಪ್ಪು ಆಫ್ರಿಕನ್ನರೇ ಆಗಿದ್ದರು. ಗಾಂಧಿಯ ಕೆಲಸ ತಮ್ಮ ಕೋಣೆ ಮತ್ತು ಸೆರೆಮನೆಯ ಮೊಗಸಾಲೆಗಳನ್ನು ಗುಡಿಸಿ ಉಜ್ಜಿ ತೊಳೆದು ಪಾಲಿಶ್ ಮಾಡುವುದಾಗಿತ್ತು. ಬಹುಶಃ ಗಾಂಧಿಯವರ ಅತ್ಯಂತ ಯಾತನಾಮಯ ಸೆರೆಮನೆವಾಸ ಇದಾಗಿತ್ತು. ಏಕೆಂದರೆ ಇಲ್ಲಿ ಯಾರ ಭೇಟಿಗೂ ಅವಕಾಶವಿರಲಿಲ್ಲ ಮತ್ತು ತಿಂಗಳಿಗೆ ಒಂದು ಪತ್ರ ಮಾತ್ರ, ಅದೂ ಇಂಗ್ಲಿಷ್‌ನಲ್ಲಿ ಮಾತ್ರ ಬರೆಯಬಹುದಾಗಿತ್ತು. ಊಟ, ಆಫ್ರಿಕನ್ ಕಪ್ಪು ವರ್ಣೀಯರಿಗೆ, ಬಂದಿಗಳಿಗೆ ನೀಡುವ ಅನುಮಾನಾಸ್ಪದ ಗುಣಮಟ್ಟದ್ದಾಗಿದ್ದು, ಅದನ್ನು ಕಾವಲುಗಾರ ಪ್ರತಿದಿನ ಗಾಂಧಿಯನ್ನು ಕೊಳಕು ವರ್ಣೀಯನೆಂದು ವೈಯಕ್ತಿಕವಾಗಿ ನಿಂದಿಸಿ, ಅವಮಾನಿಸಿ ನೀಡುತ್ತಿದ್ದನು.

ಸೆರೆಮನೆಗೆ ನೀಡಿದ ತನ್ನದೊಂದು ಭೇಟಿಯಲ್ಲಿ ಇದನ್ನೆಲ್ಲ ಕಣ್ಣಾರೆ ಕಂಡ,

ಪ್ರಿಟೋರಿಯಾದಲ್ಲಿ ಗಾಂಧಿಯ ವಕೀಲಿಕೆಯ ಪ್ರತಿನಿಧಿಯಾಗಿದ್ದ ಲೆಶನ್‌ಸ್ಟೈನ್ ಎಂಬಾತ, ಇದು ಹೀಗೇ ಮುಂದುವರೆದರೆ ಗಾಂಧಿಯ ದೇಹ ಮತ್ತು ಆತ್ಮಗಳೆರಡೂ ಮುರಿದು ಬೀಳುವುದು ಖಂಡಿತವೆಂದು ಎಚ್ಚರಿಸಿ ಹೆನ್ರಿ ಪೋಲಾಕ್‌ಗೆ ಪತ್ರ ಬರೆದ. ಆತ ಈ ಪತ್ರವನ್ನು ತನ್ನ ಆತಂಕ ಮತ್ತು ಖಂಡನೆಯ ಟಿಪ್ಪಣಿಗಳೊಂದಿಗೆ ಜೊಹಾನ್ಸ್‌ಬರ್ಗ್‌ನ ಗಣ್ಯ ಪ್ರಜೆಯೂ, ಸರ್ಕಾರದ ಉನ್ನತ ವಲಯಗಳಲ್ಲಿ ಪ್ರಭಾವ ಹೊಂದಿದ್ದ ಕಾನೂನು ಪಂಡಿತರೂ ಆಗಿದ್ದ ಡೇವಿಡ್ ಪೊಲಾಕ್‌ರಿಗೆ ಕಳಿಸಿದ. ಇದೇ ಸಂದರ್ಭದಲ್ಲಿ ಲಾರ್ಡ್ ಆ್ಯಂಪ್ಟ್‌ಹಿಲ್ ಅವರು ಲಂಡನ್‌ನಲ್ಲಿ ಇಂಗ್ಲೆಂಡ್‌ನ ಸಂಸತ್ತಿನ ಮೇಲ್ಮನೆಯಲ್ಲಿ ಗಾಂಧಿಯ ವ್ಯಕ್ತಿತ್ವ ಕುರಿತು ಆಡಿದ ಶ್ಲಾಘನೆಯ ಮಾತುಗಳು ಜ. ಸ್ಮಟ್ಸ್‌ನ ಕಿವಿಗೂ ಬಿದ್ದವು. ಇದರ ಜೊತೆಗೆ ಆತನ ಗೆಳೆಯರಾಗಿದ್ದ ಕೇಂಬ್ರಿಡ್ಜ್ ವಿದ್ವಾಂಸರೊಬ್ಬರು ಗಾಂಧಿಯ ಗುಣಗಾನ ಮಾಡಿದ ಪತ್ರವೂ ಕೆಲಸ ಮಾಡಿತು. ಇದರ ಪರಿಣಾಮವಾಗಿ ಸೆರೆಮನೆಯಲ್ಲಿ ಗಾಂಧಿ ಸ್ವಲ್ಪ ನಿರಾಳವಾಗಿ ಉಸಿರಾಡುವಂತಹ ಬದಲಾವಣೆ ಕಂಡುಬಂತು. ಜ. ಸ್ಮಟ್ಸ್ ಗಾಂಧಿಗೆಂದೇ ಧಾರ್ಮಿಕ ವಿಷಯಗಳನ್ನು ಕುರಿತ ಎರಡು ಗ್ರಂಥಗಳನ್ನು ಕಳಿಸಿದ. ಅಲ್ಲದೆ ಅವರಿಗೆಂದು ಒಂದು ಹಾಸಿಗೆಯನ್ನೂ, ಬರೆಯಲು ಒಂದು ಟಿಪ್ಪಣಿ ಪುಸ್ತಕ ಹಾಗೂ ಸೀಸದ ಕಡ್ಡಿ ಒದಗಿಸಲಾಯಿತು. ನೆಲ ಗುಡಿಸಿ ಸಾರಿಸಿ ಪಾಲಿಶ್ ಮಾಡುವ ಕೆಲಸಕ್ಕೆ ಬದಲಾಗಿ ಬಟ್ಟೆ ಹೊಲಿಯುವ ಮತ್ತು ಮಡಿಚಿಡುವ ಕೆಲಸಗಳನ್ನು ಅವರಿಗೆ ನೀಡಲಾಯಿತು.

■

೨೪

ಥೋರೋನ ಪ್ರಭಾವ: ಮಗನಿಗೆ ಮಾರ್ಗದರ್ಶನ

ಹಿಂದಿನ ಸೆರೆಮನೆ ವಾಸಗಳಂತೆಯೇ ಗಾಂಧಿ ಇಲ್ಲಿ ಬಿಡುವಿನ ಕಾಲವನ್ನು ಪುಸ್ತಕಗಳ ಅಧ್ಯಯನಕ್ಕಾಗಿ ಬಳಸಿದರು. ಗುಜರಾತಿ, ಹಿಂದಿ, ಇಂಗ್ಲಿಷ್ ಪುಸ್ತಕಗಳಲ್ಲದೆ ಸಣ್ಣ ತಮಿಳು ಪುಸ್ತಕಗಳನ್ನೂ ಅವರು ಓದಿದರು. ಸೆರೆಮನೆಯಲ್ಲಿ ತಮ್ಮನ್ನು ರಕ್ಷಿಸಿದ್ದು ಪುಸ್ತಕಗಳೇ ಎನ್ನುವ ಗಾಂಧಿ ತಮ್ಮ ಹೋರಾಟದಲ್ಲಿ ಯಾವುದೇ ಅಪನಂಬಿಕೆ ಇಲ್ಲದೆ ನಿರಂತರ ಬೆಂಬಲ ನೀಡಿದ ತಮಿಳು ಸಮುದಾಯದ ಬಗೆಗಿನ ವಿಶೇಷ ಪ್ರೀತಿಯ ದ್ಯೋತಕವಾಗಿ ತಾವು ತಮಿಳು ಪುಸ್ತಕಗಳನ್ನು ವಿಶೇಷ ಆಸ್ಥೆಯಿಂದ ಓದಿದ್ದಾಗಿ ಹೇಳುತ್ತಾರೆ. ಅವರು ಉಪನಿಷತ್ತುಗಳು, ಪತಂಜಲಿಯ ಯೋಗ ದರ್ಶನ, ಮನುಸ್ಮೃತಿಗಳಲ್ಲದೆ ಕಾರ್ಲೈಲ್, ಮಜಿನಿ, ಸ್ಟೀವನ್ಸನ್, ರಸ್ಕಿನ್, ಥೋರೋ, ಟಾಲ್‌ಸ್ಟಾಯ್‌ರ ಸಾಹಿತ್ಯವನ್ನೂ ಓದಿದರು.

ಥೋರೋ ನಿರೂಪಿಸಿದ ಸೆರೆಮನೆವಾಸದ ಸುಖಗಳು!

ಈ ಸೆರೆಮನೆಯ ಒಂಟಿ ಕೋಣೆಯಲ್ಲಿ ಅವರು ವಿಶೇಷ ತಾದಾತ್ಮ್ಯದೊಂದಿಗೆ ಓದಿದ ಸಾಹಿತ್ಯವೆಂದರೆ ಅಮೆರಿಕಾದ ಬಹುಪ್ರತಿಭೆಗಳ ಲೇಖಕ ಹೆನ್ರಿ ಡೇವಿಡ್ ಥೋರೋನದು. ಥೋರೋನಂತೆಯೇ ಸೆರೆಮನೆವಾಸವನ್ನು ಆದರ್ಶೀಕರಿಸುವ ಗಾಂಧಿ, ದಂಡ ಪಾವತಿ ಮಾಡಿ ಸೆರೆಮನೆವಾಸವನ್ನು ತಪ್ಪಿಸಿಕೊಳ್ಳುವವರು ಹೇಡಿಗಳು ಎನ್ನುತ್ತಾರೆ. ಹೊರ ಬದುಕಿನಲ್ಲಿ ಹಲವರ ಮಾತುಗಳನ್ನು ಕೇಳಬೇಕಾಗಿದ್ದರೆ ಇಲ್ಲಿ ಒಬ್ಬ ಮೇಲ್ವಿಚಾರಕನ ಮಾತನ್ನಷ್ಟೆ ಕೇಳಿ ನಡೆದರೆ ಸಾಕು, ಆಹಾರದ, ಸೂರಿನ ಚಿಂತೆಯಿಲ್ಲದೆ ದೇಶ, ಜನತೆಯ ಸೇವೆಯನ್ನು ಬದ್ಧತೆಯಿಂದ ಮಾಡಬಹುದು. ಇಲ್ಲಿ ದೇಹವನ್ನು ಸುಸ್ಥಿತಿಯಲ್ಲಿ ಇಡುವಂತಹ ದುಡಿಮೆಗೆ ಅವಕಾಶವಿದೆ, ದುಶ್ಚಟಗಳಿಂದ ದೂರವಿಡುವ ನಿರ್ಬಂಧವಿದೆ, ಪ್ರಾರ್ಥನೆ-ಅಧ್ಯಯನಗಳಿಗೆ ಸಾಕಷ್ಟು ಬಿಡುವು ಸಿಗುತ್ತದೆ, ಉಚಿತ ವೈದ್ಯಕೀಯ ನೆರವಿದೆ ಎಂದು ಸೆರೆಮನೆಯ ಜೀವನದ ಪ್ರಯೋಜನಗಳನ್ನು ಅವರು ಪಟ್ಟಿ ಮಾಡುತ್ತಾರೆ. ಅಕಸ್ಮಾತ್ ಕೆಟ್ಟದಾಗಿ ನಡೆಸಿಕೊಳ್ಳುವ ಮೇಲ್ವಿಚಾರಕ ಸಿಕ್ಕರೆ ತಾಳ್ಮೆಯ, ಮನೋನಿಗ್ರಹದ ಪಾಠಗಳನ್ನು ಇಲ್ಲಿ ಕಲಿಯಬಹುದಾಗಿದೆ ಎನ್ನುತ್ತಾರೆ. ಸೆರೆಮನೆ ವಾಸದ ನೆನಪುಗಳ ದಾಖಲೆಯಲ್ಲಿ ಅದರ ಗುಣಗಾನವನ್ನು ಅವರು ಮುಗಿಸುವುದು, 'ನಾಗರಿಕ ಅವಿಧೇಯತೆ' ಅಥವಾ ಸವಿನಯ ಕಾನೂನು ಭಂಗ ಎಂದು ಅನುವಾದಿಸಬಹುದಾದ ಥೋರೋನ 'ಸಿವಿಲ್ ಡಿಸೊಬಿಡಿಯನ್ಸ್' ಎಂಬ ಪ್ರಬಂಧವೊಂದರ ಈ ಮಾತುಗಳೊಂದಿಗೆ : 'ಊರ ಜನರು ನನ್ನ ಮತ್ತು ಅವರ ನಡುವೆ

ಇರುವ ದಪ್ಪನೆಯ ಕಲ್ಲು ಗಾರೆಗಳ ಗೋಡೆಯನ್ನು ದಾಟಿ ಬಂದರೂ ನನ್ನಷ್ಟು ಸ್ವತಂತ್ರರಾಗಿರಲು ಇನ್ನೂ ದೊಡ್ಡ ಕಲ್ಲುಗೋಡೆಯನ್ನು ಒಡೆದು ಮತ್ತು ದಾಟಿ ಬರಬೇಕಾಗುತ್ತದೆ'.

ಚುನಾವಣಾ ತೆರಿಗೆಯನ್ನು ಪಾವತಿಸದೆ ಸರ್ಕಾರಕ್ಕೆ ಅವಿಧೇಯತೆ ತೋರಿ ಸೆರೆಮನೆ ಸೇರಿದ್ದ ಥೋರೋ (೧೮೧೭-೧೮೬೨) ಇಲ್ಲಿ ಹೇಳುವುದು, ಅನ್ಯಾಯದ ವಿರುದ್ಧ ಹೋರಾಟ ನಡೆಸಲು ಮಾನವತೆಯನ್ನು ಕುರಿತು ಬೇಕಾದ ಸಂಪೂರ್ಣ ಅರಿವನ್ನು ಗಳಿಸಲು ಅಡ್ಡಿಯಾಗಿರುವ ಅಜ್ಞಾನದ ಗೋಡೆಯ ಬಗ್ಗೆ. ಧಾರ್ಮಿಕ ಸಂಸ್ಥೆಗಳ ಗುಲಾಮಗಿರಿಯಿಂದ ಹಿಡಿದು ಸರ್ಕಾರದ ಗುಲಾಮಗಿರಿಯವರೆಗಿನ ಮನುಷ್ಯ ಚೇತನವನ್ನು ಬಗ್ಗು ಬಡಿಯುವ, ಭ್ರಷ್ಟಗೊಳಿಸುವ ಎಲ್ಲ ರೀತಿಯ ನೀತಿ-ನಿಯಮ, ನಂಬಿಕೆ-ರಿವಾಜು ಕಾನೂನುಗಳನ್ನು ವಿರೋಧಿಸುತ್ತಿದ್ದ ಥೋರೋ ಸೆರೆಮನೆಯೊಂದೇ ನ್ಯಾಯವಂತರ ನಿಜ ನಿವಾಸ ಎಂದು ಪ್ರತಿಪಾದಿಸಿದ ಸಂಪೂರ್ಣ ಬಂಡಾಯಗಾರ. ಕವಿಯೂ, ಅನುಭಾವಿಯೂ, ತತ್ವಜ್ಞಾನಿಯೂ, ಪ್ರಬಂಧಕಾರನೂ ಆಗಿದ್ದ ಈತ ಬಹುಸಂಖ್ಯಾತರ ಅಭಿಪ್ರಾಯದ ಆಧಾರದ ಮೇಲೆ ತೀರ್ಮಾನಗಳನ್ನು ತೆಗೆದುಕೊಳ್ಳುವ ಪ್ರಜಾಸತ್ತಾತ್ಮಕವೆಂದು ಹೇಳಲಾಗುವ ವಿಧಾನವನ್ನು ಸತ್ಯವನ್ನು ಸಂಖ್ಯಾಬಲದ ಮೂಲಕ ಅಳೆಯುವ ಅಜ್ಞಾನ ಎಂದು ಟೀಕಿಸುತ್ತಾನೆ. 'ಏಕೆ ಯಾವಾಗಲೂ ಕ್ರಿಸ್ತನನ್ನು ಶಿಲುಬೆಗೇರಿಸುತ್ತೀರಿ?' ಎಂದು ಕೇಳುವ ಅವನು ಸಮೂಹ ಸನ್ನಿಯನ್ನು ಅಧಾರ್ಮಿಕ ಎಂದು ಗುರುತಿಸಿದ್ದ. ಮನುಷ್ಯರು ಸರ್ಕಾರವನ್ನು ಮಾಡಿಕೊಂಡಿದ್ದಾರೆಯೇ ಹೊರತು ಸರ್ಕಾರ ಮನುಷ್ಯರನ್ನು ಮಾಡಿಲ್ಲ ಎಂದು ಎಚ್ಚರಿಸುತ್ತಿದ್ದ ಥೋರೋ, ಸರ್ಕಾರದ ಅನ್ಯಾಯಗಳನ್ನು ವಿರೋಧಿಸುವ ಏಕೈಕ ಮಾರ್ಗವೆಂದರೆ ತೆರಿಗೆ ಪಾವತಿಸದಿರುವುದು ಎನ್ನುತ್ತಿದ್ದ. ವಾಲ್ಡೆನ್ ಎಂಬ ಸರೋವರದ ಪಕ್ಕ ಒಂದು ಪುಟ್ಟ ಕುಟೀರ ಕಟ್ಟಿಕೊಂಡು ನಿಸರ್ಗದ ಅವಿಭಾಜ್ಯ ಅಂಗವೆಂಬಂತೆ ಸಹಜ ಬದುಕಿನ ಪ್ರಯೋಗವನ್ನು ನಡೆಸಿದ್ದ ಥೋರೋ, ಆಧುನಿಕತೆಯ ಹೆಸರಿನಲ್ಲಿ ಚಾಲ್ತಿಗೆ ಬಂದ 'ಪ್ರಗತಿ' ಅಥವಾ 'ಅಭಿವೃದ್ಧಿ' ಎಂಬ ಪರಿಕಲ್ಪನೆಯನ್ನು ಅದು ಮನುಷ್ಯನನ್ನು ನಿಸರ್ಗದಿಂದ ದೂರ ಒಯ್ದು ಸ್ವಯಂವಿನಾಶಕನನ್ನಾಗಿ ಮಾಡುತ್ತದೆ ಎಂದು ನಂಬಿದ್ದ. ಈ ಸಂಬಂಧ ಅವನು ಬರೆದ ಲೇಖನಗಳ ಸಂಗ್ರಹ 'ವಾಲ್ಡೆನ್'. ಅದು ಥೋರೋನ ವ್ಯಕ್ತಿತ್ವದ ವಿಶಿಷ್ಟ ಗುರುತಾಗಿದ್ದ ಪೂರ್ಣ ಮನುಷ್ಯತ್ವ ಎಂದರೆ ನುಡಿ-ನಡೆಗಳ ಐಕ್ಯತೆ ಎಂಬುದನ್ನು ಸಾರುವ ಜೀವಂತ ಕೃತಿಯಾಗಿತ್ತು.

ಗಾಂಧಿ ಥೋರೋನ ವಿಚಾರಗಳಲ್ಲಿ ತಮ್ಮ ಸತ್ಯಾಗ್ರಹ ಕಲ್ಪನೆಗೆ ಸಮರ್ಥನೆಯನ್ನು ಕಂಡುಕೊಂಡರು. ತಾವು ಥೋರೋನ ವಿಚಾರಗಳಿಂದ ತಮ್ಮ ಹೋರಾಟಕ್ಕೆ ಹೆಚ್ಚಿನ ಅರಿವಿನ ಬಲ ಗಳಿಸಿದ್ದಾಗಿ ಗಾಂಧಿ ಹೇಳುತ್ತಾರೆ. ಆದರೆ ಕೆಲವರು ಸತ್ಯಾಗ್ರಹ ಕಲ್ಪನೆಯನ್ನು ತಾವು ಆತನಿಂದ ಪಡೆದುಕೊಂಡಿದ್ದಾಗಿ ಹೇಳುವುದನ್ನು ಅವರು ನಿರಾಕರಿಸುತ್ತಾರೆ. ಥೋರೋನನ್ನು ಓದಿದ್ದು ತಾವು ಸತ್ಯಾಗ್ರಹವನ್ನು ಆರಂಭಿಸಿದ ಬಹುದಿನಗಳ ನಂತರ ಎನ್ನುತ್ತಾರೆ. ಹೇಗೂ ಥೋರೋ ತನ್ನ ವಿಚಾರಗಳ ಬೇರುಗಳನ್ನು ಹೊಂದಿದ್ದುದು ಆತ ಓದಿದ್ದ ಉಪನಿಷತ್ತುಗಳು, ಗೀತೆ ಇತ್ಯಾದಿ ಭಾರತದ ಪ್ರಾಚೀನ ಗ್ರಂಥಗಳಲ್ಲೇ ಎಂಬುದು ಇಲ್ಲಿ ಗಮನಾರ್ಹ.

ಮಕ್ಕಳಿಗೆ ಜನಿವಾರ ಬೇಡವೆಂದ ಗಾಂಧಿ

ಗಾಂಧಿಯವರ ಈ ಸೆರೆಮನೆವಾಸದಲ್ಲಿ ನಾವು ಗಮನಿಸಬೇಕಾದ ಇನ್ನೊಂದು ಮುಖ್ಯ ಸಂಗತಿ ಎಂದರೆ ಅವರು ಸೆರೆಮನೆಯ ನಿಯಮದ ಪ್ರಕಾರ ಬರೆಯಬಹುದಾಗಿದ್ದ ತಿಂಗಳಿಗೊಂದು ಬರೆದ ಪತ್ರಗಳಲ್ಲಿನ ಅವರ ವಿಚಾರಗಳ ವೈಶಿಷ್ಟ್ಯ. ಮಾರ್ಚ್ ಕೊನೆಯ ವಾರದಲ್ಲಿ ಬರೆದ ಒಂದು ಪತ್ರದಲ್ಲಿ ಅವರು ಕಸ್ತೂರಬಾ ಅವರ ಆರೋಗ್ಯದ ಬಗ್ಗೆ ವಿಚಾರಿಸುತ್ತಾ, ಆಕೆ ಮತ್ತು ಮಕ್ಕಳೆಲ್ಲರೂ ಪ್ರತಿದಿನ ಬೆಳಗ್ಗೆ ಹಾಲಿನೊಂದಿಗೆ ಸಬ್ಬಕ್ಕಿ ತೆಗೆದುಕೊಳ್ಳುವುದನ್ನು ಮುಂದುವರೆಸಲು ಸೂಚಿಸಿದ್ದರಲ್ಲದೆ, ಫೀನಿಕ್ಸ್‌ನ ತಮ್ಮ ಮನೆಗೆ ಬಂದು ಮಣಿಲಾಲನಿಗೆ ಜನಿವಾರ ಹಾಕಿಕೊಳ್ಳಲು ಆಗ್ರಹಿಸಿದ್ದ ಹಿಂದೂ ಆರ್ಯಸಮಾಜದ ಶಂಕರಾನಂದ ಸ್ವಾಮಿಯ (ಭಾರತದಿಂದ ಬಂದಿದ್ದ ಈತ ದ.ಆಫ್ರಿಕಾದ ಹಿಂದೂ ಭಾರತೀಯರ ಮನೆಗಳಿಗೆ ಹೋಗಿ ಹಿಂದೂ ಕರ್ಮಾಚರಣೆಗಳನ್ನು ಮಾಡಿಸುತ್ತಾ ಗಾಂಧಿ ಪ್ರಚುರಪಡಿಸುತ್ತಿದ್ದ ಉದಾರವಾದಿ ಹಿಂದೂ ಧರ್ಮದ ತತ್ವಗಳನ್ನು ಖಂಡಿಸುತ್ತಾ, ಆ ಕಾರಣದಿಂದಾಗಿ ಬಿಳಿಯರ ಸಾಮಾಜಿಕ ವಲಯಗಳಲ್ಲಿ ಬಹು ಪ್ರಿಯ ವ್ಯಕ್ತಿಯಾಗಿದ್ದ) ಮಾತನ್ನು ಕೇಳಬಾರದೆಂದು ಆಗ್ರಹಿಸಿದ್ದರು. ಈ ಸಂಬಂಧವಾಗಿ ಅವರು 'ಈಗಾಗಲೇ ಶೂದ್ರರು ಮತ್ತು ಇತರರ ನಡುವೆ ಸಾಕಷ್ಟು ಹುಸಿ ವಿಭಜನೆಗಳಿದ್ದು, ಈ ದಾರವು ಅವನ್ನು ಇನ್ನಷ್ಟು ಹೆಚ್ಚಿಸಿ ತೊಂದರೆ ಉಂಟುಮಾಡುತ್ತದೆ' ಎಂದು ಮಗನಿಗೆ ಎಚ್ಚರಿಸಿದ್ದರು. ಈ ಶಂಕರಾನಂದ ಸ್ವಾಮಿ ದ.ಆಫ್ರಿಕಾದಲ್ಲಿ ನಡೆಸುತ್ತಿದ್ದ ಧರ್ಮ ಪ್ರಚಾರ ಕಾರ್ಯಕ್ರಮವನ್ನು ಆರಂಭದಲ್ಲೇ ಗಮನಿಸಿದ್ದ ಗಾಂಧಿ, ಸೋದರ ಸಂಬಂಧಿ ಹುಡುಗ ಮಗನ್‌ಲಾಲ್‌ಗೆ ಬರೆದ ಪತ್ರವೊಂದರಲ್ಲಿ 'ಈ ಸ್ವಾಮಿಯ ವಿಚಾರಗಳ ಬಗ್ಗೆ ನನ್ನ ಗೌರವಪೂರ್ವಕ ಭಿನ್ನಾಭಿಪ್ರಾಯವಿದೆ. ಇಂತಹ ವಿಷಾದನೀಯ ಬೆಳವಣಿಗೆಗಳ ಕಾರಣದಿಂದಲೇ ತಮ್ಮ ಗೆಳೆಯ–ಮಾರ್ಗದರ್ಶಿ ಕವಿ ರಾಯ್‌ಚಂದ್, ಆಧುನಿಕ ಕಾಲದಲ್ಲಿ ಧರ್ಮ ಬೋಧಕರ ಬಗ್ಗೆ ಎಚ್ಚರದಿಂದಿರಬೇಕೆಂದು ಹೇಳುತ್ತಿದ್ದುದು' ಎಂದು ಬರೆದಿದ್ದರು.

ಮಗನಿಗೆ ನೀಡಿದ ಮಾರ್ಗದರ್ಶನ

ನಂತರ ತಮ್ಮ ಗೆಳೆಯ ಪೊಲಾಕ್‌ಗೆ ಬರೆದ ಪತ್ರದಲ್ಲಿ ಫೀನಿಕ್ಸ್‌ನಲ್ಲಿ ತಮ್ಮ ಕುಟುಂಬ ತಮ್ಮನ್ನು ಒಮ್ಮೆ ನೋಡಿ ಬರಬಲ್ಲ ಪ್ರಯಾಣದ ಖರ್ಚನ್ನೂ ನಿರ್ವಹಿಸಲಾಗದಷ್ಟು ಆರ್ಥಿಕವಾಗಿ ದುಃಸ್ಥಿತಿಯಲ್ಲಿದ್ದು ಸಾಲದ ಹೊರೆಗೆ ಸಿಕ್ಕಿರುವುದರ ಬಗ್ಗೆ ವಿಷಾದಿಸಿ, ದಯವಿಟ್ಟು ಮನೆಯವರಿಗೆ ಕುಟುಂಬದ ಚಿನ್ನಾಭರಣಗಳನ್ನೂ ಮತ್ತು ತಮ್ಮ ಕಾನೂನು ಪುಸ್ತಕಗಳನ್ನೂ ಮಾರಿ ಸಾಲ ತೀರಿಸಲು ಹೇಳಿ ಎಂದು ಬರೆದಿದ್ದರು. ಆದರೆ ಗಾಂಧಿ ವ್ಯಕ್ತಿತ್ವ ಮೂಡುತ್ತಿದ್ದ ಬಗೆಯನ್ನು ಕುತೂಹಲಕಾರಿಯಾಗಿ ಬಿಚ್ಚಿಡುವ ಕಾರಣದಿಂದಾಗಿ ನಿಜವಾಗಿ ನಮ್ಮ ಗಮನವನ್ನು ಸೆಳೆಯುವ ಪತ್ರವೆಂದರೆ ಅವರು ಹದಿನೇಳು ವರ್ಷ ವಯಸ್ಸಿನ ತಮ್ಮ ಎರಡನೇ ಮಗ ಮಣಿಲಾಲನಿಗೆ ಬರೆದ ಒಂದು ದೀರ್ಘ ಪತ್ರ. ಕುಟುಂಬದ ಲೌಕಿಕ ಯೋಗಕ್ಷೇಮದ ವಿಷಯಗಳಲ್ಲದೆ ಕುಟುಂಬದ ಆಂತರಂಗಿಕ ಯೋಗಕ್ಷೇಮದ ಬಗ್ಗೆಯೂ ಅವರು ನೀಡುವ ಸೂಚನೆಗಳ ಸ್ವರೂಪ ಗಾಂಧಿಯಲ್ಲಿದ್ದ ತಾಯ್ತನದ ಜೊತೆಗೇ ತಂದೆತನದ ಪರಿಚಯವನ್ನೂ ಮಾಡಿಕೊಡುತ್ತಾ ಈ ಪತ್ರ ಒಟ್ಟಾರೆ

ಅವರ ವ್ಯಕ್ತಿತ್ವದಲ್ಲಿ ಸಿದ್ಧವಾಗುತ್ತಿದ್ದ ಹದದ ಸೂಚನೆಯನ್ನು ನೀಡುತ್ತದೆ. ಈ ಪತ್ರದಲ್ಲಿ ಮುಖ್ಯವಾಗಿ ಎದ್ದುಕಾಣುವುದು ತಮ್ಮ ಮಕ್ಕಳಿಗೆ ಔಪಚಾರಿಕ ಶಿಕ್ಷಣದ ವ್ಯವಸ್ಥೆ ಮಾಡಿಲ್ಲವೆಂಬ ಅವರ ಗೆಳೆಯರ ಟೀಕೆ, ಪತ್ನಿಯ ಕೊರಗು ಮತ್ತು ಸ್ವತಃ ಮಕ್ಕಳ ಆತಂಕಗಳು ಅವರ ಮನಸ್ಸಿನಲ್ಲಿ ಸದಾ ಉಂಟು ಮಾಡುತ್ತಿರಬಹುದಾದ ತುಮುಲ.

ಈ ಪತ್ರದಲ್ಲಿ ಗಾಂಧಿ, 'ಈಗ ಮನೆಯಲ್ಲಿರುವ ಹಿರಿಯ ಮಗನಾಗಿ ತಾಯಿ, ಅತ್ತಿಗೆ ಮತ್ತು ತಮ್ಮಂದಿರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ತನ್ನ ಕರ್ತವ್ಯವೆಂದು ಭಾವಿಸುವಂತೆ ಮನಸ್ಸನ್ನು ತರಬೇತುಗೊಳಿಸಿಕೊಳ್ಳುವುದೇ ನಿಜವಾದ ಶಿಕ್ಷಣವೇ ಹೊರತು ಅಕ್ಷರ ಜ್ಞಾನವಲ್ಲ. ಪ್ರತಿಯೊಬ್ಬನೂ ಹನ್ನೆರಡು ವಯಸ್ಸಿನ ನಂತರ ತನ್ನ ಕರ್ತವ್ಯಗಳನ್ನು ಮನವರಿಕೆ ಮಾಡಿಕೊಳ್ಳುವಂತೆ ಆಲೋಚನೆ, ಮಾತು ಮತ್ತು ಕೆಲಸಗಳಲ್ಲಿ ಸಮಾಧಾನ, ಸತ್ಯವಂತಿಕೆಗಳನ್ನೂ ಜೀವಹಾನಿ ಮಾಡದಿರುವಂತಹ ಕಲಿಕೆ ಮತ್ತು ಆಚರಣೆಗಳನ್ನು ರೂಢಿಸಿಕೊಳ್ಳುವುದೇ ಶಿಕ್ಷಣ' ಎಂದು ಉಪನಿಷದ್ ಬಗೆಗಿನ ಒಂದು ಗುಜರಾತಿ ವ್ಯಾಖ್ಯಾನ ಪತ್ಯವೊಂದನ್ನು ಉಲ್ಲೇಖಿಸಿ ಹೇಳುತ್ತಾರೆ. ಮುಂದುವರೆದು ಅವರು, 'ಈ ಮೂರು ಗುಣಗಳನ್ನು ರೂಢಿಸಿಕೊಂಡವನು ಜಗತ್ತಿನ ಯಾವ ಭಾಗದಲ್ಲಾದರೂ ಅನ್ನಾಹಾರಗಳನ್ನು ಗಳಿಸಬಲ್ಲವನಲ್ಲದೆ ಸತ್ಯದ, ಆತ್ಮದ ಮತ್ತು ದೇವರ ಸಾಕ್ಷಾತ್ಕಾರವನ್ನೂ ಸಾಧಿಸಬಹುದು. ಆದರೆ ಅಕ್ಷರ ಜ್ಞಾನ ಬೇಡವೆಂದಲ್ಲ. ಅದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಬೇಕಿಲ್ಲ. ಅದನ್ನು ಕಲಿಯಲು ಬೇಕಾದಷ್ಟು ಕಾಲಾವಕಾಶವಿದೆ. ಇನ್ನು ಮುಂದೆ ನಾವು ಬಯಸಬೇಕಾದದ್ದು, ನಿರೀಕ್ಷಿಸಬೇಕಾದದ್ದು ಬಡತನವನ್ನು. ಅದರ ಬಗ್ಗೆ ಹೆಚ್ಚು ಯೋಚಿಸಿದಷ್ಟೂ ಅದೊಂದು ಆಶೀರ್ವಾದ ರೂಪವಾಗಿಯೇ ನನಗೆ ಕಾಣುತ್ತದೆ. ಬಡತನದ ಪ್ರಯೋಜನಗಳು ಶ್ರೀಮಂತಿಕೆಯವಕ್ಕಿಂತ ಹೆಚ್ಚು ಸವಿಯಾಗಿರುತ್ತವೆ' ಎನ್ನುತ್ತಾರೆ. ಕೊನೆಯಲ್ಲಿ, 'ತೋಟಗಾರಿಕೆಯನ್ನು ಮರೆಯಬೇಡ. ನೀನು ಒಬ್ಬ ಒಳ್ಳೆಯ ತೋಟಗಾರನಾಗಬೇಕು. ಕೆಲಸದ ಉಪಕರಣಗಳನ್ನು ಸ್ವಚ್ಛ ಮಾಡಿ ಒಂದೆಡೆ ಇಡುವುದನ್ನು ಕಲಿ. ಗಣಿತ ಮತ್ತು ಸಂಸ್ಕೃತ ಕಲಿಯುವುದನ್ನು ಮರೆಯಬೇಡ. ಹಾಗೇ ಹಾಡುವುದನ್ನೂ. ಒಳ್ಳೆಯ ಪದ್ಯಗಳನ್ನು ಆರಿಸಿ ಪ್ರತ್ಯೇಕವಾಗಿ ಬರೆದಿಟ್ಟುಕೊಂಡು ಬಿಡುವಾದಾಗ ಗುನುಗುವುದನ್ನೂ ರೂಢಿ ಮಾಡಿಕೋ. ಎಂದೂ ಉದ್ವಿಗ್ನ ಅಥವಾ ಕೋಪಗೊಳ್ಳಬೇಡ. ಸಹನೆಯನ್ನು ರೂಢಿಸಿಕೋ. ಮನೆಯ ಎಲ್ಲ ಖರ್ಚು ವೆಚ್ಚಗಳನ್ನು ಒಂದು ಪೈಸೆಯೂ ಬಿಡದಂತೆ ಲೆಕ್ಕವಿಟ್ಟಿದ್ದೀಯಾ ತಾನೆ?' ಎಂದು ವಿಚಾರಿಸುವ ಮೂಲಕ ತಮ್ಮ ಎರಡನೆಯ ಮಗನನ್ನು ತಮ್ಮ ಮುಂದಿನ ಹೋರಾಟದ ಬದುಕಿಗೆ ಶೃತಿ ಮಾಡಲು ಪ್ರಯತ್ನಿಸುತ್ತಾರೆ.

ಬೀಜಗಣಿತ ಪುಸ್ತಕ ಬೇಕೆಂದ ಗಾಂಧಿ!

ಇದೇ ಪತ್ರದಲ್ಲಿ ಗಾಂಧಿ ತಮ್ಮೊಡನೆ ದ.ಆಫ್ರಿಕಾಕ್ಕೆ ಕರೆತಂದಿದ್ದ ತಮ್ಮ ಸೋದರ ಸಂಬಂಧಿ ಹುಡುಗ ಮಗನ್‌ಲಾಲ್‌ಗೆ ಮಾರುಕಟ್ಟೆಯಲ್ಲಿ ಈಗ ಸುಲಭ ಬೆಲೆಯ ಆವೃತ್ತಿಯಲ್ಲಿ ಲಭ್ಯವಿರುವ ಎಮರ್ಸನ್‌ನ ಪ್ರಬಂಧಗಳನ್ನು ಓದಲು ಹೇಳಬೇಕೆಂದೂ, ಅವು ಪೂರ್ವದ ವಿವೇಕವನ್ನು ಪಶ್ಚಿಮದ ನುಡಿಗಟ್ಟಿನಲ್ಲಿ ಹೇಳಿರುವ ಅಪೂರ್ವ ಬರಹಗಳೆಂದೂ, ಅವುಗಳ ಮುಖ್ಯ ಭಾಗಗಳನ್ನು ಕೆಳಗೆರೆ ಹಾಕಿ ಆಯ್ಕೆ ಮಾಡಿಕೊಂಡು

ನಂತರ ಅವನ್ನು ಇನ್ನೊಂದು ಟಿಪ್ಪಣಿ ಪುಸ್ತಕಕ್ಕೆ ಪ್ರತಿ ಮಾಡಿಕೊಂಡು ದಿನವೂ ಮನನ ಮಾಡಿಕೊಳ್ಳಬೇಕೆಂದೂ ಸೂಚಿಸಿದ್ದರು. ಜೊತೆಗೆ ಸರಳ ಇಂಗ್ಲಿಷ್‌ನಲ್ಲಿ ಅನುವಾದಿತವಾಗಿರುವ ಟಾಲ್‌ಸ್ಟಾಯ್‌ನ 'ದೇವರ ಸಾಮ್ರಾಜ್ಯ ನಿನ್ನೊಳಗೇ ಇದೆ' ಎಂಬ ಪುಸ್ತಕವನ್ನು ಓದಲೇಬೇಕೆಂದು ಆಗ್ರಹಿಸಿದ್ದಾರೆ. ಕುತೂಹಲದ ಸಂಗತಿ ಎಂದರೆ ಈ ಪತ್ರದ ಕೊನೆಯಲ್ಲಿ ತಮಗೆ 'ಬೀಜಗಣಿತ'ದ ಪುಸ್ತಕವೊಂದನ್ನು ಕಳಿಸಿಕೊಡಲು ಹೇಳುತ್ತಾರೆ!

ಈ ಪತ್ರವನ್ನು ತಮ್ಮ, ಗಾಂಧಿ ಜೀವನ ಚರಿತ್ರೆ 'ದ ಲೈಫ್ ಆಫ್ ಮಹಾತ್ಮ ಗಾಂಧಿ' ಪುಸ್ತಕದಲ್ಲಿ ಇಡಿಯಾಗಿ ಉಲ್ಲೇಖಿಸುವ ಲೂಯಿ ಫಿಶರ್, ಇದೊಂದು, ಹದಿಮೂರನೇ ವಯಸ್ಸಿಗೇ ಮದುವೆಯಾಗಿ ಬಾಲ್ಯವನ್ನೇ ಕಳೆದುಕೊಂಡಿದ್ದ ತಂದೆಯೊಬ್ಬ ಅದರ ಫಲವಾಗಿ ತನ್ನ ಮಗನನ್ನು ತನ್ನದೇ ವ್ಯಕ್ತಿತ್ವದ ಎರಕದಲ್ಲಿ ರೂಪಿಸಿಕೊಂಡು ತನ್ನ ಬದುಕಿನ ಮಹಾನ್ ಗುರಿಯನ್ನು ತಲುಪುವುದಕ್ಕೆ ಬೇಕಾದ ಒಳ್ಳೆಯ ಸಹಾಯಕನೊಬ್ಬನನ್ನು ತಯಾರು ಮಾಡಿಕೊಳ್ಳುವ ಪ್ರಯತ್ನದಂತೆ ಕಾಣುತ್ತದೆ. ಮಣಿಲಾಲ ವಕೀಲನೋ ವೈದ್ಯನೋ ಆಗಬಯಸಿದ್ದರೆ, ಗಾಂಧಿ ಆತನನ್ನು ಒಬ್ಬ ಸಣ್ಣ ಸಂತನನ್ನಾಗಿ ಮಾಡಲು ಪ್ರಯತ್ನಿಸಿದರು. ದಿಗಂತದಲ್ಲಿ ನೆಟ್ಟಿದ್ದ ಗಾಂಧಿಯವರ ದೂರದೃಷ್ಟಿಗೆ ತನ್ನ ಹತ್ತಿರದವರ ಕಾಳಜಿಗಳನ್ನು ಸೂಕ್ಷ್ಮವಾಗಿ ಗಮನಿಸಲಾಗಲಿಲ್ಲವೇನೋ!' ಎಂದು ಬರೆಯುತ್ತಾರೆ.

■

೨೫

ಒಕ್ಕೂಟ ರಚನೆಯ ರಾಜಕಾರಣ ಮೂಡಿಸಿದ ಎಚ್ಚರ

ಅಂತೂ ಹೇಗೋ ಗಾಂಧಿಯವರ ಪ್ರಿಟೋರಿಯಾ ಸೆರೆಮನೆ ವಾಸ ಮುಕ್ತಾಯಕ್ಕೆ ಬಂತು. ಸರ್ಕಾರ ಅವರನ್ನು ಸ್ವಾಗತಿಸಲು ಜನ ಸೇರಬಾರದೆಂಬ ದೃಷ್ಟಿಯಿಂದ ೧೯೦೯ರ ಮೇ ೨೪ರ ಬೆಳಗಿನ ಝಾವ ಅವರನ್ನು ಸೆರೆಮನೆಯಿಂದ ಬಿಡುಗಡೆ ಮಾಡಿತು. ಆದರೂ ನೂರಾರು ಜನ ಸೆರೆಮನೆಯ ಮುಖ್ಯದ್ವಾರದ ಬಳಿ ಗಾಂಧಿಯವರನ್ನು ಸ್ವಾಗತಿಸಲು ಹೂಗುಚ್ಛ ಮತ್ತು ಹಾರಗಳೊಂದಿಗೆ ಕಾಯುತ್ತಿದ್ದರು. ಅವರೊಂದಿಗೆ ನಗರದ ಮಸೀದಿಯ ಮೈದಾನಕ್ಕೆ ತೆರಳಿದ ಗಾಂಧಿ ಅಲ್ಲಿ ಸೇರಿದ್ದ ಭಾರತೀಯರ ಬೃಹತ್ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಸತ್ಯಾಗ್ರಹಕ್ಕೆ ಇನ್ನಷ್ಟು ಜನ ಸೇರಿಕೊಳ್ಳಬೇಕೆಂದು ಆಗ್ರಹಿಸಿದ ಅವರು, ಇತರರು ಸೆರೆಮನೆಯಲ್ಲಿದ್ದಾಗ ವ್ಯಾಪಾರ ಮಾಡಿ ಹಣ ಸಂಪಾದಿಸಿರುವ ಭಾರತೀಯರು ಬಡವಾಗಿರುವ ಬ್ರಿಟಿಷ್ ಭಾರತೀಯ ಸಂಘಕ್ಕೆ ಉದಾರ ದೇಣಿಗೆ ನೀಡಿ ತಮ್ಮ ತಪ್ಪನ್ನು ಸರಿಪಡಿಸಿಕೊಳ್ಳಬೇಕೆಂದು ಸೂಚಿಸಿದರು. ನಂತರ ಜೊಹಾನ್ಸ್‌ಬರ್ಗ್‌ಗೆ ತೆರಳಿದ ಗಾಂಧಿಯವರನ್ನು ಅಲ್ಲಿ ಹಲವು ಚೀನೀಯರೂ, ಯೂರೋಪಿಯನ್ನರೂ ಸೇರಿದಂತೆ ಒಂದು ದೊಡ್ಡ ಜನಸ್ತೋಮ ರೈಲ್ವೇ ನಿಲ್ದಾಣದಲ್ಲಿ ಸ್ವಾಗತಿಸಿತು. ನಂತರ ಅವರನ್ನು ಹಮೀದಿಯಾ ಮಸೀದಿಯ ಮೈದಾನದ ಬಳಿಗೆ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು. ಅಲ್ಲಿ ಮಾತನಾಡಿದ ಗಾಂಧಿ, ತಮ್ಮನ್ನು ಕೆಲವರು 'ಹಿಂದೂ-ಮುಸ್ಲಿಂ ಸಮುದಾಯದ ರಾಜ' ಎಂದು ಕರೆಯುವುದರ ಬಗ್ಗೆ ಅಸಮಾಧಾನ ಸೂಚಿಸಿ, ತಾವೇನಿದ್ದರೂ ಜನರ ಸೇವಕ ಎಂದು ಹೇಳಿದರು. ಏಷಿಯಾಟಿಕ್ ಕಾನೂನಿನ ವಿರುದ್ಧ ಸತ್ಯಾಗ್ರಹ ಕಳೆಗುಂದುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ ಅವರು ಗುರಿ ಮುಟ್ಟುವವರೆಗೂ ಸತ್ಯಾಗ್ರಹವನ್ನು ಸಂಘಟಿಸುತ್ತಲೇ ಇರಬೇಕೆಂದು ಕರೆಕೊಟ್ಟರು. ಇದೇ ಸಂದರ್ಭದಲ್ಲಿ ಮಾತಾಡಿದ ಕಛಾಲಿಯಾ ಅವರು 'ಘನತೆಯಿಲ್ಲದ ಬದುಕು ಅರ್ಥಹೀನ. ಹಾಗಾಗಿ ಭಾರತೀಯ ವ್ಯಾಪಾರಿಗಳು ಈಗ ಸ್ವಯಂಪ್ರೇರಣೆಯ ಬಡತನ ಮತ್ತು ಸ್ವಯಂಹೇರಿಕೆಯ ಬಡತನಕ್ಕೆ ಅಥವಾ ಅವಮಾನಗಳಿಗೆ ಸಿದ್ಧರಾಗುವ ನಡುವೆ ಆಯ್ಕೆ ಮಾಡಿಕೊಳ್ಳಬೇಕಿದೆ. ಬಿಳಿಯರ ಸರಕನ್ನು ಅವರಿಗೇ ಹಿಂದಿರುಗಿಸಿ ಅಂಗಡಿಗಳನ್ನು ಮುಚ್ಚಿ ವ್ಯಾಪಾರ ನಿಲ್ಲಿಸುವ ಕಾಲ ಬಂದಿದೆ' ಎಂದು ಭಾರತೀಯ ಸಮುದಾಯವನ್ನು ಪ್ರಚೋದಿಸಿದರು.

ಗಾಂಧಿ ಮತ್ತು ಅವರ ವೈವಿಧ್ಯಮಯ ಸಹ ಸತ್ಯಾಗ್ರಹಿಗಳು

ಆದರೂ ಸತ್ಯಾಗ್ರಹ ಹೊಸಬರನ್ನು ಆಕರ್ಷಿಸಲು ಸೋಲತೊಡಗಿದ್ದನ್ನು ಗಾಂಧಿ

ಮತ್ತು ಅವರ ಸಹಚರರು ಗಮನಿಸದಿರಲಿಲ್ಲ. ಟ್ರಾನ್ಸ್‌ವಾಲ್‌ನಲ್ಲಿದ್ದ ಹದಿಮೂರು ಸಾವಿರ ಭಾರತೀಯರಲ್ಲಿ ೨೫೦೦ ಜನ ಮಾತ್ರ ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಇವರಲ್ಲಿ ಹಲವರು ಸತತವಾಗಿ ಐದು ಬಾರಿ ಸೆರೆಮನೆ ಸೇರಿ ವಿವಿಧ ಅವಧಿಗಳ ಶಿಕ್ಷೆ ಅನುಭವಿಸಿ ಬಂದಿದ್ದರು. ಸತ್ಯಾಗ್ರಹದ ತೀವ್ರತೆ ಹೆಚ್ಚಿದಂತೆ ಸರ್ಕಾರವೂ ಸತ್ಯಾಗ್ರಹಿಗಳನ್ನು ಕ್ರೂರವಾಗಿ ನಡೆಸಿಕೊಳ್ಳಲು ಆರಂಭಿಸಿತ್ತು. ವಿವಿಧ ರೂಪಗಳಲ್ಲಿ ಕಾನೂನು ಉಲ್ಲಂಘಿಸುವ ಮೂಲಕ ಸೆರೆಮನೆ ಸೇರಿ ಗಂಜಿ ಕುಡಿದು ಕಲ್ಲು ಒಡೆಯುವ, ಕಸ ಗುಡಿಸುವ ಶ್ರಮ ಶಿಕ್ಷೆಗಳನ್ನು ಅನುಭವಿಸಿದವರಲ್ಲಿ ಹಲವು ಹದಿಹರೆಯದ ತರುಣರಲ್ಲದೆ, ತಂಬಿ ನಾಯ್ಡುನಂತಹ ಬಡ ಕಾರ್ಮಿಕ, ರಾಯಪ್ಪನ್‌ನಂತಹ ಆಕ್ಸ್‌ಫರ್ಡ್ ಪದವೀಧರರು, ಇಮಾಂ ಸಾಹೇಬರಂತಹ ಮಹಾನ್ ಸುಖಜೀವಿಗಳೂ ಸೇರಿದ್ದರು. ಇವರಲ್ಲೆಲ್ಲ ಗಾಂಧಿ ನಿರ್ದಿಷ್ಟವಾಗಿ ಶ್ಲಾಘಿಸುವುದು ತಾವು ಯಾವುದೇ ನಿರ್ಧಾರ ತೆಗೆದುಕೊಂಡರೂ, ಸದಾ ತಮ್ಮ ಜೊತೆ ಇರುತ್ತಿದ್ದ ಮತ್ತು ತನ್ನ ಬಡತನವನ್ನು ಲೆಕ್ಕಿಸದೆ ಪದೇ ಪದೇ ಸೆರೆಮನೆಗೆ ಹೋಗಿಬರುತ್ತಿದ್ದ ತಂಬಿ ನಾಯ್ಡೂನನ್ನು. ಆತನ ಕುಟುಂಬ ಬೀದಿ ಪಾಲಾಗುವ ಸ್ಥಿತಿ ಬಂದೊದಗಿದಾಗ ಗಾಂಧಿ ತಮ್ಮ ಗೆಳೆಯರೊಂದಿಗೆ ಆತನ ಮನೆಗೆ ಹೋಗಿ ಆತನ ಪತ್ನಿ ವೀರಮ್ಮಾಳ್‌ಗೆ ಧೈರ್ಯ ತುಂಬಿ ವಿಶೇಷ ಹಣಕಾಸು ಒದಗಿಸಿದ್ದೂ ಉಂಟು. ತಂಬಿ ನಾಯ್ಡೂನಂತೆಯೇ ಗಾಂಧಿಯವರ ಜೊತೆ ಸದಾ ಕಾವಲುಗಾರನಂತೆ ಇರುತ್ತಿದ್ದ ಪೈಲ್ವಾನ್ ಜಾಕಿ ಮೊದಲಿಯಾರ್ ಮತ್ತು ಸೆರೆಮನೆಯಲ್ಲಿ ಅನುಭವಿಸಿದ ಸಶ್ರಮ ಶಿಕ್ಷೆಗಳಿಂದ ಬಳಲಿ ಬಿಡುಗಡೆಯಾದ ಸ್ವಲ್ಪ ಕಾಲದಲ್ಲೇ ಕ್ಷಯಕ್ಕೆ ತುತ್ತಾಗಿ– ಗಾಂಧಿ, ಮುಂದೆ ಮಾತುಕತೆಗಾಗಿ ಲಂಡನ್‌ಗೆ ಹೋದ ಸಮಯದಲ್ಲಿ– ಸಾವನ್ನಪ್ಪಿದ ನಾಗಪ್ಪ ಸ್ವಾಮಿಯನ್ನೂ ಇಲ್ಲಿ ನೆನೆಯಬೇಕು. ಗಾಂಧಿ 'ಇಂಡಿಯನ್ ಒಪಿನಿಯನ್' ಪತ್ರಿಕೆಯಲ್ಲಿ ಬರೆದ ಲೇಖನವೊಂದರ ಪ್ರಕಾರ ವರ್ಣಭೇದ ವಿರೋಧಿ ಹೋರಾಟದ ಯಾವುದೇ ಹಂತದಲ್ಲೂ ಎಂದೂ ಯಾವುದೇ ಕಾರಣಕ್ಕೂ ವಿಚಲಿತರಾಗದೆ ಕಟಿಬದ್ಧತೆಯಿಂದ ತಮ್ಮೊಡನೆ ಪಾಲ್ಗೊಂಡ ಸಮುದಾಯವೆಂದರೆ ತಮಿಳು ಸಮುದಾಯ.

ಹೀಗೆ ಹಲವರು ಬಿಸಿಲು–ಚಳಿ–ಮಳೆಗಳಲ್ಲಿ ಕಠಿಣ ದೈಹಿಕ ಶ್ರಮದ ಶಿಕ್ಷೆಗಳಿಂದ ಆರೋಗ್ಯ ಕಳೆದುಕೊಂಡಿದ್ದರು; ನಾಗಪ್ಪನಂತಹ ಒಂದಿಬ್ಬರು ಸಾವಿಗೆ ತುತ್ತಾಗಬೇಕಾಯಿತು. ಇನ್ನು ಹಲವರು ಗಡೀಪಾರಾಗಿದ್ದರು. ಹಲವರು ಮನೆಮಠ ಕುಟುಂಬಗಳನ್ನು ಕಳೆದುಕೊಂಡಿದ್ದರು. ಬಲಿಷ್ಠ ಮನಸ್ಸಿನ, ದೃಢನಿಶ್ಚಯ ಮತ್ತು ಬದ್ಧತೆಗಳ ಜನ ಮಾತ್ರ ಗಾಂಧಿಯ ಕರೆಗೆ ಇನ್ನೂ ಓಗೊಡುವ ಸ್ಥಿತಿಯಲ್ಲಿದ್ದರು. ಅದಕ್ಕೆ ಮುಖ್ಯ ಕಾರಣ, ಗಾಂಧಿ ನಾಯಕರಂತೆ ವರ್ತಿಸದೆ ತಮ್ಮಲ್ಲಿ ಒಬ್ಬರಾಗಿ ಎಲ್ಲ ರೀತಿಯ ಮಾನಸಿಕ ಮತ್ತು ದೈಹಿಕ ಸಂಕಷ್ಟಗಳಿಗೆ ಒಡ್ಡಿಕೊಳ್ಳಲು ಎಂದೂ ಹಿಂಜರಿಯದ ಒಡನಾಡಿಯಂತಿದ್ದುದು.

ಒಕ್ಕೂಟ ರಚನೆಯ ಹಿಂದಿನ ರಾಜಕಾರಣ; ಎಚ್ಚೆತ್ತ ಗಾಂಧಿ

ಇದೇ ಸಮಯದಲ್ಲಿ ಸರ್ಕಾರ ಸತ್ಯಾಗ್ರಹದ ಒತ್ತಡಗಳಿಂದ ನಲುಗಿಹೋಗಿ, ಏಷ್ಯನ್ನರನ್ನು ಕುರಿತ ತನ್ನ ಅನಾಗರಿಕ ವರ್ತನೆಗಳಿಗಾಗಿ ಮರ್ಯಾದಸ್ಥ ಬಿಳಿಜನರ ಕಟು

ಟೀಕೆಗೆ ಗುರಿಯಾಗಿತ್ತು. ಸೆರೆಮನೆಯಿಂದ ಬಿಡುಗಡೆಯಾದ ಎರಡು ವಾರಗಳಲ್ಲಿ ಯೂರೋಪಿಯನ್ನರ ಒಂದು ಸಾಹಿತ್ಯ ಮತ್ತು ಚರ್ಚಾಕೂಟ ಸಂಘವು ಗಾಂಧಿಯವರನ್ನು 'ಸತ್ಯಾಗ್ರಹ ಮತ್ತು ನೀತಿಶಾಸ್ತ್ರ' ಎಂಬ ವಿಷಯವಾಗಿ ಮಾತಾಡಲು ಆಹ್ವಾನಿಸಿತ್ತು. ಅಲ್ಲಿ ಗಾಂಧಿ ಮಾಡಿದ 'ಪಶುಬಲದ ವಿರುದ್ಧದ ಆತ್ಮಬಲ' ಕುರಿತ ಜಿಜ್ಞಾಸೆ ಹಲವು ಬಿಳಿಯ ಬೌದ್ಧಿಕರ ಕುತೂಹಲ ಕೆರಳಿಸಿದ್ದು ಸರ್ಕಾರದ ಗಮನಕ್ಕೆ ಬಂದಿತ್ತು. ಹಾಗಾಗಿ ಅದೂ ಕೂಡ ಹೇಗಾದರೂ ಮಾಡಿ ಈ ಮುಜುಗರದ ಸಂಘರ್ಷದಿಂದ ಹೊರಬರುವ ಮಾರ್ಗದ ತುರ್ತು ಹುಡುಕಾಟದಲ್ಲಿತ್ತು. ಆ ಹೊತ್ತಿಗೆ ದ.ಆಫ್ರಿಕಾದ ನಾಲ್ಕೂ ಪ್ರಾಂತ್ಯಗಳು ಒಗ್ಗೂಡಿ ಒಂದು ಶಾಸನಬದ್ಧ ದ.ಆಫ್ರಿಕಾ ಒಕ್ಕೂಟವಾಗಿ ರೂಪಿತಗೊಳ್ಳಬೇಕೆಂಬ ನಾಲ್ಕೂ ಪ್ರಾಂತ್ಯಗಳ ಸರ್ಕಾರಗಳ ಮಾತುಕತೆಗಳು ಒಂದು ನಿರ್ಣಾಯಕ ಘಟ್ಟ ತಲುಪಿದ್ದವು. ಬ್ರಿಟಿಷ್ ಸಂಸತ್ತಿನ ಮುಂದೆ ದ.ಆಫ್ರಿಕಾ ಒಕ್ಕೂಟ ರಚನೆಯ ಸಂಬಂಧವಾದ ಮಸೂದೆಯೊಂದು ಮಂಡಿತವಾಗಿತ್ತು. ಈಗಾಗಲೇ ಟ್ರಾನ್ಸ್‌ವಾಲ್‌ನಿಂದ ಬೋತಾ ಮತ್ತು ಸ್ಮಟ್ಸ್ ಇಬ್ಬರೂ ಬ್ರಿಟಿಷ್ ಸಾಮ್ರಾಜ್ಯದ ಅಧಿಪತಿಗಳೊಂದಿಗೆ ಈ ಬಗ್ಗೆ ಚರ್ಚಿಸಲು ಲಂಡನ್‌ಗೆ ಹೋಗಿರುವ ಸುದ್ದಿಯೂ ಬಂತು. ಇದರಿಂದ ಎಚ್ಚೆತ್ತುಗೊಂಡ ಗಾಂಧಿ ಮತ್ತು ಅವರ ಸಹಚರರು ಈ ಒಕ್ಕೂಟ ವ್ಯವಸ್ಥೆ ಎಂಬುದು ನಾಲ್ಕೂ ಪ್ರಾಂತ್ಯಗಳ ಒಗ್ಗಟ್ಟಿನ ಶಕ್ತಿಯಿಂದ ಏಷಿಯನ್ನರ ಭವಿಷ್ಯವನ್ನು ಒಂದೇ ಏಟಿಗೆ–ಟ್ರಾನ್ಸ್‌ವಾಲ್‌ನ ಕುಪ್ರಸಿದ್ಧ ಏಷಿಯಾಟಿಕ್ ಶಾಸನವನ್ನು ಇಡೀ ದ.ಆಫ್ರಿಕಾಕ್ಕೆ ಅನ್ವಯಿಸುವಂತೆ ಮಾಡಿ–ನಾಶ ಮಾಡುವ ಹುನ್ನಾರವೆಂದು ಅನುಮಾನಿಸಿದರು. ಕೂಡಲೇ ಭಾರತೀಯರ ನಿಯೋಗವೊಂದನ್ನು ಲಂಡನ್‌ಗೆ ಕಳಿಸಿ ಬ್ರಿಟಿಷ್ ಸಾಮ್ರಾಜ್ಯದ ಅಧಿಪತಿಗಳ ಬಳಿ ತನ್ನ ಅಹವಾಲುಗಳನ್ನು–ಮುಖ್ಯವಾಗಿ ಒಕ್ಕೂಟ ರಚನೆಯ ಮುಂಚೆ ಏಷಿಯಾಟಿಕ್ ಶಾಸನ ಕುರಿತ ವಿವಾದವನ್ನು ಇತ್ಯರ್ಥಪಡಿಸಬೇಕೆಂಬುದು–ಮಂಡಿಸುವುದು ಅತ್ಯವಶ್ಯಕವೆಂದೂ ಅವರು ಭಾವಿಸಿದರು.

ಬ್ರಿಟಿಷ್ ಸಾಮ್ರಾಜ್ಯಕ್ಕೆ ಅಹವಾಲು ಸಲ್ಲಿಸಲು ಲಂಡನ್‌ಗೆ ನಿಯೋಗ

೧೯೦೯ರ ಜೂನ್ ೧೬ರಂದು ಭಾರತೀಯರ ಸಭೆಯೊಂದು ಆಯೋಜಿತವಾಯಿತು. ೧೫೦೦ ಜನ ಸೇರಿದ್ದ ಈ ಸಭೆ ಕಛಾಲಿಯಾ ಸೇರಿದಂತೆ ಇಂಗ್ಲಿಷ್ ಬಲ್ಲ ಹಿಂದೂ–ಮುಸ್ಲಿಂ–ಪಾರ್ಸಿಗಳ ಪ್ರಾತಿನಿಧ್ಯವಿದ್ದ ಐದು ಜನರ ನಿಯೋಗವೊಂದನ್ನು ಆಯ್ದಿತಾದರೂ, ಅವರಲ್ಲಿ ಮೂವರು ಸೆರೆಮನೆಯಲ್ಲಿದ್ದುದರಿಂದ ಗಾಂಧಿ ಮತ್ತು ಪೋರ್‌ಬಂದರ್ ಮೂಲದ ಪ್ರಿಟೋರಿಯಾ ನಗರದ ವ್ಯಾಪಾರಿ ಹಾಜಿ ಹಬೀಬ್ ಅವರನ್ನೊಳಗೊಂಡ ನಿಯೋಗವನ್ನು ಲಂಡನ್‌ಗೆ ಕಳಿಸಲು ತೀರ್ಮಾನಿಸಿತು. ಹಾಗೇ ಗಾಂಧಿ ಗೆಳೆಯ ಪೋಲಾಕ್‌ರನ್ನು ಭಾರತದಲ್ಲಿನ ಬ್ರಿಟಿಷ್ ಆಡಳಿತ ವಲಯದ ಮಧ್ಯೆ ನಿಯೋಗದ ಕೆಲಸಗಳಿಗೆ ಪೂರಕವಾದ ಅಭಿಪ್ರಾಯಗಳನ್ನು ಮೂಡಿಸಲು ಅಲ್ಲಿಗೆ ಕಳಿಸಲೂ ತೀರ್ಮಾನಿಸಲಾಯಿತು. ಲಂಡನ್‌ಗೆ ತೆರಳಲು ಜೂನ್ ೨೩ರಂದು ಕೇಪ್ ಟೌನ್‌ನಲ್ಲಿ ಗಾಂಧಿ ಹಡಗು ಹತ್ತುತ್ತಿದ್ದಂತೆ ಅಲ್ಲಿದ್ದ ಬಹುಸಂಖ್ಯಾತ ಬಿಳಿಯರ ಮಧ್ಯದಿಂದ ಓಡಿ ಬಂದ ಪ್ರಸಿದ್ಧ ಲೇಖಕಿ ಆಲೀವ್ ಶ್ರೈನರ್ ಗಾಂಧಿಯವರ ಕೈಕುಲುಕಿ

ಶುಭಾಶಯ ಹೇಳಿ ಒಂದು ಅಚ್ಚರಿಯ ದೃಶ್ಯವನ್ನೇ ನಿರ್ಮಿಸಿದರು.

ಗಾಂಧಿಯವರ ಈ ನಿರ್ಣಾಯಕ ಲಂಡನ್ ಭೇಟಿಯ ಮುನ್ನ ನಡೆದಿದ್ದ ಇನ್ನೊಂದು ಇಂತಹುದೇ ಅಚ್ಚರಿಯ ಬೆಳವಣಿಗೆ ಎಂದರೆ, ಗಾಂಧಿಯವರ ಮೇಲೆ ಮಾರಣಾಂತಿಕ ಹಲ್ಲೆಯ ಪ್ರಯತ್ನ ಮಾಡಿದ್ದ ಮೀರ್ ಆಲಂ ಎಂಬ ಪಠಾಣ ನಂತರ ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಭಾಗವಹಿಸಿ ಭಾರತಕ್ಕೆ ಗಡೀಪಾರಾಗಿದ್ದವನು, ಗಾಂಧಿಗೆ ಒಂದು ಪತ್ರ ಬರೆದು ಅವರ ಹೋರಾಟದ ಸಂದೇಶವನ್ನು ಭಾರತದಲ್ಲಿ ಮಾತ್ರವಲ್ಲದೆ ತನ್ನ ತಾಯ್ನಾಡಾದ ಆಫ್ಘನಿಸ್ಥಾನಕ್ಕೂ ಒಯ್ದು ಪ್ರಸಾರ ಮಾಡುವುದಾಗಿ ಹೇಳುತ್ತಾ, ಗಾಂಧಿಯವರಿಗೆ ನಿರ್ಭಯವಾಗಿರುವಂತೆ ಹಾರೈಸಿದ್ದುದು. ಗಾಂಧಿ ಪ್ರಯಾಣ ಹೊರಟ ನಂತರ ಜೊಹಾನ್ಸ್‌ಬರ್ಗ್ ತಲುಪಿದ ಈ ಪತ್ರವನ್ನು ಪೋಲಾಕ್ 'ಇಂಡಿಯನ್ ಒಪಿನಿಯನ್'ನಲ್ಲಿ ಪ್ರಕಟಿಸಿ ಗಾಂಧಿಯವರ ಲಂಡನ್ ವಿಳಾಸಕ್ಕೆ ಕಳಿಸಿದ. ಅಲ್ಲಿ ಅದನ್ನು ಗಾಂಧಿ ಓದಿ ನಿಜವಾಗಿಯೂ ಖುಷಿಯ, ಸಂತೃಪ್ತಿಯ ಭಾವ ಅನುಭವಿಸಿರುವುದರಲ್ಲಿ ಸಂಶಯವಿಲ್ಲ.

■

೨೩
ಹಿಂಸಾವಾದಿಗಳೊಂದಿಗೆ ಸಂವಾದ; ಟಾಲ್‌ಸ್ಟಾಯ್‌ರೊಂದಿಗೆ ಸಂಪರ್ಕ

೧೯೦೯ರ ಜುಲೈ ೯ರಂದು ತಮ್ಮ ನಿಯೋಗದ ಸಹ ಸದಸ್ಯ ಹಾಜಿ ಹಬೀಬ್‌ರೊಂದಿಗೆ ಲಂಡನ್ ತಲುಪಿದ ಗಾಂಧಿ, ಅಲ್ಲಿನ ವೆಸ್ಟ್ ಮಿನಿಸ್ಟರ್ ಪ್ಯಾಲೇಸ್ ಹೋಟೆಲ್‌ನಲ್ಲಿ ತಂಗಿದರು. ಮುಂದಿನ ನವೆಂಬರ್‌ವರೆಗೆ ಲಂಡನ್‌ನಲ್ಲಿದ್ದ ಅವರು ಆ ನಾಲ್ಕು ತಿಂಗಳುಗಳಲ್ಲಿ ಬ್ರಿಟಿಷ್ ಸಾಮ್ರಾಜ್ಯದ ವಿವಿಧ ಸ್ತರಗಳ ಅಧಿಕಾರಸ್ಥರನ್ನಲ್ಲದೆ, ಸಂಸತ್ ಸದಸ್ಯರು, ಪತ್ರಿಕಾ ಸಂಪಾದಕರು, ಸಾಮಾನ್ಯ ಪ್ರಜೆಗಳು, ಹಳೆಯ ಗೆಳೆಯರು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಅಲ್ಲಿ ನೆಲೆಸಿದ್ದ ಭಾರತೀಯ ವಿದ್ಯಾರ್ಥಿಗಳು ಮತ್ತು ವಿವಿಧ ರಾಜಕೀಯ ನಿಲುವುಗಳ ಭಾರತೀಯ ನಾಯಕರನ್ನೂ ಭೇಟಿ ಮಾಡಿ ವಿಸ್ತೃತ ಮಾತುಕತೆ ನಡೆಸಿದರು. ಇನ್ನೊಂದು ಮುಖ್ಯ ಘಟನೆಯೆಂದರೆ ತಾವು ಬಹುಕಾಲದಿಂದ ಮೆಚ್ಚಿ ಓದುತ್ತಿದ್ದ ಲಿಯೋ ಟಾಲ್‌ಸ್ಟಾಯ್‌ರೊಂದಿಗೆ ಪತ್ರ ವ್ಯವಹಾರ ಆರಂಭಿಸಿದ್ದೂ ಈ ವಾಸ್ತವ್ಯದ ಸಮಯದಲ್ಲೇ. ಇವೆಲ್ಲವೂ ಗಾಂಧಿ ಈವರೆಗೆ ರೂಪಿಸಿಕೊಂಡಿದ್ದ ತಮ್ಮ ವ್ಯಕ್ತಿತ್ವವನ್ನು ನಿರ್ಣಾಯಕವಾಗಿ ವಿಸ್ತರಿಸಿಕೊಳ್ಳಲು ನೆರವಾಗಿ, ಅವರು ಮುಂದೆ ಭಾರತದ ಸ್ವಾತಂತ್ರ್ಯಕ್ಕಾಗಿಯೂ ಹೋರಾಟ ನಡೆಸುವ ಅವರ ಬದುಕಿನ ಮುಖ್ಯ ಅಧ್ಯಾಯಕ್ಕೆ ಮುನ್ನುಡಿ ಸಿದ್ಧವಾದ ಸಂದರ್ಭ ಇದಾಗಿತ್ತು.

ಗಾಂಧಿಯವರಿಗೆ ಲಂಡನ್‌ನಲ್ಲಿನ ಕಾರ್ಯಾಚರಣೆಗೆ ನೆರವಾಗಲಿದ್ದಾರೆಂದು ನಿರೀಕ್ಷಿಸಲಾಗಿದ್ದ ಅವರ ಹಳೆಯ ಗೆಳೆಯ ರೀಚ್ ತನ್ನ ಪತ್ನಿಯ ಅನಾರೋಗ್ಯದ ಕಾರಣ ಅವರಿಗೆ ಪೂರ್ಣಕಾಲದ ಸಹಾಯಕನಾಗಿರಲು ಸಾಧ್ಯವಾಗದ ಸ್ಥಿತಿ ಉಂಟಾಗಿತ್ತು. ಆದರೆ ಹೆನ್ರಿ ಪೊಲಾಕ್‌ರ ಅವಿವಾಹಿತ ತಂಗಿ ಮೌದ್ ಪೊಲಾಕ್ ಮತ್ತು ಪತ್ನಿ ಮಿಲಿ ಪೊಲಾಕ್ ತನ್ನ ಚಿಕ್ಕ ಮಕ್ಕಳೊಂದಿಗೆ ಈಗ ಅಲ್ಲಿಯೇ ಇದ್ದರು. ಗಾಂಧಿ ಲಂಡನ್‌ನಲ್ಲಿ ಇದ್ದಷ್ಟು ದಿನವೂ ಅವರ ಪತ್ರ ವ್ಯವಹಾರ ನಿರ್ವಹಿಸುವ ಕಾರ್ಯದರ್ಶಿಯಾಗಿ ಮೌದ್ ಪೊಲಾಕ್ ಕೆಲಸ ಮಾಡಿ ಅವರಿಗೆ ನೆರವಾದಳು.

ಧಿಂಗ್ರಾ ಮಾಡಿದ ಕೊಲೆ ಮತ್ತು ಅದರ ಸಮರ್ಥನೆ

ಅದೇನೇ ಇದ್ದರೂ, ಗಾಂಧಿ ಲಂಡನ್ ತಲುಪುವ ಕೆಲ ದಿನಗಳ ಮುನ್ನ, ಜುಲೈ ೧ ರಂದು ಅಲ್ಲಿ ಭಾರತದ ಇಂಗ್ಲಿಷ್ ಸೈನ್ಯದ ಅಧಿಕಾರಿ ಸರ್ ಕರ್ಜನ್ ವೈಲಿ ಎಂಬುವವರನ್ನು ಮದನ್‌ಲಾಲ್ ಧಿಂಗ್ರಾ ಎಂಬ ಭಾರತೀಯ ವಿದ್ಯಾರ್ಥಿ ಗುಂಡು ಹಾರಿಸಿ ಕೊಲೆ ಮಾಡಿದ್ದ. ಇದರಿಂದಾಗಿ ಗಾಂಧಿಗೆ ತಾನು ಬಂದ ಕೆಲಸ ಶುರು

ಮಾಡಲು ತುಸು ಕಷ್ಟವೇ ಆಯಿತು. ಮತ್ತು ತಡವೂ ಆಯಿತು. ಆದರೆ ಇದರಿಂದಾಗಿ ಭಾರತದ ಸ್ವಾತಂತ್ರ್ಯ ಹೋರಾಟದ ಆರಂಭದ ಆ ದಿನಗಳ ವಿವಿಧ ಮಜಲುಗಳನ್ನು ವಿವರವಾಗಿ ಅರಿಯಲು ಮತ್ತು ಅವುಗಳ ಬಗ್ಗೆ ಆಳವಾಗಿ ಯೋಚಿಸಲು ಗಾಂಧಿಯವರಿಗೆ ಅವಕಾಶವಾಯಿತು. ಇದಕ್ಕೆ ನೆಪವೆಂಬಂತೆ ಅದೇ ಸಮಯದಲ್ಲಿ ಲಂಡನ್ ಪ್ರವಾಸದಲ್ಲಿದ್ದು ಗಾಂಧಿಗೆ ಸ್ವಲ್ಪ ಕಾಲ ಜೊತೆ ನೀಡಿದವರು ಅವರ ಹಳೆಯ ಆಪ್ತ ಸ್ನೇಹಿತ ಪ್ರಾಣಜೀವನ ಮೆಹ್ತಾ. ಆಗ ರಂಗೂನ್‌ನಲ್ಲಿ ವೈದ್ಯನೂ ಮತ್ತು ಚಿನ್ನಾಭರಣಗಳ ವ್ಯಾಪಾರಿಯೂ ಆಗಿದ್ದ ಆತ ಗಾಂಧಿಯ ದ.ಆಫ್ರಿಕಾದಲ್ಲಿನ ಹೋರಾಟ ಮತ್ತು ಭಾರತದ ಸ್ವಾತಂತ್ರ್ಯ ಹೋರಾಟದ ಬಗ್ಗೆಯೂ ಕುತೂಹಲ ಮತ್ತು ಆಸಕ್ತಿಗಳನ್ನು ಹೊಂದಿದ್ದ. ಅವುಗಳಿಗೆ ಹಣಕಾಸಿನ ಸಹಾಯ ಒದಗಿಸುವ ಇಚ್ಛೆಯನ್ನೂ ಹೊಂದಿದ್ದ.

ಮೆಹ್ತಾ ಮೊದಮೊದಲು ಧಿಂಗ್ರಾನ ಸಾಹಸವನ್ನು ಮೆಚ್ಚಿ ಮಾತಾಡಿದನಾದರೂ, ಗಾಂಧಿ ಅದು ಹೇಗೆ ಅನೈತಿಕವೂ, ದೀರ್ಘಾವಧಿಯಲ್ಲಿ ಗುರಿ ತಲುಪುವಲ್ಲಿ ಮಾರಕವಾಗುವುದೆಂಬುದನ್ನು ತಾವು ದ.ಆಫ್ರಿಕಾದಲ್ಲಿ ನಡೆಸಿರುವ ಸತ್ಯಾಗ್ರಹವೆಂಬ ಹೊಸ ಮಾದರಿಯ ಪ್ರತಿಭಟನೆ ಮತ್ತು ಹೋರಾಟದ ಅನುಭವಗಳ ಹಿನ್ನೆಲೆಯಲ್ಲಿ ವಿವರಿಸಿದಾಗ ತನ್ನ ಅಭಿಪ್ರಾಯವನ್ನು ಬದಲಾಯಿಸಿಕೊಂಡ. ಮೆಹ್ತಾ ಮೊದಲು ಹಾಗೆ ಯೋಚಿಸಲು ಕಾರಣವೂ ಇತ್ತು. ಧಿಂಗ್ರಾ ತನ್ನ ಕೃತ್ಯವನ್ನು ಸಮರ್ಥಿಸಿಕೊಂಡು ನ್ಯಾಯಾಲಯದಲ್ಲಿ ನೀಡಿದ ಹೇಳಿಕೆ ಯಾರ ಭಾವನೆಗಳನ್ನಾದರೂ ಕೆರಳಿಸುವಂತಿತ್ತು. ಇದು ಭಾರತಮಾತೆಯನ್ನು ವಿದೇಶೀ ಆಳ್ವಿಕೆಯಿಂದ ಬಿಡುಗಡೆಗೊಳಿಸುವ ಮೂಲಕ ದೇಶದ ಪ್ರಜೆಗಳು ಈ ವಿದೇಶೀ ಆಳ್ವಿಕೆಯ ಕೈಯಲ್ಲಿ ಸಿಕ್ಕಿ ಅನುಭವಿಸುತ್ತಿರುವ ಗಡೀಪಾರು, ನೇಣು, ಸೆರೆಮನೆವಾಸ ಇತ್ಯಾದಿ ಸಂಕಷ್ಟಗಳಿಂದ ಪಾರು ಮಾಡಿ ಅವರ ಸೇವೆಗೈಯುವ ದೇಶಪ್ರೇಮಿ ಕೃತ್ಯವೆಂದೂ, ಭಾರತೀಯ ಪರಂಪರೆಯ ದಿವ್ಯಪ್ರತೀಕವಾದ ಶ್ರೀರಾಮ ರಾಕ್ಷಸ ಕುಲದ ವಧೆಯ ಮೂಲಕ ಮಾಡಿದ್ದೂ ಇದನ್ನೇ ಎಂದೂ, ಶ್ರೀಕೃಷ್ಣನೂ ಇದನ್ನು ಮೆಚ್ಚುವನೆಂದೂ ಅವನು ಹೇಳಿದ್ದ. ಈ ಹೇಳಿಕೆ ಧಾರ್ಮಿಕ ಪ್ರಚೋದನೆಗೆ ಕಾರಣವಾಗುತ್ತದೆಂದು ನ್ಯಾಯಾಧೀಶರು ಅದನ್ನು ತಡೆ ಹಿಡಿದಿದ್ದರೂ, ಧಿಂಗ್ರಾನ ಗುರುವಿನಂತಿದ್ದ ವಿನಾಯಕ ದಾಮೋದರ ಸಾವರ್ಕರ್ ಎಂಬ ಇನ್ನೋರ್ವ ಭಾರತೀಯ ವಿದ್ಯಾರ್ಥಿ ಅದನ್ನು ಕಳ್ಳತನದಲ್ಲಿ ಸಾರ್ವಜನಿಕರಿಗೆ ಬಿಡುಗಡೆ ಮಾಡಿದ್ದ. ಅಷ್ಟೇ ಅಲ್ಲದೆ ಆತ ಧಿಂಗ್ರಾನ ಕೃತ್ಯವನ್ನು, ಹಿಂದೂ ದೇವತೆಗಳ ಪರಂಪರೆಯನ್ನು ಉಲ್ಲೇಖಿಸಿ, ಈ ದೇವತೆಗಳೆಲ್ಲರೂ ಶಸ್ತ್ರಧಾರಿಗಳಾಗಿ ಸೂಚಿಸುತ್ತಿರುವಂತೆ ಶಿಷ್ಟರ ರಕ್ಷಣೆಗಾಗಿ ದುಷ್ಟರ ಸಂಹಾರ ನಮ್ಮ ಧರ್ಮದ ಭಾಗವಾಗಿದೆ ಎಂದೂ ವ್ಯಾಖ್ಯಾನ ಮಾಡಿದ್ದ. ಇದೆಲ್ಲವೂ ತಾವು ಈ ಮೊದಲು ೧೯೦೬ರಲ್ಲಿ ಕರಾಳ ಶಾಸನದ ಕೆಡುಕುಗಳನ್ನು ಬ್ರಿಟಿಷ್ ಸಾಮ್ರಾಜ್ಯದ ಸರ್ಕಾರಕ್ಕೆ ಮನವರಿಕೆ ಮಾಡಿಕೊಡುವ ಉದ್ದೇಶದ ನಿಯೋಗದ ಭಾಗವಾಗಿ ಲಂಡನ್‌ಗೆ ಭೇಟಿ ನೀಡಿದ್ದಾಗ ಸಂಧಿಸಿದ್ದ ಶ್ಯಾಮ್‌ಜಿ ಕೃಷ್ಣವರ್ಮ ಸ್ಥಾಪಿಸಿದ್ದ 'ಇಂಡಿಯಾ ಹೌಸ್'ನ ಗೆಳೆಯರ ಬಳಗವು ನಂಬಿ ಪೋಷಿಸುತ್ತಿದ್ದ ಹತ್ಯೆಗಳ ಉಗ್ರ ದೇಶಪ್ರೇಮಿ ರಾಜಕಾರಣದ ಫಲವೆಂದು ಗಾಂಧಿಗೆ ಗೊತ್ತಿತ್ತು.

ಅವರೆಲ್ಲ ಉನ್ನತ ವಿದ್ಯಾಭ್ಯಾಸಕ್ಕೆಂದು ಬಂದಿದ್ದವರಾದರೂ ಅವರಲ್ಲಿ ಬಹುತೇಕರು

ಭಾರತದಲ್ಲಿ ರಾಷ್ಟ್ರೀಯತೆಯ ಭಾವನೆಯ ಸ್ಫೂರ್ತಿಯಲ್ಲಿ ಆರಂಭವಾಗಿದ್ದ ಆಂದೋಲನದಲ್ಲಿ ಕಾಣತೊಡಗಿದ್ದ ಸೌಮ್ಯವಾದಿ ಮತ್ತು ತೀವ್ರವಾದಿ ಗುಂಪುಗಳೆಂಬ ಒಡಕಿನಲ್ಲಿ ತೀವ್ರವಾದಿ ಗುಂಪಿನ ಆಲೋಚನಾ ಕ್ರಮದಿಂದ ಪ್ರಭಾವಿತರಾಗಿದ್ದವರು. ಇವರೆಲ್ಲ ಐರೋಪ್ಯ ಆಧುನಿಕ ರಾಜಕೀಯ ವಿಚಾರಧಾರೆಗಳ ವಿದ್ಯಾರ್ಥಿಗಳಾಗಿದ್ದು ಅದರ ಕ್ರಾಂತಿಕಾರಿ ಹೋರಾಟಗಳ ಮಾರ್ಗಗಳಲ್ಲಿ–ಉದಾ: ಇಟಲಿ ಮತ್ತು ಐರಿಶ್ ರಾಷ್ಟ್ರೀಯ ಹೋರಾಟ, ಮಾರ್ಕ್ಸ್‌ವಾದ–ನಂಬಿಕೆ ಬೆಳೆಸಿಕೊಂಡು ಅವುಗಳ ಆಧಾರದ ಮೇಲೆ ಆಧುನಿಕ ಭಾರತದ ಪ್ರಭುತ್ವದ ಸ್ಥಾಪನೆಯ ಕನಸು ಕಟ್ಟಿಕೊಂಡಿದ್ದವರು. ಸಹಜವಾಗಿಯೇ ಅವರಿಗೆ ಹಿಂಸೆ ನಿಷಿದ್ಧವಾಗಿರಲಿಲ್ಲ. ಮುಖ್ಯವಾಗಿ ಇವರು ಬಂಗಾಳದ 'ಅನುಶೀಲನ' ಮತ್ತು ಮಹಾರಾಷ್ಟ್ರದ 'ಅಭಿನವ ಭಾರತ್' ಎಂಬ ಭೂಗತ ಗುಂಪುಗಳಿಗೆ ಸೇರಿದವರು. ಇವರಲ್ಲಿ ಹಲವರು ಭಾರತದಿಂದ ತಲೆತಪ್ಪಿಸಿಕೊಂಡು ಬ್ರಿಟನ್, ಜರ್ಮನಿ, ಫ್ರಾನ್ಸ್‌ನಂತಹ ಐರೋಪ್ಯ ದೇಶಗಳಲ್ಲದೆ ಅಮೆರಿಕಾ, ಕೆನಡಾ ದೇಶಗಳಲ್ಲೂ ನೆಲೆಸಿ ಬ್ರಿಟಿಷ್ ಪ್ರಭುತ್ವದ ವಿರುದ್ಧ ಬುಡಮೇಲು ಕೃತ್ಯಗಳನ್ನು ನಡೆಸಿದ್ದರು.

'ಇಂಡಿಯಾ ಹೌಸ್' ಸ್ಥಾಪನೆ

ಅವರಲ್ಲಿ ಪ್ರಮುಖನಾದವನು ಶ್ಯಾಮ್‌ಜಿ ಕೃಷ್ಣವರ್ಮ ಎಂಬ ಗುಜರಾತಿ. ಭಾಷಾಶಾಸ್ತ್ರ ಪರಿಣತನಾಗಿ ಲಂಡನ್‌ಗೆ ಉದ್ಯೋಗಕ್ಕೆ ಬಂದ ಈತ 'ಸಂಪೂರ್ಣ ಸ್ವಾತಂತ್ರ್ಯ ಪ್ರತಿಯೊಬ್ಬನ ಸಹಜ ಹಕ್ಕು. ಹಾಗಾಗಿ ಅದರ ಮೇಲಿನ ಆಕ್ರಮಣವನ್ನು ಹೇಗಾದರೂ ತಡೆಯುವುದೂ ಪ್ರತಿಯೊಬ್ಬನ ಸಹಜ ಹಕ್ಕು' ಎಂದು ಪ್ರತಿಪಾದಿಸಿದ್ದ ಹರ್ಬರ್ಟ್ ಸ್ಪೆನ್ಸರ್ ಎಂಬ ಆಧುನಿಕ ಚಿಂತಕನ ವಿಚಾರಗಳ ಪ್ರಭಾವಕ್ಕೆ ಸಿಕ್ಕಿದವನಾಗಿದ್ದ. ಆತನ ಹೆಸರಿನಲ್ಲಿ ನಿಧಿ ಸಂಗ್ರಹಿಸಿ ಸ್ಥಾಪಿಸಿದ್ದ ಮುದುವಟ್ಟಿನ ಅಡಿಯಲ್ಲಿನ ವಿದ್ಯಾರ್ಥಿ ಮತ್ತು ಶಿಷ್ಯವೇತನಗಳ ಮೂಲಕ ಶ್ಯಾಮ್‌ಜಿ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಬೇಕಾದ 'ಸೈನಿಕ'ರನ್ನು ಲಂಡನ್‌ಗೆ ಕರೆಸಿಕೊಂಡು ತರಬೇತಿ ನೀಡುತ್ತಿದ್ದ. ಅವರ ವಸತಿಗಾಗಿ ೧೯೦೫ರಲ್ಲಿ 'ಇಂಡಿಯಾ ಹೌಸ್' ಎಂಬ ಸಂಸ್ಥೆಯನ್ನು ಸ್ಥಾಪಿಸಿ 'ಇಂಡಿಯನ್ ಸೋಶಿಯಾಲಜಿಸ್ಟ್' ಎಂಬ ವೈಚಾರಿಕ ಪತ್ರಿಕೆಯನ್ನೂ ನಡೆಸುತ್ತಿದ್ದ. ಈ ಗುಂಪಿನ ಇಬ್ಬರು ಗಮನಾರ್ಹ ಸದಸ್ಯರೆಂದರೆ ವಿ.ಡಿ. ಸಾವರ್ಕರ್ ಮತ್ತು ಮದನ್‌ಲಾಲ್ ಧಿಂಗ್ರಾ. ಇವರಲ್ಲಿ ಧಿಂಗ್ರಾ, ಈ ಮೊದಲೇ ತಿಳಿಸಿದಂತೆ ಗಾಂಧಿ ಲಂಡನ್ ತಲುಪುವ ಕೆಲವೇ ದಿನಗಳ ಹಿಂದೆ ಬ್ರಿಟಿಷ್ ಸೈನ್ಯಾಧಿಕಾರಿಯೊಬ್ಬನನ್ನು ಹತ್ಯೆಗೈದು ಸೆರೆಮನೆ ಸೇರಿದ್ದ.

ಗಾಂಧಿ ಕೃಷ್ಣವರ್ಮ, ಸಾವರ್ಕರ್ ಮುಂತಾದ ತೀವ್ರವಾದಿಗಳ ಗುಂಪಿನೊಂದಿಗೆ ಮಾತುಕತೆ ನಡೆಸಿದ್ದರು. ಗೀತೆ ಮತ್ತು ರಾಮಾಯಣ ಅಹಿಂಸೆಯನ್ನು ಬೋಧಿಸುವ ಧಾರ್ಮಿಕ ಕೃತಿಗಳಾಗಿ ಗಾಂಧಿಗೆ ಕಂಡರೆ ಈ ಕ್ರಾಂತಿಕಾರಿಗಳಿಗೆ ಆಯುಧಪಾಣಿಗಳಾದ ಹಿಂದೂ ದೇವತೆಗಳು ಹಿಂಸೆ–ಅಹಿಂಸೆಗಳ ಪರಿಗಣನೆ ಇಲ್ಲದೆ ನ್ಯಾಯಕ್ಕಾಗಿ–ಶಿಷ್ಟ ರಕ್ಷಣ ದುಷ್ಟ ಶಿಕ್ಷಣಕ್ಕಾಗಿ–ಹೋರಾಡಿದ ಶಕ್ತಿಗಳಾಗಿ ಕಾಣುತ್ತಿದ್ದವು. ನಮ್ಮ ಧಾರ್ಮಿಕ ಗ್ರಂಥಗಳಾವುವೂ ಐತಿಹಾಸಿಕ ಗ್ರಂಥಗಳಾಗಿರದೆ, ಅವುಗಳಲ್ಲಿನ ಪಾತ್ರಗಳನ್ನು ಸಾಂಕೇತಿಕ ನೆಲೆಗಳಲ್ಲಿ ಮಾತ್ರ ಗ್ರಹಿಸಿ ಅಂತಿಮ ಸಂದೇಶವನ್ನು ಗ್ರಹಿಸಬೇಕೆಂದೂ, ಏಕೆಂದರೆ ಈ ಆಧುನಿಕ ಕಾಲದ ಸಂಕೀರ್ಣತೆಗಳಲ್ಲಿ ಶಿಷ್ಟ–ದುಷ್ಟತನಗಳನ್ನು ಅಷ್ಟು ಸುಲಭವಾಗಿ

ಪ್ರತ್ಯೇಕಿಸಲಾಗದೆಂದೂ ಗಾಂಧಿ ಹೇಳಿದ ಮಾತನ್ನು ಅವರು ಒಪ್ಪುವವರಾಗಿರಲಿಲ್ಲ. ಗಾಂಧಿ ಧಾರ್ಮಿಕ ವಿಷಯಗಳ ಬಗ್ಗೆ ಗೊಂದಲ ಉಂಟಾದಾಗಲೆಲ್ಲ ಸಂಪರ್ಕಿಸುತ್ತಿದ್ದ ತಮ್ಮ ಗೆಳೆಯ, ಮಾರ್ಗದರ್ಶಿ ಮತ್ತು ತತ್ವಜ್ಞಾನಿಯಾಗಿದ್ದ ರಾಯ್‌ಚಂದ್ (ರಾಜಾಚಂದ್ರ) ಭಾಯಿ ಅವರನ್ನು ಈ ಹಿಂದೆ ಸಂಪರ್ಕಿಸಿದ್ದಾಗ ಅವರೂ ತಮ್ಮ ವ್ಯಾಖ್ಯಾನದೊಂದಿಗೆ ಸಹಮತ ವ್ಯಕ್ತಪಡಿಸಿದ್ದು ಗಾಂಧಿಯವರಿಗೆ ಸಮಾಧಾನ ತಂದಿತ್ತು.

ಸಾವರ್ಕರ್ ಜೊತೆಗೆ ವೇದಿಕೆ ಹಂಚಿಕೊಂಡ ಗಾಂಧಿ

ಧಿಂಗ್ರಾ ತಾನು ಮಾಡಿದ್ದ ಕೊಲೆಯನ್ನು ಸಮರ್ಥಿಸಿಕೊಂಡು ನ್ಯಾಯಾಲಯದಲ್ಲಿ ನೀಡಿದ್ದ ಹೇಳಿಕೆಯನ್ನು ಒಪ್ಪದ ಗಾಂಧಿ, ಆತನ ದೇಶಭಕ್ತಿ ಮೆಚ್ಚುವಂತಹದ್ದಾದರೂ, ಅದು ತಪ್ಪುದಾರಿ ಹಿಡಿದು ದೇಶಕ್ಕೆ ಅಪಕಾರವನ್ನೇ ಮಾಡಿದೆ ಎಂದು ಹೇಳಿಕೆ ನೀಡಿದರು. ಅತಿಥಿಯಾಗಿ ಸಭೆಗೆ ಬಂದಿದ್ದ ವ್ಯಕ್ತಿಯನ್ನು ವಿಶ್ವಾಸದ್ರೋಹವೆಸಗಿ ಕೊಲ್ಲುವುದು ಹೇಡಿತನವೆಂದು ಅವರು ಬಣ್ಣಿಸಿದ್ದರು. ಹಾಗೇ ಇದು ಬಿಳಿಯರ ಸದ್ಯದ ಆಡಳಿತ ವೈಖರಿಯು, ಎದುರು ಪಾಳೆಯದಲ್ಲಿ ಎಂತಹ ಆಘಾತಕಾರಿ ಪ್ರಚೋದನೆಗಳಿಗೆ ದಾರಿ ಮಾಡಿಕೊಡುತ್ತಿದೆ ಎಂಬುದರ ಎಚ್ಚರಿಕೆಯೂ ಆಗಬೇಕು ಎಂದು ಹೇಳಿದ್ದರು. ತಮ್ಮ ಈ ಚಿಂತನಾ ಲಹರಿಯನ್ನು ಅವರು ಮತ್ತೆ ಸಾವರ್ಕರ್ ಮತ್ತು ಅವರ ಸಮಾನ ಮನಸ್ಕ ಗೆಳೆಯರೊಂದಿಗೆ ಚರ್ಚಿಸುವ ಅವಕಾಶವೂ ಅವರಿಗೆ ಈ ಲಂಡನ್ ಪ್ರವಾಸದ ಅವಧಿಯಲ್ಲೇ ಮುಂದೆ ಒದಗಿಬಂತು. ಅಕ್ಟೋಬರ್ ೨೧ರಂದು ಲಂಡನ್‌ನಲ್ಲಿ ಭಾರತೀಯ ವಿದ್ಯಾರ್ಥಿಗಳು ಆಯೋಜಿಸಿದ್ದ ವಿಜಯದಶಮಿಯ ಆಚರಣೆಯ ಸಭೆಯಲ್ಲಿ ಗಾಂಧಿ ಮತ್ತು ಸಾವರ್ಕರ್ ವೇದಿಕೆ ಹಂಚಿಕೊಳ್ಳಬೇಕಾಯಿತು. ನಂತರ ಸಾವರ್ಕರ್ ಮತ್ತು ಅವರ ಗೆಳೆಯರೊಂದಿಗೆ ಗಾಂಧಿ ವಿಚಾರ ವಿನಿಮಯ-ಚರ್ಚೆಗಳನ್ನು ಮಾಡಿದರಾದರೂ, ಗಾಂಧಿಯ ವಿಚಾರಗಳನ್ನು ಒಪ್ಪಲು ನಿರಾಕರಿಸಿದ ಸಾವರ್ಕರ್ ಮತ್ತು ಅವರ ಗೆಳೆಯರು ಗಾಂಧಿ ಹಿಡಿದಿರುವ ಮಾರ್ಗ ತಪ್ಪೆಂದೂ, ಅದರ ಮೂಲಕ ಗುರಿ ಮುಟ್ಟುವುದು ಸಾಧ್ಯವಿಲ್ಲ ಎಂದೂ ವಾದಿಸಿದರು. ಈ ಗುಂಪಿನ ಮುಖವಾಣಿ 'ಬಂದೇ ಮಾತರಂ' ಪತ್ರಿಕೆಯಲ್ಲಿ ತಾವು ಗುರುವೆಂದು ಹೇಳುತ್ತಿದ್ದ ಗೋಪಾಲಕೃಷ್ಣ ಗೋಖಲೆಯವರನ್ನು ಹೀನಾಯವಾಗಿ ನಿಂದಿಸಿದುದನ್ನು ನೋಡಿ ಗಾಂಧಿ ವ್ಯಥೆಪಟ್ಟರು.

ನಂತರದಲ್ಲೇ ಗಾಂಧಿ ಈ ಬಗ್ಗೆ ಗೋಖಲೆಯವರಿಗೆ ಒಂದು ಪತ್ರ ಬರೆದು, ಅವರು ಆದಷ್ಟು ಬೇಗ ಟ್ರಾನ್ಸ್‌ವಾಲ್‌ಗೆ ಬಂದು ಸತ್ಯಾಗ್ರಹದಲ್ಲಿ ಭಾಗವಹಿಸುವ ಮೂಲಕ ಬಂಧನಕ್ಕೊಳಗಾಗಿ ಇವರಿಗೆ ಉತ್ತರ ನೀಡಬೇಕು ಎಂದು ಕೋರಿಕೊಂಡರು. ಇದೆಲ್ಲ ಬೆಳವಣಿಗೆಗಳ ಮಧ್ಯೆ ಗಾಂಧಿಯ ಗೆಳೆಯ ಪ್ರಾಣಜೀವನ ಮೆಹ್ತಾ ಮಾತ್ರ ಸತ್ಯಾಗ್ರಹ ಮಾರ್ಗದ ಸಾಧುತ್ವವನ್ನು ಒಪ್ಪಿಕೊಂಡು, ಫೀನಿಕ್ಸ್ ಆಶ್ರಮದ ಓರ್ವ ಭಾರತೀಯ ಯುವ ನಿವಾಸಿಯನ್ನು ಲಂಡನ್‌ನಲ್ಲಿ ಒಂದು ವರ್ಷ ಶಿಕ್ಷಣಕ್ಕಾಗಿ ನೆಲೆಗೊಳಿಸಿ ಅಲ್ಲಿನ ಭಾರತೀಯ ವಿದ್ಯಾರ್ಥಿಗಳಲ್ಲಿ ತನ್ನ ಸರಳ ಜೀವನ ಮತ್ತು ನೇರ ಮಾತುಕತೆಯ ಮೂಲಕ ಅಹಿಂಸೆ ಮತ್ತು ಸತ್ಯಾಗ್ರಹ ವಿಚಾರಗಳ ಬೀಜ ಬಿತ್ತಲು ವಿದ್ಯಾರ್ಥಿವೇತನವೊಂದನ್ನು ಪ್ರಾಯೋಜಿಸಲು ಮುಂದಾದನು. ಆ ವಿದ್ಯಾರ್ಥಿವೇತನಕ್ಕೆ

ಗಾಂಧಿಯವರ ಮಕ್ಕಳಲ್ಲಿ ಒಬ್ಬರು ಅರ್ಹರೆಂದು ಆತ ಅಭಿಪ್ರಾಯಪಟ್ಟನಾದರೂ, ಗಾಂಧಿ ಅದನ್ನೊಪ್ಪದೆ ಚಗನ್‌ಲಾಲ್‌ನ ಹೆಸರು ಸೂಚಿಸಿದರು. ಆದರೆ ಮುಂದೆ ಚಗನ್‌ಲಾಲ್ ಲಂಡನ್‌ಗೆ ಹೋಗಲು ಒಪ್ಪದಿದ್ದುದರಿಂದ ಬೇರೊಬ್ಬರು ಈ ವಿದ್ಯಾರ್ಥಿವೇತನ ಪಡೆದರೆಂಬುದು ಬೇರೆ ವಿಷಯ.

ಪ್ರಭುತ್ವದೊಂದಿಗೆ ಮಾತುಕತೆ

ಧಿಂಗ್ರಾನ ವಿಚಾರಣೆ ನಡೆದು ಮುಂದೆ ಆತನನ್ನು ನೇಣಿಗೇರಿಸುವ ಕಾನೂನು ಪ್ರಕ್ರಿಯೆ ನಡೆಯುತ್ತಿದ್ದಂತೆ ಗಾಂಧಿ ತಾವು ಲಂಡನ್‌ಗೆ ಬಂದಿದ್ದ ಉದ್ದೇಶದ ಕೆಲಸಗಳನ್ನು ಆರಂಭಿಸಿದರು. ಈ ವಿಷಯದಲ್ಲಿ ಅವರಿಗೆ ಮಾರ್ಗದರ್ಶಕರಾಗಿದ್ದವರು ಭಾರತದಲ್ಲಿ ಸ್ವಲ್ಪ ಮಧ್ಯಂತರ ಕಾಲದಲ್ಲಿ ವೈಸ್‌ರಾಯ್ ಆಗಿದ್ದು, ತಮ್ಮ ಭಾರತ ಪರ ಒಲವಿಗಾಗಿ ವೈಸ್‌ರಾಯ್ ಹುದ್ದೆಯಿಂದ ವಂಚಿತರಾಗಿ ಇಂಗ್ಲೆಂಡ್‌ಗೆ ಹಿಂದಿರುಗಿ ಈಗ ಬ್ರಿಟಿಷ್ ಸಂಸತ್ತಿನ ಮೇಲ್ಮನೆ ಸದಸ್ಯರಾಗಿದ್ದ ಲಾರ್ಡ್ ಆ್ಯಂಪ್ಟ್‌ಹಿಲ್ ಮತ್ತು ಲಂಡನ್‌ನ ಹಿರಿಯ ನಿವಾಸಿಯಾಗಿದ್ದ ಪಾರ್ಸಿ ಮಹಿಳೆ ಶ್ರೀಮತಿ ಭೌಂಗ್ರಿ. ಮೊದಲು ಸಾರ್ವಜನಿಕರ ಮಧ್ಯೆ ದ.ಆಫ್ರಿಕಾದ ಸಮಸ್ಯೆಯ ಬಗ್ಗೆ ಜಾಗೃತಿ–ಸಹಾನುಭೂತಿ ಉಂಟುಮಾಡಬೇಕೆಂಬ ಶ್ರೀಮತಿ ಭೌಂಗ್ರಿಯವರ ಸಲಹೆಯನ್ನು, ಅದು ಅಧಿಕಾರ ವಲಯಗಳಲ್ಲಿ ಪ್ರತಿಕೂಲ ಪರಿಣಾಮವನ್ನು ಉಂಟುಮಾಡುತ್ತದೆಂಬ ಕಾರಣದಿಂದ ಒಪ್ಪದ ಆ್ಯಂಪ್ಟ್‌ಹಿಲ್, ಗಾಂಧಿ ಬ್ರಿಟಿಷ್ ಸಾಮ್ರಾಜ್ಯ ಸರ್ಕಾರದ ಮುಖ್ಯಸ್ಥರನ್ನು ಭೇಟಿ ಮಾಡಿ ತಮ್ಮ ಸಮಸ್ಯೆ–ಬೇಡಿಕೆ–ಪ್ರಸ್ತಾವನೆಗಳನ್ನು ಮುಂದಿಡಲು ಸೂಚಿಸಿದರು. ಅದರಂತೆ ಗಾಂಧಿ ಬ್ರಿಟಿಷ್ ಭಾರತ ಸರ್ಕಾರದ ಕಾರ್ಯದರ್ಶಿಯಾಗಿದ್ದ ಲಾರ್ಡ್ ಮೋರ್ಲೆ ಮತ್ತು ಬ್ರಿಟಿಷ್ ವಸಾಹತುಗಳ ಕಾರ್ಯದರ್ಶಿಯಾಗಿದ್ದ ಲಾರ್ಡ್ ಕ್ರೂ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಇದರ ನಂತರ ಕ್ರೂ, ಸ್ಮಟ್ಸ್‌ನೊಂದಿಗೆ ಮಾತಾಡಿದರು. ಆತ ತನ್ನ ಈ ಮೊದಲಿನ ವಾದವನ್ನೇ ಮಂಡಿಸಿದ: 'ಒಂದು ಆಡಳಿತಾತ್ಮಕ ರಿಯಾಯಿತಿಯಾಗಿ ಪ್ರತಿವರ್ಷ ಒಂದು ನಿರ್ದಿಷ್ಟ ಸಂಖ್ಯೆಯ ಭಾರತೀಯರ ವಲಸೆಗೆ ಅವಕಾಶ ನೀಡಲಾಗುವುದು. ಆದರೆ ನಿರ್ದಿಷ್ಟವಾಗಿ ಏಷಿಯನ್ನರ ವಲಸೆ ಮೇಲಿನ ಹತೋಟಿಯ ವಿಧಿಗಳನ್ನು ರದ್ದುಗೊಳಿಸುವ ಮೂಲಕ ತಾತ್ವಿಕವಾಗಿ ಬಿಳಿಯರೂ ವರ್ಣೀಯರೂ ಸಮಾನ ಹಕ್ಕುದಾರರು ಎಂಬುದನ್ನು ವಸಾಹತುದಾರರು ಒಪ್ಪಲು ಸಾಧ್ಯವಿಲ್ಲ' ಎಂದು ಕಡ್ಡಿ ಮುರಿದಂತೆ ಹೇಳಿಬಿಟ್ಟ. ಒಮ್ಮೆ ತಾತ್ವಿಕವಾಗಿ ಈ ಸಮಾನತೆಯನ್ನು ಒಪ್ಪಿಕೊಂಡು ಬಿಟ್ಟರೆ ಗಾಂಧಿ ಅದನ್ನೇ ನೆಪ ಮಾಡಿಕೊಂಡು ಇನ್ನಷ್ಟು ಸವಲತ್ತುಗಳಿಗಾಗಿ ಚಳುವಳಿಯನ್ನು ಆರಂಭಿಸುವ ಎಲ್ಲ ಸಾಧ್ಯತೆಗಳಿವೆ ಎಂದೂ ತನ್ನ ನಿರ್ಧಾರಕ್ಕೆ ವಿವರಣೆ ನೀಡಿದ.

ಗಾಂಧಿ ಇದಕ್ಕೆ ಸರಿಯಾಗಿ, ಒಮ್ಮೆ ತಾತ್ವಿಕ ಸಮಾನತೆಯನ್ನು ಘೋಷಿಸಿದರೆ ಸಾಕು ತಮ್ಮ ಚಳುವಳಿಯನ್ನು ನಿಲ್ಲಿಸುವುದಾಗಿ ಹೇಳಿದರು. ಇದನ್ನು ಉಲ್ಲೇಖಿಸಿ ಆ್ಯಂಪ್ಟ್‌ಹಿಲ್ ಜ. ಬೋತಾನೊಂದಿಗೆ ಮಾತಾಡಿ, 'ತನ್ನ ಆತ್ಮಸಾಕ್ಷಿಯ ಹೊರತಾಗಿ ಯಾವ ನ್ಯಾಯಾಲಯದ ಸೂಚನೆಗೂ ತಲೆಬಾಗಲೊಲ್ಲದ ಗಾಂಧಿ ತನ್ನ ಜನರ ಆತ್ಮಗೌರವವನ್ನು ಕಾಪಾಡಲು ನಡೆಸಿರುವ ಹೋರಾಟವನ್ನು ಯಾವ ಕಾರಣಕ್ಕೂ ಓಂತೆಗೆದುಕೊಳ್ಳಲಾರರು' ಎಂಬ ಎಚ್ಚರಿಕೆ ನೀಡಿ, ತಾವು ಆವರ ವ್ಯಕ್ತಿತ್ವವನ್ನು

ಮೆಚ್ಚುವುದಾಗಿಯೂ ತಿಳಿಸಿದರು. ಆದರೆ ಜ. ಬೋತಾ ಮೊದಲಿನಂತೆಯೇ, ಮೂಲ ಏಷಿಯಾಟಿಕ್ ಶಾಸನವನ್ನು ಹಿಂತೆಗೆದುಕೊಳ್ಳಲು ಸಿದ್ಧವಾಗಿರುವುದಾದರೂ, ವಲಸೆ ಹತೋಟಿ ಶಾಸನವನ್ನು ಯಾವುದೇ ಕಾರಣಕ್ಕೂ ಹಿಂತೆಗೆದುಕೊಳ್ಳಲಾಗದು ಎಂದು ಸರ್ಕಾರದ ನಿಲುವನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದ.

ಕೈ ಚೆಲ್ಲಿದ ಆ್ಯಂಪ್ಟ್‌ಹಿಲ್–ಸತ್ಯಾಗ್ರಹಿಯೊಬ್ಬರ ಸಾವಿನ ಸುದ್ದಿ

ಸಂಧಾನಗಳ ಮಧ್ಯಸ್ಥಿಕೆದಾರನಾಗಿ ಎರಡೂ ಕಡೆಯ ಬಿಗಿಪಟ್ಟುಗಳಿಂದ ಸುಸ್ತಾಗಿ ಹೋಗಿದ್ದ ಆ್ಯಂಪ್ಟ್‌ಹಿಲ್ ಗಾಂಧಿಗೆ 'ನೀವು ನಿಮ್ಮ ಜನಾಂಗದ ಆತ್ಮಗೌರವಕ್ಕಾಗಿ ಸಾಕಷ್ಟು ಕೆಲಸ ಮಾಡಿದ್ದೀರಿ. ಅದರ ಪರಿಣಾಮವಾಗಿ ಈಗ ಸಾಕಷ್ಟು ಫಲಗಳನ್ನೂ ಪಡೆದಿದ್ದೀರಿ. ಆದಾಗ್ಯೂ ಸದ್ಯದ ಸ್ಥಿತಿಯಲ್ಲಿ ನಿಮ್ಮ ಚಳುವಳಿಯನ್ನು ಮುಂದುವರೆಸುವುದು ತಿಕ್ಕಲುತನವಾಗಿ ನನಗೆ ಕಾಣುತ್ತದೆ' ಎಂದು ತಿಳಿಸಿದಾಗ ಗಾಂಧಿ ತಮ್ಮ ರಾಜತಾಂತ್ರಿಕ ಪ್ರಯತ್ನಗಳಿಗೆ ವಿದಾಯ ಹೇಳಿದರು. ಗಾಂಧಿ ಜೊತೆಗೆ ನಿಯೋಗದಲ್ಲಿ ಹೋಗಿದ್ದ ಹಾಜಿ ಹಬೀಬರು, ಸತ್ಯಾಗ್ರಹಕ್ಕೆ ಜನ ಬೆಂಬಲ ಕಡಿಮೆಯಾಗುತ್ತಿದ್ದು ಬೋತಾನ ರಿಯಾಯ್ತಿಯನ್ನು ಸದ್ಯಕ್ಕೆ ಒಪ್ಪಿಕೊಳ್ಳುವುದು ಲೇಸೆಂದು ಸೂಚಿಸಿದಾಗ ಗಾಂಧಿ, ಆತ್ಮಗೌರವದ ಹೋರಾಟವನ್ನು ತತ್ಕಾಲೀನ ಲಾಭಗಳಿಗಾಗಿ ಬಲಿಗೊಡುವುದು ಜನಾಂಗದ ದೀರ್ಘಕಾಲಿಕ ಭವಿಷ್ಯದ ದೃಷ್ಟಿಯಿಂದ ಅಪಾಯಕಾರಿ ಎಂದು ವಿವರಿಸಿ ಅವರನ್ನು ತಮ್ಮ ದಾರಿಗೆ ತಂದುಕೊಂಡರು. ಈ ಮಧ್ಯೆ ಈಗ ಜೋಸೆಫ್ ಡೋಕ್‌ರಿಂದ ಸಂಪಾದಿತವಾಗುತ್ತಿದ್ದ 'ಇಂಡಿಯನ್ ಒಪಿನಿಯನ್' ಪತ್ರಿಕೆ, ಸಶ್ರಮ ಶಿಕ್ಷೆಯ ಫಲವಾಗಿ ಕ್ಷಯರೋಗಕ್ಕೆ ತುತ್ತಾಗಿದ್ದ ನಾಗಪ್ಪನ ಸಾವಿನ ಸುದ್ದಿ ತಲುಪಿಸಿ ಗಾಂಧಿಯನ್ನು ಮತ್ತಷ್ಟು ಖೇದಕ್ಕೀಡುಮಾಡಿತು. ಹಾಗೇ ನಾಗಪ್ಪನ ಶವಯಾತ್ರೆಯ ಮೆರವಣಿಗೆಯಲ್ಲಿ ಮುವ್ವತ್ತು ಕುದುರೆಗಾಡಿಗಳು ಭಾಗವಹಿಸಿದ್ದವು ಎಂಬುದನ್ನು ತಿಳಿದು ಹುರುಪುಗೊಂಡರು.

ಗಾಂಧಿ ಆಸಕ್ತಿ ಕೆರಳಸಿದ ಟಾಲ್‌ಸ್ಟಾಯ್‌ರ ಒಂದು ಪತ್ರ

ಗಾಂಧಿ ಭಾನುವಾರಗಳಂದು ಮಿಲಿ ಪೊಲಾಕ್‌ಳ ಮನೆಗೆ ಹೋಗಿ ಸ್ವಲ್ಪ ಕಾಲ ಕಳೆಯುತ್ತಿದ್ದರು. ಹಾಗೇ ತಾವು ವಿದ್ಯಾರ್ಥಿಯಾಗಿ ಲಂಡನ್‌ನಲ್ಲಿದ್ದಾಗ ಬೆರೆಯುತ್ತಿದ್ದ 'ತಾಂತ್ರಿಕ ಕ್ರೈಸ್ತ' ಗೆಳೆಯರನ್ನು ಭೇಟಿ ಮಾಡುತ್ತಿದ್ದರು. ಇದರ ಫಲವಾಗಿ ತಮ್ಮ ಬಹುಪ್ರಿಯ ಲೇಖಕ ಲಿಯೋ ಟಾಲ್‌ಸ್ಟಾಯ್‌ನ ಇಂಗ್ಲಿಷ್ ಜೀವನ ಚರಿತ್ರಕಾರ ಐಲ್ಮರ್ ಮೌಡ್ ಅವರ ಸಂಪರ್ಕ ದೊರೆಯಿತು. ಹಾಗೇ ಜಾರ್ಜ್ ಅಲೆನ್ ಎಂಬ ಟಾಲ್‌ಸ್ಟಾಯ್ ಅನುಯಾಯಿಯ ಜೊತೆಗೆ ಮಾತುಕತೆಯೂ ಸಾಧ್ಯವಾಗಿ ಒಂದು ಸಂಜೆ ಆತನ ತೋಟಕ್ಕೂ ಹೋಗಿಬಂದು ಪುಳಕಿತರಾದರು. ಲಂಡನ್‌ನಲ್ಲಿ ದೊರೆತ ಟಾಲ್‌ಸ್ಟಾಯ್ ಕುರಿತ ಪುಸ್ತಕಗಳನ್ನು ಓದತೊಡಗಿದರು. ಅತಿ ಶ್ರೀಮಂತಿಕೆಯ ವೈಭವದ ಕುಟುಂಬದಲ್ಲಿ ಹುಟ್ಟಿ ಎಲ್ಲ ಲೌಕಿಕ ಸುಖಗಳನ್ನೂ ಅನಿರ್ಬಂಧಿತವಾಗಿ ಅನುಭವಿಸಿದ ಟಾಲ್‌ಸ್ಟಾಯ್, ಅರವತ್ತರ ಹರೆಯದ ಒಂದು ದಿನ ಎಲ್ಲವೂ ಬೇಸರವಾಗಿ ಹಳ್ಳಿಯ ಕಡೆ ಮುಖ ಮಾಡಿ ಹೊರಟು ಹಳ್ಳಿಯ ಜನರ ನಡುವೆ ಕೃಷಿ ಮಾಡುತ್ತಾ ಕನಿಷ್ಠ ಅಗತ್ಯಗಳ ಕಾಯಕ ಜೀವನವನ್ನು ನಡೆಸುತ್ತಾ, ಕ್ರಿಸ್ತನನ್ನು ಕ್ರಿಶ್ಚಿಯನ್ ಧರ್ಮದಿಂದ, ಕ್ರಿಶ್ಚಿಯನ್ ಧಾರ್ಮಿಕ ಸಂಸ್ಥೆಗಳಿಂದ ಬಿಡುಗಡೆಗೊಳಿಸಬೇಕೆಂದು ಹೇಳುತ್ತಾ ಅಹಿಂಸೆಯೊಂದೇ ಮಾನವತೆಗೆ

ಮಾರ್ಗವೆಂದು ಪ್ರತಿಪಾದಿಸುತ್ತಾ ಜಗತ್ತಿನ ಹಲವು ದೇಶ ಮತ್ತು ಧರ್ಮಗಳಿಂದ ಅನುಯಾಯಿಗಳನ್ನು ಆಕರ್ಷಿಸುತ್ತಿದ್ದುದನ್ನು ತಿಳಿದರು. ಹಾಗೇ ಈ ಹಿಂದೆ ಕೆಲ ಭಾರತೀಯರು ಅವರಿಗೆ ಪತ್ರ ಬರೆದು ಉತ್ತರ ಪಡೆದಿದ್ದುದೂ ಅವರ ಗಮನಕ್ಕೆ ಬಂದಿತು. ವಿಶೇಷವಾಗಿ ೧೯೧೦ರ ಜೂನ್‌ನಷ್ಟು ಇತ್ತೀಚೆಗೆ ತಾರಕಾನಾಥ್ ದಾಸ್ ಎಂಬ ಬಂಗಾಳದ (ದೇಶಭ್ರಷ್ಟನಾಗಿ ಅಮೆರಿಕಾದಲ್ಲಿ ನೆಲೆಸಿದ್ದ) ಕ್ರಾಂತಿಕಾರರೊಬ್ಬರು ಬರೆದಿದ್ದ ಪತ್ರಕ್ಕೆ ಅವರು ನೀಡಿದ್ದ 'ಓರ್ವ ಹಿಂದೂಗೆ ಬರೆದ ಪತ್ರ' ಎಂಬ ಶೀರ್ಷಿಕೆಯಡಿ ಪ್ರಕಟವಾಗಿದ್ದ ಉತ್ತರ ಗಾಂಧಿಯವರ ಕುತೂಹಲವನ್ನು ಕೆರಳಿಸಿತು. ಅವರು ಭಾರತದ ಬಿಡುಗಡೆಗಾಗಿ ತಾವು ಹಿಡಿದಿದ್ದ ಹಿಂಸೆಯ–ಭಯೋತ್ಪಾದನೆಯ–ಹಾದಿಗೆ ಟಾಲ್‌ಸ್ಟಾಯ್‌ರ ಅನುಮೋದನೆ ಕೋರಿದ್ದರು. ಅದಕ್ಕೆ ಉತ್ತರ ಬರೆದಿದ್ದ ಟಾಲ್‌ಸ್ಟಾಯ್ 'ಹಿಂಸಾತ್ಮಕ ಹಾದಿಯನ್ನು ಪರಮ ಮೂರ್ಖತನದ್ದೆಂದು ಹೇಳಿ ಆ ಬಗ್ಗೆ ತಮ್ಮ ಅಸಮಾಧಾನ–ಜಿಗುಪ್ಸೆಗಳನ್ನು ದಾಖಲಿಸಿ, ಶಸ್ತ್ರಗಳನ್ನು ತ್ಯಜಿಸಿ ಬ್ರಿಟಿಷ್ ಪ್ರಭುತ್ವದ ಪೊಲೀಸ್ ಮತ್ತು ಸೈನ್ಯಕ್ಕೆ ಸೇರದೆ, ತೆರಿಗೆ ಕೊಡಲು ನಿರಾಕರಿಸಿ, ನ್ಯಾಯಾಲಯಗಳನ್ನು ಬಹಿಷ್ಕರಿಸಿ ನಾಗರಿಕ ಅಸಹಕಾರ ಕಾರ್ಯಕ್ರಮಗಳ ಅಹಿಂಸಾತ್ಮಕ ದಾರಿ ಹಿಡಿದರೆ ಯಾರೂ ನಿಮ್ಮನ್ನು ಅಡಿಯಾಳಾಗಿ ಮಾಡಿಕೊಳ್ಳಲಾರರು' ಎಂದು ಹೇಳಿದ್ದರು.

ಟಾಲ್‌ಸ್ಟಾಯ್‌ರೊಂದಿಗೆ ಆರಂಭವಾದ ಪತ್ರ ವ್ಯವಹಾರ

ಇದೆಲ್ಲದರಿಂದ ಸ್ಫೂರ್ತಿಗೊಂಡ ಗಾಂಧಿ ಅಕ್ಟೋಬರ್ ೧ರಂದು ಟಾಲ್‌ಸ್ಟಾಯ್‌ರ ವಿಳಾಸಕ್ಕೆ ಒಂದು ಪತ್ರ ಬರೆದರು. ಗಾಂಧಿ ತಮ್ಮ ಈ ಪತ್ರದಲ್ಲಿ ತಾವು ಟ್ರಾನ್ಸ್‌ವಾಲ್‌ನಲ್ಲಿ ನಡೆಸಿರುವ ಸತ್ಯಾಗ್ರಹವೆಂಬ ಹೊಸ ಮಾದರಿಯ ಹೋರಾಟವನ್ನು ವಿವರಿಸಿ ಅವರ ನೈತಿಕತೆಯನ್ನು ಕುರಿತ ಮೀಮಾಂಸೆಯ ಹಿನ್ನೆಲೆಯಲ್ಲಿ ಅದರ ಬಗ್ಗೆ ಅಭಿಪ್ರಾಯವನ್ನು ಕೋರಿದರು. ಹಾಗೇ ಕೆಲವು– ಕ್ರಿಸ್ತನ ಪುನರುತ್ಥಾನವನ್ನು ಟಾಲ್‌ಸ್ಟಾಯ್ ನಿರಾಕರಿಸುವ– ಭಾಗಗಳನ್ನು ಕೈಬಿಟ್ಟು ಟಾಲ್‌ಸ್ಟಾಯ್ ತಾರಕಾನಾಥ್ ದಾಸ್‌ಗೆ ಬರೆದ ಪತ್ರವನ್ನು ತಮ್ಮ 'ಇಂಡಿಯನ್ ಒಪಿನಿಯನ್' ಪತ್ರಿಕೆಯಲ್ಲಿ ಪ್ರಕಟಿಸಲು ಅನುಮತಿ ಕೋರಿದ್ದರು. ಈ ಪತ್ರ ಟಾಲ್‌ಸ್ಟಾಯ್‌ಗೆ ತಲುಪಿದ ಬಗ್ಗೆ ಅವರ ದಿನಚರಿಯ ಅಕ್ಟೋಬರ್ ೬ನೇ ದಿನಾಂಕದಡಿಯಲ್ಲಿ, 'ಇಂದು ಟ್ರಾನ್ಸ್‌ವಾಲ್‌ನ ಓರ್ವ ಹಿಂದೂವಿನಿಂದ ಮುದ ನೀಡುವ ಪತ್ರ ಬಂದಿದೆ' ಎಂದು ನಮೂದಾಗಿದೆ. ನಾಲ್ಕು ದಿನಗಳ ನಂತರ ಅವರು ತಮ್ಮ ಆಪ್ತ ಮಿತ್ರ ಮತ್ತು ಮುಂದೆ ಅವರ ಸಮಗ್ರ ಕೃತಿಗಳನ್ನು ಸಂಪಾದಿಸಿದ ವ್ಲಾಡಿಮೀರ್ ಜಿ. ಚೆರ್ಕೋಫ್‌ಗೆ ಬರೆದ ಒಂದು ಪತ್ರದಲ್ಲಿ 'ಟ್ರಾನ್ಸ್‌ವಾಲ್‌ನ ಹಿಂದೂ ಬರೆದ ಪತ್ರ ಹೃದಯಸ್ಪರ್ಶಿಯಾಗಿದೆ' ಎಂದು ತಿಳಿಸಿದರು. ೭ರ ದಿನಾಂಕ ಹಾಕಿರುವ ಪತ್ರದಲ್ಲಿ ಟಾಲ್‌ಸ್ಟಾಯ್ ರಷ್ಯನ್ ಭಾಷೆಯಲ್ಲಿ ಗಾಂಧಿಗೆ ಒಂದು ಉತ್ತರ ಬರೆದರು. ತಾತಿಯಾನ (ಲಿಯೋ ಟಾಲ್‌ಸ್ಟಾಯ್‌ರ ಮಗಳು) ಅದನ್ನು ಇಂಗ್ಲಿಷ್‌ಗೆ ಅನುವಾದಿಸಿ ಗಾಂಧಿ ವಿಳಾಸಕ್ಕೆ ಅಂಚೆಗೆ ಹಾಕಿದಳು. ಅದರಲ್ಲಿ ಟಾಲ್‌ಸ್ಟಾಯ್ 'ಟ್ರಾನ್ಸ್‌ವಾಲ್‌ನ ನನ್ನ ಪ್ರಿಯ ಸೋದರರು ಮತ್ತು ಸಹ ದುಡಿಮೆಗಾರರು ನಡೆಸುತ್ತಿರುವ ಹೋರಾಟ'ದ ಬಗ್ಗೆ ತಿಳಿದು ತಮಗೆ ಸಂತೋಷವಾಗಿದೆಯೆಂದೂ, 'ಇಲ್ಲಿಯೂ ಕಡ್ಡಾಯ ಸೇನಾ ಸೇವೆಗೆ ವಿರೋಧ ವ್ಯಕ್ತಪಡಿಸುವ ಮೂಲಕ ಒರಟುತನದ ವಿರುದ್ಧ ಮೃದುತ್ವ ಮತ್ತು ಹಿಂಸೆಯ ವಿರುದ್ಧ

ವಿನಯವಂತಿಕೆ ಮತ್ತು ಪ್ರೀತಿಗಳ ಹೋರಾಟ ಪ್ರತಿ ವರ್ಷ ಹೆಚ್ಚೆಚ್ಚು ಪ್ರಚಲಿತವಾಗುತ್ತಿದೆ' ಎಂದೂ ತಿಳಿಸಿದ್ದರು. ಜೊತೆಗೆ ಕ್ರಿಸ್ತನ ಪುನರುತ್ಥಾನದ ಬಗೆಗಿನ ನಂಬಿಕೆ ಆತ್ಮದ ಅಮರತ್ವ ಮತ್ತು ದೇವರ ನ್ಯಾಯ ಮತ್ತು ಪ್ರೀತಿಗಳಲ್ಲಿನ ನಂಬಿಕೆಗೆ ಭಂಗ ತರುತ್ತವೆಂದು ತಮ್ಮ ವಾದವನ್ನು ಸಮರ್ಥಿಸುತ್ತಾ, 'ನಿಮಗೆ ಹೇಗೆ ಬೇಕೋ ಹಾಗೆ ಮಾಡಿ' ಎಂದೂ ಸೂಚಿಸಿದ್ದರು.

'ಇಂಡಿಯನ್ ಒಪಿನಿಯನ್'ನಲ್ಲಿ ಮೂಡಿದ ಟಾಲ್‌ಸ್ಟಾಯ್ ಚಿತ್ರ

ಗಾಂಧಿ ಈ ಪತ್ರ ವ್ಯವಹಾರವನ್ನೂ 'ಹಿಂದೂಗೆ ಬರೆದ ಪತ್ರ'ವನ್ನೂ ಸಂಕಲಿಸಿ 'ಇಂಡಿಯನ್ ಒಪಿನಿಯನ್'ಗೆ ಟಾಲ್‌ಸ್ಟಾಯ್ ಕುರಿತ ಒಂದು ಪ್ರಸ್ತಾವನೆಯೊಂದಿಗೆ ಪ್ರಕಟಿಸಿದರು. ಆ ಪ್ರಸ್ತಾವನೆಯಲ್ಲಿ ಅವರು 'ಟಾಲ್‌ಸ್ಟಾಯ್‌ರಂತಹ ಸ್ಪಷ್ಟ ಚಿಂತನೆಯ ಅಪೂರ್ವ ಮತ್ತು ಪವಿತ್ರ ವ್ಯಕ್ತಿಯ ಬೆಂಬಲ – ಈ ನಿಯೋಗದ ವ್ಯರ್ಥ ಪ್ರಯತ್ನಗಳ ಮಧ್ಯೆ–ಆತ್ಮಬಲವನ್ನಾಧರಿಸಿದ ಸತ್ಯಾಗ್ರಹಕ್ಕೆ ಬೇರೆ ದಾರಿ ಯಾವುದೂ ಇಲ್ಲ ಎಂಬುದನ್ನು ನಮಗೆ ಮನವರಿಕೆ ಮಾಡಿದೆ. ರಷ್ಯಾದ ಪ್ರಭುತ್ವವನ್ನು ಟೀಕಿಸಿ ತನ್ನನ್ನು ದಸ್ತಗಿರಿ ಮಾಡುವಂತೆ ಆಹ್ವಾನಿಸಬಲ್ಲ ಈ ಎಂಬತ್ತು ವರ್ಷದ ಹಿರಿಯನ ನೈತಿಕ ಸ್ಥೈರ್ಯ, ಮಾತುಗಳಲ್ಲಿಯೇ ಮನುಷ್ಯನ ನಿಜವಾದ ಸ್ವಾತಂತ್ರ್ಯದ ಅರ್ಥ ಅಡಗಿರುವುದು. ಟ್ರಾನ್ಸ್‌ವಾಲ್‌ನಲ್ಲಿ ಇಂತಹ ಸ್ವಾತಂತ್ರ್ಯ ಸಾಧನೆಗೇ ಪ್ರಯತ್ನ ನಡೆದಿರುವುದು. ಭಾರತ ಇಂತಹ ಸ್ವಾತಂತ್ರ್ಯ ಪಡೆದಾಗಲೇ ಅಲ್ಲಿ ಸ್ವರಾಜ್ಯವೆನ್ನುವುದು ಸೃಷ್ಟಿಯಾಗುವುದು' ಎಂದು ಬರೆದಿದ್ದರು. ಈ ಮೂಲಕ ಗಾಂಧಿ ತಮ್ಮ ನಿಯೋಗ ವಿಫಲವಾಗಿರುವುದನ್ನು ಸೂಚಿಸಿದ್ದಲ್ಲದೆ ಮೊದಲ ಬಾರಿಗೆ ತಮ್ಮ ಆಲೋಚನೆ ಮತ್ತು ಬರವಣಿಗೆಯಲ್ಲಿ ಭಾರತದಲ್ಲಿನ ಸ್ವರಾಜ್ಯ ಸಾಧನೆಯ ಪ್ರಸ್ತಾಪ ಮಾಡಿದ್ದರು.

ನಂತರ ಗಾಂಧಿ, ಆ ಹೊತ್ತಿಗೆ ಗೆಳೆಯ ಪ್ರಾಣಜೀವನ ಮೆಹ್ತಾನ ಧನಸಹಾಯದೊಂದಿಗೆ ಪ್ರಕಟವಾಗಿದ್ದ, ಜೋಸೆಫ್ ಡೋಕ್ ಅವರು ಬರೆದಿದ್ದ ತಮ್ಮ ಆವರೆಗಿನ ಜೀವನ ಚರಿತ್ರೆಯ ಪ್ರತಿಯೊಂದನ್ನು ಟಾಲ್‌ಸ್ಟಾಯ್‌ಗೆ ಕಳಿಸುತ್ತಾ, ಆಧುನಿಕ ಕಾಲದಲ್ಲಿ ಎಲ್ಲೂ ಈವರೆಗೆ ನಡೆಯದಂತಹ 'ಗುರಿಯಂತೆಯೇ ಮಾರ್ಗ' ಎಂಬ ಸಂದೇಶವನ್ನು ಸಾರುತ್ತಾ, ಅನ್ಯಾಯದ ವಿರುದ್ಧ ಎದುರಾಳಿಯನ್ನು ಘಾತಗೊಳಿಸದೆ ಸ್ವಯಂಸಂಕಷ್ಟಗಳಿಂದ ಸ್ಫೂರ್ತಿಗೊಳ್ಳುವ ಹೋರಾಟ ಟ್ರಾನ್ಸ್‌ವಾಲ್‌ನಲ್ಲಿ ಭಾರತೀಯರಿಂದ ನಡೆದಿದ್ದು, ಇದಕ್ಕೆ ಜಾಗತಿಕ ಪ್ರಚಾರ ದೊರೆತರೆ ಜಗತ್ತಿನ ಎಲ್ಲೆಡೆ ಅನ್ಯಾಯಗಳ ವಿರುದ್ಧದ ಹೋರಾಟಗಳಿಗೆ ಈ ಮಾರ್ಗ ಆದರ್ಶವಾಗಬಹುದೆಂದೂ, ಇದರ ವಿವರಗಳು ತಾನು ಕಳಿಸುತ್ತಿರುವ ಪುಸ್ತಕದಲ್ಲಿ ಇರುವವೆಂದೂ, ಈ ಪುಸ್ತಕವನ್ನು ಓದಿ ತಾನು ಹೇಳುತ್ತಿರುವುದು ಸತ್ಯವೆಂದು ಮನವರಿಕೆಯಾದರೆ ಜಗತ್ತಿನ ಎಲ್ಲೆಡೆ ಪ್ರಭಾವ ಹೊಂದಿರುವ ಅವರು ಇದಕ್ಕೆ ಪ್ರಚಾರ ಕೊಡಬೇಕೆಂದೂ ಪತ್ರ ಮುಖೇನ ಕೋರಿದ್ದರು. ಈ ಅಂಚೆಗೆ ಟಾಲ್‌ಸ್ಟಾಯ್‌ರಿಂದ ತಕ್ಷಣಕ್ಕೆ ಉತ್ತರ ಬರಲಿಲ್ಲ.

■

೨೨
ವಿಫಲವಾದ ಮಾತುಕತೆ; ಭಂಗಗೊಂಡ ಒಂದು ಪ್ರೇಮ ಪ್ರಸಂಗ

ಈ ಮಧ್ಯೆ ೧೯೦೯ರ ಸೆಪ್ಟೆಂಬರ್ ೧೪ರಂದು ಭಾರತಕ್ಕೆ ತೆರಳಿದ್ದ ಹೆನ್ರಿ ಪೋಲಾಕ್ ಅಲ್ಲಿನ ತನ್ನ ಪ್ರಯತ್ನ ಮತ್ತು ಅನುಭವಗಳ ಬಗ್ಗೆ ಗಾಂಧಿಗೆ ಪತ್ರಗಳನ್ನು ಬರೆಯುತ್ತಿದ್ದ. ಆತ ಆಗಸ್ಟ್ ಮೊದಲ ವಾರದಲ್ಲಿ ಮುಂಬೈಗೆ ಬಂದು ದಾದಾಭಾಯಿ ನವರೋಜಿಯವರನ್ನು ಕಂಡು ಅವರಿಂದ ಗಾಂಧಿಗೆ ಆಶೀರ್ವಾದ ಪಡೆದು, ಅಲ್ಲಿಂದ ತನ್ನ ಪ್ರವಾಸದ ಮೊದಲ ಘಟ್ಟದಲ್ಲಿ ಗುಜರಾತ್‌ನ ಕೆಲವು ಊರುಗಳು, ಪೂನಾ (ಈಗಿನ ಪುಣೆ), ನಂತರ ಮದ್ರಾಸ್ (ಈಗಿನ ಚೆನ್ನೈ), ಆನಂತರ ದ.ಆಫ್ರಿಕಾದಲ್ಲಿ ಕರಾರು ಆಳುಗಳಾಗಿ ಬಂದಿದ್ದವರ ತಮಿಳ್ನಾಡಿನ ಹಲವು ಊರುಗಳಿಗೆ ಭೇಟಿ ನೀಡಿ, ಟ್ರಾನ್ಸ್‌ವಾಲ್ ಹೋರಾಟದ ವಿವರ ಮತ್ತು ಮಹತ್ವ ವಿವರಿಸಿ, ಅದಕ್ಕೆ ಬೆಂಬಲ ಕೋರಿ ನಿಧಿ ಸಂಗ್ರಹಿಸುತ್ತಿದ್ದ. ಭಾರತೀಯರು ಈ ವಿಷಯವಾಗಿ ಸಂಘಟನೆಗೊಂಡು ಸರ್ಕಾರದ ಮೇಲೆ ಜನಾಂಗವಾದದ ರದ್ದತಿಗಾಗಿ ಒತ್ತಡ ಹಾಕಬೇಕು ಎಂದು ಆಗ್ರಹಿಸುತ್ತಿದ್ದ. ಈತನ ಸಭೆಗಳಿಗೆ ಬಂದವರಲ್ಲಿ ಗೋಪಾಲಕೃಷ್ಣ ಗೋಖಲೆ ಮತ್ತು ಮಹಮ್ಮದಾಲಿ ಜಿನ್ನಾ ಸೇರಿದಂತೆ ಹಲವು ಭಾರತೀಯ ಗಣ್ಯರು ಸೇರಿದ್ದರು.

ಗೋಖಲೆ ಮೆಚ್ಚಿದ ಗಾಂಧಿ ಚಳುವಳಿ

ಇಂತಹ ಒಂದು ಸಭೆಯಲ್ಲಿ ಮಾತನಾಡಿದ ಗೋಖಲೆಯವರಂತಹ ಸೌಮ್ಯವಾದಿಯೂ ತಾವೀಗ ಟ್ರಾನ್ಸ್‌ವಾಲ್‌ನಲ್ಲಿದ್ದರೆ ಗಾಂಧಿಯ ಬಾವುಟದಡಿ ಸೇರಿಕೊಂಡು ಚಳುವಳಿ ಮಾಡಿ ಸ್ವಯಂ ಸಂಕಷ್ಟದ ಹಾದಿ ಹಿಡಿಯುತ್ತಿದ್ದೆ ಎಂದದ್ದು ಪೋಲಾಕ್‌ನಲ್ಲಿ ಬೆರಗನ್ನುಂಟುಮಾಡಿತು. ತಮಿಳ್ನಾಡಿನಲ್ಲಿ ಗಾಂಧಿ ಅನುಯಾಯಿ ಜಿ.ಎ. ನಟೇಶನ್ ದ.ಆಫ್ರಿಕಾದಲ್ಲಿನ ಭಾರತೀಯರ ಸ್ಥಿತಿಗತಿ ಮತ್ತು ಹೋರಾಟದ ಬಗ್ಗೆ ಪೋಲಾಕ್ ಬರೆದಿದ್ದ ಕೈಪಿಡಿಯನ್ನು ಪ್ರಕಟಿಸಿ ಹಂಚಲು ನೆರವಾದರು. ಹಾಗೇ ಅವನಿಂದ ಗಾಂಧಿಯ ಒಂದು ವ್ಯಕ್ತಿ ಚಿತ್ರವನ್ನೂ ಕೈಪಿಡಿಯನ್ನೂ ಬರೆಸಿ ಮುದ್ರಿಸಿ ಹಂಚಿದರು. ಈ ಎರಡೂ ಕೈಪಿಡಿಗಳಲ್ಲಿ ಹೇಗೆ ಗಾಂಧಿ ನೇತೃತ್ವದಲ್ಲಿ ಹಿಂದೂ–ಮುಸ್ಲಿಂ–ಪಾರ್ಸಿ–ಕ್ರಿಶ್ಚಿಯನ್ನರು ಒಂದೇ ತಾಯಿಯ ಮಕ್ಕಳಂತೆ ಒಂದುಗೂಡಿ ಕಷ್ಟ ಸುಖಗಳನ್ನು ಹಂಚಿಕೊಳ್ಳುತ್ತಿದ್ದಾರೆ ಎಂಬುದನ್ನು ವಿವರಿಸಲಾಗಿತ್ತು. ಪೋಲಾಕ್ ಕೂಡ ತನ್ನ ಭಾಷಣಗಳಲ್ಲಿ ಈ ಅಂಶವನ್ನು ಒತ್ತಿ ಹೇಳುತ್ತಿದ್ದ. ಕೆಲವೆಡೆ ಜನ ಕಣ್ಣೀರಿಟ್ಟು ತನ್ನ

ಮಾತುಗಳನ್ನು ಕೇಳುತ್ತಿದ್ದರು ಎಂದು ಪೋಲಾಕ್ ಗಾಂಧಿಗೆ ಬರೆದ ಪತ್ರವೊಂದರಲ್ಲಿ ತಿಳಿಸುತ್ತಾನೆ. ಹಾಗೇ ಇನ್ನೊಂದು ಪತ್ರದಲ್ಲಿ ಭಾರತದಲ್ಲಿ ತಾನು ಭೇಟಿ ಮಾಡಿದ ಜನರ ಪೈಕಿ ಯಾರೂ ಗಾಂಧಿಯ ವ್ಯಕ್ತಿತ್ವದ ಶ್ರೇಷ್ಠತೆಯ ಹತ್ತಿರವೂ ಬಂದಿಲ್ಲ ಎಂದು ಹೇಳುತ್ತಾ, ಭಾರತವು ಹೀಗಿರುವ ಜಡ ಸ್ಥಿತಿಯಿಂದ ಹೊರಬರಲು ನೂರಾರು ಗಾಂಧಿಗಳು ಬೇಕೇನೋ ಎಂದು ನೊಂದು ನುಡಿದಿದ್ದಾನೆ.

ಗಾಂಧಿಗೆ ಸಿಕ್ಕ ಮೊದಲ 'ಮಹಾತ್ಮ' ಪಟ್ಟ

ಮದ್ರಾಸ್‌ನಿಂದ ೧೯೦೯ ರ ನವೆಂಬರ್‌ನಲ್ಲಿ ಸಣ್ಣ ಹಡಗೊಂದರಲ್ಲಿ ರಂಗೂನ್‌ಗೆ ಹೋದ ಪೋಲಾಕ್‌ಗೆ ಅಲ್ಲಿ ಆತಿಥ್ಯ ನೀಡಿದಾತ ಗಾಂಧಿಯ ಗೆಳೆಯ ಪ್ರಾಣಜೀವನ ಮೆಹ್ತಾ. ಪೊಲಾಕ್, ತಾನು ಹೋದೆಡೆಯಲ್ಲೆಲ್ಲ ಗಾಂಧಿ ಬಗ್ಗೆ ಜನ ಪ್ರೀತಿ-ಗೌರವದಿಂದ ಮಾತಾಡುತ್ತಿದ್ದುದನ್ನೂ, ಗಾಂಧಿಯ ಹೆಸರು ಪರಿಚಯವಿಲ್ಲದೆಡೆ ತಾನು ದ.ಆಫ್ರಿಕಾದ ಕಥೆ ಹೇಳಿ ಪರಿಚಯ ಮಾಡುತ್ತಿರುವುದನ್ನೂ ತಿಳಿಸಿದ. ಅವರಿಬ್ಬರೂ ಹಗಲೂ ರಾತ್ರಿ ಗಾಂಧಿಯ ಬಗ್ಗೆಯೇ ಮಾತಾಡಿ ಖುಷಿಪಟ್ಟರು. ಈ ಮಾತುಕತೆಯ ಮಧ್ಯೆ ಗೋಖಲೆಯಂತಹ ಹಿರಿಯರು ಗಾಂಧಿ ಬಗ್ಗೆ ಆಡಿದ ಪ್ರೀತಿ-ಗೌರವಗಳ ಮಾತುಗಳನ್ನು ಪೊಲಾಕ್ ಮೆಹ್ತಾಗೆ ತಿಳಿಸಿದ. ಇದರ ಪರಿಣಾಮವಾಗಿಯೋ ಎಂಬಂತೆ ಮೆಹತಾ ಮರುದಿನವೇ ಗೋಖಲೆಯವರಿಗೆ ಒಂದು ಪತ್ರ ಬರೆದು, ತಾನು ಬಹಳ ಕಾಲದಿಂದಲೂ ಬಲ್ಲ ಗಾಂಧಿಯ ಗುಣಗಾನ ಮಾಡಿ, ಭಾರತ ದೇಶದ ಸೇವೆ ಮಾಡಬಯಸುವ ಯಾರಾದರೂ ಮೊದಲು ಗಾಂಧಿಯ ಅಧ್ಯಯನ ಮಾಡಬೇಕು ಎಂದು ಸೂಚಿಸುತ್ತಾ ಫೀನಿಕ್ಸ್ ಆಶ್ರಮ ಮತ್ತು ಶಾಲೆಯ ಪ್ರಯೋಗಗಳನ್ನು ಶ್ಲಾಘಿಸಿ ಗಾಂಧಿಯವರನ್ನು 'ಮಹಾತ್ಮ' ಎಂದು ಕರೆದಿದ್ದ. ಜೊತೆಗೆ ಫೀನಿಕ್ಸ್‌ಗೆ ಗಾಂಧಿಯನ್ನು ಅರಿಯಲು ಗೋಖಲೆಯವರು ತಮ್ಮ 'ಸರ್ವೆಂಟ್ಸ್ ಆಫ್ ಇಂಡಿಯಾ' ಸಂಸ್ಥೆಯಿಂದ ಯಾರನ್ನಾದರೂ ಕಳಿಸುವುದಾದರೆ ತಾನು ಅದರ ವೆಚ್ಚವನ್ನು ನಿರ್ವಹಿಸುವುದಾಗಿಯೂ ಹೇಳಿದ್ದ. ಇದಕ್ಕಾಗಿ ತಮಿಳ್ನಾಡಿನ ವಿದ್ವಾಂಸ ಮತ್ತು ವಾಗ್ಮಿ ವಿ.ಎಸ್. ಶ್ರೀನಿವಾಸ ಶಾಸ್ತ್ರಿಗಳ ಹೆಸರನ್ನೂ ಸೂಚಿಸಿದ್ದ.

ಈ ಪತ್ರದಲ್ಲಿನ ನಿಜವಾದ ಐತಿಹಾಸಿಕತೆ ಇರುವುದು ಗಾಂಧಿಯನ್ನು ರಬೀಂದ್ರನಾಥ ಟ್ಯಾಗೋರರು ಮಹಾತ್ಮ ಎಂದು ಸಾರ್ವಜನಿಕವಾಗಿ ಕರೆಯುವ ಹತ್ತು ವರ್ಷಗಳ ಮೊದಲೇ ಅವರ ಅಭಿಮಾನಿ ಗೆಳೆಯನೊಬ್ಬ ಅವರನ್ನು ಹಾಗೆ ಕರೆಯುವಷ್ಟು ಪ್ರಭೆ ಆ ಹೊತ್ತಿಗಾಗಲೇ ಗಾಂಧಿಯವರ ವ್ಯಕ್ತಿತ್ವದ ಸುತ್ತ ಮೂಡಿತ್ತು ಎಂಬ ಸಂಗತಿಯಲ್ಲಿ. ಇದಾದ ನಂತರ ಮತ್ತು ಟ್ಯಾಗೋರರ ಘೋಷಣೆಯ ಮೊದಲು ಗಾಂಧಿ ದ.ಆಫ್ರಿಕಾದಿಂದ ಭಾರತಕ್ಕೆ ಹಿಂದಿರುಗಿ ಗುಜರಾತ್‌ನ ಗೊಂಡಾಲ್ ಎಂಬ ಪಟ್ಟಣಕ್ಕೆ ಭೇಟಿ ನೀಡಿದಾಗ ಆ ಊರಿನ ಜನ ಅವರಿಗೆ 'ಮಹಾತ್ಮ' ಎಂಬ ಅಭಿದಾನ ನೀಡಿದ್ದರು ಎಂಬ ಮಾತೂ ಇದೆ.

ರಂಗೂನ್ ಬಿಟ್ಟ ಪೊಲಾಕ್ ಅಲ್ಲಿಂದ ಕಲ್ಕತ್ತಾ ತಲುಪಿ ಅಲ್ಲಿ ಭೂಪೇಂದ್ರನಾಥ ಬಸು ಮತ್ತು ಸುರೇಂದ್ರನಾಥ ಬ್ಯಾನರ್ಜಿಯವರಂತಹ ಹಿಂದೂ ಸುಧಾರಕರು ಮತ್ತು ಹಲವು ಮುಸ್ಲಿಂ ಗಣ್ಯರು ಹಾಜರಿದ್ದ ಸಭೆಗಳಲ್ಲಿ ಮಾತಾಡಿದರು ಮತ್ತು ತಮ್ಮ

ಕೈಪಿಡಿಗಳನ್ನು ಹಂಚಿದರು. ಇದರ ಪರಿಣಾಮವೆಂದರೆ ಸ್ವಾತಂತ್ರ್ಯ ಹೋರಾಟದ ತೀವ್ರಗಾಮಿ ಗುಂಪಿನಲ್ಲಿದ್ದು ಹಿಂಸಾತ್ಮಕ ಪ್ರತಿಭಟನೆಗಳಲ್ಲಿ ನಂಬಿಕೆ ಇಟ್ಟಿದ್ದ ಅರವಿಂದ ಘೋಷ್ (ಮುಂದೆ ಶ್ರೀ ಅರಬಿಂದೊ ಆದವರು) ತಮ್ಮ 'ಕರ್ಮಯೋಗಿ' ಪತ್ರಿಕೆಯ ಡಿಸೆಂಬರ್ ೧೧ರ ಸಂಚಿಕೆಯಲ್ಲಿ 'ಪಶುಬಲಕ್ಕಿಂತ ಆತ್ಮಬಲ ಶ್ರೇಷ್ಠವೆಂಬ ಭಾರತೀಯ ಪರಂಪರೆಯ ಮೌಲ್ಯವನ್ನು ಸಾರುವ' ಗಾಂಧಿಯವರ ಸತ್ಯಾಗ್ರಹ ಚಳುವಳಿಯನ್ನು ಮೆಚ್ಚುತ್ತಾ 'ದ ಟ್ರಾನ್ಸ್‌ವಾಲ್ ಭಾರತೀಯರು' ಎಂಬ ಲೇಖನವನ್ನು ಬರೆದರು. ನಂತರ ಪೊಲಾಕ್ ಉತ್ತರ ಭಾರತದ ಪ್ರವಾಸ ಮಾಡಿದ. ಬನಾರಸ್‌ನಲ್ಲಿ ಆತ ಮಾಡಿದ ಭಾಷಣಕ್ಕೆ ಮಾಜಿ ಬ್ರಿಟಿಷ್ ಸಮಾಜವಾದಿ ಮತ್ತು ಥಿಯೊಸಫಿ ಆಂದೋಲನದ ರೂವಾರಿ ಶ್ರೀಮತಿ ಆ್ಯನಿ ಬೆಸೆಂಟ್ ಬಂದು ಅಧ್ಯಕ್ಷತೆ ವಹಿಸಿದ್ದಲ್ಲದೆ ಟ್ರಾನ್ಸ್‌ವಾಲ್ ಸತ್ಯಾಗ್ರಹ ನಿಧಿಗೆ ವೈಯಕ್ತಿಕವಾಗಿ ೩೦ ರೂ.ಗಳ ದೇಣಿಗೆ ನೀಡಿ ಭಾರತೀಯರ ಹೋರಾಟದ ಬಗ್ಗೆ ಹೃದಯ ತುಂಬಿ ಮಾತನಾಡಿದರು.

ಅಸಹಾಯಕತೆ ಸೂಚಿಸಿದ ಬ್ರಿಟಿಷ್ ಸಾಮ್ರಾಜ್ಯ ಸರ್ಕಾರ

ಗಾಂಧಿ ಲಂಡನ್‌ನಲ್ಲಿದ್ದಾಗ ಟ್ರಾನ್ಸ್‌ವಾಲ್‌ನಲ್ಲಿ ಸತ್ಯಾಗ್ರಹ ಮುಂದುವರೆದು ಹರಿಲಾಲ್, ರುಸ್ತುಂಜಿ, ತಂಬಿ ನಾಯ್ಡು ಅವರು ಮತ್ತೆ ಮತ್ತೆ ಬಂಧನಗಳಿಗೊಳಗಾಗಿ ಕಠಿಣ ಶಿಕ್ಷೆ ಅನುಭವಿಸುವುದು ಮುಂದುವರೆದಿತ್ತು. ಪ್ರತಿ ಭಾನುವಾರ ಜೊಹಾನ್ಸ್‌ಬರ್ಗ್‌ನ ಹಮೀದಿಯಾ ಮಸೀದಿ ಬಳಿ ಭಾರತೀಯರ ಸಾರ್ವಜನಿಕ ಸಭೆಗಳು ನಡೆದು ಸತ್ಯಾಗ್ರಹಕ್ಕೆ ಬಲ ನೀಡಲಾಗುತ್ತಿತ್ತು. ಡೋಕ್ ಅವರ ಸ್ಫೂರ್ತಿಯುತ ಸಂಪಾದಕೀಯಗಳು, ಗಾಂಧಿಯವರ ಲೇಖನಗಳು ಹಾಗೂ ಲಂಡನ್‌ನಲ್ಲಿ ಅವರು ನಡೆಸಿದ ಸಂವಾದಗಳು, ಮಾಡಿದ ಭಾಷಣಗಳು ಮತ್ತು ಪೊಲಾಕ್‌ರ ವರದಿಗಳೊಂದಿಗೆ 'ಇಂಡಿಯನ್ ಒಪಿನಿಯನ್' ನಿಯಮಿತವಾಗಿ ಪ್ರಕಟವಾಗುತ್ತಾ ಪ್ರತಿಭಟನೆಯ ಕಾವು ಆರದಂತೆ ನೋಡಿಕೊಳ್ಳುತ್ತಿತ್ತು. ಆದರೆ ಅಕ್ಟೋಬರ್ ಕೊನೆಯ ಹೊತ್ತಿಗೆ ಗಾಂಧಿಯವರ ನಿಯೋಗ ವಿಫಲವಾಗಿತ್ತೆಂಬುದು ಸ್ಪಷ್ಟವಾಗತೊಡಗಿತ್ತು. ನವೆಂಬರ್ ೩ರಂದು ಬ್ರಿಟಿಷ್ ಸಾಮ್ರಾಜ್ಯದ ವಿದೇಶಾಂಗ ಕಛೇರಿಯು, ಜ. ಸ್ಮಟ್ಸ್ ಯಾವ ಕಾರಣಕ್ಕೂ ಟ್ರಾನ್ಸ್‌ವಾಲ್‌ನಲ್ಲಿ ವಲಸೆ ಅಥವಾ ಇನ್ನಾವುದೇ ವಿಷಯದಲ್ಲಾಗಲೀ ಏಷಿಯನ್ನರಿಗೆ ಯೂರೋಪಿಯನ್ನರೊಂದಿಗೆ ಸಮಾನತೆಯನ್ನು ಒದಗಿಸಲು ಸಿದ್ಧನಿಲ್ಲವೆಂದೂ, ಟ್ರಾನ್ಸ್‌ವಾಲ್ ಬೋಯರರ ವಸಾಹತುವಾದುದರಿಂದ ಬ್ರಿಟಿಷ್ ಸಾಮ್ರಾಜ್ಯ ಸರ್ಕಾರ ಇನ್ನು ಹೆಚ್ಚೇನನ್ನೂ ಮಾಡಲು ಅಸಾಧ್ಯವಾಗಿದೆ ಎಂದೂ, ತನ್ನ ಅಸಹಾಯಕತೆಯನ್ನು ತಿಳಿಸಿ ಈ ಸಂಬಂಧ ಅಂತಿಮ ಪತ್ರವನ್ನು ಗಾಂಧಿಯವರಿಗೆ ಬರೆಯಿತು.

ಗಾಂಧಿ ಮತ್ತು ಹಬೀಬರು ನಂತರದ ದಿನಗಳಲ್ಲಿ ಅನೇಕ ಸಾರ್ವಜನಿಕ ಸಭೆಗಳಲ್ಲಿ, ಪತ್ರಿಕಾ ಸಮ್ಮೇಳನಗಳಲ್ಲಿ ಮಾತನಾಡಿದರು. ತಮ್ಮ ನಿಲುವು ಮತ್ತು ಪ್ರಯತ್ನಗಳನ್ನು ವಿವರಿಸಿದರು ಮತ್ತು ಟ್ರಾನ್ಸ್‌ವಾಲ್‌ನ ಹೋರಾಟ ಗುರಿ ಮುಟ್ಟುವವರೆಗೂ ಮುಂದುವರೆಯುವುದೆಂದು ಪುನರುಚ್ಚರಿಸಿದರು. ಇದರಿಂದ ಉಂಟಾದ ಪರಿಣಾಮಗಳಲ್ಲಿ ಬಹು ಮುಖ್ಯವಾದವುಗಳೆಂದರೆ ಲಾರ್ಡ್ ಆ್ಯಂಪ್ಟ್‌ಹಿಲ್ ಭಾರತದ ವೈಸ್‌ರಾಯ್ ಲಾರ್ಡ್ ಕರ್ಜನ್‌ಗೆ ಒಂದು ಪತ್ರ ಬರೆದು, ಬ್ರಿಟಿಷ್ ಸಾಮ್ರಾಜ್ಯದ

ಇತಿಹಾಸದಲ್ಲೇ ಉದಾರವಾದಿ ಸರ್ಕಾರವೊಂದು ವರ್ಣಭೇದವನ್ನು ಬೆಂಬಲಿಸಿರುವುದರ ಬಗ್ಗೆ ವಿಷಾದ ವ್ಯಕ್ತಪಡಿಸಿ, ಈ ಬಗ್ಗೆ ಬ್ರಿಟಿಷ್ ಸಂಸತ್ತಿನಲ್ಲಿ ತಾವೊಂದು ನಿಲುವಳಿ ಸೂಚನೆಯೊಂದನ್ನು ಮಂಡಿಸುವುದಾಗಿಯೂ ಅದಕ್ಕೆ ಕರ್ಜನ್ ಬೆಂಬಲ ನೀಡಬೇಕೆಂದೂ ಕೋರಿದುದು ಮತ್ತು ಬ್ರಿಟಿಷ್ ಸರ್ಕಾರದ ಭಿನ್ನಮತೀಯ ಸಚಿವ ಎಫ್.ಬಿ. ಮೇಯರ್, ಗಾಂಧಿ ಗೌರವಾರ್ಥ ಬೀಳ್ಕೊಡುಗೆ ಸಮಾರಂಭವನ್ನು ಏರ್ಪಡಿಸಿದುದು. ಇದರಲ್ಲಿ ಬ್ರಿಟಿಷ್ ಸಂಸತ್ತಿನ ಹಲವು ಸದಸ್ಯರು, ಭಾರತೀಯ ಸಮುದಾಯದ ಹಲವು ಗಣ್ಯರು ಮತ್ತು ಆಗ ಲಂಡನ್‌ನಲ್ಲಿದ್ದ ಮೋತಿಲಾಲ್ ನೆಹರೂರವರೂ ಭಾಗವಹಿಸಿದ್ದರು. ಅಲ್ಲದೆ ಹಲವು ಕ್ರಿಶ್ಚಿಯನ್ ಪ್ರಜೆಗಳು ಗಾಂಧಿಯವರಿಗೆ ಶುಭಾಶಯಗಳನ್ನು ಕಳಿಸಿದ್ದರು.

ಮಕ್ಕಳಿಗೆ ಬರೆದ ಪತ್ರಗಳು

ಲಂಡನ್‌ನಲ್ಲಿದ್ದಾಗ ಗಾಂಧಿ ತಮ್ಮ ಕುಟುಂಬವನ್ನು ಮರೆಯಲಿಲ್ಲ. ಹರಿಲಾಲ್ ಸತ್ಯಾಗ್ರಹದಲ್ಲಿ ತೊಡಗಿದ್ದುದರಿಂದ, ಅವರು ಫೀನಿಕ್ಸ್‌ನಲ್ಲಿ ತಮ್ಮ ಕುಟುಂಬದ ಯೋಗಕ್ಷೇಮದ ಜವಾಬ್ದಾರಿ ವಹಿಸಿದ್ದ ಎರಡನೆಯ ಮಗ ಹದಿಹರೆಯದ ಮಣಿಲಾಲ್‌ಗೆ ತಿಂಗಳಿಗೊಮ್ಮೆಯಾದರೂ ಪತ್ರ ಬರೆದು, ಆತನ ಭವಿಷ್ಯ ಮತ್ತು ಕರ್ತವ್ಯಗಳ ಬಗ್ಗೆ ಮಾರ್ಗದರ್ಶನ ಮಾಡುತ್ತಿದ್ದರು. ವಿಶೇಷವಾಗಿ ಹದಿಹರೆಯದ ಮಕ್ಕಳನ್ನು ಕಾಡುವ ಲೈಂಗಿಕತೆಯ ಬಗ್ಗೆ ಬರೆಯುತ್ತಾ, ಲೈಂಗಿಕತೆ ಸಂತಾನ ವೃದ್ಧಿಗೆ ಮಾತ್ರವೆಂದು ಋಷಿಮುನಿಗಳು ನಂಬಿದುದನ್ನು ಸೂಚಿಸುತ್ತಾ ಸದ್ಯಕ್ಕೆ ಮದುವೆಯ ಬಗ್ಗೆ ಯೋಚಿಸದೆ, ಅವಕಾಶವಾದಷ್ಟು ಶಿಕ್ಷಣ ಪಡೆಯುವ ಮತ್ತು ತೋಟ ತುಡಿಕೆಗಳಲ್ಲಿ ದುಡಿಯುವ ಕಡೆ ಗಮನ ಕೊಡಬೇಕೆಂದು ಒಂದು ಪತ್ರದಲ್ಲಿ ತಿಳಿಸಿದರೆ, ಇನ್ನೊಂದು ಪತ್ರದಲ್ಲಿ ಆತ ಅಸ್ವಸ್ಥರಾಗಿರುವ ಆಲ್ಬರ್ಟ್ ವೆಸ್ಟ್‌ರ ಸೇವೆಯಲ್ಲಿ ತೊಡಗಿರುವುದನ್ನು ಮೆಚ್ಚಿ ಹಿರಿಯರ, ತಂದೆತಾಯಿಗಳ ಸೇವೆಯಲ್ಲೇ ಜೀವನದ ಸಾರ್ಥಕತೆ ಅಡಗಿರುವುದು ಎಂದು ಹೇಳುತ್ತಾರೆ. ಮುಂದುವರೆದು ಅವರು ತರಗತಿಗಳ ಶಿಕ್ಷಣ ದೊರೆಯದ ಬಗ್ಗೆ ಚಿಂತೆ ಬಿಡಬೇಕೆಂದೂ, ನೈತಿಕತೆಯ ದಾರಿ ಬಿಡದವನೆಂದೂ ಹಸಿವಿನ ಸಮಸ್ಯೆ ಎದುರಿಸುವುದಿಲ್ಲವೆಂದೂ, ತಾವು ಬಡವರಾಗಿಯೇ ಉಳಿದು ಫೀನಿಕ್ಸ್ ಆಶ್ರಮವನ್ನು ಮಾದರಿ ಬದುಕಿನ ಮಾದರಿಯಾಗಿ ಬೆಳೆಸುವ ಮೂಲಕ ದೇಶದ ಸೇವೆ ಮಾಡಬೇಕಾಗಿದೆಯೆಂದೂ ಅದಕ್ಕಾಗಿ ವೈದ್ಯ ಅಥವಾ ವಕೀಲನಾಗುವ ಆಸೆ ಬಿಟ್ಟು 'ಬಾಪು ತರಗತಿ'ಯ ವಿದ್ಯಾರ್ಥಿಯಾಗಿರಬೇಕೆಂದೂ ಆಗ್ರಹಿಸುತ್ತಾರೆ. ಇನ್ನೊಂದು ಪತ್ರದಲ್ಲಿ ತಾವು ಆತನ ಬಗ್ಗೆ ಸದಾ ಯೋಚಿಸುವ ತಂದೆಯಾಗಿದ್ದು, ಆತನ ಮೇಲೆ ತಮ್ಮ ನಿರ್ಧಾರಗಳನ್ನು ಹೇರಬಯಸುವ ಕ್ರೂರಿಯಲ್ಲವೆಂದೂ ಬರೆಯುತ್ತಾರೆ. ಇನ್ನು ತಮ್ಮ ಮೂರನೇ ಮಗ ಬಾಲಕ ರಾಮದಾಸ್‌ನಿಗೆ ಬರೆದ ಪತ್ರವೊಂದರಲ್ಲಿ 'ನನಗೆ ಇಲ್ಲಿ ಏನೂ ಇಷ್ಟವಾಗಿಲ್ಲವಾದ್ದರಿಂದ ನಾನು ನಿನಗೇನೂ ತರದಿದ್ದರೆ ಕೋಪ ಮಾಡಿಕೊಳ್ಳಬೇಡ' ಎಂಬ ಮುನ್ನೆಚ್ಚರಿಕೆ ನೀಡುತ್ತಾ, ತಾವು ಬಂದೊಡನೆ ಸೆರೆಮನೆಗೆ ಹೊರಟರೆ ಬೇಸರ ಮಾಡಿಕೊಳ್ಳಕೂಡದು, ಬದಲಿಗೆ ಆತನ ಹಿರಿಯಣ್ಣ ಹರಿಲಾಲನಿರುವೆಡೆಗೆ ತಾವು ಹೋಗುತ್ತಿರುವುದರಿಂದ ಖುಷಿಯಾಗಬೇಕೆಂದೂ ಆತನನ್ನು ಮುಂದಿನ ದಿನಗಳಿಗಾಗಿ ಮಾನಸಿಕವಾಗಿ ಸಿದ್ಧಪಡಿಸುತ್ತಾರೆ.

ಮೌದ್‌ಳ ಮುಗ್ಧ ಪ್ರೇಮ ಪ್ರಸಂಗ

ಅಂತಿಮವಾಗಿ ಗಾಂಧಿ ಹಾಜಿ ಹಬೀಬರೊಂದಿಗೆ ದ.ಆಫ್ರಿಕಾಕ್ಕೆ ಹೊರಟು ನಿಂತಾಗ, ಅವರಿಗೆ, ಅಲ್ಲಿಯವರೆಗೆ ಗೊತ್ತಿಲ್ಲದಂತೆಯೇ ಬೆಳೆದಿದ್ದ ಒಂದು ವಿಶಿಷ್ಟ ಭಾವನಾತ್ಮಕ ಸಂಬಂಧದ ಬಲೆಯಿಂದ ಬಿಡಿಸಿಕೊಳ್ಳಲು ಸ್ವಲ್ಪ ಕಷ್ಟಪಡಬೇಕಾಯಿತು. ತಮ್ಮ ಪತ್ರವ್ಯವಹಾರಗಳನ್ನು ನೋಡಿಕೊಳ್ಳುವ ಕಾರ್ಯದರ್ಶಿಯಾಗಿದ್ದ ಹೆನ್ರಿ ಪೋಲಾಕ್‌ನ ತಂಗಿ ಮೌದ್, ಈ ನಾಲ್ಕು ತಿಂಗಳಲ್ಲಿ ಗಾಂಧಿಯ ಕರ್ತವ್ಯ ಪ್ರಜ್ಞೆ, ದಣಿವರಿಯದ ಕಾಯಕ ಶ್ರದ್ಧೆ ಮತ್ತು ಸದ್ವರ್ತನೆಗಳಿಂದ ಗಾಂಧಿಯವರನ್ನು ಎಷ್ಟು ಹಚ್ಚಿಕೊಂಡಿದ್ದಳೆಂದರೆ, ಅವಳು ಗಾಂಧಿ ಎಲ್ಲಿರುವರೋ ತಾನು ಅಲ್ಲಿರಬಯಸುವುದಾಗಿ ಹೇಳುತ್ತಾ ಗಾಂಧಿಯೊಂದಿಗೆ ದ.ಆಫ್ರಿಕಾಕ್ಕೆ ಹೊರಡಬಯಸಿದಳು. ಫೀನಿಕ್ಸ್‌ನಲ್ಲಿನ ಬಡತನ, ಕನಿಷ್ಠ ನಾಗರೀಕ ಸೌಲಭ್ಯಗಳ ಕೊರತೆ, ಭಯಾನಕ ಕ್ರಿಮಿಕೀಟ, ಹಾವುಗಳ ಕಾಟ ಹೀಗೆ ಮಿಲಿ ಪೋಲಾಕ್, ಗಾಂಧಿ ಕುಟುಂಬದೊಡನೆಯ ಬದುಕಿನ ಕಷ್ಟಕೋಟಲೆಗಳನ್ನು ವಿವರಿಸಿದರೂ, ಮೌದ್ ತನ್ನ ಹಠ ಬಿಡದಾಗ, ಆಕೆಯ ಸೋದರ ಹೆನ್ರಿ, ಭಾರತದಿಂದ ಒಂದು ಪತ್ರ ಬರೆದು, ಗಾಂಧಿ ಸೇವೆಗೆ ದ.ಆಫ್ರಿಕಾದಲ್ಲಿ ಬಹಳ ಜನರಿರುವುದರಿಂದ ಆಕೆಗೆ ಗಾಂಧಿ ಲಭ್ಯವಾಗುವುದು ಅಪರೂಪಕ್ಕೆ ಮಾತ್ರವೆಂದೂ, ಬದಲಿಗೆ ಲಂಡನ್‌ನಲ್ಲೇ ರೀಚ್ ಅವರಿಗೆ ಸಹಾಯಕಿಯಾಗಿ ಗಾಂಧಿ ಕೆಲಸಕ್ಕೆ ನೆರವಾಗುವುದು ಉತ್ತಮ ಆಯ್ಕೆಯೆಂದೂ ನಿರ್ಣಾಯಕವಾಗಿ ಬರೆದು ಅವಳ ಹಠಕ್ಕೆ ಅಂತ್ಯ ಹಾಡಬೇಕಾಯಿತು. (ತಮ್ಮನ್ನು ಬೀಳ್ಕೊಡಲು ಲಂಡನ್ ರೈಲ್ವೇ ನಿಲ್ದಾಣಕ್ಕೆ ಬಂದಿದ್ದ ಮೌದ್, ತಾವು ಚಾಚಿದ ಕೈಯನ್ನು ಕುಲುಕಲು ನಿರಾಕರಿಸಿ ತನ್ನ ಕೆನ್ನೆಗೆ ಮುತ್ತು ನೀಡಬೇಕೆಂಬ ನಿರೀಕ್ಷೆಯಲ್ಲಿದ್ದಂತೆ ಕಂಡು, ತಮಗೆ ಅದಕ್ಕೆ ಹಿಂಜರಿತವೇನಿಲ್ಲದಿದ್ದರೂ ಸುತ್ತಲಿದ್ದ ಜನ ತಪ್ಪು ತಿಳಿಯುವರೆಂದು ಸುಮ್ಮನಾಗಿದ್ದಾಗಿ ಗಾಂಧಿ ಪೋಲಾಕ್‌ಗೆ ಬರೆದ ಪತ್ರವೊಂದರಲ್ಲಿ ತಿಳಿಸಿದ್ದಾರೆ). ಆದರೆ ಪೋಲಾಕ್ ಲೈಂಗಿಕತೆಯ ಸೋಂಕಿಲ್ಲದ ಈ ಸಂಬಂಧದ ಸಂಕೀರ್ಣತೆಯನ್ನು ಅರಿತವನಾಗಿ ಮತ್ತು ಗಾಂಧಿಯ ದೀರ್ಘಕಾಲಿಕ ಸಹಚರನಾಗಿ ತಾನು ಮುಂದೆ ಬರೆದ ತನ್ನ ನೆನಪುಗಳಲ್ಲಿ, 'ಗಾಂಧಿ ಹೊರನೋಟಕ್ಕೆ ಅಷ್ಟು ಸುಂದರ ವ್ಯಕ್ತಿಯಾಗಿಲ್ಲದಿದ್ದರೂ ತಮ್ಮ ವ್ಯಕ್ತಿತ್ವದ ಆಂತರಿಕ ಸೌಂದರ್ಯದಿಂದ ತಮ್ಮ ಜೀವನದಲ್ಲಿ ಸಾಕಷ್ಟು ಮಹಿಳೆಯರಲ್ಲಿ–ಐರೋಪ್ಯ ಮತ್ತು ಭಾರತೀಯ ಎರಡೂ– ಇಂತಹ ಆಕರ್ಷಣೆಯನ್ನು ಉಂಟುಮಾಡಿದ್ದರು' ಎಂದು ಬರೆದಿದ್ದಾನೆ.

ಗಾಂಧಿಯನ್ನು ಮುತ್ತಿದ ಹೊಸ ಆಲೋಚನೆ–ಹೊಳಹುಗಳು

ನಾಲ್ಕು ತಿಂಗಳುಗಳ ಈ ಲಂಡನ್ ಪ್ರವಾಸ ತನ್ನ ಮೂಲ ಉದ್ದೇಶದ ದೃಷ್ಟಿಯಿಂದ ವಿಫಲವಾಗಿದ್ದರೂ, ಗಾಂಧಿ ನಾಲ್ಕು ತಿಂಗಳುಗಳಲ್ಲಿ ಭೇಟಿ ಮಾಡಿದ ಜನರ ವೈವಿಧ್ಯ, ಅವರೊಂದಿಗೆ–ವಿಶೇಷವಾಗಿ ಹಿಂಸೆ–ಹತ್ಯೆಗಳ ಮೂಲಕ ದೇಶದ ಬಿಡುಗಡೆಗಾಗಿ ತಹತಹಿಸುತ್ತಿದ್ದ ಯುವಕರೊಂದಿಗೆ–ನಡೆಸಿದ ಸಂವಾದಗಳು ಮತ್ತು ಆ ಮೂಲಕ ಅವರಿಗೆ ಮನವರಿಕೆಯಾದ ಹೊಸ ನಿಜಗಳು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಬಿಳಿಯರ ಪ್ರಭುತ್ವ ತಮ್ಮ ನಿಯೋಗದ ಉದ್ದೇಶವನ್ನು ವಿಫಲಗೊಳಿಸಿದ ರೀತಿಯಿಂದ ಹುಟ್ಟಿದ ದಟ್ಟ ವಿಷಾದ ಅವರ ಬದುಕಿನ ಹೊಸ ದಿಗಂತಗಳನ್ನೇ ತೆರೆದವೆಂದು ಹೇಳಬೇಕು. ಜೊತೆಗೆ

ಟಾಲ್‌ಸ್ಟಾಯ್‌ರೊಂದಿಗೆ ಲಭಿಸಿದ್ದ ಸಂಪರ್ಕ ಮತ್ತು ಅವರಿಂದ ತಮ್ಮ ಹೋರಾಟದ ಹೊಸ ಹಾದಿಗೆ ದೊರೆತಿದ್ದ ಸಮರ್ಥನೆ ಅವರಲ್ಲಿ ಹೊಸ ಭರವಸೆಯನ್ನು ಹುಟ್ಟಿಸಿತ್ತೆಂದೂ ಹೇಳಬಹುದು. ಹೀಗಾಗಿ ಹಲವು ಹೊಸ ಹೊಳಹುಗಳು ಮತ್ತು ಆಲೋಚನೆಗಳಿಂದ ತುಂಬಿ ತುಳುಕುತ್ತಿದ್ದ ಕಾತರದ ಮನಸ್ಸಿನೊಂದಿಗೆ ಅವರು ೧೯೦೯ ರ ನವೆಂಬರ್ ೧೧ರಂದು ಹಬೀಬರೊಂದಿಗೆ ಕೇಪ್‌ಟೌನ್‌ಗೆ ಹೊರಟಿದ್ದ ಎಸ್.ಎಸ್. ಕಿಲ್ಡೊನನ್ ಕ್ಯಾಸಲ್ ಎಂಬ ಹಡಗನ್ನು ಹತ್ತಿ ಲಂಡನ್‌ನಿಂದ ವಾಪಸ್ ಹೊರಟರು.

ಇದಾದ ಒಂದು ವಾರದಲ್ಲೇ ಲಂಡನ್‌ನಲ್ಲಿನ ಬ್ರಿಟಿಷ್ ಪ್ರಭುತ್ವ ಕೂಡ ಗಾಂಧಿ ನಿಯೋಗ ಯಾವ ಉದ್ದೇಶಕ್ಕಾಗಿ ಲಂಡನ್‌ಗೆ ಬಂದಿತ್ತೋ ಆ ಉದ್ದೇಶ ಈಡೇರಲಿಲ್ಲದಿರುವುದನ್ನು ಅಧಿಕೃತವಾಗಿ ಘೋಷಿಸಿತು. ೧೯೦೯ ರ ನವೆಂಬರ್ ೧೭ರಂದು ಭಾರತಕ್ಕೆ ಸಂಬಂಧಿಸಿದ ವ್ಯವಹಾರಗಳ ಕಾರ್ಯದರ್ಶಿ ಲಾರ್ಡ್ ಕ್ರ್ಯೂ, ಬ್ರಿಟಿಷ್ ಸಂಸತ್ತಿನ ಮೇಲ್ಮನೆಯಲ್ಲಿ 'ಭಾರತೀಯರ ಪರವಾಗಿ ಬಂದಿದ್ದ ವಕ್ತಾರರು ತಮ್ಮ ವಾದವನ್ನು ಬಹು ಕೌಶಲ್ಯದಿಂದ ಮತ್ತು ನ್ಯಾಯಪರವಾಗಿಯೇ ಮಂಡಿಸಿದರು. ದ.ಆಫ್ರಿಕಾದ ಸರ್ಕಾರ ಕೂಡ ಅವರೆಲ್ಲ ಮುಖ್ಯ ಬೇಡಿಕೆಗಳನ್ನು ಒಪ್ಪಲು ಸಿದ್ಧವಿತ್ತು. ಆದರೆ ಟ್ರಾನ್ಸ್‌ವಾಲ್‌ಗೆ ಏಷಿಯನ್ನರ ಪ್ರವೇಶವನ್ನು ಪ್ರತಿಬಂಧಿಸಿರುವ ಕಾನೂನಿನ ಹಿಂದಿನ (ವರ್ಣಭೇದದ) ತಾತ್ವಿಕ ಪ್ರಶ್ನೆ ಪರಿಹಾರವಾಗದೆ ಹಾಗೇ ಉಳಿಯಿತು. ಸ್ವಯಮಾಡಳಿತವುಳ್ಳ ಸರ್ಕಾರದ ನೀತಿಯ ಪ್ರಶ್ನೆಯಲ್ಲಿ ನಾವು ಮಧ್ಯೆ ಪ್ರವೇಶಿಸುವುದು ಉಚಿತವಲ್ಲ' ಎಂದು ಪ್ರಕಟಿಸಿದರು.

■

೨೮

'ಹಿಂದ್ ಸ್ವರಾಜ್'ನ ಉದಯ

ಗಾಂಧಿ ಹಡಗು ಹತ್ತಿದ ಎರಡು ದಿನಗಳಲ್ಲಿ ಅವರು ಕಳೆದ ನಾಲ್ಕು ತಿಂಗಳ ಅವಧಿಯಲ್ಲಿ ತಮ್ಮ ಮನಸ್ಸಿನಲ್ಲಿ ಭೋರ್ಗರೆಯುತ್ತಿದ್ದ ಹಲವು ವಿಚಾರಗಳನ್ನು ಒಂದು ದೃಷ್ಟಿಕೇಂದ್ರದೊಂದಿಗೆ ಮತ್ತು ಶಿಸ್ತಿನೊಂದಿಗೆ ಬರಹಕ್ಕಿಳಿಸಬೇಕೆಂಬ ಒತ್ತಡವೊಂದು ಉಂಟಾಯಿತು. ಈವರೆಗೆ ಟ್ರಾನ್ಸ್‌ವಾಲ್‌ಗೆ ಸೀಮಿತವಾಗಿದ್ದ ಅವರ ಚಿಂತನೆ, ತಮ್ಮ ಕಡೆಯ ಮನವಿ, ಬೇಡಿಕೆ ಮತ್ತು ಸಂಧಾನಗಳ ವಿಷಯದಲ್ಲಿ ಲಂಡನ್‌ನಲ್ಲಿನ ಬ್ರಿಟಿಷ್ ಸಾಮ್ರಾಜ್ಯದ ಅಧಿಪತಿಗಳು ತೋರಿದ ಔದಾಸೀನ್ಯ ಮತ್ತು ಅಸಹಕಾರಗಳ ಪರಿಣಾಮವಾಗಿ ಭಾರತಕ್ಕೆ ವಿಸ್ತರಿಸಿ, ಅದರ ಪರಿಣಾಮವಾಗಿ ಜಗತ್ತಿನ ವರ್ತಮಾನದ ಸ್ಥಿತಿಗತಿಗಳವರೆಗೆ ಹಬ್ಬಿತು. ತಮ್ಮ ಬಗ್ಗೆ ಸಹಾನುಭೂತಿ ಹೊಂದಿ ತಮ್ಮ ಸಂಧಾನಗಳಿಗೆ ಮಧ್ಯಸ್ಥಿಕೆದಾರರಾಗಿದ್ದ ಲಾರ್ಡ್ ಆ್ಯಂಪ್ಟ್‌ಹಿಲ್‌ರಿಗೆ ಅಕ್ಟೋಬರ್ ೯ರಂದು ಬರೆದ ಒಂದು ಪತ್ರದಲ್ಲಿ, ಟ್ರಾನ್ಸ್‌ವಾಲ್‌ನ ಬ್ರಿಟಿಷ್ ಸಾಮ್ರಾಜ್ಯದ ಪ್ರಜೆಗಳೇ ಆದ ಭಾರತೀಯರ ವಿಷಯದಲ್ಲಿ ಬ್ರಿಟಿಷ್ ಸಾಮ್ರಾಜ್ಯ ನ್ಯಾಯ ಒದಗಿಸುವಲ್ಲಿ ತೋರಿಸುತ್ತಿರುವ ನಿಷ್ಕ್ರಿಯತೆ, ಭಾರತದ ಜನರ ಸಹನೆಯನ್ನು ಕೆಣಕುತ್ತಿದ್ದು, ಅದರ ಪರಿಣಾಮವಾಗಿ ಬ್ರಿಟಿಷ್ ಪ್ರಭುತ್ವ ಭಾರತದಲ್ಲಿ ಕಷ್ಟಗಳನ್ನು ಎದುರಿಸಬೇಕಾಗುತ್ತದೆಂದೂ, ಅದರ ಸೂಚನೆಗಳು ಈಗಾಗಲೇ ಭಾರತೀಯ ಯುವಜನತೆಯ ಭಯೋತ್ಪಾದನಾ ಕೃತ್ಯಗಳ ಮೂಲಕ ಕಂಡುಬರುತ್ತಿವೆಯೆಂದೂ ವಿವರಿಸಿದ್ದರು. ಬ್ರಿಟಿಷ್ ಸಾಮ್ರಾಜ್ಯದ ಈ ಮನೋಭಾವಕ್ಕೆ ಅದರ ಬಂಡವಾಳಶಾಹಿ ವ್ಯಾಪಾರಿ ಹಿತಾಸಕ್ತಿಗಳೇ ಕಾರಣವಾಗಿದ್ದು, ಆ ಹಿತಾಸಕ್ತಿಗಳೇ ಬ್ರಿಟಿಷ್ ಸಮಾಜದಲ್ಲಿ ಪಾರಂಪರಿಕ ನೈತಿಕತೆಯನ್ನು ಹಾಳುಗೆಡಹುತ್ತಿರುವುದು ಎಂದು ತಿಳಿಸಿದ್ದರು. ತಮ್ಮ ವಿಶ್ಲೇಷಣೆಯನ್ನು ಮುಂದುವರೆಸಿದ್ದ ಅವರು, ನಿರ್ದಿಷ್ಟವಾಗಿ ಬ್ರಿಟನ್ ಮತ್ತು ಸಾರ್ವತ್ರಿಕವಾಗಿ ಯೂರೋಪ್ ಕ್ರಿಸ್ತನ ಸ್ಫೂರ್ತಿಯನ್ನು ಮರೆತು, ತನ್ನ ಪುರಾತನ ನಾಗರೀಕತೆಯನ್ನು ತ್ಯಜಿಸಿ, ಯಂತ್ರಚಾಲಿತ ಆಧುನಿಕ ನಾಗರೀಕತೆಗೆ ಒಲಿದಿದೆ. ಆತ್ಮಸುಖಕ್ಕಿಂತ ದೇಹ ಸುಖಕ್ಕೆ ಪ್ರಾಮುಖ್ಯತೆ ನೀಡಿ, ಅದು ಈ ಹೊಸ ವ್ಯವಸ್ಥೆಯ ಉಳಿವಿಗೆ ಬೇಕಾದ ಬಂಡವಾಳಕ್ಕಾಗಿ ಅನ್ಯ ದೇಶಗಳನ್ನು ಆಕ್ರಮಿಸಿಕೊಂಡು ಅನ್ಯ ಜನಾಂಗಗಳ ಮೌಲ್ಯಗಳು, ಜೀವನ ದೃಷ್ಟಿ, ಜೀವನ ಕ್ರಮಗಳನ್ನು ದಮನ ಮಾಡತೊಡಗಿವೆ ಎಂದು ಅವರು ತೀರ್ಮಾನಿಸಿದ್ದರು. ಇದರ ಪರಿಣಾಮವಾಗಿ ಭಾರತದ ಗ್ರಾಮ ವ್ಯವಸ್ಥೆ ನಾಶವಾಗಿ ಅಪಾಯಕಾರಿಯಾದ ಕಲ್ಕತ್ತಾ, ಬಾಂಬೆಯಂತಹ ನಗರಗಳು ಸೃಷ್ಟಿಯಾಗುತ್ತಿವೆ ಎಂದವರು ಸೂಚಿಸಿದ್ದರು.

ಆಧುನಿಕ ನಾಗರೀಕತೆ ಎಂಬ ಬಂಧನ

ಈ ದೃಷ್ಟಿಯಿಂದ ಗಾಂಧಿಗೆ ರೈಲು, ಟೆಲಿಗ್ರಾಂ, ಟೆಲಿಫೋನ್ ಮುಂತಾದ ಆಧುನಿಕ ಸಾಧನ ಸಲಕರಣೆಗಳು ಮತ್ತು ಇಂಗ್ಲಿಷ್ ಶಿಕ್ಷಣ, ವಕೀಲಿಕೆಯನ್ನಾಧರಿಸಿದ ನ್ಯಾಯಾಲಯ ವ್ಯವಸ್ಥೆಗಳು ವಿದೇಶಿ ಆಕ್ರಮಣವನ್ನು ಪೋಷಿಸಿದ ಮತ್ತು ಪ್ರಜೆಗಳ ಅನುಕೂಲದ ಹೆಸರಿನಲ್ಲಿ ವಸಾಹತುಶಾಹಿ ಸಾಮ್ರಾಜ್ಯವನ್ನು ಭದ್ರವಾಗಿ ರೂಪಿಸಿ ಕಾಯ್ದುಕೊಳ್ಳಲು ಅಗತ್ಯವಾದ ಸಾಧನ–ಮಾರ್ಗಗಳಾಗಿ ಕಂಡಿದ್ದವು. ಹಾಗೇ ಹೊಸ ಹೊಸ ಔಷಧಿಗಳ ಅನ್ವೇಷಣೆ ಹೊಸ ಹೊಸ ರೋಗಗಳ ಬಾಗಿಲು ತೆರೆಯುತ್ತಿದ್ದವು. ಅವರ ಈ ತರ್ಕವನ್ನು ಅರ್ಥಮಾಡಿಕೊಳ್ಳಲು ಅವರು ನೀಡುವ ಒಂದು ಉದಾಹರಣೆಯನ್ನು ಪರಿಶೀಲಿಸಬೇಕು. ಆಧುನಿಕ ವೈದ್ಯಪದ್ಧತಿ ಲೈಂಗಿಕ ರೋಗಗಳಿಗೆ ಔಷಧಿಗಳನ್ನು ಕಂಡು ಹಿಡಿಯದಿದ್ದರೆ, ಮನುಷ್ಯ ತನ್ನ ಲೈಂಗಿಕತೆಯನ್ನು ಹತೋಟಿಯಲ್ಲಿಟ್ಟುಕೊಂಡು ತನ್ನ ದೇಹಾರೋಗ್ಯದ ಬಗೆಗಿನ ತನ್ನ ಪಾರಂಪರಿಕ ಸಮಗ್ರ ದೃಷ್ಟಿಕೋನವನ್ನು ಕಾಪಾಡಿಕೊಂಡು ತನ್ನ ಮಿತಿಗಳಲ್ಲಿ ತಾನಿರುತ್ತಿದ್ದ. ಹೊಸ ಸುಖ ಹಾಗೂ ಭೋಗ ಸಾಧನಗಳ ಕಡೆ ಗಮನ ಕೊಡುತ್ತಿರಲಿಲ್ಲ. ಹೀಗೆ ಆಧುನಿಕ ನಾಗರೀಕತೆ ಎಂಬುದು ಮಾನವತೆಯನ್ನು ಬಂಧಿಸುವ, ಹಿಂಸಿಸುವ ಚಕ್ರವ್ಯೂಹವಾಗಿದೆ. ಇದಕ್ಕೆ ಪರಿಹಾರವೆಂದರೆ ಬ್ರಿಟನ್ ಸೇರಿದಂತೆ ಯೂರೋಪ್ ಆಧುನಿಕ ನಾಗರೀಕತೆಯ ಹಾದಿಯನ್ನು ತ್ಯಜಿಸಿ ಕ್ರಿಸ್ತನ ಸ್ಫೂರ್ತಿಯ ಬದುಕಿಗೆ ಹಿಂದಿರುಗುವುದು.

ಗಾಂಧಿ ಇಷ್ಟೆಲ್ಲ–ಸೂಕ್ಷ್ಮವಾಗಿ–ಯೋಚಿಸಲು ಮುಖ್ಯವಾಗಿ ಲಂಡನ್‌ನಲ್ಲಿನ ಇನ್ನೂ ಎರಡು ಘಟನೆಗಳೂ ಕಾರಣವಾಗಿದ್ದವು. ಒಂದು, ಗಾಂಧಿ ಲಂಡನ್‌ನಲ್ಲಿದ್ದಾಗ ಜಿ.ಕೆ. ಚೆಸ್ಟರ್‌ಟನ್ ಎಂಬ ರಾಜಕೀಯ ವಿಶ್ಲೇಷಕ, ಸೆಪ್ಟೆಂಬರ್ ಮೂರನೇ ವಾರದಲ್ಲಿ ಇಲ್ಲಸ್ಟ್ರೇಟೆಡ್ ಲಂಡನ್ ನ್ಯೂಸ್ ಎಂಬ ಪತ್ರಿಕೆಯಲ್ಲಿ ಬರೆದ ಅಂಕಣದಲ್ಲಿ, ಭಾರತದಲ್ಲಿ ಹೆಚ್ಚುತ್ತಿರುವ ರಾಷ್ಟ್ರೀಯತೆಯ ಕೂಗನ್ನು ಅಪಹಾಸ್ಯ ಮಾಡಿ ಬರೆದಿದ್ದ ಲೇಖನ. ಈ ಲೇಖನದಲ್ಲಿ ಚೆಸ್ಟರ್‌ಟನ್ ಭಾರತದಲ್ಲಿ ಕೇಳಿ ಬರುತ್ತಿರುವ ರಾಷ್ಟ್ರೀಯತೆಯ ಕೂಗು ಭಾರತೀಯವೂ ಅಲ್ಲ, ರಾಷ್ಟ್ರೀಯವೂ ಅಲ್ಲ ಎಂದು ಹೇಳಿ ಅದಕ್ಕೆ ಕಾರಣವನ್ನೂ ನೀಡಿದ್ದ. ಆಕ್ರಮಿತ ದೇಶವೊಂದರ ಜನ ಆಕ್ರಮಣಕಾರರು ತಮ್ಮ ಆಕ್ರಮಣದ ಸಂರಕ್ಷಣೆಗಾಗಿ ರೂಪಿಸಿಕೊಂಡಿರುವ ಎಲ್ಲ ಅಧಿಕಾರ ಸ್ಥಾನಗಳನ್ನೂ, ರಾಜ್ಯ ವ್ಯವಸ್ಥೆಯ ಎಲ್ಲ ಸಾಧನ–ಸಲಕರಣೆಗಳನ್ನೂ ತನಗೆ ಒಪ್ಪಿಸಿಹೋಗುವಂತೆ ಆಗ್ರಹಿಸುವ ಪರಿ ವಿಪರ್ಯಾಸಕರ ಎಂದು ಟೀಕಿಸಿದ್ದ.

ಈ ಲೇಖನ ಮತ್ತು ಅದರಲ್ಲಿನ ಟೀಕೆ ಎರಡು ದೃಷ್ಟಿಗಳಿಂದ ಗಾಂಧಿಯವರ ಕುತೂಹಲ ಕೆರಳಿಸಿತ್ತು. ಚೆಸ್ಟರ್‌ಟನ್ ಭಾರತದ ರಾಷ್ಟ್ರೀಯವಾದಿಗಳ ಬೇಡಿಕೆಗಳ ಸ್ವರೂಪವನ್ನು ಪರಿಚಯ ಮಾಡಿಕೊಂಡಿದ್ದುದು, ಆ ಲೇಖನವೇ ಸೂಚಿಸುತ್ತಿದ್ದಂತೆ, ಗಾಂಧಿ ಇಷ್ಟಪಡದಿದ್ದ ಧಿಂಗ್ರಾ, ಸಾವರ್ಕರ್ ಮುಂತಾದ ಉಗ್ರಗಾಮಿ ತಂಡದ 'ಗುರು'ವಾಗಿದ್ದ ಶ್ಯಾಮ್‌ಜಿ ಕೃಷ್ಣವರ್ಮ ಸಂಪಾದಿಸುತ್ತಿದ್ದ 'ಇಂಡಿಯನ್ ಸೋಶಿಯಾಲಜಿಸ್ಟ್' ಪತ್ರಿಕೆಯ ಮೂಲಕ ಎಂಬುದು ಒಂದು ಅಂಶವಾಗಿದ್ದರೆ, ಭಾರತದ ಬಿಡುಗಡೆಯ ಆಂದೋಲನ ಅಥವಾ ಪರ್ಯಾಯ ರಾಷ್ಟ್ರೀಯತೆ ಯಾವ

ಸಂಗತಿಗಳನ್ನು ಮುನ್ನೆಲೆಗೆ ತಂದು ತನ್ನ ವಾದವನ್ನು ಮಂಡಿಸಬೇಕು ಎಂಬ ಯೋಚನೆಯನ್ನು ಅವರಲ್ಲಿ ಪ್ರೇರೇಪಿಸುವಂತಾಗಿದ್ದು ಇನ್ನೊಂದು ಅಂಶವಾಗಿತ್ತು. ಇದು ಬ್ರಿಟಿಷರು ಭಾರತವನ್ನು ಆಕ್ರಮಿಸಿಕೊಳ್ಳಲು ಕಾರಣಗಳೇನು, ಅದಕ್ಕಾಗಿ ಅವರು ಬಳಸಿದ ಆಯುಧಗಳಾವುವು, ಬ್ರಿಟಿಷರ ಆಕ್ರಮಣದ ಮುನ್ನ ಭಾರತ ಹೇಗಿತ್ತು, ಯಾವ ಮೌಲ್ಯಗಳನ್ನು, ಬದುಕಿನ ಮಾದರಿಗಳನ್ನು ನಂಬಿ ಅದು ಬಾಳುತ್ತಿತ್ತು ಇತ್ಯಾದಿ ಸಂಗತಿಗಳ ಬಗ್ಗೆ ದೀರ್ಘವಾಗಿ ಆಲೋಚಿಸಲು ಕಾರಣವಾಯಿತು. ಹೊಸ ಭಾರತಕ್ಕೆ ತಕ್ಕ ರಾಷ್ಟ್ರೀಯತೆಯ ಹೊಸ ಎರಕವೊಂದನ್ನು ಅವರು ರೂಪಿಸಲೂ ಪ್ರೇರಣೆ ಒದಗಿಸಿತು.

ಈ ದಿಕ್ಕಿನ ಆಲೋಚನೆಯಲ್ಲಿದ್ದಾಗಲೇ ಅಕ್ಟೋಬರ್ ಮೊದಲ ವಾರದಲ್ಲಿ ಲಂಡನ್‌ನ ಗುಜರಾತಿಗಳು ಗುಜರಾತ್‌ನ ರಾಜಕೋಟೆಯಲ್ಲಿ ಆಯೋಜಿಸಿದ್ದ ಮೂರನೇ ಗುಜರಾತಿ ಸಾಹಿತ್ಯ ಸಮ್ಮೇಳನಕ್ಕೆ ಬೆಂಬಲವಾಗಿ ಏರ್ಪಡಿಸಿದ್ದ ಗುಜರಾತಿ ಸಾಹಿತ್ಯ ಸಮ್ಮೇಳನವೊಂದರಲ್ಲಿ ಮಾತಾಡಲು ಗಾಂಧಿಯವರನ್ನು ಆಹ್ವಾನಿಸಿದರು. ಆ ಸಮ್ಮೇಳನದಲ್ಲಿ ಗಾಂಧಿ, ಭಾರತೀಯರು ತಮ್ಮ ಮಾತೃಭಾಷೆಗಳನ್ನು ಮರೆತಿರುವುದೂ ಭಾರತದ ಗುಲಾಮಗಿರಿಗೆ ಕಾರಣವಾಗಿದ್ದು, ಮಾತೃಭಾಷೆಯನ್ನು ಕೈಬಿಡುವುದೆಂದರೆ ನಮ್ಮ ಬೇರುಗಳನ್ನೇ ಕಳೆದುಕೊಂಡಂತೆ ಎಂದರು. ದ.ಆಫ್ರಿಕಾದಲ್ಲಿ ಬೋಯರರು ಗಟ್ಟಿಯಾಗಿ ಬೇರೂರಿರಲು, ತಮ್ಮದೇ ಸ್ವರಾಜ್ಯ ಸ್ಥಾಪಿಸಿಕೊಂಡಿರಲು, ಅವರು ಮತ್ತು ಅವರ ಮಕ್ಕಳು ಇಂಗ್ಲಿಷ್‌ನ್ನು ಲೆಕ್ಕಿಸದೆ ತಮ್ಮ ಮಾತೃಭಾಷೆ ಡಚ್ ಅನ್ನು ಬಳಸುತ್ತಿರುವುದು ಎಂದು ವಿವರಿಸಿದ ಅವರು, ನಾನು ಭಾರತೀಯ ಎಂಬ ನನ್ನ ಹೆಮ್ಮೆ ನಾನು ಗುಜರಾತಿ ಎಂಬ ಹೆಮ್ಮೆಯಿಂದ ಮೂಡಿರಬೇಕು ಎಂದರು. ಅಲ್ಲದೆ, ಭಾರತದಲ್ಲಿ ನಿಜವಾದ ರಾಷ್ಟ್ರೀಯತೆಯ ಅಲೆಗಳನ್ನು ಎಬ್ಬಿಸಲು ಗುಜರಾತಿ ಸಮ್ಮೇಳನದಂತೆಯೇ ಬಂಗಾಳಿ, ಮರಾಠಿ, ಉರ್ದು ಸಾಹಿತ್ಯ ಸಮ್ಮೇಳನಗಳು ನಡೆಯಬೇಕೆಂದು ಕರೆಕೊಟ್ಟರು.

ಇದರ ಬೆನ್ನಲ್ಲೇ ಗಾಂಧಿಯವರನ್ನು 'ಹ್ಯಾಂಪ್‌ಸ್ಟೆಡ್ ಶಾಂತಿ ಸಂಧಾನ ಸಮಾಜ'ದಲ್ಲಿ ಮಾತಾಡಲು ಆಹ್ವಾನಿಸಲಾಯಿತು. ಅಲ್ಲಿ ಗಾಂಧಿ ಪೂರ್ವ ಮತ್ತು ಪಶ್ಚಿಮಗಳು ಎಂದೂ ಕೂಡಿ ಬಾಳಲಾರವು ಎಂಬ ಕಿಪ್ಲಿಂಗ್‌ನ ಪ್ರಸಿದ್ಧ ಮಾತನ್ನು ಅಲ್ಲಗಳೆದು ಮಾತನಾಡುತ್ತಾ ನಾಗರೀಕತೆ ಕುರಿತ ತಮ್ಮ ಜಿಜ್ಞಾಸೆಯ ಮೊದಲ ಹೆಜ್ಜೆಗಳನ್ನಿಟ್ಟರು. ಒಬ್ಬ ಭಾರತೀಯ ಮತ್ತು ಒಬ್ಬ ಐರೋಪ್ಯ ಜೊತೆಯಾಗಿ ಒಂದೇ ಸೂರಿನಡಿ ಬಾಳಬಲ್ಲರಾದರೆ ಎರಡು ದೇಶಗಳು ಏಕೆ ಬಾಳಲಾಗದು? ಎಂಬ ಪ್ರಶ್ನೆಯನ್ನು ಹಾಕಿಕೊಂಡು ಮಾತನಾಡಿದ ಅವರು ಮನುಷ್ಯನು ದೇಹ ಮಾತ್ರವೆಂಬ ಭಾವನೆಯ ಮೇಲೆ ಅದರ ಸುಖಗಳಿಗಾಗಿ ಕಟ್ಟಲಾಗಿರುವ ಆಧುನಿಕ ನಾಗರೀಕತೆಗೆ ಯೂರೋಪ್ ಶರಣಾದ ಮೇಲಷ್ಟೇ ಈ ಪೂರ್ವ-ಪಶ್ಚಿಮಗಳ ದ್ವಂದ್ವ ಆರಂಭವಾಗಿರುವುದೆಂದೂ, ಅದಕ್ಕೆ ಮೊದಲು ಈ ಎರಡರ ಸಹಬಾಳ್ವೆಗೆ ಯಾವ ಅಡ್ಡಿಯೂ ಇರಲಿಲ್ಲವೆಂದು ಹೇಳುತ್ತಾ ಈ ರೈಲು, ದೂರವಾಣಿಗಳು ಮನುಷ್ಯನ ನೈತಿಕತೆಯನ್ನು ಹಾಳು ಮಾಡಿವೆಯೋ, ಹೆಚ್ಚಿಸಿವೆಯೋ ಯೋಚಿಸಿ ನೋಡಿ ಎಂದು ಆಗ್ರಹಿಸಿದರು.

ಏನೆಲ್ಲ ಕಲಿತಿದ್ದೇವೆಯೋ ಅದನ್ನೆಲ್ಲ ಮರೆಯಬೇಕು!

ಈ ವಿಚಾರಲಹರಿಯ ಮುಂದುವರಿಕೆಯಾಗಿಯೇ ಗಾಂಧಿ ಲಾರ್ಡ್ ಆ್ಯಂಪ್ಟ್‌ಹಿಲ್‌ಗೆ ಈ ಮೊದಲು ಪ್ರಸ್ತಾಪಿಸಿದ ಅಕ್ಟೋಬರ್ ೯ರ ಪತ್ರ ಬರೆದು, ಬ್ರಿಟನ್‌ನ ಉದಾರವಾದಿ ಮೌಲ್ಯಗಳು ಎಚ್ಚೆತ್ತುಕೊಳ್ಳಬೇಕು; ವಸಾಹತುಗಳ ಪ್ರಜೆಗಳಿಗೆ ಸಮಾನ ಹಕ್ಕುಗಳನ್ನು ನೀಡುವುದನ್ನು ತಡ ಮಾಡಿದಷ್ಟೂ ಹಿಂಸೆ ಹೆಚ್ಚುತ್ತಾ ಹೋಗುವುದೆಂದು ಎಚ್ಚರಿಸಿದ್ದು. ಈ ಬಗ್ಗೆ ಮತ್ತಷ್ಟು ಯೋಚಿಸಿದ ಗಾಂಧಿ ತಮ್ಮ ಮುಂದುವರೆದ ಆಲೋಚನೆಗಳನ್ನು ಭಾರತದಲ್ಲಿದ್ದ ತಮ್ಮ ಗೆಳೆಯ ಹೆನ್ರಿ ಪೋಲಾಕ್‌ನೊಂದಿಗೆ ಪತ್ರಮುಖೇನ ಹಂಚಿಕೊಳ್ಳತೊಡಗಿದರು. ಈ ಆಲೋಚನೆಗಳ ಮುಖ್ಯ ಸಾರಾಂಶವೆಂದರೆ, ಭಾರತೀಯ ಸಮಾಜದ ಸಂವೇದನೆಗಳ ಸೂಕ್ಷ್ಮತೆಯನ್ನು ಹಾಳು ಮಾಡುತ್ತಿರುವ ರೈಲು, ದೂರವಾಣಿ, ಔಷಧಿ ಉದ್ಯಮ ಮುಂತಾದ ದೇಹಸುಖ ಸಾಧನಗಳ ಅಂತ್ಯವಿಲ್ಲದ ಸರಣಿಗೆ ಕಾರಣವಾಗಿರುವ ಯಂತ್ರಚಾಲಿತ ಆಧುನಿಕ ನಾಗರೀಕತೆ ಭಾರತದ ಮೂಲಸತ್ವವನ್ನೆಲ್ಲ ಹಿಂಡಿ ಹಾಕಿ, ಅದನ್ನು ಒಂದಲ್ಲ ಒಂದು ರೂಪದ ಗುಲಾಮಗಿರಿಯಲ್ಲೇ ಇಟ್ಟಿರುವುದಾದ್ದರಿಂದ ಸದ್ಯದ ಭಾರತೀಯ ರಾಷ್ಟ್ರೀಯ ಆಂದೋಲನ–ಅದು ಉಗ್ರಪಂಥೀಯರದ್ದೇ ಆಗಿರಲಿ ಅಥವಾ ಸೌಮ್ಯವಾದಿಗಳದ್ದೇ ಆಗಿರಲಿ–ಆಗ್ರಹಿಸುತ್ತಿರುವಂತೆ ಬ್ರಿಟಿಷರು ಭಾರತವನ್ನು ಬಿಟ್ಟು ಹೋಗುವುದರಿಂದ ಜನರ ಗುಲಾಮಗಿರಿ ಅಂತ್ಯವಾಗುವುದಿಲ್ಲ ಎಂಬುದು. ಏಕೆಂದರೆ ಈ ಎರಡೂ ಬಣಗಳು ಬ್ರಿಟಿಷ್ ಪ್ರಭುತ್ವದ ಮಾದರಿಯ ಮತ್ತು ಆ ಮೂಲಕ ಆಧುನಿಕ ನಾಗರೀಕತೆಯ ಆರಾಧಕರಾಗಿದ್ದಾರೆ. ಆದುದರಿಂದ ಇವರಲ್ಲಿ ಯಾರು ಆಳಿದರೂ ಸಮಾಜದಲ್ಲಿ ಹಿಂಸೆ ತಪ್ಪದು. ಹಾಗಾಗಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟ ಆಧುನಿಕ ನಾಗರೀಕತೆಯ ವಿರುದ್ಧದ ಹೋರಾಟವೂ ಆಗಬೇಕು. ಅಂದರೆ ಬದುಕುವ ಮಾರ್ಗ ಮತ್ತು ಜನಾಡಳಿತಗಳ ವಿಷಯದಲ್ಲಿ ಬ್ರಿಟಿಷ್ ಪ್ರಭುತ್ವದಡಿ ಉದ್ಧಾರದ ಹೆಸರಿನಲ್ಲಿ ಏನೆಲ್ಲ ಕಲಿತಿದ್ದೇವೆಯೋ ಅದನ್ನೆಲ್ಲ ಮರೆಯಬೇಕು.

ಇದಕ್ಕೆ ಮೊದಲ ಸಣ್ಣ ಹೆಜ್ಜೆಯಾಗಿ ಗಿರಣಿಗಳಲ್ಲಿ–ಅದು ಬ್ರಿಟಿಷ್ ಮಾಲೀಕತ್ವದ್ದೇ ಆಗಿರಲಿ, ಭಾರತೀಯರ ಮಾಲೀಕತ್ವದ್ದೇ ಆಗಿರಲಿ–ತಯಾರಾದ ಬಟ್ಟೆಯನ್ನು ತೊಡುವುದನ್ನು ನಿಲ್ಲಿಸಬೇಕು. ಇದರ ಜೊತೆಗೇ ಇನ್ನೊಂದು ಮುಖ್ಯ ಅಂಶವನ್ನೂ ಅವರು ಸೂಚಿಸಿದ್ದರು: ದೊಡ್ಡ ಬದಲಾವಣೆ ವ್ಯಕ್ತಿಯಿಂದ ಆರಂಭವಾಗಬೇಕು. ನಾವು ಸರಿ ದಾರಿಯಲ್ಲಿ ನಡೆದರೆ ಜಗತ್ತೂ ನಮ್ಮನ್ನು ಅನುಸರಿಸುತ್ತಾ ಬದಲಾವಣೆಗೆ ದಾರಿ ಮಾಡಿಕೊಡುತ್ತದೆ. ಗಾಂಧಿ ತಮ್ಮೆಲ್ಲ ವಿಚಾರಗಳನ್ನು ಒಂದೇ ವಾಕ್ಯದಲ್ಲಿ ಹೇಳಿದ್ದು ಹೀಗೆ 'ನಾನು ರೈಲ್ವೇ ಡಬ್ಬಿಯನ್ನೋ ಬಸ್‌ನ್ನೋ ಹತ್ತಿದಾಗ ನನಗೆ ಹಿಂಸೆ ಎನಿಸುತ್ತದೆ'.

ನುಗ್ಗಿ ಬಂದ ವಿಚಾರಗಳು– ಮೂಡಿ ಬಂದ 'ಹಿಂದ್ ಸ್ವರಾಜ್'

ಗಾಂಧಿ ಕೇಪ್‌ಟೌನ್‌ನತ್ತ ಸಾಗುತ್ತಿದ್ದ ಹಡಗಿನಲ್ಲಿ ಕಳೆದ ಮೊದಲ ಎರಡು ದಿನಗಳೂ ಈ ಎಲ್ಲ ಆಲೋಚನೆಗಳು ಗಾಂಧಿಯ ಮನಸ್ಸನ್ನು ಮುತ್ತಿ ಆಧುನಿಕ ನಾಗರೀಕತೆ ಮತ್ತು ಅದರಿಂದ ಬಿಡುಗಡೆಯ ಅನಿವಾರ್ಯತೆ ಮತ್ತು ಮಾರ್ಗ ಕುರಿತಂತೆ ಅವರಿಂದ 'ಹಿಂದ್ ಸ್ವರಾಜ್' ಎಂಬ ಕೃತಿ ರಚನೆಗೆ ಕಾರಣವಾಯಿತು. ಗಾಂಧಿ

ಇದನ್ನು ಹಡಗಿನ ಆಡಳಿತ ನೀಡಿದ ಕಾಗದದ ಮೇಲೆ ಗುಜರಾತಿಯಲ್ಲಿ ಒಂದೇ ಏಟಿನಲ್ಲಿ–ನಿರಂತರವಾಗಿ ಬರೆದರು. ಬಲಗೈ ಬಳಲಿದರೆ ಎಡಗೈನಲ್ಲಿ ಬರೆದರು. ಹೀಗೆ ನವೆಂಬರ್ ೧೩ರಿಂದ ೨೨ರವರೆಗೆ ಒಂಬತ್ತು ದಿವಸಗಳಲ್ಲಿ ಬರೆದು ಮುಗಿಸಿದರು. ೨೭೧ ಪುಟಗಳ ಈ ಹಸ್ತಪತ್ರಿಯಲ್ಲಿ ಎಡಗೈಯಲ್ಲಿ ಬರೆದದ್ದು ಸುಮಾರು ೫೦ ಪುಟಗಳು. ಒಟ್ಟು ಹತ್ತು–ಹನ್ನೆರಡು ಸಾಲುಗಳನ್ನು ಮಾತ್ರ ಹೊಡೆದು ಬರೆಯಲಾಗಿತ್ತು.

ಈ ಗುಜರಾತಿ ಕೃತಿಯನ್ನು 'ಹಿಂದ್ ಸ್ವರಾಜ್' ಶೀರ್ಷಿಕೆಯೊಂದಿಗೆ ಮೊದಲು ೧೯೧೦ರ ಜನವರಿಯಲ್ಲಿ ಪ್ರಕಟಿಸಲಾಯಿತು. ಎರಡು ತಿಂಗಳುಗಳ ನಂತರ ಅದನ್ನು ಗಾಂಧಿಯೇ ಕಲೆನ್‌ಬಾಕ್‌ಗೆ ಹೇಳಿ ಅದರ ಇಂಗ್ಲಿಷ್ ಅನುವಾದವನ್ನು ಬರೆಸಿ 'ಇಂಡಿಯನ್ ಹೋಂ ರೂಲ್' ಎಂಬ ಶೀರ್ಷಿಕೆಯಡಿ ಪ್ರಕಟಿಸಲಾಯಿತು. ಇದಕ್ಕೆ ಮುಖ್ಯವಾಗಿ ಎರಡು ಕಾರಣಗಳಿದ್ದವು. ಒಂದು ಕಲೆನ್‌ಬಾಕ್ ಹಿಂದ್ ಸ್ವರಾಜ್‌ನಲ್ಲಿನ ವಿಚಾರಗಳ ಬಗ್ಗೆ ನಿರಂತರವಾಗಿ ತೋರಿಸಿದ ಕುತೂಹಲವಾದರೆ, ಇನ್ನೊಂದು 'ಹಿಂದ್ ಸ್ವರಾಜ್'ನ ಮೂಲ ಗುಜರಾತಿ ಆವೃತ್ತಿ ಭಾರತದಲ್ಲಿ ಲಭ್ಯವಾಗದಂತೆ ಬ್ರಿಟಿಷ್ ಭಾರತ ಸರ್ಕಾರ ಅದನ್ನು ಮುಟ್ಟುಗೋಲು ಹಾಕಿಕೊಂಡದ್ದು. ಈ ಎರಡೂ ಆವೃತ್ತಿಗಳು ಫೀನಿಕ್ಸ್‌ನಲ್ಲಿದ್ದ 'ಇಂಡಿಯನ್ ಒಪಿನಿಯನ್' ಮುದ್ರಣಾಲಯದಲ್ಲೇ ಮುದ್ರಿತವಾದವು. ಗಾಂಧಿ ತಮ್ಮ ಮುನ್ನುಡಿಯಲ್ಲಿ ಬರೆದಂತೆ, ತಾವು ಈವರೆಗೆ ಓದಿಕೊಂಡಿದ್ದ ರಸ್ಕಿನ್, ಥೋರೋ, ಟಾಲ್‌ಸ್ಟಾಯ್, ಕಾರ್ಲೈಲ್, ಎಮರ್ಸನ್, ಮ್ಯಾಕ್ಸ್ ನೋರ್ದಾ ಸೇರಿದಂತೆ ಬಹುತೇಕ ಆಧುನಿಕ ಕಾಲದ ಚಿಂತಕರಲ್ಲದೆ ಸಾಕ್ರಟಿಸ್, ಪ್ಲೇಟೋರ ಮತ್ತು ಗ್ರೀಕ್ ನ್ಯಾಯಶಾಸ್ತ್ರದ ಪುರಾತನ ಗ್ರಂಥಗಳಲ್ಲದೆ ಜಗತ್ತಿನ ಎಲ್ಲ ಧರ್ಮಗಳ ಪವಿತ್ರ ಗ್ರಂಥಗಳ ಮತ್ತು ಬುದ್ಧ ಹಾಗೂ ಪ್ರವಾದಿ ಮಹಮ್ಮದರದ್ದೂ ಸೇರಿದಂತೆ ಅವುಗಳ ಪ್ರವರ್ತಕರ ಜೀವನ ಚರಿತ್ರೆಗಳ ಮನನ ಈ ಕೃತಿಯ ಅಂತಃಸತ್ವಕ್ಕೆ ಕಾರಣವಾಗಿದೆ. ಇವುಗಳ ಜೊತೆಗೆ ಆರ್.ಸಿ. ದತ್ ಅವರ 'ಭಾರತದ ಆರ್ಥಿಕ ಚರಿತ್ರೆ', ದಾದಾಭಾಯಿ ನವರೋಜಿ ಅವರ 'ಭಾರತದಲ್ಲಿ ಬ್ರಿಟಿಷೇತರ ಆಳ್ವಿಕೆ ಮತ್ತು ಬಡತನ' ಮತ್ತು ಮೇನ್‌ನ 'ಗ್ರಾಮೀಣ ಸಮುದಾಯಗಳು' ಎಂಬ ಗ್ರಂಥಗಳೂ ಹೆಚ್ಚಿನ ಓದಿಗೆಂದು ಈ ಕೃತಿಯ ಅನುಬಂಧದಲ್ಲಿ ಸೇರಿವೆ. ಇದು ಈ ಕೃತಿ ಕೇವಲ ಅಮೂರ್ತಭಾವನೆಗಳನ್ನಾಧರಿಸಿದ ಕೃತಿಯಲ್ಲ ಎಂಬುದನ್ನು ಸೂಚಿಸುತ್ತದೆ. ಈ ಹಿನ್ನೆಲೆಯಲ್ಲಿ ಹಿಂದ್ ಸ್ವರಾಜ್, ನಮ್ಮ ಡಿವಿಜಿಯವರ ಮಂಕುತಿಮ್ಮನ ಕಗ್ಗದ ಮಾತುಗಳಲ್ಲಿ ಹೇಳುವುದಾದರೆ 'ಹೊಸ ಚಿಗುರು ಹಳೆ ಬೇರು'ಗಳಿಂದ ಕೂಡಿದ 'ಸೊಬಗಿನ ಮರ' ಆಗಿದೆ.

ಪಶ್ಚಿಮದ ಚಿಂತಕರದ್ದೇ ಸ್ಫೂರ್ತಿ

ಹಾಗೆ ನೋಡಿದರೆ ಈ ಪುಸ್ತಕಕ್ಕೆ ಬೌದ್ಧಿಕ ಸ್ಫೂರ್ತಿ ಒದಗಿಸಿರುವುದು ಬಹುತೇಕ ಪಾಶ್ಚಿಮಾತ್ಯ ಚಿಂತಕರ ವಿಚಾರಗಳೇ. ಆದರೆ ಈ ಚಿಂತಕರ ಚಿಂತನೆಗಳೆಲ್ಲ ಹುಟ್ಟಿದ್ದು ಆಧುನಿಕ ನಾಗರೀಕತೆಯ ಉದಯಕ್ಕೆ ಕಾರಣವಾದ ಯಂತ್ರ–ಕೈಗಾರಿಕಾ ಕ್ರಾಂತಿ ಐರೋಪ್ಯ ಬದುಕಿನಲ್ಲಿ ಉಂಟುಮಾಡತೊಡಗಿದ್ದ ವಿಷಮತೆ ಮತ್ತು ಅಶಾಂತಿಗಳ ವಿರುದ್ಧವಾಗಿಯೇ. ಹಾಗಾಗಿ ಗಾಂಧಿಯ ಈ ಕೃತಿ ವಾದಿಸುವುದು ಮನಸ್ಸಿನ ಒಂದು ಪ್ರವೃತ್ತಿಯ ವಿರುದ್ಧವೇ ಹೊರತು ಒಂದು ಜನಾಂಗದ ವಿರುದ್ಧವಲ್ಲ. ಹಾಗೆ ನೋಡಿದರೆ

ಗಾಂಧಿ ಪ್ರಕಾರ ಕೈಗಾರಿಕಾ ಕ್ರಾಂತಿಯ ಪೂರ್ವದಲ್ಲಿ, ಪೂರ್ವ ಮತ್ತು ಪಶ್ಚಿಮದ ಬದುಕಿನ ಮಾದರಿಗಳ ಜೀವನಮೌಲ್ಯಗಳು ಮತ್ತು ದೃಷ್ಟಿ ಸಾಮಾನ್ಯವಾಗಿ ಒಂದೇ ಆಗಿದ್ದವು. ಮತ್ತು ಕೈಗಾರಿಕಾ ಕ್ರಾಂತಿ ಹುಟ್ಟು ಹಾಕಿದ ಬದುಕಿನ ಹೊಸ ಮೌಲ್ಯಗಳೆಲ್ಲವೂ ತಿರಸ್ಕಾರಾರ್ಹವೇನಲ್ಲ. ಮನುಷ್ಯನ ಬಡತನವನ್ನು ನೀಗಿಸಲು ಅದು ಹೆಚ್ಚಿನ ಉಪಾಯಗಳನ್ನು ಒದಗಿಸಿದೆ. ಅವನ ಆಜನ್ಮಸಿದ್ಧ ಹಕ್ಕುಗಳ ಬಗ್ಗೆ ಜಾಗೃತಿ ಉಂಟು ಮಾಡಿದೆ. ಸಮಾನತೆಯನ್ನು ಒಂದು ಮೌಲ್ಯವಾಗಿ ಎತ್ತಿ ಹಿಡಿದಿದೆ. ಮಹಿಳೆಯರ ಸ್ಥಾನಮಾನಗಳ ಚರ್ಚೆಯನ್ನು ಹುಟ್ಟು ಹಾಕಿದೆ. ಆದರೆ ಅದು ಇದೆಲ್ಲವನ್ನೂ ಬದುಕಿನ ಕೇಂದ್ರದಲ್ಲಿರಬೇಕಾದ ನೈತಿಕ ಪ್ರಜ್ಞೆಯನ್ನು ಹಿನ್ನೆಲೆಗೆ ಸರಿಸಿ ಬಲಿಷ್ಠತೆಗೇ ಬೆಲೆ ಕೊಟ್ಟು ಬಲವಿರುವವರಿಗಷ್ಟೇ ಬದುಕುವ ಹಕ್ಕು ಎಂಬ ತತ್ವವನ್ನು ಅನುಸರಿಸಿ ಬದುಕಿನ ಮೌಲಿಕತೆಯ ದೃಷ್ಟಿಯನ್ನು ಕೇವಲ ಹೊರಮುಖಗೊಳಿಸಿ, ಕೇವಲ ಲೌಕಿಕ ಸ್ತರದಲ್ಲಿ ಸೀಮಿತಗೊಳಿಸಿ ಅಶ್ಲೀಲ ಮಾಡಿದೆ. ಆದುದರಿಂದ, ಸದಾ ಸ್ವ-ವ್ಯಸ್ತವಾಗಿರುವ ಆಧುನಿಕ ನಾಗರೀಕತೆಯನ್ನು ಒಳಮುಖತೆಯ ಮೂಲಕ ಸ್ವಲ್ಪ ಧ್ಯಾನಸ್ಥವೂ, ವ್ಯವಧಾನಿತವೂ ಮಾಡಿ ಮಾನವೀಯಗೊಳಿಸುವ ಮೂಲಕ ಪೂರ್ವ ಮತ್ತು ಪಶ್ಚಿಮಗಳ ಪಾರಂಪರಿಕ ವಿವೇಕಗಳ ಜೊತೆ ಸಮ್ಮಿಳಿತಗೊಳಿಸಬೇಕು ಎಂಬುದೇ ಗಾಂಧಿಯವರ ಉದ್ದೇಶವಾಗಿತ್ತು. ಪೊಲಾಕ್ ಮತ್ತು ಆ್ಯಂಪ್ಟ್‌ಹಿಲ್ ಅವರಿಗೆ ಬರೆದ ಪತ್ರಗಳಲ್ಲಿ ವ್ಯಕ್ತವಾಗಿರುವ ಗಾಂಧಿಯವರ ಈ ಆಶಯ 'ಹಿಂದ್‌ಸ್ವರಾಜ್'ನಲ್ಲೂ ಪ್ರತಿಬಿಂಬಿತವಾಗಿರುವುದನ್ನು ನಾವು ಕಾಣಬಹುದು.

ಭಾರತದ ರಾಷ್ಟ್ರೀಯತೆಯ ಮರುವ್ಯಾಖ್ಯಾನ

ಆಧುನಿಕ ನಾಗರೀಕತೆ ಭಾರತದಲ್ಲಿ ತನ್ನ ಸ್ವರಕ್ಷಣೆಗಾಗಿ ಉಂಟು ಮಾಡಿದ ಇನ್ನೊಂದು ದುರಂತವೆಂದರೆ ಹಿಂದೂ-ಮುಸ್ಲಿಂ ವಿಭಜನೆ. ಇದನ್ನು ಗಾಂಧಿ, ಬಲ ಅಥವಾ ಯುದ್ಧ ಪ್ರಧಾನವಾದ ಈ ನಾಗರೀಕತೆ, ಇತಿಹಾಸವನ್ನು ಯುದ್ಧಗಳ ಇತಿಹಾಸವಾಗಿ ನೋಡುವ ಮೂಲಕ ಈ ದುರಂತವನ್ನು ಉಂಟು ಮಾಡಿದೆ ಎನ್ನುತ್ತಾರೆ. ಇದಕ್ಕೆ ಪರಿಹಾರವಾಗಿ ಗಾಂಧಿ, ಆ ಹೊತ್ತಿಗೆ ವೀರಾವೇಶ ತುಂಬಿಕೊಂಡು ಮತಮಯವಾಗಿದ್ದ ಭಾರತದ ರಾಷ್ಟ್ರೀಯತೆಯನ್ನು ಅದರಲ್ಲಿ ಜನಸಾಮಾನ್ಯರ ಬದುಕಿನ ಭವಿಷ್ಯದ ಪ್ರಶ್ನೆಯೂ ಒಳಗೊಳ್ಳುವ ರೀತಿಯಲ್ಲಿ ಮತಮುಕ್ತವಾದ ನೈತಿಕ ತಳಹದಿಯ ಮೇಲೆ ಪುನರ್‌ವ್ಯಾಖ್ಯಾನಿಸಿದರು. 'ಪ್ರಜಾ'ರಾಜ್ಯ ಎಂಬ ಹೊಸ ಮತಮುಕ್ತ ರಾಷ್ಟ್ರಕಲ್ಪನೆಯನ್ನು ಮುಂದಿಟ್ಟರು. ಅದರ ಕೇಂದ್ರದಲ್ಲಿದ್ದವರು ರೈತರು ಮತ್ತು ಗ್ರಾಮೀಣ ಕಸಬುದಾರರು. ಇದರ ಪರಿಣಾಮವೆಂದರೆ, ಸಾರ್ವಜನಿಕ ಜೀವನದ ಸಂಕಥನಗಳಲ್ಲಿ ಪದೇ ಪದೇ ತಲೆ ಎತ್ತುತ್ತಿದ್ದ ಹಿಂದೂ-ಮುಸ್ಲಿಂ ವಿಭಜನೆಯ ಮಾತು ಅಪ್ರಸ್ತುತವಾಗತೊಡಗಿತು. ಇದರ ಹಿಂದೆ ಇದ್ದುದು ದ.ಆಫ್ರಿಕಾದಲ್ಲಿ ಗಾಂಧಿಯವರಿಗೆ ದೊರೆತ ಮುಸ್ಲಿಂ ಸಮುದಾಯದ ಆತ್ಮೀಯ ಒಡನಾಟ ಎಂದರೂ ತಪ್ಪಾಗಲಾರದು.

ಗಾಂಧಿ ಈ ಸಂಬಂಧವಾಗಿ ಯೋಚಿಸಿದ ಇನ್ನೊಂದು ಸಂಗತಿ ಎಂದರೆ ಪಶ್ಚಿಮವು ಜಗತ್ತಿನ ಇತಿಹಾಸವನ್ನು ತನಗೆ ತಾನೇ ನಿರೂಪಿಸಿಕೊಂಡಿದ್ದ ಬಗೆ. ಅದು ಮಾನವ ಇತಿಹಾಸವನ್ನು ದೇಶಗಳ ಮತ್ತು ಸಮುದಾಯಗಳ ನಡುವಣ ಯುದ್ಧಗಳ ಇತಿಹಾಸವೆಂದು ಗ್ರಹಿಸಿ ತನ್ನ ನಾಗರೀಕತೆಯನ್ನು ರೂಪಿಸಿಕೊಂಡಿತ್ತು. ಹಾಗಾಗಿ ಅದು

ಹಿಂಸಾತ್ಮಕ ಆಕ್ರಮಣಕಾರಿ ದಾರಿಯನ್ನು ಮಾನ್ಯ ಮಾಡಿತ್ತು. ಆದರೆ ಗಾಂಧಿ, ಇತಿಹಾಸದಲ್ಲಿ ಯುದ್ಧಕಾಲಕ್ಕಿಂತ ಶಾಂತಿ ಕಾಲವೇ ಹೆಚ್ಚಿದ್ದುದನ್ನೂ, ಜನ ಹೊಂದಾಣಿಕೆಗಳ ಮೂಲಕ ಶಾಂತಿಯಿಂದ ಬಾಳಿದ ಅವಧಿಯೇ ಬಹು ಹೆಚ್ಚು ಇರುವುದನ್ನು ಅವರು ಗಮನಿಸಿದರು. ಹಾಗಾಗಿ ಅವರು ಇತಿಹಾಸವನ್ನು ಮನುಷ್ಯನ ಶಾಂತಿಪ್ರಿಯತೆಯ, ಅಹಿಂಸೆಯಲ್ಲಿನ ಅವನ ನಂಬಿಕೆಯ ಸಾಕ್ಷ್ಯವಾಗಿ ಕಂಡರು. ಮನುಷ್ಯ ಹಳೆಯದನ್ನು ಮರೆತು ಮುಂದೆ ಸಾಗುವ ಈ ಸಹಜ ಮಾರ್ಗಕ್ಕೆ ವಿರುದ್ಧವಾಗಿ ಹಳೆಯ ಗಾಯಗಳನ್ನು ದಾಖಲೆಗಳ ಸಹಿತ ನೆನಪಿಸುವ ಪಶ್ಚಿಮದ ಇತಿಹಾಸ ಗ್ರಹಿಕೆಯ ಕ್ರಮ ಹಿಂಸಾತ್ಮಕವಾದುದೆಂದು ಅಭಿಪ್ರಾಯಪಟ್ಟ ಗಾಂಧಿ ಆ ಕ್ರಮವನ್ನು ನಮ್ಮ ಶಿಕ್ಷಣ ಕ್ರಮದಿಂದ ಕೈಬಿಡಬೇಕೆಂದು ಸಲಹೆ ಮಾಡಿದರು.

ಈ ಕೃತಿಯ ಹುಟ್ಟಿನ ಬಗ್ಗೆ ಗಾಂಧಿ ಮುನ್ನುಡಿಯಲ್ಲಿ ಹೇಳಿರುವ ಇನ್ನೊಂದು ಮಾತೂ ಕುತೂಹಲಕಾರಿಯಾಗಿದೆ. ಅವರ ಪ್ರಕಾರ ಅವರು ಲಂಡನ್‌ನಲ್ಲಿ ಹಿಂಸಾವಾದಿ ಭಾರತೀಯ ರಾಷ್ಟ್ರವಾದಿಗಳೊಡನೆ ಮುಖಾಮುಖಿಯಾಗದಿದ್ದಲ್ಲಿ ಬಹುಶಃ ಈ ಕೃತಿ ರಚನೆಯಾಗುತ್ತಿರಲಿಲ್ಲ. ಹಾಗೆಯೇ ಈ ಕೃತಿಯ ಇಂಗ್ಲಿಷ್ ಆವೃತ್ತಿಗೆ ಬರೆದಿರುವ ಮುನ್ನುಡಿಯ ಒಂದು ಮಾತೂ ಕುತೂಹಲಕಾರಿಯಾಗಿದೆ. ಈ ಕೃತಿಯ ಮೂಲ ಗುಜರಾತಿ ಆವೃತ್ತಿಯನ್ನು ಭಾರತದಲ್ಲಿನ ಬ್ರಿಟಿಷ್ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಆಧಾರವಾಗಿ ಸೂಚಿತವಾಗಿದ್ದ; ಅದು ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಬಂಡಾಯವೇಳಲು ಜನರನ್ನು ಪ್ರೇರೇಪಿಸುತ್ತದೆ ಎಂಬ ಆಪಾದನೆಗೆ ಪ್ರತಿಕ್ರಿಯಿಸುತ್ತಾ ಅವರು, ತಾವೂ ಬ್ರಿಟಿಷ್ ಸಾಮ್ರಾಜ್ಯಕ್ಕೆ ನಿಷ್ಠೆ ಹೊಂದಿರುವ ಪ್ರಜೆಯೇ ಆಗಿದ್ದು ಅದರ ಒಳಿತಿನ ದೃಷ್ಟಿಯಿಂದಲೇ ಈ ಕೃತಿಯನ್ನು ರಚಿಸಿರುವುದಾಗಿ ಹೇಳಿರುವುದು. ಅವರ ಪ್ರಕಾರ ಈ ಕೃತಿ ಟೀಕೆ ಮಾಡಿರುವುದು ಸಾಮ್ರಾಜ್ಯವನ್ನು ನಡೆಸುತ್ತಿರುವ ಜನರನ್ನಲ್ಲ; ಬದಲಿಗೆ ಅವರು ನಂಬಿರುವ ಮೌಲ್ಯ ವ್ಯವಸ್ಥೆಯನ್ನು; ನಾಗರೀಕತೆಯನ್ನು.

'ಹಿಂದ್ ಸ್ವರಾಜ್' ಏನು ಹೇಳುತ್ತದೆ?

ಉಪಸಂಹಾರವೂ ಸೇರಿದಂತೆ ಒಟ್ಟು ೨೦ ಕಿರು ಅಧ್ಯಾಯಗಳುಳ್ಳ ಈ ಪುಸ್ತಕ, ಓದುಗ ಮತ್ತು ಸಂಪಾದಕ ಎಂಬ ಎರಡು ಪಾತ್ರಗಳನ್ನು ಸೃಷ್ಟಿಸಿಕೊಂಡು ಪ್ರಶ್ನೋತ್ತರ ರೂಪದಲ್ಲಿ ತನ್ನ ವಾದ-ವಿಚಾರಗಳನ್ನು ಮಂಡಿಸುತ್ತದೆ. ಪುಸ್ತಕದ ಈ ರೂಪಕ್ಕೆ ಸ್ಫೂರ್ತಿ, ಇಲ್ಲಿನ ಬಹಳಷ್ಟು ವಿಷಯಗಳ ಬಗ್ಗೆ ಲಂಡನ್‌ನಲ್ಲಿ ಉಗ್ರಗಾಮಿ ರಾಷ್ಟ್ರವಾದಿಗಳೊಂದಿಗೆ, ನಂತರ ಗೆಳೆಯ ಪ್ರಾಣಜೀವನ ಮೆಹ್ತಾನೊಂದಿಗೆ ನಡೆಸಿದ ಸಂವಾದಗಳ ಪರಿ ಮತ್ತು ಅವೆಲ್ಲವೂ ಹಾಗೇ 'ಇಂಡಿಯನ್ ಒಪಿನಿಯನ್' ಪತ್ರಿಕೆಯಲ್ಲಿ ಪ್ರಕಟವಾದ ರೀತಿಯೇ ಆಗಿದೆ ಎಂಬ ಮಾತಿದೆ. ಆದರೆ ಈ ಸಂವಾದ ರೂಪ ಭಗವದ್ಗೀತೆ ಸೇರಿದಂತೆ ಭಾರತದ ಅನೇಕ ಪ್ರಾಚೀನ ಗ್ರಂಥಗಳಲ್ಲೂ ಕಂಡು ಬರುವುದರಿಂದ ಗಾಂಧಿ ಅವುಗಳಿಂದಲೂ ಸ್ಫೂರ್ತಿ ಪಡೆದಿರುವ ಸಾಧ್ಯತೆಯನ್ನು ತಳ್ಳಿ ಹಾಕಲಾಗುವುದಿಲ್ಲ.

ಭಾರತದ ಅಂದಿನ ಪರಾಧೀನ ಪರಿಸ್ಥಿತಿಗೆ ಕಾರಣಗಳನ್ನು ಹುಡುಕುತ್ತಾ, ಅದರ ಭಾಗವಾಗಿ ನಾಗರೀಕತೆಯ ಅರ್ಥವನ್ನು ಕೆದಕುತ್ತಾ ಅದರ ಹಿನ್ನೆಲೆಯಲ್ಲಿ ಭಾರತ ಮತ್ತು ಇಂಗ್ಲೆಂಡ್‌ಗಳ ಅಂದಿನ ಸ್ಥಿತಿಗತಿಗಳನ್ನು ವಿಮರ್ಶಿಸುತ್ತಾ ಹೋಗುವ ಈ ಕೃತಿ ಭಾರತ

ತಿಣುಕುತ್ತಿರುವುದು ಬ್ರಿಟಿಷ್ ಪ್ರಭುತ್ವದ ಭಾರದಿಂದಲ್ಲ, ಬದಲಿಗೆ ಆಧುನಿಕ ನಾಗರೀಕತೆಯ ಭಾರದಿಂದ ಎಂದು ಹೇಳುತ್ತದೆ. ಈ ರೈಲು, ಅಲೋಪತಿ, ವಕೀಲ ವೃತ್ತಿ, ಸಂಸತ್ತು ಇತ್ಯಾದಿಗಳನ್ನು ಆಧುನಿಕ ನಾಗರೀಕತೆಯ ರೂಪಕಗಳನ್ನಾಗಿಟ್ಟುಕೊಂಡು, ಅದು ಹೇಗೆ ತನ್ನ ಪಾಡಿಗೆ ತನ್ನ ನೆಮ್ಮದಿಯಲ್ಲಿದ್ದ ಭಾರತದ ಗ್ರಾಮ ಸಮಾಜವನ್ನು ಕೆರಳಿಸಿ, ಮರುಳು ಮಾಡಿ, ಕೊನೆಗೆ ಮಣಿಸಿ ಬ್ರಿಟಿಷ್ ಪ್ರಭುತ್ವಕ್ಕೆ ಒಪ್ಪಿಸಿ ಭಾರತದ ಒಳ ಸಂಪತ್ತನ್ನೆಲ್ಲ ಹೊಸಕಿ ಹಾಕಿ, ಹೊರ ಸಂಪತ್ತನ್ನೆಲ್ಲ ಲೂಟಿ ಮಾಡಿ ಭಾರತವನ್ನು ದರಿದ್ರ ಸ್ಥಿತಿಗೆ ತರಲಾಗಿದೆ ಎಂಬುದನ್ನು ವಿವರಿಸುತ್ತದೆ. ಪಶುಬಲವನ್ನು ನೆಚ್ಚಿರುವ ವ್ಯವಸ್ಥೆಯ ನಿರ್ಮಾಣವೇ ಈ ಸ್ಥಿತಿಗೆ ಕಾರಣವಾಗಿದ್ದು, ಇದರಿಂದ ಪಾರಾಗಲು ಏಕೆ ಮತ್ತು ಹೇಗೆ ಭಾರತ ಮತ್ತೆ ತನ್ನ ಪುರಾತನ ಸಂಪನ್ಮೂಲವಾದ ಆತ್ಮಬಲದ ಬಳಕೆಗೆ ಮರಳುವ ಅಗತ್ಯವೂ ಅನಿವಾರ್ಯತೆಯೂ ಇದೆ ಎಂಬುದನ್ನು, ಆಗ ಮಜ್ಜಿನಿಯ ನೇತೃತ್ವದಲ್ಲಿ ನಡೆದಿದ್ದ ಇಟಲಿಯ ಮರುನಿರ್ಮಾಣದ ತೊಡಕುಗಳ ಹಿನ್ನೆಲೆಯಲ್ಲಿ ಹೇಳುತ್ತದೆ. ಈ ಸಂಬಂಧವಾದ ಕಾಂಗ್ರೆಸ್‌ನ ನಾಯಕರ ಅಡಿಪಾಯದ ಕೆಲಸ, ಹಿಂದೂ ಮುಸ್ಲಿಂ ಐಕ್ಯತೆಯ ಮಹತ್ವ, ಯಂತ್ರ ವ್ಯವಸ್ಥೆಯಲ್ಲಿ ಅಂತರ್ಗತವಾಗಿರುವ ಹಿಂಸೆ, ಇದಕ್ಕೆ ಪರಿಹಾರವಾದ ಸತ್ಯಾಗ್ರಹದ ಅರ್ಥವ್ಯಾಪ್ತಿ, ಚರಿತ್ರೆಯನ್ನು ಗ್ರಹಿಸುವ ಮತ್ತು ಬರೆಯುವ ಬಗೆಯೂ ಸೇರಿದಂತೆ ಶಿಕ್ಷಣ ವ್ಯವಸ್ಥೆಯನ್ನು ಅಡಿಪಾಯದಿಂದ ಪುನರ್‍ರೂಪಿಸಬೇಕಾದ ರೀತಿ ನೀತಿಗಳು ಇತ್ಯಾದಿ ವಿಷಯಗಳನ್ನು ಚರ್ಚಿಸುತ್ತದೆ. ಕೊನೆಗೆ ಈ ಕೃತಿಯ ಉಪಸಂಹಾರದ ಕೊನೆಯ ಭಾಗವನ್ನು ಇಲ್ಲಿ ಉಲ್ಲೇಖಿಸುವ ಮೂಲಕ ಈ ಕೃತಿಯ ಸಾರಾಂಶವನ್ನು ಹೇಳಬಹುದು :

ಕಟ್ಟಕಡೆಗೆ ಮತ್ತೊಮ್ಮೆ ಹೇಳುತ್ತೇನೆ :

೧. ನಿಜವಾದ ಸ್ವರಾಜ್ಯ ಎಂದರೆ ಆತ್ಮರಾಜ್ಯ ಅಥವಾ ಆತ್ಮ ಸಂಯಮ.

೨. ಅದಕ್ಕೆ ದಾರಿ ಸತ್ಯಾಗ್ರಹ, ಆತ್ಮಬಲ ಅಥವಾ ಸ್ನೇಹಬಲ.

೩. ಈ ಬಲವನ್ನು ಪ್ರಯೋಗಿಸಲು ಸರ್ವವಿಧದಲ್ಲೂ ಸರ್ವಥಾ ಸ್ವದೇಶಿ ಅಗತ್ಯ.

೪. ಇಂಗ್ಲಿಷರ ಮೇಲೆ ಹಗೆಯಿಂದ ಅಥವಾ ಪ್ರತೀಕಾರ ಬುದ್ಧಿಯಿಂದ ಏನೂ ಮಾಡಬೇಕಾಗಿಲ್ಲ. ಮಾಡಬೇಕಾದ್ದನ್ನೆಲ್ಲ ಕರ್ತವ್ಯವೆಂದು ಮಾಡಬೇಕು. ಒಂದು ವೇಳೆ ಇಂಗ್ಲಿಷರು ಉಪ್ಪಿನ ಮೇಲಿನ ತೆರಿಗೆಯನ್ನು ತೆಗೆದುಹಾಕಿದರೆ ನಮ್ಮ ಹಣವನ್ನು ಹಿಂತಿರುಗಿಸಿದರೆ, ಇಂಗ್ಲಿಷ್ ಸೇನೆಯನ್ನು ಇಲ್ಲಿಂದ ವಾಪಸ್ ಕರೆಸಿಕೊಂಡರೆ, ಆಗಲೂ ನಾವು ಅವರ ಯಂತ್ರಗಳ ಉತ್ಪನ್ನಗಳನ್ನು ಬಳಸುವುದಿಲ್ಲ; ಇಂಗ್ಲಿಷ್ ಭಾಷೆಯನ್ನು ಬಳಸುವುದಿಲ್ಲ; ಅವರ ಉದ್ಯೋಗಗಳಿಗೆ ಆಶ್ರಯ ಕೊಡುವುದಿಲ್ಲ; ಖಂಡಿತ ಇವೆಲ್ಲವೂ ಅವುಗಳ ಗುಣಗಳಿಂದಲೇ ನಮಗೆ ಹಾನಿಕರ; ಆದುದರಿಂದ ಅವು ನಮಗೆ ಬೇಡ. ನನಗೆ ಇಂಗ್ಲಿಷರನ್ನು ಕಂಡರೆ ಕಿಂಚಿತ್ತೂ ಹಗೆಯಿಲ್ಲ. ಆದರೆ ಅವರ ನಾಗರೀಕತೆಗೆ ನಾನು ಪೂರ್ಣ ವಿರೋಧಿ. ಸ್ವರಾಜ್ಯ– ಈ ಶಬ್ದಕ್ಕೆ ನಿಜವಾದ ಅರ್ಥ ತಿಳಿಯದೆ ನಾವು ಅದನ್ನು ಬಳಸಿದ್ದೇವೆ ಎನಿಸುತ್ತಿದೆ. ನನಗೆ ತಿಳಿದ ಮಟ್ಟಿಗೆ ನಾನು ಅದನ್ನು ತಿಳಿಸುವ ಪ್ರಯತ್ನ ಮಾಡಿದ್ದೇನೆ. ಈ ಬಗೆಯ ಸ್ವರಾಜ್ಯ ಸಂಪಾದನೆಗೆ ನನ್ನ ಬಾಳು ಮೀಸಲು. ಇದಕ್ಕೆ ನನ್ನ ಅಂತರಾತ್ಮವೇ ಸಾಕ್ಷಿ'

ಈ ಮೇಲಿನ ಮಾತುಗಳ ಕೊನೆಯ ಪ್ಯಾರಾ ಆಗ, ಭಾರತದಲ್ಲಿ ಸ್ವರಾಜ್ಯ ಎಂಬ ಶಬ್ದದ ಪ್ರಯೋಗ ಮಾಡಿ ಚಾಲ್ತಿಗೆ ತಂದಿದ್ದ ಬಾಲಗಂಗಾಧರ ತಿಲಕರ ಪರಂಪರೆಯ– ಲಂಡನ್‌ನಲ್ಲಿ ಮುಖಾಮುಖಿಯಾಗಿದ್ದ–ಉಗ್ರಗಾಮಿ ಗುಂಪನ್ನು ಉದ್ದೇಶಿಸಿದಂತಿದೆ. ಹಾಗೇ ಈ ಕೃತಿಯ ಹುಟ್ಟಿನ ಹಿನ್ನೆಲೆಯನ್ನೂ ಸೂಚಿಸುವಂತಿದೆ. ಅಲ್ಲದೆ, 'ಸ್ವ-ರಾಜ್ಯ'ದಲ್ಲಿನ 'ಸ್ವ' ಎಂಬುದು ಭೌಗೋಳಿಕ ಪ್ರಾದೇಶಿಕತೆಯ ಸೂಚಕವಾಗಿರದೆ, ಪ್ರತಿ ಮನುಷ್ಯನ ಆತ್ಮಕ್ಕೆ ಸಂಬಂಧಿಸಿದ್ದಾಗಿದ್ದು ಸ್ವಯಂವಿವೇಕದಿಂದ ಅದರ ಆಟವನ್ನು ನಿಯಂತ್ರಿಸಿಕೊಳ್ಳುವ ಮೂಲಕ ತನ್ನೊಳಗಿನ ಆತ್ಮ ಸಾಮ್ರಾಜ್ಯದ ರಾಜ ತಾನೇ ಆಗುವುದರೊಂದಿಗೆ ಮಾತ್ರ ಹೊರಗಿನ ಲೋಕ ಸ್ವರಾಜ್ಯವಾಗಬಲ್ಲದೆಂದು ಅವರು ವಿವರಿಸುತ್ತಿರುವಂತಿದೆ. ಇನ್ನು ಈ ಕೃತಿಯ ಉಪಸಂಹಾರ ಅಧ್ಯಾಯದಲ್ಲಿ ಬರುವ 'ರಾಷ್ಟ್ರಕ್ಕೆ ನಿಮ್ಮ ಸಂದೇಶವೇನು?' ಎಂಬರ್ಥದ ಪ್ರಶ್ನೆಗೆ ಗಾಂಧಿ ಹಾಕುವ 'ಈ ರಾಷ್ಟ್ರ ಎಂದರೆ ಯಾರು?' ಎಂಬ ಮರುಪ್ರಶ್ನೆ, ತಾವು ಗುರು ಎಂದು ಕರೆದಿದ್ದ ಗೋಪಾಲಕೃಷ್ಣ ಗೋಖಲೆಯವರ ಸೌಮ್ಯವಾದಿ ಗುಂಪೂ ಸೇರಿದಂತೆ ಸ್ವಾತಂತ್ರ್ಯಕ್ಕಾಗಿ ಆವರೆಗೆ ನಡೆಸಿದ್ದ ಹೋರಾಟ ಎಷ್ಟು ಸ್ಥೂಲವಾದುದಾಗಿತ್ತು ಎಂಬುದನ್ನು ಸೂಚಿಸುತ್ತಾ, ಅದರ ಹಿಂದಿನ ಚಾಲನಾ ಶಕ್ತಿಯಾಗಿದ್ದ ರಾಷ್ಟ್ರೀಯತೆಯ ಕೂಗಿನ ಬಗೆಗೆ ಬರೆದ ಒಂದು ನಿಷ್ಠುರ ಭಾಷ್ಯವೂ ಆಗಿದ್ದಂತೆ ತೋರುತ್ತದೆ.

ಎಲ್ಲಕ್ಕಿಂತ ಮುಖ್ಯವಾಗಿ, ಈ ಕೃತಿ ರಚನೆಯ ಹಿಂದೆ ಇರುವ ಒಂದು ಒಟ್ಟಾರೆ ತಾತ್ವಿಕ ಗ್ರಹಿಕೆಯನ್ನು ಸೂಚಿಸುವ ಒಂದು ನಿರ್ಣಾಯಕ ವಾಕ್ಯವನ್ನು ಇಲ್ಲಿ ಉಲ್ಲೇಖಿಸಬೇಕು. ಅದೆಂದರೆ 'ಆಧುನಿಕ ನಾಗರೀಕತೆ ಎಂಬುದು ಅಧರ್ಮ'. ಹಾಗಾಗಿ ಈ ಕೃತಿ ಗಾಂಧಿ ಓರ್ವ ಸಂತನೋ ಅಥವಾ ರಾಜಕಾರಣಿಯೋ ಅಥವಾ ಸಂತನ ರೂಪದ ರಾಜಕಾರಣಿಯೋ ಎಂಬ ಚರ್ಚೆಯನ್ನೂ ಹುಟ್ಟು ಹಾಕಿತು. ಇದಕ್ಕೆ ಪೊಲಾಕ್ ತನ್ನ ನೆನಪಿನ ಪುಸ್ತಕದಲ್ಲಿ, ಗಾಂಧಿ ಒಮ್ಮೆ 'ದ.ಆಫ್ರಿಕಾದಲ್ಲೇ, ಜನ ನನ್ನನ್ನು ರಾಜಕಾರಣದಲ್ಲಿ ಕಳೆದು ಹೋಗುತ್ತಿರುವ ಸಂತನೆನ್ನುತ್ತಿದ್ದಾರೆ. ಆದರೆ ವಾಸ್ತವವೆಂದರೆ ನಾನು ಸಂತನಾಗಲು ಬಹು ಕಷ್ಟಪಡುತ್ತಿರುವ ರಾಜಕಾರಣಿ' ಎಂದಿದ್ದರು ಎಂದು ಹೇಳುವನು. ಈ ಬಗ್ಗೆ ಗಾಂಧಿಯ ಖ್ಯಾತ ಜೀವನ ಚರಿತ್ರಕಾರ ಲೂಯಿ ಫಿಶರ್ ಹೇಳುವುದು: 'ರಾಜಕಾರಣದಲ್ಲಿ ಗಾಂಧಿ ಯಾವಾಗಲೂ ಧಾರ್ಮಿಕ ಮತ್ತು ನೈತಿಕ ಪರಿಗಣನೆಗಳಿಗಾಗಿ ಶ್ರಮಿಸಿದರು ಮತ್ತು ಸಂತನಾಗಿ ತಮ್ಮ ಜಾಗ ಇರುವುದು ಗುಹೆ ಗಹ್ವರಗಳಲ್ಲಲ್ಲ, ಬದಲಿಗೆ ಹಕ್ಕುಗಳಿಗಾಗಿ ನಡೆದಿರುವ ಜನಸಾಮಾನ್ಯರ ಹೋರಾಟದ ಗದ್ದಲದ ನಡುವೆ. ಗಾಂಧಿಯವರ ರಾಜಕಾರಣ ಧಾರ್ಮಿಕವಾದದ್ದು'.

'ಹಿಂದ್ ಸ್ವರಾಜ್' ಆಹ್ವಾನಿಸಿದ ಮಿಶ್ರ ಪ್ರತಿಕ್ರಿಯೆ

ಅದೇನೇ ಇರಲಿ, ಈ ಕೃತಿ ಪ್ರಕಟವಾದಾಗ ಮತ್ತು ಆನಂತರದ ಕೆಲವು ವರ್ಷಗಳಲ್ಲಿಯೂ ಪಶ್ಚಿಮದ ಹಲವು ಚಿಂತಕರಿಂದ ಮೆಚ್ಚುಗೆಯ ಜೊತೆಗೆ ಟೀಕೆಗಳು ಕೇಳಿ ಬಂದವು. ಮೆಚ್ಚುಗೆಗಳ ಪೈಕಿ ಅದ್ಭುತವೆನಿಸುವ ಮಾತು ಬಂದದ್ದು ಸ್ಕಾಟ್ಲೆಂಡ್‌ನ ಟಾಲ್‌ಸ್ಟಾಯ್‌ವಾದಿ ಕುಮಾರಿ ಫೈವಿ ಮೇಯೋ ಅವರಿಂದ. ಅವರು ಕಲೆನ್‌ಬಾಕ್‌ಗೆ ಬರೆದ ಪತ್ರದಲ್ಲಿ ತಾವು ಈ ಕೃತಿಯನ್ನು ಓದಿ ಅದರಲ್ಲೇ ಕಳೆದುಹೋಗಿರುವುದಾಗಿ ಹೇಳಿದ್ದಳಲ್ಲದೆ, ಈ ಕೃತಿಯನ್ನು ಬ್ರಿಟಿಷ್ ಸರ್ಕಾರ ಮುಟ್ಟುಗೋಲು ಹಾಕಿಕೊಂಡಿದೆ

ಎಂಬ ಸುದ್ದಿಯ ಪ್ರಸ್ತಾಪ ಮಾಡಿ, ಗಾಂಧಿ 'ಸರ್ಮನ್ಸ್ ಆನ್ ದ ಮೌಂಟ್'ನ ಉಪದೇಶಗಳನ್ನು ಸಾಕಾರಗೊಳಿಸಲು ಪ್ರಯತ್ನಿಸುತ್ತಿರುವುದರಿಂದ ಪ್ರಭುತ್ವ ಬೈಬಲ್‌ನ್ನೂ ನಿಷೇಧಿಸಬೇಕಾಗಬಹುದು ಎಂದು ವ್ಯಂಗ್ಯವಾಡಿದ್ದರು. ಅವರು ಗಾಂಧಿ ಹೋರಾಟದ ಬಗ್ಗೆ ಸಹಾನುಭೂತಿ ಹೊಂದಿದ್ದರು. ಆಫ್ರಿಕಾದ ವಕೀಲ ಎಡ್ವರ್ಡ್ ಡಾಲೋ ಎಂಬುವವರು ಗಾಂಧಿಯವರು ಮಿಲ್, ಸ್ಪೆನ್ಸರ್, ಗೋಥೆ, ಕಾಂಟ್, ಹೆಗಲ್ ಮುಂತಾದ ಆಧುನಿಕ ತತ್ವಶಾಸ್ತ್ರಜ್ಞರನ್ನು ಓದಿದ್ದರೆ ಆಧುನಿಕ ನಾಗರೀಕತೆ ಕುರಿತು ಇಷ್ಟು ಸಂಕುಚಿತವಾದ ವಾದ ಮಂಡಿಸುತ್ತಿರಲಿಲ್ಲವೆಂದು ಹೇಳುತ್ತಾ, ಸರ್ವೋತ್ತಮ ಎಂದು ಗಾಂಧಿ ಹೇಳುವ ಭಾರತದ ನಾಗರೀಕತೆಯಲ್ಲಿ ಇರುವ ಜಾತಿ ವ್ಯವಸ್ಥೆಯ ಕುರೂಪದ ಕಡೆ ಗಮನ ಸೆಳೆದಿದ್ದರು. ಡಬ್ಲ್ಯು. ಜೆ. ವೈಬರ್ಗ್ ವರ್ಣಭೇದ ನೀತಿಯ ಬೆಂಬಲಿಗನಾಗಿದ್ದರೂ ಗಾಂಧಿಯಂತಹ ಘನತೆವೆತ್ತ ವ್ಯಕ್ತಿಗೆ ಈ ನೀತಿ ಅನ್ವಯವಾಗಬಾರದೆಂದು ಪ್ರತಿಪಾದಿಸುತ್ತಿದ್ದ. ಟ್ರಾನ್ಸ್‌ವಾಲ್ ಶಾಸನಸಭೆಯ ಸದಸ್ಯನೂ, ಗಾಂಧಿಯ ಥಿಯೊಸಫಿ ಸಮಾಜದ ಸಹಚರನೂ ಆಗಿದ್ದ ಈತ ಈ ಪುಸ್ತಕದ ಬಗ್ಗೆ ಗಾಂಧಿಗೆ ಹೀಗೆ ಪತ್ರ ಬರೆದಿದ್ದ: 'ಆಧುನಿಕ ನಾಗರೀಕತೆ ಯೂರೋಪಿನ ಜನಜೀವನದ ವಿಕಾಸದ ಉತ್ಪನ್ನವಾಗಿದ್ದು, ಅದು ಯೂರೋಪ್‌ಗೆ ಸಹಜವೂ ಪ್ರಯೋಜನಕಾರಿಯೂ ಆಗಿ, ಅದನ್ನು ತನಗೆ ಅಗತ್ಯಕ್ಕೆ ತಕ್ಕಂತೆ ಪರಿಷ್ಕರಿಸಿಕೊಂಡು ಬಳಸುವುದು ಭಾರತಕ್ಕೂ ಅಗತ್ಯವಾಗಿದೆ. ಸರ್ಕಾರ, ಕಾನೂನು, ಬಲಪ್ರಯೋಗಗಳು ಮಾನವ ಸಮಾಜದ ಸುಧಾರಣೆ ಮತ್ತು ಅಭಿವೃದ್ಧಿಗೆ ತಿನ್ನುವುದು, ಕುಡಿಯುವುದರಷ್ಟೇ ನೈತಿಕವಾದ ಮತ್ತು ಸರಿಯಾದ ಮಾರ್ಗ ಅದರ ಅಗತ್ಯಗಳಾಗಿವೆ. ಇಡೀ ಮಾನವ ಜನಾಂಗ ಸಂತತನವನ್ನು ಬೆಳೆಸಿಕೊಂಡಾಗ ಸರ್ಕಾರ, ಶಾಸನ ಇತ್ಯಾದಿಗಳೆಲ್ಲ ತಾನಾಗಿ ಮಾಯವಾಗುತ್ತವೆ...'. ಇನ್ನು ನಂತರದ ವರ್ಷಗಳಲ್ಲಿ ಮಿಡ್ಲ್‌ಟನ್ ಮರೆ, ಯಂತ್ರ ಬಳಸುವವರ ದುಷ್ಟತನವನ್ನು ಯಂತ್ರಕ್ಕೆ ಆರೋಪಿಸುವುದು ತಪ್ಪು ಎಂದರೆ, ಜಿ.ಡಿ.ಎಚ್. ಕೋಲ್, ಇರೇನ್ ರಾತ್‌ಬೋನ್ ಎಂಬುವವರು ಮಹಾಯುದ್ಧಗಳಲ್ಲಿನ ಭೀಕರ ಹಿಂಸೆಯ ಹಿನ್ನೆಲೆಯಲ್ಲಿ ಬರೆಯುತ್ತಾ, ಹಿಂಸಾಚಾರದ ಆಧುನಿಕ ರೂಪಗಳ ಸಂದರ್ಭದಲ್ಲಿ ಅಹಿಂಸೆ ಮತ್ತು ಸತ್ಯಾಗ್ರಹಗಳು ಅಸಹಾಯಕರ ನೆರವಿಗೆ ಬರಲಾರವು ಎಂದಿದ್ದಾರೆ.

ಗಾಂಧಿ ನೀಡಿದ ಉತ್ತರಗಳು

ಗಾಂಧಿ ಅವಸರದಲ್ಲಿ ಬರೆದ ಈ ಪುಸ್ತಕವನ್ನು, ಭಾರತಕ್ಕೆ ಬಂದು ಕೆಲವು ಕಾಲ ಇದ್ದ ನಂತರ ಅದನ್ನು ಅವರೇ ಹರಿದುಹಾಕುವರು ಎಂದಿದ್ದ ಗೋಪಾಲಕೃಷ್ಣ ಗೋಖಲೆ ಮತ್ತು ಗಾಂಧಿಯವರ ದ.ಆಫ್ರಿಕಾ ಹಾಗೂ ಭಾರತದ ಹಲವು ಗೆಳೆಯರೂ ಸೇರಿದಂತಿದ್ದ ಈ ಟೀಕಾಕಾರರೆಲ್ಲರ ಪ್ರಕಾರ 'ಹಿಂದ್ ಸ್ವರಾಜ್' ಒಂದು ಅತಿಗೆ ಹೋಗಿ ಮಂಡಿಸಲ್ಪಟ್ಟ ವಾದಸರಣಿಯ ಕೃತಿಯಾಗಿತ್ತು. ಈ ಟೀಕೆಗಳಿಗೆಲ್ಲ ಗಾಂಧಿ ವಿವರವಾದ ಉತ್ತರ ಮತ್ತು ಸ್ಪಷ್ಟೀಕರಣಗಳನ್ನು ನೀಡಿ, ಕಾಲಪ್ರವಾಹದಲ್ಲಿ ಈ ಕೃತಿಯ ಸತ್ವ ಪರೀಕ್ಷೆಯಾಗಲಿ ಎಂಬರ್ಥ ಸೂಚಿಸುವ ಮಾತೊಂದನ್ನು, ಈ ಕೃತಿಯ ೧೯೩೮ರ ಆವೃತ್ತಿಗೆ (ಇದೇ ಅವರು ಬದುಕಿದ್ದಾಗ ಹೊರಬಂದ ಅದರ ಕೊನೆಯ ಆವೃತ್ತಿ) ಮುನ್ನುಡಿಯಲ್ಲಿ ಬರೆದಿದ್ದಾರೆ. ಈ ಕೃತಿಯ ಬಗ್ಗೆ ತಮಗೆ ಹಿಂದಿಗಿಂತ ಈಗ ಹೆಚ್ಚು ನಂಬಿಕೆ ಬಂದಿದೆ ಎನ್ನುತ್ತಾ ಇದರಲ್ಲಿ ಬ್ರಿಟಿಷ್ ಸಂಸತ್‌ನ್ನು ವರ್ಣಿಸುವಾಗ ಬಳಸಿರುವ 'ವೇಶ್ಯೆ' ಎಂಬ

ಶಬ್ದದ ಹೊರತಾಗಿ ಒಂದು ವಾಕ್ಯವನ್ನೂ ಬದಲಾಯಿಸಲು ಸಿದ್ಧವಿಲ್ಲವೆಂದು ಅವರು ಸ್ಪಷ್ಟಪಡಿಸುತ್ತಾರೆ. ಜೊತೆಗೇ ಈ ಕಟುವಾಸ್ತವವನ್ನು ಅರಿತ ಮಾತುಗಳನ್ನೂ: '...ಇದರಲ್ಲಿ ಹೇಳಿರುವ ಸ್ವರಾಜ್ಯವನ್ನು ನಾನಿಂದು ಕೇಳುತ್ತಿಲ್ಲ. ಹಿಂದೂಸ್ತಾನ ಅದಕ್ಕೆ ಸಾಕಷ್ಟು ಮಾಗಿಬಂದಿಲ್ಲ. ಹೀಗೆ ಹೇಳಿದರೆ ಅಧಿಕಪ್ರಸಂಗವಾದೀತೋ ಏನೋ. ಆದರೆ ನನ್ನ ಅಭಿಪ್ರಾಯ ಬದಲಾಗಿಲ್ಲ. ಅದರಲ್ಲಿರುವ ಸ್ವರಾಜ್ಯಕ್ಕಾಗಿ ವ್ಯಕ್ತಿಶಃ ನಾನು ಯತ್ನಿಸುತ್ತಿದ್ದೇನೆ. ನನ್ನ ಸಾಮೂಹಿಕ ಪ್ರಯತ್ನವೇನೋ ಭಾರತೀಯರ ಬಹುಮತದ ಅಭಿಮತದಂತೆ ಶಾಸನಸಮ್ಮತ ಪ್ರಜಾತಂತ್ರಕ್ಕಾಗಿ ನಡೆದಿದೆ. ರೈಲಾಗಲೀ, ಆಸ್ಪತ್ರೆಯಾಗಲೀ, ಶುದ್ಧ ಉತ್ತಮ ನಾಗರೀಕತೆಯ ಲಕ್ಷಣವೇನೂ ಅಲ್ಲ. ಏನೋ ಅನಿವಾರ್ಯ ದುರ್ಲಕ್ಷಣ ಎಂದೇನು. ರಾಷ್ಟ್ರದ ಗೌರವಕ್ಕೆ ಎಳ್ಳುಕಾಳಿನಷ್ಟಾದರೂ ಸಹಾಯಕವಲ್ಲ ಇವು ಎರಡೂ. ಕೋರ್ಟುಗಳನ್ನು ಶಾಶ್ವತವಾಗಿ ಕಿತ್ತುಹಾಕುವ ಮನಸ್ಸಿದ್ದರೂ ಈಗ ಅದು ನನ್ನ ಗುರಿಯಲ್ಲ. ಎಲ್ಲ ಯಂತ್ರಗಳನ್ನೂ ಗಿರಣಿ–ಕಾರಖಾನೆಗಳನ್ನೂ ನಾಶ ಮಾಡುವುದೂ ಅಲ್ಲ. ಹಾಗೆ ಮಾಡಲು ರಾಷ್ಟ್ರ ಇನ್ನೂ ಹೆಚ್ಚು ತ್ಯಾಗಕ್ಕೆ, ಸರಳತೆಗೆ ಸಿದ್ಧವಾಗಬೇಕು. ಈ ಕಾರ್ಯಕ್ರಮದಲ್ಲಿ ಈಗ ಸದ್ಯ ಚಾಲ್ತಿಯಲ್ಲಿರುವುದು–ಅಹಿಂಸೆ–ಒಂದೇ. ಅದೂ ಸಹ ಈ ಗ್ರಂಥದ ಉದ್ದೇಶದಂತೆ ನಡೆಸಲಾಗುತ್ತಿಲ್ಲ. ಹಾಗೆ ನಡೆದರೆ ಒಂದೇ ದಿನದಲ್ಲಿ ಭಾರತ ಸ್ವರಾಜ್ಯ ಸ್ಥಾಪನೆ ಮಾಡೀತು'

ಮೇಲಿನ ಮಾತುಗಳು ಸ್ವತಃ ಗಾಂಧಿ ತಮ್ಮ ಈ ಕೃತಿಯ ಸಾರ್ಥಕತೆಯ ಬಗ್ಗೆ ಏನು ಯೋಚಿಸಿದ್ದರು ಎಂಬುದನ್ನು ಸೂಚಿಸುತ್ತದೆ. ಅದನ್ನೇ ಬಹುಸೂಕ್ಷ್ಮವಾಗಿ ಇನ್ನೊಂದೆಡೆ 'ಜ್ಯಾಮಿತಿಯಲ್ಲಿ ಬಿಂದು ಎಂಬುದು ಕಣ್ಣಿಗೆ ಕಾಣದ ಸಂಕೇತ. ಆದರೆ ಅದೇ ಜ್ಯಾಮಿತಿಯ ಅಡಿಪಾಯ' ಎಂಬ ಮಾತುಗಳಲ್ಲಿ ಸ್ವರಾಜ್ಯದ ಮೂಲಭೂತ ಅಗತ್ಯವನ್ನು ಸೂಚಿಸಿದ್ದಾರೆ. ಆದರೂ ಗಾಂಧಿಗೆ ಈ ಕೃತಿಯ ಬಗ್ಗೆ ಎಂತಹ ವಿಶ್ವಾಸವಿತ್ತೆಂದರೆ, ೧೯೪೫ರಲ್ಲಿ ತಮ್ಮ ಶಿಷ್ಯ ಜವಾಹರಲಾಲ್ ದೇಶದ ಪ್ರಧಾನಮಂತ್ರಿಯಾಗುವ ಸಿದ್ಧತೆಯಲ್ಲಿದ್ದಾಗ ಅವರು ದೇಶವನ್ನು ಆಧುನಿಕ ನಾಗರೀಕತೆಯ ಸೂತ್ರಗಳ ಪ್ರಕಾರ ಕಟ್ಟಲು ಹೊರಟಿದ್ದಾರೆ ಎಂಬ ಸುಳಿವು ಸಿಕ್ಕ ಆತಂಕದಲ್ಲಿ ಅವರಿಗೆ, 'ಹಿಂದ್ ಸ್ವರಾಜ್'ನ ಸಂದೇಶವನ್ನು ಮರೆತಿರಾ? ಎಂದು ಕೇಳಿ ಪತ್ರ ಬರೆದರು. ಅದಕ್ಕೆ ನೆಹ್ರೂ ಕೊಟ್ಟ ಉತ್ತರ ಆಗಲೇ ಅವರ ಈ ಬೀಜಕೃತಿಗೆ ಅವರ ಆಪ್ತ ಶಿಷ್ಯಬಳಗದಿಂದಲೇ ಒದಗಲಾರಂಭಿಸಿದ್ದ ದುಃಸ್ಥಿತಿಯನ್ನು ಸೂಚಿಸುವಂತಿತ್ತು. ಈಗ ವಾಸ್ತವದಲ್ಲಿ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆಯಾದರೂ, ಆಧುನಿಕ ನಾಗರೀಕತೆಯ ಆತ್ಯಂತಿಕ ರೂಪದಂತೆ ಕಾಣುತ್ತಿರುವ ಜಾಗತೀಕರಣದ ಈ ದಿನಗಳಲ್ಲಿ ಅದರ ಅನಾಹುತಗಳು –ರಾಕ್ಷಸೀಯ ಅಸಮಾನತೆ, ಬಗೆ ಬಗೆಯ ಹಿಂಸೆ, ನೀರು–ನೆಲ–ಗಾಳಿಗಳ ಸರ್ವನಾಶದ ಕೂಗುಗಳು ದೂರದ ಸಿಡಿಲಿನ ಸದ್ದಿನಂತೆ ಕೇಳಿಸಲಾರಂಭಿಸಿರುವಾಗ, ಜಗತ್ತಿನಾದ್ಯಂತ ಬೌದ್ಧಿಕ ವಲಯಗಳಲ್ಲಾದರೂ ಈ ಕೃತಿ ತುರ್ತು ಚರ್ಚೆಗೆ ಒಳಗಾಗುತ್ತಿರುವುದು ಗಮನಾರ್ಹ ಸಂಗತಿಯೇ ಆಗಿದೆ.

■

೨೯

ಭಾರತದಿಂದ ಪ್ರತಿಸ್ಪಂದನ; ತೀವ್ರಗೊಂಡ ದಮನ

ಗಾಂಧಿ ಲಂಡನ್ ಬಿಡುವ ಸ್ವಲ್ಪ ಮುನ್ನ ಸತ್ಯಾಗ್ರಹ ಸಂಬಂಧವಾದ ನಿಧಿ ತೀರಾ ತಳ ಮುಟ್ಟಿ ಸತ್ಯಾಗ್ರಹವನ್ನಾಗಲೀ, 'ಇಂಡಿಯನ್ ಒಪಿನಿಯನ್'ನ್ನಾಗಲೀ ಮುಂದುವರೆಸುವುದು ಕಷ್ಟವಾಗುತ್ತಿದೆ ಎಂಬ ಸಂದೇಶ ಅವರಿಗೆ ತಮ್ಮ ಗೆಳೆಯರಿಂದ ತಲುಪಿತ್ತು. ನಿಧಿ ಸಂಗ್ರಹ ಸಾಕಷ್ಟಿತ್ತಾದರೂ, ಸತ್ಯಾಗ್ರಹದಲ್ಲಿ ನಿರಂತರ ಭಾಗವಹಿಸುತ್ತಾ ದೀರ್ಘಕಾಲ ಸೆರೆಮನೆಯಲ್ಲಿ ಕಳೆಯಬೇಕಾದ ಬಡವರ ಕುಟುಂಬ ನಿರ್ವಹಣೆಗೆ ಹಣ ಕೊಡುವ ಮತ್ತು ಗಡಿಪಾರಾದವರಿಗೆ ಒಂದಿಷ್ಟು ಸಹಾಯ ಮಾಡುವ ಬಾಬತ್ತು ಶುರುವಾದಾಗಿನಿಂದ ನಿಧಿ ಖಾಲಿಯಾಗತೊಡಗಿತ್ತು. ಸತ್ಯಾಗ್ರಹ ಆಂದೋಲನ ಏರಿಳಿತಗಳನ್ನು ಕಾಣುತ್ತಿದ್ದುದರಿಂದ ನಿಧಿ ಸಂಗ್ರಹ ಕಷ್ಟವಾಗಿತ್ತು. ಗಾಂಧಿ ಮಗನ್‌ಲಾಲ್‌ಗೆ ಒಂದು ಪತ್ರ ಬರೆದು ತಾವು ಬರುವವರೆಗೆ ಹೇಗಾದರೂ ಮಾಡಿ– ಒಂದು ಪುಟದಷ್ಟಾದರೂ ಪ್ರಕಟಿಸುತ್ತಾ – 'ಇಂಡಿಯನ್ ಒಪಿನಿಯನ್' ಪತ್ರಿಕೆ ಸ್ಥಗಿತವಾಗದಂತೆ ನೋಡಿಕೊಳ್ಳುವಂತೆ ಸೂಚಿಸಿದ್ದರು.

ಆದರೆ ಗಾಂಧಿ ಮತ್ತು ಹಾಜಿ ಹಬೀಬರು ೧೯೦೯ರ ನವೆಂಬರ್ ೩೦ರಂದು ಹಡಗಿನಿಂದ ಇಳಿಯುತ್ತಿದ್ದಂತೆ ಸತ್ಯಾಗ್ರಹ ನಿಧಿಗೆ ರತನ್‌ಜಿ ಟಾಟಾ (ಭಾರತದ ಕೈಗಾರಿಕೋದ್ಯಮದ ಪಿತಾಮಹರೆನಿಸಿದ್ದ ಜೆಮ್‌ಶೆಡ್‌ಜಿ ಅವರ ಪುತ್ರ) ೨೫ ಸಾವಿರ ರೂ.ಗಳ ದೇಣಿಗೆ ಕಳಿಸಿದ್ದಾರೆ ಎಂಬ ಸುದ್ದಿ ತಿಳಿಯಿತು. ಈ ಬಗ್ಗೆ ಅವರು 'ಆಫ್ರಿಕಾದಲ್ಲಿ ಸತ್ಯಾಗ್ರಹ' ಎಂಬ ತಮ್ಮ ನೆನಪುಗಳ ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ; 'ಸತ್ಯಾಗ್ರಹಿ ಅಥವಾ ಮುಮುಕ್ಷುವಿಗೆ ದೇವರು ಅವಶ್ಯಕತೆಗಿಂತ ಹೆಚ್ಚು ಸಹಾಯ ಒದಗಿಸುವುದಿಲ್ಲ ಎಂಬ ಈಗಿನ ನಂಬಿಕೆ ಆಗ ನನ್ನಲ್ಲಿ ಇನ್ನೂ ಮೂಡಿರಲಿಲ್ಲ. ಆದರೆ ದೇವರಲ್ಲಿ ಪೂರ್ಣ ವಿಶ್ವಾಸವಿದ್ದುದರಿಂದ ಆತ ನನ್ನನ್ನು ಕೈಬಿಡಲಿಲ್ಲ. ಜೊತೆಗೆ ನಿರಾಶೆಯ ಮಡುವಿನಿಂದ ಸಹ ನನ್ನನ್ನು ಪಾರು ಮಾಡಿದ'. ಟಾಟಾ, ಗೋಖಲೆಯವರ ಅಭಿಮಾನಿಯಾಗಿದ್ದು ಅವರು 'ಸ್ವಾತಂತ್ರ್ಯ ಹೋರಾಟ'ಕ್ಕೆ ಪೂರಕವಾಗಿ ಸ್ಥಾಪಿಸಿದ್ದ 'ಸರ್ವೆಂಟ್ಸ್ ಆಫ್ ಇಂಡಿಯಾ' ಎಂಬ ಯುವಜನರ ವ್ಯಕ್ತಿತ್ವ ನಿರ್ಮಾಣಕ್ಕಾಗಿ ಶಿಕ್ಷಣ, ತರಬೇತಿ, ಮಹಿಳೆ ಮತ್ತು ಹಿಂದುಳಿದ ಜಾತಿಗಳ ಉನ್ನತಿ ರಚನಾತ್ಮಕ ಚಟುವಟಿಕೆಗಳ ಸಂಸ್ಥೆಗಾಗಿ ವಾರ್ಷಿಕ ದೇಣಿಗೆ ನೀಡುತ್ತಿದ್ದರು. ಗೋಖಲೆಯವರಿಂದ ಆಫ್ರಿಕಾದಲ್ಲಿನ ಗಾಂಧಿ ಹೋರಾಟದ ಬಗ್ಗೆ ತಿಳಿದು 'ಇಂಡಿಯನ್ ಒಪಿನಿಯನ್' ಪತ್ರಿಕೆಯ ಓದುಗರೂ ಆಗಿದ್ದರು. ಹಾಗಾಗಿ ಗಾಂಧಿಯವರ ಈ ಹೋರಾಟಕ್ಕೆ ತಮ್ಮ ಬೆಂಬಲವಾಗಿ ಈ ದೊಡ್ಡ ಮೊತ್ತವನ್ನು

ಕಳಿಸಿದ್ದರು. ಇದರಿಂದ ಗಾಂಧಿಗೆ ಮುದುಡತೊಡಗಿದ್ದ ಸತ್ಯಾಗ್ರಹ ಚಳುವಳಿಗೆ ಪುನಃಶ್ಚೇತನ ನೀಡಲು ಸಾಧ್ಯವಾಯಿತು. ಅವರು ಈ ಬಗ್ಗೆ 'ಇಂಡಿಯನ್ ಒಪಿನಿಯನ್'ಗೆ ಒಂದು ಪತ್ರ ಬರೆದು ಈ ಪತ್ರ ಪ್ರಕಟವಾಗುವ ಮುನ್ನ ನಾನು ಸೆರೆಮನೆಯಲ್ಲಿರುವ ನಿರೀಕ್ಷೆ ಇದೆ' ಎಂದು ಘೋಷಿಸಿದರು.

ಇದೇ ಸಮಯದಲ್ಲಿ ಗೋಖಲೆಯವರು ಮುಂಬೈನಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿ ಟ್ರಾನ್ಸ್‌ವಾಲ್‌ನಲ್ಲಿನ ಭಾರತೀಯರ ಸಂಕಷ್ಟ ಮತ್ತು ಹೋರಾಟಗಳನ್ನು ವಿವರಿಸುತ್ತಾ ಗಾಂಧಿ ನೇತೃತ್ವದಲ್ಲಿ ಹಿಂದೂಗಳು, ಮುಸ್ಲಿಮರು, ಕ್ರಿಶ್ಚಿಯನ್ನರು ಮತ್ತು ಪಾರ್ಸಿಗಳು ಒಂದಾಗಿ ತಮ್ಮ ಸ್ವಾರ್ಥ ಮರೆತು ಮಾತೃಭೂಮಿಯ ಮರ್ಯಾದೆಗಾಗಿ ಸತ್ಯಾಗ್ರಹವೆಂಬ ಹೊಸ ಮಾದರಿಯ ಪ್ರತಿಭಟನೆಯಲ್ಲಿ ತೊಡಗಿದ್ದು ಅವರಿಗೆ ನೆರವಾಗುವುದು ಭಾರತೀಯರೆಲ್ಲರ ಕರ್ತವ್ಯವೆಂದು ಕರೆ ಕೊಟ್ಟರು. ಜನ ಉದಾರವಾಗಿ ಸತ್ಯಾಗ್ರಹ ನಿಧಿಗೆ ಹಣ ನೀಡಿದರು. ಭಾರತದ ಕೆಲವು ರಾಜ ಮಹಾರಾಜರುಗಳೂ ದೇಣಿಗೆ ನೀಡಲು ಮುಂದೆ ಬಂದರು.

ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಗೆ ಗಾಂಧಿ ಹೆಸರು ಸೂಚನೆ

ಗಾಂಧಿ ಈಗ ಭಾರತದಾದ್ಯಂತ ಪ್ರಸಿದ್ಧರಾಗಿದ್ದರು. ಬಂಗಾಳ ಪ್ರಾಂತೀಯ ಕಾಂಗ್ರೆಸ್ ೧೯೦೯ರ ಡಿಸೆಂಬರ್ ಕೊನೆಯಲ್ಲಿ ನಡೆಯಲಿರುವ ಅಖಿಲ ಭಾರತೀಯ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಗೆ ಗಾಂಧಿಯವರ ಹೆಸರನ್ನು ಸೂಚಿಸಿತು. ಈ ಅಧಿವೇಶನಕ್ಕೆ ಒಂದು ಸಂದೇಶ ಕಳಿಸಿದ ಗಾಂಧಿ ಟ್ರಾನ್ಸ್‌ವಾಲ್‌ನಲ್ಲಿ ನಡೆಯುತ್ತಿರುವ ಹೋರಾಟ ತನ್ನ ಗುರಿ ಮತ್ತು ಮಾರ್ಗಗಳೆರಡರಲ್ಲೂ ಯಾವುದೇ ರೂಪದ ಹಿಂಸೆ ಅಥವಾ ಹಗೆತನವನ್ನು ಪೋಷಿಸದ ಪರಿಶುದ್ಧತೆಯನ್ನು ಕಾಪಾಡಿಕೊಂಡು ಬಂದಿರುವ ಆಧುನಿಕ ಕಾಲದ ಒಂದು ಅಪೂರ್ವ ಹೋರಾಟವಾಗಿದೆ ಎಂದು ಹೇಳಲು ತಾವು ಕೊಂಚವೂ ಹಿಂಜರಿಯುವುದಿಲ್ಲವೆಂದೂ, ಈಗ ಬರೀ ಮಾನಸಿಕ ಕೆಲಸಗಳಲ್ಲಿ ತೊಡಗಿರುವ ಕಾಂಗ್ರೆಸ್ ಕ್ರಿಯೆಗಳಲ್ಲೂ ತೊಡಗಬೇಕೆಂದೂ, ಅದಕ್ಕೆ ಮತ್ತು ಭಾರತದ ಇಂದಿನ ಅನೇಕ ಸಮಸ್ಯೆಗಳಿಗೆ ಇಲ್ಲಿನ ಅತ್ಯಂತ ಪುರಾತನ ಧರ್ಮ ಮತ್ತು ಸ್ವಭಾವಕ್ಕೆ ಹೊಂದಿಕೊಳ್ಳುವಂತಹ ತಮ್ಮ ಈ ಹೋರಾಟದ ಮಾರ್ಗ ಸೂಕ್ತವೆಂಬ ಸಲಹೆಯನ್ನು ಕಾಂಗ್ರೆಸ್‌ನ ಹಿರಿಯರು ಪರಿಗಣಿಸಬೇಕೆಂದೂ ಕೋರಿದರು.

ಅಧಿವೇಶನದಲ್ಲಿ ಗೋಖಲೆಯವರು ದ.ಆಫ್ರಿಕಾದಲ್ಲಿನ ಭಾರತೀಯರ ಸ್ಥಿತಿಗತಿಗಳ ಬಗ್ಗೆ ಒಂದು ನಿರ್ಣಯ ಮಂಡಿಸಿ, ಗಾಂಧಿಯನ್ನು ವೈಯಕ್ತಿಕವಾಗಿ ಬಲ್ಲೆ ಎಂದು ಹೇಳುವುದು ತಮಗೆ ಬಹಳ ಹೆಮ್ಮೆಯ ಸಂಗತಿಯಾಗಿದೆಯೆಂದೂ ಈ ಮನುಷ್ಯನಿಗಿಂತ ಹೆಚ್ಚಿನ ಪರಿಶುದ್ಧತೆಯ, ಘನತೆಯ, ಧೈರ್ಯವಂತಿಕೆಯ, ತ್ಯಾಗಶೀಲತೆಯ, ತನ್ನ ಜನರನ್ನು ಕುರಿತ ಪ್ರೀತಿ ಮತ್ತು ಅರ್ಪಣಾ ಮನೋಭಾವಗಳ, ತನ್ನ ದುರ್ಬಲ ಸಹಚರರ ಬಗೆಗಿನ ದಯಾಮಯತೆಯ, ಉನ್ನತ ತತ್ವಗಳ ಅನ್ವೇಷಣೆಯಲ್ಲಿ ಅತ್ಯಂತ ಸರಳ ಜೀವನಕ್ಕೆ ಬದ್ಧವಾದ ಇನ್ನಾವ ಮನುಷ್ಯನೂ ಈ ಭೂಮಿಯ ಮೇಲೆ ನಡೆದಾಡಿರಲಾರ ಎಂದು ಗಾಂಧಿಯನ್ನು ವರ್ಣಿಸಿದರು. ಇಡೀ ಜನಸಮೂಹ ಎದ್ದು ನಿಂತು ಒಂದೇ ಸಮನೆ ಚಪ್ಪಾಳೆ ತಟ್ಟುತ್ತಾ ಗಾಂಧಿಗೆ ಗೌರವ ಸಲ್ಲಿಸಿದರು. ನಂತರ

ಮದ್ರಾಸ್‌ನ ಸ್ವಾತಂತ್ರ್ಯ ಹೋರಾಟಗಾರ ಮತ್ತು ಪತ್ರಕರ್ತ ನಟೇಶನ್ ದ.ಆಫ್ರಿಕಾದಲ್ಲಿ ಹೋರಾಟದ ವಿವರಗಳನ್ನು ನೀಡಿ, ಈ ಹೋರಾಟಕ್ಕೆ ಬೆಂಬಲವಾಗಿ ಹಣ ಸಹಾಯವನ್ನು ಕೋರಿದರು. ಕೂಡಲೇ ಜನ ವೇದಿಕೆಯತ್ತ ಧಾವಿಸಿ ಹಣ ಮತ್ತು ಚಿನ್ನವನ್ನು, ಮಹಿಳೆಯರು ತಮ್ಮ ತಮ್ಮ ಉಂಗುರ ಮತ್ತು ಬಳೆಗಳನ್ನು ಬಿಚ್ಚಿಕೊಟ್ಟರು. ಆ ಕ್ಷಣದಲ್ಲೇ ಒಟ್ಟು ಹದಿನೆಂಟು ಸಾವಿರ ರೂಪಾಯಿಗಳ ನಿಧಿ ಸಂಗ್ರಹವಾಯಿತು. ಅಧಿವೇಶನದ ಅಧ್ಯಕ್ಷತೆ ವಹಿಸಿದ್ದ ಮದನಮೋಹನ ಮಾಳವೀಯ ಅವರು ಗಾಂಧಿ ಮತ್ತು ಅವರ ಅನುಯಾಯಿಗಳ ವೀರೋಚಿತವಾದ ಹೋರಾಟವನ್ನು ಕಾಂಗ್ರೆಸ್ ತುಂಬು ಅಭಿಮಾನದಿಂದ ಗಮನಿಸಿದೆಯೆಂಬ ನಿರ್ಣಯವನ್ನು ಓದಿ ಹೇಳಿದರು ಮತ್ತು ಹಣವನ್ನು ಗಾಂಧಿಗೆ ತಂತಿ ಮೂಲಕ ಕಳಿಸುವ ವ್ಯವಸ್ಥೆ ಮಾಡಿದರು.

ಡಿಸೆಂಬರ್ ಮೂರನೇ ವಾರದಲ್ಲಿ ತಮ್ಮ ಹೆಂಡತಿ–ಮಕ್ಕಳು ಮತ್ತು ಮಿತ್ರರನ್ನು ಕಾಣಲು ನೆಟಾಲ್‌ಗೆ ಹೊರಟ ಗಾಂಧಿ ಉಂಜೆನಿ ಎಂಬ ರೈಲ್ವೇ ನಿಲ್ದಾಣದಲ್ಲಿ ಇಳಿದು, ನಡುರಾತ್ರಿಯ ಕತ್ತಲೆಯಲ್ಲಿ ಹಾವು ಚೇಳುಗಳು ತುಂಬಿದ್ದ ಕಾಡಿನ ಮಧ್ಯೆ ಮೂರು ತಾಸು ನಡೆದು 'ಫೀನಿಕ್ಸ್' ತಲುಪಿದರು. ಅವರಿಗೆ ಕಸ್ತೂರಬಾ ಅವರ ಆರೋಗ್ಯದ್ದೇ ಚಿಂತೆಯಾಗಿದ್ದು ಸಾಕಷ್ಟು ಸುಧಾರಣೆಯಾಗಿದ್ದ ಅವರ ಆರೋಗ್ಯ ಕಂಡು ನೆಮ್ಮದಿ ತಾಳಿದರು. ನಂತರ ಡರ್ಬಾನ್ ಮತ್ತು ಸುತ್ತಮುತ್ತ ಸಭೆಗಳನ್ನು ಉದ್ದೇಶಿಸಿ ಮಾತನಾಡಿದ ಅವರು ಮಗ ಮಣಿಲಾಲ, ಬ್ಯಾರಿಸ್ಟರ್ ಜೋಸೆಫ್ ರಾಯಪ್ಪನ್ ಸೇರಿದಂತೆ ಆರು ಜನರೊಂದಿಗೆ ನೆಟಾಲ್ ಕಡೆಯಿಂದ ಟ್ರಾನ್ಸ್‌ವಾಲ್ ಗಡಿ ದಾಟಿದರು. ಆದರೆ ಅವರಾರನ್ನೂ ಪೊಲೀಸರು ಬಂಧಿಸದೆ ಗಾಂಧಿಯವರನ್ನು ನಿರಾಶೆಗೊಳಿಸಿದರು. ಆಗ ಅವರು ತಮ್ಮ ಈ ಸಹಚರರನ್ನು ನೆಟಾಲ್‌ಗೆ ವಾಪಸಾಗುವಂತೆ ಹೇಳಿ ಅಲ್ಲಿಂದ ಮತ್ತೆ ಗಡಿ ದಾಟಿ ಜೊಹಾನ್ಸ್‌ಬರ್ಗ್‌ಗೆ ಹೋಗಿ ಅಲ್ಲಿನ ಬೀದಿಗಳಲ್ಲಿ ಅನುಮತಿ ಪತ್ರವಿಲ್ಲದೆ ಹಣ್ಣು–ತರಕಾರಿ ಮಾರತೊಡಗಬೇಕೆಂದು ಸೂಚಿಸಿದರು. ಅವರು ಮಣಿಲಾಲ ಮತ್ತು ರಾಯಪ್ಪನ್ ಇಬ್ಬರಿಗೂ, ಒಂದು ಆದರ್ಶಕ್ಕಾಗಿ ಪ್ರತಿಷ್ಠೆ ಬಿಟ್ಟು ಯಾವುದೇ ಕಾಯಕ ಮಾಡಲು ಸಿದ್ಧವಾಗುವುದೇ ನಿಜವಾದ ಶಿಕ್ಷಣ ಎಂದು ತಿಳಿಸಿದರು. ಇಬ್ಬರೂ ಹಾಗೆಯೇ ಮಾಡಿ ಕೆಲವೇ ದಿನಗಳಲ್ಲಿ ಬಂಧನಕ್ಕೊಳಗಾಗಿ ೧೦ ದಿನಗಳ ಸಶ್ರಮ ಶಿಕ್ಷೆ ಅನುಭವಿಸಲು ಸೆರೆಮನೆ ಸೇರಿದರು.

ತಂಬಿ ನಾಯ್ಡು–ರುಸ್ತುಂಜಿ ಅವರ ತ್ಯಾಗ

ಚಳುವಳಿಯ ಈ ದುರ್ಬಲ ಹಂತದಲ್ಲೂ ಗಾಂಧಿಯವರೊಂದಿಗೆ ನಿಂತವರೆಂದರೆ ತಂಬಿ ನಾಯ್ಡೂ ನೇತೃತ್ವದ ತಮಿಳು ಜನರೇ. ಈ ತಮಿಳು ಗಂಡಸರ ಹೆಂಡತಿಯರು ಗಾಂಧಿ ಬಳಿ ಬಂದು ತಮ್ಮ ಓಲೆ, ಮೂಗುತಿ, ಕಾಸಿನ ಸರಗಳನ್ನೆಲ್ಲ ಬಿಚ್ಚಿ ಅವರ ಬಳಿ ನೀಡಿ ಸತ್ಯಾಗ್ರಹ ಅಂತ್ಯವಾಗುವವರೆಗೂ ಅವನ್ನು ತೊಡುವುದಿಲ್ಲ ಎಂದು ಪ್ರತಿಜ್ಞೆ ಮಾಡಿದರು. ಈ ಹೊತ್ತಿನಲ್ಲೇ ರುಸ್ತುಂಜಿ ಒಂದು ವರ್ಷದ ಸಶ್ರಮ ಶಿಕ್ಷೆ ಮುಗಿಸಿ ಬಿಡುಗಡೆಯಾದರು. ಆಗರ್ಭ ಶ್ರೀಮಂತರಾಗಿದ್ದ ಅವರು ಸೆರೆಮನೆ ವಾಸದಲ್ಲಿ ದಿನನಿತ್ಯ ಕಲ್ಲು ಒಡೆದು ಕಲ್ಲಿನ ಚೂರುಗಳು ಕಣ್ಣು ಹೊಕ್ಕು ಅರ್ಧ ಕುರುಡರಾಗಿದ್ದರಲ್ಲದೆ ಬಳಲಿ ಬೆಂಡಾಗಿ ಹೋಗಿದ್ದರು. ಸತ್ಯಾಗ್ರಹವನ್ನು ಮುರಿಯಲು ಸರ್ಕಾರ ತಮ್ಮಂಥವರನ್ನು

ದೂರದ ಕ್ರೂರ ಸೆರೆಮನೆಗಳಿಗೆ ಕಳಿಸಿ ಶಿಕ್ಷಿಸಲಾಗುತ್ತಿದೆಯಾದರೂ, ತಾವು ಮತ್ತೆ ಮತ್ತೆ ಅಂತಹ ಸೆರೆಮನೆಗಳಿಗೆ ಹೋಗಲು ಸಿದ್ಧವಿರುವುದಾಗಿ ಸರ್ಕಾರಕ್ಕೆ ತಿಳಿಸಿದರು. ನಂತರದಲ್ಲೇ ರೆ. ಜೋಸೆಫ್ ಡೋಕ್ ಅವರು ಅಮೆರಿಕಾ ಪ್ರವಾಸಕ್ಕೆ ಹೊರಟ ಸಂದರ್ಭದಲ್ಲಿ ಸತ್ಯಾಗ್ರಹ ದಳ ಅವರ ಗೌರವಾರ್ಥ ಏರ್ಪಾಟು ಮಾಡಿದ ಬೀಳ್ಕೊಡುಗೆಯ ಸಭೆಯಲ್ಲಿ ಭಾಗವಹಿಸಿದ್ದ ಹಲವು ಯೂರೋಪಿಯನ್ನರಲ್ಲಿ ಒಬ್ಬರಾದ ರೆವೆರೆಂಡ್ ಫಿಲಿಪ್ಸ್ ಅವರು ಸತ್ಯಾಗ್ರಹಿಗಳನ್ನು ಶ್ಲಾಘಿಸುತ್ತಾ, ಜಗತ್ತಿನ ಸಾತ್ವಿಕ ಪ್ರತಿರೋಧ ಆಂದೋಲನದ ಇತಿಹಾಸದಲ್ಲಿ ತಂಬಿ ನಾಯ್ಡೂ ಓರ್ವ ಅಪೂರ್ವ ಸತ್ಯಾಗ್ರಹಿಯಾಗಿದ್ದು, ಆತನ ಹೆಸರನ್ನು ಚಿರಸ್ಥಾಯಿ ಮಾಡಲು ಒಂದು ಸ್ಮಾರಕ ನಿರ್ಮಿಸುವುದು ಸೂಕ್ತ ಎಂದರು. ಜೊತೆಗೆ ಆ ಯೂರೋಪಿಯನ್ ಧಾರ್ಮಿಕ ಮುಖಂಡರು ಭಾರತೀಯರ ಪರವಾಗಿ ತಾವು ಸರ್ಕಾರದ ಅಧಿಪತಿಗಳೊಂದಿಗೆ ಮಾತಾಡುವುದಾಗಿಯೂ ಆಶ್ವಾಸನೆ ನೀಡಿದರು.

ಅತ್ತ ಭಾರತದಲ್ಲಿ ೧೯೧೦ರ ಫೆಬ್ರುವರಿ ೨೫ರಂದು ಗೋಪಾಲಕೃಷ್ಣ ಗೋಖಲೆಯವರು ವೈಸ್‌ರಾಯ್‌ರ ಆಡಳಿತ ಮಂಡಳಿಯ ಸಭೆಯಲ್ಲಿ ಭಾರತದಿಂದ ದ.ಆಫ್ರಿಕಾಕ್ಕೆ ಒಪ್ಪಂದದ ಅಡಿ ಕೂಲಿಕಾರರನ್ನು ಕಳಿಸುವ ವ್ಯವಸ್ಥೆಗೆ ಇತಿಶ್ರೀ ಹಾಡಬೇಕೆಂದು ಆಗ್ರಹಿಸುವ ಮಸೂದೆಯೊಂದನ್ನು ಮಂಡಿಸಿದರು. ಅದರ ಮೇಲೆ ಮಾಡಿದ ಭಾಷಣದಲ್ಲಿ ಈ ಒಪ್ಪಂದ – ಜೀತಪದ್ಧತಿ ಮತ್ತು ಗುಲಾಮಗಿರಿಯನ್ನು ಸೃಷ್ಟಿಸುತ್ತಿದ್ದು, ಬ್ರಿಟಿಷ್ ಸರ್ಕಾರ ತುರ್ತಾಗಿ ಇದಕ್ಕೊಂದು ಪರಿಹಾರ ಒದಗಿಸಬೇಕಾಗಿದೆ ಎಂದರು. ಗೋಖಲೆಯವರನ್ನು ಬೆಂಬಲಿಸಿ ಮಹಮ್ಮದ್ ಅಲಿ ಜಿನ್ನಾ ಸೇರಿದಂತೆ ಹಲವರು ಭಾಷಣ ಮಾಡಿ ಬ್ರಿಟಿಷ್ ಸರ್ಕಾರದ ಗಮನ ಸೆಳೆಯಲು ಪ್ರಯತ್ನ ಮಾಡಿದರು.

ಸತ್ಯಾಗ್ರಹಿಗಳಿಗೆ ಗಡಿಪಾರಿನ ಶಿಕ್ಷೆ: ನೆರವಿಗೆ ಬಂದ ನಟೇಶನ್–ರತನ್‌ಜಿ ಟಾಟಾ

ಆದರೆ ದಿನ ಕಳೆದಂತೆ ಸರ್ಕಾರ ಸತ್ಯಾಗ್ರಹಿಗಳೊಂದಿಗೆ ಹೆಚ್ಚು ಕ್ರೂರವಾಗಿ ನಡೆದುಕೊಳ್ಳಲಾರಂಭಿಸಿತು. ಮಣಿಲಾಲ ಮತ್ತು ಅವರ ಸಹಬಂದಿಗಳನ್ನು ಒಂಟಿ ಸೆರೆಮನೆವಾಸಕ್ಕೆ ತಳ್ಳಲಾಯಿತು. ಇನ್ನು ಕೆಲವರನ್ನು ಸಮುದ್ರ ಮಧ್ಯದ ಪೋರ್ಚುಗೀಸ್ ವಶದ ಕ್ರೂರ ಸೆರೆಮನೆಗಳಿಗೆ ಕಳಿಸಲಾಯಿತು. ಮತ್ತೆ ಕೆಲವು ಸಣ್ಣ ಬಡ ವ್ಯಾಪಾರಿಗಳನ್ನು ಗಡಿಪಾರು ಮಾಡಿ ಭಾರತಕ್ಕೆ ಕಳಿಸಲಾಯಿತು ಮತ್ತೆ ಕೆಲವರನ್ನು ಸುಮ್ಮನೆ ಹಡಗಿಗೆ ತುಂಬಿ ಭಾರತಕ್ಕೆ ಕಳಿಸಲಾಯಿತು. ಅಂತಹವರು ಯಾವುದೇ ವಿಷಾದವಿಲ್ಲದೆ ಮತ್ತು ಯಾವುದೇ ಸಹಾಯ ಅಪೇಕ್ಷಿಸದೆ ಗಾಂಧಿಯವರ ಚಳುವಳಿಯನ್ನು ಬೆಂಬಲಿಸಿ ಹಡಗು ಹತ್ತಿದರು. ಅವರಲ್ಲಿ ಚೀನೀ ಸಮುದಾಯದ ಮುಖಂಡ ಕ್ವಿನ್ ಕೂಡ ಸೇರಿದ್ದನು. ಸ್ವತಃ ಗಾಂಧಿಯವರೇ ಹೋಗಿ ಅವರೆಲ್ಲರ ಪ್ರಯಾಣದ ಉಸ್ತುವಾರಿ ವಹಿಸಿ ಅವರನ್ನು ಹಡಗು ಹತ್ತಿಸಿ ಬಂದರು. ಗಾಂಧಿ ತಮ್ಮ ಗೆಳೆಯರ ಮೂಲಕ ಭಾರತದಲ್ಲಿ ಅವರ ಪುನರ್ವಸತಿಯ ವ್ಯವಸ್ಥೆಯನ್ನು ಮಾಡಿದರು. ಆಗ ಭಾರತದಲ್ಲೇ ಇದ್ದ ಹೆನ್ರಿ ಪೊಲಾಕ್ ಗಾಂಧಿಯವರ ಅಭಿಮಾನಿಯಾಗಿದ್ದ ಮದ್ರಾಸ್‌ನ (ಈಗಿನ ಚೆನ್ನೈ) ನಟೇಶನ್

ಮುಂತಾದ ಭಾರತೀಯ ನಾಯಕರ ಸಹಾಯದೊಂದಿಗೆ, ಗಡೀಪಾರಾದ ಈ ಸತ್ಯಾಗ್ರಹಿಗಳ ಪುನರ್ವಸತಿಯ ವ್ಯವಸ್ಥೆ ಮಾಡಿದನು. ಪೊಲಾಕ್ ತನ್ನ ಭಾರತದ ಪ್ರವಾಸದಲ್ಲಿ ಸತ್ಯಾಗ್ರಹ ನಿಧಿಗಾಗಿ ಸುಮಾರು ೫೦ ಸಾವಿರ ರೂಪಾಯಿಗಳನ್ನು ಸಂಗ್ರಹಿಸಿದ್ದನು. ಗಡೀಪಾರಿನ ಸುದ್ದಿ ಕೇಳಿ ರತನ್‌ಜಿ ಟಾಟಾ ಅವರು ಗಾಂಧಿಯವರಿಗೆ ಪತ್ರ ಬರೆದು, 'ಮಾತೃಭೂಮಿಯ ಗೌರವ ಕಾಪಾಡುವ ನಿಮ್ಮ ಅದ್ಭುತ ಹೋರಾಟಕ್ಕೆ ನಾನು ನೀಡಿದ ಧನ ರೂಪದ ಕೊಡುಗೆ ಹೋರಾಟಕ್ಕೆ ಮತ್ತಷ್ಟು ಪ್ರೇರಣೆ ನೀಡಿರುವುದು ಸಂತೋಷಕರ' ಎಂದು ತಿಳಿಸಿ ಮತ್ತೆ ೨೫ ಸಾವಿರ ರೂಪಾಯಿಗಳನ್ನು ನೆರವಾಗಿ ಕಳಿಸಿದರು.

ಈ ಸಂದರ್ಭವನ್ನು ಗಾಂಧಿ ತಮ್ಮ 'ಆಫ್ರಿಕಾದಲ್ಲಿ ಸತ್ಯಾಗ್ರಹ' ಪುಸ್ತಕದಲ್ಲಿ ನಿರೂಪಿಸುವುದು ಹೀಗೆ: '...ನಮ್ಮ ಕೆಲಸ ಮುಂದುವರೆಯಲು ಈ ಎಲ್ಲ ಕಡೆಯಿಂದ ಬರತೊಡಗಿದ ಹಣ ಸಾಕಾಗಿದ್ದರಿಂದ ನಮ್ಮ ಹೋರಾಟ ಮುಂದುವರೆಯಿತು. ಆದರೆ ಇದರಿಂದ ಅಥವಾ ಇನ್ನೂ ಹೆಚ್ಚಿನ ಧನ ಸಹಾಯದಿಂದ ಸತ್ಯಾಗ್ರಹ ಮುಂದುವರೆಯಲು ಸಾಧ್ಯವಿರಲಿಲ್ಲ. ಮುಖ್ಯವಾಗಿ ಆತ್ಮಶಕ್ತಿ, ಆತ್ಮಶುದ್ಧಿ ಬೇಕು. ಸತ್ಯ ಸಂಗ್ರಾಮಕ್ಕೆ ಶೀಲಭಂಡಾರ ತುಂಬದ ಹೊರತು ಸತ್ಯಾಗ್ರಹ ಸಮರ ಅಸಾಧ್ಯ. ನೀತಿಬಾಹಿರನ ಸಂಪತ್ತೆಲ್ಲ ಹಾಳುಬಡಿದಿರುವ ಅರಮನೆಯಂತೆ. ಹೋರಾಟ ಎಷ್ಟು ದಿನ ನಡೆಯಬಹುದೋ ಹೇಳಲು ಸಾಧ್ಯವಿಲ್ಲವೆಂದು ಸತ್ಯಾಗ್ರಹಿಗಳು ಅರಿತರು. ತಮ್ಮ ನಿಲುವಿನಿಂದ ಒಂದು ಕಡೆ ಒಂದಿಂಚೂ ಕದಲಬಾರದೆಂಬ ಬೋಯರ್ ಸೇನಾನಿಗಳು, ಇನ್ನೊಂದು ಕಡೆ ಜಯಿಸಬೇಕು ಇಲ್ಲವೇ ಮಡಿಯಬೇಕು ಎಂಬ ಸತ್ಯಾಗ್ರಹಿಗಳ ಸಣ್ಣ ತಂಡ, ಒಂದೊಂದು ಕಾಲಿನಿಂದ ಲಕ್ಷಾಂತರ ಜೀವಿಗಳನ್ನು ನಾಶ ಮಾಡಬಲ್ಲ ಆನೆಗಳ ಎದುರು ಇರುವೆಗಳು ಯುದ್ಧ ಹೂಡಿದಂತಿತ್ತು. ಸತ್ಯಾಗ್ರಹಿಗಳು ಸತ್ಯಾಗ್ರಹಕ್ಕೆ ಯಾವ ಕಾಲಮಿತಿಯನ್ನೂ ಹಾಕಿಕೊಂಡಿರಲಿಲ್ಲ. ಅವರಿಗೆ ಒಂದು ವರ್ಷವೋ, ಅನೇಕ ವರ್ಷಗಳೋ ಎಲ್ಲ ಒಂದೇ. ಹೋರಾಟವೇ ಅವರ ವಿಜಯ ಪತಾಕೆ. ಹೋರಾಟವೆಂದರೆ ಸೆರೆಮನೆ, ಗಡಿಪಾರು. ಈ ಮಧ್ಯೆ ಅವರ ಸಂಸಾರಗಳ ಗತಿ? ಪದೇ ಪದೇ ಸೆರೆಮನೆಗೆ ಹೋಗುವವರಿಗೆ ಕರೆದು ಕೆಲಸ ಕೊಡುವವರು ಯಾರು? ಬಿಡುಗಡೆಯಾದ ಮೇಲೆ ವ್ಯಾಪಾರ-ಉದ್ಯೋಗ-ಕುಟುಂಬಗಳ ಮರುವ್ಯವಸ್ಥೆ ಹೇಗೆ? ಹೆಂಡತಿ-ಮಕ್ಕಳು ನಿತ್ಯಾನ್ನಕ್ಕಾಗಿ ಪರದಾಡುತ್ತಿರುವಾಗ ಸತ್ಯಾಗ್ರಹಿ ನಿರಾತಂಕವಾಗಿರುವುದು ಶಕ್ಯವೆ?'

ಸತ್ಯಾಗ್ರಹಿ ಕುಟುಂಬಗಳಿಗೊಂದು ನೆಲೆ

ಈ ಪ್ರಶ್ನೆ ಗಾಂಧಿಯನ್ನು ಬಹಳ ದಿನಗಳಿಂದ ಕಾಡುತ್ತಿತ್ತು. ಹಾಗಾಗಿಯೇ ಅವರು ಸತ್ಯಾಗ್ರಹಿಗಳ ಕುಟುಂಬಗಳಿಗೆ ಸಹಾಯಧನ ಒದಗಿಸುವ ಒಂದು ವ್ಯವಸ್ಥೆ ಮಾಡಿದ್ದರು. ಆದರೆ ಅದರ ಬಗ್ಗೆ ಹಲವು ಅಸಮಾಧಾನಗಳೂ ಇದ್ದವು. ಎಲ್ಲರಿಗೂ ಒಂದೇ ಮಟ್ಟದ ಸಹಾಯ ಸರಿಯೇ? ಕೊಡುತ್ತಿರುವ ಸಹಾಯಧನಕ್ಕೆ ಎಲ್ಲರೂ ಅರ್ಹರೇ? ಅದು ಕೆಲವು ಕಡೆ ದುರುಪಯೋಗವಾಗುತ್ತಿದೆಯಲ್ಲವೇ? ಇತ್ಯಾದಿ. ಆದರೆ ಪ್ರತಿಯೊಂದು ಪ್ರಕರಣವನ್ನೂ ಪರಿಶೀಲಿಸಿ ಸಹಾಯಧನದ ನಿರ್ಧಾರ ಮಾಡುವುದೂ, ಅದರ ಲೆಕ್ಕ

ಇಡುವುದೂ ಜಟಿಲವಾದ ಕೆಲಸ. ಜೊತೆಗೆ ಸತ್ಯಾಗ್ರಹಿಗಳಂತೆಯೇ ಅವರ ಕುಟುಂಬದವರನ್ನೂ ಒಂದು ನೈತಿಕ ಚೌಕಟ್ಟಿನಲ್ಲಿ ತರಬೇತುಗೊಳಿಸುವುದು ಅವಶ್ಯ ಎಂಬ ವಿಚಾರವೂ ಗಾಂಧಿಯವರ ಮನಸ್ಸಿನಲ್ಲಿ ಹರಿದಾಡುತ್ತಿತ್ತು. ಆದರೆ ಫೀನಿಕ್ಸ್ ಆಶ್ರಮ ಗಡಿಯಾಚೆಯ ನೆಟಾಲ್‌ನಲ್ಲಿದ್ದು ತಮ್ಮ ಕಾರ್ಯಕೇಂದ್ರವಾದ ಜೊಹಾನ್ಸ್‌ಬರ್ಗ್‌ನಿಂದ ಮುವ್ವತ್ತು ತಾಸುಗಳ ರೈಲು ಪ್ರಯಾಣದಷ್ಟು ದೂರವಿತ್ತು. ಹಾಗಾಗಿ ತರಬೇತಿ ಕೇಂದ್ರಕ್ಕಾಗಿ ಜೊಹಾನ್ಸ್‌ಬರ್ಗ್ ನಗರದಿಂದ ದೂರವೂ ಇರಬಾರದು, ಹತ್ತಿರವೂ ಇರಬಾರದು, ಅಂತಹ ಜಾಗ ಎಲ್ಲಿದೆ? ಅದನ್ನು ನಮಗೆ ಕೊಡುವವರು ಯಾರು ಎಂದೂ ಅವರು ಯೋಚಿಸುತ್ತಿದ್ದರು. ಇದರ ಬಗ್ಗೆ ತಮ್ಮ ಗೆಳೆಯ ಕಲೆನ್‌ಬಾಕ್‌ನೊಂದಿಗೆ ಸಮಾಲೋಚಿಸಿದರು. ಕಲೆನ್‌ಬಾಕ್ ಇದೆಲ್ಲದಕ್ಕೆ ಪರಿಹಾರವಾಗಿ ಸಹಾಯಧನದ ಅಗತ್ಯವಿರುವ ಎಲ್ಲ ಸತ್ಯಾಗ್ರಹಿಗಳ ಕುಟುಂಬಗಳೂ ಒಂದೇ ಕಡೆ ವಾಸಿಸಿ ಜೀವನ ನಡೆಸಬಲ್ಲ ವ್ಯವಸ್ಥೆಯನ್ನು ಮಾಡುವುದಾಗಿ ಹೇಳಿ, ೧೯೧೦ರ ಮೇ ೩೦ರಂದು ಜೊಹಾನ್ಸ್‌ಬರ್ಗ್‌ನಿಂದ ೩೦ ಕಿ.ಮೀ. ದೂರದಲ್ಲಿದ್ದೂ ಲಾಲೆ ಎಂಬ ರೈಲ್ವೇ ನಿಲ್ದಾಣದಿಂದ ಒಂದೂವರೆ ಕಿ.ಮೀ.ನಷ್ಟು ಸಮೀಪದಲ್ಲಿದ್ದ ೧೧೦೦ ಎಕರೆ ವಿಶಾಲ ಪ್ರದೇಶವನ್ನು ಕೊಂಡು, ಯಾವುದೇ ವೆಚ್ಚ-ಬಾಡಿಗೆಗಳಿಲ್ಲದೆ ಸತ್ಯಾಗ್ರಹಿಗಳ ಕುಟುಂಬಗಳಿಗಾಗಿ ಬಿಟ್ಟುಕೊಟ್ಟ. ಅಲ್ಲಿ ಕಟ್ಟಲಾರಂಭಿಸಿದ ವಸತಿ ಪ್ರದೇಶಕ್ಕೆ ಗಾಂಧಿ 'ಟಾಲ್‌ಸ್ಟಾಯ್ ಆಶ್ರಮ'ವೆಂದು ನಾಮಕರಣ ಮಾಡಿದರು.

■

೩೦

ಟಾಲ್‌ಸ್ಟಾಯ್ ಆಶ್ರಮ ಮತ್ತು ಅದರ ಹಲವು ಪ್ರಯೋಗಗಳು

ಗಾಂಧಿ ಲಂಡನ್‌ನಲ್ಲಿದ್ದಾಗ ಟಾಲ್‌ಸ್ಟಾಯ್‌ರೊಂದಿಗೆ ಆರಂಭಿಸಿದ್ದ ಪತ್ರ ವ್ಯವಹಾರವನ್ನು ದ.ಆಫ್ರಿಕಾಕ್ಕೆ ವಾಪಸಾದ ನಂತರವೂ ಮುಂದುವರೆಸಿದ್ದರು. ೧೯೧೦ರ ಏಪ್ರಿಲ್ ೫ರಂದು ಅವರು ತಮ್ಮ 'ಹಿಂದ್ ಸ್ವರಾಜ್'ನ ಇಂಗ್ಲಿಷ್ ಅನುವಾದ 'ಹೋಂ ರೂಲ್ ಇನ್ ಇಂಡಿಯಾ' ಪುಸ್ತಕವನ್ನು ಟಾಲ್‌ಸ್ಟಾಯ್‌ಗೆ ಕಳಿಸಿ, ತಾವು ಅವರ ಅಭಿಪ್ರಾಯವನ್ನು ಅಮೂಲ್ಯವೆಂದು ಭಾವಿಸಿ, ಅದಕ್ಕಾಗಿ ಎದುರು ನೋಡುತ್ತಿರುವುದಾಗಿ ತಿಳಿಸಿದ್ದರು. ಈ ಸಂಬಂಧವಾಗಿ ಟಾಲ್‌ಸ್ಟಾಯ್ ಏಪ್ರಿಲ್ ೧೯ರಂದು ತಮ್ಮ ದಿನಚರಿಯಲ್ಲಿ ಹೀಗೆ ಬರೆದಿದ್ದಾರೆ: 'ಇಂದು ಬೆಳಿಗ್ಗೆ ಇಬ್ಬರು ಒರಟೊರಟಾದ ಜಪಾನೀಯರು ಬಂದು ಐರೋಪ್ಯ ನಾಗರೀಕತೆಯ ಬಗ್ಗೆ ಉನ್ಮಾದಿತರಾಗಿ ಮಾತಾಡಿದರು. ಆದರೆ ಹಿಂದೂವೊಬ್ಬರಿಂದ ಬಂದಿರುವ ಪತ್ರ ಮತ್ತು ಪುಸ್ತಕ ಐರೋಪ್ಯ ನಾಗರೀಕತೆಯ ದೌರ್ಬಲ್ಯಗಳನ್ನು ಮಾತ್ರವಲ್ಲ ಅದರ ಅಪೂರ್ಣತೆಗಳನ್ನೂ ಸರಿಯಾಗಿ ಚಿತ್ರಿಸಿದೆ'. ಮಾರನೆಯ ದಿನ ದಿನಚರಿಯಲ್ಲಿ ಹೀಗೆ ಬರೆದಿದ್ದಾರೆ: 'ನಾಗರೀಕತೆ ಕುರಿತ ಗಾಂಧಿ ಪುಸ್ತಕವನ್ನು ಓದಿದೆ. ತುಂಬ ಚೆನ್ನಾಗಿದೆ.' ಮತ್ತೆ ಅದರ ಮಾರನೆಯ ದಿನ ಹೀಗೆ ದಾಖಲಿಸಿದ್ದಾರೆ: 'ಗಾಂಧಿ ಕುರಿತ (ಡೋಕ್ ಬರೆದಿರುವ ಜೀವನ ಚರಿತ್ರೆ) ಪುಸ್ತಕ ಓದಿದೆ. ಬಹಳ ಮುಖ್ಯವಾದ ಪುಸ್ತಕ. ಗಾಂಧಿಗೆ ಪತ್ರ ಬರೆಯಬೇಕು'. ನಂತರ ಮಾರನೆಯ ದಿನ ಅವರು ತಮ್ಮ ಗೆಳೆಯ ಚೆರ್ಕೋಫ್‌ಗೆ ಬರೆದ ಪತ್ರದಲ್ಲಿ ಗಾಂಧಿಯ ಪ್ರಸ್ತಾಪ ಮಾಡುತ್ತಾ, 'ಈ ವ್ಯಕ್ತಿ ನಮಗೆ ಮತ್ತು ನನಗೆ ಬಹಳ ಹತ್ತಿರವಿರುವವನು' ಎಂದು ಬರೆದರು.

ಟಾಲ್‌ಸ್ಟಾಯ್ ಏಪ್ರಿಲ್ ೨೫ರಂದು ಗಾಂಧಿಯವರಿಗೇ ನೇರವಾಗಿ ಹೀಗೆ ಪತ್ರ ಬರೆದರು;

ಪ್ರಿಯ ಮಿತ್ರ,

ನಿಮ್ಮ 'ಹೋಂ ರೂಲ್' ಕುರಿತ ಪುಸ್ತಕವನ್ನು ಆಸಕ್ತಿಯಿಂದ ಓದಿದೆ. 'ಸವಿನಯ ಕಾನೂನು ಭಂಗ' ಕುರಿತ ನಿಮ್ಮ ವಿಚಾರಗಳು ಭಾರತಕ್ಕೆ ಮಾತ್ರವಲ್ಲದೆ ಇಡೀ ಜಗತ್ತಿಗೆ ಮಹತ್ವದ್ದಾಗಿವೆ. ಹಾಗೇ ನಿಮ್ಮನ್ನು ಕುರಿತು ಡೋಕ್ ಬರೆದಿರುವ ಪುಸ್ತಕವನ್ನೂ ಕುತೂಹಲದಿಂದ ಓದಿದೆ. ಇದರೊಡನೆಯ ನಿಮ್ಮ ಪತ್ರ ನನಗೆ ಸಿಗಲಿಲ್ಲವಾದರೂ ಈ ಪುಸ್ತಕ ಓದಿ ಆ ಪತ್ರದಲ್ಲಿದ್ದಿರಬಹುದಾದ ವಿಚಾರಗಳನ್ನು ಊಹಿಸಲು ಸಾಧ್ಯವಾಗಿದೆ. ನನ್ನ ಆರೋಗ್ಯ ಸರಿಯಿಲ್ಲ. ಆದರೆ ನಾನು ಬಹುವಾಗಿ ಮೆಚ್ಚಿರುವ ಈ ಪುಸ್ತಕ

ಮತ್ತು ನಿಮ್ಮ ಕೆಲಸಗಳ ಬಗ್ಗೆ ಈಗ ಬರೆಯಲು ಸಾಧ್ಯವಾಗುತ್ತಿಲ್ಲ. ಆರೋಗ್ಯ ಸುಧಾರಿಸಿದ ಮೇಲೆ ಬರೆಯುವೆ.

ಇತೀ ನಿಮ್ಮ ಮಿತ್ರ ಮತ್ತು ಸೋದರ
ಟಾಲ್‌ಸ್ಟಾಯ್

ಕಲೆನ್‌ಬಾಕ್ ಖರೀದಿಸಿದ ಜಮೀನಿನಲ್ಲಿ ಆರಂಭಿಸಿದ ವಸತಿ ಪ್ರದೇಶಕ್ಕೆ ಟಾಲ್‌ಸ್ಟಾಯ್ ಆಶ್ರಮವೆಂದು ಹೆಸರಿಡಲು ಈ ಪತ್ರ ವ್ಯವಹಾರದ ಮೂಲಕ ಗಾಂಧಿ ಮತ್ತು ಟಾಲ್‌ಸ್ಟಾಯ್ ನಡುವೆ ಸ್ಥಾಪಿತವಾಗಿದ್ದ ಆಪ್ತ ಸಂಬಂಧವೂ ಕಾರಣವಾಗಿತ್ತೆನಿಸಬಹುದು. ಅವರು ಟಾಲ್‌ಸ್ಟಾಯ್ ಆಶ್ರಮದ ಸ್ಥಾಪನೆಯ ಕೆಲಸಗಳು ಮತ್ತು ಸತ್ಯಾಗ್ರಹಗಳ ಮಧ್ಯೆ ಬಿಡುವು ಮಾಡಿಕೊಂಡು ಆಗಸ್ಟ್ ೧೫ರಂದು ಟಾಲ್‌ಸ್ಟಾಯ್ ಅವರಿಗೆ ಬರೆದ ಪತ್ರದಲ್ಲಿ, ಕಲೆನ್‌ಬಾಕ್‌ರ ನೆರವಿನೊಂದಿಗೆ ಟಾಲ್ಸ್‌ಸ್ಟಾಯ್‌ರ ಹೆಸರಿನಲ್ಲಿ ಆಶ್ರಮವೊಂದನ್ನು ಸ್ಥಾಪಿಸಿರುವ ಸುದ್ದಿ ತಿಳಿಸಿದರಲ್ಲದೆ, 'ಇಂಡಿಯನ್ ಒಪಿನಿಯನ್' ಪತ್ರಿಕೆಯ ಹಲವು ಹಳೆಯ ಸಂಚಿಕೆಗಳನ್ನೂ ಕಳಿಸಿದರು. ಈ ಬಗ್ಗೆ ಟಾಲ್‌ಸ್ಟಾಯ್ ಸೆಪ್ಟೆಂಬರ್ ೬ರಂದು ತಮ್ಮ ದಿನಚರಿಯಲ್ಲಿ ಹೀಗೆ ಬರೆದರು: 'ಟ್ರಾನ್ಸ್‌ವಾಲ್‌ನ ಸವಿನಯ ಕಾನೂನು ಭಂಗ ಕಾಲೋನಿಯಿಂದ ಹರ್ಷದಾಯಕ ಸುದ್ದಿಯೊಂದು ಬಂದಿದೆ'. ನಂತರದಲ್ಲೇ ಅವರು ಅಂದರೆ ಸೆಪ್ಟೆಂಬರ್ ೭ರಂದು ಗಾಂಧಿಯವರಿಗೆ ದೀರ್ಘಪತ್ರವೊಂದನ್ನು ರಷ್ಯನ್ ಭಾಷೆಯಲ್ಲಿ ಬರೆದು ಅದನ್ನು ಇಂಗ್ಲಿಷ್‌ಗೆ ಅನುವಾದಿಸಿ ಕಳಿಸುವಂತೆ ತಮ್ಮ ಗೆಳೆಯ ಚೆರ್ಕೋಫ್‌ಗೆ ನೀಡಿದರು. ಅವರು ಅದನ್ನು – ಅವರೇ ಜೊತೆಪತ್ರದಲ್ಲಿ ಹೇಳಿಕೊಂಡಿರುವಂತೆ, ತಮ್ಮ ಇಂಗ್ಲಿಷ್ ಭಾಷಾ ಜ್ಞಾನದ ಮಿತಿಗಳಲ್ಲೇ ಅನುವಾದಿಸಿ–ಟಾಲ್‌ಸ್ಟಾಯ್ ಸಾಹಿತ್ಯವನ್ನು ಇಂಗ್ಲಿಷ್‌ನಲ್ಲಿ ಪ್ರಕಟಿಸುತ್ತಿದ್ದ ಪ್ರಕಾಶನ ಸಂಸ್ಥೆಯೊಂದರ ಮಿತ್ರರಿಗೆ ಕಳಿಸಿ, ಅದನ್ನು ಆ ಸಂಸ್ಥೆ ಹೊರತರುತ್ತಿದ್ದ ನಿಯತಕಾಲಿಕೆಯೊಂದರಲ್ಲಿ ಪ್ರಕಟಿಸಿ, ನಂತರ ಗಾಂಧಿ ವಿಳಾಸಕ್ಕೆ ಅಂಚೆಗೆ ಹಾಕುವಂತೆ ಕೋರಿದರು. ಇದಕ್ಕೆ ಕಾರಣ ಚೆರ್ಕೋಫ್ ಅವರೇ ತಮ್ಮ ಜೊತೆಪತ್ರದಲ್ಲಿ ತಿಳಿಸಿದಂತೆ, ಟಾಲ್‌ಸ್ಟಾಯ್ ಬಹುವಾಗಿ ಆಸಕ್ತಿ ತಾಳಿರುವ ಗಾಂಧಿಯವರ ಕೆಲಸದ ಮಹತ್ವ ಇಂಗ್ಲಿಷ್ ಭಾಷೆಯ ಮೂಲಕ ಹೆಚ್ಚು ಜನರಿಗೆ ತಲುಪಬೇಕೆಂಬ ಅವರ ಇಚ್ಛೆಯೇ ಕಾರಣವಾಗಿತ್ತು. ಟಾಲ್‌ಸ್ಟಾಯ್ ಅವರ ಪತ್ರದ ಒಟ್ಟು ಸಾರಾಂಶ ಹೀಗಿತ್ತು:

ಟಾಲ್‌ಸ್ಟಾಯ್ ಸಂದೇಶ

'ನಾನೆಷ್ಟೇ ದಿನ ಬದುಕಿರಲಿ ಅಷ್ಟೂ ದಿನಗಳ ಕಾಲ, ವಿಶೇಷವಾಗಿ ಸಾವಿನ ಸದ್ದು ಸ್ಪಷ್ಟವಾಗಿ ಕೇಳುತ್ತಿರುವ ಈ ದಿನಗಳಲ್ಲಿ ನಾನು ಜನರಿಗೆ ಹೇಳಬಯಸುವ ಮುಖ್ಯ ವಿಷಯವೆಂದರೆ, ಯಾವುದನ್ನು ಈಗ ಸವಿನಯ ಕಾನೂನು ಭಂಗ ಎಂದು ಕರೆಯಲಾಗುತ್ತಿದೆಯೋ ಅದು ಹುಸಿ ವ್ಯಾಖ್ಯಾನಗಳಿಂದ ಮಲಿನಗೊಳ್ಳದ ಪರಿಶುದ್ಧ ಪ್ರೇಮದ ಅಭಿವ್ಯಕ್ತಿಯೇ ಆಗಿದೆ. ಇದು ಮಾನವ ಜೀವನದ ಅತ್ಯುನ್ನತ ಮತ್ತು ಏಕೈಕ ನಿಯಮವಾಗಿದ್ದು, ಪ್ರತಿ ಮನುಷ್ಯನ ಆತ್ಮದ ಆಳಾತಿಆಳಗಳಲ್ಲಿ–ಮಕ್ಕಳಲ್ಲಿ ಕಾಣುವಂತೆ– ಲೋಕ ವ್ಯವಹಾರಗಳಿಂದ ಕಲುಷಿತವಾಗದವರೆಗೆ ತುಡಿಯುವ ಮಿಡಿತವಾಗಿದೆ.

ಭಾರತೀಯ, ಚೀನೀ, ಗ್ರೀಕ್, ಹೀಬ್ರೂ ಹೀಗೆ ಎಲ್ಲ ಜನಾಂಗಗಳ ಸಂತರೂ ಘೋಷಿಸಿರುವುದು ಈ ನಿಯಮವನ್ನೇ. ಒಮ್ಮೆ ಪ್ರೇಮದ ಆವರಣಕ್ಕೆ ಬಲ ಪ್ರವೇಶಿಸಿತೆಂದಾದರೆ ಪ್ರೇಮ ಮನುಷ್ಯ ಜೀವನದ ನಿಯಮವಾಗಿ ಉಳಿಯುವುದಿಲ್ಲ ಮತ್ತು ಉಳಿಯಲಾರದು ಕೂಡ. ಪ್ರೇಮದ ನಿಯಮವಿಲ್ಲದೆಡೆ ಯಾವ ನಿಯಮವೂ ಇರಲಾರದು. ಅದೇ ಹಿಂಸೆ, ಅಂದರೆ ಬಲಶಾಲಿಯ ಬಲ ಪ್ರದರ್ಶನ. ಕ್ರಿಶ್ಚಿಯನ್ ಜಗತ್ತು ಮತ್ತು ಇತರ ಜಗತ್ತಿನ ನಡುವಣ ವ್ಯತ್ಯಾಸವೆಂದರೆ, ಕ್ರೈಸ್ತ ಧರ್ಮದಲ್ಲಿ ಪ್ರೇಮದ ನಿಯಮ ನಮೂದಾಗಿದ್ದಷ್ಟು ಸ್ಪಷ್ಟವಾಗಿ ಇತರ ಧರ್ಮಗಳಲ್ಲಿ ಆಗಿರಲಿಲ್ಲ. ಆದರೆ ಕ್ರೈಸ್ತ ಜಗತ್ತು ಇದನ್ನು ತನ್ನ ಶ್ಲೋಕ ಪಠಣಗಳಿಗೆ ಸೀಮಿತಗೊಳಿಸಿಕೊಂಡು ಹಿಂಸೆಯನ್ನು ಆಧರಿಸಿದ ವಿರೋಧಾಭಾಸಗಳ ಬದುಕನ್ನು ಕಟ್ಟಿಕೊಂಡಿದೆ. ಹೀಗೇ ಕ್ರಿಶ್ಚಿಯನ್ ಜಗತ್ತು ಕಳೆದ ಹತ್ತೊಂಬತ್ತು ಶತಮಾನಗಳಿಂದ ಬಾಳುತ್ತಿರುವುದು... ಹಾಗಾಗಿ ಇಂದು ಅವರ ಮುಂದಿರುವ ಪ್ರಶ್ನೆ ಇದು: ಬಲಿಷ್ಠನ ಬಲದ ಮೇಲೆ ಬದುಕನ್ನು ಕಟ್ಟಿಕೊಂಡು ಕ್ರಿಸ್ತನ ಉಪದೇಶಗಳನ್ನು ಒಪ್ಪಲಾಗದು ಎಂದು ಘೋಷಿಸಬೇಕು ಅಥವಾ ಕಡ್ಡಾಯ ತೆರಿಗೆಗಳು ಕೋರ್ಟು, ಪೊಲೀಸು, ಮುಖ್ಯವಾಗಿ ಸೈನಿಕ ಸಂಬಂಧಿತ ಸಂಸ್ಥೆಗಳನ್ನು ಮುಚ್ಚಬೇಕು. ಈ ದಿಸೆಯಲ್ಲಿ ನೀವು ಟ್ರಾನ್ಸ್‌ವಾಲ್‌ನಲ್ಲಿ ನಡೆಸಿರುವ ಚಟುವಟಿಕೆಗಳು ಬಹಳ ಮುಖ್ಯವಾದದ್ದಾಗಿದ್ದು, ಜಗತ್ತಿನ ಅತ್ಯಂತ ಮಹತ್ವದ ವಿದ್ಯಮಾನವಾಗಿ ಕೇವಲ ಕ್ರಿಶ್ಚಿಯನ್ ರಾಷ್ಟ್ರಗಳಲ್ಲ, ಇಡೀ ಜಗತ್ತೇ ಅನಿವಾರ್ಯವಾಗಿ ಅನುಸರಿಸಬೇಕಾದದ್ದಾಗಿದೆ... ಈ ಸಂಬಂಧವಾಗಿಯೇ ನಿಮಗೊಂದು ಸಂತೋಷದ ಸಂಗತಿ ತಿಳಿಸಬೇಕು. ಇಲ್ಲಿ ರಷ್ಯಾದಲ್ಲಿ ವರ್ಷದಿಂದ ವರ್ಷಕ್ಕೆ ಸೈನ್ಯ ಸೇರಲು ನಿರಾಕರಿಸುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದ್ದು, ಇದು ಸವಿನಯ ಕಾನೂನು ಭಂಗ ಆಂದೋಲನದ ಸಣ್ಣ ತೊರೆಯೇ ಆಗಿ ನಿಮ್ಮ ಆಂದೋಲನದ ಬಲ ಹೆಚ್ಚಿಸುವಂತಿದೆ. ಈ ಜನರೆಲ್ಲ ಸೈನ್ಯ ಬೇಡ, ನಮ್ಮ ರಕ್ಷಣೆಗೆ ದೇವರಿದ್ದಾನೆ ಎನ್ನುತ್ತಿದ್ದಾರೆ. ದೇವರು ಖಂಡಿತ ಮನುಷ್ಯನಿಗಿಂತ ಬಹು ದೊಡ್ಡವನು...'

ಈ ಪತ್ರ ಅಲ್ಲಲ್ಲಿ ಸುತ್ತಾಡಿ ಟಾಲ್‌ಸ್ಟಾಯ್ ನಿಧನರಾದ ನವೆಂಬರ್ ೨೦ರ ನಂತರದ ಕೆಲ ದಿನಗಳಲ್ಲಿ ಗಾಂಧಿಯವರನ್ನು ತಲುಪಿತು. 'ಇಂಡಿಯನ್ ಒಪಿನಿಯನ್' ಈ ರೀತಿ ಅವರಿಗೆ ತನ್ನ ಜನರ ಪರವಾಗಿ ಶ್ರದ್ಧಾಂಜಲಿ ಸಲ್ಲಿಸಿತು: 'ಲಿಯೋ ಟಾಲ್‌ಸ್ಟಾಯ್ ಮಾನವತೆಗೆ ತಮ್ಮದೇ ವಿಶಿಷ್ಟ ರೀತಿಯ ಸ್ಪಂದನಶೀಲತೆಯನ್ನು ಒದಗಿಸಿದ ಈ ಯುಗದ ಮಹಾಪುರುಷರಾಗಿದ್ದು ಸಾಧ್ಯವಾದಷ್ಟೂ ಅವರ ಉಪದೇಶಗಳನ್ನು ಪಾಲಿಸುವ ಗುರಿ ನಮ್ಮದಾಗಿದೆ... ಓರ್ವ ನಿಷ್ಠಾವಂತ ಕ್ರೈಸ್ತರಾಗಿದ್ದ ಅವರು ಕ್ರೈಸ್ತ ಧರ್ಮದ ನಿಜ ವ್ಯಾಖ್ಯಾನವನ್ನು ಮಾತ್ರವಲ್ಲದೆ ಜಗತ್ತಿನ ಮಹಾಧರ್ಮವೊಂದರ ವಾಸ್ತವಿಕ ನೆಲೆಯ ಅರ್ಥ ನಿರೂಪಣೆಯನ್ನೂ ಮಾಡಿದರು. ಈ ಸಂಚಿಕೆಯ ಮುಖಪುಟದಲ್ಲಿ ಪ್ರಕಟಿಸಲಾಗಿರುವ, ಗಾಂಧಿಯವರಿಗೆ ಈ ಯಸ್ನಾಯಾ ಪೊಲ್ಯಾನಾದ ಸಂತ ಬರೆದ ಪತ್ರ, ಅವರು ಬರೆದ ತಮ್ಮ ಬದುಕಿನ ಕೊನೆಯ ಪತ್ರಗಳಲ್ಲಿ ಒಂದಾಗಿದ್ದು, ಅದರಲ್ಲಿ ಅವರು ಟ್ರಾನ್ಸ್‌ವಾಲ್‌ನ ಆಂದೋಲನವನ್ನು ಇಂದು ಜಗತ್ತಿನಲ್ಲಿ ನಡೆಯುತ್ತಿರುವ ಅತಿ ಮಹತ್ವದ ಘಟನೆ ಎಂದು ಹೇಳಿರುವುದನ್ನು ನಮ್ಮ ಸತ್ಯಾಗ್ರಹಕ್ಕೆ ದೊರೆತ ಮಹಾಮಾನ್ಯತೆ ಎಂದು ನಾವು ಭಾವಿಸುತ್ತೇವೆ'

ಎಲ್ಲರೂ ಸೇರಿ ಕಟ್ಟಿದ ಆಶ್ರಮ

ಈ ಶ್ರದ್ಧಾಂಜಲಿ, ಗಾಂಧಿ ಮತ್ತು ಕಲೆನ್‌ಬಾಕ್ ಅವರ ಮಾರ್ಗದರ್ಶನದಲ್ಲಿ ನಿರ್ಮಿತವಾಗುತ್ತಿದ್ದ ಟಾಲ್‌ಸ್ಟಾಯ್ ಆಶ್ರಮದ ಮಾದರಿಯಲ್ಲಿ ಪ್ರತಿಬಿಂಬಿತವಾಗುತ್ತಿತ್ತು. ಟಾಲ್‌ಸ್ಟಾಯ್ ಚಿಂತನೆಗಳ ಮೂಲ ಮಾತೃಕೆಗಳಾದ ಅಹಿಂಸೆ, ಸರಳತೆ, ದೈಹಿಕ ಶ್ರಮ, ಸತ್ಯಾಗ್ರಹ–ಆಶ್ರಮದ ಭೌತಿಕ ಮತ್ತು ಕಾರ್ಯಶೀಲ ವಿನ್ಯಾಸಗಳಲ್ಲಿ ಹಾಸುಹೊಕ್ಕಾಗಿದ್ದವು. ಈ ಜಾಗದಲ್ಲಿ ಮೊದಲೇ ಸಮೃದ್ಧವಾಗಿ ಬೆಳೆದು ನಿಂತ ನೂರಾರು ಕಿತ್ತಳೆ, ಸಿಹಿ ಬಾದಾಮಿ ಮತ್ತು ದ್ರಾಕ್ಷಿ ಗಿಡಗಳಿದ್ದವು. ಗುಡ್ಡದ ತಪ್ಪಲಲ್ಲಿ ಒಂದು ದೊಡ್ಡ ಮನೆಯೂ ಎರಡು ತೆರೆದ ಬಾವಿಗಳೂ ಇದ್ದವು. ಸನಿಹದಲ್ಲೇ ಒಂದು ಊಟೆ ಕೂಡ ಇತ್ತು. ಆ ಮನೆಯಲ್ಲಿ ಆಶ್ರಮದ ವಿನ್ಯಾಸಕಾರ ಕಲೆನ್‌ಬಾಕ್ ವಾಸ ಮಾಡುತ್ತಿದ್ದರೆ ಇತರ ಎರಡು ಡೇರೆಗಳಲ್ಲಿ ತಂಗಿದ್ದ ಸತ್ಯಾಗ್ರಹಿಗಳಿಗಾಗಿ ಕುಟೀರಗಳನ್ನು ಕಟ್ಟಲಾಯಿತು. ಆಗರ್ಭ ಶ್ರೀಮಂತರಾಗಿದ್ದ ಖಂಡೂಭಾಯಿ ದೇಸಾಯಿ, ಬ್ಯಾರಿಸ್ಟರ್ ರಾಯಪ್ಪನ್ ಸೇರಿದಂತೆ ಎಲ್ಲರೂ ಸೇರಿ ಮೇಲು–ಕೀಳು ಕೆಲಸಗಳೆನ್ನದೆ ಸಾಮೂಹಿಕವಾಗಿ ಆ ಬಯಲಿನ ಬಿಸಿಲಲ್ಲಿ ದುಡಿದು, ತಗಡು ಮತ್ತು ಮರದ ಹತ್ತಾರು ಮನೆಗಳನ್ನು ಕಟ್ಟಿದರು. ನೆಲ ಅಗೆಯುವ, ದೂರದ ಗುಡ್ಡದಿಂದ ಕಲ್ಲು ಹೊರುವ ಶ್ರಮದಾಯಕ ಕೆಲಸಗಳ ಮಧ್ಯೆ ಒಂದಿಬ್ಬರು ಪ್ರಜ್ಞೆ ತಪ್ಪಿ ಬಿದ್ದು ಮತ್ತೆ ಹಟದಿಂದ ಕೆಲಸವನ್ನು ಆರಂಭಿಸಿದ್ದೂ ಉಂಟು. ಇವರಿಗೆಲ್ಲ ಗಾಂಧಿಯೇ ಆಹಾರ ತಯಾರಿಸುತ್ತಿದ್ದರು. ಕೈಯಲ್ಲಿ ಕುಟ್ಟಿದ ಜವೆಗೋಧಿಯ ರೊಟ್ಟಿಗಳು, ನೆನೆ ಹಾಕಿದ ಶೇಂಗಾ ರುಬ್ಬಿ ತೆಗೆದ ಬೆಣ್ಣೆ ಮತ್ತು ಈ ಸಂದರ್ಭದಲ್ಲಿ ಗಾಂಧಿಯೇ ಪ್ರಯೋಗ ಮಾಡಿ ಕಂಡುಹಿಡಿದ ಗೋಧಿ ಹೊಟ್ಟನ್ನು ಹಿಂಗಿಸಿ ತಯಾರು ಮಾಡಿದ ಕಾಫಿ ಅವರ ಊಟೋಪಹಾರಗಳಾಗಿದ್ದವು. ಆಶ್ರಮದ ನಿರ್ಮಾಣದ ಸುದ್ದಿ ತಿಳಿದು ಧಾರ್ಮಿಕ ಮನೋಭಾವದ ಐರೋಪ್ಯ ಕ್ರಿಶ್ಚಿಯನ್ನರು ಹಣ, ಬಟ್ಟೆ ಆಹಾರಗಳ ನೆರವು ನೀಡಿದರು.

ಆಶ್ರಮದ ಜನಸಂಖ್ಯೆ ಸುಮಾರು ನೂರು ಆಗಿದ್ದು, ಅದು ಸತ್ಯಾಗ್ರಹದ ತೀವ್ರತೆಯ ಮೇಲೆ–ಬಂಧನ ಮತ್ತು ಬಿಡುಗಡೆಗಳನ್ನಾಧರಿಸಿ– ಹೆಚ್ಚೂ ಕಡಿಮೆ ಆಗುತ್ತಿತ್ತು. ಇವರಲ್ಲಿ ಹಿಂದೂ, ಮುಸ್ಲಿಂ, ಪಾರಸಿ, ಕ್ರಿಶ್ಚಿಯನ್ನರಿದ್ದು ಭಾರತದ ಹಲವು ಪ್ರಾಂತ್ಯಗಳಿಂದ ಬಂದವರಾಗಿ ಹಲವು ಭಾಷೆಗಳನ್ನು ಮಾತಾಡುತ್ತಿದ್ದರು. ಆಶ್ರಮದ ಒಟ್ಟು ನಿವಾಸಿಗಳಲ್ಲಿ ನಲವತ್ತು ಜನ ಯುವಕರಾಗಿದ್ದರೆ, ಮೂವರು ಮುದುಕರೂ, ಐವರು ಹೆಂಗಸರೂ ಮತ್ತು ಐವರು ಹುಡುಗಿಯರೂ ಸೇರಿದಂತೆ ಮೂವತ್ತು ಜನ ಮಕ್ಕಳಿದ್ದರು. ಪ್ರತಿ ಕುಟುಂಬಕ್ಕೂ ಅವರವರ ಅಗತ್ಯಗಳಿಗೆ ತಕ್ಕಂತೆ ಮನೆಗಳನ್ನು ಹಂಚಲಾಯಿತು. ಐರೋಪ್ಯ ದಾನಿಗಳು ನೀಡಿದ್ದ ಹಾಸಿಗೆ–ಹೊದಿಕೆ ಮತ್ತು ಬಟ್ಟೆಗಳನ್ನು ಎಲ್ಲರಿಗೂ ವಿತರಿಸಿ, ಸರಳ ಉಡುಪಿನ ನೀತಿ ಸಂಹಿತೆಯನ್ನು ಬೋಧಿಸಲಾಯಿತು. ದುಡಿಯಲು ಪಕ್ಕದಲ್ಲೇ ಸಣ್ಣ ಕೈಗಾರಿಕೆಗಳನ್ನು ಆರಂಭಿಸಲಾಯಿತು. ಕುಟೀರಗಳ ನಿರ್ಮಾಣಕ್ಕೆ ಬೇಕಾದ ಮರಗೆಲಸಕ್ಕಾಗಿ, ಗಾಂಧಿಯ ಅಭಿಮಾನಿಯಾಗಿದ್ದ ಗುಜರಾತಿ ಬಡಗಿಯೊಬ್ಬ ಉಚಿತವಾಗಿ ಕೆಲಸ ಮಾಡಲು ಬಂದವನು ತನ್ನೊಂದಿಗೆ ಕಡಿಮೆ ಕೂಲಿಯ ಕೆಲ ಆಫ್ರಿಕನ್ನರನ್ನೂ ಕರೆತಂದ. ಗಾಂಧಿ ಅವರಿಂದ ಬಡಗಿ ಕೆಲಸ ಕಲಿತರು. ಕಲೆನ್‌ಬಾಕ್ ದೂರದ ಕ್ರಿಶ್ಚಿಯನ್ ಮಠವೊಂದಕ್ಕೆ ಹೋಗಿ ಮೆಟ್ಟು ತಯಾರಿಸುವ ಕೌಶಲವನ್ನು ಕಲಿತು

ಬಂದರು. ಈ ಇಬ್ಬರೂ ಇತರರಿಗೆ ತಮ್ಮ ಕೌಶಲಗಳನ್ನು ಕಲಿಸಿದರು. ಗಾಂಧಿಯವರಂತೂ ಚಮ್ಮಾರಿಕೆಯಲ್ಲಿ ಪರಿಣತರೇ ಆಗಿ ತಮ್ಮ ಸಹಚರರಿಗಾಗಿ ಮೆಟ್ಟು-ಬೂಟುಗಳನ್ನು ಹೊಲಿದು ನೀಡಿದರು.

ಆಶ್ರಮದ ಕಟ್ಟುನಿಟ್ಟಾದ ನಿಯಮಗಳು

ಈ ಪುಟ್ಟ ಕೈಗಾರಿಕೆಗಳು ತಯಾರಿಸಿದ ಆಶ್ರಮದ ಅಗತ್ಯಗಳನ್ನು ಮೀರಿದ ಉತ್ಪನ್ನಗಳನ್ನು ಜೊಹಾನ್ಸ್‌ಬರ್ಗ್ ಮಾರುಕಟ್ಟೆಗೆ ಹೋಗಿ ಮಾರಿ ಆಶ್ರಮದ ಖರ್ಚಿಗಾಗಿ ಒಂದಿಷ್ಟು ಹಣವನ್ನೂ ಸಂಪಾದಿಸಿಕೊಂಡು ಬರಲಾಗುತ್ತಿತ್ತು. ಆದರೆ ಜೊಹಾನ್ಸ್‌ಬರ್ಗ್‌ಗೆ ಹೋಗಿಬರಲು ಕೆಲವು ನಿಯಮಗಳನ್ನು ರೂಪಿಸಲಾಯಿತು. ಆಶ್ರಮದ ಕೆಲಸಗಳಿಗಾಗಿ ಹೋಗಿ ಬರುವವರಿಗೆ ಮಾತ್ರ ಮೂರನೇ ದರ್ಜೆಯ ರೈಲು ಪ್ರಯಾಣದ ವೆಚ್ಚ ನೀಡಲಾಗುತ್ತಿತ್ತು. ಅಂಥವರಿಗೆ ಊಟ ತಿಂಡಿ ಇತ್ಯಾದಿ ಬಾಬತ್ತುಗಳಿಗೆ ಹಣ ನೀಡಲಾಗುತ್ತಿರಲಿಲ್ಲ. ಆಶ್ರಮದಿಂದಲೇ ಲಭ್ಯ ಆಹಾರ ವಸ್ತುಗಳನ್ನು ಒಯ್ಯಬೇಕಾಗಿತ್ತು. ಖಾಸಗಿ ಕೆಲಸಗಳಿಗೆ, ನಗರದ ಮೋಜಿಗಾಗಿ ಹೋಗಬಯಸುವವರಿಗೆ ಪ್ರಯಾಣದ ಖರ್ಚು ನೀಡಲಾಗುತ್ತಿರಲಿಲ್ಲ. ಅಂಥವರು ಮೂವತ್ತು ಕಿ.ಮೀ. ನಡೆದು ಹೋಗಿ ಮತ್ತೆ ಮೂವತ್ತು ಕಿ.ಮೀ. ನಡೆದು ಬರಬೇಕಾಗಿತ್ತು. ಎಷ್ಟೋ ಸಲ ಗಾಂಧಿ ತನ್ನ ಕಕ್ಷಿದಾರರ ಮೊಕದ್ದಮೆಗಳಲ್ಲಿ ಹಾಜರಾಗಲು ಬೆಳಗಿನ ಝಾವ ಎರಡು ಗಂಟೆಗೆ ಎದ್ದು ಹೊರಟು ಮಧ್ಯರಾತ್ರಿ ವಾಪಸ್ ಬರುತ್ತಿದ್ದರು. ನಡಿಗೆಯ ವೇಗದ ವಿಷಯದಲ್ಲಿ ಕೆಲವೊಮ್ಮೆ ಜೊತೆಗಾರರೊಂದಿಗೆ ಸ್ಪರ್ಧೆಯೂ ಏರ್ಪಡುತ್ತಿತ್ತು. ಇಂತಹ ಸ್ಪರ್ಧೆಯೊಂದರಲ್ಲಿ ಸಾಮಾನ್ಯವಾಗಿ ಏಳು ಅಥವಾ ಕಡಿಮೆ ಎಂದರೆ ಆರು ತಾಸುಗಳಲ್ಲಿ ಕ್ರಮಿಸುತ್ತಿದ್ದ ಈ ದೂರವನ್ನು ತಾವು ನಾಲ್ಕು ತಾಸು ಹದಿನೆಂಟು ನಿಮಿಷಗಳಲ್ಲಿ ಕ್ರಮಿಸಿದ್ದಾಗಿ ಗಾಂಧಿ 'ದ.ಆಫ್ರಿಕಾದಲ್ಲಿ ಸತ್ಯಾಗ್ರಹ' ಪುಸ್ತಕದಲ್ಲಿ ದಾಖಲಿಸಿದ್ದಾರೆ. ಇಂತಹ ಶ್ರಮದ ಬದುಕು ಮತ್ತು ಸಮತೋಲಿತ ಆಹಾರವೇ ತಮ್ಮ ಮತ್ತು ತಮ್ಮ ಸಹವರ್ತಿಗಳ ಒಳ್ಳೆಯ ಆರೋಗ್ಯಕ್ಕೆ ಕಾರಣವೆಂದು ಅವರು ಯಾವಾಗಲೂ ಹೇಳುತ್ತಿದ್ದರು. ಬೆಳಿಗ್ಗೆ ಏಳಕ್ಕೆ ಉಪಾಹಾರ, ಹನ್ನೊಂದಕ್ಕೆ ಮಧ್ಯಾಹ್ನದ ಊಟ, ಐದೂವರೆಗೆ ಸಂಜೆಯ ಊಟ, ರಾತ್ರಿ ಏಳಕ್ಕೆ ಸಾಮೂಹಿಕ ಪ್ರಾರ್ಥನೆ, ರಾತ್ರಿ ಒಂಬತ್ತಕ್ಕೆ ನಿದ್ರೆ ಇದು ಆಶ್ರಮವಾಸಿಗಳು ಅನುಸರಿಸಬೇಕಾಗಿದ್ದ ದಿನಚರಿ.

ಆಶ್ರಮಕ್ಕೆ ಸಾಮಾನ್ಯ ಅಡುಗೆ ಮನೆ ಇದ್ದು ಇಲ್ಲಿ ಎಲ್ಲರ ಒಮ್ಮತದೊಂದಿಗೆ ಸಸ್ಯಾಹಾರ ಮಾತ್ರ ತಯಾರಾಗುತ್ತಿತ್ತು. ಕ್ರಿಶ್ಚಿಯನ್ ಮಹಿಳೆಯರು ಅಡುಗೆ ಕೆಲಸ ನಿರ್ವಹಿಸುತ್ತಿದ್ದರು. ಮೊದಲು ಮಣಿಲಾಲ್, ನಂತರ ಅವನ ತಾಯಿ ಕಸ್ತೂರಬಾ ಫೀನಿಕ್ಸ್‌ನಿಂದ ಇಲ್ಲಿಗೆ ಬಂದು ನೆಲೆ ನಿಂತರು.

ಸಸ್ಯಾಹಾರಿಯಾದ ಕಲೆನ್‌ಬಾಕ್

ಕಲೆನ್‌ಬಾಕ್ ಇಲ್ಲಿಗೆ ಬಂದಮೇಲೆ ಮಾಂಸಾಹಾರ, ಧೂಮಪಾನ ಮತ್ತು ಮದ್ಯಪಾನ ಬಿಟ್ಟು ಗಾಂಧಿಯ ಜೊತೆ ಹಣ್ಣು ಹಂಪಲುಗಳ ಆಹಾರ ಪದ್ಧತಿಗೆ ಬದ್ಧನಾದ. ನಂತರ ಹಸುವಿನ ಹಾಲು ಹಿಂಡಲು ಬಳಸುತ್ತಿದ್ದ ಒರಟು ವಿಧಾನವನ್ನು ಎಲ್ಲೋ ಓದಿದ್ದೇ ನೆಪವಾಗಿ ಗಾಂಧಿ ಹಾಲು ಬಳಸುವುದನ್ನು ನಿಲ್ಲಿಸಿದರು. ಕಲೆನ್‌ಬಾಕ್

ಅವರನ್ನು ಅನುಸರಿಸಿದ. ಈತ, ಮೊದಲಿಂದಲೂ ವೈಭವೋಪೇತ ಜೀವನವನ್ನು ನಡೆಸಿಕೊಂಡು ಬಂದಿದ್ದರೂ, ಗಾಂಧಿಯ ಇನ್ನೋರ್ವ ಐರೋಪ್ಯ ಆಪ್ತ ಗೆಳೆಯ ಹೆನ್ರಿ ಪೊಲಾಕ್ ಮತ್ತು ಆತನ ಹೆಂಡತಿಯಂತೆ ನಾಗರಿಕ ಸೌಲಭ್ಯಗಳು ಅತ್ಯಗತ್ಯವೆಂದು ನಂಬಿದ್ದ ಮನುಷ್ಯನಾಗಿರಲಿಲ್ಲ. ಕಲೆನ್‌ಬಾಕ್ ಗಾಂಧಿಯ ಕನಿಷ್ಠ ಅಗತ್ಯಗಳ ಸರಳ ಜೀವನದ ಪ್ರತಿಯೊಂದು ಪ್ರಯೋಗಕ್ಕೂ ಸಾಥಿಯಾಗಿ ಸಂತಜೀವನಕ್ಕೆ ಖುಷಿಯಿಂದ ತಯಾರಾಗುತ್ತಿದ್ದ. ಪ್ರತಿ ಮನೆಗೆ ಒಂದು ಶೌಚಾಲಯವಿದ್ದುದರಿಂದ ಬಯಲಲ್ಲಿ ಮಲ ಮೂತ್ರ ವಿಸರ್ಜನೆ ಮತ್ತು ಮೂಗು ಚೊಕ್ಕಟ ಮಾಡಿಕೊಳ್ಳುವುದರ ವಿರುದ್ಧ ಜಾಗೃತಿ ಮೂಡಿಸುವ ಪ್ರಯತ್ನಗಳನ್ನು ಗಾಂಧಿ ಮಾಡಿದರು. ಕಲೆನ್‌ಬಾಕ್ ಅದರಲ್ಲೂ–ವಸತಿ ಪ್ರದೇಶದಲ್ಲಿ ಕಂಡುಬರುತ್ತಿದ್ದ ಮಲ ಇತ್ಯಾದಿ ಕೊಳಕನ್ನು ಮಣ್ಣು ಹಾಕಿ ಮುಚ್ಚುವುದರಲ್ಲಿ–ಸಕ್ರಿಯವಾಗಿ ಭಾಗವಹಿಸಿದ.

ಕಪ್ಪು ಆಫ್ರಿಕನ್ನರ ಒಡನಾಟ–ಬದಲಾದ ಗಾಂಧಿ ನಿಲುವು

ಆಶ್ರಮದ ನಿರ್ಮಾಣ ಸಮಯದಲ್ಲಿ ಕಪ್ಪು ಆಫ್ರಿಕನ್ ಕೂಲಿಕಾರರೊಂದಿಗೆ ಬೆರೆತು ಕೆಲಸ ಮಾಡುತ್ತಾ ಗಾಂಧಿ, ಈವರೆಗೆ ಎಲ್ಲರಂತೆ ಅವರನ್ನು 'ಕಾಫಿರ್' ಎಂದು ಗುರುತಿಸುವುದನ್ನು ಬಿಟ್ಟು, ಅವರನ್ನು, ಅವರ ಬದುಕಿನ ಸ್ಥಿತಿಗತಿಗಳ ಬಗ್ಗೆ ಮೊದಲ ಬಾರಿಗೆ ಪ್ರಜ್ಞಾಪೂರ್ವಕವಾಗಿ ಯೋಚನೆ ಮಾಡಲಾರಂಭಿಸಿದರು. ಇದರ ಫಲವಾಗಿ ಅವರು 'ಇಂಡಿಯನ್ ಒಪಿನಿಯನ್' ಪತ್ರಿಕೆಯ ಅಕ್ಟೋಬರ್ ೨೨ರ ಸಂಚಿಕೆಯಲ್ಲಿ ಮೊದಲ ಬಾರಿಗೆ ಈ ಸಮುದಾಯದ ಬಗ್ಗೆ ಬರೆಯುತ್ತಾ 'ಇದು ಮೂಲತಃ ಈ ಕಪ್ಪು ಜನರ ನಾಡು. ಭಾರತೀಯರು ಅವರ ಸೌಜನ್ಯದಿಂದಾಗಿ ಇಲ್ಲಿ ಬದುಕು ನಡೆಸಲು ಬಂದಿದ್ದರೆ, ಬಿಳಿಯರು ಬಲಪ್ರಯೋಗದ ಮೂಲಕ ಅವರ ನಾಡನ್ನು ಆಕ್ರಮಿಸಿಕೊಂಡು ಲೂಟಿ ಮಾಡುತ್ತಿದ್ದಾರೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಇದು ಬ್ರಿಟಿಷ್ ಸಾಮ್ರಾಜ್ಯದ ಅಭಿಮಾನಿಯಾಗಿ ಅದರ ಕಾನೂನುಬದ್ಧತೆಯನ್ನು ಮುಗ್ಧವಾಗಿ ಒಪ್ಪಿಕೊಂಡಿದ್ದ ಗಾಂಧಿಯವರ ನಿಲುವಿನಲ್ಲಿ ಉಂಟಾದ ಒಂದು ಮಹತ್ತರ ಬದಲಾವಣೆ ಎನ್ನಬೇಕು. ನಂತರದಲ್ಲೇ ಅವರು 'ಇಂಡಿಯನ್ ಒಪಿನಿಯನ್' ಪತ್ರಿಕೆಯಲ್ಲೇ ಕಪ್ಪು ಜನರ ಪ್ರವೇಶವನ್ನು ಸಾರ್ವಜನಿಕ ಕಟ್ಟಡಗಳೊಳಕ್ಕೆ ನಿಷೇಧಿಸಿರುವುದನ್ನು ಪ್ರಶ್ನಿಸಿ, ಇದಕ್ಕೆ ಪರಿಹಾರ ಎಂದರೆ ಕಪ್ಪು ಜನರಿಂದಲೂ ಸತ್ಯಾಗ್ರಹದ–ಅದೆಷ್ಟೇ ದೀರ್ಘಕಾಲೀನವಾದರೂ–ಆರಂಭ ಎಂದು ಬರೆದರು. ಇದೇ ಸಮಯದಲ್ಲಿ ಗಾಂಧಿ ಜೊಹಾನ್ಸ್‌ಬರ್ಗ್‌ಗೆ ಕಾಫಿರ್ ಮೇಲ್ ರೈಲುಗಾಡಿಯಲ್ಲಿ ಪ್ರಯಾಣ ಮಾಡಿದ ಸುದ್ದಿ ಕೇಳಿದ ನೆಟಾಲ್‌ನ ಕೆಲವು ಭಾರತೀಯರು ಹೌಹಾರಿ, ತಮ್ಮ ನಾಯಕ ಹೀಗೆಲ್ಲ ಕೆಳವರ್ಗದ 'ಕಾಫಿರ'ರೊಡನೆ ಒಡನಾಡಿ ತಮ್ಮ ಸಮುದಾಯದ ಮಾನ ಕಳೆಯಬಾರದೆಂದು ಕೋರಿ ಪತ್ರ ಬರೆದಾಗ, ಗಾಂಧಿ ತಾವು ಕಡುಬಡವನ ಬದುಕು ಬಾಳಲು ಇಚ್ಛಿಸಿರುವುದಾಗಿಯೂ ಈ ನಾಡಿನಲ್ಲಿ ಕಪ್ಪುಜನರ ಬವಣೆಗಳನ್ನು ಕೇಳಿ ತಳಮಳಗೊಂಡಿದ್ದು, ಅವರನ್ನು ಹತ್ತಿರದಿಂದ ಕಾಣಲು ತಾವು ಇಂತಹ ಪ್ರಯಾಣ ಆರಂಭಿಸಿರುವುದಾಗಿಯೂ ಅವರಿಗೆ ಉತ್ತರಿಸಿದರು.

ಇದೇ ಸಮಯದಲ್ಲಿ ಫೀನಿಕ್ಸ್‌ನಲ್ಲಿದ್ದ ಕಿರಿಯ ಬಂಧು ಮಗನ್‌ಲಾಲ್‌ಗೆ ಬರೆದ

ಪತ್ರವೊಂದರಲ್ಲಿ ಮಣಿಲಾಲ ಇಲ್ಲಿಗೆ ಬಂದ ಮೇಲೆ ಹೆಚ್ಚು ಚಿಂತಿಸುವುದನ್ನು ಬಿಟ್ಟಿರುವುದು ಕಂಡುಬಂದಿದೆಯೆಂದೂ, ಇದಕ್ಕೆ ಕಾರಣ ದೈಹಿಕ ಶ್ರಮ ಕೆಲಸಗಳಲ್ಲಿ ತೊಡಗಿರುವುದೇ ಆಗಿದೆಯೆಂದೂ, ದೇಹವನ್ನು ಮುದ್ದು ಮಾಡಿದಷ್ಟೂ ಮನಸ್ಸು ಕೆರಳಿ ಮನುಷ್ಯ ಕೇಡಿನತ್ತ ವಾಲುವನೆಂದೂ ಹೇಳುತ್ತಾ ತಾವು ಕಪ್ಪು ಜನರ ದುಡಿಮೆಯ ಬದುಕು ನೋಡುತ್ತಾ ನಿಜವಾಗಿ ಅವರು ನಮಗಿಂತ ಶ್ರೇಷ್ಠರು ಎನ್ನಿಸತೊಡಗಿರುವುದಾಗಿಯೂ ತಿಳಿಸಿದರು. 'ಈ ಕಪ್ಪುಜನ ತಿಳುವಳಿಕೆ ಇಲ್ಲದೆ ಮಾಡುತ್ತಿರುವುದನ್ನು ನಾವು ತಿಳುವಳಿಕೆಯಿಂದ ಮಾಡಬೇಕಷ್ಟೆ ಮತ್ತು ಬಾಹ್ಯವಾಗಿ ನಾವು ಅವರಂತೆಯೇ ಕಾಣಬೇಕು ಕೂಡ' ಎಂದೂ ಅವರು ಸೂಚಿಸಿದ್ದರು.

ಆಶ್ರಮದಲ್ಲಿ ಶಾಲೆ

ಜೂನ್‌ನಲ್ಲಿ ಗಾಂಧಿ ಟಾಲ್‌ಸ್ಟಾಯ್ ಆಶ್ರಮದ ಮಕ್ಕಳಿಗಾಗಿ ಒಂದು ಶಾಲೆ ತೆರೆಯುವ ಆಲೋಚನೆ ಮಾಡಿದರು. ಅಲ್ಲಿ ವಿವಿಧ ಭಾಷೆಗಳನ್ನಾಡುವ ಮಕ್ಕಳಿದ್ದುದರಿಂದ, ಮಾತೃಭಾಷಾ ಶಿಕ್ಷಣದಲ್ಲಿ ನಂಬಿಕೆಯಿದ್ದ ಗಾಂಧಿಗೆ ಸ್ವಲ್ಪ ಗೊಂದಲವಾಯಿತು. ಅವರು ಗುಜರಾತಿ ಮಾತನಾಡುವ ಮತ್ತು ಇತರ ಭಾಷೆ ಮಾತಾಡುವ ಮಕ್ಕಳನ್ನು ಎರಡು ಗುಂಪುಗಳನ್ನಾಗಿ ಮಾಡಿ, ಗುಜರಾತಿ ಗುಂಪಿನೊಂದಿಗೆ ಗುಜರಾತಿಯಲ್ಲೂ ಇನ್ನೊಂದು ಗುಂಪಿನೊಂದಿಗೆ ಉರ್ದು ಮತ್ತು ಅನಿವಾರ್ಯವಾಗಿ ಇಂಗ್ಲಿಷ್‌ನಲ್ಲೂ ಸಂವಾದಿಸುತ್ತಾ ಬೋಧನೆ ನಡೆಸುತ್ತಿದ್ದರು. ಆಗಾಗ ತಮಗೆ ಗೊತ್ತಿದ್ದಷ್ಟು ಚೂರುಪಾರು ತಮಿಳನ್ನು ಬಳಸುತ್ತಿದ್ದರು ಹಾಗೂ ತೆಲುಗು ಕಲಿಯಲು ಯತ್ನಿಸಿದರು. ಗಾಂಧಿ ಜೊತೆಗೆ ಕಲೆನ್‌ಬಾಕ್ ಕೂಡ ಶಿಕ್ಷಕರಾಗಿ ಸೇರಿಕೊಂಡರು. ಭೂಗೋಳ, ಇತಿಹಾಸ, ಪ್ರಾಥಮಿಕ ಗಣಿತ ಮತ್ತು ಧರ್ಮ ಇಲ್ಲಿನ ಅನೌಪಚಾರಿಕ ಶಿಕ್ಷಣದ ವಿಷಯಗಳಾಗಿದ್ದವು. ಗಾಂಧಿ ಜಗತ್ತಿನ ಎಲ್ಲ ಧರ್ಮಗಳ ಸಾರಗಳನ್ನೊಳಗೊಂಡ ಪಾಠಗಳ ಪುಸ್ತಕವೊಂದನ್ನು ಈ ಶಾಲೆಗಾಗಿ ತಯಾರಿಸಿದ್ದರು. ವಿದ್ಯಾರ್ಥಿಗಳು ಹೆಚ್ಚಾಗಿ ಕೂಲಿಕಾರರ ಮಕ್ಕಳಾದುದರಿಂದ ಬಹಳ ತುಂಟರಾಗಿದ್ದರು ಮತ್ತು ಪಾಠಗಳ ಕಡೆ ಹೆಚ್ಚು ಗಮನ ಕೊಡುತ್ತಿರಲಿಲ್ಲ ಎಂದು ಹೇಳುವ ಗಾಂಧಿ ಆಟ ಮತ್ತು ಕಥೆಗಳ ಮೂಲಕ ಇವರನ್ನು ಸೆಳೆಯುತ್ತಿದ್ದುದಾಗಿಯೂ, ಈ ಶಾಲೆಯ ಪ್ರಯೋಗದಿಂದ ಏನು ಸಾಧನೆಯಾಗದಿದ್ದರೂ, ವಿವಿಧ ಹಿನ್ನೆಲೆಗಳಿಂದ ಬಂದ ಈ ಎಲ್ಲ ಮಕ್ಕಳು ಸೌಹಾರ್ದದಿಂದ ಬದುಕುವ ಪಾಠವನ್ನಂತೂ ಕಲಿತವು ಎನ್ನುತ್ತಾರೆ. ಈ ಶಾಲೆಯ ಮೂಲಕ ತಾವು ನಡೆಸಿದ ಪ್ರಯೋಗವೆಂದು ಗಾಂಧಿ ಹೇಳುವ ಒಂದು ವಿದ್ಯಮಾನ ಈ ದೃಷ್ಟಿಯಿಂದ ಗಮನಾರ್ಹವಾಗಿದೆ. ತಾವು ಎಲ್ಲ ಮಕ್ಕಳನ್ನೂ ತಾಯಿ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದು, ಗಂಡು ಹೆಣ್ಣೆನ್ನದೆ ಸಹಜವಾಗಿ ಬೆರೆತು ಬಾಳುವ ಪಾಠದ ಭಾಗವಾಗಿ ಲಿಂಗಭೇದವಿಲ್ಲದೆ ರಾತ್ರಿ ಒಂದು ಹಜಾರದಲ್ಲಿ ತಮ್ಮ ಸುತ್ತ ಹಾಸಿಗೆ ಹಾಸಿಕೊಂಡು ಮಲಗುವ ಕ್ರಮವನ್ನು ಅವರು ಆರಂಭಿಸಿದ್ದರು. ಅಲ್ಲದೆ ತಮ್ಮ ಕಣ್ಗಾವಲಿನಲ್ಲಿ ಗಂಡು ಹೆಣ್ಣು ಮಕ್ಕಳಿಬ್ಬರೂ ಒಟ್ಟಿಗೆ ಊಟೆಯ ಬಳಿ ಸ್ನಾನ ಮಾಡುವಂತೆಯೂ ಮಾಡಿದ್ದರು. ಲೈಂಗಿಕ ಸಂಯಮ ಕಲಿಸುವ ತರಬೇತಿ ಇದಾಗಿತ್ತೆಂದೂ, ಇದರಿಂದ ಯಾವ ಅನಾಹುತವೂ ಸಂಭವಿಸಲಿಲ್ಲ ಎನ್ನುವ ಗಾಂಧಿ ಈ ಸಂಬಂಧವಾಗಿ ಹೇಳುವ ಒಂದು ಘಟನೆ ಕುತೂಹಲಕರವಾಗಿದೆ.

ಹೆಣ್ಣು ಮಕ್ಕಳ ತಲೆ ಬೋಳಿಸಿದ ಗಾಂಧಿ

ಒಮ್ಮೆ ಗಾಂಧಿ ಇಲ್ಲದಾಗ ಒಬ್ಬ ಹುಡುಗ ಇಬ್ಬರು ಹುಡುಗಿಯರೊಂದಿಗೆ ಕೆಟ್ಟದಾಗಿ ನಡೆದುಕೊಂಡ ವರದಿ ಅವರಿಗೆ ತಲುಪಿತು. ಇದರಿಂದ ವಿಚಲಿತರಾದ ಗಾಂಧಿ, ಸುದ್ದಿಯನ್ನು ಖಚಿತಪಡಿಸಿಕೊಂಡು ಹುಡುಗರ ಕಣ್ಣುಗಳನ್ನು ಶುದ್ಧಗೊಳಿಸುವ ವಿಧಾನವಾಗಿ ಇಬ್ಬರು ಹುಡುಗಿಯರ ತಲೆಗಳನ್ನು ಬೋಳಿಸಿ ಅವರ ರೂಪವನ್ನು ವಿಕರ್ಷಿಸಲು ನಿರ್ಧರಿಸಿದರು. ಮೊದಲು ಆ ಹೆಣ್ಣುಮಕ್ಕಳ ಪೋಷಕರೊಂದಿಗೆ ಚರ್ಚಿಸಿ, ಆನಂತರ ಇಬ್ಬರು ಹುಡುಗಿಯರ ಮನವೊಲಿಸಿ ಸ್ವತಃ ತಾವೇ ಆ ಕೆಲಸ ಮಾಡಿದರು. (ಕ್ಷೌರ ಕೌಶಲ್ಯವನ್ನು ಕಲಿತಿದ್ದ ಅವರು ತಮ್ಮ ಕ್ಷೌರವನ್ನು ತಾವೇ ಮಾಡಿಕೊಳ್ಳುತ್ತಿದ್ದರಲ್ಲದೆ ಇತರರಿಗೂ ಮಾಡುತ್ತಿದ್ದರು!) ನಂತರದ ದಿನಗಳಲ್ಲಿ ಮತ್ತೆ ಹುಡುಗ-ಹುಡುಗಿಯರ ನಡುವೆ ಇಂತಹ ಕೆಟ್ಟ ಘಟನೆಗಳು ನಡೆಯಲಿಲ್ಲ ಎನ್ನುವ ಗಾಂಧಿ ಮುಂದೆ ಹಲವು ವರ್ಷಗಳ ನಂತರ ಈ ಬಗ್ಗೆ 'ಅದು ನನ್ನ ಅಜ್ಞಾನವೂ ಇದ್ದೀತು, ಆದರೆ ಅದು ಕೇಡಾಗಿರಲಿಲ್ಲ. ಏಕೆಂದರೆ ನಾನು ಅದನ್ನು ಒಬ್ಬ ಗುರುವಾಗಿ ಶುದ್ಧ ಮನಸ್ಸಿನಿಂದ ಮಾಡಿದ್ದೆನಾದ್ದರಿಂದ ಅದರ ಬಗ್ಗೆ ನನಗೇನೂ ವಿಷಾದವಿರಲಿಲ್ಲ ಮತ್ತು ಇತರರೂ ಅನ್ಯಥಾ ಭಾವಿಸಲಿಲ್ಲ' ಎಂಬ ವಿವರಣೆ ನೀಡಿದ್ದಾರೆ.

ನಿಸರ್ಗ ಚಿಕಿತ್ಸೆ ಮತ್ತು ಪ್ರಾಣಿಪ್ರೇಮದ ಪ್ರಯೋಗಗಳು

ಟಾಲ್‌ಸ್ಟಾಯ್ ಆಶ್ರಮದಲ್ಲಿ ಯಾವ ರೋಗಕ್ಕೂ ಔಷಧಿಗಳ ಸಂಗ್ರಹವಿರಲಿಲ್ಲ. ಜೊತೆಗೆ ಅಲ್ಲಿನ ಯಾರಿಗೂ ಯಾವ ದೊಡ್ಡ ಅಸ್ವಸ್ಥತೆಗಳೂ ಉಂಟಾಗಲಿಲ್ಲ. ಸಣ್ಣಪುಟ್ಟ ಅಸ್ವಸ್ಥತೆಗಳನ್ನೆಲ್ಲ ಗಾಂಧಿ, ತಮ್ಮ ಮಣ್ಣು-ನೀರಿನ ಚಿಕಿತ್ಸೆ ಮತ್ತು ಪಥ್ಯಗಳಿಂದ ಗುಣ ಮಾಡುತ್ತಿದ್ದರು. ಹಾಗೆ ಇವರ ವೈದ್ಯಪರಿಣತಿಯನ್ನು ನಂಬಿ ಇವರ ಕಕ್ಷಿದಾರರೊಬ್ಬರು ಕಳಿಸಿದ್ದ ಗೂನುಬೆನ್ನಿನ ವೃದ್ಧ ಭಾರತೀಯ ಸಂಜಾತನೊಬ್ಬನ ಗೂರಲನ್ನು ವಾಸಿ ಮಾಡಿದ್ದರು. ಗಾಂಧಿಯವರ ಈ ಪರಿಣತಿಯನ್ನು ತಿಳಿದ ಹತ್ತಿರದ ಲಾಲೆ ರೈಲ್ವೆ ನಿಲ್ದಾಣದ ಅಧಿಕಾರಿಗಳು ತಮ್ಮ ಕುಟುಂಬಗಳ ಅಸ್ವಸ್ಥತೆಗಳಿಗೆ ಇವರ ಸಲಹೆಗಳನ್ನೇ ಪಡೆಯುತ್ತಿದ್ದರು. ಈ ಮೂಲಕ ಗಾಂಧಿ ಮತ್ತು ಅವರ ಅನುಯಾಯಿ ಸತ್ಯಾಗ್ರಹಿಗಳ ಸಾತ್ವಿಕ ಬದುಕನ್ನು ಕಂಡು ಮೆಚ್ಚಿಕೊಂಡ ಅವರು ಸೆರೆಮನೆಗೆ, ನ್ಯಾಯಾಲಯಗಳಿಗೆ ಮತ್ತು ಇತರೆ ಉದ್ದೇಶಗಳಿಗಾಗಿ ರೈಲು ಪ್ರಯಾಣ ಮಾಡುತ್ತಿದ್ದ ಆಶ್ರಮವಾಸಿಗಳಿಗಾಗಿ ಒಮ್ಮೊಮ್ಮೆ ರೈಲನ್ನು ಕೊಂಚಕಾಲ ತಡೆಹಿಡಿಯುವುದೂ ಸೇರಿ ಹಲವು ರೀತಿಯ ನೆರವನ್ನು ಒದಗಿಸುತ್ತಿದ್ದರು.

ಗಾಂಧಿಯವರ ಅಹಿಂಸೆ ಮತ್ತು ಪ್ರಕೃತಿಯೊಂದಿಗೆ ಸಮರಸವಾಗಿ ಬೆರೆತು ಬದುಕಬೇಕೆಂಬ ತತ್ವಕ್ಕನುಸಾರವಾಗಿ ಅಲ್ಲಿ ಯಾವ ಪ್ರಾಣಿಗಳನ್ನೂ ಕೊಲ್ಲಲಾಗುತ್ತಿರಲಿಲ್ಲ. ವಿಪರೀತ ಹಾವುಗಳಿದ್ದ ಅಲ್ಲಿ ಅನಿವಾರ್ಯವಾದ ಹೊರತು ಅವನ್ನು ಕೊಲ್ಲುವಂತಿರಲಿಲ್ಲ. ಆಶ್ರಮಕ್ಕೆ ಅತಿಥಿಯಾಗಿ ಬಂದಿದ್ದ ಜರ್ಮನ್ ಉರಗತಜ್ಞನೊಬ್ಬನ ಮೂಲಕ ಆಶ್ರಮವಾಸಿಗಳಿಗೆ ವಿಷಕಾರಿ ಮತ್ತು ವಿಷಕಾರಿಯಲ್ಲದ ಹಾವುಗಳ ವಿಂಗಡನೆಯ ಮತ್ತು ಅವುಗಳೊಂದಿಗೆ ಪ್ರಾಣಾಪಾಯವಿಲ್ಲದೆ ಬದುಕುವ ಪಾಠಗಳನ್ನು ಹೇಳಿಕೊಡಲಾಯಿತು. ಇದರಿಂದ ಉತ್ಸಾಹಿತನಾದ ಕಲೆನ್‌ಬಾಕ್, ಗಾಂಧಿಯ

ಕುತೂಹಲದ ಕಣ್ಗಾವಲಿನಲ್ಲಿ ನಾಗರಹಾವೊಂದನ್ನು ಹಿಡಿದು ಸಾಕುವ ಪ್ರಯೋಗ ಮಾಡಿದನಾದರೂ, ಭಯಭೀತರಾಗಿದ್ದ ಯಾರೋ ಆಶ್ರಮವಾಸಿ ಕಲೆನ್‌ಬಾಕ್‌ನ ಕಣ್ತಪ್ಪಿಸಿ ಅದರ ಗೂಡಿನಿಂದ ಅದನ್ನು ಬಿಡುಗಡೆ ಮಾಡಿಬಿಟ್ಟಿದ್ದರಿಂದ ಆ ಪ್ರಯೋಗ ಅಪೂರ್ಣವಾಗಿಯೇ ಉಳಿಯಿತು!

ಬದುಕಿನ ಇಂತಹ ಹಲವು ಪ್ರಯೋಗಗಳ ನಡುವೆ ಸತ್ಯಾಗ್ರಹ ಮುಂದುವರೆದು ಗಾಂಧಿ ಮತ್ತು ಅವರ ಇಬ್ಬರು ಮಕ್ಕಳೂ ಸೇರಿದಂತೆ ಸತ್ಯಾಗ್ರಹಿಗಳು ಆಶ್ರಮಕ್ಕೆ ಬರುತ್ತಲೂ ಹೋಗುತ್ತಲೂ ಇದ್ದರು. ಈ ಮಧ್ಯೆ ೧೯೧೦ರ ಜೂನ್ ೧ರಿಂದ ಸಾಮ್ರಾಜ್ಯದಡಿಯಲ್ಲಿ ದ.ಆಫ್ರಿಕಾದ ನಾಲ್ಕೂ ಪ್ರಾಂತ್ಯಗಳು–ನೆಟಾಲ್, ಟ್ರಾನ್ಸ್‌ವಾಲ್, ಕೇಪ್ ಮತ್ತು ಆರೆಂಜ್ ಫ್ರೀ ಸ್ಟೇಟ್–ಒಂದು ಒಕ್ಕೂಟ ರಾಷ್ಟ್ರವೆಂದು ಘೋಷಿತವಾಯಿತು. ಮೊದಲು ಬ್ರಿಟಿಷ್ ಸಾಮ್ರಾಜ್ಯದ ಭಾಗವಾಗಿಯೇ ಸ್ವಯಂ ಆಡಳಿತದ ಈ ಪ್ರಾಂತ್ಯಗಳು ಒಗ್ಗೂಡಿ ಒಕ್ಕೂಟವಾದ ರಾಜಕಾರಣದ ಹಿಂದಿದ್ದುದು, ಆ ನಾಲ್ಕೂ ಪ್ರಾಂತ್ಯಗಳಲ್ಲಿ ಬಿಳಿಯರ ಆಳ್ವಿಕೆಗೆ ಸಂಘಟಿತ ಬಲ ತುಂಬುವುದೇ ಆಗಿತ್ತು. ಕೇಪ್‌ಟೌನ್ ಒಕ್ಕೂಟದ ರಾಜಧಾನಿಯಾಗಿ, ಅಲ್ಲಿಯೇ ಒಕ್ಕೂಟದ ಕೇಂದ್ರ ಸಂಸತ್ತಿನ ಅಧಿವೇಶನಗಳು ನಡೆಯುವವೆಂದು ಪ್ರಕಟಿಸಲಾಯಿತು. ಜ. ಬೋತಾ ಅದರ ಪ್ರಧಾನಿಯಾಗಿ ಮತ್ತು ಜ. ಸ್ಮಟ್ಸ್ ಕಾರ್ಯದರ್ಶಿಯಾಗಿ ಮುಂದುವರೆದರು. ಇದರಿಂದಾಗಿ ಗಾಂಧಿ, ಈಗ ಕೇಪ್‌ಟೌನ್‌ಗೂ ಹಲವು ಬಾರಿ ಹೋಗುವ ಪ್ರಮೇಯ ಉಂಟಾಯಿತು.

■

೩೧
ಗಾಂಧಿಯವರ ತಮಿಳುಪ್ರೇಮ; ಸ್ಮಟ್ಸ್‌ನೊಡನೆ ಮತ್ತೊಂದು ಒಪ್ಪಂದ

ಭಾರತದ ಪ್ರಚಾರ–ಪ್ರವಾಸಕ್ಕೆ ಹೋಗಿದ್ದ ಹೆನ್ರಿ ಪೊಲಾಕ್ ದ. ಆಫ್ರಿಕಾಕ್ಕೆ ೧೯೧೦ ರ ಆಗಸ್ಟ್‌ನಲ್ಲಿ ವಾಪಸ್ ಬಂದನು. ಆತ ಭಾರತದಲ್ಲಿ ದ.ಆಫ್ರಿಕಾದ ಭಾರತೀಯರ ಪರವಾಗಿ ಮಾಡಿದ್ದ ಕೆಲಸ ಕಾರ್ಯಗಳಿಗಾಗಿ, ವಿಶೇಷವಾಗಿ ಗಡೀಪಾರಾದ ಭಾರತೀಯರ ಪುನರ್ವಸತಿಯ ವಿಷಯದಲ್ಲಿ ಸಲ್ಲಿಸಿದ್ದ ಸೇವೆಗಾಗಿ ನೆಟಾಲ್ ಮತ್ತು ಟ್ರಾನ್ಸ್‌ವಾಲ್‌ನ ವಿವಿಧೆಡೆ ಅಭಿನಂದನಾ ಮತ್ತು ಸ್ವಾಗತ ಸಮಾರಂಭಗಳನ್ನು ಆಯೋಜಿಸಲಾಯಿತು. ಭಾರತೀಯರ ನಡುವೆ ತನ್ನ ಹೆಗಲವರೆಗಿನ ಕೂದಲು ಮತ್ತು ತುಂಟನಗೆಯ ರಸಿಕತೆಯಿಂದಾಗಿ 'ಕೇಶವಲಾಲ್'ನೆಂದೇ ಪ್ರಸಿದ್ಧನಾಗಿದ್ದ ಪೊಲಾಕ್‌ಗೆ ಈ ಸಭೆಗಳಲ್ಲಿ ಬಿನ್ನವತ್ತಳೆಗಳನ್ನರ್ಪಿಸಿ ಸನ್ಮಾನಿಸಲಾಯಿತು. ಡರ್ಬಾನ್‌ನಲ್ಲಿ ನಡೆದ ಇಂತಹ ಸಮಾರಂಭವೊಂದರ ನಂತರ ಸತ್ಯಾಗ್ರಹದ ಬಗ್ಗೆ ಚರ್ಚಿಸಲು ಕೂಡಿದ ಸಭೆಯಲ್ಲಿ ಗಾಂಧಿ ಇಂಗ್ಲಿಷ್‌ನಲ್ಲಿ ಮಾತು ಶುರು ಮಾಡಿದಾಗ ಸಭೆಯಿಂದ 'ತಮಿಳು, ತಮಿಳು!' ಎಂಬ ಕೂಗು ಕೇಳಿಬಂತು. ತಕ್ಷಣ ಮಾತು ನಿಲ್ಲಿಸಿದ ಗಾಂಧಿ ತಮಗೆ ಸಾರ್ವಜನಿಕ ಭಾಷಣ ಮಾಡುವಷ್ಟು ತಮಿಳು ಬರುವುದಿಲ್ಲವೆಂದೂ, ಇನ್ನೊಮ್ಮೆ ಜ. ಸ್ಮಟ್ಸ್ ತಮ್ಮನ್ನು ಸೆರೆಮನೆಗೆ ಕಳಿಸಿದರೆ ಅಲ್ಲಿ ಖಂಡಿತ ತಮಿಳು ಕಲಿತು ಬರುವುದಾಗಿಯೂ ಆಶ್ವಾಸನೆ ನೀಡಿದರು. ಮಾರನೆಯ ದಿನವೇ ಅವರು ಫೀನಿಕ್ಸ್ ಆಶ್ರಮದ ಮೇಲ್ವಿಚಾರಕನಾಗಿದ್ದ ಸೋದರ ಬಂಧು ಮಗನ್‌ಲಾಲ್‌ಗೆ ಪತ್ರವೊಂದನ್ನು ಬರೆದು ಅಲ್ಲಿರುವ ತಮಿಳರ ಸಹಾಯದಿಂದ ಕೂಡಲೇ ತಮಿಳು ಕಲಿಯಲು ಆರಂಭಿಸಿ, ತಮಗೂ ಅದನ್ನು ಕಲಿಸಲು ಸಿದ್ಧವಾಗಬೇಕೆಂದು ಸೂಚಿಸಿದರು. ಅಲ್ಲದೆ ಆಗಾಗ್ಗೆ ಆತನಿಗೆ ಪತ್ರ ಬರೆದು, ತಮಿಳು ಕಲಿಕೆ ಎಲ್ಲಿಗೆ ಬಂತೆಂದು ವಿಚಾರಿಸುತ್ತಲೂ ಇದ್ದರು. ಹೀಗಿತ್ತು ಗಾಂಧಿಯ ವಚನಬದ್ಧತೆ.

ಸತ್ಯಾಗ್ರಹದಲ್ಲಿ ಮಹಿಳೆ

ಇದಾದ ನಂತರ ಗಾಂಧಿ ಬಂಧನವನ್ನು ಆಹ್ವಾನಿಸಿ ಹಲವು ಬಾರಿ ನೆಟಾಲ್‌ನಿಂದ ನೋಂದಣಿ ಪತ್ರವಿಲ್ಲದೆ ಗಡಿ ದಾಟಿ ಟ್ರಾನ್ಸ್‌ವಾಲನ್ನು ಪ್ರವೇಶಿಸಿದರೂ ಪೋಲೀಸರು ಅವರನ್ನು ಬಂಧಿಸಲು ನಿರ್ಲಕ್ಷ್ಯ ತೋರಿದರು. ಆದರೆ ನವೆಂಬರ್‌ನಲ್ಲಿ ಅವರು ಈಗಾಗಲೇ ಸೆರೆಮನೆಯಲ್ಲಿದ್ದ ರಾಂಭಾಯಿ ಸೋಂಧಾ ಅವರ ಪತ್ನಿ ಮತ್ತು ಆಕೆಯ ಚಿಕ್ಕ ಮಕ್ಕಳನ್ನು ಕರೆದುಕೊಂಡು ಗಡಿ ದಾಟಿ ಹೋದರು. ಟ್ರಾನ್ಸ್‌ವಾಲ್ ಪೋಲೀಸರು ಶ್ರೀಮತಿ

ಸೋಂಧಾ ಮತ್ತು ಮಕ್ಕಳನ್ನು ಹೊರಗಿನವರು ಎಂದು ಬಂಧಿಸಿದರು. ಗಾಂಧಿ ಅವರ ಪರವಾಗಿ ದಾವೆ ಹಾಕಿ ಮೊಕದ್ದಮೆಯನ್ನು ಮುಂದೂಡಿಸಿಕೊಂಡು ಅವರನ್ನೆಲ್ಲ ಟಾಲ್‌ಸ್ಟಾಯ್ ಆಶ್ರಮಕ್ಕೆ ಕರೆದುಕೊಂಡು ಹೋಗಿ ಅಲ್ಲಿ ನೆಲೆ ನಿಲ್ಲಿಸಿದರು. ಈ ಸಂಬಂಧವಾಗಿ ಅವರು ಜ. ಸ್ಮಟ್ಸ್‌ಗೆ ಪತ್ರ ಬರೆದು ಶ್ರೀಮತಿ ಸೋಂಧಾ ಮತ್ತು ಅವರ ಮಕ್ಕಳು ರಾಂಭಾಯಿ ಸೋಂಧಾರ ಬಿಡುಗಡೆಯಾಗುವವರೆಗೂ ಟಾಲ್‌ಸ್ಟಾಯ್ ಆಶ್ರಮದಲ್ಲಿರಲು ಅನುಮತಿ ನೀಡಬೇಕೆಂದು ಕೋರಿದರು. ಅದಕ್ಕೆ ಸ್ಮಟ್ಸ್ ಸಂಕ್ಷಿಪ್ತವಾಗಿ ಉತ್ತರಿಸಿ 'ಕಾನೂನು ಏನು ಹೇಳುತ್ತದೆ, ಹಾಗೆ ನಡೆಯುತ್ತದೆ' ಎಂದು ಉತ್ತರಿಸಿದ. ಕೂಡಲೇ ಗಾಂಧಿ ಒಂದು ಪತ್ರಿಕಾ ಹೇಳಿಕೆ ನೀಡಿ 'ಟ್ರಾನ್ಸ್‌ವಾಲ್‌ನ ಕರಾಳ ಶಾಸನದ ದುಷ್ಪರಿಣಾಮಗಳನ್ನು ಈವರೆಗೆ ಗಂಡಸರು ಮಾತ್ರ ಎದುರಿಸುತ್ತಿದ್ದು ಈಗ ಹೆಂಗಸರೂ ಅದಕ್ಕೆ ಬಲಿಯಾಗುವಂತಾಗಿದೆ. ಶ್ರೀಮತಿ ಸೋಂಧಾ ಅತಿ ಸಜ್ಜನಿಕೆಯ ಮಹಿಳೆಯಾಗಿದ್ದು, ದ.ಆಫ್ರಿಕಾದ ಯಾವ ಪ್ರಾಂತ್ಯದಲ್ಲೂ ಆಕೆ ಯಾವ ಬಿಳಿಯನಿಗೂ ವೃತ್ತಿಯಲ್ಲಾಗಲೀ, ವ್ಯಾಪಾರದಲ್ಲಾಗಲೀ ಸ್ಪರ್ಧಿಯಾಗುವುದಿಲ್ಲವಾದ್ದರಿಂದ ಮಹಿಳೆಗೇಕೆ ಸೆರೆಮನೆವಾಸದ ಶಿಕ್ಷೆ?' ಎಂದು ಪ್ರಶ್ನಿಸಿದರಲ್ಲದೆ ಕ್ರೈಸ್ತ ಧರ್ಮದ ನಿಜವಾದ ಅನುಯಾಯಿ ಗಂಡಸರು ಹೆಂಗಸರಿಬ್ಬರೂ ತಮ್ಮ ಧರ್ಮದ ಮೇಲೆ ಪ್ರಾಬಲ್ಯ ಸಾಧಿಸಿರುವ ಇಂತಹ ಸೈತಾನಿ ಶಕ್ತಿಯ ವಿರುದ್ಧ ದನಿ ಎತ್ತಬೇಕೆಂದು ಕರೆ ಕೊಟ್ಟರು. ಈ ಕ್ರಮದ ಮುಂದುವರಿಕೆಯಾಗಿ, ಡಿಸೆಂಬರ್‌ನಲ್ಲಿ ಕ್ರಿಸ್ಮಸ್ ದಿನದಂದು ಗಾಂಧಿ ಟಾಲ್‌ಸ್ಟಾಯ್ ಆಶ್ರಮದಲ್ಲಿ ಹತ್ತಿರದ ಊರುಗಳ ತಮ್ಮ ಬಗ್ಗೆ ಸಹಾನುಭೂತಿ ಇದ್ದ ಕ್ರೈಸ್ತ ಬಂಧುಗಳನ್ನು ಆಹ್ವಾನಿಸಿ ಒಂದು ಸಂತೋಷ ಕೂಟ ಏರ್ಪಡಿಸಿದರು. ಅಂದು ಆಶ್ರಮ ಈವರೆಗೆ ಕಾಣದ ಸಂತೋಷ–ಸಡಗರ–ಸಂಭ್ರಮಗಳನ್ನು ಕಂಡಿತು. ಉಂಡು ಹಾಡಿ ಕುಣಿಯಲು ಅಂದು ಎಲ್ಲರಿಗೂ ಸ್ವಾತಂತ್ರ್ಯ ಘೋಷಿಸಲಾಗಿತ್ತು!

ನಂತರದ ಕೆಲವೇ ದಿನಗಳಲ್ಲಿ ಜೊಹಾನ್ಸ್‌ಬರ್ಗ್ ನ್ಯಾಯಾಲಯವೊಂದರಲ್ಲಿ ಶ್ರೀಮತಿ ಸೋಂಧಾ ಮೊಕದ್ದಮೆ ವಿಚಾರಣೆಗೆ ಬಂದ ಗಾಂಧಿ, ತಮ್ಮ ಕಕ್ಷಿದಾರಳು, ಆಕೆಯ ಗಂಡ ಸತ್ಯಾಗ್ರಹಿಯಾಗಿ ಸೆರೆಮನೆಯಲ್ಲಿರುವುದರಿಂದ ಆಕೆ ನೆಟಾಲ್‌ನಲ್ಲಿ ಒಂಟಿಯಾಗಿ ವರಮಾನವಿಲ್ಲದೆ ಬದುಕುವ ದುಃಸ್ಥಿತಿಯಲ್ಲಿದ್ದು, ಆಕೆಗೆ ಟಾಲ್‌ಸ್ಟಾಯ್ ಆಶ್ರಮದಲ್ಲಿ ಅನಿವಾರ್ಯವಾಗಿ ಆಶ್ರಯ ನೀಡಬೇಕಾಗಿದೆ ಎಂದು ವಾದಿಸಿದರೂ, ನ್ಯಾಯಾಧೀಶರು ಆಪಾದಿತಳಿಗೆ ೧೦ ಪೌಂಡ್ ದಂಡ ಮತ್ತು ಒಂದು ತಿಂಗಳ ಸೆರೆಮನೆವಾಸದ ಶಿಕ್ಷೆ ವಿಧಿಸಿದರು. ಗಾಂಧಿ ಆಕೆಯ ಕುಟುಂಬಕ್ಕೆ ಜಾಮೀನು ಪಡೆದು ಅವರನ್ನು ಮತ್ತೆ ಟಾಲ್‌ಸ್ಟಾಯ್ ಆಶ್ರಮಕ್ಕೆ ಕರೆದುಕೊಂಡು ಹೋದರು.

ಈ ಸುದ್ದಿ ಭಾರತವನ್ನು ತಲುಪಿ ಒಂಟಿ ಮಹಿಳೆಗೆ ಹಿಂಸೆ ನೀಡಲಾಗುತ್ತಿದೆ ಎಂಬ ವರದಿಯೊಂದು ಲಂಡನ್‌ನ ವಸಾಹತು ವ್ಯವಹಾರಗಳ ಕಛೇರಿ ತಲುಪಿತು. ಇದಕ್ಕೆ ವಿವರಣೆ ಕೇಳಿ ಅದು ದ.ಆಫ್ರಿಕಾ ಸರ್ಕಾರಕ್ಕೆ ಪತ್ರ ಬರೆಯಿತು. ಸರ್ಕಾರವು ಗಾಂಧಿ ಈ ಮಹಿಳೆಯನ್ನು ಗಡಿ ದಾಟಿಸಿ ಕರೆ ತಂದದ್ದು ಸತ್ಯಾಗ್ರಹದ ಭಾಗವೇ ಆಗಿದ್ದು, ಅವರು ತಮ್ಮ ಹಲವು ಪ್ರತಿನಿಧಿ ಮತ್ತು ಸಂಸ್ಥೆಗಳ ಮೂಲಕ ಸತ್ಯಾಗ್ರಹದ ಖರ್ಚಿಗೆಂದು ಸಾವಿರಾರು ಪೌಂಡುಗಳನ್ನು ಸಂಗ್ರಹಿಸಿರುವುದರಿಂದ ಅದರಿಂದಲೇ ಆ ಮಹಿಳೆಗೆ ಪರಿಹಾರ ಒದಗಿಸಬಹುದಾಗಿದೆ ಎಂದು ಉತ್ತರ ಬರೆಯಿತು.

ವರ್ಣಭೇದ ಕಾಯಿದೆಯಲ್ಲಿ ಬದಲಾವಣೆ

ಆದರೆ ಈ ಹಿಂದಿನ ಗಡೀಪಾರು ಭಾರತದಲ್ಲಿನ ಮಾಧ್ಯಮಗಳಲ್ಲಿ ಒಂದು ದೊಡ್ಡ ಸುದ್ದಿಯಾಗಿ ಅಲ್ಲಿನ ಭಾರತೀಯರು ಬ್ರಿಟಿಷ್ ಸರ್ಕಾರದ ವಿರುದ್ಧ ಹೆಚ್ಚೆಚ್ಚು ಅಶಾಂತರಾಗುತ್ತಿದ್ದಾರೆ ಎಂಬ ಮಾಹಿತಿಯಿಂದ ಕಳವಳಗೊಂಡಿದ್ದ ಲಂಡನ್‌ನ ಬ್ರಿಟಿಷ್ ಸಾಮ್ರಾಜ್ಯ ಪ್ರಭುತ್ವ, ಇದೀಗ ಈ ಪ್ರಕರಣದಿಂದ ಮತ್ತಷ್ಟು ಚಿಂತಿತವಾಯಿತು. ಇದರ ಪರೋಕ್ಷ ಪರಿಣಾಮವೋ ಎಂಬಂತೆ ೧೯೧೧ರ ಜನವರಿಯಲ್ಲಿ ಜ. ಸ್ಮಟ್ಸ್ ಹೊಸ ವಲಸೆ ಕಾಯಿದೆಯ ಕರಡೊಂದನ್ನು ಪ್ರಕಟಿಸಿ ಇದು ಹಳೆಯ ಕಾಯಿದೆಯನ್ನು ರದ್ದುಪಡಿಸುತ್ತದೆ ಎಂದೂ ಸೂಚಿಸಿದ. ಒಂದು ಭಾಷಾಜ್ಞಾನದ ಪರೀಕ್ಷೆ ಇದ್ದು ಇದರಲ್ಲಿ ತೇರ್ಗಡೆಯಾದವರನ್ನು ಒಳಗೆ ಬಿಡಲಾಗುವುದು ಎಂದು ಈ ಹೊಸ ಕಾಯಿದೆ ತಿಳಿಸಿತ್ತು. ಗಾಂಧಿ ಈ ಬಗ್ಗೆ ಸ್ಮಟ್ಸ್‌ಗೆ ಪತ್ರ ಬರೆದು, ಭಾಷಾ ಪರೀಕ್ಷೆಯಲ್ಲಿ ತೇರ್ಗಡೆಯಾದ ಎಲ್ಲರಿಗೂ – ಅವರ ಹೆಂಡತಿ ಮಕ್ಕಳೂ ಸೇರಿದಂತೆ – ಟ್ರಾನ್ಸ್‌ವಾಲ್‌ನೊಳಕ್ಕೆ ಪ್ರವೇಶವನ್ನು ಅಧಿಕೃತಗೊಳಿಸಲಾಗುವುದೋ ಎಂದು ಸ್ಪಷ್ಟೀಕರಣ ಕೇಳಿ ಸರ್ಕಾರಕ್ಕೆ ಪತ್ರ ಬರೆದರು. ಗಾಂಧಿ ಪರವಿದ್ದ ಬಿಳಿಯ ವಕೀಲರೂ ಆ ಕಾಯಿದೆಯನ್ನು ವಿವರವಾಗಿ ಅಧ್ಯಯನ ಮಾಡುತ್ತಿದ್ದ ಹೊತ್ತಿನಲ್ಲೇ ದ. ಆಫ್ರಿಕಾದ ಹೊಸ ಒಕ್ಕೂಟದ ಸಂಸತ್ತಿನಲ್ಲಿ ಈ ಕಾಯಿದೆ ವ್ಯಾಪಕ ಚರ್ಚೆಗೆ ಒಳಗಾಗಿ ಆರೆಂಜ್ ಫ್ರೀ ಸ್ಟೇಟ್‌ನ ಸಂಸತ್ ಸದಸ್ಯರಿಂದ ಅದಕ್ಕೆ ಪ್ರಬಲ ವಿರೋಧ ವ್ಯಕ್ತವಾಯಿತು. ಒಕ್ಕೂಟದ ಸಂವಿಧಾನದ ಪ್ರಕಾರ ಒಂದು ಪ್ರಾಂತ್ಯಕ್ಕೆ ಅನ್ವಯವಾಗುವ ಕಾಯಿದೆ ಎಲ್ಲ ಪ್ರಾಂತ್ಯಗಳಿಗೂ ತಂತಾನೇ ಅನ್ವಯವಾಗುವ ಅವಕಾಶವಿರುವುದರಿಂದ ತಮ್ಮ ಪ್ರಾಂತ್ಯದೊಳಕ್ಕೆ ಹೊಸದಾಗಿ ಯಾವ ಏಷ್ಯನ್ನರನ್ನೂ ಬಿಟ್ಟುಕೊಳ್ಳಲು ತಮ್ಮ ಪ್ರಾಂತ್ಯ ಸಿದ್ಧವಿಲ್ಲವೆಂದು ಆ ಪ್ರಾಂತ್ಯದ ಸಂಸತ್ ಸದಸ್ಯರು ಕಾಯಿದೆ ಅನುಮೋದಿತವಾಗುವುದಕ್ಕೆ ಅಡ್ಡಿಯಾಗಿ ನಿಂತರು.

ಗಾಂಧಿ ಇದನ್ನು ತಾತ್ವಿಕವಾಗಿ ವಿರೋಧಿಸಿದರು. ಒಬ್ಬನೇ ಒಬ್ಬ ಭಾರತೀಯನೂ ಫ್ರೀ ಸ್ಟೇಟ್‌ನೊಳಕ್ಕೆ ಹೋಗಲು ಇಚ್ಛಿಸದಿರುವ ಸಂಭಾವ್ಯತೆಯಲ್ಲೂ ಜನಾಂಗಭೇದವಿರುವ ಕಾನೂನನ್ನು ರಾಷ್ಟ್ರ ವ್ಯಾಪಿಯಾಗಿ ಒಪ್ಪಲು ಸಾಧ್ಯವಿಲ್ಲ ಎಂದು ಅವರು ಹೇಳಿದರು. ಇದನ್ನು ಯಾರೂ ಒಪ್ಪಲಾಗದ ಹೊಸ ಬೇಡಿಕೆ ಎಂದು ವರ್ಣಿಸಿದ ಜ. ಸ್ಮಟ್ಸ್, ಆ ವರ್ಷ ಬ್ರಿಟಿಷ್ ಸಾಮ್ರಾಜ್ಯದ ರಾಣಿಯ ಪಟ್ಟಾಭಿಷೇಕ ಮಹೋತ್ಸವ ಆಚರಣೆಯಿದ್ದು, ಅದು ಯಾವ ವಿಘ್ನವೂ ಇಲ್ಲದೆ ನಡೆಯುವುದನ್ನು ಖಚಿತಪಡಿಸಿಕೊಳ್ಳಲೋ ಏನೋ ಗಾಂಧಿಯೊಂದಿಗೆ ಮಾತುಕತೆಗೆ ಮುಂದಾದ. ಗಾಂಧಿ ಕೂಡ ೧೯೧೧ರ ಏಪ್ರಿಲ್‌ನಲ್ಲಿ ಒಕ್ಕೂಟದ ರಾಜಧಾನಿ ಕೇಪ್‌ಟೌನ್‌ಗೆ ಹೋಗಿ ಫ್ರೀ ಸ್ಟೇಟ್‌ನ ಸಂಸತ್ ಸದಸ್ಯರೂ ಸೇರಿದಂತೆ ಹಲವು ಪಕ್ಷಗಳ ಸಂಸತ್ ಸದಸ್ಯರ ಮನವೊಲಿಸುವ ಪ್ರಯತ್ನ ಮಾಡಿದರಾದರೂ ಫಲಕಾರಿಯಾಗಲಿಲ್ಲ. ಈ ಮಧ್ಯೆ ಡರ್ಬಾನ್‌ನ ತಮಿಳರ ಪರವಾದ 'ಆಫ್ರಿಕನ್ ಕ್ರಾನಿಕಲ್' ಪತ್ರಿಕೆಯ ಸಂಪಾದಕ ಪಿ.ಎಸ್. ಅಯ್ಯರ್ ಇಡೀ ಒಕ್ಕೂಟದಲ್ಲಿ ಮುಕ್ತವಾಗಿ ಸಂಚರಿಸಿ ಎಲ್ಲಿ ಬೇಕಾದರೂ ನೆಲೆಸಲು ಅವಕಾಶವಿರುವ ಕಾನೂನಿಗೆ ಪಟ್ಟು ಹಿಡಿಯುವುದರ ಪರವಾಗಿ ಜನಾಭಿಪ್ರಾಯ ರೂಪಿಸುವ ಪ್ರಯತ್ನವೊಂದನ್ನು ಮಾಡಿ ಸಂಧಾನದ ವಾತಾವರಣವನ್ನು ಇನ್ನಷ್ಟು

ಕೆಡಿಸಿದ. ಇದರಿಂದ ಆಕ್ರೋಶಗೊಂಡ ಬಿಳಿಯ ಜನಾಂಗದ ನಿಯೋಗವೊಂದು ಎಲ್ಲ ವರ್ಣೀಯರನ್ನೂ ದ.ಆಫ್ರಿಕಾದಿಂದ ಹೊರಹಾಕುವಂತೆ ಕೋರಿ ಪ್ರಧಾನಿ ಜ. ಬೋತಾ ಅವರಿಗೆ ಮನವಿ ಸಲ್ಲಿಸಿತು. ಅದಕ್ಕವರು ಉತ್ತರಿಸಿ, ತಮ್ಮ ಆಸೆ ಅದೇ ಆಗಿದ್ದರೂ, ಕರಿಯ ಜನಾಂಗ ಪ್ರಧಾನವಾದ ಈ ದೇಶದಲ್ಲಿ ಅದು ಅಸಾಧ್ಯವೂ ಅವ್ಯಾವಹಾರಿಕವೂ ಆದ ಸಲಹೆ ಎಂದರು. ಜೊತೆಗೆ ಜ. ಸ್ಮಟ್ಸ್, ಗಾಳಿಯೊಂದಿಗೆ ಗುದ್ದಾಡುತ್ತಿದ್ದು ಏನು ಸಾಧಿಸುತ್ತಾರೋ ಕಾದು ನೋಡೋಣ ಎಂಬ ವ್ಯಂಗ್ಯದ ಬಾಣವನ್ನೂ ಬಿಟ್ಟರು. ಇದರಿಂದ ಪ್ರಚೋದಿತನಾದರೆಂಬಂತೆ ಜ.ಸ್ಮಟ್ಸ್ ಗಾಂಧಿ ಕೇಪ್‌ಟೌನ್‌ನಲ್ಲಿದ್ದಾಗಲೇ ಅವರನ್ನು ಮಾತುಕತೆಗೆ ಕರೆದರು.

ಸ್ಮಟ್ಸ್‌ನ ಕಷ್ಟ ನಿವೇದನೆ–ಮೂಡಿದ ಹೊಸ ಒಪ್ಪಂದ

ಈ ಮಾತುಕತೆಯಲ್ಲಿ ಗಾಂಧಿಯವರ ವೈಯಕ್ತಿಕ ಯೋಗಕ್ಷೇಮವನ್ನು ಆತ್ಮೀಯವಾಗಿ ವಿಚಾರಿಸಿದ ಜ. ಸ್ಮಟ್ಸ್, ಟಾಲ್‌ಸ್ಟಾಯ್ ಆಶ್ರಮದ ಚಟುವಟಿಕೆಗಳ ಬಗ್ಗೆ ಕುತೂಹಲ ವ್ಯಕ್ತಪಡಿಸುತ್ತಾ ತಾನೊಮ್ಮೆ ಅಲ್ಲಿಗೆ ಭೇಟಿ ನೀಡುವ ಬಯಕೆಯನ್ನೂ ವ್ಯಕ್ತಪಡಿಸಿದ. ಜೊತೆಗೆ ಬಿಳಿಯರ ಸರ್ಕಾರದ ಓರ್ವ ನಾಯಕನಾಗಿ ತನಗಿರುವ ಜವಾಬ್ದಾರಿ ಮತ್ತು ಮಿತಿಗಳ ನಡುವೆ, ನೋಡಿದ ಕಡೆಯಲ್ಲೆಲ್ಲ ವ್ಯಾಪಿಸಿರುವ ಭಾರತೀಯ ವ್ಯಾಪಾರಿಗಳ ಹಿತ ಕಾಪಾಡುವ ಕೆಲಸ ತುಂಬ ಸಂಕೀರ್ಣವಾಗಿದ್ದು, ಈ ದಿಸೆಯಲ್ಲಿ ತಾನು ಮಾಡಲು ಏನೆಲ್ಲ ಸಾಧ್ಯವೋ ಅದನ್ನೆಲ್ಲ ಮಾಡುವುದಾಗಿಯೂ, ಸದ್ಯಕ್ಕೆ ಶಾಂತಿ ಕಾಪಾಡುವುದು ತಮ್ಮ ಗುರಿಯಾಗಿದ್ದು ಇದಕ್ಕೆ ಗಾಂಧಿಯ ಸಹಕಾರ ಅಗತ್ಯ ಎಂದೂ ಹೇಳಿದ. ಇದಕ್ಕೆ ಪ್ರತಿಕ್ರಿಯಿಸಿದ ಗಾಂಧಿ ಎಲ್ಲವೂ ತಮ್ಮ ನಿಯಂತ್ರಣದಲ್ಲೇನೂ ಇಲ್ಲವೆಂದೂ, ಭಾರತೀಯರ ಕನಿಷ್ಠ ಬೇಡಿಕೆಗಳನ್ನಾದರೂ ಸದ್ಯಕ್ಕೆ ಒಪ್ಪಿಕೊಂಡರೆ ಸತ್ಯಾಗ್ರಹಿಗಳ ಮನವೊಲಿಸಲು ತಮಗೆ ಸಾಧ್ಯವಾಗಬಹುದೆಂದು ಹೇಳಿದರು.

ನಂತರ ನಡೆದ ದೀರ್ಘ ಮಾತುಕತೆಯಲ್ಲಿ ಒಂದು ಒಪ್ಪಂದಕ್ಕೆ ಬರಲಾಯಿತು. ಹೊಸ ವಲಸೆ ಕಾನೂನು ರೂಪುಗೊಂಡು ಜಾರಿಗೆ ಬರುವ ತನಕ ಈಗಾಗಲೇ ಟ್ರಾನ್ಸ್‌ವಾಲ್‌ನಲ್ಲಿರುವ ಭಾರತೀಯರು ಯಾವುದೇ ಪ್ರಶ್ನೆಗಳಿಲ್ಲದೆ ತಮ್ಮ ನೋಂದಣಿ ಪತ್ರ ಪಡೆಯಲು ಅವಕಾಶವಿರಬೇಕು ಮತ್ತು ಆರು ಜನರವರೆಗೆ ಕನಿಷ್ಠ ಶಿಕ್ಷಣದ ಷರತ್ತನ್ನು ಪೂರೈಸಿದ ಭಾರತೀಯರು ಟ್ರಾನ್ಸ್‌ವಾಲ್‌ಗೆ ಪ್ರವೇಶ ಪಡೆಯಬಹುದು ಹಾಗೂ ಈಗ ಸೆರೆಮನೆಯಲ್ಲಿರುವ ಎಲ್ಲ ಸತ್ಯಾಗ್ರಹಿಗಳ ಶಿಕ್ಷೆ ಮನ್ನಾ ಮಾಡಿ ಬಿಡುಗಡೆಗೊಳಿಸಬೇಕು ಎಂಬ ಅಂಶಗಳನ್ನೊಳಗೊಂಡ ಈ ಒಪ್ಪಂದ ಒಂದು ವರ್ಷ ಜಾರಿಯಲ್ಲಿರುತ್ತದೆಂದೂ ತೀರ್ಮಾನಿಸಲಾಯಿತು.

ಏಪ್ರಿಲ್ ೨೭ರಂದು ಜೊಹಾನ್ಸ್‌ಬರ್ಗ್‌ನ ಹಮೀದಿಯಾ ಸಭಾಂಗಣದಲ್ಲಿ ಸೇರಿದ ಭಾರತೀಯರ ಸಭೆಯು ಈ ಒಪ್ಪಂದಕ್ಕೆ ತನ್ನ ಅನುಮೋದನೆ ನೀಡಿತು. ಮುಂದಿನ ಸಂಸತ್ ಅಧಿವೇಶನದಲ್ಲಿ ಸೂಕ್ತ ವಲಸೆ ಕಾನೂನು ಅನುಮೋದಿತವಾಗುವಂತೆ ಎಲ್ಲ ಪ್ರಯತ್ನ ಮಾಡುವುದಾಗಿ ಜ. ಸ್ಮಟ್ಸ್ ನೀಡಿದ್ದ ಆಶ್ವಾಸನೆ ಈಡೇರುವುದೆಂಬ ಆಶಯ ಈ ಸಭೆಯದಾಗಿತ್ತು. ಇದನ್ನು ಸ್ವಾಗತಿಸಿದ ಜೊಹಾನ್ಸ್‌ಬರ್ಗ್‌ನ ಜನಪ್ರಿಯ ಉದಾರವಾದಿ

ಪತ್ರಿಕೆ 'ಸ್ಟಾರ್', ಈ ಒಪ್ಪಂದದ ಸತ್ಪರಿಣಾಮವನ್ನು ಮುಂದಿನ ದಿನಗಳಲ್ಲಿ ಟ್ರಾನ್ಸ್‌ವಾಲ್ ಮತ್ತು ದ.ಆಫ್ರಿಕಾಗಳ ಗಡಿಗಳಾಚೆಯೂ ಕಾಣಬಹುದೆಂದು ಹೇಳಿತಲ್ಲದೆ, ಗಾಂಧಿಯವರ ಸಂದರ್ಶನವೊಂದನ್ನೂ ಪ್ರಕಟಿಸಿತು. ಅದರಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದ ಗಾಂಧಿ ತಾವು ಮುಂದಿನ ಬಿಡುವಿನ ದಿನಗಳಲ್ಲಿ ಸತ್ಯಾಗ್ರಹಿಗಳ ಶಿಕ್ಷಣ ವಂಚಿತ ಮಕ್ಕಳ ಯೋಗಕ್ಷೇಮದ ಕಡೆ ಗಮನ ಕೊಡುವುದಾಗಿಯೂ, ಫೀನಿಕ್ಸ್ ಆಶ್ರಮಕ್ಕೆ ತೆರಳಿ ಟಾಲ್‌ಸ್ಟಾಯ್‌ರ ದಾರ್ಶನಿಕತೆಯ ಅನುಸರಣೆಯ ಹಾದಿಗಳನ್ನು ಹುಡುಕುತ್ತಾ ಮಾತೃಭೂಮಿ ಭಾರತದ ಜನರ ಸೇವೆಯತ್ತ ಗಮನ ಹರಿಸುವುದಾಗಿ ಹೇಳಿದರು. ಅದೇ ವೇಳೆಯಲ್ಲಿ ಗಾಂಧಿ ತಮ್ಮ 'ಇಂಡಿಯನ್ ಒಪಿನಿಯನ್' ಪತ್ರಿಕೆಯ ಸಂಪಾದಕೀಯದಲ್ಲಿ, ಜ. ಸ್ಮಟ್ಸ್ ಒಪ್ಪಂದವನ್ನು ಉಲ್ಲಂಘಿಸಿದರೆ ಸತ್ಯಾಗ್ರಹವನ್ನು ಅದೇ ಹಳೆಯ ತೀವ್ರತೆಯೊಂದಿಗೆ ಪುನರಾರಂಭಿಸುವ ಎಚ್ಚರಿಕೆಯನ್ನೂ ನೀಡಿದರು.

ವರ್ಣ ಸೌಹಾರ್ದದ ಒಂದು ಸಮಾರಂಭ

ಈ ಸಂದರ್ಭದಲ್ಲಿ ಗಾಂಧಿಯವರಿಂದ ಬಿಡುವು ಪಡೆದ ಪೊಲಾಕ್ ತನ್ನ ಹೆಂಡತಿ ಮಕ್ಕಳನ್ನು ನೋಡಲು ಲಂಡನ್‌ಗೆ ಹೋದ. ಭಾರತೀಯ ಸಮುದಾಯವು ತನ್ನ ಹಕ್ಕುಗಳ ಹೋರಾಟಕ್ಕಾಗಿ ಶ್ರಮಿಸಿದ, ಹಣ ಸಂಗ್ರಹಿಸಿ ನೀಡಿದ ಯೂರೋಪಿಯನ್ನರ ಗೌರವಾರ್ಥ ಒಂದು ಔತಣಕೂಟವನ್ನು ಏರ್ಪಡಿಸಿತು. ಈ ಮೊದಲು ನೆಟಾಲ್‌ನಲ್ಲಿ ಭಾರತೀಯರ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸುತ್ತಲೇ ಎಡಬಿಡಂಗಿಯೂ ಆಗಿದ್ದು ಈಗ ಸಂಪೂರ್ಣ ಗಾಂಧಿ ಬೆಂಬಲಿಗರಾಗಿ ಪರಿವರ್ತಿತರಾಗಿದ್ದ ಪರಿಣಾಮವಾಗಿ, ೧೯೧೦ರ ಸಂಸತ್ ಚುನಾವಣೆಯಲ್ಲಿ ಸೋಲನ್ನನುಭವಿಸಿದ್ದ ವಿಲಿಯಂ ಹೊಸ್ಕೆನ್ (೧೯೦೭ರ ಜುಲೈ ೩೧ರಂದು ಪ್ರಿಟೋರಿಯಾದಲ್ಲಿ ಏರ್ಪಡಿಸಿದ್ದ ನೋಂದಣಿ ವಿರೋಧಿ ಸಿದ್ಧತಾ ಸಭೆಗೆ ಸರ್ಕಾರದ ಪರವಾಗಿ ಸಂದೇಶ ತಂದಿದ್ದುದು ಈ ವ್ಯಕ್ತಿಯೇ) ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಲೆನ್‌ಬಾಕ್, ರೀಚ್, ಡೋಕ್ ಕುಟುಂಬ, ಗಾಂಧಿಯ ಆಪ್ತ ಸಹಾಯಕಿ ಸೋನ್ಯಾ ಶ್ಲೇಸಿನ್, ಚಿನ್ನಾಭರಣಗಳ ವ್ಯಾಪಾರಿ ಗೇಬ್ರಿಯಲ್ ಇಸಾಕ್, ಬಟ್ಟೆ ವ್ಯಾಪಾರಿ ವೋಗಲ್ ಮುಂತಾದವರು ಭಾಗವಹಿಸಿದ್ದ ಈ ಸಭೆಗಾಗಿ ತಯಾರಿಸಿದ್ದ ಊಟ ಸಂಪೂರ್ಣ ಸಸ್ಯಾಹಾರಿಯಾಗಿದ್ದು, ಇದರ ಉಸ್ತುವಾರಿ ವಹಿಸಿದ್ದವರು ಸ್ವತಃ ಗಾಂಧಿಯೇ!

ಈ ಸಮಾರಂಭದ (ಬಹುಶಃ ಗಾಂಧಿಯೇ ಬರೆದ) ವರದಿಯೊಂದು 'ಇಂಡಿಯನ್ ಒಪಿನಿಯನ್'ನಲ್ಲಿ ಪ್ರಕಟವಾಗಿದ್ದು, ಅದರಲ್ಲಿ ಉಲ್ಲೇಖಿಸಲಾಗಿರುವ ಒಂದು ಪ್ರಸಂಗದೊಡನೆ ಈ ಅಧ್ಯಾಯವನ್ನು ಮುಗಿಸುವುದು ಉಚಿತವಾದೀತು: 'ಸತ್ಯಾಗ್ರಹಿಯಾಗಿ ವೋಲ್ಕ್ಸ್‌ರಸ್ಟ್ ಸೆರೆಮನೆಗೆ ಕರೆದೊಯ್ಯಲ್ಪಡುತ್ತಿದ್ದ ಭಾರತೀಯ ಕೈದಿಗೆ ರೈಲ್ವೇ ಉಪಹಾರ ಮಂದಿರದ ಬಿಳಿಯ ಸಹಾಯಕಿಯೊಬ್ಬಳು ಪ್ರೀತಿಯಿಂದ ಉಪಾಹಾರ ಪೂರೈಸಿ ಅದಕ್ಕೆ ಹಣ ತೆಗೆದುಕೊಳ್ಳಲು ಸುತಾರಾಂ ನಿರಾಕರಿಸಿದ ಪ್ರಸಂಗ ಸೂಚಿಸುವ ವರ್ಣ ಸೌಹಾರ್ದದ ದಿಟ್ಟ ಉದಾಹರಣೆಯಾಗಿ ಶ್ರೀಮತಿ ವೊಗಲ್, ಭಾರತೀಯ ಮಹಿಳೆಯರಿಗಾಗಿ ಒಂದು ಹೊಲಿಗೆ ತರಬೇತಿ ಶಾಲೆಯನ್ನೇ ಆರಂಭಿಸಿದ್ದಾರೆ.'

■

೩.೨
ಮಧ್ಯಂತರದ ಒಂದೆರಡು ಕಹಿ-ಸಿಹಿ ಘಟನೆಗಳು

ಗಾಂಧಿ ಲಂಡನ್‌ನಿಂದ ಬಂದು ಸತ್ಯಾಗ್ರಹವನ್ನು ಪುನರಾರಂಭಿಸಿ ಗುರಿ ಮುಟ್ಟುವವರೆಗೂ ಅದು ಜೀವಂತವಾಗಿರುವಂತೆ ಅದಕ್ಕೊಂದು ಭದ್ರ ಆಧಾರ ಒದಗಿಸಲು ಯತ್ನಿಸುತ್ತಾ, ಇನ್ನೊಂದು ಕಡೆ ಸರ್ಕಾರದೊಡನೆ ಒಂದು ಪರಿಹಾರಕ್ಕಾಗಿ ಮಾತುಕತೆ ನಡೆಸಲು ಯತ್ನಿಸುತ್ತಿರುವಾಗಲೇ, ಅವರ ಕುಟುಂಬದಲ್ಲಿ ಒಂದು ಸಣ್ಣ ಒಡಕು ಕಾಣಿಸಿಕೊಳ್ಳಲಾರಂಭಿಸಿತ್ತು. ಅವರ ಹಿರಿಯ ಮಗ ಹರಿಲಾಲ ಭಾರತದಿಂದ ಬಂದು ತಂದೆಯ ಮಾರ್ಗದರ್ಶನದಲ್ಲಿ ಸತ್ಯಾಗ್ರಹಗಳಲ್ಲಿ ಪಾಲ್ಗೊಂಡು ಸೆರೆಮನೆಯ ಶಿಕ್ಷೆ ಅನುಭವಿಸುತ್ತಿದ್ದನಾದರೂ, ಒಳಗೆ ಅವನಲ್ಲಿ ತನ್ನ ಬದುಕಿನ ಭವಿಷ್ಯದ ಬಗ್ಗೆ ಆತಂಕ ಮತ್ತು ಮಕ್ಕಳನ್ನು ಕುರಿತ ತನ್ನ ತಂದೆಯ ಮನೋಭಾವದ ಬಗ್ಗೆ ಹತಾಶೆ ಆರಂಭವಾಗಿತ್ತು. ಅವನ ಪ್ರಕಾರ ಗಾಂಧಿ ಬದುಕಿನಲ್ಲಿ ಮಕ್ಕಳು ಮತ್ತು ಹೆಂಡತಿ ಕೊನೆಯ ಆದ್ಯತೆಗಳಾಗಿದ್ದವು. ಈಗಾಗಲೇ ತಂದೆಯ ಇಷ್ಟಕ್ಕೆ ವಿರುದ್ಧವಾಗಿ ಆತ ಮದುವೆಯಾಗಿ ಒಂದು ಗಂಡು ಮಗುವಿನ ತಂದೆಯೂ ಆಗಿದ್ದನು.

ಹರಿಲಾಲನ ಹಠ-ಭಾರತಕ್ಕೆ ವಾಪಸ್

ಹರಿಲಾಲನಿಗೆ ಓದಿ ವಕೀಲನಾಗಬೇಕೆಂಬ ಆಸೆ. ಆದರೆ ಗಾಂಧಿಗೆ ತಮ್ಮ ಮಕ್ಕಳಾರೂ ಇಂಗ್ಲಿಷ್ ಶಿಕ್ಷಣ ವ್ಯವಸ್ಥೆಗೆ ಬಲಿಯಾಗಿ ಆಧುನಿಕ ನಾಗರೀಕತೆಯ ಸೇವಕರಾಗಬಾರದೆಂಬ ಸಂಕಲ್ಪ. ಇದನ್ನೊಪ್ಪದ ಹರಿಲಾಲ್ ಈ ಮೊದಲೇ – ಗಾಂಧಿ ಲಂಡನ್‌ನಲ್ಲಿದ್ದಾಗ ತನ್ನ ಹೆಂಡತಿ-ಮಗುವನ್ನು ತವರಿಗೆ ಕಳಿಸಿ ಬಂದು, ಈಗ ತಾನೂ ಹೊರಡಲನುವಾಗಿದ್ದ. ಅವನ ವಾದ ಮತ್ತು ಹಠವನ್ನು ತಡೆಯಲಾಗದ ಗಾಂಧಿ ೧೯೧೧ರ ಮೇ ೧೬ ರಂದು ಒಲ್ಲದ ಮನಸ್ಸಿನಿಂದ ಅವನನ್ನು ತಿಂಗಳಿಗೆ ಮುವ್ವತ್ತು ರೂಪಾಯಿಗಳ ಭತ್ಯೆಯ ವ್ಯವಸ್ಥೆ ಮಾಡುವ ಆಶ್ವಾಸನೆಯೊಂದಿಗೆ ಆಶೀರ್ವದಿಸಿ ಭಾರತಕ್ಕೆ ಕಳಿಸಿದರು. ಆತನೂ ಸತ್ಯಾಗ್ರಹಕ್ಕೆ ತಾನು ಅಗತ್ಯವೆನಿಸಿದಾಗ ತಿಳಿಸಿದರೆ ಕೂಡಲೇ ಹೊರಟು ಬರುವುದಾಗಿ ಹೇಳಿ, ತಂದೆಗೆ ತಕ್ಕ ಮಗನಾಗಿ ಬೆಳೆಯುವುದಾಗಿ ಆಶ್ವಾಸನೆ ನೀಡಿ ತೆರಳಿದನು. ಆದರೆ ಗಾಂಧಿಗೆ ಅವನ ಈ ನಡೆ ವೈಯಕ್ತಿಕ ಮತ್ತು ಕೌಟುಂಬಿಕ ನೆಲೆಗಳೆರಡರಲ್ಲೂ ಆಘಾತವನ್ನುಂಟುಮಾಡಿತು. ಹಿರಿಮಗ ಮನಸ್ಸಿಗೆ ಮಾಡಿದ ಈ ಗಾಯ ಮುಂದಿನ ದಿನಗಳ ಅವನ ವರ್ತನೆಗಳಿಂದ ದೊಡ್ಡದಾಗುತ್ತಾ ಹೋಗಿ, ಗಾಂಧಿಯ ಇಡೀ ಬದುಕಿನ ತುಂಬ ಅವರನ್ನೂ ಕಸ್ತೂರಬಾರನ್ನೂ ನೋಯಿಸಿತು. ಇದಕ್ಕೆ ಹರಿಲಾಲ ಎಷ್ಟು ಕಾರಣ, ಗಾಂಧಿ ಎಷ್ಟು ಕಾರಣ ಎಂಬ ಚರ್ಚೆ

ಈಗಲೂ ನಡೆದಿದೆ.

ಕಲೆನ್‌ಬಾಕ್‌ನಿಂದ ಪಡೆದ ವಚನ

ಈ ಕಹಿ ಘಟನೆಯ ನಂತರ ಗಾಂಧಿ ತಮ್ಮ ವಕೀಲ ವೃತ್ತಿಯ ಜವಾಬ್ದಾರಿಗಳನ್ನು ರೀಚ್ ಅವರಿಗೆ ವಹಿಸಿ, ಹೆಚ್ಚು ಕಾಲ ಟಾಲ್‌ಸ್ಟಾಯ್ ಆಶ್ರಮದ ಶಾಲೆಯ ಕಡೆ ಗಮನ ಕೊಟ್ಟು, ಇಡೀ ಹಗಲು ಅಲ್ಲಿ ಮಾಸ್ತರರಾಗಿ ಮಕ್ಕಳಿಗೆ ಪ್ರಕೃತಿಯ ನಡುವೆ ಅನೌಪಚಾರಿಕ ಶಿಕ್ಷಣ ನೀಡುವ ಕಾಯಕದಲ್ಲಿ ತೊಡಗಿದರು. ಒಮ್ಮೊಮ್ಮೆ ಭಾರತಕ್ಕೆ ಹಿಂದಿರುಗುವ ಒತ್ತಡವೂ ಉಂಟಾಗುತ್ತಿತ್ತು. ಗೆಳೆಯ ಪ್ರಾಣಜೀವನ ಮೆಹ್ತಾ, ಬೇಗ ಭಾರತಕ್ಕೆ ಬಂದು ರಾಷ್ಟ್ರೀಯ ಹೋರಾಟದ ನೇತೃತ್ವ ವಹಿಸಿಕೊಳ್ಳಬೇಕೆಂದು ಕೋರುತ್ತಲೇ ಇದ್ದ. ಆದರೆ ಪೊಲಾಕ್ ಮತ್ತು ಕಲೆನ್‌ಬಾಕ್ ದ.ಆಫ್ರಿಕಾದಲ್ಲಿನ ಕೆಲಸ ಪೂರ್ಣಗೊಳಿಸದೆ ಹೋಗಬಾರದೆಂದು ಆಗ್ರಹಿಸುತ್ತಿದ್ದರು. ಗಾಂಧಿಯವರ ಈ ಮುವ್ವರು ಆಪ್ತ ಸ್ನೇಹಿತರೂ ಒಮ್ಮೆ ಲಂಡನ್‌ನಲ್ಲಿ ಸೇರಿದ್ದಾಗ ಗಾಂಧಿ ಮುಂದಿನ ಬದುಕಿನ ಗುರಿಗಳ ಬಗ್ಗೆ ಚರ್ಚಿಸಿದ್ದರು ಕೂಡ. ಪೊಲಾಕ್, ಗಾಂಧಿಯ ಅಭಿಮಾನಿಯಾಗಿದ್ದರೂ ರಸಿಕನಾಗಿದ್ದ, ಗಾಂಧಿಯ ಸರಳ ಜೀವನದ ನಿಯಮಗಳಿಗೆ ಆತ ಹೊರತಾಗಿದ್ದ. ಆದರೆ ಕಲೆನ್‌ಬಾಕ್ ಗಾಂಧಿಯನ್ನು ಗುರುವಾಗಿ ಸ್ವೀಕರಿಸಿ ಅವರ ಮಾತುಗಳನ್ನು ಆಣತಿಯಂತೆ ಪಾಲಿಸುವವನಾಗಿದ್ದ. ಇದನ್ನರಿತೇ ಗಾಂಧಿ ಆತ ಯೂರೋಪ್‌ಗೆ ಹೊರಟಾಗ, ತಾವು ಬ್ಯಾರಿಸ್ಟರ್ ಆಗಲು ಮೊದಲ ಬಾರಿಗೆ ಲಂಡನ್‌ಗೆ ಹೊರಟಾಗ ತಮ್ಮ ತಾಯಿ ತಮ್ಮಿಂದ ಪಡೆದಿದ್ದ ವಚನಗಳನ್ನೇ ಅವನಿಂದ ಪಡೆದರು! ಇವುಗಳ ಜೊತೆಗೆ ಆತನಿಂದ ಪಡೆದ ಇನ್ನೊಂದು ವಚನವೆಂದರೆ ಯಾವ ಹೆಣ್ಣನ್ನೂ ಕಾಮದೃಷ್ಟಿಯಿಂದ ನೋಡಬಾರದು ಮತ್ತು ಮದುವೆಯಾಗುವ ಯೋಚನೆ ಮಾಡಬಾರದು!

ಗಾಂಧಿ ವಿರುದ್ಧ ಎದ್ದ ಅಪಸ್ವರ

ಗಾಂಧಿ ಈಗ ಜ. ಸ್ಮಟ್ಸ್‌ನೊಡನೆಯ ಇತ್ತೀಚಿನ ಒಪ್ಪಂದದಂತೆ ಸತ್ಯಾಗ್ರಹವನ್ನು ಸ್ಥಗಿತಗೊಳಿಸಿ ದೂರದ ಟ್ರಾನ್ಸ್‌ವಾಲ್‌ನ ಟಾಲ್‌ಸ್ಟಾಯ್ ಆಶ್ರಮದಲ್ಲಿ ನೆಲೆಸಿದ್ದರಿಂದ ಭಾರತೀಯ ಸಮುದಾಯದಲ್ಲೇ ಇದ್ದ ಭಿನ್ನಮತೀಯರಿಗೆ ದನಿ ಕೊಡುವ ಸಣ್ಣ ಪ್ರಯತ್ನಗಳು ನೆಟಾಲ್‌ನಲ್ಲಿ ಆರಂಭವಾದವು. ಡರ್ಬಾನ್‌ನ 'ಆಫ್ರಿಕನ್ ಕ್ರಾನಿಕಲ್'ನ ಸಂಪಾದಕ ಪಿ.ಎಸ್. ಅಯ್ಯರ್ ೧೯೧೧ರ ಮಾರ್ಚ್ ಹೊತ್ತಿಗೆ ಗಾಂಧಿಯ ನಾಯಕತ್ವವನ್ನು ಮೆಚ್ಚುವಂತೆ ತನ್ನ ಪತ್ರಿಕೆಯಲ್ಲಿ ಸಂಪಾದಕೀಯಗಳನ್ನು ಬರೆಯುತ್ತಿರುವಾಗಲೇ ನಿಧಾನವಾಗಿ, ಅವರದ್ದು ಪೂರ್ಣ ಸಂಘರ್ಷಾತ್ಮಕವಲ್ಲದ ನಿಧಾನ ಗತಿಯ ಹೋರಾಟದ ಮಾರ್ಗವೆಂದು ಟೀಕಿಸುತ್ತಾ ಅದನ್ನು ಪ್ರಶ್ನಿಸತೊಡಗಿದ. ಗಾಂಧಿ ಬಿಡುವು ಪಡೆದಿರುವ ಈ ಹೊತ್ತಿನಲ್ಲಿ ಅದರ ನಾಯಕತ್ವಕ್ಕೆ ಈಗ ತಾನು ಸೂಕ್ತ ಎಂಬ ಸೂಚನೆಗಳನ್ನು ನೀಡತೊಡಗಿದ. ಮುಂದುವರೆದ ಆತ ನೆಟಾಲ್‌ನ ಬಡ ಭಾರತೀಯ ಕೂಲಿಗಳು ತಮ್ಮ ವರ್ಷದ ಆದಾಯದ ಕಾಲುಭಾಗದಷ್ಟಾಗುವ ಮೂರು ಪೌಂಡ್‌ಗಳಷ್ಟು ತೆರಿಗೆ ನೀಡಬೇಕಾಗಿರುವ ಕಾನೂನಿನ ವಿರುದ್ಧ ಹೋರಾಟಕ್ಕೆ ಕರೆಯನ್ನೂ ನೀಡಿದ. ಇದಕ್ಕೆ ಪೂರಕವೆಂಬಂತೆ ಕೆಲವರು ಗಾಂಧಿ ಸತ್ಯಾಗ್ರಹ ಮುಖ್ಯವಾಗಿ ಗುಜರಾತಿ ವ್ಯಾಪಾರಿಗಳ ಹಿತರಕ್ಷಣೆಯನ್ನಷ್ಟೇ ಉದ್ದೇಶಿಸಿದೆ ಎಂಬ

ಪ್ರಚಾರವನ್ನೂ ಆರಂಭಿಸಿದರು.

ಇದರಿಂದ ಜಿಗುಪ್ಸೆಗೊಂಡ ಗಾಂಧಿ ಅನುಯಾಯಿ ಜೋಸೆಫ್ ರಾಯಪ್ಪನ್, ಒಮ್ಮೆಯೂ ಸೆರೆಮನೆಗೆ ಹೋಗದ ಅಯ್ಯರ್‌ನನ್ನು 'ಇಂಡಿಯನ್ ಒಪಿನಿಯನ್'ನಲ್ಲಿ ತರಾಟೆಗೆ ತೆಗೆದುಕೊಂಡರು. ಆದರೆ ಫೀನಿಕ್ಸ್‌ನ ಕೆಲ ನಿವಾಸಿಗಳೇ ಅಯ್ಯರ್‌ನ ಹೋರಾಟದ ಕರೆಗೆ ಬೆಂಬಲ ವ್ಯಕ್ತಪಡಿಸಿದಾಗ ಅವರಿಗೆ ಆತಂಕವೆನಿಸಿತು. ನೆಟಾಲ್ ಇಂಡಿಯನ್ ಕಾಂಗ್ರೆಸ್ ಕೂಡ ಹೋರಾಟಕ್ಕೆ ತನ್ನ ಬೆಂಬಲ ಘೋಷಿಸಿತು. ಈ ಬಗ್ಗೆ 'ಇಂಡಿಯನ್ ಒಪಿನಿಯನ್'ನ ಉಸ್ತುವಾರಿಯಲ್ಲಿದ್ದ ಆಲ್ಬರ್ಟ್ ವೆಸ್ಟ್ ಗಾಂಧಿಗೆ ಪತ್ರ ಬರೆದಾಗ, ಅವರು ಹೋರಾಟಕ್ಕೆ ಒಂದು ವಿಧಾನ ಮತ್ತು ಸಿದ್ಧತೆ ಅಗತ್ಯವಿದೆಯೆಂದೂ, ಈಗ ಪ್ರತಿಭಟಿಸಿ ಸೆರೆಮನೆಗೆ ಹೋಗಲು, ತಮ್ಮ ಕುಟುಂಬಗಳನ್ನು ಬೀದಿಪಾಲು ಮಾಡಲು ಎಷ್ಟು ಜನ ಸಿದ್ಧರಿದ್ದಾರೆಂಬ ಅಂದಾಜು ಮಾಡಿದರೆ ಸಾಕು ದಿಢೀರ್ ಹೋರಾಟದ ಕಲ್ಪನೆ ಎಷ್ಟು ಬಾಲಿಶವೆಂಬುದು ಗೊತ್ತಾಗುವುದೆಂದೂ ಉತ್ತರ ಬರೆದರು. ಗಾಂಧಿಯ ಈ ಎಚ್ಚರಿಕೆಯ ಮಾತು ನಿಜವೆನ್ನುವಂತೆ ಹೋರಾಟ ನೆಲ ಬಿಟ್ಟು ಮೇಲೇಳಲಿಲ್ಲ. ಆದರೂ ಕೆಲವು ವಲಯಗಳಲ್ಲಿ ಗಾಂಧಿ ಮೇಲಿನ ಸಿಟ್ಟನ್ನು ಗಮನಿಸಿದ್ದ ಕಲೆನ್‌ಬಾಕ್, ಗಾಂಧಿ ನೆಟಾಲ್‌ಗೆ ಬಂದಾಗಲೆಲ್ಲ ಅವರ ಜೊತೆ ರಕ್ಷಕನಾಗಿ ಹತ್ತಿರದಲ್ಲೇ ಇರಬೇಕೆಂದು ಫೀನಿಕ್ಸ್‌ನಲ್ಲಿದ್ದ ಛಗನ್‌ಲಾಲ್ ಪತ್ರ ಬರೆದಿದ್ದ ಎಂಬುದನ್ನು ಗಮನಿಸಿದರೆ ಆಗ ಪರಿಸ್ಥಿತಿ ಎಷ್ಟು ಉದ್ವಿಗ್ನವಾಗಿತ್ತು ಎಂಬುದು ಗೊತ್ತಾಗುತ್ತದೆ.

ಗಾಂಧಿ ಪ್ರೇರಣೆಯಲ್ಲಿ ಕಪ್ಪು ಜನರ ಮೊದಲ ಸಂಘಟನೆ

ಸುಮಾರು ಇದೇ ವೇಳೆಯಲ್ಲಿ–ಜ.ಸ್ಮಟ್ಸ್ ಮತ್ತು ಗಾಂಧಿ ನಡುವೆ ಒಪ್ಪಂದವಾಗುತ್ತಿದ್ದಾಗ–ದ.ಆಫ್ರಿಕಾದಲ್ಲಿ ನಡೆದ ಇನ್ನೊಂದು ಐತಿಹಾಸಿಕ ಬೆಳವಣಿಗೆಯನ್ನು ಇಲ್ಲಿ ದಾಖಲಿಸಬೇಕು. ಇದು ಬಹಳಷ್ಟು ಗಾಂಧಿ ಜೀವನ ಚರಿತ್ರೆ ಸಂಪುಟಗಳಲ್ಲಿ ಕೂಡ ದಾಖಲಾಗದೆ ಬಿಟ್ಟುಹೋಗಿರುವ ಬಹು ಮಹತ್ವದ ವಿದ್ಯಮಾನ. ೧೯೧೧ರ ಜುಲೈ ೨೯ರ 'ಇಂಡಿಯನ್ ಒಪಿನಿಯನ್' ಸಂಚಿಕೆಯಲ್ಲಿ ದ.ಆಫ್ರಿಕಾದ ಮೂಲನಿವಾಸಿ ಜನಾಂಗಗಳ ಎಲ್ಲ ಸಂಘಟನೆಗಳನ್ನೂ ಒಗ್ಗೂಡಿಸುವ ಪ್ರಯತ್ನದ ಬಗ್ಗೆ ಬರೆಯಲಾಗಿತ್ತು. ಈ ಪ್ರಯತ್ನವನ್ನು ಕೈಗೊಂಡ ವ್ಯಕ್ತಿ ನ್ಯೂಯಾರ್ಕ್‌ನ ಕೊಲಂಬಿಯಾ ವಿಶ್ವವಿದ್ಯಾಲಯದಿಂದ ಪದವಿಯನ್ನೂ, ಲಂಡನ್‌ನಲ್ಲಿ ವಕೀಲ ಶಿಕ್ಷಣವನ್ನೂ ಪಡೆದು ಬಂದಿದ್ದ, ಜೊಹಾನ್ಸ್‌ಬರ್ಗ್‌ನಲ್ಲಿ ವಕೀಲಿ ವೃತ್ತಿ ನಡೆಸಿದ್ದ ಡಾ. ಪ್ರಿಕ್ಸ್‌ಲಿ ಸೆಮೆ ಎಂಬುವವರು. ಗಾಂಧಿ ನೇತೃತ್ವದ ಸತ್ಯಾಗ್ರಹ ಆಂದೋಲನವನ್ನು ಗಮನಿಸುತ್ತಿದ್ದ ಇವರು, ದ.ಆಫ್ರಿಕಾದ ಮಣ್ಣಿನ ಮಕ್ಕಳ ಸಂಘಟನೆಯನ್ನು ಹಿಂಸೆಯ ಮೂಲಕ ಕಟ್ಟಲಾಗುವುದಿಲ್ಲ ಎಂದು ಸಂದರ್ಶನವೊಂದರಲ್ಲಿ ಹೇಳುತ್ತಾ, ಅದು ಸತ್ಯಾಗ್ರಹಕ್ಕೂ ಮೊರೆ ಹೋಗಬೇಕಾಗಬಹುದು ಎಂದಿದ್ದರು.

೧೯೧೧ರ ಅಕ್ಟೋಬರ್‌ನಲ್ಲಿ ಟಾಲ್‌ಸ್ಟಾಯ್ ಆಶ್ರಮಕ್ಕೆ ಭೇಟಿ ನೀಡಿ ಗಾಂಧಿಯೊಂದಿಗೆ ಮಾತನಾಡಿ ಅಲ್ಲಿ ಒಂದೇ ಆವರಣದಲ್ಲಿ ವಿವಿಧ ಪ್ರಾಂತ್ಯಗಳ, ಭಾಷೆಗಳ, ಧರ್ಮಗಳ ಜನ ಒಟ್ಟಿಗೆ ನೆಮ್ಮದಿಯಿಂದ ಬಾಳುತ್ತಿರುವುದನ್ನು ನೋಡಿ ಬಂದಿದ್ದರು. ಕೂಡಲೇ ಅವರು ದ.ಆಫ್ರಿಕಾದ ಕ್ಸೋಸಾ, ಫಿಂಗೋ, ಜುಲು, ಟೋಗಾ,

ಬಸೊತೋ ಮುಂತಾದ ವಿವಿಧ ಬುಡಕಟ್ಟುಗಳ ಪರಸ್ಪರ ಹಗೆತನ ಮತ್ತು ಜಗಳಗಳ ಬಗ್ಗೆ ಚಿಂತಿಸಿ ಅವರನ್ನೆಲ್ಲ ಒಂದು ಗುರಿಗಾಗಿ ಒಗ್ಗೂಡಿಸುವ ಪ್ರಯತ್ನ ಆರಂಭಿಸಿದರು. ಇದರ ಫಲವಾಗಿ ೧೯೧೨ರ ಜನವರಿ ಎರಡನೇ ವಾರದಲ್ಲಿ ಬ್ಲೊಫಂಟೇನ್ ನಗರದಲ್ಲಿ ವಿವಿಧ ಬುಡಕಟ್ಟುಗಳಿಗೆ ಸೇರಿದ ಸುಮಾರು ಅರವತ್ತು ಜನ ವಕೀಲರು, ಪತ್ರಕರ್ತರು, ಸಮುದಾಯ ಮುಖಂಡರು ಸಭೆ ಸೇರಿ ದ.ಆಫ್ರಿಕಾ ದೇಶಿ ರಾಷ್ಟ್ರೀಯ ಕಾಂಗ್ರೆಸ್ (ಸೌತ್ ಆಫ್ರಿಕನ್ ನೇಟಿವ್ ನ್ಯಾಷನಲ್ ಕಾಂಗ್ರೆಸ್) ಎಂಬ ಸಂಸ್ಥೆ ರಚನೆಯ ಘೋಷಣೆ ಮಾಡಿದರು. ಝುಲು ಸುಧಾರಕ ಜಾನ್ ಡುಬೆ ಅವರನ್ನು ಅವರ ಗೈರು ಹಾಜರಿಯಲ್ಲಿ- ಅವರು ಪೂರ್ವನಿಯೋಜಿತ ಕಾರ್ಯಕ್ರಮವೊಂದರಿಂದಾಗಿ ಬರಲಾಗಿರಲಿಲ್ಲವಾಗಿ- ಸಂಸ್ಥೆಯ ಮೊದಲ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಈ ಮೂಲ ಆಫ್ರಿಕನ್ ಬುಡಕಟ್ಟುಗಳ ಇತಿಹಾಸದಲ್ಲೇ ಮೊದಲ ಬಾರಿಗೆ ನಡೆದ ಈ ಐಕ್ಯತೆಯ ಪ್ರದರ್ಶನ ನಿಜವಾದ ಆಫ್ರಿಕನ್ ರಾಷ್ಟ್ರೀಯ ಐಕ್ಯತೆಯ ಸಂಕಲ್ಪದ ಪ್ರಯತ್ನವಾಗಿದ್ದು, ರಾಷ್ಟ್ರದ ಕಾನೂನುಗಳ ರಚನೆಯಲ್ಲಿ ಯಾವುದೇ ರೀತಿಯಲ್ಲಿ ಬಹುಸಂಖ್ಯಾತರಾದ ತಮ್ಮ ಪಾತ್ರವಿಲ್ಲದ ವಿಪರ್ಯಾಸವನ್ನು ಸರಿಪಡಿಸಲು ಬಳಸಬೇಕಾದ ಮಾರ್ಗಗಳನ್ನು ರೂಪಿಸುವುದೇ ಈ ಸಂಸ್ಥೆಯ ಉದ್ದೇಶವಾಗಿದೆ ಎಂದು ಡಾ. ಸೆಮೆ ಘೋಷಿಸಿದರು.

ಜಾನ್ ಡುಬೆ, ಗಾಂಧಿಯ ಫೀನಿಕ್ಸ್ ಆಶ್ರಮದ ಪಕ್ಕದಲ್ಲೇ ಮೂರು ನೂರು ಎಕರೆ ಜಮೀನು ಕೊಂಡು ತಮ್ಮ ಜನಾಂಗದ ಯುವಜನರಿಗೆ ವಿವಿಧ ಆಧುನಿಕ ವೃತ್ತಿಗಳಲ್ಲಿ ತರಬೇತಿ ಒದಗಿಸುವ ಸಮಾಜ ಸುಧಾರಣಾ ಕಾರ್ಯದಲ್ಲಿ ತೊಡಗಿದ್ದವರು. ಹಾಗಾಗಿ ಅವರು ನೆರೆಹೊರೆಯವರಾಗಿ ಪರಿಚಿತರೂ ಆಗಿದ್ದು, ಇಬ್ಬರೂ ಪರಸ್ಪರ ವಿಚಾರಗಳ ಬಗ್ಗೆ ಮೆಚ್ಚುಗೆಗಳನ್ನೂ ಪತ್ರಿಕೆಗಳಲ್ಲಿ ದಾಖಲಿಸುತ್ತಿದ್ದರು. ಆದರೆ ಗಾಂಧಿ ಟ್ರಾನ್ಸ್‌ವಾಲ್‌ಗೆ ಹೋದ ನಂತರ ಸಂಪರ್ಕ ತಪ್ಪಿಹೋಗಿತ್ತು. ಆದರೂ ಡುಬೆ ತಮ್ಮ ಕಾಂಗ್ರೆಸ್‌ಗಾಗಿ ಸಿದ್ಧಪಡಿಸಿದ ಪ್ರಣಾಳಿಕೆಯಲ್ಲಿ ಸೂಚಿಸಿದ್ದ ಶಾಂತಿ-ವ್ಯವಧಾನ-ಸಹನೆ-ವಿವೇಕ- ಕಾನೂನು ಪಾಲನೆ ಮತ್ತು ನ್ಯಾಯಪರತೆಗಳ ಪ್ರಾಮುಖ್ಯತೆಯು ಅವರ ಮೇಲಿನ ಗಾಂಧಿ ಪ್ರಭಾವವನ್ನು ಸೂಚಿಸುವಂತಿತ್ತು.

ರತನ್‌ಜಿ ಟಾಟಾರಿಂದ ಮತ್ತೊಂದು ದೊಡ್ಡ ದೇಣಿಗೆ

ಈ ಮಧ್ಯೆ ಗಾಂಧಿ, ೧೯೧೨ರ ಏಪ್ರಿಲ್‌ನಲ್ಲಿ ರತನ್ ಟಾಟಾ ಅವರಿಗೆ ಪತ್ರ ಬರೆದು ಸತ್ಯಾಗ್ರಹ ನಿಧಿಯ ವಿವರವಾದ ಲೆಕ್ಕ ಪತ್ರಗಳನ್ನು ನೀಡಿ, ಅವರ ಸಹಾಯಕ್ಕಾಗಿ ಧನ್ಯವಾದಗಳನ್ನು ತಿಳಿಸಿದರಲ್ಲದೆ, ಸದ್ಯದ ಪರಿಸ್ಥಿತಿಯ ಚಿತ್ರವನ್ನೂ ನೀಡಿದರು. ಪತ್ರ ಓದಿ ಲೆಕ್ಕ ಪತ್ರಗಳನ್ನು ನೋಡಿದ ರತನ್ ಟಾಟಾ, ೧೯೧೨ರ ಜುಲೈ ೩೧ರಂದು ಮುಂಬೈನಲ್ಲಿ ಹಿರಿಯ ಪಾರ್ಸಿ ಗಣ್ಯ ಉದ್ಯಮಿ ಜೆಮ್‌ಷೆಡ್‌ಜಿ ಜೀಜಾಬಾಯ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯೊಂದರಲ್ಲಿ ಸತ್ಯಾಗ್ರಹ ನಿಧಿಗೆ ಮೂರನೇ ಬಾರಿಗೆ ಇಪ್ಪತ್ತೈದು ಸಾವಿರ ರೂಪಾಯಿಗಳ ದೇಣಿಗೆಯನ್ನು ಪ್ರಕಟಿಸಿದರು. ಈ ಸಭೆ ಬ್ರಿಟಿಷ್ ಪ್ರಭುತ್ವದ ವಿವಿಧ ಕಡೆಗಳಲ್ಲಿ ಭಾರತೀಯರು ಅನುಭವಿಸುತ್ತಿರುವ ಅವಮಾನ ಸಂಕಷ್ಟಗಳ ಬಗ್ಗೆ ಬ್ರಿಟಿಷ್ ಸಾಮ್ರಾಜ್ಯಾಧಿಪತಿಗಳ ಗಮನ ಸೆಳೆದು, ನಿರ್ದಿಷ್ಟವಾಗಿ

ದ.ಆಫ್ರಿಕಾದಲ್ಲಿನ ಭಾರತೀಯರನ್ನು ಜನಾಂಗೀಯ ಅಕ್ರಮಗಳಿಗೆ ತುತ್ತಾಗಿಸುವುದು ಅಲ್ಲಿನ ಸ್ವಯಮಾಡಳಿತಗಳ ಮುಖದ ಮೇಲಿನ ಕಪ್ಪು ಕಲೆಯಾಗಿದೆ ಎಂದು ವಿಷಾದ ವ್ಯಕ್ತಪಡಿಸಿತು.

ಪುದುವಟ್ಟಾಗಿ ಪರಿವರ್ತಿತವಾದ ಫೀನಿಕ್ಸ್ ಆಶ್ರಮ

ಟಾಲ್‌ಸ್ಟಾಯ್ ಆಶ್ರಮವೇ ಈಗ ಹೋರಾಟದ ಮುಖ್ಯ ಕೇಂದ್ರವಾಗಿ ಬೆಳೆಯತೊಡಗಿದ್ದರಿಂದ ೧೯೧೨ರ ಸೆಪ್ಟೆಂಬರ್‌ನಲ್ಲಿ ಗಾಂಧಿ ಫೀನಿಕ್ಸ್ ಆಶ್ರಮವನ್ನು ಶೈಕ್ಷಣಿಕ ಉದ್ದೇಶಗಳ ಒಂದು ಪುದುವಟ್ಟಾಗಿ ಪರಿವರ್ತಿಸಿ ಅಧಿಕೃತವಾಗಿ ನೋಂದಣಿ ಮಾಡಿಸಿದರು. ತಾವು ವ್ಯವಸ್ಥಾಪಕ ಸದಸ್ಯರಾಗಿದ್ದ ಆ ಪುದುವಟ್ಟಿನ ಇತರ ಸದಸ್ಯರೆಂದರೆ ಡರ್ಬಾನ್‌ನ ವ್ಯಾಪಾರಿ ಹಾಜಿ ಅಮೋದ್ ಜೊಹಾರಿ, ಪಾರ್ಸಿ ರುಸ್ತುಂಜಿ, ಯಹೂದ್ಯ ಮಿತ್ರ ಕಲೆನ್‌ಬಾಕ್, ಕ್ರಿಶ್ಚಿಯನ್ ಮಿತ್ರ ರೀಚ್ ಮತ್ತು ಹಿಂದೂ ಗುಜರಾತಿ ಗೆಳೆಯ ಪ್ರಾಣಜೀವನ ಮೆಹ್ತಾ. ಈ ಪುದುವಟ್ಟಿನ ಉದ್ದೇಶಗಳನ್ನು ಹೀಗೆ ಪಟ್ಟಿ ಮಾಡಲಾಯಿತು:

೧. ಆದಷ್ಟೂ ಹೆಚ್ಚು ದೈಹಿಕ ದುಡಿಮೆಯ ಮೂಲಕ ಜೀವನೋಪಾಯಕ್ಕಾಗಿ

೨. ಭಾರತೀಯರು ಮತ್ತು ಐರೋಪ್ಯರ ನಡುವೆ ಉತ್ತಮ ಬಾಂಧವ್ಯ ಬೆಳೆಸಲು

೩. ಟಾಲ್‌ಸ್ಟಾಯ್ ಮತ್ತು ರಸ್ಕಿನ್ ಪ್ರತಿಪಾದಿಸಿದ ತತ್ವಗಳನ್ನು ಅನುಸರಿಸಿ ಪ್ರಸಾರ ಮಾಡಲು

೪. ಸ್ವತಃ 'ಪರಿಶುದ್ಧ' ಜೀವನ ನಡೆಸಿ ಸಾರ್ವಜನಿಕ ಜೀವನದಲ್ಲಿ 'ಪರಿಶುದ್ಧ' ಜೀವನದ ಆದರ್ಶ ಬಿತ್ತಲು

೫. ಮಕ್ಕಳಿಗೆ ಅವರ ಮಾತೃಭಾಷೆಗಳಲ್ಲೇ ಶಿಕ್ಷಣ ಕೊಡುವ ಶಾಲೆ ತೆರೆಯಲು

೬. ಶೌಚ ಸ್ವಚ್ಛತೆ ಮತ್ತು ಸಾಮಾನ್ಯ ಆರೋಗ್ಯ ಕೇಂದ್ರವೊಂದನ್ನು ಸ್ಥಾಪಿಸಲು

೭. ಮಾನವತೆಯ ಸೇವೆಗಾಗಿ ಸ್ವಯಂ ತರಬೇತಿಗಾಗಿ ಹಾಗೂ

೮. ಈ ಎಲ್ಲ ಉದ್ದೇಶ ಸಾಧನೆಗಳಿಗಾಗಿ 'ಇಂಡಿಯನ್ ಒಪಿನಿಯನ್' ಪತ್ರಿಕೆ ನಡೆಸಲು ಈ ಆಶ್ರಮದ ಆಸ್ತಿಯನ್ನು ಬಳಸಬಹುದು.

ಗಾಂಧಿ ತಮ್ಮ ಕುಟುಂಬದ ವಾಸ ಮತ್ತು ದುಡಿಮೆಗಾಗಿ ಒಂದು ಕಟ್ಟಡ ಮತ್ತು ಎರಡು ಎಕರೆ ಜಮೀನಿನ ಹೊರತಾಗಿ ಮಿಕ್ಕೆಲ್ಲವನ್ನೂ ಪುದುವಟ್ಟಿಗೆ ಬಿಟ್ಟುಕೊಟ್ಟರು. ಎಲ್ಲ ಆಶ್ರಮವಾಸಿಗಳಂತೆ ಅವರು ಕುಟುಂಬ ಭತ್ಯೆಯಾಗಿ ತಿಂಗಳಿಗೆ ಐದು ಪೌಂಡ್ ಹಣ ಪಡೆಯುವರು. ಇದೇ ಸಮಯದಲ್ಲಿ ಗಾಂಧಿ 'ಇಂಡಿಯನ್ ಒಪಿನಿಯನ್' ಯಾವುದೇ ವಾಣಿಜ್ಯ ಜಾಹೀರಾತನ್ನು ಸ್ವೀಕರಿಸುವುದಿಲ್ಲವೆಂದೂ ಪ್ರಕಟಿಸಿದರು. ಅವರ ಪ್ರಕಾರ, ಕಣ್ತಪ್ಪಿ ಕೆಲವು ಜಾಹೀರಾತುಗಳು ಪತ್ರಿಕೆಯ ವಿಚಾರಗಳ ದಿಕ್ಕು ತಪ್ಪಿಸುವಂತಿರುತ್ತವೆ ಎಂಬುದಾಗಿತ್ತು.

■

೩೩

ಗೋಖಲೆ ಬಂದು ಹೋದರು

ಟಾಲ್‌ಸ್ಟಾಯ್ ಆಶ್ರಮ ಸತ್ಯಾಗ್ರಹಿಗಳ ಪುನರ್ವಸತಿ ಕ್ಷೇತ್ರವಾಗಿ ಸ್ಥಾಪಿತವಾದ ನಂತರ ಫೀನಿಕ್ಸ್ ಆಶ್ರಮವನ್ನು ಒಂದು ತಾತ್ವಿಕ ಉದ್ದೇಶಕ್ಕಾಗಿ ಅಭಿವೃದ್ಧಿ ಪಡಿಸುವ ನಿರ್ಣಯವನ್ನು ತೆಗೆದುಕೊಂಡ ಕೂಡಲೇ ಗಾಂಧಿ ಗಮನ ಹರಿಸಿದ್ದು ಗೋಪಾಲಕೃಷ್ಣ ಗೋಖಲೆಯವರ ನಿಯೋಜಿತ ದ.ಆಫ್ರಿಕಾ ಭೇಟಿಯತ್ತ. ತಮ್ಮ ರಾಜಕೀಯ ಗುರು ಎಂದು ಮಾನ್ಯ ಮಾಡಿದ್ದ ಮತ್ತು ದ.ಆಫ್ರಿಕಾದಲ್ಲಿ ಭಾರತೀಯರ ಬಗ್ಗೆ ತೀವ್ರ ಕಾಳಜಿ ವಹಿಸಿದ್ದ ಅವರೊಮ್ಮೆ ಅಲ್ಲಿಗೇ ಬಂದು ವಾಸ್ತವ ಸ್ಥಿತಿ ಅರಿಯಬೇಕೆಂದು ಗಾಂಧಿ ಹಲವು ಬಾರಿ ಆಹ್ವಾನ ನೀಡಿದ್ದರು. ಸ್ವತಃ ಒಡನಾಡಿದ್ದಕ್ಕಿಂತ ಹೆಚ್ಚಾಗಿ ಹಲವು ವರದಿಗಳ ಮೂಲಕ, ಸ್ವತಃ ಗಾಂಧಿಯವರ ಪತ್ರಗಳ ಮೂಲಕ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಗಾಂಧಿಯನ್ನು ಬುದ್ಧ, ಮಹಾವೀರ, ಏಸುಗಳಿಗೆ ಹೋಲಿಸಿ ಯುಗಪುರುಷನೆಂದು ವರ್ಣಿಸುವ ಪ್ರಾಣಜೀವನ ಮೆಹ್ತಾರ ಮಾತುಗಳ ಮೂಲಕ ಗೋಖಲೆಯವರು ಗಾಂಧಿ ವ್ಯಕ್ತಿತ್ವ ಮತ್ತು ಅವರು ಮಾಡುತ್ತಿರುವ ಕೆಲಸದ ಬಗ್ಗೆ ಬಹು ಕುತೂಹಲ ತಾಳಿದ್ದರು. ಭಾರತದ ವೈಸ್‌ರಾಯ್ ಸಲಹಾ ಮಂಡಳಿಯ ಗಣ್ಯ ಸದಸ್ಯರಾಗಿ, ಬ್ರಿಟಿಷ್ ಸರ್ಕಾರದೊಡನೆ ಸೌಹಾರ್ದ ಸಂಬಂಧ ಹೊಂದಿದ್ದ ಅವರು ಇಂಗ್ಲೆಂಡ್‌ಗೆ ನೀಡಿದ್ದ ಹಲವು ಭೇಟಿಗಳ ಸಂದರ್ಭದಲ್ಲಿ ದ.ಆಫ್ರಿಕಾಗೆ ಹೋಗುವ ಆಸಕ್ತಿ ತೋರಿದ್ದರಾದರೂ, ಅವರ ಸೂಕ್ಷ್ಮ ಆರೋಗ್ಯದ ದೃಷ್ಟಿಯಿಂದ ಪ್ರಯಾಣ ರದ್ದಾಗಿತ್ತು. ಆದರೆ ೧೯೧೧ರ ಇಂತಹ ಭೇಟಿಯ ಸಂದರ್ಭದಲ್ಲಿ ದ.ಆಫ್ರಿಕಾದಲ್ಲಿನ ಬ್ರಿಟಿಷ್ ಭಾರತೀಯ ಪ್ರಜೆಗಳ ಸ್ಥಿತಿ ಗತಿಗಳನ್ನು ಕಣ್ಣಾರೆ ನೋಡಿ ಬರಬೇಕೆಂದು ಗೋಖಲೆಯವರು ಬ್ರಿಟಿಷ್ ಸರ್ಕಾರಕ್ಕೆ ತಿಳಿಸಿದಾಗ ಸರ್ಕಾರ ಅದನ್ನು ಒಪ್ಪಿ ಅವರ ಪ್ರಯಾಣಕ್ಕೆ ತಾನೇ ಸಿದ್ಧತೆ ಮಾಡಿಕೊಟ್ಟು ದ.ಆಫ್ರಿಕಾದ ಸರ್ಕಾರಕ್ಕೂ ಅವರನ್ನು ಅತಿಗಣ್ಯ ಅತಿಥಿಯಾಗಿ ನೋಡಿಕೊಳ್ಳಬೇಕೆಂದು ಸೂಚಿಸಿತು. ಸರ್ಕಾರ ಹಿರಿಯ ಅಧಿಕಾರಿಯೊಬ್ಬನನ್ನು ಗೋಖಲೆ ಹೋದಲ್ಲಿ ಅಗತ್ಯ ವಸತಿ ಮತ್ತು ಆತಿಥ್ಯದ ವ್ಯವಸ್ಥೆ ಮಾಡಲು ನಿಯೋಜಿಸಿತು.

ಗೋಖಲೆಯವರಿಗೆ ಸಂಭ್ರಮದ ಸ್ವಾಗತ

ಗೋಖಲೆಯವರು ೧೯೧೨ರ ಅಕ್ಟೋಬರ್ ೨೨ರಂದು ಕೇಪ್‌ಟೌನ್ ತಲುಪಿದಾಗ ಗಾಂಧಿ ಮತ್ತು ಪೊಲಾಕ್ ಹಡಗನ್ನು ಪ್ರವೇಶಿಸಿ ಅವರನ್ನು ಸ್ವಾಗತಿಸಿದರು. ಊರ ತುಂಬ 'ವಂದೇ ಮಾತರಂ' ಘೋಷಣೆಗಳೊಂದಿಗೆ ಅವರನ್ನು ಭವ್ಯವಾಗಿ ಅಲಂಕರಿಸಿದ ಜೋಡಿ ಕುದುರೆ ಗಾಡಿಯಲ್ಲಿ ಮೆರವಣಿಗೆಯಲ್ಲಿ ಕರೆದೊಯ್ದು ನಂತರ ನಡೆದ ಸಮಾರಂಭದಲ್ಲಿ ನೂರಾರು ಜನ ಭಾರತೀಯರೂ, ಐರೋಪ್ಯರೂ ಸೇರಿದ್ದರು. ಭಾರತೀಯರ ಬಗ್ಗೆ ಸಹಾನುಭೂತಿ ಹೊಂದಿದ್ದ ಶ್ರೈನರ್ ಸೋದರ–ಸೋದರಿ

ಅವರನ್ನು ಸ್ವಾಗತಿಸಿದರು. ಗೋಖಲೆಯವರು ಇಂಗ್ಲಿಷ್ ಪ್ರಾಧ್ಯಾಪಕರಾಗಿ ಗಳಿಸಿದ್ದ ಇಂಗ್ಲಿಷ್‌ನಲ್ಲಿನ ನೈಪುಣ್ಯತೆ, ಅರ್ಥಶಾಸ್ತ್ರಜ್ಞರೂ ಆಗಿ ಹೊಂದಿದ್ದ ಆಧುನಿಕ ಶಾಸ್ತ್ರೀಯ ವಿದ್ವತ್ತು, ಭಾರತದ ರಾಷ್ಟ್ರೀಯ ಹೋರಾಟದ ಮುಂಚೂಣಿ ನಾಯಕರಲ್ಲೊಬ್ಬರಾಗಿ ಗಳಿಸಿದ್ದ ಜನಪ್ರಿಯತೆ ಮತ್ತು ತಮ್ಮ ಸೌಮ್ಯ ವ್ಯಕ್ತಿತ್ವದ ಮೂಲಕ ಬ್ರಿಟಿಷ್ ಪ್ರಭುತ್ವದಿಂದ ಗಳಿಸಿದ್ದ ಘನತೆ–ಗೌರವಗಳ ಬಗ್ಗೆ ಅಲ್ಲಿನ ಪತ್ರಿಕೆಗಳು ಬರೆದಿದ್ದವು. ಹಾಗಾಗಿ ದ.ಆಫ್ರಿಕಾದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಈ 'ಕೂಲಿಗಳ ದೊರೆ'ಯನ್ನು ನೋಡಲು ಬಿಳಿಯರು ವರ್ಣೀಯರ ಜೊತೆ ಅಷ್ಟು ದೊಡ್ಡ ಸಂಖ್ಯೆಯಲ್ಲಿ ಸಭೆಯೊಂದರಲ್ಲಿ ಪಾಲ್ಗೊಂಡಿದ್ದರು. ಗೋಖಲೆಯವರು ತಮ್ಮ ಪ್ರಬುದ್ಧ ಇಂಗ್ಲಿಷ್ ಮಾತುಗಾರಿಕೆಯ ಮೂಲಕ ಸಭೆಯನ್ನು ಮಂತ್ರಮುಗ್ಧಗೊಳಿಸಿದರು. ಈ ಸಭೆಗೆ ಗೈರು ಹಾಜರಾಗಿದ್ದ ಕೇಪ್‌ಟೌನ್ ಮೇಯರ್ ಮತ್ತು ಪ್ರಾಂತ್ಯದ ಪ್ರಮುಖ ರಾಜಕೀಯ ನಾಯಕರಲ್ಲೊಬ್ಬರಾಗಿದ್ದ ಮೆರಿಮನ್, ಗೋಖಲೆಯವರನ್ನು ಖಾಸಗಿಯಾಗಿ ಭೇಟಿಯಾಗಿ ನಂತರ ಜ. ಸ್ಮಟ್ಸ್‌ಗೆ, ಗೋಖಲೆಯವರನ್ನು ಪೂರ್ವದ ವಿವೇಕ ಮತ್ತು ಪ್ರಬುದ್ಧತೆಗಳ ಪ್ರತೀಕವಾಗಿದ್ದಾರೆಂದು ವರ್ಣಿಸಿ, ಅವರೊಂದಿಗೆ ಮಾತಾಡಿದ ಮೇಲೆ ಬಿಳಿಯರು ವರ್ಣೀಯರನ್ನು ಅವಮಾನಗಳಿಂದ ಹಿಂಸಿಸುವುದಕ್ಕಿಂತ ಉತ್ತಮ ಕೆಲಸಗಳ ಕಡೆ ಗಮನ ಕೊಡುವುದು ಒಳ್ಳೆಯದು ಎಂದು ತನಗನ್ನಿಸಿರುವುದಾಗಿ ಪತ್ರ ಬರೆದ.

ಗೋಖಲೆಯವರ ರೈಲ್ವೇ ಪ್ರಯಾಣಕ್ಕಾಗಿ ದ.ಆಫ್ರಿಕಾ ಸರ್ಕಾರ ಸಕಲ ಸೌಲಭ್ಯಗಳಿದ್ದ ವಿಶೇಷ ರೈಲೊಂದನ್ನು ಒದಗಿಸಿತ್ತು. ಅದರಲ್ಲಿ ಜೊಹಾನ್ಸ್‌ಬರ್ಗ್‌ಗೆ ಹೊರಟ ಗೋಖಲೆಯವರು, ಜನ ಸೇರಿ ಸ್ವಾಗತ ಘೋಷಣೆಗಳನ್ನು ಕೂಗಿದ ರೈಲ್ವೇ ನಿಲ್ದಾಣಗಳಲ್ಲೆಲ್ಲ ನಿಂತು ಸನ್ಮಾನ ಸ್ವೀಕರಿಸಿ ಜನರನ್ನುದ್ದೇಶಿಸಿ ಮಾತನಾಡಿ ಮುಂದುವರೆದರು. ಅವರ ಪಕ್ಕದಲ್ಲಿ ಗಾಂಧಿ ಅವರ ಸೇವೆಗಾಗಿ ಯಾವಾಗಲೂ ಹಾಜರಿರುತ್ತಿದ್ದರು. ಕೆಲವೆಡೆ, 'ದೇಶದಲ್ಲಿ ಅಶಾಂತಿ ಹಬ್ಬಿಸಲು ಬಂದಿರುವ ವರ್ಣೀಯನನ್ನು ಸ್ವಾಗತಿಸಲು ಊರುಗಳ ಬಿಳಿಯ ಮೇಯರ್‌ಗಳು ಹೋಗುತ್ತಿರುವುದನ್ನು' ಖಂಡಿಸಿ, ಬಿಳಿಯ ಜನ ಸಭೆಗಳನ್ನು ನಡೆಸಿ, ಯಾವುದೇ ಕಾರಣಕ್ಕೂ ದೇಶದ ಬಿಳಿ ಪರಿಶುದ್ಧತೆಗೆ ಧಕ್ಕೆ ಬಾರದಂತೆ ನೋಡಿಕೊಳ್ಳುವ ನಿರ್ಣಯಗಳನ್ನು ಕೈಗೊಂಡರು. ಆದರೆ ಗೋಖಲೆಯವರ ರೈಲು ಯಾತ್ರೆ ಅಕ್ಟೋಬರ್ ೨೮ರಂದು ಸುಗಮವಾಗಿ ಜೊಹಾನ್ಸ್‌ಬರ್ಗ್ ತಲುಪಿತು.

ನಮ್ಮ ಕಾಲದ ಶ್ರೇಷ್ಠ ವ್ಯಕ್ತಿ ಗಾಂಧಿ: ಗೋಖಲೆ

ಜೊಹಾನ್ಸ್‌ಬರ್ಗ್ ರೈಲ್ವೇ ನಿಲ್ದಾಣದಲ್ಲಿ ಪೊಲಾಕ್‌ನ ವಾಸ್ತು ಪರಿಣಿತಿಯ ಭವ್ಯ ಪ್ರದರ್ಶನವಾಗಿ ಕುಸುರಿ ಕೆಲಸವಿದ್ದ ಬೃಹತ್ ಪುಷ್ಪ ಸ್ವಾಗತ ಕಮಾನುಗಳನ್ನು ಸ್ಥಾಪಿಸಲಾಗಿತ್ತು. ಸ್ವಾಗತ ಸಭೆಯಲ್ಲಿ ಮಾತಾಡಿದ ಹೊಸ್ಕೆನ್ ಮತ್ತು ಡೋಕ್ ಅವರು ಟ್ರಾನ್ಸ್‌ವಾಲ್‌ನ ಒಂಬತ್ತು ಸಾವಿರ ಭಾರತೀಯರಲ್ಲಿ ಎರಡೂವರೆ ಸಾವಿರ ಜನರನ್ನು ಸೆರೆಮನೆಗೆ ತಳ್ಳಿದ ಪ್ರಭುತ್ವ, ಕ್ರೈಸ್ತ ಧರ್ಮೀಯವಾದದ್ದೂ ಅಲ್ಲ, ನಾಗರೀಕವೂ ಅಲ್ಲ ಎಂದು ಖಂಡಿಸಿ ಯಾವುದೇ ಭೇದಭಾವವಿಲ್ಲದೆ ಮನುಷ್ಯನನ್ನು ಮನುಷ್ಯನನ್ನಾಗಿ ಮಾತ್ರ ನೋಡುವ ಪಾಠವನ್ನು ಬ್ರಿಟಿಷ್ ಪ್ರಭುತ್ವ ದ.ಆಫ್ರಿಕಾ ಸರ್ಕಾರಕ್ಕೆ ಕಲಿಸಬೇಕು

ಎಂದು ಕರೆ ಕೊಟ್ಟರು. ನಂತರ ಮಾತನಾಡಿದ ಗೋಖಲೆಯವರು ನಮ್ಮ ಕಾಲದ ಶ್ರೇಷ್ಠ ವ್ಯಕ್ತಿಯಾಗಿ ಮೂಡಿರುವ ಗಾಂಧಿ ಎಲ್ಲ ಜನಾಂಗಗಳ ಮಿತ್ರರಾಗಿದ್ದು ಅವರ ಮಹಾನ್ ನೇತೃತ್ವದಲ್ಲಿ ಎಲ್ಲ ಸಮಸ್ಯೆಗಳು ಬಗೆಹರಿಯುವ ವಿಶ್ವಾಸವನ್ನು ವ್ಯಕ್ತಪಡಿಸಿದರು. ಜೊಹಾನ್ಸ್‌ಬರ್ಗ್‌ನ ಮೇಯರ್, ಅತಿಥಿಯ ಓಡಾಟಕ್ಕಾಗಿ ತನ್ನ ವಿಶೇಷ ಮೋಟಾರು ವಾಹನವನ್ನೇ ಅವರ ಸುಪರ್ದಿಗೆ ಒಪ್ಪಿಸಿದ್ದ. ಜೊತೆಗೆ ಅವರು ತಂಗಲು ಸುಸಜ್ಜಿತ ಭವನವೊಂದರ ವ್ಯವಸ್ಥೆಯನ್ನೂ ಮಾಡಿದ್ದ.

ನವೆಂಬರ್ ೧ರಂದು, ಗಡಿಪಾರಾದ ನಂತರ ದ.ಆಫ್ರಿಕಾಕ್ಕೆ ವಾಪಸ್ ಬಂದಿದ್ದ ಲ್ಯಿಂಗ್ ಕ್ವಿನ್ ನೇತೃತ್ವದ ಚೀನೀ ಸಮಾಜದಿಂದ ಕೊಡಮಾಡಲ್ಪಟ್ಟ ಗೌರವ ಉಪಾಹಾರ ಕೂಟದಲ್ಲಿ ಭಾಗವಹಿಸಿದ ಗೋಖಲೆಯವರು ನಂತರ ಎರಡು ಮೂರು ದಿನಗಳ ಕಾಲ ಟಾಲ್‌ಸ್ಟಾಯ್ ಆಶ್ರಮದಲ್ಲಿ ತಂಗಿ ವಿಶ್ರಾಂತಿ ಪಡೆದರು. ಅಲ್ಲಿ ಗುಡ್ಡದ ತಪ್ಪಲಿನ ತನ್ನ ವಿಶಾಲ ಮನೆಯನ್ನು ಗೋಖಲೆಯವರಿಗೆ ಅಗತ್ಯವಾದ ಸೌಲಭ್ಯಗಳಿಂದ ಸಜ್ಜುಗೊಳಿಸಿ ಅವರಿಗೆ ಬಿಟ್ಟುಕೊಟ್ಟ ಕಲೆನ್‌ಬಾಕ್ ಗಾಂಧಿಯೊಂದಿಗೆ ಸೇರಿ ಅವರ ಊಟೋಪಚಾರಗಳನ್ನು ನೋಡಿಕೊಂಡನು.

ಈ ವಿಶ್ರಾಂತಿಯ ನಂತರ ನೆಟಾಲ್ ಪ್ರಾಂತ್ಯದತ್ತ ಪ್ರಯಾಣ ಹೊರಟ ಗೋಖಲೆಯವರು ದಾರಿಯಲ್ಲಿ ಸಿಕ್ಕ ಊರುಗಳಲ್ಲಿ ನಿಂತು ಜನರೊಂದಿಗೆ ಮಾತನಾಡಿ, ನವೆಂಬರ್ ೮ರಂದು ಡರ್ಬಾನ್ ನಗರವನ್ನು ತಲುಪಿದರು. ಅಂದು ನಡೆದ ಸಾರ್ವಜನಿಕ ಸಭೆಯ ಸಂಭ್ರಮ ಹೇಗಿತ್ತೆಂದರೆ ಅಂದು ಅಲ್ಲಿನ ಭಾರತೀಯರಿಗೆ ಎಲ್ಲ ಪ್ರತಿಬಂಧನಗಳಿಂದ ಶಾಶ್ವತ ಬಿಡುಗಡೆ ದೊರೆತಂತಿತ್ತು. ಸಭೆಯಲ್ಲಿ ಮಾತನಾಡಿದ ಪ್ರಮುಖರಲ್ಲಿ ೧೮೯೭ರಲ್ಲಿ ಗಾಂಧಿ ಹಡಗಿನಿಂದ ಇಳಿದಾಗ ಅವರ ಮೇಲೆ ನಡೆದ ಬಿಳಿಯರ ಸಮೂಹದ ಹಲ್ಲೆಯಿಂದ ಅವರನ್ನು ರಕ್ಷಿಸಿದ್ದ ಪೊಲೀಸು ಅಧಿಕಾರಿ ಲಾಫ್ಟನ್ ಕೂಡ ಸೇರಿದ್ದರು. ಮಾರನೆಯ ದಿನ ಸುತ್ತಮುತ್ತಲ ಊರುಗಳಿಂದ ಸಿಕ್ಕ ಸಿಕ್ಕ ವಾಹನಗಳಲ್ಲಿ ನಗರವನ್ನು ತುಂಬಿದ ಸಾವಿರಾರು ಭಾರತೀಯರು ಗುಂಪು ಗುಂಪಾಗಿ ಬಂದು ಮೂರು ಪೌಂಡ್ ತೆರಿಗೆಯ ಕಷ್ಟ ನಷ್ಟಗಳ ಬಗ್ಗೆ ಗೋಖಲೆಯವರಿಗೆ ವಿವರಿಸಿದರು. ಮಾರನೆಯ ದಿವಸ ಓಹ್ಲಾಂಗ್ ಎಂಬ ಬುಡಕಟ್ಟು ಜನರ ಊರಿಗೆ ಹೋದ ಗೋಖಲೆ ಅಲ್ಲಿ ಹೊಸದಾಗಿ ರಚಿತವಾಗಿದ್ದ ಆಫ್ರಿಕನ್ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷ ಜಾನ್ ಡುಬೆ ಅವರೊಂದಿಗೆ ಮಾತುಕತೆ ನಡೆಸಿದರು. ನಂತರ ಟ್ರಾನ್ಸ್‌ವಾಲ್‌ಗೆ ಹಿಂತಿರುಗಿದ ಗೋಖಲೆ ಮತ್ತವರ ತಂಡ ದ.ಆಫ್ರಿಕಾ ಒಕ್ಕೂಟ ಸರ್ಕಾರದ ಅಧಿಪತಿಗಳೊಂದಿಗೆ ನಿಗದಿಯಾಗಿದ್ದ ಸಭೆಯಲ್ಲಿ ಭಾಗವಹಿಸಲು ನವೆಂಬರ್ ೧೪ರಂದು ಪ್ರಿಟೋರಿಯಾ ತಲುಪಿದರು.

ಆಸೆ ಚಿಗುರಿಸಿದ ಗೋಖಲೆಯವರ ಮಾತುಕತೆ

ಪ್ರಿಟೋರಿಯಾದಲ್ಲಿ ಗೋಖಲೆ, ಪ್ರಧಾನ ಮಂತ್ರಿ ಜ. ಬೋತಾ ಮತ್ತು ಗೌರ್ನರ್ ಜನರಲ್ ಲಾರ್ಡ್ ಗ್ಲಾಡ್‌ಸ್ಟೋನ್ ಅವರೊಂದಿಗೆ ಒಟ್ಟಿಗೆ ಮತ್ತು ಪ್ರತ್ಯೇಕ ಸಭೆಗಳನ್ನು ನಡೆಸಿದರು. ದ.ಆಫ್ರಿಕಾಕ್ಕೆ ಬಂದೊಡನೆ ತನ್ನನ್ನು ಭೇಟಿಯಾಗದ ಗೋಖಲೆ ಹೋದೆಡೆಯಲ್ಲೆಲ್ಲ ಸಂಭ್ರಮದ ಸ್ವಾಗತ ಪಡೆಯುತ್ತಿದ್ದ ಸುದ್ದಿ ತಿಳಿದು

ಅಸಮಾಧಾನದಿಂದಿದ್ದ ಬೋತಾ, ಗೋಖಲೆಯವರ ವ್ಯಕ್ತಿತ್ವ ಕಂಡು ಬದಲಾಗಿ ಸೌಜನ್ಯದಿಂದಲೇ ವರ್ತಿಸಿದ. ಇನ್ನು ಮಾಜಿ ಉದಾರವಾದಿ ರಾಜಕಾರಣಿ ಗೌರ್ನರ್ ಜನರಲ್ ಗ್ಲಾಡ್‌ಸ್ಟೋನ್ ಸೌಜನ್ಯಕ್ಕೆ ಮತ್ತೊಂದು ಹೆಸರಾಗಿದ್ದವರು. ಎರಡು ತಾಸುಗಳ ಈ ಮಾತುಕತೆಯ ಸಂದರ್ಭದಲ್ಲಿ ಯಾವುದೇ ಇರುಸು ಮುರುಸು ಉಂಟಾಗಬಾರದೆಂದು ಗಾಂಧಿ ಈ ಸಭೆಗಳಲ್ಲಿ ಭಾಗವಹಿಸಲಿಲ್ಲ. (ಅವರ ಭಾಗವಹಿಸುವಿಕೆಯನ್ನು ಸರ್ಕಾರವೇ ತಡೆಯಿತೆಂಬ ಮಾತೂ ಒಂದು ಆಕರದಲ್ಲಿ ದಾಖಲೆಯಾಗಿದೆ)

ಸಭೆ ಮುಗಿಸಿ ಹೊರಬಂದ ಗೋಖಲೆಯವರು ಹರ್ಷಚಿತ್ತರಾಗಿ 'ನಿಮ್ಮ ಎಲ್ಲ ಸಮಸ್ಯೆಗಳೂ ಒಂದು ವರ್ಷದಲ್ಲಿ ಬಗೆಹರಿಯಲಿವೆ. ಮೂರು ಪೌಂಡು ತೆರಿಗೆಯೂ ರದ್ದಾಗುವುದು, ವಲಸೆ ಕಾನೂನಿನಲ್ಲಿನ ವರ್ಣಭೇದದ ನಿಯಮವೂ ಇಲ್ಲವಾಗುವುದು. ಭಾರತಕ್ಕೆ ಹಿಂತಿರುಗಲು ಸಿದ್ಧತೆ ಮಾಡಿಕೊಳ್ಳಿ' ಎಂದು ಹೇಳಿದಾಗ ಗಾಂಧಿಗೆ ಖುಷಿಯಾಯಿತಾದರೂ ನಂಬಲಾಗಲಿಲ್ಲ. ಅವರು ಅದನ್ನು ಹೇಳಿಯೂಬಿಟ್ಟರು: 'ನಾನು ನಂಬಲಾರೆ. ನಿಮಗೆ ಈ ಸಚಿವರುಗಳ ಬುದ್ಧಿ ಗೊತ್ತಿಲ್ಲ.' ಗೋಖಲೆಯವರು 'ಇಲ್ಲ, ಅದು ಆಗಿಯೇ ತೀರುತ್ತದೆ, ನನಗೆ ಮನವರಿಕೆಯಾಗಿದೆ' ಎಂದು ಗಾಂಧಿಯನ್ನು ಛೇಡಿಸಿ ಹೇಳಿದರು.

ಗೋಖಲೆಯವರಿಗೆ ವಿದಾಯ

ಗೋಖಲೆ ೧೯೧೨ರ ನವೆಂಬರ್ ೧೫ರಂದು ಪ್ರಿಟೋರಿಯಾದಲ್ಲಿ ತಮ್ಮ ಪ್ರವಾಸದ ವಿದಾಯ ಭಾಷಣ ಮಾಡಿ 'ಯಾವುದೇ ತಾರತಮ್ಯ ಮಾಡದೆ ತನ್ನೆಲ್ಲ ಜನರ ಕಲ್ಯಾಣವನ್ನು ಸಾಧಿಸುವುದು ಸರ್ಕಾರದ ಕರ್ತವ್ಯವಾಗಬೇಕೆಂದು ಪ್ರಭುತ್ವಕ್ಕೆ ಸೂಚಿಸಿದರು. ಜೊತೆಗೆ ಭಾರತೀಯರ ಭವಿಷ್ಯ ಅವರ ಕೈಯಲ್ಲೇ ಇದ್ದು ಈವರೆಗೆ ನಡೆಸಿದ ಹೋರಾಟವನ್ನು ಇನ್ನೊಮ್ಮೆ ನಡೆಸುವ ಸಾಧ್ಯತೆ ಇರಲಾರದಾದರೂ, ಅಂತಹ ಸಂದರ್ಭ ಬಂದರೆ ಸವಾಲು ಇನ್ನೂ ದೊಡ್ಡದಾಗಲಿದ್ದು ಆ ಹೋರಾಟಕ್ಕೆ ಅಗತ್ಯವಾದ ಶೀಲ ಮತ್ತು ತ್ಯಾಗಬುದ್ಧಿಗೆ ಸಿದ್ಧವಾಗಿರಬೇಕೆಂದು ಕರೆ ಕೊಟ್ಟರು. ನಂತರ ಎರಡು ದಿವಸ ಟಾಲ್‌ಸ್ಟಾಯ್ ಆಶ್ರಮದಲ್ಲಿ ವಿಶ್ರಾಂತಿ ಪಡೆದ ಗೋಖಲೆ ನವೆಂಬರ್ ೧೭ರಂದು ಜೊಹಾನ್ಸ್‌ಬರ್ಗ್‌ನಿಂದ ಲೊರೆಂಕೋ ಮಾರ್ಕ್ವೆಜ್ ಬಂದರಿಗೆ ಹೊರಟರು. ಅವರು ಗಾಂಧಿ ಮತ್ತು ಕಲೆನ್‌ಬಾಕ್ ಅವರನ್ನು ಜಾಂಜಿಬಾರ್‌ವರೆಗೆ ತಮ್ಮೊಡನೆ ಬಂದು ವಿದಾಯ ಹೇಳಲು ಕೋರಿದರು. ಅದರಂತೆ ಅವರಿಬ್ಬರೂ ಗೋಖಲೆಯವರೊಡನೆ ಪ್ರಯಾಣ ಮಾಡಿದರು.

ಆ ಎರಡು ದಿನಗಳಲ್ಲಿ ಮಾರ್ಕ್ವೆಜ್ ಮತ್ತು ದಾರ್-ಎಸ್-ಸಲಾಂಗಳಲ್ಲಿ ಭಾರತೀಯರು ಬಂದರುಗಳ ಬಳಿ ಬಂದು ಅವರಿಗೆ ಜಯಕಾರ ಹಾಕಿದರು. ಗೋಖಲೆ ಮತ್ತು ಗಾಂಧಿ ಜನರನ್ನುದ್ದೇಶಿಸಿ ಮಾತಾಡಿದರು. ಈ ಪ್ರಯಾಣದುದ್ದಕ್ಕೂ ಗೋಖಲೆ ಭಾರತದಲ್ಲಿನ ಪರಿಸ್ಥಿತಿ, ರಾಷ್ಟ್ರೀಯ ಹೋರಾಟದ ಮುಂದಿರುವ ಸವಾಲುಗಳ ಪರಿಚಯ ಮಾಡಿಕೊಟ್ಟು ಆದಷ್ಟು ಬೇಗ ಭಾರತಕ್ಕೆ ಮರಳುವಂತೆ ಸೂಚಿಸಿದರು. ಅದಕ್ಕೆ ಗಾಂಧಿ ದ.ಆಫ್ರಿಕಾದಲ್ಲಿ ಕೈಗೆತ್ತಿಕೊಂಡಿರುವ ಕೆಲಸ ಮುಗಿಯುವ ತನಕ ಅಲ್ಲಿಂದ

ಹೊರಡಲಾರೆ ಎಂದು ಉತ್ತರಿಸಿದರು. ಗೋಖಲೆಯವರ ಕೈಕುಲುಕಿ ವಿದಾಯ ಹೇಳುವ ಮುನ್ನ ಗಾಂಧಿ ಹೀಗೆ ಹೇಳಿದರು: 'ನನ್ನ ಮತ್ತು ನಿಮ್ಮ ನಡುವೆ ಸಾಕಷ್ಟು ವ್ಯತ್ಯಾಸಗಳಿವೆ. ಆದರೆ ರಾಜಕೀಯ ನಡೆಯಲ್ಲಿ ನೀವೇ ನನಗೆ ಮಾದರಿ. ನಾನು ನಿಮಗೆ ತಕ್ಕ ಶಿಷ್ಯನಾಗಲು ಎಲ್ಲ ಪ್ರಯತ್ನ ಮಾಡುವೆ. ನನ್ನ ವಿಚಾರಗಳನ್ನು ನನ್ನ ನಡೆಯ ಮೂಲಕ ಸಾಕಾರಗೊಳಿಸಿಕೊಂಡು ಪೂರ್ವದ ಸಾರ್ಥಕ ಶಿಷ್ಯತ್ವ ಸಾಧಿಸಬಯಸುತ್ತೇನೆ.'

ಗೋಖಲೆ–ಗಾಂಧಿ ಎಂಬ ಗುರು–ಶಿಷ್ಯರ ಭಲೇ ಜೋಡಿ!

ಹೌದು. ಈ ಗುರು–ಶಿಷ್ಯರ ನಡುವೆ ಗಮನಾರ್ಹ ವ್ಯತ್ಯಾಸಗಳಿದ್ದವು. ಅವುಗಳ ಮೂಲ, ಗೋಖಲೆಯವರು ಗಾಂಧಿಗೆ ವಿರುದ್ಧವಾಗಿ ಪಶ್ಚಿಮದ ಶಿಕ್ಷಣ ಪದ್ಧತಿಯ ಮತ್ತು ಜೀವನ ಮಾದರಿಯ ಅಭಿಮಾನಿಯಾಗಿದ್ದುದೇ ಆಗಿತ್ತು. ಗೋಖಲೆಯವರದ್ದು ಸಹನೆಯ ಮನವಿ ರಾಜಕಾರಣವಾದರೆ, ಗಾಂಧಿಯದ್ದು ಕ್ರಿಯಾಶೀಲ ಸಾತ್ವಿಕ ಪ್ರತಿರೋಧದ ರಾಜಕಾರಣ. ಹಾಗಾಗಿಯೇ ಅವರು ಗಾಂಧಿಯ 'ಹಿಂದ್ ಸ್ವರಾಜ್'ನ್ನು ಒಪ್ಪಿಕೊಳ್ಳಲು ಸಾಧ್ಯವಾಗಿರಲಿಲ್ಲ. ಆದರೆ ಅವರು ಗಾಂಧಿಯ ವ್ಯಕ್ತಿತ್ವದಲ್ಲಿ ಅಪರೂಪದ ಮಾನವ ಸತ್ವವನ್ನು ಗುರುತಿಸಿದ್ದರು. ಈ ಒಂದು ತಿಂಗಳ ಪ್ರವಾಸದುದ್ದಕ್ಕೂ ಸದಾ ತಮ್ಮೊಡನಿದ್ದು ವೈಯಕ್ತಿಕ ಸೇವಕನಂತೆ ತಮ್ಮ ಸೇವೆ ಮಾಡುತ್ತಿದ್ದ ಗಾಂಧಿಯನ್ನು ಗೋಖಲೆಯವರು ಸೂಕ್ಷ್ಮವಾಗಿ ಗಮನಿಸಿದ್ದರು. ಕೆಲವೊಮ್ಮೆ ಅವರ ಜಿಗುಟುತನ, ಹಟಮಾರಿತನಗಳಿಗಾಗಿ ಅವರನ್ನು ಛೇಡಿಸಿಯೂ ಇದ್ದರು. 'ನಾನು ನಿನ್ನ ವಶವಾದ ಮೇಲೆ ನಾನು ಅಸಹಾಯಕನಾಗಿದ್ದೇನೆ. ನೀನು ಹೇಳಿದ್ದೇ ಇಲ್ಲಿ ನಡೆಯುವುದು!' ಎಂದು ಎಷ್ಟೋ ಬಾರಿ ಸಲಿಗೆಯಿಂದ ಅಲವತ್ತುಕೊಂಡಿದ್ದೂ ಉಂಟು.

ಜೊಹಾನ್ಸ್‌ಬರ್ಗ್‌ನಲ್ಲಿ ಗೋಖಲೆಯವರ ಗೌರವಾರ್ಥ ಏರ್ಪಡಿಸಲಾಗಿದ್ದ ಭಾರತೀಯರ ಬೃಹತ್ ಸಭೆಯಲ್ಲಿ ತಮ್ಮನ್ನು ಗಾಂಧಿ, ಹಿಂದೂಸ್ಥಾನಿಯಲ್ಲಿ ಮಾತನಾಡಲು ಕೇಳಿಕೊಂಡಾಗ ಗೋಖಲೆಯವರಿಗೆ ಸಿಟ್ಟೇ ಬಂದಿತ್ತು. ತಮಗೆ ಹಿಂದೂಸ್ಥಾನಿಯಲ್ಲಿ ಸರಾಗವಾಗಿ ಮಾತಾಡಲು ಬರುವುದಿಲ್ಲವೆಂದು ಗೋಖಲೆ ಹೇಳಿದಾಗ ಗಾಂಧಿ, 'ಹಾಗಾದರೆ ನಿಮ್ಮ ಮಾತೃಭಾಷೆ ಮರಾಠಿಯಲ್ಲಿ ಮಾತನಾಡಿ' ಎಂದು ಸಲಹೆ ನೀಡಿದಾಗಲಂತೂ ಅವರಿಗೆ, ಗಾಂಧಿ ಐಲುಪೈಲಿನ ವ್ಯಕ್ತಿಯಾಗಿಯೇ ಕಂಡಿರಬೇಕು. ಗಾಂಧಿಯವರ ಸ್ವರಾಜ್ಯ ಪರಿಕಲ್ಪನೆಯ ಪ್ರಕಾರ ಭಾರತೀಯರೇ ಇರುವ ಸಭೆಯಲ್ಲಿ ಇಂಗ್ಲಿಷ್‌ನಲ್ಲಿ ಮಾತನಾಡುವುದು ಆ ಪರಿಕಲ್ಪನೆಗೆ ಅಪಚಾರ ಮಾಡಿದಂತೆ. ಹಾಗಾಗಿ ಅವರು ಅಲ್ಲಿ ಗೋಖಲೆ ಮರಾಠಿಯಲ್ಲೇ ಮಾತನಾಡುವಂತೆ ಹಟ ಹಿಡಿದರು ಮತ್ತು ತಾವು ಅದನ್ನು ಹಿಂದೂಸ್ಥಾನಿಗೆ ಅನುವಾದ ಮಾಡುವುದಾಗಿ ಹೇಳಿದರು. ಗೋಖಲೆ ಇನ್ನಷ್ಟು ಅಪ್ರತಿಭರಾಗಿ 'ನಿನಗೆ ಹಿಂದೂಸ್ಥಾನಿ ಎಷ್ಟು ಗೊತ್ತು, ಮರಾಠಿ ಎಷ್ಟು ಗೊತ್ತು ಸುಮ್ಮನಿರು' ಎಂದು ಅವರ ಬಾಯಿ ಮುಚ್ಚಿಸಲು ಯತ್ನಿಸಿದಾಗ, ಇಲ್ಲಿ ಕೊಂಕಣಿ, ಮರಾಠಿಗರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ, ಅವರಿಗಾದರೂ ನಿಮ್ಮ ಮಾತುಗಳು ಹೃದಯಪೂರ್ವಕವಾಗಿ ಮುಟ್ಟಲಿ ಎಂದು ವಾದಿಸುತ್ತಾ ಅವರನ್ನು ಮಾತಿನಿಂದ ಕಟ್ಟಿ ಹಾಕಿ, ಅವರಿಂದ ಅವರ ಮಾತೃಭಾಷೆಯಲ್ಲೇ ಭಾಷಣ ಮಾಡಿಸಿದರು. ನಂತರ ಅದನ್ನು ಹಿಂದೂಸ್ಥಾನಿಗೆ ಅನುವಾದಿಸಿ, 'ಎಲ್ಲಿಯಾದರೂ ನಿಮ್ಮ ಮಾತುಗಳನ್ನು ತಪ್ಪಾಗಿ ಅನುವಾದಿಸಿದ್ದೇನೆಯೇ ಹೇಳಿ!' ಎಂದು ಗೋಖಲೆಯವರನ್ನು ಪ್ರಶ್ನಿಸಿ ಅವರನ್ನು

ಮತ್ತಷ್ಟು ಕಾಡಿದ ನಂತರ, ಗೋಖಲೆಯವರ ಪ್ರವಾಸದುದ್ದಕ್ಕೂ ನಡೆದ ಭಾರತೀಯರ ಅನೇಕ ಸಭೆಗಳಲ್ಲಿ ಗಾಂಧಿಯವರ ಈ 'ಕಾಟ' ತಡೆಯಲಾರದೆ ಮರಾಠಿಯಲ್ಲೇ ಮಾತಾಡಿ ಅದರ ಹಿಂದೂಸ್ಥಾನಿ ಅನುವಾದಕ್ಕೆ ಗಾಂಧಿಯನ್ನು ಬಿಡುತ್ತಿದ್ದರು!

ಮತ್ತೆ ಅಯ್ಯರನ ಅಪಸ್ವರ

ಹೀಗೆ ಗೋಖಲೆ ಅವರಿಗೆ ಈ ಪ್ರವಾಸದುದ್ದಕ್ಕೂ ಗಾಂಧಿಯನ್ನು ಒಳಹೊಕ್ಕು ನೋಡುವ ಅನೇಕ ಸಂದರ್ಭಗಳು ಉಂಟಾಗಿದ್ದವು. ಈ ಸಂದರ್ಭಗಳಲ್ಲೆಲ್ಲ ಗಾಂಧಿ ತಮ್ಮ ತತ್ವಬದ್ಧತೆ, ಪ್ರಾಮಾಣಿಕತೆ, ಮನಃಪೂರ್ವಕತೆ ಮತ್ತು ನೇರವಂತಿಕೆ ಹಾಗೂ ಸರಳತೆಗಳಿಂದ ಗೋಖಲೆಯವರ ಮನಗೆದ್ದು ಅವರ ಅಪಾರ ಪ್ರೀತಿ ಮತ್ತು ಗೌರವಗಳಿಗೆ ಪಾತ್ರರಾಗಿದ್ದರು. ಆದರೆ ಇದೇ ಹೊತ್ತಿನಲ್ಲಿ ಇದೇ ಕಾರಣಕ್ಕಾಗಿ ಕೆಲವರು ಗಾಂಧಿ ವಿರುದ್ಧ ತಿರುಗಿ ಬಿದ್ದರು. ಆ ಗುಂಪಿನ ನಾಯಕ 'ಆಫ್ರಿಕನ್ ಕ್ರಾನಿಕಲ್'ನ ಸಂಪಾದಕ ಪಿ.ಎಸ್. ಅಯ್ಯರ್ ಆಗಿದ್ದ. ಗೋಖಲೆಯವರು ಎಲ್ಲ ಕಡೆ ಗಾಂಧಿಯ ಹೋರಾಟವನ್ನು ಮುಕ್ತ ಕಂಠದಿಂದ ಶ್ಲಾಘಿಸಿ ಬೆಂಬಲಿಸುತ್ತಿದ್ದುದರಿಂದ ಭಾರತೀಯ ಸಮುದಾಯ ಮತ್ತು ಹೋರಾಟದಲ್ಲಿ ತನ್ನ ದನಿ ಕ್ಷೀಣಿಸಿದೆ ಎಂದು ಭಾವಿಸಿದ ಆತ, ಆಧುನಿಕ ನಾಗರೀಕತೆಯ ಎಲ್ಲ ಗುಣಗಳ ಸಾಕಾರಮೂರ್ತಿಯಾಗಿ ಬ್ರಿಟಿಷ್ ಸಾಮ್ರಾಜ್ಯದ ಬಗ್ಗೆ ಸಹಾನುಭೂತಿ ಹೊಂದಿರುವ ಗೋಖಲೆಯವರ ಪ್ರವಾಸ ಭಾರತೀಯರ ಹೋರಾಟಕ್ಕೆ ಯಾವ ಹೊಸ ಕೊಡುಗೆಯನ್ನೂ ನೀಡಲು ಸಾಧ್ಯವಿಲ್ಲ; ನೀಡಿಯೂ ಇಲ್ಲ ಎಂದು ತನ್ನ ಪತ್ರಿಕೆಯಲ್ಲಿ ಬರೆದು ತನ್ನ ಅಸಮಾಧಾನವನ್ನು ತೋಡಿಕೊಂಡ. ಗೋಖಲೆ ಆತನಿಗೆ ಅರ್ಧ ತಾಸು ಮಾತ್ರ ಮಾತುಕತೆಗೆ ಅವಕಾಶ ಕೊಟ್ಟದ್ದು ಅವನ ಮುನಿಸಿಗೆ ಮುಖ್ಯ ಕಾರಣವಾದಂತಿತ್ತು. ಜೊತೆಗೆ, ಟ್ರಾನ್ಸ್‌ವಾಲ್‌ನಲ್ಲಿ ಈಗ ವಾಸ ಮಾಡುತ್ತಿರುವ ಭಾರತೀಯರೆಲ್ಲರಿಗೂ ಬೇಷರತ್ತಾಗಿ ಪ್ರಜೆತನ ನೀಡಬೇಕೆಂಬ ಗಾಂಧಿಯ ಬೇಡಿಕೆಗೆ ಪ್ರತಿಯಾಗಿ ಇಡೀ ದ.ಆಫ್ರಿಕಾದಲ್ಲಿ ಭಾರತೀಯರ ಮುಕ್ತ ಪ್ರವೇಶ ಮತ್ತು ಸಂಚಾರ ಹಾಗೂ ನೆಲೆಸುವಿಕೆಯ ಹಕ್ಕಿನ ಬೇಡಿಕೆಗಾಗಿ ಪ್ರಚಾರ ನಡೆಸಿದ್ದ. ಗೋಖಲೆ ಇದನ್ನು ಅಸಾಧ್ಯ ಮತ್ತು ಅವ್ಯಾವಹಾರಿಕ ಎಂದು ತಳ್ಳಿ ಹಾಕಿದ್ದರು.

ಸ್ವದೇಶ ತಲುಪಿದ ನಂತರದಲ್ಲೇ ಗೋಖಲೆ, ಡಿಸೆಂಬರ್‌ನಲ್ಲಿ ಮುಂಬೈನ ಟೌನ್‌ಹಾಲ್‌ನ ಸಭೆಯೊಂದರಲ್ಲಿ ತಮ್ಮ ದ.ಆಫ್ರಿಕಾ ಪ್ರವಾಸದ ಬಗ್ಗೆ ಮಾತನಾಡಿ ಗಾಂಧಿಯನ್ನು ಶ್ಲಾಘಿಸುತ್ತಾ 'ಸಾಮಾನ್ಯರನ್ನು ವೀರರನ್ನಾಗಿ, ಹುತಾತ್ಮರನ್ನಾಗಿ ಪರಿವರ್ತಿಸಬಲ್ಲ ಅದ್ಭುತ ಆಧ್ಯಾತ್ಮಿಕ ಶಕ್ತಿಯುಳ್ಳ ಮಹಾನ್ ವ್ಯಕ್ತಿಯಾಗಿದ್ದು ಅವರ ಉಪಸ್ಥಿತಿಯಲ್ಲಿ ಯಾರೇ ಆಗಲಿ ಅನುಚಿತವಾದುದನ್ನು ಆಡಲು ಅಥವಾ ಮಾಡಲು ನಾಚಿಕೆಪಡುವಂತಾಗುತ್ತದೆ' ಎಂದರು. ಇದನ್ನು ತಿಳಿದ ಅಯ್ಯರ್, ಗೋಖಲೆಯಂಥ ಘನತೆವೆತ್ತ ವ್ಯಕ್ತಿ ರಾಜಕೀಯ ಕೆಲಸ ಮಾಡುವ ಯಾವ ಯೋಗ್ಯತೆಗಳೂ ಇಲ್ಲದ ಗಾಂಧಿ ಮತ್ತು ಪೊಲಾಕ್‌ರ ವಶೀಕರಣ ವಿದ್ಯೆಗೆ ಒಳಗಾಗದಿದ್ದಲ್ಲಿ ದ.ಆಫ್ರಿಕಾದ ಭಾರತೀಯರ ಪರವಾಗಿ ಇನ್ನಷ್ಟು ಗಟ್ಟಿಯಾದ ಕೆಲಸ ಮಾಡಬಹುದಿತ್ತು' ಎಂದು ತನ್ನ ಪತ್ರಿಕೆಯಲ್ಲಿ ಬರೆದು ತೃಪ್ತಿಪಟ್ಟುಕೊಂಡ.

■

೩೩

ಮಹಿಳೆ ಮತ್ತು ಕಾರ್ಮಿಕರ ಜೊತೆಯಲ್ಲಿ

ಜ.ಸ್ಮಟ್ಸ್‌ನೊಡನೆಯ ತಾತ್ಕಾಲಿಕ ಒಪ್ಪಂದದ ನಂತರ ಸತ್ಯಾಗ್ರಹವನ್ನು ಸ್ಥಗಿತಗೊಳಿಸಿದ್ದ ಗಾಂಧಿ ಸತ್ಯಾಗ್ರಹಿಗಳ ಪುನರ್ವಸತಿಯ ನೆಲೆಯಾಗಿದ್ದ ಟಾಲ್‌ಸ್ಟಾಯ್ ಆಶ್ರಮವನ್ನು ತೆರವುಗೊಳಿಸಿ ೧೯೧೩ರ ಜನವರಿಯಲ್ಲಿ 'ಇಂಡಿಯನ್ ಒಪಿನಿಯನ್' ಮುದ್ರಿತವಾಗುತ್ತಿದ್ದ ಫೀನಿಕ್ಸ್ ಆಶ್ರಮಕ್ಕೆ ಬಂದು ನೆಲೆಸಿದರು. ಇದಕ್ಕೆ ಇದ್ದ ಇನ್ನೊಂದು ಕಾರಣವೆಂದರೆ, ನೆಟಾಲ್‌ನ ಕೂಲಿ ಕಾರ್ಮಿಕರ ಮೇಲಿನ ವಾರ್ಷಿಕ ಮೂರು ಪೌಂಡುಗಳ ತೆರಿಗೆಯನ್ನು ರದ್ದುಗೊಳಿಸುವ ಆಶ್ವಾಸನೆ ಸರ್ಕಾರದಿಂದ ಈಡೇರದಿದ್ದರೆ, ಸತ್ಯಾಗ್ರಹದ ಪುನರಾರಂಭವು ಈ ಕೂಲಿ ಕಾರ್ಮಿಕರನ್ನೂ ಒಳಗೊಳ್ಳುವ ಸಾಧ್ಯತೆ ಇದ್ದುದರಿಂದ, ಅವರನ್ನು ಸಂಘಟಿಸಲು ನೆಟಾಲ್‌ನಲ್ಲೇ ಇದ್ದ ಫೀನಿಕ್ಸ್ ಆಶ್ರಮ ಸೂಕ್ತ ಸ್ಥಳವಾಗಿತ್ತು. ಗೋಖಲೆಯವರಿಗೆ ಸರ್ಕಾರ ನೀಡಿದ್ದ ಆಶ್ವಾಸನೆ ಸದ್ಯದಲ್ಲೇ ಈಡೇರುವ ನಂಬಿಕೆ ಇಲ್ಲದಿದ್ದರೂ, ಅದು ಈಡೇರುವ ಕಾಲ ದೂರವಿಲ್ಲ ಎಂಬ ಆಶಯದೊಂದಿಗೆ ಗಾಂಧಿ, ಮಗ ಹರಿಲಾಲನಿಗೂ ಒಂದು ಪತ್ರ ಬರೆದು ತಾವು ಇನ್ನೊಂದು ತಿಂಗಳು ಫೀನಿಕ್ಸ್‌ನಲ್ಲೇ ಇದ್ದು ನಂತರ ಬಹು ಬೇಗನೆ ತಮ್ಮ ಜೊತೆಯಲ್ಲಿರುವ ಕೆಲವು ಹುಡುಗರೊಂದಿಗೆ ಭಾರತಕ್ಕೆ ಹಿಂದಿರುಗುವುದಾಗಿಯೂ ತಿಳಿಸಿದರು.

ಈ ಆಶ್ರಮ ಸ್ಥಾಪನೆಯಾಗಿದ್ದ ಒಂಬತ್ತು ವರ್ಷಗಳಲ್ಲಿ, ಆಶ್ರಮವಾಸಿಗಳು ಅದರ ಆವರಣವನ್ನು ಅಚ್ಚುಕಟ್ಟಾದ ತಮ್ಮ ಕುಟೀರಗಳು, ಹೂ ಹಣ್ಣುಗಳು ಬಿಡುವ ಗಿಡ ಮರಗಳು ಮತ್ತು ಹುಲ್ಲುಗಾವಲು ಹಾಗೂ ಪೊದೆಗಳಿಂದ ಕೂಡಿದ್ದ ಸಮೃದ್ಧ ಹಸಿರಿನಿಂದ ಕಂಗೊಳಿಸುವಂತೆ ಮಾಡಿದ್ದರು. ಮಧ್ಯದಲ್ಲಿ ಒಂದು ತೊರೆಯೂ ಹರಿಯುತ್ತಾ ಆವರಣವನ್ನು ನಿಜವಾಗಿ ಆಶ್ರಮವಾಗಿ ಪರಿವರ್ತಿಸಿತ್ತು. ಆಶ್ರಮದಲ್ಲಿ ಪ್ರತಿ ಕುಟುಂಬವೂ ಒಂದೆರೆಡು ಎಕರೆ ಭೂಮಿಯಲ್ಲಿ ಕೃಷಿ ಮಾಡುತ್ತಿದ್ದವು. ಗಾಂಧಿಯೂ ಇದಕ್ಕೆ ಹೊರತಾಗಲಿಲ್ಲ. ಈ ಮೊದಲೇ ತಿಳಿಸಿದಂತೆ ಅವರೂ ತಮ್ಮ ಕುಟುಂಬಕ್ಕಾಗಿ ಎಲ್ಲರಂತೆ ಸಮಾನ ಜೀವನ ಭತ್ಯೆ ಪಡೆಯುತ್ತಿದ್ದರು.

ಆಶ್ರಮದ ಶಾಲೆಯಲ್ಲಿ ಪಾಠ – ಪತ್ರಿಕೆಗಾಗಿ ಬರಹ

ಟಾಲ್‌ಸ್ಟಾಯ್ ಆಶ್ರಮದಲ್ಲಿದ್ದಾಗ, ಗಾಂಧಿ ಇಲ್ಲಿಗೆ ಬಂದಾಗಲೆಲ್ಲ ಅವರನ್ನು ಆಶ್ರಮವಾಸಿಗಳು ಸ್ವಾಗತ ಕಮಾನು ಕಟ್ಟಿ, ರಾತ್ರಿ ಬಂದರೆ ಅವರ ಕುಟೀರದವರೆಗಿನ ದಾರಿಯುದ್ದಕ್ಕೂ ಮೇಣದ ಬತ್ತಿ ಬೆಳಗಿಸಿ ಸ್ವಾಗತಿಸಿ ಖುಷಿ ಪಡುತ್ತಿದ್ದರು. ಇದರಲ್ಲಿ ಮಕ್ಕಳದ್ದೇ ದೊಡ್ಡ ಪಾತ್ರ. ಗಾಂಧಿ ನೆಲೆಸಲು ಈಗ ಮತ್ತೆ ಬಂದೊಡನೆ ಅಲ್ಲಿನ ದಿನಚರಿ ಬದಲಾಯಿತು. ಮುವ್ವತ್ತು ಮಕ್ಕಳಿದ್ದ ಶಾಲೆ ಹೆಚ್ಚು ಸಕ್ರಿಯವಾಗಿ, ಮಕ್ಕಳು ಗಾಂಧಿಯೊಂದಿಗೆ ಪ್ರತಿ ಬೆಳಿಗ್ಗೆ ಆರರಿಂದ ಎಂಟರವರೆಗೆ ತೋಟದಲ್ಲಿ ಕೆಲಸ

ಮಾಡತೊಡಗಿದರು. ಬೆಳಗಿನ ಉಪಹಾರದ ನಂತರ ಶಾಲೆಯಲ್ಲಿ ಗಾಂಧಿ ಪಾಠ ಮಾಡುತ್ತಿದ್ದರು. ಮುಖ್ಯವಾಗಿ, ಆದಷ್ಟೂ ಅವರವರ ಮಾತೃಭಾಷೆಗಳಲ್ಲಿ ಓದು, ಬರಹ, ಸರಳ ಲೆಕ್ಕ ಮತ್ತು ನೈತಿಕ ತರಬೇತಿಯ ಪಾಠಗಳು. ಗಾಂಧಿ ಇದಕ್ಕಾಗಿ ಕೆಲ ಪಠ್ಯಗಳನ್ನೂ ರಚಿಸಿದ್ದರು. ಕೆಲ ತಾಸುಗಳ ನಂತರ ಗಾಂಧಿ ತರಗತಿಯನ್ನು ಬೇರೊಬ್ಬರಿಗೆ ಒಪ್ಪಿಸಿ 'ಇಂಡಿಯನ್ ಒಪಿನಿಯನ್' ಕೆಲಸಕ್ಕಾಗಿ ಮುದ್ರಣಾಲಯಕ್ಕೆ ತೆರಳುತ್ತಿದ್ದರು. ಸಂಜೆ ೫.೩೦ಕ್ಕೆ ಊಟದ ನಂತರ ರಾತ್ರಿ ಏಳೂವರೆಯಿಂದ ಒಂಬತ್ತರವರೆಗೆ ಹಾಡು ಭಜನೆಗಳ ಪ್ರಾರ್ಥನಾ ಕಾರ್ಯಕ್ರಮ. ಪ್ರತಿ ಭಾನುವಾರ ಆಶ್ರಮವಾಸಿಗಳೆಲ್ಲ ಸೇರಿ ಸರ್ವಧರ್ಮ ಪ್ರಾರ್ಥನೆಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದರು.

ಈಗ 'ಇಂಡಿಯನ್ ಒಪನಿಯನ್' ಕಡೆ ಹೆಚ್ಚು ಗಮನ ಕೊಡಲಾರಂಭಿಸಿದ ಗಾಂಧಿ ೧೯೧೩ರ ಜನವರಿಯಿಂದ ಆರಂಭಿಸಿದಂತೆ ಆ ಪತ್ರಿಕೆಯಲ್ಲಿ ಪ್ರತಿ ವಾರ ಆರೋಗ್ಯ ರಕ್ಷಣೆ ಕುರಿತ ಒಂದು ಅಂಕಣ ಬರೆಯಲಾರಂಭಿಸಿದರು. ಅದು ನಂತರ ಎಂಟು ತಿಂಗಳುಗಳ ಕಾಲ ಎಡೆಬಿಡದೆ ಮುಂದುವರೆಯಿತು. ತಾವು ತರಬೇತಿ ಹೊಂದಿದ ವೈದ್ಯರಲ್ಲವೆಂದೂ, ಅನುಭವದ ಆಧಾರದ ಮೇಲೆ ಸದುದ್ದೇಶದಿಂದ ಬರೆಯುತ್ತಿರುವುದಾಗಿ ತಿಳಿಸಿದ ಅವರು ತಮ್ಮ ಈ ಸೂಚನೆಗಳನ್ನು ಮುಖ್ಯವಾಗಿ ರೋಗ ತಡೆಯಲು ಬಳಸಬಹುದಾಗಿದೆ ಎಂದು ಸೂಚಿಸಿದರು. ಈ ಅಂಕಣಗಳಲ್ಲಿ ಅವರು ಆಹಾರ ಪದ್ಧತಿ, ಶುಚಿತ್ವ, ನೈಸರ್ಗಿಕ ಚಿಕಿತ್ಸೆಗಳಿಂದ ಹಿಡಿದು ಕಾಮ ಜೀವನದ ಪಾಠಗಳವರೆಗೆ ಅನೇಕ ವಿಷಯಗಳ ಬಗ್ಗೆ ಬರೆದರು. ಅಷ್ಟೇ ಅಲ್ಲ ಹಲವು ಜನರಿಗೆ ನೀರು ಮತ್ತು ಮಣ್ಣಿನ ಚಿಕಿತ್ಸೆಗಳ ಮೂಲಕ ಅವರ ರೋಗಗಳನ್ನೂ ವಾಸಿ ಮಾಡಿ ತೋರಿಸಿದರು.

ವಿವಾಹ ಶಾಸನದ ವಿವಾದ

ಈ ಮಧ್ಯೆ ಫೆಬ್ರುವರಿಯಲ್ಲಿ ಸರ್ಕಾರ ಗಾಂಧಿಯ ನಿರೀಕ್ಷೆಗೆ ವಿರುದ್ಧವಾಗಿ ವಲಸೆ ಹತೋಟಿ ಶಾಸನವನ್ನು ಇನ್ನಷ್ಟು ಕಟ್ಟುನಿಟ್ಟಾಗಿ ಜಾರಿಗೆ ತರಲಾರಂಭಿಸಿ ಭಾರತೀಯರ ಹೆಂಡತಿ-ಮಕ್ಕಳ ಪ್ರಜೆತನವನ್ನು ಪ್ರಶ್ನಿಸುತ್ತಾ ಕಿರುಕುಳ ಕೊಡಲಾರಂಭಿಸಿತ್ತು. ಈ ಬಗ್ಗೆ ಗಾಂಧಿ ಗೋಖಲೆಯವರಿಗೆ ಪತ್ರ ಬರೆದು ಶೀಘ್ರದಲ್ಲೇ ಸತ್ಯಾಗ್ರಹದ ಪುನರಾರಂಭದ ಸಂಭಾವ್ಯತೆಯ ಸೂಚನೆ ನೀಡಿದರು. ಇದೇ ಹೊತ್ತಿನಲ್ಲಿ ಭಾರತಕ್ಕೆ ಹೋಗಿ ಮದುವೆಯಾಗಿ ಪತ್ನಿಯೊಂದಿಗೆ ಹಿಂತಿರುಗುತ್ತಿದ್ದ ಮುಸ್ಲಿಂ ಭಾರತೀಯನೊಬ್ಬನ ಪತ್ನಿಗೆ ಆಕೆಯ ಪ್ರಜೆತನದ ವಿಷಯದಲ್ಲಿ ತಕರಾರೆತ್ತಿ ದೇಶದೊಳಕ್ಕೆ ಪ್ರವೇಶ ನೀಡಲು ವಲಸೆ ಇಲಾಖೆ ಅಧಿಕಾರಿಗಳು ನಿರಾಕರಿಸಿದರು. ಈ ಸಂಬಂಧ ಹೂಡಲಾದ ಮೊಕದ್ದಮೆಯ ವಿಚಾರಣೆ ಕೇಪ್‌ಟೌನ್ ನ್ಯಾಯಾಲಯದಲ್ಲಿ ನಡೆದು ಮಾರ್ಚ್ ಮೂರನೇ ವಾರದಲ್ಲಿ ತೀರ್ಪು ಸರ್ಕಾರದ ಪರ ಹೊರಬಿತ್ತು. ತೀರ್ಪು ನೀಡಿದ ನ್ಯಾ. ಸರ್ಲೆ ಪ್ರಕಾರ ಬಹುಪತ್ನಿತ್ವಕ್ಕೆ ಅವಕಾಶವಿರುವ ಎಲ್ಲ ಧಾರ್ಮಿಕ ವಿವಾಹಗಳೂ ದ.ಆಫ್ರಿಕಾದಲ್ಲಿ ಅಸಾಧು ಎನಿಸುತ್ತವೆ. ಅಂದರೆ ಅಧಿಕೃತ ನೋಂದಣಿಯ ಕ್ರೈಸ್ತ ವಿವಾಹಗಳ ಹೊರತಾಗಿ ಮಿಕ್ಕೆಲ್ಲವೂ ಅನೂರ್ಜಿತವಾಗುತ್ತವೆ. ಇದು ಬಹುಧರ್ಮೀಯರಿದ್ದ ಭಾರತೀಯ ಸಮುದಾಯದಲ್ಲಿ ಕೋಲಾಹಲವನ್ನೇ ಉಂಟುಮಾಡಿತು. ವಿವಾಹಿತ ಭಾರತೀಯ ಮಹಿಳೆಯರು, 'ಹಾಗಾದರೆ ನಾವು ನಮ್ಮ ಗಂಡಂದಿರಿಗೆ ಏನಾಗಿದ್ದೇವೆ? ನಮ್ಮ ಮಕ್ಕಳು ಹಾಗಾದರೆ ಅನೈತಿಕ ಸಂಬಂಧದ ಮಕ್ಕಳೇ?' ಎಂಬ ಪ್ರಶ್ನೆಗಳನ್ನು ಕೇಳತೊಡಗಿದರು.

ಕಸ್ತೂರಬಾ ತಮ್ಮ ಮಕ್ಕಳ ಹಿತದೃಷ್ಟಿಯಿಂದಲಾದರೂ ತಾವು ಭಾರತಕ್ಕೆ ಹಿಂದಿರುಗುವುದು ಒಳಿತು ಎಂದು ಗಾಂಧಿಯನ್ನು ಒತ್ತಾಯಿಸತೊಡಗಿದರು. ಇದಕ್ಕೆ ಗಾಂಧಿ ಇದು ಹೇಡಿತನವೆನ್ನಿಸಿಕೊಂಡೀತು ಎಂದು ಉತ್ತರಿಸಿದಾಗ ಕಸ್ತೂರಬಾ, 'ಹಾಗಾದರೆ ಸತ್ಯಾಗ್ರಹ ಆರಂಭಿಸಿ; ನಾನೂ ಅದರಲ್ಲಿ ಸೇರುವೆ' ಎಂದರು. ಈ ಹೊತ್ತಿಗಾಗಲೇ ಬಾ ತಮ್ಮ ಇತರ ಆಶ್ರಮವಾಸಿ ಮಹಿಳೆಯರೊಂದಿಗೆ ಚರ್ಚಿಸಿ ಅವರನ್ನೂ ಪ್ರತಿಭಟನೆಗೆ ಸಿದ್ಧಗೊಳಿಸಿದ್ದರು. 'ಸೆರೆಮನೆವಾಸ ಕಷ್ಟ; ಒಮ್ಮೆ ಸತ್ಯಾಗ್ರಹಕ್ಕೆ ಇಳಿದರೆ ಕಷ್ಟವೆನಿಸಿದಾಗ ಹಿಂತಿರುಗುವಂತಿಲ್ಲ!' ಎಂಬ ಗಾಂಧಿ ಎಚ್ಚರಿಕೆಯ ಮಾತಿನ ಹೊರತಾಗಿಯೂ ಅವರು ಸೆರೆಮನೆವಾಸಕ್ಕೆ ಸಿದ್ಧರಾದರು. ಇದೆಲ್ಲದರ ಪರಿಣಾಮವಾಗಿ ಜೊಹಾನ್ಸ್‌ಬರ್ಗ್‌ನ ಹಮೀದಿಯಾ ಸಭಾಭವನದಲ್ಲಿ ಭಾರತೀಯರ ಸಭೆಯೊಂದು ನಡೆದು ಸರ್ಲೆ ತೀರ್ಪಿನ ವಿರುದ್ಧ ಹೋರಾಟದ ನಿರ್ಣಯ ಕೈಗೊಂಡಿತು. ಇದರಿಂದಾಗಿ ಇತ್ತೀಚಿನ ವರ್ಷಗಳಲ್ಲಿ ಟ್ರಾನ್ಸ್‌ವಾಲ್‌ನ ಭಾರತೀಯರಿಂದ ವ್ಯಾವಹಾರಿಕವಾಗಿ ಪ್ರತ್ಯೇಕಿಸಲ್ಪಟ್ಟಿದ್ದ ನೆಟಾಲ್‌ನ ಭಾರತೀಯ ಸಮುದಾಯ ಎಚ್ಚೆತ್ತುಕೊಂಡು ಒಗ್ಗಟ್ಟು ಪ್ರದರ್ಶಿಸಲಾರಂಭಿಸಿತು. ಈಗ ಕಸ್ತೂರಬಾ ನೇತೃತ್ವದಲ್ಲಿ ಭಾರತೀಯ ಮಹಿಳೆಯರೂ ಹೋರಾಟಕ್ಕೆ ಸಜ್ಜಾದರು.

ಮತ್ತೆ ಸರ್ಕಾರದ ವಿಶ್ವಾಸದ್ರೋಹ

ಇದೇ ವೇಳೆಯಲ್ಲಿ 'ಆಫ್ರಿಕನ್ ಕ್ರಾನಿಕಲ್'ನ ಪಿ.ಎಸ್. ಅಯ್ಯರ್ ೧೯೧೩ರ ಏಪ್ರಿಲ್ ೧೯ರ ಸಂಚಿಕೆಯಲ್ಲಿ ಮೂರು ಪೌಂಡ್ ತೆರಿಗೆ ವಿರುದ್ಧ ಕೂಲಿಕಾರರನ್ನು ಸಂಘಟಿಸುತ್ತಾ, ತೆರಿಗೆ ರದ್ದತಿಗಾಗಿ ಸರ್ಕಾರವನ್ನು ಒತ್ತಾಯಿಸುತ್ತಿದ್ದನು. ಜೊತೆಗೆ ಭಾರತೀಯರ ಆಂದೋಲನ ಗಾಂಧಿ-ಪೊಲಾಕ್‌ರ ಗರ್ವಿಷ್ಠ ಮಾರ್ಗದರ್ಶನದಲ್ಲಿ ದಾರಿ ತಪ್ಪಿ ವಿಫಲತೆಯ ಅಂಚಿಗೆ ತಲುಪುತ್ತಿದೆ ಎಂಬ ಕೂಗನ್ನೂ ಎಬ್ಬಿಸತೊಡಗಿದ್ದನು. ಏಪ್ರಿಲ್‌ನಲ್ಲಿ ಸರ್ಕಾರ ಬಿಳಿಜನರ ಪ್ರಬಲ ವಿರೋಧದಿಂದಾಗಿ ತೆರಿಗೆಯನ್ನು ರದ್ದು ಮಾಡಲಾಗುತ್ತಿಲ್ಲವೆಂದು ಘೋಷಿಸಿತಲ್ಲದೆ, ಹೊಸ ವಲಸೆ ಹತೋಟಿ ಶಾಸನದ ಕರಡೊಂದನ್ನು ಪ್ರಕಟಿಸಿತು. ಇದು ಟ್ರಾನ್ಸ್‌ವಾಲ್ ಪ್ರಾಂತೀಯ ಸರ್ಕಾರದ ಶಾಸನಕ್ಕಿಂತಲೂ ಕ್ರೂರವಾಗಿತ್ತು. ಅದು ಭಾರತೀಯರು ಒಂದು ಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯಕ್ಕೆ ಹೋಗುವುದನ್ನು ನಿಷೇಧಿಸಿತಲ್ಲದೆ ವಲಸೆ ಅಧಿಕಾರಿಗಳಿಗೆ ಜನರ ಶಿಕ್ಷಣದ ಮಟ್ಟ ಹಾಗೂ ಬದುಕಿನ ರೀತಿ ನೀತಿಗಳ ಬಗ್ಗೆ ತಪಾಸಣೆ ನಡೆಸುವ ಹೆಚ್ಚಿನ ಅಧಿಕಾರ ನೀಡಿತ್ತು. ಗಾಂಧಿ ಇದು ತಮಗೆ ಮತ್ತು ತಮ್ಮ ನಾಯಕ ಗೋಖಲೆಯವರಿಗೆ ಎಸಗಿದ ವಿಶ್ವಾಸದ್ರೋಹವೆಂದು ಬಗೆದರು. ಕೂಡಲೇ ಅವರು ನೆಟಾಲ್ ಕಾಂಗ್ರೆಸ್‌ನ ಸಭೆ ಕರೆದು ಹೋರಾಟಕ್ಕೆ ಭೂಮಿಕೆ ಸಿದ್ಧಪಡಿಸಿದರು. ನಂತರ ಟ್ರಾನ್ಸ್‌ವಾಲ್‌ಗೆ ತೆರಳಿ ಅಲ್ಲಿನ ಭಾರತೀಯರ ಸಭೆ ಕರೆದು, ಕಳೆದ ಬಾರಿಗಿಂತ ದೀರ್ಘಕಾಲದ ಮತ್ತು ಹೆಚ್ಚಿನ ತ್ಯಾಗದ ಸತ್ಯಾಗ್ರಹಕ್ಕೆ ಸಿದ್ಧವಾಗಬೇಕೆಂದು ಅವರಿಗೆ ಕರೆ ನೀಡಿದರು. ಸತ್ಯಾಗ್ರಹ ಭಾರತೀಯ ಕುಟುಂಬಗಳಲ್ಲಿ ಉಂಟು ಮಾಡುವ ಏರುಪೇರುಗಳನ್ನು ಗಮನಿಸಿದ್ದ ಪೊಲಾಕ್ ವೈಯಕ್ತಿಕವಾಗಿ ಸರ್ಕಾರದೊಂದಿಗೆ ಪತ್ರ ವ್ಯವಹಾರ ನಡೆಸಿ ಭಾರತೀಯರ ಬೇಡಿಕೆಗಳನ್ನು ಮನ್ನಿಸುವಂತೆ ಕೋರಿದ್ದ. ಗಾಂಧಿಯ ಆಪ್ತ ಸಹಾಯಕಿ ಸೋನ್ಯಾ ಶ್ಲೇಸಿನ್ ಕೂಡ ಭಾರತೀಯ ಮಹಿಳೆಯರ ಅಹವಾಲನ್ನು ಸರ್ಕಾರಕ್ಕೆ ತಲುಪಿಸಿ ಸೂಕ್ತ

ಕ್ರಮಕ್ಕಾಗಿ ಆಗ್ರಹಿಸಿದ್ದಳು.

ಇವರಲ್ಲದೆ ಲಾರ್ಡ್ ಆ್ಯಂಪ್ಟ್‌ಹಿಲ್ ಸೇರಿದಂತೆ ಅನೇಕ ಬಿಳಿಯ ರಾಜಕೀಯ ಮುತ್ಸದ್ದಿಗಳು ಮತ್ತೆ ಸತ್ಯಾಗ್ರಹಕ್ಕೆ ಎಡೆಗೊಡದಂತೆ ಸರ್ಕಾರವನ್ನು ಒತ್ತಾಯಿಸಿದ್ದರು. ಆದರೆ ಈಗ ಜ. ಸ್ಮಟ್ಸ್ ಸ್ಥಾನಕ್ಕೆ ಗೃಹ ಮಂತ್ರಿಯಾಗಿ ಬಂದಿದ್ದ ಆರೆಂಜ್ ಫ್ರೀ ಸ್ಟೇಟ್‌ನ ರಾಜಕಾರಣಿ ಅಬ್ರಾಹಂ ಫಿಶರ್, ಸ್ಮಟ್ಸ್‌ಗಿಂತ ಹೆಚ್ಚು ಬಿಳಿತನದ ಪ್ರಬಲ ಪ್ರತಿಪಾದಕನಾಗಿ ಈ ಯಾವ ಒತ್ತಾಯಗಳಿಗೂ ಮಣಿಯದವನಾಗಿದ್ದ. ಜ. ಸ್ಮಟ್ಸ್ ಈಗ ಒಕ್ಕೂಟದ ರಕ್ಷಣಾ ಮಂತ್ರಿಯಾಗಿದ್ದ. ಈ ಎಲ್ಲ ಬೆಳವಣಿಗೆಗಳ ಮಧ್ಯೆಯೇ ಜೂನ್‌ನಲ್ಲಿ ಒಕ್ಕೂಟದ ಸಂಸತ್ತು, ಹೆಚ್ಚಿನ ಬದಲಾವಣೆಗಳಿಲ್ಲದೆ ಅಂತಿಮ ವಲಸೆ ಹತೋಟಿ ಶಾಸನವನ್ನು ಅನುಮೋದಿಸಿ ಬ್ರಿಟಿಷ್ ಸಾಮ್ರಾಜ್ಯದ ಒಪ್ಪಿಗೆಯ ಮುದ್ರೆಯನ್ನೂ ಪಡೆದುಬಿಟ್ಟಿತು. ಗಾಂಧಿ ಕೂಡಲೆ ಗೋಖಲೆಯವರಿಗೆ ಪತ್ರ ಬರೆದು ಸತ್ಯಾಗ್ರಹವನ್ನು ಆರಂಭಿಸುವುದಾಗಿ ತಿಳಿಸಿ ಅವರ ಆಶೀರ್ವಾದವನ್ನು ಕೋರಿದರು.

ತಮ್ಮ ದ.ಆಫ್ರಿಕಾದ ಪ್ರವಾಸದ ಸಂದರ್ಭದಲ್ಲಿ ಅಲ್ಲಿನ ಸರ್ಕಾರದೊಂದಿಗೆ ನಡೆಸಿದ್ದ ಮಾತುಕತೆಯ ಹಿನ್ನೆಲೆಯಲ್ಲಿ ಇನ್ನು ಅಲ್ಲಿ ಸತ್ಯಾಗ್ರಹದ ಅಗತ್ಯವಿರುವುದಿಲ್ಲ ಎಂದು ನಿಸೂರಾಗಿದ್ದ ಗೋಖಲೆಯವರಿಗೆ ಇದು ಅನಿರೀಕ್ಷಿತವಾಗಿತ್ತು. ಆಗ ಲಂಡನ್‌ನಲ್ಲಿದ್ದ ಅವರು ಗಾಂಧಿಗೆ ಪತ್ರ ಬರೆದು ಈಗ ದ.ಆಫ್ರಿಕಾದಲ್ಲಿ ಎಷ್ಟು ಜನ ಭಾರತೀಯರು ಸತ್ಯಾಗ್ರಹಕ್ಕೆ ಸಿದ್ಧರಿದ್ದಾರೆ ಲೆಕ್ಕ ಹಾಕಿ ತಿಳಿಸಲು ಸೂಚಿಸಿದರು. ಗಾಂಧಿ ೬೫ ಜನರ ಪಟ್ಟಿ ಮಾಡಿ, ಇವರಲ್ಲಿ ಕನಿಷ್ಠ ೧೬ ಜನರಾದರೂ ತಮ್ಮೊಡನೆ ಕೊನೆವರೆಗೂ ನಿಲ್ಲುವರು ಎಂದು ಉತ್ತರ ಬರೆದುದಲ್ಲದೆ, ತಮಗಾಗಿ ಗೋಖಲೆ ಹಣದ ವ್ಯವಸ್ಥೆ ಮಾಡುವ ಅಗತ್ಯವಿಲ್ಲವೆಂದೂ, ತಮ್ಮ ಪರವಾಗಿ ಗೆಳೆಯ ಕಲೆನ್‌ಬಾಕ್ ಜೊಹಾನ್ಸ್‌ಬರ್ಗ್‌ನ ಬೀದಿಗಳಲ್ಲಿ ಭಿಕ್ಷೆ ಬೇಡಿ ನಿಧಿ ಸಂಗ್ರಹಿಸಲು ತಯಾರಾಗಿರುವುದಾಗಿಯೂ, ಇಷ್ಟು ಜನರೊಂದಿಗೇ ತಾವು ಸತ್ಯಾಗ್ರಹವನ್ನು ಮುಂದುವರೆಸಿ ದಡ ಮುಟ್ಟಿಸುವುದಾಗಿಯೂ ಬರೆದರು.

ಮಧುಮೇಹದ ಸಂಕಷ್ಟಗಳಿಂದ ಬಳಲಿಹೋಗಿ ವಿಶ್ರಾಂತಿಯಲ್ಲಿದ್ದರೂ ಗೋಖಲೆಯವರಿಗೆ ದ.ಆಫ್ರಿಕಾದ ಭಾರತೀಯರ ಸಮಸ್ಯೆಗಳ ಪರಿಹಾರ ಒಂದು ಬದ್ಧತೆಯಾಗಿತ್ತು. ಹಾಗಾಗಿ ಅವರು ಕೂಡಲೇ ಭಾರತಕ್ಕೆ ಹಿಂದಿರುಗಿ ತಾವು ಸದಸ್ಯರಾಗಿದ್ದ ವೈಸ್‌ರಾಯ್ ಸಲಹಾ ಮಂಡಳಿಯ ಮೂಲಕ ಬ್ರಿಟಿಷ್ ಸಾಮ್ರಾಜ್ಯಕ್ಕೆ ಚುರುಕು ಮುಟ್ಟಿಸಬಯಸಿದರು. ಆದರೆ ವಿಲಿಯಂ ವೆಡ್‌ಬರ್ನ್ ಸೇರಿದಂತೆ ಅಲ್ಲಿನ ಅವರ ಹಿತೈಷಿಗಳು ಆ ಅನಾರೋಗ್ಯದ ಸ್ಥಿತಿಯಲ್ಲಿ ಅವರು ಭಾರತಕ್ಕೆ ಪ್ರಯಾಣ ಮಾಡುವುದು ಉಚಿತವಲ್ಲವೆಂದು ಸೂಚಿಸಿದರು. ಈ ಬಗ್ಗೆ ವೆಡ್‌ಬರ್ನ್ ಗಾಂಧಿಯವರಿಗೂ ಪತ್ರ ಬರೆದು, ಗೋಖಲೆಯವರ ಮನಸ್ಸಿನ ಮೇಲೆ ಒತ್ತಡ ಹಾಕಬಾರದೆಂದು ಕೋರಿದರು. ಗಾಂಧಿ ಈ ಸಂದರ್ಭದಲ್ಲಿ ಪೋಲಾಕ್‌ನನ್ನು ಗೋಖಲೆ ಹಾಗೂ ಬ್ರಿಟಿಷ್ ಸರ್ಕಾರದ ಅಧಿಕಾರಿಗಳೊಂದಿಗೆ ಮಾತಾಡಲು ಇಂಗ್ಲೆಂಡ್‌ಗೆ ಕಳಿಸಿದರು. ಆದರೆ ಅಲ್ಲಿಂದ ಅಂತಹ ಒಳ್ಳೆಯ ಸುದ್ದಿಯನ್ನೇನೂ ಪೋಲಾಕ್ ನೀಡಲಿಲ್ಲ.

ಕಾರ್ಮಿಕರ ಮುಷ್ಕರ–ಉಗ್ರವಾದ ಪರಿಸ್ಥಿತಿ

ನಂತರದಲ್ಲೇ ಗಾಂಧಿ ಸತ್ಯಾಗ್ರಹ ಆರಂಭಿಸುವ ಮುನ್ನ ಕೊನೆಯ ಪ್ರಯತ್ನವಾಗಿ

ಈಗ ರಕ್ಷಣಾ ಮಂತ್ರಿಯಾಗಿದ್ದ ಜ. ಸ್ಮಟ್ಸ್‌ನೊಡನೆ ಮಾತುಕತೆಗಾಗಿ ಕಾಗದ ಬರೆದರು. ಈಗ ಜಾರಿಗೆ ಬರಲಿರುವ ಹೊಸ ಶಾಸನದ ನಿಯಮಗಳಿಗೆ ಪ್ರತಿಯಾಗಿ, ದ.ಆಫ್ರಿಕಾದಲ್ಲೇ ಹುಟ್ಟಿದ ಭಾರತೀಯರು ಕೇಪ್ ಪ್ರಾಂತ್ಯವನ್ನು ಪ್ರವೇಶಿಸಲು, ದ.ಆಫ್ರಿಕಾದಲ್ಲಿ ಕೂಲಿಗಳಾಗಿ ಮೂರು ವರ್ಷ ಪೂರೈಸಿದವರು–ಅವರೊಮ್ಮೆ ಭಾರತಕ್ಕೆ ಹೋಗಿದ್ದರೂ ಅಲ್ಲಿಂದ ಬಂದು–ಅಲ್ಲಿ ಸ್ವತಂತ್ರವಾಗಿ ಬದುಕಲು ಮತ್ತು ಎಲ್ಲ ಏಕಪತ್ನಿ ಭಾರತೀಯ ವಿವಾಹಗಳನ್ನೂ–ದ.ಆಫ್ರಿಕಾದಲ್ಲಿರುವ ಪತ್ನಿಗೆ ಸೀಮಿತವಾದಂತಾದರೂ–ಕಾನೂನುಬದ್ಧಗೊಳಿಸಲು ಸರ್ಕಾರ ಸಿದ್ಧವಿದ್ದರೆ ಸತ್ಯಾಗ್ರಹದ ಪ್ರಯತ್ನದ ಬಗ್ಗೆ ಪುನರಾಲೋಚಿಸಲು ಸಾಧ್ಯವಾಗುವುದೆಂದು ಆ ಕಾಗದದಲ್ಲಿ ಬರೆದಿದ್ದರು. ಆದರೆ ಸ್ಮಟ್ಸ್ ಈ ಕಾಗದದ ಕಡೆ ಗಮನ ಹರಿಸಲಾಗದಂತಹ ಬಿಕ್ಕಟ್ಟೊಂದು ಸರ್ಕಾರಕ್ಕೆ ಸೃಷ್ಟಿಯಾಯಿತು. ಜೊಹಾನ್ಸ್‌ಬರ್ಗ್ ಬಳಿಯ ಕಲ್ಲಿದ್ದಲು ಗಣಿಗಳ ಕಾರ್ಮಿಕರು ತಮ್ಮ ಮಾಲೀಕರು ಮಿತಿಮೀರಿದ ದುಡಿಮೆಗಾಗಿ ಒತ್ತಾಯಿಸಿ ಹಿಂಸೆ ನೀಡುತ್ತಿದ್ದಾರೆಂದು ಪ್ರತಿಭಟಿಸಿ ಜುಲೈ ಆರಂಭದಲ್ಲಿ ಮುಷ್ಕರ ಆರಂಭಿಸಿದ್ದರು. ಅದು ನಿಯಂತ್ರಣಕ್ಕೆ ಸಿಗದೆ ಕಾರ್ಮಿಕರು ಹಿಂಸೆಗೆ ಇಳಿದಿದ್ದರಿಂದ ಪೊಲೀಸರು ಗೋಲೀಬಾರ್ ಮಾಡಿದ್ದರು. ಅದರಲ್ಲಿ ಹನ್ನೆರಡು ಜನ ಕಾರ್ಮಿಕರು ಸತ್ತಿದ್ದರು. ನಂತರ ನಡೆದ ಶವಯಾತ್ರೆಯಲ್ಲಿ ಸಾವಿರಾರು ಜನ ಭಾಗವಹಿಸಿದ್ದರು. ಸ್ಮಟ್ಸ್ ಈ ಉಗ್ರ ಪರಿಸ್ಥಿತಿಯನ್ನು ನಿಯಂತ್ರಿಸುವುದರಲ್ಲಿ ಮುಳುಗಿಹೋಗಿದ್ದನು.

ಮಣಿಲಾಲನ ಪ್ರೇಮ ಪ್ರಕರಣ

ಇನ್ನು ಇದೇ ಸಂದರ್ಭದಲ್ಲಿ ಗಾಂಧಿ ಕೂಡ ಒಂದು ಮುಜುಗರದ ಸಂದರ್ಭವನ್ನು ಎದುರಿಸಬೇಕಾಗಿ ಬಂದು ಅದರ ಪರಿಹಾರಕ್ಕಾಗಿ ಗಮನ ಹರಿಸಬೇಕಾಯಿತು. ಫೀನಿಕ್ಸ್‌ನಲ್ಲಿದ್ದ ಅವರ ಎರಡನೆಯ ಮಗ ಮಣಿಲಾಲ ಕಲೆನ್‌ಬಾಕ್ ಮೂಲಕ ಒಂದು ಪತ್ರ ಬರೆದು ತಾನೊಂದು ಪ್ರೇಮ ಪ್ರಸಂಗದಲ್ಲಿ ಸಿಲುಕಿಕೊಂಡಿರುವುದನ್ನು ನಿವೇದಿಸಿಕೊಂಡಿದ್ದ. ಆತನ ಪ್ರೇಮ, ಗಾಂಧಿಯವರ ಪರಮಾಪ್ತ ಗೆಳೆಯ ಮತ್ತು ಆರಾಧಕ ಡಾ. ಪ್ರಾಣಜೀವನ ಮೆಹ್ತಾನ ವಿವಾಹಿತ ಪುತ್ರಿ ಜೇಕಿಯೊಂದಿಗಾಗಿತ್ತು! ಆಕೆಯ ಗಂಡ ತನ್ನ ವೃತ್ತಿಸಂಬಂಧದ ಕೆಲಸಕ್ಕಾಗಿ ಸ್ವಲ್ಪ ಕಾಲ ಮಾರಿಷಸ್‌ನಲ್ಲಿ ತಂಗಬೇಕಾಗಿ ಬಂದದ್ದರಿಂದ ಮೆಹ್ತಾ ಪುತ್ರಿಯನ್ನು ಫೀನಿಕ್ಸ್ ಆಶ್ರಮದಲ್ಲಿ ಸರಳ ಜೀವನದ ಪಾಠ ಕಲಿಯಲೆಂದು ಕಳಿಸಿದ್ದರು! ಹಿರಿಯ ಮಗ ಹರಿಲಾಲ ದಾರಿ ತಪ್ಪಿದನೆಂದು ವಿಷಾದಿಸಿದ್ದ ಗಾಂಧಿ ಈ ಎರಡನೆಯ ಮಗನಾದರೂ ತಮ್ಮ ಹಾದಿಗೆ ಬರಲೆಂದು ಎಲ್ಲ ಪ್ರಯತ್ನಗಳನ್ನೂ ಮಾಡಿದ್ದರು. ಮುಖ್ಯವಾಗಿ ಬ್ರಹ್ಮಚರ್ಯ ಪಾಲನೆಯ ವಿಷಯದಲ್ಲಿ. ಆದರೆ ಈಗ ನೋಡಿದರೆ ಈ ಘಟನೆ ಸಂಭವಿಸಿದೆ. ಗಾಂಧಿಗೆ ತಲ್ಲಣ ಉಂಟುಮಾಡಿದ ಈ ವಿಷಯದ ಸಂಬಂಧವಾಗಿ ಅವರಿಗೆ ಇದ್ದ ಏಕೈಕ ಸಮಾಧಾನವೆಂದರೆ ಮಣಿಲಾಲ ಈ ಸಂಬಂಧವಾಗಿ ತಪ್ಪೊಪ್ಪಿಗೆಯ ಪತ್ರವನ್ನು ಬರೆದಿದ್ದನು ಎಂಬುದು. ಕೂಡಲೇ ಅವರು ಫೀನಿಕ್ಸ್‌ಗೆ ತೆರಳಿದರು. ಅಲ್ಲಿನ ಹುಡುಗ–ಹುಡುಗಿಯರಲ್ಲಿ ಈ ಬಗ್ಗೆ ವಿಚಾರಣೆ ನಡೆಸಿದರು. ಈ ಬಗ್ಗೆ ತಮಗೆ ಒಂದು ಸೂಚನೆಯನ್ನೂ ನೀಡದ ಅವರ ಬಗ್ಗೆ ವಿಷಾದ ವ್ಯಕ್ತಪಡಿಸಿದರು. ಮಣಿಲಾಲ ಮತ್ತು ಜೇಕಿ ಇಬ್ಬರೂ ತಮ್ಮ ವರ್ತನೆಯ ಬಗ್ಗೆ ಪಶ್ಚಾತ್ತಾಪ ವ್ಯಕ್ತಪಡಿಸಿದರು.

ಜೇಕಿ ತಾನಾಗಿ ತಲೆಕೂದಲು ಕತ್ತರಿಸಿಕೊಂಡು ಬಿಳಿ ಸೀರೆ ಉಡುವ ಮತ್ತು ಉಪ್ಪಿಲ್ಲದ ಆಹಾರ ಸೇವಿಸುವ ಪ್ರತಿಜ್ಞೆ ಮಾಡಿದಳು. ಮಣಿಲಾಲನಿಗೆ ಗಾಂಧಿ ತಾನು ಹೇಳುವವರೆಗೆ ಮದುವೆಯ ಯೋಚನೆ ಮಾಡದಂತೆ ಪ್ರತಿಜ್ಞೆ ಸ್ವೀಕರಿಸುವಂತೆ ಮಾಡಿದರು. ತಾವೂ ಒಂದು ವಾರದ ಉಪವಾಸ ಮತ್ತು ಆನಂತರ ಒಂದು ವರ್ಷದ ಕಾಲ ಒಂದು ಊಟದ ಸ್ವ-ಶಿಕ್ಷಣದ ಶಿಕ್ಷೆ ವಿಧಿಸಿಕೊಂಡರು.

ಜಿಡ್ಡು ಕೃಷ್ಣಮೂರ್ತಿಯವರ ಉದಯ

ಇದೇ ವೇಳೆಯಲ್ಲಿ ಸಂಭವಿಸಿದ ಎರಡು ವಿದ್ಯಮಾನಗಳನ್ನು ರಾಮಚಂದ್ರ ಗುಹಾ ತಮ್ಮ 'ಗಾಂಧಿ ಬಿಫೋರ್ ಇಂಡಿಯಾ' ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಅವೆಂದರೆ, ಒಂದು: ಗಾಂಧಿಯ ಶಿಷ್ಯತ್ವ ಸ್ವೀಕರಿಸಿ ಫೀನಿಕ್ಸ್ ಆಶ್ರಮವಾಸಿಯಾಗಿದ್ದು ಈಗ ಥಿಯೊಸಫಿಯ ಹುಚ್ಚಿನಲ್ಲಿ ವಿಶ್ವಪರ್ಯಟನೆಯಲ್ಲಿದ್ದ ಜಾನ್ ಕೊರ್ಡೆಸ್, ತನ್ನ ಗುರುವಿನ ಈ ನಿರ್ಣಾಯಕ ಹೋರಾಟಕ್ಕೆ ಶುಭಾಶಯ ಹೇಳಿ ಬರೆದ ಪತ್ರ. ಅದರಲ್ಲಿ ಆತ ಗಾಂಧಿಯನ್ನು ಹೊರ ಲಕ್ಷಣಗಳಲ್ಲದಿದ್ದರೂ ಒಳ ಸ್ವರೂಪದಲ್ಲಿ ಮೀರಿಸುವ ವ್ಯಕ್ತಿತ್ವವೊಂದರ ಉದಯದ ಪ್ರಸ್ತಾಪ ಮಾಡಿ, ಆ ವ್ಯಕ್ತಿತ್ವ ಭೂಮಿಯ ಮೇಲಿನ ದೇವರ ಪ್ರತಿನಿಧಿ ಎಂದು ಆ್ಯನಿ ಬೆಸೆಂಟ್ ಗುರುತಿಸಿದ್ದ ಜಿಡ್ಡು ಕೃಷ್ಣಮೂರ್ತಿ ಎಂದು ವಿವರಿಸಿದ್ದ. ಇನ್ನೊಂದು: ಗಾಂಧಿಯ ಹಿತೈಷಿಯೂ, ಅಭಿಮಾನಿಯೂ ಆಗಿ ಅವರನ್ನು ಕ್ರಿಸ್ತನಿಗೆ ಹೋಲಿಸಿ ಅವರ ಜೀವನ ಚರಿತ್ರೆ ಬರೆದಿದ್ದ ಜೋಸೆಫ್ ಡೋಕ್ ಅವರ ನಿಧನ. ಆಗಸ್ಟ್ ೨೪ರಂದು ಜೊಹಾನ್ಸ್‌ಬರ್ಗ್‌ನ ಚರ್ಚೊಂದರಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಗಾಂಧಿ, ಡೋಕ್ ಅವರ ಮಾನವೀಯತೆಯ ಗುಣಗಾನ ಮಾಡುತ್ತಾ, ಅವರು ತಮ್ಮನ್ನು ಕ್ರೈಸ್ತನನ್ನಾಗಿ ಮಾಡಲು ಮಾಡಿದ ಪ್ರಯತ್ನಗಳನ್ನೂ, ತಾವು ಅವರಿಗೆ ಕ್ರೈಸ್ತ ಧರ್ಮ ತನ್ನ ಪೂರ್ಣತೆಯನ್ನು ಹಿಂದೂ ಧರ್ಮದ ಬೆಳಕಿನಲ್ಲಿ ಕಂಡುಕೊಳ್ಳಬಹುದು ಎಂದು ಉತ್ತರಿಸಿದ್ದನ್ನೂ ನೆನಪಿಸಿಕೊಂಡರು.

ಮತ್ತೆ ಸತ್ಯಾಗ್ರಹದ ಘೋಷಣೆ

ಇದಾದ ಎರಡು ವಾರಗಳ ನಂತರ ೧೯೧೩ರ ಸೆಪ್ಟೆಂಬರ್‌ನಲ್ಲಿ ಗಾಂಧಿ, ಭಾರತೀಯರು ಸಾಕಷ್ಟು ಕಾದು ಈಗ ವಿಷಾದದಿಂದ ಸತ್ಯಾಗ್ರಹವನ್ನು ಪುನರಾರಂಭಿಸಲು ನಿರ್ಧರಿಸಿರುವುದಾಗಿ ಸರ್ಕಾರಕ್ಕೆ ತಿಳಿಸಿದರು. ಮೂರು ಪೌಂಡುಗಳ ತೆರಿಗೆ, ವಲಸೆ ಹತೋಟಿ ಕಾನೂನಿನಲ್ಲಿದ್ದ ವರ್ಣಭೇದದ ಅಂಶ ಮತ್ತು ಭಾರತೀಯ ಮಹಿಳೆಯರ ವಿವಾಹಕ್ಕೆ ಸಂಬಂಧಿಸಿದ ವಿವಾದ, ಇವುಗಳ ಪರಿಹಾರ ಇವು ಸತ್ಯಾಗ್ರಹದ ಪುನರಾರಂಭದ ಕಾರ್ಯಸೂಚಿಯಾಗಿತ್ತು. ಮೂರು ಪೌಂಡುಗಳ ತೆರಿಗೆ ಮತ್ತು ವಿವಾಹ ವಿವಾದ, ಸತ್ಯಾಗ್ರಹ ವಿಷಯಗಳಿಗೆ ಹೊಸ ಸೇರ್ಪಡೆಗಳಾಗಿದ್ದವು. ಗಾಂಧಿ ಇದನ್ನು ಗೋಖಲೆಯವರಿಗೆ ನೀಡಿದ್ದ ವಚನವನ್ನು ಸರ್ಕಾರ ಭಂಗ ಮಾಡಿ ಇಡೀ ಭಾರತದ ಜನತೆಗೆ ಅವಮಾನ ಮಾಡಿದ್ದರಿಂದ ಮತ್ತು ಸರ್ಕಾರವೀಗ ಜನರ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡತೊಡಗಿದೆ ಎಂಬ ಕಾರಣಗಳ ಮೇಲೆ ಸಮರ್ಥಿಸಿಕೊಂಡರು. ಆದರೆ ಈ ಸೇರ್ಪಡೆಗಳಿಂದ ಸತ್ಯಾಗ್ರಹದಲ್ಲಿ ಕೂಲಿ ಕಾರ್ಮಿಕರನ್ನೂ, ಮಹಿಳೆಯರನ್ನೂ ಒಳಗೊಳ್ಳಲು ಸಾಧ್ಯವೆಂಬುದೂ ಗಾಂಧಿಯ ಲೆಕ್ಕಾಚಾರವಾಗಿತ್ತು. ಏಕೆಂದರೆ, ಸ್ಥಗಿತಗೊಳಿಸಲಾಗಿದ್ದ ಸತ್ಯಾಗ್ರಹವನ್ನು ಮತ್ತೆ

ಹುರುಪುಗೊಳಿಸಲು ಈ ವರ್ಗಗಳ ಅಗತ್ಯವನ್ನು ಅವರು ಮನಗಂಡಿದ್ದರು. ಪ್ರತಿಭಟನೆಯ ಬಗ್ಗೆ ನೆಟಾಲ್‌ನ ಅನುಕೂಲಸ್ಥ ಭಾರತೀಯ ವ್ಯಾಪಾರಿ ವರ್ಗದ ಅನಾಸಕ್ತಿ ಗಾಂಧಿಯ ಗಮನಕ್ಕೆ ಬಂದಿತ್ತು. ಅವರಲ್ಲಿ ಕೆಲವರು ಒಂದೆರಡು ಸಭೆಗಳಲ್ಲಿ ಗಾಂಧಿಯದು ಅನಗತ್ಯ ಉಸಾಬರಿ ಎಂದು ಟೀಕಿಸಿದ್ದರೆ, ಮತ್ತೆ ಕೆಲವು ಗುಜರಾತಿ ಹಿಂದೂ ವ್ಯಾಪಾರಿಗಳು ಇದೆಲ್ಲ ಮುಸ್ಲಿಂ ವ್ಯಾಪಾರಿಗಳ ಕರಾಮತ್ತು ಎಂಬ ಗುಸುಗುಸುವನ್ನೂ ಆರಂಭಿಸಿದ್ದರು.

ಆದರೆ ಗಾಂಧಿಗೆ ಇದೊಂದು ಬದುಕಿನ ನಂಬಿಕೆಯ ಪ್ರಶ್ನೆಯಾಗಿತ್ತು. ತತ್ಕಾಲೀನ ಒಪ್ಪಂದದ ನಂತರ ಗೋಖಲೆಯವರಿಗೆ ಸರ್ಕಾರ ನೀಡಿದ ಆಶ್ವಾಸನೆಯ ಹಿನ್ನೆಲೆಯಲ್ಲಿ, ಅವರು ನೀಡಿದ ಆಹ್ವಾನದ ಮೇರೆಗೆ ಗಾಂಧಿ ಭಾರತಕ್ಕೆ ಹಿಂದಿರುಗಬಹುದಿತ್ತು. ಆದರೆ ಅವರು ತಮ್ಮ ದೇಶದ ಜನರ ಸ್ವಾಭಿಮಾನದ ಮತ್ತು ಬಿಳಿಯರ ಪ್ರಭುತ್ವದ ವರ್ಣ ತಾರತಮ್ಯದ ಪ್ರಶ್ನೆಯನ್ನು ವೈಯಕ್ತಿಕ ಹೋರಾಟದ ಪ್ರಶ್ನೆಯನ್ನಾಗಿ ಮಾಡಿಕೊಂಡು ಒಂದು ತತ್ವ ಸಾಧನೆಗೆ ನಿರ್ಧರಿಸಿದ್ದರು. ಹಾಗಾಗಿಯೇ ಅವರು ಈ ಪ್ರಶ್ನೆ ಪರಿಹಾರವಾಗುವವರೆಗೆ ಇಲ್ಲಿಂದ ಹೊರಡಲಾಗದು ಎಂದು ಗೋಖಲೆಯವರಿಗೆ ತಿಳಿಸಿದ್ದರು.

ಮಹಿಳೆಯರ ಉತ್ಸಾಹ

ಸತ್ಯಾಗ್ರಹವನ್ನು ಒಕ್ಕೂಟದ ಎಲ್ಲ ಪ್ರಾಂತ್ಯಗಳಿಂದಲೂ ಆರಂಭಿಸಲು ಉದ್ದೇಶಿಸಿದ ಗಾಂಧಿ, ಮೊದಲು ಟ್ರಾನ್ಸ್‌ವಾಲ್ ಮತ್ತು ನೆಟಾಲ್‌ಗಳಿಂದ ಅದನ್ನು ಆರಂಭಿಸಲು ನಿಶ್ಚಯಿಸಿದರು. ಇನ್ನೂ ಟಾಲ್‌ಸ್ಟಾಯ್ ಆಶ್ರಮದಲ್ಲಿ ಉಳಿದಿದ್ದ ತಂಬಿ ನಾಯ್ಡೂನ ನೇತೃತ್ವದ ಕೆಲವು ತಮಿಳು-ತೆಲುಗು ಕುಟುಂಬಗಳು, ಅದರಲ್ಲೂ ಅವುಗಳ ಮಹಿಳೆಯರು ಗಾಂಧಿಯ ಕರೆಗಾಗಿ ಕಾಯುತ್ತಿದ್ದರು. ಅವರಲ್ಲಿ ಕೆಲವರು ಈ ಹಿಂದೆಯೇ, ತಮ್ಮ ಕುಟುಂಬಗಳ ಗಂಡಸರು ಸೆರೆಮನೆ ಸೇರಿದ್ದಾಗ ತಾವೂ ಸತ್ಯಾಗ್ರಹ ಮಾಡಿ ಸೆರೆಮನೆಯಲ್ಲಿ ತಮ್ಮ ಗಂಡಂದಿರನ್ನು ಕೂಡಿಕೊಳ್ಳಲು ತಹತಹಿಸಿದ್ದರು. ಆದರೆ ಗಾಂಧಿ ಅದಕ್ಕಿನ್ನೂ ಕಾಲ ಕೂಡಿ ಬಂದಿಲ್ಲವೆಂದು ಅವರನ್ನು ಸಮಾಧಾನಗೊಳಿಸಿ ಸುಮ್ಮನಿರಿಸಿದ್ದರು. ಏಕೆಂದರೆ, ಇಂಗ್ಲೆಂಡ್ ಮತ್ತು ದ.ಆಫ್ರಿಕಾಗಳಲ್ಲಿನ ಮಹಿಳೆಯರಲ್ಲಿನ ಸ್ವತಂತ್ರ ಪ್ರವೃತ್ತಿಯನ್ನು ಗಾಂಧಿ ನೋಡಿ ಮೆಚ್ಚಿದ್ದರಾದರೂ ಮತ್ತು ಪೊಲಾಕ್‌ನ ಪತ್ನಿ ಮಿಲಿ ಪೊಲಾಕ್‌ಳ ಸ್ತ್ರೀವಾದಿ ಕಿಚಾಯಿಸುವಿಕೆಗಳ ಹೊರತಾಗಿಯೂ ಭಾರತೀಯ ಸ್ತ್ರೀಯರನ್ನು ಮನೆಯ ಹೊರಗಿನ ವ್ಯವಹಾರಗಳಲ್ಲಿ ಭಾಗವಹಿಸುವಂತೆ ಮಾಡುವ ಸಾಹಸವನ್ನು ಆವರೆಗೆ ಯಾರೂ ಮಾಡಿರಲಿಲ್ಲವಾದ್ದರಿಂದ ಅವರು ಕಾಲ ಪಕ್ವವಾಗಲೆಂದು ಕಾಯುತ್ತಿದ್ದರು. ಈಗ ಅದು ಸಂಭವಿಸಿತ್ತು.

೧೯೧೩ರ ಸೆಪ್ಟೆಂಬರ್ ಹದಿನೈದರಂದು ಟಾಲ್‌ಸ್ಟಾಯ್ ಆಶ್ರಮದಿಂದ ಹನ್ನೊಂದು ಜನ ಮಹಿಳೆಯರ ತಂಡ ಮತ್ತು ಫೀನಿಕ್ಸ್ ಆಶ್ರಮದಿಂದ ಹದಿನಾರು ಜನ ಪುರುಷರು ಮತ್ತು ಮಹಿಳೆಯರೂ ಇದ್ದ ತಂಡ ಕ್ರಮವಾಗಿ ಟ್ರಾನ್ಸ್‌ವಾಲ್ ಗಡಿ ದಾಟಿ ನೆಟಾಲ್ ಪ್ರವೇಶಿಸಲು ಮತ್ತು ಇದಕ್ಕೆ ವಿರುದ್ಧ ದಿಕ್ಕಿನಲ್ಲಿ ನೆಟಾಲ್ ಗಡಿ ದಾಟಿ ಟ್ರಾನ್ಸ್‌ವಾಲ್ ಪ್ರವೇಶಿಸಲು ಹೊರಟವು. ಹೊಸ ಶಾಸನದ ಪ್ರಕಾರ ಏಷ್ಯನ್ನರು ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ರಹದಾರಿ ಪತ್ರವಿಲ್ಲದೆ ಪ್ರವೇಶಿಸುವುದು

ಅಪರಾಧವಾಗಿತ್ತು. ಫೀನಿಕ್ಸ್‌ನಿಂದ ಹೊರಟ ಹದಿನಾರು ಸದಸ್ಯರ ತಂಡ ಗಾಂಧಿ ಗೋಖಲೆಯವರಿಗೆ ಬರೆದ ಪತ್ರದಲ್ಲಿ ಕೊನೆವರೆಗೂ ತಮ್ಮ ಹೋರಾಟದಲ್ಲಿ ಜೊತೆಗಿರುವವರು ಎಂದು ಹೆಸರಿಸಿದ್ದವರಿಂದಲೇ ಕೂಡಿತ್ತು. ಅವರಲ್ಲಿ ಅವರ ಪತ್ನಿ, ಒಬ್ಬ ಮಗ ರಾಮದಾಸ್, ಜೇಕಿ, ಬಂಧು ಛಗನ್‌ಲಾಲ್ ಮತ್ತು ಆತನ ಹಾಗೂ ಮಗನ್‌ಲಾಲ್‌ರ ಪತ್ನಿಯರಾದ ಕಾಶಿ ಮತ್ತು ಸಂತೋಕ್, ಪಾರ್ಸಿ ರುಸ್ತುಂಜಿ, ಹರಿಭಾಯಿ ಪಟೇಲ್, ಸಾಲೋಮನ್ ರಾಯಪ್ಪನ್, ಶಿವಪೂಜನ್ ಬದರಿ, ಗೋವಿಂದರಾಜುಲು ಹಾಗೂ ಇನ್ನೂ ಮೂವರು ಸೇರಿದ್ದರು. ಆಲ್ಬರ್ಟ್ ವೆಸ್ಟ್ ಮತ್ತು ಮಗನ್‌ಲಾಲ್ ಆಶ್ರಮದ ಬಾಲಕರ ಉಸ್ತುವಾರಿ ಮತ್ತು 'ಇಂಡಿಯನ್ ಒಪಿನಿಯನ್' ಪತ್ರಿಕೆಯ ಜವಾಬ್ದಾರಿಗಾಗಿ ಅಲ್ಲಿಯೇ ಉಳಿದುಕೊಂಡರು.

ಮಹಿಳೆಯರ ಸುರಕ್ಷತೆಗೆ ಕಲೆನ್‌ಬಾಕ್‌ಗೆ ಸೂಚನೆ

ಫೀನಿಕ್ಸ್‌ನಿಂದ ಹೊರಟ ಸತ್ಯಾಗ್ರಹಿಗಳ ತಂಡ 'ಕಾಫಿರ'ರಿಗೆಂದೇ (ಕೆಳ ವರ್ಗದವರು–ಆಫ್ರಿಕಾದ ಕಪ್ಪು ಜನ) ಸರ್ಕಾರ ಓಡಿಸುತ್ತಿದ್ದ ಮೂರನೇ ದರ್ಜೆ ರೈಲು ಗಾಡಿ ಹತ್ತಿದಾಗ ಗಾಂಧಿ ಮಹಿಳೆಯರ ಸುರಕ್ಷತೆಯ ಬಗ್ಗೆ ಯೋಚಿಸಿ ಆತಂಕಿತರಾಗಿದ್ದರು. ಈ ಮುನ್ನ ಅವರು ಜೊಹಾನ್ಸ್‌ಬರ್ಗ್‌ನಲ್ಲಿದ್ದ ಕಲೆನ್‌ಬಾಕ್‌ಗೆ ಪತ್ರ ಬರೆದು, ತಂಡ ಗಡಿ ದಾಟುವ ಹೊತ್ತಿಗೆ ಆತ ಅಲ್ಲಿ ಹಾಜರಿದ್ದು ಯಾವುದೇ ಅವಘಡ ಆಗದಂತೆ ನೋಡಿಕೊಳ್ಳಬೇಕೆಂದು ಕೋರಿದ್ದರು. ತಂಡದ ಯಾರೂ ತಮ್ಮ ಹೆಸರು ವಿಳಾಸಗಳನ್ನು ಪೊಲೀಸರಿಗೆ ತಿಳಿಸಬಾರದೆಂದೂ, ತಿಳಿಸಿದರೆ ಇವರು ಗಾಂಧಿ ಕಡೆಯವರೆಂದು ತಿಳಿದು ಬಂಧಿಸದೆ ಬಿಟ್ಟು ಸತ್ಯಾಗ್ರಹವನ್ನು ವಿಫಲಗೊಳಿಸುವ ಎಲ್ಲ ಸಾಧ್ಯತೆಗಳಿವೆಯೆಂದೂ ಸೂಚಿಸಲಾಗಿತ್ತು. ನಿರೀಕ್ಷೆಯಂತೆ ಅವರನ್ನೆಲ್ಲ ಗಡಿ ಪಟ್ಟಣ ವೋಲ್ಕ್ಸ್‌ರಸ್ಟ್‌ನಲ್ಲಿ ಬಂಧಿಸಿ ವಿಚಾರಣೆಗೊಳಪಡಿಸಲಾಯಿತು. ಎಲ್ಲರೂ ತಾವು ಸ್ವಯಂಪ್ರೇರಿತ ಅಪರಾಧಿಗಳೆಂದು ಹೇಳಿದ್ದರಿಂದ ಅವರೆಲ್ಲರಿಗೂ ಮೂರು ತಿಂಗಳ ಸಶ್ರಮ ಶಿಕ್ಷೆ ವಿಧಿಸಿ ಮೆರಿಟ್ಸ್‌ಬರ್ಗ್‌ನ ಸೆರೆಮನೆಗೆ ದೂಡಲಾಯಿತು. ಇದು ಪ್ರಾಂತ್ಯದೆಲ್ಲೆಡೆ ಸುದ್ದಿಯಾಗಿ ಭಾರತೀಯ ಸಮುದಾಯದ ಮಧ್ಯೆ ತಲ್ಲಣವನ್ನು ಉಂಟುಮಾಡಿತು.

ಇದೇ ಸಂದರ್ಭದಲ್ಲಿ ಗಾಂಧಿ 'ಇಂಡಿಯನ್ ಒಪಿನಿಯನ್'ನಲ್ಲಿ ಲೇಖನವೊಂದನ್ನು ಬರೆದು ಮೊದಲ ಬಾರಿಗೆ ಬಡ ಕೂಲಿ ಕಾರ್ಮಿಕರ ಸಮಸ್ಯೆಯನ್ನು ಸತ್ಯಾಗ್ರಹದ ಕೇಂದ್ರ ಸ್ಥಳಕ್ಕೆ ತಂದಿದ್ದರು. ಮೂರು ಪೌಂಡುಗಳ ತೆರಿಗೆಯೇ ಈ ಸತ್ಯಾಗ್ರಹದ ಮುಖ್ಯ ಬೇಡಿಕೆಯಾಗಿದ್ದು, ಭಾರತದ ಹೆಮ್ಮೆಯ ನಾಯಕ ಗೋಪಾಲಕೃಷ್ಣ ಗೋಖಲೆಯವರಿಗೆ ಈ ಸಂಬಂಧ ನೀಡಿದ್ದ ವಚನವನ್ನು ಭಂಗಗೊಳಿಸಿ ಸರ್ಕಾರ ಭಾರತದ ಜನತೆಗೆ ಅವಮಾನ ಮಾಡಿದೆ ಎಂದು ಅವರು ವಾದಿಸಿದ್ದರು. ಹಾಗಾಗಿ ಭಾರತದ ಗೌರವವನ್ನೂ, ದ.ಆಫ್ರಿಕಾದಲ್ಲಿನ ಭಾರತೀಯರ ಘನತೆಯನ್ನೂ ಕಾಪಾಡಿಕೊಳ್ಳಲು ಎಲ್ಲ ಊರುಗಳಿಂದ ಭಾರತೀಯರು ಬಂದು ಸತ್ಯಾಗ್ರಹದಲ್ಲಿ ಪಾಲ್ಗೊಂಡು ಬಂಧಿತರಾಗಬೇಕೆಂದು ಗಾಂಧಿ ಆಗ್ರಹಿಸಿದ್ದರು.

ಗಾಂಧಿಯನ್ನು ಉಪಚರಿಸಿದ ರೈಲ್ವೇ ಸಿಬ್ಬಂದಿ

ಸೆಪ್ಟೆಂಬರ್ ೨೫ರ ಬೆಳಿಗ್ಗೆ ಗಾಂಧಿ ಮಗ ಮಣಿಲಾಲನೊಂದಿಗೆ ಡರ್ಬಾನ್‌ನಿಂದ

'ಕಾಫಿರ್' ಮೇಲ್‌ನಲ್ಲಿ ಟ್ರಾನ್ಸ್‌ವಾಲ್‌ಗೆ ಹೊರಟರು. ರೈಲ್ವೇ ಡಬ್ಬಿಯಲ್ಲಿ ಅವರ ಬಗ್ಗೆ ತಿಳಿದಿದ್ದ ಬಿಳಿಯ ಮೇಲ್ವಿಚಾರಣಾ ಸಿಬ್ಬಂದಿ ಅವರನ್ನು ಸುತ್ತುವರೆದು ಅವರಿಗೆ ಶುಭ ಕೋರಿದರು. ರೈಲ್ವೇ ಉಪಾಹಾರ ಗೃಹದ ಸಹಾಯಕಿ ತಾನೇ ಹೋಗಿ ಗಾಂಧಿಗೆ ಉಪಾಹಾರ ತಂದು ಸತ್ಕರಿಸಿದಳು. ಗಾಂಧಿ ಹಣ ಕೊಡಲು ಹೋದಾಗ ತೆಗೆದುಕೊಳ್ಳಲು ನಿರಾಕರಿಸಿದಳು. ಗಡಿಯಲ್ಲಿ ಬಂಧನಕ್ಕೊಳಗಾಗಿ ಸೆರೆಮನೆಯಲ್ಲಿ ಟಾಲ್‌ಸ್ಟಾಯ್ ಆಶ್ರಮದ ತಂಡದ ಜೊತೆ ಸೇರುವುದು ಅವರ ಉದ್ದೇಶವಾಗಿತ್ತು. ಆದರೆ ಗಡಿ ನಿಲ್ದಾಣದಲ್ಲಿ ಪೊಲೀಸರು ಬೇಕೆಂದೇ ಗಾಂಧಿಯ ಡಬ್ಬಿಯತ್ತ ಸುಳಿಯಲೂ ಇಲ್ಲ, ಬಂಧಿಸಲಿಲ್ಲ. ಹೀಗೆ ಸೀದಾ ಜೊಹಾನ್ಸ್‌ಬರ್ಗ್ ತಲುಪಿದ ಗಾಂಧಿ, ಮಾರನೆಯ ದಿನ ಅಲ್ಲಿ ಸಭೆಗಳನ್ನು ಸಂಘಟಿಸಿ ಸತ್ಯಾಗ್ರಹದಲ್ಲಿ ಭಾಗವಹಿಸುವಂತೆ ಭಾರತೀಯರಿಗೆ ಕರೆ ಕೊಟ್ಟರು. ನಂತರ ಮಗ ಮಣಿಲಾಲನ ತಲೆಯ ಮೇಲೆ ಹಣ್ಣಿನ ಬುಟ್ಟಿ ಹೊರಿಸಿ ಬೀದಿಗಳಲ್ಲಿ ಮಾರಲು ಕಳಿಸಿದರು. ನೋಂದಣಿ ಪತ್ರವಿಲ್ಲದ ಕಾರಣ ಆತನೂ ಬಂಧಿತನಾಗಿ ಅಕ್ಟೋಬರ್ ಒಂದರಂದು ಸೆರೆಮನೆ ಸೇರಿದನು.

ಬರಲೊಲ್ಲದ ಹರಿಲಾಲ–ಮುಂದೆ ಬಂದ ಮುಸ್ಲಿಂ ಮಹಿಳಾ ಸತ್ಯಾಗ್ರಹಿಗಳು

ಈ ಸಂದರ್ಭದಲ್ಲಿ ಗಾಂಧಿ ತಮ್ಮ ಹಿರಿಮಗ ಹರಿಲಾಲನಿಗೆ ತನ್ನ ಪತ್ನಿಯೊಂದಿಗೆ ಬಂದು–ಬಹುಶಃ ಕಸ್ತೂರಬಾಗೆ ನೈತಿಕ ಬೆಂಬಲವಾಗಿ–ಸತ್ಯಾಗ್ರಹದಲ್ಲಿ ಭಾಗವಹಿಸಲು ಪತ್ರ ಬರೆದರು. ಆದರೆ ಆತ ತಾನು ಪುನರಾರಂಭಿಸಿರುವ ಶಿಕ್ಷಣವನ್ನು ಅರ್ಧಕ್ಕೆ ತೊರೆದು ಬರುವುದು ಕಷ್ಟ ಎಂದು ಉತ್ತರ ಬರೆದ. ಆದರೆ ಇದೇ ಸಮಯದಲ್ಲಿ ಗಾಂಧಿಯ ಹಳೆಯ ಗೆಳೆಯ ಶೇಖ್ ಮೆಹ್ತಾಬ್‌ನ ಪತ್ನಿ ಫಾತಿಮಾಬಾಯಿ, ತಾಯಿ ಹನೀಫಾಬಾಯಿ ಮತ್ತು ಏಳು ವರ್ಷದ ಮಗ ಮತ್ತು ಮನೆಯಾಳುಗಳೊಂದಿಗೆ ನೆಟಾಲ್ ಗಡಿ ದಾಟಿ ಬಂಧಿತರಾಗಲು ಡರ್ಬಾನ್‌ನಿಂದ ಹೊರಟರು. ಗಡಿಯಲ್ಲಿ ರಹದಾರಿ ಪತ್ರಕ್ಕೆ ಬೆರಳಚ್ಚು ನೀಡಲು ನಿರಾಕರಿಸಿದ ಕುಟುಂಬದ ತಾಯಿ ಮತ್ತು ಮಗಳನ್ನು ಪೊಲೀಸರು ಬಂಧಿಸಿ ಮಗುವನ್ನು ಆಳುಗಳೊಂದಿಗೆ ಡರ್ಬಾನ್‌ಗೆ ವಾಪಸ್ ಕಳಿಸಿದರು. ಅಕ್ಟೋಬರ್ ೧೩ರಂದು ತಾಯಿ–ಮಗಳ ವಿಚಾರಣೆ ನಡೆದು ಇಬ್ಬರಿಗೂ ಮೂರು ತಿಂಗಳ ಸೆರೆಮನೆ ವಾಸದ ಶಿಕ್ಷೆ ವಿಧಿಸಲಾಯಿತು. ಹೀಗೆ ಫಾತಿಮಾ ಬಾಯಿ ಮತ್ತು ಆಕೆಯ ತಾಯಿ ಮೊದಲ ಮುಸ್ಲಿಂ ಮಹಿಳಾ ಸತ್ಯಾಗ್ರಹಿಗಳೆನಿಸಿಕೊಂಡರು. ಇದನ್ನು ತಿಳಿದ ಗಾಂಧಿ, ಅವರ ಬಗ್ಗೆ ಹೆಮ್ಮೆ ಪಟ್ಟು ಅವರನ್ನು ಅಭಿನಂದಿಸಿದರು.

ಮಹಿಳಾ ಸತ್ಯಾಗ್ರಹಿಗಳ ಕರಾಮತ್ತು : ಗಣಿ ಕಾರ್ಮಿಕರ ಮುಷ್ಕರ

ಈ ಮಧ್ಯೆ ನೆಟಾಲ್ ಗಡಿಯ ಗಣಿ ಪಟ್ಟಣಗಳಲ್ಲಿ ಮುಷ್ಕರ ಶುರುವಾಗಿ ಕಾರ್ಮಿಕರು ಗಾಂಧಿಯ ಮಾರ್ಗದರ್ಶನವನ್ನು ಎದುರು ನೋಡುತ್ತಿದ್ದರು. ಇದು ಗಾಂಧಿ ಕೋರಿಕೆಯ ಮೇರೆಗೆ ಟ್ರಾನ್ಸ್‌ವಾಲ್‌ನ ಟಾಲ್‌ಸ್ಟಾಯ್ ಆಶ್ರಮದಿಂದ ಹೊರಟಿದ್ದ ದ್ರಾವಿಡ ಮಹಿಳಾ ತಂಡದ ಕರಾಮತ್ತಾಗಿತ್ತು. ಅದರಲ್ಲಿ ಬರೀ ಮಹಿಳೆಯರೇ ಇದ್ದುದರಿಂದಲೋ ಏನೋ ನೆಟಾಲ್ ಗಡಿಯಲ್ಲಿ ಅವರನ್ನು ಬಂಧಿಸದೆ ಹಾಗೇ ಬಿಟ್ಟುಬಿಟ್ಟಿದ್ದರು. ಅವರು ಬಂಧನಕ್ಕಾಗಿ ಮತ್ತೆ ನೆಟಾಲ್‌ನಿಂದ ಟ್ರಾನ್ಸ್‌ವಾಲ್ ಗಡಿ ದಾಟಿದರೂ ಪೊಲೀಸರು ಅವರನ್ನು ಬಂಧಿಸದೆ ನೆಟಾಲ್ ಗಡಿಯಾಚೆಗೆ ಕೊಂಡೊಯ್ದು ಬಿಟ್ಟು ಬಂದರು. ಈ ವಿಫಲ ಪ್ರಯತ್ನಗಳ ನಂತರ ಆ ತಂಡ ಮೊದಲೇ ಗಾಂಧಿಯಿಂದ

ಸೂಚನೆ ಪಡೆದಿದ್ದಂತೆ ನೆಟಾಲ್‌ನಲ್ಲಿದ್ದ ಗಣಿ ಪಟ್ಟಣ ನ್ಯೂ ಕ್ಯಾಸಲ್‌ಗೆ ತೆರಳಿ, ಹೆಚ್ಚಾಗಿ ತಮಿಳು–ತೆಲುಗರೇ ಇದ್ದ ಗಣಿ ಕಾರ್ಮಿಕರಿಗೆ ಸತ್ಯಾಗ್ರಹದ ಸಂದೇಶ ಮುಟ್ಟಿಸಿದರು. ಗಾಂಧಿ ಸತ್ಯಾಗ್ರಹದ ಉದ್ದೇಶಗಳನ್ನು ವಿವರಿಸಿದರು. ತಮಿಳು ತೆಲುಗರೇ ಬಹುಸಂಖ್ಯೆಯಲ್ಲಿ ಗಣಿ ಕಾರ್ಮಿಕರಾಗಿದ್ದ ಭಾರತೀಯ ಮೂಲದ 'ಕೂಲಿ'ಗಳು ಅಕ್ಟೋಬರ್ ೧೬ರಿಂದ ಕೆಲಸ ನಿಲ್ಲಿಸಿ ಮುಷ್ಕರ ಘೋಷಿಸಿದರು. ಇದರಿಂದ ಚಿಂತಿತರಾದ ಅಧಿಕಾರಿಗಳು ಶ್ರೀಮತಿ ತಂಬಿ ನಾಯ್ಡು ಮತ್ತು ಅವರ ಸಂಗಾತಿಗಳನ್ನು ಬಂಧಿಸಿ ಮೂರು ತಿಂಗಳ ಸಶ್ರಮ ಶಿಕ್ಷೆಗೆ ಒಳಗಾಗಿಸಿ ಮೆರಿಟ್ಸ್‌ಬರ್ಗ್‌ನ ಸೆರೆಮನೆಗೆ ಅಟ್ಟಿದರು.

ಸತ್ಯಾಗ್ರಹದ ವೀರ ಮಹಿಳೆಯರು

ಈ ದ್ರಾವಿಡ ಮಹಿಳೆಯರ ಬಗ್ಗೆ ತಮ್ಮ 'ದ.ಆಫ್ರಿಕಾದಲ್ಲಿ ಸತ್ಯಾಗ್ರಹ' ಎಂಬ ನೆನಪುಗಳ ಪುಸ್ತಕದಲ್ಲಿ ಗಾಂಧಿ ಭಾವುಕವಾಗಿ ಬರೆಯುತ್ತಾರೆ. ಕಸ್ತೂರಬಾ ಸೇರಿದಂತೆ ಈ ಮಹಿಳೆಯರನ್ನೆಲ್ಲ ಒರಟು ಆಫ್ರಿಕನ್ ಮಹಿಳಾ ಅಪರಾಧಿಗಳ ಜೊತೆ ಕೂಡಿಡಲಾಗಿತ್ತು. ಅಲ್ಲಿ ಕಡ್ಡಾಯ ದೈಹಿಕ ದುಡಿಮೆಯ ಜೊತೆಗೆ ಕೊಡುವ ಆಹಾರ ಯಾರಿಗೂ ಸೇರುತ್ತಿರಲಿಲ್ಲ. ಕೆಲವರು ಒಂದು ಊಟಕ್ಕೇ ಸೀಮಿತರಾದರೆ ಕೆಲವರು ತೀವ್ರ ಅಸ್ವಸ್ಥತೆಗೆ ಒಳಗಾದರು. ವಳ್ಳಿಯಮ್ಮ ಎಂಬ ಹದಿನಾರು ವರ್ಷದ ಯುವತಿ ಸೆರೆಮನೆಯಿಂದ ಬಿಡುಗಡೆಯಾದ ಕೆಲವೇ ದಿನಗಳಲ್ಲಿ ಸಾವನ್ನಪ್ಪಿದಳು. ಮೃತ್ಯುಶಯ್ಯೆಯಲ್ಲಿದ್ದ ಆ ಹುಡುಗಿಯನ್ನು ಕಾಣಲು ಹೋದ ಗಾಂಧಿ ಆಕೆಯನ್ನು 'ನಿನಗೆ ಸೆರೆಮನೆವಾಸ ಕಷ್ಟವಾಯಿತೇ?' ಎಂದು ಕೇಳಿದಾಗ ಆಕೆ 'ಕಷ್ಟವೇ? ಈಗಲೂ ಬಂಧಿಸಿ ಅಲ್ಲಿಗೆ ಒಯ್ಯುವುದಾದರೆ ಸಂತೋಷದಿಂದಲೇ ಹೋಗುವೆ' ಎಂದು ನೀಡಿದ ಉತ್ತರ ಕೇಳಿ ಗಾಂಧಿ ದಂಗಾಗಿ ಹೋದರು. ಈ ಘಟನೆಯನ್ನು ದಾಖಲಿಸುತ್ತಾ ಗಾಂಧಿ 'ಈ ವೀರ ಪುತ್ರಿಯ ಸ್ಮರಣಾರ್ಥ ಭವನವೊಂದನ್ನು ಕಟ್ಟುವ ಭಾರತೀಯ ಸಮುದಾಯದ ತೀರ್ಮಾನ ಇನ್ನೂ ಸಾಕಾರವಾಗದಿರುವ' ಬಗ್ಗೆ ವಿಷಾದ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಅವರು ಮುಂದುವರೆದು ಹೀಗೆ ಬರೆಯುತ್ತಾರೆ: 'ಕಲ್ಲು ಮಣ್ಣಿನ ಭವನ ಏಳಲಿ ಬಿಡಲಿ, ವಳ್ಳಿಯಮ್ಮನ ತ್ಯಾಗವಂತೂ ಚಿರಸ್ಥಾಯಿ. ಆಕೆ ತನ್ನ ತ್ಯಾಗಮಂದಿರವನ್ನು ತಾನೇ ತನ್ನ ಕೈಗಳಿಂದಲೇ ನಿರ್ಮಿಸಿದಳು. ಈಗಲೂ ಅನೇಕರ ಹೃದಯ ಮಂದಿರಗಳಲ್ಲಿ ಆಕೆಯ ಜ್ಯೋತಿಯ ಪ್ರತಿಮೆ ಮೂರ್ತೀಭವಿಸಿದೆ. ಭಾರತ ಉಳಿದಿರುವವರೆಗೆ, ದ.ಆಫ್ರಿಕಾದ ಇತಿಹಾಸದಲ್ಲಿ ವಳ್ಳಿಯಮ್ಮನ ಹೆಸರು ಶಾಶ್ವತವಾಗಿರುತ್ತದೆ. ಅಕ್ಷರ ಜ್ಞಾನವಿಲ್ಲದ, ಪತ್ರಿಕೆ ಓದದ, ಕಾನೂನುಗಳ ತೊಡಕು ಅರಿಯದ, ದೇಶದ ಕಲ್ಪನೆಯೇ ಇಲ್ಲದೆ ಕೇವಲ ಸಮೂಹದ ನಂಬಿಕೆಯಿಂದ ಸ್ಫುರಿಸಿದ ದೇಶಪ್ರೇಮದ ಈ ಸೋದರಿಯರ ತ್ಯಾಗ ಬಹು ದೊಡ್ಡದು. ಅಂಥವರು ಸೆರೆಮನೆ ಸೇರಿದ್ದು ಮತ್ತೇನೂ ಆಗಿರದೆ, ಅವರ ಮಾನವತ್ವದ ಶ್ರೇಷ್ಠತೆಯ ಪ್ರತೀಕ ಹೇಗೋ ಹಾಗೆಯೇ ಅವರ ಹೃದಯಾಂತರಾಳದ ಶೋಕದ ಸ್ವರಪ್ರತೀಕವೂ ಹೌದು, ಆರ್ತ ಮೊರೆ ಕೂಡ'.

■

೩೫

ಮಹಾಯಾತ್ರೆಯ ಆರಂಭ

ನ್ಯೂ ಕ್ಯಾಸಲ್‌ನಲ್ಲಿ ಆರಂಭವಾದ ಗಣಿ ಕಾರ್ಮಿಕರ ಮುಷ್ಕರ ಡರ್ಬಾನ್ ಸೇರಿದಂತೆ ನೆಟಾಲ್‌ನ ಇತರ ಗಣಿ ಪಟ್ಟಣಗಳಿಗೂ, ತೋಟಗಳ ಕೂಲಿ ಕಾರ್ಮಿಕರಿಗೂ ಹರಡಿತು. ಗಾಂಧಿ, ಅಕ್ಟೋಬರ್ ಎರಡು ಮತ್ತು ಮೂರನೇ ವಾರದಲ್ಲಿ ಡರ್ಬಾನ್ ನೆರೆಹೊರೆ ಮತ್ತು ನೆಟಾಲ್‌ನ ಗಡಿ ಪ್ರದೇಶಗಳಲ್ಲಿನ ಗಣಿ ಮತ್ತು ತೋಟ ಕಾರ್ಮಿಕರಿದ್ದ ನ್ಯೂ ಕ್ಯಾಸಲ್, ಹಟ್ಟಿಂಗ್, ಸಪ್ರ್ಯೂಟ್ ಮುಂತಾದ ಊರುಗಳಿಗೆ ಭೇಟಿ ನೀಡಿ ಕಾರ್ಮಿಕರೊಂದಿಗೆ ಸಭೆ ನಡೆಸಿದರು. 'ವಂದೇ ಮಾತರಂ' ಮತ್ತು 'ರಾಮಚಂದ್ರ ಕೀ ಜೈ' ಎಂಬ ಘೋಷಣೆಗಳು ಗಣಿ ಮತ್ತು ತೋಟಗಳಲ್ಲಿ ಮೊಳಗತೊಡಗಿದಾಗ ಗಣಿ ಮತ್ತು ತೋಟಗಳ ಮಾಲೀಕ ವರ್ಗ ಗಾಬರಿಯಾಯಿತು. ಅವರು ಬೆದರಿಕೆ, ಬಲಪ್ರಯೋಗ, ಆಮಿಷಗಳ ಮೂಲಕ ಈ ಕಾರ್ಮಿಕರ ಮೇಲೆ ಒತ್ತಡ ಹೇರಿ ಅವರು ಕೆಲಸಕ್ಕೆ ಹಿಂದಿರುಗುವಂತೆ ಮಾಡಿ ಮುಷ್ಕರವನ್ನು ಮುರಿಯಲು ಯತ್ನಿಸಿದರು. ಅವರ ವಸತಿ ಗೃಹಗಳಿಗೆ ನೀರು, ವಿದ್ಯುತ್ ಪೂರೈಕೆ ನಿಲ್ಲಿಸಲಾಯಿತು. ಮನೆ ಸಾಮಾನುಗಳನ್ನು ಬೀದಿಗೆ ಎಸೆದು ಅವರನ್ನು ಮನೆಗಳಿಂದ ಹೊರಹಾಕುವ ಪ್ರಯತ್ನಗಳೂ ನಡೆದವು. ಇದನ್ನು ಕೇಳಿದ ಗಾಂಧಿ ಕಾರ್ಮಿಕರಿಗೆ ನ್ಯೂ ಕ್ಯಾಸಲ್ ಮತ್ತು ಡಂಡೀ ಪಟ್ಟಣಗಳಿಗೆ ಬಂದು ಸೇರಲು ಸೂಚಿಸಿದರು.

ಗಾಂಧಿಗೆ ಆಶ್ರಯ ನೀಡಿದ ಕೂಲಿ ಕಾರ್ಮಿಕ ವಂಶಸ್ಥ

ಆ ಪ್ರದೇಶಗಳಲ್ಲಿದ್ದ ಅನುಕೂಲಸ್ಥ ಭಾರತೀಯ ವ್ಯಾಪಾರಿಗಳು ಕಲ್ಲಿದ್ದಲು ಗಣಿಗಳ ಮಾಲೀಕರೊಂದಿಗೆ ವ್ಯಾಪಾರಿ ಸಂಬಂಧಗಳನ್ನು ಹೊಂದಿದ್ದರಿಂದಲೂ ಮತ್ತು ಪ್ರಭುತ್ವದ ಕಿರುಕುಳದ ಭಯದಿಂದಲೂ ಗಾಂಧಿಗೆ ನೆರವಾಗಲು, ಅವರಿಗೆ ಆಶ್ರಯ ನೀಡಲು ಹಿಂಜರಿದರು. ನ್ಯೂ ಕ್ಯಾಸಲ್‌ನಲ್ಲಿ ಸ್ವಲ್ಪ ದೊಡ್ಡ ಮನೆಯನ್ನೇ ಹೊಂದಿದ್ದ ಭಾರತೀಯ ಕೂಲಿಕಾರ್ಮಿಕರ ವಂಶಸ್ಥನಾಗಿ ಈಗಲೂ ಮೂರು ಪೌಂಡು ತೆರಿಗೆ ಕಟ್ಟುತ್ತಿದ್ದ ಲಾಝರಸ್ ಎಂಬ ತಮಿಳು ಭಾಷಿಕ ಗಾಂಧಿಗೆ ಆಶ್ರಯ ನೀಡಲು ಮುಂದೆ ಬಂದ. ಗಣಿ ಕಾರ್ಮಿಕರನ್ನು ಮುಷ್ಕರಕ್ಕೆ ಪ್ರಚೋದಿಸಿದ ದ್ರಾವಿಡ ಮಹಿಳೆಯರಿಗೂ ಆಶ್ರಯ ನೀಡಿದ್ದುದೂ ಈತನೇ.

ಲಾಝರಸ್‌ರ ತೋಟದ ಮನೆಯಲ್ಲಿ ಗಾಂಧಿ ತಂಗಿ ಸತ್ಯಾಗ್ರಹದ ಸ್ವರೂಪದ ಆಯೋಜನೆಯಲ್ಲಿ ತೊಡಗಿದರು. ಅವರು ಎಲ್ಲ ಕಾರ್ಮಿಕರಿಗೂ ತಮ್ಮ ಮನೆ-ಮಠ ಬಿಟ್ಟು ಹೆಂಡತಿ ಮಕ್ಕಳೊಂದಿಗೆ ಕನಿಷ್ಠ ಬಟ್ಟೆಬರೆ ಮತ್ತು ಮಲಗಲು ಅಗತ್ಯವಾದ ಹಾಸು-

ಹೊದಿಕೆಗಳೊಂದಿಗೆ ನ್ಯೂ ಕ್ಯಾಸಲ್‌ಗೆ ಬಂದು ಸೇರಿಕೊಳ್ಳಲು ಕರೆ ಕೊಟ್ಟರು. ಕೂಡಲೇ ವಿವಿಧ ಊರುಗಳ ತೋಟಗಳ ಕೂಲಿಗಳು ಮತ್ತು ಗಣಿ ಕಾರ್ಮಿಕರು ಪ್ರವಾಹದೋಪಾದಿಯಲ್ಲಿ ಹರಿದು ಬರಲಾರಂಭಿಸಿದರು. ಅವರೆಲ್ಲ ತಮ್ಮ ಮಾಲೀಕರಿಂದ ತಮಗಾಗುತ್ತಿರುವ ತೊಂದರೆಗಳ ನಿವೇದನೆಯ ಜೊತೆಗೇ ಸತ್ಯಾಗ್ರಹದಲ್ಲಿ ಭಾಗವಹಿಸಲು ತಮ್ಮ ದೃಢ ನಿರ್ಧಾರವನ್ನೂ ತಿಳಿಸಿದರು. ಸೈಯದ್ ಇಬ್ರಾಹಿಂ ಎಂಬ ಪಠಾಣ ತನ್ನ ಮಾಲೀಕ ಹೊಡೆದಿದ್ದರಿಂದಾಗಿ ಮೈಮೇಲೆ ಎದ್ದಿದ್ದ ಬಾಸುಂಡೆಗಳನ್ನು ತೋರಿಸುತ್ತಾ ತಾನು ಪಠಾಣನಾಗಿ ಬರೀ ಹೊಡೆಸಿಕೊಂಡು ರೂಢಿಯಿಲ್ಲದಿದ್ದರೂ ಸತ್ಯಾಗ್ರಹಿಯಾಗಿ ತಿರುಗಿ ಹೊಡೆಯದೆ ಸಹಿಸಿರುವುದಾಗಿ ಹೇಳಿದ. ಅವನನ್ನು ಮೆಚ್ಚಿಕೊಂಡ ಗಾಂಧಿ, ಸತ್ಯಾಗ್ರಹ ಸೇರಿಕೊಳ್ಳಬಯಸುವವರು ಇಂತಹ ಸೈರಣೆಯ ಶಕ್ತಿ ಇರುವವರು ಮಾತ್ರ ಮುಂದೆ ಬರಬೇಕೆಂದು ಮುನ್ನೆಚ್ಚರಿಕೆ ನೀಡಿದರು. ಏಕೆಂದರೆ ಸತ್ಯಾಗ್ರಹ ಯಾವಾಗ ಮುಗಿಯುವುದೆಂದು ಹೇಳಲಾಗದು ಮತ್ತು ಸೆರೆಮನೆವಾಸ ಎದುರಾಗಬಹುದು. ಊಟ, ತಿಂಡಿಗಳ ಮತ್ತು ವಸತಿಯ ವ್ಯವಸ್ಥೆ ತೃಪ್ತಿದಾಯಕವಾಗಿಲ್ಲದಿರಬಹುದು. ಇದನ್ನೆಲ್ಲ ಎದುರಿಸಲು ಸಿದ್ಧವಿಲ್ಲದವರು ಕೆಲಸಗಳಿಗೆ ಹಿಂದಿರುಗಬೇಕೆಂದೂ, ಅಂಥವರಿಗೆ ಯಾರೂ ತೊಂದರೆ ಕೊಡಬಾರದೆಂದೂ ಮನವಿ ಮಾಡಿದರು. ಆದರೆ ಯಾರೊಬ್ಬರೂ ತೋಟ ಅಥವಾ ಗಣಿಗಳಿಗೆ ವಾಪಸಾಗಲು ಸಿದ್ಧರಿರಲಿಲ್ಲ.

ಆದರೆ ಒಂದೇ ಸಮನೆ ನ್ಯೂ ಕ್ಯಾಸಲ್ ಮತ್ತು ಪಕ್ಕದ ಡಂಡೀ ಊರುಗಳಿಗೆ ಬಂದು ಸೇರುತ್ತಿದ್ದ ಕೂಲಿ–ಕಾರ್ಮಿಕರ ಸಂಖ್ಯೆ, ಆ ಊರುಗಳ ಜನಸಂಖ್ಯೆಯ ಎರಡು–ಮೂರು ಪಟ್ಟು ಹೆಚ್ಚಾಗತೊಡಗಿದಾಗ ಅಲ್ಲಿನ ಯೂರೋಪಿಯನ್ನರು ಪ್ಲೇಗ್ ಮುಂತಾದ ಕಾಯಿಲೆಗಳು ಹರಡುವ ಭೀತಿಯಿಂದ ತಮ್ಮ ಅಸಮಾಧಾನ ವ್ಯಕ್ತಪಡಿಸತೊಡಗಿದರು. ಆ ಭೀತಿ ಗಾಂಧಿಗೂ ನಿಜವೆನ್ನಿಸಿತು. ಜೊತೆಗೆ ಮಾಲೀಕರ ಕಡೆಯ ಮೇಸ್ತ್ರಿಗಳೂ ಆ ಊರಿಗೆ ಬಂದು ಮುಷ್ಕರನಿರತ ಕಾರ್ಮಿಕರಲ್ಲಿ ಅನೈಕ್ಯತೆಯನ್ನು ಉಂಟುಮಾಡುವ ಪ್ರಯತ್ನಗಳನ್ನು ಮಾಡತೊಡಗಿದ್ದರು. ಇದೆಲ್ಲದಕ್ಕಿಂತ ಮುಖ್ಯವಾಗಿ, ಕೆಲವು ಭಾರತೀಯ ವ್ಯಾಪಾರಿಗಳು ಪರೋಕ್ಷವಾಗಿ ನೀಡಿದ ನೆರವಿನ ಹೊರತಾಗಿಯೂ ಆ ಸಣ್ಣ ಊರುಗಳಲ್ಲಿ ದಿನಗಟ್ಟಲೆ ಸಾವಿರಾರು ಜನರಿಗೆ ಊಟ–ವಸತಿ ಒದಗಿಸಲು ಅಸಾಧ್ಯವಾಯಿತು. ಲಾಜ಼ರಸ್ ಕುಟುಂಬದ ಮೇಲೆ ವಿಪರೀತ ಒತ್ತಡ ಬೀಳಲಾರಂಭಿಸಿತು. ಇವೆಲ್ಲದರ ಜೊತೆಗೆ ಗಾಂಧಿಯವರಲ್ಲಿ ಇನ್ನೊಂದು ಆತಂಕವೂ ಆರಂಭವಾಗಿತ್ತು. ಇಡೀ ಕಾರ್ಮಿಕ ಸಮೂಹ ಪರಸ್ಪರ ಪರಿಚಯವಿಲ್ಲದ ವಿವಿಧ ಗುಣಲಕ್ಷಣಗಳ ಸಮೂಹವಾಗಿದ್ದು ಅದರಲ್ಲಿ ಅನೇಕರಿಗೆ ಖೂನಿ, ಕಳ್ಳತನ, ಅತ್ಯಾಚಾರಗಳ ಹಿನ್ನೆಲೆ ಇರುವ ಸುದ್ದಿಯೂ ಗಾಂಧಿಗೆ ತಲುಪಿತ್ತು. ಹಾಗಾಗಿ ಅವರು ದುಷ್ಕೃತ್ಯಗಳಲ್ಲಿ ತೊಡಗದಂತೆ ಒಂದೋ ಎರಡೋ ಪ್ರವಚನಗಳ ಮೂಲಕ ಅವರನ್ನು ಪರಿವರ್ತಿಸಲು ಅಥವಾ ಅವರ ಮೇಲೆ ಒಟ್ಟಾರೆ ನಿಗಾ ಇಡಲು ಅಸಾಧ್ಯವೆನಿಸತೊಡಗಿತ್ತು.

ಟಾಲ್‌ಸ್ಟಾಯ್ ಆಶ್ರಮಕ್ಕೆ ಕಾರ್ಮಿಕರ ಜಾಥಾ

ಇದನ್ನೆಲ್ಲ ಪರಿಗಣಿಸಿ ಗಾಂಧಿ, ಪೊಲಾಕ್, ಕಲೆನ್‌ಬಾಕ್ ಸೇರಿದಂತೆ ತಮ್ಮ ಸಹ

ಸತ್ಯಾಗ್ರಹಿ ನಾಯಕರ ಜೊತೆ ಸಮಾಲೋಚಿಸಿ, ಇಡೀ ಕಾರ್ಮಿಕ ಸಮೂಹವನ್ನು ಟ್ರಾನ್ಸ್‌ವಾಲ್‌ನ ಟಾಲ್‌ಸ್ಟಾಯ್ ಆಶ್ರಮಕ್ಕೆ ಕರೆದೊಯ್ಯುವ ತೀರ್ಮಾನ ಮಾಡಿದರು. ಅಲ್ಲಿನ ಸಾವಿರಾರು ಎಕರೆ ಪ್ರದೇಶದಲ್ಲಿ ಇವರನ್ನೆಲ್ಲ ನೆಲೆಗೊಳಿಸಿ ಸತ್ಯಾಗ್ರಹ ಮತ್ತು ದುಡಿಮೆಗಳಿಗೆ ಹಚ್ಚಬಹುದೆಂದು ಅವರು ಯೋಚಿಸಿದರು. ಅದು ಸುಮಾರು ೫೦ ಕಿಮೀ. ದೂರದಲ್ಲಿದ್ದುದರಿಂದ ಅವರಿಗೆಲ್ಲ ರೈಲು ಪ್ರಯಾಣದ ಖರ್ಚನ್ನು ಭರಿಸಲು ಸಾಧ್ಯವಾಗದು ಮತ್ತು ಎಲ್ಲರೂ ರೈಲಿನಲ್ಲಿ ಹೊರಟರೆ ಅವರ ನೈತಿಕ ಸ್ಥೈರ್ಯದ ಪರೀಕ್ಷೆ ಆಗುವುದಿಲ್ಲವೆಂದೂ ಭಾವಿಸಿದ ಗಾಂಧಿ ಅವರನ್ನೆಲ್ಲ ತಮಗೆ ಪ್ರಿಯವಾದ ನಡಿಗೆಯ ಮೂಲಕ ಜಾಥಾ ಹೊರಡಿಸಲು ತೀರ್ಮಾನಿಸಿದರು. ಈ ಬಗ್ಗೆ ಅವರು ಕಾರ್ಮಿಕರೊಂದಿಗೂ ಮಾತಾಡಿದರು. ದುರ್ಬಲರೂ, ಅಸ್ವಸ್ಥರೂ ರೈಲಿನಲ್ಲಿ ಹೊರಡಬಹುದೆಂದೂ ಸೂಚಿಸಿದರು. ಕೆಲವರ ಹಿಂಜರಿಕೆಯನ್ನೂ ಗಮನಿಸಿದ ಅವರು ಈಗಲೂ ಇಷ್ಟಪಟ್ಟವರು ಯಾವುದೇ ಸಂಕೋಚವಿಲ್ಲದೆ ಗಣಿ–ತೋಟಗಳಿಗೆ ಹಿಂದಿರುಗಬಹುದೆಂದು ಹೇಳಿದರು. ನಂತರ ಜಾಥಾಗೆ ಸಿದ್ಧತೆಯಲ್ಲಿ ತೊಡಗಿದರು. ದಾರಿಯಲ್ಲಿ ತಂಗುವ ಜಾಗಗಳು ಮತ್ತು ಅಗತ್ಯ ಆಹಾರ, ವೈದ್ಯೋಪಚಾರಗಳಿಗಾಗಿ ತಮ್ಮ ಸಂಪರ್ಕಗಳ ಪ್ರಯೋಜನ ಪಡೆಯಲು ನಿರ್ಧರಿಸಿದರು.

ಈ ಮಧ್ಯೆ ಗಣಿ ಮತ್ತು ತೋಟಗಳ ಮಾಲೀಕರು ಗಾಂಧಿಯನ್ನು ಸಂಧಾನಕ್ಕಾಗಿ ಡರ್ಬಾನ್‌ಗೆ ಕರೆದರು. ಯಾವ ಅನ್ಯಾಯದ ಪ್ರತಿಯಾಗಿ, ಕಾರಣಕ್ಕಾಗಿ ಸತ್ಯಾಗ್ರಹ ಹೂಡಲಾಗಿದೆಯೋ ಆ ಅನ್ಯಾಯ ಕೊನೆಗೊಳ್ಳುವ ಯಾವ ಸೂಚನೆ ದೊರೆತರೂ ಅದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸುವುದು ಸತ್ಯಾಗ್ರಹ ಧರ್ಮದ ಸಂಹಿತೆ ಎಂದು ಭಾವಿಸಿದ್ದ ಗಾಂಧಿ, ಆ ಸಂಧಾನದ ಸಭೆಗೂ ಹೋದರು. ಆದರೆ ಆ ಸಭೆಯಲ್ಲಿ ಮಾಲೀಕರಿಂದ ಬೆದರಿಕೆ, ಎಚ್ಚರಿಕೆಗಳ ಹೊರತಾಗಿ ಅಲ್ಲಿ ಏನೂ ಕೇಳಿಬರದಿದ್ದರಿಂದ ಮತ್ತು ಕೂಲಿ ಕಾರ್ಮಿಕರ ಮೇಲಿನ ಮೂರು ಪೌಂಡುಗಳ ತೆರಿಗೆಯ ರದ್ದತಿಗಾಗಿ ಸರ್ಕಾರದ ಮೇಲೆ ಒತ್ತಡ ಹೇರಲು ಅವರು ನಿರಾಕರಿಸಿದ್ದರಿಂದ ಗಾಂಧಿ ಬರಿಗೈಯಲ್ಲಿ ನ್ಯೂ ಕ್ಯಾಸಲ್‌ಗೆ ಹಿಂದಿರುಗಿ ಜಾಥಾದ ವಿವರಗಳನ್ನು ಸಿದ್ಧಪಡಿಸುವುದರಲ್ಲಿ ನಿರತರಾದರು.

ಜಾಥಾದಾರರಿಗೆ ಗಾಂಧಿ ನೀಡಿದ ಸತ್ಯಾಗ್ರಹದ ಸೂಚನೆಗಳು

ಎಂಟು ಹಂತಗಳಲ್ಲಿ ನಡೆಸಲು ಉದ್ದೇಶಿಸಲಾದ ಈ ಜಾಥಾದ ಮೊದಲ ಪಾದ ನೆಟಾಲ್ ಗಡಿಯಲ್ಲಿದ್ದ ಚಾರ್ಲ್ಸ್‌ಟೌನ್–ವೋಲ್ಕ್‌ಸ್‌ರಸ್ಟ್ ಪಟ್ಟಣಗಳವರೆಗೆ ಎಂದು ನಿಗದಿಪಡಿಸಲಾಯಿತು. ಅಕ್ಟೋಬರ್ ೨೮ರಂದು ಗಾಂಧಿ ಕಾರ್ಮಿಕರ ಮೊದಲ ತಂಡದ ಜೊತೆ ಚಾರ್ಲ್ಸ್‌ಟೌನ್ ಕಡೆ ಜಾಥಾ ಹೊರಟರು. ಅವರ ಹಿಂದೆಯೆ ತಂಡೋಪತಂಡವಾಗಿ ಇತರ ಕಾರ್ಮಿಕರು ಹೆಜ್ಜೆ ಹಾಕಿದರು. ಜಾಥಾ ಹೊರಡುವ ಮುನ್ನ ಗಾಂಧಿ ತಮ್ಮ ಅನುಯಾಯಿಗಳಿಗೆ ಕೆಲವು ಸೂಚನೆಗಳನ್ನು ನೀಡಿದ್ದರು. ಯಾರೂ ಒಂದು ಹಾಸು ಮತ್ತು ಹೊದಿಕೆ ಮತ್ತು ಒಂದೆರೆಡು ಜೊತೆ ಬಟ್ಟೆಗಿಂತ ಹೆಚ್ಚು ಸಾಮಾನು ತರಬಾರದು. ದಾರಿಯಲ್ಲಿ ದಿನಕ್ಕೆ ಒಂದೂವರೆ ಪೌಂಡ್ ಬ್ರೆಡ್ ಮತ್ತು ಒಂದು ಮುಷ್ಟಿ ಸಕ್ಕರೆಯ ಹೊರತಾಗಿ ಇನ್ನೇನೂ ಲಭ್ಯವಿರುವುದಿಲ್ಲ. ದಾರಿಯಲ್ಲಿನ ಊರುಗಳಲ್ಲಿನ ಭಾರತೀಯ ವರ್ತಕರೇನಾದರೂ ಹೆಚ್ಚಿನ ಆಹಾರ ಒದಗಿಸಬಹುದು;

ಆದರೆ ಖಚಿತವಿಲ್ಲ. ಬಯಲಲ್ಲೇ ಮಲಗಬೇಕಾಗಬಹುದು. ಯಾರೂ ಬೇರೆಯವರ ವಸ್ತುಗಳನ್ನು ಮುಟ್ಟಬಾರದು. ದಾರಿಯಲ್ಲಿ ಎಲ್ಲಿಯಾದರೂ ಸರ್ಕಾರದ ಪ್ರತಿನಿಧಿಗಳು ಬಂದು ಬೈದರೂ, ಥಳಿಸಿದರೂ ತಾಳ್ಮೆ ವಹಿಸಿ ಅದನ್ನು ಸಹಿಸಬೇಕು. ದಸ್ತಗೀರು ಮಾಡಿದರೆ ಪ್ರತಿಭಟಿಸಬಾರದು. ಒಂದು ವೇಳೆ ಗಾಂಧಿಯವರ ದಸ್ತಗಿರಿಯಾದರೆ, ಸ್ಥೈರ್ಯ ಕಳೆದುಕೊಳ್ಳದೆ ಜಾಥಾ ಮುಂದುವರೆಸಬೇಕು. ಇದರಲ್ಲಿ ಯಾವುದಾದರೊಂದು ಸಾಧ್ಯವಿಲ್ಲವೆನಿಸಿದವರು ಈಗಲೂ ಜಾಥಾದಿಂದ ನಿರ್ಗಮಿಸಲು ಸ್ವತಂತ್ರರು. ಈ ಸೂಚನೆಗಳನ್ನು ಕೇಳಿಸಿಕೊಂಡ ಕಾರ್ಮಿಕ ಸಮೂಹ ಮರುಮಾತಾಡದೆ ತನ್ನ ಯಾತ್ರೆಯನ್ನು ಆರಂಭಿಸಿತು. ಈ ಯಾತ್ರೆ ಆರಂಭವಾದಾಗ ಅದರಲ್ಲಿ ಎರಡು ಸಾವಿರ ಜನ ಗಂಡಸರು, ೧೨೨ ಜನ ಹೆಂಗಸರೂ ಮತ್ತು ೫೦ ಮಕ್ಕಳೂ ಇದ್ದರು.

ಮಾರನೆಯ ದಿವಸ ವಿಜಯದಶಮಿ. ಅಂದು ಈ ಜಾಥಾಕ್ಕೆ ಬೆಂಬಲವಾಗಿ ಜೊಹಾನ್ಸ್‌ಬರ್ಗ್‌ನ ವೆಸ್ಟ್‌ಎಂಡ್ ಬಯೋಸ್ಕೋಪ್ ಹಾಲ್‌ನಲ್ಲಿ ಭಾರತೀಯರ ಸಭೆ ಏರ್ಪಡಿಸಲಾಯಿತು. ಮಹಿಳೆಯರ ಬಂಧನ ಮತ್ತು ಸಶ್ರಮ ಶಿಕ್ಷೆಯ ಸುದ್ದಿಯಿಂದ ಉದ್ವಿಗ್ನರಾದ ಭಾರತೀಯ ಸಮುದಾಯ ದೊಡ್ಡ ಸಂಖ್ಯೆಯಲ್ಲಿ ಸೇರಿತು. ಅವರ ಜೊತೆಗೆ ಬೆಂಬಲವಾಗಿ ಹೊಸ್ಕೆನ್, ಸೋನ್ಯಾ, ರೀಚ್ ಸೇರಿದಂತೆ ಸಾಕಷ್ಟು ಯೂರೋಪಿಯನ್ನರೂ ಸಭೆಗೆ ಬಂದು ತಮ್ಮ ಬೆಂಬಲ ವ್ಯಕ್ತಪಡಿಸಿದರು. ಭಾಷಣಗಳಾದ ನಂತರ ನಿಧಿ ಸಂಗ್ರಹಕ್ಕಾಗಿ ಮನವಿ ಮಾಡಲಾಯಿತು. ಜನ ಹಣವನ್ನಲ್ಲದೆ ಉಂಗುರ, ಬಳೆಗಳಿಂದ ಹಿಡಿದು ತಮ್ಮ ಕೊಡೆ, ಪರ್ಸ್, ಚಾಕು ಇತ್ಯಾದಿ ತಮ್ಮ ಬಳಿ ಇದ್ದ ವಸ್ತುಗಳನ್ನೆಲ್ಲವನ್ನು ಹರಾಜು ಕೂಗಿ ಹಣ ಸಂಗ್ರಹಿಸಿ ಒಂದು ದೊಡ್ಡ ಮೊತ್ತವನ್ನೇ ಸತ್ಯಾಗ್ರಹ ನಿಧಿಗೆ ನೀಡಿದರು.

ಸ್ತ್ರೀ ಸಾಹಸ–ಸಾಧನೆ–ಶಿಕ್ಷೆಯ ಮತ್ತು ಜಾಥಾದ ಸುದ್ದಿ ಗಡಿ ದಾಟಿ ಭಾರತದಲ್ಲೂ ಜನ ಉದ್ವಿಗ್ನರಾದರು. ಅಲ್ಲಿ ಅನೇಕ ಕಡೆ ಪ್ರತಿಭಟನೆ/ಬೆಂಬಲ ಸಭೆಗಳು ನಡೆದವು. ಮುಂಬೈನ ಇಂತಹ ಒಂದು ಸಭೆಯಲ್ಲಿ ಗೋಖಲೆಯವರು ಸತ್ಯಾಗ್ರಹದ ಖರ್ಚಿಗಾಗಿ ಮುಂದಿನ ಆರು ತಿಂಗಳು ತಲಾ ಎರಡು ಸಾವಿರ ಪೌಂಡುಗಳಷ್ಟು ಹಣದ ವ್ಯವಸ್ಥೆ ಮಾಡುವುದಾಗಿ ಘೋಷಿಸಿದರು.

ಗಾಂಧಿಯವರನ್ನು ಖಿನ್ನತೆಗೆ ದೂಡಿದ ಕೆಲ ಘಟನೆಗಳು

ಜಾಥಾ ೧೯೧೩ರ ನವೆಂಬರ್ ಮೂರರಂದು ಚಾರ್ಲ್ಸ್‌ಟೌನ್ ತಲುಪಿತು. ಅದು ಯಾವ ಸಮಸ್ಯೆಯೂ ಇಲ್ಲದೆ ಸುಖವಾಗಿ ಚಾರ್ಲ್ಸ್‌ಟೌನ್ ಸೇರಿತೆಂದು ಹೇಳಲಾಗದು. ದಾರಿಯುದ್ದಕ್ಕೂ ಹೊಸದಾಗಿ ಜನ ಬಂದು ಸೇರಿಕೊಳ್ಳುತ್ತಾ ಜನಸಂಖ್ಯೆ ಜಾಸ್ತಿಯಾಗುತ್ತಾ ಹೋಯಿತು. ಎಲ್ಲರ ಕಡೆ ಗಮನ ಕೊಡಲು ಅಸಾಧ್ಯವಾಗತೊಡಗಿತು. ತಂಗಿದ ಒಂದೆಡೆ ಜಗಳಗಳು ಮತ್ತು ವ್ಯಭಿಚಾರ ನಡೆದ ಸುದ್ದಿಯೂ ಗಾಂಧಿಯನ್ನು ತಲುಪಿ ಅವರನ್ನು ಖಿನ್ನರನ್ನಾಗಿಸಿತು. ಅವರು ವಿಚಾರಣೆ ನಡೆಸಿದಾಗ ಸಂಬಂಧಪಟ್ಟವರು ಪಶ್ಚಾತ್ತಾಪದಿಂದ ಕ್ಷಮೆ ಕೇಳಿದರು. ಒಂದು ಹೊಳೆ ದಾಟುವಾಗ ಮಗುವೊಂದು ತಾಯಿಯ ಕೈಗಳಿಂದ ಜಾರಿ ನೀರಿನಲ್ಲಿ ಮುಳುಗಿಹೋಯಿತು. ಮತ್ತೊಂದು ಮಗು ಚಳಿಗಾಳಿ ತಡೆಯಲಾಗದೆ ಅಸು ನೀಗಿತು. ಆದರೆ ಆ ತಾಯಂದಿರು ಎಲ್ಲ ಮರೆತು ಜಾಥಾದಲ್ಲಿ ಮುಂದುವರೆದರು.

ಚಾರ್ಲ್ಸ್‌ಟೌನ್‌ನಿಂದ ಒಂದೂವರೆ ಕಿ.ಮಿ. ದೂರದಲ್ಲಿ ಟ್ರಾನ್ಸ್‌ವಾಲ್ ಗಡಿ. ನೋಂದಣಿ/ರಹದಾರಿ ಪತ್ರವಿಲ್ಲದೆ ಅದನ್ನು ದಾಟುವ ಮುನ್ನ, ಜಾಥಾ ಮತ್ತೆ ಸಿದ್ಧತೆಗಾಗಿ ಒಂದೆರಡು ದಿನ ಅಲ್ಲಿ ತಂಗಬೇಕಾಯಿತು. ಅಲ್ಲಿನ ಭಾರತೀಯ ವರ್ತಕರು ಜಾಥಾಗಾಗಿ ಆಹಾರದ ವ್ಯವಸ್ಥೆ ಮಾಡಿದ್ದರು. ಮಹಿಳೆಯರಿಗೆ ಮಲಗಲು ಕೆಲವು ಮನೆಗಳನ್ನು ತೆರವು ಮಾಡಿಕೊಟ್ಟಿದ್ದರು. ಅಡಿಗೆ ಮಾಡಿ ಅದನ್ನು ಬಡಿಸುವ ಉಸ್ತುವಾರಿಯನ್ನು ಗಾಂಧಿಯೇ ವಹಿಸಿಕೊಂಡು, ಆ ವೇಳೆ ಆದ ಅನೇಕ ವ್ಯತ್ಯಾಸ ಮತ್ತು ಕಲಹಗಳನ್ನು ಹೇಗೋ ನಿಭಾಯಿಸಿದರು. ಇದರಲ್ಲಿ ನೆರವಾಗಲು ಅವರಿಗೆ ಭಾರತೀಯ ಸಹಚರರ ಜೊತೆಗೇ ಐರೋಪ್ಯರಾದ ಪೊಲಾಕ್, ಕಲೆನ್‌ಬಾಕ್ ಮತ್ತು ಸೋನ್ಯಾ ಜೊತೆಗಿದ್ದೇ ಇದ್ದರು. ಸ್ವತಃ ತಾವೇ ನಿಂತು ಜಾಥಾ ತಂಗಿದ್ದ ಬಯಲನ್ನು ಚೊಕ್ಕಟಗೊಳಿಸುವ, ಪಾಯಿಖಾನೆಯನ್ನು ತೆಗೆದುಹಾಕುವ, ಮಣ್ಣಿನಿಂದ ಮುಚ್ಚುವ ಕೆಲಸಗಳಲ್ಲಿ ತೊಡಗಿದರು. ಇದನ್ನು ನೋಡಿ ಇತರರು ಅವರ ಸಹಾಯಕ್ಕೆ ಬಂದರು. ಈ ಸಂಬಂಧ ಗಾಂಧಿ ಹೇಳುವ ಮಾತಿದು: 'ಸಮಾಜಸೇವಕ ಇತರರಿಗೆ ಬುದ್ಧಿ ಹೇಳುವುದನ್ನು ನಿಲ್ಲಿಸಿ ಕೆಲಸ ಮಾಡತೊಡಗಿ ನಿಜವಾಗಿ ಸೇವಕನಾದರೆ ನಾಯಕತ್ವಕ್ಕೆ ಸ್ಪರ್ಧೆ ಉಂಟಾಗದು.'

ನಾಜೂಕಾದ ಪರಿಸ್ಥಿತಿ; ಗಾಂಧಿಯ ಬಂಧನ

ಜಾಥಾ ಚಾರ್ಲ್ಸ್‌ಟೌನ್ ಮುಟ್ಟುತ್ತಿದ್ದಂತೆ ಸರ್ಕಾರದ ವಲಯಗಳಲ್ಲಿ ಸಂಚಲನ ಆರಂಭವಾಯಿತು. ಗಾಂಧಿಯನ್ನು ಬಂಧಿಸಿದರೆ, ಮುಂದೆ ಕಾನೂನು ಮತ್ತು ಶಿಸ್ತು ಅಸ್ತವ್ಯಸ್ತವಾಗುವುದೆಂದು ಪೊಲೀಸರು ವರದಿ ಮಾಡಿದರು. ಆದರೆ ಈಗ ಮತ್ತೆ ಗೃಹಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದ ಜ. ಸ್ಮಟ್ಸ್ ಗಾಂಧಿ ಹುಲಿ ಸವಾರಿಗೆ ಹೊರಟಿದ್ದು, ಅದು ಅಸಾಧ್ಯವಾಗಿ ಗಾಂಧಿ ವಿಶ್ವಾಸಾರ್ಹತೆ ಕಳೆದುಕೊಂಡು ಸೋತು ತಮ್ಮ ಅಂತ್ಯವನ್ನು ತಾವೇ ಕಂಡುಕೊಳ್ಳಲು ಬಿಡಬೇಕು ಎಂದು ವಾದಿಸಿದ. ಪರಿಸ್ಥಿತಿ ಬಿಗುವು ಹೆಚ್ಚುತ್ತಿದ್ದು ವೋಲ್ಕ್ಸ್‌ರಸ್ಟ್‌ನ ಬಿಳಿಯರು, ಭಾರತೀಯರು ತಮ್ಮೂರನ್ನು ಅಕ್ರಮವಾಗಿ ಪ್ರವೇಶಿಸಿದರೆ ಗುಂಡಿಕ್ಕಿ ಕೊಲ್ಲುವುದಾಗಿ ಸುದ್ದಿ ಹಬ್ಬಿಸಿದ್ದರು. ಗಾಂಧಿ ತಮ್ಮ ಗೆಳೆಯ ಕಲೆನ್‌ಬಾಕ್‌ನನ್ನು ವೋಲ್ಕ್ಸ್‌ರಸ್ಟ್‌ಗೆ ಕಳಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿ ಬರಲು ಹೇಳಿದರು. ಸೈಂಧವನಂತಿದ್ದ ಕಲೆನ್‌ಬಾಕ್ ಬಿಳಿಯರನ್ನು ಒಟ್ಟುಗೂಡಿಸಿ ಮಾತಾಡಿ ಅವರನ್ನು ಸುಮ್ಮನಿರಿಸುವಲ್ಲಿ ಯಶಸ್ವಿಯಾದ. ಗಾಂಧಿ ಜ. ಸ್ಮಟ್ಸ್‌ನನ್ನು, ಈ ಜಾಥಾ ಸರ್ಕಾರದ ವಚನಭಂಗದ ಕಾರಣದಿಂದಾಗಿ ಅನಿವಾರ್ಯವಾಗಿದ್ದು ಪರಿಸ್ಥಿತಿ ಕೈಮೀರಿ ಹೋಗುವ ಮುನ್ನ ಕನಿಷ್ಠ ಮೂರು ಪೌಂಡುಗಳ ತೆರಿಗೆಯನ್ನು ರದ್ದು ಮಾಡುವ ನಿರ್ಧಾರ ಪ್ರಕಟಿಸಬೇಕೆಂದು ದೂರವಾಣಿಯ ಮೂಲಕ ಆತನ ಕಛೇರಿಯನ್ನು ಸಂಪರ್ಕಿಸಿ ಕೋರಿದರು. ಗಾಂಧಿಯೊಂದಿಗೆ ಮಾತಾಡಲು ನಿರಾಕರಿಸಿದ ಸ್ಮಟ್ಸ್, ಅರೆ ಕ್ಷಣದಲ್ಲೇ 'ಆಗದು; ನಿಮ್ಮ ಇಷ್ಟ ಬಂದಂತೆ ಮಾಡಬಹುದು' ಎಂಬ ಉದ್ಧಟತನದ ಉತ್ತರವನ್ನು ತನ್ನ ಕಾರ್ಯದರ್ಶಿಯ ಮೂಲಕ ರವಾನಿಸಿದ.

ಒಪ್ಪಂದದ ಈ ಕೊನೆಯ ಪ್ರಯತ್ನವನ್ನು ಕರ್ತವ್ಯದಂತೆ ನಿರ್ವಹಿಸಿದ ಗಾಂಧಿ, ಸ್ಮಟ್ಸ್‌ನ ಉದ್ಧಟ ಉತ್ತರದಿಂದ ವಿಚಲಿತರಾಗದೆ, ಎರಡು ದಿನಗಳ ವಿಶ್ರಾಂತಿಯ ನಂತರ ನವೆಂಬರ್ ಆರರಂದು ಟ್ರಾನ್ಸ್‌ವಾಲ್ ಪ್ರವೇಶಿಸಲು ಮೊದಲ ತಂಡದ ನೇತೃತ್ವ ವಹಿಸಿ ಹೊರಟರು. ಗಡಿಯಲ್ಲಿದ್ದ ಪೊಲೀಸ್ ಪಡೆ ಆಶ್ಚರ್ಯವೆಂಬಂತೆ ಯಾವ

ಪ್ರತಿರೋಧವೂ ಇಲ್ಲದೆ ಜಾಥಾ ಮುಂದುವರೆಯಲು ಬಿಟ್ಟರು. ಮುಂದೆ ಜಾಥಾ ಪೊಲೀಸರ ಬಿಗಿ ಪಹರೆಯ ಮತ್ತು ಕಲೆನ್‌ಬಾಕ್‌ನ ಹಿಂದಿನ ದಿನದ ಮಧ್ಯಪ್ರವೇಶದಿಂದಾಗಿ ಯಾವ ತೊಂದರೆಯೂ ಇಲ್ಲದೆ ವೋಲ್ಕ್‌ಸ್ರಸ್ಟ್‌ನ ಬೀದಿಗಳಲ್ಲಿ ಸಾಗಿ ಸಂಜೆಯ ಹೊತ್ತಿಗೆ ಪಾಮ್‌ಫೋರ್ಡ್ ಊರನ್ನು ತಲುಪಿ ಅಲ್ಲಿ ತಂಗಿತು. ಎಲ್ಲರೂ ಬಳಲಿದ್ದರು. ಹಲವರ ಕಾಲುಗಳಿಗೆ ಬೊಬ್ಬೆ ಬಂದು ತುಂಬ ಅಸ್ವಸ್ಥರಾಗಿದ್ದರು. ಅಂತಹವರಲ್ಲಿ ಹೆಂಗಸರು–ಮಕ್ಕಳನ್ನು ಬೇರ್ಪಡಿಸಿ ಓರ್ವ ಭಾರತೀಯ ವರ್ತಕನ ಮನೆಯಲ್ಲಿ ಇರಿಸಲು ವ್ಯವಸ್ಥೆ ಮಾಡಿದ ಗಾಂಧಿ, ಮುಂದೆ ಅವರನ್ನು ತಾವು ಟಾಲ್‌ಸ್ಟಾಯ್ ಆಶ್ರಮ ತಲುಪಿದಾಗ ಅಲ್ಲಿಗೆ ಅಥವಾ ಬಂಧನಗಳಿಂದಾಗಿ ಜಾಥಾ ಅರ್ಧಕ್ಕೇ ನಿಂತರೆ ಅವರವರ ಮನೆಗಳಿಗೆ ಕಳಿಸಲು ಸೂಚಿಸಿದರು. ಆದರೆ ಅಂದು ರಾತ್ರಿಯೇ ಗಾಂಧಿಯವರ ಬಂಧನವಾಯಿತು. ಅವರು ತಮ್ಮ ಸಹಚರ ಪಿ.ಕೆ. ನಾಯ್ಡು ಮತ್ತಿತರರಿಗೆ ಸೂಕ್ತ ನಿರ್ದೇಶನಗಳನ್ನು ನೀಡಿ ಪೊಲೀಸರೊಂದಿಗೆ ಹೊರಟರು.

ಮಾರನೆಯ ಬೆಳಿಗ್ಗೆ ಗಾಂಧಿಯನ್ನು ವೋಲ್ಕ್‌ಸ್ರಸ್ಟ್‌ನ ನ್ಯಾಯಾಲಯದಲ್ಲಿ ಹಾಜರುಪಡಿಸಲಾಯಿತು. ಗಾಂಧಿ ತಾವು ಮಹಿಳೆಯರೂ ಮಕ್ಕಳೂ ಸೇರಿದಂತೆ ಸಾವಿರಾರು ಜನರ ಜವಾಬ್ದಾರಿ ಹೊತ್ತಿರುವುದರಿಂದ ಮತ್ತು ತಾವು ಯಾವುದೇ ಕ್ರೌರ್ಯಮಯವಾದ ಕೆಲಸದಲ್ಲಿ ತೊಡಗಿಲ್ಲವಾದ್ದರಿಂದ ಕಾನೂನು ಪ್ರಕಾರ ತಮಗೆ ಜಾಮೀನು ನೀಡಬೇಕೆಂದು ಕೋರಿದರು. ಮತ್ತೆ ಯಾವ ಪ್ರಶ್ನೆಯೂ ಇಲ್ಲದೆ ನ್ಯಾಯಾಧೀಶರು ೫೦ ಪೌಂಡುಗಳ ಜಾಮೀನಿನ ಮೇಲೆ ಗಾಂಧಿಯನ್ನು ಬಿಡುಗಡೆ ಮಾಡಿದರು. ಆ ಊರಿನ ಭಾರತೀಯ ವರ್ತಕನೊಬ್ಬ ಜಾಮೀನು ಹಣ ತುಂಬಿದ.

ಜಾಥಾ ಆರಂಭವಾದಾಗಿನಿಂದ ಪತ್ರಕರ್ತರು ಅದನ್ನು ಹಿಂಬಾಲಿಸಿ ಟ್ರಾನ್ಸ್‌ವಾಲ್ ಲೀಡರ್, ನೆಟಾಲ್ ಮೆರ್ಕ್ಯುರಿ ಮುಂತಾದ ತಮ್ಮ ಪತ್ರಿಕೆಗಳಿಗೆ ವಿಸ್ತೃತ ವರದಿ ಮಾಡುತ್ತಿದ್ದುದರಿಂದಾಗಿ ನೆಟಾಲ್ ಮತ್ತು ಟ್ರಾನ್ಸ್‌ವಾಲ್ ಪ್ರಾಂತ್ಯಗಳ ಯೂರೋಪಿಯನ್ ಮತ್ತು ಭಾರತೀಯ ಸಮುದಾಯಗಳೆರಡರಲ್ಲೂ ಸತ್ಯಾಗ್ರಹದ ಬಗ್ಗೆ ಕುತೂಹಲ ಹೆಚ್ಚಾಯಿತು. ಹೀಗಾಗಿ ಕಾರ್ಮಿಕರಲ್ಲದ ಹಲವು ಭಾರತೀಯರು ತಂತಮ್ಮ ಸ್ಥಳಗಳಿಂದ ಜಾಥಾ ಸೇರಲು ಹೊರಟರು. ಹೀಗೆ ನಿರಂತರವಾಗಿ ಹೊಸದಾಗಿ ಬಂದು ಸೇರುತ್ತಿದ್ದ ಸತ್ಯಾಗ್ರಹಿಗಳನ್ನು ಸಂಪರ್ಕಿಸಿ ಅವರನ್ನು ಜಾಥಾದ ಭಾಗವಾಗಿಸುವ ಹೊಣೆಯನ್ನು ಸದಾ ತನ್ನದೊಂದು ಮೋಟಾರು ವಾಹನದೊಂದಿಗೆ ಇರುತ್ತಿದ್ದ ಕಲೆನ್‌ಬಾಕ್‌ಗೆ ವಹಿಸಲಾಗಿತ್ತು. ಗಾಂಧಿ ನ್ಯಾಯಾಲಯದಿಂದ ಜಾಮೀನು ಪಡೆದವರೇ ಕಲೆನ್‌ಬಾಕ್‌ನ ವಾಹನದಲ್ಲಿ ಹೊರಟು ಜಾಥಾ ಸೇರಿಕೊಂಡರು.

ಗಾಂಧಿಯವರ ಮರುಬಂಧನ–ಬಿಡುಗಡೆ–ಮತ್ತೆ ಬಂಧನ

೮ನೇ ತಾರೀಖು ಜಾಥಾ, ಸ್ಟ್ಯಾಂಡರ್ಟನ್ ಎಂಬ ಪಟ್ಟಣವನ್ನು ಮುಟ್ಟಿತು. ಅಲ್ಲಿ ಗಾಂಧಿ ಯಾತ್ರಿಕರಿಗೆ ಬ್ರೆಡ್ ಮತ್ತು ಸಕ್ಕರೆ ಹಂಚುತ್ತಿದ್ದಾಗ ಊರಿನ ನ್ಯಾಯಾಧೀಶನೇ ಬಂದು ಅವರನ್ನು ಬಂಧಿಸಿ ನ್ಯಾಯಾಲಯದಲ್ಲಿ ಹಾಜರುಪಡಿಸಿದ. ಮತ್ತೆ ಅದೇ ಆಪಾದನೆ, ಅದೇ ಜಾಮೀನು ಅರ್ಜಿ, ಮತ್ತೆ ಅದೇ ಜಾಮೀನು ಮಂಜೂರು, ಜಾಮೀನು ಮೊತ್ತದ ಪಾವತಿ ಮೇಲೆ ಬಿಡುಗಡೆ! ಜಾಮೀನು ಮೊತ್ತವನ್ನು ಪಾವತಿಸಿದ ಸ್ಥಳೀಯ ಭಾರತೀಯ ವರ್ತಕರು ಗಾಂಧಿಯನ್ನು ತಮ್ಮ ವಾಹನದಲ್ಲಿ ಆ ಹೊತ್ತಿಗೆ ಐದು

ಕಿ.ಮೀ.ನಷ್ಟು ಮುಂದೆ ಸಾಗಿದ್ದ ಜಾಥಾಗೆ ಒಯ್ದು ಸೇರಿಸಿದರು. ಜಾಥಾ ಈಗ ಜೊಹಾನ್ಸ್‌ಬರ್ಗ್‌ನ ಹತ್ತಿರ ಬಂದಿತ್ತು. ಹಾಗಾಗಿ ಜಾಥಾ ಬಹುಬೇಗ ಟಾಲ್‌ಸ್ಟಾಯ್ ಆಶ್ರಮ ಸೇರುವ ನಿರೀಕ್ಷೆಯಲ್ಲಿ ಮುಂದುವರೆಯಿತು.

ಆ ಹೊತ್ತಿಗೆ ಗೋಖಲೆಯವರಿಂದ ಒಂದು ತಂತಿ ಸಂದೇಶ ಬಂದಿದ್ದು, ಅದರಲ್ಲಿ ಅವರು ದ.ಆಫ್ರಿಕಾದ ಭಾರತೀಯರ ಸದ್ಯದ ಪರಿಸ್ಥಿತಿಯ ಬಗ್ಗೆ ಭಾರತದ ಬ್ರಿಟಿಷ್ ಸರ್ಕಾರ ಮತ್ತು ಲಂಡನ್‌ನಲ್ಲಿನ ಬ್ರಿಟಿಷ್ ಸಾಮ್ರಾಜ್ಯ ಸರ್ಕಾರಗಳಿಗೆ ಮನದಟ್ಟು ಮಾಡಲು ಹೆನ್ರಿ ಪೊಲಾಕ್‌ರನ್ನು ಬರಹೇಳಲಾಗಿತ್ತು. ಈ ಸಂಬಂಧ ಪೊಲಾಕ್ ಗಾಂಧಿಯೊಂದಿಗೆ ಮಾತಾಡಲು ಆಗ ಜಾಥಾ ಬಂದು ಮುಟ್ಟಿದ್ದ ಟೀಕ್ಸ್‌ವರ್ತ್ ಎಂಬಲ್ಲಿಗೆ ನವೆಂಬರ್ ೯ರಂದು ಬಂದು ಸೇರಿದ್ದ. ಅಲ್ಲಿ ನಡಿಗೆಯಲ್ಲಿ ಇಬ್ಬರೂ ಮಾತುಕತೆಯಾಡುತ್ತಿದ್ದ ಸಂದರ್ಭದಲ್ಲೇ ಟ್ರಾನ್ಸ್‌ವಾಲ್‌ನ ವಲಸೆ ಅಧಿಕಾರಿ ಚಾಮ್ನೆ ಮತ್ತು ಒಂದು ಪೊಲೀಸ್ ಪಡೆ ಅವರನ್ನು ಹಿಂಬಾಲಿಸಿ ಬಂದು ಗಾಂಧಿಯನ್ನು ಮತ್ತೆ ಬಂಧಿಸಿತು. ಈ ಬಾರಿ ಜ. ಸ್ಮಟ್ಸ್‌ನೇ ಬಂಧನಕ್ಕೆ ಆಜ್ಞೆ ನೀಡಿದ್ದನೆಂದು ಚಾಮ್ನೆಯ ಮಾತುಗಳಿಂದ ಗೊತ್ತಾಯಿತು. ಗಾಂಧಿಗೆ ಅವರನ್ನು ಹಿಂಬಾಲಿಸಿ ಬರುತ್ತಿದ್ದ ಜಾಥಾದ ಯಾತ್ರಿಕರನ್ನು ಭೇಟಿ ಮಾಡಿ ಸೂಚನೆಗಳನ್ನು ನೀಡಲೂ ಅವಕಾಶ ಕೊಡದಿದ್ದಾಗ ಅವರು ಪೊಲಾಕ್‌ಗೇ ಜಾಥಾದ ನಾಯಕತ್ವ ವಹಿಸಿ ಮುಂದೊಯ್ಯಲು ಹೇಳಿ ಪೊಲೀಸರೊಡನೆ ಹೊರಟರು. ಅವರನ್ನು ಪೊಲೀಸರು ಹೀಡಲ್‌ಬರ್ಗ್ ಎಂಬಲ್ಲಿಗೆ ಕರೆದುಕೊಂಡು ಹೋಗಿ ಆ ರಾತ್ರಿ ಅಲ್ಲಿನ ಸೆರೆಮನೆಯಲ್ಲಿರಿಸಿದರು.

ಎಲ್ಲ ಯಾತ್ರಿಕರ ಬಂಧನ–ರೈಲಿನಲ್ಲಿ ಮರು ಸಾಗಣೆ

ಆದರೆ ಜಾಥಾ ಎದೆಗುಂದದೆ ಪೊಲಾಕ್‌ನ ಮಾರ್ಗದರ್ಶನದಲ್ಲಿ ಮತ್ತು ಕಲೆನ್‌ಬಾಕ್‌ನ ನಿಗಾದಲ್ಲಿ ಮುಂದುವರೆದು ೧೦ನೇ ತಾರೀಖು ಬಾಲ್ಫೌರ್ ಸೇರಿತು. ಇದು ಪೊಲೀಸ್ ಪಹರೆಯಲ್ಲಿ ನಡೆದಿದ್ದು, ನಿರೀಕ್ಷೆಯಂತೆಯೇ ಅಲ್ಲಿ ಸರ್ಕಾರ ಮೊದಲೇ ಆಯೋಜಿಸಿದ್ದಂತೆ ಜಾಥಾವನ್ನು ತಡೆದು ಎಲ್ಲ ಯಾತ್ರಿಕರನ್ನೂ ಬಂಧಿಸಿರುವುದಾಗಿ ಘೋಷಿಸಿತು. ನಂತರ ಅವರ ಪ್ರಯಾಣಕ್ಕಾಗಿ ವ್ಯವಸ್ಥೆ ಮಾಡಿದ್ದ ಮೂರು ವಿಶೇಷ ರೈಲುಗಳಲ್ಲಿ ತುಂಬಿ ನೆಟಾಲ್‌ಗೆ ಕಳಿಸುವ ಕಾರ್ಯಾಚರಣೆ ಚಾಮ್ನೆಯ ಉಸ್ತುವಾರಿಯಲ್ಲಿ ಆರಂಭವಾಯಿತು. ಇದನ್ನು ಯಾತ್ರಿಕರು ಪ್ರತಿಭಟಿಸಿದರು. ಗಾಂಧಿ ಬಂದು ಹೇಳಿದರೆ ಮಾತ್ರ ರೈಲು ಹತ್ತುವುದಾಗಿ ಹಠ ಹಿಡಿದರು. ಆದರೆ ವಿಷಯ ತಿಳಿದು ಅಲ್ಲಿಗೆ ಬಂದಿದ್ದ ಸೇಠ್ ಮಹಮ್ಮದ್ ಕಛಾಲಿಯಾ ಮತ್ತು ಪೊಲಾಕ್, ಸತ್ಯಾಗ್ರಹಿಗಳು ಸರ್ಕಾರದ ಬಂಧನದ ಆಜ್ಞೆಯನ್ನು ಧಿಕ್ಕರಿಸುವುದು ಸತ್ಯಾಗ್ರಹ ಧರ್ಮಕ್ಕೆ ವಿರುದ್ಧವೆಂದು ಅವರ ಮನವೊಲಿಸಿದಾಗ ಅವರೆಲ್ಲ ರೈಲು ಹತ್ತಿದರು. ಆದರೆ ಹಾಗೆ ಹತ್ತುವ ಮುನ್ನ, ತಮ್ಮ ನಾಯಕ ಗಾಂಧಿ ಬಿಡುಗಡೆಯಾಗಿ ಬಂದು ಸತ್ಯಾಗ್ರಹ ಮುಂದುವರೆಸಿದಲ್ಲಿ ತಾವೆಲ್ಲ ಮತ್ತೆ ಅವರ ಹಿಂದೆ ಹೊರಡಲು ಸಿದ್ಧವೆಂದು ಪತ್ರಕರ್ತರ ಮುಂದೆ ಘೋಷಿಸಿದರು. ಆದರೆ ರೈಲು ಹೊರಟ ಕೂಡಲೇ ಮೇಲಿಂದ ಸರ್ಕಾರದ ಆಜ್ಞೆ ಬಂದಿದೆ ಎಂದು ಪೊಲಾಕ್ ಮತ್ತು ಕಲೆನ್‌ಬಾಕ್‌ರನ್ನೂ ಪೊಲೀಸರು ಬಂಧಿಸಿದರು. ಪೊಲಾಕ್ ಭಾರತಕ್ಕೆ ಹೋಗುವುದನ್ನು ತಡೆಯಲು ಮತ್ತು ಕಲೆನ್‌ಬಾಕ್‌ನನ್ನು ಜಾಥಾ ಮತ್ತೆ ತಲೆಯೆತ್ತದಂತೆ ಖಚಿತಪಡಿಸಿಕೊಳ್ಳಲು ಬಂಧಿಸಲಾಗಿತ್ತು. ಈ ಇಬ್ಬರನ್ನೂ

ವೋಲ್ಕ್ಸ್‌ರಸ್ಟ್ ಸೆರೆಮನೆಗೆ ಒಯ್ಯಲಾಯಿತು. ರೈಲಿನಲ್ಲಿ ನೇಟಾಲ್ ತಲುಪಿದ ಕಾರ್ಮಿಕರನ್ನೂ ಅಲ್ಲಿ ಬಂಧಿಸಿ ಸೆರೆಮನೆಗಳಿಗೆ ದೂಡಲಾಯಿತು.

ಮುವ್ವರು ಗೆಳೆಯರ ಸಹ ಸೆರೆವಾಸ

ಅತ್ತ ಗಾಂಧಿಯನ್ನು ಮಾರನೆಯ ದಿನ, ಅಂದರೆ ೧೧ರಂದು ಅವರ ಮೇಲೆ ಈ ಮೊದಲು ದೂರು ದಾಖಲಿಸಿದ್ದ ಡಂಡೀ ನ್ಯಾಯಾಲಯಕ್ಕೆ ಕರೆದೊಯ್ದು ವಿಚಾರಣೆಗೆ ಗುರಿಪಡಿಸಲಾಯಿತು. ಈ ಬಾರಿ ಮೇಲಿನಿಂದಲೇ ಆದೇಶ ಬಂದಿದ್ದರಿಂದ ನ್ಯಾಯಾಲಯ, ಗಾಂಧಿ ಜಾಮೀನಿಗೆ ಮಾಡಿದ ಮನವಿಯನ್ನು ತಿರಸ್ಕರಿಸಿತು. ನೇಟಾಲ್‌ನಿಂದ ಕೂಲಿ ಕಾರ್ಮಿಕರನ್ನು ಜಾಥಾ ಹೊರಡಿಸಿದ ಅಪರಾಧಕ್ಕಾಗಿ ಒಂಬತ್ತು ತಿಂಗಳ ಸಶ್ರಮ ಶಿಕ್ಷೆ ಘೋಷಿಸಿತು. ಇದರ ನಂತರದ ಮೂರೇ ದಿನಗಳಲ್ಲಿ ಅವರನ್ನು ವೋಲ್ಕ್ಸ್‌ರಸ್ಟ್ ನ್ಯಾಯಾಲಯಕ್ಕೆ ಕರೆತಂದು ಮತ್ತೊಂದು ಮೊಕದ್ದಮೆಯ ಸಂಬಂಧ ವಿಚಾರಣೆಗೆ ಒಳಪಡಿಸಲಾಯಿತು. ಆ ನ್ಯಾಯಾಲಯ ಕೂಲಿ ಕಾರ್ಮಿಕರನ್ನು ಅಕ್ರಮವಾಗಿ ಟ್ರಾನ್ಸ್‌ವಾಲ್‌ಗೆ ಕರೆದುಕೊಂಡು ಬಂದ ಅಪರಾಧಕ್ಕಾಗಿ ಮತ್ತೆ ಮೂರು ತಿಂಗಳ ಸಶ್ರಮ ಸೆರೆಮನೆವಾಸ ಶಿಕ್ಷೆ ಘೋಷಿಸಿತು. ಗಾಂಧಿಯನ್ನು ಅಂದು ವೋಲ್ಕ್ಸ್‌ರಸ್ಟ್ ಸೆರೆಮನೆಗೆ ಕರೆದೊಯ್ದಾಗ ಅಲ್ಲಿ ಆಗಲೇ ಬಂಧಿತರಾಗಿದ್ದ ತಮ್ಮ ಇಬ್ಬರು ಗೆಳೆಯರಾದ ಕಲೆನ್‌ಬಾಕ್ ಮತ್ತು ಪೋಲಾಕ್‌ರನ್ನು ಕಂಡು ಅವರಿಗೆ ಸಂತೋಷವಾಯಿತು. ಅಲ್ಲಿ ಈ ಇಬ್ಬರ ವಿಚಾರಣೆಯೂ ನಡೆದು ಅವರಿಗೂ ತಲಾ ಮೂರು ತಿಂಗಳ ಸಶ್ರಮ ಶಿಕ್ಷೆ ವಿಧಿಸಲಾಯಿತು.

ಈ ಮೂವರೂ ವೋಲ್ಕ್ಸ್‌ರಸ್ಟ್ ಸೆರೆಮನೆಯಲ್ಲಿದ್ದಾಗ ಹೊರಗೆ ಸತ್ಯಾಗ್ರಹ ಮುಂದುವರೆದಿರುವ ಸೂಚನೆಯಾಗಿ ದಿನವೂ ಕೂಲಿ ಕಾರ್ಮಿಕರೂ ಅನೇಕ ಇತರೆ ಭಾರತೀಯರೂ ಸೆರೆಮನೆಗೆ ಬರುವುದೂ ಬಿಡುಗಡೆಯಾಗಿ ಹೋಗುವುದೂ ನಡೆದಿತ್ತು. ಅಂಥವರಲ್ಲಿ ಹರಬತ್ ಸಿಂಗ್ ಎಂಬ ೭೫ ವರ್ಷ ವಯಸ್ಸಿನ ವೃದ್ಧ ಸಿಖ್‌ವೊಬ್ಬರ ಕಥೆಯನ್ನು ಗಾಂಧಿ ತಮ್ಮ ದ.ಆಫ್ರಿಕಾದಲ್ಲಿ ಸತ್ಯಾಗ್ರಹ ಪುಸ್ತಕದಲ್ಲಿ ನಿರೂಪಿಸಿ, ಜಾಥಾ ಉಂಟುಮಾಡಿದ್ದ ಸಾರ್ವತ್ರಿಕ ಪರಿಣಾಮವನ್ನು ಸೂಚಿಸುತ್ತಾರೆ. ಗಾಂಧಿ ಹರಬತ್ ಸಿಂಗ್‌ರನ್ನು 'ಈ ವಯಸ್ಸಿನಲ್ಲಿ ನೀವೇಕೆ ಸೆರೆಮನೆಗೆ ಬರಲು ಹೋದಿರಿ? ನಿಮ್ಮ ಬಿಡುಗಡೆಗೆ ನೆರವಾಗುವೆ' ಎಂದಾಗ ಆತ 'ನೀವು ನಿಮ್ಮ ಹೆಂಡತಿ ಮಕ್ಕಳೊಂದಿಗೆ ಸೆರೆಮನೆ ಸೇರಿ ಕಷ್ಟಪಡುತ್ತಿದ್ದಾಗ ನಾನು ಹೇಗೆ ಹೊರಗಿರಲಿ? ನಾನು ಬಹಳ ದಿವಸ ಬದುಕಲಾರೆ. ಇಲ್ಲಿಯೇ ಪ್ರಾಣ ಬಿಟ್ಟರೂ ಸರಿಯೇ!' ಎಂದನಂತೆ. ಹಾಗೇ ಆತ ಇನ್ನೊಮ್ಮೆ ಸತ್ಯಾಗ್ರಹಿಯಾಗಿ ಡರ್ಬಾನ್ ಸೆರೆಮನೆ ಸೇರಿ ಅಲ್ಲಿಯೇ ಮೃತಪಟ್ಟ ಸುದ್ದಿ ಬಂತು.

ಮುವ್ವರನ್ನೂ ಪ್ರತ್ಯೇಕಿಸಿದ ಸರ್ಕಾರ

ಸರ್ಕಾರ, ಈ ಮೂವರೂ ಒಟ್ಟಿಗೆ ಜೈಲಿನಲ್ಲಿದ್ದುಕೊಂಡೇ ಸತ್ಯಾಗ್ರಹಿಗಳನ್ನು ಪ್ರಚೋದಿಸುತ್ತಿದ್ದಾರೆಂದು ಅನುಮಾನಿಸಿತು. ಕೂಡಲೇ ಮೂವರನ್ನು ಪ್ರತ್ಯೇಕಿಸಿ ಗಾಂಧಿಯನ್ನು ಬ್ಲೂಂಫಾಂಟೇನ್, ಪೋಲಾಕ್‌ನನ್ನು ಜರ್ಮಿಸ್ಟನ್ ಮತ್ತು ಕಲೆನ್‌ಬಾಕ್‌ನನ್ನು ಪ್ರಿಟೋರಿಯಾ ಸೆರೆಮನೆಗೂ ವರ್ಗಾಯಿಸಲಾಯಿತು.

ಗಾಂಧಿ ವರ್ಗಾಯಿಸಲ್ಪಟ್ಟಿದ್ದ ಬ್ಲೂಂಫಾಂಟೇನ್, ಭಾರತೀಯರು ಬಹು

ವಿರಳವಾಗಿದ್ದ ನಗರ. ಅಲ್ಲಿನ ಸೆರೆಮನೆಯಲ್ಲಿ ಬಿಳಿಯರು ಮತ್ತು ಕಪ್ಪು ಜನರೇ ತುಂಬಿದ್ದರು. ಗಾಂಧಿ ಅಲ್ಲಿ ದೈಹಿಕ ಶ್ರಮದ ಕಠಿಣ ಶಿಕ್ಷೆಗೆ ಒಳಗಾಗಿದ್ದರೂ, ಅದು ಏಕಾಂತವಾಸದ ಶಿಕ್ಷೆಯೂ ಆಗಿದ್ದುದರಿಂದ ಸಂತೋಷವನ್ನೇ ಪಟ್ಟರು. ಓದಲು ಬಿಡುವೇ ಇಲ್ಲದ ಇತ್ತೀಚಿನ ವರ್ಷಗಳಲ್ಲಿ ಅದಕ್ಕಾಗಿ ಈಗ ಒಂದು ವರ್ಷ ಬಿಡುವು ಸಿಕ್ಕಿದ್ದೂ ಸಂತೋಷಕ್ಕೆ ಕಾರಣ. ಅವರು ತಾವು ಹಿಂದೆ ತಮ್ಮ ತಮಿಳು ಸಮುದಾಯದ ಅನುಯಾಯಿಗಳಿಗೆ ನೀಡಿದ್ದ ಮಾತಿನಂತೆ ತಮಿಳು ಕಲಿಕೆ ಪುಸ್ತಕಗಳನ್ನು ತರಿಸಿಕೊಂಡು ಆ ಭಾಷೆಯನ್ನು ಕಲಿಯುವ ಅಭ್ಯಾಸವನ್ನು ಮಾಡತೊಡಗಿದರು. ಜೊತೆಗೆ ಅಲ್ಲಿನ ಸೆರೆಮನೆಯ ಅಧಿಕಾರಿಯ ವರ್ತನೆಯ ಕಾಠಿಣ್ಯವನ್ನು ಸರಿದೂಗಿಸುವಂತೆ, ಸೆರೆಮನೆಯ ವೈದ್ಯಾಧಿಕಾರಿ ಇವರ–ಬಹುತೇಕ ಹಣ್ಣುಗಳನ್ನಷ್ಟೇ ಆಧರಿಸಿದ–ಆಹಾರ ಪದ್ಧತಿಯಿಂದ ಕುತೂಹಲಿತನಾಗಿ ಅವರ ಗೆಳೆಯನಾದ್ದರಿಂದ, ಅವನಿಂದ ಆದಷ್ಟು ವೈದ್ಯಕೀಯ ಶಿಕ್ಷಣ ಪಡೆಯಬಹುದೆಂಬುದು ಅವರ ಸಂತೋಷವನ್ನು ಹೆಚ್ಚಿಸಿತು.

ಆಶ್ರಮ–ಕುಟುಂಬವನ್ನು ಮರೆಯದ ಗಾಂಧಿ

ಆದರೆ ಇಲ್ಲಿ ಗಾಂಧಿ, ಮುಂದಿನ ಘಟನೆಗಳು ಸೂಚಿಸುವಂತೆ ಹೆಚ್ಚು ಕಾಲ ಇರಬೇಕಾಗಿ ಬರಲಿಲ್ಲವಾದರೂ ಈ ಸಶ್ರಮ ಶಿಕ್ಷೆಯ ಅಲ್ಪಾವಧಿ ಸೆರೆವಾಸವೂ ಅವರ ಪಾಲಿಗೆ ತುಂಬ ಕಷ್ಟದಾಯಕವಾಗಿತ್ತು. ಆದರೆ ಈ ಬಗ್ಗೆ ಅವರು ತಮ್ಮ ನೆನಪುಗಳಲ್ಲಿ ('ದ.ಆಫ್ರಿಕಾದಲ್ಲಿ ಸತ್ಯಾಗ್ರಹ') 'ಈ ವಾಸದಲ್ಲಿ ಅನೇಕ ತೊಂದರೆಗಳಿದ್ದರೂ ಸಹಿಸಲು ಕಷ್ಟವಾಗಲಿಲ್ಲ. ಅವನ್ನೆಲ್ಲ ಇಲ್ಲಿ ಬರೆದು ಓದುಗರನ್ನು ಬೇಸರಪಡಿಸಲು ಇಷ್ಟಪಡುವುದಿಲ್ಲ' ಎಂದು ಸಂಕ್ಷಿಪ್ತವಾಗಿ ಬರೆದು ಮುಂದೆ ಸಾಗಿದ್ದಾರೆ. ಸುಮಾರು ಐದಾರು ವಾರಗಳ ಈ ಸೆರೆಮನೆವಾಸದಲ್ಲಿ ಅವರು ಬರೆದ ಒಂದು ಪತ್ರವನ್ನು ಅವರ ವ್ಯಕ್ತಿತ್ವದ ಸಮಗ್ರತೆಯನ್ನು ಅರಿಯುವ ಮುಂದುವರೆದ ಒಂದು ಪ್ರಯತ್ನವಾಗಿ ಗಮನಿಸಬಹುದು. ಈ ಪತ್ರವನ್ನು ಗಾಂಧಿ ಆಲ್ಬರ್ಟ್ ವೆಸ್ಟ್ ಅವರ ಸೋದರಿಯಾದ ದೇವಿಗೆ ಬರೆದಿದ್ದು, ಅದರಲ್ಲಿ ಮುಖ್ಯವಾಗಿ ಅವರು ಫೀನಿಕ್ಸ್ ಆಶ್ರಮದಲ್ಲಿನ ಬಾಲಕರ ದಿನಚರಿಯ ಬಗ್ಗೆ ವಿಚಾರಿಸಿದ್ದಾರಲ್ಲದೆ, ತಮ್ಮ ಕಿರಿಯ ಮಗ ದೇವದಾಸನಿಗೆ, ಆತ ತಾವು ಸತ್ಯಾಗ್ರಹಕ್ಕೆ ಹೊರಡುವ ಮುನ್ನ ತಮಗೆ ಕೊಟ್ಟಿದ್ದ ಆಶ್ವಾಸನೆಗಳನ್ನು ನೆನಪಿಸುವಂತೆ ತಿಳಿಸಿದ್ದಾರೆ. ಇದಕ್ಕಿಂತ ಮುಖ್ಯವಾಗಿ ಆಗ ತಾನೇ ಶಿಕ್ಷೆ ಮುಗಿಸಿ ಬಿಡುಗಡೆಯಾಗಿದ್ದ ತಮ್ಮ ಗೆಳೆಯ ಡಾ. ಪ್ರಾಣಜೀವನ ಮೆಹ್ತಾನ ಪುತ್ರಿ ಮತ್ತು ಹಿರಿಯ ಮಗ ಮಣಿಲಾಲನ ಮಾಜಿ ಪ್ರೇಮಿ, ಜೇಕಿ ಬಗ್ಗೆ ಬರೆದಿರುವ ಸಾಲುಗಳು ನಮ್ಮ ಗಮನ ಸೆಳೆಯುತ್ತವೆ. ಆಕೆಯ ಬಗ್ಗೆ ಚಿಂತಿಸದ ದಿನವೇ ಇಲ್ಲವೆಂದು ಹೇಳುವ ಗಾಂಧಿ, ಆಕೆ ತಮಗೆ ಕೊಟ್ಟ ಯಾವ ಮಾತನ್ನು ಉಲ್ಲಂಘಿಸಿದರೂ ಸರಿಯೇ, ಯಾವ ಪಥ್ಯವನ್ನು ಪಾಲಿಸದಿದ್ದರೂ ಸರಿಯೇ ತನ್ನ ದೇಹಕ್ಕೆ ಒಗ್ಗುವ ಏನು ಬೇಕಾದರೂ ತಿಂದು ಆರೋಗ್ಯ ಕಾಪಾಡಿಕೊಂಡು ಗಟ್ಟಿಗಿತ್ತಿಯಾಗಿ ಬೆಳೆಯಬೇಕೆಂದು ಸೂಚಿಸುತ್ತಾರೆ. ಮತ್ತು ಆಕೆಯ ತಂದೆಯ ಅಭ್ಯಂತರವಿಲ್ಲದಿದ್ದರೆ, ಪಶ್ಚಾತ್ತಾಪದಿಂದ ಕತ್ತರಿಸಿಕೊಂಡ ಕೂದಲನ್ನು ಮತ್ತೆ ಬೆಳೆಸಿಕೊಳ್ಳಬಹುದೆಂದೂ ತಿಳಿಸುತ್ತಾರೆ.

■

೩೩

ಕೊನೆಯ ಹೋರಾಟ

ಗಾಂಧಿ ಮತ್ತವರ ಗೆಳೆಯರ ಬಂಧನ ಮತ್ತು ಜಾಥಾದಲ್ಲಿದ್ದ ಕಾರ್ಮಿಕರ ಬಂಧನದ ಸುದ್ದಿ ನೆಟಾಲ್‌ನಾದ್ಯಂತ ಕಾಳ್ಗಿಚ್ಚಿನಂತೆ ಹಬ್ಬಿತು. ಈಗ ಕಬ್ಬಿನ ಗದ್ದೆಗಳಲ್ಲಿ ಮತ್ತು ಅವುಗಳ ನೆರೆಹೊರೆಯಲ್ಲೇ ಇದ್ದ ಸಕ್ಕರೆ ಗಿರಣಿಗಳ ಕೆಲಸಗಾರರು ಸ್ವಯಂಪ್ರೇರಿತರಾಗಿ ಕೆಲಸ ನಿಲ್ಲಿಸಿ ಮುಷ್ಕರ ಹೂಡಿದರು. ಈ ಹಿಂದೆಯೂ ಈ ಕೂಲಿಕಾರರು ತಮ್ಮನ್ನು ಬಲಾತ್ಕಾರದಿಂದ, ಹಿಂಸಾತ್ಮಕ ಕ್ರಮಗಳಿಂದ ಹೆಚ್ಚಿನ ದುಡಿಮೆಗೆ ದೂಡಿದ ಸಂದರ್ಭಗಳಲ್ಲಿ ಅವರು ಪ್ರತಿಭಟಿಸಿದ್ದರು; ಮೇಲಿನವರಿಗೆ ಮನವಿ ಸಲ್ಲಿಸುವ ಮೂಲಕ, ಕೆಲವೊಮ್ಮೆ ತಮ್ಮ ಮೇಲ್ವಿಚಾರಕರ ಮೇಲೆ ಹಲ್ಲೆ ಮಾಡುವ ಮೂಲಕ ಮತ್ತು ಸ್ವಲ್ಪ ಕಾಲ ಕೆಲಸ ನಿಲ್ಲಿಸುವ ಮೂಲಕ. ಆದರೆ ಈ ಬಾರಿಯ ಮುಷ್ಕರ ಪೂರ್ಣ ಪ್ರಮಾಣದ್ದಾಗಿತ್ತು, ವ್ಯಾಪಕವಾಗಿತ್ತು ಮತ್ತು ದೃಢ ನಿಶ್ಚಯದಿಂದ ಕೂಡಿತ್ತು. ನೆಟಾಲ್‌ನ ದಕ್ಷಿಣ ಭಾಗದ ಈ ತೋಟ-ಗದ್ದೆಗಳ ಮತ್ತು ಗಿರಣಿಗಳ ಕಾರ್ಮಿಕರು ಇವರಾರೂ ಗಾಂಧಿಯನ್ನು ನೋಡಿರಲಿಲ್ಲ. ಏಕೆಂದರೆ ಗಾಂಧಿ ಈವರೆಗೆ ಪ್ರಾಂತ್ಯದ ವಾಯುವ್ಯ ಮತ್ತು ಉತ್ತರ ಭಾಗಗಳಲ್ಲಿದ್ದ ಫೀನಿಕ್ಸ್ ಮತ್ತು ಅದರ ಸುತ್ತಮುತ್ತಲ ಗಣಿ ಪ್ರದೇಶಗಳಲ್ಲಷ್ಟೇ ಸಂಚರಿಸಿ ಹೋರಾಟ ರೂಪಿಸಿದ್ದರು. ಆದರೆ ಅವರೆಲ್ಲರೂ ಗಾಂಧಿ ಒಟ್ಟಾರೆ ಭಾರತೀಯರ ಹಿತ ಕಾಪಾಡಲು ಹೋರಾಟ ನಡೆಸಿ ಸೆರೆಮನೆವಾಸಗಳಿಗೆ ಒಳಗಾಗುತ್ತಿದ್ದಾರೆ ಎಂಬುದನ್ನು ಕೇಳಿದ್ದರು. ಈಗ ಗಾಂಧಿ ಹೋರಾಟ, ಸಾವಿರಾರು ಕೂಲಿಕಾರರ ಜಾಥಾ ಮತ್ತು ಅವರೆಲ್ಲರ ಬಂಧನದ ಸುದ್ದಿಯ ಮೂಲಕ ಈ ಕೂಲಿಕಾರರನ್ನೂ ಜಾಗೃತಗೊಳಿಸಿತ್ತು. ಈ ಮೊದಲು ಉತ್ತರ ಭಾಗದ ಗಣಿ ಪ್ರದೇಶದ ಕಾರ್ಮಿಕರಷ್ಟೇ ಮುಷ್ಕರ ಹೂಡಿದ್ದರೆ ಈಗ ದಕ್ಷಿಣ ಗಡಿಯ ಗಣಿ ಮತ್ತು ತೋಟಗಳ ಕಾರ್ಮಿಕರೂ ಮುಷ್ಕರಕ್ಕೆ ತೊಡಗಿದರು.

ನಿಲ್ಲದ ಕಾರ್ಮಿಕ ಮುಷ್ಕರ

ಈ ಅಶಾಂತಿ ದಕ್ಷಿಣ ಭಾಗದ ಗಣಿ ಮತ್ತು ತೋಟ ಪ್ರದೇಶಗಳಲ್ಲದೆ ಇಟ್ಟಿಗೆ ಗೂಡುಗಳ ಕಾರ್ಮಿಕ ವಲಯಕ್ಕೂ ಹಬ್ಬಲು ಕಾರಣವಾಯಿತು. ಸರ್ಕಾರ ಸೇನೆಯನ್ನೂ, ನೌಕಾದಳವನ್ನು ಎಚ್ಚರದಲ್ಲಿಟ್ಟು ಪರಿಸ್ಥಿತಿಯನ್ನು ತಹಬಂದಿಗೆ ತರಲು ಯತ್ನಿಸಿತು. ಆದರೆ ಕೂಲಿಕಾರರು ಗಣಿ-ತೋಟಗಳಿಂದ ಹೊರಬಂದು ಪಟ್ಟಣಗಳಲ್ಲಿ ಸೇರತೊಡಗಿ ಪುರಸಭೆ, ಆಸ್ಪತ್ರೆಗಳು, ಹೋಟೆಲ್ ಮತ್ತು ಸಣ್ಣಪುಟ್ಟ ಉದ್ಯಮಗಳಲ್ಲಿ ಕೆಲಸಗಳಲ್ಲಿದ್ದ ಭಾರತೀಯರನ್ನು ಮುಷ್ಕರಕ್ಕೆ ಪ್ರಚೋದಿಸತೊಡಗಿದರು. ಪೀಟರ್‌ಮೆರಿಟ್ಜ್‌ಬರ್ಗ್, ಡರ್ಬಾನ್ ಮತ್ತು ಜೊಹಾನ್ಸ್‌ಬರ್ಗ್‌ಗಳಲ್ಲಿ ಭಾರತೀಯರ ಸಭೆಗಳು ನಡೆದವು. ಅಲ್ಲೆಲ್ಲ ಗಾಂಧಿ ಮತ್ತು ಗೋಖಲೆಯವರಿಗೆ ಜೈಕಾರ ಮತ್ತು ಬೆಂಬಲ ಘೋಷಿತವಾದವು. ಕೆಲವು ಭಾಷಣಕಾರರು 'ನಮಗಾಗಿ ಗಾಂಧಿ ಸೆರೆಮನೆಗೆ ಸೇರಿದ್ದಾರೆ. ಅವರನ್ನು ಹಾಗೇ

ಸೆರೆಮನೆಯಲ್ಲಿ ಕೊಳೆಯಲು ಬಿಡಬೇಕೇ?' ಎಂದು ಜನರನ್ನು ಕೇಳಿದರೆ ಇನ್ನು ಕೆಲವರು ಸರ್ಕಾರ ಕೂಡಲೇ ಗಾಂಧಿಯವರೊಂದಿಗೆ ಮಾತುಕತೆ ಆರಂಭಿಸಬೇಕೆಂದು ಆಗ್ರಹಿಸಿದರು.

ನೆಟಾಲ್‌ನ ಎಲ್ಲ ಕಬ್ಬಿನ ಗದ್ದೆಗಳು, ಸಕ್ಕರೆ ಗಿರಣಿಗಳು, ಕಲ್ಲಿದ್ದಲು ಗಣಿಗಳು, ಇಟ್ಟಿಗೆ ಗೂಡುಗಳು ಮತ್ತು ಪಟ್ಟಣಗಳಲ್ಲಿನ ಎಲ್ಲ ಅಂಗಡಿಗಳು, ಹೋಟೆಲ್‌ಗಳು, ರೈಲ್ವೇ ಮತ್ತು ಹಡಗು ಕಾರ್ಯಾಗಾರಗಳಲ್ಲಿ ಕೆಲಸ ಸ್ಥಗಿತಗೊಂಡಿತು. ರಾಜಧಾನಿ ಡರ್ಬಾನ್ ನಗರ ಸೋತು ಮಲಗಿದ್ದಂತೆ ಕಾಣುತ್ತಿತ್ತು. ನಗರದ ನ್ಯಾಯಾಧೀಶರು ನಗರ ಪ್ರದಕ್ಷಿಣೆ ಮಾಡಿ ಭಾರತೀಯರ ಮನವೊಲಿಸುವ ಪ್ರಯತ್ನ ಮಾಡಿದರು. ಅವರೆಲ್ಲರ ಒಕ್ಕೊರಲ ಮಾತು ಒಂದೇ ಆಗಿತ್ತು: 'ನಮ್ಮ 'ರಾಜ' ಬಂದು ಹೇಳಿದರೆ ಮಾತ್ರ ನಾವು ಕೆಲಸಕ್ಕೆ ಹಿಂದಿರುಗುತ್ತೇವೆ.' ಅವರ ರಾಜ ಎಂದರೆ ಗಾಂಧಿ ಎಂದು ಬೇರೆ ಹೇಳಬೇಕಾಗಿಲ್ಲ. ಆ ನ್ಯಾಯಾಧೀಶ ಸರ್ಕಾರಕ್ಕೆ ನೀಡಿದ ವರದಿಯ ಪ್ರಕಾರ, ಭಾರತೀಯರು ಅವರ ಪೈಕಿಯ ಕೂಲಿಗಳ ಮೇಲಿನ ಮೂರು ಪೌಂಡುಗಳ ತೆರಿಗೆಯ ರದ್ದತಿಯಲ್ಲದೆ, ಮತದಾನದ ಹಕ್ಕು ಮತ್ತು ವರ್ಣ ಸಮಾನತೆಯ ಶಾಸನಗಳ ಜಾರಿಗಾಗಿ ಹಠ ಹಿಡಿದಿದ್ದರು.

ಈ ಮಧ್ಯೆ ಹಲವೆಡೆ ಭಾರತೀಯರಲ್ಲಿ ಹೆದರಿಕೆ ಹುಟ್ಟಿಸಲು ಪೊಲೀಸರ ಮತ್ತು ಸೇನೆಯ ಪಥ ಸಂಚಲನಗಳನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಕೆಲವೆಡೆ ಕೂಲಿಕಾರರು ಮತ್ತು ಬಂದೂಕು ಹಿಡಿದ ಅಶ್ವದಳಗಳ ನಡುವೆ ಸಂಘರ್ಷಗಳು ಉಂಟಾಗಿ ಎರಡೂ ಕಡೆ ಜನ ಗಂಭೀರವಾಗಿ ಗಾಯಗೊಂಡರು. ನವೆಂಬರ್ ೧೩ರಂದು ಮೌಂಟ್ ಎಜ್‌ಕಾಂಬ್ ಎಂಬ ಕಬ್ಬು ಮತ್ತು ಸಕ್ಕರೆ ಕ್ಷೇತ್ರದ ೨೭೦೦ ಜನ ಕೂಲಿಕಾರರನ್ನು ಮುಷ್ಕರಕ್ಕೆ ಸೇರದಂತೆ ತಡೆಯಲು ಅದರ ಮಾಲೀಕರು ಅದರ ಸುತ್ತ ಮುಳ್ಳಿನ ತಂತಿಬೇಲಿ ನಿರ್ಮಿಸಿ ಬಲಪ್ರಯೋಗದ ಮೂಲಕ ಕೂಲಿಕಾರರನ್ನು ಕೆಲಸಕ್ಕೆ ಹಚ್ಚಲು ತಮ್ಮ ಇತರೆ ಬಿಳಿಯ ನೌಕರರನ್ನು ನೇಮಿಸಿದರು. ಆದರೆ ಬಹುಪಾಲು ಕೂಲಿಕಾರರು ಈ ಬಲಪ್ರಯೋಗಕ್ಕೆ ಬಗ್ಗದೆ ಮುಷ್ಕರ ಮುಂದುವರೆಸಿದರು. ಲಾಠಿ ಮತ್ತು ಚಾಟಿ ಏಟುಗಳ ಬಲಾತ್ಕಾರ ಶುರುವಾದಾಗ ಕೂಲಿಕಾರರೂ ಹಿಂಸೆಗೆ ಇಳಿದು ಮಾಲೀಕ ವರ್ಗದ ಸಿಬ್ಬಂದಿಯ ಮೇಲೆ ಹಲ್ಲೆ ಮಾಡತೊಡಗಿದರು. ಕೂಲಿಕಾರರು ಕಬ್ಬಿನ ಜಲ್ಲೆ ಮತ್ತು ಕಲ್ಲುಗಳೊಂದಿಗೆ ಹೋರಾಟಕ್ಕಿಳಿದಾಗ ಪೊಲೀಸರನ್ನು ಕರೆಸಲಾಯಿತು. ಪರಿಸ್ಥಿತಿ ನಿಯಂತ್ರಣಕ್ಕೆ ಬಾರದಿದ್ದಾಗ ಗೋಲೀಬಾರ್ ನಡೆದು ಭಾರತೀಯರ ಕಡೆಯಿಂದ ನಾಲ್ವರು ಪ್ರಾಣ ತೆರಬೇಕಾಯಿತು. ಎರಡೂ ಕಡೆ ಸೇರಿ ಇಪ್ಪತ್ತಕ್ಕೂ ಹೆಚ್ಚು ಜನ ಗಾಯಗೊಂಡಿದ್ದರು.

ಕಪ್ಪು ಜನರಿಗೆ ಸ್ಫೂರ್ತಿಯಾದ ಗಾಂಧಿ ಚಳುವಳಿ

ಭಾರತೀಯ ಕೂಲಿ ಕಾರ್ಮಿಕರ ಈ ಹೋರಾಟದ ಒಂದು ಪ್ರಸಂಗವನ್ನು ಕಣ್ಣಾರೆ ಕಂಡ ಝುಲು ಸುಧಾರಕ ಮತ್ತು 'ನೇಟಿವ್ ನ್ಯಾಷನಲ್ ಕಾಂಗ್ರೆಸ್' ನಾಯಕ ಜಾನ್ ಡುಬೆ, ಭಾರತೀಯ ಕೂಲಿಕಾರರು ಸತತ ಹಿಂಸಾಚಾರದ ನಡುವೆಯೂ ವಿಚಲಿತರಾಗದೆ ಐಕ್ಯತೆಯನ್ನು ಪ್ರದರ್ಶಿಸುವಲ್ಲಿ ಗಾಂಧಿ ಪ್ರಭಾವವನ್ನು ಕಂಡು, ಭಾರತೀಯ ಕೂಲಿಕಾರರು ಒರಟರು ಎಂಬ ತಮ್ಮ ಅಭಿಪ್ರಾಯವನ್ನು ತಾವು ಬದಲಿಸಿಕೊಂಡಿದ್ದಾಗಿ ಹೇಳಿದರು. ಹಾಗೇ ಕೇಪ್ ರಾಜ್ಯದ ಕರಿಯರ ನಾಯಕ ಡಾ. ಅಬ್ದುಲ್ ರೆಹಮಾನ್,

ಕೆಲವೇ ಭಾರತೀಯರು ಬಲಿಷ್ಠ ಬಿಳಿಯ ಪ್ರಭುತ್ವವನ್ನು ಎದುರಿಸುತ್ತಿರುವ ರೀತಿ ನೋಡಿ ಕರಿಯರೂ ಇನ್ನು ಮುಂದೆ ಸತ್ಯಾಗ್ರಹ ಮಾರ್ಗವನ್ನು ಬಳಸುವ ಆಲೋಚನೆ ಮಾಡಬಹುದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಈ ಪ್ರತಿಕ್ರಿಯೆಗಳಿಂದ ಬೆಚ್ಚಿದ ಬಿಳಿಯ ಸಮುದಾಯ ಪಶ್ಚಿಮದ ಆಧುನಿಕ ನಾಗರೀಕತೆಯನ್ನು ಶಪಿಸುವ ಗಾಂಧಿಗೆ ಇಲ್ಲಿ ಜಾಗ ಕೊಡಕೂಡದೆಂದೂ, ಮುಷ್ಕರದ ಬೆನ್ನು ಮೂಳೆ ಮುರಿದು ಭಾರತೀಯರೆಲ್ಲರನ್ನೂ ದೇಶಾಂತರ ಕಳಿಸಬೇಕೆಂದು ಒತ್ತಾಯಿಸಿ ಸಭೆಗಳನ್ನು ನಡೆಸತೊಡಗಿದರು ಮತ್ತು ಪತ್ರಿಕೆಗಳಿಗೆ ಬರೆಯತೊಡಗಿದರು. ಇದರ ಪರಿಣಾಮವಾಗಿ ಜನಪ್ರತಿನಿಧಿಗಳ ನಡುವೆಯೂ ಭಾರತೀಯರ ಬೇಡಿಕೆಗಳ ಬಗ್ಗೆ ಮತ್ತೆ ಬಿಸಿಬಿಸಿ ಚರ್ಚೆ ಆರಂಭವಾಗಿ ಕೆಲ ಶಾಸಕರು ಭಾರತೀಯರ ಬೇಡಿಕೆಗಳ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಲಾರಂಭಿಸಿದರು.

ಆಶ್ರಮ ತುಂಬಿದ ಕೂಲಿಕಾರರು-ಮಧ್ಯಸ್ಥಿಕೆಗಾಗಿ ಬಂದ ಸಿ.ಎಫ್. ಆಂಡ್ರ್ಯೂಸ್

ಈ ಮಧ್ಯೆ ಮುಷ್ಕರಕಾರರು ಪೊಲೀಸ್ ದಬ್ಬಾಳಿಕೆಯಿಂದ ತಪ್ಪಿಸಿಕೊಳ್ಳಲು ಫೀನಿಕ್ಸ್ ಆಶ್ರಮಕ್ಕೆ ಆಶ್ರಯಕ್ಕಾಗಿ ಧಾವಿಸಲಾರಂಭಿಸಿದರು. ಇವರ ಜೊತೆಗೆ ಭಾರತೀಯ ಸಮುದಾಯದ ಅನೇಕ ನಾಯಕರೂ ಸತ್ಯಾಗ್ರಹದ ಮುಂದುವರಿಕೆಗಾಗಿ ಗಾಂಧಿಯವರ ಪ್ರತಿನಿಧಿಯಾಗಿದ್ದ ಆಲ್ಬರ್ಟ್ ವೆಸ್ಟ್‌ರ ಸಲಹೆ ಕೇಳಲು ಬರಹತ್ತಿದರು. ವೆಸ್ಟ್ ಮತ್ತು ಮಗನಲಾಲ್ ಕೂಲಿಕಾರರಿಗೆ ಆಹಾರ ನೀಡಿ ಅವರಿಗೆಲ್ಲ ಮಲಗಲು ವ್ಯವಸ್ಥೆ ಮಾಡುತ್ತಿದ್ದರು. ಇದರಲ್ಲಿ ಗಾಂಧಿಯ ಕಿರಿಯ ಮಗ ಹನ್ನೆರಡು ವರ್ಷ ವಯಸ್ಸಿನ ದೇವದಾಸನ ಪಾತ್ರವೇನೂ ಕಡಿಮೆ ಇರಲಿಲ್ಲ. ಇದೆಲ್ಲದರ ಪರಿಣಾಮವೆಂದರೆ ಈವರೆಗೆ ಉದ್ದೇಶಪೂರ್ವಕವಾಗಿಯೇ ಸತ್ಯಾಗ್ರಹ ಚಟುವಟಿಕೆಗಳಿಂದ ದೂರವಿದ್ದ ವೆಸ್ಟ್ ಮತ್ತು ಮಗನ್‌ಲಾಲ್‌ರ ಬಂಧನ ಆಯಿತು. ಇದರಿಂದಾಗಿ ತಮ್ಮ ಎಲ್ಲ ಕಾರ್ಯಾಚರಣೆಯ ಕೇಂದ್ರವಾಗಿದ್ದ ಫೀನಿಕ್ಸ್ ಆಶ್ರಮಕ್ಕೆ ಓರ್ವ ಯಜಮಾನನಿಲ್ಲದಾಯಿತು.

ಇದರಿಂದ ಸತ್ಯಾಗ್ರಹ ದಿಕ್ಕೆಡುವುದೆಂದು ಗಾಬರಿಯಾದ ಬಂಧನಕ್ಕೊಳಗಾಗದ ಆಶ್ರಮವಾಸಿಗಳಾದ ವೆಸ್ಟ್‌ರ ಸೋದರಿ ಮತ್ತು ಗಾಂಧಿಯ ಕಾರ್ಯದರ್ಶಿಯಾಗಿದ್ದ ಸೋನ್ಯಾ ಶ್ಲೆಸಿನ್ ಗೋಖಲೆಯವರಿಗೆ ಒಂದು ತಂತಿ ಕಳಿಸಿ, ಅವರ ತುರ್ತು ಮಧ್ಯಪ್ರವೇಶವನ್ನು ಕೋರಿದರು. ಪರಿಸ್ಥಿತಿ ಕೈಮೀರಿ ಹೋಗುತ್ತಿದೆ ಎಂದು ಆತಂಕಗೊಂಡ ಗೋಖಲೆಯವರು ಕೂಡಲೇ, ತಮ್ಮ ಮತ್ತು ಭಾರತೀಯರ ಗೆಳೆಯರಾಗಿ ತಮ್ಮೆಲ್ಲ ಧನ ಸಂಗ್ರಹವನ್ನು ಸತ್ಯಾಗ್ರಹ ನಿಧಿಗೆ ಅರ್ಪಿಸಿದ್ದ, ರಬೀಂದ್ರನಾಥ ಟ್ಯಾಗೋರರ ದೊಡ್ಡ ಅಭಿಮಾನಿಯೂ ಮತ್ತು ದೆಹಲಿಯ ಕಾಲೇಜೊಂದರಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರೂ ಆಗಿದ್ದ ಪಾದ್ರಿ ಸಿ.ಎಫ್. ಆ್ಯಂಡ್ರ್ಯೂಸ್ ಅವರನ್ನು, ಗಾಂಧಿ ಮತ್ತು ಸರ್ಕಾರದ ನಡುವಣ ತಮ್ಮ ರಾಯಭಾರಿಯಾಗಿ ಕೆಲಸ ಮಾಡಲು ಕೋರಿ, ಅವರನ್ನು ದ.ಆಫ್ರಿಕಾಕ್ಕೆ ಕಳಿಸಿದರು. ಆಂಡ್ರ್ಯೂಸ್ ತಮ್ಮ ಸಹಮನಸ್ಕ ಗೆಳೆಯ ಹಾಗೂ ಸಹೋದ್ಯೋಗಿ ಪಾದ್ರಿ ಡಬ್ಲ್ಯು.ಡಬ್ಲ್ಯು.ಪಿಯರ್ಸನ್ ಜೊತೆಗೆ ದ.ಆಫ್ರಿಕಾಕ್ಕೆ ಹಡಗು ಹತ್ತಿದರು. ಈಗ ಬಂಧನವಾಗದೆ ಉಳಿದ ಗಾಂಧಿಯವರ ಏಕೈಕ ಸಹಚರನೆಂದರೆ ಜೊಹಾನ್ಸ್‌ಬರ್ಗ್‌ನಲ್ಲಿದ್ದುಕೊಂಡು ಗಾಂಧಿಯವರ ವಕೀಲಿಕೆಯ (ಬಹುತೇಕ

ಸತ್ಯಾಗ್ರಹಿಗಳ ಮೇಲೆ ಹೂಡಲಾಗುತ್ತಿದ್ದ ಮೊಕದ್ದಮೆಗಳಿಗೆ ಸಂಬಂಧಿಸಿದ್ದು) ಜವಾಬ್ದಾರಿಗಳನ್ನು ನೋಡಿಕೊಳ್ಳುತ್ತಿದ್ದ ರೀಚ್ ಮಾತ್ರ.

ಭಾರತದಲ್ಲೂ ಪ್ರತಿಭಟನೆ–ಬ್ರಿಟಿಷ್ ಸರ್ಕಾರದ ಮೇಲೆ ಹೆಚ್ಚಿದ ಒತ್ತಡ

ಮುಷ್ಕರ ಮತ್ತು ಸರ್ಕಾರದಿಂದ ಅದರ ದಮನ ಮುಂದುವರೆದಂತೆ ಭಾರತದಲ್ಲೂ ಈ ಬೆಳವಣಿಗೆ ಜನರಲ್ಲಿ ಆಕ್ರೋಶವನ್ನುಂಟು ಮಾಡತೊಡಗಿತ್ತು. ದೇಶದ ಎಲ್ಲ ಭಾಗಗಳಲ್ಲಿ ಸಭೆಗಳು ನಡೆದು ಅಲ್ಲಿನ ಖಂಡನಾ ನಿರ್ಣಯಗಳನ್ನು ಭಾರತ ಸರ್ಕಾರದ ವೈಸ್‌ರಾಯ್‌ಗೆ ಕಳಿಸುವ ಆಂದೋಲನವೊಂದು ಆರಂಭವಾಯಿತು. ಗೋಪಾಲಕೃಷ್ಣ ಗೋಖಲೆಯವರು ಇದರ ನಾಯಕರಾಗಿದ್ದು, ಅವರು ದ.ಆಫ್ರಿಕಾದ ಸತ್ಯಾಗ್ರಹ ನಿಧಿಗಾಗಿ ನಿಧಿ ಸಂಗ್ರಹಣೆಯಲ್ಲೂ ತೊಡಗಿದ್ದರು. ನವೆಂಬರ್ ಕೊನೆಯ ಹೊತ್ತಿಗಾಗಲೇ ಐದು ಸಾವಿರ ಪೌಂಡುಗಳು ಈ ನಿಧಿಗಾಗಿ ಸಂಗ್ರಹವಾಗಿತ್ತು. ಇದಕ್ಕೆ ಕವಿ ರಬೀಂದ್ರನಾಥ ಟ್ಯಾಗೋರ್, ಗೊಂಡಾಲ್‌ನ ಮಹಾರಾಣಿ, ಬರೋಡಾದ ಮಹಾರಾಜ, ಮದ್ರಾಸ್‌ನ ಬಿಷಪ್ ಸೇರಿದಂತೆ ವಿವಿಧ ಕ್ಷೇತ್ರಗಳ ಜನ ಗೋಖಲೆಯವರಿಗೆ ತಮ್ಮ ಶಕ್ತ್ಯಾನುಸಾರ ಹಣ ಕಳಿಸತೊಡಗಿದರು. ಕರಾಚಿ ಕಾಂಗ್ರೆಸ್ ಅಧಿವೇಶನ ಗಾಂಧಿಯವರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದ ಮತ್ತು ಬ್ರಿಟಿಷ್ ಸಾಮ್ರಾಜ್ಯದ ಎಲ್ಲ ಪ್ರಜೆಗಳನ್ನೂ ಸ್ಥಳೀಯ ಬಿಳಿಯರ ಒತ್ತಾಯಗಳಿಗೆ ಮಣಿಯದೆ ಸಮಾನ ಗೌರವ ಮತ್ತು ಸ್ಥಾನಮಾನಗಳೊಂದಿಗೆ ನಡೆಸಿಕೊಳ್ಳಬೇಕೆಂದು ಬ್ರಿಟಿಷ್ ಸಾಮ್ರಾಜ್ಯದ ಸರ್ಕಾರವನ್ನು ಆಗ್ರಹಿಸುವ ಠರಾವನ್ನು ಗಾಂಧಿಗೆ ಕಳಿಸಿಕೊಟ್ಟಿತು. ಟ್ಯಾಗೋರ್ ಗಾಂಧಿಗೆ ಒಂದು ವೈಯಕ್ತಿಕ ಪತ್ರ ಬರೆದು, ಜಗತ್ತಿಗೇ ಅನನ್ಯವಾದ ಹೋರಾಟಕ್ಕಾಗಿ ಅವರನ್ನು ಅಭಿನಂದಿಸಿದರು.

ದ.ಆಫ್ರಿಕಾದಲ್ಲಿನ ಸತ್ಯಾಗ್ರಹದಲ್ಲಿ ಮಹಿಳೆಯರೂ ಪಾಲ್ಗೊಂಡು ಸೆರೆಮನೆ ಸೇರಿರುವ ಸುದ್ದಿ ಭಾರತದ ಜನರನ್ನು ವಿಶೇಷವಾಗಿ ಕೆರಳಿಸಿತ್ತು. ಈಗ ಗಾಂಧಿ ಎಂಬ ಹೆಸರು ಭಾರತದ ಎಲ್ಲೆಡೆ ಸುಪರಿಚಿತವಾಗಿತ್ತು. ಕೆಲವರು ಗಾಂಧಿ ಹೋರಾಟದ ಬಗ್ಗೆ ನಾಟಕ ಮತ್ತು ಕಾವ್ಯವನ್ನೂ ಬರೆದು ಸಾರ್ವಜನಿಕ ಸಭೆಗಳಲ್ಲಿ ಅವುಗಳ ಪ್ರದರ್ಶನ/ವಾಚನಗಳನ್ನೂ ನಡೆಸಲಾರಂಭಿಸಿದರು. ಇನ್ನೂ ಕೆಲವರು ಗಾಂಧಿಯನ್ನು ಕುರಿತ ಸಣ್ಣ ಪರಿಚಯ ಪುಸ್ತಕಗಳನ್ನು ರಚಿಸಿ ಸಭೆಗಳಲ್ಲಿ ಮಾರಿ 'ನಿಧಿ'ಗಾಗಿ ಹಣ ಸಂಗ್ರಹಿಸತೊಡಗಿದರು. ಈ ಆಂದೋಲನ ದೇಶದಲ್ಲಿ ಅಶಾಂತಿ ಮತ್ತು ಕಾನೂನು ಸುವ್ಯವಸ್ಥೆಗೆ ಭಂಗ ಉಂಟುಮಾಡುವ ಸೂಚನೆಗಳನ್ನರಿತ ವೈಸ್‌ರಾಯ್ ಲಾರ್ಡ್ ಹಾರ್ಡಿಂಜ್ ಮದ್ರಾಸ್ (ಈಗಿನ ಚೆನ್ನೈ)ನಲ್ಲಿ ಮಾಡಿದ ಭಾಷಣವೊಂದರಲ್ಲಿ ಲಂಡನ್‌ನಲ್ಲಿನ ಬ್ರಿಟಿಷ್ ಸಾಮ್ರಾಜ್ಯ ಸರ್ಕಾರವನ್ನು ಎಚ್ಚರಿಸಿದರು. ತನಗೆ ದೇಶದ ವಿವಿಧ ಕಡೆಗಳಿಂದ ಬಂದ ತಂತಿ ಸಂದೇಶಗಳ ರೂಪದ ನಿರ್ಣಯಗಳನ್ನು ಅದರ ಅವಗಾಹನೆಗಾಗಿ ಕಳಿಸಿ, ದ.ಆಫ್ರಿಕಾದಲ್ಲಿನ ಸಮಸ್ಯೆಯನ್ನು ಪರಿಹರಿಸಲು ತುರ್ತು ಕ್ರಮ ಕೈಗೊಳ್ಳಲು ಕೋರಿದರು. ತನ್ನ ಕೋರಿಕೆ ತಕ್ಷಣಕ್ಕೆ ಯಾವುದೇ ಪ್ರತಿಸ್ಪಂದನವನ್ನು ಉಂಟುಮಾಡದಿದ್ದಾಗ ಹಾರ್ಡಿಂಜ್, ಗೋಖಲೆಯವರ ಸಲಹೆಯ ಮೇರೆಗೆ ನವೆಂಬರ್ ಕೊನೆಯ ವಾರದಲ್ಲಿ ಭಾರತೀಯರ ಪರವಾದ ಹೇಳಿಕೆಯೊಂದನ್ನಿತ್ತು, ಅಲ್ಲಿ ಭಾರತೀಯರ ಮೇಲೆ ನಡೆದಿರುವ ಹಿಂಸೆ–ದಬ್ಬಾಳಿಕೆಗಳ ಬಗ್ಗೆ ತನಿಖೆ ನಡೆಸಲು ಮತ್ತು

ಒಟ್ಟಾರೆ ಅಲ್ಲಿನ ಸಮಸ್ಯೆಗಳನ್ನು ಅರಿಯಲು ವಿಚಾರಣಾ ಆಯೋಗವೊಂದನ್ನಾದರೂ ನೇಮಿಸಬೇಕೆಂದು ಲಂಡನ್‌ನಲ್ಲಿನ ತನ್ನ ಸರ್ಕಾರವನ್ನು ಆಗ್ರಹಿಸಿದರು.

ವಿಚಾರಣಾ ಆಯೋಗದ ನೇಮಕ–ಬಂದಿಗಳ ಬಿಡುಗಡೆ

ಇದರ ಮತ್ತು ಇಂಗ್ಲೆಂಡ್‌ನಲ್ಲಿ ಲಾರ್ಡ್ ಆ್ಯಂಪ್ಟ್‌ಹಿಲ್‌ರವರ ನೇತೃತ್ವದಲ್ಲಿ ಕ್ರೋಢೀಕೃತವಾಗಲಾರಂಭಿಸಿದ್ದ ಭಾರತೀಯರ ಪರವಾದ ಸಾರ್ವಜನಿಕಾಭಿಪ್ರಾಯದ ಒತ್ತಡದ ಪರಿಣಾಮವೆಂದರೆ ೧೯೧೩ರ ಡಿಸೆಂಬರ್ ೨ನೇ ವಾರದ ಹೊತ್ತಿಗೆ ಲಂಡನ್‌ನ ಬ್ರಿಟಿಷ್ ಸಾಮ್ರಾಜ್ಯ ಸರ್ಕಾರದ ಶಿಫಾರ್ಸಿನ ಮೇರೆಗೆ ದ.ಆಫ್ರಿಕಾ ಒಕ್ಕೂಟದ ಗವರ್ನರ್ ಜನರಲ್ ಲಾರ್ಡ್ ಗ್ಲ್ಯಾಡ್‌ಸ್ಟೋನ್ ವಿಚಾರಣಾ ಆಯೋಗವೊಂದನ್ನು ನೇಮಿಸಲು ನಿರ್ಧರಿಸಿದ್ದು. ಈ ನಿರ್ಧಾರಕ್ಕೆ ಜ. ಸ್ಮಟ್ಸ್ ಸಮ್ಮತಿಸುವುದು ಅನಿವಾರ್ಯವೇ ಆಗಿತ್ತು. ಏಕೆಂದರೆ ಭಾರತೀಯ ಕೂಲಿ ಕಾರ್ಮಿಕರ, ನೌಕರರ, ಬೀದಿ ವ್ಯಾಪಾರಿಗಳ ಮುಷ್ಕರ ಮತ್ತು ಬಂಧನಗಳಿಂದ ದ.ಆಫ್ರಿಕಾದ ಅರ್ಧ ಭಾಗದ ಆರ್ಥಿಕತೆಗೆ ಪಾರ್ಶ್ವವಾಯು ಬಡಿದಂತಾಗಿತ್ತು. ಬಿಳಿಯರ ಬಡಾಯಿ, ಹೇಳಿಕೆಗಳಿಗೆ, ಆಕ್ರೋಶಗಳಿಗೆ ಸೀಮಿತವಾಗಿತ್ತೇ ಹೊರತು ಅವರು ಗದ್ದೆ–ತೋಟಗಳಲ್ಲಿ, ಗಣಿ–ಗೂಡುಗಳಲ್ಲಿ ಮೈಬಗ್ಗಿಸಿ ದುಡಿಯಲು ತಯಾರಾಗಿರಲಿಲ್ಲ. ಜೊತೆಗೆ ಸೆರೆಮನೆಗಳು ಮುಷ್ಕರ ನಿರತರಿಂದ ತುಂಬಿ ತುಳುಕುತ್ತಿದ್ದು ಮತ್ತಷ್ಟು ಬಂಧನಗಳು ವ್ಯಾವಹಾರಿಕವಾಗಿ ಅಸಾಧ್ಯವಾಗಿತ್ತು. ಹಾಗಾಗಿ ಇತ್ತೀಚಿನ ಗಲಭೆಗಳು ಮತ್ತು ಅದಕ್ಕೇನು ಕಾರಣಗಳು ಎಂಬುದರ ಬಗ್ಗೆ ಅಧ್ಯಯನ ಮಾಡಿ ವರದಿ ನೀಡಲು ನ್ಯಾಯವೇತ್ತ ಸರ್ ವಿಲಿಯಮ್ ಸಾಲೋಮನ್ ಅಧ್ಯಕ್ಷತೆಯಲ್ಲಿ ಮೂವರು ಸದಸ್ಯರ ಆಯೋಗವೊಂದರ ನೇಮಕದ ಪ್ರಕಟಣೆ ಹೊರಬಿತ್ತು. ಇದರ ಜೊತೆಗೇ, ಆಯೋಗದ ಕೆಲಸವನ್ನು ಸುಗಮಗೊಳಿಸಲು ಅನುಕೂಲವಾಗುವ ವಾತಾವರಣವನ್ನು ನಿರ್ಮಿಸಲೆಂದು ಗಾಂಧಿ ಮತ್ತವರ ಸಹವರ್ತಿಗಳ ಬಿಡುಗಡೆಯ ಆದೇಶವೂ ಹೊರಬಂತು.

ಡಿಸೆಂಬರ್ ೧೮ರಂದು ಗಾಂಧಿ ಮತ್ತು ಪೊಲಾಕ್–ಕಲೆನ್‌ಬಾಕ್ ಅವರನ್ನು ಬಿಡುಗಡೆ ಮಾಡಿದರೆ ೨೧ರಂದು ಕಸ್ತೂರಬಾ ಮತ್ತವರ ಜೊತೆಯ ಮಹಿಳಾ ಕೈದಿಗಳನ್ನು ಬಿಡುಗಡೆ ಮಾಡಲಾಯಿತು. ಕಸ್ತೂರಬಾ ಅವರನ್ನು ಸ್ವಾಗತಿಸಲು ಸೆರೆಮನೆ ಬಳಿ ಹೋಗಿದ್ದ ಪೊಲಾಕ್‌ನ ಪತ್ನಿ ಮಿಲಿ ಪೋಲಾಕ್ 'ಬಾ ಅವರು ಗುರುತು ಸಿಗದಷ್ಟು ಕೃಶವಾಗಿ ಮೂಳೆ ಚಕ್ಕಳದಂತೆ ಕಾಣುತ್ತಿದ್ದರು' ಎಂದು ತಮ್ಮ ನೆನಪುಗಳಲ್ಲಿ ದಾಖಲಿಸಿದ್ದಾರೆ. ಎಂಟು ವಾರಗಳ ಸಶ್ರಮ ಶಿಕ್ಷೆಯ ಆ ಅವಧಿಯಲ್ಲಿ ತಮಗೊಲ್ಲದ ಆಹಾರವನ್ನು ತ್ಯಜಿಸಿ ಮತ್ತು ಸತತವಾಗಿ ದುಡಿದು ಬಾ ಹಣ್ಣಾಗಿ ಹೋಗಿದ್ದರು ಎಂದವರು ಬರೆದಿದ್ದಾರೆ.

ಆಯೋಗದ ಬಗ್ಗೆ ಗಾಂಧಿಯ ತಕರಾರು–ಬದಲಾದ ರೂಪ

ಗಾಂಧಿ ಬಿಡುಗಡೆಯಾದೊಡನೆ ವಿಚಾರಣಾ ಆಯೋಗದ ರಚನೆ ಸರಿಯಿಲ್ಲವೆಂದೂ ಅದರ ಇಬ್ಬರು ಸದಸ್ಯರಾದ ಲೆ.ಕ. ವೈಲಿ ಮತ್ತು ಎಡ್ವರ್ಡ್ ಎಸ್ಲೆನ್ ಭಾರತೀಯರ ಹಿತಾಸಕ್ತಿಯ ಬಗ್ಗೆ ಮೊದಲಿಂದಲೂ ಸಹಾನುಭೂತಿ ಹೊಂದಿಲ್ಲದವರೆಂದು ಹೇಳಿಕೆ ನೀಡಿ, ಈ ತಪ್ಪನ್ನು ಸರಿಪಡಿಸದಿದ್ದರೆ ಮತ್ತೆ ಹೋರಾಟ ಆರಂಭಿಸುವುದಾಗಿಯೂ ಹೇಳಿಕೆ ನೀಡಿದರು. ಪೊಲಾಕ್ ಮತ್ತು ಕಲೆನ್‌ಬಾಕ್

ಗಾಂಧಿಯವರನ್ನು ಬೆಂಬಲಿಸಿದರು. ನಂತರ ಅವರು ಮೂವರೂ ಡರ್ಬಾನ್‌ಗೆ ಹೊರಟರು. ಅಲ್ಲಿ ಗಾಂಧಿಯನ್ನು ನೋಡಿ ಜನ ಆಶ್ಚರ್ಯಚಕಿತರಾದರು. ಅವರು ತಲೆ ಬೋಳಿಸಿಕೊಂಡು ಧೋತರ ಮತ್ತು ಮೇಲಂಗಿಯ ಎರಡು ತುಂಡು ಬಿಳಿಯುಡಿಗೆಯಲ್ಲಿ ಕಾಣಿಸಿಕೊಂಡಿದ್ದರು.

ಈ ಬಗ್ಗೆ ಜನ ಪ್ರಶ್ನಿಸಿದಾಗ ಅವರು ಮುಷ್ಕರ ನಿರತ ಕೂಲಿಕಾರ್ಮಿಕರ ಮೇಲೆ ಹಾರಿಸಿದ ಗುಂಡುಗಳು ತಮ್ಮ ಎದೆಯ ಮೂಲಕವೇ ಹಾದು ಹೋದಷ್ಟು ವೇದನೆ ತಮಗಾಗಿದ್ದು, ಈ ದುಡಿಯುವ ವರ್ಗಕ್ಕೆ ತಾವು ಚಿರಋಣಿಯಾಗಿರುವುದರ ಪ್ರತೀಕವಾಗಿ ತಮ್ಮ ಬದುಕಿನುದ್ದಕ್ಕೂ ಕೂಲಿಯ ಉಡುಪಿನಲ್ಲೇ ಇರಲು ನಿರ್ಧರಿಸಿದ್ದಾಗಿ ತಿಳಿಸಿದರು. ರೈಲ್ವೇ ನಿಲ್ದಾಣದಿಂದ ಸಾವಿರಾರು ಜನ ಭಾರತೀಯರು ಅವರಿಗೆ ಪುಷ್ಪಗಳನ್ನೆರಚುತ್ತಾ ಜೈಕಾರಗಳನ್ನು ಕೂಗುತ್ತಾ ಕುದುರೆ ಗಾಡಿಯನ್ನು ತಾವೇ ಎಳೆಯುತ್ತಾ ಡರ್ಬಾನ್ ನಗರದ ಬೀದಿಗಳಲ್ಲಿ ವಿಜಯಯಾತ್ರೆಯಂತೆ ಮೆರವಣಿಗೆ ನಡೆಸಿ ರೇಸ್‌ಕೋರ್ಸ್ ಮೈದಾನಕ್ಕೆ ಅವರನ್ನು ಕರೆತಂದರು. ಅಲ್ಲಿ ಸೇರಿದ್ದ ಐದು ಸಾವಿರ ಜನರ ಸಭೆಯನ್ನುದ್ದೇಶಿಸಿ ಮಾತನಾಡಿದ ಗಾಂಧಿ ಮತ್ತೆ ವಿಚಾರಣಾ ಆಯೋಗದ ಇಬ್ಬರು ಸದಸ್ಯರನ್ನು ಕುರಿತ ತಮ್ಮ ಅಸಮ್ಮತಿಯನ್ನು ಪುನರುಚ್ಚರಿಸಿ ಸರ್ಕಾರ ಆಯೋಗದ ಸದಸ್ಯರನ್ನು ಬದಲಾಯಿಸದಿದ್ದರೆ ಪ್ರಿಟೋರಿಯಾಗೆ ಜಾಥಾ ಹೊರಡಲು ಸಿದ್ಧರಿರಬೇಕೆಂದು ಭಾರತೀಯ ಸಮುದಾಯಕ್ಕೆ ಕರೆಕೊಟ್ಟರು. ಆ ಸಭೆಯಲ್ಲಿಯೇ ಹೊಸ ವರ್ಷದ ಮೊದಲ ದಿನ ಈ ಜಾಥಾ ಹೊರಡುವ ದಿನವೆಂದು ನಿಗದಿಯಾಗಿ ಸಭೆ ಈ ಬಗ್ಗೆ ಮತ್ತು ಆಯೋಗವನ್ನು ಬಹಿಷ್ಕರಿಸುವ ಬಗ್ಗೆ ಪ್ರತಿಜ್ಞೆ ಕೈಗೊಂಡಿತು.

ಡಿಸೆಂಬರ್ ೨೨ರಂದು ಸೆರೆಮನೆಯಿಂದ ಬಿಡುಗಡೆಗೊಂಡ ಕಸ್ತೂರಬಾ ಅವರನ್ನು ಮತ್ತು ಅವರ ಜೊತೆಗಿನ ಇತರ ಮಹಿಳಾ ಸತ್ಯಾಗ್ರಹಿಗಳನ್ನು ಸ್ವಾಗತಿಸಲು ಮೆರಿಟ್ಜ್‌ಬರ್ಗ್‌ಗೆ ಬಂದ ಗಾಂಧಿ ಕಂಡದ್ದು ಪುಷ್ಪಾಲಂಕೃತ ಕುದುರೆಗಾಡಿಯೊಂದರಲ್ಲಿ ನಗರದ ಬೀದಿಗಳಲ್ಲಿ ನಡೆದಿದ್ದ ಮೆರವಣಿಗೆಯ ಸಂಭ್ರಮದ ದೃಶ್ಯವನ್ನು. ಆದರೆ ಸೆರೆಮನೆಯಲ್ಲಿ ವಿಶೇಷ ಊಟವನ್ನು ನಿರಾಕರಿಸಿದ್ದರ ಫಲವಾಗಿ ಅಸ್ಥಿಪಂಜರದಂತಾಗಿದ್ದ ಬಾ ಅವರನ್ನು ನೋಡಿ ಗಾಂಧಿ ಗಾಬರಿಯಾದರು. ಮೆರವಣಿಗೆಯ ನಂತರ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಮಿಲಿ ಪೊಲಾಕ್, ಈ ಕೊನೆಯ ಹಂತದ ಹೋರಾಟ ನಿರ್ಣಾಯಕವಾಗಿ ಮಹಿಳೆಯರ ಹೋರಾಟವಾಗಿತ್ತು ಎಂದು ಗುರುತಿಸುತ್ತಾ ಈ ಹೋರಾಟದ ನೇತೃತ್ವ ವಹಿಸಿದ್ದ ಕಸ್ತೂರಬಾರನ್ನು ಅಭಿನಂದಿಸಿದಳು.

ಮತ್ತೆ ಹರಿಲಾಲನಿಗೆ ಆಹ್ವಾನ–ಮತ್ತೆ ನಿರಾಸೆಗೊಂಡ ಗಾಂಧಿ

ಗಾಂಧಿಯ ಇಡೀ ಕುಟುಂಬ–ಬಾಲಕ ದೇವದಾಸನೂ ಸೇರಿದಂತೆ–ಈ ಸತ್ಯಾಗ್ರಹದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಪಾಲ್ಗೊಂಡಿತ್ತು. ಆದರೆ ಭಾರತವನ್ನು ಸೇರಿದ್ದ ಹಿರಿಯಮಗ ಹರಿಲಾಲನ ಹೊರತಾಗಿ. ಇದು ಗಾಂಧಿಗೆ ಸರಿ ಎನಿಸಲಿಲ್ಲ. ಸತ್ಯಾಗ್ರಹ ಪುನರಾರಂಭವಾದಾಗಲಾದರೂ ಆತ ಅದರಲ್ಲಿ ಭಾಗವಹಿಸಬೇಕೆಂದು ಬಯಸಿದ ಅವರು ಆತನಿಗೆ ಕೂಡಲೇ ಸಿಕ್ಕ ಹಡಗಿನಲ್ಲಿ ದ.ಆಫ್ರಿಕಾಕ್ಕೆ ಬರಬೇಕೆಂದು ತಂತಿ ಕಳಿಸಿದರು. ಆದರೆ ಇದಕ್ಕೆ ಪ್ರತಿಕ್ರಿಯೆ ಬಂದದ್ದು ಗೋಖಲೆಯವರಿಂದ! ಅವರು ಹರಿಲಾಲ ತಮ್ಮನ್ನು ಬಾಂಬೆಯಲ್ಲಿ ಕಂಡು ಮಾತನಾಡಿದ್ದಾಗಿಯೂ, ತಾವು ಆತನಿಗೆ

ಅವನಿಚ್ಛೆಯಂತೆ ಭಾರತದಲ್ಲೇ ಇದ್ದು ಶಿಕ್ಷಣ ಮುಂದುವರೆಸಲು ಸೂಚಿಸಿರುವುದಾಗಿಯೂ ತಿಳಿಸಿದರು. ಆದರೆ ಇದನ್ನೊಪ್ಪದ ಗಾಂಧಿ ಗೋಖಲೆಯವರಿಗೆ ತಂತಿ ಕಳಿಸಿ, ಹರಿಲಾಲನಿಗೆ ಸತ್ಯಾಗ್ರಹ ಮತ್ತು ಸೆರೆಮನೆ ವಾಸಕ್ಕಿಂತ ಉತ್ತಮ ಶಿಕ್ಷಣ ಮತ್ತೊಂದಿಲ್ಲವೆಂದು ಸೂಚಿಸುತ್ತಾ, ಮತ್ತೆ ಆತನಿಗೆ ತಮ್ಮಲ್ಲಿಗೆ ಬರುವಂತೆ ಹೇಳಲು ಒತ್ತಾಯಿಸಿದರು. ಆದರೆ ಇದಕ್ಕೆ ಹರಿಲಾಲ ಗಾಂಧಿಗೆ ನೇರವಾಗಿ ಪ್ರತಿಕ್ರಿಯಿಸದೆ ಗೋಖಲೆಯವರಿಗೊಂದು ಪತ್ರ ಬರೆದು ತಾನು ತಂದೆಗೆ ಅವರು ಕರೆದ ಕೂಡಲೇ ದ.ಆಫ್ರಿಕಾಗೆ ವಾಪಸಾಗುವುದಾಗಿ ಮಾತು ಕೊಟ್ಟಿದ್ದೆನಾದರೂ, ತನ್ನ ಮನಸ್ಸು ತಂದೆಯವರ ಕರೆಯ ಕಡೆ ತುಡಿಯುತ್ತಿರುವುದಾದರೂ, ಆರು ವರ್ಷಗಳ ನಂತರ ಪುನರಾರಂಭಿಸಿರುವ ಕಾಲೇಜು ಶಿಕ್ಷಣವನ್ನು ಈ ಸಂದರ್ಭದಲ್ಲಿ ಬಿಟ್ಟುಬರುವುದು ಒಳ್ಳೆಯದಲ್ಲ ಎಂದು ತಾನು ಭಾವಿಸಿರುವುದಾಗಿಯೂ, ಆದರೂ ಇನ್ನೊಂದು ಹದಿನೈದು ದಿನಗಳ ನಂತರ ಅಲ್ಲಿಗೆ ಹೊರಡುವುದಾಗಿಯೂ ತಿಳಿಸುತ್ತಾ ತನ್ನ ಮಾನಸಿಕ ದ್ವಂದ್ವವನ್ನು ಸೂಚಿಸಿದ್ದ. ಅದನ್ನು ಗೋಖಲೆ ಗಾಂಧಿಗೆ ಕಳಿಸಿದ್ದರು. ಆದರೆ ಹರಿಲಾಲ ಮತ್ತೆ ದ.ಆಫ್ರಿಕಾಕ್ಕೆ ಬರಲಿಲ್ಲ.

ಗಾಂಧಿಯ ಹಠ-ಗೋಖಲೆಯವರ ಸಂಧಾನ

ಈ ಮಧ್ಯೆ ಜ.ಸ್ಮಟ್ಸ್ ಆಯೋಗ ಅಸಮತುಲಿತವಾಗಿದೆ ಎಂಬ ಗಾಂಧಿಯ ನಿಲುವನ್ನು ಒಪ್ಪದೆ ಅದರ ಸದಸ್ಯರನ್ನು ಬದಲಿಸಬೇಕೆಂಬ ಅವರ ಬೇಡಿಕೆಯನ್ನೂ ತಿರಸ್ಕರಿಸಿದ ಹೇಳಿಕೆಯನ್ನೂ ನೀಡಿದ. ಮತ್ತೊಂದು ಘರ್ಷಣೆ ಮತ್ತು ಹೋರಾಟ ಆರಂಭವಾಗುವ ಸೂಚನೆಗಳ ಮಧ್ಯೆಯೇ ಗೋಖಲೆಯವರು ಮಧ್ಯೆ ಪ್ರವೇಶಿಸಿ ವಾತಾವರಣವನ್ನು ತಿಳಿಗೊಳಿಸುವ ಯತ್ನ ಮಾಡಿದರು. ಈ ಆಯೋಗ ತಮ್ಮ ಒತ್ತಡ ಮತ್ತು ಭಾರತದ ವೈಸ್‌ರಾಯ್ ಲಾರ್ಡ್ ಹಾರ್ಡಿಂಜ್ ಭಾರತೀಯರ ಬಗ್ಗೆ ಹೊಂದಿರುವ ಸಹಾನುಭೂತಿಯ ಕಾರಣದಿಂದಾಗಿ ರಚಿತವಾಗಿರುವುದರಿಂದ ಅದನ್ನು ವಿರೋಧಿಸುವುದು ಸರಿಯಾಗುವುದಿಲ್ಲವೆಂದು ಅವರು ಗಾಂಧಿಗೆ ತಂತಿ ಮೂಲಕ ವಿವರಿಸಿದರು. ಆದರೆ ಗಾಂಧಿ ಗೋಖಲೆಯವರು ತೀವ್ರ ಅಸ್ವಸ್ಥರಾಗಿ ಹಾಸಿಗೆ ಹಿಡಿದಿದ್ದಾರೆ ಎಂಬ ಸುದ್ದಿಯಿಂದ ಖಿನ್ನರಾದರಾದರೂ, ತಾವು ಆಯೋಗದ ಸದಸ್ಯರ ಬದಲಾವಣೆಯ ಬೇಡಿಕೆಯಿಂದ ಹಿಂದೆಗೆಯುವುದು ಈಗ ಕಷ್ಟವಾಗಿದೆ ಎಂದು ಒಂದು ದೀರ್ಘ ತಂತಿ ಕಳಿಸಿ, ತಮ್ಮ ಇಡೀ ಹೋರಾಟ ಜನರ ಏಕಾಭಿಪ್ರಾಯ ಮತ್ತು ಪ್ರತಿಜ್ಞೆಗಳ ಆಧಾರದ ಮೇಲೆ ನಡೆದಿದ್ದು ಈಗ ಪ್ರತಿಜ್ಞಾ ಭಂಗ ಮಾಡುವುದು ಕಷ್ಟವೆಂದೂ, ತಮ್ಮ ಮಾತನ್ನು ಮನ್ನಿಸಲು ಸಾಧ್ಯವಾಗದುದಕ್ಕಾಗಿ ಕ್ಷಮಿಸಬೇಕೆಂದೂ ತಿಳಿಸಿದರು.

ಗಾಂಧಿಯ ಹಠವಾದಿ ಗುಣವನ್ನು ಬಲ್ಲವರಾಗಿದ್ದ ಗೋಖಲೆ ಇದರಿಂದ ಅಸಮಾಧಾನಗೊಳ್ಳದೆ ಮತ್ತೆ ವೈಸ್‌ರಾಯ್‌ರೊಂದಿಗೆ ಪತ್ರ ವ್ಯವಹಾರ ಮಾಡಿ ಪರಿಸ್ಥಿತಿ ವಿವರಿಸಿದರು. ಭಾರತೀಯರ ಹೋರಾಟದ ಬಗ್ಗೆ ಸಹಾನುಭೂತಿಯನ್ನೇ ಹೊಂದಿದ್ದ ಹಾರ್ಡಿಂಜ್, ಆಯೋಗದ ಬಗ್ಗೆ ಅಪನಂಬಿಕೆ ಹೊಂದುವ ಅಗತ್ಯವಿಲ್ಲವೆಂದೂ, ಬೆಂಜಮಿನ್ ರಾಬರ್ಟ್ಸನ್ ಎಂಬ ಉನ್ನತ ಅಧಿಕಾರಿಯನ್ನು ಭಾರತದ ಸರ್ಕಾರದ ಪರವಾಗಿ, ಅಂದರೆ ದ. ಆಫ್ರಿಕಾದಲ್ಲಿನ ಭಾರತೀಯರ ಪರವಾಗಿ ಕೆಲಸ ಮಾಡಲು ನಿಯೋಜಿಸುತ್ತಿರುವುದಾಗಿ ತಿಳಿಸಿದರು. ಇದನ್ನು ಗೋಖಲೆಯವರು ಗಾಂಧಿಗೆ ಕೇಬಲ್

ಮೂಲಕ ತಿಳಿಸಿ ಸ್ವಲ್ಪ ಸಹನೆಯಿಂದ ಕಾಯಲು ಸಲಹೆ ಮಾಡಿದರು. ಇವರ ಜೊತೆಗೇ ಭಾರತೀಯರ ಪರ ಸಹಾನುಭೂತಿ ಹೊಂದಿದ್ದ ವಿಲಿಯಂ ಹೊಸ್ಕೆನ್‌ರೂ ಗಾಂಧಿಯನ್ನು ಈ ವಿಷಯದಲ್ಲಿ ಹಠ ಮಾಡದಂತೆ 'ಬೇಡಿ'ಕೊಂಡರು. ಗಾಂಧಿ ತಮ್ಮ ಪ್ರಿಟೋರಿಯಾ ಜಾಥಾವನ್ನು ಜನವರಿ ೧೬ಕ್ಕೆ ಮುಂದೂಡಿದರು.

ಗೋಖಲೆಯವರು ಇತ್ತ ಸ್ಮಟ್ಸ್‌ಗೂ ಪತ್ರ ಬರೆದು ಇಷ್ಟೆಲ್ಲವಾದ ಮೇಲಾದರೂ ಸ್ವಲ್ಪ ಉದಾರವಾಗಿ ವರ್ತಿಸುವಂತೆ ಅವನಿಗೆ ಸೂಚಿಸಿದ್ದರು. ಜೊತೆಗೆ ಅವರು ವೈಸ್‌ರಾಯ್‌ನ ಪ್ರತಿನಿಧಿ ರಾಬರ್ಟ್ಸನ್‌ಗೂ ಹಳೆಯ 'ಇಂಡಿಯನ್ ಒಪಿನಿಯನ್' ಪತ್ರಿಕೆಗಳ ಪ್ರತಿಗಳನ್ನು ಕಳಿಸಿ ಆತ ಅಲ್ಲಿನ ಪರಿಸ್ಥಿತಿಯನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡು ಭಾರತೀಯರ ಪ್ರಮುಖ ಬೇಡಿಕೆಗಳಾದ ಮೂರು ಪೌಂಡುಗಳ ತೆರಿಗೆ ರದ್ದತಿ, ವಲಸೆ ಹತೋಟಿಯಲ್ಲಿದ್ದ ವರ್ಣಭೇದದ ಅಂಶಗಳ ನಿವಾರಣೆ, ದ.ಆಫ್ರಿಕಾದಲ್ಲೇ ಹುಟ್ಟಿದ ಭಾರತೀಯರಿಗೆ ಕೇಪ್ ಪ್ರಾಂತ್ಯಕ್ಕೆ ಮುಕ್ತ ಪ್ರವೇಶ ಮತ್ತು ಭಾರತೀಯ ಮತಧರ್ಮ ಸಂಪ್ರದಾಯಗಳ ಪ್ರಕಾರ ನಡೆದ ಎಲ್ಲ ಏಕಪತ್ನಿ ವಿವಾಹಗಳ ಮನ್ನಣೆ ಇವುಗಳ ಈಡೇರಿಕೆಗೆ ಸರ್ವ ಪ್ರಯತ್ನಗಳನ್ನೂ ಮಾಡಬೇಕೆಂದು ಕೋರಿದರು.

ಸ್ಮಟ್ಸ್ ಮೇಲೆ ಒತ್ತಡ–ಪುನರಾರಂಭವಾದ 'ಇಂಡಿಯನ್ ಒಪಿನಿಯನ್'ನ ತಮಿಳು–ಹಿಂದಿ ಆವೃತ್ತಿಗಳು

ಇದೇ ವೇಳೆಯಲ್ಲಿ ಸ್ಮಟ್ಸ್‌ನ ಕೇಂಬ್ರಿಡ್ಜ್ ಸಹಪಾಠಿ ಹೆಚ್.ಜೆ. ವೊಲ್ಸ್‌ಟನ್ಹೋಮ್ ಅವರಿಂದಲೂ ಸ್ಮಟ್ಸ್‌ಗೆ ಭಾರತೀಯರ ಹೋರಾಟದ ಪರವಾಗಿ ಸಂದೇಶ ಬಂದಿತ್ತು. ಜೊತೆಗೇ ಬೋಯರ್ ಯುದ್ಧದ ಸಮಯದಲ್ಲಿ ಬೋಯರರ ಪರವಾಗಿ ವಾದಿಸಿ ಸ್ಮಟ್ಸ್‌ನ ಗಮನ ಸೆಳೆದಿದ್ದ ಶಾಂತಿವಾದಿ ಕ್ರೈಸ್ತಕೂಟ('ಕ್ವೇಕರ್'ಗಳು)ದ ಇಂಗ್ಲಿಷ್ ಮಹಿಳೆ ಎಮಿಲಿ ಹಾಬ್‌ಹೌಸ್ ಮತ್ತು ಕೇಪ್ ಪ್ರಾಂತ್ಯದ ಮೊದಲ ಪ್ರಧಾನಿಯ ಮಗಳಾದ ಬೆಟ್ಟಿ ಮೊಲ್ಟೆನೋ ಸೇರಿ ಜ.ಸ್ಮಟ್ಸ್‌ಗೆ ಭಾರತೀಯರ ಬೇಡಿಕೆಗಳು ನ್ಯಾಯಯುತವಾಗಿದ್ದು ಆ ಬಗ್ಗೆ ಹೆಚ್ಚಿನ ಸಹಾನುಭೂತಿ ತೋರಿಸಲು ಸಲಹೆ ನೀಡಿ ವಿವರವಾದ ಪತ್ರ ಬರೆದರು. ಮತ್ತು ಪರಿಸ್ಥಿತಿ ಮತ್ತೆ ಬಿಗಡಾಯಿಸುವುದನ್ನು ತಪ್ಪಿಸಲು ಭಾರತದ ನಾಯಕರಿಗೆ ಖಾಸಗಿಯಾಗಿಯಾದರೂ ಅವರ ಸಮಸ್ಯೆಗಳನ್ನು ತೃಪ್ತಿದಾಯಕವಾಗಿ ಪರಿಹರಿಸುವ ಆಶ್ವಾಸನೆ ನೀಡುವಂತೆ 'ಬುದ್ಧಿ' ಹೇಳಿದರು. ಗಾಂಧಿ ಓರ್ವ ಆಧ್ಯಾತ್ಮಿಕ ವ್ಯಕ್ತಿಯಾಗಿದ್ದು ಅವರ ಅಪಾರ ನೈತಿಕ ಬಲದ ಮುಂದೆ ಪ್ರಭುತ್ವದ ಲೌಕಿಕ ಬಲ ಅಂತಿಮವಾಗಿ ಸೋಲಲೇಬೇಕಾಗುತ್ತದೆ ಎಂದೂ ಅವರು ಎಚ್ಚರಿಸಿದ್ದರು. ಹೀಗೆ ಗಾಂಧಿ ಹೋರಾಟದಲ್ಲಿ ಅವರ ಬೆಂಬಲಕ್ಕೆ ನಿಂತ ಆ್ಯನಿ ಬೆಸೆಂಟ್, ಸೋನ್ಯಾ ಶ್ಲೆಸಿನ್, ಶ್ರೀಮತಿ ಡೋಕ್, ಮಿಲಿ ಪೋಲಾಕ್, ಮೌದ್ ಪೋಲಾಕ್ ಮತ್ತು ಆಲೀವ್ ಶ್ರೈನರ್‌ರಿಂದ ಕೂಡಿದ ಐರೋಪ್ಯ ಮಹಿಳೆಯರ ಕೂಟಕ್ಕೆ ಈಗ ಶ್ರೀಮತಿ ಹಾಬ್‌ಹೌಸ್ ಮತ್ತು ಎಮಿಲಿಯರೂ ಸೇರಿದರು.

ಡಿಸೆಂಬರ್ ೩೧ರ 'ಇಂಡಿಯನ್ ಒಪಿನಿಯನ್' ಪತ್ರಿಕೆಗೆ ಸಂಪಾದಕೀಯ ಬರೆದ ಗಾಂಧಿ ಸತ್ಯಾಗ್ರಹದ ಈ ನಿರ್ಣಾಯಕ ಘಟ್ಟದ ಬಹುಪಾಲು ಕೀರ್ತಿ ತಮಿಳು ಮತ್ತು ಹಿಂದಿ ಭಾಷಿಕ ಸಮುದಾಯಗಳ ಸೋದರ–ಸೋದರಿಯರಿಗೆ ಸಲ್ಲಬೇಕಿದ್ದು, ಈ ಸಮುದಾಯಗಳ ಹುತಾತ್ಮರಿಗೆ ಗೌರವ ಸಲ್ಲಿಸಲು ಈ ಹಿಂದೆ ಸ್ಥಗಿತಗೊಳಿಸಿದ್ದ ಪತ್ರಿಕೆಯ ತಮಿಳು ಮತ್ತು ಹಿಂದಿ ವಿಭಾಗಗಳನ್ನು ಪುನರಾರಂಭಿಸುವುದಾಗಿ ಪ್ರಕಟಿಸಿದರು.

■

೩೭

ಅಂತಿಮ ವಿಜಯದತ್ತ

ಆ್ಯಂಡ್ರ್ಯೂಸ್ ಮತ್ತು ಅವರ ಗೆಳೆಯ ಪಿಯರ್ಸನ್ ೧೯೧೪ರ ಜನವರಿ ಎರಡರಂದು ಡರ್ಬಾನ್ ಬಂದರಿನಲ್ಲಿ ಹಡಗಿನಿಂದ ಇಳಿದಾಗ ತಮ್ಮನ್ನು ಸ್ವಾಗತಿಸಲು ಬಂದಿದ್ದ ಗಾಂಧಿಯನ್ನು ಕಂಡು ಆಶ್ಚರ್ಯಗೊಂಡರು. ಅವರ ಹಡಗು ಪ್ರಯಾಣದ ಅವಧಿಯಲ್ಲಿ ದ.ಆಫ್ರಿಕಾದಲ್ಲಿ ನಡೆದ ಬೆಳವಣಿಗೆಗಳಾಗಲೀ, ಗಾಂಧಿಯ ಬಿಡುಗಡೆಯಾಗಲೀ ಅವರಿಗೆ ತಿಳಿದಿರಲಿಲ್ಲ. ಬದಲಾದ ಪರಿಸ್ಥಿತಿಯನ್ನು ಅರಿತ ಆ್ಯಂಡ್ರ್ಯೂಸ್, ಫೀನಿಕ್ಸ್ ಆಶ್ರಮದಲ್ಲಿ ತಂಗಿ ಗಾಂಧಿಯವರನ್ನು ಸ್ಮಟ್ಸ್‌ನೊಡನೆ ಸಂಧಾನಕ್ಕೆ ಪ್ರೇರೇಪಿಸತೊಡಗಿದರು. ಜಾಥಾ ಸಂದರ್ಭದ ಕೊನೆಯ ಘಳಿಗೆಯಲ್ಲೂ ತಾವು ನೀಡಿದ ಸಂಧಾನದ ಸಹಕಾರ ಹಸ್ತವನ್ನು ತಮ್ಮೊಡನೆ ನೇರವಾಗಿ ಮಾತಾಡಲೂ ಇಷ್ಟಪಡದೆ ಗರ್ವದಿಂದ ತಿರಸ್ಕರಿಸಿ ತಾವೂ ಸೇರಿದಂತೆ ಸಾವಿರಾರು ಜನರನ್ನು ಬಂಧಿಸಿ ಕಿರುಕುಳ ನೀಡಿದ್ದ ವ್ಯಕ್ತಿಯೊಂದಿಗೆ ಮಾತನಾಡಲು ಗಾಂಧಿ ಉತ್ಸಾಹ ತೋರಲಿಲ್ಲ. ಜೊತೆಗೆ ಅವರ ಸಹಚರರು ಜನವರಿ ೧೬ಕ್ಕೆ ಮುಂದೂಡಲಾಗಿದ್ದ ಬೃಹತ್ ಜಾಥಾದ ಸಿದ್ಧತೆಯಲ್ಲಿ ತೊಡಗಿದ್ದರಿಂದಾಗಿ ಸಂಧಾನಕ್ಕಿದು ಸೂಕ್ತ ಸಂದರ್ಭವಲ್ಲವೆಂದು ಭಾವಿಸಿದರು. ಆದರೆ ಇದೇ ವೇಳೆಯಲ್ಲಿ ಒಕ್ಕೂಟದಾದ್ಯಂತ ರೈಲ್ವೇ ಮುಷ್ಕರ ಆರಂಭವಾಗಿ ಸಾರ್ವಜನಿಕ ಜೀವನ ಅಸ್ತವ್ಯಸ್ತಗೊಂಡು ಸರ್ಕಾರ ಪರಿಸ್ಥಿತಿಯನ್ನು ನಿಭಾಯಿಸುವ ಸಂಕಷ್ಟದಲ್ಲಿತ್ತು. ಇದನ್ನು ಗಮನಿಸಿದ ಗಾಂಧಿಗೆ ಎದುರಾಳಿ ಸಂಕಷ್ಟದಲ್ಲಿದ್ದಾಗ ಅವನ ಮೇಲೆ ಇನ್ನಷ್ಟು ಒತ್ತಡ ಹೇರಿ ಕೆಲಸ ಸಾಧಿಸಿಕೊಳ್ಳುವುದು ಸತ್ಯಾಗ್ರಹ ಧರ್ಮಕ್ಕೆ ವಿರುದ್ಧವಾದುದೆಂದು ಭಾವಿಸಿ ತಮ್ಮ ಸಹವರ್ತಿಗಳೊಡನೆ ಸಮಾಲೋಚಿಸಿದ ನಂತರ ಜಾಥಾವನ್ನು ಸದ್ಯಕ್ಕೆ ರದ್ದುಪಡಿಸಿರುವುದಾಗಿ ಪ್ರಕಟಿಸಿದರು.

ಸ್ಮಟ್ಸ್ ಚಾಚಿದ ಸ್ನೇಹ ಹಸ್ತ–ಸ್ಪಂದಿಸಿದ ಗಾಂಧಿ

ಇದರಿಂದಾಗಿ ಬಿಳಿಯ ಸಮುದಾಯದಿಂದ ಪತ್ರಿಕೆಗಳ ಮೂಲಕ ಗಾಂಧಿಯ ಬಗ್ಗೆ ಸಾರ್ವತ್ರಿಕವಾದ ಸೌಹಾರ್ದ ಭಾವನೆ ವ್ಯಕ್ತವಾಯಿತಲ್ಲದೆ ಸರ್ಕಾರಿ ವಲಯಗಳಲ್ಲೂ ಗಾಂಧಿ ಬಗ್ಗೆ ಮೆಚ್ಚುಗೆ ಮೂಡಿತು. ಇಂಗ್ಲೆಂಡ್‌ನಿಂದಲೂ ಲಾರ್ಡ್ ಆ್ಯಂಪ್ಟ್‌ಹಿಲ್ ಮತ್ತು ಹಲವು ಸಂಸತ್ ಸದಸ್ಯರು ಮತ್ತು ಪತ್ರಿಕೆಗಳಿಂದ ಗಾಂಧಿಗೆ ಮೆಚ್ಚುಗೆಯ ಮತ್ತು ಶುಭಾಶಯಗಳ ಸಂದೇಶಗಳು ಬಂದವು. ಸ್ಮಟ್ಸ್‌ನ ಕಾರ್ಯದರ್ಶಿ ಗಾಂಧಿಗೆ ಕರೆಮಾಡಿ ಸರ್ಕಾರದ ಪರವಾಗಿ ಅವರಿಗೆ ಧನ್ಯವಾದ ಹೇಳಿದನಲ್ಲದೆ 'ನಾವು ನಿಮ್ಮನ್ನು ದೂರವಿಡಲು ಎಷ್ಟೇ ಪ್ರಯತ್ನಿಸಿದರೂ, ನಮಗೆ ಗೊತ್ತಿಲ್ಲದಂತೆಯೇ ನೀವು

ಹತ್ತಿರವಾಗುವ ಸಾತ್ವಿಕ ಬಗೆಯನ್ನು ನೀವು ಕಂಡುಕೊಳ್ಳುವ ರೀತಿಗೆ ನಾವು ಬೆರಗಾಗಿದ್ದೇವೆ' ಎಂದು ಸ್ನೇಹಪರವಾದ ಮಾತನ್ನಾಡಿದ. ಅದಕ್ಕೆ ಗಾಂಧಿ ತಮ್ಮ ಈ ಧೋರಣೆ ಮೊದಲ ಸಲದ್ದೇನಾಗಿರದೆ ಇತ್ತೀಚಿನ ಕಾರ್ಮಿಕರ ಮುಷ್ಕರದ ಸಂದರ್ಭದಲ್ಲಿ ನೆಟಾಲ್‌ನ ಪಟ್ಟಣಗಳಲ್ಲಿ ಚರಂಡಿಗಳು ತುಂಬಿ ಹರಿದು ಸಾಂಕ್ರಾಮಿಕ ರೋಗಗಳ ಭೀತಿ ಉಂಟಾದಾಗ ಮತ್ತು ಆಸ್ಪತ್ರೆಗಳಲ್ಲಿ ರೋಗಿಗಳನ್ನು ನಿರ್ವಹಿಸಲು ಸಹಾಯಕರಿಲ್ಲದೆ ಆತಂಕದ ಪರಿಸ್ಥಿತಿ ಉಂಟಾದಾಗ ಸತ್ಯಾಗ್ರಹದ ನಿರ್ವಾಹಕರು ಸಂಬಂಧಪಟ್ಟ ನೌಕರರ ಮನವೊಲಿಸಿ ಕರ್ತವ್ಯಕ್ಕೆ ಕಳಿಸಿ ಸರ್ಕಾರವನ್ನು ವಿಪತ್ತಿನಿಂದ ಪಾರು ಮಾಡಿದ್ದನ್ನೂ, ಎಜ್‌ಕೋಂಬ್‌ನ ಕಬ್ಬಿನ ಗದ್ದೆಗಳಲ್ಲಿ ಕಡಿದ ಅಪಾರವಾದ ಕಬ್ಬಿನ ರಾಶಿ ಒಣಗುತ್ತಾ ಬಿದ್ದಿದ್ದಾಗ ಅದರಿಂದಾಗುವ ಅಪಾರ ನಷ್ಟ ತಪ್ಪಿಸಲು ೧೨೦೦ ಜನ ಕೂಲಿ ಕಾರ್ಮಿಕರನ್ನು ಆಲೆಮನೆ ಕೆಲಸಕ್ಕೆ ಕಳಿಸಿದ್ದನ್ನೂ ನೆನಪಿಸಿದರು.

ಗಾಂಧಿಯನ್ನು ಮಾತುಕತೆಗೆ ಒಪ್ಪಿಸಲು ಇದೇ ಸುಸಂದರ್ಭವೆಂದು ಅರಿತ ಆ್ಯಂಡ್ರ್ಯೂಸ್‌ರು ಅವರ ಮನವೊಲಿಕೆ ಪ್ರಯತ್ನಗಳನ್ನು ತೀವ್ರಗೊಳಿಸಿದರು. ಇದರ ಫಲವಾಗಿ ಅವರು ಮಾತುಕತೆಗೆ ಒಪ್ಪಿ ಸ್ಮಟ್ಸ್‌ಗೆ ಭೇಟಿಯ ಅವಕಾಶ ಕೇಳಿ ಜನವರಿ ೬ರಂದು ಕಾಗದ ಬರೆದರು. ಗಾಂಧಿಯ ಕಾಗದದಿಂದ ಆಶ್ಚರ್ಯಚಕಿತನಾದ ಸ್ಮಟ್ಸ್ ತಕ್ಷಣ ಕಾಗದಕ್ಕೆ ಉತ್ತರಿಸಿ, ಅವರಿಗೆ ಬರಲು ಹೇಳಿದ. ಆದರೆ ರೈಲ್ವೇ ಮುಷ್ಕರದಿಂದುಂಟಾಗಿದ್ದ ಪ್ರತಿಕೂಲ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ವ್ಯಸ್ತನಾಗಿದ್ದ. ಎರಡು ಮೂರು ದಿನಗಳ ಕಾಲ ಗಾಂಧಿಗೆ ಸಮಯ ಕೊಡಲಾಗದೆ ಅವರ ಸಹನೆಯನ್ನು ಪರೀಕ್ಷಿಸಿದ. ಕೊನೆಗೆ ೧೫ರಂದು ಕೆಲ ನಿಮಿಷಗಳ ಕಾಲವಷ್ಟೇ ಭೇಟಿಗೆ ಅವಕಾಶವಾಗಿ ಇಬ್ಬರೂ ಸದ್ಯದ ತಮ್ಮಿಬ್ಬರ ನಡುವಣ ಬಿಗುವನ್ನು ಮರೆತು ಮತ್ತೆ ಹಳೆಯ ಸ್ನೇಹ ಸಂಬಂಧಕ್ಕೆ ಮರಳಲು ಸಾಧ್ಯವಾಯಿತು. ಆದರೆ ೧೬ರಂದು ಭೇಟಿ ಸಾಕಷ್ಟು ದೀರ್ಘವಾಗಿದ್ದು, ಈ ಭೇಟಿಯಲ್ಲಿ ಸ್ಮಟ್ಸ್ ವಿಚಾರಣಾ ಆಯೋಗದ ಸದಸ್ಯರನ್ನು ಬದಲಿಸುವುದು ಸರ್ಕಾರಕ್ಕೆ ಮುಜುಗರ ಉಂಟುಮಾಡುವುದೆಂದೂ, ಆದರೆ ಸತ್ಯಾಗ್ರಹವನ್ನು ಕೂಡಲೇ ಹಿಂತೆಗೆದುಕೊಂಡರೆ ಭಾರತೀಯ ಸಮುದಾಯದ ಎಲ್ಲ ಬೇಡಿಕೆಗಳನ್ನೂ ಆಯೋಗ ಒಪ್ಪುವಂತೆ ನೋಡಿಕೊಳ್ಳುವುದು ತನ್ನ ಮತ್ತು ಪ್ರಧಾನಿ ಬೋತಾ ಅವರ ಜವಾಬ್ದಾರಿಯಾಗಿದೆಯೆಂದೂ ಆಶ್ವಾಸನೆ ನೀಡಿದ. ಅಲ್ಲದೆ ಆಯೋಗದ ಕಲಾಪಗಳನ್ನು ಬಹಿಷ್ಕರಿಸುವುದು ಸರಿಯಲ್ಲವೆಂದೂ, ಅದರಿಂದ ಭಾರತೀಯರ ಮೇಲೆ ಪೊಲೀಸರು ನಡೆಸಿದರೆಂದು ಮಾಡಲಾಗಿರುವ ಆರೋಪಗಳು ಸಾಬೀತಾಗುವುದು ಕಷ್ಟವೆಂದೂ ವಿವರಿಸಿದನು. ಜೊತೆಗೆ ಬಹಿಷ್ಕಾರದ ಹೊರತಾಗಿಯೂ ಕೆಲವರು ಆಯೋಗದ ಕಲಾಪಗಳಲ್ಲಿ ಭಾಗವಹಿಸಿ ಹೇಳಿಕೆ/ಸಾಕ್ಷ್ಯ ನೀಡಲು ಮುಂದೆ ಬಂದರೆ ಅವರನ್ನು ತಡೆದು ಸರ್ಕಾರ ಮತ್ತೆ ಕಾನೂನು ಬಳಸುವ ಅನಿವಾರ್ಯ ಪರಿಸ್ಥಿತಿಯನ್ನು ಉಂಟುಮಾಡುವುದಿಲ್ಲ ಎಂಬ ಭರವಸೆಯನ್ನಾದರೂ ನೀಡುವಂತೆ ಆತ ಗಾಂಧಿಯನ್ನು ಕೋರಿದ.

ಶಾಂತಿ ಸಮಾಧಾನಗಳೊಂದಿಗೆ ನಡೆದ ಈ ಸಭೆ ಗಾಂಧಿಗೆ ತೃಪ್ತಿ ನೀಡಿತು. ಸ್ಮಟ್ಸ್‌ನ ಹೊಸ ನಮ್ರತೆ ಮತ್ತು ಸೌಜನ್ಯ ಗಾಂಧಿಗೆ ಸ್ವಾಗತಾರ್ಹವಾಗಿ ಕಂಡಿತು. ಅವರು ಎಲ್ಲ ಸತ್ಯಾಗ್ರಹಿಗಳನ್ನೂ ಬಂಧನದಿಂದ ಬಿಡುಗಡೆ ಮಾಡುವಂತೆ ಕೋರಿದರು. ಅದಕ್ಕೆ ಸ್ಮಟ್ಸ್

ಒಪ್ಪಿದ. ಈ ಸಂದರ್ಭದಲ್ಲಿ ಆ್ಯಂಡ್ರ್ಯೂಸ್, ಗವರ್ನರ್ ಜನರಲ್ ಗ್ಲ್ಯಾಡ್‌ಸ್ಟೋನ್‌ರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಗಾಂಧಿಯೊಡನೆಯ ಮಾತುಕತೆಯನ್ನು ಸ್ಮಟ್ಸ್ ತನಗೆ ವರದಿ ಮಾಡಿದ್ದ ಆಧಾರದ ಮೇಲೆ ಗ್ಲ್ಯಾಡ್‌ಸ್ಟೋನ್ ಸಾಮ್ರಾಜ್ಯದ ಸರ್ಕಾರಕ್ಕೆ ಕಳಿಸಿದ ವರದಿಯ ಕೆಲವು ಭಾಗಗಳು, ಗಾಂಧಿ ವ್ಯಕ್ತಿತ್ವವನ್ನು ಕುರಿತ ಯೂರೋಪಿಯನ್ನರ ಭಾವನೆಗಳ ಮೇಲೆ ವಿಶೇಷ ಬೆಳಕು ಚೆಲ್ಲುವಂತಿವೆ:

"ಕಳೆದ ಕೆಲವು ವರ್ಷಗಳ ಹಲವು ಘರ್ಷಣೆಗಳ ಹೊರತಾಗಿಯೂ ಈ ಸಭೆಯಲ್ಲಿ ಜ. ಸ್ಮಟ್ಸ್ ಸಹನೆಯ ಮತ್ತು ರಾಜಿಯ ಮನೋಭಾವ ಪ್ರದರ್ಶಿಸಿ ತನಗೆ ಅನೇಕ ಬಾರಿ ಕಿರಿಕಿರಿಯನ್ನುಂಟು ಮಾಡಿದ್ದರೂ ಗಾಂಧಿಯನ್ನು ಮಾನವತೆಯ ಓರ್ವ ವಿಶಿಷ್ಟ ಪ್ರತಿನಿಧಿಯಂತೆ ಪರಿಗಣಿಸಿ ಆ ವ್ಯಕ್ತಿತ್ವದ ಬಗ್ಗೆ ಸಹಾನುಭೂತಿಪರವಾದ ಆಕರ್ಷಣೆಯನ್ನು ಉಳಿಸಿಕೊಂಡಂತೆ ಕಾಣುತ್ತದೆ... ಯೂರೋಪಿಯನ್ನೊಬ್ಬನಿಗೆ ಶ್ರೀಮಾನ್ ಗಾಂಧಿಯೊಂದಿಗೆ ಸಂಧಾನ ನಡೆಸುವುದು ಸುಲಭದ ಕೆಲಸವಲ್ಲ. ಆತನ ಆತ್ಮಸಾಕ್ಷಿಯ ಕ್ರಿಯಾಚರಣೆಗಳು ದುರ್ಭೇದ್ಯವಾದವು ಮತ್ತು ಪಶ್ಚಿಮದ ಮನಸ್ಸಿಗೆ ಇಡಿಯಾಗಿ ಅನಿರೀಕ್ಷಿತವಾದ ಸ್ಥಳಗಳಲ್ಲಿ ಕ್ಲಿಷ್ಟತೆಗಳನ್ನು ಸೃಷ್ಟಿಸುವಂಥವು. ಅನುಭಾವ ಮತ್ತು ಕುಶಲತೆಗಳ ಕುತೂಹಲಕಾರಿ ಕಸಿಯನ್ನು ಆಧರಿಸಿರುವಂತೆ ತೋರುವ ಆತನ ನೈತಿಕತೆ ಮತ್ತು ಬೌದ್ಧಿಕತೆಗಳು ಆಲೋಚನೆಯ ಸಾಮಾನ್ಯ ಪ್ರಕ್ರಿಯೆಗಳನ್ನು ದಿಕ್ಕೆಡಿಸಿಬಿಡುತ್ತವೆ. ಆದರೂ ಒಂದು ಸಹನೀಯ ಮತ್ತು ವ್ಯಾವಹಾರಿಕ ಒಪ್ಪಂದಕ್ಕೆ ಬರುವಲ್ಲಿ ನಾವು ಯಶಸ್ವಿಯಾಗಿದ್ದೇವೆ".

ಸತ್ಯಾಗ್ರಹದ ನಿಲುಗಡೆಗೆ ಜನರ ಮನವೊಲಿಸಿದ ಗಾಂಧಿ–ಸ್ಮಟ್ಸ್‌ನ ಕೃತಜ್ಞತೆ

ಡರ್ಬಾನ್‌ಗೆ ಹಿಂತಿರುಗಿದ ಗಾಂಧಿ, ಮಾತುಕತೆಗಳ ಬಗ್ಗೆ ತಮ್ಮ ಸಹಚರರು ಮತ್ತು ಅನುಯಾಯಿಗಳೊಂದಿಗೆ ಸಮಾಲೋಚಿಸಿದರು. ಆರಂಭದಲ್ಲಿ ಬಹಳ ಜನ ಸ್ಮಟ್ಸ್‌ನ ಈ ಹಿಂದಿನ ವಿಶ್ವಾಸದ್ರೋಹಗಳನ್ನು ನೆನಪಿಸಿ ಆತನಿಂದ ಮತ್ತೆ ಮೋಸ ಹೋಗಿ ಸತ್ಯಾಗ್ರಹವನ್ನು ನಿಲ್ಲಿಸುವುದು ಮೂರ್ಖತನವಾದೀತೆಂದು ವಾದಿಸಿದರು. ಆದರೆ ಗಾಂಧಿ ದೀರ್ಘ ಹೋರಾಟ ಫಲ ಕೊಡುವಂತಿರುವ ಸಮಯದಲ್ಲಿ ಹಳೆಯ ಘಟನೆಗಳನ್ನು ನೆನಪಿಸಿಕೊಂಡು ಸಮಸ್ಯೆಯ ಪರಿಹಾರದ ಹಾದಿಗೆ ಅಡ್ಡಿ ಬರುವುದು ಸತ್ಯಾಗ್ರಹಿಗೆ ತರವಲ್ಲ, ಏಕೆಂದರೆ ಸತ್ಯಾಗ್ರಹಿ ಆತ್ಮಶಕ್ತಿಯನ್ನು ನಂಬಿದ ಸತ್ಯದ ಆರಾಧಕನಾಗಿ ಸದಾ ತೆರೆದ ಮನಸ್ಸಿನ ಧೈರ್ಯವಂತನಾಗಿರಬೇಕು. ಸೋಲು ಮತ್ತು ನೋವು ಅವನ ಆತ್ಮಶಕ್ತಿಯನ್ನು ಕುಗ್ಗಿಸದೆ ಎದುರಾಳಿ ಪದೇ ಪದೇ ಮೋಸ ಮಾಡಿದರೂ ಅವನಲ್ಲಿ ಸತ್ಯದ ಬಾಗಿಲು ತೆರೆದೀತೆಂಬ ನಿರೀಕ್ಷೆಯಲ್ಲೇ ಇರಬೇಕೆಂದು ವಿವರಿಸಿದರು. ಜೊತೆಗೆ ಮತ್ತೆ ಸತ್ಯಾಗ್ರಹ–ಮುಷ್ಕರ ಆರಂಭಿಸಿದರೆ ಎಷ್ಟು ಜನ ಅದರಲ್ಲಿ ಸಕ್ರಿಯರಾಗಲು ಸಿದ್ಧ ಎಂಬುದನ್ನು ತಮಗೆ ತಾವೇ ಕೇಳಿಕೊಳ್ಳಬೇಕೆಂದು ಸೂಚಿಸಿದರು. ಕೆಲವರ ಹೊರತಾಗಿ ಬಹುತೇಕ ಜನ ಗಾಂಧಿಯ ಅಭಿಪ್ರಾಯವನ್ನು ಒಪ್ಪಿದರು. ಇನ್ನು ಕೆಲವರು ಆಯೋಗವನ್ನು ಬಹಿಷ್ಕರಿಸಿ ಪೊಲೀಸ್ ಅತ್ಯಾಚಾರಗಳ ಬಗ್ಗೆ ಸಾಕ್ಷಿ ಹೇಳುವಂತಿಲ್ಲವಾದ್ದರಿಂದ ವ್ಯಕ್ತಿಗತವಾಗಿ ಅಧಿಕಾರಿಗಳು ಮತ್ತು ಪೊಲೀಸರ ಮೇಲೆ ಮಾನನಷ್ಟ ಮೊಕದ್ದಮೆ ಹೂಡಬಹುದೆಂದು ವಾದಿಸಿದರು. ಅದಕ್ಕೆ ಗಾಂಧಿ ತಮ್ಮ

ವಕೀಲಿಕೆಯ ಅನುಭವಗಳನ್ನು ಉಲ್ಲೇಖಿಸುತ್ತಾ ಅಂತಹ ಮೊಕದ್ದಮೆಗಳು ಸಾಬೀತಾಗುವುದು ವಿರಳ ಮತ್ತು ಕಷ್ಟವಾಗಿದ್ದು, ಅಂತಹ ವ್ಯರ್ಥ ಪ್ರಯತ್ನಗಳನ್ನು ಕೈಬಿಟ್ಟು ಸರ್ಕಾರದೊಂದಿಗೆ ಸ್ನೇಹ ವೃದ್ಧಿಸಿಕೊಂಡು ಹೆಚ್ಚಿನ ನಾಗರಿಕ ಹಕ್ಕುಗಳನ್ನು ಪಡೆಯಲು ಯತ್ನಿಸುವುದು ಒಳಿತೆಂದು ಸಲಹೆ ನೀಡಿದರು. ಇದನ್ನೂ ಬಹುತೇಕ ಜನ ಒಪ್ಪಿದರು.

ನಂತರ ಗಾಂಧಿ ಆ್ಯಂಡ್ರ್ಯೂಸ್‌ರೊಡಗೂಡಿ ಸ್ಮಟ್ಸ್‌ನೊಡನೆಯ ತಮ್ಮ ಮಾತುಕತೆಯ ಕೊನೆಯಲ್ಲಿ ಸ್ಮಟ್ಸ್ ನೀಡಿದ ಆಶ್ವಾಸನೆಗಳನ್ನು ಪಟ್ಟಿ ಮಾಡಿ ಅವನ್ನು ಖಚಿತಪಡಿಸುವಂತೆ ಆತನಿಗೆ ಜನವರಿ ೨೧ರಂದು ಪತ್ರ ಬರೆದರು. ಇದರಲ್ಲಿ ಬಹುಪತ್ನಿತ್ವದ ವಾಡಿಕೆ ಇರುವ ಸಮುದಾಯಗಳಲ್ಲಿ ಹೆಚ್ಚಿನ ಹೆಂಡತಿಯರಾಗಿ ಈಗಾಗಲೇ ದ.ಆಫ್ರಿಕಾದಲ್ಲಿ ವಾಸಿಸುತ್ತಿರುವ ಮಹಿಳೆಯರಿಗೆ ನಾಗರಿಕ ಹಕ್ಕುಪತ್ರ ನೀಡುವಂತೆ ಕೋರಿದ್ದರು. ಇದಕ್ಕೆ ಕೂಡಲೇ ಉತ್ತರಿಸಿದ ಸ್ಮಟ್ಸ್, ಪತ್ರದ ಒಕ್ಕಣೆಗೆ ತನ್ನ ಸಹಮತ ಸೂಚಿಸಿ, ಸತ್ಯಾಗ್ರಹವನ್ನು ಹಿಂತೆಗೆದುಕೊಂಡು, ಪೊಲೀಸರ ಮೇಲೆ ಮೊಕದ್ದಮೆ ಹೂಡದಿರಲು ನಿರ್ಧರಿಸಿರುವ ಬಗ್ಗೆ ತನ್ನ ಸಂತೋಷವನ್ನು ವ್ಯಕ್ತಪಡಿಸಿದ. ಹಾಗೇ ತಾವಿಬ್ಬರೂ ಒಪ್ಪಂದಕ್ಕೆ ಬಂದಿರುವ ಅಂಶಗಳನ್ನು ಒಳಗೊಂಡ ಒಂದು ಶಾಸನ ಬರಲಿರುವ ಒಕ್ಕೂಟದ ಸಂಸತ್ತಿನಲ್ಲಿ ಅನುಮೋದನೆಗೊಂಡು ಕಾಯಿದೆಯಾಗುವಂತೆ ನೋಡಿಕೊಳ್ಳುವುದಾಗಿಯೂ ಭರವಸೆ ನೀಡಿದನು.

ಸತ್ಯಾಗ್ರಹಿಗಳ ಸಂಭ್ರಮಾಚರಣೆ

ಈ ಹೊತ್ತಿಗಾಗಲೇ ಸರ್ಕಾರ ತಂಡೋಪತಂಡವಾಗಿ ಸತ್ಯಾಗ್ರಹಿಗಳನ್ನು ಬಿಡುಗಡೆ ಮಾಡಲಾರಂಭಿಸಿತ್ತು. ಪ್ರತಿಯೊಂದು ತಂಡವನ್ನೂ ಸೆರೆಮನೆಯ ಬಾಗಿಲಲ್ಲಿ ಸಂಭ್ರಮದಿಂದ ಸ್ವಾಗತಿಸುವ ತಂಡಗಳು ರಚಿತವಾದವು. ಫಾತಿಮಾಬಾಯಿ ಮತ್ತು ಆಕೆಯ ತಾಯಿ ಹನೀಫಾಬಾಯಿ ಹಾಗೂ ಶ್ರೀಮತಿ ತಂಬಿ ನಾಯ್ಡೂ ಮತ್ತಾಕೆಯ ದ್ರಾವಿಡ ಮಹಿಳಾ ಸತ್ಯಾಗ್ರಹಿ ತಂಡ ಬಿಡುಗಡೆಯಾದಾಗ ವಿಶೇಷ ಸಂಭ್ರಮಗಳೊಂದಿಗೆ ಅವರನ್ನು ಸ್ವಾಗತಿಸಿ, ಡರ್ಬಾನ್‌ನ ಬೀದಿಗಳಲ್ಲಿ ಮೆರವಣಿಗೆ ಮಾಡಿ ಗೌರವ ಸಮರ್ಪಿಸಲಾಯಿತು. ಪಾರ್ಸಿ ರುಸ್ತುಂಜಿಯವರ ಅಂಗಡಿಯ ಆವರಣದಲ್ಲಿ ನಡೆದ ಈ ಸಮಾರಂಭಗಳಲ್ಲಿ ಕವಿ ಶೇಕ್ ಮೆಹ್ತಾಬ್ ಮತ್ತು ಆತನ ಸಂಗೀತ ವಿದ್ಯಾರ್ಥಿಗಳು ದೇಶಪ್ರೇಮದ ಮತ್ತು ಐಕ್ಯತೆಯ ಗೀತೆಗಳನ್ನು ಹಾಡಿದರೆ ಮಿಲಿ ಪೊಲಾಕ್ ಮತ್ತು ಸೋನ್ಯಾ ಶ್ಲೆಸಿನ್ ಮಹಿಳಾ ಶಕ್ತಿಯ ಬಗ್ಗೆ ಪುಟ್ಟ ಭಾಷಣಗಳನ್ನು ಮಾಡಿದರು. ಎಲ್ಲರೂ ಒಟ್ಟಿಗೆ ಅಡುಗೆ ಮಾಡಿ ಊಟ ಮಾಡಿ ಸಂತೋಷಿಸಿದರು.

■

೩೮

ದ.ಆಫ್ರಿಕಾಕ್ಕೆ ವಿದಾಯ

ಜ. ಸ್ಮಟ್ಸ್‌ನ ಆಶ್ವಾಸನೆಗಳನ್ನು ಶಾಸನವಾಗಿ ಪರಿವರ್ತಿಸಬೇಕಾದ ಒಕ್ಕೂಟದ ಸಂಸತ್ತಿನ ಅಧಿವೇಶನವನ್ನು ಎದುರು ನೋಡುತ್ತಾ ಗಾಂಧಿ ಫೆಬ್ರುವರಿ ಎರಡನೇ ವಾರದಲ್ಲಿ ಪತ್ನಿ ಕಸ್ತೂರಬಾ ಮತ್ತು ಹೊಸ ಗೆಳೆಯ ಆ್ಯಂಡ್ರ್ಯೂಸ್ ಅವರೊಂದಿಗೆ ರಾಜಧಾನಿ ಕೇಪ್‌ಟೌನ್‌ಗೆ ಬಂದು ತಮ್ಮ ಮುಸ್ಲಿಂ ಗೆಳೆಯ ಡಾ. ಗೂಲ್ ಅವರ ಕುಟುಂಬದೊಂದಿಗೆ ತಂಗಿದರು. ಈ ಭೇಟಿಗೆ ಎರಡು ಮೂರು ಉದ್ದೇಶಗಳಿದ್ದವು. ಒಂದು: ತೀವ್ರ ಅಸ್ವಸ್ಥರಾಗಿದ್ದ ಕಸ್ತೂರಬಾಗೆ ಚಿಕಿತ್ಸೆ ಕೊಡಿಸುವುದು, ಎರಡು: ರಾಜಧಾನಿಯಲ್ಲಿದ್ದು ವಿಚಾರಣಾ ಆಯೋಗದ ಕಾರ್ಯ ನಿರ್ವಹಣೆಯ ಮೇಲೆ ನಿಗಾ ಇಡುವುದು, ಮೂರು: ಆ್ಯಂಡ್ರ್ಯೂಸ್‌ರನ್ನು ವಿವಿಧ ಹಿನ್ನೆಲೆಗಳ ಜನರಿಗೆ ಪರಿಚಯಿಸುವುದು. ಆದರೆ ಬಾ ಅವರ ಆರೋಗ್ಯ ತೀವ್ರ ಹದಗೆಟ್ಟು ಮೊದಲ ಕಾರಣವೇ ತುಂಬ ಗಂಭೀರ ಸ್ವರೂಪ ಪಡೆಯಿತು. ಅವರಿಗೆ ಇನ್ನೊಬ್ಬರ ಸಹಾಯವಿಲ್ಲದೆ ಕೂರಲೂ ಕಷ್ಟವಾಗತೊಡಗಿತು. ಒಂದಿಷ್ಟು ಹಣ್ಣಿನ ರಸದ ಹೊರತಾಗಿ ಆಹಾರವೇ ಸೇರದಾಯಿತು. ಹೊಟ್ಟೆಯೊಳಗಿನ ಊತ ಗಮನಿಸಿದ ಡಾ. ಗೂಲ್ ಅವರು ಇದು ಕ್ಯಾನ್ಸರ್ ಇರಬೇಕೆಂದು ಅನುಮಾನಿಸಿದರು. ಕೂಡಲೇ ಗಾಂಧಿ ಕ್ಯಾನ್ಸರ್‌ಗೆ ಮದ್ದಿಲ್ಲ ಎಂಬ ತಮ್ಮ ನಂಬಿಕೆಯ ಆಧಾರದ ಮೇಲೆ ಬಾ ಅವರ ಉಸ್ತುವಾರಿಯನ್ನು ತಾವೇ ವಹಿಸಿಕೊಂಡು ಅವರಿಗೆ ಉಪವಾಸ, ನಿಂಬೆ ಎಲೆಯ ರಸದ ಪಥ್ಯವನ್ನು ವಿಧಿಸಿದರು. ಫೆಬ್ರುವರಿ ಕೊನೇ ವಾರದಲ್ಲಿ ಆ್ಯಂಡ್ರ್ಯೂಸ್ ಮತ್ತು ಅವರ ಗೆಳೆಯ ಪಿಯರ್ಸನ್ ಭಾರತಕ್ಕೆ ವಾಪಸ್ ಹೊರಟ ನಂತರ, ಬಾ ಅವರ ಕಡೆ ಹೆಚ್ಚು ಗಮನ ಹರಿಸಿದ ಗಾಂಧಿಯ ನೈಸರ್ಗಿಕ ಚಿಕಿತ್ಸೆಯ ಫಲವಾಗಿ ಅವರ ಆರೋಗ್ಯ ಸಾಕಷ್ಟು ಸುಧಾರಿಸಿ, ಅವರು ಅಪಾಯದಿಂದ ಪಾರಾಗಿದ್ದಾರೆಂದು ಸ್ವತಃ ವೈದ್ಯರೇ ಹೇಳುವಂತಾಯಿತು.

ಗಾಂಧಿ ಕೊಲೆಗೆ ಸಂಚು?–ಗಾಂಧಿ ನೀಡಿದ 'ಕೊನೆಯ' ಸಂದೇಶ

ಈ ಮಧ್ಯೆ ಸ್ವತಃ ಗಾಂಧಿಯವರ ಪ್ರಾಣಕ್ಕೆ ಅಪಾಯವಿರುವ ಸುದ್ದಿ ಬಂತು. ಜೊಹಾನ್ಸ್‌ಬರ್ಗ್‌ನಿಂದ ಮೇಥ್ ಅನ್ನುವ ಯುವಕನೊಬ್ಬ ಒಂದು ಪತ್ರ ಬರೆದು ಹೆಚ್ಚಿನ ವಿವರಗಳನ್ನು ನೀಡದೆ 'ನಿಮ್ಮನ್ನು ಕೊಲ್ಲಲು ಒಂದು ಸಂಚು ನಡೆದಿದೆ' ಎಂದಷ್ಟೇ ಸೂಚನೆ ನೀಡಿದ್ದ. ದ.ಆಫ್ರಿಕಾಕ್ಕೆ ಬಂದಾಗಿನಿಂದ ಗಾಂಧಿ ಆರಂಭಿಸಿದ ಕಾರ್ಯಾಚರಣೆಗಳು ಮತ್ತು ಅವುಗಳ ಬಗೆಗಳು ಹಲವು ಸಮುದಾಯಗಳ ಹಲವು ಗುಂಪುಗಳ ಸಿಟ್ಟಿಗೆ ಕಾರಣವಾಗಿ ಹಲವು ಬಾರಿ ಅವರ ಮೇಲೆ ಪ್ರಾಣಾಂತಿಕ ಹಲ್ಲೆಗಳೂ

ನಡೆದಿದ್ದವು. ಈ ಹಿನ್ನೆಲೆಯಲ್ಲಿ ಗಾಂಧಿ ಈ ಸುದ್ದಿಯನ್ನು ಲಘುವಾಗಿ ಪರಿಗಣಿಸುವ ಸ್ಥಿತಿಯಲ್ಲಿರಲಿಲ್ಲ. ಹಾಗಾಗಿ ಅವರು ಮಾರ್ಚ್ ೧೧ರಂದು ಫೀನಿಕ್ಸ್‌ನಲ್ಲಿದ್ದ ತಮ್ಮ ಬಂಧು ಛಗನ್‌ಲಾಲ್‌ಗೆ ಪತ್ರ ಬರೆದು, ಇಂತಹ ಸಾವು ತಮ್ಮ ಬದುಕಿಗೆ ಯೋಗ್ಯವಾದ ಅಂತ್ಯವನ್ನು ಕಾಣಿಸುವುದರಿಂದ ಅದನ್ನು ಸ್ವಾಗತಿಸುವುದಾಗಿ ತಿಳಿಸುತ್ತಾ, ಒಂದು ವೇಳೆ ತಮ್ಮ ಸಾವು ಸಂಭವಿಸಿದರೆ ತಮ್ಮ ಕುಟುಂಬ ಏನು ಮಾಡಬೇಕೆಂಬುದನ್ನು ವಿವರಿಸಿದರು. ಮುಖ್ಯವಾಗಿ ಎರಡು ಅಂಶಗಳು. ಎಲ್ಲರೂ ರೈತರಾಗಿ ಸರಳ ಜೀವನ ನಡೆಸಬೇಕು. ಗಂಡಸರು, ಕಸ್ತೂರಬಾ, ಗುಜರಾತ್‌ನಲ್ಲಿರುವ ತಮ್ಮ ತಂಗಿ ಹಾಗೂ ತಮ್ಮ ಅಣ್ಣಂದಿರ ಪತ್ನಿಯರೂ ಸೇರಿದಂತೆ ಕುಟುಂಬದ ವಿಧವೆಯರನ್ನು ನೋಡಿಕೊಳ್ಳಬೇಕು. ತಕ್ಷಣಕ್ಕೆ ಹಣದ ಅಗತ್ಯ ಬಿದ್ದರೆ ಡಾ. ಪ್ರಾಣಜೀವನ ಮೆಹ್ತಾರಿಂದ ಪಡೆಯಬಹುದು. ಸರಿಸುಮಾರು ಇದೇ ಹೊತ್ತಿಗೆ ಗಾಂಧಿ ಕುಟುಂಬದ ಹಿರಿಯರಾಗಿದ್ದ ಮತ್ತು ಗಾಂಧಿಯ ಅಣ್ಣನಾಗಿದ್ದ ಲಕ್ಷ್ಮೀದಾಸರ ಮರಣದ ಸುದ್ದಿಯೂ ಬಂದಿತ್ತು.

ಇದೇ ಸಮಯದಲ್ಲಿ ಮಾರ್ಚ್ ಕೊನೆಯ ವೇಳೆಗೆ ವಿಚಾರಣಾ ಆಯೋಗ ಭಾರತೀಯ ವಿವಾಹಗಳಲ್ಲಿ ಏಕಪತ್ನಿ ವಿವಾಹವೊಂದನ್ನು ಮಾತ್ರ ಮಾನ್ಯ ಮಾಡಲು ನಿರ್ಧರಿಸಿದೆ ಎಂಬ ಸುದ್ದಿ ಹರಡಿತ್ತು. ಇದಕ್ಕೆ ಗಾಂಧಿಯೇ ಕಾರಣವೆಂದು ಭಾವಿಸಿದ ಟ್ರಾನ್ಸ್‌ವಾಲ್‌ನ ಮುಸ್ಲಿಂ ಸಮುದಾಯದ ಎಲ್ಲ ಪಂಗಡಗಳ ನಾಯಕರೂ ಮಾರ್ಚ್ ಕೊನೆಯ ವಾರದಲ್ಲಿ ಜೊಹಾನ್ಸ್‌ಬರ್ಗ್‌ನ ಹಮೀದಿಯಾ ಮಸೀದಿಯ ಆವರಣದಲ್ಲಿ ಸಭೆ ಸೇರಿ ಗಾಂಧಿ, ಮುಸ್ಲಿಂ ಸಮುದಾಯದ ವಕ್ತಾರರಲ್ಲವೆಂದೂ, ತಮ್ಮ ಮತಾಚಾರಗಳ ವಿಷಯದಲ್ಲಿ ಯಾರಿಗೂ ಹಸ್ತಕ್ಷೇಪ ಮಾಡುವ ಅಧಿಕಾರವಿಲ್ಲವೆಂದೂ ನಿರ್ಣಯ ಸ್ವೀಕರಿಸಿದರು. ಇದೇ ಆವರಣದಲ್ಲಿಯೇ ಗಾಂಧಿ ಹಲವು ಬಾರಿ ಹಿಂದೂ–ಮುಸ್ಲಿಮರೆನ್ನದೆ ಎಲ್ಲ ಮತಗಳಿಗೆ ಸೇರಿದ ಭಾರತೀಯ ಸಮುದಾಯದ ಹಕ್ಕುಗಳಿಗಾಗಿ ಸಭೆ ನಡೆಸಿದ್ದರು ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ವಿಚಾರಣಾ ಆಯೋಗದ ಶಿಫಾರ್ಸುಗಳು

ಈ ಸಭೆ ನಡೆದ ಕೆಲವೇ ದಿನಗಳಲ್ಲಿ ವಿಚಾರಣಾ ಆಯೋಗದ ವರದಿ ಪ್ರಕಟವಾಯಿತು. ಅದು ಗಾಂಧಿಯನ್ನು ಭಾರತೀಯ ಸಮುದಾಯದ ನಾಯಕರೆಂದು ಗುರುತಿಸಿತ್ತಾದರೂ, ಅವರ ನಾಯಕತ್ವ ಆಯೋಗವನ್ನು ಬಹಿಷ್ಕರಿಸಿದ್ದರ ಬಗ್ಗೆ ವಿಷಾದ ವ್ಯಕ್ತಪಡಿಸಿ, ಇದರಿಂದಾಗಿ ಅವರು ಮುಷ್ಕರದ ಸಂದರ್ಭದಲ್ಲಿ ಸರ್ಕಾರ ನಡೆಸಿದ ದೌರ್ಜನ್ಯ ಮತ್ತು ಗೋಲೀಬಾರ್ ಸಮರ್ಥನೀಯವಾಗಿರಲಿಲ್ಲ ಎಂಬ ಆರೋಪ ಯಾವುದೇ ಸಾಕ್ಷ್ಯಗಳಿಲ್ಲದೆ ಸಾಬೀತಾಗಿಲ್ಲ ಎಂದು ವಿವರಿಸಿತ್ತು. ಅಲ್ಲದೆ ಅದು ಭಾರತೀಯ ಸಮುದಾಯದ ಪ್ರತಿಭಟನೆ, ಸತ್ಯಾಗ್ರಹ ಮತ್ತು ಮುಷ್ಕರಗಳಿಗೆ ಕಾರಣವಾಗಿದ್ದ ಮತ್ತು ಆನಂತರ ಗಾಂಧಿ ಕೋರಿಕೆಗಳ ಮೂಲಕ ಸಲ್ಲಿಸಿದ್ದ ಪ್ರಮುಖ ಬೇಡಿಕೆಗಳನ್ನು ಶಾಸನಾತ್ಮಕ ಕ್ರಮಗಳ ಮೂಲಕ ಈಡೇರಿಸುವಂತೆ ಸರ್ಕಾರಕ್ಕೆ ಶಿಫಾರ್ಸು ಮಾಡಿತ್ತು. ಈ ಶಿಫಾರ್ಸುಗಳೆಂದರೆ,

೧. ದ.ಆಫ್ರಿಕಾದ ನಿವಾಸಿಯಾದ ಭಾರತೀಯನು ಈಗಾಗಲೇ ಆತನಿಗೆ ದ.ಆಫ್ರಿಕಾದಲ್ಲಿ ಹೆಂಡತಿ ಇಲ್ಲದಿದ್ದರೆ ಓರ್ವ ಪತ್ನಿ ಮತ್ತು ಅವಳ

ವಯಸ್ಕರಲ್ಲದ ಮಕ್ಕಳನ್ನು ಇಲ್ಲಿಗೆ ಕರೆತರಲು ಅನುಮತಿ ನೀಡಬಹುದು.

೨. ಈಗಾಗಲೇ ಬಹುಪತ್ನಿತ್ವದ ಪರಿಣಾಮವಾಗಿ ದ.ಆಫ್ರಿಕಾದಲ್ಲಿ ಭಾರತೀಯರ ಹೆಂಡತಿಯರಾಗಿರುವ ಮಹಿಳೆಯರು ಮತ್ತು ಅವರ ಮಕ್ಕಳಿಗೆ ನೋಂದಣಿ ಪತ್ರ ನೀಡಬಹುದು.

೩. ಭಾರತೀಯ ವಿವಾಹ ಪದ್ಧತಿಯ ಮದುವೆಗಳಿಗೆ ಮಾನ್ಯತೆ ನೀಡಲು ಸಹಾಯಕವಾಗುವಂತೆ ಎಲ್ಲ ಮತಗಳಿಂದ ಕೆಲವು ಪುರೋಹಿತರನ್ನು ಸರ್ಕಾರ ನೇಮಿಸಬೇಕು.

೪. ನೆಟಾಲ್‌ನಲ್ಲಿ 'ಭಾರತೀಯ ಕೂಲಿ'ಗಳಿಗೆ ಸಂಬಂಧಿಸಿದಂತಿರುವ ಮೂರು ಪೌಂಡುಗಳ ತೆರಿಗೆ ಪದ್ಧತಿಯನ್ನು, ಬಾಕಿ ಸಹಿತವಾಗಿ ರದ್ದುಗೊಳಿಸಿ ಅವರು ನೆಟಾಲ್‌ನಲ್ಲಿ ನೆಲೆಸಲು ಮುಕ್ತ ಅವಕಾಶ ನೀಡಬೇಕು.

೫. ನೆಟಾಲ್ ಭಾರತೀಯರು ವಲಸೆ ರಹದಾರಿ ಪಡೆದು ಒಕ್ಕೂಟ ಸರ್ಕಾರದಿಂದ ಹೆಬ್ಬೆಟ್ಟಿನ ಮುದ್ರೆ ಮೂಲಕ ಗುರುತು ಸ್ಥಾಪಿಸಿಕೊಂಡು ಒಕ್ಕೂಟದಾದ್ಯಂತ ಸಂಚರಿಸಬಹುದು.

೬. ನೋಂದಣಿ ಪತ್ರವನ್ನು ಒಂದು ವರ್ಷದ ಅವಧಿಗೆ ಬದಲಾಗಿ ಮೂರು ವರ್ಷಗಳ ಅವಧಿಗೆ ನೀಡಬೇಕು ಮತ್ತು ಈ ಎಲ್ಲ ನೋಂದಣಿ ಕಾರ್ಯದಲ್ಲಿ ಭಾರತೀಯರಿಗೆ ನೆರವಾಗಲು ಭಾಷಾಂತರಕಾರರನ್ನು ನೇಮಿಸಬೇಕು.

ಇವೆಲ್ಲವೂ ಮತ್ತು ಈ ಮುಂಚೆ ಸಂಸತ್ತಿನಲ್ಲಿ ಅನುಮೋದಿತವಾಗಿದ್ದ ಶಾಸನ ತಿದ್ದುಪಡಿಗಳು ಸೇರಿ ಭಾರತೀಯರ ಎಲ್ಲ ಪ್ರಮುಖ ಬೇಡಿಕೆಗಳನ್ನು ಈಡೇರಿಸುವಂತಿದ್ದುದರಿಂದ ಗಾಂಧಿ ವರದಿಯನ್ನು ಸ್ವಾಗತಿಸಿದರು. ನೆಟಾಲ್‌ನ ಭಾರತೀಯರಿಗೆ ನೀಡಲಾಗಿರುವ ಹಕ್ಕುಗಳನ್ನು ಕೇಪ್‌ಟೌನ್ ಮತ್ತು ಫ್ರೀ ಸ್ಟೇಟ್‌ಗಳ ಭಾರತೀಯರಿಗೂ ಒದಗಿಸಬೇಕೆಂದು ಕೋರಿ ಸರ್ಕಾರಕ್ಕೆ ಪತ್ರ ಬರೆದರು. ಈ ಸಮಯದಲ್ಲಿ ಬರ್ಮಾದಿಂದ (ಈಗಿನ ಮ್ಯಾನ್ಮಾರ್) ಪತ್ರ ಬರೆದ ಪ್ರಾಣಜೀವನ ಮೆಹ್ತಾ ದ.ಆಫ್ರಿಕಾದಲ್ಲಿ ಕೆಲಸ ಮುಗಿದಿರುವುದರಿಂದ ಭಾರತಕ್ಕೆ ಆದಷ್ಟು ಬೇಗ ಮರಳಲು ಒತ್ತಾಯಿಸಿದ್ದ. ಈ ಹೊತ್ತಿಗೆ ಲಂಡನ್‌ನಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಗೋಖಲೆಯವರನ್ನು ಕಂಡು ಅವರ ಸೇವೆ ಮಾಡಿ ಆಶೀರ್ವಾದ ಪಡೆದ ನಂತರವಷ್ಟೇ ಭಾರತಕ್ಕೆ ಬರುವುದಾಗಿ ಗಾಂಧಿ ಮೆಹ್ತಾಗೆ ಉತ್ತರಿಸಿದರು.

ಕುಟುಂಬದಲ್ಲೊಂದು ಸಣ್ಣ ಬಿರುಗಾಳಿ–ಗಾಂಧಿಯ ಉಪವಾಸ

ನಂತರ ಕಸ್ತೂರಬಾ ಪ್ರಯಾಣ ಮಾಡಲು ಶಕ್ತರಾದ ಮೇಲೆ ಮೇ ತಿಂಗಳ ಹೊತ್ತಿಗೆ ಅವರು ಫೀನಿಕ್ಸ್‌ಗೆ ಬಂದರು. ಬಂದೊಡನೆ ಅವರಿಗೊಂದು ಕೆಟ್ಟ ಸುದ್ದಿ ಕಾದಿತ್ತು. ಮಣಿಲಾಲ ಮತ್ತು ಜೇಕಿಯ ನಡುವೆ ಮತ್ತೆ ಪ್ರೇಮ ಪ್ರಸಂಗಗಳ ಪುಕಾರು ಹಬ್ಬಿತ್ತು. ಈ ಬಗ್ಗೆ ಬಾ ಕಳವಳ ವ್ಯಕ್ತಪಡಿಸಿದಾಗ, ಗಾಂಧಿ ತಮ್ಮದೇ ರೀತಿಯಲ್ಲಿ ಗುಪ್ತ ವಿಚಾರಣೆ ನಡೆಸಿ ಅದು ಸುಳ್ಳು ಎಂಬ ತೀರ್ಮಾನಕ್ಕೆ ಬಂದ ಮೇಲೂ, ಬಾ ಈ ಬಗ್ಗೆ ಮನೆಯಲ್ಲಿ ದಿನನಿತ್ಯ ರಗಳೆ ಶುರು ಮಾಡಿದರು. ಗಾಂಧಿ ಬೇಕೆಂದೇ ಜೇಕಿಯ ರಕ್ಷಣೆಗೆ ನಿಂತಿದ್ದಾರೆಂದು ದೂರಿದರು. ಬಾಗೆ ಜೇಕಿಯನ್ನು ಕಂಡರೆ ಕಣ್ಣುರಿ ಎಂದು ಗಾಂಧಿ

ದೂರಿದರು. ಇದರ ಪರಿಣಾಮವಾಗಿ ಒಂದು ದಿನ ಗಂಡ ಹೆಂಡಿರ ನಡುವೆ ಭಾರಿ ಕೂಗಾಟಗಳ ಜಗಳವೇ ನಡೆದುಹೋಗಿ ಗಾಂಧಿಯ ಮನಸ್ಸು ಕೆಟ್ಟು ಹೋಯಿತು. ಈ ಬಗ್ಗೆ ಗಾಂಧಿ ತನ್ನ ಅಂತರಂಗವನ್ನೆಲ್ಲ ಸದಾ ತೋಡಿಕೊಂಡು ಹಗುರಾಗುತ್ತಿದ್ದ ಆಪ್ತಮಿತ್ರ ಕಲೆನ್‌ಬಾಕ್‌ಗೆ ಬರೆದರು. 'ನಾನು ನಿನ್ನೆ ಬಾಳಿನ ಬಹು ಪ್ರಮುಖ ಪಾಠವೊಂದನ್ನು ಕಲಿತೆ' ಎಂದು ಆರಂಭವಾಗುವ ಈ ಪತ್ರದಲ್ಲಿ 'ಅವಳು ಕಾಯಿಲೆಯಲ್ಲಿ ಸಾಯಬಾರದಿತ್ತೇ!' ಎಂದು ತಮಗನ್ನಿಸಿದ್ದನ್ನು ಹೇಳಿಕೊಂಡಿದ್ದಾರೆ. ಜೊತೆಗೆ 'ಅವಳನ್ನು, ತಾಯಿಯನ್ನು ಮಗ ನೋಡಿಕೊಂಡಂತೆ ನೋಡಿಕೊಂಡು ರಕ್ಷಿಸಿದೆ. ಆದರೂ ಅವಳು ನನ್ನನ್ನು ಹೆಡೆನಾಗ ಎಂದು ಕರೆದಳು... ಹೌದು ಸಾರ್ವಜನಿಕ ಸೇವೆ ಮಾಡಬಯಸುವವರು ಮದುವೆಯಾಗಬಾರದು. ಎರಡೂ ಪರಸ್ಪರ ವಿರುದ್ಧ. ಆತ ತನ್ನ ಬದುಕನ್ನು ಒಬ್ಬ ಹೆಂಗಸಿಗೆಂದೇ ಮುಡಿಪಾಗಿ ಇಡಲಾರ....' ಎನ್ನುತ್ತಲೇ, 'ಅವಳನ್ನು ಬಹಳ ಕೆಟ್ಟ ಹೆಂಡತಿ ಎಂದೂ ಕರೆಯಲಾರೆ. ಏಕೆಂದರೆ ನನ್ನ ಬಾಳಿನಲ್ಲಾದ ಅಲ್ಲೋಲ ಕಲ್ಲೋಲಗಳಂತಹ ಬದಲಾವಣೆಗಳನ್ನು ಅವಳಂತೆ ಇನ್ನೊಬ್ಬ ಹೆಂಗಸು ತಡೆದುಕೊಳ್ಳಲಾಗುತ್ತಿರಲಿಲ್ಲವೇನೋ...' ಎಂದೂ ಅಲವತ್ತುಕೊಂಡಿದ್ದಾರೆ.

ಆದರೆ ನಂತರ ಗೊತ್ತಾದ ಸತ್ಯ ಸಂಗತಿಯಿಂದ ಗಾಂಧಿ ಬೆಚ್ಚಿಬಿದ್ದಿದ್ದಂತೂ ನಿಜ. ಜೇಕಿ ಆಶ್ರಮದ ಇನ್ನೋರ್ವ ಹುಡುಗನೊಂದಿಗೆ ಪ್ರೇಮ ಸಲ್ಲಾಪ ನಡೆಸುತ್ತಿದ್ದಾಗ ಸಿಕ್ಕಿಬಿದ್ದಿದ್ದಳು. ಗಾಂಧಿ ಆಘಾತಗೊಂಡು ಕುಸಿದರು. ಅವಳೊಬ್ಬಳು ಹುಟ್ಟು ಸುಳ್ಳಿ, ವಿಶ್ವಾಸದ್ರೋಹಿ ಎಂದು ನರಳಿದರು. ಅವಳನ್ನು ಫಿಜಿಯಲ್ಲಿದ್ದ ಅವಳ ಗಂಡನ ಬಳಿ ಕಳಿಸಲು ತೀರ್ಮಾನಿಸಿದರು. ನಂತರ, ನಂಬಿಕೆ ಇಟ್ಟು ಆಕೆಯ ತಂದೆ ಮತ್ತು ಗಂಡ ತಮ್ಮಲ್ಲಿಗೆ ಕಳಿಸಿದ್ದ ಅವಳನ್ನು ಕೆಟ್ಟತನದಿಂದ ಕಾಪಾಡಲಾಗದ ತಮ್ಮ ತಪ್ಪಿಗೆ ಶಿಕ್ಷೆಯಾಗಿ, ಆತ್ಮಶುದ್ಧಿಗೆಂದು ಎರಡು ವಾರಗಳ ಉಪವಾಸ ಆರಂಭಿಸಿದರು. ಈ ಉಪವಾಸ ಅವರ ಕೌಟುಂಬಿಕ ಬದುಕಿನಲ್ಲಿ, ನಿರ್ದಿಷ್ಟವಾಗಿ ಅವರ ದಾಂಪತ್ಯದಲ್ಲಿ ಒಂದು ನಿರ್ಣಾಯಕ ಪರಿವರ್ತನೆಯನ್ನೇ ತಂದಿತು ಎಂದು ಹೇಳಬೇಕು. ತುಂಬ ನೊಂದಿದ್ದ ಗಾಂಧಿ ಈ ಉಪವಾಸವನ್ನು ಎಷ್ಟು ಕಟ್ಟುನಿಟ್ಟಾಗಿ ಪಾಲಿಸತೊಡಗಿದರೆಂದರೆ ಅವರ ಹೆಂಡತಿ ಮತ್ತು ಮಕ್ಕಳಿಗೆ ಇದು ಪ್ರಾಣಾಹುತಿ ಎಂದೇ ಕಾಣತೊಡಗಿ ಅವರು ತಲ್ಲಣಿಸಿಹೋದರು. ಈ ಅಗ್ನಿ ಪರೀಕ್ಷೆಯಲ್ಲಿ ಗಾಂಧಿ ದೈಹಿಕವಾಗಿ ಹೇಗೋ ಆಧ್ಯಾತ್ಮಿಕವಾಗಿಯೂ ಯಶಸ್ವಿಯಾಗಿ ಹೊರಬಂದು ತಮ್ಮ ಹೆಂಡತಿ ಮಕ್ಕಳ ಆತ್ಮಶುದ್ಧೀಕರಣಕ್ಕೂ ಕಾರಣರಾಗಿದ್ದರು. ಕಸ್ತೂರ ಬಾ ಮತ್ತೆ ಅವರ ಪ್ರಾಣಸಖಿಯಾಗಿದ್ದರು.

■

೩೯

ಗುರುದರ್ಶನಕ್ಕಾಗಿ ಲಂಡನ್‌ಗೆ ಪ್ರಯಾಣ

ಅಂತೂ ೧೯೧೪ರ ಮೇ ತಿಂಗಳ ಕೊನೆಯಲ್ಲಿ ವಿಚಾರಣಾ ಆಯೋಗದ ಶಿಫಾರ್ಸುಗಳನ್ನೊಳಗೊಂಡ ಕರಡು ಮಸೂದೆಯನ್ನು ಸರ್ಕಾರ ಪ್ರಕಟಿಸಿತು. ಗಾಂಧಿ ಇದು ಪರಿಪೂರ್ಣವಾಗಿ ಶಾಸನವಾಗಿ ಹೊರಬರುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ರಾಜಧಾನಿ ಕೇಪ್‌ಟೌನ್‌ಗೆ ತೆರಳಿದರು. ಇಡೀ ಜೂನ್ ತಿಂಗಳು ಅಲ್ಲಿ ತಂಗಿ ವಿವಿಧ ಪಕ್ಷಗಳ ನಾಯಕರನ್ನು ಕಂಡು ಮಾತನಾಡಿದರು. ಮಸೂದೆಗೆ ವಿರೋಧವಿದ್ದವರನ್ನು ಗುರುತಿಸಿ ಅವರ ಮನವೊಲಿಸುವ ಪ್ರಯತ್ನ ಮಾಡಿದರು. ಈ ಸಂದರ್ಭದಲ್ಲಿ ಅವರ ಗಮನಕ್ಕೆ ಬಂದ ಸತ್ಯ ಸಂಗತಿ ಎಂದರೆ ಭಾರತೀಯ ಬಹುಪತ್ನಿತ್ವ ವಿವಾಹ ಪದ್ಧತಿಗಳಿಗೆ ಮಾನ್ಯತೆ ನೀಡುವುದಕ್ಕೆ ಟ್ರಾನ್ಸ್‌ವಾಲ್‌ನ ಡಚ್ ಮೂಲದ ಬೋಯರ್ ಸದಸ್ಯರದ್ದು ಪ್ರಬಲ ವಿರೋಧವಿದ್ದರೆ, ನೆಟಾಲ್‌ನ ಇಂಗ್ಲಿಷರದ್ದು, ಮೂರು ಪೌಂಡುಗಳ ತೆರಿಗೆ ರದ್ದತಿಗೆ ಪ್ರಬಲ ವಿರೋಧ. ಇದು ಸಾಮಾಜಿಕ-ಶಾಂತಿ ಮತ್ತು ಸ್ಥಿರತೆಗಳನ್ನು ಕೆಡಿಸುವುದೆಂದು ಅವರ ವಾದ. ಆದರೆ ಗಾಂಧಿ ಮತ್ತು ಅವರ ಗೆಳೆಯರ ಸ್ನೇಹಮಯ ಪ್ರಯತ್ನಗಳು ಮತ್ತು ಸಂಸತ್ತಿನ ಒಳಗೆ ಸ್ಮಟ್ಸ್ ಮತ್ತು ಬೋತಾರ ಕೌಶಲ್ಯಪೂರ್ಣ ಸಂಸದೀಯ ವ್ಯವಹಾರಗಳ ಮೂಲಕ ಸಂಸತ್ತು ಮಸೂದೆಯನ್ನು ಇಡಿಯಾಗಿ ಅಂಗೀಕರಿಸುವಂತಾಯಿತು. ಅದು ಗವರ್ನರ್ ಜನರಲ್ ಮೂಲಕ ಲಂಡನ್‌ನ ಬ್ರಿಟಿಷ್ ಸಾಮ್ರಾಜ್ಯದ ಸರ್ಕಾರಕ್ಕೆ ತಲುಪಿ ಅಲ್ಲಿ ಅದಕ್ಕೆ ಔಪಚಾರಿಕ ಮನ್ನಣೆಯ ಮುದ್ರೆ ಬಿದ್ದು ಶಾಸನದ ರೂಪ ಪಡೆಯಬೇಕಿತ್ತಷ್ಟೇ.

ಭಾರತಕ್ಕೆ ಹೊರಟ ಗಾಂಧಿ-ವಿದಾಯ ಸಭೆಗಳ ಮಹಾಪೂರ

ಗಾಂಧಿ ಹಿಡಿದ ಕೆಲಸ ಮುಗಿದಿತ್ತು. ದ.ಆಫ್ರಿಕಾದಿಂದ ಹೊರಡಲು ಅನುವಾದರು. ಲಂಡನ್‌ನಲ್ಲಿದ್ದ ಗೋಖಲೆಯವರಿಗೆ ಪತ್ರ ಬರೆದ ಅವರು ತಮಗುಳಿದಿರುವ ಏಕೈಕ ಆಸೆ ಎಂದರೆ, ಅವರ ಬಳಿ ಬಂದು ಅವರ ಸೇವೆ ಮಾಡಿ ಕೃತಾರ್ಥರಾಗಿ ಭಾರತಕ್ಕೆ ತೆರಳುವುದು ಎಂದು ತಿಳಿಸಿದರು. ತಮ್ಮ ಜೊತೆಗೆ ಭಾರತವನ್ನು ಒಮ್ಮೆ ನೋಡಲು ಹಂಬಲಿಸುತ್ತಿರುವ ತಮ್ಮ ಪ್ರಾಣ ಮಿತ್ರ ವಾಸ್ತುಶಿಲ್ಪಿ ಕಲೆನ್‌ಬಾಕ್ ಕೂಡ ಬರುತ್ತಿರುವುದಾಗಿ ತಿಳಿಸಿದರು. ಅಷ್ಟರಲ್ಲಿ ಮಸೂದೆ ಶಾಸನವಾಗಿ ರಾಜಪತ್ರದಲ್ಲಿ ಪ್ರಕಟವಾಯಿತು. ಜುಲೈ ೧೮ರಂದು ಲಂಡನ್‌ಗೆ ಹಡಗು ಹತ್ತಲು ಟಿಕೆಟ್ ಕೊಳ್ಳಲಾಯಿತು.

ಗಾಂಧಿ ದ.ಆಫ್ರಿಕಾಕ್ಕೆ ವಿದಾಯ ಹೇಳುತ್ತಿದ್ದಾರೆ ಎಂಬ ಸುದ್ದಿ ಹರಡುತ್ತಿದ್ದಂತೆ

ಅವರಿಗೆ ಒಕ್ಕೂಟದ ವಿವಿಧ ಭಾಗಗಳಲ್ಲಿ ಗೌರವ ಸಮರ್ಪಣೆಯ, ಸನ್ಮಾನಗಳ ಮತ್ತು ವಿದಾಯ ಸಮಾರಂಭಗಳ ಮಹಾಪೂರವೇ ಆರಂಭವಾಯಿತು. ಯೂರೋಪಿಯನ್ನರು ಮತ್ತು ಭಾರತೀಯರು ಎಂಬ ಭಿನ್ನತೆ ಇಲ್ಲದೆ ಎಲ್ಲ ವರ್ಣ, ವರ್ಗ, ಕೋಮು, ಜಾತಿ, ಭಾಷೆ, ವೃತ್ತಿಗಳ ಜನ ವಿವಿಧ ಊರುಗಳಲ್ಲಿ ಒಟ್ಟಿಗೇ ಅಥವಾ ಪ್ರತ್ಯೇಕವಾಗಿ ಸಮಾರಂಭಗಳನ್ನು ಏರ್ಪಡಿಸಿ ಗಾಂಧಿಗೆ ಕೃತಜ್ಞತೆ ಅರ್ಪಿಸಿದರು. ಆ ಸಂದರ್ಭಗಳಲ್ಲಿ ಗಾಂಧಿ ಆಡಿದ ಮುಖ್ಯ ಮಾತುಗಳ ಸಾರಾಂಶವೆಂದರೆ–

ಅನ್ಯಾಯಗಳ ವಿರುದ್ಧದ ಅತ್ಯಂತ ಬಲಿಷ್ಠ, ಪ್ರತಿಭಟನೆಯ ಮತ್ತು ಪರಿಹಾರದ ಅಸ್ತ್ರ 'ಸತ್ಯಾಗ್ರಹ'ವೆಂಬುದನ್ನು ಇಲ್ಲಿ ಕಂಡುಕೊಳ್ಳಲಾಯಿತು. ಭಾರತೀಯರು ತಮ್ಮ ಬೇಡಿಕೆಗಳನ್ನು ಅತಿಗಳಿಗೆ ಹೋಗದೆ ವಾಸ್ತವದ ಅರಿವಿನಲ್ಲಿ ವ್ಯಾವಹಾರಿಕವಾಗಿರುವಂತೆ ನೋಡಿಕೊಂಡು ಮತ್ತು ಯೂರೋಪಿಯನ್ನರ ಕಣ್ಣುಗಳಿಂದಲೂ ಅವನ್ನು ನೋಡಿ ರೂಪಿಸಿದ್ದರಿಂದಾಗಿ ಈ ಗೆಲುವು ಸಾಧ್ಯವಾಗಿದೆ. ಈ ಗೆಲವು ಭಾರತೀಯರಿಗೆ ಯೂರೋಪಿಯನ್ನರೊಡನೆಯ ಎಲ್ಲ ರೀತಿಯ ಸಮಾನತೆಯ ಸ್ಥಾನಮಾನವನ್ನೇನೂ ತಂದು ಕೊಟ್ಟಿಲ್ಲ. ಆದರೆ ಈಗೇನು ಸಾಧಿಸಲಾಗಿದೆಯೋ ಅದರಿಂದ ಮುಂದೆ ಸಾಗುವ ದಾರಿ ತೆರೆದಿದೆ.

ಜಾಥಾ ಸಮಯದಲ್ಲಿ ಬಡ ಕೂಲಿ ಕಾರ್ಮಿಕರು ತಮ್ಮ ಹೆಂಡತಿ ಮಕ್ಕಳೊಂದಿಗೆ ನಾವು ನೀಡುತ್ತಿದ್ದ ಒಂದೊತ್ತಿನ ಅಲ್ಪ ಆಹಾರದಿಂದಲೇ ತೃಪ್ತರಾಗಿ ದಿನಗಟ್ಟಲೇ ನನ್ನ ಹಿಂದೆ ನಡೆದು ಬಂದುದನ್ನು ನಾನು ಹೇಗೆ ಮರೆಯಲಿ? ಬಿಳಿಯ ಮಾಲೀಕರು ಕೂಲಿಗಳನ್ನು ತಮಗಿಂತ ಭಿನ್ನ ಮಾನವ ತಳಿ ಎಂದು ಪರಿಗಣಿಸುವುದನ್ನು ನಿಲ್ಲಿಸಬೇಕು. ಅವರಿಗೆ ತಮ್ಮಂತೆಯೇ ಸೂಕ್ಷ್ಮ ಭಾವನೆಗಳಿವೆ ಎಂದು ಅರಿಯಬೇಕು. ಅವರ ಮನೆಗಳಿಗೆ ಶುದ್ಧ ಕುಡಿಯುವ ನೀರು ಪೂರೈಸಿ, ಶೌಚ ವ್ಯವಸ್ಥೆಯನ್ನು ಕಲ್ಪಿಸಬೇಕು.

ಈ ಹೋರಾಟಕ್ಕಾಗಿ ನನಗೇ ಇಷ್ಟು ಶ್ಲಾಘನೆ ದೊರೆಯುವುದಾದರೆ ಸರಳ ಮತ್ತು ಮುಗ್ಧ ನಿಷ್ಠೆ ಮತ್ತು ಯಾವುದೇ ಮೆಚ್ಚುಗೆಯ ನಿರೀಕ್ಷೆ ಇಲ್ಲದೆ ನನ್ನ ಹಿಂದೆ ಗಟ್ಟಿಯಾಗಿ ನಿಂತ ಜನರು ಎಷ್ಟೊಂದು ಶ್ಲಾಘನೆಗೆ ಬಾಧ್ಯರಾಗುವರು! ಈ ಹೋರಾಟದಲ್ಲಿ ತಮ್ಮ ಪ್ರಾಣಗಳನ್ನೇ ಅರ್ಪಿಸಿ ಹುತಾತ್ಮರಾದ ಹರಬತ್ ಸಿಂಗ್, ನಾಗಪ್ಪನ್, ವಳ್ಳಿಯಮ್ಮ, ನಾರಾಯಣಸ್ವಾಮಿಯಂಥವರನ್ನು ನಾವು ಸ್ಮರಿಸುವ ಬಗೆಯಾದರೂ ಯಾವುದು?

ನನ್ನ ಹೋರಾಟದಲ್ಲಿ ನನಗೆ ಹೆಗಲೆಣೆಯಾಗಿ ನಿಂತ ಬಿಳಿಯರೆಷ್ಟು ಜನ... ಎಣಿಸಲಾಗದಷ್ಟು... ಗಣ್ಯರ ಮಾತು ಅತ್ತ ಇರಲಿ, ರೈಲ್ವೇ ನಿಲ್ದಾಣದಲ್ಲಿ, ರೈಲ್ವೇ ಡಬ್ಬಿಗಳಲ್ಲಿ ನನಗೆ ನನ್ನ ಸಹಚರರಿಗೆ ಉಚಿತವಾಗಿ ಹಾಲು, ಹಣ್ಣು, ರೊಟ್ಟಿ ನೀಡಿ ಉಪಚರಿಸಿದ ಬಿಳಿಯ ನೌಕರರು ಮತ್ತು ಅಧಿಕಾರಿಗಳನ್ನು ನಾನು ಹೇಗೆ ಮರೆಯಲಿ? ತಂಬಿ ನಾಯ್ಡುವನ್ನು ಮತ್ತು ವಳ್ಳಿಯಮ್ಮನನ್ನು ನೀಡಿದ ಜೊಹಾನ್ಸ್‌ಬರ್ಗ್ ನನ್ನ ಬದುಕಿನುದ್ದಕ್ಕೂ ನನ್ನೊಡನಿರಲಿದೆ.

ಮುಸ್ಲಿಮರ ಅಸಮಾಧಾನ–ಗಾಂಧಿ ರಕ್ಷಣೆಗೆ ನಿಂತ ಮೀರ್ ಆಲಂ

ಇಂತಹ ಗೌರವ ಸಮಾರಂಭಗಳ ಪೈಕಿ ಒಂದು ಅಪವಾದದಂತಿದ್ದು ಗಾಂಧಿಯವರಿಗೆ ಮುಜುಗರ ಉಂಟು ಮಾಡುವಂತಿದ್ದುದು, ಜುಲೈ ೧೫ರಂದು –

ಅವರು ಲಂಡನ್‌ಗೆ ಹೊರಡುವ ಎರಡು ದಿನ ಮುನ್ನ ಜೊಹಾನ್ಸ್‌ಬರ್ಗ್‌ನಲ್ಲಿ ಮುಸ್ಲಿಂ ವ್ಯಾಪಾರಿಗಳು ಏರ್ಪಡಿಸಿದ್ದ ವಿದಾಯ ಸಮಾರಂಭ. ಅದು ನಡೆದದ್ದು ಗಾಂಧಿ ಬಹುಬಾರಿ ಭಾರತೀಯ ಸಮುದಾಯವನ್ನು ಉದ್ದೇಶಿಸಿ ಮಾತನಾಡಿದ್ದ ಹಮೀದಿಯಾ ಸಭಾಂಗಣದಲ್ಲಿ. ಸಭೆಯಲ್ಲಿ ಮಾತನಾಡಿದ ಅವರ ಹಳೆಯ ಮಿತ್ರ ಹಾಗೂ ತಮ್ಮ ಮೇಲೆ ಪ್ರಾಣಾಂತಿಕ ಹಲ್ಲೆಯಾದಾಗ ತಮ್ಮೊಡನಿದ್ದು, ನಂತರ ಅಂತಹುದೇ ಹಲ್ಲೆಗೆ ಒಳಗಾಗಿದ್ದ ಈಸೋಪ್ ಮಿಯಾ, ಗಾಂಧಿ ಎರಡರ ಆಶೆ ಹುಟ್ಟಿಸಿ ಒಂದೂವರೆಯಷ್ಟನ್ನೇ ತಮಗೆ ದೊರಕಿಸಿಕೊಟ್ಟು ಹೋಗುತ್ತಿದ್ದಾರೆಂದು ವಿಷಾದಿಸಿದರು. ಈ ಒಗಟಿನ ಮಾತನ್ನು ವಿವರಿಸಲು ಯತ್ನಿಸಿದ ಗಾಂಧಿಯೊಂದಿಗೆ ಲಂಡನ್‌ಗೆ ಹೋಗಿದ್ದ ಮೊದಲ ನಿಯೋಗದ ಸಹಸದಸ್ಯನಾಗಿದ್ದ ಹೆಚ್.ಓ. ಅಲಿ, ಕುರಾನ್‌ನ ಒಂದಕ್ಷರವೂ ಅಲುಗಾಡಬಾರದೆಂದು ನಂಬಿರುವ ಮುಸ್ಲಿಮರ ಮೇಲೆ ಬಹುಪತ್ನಿತ್ವ ಪದ್ಧತಿಗೆ ಮಾನ್ಯತೆ ದೊರಕಿಸಿಕೊಡದ ಗಾಂಧಿ, ಏಕಪತ್ನಿ ಪದ್ಧತಿಯನ್ನು ಹೇರಹೊರಟಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ.

ಇದಕ್ಕೆ ಉತ್ತರಿಸಿದ ಗಾಂಧಿ ಇಲ್ಲಿನ ಭಾರತೀಯ ಸಮುದಾಯ ಘನತೆಯೊಂದಿಗೆ ಬಾಳಿ ಬೆಳೆಯುವಂತಹ ವಾತಾವರಣ ಈಗ ನಿರ್ಮಾಣವಾಗಿರುವುದಕ್ಕೆ ಸಮುದಾಯ ಸಂತೋಷಿಸಬೇಕೆಂದು ಹೇಳಿ, ಇಲ್ಲಿನ ಎಲ್ಲ ಭಾರತೀಯರ ಈಗಿರುವ ಎಲ್ಲ ಪತ್ನಿಯರ ಮಕ್ಕಳಿಗೆ ಮಾನ್ಯತೆ ದೊರಕಿಸಿಕೊಟ್ಟಿರುವ ಬಗ್ಗೆ ತೃಪ್ತಿ ವ್ಯಕ್ತಪಡಿಸಿದರು. ಆದರೆ ಸಭೆಯಲ್ಲಿ ಹಲವರಿಂದ ಗಾಂಧಿ ವಿರುದ್ಧ ಕೂಗುಗಳು ಕೇಳಿ ಬರಲಾರಂಭಿಸಿ ವಾತಾವರಣ ಪ್ರಕ್ಷುಬ್ಧಗೊಳ್ಳತೊಡಗಿದಾಗ, ಈ ಹಿಂದೆ ಗಾಂಧಿಯ ಮೇಲೆ ಪ್ರಾಣಾಂತಿಕ ಹಲ್ಲೆ ನಡೆಸಿ ಶಿಕ್ಷೆ ಅನುಭವಿಸಿದ್ದ ಪಠಾಣ ಮೀರ್ ಆಲಂ ವೇದಿಕೆಯತ್ತ ಜಿಗಿದು ಬಂದು ಸೊಂಟದಿಂದ ಒಂದು ಉದ್ದನೆಯ ಚೂರಿಯನ್ನು ಹೊರತೆಗೆದು ಗಾಂಧಿಗೆ ಅಡ್ಡನಿಂತ. ಆತ ಚೂರಿಯನ್ನು ಝಳಪಿಸುತ್ತಾ, ಸಭೆಗೆ 'ಗಾಂಧಿಭಾಯಿಯ ಬಳಿ ಯಾರಾದರೂ ಬರಲು ಯತ್ನಿಸಿದರೆ ಅವರ ಹೆಣ ಬೀಳುವುದು' ಎಂದು ಕೂಗಿ ಹೇಳಿದ. ಗಾಂಧಿ ಆತನನ್ನು ಸಮಾಧಾನಗೊಳಿಸಿ ವೇದಿಕೆಯಿಂದ ಇಳಿಸುತ್ತಿದ್ದಂತೆ ಸಭೆ ಶಾಂತವಾಗಿ ವಿಸರ್ಜನೆಗೊಂಡಿತು.

ಪತ್ರಿಕಾ ಸಂದರ್ಶನಗಳು–ಸ್ಮಟ್ಸ್‌ನ ಸಂದೇಶ

ಗಾಂಧಿ ದ.ಆಫ್ರಿಕಾದ ಹಲವು ಪತ್ರಿಕೆಗಳಿಗೆ ಸಂದರ್ಶನ ನೀಡಿ ಆ ಪತ್ರಿಕೆಗಳ ಪತ್ರಕರ್ತರಿಗೆ ವಂದನೆ ಸಲ್ಲಿಸುತ್ತಾ, 'ತಾವು ತಮ್ಮ ನಿಯಂತ್ರಣಕ್ಕೆ ಸಿಗದ ಮತ್ತು ಸದ್ಯಕ್ಕೆ ತಮ್ಮ ಕಲ್ಪನೆಗೂ ಮೀರಿದ ಕಾರಣಗಳಿಂದಾಗಿ ಮತ್ತೆ ಇಲ್ಲಿಗೆ ಬರಬಹುದೇ ಹೊರತು ಖಂಡಿತ ಮತ್ತೆ ಇಲ್ಲಿಗೆ ಬರಲಾರೆ' ಎಂದು ದ.ಆಫ್ರಿಕಾದ ಜನತೆಗೆ ಅಂತಿಮ ವಿದಾಯ ಹೇಳಿದರು. ಹಾಗೇ ದ.ಆಫ್ರಿಕಾದಲ್ಲಿ ಪರಿಹಾರಕ್ಕಾಗಿ ತಾವು ಕೈಗೆತ್ತಿಕೊಂಡ ಸಮಸ್ಯೆಗಳು ಪೂರ್ಣವಾಗಿ ಪರಿಹಾರವಾಗಿಲ್ಲ ಎಂಬ ಅರಿವಿದ್ದರೂ ತಾವೇಕೆ ಈ ದೇಶವನ್ನು ಬಿಟ್ಟುಹೊರಟಿರುವುದು ಎಂಬುದನ್ನು ಅವರು ಹೀಗೆ ವಿವರಿಸಿದರು: 'ನಾನು ಭಾರತಕ್ಕೆ ತೆರಳಲು ಒಂದು ಕಾರಣವೆಂದರೆ, ನಾನು ಸತ್ಯಾಗ್ರಹಿಯಾಗಿ ನನ್ನ ಅಪರಿಪೂರ್ಣತೆಯನ್ನು ಮನವರಿಕೆ ಮಾಡಿಕೊಂಡು–ಅದರ ಅನುಭವ ಇಲ್ಲಿಯೇ ಆರಂಭವಾಗಿದೆ – ಪರಿಪೂರ್ಣತೆಯತ್ತ ಸಾಗಬೇಕಿದೆ. ಇದರ ಹೆಚ್ಚಿನ

ಸಾಧ್ಯತೆಗಳಿರುವುದು ನನ್ನ ತಾಯ್ನಾಡಿನಲ್ಲಿ ಎಂಬುದು ನನ್ನ ನಂಬಿಕೆ'. ಇದಕ್ಕೆ ಪ್ರತಿಸ್ಪಂದನವಾಗಿ 'ಟ್ರಾನ್ಸ್‌ವಾಲ್ ಲೀಡರ್' ಎಂಬ ಪತ್ರಿಕೆ, 'ಭಾರತೀಯ ಸಮುದಾಯದ ಕಣ್ಣಿಗೆ ಹೊಡೆಯುವಂತಹ ಈ ನಾಯಕನ ಕೃಶ ದೇಹದಲ್ಲಿ ಆ ಪ್ರತಿಭಟನೆಗಳ, ಆ ದಸ್ತಗಿರಿಗಳ, ಆ ನಡಿಗೆಗಳ, ಆ ಉಪವಾಸಗಳ ಧಾರಣ ಶಕ್ತಿ ಎಲ್ಲಿ ಅಡಗಿತ್ತೋ!' ಎಂಬ ಬೆರಗಿನೊಂದಿಗೆ ತನ್ನ ವಿದಾಯ ಸಾಲನ್ನು ಬರೆದು ಗಾಂಧಿಗೆ ಒಂದು ಸಾರ್ವಜನಿಕ ನುಡಿನಮನವನ್ನು ಸಲ್ಲಿಸಿತು. 'ಹಿಬ್ಬರ್ಟ್ ಜರ್ನಲ್' ಎಂಬ ಪತ್ರಿಕೆಯಲ್ಲಿ ಬರೆದ ಗಿಲ್ಬರ್ಟ್ ಮರ್ರೆ ಎಂಬುವವರು ಗಾಂಧಿಯನ್ನು ಹೀಗೆ ವರ್ಣಿಸಿ ಅವರಿಗೆ ತನ್ನ ಗೌರವ ಸಲ್ಲಿಸಿದರು: 'ದೇಹ ಸುಖಗಳಿಗಾಗಲೀ, ಸಂಪತ್ತಿನ ಆಮಿಷಗಳಿಗಾಗಲೀ, ಯಾವುದೇ ಸೌಲಭ್ಯ–ಸವಲತ್ತುಗಳಿಗಾಗಲೀ, ಶ್ಲಾಘನೆಗಾಗಲೀ, ಓಲೈಕೆಗಳಿಗಾಗಲೀ ಬಲಿಯಾಗುವ ಯಾವ ಸಾಧ್ಯತೆಗಳಿಗೂ ಅವಕಾಶ ಕೊಡದೆ, ತಾನು ಸರಿಯೆಂದು ನಂಬಿದ ಕೆಲಸಗಳನ್ನು ಮಾಡಲಷ್ಟೇ ಬದ್ಧವಾದ ಈ ಮನುಷ್ಯನನ್ನು ನಿಭಾಯಿಸುವಲ್ಲಿ ಬಹು ಎಚ್ಚರಿಕೆ ವಹಿಸಬೇಕಾಗುತ್ತದೆ. ಏಕೆಂದರೆ, ನೀವು ಈತನ ದೇಹದ ಮೇಲೆ ಆಕ್ರಮಣ ಮಾಡಬಹುದು, ಆದರೆ ಆತ್ಮದ ಹತ್ತಿರ ನಿಮ್ಮನ್ನು ಸುಳಿಯಗೊಡುವುದಿಲ್ಲ. ಹೀಗಾಗಿ ಈತ ಓರ್ವ ಬಹು ಅಪಾಯಕಾರಿ ಮತ್ತು ಬಹು ತಲೆನೋವಿನ ಶತ್ರು.'

ಇನ್ನು ದ.ಆಫ್ರಿಕಾದ ಹೋರಾಟ ಸಮಯದುದ್ದಕ್ಕೂ ಗಾಂಧಿಯ ಎದುರಾಳಿಯಂತಿದ್ದ ಜ. ಸ್ಮಟ್ಸ್ ತನ್ನ ದೇಶದಿಂದ ಗಾಂಧಿ ನಿರ್ಗಮಿಸುತ್ತಿರುವ ಸುದ್ದಿಗೆ ತಮ್ಮ ಗೆಳೆಯನೊಬ್ಬನಿಗೆ ಬರೆದ ಪತ್ರದಲ್ಲಿ ಪ್ರತಿಕ್ರಿಯಿಸಿರುವುದು ಹೀಗೆ: 'ಆ ಸಂತ ನಮ್ಮ ದೇಶದ ತೀರ ಬಿಟ್ಟಿರುವ ಸುದ್ದಿ ಬಂದಿದೆ. ಇದು ಕಾಯಂ ನಿರ್ಗಮನವೆಂದು ನಾನು ಪ್ರಾಮಾಣಿಕವಾಗಿ ನಂಬುತ್ತೇನೆ'. ಆದರೆ ಇದೇ ಸ್ಮಟ್ಸ್ ಮುಂದೆ ಗಾಂಧಿಯವರ ೭೦ನೇ ಹುಟ್ಟುಹಬ್ಬದ ಸ್ಮರಣ ಸಂಚಿಕೆಗೆ ಬರೆದ ಲೇಖನವೊಂದರಲ್ಲಿ ಅವರನ್ನು ಸ್ಮರಿಸಿಕೊಂಡಿರುವುದು ಹೀಗೆ: 'ನಾನು ಆ ಅಲ್ಲೋಲಕಲ್ಲೋಲಗಳ ವರ್ಷಗಳಲ್ಲಿ ಅವರ ಎದುರಾಳಿಯಾಗಿ ಇರಬೇಕಾದದ್ದು ನನ್ನ ಹಣೆಬರಹವಾಗಿತ್ತಷ್ಟೆ. ಆದರೆ ಆಗಲೂ ಕೂಡ ಅವರನ್ನು ನಾನು ಅತ್ಯಾದರಗಳಿಂದಲೇ ನೋಡಿಕೊಂಡೆ ಎಂದೇ ಹೇಳಬೇಕು. ಆಗ ಅವರ ಚಟುವಟಿಕೆಗಳು ನನಗೆ ಸಾಕಷ್ಟು ಕಿರಿಕಿರಿಯನ್ನೇ ಉಂಟು ಮಾಡಿದವು. ಅವರಿಗಾದರೋ ಎಲ್ಲವೂ ಅವರ ಯೋಜನೆಯಂತೆ ನಡೆಯುತ್ತಾ ಹೋಯಿತು. ಅಂತಹ ಪ್ರಬಲ ಸಾರ್ವಜನಿಕ ಬೆಂಬಲವಿಲ್ಲದ ಕಾನೂನನ್ನು ಜಾರಿಗೆ ತರುವ ಜವಾಬ್ದಾರಿ ಹೊತ್ತಿದ್ದ ನನಗೋ, ಆ ಕಾನೂನನ್ನು ರದ್ದು ಮಾಡಬೇಕಾಗಿ ಬಂದಾಗಲೇ ಮುಕ್ತಿ ಸಿಕ್ಕಿದ್ದು. ಅವರಿಗೋ ಅದೊಂದು ಯಶಸ್ವಿ ಕ್ಷಿಪ್ರ ಕ್ರಾಂತಿ. ಆದರೂ ಇದೆಲ್ಲದರ ಮಧ್ಯೆ ವೈಯಕ್ತಿಕ ಆಪ್ತತೆಗೇನೂ ಕೊರತೆ ಇರಲಿಲ್ಲ. ಅವರೊಮ್ಮೆ ಸೆರೆಮನೆಯಿಂದ ಬಿಡುಗಡೆಯಾದಾಗ ಅಲ್ಲಿ ತಾವೇ ಹೊಲಿದು ಸಿದ್ಧಪಡಿಸಿದ್ದ ಹಲವು ಪಾದರಕ್ಷೆಗಳ ಜೋಡಿಗಳಲ್ಲಿ ನನಗೊಂದು ಜೋಡಿಯನ್ನು ಕಾಣಿಕೆಯಾಗಿ ನೀಡಿದ್ದರು. ಅವುಗಳನ್ನು ನಾನು ಹಲವು ಬೇಸಿಗೆಗಳಲ್ಲಿ ಬಳಸಿ ಸವೆಸಿರುವೆನಾದರೂ, ಅಂತಹ ಅಪೂರ್ವ ವ್ಯಕ್ತಿ ಸಿದ್ಧಪಡಿಸಿದ ಚಪ್ಪಲಿಗಳಲ್ಲಿ ಕಾಲಿಡಲು ನಾನು ಅರ್ಹನಲ್ಲ ಎಂದೇ ಸದಾ ನನಗನ್ನಿಸಿದೆ'. ಈ ಅನ್ನಿಸಿಕೆಯಂತೆಯೇ ಸ್ಮಟ್ಸ್ ಆ ಚಪ್ಪಲಿಗಳನ್ನು ಗಾಂಧಿ ವಸ್ತು ಸಂಗ್ರಹಾಲಯಕ್ಕೆಂದು ಭಾರತಕ್ಕೆ ಕಳಿಸಿಕೊಟ್ಟ.

ಹಡಗು ಹತ್ತಿದ ಗಾಂಧಿ–ಚದುರಿ ಹೋದ ಪರಿವಾರ

೧೯೧೪ರ ಜುಲೈ ೧೬ರಂದು ಪ್ರಿಟೋರಿಯಾಗೆ ಬಂದ ಗಾಂಧಿ, ಬಾ ಮತ್ತು ಕಲೆನ್‌ಬಾಕ್, ಈ ಹಿಂದೆ ಗಾಂಧಿಯೊಂದಿಗೆ ಲಂಡನ್‌ಗೆ ಹೋಗಿದ್ದ ನಿಯೋಗದ ಸದಸ್ಯರಾಗಿ ಪರಿಚಿತರಾಗಿದ್ದ ಹಾಜಿ ಹಬೀಬ್ ಸೇಠ್‌ರ ಔತಣಕೂಟದಲ್ಲಿ ಭಾಗವಹಿಸಿ ಅಂದೇ ಕೇಪ್‌ಟೌನ್‌ಗೆ ಬಂದು ಕಲೆನ್‌ಬಾಕ್‌ರ ಯೆಹೂದಿ ಗೆಳೆಯ, ಉದಾರವಾದಿ (ಲಿಬರಲ್) ಪಕ್ಷದ ಸಂಸತ್ ಸದಸ್ಯ ಮೋರಿಸ್ ಅಲೆಕ್ಸಾಂಡರ್‌ರ ಮನೆಯಲ್ಲಿ ತಂಗಿ ಮಾರನೆಯ ದಿವಸ ಕೇಪ್ ಸಮುದ್ರ ದಂಡೆಗೆ ಬಂದು ಲಂಡನ್ ಹಡಗು ಹತ್ತಿದರು. ಅಲ್ಲಿನ ತಮಿಳು ಬಾಂಧವರು ಗಾಂಧಿಗೆ ಚಿನ್ನದ ಕೈ ಗಡಿಯಾರ ನೀಡಿದಾಗ ಅದನ್ನು ತೆಗೆದುಕೊಳ್ಳಲು ನಯವಾಗಿ ನಿರಾಕರಿಸಿದ ಗಾಂಧಿ ಕೊನೆಯ ಬಾರಿಗೆ ೧೯೧೪ರ ಜುಲೈ ೧೮ರಂದು ದ.ಆಫ್ರಿಕಾದ ನೆಲ, ಜಲ, ಜನರಿಗೆ ಕೈಮುಗಿದು ಎಸ್‌ಎಸ್ ಕಿನ್‌ಫಾಸ್ ಕ್ಯಾಸಲ್ ಎಂಬ ಹೆಸರಿನ ಹಡಗನ್ನು ಹತ್ತಿ ಲಂಡನ್‌ನತ್ತ ಹೊರಟರು.

ಇತ್ತ ಸದ್ಯಕ್ಕೆ ಗಾಂಧಿಯ ಆಪ್ತ ಸಹಚರರಲ್ಲಿ ಆಲ್ಬರ್ಟ್ ವೆಸ್ಟ್, ಗಾಂಧಿಯ ಮಕ್ಕಳೂ ಸೇರಿದಂತೆ ಉಳಿದ ಆಶ್ರಮವಾಸಿಗಳೊಂದಿಗೆ ಫೀನಿಕ್ಸ್ ಆಶ್ರಮದಲ್ಲೇ ಉಳಿದರಾದರೂ ಅನತಿ ಕಾಲದಲ್ಲೇ ಅವರು ವಕೀಲಿ ವೃತ್ತಿ ನಡೆಸಲು ಲಂಡನ್‌ಗೆ ತೆರಳಿದರು. ಗಾಂಧಿಯ ಮೂರೂ ಜನ ಮಕ್ಕಳು (ಹಿರಿಯ ಹರಿಲಾಲ ಆಗ ಭಾರತದಲ್ಲೇ ಇದ್ದ) ಮತ್ತು ಮಗನ್‌ಲಾಲ್–ಛಗನ್‌ಲಾಲ್ ಕುಟುಂಬಗಳೊಂದಿಗೆ ಇನ್ನೂ ಕೆಲವು ಯುವ ಆಶ್ರಮವಾಸಿಗಳು ಸೇರಿ ಗಾಂಧಿ ಮತ್ತು ಬಾ ಲಂಡನ್ ವಾಸ್ತವ್ಯ ಮುಗಿಸಿ ಭಾರತಕ್ಕೆ ತೆರಳುವ ಹೊತ್ತಿಗೆ ತಾವೂ ಭಾರತ ಸೇರುವಂತೆ ಪ್ರಯಾಣದ ಸಿದ್ಧತೆ ನಡೆಸಿದ್ದರು. ಭಾರತದಲ್ಲಿ ಅವರ ತಾತ್ಕಾಲಿಕ ವಸತಿಗಾಗಿ ಗಾಂಧಿ, ಆ್ಯಂಡ್ರ್ಯೂಸ್ ಅವರೊಂದಿಗೆ ಸಮಾಲೋಚಿಸಿ ಹಿಮಾಲಯ ತಪ್ಪಲಿನಲ್ಲಿದ್ದ–ಮುಂದೆ ಶ್ರದ್ಧಾನಂದರ ಆಶ್ರಮವೆಂದು ಹೆಸರಾದ–ಕಾಂಗ್ರಿ ಆಶ್ರಮ, ನಂತರ ಕಲ್ಕತ್ತಾದಲ್ಲಿನ ರಬೀಂದ್ರನಾಥ ಟ್ಯಾಗೋರರ ಶಾಂತಿನಿಕೇತನದಲ್ಲಿ ವ್ಯವಸ್ಥೆ ಮಾಡಿದ್ದರು. ಮಿಕ್ಕವರು ಫೀನಿಕ್ಸ್ ಆಶ್ರಮದ ಉಸ್ತುವಾರಿಗಾಗಿ ಅಲ್ಲಿಯೇ ಉಳಿದರು. ಇನ್ನು ರೀಚ್, ಜೊಹಾನ್ಸ್‌ಬರ್ಗ್‌ನ ಗಾಂಧಿ ವಕೀಲ ಕಛೇರಿಯಲ್ಲಿ ವಕೀಲಿ ಮುಂದುವರೆಸಿದರು. ಆಪ್ತ ಕಾರ್ಯದರ್ಶಿ ಸೋನ್ಯಾ ಶ್ಲೆಸಿನ್ ಗಾಂಧಿಯ ಕಛೇರಿಗೆ ಸೇರುವ ಮುನ್ನ ಬಿಟ್ಟುಬಂದಿದ್ದ ತನ್ನ ವಿದ್ಯಾಭ್ಯಾಸವನ್ನು ಮುಂದುವರೆಸಿ ಪದವಿ ಪಡೆದು ಟ್ರಾನ್ಸ್‌ವಾಲ್‌ನ ಸಣ್ಣ ಹಳ್ಳಿಯೊಂದರಲ್ಲಿನ ಶಾಲೆಯೊಂದರಲ್ಲಿ ಮುಖ್ಯೋಪಾಧ್ಯಾಯಿನಿಯಾಗಿ ಸೇರಿಕೊಂಡಳು. ಇನ್ನು ಪೊಲಾಕ್, ಗಾಂಧಿ ದ.ಆಫ್ರಿಕಾದಿಂದ ಲಂಡನ್‌ಗೆ ಹೊರಟಿದ್ದಾಗಲೇ ತನ್ನ ಕುಟುಂಬದೊಂದಿಗೆ ಸ್ವಲ್ಪ ಕಾಲ ಕಳೆಯಲು ಇಂಗ್ಲೆಂಡ್‌ಗೆ ಹೋಗಿದ್ದವನು ಗಾಂಧಿಯೊಂದಿಗೆ ಕೊನೆಯ ಭೇಟಿಯ ನಿರೀಕ್ಷೆಯಲ್ಲಿ ಲಂಡನ್‌ನಿಂದ ದ.ಆಫ್ರಿಕಾದತ್ತ ಹೊರಟಿದ್ದ.

■

ಗಾಂಧಿ ಕಥನ

ಹೆಜ್ಜೆ ೨

೪೦

ಲಂಡನ್‌ನಲ್ಲಿ ಯುದ್ಧದ ಕಾರ್ಮೋಡಗಳು

ಗಾಂಧಿ ಮೂರನೇ ದರ್ಜೆಯ ಟಿಕೆಟ್‌ಗಳನ್ನು ಕೊಂಡಿದ್ದರಾದರೂ, ಹಡಗಿನ ವ್ಯವಸ್ಥಾಪಕರು ಅವರನ್ನು ಎಚ್ಚರದಿಂದ ನೋಡಿಕೊಳ್ಳುವ ಎಲ್ಲ ಎಚ್ಚರಿಕೆಗಳನ್ನೂ ವಹಿಸಿದ್ದರು. ಕಾರಣ, ಅವರ ಮತ್ತು ಕಸ್ತೂರಬಾ ಅವರ ಆರೋಗ್ಯ ಸೂಕ್ಷ್ಮವಾಗಿತ್ತು. ಗಾಂಧಿ ಅವರ ದೇಹ ಉಪವಾಸಗಳಿಂದ ದಣಿದುಹೋಗಿದ್ದರೆ, ಕಸ್ತೂರಬಾ ಅವರು ತೀವ್ರ ಅಸ್ವಸ್ಥತೆಗಳಿಂದ ಇನ್ನೂ ಪೂರ್ಣ ಚೇತರಿಸಿಕೊಂಡಿರಲಿಲ್ಲ. ಆದರೆ ಎಷ್ಟೋ ವರ್ಷಗಳ ನಂತರ ಗಾಂಧಿ ದಂಪತಿ ಯಾವ ಬಾಹ್ಯ ಒತ್ತಡ-ಹಸ್ತಕ್ಷೇಪಗಳಿಲ್ಲದೆ ಈ ನೌಕಾ ಪಯಣದಲ್ಲಿ ಒಂದಷ್ಟು ದಿನ ನೆಮ್ಮದಿಯಿಂದ ಒಟ್ಟಿಗೆ ಇರಲು ಸಾಧ್ಯವಾಯಿತು. ಹಡಗಿನವರು ಗಾಂಧಿಗೆ ಬೇಕಾದ ಹಣ್ಣು-ತರಕಾರಿಗಳ ಆಹಾರದ ವ್ಯವಸ್ಥೆ ಮಾಡಿದ್ದರು. ಗಾಂಧಿ ಮತ್ತು ಕಸ್ತೂರಬಾ ಇಬ್ಬರಿಗೂ ಆದಷ್ಟು ಬೇಗ ಭಾರತವನ್ನು ತಲುಪುವ ಕಾತರವಿತ್ತು. ದ.ಆಫ್ರಿಕಾದ ಪರಿಸ್ಥಿತಿ ಅವರಿಬ್ಬರನ್ನೂ ಮತ್ತೆ ಮತ್ತೆ ಹೇಗೆ ಅಲ್ಲಿಗೇ ಬಂಧಿಸಿಟ್ಟಿತ್ತೆಂದರೆ, ತಾವು ಎಂದಿಗಾದರೂ ಸ್ವದೇಶಕ್ಕೆ ಹಿಂದಿರುಗಲಾದೀತೇ ಎಂದು ಹಲವಾರು ಬಾರಿ ಚಿಂತಾಕ್ರಾಂತರಾಗಿದ್ದೂ ಉಂಟು. ಹಾಗಾಗಿ ಈ ಹಡಗಿನಲ್ಲಿದ್ದಾಗ ಅವರು ತಾವು ನಿಜವಾಗಿಯೂ ದ.ಆಫ್ರಿಕಾದಿಂದ ಬಿಡುಗಡೆ ಹೊಂದಿ ಸ್ವದೇಶದತ್ತ ಹೊರಟಿದ್ದೇವೆಯೇ? ಎಂದು ಕೇಳಿಕೊಳ್ಳುವಂತಾಗುತ್ತಿತ್ತು.

ಗಾಂಧಿ ಹಡಗಿನ ಮೇಲ್ಭಾವಣಿಯ ಮೇಲೆ ಕೆಲವೊಮ್ಮೆ ವಾಯುಸೇವನೆಗೆ ಹೋಗುತ್ತಿದ್ದರು. ಆಗ ಗೆಳೆಯ ಕಲೆನ್‌ಬಾಕ್‌ನೂ ಜತೆಗಿರುತ್ತಿದ್ದನು. ಅಂತಹ ಒಂದು ಸಂದರ್ಭದಲ್ಲಿ ಗೆಳೆಯ ಕಣ್ಣಿಗೆ ಹಾಕಿಕೊಂಡು ತದೇಕಚಿತ್ತದಿಂದ ನೋಡುತ್ತಿದ್ದ ಸಾಧನವೊಂದನ್ನು ಗಮನಿಸಿ ಗಾಂಧಿ ಅದೇನೆಂದು ಕೇಳಿದರು. 'ಇದು ಬೈನಾಕ್ಯುಲರ್ಸ್. ದೂರದರ್ಶಕ' ಎಂದ ಕಲೆನ್‌ಬಾಕ್. ಅದರ ಬೆಲೆ ಎಷ್ಟೆಂದು ಗಾಂಧಿ ಕೇಳಿದರು ಮತ್ತು ಅದರ ದುಬಾರಿ ಬೆಲೆ ಕೇಳಿ ಗಾಬರಿಯಾದರು. ಸರಳ ಜೀವನವನ್ನು ನಂಬಿರುವ ನಮ್ಮಂತಹವರಿಗೆ ಇಂಥವನ್ನು ಹೊಂದುವುದು ಭೂಷಣವಲ್ಲ ಎಂದು ಗಾಂಧಿ ಹೇಳಿದರು. ಆಗ ಕಲೆನ್‌ಬಾಕ್ 'ಇದರ ಮೂಲಕ ಬರಿಗಣ್ಣಿಗೆ ಕಾಣದ ದೂರದ ವಸ್ತುಗಳನ್ನು ನೋಡಬಹುದು' ಎಂದು ವಿವರಿಸಹೊರಟಾಗ ಗಾಂಧಿ, 'ಬರಿಗಣ್ಣಿಗೆ ಕಾಣುವ ವಿಸ್ತಾರ ಲೋಕವನ್ನೇ ನಮಗಿನ್ನೂ ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲದಾಗ ಅದರಾಚೆಯ ಗೊಡವೆಯೇಕೆ? ಅದನ್ನು ಮೊದಲು ಬಿಸಾಡಿ' ಎಂದು ಗೆಳೆಯನಿಗೆ

ಸೂಚಿಸಿದರು. ಗಾಂಧಿಯ ಪ್ರಶ್ನಾತೀತ ಶಿಷ್ಯನಾಗಿದ್ದ ಕಲೆನ್‌ಬಾಕ್ ಮರುಮಾತಾಡದೆ ಬೈನಾಕ್ಯುಲರ್ಸ್‌ನ್ನು ಸಮುದ್ರಕ್ಕೆ ಎಸೆದುಬಿಟ್ಟನು.

ಗಾಂಧಿ ಮನುಷ್ಯನ ಕುತೂಹಲ ಬುದ್ಧಿಯನ್ನು ಇಷ್ಟಪಡುತ್ತಿರಲಿಲ್ಲವೇ? ಮುಂದೆ ಅವರು ದೂರದರ್ಶಕವನ್ನಾಗಲೀ, ಸೂಕ್ಷ್ಮದರ್ಶಕವನ್ನಾಗಲೀ ಬಹಿಷ್ಕರಿಸುವ ಮಾತಾಡಿದರೆ? ಹಾಗೇನಿಲ್ಲ. ಅವರು ಸೂಕ್ಷ್ಮದರ್ಶಕದಲ್ಲಿ ಕಣ್ಣಿಟ್ಟು ನೋಡುತ್ತಿರುವ ಚಿತ್ರ ಬಹು ಪರಿಚಿತವಾದುದು. ಆದರೆ ಅವರು ಮನುಷ್ಯನ ಕುತೂಹಲಕ್ಕೆ ಒಂದು ಆದ್ಯತೆ ಮತ್ತು ಮಿತಿ ಇರಬೇಕೆಂದು ಬಯಸುತ್ತಿದ್ದರು ಮತ್ತು ಮಾನವ ಕಲ್ಯಾಣಕ್ಕೆ ಉಪಯುಕ್ತವಾಗಬಹುದಾದ ಸಾಧನಗಳು ಶ್ರೀಮಂತಿಕೆಯ ಚಪಲ–ಮೋಜುಗಳ ಸಲಕರಣೆಗಳಾಗದೆ ಅವು ಸಾರ್ವಜನಿಕ ಉಪಯುಕ್ತತೆಗಾಗಿ ಸಾಮೂಹಿಕ ಒಡೆತನದಲ್ಲಿರಬೇಕು ಎಂದು ಭಾವಿಸಿದ್ದರು.

ಗಾಂಧಿ ಪ್ರಯಾಣ ಹೊರಟ ಎರಡು–ಮೂರು ದಿನಗಳಲ್ಲೇ ಯೂರೋಪ್‌ನಲ್ಲಿನ ದೇಶಗಳ ಬಹುಕಾಲದ ರಾಜಕೀಯ ಮೇಲಾಟದ ಬಿಗುವು ಬಿರಿದಂತಾಗಿ ಮೊದಲ ಮಹಾಯುದ್ಧದ ಘೋಷಣೆ ಆಯಿತು. ಅದರಲ್ಲಿ ರಷ್ಯಾ, ಜರ್ಮನಿ, ಫ್ರಾನ್ಸ್‌ಗಳಲ್ಲದೆ ಬ್ರಿಟನ್ ಕೂಡ ಭಾಗವಹಿಸುವಂತಾಯಿತು. ಗಾಂಧಿ ಪಯಣಿಸುತ್ತಿದ್ದ ಹಡಗಿನ ಕಡಲ ಮಾರ್ಗವೂ ಯುದ್ಧದ ಅಪಾಯಗಳಿಗೆ ಸಿಕ್ಕಿ ಹೇಗೋ ಪಾರಾಗಿ ಆಗಸ್ಟ್ ೬ರಂದು ಸೌಥಾಂಪ್ಟನ್ ಬಂದರನ್ನು ತಲುಪಿದಾಗ ಬ್ರಿಟನ್ ಯುದ್ಧ ಸಿದ್ಧತೆಯಲ್ಲಿತ್ತು.

ಗಾಂಧಿ ಲಂಡನ್ ತಲುಪಿದೊಡನೆ ಗೊತ್ತಾದ ವಿಷಯವೆಂದರೆ, ಯಾರ ಸೇವೆ ಮಾಡಲೆಂದು ಅವರು ಮಾರ್ಗ ಮಧ್ಯೆ ಲಂಡನ್‌ಗೆ ಬಂದಿದ್ದರೋ ಆ ಗೋಪಾಲಕೃಷ್ಣ ಗೋಖಲೆಯವರು ವಿಶೇಷ ಚಿಕಿತ್ಸೆಗೆಂದು ಫ್ರಾನ್ಸ್‌ಗೆ ಹೋಗಿದ್ದವರು ಯುದ್ಧದ ಪರಿಣಾಮವಾಗಿ ಅಲ್ಲಿಂದ ಲಂಡನ್‌ಗೆ ವಾಪಸ್ ಬರಲಾಗಿರಲಿಲ್ಲ ಎಂಬುದು. ಗುರು ಗೋಖಲೆಯವರನ್ನು ಕಾಣದೆ ಭಾರತಕ್ಕೆ ಪ್ರಯಾಣ ಮುಂದುವರೆಸಲಿಚ್ಛಿಸದ ಗಾಂಧಿ ಪರಿಚಿತ ಗುಜರಾತಿ ಕುಟುಂಬವೊಂದರ ಜೊತೆ ಸ್ವಲ್ಪಕಾಲ ನೆಲೆಸುವ ನಿರ್ಧಾರ ಮಾಡಿದರು. ಈ ನಿರ್ಧಾರಕ್ಕೆ ಇನ್ನೊಂದು ಕಾರಣವೂ ಇತ್ತು. ಅದೆಂದರೆ ಯುದ್ಧದಲ್ಲಿ ಸಿಲುಕಿರುವ ಬ್ರಿಟನ್‌ಗೆ ಯಾವುದಾದರೂ ಒಂದು ರೂಪದಲ್ಲಿ ನೆರವಾಗುವುದು. ಕೊನೆಗೆ ಅವರು ನಿರ್ಧರಿಸಿದ್ದು ದ.ಆಫ್ರಿಕಾದಲ್ಲಿ ಬೋಯರ್ ಯುದ್ಧ ಮತ್ತು ಝುಲು ದಂಗೆಯ ವೇಳೆ ರಚಿಸಿದ್ದಂತೆ ಒಂದು ಶುಶ್ರೂಷಾ ದಳ ರಚಿಸಿಕೊಂಡು ಯುದ್ಧದ ಗಾಯಾಳುಗಳ ಶುಶ್ರೂಷೆ ಮಾಡುವುದು. ಇದಕ್ಕೆ ಪುಷ್ಟಿ ನೀಡುವಂತೆ, ಆ ಹೊತ್ತಿಗೆ ಭಾರತದ ಆಡಳಿತದಲ್ಲಿ ಭಾರತೀಯರಿಗೆ ಪ್ರಾತಿನಿಧ್ಯ ನೀಡುವ ಸಂಬಂಧವಾಗಿ ಮಾತುಕತೆ ನಡೆಸಲು ಲಂಡನ್‌ಗೆ ಬಂದಿದ್ದ ಭಾರತೀಯ ನಿಯೋಗವೂ 'ಸಾಮ್ರಾಜ್ಯದ ಈ ಕಷ್ಟದ ಸಮಯದಲ್ಲಿ ಭಾರತದ ಜನತೆ ಅದಕ್ಕೆ ಎಲ್ಲ ನೆರವನ್ನೂ, ಸಹಕಾರವನ್ನೂ ನೀಡುವ ವಿಷಯದಲ್ಲಿ ಕಿಂಚಿತ್ತೂ ಸಂದೇಹಪಡುವುದು ಬೇಡ' ಎಂಬ ಹೇಳಿಕೆಯನ್ನು ನೀಡಿತ್ತು. ಈ ನಿಯೋಗದಲ್ಲಿ ಲಾಲಾ ಲಜಪತ್‌ರಾಯ್, ಮಹಮ್ಮದಾಲಿ ಜಿನ್ನಾ, ಭೂಪೇಂದ್ರನಾಥ ಬಸು ಮುಂತಾದವರಿದ್ದರು.

ಗಾಂಧಿ ಲಂಡನ್‌ನಲ್ಲಿ ವಾಸ್ತವ್ಯ ಹೂಡಿದ ಹತ್ತು ದಿನಗಳ ನಂತರ ಅವರಿಗೆ ಲಂಡನ್‌ನ ಅವರ ಅಭಿಮಾನಿಗಳು ಒಂದು ಸತ್ಕಾರ ಸಮಾರಂಭವನ್ನು ಏರ್ಪಡಿಸಿದರು. ಅದರಲ್ಲಿ ಆಗ ಲಂಡನ್ನಿನಲ್ಲಿದ್ದ ಖ್ಯಾತ ಕಲಾತಜ್ಞ ಆನಂದಕುಮಾರಸ್ವಾಮಿ, ಖ್ಯಾತ ಕವಯತ್ರಿ ಸರೋಜಿನಿ ನಾಯ್ಡು ಮತ್ತು ಮಹಮ್ಮದಾಲಿ ಜಿನ್ನಾ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು. ಅಲ್ಲದೆ ಬ್ರಿಟಿಷ್ ಸಾಮ್ರಾಜ್ಯದ ಗಣ್ಯ ಸ್ಥಾನಗಳಲ್ಲಿದ್ದ-ಪ್ರಧಾನಿ, ಭಾರತೀಯ ವ್ಯವಹಾರಗಳ ಸಚಿವರು, ಮಾಜಿ ವೈಸ್‌ರಾಯ್‌ಗಳು ಮತ್ತು ರಾಜ್ಯಪಾಲರುಗಳೂ ಸೇರಿದಂತೆ ಅನೇಕರು ಹಾಗೂ ಫ್ರಾನ್ಸ್‌ನಲ್ಲಿದ್ದ ಗೋಖಲೆಯವರೂ ಸೇರಿದಂತೆ ಅನೇಕರು ಶುಭಾಶಯ ಸಂದೇಶಗಳನ್ನು ಕಳಿಸಿದ್ದರು. ಸನ್ಮಾನಕ್ಕೆ ಉತ್ತರ ಕೊಟ್ಟ ಗಾಂಧಿಯವರು ದ.ಆಫ್ರಿಕಾದಲ್ಲಿ ಸತ್ಯಾಗ್ರಹದಲ್ಲಿ ಭಾಗವಹಿಸಿ ಅನುಪಮ ಧೈರ್ಯ ಮತ್ತು ತ್ಯಾಗಶೀಲತೆಗಳನ್ನು ಪ್ರದರ್ಶಿಸಿದ ತಮಿಳು ಸತ್ಯಾಗ್ರಹಿಗಳನ್ನು ನೆನೆಯುತ್ತಾ, ಅವರೇ ಭಾರತದ 'ಉಪ್ಪು' ಎಂದು ವರ್ಣಿಸಿದರಲ್ಲದೆ ಅಂಥವರಿಂದಲೇ ಮತ್ತು ಅಂಥವರಿಗಾಗಿಯೇ ನವಭಾರತ ನಿರ್ಮಾಣವಾಗಬೇಕಿದೆ ಎಂದರು. ಹಾಗೇ ಸದ್ಯದ ಯುದ್ಧ ಸಂದರ್ಭದಲ್ಲಿ ಬ್ರಿಟಿಷ್ ಪ್ರಭುತ್ವಕ್ಕೆ ನೆರವಾಗುವುದು ಅದರ ಪ್ರಜೆಗಳಾದ ಭಾರತೀಯರ ಕರ್ತವ್ಯವಾಗಿದೆ ಎಂದು ನೆನಪಿಸಲು ಅವರು ಮರೆಯಲಿಲ್ಲ.

ನಂತರದ ದಿನಗಳಲ್ಲೇ ಗಾಂಧಿ ತಮ್ಮ ಕಲ್ಪನೆಯ ಶುಶ್ರೂಷಾ ದಳ ರಚನೆಗಾಗಿ ಸಭೆಯೊಂದನ್ನು ಕರೆದರು. ಆದರೆ ಸಭೆಗೆ ಬಂದಿದ್ದ ಹಲವು ಭಾರತೀಯರು ಭಾರತಕ್ಕೆ ಹೆಚ್ಚಿನ ಸ್ವಾತಂತ್ರ್ಯ ನೀಡುವಂತೆ ಬ್ರಿಟನ್‌ನನ್ನು ಒತ್ತಾಯಿಸಲು ಇದು ಸುಸಂದರ್ಭ ಎಂದು ವಾದಿಸಿದಾಗ ಗಾಂಧಿ, ಎದುರಾಳಿಯ ಕಷ್ಟವನ್ನು ನಾವು ಲಾಭಕ್ಕೆ ಬಳಸಿಕೊಳ್ಳುವುದು ಅನೈತಿಕ ಮತ್ತು ದೀರ್ಘಕಾಲೀನ ದೃಷ್ಟಿಯಿಂದ ಅವ್ಯಾವಹಾರಿಕ ಎಂದು ಅದನ್ನು ತಳ್ಳಿ ಹಾಕಿದರು. ಆದರೆ ಗಾಂಧಿಯವರ ಪ್ರಸ್ತಾವಕ್ಕೆ ಅವರ ಆಪ್ತರಿಂದಲೇ ತೀವ್ರ ವಿರೋಧ ವ್ಯಕ್ತವಾಯಿತು. ಗೆಳೆಯ ಹೆನ್ರಿ ಪೊಲಾಕ್, ದ.ಆಫ್ರಿಕಾದಲ್ಲಿನ ಗಾಂಧಿ ಅಭಿಮಾನಿ ಲೇಖಕಿ ಆಲಿವ್ ಶ್ರೈನರ್ ಸೇರಿದಂತೆ ಲಂಡನ್‌ನಲ್ಲಿದ್ದ ಹಲವರು ಇದು ಅಹಿಂಸೆಯನ್ನು ಪ್ರತಿಪಾದಿಸುವ ವ್ಯಕ್ತಿಗೆ ಸಲ್ಲದ ವಿಚಾರ ಎಂದು ಟೀಕಿಸಿದರು. ಆದರೆ ಗಾಂಧಿ ತಾವು ಯಾರನ್ನೂ ಕೊಲ್ಲಲು ಹೊರಟಿಲ್ಲ ಎಂದು ಸೂಚಿಸುತ್ತಾ, ನಾವು ಯುದ್ಧವನ್ನು ತಡೆಯುವ ಸ್ಥಿತಿಯಲ್ಲಿ ಇಲ್ಲದಾಗ ತಮಗೆ ಬದುಕುವ ಸೌಲಭ್ಯಗಳನ್ನು ನೀಡಿ ರಕ್ಷಿಸುತ್ತಿರುವ ಪ್ರಭುತ್ವಕ್ಕೆ ನಮ್ಮ ಕೈಲಾದ ಸೇವೆ ಸಲ್ಲಿಸಿ ಕೃತಾರ್ಥರಾಗುವುದು ನಮ್ಮ ನೈತಿಕ ಕರ್ತವ್ಯವೆಂದು ವಾದಿಸಿದರು. ಅಲ್ಲದೆ, ಅಹಿಂಸೆಯ ಹೆಸರಿನಲ್ಲಿ ತಮ್ಮ ಪ್ರಯತ್ನವನ್ನು ವಿರೋಧಿಸುವವರು ಯುದ್ಧ ಕಾಲದ ಅಹಿಂಸಾವಾದಿಗಳಷ್ಟೇ ಆಗದೆ, ಯುದ್ಧಕ್ಕೆ ಕಾರಣವಾಗುವ ಪ್ರಭುತ್ವಗಳನ್ನು ಪೋಷಿಸುವ ತೆರಿಗೆ ಪಾವತಿ, ಸರ್ಕಾರಿ ನೌಕರಿ ಇತ್ಯಾದಿ ಶಾಂತಿ ಕಾಲದ ರಾಜ್ಯ ವ್ಯವಸ್ಥೆಯ ಎಲ್ಲ ಅಗತ್ಯಗಳನ್ನೂ ಧಿಕ್ಕರಿಸಿ ಹೊರಟು ಎಲ್ಲಿಯಾದರೂ ಪರ್ವತಗಳ ಗುಹೆ-ಗಹ್ವರಗಳಲ್ಲಿ ಬದುಕಬೇಕಾಗುತ್ತದೆ ಎಂದು ವಿವರಿಸಿದರು.

ಕೊನೆಗೂ ಗಾಂಧಿ ಬ್ರಿಟಿಷ್ ಸರ್ಕಾರದ ಅನುಮತಿ ಪಡೆದು ಎಂಟು ಜನರ ದಳವೊಂದನ್ನು ರಚಿಸಿಕೊಂಡು ಬ್ರಿಟಿಷ್ ಸೇನೆಯ ವೈದ್ಯಕೀಯ ದಳದ

ಮಾರ್ಗದರ್ಶನದಲ್ಲಿ ಪ್ರಥಮ ಚಿಕಿತ್ಸೆಯ ತರಬೇತಿ ಪಡೆದರು. ಈ ತರಬೇತಿಯ ಸಂದರ್ಭದಲ್ಲಿ ತಮ್ಮ ದಳದ ಮೇಲೆ ಪರಮಾಧಿಕಾರ ಹೇರಲು ಬಂದ ಬ್ರಿಟಿಷ್ ಸೇನಾಧಿಕಾರಿಯ ವಿರುದ್ಧ ಒಂದು ಸಣ್ಣ 'ಸತ್ಯಾಗ್ರಹ'ವನ್ನೂ ಗಾಂಧಿ ನಡೆಸಬೇಕಾಯಿತು. ಸರೋಜಿನಿ ನಾಯ್ಡು ಮತ್ತು ಕಸ್ತೂರಬಾ ಕೂಡ ಈ ದಳದಲ್ಲಿ ಸಹಾಯಕಿಯರಾಗಿ ಸೇರಿಕೊಂಡರು. ಆದರೆ ಕೆಲವೇ ದಿನಗಳಲ್ಲಿ ಗಾಂಧಿಯವರ ಆರೋಗ್ಯ ಹದಗೆಟ್ಟಿತು. ವೈದ್ಯರು ಅವರಿಗೆ ಸಂಪೂರ್ಣ ವಿಶ್ರಾಂತಿಯ ಶಿಫಾರ್ಸು ಮಾಡಿ, ಹಾಲು ಸೇರಿದಂತೆ ಪುಷ್ಟಿಕರ ಆಹಾರ ಸೇವನೆಯನ್ನು ಕಡ್ಡಾಯ ಮಾಡಿದರು. ಆದರೆ ಗಾಂಧಿ ಹಾಲು ಸೇವಿಸಲು ನಿರಾಕರಿಸಿ ಬೀಜ-ಧಾನ್ಯಗಳ ಆಹಾರವನ್ನು ಒಪ್ಪಿಕೊಂಡು ಆರೋಗ್ಯ ಸುಧಾರಣೆಯ ಪ್ರಯತ್ನದಲ್ಲಿ ತೊಡಗಿದರು.

ಈ ಮಧ್ಯೆ ಅಕ್ಟೋಬರ್ ಹೊತ್ತಿಗೆ ಗೋಖಲೆಯವರೂ ಲಂಡನ್‌ಗೆ ಬರಲು ಸಾಧ್ಯವಾಯಿತು. ಗಾಂಧಿ ಕಲೆನ್‌ಬಾಕ್ ಅವರೊಂದಿಗೆ ಗೋಖಲೆಯವರನ್ನು ಹಲವು ಬಾರಿ ಭೇಟಿ ಮಾಡಿದರು. ಇಬ್ಬರೂ ಆರೋಗ್ಯವನ್ನು ನಿರ್ಲಕ್ಷಿಸುತ್ತಿರುವ ಒಗ್ಗೆ ಪರಸ್ಪರ ದೂರಿಕೊಂಡರು. ಗೋಖಲೆ ಗಾಂಧಿಯನ್ನು ಆದಷ್ಟು ಬೇಗ ಗುಣಮುಖರಾಗಿ ಭಾರತಕ್ಕೆ ಬರುವಂತೆ ಒತ್ತಾಯಿಸಿ ಅಕ್ಟೋಬರ್ ೨೪ರಂದು ಭಾರತಕ್ಕೆ ಪ್ರಯಾಣ ಮಾಡಿದರು. ನಂತರದಲ್ಲೇ ಗಾಂಧಿ ಮತ್ತು ಕಸ್ತೂರಬಾ ಅವರ ಆರೋಗ್ಯ ಮತ್ತಷ್ಟು ಕುಸಿಯತೊಡಗಿತು. ವೈದ್ಯರು ಇಬ್ಬರಿಗೂ ಕೂಡಲೇ ಭಾರತಕ್ಕೆ ಹಿಂದಿರುಗಿದರೆ ಮಾತ್ರ ಅವರು ಒಪ್ಪುವ ಚಿಕಿತ್ಸೆ ದೊರೆತು ಇನ್ನಷ್ಟು ಆರೋಗ್ಯದ ತೊಂದರೆಗಳನ್ನು ತಪ್ಪಿಸಿಕೊಳ್ಳಬಹುದೆಂದು ಕಟ್ಟುನಿಟ್ಟಾಗಿ ಹೇಳಿದರು. ಇದಕ್ಕೆ ಒಪ್ಪಲೇಬೇಕಾಯಿತು. ಶ್ವಾಸಕೋಶಗಳ ಉರಿಯೂತ ಹೆಚ್ಚಿ ಗಾಂಧಿ ಬಳಲಿ ಹೋಗಿದ್ದರು. ಅವರ ಹೊಟ್ಟೆ ಮತ್ತು ಎದೆ ಎಲುಬುಗಳಿಗೆ ಪಟ್ಟಿಗಳನ್ನು ಕಟ್ಟಿ ಅವರನ್ನು ಪ್ರಯಾಣಕ್ಕೆ ಸಿದ್ಧಗೊಳಿಸಲಾಯಿತು.

೧೯೧೪ರ ಡಿಸೆಂಬರ್ ೧೮ರಂದು ಪ್ರಯಾಣವನ್ನು ನಿಗದಿಪಡಿಸಲಾಯಿತು. ಆದರೆ ತಮ್ಮೊಂದಿಗೆ ಭಾರತಕ್ಕೆ ಬರಲು ಹೊರಟಿದ್ದ ಕಲೆನ್‌ಬಾಕ್‌ಗೆ ಭಾರತಕ್ಕೆ ಪ್ರವೇಶ ನೀಡಲು ಭಾರತದ ಬ್ರಿಟಿಷ್ ಸರ್ಕಾರ ನಿರಾಕರಿಸಿದ್ದರಿಂದ ಗಾಂಧಿಗೆ ಬಹು ನಿರಾಶೆಯಾಯಿತು. ಯುದ್ಧದಲ್ಲಿ ಜರ್ಮನಿ ಬ್ರಿಟನ್‌ನ ಶತ್ರು ದೇಶವಾಗಿದ್ದುದರಿಂದ ಮೂಲತಃ ಜರ್ಮನಿಯ ಪ್ರಜೆಯಾಗಿದ್ದ ಕಲೆನ್‌ಬಾಕ್‌ಗೆ ಪ್ರವೇಶ ನಿರಾಕರಿಸಲಾಗಿತ್ತು. ಗಾಂಧಿ ತಮ್ಮ ಉನ್ನತ ಸಂಪರ್ಕಗಳ ಮೂಲಕ ಎಷ್ಟೇ ಪ್ರಯತ್ನಪಟ್ಟರೂ ಅದರಲ್ಲಿ ಯಶಸ್ವಿಯಾಗಲಿಲ್ಲ. ಹಾಗಾಗಿ ಗಾಂಧಿ ದಂಪತಿಗಳು ಯುದ್ಧಾನಂತರ ಭಾರತಕ್ಕೆ ಬರುವಂತೆ ಆಹ್ವಾನಿಸಿ ಭಾರವಾದ ಹೃದಯದಿಂದ ತಮ್ಮ ಆ ಕುಟುಂಬದ ಗೆಳೆಯನನ್ನು ಬೀಳ್ಕೊಟ್ಟು ಹಡಗು ಹತ್ತಿದರು. ನಿರಾಶರಾಗಿ ದ.ಆಫ್ರಿಕಾಕ್ಕೆ ಹಿಂದಿರುಗಿದ ಕಲೆನ್‌ಬಾಕ್ ಇಪ್ಪತ್ತು ವರ್ಷಗಳ ನಂತರ ಭಾರತಕ್ಕೆ ಬಂದು ಗಾಂಧಿಯ ಅತಿಥಿಯಾಗಿದ್ದು ಮತ್ತೆ ಆ ದೇಶಕ್ಕೇ ವಾಪಸ್ಸಾದನು. ೧೯೪೫ರಲ್ಲಿ ಅವನು ಮೃತನಾದನು.

ಕೊನೆಗೂ ಭಾರತದತ್ತ ಗಾಂಧಿ

ಎಸ್. ಎಸ್. ಅರೇಬಿಯಾ ಎಂಬ ಆ ಹಡಗನ್ನು ಹತ್ತುವ ಹಿಂದಿನ ದಿನ ಗಾಂಧಿ

ದಂಪತಿಗಳಿಗೆ ವೆಸ್ಟ್‌ಮಿನಿಸ್ಟರ್ ಪ್ಯಾಲೇಸ್ ಹೋಟೆಲ್‌ನಲ್ಲಿ ಒಂದು ಭವ್ಯ ವಿದಾಯ ಸಮಾರಂಭ ಏರ್ಪಡಿಸಲಾಗಿತ್ತು. ಅಲ್ಲಿ ಗಾಂಧಿ ಮಾತನಾಡುತ್ತಾ ದ.ಆಫ್ರಿಕಾದಲ್ಲಿನ ತಮ್ಮ ಕೆಲಸಗಳೆಲ್ಲವೂ ತಮ್ಮ ಕರ್ತವ್ಯವೇ ಆದುದರಿಂದ ಅದರ ಕೀರ್ತಿ ತಮಗೆ ಸಲ್ಲದೆಂದೂ, ಲಂಡನ್‌ನಲ್ಲಿ ತುರ್ತು ಕರ್ತವ್ಯವಿದ್ದರೂ ಅನಾರೋಗ್ಯ ಮತ್ತು ತಾಯ್ನಾಡಿನ ಕರೆಯ ಕಾರಣ ಅದನ್ನು ಪೂರ್ತಿ ನಿರ್ವಹಿಸಲಾಗದ ಬಗ್ಗೆ ತಮಗೆ ವಿಷಾದವಿದೆ ಎಂದೂ ಹೇಳಿದ್ದರು. ಜೊತೆಗೆ ಈಗ ತಾವು ತಲುಪಲು ಹೊರಟಿರುವ ಭಾರತ ತನ್ನ ತಾಯ್ನಾಡಾದರೂ, ಹೆಚ್ಚೂಕಡಿಮೆ ೨೫ ವರ್ಷಗಳಿಂದ ದೇಶಭ್ರಷ್ಟರಂತಿರುವ ತಮಗೆ ಅದು ತಮ್ಮ ಗುರು ಗೋಖಲೆಯವರು ಹೇಳಿದಂತೆ ವಿದೇಶವೇ ಆಗಿದ್ದು, ಅದನ್ನು ಸ್ವಲ್ಪಕಾಲ ಕಣ್ಣು ತೆರೆದು, ಬಾಯಿ ಮುಚ್ಚಿ ನೋಡುತ್ತಾ ಅರಿತು ಆನಂತರ ತಮಗನ್ನಿಸಿದ್ದನ್ನು ಮಾಡಬಯಸುವುದಾಗಿ ತಿಳಿಸಿದ್ದರು. ಮುಖ್ಯವಾಗಿ ಭಾರತ ಆಧ್ಯಾತ್ಮಿಕ ಶಕ್ತಿಯ ಆಗರವಾಗಿರುವುದರಿಂದ ಅದು ಜಗತ್ತಿನ ಶ್ರೇಷ್ಠ ದೇಶವಾಗಿ ಹೊರಹೊಮ್ಮುವ ಆಶಯವನ್ನು ವ್ಯಕ್ತಪಡಿಸಿದ್ದರು. ಆದರೆ ಗಾಂಧಿ ದಂಪತಿಗಳಿಬ್ಬರಿಗೂ ಸದ್ಯದ ಲೌಕಿಕ ಚಿಂತೆಯೂ ಮನಸ್ಸನ್ನು ಆವರಿಸದಿರಲಿಲ್ಲ. ಏಕೆಂದರೆ ಗಾಂಧಿಯ ಇಬ್ಬರು ಸೋದರರೂ ಬಡತನದಲ್ಲೇ ಮೃತರಾಗಿದ್ದರು. ಗಂಡಂದಿರನ್ನು ಕಳೆದುಕೊಂಡ ಅವರ ಸೋದರಿಯರು ಮಾತ್ರ ಬಡತನದಲ್ಲೇ ಬದುಕಿದ್ದರು. ಹಾಗಾಗಿ ಗಾಂಧಿಗೆ ದ.ಆಫ್ರಿಕಾದಿಂದ ಬಂದಿದ್ದ ತಮ್ಮ ವಿಶಾಲ ಕುಟುಂಬಕ್ಕೆ ನೆಲೆ ಯಾವುದು ಎಂಬುದರ ಬಗ್ಗೆ ಸ್ಪಷ್ಟತೆ ಇರಲಿಲ್ಲ. ಫೀನಿಕ್ಸ್ ಆಶ್ರಮದಿಂದ ಹೊರಟಿದ್ದ ಮಗನಲಾಲ್ ನೇತೃತ್ವದ ತಮ್ಮ ಮಕ್ಕಳು ಮತ್ತು ಸೋದರ ಸಂಬಂಧಿಗಳ ಕುಟುಂಬಗಳ ತಂಡ, ಗಾಂಧಿ ಲಂಡನ್‌ನಲ್ಲಿ ಅನಿರೀಕ್ಷಿತವಾಗಿ ತಿಂಗಳುಗಟ್ಟಲೆ ಇರಬೇಕಾಗಿ ಬಂದ ಕಾರಣ, ಈಗಾಗಲೇ ಭಾರತವನ್ನು ತಲುಪಿ ಕಾಂಗ್ರಿ ಆಶ್ರಮದಲ್ಲಿ ತಂಗಿದೆ ಎಂಬ ಸುದ್ದಿ ಗಾಂಧಿಗೆ ತಲುಪಿತ್ತು. ಈ ಎಲ್ಲ ಅನಿಶ್ಚಿತತೆಗಳೊಂದಿಗೆ ಗಾಂಧಿ ದಂಪತಿಗಳು ಭಾರತದತ್ತ ಹೊರಟಿದ್ದರು.

■

೩೧
ಭಾರತಕ್ಕೆ ಬಂದ ಗಾಂಧಿ

ಇತ್ತ ಭಾರತದಲ್ಲಿ ಮೊದಲ ಮಹಾಯುದ್ಧದ ಕಾರ್ಮೋಡಗಳು ಕವಿದ ಹಿನ್ನೆಲೆಯಲ್ಲಿ ಕಾಂಗ್ರೆಸ್ ನೇತೃತ್ವದ ಸ್ವಾತಂತ್ರ್ಯ ಹೋರಾಟ ಕವಲು ದಾರಿಯಲ್ಲಿತ್ತು. ಗೋಖಲೆ–ತಿಲಕರ ನಾಯಕತ್ವಗಳಲ್ಲಿ ಅದು ಸೌಮ್ಯವಾದಿ ಮತ್ತು ಉಗ್ರವಾದಿ ಗುಂಪುಗಳಾಗಿ, ಅದು ಈ ಮಧ್ಯೆ ಆರು ವರ್ಷಗಳ ಕಾಲ ಮಾಂಡಲೆ(ಬರ್ಮಾ)ಯಲ್ಲಿ ಏಕಾಂತ ಸೆರೆಮನೆವಾಸಕ್ಕೆ ಗುರಿಯಾಗಿದ್ದ ಬಾಲಗಂಗಾಧರ ತಿಲಕರನ್ನು ಬ್ರಿಟಿಷ್ ಸರ್ಕಾರ ಯಾವುದೇ ಸದ್ದಿಲ್ಲದೆ, ಅವರ ಪುಣೆಯ ಮನೆಯ ಮುಂದೆ ಬಿಡುಗಡೆಗೊಳಿಸಿ ಹೋಗಿತ್ತು. ತಿಲಕರ ಪುನರಾಗಮನದೊಂದಿಗೆ ಸ್ವಾತಂತ್ರ್ಯ ಹೋರಾಟವು ಗೋಖಲೆ ನಿರ್ದೇಶಿತ ಸ್ನೇಹ–ಸಂಧಾನಗಳ ಸೌಮ್ಯವಾದಿ ಮಾರ್ಗದ ಮೇಲೆ ಒತ್ತಡ ಹೆಚ್ಚಿ, ಅದು ಎಲ್ಲಿ ಘರ್ಷಣೆಯ ಮಾರ್ಗವಾಗಿ ಪರಿವರ್ತಿತವಾಗುವುದೋ ಎಂಬ ಆತಂಕವನ್ನು ಸೌಮ್ಯವಾದಿ ಗುಂಪಿನ ಮುಂಬೈನ ಖ್ಯಾತ ವಕೀಲ ಫಿರೋಜ್ ಶಾ ಮೆಹ್ತಾ ವ್ಯಕ್ತಪಡಿಸಿದ್ದರು. ತಿಲಕರ ಅನುಯಾಯಿಗಳಿಗೆ ಕಾಂಗ್ರೆಸ್‌ಗೆ ಪ್ರವೇಶ ನೀಡಬಾರದೆಂದು ಅವರು ವಾದಿಸುತ್ತಿದ್ದರು. ಆದರೆ ತಿಲಕರು ದೀರ್ಘ ಸೆರೆಮನೆವಾಸದ ನಂತರ ಕೊಂಚ ಬದಲಾದಂತಿದ್ದರು. ಅವರು ಭಯೋತ್ಪಾದಕ ಮಾರ್ಗ ಹಿಡಿದಿದ್ದ ತಮ್ಮ ಅನುಯಾಯಿಗಳ ನಿಲುವಿಗೆ ವಿರುದ್ಧವಾಗಿ ಈ ಯುದ್ಧದ ಸಂಕಷ್ಟ ಸಮಯದಲ್ಲಿ ಬ್ರಿಟಿಷ್ ಪ್ರಭುತ್ವದ ಪರವಾಗಿರುವ ಹೇಳಿಕೆ ನೀಡಿದ್ದರು.

ಈ ಮಧ್ಯೆ ಬ್ರಿಟಿಷ್ ಸಾಮ್ರಾಜ್ಯದ ಅಧಿಪತಿಗಳ ಚಿತ್ರಗಳಿಂದ ಅಲಂಕರಿಸಲ್ಪಟ್ಟಿದ್ದ ಭವ್ಯ ವೇದಿಕೆ–ಚಪ್ಪರದಡಿ ಮದ್ರಾಸ್(ಈಗಿನ ಚೆನ್ನೈ)ನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ, ಬ್ರಿಟಿಷ್ ಸಾಮ್ರಾಜ್ಯ ಸಿಂಹಾಸನಕ್ಕೆ ತನ್ನ ನಿಷ್ಠೆಯನ್ನು ಪುನರುಚ್ಚರಿಸುತ್ತಾ, ಯುದ್ಧದಲ್ಲಿ ಜನಾಂಗಭೇದವಿಲ್ಲದೆ, ಅದರ ಪ್ರಜೆಗಳು ಬಲಿದಾನ ಮಾಡಲು ಬದ್ಧರಾಗಿದ್ದಾರೆ ಎಂಬ ನಿರ್ಣಯವನ್ನು ಅಂಗೀಕರಿಸಿತು. ಹಾಗೇ ಸಾಮ್ರಾಜ್ಯ ಜನಾಂಗಭೇದವಿಲ್ಲದೆ ಅದರ ಎಲ್ಲ ಪ್ರಜೆಗಳಿಗೂ ಸಮಾನ ಅಧಿಕಾರ ನೀಡಬೇಕೆಂದೂ ಆಗ್ರಹಿಸಿತು. ಅಧಿವೇಶನದ ಕಾರ್ಯಕಲಾಪಗಳ ಮುಂಚೂಣಿಯಲ್ಲಿದ್ದ ಶ್ರೀಮತಿ ಅನಿಬೆಸೆಂಟ್ ಅವರು ಅವುಗಳನ್ನು ಸಾರಾಂಶೀಕರಿಸಿ ಹೇಳಿದ್ದು ಹೀಗೆ: 'ಯುದ್ಧಕ್ಕೆ ಮೊದಲೂ ನಮ್ಮದು ಅದೇ ಬೇಡಿಕೆ. ನಂತರವೂ ಅದೇ ಬೇಡಿಕೆ. ಅದು ಭಾರತಕ್ಕೆ ಹೋಂ ರೂಲ್–ಸ್ವಯಮಾಡಳಿತ–ನೀಡಿ ಎಂಬುದು'

ಇಂತಹ ಕುತೂಹಲಕಾರಿ ರಾಜಕೀಯ ಹಿನ್ನೆಲೆಯ ದಿನಗಳಲ್ಲಿ, ಗಾಂಧಿ ದಂಪತಿ ೧೯೧೫ರ ಜನವರಿ ೯ರಂದು ಬಾಂಬೆಯ ಬಂದರಿನಲ್ಲಿ ಬಂದಿಳಿದರು. ಅವರೀಗ ತಮ್ಮ ಹುಟ್ಟು ಪ್ರಾಂತ್ಯವಾದ ಕಾಥೇವಾಡದ ಉಡುಪಿಗೆ ಬದಲಾಗಿದ್ದರು. ಭಾರತದ ಹತ್ತಿಯಲ್ಲಿ ನೇಯ್ದ ಬಿಳಿಯ ಉದ್ದನೆಯ ನಿಲುವಂಗಿ, ಧೋತಿ ಮತ್ತು ದೊಡ್ಡ ಪೇಟವನ್ನು ಗಾಂಧಿ ಧರಿಸಿದ್ದರೆ, ಕಸ್ತೂರಬಾ ಕಾಥೇವಾಡಿ ಶೈಲಿಯ ಸೀರೆ–ಕುಬಸಗಳನ್ನು ಧರಿಸಿದ್ದರು. ಅವರ ಆಗಮನದ ಬಗ್ಗೆ ಮುಂಚೆಯೇ ಪ್ರಚಾರವಾಗಿದ್ದುದರಿಂದ ಮತ್ತು ಗೋಖಲೆಯವರು ತಮ್ಮ ಶಿಷ್ಯನನ್ನು ಮುಂಬಯಿಯ ಜನತೆಗೆ ಈಗಾಗಲೇ ತಮ್ಮ ಹಲವು ಭಾಷಣಗಳ ಮೂಲಕ ಪರಿಚಯಿಸಿದ್ದುದರಿಂದ, ಬಂದರಿನಲ್ಲಿ ಒಂದು ಭಾರಿ ಜನಸಮುದಾಯವೇ ಸೇರಿ ಮುಗಿಲು ಮುಟ್ಟಿದ ಜಯಘೋಷಗಳೊಂದಿಗೆ ಅವರನ್ನು ಸ್ವಾಗತಿಸಿತು. ಅವರು ಸಾಂತಾಕ್ರೂಜ಼್‌ನ ರೇವತಿಶಂಕರ ಝುವೇರಿ ಎಂಬ ಗೆಳೆಯರ ಮನೆಯಲ್ಲಿ ತಂಗಲು ನಿರ್ಧರಿಸಿದ್ದರಿಂದ ಅವರನ್ನು ಅಲ್ಲಿಯವರೆಗೆ ಬೀದಿಯಲ್ಲಿ ಮೆರವಣಿಗೆಯಲ್ಲಿ ಒಯ್ಯಲಾಯಿತು.

ಗೆಳೆಯರ ಮನೆಯಲ್ಲಿ ಒಂದೆರಡು ದಿನ ಸುಧಾರಿಸಿಕೊಂಡ ನಂತರ ಗಾಂಧಿ, ತಾವು ಗೋಖಲೆಯವರಿಗೆ ಸಮಾನವಾಗಿ ಪರಿಗಣಿಸಿದ್ದ ಹಿರಿಯ ಉದ್ಯಮಿ ಮತ್ತು ಚಿಂತಕ ದಾದಾಭಾಯಿ ನವರೋಜಿ ಅವರಿಗೆ ಗೌರವ ಸಲ್ಲಿಸಿ ಬಂದರು. ಅಂದು ಸಂಜೆಯೇ ಮುಂಬೈನ ಪ್ರತಿಷ್ಠಿತರೊಬ್ಬರ ಮನೆಯಲ್ಲಿ ಏರ್ಪಡಿಸಲಾಗಿದ್ದ ಸಭೆಯಲ್ಲಿ ದೊಡ್ಡ ಪಾರ್ಸಿ ವ್ಯಾಪಾರಿಗಳೂ ಸೇರಿದಂತೆ ನಗರದ ಎಲ್ಲ ಭಾರತೀಯ ಗಣ್ಯರು, ನ್ಯಾಯಾಧೀಶರುಗಳು, ವಕೀಲರು, ಇಂಗ್ಲಿಷ್ ನಾಗರೀಕ ಅಧಿಕಾರಿಗಳು ಗಾಂಧಿಯನ್ನು ಭೇಟಿ ಮಾಡಿ ಪರಿಚಯಿಸಿಕೊಳ್ಳುವ ಏರ್ಪಾಡು ಮಾಡಲಾಗಿತ್ತು. ನಂತರದ ಮತ್ತೊಂದು ಸಭೆ, ಬಾಲಗಂಗಾಧರ ತಿಲಕರ ಅಧ್ಯಕ್ಷತೆಯಲ್ಲಿ ಏರ್ಪಾಡಾಗಿತ್ತು. ಈ ಸಭೆಯಲ್ಲಿ ತಿಲಕರು, ಗಾಂಧಿ ದೂರದ ನಾಡಿನಲ್ಲಿ ಭಾರತೀಯರ ಘನತೆಗಾಗಿ ಹೋರಾಡಿದ ವೀರನೆಂದು ಶ್ಲಾಘಿಸಿದರು. ನಂತರದ ಒಂದು ವಾರದವರೆಗೆ, ಗಾಂಧಿ ದಂಪತಿಗೆ ಸ್ವಾಗತ ಮತ್ತು ಸತ್ಕಾರಕೂಟಗಳಲ್ಲಿ ಭಾಗವಹಿಸುವುದೇ ಕೆಲಸವಾಯಿತು. ಇಂತಹ ಒಂದು ಸಮಾರಂಭವನ್ನು, ಗಾಂಧಿ ಲಂಡನ್‌ಗೆ ಹೊರಟಾಗ ಸಮುದ್ರಯಾನವನ್ನು ಧರ್ಮ ನಿಷಿದ್ಧವೆಂದು ವಿರೋಧಿಸಿದ್ದ ಮುಂಬೈನ ಮೋದ್ ವೈಶ್ಯರೇ ಏರ್ಪಡಿಸಿ ಗಾಂಧಿಯನ್ನು ತಮ್ಮ ಹೆಮ್ಮೆಯ ಪುತ್ರನೆಂದು ಘೋಷಿಸಿದ್ದು ಗಮನಾರ್ಹವಾಗಿತ್ತು.

ಗಾಂಧಿ–ಜಿನ್ನಾ ಮೊದಲ ಮಿಲನ

ಇನ್ನೊಂದು ಸಮಾರಂಭ ಗುಜರಾತಿ ಸಮುದಾಯ ಏರ್ಪಡಿಸಿದ್ದಾಗಿತ್ತು. ಇದರ ಮುಖ್ಯ ಅತಿಥಿಯಾಗಿದ್ದವರು ಕಾಥೇವಾಡಿ ಗುಜರಾತಿಯೇ ಆಗಿ, ಗಾಂಧಿಯಂತೆಯೇ ಲಂಡನ್‌ನಲ್ಲಿ ವಕೀಲಿ ಕಲಿತು ಯಶಸ್ವಿ ವಕೀಲರೂ ಆಗಿದ್ದ ಶ್ರೀಮಂತ ಮನೆತನದ ಮಹಮ್ಮದಾಲಿ ಜಿನ್ನಾ. ಅವರು ಗಾಂಧಿಯನ್ನು ಭಾರತದ ಹೊಸ ಆಭರಣವೆಂದು ವರ್ಣಿಸುತ್ತಾ, ಅವರು ದ.ಆಫ್ರಿಕಾದಲ್ಲಿ ಭಾರತೀಯರ ಘನತೆಗಾಗಿ ನಡೆಸಿದ ದೃಢ ಹೋರಾಟ ಅನನ್ಯವಾದುದೆಂದು ವರ್ಣಿಸುತ್ತಾ, ಅವರು ಹೇಗೆ ಅಲ್ಲಿ ಹಿಂದೂ–ಮುಸ್ಲಿಮರಲ್ಲಿ ಏಕಭಾವ ಮೂಡಿಸಿದರೋ ಹಾಗೇ ಭಾರತದಲ್ಲೂ ಮೂಡಿಸಲು

ದುಡಿದರೆ ಭಾರತದ ಸ್ವಾತಂತ್ರ್ಯದ ಬೇಡಿಕೆಗಳು ಒಮ್ಮತದವಾಗಿ ಫಲಪ್ರದವಾಗುವುವು ಎಂದು ಆಶಿಸಿದರು. ಜಿನ್ನಾ ಅವರ ಇಂಗ್ಲಿಷ್ ಭಾಷಣದ ನಂತರ ಗುಜರಾತಿಯಲ್ಲಿ ಮಾತನಾಡಿದ ಗಾಂಧಿ, ಹಿಂದೂಗಳೇ ತುಂಬಿರುವ ಆ ಸಭೆಯಲ್ಲಿ ಮುಸ್ಲಿಮರೊಬ್ಬರು ಪ್ರಧಾನ ಭಾಷಣ ಮಾಡಿದ್ದು ಒಂದು ಶುಭ ಶಕುನವೇ ಆಗಿದೆ ಎನ್ನುತ್ತಾ, ತಾವು ಮೊದಲು ಭಾರತದ ಮುಂದಿರುವ ಪ್ರಶ್ನೆಗಳನ್ನು ವಿವರವಾಗಿ ಅಭ್ಯಸಿಸಿ ನಂತರ ತಮ್ಮ ಸೇವೆಯ ಸ್ವರೂಪದ ಬಗ್ಗೆ ನಿರ್ಧರಿಸುವುದಾಗಿ ತಿಳಿಸಿದರು. ನಂತರದ ಅನೇಕ ಸಭೆಗಳಲ್ಲಿ ಮಾತನಾಡಿದ ಗಾಂಧಿ, ಕಸ್ತೂರಬಾರನ್ನು ಮಹಾನ್ ಗಾಂಧಿಯ ಪತ್ನಿಯೆಂದು ಗುರುತಿಸದೆ, ಮಹಾನ್ ಮಹಿಳೆ ಕಸ್ತೂರಬಾ ಅವರ ಪತಿ ಎಂದು ತಮ್ಮನ್ನು ಗುರುತಿಸಬೇಕೆಂದು ಸೂಚಿಸುತ್ತಾ, ಬಾ ಅವರು ತಮ್ಮ ಹೋರಾಟದ ಬದುಕಿಗೆ ಆಸರೆಯಾಗಿ ನಿಂತ ಪರಿಯನ್ನು ವಿವರಿಸಿದರಲ್ಲದೆ, ಜನ ತಮ್ಮ ಯಶಸ್ಸುಗಳ ಬಗ್ಗೆ ಮಾತ್ರ ಮಾತಾಡುತ್ತಿದ್ದು ಇನ್ನು ಮುಂದೆ ಭಾರತದಲ್ಲಿ ತಮ್ಮ ವೈಫಲ್ಯಗಳನ್ನು ಕಾಣಲೂ ಸಿದ್ಧರಾಗಬೇಕೆಂದು ಕರೆ ಕೊಟ್ಟರು.

ಮುಂಬೈನ ತಮ್ಮ ವಾಸ್ತವ್ಯದ ಕೊನೆಯ ಕಾರ್ಯಕ್ರಮವಾಗಿ, ಬಾಂಬೆಯ ಗವರ್ನರ್ ಲಾರ್ಡ್ ವಿಲ್ಲಿಂಗ್ಡನ್‌ರು ಗೋಖಲೆಯವರಿಗೆ ಸಲ್ಲಿಸಿದ್ದ ಕೋರಿಕೆಯಂತೆ ಗಾಂಧಿ ಅವರನ್ನು ಭೇಟಿ ಮಾಡಿದರು. ಅವರನ್ನು ಆತ್ಮೀಯತೆಯಿಂದ ಸ್ವಾಗತಿಸಿದ ಗವರ್ನರ್, ಗಾಂಧಿಯವರ ಮುಂದೆ ತಮ್ಮ ಏಕಮಾತ್ರ ಕೋರಿಕೆಯೆಂದು ಮಂಡಿಸಿದ್ದು ಇದನ್ನು: 'ನೀವು ಆಡಳಿತ ಸಂಬಂಧವಾಗಿ ಯಾವುದೇ ಕ್ರಮವನ್ನು ಕೈಗೊಳ್ಳುವ ಮುನ್ನ ನನ್ನನ್ನೊಮ್ಮೆ ಕಂಡು ಮಾತಾಡಿರಿ'. ಅದಕ್ಕೆ ಗಾಂಧಿ ನೀಡಿದ ಉತ್ತರ: 'ಸತ್ಯಾಗ್ರಹಿಯಾಗಿ ನಾನು ನನ್ನ ಇನ್ನೊಂದು ಬದಿಯ ಅಭಿಪ್ರಾಯವನ್ನೂ ಅರಿತು ಸಾಧ್ಯವಾದಷ್ಟೂ ಒಮ್ಮತ ಸಾಧಿಸುವುದು ನನ್ನ ಕರ್ತವ್ಯ'

ನಂತರ ಗಾಂಧಿ ದಂಪತಿ ಗುಜರಾತ್ ಕಡೆ ಹೊರಟು ರಾಜಕೋಟೆ ಮತ್ತು ಪೋರ್‌ಬಂದರ್ ನಗರಗಳಿಗೆ ಭೇಟಿ ನೀಡಿದರು. ಅಲ್ಲಿ ತಮ್ಮ ಬಾಲ್ಯ, ಹದಿಹರೆಯದ ನೆನಪುಗಳಲ್ಲಿ ವಿಹರಿಸಿದರು. ಮಾರ್ಗದುದ್ದಕ್ಕೂ ಗುಜರಾತ್‌ನ ಜನತೆ ತನ್ನ ಸುಪುತ್ರನಿಗೆ ಭವ್ಯ ಸ್ವಾಗತ ನೀಡಿ ಹೆಮ್ಮೆಪಟ್ಟಿತು. ಅಹಮದಾಬಾದ್ ನಗರದಲ್ಲಿ ಏರ್ಪಾಡಾಗಿದ್ದ ಸಭೆಯಲ್ಲಿ ಗಾಂಧಿ, ದ.ಆಫ್ರಿಕಾದಲ್ಲಿನ ಹೋರಾಟದಲ್ಲಿ ತಮ್ಮೊಡನಿದ್ದ ಕೆಲ ಅತ್ಯುತ್ತಮ ಸತ್ಯಾಗ್ರಹಿಗಳನ್ನು ನೀಡಿದ ಈ ನಗರದ ಜನತೆ, ತಾವು ಇದನ್ನು ತಮ್ಮ ಮುಂದಿನ ನೆಲೆಯಾಗಿ ಮಾಡಿಕೊಂಡರೆ ಸಹಕಾರ ನೀಡಲು ಸಿದ್ಧವೇ ಎಂದು ಕೇಳಿ ಸಕಾರಾತ್ಮಕ ಉತ್ತರವನ್ನು ಪಡೆದರು. ನಂತರ ಗಾಂಧಿ ಗೋಖಲೆಯವರನ್ನು ಕಾಣಲು ಪೂನಾಗೆ ಪ್ರಯಾಣ ಮಾಡಿದರು.

ಗಾಂಧಿ ಮತ್ತು 'ಸರ್ವೆಂಟ್ಸ್ ಆಫ್ ಇಂಡಿಯಾ'

ಗೋಖಲೆ ಅವರಿಗೆ ಗಾಂಧಿಯವರು ತಾವು ಸ್ಥಾಪಿಸಿದ್ದ 'ಸರ್ವೆಂಟ್ಸ್ ಆಫ್ ಇಂಡಿಯಾ'ದ ಸದಸ್ಯತ್ವ ಪಡೆದು ಜನತೆಯ ಸೇವೆ ಆರಂಭಿಸಬೇಕೆಂಬ ಇಚ್ಛೆ ಇತ್ತು. ಗಾಂಧಿ ಕೂಡ ಗೋಖಲೆಯವರ ಬಗೆಗಿನ ಪ್ರೀತಿ–ಗೌರವಗಳ ಕಾರಣದಿಂದಾಗಿ,

ಅದರೊಡನೆ ಕೆಲಸ ಮಾಡುವುದು ತಮ್ಮ ಕರ್ತವ್ಯವೆಂದು ಭಾವಿಸಿದ್ದರು. ಆದರೆ ಗಾಂಧಿಗೆ ಆ ಸಂಸ್ಥೆಯ ಸೇವೆಯ ಸ್ವರೂಪದ ಬಗ್ಗೆ ತೀವ್ರ ಭಿನ್ನಾಭಿಪ್ರಾಯವಿತ್ತು. ಅದೊಂದು ಬ್ರಿಟಿಷ್ ಜೀವನ ಮೌಲ್ಯ ಮತ್ತು ಮಾದರಿಗಳನ್ನು ಆದರ್ಶಗಳೆಂದು ಒಪ್ಪಿಕೊಂಡು ಬ್ರಿಟಿಷ್ ಪ್ರಭುತ್ವದೊಡನೆ ಆಡಳಿತದಲ್ಲಿ ಆದಷ್ಟೂ ಹೆಚ್ಚು ಭಾಗವಹಿಸುವಿಕೆಯ ಬೇಡಿಕೆಗಳನ್ನಿಡಲು ಸುಕ್ಷೇಮಕರ ಸೇತುವೆಯಾಗಬಲ್ಲ ಮಧ್ಯಮ ವರ್ಗವೊಂದನ್ನು ಸೃಷ್ಟಿಸುತ್ತಿದ್ದ ಅರೆ ಪ್ರತಿಷ್ಠಿತರ ಸಂಸ್ಥೆಯಾಗಿತ್ತು. ಗಾಂಧಿ ಬ್ರಿಟಿಷ್ ಪ್ರಭುತ್ವದ ಶಾಸನಗಳ ನ್ಯಾಯಪರತೆಯ ಬಗ್ಗೆ ಇನ್ನೂ ನಂಬಿಕೆ ಇಟ್ಟಿದ್ದರಾದರೂ, ತಮ್ಮ 'ಹಿಂದ್ ಸ್ವರಾಜ್' ಕೃತಿಯಲ್ಲಿ ಕಂಡುಕೊಂಡಿದ್ದಂತೆ, ಬ್ರಿಟಿಷ್ ಅಥವಾ ಐರೋಪ್ಯ ಜೀವನ ದೃಷ್ಟಿ ಮತ್ತು ಮಾದರಿಗಳ ಅನುಸರಣೆಯೇ ತಮ್ಮ ದೇಶದ ಗುಲಾಮಗಿರಿಗೆ ಕಾರಣವಾಗಿದ್ದು, ಅವುಗಳನ್ನು ತ್ಯಜಿಸಿ ನಮ್ಮದೇ ಜೀವನ ದೃಷ್ಟಿ ಮತ್ತು ಮಾದರಿಗಳನ್ನು ಅನುಸರಿಸುವ–ಸಹಕಾರ, ಮುಷ್ಕರ, ಬಹಿಷ್ಕಾರ, ಸತ್ಯಾಗ್ರಹಗಳಿಂದ ಕೂಡಿದ–ಜನಾಂದೋಲನದ ಮೂಲಕ ಮಾತ್ರ ಗುಲಾಮಗಿರಿಯಿಂದ ಬಿಡುಗಡೆ ಪಡೆಯಬಹುದೆಂದು ನಂಬಿದ್ದರಿಂದ ಗೋಖಲೆಯವರ ಸಂಸ್ಥೆಯೊಂದಿಗೆ ತಮ್ಮನ್ನು ಕಟ್ಟಿಹಾಕಿಕೊಳ್ಳಲು ಮುಕ್ತ ಮನಸ್ಸಿನವರೇನಾಗಿರಲಿಲ್ಲ... ಗೋಖಲೆಯವರ ಆ ಸಂಸ್ಥೆಯ ಪದಾಧಿಕಾರಿಗಳೆಲ್ಲರೂ ಬ್ರಿಟಿಷರಂತೆ ಎಲ್ಲಕ್ಕೂ–ಶೌಚ ಗೃಹಗಳನ್ನು ಸ್ವಚ್ಛ ಮಾಡುವುದರಿಂದ ಹಿಡಿದು ಕೊಠಡಿಗಳ ಸ್ವಚ್ಛತೆ, ಬಟ್ಟೆ ತೊಳೆಯುವುದು, ಅಡುಗೆ ಹೀಗೆ ಎಲ್ಲಕ್ಕೂ–ಸೇವಕರನ್ನು ಇಟ್ಟುಕೊಂಡಿದ್ದುದನ್ನು ಗಮನಿಸಿದ ಗಾಂಧಿ, ಅದೆಲ್ಲವನ್ನೂ ತಾವೇ ಮಾಡತೊಡಗಿದಾಗ ಅಲ್ಲಿಗೆ ಬಂದಿದ್ದ ಸಂಸ್ಥೆಯ ಭಾವಿ ಅಧ್ಯಕ್ಷ, ಮಹಾನ್ ಧಾರ್ಮಿಕ ಪಂಡಿತರೂ, ಇಂಗ್ಲಿಷ್ ವಿದ್ವಾಂಸರೂ, ನುರಿತ ವಾಗ್ಮಿ ಮತ್ತು ವಕೀಲರೂ ಆಗಿದ್ದ ಎಸ್.ವಿ.ಶ್ರೀನಿವಾಸ ಶಾಸ್ತ್ರಿಗಳೂ ಸೇರಿದಂತೆ ಅದರೆಲ್ಲ ಪದಾಧಿಕಾರಿಗಳು ಕಸಿವಿಸಿಗೊಂಡರು. ಹಾಗೇ ಗಾಂಧಿ ತಮ್ಮ ಸಂಸ್ಥೆಯ ಉದ್ದೇಶಗಳಿಗೆ ಹೊಂದಲಾರರೆಂದು ಭಾವಿಸಿ ಅವರಿಗೆ ಸದಸ್ಯತ್ವ ನೀಡಲು ಹಿಂದುಮುಂದು ನೋಡಿದರು. ಇದನ್ನೆಲ್ಲ ಅರಿತ ಗೋಖಲೆಯವರು ಗಾಂಧಿಗೆ 'ನೀನು ನಮ್ಮ ಸಂಸ್ಥೆಯ ಸದಸ್ಯತ್ವ ಪಡೆಯಲಿ, ಬಿಡಲಿ ನೀನು ನಮ್ಮವನೇ' ಎಂಬ ಪ್ರೀತಿಯ ಆಶೀರ್ವಾದ ಮಾಡಿದರು. ಗಾಂಧಿ ತಮ್ಮ ಚಟುವಟಿಕೆಗಳಿಗೆ ಒಂದು ಕೇಂದ್ರವಾಗಿ ಆಶ್ರಮವೊಂದನ್ನು ಸ್ಥಾಪಿಸಬಯಸಿದ್ದಾಗಿ ಹೇಳಿದಾಗ, ಅವರು ಅದಕ್ಕಾಗಿ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು ತಮ್ಮ ಜವಾಬ್ದಾರಿ ಎಂಬ ಆಶ್ವಾಸನೆಯನ್ನೂ ನೀಡಿದರು. ನಂತರದಲ್ಲಿ ಗಾಂಧಿ 'ಸರ್ವೆಂಟ್ಸ್ ಆಫ್ ಇಂಡಿಯಾ'ದ ಸದಸ್ಯತ್ವದ ಅರ್ಜಿಯನ್ನು ಹಿಂಪಡೆದರು.

■

೪೨

ಗಾಂಧಿಯವರ ಭಾರತಯಾತ್ರೆ

ಗಾಂಧಿ ಪೂನಾದಿಂದ ಕಸ್ತೂರಬಾ ಅವರೊಂದಿಗೆ, ಭಾರತದ ಒಡಲನ್ನು ಅಡ್ಡವಾಗಿ ಸೀಳುತ್ತಾ ಹೊರಟ ಮೂರನೇ ದರ್ಜೆ ರೈಲುಗಾಡಿಯಲ್ಲಿ ಕಲ್ಕತ್ತಾ ನಗರದ ಹೊರವಲಯದಲ್ಲಿದ್ದ ಶಾಂತಿನಿಕೇತನಕ್ಕೆ ಬಂದರು. ಅವರು ಅಲ್ಲಿಗೆ ಹೋದಾಗ ಶಾಂತಿನಿಕೇತನದ ಸ್ಥಾಪಕ ಗುರುದೇವ ರಬೀಂದ್ರನಾಥ ಟ್ಯಾಗೋರರು ಅಲ್ಲಿರಲಿಲ್ಲ. ಆದರೆ ಈಗ ಅಲ್ಲಿದ್ದ, ತಮ್ಮ ಮಕ್ಕಳೂ ಒಳಗೊಂಡಿದ್ದ ಫೀನಿಕ್ಸ್ ಆಶ್ರಮದ ತಂಡವನ್ನು ಕಂಡು ಸಂತೋಷಗೊಂಡರು. ಸಿ.ಎಫ್. ಆ್ಯಂಡ್ರ್ಯೂಸ್ ಮತ್ತು ಪಿಯರ್ಸನ್ ಜೋಡಿ ಗಾಂಧಿ ದಂಪತಿಯನ್ನು ಆತ್ಮೀಯವಾಗಿ ಸ್ವಾಗತಿಸಿ ಅವರ ಯೋಗಕ್ಷೇಮದ ಎಲ್ಲ ವ್ಯವಸ್ಥೆ ಮಾಡಿದರು.

ಗೋಖಲೆಯವರ ನಿಧನ– ಗಾಂಧಿಗೆ 'ಮಹಾತ್ಮ' ಪಟ್ಟ

ಆದರೆ ಎರಡೇ ದಿನಗಳಲ್ಲಿ ಪೂನಾದಿಂದ ಗೋಖಲೆಯವರ ಹಠಾತ್ ನಿಧನದ ಸುದ್ದಿ ಬಂದು, ಗಾಂಧಿ ಮತ್ತೆ ಪೂನಾಗೆ ಹೊರಡಬೇಕಾಯಿತು. ಗೋಖಲೆಯವರ ಹಠಾತ್ ನಿಧನ ಗಾಂಧಿಯನ್ನು ನಿಜವಾಗಿ ಕಂಗೆಡಿಸಿತ್ತು. ಅವರ ಪ್ರೀತಿಯ ಆಸರೆಯನ್ನು ನಂಬಿಯೇ ಗಾಂಧಿ ಭಾರತದಲ್ಲಿ ಸಾರ್ವಜನಿಕ ಜೀವನ ಆರಂಭಿಸಲು ಬಂದಿದ್ದರು. ಆದರೀಗ ಅವರನ್ನು ಅನಾಥ ಭಾವ ಆವರಿಸಿದ್ದಂತಿತ್ತು. ಪೂನಾದಲ್ಲಿ ಗೋಖಲೆಯವರಿಗೆ ಶ್ರದ್ಧಾಂಜಲಿ ಸಲ್ಲಿಸಿದ ಗಾಂಧಿ ತಮ್ಮ ಗುರುವಿನ ಸಾವಿನ ನೋವಿನಿಂದ ಸುಧಾರಿಸಿಕೊಂಡು ಮತ್ತೆ ಶಾಂತಿನಿಕೇತನಕ್ಕೆ ವಾಪಸ್ ಬಂದರು. ಆ ವೇಳೆಗೆ ಅನ್ಯಕಾರ್ಯ ನಿಮಿತ್ತ ಹೊರಗೆ ಪ್ರಯಾಣಿಸಿದ್ದ ಟ್ಯಾಗೋರರೂ ವಾಪಸಾಗಿದ್ದರು. ಈ ಭೇಟಿ ಕ್ರಮವಾಗಿ ಸತ್ಯದ ಮೂಲಕ ಮತ್ತು ಸೌಂದರ್ಯದ ಮೂಲಕ ಶಿವನನ್ನು ಕಾಣುವ ಇಬ್ಬರು ಮಹಾನ್ ವ್ಯಕ್ತಿಗಳ ಸಂಗಮದ ಸಂದರ್ಭವಾಗಿತ್ತು. ಶಾಂತಿನಿಕೇತನದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು, ಗಾಂಧಿ ದಂಪತಿಗಳನ್ನು ಹಾಡು–ನೃತ್ಯ–ಹೂ ರಾಶಿಗಳಲ್ಲಿ ಮುಳುಗಿಸಿ ಸ್ತುತಿಸಿದರು. ಟ್ಯಾಗೋರರು ಗಾಂಧಿಯನ್ನು 'ಮಹಾತ್ಮ' ಎಂದು ಸಂಬೋಧಿಸಿ, ಈ ಹಿಂದೆಯೆ ಒಂದಿಬ್ಬರು ಬಳಸಿದ್ದ ಈ ವರ್ಣನೆಯನ್ನು ಜನಸಾಮಾನ್ಯರ ನಡುವೆ ಚಾಲ್ತಿಗೆ ಬರುವಂತೆ ಮಾಡಿದರು. ಟ್ಯಾಗೋರರಿಗಿಂತ ಎಂಟು ವರ್ಷ ಕಿರಿಯರಾಗಿದ್ದ ಗಾಂಧಿ, ಅವರ ಕಾಲ್ಮುಟ್ಟಿ ನಮಸ್ಕರಿಸಿ ಅವರನ್ನು ಗುರುದೇವ ಎಂದು ಸಂಬೋಧಿಸಿ ಆ ವರ್ಣನೆಯನ್ನು ಜನಸಮ್ಮತಗೊಳಿಸಿದರು. ತಮಗೆ ಮುಂಬೈ–

ಗುಜರಾತುಗಳಲ್ಲಿ ದೊರೆತ ಗೌಜು–ಗದ್ದಲಗಳ ಅದ್ದೂರಿ ಸ್ವಾಗತ ಸಮ್ಮಾನಗಳಿಗಿಂತ ಇಲ್ಲಿನ ಪ್ರೀತಿ ಗೌರವಗಳೇ, ಇವು ಹೆಚ್ಚು ಭಾರತೀಯವಾಗಿ, ಸರಳವಾಗಿ ಕಂಡು ಆಪ್ಯಾಯಮಾನವೆನಿಸಿವೆ ಎನ್ನುತ್ತಾ ಅಲ್ಲಿನ ವ್ಯವಸ್ಥೆಯ ಬಗ್ಗೆ ತಮ್ಮ ಅಸಮ್ಮತಿಯನ್ನೂ ಸೂಚಿಸಲು ಹಿಂಜರಿಯಲಿಲ್ಲ.

ಹಾಡು ಕುಣಿತ ಹೆಚ್ಚಾಯಿತು–ದೇಹಶ್ರಮದ ಸೌಂದರ್ಯವೂ ಬೇಕು!

ಇಲ್ಲಿ ಹೂವು–ಹಾಡು–ಕುಣಿತ ಹೆಚ್ಚಾಯಿತು. ಇವುಗಳೊಂದಿಗೆ ಒಂದಿಷ್ಟು ದೇಹಶ್ರಮದ ಸೌಂದರ್ಯವೂ ಬೆರೆಯಬೇಕೆಂದು ಹೇಳುತ್ತಾ, ಗಾಂಧಿ ತಮ್ಮ ಫೀನಿಕ್ಸ್ ಆಶ್ರಮದ ತಂಡದೊಂದಿಗೆ ಶೌಚ–ಸ್ನಾನ ಗೃಹಗಳೂ ಸೇರಿದಂತೆ ಆ ಇಡೀ ಆವರಣದ ಶುಚೀಕರಣದ ಕೆಲಸವನ್ನು ಆರಂಭಿಸಿಯೇಬಿಟ್ಟರು. ಶಾಂತಿನಿಕೇತನದ ವಿದ್ಯಾರ್ಥಿ ಮತ್ತು ಬೋಧಕ ಸಿಬ್ಬಂದಿಯೂ ಇದರಲ್ಲಿ ಸೇರಿತು. ಟ್ಯಾಗೋರರು ಇದನ್ನು ಸಮುದಾಯದ ಆರೋಗ್ಯದ ದೃಷ್ಟಿಯಿಂದ ಒಪ್ಪಲಿಲ್ಲವಾದರೂ ಕುತೂಹಲದಿಂದ ನೋಡಿದರು. ಆದರೆ ಗಾಂಧಿ ಶಾಂತಿನಿಕೇತನವನ್ನು ಬಿಟ್ಟುಹೊರಟ ನಂತರ ಈ ಅಭ್ಯಾಸ ತಾನೇ ತಾನಾಗಿ ನಿಂತು ಹೋಯಿತೆಂಬುದು ಬೇರೆ ವಿಷಯ. ಮುಂದೆ ತಿಳಿಯುವಂತೆ ಈ ಸುಳಿವಿನಿಂದಲೇ ಆರಂಭವಾದಂತೆ ಗಾಂಧಿಯವರೊಡನೆಯ ಟ್ಯಾಗೋರರ ಭಿನ್ನಾಭಿಪ್ರಾಯ ಒಟ್ಟು ಆಧುನಿಕ ನಾಗರೀಕತೆ ಕುರಿತಂತೆಯೇ ದೊಡ್ಡ ಚರ್ಚೆಗೆ ಕಾರಣವಾಗುವಂತೆ ಬೆಳೆಯಿತು. ಆದರೆ ಇದಾವುದೂ ಈ ಇಬ್ಬರು ಮಹಾನ್ ವ್ಯಕ್ತಿಗಳ ನಡುವಣ ಮಧುರ ಸ್ನೇಹಕ್ಕೆ ಯಾವುದೇ ಬಾಧೆ ತರಲಿಲ್ಲ.

ಗಾಂಧಿ ದಂಪತಿ ಶಾಂತಿನಿಕೇತನದಿಂದ ತಮ್ಮ ಗೆಳೆಯ ಪ್ರಾಣಜೀವನ ಮೆಹ್ತಾರನ್ನು ಕಾಣಲು ರಂಗೂನ್‌ಗೆ ಹೊರಟರು. ದಾರಿಯಲ್ಲಿ ಕಲ್ಕತ್ತಾ ನಗರದಲ್ಲಿ ಭೂಪೇಂದ್ರನಾಥ ಬಸು ಅವರ ಅತಿಥಿಯಾಗಿ ಉಳಿದು, ಅಲ್ಲಿ ವಿದ್ಯಾರ್ಥಿ ಸಭೆಯೊಂದನ್ನು ಉದ್ದೇಶಿಸಿ ಮಾತನಾಡಿದರು. 'ದೇವರಿಗೆ ಬದಲಾಗಿ ಮನುಷ್ಯನಿಗೆ ಹೆದರುವವರಷ್ಟೇ ಹಿಂಸಾಚಾರದ ಹೇಡಿತನದಲ್ಲಿ ಪಾಲ್ಗೊಳ್ಳುತ್ತಾರೆ. ಭಯೋತ್ಪಾದಕರಿಗೆ ತಮ್ಮ ಗುರಿಯ ಬಗ್ಗೆ ನಂಬಿಕೆ ಇದ್ದರೆ ಅದನ್ನು ಸಾರ್ವಜನಿಕವಾಗಿ ಹೇಳಿ ಅದರ ಪರಿಣಾಮಗಳನ್ನು ಎದುರಿಸಲು ಸಿದ್ಧರಿರಬೇಕು' ಎಂದು ಕಿವಿ ಮಾತು ಹೇಳಿದರಲ್ಲದೆ, ರಾಜಕಾರಣವೂ ಸೇರಿದಂತೆ ನಾವು ಮಾಡುವ ಎಲ್ಲದಕ್ಕೂ ಧರ್ಮ ಮತ್ತು ನೈತಿಕತೆ ಒರೆಗಲ್ಲುಗಳಾಗಿರಬೇಕೆಂದು ಅಭಿಪ್ರಾಯಪಟ್ಟರು.

ಮಹರ್ಷಿ ಮುನ್ಷೀರಾಮರ ಭೇಟಿ

ಯಾಂತ್ರಿಕ ದೋಣಿಯೊಂದರ ಮೂರನೇ ದರ್ಜೆಯ ಪ್ರಯಾಣಿಕರಾಗಿ ಅಸಾಧ್ಯ ಕೊಳಕಿನ ಮಧ್ಯೆ ಸಾವರಿಸಿಕೊಂಡು, ದೋಣಿಯ ಸಂಚಾಲಕ ಸಿಬ್ಬಂದಿಗೆ ಬುದ್ಧಿ ಹೇಳುತ್ತಾ ರಂಗೂನ್ ತಲುಪಿದ ಗಾಂಧಿ, ವಜ್ರಾಭರಣಗಳ ವ್ಯಾಪಾರಿಯಾಗಿದ್ದ ಗೆಳೆಯ ಮೆಹ್ತಾರೊಂದಿಗೆ ಕೆಲಕಾಲ ಕಳೆದು ಹೊರಟದ್ದು ಹಿಮಾಲಯದ ತಪ್ಪಲಿನ ಹರಿದ್ವಾರದತ್ತ. ಅಲ್ಲಿ ಕುಂಭಮೇಳ ನಡೆದಿದ್ದು, ಫೀನಿಕ್ಸ್ ಆಶ್ರಮದ ತಂಡ ಅಲ್ಲಿ ಸ್ವಯಂಸೇವಕರಾಗಿ ದುಡಿಯಲು ನಿಶ್ಚಯಿಸಿದ್ದು ಒಂದು ಕಾರಣವಾದರೆ, ಮಹರ್ಷಿ

ಮುನ್ಶಿರಾಮರನ್ನು ಕಾಣುವುದು ಇನ್ನೊಂದು ಕಾರಣವಾಗಿತ್ತು. ಹರಿದ್ವಾರದಲ್ಲಿನ ಕುಂಭಮೇಳದಲ್ಲಿನ ಕೊಳಕು ಮತ್ತು ಸನ್ಯಾಸಿಗಳ ಮೌಢ್ಯಾಚಾರ-ದುರಾಚಾರಗಳನ್ನು ಕಂಡು ಗಾಂಧಿ ವಿಷಾದಪಟ್ಟುಕೊಂಡರು. ಇಲ್ಲಿ ಅವರು ನೆಮ್ಮದಿ ಪಡೆದುಕೊಂಡದ್ದು (ಮುಂದೆ ಶ್ರದ್ಧಾನಂದರೆಂದು ಪ್ರಸಿದ್ಧರಾಗಿ ಗಾಂಧಿಯ ಆಪ್ತರಾದ) ಮಹರ್ಷಿ ಮುನ್ಶಿರಾಮರ ಗುರುಕುಲದಲ್ಲಿ. ಅವರೊಂದಿಗೆ ಗಾಂಧಿ, ಗುರುಕುಲಗಳಲ್ಲಿ ಕೈಗಾರಿಕಾ ತರಬೇತಿ ನೀಡುವ ಸಾಧ್ಯತೆಗಳ ಬಗ್ಗೆ ಚರ್ಚಿಸಿದ ನಂತರ ಹೃಷಿಕೇಶಕ್ಕೆ ತೆರಳಿ ಗಂಗಾ ನದಿಯ ಆ ಕಣಿವೆಯ ಸೌಂದರ್ಯವನ್ನು ಸವಿದರು. ಅಲ್ಲಿನ ಸಾಧುವೊಬ್ಬರು ಗಾಂಧಿ ದ್ವಿಜರಾಗಿಯೂ ಜುಟ್ಟು ಜನಿವಾರಗಳಿಲ್ಲದೆ ಇರುವುದನ್ನು ಪ್ರಶ್ನಿಸಿದಾಗ, ಅವರು ನೆತ್ತಿಯ ಸುರಕ್ಷತೆಗಾಗಿ ಜುಟ್ಟು ಬಿಡಲು ಒಪ್ಪಿದರಾದರೂ, ಜನಿವಾರ ಹಾಕಿಕೊಳ್ಳಲು ನಿರಾಕರಿಸಿದರು. ಅದು ತಮ್ಮನ್ನು ಕೋಟ್ಯಂತರ ಹಿಂದೂ ಸೋದರರಿಂದ ಬೇರ್ಪಡಿಸುತ್ತದೆ ಎಂದು ಹೇಳಿದರು.

ಈ ಮೇಲಿನ ವಾದದ ಮುಂದುವರಿಕೆಯಾಗಿಯೇ ತಮ್ಮ ಯಾತ್ರೆಯ ಮುಂದಿನ ಸ್ಥಳವಾದ ದೆಹಲಿಯಲ್ಲಿ, ಗೆಳೆಯ ಆ್ಯಂಡ್ರ್ಯೂಸ್, ತಾವು ಬೋಧಿಸಿದ್ದ ಕಾಲೇಜೆಂದು ಕರೆದುಕೊಂಡು ಹೋದ ಸೇಂಟ್ ಸ್ಟೀಫನ್ ಕಾಲೇಜಿನಲ್ಲಿ, ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಗಾಂಧಿ, ಗೋಖಲೆಯವರ ದಿಟ್ಟ ಮಾತೊಂದನ್ನು ಉಲ್ಲೇಖಿಸಿದ್ದು: ಗೋಖಲೆ ದ.ಆಫ್ರಿಕಾದಲ್ಲಿದ್ದಾಗ ಅವರನ್ನು ಭೇಟಿಯಾದ ಹಿಂದೂ ಸನ್ಯಾಸಿಯೊಬ್ಬ ಅವರ ರಾಜಕಾರಣವನ್ನು, ಮುಸ್ಲಿಮರನ್ನು ಹಿಂದೆ ಸರಿಸಿ ಹಿಂದೂಗಳ ಉದ್ಧಾರಕ್ಕೆ ಕಾರಣವಾಗುವಂತಹ ರೀತಿಯಲ್ಲಿ ರೂಪಿಸಬೇಕೆಂದು ಒತ್ತಾಯಿಸುತ್ತಾ, ಅದಕ್ಕೆ ಬೆಂಬಲವಾಗಿ ಕೆಲವು ಧಾರ್ಮಿಕ ಶ್ಲೋಕಗಳನ್ನು ಉಲ್ಲೇಖಿಸಿದಾಗ, ಅವರು ಆ ಸನ್ಯಾಸಿಗೆ ಹೇಳಿದ್ದು: 'ನೀವು ಹೇಳಿದಂತೆ ಮಾಡುವುದೇ ಹಿಂದೂ ಧರ್ಮವಾದರೆ ನಾನು ಹಿಂದೂವೇ ಅಲ್ಲ. ಇದನ್ನು ಬೇಕಾದರೆ ಭಾರತಕ್ಕೆ ಹೋಗಿ ಪ್ರಚಾರ ಮಾಡಿ'.

ಮದ್ರಾಸ್‌ನಲ್ಲಿ ಭವ್ಯ ಸ್ವಾಗತ

ದೆಹಲಿಯಿಂದ ಗಾಂಧಿ ದಂಪತಿಗಳು ತಮ್ಮ ಭಾರತ ಯಾತ್ರೆಯ ಮುಂದಿನ ಹಂತವಾಗಿ ಹೊರಟದ್ದು ದಕ್ಷಿಣ ಭಾರತದ ಕಡೆಗೆ. ಕಾಯ್ದಿರಿಸದ ಮೂರನೇ ದರ್ಜೆ ಡಬ್ಬಿಯಲ್ಲಿ ಜನಜಂಗುಳಿಯ ಮಧ್ಯೆ ಏರುತ್ತಿದ್ದ ಏಪ್ರಿಲ್ ಬಿಸಿಲಿನಲ್ಲಿ ನಾಲ್ಕು ದಿನ ಪ್ರಯಾಣ ಮಾಡಿ, ಮದ್ರಾಸ್‌ನಲ್ಲಿ ರೈಲುಗಾಡಿಯಿಂದ ಇಳಿದಾಗ, ಅಲ್ಲಿ ಅವರನ್ನು ಸ್ವಾಗತಿಸಲು ಸೇರಿದ್ದ ಒಂದು ದೊಡ್ಡ ಜನಸಮೂಹ ಅವರನ್ನು ನೋಡಿ ತಬ್ಬಿಬ್ಬಾಯಿತು. ಈಗ ಗಾಂಧಿ ತಮ್ಮ ಕಾಠೇವಾಡಿ ಪೇಟ, ನಿಲುವಂಗಿಗಳನ್ನೆಲ್ಲ ತೊರೆದು ಮೈ ಮುಚ್ಚಬಲ್ಲ ಹತ್ತಿಯ ಪಂಚೆ ಮತ್ತು ಅಂಗಿಗಳ ಸರಳ ಉಡುಪಿಗೆ ಸೀಮಿತರಾಗಿದ್ದರು. ಅವರು ಪ್ರವಾಸಕ್ಕೆ ತಮ್ಮೊಂದಿಗೆ ತಂದುದು ಎರಡು ಪುಟ್ಟ ಬಟ್ಟೆ ಗಂಟುಗಳನ್ನಷ್ಟೇ. ಅರೆಕ್ಷಣದಲ್ಲೇ ಎಲ್ಲವನ್ನೂ ಅರಿತಂತೆ ಆ ಜನಸಮೂಹ ಗಾಂಧಿಗೆ ಜಯಘೋಷ ಮಾಡುತ್ತಾ ದಂಪತಿಗಳನ್ನು ಒಂದು ಅಲಂಕೃತ ಗಾಡಿಯಲ್ಲಿ ಕೂರಿಸಿ ಅದನ್ನು ತಾವೇ ಎಳೆಯುತ್ತಾ ನಗರದ ಬೀದಿಗಳಲ್ಲಿ ಮೆರವಣಿಗೆ ಹೊರಟರು.

ಗಾಂಧಿ ಪ್ರವಾಸದ ಈ ಹಂತದ ಉಸ್ತುವಾರಿ ವಹಿಸಿದ್ದವರು ಗಾಂಧಿಯವರ ಹಳೆಯ ಗೆಳೆಯರೂ, ದ.ಆಫ್ರಿಕಾದಲ್ಲಿನ ಸತ್ಯಾಗ್ರಹಕ್ಕೆ ನಿಧಿ ಕೂಡಿಸಿಕೊಟ್ಟಿದ್ದಲ್ಲದೆ, ಆ ಸತ್ಯಾಗ್ರಹದ ಪರಿಣಾಮವಾಗಿ ದೇಶಭ್ರಷ್ಟರಾಗಿ ಬಂದ, ಭಾರತೀಯರಿಗೆ ಪುನರ್ವಸತಿ ಕಲ್ಪಿಸುವಲ್ಲಿ ನೆರವಾದವರೂ, ಹೆನ್ರಿ ಪೋಲಾಕ್ ಗಾಂಧಿಯವರ ಪ್ರತಿನಿಧಿಯಾಗಿ ಭಾರತಕ್ಕೆ ಬಂದಿದ್ದಾಗ ಅವರಿಗೆ ಮದ್ರಾಸ್‌ನಲ್ಲಿ ಆತಿಥೇಯರಾಗಿ ಗಾಂಧಿಯ ಕಿರುಪತ್ರಗಳನ್ನು ಮುದ್ರಿಸಿ ಹಂಚಿದವರೂ ಮತ್ತು 'ಇಂಡಿಯನ್ ರಿವ್ಯೂ' ಪತ್ರಿಕೆಯ ಸಂಪಾದಕರೂ ಆದ ಜಿ.ಎ. ನಟೇಶನ್ ಅವರು. ಗಾಂಧಿ ಆಡ್ಯಾರ್‌ನಲ್ಲಿದ್ದ ಥಿಯೋಸಾಫಿಕಲ್ ಸಂಘಕ್ಕೆ ಭೇಟಿ ನೀಡಿ ಶ್ರೀಮತಿ ಅನಿಬೆಸೆಂಟ್ ಅವರನ್ನು ಕಂಡು ಮಾತನಾಡಿಸಿದರಲ್ಲದೆ ಅವರು ನಡೆಸುತ್ತಿದ್ದ ಶಾಲೆಗಳಿಗೂ ಭೇಟಿ ನೀಡಿ, ಅಲ್ಲಿನ ಅಸ್ಪೃಶ್ಯ ಜಾತಿಗೆ ಸೇರಿದ್ದ ಮಕ್ಕಳ ಮಧ್ಯೆ ಬೆರೆತು ಅವರೊಂದಿಗೆ ಸಂವಾದಿಸಿದರು. ನಂತರ ಗಾಂಧಿ ದಂಪತಿ ದ.ಆಫ್ರಿಕಾದ ಸತ್ಯಾಗ್ರಹದಲ್ಲಿ ತಮ್ಮೊಂದಿಗೆ ಇತರೆಲ್ಲರಿಗಿಂತ ಹೆಚ್ಚಿನ ನಿಷ್ಠೆ ಮತ್ತು ಕೆಚ್ಚುಗಳೊಂದಿಗೆ ಪಾಲ್ಗೊಂಡು, ಪ್ರಾಣವನ್ನೂ ತೆತ್ತಿದ್ದ ಕೆಲವರು ತಮಿಳು ಸಂಗಾತಿಗಳ ಊರುಗಳನ್ನೂ, ಬಂಧುಗಳನ್ನೂ ಅರಸುತ್ತಾ ಬೇರೆ ಬೇರೆ ಊರುಗಳಿಗೆ ಭೇಟಿ ನೀಡಿ ಅವರ ನೆನಪಿಗೆ ಗೌರವ ಸಲ್ಲಿಸಿದರು. ಕೆಲವೆಡೆ 'ಸರ್ವೆಂಟ್ಸ್ ಆಫ್ ಇಂಡಿಯಾ'ದ ಅಧ್ಯಕ್ಷ ಎಸ್.ವಿ. ಶ್ರೀನಿವಾಸ ಶಾಸ್ತ್ರಿಗಳು ಅರ್ಧ ಮನಸ್ಸಿನಿಂದಲೇ ಗಾಂಧಿಯವರೊಂದಿಗೆ ಪಯಣಿಸಿ, ಅವರ ಭಾಷಣಗಳನ್ನು ತಮಿಳಿಗೆ ಅನುವಾದಿಸಿದ್ದೂ ಉಂಟು. ಅಂತಹ ಸಂದರ್ಭಗಳಲ್ಲಿ ಗಾಂಧಿ ನಾಯಕತ್ವ ಜನರ ಮಧ್ಯೆ ಬೆಳೆಯುತ್ತಿರುವ ರೀತಿ ನೋಡಿ ಅವರು ದಂಗಾಗಿ ಹೋಗಿದ್ದೂ ಉಂಟು.

ಗಾಂಧಿ ಈ ಯಾತ್ರೆಯಲ್ಲಿ, ಮದ್ರಾಸ್ ಪ್ರಾಂತ್ಯದ ತೆಲುಗು ಭಾಷಿಕ ಪ್ರದೇಶಗಳನ್ನಷ್ಟೇ ಅಲ್ಲದೆ, ಅದರ ಗಡಿ ದಾಟಿ ಬೆಂಗಳೂರು ಮತ್ತು ಅದರ ಸುತ್ತಮುತ್ತಲ ಊರುಗಳಿಗೂ ಭೇಟಿ ನೀಡಿದರು. ಇಲ್ಲೆಲ್ಲ ಗಾಂಧಿ ಜನತೆಗೆ ಹೇಳಿದ್ದು ಮುಖ್ಯವಾಗಿ ಈ ಮೂರು ಅಂಶಗಳನ್ನೇ–

೧. ದ.ಆಫ್ರಿಕಾದಲ್ಲಿನ ಹೋರಾಟದ ಯಶಸ್ಸಿಗೆ ನಾವಷ್ಟೇ ಕಾರಣರಲ್ಲ. ದಯವಿಟ್ಟು ನಮ್ಮನ್ನು ಜನಶಕ್ತಿಯಿಂದ ಬೇರ್ಪಡಿಸಿ ನೋಡಬೇಡಿ. ಅಲ್ಲಿ ಕೆಲವೇ ಭಾರತೀಯರ ಹೋರಾಟ ವಿಶ್ವದ ಗಮನ ಸೆಳೆಯುವಷ್ಟು ಯಶಸ್ವಿಯಾಗಿದ್ದರೆ, ಇಲ್ಲಿ ಇನ್ನೆಷ್ಟು ಯಶಸ್ವಿಯಾಗಬಹುದು, ಯೋಚಿಸಿ.

೨. ಅಸ್ಪೃಶ್ಯತೆ ಧರ್ಮಸಮ್ಮತವಾದ ಆಚರಣೆಯಲ್ಲ. ಅದು ಹಿಂದೂ ಧರ್ಮಕ್ಕೆ ಮಾತ್ರವಲ್ಲ, ಮಾನವತೆಗೇ ಅಪಚಾರ ಮಾಡಿರುವಂತಹ ಆಚರಣೆ. ಅದರಲ್ಲಿ ನಂಬಿಕೆ ಇಟ್ಟವರನ್ನು ಸ್ವಯಮಾಡಳಿತದ ಹೋರಾಟದ ಭಾವೈಕ್ಯತೆಗೆ ಭಂಗ ತರುವವರೆಂದೇ ಪರಿಗಣಿಸಬೇಕಾಗುತ್ತದೆ.

೩. ಒಂದೂ ಇಂಗ್ಲಿಷ್ ಅಕ್ಷರದ ಪರಿಚಯವಿಲ್ಲದ ಕಾಲದ ನಮ್ಮ ಪುರಾತನ ಋಷಿಗಳು, ಮನುಷ್ಯ ಆನಂದ–ನೆಮ್ಮದಿಗಳನ್ನು ಸಾಧಿಸುವ ಮೌಲ್ಯಗಳು ಮತ್ತು ಮಾದರಿಗಳನ್ನು ನಮಗೆ ನೀಡಿ ಹೋಗಿರುವಾಗ ಬ್ರಿಟಿಷರು ನಮ್ಮನ್ನು

ಆಳಲು ಬಳಸುತ್ತಿರುವ ಐರೋಪ್ಯ ನಾಗರೀಕತೆಯ ಮೌಲ್ಯಗಳು ಮತ್ತು ಬದುಕಿನ ಕ್ರಮಗಳು ಆತ್ಯಂತಿಕವಾಗಿ ಮಾನವ ಕಲ್ಯಾಣಕ್ಕೆ ಮಾರಕವಾದವು ಎಂಬುದನ್ನು ಮನನ ಮಾಡಿಕೊಳ್ಳಿರಿ.

ಹರಿಲಾಲನ ಆರೋಪ ಪಟ್ಟಿ

ಸುಮಾರು ಎರಡು ತಿಂಗಳ ಕಾಲದ ದ.ಭಾರತದ ಈ ಯಾತ್ರೆಯ ಸಮಯದಲ್ಲಿ ಗಾಂಧಿಯವರಿಗೆ ಯಾವುದೇ ಕಛೇರಿ ಅಥವಾ ವಿಳಾಸ ಎಂಬುವಾವುವೂ ಇರಲಿಲ್ಲವಾದರೂ, ಪತ್ರಿಕೆಗಳಲ್ಲಿ ಅವರನ್ನು ಕುರಿತ ಸುದ್ದಿಗಳನ್ನು ಓದಿದ ದೇಶದ ವಿವಿಧ ಭಾಗಗಳ ಜನರು ಅವರ ಅಭಿಪ್ರಾಯಗಳಿಗೆ ಪ್ರತಿಕ್ರಿಯಿಸುತ್ತಲೋ, ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಲೋ ಅಥವಾ ಅವರನ್ನು ತಮ್ಮ ಊರುಗಳಿಗೆ ಆಹ್ವಾನಿಸುತ್ತಲೋ ಪತ್ರಗಳನ್ನು ಬರೆಯುತ್ತಿದ್ದರು. ಆದರೆ ಈ ಸಂದರ್ಭದಲ್ಲಿ ಅವರಿಗೆ ಬಂದ ಒಂದು ಪತ್ರ ವಿಭಿನ್ನವಾಗಿದ್ದು ಅವರನ್ನು ಸ್ವಲ್ಪಕಾಲವಾದರೂ ವಿಚಲಿತಗೊಳಿಸಿತೆಂದೇ ಹೇಳಬೇಕು. ಆ ಪತ್ರ ಬಂದಿದ್ದುದು, ಅವರ ಹಿರಿಯ ಮಗ ಹರಿಲಾಲನಿಂದ. ಅದು ಒಂದು ಮುದ್ರಿತ ಪತ್ರವಾಗಿದ್ದು, ಮೊದಲು ಸಾರ್ವಜನಿಕ ಬಿಡುಗಡೆಗಾಗಿ ಸಿದ್ಧಪಡಿಸಲಾಗಿದ್ದರೂ ಕೊನೆಗೆ ಗಾಂಧಿ ಮತ್ತು ಅವರ ಆಪ್ತ ಬಂಧುಗಳಿಗಷ್ಟೇ ಕಳಿಸಲಾಗಿತ್ತು.

ಗಾಂಧಿ ತಮ್ಮ ಈ ಯಾತ್ರೆಯ ಆರಂಭದಲ್ಲಿ, ಮುಂಬೈ ಮತ್ತು ರಾಜಕೋಟೆಗೆ ಹೋಗಿದ್ದಾಗ ಹರಿಲಾಲ ಅವರನ್ನು ಭೇಟಿಯಾಗಿ, ಮಗನಾಗಿ ತನ್ನ ಕೆಲವು ಬೇಡಿಕೆಗಳನ್ನು ಅವರ ಮುಂದಿರಿಸಿದ್ದ. ಆದರೆ ತಮ್ಮ ಮತ್ತು ಬಾ ಅವರ ಇಷ್ಟಕ್ಕೆ ವಿರುದ್ಧವಾಗಿ ಮತ್ತು ಚಿಕ್ಕ ವಯಸ್ಸಿನಲ್ಲೇ ತನಗಿಷ್ಟ ಬಂದ ಹೆಣ್ಣನ್ನು ಮದುವೆಯಾಗಿ ನಾಲ್ಕು ಮಕ್ಕಳ ತಂದೆಯೂ ಆಗಿದ್ದ ಹರಿಲಾಲ, ಇನ್ನೂ ಯಾವುದೇ ಪರೀಕ್ಷೆಯಲ್ಲಿ ತೇರ್ಗಡೆಯಾಗದೆ ಕೆಲಸವೊಂದನ್ನು ಹುಡುಕಿಕೊಳ್ಳಲಾಗದ್ದನ್ನು ತಿಳಿದು ಗಾಂಧಿ ಬೇಸರಪಟ್ಟುಕೊಂಡಿದ್ದರು. ಇದನ್ನೆಲ್ಲ ತಾವು ಕ್ಷಮಿಸಿ ಆತನ ಕುಟಂಬಕ್ಕೆ ಆಸರೆ ನೀಡಿ ಸಾಕಲಾರಂಭಿಸಿದ ನಂತರವೂ ತನ್ನ ಮಾತು ಕೇಳದ ಆತನಿಗೆ, ತನ್ನಿಂದ ಇನ್ನು ಮುಂದೆ ಏನನ್ನೂ ನಿರೀಕ್ಷಿಸಬಾರದೆಂದು ಆಗ ಕಟ್ಟುನಿಟ್ಟಾಗಿ ಹೇಳಿಬಂದಿದ್ದರು. ಜೊತೆಗೆ, ದ.ಆಫ್ರಿಕಾದಿಂದ ಅವನು ತಮ್ಮ ಮಾತಿಗೆ ವಿರುದ್ಧವಾಗಿ ವಾಪಸಾದ ನಂತರ ಭಾರತದಲ್ಲಿ ಅವನ ಕುಟುಂಬವನ್ನು ಸಾಕಲು ತಮ್ಮ ಅಣ್ಣ ಲಕ್ಷ್ಮೀದಾಸರು ಮಾಡಿದ್ದ ಖರ್ಚನ್ನೂ ಲೆಕ್ಕ ಹಾಕಿ, ಅದನ್ನು ತಮ್ಮ ಅತ್ತಿಗೆಗೆ ನೀಡಿ ಹರಿಲಾಲನ ಲೆಕ್ಕ ಚುಕ್ತಾ ಮಾಡಿದ್ದರು ಗಾಂಧಿ. ಅದಕ್ಕೆ ಅವನಿಂದ ವ್ಯಕ್ತವಾದ ದೀರ್ಘ ಪ್ರತಿಕ್ರಿಯೆ ಈ ಪತ್ರವಾಗಿತ್ತು.

ಈ ಪತ್ರ ಗಾಂಧಿಯ ಮೇಲೆ ಒಂದು ಆರೋಪ ಪಟ್ಟಿಯನ್ನೇ ಒಳಗೊಂಡಿತ್ತು. ಅವರು ಮಕ್ಕಳಿಗೆ ಮತ್ತು ಪತ್ನಿಗೆ ಪ್ರತ್ಯೇಕ ವ್ಯಕ್ತಿತ್ವ ಇದ್ದು, ಅದರಿಂದಾಗಿ ಅವರದ್ದೇ ಆಶೆ–ಆಶೋತ್ತರಗಳಿರುತ್ತವೆ ಎಂಬುದನ್ನೇ ಅರಿಯದೆ ಅವರನ್ನು ಬಲಾತ್ಕಾರದಿಂದ ದಮನ ಮಾಡಿಟ್ಟಿರುವ ತಂದೆಯೆಂದು ಅದರಲ್ಲಿ ದೂರಲಾಗಿತ್ತು. ಜೊತೆಗೆ ಲೈಂಗಿಕತೆ ಮತ್ತು ಬ್ರಹ್ಮಚರ್ಯಗಳನ್ನು ಕುರಿತ ಗಾಂಧಿಯ ವಿಚಾರಗಳು ಅವ್ಯಾವಹಾರಿಕವೆಂದೂ, ಯಾರನ್ನೂ ಒತ್ತಾಯದ ಮೂಲಕ ಬೈರಾಗಿಯನ್ನಾಗಿ ಮಾಡಲು ಸಾಧ್ಯವಿಲ್ಲವೆಂದೂ

ಆತ ಹೇಳಿದ್ದ. ಆದರೆ ಕೊನೆಯಲ್ಲಿ, ಮರು ಆಲೋಚನೆಗೆ ಈಡಾದವನಂತೆ ಹರಿಲಾಲ, ತನ್ನ ಅಭಿಪ್ರಾಯಗಳು ತಪ್ಪಿರಬಹುದೆಂದೂ, ತಪ್ಪಾಗಿದ್ದರೆ ತಾನು ಸಂತೋಷಪಡುವುದಾಗಿಯೂ, ತನ್ನ ಎದೆಯಾಳದಲ್ಲಿರುವ ಆಸೆಯೆಂದರೆ ತಾನು ತಂದೆಗೆ ತಕ್ಕ ಮಗನಾಗಬೇಕೆಂಬುದೇ ಆಗಿದೆ ಎಂದು ನಿವೇದಿಸಿದ್ದ.

ಮೇಲ್ನೋಟಕ್ಕೆ ಕಾಣುವಂತೆಯೇ ಹರಿಲಾಲ ಭಾವಾವೇಶಕ್ಕೆ ಸಿಕ್ಕಿ ಹರಿದುಹಂಚಿಹೋಗಿದ್ದ ಹೃದಯದೊಂದಿಗೆ ಬರೆದ ಪತ್ರ ಇದಾಗಿತ್ತು. ಗಾಂಧಿಯವರ ಬದುಕಿನ ವಿಶಾಲ ಭಿತ್ತಿ ಮತ್ತು ಉನ್ನತ ಉದ್ದೇಶಗಳ ಚೌಕಟ್ಟಿನಾಚೆ ಇಟ್ಟು ನೋಡಿದಾಗ ಹರಿಲಾಲನ ದೂರುಗಳು ಸಮರ್ಥನೀಯವೇ ಆಗಿದ್ದವು. ಆದರೆ ಗಾಂಧಿ ತೊಡಗಿಕೊಂಡಿದ್ದ ವಿಶ್ವ ಆಯಾಮದ ಸತ್ಯಾನ್ವೇಷಣೆಯ ಸಾಹಸದಲ್ಲಿ ಅವರು ತಮ್ಮ ಕುಟುಂಬದ ಸದಸ್ಯರನ್ನು ಬಿಡಿಬಿಡಿಯಾಗಿ ಗ್ರಹಿಸದೆ ಒಂದು ಘಟಕವಾಗಿ ಪರಿಗಣಿಸಿದ್ದರು. ಹಾಗಾಗಿಯೇ ಅವರು ಹರಿಲಾಲನಿಗೆ ಯಾವುದೇ ಉತ್ತರ ಬರೆಯದೆ, ತಮ್ಮ ಅಭಿಪ್ರಾಯಗಳನ್ನು ತಮ್ಮ ಬಂಧು ನಾರಾಯಣದಾಸ್‌ರೊಂದಿಗೆ ಪತ್ರಮುಖೇನ ಹೀಗೆ ಹಂಚಿಕೊಂಡರು: 'ತಂದೆ–ಮಗನ ನಡುವೆ ಈ ತರಹದ ಸಂವಾದ ಅಪರೂಪ. ಅವನು ಕಲ್ಕತ್ತೆಯವರೆಗೂ ನನ್ನೊಂದಿಗೆ ಬಂದಿದ್ದ, ಯಾವ ಕಹಿ ಮಾತುಗಳನ್ನೂ ಅವನು ಆಡಿರಲಿಲ್ಲ. ಅವನ ಪತ್ರ ತಪ್ಪು ಗ್ರಹಿಕೆಗಳಿಂದ ತುಂಬಿ ಹೋಗಿದೆ. ಅವನ ತಪ್ಪುಗಳು ಮುಂದೆ ಅವನಿಗೇ ಅರ್ಥವಾಗುವುದು.'

ಹರಿಲಾಲ ಹೀಗೆ ತಂದೆಯ ಸ್ವಭಾವಕ್ಕೆ ಪ್ರತಿಕೂಲವಾಗಿ ಪ್ರತಿಕ್ರಿಯಿಸಲಾರಂಭಿಸಿದ್ದರ ಕಾರಣ, ಆತ ಈವರೆಗಿನ ತನ್ನ ಬದುಕಿನ ಬಹುಭಾಗವನ್ನು ಅವರಿಂದ ದೂರವಿದ್ದು ಕಳೆದುದೇ ಆಗಿರಬಹುದು. ಆದರೆ ಗಾಂಧಿ ಪ್ರಕಾರ, ಆತನ ಇಂತಹ ವರ್ತನೆಗೆ ಅವನು, ತಾವು ಇನ್ನೂ ಹದಿಹರೆಯದಲ್ಲಿದ್ದು ಕಾಮಜೀವನದಲ್ಲಿ ಅತಿಯಾಗಿ ವ್ಯಸ್ತವಾಗಿದ್ದಾಗ ಹುಟ್ಟಿದ್ದೇ ಕಾರಣ!

■

೭೩

ಸತ್ಯಾಗ್ರಹ ಆಶ್ರಮದ ಆರಂಭ

ಗಾಂಧಿ ದ.ಭಾರತದ ಪ್ರವಾಸದಿಂದ ಗುಜರಾತ್‌ಗೆ ಹಿಂದಿರುಗಿದವರೇ ತಮ್ಮ ಕುಟುಂಬವೂ ಸೇರಿದಂತಿದ್ದ ೨೫ ಜನರ ಪರಿವಾರಕ್ಕಾಗಿ ಒಂದು ನೆಲೆ ಕಂಡುಕೊಳ್ಳುವತ್ತ ಗಮನ ಹರಿಸಿದರು. ಅವರ ಪ್ರಕಾರ ಅದೊಂದು ಸಮಾಜಸೇವೆ ಮತ್ತು ಸತ್ಯಾಗ್ರಹ ಚಟುವಟಿಕೆಗಳ ಕೇಂದ್ರವಾಗಿರಬೇಕಿತ್ತು. ಅದಕ್ಕೆ ದ.ಆಫ್ರಿಕಾದಲ್ಲಿನ ಫೀನಿಕ್ಸ್ ಆಶ್ರಮ ಒಂದು ಮಾದರಿಯಾಗಿತ್ತು. ಗಾಂಧಿ ತಮ್ಮಲ್ಲಿ ನೆಲೆಸಬಹುದೆಂದು ಹರಿದ್ವಾರದಿಂದ ಸ್ವಾಮಿ ಶ್ರದ್ಧಾನಂದರು ಆಹ್ವಾನ ನೀಡಿದರು. ಕಲ್ಕತ್ತಾದ ಗೆಳೆಯರು ಬಂಗಾಳದ ವೈದ್ಯನಾಥಧಾಮ, ಆಶ್ರಮ ಸ್ಥಾಪನೆಗೆ ಸೂಕ್ತವೆಂದು ಹೇಳಿ ಎಲ್ಲ ಸಹಕಾರದ ಆಶ್ವಾಸನೆ ನೀಡಿದರು. ಆದರೆ ಭಾರತದ ಬೇರೆ ಭಾಗಗಳ ಭಾಷೆ–ಸಂಸ್ಕೃತಿಗಳಿಗೆ ಅಷ್ಟೇನೂ ಪರಿಚಿತರಾಗದ ಗಾಂಧಿ ತಮ್ಮ ಭಾಷೆಯನ್ನಾಡುವ ಜನರ ಮಧ್ಯೆ ಇರಬಯಸಿದರು. ಅದಕ್ಕಾಗಿ ಸಬರ್ಮತಿ ನದೀ ತೀರದ ಅಹಮದಾಬಾದನ್ನು ಆಯ್ಕೆ ಮಾಡಿದರು. ಅದಕ್ಕೆ ಇನ್ನೊಂದು ಕಾರಣವೂ ಇತ್ತು. ಅದು ಹತ್ತಿ ಗಿರಣಿ ಮತ್ತು ಇತರ ಸಣ್ಣಪುಟ್ಟ ಉದ್ಯಮಗಳ ಕೇಂದ್ರವಾಗಿದ್ದು, ತಮ್ಮ ಆಶ್ರಮವನ್ನು ಸದ್ಭಾವನೆಯಿಂದ ಪೋಷಿಸಬಲ್ಲ ಶ್ರೀಮಂತ ಉದ್ಯಮಿಗಳು ಅಲ್ಲಿದ್ದರು. ಅದಕ್ಕೆ ತಕ್ಕಂತೆಯೇ ಮಂಗಳದಾಸ್ ಗಿರಿಧರ ದಾಸ್ ಎಂಬ ಶ್ರೀಮಂತ ಉದ್ಯಮಿಯೊಬ್ಬರು ಆಶ್ರಮದ ಖರ್ಚುವೆಚ್ಚಗಳನ್ನು ನೋಡಿಕೊಳ್ಳಲು ಮುಂದೆ ಬಂದರು. ಗಾಂಧಿ ತಮ್ಮ ಆಶ್ರಮದ ನೀಲನಕ್ಷೆಯೊಂದನ್ನು ತಯಾರಿಸಿ, ಅದಕ್ಕೆ ಬೇಕಾದ ಎಲ್ಲ ಅಗತ್ಯಗಳ ಪಟ್ಟಿ ಮಾಡಿದರು. ಅದರಲ್ಲಿ ಅಡಿಗೆ ಪಾತ್ರೆ–ಸಲಕರಣೆಗಳಿಂದ ಹಿಡಿದು ದುಡಿಮೆಗೆ ಬೇಕಾದ ಬೇಸಾಯದ, ಬಡಗಿತನದ, ಚಮ್ಮಾರಿಕೆಯ ಸಲಕರಣೆಗಳು, ಮಸಿ ಕುಡಿಕೆಗಳು, ಲೇಖನಿಗಳು ಮತ್ತು ಭೂಪಟಗಳವರೆಗಿನ ವಸ್ತುಗಳು ಸೇರಿದ್ದವು. ನಂತರ ಆಹಾರ ಧಾನ್ಯ ಮತ್ತು ತರಕಾರಿ–ಹಣ್ಣುಗಳ ಖರ್ಚು. ಒಟ್ಟಿನಲ್ಲಿ ೨೫–೩೦ ಜನರಿರುವ ಆಶ್ರಮದ ವಾರ್ಷಿಕ ಖರ್ಚು, ವರ್ಷಕ್ಕೆ ಆರು ಸಾವಿರ ರೂ.ಗಳೆಂದು ಲೆಕ್ಕ ಹಾಕಲಾಯಿತು. ಇದರ ಜವಾಬ್ದಾರಿ ಹೊರಲು ಮಂಗಳದಾಸ್ ಒಪ್ಪಿದರಾದರೂ ಆಶ್ರಮಕ್ಕೆ ಬೇಕಾದ ಹತ್ತು ಎಕರೆಗಳ ವಿಶಾಲ ಭೂಮಿ ತಕ್ಷಣಕ್ಕೆ ಗಾಂಧಿಗೆ ಸಿಗಲಿಲ್ಲ. ಆಗ ಈ ಸಮಸ್ಯೆಯನ್ನು ತಾತ್ಕಾಲಿಕವಾಗಿಯಾದರೂ ಪರಿಹರಿಸಲು ಮುಂದೆ ಬಂದವರು ಜೀವನಲಾಲ್ ದೇಸಾಯಿ ಎಂಬ ಬ್ಯಾರಿಸ್ಟರ್. ಅವರು ಸಬರ್ಮತಿ ನದೀ ತೀರದ ಕೊಚ್ರಾಬ್ ಪ್ರದೇಶದಲ್ಲಿ, ದೊಡ್ಡ ಕೈತೋಟ ಮತ್ತು ಹತ್ತಕ್ಕೂ ಹೆಚ್ಚು ಕೋಣೆಗಳಿದ್ದ ಹೆಂಚಿನ ಭಾವಣಿಯ ದೊಡ್ಡ ಬಂಗಲೆಯೊಂದನ್ನು ಆಶ್ರಮಕ್ಕಾಗಿ ನೀಡಿದರು. ೧೯೧೫

ರ ಮೇ ೨೫ರಂದು ಗಾಂಧಿ ಪರಿವಾರ ಅಲ್ಲಿಗೆ ಬಂದು ನೆಲೆಸಿತು. ಅದನ್ನು ಕೆಲವರು ಸೇವಾಶ್ರಮವೆಂದೂ ಮತ್ತು ಕೆಲವರು ತಪೋವನವೆಂದೂ ಕರೆಯಬಯಸಿದರಾದರೂ, ಅದು ಗಾಂಧಿ ರಚಿಸಿದ ನೀತಿ ಸಂಹಿತೆಯೊಂದಿಗೆ 'ಸತ್ಯಾಗ್ರಹ ಆಶ್ರಮ'ವೆಂದು ಅಧಿಕೃತವಾಗಿ ಕರೆಯಲ್ಪಟ್ಟು ಪೂರ್ಣ ಚಟುವಟಿಕೆಗಳೊಂದಿಗೆ ವಿಧ್ಯುಕ್ತವಾಗಿ ಆರಂಭವಾದದ್ದು ಜುಲೈ ೨೫ರಂದು. ಆಶ್ರಮವಾಸಿಗಳು ಗಾಂಧಿಯವರನ್ನು ಪ್ರೀತಿಯಿಂದ 'ಬಾಪು' ಎಂದು ಕರೆಯಲಾರಂಭಿಸಿದರು.

ಆಶ್ರಮದ ನೀತಿ ಸಂಹಿತೆ

ಮೊದಲಿಗೆ ಅಲ್ಲಿ ನೆಲೆಸಿದ ೨೫ ಜನರ ಪರಿವಾರದಲ್ಲಿ ೧೩ ಜನ ತಮಿಳರಾಗಿದ್ದರೆ, ಮಿಕ್ಕವರು ದೇಶದ ಬೇರೆ ಬೇರೆ ಭಾಗಗಳಿಗೆ ಸೇರಿದವರು. ಅವರೆಲ್ಲರೂ ಸರ್ವಧರ್ಮ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳಬೇಕಿತ್ತು ಮತ್ತು ಎಲ್ಲರಿಗೂ ಒಂದು ಸಾಮಾನ್ಯ ಅಡುಗೆಮನೆ ಮತ್ತು ಅಡುಗೆ ಇರುತ್ತಿತ್ತು. ದೊಡ್ಡವರು ನಿಗದಿತ ಅವಧಿಗಳಲ್ಲಿ ತಮ್ಮ ಆಯ್ಕೆಯ ಕಸುಬಿನಲ್ಲಿ ತೊಡಗಬೇಕಾಗಿತ್ತು. ಮಕ್ಕಳ ದಿನದ ಅವಧಿ ಶಿಕ್ಷಣ ಮತ್ತು ಶ್ರಮಜೀವನದ ಮಧ್ಯೆ ಹಂಚಿಕೆಯಾಗಿತ್ತು. ಸುಳ್ಳು ಹೇಳದಿರುವುದು, ಕದಿಯದಿರುವುದು, ತನಗೆ ಅಗತ್ಯವಿಲ್ಲದ್ದನ್ನು ಬಯಸದಿರುವುದು, ಯಾವುದರ ಮೇಲೂ ಒಡೆತನದ ಭಾವ ಇಟ್ಟುಕೊಳ್ಳದಿರುವುದು, ನಾಲಗೆ ರುಚಿಗಾಗಿ ಹಾತೊರೆಯದಿರುವುದು, ಸ್ಥಳೀಯ ವಸ್ತುಗಳನ್ನೇ ಬಳಸುವುದು, ಯಾವುದಕ್ಕೂ ಹೆದರದಿರುವುದು ಮತ್ತು ಬ್ರಹ್ಮಚರ್ಯ ಆಶ್ರಮದ ನೀತಿಸಂಹಿತೆಯ ಮುಖ್ಯಾಂಶಗಳಾಗಿದ್ದವು. ಇದನ್ನು ಕೇಳಿ ಕೆಲವರು ಗಾಂಧಿಯೇನಾದರೂ ಭಾರತವನ್ನು ಸಾಧು-ಸನ್ಯಾಸಿನಿಯರ ದೇಶ ಮಾಡಲು ಹೊರಟಿದ್ದಾರೆಯೇ? ಎಂದು ಚೇಷ್ಟೆ ಮಾಡಿದರು. ಆದರೆ ತಮ್ಮ ಆಶ್ರಮದ ವಾಸಿಗಳಿಗೆ ಇದು ಕಡ್ಡಾಯ ಎಂದು ನಿರ್ದಾಕ್ಷಿಣ್ಯವಾಗಿ ಹೇಳಿದರು. ಆದರೂ ಒಂದೆರಡು ತಿಂಗಳಲ್ಲೇ ಆಶ್ರಮವಾಸಿಗಳ ಸಂಖ್ಯೆ ಹೆಚ್ಚತೊಡಗಿದ್ದಂತೂ ನಿಜ.

ನಾಲ್ಕು ವರ್ಷ ವಯಸ್ಸು ಮೇಲ್ಪಟ್ಟ ಮಕ್ಕಳನ್ನು ಮಾತ್ರ ಆಶ್ರಮಕ್ಕೆ ಸೇರಿಸಿಕೊಳ್ಳಲಾಗುತ್ತಿತ್ತು. ಒಮ್ಮೆ ಆಶ್ರಮವಾಸಿಗಳಾದರೆ ಆ ಮಕ್ಕಳ ಮೇಲಿನ ಎಲ್ಲ ಹತೋಟಿಯನ್ನೂ ಪೋಷಕರು ಆಶ್ರಮಕ್ಕೆ ಬಿಟ್ಟುಕೊಡಬೇಕಾಗುತ್ತಿತ್ತು. ಶಿಕ್ಷಣ, ಭಾರತೀಯ ಭಾಷೆಗಳಲ್ಲಿ ಇರುತ್ತಿತ್ತು. ಇಂಗ್ಲಿಷನ್ನು ಎರಡನೆಯ ಭಾಷೆಯಾಗಿ ಕಲಿಸುವ ಏರ್ಪಾಡಿತ್ತು. ಹತ್ತು ವರ್ಷಗಳ ಈ ಶಿಕ್ಷಣ ಕ್ರಮದಲ್ಲಿ ಮುಖ್ಯವಾಗಿ ಭಾಷೆ, ಗಣಿತ, ಇತಿಹಾಸ, ಭೂಗೋಳ, ಅರ್ಥಶಾಸ್ತ್ರಗಳ ಜೊತೆಗೆ ಬೇಸಾಯ, ಬಡಗಿತನ, ಚಮ್ಮಾರಿಕೆ, ನೂಲುವುದು, ನೇಯ್ಗೆ ಮುಂತಾದ ಕೈಕಸುಬುಗಳ ಪರಿಚಯ ಮಾಡಿಕೊಡಲಾಗುತ್ತಿತ್ತು. ಈ ಪಠ್ಯಕ್ರಮದ ಅಭ್ಯಾಸದ ಸಂದರ್ಭದಲ್ಲಿ ವಿದ್ಯಾರ್ಥಿಯು ಮುಂದೆ ತನ್ನ ಜೀವನೋಪಾಯದ ಮಾರ್ಗವಾವುದು ಎಂದು ಚಿಂತಿಸಬಾರದು ಎಂದು ಹೇಳಲಾಗುತ್ತಿತ್ತು. ಮಕ್ಕಳು ಹತ್ತು ವರ್ಷದ ಪಠ್ಯಕ್ರಮ ಪೂರೈಸಿದೊಡನೆ ನೀತಿ ಸಂಹಿತೆಯ ವಚನ ಸ್ವೀಕರಿಸಿ ಆಶ್ರಮದ ಕಾರ್ಯಕರ್ತನಾಗಿ ಮುಂದುವರೆಯಬಹುದು. ವಚನಬದ್ಧರಾಗಲು ಇಷ್ಟಪಡದವರು ಆಶ್ರಮ ಬಿಟ್ಟು ಹೋಗಬಹುದೆಂಬ ನಿಯಮವನ್ನು ರೂಪಿಸಲಾಗಿತ್ತು.

ಅಸ್ಪೃಶ್ಯ ಕುಟುಂಬದ ಆಗಮನದ ಅಗ್ನಿ ಪರೀಕ್ಷೆ

ಆಶ್ರಮ ಈ ನೀತಿಸಂಹಿತೆಯೊಂದಿಗೆ ಬೆಳೆಯುತ್ತಿದ್ದಾಗಲೇ ಅದು ಒಂದು ಸಾಮಾಜಿಕ ಬಿಕ್ಕಟ್ಟನ್ನು ಎದುರಿಸಬೇಕಾಯಿತು. ಸೆಪ್ಟೆಂಬರ್ ತಿಂಗಳ ಒಂದು ದಿನ ಗಾಂಧಿಯವರಿಗೆ ತಮ್ಮ ಗೆಳೆಯ ಅಮೃತಲಾಲ್ ಥಕ್ಕರ್ ಅವರಿಂದ ಒಂದು ಪತ್ರ ಬಂತು. ಅದರಲ್ಲಿ, ಅಸ್ಪೃಶ್ಯ ಕುಟುಂಬವೊಂದು ಸತ್ಯಾಗ್ರಹ ಆಶ್ರಮ ಸೇರಲು ಬಯಸಿದೆ ಎಂದು ತಿಳಿಸಲಾಗಿತ್ತು. ಮುಂದೆ ಗಾಂಧಿಯವರೇ ಬರೆದುಕೊಂಡಿರುವಂತೆ ಅವರ ಎದೆ ಒಂದು ಕ್ಷಣ ಢವಢವ ಹೊಡೆದುಕೊಂಡಿತು. ಅಸ್ಪೃಶ್ಯರು ಸವರ್ಣೀಯರೊಂದಿಗೆ ಸಹ-ವಾಸಿಗಳಾಗುವುದು ಆ ಕಾಲಕ್ಕೆ ಕಲ್ಪನಾತೀತವಾಗಿತ್ತು. ಬಹುಪಾಲು ಆಶ್ರಮವಾಸಿಗಳಿಗೆ ಅಸ್ಪೃಶ್ಯರ ಬಗ್ಗೆ ಮಾನಸಿಕ ಸಹಾನುಭೂತಿ ಇತ್ತು. ಆದರೆ ಸಹ-ವಾಸ? ಗಾಂಧಿಗೆ ತಕ್ಷಣ ತಾವು ಭಾರತಕ್ಕೆ ಬಂದ ಕೆಲವೇ ದಿನಗಳಲ್ಲಿ ದ.ಆಫ್ರಿಕಾದಿಂದ ಲಾಜರಸ್ ಎಂಬುವವರು ಬರೆದಿದ್ದ ಪತ್ರ ನೆನಪಿಗೆ ಬಂತು. ಲಾಜರಸ್, ದ.ಆಫ್ರಿಕಾದಲ್ಲಿ 'ಮಹಾಯಾತ್ರೆ' ಹೊರಡುವ ಮುನ್ನ ತಮ್ಮ ಸತ್ಯಾಗ್ರಹಿ ಕಾರ್ಮಿಕರಿಗೆ ಮಲಗಲು ಜಾಗವಿಲ್ಲದಾಗ ಅವರಿಗೆ ತನ್ನ ವಿಶಾಲ ಬಂಗಲೆಯ ಆವರಣದಲ್ಲಿ ಜಾಗ ನೀಡಿದ್ದಲ್ಲದೆ ಆಹಾರ ವ್ಯವಸ್ಥೆ ಮಾಡಿದ್ದ ಭಾರತೀಯ ಮೂಲದ 'ಅಸ್ಪೃಶ್ಯ' ಜಾತಿಯಿಂದ ಮತಾಂತರವಾಗಿದ್ದ ಕ್ರಿಶ್ಚಿಯನ್. ಆತ ಈ ಪತ್ರದಲ್ಲಿ ಭಾರತೀಯ ಅಸ್ಪೃಶ್ಯರ ದಾರುಣ ಅನುಭವಗಳನ್ನು ಹೇಳುತ್ತಾ, ಈ ಸಮಸ್ಯೆ ಪರಿಹಾರವಾಗದೆ ಬ್ರಿಟಿಷ್ ಪ್ರಭುತ್ವವನ್ನು ಎದುರಿಸಲಾಗದು ಎಂದು ಬರೆದಿದ್ದ.

ಗಾಂಧಿಯವರಿಗೆ ಈ ಮಾತು ನಿಜವೆನಿಸಿತ್ತು. ಗಾಂಧಿ ಅಸ್ಪೃಶ್ಯ ಕುಟುಂಬವನ್ನು ಆಶ್ರಮಕ್ಕೆ ಸೇರಿಸಿಕೊಳ್ಳಲು ನಿಶ್ಚಯಿಸಿದರು. ದೇಢ್ ಜನಾಂಗಕ್ಕೆ ಸೇರಿದ ಆ ಕುಟುಂಬ ದೂದಾಭಾಯಿ, ಆತನ ಪತ್ನಿ ಧುನಿಬೆನ್ ಹಾಗೂ ಅವರ ಹೆಣ್ಣು ಮಗು ಲಕ್ಷ್ಮಿ, ಸೆಪ್ಟೆಂಬರ್ ೧೧ರಂದು ಆಶ್ರಮಕ್ಕೆ ಬಂದರು. 'ಸತ್ಯಾಗ್ರಹ ಆಶ್ರಮ'ದ ಮೊದಲ ಸತ್ಯಾಗ್ರಹ ಪ್ರಯೋಗವನ್ನು, ಗಾಂಧಿ, ಆಶ್ರಮವಾಸಿಗಳ ಮೇಲೆಯೇ ಬಳಸಬೇಕಾಯಿತು. ಮುನಿಸಿಕೊಂಡ ಪತ್ನಿ ಬಾ ಅವರಿಗೆ ಅಸ್ಪೃಶ್ಯ ಕುಟುಂಬದೊಂದಿಗೆ ಬಾಳಲಾಗದಿದ್ದರೆ ಒಳ್ಳೆಯ ಸ್ನೇಹಿತರಾಗಿ ಬೇರ್ಪಡೋಣ ಎಂದರು. ಅಸ್ಪೃಶ್ಯ ಕುಟುಂಬ, ಆಶ್ರಮದ ಬಾವಿಯಿಂದ ನೀರು ತರುವುದನ್ನು ಕೆಲವರು ತಡೆದಾಗ, ಗಾಂಧಿ ಆಶ್ರಮದ ನೀರು ಕುಡಿಯುವುದನ್ನು ನಿಲ್ಲಿಸುವುದಾಗಿ ಹೇಳಿದರು. ಕೊನೆಗೂ ಆಶ್ರಮವಾಸಿಗಳು ಗೊಣಗುತ್ತಲೇ ದಾರಿಗೆ ಬಂದರು. ಆದರೆ ಆ ವೇಳೆಗೆ ಈ ವಿಷಯ ಅಹಮದಾಬಾದ್ ನಗರದ ಜನರ ಮಧ್ಯೆ ಚರ್ಚೆಯ, ವಿವಾದದ ವಿಷಯವಾಗಿದ್ದು, ಆಶ್ರಮದ ತಿಂಗಳ ಖರ್ಚು ನೋಡಿಕೊಳ್ಳುತ್ತಿದ್ದ ಮಂಗಳದಾಸ್, ಇನ್ನು ಮುಂದೆ ಆಶ್ರಮಕ್ಕೆ ಹಣ ಕೊಡಲಾಗುವುದಿಲ್ಲವೆಂದು ಗಾಂಧಿಗೆ ಹೇಳಿಕಳಿಸಿದರು. ಮೂರೇ ತಿಂಗಳಲ್ಲಿ ಆಶ್ರಮದ ಭವಿಷ್ಯ ಬಿಕ್ಕಟ್ಟಿಗೆ ಸಿಕ್ಕಿತ್ತು. ಗಾಂಧಿಗೆ ಇದೊಂದು ಅಗ್ನಿಪರೀಕ್ಷೆಯಾಗಿತ್ತು. ಅವರು ತಮ್ಮ ಸಹವರ್ತಿಗಳಿಗೆ, ದೇವರ ಮೇಲೆ ಭಾರ ಹಾಕಿ ಸಹನೆಯಿಂದ ಇರಲು ಹೇಳಿದರು.

ಗಾಂಧಿ ನಂಬಿದ್ದ ದೈವ ಅವರನ್ನು ಕೈಬಿಡಲಿಲ್ಲ. ನಗರದಲ್ಲಿ ವಿವಾದವೆಬ್ಬಿಸಿದ್ದ ವಿಷಯ ತರುಣ ಉದ್ಯಮಿಯೊಬ್ಬರ ಕುತೂಹಲ ಕೆರಳಿಸಿತ್ತು. ಗಾಂಧಿಯ ಬಗ್ಗೆ ಕೇಳಿದ್ದ, ಮತ್ತು ಒಮ್ಮೆ ಮಾತ್ರ ಅವರನ್ನು ಕಂಡಿದ್ದ ಅಂಬಾಲಾಲ್ ಸಾರಾಭಾಯಿ ಎಂಬ ಆ

ಉದ್ಯಮಿ ಒಂದು ದಿನ ಆಶ್ರಮದ ಬಳಿ ಬಂದು ಗಾಂಧಿಯವರಿಗೆ ಕರೆ ಕಳಿಸಿ, ಅವರ ಕೈಗೆ ಹಣದ ಥೈಲಿಯೊಂದನ್ನು ಇಟ್ಟು ಹೊರಟುಹೋದ. ಆ ಥೈಲಿಯಲ್ಲಿ ಹದಿಮೂರು ಸಾವಿರ ರೂಪಾಯಿಗಳಿದ್ದು, ಅದು ಆಶ್ರಮವನ್ನು ಎರಡು ವರ್ಷಗಳ ಕಾಲ ನಡೆಸಲು ಸಾಕಾಗುವಷ್ಟಿತ್ತು.

ಚರಕಕ್ಕಾಗಿ ಹುಡುಕಾಟ–ಖಾದಿಯ ಉದಯ

ಇದರಿಂದ ಸ್ಫೂರ್ತಿ ಪಡೆದಂತೆ ಗಾಂಧಿ ಆಶ್ರಮದಲ್ಲಿ ಕೈಕಸುಬಿನ ಪ್ರಯೋಗಗಳನ್ನು ಶುರು ಮಾಡಿದ್ದರು. ಅವರ ಚಿಂತನೆಯಂತೆ, ಅಂದು ದರಿದ್ರ ಸ್ಥಿತಿ ತಲುಪಿದ್ದ ಸಾಮಾನ್ಯ ಭಾರತೀಯನಿಗೆ ಅತಿ ಕಡಿಮೆ ವೆಚ್ಚದಲ್ಲಿ ಕೆಲಸ ಕೊಡಬೇಕಿತ್ತು. ಆಗ ಅವರಿಗೆ ಹೊಳೆದದ್ದು, ನೂಲುವ ಮತ್ತು ನೇಯುವ ಕಸುಬಿನ ಪುನರುಜ್ಜೀವನ. ಈ ಕಸುಬುಗಳು, ಗಿರಣಿಗಳು ಬಂದು ನಶಿಸಿಹೋಗಿ ನಮ್ಮ ಗ್ರಾಮೀಣರನ್ನು ದರಿದ್ರ ಸ್ಥಿತಿಗೆ ನೂಕಿತ್ತು. ಆದರೆ ನೂಲುವ ಮತ್ತು ನೇಯುವ ಕೌಶಲ್ಯ ಮತ್ತು ಸಲಕರಣೆಗಳೇ ಮೂಲೆ ಸೇರಿ ಅವನ್ನು ಆಶ್ರಮದಲ್ಲಿ ಸ್ಥಾಪಿಸುವುದೇ ಕಷ್ಟವೆನಿಸಿತು. ಆಗ ತಾವು 'ಹಿಂದ್ ಸ್ವರಾಜ್'ನಲ್ಲಿ, ಭಾರತದ ಆರ್ಥಿಕ ಪುನರುಜ್ಜೀವನದ ಮಹಾಸಾಧನವೆಂದು ಹೆಸರಿಸಿದ್ದ ಚರಕಾವನ್ನು ತಾವು ಎಲ್ಲೋ ನೋಡಿದ ನೆನಪಿನ ಆಧಾರದ ಮೇಲೆ ಮಾತ್ರ ಪ್ರಸ್ತಾಪಿಸಿದ್ದೆ ಎನ್ನುವ ಗಾಂಧಿ, ಈಗ ಅದನ್ನು ಹುಡುಕುತ್ತಾ ಹೊರಟರು. ಈ ಮಧ್ಯೆ ಪುರಾತನ ರಾಟೆಗಳು, ಹರುಕು ಮುರುಕು ಮಗ್ಗಗಳ ಮೇಲೆ ಕೆಲಸ ಆರಂಭವಾಯಿತು. ಗಾಂಧಿ ಆಶ್ರಮವಾಸಿಗಳನ್ನು ಹೆಚ್ಚು ಸಾಹಸಿಗಳನ್ನಾಗಿ ಮಾಡಲು, ಅವರು ತಾವೇ ನೂತ ಬಟ್ಟೆಯನ್ನು ಮಾತ್ರ ಧರಿಸಬೇಕೆಂಬ ನಿಯಮ ಮಾಡಿದರು. ಇದರಿಂದಾಗಿ ಹಲವರು ಹೊರಕ್ಕೆ ಹೋಗಿ ನೂಲುವ ಮತ್ತು ನೇಯುವ ಹೊಸ ಉಪಾಯಗಳನ್ನು ಕಲಿತುಬಂದರು. ಆದರೆ ಚರಕಾ ಸಿಕ್ಕಿದ್ದು ಮಾತ್ರ ಗಾಂಧಿಗೇ.

ಒಮ್ಮೆ ಗಾಂಧಿ ಬ್ರೋಚ್ ಎಂಬ ಊರಿಗೆ ಶೈಕ್ಷಣಿಕ ಶಿಬಿರಕ್ಕೆಂದು ಹೋದಾಗ, ಅಲ್ಲಿ ಅಕಸ್ಮಾತ್ತಾಗಿ ಪರಿಚಯವಾದ ಗಂಗಾಬೆನ್ ಎಂಬ ಓರ್ವ ಬಹುದಿಟ್ಟ ದಲಿತ ಸಾಮಾಜಿಕ ಕಾರ್ಯಕರ್ತೆ, ಗಾಂಧಿಯವರ ಹುರುಪು ಮತ್ತು ಬದ್ಧತೆಗಳನ್ನು ಗಮನಿಸಿ, ಚರಕಾ ಆಧಾರಿತ ವಸ್ತ್ರೋದ್ಯಮದ ಅವಶೇಷಗಳನ್ನು ಪತ್ತೆ ಹಚ್ಚುವುದಾಗಿ ಮಾತುಕೊಟ್ಟಳು. ಅದರಂತೆ ಆಕೆ ಅನತಿ ಕಾಲದಲ್ಲೇ ಬರೋಡಾ ಸಮೀಪದ ವಿಜಾಪುರ ಎಂಬ ಹಳ್ಳಿಯಲ್ಲಿ ಚರಕಾ ಮೂಲದ ವಸ್ತ್ರೋದ್ಯೋಗದಲ್ಲಿ ಕುಶಲಿಗಳಾಗಿದ್ದ ಒಂದು ಆದಿವಾಸಿ ಸ್ತ್ರೀಸಮೂಹವನ್ನು ಗುರುತಿಸಿದಳು. ಆ ಸ್ತ್ರೀ ಸಮುದಾಯ ತಮಗೆ ಹತ್ತಿ ಹಂಜಿಗಳನ್ನು ಒದಗಿಸುವುದಾದರೆ ಮತ್ತು ತಾವು ನೂತ ನೂಲೆಲ್ಲವನ್ನೂ ಕೊಳ್ಳುವುದಾದರೆ, ತಾವು ತಮ್ಮ ಅಟ್ಟಗಳಿಂದ ಚರಕಾಗಳನ್ನು ಇಳಿಸಿ ನೂಲನ್ನು ನೂತು ಕೊಡುವುದಾಗಿ ಹೇಳಿತು. ಖುಷಿಯಾದ ಗಾಂಧಿ, ಅವರನ್ನು ಆಶ್ರಮಕ್ಕೆ ಕರೆಸಿ, ಅವರಿಗೆ ಅಹಮದಾಬಾದ್‌ನ ಹತ್ತಿಗಿರಣಿಗಳಿಂದ ಹತ್ತಿಹಂಜಿಗಳನ್ನು ತರಿಸಿ ಒದಗಿಸಿದರು. ಆಶ್ರಮದಲ್ಲಿ ಈಗ ನೂಲುವ ಮತ್ತು ನೇಯುವ ಕೆಲಸ ಪೂರ್ಣ ಪ್ರಮಾಣದಲ್ಲಿ ಆರಂಭವಾಯಿತು. ಆಶ್ರಮವಾಸಿಗಳು ಈ ಸ್ತ್ರೀ ಸಮೂಹದಿಂದ ಕೌಶಲ್ಯಗಳನ್ನು ಕಲಿತು, ಸುಧಾರಿತ ರಾಟೆ ಅಥವಾ ಚರಕಾ

ಮತ್ತು ಸುಲಭ ತಂತ್ರಜ್ಞಾನದ ಮಗ್ಗಗಳ ಕಸುಬು ಆರಂಭಿಸಿದರು. ಇದರಲ್ಲಿ ನೆರವಾದವರು ಯಂತ್ರವಿದ್ಯೆಯಲ್ಲಿ ಚುರುಕಾಗಿದ್ದ ಮಗನ್‌ಲಾಲ್. ಗಾಂಧಿಯವರ ಸ್ವದೇಶಿ ಆಂದೋಲನದಲ್ಲಿ ಜೆ.ಸಿ. ಕುಮಾರಪ್ಪ ಅವರೊಂದಿಗೆ ಬಹುದೊಡ್ಡ ಪಾತ್ರ ವಹಿಸಿದವರು ಮಗನ್‌ಲಾಲರೇ ಎಂಬುದನ್ನೂ ಇಲ್ಲಿ ಸೂಚಿಸುವುದು ಸೂಕ್ತ.

ಗಾಂಧಿ ಆಶ್ರಮದಲ್ಲಿ ತಯಾರಾದ ಒಂದು ಗಜ ಹತ್ತಿಬಟ್ಟೆಗೆ ಆಗ ಖರ್ಚಾದ ಹಣ ಹದಿನೇಳು ಆಣೆಗಳು. ಅಂದರೆ ಒಂದು ರೂಪಾಯಿ ಆರು ಪೈಸೆ. ಗಾಂಧಿ ಆಶ್ರಮದಲ್ಲಿ ಖಾದಿ ಉದಯವಾಗಿತ್ತು. ೧೯೧೫ರ ಡಿಸೆಂಬರ್‌ನಲ್ಲಿ ಮುಂಬೈನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ ಗಾಂಧಿ, ದ.ಆಫ್ರಿಕಾದಲ್ಲಿನ ಭಾರತೀಯರ ಸ್ಥಿತಿ ಸುಧಾರಿಸಿಲ್ಲದ್ದರ ಬಗ್ಗೆ ಒಂದು ಖಂಡನಾ ನಿರ್ಣಯ ಮಂಡಿಸಿ ಅನುಮೋದನೆ ಪಡೆದರು. ಇದರೊಂದಿಗೆ ಅವರು ಭಾರತದಲ್ಲಿ ಒಂದು ವರ್ಷದ ವಾಸವನ್ನೂ ಪೂರೈಸಿದ್ದರು.

■

೬೪
ಬನಾರಸ್‌ನಲ್ಲಿ ಬಂಡಾಯ

ಗಾಂಧಿ ತಮ್ಮ ಗುರು ಗೋಖಲೆಯವರ ಸೂಚನೆಯಂತೆ ಭಾರತವನ್ನು ಸುತ್ತಿದ್ದರು; ಅದೂ ಮೂರನೇ ದರ್ಜೆ ರೈಲು ಡಬ್ಬಿಯಲ್ಲಿ, ಅತಿ ಸಾಮಾನ್ಯ ಭಾರತೀಯರೊಂದಿಗೆ, ಅವರ ನಡೆ ನುಡಿಗಳನ್ನು ಹತ್ತಿರದಿಂದ ಗಮನಿಸುತ್ತಾ. ಆದರೆ ಯಾವುದರ ಬಗ್ಗೆಯೂ ಬಾಯಿ ಬಿಡದೆ. ಅವರು ಮಾತಾಡಿದ್ದುದು, ತಾವು ಭೇಟಿಕೊಟ್ಟ ಕಡೆ ನೀಡಿದ ಸ್ವಾಗತ-ಸನ್ಮಾನಗಳಿಗೆ ಉತ್ತರಿಸುತ್ತಾ, ಸಾಮಾಜಿಕ ವಿಷಯಗಳ ಬಗ್ಗೆ. ಆದರೀಗ ಅವರು ಭಾರತದ ರಾಜಕೀಯದ ಬಗ್ಗೆ ಬಾಯಿ ಬಿಡುವ ಕಾಲ ಬಂದಿತ್ತು. ಅದಕ್ಕೆ ಬನಾರಸ್‌ನಲ್ಲಿ ವಿಶ್ವವಿದ್ಯಾಲಯವೊಂದರ ಶಂಕುಸ್ಥಾಪನಾ ಮಹೋತ್ಸವಕ್ಕೆ ಅನಿಬೆಸೆಂಟ್‌ರವರು, ಅವರನ್ನು ಓರ್ವ ಭಾಷಣಕಾರರನ್ನಾಗಿ ಆಹ್ವಾನಿಸಿದಾಗ ಒದಗಿ ಬಂತು.

ಹುಟ್ಟಿನಿಂದ ಇಂಗ್ಲಿಷ್ ಮಹಿಳೆಯಾಗಿದ್ದ ಅನಿಬೆಸೆಂಟ್, ಭಾರತೀಯ ಧರ್ಮ-ಸಂಸ್ಕೃತಿಗಳಿಗೆ ಮಾರುಹೋಗಿ ಥಿಯೋಸಫಿ ಎಂಬ ಹಿಂದೂ ಧರ್ಮದ ಒಂದು ಹೊಸ ಮಾಯಾ ಪಂಥವನ್ನು ರೂಪಿಸಿದ್ದರಲ್ಲದೆ, ಕಾಂಗ್ರೆಸ್‌ನ ಓರ್ವ ಸಕ್ರಿಯ ನಾಯಕಿಯೂ ಆಗಿ ಭಾರತಕ್ಕೆ ಸ್ವಯಮಾಡಳಿತ ಕೊಡಿಸುವ ಪ್ರಯತ್ನದಲ್ಲೂ ತೊಡಗಿ ಪೂರ್ಣ ಭಾರತೀಯರೇ ಆಗಿದ್ದರು. ದಾದಾಭಾಯಿ ನವರೋಜಿ ಅಧ್ಯಕ್ಷತೆಯಲ್ಲಿ ಅವರು 'ಹೋಂ ರೂಲ್ ಲೀಗ್' ಎಂಬ ಸಂಸ್ಥೆಯನ್ನೂ ಕಟ್ಟಿದ್ದರು. ಅವರು ೧೮೯೨ರಲ್ಲಿ ಭಾರತದ ಅತಿ ಪುರಾತನ ನಗರವೆನಿಸಿದ, ಗಂಗಾನದಿ ತೀರದಲ್ಲಿರುವ ಬನಾರಸ್‌ನಲ್ಲಿ (ವಾರಾಣಸಿ-ಕಾಶಿ) ಒಂದು ಶಾಲೆ ತೆರೆದಿದ್ದರು. ಅದು ಸಂಸ್ಕೃತ ವಿದ್ವಾಂಸರಾದ ಮದನಮೋಹನ ಮಾಳವೀಯರ ಪ್ರಯತ್ನಗಳಿಂದಾಗಿ, 'ಹಿಂದು ಸೆಂಟ್ರಲ್ ಕಾಲೇಜ್' ಎಂಬ ಹೆಸರಿನಲ್ಲಿ ಉನ್ನತ ಶಿಕ್ಷಣದ ಒಂದು ದೊಡ್ಡ ವಿದ್ಯಾಸಂಸ್ಥೆಯಾಗಿ ಬೆಳೆದಿತ್ತು. ಅದು ಈಗ-೧೯೧೬ರ ಹೊತ್ತಿಗೆ- 'ಬನಾರಸ್ ಹಿಂದೂ ವಿಶ್ವವಿದ್ಯಾಲಯ' ಎಂಬ ಹೆಸರಿನೊಂದಿಗೆ ಒಂದು ವಿಶ್ವವಿದ್ಯಾನಿಲಯವಾಗಿ ಸ್ಥಾಪಿತವಾಗುವ ಹಂತ ತಲುಪಿತ್ತು. ಫೆಬ್ರುವರಿ ೪ರಂದು ವೈಸ್‌ರಾಯ್ ಹಾರ್ಡಿಂಜ್ ಅವರಿಂದ ಶಂಕುಸ್ಥಾಪನೆಯ ಕಾರ್ಯಕ್ರಮ ಇದ್ದರೆ, ನಂತರ ಎರಡು ದಿನ ವಿವಿಧ ಗಣ್ಯರಿಂದ ಉಪನ್ಯಾಸಗಳ ಕಾರ್ಯಕ್ರಮ ಏರ್ಪಾಟಾಗಿತ್ತು. ಫೆಬ್ರುವರಿ ೬ರಂದು ಭಾಷಣ ಮಾಡಲು ಸಮಾರಂಭದ ಸಂಚಾಲಕರಾದ ಅನಿಬೆಸೆಂಟ್ ಅವರು ಗಾಂಧಿಯನ್ನು ಆಹ್ವಾನಿಸಿದ್ದರು.

ಗಾಂಧಿ ಮೊದಲ ದಿನದ ಶಂಕುಸ್ಥಾಪನಾ ಕಾರ್ಯಕ್ರಮದಲ್ಲೂ ಆಹ್ವಾನಿತರಾಗಿ ಭಾಗವಹಿಸಿದ್ದರು. ಗಾಂಧಿಯುವರಂತೆಯೇ ಆಹ್ವಾನಿತರಾಗಿದ್ದವರು, ವಿಶ್ವವಿದ್ಯಾನಿಲಯದ ಪೋಷಕರಾಗಲು ಒಪ್ಪಿದ್ದ ಭಾರತದ ಉತ್ತರ ಭಾಗದ ಅನೇಕ ಸಂಸ್ಥಾನಗಳ ಮಹಾರಾಜರುಗಳು, ವಿವಿಧ ಪ್ರಾಂತ್ಯಗಳ ಗವರ್ನರ್‌ಗಳು, ಬ್ರಿಟಿಷ್ ಪ್ರಭುತ್ವದ ಉನ್ನತ ಅಧಿಕಾರಿಗಳು, ವಿದ್ವಾಂಸರು, ಸಾಹಿತಿಗಳು, ವಕೀಲರು ಮತ್ತು ವಿದ್ಯಾರ್ಥಿ ಸಮೂಹ. ಶಂಕುಸ್ಥಾಪನೆಯ ಸಮಾರಂಭದಿಂದ ಹಿಡಿದು ತಮ್ಮ ಭಾಷಣಕ್ಕೆ ಮುನ್ನ ಮಾತಾಡಿದ್ದ ಅವರ ಭಾಷಣದವರೆಗಿನ ಕಾರ್ಯಕಲಾಪಗಳ ಅದ್ದೂರಿ, ಆಡಂಬರ, ಕೃತಕತೆ, ಭೋಳೆತನ, ಶ್ರೀಮಂತಿಕೆಯ ಅಶ್ಲೀಲ ಪ್ರದರ್ಶನಗಳಿಂದ ಗಾಂಧಿ ಎಷ್ಟು ವಿಚಲಿತರಾಗಿದ್ದರೆಂದರೆ, ಅವರ ಮಾತು ಈವರೆಗೆ ಕಂಡಿರದಿದ್ದ, ದಾಳಿಯ ರೂಪವನ್ನು ಕಂಡುಕೊಂಡಿತ್ತು.

ಮೆಕಾಲೆ ಮಾಡಿದ ಅಪರಾಧ

ಅವರು ತಮ್ಮ ಮಾತುಗಳನ್ನು ಹೀಗೆ ಆರಂಭಿಸಿದರು: 'ನಾನು ಭಾರತೀಯ ಸಂಸ್ಕೃತಿಯ ಪ್ರತೀಕವೆನಿಸಿರುವ ಈ ಊರಿನಲ್ಲಿನ ಈ ಭವ್ಯ ಇತಿಹಾಸವುಳ್ಳ ಈ ಕಾಲೇಜಿನ ಆವರಣದಲ್ಲಿ ನಿಮ್ಮನ್ನು ಉದ್ದೇಶಿಸಿ, ವಿದೇಶಿ ಭಾಷೆಯಲ್ಲಿ ಮಾತಾಡುವಂತಹ ಸಂದರ್ಭ ಬಂದಿರುವುದು ನಮ್ಮ ದೇಶ ಎದುರಿಸುತ್ತಿರುವ ದುರಂತಕ್ಕೆ ಸಾಕ್ಷಿಯೂ, ಅದಕ್ಕಿಂತ ಹೆಚ್ಚಾಗಿ ನಾಚಿಕೆಗೇಡಿನ ಸಂಗತಿಯೂ ಆಗಿದೆ. ನಮ್ಮ ಮಕ್ಕಳಿಗೆ ನಮ್ಮದೇ ಭಾಷೆಗಳಲ್ಲಿ ಶಿಕ್ಷಣ ಒದಗಿಸಿದ್ದರೆ ದೇಶ ಈ ಹೊತ್ತಿಗೆ ಸ್ವತಂತ್ರವಾಗಿರುತ್ತಿತ್ತು. ಜನನಾಯಕರು ಜನಸಾಮಾನ್ಯರೊಂದಿಗೆ ಹೃದಯದ ಭಾಷೆಯಲ್ಲಿ ಸಂವಾದಿಸುತ್ತಾ ಅವರ ಕಷ್ಟಗಳಿಗೆ ಸ್ಪಂದಿಸುತ್ತಿದ್ದರಲ್ಲವೇ? ಇದು ಆಗದಂತೆ ತಡೆದ ಮೆಕಾಲೆ, ಭಾರತದ ವಿಷಯದಲ್ಲಿ ಮಾಡಿದ ದೊಡ್ಡ ಅಪರಾಧದ ಪರಿಣಾಮವಿದು.' ಇದಕ್ಕೆ ಪ್ರತಿಕ್ರಿಯೆಯಾಗಿ ವಿದ್ಯಾರ್ಥಿ ಸಮೂಹದಿಂದ ಚಪ್ಪಾಳೆ ಕೇಳಿ ಬಂದಿತು. ಹುರುಪುಗೊಂಡ ಗಾಂಧಿ ಮುಂದುವರೆಸಿದರು: 'ಕಣ್ಣು–ಕಿವಿಗಳಿಗೆ ಹಬ್ಬ ಸಾಕಾಗಿದೆ. ಭಾರತೀಯನ ಹೃದಯ ಮುಟ್ಟುವ ಕಾಲವೀಗ ಬಂದಿದೆ. ಭಾಷಣಗಳ ಮೂಲಕ ದೇಶಸೇವೆ ಮಾಡಲಾಗದು. ಅವು ಕೂಡ ಅರ್ಥಹೀನವಾಗತೊಡಗಿವೆ'. ಈ ಮಾತು ಕೇಳಿ ಅನಿಬೆಸೆಂಟರು ಕೊಂಚ ಬೆಚ್ಚಿದಂತಾದರು.

ಬದುಕಿದ್ದೂ ಸಾಯುವ ಸ್ಥಿತಿಗಿಂತ ಸಾವೇ ಮೇಲು!

ನಂತರ ಗಾಂಧಿ ದೇಶದ ಆಧ್ಯಾತ್ಮಿಕ ಸಂಪತ್ತಿನ ಕೀರ್ತಿಯ ಬಗ್ಗೆ ಮಾತಾಡತೊಡಗಿದರು: 'ನಮ್ಮದು ಆಧ್ಯಾತ್ಮಿಕ ದೇಶವೆಂದು ಕೊಚ್ಚಿಕೊಳ್ಳುತ್ತೇವೆ, ಅಧ್ಯಾತ್ಮ ವ್ಯಕ್ತವಾಗಬೇಕಾದದ್ದು ಬಾಯಿಂದ ಅಲ್ಲ. ಕೈಕಾಲುಗಳ ಮೂಲಕ, ಜನರ ಬಳಿ ಹೋಗಿ ಕೆಲಸ ಮಾಡುವ ಮೂಲಕ. ಇಲ್ಲಿನ ದೇವಸ್ಥಾನವನ್ನು ನೋಡಿ. ಅದರ ಸುತ್ತಮುತ್ತಲ ಬೀದಿಗಳನ್ನು ನೋಡಿ. ಎಷ್ಟು ಕೊಳಕಾಗಿದೆ. ಧರ್ಮ–ಅಧ್ಯಾತ್ಮ ಎಂದರೆ ಕೊಳಕೇ?' ವೇದಿಕೆಯ ಮೇಲಿದ್ದ ಗಣ್ಯರಿಗೆ ಕಲಾಪ ಹಾದಿ ತಪ್ಪುತ್ತಿದೆ ಎನ್ನಿಸಿ, ಏನು ಮಾಡಬೇಕೆಂದು ತೋಚದೆ ಗಾಬರಿಯಿಂದ ಕೂತಿದ್ದಾಗಲೇ ಗಾಂಧಿ, ನೇರವಾಗಿ ತಮ್ಮೊಂದಿಗೆ

ವೇದಿಕೆಯಲ್ಲಿದ್ದ ರಾಜ ಮಹಾರಾಜರುಗಳತ್ತ ನೋಡುತ್ತಾ ಹೇಳಿದರು: 'ನಿನ್ನೆ ಮೊನ್ನೆ ಈ ಮಹಾಶಯರೆಲ್ಲರೂ ಭಾರತದ ಬಡತನದ ಬಗ್ಗೆ ಮಾತನಾಡಿದರು. ಇವರ ಮುಡಿಯಿಂದ ಅಡಿಯವರೆಗೆ ದೇಹದ ವಿವಿಧ ಭಾಗಗಳಲ್ಲಿ ಧರಿಸಿರುವ ವಿವಿಧ ರತ್ನಾಭರಣಗಳು ನನ್ನಲ್ಲಿ ವಿಷಾದ ಹುಟ್ಟಿಸಿವೆ. ಇವೆಲ್ಲ ಭಾರತದ ಬಡತನದ ಮೂಲಗಳಂತೆ ನನಗೆ ಕಾಣುತ್ತಿವೆ. ಇವು ನಮ್ಮ ರೈತನಿಂದ, ಗ್ರಾಮೀಣ ಕಸುಬುದಾರರಿಂದ ಸೂರೆ ಮಾಡಲ್ಪಟ್ಟ ಆಸ್ತಿಯೇ ಹೌದು. ಇಂತಹ ಸೂರೆಯನ್ನು ಒಪ್ಪಿಕೊಂಡು, ಸ್ವರಾಜ್ಯದ ಮಾತಾಡುವುದು ದೊಡ್ಡ ವಿಪರ್ಯಾಸವೇ ಸರಿ'. ಈ ಹೊತ್ತಿಗೆ ಅನಿಬೆಸೆಂಟರ ಸಹಿತ ಮಹಾರಾಜ ಗಣವೆಲ್ಲ ಇಲ್ಲೇನು ನಡೆಯುತ್ತಿದೆ ಎಂದು ದಿಗ್ಭ್ರಾಂತವಾಯಿತು. ವಿದ್ಯಾರ್ಥಿಗಳ ಕಡೆಯಿಂದ ಮತ್ತೆ ಮತ್ತೆ ಮೆಚ್ಚುಗೆಯ ಚಪ್ಪಾಳೆ ಶುರುವಾದಾಗ ಆಹ್ವಾನಿತ ಗಣ್ಯರ ಮುಜುಗರ ಹೆಚ್ಚಾಗತೊಡಗಿತು. ಗಾಂಧಿ ಈಗ ನೇರವಾಗಿ ಕಳೆದೆರಡು ದಿನಗಳಲ್ಲಿ ತಾವು ಕಂಡು ವಿಷಾದಿಸಿದ ಒಂದು ಸಂಗತಿಯ ಪ್ರಸ್ತಾಪ ಮಾಡತೊಡಗಿದರು: 'ಈ ಸಮಾರಂಭಕ್ಕೆ ಎಷ್ಟೊಂದು ಭದ್ರತೆ. ನಗರದ ತುಂಬಾ ಪೊಲೀಸರು, ಗುಪ್ತಚರ ದಳದವರೇ ತುಂಬಿ ಹೋಗಿದ್ದಾರೆ. ಏಕಿಷ್ಟು ಅಭದ್ರತೆಯ, ಅಪನಂಬಿಕೆಯ ಭಾವನೆ? ಇದು ಉಂಟಾಗಿರುವುದಾದರೂ ಏಕೆ, ಹೇಗೆ?' ಈ ಪ್ರಶ್ನೆಗಳನ್ನು ಕೇಳಿಕೊಂಡ ಗಾಂಧಿ, ಯಾವ ಉತ್ತರ ನೀಡುವರೋ ಎಂದು ಆತಂಕಿತರಾಗಿ ಬೆವರಿ ಕೂತ ವೇದಿಕೆಯ ಮೇಲಿನ ಗಣ್ಯ ಸಮೂಹಕ್ಕೆ ಸಿಡಿಲು ಬಡಿದಂತೆ ಹೇಳಿದರು: 'ಇಂತಹ ಬದುಕಿದ್ದೂ ಸಾಯುವ ಸ್ಥಿತಿಗಿಂತ ಸಾವೇ ಮೇಲು!'

ಅರ್ಧಕ್ಕೇ ಬರಖಾಸ್ತಾದ ಸಭೆ!

ಇನ್ನು ಅಲ್ಲಿ ಕೂರಲಾಗದ ಮಹಾರಾಜರುಗಳ ಮತ್ತು ಅಧಿಕಾರಿಗಳ ಸಮೂಹದ ಬಹುಪಾಲು ಗಣ್ಯರು ವೇದಿಕೆಯಿಂದ ಇಳಿಯಲಾರಂಭಿಸಿದರು. ಗಾಂಧಿ ತಮ್ಮ ಮಾತುಗಳನ್ನು ಮುಂದುವರೆಸಿದ್ದರು: 'ಇಂತಹ ಉಸಿರುಗಟ್ಟಿಸುವ ವಾತಾವರಣ ಈ ದೇಶದಲ್ಲಿ ಒಂದು ಅರಾಜಕ ಗುಂಪನ್ನು ಸೃಷ್ಟಿಸಿದ್ದರೆ ಆಶ್ಚರ್ಯವಿಲ್ಲ. ನಾನೂ ಒಬ್ಬ ಅರಾಜಕನೇ. ಆದರೆ ಬೇರೆ ರೀತಿಯ ಅರಾಜಕ... ಅರಾಜಕರು ಪರಮ ದೇಶಭಕ್ತರು. ದೇಶಕ್ಕಾಗಿ ತಮ್ಮ ಪ್ರಾಣ ತೆರಲೂ ಸಿದ್ಧವಾದ ಧೈರ್ಯವಂತರು, ತ್ಯಾಗಶೀಲರು. ಆದರೆ ಅವರಲ್ಲಿ ಹಲವರು ಹಾದಿ ತಪ್ಪಿ ಹಿಂಸೆಗೆ ಇಳಿದಿದ್ದಾರೆ. ದೇಶಭಕ್ತರ ಸಾವು ಘನತೆಯಿಂದ ಕೂಡಿರಬೇಕು. ಚೂರಿ ಅಥವಾ ಬಾಂಬ್, ಆ ಘನತೆ ನೀಡಲಾರವು. ಘನತೆ ಇಲ್ಲದ ತ್ಯಾಗದಿಂದ ಘನತೆಯುಳ್ಳ ದೇಶ ಕಟ್ಟಲಾಗದು. ನಮ್ಮ ಧರ್ಮಗ್ರಂಥಗಳೂ ಈ ಮಾರ್ಗವನ್ನು ಒಪ್ಪುವುದಿಲ್ಲ. ಒಪ್ಪುವುದು ಎನ್ನುವವರೂ ಇರಬಹುದು. ಅದು ತಪ್ಪು ನಿರೂಪಣೆ. ಹಿಂದೂ ಧರ್ಮ ಅಹಿಂಸೆಯ ಧರ್ಮ ಎಂಬುದು ನನ್ನ ಪರಮ ನಂಬಿಕೆ...' ಗಾಂಧಿ ಮಾತು ಮುಂದುವರೆಸುವ ಮುನ್ನವೇ ವಿರುದ್ಧ ದಿಕ್ಕುಗಳಿಂದ 'ಗಾಂಧಿ, ಕೂತುಕೊಳ್ಳಿ ಸಾಕು!' ಎಂಬ ಮತ್ತು 'ನೀವು ಮುಂದುವರೆಸಿ' ಎಂಬ ಕೂಗುಗಳು ಕೇಳಿಬಂದವು. ಗಾಂಧಿ ಅನಿಬೆಸೆಂಟರ ಕಡೆ ನೋಡಿದಾಗ ಅವರು, 'ಸಾಕು ನಿಲ್ಲಿಸಿ..ಕೂತುಕೊಳ್ಳಿ!' ಎಂದು ಬೇಸರದಿಂದಲೇ ಹೇಳಿದರು. ಗಾಂಧಿ ಅಧ್ಯಕ್ಷರ ಆದೇಶಕ್ಕಾಗಿ ಕಾಯುತ್ತಿದ್ದೇನೆ ಎಂದಾಗ, ಅಧ್ಯಕ್ಷತೆ ವಹಿಸಿದ್ದ ದರ್ಭಾಂಗದ ಮಹಾರಾಜ

'ನಿಮ್ಮ ಉದ್ದೇಶ ಏನು ಹೇಳಿ ಮುಗಿಸಿ' ಎಂದ. ಗಾಂಧಿ, 'ನಾನು ಈ ಮಾತುಗಳ ಮೂಲಕ ದೇಶ ಮತ್ತು ಸಾಮ್ರಾಜ್ಯದ ಸೇವೆ ಮಾಡುತ್ತಿದ್ದೇನೆ ಎಂದುಕೊಂಡಿದ್ದೇನೆ...' ಮುಂತಾಗಿ ವಿವರಿಸುತ್ತಿದ್ದಾಗಲೇ ಸಭೆ ವಂದನಾರ್ಪಣೆಯ ಔಪಚಾರಿಕತೆಯೂ ಇಲ್ಲದೆ ಬರಖಾಸ್ತಾಯಿತು.

ಈ ಭಾಷಣವನ್ನು ಅರೆಬರೆ ಕೇಳಿಸಿಕೊಂಡ ಕೆಲ ಅಧಿಕಾರಿಗಳು ಗಾಂಧಿ ಉಗ್ರಗಾಮಿ ಗುಂಪಿಗೆ ಕುಮ್ಮಕ್ಕು ಕೊಟ್ಟಿದ್ದಾರೆ ಎಂಬ ದೂರನ್ನು ವೈಸ್‌ರಾಯ್‌ಗೆ ಸಲ್ಲಿಸಿದರಾದರೂ, ವಾರಾಣಸಿಯ ಪೊಲೀಸ್ ಕಮೀಷನರ್ ತನ್ನ ವರದಿಯಲ್ಲಿ, ಗಾಂಧಿ ಅಂದು ಕೆಲ ವಿಷಯಗಳಲ್ಲಿ ತಮ್ಮ ಮಿತಿ ಮೀರಿ ಮಾತಾಡಿದರಾದರೂ, ಅವರ ಒಟ್ಟು ಮಾತುಗಳಲ್ಲಿ ಸಾಮ್ರಾಜ್ಯಕ್ಕೆ ದ್ರೋಹ ಬಗೆಯುವ ಅಂಶವೇನೂ ಇರಲಿಲ್ಲ ಎಂದು ಹೇಳಿದರೆ, ಲೆ. ಗವರ್ನರ್, ಇದನ್ನು ಇಲ್ಲಿಗೆ ಮುಕ್ತಾಯ ಮಾಡುವುದೇ ಒಳ್ಳೆಯದು ಎಂದು ಸೂಚಿಸಿದ್ದರು. ಆದರೆ ಗಾಂಧಿ ತಮ್ಮ ಆತ್ಮಚರಿತ್ರೆ, 'ಸತ್ಯದೊಂದಿಗೆ ನನ್ನ ಪ್ರಯೋಗ'ದಲ್ಲಿ ಈ ಭಾಷಣದ ಪ್ರಸ್ತಾಪ ಮಾಡದಿರುವುದು ಕುತೂಹಲಕಾರಿಯಾದ ಸಂಗತಿ ಎಂದು ತಮ್ಮ 'ಗಾಂಧಿ' ಪುಸ್ತಕದಲ್ಲಿ ಹೇಳುತ್ತಾರೆ, ಎರಿಕ್ ಎರಿಕ್ಸನ್ ಎಂಬ ಚಿಂತಕ. ಮುಂದೆ ಅವರು ಅಭಿಪ್ರಾಯಪಟ್ಟಂತೆ, ಈ ಭಾಷಣವನ್ನು ಭಾವಾವೇಶಕ್ಕೆ ತುತ್ತಾಗಿ ಮಾಡಿ ಅರಾಜಕ ಗುಂಪಿಗೆ ಕುಮ್ಮಕ್ಕು ನೀಡಿದೆನೇನೋ ಎಂಬ ಸಂದೇಹ ಗಾಂಧಿಯವರಿಗೆ ಉಂಟಾಗಿರಬೇಕು.

ಬದಲಾದ ಕಾಂಗ್ರೆಸ್‌ನ ದಿಕ್ಕು ದೆಸೆಗಳು

ಅದೇನೇ ಇರಲಿ, ಗಾಂಧಿಯವರ ಈ ಭಾಷಣ, ಕಾಂಗ್ರೆಸ್‌ನ ಒಳಗೆ ಮತ್ತು ಹೊರಗೆ ನಡೆಯುತ್ತಿದ್ದ ಸ್ವರಾಜ್ಯ ಕುರಿತ ಚರ್ಚೆಗಳ ದಿಕ್ಕನ್ನೇ ಬದಲಿಸಿತು ಎಂದು ಹೇಳಬೇಕು; ವಿಶೇಷವಾಗಿ ಕಾಂಗ್ರೆಸ್‌ನ ದಿಕ್ಕು ದೆಸೆಗಳನ್ನು. ಬ್ರಿಟಿಷ್ ಸಾಮ್ರಾಜ್ಯದ ಸಲಹೆಯ ಮೇರೆಗೆ ೧೮೮೫ರ ಡಿಸೆಂಬರ್ ೨೮ರಂದು ಮುಂಬೈನಲ್ಲಿ, 'ಭಾರತದ ರಾಷ್ಟ್ರೀಯತೆಯ ಆದಿ ಪುರುಷ' ಎಂದೇ ಪ್ರಸಿದ್ಧರಾಗಿರುವ ದಾದಾಭಾಯಿ ನವರೋಜಿ ಮತ್ತು ದೀನ್‌ಷಾ ಎಡುಲ್ಜಿ ವಾಚಾ ಎಂಬ ಪಾರ್ಸಿ ಉದ್ಯಮಿಗಳ ಒತ್ತಾಸೆಯೊಂದಿಗೆ, ಎ.ಓ. ಹ್ಯೂಮ್ ಎಂಬ ಇಂಗ್ಲಿಷ್ ಗಣ್ಯನ ನೇತೃತ್ವದಲ್ಲಿ ಕಾಂಗ್ರೆಸ್ ಸ್ಥಾಪಿತವಾಗಿತ್ತು. ಭಾರತೀಯ ಸಾರ್ವಜನಿಕ ಜೀವನದ ಗಣ್ಯರಿಗೆ ಸಾಮ್ರಾಜ್ಯದ ಆಡಳಿತ ಕುರಿತ ತಮ್ಮ ಅಭಿಪ್ರಾಯ ಮತ್ತು ದೂರುಗಳನ್ನು ಮಂಡಿಸುವ ವೇದಿಕೆಯಾಗಿ ಮೊದಮೊದಲು ಇಂಗ್ಲಿಷ್ ಗಣ್ಯರ ನೇತೃತ್ವದಲ್ಲೇ ಕ್ರಿಯಾಶೀಲವಾಗಿದ್ದರೂ, ೨೦ನೇ ಶತಮಾನದ ಮೊದಲ ದಶಕದ ಹೊತ್ತಿಗೆ, ಮತ್ತೆ ಪ್ರಭುತ್ವದ ಉದಾರ ಸಲಹೆಯ ಮೇರೆಗೆ ಭಾರತೀಯರ ನೇತೃತ್ವಕ್ಕೆ ಬದಲಾಗಿತ್ತು. ಆ ಹೊತ್ತಿಗೆ ವಂಗ ನವೋದಯದ ಸ್ಫೂರ್ತಿಯಲ್ಲಿ ಉಂಟಾದ ಧಾರ್ಮಿಕ-ಸಾಂಸ್ಕೃತಿಕ-ಸಾಮಾಜಿಕ ಸುಧಾರಣಾ ಚಳುವಳಿಯ ಕಾವಿನಲ್ಲಿ ಹುಟ್ಟಿಕೊಂಡ ನವ ಸ್ವಾಭಿಮಾನ ಮತ್ತು ಜಾಗೃತಿ, ರಾಷ್ಟ್ರೀಯತೆ ಎಂಬ ಹೊಸ ಅರಿವನ್ನು ಸೃಷ್ಟಿಸಿದ ಪರಿಣಾಮವಾಗಿ ಎದ್ದ ವೈಚಾರಿಕ ಅಲೆಗಳು ಕಾಂಗ್ರೆಸ್‌ನ ಸ್ವರೂಪವನ್ನು ಬದಲಿಸತೊಡಗಿದ್ದವು.

ವಕೀಲರು, ವಿದ್ವಾಂಸರು, ಪ್ರಾಧ್ಯಾಪಕರು ಮುಂತಾದ ಇಂಗ್ಲಿಷ್ ಶಿಕ್ಷಣ ಪಡೆದ ಭಾರತೀಯ ಗಣ್ಯವರ್ಗ ನಿಧಾನವಾಗಿ ತಮ್ಮದೇ ರಾಜಕೀಯ ಪ್ರಜ್ಞೆ ಬೆಳೆಸಿಕೊಂಡು ಕಾಂಗ್ರೆಸ್ ಮೂಲಕ ಆಡಳಿತದಲ್ಲಿ ಪಾಲು ಕೇಳತೊಡಗಿ, ಅದನ್ನು ಒಂದು ರಾಜಕೀಯ ವೇದಿಕೆಯಾಗಿ ಪರಿವರ್ತಿಸಿತ್ತು. ಆದರೆ ಅದು ಬ್ರಿಟಿಷ್ ಪ್ರಭುತ್ವದ ಪರಮಾಧಿಕಾರವನ್ನು ಶಾಸನಾತ್ಮಕವಾದ ನ್ಯಾಯಯುತ ವ್ಯವಸ್ಥೆ ಎಂದು ಮಾನ್ಯ ಮಾಡಿ, ಭಾರತೀಯರಿಗೆ ಹೆಚ್ಚಿನ ಅಧಿಕಾರವನ್ನು ಅರ್ಜಿ, ಮನವಿ, ಚರ್ಚೆಗಳ ಮೂಲಕ ಕೋರುವ 'ಸಾಂವಿಧಾನಿಕ' ಮಾರ್ಗಗಳ ವೇದಿಕೆಯಾಗಿತ್ತು. ಇದರ ಪರಿಣಾಮವಾಗಿ ಕ್ರಮೇಣ ಮೂಡಿಬಂದ ಹಲವು ಶಾಸನಾತ್ಮಕ ಸುಧಾರಣೆಗಳ ಮೂಲಕ ಈ ಗಣ್ಯವರ್ಗ ಸೀಮಿತ ಮತಾಧಿಕಾರದ ಕ್ಷೇತ್ರಗಳಿಂದ ಪ್ರಾಂತ್ಯ ಮತ್ತು ಕೇಂದ್ರ ಮಟ್ಟದಲ್ಲಿ ಶಾಸನಸಭೆಗಳಿಗೆ ಚುನಾಯಿತವಾಗಿ ಆಡಳಿತದಲ್ಲಿ ನಾಮಕಾವಸ್ತೆ ಎನ್ನಬಹುದಾದ ಒಂದಿಷ್ಟು ಪಾಲನ್ನೂ ಪಡೆದಿತ್ತು. ಇವುಗಳ ಮೇಲುಸ್ತುವಾರಿಗೆ ವೈಸ್‌ರಾಯ್‌ರಿಂದ ನಾಮಕರಣಗೊಂಡ ಕಾರ್ಯಕಾರಿ ಮಂಡಳಿಯೊಂದಿದ್ದು, ಇದರಲ್ಲೂ ಭಾರತೀಯರಿಗೆ ಪ್ರಾತಿನಿಧ್ಯ ನೀಡಲಾಗಿತ್ತು.

ಇದಕ್ಕೆ ಪ್ರತಿಯಾಗಿ ಇನ್ನೊಂದು ದಿಕ್ಕಿನಲ್ಲಿ ಬಾಲಗಂಗಾಧರ ತಿಲಕರಂತಹ ಕೆಲವರ ಸ್ಫೂರ್ತಿಯೊಂದಿಗೆ ಪ್ರಭುತ್ವಕ್ಕೆ ಸವಾಲು ಹಾಕುವ ಮಾರ್ಗ ಹಿಡಿದು ಬ್ರಿಟಿಷ್ ಪ್ರಭುತ್ವವನ್ನು ಹಿಂಸಾಚಾರಗಳ ಮೂಲಕ ಬೆದರಿಸಿ ಪದಚ್ಯುತಗೊಳಿಸಬಯಸುವ ಉಗ್ರಗಾಮಿಗಳ ಗುಂಪೊಂದರ ಉದಯವೂ ಆಗಿತ್ತು. ಆದರೆ ಈ ಎರಡೂ ಗುಂಪುಗಳು ರಾಷ್ಟ್ರವನ್ನು ಜನಸಾಮಾನ್ಯರ ಕಷ್ಟಸುಖಗಳೊಂದಿಗೆ ಗುರುತಿಸುವ ಅರಿವಾಗಲೀ ಛಾತಿಯಾಗಲೀ ಇಲ್ಲದ, ಭಾರತೀಯ ಸಮಾಜದ ಗಣ್ಯಾತಿಗಣ್ಯ ವರ್ಗಕ್ಕೆ ಸೇರಿದವಾಗಿದ್ದವು. ಆದರೆ ಗಾಂಧಿಯ ಹೋರಾಟದ ರಾಜಕಾರಣದ ಬಾಹುಗಳು, ವಸಾಹತುಶಾಹಿಯ ರಾಜಕಾರಣದಿಂದ ತತ್ತರಿಸಿದ್ದ ಭಾರತದ ರೈತರು ಮತ್ತು ಕುಶಲಕರ್ಮಿಗಳ ವಿಶಾಲ ಜನಸ್ತೋಮದತ್ತ ಚಾಚಿತ್ತು. ಅದಕ್ಕೆ ದ.ಆಫ್ರಿಕಾದ ಹೋರಾಟ ಒದಗಿಸಿದ ಅನುಭವ ಮತ್ತು ತಿಳುವಳಿಕೆಗಳ ಬೆಂಬಲವಿತ್ತು. ಅದು ಗಾಂಧಿಯವರ ಈ ಬನಾರಸ್ ಭಾಷಣದ ಮೂಲಕ ಅನಾವರಣಗೊಳ್ಳಲು ಕಾಯುತ್ತಿತ್ತು. ಅದು ಕಾಂಗ್ರೆಸ್ ಅನ್ನು, ಗಾಂಧಿ ಜೀವನ ಚರಿತ್ರೆಕಾರ ಲೂಯಿ ಫಿಶರ್ ಹೇಳುವಂತೆ, ತಲೆಕೆಳಗಾಗಿಸಿ ನಿಲ್ಲಿಸಿತು. ಕಾಂಗ್ರೆಸ್‌ನೊಳಕ್ಕೆ ಬಡವರ, ದೀನ ದರಿದ್ರರ ನೋವು ಸಂಕಟಗಳ ಜೀವಜಲ ಹರಿಯಲು ಶುರುವಾಯಿತು.

■

೩೫

ಹೋರಾಟಕ್ಕೆ ಹೊರಡುವ ಮುನ್ನ

ಗಾಂಧಿಯವರ ಬನಾರಸ್ ಭಾಷಣ ದೇಶಾದ್ಯಂತ ಚರ್ಚೆಯ ವಸ್ತುವಾಗಿ, ಅವರ ಹೆಸರನ್ನು ದೇಶದ ಮೂಲೆ ಮೂಲೆಗೆ ತಲುಪಿಸಿತಲ್ಲದೆ, ಹಲವು ಗಣ್ಯರನ್ನು ಅವರ ಸತ್ಯಾಗ್ರಹ ಆಶ್ರಮದತ್ತ ಆಕರ್ಷಿಸಿತು. ಅಂಥವರಲ್ಲಿ ಗಾಂಧಿ ಕಲ್ಕತ್ತಾಗೆ ಭೇಟಿ ನೀಡಿದ್ದಾಗ, ಅವರ ಸಾರೋಟು ಗಾಡಿಯನ್ನು ಎಳೆದು ಮೆರವಣಿಗೆ ಮಾಡಿದವರಲ್ಲಿ ಸೇರಿದ್ದ ತರುಣ ಉದ್ಯಮಿ ಘನಶ್ಯಾಮದಾಸ್ ಬಿರ್ಲಾ ಒಂದು ಕಡೆಯಾದರೆ, ಮಹಾರಾಷ್ಟ್ರದ ಬಹುಶ್ರುತ ತರುಣ ವಿದ್ವಾಂಸ ವಿನೋಬಾ ಬಾವೆ ಇನ್ನೊಬ್ಬರು. ಇವರಲ್ಲದೆ ಕ್ರಮೇಣ ಕಿಶೋರಿಲಾಲ್ ಮಶ್ರೂವಾಲಾ, ಕಾಕಾಸಾಹೇಬ ಕಾಲೇಲ್ಕರ, ಮಹದೇವ ದೇಸಾಯಿ, ನರಹರಿ ಪಾರೀಖ್, ಸ್ವಾಮಿ ಆನಂದ್, ಥಕ್ಕರ್ ಬಾಪಾ, ಪ್ಯಾರೇಲಾಲ್ ಮುಂತಾದ, ತ್ಯಾಗಶೀಲತೆಯಲ್ಲಿ ಒಬ್ಬರನ್ನೊಬ್ಬರು ಮೀರಿಸುವ ತರುಣರು ಗಾಂಧಿ ಪಡೆಗೆ ಬಂದು ಸೇರಿಕೊಂಡರು. ಇನ್ನು ವರ್ಧಾದ ಕೈಗಾರಿಕೋದ್ಯಮಿ ಜಮ್ನಾಲಾಲ್ ಬಜಾಜ್ ಅವರು ಸತ್ಯಾಗ್ರಹ ಆಶ್ರಮಕ್ಕೆ ನಿಗದಿತ ಧನ ಸಹಾಯ ಮಾಡಲೂ ಮುಂದಾದರು. ದಕ್ಷಿಣದಿಂದ ಸೇಲಂನ ಪ್ರಸಿದ್ಧ ತರುಣ ವಕೀಲ ಚಕ್ರವರ್ತಿ ರಾಜಗೋಪಾಲಾಚಾರಿ ಅವರು ಹಿಂದೂ–ಮುಸ್ಲಿಂ ಏಕತೆ, ಅಹಿಂಸೆ ಮತ್ತು ಗ್ರಾಮೀಣ ಕೈಗಾರಿಕೆಗಳ ಮೂಲಕ ಸ್ವಾವಲಂಬನೆಯ, ಗಾಂಧಿ ಮಾರ್ಗ ಕುರಿತ ಒಂದು ದೀರ್ಘ ಲೇಖನವನ್ನು ಪತ್ರಿಕೆಗಳಲ್ಲಿ ಬರೆದರು.

ಇದೇ ವೇಳೆಯಲ್ಲಿ ಗಾಂಧಿ 'ರೈಲ್ವೇ ಪ್ರಯಾಣಿಕರ ಸಮಸ್ಯೆಗಳು' ಮತ್ತು ಆನಂತರ 'ಭಾರತದ ಜಾತಿ ಪದ್ಧತಿ' ಕುರಿತು ಎರಡು ಕರಪತ್ರಗಳನ್ನು ಬರೆದು ಪ್ರಕಟಿಸಿದರು. ಮೊದಲದರಲ್ಲಿ ರೈಲ್ವೇ ಅಧಿಕಾರಿಗಳಿಗೂ, ಪ್ರಯಾಣಿಕರಿಗೂ ಕೆಲವು ಸಲಹೆಗಳಿದ್ದರೆ, ಎರಡನೆಯದರಲ್ಲಿ ಅವರು ಅಸ್ಪೃಶ್ಯತೆ ಅಧಾರ್ಮಿಕ ಎಂದಿದ್ದರಾದರೂ ಜಾತಿ ಪದ್ಧತಿಯಲ್ಲಿ ಆತ್ಮಸಂಯಮ ಮತ್ತು ಚಾರಿತ್ರ್ಯ ನಿರ್ಮಾಣದಂತಹ ಕೆಲವು ಒಳ್ಳೆಯ ಗುಣಗಳಿದ್ದು, ಈ ಪದ್ಧತಿಯನ್ನು ಸುಧಾರಿಸಲು ಪ್ರಯತ್ನಿಸಬೇಕೇ ಹೊರತು ಹಾಳುಮಾಡಲು ಹೋಗಬಾರದು ಎಂದು ಅಭಿಪ್ರಾಯಪಟ್ಟಿದ್ದರು.

ಮಗ ಮಣಿಲಾಲನಿಗೆ ಶಿಕ್ಷೆ

ಈ ಮಧ್ಯೆ ಸೆಪ್ಟೆಂಬರ್‌ನಲ್ಲಿ, ತಮ್ಮ ಮಗ ಮಣಿಲಾಲನು, ಕಲ್ಕತ್ತಾದಲ್ಲಿದ್ದ ತನ್ನ ಅಣ್ಣ ಹರಿಲಾಲನಿಗೆ ಐದನೇ ಮಗುವಾಗಿ (ಬಾಣಂತನಕ್ಕೆ ಸ್ವತಃ ಕಸ್ತೂರಬಾ ಹೋಗಿದ್ದರು.)

ಹಣಕಾಸಿನ ತೊಂದರೆಯಲ್ಲಿದ್ದಾನೆ ಎಂದು ತಿಳಿದು ಆತನಿಗೆ ಆಶ್ರಮದ ಹಣದಿಂದ ಒಂದಿಷ್ಟು ಸಹಾಯ ನೀಡಿದ್ದನು. ಇದು ಗೊತ್ತಾದ ಕೂಡಲೇ ಗಾಂಧಿ ಬೆಚ್ಚಿಬಿದ್ದು ಮಣಿಲಾಲನಿಗೆ ಮದ್ರಾಸ್‌ಗೆ ಒಂದು ರೈಲ್ವೇ ಟಿಕೆಟ್ ತೆಗೆದುಕೊಟ್ಟು, ಹರಿಲಾಲನಿಗೆ ಕಳಿಸಿದ ಹಣ ಮತ್ತು ರೈಲ್ವೇ ಟಿಕೆಟ್‌ನ ಹಣ ಸೇರಿ ಸಂಪಾದಿಸಿಕೊಂಡು ಬರುವವರೆಗೆ ಆಶ್ರಮದತ್ತ ಮುಖ ಹಾಕಬಾರದೆಂದು ಹೇಳಿ ಆತನನ್ನು ಆಶ್ರಮದಿಂದ ಅಟ್ಟಿದ್ದರು. ತನ್ನ ತಪ್ಪಿಗಾಗಿ ಗಾಂಧಿ ಉಪವಾಸ ಮಾಡುವರೆಂದು ಬೆದರಿದ ಮಣಿಲಾಲ, ಹಾಗೆ ಮಾಡಬಾರದೆಂದು ಬೇಡಿಕೊಂಡು ಹೋಗಿದ್ದರೂ ಗಾಂಧಿ ಮೂರು ದಿನಗಳ ಪ್ರಾಯಶ್ಚಿತ್ತ ಉಪವಾಸವನ್ನು ಮಾಡಿಯೇ ತೀರಿದರು. ಆದರೆ ಕಲ್ಕತ್ತೆಯಲ್ಲಿ ಸುಖಿ ಜೀವನದ ಚಟಕ್ಕೆ ಬಿದ್ದ ಹರಿಲಾಲ, ವಿಪರೀತ ಸಾಲ ಮಾಡಿಕೊಂಡಿದ್ದಲ್ಲದೆ, ತನಗೆ ಉದ್ಯೋಗ ಕೊಟ್ಟಿದ್ದ ಸಂಸ್ಥೆಯ ಹಣ ದುರುಪಯೋಗ ಮಾಡಿಕೊಂಡ ಕಾರಣ ಕೆಲಸ ಕಳೆದುಕೊಂಡ. ಇದರಿಂದ ನೊಂದ ಗಾಂಧಿ, ತಮ್ಮ ಗೆಳೆಯ ಕಲೆನ್‌ಬಾಕ್‌ಗೆ ಬರೆದ ಪತ್ರವೊಂದರಲ್ಲಿ 'ಹರಿಲಾಲನ ಮನಸ್ಸು ತೀರಾ ದುರ್ಬಲವಾಗಿ ಹೋಗಿದೆ' ಎಂದು ವಿಷಾದಿಸಿದ್ದರು. ಅತ್ತ ಮದ್ರಾಸ್‌ಗೆ ಹೋದ ಮಣಿಲಾಲ, ತಮ್ಮ ತಂದೆಯ ಪರಿಚಯಸ್ಥರ ಮೂಲಕ ನೇಯ್ಗೆ ಉದ್ಯಮವೊಂದರಲ್ಲಿ ಕೆಲಸ ಗಿಟ್ಟಿಸಿಕೊಂಡು ಏಳು ತಿಂಗಳು ಕೆಲಸ ಮಾಡಿ, ತಂದೆ ಸೂಚಿಸಿದ್ದ ಮೊತ್ತವನ್ನು ಸಂಪಾದಿಸಿಕೊಂಡು ಆಶ್ರಮಕ್ಕೆ ವಾಪಸ್ ಬಂದ. ಆತ ಆ ಸಮಯದಲ್ಲಿ ತಮಿಳು ಭಾಷೆ ಕಲಿತಿದ್ದನಲ್ಲದೆ ನೇಯ್ಗೆ ಕಸುಬಿನಲ್ಲಿ ಒಂದಿಷ್ಟು ನೈಪುಣ್ಯವನ್ನೂ ಗಳಿಸಿದ್ದ.

ಗಾಂಧಿಯವರ ಕಾಂಗ್ರೆಸ್ ಪ್ರವೇಶ

೧೯೧೬ರಲ್ಲಿ ಗಾಂಧಿ ಭಾಗವಹಿಸಿದ ಎರಡು ಮುಖ್ಯ ಕಾರ್ಯಕ್ರಮಗಳೆಂದರೆ ಒಂದು, ಅಕ್ಟೋಬರ್‌ನಲ್ಲಿ ಅಹಮದಾಬಾದ್‌ನಲ್ಲಿ ನಡೆದ ಬಾಂಬೆ ಪ್ರಾಂತೀಯ ಸಮ್ಮೇಳನ. ಇದೊಂದು ದೇಶಕ್ಕೆ ಸ್ವಯಮಾಧಿಕಾರ ಬೇಡಿಕೆಯ ರಾಜಕೀಯ ಸಮ್ಮೇಳನವಾಗಿದ್ದು ಮೊದಲ ಬಾರಿಗೆ ಕಾಂಗ್ರೆಸ್ಸಿನ ಸೌಮ್ಯವಾದಿ ಮತ್ತು ತೀವ್ರವಾದಿ ಗುಂಪುಗಳ ಸದಸ್ಯರಲ್ಲದೆ ಮುಸ್ಲಿಂ ಲೀಗ್‌ನ ಎಂ.ಎ. ಜಿನ್ನಾ ಮತ್ತವರ ಸಹಚರರೂ ಭಾಗವಹಿಸಿದ್ದರು. ಗಾಂಧಿಯವರ ಸಲಹೆಯ ಮೇರೆಗೆ, ಭಾರತದ ಎಲ್ಲ ಪ್ರಾಂತೀಯತೆ, ಭಾಷೆ ಮತ್ತು ಧರ್ಮಗಳ ಪ್ರತ್ಯೇಕತೆಗಳನ್ನು ಮೀರಿದ ಭಾವೈಕ್ಯತೆಯನ್ನು ರೂಢಿಸುವ ದೃಷ್ಟಿಯಿಂದ, ಜಿನ್ನಾ ಅವರನ್ನು ಈ ಸಮ್ಮೇಳನದ ಅಧ್ಯಕ್ಷರನ್ನಾಗಿ ಆರಿಸಲಾಗಿತ್ತು. ಈ ಸಮ್ಮೇಳನದ ಗಮನಾರ್ಹ ಸಂಗತಿ ಎಂದರೆ, ಇಲ್ಲಿಯೇ ಗಾಂಧಿಗೆ ಸರ್ದಾರ್ ವಲ್ಲಭಭಾಯಿ ಪಟೇಲ್ ಮತ್ತು ಅವರ ಅಣ್ಣ ವಿಠಲಭಾಯಿ ಪಟೇಲರ ಪರಿಚಯವಾದದ್ದು. ಈ ಇಬ್ಬರೂ ಗಾಂಧಿಯವರಂತೆಯೇ ಲಂಡನ್‌ನಲ್ಲಿ ಬ್ಯಾರಿಸ್ಟರ್ ಪರೀಕ್ಷೆ ಪಾಸು ಮಾಡಿ ಬಂದು ಯಶಸ್ವಿ ವಕೀಲರಾಗಿ ಪಾಶ್ಚಿಮಾತ್ಯ ಶೈಲಿಯ ವೈಭೋಗದ ಜೀವನ ನಡೆಸುತ್ತಿದ್ದರು. ಈ ಇಬ್ಬರಿಗೂ ಗಾಂಧಿ, ಕಕ್ಕಸು ತೊಳೆದು, ಕಸ ಗುಡಿಸಿ, ರಾಟೆ ತಿರುಗಿಸುವ ಮೂಲಕ ಸ್ವರಾಜ್ಯ ಪಡೆಯಬಯಸುವ ತಿಕ್ಕಲು ಮನುಷ್ಯನಾಗಿ ಕಂಡಿದ್ದರಾದರೂ ಈ ಸಮ್ಮೇಳನದಲ್ಲಿ ಅವರ ನಡೆ ನುಡಿಗಳನ್ನು ಕಣ್ಣಾರೆ ನೋಡಿ, ಕಿವಿಯಾರೆ ಕೇಳಿ ಅವರ ಬಗ್ಗೆ ಕುತೂಹಲ ತಾಳಲಾರಂಭಿಸಿದರು.

ಈ ವರ್ಷ ಗಾಂಧಿ ಭಾಗವಹಿಸಿದ ಇನ್ನೊಂದು ಮುಖ್ಯ ಕಾರ್ಯಕ್ರಮವೆಂದರೆ ಸಂಯುಕ್ತ ಪ್ರಾಂತ್ಯಗಳ ರಾಜಧಾನಿಯಾದ ಲಕ್ನೋದಲ್ಲಿ ಮಹಮ್ಮದಾಲಿ ಜಿನ್ನಾರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದ್ದ ಕಾಂಗ್ರೆಸ್‌ನ ವಾರ್ಷಿಕ ಅಧಿವೇಶನ. ಈ ಅಧಿವೇಶನದ ವೈಶಿಷ್ಟ್ಯಗಳೆಂದರೆ ಇದರಲ್ಲಿ ಹತ್ತು ವರ್ಷಗಳ ನಂತರ ಬಾಲಗಂಗಾಧರ ತಿಲಕರು ಭಾಗವಹಿಸಲು ಬಂದಿದ್ದುದು ಮತ್ತು ಈ ಅಧಿವೇಶನದ ಜೊತೆಗೇ ಆ ನಗರದಲ್ಲೇ ಮುಸ್ಲಿಂ ಲೀಗ್ ಅಧಿವೇಶನವೂ ಏರ್ಪಾಡಾಗಿದ್ದುದು. ೧೯೦೯ರಲ್ಲಿ ಬ್ರಿಟಿಷ್ ಪ್ರಭುತ್ವ ಮುಸ್ಲಿಮರಿಗೆ ಪ್ರತ್ಯೇಕ ಮತಕ್ಷೇತ್ರಗಳಿಗೆ ಒಪ್ಪಿಗೆ ನೀಡಿದಾಗಿನಿಂದ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವಣ ಸಂಬಂಧ ಹಳಿಸಿತ್ತು ಎಂಬುದನ್ನು ಇಲ್ಲಿ ಗಮನಿಸಬೇಕು. ಇನ್ನು ೧೯೦೭ರ ಸೂರತ್ ಅಧಿವೇಶನದಲ್ಲಿ ಕಾಂಗ್ರೆಸ್ ಸೌಮ್ಯವಾದಿ ಮತ್ತು ತೀವ್ರವಾದಿ ಎಂಬ ಎರಡು ಗುಂಪುಗಳಾಗಿ ಹೋಳಾಗಿ, ತೀವ್ರವಾದಿಗಳ ನಾಯಕರೆನಿಸಿದ್ದ ತಿಲಕರು, ಆರು ವರ್ಷಗಳ ಮಾಂಡಲೆ ಸೆರೆವಾಸದ ನಂತರ ಮೊದಲಬಾರಿಗೆ ಈ ಅಧಿವೇಶನಕ್ಕೆ ತಮ್ಮ ಅಪಾರ ಸಂಖ್ಯೆಯ ಬೆಂಬಲಿಗರೊಂದಿಗೆ ವಿಶೇಷ ರೈಲೊಂದರಲ್ಲಿ ಬಂದಿದ್ದರು.

ಜಿನ್ನಾರೂ ಈಗ ಅನಿಬೆಸೆಂಟ್‌ರಂತೆಯೇ ತಮ್ಮದೇ ಒಂದು 'ಹೋಂ ರೂಲ್ ಲೀಗ್'ನ್ನು ರಚಿಸಿಕೊಂಡಿದ್ದರಿಂದ ಈ ಇಬ್ಬರೂ 'ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು, ಅದನ್ನು ಪಡೆದೇ ತೀರುವೆ' ಎಂಬ ಘೋಷಣೆ ನೀಡಿದ್ದ ತಿಲಕರೊಂದಿಗೆ ರಾಜಿಯಾಗಿ 'ಹೋಂ ರೂಲ್'ನ್ನು ಒತ್ತಾಯಿಸಿ ಒಂದು ಖಡಕ್ ನಿರ್ಣಯವನ್ನು ಮಂಡಿಸಿದರು. ಅದು ಬ್ರಿಟಿಷ್ ಸಾಮ್ರಾಜ್ಯದ ಅಡಿಯಲ್ಲಿಯೇ ಸಿಕ್ಖರೂ ಸೇರಿದಂತೆ ಎಲ್ಲ ಧಾರ್ಮಿಕ ಅಲ್ಪಸಂಖ್ಯಾತರಿಗೂ ಪ್ರತ್ಯೇಕ ಮತಕ್ಷೇತ್ರಗಳಿರುವ ವ್ಯವಸ್ಥೆಯೊಂದಿಗೆ, ಕೇಂದ್ರ ಮತ್ತು ಪ್ರಾಂತ್ಯ ಮಟ್ಟಗಳ ಆಡಳಿತಗಳಲ್ಲಿ ಹೆಚ್ಚಿನ ಪರಸ್ಪರ ಸ್ವಾಯತ್ತತೆ, ಚುನಾಯಿತ ಜನ ಪ್ರಾತಿನಿಧ್ಯದ ಹೆಚ್ಚಳ ಮತ್ತು ಇನ್ನಷ್ಟು ಸ್ವಯಮಾಧಿಕಾರ ಹೊಂದಿದ ಸ್ವತಂತ್ರ ವ್ಯವಸ್ಥೆ ಆದಷ್ಟು ಬೇಗ ಸ್ಥಾಪಿತವಾಗಬೇಕೆಂಬ ಈ ನಿರ್ಣಯ ಅಧಿವೇಶನದಲ್ಲಿ ಅನುಮೋದಿತವಾಗಿ 'ಲಕ್ನೋ ಘೋಷಣೆ' ಎಂದು ಹೆಸರಾಯಿತು.

ಗಾಂಧಿ ತಂದ ಜನಪರ ತಿದ್ದುಪಡಿ

ನಿರ್ಣಯ ಕುರಿತ ಚರ್ಚೆಯ ಸಂದರ್ಭದಲ್ಲಿ ಗಾಂಧಿ, ಸ್ವಯಮಾಧಿಕಾರದ ಪ್ರಕ್ರಿಯೆ ಮತ್ತು ನಂತರದ ವ್ಯವಸ್ಥೆಗಳಲ್ಲಿ ಭಾರತದ ರೈತರು ಮತ್ತು ಕುಶಲಕರ್ಮಿಗಳಿಗೂ ಜಾಗವಿರಬೇಕೆಂಬ ತಿದ್ದುಪಡಿಯನ್ನು ಮಂಡಿಸಿ ಅದಕ್ಕೆ ಅನುಮೋದನೆ ಪಡೆದರು. ನಂತರ ಅವರು ಈ ಅಧಿವೇಶನದಲ್ಲೇ ಕಾಂಗ್ರೆಸ್ಸಿಗೆ ಅಗತ್ಯವಾದ ಸಾಮಾನ್ಯ ಭಾಷೆ ಎಂಬ ಗೋಷ್ಠಿಯ ಅಧ್ಯಕ್ಷತೆ ವಹಿಸಿ, ಕಾಂಗ್ರೆಸ್ಸಿನ ಪ್ರಾಂತೀಯ ಅಧಿವೇಶನಗಳನ್ನು ಆಯಾ ಪ್ರಾಂತೀಯ ಭಾಷೆಗಳಲ್ಲೇ ನಡೆಸಬೇಕೆಂಬ ನಿರ್ಣಯವನ್ನು ಮಂಡಿಸಿ ಅದಕ್ಕೂ ಅನುಮೋದನೆ ಪಡೆದರು.

ಸ್ವರಾಜ್ಯ ಕಲ್ಪನೆಯ ಸಾಕಾರಕ್ಕೆ ಗಾಂಧಿಯವರ ತಿದ್ದುಪಡಿ ಹೊಸದಿಕ್ಕು ನೀಡುವುದೆಂದು ತಕ್ಷಣ ಗಮನಿಸಿದವರಲ್ಲಿ ಮೋತಿಲಾಲ್ ನೆಹ್ರೂ ಮತ್ತು ಅವರ ಮಗ ಜವಾಹರಲಾಲ್ ಮುಖ್ಯರು ಎಂದು ಹೇಳಬಹುದು. ವಿಶೇಷವಾಗಿ ಜವಾಹರ್.

ಮೂಲತಃ ಕಾಶ್ಮೀರಿ ಬ್ರಾಹ್ಮಣರಾದ ವಕೀಲ ವೃತ್ತಿಯ ಮೋತಿಲಾಲರದ್ದು, ಅಲಹಾಬಾದ್‌ನ ಆಗರ್ಭ ಶ್ರೀಮಂತ ಕುಟುಂಬ. ಮಗ ಜವಾಹರ್ ತಂದೆಯಂತೆಯೇ ಲಂಡನ್‌ನಲ್ಲಿ ಬ್ಯಾರಿಸ್ಟರ್ ಪರೀಕ್ಷೆಯ ಜೊತೆಗೆ, ಹ್ಯಾರೋ ಶಾಲೆ ಮತ್ತು ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಓದಿ ಜಗತ್ತಿನ ಪ್ರಗತಿಶೀಲ ಸಾಮಾಜಿಕ ಮತ್ತು ರಾಜಕೀಯ ವಿಚಾರಗಳಿಂದ ಪ್ರಭಾವಿತರಾದ ಯುವ ವಿಚಾರವಂತರೆಂದು ಹೆಸರಾಗಿದ್ದರು. ನೆಹರೂ ಮತ್ತು ಪಟೇಲ್ ಕುಟುಂಬಗಳೆರಡೂ ಇಲ್ಲಿ ಗಾಂಧಿಗೆ ಆಪ್ತವಾದವು.

ಸುಮಾರು ಇದೇ ವೇಳೆಯಲ್ಲಿ ಭಾರತದ ಪ್ರವಾಸಕ್ಕೆ ಬಂದಿದ್ದ ಗಾಂಧಿಯವರ ಹಳೆಯ ಗೆಳೆಯ ಹೆನ್ರಿ ಪೊಲಾಕ್ ಗಾಂಧಿಯನ್ನು ಕಂಡು; ಅವರೀಗ ದ.ಆಫ್ರಿಕಾದಲ್ಲಿ ಕಂಡಿದ್ದಕ್ಕಿಂತ ಹೆಚ್ಚು ಕಳೆಯಾಗಿ ಕಾಣುತ್ತಿದ್ದಾರೆಂದು ಇನ್ನೊಬ್ಬ ಗೆಳೆಯ ಕಲೆನ್‌ಬಾಕ್‌ಗೆ ಪತ್ರ ಬರೆದನೆಂಬುದನ್ನು ಇಲ್ಲಿ ಉಲ್ಲೇಖಿಸಬಹುದು.

೨೭

ಚಂಪಾರಣ್ ಸತ್ಯಾಗ್ರಹ

ಚಂಪಾರಣ್ ಸತ್ಯಾಗ್ರಹ ಆಧುನಿಕ ಭಾರತದ ಇತಿಹಾಸದಲ್ಲಿ, ನಿರ್ದಿಷ್ಟವಾಗಿ ಗಾಂಧಿ ಬದುಕಿನಲ್ಲೆ ಎಷ್ಟು ಮಹತ್ವ ಪಡೆದಿದೆ ಎಂದರೆ, ಅದು ದ.ಆಫ್ರಿಕಾದಲ್ಲಿ ಹೋರಾಟದ ಅನುಭವದ ಆಧಾರದ ಮೇಲೆ ಭಾರತದಲ್ಲಿ ಗಾಂಧಿಯವರ ವ್ಯಕ್ತಿತ್ವ ಅರಳಿ ಒಂದು ನಿರ್ಣಾಯಕ ರೂಪ ಪಡೆದುದರ ಚರಿತ್ರೆಯೂ ಆಗಿರುವುದಲ್ಲದೆ ಭವಿಷ್ಯ ಭಾರತವನ್ನು ಕಟ್ಟಿದ ಹೊಸ ರಾಷ್ಟ್ರೀಯತೆಯ ಮೌಲ್ಯಗಳನ್ನೂ ನಿಷ್ಕರ್ಷಿಸಿತು. ಭಾರತದಲ್ಲಿ ಈ ಮೊದಲ ಸತ್ಯಾಗ್ರಹವನ್ನು ಅವರು ಎಷ್ಟು ಸಂಯಮದೊಂದಿಗೆ ಎಚ್ಚರದೊಂದಿಗೆ ಮತ್ತು ಗುರಿಯ ಸ್ಪಷ್ಟತೆಯೊಂದಿಗೆ, ಹೆಜ್ಜೆಯ ನಂತರ ಹೆಜ್ಜೆ ಇಟ್ಟು ಕಟ್ಟಿದರೆಂದರೆ, ಅದು ಯಶಸ್ವಿಯಾಗಿ ಕೊನೆಗೊಂಡಾಗ, ಅದು ಕೇವಲ ರೈತರ ಪರವಾದ ಹೋರಾಟವಾಗಿರದೆ, ಬಲಿಷ್ಠ ಪ್ರಭುತ್ವದಡಿ ಭಯಭೀತವಾಗಿದ್ದ ಜನಸಮೂಹವನ್ನು ಅದರ ಮುಡಿಯಿಂದ ಅಡಿಯವರೆಗಿನ ಸದಸ್ಯರೆಲ್ಲರನ್ನು ರಾಜಕೀಯ-ಸಾಮಾಜಿಕ-ಸಾಂಸ್ಕೃತಿಕ ಜಾಗೃತಿಯೊಡನೆ ನಿರ್ಭೀತಿಯೆಡೆಗೆ ಕೊಂಡೊಯ್ಯುವ ಮಹಾಗಾಥೆಯೇ ಆಗಿತ್ತು.

ಗಾಂಧಿ ಲಕ್ನೋ ಕಾಂಗ್ರೆಸ್ ಅಧಿವೇಶನದಲ್ಲಿ, ಸ್ವರಾಜ್ಯದ ಪ್ರಯತ್ನದಲ್ಲಿ ರೈತರನ್ನೂ ಒಳಗೊಳ್ಳಬೇಕೆಂದು ಪ್ರತಿಪಾದಿಸಿದ್ದರ ಹಿಂದೆ ಆ ಅಧಿವೇಶನದಲ್ಲಿ ತಾವು ಕೇಳಿಸಿಕೊಂಡ ಬಡರೈತರ ಸಂಕಟದ ಧ್ವನಿಯೂ ಕೆಲಸ ಮಾಡಿತ್ತು. ಆ ಅಧಿವೇಶನಕ್ಕೆ ಉತ್ತರ ಬಿಹಾರದ ಚಂಪಾರಣ್ ಜಿಲ್ಲೆಯ ರೈತರೂ ಬಂದಿದ್ದರು. ಅವರು ತಮ್ಮ ಸಮಸ್ಯೆಗಳನ್ನು ತಿಲಕರೊಂದಿಗೆ ಹೇಳಿಕೊಂಡಾಗ ಅವರು ತಮ್ಮ ಹೋರಾಟಕ್ಕೂ ಇದಕ್ಕೂ ಸಂಬಂಧವಿಲ್ಲವೆಂದುಬಿಟ್ಟರು. ಈ ರೈತರ ಪೈಕಿ, ಹತ್ತು ವರ್ಷಗಳಿಂದ ಭೂಮಾಲೀಕರ ದೌರ್ಜನ್ಯಗಳ ವಿರುದ್ಧ ರೈತರನ್ನು ಸಂಘಟಿಸಿ, ಪ್ರಭುತ್ವದ ಶಿಕ್ಷೆಗಳಿಗೂ ಒಳಗಾಗಿದ್ದ ರಾಜಕುಮಾರ್ ಶುಕ್ಲಾ ಎಂಬಾತ ಗಾಂಧಿಯವರ ಬಳಿ ತನ್ನ ಸಂಕಷ್ಟ ತೋಡಿಕೊಂಡ. ಗಾಂಧಿ ಶುಕ್ಲಾರ ಮಾತುಗಳನ್ನು ಸಹಾನುಭೂತಿಯಿಂದ ಕೇಳಿಸಿಕೊಂಡು, ಸ್ವರಾಜ್ಯ ಕುರಿತ ಠರಾವಿನಲ್ಲಿ ರೈತರ ವಿಷಯವನ್ನೂ ಸೇರಿಸುವಂತೆ ಮಾಡಿದ ಬದ್ಧತೆಯಿಂದಾಗಿ, ಆತ ಅವರನ್ನು ಚಂಪಾರಣ್‌ಗೆ ತನ್ನೊಂದಿಗೆ ಬಂದು ರೈತರ ಸಂಕಷ್ಟಗಳನ್ನು ಕಣ್ಣಾರೆ ನೋಡಿ ಏನಾದರೂ ಮಾಡಬೇಕೆಂದು ಅವರ ಕಾಲನ್ನೇ ಹಿಡಿದ. ಗಾಂಧಿಗೆ ಉತ್ತರ ಬಿಹಾರ ಸಂಪೂರ್ಣ ಅಪರಿಚಿತ ಸ್ಥಳ. ಏನೂ ಸಿದ್ಧತೆ ಇಲ್ಲದೆ ಅಲ್ಲಿ ಹೋಗಿ ತಾವೇನು ಮಾಡಬಹುದು ಎಂದು ಯೋಚಿಸಿದ ಗಾಂಧಿಯವರಿಗೆ ಏನೂ ತೋಚದೆ, ತಮಗೆ

ಸದ್ಯಕ್ಕೆ ಕಾನ್ಪುರ ಮತ್ತು ಅಹಮದಾಬಾದ್‌ಗಳಲ್ಲಿ ಪೂರ್ವ ನಿಯೋಜಿತ ಕೆಲಸಗಳಿವೆ ಎಂದು ಹೇಳಿ ಶುಕ್ಲಾ ಮತ್ತವರ ಸಹಚರರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು. ಗಾಂಧಿ ಕಾನ್ಪುರಕ್ಕೆ ಹೋದರೆ ಅಲ್ಲಿಯೂ ಶುಕ್ಲಾ ಪ್ರತ್ಯಕ್ಷ. ಅಲ್ಲಿಂದ ತಪ್ಪಿಸಿಕೊಂಡು ಅಹಮದಾಬಾದ್‌ಗೆ ಬಂದರೆ, ಅಲ್ಲಿನ ಆಶ್ರಮದಲ್ಲಿಯೂ ಶುಕ್ಲಾ ಹಾಜರು! ಗಾಂಧಿಗೆ ಈತ ಮಂಡಿಸುತ್ತಿರುವ ರೈತರ ಸಮಸ್ಯೆ ನಿಜವಾಗಿಯೂ ತುರ್ತು ಪರಿಹಾರವನ್ನು ಬೇಡುವಂಥದ್ದು ಎನ್ನಿಸಿತು. ಆತನಿಂದ ಸಮಸ್ಯೆಯ ಎಲ್ಲ ಸಾಧ್ಯ ವಿವರಗಳನ್ನೂ ಪಡೆದು ಆಶ್ರಮದಲ್ಲಿ ಆತನನ್ನು ಉಪಚರಿಸಿದ ಅವರು, ತಾವು ೧೯೧೭ ರ ಏಪ್ರಿಲ್‌ನಲ್ಲಿ ಕಲ್ಕತ್ತಾಗೆ ಬರುತ್ತಿರುವುದಾಗಿಯೂ ಆಗ ಆತನೂ ಅಲ್ಲಿಗೆ ಬಂದರೆ ಇಬ್ಬರೂ ಒಟ್ಟಿಗೆ ಚಂಪಾರಣ್‌ಗೆ ಹೋಗಬಹುದೆಂದೂ ಹೇಳಿ ಬೀಳ್ಕೊಟ್ಟರು.

ರೈತರ ಶೋಷಣೆಯ 'ತೀನ್ ಕಠಿಯಾ' ಪದ್ಧತಿ

ಹಿಮಾಲಯ ತಪ್ಪಲಿನ ನೇಪಾಳದ ಗಡಿಗೆ ಹೊಂದಿಕೊಂಡಂತಿದ್ದ, ಹಲವು ನದಿಗಳ ಮತ್ತು ದಟ್ಟ ಅರಣ್ಯದ ನಾಡಾಗಿದ್ದ ಚಂಪಾರಣ್ ಜಿಲ್ಲೆ, ನೀಲಿ ಬೆಳೆ ತೋಟಗಳಿಗೆ ಪ್ರಸಿದ್ಧವಾಗಿತ್ತು. ಕೈಗಾರಿಕೆಗಳಿಗೆ ಬೇಕಾದ ನೀಲಿ ಬಣ್ಣ ತಯಾರಿಸಲು ಬೇಕಾದ ಈ ಬೆಳೆಗೆ, ಹತ್ತೊಂಬತ್ತನೇ ಶತಮಾನದಲ್ಲಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬಹಳ ಬೆಲೆಯಿತ್ತು. ಹೀಗಾಗಿ ಅನೇಕ ನಿವೃತ್ತ ಬ್ರಿಟಿಷ್ ನಾಗರಿಕ ಅಧಿಕಾರಿಗಳು ಮತ್ತು ಸೇನಾಧಿಕಾರಿಗಳು ಇಲ್ಲಿ ಸಾವಿರಾರು ಎಕರೆ ಭೂಮಿಯನ್ನು ಸ್ವಾಧೀನಕ್ಕೆ ಪಡೆದು, ನೀಲಿ ತಯಾರಿಸುವ ಕಾರ್ಖಾನೆಗಳನ್ನು ಸ್ಥಾಪಿಸಿ, ಸ್ಥಳೀಯ ರೈತರಿಗೆ ಭೂಮಿಯನ್ನು ಗೇಣಿಗೆ ಕೊಟ್ಟು ನೀಲಿ ಬೆಳೆ ಬೆಳೆಯುವುದನ್ನು ರೂಢಿ ಮಾಡಿಸಿದ್ದರು. ಜೊತೆಗೆ ರೈತ ತನ್ನ ಸ್ವಂತ ಭೂಮಿಯಲ್ಲೂ ಒಂದಷ್ಟು ಭೂಮಿಯಲ್ಲಿ ನೀಲಿ ಬೆಳೆದು ಕಾರ್ಖಾನೆಗಳಿಗೆ ಒಪ್ಪಿಸಬೇಕೆಂಬುದು ಸರ್ಕಾರದ ಕಾನೂನಾಗಿತ್ತು. ಪ್ರತಿ ಹಿಡುವಳಿಯ ಶೇ. ೧೫ರಿಂದ ೨೦ರಷ್ಟು ಭಾಗದಷ್ಟಲ್ಲಾದರೂ ನೀಲಿ ಬೆಳೆ ಬೆಳೆಯುವುದು ಕಡ್ಡಾಯವಾಗಿತ್ತು. ಇದನ್ನು 'ತೀನ್ ಕಠಿಯಾ' ಪದ್ಧತಿ ಎಂದು ಕರೆಯಲಾಗುತ್ತಿತ್ತು. ಈ ಭೂಮಾಲೀಕರು ನೀಲಿಯ ಬೆಲೆ ಹೆಚ್ಚಿದಂತೆ, ಹೆಚ್ಚಿನ ನೀಲಿ ಬೆಳೆ ಬೆಳೆಯುವಂತೆ ರೈತರನ್ನು ಬಲಾತ್ಕರಿಸುತ್ತಿದ್ದರು. ಇದರಿಂದ ರೈತರು ತಮಗೆ ಅಗತ್ಯವಾದ ಬೆಳೆ ಬೆಳೆದುಕೊಳ್ಳಲು ಕಷ್ಟವಾಗಿ ಅವರ ಜೀವನ ದುರ್ಭರವಾಗಿತ್ತು.

ಆದರೆ ಹತ್ತೊಂಬತ್ತನೇ ಶತಮಾನದ ಕೊನೆಯ ಹೊತ್ತಿಗೆ, ಜರ್ಮನಿ ಕೃತಕ ನೀಲಿಯನ್ನು ಕಂಡುಹಿಡಿದು ಮಾರುಕಟ್ಟೆಗೆ ಬಿಡುಗಡೆ ಮಾಡತೊಡಗಿದಾಗ ಬಿಹಾರದ ನೀಲಿಯ ಬೆಲೆ ಕುಸಿದುಹೋಯಿತು. ಆಗ ಕಾರ್ಖಾನೆಗಳ ಭೂಮಾಲೀಕರು ರೈತರಿಗೆ ಭೂಮಿ ವಾಪಸ್ ಕೊಟ್ಟು ಅವರಿಂದ ಅದಕ್ಕಾಗಿ ಪರಿಹಾರ ವಸೂಲು ಮಾಡಲು ಮುಂದಾದರು. ಆಗ ಈ 'ತೀನ್ ಕಠಿಯಾ'ದ ತರಲೆಯೇ ಬೇಡವೆಂದು ಕೆಲವು ರೈತರು ಪರಿಹಾರ ಒಪ್ಪಂದಕ್ಕೂ ಬಂದರು. ಆದರೆ ಮೊದಲ ವಿಶ್ವಯುದ್ಧ ಆರಂಭವಾದಂತೆ ಜರ್ಮನಿಯಿಂದ ನೀಲಿ ಪೂರೈಕೆ ನಿಂತು ಹೋಗುತ್ತಿದ್ದಂತೆ, ಮತ್ತೆ ಅದರ ಬೆಲೆ ಗಗನ ಮುಟ್ಟಿದಾಗ, ನೀಲಿ ಬೆಳೆ ಬೆಳೆಯಲು ಮತ್ತೆ ರೈತರ ಮೇಲೆ ಒತ್ತಡ ಆರಂಭವಾಯಿತು. ರೈತರು ತಾವು ಕೊಟ್ಟ ಪರಿಹಾರವನ್ನು ವಾಪಸ್ ಕೇಳತೊಡಗಿ ಪರಿಸ್ಥಿತಿ

ಗೊಂದಲಮಯವಾಗಿ ರೈತರ ಮೇಲೆ ದೌರ್ಜನ್ಯ ಹೆಚ್ಚತೊಡಗಿತು. ರೈತರಿಗೆ ತೀನ್ ಕಠಿಯಾ ಕಾನೂನಿನಿಂದ ಬಿಡುಗಡೆ ಸಿಕ್ಕಿ ತಮಗೆ ಬೇಕಾದ ಬೆಳೆ ಬೆಳೆದುಕೊಳ್ಳುವ ಸ್ವಾತಂತ್ರ್ಯ ಬೇಕಿತ್ತು. ಆದರೆ ರೈತರು ಪುಕ್ಕಟೆ ಬೆಳೆದುಕೊಡುತ್ತಿದ್ದ ನೀಲಿ ಬೆಳೆಯ ಅಪಾರ ಲಾಭದ ಹಣದಿಂದ ಅಡವಿಯಲ್ಲಿ ವನ್ಯಪ್ರಾಣಿಗಳ ಶಿಕಾರಿ ಸ್ಪರ್ಧೆಗಳನ್ನು ಮಾಡಿಕೊಂಡು ಸುಖ-ಸಂತೋಷಗಳ ಜೀವನ ನಡೆಸುತ್ತಿದ್ದ ಕಾರ್ಖಾನೆ ಮತ್ತು ತೋಟಗಳ ಮಾಲೀಕರಿಗೆ ಅದು ಇಷ್ಟವಿರಲಿಲ್ಲ. ಹೀಗಾಗಿ ಅಲ್ಲಿ ಸಂಘರ್ಷ ಶುರುವಾಗಿತ್ತು. ರಾಜಕುಮಾರ ಶುಕ್ಲಾ ಮತ್ತವರ ರೈತ ಸಂಗಾತಿಗಳು ಈ ಸಂಘರ್ಷದ ಪರಿಹಾರ ಕಾಣದೆ ಹೈರಾಣಾಗಿದ್ದರು.

ಸತ್ಯಾಗ್ರಹಕ್ಕೆ ಸಿದ್ಧತೆ

ಏಪ್ರಿಲ್ ಮೊದಲ ವಾರದಲ್ಲಿ ಗಾಂಧಿ ಕಲ್ಕತ್ತಾಗೆ ಹೋದಾಗ ಶುಕ್ಲಾ ಅಲ್ಲಿಗೆ ಬಂದಿದ್ದರು. ಅಲ್ಲಿ ಗಾಂಧಿಯವರ ಕೆಲಸಗಳು ಮುಗಿದ ಮೇಲೆ ಇಬ್ಬರೂ ಒಟ್ಟಿಗೆ ರೈಲಿನಲ್ಲಿ ಪಟ್ನಾಗೆ ಪ್ರಯಾಣ ಮಾಡಿದರು. ಅವರು ಅಲ್ಲಿ ಹೋದದ್ದು ಶುಕ್ಲಾಗೆ ವಕೀಲರಾಗಿ ಪರಿಚಯವಿದ್ದ ರಾಜೇಂದ್ರ ಪ್ರಸಾದರ ಮನೆಗೆ. ಆಗ ಪ್ರಸಾದರು ಊರಲ್ಲಿರಲಿಲ್ಲ. ಅವರ ಮನೆಯ ಪರಿಚಾರಕರು ಅಪರಿಚಿತ ಗಾಂಧಿಯನ್ನು ಅಸ್ಪೃಶ್ಯನಿರಬಹುದೆಂದು ಭಾವಿಸಿ ಬಾವಿಯ ನೀರು ಮುಟ್ಟಲೂ ಅವಕಾಶ ಕೊಡಲಿಲ್ಲ. ಗಾಂಧಿಯವರ ಚಂಪಾರಣ್ ಸತ್ಯಾಗ್ರಹದ ರೂಪುರೇಷೆ ಇಲ್ಲಿಂದಲೇ ಆರಂಭವಾಯಿತು ಎಂದು ಹೇಳಬಹುದು.

ಮಾರನೆಯ ದಿನವೂ ರಾಜೇಂದ್ರ ಪ್ರಸಾದರು ಬರಲಿಲ್ಲವಾದ್ದರಿಂದ ಏಪ್ರಿಲ್ ೧೧ರಂದು ಅವರು ಚಂಪಾರಣ್‌ಗೆ ಹೋಗುವ ಮಾರ್ಗದಲ್ಲಿದ್ದ ಉತ್ತರ ಬಿಹಾರದ ಅತಿ ದೊಡ್ಡ ನಗರ ಮುಜಾಫ್ಫರ್‌ಪುರಕ್ಕೆ ಹೊರಟರು. ಅಲ್ಲಿ ರೈತರ ಸಂಕಷ್ಟಗಳ ಬಗ್ಗೆ ಇನ್ನಷ್ಟು ಮಾಹಿತಿ ಕಲೆಹಾಕುವುದು ಈ ಭೇಟಿಯ ಉದ್ದೇಶವಾಗಿತ್ತು. ನಗರಕ್ಕೆ ಬಂದೊಡನೆ ಅವರು ಪ್ರಾಂತ್ಯದ ಆಯುಕ್ತರಿಗೆ ತಾವು ನೀಲಿ ಬೆಳೆಗಾರರ ಸಮಸ್ಯೆಯ ಅಧ್ಯಯನಕ್ಕಾಗಿ ಬಂದಿರುವುದಾಗಿ ತಿಳಿಸಿದರು. ಅಲ್ಲಿ ಗಾಂಧಿ ತಾವು ಈ ಹಿಂದೆ ಶಾಂತಿನಿಕೇತನದಲ್ಲಿ ಭೇಟಿ ಮಾಡಿದ್ದ ಜೆ.ಬಿ. ಕೃಪಲಾನಿ ಅವರ ಅತಿಥಿಯಾಗಿ ಉಳಿದುಕೊಂಡರು. ಕೃಪಲಾನಿ ಸ್ಥಳೀಯ ಕಾಲೇಜೊಂದರಲ್ಲಿ ಇತಿಹಾಸದ ಉಪನ್ಯಾಸಕರಾಗಿದ್ದರು. ಗಾಂಧಿ, ನಗರಕ್ಕೆ ಬಂದಿರುವ ಸುದ್ದಿ ಹೇಗೋ ಹರಡಿ ಸುತ್ತಮುತ್ತಲ ಹಳ್ಳಿಗಳ ರೈತರು ನಗರದಲ್ಲಿ ಜಮಾಯಿಸಹತ್ತಿದರು. ಗಾಂಧಿ ಅವರ ಅಹವಾಲುಗಳನ್ನು ಕೇಳಿಸಿಕೊಂಡು ಟಿಪ್ಪಣಿಗಳನ್ನು ಮಾಡಿಕೊಂಡರು.

ನಂತರ ಗಾಂಧಿ ವಿವಾದದ ಇನ್ನೊಂದು ಬದಿಯ ಮಾಹಿತಿ-ಅಭಿಪ್ರಾಯ ಪಡೆಯಲು ಕಾರ್ಖಾನೆಗಳ ಒಡೆಯರು ಮತ್ತು ತೋಟಗಳ ಭೂಮಾಲೀಕರ ಸಂಘದ ಪದಾಧಿಕಾರಿಗಳನ್ನೂ ಮತ್ತು ಸಂಬಂಧಪಟ್ಟ ಸರ್ಕಾರದ ಅಧಿಕಾರಿಯನ್ನೂ ಭೇಟಿ ಮಾಡಿ ಮಾತುಕತೆ ನಡೆಸುವ ಪ್ರಯತ್ನ ಮಾಡಿದರು. ಆದರೆ ಅವರಿಂದ ಯಾವುದೇ ಸಹಕಾರ ಸಿಗಲಿಲ್ಲ. ಬದಲಿಗೆ ಅವರೊಬ್ಬ ಅನಪೇಕ್ಷಿತ ವ್ಯಕ್ತಿಯಾಗಿದ್ದು ಕೂಡಲೇ ಚಂಪಾರಣ್ ಬಿಟ್ಟುಹೋಗಲು ಸೂಚಿಸಲಾಯಿತು. ಇದನ್ನು ಲೆಕ್ಕಿಸದ ಗಾಂಧಿ

೧೫ರಂದು ಚಂಪಾರಣ್‌ನ ರಾಜಧಾನಿ ಮೋತಿಹಾರಿಗೆ ಹೊರಟರು. ಕೆಲ ಸ್ಥಳೀಯ ವಕೀಲರ ಮತ್ತು ರೈತರ ಗುಂಪುಗಳೂ ಅವರನ್ನು ಹಿಂಬಾಲಿಸಿದವು.

ಗಾಂಧಿಯವರ ಆನೆ ಪಯಣ–ಅಲ್ಲಿಗೇ ಸಮನ್ಸ್!

ಗಾಂಧಿಯನ್ನು ಸ್ವಾಗತಿಸಲು ಮೋತಿಹಾರಿಯ ರೈಲ್ವೇ ನಿಲ್ದಾಣದಲ್ಲಿ ಸೇರಿದ್ದ ಜನಸಾಗರ ಮತ್ತು ಅದು ಹಾಕುತ್ತಿದ್ದ ಜಯಘೋಷಗಳನ್ನು ಕೇಳಿ ಜಿಲ್ಲಾಧಿಕಾರವರ್ಗ ಗಾಬರಿಯಾಯಿತು. ನಗರದಲ್ಲಿ ತಮ್ಮನ್ನು ಸ್ವಾಗತಿಸಿದ ಗೋರಖ್‌ಬಾಬು ಎಂಬುವವರ ಮನೆಯಲ್ಲಿ ವಸತಿ ಹೂಡಿದ ಗಾಂಧಿ ಮತ್ತು ಅವರ ಸಹಚರರು ಅದನ್ನೇ ತಮ್ಮ ಕಾರ್ಯಾಲಯವನ್ನಾಗಿ ಮಾಡಿಕೊಂಡರು. ಆ ಹೊತ್ತಿಗೆ ಪಕ್ಕದ ಹಳ್ಳಿಯೊಂದರಲ್ಲಿ ಬಡರೈತನೊಬ್ಬನ ಮೇಲೆ ಭೂಮಾಲೀಕರ ದೌರ್ಜನ್ಯ ನಡೆದಿದೆ ಎಂದು ಕೇಳಿದ ಗಾಂಧಿ ಆ ಹಳ್ಳಿಗೆ ಹೊರಟರು. ಅದು ಎಂತಹ ದುರ್ಗಮವಾದ ಜಾಗವೆಂದರೆ ಅಲ್ಲಿಗೆ ಆನೆಯ ಮೇಲೆ ಕೂತು ಮಾತ್ರ ಹೋಗಲು ಸಾಧ್ಯವಿತ್ತು.

ಆನೆಯ ಮೇಲೆ ಕೂತಾಗಲೂ ಗಾಂಧಿ ಸುಮ್ಮನಿರದೆ ಆ ಭಾಗದಲ್ಲಿ ವ್ಯಾಪಕವಾಗಿ ಕಂಡಿದ್ದ 'ಪರದಾ' ಪದ್ಧತಿಯ ಬಗ್ಗೆ ತಮ್ಮೊಂದಿಗೆ ಪ್ರಯಾಣ ಹೊರಟಿದ್ದ ರೈತರಿಗೆ ತಿಳಿಹೇಳಿದರು. ಅದು ಮಹಿಳೆಯರನ್ನು ಗಾಳಿ ಬೆಳಕಿನಿಂದ ತಡೆದು ಅವರ ಆರೋಗ್ಯವನ್ನು ಕೆಡಿಸುವುದಲ್ಲದೆ, ಕೂಡಿ ದುಡಿಯುವ ಸಂತೋಷದಿಂದ ಗಂಡ ಹೆಂಡಿರಿಬ್ಬರನ್ನೂ ವಂಚಿಸುತ್ತದೆ ಎಂದು ಅವರು ವಿವರಿಸಿದರು. ಆ ಹೊತ್ತಿಗೆ ಪೊಲೀಸನೊಬ್ಬ ಅವರನ್ನು ಸೈಕಲ್ಲೊಂದರ ಮೇಲೆ ಹಿಂಬಾಲಿಸಿ ಬಂದು ಜಿಲ್ಲಾ ಮ್ಯಾಜಿಸ್ಟ್ರೇಟರ ನೋಟಿಸೊಂದನ್ನು ನೀಡಿ ರಸೀದಿ ಪಡೆದನು. ಗಾಂಧಿ ತಕ್ಷಣವೇ ಮೋತಿಹಾರಿಗೆ ವಾಪಸ್ ಹೊರಟರು. ಅಲ್ಲಿ ಮ್ಯಾಜಿಸ್ಟ್ರೇಟ್, ಅವರಿಗೆ ಮುಂದಿನ ರೈಲುಗಾಡಿಯಲ್ಲಿಯೇ ನಗರ ಬಿಟ್ಟು ಹೋಗಲು ಆಜ್ಞಾಪಿಸಿದ. ಗಾಂಧಿ ತಾವು ಸ್ಥಳೀಯ ಸಮಸ್ಯೆಯೊಂದರ ಅಧ್ಯಯನಕ್ಕಾಗಿ ಬಂದಿದ್ದು, ಊರು ಬಿಟ್ಟು ಹೋಗಲು ಕಾರಣವಿಲ್ಲ ಎಂದರು. ಆದೇಶದ ಈ ಉಲ್ಲಂಘನೆಯ ಅಪರಾಧದ ವಿಚಾರಣೆ ನಡೆಸಲು ಅವರನ್ನು ಮಾರನೆ ದಿನ ನ್ಯಾಯಾಲಯಕ್ಕೆ ಬರಲು ಸೂಚಿಸಲಾಯಿತು.

ಆತ್ಮಸಾಕ್ಷಿ ಎಂಬ ಅತ್ಯುಚ್ಚ ಕಾನೂನು!

ಮಾರನೆಯ ಬೆಳಗ್ಗೆ, ಅಂದರೆ ಏಪ್ರಿಲ್ ೧೮ರಂದು ಗಾಂಧಿ ರೈತರ ದೂರು ದುಮ್ಮಾನಗಳ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಕ್ರೋಢೀಕರಿಸುವ ಕೆಲಸದಲ್ಲಿ ತೊಡಗಿದರು. ಆ ಹೊತ್ತಿಗೆ ಸುಮಾರು ೭೦೦ ಅಹವಾಲುಗಳನ್ನು ಕ್ರೋಢೀಕರಿಸಿದ್ದರು. ಮಧ್ಯಾಹ್ನ ಪೊಲೀಸರ ಸುಪರ್ದಿಯಲ್ಲಿ ನ್ಯಾಯಾಲಯದ ಬಳಿ ಬಂದಾಗ ಅವರನ್ನು ಸಾಕಷ್ಟು ಕಾಲ ಕಾಯಿಸಲಾಯಿತು. ಕಾರಣ, ನ್ಯಾಯಾಲಯದ ಆವರಣ ಮತ್ತು ಆಸುಪಾಸು ಗಾಂಧಿಗೆ ಜೈಕಾರ ಕೂಗುತ್ತಿದ್ದ ಜನರಿಂದ ಕಿಕ್ಕಿರಿದಿದ್ದು, ಪೊಲೀಸರು ನ್ಯಾಯಾಲಯವನ್ನು ಜನರ 'ಮುತ್ತಿಗೆ'ಯಿಂದ ಮುಕ್ತಗೊಳಿಸಬೇಕಿತ್ತು. ಗಾಂಧಿ ವಿಚಾರಣೆ ತಡವಾಗುತ್ತಿರುವುದನ್ನು ಖಂಡಿಸಿದರು. ಪರಿಸ್ಥಿತಿ ತಕ್ಕಮಟ್ಟಿಗೆ ತಹಬಂದಿಗೆ ಬಂದನಂತರ ಆರಂಭವಾದ ವಿಚಾರಣೆಯಲ್ಲಿ ತಾವು ಜಿಲ್ಲಾಧಿಕಾರದ ಆದೇಶವನ್ನು ಧಿಕ್ಕರಿಸುವ ಮೂಲಕ ಅಪರಾಧವೆಸಗಿರುವುದಾಗಿ ಒಪ್ಪಿಕೊಂಡರಲ್ಲದೆ ಅದಕ್ಕಾಗಿ ನ್ಯಾಯಾಲಯ

ವಿಧಿಸುವ ಶಿಕ್ಷೆಗೆ ಬದ್ಧರಾಗಿರುವುದಾಗಿ ತಿಳಿಸಿದರು. ಆದರೆ ತಾವು ಪ್ರಭುತ್ವದ ಕಾನೂನಿಗೆ ಅವಿಧೇಯತೆ ತೋರಬೇಕೆಂದೇನೂ ಇಚ್ಛಿಸಿಲ್ಲ; ಬದಲಿಗೆ ಈ ಕಾನೂನಿಗಿಂತ ಅತ್ಯುಚ್ಚವಾದ ನನ್ನ ಆತ್ಮಸಾಕ್ಷಿ ಎಂಬ ಕಾನೂನಿಗೆ ವಿಧೇಯತೆ ತೋರಬೇಕಾಗಿರುವುದು ತಮ್ಮ ಕರ್ತವ್ಯವಾಗಿದೆ ಎಂದು ಹೇಳಿದರು. ನ್ಯಾಯಾಧೀಶರು ಈ ಮಾತಿನಿಂದ ಕೊಂಚ ಅಪ್ರತಿಭರಾದಂತೆ ತೋರುತ್ತಿದ್ದಂತೆ, ತಾವು ಇಲ್ಲಿಗೆ ರೈತರ ಆಹ್ವಾನದ ಮೇರೆಗೆ ಅವರ ಸಮಸ್ಯೆಗಳನ್ನು ತಿಳಿದು ಮಾನವತೆಯ ಸೇವೆಯ ದೃಷ್ಟಿಯಿಂದ ಅವರ ಸಮಸ್ಯೆಗಳ ಪರಿಹಾರದ ಪ್ರಯತ್ನಕ್ಕಾಗಿ ಬಂದಿರುವುದೇ ಹೊರತು ಯಾವುದೇ ಅಶಾಂತಿಯನ್ನು ಹರಡುವುದಕ್ಕಲ್ಲ ಎಂದು ವಿವರಿಸಿದರು.

ನ್ಯಾಯಾಧೀಶರು ಯೋಚನಾಪರರಾದರು. ಇನ್ನೆರಡು ತಾಸುಗಳ ನಂತರ ತಾವು ತೀರ್ಪು ನೀಡುವುದಾಗಿಯೂ, ಅಷ್ಟರವರೆಗೆ ಗಾಂಧಿ ಜಾಮೀನು ಪಡೆದು ನ್ಯಾಯಾಲಯದಲ್ಲಿರಬೇಕೆಂದು ಸೂಚಿಸಿದರು. ಗಾಂಧಿ ತಮಗೆ ಜಾಮೀನು ಬೇಕಿಲ್ಲ ಎಂದಾಗ ನ್ಯಾಯಾಧೀಶರಿಗೆ ಏನೂ ತೋಚದೆ ಅವರನ್ನು ಬಿಡುಗಡೆಗೊಳಿಸಿದರು. ಎರಡು ತಾಸುಗಳ ನಂತರ ನ್ಯಾಯಾಲಯಕ್ಕೆ ಬಂದ ನ್ಯಾಯಾಧೀಶರು ಸದ್ಯಕ್ಕೆ ತೀರ್ಪು ನೀಡಲಾಗುತ್ತಿಲ್ಲವೆಂದೂ ಕೆಲವು ದಿನಗಳ ನಂತರ ಮತ್ತೆ ವಿಚಾರಣೆ ಮಾಡುವುದಾಗಿಯೂ ಹೇಳಿ ಗಾಂಧಿಯವರನ್ನು ಪೊಲೀಸರಿಂದ ಬಂಧಮುಕ್ತಗೊಳಿಸಿದರು. ಎಲ್ಲೆಲ್ಲೂ ಜಯಕಾರ ಮೊಳಗಿತು.

ಸರ್ಕಾರಕ್ಕೆ ಮುಜುಗರವನ್ನುಂಟು ಮಾಡಿದ ಈ ಸಂಗತಿ ಅಧಿಕಾರದ ಮೇಲ್ಮಟ್ಟಗಳಲ್ಲಿ ಚರ್ಚೆಗೆ ವಸ್ತುವಾಯಿತು. ಇದರ ಫಲವಾಗಿ ಜಿಲ್ಲಾಧಿಕಾರ ವಿಷಯವನ್ನು ಸರಿಯಾಗಿ ನಿಭಾಯಿಸಿಲ್ಲವೆಂಬ ಅಭಿಪ್ರಾಯ ವ್ಯಕ್ತವಾಗಿ, ರಾಜ್ಯದ ಲೆ. ಗವರ್ನರ್ ಅವರು ಜಿಲ್ಲೆಯ ಆಯುಕ್ತರಿಗೆ ಛೀಮಾರಿ ಹಾಕಿದ್ದರಲ್ಲದೆ ಗಾಂಧಿಗೆ ಮುಕ್ತವಾಗಿ ಕೆಲಸ ಮಾಡಲು ಬಿಡಲು ಸೂಚಿಸಿದರು. ಇದರ ಹಿಂದೆ, ಗಾಂಧಿ ಮುಜಫ್ಫರ್‌ಪುರಕ್ಕೆ ಬಂದು ರೈತರೊಡನೆ ಮಾತನಾಡಿದ ಬಳಿಕ, ಎಲ್ಲ ವಿಷಯ ತಿಳಿಸಿ ಹೊಸ ವೈಸ್‌ರಾಯ್ ಚೆಮ್ಸ್‌ಫೋರ್ಡ್‌ಗೆ ಪತ್ರ ಬರೆದಿದ್ದುದೂ ಕೆಲಸ ಮಾಡಿರಬಹುದು.

ವಕೀಲರಿಗೆ ಕಿವಿಮಾತು–ಜನಪರ ಶಿಕ್ಷಣ

ಆ ಹೊತ್ತಿಗೆ ಪಟ್ನಾದಿಂದ ಕಾಂಗ್ರೆಸ್ಸಿಗರಾಗಿದ್ದ ರಾಜೇಂದ್ರ ಪ್ರಸಾದ್, ಬ್ರಜ್‌ಕಿಶೋರ್ ಬಾಬು (ಜಯಪ್ರಕಾಶ್ ನಾರಾಯಣರ ಭಾವಿ ಮಾವ), ಮುಸ್ಲಿಂ ಲೀಗ್‌ನ ಮಝರುಲ್ ಹಕ್ ಮುಂತಾದ ಹಿರಿಯ ವಕೀಲರನ್ನು ಒಳಗೊಂಡ ಒಂದು ದೊಡ್ಡ ತಂಡವೇ ಮೋತಿಹಾರಿಗೆ ಬಂದಿತ್ತು. ಈ ವಕೀಲರೆಲ್ಲರೂ ರೈತರ ಮೊಕದ್ದಮೆಗಳನ್ನು ನಡೆಸುತ್ತಿದ್ದವರೇ. ಗಾಂಧಿ, ರೈತರು ಮತ್ತು ವಕೀಲರೊಂದಿಗೆ ವ್ಯಾಪಕ ಮಾತುಕತೆ ನಡೆಸಿ ತಾವು ಸಂಗ್ರಹಿಸಿದ್ದ ರೈತರ ಅಹವಾಲುಗಳಲ್ಲಿದ್ದ ವಿವರಗಳು ನಿಜವೆಂದು ಖಚಿತಪಡಿಸಿಕೊಂಡರು. ವಕೀಲರ ಸಹಕಾರವಿದ್ದರೆ ತಾವು ಈ ಹೋರಾಟದ ನೇತೃತ್ವವನ್ನು ವಹಿಸಿಕೊಳ್ಳುವುದಾಗಿ ಹೇಳಿದರು. ವಕೀಲರು ತಬ್ಬಿಬ್ಬಾಗಿ ತಮ್ಮ ಪಾತ್ರವೇನು ಎಂದು ಕೇಳಿದಾಗ 'ಹೆದರಬೇಡಿ, ನೀವು ಜೈಲಿಗೆ ಹೋಗುವ ಪ್ರಮೇಯವೇನೂ ಬರಲಾರದು. ಆದರೆ ರೈತರಿಂದ ದೊಡ್ಡ ಮೊತ್ತದ ಶುಲ್ಕ

ಪಡೆಯುವುದನ್ನು ನಿಲ್ಲಿಸಿ. ಅವರ ಪರವಾದ ಕೆಲಸವನ್ನು ಸೇವೆಯೆಂದು ಪರಿಗಣಿಸಿ ಅವರ ಅಹವಾಲುಗಳನ್ನು ಕೇಳಿ ಮೇಲಧಿಕಾರಿಗಳಿಗೆ ಸಲ್ಲಿಸಲು ಅವುಗಳ ಕರಡು ಬರೆದುಕೊಡಿ' ಎಂದರು. ನ್ಯಾಯಾಧೀಶರ ಹುದ್ದೆಗಳ ನಿರೀಕ್ಷೆಯಲ್ಲಿದ್ದ ಹಲವು ಹಿರಿಯ ವಕೀಲರು ಗಾಂಧಿ ಮನವಿಗೆ ಸ್ಪಂದಿಸಿ ರೈತರ ಅಹವಾಲುಗಳನ್ನು ದಾಖಲು ಮಾಡತೊಡಗಿದರು. ದಾಖಲೆಗಳನ್ನು ನೋಡಿ ಗಾಂಧಿ ಹೇಳಿದರು: 'ರೈತರ ಈ ಸಮಸ್ಯೆಗೆ ನ್ಯಾಯಾಲಯಗಳಲ್ಲಿ ಪರಿಹಾರವಿಲ್ಲ. ನಾವು ಮಾಡಬೇಕಾದ ಕೆಲಸವೆಂದರೆ ತಮ್ಮ ದಮನಕ್ಕೆ ಕಾರಣವಾಗಿರುವ ಪ್ರಭುತ್ವ ಕುರಿತ ಅವರ ಭೀತಿಯನ್ನು ಹೋಗಲಾಡಿಸುವುದು. ಅದೇ ಎಲ್ಲ ಸಮಸ್ಯೆಗಳ ಪರಿಹಾರಕ್ಕೆ ನಾಂದಿ'

ನಂತರ ಗಾಂಧಿ, ಆ ತಂಡವನ್ನು, ತಾವು ಸೆರೆಮನೆ ಸೇರುವಂತಾದರೆ ನೀವು ಮುಂದೇನು ಮಾಡುವಿರಿ? ಎಂದು ಕೇಳಿದರು. ಅದಕ್ಕವರು ನೀವು ಒಳಕ್ಕೆ ಹೋದ ಮೇಲೆ ನಮಗೇನು ಕೆಲಸ? ವಾಪಸ್ ಪಟ್ನಾಕ್ಕೆ ಹೋಗುತ್ತೇವೆ ಎಂದರು. ಆಗ ಗಾಂಧಿ, ಇದರಿಂದ ಗೇಣಿ ರೈತರ ಸಮಸ್ಯೆ ಪರಿಹಾರವಾಗುತ್ತದೆಯೇ? ಇದರ ಪರಿಹಾರದಲ್ಲಿ ನಿಮ್ಮ ಪಾತ್ರವೇನೂ ಇರಲಾರದೆ? ಎಂದು ಪ್ರಶ್ನಿಸಿದಾಗ, ಅವರೆಲ್ಲ ಪರಸ್ಪರ ಸಮಾಲೋಚಿಸಿ, ನೀವು ಸೆರೆಮನೆಗೆ ಹೋದರೆ ನಾವೂ ನಿಮ್ಮನ್ನು ಹಿಂಬಾಲಿಸುತ್ತೇವೆ ಎಂದು ತಿಳಿಸಿದರು. ಆಗ ಸಮಾಧಾನದ ನಿಟ್ಟುಸಿರಿಟ್ಟ ಗಾಂಧಿ, 'ಹಾಗಾದರೆ ಚಂಪಾರಣ್ ಸಮಸ್ಯೆ ಬಗೆಹರಿಯಿತೆಂದೇ ಅರ್ಥ' ಎಂದು ನುಡಿದರು. ಗಾಂಧಿ ಸೆರೆಮನೆಗೆ ಹೋಗುವಂತಾದರೆ ರಾಜೇಂದ್ರ ಪ್ರಸಾದ್ ಮತ್ತು ಮದನಮೋಹನ ಮಾಳವೀಯರು ಚಳುವಳಿಯ ನೇತೃತ್ವ ವಹಿಸಬೇಕೆಂದು ವಕೀಲರ ತಂಡ ನಿರ್ಧರಿಸಿತು.

ಈ ಎಲ್ಲ ಚರ್ಚೆಗಳ ನಂತರ ಗಾಂಧಿ ವಕೀಲ ತಂಡದ ಜೀವನಶೈಲಿಯತ್ತ ಗಮನ ಹರಿಸಿದರು. ವಕೀಲರೆಲ್ಲ ತಮ್ಮೊಡನೆ ಅಡುಗೆ ಸಹಾಯಕರು ಮತ್ತು ಸೇವಕರನ್ನು ಕರೆದು ತಂದಿರುವುದನ್ನು ಟೀಕಿಸಿದ ಗಾಂಧಿ, ಸಾಮಾನ್ಯ ಅಡುಗೆಮನೆಯೊಂದರ ವ್ಯವಸ್ಥೆ ಮಾಡಿದರು ಹಾಗೂ ವಕೀಲರ ತಿಂಡಿ–ತೀರ್ಥಗಳ ವಿಪರೀತ ಖಯಾಲಿಯನ್ನೂ, ಭರ್ಜರಿ ಊಟ ಮತ್ತು ರಾತ್ರಿ ಅದನ್ನು ಬಹುತಡವಾಗಿ ಮಾಡುವುದನ್ನೂ ಬಿಡಬೇಕೆಂದು ಸೂಚಿಸಿದರು. ರೈತರೂ ಸೇರಿದಂತೆ ಎಲ್ಲರೂ ಒಂದೇ ಅಡುಗೆ ಮತ್ತು ಒಟ್ಟಿಗೆ ಊಟಮಾಡುವ ಕ್ರಮ ಆರಂಭಿಸಿದರು.

ಚಂಪಾರಣ್‌ನಲ್ಲಿ ಕೆಲವು ದಿನಗಳ ಕೆಲಸ ಎಂದು ಬಂದಿದ್ದ ಗಾಂಧಿಗೆ, ಇದು ಕೇವಲ ನೀಲಿ ಬೆಳೆಗಾರರ ಸಮಸ್ಯೆಯಲ್ಲ; ಇಲ್ಲಿ ಮಾಡಬೇಕಾದ ಕೆಲಸ ತುಂಬ ದೊಡ್ಡದಿದೆ ಎನಿಸತೊಡಗಿ, ಅವರು ತಮ್ಮ ಕಾರ್ಯ ಚಟುವಟಿಕೆಗಳಿಗೆ ಒಂದು ವಿಶಾಲವಾದ ಮನೆಗೆ ಸ್ಥಳಾಂತರಗೊಳ್ಳಬಯಸಿದರು. ಅದಕ್ಕೊಂದು ದಿನ ಮತ್ತು ವೇಳೆ ನಿಗದಿ ಪಡಿಸಿದರು. ಆದರೆ ಆ ವೇಳೆಗೆ ರಾಜೇಂದ್ರ ಪ್ರಸಾದರೂ ಸೇರಿದಂತೆ ಹಲವು ವಕೀಲರು, ಹೊಸ ಜಾಗ ಇನ್ನೂ ಪೂರ್ಣ ಸ್ವಚ್ಛಗೊಂಡಿಲ್ಲ ಎಂಬ ಕಾರಣಕ್ಕೆ ಹೊರಡದಾದಾಗ ಗಾಂಧಿ ಅವರನ್ನು ಅಶಿಸ್ತಿನವರೆಂದು ಛೇಡಿಸಿ ಅವರನ್ನು ಅಲ್ಲಿಂದ ಹೊರಡಿಸಿದರಲ್ಲದೆ, ತಮ್ಮೊಂದಿಗೆ ಅವರೆಲ್ಲರನ್ನೂ ಹೊಸ ಜಾಗವನ್ನು ಪೂರ್ಣ ಸ್ವಚ್ಛಗೊಳಿಸುವ ಕೆಲಸದಲ್ಲಿ ತೊಡಗಿಸಿಕೊಂಡರು.

ಸರ್ಕಾರದಿಂದ ವಿಚಾರಣಾ ಆಯೋಗದ ನೇಮಕ

ಜೂನ್ ಹೊತ್ತಿಗೆ ಗಾಂಧಿ ಮತ್ತು ಅವರ ತಂಡ, ಸುಮಾರು ಏಳೆಂಟು ಸಾವಿರ ರೈತರ ಅರ್ಜಿಗಳನ್ನು ಸಿದ್ಧಪಡಿಸಿತ್ತು. ಈ ಕೆಲಸಕ್ಕೆ ಪ್ರಭುತ್ವ ಯಾವ ಅಡ್ಡಿಯನ್ನೂ ಉಂಟುಮಾಡಲಿಲ್ಲ. ಈ ಅರ್ಜಿಗಳೊಂದಿಗೆ ಗಾಂಧಿ ಜೂನ್ ಮೊದಲ ವಾರದಲ್ಲಿ ಬಿಹಾರದ ಬೇಸಿಗೆ ರಾಜಧಾನಿಯಾಗಿದ್ದ ರಾಂಚಿಗೆ ತೆರಳಿ, ಅಲ್ಲಿ ಮೊಕ್ಕಾಂ ಮಾಡಿದ್ದ ಲೆ.ಗವರ್ನರ್‌ರನ್ನು ನಾಲ್ಕಾರು ಬಾರಿ ಕಂಡು ಸಮಸ್ಯೆಯ ವಿವಿಧ ಆಯಾಮಗಳನ್ನು ವಿವರಿಸಿ, ಅವನ್ನು ಅವರಿಗೆ ಸಲ್ಲಿಸಿದರು. ಇವನ್ನು ಪರಿಶೀಲಿಸಿದ ಸರ್ಕಾರ, ಚಂಪಾರಣ್ ಕೃಷಿ ಸಂಬಂಧಿ ವಿಚಾರಣಾ ಆಯೋಗವೊಂದನ್ನು ಜೂನ್ ೧೦ರಂದು ಪ್ರಕಟಿಸಿತು. ಈ ಆಯೋಗದಲ್ಲಿ ನಾಗರಿಕ ಸೇವೆಯ ಅಧಿಕಾರಿ, ಭೂ ಒಡೆಯರ ಒಬ್ಬ ಪ್ರತಿನಿಧಿ ಮತ್ತು ರೈತರ ಪ್ರತಿನಿಧಿಯಾಗಿ ಗಾಂಧಿ ಇದ್ದರು.

ಆಯೋಗದ ವಿಚಾರಣಾ ಕೆಲಸಗಳ ಸಂಬಂಧವಾಗಿ ಗಾಂಧಿ ಆರೇಳು ತಿಂಗಳುಗಳ ಕಾಲ ಅಲ್ಲಿರಬೇಕಾಗಿ ಬಂತು. ಆದರೆ ಈ ಅವಧಿಯ ಮಧ್ಯೆ ಅವರು ಹಲವು ಬಾರಿ ಬಾಂಬೆ, ಅಹಮದಾಬಾದ್ ಮತ್ತಿತರ ಸ್ಥಳಗಳಿಗೂ ಹೋಗಿಬರಬೇಕಾಗುತ್ತಿತ್ತು. ಅವರು ದೂರದಿಂದಲೇ ಅಹಮದಾಬಾದ್‌ನ ತಮ್ಮ ಆಶ್ರಮದ ಮೇಲೆ ನಿಗಾ ಇಟ್ಟಿದ್ದರು. ಮಗನ್‌ಲಾಲ್‌ಗೆ ಆಗಾಗ್ಗೆ ಪತ್ರಗಳನ್ನು ಬರೆದು ಅಲ್ಲಿನ ಕೆಲಸ ಕಾರ್ಯಗಳ ಸ್ಥಿತಿಗತಿಗಳ ಬಗ್ಗೆ ವಿಚಾರಿಸುತ್ತಿದ್ದರು. ಈ ವಿಷಯದಲ್ಲಿ ಅವರೆಷ್ಟು ಗಮನ ಕೊಡುತ್ತಿದ್ದರೆಂದರೆ, ಅಹಮದಾಬಾದ್ ಸುತ್ತಮುತ್ತ ಪ್ಲೇಗ್ ಹರಡಲಾರಂಭಿಸಿದೆ ಎಂಬ ಸುದ್ದಿಯ ಹಿನ್ನೆಲೆಯಲ್ಲಿ ಆಶ್ರಮದ ಶೌಚಾಲಯಗಳಲ್ಲಿನ ಮಲದ ಗುಂಡಿಗಳನ್ನು ಸುರಕ್ಷಿತವಾಗಿ ಮುಚ್ಚಿ ಹೊಸ ಗುಂಡಿಗಳನ್ನು ತೋಡಬೇಕು ಎಂದು ಮಗನ್‌ಗೆ ಪತ್ರ ಬರೆದಿದ್ದರು. ಅವರು ಪ್ರತಿ ತಿಂಗಳೂ ಆಶ್ರಮದ ಆದಾಯ-ವೆಚ್ಚಗಳ ಲೆಕ್ಕ ಕೇಳುತ್ತಿದ್ದರು. ಬಹುಶಃ ಇಂತಹ ಒಂದು ಸಂದರ್ಭದಲ್ಲೆ ಅವರಿಗೆ ಮಣಿಲಾಲನು ಹರಿಲಾಲನಿಗೆ ನೆರವಾಗಲು ಆಶ್ರಮದ ಹಣ ಕಳಿಸಿದ್ದನೆಂದು ಗೊತ್ತಾಗಿ ಅವನನ್ನು ಮದ್ರಾಸ್‌ಗೆ ಅಟ್ಟಿದ್ದು.

ಇದೇ ಸಮಯದಲ್ಲಿ ಗಾಂಧಿ ಚಂಪಾರಣ್‌ದ ರೈತರ ಸಮಸ್ಯೆಗೆ, ಆ ಪ್ರದೇಶದಲ್ಲಿನ ಶಿಕ್ಷಣ ಮತ್ತು ಆರೋಗ್ಯದ ಅರಿವಿನ ಕೊರತೆಗಳು ಕಾರಣವೆಂದು ಕಂಡುಕೊಂಡರು. ಅಲ್ಲಿ ಶಾಲೆ ಮತ್ತು ಆರೋಗ್ಯಾಲಯಗಳನ್ನು ಸ್ಥಾಪಿಸಲು ನಿರ್ಧರಿಸಿದರು. ಇದಕ್ಕಾಗಿ, ಬಾಂಬೆ-ಅಹಮದಾಬಾದ್‌ಗಳ ಉದ್ಯಮಿಗಳು ದೇಣಿಗೆ ನೀಡಲು ಮುಂದೆ ಬಂದರೂ ಅದನ್ನು ನಿರಾಕರಿಸಿ, ಸ್ಥಳೀಯ ಬಾಂಧವ್ಯವನ್ನು ವೃದ್ಧಿಪಡಿಸಲು ಬಿಹಾರದ ಅನುಕೂಲಸ್ಥ ಕುಟುಂಬಗಳಿಂದ ಧನ ಸಹಾಯ ಕೋರಿದರು. ಸಾಕಷ್ಟು ಹಣ ಸಂಗ್ರಹವಾಯಿತು. ಗೆಳೆಯ ಪ್ರಾಣಜೀವನ ಮೆಹ್ತಾರೂ ಹಣ ಕಡಿಮೆ ಬಿದ್ದರೆ ಅದನ್ನು ತಾವು ಕೊಡುವುದಾಗಿ ಹೇಳಿದರು. ಗಾಂಧಿ ತಮಗೆ ಈ ಸಂದರ್ಭದಲ್ಲಿ 'ದ.ಆಫ್ರಿಕಾದಲ್ಲಿನ ಅಂತಿಮ ಘಟ್ಟದ, ವಿಶೇಷವಾಗಿ ನ್ಯೂಕ್ಯಾಸಲ್‌ನ ಸುತ್ತಮುತ್ತಲಿಂದ, ತೋಟಗಳ ಕಾರ್ಮಿಕರು ಸೇರಿಕೊಂಡು ಮುಂದುವರೆಸಿದ ಹೋರಾಟದ ಹುರುಪಿನ ದಿನಗಳ ನೆನಪಾಗುತ್ತಿದೆ. ಇಲ್ಲಿನ ರೈತರ ಉತ್ಸಾಹ ಮತ್ತು ಕೆಚ್ಚುಗಳನ್ನು ನೋಡಿದರೆ ಇಲ್ಲೂ ನಮಗೆ ತಂಬಿನಾಯ್ಡು, ಸೊರಾಬ್ಜಿ,

ವಳ್ಳಿಯಮ್ಮಗಳಷ್ಟೇ ಅಲ್ಲ, ಕಛಾಲಿಯಾಗಳೂ ಎದುರಾಗುವ ಎಲ್ಲ ಸಾಧ್ಯತೆಗಳಿವೆ' ಎಂದು ಆಗ ಭಾರತದ ಪ್ರವಾಸದಲ್ಲಿದ್ದ ಗೆಳೆಯ ಪೋಲಾಕ್‌ಗೆ ಪತ್ರ ಬರೆದರು.

ಚಂಪಾರಣ್‌ನಲ್ಲಿ ಆರಂಭವಾದ ಸಾಮಾಜಿಕ ಕಾರ್ಯ

ಚಂಪಾರಣ್‌ದ ಕೆಲಸಗಳಿಗಾಗಿ, ಆಗತಾನೇ ಸತ್ಯಾಗ್ರಹ ಆಶ್ರಮ ಸೇರಿದ್ದ ಮಹದೇವ ದೇಸಾಯಿ ಮತ್ತು ನರಹರಿ ಪಾರೀಖ್‌ರೆಂಬ ಇಬ್ಬರು ಉತ್ಸಾಹಿ ತರುಣರು ಮತ್ತು ಅವರ ಪತ್ನಿಯರೂ ಬಂದರು. ಜೊತೆಗೆ ಬಾಂಬೆ, ಪೂನಾ ಮತ್ತು ದೇಶದ ಬೇರೆ ಬೇರೆ ಸ್ಥಳಗಳಿಂದ ಹಲವರು ಸ್ವಯಂಸೇವಕರಾಗಿ ಕೆಲಸ ಮಾಡಲು ಬಂದರು. ಅವರಲ್ಲಿ ಯುವ ದಂಪತಿಗಳು, ಸಂಸ್ಕೃತ ವಿದ್ವಾಂಸರು, ಎಂಜಿನಿಯರ್‌ಗಳು, ಬರೀ ಫಲಾಹಾರದ ಮೇಲೆ ಬದುಕುವ ವ್ರತಧಾರಿಗಳು, ನಿವೃತ್ತ ನೌಕರರು ಹೀಗೆ ವೈವಿಧ್ಯಮಯ ಹಿನ್ನೆಲೆಯುಳ್ಳವರು ಗಾಂಧಿ ಕರೆಗೆ ಓಗೊಟ್ಟರು. ಗಾಂಧಿ ತಮ್ಮ ಪತ್ನಿ ಹಾಗೂ ಚಿಕ್ಕಮಗ ದೇವದಾಸನನ್ನೂ ಕರೆಸಿಕೊಂಡರು. ಜಿಲ್ಲೆಯ ಆರು ಹಳ್ಳಿಗಳಲ್ಲಿ ಶಾಲೆಗಳನ್ನು ತೆರೆದರು ಮತ್ತು ಜಿಲ್ಲೆಯಾದ್ಯಂತ ಜನಜಾಗೃತಿ ಆಂದೋಲನ ಆರಂಭಿಸಿದರು. ಅಕ್ಷರಾಭ್ಯಾಸ, ಲೆಕ್ಕ, ವೈಯಕ್ತಿಕ ಮತ್ತು ಸಾಮುದಾಯಿಕ ಶುಚಿತ್ವದ ಪಾಠಗಳ ಜೊತೆಗೆ ಗೋರಕ್ಷಣೆ, ಹಿಂದೂ-ಮುಸ್ಲಿಂ ಐಕ್ಯತೆಯ ಪಾಠಗಳನ್ನೂ ಆರಂಭಿಸಲಾಯಿತು. ಕಸ್ತೂರಬಾ ಮಹಿಳೆಯರ ಜೊತೆ ಬೆರೆತು ಅವರಿಂದ ತರಕಾರಿ-ಹಣ್ಣು ಇತ್ಯಾದಿ ಗ್ರಾಮೀಣ ಉತ್ಪನ್ನಗಳ ಸಣ್ಣ ವ್ಯಾಪಾರ ಸಾಹಸಗಳನ್ನು ಮಾಡಿಸಿದರು.

ಈ ಆಂದೋಲನಕ್ಕಾಗಿ ಒಂದಿಬ್ಬರು ವೈದ್ಯರನ್ನೂ ಕರೆಸಿ, ಅಲ್ಲಿ ವ್ಯಾಪಕವಾಗಿದ್ದ ಚರ್ಮ ರೋಗ ಮತ್ತು ಮಲೇರಿಯಾಗಳಿಗೆ ಹರಳೆಣ್ಣೆ, ಕ್ವಿನೈನ್ ಮತ್ತು ಗಂಧಕ ಮಿಶ್ರಿತ ಮದ್ದುಗಳ ಪ್ರಯೋಗ ಮಾಡಲಾಯಿತು. ಇದರಿಂದ ವಿಚಲಿತಗೊಂಡ ಐರೋಪ್ಯ ಭೂಒಡೆಯರು ರೈತರ ಸಮಸ್ಯೆಗಳ ಅಧ್ಯಯನಕ್ಕೆಂದು ಬಂದ ಗಾಂಧಿ ಇಲ್ಲಿ ರಾಜಕೀಯ ಆಂದೋಲನ ಮಾಡತೊಡಗಿದ್ದಾರೆ ಎಂದು ಪತ್ರಿಕೆಗಳಲ್ಲಿ ಬರೆದರು. ಆದರೆ ಪ್ರಭುತ್ವಕ್ಕೆ ಗಾಂಧಿ ಕೆಲಸಗಳಲ್ಲೇನೂ ಅಪರಾಧ ಕಾಣಲಿಲ್ಲ. ನಂತರದ ದಿನಗಳಲ್ಲಿ ಪೋಲಾಕ್ ಮತ್ತು ಆ್ಯಂಡ್ರ್ಯೂಸ್ ಕೂಡ ಗಾಂಧಿ ಪರಿವಾರವನ್ನು ಸೇರಿಕೊಂಡರು. ಫಿಜಿಯಲ್ಲಿ ಭಾರತೀಯ ರೈತರ ನೆರವಿಗಾಗಿ ಹೊರಟಿದ್ದ ಆ್ಯಂಡ್ರ್ಯೂಸ್, ತಾವು ಬಿಳಿಯರಾಗಿ ಇಲ್ಲಿನ ಆಂದೋಲನದಲ್ಲಿ ಭಾಗವಹಿಸುವುದರಿಂದ ಆಂದೋಲನಕ್ಕೊಂದು ವಿಶೇಷ ಬಲ ಬರುತ್ತದೆಂದು ಹೇಳುತ್ತಾ ಅಲ್ಲಿಯೇ ಉಳಿಯಲು ಯತ್ನಿಸಿದಾಗ, ಗಾಂಧಿ ನಮ್ಮ ಹೋರಾಟ ನಿಜವಾಗಿ ನೈತಿಕವಾಗಿರುವುದಾದರೆ ಇಂತಹ ಕಾರಣದ ಬೆಂಬಲ ಬೇಕಿಲ್ಲವೆಂದು ಹೇಳಿ ಅವರನ್ನು ಫಿಜಿಗೆ ಸಾಗಹಾಕಿದರು!

ಗಾಂಧಿಯ ಸಂಧಾನ-ರೈತರ ಜಯಘೋಷ!

ವಿಚಾರಣಾ ಆಯೋಗ ರೈತರ ಅರ್ಜಿಗಳನ್ನಲ್ಲದೆ ಭೂ ಮತ್ತು ಕಾರ್ಖಾನೆಗಳ ಒಡೆಯರ ಮನವಿಗಳನ್ನೂ ಆಲಿಸಿತು. ಕೊನೆಗೆ ರೈತರಿಗೆ ಅನ್ಯಾಯವಾಗಿದೆ ಎಂಬ ಸರ್ವಾನುಮತದ ತೀರ್ಮಾನಕ್ಕೆ ಬಂದು 'ತೀನ್ ಕಠಿಯಾ ಪದ್ಧತಿ'ಯನ್ನು ನಿಷೇಧಿಸಲು ಮತ್ತು ನೀಲಿ ಬೆಳೆಯ ಬೆಲೆ ಕುಸಿದಿದ್ದಾಗ ಒಡೆಯರು ರೈತರಿಂದ ವಸೂಲು ಮಾಡಿದ್ದ ಪರಿಹಾರವನ್ನು ಅವರು ಹಿಂದಿರುಗಿಸಬೇಕೆಂದು ಹೇಳಿ ವರದಿ ನೀಡಿತು. ಆದರೆ

ತೋಟಗಳ ಒಡೆಯರು ತಮಗೆ ಪೂರ್ತಿ ಹಣ ಹಿಂದಿರುಗಿಸಲು ಕಷ್ಟ ಎಂದಾಗ ಗಾಂಧಿ, 'ಆಯಿತು ಅರ್ಧ ಕೊಡಿ' ಎಂದರು. ಮತ್ತೆ ಒಡೆಯರು, ಅದೂ ಕಷ್ಟ ಕಾಲು ಭಾಗ ಕೊಡುತ್ತೇವೆ ಎಂದಾಗ ಗಾಂಧಿ ಮರುಮಾತಾಡದೆ 'ಆಯಿತು ಅಷ್ಟೇ ಕೊಡಿ' ಎಂದು ಒಪ್ಪಂದವನ್ನು ಇತ್ಯರ್ಥಗೊಳಿಸಿದರು. ಅಕ್ಟೋಬರ್ ೩ರಂದು, ಇದು ಕೊಟ್ಟು ತೆಗೆದುಕೊಳ್ಳುವ ಸಾಮಾಜಿಕ ಸಾಮರಸ್ಯ ಉದ್ದೇಶದ ಒಪ್ಪಂದವೆಂದು ಬಣ್ಣಿಸಿದ ಗಾಂಧಿ, ಇದರಲ್ಲಿ ತಮ್ಮ ಉದಾರತೆಗೆ ನೀಡಿದ ಕಾರಣ, ಇದು ಹಣಕ್ಕಾಗಿ ನಡೆದ ಹೋರಾಟವಲ್ಲ. ಭಯದ ವಿರುದ್ಧ ಸ್ವಾಭಿಮಾನ ಮತ್ತು ಕಾನೂನುಬದ್ಧ ಹಕ್ಕುಗಳಿಗಾಗಿ ನಡೆದ ಹೋರಾಟ. ರೈತರು ಈಗ ಎಲ್ಲ ಅಸಮಾನ ಕರಾರು ಮತ್ತು ಸಂಬಂಧಗಳಿಂದ ಮುಕ್ತರಾಗಿ ಆತ್ಮವಿಶ್ವಾಸ ಗಳಿಸಿದ್ದಾರೆ. ಅದು ಈ ಹೋರಾಟದ ಮುಖ್ಯ ಗುರಿಯಾಗಿತ್ತು ಎಂಬುದು. ಅಕ್ಟೋಬರ್ ೩ ರಂದು ಆಯೋಗ ತನ್ನ ಶಿಫಾರ್ಸುಗಳನ್ನು ಪ್ರಕಟಿಸಿತು.

ಗೇಣಿದಾರ ರೈತರು ಇದನ್ನು ಮುಕ್ತ ಮನಸ್ಸಿನಿಂದ ಒಪ್ಪಿಕೊಂಡರು. ಏಕೆಂದರೆ ಅವರು ಭೂಮಾಲೀಕರ ಹಲವು ಬಂಧನಗಳಿಂದ ಮುಕ್ತರಾಗಿ ಹೋರಾಟದ ಕೆಚ್ಚು ಬೆಳೆಸಿಕೊಂಡಿದ್ದರು. ಒಬ್ಬ ಅನಾಮಿಕ ರೈತನ ಹಠಕ್ಕೆ ಸ್ಪಂದಿಸಿ ತಾವು ಆರಂಭಿಸಿದ ಒಂದು ಕಾರ್ಯಾಚರಣೆ, ತನ್ನ ನಿರೀಕ್ಷೆಯನ್ನೂ ಮೀರಿ ಫಲ ಕೊಟ್ಟಿದೆ ಎಂಬ ತೃಪ್ತಿಯಿಂದ ಗಾಂಧಿ, ಅಕ್ಟೋಬರ್ ೧೧ರಂದು ಮೋತಿಹಾರಿಯಿಂದ ಬೆಟಿಯಾ ಮಾರ್ಗವಾಗಿ ಅಹಮದಾಬಾದ್‌ಗೆ ಹೊರಟರು. ಬೆಟಿಯಾ ರೈಲ್ವೆ ನಿಲ್ದಾಣದಲ್ಲಿ ಬಾಜಾ ಭಜಂತ್ರಿಯೊಂದಿಗೆ ಜನ ಕಿಕ್ಕಿರಿದು ಜಯಕಾರಗಳ ಮಧ್ಯೆ ಕುಣಿಯುತ್ತಾ ಹಾಡುತ್ತಾ ಅವರ ಮೇಲೆ ಹೂಮಳೆಯನ್ನೇ ಸುರಿಸಿ ಅವರನ್ನು ಬೀಳ್ಕೊಟ್ಟಿತು.

ಇದೆಲ್ಲದರ ಪರಿಣಾಮವೆಂಬಂತೆ ಚಂಪಾರಣ್‌ದ ತೋಟಗಳ ಮಾಲೀಕರೆಲ್ಲ ಒಂದೆರಡು ವರ್ಷಗಳಲ್ಲೇ ಭೂಮಿಯನ್ನು ರೈತರಿಗೇ ಬಿಟ್ಟು ಬೇರೆಡೆಗಳಿಗೆ ಸ್ಥಳಾಂತರಗೊಂಡರು. ಭಾರತದಲ್ಲಿ ಗಾಂಧಿಯವರ ಮೊದಲ ಸತ್ಯಾಗ್ರಹ, ಅದರ ಯಾವುದೇ ಆಧಾಳ ತತ್ವಗಳಿಗೆ ಚ್ಯುತಿಯಾಗದಂತೆ ಮತ್ತು ಶೈಕ್ಷಣಿಕ ವಿಸ್ತರಣೆಗಳೊಂದಿಗೆ ಪೂರ್ಣ ಯಶಸ್ವಿಯಾಗಿತ್ತು. ಇದರಿಂದ ಗಾಂಧಿ ಮತ್ತು ಅವರ ಸತ್ಯಾಗ್ರಹದ ಸಂದೇಶ ದೇಶದ ಮೂಲೆ ಮೂಲೆಗಳಿಗೂ ತಲುಪಿತು. ಗಾಂಧಿ ಮೋತಿಹಾರಿ ನ್ಯಾಯಾಲಯದಲ್ಲಿ ನೀಡಿದ 'ಪ್ರಭುತ್ವದ ಕಾನೂನನ್ನು ಅದಕ್ಕೂ ಮೇಲಿನ ಕಾನೂನಾದ ಆತ್ಮಸಾಕ್ಷಿ ಒಪ್ಪುತ್ತಿಲ್ಲವಾದ್ದರಿಂದ ಪಾಲಿಸಲಾಗುತ್ತಿಲ್ಲ' ಎಂಬ ಹೇಳಿಕೆಯನ್ನು ಓದಿದ ರಾವ್‌ಸಾಹೇಬ್ ಹರಿಲಾಲ್‌ಭಾಯಿ ಎಂಬ ಗುಜರಾತ್ ಕ್ಲಬ್ ಎಂಬ ಪ್ರತಿಷ್ಠಿತ ಸಂಸ್ಥೆಯ ಅಧ್ಯಕ್ಷ, ತಾನು ಕೂತಿದ್ದ ಕುರ್ಚಿಯಿಂದ ಚಂಗನೆ ನೆಗೆದು ನಿಂತು 'ಇದೋ ನಮ್ಮ ಧೀರ ನಾಯಕ ಜನಿಸಿದ್ದಾನೆ! ಈತನೇ ನಮ್ಮ ಗುಜರಾತ್ ಸಭಾದ ಮುಂದಿನ ಅಧ್ಯಕ್ಷ!' ಎಂದು ಎಲ್ಲರಿಗೂ ಕೂಗಿ ಕೂಗಿ ಹೇಳಿದನಂತೆ! ಅಲ್ಲೇ ಬ್ರಿಡ್ಜ್ ಆಡುತ್ತಿದ್ದ ವಲ್ಲಭ್‌ಭಾಯಿ ಪಟೇಲ್ ಮತ್ತು ಅವರ ವಕೀಲ ಗೆಳೆಯರು 'ಖಂಡಿತ' ಎಂದು ಅದನ್ನು ಅನುಮೋದಿಸಿದರಂತೆ. ಅದೇನೇ ಇರಲಿ ಈ ಸತ್ಯಾಗ್ರಹದಿಂದ ಗಾಂಧಿಯ ಆಶ್ರಮಕ್ಕೆ ರಾಜೇಂದ್ರ ಪ್ರಸಾದ್ ಮತ್ತು ಜೆ.ಬಿ. ಕೃಪಲಾನಿ ಎಂಬ ಅಮೂಲ್ಯ ಕಾರ್ಯಕರ್ತರು ದೊರೆತರೆಂಬುದು ಸತ್ಯ.

■

೪೭

ನಾಯಕತ್ವದ ಹೊಸ ಎತ್ತರಗಳತ್ತ

ಗಾಂಧಿ ಚಂಪಾರಣ್ ಸತ್ಯಾಗ್ರಹದಲ್ಲಿ ಭಾಗವಹಿಸುತ್ತಿದ್ದ ಕಾಲದಲ್ಲೇ ದೇಶದ ರಾಜಕಾರಣದಲ್ಲಿ ಹೊಸ ಮತ್ತು ಮುಖ್ಯ ಬೆಳವಣಿಗೆಗಳು ನಡೆಯುತ್ತಿದ್ದವು. ಇವುಗಳ ಜೊತೆಗೇ ಗಾಂಧಿ ವೈಯಕ್ತಿಕವಾಗಿ ಭಾಗವಹಿಸಬೇಕಾದ ಅನೇಕ ಘಟನೆಗಳೂ ಸೃಷ್ಟಿಯಾಗಿದ್ದವು. ಅಹಮದಾಬಾದ್‌ನಲ್ಲಿ ಪ್ಲೇಗ್ ಹರಡಿ ಸತ್ಯಾಗ್ರಹ ಆಶ್ರಮವನ್ನು ಕೊಚ್ರಾಬ್‌ನಿಂದ ದೂರಕ್ಕೆ ಸ್ಥಳಾಂತರಿಸಬೇಕಿತ್ತು. ಅಲ್ಲದೇ ಆಶ್ರಮಕ್ಕೆ ಸೇರುವವರ ಸಂಖ್ಯೆ ಹೆಚ್ಚುತ್ತಿದ್ದಂತೆ, ಈಗ ಆಶ್ರಮವಿದ್ದ ಕಟ್ಟಡ ಕಿರಿದೆನಿಸತೊಡಗಿತ್ತು. ಪ್ಲೇಗ್‌ನ ಕಾರಣದ ಪರೋಕ್ಷ ಪರಿಣಾಮವಾಗಿಯೇ ಅಹಮದಾಬಾದ್‌ನ ಹತ್ತಿ ಗಿರಣಿಗಳಲ್ಲಿ ಆರಂಭವಾದ ಕಾರ್ಮಿಕ ಮುಷ್ಕರವನ್ನು ಪರಿಹರಿಸುವಲ್ಲಿಯೂ ಅವರು ಪಾತ್ರ ವಹಿಸಬೇಕಾಗಿ ಬಂತು. ಅಲ್ಲದೆ ಇದೇ ಸಮಯದಲ್ಲಿ ಖೇಡಾದಲ್ಲಿ ರೈತರ ಹೋರಾಟದ ಕರೆಗೆ ಕೂಡ ಅವರು ಓಗೊಡಬೇಕಾಯಿತು.

ದೇಶದಲ್ಲಿ ತಿಲಕ್ ಮತ್ತು ಅನಿಬೆಸೆಂಟರ ನೇತೃತ್ವದಲ್ಲಿ 'ಹೋಂ ರೂಲ್'ನ್ನು ಆಗ್ರಹಿಸಿ ಚಳುವಳಿ ನಡೆದಿತ್ತು. ಚಳುವಳಿ ತೀವ್ರವಾದಂತೆ ಸರ್ಕಾರ ಈ ಚಳುವಳಿಯಲ್ಲಿ ಭಾಗವಹಿಸದಂತೆ ಸಾರ್ವಜನಿಕರ ಮೇಲೆ ನಿರ್ದಿಷ್ಟವಾಗಿ ವಿದ್ಯಾರ್ಥಿಗಳ ಮೇಲೆ ನಿಷೇಧ ಹೇರಿತು. ಮದ್ರಾಸ್ ಸಂಸ್ಥಾನದಲ್ಲಿ ಈ ಚಳುವಳಿಯ ನೇತೃತ್ವ ವಹಿಸಿದ್ದ ಅನಿಬೆಸೆಂಟ್ ಮತ್ತವರ ಅನುಯಾಯಿಗಳನ್ನು ಸರ್ಕಾರ ಸ್ಥಾನಬದ್ಧತೆಯಲ್ಲಿರಿಸಿತು. ಆ ಸಂಸ್ಥಾನದಲ್ಲಿನ ಬ್ರಾಹ್ಮಣೇತರ ಜಮೀನ್ದಾರರು ಮತ್ತು ಶ್ರೀಮಂತ ವ್ಯಾಪಾರಿಗಳ ಪಕ್ಷವಾಗಿದ್ದ 'ಜಸ್ಟಿಸ್ ಪಾರ್ಟಿ' ಹೋಂ ರೂಲ್‌ಗೆ ವಿರುದ್ಧವಾಗಿ ಸರ್ಕಾರದ ಬೆಂಬಲಕ್ಕೆ ನಿಂತುದೂ ಸರ್ಕಾರದ ಈ ನಿರ್ಧಾರಕ್ಕೆ ಇಂಬುಗೊಟ್ಟಂತಿತ್ತು. ಇದೇ ವೇಳೆಯಲ್ಲಿ ಬ್ರಿಟನ್ ಮಹಾಯುದ್ಧದಲ್ಲಿ ಪ್ರತಿಕೂಲ ಪರಿಸ್ಥಿತಿಯನ್ನೆದುರಿಸುತ್ತಾ ಆರ್ಥಿಕ ಸಂಕಷ್ಟದಲ್ಲಿದ್ದ ಕಾರಣದಿಂದಾಗಿ, ಭಾರತದಲ್ಲಿನ ಈ ಚಳುವಳಿ ಅದಕ್ಕೆ ದೊಡ್ಡ ತಲೆನೋವಾಗಿತ್ತು. ಲಂಡನ್‌ನ ಬ್ರಿಟಿಷ್ ಸಾಮ್ರಾಜ್ಯದ ಪಾರ್ಲಿಮೆಂಟಿನಲ್ಲಿ ಸದಸ್ಯರು, ಭಾರತದಲ್ಲಿನ ರಾಜಕೀಯ ಪರಿಸ್ಥಿತಿಯನ್ನು ಸರಿಯಾಗಿ ನಿಭಾಯಿಸದೆ, ಅಲ್ಲಿಂದ ಸೇನೆಗೆ ಜನ ಮತ್ತು ಇತರ ಸಂಪನ್ಮೂಲಗಳನ್ನು ಪಡೆಯಲು ವಿಫಲವಾಗಿದೆ ಎಂದು ಭಾರತ ಸರ್ಕಾರವನ್ನು ಟೀಕಿಸತೊಡಗಿದರು.

ಯುದ್ಧ ಸಮಯದ ಸಹಕಾರ–ಸ್ವಯಮಾಧಿಕಾರಕ್ಕಾಗಿ ಆಯೋಗ

ಆದರೆ ತಿಲಕರು ಮತ್ತು ಜಿನ್ನಾ ಅವರೂ ಸೇರಿದಂತೆ 'ಹೋಂ ರೂಲ್'

ಚಳುವಳಿಕಾರರು ಜುಲೈ ೨೮ರಂದು ಬಾಂಬೆಯಲ್ಲಿ ಸಭೆ ನಡೆಸಿ, ಸಾಮ್ರಾಜ್ಯಕ್ಕೆ ತಮ್ಮ ನಿಷ್ಠೆ ಪ್ರಶ್ನಾತೀತವೆಂದು ಪುನರುಚ್ಚರಿಸುತ್ತಾ, ಯುದ್ಧದಲ್ಲಿ ಭಾರತೀಯರು ಬ್ರಿಟಿಷ್ ಪ್ರಭುತ್ವಕ್ಕೆ ಎಲ್ಲ ಸಹಕಾರ ನೀಡಬೇಕೆಂದು ಕರೆಕೊಟ್ಟರು. 'ಈ ಚಳುವಳಿ ಭಾರತೀಯರಿಗೆ ಆಧುನಿಕ ಶಿಕ್ಷಣ ಒದಗಿಸಿ ಅವರನ್ನು ಜಾಗೃತಗೊಳಿಸಿದ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧವಾಗಿರದೆ, ಅದರ ರಾಜ್ಯಾಂಗದ ಪ್ರಕಾರವೇ ಭಾರತದಲ್ಲಿ ಸ್ವಯಮಾಡಳಿತದ ವ್ಯವಸ್ಥೆಯ ಜಾರಿಗೆ ಕ್ರಮಗಳನ್ನು ಕೈಗೊಳ್ಳಲು ಆಗ್ರಹಿಸುವ ಚಳುವಳಿಯಾಗಿದೆ' ಎಂದು ಸಭೆ ವಿವರಿಸಿತು. ಅಲ್ಲದೆ ಇದನ್ನು ಸಾಮ್ರಾಜ್ಯದ ಅಧಿಪತಿಗಳಿಗೆ ಮನಗಾಣಿಸಲು ಲಂಡನ್‌ಗೆ ಒಂದು ನಿಯೋಗ ಕಳಿಸಲೂ ತೀರ್ಮಾನಿಸಿತು. ಗಾಂಧಿ, ಅನಿಬೆಸೆಂಟರ ಬಿಡುಗಡೆಗಾಗಿ ಬಾಂಬೆಯಿಂದ ಅವರು ಸ್ಥಾನಬದ್ಧತೆಯಲ್ಲಿದ್ದ ನೀಲಗಿರಿವರೆಗೆ ನೂರು ಜನ ಸ್ವಯಂಸೇವಕರ ಜಾಗೃತಿ ಪಾದಯಾತ್ರೆ ನಡೆಸಬೇಕೆಂದೂ, ಆ ಹೊತ್ತಿಗೆ ಅನಿಬೆಸೆಂಟರ ಬಿಡುಗಡೆಯಾಗದಿದ್ದರೆ ಸ್ವಯಂಸೇವಕರು ಬಂಧನಕ್ಕೊಳಗಾಗಿ ಪ್ರತಿಭಟನೆಯನ್ನು ದಾಖಲಿಸಬೇಕೆಂದು ಸಲಹೆ ಮಾಡಿದರು. ತಿಲಕರು ಅನಿಬೆಸೆಂಟ್‌ರನ್ನು ಬರಲಿರುವ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರನ್ನಾಗಿ ಆರಿಸಿ ಸರ್ಕಾರದ ಮೇಲೆ ಒತ್ತಡ ಹಾಕಬೇಕೆಂದು ಸೂಚಿಸಿದರು.

ಇದೆಲ್ಲದರ ಪರಿಣಾಮವಾಗಿ ಸೆಪ್ಟೆಂಬರ್‌ನಲ್ಲಿ ಅನಿಬೆಸೆಂಟರ ಬಿಡುಗಡೆಯಾಯಿತು. ಅಷ್ಟೇ ಅಲ್ಲ, ಭಾರತೀಯರಿಗೆ ಯಾವ ಹಂತದವರೆಗೆ ಸ್ವಯಮಾಧಿಕಾರವನ್ನು ನೀಡಬಹುದೆಂದು ಅಧ್ಯಯನ ಮಾಡಲು ಭಾರತೀಯ ವ್ಯವಹಾರಗಳ ವಿದೇಶಾಂಗ ಕಾರ್ಯದರ್ಶಿ ಮಾಂಟೆಗೋ ಅಕ್ಟೋಬರ್‌ನಲ್ಲಿ ಭಾರತದ ಪ್ರವಾಸಕ್ಕೆ ಬಂದರು. ಸ್ವಯಮಾಧಿಕಾರದ ಪ್ರಶ್ನೆಗೆ ಸಂಬಂಧಿಸಿದ್ದ 'ಲಕ್ನೋ ಘೋಷಣೆ'ಯನ್ನು ರೂಪಿಸುವಲ್ಲಿ ಗಾಂಧಿ ಪಾತ್ರ ಏನೂ ಇರಲಿಲ್ಲವಾದರೂ, ಕಾಂಗ್ರೆಸ್ ಕೆಲಸವಾಗಿ ಅವರು ಅದರ ಗುಜರಾತಿ ಅನುವಾದವನ್ನು ಸಾವಿರಾರು ಪ್ರತಿಗಳಲ್ಲಿ ಮುದ್ರಿಸಿ ಹಂಚಿ ಜನರ ಸಹಿಪಡೆದು ಮಾಂಟೆಗೋಗೆ ಸಲ್ಲಿಸಲು ಸಿದ್ಧತೆ ನಡೆಸಿದರು.

ಗುಜರಾತ್ ಸಭಾದ ಅಧ್ಯಕ್ಷತೆ–ಪ್ರಾದೇಶಿಕ ಭಾಷೆಗಳಿಗೆ ಮನ್ನಣೆ

ನವೆಂಬರ್‌ನಲ್ಲಿ ಗೋಧ್ರಾದಲ್ಲಿ ಆಯೋಜಿತವಾದ ಗುಜರಾತ್ ಸಭಾದ ಅಧ್ಯಕ್ಷತೆಗೆ ಗಾಂಧಿ ಆಯ್ಕೆಯಾದರು. ಅಲ್ಲಿ ಅವರು, ಕಾರ್ಯಕ್ರಮದ ಆರಂಭದಲ್ಲಿ ರೂಢಿಯಂತೆ ಸಾಮ್ರಾಜ್ಯಕ್ಕೆ ವಿಧೇಯತೆ ಸೂಚಿಸಿ, ಅದನ್ನು ಸ್ತುತಿಸುವ ಹಾಡನ್ನು, ಅದು ಬ್ರಿಟನ್‌ನಲ್ಲೇ ರೂಢಿಯಲ್ಲಿಲ್ಲದಾಗ ಇಲ್ಲೇಕೆ ಬೇಕೆಂದು ತಡೆದರು. ಅಲ್ಲದೆ ತಮಗೆ ಸಮೂಹದಲ್ಲಿ ಹಾಡಲು ನೀಡಿದ್ದ ಅದರ ಮುದ್ರಿತ ಪ್ರತಿಯನ್ನು ಎಲ್ಲರ ಮುಂದೆ ಹರಿದು ಹಾಕಿ ಸಭಿಕರನ್ನು ಬೆಚ್ಚಿಬೀಳಿಸಿದರು. ನಂತರ ಮಾತನಾಡಿದ ಅವರು ಮಾಂಟೆಗೋಗೆ ಸಲ್ಲಿಸಲು, ಮನವಿಗಳಿಗೆ ಸಹಿ ಪಡೆವ ಆಂದೋಲನದ ಬಗ್ಗೆ ಪ್ರಸ್ತಾಪಿಸುತ್ತಾ, ಸಹಿ ಮಾಡುವ ಅಕ್ಷರ ಜ್ಞಾನವೇ ಎಲ್ಲವೂ ಅಲ್ಲ ಎಂದು ಅಭಿಪ್ರಾಯಪಟ್ಟು, ಸ್ವರಾಜ್ಯ ಏಕೆ ಎಂಬುದರ ಬಗ್ಗೆ ಸಾಮಾನ್ಯ ಜನರನ್ನು ಮತ್ತು ಮಹಿಳೆಯರನ್ನು ಜಾಗೃತಗೊಳಿಸಿ, ಅವರನ್ನು ಒಳಗೊಳ್ಳದೆ ಯಾವುದೇ ಸ್ವಯಮಾಡಳಿತ ಚಳುವಳಿ ಯಶಸ್ವಿಯಾಗದು ಮತ್ತು ಸ್ವಯಮಾಡಳಿತವೂ ಸಾರ್ಥಕವಾಗದು ಎಂದರು. ತಮ್ಮ ಚಂಪಾರಣ್

ಅನುಭವವನ್ನು ಸ್ಮರಿಸಿಕೊಂಡು ಅವರು ಮಾತಾಡುತ್ತಾ, 'ಹೊಟ್ಟೆ ತುಂಬ ಉಣ್ಣುವ ಮತ್ತು ಮೈತುಂಬ ಬಟ್ಟೆ ತೊಡುವ ನಗರಗಳ ವಕೀಲರುಗಳಂತಹ ಗಣ್ಯ ಜನರು, ಜನಸಾಮಾನ್ಯರೊಂದಿಗೆ ಬೆರೆತು ಅವರ ನುಡಿಗಟ್ಟಿನಲ್ಲಿ ಮಾತಾಡತೊಡಗಿದಾಗ ಮಾತ್ರ ನಮ್ಮ ಚಳುವಳಿ ನಿಜವಾದ ಪ್ರಗತಿಯೆಡೆಗೆ ಹೆಜ್ಜೆ ಇಟ್ಟೀತು' ಎಂದು ನುಡಿದರು. ಸಭೆ ಕೆಲವೇ ದಿನಗಳ ಹಿಂದೆ ನಿಧನರಾಗಿದ್ದ ದಾದಾಭಾಯಿ ನವರೋಜಿ ಅವರನ್ನು, ಭಾರತದ ಬಡತನದ ಅಧ್ಯಯನ ಮಾಡಿ ಬ್ರಿಟಿಷ್ ಆಳ್ವಿಕೆಯ ದುಷ್ಪರಿಣಾಮಗಳನ್ನು ಜನತೆಗೆ ತಿಳಿಸಿದ ಮಹಾವ್ಯಕ್ತಿಯೆಂದು ವರ್ಣಿಸುತ್ತಾ ಅವರ ನೆನಪಿಗೆ ತನ್ನ ಶ್ರದ್ಧಾಂಜಲಿ ಸಲ್ಲಿಸಿತು.

ಈ ಕಾರ್ಯಕ್ರಮಕ್ಕೆ ಮುಕ್ಕಾಲು ಘಂಟೆ ತಡವಾಗಿ ಬಂದ ತಿಲಕರನ್ನು ಸ್ವಾಗತಿಸುತ್ತಾ ಗಾಂಧಿ ಸಮಯಪಾಲನೆಯ ಅವರ ಲೋಪವನ್ನು ಆತ್ಮೀಯ ಶೈಲಿಯಲ್ಲೇ ಛೇಡಿಸುತ್ತಾ 'ತಿಲಕರು ತಮ್ಮ ಆಜನ್ಮಸಿದ್ಧ ಹಕ್ಕು ಎಂದು ಘೋಷಿಸಿರುವ ಸ್ವರಾಜ್ಯ, ಮುಕ್ಕಾಲು ತಾಸು ತಡವಾಗಿ ಬಂದರೂ ನಾನು ಸಹಿಸಿಕೊಳ್ಳಬೇಕಾಗುತ್ತದೆ!' ಎಂದರು. ಲಕ್ನೋ ಕಾಂಗ್ರೆಸ್ ಅಧಿವೇಶನದ ಒಂದು ಗೋಷ್ಠಿಯ ಅಧ್ಯಕ್ಷತೆ ವಹಿಸಿ ಅನುಮೋದನೆ ಪಡೆಯಲಾಗಿದ್ದ ಭಾಷೆ ಕುರಿತ ನಿರ್ಣಯದಂತೆ, ಈ ಸಭೆಯಲ್ಲಿ ಭಾರತೀಯ ಭಾಷೆಗಳನ್ನು ಮಾತ್ರ ಬಳಸುವಂತೆ ಗಾಂಧಿ ಒತ್ತಡ ಹೇರಿದರು. ಇದರಿಂದಾಗಿ ತಿಲಕರು ಮರಾಠಿಯಲ್ಲಿ ಮಾತಾಡಬೇಕಾಗಿ ಬಂದರೆ, ಜಿನ್ನಾ ಅವರು ಕಷ್ಟಪಟ್ಟು ಗುಜರಾತಿಯಲ್ಲಿ ಮಾತಾಡಬೇಕಾಯಿತು.

ಗುಜರಾತಿ ಸಭಾದ ಭಾಗವಾಗಿಯೇ ಅವರು ಹಿಂದೂ-ಮುಸ್ಲಿಂ ಐಕ್ಯತೆಗಾಗಿ ಸಭೆಯೊಂದನ್ನು ಸೇರಿಸಿ ಅದರಲ್ಲಿ ಅಸ್ಪೃಶ್ಯ ದೇಢ್ ಜನಾಂಗದವರೂ ಭಾಗವಹಿಸುವಂತೆ ಏರ್ಪಾಡು ಮಾಡಿದ್ದರು. ಈ ಸಭೆ ಹಿಂದೂ ಮುಸ್ಲಿಂ ಐಕ್ಯತೆಗೆ ಬದ್ಧತೆಯನ್ನು ಘೋಷಿಸುವ ನಿರ್ಣಯವನ್ನು ಅಂಗೀಕರಿಸಿತು. ಈ ಸಭೆಯಲ್ಲಿ ಮಾತನಾಡಿದ ಗಾಂಧಿ, ಸವರ್ಣೀಯರು ಅಸ್ಪೃಶ್ಯರನ್ನು ಸಮವಾಗಿ ಕಾಣತೊಡಗಿದಾಗ ಮಾತ್ರ ಅವರು 'ಸ್ವರಾಜ್ಯ'ಕ್ಕೆ ಅರ್ಹರಾಗುವರು ಎಂದು ಎಚ್ಚರಿಸಿದರು. ಅವರು ಮಾಂಟೆಗೋಗೆ ವಿವಿಧ ಜಾತಿ-ಮತಗಳ ಗುಂಪುಗಳು ಪ್ರತ್ಯೇಕವಾಗಿ ಮನವಿ ಸಲ್ಲಿಸುತ್ತಿರುವುದನ್ನು ಗಮನಿಸಿದ್ದರು. ಗುಜರಾತಿ ಸಭಾವನ್ನು ಒಂದು ವಾರ್ಷಿಕ ಔಪಚಾರಿಕತೆಯ ಸ್ವರೂಪದಿಂದ ಬಿಡುಗಡೆಗೊಳಿಸಲು ನಿರ್ಧರಿಸಿದ ಗಾಂಧಿ, ಅದಕ್ಕಾಗಿ ಒಂದು ಕಾರ್ಯಕಾರಿ ಸಮಿತಿ ರಚಿಸಿ ಅದಕ್ಕೆ ವಲ್ಲಭಭಾಯಿ ಪಟೇಲರನ್ನು ಕಾರ್ಯದರ್ಶಿಯನ್ನಾಗಿ ನೇಮಿಸಿದರು. ಅವರಿಗೆ, ತಮ್ಮ ಸಹಸದಸ್ಯರೊಡನೆ ಗುಜರಾತ್‌ನ ಹಳ್ಳಿಗಾಡಿನಲ್ಲಿ ತಿರುಗಿ ಅಸ್ಪೃಶ್ಯರ, ರೈತರ ಮತ್ತು ಕುಶಲ ಕರ್ಮಿಗಳ ದೂರುಗಳನ್ನು ಕೇಳಿ ಅವರ ಸಮಸ್ಯೆಗಳನ್ನು ನಿವಾರಣೆ ಮಾಡುವ ಹೊಣೆ ಹೊರಿಸಿದರು.

ಒಟ್ಟಿನಲ್ಲಿ ಗುಜರಾತ್ ಸಭಾದ ಈ ಸಮ್ಮೇಳನ, ಗಾಂಧಿಯವರು, ತಿಲಕರು ಮತ್ತು ಜಿನ್ನಾರನ್ನು ಇಲ್ಲಿ ನಿರ್ವಹಿಸಿದ ಜಾಣ ರೀತಿ ಮತ್ತು ಚಳುವಳಿ ತೆಗೆದುಕೊಳ್ಳಬೇಕಾದ ಹೊಸ ದಿಕ್ಕಿನ ಬಗ್ಗೆ ಅವರು ಆಡಿದ ಮಾತುಗಳು, ಅವರನ್ನು ಅಂದಿನ ಭಾರತೀಯ ನಾಯಕರ ಮಧ್ಯೆ ಹೊಸ ಎತ್ತರಕ್ಕೆ ಕೊಂಡೊಯ್ದಿತು ಎನ್ನುತ್ತಾರೆ ರಾಮಚಂದ್ರ ಗುಹಾ ತಮ್ಮ 'ಮಹಾತ್ಮ' ಕೃತಿಯಲ್ಲಿ.

ಸತ್ಯಾಗ್ರಹ ಆಶ್ರಮದ ಸ್ಥಳಾಂತರ

ಈ ಮಧ್ಯೆ ಕೊಚ್ರಾಬ್‌ನ ಆಶ್ರಮದ ಸ್ಥಳಾಂತರದ ಕೆಲಸಗಳೂ ನಡೆದಿದ್ದವು. ಪೂಂಜಾಭಾಯಿ ಹೀರಾಚಂದ್ ಎಂಬ ವ್ಯಾಪಾರಿಯೊಬ್ಬರು ದಾನವಾಗಿ ನೀಡಿದ್ದ ೨೦ ಎಕರೆ ಭೂಮಿ, ಗಾಂಧಿ ಬಯಸಿದಂತೆ ಸಬರ್ಮತಿ ನದಿಯ ತೀರದಲ್ಲೇ ಇದ್ದು ನಗರ ಪ್ರದೇಶದಿಂದ ಸಾಕಷ್ಟು ದೂರದಲ್ಲಿತ್ತು. ಜೊತೆಗೆ ಸತ್ಯಾಗ್ರಹದ ಲೌಕಿಕ ಮತ್ತು ಆಧ್ಯಾತ್ಮಿಕ ಎಳೆಗಳನ್ನು ಜೋಡಿಸುವಂತೆ ಈ ಭೂಮಿ, ಅಹಮದಾಬಾದ್ ಕೇಂದ್ರೀಯ ಸೆರೆಮನೆ ಮತ್ತು ಸ್ಮಶಾನಗಳ ಮಧ್ಯೆ ಇದ್ದು, ಗಾಂಧಿಗೆ ಈ ಜಾಗ ಆಪ್ಯಾಯಮಾನವೂ ಎನಿಸಿತ್ತು. ಆದರೆ ಆ ಜಾಗವನ್ನು ಸಾಕಷ್ಟು ವರ್ಷಗಳ ಕಾಲ ಬೀಳು ಬಿಟ್ಟಿದುದರಿಂದ, ಅಲ್ಲಿ ಯಾವುದೇ ಮರಗಿಡಗಳಿರದೆ ಅದು ಹಲವು ವಿಧದ ಹಾವುಗಳ ಆವಾಸ ಸ್ಥಾನವಾಗಿತ್ತು. ಗಾಂಧಿ, ಹಾವೂ ಸೇರಿದಂತೆ ಯಾವ ಪ್ರಾಣಿಯನ್ನೂ ಕೊಲ್ಲದೆ ಜಾಗವನ್ನು ಅಭಿವೃದ್ಧಿಪಡಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಸದ್ಯಕ್ಕೆ ಕಟ್ಟಡಗಳನ್ನು ಕಟ್ಟಲು ಹಣವಿಲ್ಲದ ಕಾರಣ ಜನವಸತಿಗೆ ಭಿತ್ತಿ ಬಟ್ಟೆಯ ಗುಡಾರಗಳನ್ನು ನಿರ್ಮಿಸಲಾಯಿತು. ಅಡುಗೆ ಮನೆಗಾಗಿ ಒಂದು ತಗಡಿನ ವಪ್ಪಾರ ನಿರ್ಮಿಸಲಾಯಿತು.

■

೩೮

ಭಾರತದಲ್ಲಿ ಮೊದಲ ಉಪವಾಸ

ಅನಿಬೆಸೆಂಟ್ ಅವರ ಅಧ್ಯಕ್ಷತೆಯಲ್ಲಿ ೧೯೧೭ರ ಡಿಸೆಂಬರ್‌ನಲ್ಲಿ ಕಲ್ಕತ್ತೆಯಲ್ಲಿ ನಡೆದ ಕಾಂಗ್ರೆಸ್‌ನ ವಾರ್ಷಿಕ ಅಧಿವೇಶನದಲ್ಲಿ ಗಾಂಧಿ ಅನಾರೋಗ್ಯದ ಕಾರಣದಿಂದಾಗಿ ಭಾಗವಹಿಸಲಾಗಲಿಲ್ಲ. ಅಧಿವೇಶನದ ಎರಡು ವೈಶಿಷ್ಟ್ಯಗಳೆಂದರೆ ಇದರಲ್ಲಿ ಕವಿ ರಬೀಂದ್ರನಾಥ್ ಟ್ಯಾಗೋರರು ಭಾಗವಹಿಸಿ ಪ್ರಾರ್ಥನಾ ಗೀತೆಯನ್ನು ಹಾಡಿದ್ದಲ್ಲದೆ, ಶಾಂತಿನಿಕೇತನದ ವಿದ್ಯಾರ್ಥಿಗಳಿಂದ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಿದ್ದು; ಹಾಗೂ ಈವರೆಗೆ ಸಾಮಾಜಿಕ ವಿಷಯಗಳನ್ನು ದೂರವಿಟ್ಟಿದ್ದ ಕಾಂಗ್ರೆಸ್ ಈ ಅಧಿವೇಶನದಲ್ಲಿ ಮೊದಲ ಬಾರಿಗೆ 'ನಮ್ಮ ರೂಢಿ-ಸಂಪ್ರದಾಯಗಳು ಅಸ್ಪೃಶ್ಯರ ಮೇಲೆ ಹೇರಿರುವ ವೈಕಲ್ಯಗಳನ್ನು ನ್ಯಾಯಪರವಾಗಿ ನಿವಾರಿಸಿಕೊಳ್ಳಬೇಕಾಗಿದೆ' ಎಂಬ ನಿರ್ಣಯವನ್ನು ಅಂಗೀಕರಿಸಿದ್ದು, ಇದರ ಹಿಂದೆ ಇದ್ದ ಶಕ್ತಿ ಯಾರದ್ದೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಇನ್ನು ತಿಲಕರ ಅಪೇಕ್ಷೆಯಂತೆ ಅಧಿವೇಶನ, ಮಾಂಟೆಗೋ ವರದಿ ಬರುವವರೆಗೆ ತನ್ನ ಲಕ್ನೋ ಘೋಷಣೆಯಲ್ಲಿ ಯಾವುದೇ ಬದಲಾವಣೆ ಮಾಡುವ ಅಗತ್ಯವಿಲ್ಲವೆಂದು ತೀರ್ಮಾನಿಸಿತು.

ರೈತ ಸತ್ಯಾಗ್ರಹ-ಪಟೇಲರಿಗೆ ಪಟ್ಟ

ಗಾಂಧಿ ಈಗ ನಾಯಕರಾಗಿ ಏರಿದ್ದ ಹೊಸ ಎತ್ತರಗಳ ಪ್ರತ್ಯಕ್ಷ ನಿದರ್ಶನಗಳಾಗಿ ನಾವು, ಅವರು ಈ ಕಾಲಾವಧಿಯಲ್ಲೇ ನಾಯಕತ್ವ ವಹಿಸಿದ್ದ ಎರಡು ಚಳುವಳಿಗಳನ್ನು ಪರಿಶೀಲಿಸಬಹುದು. ಗೋಧ್ರಾದ ಗುಜರಾತಿ ಸಭಾದ ಸಮ್ಮೇಳನದಲ್ಲಿ ಗಾಂಧಿ ವಲ್ಲಭಭಾಯಿ ಪಟೇಲ್‌ರಿಗೆ ಹಳ್ಳಿಗಾಡಿನಲ್ಲಿ ತಿರುಗಾಡಿ ಗ್ರಾಮೀಣರೊಂದಿಗೆ ಬೆರೆತು ಅವರ ಸಮಸ್ಯೆಗಳನ್ನು ಆಲಿಸಲು ಹೇಳಲು ಒಂದು ನಿರ್ದಿಷ್ಟ ಕಾರಣವೂ ಇತ್ತು. ೧೯೧೭ರ ಮಳೆಗಾಲದಲ್ಲಿ ಪ್ರವಾಹ ಉಂಟಾಗಿ ಕೆಲ ಜಿಲ್ಲೆಗಳಲ್ಲಿ ರೈತರ ಬೆಳೆಗಳನ್ನು ನಾಶಪಡಿಸಿತ್ತು. ವಿಶೇಷವಾಗಿ ಖೇಡಾ ಜಿಲ್ಲೆಯ ರೈತರು ವಿಪರೀತ ಸಂಕಷ್ಟಕ್ಕೆ ಸಿಲುಕಿದ್ದರು. ಇದರಿಂದಾಗಿ ಅವರಿಗೆ ಭೂಕಂದಾಯ ಕಟ್ಟುವುದೂ ಕಷ್ಟವಾಯಿತು. ಗುಜರಾತಿ ಸಭಾದ ಗೋಧ್ರಾ ಸಮ್ಮೇಳನದಲ್ಲಿ ಭಾಗವಹಿಸಿದ್ದ ಮೋಹನಲಾಲ್ ಪಾಂಡ್ಯ ಮತ್ತು ಶಂಕರಲಾಲ್ ಪಾರೀಖ್ ಎಂಬ ರೈತ ಪ್ರತಿನಿಧಿಗಳು, ಖೇಡಾದ ರೈತರ ವಾರ್ಷಿಕ ಭೂ ಕಂದಾಯ ವಸೂಲಿಯನ್ನು ಮುಂದೂಡುವಂತೆ ಕೋರಿ - ಗುಜರಾತ್ ಆಗ ಸೇರಿದ್ದ - ಬಾಂಬೆ ಪ್ರಾಂತ್ಯದ ಆಯುಕ್ತರಿಗೆ, ಸಾವಿರಾರು ರೈತರ ಸಹಿ ಅಥವಾ ಹೆಬ್ಬೆಟ್ಟಿನ

ಗುರುತಿದ್ದ ಮನವಿ ಪತ್ರವನ್ನು ಗುಜರಾತಿ ಸಭಾದ ಪರವಾಗಿ ಸಲ್ಲಿಸಿದರು. ಆದರೆ ಗ್ರಾಮೀಣ ಪ್ರದೇಶದ ಮೇಲೆ ಪ್ರಭುತ್ವದ ಹೆಗ್ಗುರುತಾಗಿದ್ದ ಭೂಕಂದಾಯದ ವಸೂಲಿಯನ್ನು ಮುಂದೂಡಲು ಆಯುಕ್ತರು ನಿರಾಕರಿಸಿದಾಗ, ಅದನ್ನು ಆಗ ಚಂಪಾರಣ್‌ದಲ್ಲಿದ್ದ ಗಾಂಧಿಯವರ ಗಮನಕ್ಕೆ ತರಲಾಯಿತು. ೧೯೧೮ರ ಫೆಬ್ರುವರಿ ಮೊದಲ ವಾರದ ಹೊತ್ತಿಗೆ ಗುಜರಾತ್‌ಗೆ ಹಿಂದಿರುಗಿದ್ದ ಗಾಂಧಿ, ಕಾರ್ಯಕರ್ತರ ಒಂದು ತಂಡವನ್ನು ರಚಿಸಿ ಬೆಳೆ ಪರಿಸ್ಥಿತಿಯ ಸಮೀಕ್ಷೆ ಮಾಡಲು ಸೂಚಿಸಿದರು. ಸಮೀಕ್ಷೆಯಿಂದ ಪಾಟೀದಾರ ರೈತರು ಕಂದಾಯ ಕೊಡುವ ಸ್ಥಿತಿಯಲ್ಲಿ ಇಲ್ಲ ಎಂಬುದು ಗೊತ್ತಾದಾಗ ಅವರು, ರೈತರು ಕರ ನಿರಾಕರಣೆಯ ಚಳುವಳಿ ಆರಂಭಿಸಲು ಕರೆ ಕೊಟ್ಟರು. ಜೊತೆಗೆ ಯಾವ ರೈತನೂ ಯಾವ ಕಾರಣಕ್ಕೂ ಕಂದಾಯ ಕಟ್ಟದಂತೆ ಖಚಿತಪಡಿಸಿಕೊಳ್ಳುವ ಜವಾಬ್ದಾರಿಯನ್ನು ಗುಜರಾತಿ ಸಭಾದ ಒಬ್ಬ ಸದಸ್ಯ ವಹಿಸುವುದಾದರೆ ಮಾತ್ರ, ತಾವು ಬಂದು ಈ ರೈತ ಸತ್ಯಾಗ್ರಹದ ನಾಯಕತ್ವ ವಹಿಸಿಕೊಳ್ಳುವುದಾಗಿ ತಿಳಿಸಿದರು. ಸಹಜವಾಗಿ ಆ ಜವಾಬ್ದಾರಿ ಸಭಾದ ಕಾರ್ಯದರ್ಶಿಯಾಗಿದ್ದ ವಲ್ಲಭಭಾಯಿ ಪಟೇಲರ ಮೇಲೆ ಬಿತ್ತು. ಪೂರ್ಣ ಪಾಶ್ಚಾತ್ಯ ಶೈಲಿಯ ಬದುಕು ನಡೆಸುತ್ತಿದ್ದ ಪಟೇಲರು ಗಾಂಧಿಯ ಸಂಪರ್ಕಕ್ಕೆ ಬಂದಂದಿನಿಂದ ತಮ್ಮ ಬದುಕಿನ ದಿಕ್ಕು ಬದಲಿಸಿಕೊಳ್ಳುವ ಒಂದು ನೆಪಕ್ಕಾಗಿ ಕಾಯುತ್ತಿದ್ದಂತಿದ್ದು, ಅದು ಈಗ ದೊರೆತಂತಾಗಿ ತಮ್ಮ ಬ್ಯಾರಿಸ್ಟರ್ ವೃತ್ತಿಯನ್ನು ಕೈಬಿಟ್ಟು ಸಂಪೂರ್ಣ ಸಾರ್ವಜನಿಕ ಜೀವನಕ್ಕೆ ಧುಮುಕಿದರು. ಪಟೇಲರಿಗೆ ಇಬ್ಬರು ಮಕ್ಕಳಿದ್ದರು. ಹೆಂಡತಿ ನಿಧನರಾಗಿ ವರ್ಷಗಳೇ ಆಗಿದ್ದರೂ ಮರುಮದುವೆಯಾಗಲು ನಿರಾಕರಿಸಿದ್ದರು. ಇದು ಕೂಡ ಅವರು ಗಾಂಧಿ ಕಣ್ಣಿಗೆ ವಿಶೇಷವಾಗಿ ಬೀಳಲು ಕಾರಣವಾಗಿರಬಹುದು!

ಅಹಮದಾಬಾದ್ ಹತ್ತಿ ಗಿರಣಿ ಕಾರ್ಮಿಕರ ಮುಷ್ಕರ

ಖೇಡಾದಲ್ಲಿ ರೈತರ ಅಸಹಕಾರ ಸತ್ಯಾಗ್ರಹ, ಪಟೇಲ್ ಮತ್ತು ಮುಂದೆ ಗುಜರಾತ್‌ನ ಸಮಾಜವಾದಿ ನಾಯಕರಾದ ಇಂದೂಲಾಲ್ ಯಾಜ್ಞಿಕ್ ಅವರ ನೇತೃತ್ವದಲ್ಲಿ ಬಲಗೊಳ್ಳತೊಡಗಿತು. ಆದರೆ ಇದೇ ವೇಳೆಯಲ್ಲಿ ಗಾಂಧಿ ತಮ್ಮ ಹಿತೈಷಿಯೊಬ್ಬರ ಸಮಸ್ಯೆಯೊಂದನ್ನು ತುರ್ತಾಗಿ ಪರಿಹರಿಸುವ ಒತ್ತಾಯಕ್ಕೆ ಒಳಗಾಗಿದ್ದರು. ಸತ್ಯಾಗ್ರಹ ಆಶ್ರಮಕ್ಕೆ ಅಸ್ಪೃಶ್ಯ ಕುಟುಂಬದ ಸೇರ್ಪಡೆಯ ಕಾರಣ ಅದಕ್ಕೆ ಧನಸಹಾಯ ನಿಂತು ಆಶ್ರಮ ಮುಚ್ಚುವ ಸ್ಥಿತಿ ತಲುಪಿದ್ದಾಗ, ಒಂದು ದೊಡ್ಡ ಮೊತ್ತವನ್ನು ಅಯಾಚಿತವಾಗಿ ನೀಡಿ ಆಶ್ರಮವನ್ನು ಉಳಿಸಿದ್ದ ಅಂಬಾಲಾಲ್ ಸಾರಾಭಾಯಿ ಮಾಲಿಕತ್ವದ ಗಿರಣಿಗಳು ಸೇರಿದಂತೆ ಎಲ್ಲ ಹತ್ತಿ ಗಿರಣಿಗಳಲ್ಲಿ ಕಾರ್ಮಿಕ ಅಶಾಂತಿ ಆರಂಭವಾಗಿತ್ತು. ಗಿರಣಿಗಳಲ್ಲಿ ಕೆಲಸ ಸ್ಥಗಿತಗೊಳ್ಳುವ ಆತಂಕ ಎದುರಾಗಿತ್ತು. ಈ ಕಷ್ಟದಿಂದ ಪಾರು ಮಾಡುವಂತೆ ಅಂಬಾಲಾಲರು ಗಾಂಧಿಯನ್ನು ಕೋರಿದ್ದರು.

ಅತಿವೃಷ್ಟಿಯಿಂದಾಗಿ ಬೆಳೆ ನಾಶದ ಪರಿಣಾಮವಾಗಿ ಇಲಿಗಳು ಸಾಮೂಹಿಕವಾಗಿ ನಗರ ಪ್ರದೇಶಗಳಿಗೆ ದಾಳಿ ಇಟ್ಟು ಅಹಮದಾಬಾದ್ ನಗರ ಪ್ಲೇಗ್ ಹಾವಳಿಗೆ ತುತ್ತಾಗತೊಡಗಿತು. ನವೆಂಬರ್ ಹೊತ್ತಿಗೆ ಸಾವಿನ ಸಂಖ್ಯೆ ವಿಪರೀತ ಹೆಚ್ಚುತ್ತಿದ್ದಂತೆ ಗಿರಣಿಗಳ ಕಾರ್ಮಿಕರು ಹಳ್ಳಿಗಾಡಿನ ಊರುಗಳ ಕಡೆ ಹೊರಡಲಾರಂಭಿಸಿದರು. ಆಗ

ಗಿರಣಿಗಳ ಮಾಲೀಕರು ಪ್ಲೇಗ್ ಪರಿಹಾರ ಧನವೆಂದು ಕಾರ್ಮಿಕರಿಗೆ ಅವರ ವೇತನದ ಶೇ.೮೦ರಷ್ಟನ್ನು ನೀಡಿ ಅವರನ್ನು ನಗರದಲ್ಲೇ ಉಳಿಸಿಕೊಂಡರು. ಆದರೆ ಜನವರಿ ತಿಂಗಳ ಕೊನೆಯ ಹೊತ್ತಿಗೆ ಪ್ಲೇಗ್ ಹಾವಳಿ ಸಂಪೂರ್ಣ ನಿಂತಾಗ ಆ ಪರಿಹಾರ ಭತ್ಯೆಯನ್ನು ವಾಪಸ್ ಪಡೆಯಬಯಸಿದರು. ಆದರೆ ಪ್ಲೇಗ್ ಹಾವಳಿಯ ಕಾರಣದಿಂದಾಗಿ ನಿತ್ಯಬಳಕೆಯ ವಸ್ತುಗಳ ಬೆಲೆ ಏರಿಕೆಯ ಕಾರಣದಿಂದಾಗಿ ಪರಿಹಾರ ಧನವನ್ನು ನಿಲ್ಲಿಸದೆ, ವೇತನದ ಶೇ.೫೦ರಷ್ಟನ್ನಾದರೂ ನೀಡುವುದು ಮುಂದುವರೆಸಬೇಕೆಂದು ಒತ್ತಾಯಿಸಿ ಕಾರ್ಮಿಕ ಸಂಘದವರು ಮುಷ್ಕರದ ನೋಟಿಸ್ ನೀಡಿದ್ದರು. ಈ ಸಂದರ್ಭದ ಕುತೂಹಲಕಾರಿ ಸಂಗತಿ ಎಂದರೆ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಓದಿ ಕಾರ್ಮಿಕ ಚಳುವಳಿಯ ಅಧ್ಯಯನ ಮಾಡಿಬಂದಿದ್ದ ಅಂಬಾಲಾಲರ ಸೋದರಿ ಅನಸೂಯಾ ಬೆನ್ ಕಾರ್ಮಿಕರ ಬೆಂಬಲಕ್ಕೆ ನಿಂತಿದ್ದರು!

ಮುಷ್ಕರದ ನಾಯಕತ್ವ ವಹಿಸಿದ ಗಾಂಧಿ

೧೯೧೮ರ ಜನವರಿ ೨ರಂದು ಗಾಂಧಿ ಬಾಂಬೆಯಲ್ಲಿದ್ದಾಗ ಅದೇ ನಗರದಲ್ಲಿದ್ದ ಅಂಬಾಲಾಲರು ತಮ್ಮ ಇಕ್ಕಟ್ಟನ್ನು ಗಾಂಧಿಯವರಲ್ಲಿ ನಿವೇದಿಸಿದರು. ಅಹಮದಾಬಾದ್‌ಗೆ ಬಂದ ಗಾಂಧಿ ತಮ್ಮ ಸಹವರ್ತಿಗಳಿಗೆ, ಹತ್ತಿ ಗಿರಣಿ ಕಾರ್ಮಿಕರ ಸಂಬಳ ಭತ್ಯೆಗಳ ವಿವರ ಪಡೆದು ಅದು ಸಾಮಾನ್ಯ ಬದುಕು ನಡೆಸಲು ಸಾಕಾಗುತ್ತದೆಯೇ ಎಂಬುದನ್ನು ತಮ್ಮಲ್ಲೇ ಚರ್ಚಿಸಿ ತಿಳಿಸಬೇಕೆಂದು ಸೂಚಿಸಿದರು. ಅವರು ಸದ್ಯದ ಹತ್ತಿ ಗಿರಣಿ ಕಾರ್ಮಿಕರ ವೇತನ, ಸಾಮಾನ್ಯ ಬದುಕು ನಡೆಸಲು ಏನೇನೂ ಸಾಲದೆಂದು ತೀರ್ಮಾನಿಸಿ ತಿಳಿಸಿದಾಗ, ಗಾಂಧಿ ಕಾರ್ಮಿಕರೊಂದಿಗೆ ಚರ್ಚಿಸಿ ಶೇ.೩೫ರ ಹೆಚ್ಚಳಕ್ಕಾಗಿ ಅಂಬಾಲಾಲರಿಗೆ ಮನವಿ ಸಲ್ಲಿಸಿದರು. ಆದರೆ ಮಾಲೀಕರು ಶೇ.೨೦ಕ್ಕಿಂತ ಹೆಚ್ಚು ಹೆಚ್ಚಳ ಸಾಧ್ಯವಿಲ್ಲ ಎಂದು ಖಡಾಖಂಡಿತವಾಗಿ ಹೇಳಿಬಿಟ್ಟರು. ಜೊತೆಗೆ ಗಾಂಧಿ ಸೂಚಿಸಿದಂತೆ ಯಾವುದೇ ನ್ಯಾಯ ಪಂಚಾಯ್ತಿಗೂ ಒಪ್ಪಲಾರೆವು ಎಂದುಬಿಟ್ಟರು. ಆಗ ಗಾಂಧಿಯವರು ವಿಧಿ ಇಲ್ಲದೆ ಫೆಬ್ರುವರಿ ೨೨ರಂದು ಕಾರ್ಮಿಕರಿಗೆ ಕೆಲಸ ನಿಲ್ಲಿಸಿ ಮುಷ್ಕರ ಹೂಡಲು ಕರೆಕೊಟ್ಟರು.

ಸಬರ್ಮತಿ ನದಿ ತೀರದಲ್ಲೇ ಇದ್ದ ಸತ್ಯಾಗ್ರಹ ಆಶ್ರಮದ ಹೊಸ ಪ್ರದೇಶದಲ್ಲಿನ ಅರಳಿ ಮರವೊಂದರ ಕೆಳಗೆ ಪ್ರತಿ ದಿನ ಕಾರ್ಮಿಕರ ಸಭೆ ಸೇರುತ್ತಿತ್ತು. ಅಲ್ಲಿ ಗಾಂಧಿ ಮತ್ತು ಅನುಸೂಯಾ ಬೆನ್ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಕಾರ್ಮಿಕರು ತಮ್ಮ ಬೇಡಿಕೆ ಈಡೇರುವವರೆಗೆ ಕೆಲಸಕ್ಕೆ ವಾಪಸ್ ಹೋಗಬಾರದು ಮತ್ತು ಹಿಂಸೆಗೆ ಇಳಿಯಬಾರದೆಂಬುದು ತಮ್ಮ ನಾಯಕತ್ವಕ್ಕಾಗಿ ಗಾಂಧಿ ಹಾಕಿದ್ದ ಶರತ್ತುಗಳಾಗಿದ್ದವು. ಆದರೆ ಗಾಂಧಿ, ಈ ವಿಷಯದಲ್ಲಿ ನಿಜವಾಗಿ ಸಂಕಟದಲ್ಲಿದ್ದರು. ಅಂಬಾಲಾಲರು ಆಪತ್ಬಾಂಧವರಾಗಿ ಬಂದು ತಮ್ಮ ಆಶ್ರಮವನ್ನು ಉಳಿಸಿದವರು ಮತ್ತು ಅವರ ಪತ್ನಿ ಸರಳಾದೇವಿ ಗಾಂಧಿಯ ಪರಮ ಭಕ್ತೆಯೇ ಆಗಿದ್ದರು. ಇದರ ಜೊತೆಗೆ ಸೋದರ-ಸೋದರಿಯ ಮಧ್ಯೆ ಸಂಘರ್ಷದ ಕಾವು ಬೇರೆ. ಅಂಬಾಲಾಲರನ್ನು ಗಾಂಧಿ ಹಲವು ಬಾರಿ ತಮ್ಮ ಆಶ್ರಮಕ್ಕೆ ಊಟಕ್ಕೆ ಕರೆಯುತ್ತಿದ್ದರು ಮತ್ತು ಅವರು ಬಂದಾಗಲೆಲ್ಲ ಊಟ ಬಡಿಸಲು ಅವರು ಅನುಸೂಯಾಬೆನ್‌ಗೆ ಹೇಳುತ್ತಿದ್ದರು. ಗಾಂಧಿ ಒಮ್ಮೆ ಅಂಬಾಲಾಲರಿಗೆ

ಹಣದ ಗರ್ವದಲ್ಲಿ ಬಡವರ ಕಷ್ಟಗಳನ್ನು ಅರಿಯದೇ ಹೋಗುವುದರ ದುಷ್ಪರಿಣಾಮಗಳ ಬಗ್ಗೆ ಎಚ್ಚರಿಸಿದ್ದರು ಕೂಡ. ಹಾಗೇ ಕಾರ್ಮಿಕರಿಗೂ ಜೂಜು, ಮಾದಕ ವಸ್ತುಗಳ ಚಟ ಬಿಡುವಂತೆ, ಓದುವ ಹವ್ಯಾಸ ಬೆಳೆಸಿಕೊಳ್ಳುವಂತೆ ಮತ್ತು ತಂತಮ್ಮ ನಡುವೆ ಜಾತಿ-ಮತಗಳ ಭೇದಭಾವಗಳಿಲ್ಲದೆ ಬೆರೆಯುವುದನ್ನು ಕಲಿಯುವಂತೆ ಸಲಹೆ ನೀಡುವ ಕರಪತ್ರಗಳನ್ನು ಬರೆದು ಹಂಚುವ ವ್ಯವಸ್ಥೆ ಮಾಡಿದ್ದರು. ಕಾರ್ಮಿಕರಿಗೆ ಸಣ್ಣಪುಟ್ಟ ತಾತ್ಕಾಲಿಕ ಕೆಲಸಗಳನ್ನೂ ಹುಡುಕಿ ಕೊಡುವ ಪ್ರಯತ್ನವೂ ನಡೆದಿತ್ತು. ಹೊಸ ಆಶ್ರಮಕ್ಕಾಗಿ ಸಣ್ಣಪುಟ್ಟ ಸರಳ ಆಶ್ರಯಗಳನ್ನು ನಿರ್ಮಿಸುವ ಕೆಲಸಗಳಲ್ಲೂ ಅವರನ್ನು ತೊಡಗಿಸಿಕೊಳ್ಳಲಾಗುತ್ತಿತ್ತು. ಇದರಲ್ಲಿ ಗಾಂಧಿಗೆ ನೆರವಾದವರೆಂದರೆ ಶಂಕರಲಾಲ್ ಬ್ಯಾಂಕರ್ ಎಂಬ ಕಾರ್ಮಿಕ ನಾಯಕ.

ಮುಷ್ಕರದಲ್ಲಿ ಒಡಕು-ಗಾಂಧಿ ಉಪವಾಸ-ಮುಷ್ಕರ ಅಂತ್ಯ

ಮುಷ್ಕರ ಮೂರನೇ ವಾರಕ್ಕೆ ಕಾಲಿಡುತ್ತಿದ್ದಂತೆ ಸಭೆಗಳಿಗೆ ಕಾರ್ಮಿಕರು ಬರುವುದು ಕಡಿಮೆಯಾಗುತ್ತಿರುವುದನ್ನು ಗಾಂಧಿ ಗಮನಿಸಿದರು. ಕೆಲವರು ಮಾಲೀಕರ ಶೇ. ೨೦ರ ಹೆಚ್ಚಳವನ್ನೇ ಒಪ್ಪಿಕೊಂಡು ಕೆಲಸಕ್ಕೆ ಹಿಂದಿರುಗಿದ್ದಾರೆ ಎಂಬುದೂ ತಿಳಿಯಿತು. ಆದರೆ ಛಗನ್‌ಲಾಲ್ ಮೂಲಕ ಗಾಂಧಿ ಕಿವಿಗೆ ಬಿದ್ದ ಎಲ್ಲಕ್ಕಿಂತ ಹೆಚ್ಚು ಆಘಾತಕರ ಸುದ್ದಿಯೆಂದರೆ, ಗಾಂಧಿ ಹೊಟ್ಟೆ ತುಂಬ ಊಟ ಮಾಡಿಕೊಂಡು ಅನುಸೂಯಾ ಬೆನ್‌ರ ಕಾರಲ್ಲಿ ಓಡಾಡಿಕೊಂಡಿರುವಾಗ ನಾವೇಕೆ ಅರೆಹೊಟ್ಟೆಯ ದರಿದ್ರ ಬದುಕು ನಡೆಸಬೇಕು? ಎಂದು ಕೆಲ ಕಾರ್ಮಿಕರು ಮಾತಾಡಿಕೊಳ್ಳುತ್ತಿದ್ದಾರೆ ಎಂಬುದು. ಗಾಂಧಿ ಬೆಚ್ಚಿಬಿದ್ದರು. ಈ ಮಾತುಗಳಲ್ಲಿ ಸತ್ಯವಿದೆ ಎಂದು ಅವರಿಗೆ ಅನಿಸಿತು. ಅವರು ಕೂಡಲೇ ಕಾರು ಏರುವುದನ್ನು ನಿಲ್ಲಿಸಿದರು ಮತ್ತು ಕಾರ್ಮಿಕರ ಬೇಡಿಕೆ ಈಡೇರುವವರೆಗೆ ಅನ್ನಾಹಾರ ಮುಟ್ಟುವುದಿಲ್ಲವೆಂದು ಪ್ರಕಟಿಸಿದರು. ಕಾರ್ಮಿಕ ಸಮುದಾಯ ಗಾಬರಿಯಾಯಿತು. ಅವರು ಪರಿಪರಿಯಾಗಿ ಬೇಡಿಕೊಂಡರೂ ಗಾಂಧಿ ಮಾರ್ಚ್ ೧೫ರಂದು ಉಪವಾಸ ಆರಂಭಿಸಿದರು. ಕಾರ್ಮಿಕರ ಹಕ್ಕುಗಳು ತಮ್ಮ ಮನಸ್ಸಿಗೆ ಮನವರಿಕೆಯಾಗುವಂತೆ ದೇಹವನ್ನು ಪಳಗಿಸುವುದು ಉಪವಾಸದ ಉದ್ದೇಶವೇ ಹೊರತು ಯಾರ ಮೇಲೂ ಒತ್ತಡ ಹೇರುವ ಉದ್ದೇಶ ತಮಗಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಗಾಂಧಿ ಇದು ಭಾರತದಲ್ಲಿ ನಡೆಸಲಾರಂಭಿಸಿದ ಮೊದಲ ಉಪವಾಸ. ಹಿಂದಿನ ಉಪವಾಸಗಳು ವೈಯಕ್ತಿಕ ನೆಲೆಯ ಪ್ರಾಯಶ್ಚಿತ್ತಗಳಿಗಾಗಿ ನಡೆದುವಾಗಿದ್ದರೆ ಇದು ಸಾರ್ವಜನಿಕ ಉದ್ದೇಶದೊಂದಿಗೆ ನಡೆದುದಾಗಿತ್ತು. ಈ ಸಂದರ್ಭದಲ್ಲಿ ಅವರು ಉಪವಾಸದ ಪಾವಿತ್ರ್ಯದ ಬಗ್ಗೆ ಮಾತನಾಡುತ್ತಾ, ಬೆದರಿಕೆಯ ಸಾಧನವಾಗಿ ಉಪವಾಸ ಮಾಡುವುದು ಅನೈತಿಕ ಎಂದರು. ಅದು ಸ್ವಯಂಸಂಕಷ್ಟವನ್ನು ಆಹ್ವಾನಿಸಿಕೊಂಡು ಸತ್ಯದರ್ಶನ ಮಾಡುವ ಪ್ರಯತ್ನವಾಗಿರಬೇಕೇ ಹೊರತು ಯಾವುದೇ ಸ್ವಾರ್ಥ ಲಾಭಕ್ಕಾಗಿರಬಾರದು ಎಂದು ವಿವರಿಸಿದರು. 'ನಾನು ನನ್ನ ತಂದೆಯ ವಿರುದ್ಧ ಅವರ ಆಸ್ತಿ ಉತ್ತರಾಧಿಕಾರ ಪಡೆಯಲು ಉಪವಾಸ ಹೂಡುವುದು ತಪ್ಪಾಗುತ್ತದೆ... ಆದರೆ ಅವರ ದುಶ್ಚಟಗಳನ್ನು ಬಿಡಿಸಲು ಉಪವಾಸ ಹೂಡುವುದು ಸರಿಯೆನಿಸೀತು ಎಂದು

ಉದಾಹರಣೆ ಸಹಿತ ವಿಷದೀಕರಿಸಿದರು. ಆದರೆ ತಮ್ಮ ಉಪವಾಸದ ಬಗ್ಗೆ ಅವರು ಎಷ್ಟೇ ಸ್ಪಷ್ಟೀಕರಣಗಳನ್ನು ನೀಡಿದ್ದರೂ ದಿನ ಕಳೆದಂತೆ ಗಿರಣಿ ಮಾಲೀಕರಿಗೆ ಗಾಂಧಿಯ ಆರೋಗ್ಯದ ಬಗ್ಗೆ ಆತಂಕ ಶುರುವಾಯಿತು. ಉಪವಾಸ ನಾಲ್ಕನೇ ದಿನಕ್ಕೆ ಕಾಲಿಡುವ ಮುನ್ನವೇ, ಅಂದರೆ ಮಾರ್ಚ್ ೧೮ರಂದು, ಅಂಬಾಲಾಲ್ ಸಾರಾಭಾಯಿ ನೇತೃತ್ವದಲ್ಲಿ ಗಿರಣಿ ಮಾಲೀಕರು ಸದ್ಯಕ್ಕೆ ಎರಡೂ ಕಡೆಯವರ ಒಪ್ಪಿಗೆಯ ಒಂದು ಸೂತ್ರದ ಪ್ರಕಾರ ವೇತನ ನಿಗದಿ ಮಾಡಿ ಅಂತಿಮ ಇತ್ಯರ್ಥವನ್ನು ಒಂದು ನ್ಯಾಯ ಪಂಚಾಯ್ತಿಗೆ ಒಪ್ಪಿಸಲು ತಾವು ಒಪ್ಪಿರುವುದಾಗಿ ಗಾಂಧಿಗೆ ತಿಳಿಸಿದರು. ಉಪವಾಸ ಅಂತ್ಯಗೊಂಡಿತು.

ಪ್ರೊ. ಆನಂದಶಂಕರ್ ಧೃವ ಎಂಬ ಅರ್ಥಶಾಸ್ತ್ರಜ್ಞರ ನೇತೃತ್ವದ ಪಂಚಾಯ್ತಿ, ಆಗಸ್ಟ್‌ನಲ್ಲಿ ತನ್ನ ಅಂತಿಮ ತೀರ್ಪು ನೀಡಿ, ಕಾರ್ಮಿಕರಿಗೆ ಗಾಂಧಿ ಸೂಚಿಸಿದ್ದಂತೆಯೇ ಶೇ. ೩೫ರ ವೇತನ ಹೆಚ್ಚಳವನ್ನು ಪೂರ್ವಾನ್ವಯವಾಗಿ ಪ್ರಕಟಿಸಿತು.

■

೬೮

ಖೇಡಾ ರೈತ ಸತ್ಯಾಗ್ರಹ

ಅಹಮದಾಬಾದ್ ಕಾರ್ಮಿಕರ ಮುಷ್ಕರವನ್ನು ಒಪ್ಪಂದದನ್ವಯ ಹಿಂತೆಗೆದುಕೊಂಡ ನಂತರ ಗಾಂಧಿ, ಖೇಡಾದ ರೈತ ಸತ್ಯಾಗ್ರಹದತ್ತ ಗಮನ ಹರಿಸಿದರು. ಈ ರೈತರ ಸಮಸ್ಯೆಯನ್ನು ಒಂದು ಲಕ್ಷ ರೂಪಾಯಿಗಳ ದೇಣಿಗೆ ಎತ್ತಿ ರೈತರ ಪರವಾಗಿ ಸರ್ಕಾರಕ್ಕೆ ಕಂದಾಯ ಕಟ್ಟಿ ಪರಿಹರಿಸಬಹುದೆಂಬ 'ಸರ್ವೆಂಟ್ಸ್ ಆಫ್ ಇಂಡಿಯಾ'ದ ಸಲಹೆಯನ್ನು ತಿರಸ್ಕರಿಸಿದ ಗಾಂಧಿ, ರೈತರಲ್ಲಿ ತಾವು ಸರ್ಕಾರದ ಗುಲಾಮರಲ್ಲ ಎಂಬ ಅರಿವನ್ನು ಮೂಡಿಸಲು ಹೋರಾಟ ನಡೆಸಬೇಕಾಗಿದೆ ಎಂದರು. ಜಿಲ್ಲೆಯ ವ್ಯಾಪಕ ಪ್ರವಾಸ ಮಾಡಿ ಹಳ್ಳಿಗರನ್ನು ಉದ್ದೇಶಿಸಿ ಮಾತನಾಡಿದ ಗಾಂಧಿ, ಅಧಿಕಾರಿಗಳಿಗೆ ಹೆದರದಂತೆ ರೈತರ ಮನಸ್ಸನ್ನು ಸಿದ್ಧಗೊಳಿಸುವ ಪ್ರಯತ್ನ ಮಾಡುತ್ತಿದ್ದರು. 'ದೇವರಿಗೆ ಹೊರತಾಗಿ ಇನ್ನಾರಿಗೂ ಹೆದರದವರಿಗೆ ಶಿಕ್ಷೆಯ ಭಯ ಇರಬಾರದು. ಅನ್ಯಾಯವೆಸಗದವರಿಗೆ ಶಿಕ್ಷೆ ನೀಡುವ ಶಾಸನದ ವಿರುದ್ಧದ ಹೋರಾಟವೇ ಸತ್ಯದ ದಿಕ್ಕಿನ ಹೋರಾಟ' ಎಂದು ವಿವರಿಸುತ್ತಾ, ಪ್ರಜೆಗಳ ಮಾತು ಕೇಳದ ರಾಜನನ್ನು ರಾಜ ಎಂದು ಮಾನ್ಯ ಮಾಡಬಾರದೆಂದು ಕರೆಕೊಡುತ್ತಿದ್ದರು. ಹಾಗೂ ಅಂಥವರ ಆಜ್ಞೆಗಳನ್ನು ಪಾಲಿಸುವುದು ಪ್ರಜಾಧರ್ಮವಾಗುವುದಿಲ್ಲ ಎಂದು ಜನರಿಗೆ ಮನದಟ್ಟು ಮಾಡತೊಡಗಿದರು. ಹಾಗೇ ಸತ್ಯಾಗ್ರಹದಲ್ಲಿ ಯಾವ ರೀತಿಯ ಹಿಂಸೆಗೂ ಜಾಗವಿಲ್ಲವೆಂದು ಹೇಳುತ್ತಾ, ರೈತರು ಯಾವ ಕಾರಣಕ್ಕೂ ಅಧಿಕಾರಿಗಳೊಂದಿಗೆ ಒರಟಾಗಿ ನಡೆದುಕೊಳ್ಳಬಾರದೆಂದು ಹೇಳಿದರು. ಗಾಂಧಿ ತಮ್ಮ ಭಾಷಣಗಳಲ್ಲಿ ಇದು ಕೇವಲ ಒಂದಿಷ್ಟು ಹಣ ಪಾವತಿಗೆ ಸಂಬಂಧಿಸಿದ ವಿಷಯವಲ್ಲ. ನಾವು ನಮ್ಮ ಪಾಡಿಗೆ ಸ್ವಾಭಿಮಾನದಿಂದ ಘನತೆಯಿಂದ ಬಾಳಲು ನಡೆಸಿರುವ ಹೋರಾಟ. ಇದು ಯಶಸ್ವಿಯಾಗಲು ನಾವು ನಮ್ಮೊಳಗಿನ ಸಾಮಾಜಿಕ ದೋಷಗಳನ್ನೂ ತಿದ್ದಿಕೊಳ್ಳಬೇಕಾಗಿದೆ ಎಂದು ಅಸ್ಪೃಶ್ಯತೆ, ಮೂಢ ನಂಬಿಕೆ ಮತ್ತು ಶುಚಿತ್ವದ ಕೊರತೆ ಇತ್ಯಾದಿ ಸಮಸ್ಯೆಗಳ ಬಗ್ಗೆಯೂ ಜನರಿಗೆ ತಿಳಿಹೇಳುತ್ತಿದ್ದರು.

ಕರ ನಿರಾಕರಣೆಯ ಅಸಹಕಾರ ಚಳುವಳಿ ರೈತರ ಸಹಕಾರದಿಂದ ಬಲವಾಗಿ ಮುನ್ನಡೆದಿತ್ತು. ರೈತರು ಬಾಂಬೆ ನಗರಕ್ಕೆ ಹಾಲು, ಮೊಸರು, ತುಪ್ಪಗಳ ಪೂರೈಕೆಯನ್ನು ಸಂಪೂರ್ಣ ಬಂದ್ ಮಾಡಿದ್ದರು. ಇದರಿಂದ ಮುಂಬೈ ನಗರದ ನಾಗರೀಕರು ಕಂಗಾಲಾಗಿದ್ದರಲ್ಲದೆ, ಅಲ್ಲಿ ಯುದ್ಧ ಸಂಬಂಧವಾಗಿ ಮೊಕ್ಕಾಂ ಮಾಡಿದ್ದ ಸೇನೆಗೂ ಪೋಷಣೆ ಇಲ್ಲದಾಯಿತು. ಖೇಡಾದ ಜಿಲ್ಲಾಧಿಕಾರ ಮಾರ್ಚ್ ೩೦ರಂದು ರೈತರ

ಆಸ್ತಿಪಾಸ್ತಿಗಳ ಮುಟ್ಟುಗೋಲಿನ ಆಜ್ಞೆ ಹೊರಡಿಸಿತು. ರೈತರ ಮನೆ ಜಪ್ತಿ ಕಾರ್ಯಾಚರಣೆಯ ಭಾಗವಾಗಿ ಮನೆಗಳ ದನಕರುಗಳನ್ನೂ ವಶಪಡಿಸಿಕೊಳ್ಳಲಾಯಿತು. ಮುಟ್ಟುಗೋಲು ಹಾಕಿಕೊಂಡ ಜಮೀನಿನಲ್ಲಿ ಬೆಳೆಯನ್ನು ಕಟಾವು ಮಾಡಿಕೊಳ್ಳುವಂತೆ ಗಾಂಧಿ ರೈತರಿಗೆ ಕರೆ ನೀಡಿದರು. ಹಾಗೆ ಕಟಾವಿಗೆ ಹೋದ ರೈತರನ್ನು ಸರ್ಕಾರ ಬಂಧಿಸಿ ಸೆರೆಮನೆಗೆ ತಳ್ಳಿತು. ಆ ಮೊಕದ್ದಮೆಗಳು ನ್ಯಾಯಾಲಯದ ಮುಂದೆ ವಿಚಾರಣೆಗೆ ಬಂದಾಗ ಜನ ಕಿಕ್ಕಿರಿದು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗತೊಡಗಿದರು. ಪರಿಸ್ಥಿತಿ ಕೈಮೀರತೊಡಗಿತ್ತು.

ಮುಗಿಯದ ಹಗ್ಗ ಜಗ್ಗಾಟ

ಇದು ಮುಗಿಯದ ಹಗ್ಗ ಜಗ್ಗಾಟ ಅನಿಸಿದಾಗ ಗಾಂಧಿ, ಏಪ್ರಿಲ್ ಮೊದಲವಾರದಲ್ಲಿ ಜಿಲ್ಲಾ ಕಲೆಕ್ಟರನನ್ನು ಭೇಟಿ ಮಾಡಿ ಬಡ ರೈತರ ಭೂಕಂದಾಯವನ್ನಾದರೂ ಸದ್ಯಕ್ಕೆ ಮಾಫಿ ಮಾಡಬೇಕೆಂಬ ರಾಜಿ ಸೂತ್ರವನ್ನು ಮುಂದಿಟ್ಟರು. ಕಲೆಕ್ಟರ್ ಅದನ್ನು ಒಪ್ಪದಿದ್ದಾಗ ಮಧ್ಯಪ್ರವೇಶಕ್ಕಾಗಿ ಪಟೇಲರ ಮೂಲಕ ಜಿನ್ನಾಗೆ ಹೇಳಿ ಕಳಿಸಿದರು. ಜಿನ್ನಾರ ಮನೆಯಲ್ಲಿ ಅವರ ಭೇಟಿಗಾಗಿ ಕಾದು ಸುಸ್ತಾಗಿ ವಾಪಸ್ ಬಂದ ಪಟೇಲರು, ಜಿನ್ನಾರ ಹೋಂ ರೂಲ್ ಚಳುವಳಿಗೂ ದೇಶದ ಜನಸಾಮಾನ್ಯರಿಗೂ ಯಾವುದೇ ಸಂಬಂಧವಿದ್ದಂತಿಲ್ಲ ಎಂದು ಜಿನ್ನಾ ವಿರುದ್ಧ ಕಿಡಿ ಕಾರಿದರು. ಗಾಂಧಿಗೆ ಕೂಡ ಇದು ನಿಜವೆನ್ನಿಸಿತ್ತು. ಅವರು ಬಾಂಬೆ ಮುಂತಾದ ಕಡೆ ವಕೀಲರನ್ನೊಳಗೊಂಡ ಗಣ್ಯರ ಸಭೆಗಳಲ್ಲಿ ಮಾತನಾಡುತ್ತಾ ಹೋಂ ರೂಲ್, ಚಂಪಾರಣ್, ಖೇಡಾ ರೈತ ಚಳುವಳಿಗಳಿಂದ ಲಭ್ಯವಾಗಬಹುದೇ ಹೊರತು ಬ್ಯಾರಿಸ್ಟರುಗಳ ವಾದ ಮಂಡನೆ-ಅರ್ಜಿಗಳ ಮೂಲಕವಲ್ಲ ಎಂದು ಹೇಳತೊಡಗಿದರು. ಖೇಡಾ ಸತ್ಯಾಗ್ರಹದಲ್ಲಿ ರೈತ ಮಹಿಳೆಯರು, ತಮ್ಮ ಗಂಡಂದಿರು ಸತ್ಯಾಗ್ರಹದಲ್ಲಿ ತೊಡಗಿದ್ದಾಗ ಧೃತಿಗೆಡದೆ ತಮ್ಮ ಕುಟುಂಬಗಳನ್ನು ಹೇಗೋ ಕಷ್ಟದಲ್ಲೇ ನಿಭಾಯಿಸುತ್ತಾ ಅವರನ್ನು ಪ್ರೋತ್ಸಾಹಿಸುತ್ತಿದ್ದ ರೀತಿಯನ್ನು ಗಾಂಧಿ ಗಮನಿಸಿದ್ದರು. ಸ್ವಯಮಾಡಳಿತದ ಹೋರಾಟದಲ್ಲಿ ಒಳಗೊಳ್ಳದೆ ಬಿಟ್ಟುಹೋಗಿರುವ ಸಮಾಜದ ಭಾಗಗಳ ಬಗ್ಗೆ ಅವರು ಚಿಂತಿಸತೊಡಗಿ ಇವರನ್ನೆಲ್ಲ ಒಳಗೊಳ್ಳದ ಸ್ವಯಮಾಡಳಿತ ಯಾರಿಗಾಗಿ ಎಂಬ ಪ್ರಶ್ನೆಯನ್ನೂ ಹಾಕಿಕೊಳ್ಳತೊಡಗಿದರು.

ಇದೇ ಹೊತ್ತಿಗೆ ಯುದ್ಧ ಸಂಬಂಧವಾಗಿ ಸಂಕಷ್ಟದಲ್ಲಿದ್ದ ಬ್ರಿಟನ್‌ಗೆ ನೆರವಾಗುವಂತೆ ಭಾರತೀಯರ ಮನವೊಲಿಸುವ ಪ್ರಯತ್ನವಾಗಿ, ವೈಸ್‌ರಾಯ್ ಚೆಮ್ಸ್‌ಫೋರ್ಡ್ ದೆಹಲಿಯಲ್ಲಿ ಕರೆದಿದ್ದ ಸಭೆಗೆ ಗಾಂಧಿ ಹೋಗಬೇಕಾಯಿತು. ಈ ಸಭೆಗೆ ದೇಶದ ಅತಿಮುಖ್ಯ ನಾಯಕರೆನಿಸಿದ್ದ ತಿಲಕರನ್ನಾಗಲೀ, (ಬ್ರಿಟನ್ ಯುದ್ಧದ ಭಾಗವಾಗಿ ಅಮಾನ್ಯ ಮಾಡಿದ್ದ ತುರ್ಕಿಯ ರಾಜನ ಬೆಂಬಲಿಗರೆಂಬ ಅನುಮಾನದ ಮೇಲೆ ಗೃಹಬಂಧನದಲ್ಲಿದ್ದ) ಅಲಿ ಸೋದರರನ್ನಾಗಲೀ ಆಹ್ವಾನಿಸದ ಬಗ್ಗೆ ತಮ್ಮ ಅಸಮಾಧಾನವನ್ನು ದಾಖಲಿಸಿದ ನಂತರ ಎರಡನೇ ದಿನ ಸಭೆಯಲ್ಲಿ ಭಾಗವಹಿಸಿದ ಗಾಂಧಿ, ಸಾಮ್ರಾಜ್ಯದ ನಿಷ್ಠಾವಂತ ಪ್ರಜೆಗಳಾಗಿ ಪ್ರಭುತ್ವ ಅಪಾಯದಲ್ಲಿದ್ದಾಗ ಏನೆಲ್ಲ ಸಹಕಾರ ಸಾಧ್ಯವೋ ಅದನ್ನೆಲ್ಲ ತಾವು ಸಂಘಟಿಸುವುದಾಗಿ ತಿಳಿಸಿದರು. ಇದನ್ನು ಅವರು ವೈಸ್‌ರಾಯ್‌ಗೆ ಹಿಂದೂಸ್ತಾನಿಯಲ್ಲಿ ಹೇಳಿದ್ದು ದೊಡ್ಡ ಸುದ್ದಿಯಾಗಿತ್ತು. ವೈಸ್‌ರಾಯ್

ಗಾಂಧಿಯವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ ಸೇನೆಗೆ ಜನ ಸೇರುವಂತೆ ಪ್ರೇರೇಪಿಸಲು ಅವರ ತುರ್ತು ನೆರವನ್ನು ಕೋರಿದರು. ಮಾಂಟೆಗೋ, ಭಾರತದ ವಿವಿಧ ನಾಯಕರ ಮತ್ತು ಜನವರ್ಗಗಳ ಪ್ರತಿನಿಧಿಗಳನ್ನು ಭೇಟಿ ಮಾಡಿ, ಅವರ ಮನವಿಗಳನ್ನು ಸ್ವೀಕರಿಸಿ, ಭಾರತಕ್ಕೆ ಸದ್ಯಕ್ಕೆ ನೀಡಬಹುದಾದ ಶಾಸನಾತ್ಮಕ ಸ್ವಯಮಾಧಿಕಾರದ ಇತಿಮಿತಿಗಳನ್ನು ಪರಿಶೀಲಿಸುತ್ತಿದ್ದ ಕಾಲವದು. ಗಾಂಧಿ ದೇಶಕ್ಕೊಂದು ಶಾಸನಬದ್ಧ ಆಡಳಿತ ವ್ಯವಸ್ಥೆ ನೀಡಿದ್ದ ಬ್ರಿಟಿಷ್ ಪ್ರಭುತ್ವವನ್ನು, ಯುದ್ಧ ಕಾಲದಲ್ಲಿ ಕಷ್ಟಕ್ಕೆ ಸಿಲುಕಿಸಿ ವಿಶ್ವಾಸದ್ರೋಹವೆಸಗಲು ಇಷ್ಟಪಡಲಿಲ್ಲ. ಪ್ರಭುತ್ವವನ್ನು ಹೀಗೆ ಎದುರು ಹಾಕಿಕೊಂಡು ಸ್ವರಾಜ್ಯದ ಸಾಧ್ಯತೆಗಳನ್ನು ಕಳೆದುಕೊಳ್ಳುವುದೂ ಅವರಿಗೆ ವಿವೇಕಯುತವಾದ ಕ್ರಮವಾಗಿ ಕಾಣಲಿಲ್ಲ. ಜೊತೆಗೆ ಪ್ರಭುತ್ವದ ವಿರುದ್ಧ ಬಂಡಾಯವೇಳುವಷ್ಟರ ಮಟ್ಟಿಗೆ ಆಗ ಜನಜಾಗೃತಿಯಾಗಲೀ ಸಂಘಟನೆಯಾಗಲೀ ಆಗಿರಲಿಲ್ಲ. ಇನ್ನು ತೀವ್ರವಾದಿಗಳು ಪ್ರಭುತ್ವದ ಉಚ್ಚಾಟನೆಗಾಗಿ ಅಲ್ಲೊಂದು ಇಲ್ಲೊಂದರಂತೆ ನಡೆಸುತ್ತಿದ್ದ ಕೊಲೆ-ಹಿಂಸಾಚಾರಗಳ ತಾತ್ವಿಕತೆಯಲ್ಲಾಗಲೀ, ವ್ಯಾವಹಾರಿಕತೆಯಲ್ಲಾಗಲೀ ಅವರಿಗೆ ನಂಬಿಕೆ ಇರಲಿಲ್ಲ. ಹೀಗಾಗಿ ಅವರು ಸೇನೆಗೆ ಸೇರುವಂತೆ ಜನರ ಮನವೊಲಿಸುವ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರಲ್ಲದೆ ಖೇಡಾ ರೈತರ ಕಂದಾಯ ಸಮಸ್ಯೆಯನ್ನು ಪರಿಹರಿಸುವಂತೆಯೂ ಕೋರಿದರು.

ಸೇನಾಭರ್ತಿ ಕಾರ್ಯಾಚರಣೆ

ದೆಹಲಿಯಿಂದ ವಾಪಸ್ ಬಂದ ಗಾಂಧಿ, ವೈಸ್‌ರಾಯ್‌ಗೆ ಕೊಟ್ಟ ಮಾತಿನಂತೆ ಗುಜರಾತ್‌ನಲ್ಲಿ-ನಿರ್ದಿಷ್ಟವಾಗಿ ಖೇಡಾದಲ್ಲಿ-ಸೇನೆಗೆ ಸೇರುವಂತೆ ರೈತರ ಮನವೊಲಿಸುವ ಆಂದೋಲನ ಶುರುಮಾಡಿದರು. ಆದರೆ ಕ್ಷಾತ್ರ ಗುಣಕ್ಕೇನೂ ಹೆಸರಾಗದ ಗುಜರಾತಿನ ಜನ, ಗಾಂಧಿ ಕರೆಗೆ ಅಷ್ಟೇನೂ ಉತ್ಸಾಹದಿಂದ ಓಗೊಡಲಿಲ್ಲ. ಜೊತೆಗೆ ಮೊನ್ನೆ ತಾನೇ ಅಹಿಂಸೆಯ ಮಾತಾಡುತ್ತಿದ್ದ ಈ ಮನುಷ್ಯ ಈಗ ಶಸ್ತ್ರಸಜ್ಜಿತ ಸೈನಿಕರಾಗಲು ಮುಂದೆ ಬನ್ನಿ ಎಂದು ಹೇಳುತ್ತಿರುವುದು ಆತ್ಮದ್ರೋಹದ ವರ್ತನೆಯಾಗಿ ಕಂಡಿತು. ಗಾಂಧಿ, ಸ್ವರಕ್ಷಣೆಗಾದರೂ ಯುದ್ಧ ಅನಿವಾರ್ಯವಾದಾಗ ಅದರಲ್ಲಿ ಭಾಗವಹಿಸುವುದು ತಪ್ಪಲ್ಲ; ಅದು ಕರ್ತವ್ಯ ಎಂದು ವಾದಿಸಿದರು. ಆದರೂ ಸಾವಿರಾರು ಜನರನ್ನು ಸೈನ್ಯಕ್ಕೆ ಸೇರಿಸುವ ಉದ್ದೇಶವಿದ್ದ ಅವರ ಈ ಆಂದೋಲನ, ಕೊನೆಗೆ ನೂರು ಜನರನ್ನೂ ಆಕರ್ಷಿಸದೆ ವಿಫಲವಾಯಿತು. ಗಾಂಧಿ ಸೈನ್ಯಕ್ಕೆ ಸೇರಲು ಸಿದ್ಧರಿರುವವರೆಂದು, ತಮ್ಮ ಮತ್ತು ಪಟೇಲರ ಹೆಸರುಗಳಿಂದ ಆರಂಭಿಸಿ, ತಮ್ಮ ಕೆಲವರು ಆಪ್ತ ಆಶ್ರಮವಾಸಿಗಳ ಹೆಸರುಗಳನ್ನು ಸೇರಿಸಿ, ಒಂದು ನೂರು ಜನರ ಹೆಸರುಗಳ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿದರು. ಆದರೆ ಗಾಂಧಿಯ ಈ ಪ್ರಯತ್ನದ ಪ್ರಾಮಾಣಿಕತೆಯನ್ನು ಮೆಚ್ಚಿಯೇನೋ ಎಂಬಂತೆ ಜೂನ್‌ನಲ್ಲಿ ಸರ್ಕಾರ ಬಡರೈತರ ಭೂ ಕಂದಾಯವನ್ನು ಆ ವರ್ಷ ವಸೂಲು ಮಾಡದಿರುವ ಆಜ್ಞೆಯನ್ನು ಹೊರಡಿಸಿತು. ಅಂತೂ ಗಾಂಧಿ ಒಟ್ಟಾರೆ ಈ ಹೋರಾಟದಲ್ಲಿ ಸೋತು ಗೆದ್ದಿದ್ದರು.

ಮುಂದಿನ ತಿಂಗಳಿನಲ್ಲಿಯೇ ಸ್ವಯಮಾಧಿಕಾರ ನೀಡುವ ಪ್ರಶ್ನೆ ಕುರಿತು ಅಧ್ಯಯನಕ್ಕೆ ಬಂದಿದ್ದ ಮಾಂಟೆಗೋ, ತಿಲಕ್-ಗಾಂಧಿ-ಜಿನ್ನಾ ಮುಂತಾದ ನಾಯಕರನ್ನಲ್ಲದೆ ದೇಶದ

ವಿವಿಧ ಸಮುದಾಯ ಮತ್ತು ವರ್ಗಗಳ ಪ್ರತಿನಿಧಿಗಳನ್ನು ಭೇಟಿ ಮಾಡಿ, ಪ್ರಭುತ್ವದಲ್ಲಿ ಭಾರತೀಯರಿಗೆ ಸಾಕಷ್ಟು ಉದಾರವಾಗಿಯೇ ಹೆಚ್ಚಿನ ಪ್ರಾತಿನಿಧ್ಯ ಮತ್ತು ಅಧಿಕಾರಗಳನ್ನು ಒದಗಿಸಲು ಅವಕಾಶವಿರುವ ಸಂವಿಧಾನ ಪರಿಷ್ಕರಣೆಗಳನ್ನು ಮಾಡಿದ್ದರು. ಆದರೆ ವೈಸ್‌ರಾಯ್ ಚೆಮ್ಸ್‌ಫೋರ್ಡ್ ಮತ್ತು ಅವರ ಅಧಿಕಾರಿಗಳ ಬಳಗ ಈ ಕುರಿತು ಸಂಪೂರ್ಣ ಅಸಮ್ಮತಿ ಸೂಚಿಸಿದ್ದರಿಂದ, ಅವರು ವೈಸ್‌ರಾಯ್‌ರ ಜೊತೆಗೂಡಿ ಅಂತಿಮವಾಗಿ ಒಂದು ತೇಪೆ ಹಾಕಿದ ವರದಿ ಸಲ್ಲಿಸಿದ್ದರು. ಮುಂದೆ ಮಾಂಟೆಫೋರ್ಡ್ ವರದಿಯೆಂದೇ ಹೆಸರಾದ ಅದು, ಲಕ್ನೋ ಘೋಷಣೆಗೆ ಅರ್ಧಂಬರ್ಧ ಮಾನ್ಯತೆ ನೀಡಿ, ಎಲ್ಲ ಮುಖ್ಯ ಅಧಿಕಾರಗಳನ್ನೂ, ಸಾಮ್ರಾಜ್ಯ ನೇಮಿಸುವ ವೈಸ್‌ರಾಯ್ ಮತ್ತವನ ಸಲಹಾಮಂಡಳಿಯ ಸುಪರ್ದಿಯಲ್ಲಿರುವ ಕೇಂದ್ರ ಸರ್ಕಾರದಲ್ಲೇ ಉಳಿಸಿಕೊಂಡು ಕೆಲವು ಅಮುಖ್ಯ ಅಧಿಕಾರಗಳನ್ನಷ್ಟೇ ಸೀಮಿತ ಮತದಾರ ವಲಯದಿಂದ ಆಯ್ಕೆಯಾಗುವ ಪ್ರಾಂತೀಯ ಸರ್ಕಾರಗಳಿಗೆ ನೀಡಲು ಶಿಫಾರ್ಸು ಮಾಡಿತ್ತು. ವರದಿಯನ್ನು ಅಭ್ಯಸಿಸಿದ ಗಾಂಧಿ, ಇದು ಪ್ರಸ್ತುತ ವ್ಯವಸ್ಥೆಗಿಂತ ಮೇಲಾದ ಸ್ವಯಮಾಧಿಕಾರ ವ್ಯವಸ್ಥೆಗೆ ಕಾರಣವಾಗಲಿದ್ದು ಕೆಲವು ತಿದ್ದುಪಡಿಗಳೊಡನೆ ಅದನ್ನು ಒಪ್ಪಿಕೊಳ್ಳಬಹುದೆಂದು ಜಿನ್ನಾಗೆ ಬರೆದರೆ, ಈ ತಿದ್ದುಪಡಿಗಳಿಗೆ ಸತ್ಯಾಗ್ರಹ ಅಗತ್ಯವಾಗಬಹುದೆಂದು ತಿಲಕರಿಗೆ ತಿಳಿಸಿದರು. ಆದರೆ ತಿಲಕರು ಗಾಂಧಿ ಮಾತನ್ನು ಒಪ್ಪದೆ ಸರ್ಕಾರದ ವಿರುದ್ಧ ಮಾತಿನ ದಾಳಿಯನ್ನು ತೀವ್ರಗೊಳಿಸಿದರು. ಅನಿಬೆಸೆಂಟರೂ ಅವರನ್ನು ಸೇರಿಕೊಂಡರು. ಆದರೆ ಸುರೇಂದ್ರನಾಥ ಬ್ಯಾನರ್ಜಿ ನಾಯಕತ್ವದಲ್ಲಿ ಕಾಂಗ್ರೆಸ್‌ನ ಸೌಮ್ಯವಾದಿಗಳು ಸಭೆ ಸೇರಿ ಮಾಂಟೆಗೋ-ಫೋರ್ಡ್ ಶಿಫಾರ್ಸುಗಳನ್ನು ಸ್ವಾಗತಿಸುವ ಮತ್ತು ಸಮಾಲೋಚನೆಗಳ ಮೂಲಕ ಅವನ್ನು ಪರಿಷ್ಕರಿಸಿ ಒಪ್ಪಿಕೊಳ್ಳುವ ನಿರ್ಣಯವೊಂದನ್ನು ಅಂಗೀಕರಿಸಿದರು. ಇದರ ನಂತರದ ದಿನಗಳಲ್ಲಿ ತಿಲಕರು, ಬ್ರಿಟಿಷ್ ಸಾಮ್ರಾಜ್ಯದ ಅಧಿಪತಿಗಳಿಗೆ ಭಾರತದಲ್ಲಿನ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ, ಸ್ವಯಮಾಧಿಕಾರ ನೀಡಿಕೆ ಸಾಮ್ರಾಜ್ಯದ ಹಿತದೃಷ್ಟಿಯಿಂದ ಎಷ್ಟು ಒಳ್ಳೆಯದೆಂದು ವಿವರಿಸಲು, ಜನಸಾಮಾನ್ಯರಿಂದ ದೇಣಿಗೆ ಎತ್ತಿ ಇಂಗ್ಲೆಂಡ್‌ಗೆ ಹೊರಟರು. ಆದರೆ ಅಲ್ಲಿ ಅವರು ಖಾಸಗಿ ಮೊಕದ್ದಮೆಯೊಂದರ ವಿಚಾರಣೆಯಲ್ಲಿ ಭಾಗವಹಿಸಬೇಕಾಗಿ ಬಂದುದರಿಂದ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಲಾಗಲಿಲ್ಲ.

ಅಹಿಂಸೆ ಮತ್ತು ಯುದ್ಧ: ನೈತಿಕ ಸಂದಿಗ್ಧತೆ

ಇದೆಲ್ಲದರ ಆಚೆ, ಸೇನೆಗೆ ಸೇರಲು, ಶಸ್ತ್ರ ತರಬೇತಿ ಪಡೆಯಲು ಜನರ ಮನ ಒಲಿಸಲು ಸತತ ಪ್ರಯತ್ನ ಮಾಡಿದ ಗಾಂಧಿಯವರ ಅಹಿಂಸೆ ಕುರಿತ ಬದ್ಧತೆ, ಹಲವರಿಗೆ ಅನುಮಾನಾಸ್ಪದವಾಗಿ ಕಂಡಿದ್ದರೆ ಆಶ್ಚರ್ಯವೇನಿಲ್ಲ. ಅವರ ಗೆಳೆಯ ಪೊಲಾಕ್ ಅಲ್ಲದೆ ಅವರ ಆಶ್ರಮದ ಕೆಲವು ಕಾರ್ಯಕರ್ತರೇ ಅದನ್ನು ಒಪ್ಪಲಿಲ್ಲ. ಈ ಬಗ್ಗೆ ಅವರ ಜೀವನ ಚರಿತ್ರಕಾರ ಲೂಯಿ ಫೀಶರ್ ೧೯೪೨ರಲ್ಲಿ ತನ್ನ ಪುಸ್ತಕಕ್ಕಾಗಿ ಪ್ರಶ್ನಿಸಿದಾಗ ಗಾಂಧಿ, ತಾವು ಆಗ ರಾಷ್ಟ್ರೀಯತೆ ಮತ್ತು ಶಾಂತಿವಾದಗಳ ನಡುವೆ, ಆ ಸಂದರ್ಭದಲ್ಲಿ, ಪರಿಹಾರ ಕಂಡುಕೊಳ್ಳಲಾಗದ ಒಂದು ದೊಡ್ಡ ದ್ವಂದ್ವದಲ್ಲಿ ಸಿಲುಕಿಕೊಂಡಿದ್ದುದಾಗಿ ಹೇಳಿ ಅದನ್ನು

ಹೀಗೆ ವಿವರಿಸಿದ್ದಾರೆ: 'ನನಗೆ ನನ್ನದೇ ರಾಷ್ಟ್ರ ಬೇಕಿತ್ತು. ಅದನ್ನು ಆಗ ನನ್ನ ನಂಬಿಕೆಯ ಪ್ರಕಾರ ಬ್ರಿಟಿಷ್ ಸಾಮ್ರಾಜ್ಯದಿಂದಲೇ ಪಡೆಯಬೇಕಿತ್ತು. ಹಾಗಾಗಿ ಬ್ರಿಟಿಷ್ ಸಾಮ್ರಾಜ್ಯದ ಉಳಿವಿಗೆ ಪ್ರಯತ್ನಿಸಬೇಕು ಎಂದು ನಾನು ಯೋಚಿಸಿದೆ. ನಾನು ಆಗ ಪ್ರತಿಶತ ನೂರರಷ್ಟು ಶಾಂತಿವಾದಿಯಾಗಿದ್ದರೆ ನಮಗಾಗಿ ಏನು ಉಳಿಯುತ್ತಿತ್ತೋ ಗೊತ್ತಿಲ್ಲ!'

ಅವರ ಈ ಮಾತುಗಳು ಸರಿಯಾದ ಭಾವಾರ್ಥವನ್ನು, ಅವರ ಈ ದ್ವಂದ್ವವನ್ನು ತಮ್ಮ ಬದುಕಿನ ದುರಂತ ಸಮಯವೆಂಬಂತೆ ಆರ್ತವಾಗಿ ತಮ್ಮ ಬ್ರಿಟಿಷ್ ಮಿತ್ರ ಫ್ಲಾರೆನ್ಸ್ ವಿಂಟರ್‌ಬಾಟಮ್‌ಗೆ ಬರೆದ ಪತ್ರದ ಕೊನೆಯ ಈ ಸಾಲುಗಳು ಪರಿಣಾಮಕಾರಿಯಾಗಿ ನಿರೂಪಿಸುತ್ತವೆ: 'ಓಹ್, ನನ್ನ ಜನ ಕೊಲ್ಲುವ ಕಲೆಯನ್ನು ಕರಗತಮಾಡಿಕೊಳ್ಳಬೇಕೆಂಬ ಬಯಕೆಯಲ್ಲವೇ ಇದು? ಇದು ಅತಿ ಘೋರ, ಭೀಕರ! ನನ್ನ ಆತ್ಮ ಒಳಗೊಳಗೇ ಕೆಳಕೆಳಕ್ಕೆ ಕುಸಿಯುತ್ತಿದೆಯೇನೋ ಎಂಬ ವೇದನೆ ನನ್ನನ್ನು ಬಾಧಿಸುತ್ತಿದೆ.' (ಮಾರ್ಟಿನ್ ಗ್ರೀನ್ ಅವರ 'ಗಾಂಧಿ' ಪುಸ್ತಕದ ೧೪೪ನೇ ಪುಟ ನೋಡಿ)

ಅದೇನೇ ಇರಲಿ, ಈ ಘಟ್ಟದಲ್ಲಿ ಗಾಂಧಿ ಭಾಗವಹಿಸಿದ ಮೂರು ಸತ್ಯಾಗ್ರಹಗಳ ಹಲವು ಮುಖ್ಯ ಫಲಶೃತಿಗಳೆಂದರೆ, ಅವರಿಗೆ ದೇಶದಾದ್ಯಂತದಿಂದ ಬಂದ ಹಲವಾರು ಬದ್ಧ ದೇಶಭಕ್ತ ಕಾರ್ಯಕರ್ತರು ಪರಿಚಯವಾಗಿ, ಅವರಲ್ಲಿ ಹಲವರು ಸತ್ಯಾಗ್ರಹ ಆಶ್ರಮ ಸೇರಿದರು. ಅವರಲ್ಲಿ ತಮ್ಮ ಬಹುಶೃತ ವಿದ್ವತ್ತು, ನಮ್ರತೆ ಮತ್ತು ಸ್ವತಂತ್ರ ಮನೋಭಾವದ ವ್ಯಕ್ತಿ ಎನಿಸಿದ ತರುಣ ಮಹದೇವ ದೇಸಾಯಿಯವರನ್ನು ಗಾಂಧಿ ತುಂಬ ಮೆಚ್ಚಿ ಅವರನ್ನು ತಮ್ಮ ಕಾರ್ಯದರ್ಶಿಯನ್ನಾಗಿ ನೇಮಿಸಿಕೊಂಡರು. ಮುಂದೆ ಗಾಂಧಿಯವರೊಂದಿಗೆ ಯೆರವಾಡ ಸೆರೆಮನೆಯಲ್ಲಿ ಸ್ಥಾನಬದ್ಧತೆಯಲ್ಲಿದ್ದು ಕೊನೆಯುಸಿರೆಳೆಯುವವರೆಗೆ ಅವರು ಗಾಂಧಿಯ ಮಾತುಗಳ ದಾಖಲೆಕಾರ, ಅನುವಾದಕ, ವ್ಯಾಖ್ಯಾನಕಾರ, ಅವರ ದಿನಚರಿ ಮತ್ತು ಪ್ರವಾಸಗಳ ನಿರ್ಣಯಕಾರ, ಕೆಲವೊಮ್ಮೆ ಅಡುಗೆ ಭಟ್ಟ ಹೀಗೆ ಅವರ ದಿನನಿತ್ಯದ ಜೀವನದ ಎಲ್ಲ ವ್ಯವಹಾರಗಳ ಉಸ್ತುವಾರಿಯನ್ನು ಚಾಚೂ ತಪ್ಪದೆ ನೋಡಿಕೊಂಡರು. ಗಾಂಧಿ ಪ್ರಕಾರ ದೇಸಾಯಿ ತಮ್ಮ ಹಿರಿಯ ಮಗ ಹರಿಲಾಲ ನಿರ್ವಹಿಸುತ್ತಾನೆಂದು ತಾವು ನಿರೀಕ್ಷಿಸಿದ್ದ, ಆದರೆ ಅದು ನೆರವೇರದಾದಾಗ ಹೆನ್ರಿ ಪೊಲಾಕ್ ನಿರ್ವಹಿಸಿದ್ದ ಪಾತ್ರವನ್ನು ನಿರ್ವಹಿಸುವ ಜವಾಬ್ದಾರಿಯನ್ನು ದೇಸಾಯಿ ಹೊತ್ತರು. ಈ ಎಲ್ಲಕ್ಕಿಂತ ಹೆಚ್ಚಾಗಿ ಸತ್ಯಾಗ್ರಹಗಳ–ಮುಖ್ಯವಾಗಿ ಎರಡು ರೈತ ಸತ್ಯಾಗ್ರಹಗಳ–ಮೂಲಕ ಗಾಂಧಿ ಸಾಧಿಸಿದ್ದೇನೆಂದರೆ ಪ್ರಭುತ್ವ ಎಂದರೆ ಜನರಿಗಾಗಿ ಪ್ರಭುತ್ವವೇ ಹೊರತು ಪ್ರಭುತ್ವಕ್ಕಾಗಿ ಜನರಲ್ಲ ಎಂಬುದು. ಆವರೆಗೆ ಇದ್ದ ಮಧ್ಯಕಾಲೀನತೆಯ ವಾಸನೆಗಳ ಸಾಮ್ರಾಜ್ಯ ಪ್ರಭುತ್ವದ ಪರಿಕಲ್ಪನೆಯನ್ನು, ಸಾಮ್ರಾಜ್ಯಕ್ಕೆ ವಿಧೇಯತೆಯನ್ನು ಪ್ರದರ್ಶಿಸುತ್ತಲೇ ಒಳಗಿಂದೊಳಗೇ ತಲೆಕೆಳಗಾಗಿಸಿ ಜನರಿಗೆ ಅವರ ಸಹಜ ಹಕ್ಕುಗಳ ಅರಿವು ಮೂಡಿಸಿ ಪ್ರಭುತ್ವದ ಭೀತಿಯನ್ನು ಕಳೆಯುವ ದಾರಿ ತೆರೆದದ್ದು. ಪ್ರಜಾಸತ್ತಾತ್ಮಕ ಪ್ರಭುತ್ವದ ಅಸ್ಪಷ್ಟ ಆಕಾರವನ್ನಾದರೂ ಜನರ ಮನಸ್ಸಿನಲ್ಲಿ ಮೂಡಿಸಿದ್ದು.

ಹರಿಲಾಲ–ಮಣಿಲಾಲರ ರಗಳೆ

ಈ ವೇಳೆಗೆ ಹರಿಲಾಲ ತಾನು ಕೆಲಸದಲ್ಲಿದ್ದ ಸಂಸ್ಥೆಯ ಹಣ ದುರುಪಯೋಗ

ಮಾಡಿಕೊಂಡ ಆರೋಪಕ್ಕೆ ಸಿಲುಕಿ, ತಂದೆಯಿಂದ ಹಿತೋಪದೇಶದ ಹೊರತಾಗಿ ಮತ್ತಾವ ನೆರವೂ ಸಿಗದೆ ದಿಕ್ಕೆಟ್ಟು ಅಲೆಯತೊಡಗಿದ್ದ. ಆದರೆ ಆತನ ಪತ್ನಿ ಗುಲಾಬ್ ಹಾಗೂ ಕೊನೆಯ ಮಗು ಶಾಂತಿ ಇನ್‌ಫ್ಲೂಯೆಂಜ಼ಾಗೆ ತುತ್ತಾದ ನಂತರ, ಮಿಕ್ಕ ನಾಲ್ಕು ಮಕ್ಕಳನ್ನು ಗಾಂಧಿ ಆಶ್ರಮಕ್ಕೆ ಕರೆತಂದು ಅಜ್ಜಿ ಕಸ್ತೂರಬಾ ಅವರ ಪ್ರೀತಿಯ ಆಸರೆಯಲ್ಲಿ ಬೆಳೆಸುತ್ತಿದ್ದರು. ಎರಡನೆಯ ಮಗ ಮಣಿಲಾಲನನ್ನು ಗಾಂಧಿ ಆತನ ಅಸಮಾಧಾನಗಳ ನಡುವೆಯೇ 'ಇಂಡಿಯನ್ ಒಪಿನಿಯನ್'ನ್ನು ನಡೆಸಲು ಆಲ್ಬರ್ಟ್ ವೆಸ್ಟ್‌ರಿಗೆ ಸಹಾಯ ಮಾಡಲು ದ.ಆಫ್ರಿಕಾಕ್ಕೆ ಕಳಿಸಿದ್ದರಲ್ಲದೆ ಆತನಿಗೆ 'ಬ್ರಹ್ಮಚಾರಿಯಾಗಿ ಉಳಿಯಲು ಒತ್ತಾಯಪೂರ್ವಕವಾಗಿ ಹೇಳಿದ್ದರು. ಅವನ ತಮ್ಮ ರಾಮದಾಸ ಈಗಾಗಲೇ ದ.ಆಫ್ರಿಕಾದಲ್ಲಿದ್ದು ತಂದೆಯ ಸಲಹೆಯ ಮೇರೆಗೆ ಬಟ್ಟೆ ವ್ಯಾಪಾರ ಮಾಡುತ್ತಾ, ಉಡುಪು ಸಿದ್ಧಪಡಿಸುವ ಕಲೆಯಲ್ಲಿ ತರಬೇತಿ ಪಡೆಯುತ್ತಿದ್ದ. ಇನ್ನು ಹದಿನೆಂಟರ ಕಿರಿಯ ಮಗ ದೇವದಾಸನನ್ನು ಭವಿಷ್ಯದ ರಾಷ್ಟ್ರ ಭಾಷೆ ಎಂದು ತಾವು ಭಾವಿಸಿದ್ದ ಹಿಂದಿಯ ಪ್ರಚಾರಕ್ಕಾಗಿ–ಆತನ ಹಿಂಜರಿಕೆಯ ನಡುವೆಯೇ–ಮದ್ರಾಸ್‌ಗೆ ಅಟ್ಟಿದ್ದರು.

ಸಾರ್ವಜನಿಕ ಜೀವನದೊಂದಿಗೇ ಕುಟುಂಬ ಜೀವನವನ್ನೂ ಸುಗಮವಾಗಿ ಸರಿದೂಗಿಸಿಕೊಂಡು ಹೋಗಬೇಕಾದ ಜಟಿಲ ಕಸರತ್ತಿನ ಹಿಂದೆ ಸೃಷ್ಟಿಯಾಗುತ್ತಿದ್ದ ಭಾವಸ್ಫೋಟಗಳ ಹಲವು ವಿನ್ಯಾಸಗಳನ್ನು ನಾವು, ಅವರು ಈ ಸಂದರ್ಭದಲ್ಲಿ ತಮ್ಮ ಆತ್ಮೀಯರಾದ ಪೊಲಾಕ್ ಮತ್ತು ಆತನ ಹೆಂಡತಿ ಮಿಲಿ ಹಾಗೂ ಕಲೆನ್‌ಬಾಕ್‌ಗೆ ನಿಯಮಿತವಾಗಿ ಬರೆದಿರುವ ಹಲವು ಪತ್ರಗಳಲ್ಲಿ ಕಾಣಬಹುದು. ಹಾಗೇ ಪತ್ನಿ ಮತ್ತು ಹರಿಲಾಲನೂ ಸೇರಿದಂತೆ ಮಕ್ಕಳಿಗೆ ಬರೆಯುತ್ತಿದ್ದ ಪತ್ರಗಳಲ್ಲೂ ಅವರ ಒಡಲ ಬೇಗುದಿಯ ಜೊತೆಗೇ ಪ್ರೀತಿ–ವಾತ್ಸಲ್ಯಗಳ ನಿರ್ಮಲ ಝರಿಗಳೂ ಹರಿಯುತ್ತಿದ್ದುದನ್ನು ಗಮನಿಸಬಹುದು. ನೋಡಲು ತಣ್ಣಗೆ ಕಾಣುತ್ತಿದ್ದ ಗಾಂಧಿಯವರ ಮನದಲ್ಲಿ ಭಾವ ಸಂಘರ್ಷದ ಅಲೆಗಳು ಎದ್ದೆದ್ದು ಬೀಳುತ್ತಿದ್ದವು. ತಮ್ಮ ಸುತ್ತಲಿನ ಎಲ್ಲರನ್ನೂ ತಾವು ಸತ್ಯವೆಂದು ನಂಬಿದ ಒಂದು ದಿಕ್ಕಿನತ್ತ ತಿರುಗಿಸುವ ಅವರ ಹಠ, ಅವರ ಶಕ್ತಿ ಹೇಗೋ ಹಾಗೇ ದೌರ್ಬಲ್ಯವೂ ಆಗಿತ್ತು.

ಈ ಎಲ್ಲ ಬೆಳವಣಿಗೆಗಳ ನಡುವೆಯೇ ಸತ್ಯಾಗ್ರಹ ಆಶ್ರಮದ ಹೊಸ ಜಮೀನಿನಲ್ಲಿ ಮಗನ್‌ಲಾಲ್‌ರ ಉಸ್ತುವಾರಿಯಲ್ಲಿ ಕಟ್ಟಡಗಳು ನಿಧಾನವಾಗಿ ಏಳುತ್ತಿದ್ದವು. ಗಾಂಧಿ ಅಲ್ಲಿ ನೂರು ಜನರ ವಸತಿಗಾಗಿ ಕುಟೀರಗಳನ್ನು ಕಟ್ಟಬಯಸಿದ್ದರು. ನೂಲಲು ಚರಕ ಅಂಗಳಗಳು ಮತ್ತು ನೇಯಲು ಹದಿನಾರು ಮಗ್ಗಗಳು, ಬೇಸಾಯ ಮತ್ತು ಪಶು ಸಾಕಣೆ ಇತ್ಯಾದಿ ಪ್ರಯೋಗಗಳಿಗೆ ಬೇಕಾದ ಸೌಲಭ್ಯಗಳಿಗೂ ಅಲ್ಲಿ ಅವಕಾಶ ಮಾಡಬೇಕಿತ್ತು. ಅದಕ್ಕೆ ಆಗ ಒಂದು ಲಕ್ಷ ರೂಪಾಯಿಗಳ ವೆಚ್ಚದ ಅಂದಾಜು ಮಾಡಲಾಗಿತ್ತು. ಅದರಲ್ಲಿ ಸುಮಾರು ಅರ್ಧದಷ್ಟು ಹಣ ದೇಣಿಗೆಗಳ ಮೂಲಕ ಸಂಗ್ರಹವಾಗಿ ಉಳಿದ ಹಣಕ್ಕಾಗಿ ಗಾಂಧಿ ಮತ್ತೆ ತಮ್ಮ ಗೆಳೆಯ ಪ್ರಾಣಜೀವನ ಮೆಹ್ತಾನಿಗೆ ಮನವಿ ಸಲ್ಲಿಸಿದರು.

ಕುಸಿದುಬಿದ್ದ ಗಾಂಧಿ

ಗಾಂಧಿ, ದೇಶದ ನಾಯಕತ್ವದ ಹೊಸ ಎತ್ತರಗಳನ್ನು ಏರುತ್ತಿದ್ದ ಸಂದರ್ಭ, ಅವರ ಬದುಕಿನ ಅತ್ಯಂತ ಬಳಲಿಕೆಯ ಸಂದರ್ಭವೂ ಆಗಿತ್ತು. ಅದು ಬರೀ ದೈಹಿಕ ಬಳಲಿಕೆ

ಮಾತ್ರವಾಗಿರದೆ ಮಾನಸಿಕ ಬಳಲಿಕೆಯೂ ಆಗಿತ್ತು. ಅವರು ಭಾಗವಹಿಸಿ ನೇತೃತ್ವ ವಹಿಸಿದ ಮೂರೂ ಸತ್ಯಾಗ್ರಹಗಳು ಹೆಚ್ಚೂಕಡಿಮೆ ಒಂದೇ ಕಾಲದಲ್ಲಿ ನಡೆಯಬೇಕಾಗಿ ಬಂದು, ಅವರು ಬಿಹಾರ-ಗುಜರಾತ್‌ಗಳ ಮಧ್ಯೆ ಪದೇಪದೇ ಓಡಾಡಬೇಕಾಗಿ ಬಂತು. ಜೊತೆಗೆ ಕಾಂಗ್ರೆಸ್ ಸಭೆಗಳು, ವೈಸ್‌ರಾಯ್ ಸಭೆಗಳೆಂದು ಬಾಂಬೆ-ಕಲ್ಕತ್ತಾ-ಮದ್ರಾಸ್-ದೆಹಲಿಗೂ ಹೋಗಿ ಬರಬೇಕಾಯಿತು. ಎಲ್ಲಕ್ಕಿಂತ ಹೆಚ್ಚಾಗಿ ಖೇಡಾ ಸತ್ಯಾಗ್ರಹ ಮತ್ತು ಸೇನಾಭರ್ತಿ ಕಾರ್ಯಗಳಿಗಾಗಿ ಅವರು ಉರಿಬಿಸಿಲಿನಲ್ಲಿ ಹಳ್ಳಿಗಾಡಿನಲ್ಲಿ ಅಲೆದಾಡಬೇಕಾಯಿತು. ಇದರ ಮಧ್ಯೆ ಹೆಂಡತಿ-ಮಕ್ಕಳ ಚಿಂತೆ ಮತ್ತು ಅವರ ಅಸಮಾಧಾನ-ಕೋಪ-ತಾಪಗಳನ್ನು ನಿಭಾಯಿಸುವ ಹೊಣೆಯ ಭಾರ. ಇವನ್ನೆಲ್ಲ ಅವರು ಹೇಗೋ ನಿರ್ವಹಿಸಬಲ್ಲವರಾಗಿದ್ದರೋ ಏನೋ. ಆದರೆ ಪ್ರಭುತ್ವದ ಸೇನೆಗೆ ಜನರನ್ನು ಒಲಿಸಬೇಕಾದ ಕೆಲಸಕ್ಕಾಗಿ ತಮ್ಮ ಮನಸ್ಸನ್ನು ಹೊಂದಿಸಿಕೊಳ್ಳುವಲ್ಲಿ ಅವರು ಅನುಭವಿಸಿದ ಮಾನಸಿಕ ಕಿರುಕುಳ ನಿಜವಾಗಿ ದಾರುಣವಾಗಿತ್ತು.

ಸೇನಾ ಭರ್ತಿಯ ಹೊಣೆಯನ್ನು ಅನಿವಾರ್ಯ ಮಾಡಿದ ಪ್ರಭುತ್ವ ಕುರಿತ ವಿಧೇಯತೆಯ ಪ್ರಶ್ನೆ, ಅವರು ಇತ್ತೀಚಿನ ಸತ್ಯಾಗ್ರಹಗಳಲ್ಲಿ ಭಾಗವಹಿಸಿದ ಅನುಭವಗಳ ಹಿನ್ನೆಲೆಯಲ್ಲಿ ತಾವು ಯೋಚಿಸಿದಷ್ಟು ಸರಳವಾದದ್ದಲ್ಲ ಎಂದು ಅವರಿಗೆ ಅನಿಸತೊಡಗಿತ್ತು. ಅವರು, ಸೇನಾಭರ್ತಿ ಉದ್ದೇಶದಿಂದ ಕರೆದಿದ್ದ ವೈಸ್‌ರಾಯ್ ಸಭೆಗೆ ಹೋಗುವ ಸ್ವಲ್ಪ ಮುನ್ನ ಮಹದೇವ ದೇಸಾಯಿ ಅವರೊಂದಿಗೆ ಈ ವಿಧೇಯತೆಯ ಸಾಧುತ್ವದ ಬಗ್ಗೆ ಚರ್ಚಿಸುತ್ತಾ, 'ನನಗೇಕೋ ನನ್ನ ಈ ವಿಧೇಯತೆ ಸರಿಯಲ್ಲ ಅನ್ನಿಸತೊಡಗಿದೆ. ಅದರ ವಿರುದ್ಧ ನನ್ನ ಒಳಮನಸ್ಸು ಮತ್ತೆ ಮತ್ತೆ ಬಂಡಾಯವೇಳುತ್ತಿದೆ. ಅದನ್ನು ಅಡಗಿಸಲು ನನಗೆ ಬಹುಕಷ್ಟವೆನಿಸುತ್ತಿದೆ. ಆದರೆ ಭಾರತದ ಭವಿಷ್ಯಕ್ಕಾಗಿ ನಾನು ಬ್ರಿಟಿಷ್ ಪ್ರಭುತ್ವದೊಡನೆ ಪ್ರೀತಿ-ವಿಶ್ವಾಸಗಳಿಂದ ಇರಬೇಕಾಗಿದೆ' ಎಂದು ಅಲವತ್ತುಕೊಂಡಿದ್ದರೆಂದು ರಾಜ್‌ಮೋಹನ್ ಗಾಂಧಿ ತಮ್ಮ 'ಮೋಹನದಾಸ್' ಕೃತಿಯಲ್ಲಿ ಉಲ್ಲೇಖಿಸುತ್ತಾರೆ. ಆದರೆ ಈ ದ್ವಂದ್ವಕ್ಕಿಂತ ಹೆಚ್ಚಾಗಿ ಅವರ ಮನಸ್ಸನ್ನು ದಾರುಣವಾಗಿ ಕಾಡಿ ಕಂಗೆಡಿಸಿದ್ದು, ಸೇನಾಭರ್ತಿ ಕಾರ್ಯಾಚರಣೆಯ ಸಂದರ್ಭದಲ್ಲಿ ಹೊರಗೆ ಮತ್ತು ಒಳಗೆ ಎರಡೂ ಕಡೆಯಿಂದ ಎದ್ದ ತಾತ್ವಿಕ ಅಪ್ರಾಮಾಣಿಕತೆ ಮತ್ತು ಆತ್ಮದ್ರೋಹದ ಅನುಮಾನಗಳ ದಾಳಿಗಳು. ಸೇನಾಭರ್ತಿ ಕಾರ್ಯಾಚರಣೆಗೆ ಪಟೇಲ್‌ರೊಡನೆ ಹೋದಾಗ ಕೆಲವೇ ದಿನಗಳ ಹಿಂದಷ್ಟೇ ತಮ್ಮನ್ನು ತಮ್ಮ ಕಣ್ಮಣಿಗಳಂತೆ ಸ್ವಾಗತಿಸಿ ಪ್ರೀತಿಯ ಆತಿಥ್ಯ ನೀಡಿದ್ದ ಖೇಡಾದ ಹಳ್ಳಿಗರೇ ಈಗ ತಮ್ಮನ್ನು ಶತ್ರುಗಳಂತೆ ಕಾಣುತ್ತಾ ರಾತ್ರಿ ಮಲಗಲು ಜಾಗ ಕೊಡಲೂ ನಿರಾಕರಿಸಿದ ವರ್ತನೆ ಅವರನ್ನು ಸುಸ್ತು ಮಾಡಿತ್ತು. ಅವರು ಇದೇ ಸೇನಾಭರ್ತಿ ಕಾರ್ಯಾಚರಣೆಗಾಗಿ ನಡಿಯಾಡ್ ಎಂಬ ಊರಿನಲ್ಲಿದ್ದಾಗ ಅವರು, ಕುದಿಯುತ್ತಿದ್ದ ಒಳಗಿನ ಮತ್ತು ಹೊರಗಿನ ತಾಪದ ಉರಿ ತಾಳಲಾರದೆ ೧೯೧೮ ರ ಆಗಸ್ಟ್ ೧೧ರಂದು ಕುಸಿದುಬಿದ್ದರು.

ವಿಷಯ ತಿಳಿದ ಆಶ್ರಮವಾಸಿಗಳು ಧಾವಿಸಿ ಬಂದರು, ಅಂಬಾಲಾಲ್ ಸಾರಾಭಾಯಿ, ಸರಳಾದೇವಿ ಮತ್ತು ಅನಸೂಯಾಬೆನ್ ಅವರನ್ನು ಸ್ವಲ್ಪ ತಂಪಾದ ಹವಾಮಾನವಿದ್ದ ಮಾತೇರ್‌ನ ತಮ್ಮ ಮನೆಗೆ ಕರೆದುಕೊಂಡು ಹೋಗಿ ತಪಾಸಣೆ

ಮಾಡಿಸಿದರು. ಹಳ್ಳಿಗಾಡಿನ ಪ್ರವಾಸದ ವೇಳೆಯಲ್ಲಿ ಶೇಂಗಾ-ನಿಂಬೆರಸವನ್ನಷ್ಟೇ ಆಧರಿಸಿದ್ದ ಅವರ ಆಹಾರ ಪದ್ಧತಿ ನೀರು-ಆಹಾರಗಳ ವ್ಯತ್ಯಾಸದಿಂದಾಗಿ ಗಾಂಧಿ ಅತಿಸಾರಕ್ಕೆ ಒಳಗಾಗಿದ್ದರು. ಅವರಿಗೆ ಯಾವ ಆಹಾರವೂ ಸೇರದಂತಾಗಿ ದಿನಗಟ್ಟಲೆ ಅವರು ಜೀವಚ್ಛವದಂತೆ ಹಾಸಿಗೆ ಮೇಲೇ ಇರಬೇಕಾಯಿತು. ಒಮ್ಮೊಮ್ಮೆ ಅವರಿಗೆ ತಮ್ಮ ಪ್ರಾಣ ಅಡಗುತ್ತಿದೆ ಎಂಬ ಭಾವನೆಯೂ ಉಂಟಾಗುತ್ತಿತ್ತು. ಆದರೂ ಅವರು ದೇಹಪೋಷಣೆಗೆ ವೈದ್ಯರು ಸೂಚಿಸಿದಂತೆ ಮಾಂಸದ ಸಾರ ಮತ್ತು ಮೊಟ್ಟೆಗಳನ್ನು ತಿನ್ನಲು ನಿರಾಕರಿಸಿದರು. ಸಹವರ್ತಿಗಳು ಆಯುರ್ವೇದದಲ್ಲಿ ಮೊಟ್ಟೆ-ಮಾಂಸದ ಸಾರವನ್ನು ಔಷಧಿಯಾಗಿ ತೆಗೆದುಕೊಳ್ಳಬಹುದೆಂದು ಹೇಳುತ್ತದೆ ಎಂದಾಗ, ನನ್ನ ಕರ್ಮವನ್ನು ನಾನು ನನ್ನ ಅಂತರಂಗ ಶುದ್ಧಿಯ ಮೂಲಕ ನಿರ್ವಹಿಸಬಯಸುವೆನೇ ಹೊರತು ಅದಕ್ಕಾಗಿ ಬಹಿರಂಗ ಶಾಸ್ತ್ರಗಳ ಮೊರೆ ಹೋಗಲಾರೆ ಎಂದು ನಿರಾಕರಿಸಿದರು. ಯಾರೋ ಮಂಜುಗಡ್ಡೆ ಚಿಕಿತ್ಸೆಯ ಸಲಹೆ ನೀಡಿದರು. ಅನುಮಾನಾಸ್ಪದ ಚುಚ್ಚುಮದ್ದುಗಳ ಬದಲು ಈ ಚಿಕಿತ್ಸೆ ಮೇಲೆಂದು ಅವರು ಅದನ್ನು ಒಪ್ಪಿಕೊಂಡರು. ಆಶ್ಚರ್ಯವೆಂದರೆ ಅವರ ಆರೋಗ್ಯ ಸುಧಾರಿಸತೊಡಗಿತು. ತದನಂತರದಲ್ಲೇ ಅವರನ್ನು ಸಬರ್ಮತಿ ಆಶ್ರಮಕ್ಕೆ ಒಯ್ಯಲಾಯಿತು. ಅಲ್ಲಿ ಅವರು ಒಂದು ತಿಂಗಳ ವಿಶ್ರಾಂತಿ ತೆಗೆದುಕೊಂಡರು. ಅದೃಷ್ಟವಶಾತ್ ಆ ಹೊತ್ತಿಗೆ ಯುದ್ಧದಲ್ಲಿ ಜರ್ಮನಿ ಸೋತು ಬ್ರಿಟಿಷ್ ಸೇನೆಗೆ ಹೆಚ್ಚಿನ ಸೈನಿಕರ ಅಗತ್ಯ ಬೀಳಲಿಲ್ಲ. ಇಲ್ಲದಿದ್ದರೆ ಈ ಸ್ಥಿತಿಯಲ್ಲೂ ಗಾಂಧಿ ಸೇನಾಭರ್ತಿ ಕಾರ್ಯಾಚರಣೆಗಾಗಿ ಆಗಲೇ ಎದ್ದು ಹೊರಟುಬಿಡುತ್ತಿದ್ದರೇನೋ!

ಮೇಕೆ ಹಾಲು: ಪ್ರತಿಜ್ಞಾ ಭಂಗದ ತಳಮಳ

ಆದರೆ ಅಕ್ಟೋಬರ್ ವೇಳೆಗೆ ಗಾಂಧಿ ಅವರನ್ನು ಮೂಲವ್ಯಾಧಿ ಬಾಧಿಸತೊಡಗಿ ತುರ್ತು ಶಸ್ತ್ರಚಿಕಿತ್ಸೆಗಾಗಿ ಬಾಂಬೆಗೆ ಕೊಂಡೊಯ್ಯಲಾಯಿತು. ಚಿಕಿತ್ಸೆಯ ನಂತರ ಚೇತರಿಸಿಕೊಳ್ಳಲು ವೈದ್ಯರು ಹಾಲು ಅವಶ್ಯಕ ಎಂದು ಕಟ್ಟುನಿಟ್ಟಾಗಿ ಹೇಳಿದರು. ಆದರೆ ದನದ ಹಾಲು ಕುಡಿಯುವುದಿಲ್ಲವೆಂದು ಬಹು ಹಿಂದೆಯೇ ಪ್ರತಿಜ್ಞೆ ಮಾಡಿದ್ದ ಗಾಂಧಿ ಹಾಲು ಸೇವಿಸಲು ನಿರಾಕರಿಸಿದರು. ಅವರ ಆರೋಗ್ಯ ಮತ್ತೆ ಹದಗೆಡತೊಡಗಿತು. ಅವರು ಪಿ.ಸಿ.ರೇ ಎಂಬ ತಮಗೆ ಸುಪರಿಚಿತರಾಗಿದ್ದ ಆಹಾರ ಪಂಡಿತರೊಬ್ಬರಿಗೆ ಹಾಲು ಒದಗಿಸುವ ಪೋಷಕಾಂಶವನ್ನು ಒದಗಿಸುವ ಹಣ್ಣು-ತರಕಾರಿಗಳಿದ್ದರೆ ತಿಳಿಸಿ ಎಂದು ಪತ್ರ ಬರೆದರು. ಆದರೆ ಅವರ ಸ್ಥಿತಿ ಚಿಂತಾಜನಕವಾಗತೊಡಗಿತ್ತು. ಅವರು ಆಗಾಗ ಪ್ರಜ್ಞೆ ತಪ್ಪುತ್ತಿದ್ದರು. ಅದನ್ನು ಕಂಡು ಕಸ್ತೂರಬಾ ಆತಂಕಿತರಾದರು. ವೈದ್ಯರು, ಅವರು ಹಾಲು ಸೇವಿಸದೆ ಉಳಿಯಲಾರರು ಎಂದರು. ಆಗ ಬಾ ಆರ್ತರಾಗಿ 'ನೀವು ಪ್ರತಿಜ್ಞೆ ಮಾಡಿದ್ದು ದನದ ಹಾಲು ಕುಡಿಯುವುದಿಲ್ಲ ಎಂದಲ್ಲವೇ? ಹಾಗಾದರೆ ಮೇಕೆ ಹಾಲು ಕುಡಿಯಬಹುದಲ್ಲ?' ಎಂದರು. ಅವರನ್ನು ಹಾಲು ಸೇವಿಸುವಂತೆ ಮಾಡುವ ದೈವಪ್ರೇರಣೆಯ ಕೊನೆಯ ಉಪಾಯದಂತೆ. ಗಾಂಧಿ ಒಂದು ಕ್ಷಣ ಯೋಚಿಸಿ 'ಆಗಬಹುದು' ಎಂದರು. ಮೇಕೆ ಹಾಲಿನ ವ್ಯವಸ್ಥೆ ಆಯಿತು. ಗಾಂಧಿ ಚೇತರಿಸಿಕೊಳ್ಳಲಾರಂಭಿಸಿದರು. ಕೆಲವು ದಿನಗಳ ನಂತರ ಅಹಮದಾಬಾದ್ ಆಶ್ರಮಕ್ಕೆ ವಾಪಸ್ ಬಂದರು.

ಆದರೆ ವಾಪಸ್ ಬಂದ ಮೇಲೂ ಗಾಂಧಿಗೆ ತಾನು ಭಾಗಶಃ ಪ್ರತಿಜ್ಞಾ ಭಂಗ ಮಾಡಿದ್ದೇನೆ ಎಂಬ ಅಪರಾಧ ಭಾವ ಕಾಡತೊಡಗಿತ್ತು. ತಾವು ತಮ್ಮ ಪ್ರತಿಜ್ಞೆಯನ್ನು ಅವಕಾಶವಾದಿ ವ್ಯಾಖ್ಯಾನಕ್ಕೆ ಒಳಪಡಿಸಿ ಪಾರಾಗುವ ಪ್ರಯತ್ನ ಮಾಡಿದ್ದೇನೆ ಎಂಬ ಅಳುಕೂ ಬಾಧಿಸಿತು. ಜೊತೆಗೆ ತಮ್ಮ ಆಶ್ರಮ ಮಿತ್ರ ನರಹರಿ ಪಾರೀಖ್ 'ಹೇಗೋ ಗಾಂಧಿ ಬದುಕಿಕೊಂಡದ್ದು ಸಂತೋಷ. ಆದರೆ ಅವರು ಹೀಗೆ ಅದರ ತಿರುಳನ್ನು ನಿರ್ಲಕ್ಷಿಸಿ ಪ್ರತಿಜ್ಞಾ ಪಾಲನೆ ಮಾಡುವ ಬದಲು ಪ್ರತಿಜ್ಞೆಯನ್ನು ಮುರಿಯುವ ಧೈರ್ಯ ಮಾಡಿದ್ದರೆ ಹೆಚ್ಚು ಘನತರವಾಗಿರುತ್ತಿತ್ತು' ಎಂದು ಅಭಿಪ್ರಾಯಪಟ್ಟಿದ್ದನ್ನು ತಿಳಿದ ಗಾಂಧಿ ಅವರ ಮಾತನ್ನು ಅನುಮೋದಿಸಿದರು. ಆದರೆ 'ಆ ಸಂದರ್ಭದಲ್ಲಿ ಅಸಹಾಯಕ ಹಸುವಿನ ಮುಖಭಾವದೊಂದಿಗೆ ನನ್ನ ಪಕ್ಕ ನಿಂತಿದ್ದ ಕಸ್ತೂರಬಾ ಅವರ ಮಾತಿನಲ್ಲಿನ ಆರ್ತತೆ ನನ್ನನ್ನು ದುರ್ಬಲಗೊಳಿಸಿತು' ಎಂದು ಅವರು ಅಲವತ್ತುಕೊಂಡರು. ಗಾಂಧಿ ತಮ್ಮ ಪ್ರತಿಜ್ಞೆಯನ್ನು ಅಕ್ಷರಶಃ ಅರ್ಥದಲ್ಲಲ್ಲದಿದ್ದರೂ ತಿರುಳಿನ ಮಟ್ಟದಲ್ಲಿ ಮುರಿಯುವಷ್ಟು, ಬಾ ಅವರ ಬಗ್ಗೆ ಅವರಿಗೆ ಇದ್ದ 'ದೌರ್ಬಲ್ಯ'ವನ್ನು ಗಾಂಧಿಯವರ ಜೀವನ ಚರಿತ್ರಕಾರ ಲೂಯಿ ಫಿಶರ್ ಸಂಕ್ಷಿಪ್ತವಾಗಿ ತಮ್ಮ 'ದ ಲೈಫ್ ಆಫ್ ಮಹಾತ್ಮಾ ಗಾಂಧಿ' ಪುಸ್ತಕದಲ್ಲಿ, ಗಾಂಧಿ ಅವರಿಗೆ ಆಪ್ತರಾಗಿ ಗಾಂಧಿ–ಕಸ್ತೂರಬಾ ಅವರ ಸಂಬಂಧವನ್ನು ಅತ್ಯಂತ ಹತ್ತಿರದಿಂದ ಗಮನಿಸಿದ್ದ ರಾಮಚಂದ್ರನ್ ಅವರ ಬರಹಗಳನ್ನು ಉಲ್ಲೇಖಿಸಿ ಚರ್ಚಿಸಿದ್ದಾರೆ. ಗಾಂಧಿ, ಕಸ್ತೂರಬಾ ಅವರ ಸಿಟ್ಟಿಗೆ ಗುರಿಯಾದ ಹಲವು ಪ್ರಸಂಗಗಳನ್ನು ರಾಮಚಂದ್ರನ್ ಈ ಬರಹಗಳಲ್ಲಿ ವಿವರಿಸಿದ್ದಾರೆ.

ತಾವು ತಮ್ಮ ವಿಶಿಷ್ಟ ಜೀವನಕ್ರಮದಿಂದಾಗಿ ಪತ್ನಿಗೆ ಸಾಕಷ್ಟು ನೋವು ಉಂಟುಮಾಡಿರುವ ಅರಿವು ಗಾಂಧಿಗೆ ಇತ್ತೆಂದು ಹೇಳುವ ಫಿಶರ್, ಆ ಅರಿವಿನ ಒತ್ತಡವೇ ಅವರು ತಮ್ಮ ಪತ್ನಿಯ ಸಲಹೆಯನ್ನು ಒಪ್ಪುವಂತೆ ಪ್ರೇರೇಪಿಸಿರಬೇಕೆಂದು ಅಭಿಪ್ರಾಯಪಡುತ್ತಾರೆ. ಅದೇನೇ ಇದ್ದರೂ ತಮ್ಮ ಈ ನಿರ್ಧಾರದ ಬಗ್ಗೆ ಗಾಂಧಿ ಅವರಿಗೆ ಪೂರ್ಣ ಸಮಾಧಾನವಾಗಲೀ, ಸ್ಪಷ್ಟ ಕಲ್ಪನೆಯಾಗಲೀ ಇತ್ತೆಂದು ಹೇಳಲಾಗದು. ಏಕೆಂದರೆ ಹಲವು ವರ್ಷಗಳ ನಂತರ ಬರೆದ ತಮ್ಮ ಆತ್ಮಚರಿತ್ರೆಯಲ್ಲೂ ಈ ಘಟನೆಯ ಬಗ್ಗೆ ವಿವರವಾಗಿ ಪ್ರಸ್ತಾಪ ಮಾಡುತ್ತಾ, ಈ 'ಪ್ರತಿಜ್ಞಾ ಭಂಗ'ದ ಸಂಬಂಧವಾಗಿ ಹೆಚ್ಚು ಬಿಚ್ಚುಮನಸ್ಸಿನದೂ ಮತ್ತು ಹೆಚ್ಚು ಪ್ರಾಮಾಣಿಕವಾದುದೂ ಎನಿಸುವ ಈ ಅರ್ಥದ ಮಾತುಗಳನ್ನು ಬರೆದಿದ್ದಾರೆ: 'ನಾನು ಆ ಸರ್ವಶಕ್ತನ ಒಂದು ಉಪಕರಣ ಮಾತ್ರವಷ್ಟೆ. ನನಗೆ ಜೀವನದಲ್ಲಿ ನಾನು ನಂಬಿದ್ದ ಸತ್ಯಾಗ್ರಹವನ್ನು ಇನ್ನಷ್ಟು ದೀರ್ಘ ಕಾಲ ಪ್ರಯೋಗಕ್ಕೆ ಒಳಪಡಿಸುವ ಇಚ್ಛೆ ಪ್ರಬಲವಾಗಿದ್ದು, ಅದಕ್ಕಾಗಿ ಬದುಕಬೇಕೆಂದು ಬಯಸಿರಲೂಬಹುದು.'

■

೫೦

ರಾಷ್ಟ್ರೀಯ ನಾಯಕತ್ವದ ದಾರಿಯಲ್ಲಿ

೧೯೧೮ರ ಕೊನೆಯ ಹೊತ್ತಿಗೆ ಬ್ರಿಟನ್ ಜಯಶಾಲಿಯಾಗುವುದರೊಂದಿಗೆ ಮೊದಲ ವಿಶ್ವಯುದ್ಧ ಮುಗಿದಿತ್ತಾದರೂ, ಭಾರತದಲ್ಲಿ ಶಾಂತಿಯ ಲಕ್ಷಣಗಳು ಕಾಣಲಿಲ್ಲ. ಯುದ್ಧದ ಪರಿಣಾಮವಾಗಿ ಬೆಲೆಗಳು ಏರಿ, ರೈತರು ಮತ್ತು ಕಾರ್ಮಿಕರ ಸ್ಥಿತಿ ಚಿಂತಾಜನಕವಾಗಿತ್ತು. ಪ್ರತಿಭಟನೆಗಳು ಮತ್ತು ಮುಷ್ಕರಗಳು ಆರಂಭವಾಗಿದ್ದವು. ಕಾಂಗ್ರೆಸ್‌ನಲ್ಲಿ ಉಗ್ರವಾದಿಗಳ ಕೈ ಮೇಲಾಗಿ ಮಾಂಟೆಫೋರ್ಡ್ ವರದಿ ಪ್ರಕಾರ ಭಾರತೀಯರಿಗೆ ಹೆಚ್ಚಿನ ಸ್ವಯಮಾಧಿಕಾರ ನೀಡುವ ವಿಷಯವೂ ನೆನೆಗುದಿಗೆ ಬಿದ್ದಿತ್ತು. ಅಲ್ಲದೆ ಈ ವರದಿಯ ಪ್ರಕಾರ ತಮ್ಮ ಪರಮಾಧಿಕಾರಗಳನ್ನು ಕಳೆದುಕೊಳ್ಳಲಿದ್ದ ಪ್ರಾಂತ್ಯಗಳ ಗವರ್ನರ್‌ಗಳು ಮತ್ತು ಐಸಿಎಸ್ ಅಧಿಕಾರಿಗಳೂ ಈ ವರದಿಯ ಜಾರಿಗೆ ವಿರೋಧ ವ್ಯಕ್ತಪಡಿಸಿದ್ದರು. ಇದರೊಂದಿಗೆ ದೇಶದಲ್ಲಿ ಬ್ರಿಟಿಷ್ ವಿರೋಧಿ ಉಗ್ರವಾದಿಗಳ ಚಟುವಟಿಕೆಗಳು ಹೆಚ್ಚಿರುವ ವರದಿಗಳು ಸರ್ಕಾರವನ್ನು ಚಿಂತೆಗೀಡು ಮಾಡಿತ್ತು. ಸ್ವಲ್ಪ ಕಾಲದ ಹಿಂದಷ್ಟೇ ಬಾಂಬೆ ಪ್ರಾಂತ್ಯದ ಗವರ್ನರ್ ಹಾರ್ಡಿಂಜ್, ಬಾಂಬ್ ದಾಳಿಯಿಂದ ಸ್ವಲ್ಪದರಲ್ಲಿ ಪಾರಾಗಿದ್ದರು.

ಖಿಲಾಫತ್ ಪ್ರಶ್ನೆ–ರೌಲೆಟ್ ಕಾಯಿದೆ

ವಿಶ್ವಯುದ್ಧದಲ್ಲಿ ಸೋತಿದ್ದ ಟರ್ಕಿಯ ಖಲೀಫನನ್ನು ಬ್ರಿಟನ್ ಮರ್ಯಾದೆಯಿಂದ ನೋಡಿಕೊಳ್ಳುತ್ತಿಲ್ಲವೆಂದು ಅಸಮಾಧಾನಗೊಂಡಿದ್ದ ಮುಸ್ಲಿಮರೂ ಈಗ ಹಿಂದೂಗಳ ಜೊತೆಗೆ ಹಿಂಸಾತ್ಮಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲಾರಂಭಿಸಿದ್ದರು. ಇದೆಲ್ಲದರ ಹಿಂದೆ, ಒಂದು ವರ್ಷದ ಹಿಂದಷ್ಟೇ ನಡೆದಿದ್ದ ರಷ್ಯಾದ ಬೊಲ್ಶೆವಿಕ್ ಕ್ರಾಂತಿ ಮತ್ತು ಬ್ರಿಟನ್‌ನಲ್ಲಿಯೇ ನಡೆದ ಐರಿಶ್ ಜನರ ಬಂಡಾಯಗಳ ಪ್ರತಿಧ್ವನಿಗಳೂ ಕೇಳಿಸಿದಂತಾಗಿ, ಸರ್ಕಾರ ಭಾರತದಲ್ಲಿ ಕಾನೂನು ಮತ್ತು ಶಿಸ್ತನ್ನು ಬಿಗಿಗೊಳಿಸಲು ಮತ್ತು ಈಗಾಗಲೇ ಜಾರಿಯಲ್ಲಿದ್ದ ಭಾರತದ ರಕ್ಷಣಾ ಕಾಯಿದೆಯನ್ನು ಬಲಗೊಳಿಸಲು, ನ್ಯಾಯಾಧೀಶ ರೌಲೆಟ್‌ರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಿ ವರದಿ ಪಡೆದುಕೊಂಡಿತ್ತು. ಆ ವರದಿಯ ಶಿಫಾರ್ಸುಗಳನ್ನು ಸರ್ಕಾರ ೧೯೧೯ರ ಫೆಬ್ರುವರಿ ೬ರಂದು ವೈಸ್‌ರಾಯ್ ಕಾರ್ಯಕಾರಿ ಮಂಡಳಿಯ ಮುಂದೆ ಅನುಮೋದನೆಗಾಗಿ ಮಂಡಿಸಿತು. ಈ ಶಿಫಾರ್ಸುಗಳು ದೇಶದ್ರೋಹದ ಕಾನೂನುಗಳನ್ನು ಬಿಗಿಗೊಳಿಸಲು ಉದ್ದೇಶಿಸಲ್ಪಟ್ಟಿದ್ದು, ಈ ಕಾನೂನಿನಡಿ ಬರುವ ಮೊಕದ್ದಮೆಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಮೇಲ್ಮನವಿಗೆ ಅವಕಾಶವಿಲ್ಲದೆ

ಮುವ್ವರು ನ್ಯಾಯಾಧೀಶರ ಪೀಠ, ನ್ಯಾಯಮಂಡಳಿಯ(ಜ್ಯೂರಿ) ನೆರವಿಲ್ಲದೆ ವಿಚಾರಣೆ ನಡೆಸಿ ತೀರ್ಪು ನೀಡುವುದಕ್ಕೆ ಮತ್ತು ಯಾರ ಕಿಸೆಯಲ್ಲಿ ದೇಶದ್ರೋಹದ ಚಟುವಟಿಕೆಗೆ ಸಂಬಂಧಿಸಿದ ಕರಪತ್ರ ಕಂಡರೂ ಆ ವ್ಯಕ್ತಿಯ ವಿರುದ್ಧ ದೇಶದ್ರೋಹದ ಮೊಕದ್ದಮೆ ಹೂಡುವುದಕ್ಕೆ ಅವಕಾಶವಿತ್ತು.

ಈ ಸುದ್ದಿ ದೇಶಾದ್ಯಂತ ಕೋಲಾಹಲವನ್ನುಂಟು ಮಾಡಿತು. ಬ್ರಿಟಿಷ್ ಸರ್ಕಾರದ ಸಂವಿಧಾನಾತ್ಮಕ ಆಡಳಿತದಲ್ಲಿ ನಂಬಿಕೆ ಇಟ್ಟಿದ್ದ ಶಿಕ್ಷಿತ ವರ್ಗಕ್ಕೂ ಇದು ದಮನಶೀಲ ಸರ್ವಾಧಿಕಾರಿ ಆಡಳಿತದ ಕ್ರಮವಾಗಿ ಕಂಡು ಅದನ್ನು ಕೆರಳಿಸಿತು. ತಮ್ಮ ಅಸ್ವಸ್ಥತೆಯಿಂದ ಅದೀಗ ತಾನೇ ಸುಧಾರಿಸಿಕೊಂಡಿದ್ದ ಗಾಂಧಿ ಕೂಡ ಇದರಿಂದ ವಿಚಲಿತರಾದರು. ಮಾಂಟೆಫೋರ್ಡ್ ವರದಿಗೆ ತಿದ್ದುಪಡಿಗಳನ್ನು ಆಗ್ರಹಿಸುವ ಕಾರ್ಯಾಚರಣೆಗೆ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದ ಅವರು, ಈಗ ಈ ಮಾರಕ ರೌಲೆಟ್ ಕಾಯಿದೆಗಳ ವಿರುದ್ಧ ತುರ್ತು ಕಾರ್ಯಾಚರಣೆಗೆ ಸಿದ್ಧವಾಗಬೇಕಾಯಿತು. ತೀವ್ರಗಾಮಿ ಮತ್ತು ಬಹುಜನಪ್ರಿಯ ಹಿರಿಯ ನಾಯಕರಾಗಿದ್ದ ತಿಲಕರು ಆಗ ಇಂಗ್ಲೆಂಡ್‌ನಲ್ಲಿದ್ದರು. ಇದು ಗಾಂಧಿಗೆ ತಾವು ತಮ್ಮ ಹೋರಾಟದ ಮಾರ್ಗವನ್ನು ಜನರ ಮಧ್ಯೆ ಹರಡಿ ನೆಲೆಗೊಳಿಸಲು ಸ್ವಾತಂತ್ರ್ಯವನ್ನು ನೀಡಿತ್ತು. ಅವರು ಕೂಡಲೇ ವೈಸ್‌ರಾಯ್ ಮಂಡಳಿಯ ಸದಸ್ಯರಾಗಿದ್ದ ಪಂಡಿತ್ ಮದನಮೋಹನ ಮಾಳವೀಯರಿಗೆ ಪತ್ರ ಬರೆದು, ರೌಲೆಟ್ ಕಾಯಿದೆ ಕಾನೂನಾಗಿ ಜಾರಿಯಾಗದಂತೆ ಪ್ರತಿಭಟಿಸಲು ತಾವು, ಶ್ರೀನಿವಾಸ ಶಾಸ್ತ್ರಿ ಮತ್ತು ಜಿನ್ನಾ ಅವರು ಮಂಡಳಿಗೆ ರಾಜೀನಾಮೆ ನೀಡಿ ದೇಶಾದ್ಯಂತ ಸರ್ಕಾರದ ವಿರುದ್ಧ ಅಸಹಕಾರ ಸತ್ಯಾಗ್ರಹಕ್ಕಾಗಿ ಸಿದ್ಧಗೊಳ್ಳಬೇಕೆಂದು ಕೋರಿದರು.

ರೌಲೆಟ್ ಕಾಯಿದೆಯ ವಿರುದ್ಧ ಸತ್ಯಾಗ್ರಹ

ಗುಜರಾತ್ ಸಭಾ ಆಗಲೀ, ಕಾಂಗ್ರೆಸ್ ಆಗಲೀ ರೌಲೆಟ್ ಕಾಯಿದೆ ವಿರುದ್ಧ ವ್ಯವಸ್ಥಿತ ಕಾರ್ಯಾಚರಣೆಗೆ ಮುಂದಾಗದಾಗ ಗಾಂಧಿಯವರೇ 'ಸತ್ಯಾಗ್ರಹ ಸಭಾ' ಎಂಬೊಂದು ವೇದಿಕೆಯನ್ನು ರಚಿಸಿ, ಫೆಬ್ರುವರಿ ೨೪ ರಂದು ತಮ್ಮ ಆಶ್ರಮದಲ್ಲಿ ೨೦ ಜನ ಗಣ್ಯರ ಸಭೆ ಕರೆದರು. ಅವರಲ್ಲಿ ಮುಖ್ಯರೆಂದರೆ ವಲ್ಲಭಭಾಯಿ ಪಟೇಲ್, ಭಾರತೀಯರ ಪರವಿದ್ದ ಬಾಂಬೆಯ ಇಂಗ್ಲಿಷ್ ಪತ್ರಕರ್ತ ಬಿ.ಜಿ. ಹಾರ್ನಿಮನ್, ಕವಯತ್ರಿ ಸರೋಜಿನಿ ನಾಯ್ಡು, ಉದ್ಯಮಿಗಳಾದ ಉಮರ್ ಸೊಬಾನಿ, ಅಂಬಾಲಾಲ್ ಸಾರಾಭಾಯಿ, ಕಾರ್ಮಿಕ ನಾಯಕರಾದ ಅನಸೂಯಾ ಬೆನ್, ಶಂಕರಲಾಲ್ ಬ್ಯಾಂಕರ್ ಮತ್ತು ಸಮಾಜವಾದಿ ಎಂದು ಗುರುತಿಸಿಕೊಂಡಿದ್ದ ಇಂದೂಲಾಲ್ ಯಾಜ್ಞಿಕ್. ಇವರಲ್ಲದೆ ಈವರೆಗೆ ಅನಿಬೆಸೆಂಟರ ಅನುಯಾಯಿಯಾಗಿ ಗಾಂಧಿ ಮಾರ್ಗದ ಬಗ್ಗೆ ಸಂಶಯ ಹೊಂದಿದ್ದ, ಆದರೀಗ ಗಾಂಧಿ ಮಾರ್ಗವನ್ನು ಒಪ್ಪತೊಡಗಿದ್ದ ಜಮ್ನಾದಾಸ್ ದ್ವಾರಕಾದಾಸ್ ಕೂಡ ಅಲ್ಲಿ ಹಾಜರಿದ್ದರು. ಇವರೆಲ್ಲರ ಸಮ್ಮತಿಯೊಂದಿಗೆ ತಾವು ಸಿದ್ಧಪಡಿಸಿದ್ದ ಸತ್ಯಾಗ್ರಹ ಪ್ರತಿಜ್ಞೆಯೊಂದಕ್ಕೆ ಗಾಂಧಿ ಇವರೆಲ್ಲರ ಸಹಿ ಪಡೆದು, ಇದೊಂದು ಅನುಲ್ಲಂಘನೀಯ ಪವಿತ್ರ ಕರಾರೆಂದು ಪರಿಗಣಿಸಬೇಕೆಂದು ಅವರೆಲ್ಲರಿಗೆ ಸೂಚಿಸಿದರು. ಆ ಪ್ರತಿಜ್ಞೆ ಹೀಗಿತ್ತು:

'ಈ ಕಾಯಿದೆಯನ್ನು ಸರ್ಕಾರ ಹಿಂತೆಗೆದುಕೊಳ್ಳದೆ ಅದು ಶಾಸನವಾಗಲು ಅವಕಾಶ ಮಾಡಿದಲ್ಲಿ, ನಾವೆಲ್ಲರೂ ಅದನ್ನು ಪಾಲಿಸಲು ಸವಿನಯವಾಗಿಯೇ ನಿರಾಕರಿಸುತ್ತೇವೆ. ಅಷ್ಟೇ ಅಲ್ಲದೆ ಈ ಮುಂದೆ ಜಾರಿಗೆ ಬರಬಹುದಾದ ಇಂತಹ ಶಾಸನಗಳನ್ನೂ ನಾವು ಇದೇ ರೀತಿ ಪಾಲಿಸದಿರಲು ವಚನಬದ್ಧರಾಗಿದ್ದೇವೆ. ನಮ್ಮ ನಿಷ್ಠೆ ಸತ್ಯಕ್ಕೆ, ಅಹಿಂಸೆಗೆ. ನಾವಾರೂ ಜನರ ಅಥವಾ ಪ್ರಾಣಿಗಳ ಅಥವಾ ಆಸ್ತಿಪಾಸ್ತಿಗಳ ಮೇಲೆ ದಾಳಿ ನಡೆಸುವ ಹಿಂಸಾಚಾರಗಳಲ್ಲಿ ತೊಡಗುವುದಿಲ್ಲವೆಂದು ಪ್ರತಿಜ್ಞೆ ಕೈಗೊಳ್ಳುತ್ತಿದ್ದೇವೆ'

ಸತ್ಯಾಗ್ರಹ ಸಭಾ, ಸತ್ಯಾಗ್ರಹ ನಿಧಿಯೊಂದನ್ನೂ ಆರಂಭಿಸಿ ಜನರಿಂದ ದೇಣಿಗೆಗಾಗಿ ಕರೆ ನೀಡಿತು. ಗಾಂಧಿ ಸತ್ಯಾಗ್ರಹದ ನಿಯಮದಂತೆ ಸತ್ಯಾಗ್ರಹವನ್ನು ಆರಂಭಿಸುವ ಮುನ್ನ ಎದುರು ಪಕ್ಷಕ್ಕೆ, ಆ ಬಗ್ಗೆ ತಿಳುವಳಿಕೆ ನೀಡುವುದರ ಭಾಗವಾಗಿ ವೈಸ್‌ರಾಯ್‌ಗೆ ಪತ್ರವೊಂದರಲ್ಲಿ ತಮ್ಮ ನಿರ್ಧಾರವನ್ನು ತಿಳಿಸಿದರು. ಸತ್ಯಾಗ್ರಹವು ರಾಜಕಾರಣವನ್ನು ಕ್ರಾಂತಿಕಾರಿಯಾಗಿ ಬದಲಿಸಲಿದ್ದು ನೈತಿಕ ಬಲದ ಮೂಲಕ ಅಧಿಕಾರ ಬಲಕ್ಕೆ ಸತ್ಯವನ್ನು ಕಾಣಿಸುವ ಪ್ರಯತ್ನ ಮಾಡಬಯಸುತ್ತದೆ ಎಂದು ಅವರು ಆ ಪತ್ರದಲ್ಲಿ ತಿಳಿಸಿದರಲ್ಲದೆ, ಕಾಯಿದೆಗಳನ್ನು ಹಿಂತೆಗೆದುಕೊಳ್ಳುವಂತೆ ಅಂತಿಮವಾಗಿ ಕೋರಿಕೊಂಡರು. ಅಲ್ಲಿಂದ ಏನೂ ಉತ್ತರ ಬಾರದಾಗ ಸ್ವತಃ ಅವರೇ ದೆಹಲಿಗೆ ಹೋಗಿ ಮಾರ್ಚ್ ೫ರಂದು ವೈಸ್‌ರಾಯ್ ಲಾರ್ಡ್ ಚೆಮ್ಸ್‌ಫೋರ್ಡರನ್ನು ಕಂಡು ಮಾತಾಡಿದರು. ಆದರೆ ಅದರಿಂದೇನೂ ಉಪಯೋಗವಾಗದಿದ್ದಾಗ, ಗಾಂಧಿ ಅಲ್ಲಿಂದ ಲಕ್ನೋ-ಅಲಹಾಬಾದ್‌ಗಳಿಗೆ ತೆರಳಿ ತಮ್ಮ ಉದ್ದೇಶಿತ ಸತ್ಯಾಗ್ರಹದ ಸಂಘಟನೆಯಲ್ಲಿ ತೊಡಗಿದರು. ಅಲಹಾಬಾದ್‌ನಲ್ಲಿ ಮೋತಿಲಾಲ್ ನೆಹ್ರೂ ಅವರ ಸಹಾನುಭೂತಿ ದೊರಕದಿದ್ದರೂ ಅವರ ಮಗ ಜವಾಹರಲಾಲ್ ಸತ್ಯಾಗ್ರಹ ಸಂಘಟಿಸಲು ತುಂಬು ಉತ್ಸಾಹ ತೋರಿದರು. ನಂತರ ಬಾಂಬೆಗೆ ಹೋದ ಗಾಂಧಿ 'ಸತ್ಯಾಗ್ರಹ ಸಭಾ'ದ ಕಾರ್ಯಕ್ರಮಗಳನ್ನು ಸಭೆಗಳಲ್ಲಿ ವಿವರಿಸಿದರು. ಬಾಂಬೆ ನಗರವೊಂದರಲ್ಲೇ ಯುವಜನ, ಕಾರ್ಮಿಕರು ಮತ್ತು ವ್ಯಾಪಾರಿಗಳೂ ಸೇರಿದಂತೆ ಆರು ನೂರು ಜನ ಸತ್ಯಾಗ್ರಹ ಪ್ರತಿಜ್ಞೆ ಸ್ವೀಕರಿಸಿದರು, ಸತ್ಯಾಗ್ರಹ ನಿಧಿಗೂ ಹಣ ಹರಿದುಬರಲಾರಂಭಿಸಿತು.

ಹರತಾಳ ಎಂಬ ಹೊಸ ಸತ್ಯಾಗ್ರಹ ಅಸ್ತ್ರ – ಗಾಂಧಿ ಜೊತೆ ಸೇರಿದ ರಾಜಾಜಿ

ಈ ಮಧ್ಯೆ ಮೊದಲ ರೌಲೆಟ್ ಕಾಯಿದೆ ಶಾಸನವಾಗಿ ಪ್ರಕಟವಾಯಿತು. ಶಾಂತಿ ಸ್ಥಾಪನೆಯ ಕಾಲದಲ್ಲಿ ಚರ್ಚೆಗೆ ಬಂದಿರುವ ಈ ಕಾಯಿದೆ ಅಸಂಬದ್ಧ ಮತ್ತು ಅನಾಗರಿಕ ಎಂದು ವೈಸ್‌ರಾಯ್ ಮಂಡಳಿಯಲ್ಲಿ ಖಂಡಿಸಿ ಮಾತನಾಡಿದ್ದ ಜಿನ್ನಾ ಸೇರಿದಂತೆ ಅದರ ಹಲವು ಭಾರತೀಯ ಸದಸ್ಯರು ರಾಜೀನಾಮೆ ನೀಡಿದರು. ಇದು ದೇಶದಲ್ಲಿ ಸರ್ಕಾರದ ವಿರುದ್ಧ ಎಲ್ಲ ನೆಲೆಗಳಿಂದ ಬಂಡಾಯದ ಅಲೆಗಳು ಏಳತೊಡಗಿರುವ ಸೂಚನೆಯಾಗಿತ್ತು. ಈ ಹೊತ್ತಿಗೆ ದಕ್ಷಿಣಭಾಗದಿಂದಲೂ ಗಾಂಧಿಗೆ ಕರೆ ಬಂದಿತ್ತು. ಸೇಲಂನಿಂದ ಮದ್ರಾಸ್‌ಗೆ ತಮ್ಮ ವಾಸ್ತವ್ಯವನ್ನು ಬದಲಿಸಿಕೊಂಡಿದ್ದ ಚತುರ ಯುವ ವಕೀಲರೆಂದೇ ಪ್ರಸಿದ್ಧರಾಗಿದ್ದ ಸಿ. ರಾಜಗೋಪಾಲಾಚಾರಿಯವರು ಗಾಂಧಿಯವರನ್ನು

ಮದ್ರಾಸ್ ಪ್ರಾಂತ್ಯದ ಪ್ರವಾಸಕ್ಕಾಗಿ ಆಹ್ವಾನಿಸಿದ್ದರು. ಮದ್ರಾಸ್‌ನಲ್ಲಿ ರಾಜಗೋಪಾಲಾಚಾರಿಯವರ ಮನೆಯಲ್ಲಿ ಒಂದು ಮುಂಜಾನೆ ನಿದ್ದೆ–ಎಚ್ಚರಗಳ ನಡುವೆ ಸತ್ಯಾಗ್ರಹದ ವಿವರಗಳು ಅಚಾನಕ್ಕಾಗಿ ಹೊಳೆದವು. ಅದು ೧೯೧೯ ರ ಮಾರ್ಚ್ ೨೩, ಭಾನುವಾರ. ಮುಂದಿನ ಭಾನುವಾರ ಅಂದರೆ ಮಾರ್ಚ್ ೩೦ರಂದು, ಇಡೀ ದೇಶ ಕೆಲಸ ನಿಲ್ಲಿಸಿ ಉಪವಾಸ ಮತ್ತು ಪ್ರಾರ್ಥನೆಗಳ ಮೂಲಕ ರೌಲೆಟ್ ಕಾನೂನಿನ ವಿರುದ್ಧ ತನ್ನ ಪ್ರತಿರೋಧವನ್ನು ದಾಖಲಿಸಬೇಕೆಂಬುದು ಗಾಂಧಿಯವರ ವಿಚಾರವಾಗಿತ್ತು. ಅವರು ಇದನ್ನು 'ಹರತಾಳ' ಎಂದು ಕರೆದಿದ್ದರು. ಈ ಸಂದೇಶವನ್ನು ರಾಜಗೋಪಾಲಾಚಾರಿ ದೇಶದ ಎಲ್ಲ ಕಡೆ ರವಾನಿಸಿದರು. ಕೆಲವು ಕಡೆಯಿಂದ ಇದರ ಸಿದ್ಧತೆಗೆ ಇನ್ನಷ್ಟು ಸಮಯ ಬೇಕೆಂಬ ಬೇಡಿಕೆ ಬಂದಾಗ ಹರತಾಳವನ್ನು ಏಪ್ರಿಲ್ ೬ಕ್ಕೆ ನಿಗದಿ ಮಾಡಲಾಯಿತು.

ಗಾಂಧಿ ಮತ್ತು ಬೊಲ್ಶೆವಿಕ್ ಕ್ರಾಂತಿ

ದ.ಆಫ್ರಿಕಾದಲ್ಲಿನ ತಮ್ಮ ಸತ್ಯಾಗ್ರಹಕ್ಕೆ ಮುಖ್ಯ ನೆಲೆಯಾಗಿ ನಿಂತಿದ್ದ ತಮಿಳು ಜನರ ಬಗ್ಗೆ ಅಪಾರ ಅಭಿಮಾನ ಹೊಂದಿ ಬಹು ಪ್ರೀತಿಯಿಂದ ಮದ್ರಾಸ್ ಪ್ರಾಂತ್ಯದ ಪ್ರವಾಸ ಕೈಗೊಂಡಿದ್ದ ಗಾಂಧಿ, ಮಾರ್ಚ್ ೨೮ರಂದು ತೂತ್ತುಕುಡಿಯ ಸಾರ್ವಜನಿಕ ಸಭೆಯಲ್ಲಿ ಇದನ್ನು ಪ್ರಕಟಿಸಿದರು. ಇದಕ್ಕೆ ಮದ್ರಾಸ್ ಪ್ರಾಂತ್ಯದ ಗವರ್ನರ್ ಹಾರ್ಡಿಂಜ್ ಪ್ರತಿಕ್ರಿಯಿಸುತ್ತಾ, ಗಾಂಧಿ ಒಬ್ಬ ಬೊಲ್ಶೆವಿಕ್ ಎಂದು ರಷ್ಯಾದ ಕ್ರಾಂತಿಯನ್ನು ನೆನಪಿಸಿದಾಗ, ಗಾಂಧಿ, 'ಸತ್ಯಾಗ್ರಹ, ಪಶ್ಚಿಮದ ಭೌತವಾದಿ ನಾಗರೀಕತೆಯ ತಾರ್ಕಿಕ ಫಲವಾದ ಬೊಲ್ಶೆವಿಕ್ ಕ್ರಾಂತಿಯನ್ನು ತಡೆಯಬಲ್ಲ ಏಕೈಕ ಸಾತ್ವಿಕ ಶಕ್ತಿ' ಎಂದು ಹೇಳುತ್ತಾ, 'ಮನುಷ್ಯನ ಲೌಕಿಕ ಸುಖಗಳ ಮೇಲೆ ಮಾತ್ರ ಕಣ್ಣಿಟ್ಟ ಭೌತಿಕ ನಾಗರೀಕತೆ ಮನುಷ್ಯನ ಬದುಕಿನ ಅಂತಿಮ ಗುರಿಗಳನ್ನೇ ಮರೆತ ಪಶುತ್ವದ ಸಂಕೇತವಾಗಿದ್ದು, ನಾವು ಭೌತದ ಆರಾಧನೆಯ ಜಾಗದಲ್ಲಿ ಮನುಷ್ಯ ಚೈತನ್ಯದ ನಿಜವಾದ ಅಭಿವ್ಯಕ್ತಿಗಳಾದ ಸತ್ಯ ಮತ್ತು ಪ್ರೇಮಗಳ ಸಂದೇಶವನ್ನು ಬಿತ್ತರಿಸದಿದ್ದರೆ, ಈ ನಾಡು ಬೊಲ್ಶೆವಿಕ್‌ರ ತೊತ್ತೊಳದುಳಿತಕ್ಕೆ ಈಡಾಗುವುದು ಖಂಡಿತ' ಎಂದು ಉತ್ತರಿಸಿ ತಮ್ಮ ಪ್ರವಾಸವನ್ನು ಮುಂದುವರೆಸಿದರು. ಇದರೊಂದಿಗೆ ದೇಶ ತನ್ನ ಮೊದಲ ಹರತಾಳಕ್ಕೆ ಸಿದ್ಧವಾಗತೊಡಗಿತು. ಈ ಸುದ್ದಿ ತಿಳಿದ ಲಾರ್ಡ್ ಮಾಂಟೆಗೋ 'ರೌಲೆಟ್ ಕಾಯಿದೆಯು ಸಾಂವಿಧಾನಿಕ ಬ್ರಿಟಿಷ್ ಪ್ರಭುತ್ವದ ಬಗೆಗಿನ ಸದಭಿಪ್ರಾಯವನ್ನು ಹಾಳು ಮಾಡಿ ಪ್ರಭುತ್ವಕ್ಕೆ ಮಾರಕವಾಗುತ್ತದೆ' ಎಂದು ಎಚ್ಚರಿಸಿದರು. ಆದರೆ ಕಾಂಗ್ರೆಸ್ ನಾಯಕತ್ವ ಈ ಹರತಾಳವನ್ನು ಅನುಮೋದಿಸಲು ನಿರಾಕರಿಸಿತು. ಕೆಲ ಸೌಮ್ಯವಾದಿ ನಾಯಕರು ಗಾಂಧಿಯವರ ಜನಾಂದೋಲನದ ದಾರಿಯನ್ನು ಒಪ್ಪದೆ ಕಾಂಗ್ರೆಸ್ ತೊರೆದು 'ಲಿಬರಲ್ ಪಾರ್ಟಿ' ಎಂಬ ಹೊಸ ಪಕ್ಷವನ್ನು ಕಟ್ಟಿಕೊಂಡರು.

ದೇಶ ಆ ಸಮಯದಲ್ಲಿ ಬ್ರಿಟಿಷ್ ಪ್ರಭುತ್ವದ ವಿರುದ್ಧ ಎಷ್ಟು ಆಕ್ರೋಶಗೊಂಡಿತ್ತೆಂಬುದರ ಸೂಚನೆಯಂತೆ ದೇಶದ ರಾಜಧಾನಿ ದೆಹಲಿಯಲ್ಲಿ ಮಾರ್ಚ್ ೩೦ರಂದೇ ಹರತಾಳ ನಡೆಯಿತು. ಹರತಾಳದ ಮುಖ್ಯ ಕಾರ್ಯಕ್ರಮವಾಗಿ ಸ್ವಾಮಿ ಶ್ರದ್ಧಾನಂದರನ್ನು ಜುಮ್ಮ ಮಸೀದಿಯಲ್ಲಿ ಭಾಷಣ ಮಾಡಲು ಆಹ್ವಾನಿಸಲಾಗಿತ್ತು.

ಈ ಐತಿಹಾಸಿಕ ಘಟನೆಯನ್ನು ವೀಕ್ಷಿಸಲು ಹಿಂದೂ–ಮುಸ್ಲಿಂ–ಜೈನ–ಸಿಕ್ಖರೆನ್ನದೆ ನಗರದ ಹಲವೆಡೆಯಿಂದ ಹರಿದು ಬಂದ ಜನಸಾಗರವನ್ನು ನಿಯಂತ್ರಿಸಲಾಗದ ಪೊಲೀಸರು ಕೊನೆಗೆ ಗೋಲೀಬಾರ್ ಮಾಡಬೇಕಾಯಿತು. ಇದರಲ್ಲಿ ಎಂಟು ಜನ ಕೊಲ್ಲಲ್ಪಟ್ಟರು. ಜನ ಇದರಿಂದ ಉದ್ರೇಕಿತರಾಗಿ ನಗರದ ಶಾಂತಿ ಕದಡಿತು. ಸ್ವಾಮಿ ಶ್ರದ್ಧಾನಂದ ಮತ್ತು ಹಕೀಂ ಅಜ್ಮಲ್ ಖಾನರು ಜನರನ್ನು ಶಾಂತಗೊಳಿಸಲು ಗಾಂಧಿಯವರನ್ನು ದೆಹಲಿಗೆ ಬರುವಂತೆ ಕೋರಿದರು.

ರಾಷ್ಟ್ರ ಜೀವನವನ್ನು ಸ್ತಬ್ಧಗೊಳಿಸಿದ ಹರತಾಳ

ಗಾಂಧಿ ಹರತಾಳಕ್ಕಾಗಿ ಏಪ್ರಿಲ್ ೬ ರಂದು ಬಾಂಬೆಗೆ ಬಂದಿದ್ದರು. ಅವರು ಬೆಳಗ್ಗೆ ೬.೩೦ಕ್ಕೆ ಚೌಪಾಟಿ ಬಳಿ ಬಂದಾಗ ಸರ್ವಧರ್ಮಗಳಿಗೂ ಸೇರಿದ ಲಕ್ಷಕ್ಕೂ ಮೀರಿದ ಜನ, ಸಮುದ್ರ ಸ್ನಾನ ಮಾಡಿ ಅವರ ಸುತ್ತ ಜಮಾಯಿಸಿದರು. ಅವರನ್ನುದ್ದೇಶಿಸಿ ಮಾತನಾಡಿದ ಗಾಂಧಿ ದೆಹಲಿಯ ಘಟನೆಯನ್ನು ಖಂಡಿಸಿದರಲ್ಲದೆ, ಜನ ಹಿಂಸೆಗೆ ಇಳಿಯಕೂಡದು ಮತ್ತು ಹರತಾಳದಲ್ಲಿ ಭಾಗವಹಿಸಲಿಚ್ಛಿಸದ ಜನರನ್ನು ಬಲಾತ್ಕರಿಸಬಾರದೆಂದು ಕೋರಿದರು.

ದೆಹಲಿ–ಮುಂಬೈಗಳಲ್ಲಿಯಂತೆಯೇ ದೇಶಾದ್ಯಂತ–ಅಹಮದಾಬಾದ್, ಕರಾಚಿ, ಮದ್ರಾಸ್, ಮಿಡ್ನಾಪುರ, ಕಲ್ಕತ್ತಾ, ಪಾಟ್ನ ಮುಂತಾದ ದೊಡ್ಡ ನಗರಗಳಲ್ಲದೆ ಹಳ್ಳಿಗಳಲ್ಲೂ–ಜನ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿ, ಕೆಲಸ ನಿಲ್ಲಿಸಿ ಉಪವಾಸ, ಪ್ರಾರ್ಥನೆಗಳ ಮೂಲಕ ಹರತಾಳ ಆಚರಿಸಿದ್ದರು. ವಾಯುವ್ಯ ಗಡಿ ಪ್ರಾಂತ್ಯದ ಖೈಬರ್ ಕಣಿವೆಯ ಉತ್ಮಾಂಜೈ ಎಂಬ ಊರಿನಲ್ಲಿ (ಮುಂದೆ ಗಡಿನಾಡ ಗಾಂಧಿ ಎಂದೇ ಪ್ರಸಿದ್ಧರಾದ) ಖಾನ್ ಅಬ್ದುಲ್ ಗಫಾರ್ ಖಾನ್ ಎಂಬ ಪಠಾಣ್ ಯುವಕ ಮೆರವಣಿಗೆಯೊಂದನ್ನು ಸಂಘಟಿಸಿದ್ದ. ಕೆಲವೆಡೆ ನಿಷೇಧಿತ ಪುಸ್ತಕಗಳಾದ, ಗಾಂಧಿಯವರ 'ಹಿಂದ್‌ಸ್ವರಾಜ್', ಟರ್ಕಿಯ ಮುಸ್ತಫಾ ಕೆಮಾಲ್‌ರ ಜೀವನ ಚರಿತ್ರೆ ಮತ್ತು ಥೋರೋನ 'ಸವಿನಯ ಕಾನೂನು ಭಂಗ'ಗಳನ್ನು ಮುದ್ರಿಸಿ ವಿತರಿಸಲಾಯಿತು. ಒಂದೇ ದಿನದಲ್ಲಿ ಗಾಂಧಿ, ಭಾರತದ ಜನರ ಮನೆಮಾತಾದರು. ಪಂಜಾಬ್‌ನಲ್ಲಿ ಹರತಾಳ ಆಚರಣೆಯ ಸಂಬಂಧವಾಗಿ ಲಾಹೋರ್–ಅಮೃತಸರಗಳಲ್ಲಿ ಜನ ಮತ್ತು ಅಧಿಕಾರಿಗಳ ನಡುವೆ ಘರ್ಷಣೆಯುಂಟಾಗಿ ಪರಿಸ್ಥಿತಿ ಹದಗೆಟ್ಟಾಗ ಅಲ್ಲಿನ ನಾಯಕರು ಗಾಂಧಿಯವರ ತುರ್ತು ಮಾರ್ಗದರ್ಶನಕ್ಕಾಗಿ ಸಂದೇಶ ಕಳಿಸಿದರು. ಗಾಂಧಿ ಏಪ್ರಿಲ್ ೮ರಂದು ಪಂಜಾಬ್‌ಗೆ ಹೋಗಲು ದೆಹಲಿಯ ರೈಲುಗಾಡಿ ಹತ್ತಿದರು. ಒಬ್ಬ ವ್ಯಕ್ತಿಯ ಕರೆಗೆ ಓಗೊಟ್ಟು ದೇಶಾದ್ಯಂತ ಜನ ಹರತಾಳ ಆಚರಿಸಲಾರರು ಎಂದು ನಂಬಿ ಗಾಂಧಿಯ ಸುದ್ದಿಗೆ ಹೋಗದಿದ್ದ ಸರ್ಕಾರ ಈಗ ಬೆದರಿತ್ತು. ವಿಶೇಷವಾಗಿ ಹಿಂದೂ–ಮುಸ್ಲಿಮರು ಒಟ್ಟಾಗಿ ಸಂಘಟನೆಗೊಳ್ಳುತ್ತಿದ್ದ ಬೆಳವಣಿಗೆ ಅದನ್ನು ವಿಚಲಿತಗೊಳಿಸಿತ್ತು. ಗಾಂಧಿ ಈಗ ಸ್ಫೋಟಕ ಸ್ಥಿತಿಯಲ್ಲಿದ್ದ ಪಂಜಾಬ್‌ಗೆ ಹೊರಟಿರುವ ಸುದ್ದಿ ತಿಳಿದು, ಅವರನ್ನು ಮಾರ್ಗ ಮಧ್ಯದಲ್ಲೇ ತಡೆಯಲಾಯಿತು. ತಾನು ಪರಿಸ್ಥಿತಿಯನ್ನು ಹದಗೆಡಿಸಲು ಅಲ್ಲ, ತಿಳಿಗೊಳಿಸುವ ಉದ್ದೇಶದಿಂದ ಪ್ರವಾಸ ಕೈಗೊಂಡಿರುವುದಾಗಿ

ಅವರು ವಿವರಿಸಿದರೂ, ಆಡಳಿತ ಅವರನ್ನು ಬಂಧಿಸಿ ಬಾಂಬೆಗೆ ವಾಪಸು ತಂದುಬಿಟ್ಟಿತು.

ಗಾಂಧಿ ಬಂಧನದ ಸುದ್ದಿ–ಭುಗಿಲೆದ್ದ ಹಿಂಸಾಚಾರ

ಆದರೆ ಗಾಂಧಿಯ ಬಂಧನದ ಸುದ್ದಿ ಹರಡುತ್ತಿದ್ದಂತೆ ಬಾಂಬೆ–ಅಹಮದಾಬಾದ್–ಅಮೃತಸರಗಳಲ್ಲಿ ಜನ ದೊಂಬಿ ಎದ್ದರು. ಕಛೇರಿಗಳಿಗೆ ಬೆಂಕಿ–ಲೂಟಿ, ಐರೋಪ್ಯರ ಮೇಲೆ ದಾಳಿಗಳ ಮೂಲಕ ಜನಜೀವನವನ್ನು ಅಸ್ತವ್ಯಸ್ತಗೊಳಿಸಿದ್ದರು. ಗಾಂಧಿ ಇದನ್ನು ಸ್ಪಷ್ಟ ಶಬ್ದಗಳಲ್ಲಿ ಖಂಡಿಸಿದರಲ್ಲದೆ, ಹಿಂಸೆಗೆ ಇಳಿದ ತಮ್ಮ ಅನುಯಾಯಿಗಳಿಗೆ ಛೀಮಾರಿ ಹಾಕಿದರು. ಹಿಂಸೆಗಾಗಿ ಬಂಧಿತರಾಗಿರುವವರನ್ನು ಬಿಡುಗಡೆಗೊಳಿಸಬೇಕೆಂಬ ಬೇಡಿಕೆಯನ್ನು ಟೀಕಿಸಿದ ಅವರು, 'ಸತ್ಯಾಗ್ರಹದಲ್ಲಿ ಪ್ರಚೋದನಕಾರಿ ಮಾತುಗಳೂ ಸೇರಿದಂತೆ ಹಿಂಸೆಯ ಯಾವ ರೂಪಗಳಿಗೂ ಅವಕಾಶವಿಲ್ಲ. ಶಾಸನದ ವಿರುದ್ಧ ಪ್ರತಿಭಟನೆಯಾಗಿ ಸ್ವತಃ ಬಂಧನಕ್ಕೆ ಒಳಗಾಗಬೇಕಾಗಿದ್ದವರು ಪುಂಡಾಟಿಕೆಯಲ್ಲಿ ತೊಡಗಿದ್ದವರ ಬಿಡುಗಡೆಗಾಗಿ ಆಗ್ರಹಿಸುವುದು ಧರ್ಮದ್ರೋಹಕ್ಕೆ ಸಮ'ವೆಂದು ಜಿಗುಪ್ಸೆ ವ್ಯಕ್ತಪಡಿಸಿದರು. ಆದರೆ ಇದೇ ವೇಳೆಯಲ್ಲಿ ಅಹಮದಾಬಾದ್‌ನಲ್ಲಿಯೂ ಅಂಗಡಿಗಳ ಲೂಟಿ, ಕಟ್ಟಡಗಳಿಗೆ ಬೆಂಕಿ, ಟೆಲಿಗ್ರಾಫ್ ತಂತಿಗಳ ತುಂಡು, ಬಿಳಿಯ ಅಧಿಕಾರಿಗಳ ಮೇಲೆ ದಾಳಿ ಇತ್ಯಾದಿ ಅನಾಚಾರಗಳಲ್ಲಿ ತೊಡಗಿದ್ದ ಹತ್ತಿಗಿರಣಿ ಕಾರ್ಮಿಕರ ಆಕ್ರೋಶ–ಅವರ ಮೆಚ್ಚಿನ ನಾಯಕಿ ಅನುಸೂಯಾ ಬೆನ್‌ರ ಬಂಧನವಾಗಿದೆ ಎಂಬ ಸುಳ್ಳು ಸುದ್ದಿಯ ಹಿನ್ನೆಲೆಯಲ್ಲಿ–ಅನಿಯಂತ್ರಿತವಾದಾಗ ಪೊಲೀಸರು ಗುಂಡು ಹಾರಿಸಬೇಕಾಯಿತು. ಇದರಲ್ಲಿ ೨೩ ಜನ ಸತ್ತರು. ಗಾಂಧಿ ಕೂಡಲೇ ಅಹಮದಾಬಾದ್‌ಗೆ ಧಾವಿಸಿದರು. ಅಲ್ಲಿನ ದಾರುಣ ದೃಶ್ಯ ನೋಡಿ ವಿಚಲಿತರಾದರು. ತಮ್ಮ ಹೆಸರಿನಲ್ಲಿ ನಡೆದ ಈ ಎಲ್ಲ ಹಿಂಸಾಚಾರ ಅವರನ್ನು ಕಂಗೆಡಿಸಿ ಖಿನ್ನರನ್ನಾಗಿಸಿತ್ತು. ಒಮ್ಮೆ ಅವರು ಸಂಕಟ ತಡೆಯಲಾರದೆ ಜೋರಾಗಿ ಅತ್ತೇಬಿಟ್ಟರು. ನಂತರ ಅವರು ವೈಸ್‌ರಾಯ್‌ಗೆ ಪತ್ರ ಬರೆದು ಸತ್ಯಾಗ್ರಹದ ಅರ್ಥ ಜನರಿಗಿನ್ನೂ ಆಗಿಲ್ಲದಿರುವುದು ಮತ್ತು ಬ್ರಿಟಿಷ್ ಸರ್ಕಾರ ಮಾಡಿದ ತಮ್ಮ ಅನುಚಿತ ಬಂಧನವೇ ಹಿಂಸಾಚಾರಕ್ಕೆ ಕಾರಣಗಳೆಂದು ತಿಳಿಸಿ ಅದಕ್ಕಾಗಿ ವಿಷಾದಿಸಿದರು.

ಮತ್ತೆ ಉಪವಾಸ–'ಸ್ವದೇಶಿ' ಕಲ್ಪನೆಯ ಉದಯ

ನಂತರ ಗಾಂಧಿ, ಏಪ್ರಿಲ್ ೧೪ರಂದು ಸತ್ಯಾಗ್ರಹ ಆಶ್ರಮದಲ್ಲಿ ಸಭೆ ನಡೆಸಿ, ಈ ಹೊತ್ತಿಗೆ ಸರ್ಕಾರ ಹಿಂಪಡೆಯುವ ಎಲ್ಲ ಸಾಧ್ಯತೆಗಳಿದ್ದ ರೌಲೆಟ್ ಕಾಯಿದೆಗಳು, ಈಗ ಇನ್ನಷ್ಟು ಕಾಲ ಜಾರಿಯಿರುವ ವಾತಾವರಣವನ್ನು ನಾವೇ ನಿರ್ಮಿಸಿದ್ದೇವೆ ಎಂದು ವಿಷಾದಿಸಿದರು. ಹಿಂಸಾಚಾರ ಕುರಿತಂತೆ ಪ್ರಾಯಶ್ಚಿತ್ತವಾಗಿ ತಾವು ಅಂದಿನಿಂದಲೇ ೭೨ ತಾಸುಗಳ ಉಪವಾಸ ಮಾಡುವುದಾಗಿ ಅವರು ಘೋಷಿಸಿದರಲ್ಲದೆ, ಇತರರಿಗೂ ಇದಕ್ಕೆ ಪೂರಕವಾಗಿ ೨೪ ತಾಸುಗಳ ಉಪವಾಸ ಮಾಡಲು ಕೋರಿದರು. ಅಹಮದಾಬಾದ್ ಮತ್ತು ಬಾಂಬೆಗಳಲ್ಲಿ ಪರಿಸ್ಥಿತಿ ಶಾಂತವಾಯಿತು. ತಮ್ಮ ಉಪವಾಸ ಸಮಯದಲ್ಲಿ

ಗಾಂಧಿ ಸತ್ಯಾಗ್ರಹ ಏಕೆ ಹಿಂಸಾಚಾರಕ್ಕೆ ದಾರಿ ಮಾಡಿಕೊಟ್ಟಿತು ಎಂಬ ಪ್ರಶ್ನೆ ಕುರಿತು ಆಳವಾದ ಆತ್ಮನಿರೀಕ್ಷಣೆಯಲ್ಲಿ ತೊಡಗಿದರು. ನಮ್ಮ ಪ್ರಾಚೀನ ಕಾಲದ ಸಾಧು-ಮುನಿಗಳು ತಮ್ಮ ವಿಚಾರಗಳನ್ನು ವಿಶಾಲ ಜನತೆಗೆ ಹೇಗೆ ತಲುಪಿಸಲು ಸಾಧ್ಯವಾಯಿತು ಎಂದು ಯೋಚಿಸಿದರು. ಅವರ ಸರಳ ಬದುಕೇ ಅವರ ವಿಚಾರಗಳ ಸಹಜ ವಾಹಕವಾಗಿತ್ತೆಂದು ಅವರಿಗೆ ಅನ್ನಿಸಿತು. ತಾವು ತಮ್ಮ ಬದುಕಿನಲ್ಲಿ ಇನ್ನಷ್ಟು ಸರಳವಾಗಬೇಕು ಮತ್ತು ಜನರಲ್ಲಿ ಈ ಸರಳ ಬದುಕಿನ ಸಂದೇಶ ಹರಡಲು ಒಂದು ಸರಳ ತತ್ವದ ಅಗತ್ಯವನ್ನು ಮನಗಂಡರು. ಅದೇ ಮುಂದೆ 'ಸ್ವದೇಶಿ' ಕಲ್ಪನೆಯಾಗಿ ಬೆಳೆಯಿತು ಎಂದು ಹೇಳಬಹುದು.

ಈ ಮಧ್ಯೆ ತಮ್ಮ ಸತ್ಯಾಗ್ರಹದ ಕರೆಗೆ ಬೆಂಬಲ ಕೋರಿ ಗಾಂಧಿ, ರವೀಂದ್ರರಿಗೆ ಬರೆದ ಪತ್ರಕ್ಕೆ ಅವರಿಂದ ಉತ್ತರ ಬಂದಿತ್ತು. ಅದರಲ್ಲಿ ಟ್ಯಾಗೋರರು ಸತ್ಯಾಗ್ರಹದ ಆಶಯ ಒಳ್ಳೆಯದೇ ಆದರೂ, ಅದನ್ನು ಅದರ ಸಂಕೀರ್ಣ ಉದ್ದೇಶಗಳನ್ನು ಅರಿಯಲಾಗದ ಜನಸಮೂಹದ ಅಸ್ತ್ರವನ್ನಾಗಿ ಮಾಡುವುದು ಅಪಾಯಕಾರಿ; ಏಕೆಂದರೆ ಒಮ್ಮೆ ಯಶಸ್ಸಿನ ರುಚಿ ಹತ್ತಿತೆಂದರೆ ಜನ ಅದನ್ನು ಅಸತ್ಯದ ಸ್ಥಾಪನೆಗೆ ಬಳಸಲೂ ಹೇಸದ ಅಪಾಯವಿದೆ ಎಂದು ಬರೆದಿದ್ದರು. ಇದು ಸದ್ಯದ ಹಿಂಸಾಚಾರದ ಹಿನ್ನೆಲೆಯಲ್ಲಿ ಗಾಂಧಿಯನ್ನು ಯೋಚಿಸುವಂತೆ ಮಾಡಿತ್ತು.

ಹಿಮಾಲಯದಷ್ಟು ತಪ್ಪಿನ ಅರಿವು

ಅವರು ತಮ್ಮ ಉಪವಾಸದ ನಂತರ, ತಾವು ಸೇನಾಭರ್ತಿ ಕಾರ್ಯಾಚರಣೆ ನಡೆಸಿದ್ದ ನಡಿಯಾಡ್‌ನಲ್ಲೂ ಹಿಂಸಾಚಾರ ನಡೆದ ಸುದ್ದಿ ಕೇಳಿ ಅಲ್ಲಿಗೆ ಹೋದಾಗ, ಸತ್ಯಾಗ್ರಹದ ಹೆಸರಿನಲ್ಲಿ ಹಿಂಸಾಚಾರ ಹಳ್ಳಿಗಳಿಗೂ ಹಬ್ಬಿರುವ ಸುದ್ದಿಯನ್ನು ತಿಳಿದು ಆಘಾತಗೊಂಡರು. ತಾವು ಹಿಮಾಲಯದಷ್ಟು ದೊಡ್ಡ ತಪ್ಪು ಮಾಡಿರುವ ಅರಿವು ಅವರಿಗೆ ಉಂಟಾಯಿತು. ಅವರನ್ನು ಸತ್ಯಾಗ್ರಹ ಸಂಸ್ಕೃತಿಯಲ್ಲಿ ತರಬೇತುಗೊಳಿಸದೆ ಅದಕ್ಕೆ ಸಾರ್ವತ್ರಿಕ ಕರೆ ನೀಡಿದ್ದೇ ದೊಡ್ಡ ತಪ್ಪು ಎನಿಸಿತು. ಏಪ್ರಿಲ್ ೧೮ರಂದು ಗಾಂಧಿ ಸತ್ಯಾಗ್ರಹವನ್ನು ತಾತ್ಕಾಲಿಕವಾಗಿ ಹಿಂತೆಗೆದುಕೊಳ್ಳುತ್ತಿರುವುದಾಗಿ ಸಾರ್ವಜನಿಕವಾಗಿ ಪ್ರಕಟಿಸಿದರು. ತಮ್ಮ ಸಹವರ್ತಿಗಳ ಮೂಲಕ ಜನರ ನಡುವೆ ಸತ್ಯಾಗ್ರಹದ ಆಶಯ ಮತ್ತು ಬದ್ಧತೆಗಳನ್ನು ಮನದಟ್ಟು ಮಾಡಿದ ನಂತರವಷ್ಟೇ ಮತ್ತೆ ಸತ್ಯಾಗ್ರಹ ಮುಂದುವರೆಸುವುದಾಗಿ ಹೇಳಿದರು. ಕೆಲವರು ಅವರನ್ನು ಅವರ 'ಹಿಮಾಲಯದಷ್ಟು ದೊಡ್ಡ ತಪ್ಪಿ'ಗಾಗಿ ಟೀಕಿಸಿ ಹಂಗಿಸಿದರು. ಅದಕ್ಕೆ ಗಾಂಧಿ 'ತಪ್ಪನ್ನು ಒಪ್ಪಿಕೊಳ್ಳುವುದಕ್ಕೆ ನನಗೆ ಯಾವ ಸಂಕೋಚವೂ ಇಲ್ಲ' ಎಂದು ಪ್ರತಿಕ್ರಿಯಿಸಿದರು. ಈ ಸಂದರ್ಭವನ್ನು ಹಲವು ವರ್ಷಗಳ ನಂತರ ತಮ್ಮ ಜೀವನಚರಿತ್ರೆಯಲ್ಲಿ ಚರ್ಚಿಸುತ್ತಾ ಅವರು 'ನಾನು ತರಬೇತಿ ಇಲ್ಲದ ಮನಸ್ಸಿನ ಕೆಡುಕಿನ ಶಕ್ತಿಯನ್ನು ಸರಿಯಾಗಿ ಅಂದಾಜು ಮಾಡುವಲ್ಲಿ ಸೋತಿದ್ದೆ' ಎಂದು ತಮ್ಮ ತಪ್ಪಿನ ಬಗ್ಗೆ ಅಲವತ್ತುಗೊಂಡಿರುವುದನ್ನು ನಾವು ಗಮನಿಸಬಹುದು.

■

೩೧

ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡ

ಗಾಂಧಿ ೧೯೧೯ರ ಏಪ್ರಿಲ್ ೧೪ರಂದು ತಮ್ಮ ಸತ್ಯಾಗ್ರಹ ಆಶ್ರಮದಲ್ಲಿ ೭೨ ತಾಸುಗಳ ಉಪವಾಸ ಪ್ರಕಟಿಸುವ ಮುನ್ನಾ ದಿನ ಪಂಜಾಬ್‌ನಲ್ಲಿ ಭಾರತದ ಇತಿಹಾಸದಲ್ಲೇ ಅತ್ಯಂತ ಅನಾಗರಿಕವೆನ್ನಿಸುವ ನರಹತ್ಯೆ ನಡೆದುಹೋಗಿತ್ತು. ಅಮೃತಸರದ ಜಲಿಯನ್‌ವಾಲಾ ಬಾಗ್‌ನಲ್ಲಿ ವಿವಿಧ ಉದ್ದೇಶಗಳಿಗೆ ಸೇರಿದ್ದ ಜನಸಮೂಹದ ಮೇಲೆ, ಲಷ್ಕರಿ ಶಾಸನದ ಅಧಿಕಾರ ಬಳಸಿ ಜನರಲ್ ಡೈಯರ್ ಎಂಬ ಸೇನಾಧಿಕಾರಿ ಅಪ್ರಚೋದಿತವಾಗಿ ಆದರೆ ವ್ಯವಸ್ಥಿತವಾಗಿ ಗುಂಡಿನ ದಾಳಿ ನಡೆಸಿ ಸುಮಾರು ನಾಲ್ಕುನೂರು ಜನರನ್ನು ಕೊಂದಿದ್ದ. ಸಾವಿರಾರು ಜನರನ್ನು ಗಾಯಗೊಳಿಸಿದ್ದ. ಮುಂದೆ ಭಾರತದ ಆಧುನಿಕ ಇತಿಹಾಸದಲ್ಲಿ ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡವೆಂದೇ ಹೆಸರಾದ ಮತ್ತು ಭಾರತದ ಸ್ವಾತಂತ್ರ್ಯ ಹೋರಾಟದ ಕೆಚ್ಚಿನಲ್ಲಿ, ನಿರ್ದಿಷ್ಟವಾಗಿ ಬ್ರಿಟಿಷ್ ಪ್ರಭುತ್ವ ಕುರಿತ, ಗಾಂಧಿಯ ನಿಲುವಿನಲ್ಲಿ ನಿರ್ಣಾಯಕ ಬದಲಾವಣೆ ಉಂಟು ಮಾಡಿದ ಈ ಕ್ರೂರ ಘಟನೆ ತಿಂಗಳಿಗಿಂತ ಹೆಚ್ಚುಕಾಲ ದೇಶದ ಬೇರೆ ಭಾಗಗಳಿಗೆ ಗೊತ್ತೇ ಆಗಲಿಲ್ಲ. ಪಂಜಾಬ್ ಸರ್ಕಾರ ಲಷ್ಕರಿ ಶಾಸನದಡಿ ಜಾರಿಗೆ ತಂದಿದ್ದ ಪತ್ರಿಕಾ ಸ್ವಾತಂತ್ರ್ಯ, ಅಂಚೆ ಮತ್ತು ತಂತಿ ವ್ಯವಹಾರ ಹಾಗೂ ಪ್ರಯಾಣಗಳ ಮೇಲೆ ಹೇರಿದ್ದ ಕಠಿಣ ನಿಷೇಧವೇ ಇದಕ್ಕೆ ಕಾರಣವಾಗಿತ್ತು.

ಈ ದುರದೃಷ್ಟಕರ ಹತ್ಯಾಕಾಂಡದ ಹಿಂದೆ ಒಂದು ಘಟನಾವಳಿಯೇ ಇತ್ತು. ಮೊದಲ ಮಹಾಯುದ್ಧಕ್ಕಾಗಿ ಬ್ರಿಟಿಷ್ ಸೇನೆಗೆ ಅತ್ಯಂತ ಹೆಚ್ಚು ಸೈನಿಕರನ್ನು ಒದಗಿಸಿದ್ದ ಪಂಜಾಬ್ ಯುದ್ಧೋತ್ತರದ ಸಂಕಷ್ಟಗಳ ವಾತಾವರಣದಿಂದ ಮೊದಲೇ ಅಶಾಂತವಾಗಿತ್ತು. ಹೀಗಾಗಿ ಗಾಂಧಿಯ ಹರತಾಳದ ಕರೆಗೆ, ದೆಹಲಿಯ ಜೊತೆಯಲ್ಲೇ, ಮಾರ್ಚ್ ೩೦ರಂದೇ ಓಗೊಟ್ಟು, ರಾಜ್ಯಾದ್ಯಂತ ಪ್ರತಿಭಟನಾ ಮೆರವಣಿಗೆಗಳನ್ನು ಏರ್ಪಡಿಸಿ ಸಂಪೂರ್ಣ ಹರತಾಳ ನಡೆಸಿದ ಪ್ರಾಂತ್ಯ, ಮತ್ತೆ ಏಪ್ರಿಲ್ ೬ರ ಹೊಸ ದಿನಾಂಕದಂದೂ ಕೆಚ್ಚಿನಿಂದ ಹರತಾಳ ಆಚರಿಸಿತು. ಇದರಿಂದ ಸರ್ಕಾರ ಎಚ್ಚೆತ್ತುಕೊಳ್ಳುವಷ್ಟರಲ್ಲೇ ಏಪ್ರಿಲ್ ೯ರಂದು, ರಾಮನವಮಿಯ ದಿವಸ ರಾಜ್ಯದ ಮುಖ್ಯಪಟ್ಟಣಗಳಲ್ಲೊಂದಾದ ಮತ್ತು ಸಿಕ್ಖರ ಪವಿತ್ರ ಕ್ಷೇತ್ರವಾದ ಅಮೃತಸರದಲ್ಲಿ ಒಂದು ಬೃಹತ್ ಮೆರವಣಿಗೆ ಏರ್ಪಾಟಾಯಿತು. ಇದರಲ್ಲಿ ಹಿಂದೂಗಳು ಮಾತ್ರವಲ್ಲದೆ, ಸಿಕ್ಖರು ಮತ್ತು ಮುಸ್ಲಿಮರೂ ಸೇರಿದ್ದು ಎಲ್ಲರೂ ಒಕ್ಕೊರಲಿನಿಂದ 'ಮಹಾತ್ಮ ಗಾಂಧಿ ಕೀ ಜೈ' ಮತ್ತು 'ಹಿಂದೂ ಮುಸಲ್ಮಾನ್‌ಕಿ ಜೈ' ಎಂಬ ಘೋಷಣೆಗಳನ್ನು ಕೂಗುತ್ತಾ ಊರ ತುಂಬ

ಸಾಗಿದ ದೃಶ್ಯ ಆಡಳಿತದ ಧೃತಿಗೆಡಿಸಿತು. ಅದು ಕೂಡಲೇ ಈ ಮೆರವಣಿಗೆಯ ನೇತೃತ್ವ ವಹಿಸಿದ್ದ ಸತ್ಯಪಾಲ್ ಮತ್ತು ಸೈಫುದ್ದೀನ್ ಕಿಚ್ಲೂ ಎಂಬ ಇಬ್ಬರು ಕಾಂಗ್ರೆಸ್ ನಾಯಕರನ್ನು ಪ್ರಾಂತ್ಯದಿಂದ ಉಚ್ಚಾಟಿಸುವ ಆಜ್ಞೆ ಹೊರಡಿಸಿತು.

ಕೂಡಲೇ ನಗರದಲ್ಲಿ ಗಲಭೆಗಳು ಶುರುವಾದವು. ಅವೆಷ್ಟು ಭೀಕರವಾಗಿದ್ದುವೆಂದರೆ ಜನ ಬ್ರಿಟಿಷ್ ಪ್ರಭುತ್ವದ ಕಛೇರಿಗಳಿಗೆ ಬೆಂಕಿ ಹಚ್ಚಿದರು. ಬ್ಯಾಂಕ್‌ಗಳಿಗೆ ನುಗ್ಗಿ ಅವುಗಳ ಮ್ಯಾನೇಜರುಗಳನ್ನು ಬಡಿದು ಸಾಯಿಸಿದರು. ಎದುರಿಗೆ ಸಿಕ್ಕ ಬ್ರಿಟಿಷ್ ನೌಕರರನ್ನು ಚಚ್ಚಿ ಕೆಡವಿದರು. ಮಹಿಳಾ ಉಪಾಧ್ಯಾಯಿನಿಯೊಬ್ಬರನ್ನು ಪ್ರಾಣಾಂತಿಕವಾಗಿ ಹೊಡೆದು ಬಿಟ್ಟು ಹೋದರು. ಎರಡು ದಿನಗಳ ಕಾಲ ನಿರಂತರವಾಗಿ ನಡೆದ ಈ ಹಿಂಸಾಕೃತ್ಯಗಳನ್ನು ತಡೆಯಲಾಗದ ಜಿಲ್ಲಾಧಿಕಾರ ಸೇನೆಯನ್ನು ಕರೆಸಿ, ಜಿಲ್ಲೆಯನ್ನು ಅದಕ್ಕೆ ಒಪ್ಪಿಸಿ, ಲಷ್ಕರಿ ಶಾಸನವನ್ನು ಜಾರಿಗೆ ತಂದಿತು. ಸೇನಾಡಳಿತವನ್ನು ವಹಿಸಿಕೊಂಡವನು ಬ್ರಿಗೇಡಿಯರ್ ಆರ್.ಇ. ಡೈಯರ್ ಎಂಬ ಸೇನಾಧಿಕಾರಿ. ಬೀದಿಗಳಲ್ಲಿ ಸೇನಾ ಪಥಸಂಚಲನದ ನಂತರ ಊರು ಶಾಂತವಾಯಿತು.

ಆದರೆ ಜನ ಲಷ್ಕರಿ ಶಾಸನವನ್ನು ಒಪ್ಪಲಿಲ್ಲ. ನಿಧಾನವಾಗಿ ಒಳಗೊಳಗೇ ಪ್ರತಿರೋಧದ ಬೆಂಕಿ ಹೊತ್ತಿಕೊಂಡಿತು. ಅದರ ವಿರುದ್ಧ ಪ್ರತಿಭಟನೆಗೆ ಊರು ಸಿದ್ಧವಾಯಿತು. ಏಪ್ರಿಲ್ ೧೩ರಂದು ಪ್ರತಿಭಟನಾ ಸಭೆಗೆ ಕರೆಕೊಡಲಾಯಿತು. ಆ ಸಭೆ ಊರಿನ ಪ್ರಸಿದ್ಧ ಸ್ಥಳವಾಗಿದ್ದ ಜಲಿಯನ್‌ವಾಲಾ ಬಾಗ್‌ನಲ್ಲಿ ನಡೆಯುವುದೆಂದು ಪ್ರಕಟಿಸಲಾಯಿತು.

ಹತ್ತು ನಿಮಿಷಗಳಲ್ಲಿ ನಾನೂರು ಜನರ ಹತ್ಯೆ

ಅದು ಏಪ್ರಿಲ್ ೧೩ರ ಬೈಸಾಖಿ ದಿನ. ಪಂಜಾಬಿಗಳ ಹೊಸ ವರ್ಷದ ದಿನ. ಸಿಕ್ಖರು ನಗರದ ಸ್ವರ್ಣಮಂದಿರಕ್ಕೆ ಆರಾಧನೆಗೆ ಹೋಗುವ ದಿನ. ಅಂದು ಗಲಭೆಯನ್ನು ನಿರೀಕ್ಷಿಸಿದ ಡೈಯರ್, ಆ ದಿನ ಎಲ್ಲ ಸಭೆಗಳನ್ನು ನಿಷೇಧಿಸಿ ಆಜ್ಞೆ ಹೊರಡಿಸಿದ. ಆ ಆಜ್ಞೆಯನ್ನು ನಗರದ ಹಲವೆಡೆ ಕೈಧ್ವನಿವರ್ಧಕಗಳ ಮೂಲಕ ಘೋಷಿಸುವ ವ್ಯವಸ್ಥೆಯನ್ನೂ ಮಾಡಿದ. ಆದರೆ ಈ ಘೋಷಣೆ ನಗರದ ಬಹುಜನರಿಗೆ ತಲುಪಿದಂತೆ ಕಾಣಲಿಲ್ಲ. ಸ್ವರ್ಣಮಂದಿರಕ್ಕೆ ಭೇಟಿ ನೀಡಿದ ಜನ ನಂತರ ವಿಶ್ರಾಂತಿ ಮತ್ತು ಪರಸ್ಪರ ಮಾತುಕತೆಗಳಿಗಾಗಿ ಜಲಿಯನ್‌ವಾಲಾ ಬಾಗ್‌ನತ್ತ ಸಾಗಿದರು. ಇನ್ನು ಪ್ರತಿಭಟನಾ ಸಭೆಗೆಂದೂ ಕೆಲ ಜನ ಅಲ್ಲಿ ಸೇರಿದ್ದರು. ಮಧ್ಯಾಹ್ನ ಮೂರರ ಹೊತ್ತಿಗೆ ಹೆಂಗಸರು ಮಕ್ಕಳು, ಮುದುಕರು, ಹಿಂದೂಗಳು, ಸಿಕ್ಖರು, ಮುಸಲ್ಮಾನರೂ ಕೂಡಿದ್ದ ಅಲ್ಲಿನ ಜನಸಮೂಹ ಸಾವಿರಾರು ಆಗಿತ್ತು. ಯಾರೋ ಮೈದಾನದ ದಿಣ್ಣೆಯೊಂದರ ಮೇಲೆ ನಿಂತು ಭಾಷಣ ಮಾಡತೊಡಗಿದ್ದರು. ಕೆಲವರು ಕೇಳುತ್ತಿದ್ದರು, ಇನ್ನು ಕೆಲವರು ತಮ್ಮದೇ ಚಟುವಟಿಕೆಗಳಲ್ಲಿ ತೊಡಗಿದ್ದರು. ಈ ಸಮಾಚಾರ ತಿಳಿದ ಡೈಯರ್, ತನ್ನ ತಲಾ ೨೫ ಜನರ ಗೂರ್ಖಾ ಮತ್ತು ಪಠಾಣ್ ತುಕಡಿಗಳೊಂದಿಗೆ, ಬಾಗ್ ಎಂದು ಕರೆಯಲಾಗುತ್ತಿದ್ದರೂ ಸುತ್ತಲೂ ಐದು ಅಡಿ ಗೋಡೆಯಿಂದ ಆವೃತವಾಗಿದ್ದ ಆ ಮೈದಾನದತ್ತ ಸಾಗಿ ಬಂದ. ಆ ಮೈದಾನಕ್ಕೆ ಐದು ನಾಮಕಾವಸ್ತೆ ಬಾಗಿಲುಗಳಿದ್ದರೂ,

ಒಂದರ ಹೊರತಾಗಿ ಮಿಕ್ಕೆಲ್ಲವೂ ಸದಾ ಮುಚ್ಚಿರುತ್ತಿದ್ದವು. ಡಯರ್ ಆ ತೆರೆದ ಒಂದೇ ಬಾಗಿಲ ಬಳಿ ತನ್ನ ತುಕಡಿಗಳನ್ನು ಸಾಲುಗಳಲ್ಲಿ ನಿಲ್ಲಿಸಿದ. ಗುಂಡು ಹಾರಿಸುವ ಮುನ್ನ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಯ ಉದ್ಘೋಷಣೆಯೂ ಸೇರಿದಂತೆ ಯಾವುದೇ ಔಪಚಾರಿಕ ಕ್ರಮಗಳನ್ನೂ ಕೈಗೊಳ್ಳದೆ ಜನರತ್ತ ಗುಂಡು ಹಾರಿಸಲು ಆಜ್ಞಾಪಿಸಿದ. ಈ ಅನಿರೀಕ್ಷಿತ ದಾಳಿಯಿಂದ ಜನ ಚೆಲ್ಲಾಪಿಲ್ಲಿಯಾಗಿ ಹೊರ ಓಡಲು ಯತ್ನಿಸಿದರು. ಆದರೆ ತೆರೆದಿದ್ದ ಒಂದೇ ಬಾಗಿಲ ಬಳಿ ಹಂತಕರು ನಿಂತು ಗುಂಡು ಹಾರಿಸುತ್ತಿದ್ದರು. ದಾರಿಗಾಣದೆ ಅನೇಕರು ಮೈದಾನದಲ್ಲಿದ್ದ ಹಾಳು ಬಾವಿಗೆ ಹಾರಿದರು. ಹತ್ತು ನಿಮಿಷಗಳಲ್ಲಿ ೧೬೫೦ ಸುತ್ತು ಗುಂಡು ಹಾರಿಸಲಾಯಿತು. ಡೈಯರ್, ನೇರವಾಗಿ ಜನರತ್ತ, ಗೋಡೆ ಹತ್ತಿ ಹಾರಲು ಸೇರಿದ್ದ ಜನಸಂದಣಿಯತ್ತಲೇ ಗುಂಡು ಹಾರಿಸಲು ನಿರ್ದೇಶನ ನೀಡುತ್ತಿದ್ದ. ಹತ್ತು ನಿಮಿಷಗಳಲ್ಲಿ ೩೭೦ ಜನ ಸತ್ತಿದ್ದರು ಮತ್ತು ೧೧೩೭ ಜನ ತೀವ್ರವಾಗಿ ಗಾಯಗೊಂಡಿದ್ದರು. ಅಲ್ಲಿ ಸತ್ತವರನ್ನಿರಲಿ, ಗಾಯಗೊಂಡವರನ್ನೂ ಕೇಳುವವರು ಯಾರೂ ಗತಿ ಇರಲಿಲ್ಲ.

ಮುಂದಿನ ಮೂರು ದಿನ ನಗರ ಬೆಚ್ಚಿ ಸ್ತಬ್ಧಗೊಂಡಿತು. ಅದಕ್ಕೆ ಕಾರಣ, ಡೈಯರ್‌ನ ನಿರ್ದಾಕ್ಷಿಣ್ಯ ಶಾಸನ ಕ್ರಮಗಳು. ಕಟ್ಟುನಿಟ್ಟಿನ ನಿಷೇಧಾಜ್ಞೆಯನ್ನು ಜಾರಿಗೊಳಿಸಿದನಲ್ಲದೆ ಊರ ಸುದ್ದಿ ಊರಾಚೆ ಹೋಗದಂತೆ ಎಲ್ಲ ಸಂಪರ್ಕ-ಸಂವಹನಗಳನ್ನೂ ಬಂದ್ ಮಾಡಿದ. ಜನ ಬೀದಿಯಲ್ಲಿ ಬ್ರಿಟಿಷ್ ನೌಕರರು ಕಂಡರೆ ನಡುಬಗ್ಗಿಸಿ ಸಲಾಂ ಹೊಡೆಯಬೇಕೆಂದು ಆಜ್ಞೆ ಹೊರಡಿಸಿದ. ಮಹಿಳಾ ಉಪಾಧ್ಯಾಯಿನಿಯ ಮೇಲೆ ದಾಳಿ ಮಾಡಿದ ರಸ್ತೆಯನ್ನು ಬಳಸುವವರು-ಆ ರಸ್ತೆಯಲ್ಲಿ ಮನೆಯಿದ್ದವರೂ ಸೇರಿ-ರಸ್ತೆಯಲ್ಲಿ ಕೈಗಳನ್ನು ನೆಲಕ್ಕೂರಿ ತೆವಳಿ ಹೋಗುವಂತೆ ಘೋಷಣೆ ಹೊರಡಿಸಿದ. ತಪ್ಪಿದವರಿಗೆ ಛಡಿಯೇಟಿನ ಶಿಕ್ಷೆಗೆ ಆಜ್ಞಾಪಿಸಿದ. ತನ್ನ ಆಜ್ಞೆಗಳನ್ನು ಉಲ್ಲಂಘಿಸಿದವರಿಗೆಲ್ಲ ಈ ಶಿಕ್ಷೆ ವಿಧಿಸಲೆಂದೇ ಆ ರಸ್ತೆಯಲ್ಲಿ ಛಡಿ ಏಟಿನ ಕಂಭವೊಂದನ್ನೂ ನಿರ್ಮಿಸಿ ಊರು ಭಯದಿಂದ ನಡುಗುವಂತೆ ಮಾಡಿದ.

ಪ್ರತಿಬಂಧನಕ್ಕೊಳಗಾದ ಪಂಜಾಬ್

ಅಮೃತಸರ ನಗರ ಮಾತ್ರವಲ್ಲ, ಇಡೀ ಪಂಜಾಬ್ ಪ್ರಾಂತ್ಯ ಕ್ಷೋಭೆಗೊಳಗಾಗಿತ್ತು. ಲಾಹೋರ್‌ನಲ್ಲಿ ಗುಂಪನ್ನು ನಿಯಂತ್ರಿಸಲು ಗೋಲೀಬಾರ್ ನಡೆದಿತ್ತು. ಬೇರೆ ಎರಡು ಕಡೆ ರೈತರ ದಂಗೆ ಅಡಗಿಸಲು ವಿಮಾನಗಳಿಂದ ಬಾಂಬ್‌ಗಳನ್ನು ಎಸೆಯಲಾಗಿತ್ತು. ಕೊನೆಗೆ ಪ್ರಾಂತ್ಯದ ಲೆ. ಗವರ್ನರ್ ಇಡೀ ಪ್ರಾಂತ್ಯದಲ್ಲಿ ಲಷ್ಕರಿ ಶಾಸನವನ್ನು ಜಾರಿಗೆ ತಂದನು. ಯಾರೂ ಪ್ರಾಂತ್ಯದಿಂದ ಹೊರಗೆ ಹೋಗಲು ಮತ್ತು ಪ್ರಾಂತ್ಯದೊಳಕ್ಕೆ ಬರಲು ಸಾಧ್ಯವಾಗದಂತೆ ಗಡಿಯನ್ನು ಬಂದ್ ಮಾಡಲಾಯಿತು. ವಿಷಯ ತಿಳಿದ, ತಮ್ಮ ಭಾರತದ ಪ್ರವಾಸ ಸಮಯದಲ್ಲಿ ಗಾಂಧಿಯನ್ನು ಕಂಡು ಅವರ ಪ್ರಶಾಂತ ವ್ಯಕ್ತಿತ್ವಕ್ಕೆ ಮಾರುಹೋಗಿದ್ದ, ಬ್ರಿಟಿಷ್ ಸರ್ಕಾರದ ಭಾರತದ ವಿದೇಶಾಂಗ ಕಾರ್ಯದರ್ಶಿ ಮಾಂಟೆಗೋ ಸೇರಿ ಹಲವು ಬ್ರಿಟಿಷ್ ಗಣ್ಯರು ಗಾಂಧಿಗೆ ಪಂಜಾಬ್‌ಗೆ ಹೋಗಲು ಅನುಮತಿ ನೀಡಲು ಸಲಹೆ ಇತ್ತರು. ಅವರು ಪ್ರಾಂತ್ಯದಲ್ಲಿ ಮರಳಿ ಶಾಂತಿ ತರಲು ಪ್ರಯತ್ನಿಸುವರು ಎಂಬುದು ಅದಕ್ಕೆ ಕಾರಣವಾಗಿತ್ತು. ಆದರೆ ವೈಸ್‌ರಾಯ್

ಚೆಮ್ಸ್‌ಫೋರ್ಡ್ ಈ ಸಲಹೆಯನ್ನು ತಳ್ಳಿಹಾಕಿದ. ಹಾಗೇ ಸ್ವತಃ ಗಾಂಧಿ ಪಂಜಾಬ್‌ಗೆ ಭೇಟಿ ಕೊಡಲು, ಅನುಮತಿಗಾಗಿ ಹಲವು ಬಾರಿ ಕೋರಿಕೆ ಸಲ್ಲಿಸಿದರೂ ಪ್ರಯೋಜನವಾಗಲಿಲ್ಲ. ಲಷ್ಕರಿ ಶಾಸನವನ್ನು ಜೂನ್ ೧೧ರವರೆಗೆ ಮುಂದುವರೆಸಿ ಪ್ರಾಂತ್ಯವನ್ನು ದೇಶದ ಉಳಿದ ಭಾಗದಿಂದ ಕಡಿದಿರಿಸಲಾಗಿತ್ತು.

ಇಷ್ಟೆಲ್ಲ ಪ್ರತಿಬಂಧನಗಳಿದ್ದರೂ ಅಮೃತಸರದ ಹತ್ಯಾಕಾಂಡದ ಬಗ್ಗೆ ಹರಕು ಮುರುಕು ಸುದ್ದಿಗಳು ದೇಶಾದ್ಯಂತ ಸುಳಿದಾಡುತ್ತಿದ್ದವು. ಇವನ್ನು ಆಧರಿಸಿ ಗಾಂಧಿ, ವೈಸ್‌ರಾಯ್ ಕಛೇರಿಗೆ ತಮ್ಮ ಆಘಾತ ಮತ್ತು ಆತಂಕ ವ್ಯಕ್ತಪಡಿಸಿ ಪತ್ರ ಬರೆದರು. ಮದನಮೋಹನ ಮಾಳವೀಯರು ಪಂಜಾಬ್ ಪರಿಸ್ಥಿತಿ ಬಗ್ಗೆ ೯೨ ಪ್ರಶ್ನೆಗಳನ್ನು ರೂಪಿಸಿ, ತಾವು ಸದಸ್ಯರಾಗಿದ್ದ ಕೇಂದ್ರ ಶಾಸನ ಪರಿಷತ್ತಿನಲ್ಲಿ ಉತ್ತರಗಳನ್ನು ಬಯಸಿ ಮಂಡಿಸುವ ಪ್ರಯತ್ನ ಮಾಡಿದರು. ಇದನ್ನು ಪರಿಷತ್ತಿನ ಸರ್ಕಾರಿ ಸದಸ್ಯರು ಬಹುಮತದಿಂದ ತಡೆದರಲ್ಲದೆ, ಸರ್ಕಾರಿ ನೌಕರರನ್ನು ಶಾಂತಿ ಕಾಪಾಡುವ ಪ್ರಕ್ರಿಯೆಯಲ್ಲಿ ಎಸಗಿರಬಹುದಾದ ಅಪರಾಧಗಳ ವಿಚಾರಣೆಗಳಿಂದ ಮುಕ್ತಗೊಳಿಸುವ ತುರ್ತು ಶಾಸನವನ್ನು ಜಾರಿಗೆ ತಂದರು.

ಆದರೆ ಜೂನ್ ನಂತರ ಹತ್ಯಾಕಾಂಡದ ವರದಿಗಳು ಪತ್ರಿಕೆಗಳಲ್ಲಿ ಪ್ರಕಟವಾಗಲಾರಂಭಿಸಿದವು. ಅವನ್ನು ತಿಳಿದ ದೇಶ ಬೆಚ್ಚಿಬಿದ್ದಿತು. ಗಾಂಧಿ ತಮ್ಮಿಬ್ಬರು ಸಹಚರರು ಬಾಂಬೆಯಿಂದ ಹೊರತರುತ್ತಿದ್ದ 'ಯಂಗ್ ಇಂಡಿಯಾ' ಎಂಬ ವಾರಪತ್ರಿಕೆಯಲ್ಲಿ ಪಂಜಾಬ್‌ನ ಪರಿಸ್ಥಿತಿ ಬಗ್ಗೆ, ಅಲ್ಲಿನ ಎರಡು ಮುಖ್ಯ ಪತ್ರಿಕೆಗಳಾಗಿದ್ದ 'ಟ್ರಿಬ್ಯೂನ್' ಮತ್ತು 'ಪ್ರತಾಪ್'ಗಳ ಸಂಪಾದಕರನ್ನು ದೇಶದ್ರೋಹದ ಆಪಾದನೆಗಳ ಮೇಲೆ ಸೆರೆಮನೆಯಲ್ಲಿಟ್ಟಿರುವುದನ್ನು ಖಂಡಿಸಿ ವಿವರವಾಗಿ ಬರೆದರು. ಏಕೆಂದರೆ ಆ ಹೊತ್ತಿಗೆ 'ಬಾಂಬೆ ಕ್ರಾನಿಕಲ್' ಪತ್ರಿಕೆಯನ್ನು ಮುಚ್ಚಿಸಿ, ಭಾರತೀಯರ ಹೋರಾಟದ ಪರವಾಗಿದ್ದ ಅದರ ಆಂಗ್ಲ ಸಂಪಾದಕ ಹಾರ್ನಿಮನ್‌ರನ್ನು ದೇಶದಿಂದ ಉಚ್ಚಾಟಿಸಿತ್ತು. ಗಾಂಧಿಯವರಿಗೆ ಪಂಜಾಬ್‌ಗೆ ಹೋಗಲು ಅನುಮತಿ ನೀಡಲಿಲ್ಲವಾದ್ದರಿಂದ ಅವರು ಈ 'ಯಂಗ್ ಇಂಡಿಯಾ'ದಲ್ಲೇ ಪಂಜಾಬ್‌ನಲ್ಲಿನ ಅಸಾಂವಿಧಾನಿಕ, ಅನಾಗರಿಕ ಆಡಳಿತ ಕ್ರಮಗಳ ವಿರುದ್ಧ ಅಮೃತಸರ ಹತ್ಯಾಕಾಂಡದ ಸಂತ್ರಸ್ತರಿಗೆ ಪರಿಹಾರ–ಪುನರ್ವಸತಿ ಒದಗಿಸುವುದರ ತುರ್ತಿನ ಬಗ್ಗೆ ಹಲವು ಲೇಖನಗಳನ್ನು ಬರೆದು ಸರ್ಕಾರದ ಗಮನ ಸೆಳೆದರು. ಇದೇ ಹೊತ್ತಿಗೆ ಗಾಂಧಿ ತಮ್ಮ ಸತ್ಯಾಗ್ರಹವನ್ನು ಸದ್ಯಕ್ಕೆ ಮತ್ತೆ ಆರಂಭಿಸುವ ಸಾಧ್ಯತೆ ಇಲ್ಲವೆಂದು ಘೋಷಿಸಿದರು. ಅವರು ತಮ್ಮ ಈವರೆಗಿನ ಅನುಭವದ ಹಿನ್ನೆಲೆಯಲ್ಲಿ ಸತ್ಯಾಗ್ರಹಕ್ಕೆ ಬೇಕಾದ ಜನಶಿಕ್ಷಣ ಮತ್ತು ತರಬೇತಿಗಳಲ್ಲಿ ಸ್ವಲ್ಪ ಕಾಲ ತೊಡಗಿಕೊಳ್ಳಬಯಸಿದ್ದರು.

ಚರಕ ಮತ್ತು ಸ್ವರಾಜ್ಯ

ಗಾಂಧಿಯ ಅನುಯಾಯಿಗಳಾಗಿದ್ದ ಶಂಕರಲಾಲ್ ಬ್ಯಾಂಕರ್ ಮತ್ತು ಉಮರ್ ಸೊಬಾನಿ ಅವರಿಂದ ಬಾಂಬೆಯಲ್ಲಿ ಆರಂಭಿಸಲಾಗಿದ್ದ 'ಯಂಗ್ ಇಂಡಿಯಾ' ಪತ್ರಿಕೆ, ಅದರಲ್ಲಿ ಗಾಂಧಿ ಬರೆಯಲಾರಂಭಿಸಿದ ಮೇಲೆ ವಾರಕ್ಕೆರಡು ಬಾರಿ

ಪ್ರಕಟವಾಗತೊಡಗಿತು. ನಂತರ ಗಾಂಧಿಯವರ ಆಪ್ತ ಕಾರ್ಯದರ್ಶಿ ಮಹದೇವ ದೇಸಾಯಿಯವರ ಒತ್ತಾಸೆಯಂತೆ ಅದನ್ನು ಅಹಮದಾಬಾದ್‌ಗೆ ಸ್ಥಳಾಂತರಿಸಲಾಯಿತಲ್ಲದೆ, ಅದರ ಸಂಪಾದಕತ್ವದ ಹೊಣೆಯನ್ನು ಗಾಂಧಿಯವರಿಗೇ ವಹಿಸಲಾಯಿತು. ಜೊತೆಯಲ್ಲೇ ಸಮಾಜವಾದಿ ಇಂದೂಲಾಲ್ ಯಾಜ್ಞಿಕ್ ಅಹಮದಾಬಾದ್‌ನಿಂದ ಹೊರಡಿಸುತ್ತಿದ್ದ ಗುಜರಾತಿ ಭಾಷೆಯ 'ನವಜೀವನ' ಮಾಸಿಕದ ಸಂಪಾದಕತ್ವವನ್ನೂ ಗಾಂಧಿ ವಹಿಸಿಕೊಂಡು ಅದನ್ನು ವಾರಪತ್ರಿಕೆಯಾಗಿ ಪರಿವರ್ತಿಸಿದರು. ಆನಂತರ ಬಾಂಬೆ ಕ್ರಾನಿಕಲ್ ಪುನರಾರಂಭವಾಯಿತಾದರೂ ದ.ಆಫ್ರಿಕಾದಲ್ಲಿನ 'ಇಂಡಿಯನ್ ಒಪಿನಿಯನ್'ನ ಹೊಣೆ ಬಿಟ್ಟನಂತರ, ಈಗ ಗಾಂಧಿ ಕೈಗೆ, ತಮ್ಮ ಸಂದೇಶಗಳನ್ನು ಸಾರಲು ಎರಡು ಪತ್ರಿಕೆಗಳು ದೊರೆತಿದ್ದವು. ಅವರು ಈ ಎರಡು ಪತ್ರಿಕೆಗಳ ಜವಾಬ್ದಾರಿ ಹೊರಲು ಒಪ್ಪಿದ್ದರ ಹಿಂದೆ ಒಂದು ಉದ್ದೇಶವೂ ಇತ್ತು. ಅವರು ತಮ್ಮ ಸತ್ಯಾಗ್ರಹದ ಅರ್ಥವನ್ನು, ಅದರ ತಾತ್ವಿಕತೆಯನ್ನು ಜನರಿಗೆ ವಿವರಿಸಬೇಕಿತ್ತು. ಜೊತೆಗೆ ಇದಕ್ಕೆ ಪೂರಕವಾದ ತಮ್ಮ ಮತ್ತು ಇತರರ ಚಟುವಟಿಕೆಗಳ ಬಗ್ಗೆ ಜನರಿಗೆ ಮಾಹಿತಿ ನೀಡಬೇಕಿತ್ತು. ವಿಶೇಷವಾಗಿ ಇತ್ತೀಚಿನ ದಿನಗಳಲ್ಲಿ ತಮ್ಮ ಮನಸ್ಸನ್ನು ಹೊಕ್ಕು ಬೆಳೆಯುತ್ತಿದ್ದ 'ಸ್ವದೇಶಿ' ಎಂಬ ಕಲ್ಪನೆಯನ್ನು ಪೋಷಿಸಿ ಹರಡಲೂ ಒಂದು ಮಾಧ್ಯಮ ಬೇಕಿತ್ತು. ಅವರು ಈ ಪತ್ರಿಕೆಗಳಿಗೆ ಬರೆಯುವವರಿಗೆ ಬರಹಗಳು ಸಂಕ್ಷಿಪ್ತವೂ, ನೇರವೂ, ವಾಸ್ತವಾಂಶಗಳನ್ನು ಆಧರಿಸಿದ್ದೂ, ಸತ್ಯನಿಷ್ಠವೂ ಆಗಿದ್ದು ಗುಣವಾಚಕಗಳಿಂದ ಕೂಡಿದ ರಂಜನೀಯತೆಯನ್ನು ತ್ಯಜಿಸಿರಬೇಕು ಎಂದು ಸೂಚಿಸುವ ಮೂಲಕ ಜನರಿಗೆ ಪತ್ರಿಕಾ ಬರಹಗಳ ವಿಷಯದಲ್ಲಿ ಶಿಕ್ಷಣವನ್ನೂ ಆರಂಭಿಸಿದರು. ಗಾಂಧಿಯವರ ವಿಶೇಷ ಗಮನ ಹರಿದಿದ್ದು ನವಜೀವನ ಪತ್ರಿಕೆಯ ಕಡೆಗೆ. ಏಕೆಂದರೆ ಅದು ಗುಜರಾತಿ ಭಾಷೆಯಲ್ಲಿತ್ತು. ಅದನ್ನು ಅವರು ರೈತರ, ನೇಕಾರರ ಮತ್ತು ಗೃಹಿಣಿಯರ ಪತ್ರಿಕೆ ಮಾಡಲು ಉದ್ದೇಶಿಸಿದರು. ಈ ವಿಷಯದಲ್ಲಿ ಅವರಿಗೆ ನೆರವಾಗಿ ನಿಂತವರು ಮಹದೇವ ದೇಸಾಯಿ ಮತ್ತು ಯೋಗಿ ಸ್ವಾಮಿ ಆನಂದ ಅವರು. ಪತ್ರಿಕೆಗಳು ಕ್ರಮೇಣ ಹೆಚ್ಚು ಚಂದಾದಾರರನ್ನು ಗಳಿಸುತ್ತಾ ಹೋದವು.

ಬ್ರಿಟನ್‌ನ ರಾಣಿಗೆ ಚರಕಾ ಕೊಡುಗೆ!

ಭಾರತ ಹಿಂದುಳಿದು ಬ್ರಿಟಿಷರ ಪ್ರಭುತ್ವಕ್ಕೆ ಒಳಗಾಗಲು, ಅದು ತನ್ನ ಗ್ರಾಮೀಣ ಕೈಕಸುಬುಗಳನ್ನು ನಿರ್ಲಕ್ಷಿಸಿ, ಪಶ್ಚಿಮದ ಯಂತ್ರಗಳ ಉತ್ಪನ್ನಗಳನ್ನು ಅವಲಂಬಿಸಿದ್ದೇ ಕಾರಣವೆಂದು ಆಳವಾಗಿ ನಂಬಿದ್ದ ಗಾಂಧಿ, 'ಸ್ವದೇಶಿ' ಮೂಲಕ ಮಾತ್ರ ಸ್ವರಾಜ್ಯ ಎಂದು ಸಾರಿದರು. ಮುಖ್ಯವಾಗಿ ಚರಕ ಮತ್ತು ಮಗ್ಗಗಳ ಪುನರುಜ್ಜೀವನ ಅವರ ಸದ್ಯದ ತುರ್ತು ಕಾಳಜಿಗಳಾದವು. ಈ ಸಂದೇಶವನ್ನು ಸಾರಲು ಅವರು ಮೊದಲು ಬಾಂಬೆ ಪ್ರಾಂತ್ಯದ ಪ್ರವಾಸದಲ್ಲಿ ಉಪನ್ಯಾಸಗಳನ್ನು ನೀಡಿ ಜನ ಖಾದಿಯನ್ನು ಕೊಂಡು ಧರಿಸುವಂತೆ ಕೋರಿದರು. ಮನೆ ಮನೆಯಲ್ಲಿ ಚರಕಾ ಸದ್ದು ಕೇಳಲಾರಂಭಿಸಿದರೆ ಸ್ವರಾಜ್ಯ ಬಂದಂತೆಯೇ ಎಂದರು. ಚರಕಾ ತಿರುಗುವ ಸದ್ದಿನ ಸಂಗೀತ, ಅನುಭವ ಧ್ಯಾನಕ್ಕೆ ಸಮಾನವಾದದ್ದೆಂದು ತಮ್ಮ ಅನುಭವ ಹಂಚಿಕೊಂಡರು. ಖಾದಿ ಬಟ್ಟೆ ಧರಿಸುವ ಮೂಲಕ ಸ್ವರಾಜ್ಯದ ಆರ್ಥಿಕ, ಸಾಮಾಜಿಕ, ರಾಜಕೀಯ ಮಾತ್ರವಲ್ಲದೆ

ಆಧ್ಯಾತ್ಮಿಕ ನೆಲೆಗಟ್ಟನ್ನು ನಿರ್ಮಿಸಬಹುದೆಂದು ಅವರು ಪ್ರತಿಪಾದಿಸಿದರು. ಹಲವರಿಗೆ ಚರಕಾ ಸಂಘಗಳನ್ನು ತೆರೆಯುವಂತೆ ಪ್ರೇರೇಪಿಸಿದರು. ಜಿನ್ನಾರಿಗೆ ಪತ್ರ ಬರೆದು ವಿದೇಶದಲ್ಲಿದ್ದ ಅವರ ಪತ್ನಿ ಬಾಂಬೆಗೆ ಬಂದೊಡನೆ ನಗರದ ಆಢ್ಯ ಮಹಿಳೆಯರು ಸ್ಥಾಪಿಸಿರುವ ಚರಕಾ ಸಂಘದ ಸದಸ್ಯರಾಗಿ ನೂಲಲು ಕಲಿಯುವಂತೆ ಸೂಚಿಸಲು ಕೋರಿದರು. ಹಾಗೇ ಈ 'ಸ್ವದೇಶಿ'ಯ ಭಾಗವಾಗಿಯೇ ಜಿನ್ನಾರಿಗೆ ಗುಜರಾತಿ ಮತ್ತು ಹಿಂದೂಸ್ತಾನಿಯಲ್ಲಿ ಸುಲಲಿತವಾಗಿ ಮಾತಾಡುವುದನ್ನು ಕಲಿಯುವುದಾಗಿ ತಮಗೆ ನೀಡಿದ್ದ ಮಾತನ್ನು ನೆನಪಿಸಿದರು.

ಗಾಂಧಿ ತಮ್ಮ ಸ್ವದೇಶಿ ಕಾರ್ಯಕ್ರಮದ ಬಗ್ಗೆ ವೈಸ್‌ರಾಯ್‌ಗೂ ಪತ್ರ ಬರೆದು ಇದು ಬಡಬಗ್ಗರಿಗೆ ಕ್ಷಾಮದ ವಿರುದ್ಧದ ವಿಮೆ ಎಂದು ಬಣ್ಣಿಸುತ್ತಾ, ಇದಕ್ಕೆ ಸರ್ಕಾರದ ಪ್ರೋತ್ಸಾಹವನ್ನು ಕೋರಿದರು. ಈ ಪತ್ರದ ಅತಿಶಯದ ಸಂಗತಿ ಎಂದರೆ ಅವರು, ಬ್ರಿಟಿಷ್ ರಾಣಿ ಕೂಡ ಚರಕಾ ತಿರುಗಿಸುವುದನ್ನು ಕಲಿತರೆ ಒಳ್ಳೆಯದೆಂದೂ, ಅದಕ್ಕಾಗಿ ತಾವು ಒಂದು ಚರಕಾವನ್ನು ಉಡುಗೊರೆಯಾಗಿ ಕಳಿಸಿಕೊಡುವುದಲ್ಲದೆ ನೂಲಲು ಕಲಿಸಲು ತರಬೇತಿಯ ವ್ಯವಸ್ಥೆ ಮಾಡುವುದಾಗಿಯೂ ರಾಣಿಗೆ ತಿಳಿಸಲು ವೈಸ್‌ರಾಯ್‌ರನ್ನು ಕೋರಿದರು.

■

೫೨

ಖಿಲಾಫತ್ ಚಳುವಳಿಯ ನೇತೃತ್ವ

ಇದೇ ವೇಳೆಯಲ್ಲಿ ಗಾಂಧಿ ಆಸಕ್ತಿ ತೋರಿಸಿದ ಇನ್ನೊಂದು ಮುಖ್ಯ ವಿಷಯವೆಂದರೆ ಮಹಾಯುದ್ಧದ ಪರಿಣಾಮವಾಗಿ ಅಧಿಕಾರ ಕಳೆದುಕೊಂಡಿದ್ದ ಟರ್ಕಿಯ ಖಲೀಫನಿಗೆ ಮತ್ತೆ ಖಿಲಾಫತ್ತನ್ನು ಕೊಡಿಸಲು ಭಾರತದ ಮುಸ್ಲಿಮರು ನಡೆಸಿದ್ದ ಪ್ರಯತ್ನಕ್ಕೆ ಕೈಜೋಡಿಸಿದ್ದು. ಯುದ್ಧದಲ್ಲಿ ಜಯಗಳಿಸಿದ್ದ ಬ್ರಿಟನ್ ಸೇರಿದಂತೆ ಮಿತ್ರರಾಷ್ಟ್ರಗಳ ಕೂಟ ಯುದ್ಧೋತ್ತರ ಭೌಗೋಳಿಕ–ರಾಜಕೀಯ ಹೊಂದಾಣಿಕೆಯ ಒಪ್ಪಂದದ ಭಾಗವಾಗಿ ಟರ್ಕಿಯ ಒಟ್ಟೋಮನ್ ಸಾಮ್ರಾಜ್ಯವನ್ನು ಅರಬ್ ಪ್ರದೇಶದಿಂದ ಪ್ರತ್ಯೇಕಿಸಿ ಹೊಸ ಸ್ವತಂತ್ರ ದೇಶಗಳನ್ನಾಗಿ ರೂಪಿಸುವ ಯೋಜನೆಯ ಸುದ್ದಿ ಹರಡಿತ್ತು. ಇದರ ಪರಿಣಾಮವಾಗಿ ಜಾಗತಿಕ ಮುಸ್ಲಿಮರ ಯಾತ್ರಾಸ್ಥಳಗಳಾದ ಮೆಕ್ಕಾ ಮದೀನಗಳ ಪಾರಂಪರಿಕ ಉಸ್ತುವಾರಿಯ ಅಧಿಕಾರ ಖಲೀಫನ ಕೈತಪ್ಪಿಹೋಗಿತ್ತು. ಇದರಿಂದಾಗಿ ಈ ಕ್ಷೇತ್ರಗಳ ಮೇಲಿನ ಧಾರ್ಮಿಕ ಪರಮಾಧಿಕಾರ ಅನಿಶ್ಚಿತತೆಗೆ ಸಿಕ್ಕಿದಂತಾಗಿದೆ ಎಂಬುದು ಮುಸ್ಲಿಮರ ಆತಂಕವಾಗಿತ್ತು.

ತಮಗೆ ೧೯೦೯ ರಿಂದ ಪ್ರತ್ಯೇಕ ಮತಕ್ಷೇತ್ರಗಳನ್ನು ಒದಗಿಸಿದ್ದ ಕಾರಣದಿಂದಾಗಿ ಬ್ರಿಟಿಷ್ ಸರ್ಕಾರದ ಬೆಂಬಲಿಗರಾಗಿದ್ದ ಬಹುಪಾಲು ಮುಸ್ಲಿಮರನ್ನು ಬ್ರಿಟಿಷರಿಂದ ದೂರ ಸರಿಸಿ ಸ್ವರಾಜ್ಯ ಆಂದೋಲನಕ್ಕಾಗಿ ಹಿಂದೂ–ಮುಸ್ಲಿಂ ಐಕ್ಯತೆಯನ್ನು ಸಾಧಿಸುವುದು ಗಾಂಧಿಯ ಪ್ರಯತ್ನದ ಉದ್ದೇಶವಾಗಿತ್ತು. ಇದೇ ಉದ್ದೇಶಕ್ಕಾಗಿ, ಯುದ್ಧದ ಸಮಯದಲ್ಲಿ ಟರ್ಕಿಯ ಪರ ಜನಸಂಘಟನೆ ಮಾಡತೊಡಗಿ ೧೯೧೫ರಲ್ಲಿ ಸರ್ಕಾರದಿಂದ ಸ್ಥಾನಬದ್ಧತೆಗೊಳಗಾಗಿದ್ದ ಮುಸ್ಲಿಮರ ಬಹು ಜನಪ್ರಿಯ ನಾಯಕರೂ, ಇಂಗ್ಲಿಷ್ ಕಲಿತು, ಕ್ರಿಕೆಟ್ ಆಡುವ ಆಧುನಿಕ ವರ್ಗಕ್ಕೆ ಸೇರಿದ ವಿದ್ಯಾವಂತರೂ, ವಾಗ್ಮಿಗಳೂ, ಲೇಖಕರೂ ಆಗಿದ್ದ ಅಲಿ ಸೋದರರನ್ನು (ಶೌಕತ್ ಮತ್ತು ಮಹಮ್ಮದ್) ಭೇಟಿ ಮಾಡಲು ವಿಫಲ ಪ್ರಯತ್ನ ಮಾಡಿದ್ದರು ಗಾಂಧಿ. ಈಗ ಲಕ್ನೋದ ಫಿರಂಗಿ ಮಹಲ್ ಎಂಬ ಸುನ್ನಿ ಪಂಥವೊಂದರ ಮುಖ್ಯಸ್ಥ ಮೌಲಾನಾ ಅಬ್ದುಲ್ ಬಾರಿ ಎಂಬುವವರು, ಕಾಂಗ್ರೆಸ್ ನಾಯಕ ಡಾ. ಎಂ.ಎ. ಅನ್ಸಾರಿಯವರ ಮೂಲಕ ಗಾಂಧಿಯವರನ್ನು ಸಂಪರ್ಕಿಸಿ ತಾವು ಮುಸ್ಲಿಂ ಬಾಂಧವರಿಗೆ ಗೋರಕ್ಷಣೆಯ ಮಹತ್ವವನ್ನು ಉಪದೇಶಿಸಿ ಅವರು ಹಸುವನ್ನು ಕೊಲ್ಲದಂತೆ, ದನದ ಮಾಂಸ ತಿನ್ನದಂತೆ ಪ್ರೇರೇಪಿಸುವುದಾಗಿ ಹೇಳಿ, ತಾವು ಲಕ್ನೋದಲ್ಲಿ ೧೯೧೯ ರ ಸೆಪ್ಟೆಂಬರ್ ೧೮ರಂದು ಸಂಘಟಿಸಿದ್ದ ಖಿಲಾಫತ್ ದಿನಾಚರಣೆಗೆ ಅವರನ್ನು ಆಹ್ವಾನಿಸಿದರು. ಆ ವರ್ಷದ ಬಕ್ರೀದ್ ಸಂದರ್ಭದಲ್ಲಿ ಹಿಂದೂ–ಮುಸ್ಲಿಂ ಭಾವೈಕ್ಯತೆಯ ಸಂಕೇತವಾಗಿ ಫಿರಂಗಿ ಮಹಲ್‌ನಲ್ಲಿ

ಪ್ರಾಣಿಬಲಿಯನ್ನು ನಿಷೇಧಿಸಿದ್ದಾಗಿ ಬಾರಿ ಗಾಂಧಿಗೆ ತಿಳಿಸಿದರು. ಈ ಸೌಹಾರ್ದತೆಗೆ ಪ್ರತಿಯಾಗಿ ಗಾಂಧಿ ಖಿಲಾಫತ್ ದಿನಾಚರಣೆಯಲ್ಲಿ ಭಾಗವಹಿಸಿದರು. ಅಲ್ಲಿ ಅವರು ಮಾತನಾಡುತ್ತಾ, ಖಿಲಾಫತ್ ಬೇಡಿಕೆ ಮುಸ್ಲಿಮರ ಹಿತರಕ್ಷಣೆ ಮಾಡುವಂತಿದ್ದರೆ ಹಿಂದೂಗಳು ಅದನ್ನು ಬೆಂಬಲಿಸುವರು; ಅದರೆ ಅದಕ್ಕೆ ಮುಸ್ಲಿಮರಿಂದ ಗೋಹತ್ಯೆಯ ನಿಷೇಧದ ವಚನದ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದರು. ಹಾಗೇ ಖಿಲಾಫತ್ ಆಂದೋಲನ, ಶಾಂತಿ–ಅಹಿಂಸೆಗಳನ್ನು ಅನುಸರಿಸುವುದಾದರೆ ಮಾತ್ರ ತಾವು ಅದರಲ್ಲಿ ಭಾಗವಹಿಸುವುದಾಗಿ ಹೇಳಲು ಅವರು ಮರೆಯಲಿಲ್ಲ.

ಗಾಂಧಿಯ ಪಂಜಾಬ್ ಪ್ರವೇಶ

ಇದಾದ ಕೆಲವೇ ದಿನಗಳ ನಂತರ ಗಾಂಧಿಗೆ ಪಂಜಾಬ್‌ಗೆ ಭೇಟಿ ನೀಡಲು ವೈಸ್‌ರಾಯ್ ಅನುಮತಿ ದೊರೆಯಿತು. ಆ ಹೊತ್ತಿಗೆ ಬ್ರಿಟಿಷ್ ಸರ್ಕಾರ ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡದ ಬಗ್ಗೆ ವಿಚಾರಣೆ ಮಾಡಿ ವರದಿ ನೀಡಲು ಸ್ಕಾಟ್ಲೆಂಡ್‌ನ ಹಿರಿಯ ಸರ್ಕಾರಿ ವಕೀಲ ಲಾರ್ಡ್ ಹಂಟರ್‌ನ ಅಧ್ಯಕ್ಷತೆಯಲ್ಲಿ ಇಂಗ್ಲಿಷ್ ಮತ್ತು ಭಾರತೀಯ ಸದಸ್ಯರನ್ನು ಹೊಂದಿದ್ದ ಸಮಿತಿಯನ್ನು ನೇಮಿಸಿತ್ತು. ಈ ಸಮಿತಿಯ ಕಾರ್ಯಸೂಚಿ ಮಿತವಾದ್ದೆಂದು ಭಾವಿಸಿದ ಕಾಂಗ್ರೆಸ್, ಮೋತಿಲಾಲ್ ನೇತೃತ್ವದಲ್ಲಿ ತನ್ನದೇ ಒಂದು ವಿಚಾರಣಾ ಸಮಿತಿಯನ್ನು ನೇಮಿಸಿತ್ತು. ಗಾಂಧಿಯವರನ್ನು ಈ ವಿಚಾರಣೆಗೆ ನೆರವಾಗುವಂತೆ ಕೋರಲಾಗಿತ್ತು.

ಅಕ್ಟೋಬರ್ ೨೨ರಂದು ಅಹಮದಾಬಾದ್‌ನಿಂದ ರೈಲಿನಲ್ಲಿ ಹೊರಟ ಗಾಂಧಿ ೨೪ರಂದು ಲಾಹೋರ್ ಮುಟ್ಟಿದಾಗ ಅವರಿಗೆ ಅಲ್ಲಿ ಅಭೂತಪೂರ್ವ ಸ್ವಾಗತ ನೀಡಲಾಯಿತು. ಅವರನ್ನು ಆಗ ಬಂಧನದಲ್ಲಿದ್ದ ಪ್ರಾಂತೀಯ ಕಾಂಗ್ರೆಸ್ ನಾಯಕ ರಾಮ್‌ಭುಜ್‌ದತ್ ಚೌಧುರಿ ಅವರ ಮನೆಯಲ್ಲಿ ಇರಿಸಲಾಯಿತು. ರಾಮ್‌ಭುಜ್ ಅವರ ಪತ್ನಿ ಸರಳಾದೇವಿ ಚೌಧುರಾಣಿ, ಗಾಂಧಿಯವರ ಆತಿಥ್ಯದ ಉಸ್ತುವಾರಿ ವಹಿಸಿಕೊಂಡರು. ಸರಳಾದೇವಿ ಕವಿ ರಬೀಂದ್ರನಾಥ ಟ್ಯಾಗೋರರ ಸೋದರಿ ಸ್ವರ್ಣಕುಮಾರಿ ದೇವಿಯವರ ಮಗಳಾಗಿದ್ದಳು. ಉನ್ನತ ವಿದ್ಯಾಭ್ಯಾಸ ಮಾಡಿದ್ದ ಆಕೆ ಚಿತ್ರಕಲೆ, ಸಂಗೀತಗಳಲ್ಲಿ ಪರಿಣತಿ ಹೊಂದಿದ್ದಲ್ಲದೆ ಆ ಕಾಲದ ದಿಟ್ಟ ಸ್ತ್ರೀವಾದಿಯೂ ಆಗಿದ್ದರು. ಗಾಂಧಿ ಭಾಗವಹಿಸಿದ್ದ ೧೯೦೧ರ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರಾರ್ಥನಾಗೀತೆ ಹಾಡಿದ್ದ ಸಮೂಹದಲ್ಲಿ ಇದ್ದ ಅವರು, ಆ ಅಧಿವೇಶನದಲ್ಲಿ ದ.ಆಫ್ರಿಕಾದಿಂದ ಬಂದ ಭಾರತೀಯ ನಾಯಕನೆಂಬ ಕುತೂಹಲ ಮಾತ್ರದಿಂದ ಗಾಂಧಿಯನ್ನು ಕಂಡು ಮಾತನಾಡಿದ ಮಸುಕು ನೆನಪೂ ಇತ್ತು. ಅಷ್ಟೇ ಅಲ್ಲ, ಗಾಂಧಿ ಈ ಅಧಿವೇಶನದ ಸಂದರ್ಭದಲ್ಲಿ ಸರಳಾದೇವಿಯವರ ತಂದೆ ಹಿರಿಯ ವಕೀಲ ಜಾನಕೀನಾಥ ಘೋಷಾಲರಿಗೆ ಸಹಾಯಕರಾಗಿ, ಅವರ ನಿಲುವಂಗಿಯ ಗುಂಡಿಗಳನ್ನು ಹಾಕಿದ ನೆನಪು ಗಾಂಧಿಗೂ ಇತ್ತು. ಅದೇನೇ ಇದ್ದರೂ ಈಗ ಗಾಂಧಿ ಭಾರತದಲ್ಲಿ ನಾಯಕರಾಗಿ ಬೆಳೆದಿದ್ದ ಎತ್ತರವನ್ನು ಅರಿತಿದ್ದ ಸರಳಾದೇವಿ ಗಾಂಧಿಯವರ ಸತ್ಯಾಗ್ರಹ, ಸ್ವದೇಶಿಗಳಲ್ಲಿಯೂ ಆಸಕ್ತಿ ತೋರಿ ಅವರಿಗೆ ಆಪ್ತರಾದರು.

ಒಂದು ವಾರ ಲಾಹೋರ್‌ನಲ್ಲಿದ್ದು ಅಲ್ಲಿ ಮತ್ತು ಸುತ್ತಮುತ್ತಲಿನ ಊರುಗಳಲ್ಲಿ

ಏಪ್ರಿಲ್ ೬ರ ಹರತಾಳ ಮತ್ತು ಆನಂತರ ನಡೆದ ಹಿಂಸಾಚಾರಗಳ ಬಗ್ಗೆ ಸಾಕ್ಷ್ಯಗಳನ್ನು ಸಂಗ್ರಹಿಸಿದ ನಂತರ ಅವರು ಅಮೃತಸರಕ್ಕೆ ಹೋದರು. ಆ ನಗರಕ್ಕೆ ಮೊದಲ ಬಾರಿಗೆ ಭೇಟಿ ನೀಡುತ್ತಿದ್ದ ಗಾಂಧಿಯವರನ್ನು ಹಿಂದೂ-ಮುಸ್ಲಿಮ್-ಸಿಕ್ಖರೆನ್ನದೆ ಜನ ಮುತ್ತಿಕೊಂಡು ಜೈಕಾರ ಹಾಕಿ ಸ್ವಾಗತಿಸಿದರು. ಸ್ವರ್ಣಮಂದಿರಕ್ಕೆ ಭೇಟಿ ನೀಡಿ ಗೌರವ ಸಲ್ಲಿಸಿದ ನಂತರ ಅವರು ಸಾಕ್ಷ್ಯ ಸಂಗ್ರಹ ಕಾರ್ಯದಲ್ಲಿ ತೊಡಗಿದರು. ಇದರ ಮಧ್ಯೆಯೇ ಅವರು ನವೆಂಬರ್ ೨೪ರಂದು ದೆಹಲಿಯಲ್ಲಿ ಖಿಲಾಫತ್ ಸಮಸ್ಯೆ ಚರ್ಚಿಸಲು ಏರ್ಪಡಿಸಲಾಗಿದ್ದ ಮುಸ್ಲಿಂ ಸಮ್ಮೇಳನಕ್ಕೆ ಹೋಗಿ ಬರಬೇಕಾಯಿತು.

ಖಿಲಾಫತ್ ಸಮ್ಮೇಳನ-ಅಸಹಕಾರದ ಹೊಳಹು

ಈ ಸಮ್ಮೇಳನದ ಆಹ್ವಾನ ಪತ್ರದಲ್ಲಿ ಹಿಂದೂಗಳು ಖಿಲಾಫತ್ ಮರುಸ್ಥಾಪನೆಗೆ ಬೆಂಬಲ ನೀಡಿದರೆ ಮುಸ್ಲಿಮರು ಗೋಹತ್ಯೆಯನ್ನು ನಿಲ್ಲಿಸುವರು ಎಂಬ ಷರತ್ತಿನ ಮಾತಿನ ಬಗ್ಗೆ ಅಸಮಾಧಾನ ಸೂಚಿಸಿದ ಗಾಂಧಿ, ಗೋಹತ್ಯೆ ಹಿಂದೂ-ಮುಸ್ಲಿಂ ಸೌಹಾರ್ದಕ್ಕೆ ಒಳ್ಳೆಯದೆನಿಸಿದರೆ ಮುಸ್ಲಿಮರು ಅದನ್ನು ಮುಕ್ತ ಮನಸ್ಸಿನಿಂದ ನಿಲ್ಲಿಸಬೇಕು. ಹಾಗೇ ಖಿಲಾಫತ್ ಮುಸ್ಲಿಂ ಸೋದರರಿಗೆ ಒಳ್ಳೆಯದನ್ನು ಮಾಡುವುದು ಎನಿಸಿದರೆ ಹಿಂದೂಗಳು ಅದಕ್ಕೆ ಮುಕ್ತ ಮನಸ್ಸಿನ ಬೆಂಬಲ ನೀಡಬೇಕು ಎನ್ನುತ್ತಾ ಇಂತಹ ಮಹತ್ವದ ವಿಷಯದಲ್ಲಿ ಚೌಕಾಶಿ ಇರಬಾರದು ಎಂದು ಸ್ಪಷ್ಟಪಡಿಸಿದರು. ಹಿಂದೂ ಮುಸ್ಲಿಮರಿಬ್ಬರೂ ಒಂದಾಗಿ ಬ್ರಿಟಿಷ್ ಸರ್ಕಾರದ ಮೇಲೆ ಒತ್ತಡ ಹೇರುವುದೇ ಎಲ್ಲಕ್ಕಿಂತ ಉತ್ತಮ ಮಾರ್ಗವೆಂದು ಹೇಳುತ್ತಾ, ಬ್ರಿಟಿಷ್ ಹತ್ತಿ ಗಿರಣಿಗಳ ಬಟ್ಟೆಗಳನ್ನು ಬಳಸುವುದಿಲ್ಲವೆಂದು ಪ್ರತಿಜ್ಞೆ ಮಾಡಿ ಆ ದೇಶದ ಆರ್ಥಿಕತೆಯನ್ನು ದುರ್ಬಲಗೊಳಿಸಬಹುದು ಎಂದು ಸೂಚಿಸಿದರು. ಇದರಿಂದ ಗಲಿಬಿಲಿಗೊಂಡ ಸಭಿಕರು ಯಾವ ಬಟ್ಟೆ ಯಾವ ದೇಶದ್ದೆಂದು ಗುರುತಿಸುವುದು ಹೇಗೆ, ಬ್ರಿಟನ್‌ನ ಬಟ್ಟೆಯನ್ನು ಜಪಾನ್‌ನ ಬಟ್ಟೆಯೆಂದು ಮಾರಬಹುದಲ್ಲ? ನಮಗೆ ಬೇಕಾದ ಬಟ್ಟೆಯನ್ನೆಲ್ಲ ನಾವೇ ಉತ್ಪಾದಿಸಿಕೊಳ್ಳುವ ಸ್ಥಿತಿಯಲ್ಲಿ ನಾವಿದ್ದೇವೆಯೇ? ಎಂಬ ಪ್ರಶ್ನೆಗಳನ್ನು ಕೇಳಿದಾಗ ವೇದಿಕೆಯ ಮೇಲಿದ್ದ ಗಾಂಧಿ ಯೋಚನಾಪರರಾದರು. ನಂತರ ಹೇಳಿದರು: ಒಂದು ಕಡೆ ಬ್ರಿಟಿಷ್ ಸರ್ಕಾರವನ್ನು ವಿರೋಧಿಸುತ್ತಾ ಇನ್ನೊಂದು ಕಡೆ ಅದರ ಆಡಳಿತದಲ್ಲಿ ಸಹಕರಿಸುವ ವಿರೋಧಾಭಾಸ ಕೊನೆಗೊಳ್ಳುವುದೊಂದೇ ಎಲ್ಲಕ್ಕೆ ಪರಿಹಾರ. ಬ್ರಿಟಿಷ್ ಸರ್ಕಾರದ ಉತ್ಪನ್ನಗಳನ್ನು ಮಾತ್ರವಲ್ಲ, ಅದರ ಶಾಲಾ ಕಾಲೇಜುಗಳು, ಸರ್ಕಾರಿ ಹುದ್ದೆಗಳು, ನ್ಯಾಯಾಲಯಗಳು, ಅದರ ಬಿರುದು ಬಾವಲಿಗಳು ಎಲ್ಲವನ್ನೂ ಬಹಿಷ್ಕರಿಸಿ ಸರ್ಕಾರದೊಡನೆ ಸಂಪೂರ್ಣ ಅಸಹಕಾರ ಘೋಷಿಸಬೇಕು. ತಮ್ಮ ಈ ಸಲಹೆಯನ್ನು ಜನ ಪರಿಶೀಲಿಸಬೇಕು ಎಂದೂ ಅವರು ನುಡಿದರು. ಏಕೆಂದರೆ ಅದು ಅವರ ಮನಸ್ಸಿನಲ್ಲಿ ಹೊಸದಾಗಿ ಅವತರಿಸಿದ್ದ ಕಲ್ಪನೆಯಾಗಿದ್ದು, ಸ್ವತಃ ಅವರಿಗೇ ಅದರ ಪೂರ್ಣ ಕಲ್ಪನೆ ಇನ್ನೂ ಆಗಿರಲಿಲ್ಲ. ಹಾಗಾಗಿಯೇ ಅವರು, ಮೌಲಾನಾ ಅಬ್ದುಲ್ ಬಾರಿಯವರಂತಹ ಖಿಲಾಫತ್ ಸಮಿತಿಯ ಕೆಲವು ನಾಯಕರು, 'ಅಸಹಕಾರ ಚಳುವಳಿ'ಯನ್ನು ಕೂಡಲೇ ಆರಂಭಿಸುವ ಉತ್ಸಾಹ ತೋರಿದರೂ, ಅದಕ್ಕೆ ಸಾಕ್ಷಿ, ಸಿದ್ಧತೆ ಮತ್ತು ಕಾಂಗ್ರೆಸ್‌ನಲ್ಲಿ ಚರ್ಚೆ ಅಗತ್ಯವೆಂದು ಭಾವಿಸಿ ಅದಕ್ಕೆ ಒಪ್ಪಿಗೆ ನೀಡಲಿಲ್ಲ.

■

೫೩

ಕಾಂಗ್ರೆಸ್ ನಾಯಕರಾದ ಗಾಂಧಿ

ಮುಸ್ಲಿಂ ಸಮ್ಮೇಳನದ ನಂತರ ಲಾಹೋರ್‌ಗೆ ಹಿಂತಿರುಗಿದ ಗಾಂಧಿ, ಸಾಕ್ಷ್ಯ ಸಂಗ್ರಹಕ್ಕಾಗಿ ರಾವಲ್ಪಿಂಡಿ, ಪೇಷಾವರ್, ಗುಜ್ರನ್‌ವಾಲಾ ಮುಂತಾದ ಕಡೆಗಳ ಪ್ರವಾಸ ಮಾಡುತ್ತಾ, ೧೯೧೯ರ ಕೊನೆಯವರೆಗೂ ಪಂಜಾಬ್‌ನಲ್ಲೇ ಉಳಿಯಬೇಕಾಯಿತು. ಕಾರಣ: ಕಾಂಗ್ರೆಸ್‌ನ ವಾರ್ಷಿಕ ಅಧಿವೇಶನ ಡಿಸೆಂಬರ್ ಕೊನೆಯ ವಾರದಲ್ಲಿ ಅಮೃತಸರದಲ್ಲಿ ಆಯೋಜಿತವಾಗಿತ್ತು. ಅಧಿವೇಶನವನ್ನು ಜಲಿಯನ್‌ವಾಲಾ ಬಾಗ್ ಪಕ್ಕದಲ್ಲೇ ನಡೆಸಲು ಸ್ಥಳೀಯ ಸಂಘಟಕರು ನಿರ್ಧರಿಸಿದ್ದರು. ಆಶ್ಚರ್ಯವೆಂದರೆ ಸರ್ಕಾರ ಇದಕ್ಕೆ ಆಕ್ಷೇಪವನ್ನೇನೂ ವ್ಯಕ್ತಪಡಿಸಲಿಲ್ಲ. ಕಾಂಗ್ರೆಸ್ ನಾಯಕರಿಗೆ ಇನ್ನೂ ಆಶ್ಚರ್ಯ ತಂದ ಸಂಗತಿ ಎಂದರೆ ಸರ್ಕಾರ ಅಲಿ ಸೋದರರನ್ನು ಬಿಡುಗಡೆ ಮಾಡಿ, ಅವರು ಈ ಅಧಿವೇಶನದಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟಿತ್ತು. ಗಾಂಧಿಗೆ ಇದು ಸರ್ಕಾರದ ದಿಕ್ಕಿನಿಂದ ಬಂದ ರಚನಾತ್ಮಕ ಸೂಚನೆಯಾಗಿ ಕಂಡಿತು. ಆದರೆ ಬ್ರಿಟನ್‌ನ ದೊರೆ ಮಾಂಟೆಫೋರ್ಡ್ ರಾಜ್ಯಾಂಗೀಯ ಸುಧಾರಣಾ ಶಿಫಾರ್ಸುಗಳನ್ನು ಒಪ್ಪಿಕೊಂಡಿರುವ ಆದೇಶವನ್ನು ಅಧಿವೇಶನದ ಹಿಂದಿನ ದಿನ ಸರ್ಕಾರ ಹೊರಡಿಸಿದ್ದು ಅಧಿವೇಶನವನ್ನು ಸ್ವಲ್ಪ ಇಕ್ಕಟ್ಟಿಗೆ ಸಿಲುಕಿಸಿತು. ಕಾರಣ, ಈ ಶಿಫಾರ್ಸುಗಳ ಬಗ್ಗೆ ಕಾಂಗ್ರೆಸ್‌ನಲ್ಲಿ ತೀವ್ರ ಭಿನ್ನಾಭಿಪ್ರಾಯಗಳಿದ್ದವು. ಅದೇನೇ ಇರಲಿ, ಈ ಅಧಿವೇಶನದ ವೈಶಿಷ್ಟ್ಯವೆಂದರೆ ಮೊಟ್ಟಮೊದಲ ಬಾರಿಗೆ ಗಾಂಧಿ, ಓರ್ವ ರಾಷ್ಟ್ರೀಯ ನಾಯಕರಾಗಿ ನಿರ್ಣಯಗಳನ್ನು ಸಿದ್ಧಪಡಿಸುವ, ಮಂಡಿಸುವ ಮತ್ತು ಚರ್ಚಿಸುವ ಮಟ್ಟಿಗೆ ಅವರ ವರ್ಚಸ್ಸು ಬೆಳೆದಿತ್ತು. ದೇಶದ ಈವರೆಗಿನ ಅತ್ಯಂತ ಎತ್ತರದ ನಾಯಕರಾಗಿದ್ದ ಬಾಲಗಂಗಾಧರ ತಿಲಕರು, ತಮ್ಮ ಇಂಗ್ಲೆಂಡ್ ಪ್ರವಾಸ ಮುಗಿಸಿ ಈ ಅಧಿವೇಶನದಲ್ಲಿ ಹಾಜರಿದ್ದರಾದರೂ, ಅವರ ಉಪಸ್ಥಿತಿ ಅಧಿವೇಶನದ ಕಾರ್ಯಕಲಾಪಗಳೇ ಸೂಚಿಸುವಂತೆ ಗಾಂಧೀಜಿಯ ಹೊಸ ವರ್ಚಸ್ಸನ್ನೇನೂ ಮಂಕುಗೊಳಿಸುವಂತಿರಲಿಲ್ಲ.

ಮೋತಿಲಾಲ್ ನೆಹರೂ ಅವರ ಅಧ್ಯಕ್ಷತೆಯಲ್ಲಿ, ರಾಷ್ಟ್ರವ್ಯಾಪಿ ಹರತಾಳ ಮತ್ತು ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡಗಳ ಹಿನ್ನೆಲೆಯಲ್ಲಿ ನಡೆದ ಅಧಿವೇಶನದಲ್ಲಿ ಅಪಾರ ಸಂಖ್ಯೆಯ ಜನಸಾಮಾನ್ಯರು ಭಾಗವಹಿಸಿದ್ದರು. ಈ ಅಧಿವೇಶನದಲ್ಲಿ ಮುಖ್ಯವಾಗಿ ಚರ್ಚೆಯಾದ ಎರಡು ವಿಷಯಗಳೆಂದರೆ, ಮಾಂಟೆಫೋರ್ಡ್ ಸಮಿತಿ ಶಿಫಾರ್ಸುಗಳು ಮತ್ತು ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡ. ಮಾಂಟೆಫೋರ್ಡ್ ಶಿಫಾರ್ಸುಗಳನ್ನು ಒಪ್ಪಿಕೊಂಡು ಹೋರಾಟವನ್ನು ಮುಂದಿನ ಹಂತಕ್ಕೆ ತೆಗೆದುಕೊಂಡು

ಹೋಗಬೇಕೆಂದು ಬಯಸಿದ್ದ ಗಾಂಧಿಯವರು ತಿಲಕ್, ಸಿ.ಆರ್.ದಾಸ್, ಜಿನ್ನಾ ಮುಂತಾದ ಹಿರಿಯ ನಾಯಕರು ಅದನ್ನು ತಿರಸ್ಕರಿಸಬೇಕೆಂದು ತಮ್ಮ ವಾದಗಳನ್ನು ಮಂಡಿಸಿದಾಗ ಏನೂ ತೋಚದೆ ಸುಮ್ಮನಾದರು. ಶಿಫಾರ್ಸುಗಳನ್ನು ಅಂಗೀಕರಿಸಿ ಅವುಗಳ ಅಸಮರ್ಪಕತೆಯನ್ನು ಸರ್ಕಾರಕ್ಕೆ ಸಾಬೀತು ಮಾಡಬೇಕೆಂಬುದು ತಿಲಕರು ಮಂಡಿಸಿದ ನಿರ್ಣಯದ ತಿರುಳಾಗಿತ್ತು. ಇದು ಒಂದು ರೀತಿಯಲ್ಲಿ ತಿಲಕ್-ದಾಸ್-ಜಿನ್ನಾ ತ್ರಿವಳಿಯ ತಿರಸ್ಕಾರದ ನಿಲುವು ಮತ್ತು ಅನಿಬೆಸೆಂಟ್-ಮಾಳವೀಯ-ಮೋತಿಲಾಲ್ ತ್ರಿವಳಿಯ ಪ್ರಯೋಗಿಸಿ ತಿರಸ್ಕರಿಸುವ ನಿಲುವಿನ ಕಸಿ ರೂಪವಾಗಿತ್ತು. ಪ್ರತಿನಿಧಿಗಳಾಗಿ ದೇಶದ ವಿವಿಧ ಭಾಗಗಳಿಂದ ಬಂದಿದ್ದ ಸಾವಿರಾರು ಜನ ಈ ಕಸಿ ನಿರ್ಣಯದ ಸಂದಿಗ್ಧತೆಗೆ ಸಿಕ್ಕಿ ಗಾಂಧೀಜಿಯನ್ನು ಇದಕ್ಕೆ ಪ್ರತಿಕ್ರಿಯಿಸಲು ಒತ್ತಾಯಿಸಿದರು. ಗಾಂಧಿ ವೇದಿಕೆ ಏರಿ 'ನಂಬಿಕೆಯಿಂದ ಮಾತ್ರ ನಾವು ಮುಂದಿನ ಹೆಜ್ಜೆ ಇಡಬೇಕು. ಹಸಿದವನಿಗೆ ಕೊಡಲಾಗುವ ರೊಟ್ಟಿ ಹಳಸಿದ್ದರೆ ತಿರಸ್ಕರಿಸೋಣ. ಆದರೆ ಅದು ಸಾಲದು ಎಂದು ತಿರಸ್ಕರಿಸಲಾಗದು. ಶಿಫಾರ್ಸುಗಳು ಅಸಮರ್ಪಕ ಎನಿಸಿದರೆ ನೇರವಾಗಿ ತಿರಸ್ಕರಿಸೋಣ. ಆದರೆ ತಿರಸ್ಕರಿಸಲೆಂದು ಅಂಗೀಕರಿಸುವುದು ಉಚಿತವಲ್ಲ' ಎಂದು ತಮ್ಮ ವಾದ ಮಂಡಿಸಿದರು. ಗಾಂಧಿಯವರ ಮಾತುಗಳಿಗೆ ಅಧಿವೇಶನದ ಬಹುಪಾಲು ಪ್ರತಿನಿಧಿಗಳು ಚಪ್ಪಾಳೆ ತಟ್ಟಿ ಅನುಮೋದನೆ ನೀಡಿದರು.

ತಿಲಕರ ನಿರ್ಣಯದ ಸೋಲು ತಪ್ಪಿಸಿದ ಗಾಂಧಿ

ಆದರೆ ಗಾಂಧಿಗೆ ತಿಲಕರಂತಹ ಹಿರಿಯರ ನಿರ್ಣಯಕ್ಕೆ ಸೋಲಾಗುವುದು ಇಷ್ಟವಾಗಲಿಲ್ಲ. ಅವರು ಅದನ್ನು ತಮ್ಮ ಟೋಪಿಯನ್ನು ತೆಗೆದು ತಿಲಕರ ಪಾದದ ಬಳಿ ಇಡುವ ಮೂಲಕ ಸೂಚಿಸಿದರು. ತಿಲಕರು ಕೆಲವೇ ದಿನಗಳ ಹಿಂದೆ ಇಂಗ್ಲೆಂಡ್‌ನಿಂದ ಹಿಂದಿರುಗಿ ಬಂದ ನಂತರದಲ್ಲೇ ಬಾಂಬೆಯಲ್ಲಿ ಮಾತನಾಡುತ್ತಾ ಗಾಂಧಿ ಕರೆನೀಡಿದ್ದ ಹರತಾಳದ ಬಗ್ಗೆ ಮೆಚ್ಚುಗೆ ಸೂಚಿಸಿ, 'ಆ ಸಂದರ್ಭದಲ್ಲಿ ನಾನಿದ್ದಿದ್ದಲ್ಲಿ ಗಾಂಧಿಯ ಅರ್ಧ ಕಾರ್ಯಭಾರವನ್ನು ಹೊರುತ್ತಿದ್ದೆ' ಎಂಬ ಸಹಾನುಭೂತಿಯ ಮಾತುಗಳು ಗಾಂಧಿಯ ಹೃದಯವನ್ನು ತಟ್ಟಿದ್ದವು. ಅವರು ತಿಲಕರ ನಿರ್ಣಯವನ್ನೇ ತಿದ್ದಿ, ಶಿಫಾರ್ಸುಗಳನ್ನು ಒಪ್ಪಲಾಗಿದೆಯಾದರೂ, ಅವನ್ನು ಜಾರಿಗೊಳಿಸುವ ಪ್ರಕ್ರಿಯೆಯ ವಿಸ್ತರಣೆಯಾಗಿ ಭಾರತ, ಒಂದು ತನ್ನದೇ ಆದ ಸಂಸದೀಯ ಪ್ರಜಾಪ್ರಭುತ್ವವನ್ನು ಸಾಧಿಸಬಯಸುತ್ತದೆ' ಎಂಬರ್ಥದ ನಿರ್ಣಯವನ್ನು ಮಂಡಿಸಿದರು. ಅಧಿವೇಶನ ಈ ನಿರ್ಣಯಕ್ಕೆ ಒಪ್ಪಿಗೆ ನೀಡಿತು. ಬ್ರಿಟಿಷ್ ಸರ್ಕಾರ ಅಲಿ ಸೋದರರನ್ನು ಬಿಡುಗಡೆ ಮಾಡಿರುವ ಮೂಲಕ ತೋರಿರುವ ಸೌಹಾರ್ದವನ್ನು ಖಿಲಾಫತ್ ವಿಷಯಕ್ಕೂ ವಿಸ್ತರಿಸಲು ಬಳಸಿಕೊಳ್ಳುವ ದೃಷ್ಟಿಯಿಂದ ಪ್ರಾಂತೀಯ ಮತ್ತು ಕೇಂದ್ರ ಶಾಸನಸಭಾ ಸರ್ಕಾರಗಳೆಂಬ 'ದ್ವಿಸ್ತರದ ಆಡಳಿತ'ವನ್ನು ಪ್ರತಿಪಾದಿಸಿದ್ದ ಮಾಂಟ್-ಫೋರ್ಡ್ ಶಿಫಾರ್ಸುಗಳನ್ನು ಮುಕ್ತವಾಗಿ ಒಪ್ಪಿಕೊಂಡು, ಹೆಚ್ಚಿನ ಹಿಂದೂ-ಮುಸ್ಲಿಂ ಐಕ್ಯತೆಯನ್ನು ಸಾಧಿಸಬಹುದು ಎಂಬ ಅಭಿಪ್ರಾಯ ಗಾಂಧಿಯವರದ್ದಾಗಿರಬಹುದು.

ಭಾರತ ಮಾತೆಯ ನಿಜವಾದ ಸುಪುತ್ರ ಯಾರು?

ಗಾಂಧಿಯ ಚಾರಿತ್ರ್ಯ ಸ್ಫುಟವಾಗಿ ಪ್ರಕಟವಾಗುವ ಇನ್ನೊಂದು ಸಂದರ್ಭವೂ ಈ

ಅಧಿವೇಶನದಲ್ಲಿ ಉಂಟಾಯಿತು. ಹರತಾಳದ ಸಂಬಂಧವಾಗಿ ಬ್ರಿಟಿಷ್ ಸರ್ಕಾರ ಜನರ ಮೇಲೆ ನಡೆಸಿದ್ದ ಹಿಂಸಾಚಾರವನ್ನು ಖಂಡಿಸುವುದರ ಜೊತೆಗೇ ಹರತಾಳ ಸಂದರ್ಭದಲ್ಲಿ ಪ್ರಭುತ್ವದ ಜೊತೆಗೆ ಜನರು ನಡೆಸಿದ ಹಿಂಸಾಚಾರವನ್ನೂ ಖಂಡಿಸುವ ಎರಡು ನಿರ್ಣಯಗಳನ್ನು ಅಧಿವೇಶನದಲ್ಲಿ ಮಂಡಿಸಲಾಯಿತು. ಅಧಿವೇಶನ ಮೊದಲ ನಿರ್ಣಯವನ್ನು ಮಾತ್ರ ಅನುಮೋದಿಸಿ ಎರಡನೆಯ ನಿರ್ಣಯವನ್ನು ತಿರಸ್ಕರಿಸಿತಲ್ಲದೆ, ಆ ನಿರ್ಣಯವನ್ನು ಸಿದ್ಧಗೊಳಿಸಿದವರು ಹುಟ್ಟಿನಿಂದ ಭಾರತೀಯರಲ್ಲದ ಅನಿಬೆಸೆಂಟರೇ ಇರಬೇಕೆಂದು ಭಾವಿಸಿ ಅವರನ್ನು ಶಪಿಸುವ ಮಾತುಗಳೂ ಅಲ್ಲಿ ಕೇಳಿಬಂದವು. ತಿಲಕ್–ದಾಸ್ ಮುಂತಾದ ನಾಯಕರೂ ಎರಡನೆಯ ನಿರ್ಣಯದ ಬಗ್ಗೆ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಇದನ್ನು ಕೇಳಿಸಿಕೊಂಡ ಗಾಂಧಿಯವರಿಗೆ ವ್ಯಥೆಯಾಯಿತು. ಅವರು ಕೂಡಲೇ ವಿಷಯ ನಿಯಾಮಕ ಸಮಿತಿಯನ್ನು, ಈ ನಿರ್ಣಯವನ್ನು ಮರುಪರಿಶೀಲನೆಗೆ ಇಡಬೇಕೆಂದೂ, ಅದಕ್ಕಾಗಿ ತಮಗೆ ಮಾತಾಡಲು ಅವಕಾಶ ನೀಡಬೇಕೆಂದೂ ಕೋರಿದರು. ಮಾರನೆಯ ದಿವಸ ಅವರಿಗೆ ಅವಕಾಶ ನೀಡಲಾಯಿತು.

ವೇದಿಕೆ ಏರಿದ ಗಾಂಧಿ, ಎರಡನೆಯ ನಿರ್ಣಯದ ಸೋಲು ತಮಗೆ ದುಃಖ ತಂದಿದೆ ಎಂದು ತಮ್ಮ ಮಾತುಗಳನ್ನು ಆರಂಭಿಸುತ್ತಾ, ಪ್ರತಿನಿಧಿಗಳು ಊಹಿಸಿದಂತೆ ಈ ನಿರ್ಣಯವನ್ನು ಬರೆದವರು ಹೊರಗೆ ಹುಟ್ಟಿದವರಾಗಿರದೆ ಭಾರತ ಮಾತೆಯ ಸುಪುತ್ರರೇ ಆಗಿದ್ದಾರೆ ಎಂದು ಹೇಳುತ್ತಾ, ಆ ನಿರ್ಣಯದ ಜನಕ ತಾವೇ ಎಂದು ಹೇಳಿ ಪ್ರತಿನಿಧಿಗಳನ್ನು ದಂಗುಬಡಿಸಿದರು. ಹರತಾಳ ಸಂಬಂಧವಾಗಿ ದೇಶದಾದ್ಯಂತ ಜನರಿಂದ ನಡೆದ ಹಿಂಸಾಚಾರಗಳನ್ನು ಸವಿವರವಾಗಿ ಮಂಡಿಸುತ್ತಾ, ಭಾರತ ಮಾತೆಯ ನಿಜವಾದ ಸುಪುತ್ರರಾರೂ ಇದನ್ನು ಕ್ಷಮಿಸಲಾರರು ಎಂದಾಗ ಸಾವಿರಾರು ಜನರಿಂದ ಕಿಕ್ಕಿರಿದಿದ್ದ ಧ್ವನಿವರ್ಧಕ ಸೌಲಭ್ಯವಿಲ್ಲದಿದ್ದ ಆ ಸಭೆ ಅವರ ಮಾತನ್ನು ಮೌನವಾಗಿ ಆಲಿಸತೊಡಗಿತು. ಸರ್ಕಾರ ಬುದ್ಧಿಗೆಟ್ಟು ಅವಿವೇಕದಿಂದ ವರ್ತಿಸಿತು. ಅದಕ್ಕೆ ನಾವು ಪ್ರತಿಕ್ರಿಯಿಸಿದ ರೀತಿ ಅದಕ್ಕಿಂತ ಹೇಗೆ ಬೇರೆಯಾಗಿತ್ತು? ಎಂದು ಪ್ರಶ್ನಿಸಿದ ಅವರು ಆತ್ಮಶೋಧನೆಯ ಶಕ್ತಿ ಕಳೆದುಕೊಂಡ, ಸತ್ಯವನ್ನು ಅದರ ಪೂರ್ಣ ರೂಪದಲ್ಲಿ ಎದುರಿಸಲಾಗದ, ಅನೈತಿಕತೆಯನ್ನೇ ತತ್ವವಾಗಿ ಒಪ್ಪಿಕೊಂಡ ಮಾತೆಯ ಸುಪುತ್ರರಾಗಬೇಕೆ ನಾವು? ಅಂತಹ ಸುಪುತ್ರರ ದೇಶ ಎಲ್ಲಿಗೆ ತಲುಪೀತು? ಯೋಚಿಸಿ ಎಂದು ಮಾತು ಮುಗಿಸಿದರು. ಪ್ರತಿನಿಧಿಗಳು ಭಾರೀ ಕರತಾಡನದ ಮೂಲಕ ಹಿಂದಿನ ದಿನ ತಿರಸ್ಕೃತಗೊಂಡಿದ್ದ ನಿರ್ಣಯವನ್ನು ಅದರ ಮೂಲರೂಪದಲ್ಲೇ ಅಂಗೀಕರಿಸಿತು.

ಕಾಂಗ್ರೆಸ್ಸಿನ ಜನಪದೀಕರಣ: ಗಾಂಧಿ ಪ್ರಯತ್ನ

ಗಾಂಧಿಯವರ ಈ ಮಾತುಗಳು ಕಾಂಗ್ರೆಸ್‌ನ ಬಿಂಬವನ್ನೇ ನಿರ್ಣಾಯಕವಾಗಿ ಬದಲಾಯಿಸಿತೆಂದು ಆ ಅಧಿವೇಶನದಲ್ಲಿ ಭಾಗವಹಿಸಿ, ಗಾಂಧಿಗೆ ಹತ್ತಿರದ ಶಿಷ್ಯರಾಗಿ ಪರಿವರ್ತಿತರಾದ ಕೆ.ಎಂ. ಮುನ್ಷಿ ಮತ್ತು ಪ್ಯಾರೇಲಾಲ್ ನಯ್ಯರ್ ತಮ್ಮ ನೆನಪುಗಳಲ್ಲಿ ಬರೆದಿದ್ದಾರೆ. ಗಾಂಧಿಯವರ ಈ ಮಾತುಗಳು ಇಂಗ್ಲೆಂಡ್‌ನಲ್ಲೂ ಪ್ರತಿಧ್ವನಿಸಿ, ಅಲ್ಲಿ ರಜೆಯ ಮೇಲಿದ್ದ ಅಹಮದಾಬಾದ್‌ನ ಆಯುಕ್ತ ಫ್ರೆಡ್ರಿಕ್ ಪ್ರಾಟ್, ಗಾಂಧಿಗೆ ಒಂದು ಪತ್ರ ಬರೆದು ಅವರ ಮಾತುಗಳಿಂದ ತಮ್ಮ ಹೃದಯ ತುಂಬಿ ಬಂದಿದೆ ಎನ್ನುತ್ತಾ, ಅವರನ್ನು

ಅರ್ಥ ಮಾಡಿಕೊಳ್ಳಲು ಈ ಹಿಂದೆ ತಾವು ಅಸಮರ್ಥರಾಗಿದ್ದರೂ ಭವಿಷ್ಯದಲ್ಲಿ ಅವರ ಅಂತಃಕರಣಪೂರ್ವಕವಾದ ಸ್ನೇಹಹಸ್ತವನ್ನು ತಮ್ಮ ಹೃದಯದಲ್ಲಿ ಸುಭದ್ರವಾಗಿ ಕಾಪಾಡಿಕೊಳ್ಳುವುದಾಗಿ ತಿಳಿಸಿದರು.

ಈ ಅಧಿವೇಶನದ ಬಗ್ಗೆ ಗಾಂಧಿ 'ಯಂಗ್ ಇಂಡಿಯಾ'ದಲ್ಲಿ ಬರೆದ ಕೆಲವು ಮಾತುಗಳೂ ಗಮನಾರ್ಹವಾಗಿವೆ. ಅಧಿವೇಶನದ ಪ್ರತಿನಿಧಿಗಳಿಗಾಗಿ ನಿರ್ಮಿಸಿದ್ದ ನೂರಾರು ಗುಡಾರಗಳ ಮೇಲೆ ಮಾಡಿದ ಸಾವಿರಾರು ರೂಪಾಯಿಗಳ ಖರ್ಚನ್ನು ದುಂದು ಎಂದು ಕರೆದಿದ್ದ ಅವರು ಪ್ರತಿನಿಧಿಗಳಿಗಾಗಿ ನಗರದ ನಿವಾಸಿಗಳ ಮನೆಯಲ್ಲಿ ವಸತಿ ಏರ್ಪಾಡು ಮಾಡಬಹುದಿತ್ತು ಎಂದು ಸೂಚಿಸಿದರು. ಅಧಿವೇಶನದ ಆರಂಭಿಕ ದೀರ್ಘ ಔಪಚಾರಿಕ ಪ್ರಾಸ್ತಾವಿಕ ಭಾಷಣಗಳನ್ನು ತುಂಡರಿಸಿ ಅವುಗಳ ಸಾರಾಂಶವನ್ನು ಮುದ್ರಿಸಿ ಹಂಚಬೇಕು ಎಂದರಲ್ಲದೆ ಮೋತಿಲಾಲರ ಅತಿದೀರ್ಘ ಇಂಗ್ಲಿಷ್ ಭಾಷಣ ಯಾರಿಗಾಗಿ ಎಂದು ಪ್ರಶ್ನಿಸುತ್ತಾ, ಅದು ಅಲ್ಲಿದ್ದ ಶೇ.೧೦ ಜನಕ್ಕೂ ಅರ್ಥವಾಗಿರಲಾರದು ಎಂದು ಬೇಸರ ವ್ಯಕ್ತಪಡಿಸಿದರು. ಇನ್ನು ಮುಂದೆ ಅಧ್ಯಕ್ಷರ ಭಾಷಣವನ್ನು ಇಂಗ್ಲಿಷ್, ಹಿಂದೂಸ್ತಾನಿಗಳಲ್ಲಲ್ಲದೆ ಎಲ್ಲ ಭಾರತೀಯ ಭಾಷೆಗಳಲ್ಲಿ ಪ್ರಕಟಿಸಿ ಅಧಿವೇಶನದ ಆರಂಭದಲ್ಲೇ ಎಲ್ಲ ಪ್ರತಿನಿಧಿಗಳಿಗೆ ಹಂಚಬೇಕು ಎಂದು ಸಲಹೆ ನೀಡಿದರು.

ಗಾಂಧಿ ಈಗ ಕಾಂಗ್ರೆಸ್‌ನ ಪೂರ್ಣಪ್ರಮಾಣದ ನಾಯಕರಾಗಿ ಹೊರಹೊಮ್ಮಿದ್ದರು.

■

೫೪

ಗಾಂಧೀಜಿಯ ಪ್ರೇಮ ಪ್ರಸಂಗ

೧೯೧೯ರ ಅಕ್ಟೋಬರ್‌ನಲ್ಲಿ ಪೊಲೀಸ್ ಅತ್ಯಾಚಾರಗಳ ಬಗ್ಗೆ ಸಾಕ್ಷ್ಯ ಸಂಗ್ರಹಿಸಲು ಪಂಜಾಬ್‌ಗೆ ಬಂದ ಗಾಂಧೀಜಿ ಲಾಹೋರ್‌ನ ರಾಮ್‌ಭುಜ್‌ದತ್ ಚೌಧುರಿಯವರ ಮನೆಯಲ್ಲಿ ಬಿಡಾರ ಹೂಡಿ ಅವರ ಪತ್ನಿ ಸರಳಾದೇವಿ ಚೌಧುರಾಣಿಯವರ ಅತಿಥಿಯಾಗಿ ೧೯೧೯ರ ಅಕ್ಟೋಬರ್‌ನಿಂದ ೧೯೨೦ರ ಮಾರ್ಚ್-ಏಪ್ರಿಲ್‌ವರೆಗೆ ಉಳಿದರು. ಈ ಸಮಯದಲ್ಲಿ ಸರಳಾದೇವಿಯ ವ್ಯಕ್ತಿತ್ವಕ್ಕೆ ಮಾರುಹೋದ ಗಾಂಧಿ, ಅವರನ್ನು ತುಂಬ ಹಚ್ಚಿಕೊಂಡು ತಾವು ಹೋದೆಡೆಯಲ್ಲೆಲ್ಲ ಅವರನ್ನೂ ಕರೆದುಕೊಂಡು ಹೋಗತೊಡಗಿದ್ದು ಹಲವರ ಕುತೂಹಲ ಕೆರಳಿಸಿತು. ಗಾಂಧಿ ಲಾಹೋರ್‌ಗೆ ಬಂದಾಗ ಅವರಿಗೆ ಐವತ್ತು ವರ್ಷ, ಸರಳಾದೇವಿಯವರಿಗೆ ನಲವತ್ತೇಳು ವರ್ಷ ವಯಸ್ಸು. ಈ ಮೊದಲೇ ತಿಳಿಸಿದಂತೆ ಮೂಲತಃ ಬಂಗಾಳಿ ಆಢ್ಯ ಮನೆತನಕ್ಕೆ ಸೇರಿದ ಆಕೆಯ ಆಸಕ್ತಿಗಳು ವೈವಿಧ್ಯಮಯವಾಗಿದ್ದವು. ಅವರು ಆಗ ಸೆರೆಮನೆಯಲ್ಲಿದ್ದ ತಮ್ಮ ಪತಿ ನಡೆಸುತ್ತಿದ್ದ 'ಹಿಂದೂಸ್ತಾನ್' ಪತ್ರಿಕೆಯ ಸಂಪಾದಕತ್ವದ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು. ಸರಳಾದೇವಿಯವರ ಸ್ವತಂತ್ರ ವ್ಯಕ್ತಿತ್ವ ಗಾಂಧಿಯವರನ್ನು ಸೆಳೆದಿತ್ತು. ಲಾಹೋರ್‌ಗೆ ಬಂದೊಡನೆ ಗಾಂಧಿ ತಮ್ಮ 'ನವಜೀವನ' ಪತ್ರಿಕೆಗೆ ಬರೆದ 'ಪಂಜಾಬ್ ಪತ್ರ'ದಲ್ಲಿ ತಾವು ಸರಳಾದೇವಿಯವರ ಅತಿಥಿಯಾಗಿದ್ದು ಅವರ ಪ್ರೀತಿಯ ಹೊಳೆಯಲ್ಲಿ ಮೀಯುತ್ತಿರುವುದಾಗಿ ಬರೆದಿದ್ದಾರೆ.

ಬಹುಮುಖ ಪ್ರತಿಭೆಯ ಸರಳಾದೇವಿ

ಸರಳಾದೇವಿಯವರ ವ್ಯಕ್ತಿತ್ವದಿಂದ ವಿವೇಕಾನಂದರೂ ಸೆಳೆಯಲ್ಪಟ್ಟಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅವರು, ಸರಳಾದೇವಿಯಂತಹ ದಿಟ್ಟ ಮತ್ತು ಪ್ರತಿಭಾನ್ವಿತ ಮಹಿಳೆಯರು ತಮ್ಮ ಸನಾತನ ಧರ್ಮ ಪುನರುಜ್ಜೀವನ ಆಂದೋಲನದೊಂದಿಗೆ ಕೈಜೋಡಿಸಿದರೆ, ದೇಶ-ವಿದೇಶಗಳ ನೂರಾರು ಜನ ಭಾರತೀಯ ಧರ್ಮ ಪ್ರಚಾರ ಕೈಂಕರ್ಯದಲ್ಲಿ ಪಾಲುದಾರರಾಗುವುದು ಖಂಡಿತವೆಂದು ಅಭಿಪ್ರಾಯಪಟ್ಟಿದ್ದರು. ಆದರೆ ಸರಳಾದೇವಿ ಆ ಆಧ್ಯಾತ್ಮಿಕ ದಾರಿಯನ್ನೊಲ್ಲದೆ ಮೈಸೂರಿಗೆ ಬಂದು ಸ್ವಲ್ಪ ಕಾಲ ಶಾಲೆಯೊಂದರ ಉಪಾಧ್ಯಾಯಿನಿಯಾಗಿ ಸ್ವತಂತ್ರ ಜೀವನದ ಅನುಭವ ಪಡೆದು, ಹಿಮಾಲಯದ ಕುಮಾಂವ್ ಗಿರಿಧಾಮಕ್ಕೆ ಹೋಗಿ ಅಲ್ಲಿಂದ ಟಿಬೆಟ್ಟಿನಲ್ಲಿ ಮಾನಸ ಸರೋವರ ಯಾತ್ರೆಯ ಸಿದ್ಧತೆಯಲ್ಲಿ ತೊಡಗಿದ್ದರು. ಆಗ

ಕಲ್ಕತ್ತಾದ ಅವರ ಮನೆಯಿಂದ ತಾಯಿಯ ಅನಾರೋಗ್ಯದ ಬಗ್ಗೆ ಬಂದ ತುರ್ತು ಸಂದೇಶಕ್ಕನುಗುಣವಾಗಿ ಅಲ್ಲಿಗೆ ಹೋದ ಸರಳಾದೇವಿಗೆ ಅವರ ತಾಯಿಯ ಕೊನೆಯ ಆಸೆಯಂತೆ ಮದುವೆ ಮಾಡಲಾಯಿತು. ಪತಿ, ವಿಧುರನೂ ಮತ್ತು ಮೊದಲ ಹೆಂಡತಿಯಿಂದ ಜಗದೀಶ್ ಎಂಬ ಒಬ್ಬ ಮಗನನ್ನೂ ಪಡೆದಿದ್ದ ಲಾಹೋರ್‌ನ ಪ್ರಸಿದ್ಧ ವಕೀಲ ರಾಮ್‌ಭುಜ್ ದತ್ ಚೌಧುರಿ. ಆಗ ಸರಳಾದೇವಿಯವರಿಗೆ ಮುವ್ವತ್ತು ಮೂರು ವರ್ಷ. ಸ್ವಭಾವತಃ ಸ್ತ್ರೀ ಸ್ವಾತಂತ್ರ್ಯವಾದಿಯಾಗಿದ್ದ ಅವರು, ಲಾಹೋರ್‌ನಲ್ಲಿ ಮನುಪ್ರಣೀತ ಪಿತೃಪ್ರಧಾನ ಸಾಮಾಜಿಕ ವ್ಯವಸ್ಥೆಯಿಂದ ಮಹಿಳೆಯರ ಬಿಡುಗಡೆಯ ಉದ್ದೇಶವುಳ್ಳ 'ಭಾರತ್ ಸ್ತ್ರೀ ಮಹಾಮಂಡಳ'ವನ್ನು ಸ್ಥಾಪಿಸಿ ಸಮಾಜಸೇವಾ ಕಾರ್ಯದಲ್ಲಿ ತೊಡಗಿಕೊಂಡರು. ದಂಪತಿಗಳಿಗೆ ದೀಪಕ್ ಎಂಬ ಮಗನೂ ಹುಟ್ಟಿದ.

ಗಾಂಧಿಯವರ ಪಂಜಾಬ್ ಪ್ರವಾಸದುದ್ದಕ್ಕೂ ಅವರೊಂದಿಗೆ ಇರುತ್ತಿದ್ದ ಸರಳಾದೇವಿ, ಪಂಜಾಬ್ ಅತ್ಯಾಚಾರಗಳ ಸಾಕ್ಷ್ಯ ಸಂಗ್ರಹದಲ್ಲಿ ಅವರಿಗೆ ನೆರವಾಗುತ್ತಿದ್ದರು. ಗಾಂಧಿಯವರ ಸ್ವದೇಶಿ ಪ್ರಚಾರ ಸಭೆಗಳಲ್ಲಿ ಅವರು ಹಾಡುತ್ತಿದ್ದರು ಮತ್ತು ಕೆಲವೆಡೆ ಭಾಷಣಗಳನ್ನೂ ಮಾಡುತ್ತಿದ್ದರು. ಗಾಂಧಿ ತಮ್ಮ 'ಯಂಗ್ ಇಂಡಿಯಾ' ಮತ್ತು 'ನವಜೀವನ' ಪತ್ರಿಕೆಗಳಿಗೆ ಲೇಖನಗಳನ್ನು ಬರೆಯಲು ಅವರನ್ನು ಪ್ರೋತ್ಸಾಹಿಸುತ್ತಿದ್ದರಲ್ಲದೆ, ಅವರ ಬಗ್ಗೆ ಈ ಪತ್ರಿಕೆಗಳಲ್ಲಿ ತಾವೇ ಪರಿಚಯ ಲೇಖನಗಳನ್ನೂ ಬರೆದು ಅವರ ಬರವಣಿಗೆಯಲ್ಲಿನ 'ಅನಂತ ಸವಿ'ಯನ್ನು ಓದುಗರು ಗುರುತಿಸಲು ಸೂಚಿಸಿದರು. ಗಾಂಧಿಯವರಿಗೆ ಆತಿಥ್ಯ ನೀಡಿದ ಕಾರಣ, ಪಂಜಾಬ್‌ನ ಗವರ್ನರ್ ಓ ಡ್ವಯರ್‌ನ ಪತ್ನಿ ಲಾಹೋರ್‌ನ ಪ್ರತಿಷ್ಠಿತ ಮಹಿಳೆಯರ ಸಂಘವಾಗಿದ್ದ 'ಪರ್ದಾ ಕ್ಲಬ್'ನಿಂದ ಚೌಧುರಾಣಿ ಅವರನ್ನು ಹೊರಹಾಕುವ ಸೂಚನಾ ಪತ್ರ ನೀಡಿದಳು. ಆಗ ಇಬ್ಬರು ಮಹಿಳೆಯರ ನಡುವೆ ನಡೆದ ಇಡೀ ಪತ್ರವ್ಯವಹಾರವನ್ನು ಗಾಂಧಿ 'ಯಂಗ್ ಇಂಡಿಯಾ'ದಲ್ಲಿ ಪ್ರಕಟಿಸಿದರು. ಜೊತೆಗೆ, ಸರಳಾದೇವಿಯವರಿಗೆ ನೀಡುತ್ತಿರುವ ಈ ಕಿರುಕುಳ ಭಾರತದ ಸುಸಂಸ್ಕೃತ ಮಹಿಳಾ ಸಮೂಹಕ್ಕೆ ಪ್ರಭುತ್ವ ಒಡ್ಡುತ್ತಿರುವ ಬೆದರಿಕೆ ಎಂಬ ಟಿಪ್ಪಣಿಯನ್ನೂ ಅವರು ಬರೆದರು. ಸರಳಾದೇವಿ ತಮ್ಮ ಮಗ ದೀಪಕ್‌ನನ್ನು ಅಹಮದಾಬಾದ್‌ನ ಆಶ್ರಮದಲ್ಲಿ ಬೆಳೆಯಲು ಕಳಿಸಿದರು.

ಗಾಂಧಿ–ಸರಳಾದೇವಿ ಒಡನಾಟ: ಆಶ್ರಮವಾಸಿಗಳ ಆತಂಕ

ಪಂಜಾಬ್ ದೌರ್ಜನ್ಯಗಳ ವಿಚಾರಣಾ ಸಮಿತಿಯ ವರದಿಯ ಅಂತಿಮ ಕರಡು ಸಿದ್ಧಪಡಿಸಲು ಲಾಹೋರ್‌ನಿಂದ ಮದನಮೋಹನ ಮಾಳವೀಯರಿದ್ದ ಬನಾರಸ್‌ಗೆ ಹೋದ ಗಾಂಧಿ, ವಾಪಸ್ ಬರುವಾಗ ಸರಳಾದೇವಿಯವರಿಗೆ ದೆಹಲಿಗೆ ಬರಲು ಹೇಳಿ ಅಲ್ಲಿಂದ ಇಬ್ಬರೂ ಅಹಮದಾಬಾದ್‌ಗೂ ಬಂದರು. ನಂತರ ಅವರು ಒಟ್ಟಿಗೆ ಗುಜರಾತ್ ಪ್ರವಾಸವನ್ನೂ ಮಾಡಿದರು. ಈ ಸಂದರ್ಭದಲ್ಲಿ ಸರಳಾದೇವಿಯವರು ಸಬರ್ಮತಿ ನದಿಯ ಮರಳು ದಂಡೆಯಲ್ಲಿ ನಡೆದ ಒಂದು ಸಭೆಯನ್ನು ಉದ್ದೇಶಿಸಿ ಮಾತನಾಡಿದ್ದೂ ಉಂಟು.

ಇದನ್ನೆಲ್ಲ ನೋಡಿದ ಕಸ್ತೂರಬಾಗೆ ಎನನ್ನಿಸಿತೋ ತಿಳಿಯದು. ಆದರೆ ಮಹದೇವ ದೇಸಾಯಿ, ಮಗನ್‌ಲಾಲ್, ಅವರ ಮಗ ಮನ್ಮಥದಾಸ್ ಮತ್ತು ಸ್ವತಃ ಗಾಂಧಿಯವರ ಮಗ ದೇವದಾಸ್ ಹಾಗೂ ಅನೇಕ ಆಶ್ರಮವಾಸಿಗಳಿಗೆ ಮುಜುಗರ–ಆತಂಕಗಳು

ಶುರುವಾಗಿದ್ದಂತೂ ನಿಜ. ಅವರಿಗೆಲ್ಲ ತಮ್ಮ ಕಣ್ಣಿಗೆ ಕಾಣುವುದಕ್ಕಿಂತ ಹೆಚ್ಚಿನ ಸೂಕ್ಷ್ಮವಾದದ್ದೇನೋ ನಡೆಯುತ್ತಿದೆ ಎಂಬ ಅನುಮಾನಗಳು ಶುರುವಾಗಿದ್ದವು.

ಈ ಅನುಮಾನಗಳಿಗೆ ಕಾರಣಗಳೂ ಇದ್ದವು. ಗಾಂಧಿ ತಮ್ಮ ಬದುಕಿಗೆ ಸಂಬಂಧಿಸಿದ ಯಾವ ವ್ಯವಹಾರವನ್ನೂ ಗುಟ್ಟಾಗಿ ಇಡುತ್ತಿರಲಿಲ್ಲ. ಗಾಂಧಿ-ಸರಳಾದೇವಿಯವರ ನಡುವಣ 'ಸವಿಯಾದ ಆತ್ಮೀಯತೆ'ಯ ಬೆಳವಣಿಗೆಯನ್ನು ಗಾಂಧಿಯವರ ಆಪ್ತ ಕಾರ್ಯದರ್ಶಿ ಮಹದೇವ ದೇಸಾಯಿಯವರು, ಅವರಿಬ್ಬರ ನಡುವಣ ಪತ್ರ ವ್ಯವಹಾರಗಳನ್ನು ಗಮನಿಸುತ್ತಾ ತಮ್ಮ ಕುತೂಹಲವನ್ನು ಮಗನ್‌ಲಾಲ್ ಮತ್ತು ಇತರರೊಂದಿಗೆ ಹಂಚಿಕೊಂಡಿದ್ದರು. ದೇಸಾಯಿ ಈ ಸಂಬಂಧವನ್ನು 'ಬೌದ್ಧಿಕ ದಾಂಪತ್ಯ' ಎಂದು ಕರೆದಿದ್ದರು.

ಈ ಮಧ್ಯೆ ಸರಳಾದೇವಿಯವರ ಪತಿ ರಾಮ್‌ಭುಜ್‌ದತ್ ಚೌಧುರಿ ಸೆರೆಮನೆಯಿಂದ ಬಿಡುಗಡೆಯಾಗಿ ಮನೆಗೆ ಬಂದಿದ್ದರು. ಆ ದಿನ ಸರಳಾದೇವಿಯವರ ಮುಖದ ಮೇಲಿನ ಗೆರೆಗಳು ಅಳಿದು ಒಂದು ಹೊಸಕಾಂತಿ ಮೂಡಿದ್ದನ್ನು ತಾವು ಕಂಡಿದ್ದಾಗಿ ಗಾಂಧಿ 'ನವಜೀವನ್' ಪತ್ರಿಕೆಗೆ ಬರೆದ ಒಂದು 'ಪಂಜಾಬ್ ಪತ್ರ'ದಲ್ಲಿ ತಿಳಿಸಿದ್ದಾರೆ. ಆದರೂ ಇದರಿಂದ ಅವರಿಬ್ಬರ ಸವಿಯಾದ ಸಂಬಂಧಕ್ಕೇನೂ ಬಾಧೆ ಒದಗಿದಂತಿರಲಿಲ್ಲ. ಏಕೆಂದರೆ ಮುಂದೆ ಕೂಡ ಅವರಿಬ್ಬರೂ ಒಟ್ಟಿಗೆ ಹಲವು ಸಭೆಗಳಿಗೆ ಹೋಗಿಬಂದರು ಮತ್ತು ಒಟ್ಟಿಗಿಲ್ಲದಿದ್ದಾಗ ಎಡೆಬಿಡದೆ ಪತ್ರ ವ್ಯವಹಾರ ನಡೆಸಿದರು. ಅಷ್ಟಲ್ಲದೆ ಗಾಂಧಿ ತಮ್ಮ ಈ ವಿಶಿಷ್ಟ ಸಂಬಂಧವನ್ನು ಹಲವು ರೀತಿಯಲ್ಲಿ ಬಣ್ಣಿಸುತ್ತಾ ಪತ್ರಗಳನ್ನು ಬರೆದದ್ದೂ ಇದೆ. ಅವರಲ್ಲಿ ಇಬ್ಬರು ಮುಖ್ಯರೆಂದರೆ ದ.ಆಫ್ರಿಕಾದ ಗೆಳೆಯ ಕಲೆನ್‌ಬಾಕ್ ಮತ್ತು ದ.ಭಾರತದ ಹೊಸ ಶಿಷ್ಯ, ಈಗ ರಾಜಾಜಿ ಎಂದೇ ಪ್ರಸಿದ್ಧರಾಗಿದ್ದ ರಾಜಗೋಪಾಲಾಚಾರಿ.

ನಿಲ್ಲದ ಒಡನಾಟ-ವಿನಿಮಯವಾದ ಪ್ರೇಮ ಪತ್ರಗಳು!

೧೯೨೦ರ ಏಪ್ರಿಲ್‌ನಲ್ಲಿ ೧೯೧೯ರ ಏಪ್ರಿಲ್ ಹರತಾಳದ ವಾರ್ಷಿಕೋತ್ಸವವನ್ನು ರಾಷ್ಟ್ರೀಯ ಸಪ್ತಾಹವೆಂದು ಆಚರಿಸಿದ ಖಿಲಾಫತ್ ಸಮಿತಿಯ ಸಭೆಗೆ ಸರಳಾದೇವಿಯವರೊಂದಿಗೆ ಬಾಂಬೆಗೆ ಆಗಮಿಸಿದ ಗಾಂಧಿ, ಅಲ್ಲಿ ಹಲವು ಸಭೆಗಳಲ್ಲಿ ಭಾಗವಹಿಸಿದರು. ಗಾಂಧಿಯವರ ಪ್ರೇರಣೆಗೆ ಒಳಗಾಗಿ ಸರಳಾದೇವಿಯವರು, ಪ್ರಥಮ ಬಾರಿಗೆ ಖಾದಿ ಸೀರೆ ಮತ್ತು ಕುಪ್ಪಸ ತೊಟ್ಟು ಸಭೆಗಳಲ್ಲಿ ಭಾಗವಹಿಸಿ ಮಾತನಾಡಿದರು. ತಮ್ಮ ನಿಡುಗಾಲದ ಸಹವರ್ತಿ ಮತ್ತು ಅಭಿಮಾನಿ ಅನಸೂಯಾ ಬೆನ್‌ರಂತಹವರೂ ಎಷ್ಟೇ ಒತ್ತಾಯಿಸಿದರೂ, ಅದು ಒರಟು ಮತ್ತು ದಪ್ಪ ಎಂದು ಉಡಲು ನಿರಾಕರಿಸಿದ್ದ ಖಾದಿ ಸೀರೆಯನ್ನು ಈಗ ಸರಳಾದೇವಿಯವರು ಉಟ್ಟು ಸಾರ್ವಜನಿಕ ಸಭೆಯಲ್ಲಿ ಕಾಣಿಸಿಕೊಂಡಿದ್ದರಿಂದ ಖುಷಿಯಾದ ಗಾಂಧಿ, ಇದರಿಂದ ಖಾದಿ ಆಂದೋಲನಕ್ಕೆ ಹೊಸ ಗರಿ ಮೂಡಿದೆ ಎಂದು ಸರಳಾದೇವಿಯವರನ್ನು ಹೊಗಳಿ 'ನವಜೀವನ'ಕ್ಕೆ ಲೇಖನವೊಂದನ್ನು ಬರೆದರು.

ಈ ಕಾರ್ಯಕ್ರಮದ ನಂತರ ಸರಳಾದೇವಿ, ಮಲಮಗ ಜಗದೀಶನ ಮದುವೆ ಸಿದ್ಧತೆಗೆಂದು ತಮ್ಮ ಪತಿಯ ಕರೆಯ ಮೇರೆಗೆ ಲಾಹೋರ್‌ಗೆ ಮರಳಿದರು. ಗಾಂಧಿಗೆ ಮತ್ತೆ ಪಕ್ಕೆ ನೋವು ಆರಂಭವಾದದ್ದರಿಂದ ಅವರು ವೈದ್ಯರ ಸಲಹೆಯ ಮೇರೆಗೆ ಪೂನಾ

ಬಳಿಯ ಸಿಂಹಗಢ ಎಂಬ ಗಿರಿಧಾಮಕ್ಕೆ ಹವಾ ಬದಲಾವಣೆಗೆಂದು ತೆರಳಿದರು. ಅಲ್ಲಿ ಗಾಂಧಿಯವರನ್ನು ಸರಳಾದೇವಿಯವರ ಅಗಲಿಕೆ ಎಷ್ಟು ಬಾಧಿಸಿತೆಂದರೆ, ಅವರು ಅಲ್ಲಿದ್ದ ಐದು ದಿನಗಳೂ ಅವರನ್ನು ಕನವರಿಸಿಕೊಂಡು ಪತ್ರ ಬರೆದರು. ತಕ್ಷಣ ಉತ್ತರ ಬರದಿದ್ದಾಗ ಚಡಪಡಿಸಿದರು. ಮಾತು ಕೊಟ್ಟಂತೆ ಹದಿನೈದು ದಿನಗಳೊಳಗಾಗಿ–ಪತಿಯ ಜೊತೆಗಾದರೂ ಸರಿಯೇ–ಹಿಂತಿರುಗಲು ಪತ್ರಮುಖೇನ ಬೇಡಿಕೊಂಡರು. ರಾಮ್‌ಭುಜ್ ಸರಳಾರನ್ನು ಭಾರತದ 'ಮಹಾನ್ ಶಕ್ತಿ' ಎಂದು ಕರೆಯುತ್ತಿದ್ದುದನ್ನು ನೆನಪಿಸಿದ ಗಾಂಧಿ, ಈ ಮಹಾನ್ ಶಕ್ತಿ ತಮ್ಮ ಮೇಲೂ ತನ್ನ ಮಾಂತ್ರಿಕತೆಯನ್ನು ಬೀರಿದೆ ಎಂದು ಅವರನ್ನು ಉಬ್ಬಿಸಿ ಪತ್ರ ಬರೆದರು.

ಜೂನ್‌ನಲ್ಲಿ ಅಲಹಾಬಾದ್‌ನಲ್ಲಿ ನಡೆದ ಖಿಲಾಫತ್ ಸಮಿತಿ ಸಭೆಗೂ ಗಾಂಧಿ ಮತ್ತು ಸರಳಾದೇವಿ ಒಟ್ಟಿಗೆ ಹೋದರು. ಇದನ್ನು ಬಿಟ್ಟರೆ, ಮತ್ತೆ ಅವರು ಒಟ್ಟಿಗೆ ಸೇರಿದ ದಾಖಲೆಗಳು ಲಭ್ಯವಿಲ್ಲ. ಆಗಸ್ಟ್‌ನಲ್ಲಿ ಗಾಂಧಿ ಮದ್ರಾಸ್ ಪ್ರಾಂತ್ಯಕ್ಕೆ ಹೋದಾಗ ಅವರೊಂದಿಗೆ ಸರಳಾದೇವಿ ಹೋಗಿದ್ದರೆ? ಎಂಬುದು ಖಚಿತವಿಲ್ಲ. ಆದರೆ ರಾಜಾಜಿಯವರ ಒಂದು ಪತ್ರದಲ್ಲಿ ತಾವು ಸರಳಾದೇವಿಯವರನ್ನು ನೋಡಿರುವ ಪ್ರಸ್ತಾಪ ಬರುತ್ತದೆ. ಆ ಪತ್ರದಲ್ಲಿಯೇ ಅವರಿಗೆ, ಗಾಂಧಿ ತಮ್ಮ ಹೊಸ ಸಂಬಂಧವನ್ನು ಸಾರ್ವಜನಿಕವಾಗಿ ಪ್ರಕಟಿಸುವ ಸೂಚನೆ ಸಿಕ್ಕಂತೆ, ಈ ಸಂಬಂಧವನ್ನು ಕಡಿದುಕೊಳ್ಳದಿದ್ದರೆ ಆಗುವ ರಾಷ್ಟ್ರೀಯ ಮಟ್ಟದ ಅನಾಹುತಗಳ ಬಗ್ಗೆ ತೀವ್ರ ಎಚ್ಚರಿಕೆಯನ್ನು ಕೊಡುತ್ತಾರೆ. ಆದ್ದರಿಂದ ಸರಳಾದೇವಿಯವರು ಮದ್ರಾಸ್ ಪ್ರವಾಸದಲ್ಲೂ ಗಾಂಧಿಯವರ ಜೊತೆಗಿದ್ದ ಸಾಧ್ಯತೆಯನ್ನು ತಳ್ಳಿಹಾಕಲಾಗದು. ಈ ಸಾಧ್ಯತೆಯನ್ನು ಪುಷ್ಟೀಕರಿಸುವ ಇನ್ನೊಂದು ಪುರಾವೆ ಎಂದರೆ ಗಾಂಧಿ ತಮ್ಮ ಈ ಸಂಬಂಧದ ಬಗ್ಗೆ ದ.ಆಫ್ರಿಕಾದಲ್ಲಿನ ತಮ್ಮ ಸ್ನೇಹಿತ ಕಲೆನ್‌ಬಾಕ್‌ಗೆ ಆಗಸ್ಟ್ ೧೦ರಂದು ಬಹು ಉತ್ಸಾಹದಿಂದ ಬರೆದಿರುವುದು. ಆ ಪತ್ರದಲ್ಲಿ ಗಾಂಧಿ ಸರಳಾದೇವಿಯವರೊಡನೆ ತಮ್ಮ ಸಂಬಂಧವನ್ನು 'ಅನಿರ್ವಚನೀಯ' ಎಂದು ಕರೆಯುತ್ತಾ ತಾವು ಆಕೆಯೊಂದಿಗೆ ಪ್ರಯಾಣ ಮಾಡುತ್ತಿರುವುದಾಗಿಯೂ ಮತ್ತು ಆಕೆ ತಮ್ಮ ಆಧ್ಯಾತ್ಮಿಕ ಪತ್ನಿ ಎಂದೂ ವರ್ಣಿಸಿದ್ದಾರೆ. ಈ ಪತ್ರದ ಇನ್ನೊಂದು ಗಮನಾರ್ಹ ವಾಕ್ಯವೆಂದರೆ 'ಸಾಕಷ್ಟು ವಯಸ್ಸಾಗಿರುವ ಕಸ್ತೂರಬಾ ಈಗ ತನ್ನ ಎಂದಿನ ಸಿಟ್ಟು ಸೆಡವು ಮತ್ತು ಪ್ರೀತಿ ವಾತ್ಸಲ್ಯಗಳೊಂದಿಗೆ ಆಶ್ರಮದಲ್ಲಿದ್ದಾಳೆ' ಎಂಬುದು.

ರಾಜಾಜಿಯ ಪ್ರತಿಭಟನಾ ಪತ್ರ–ಎಚ್ಚರಗೊಂಡ ಗಾಂಧಿ

ಹೀಗೆ ೧೯೧೯ರ ಅಕ್ಟೋಬರ್ ಕೊನೆಯ ವಾರದಿಂದ ೧೯೨೦ರ ಕೊನೆಯವರೆಗೆ ವೈವಿಧ್ಯಮಯ ರೂಪಗಳನ್ನು ತಾಳಿ ಬೆಳೆದ ಗಾಂಧೀಜಿಯ ಈ ಪ್ರೇಮ ಪ್ರಸಂಗ ಆಶ್ರಮವಾಸಿಗಳ ಬೇಸರ–ಅಸಮಾಧಾನ ಮತ್ತು ರಾಜಾಜಿಯವರ ಸಿಟ್ಟಿನ ಪರಿಣಾಮವಾಗಿ ಇದ್ದಕ್ಕಿದ್ದಂತೆ ಕೊನೆಗೊಳ್ಳುತ್ತದೆ. ಆಶ್ರಮವಾಸಿಗಳ ಪೈಕಿ ಈ ಸಂಬಂಧದ ಬಗ್ಗೆ ತೀವ್ರ ವಿರೋಧ ವ್ಯಕ್ತಪಡಿಸಿದವನು ಗಾಂಧಿಯವರ ಕೊನೆಯ ಮಗ ದೇವದಾಸ್. ತಾಯಿ ಕಸ್ತೂರಬಾ ಅವರಿಗೆ ಬಹು ಪ್ರೀತಿಯ ಮಗನಾಗಿದ್ದ ಹದಿಹರೆಯದ ಈ ಹುಡುಗ ಗಾಂಧಿಯವರ ವರ್ತನೆಯಿಂದ ಕಸ್ತೂರಬಾ ಮೇಲೆ ಆಗುವ ಪರಿಣಾಮಗಳನ್ನು ತಂದೆಗೆ ಹೃದಯಂಗಮವಾಗಿ ಮನದಟ್ಟು ಮಾಡಿದ. ಈತನೊಂದಿಗೆ

ಮಗನಲಾಲ್, ಆತನ ಮಗ ಮಥುರಾದಾಸ್ ಮತ್ತು ಮಹದೇವ ದೇಸಾಯಿ ಕೂಡ ನಿಂತರು.

ಈ ಪ್ರಯತ್ನದ ಜೊತೆಗೆ ರಾಜಾಜಿ ಬರೆದ ತೀವ್ರ ಪ್ರತಿಭಟನೆಯ ಪತ್ರವೂ ಗಾಂಧಿಯವರ ಧೃತಿಗೆಡಿಸಿರಬಹುದು. ಈ ಪತ್ರದ ಒಂದು ಬಹು ಮಾರ್ಮಿಕ ಮಾತೆಂದರೆ 'ಆತ್ಮ ಎಷ್ಟೇ ದಿವ್ಯವಾದರೂ ಅದು ವಾಸ ಮಾಡುವುದು ಮಾಂಸ ಮಜ್ಜೆಗಳ ಗೂಡಿನಲ್ಲೇ!' ಇದೆಲ್ಲದರ ಪರಿಣಾಮವಾಗಿ ಆಗಸ್ಟ್ ೨೩ರಂದು ಗಾಂಧಿ ಸರಳಾದೇವಿಯವರಿಗೆ ಪತ್ರವೊಂದನ್ನು ಬರೆದು 'ತಮ್ಮ ಚಾರಿತ್ರ್ಯವೇ ಅತ್ಯುತ್ತಮವಾದದ್ದೆಂದು ನಂಬಿದ ಕೆಲವರು ನಮ್ಮ ಚಾರಿತ್ರ್ಯದ ಬಗ್ಗೆ ಸಂಶಯಾತ್ಮರಾಗಿದ್ದು' ಆ ಸಂಶಯವನ್ನು ನೀಗಿಸಲು ತಾವು ಅಸಮರ್ಥರಾಗಿರುವುದರಿಂದ 'ಸರ್ವಸ್ವವನ್ನೂ ತ್ಯಾಗ ಮಾಡಿ ಗಳಿಸಲರ್ಹವಾದ ನಿಮ್ಮ ಪ್ರೀತಿಗೆ ನಾನು ಯೋಗ್ಯನಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದೇನೆ' ಎಂದು ತಿಳಿಸಿದರು. ಇದರಿಂದ ಕುಸಿದುಹೋದ ಸರಳಾದೇವಿ ಪ್ರತಿಭಟಿಸಿದರು: 'ನನ್ನ ಕಾಲಡಿಯಲ್ಲಿದ್ದ ಎಲ್ಲ ಸುಖ ಸಂಪತ್ತನ್ನೂ ತ್ಯಾಗ ಮಾಡಿ ನಿಮ್ಮ ಸ್ನೇಹಕ್ಕಾಗಿ ಹಾತೊರೆದದ್ದಕ್ಕೆ ಇದೆಂತಹ ಪ್ರತಿಫಲ!'

ಇವರಿಬ್ಬರ ನಡುವೆ ಹೀಗೆ ಹಲವು ಪತ್ರಗಳು ವಿನಿಮಯವಾದವು. ಈ ಮಧ್ಯೆ ಸರಳಾದೇವಿ ಗಾಂಧಿಯವರನ್ನು ಭೇಟಿ ಮಾಡಿ ಮಾತಾಡಲು ಅಹಮದಾಬಾದ್‌ಗೂ ಬಂದು ಕೆಲ ದಿನ ಆಶ್ರಮದಲ್ಲಿದ್ದರು. ಆದರೆ ಗಾಂಧಿ ತಮ್ಮ 'ಅಸಹಕಾರ ಚಳುವಳಿ'ಯ ಪ್ರಚಾರಕ್ಕಾಗಿ ವ್ಯಾಪಕ ಪ್ರವಾಸದಲ್ಲಿದ್ದ ಕಾರಣದಿಂದಾಗಿ ಭೇಟಿ ಸಾಧ್ಯವಾಗದೆ ತಮ್ಮ ಭಾವನೆಗಳನ್ನು ಹೊರಹಾಕಲು ಅಲ್ಲಿ ಏಕಮಾತ್ರ ಜಾಗವಾಗಿದ್ದ 'ಸ್ನಾನದ ಮನೆಯಲ್ಲಿ ಅತ್ತು' ಹೋಗಿದ್ದರು. ಅದೇನೇ ಇರಲಿ, ಇವರಿಬ್ಬರ ಈ ಸಂದರ್ಭದ ಪತ್ರಗಳನ್ನು ಗಮನಿಸಿದಾಗ ಗಾಂಧಿ ಸರಳಾದೇವಿಯವರಿಂದ ದೂರವಾಗಲು ಯತ್ನಿಸುತ್ತಿದ್ದುದಕ್ಕೆ, ತಮ್ಮ ಮೇಲಿನ ಹೊರಗಿನವರ ಒತ್ತಡಕ್ಕೆ ಪೂರಕವಾಗಿ ಬದುಕಿನ ರೀತಿ ನೀತಿಗಳ ಬಗ್ಗೆ ಇಬ್ಬರಲ್ಲಿ ಪ್ರಕಟವಾಗತೊಡಗಿದ್ದ ಭಿನ್ನ ಅಭಿಪ್ರಾಯಗಳೂ ಕಾರಣವಾಗಿದ್ದವೆಂದು ಗೊತ್ತಾಗುತ್ತದೆ. ಜೊತೆಗೆ ಸರಳಾದೇವಿಯವರೊಡನೆಯ ಸಂಬಂಧ ದೈಹಿಕ ಸ್ತರಕ್ಕೆ ವಿಸ್ತರಿಸಬಹುದಾದ ಅಪಾಯವನ್ನೂ ಗಾಂಧಿ ಮುನ್ನೋಡಿ ಎಚ್ಚರಿಕೆಯಿಂದಿರುವ ಪ್ರಯತ್ನ ಮಾಡಿರುವ ಸಾಧ್ಯತೆಯೂ ಇದೆ.

ಗಾಂಧಿ ಸರಳಾದೇವಿಯವರಿಗೆ ಪತ್ರ ಬರೆಯುವಾಗಲೆಲ್ಲ ಮನುಧರ್ಮ ಶಾಸ್ತ್ರವನ್ನು ವಿರೋಧಿಸುತ್ತಿದ್ದ ಅವರನ್ನು ರೇಗಿಸಲೋ ಎಂಬಂತೆ 'ಶಾಸನ ದಾತ' ('ಲಾ ಗಿವರ್') ಎಂದು ಸಹಿ ಹಾಕಿ ತಾವು ನಂಬಿ ಪಾಲಿಸುತ್ತಿದ್ದ ಸರಳಜೀವನದ ಪಾಠಗಳನ್ನು ಹೇಳುತ್ತಿದ್ದರು. ಉದಾ: ಮನೆ ಖರ್ಚು ಕಡಿಮೆ ಮಾಡಿಕೊಳ್ಳುವುದು, ಚರಕಾದಲ್ಲಿ ನೂಲುವುದನ್ನು ಕಲಿಯುವುದು, ಕಲಿಸುವುದು, ಖಾದಿ ತೊಡುವುದು, ಇಂಗ್ಲಿಷ್ ಬಳಸದಿರುವುದು, ಸೇವಕರಿಲ್ಲದೆ ಮನೆಗೆಲಸಗಳನ್ನು ತಾವೇ ಮಾಡಿಕೊಳ್ಳುವುದು ಇತ್ಯಾದಿ.

ಸರಳಾದೇವಿಯವರಿಗೆ ತಮ್ಮ ಹುಟ್ಟು ಶ್ರೀಮಂತ ಜೀವನಶೈಲಿಯನ್ನು ಬಿಡುವುದು ಕಷ್ಟವೆನಿಸಿ, ಗಾಂಧಿಯ ಪಾಠ ಹೇಳುವ ಪ್ರವೃತ್ತಿಯನ್ನು ಪ್ರತಿಭಟಿಸಿದರಲ್ಲದೆ, ಪತ್ರ ವ್ಯವಹಾರದ ಮೂಲಕ ಇವೆಲ್ಲ ಪರಿಹಾರವಾಗದ ಸಮಸ್ಯೆಗಳೆಂದು ಹೇಳಿ ಪರಸ್ಪರ

ಭೇಟಿಯ ಸಲಹೆ ಇತ್ತರು. ಅದರಂತೆ ಗಾಂಧಿ ಅಕ್ಟೋಬರ್‌ನಲ್ಲಿ ಒಮ್ಮೆ ಎರಡು ದಿನಗಳ ಬಿಡುವು ಮಾಡಿಕೊಂಡು ಲಾಹೋರ್‌ಗೆ ಹೋಗಿ ರಾಮ್‌ಭುಜ್‌ರ ಮನೆಯಲ್ಲೇ ತಂಗಿದರು. ಆದರೆ ಆಗ್ಗೆ ಗಾಂಧಿ ಗಳಿಸಿದ್ದ ಜನಪ್ರಿಯತೆಯಿಂದಾಗಿ ಆ ಮನೆಗೆ ನಿರಂತರ ಜನಜಂಗುಳಿಯೇ ಹರಿದು ಬಂದು, ಈ ಇಬ್ಬರ ಖಾಸಗಿ ಭೇಟಿ ಸಾಧ್ಯವೇ ಆಗಲಿಲ್ಲ. ಈ ಮಧ್ಯೆ 'ಅಸಹಕಾರ ಚಳುವಳಿ'ಯ ರೂಪ ಪಡೆದಿದ್ದ ಗಾಂಧಿಯವರ ರಾಜಕಾರಣದ ರೀತಿ ನೀತಿಗಳ ಬಗ್ಗೆ ಸರಳಾದೇವಿಯವರಲ್ಲಿ ಅಸಮಾಧಾನ ಆರಂಭವಾಗಿತ್ತು. ಇದಕ್ಕೆ ಅವರ ಸೋದರಮಾವ ರಬೀಂದ್ರನಾಥ ಟ್ಯಾಗೋರರು ಈ ಚಳುವಳಿಯ ಬಗ್ಗೆ ವ್ಯಕ್ತಪಡಿಸಿದ್ದ 'ಇದು ಬ್ರಿಟಿಷ್ ಪ್ರಭುತ್ವದ ವಿರುದ್ಧ ದ್ವೇಷ ಬೆಳೆಸುವ ರಾಜಕಾರಣ' ಎಂಬ ಅಭಿಪ್ರಾಯವೂ ಕಾರಣವಾಗಿರಬಹುದು.

ಮುಂದಿನ ತಲೆಮಾರಿನಲ್ಲಿ ಮುಂದುವರೆದ ಸಂಬಂಧ

ಗಾಂಧಿ ರಾಜಕಾರಣ ಕುರಿತ ತಮ್ಮ ಈ ನಿಲುವನ್ನು ಸರಳಾದೇವಿ ತಮ್ಮ ಡಿಸೆಂಬರ್ ೧೭ರ ಪತ್ರದ ಮೂಲಕ ತಿಳಿಸಿದಾಗ ಗಾಂಧಿಯವರಿಗೆ ಈ ಸಂಬಂಧದ ಬಗ್ಗೆ ಒಂದು ಅಂತಿಮ ನಿರ್ಣಯ ತೆಗೆದುಕೊಳ್ಳುವ ಕಾಲ ಬಂದಿದೆ ಎನ್ನಿಸಿರಬೇಕು. ಕೂಡಲೇ ಅವರು ಒಂದು ದೀರ್ಘ ಉತ್ತರ ಬರೆದು ಈ ಸಂಬಂಧಕ್ಕೆ ಕೊನೆ ಹಾಡಿದರು. ಈ ಪತ್ರದ ಬಹು ಅರ್ಥಪೂರ್ಣವೆನಿಸುವ ಬಹು ಮುಖ್ಯ ಮಾತುಗಳೆಂದರೆ, 'ನಮ್ಮದು ದೈಹಿಕ ಸಂಬಂಧ ಮೀರಿದ ಆಧ್ಯಾತ್ಮಿಕ ಪ್ರೇಮವಾಗಿದ್ದು, ಅದರ ಪರಿಪೂರ್ಣತೆಗೆ ಅಗತ್ಯವಾದ ಯಾವ ಗುಣಗಳೂ–ಅವು ಆಶೋತ್ತರಗಳಾಗಿವೆಯೇ ಹೊರತು–ಸಾಕಾರಗೊಳ್ಳುವಷ್ಟು ನಾವು ಅಪೂರ್ಣರಾಗಿರುವುದರಿಂದ ಈ ಸಂಬಂಧದ ವಿಸ್ತರಣೆಗೆ ಯೋಗ್ಯರಾಗಿರುವುದಿಲ್ಲ.'

ಆದರೆ ಇವರಿಬ್ಬರ ಈ ಸಂಬಂಧ ಅಲ್ಲಿಗೇ ಕೊನೆಗೊಳ್ಳಲಿಲ್ಲ ಎಂದೇ ಹೇಳಬೇಕು. ಏಕೆಂದರೆ ಎಷ್ಟೋ ವರ್ಷಗಳ ನಂತರ ಗಾಂಧಿ ಸರಳಾದೇವಿ ಇಬ್ಬರೂ ಈ ಲೋಕ ಬಿಟ್ಟು ಹೋದ ನಂತರ ಸರಳಾದೇವಿಯವರ ಮಗ ದೀಪಕ್ ಮತ್ತು ಮಗನ್‌ಲಾಲ್‌ರ ಮಗಳು ರಾಧಾ ಪ್ರೀತಿಸಿ ಮದುವೆಯಾದರು. ಗಾಂಧಿಯವರ ಸಂಪರ್ಕ ತಪ್ಪಿದ ನಂತರ ಸರಳಾದೇವಿ ಒಬ್ಬ ಗುರುವಿನ ಮಾರ್ಗದರ್ಶನದಲ್ಲಿ ಅಧ್ಯಾತ್ಮದ ಕಡೆ ತಿರುಗಿ, ಕೊನೆಯ ವರ್ಷಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಕೊಂಡು ೧೯೪೫ರಲ್ಲಿ ಕೊನೆಯುಸಿರೆಳೆದರು.

ಗಾಂಧಿಯವರ ಈ ಪ್ರೇಮ ಪ್ರಸಂಗದ ಬಗ್ಗೆ ಅವರ ಮೊಮ್ಮಗ ರಾಜಮೋಹನ ಗಾಂಧಿಯವರು ತಮ್ಮ 'ಮೋಹನದಾಸ' ಪುಸ್ತಕದಲ್ಲಿ ವಿವರವಾಗಿ ಚರ್ಚಿಸಿದ್ದಾರೆ. ಈ ಪ್ರೇಮ ಪ್ರಸಂಗದ ಹಿನ್ನೆಲೆಯಲ್ಲಿ ಮನ್ಮಥನ ಆಟ ಇದ್ದರೂ ಇರಬಹುದು ಎನ್ನುತ್ತಾರೆ. ಏಕೆಂದರೆ ಅವರ ಪ್ರಕಾರ ಆ ಸಂದರ್ಭದಲ್ಲಿ ಗಾಂಧಿ ಕೌಟುಂಬಿಕವಾಗಿ ಮತ್ತು ಸಾರ್ವಜನಿಕವಾಗಿ ತುಂಬ ಒತ್ತಡದಲ್ಲಿದ್ದು, ಚೇತನದ ಪುನರುಜ್ಜೀವನಕ್ಕೆ ಬೇಕಾದ ಎದೆಗುದಿಗಳನ್ನು ಸಹಾನುಭೂತಿಯಿಂದ ಆಲಿಸುವ, ಪ್ರೀತಿಪೂರ್ವಕವಾದ ಪಾಲನೆಯ, ಸೃಷ್ಟಿಶೀಲ ಶಕ್ತಿಯೇ ಅವರ ಪರಿಸರದಲ್ಲಿ ಸಂಪೂರ್ಣ ಕಾಣೆಯಾಗಿತ್ತು. ಸರಳಾದೇವಿಯವರ ಸಹವಾಸದಲ್ಲಿ ಅವರು ತಮ್ಮ ಸುತ್ತಲಿನ ಶುಷ್ಕ ಪರಿಸರದಿಂದ ಹೊರಬಂದು ಬದುಕಿನ ಸವಿಗಾಗಿ ಹಂಬಲಿಸಿದರು. ಸಂಬಂಧದ ಸಾಮರಸ್ಯ ಮತ್ತು ಮಾಧುರ್ಯಗಳ ಸವಿಯಲ್ಲಿ ಇಬ್ಬರೂ ಸೇರಿ ಹೊಸ ಭಾರತವನ್ನು ಕಟ್ಟುವ

ಕನಸುಗಳನ್ನು ಕಟ್ಟಿಕೊಂಡಿರಬೇಕು. ಆದರೆ ಈ ಸಂಬಂಧದಲ್ಲಿ ಲೈಂಗಿಕತೆ ಇತ್ತೆ? ದೇಹದ ಮಟ್ಟದಲ್ಲಿ ಇರಲಾರದು ಎಂದು ಅವರು ಹೇಳುತ್ತಾರೆ.

ರಾಮಚಂದ್ರ ಗುಹಾ ಅವರು ಕೂಡ ತಮ್ಮ 'ಗಾಂಧಿ' ಪುಸ್ತಕದಲ್ಲಿ ಇದರ ಎಲ್ಲ ಸಾಧ್ಯತೆಗಳನ್ನೂ ಪರಿಶೀಲಿಸುತ್ತಾ, ವಿದೇಶದಲ್ಲಿ ಬಹುಕಾಲ ಕಳೆದಿದ್ದ ಗಾಂಧಿ, ಗಂಡು ಹೆಣ್ಣಿನ ಸಂಬಂಧವನ್ನು ಗ್ರಹಿಸಿದ್ದ ಮಟ್ಟದಲ್ಲಿ ಆ ಕಾಲದ ಸಾಂಪ್ರದಾಯಿಕ ಭಾರತದ ಸಮಾಜ ಗ್ರಹಿಸಲಾಗದಿರಬಹುದು ಎಂದು ಅಭಿಪ್ರಾಯಪಡುತ್ತಾರೆ. ಗಾಂಧಿ ಈ ಪ್ರಸಂಗದ ಕೆಲವು ವರ್ಷಗಳ ನಂತರ ಬಲವಂತರಾಯ್ ಮೆಹ್ತಾ ಎಂಬ ತಮ್ಮ ಸ್ನೇಹಿತರೊಬ್ಬರೊಂದಿಗೆ ಬ್ರಹ್ಮಚರ್ಯದ ಕಷ್ಟ-ಸುಖಗಳ ಬಗ್ಗೆ ಚರ್ಚಿಸುತ್ತಾ ಬರೆದ ಪತ್ರದ ಈ ಮುಂದಿನ ಸಾಲುಗಳನ್ನು ಉಲ್ಲೇಖಿಸುವ ಮೂಲಕ ಗುಹಾ ಗಾಂಧಿ ಹೆಚ್ಚೂಕಡಿಮೆ ಅದರ ಹತ್ತಿರ ಬಂದಿರಬಹುದಾದರೂ ಅದರಿಂದ ಪ್ರಜ್ಞಾಪೂರ್ವಕವಾಗಿ ದೂರ ಉಳಿದರು ಎನ್ನುತ್ತಾರೆ: 'ಕಾಮಕ್ಕೆ ವಯಸ್ಸಿನ ತಾರತಮ್ಯವಿಲ್ಲ. ಅದರ ಕಾಟದಿಂದ ತಪ್ಪಿಸಿಕೊಳ್ಳಲು ನಾನು ಇಂದಿಗೂ ನನ್ನ ಸುತ್ತ ತರತರದ ಗೋಡೆಗಳನ್ನು ಕಟ್ಟಿಕೊಳ್ಳುತ್ತಿರುವೆ. ಆದರೂ ಒಂದು ವರ್ಷದ ಹಿಂದಷ್ಟೇ ನಾನು ಅದಕ್ಕೆ ಶರಣಾಗುವ ಅಪಾಯಕ್ಕೆ ಸಿಲುಕಿ ಪಾರಾದೆ'

ಆತ್ಮಚರಿತ್ರೆಗಳಲ್ಲಿ ಕಾಣೆಯಾದ ಈ ಪ್ರಸಂಗ!

ಈ ಪ್ರಸಂಗದ ಗಾಂಧಿಯ ಎಲ್ಲ ಪ್ರೇಮ ಪತ್ರಗಳೂ ಗಾಂಧಿ ಸಾಹಿತ್ಯ ಸಂಗ್ರಹಾಗಾರದಲ್ಲಿವೆ. ಆದರೆ ಸರಳಾದೇವಿಯವರ ಪತ್ರಗಳು ಮಾತ್ರ ಇಲ್ಲ. ಅದಕ್ಕೆ ಕಾರಣ, ಗಾಂಧಿ ಕುಟುಂಬ ಅದನ್ನು ನಾಶ ಮಾಡಿದ್ದು ಎಂದು ರಾಮಚಂದ್ರ ಗುಹಾ ಹೇಳುತ್ತಾರೆ. ಆದರೂ ಒಂದು ಪ್ರಶ್ನೆ ಕೇಳಬಹುದು. ತಮ್ಮ ಬದುಕು ಒಂದು ತೆರೆದ ಪುಸ್ತಕ ಎನ್ನುವ ಗಾಂಧಿ, ಈ ಪ್ರೇಮ ಪ್ರಸಂಗವನ್ನೇಕೆ ಅವರ ಆತ್ಮಚರಿತ್ರೆಯಲ್ಲಿ ಪ್ರಸ್ತಾಪಿಸಿಲ್ಲ? ಇದನ್ನು ಗಾಂಧಿ ಪರೋಕ್ಷವಾಗಿ ತಮ್ಮ ಆತ್ಮಚರಿತ್ರೆಯಲ್ಲಿ ಪ್ರಸ್ತಾಪಿಸುತ್ತಾ, ದ.ಆಫ್ರಿಕಾದಿಂದ ಬಂದ ನಂತರ ಹಲವು ವರ್ಷಗಳ ಕಾಲ ತಾವು ಕಾಮದ ಸೆಳವುಗಳಿಗೆ ಸಿಕ್ಕಿಕೊಂಡಿದ್ದೆ ಎಂದು ಬರೆದಿದ್ದಾರೆ. ಅಲ್ಲದೆ ಮಾರ್ಗರೆಟ್ ಸ್ಯಾಂಗರ್ ಮತ್ತು ಮಾರ್ಟಿನ್ ಗ್ರೀನ್‌ರಂತಹ ಅವರ ಜೀವನಚರಿತ್ರೆಕಾರರ ಬಳಿ ಈ ಬಗ್ಗೆ ಮಾತನಾಡಿದ್ದು ಆ ಜೀವನಚರಿತ್ರೆಗಳಲ್ಲಿ ದಾಖಲಾಗಿದೆ. ಆದರೆ ಅವರು ಸ್ವತಃ ತಮ್ಮ ಆತ್ಮಚರಿತ್ರೆಯಲ್ಲಿ ಇದನ್ನು ನಿರ್ದಿಷ್ಟವಾಗಿ ಪ್ರಸ್ತಾಪಿಸದಿರಲು ಕಾರಣ, ಅದನ್ನು ಬರೆಯುತ್ತಿದ್ದಾಗ ಸರಳಾದೇವಿ ಮತ್ತು ಅವರ ಮಗ ದೀಪಕ್ ಬದುಕಿದ್ದು, ಅವರು ಅವರ ಮನಸ್ಸನ್ನು ಘಾಸಿಗೊಳಿಸಲು ಇಚ್ಛಿಸದೇ ಇದ್ದುದಿರಬಹುದು ಎಂದು ರಾಜಮೋಹನ ಗಾಂಧಿ ಹೇಳುತ್ತಾರೆ.

ಆಶ್ಚರ್ಯವೆಂದರೆ ಸರಳಾದೇವಿಯವರೂ ತಮ್ಮ ಆತ್ಮಚರಿತ್ರೆ ಬರೆದು ಪ್ರಕಟಿಸಿದ್ದು ಅವರು ಕೂಡ ಈ ಪ್ರೇಮ ಪ್ರಸಂಗದ ಬಗ್ಗೆ ಒಂದು ಮಾತೂ ಬರೆದಿಲ್ಲ!

■

೫೫

ಅಸಹಕಾರ ಚಳುವಳಿಯ ಉದಯ

ಖಿಲಾಫತ್ ಸಮಸ್ಯೆ ಪರಿಹರಿಸುವ ವಿಷಯದಲ್ಲಿ ಗಾಂಧಿಯವರ ಆಸಕ್ತಿ ಮುಂದುವರೆದಿತ್ತು. ೧೯೨೦ ರ ಮಾರ್ಚ್ ೧೯ರ ಖಿಲಾಫತ್ ದಿನಾಚರಣೆಯ ಸಂಬಂಧ ನಡೆದ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ, ಮುಸ್ಲಿಮರ ಒಂದು ನಿಯೋಗ ಇಂಗ್ಲೆಂಡ್‌ಗೆ ಹೋಗಿ ಅಲ್ಲಿನ ಸರ್ಕಾರದ ಗಣ್ಯರ ಮನವೊಲಿಸುವ ಪ್ರಯತ್ನ ಮಾಡಿತಾದರೂ, ಮಿತ್ರ ಪಕ್ಷಗಳು ನಿರೀಕ್ಷಿಸಿದಂತೆಯೇ ಒಟ್ಟೊಮನ್ ಸಾಮ್ರಾಜ್ಯವನ್ನು ಒಡೆಯುವ ಒಪ್ಪಂದಕ್ಕೆ ಬಂದು, ಮೇನಲ್ಲಿ ಅದನ್ನು ಘೋಷಿಸಿದವು. ಇದು ೧೯೧೮ರಲ್ಲಿ ಬ್ರಿಟಿಷ್ ಪ್ರಧಾನ ಮಂತ್ರಿ ಲಾಯ್ಡ್ ಭಾರತೀಯ ಮುಸ್ಲಿಮರಿಗೆ ನೀಡಿದ್ದ ವಚನದ ಉಲ್ಲಂಘನೆಯಾಗಿತ್ತು. ಆದರೆ ಮೊದಲ ಮಹಾಯುದ್ಧಕ್ಕೆ ಕಾರಣವಾದ ಭೌಗೋಳಿಕ ರಾಜಕೀಯ ಸಮಸ್ಯೆಗಳನ್ನು ಮಿತ್ರ ರಾಷ್ಟ್ರಗಳು ಪರಿಹರಿಸಿಕೊಳ್ಳುವ ಪ್ರಯತ್ನದ ಭಾಗವಾಗಿತ್ತು. ಹಾಗೇ ಇದು ಇಂದು ಜಗತ್ತಿನಾದ್ಯಂತ ಹರಡಿರುವ ಹಿಂಸಾತ್ಮಕ ರಾಜಕಾರಣಕ್ಕೆ ಕಾರಣವಾಗಿರುವ ತೈಲ ರಾಜಕಾರಣದ ನಾಂದಿಗೀತೆಯೂ ಆಗಿತ್ತು. ಆಗಲೇ ಅರೇಬಿಯಾ, ಸಿರಿಯಾ, ಅರ್ಮೇನಿಯಾ, ಮೆಸೊಪೊಟೇಮಿಯಾ ಎಂಬ ಸಂಸ್ಥಾನಗಳನ್ನು ರೂಪಿಸಿ ಅವುಗಳಿಗೆ ಸ್ಥಳೀಯ ಬುಡಕಟ್ಟುಗಳ ನಾಯಕರನ್ನು ದೊರೆಗಳೆಂದು ನೇಮಿಸಿದರು ಮತ್ತು ಇವುಗಳ ಮೇಲಿನ ಪರಮಾಧಿಕಾರವನ್ನು ಬ್ರಿಟನ್ ಮತ್ತು ಫ್ರಾನ್ಸ್ ಹಂಚಿಕೊಂಡವು. ಟರ್ಕಿಯ ಸುಲ್ತಾನ ಜರ್ಮನಿಯ ಪರ ನಿಂತದ್ದನ್ನು ಬ್ರಿಟನ್ ಕ್ಷಮಿಸಲು ಸಿದ್ಧವಿರಲಿಲ್ಲ.

ಇದರ ಪರಿಣಾಮವೆಂದರೆ ಟರ್ಕಿ ಒಂದು ಪುಟ್ಟದೇಶವಾಗಿ ಕುಗ್ಗಿಹೋದದ್ದು. ಮೆಕ್ಕಾ ಮದೀನಾ ಕ್ಷೇತ್ರಗಳ ಉಸ್ತುವಾರಿಗಾಗಿ ಒಬ್ಬ ಬ್ರಿಟಿಷ್ ಏಜೆಂಟನನ್ನು ನೇಮಿಸಲಾಗಿತ್ತು. ಒಂದು ಏಕೀಕೃತ ವಿಶಾಲ ಮುಸ್ಲಿಂ ಸಾಮ್ರಾಜ್ಯ ವಿಘಟನೆಯಾದದ್ದರ ಬಗ್ಗೆ ಭಾರತೀಯ ಮುಸ್ಲಿಮರು ಆಘಾತಗೊಂಡಿದ್ದರು. ಇಡೀ ಮುಸ್ಲಿಂ ಜಗತ್ತಿನ ಧರ್ಮಾಧಿಪತಿಯಾಗಿದ್ದ ಖಲೀಫನ ಪದಚ್ಯುತಿಯಿಂದ ಧರ್ಮಪಾಲನೆಯ ಶಿಸ್ತೂ ಹಾಳಾಗಿ ಧರ್ಮವೂ ವಿಘಟನೆಯಾದೀತೆಂದು ಅವರು ಹೆದರಿದ್ದರು. ಗಾಂಧಿ ಕೂಡ ಧರ್ಮವಿಘಟನೆಯ ಆತಂಕವನ್ನು ಒಪ್ಪಿಕೊಂಡು ಅರಬ್ಬರಿಗೆ ಸ್ವಾಯತ್ತತೆ ಒದಗಿಸಿ ಖಲೀಫನನ್ನು ಐರೋಪ್ಯ-ಗ್ರೀಕ್-ಟರ್ಕಿಯ ಭಾಗದ ಅಧಿಪತಿಯನ್ನಾಗಿಯಾದರೂ ಘೋಷಿಸಿ ಆತನಿಗೆ ಇಡೀ ಅರಬೀಸ್ಥಾನದ ಧರ್ಮಾಧಿಕಾರ ನೀಡಬೇಕೆಂದು ಆಗ್ರಹಿಸಿದರು.

ಗಾಂಧಿ ಮನಸ್ಸನ್ನು ಕದಡಿದ ಹಂಟರ್ ಸಮಿತಿ ವರದಿ

ಇದೇ ಸಮಯದಲ್ಲಿ ಪಂಜಾಬ್ ಅತ್ಯಾಚಾರಗಳ ಬಗೆಗಿನ ಸರ್ಕಾರಿ ವಿಚಾರಣೆಯ ಮತ್ತು ಕಾಂಗ್ರೆಸ್ ವಿಚಾರಣೆಯ ವರದಿಗಳು ಪ್ರಕಟವಾದವು. ಸ್ವತಃ ಗಾಂಧಿಯವರೇ ಅಂತಿಮ ರೂಪ ನೀಡಿದ್ದ ಕಾಂಗ್ರೆಸ್ ವರದಿ, ಜನರಲ್ ಡಯರ್ ಮತ್ತು ಪಂಜಾಬ್ ಗವರ್ನರ್ ಓ'ಡ್ವಯರ್ ಇಬ್ಬರನ್ನೂ ಸೇವೆಯಿಂದ ವಜಾ ಮಾಡಬೇಕೆಂದೂ, ವೈಸ್‌ರಾಯ್ ಚೆಮ್ಸ್‌ಫೋರ್ಡರನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂದೂ, ಜನರಿಂದ ವಸೂಲು ಮಾಡಲಾಗಿದ್ದ ದಂಡವನ್ನು ಹಿಂದಿರುಗಿಸಬೇಕೆಂದೂ ಹೇಳಿತ್ತು. ಆದರೆ ಹಂಟರ್ ಆಯೋಗ, ತಪ್ಪಾಗಿದೆ ಎಂದು ಒಪ್ಪಿಕೊಂಡಿದ್ದರೂ, ಇದು ಅಂದಿನ ಒತ್ತಡದ ಸನ್ನಿವೇಶದಲ್ಲಿ ಅನಿವಾರ್ಯವಾಗಿ ಆದ ತಪ್ಪು ಎಂದು ಅಭಿಪ್ರಾಯಪಟ್ಟು ಜ. ಡಯರ್ ಮತ್ತು ಲೆ. ಗವರ್ನರ್ ಓ'ಡ್ವಯರ್ ಇಬ್ಬರನ್ನೂ ನಿರಪರಾಧಿಗಳೆಂದು ಘೋಷಿಸಿತ್ತು. ಅಲ್ಲದೆ, ತನ್ನ ವರದಿಯನ್ನು ಸಾಮ್ರಾಜ್ಯದ ದೊರೆಗೆ ಕಳಿಸುವಾಗ ವೈಸ್‌ರಾಯ್ ತನ್ನ ಪತ್ರದಲ್ಲಿ ದಂಗೆಯನ್ನು ಅಡಗಿಸುವಲ್ಲಿ ಓ'ಡ್ವಯರ್ ಪ್ರದರ್ಶಿಸಿದ್ದ ದಕ್ಷತೆಯನ್ನು ಪ್ರಶಂಸಿಸಿದ್ದ. ಕಾಂಗ್ರೆಸ್ ವರದಿಯ ಶಿಫಾರ್ಸುಗಳನ್ನು ಸರ್ಕಾರ ಕಣ್ಣೆತ್ತಿ ಕೂಡ ನೋಡಲಿಲ್ಲ.

ಪ್ರಭುತ್ವದ ಈ ದುರಹಂಕಾರದ ನಿಲುವು ಖಿಲಾಫತ್ ಬೇಡಿಕೆಯ ತಿರಸ್ಕಾರದೊಂದಿಗೆ ಸೇರಿ ಗಾಂಧಿ ಬ್ರಿಟಿಷ್ ಪ್ರಭುತ್ವದ ಬಗ್ಗೆ ತಮ್ಮ ನಿಲುವನ್ನು ನಿರ್ಣಾಯಕವಾಗಿ ಬದಲಿಸುವಂತೆ ಮಾಡಿತು. ಭಾರತೀಯ ವ್ಯವಹಾರಗಳ ವಿದೇಶಾಂಗ ಕಾರ್ಯದರ್ಶಿ ಮಾಂಟೆಗೋ ಅವರ ಮಧ್ಯಪ್ರವೇಶದಿಂದಾಗಿ, ಹಂಟರ್ ವರದಿಯನ್ನು ಸಾಮ್ರಾಜ್ಯ ಪೂರ್ಣ ಒಪ್ಪಿಕೊಳ್ಳದೆ, ಡಯರ್‌ನನ್ನು ಸೇನೆಯಿಂದ ನಿವೃತ್ತಿಗೊಳಿಸಿತಾದರೂ, ಇಡೀ ಪ್ರಕರಣವನ್ನು ಬ್ರಿಟಿಷ್ ಪ್ರಭುತ್ವ ನೋಡಿದ, ಕೇವಲ ಆಳುವವರು–ಆಳಿಸಿಕೊಳ್ಳುವವರು ಎಂಬ ಅಧಿಕಾರಶಾಹಿ ವಿಧಾನದ ಬಗ್ಗೆ ಹೇಸಿದ ಗಾಂಧಿಯ ಮನಸ್ಸು ಪ್ರಭುತ್ವದ ಬಗ್ಗೆ ಕಠಿಣವಾಯಿತು. ಅವರ ಮನಸ್ಸಿನಲ್ಲಿ ಮೊಳಕೆಯೊಡೆದಿದ್ದ ಅಸಹಕಾರದ ಪರಿಕಲ್ಪನೆ ಗಟ್ಟಿಯಾಯಿತು. ಅಸಹಕಾರ ನಿಜವಾಗಿ ಪರಿಣಾಮಕಾರಿಯಾಗಬೇಕಾದರೆ ಮುಸ್ಲಿಮರ ಸಹಕಾರ ಅತ್ಯಗತ್ಯವೆಂದು ಭಾವಿಸಿದ ಅವರು ಖಿಲಾಫತ್ ಚಳುವಳಿಯನ್ನು ಅಸಹಕಾರ ಚಳುವಳಿಯ ಅವಿಭಾಜ್ಯ ಅಂಗವಾಗಿ ಪರಿಕಲ್ಪಿಸಿಕೊಳ್ಳಲು ಆರಂಭಿಸಿದರು.

ಆದರೆ ಖಿಲಾಫತ್ ಬಗ್ಗೆ ಗಾಂಧಿಗೆ ಇದ್ದಷ್ಟು ಆಸಕ್ತಿ ಮತ್ತು ನಿರೀಕ್ಷೆ ಜಿನ್ನಾರೂ ಸೇರಿದಂತೆ ಕಾಂಗ್ರೆಸ್‌ನ ಮಿಕ್ಕಾವ ನಾಯಕರಿಗೂ ಇರಲಿಲ್ಲ. ಶಿಯಾ ಮುಸ್ಲಿಮರಾಗಿದ್ದ ಜಿನ್ನಾ ಈ ಸುನ್ನಿ ಮುಸ್ಲಿಂ ವಿವಾದದಲ್ಲಿ ಭಾರತೀಯ ಮುಸ್ಲಿಮರಿಗೆ ಸಾಂಕೇತಿಕ ಬೆಂಬಲ ಸೂಚಿಸಿ ಸುಮ್ಮನಾಗಿದ್ದರು. ಗಾಂಧಿಯವರ ಆಪ್ತ ಗೆಳೆಯ ಆ್ಯಂಡ್ರ್ಯೂಸ್ ಕೂಡ ಚಾರಿತ್ರಿಕವಾಗಿ ಸಿರಿಯಾ–ಜೋರ್ಡಾನ್–ಇರಾಕ್ ಮುಂತಾದ ಪ್ರಾಂತ್ಯಗಳ ನ್ನೊಳಗೊಂಡ ಮೆಸೊಪೊಟೇಮಿಯಾ ಪ್ರದೇಶ ಟರ್ಕಿಗೆ ಸೇರಿರದೆ, ಅದನ್ನು ಕತ್ತಿಯ ಬಲದಿಂದಷ್ಟೇ ಪಡೆಯಲಾಗಿದ್ದು, ಈಗ ಬಂದೂಕುಗಳ ಮೂಲಕ ಕಳೆದುಕೊಳ್ಳಲಾಗಿದೆ

ಎಂದು ತಿಳಿಸಿ, ಇದರಲ್ಲಿ ಗಾಂಧಿಯ ಆಸಕ್ತಿ ಅಷ್ಟು ಸರಿಯಲ್ಲ ಎಂದು ಅಭಿಪ್ರಾಯಪಟ್ಟಿದ್ದರು. ಆದರೆ ಗಾಂಧಿಗೆ ಈಗ ತಮ್ಮ ಮನಸ್ಸಿನಲ್ಲಿದ್ದ ಬ್ರಿಟಿಷ್ ಪ್ರಭುತ್ವ ವಿರೋಧಿ ಅಸಹಕಾರ ಚಳುವಳಿಗೆ ಮುಸ್ಲಿಮರ ಬೆಂಬಲ ಬೇಕಿತ್ತು. ಹಾಗಾಗಿಯೇ ಅವರು ಜೂನ್ ಮೊದಲ ವಾರದಲ್ಲಿ ಅಲಹಾಬಾದ್‌ನಲ್ಲಿ ನಡೆದ ಖಿಲಾಫತ್ ಸಮಿತಿಯ ಸಭೆಯಲ್ಲಿ ಅಲಿ ಸೋದರರು, ಮೋತಿಲಾಲ್, ಮಾಳವೀಯರಂತಹ ಕೆಲ ಕಾಂಗ್ರೆಸ್ ನಾಯಕರು ವ್ಯಕ್ತಪಡಿಸಿದ ಭಿನ್ನಾಭಿಪ್ರಾಯಗಳ ಬಗ್ಗೆ ಕುಪಿತರಾಗಿ ಮಾತಾಡತೊಡಗಿದಾಗ ಗಾಂಧಿ, ಮಧ್ಯೆ ಪ್ರವೇಶಿಸಿ ಮುಸ್ಲಿಮರು ಅಹಿಂಸೆಗೆ ಬದ್ಧರಾದರೆ ತಾವು ಖಿಲಾಫತ್ ಚಳುವಳಿಗೆ ವೈಯಕ್ತಿಕವಾಗಿ ಬೆಂಬಲ ಕೊಡುವುದಾಗಿಯೂ, ಇದಕ್ಕೆ ಪ್ರತಿಯಾಗಿ ಮುಸ್ಲಿಂ ಸಮುದಾಯ ತಾವು ಯೋಚಿಸಿರುವ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಬೇಕೆಂದೂ ಒತ್ತಾಯಿಸಿದರು. ಮುಸ್ಲಿಂ ನಾಯಕರು ಇದಕ್ಕೆ ಒಪ್ಪಿಗೆ ಸೂಚಿಸಿದರು.

ಇಸ್ಲಾಂ ಮತ್ತು ಅಹಿಂಸೆ

ಆದರೆ ಖಡ್ಗಕ್ಕೂ ತಮ್ಮ ಧರ್ಮದಲ್ಲಿ ಒಂದು ಪಾತ್ರವಿದೆ ಎಂಬುದು ಅಲಿ ಸೋದರರೂ ಸೇರಿದಂತೆ ಕೆಲ ಮುಸ್ಲಿಮರ ನಂಬಿಕೆಯಾಗಿದೆ ಎಂಬುದು ಗಾಂಧಿಯವರಿಗೆ ಗೊತ್ತಿರದಿರಲಿಲ್ಲ. ಆದರೆ ಅಹಿಂಸೆಗೆ ಬದ್ಧರಾಗಿರುವುದಾಗಿ ತಮಗೆ ಮಾತು ಕೊಟ್ಟ ಮುಸ್ಲಿಂ ನಾಯಕರು ಮಾತಿಗೆ ತಪ್ಪಲಾರರು ಎಂದು ಅವರು ನಂಬಿದ್ದರು. ಈ ಬಗ್ಗೆ 'ನವಜೀವನ' ಪತ್ರಿಕೆಯಲ್ಲಿ ಬರೆಯುತ್ತಾ 'ಕೊಲೆ-ಹಿಂಸಾಚಾರಗಳಿಗೆ ಕುಮ್ಮಕ್ಕು ಕೊಡುವ ಯಾವುದೇ ಪ್ರಯತ್ನ ನಡೆದರೂ ನಾನು ನಿಮ್ಮಿಂದ ದೂರವಾಗುತ್ತೇನೆ. ಅಸಹಕಾರ, ಹಿಂಸೆಗಿಂತ ಹೆಚ್ಚು ಪರಿಣಾಮಕಾರಿ ಎಂಬುದನ್ನು ನೀವು ಅರಿಯಬೇಕು' ಎಂದು ಮುಸ್ಲಿಮರಿಗೆ ತಿಳಿಸಿದ್ದರಲ್ಲದೆ, 'ದ್ವೇಷ ತುಂಬಿಕೊಂಡ ಮನಸ್ಸಿನವರು ಪ್ರೀತಿ ತುಂಬಿದ ನನ್ನ ಸಹವಾಸದಲ್ಲಿ ದ್ವೇಷದಿಂದ ದೂರಾಗುವ ಎಲ್ಲ ಸಾಧ್ಯತೆಗಳಿವೆ' ಎಂದೂ ವಿವರಿಸಿದ್ದರು. ಇದಕ್ಕೆ ಪೂರಕವಾಗಿ ಉನ್ನತ ಆಧುನಿಕ ಶಿಕ್ಷಣವನ್ನು ಪಡೆದೂ ಇಸ್ಲಾಂ ಧರ್ಮದ ಆಳವಾದ ವಿದ್ವತ್ತನ್ನು ಸಂಪಾದಿಸಿದ್ದ ಕಲ್ಕತ್ತಾದ ಮೌಲಾನಾ ಅಬುಲ್ ಕಲಾಂ ಆಜ಼ಾದ್, ಮುಸಲ್ಮಾನರು ಅಹಿಂಸೆಯನ್ನು ಒಂದು ಧಾರ್ಮಿಕ ತತ್ವವಾಗಿ ಅಲ್ಲದಿದ್ದರೂ ನೀತಿಯಾಗಿ ಅಂಗೀಕರಿಸುವುದು ತಪ್ಪಲ್ಲ ಎಂದು ವಾದಿಸಿ ಗಾಂಧಿಯವರಿಗೆ ಬೆಂಬಲ ವ್ಯಕ್ತಪಡಿಸಿದ್ದು ಸಂಶಯದ ವಾತಾವರಣವನ್ನು ತಿಳಿಗೊಳಿಸಿತು.

ಜೂನ್ ಮೂರನೆ ವಾರದಲ್ಲಿ ಗಾಂಧಿ ವೈಸ್‌ರಾಯ್‌ಗೆ ಒಂದು ಪತ್ರ ಬರೆದು, ಯುದ್ಧ ಸಮಯದಲ್ಲಿ ಬ್ರಿಟಿಷ್ ಪ್ರಭುತ್ವಕ್ಕೆ ನಿಷ್ಠಾವಂತರಾಗಿ ವರ್ತಿಸಿದ ಭಾರತದ ಮುಸಲ್ಮಾನರಿಗೆ ಪ್ರಭುತ್ವ ಖಿಲಾಫತ್ತನ್ನು ವಿಸರ್ಜಿಸುವ ಮೂಲಕ ಬಹು ಕ್ರೂರವಾಗಿ ವರ್ತಿಸಿದ್ದು, ಇದರಿಂದಾಗಿ ಭಾರತೀಯ ಮುಸ್ಲಿಮರಿಗೆ ಪ್ರಭುತ್ವದೊಡನೆ ಸಹಕರಿಸದಿರುವ ಆಯ್ಕೆ ಬಿಟ್ಟು ಬೇರೆ ಮಾರ್ಗವಿಲ್ಲದಾಗಿದೆ ಎಂದು ತಿಳಿಸಿದರು. ಆದರೂ ಈಗಲೂ ವೈಸ್‌ರಾಯ್ ಲಂಡನ್ ಸರ್ಕಾರದ ಮೇಲೆ ಪ್ರಭಾವ ಬೀರಿ ಸನ್ನಿವೇಶವನ್ನು ತಿಳಿಗೊಳಿಸುವ ಅವಕಾಶವಿದೆ ಎಂದೂ ಸೂಚಿಸಿದರು.

ಖಿಲಾಫತ್ ದಿನಾಚರಣೆ-ತಿಲಕರ ನಿಧನ - ಅಸಹಕಾರ ಚಳುವಳಿಯ ಘೋಷಣೆ

ವೈಸ್‌ರಾಯ್‌ನಿಂದ ಏನೂ ಉತ್ತರ ಬಾರದಾದಾಗ ಗಾಂಧಿ ಮುಸ್ಲಿಮರ ಪ್ರಾಬಲ್ಯವಿದ್ದ ಪಂಜಾಬ್-ಸಿಂಧ್ ಭಾಗಗಳ ಪ್ರವಾಸ ಕೈಗೊಂಡು ಅನೇಕ ಸಭೆಗಳನ್ನು ನಡೆಸಿ ಅಸಹಕಾರ ಚಳುವಳಿಯ ವಿವರಗಳನ್ನು ನೀಡಿ, ಜನತೆಯನ್ನು ಅದರ ಯಶಸ್ಸಿಗಾಗಿ ಸನ್ನದ್ಧಗೊಳಿಸತೊಡಗಿದರು. ಆಗಸ್ಟ್ ೧ನ್ನು ಖಿಲಾಫತ್ ದಿನವನ್ನಾಗಿ ಆಚರಿಸುವ ಸಮಿತಿಯು ನಿರ್ಧಾರದಂತೆ ಅದನ್ನು ಉಪವಾಸ-ಪ್ರಾರ್ಥನೆಗಳನ್ನೊಳಗೊಂಡ ಹರತಾಳದ ರೂಪದಲ್ಲಿ ಆಚರಿಸಬೇಕೆಂದು ಸಲಹೆ ಮಾಡಿದ ಗಾಂಧಿ, ಅದರ ನೇತೃತ್ವ ವಹಿಸಲು ಬಾಂಬೆಗೆ ಬಂದರು. ಆದರೆ ಬಂದೊಡನೆ ತಿಲಕರಿಗೆ ಎರಡು ಬಾರಿ ಹೃದಯಾಘಾತವಾಗಿ ಅವರ ಸ್ಥಿತಿ ಚಿಂತಾಜನಕವಾಗಿದೆ ಎಂಬ ಸುದ್ದಿ ತಿಳಿದು ಅವರಿದ್ದ ನಿವಾಸದತ್ತ ತೆರಳಿದರು. ಆದರೆ ಆ ಹೊತ್ತಿಗೆ ತಿಲಕರು ಕೊನೆಯುಸಿರೆಳೆದಿದ್ದರು. ಗಾಂಧಿ, ಹಿರಿಯ ನಾಯಕನ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿ, ಅವರ ಶವಕ್ಕೆ ಹೆಗಲುಕೊಟ್ಟು ಅಂತಿಮ ಸಂಸ್ಕಾರದಲ್ಲಿ ಭಾಗವಹಿಸಿದರು. ನಂತರ ಖಿಲಾಫತ್ ದಿನಾಚರಣೆಯಲ್ಲಿ ಭಾಗವಹಿಸಿ ತಿಲಕರಿಗೆ ಶ್ರದ್ಧಾಂಜಲಿ ಸಲ್ಲಿಸುತ್ತಾ, ಅವರ ಕನಸಾಗಿದ್ದ ಸ್ವರಾಜ್ಯ ಸಾಧನೆಗಾಗಿ ಆರಂಭವಾಗಿರುವ ಅಸಹಕಾರ ಚಳುವಳಿಯ ಭಾಗವಾಗಿ ಬ್ರಿಟಿಷ್ ಪ್ರಭುತ್ವ ದಯಪಾಲಿಸಿದ್ದ ಎಲ್ಲ ಬಿರುದು-ಪ್ರಶಸ್ತಿಗಳನ್ನೂ ಹಿಂದಿರುಗಿಸಬೇಕೆಂದು ಕರೆಕೊಟ್ಟರು. ಅಂದೇ ಅವರು ವೈಸ್‌ರಾಯ್‌ಗೆ ಪತ್ರ ಬರೆದು ಬ್ರಿಟಿಷ್ ಪ್ರಭುತ್ವ ಬೋಯರ್, ಝುಲು ದಂಗೆ ಮತ್ತು ಮೊದಲ ಮಹಾಯುದ್ಧದ ಸಂದರ್ಭದಲ್ಲಿ ತಾವು ಸಲ್ಲಿಸಿದ್ದ ಅಲ್ಪ ಸೇವೆಗಾಗಿ ತಮಗೆ ನೀಡಿದ್ದ ಪದಕಗಳನ್ನು ಮತ್ತು ಕೈಸರ್-ಎ-ಹಿಂದ್ ಬಿರುದನ್ನು, ಮುಸ್ಲಿಂ ಸೋದರರು ತಮ್ಮ ಧರ್ಮದ ಸಂಬಂಧವಾಗಿ ಅನುಭವಿಸುತ್ತಿರುವ ಈ ಸಂಕಷ್ಟದ ಸಮಯದಲ್ಲಿ ಅಲಂಕರಿಸಲಾರೆ ಎಂದು ಹೇಳುತ್ತಾ ಅವನ್ನು ಸರ್ಕಾರಕ್ಕೆ ಹಿಂದಿರುಗಿಸಿದರು.

ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ತಿಲಕರ ಯುಗ ಮುಗಿದಿತ್ತು. ಅದರೊಂದಿಗೆ ತೀವ್ರವಾದಿಗಳ ನಾಯಕತ್ವವೂ ಘಾಸಿಗೊಂಡಂತಾಗಿತ್ತು. ಆದರೆ ಈ ತೀವ್ರವಾದಿಗಳಿಗೆ ಗೋಖಲೆಯವರ ನಾಯಕತ್ವದ ಸ್ಫೂರ್ತಿಯಲ್ಲಿ ಒಂದು ಸಾತ್ವಿಕ ಸವಾಲೊಡ್ಡಿದ್ದ ಗಾಂಧಿಯವರೇ ಈಗ ಅಸಹಕಾರ ಚಳುವಳಿಯ ಮಾತನಾಡುತ್ತಾ ದೇಶಕ್ಕೆ ತೀವ್ರವಾದಿಯಾಗಿ ಕಾಣತೊಡಗಿದ್ದರು. ಗಾಂಧಿ ಮತ್ತು ತಿಲಕರ ನಡುವೆ ಸಮನ್ವಯ ಏರ್ಪಡಿಸುವ ಸಲುವಾಗಿ ತಿಲಕರ ಅನುಯಾಯಿಯಾಗಿದ್ದು, ಇತ್ತೀಚಿನ ದಿನಗಳಲ್ಲಿ ಗಾಂಧಿಯವರ ಕಡೆ ಒಲಿದು ಅವರ ಆಶ್ರಮ ಸೇರಿದ್ದ ಸ್ವಾಮಿ ಆನಂದ ಅವರು, ಈ ಇಬ್ಬರು ನಾಯಕರನ್ನು ಮನಬಿಚ್ಚಿ ಮಾತಾಡಿ ಒಂದು ಮಧ್ಯಮ ಮಾರ್ಗ ರೂಪಿಸಲು ಅನುವಾಗುವಂತೆ ಒಂದು ಮಾತುಕತೆಯ ಏರ್ಪಾಡು ಮಾಡಿದ್ದರು. ಈ ಹಿಂದಿನ ಏಪ್ರಿಲ್‌ನಲ್ಲಿ ಗಾಂಧಿ ಪಕ್ಕೆ ನೋವಿನ ಕಾರಣ ವೈದ್ಯರ ಸಲಹೆಯಂತೆ ಸಿಂಹಗಢ ಗಿರಿಧಾಮಕ್ಕೆ ಬಂದಿದ್ದಾಗ, ಸ್ವಾಮಿ ಆನಂದರು ತಿಲಕರನ್ನು ಅಲ್ಲಿಗೆ ಕರೆತಂದಿದ್ದರು. ತಿಲಕರ ವಾದ, ಪುಂಡಾಟಿಕೆಗೆ ಪುಂಡಾಟಿಕೆಯೇ ಉತ್ತರ ಎಂಬುದಾಗಿದ್ದರೆ, ಗಾಂಧಿ

ಮುಂಡರನ್ನೂ ಸತ್ಯ ಮತ್ತು ಅಹಿಂಸಾತ್ಮಕ ನೆಲೆಯಲ್ಲೇ ಎದುರಿಸಬೇಕು ಎಂಬ ದೃಷ್ಟಿಕೋನ ಹೊಂದಿದವರಾಗಿದ್ದರು. ಗಾಂಧಿ ತುರ್ತು ಕರೆಯೊಂದರ ಮೇರೆಗೆ ಸಿಂಹಗಢದಿಂದ ಇದ್ದಕ್ಕಿದ್ದಂತೆ ಹೊರಡಬೇಕಾದ್ದರಿಂದ ಮಾತುಕತೆ ಅಪೂರ್ಣವಾಗಿತ್ತು. ಆದರೀಗ ಗಾಂಧಿ ಪ್ರಸ್ತಾಪಿಸಿದ್ದ ಅಸಹಕಾರ ಚಳುವಳಿಯ ಮೂಲಕ ಸ್ವಾಮಿ ಆನಂದರಂಥವರು ಆಶಿಸಿದ್ದ 'ಅಹಿಂಸಾತ್ಮಕ ತೀವ್ರವಾದ' ಎಂದು ಕರೆಯಬಹುದಾದ ಮಧ್ಯಮ ಮಾರ್ಗವೊಂದು ತೆರೆದುಕೊಂಡಿತ್ತು.

ಗಾಂಧಿ-ಅಲಿ ಜೋಡಿ!

ಅಸಹಕಾರ ಚಳುವಳಿಗೆ ಕಾಂಗ್ರೆಸ್ಸಿನಿಂದ ಅನುಮೋದನೆ ಪಡೆಯುವ ಎಲ್ಲ ಪ್ರಯತ್ನಗಳನ್ನು ಮಾಡುವುದು ಗಾಂಧಿಯವರ ಮುಂದಿನ ಕಾರ್ಯಕ್ರಮವಾಗಿತ್ತು. ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ವಿಶೇಷ ಅಧಿವೇಶನದಲ್ಲಿ ಅಸಹಕಾರ ಚಳುವಳಿಯ ಪರವಾದ ನಿರ್ಣಯವನ್ನು ಮಂಡಿಸಿ, ಅದಕ್ಕೆ ತಾತ್ವಿಕ ಅನುಮೋದನೆ ಪಡೆದು ನಂತರ ಡಿಸೆಂಬರ್‌ನಲ್ಲಿ ನಾಗಪುರದಲ್ಲಿ ನಡೆಯುವ ವಾರ್ಷಿಕ ಪೂರ್ಣಾಧಿವೇಶನದಲ್ಲಿ, ಅದರ ಜಾರಿಗಾಗಿ ಅಂತಿಮ ಅನುಮೋದನೆ ಪಡೆಯುವುದು ಗಾಂಧಿಯವರ ಉದ್ದೇಶವಾಗಿತ್ತು. ಈಗಾಗಲೇ ಬಾಂಬೆ ಪ್ರಾಂತ್ಯ, ಉತ್ತರದ ಸಂಯುಕ್ತ ಪ್ರಾಂತ್ಯಗಳಲ್ಲದೆ ಪಂಜಾಬ್-ಸಿಂಧ್‌ಗಳ ಪ್ರವಾಸ ಮಾಡಿದ್ದ ಗಾಂಧಿ ಆಗಸ್ಟ್ ಪೂರ್ತಾ ಮದ್ರಾಸ್ ಪ್ರಾಂತ್ಯದ ಪ್ರವಾಸಕ್ಕೆ ಹೊರಟರು. ಅಲ್ಲಿ ರಾಜಾಜಿ, ನಟೇಶನ್ ಮುಂತಾದವರು ಅವರ ಆತಿಥೇಯರಾಗಿದ್ದರು. ಈ ಪ್ರವಾಸದಲ್ಲಿ ಅಲಿ ಸೋದರರಲ್ಲಿ ಒಬ್ಬರಾದ ಶೌಕತ್ ಅಲಿ ಗಾಂಧಿಯವರನ್ನು ಸೇರಿಕೊಂಡರು. ಗಾಂಧಿ ಕುಂಭಕೋಣಂ, ಮಧುರೈ, ತಿರುಚ್ಚಿ, ಕಲ್ಲೀಕೋಟೆ, ಕಾಸರಗೋಡು ಮುಂತಾದಡೆ ಸಾರ್ವಜನಿಕ ಸಭೆಗಳಲ್ಲಿ ಮಾತನಾಡುತ್ತಾ ಪಂಜಾಬ್‌ನಲ್ಲಿನ ದೌರ್ಜನ್ಯಗಳು ಮತ್ತು ಖಿಲಾಫತ್ ವಿಸರ್ಜನೆಯ ಮೂಲಕ ಮುಸ್ಲಿಂ ಸೋದರರಿಗೆ ಆಗಿರುವ ಅನ್ಯಾಯದ ಬಗ್ಗೆ ಸರ್ಕಾರ ತೋರಿರುವ ನಿರ್ಲಕ್ಷ್ಯ ತಾವು ಅಸಹಕಾರ ಚಳುವಳಿಯ ಬಗ್ಗೆ ಯೋಚನೆ ಮಾಡುವಂತೆ ಪ್ರೇರೇಪಿಸಿವೆ ಎಂದು ವಿವರಿಸಿದರು. ಪ್ರತಿಯೊಬ್ಬ ಹಿಂದೂ ಮತ್ತು ಮುಸ್ಲಿಮನೂ ಸರ್ಕಾರದೊಡನೆ ಸಹಕರಿಸಲು ನಿರಾಕರಿಸಿದರೆ ಸರ್ಕಾರ ಅಸ್ತಿತ್ವದಲ್ಲಿ ಉಳಿಯಲು ಸಾಧ್ಯವಿಲ್ಲ ಎಂದು ಅವರು ಪ್ರತಿಪಾದಿಸಿದರು.

ಹಿಂದೂ ಮುಸ್ಲಿಮರು ಒಟ್ಟಿಗೆ ಬದುಕುತ್ತಿದ್ದು, ಮುಂದೆಯೂ ಒಟ್ಟಿಗೆ ಬದುಕಬೇಕಾಗಿರುವುದರಿಂದ ಅವರ ನೋವಿಗೆ ಸ್ಪಂದಿಸುವುದು ನೆರೆಹೊರೆಯ ಧರ್ಮವಾಗಿದ್ದು, ಹಿಂದೂ ಮುಸ್ಲಿಂ ಬಾಂಧವ್ಯವನ್ನು ಭದ್ರಗೊಳಿಸಲು ಇದಕ್ಕಿಂತ ಉತ್ತಮ ಅವಕಾಶ ಇನ್ನೆಂದೂ ಸಿಗುವುದಿಲ್ಲವೆಂದು ಅವರು ಹೇಳಿದ್ದರು. ಗಾಂಧಿಯ ಸರಳತೆಗೆ ಸಂವಾದಿಯೆಂಬಂತೆ ರೇಷ್ಮೆಯ ಶೇರವಾನಿ, ಉಣ್ಣೆಯ ಉದ್ದನೆಯ ಕೋಟು ಮತ್ತು ಕುಚ್ಚಿನ ಟೋಪಿಯೊಂದಿಗೆ ಜನರ ಗಮನ ಸೆಳೆದ ಶೌಕತ್ ಅಲಿ, ಭಾರತದ ಮುಸ್ಲಿಮರು ಗಾಂಧಿಯನ್ನು ತಮ್ಮ ನಾಯಕನೆಂದು ಒಪ್ಪಿಕೊಂಡಿದ್ದು, ಅವರೆಲ್ಲ ಅಹಿಂಸೆಗೆ ಬದ್ಧರಾಗಿದ್ದಾರೆ ಎಂದು ಹೇಳುತ್ತಾ ಹೋದರು. ಕಾಂಗ್ರೆಸ್ ನಾಯಕರು

ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡಿದ ಸಂಪ್ರದಾಯವೇ ಇಲ್ಲದ ಆ ಕಾಲದಲ್ಲಿ ಗಾಂಧಿಯವರ ಈ ಸಭೆಗಳಿಗೆ ಹಿಂದೂ-ಮುಸ್ಲಿಮರಿಬ್ಬರೂ ಕಿಕ್ಕಿರಿದು ನೆರೆಯುತ್ತಿದ್ದರೆಂಬುದು ಗಾಂಧಿ ಆರಂಭಿಸಿದ ಹೊಸ ಜನತಾ ರಾಜಕಾರಣವೇ ಕಾರಣವಾಗಿತ್ತೆನ್ನಬಹುದು. ಈ ಸಭೆಗಳಲ್ಲಿ ಬಡವ ಬಲ್ಲಿದರೂ, ಮಹಿಳೆಯರೂ ಭಾಗವಹಿಸಲಾರಂಭಿಸಿದ್ದು ಸಾರ್ವಜನಿಕ ಜೀವನದಲ್ಲಿ ಒಂದು ಹೊಸ ಬೆಳವಣಿಗೆಯಾಗಿತ್ತು.

ಅಸಹಕಾರ ಚಳುವಳಿಯ ರೂಪುರೇಷೆಗಳು-ದಂಗಾದ ನಾಯಕರು!

ಸೆಪ್ಟೆಂಬರ್ ಮೊದಲ ವಾರದಲ್ಲಿ ಗಾಂಧಿ ಕಾಂಗ್ರೆಸ್‌ನ ವಿಶೇಷ ಅಧಿವೇಶನಕ್ಕಾಗಿ ಕಲ್ಕತ್ತಾಗೆ ಬಂದು, ಹಿರಿಯ ಮಗ ಹರಿಲಾಲನ ಮನೆಯಲ್ಲಿ ತಂಗಿ ಮಾರನೆಯ ದಿನ ಅಧಿವೇಶನದ ಸ್ಥಳಕ್ಕೆ ಹೋದಾಗ ಅವರು ಸಿಂಹದ ಗುಹೆಯನ್ನೇ ಪ್ರವೇಶಿಸಿದಂತಾಗಿತ್ತು. ಇಂದಿನ ಗಾಂಧಿ, ಹಿಂದೊಮ್ಮೆ ೧೮೯೩ರಲ್ಲಿ ದ.ಆಫ್ರಿಕಾದ ತಮ್ಮ ಹೋರಾಟಕ್ಕೆ ಬೆಂಬಲ ಕೋರಿ ಅಲ್ಲಿನ ಕಾಂಗ್ರೆಸ್ ಅಧಿವೇಶನಕ್ಕೆ ಮೊದಲ ಬಾರಿಗೆ ಬಂದಿದ್ದ ಗಾಂಧಿಗಿಂತ ಬಹು ಭಿನ್ನ ಮತ್ತು ವರ್ಚಸ್ಸಿನ ನಾಯಕರಾಗಿದ್ದರೂ, ಬಿಪಿನ್‌ಚಂದ್ರಪಾಲ್, ದೇಶಬಂಧು ಚಿತ್ತರಂಜನ್ ದಾಸ್‌ರಂತಹ ಹಳೆಯ ಹುಲಿಗಳ ಆಕ್ರಮಣದ ಆತಂಕ ಇದ್ದೇ ಇತ್ತು. ಜೊತೆಗೆ ಲಾಲಾ ಲಜಪತ್‌ರಾಯ್‌ರಂತಹ ಹಿರಿಯ ನಾಯಕರ ಅಧ್ಯಕ್ಷತೆ. ಆದರೆ ಆಳದ ಕೆಚ್ಚು ಮತ್ತು ಅದನ್ನು ಪೋಷಿಸಿದ ತಮ್ಮ ಪ್ರವಾಸದುದ್ದಕ್ಕೂ ವ್ಯಕ್ತವಾದ ಜನಬೆಂಬಲದಿಂದ ಗಾಂಧಿ ಪ್ರಫುಲ್ಲಿತರಾಗಿದ್ದರು. ಅಮೃತಸರವನ್ನು ಮೀರಿಸಿದಂತೆ ದೇಶಾದ್ಯಂತದಿಂದ ಅಪಾರ ಸಂಖ್ಯೆಯ ಪ್ರತಿನಿಧಿಗಳನ್ನು ಆಕರ್ಷಿಸಿದ್ದ ಈ ಅಧಿವೇಶನದಲ್ಲಿ ಅವರು ಅಸಹಕಾರ ಚಳುವಳಿ ಏಕೆಂದು ವಿವರಿಸಿ ಅದರ ವಿವರಗಳೊಂದಿಗೆ ಅದರ ಅನುಮೋದನೆಗಾಗಿ ನಿರ್ಣಯ ಮಂಡಿಸಿದರು. ಅವರು ಅಸಹಕಾರದ ವಿಧಾನಗಳನ್ನು ಏಳು ಕಾರ್ಯಾಚರಣೆಗಳಾಗಿ ಪಟ್ಟಿ ಮಾಡಿದರು:

೧. ಸರ್ಕಾರದ ಬಿರುದು-ಪ್ರಶಸ್ತಿ ಮತ್ತು ಗೌರವ ಹುದ್ದೆಗಳನ್ನು ವಾಪಸು ಮಾಡುವುದು

೨. ಸರ್ಕಾರಿ ಸಮಾರಂಭಗಳಲ್ಲಿ ಭಾಗವಹಿಸುವುದನ್ನು ನಿಲ್ಲಿಸುವುದು

೩. ಮಕ್ಕಳನ್ನು ಹಂತಾನುಹಂತವಾಗಿ ಸರ್ಕಾರಿ ಶಾಲೆ-ಕಾಲೇಜುಗಳಿಂದ ಬಿಡಿಸುವುದು ಮತ್ತು ರಾಷ್ಟ್ರೀಯ ಶಾಲಾ-ಕಾಲೇಜುಗಳನ್ನು ಸ್ಥಾಪಿಸುವುದು

೪. ವಕೀಲರು ನ್ಯಾಯಾಲಯಗಳನ್ನು ಬಹಿಷ್ಕರಿಸುವುದು ಮತ್ತು ಆ ಜಾಗದಲ್ಲಿ ಖಾಸಗಿ ಪಂಚಾಯ್ತಿಗಳನ್ನು ಸ್ಥಾಪಿಸುವುದು

೫. ಖಿಲಾಫತ್ ವಿಸರ್ಜಿಸಿ ಸ್ಥಾಪನೆ ಮಾಡಲಾಗಿರುವ ಮೆಸೊಪೊಟೇಮಿಯಾ ದೇಶಗಳಲ್ಲಿ ಭಾರತೀಯರು ಸೇನೆ ಅಥವಾ ಕಾರ್ಮಿಕ ಅಥವಾ ಗುಮಾಸ್ತರಾಗಿ ಸೇವೆ ಸಲ್ಲಿಸಹೋಗದಿರುವುದು

೬. ಪ್ರಾಂತೀಯ ಶಾಸನ ಸಭೆಗಳನ್ನು ಅವುಗಳಿಗೆ ನಡೆಯಬೇಕಾದ ಚುನಾವಣೆಗಳೂ ಸೇರಿದಂತೆ, ಬಹಿಷ್ಕರಿಸುವುದು

೭. ವಿದೇಶಿ ಉತ್ಪನ್ನಗಳನ್ನು ಬಹಿಷ್ಕರಿಸುವುದು

ಇದನ್ನೆಲ್ಲ ಕೇಳಿದ, ಜಿನ್ನಾ, ಮಾಳವೀಯ, ಅನಿಬೆಸೆಂಟ್ ಮುಂತಾದ ಹಿರಿಯ ತಲೆಗಳಿಗೆ ಕಾಲ ಕೆಳಗಿನ ನೆಲ ಕುಸಿದ ಅನುಭವವಾಗಿ, ಈ ಹುಚ್ಚನ್ನು ಹೇಗಾದರೂ ಮಾಡಿ ತಡೆಯಬೇಕೆನ್ನಿಸಿದರೆ, ತಿಲಕರ ಅನುಯಾಯಿಗಳಾಗಿ ತೀವ್ರವಾದಿಗಳೆನಿಸಿಕೊಂಡಿದ್ದ ಲಾಲ್, ಪಾಲ್ ಮತ್ತು ದಾಸ್‌ರಿಗೆ ಯಾವುದು ಸೌಮ್ಯವಾದ, ಯಾವುದು ತೀವ್ರವಾದ ಎಂದು ಗೊತ್ತಾಗದೆ ಗೊಂದಲ ಉಂಟಾಗಿ ಸಂದಿಗ್ಧತೆಗೆ ಬಿದ್ದರು. ಆದರೆ ಜನ ಮಾತ್ರ ಗಾಂಧೀಜಿಯ ಮಂಡನೆಗೆ ಕಿವಿಗಡಚಿಕ್ಕುವ ಚಪ್ಪಾಳೆ ಮೂಲಕ ನಿರ್ಣಯವನ್ನು ಸ್ವಾಗತಿಸಿದರು. ಅನಿಬೆಸೆಂಟರು ಎದ್ದು ನಿರ್ಣಯವನ್ನು ವಿರೋಧಿಸಲು ತೊಡಗಿದಾಗ ಜನ ಗಲಾಟೆ ಮಾಡಲಾರಂಭಿಸಿದರು. ಗಾಂಧಿಯವರ ಮಧ್ಯಪ್ರವೇಶದಿಂದಾಗಿ ಅವರ ಭಾಷಣ ಮುಂದುವರೆಯಿತು. ಆದರೆ ಅಂತಿಮವಾಗಿ, ಅನಿಬೆಸೆಂಟ್, ಮಾಳವೀಯ ಮತ್ತಿತರರ ತೀವ್ರ ವಿರೋಧದ ಹೊರತಾಗಿಯೂ ಅದು ಬಹುಮತದಿಂದ ಅಂಗೀಕಾರವಾಯಿತು.

ಮೋತಿಲಾಲರು, ತಮ್ಮ ಮಗ ಜವಾಹರಲಾಲ್ ನೆಹರೂ ಅವರ ಗಾಂಧಿ ನಿಷ್ಠೆಯ ಪ್ರಭಾವಕ್ಕೊಳಗಾಗಿ ನಿಲುವು ಬದಲಾಯಿಸಿ ನಿರ್ಣಯವನ್ನು ಬೆಂಬಲಿಸಿದ್ದರು. ಜಿನ್ನಾ ಈ ಅಧಿವೇಶನದಲ್ಲಿ ಎಡಬಿಡಂಗಿಯಂತೆ ಕಂಡು ಎಲ್ಲರಲ್ಲಿ ಆಶ್ಚರ್ಯ ಹುಟ್ಟಿಸಿದರು. ನಿರ್ಣಯಕ್ಕೆ ಬಂಗಾಳದ ಪ್ರತಿನಿಧಿಗಳ ಸಮೂಹದ ಬಹುಮತ ಬೆಂಬಲ ವ್ಯಕ್ತವಾದ್ದರಿಂದ ದಿಙ್ಮೂಢರಾಗಿದ್ದ ಪಾಲ್ ಮತ್ತು ದಾಸ್ ನಾಗಪುರ ಅಧಿವೇಶನದವರೆಗೆ ಕಾಯಲು ನಿರ್ಧರಿಸಿದರು. ಗಾಂಧಿಯ ಪೂರ್ವಸಿದ್ಧತೆ ಫಲ ನೀಡಿತ್ತು.

ಜಿನ್ನಾ ಅವರ ಎಡಬಿಡಂಗಿತನ

ಜಿನ್ನಾರ ಎಡಬಿಡಂಗಿತನಕ್ಕೆ ಕಾರಣವಿತ್ತು. ಈ ಅಧಿವೇಶನದ ವೇಳೆಯಲ್ಲಿಯೇ ಕಲ್ಕತ್ತಾದಲ್ಲೇ ನೆರೆದಿದ್ದ ಮುಸ್ಲಿಂ ಲೀಗ್‌ನ ಅಧಿವೇಶನದಲ್ಲಿ ಜಿನ್ನಾ ಖಿಲಾಫತ್ ಬೇಡಿಕೆಯ ಪರವಾಗಿ ಮಾತನಾಡಿದ್ದರೂ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಲ್ಪ ಭಿನ್ನರಾಗ ಎಳೆಯಲು ಕಾರಣವಿತ್ತು. ಗಾಂಧಿ ತಮ್ಮ ಆಪ್ತ ಅನುಯಾಯಿಗಳಾದ ಇಂದೂಲಾಲ್ ಯಾಜ್ಞಿಕ್ ಮತ್ತು ಶಂಕರಲಾಲ್ ಬ್ಯಾಂಕರ್ ಅವರ ಒತ್ತಾಯದ ಮೇರೆಗೆ 'ಆಲ್ ಇಂಡಿಯಾ ಹೋಂ ರೂಲ್ ಲೀಗ್'ನ್ನು ಸೇರಿದ್ದರು. ಕಾಂಗ್ರೆಸ್, ಅಸಹಕಾರ ಚಳುವಳಿಯ ಬೆನ್ನಿಗೆ ನಿಲ್ಲದಿದ್ದರೆ ಅದಕ್ಕೆ ತಮ್ಮದೇ ಒಂದು ವೇದಿಕೆ ಇರಬೇಕೆಂಬುದು ಗಾಂಧಿ ಮತ್ತು ಅವರ ಈ ಅನುಯಾಯಿಗಳ ಉದ್ದೇಶವಾಗಿತ್ತು. ಆದರೆ ಇದು ಅದರ ಸ್ಥಾಪಕ ಸದಸ್ಯರಾಗಿದ್ದ ಜಿನ್ನಾರಿಗೆ ನುಂಗಲಾರದ ತುತ್ತಾಗಿತ್ತು. ಜೊತೆಗೆ ಗಾಂಧಿ, ನಂತರದಲ್ಲೇ ಅದರ ಅಧ್ಯಕ್ಷರಾಗಿ ಆಯ್ಕೆಯಾಗಿ ಅದರ ಹೆಸರನ್ನು 'ಸ್ವರಾಜ್ಯ ಸಭಾ' ಎಂದು ಬದಲಾಯಿಸಿದ್ದರು. ಆದರೆ ಅದನ್ನು ಅನುಮೋದಿಸಿದ ನಿರ್ಣಯದ ಪಾಠದಲ್ಲಿ 'ಸಾಮ್ರಾಜ್ಯದ ಆಶ್ರಯದಲ್ಲೇ ಸ್ವರಾಜ್ಯ' ಎಂಬ ವಿವರಣೆಯನ್ನು ಸೇರಿಸಬೇಕು ಎಂದು ಜಿನ್ನಾ ಸೂಚಿಸಿದಾಗ, ಗಾಂಧಿ ಆ ವಿವರವನ್ನು ಭವಿಷ್ಯಕ್ಕೆ ಬಿಡೋಣ ಎಂದರಲ್ಲದೆ, 'ಇದರ ನಿರ್ಧಾರದಲ್ಲಿ ನೀವು ಪಾತ್ರವಹಿಸಬಹುದು' ಎಂದು ಸೂಚಿಸಿದರು. ಇದರಿಂದ

ಕುಪಿತರಾದ ಜಿನ್ನಾ 'ನನಗೂ ಒಂದು ಪಾತ್ರ ನೀಡಬಯಸಿರುವ ನಿಮಗೆ ಧನ್ಯವಾದಗಳು' ಎಂಬ ವ್ಯಂಗ್ಯದೊಂದಿಗೆ ಗಾಂಧಿಯವರಿಗೆ ಪ್ರತಿಕ್ರಿಯಿಸಿ ಆ ಸಂಸ್ಥೆಗೆ ರಾಜೀನಾಮೆ ನೀಡಿದರಲ್ಲದೆ, ಅಸಹಕಾರ ಚಳುವಳಿಯ ಬದ್ಧ ವಿರೋಧಿಯಾದರೆಂದೇ ಹೇಳಬೇಕು.

ಜಿನ್ನಾ ಅವರ ಸಾಮ್ರಾಜ್ಯ ಪರ ನಿಲುವಿಗೆ ಒಂದು ಹಿನ್ನಲೆಯಿತ್ತು. ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದ ಸ್ಥಾಪಕರಾದ ಸರ್ ಸಯ್ಯದ್ ಅಹಮದ್ ಖಾನ್ ಭಾರತಕ್ಕೇನಾದರೂ ಸಂಪೂರ್ಣ ಸ್ವರಾಜ್ಯ ಲಭಿಸಿದಲ್ಲಿ, ಅದರಲ್ಲಿ ಮುಸ್ಲಿಮರು ಬಹುಸಂಖ್ಯಾತ ಹಿಂದೂಗಳ ಪ್ರಾಬಲ್ಯಕ್ಕೆ ಬಲಿಯಾಗಬೇಕಾದ ಪರಿಸ್ಥಿತಿ ಬರುವುದರಿಂದ ಭಾರತ ಬ್ರಿಟಿಷ್ ಸಾಮ್ರಾಜ್ಯದ ಚೌಕಟ್ಟಿನಾಚೆ ಹೋಗದಂತೆ ಮುಸ್ಲಿಂ ನಾಯಕರು ನೋಡಿಕೊಳ್ಳಬೇಕೆಂದು ಮಾಡಿದ್ದ ಬೋಧನೆ ಜಿನ್ನಾರ ಮನದಲ್ಲಿ ಮನೆ ಮಾಡಿತ್ತು. ಜೊತೆಗೆ, ೧೯೦೫ರಲ್ಲಿ ಬ್ರಿಟಿಷರು ಹಿಂದೂ ಕ್ರಾಂತಿಕಾರಿಗಳ ಹಿಂಸಾತ್ಮಕ ಚಟುವಟಿಕೆಗಳನ್ನು ನಿಯಂತ್ರಿಸುವ ತನ್ನ ರಾಜಕೀಯ ತಂತ್ರದ ಭಾಗವಾಗಿ ಬಂಗಾಳವನ್ನು ವಿಭಜಿಸಿ, ಮುಸ್ಲಿಂ ಬಹುಸಂಖ್ಯಾತರಾಗಿದ್ದ ಪೂರ್ವ ಬಂಗಾಳ ಎಂಬ ಪ್ರಾಂತ್ಯವನ್ನು ಸೃಷ್ಟಿಸಿದಾಗ, ಅದನ್ನು ವಿರೋಧಿಸಿದ್ದ ಕಾಂಗ್ರೆಸ್‌ನ ಧೋರಣೆಯನ್ನು ಪ್ರತಿಭಟಿಸಿ ಢಾಕಾದ ನವಾಬ ಆಗಾಖಾನ್, ಮುಸ್ಲಿಮರ ರಾಜಕೀಯ ಹಿತರಕ್ಷಣೆಗೆಂದೇ ೧೯೦೬ರಲ್ಲಿ ಆರಂಭಿಸಿದ್ದ ಭಾರತೀಯ ಮುಸ್ಲಿಂ ಲೀಗ್‌ನ ತಾತ್ವಿಕತೆಯೂ ಅವರಲ್ಲಿ ಜಾಗೃತವಾಗಿತ್ತು. ಮತ-ಮತಾಚಾರಗಳಲ್ಲಿ ನಂಬಿಕೆ ಇಲ್ಲದಿದ್ದ ಜಿನ್ನಾ ಮೊದಲು ಮುಸ್ಲಿಂ ಲೀಗ್ ಜೊತೆ ತಮ್ಮನ್ನು ಗುರುತಿಸಿಕೊಳ್ಳಲು ಇಷ್ಟಪಡದಿದ್ದರೂ, ಅವರಲ್ಲಿ ಸುಪ್ತವಾಗಿದ್ದ ರಾಜಕೀಯ ಮಹತ್ವಾಕಾಂಕ್ಷೆ ಅವರ ಈ ನಿಲುವಿನಲ್ಲಿ ಬದಲಾವಣೆ ತಂದಿತ್ತು.

ಮಗನ್‌ಲಾಲ್‌ರ ಸಂಶಯ-ಗಾಂಧಿ ಉತ್ತರಗಳು

ಇದೆಲ್ಲ ಕಾಂಗ್ರೆಸ್‌ನೊಳಗಿನ ಸಂಚಲನಗಳಾಗಿದ್ದರೆ ಗಾಂಧಿಯವರ ಕೌಟುಂಬಿಕ ವಲಯದಲ್ಲಿ ಅವರ ಈ ಪೂರ್ಣ ಪ್ರಮಾಣದ ರಾಜಕೀಯ ಪ್ರವೇಶದ ಬಗ್ಗೆ ಹಲವು ಅನುಮಾನ-ಆತಂಕಗಳು ಸೃಷ್ಟಿಯಾಗತೊಡಗಿದ್ದವು. ಅವು ನೇರವಾಗಿ, ಸ್ಪಷ್ಟವಾಗಿ ಅಭಿವ್ಯಕ್ತಗೊಂಡದ್ದು ಗಾಂಧಿಯವರ ಅಚ್ಚುಮೆಚ್ಚಿನ ಸೋದರ ಸಂಬಂಧಿಯೂ, ಸಬರ್ಮತಿ ಆಶ್ರಮದ ಉಸ್ತುವಾರಿ ವಹಿಸಿದ್ದ ಮಗನ್‌ಲಾಲ್‌ರಲ್ಲಿ. ಗಾಂಧಿಯವರನ್ನು ಪೂರ್ಣ ಆಧ್ಯಾತ್ಮಿಕವಾಗಿ ಕಂಡು ಅವರಿಗೆ ಸಮರ್ಪಿತರಾಗಿದ್ದ ಮಗನ್ ಮತ್ತು ಇತರ ಕೆಲವು ಆಶ್ರಮವಾಸಿಗಳು, ಮೊದಲು ಆಶ್ರಮಕ್ಕೆ ಅಸ್ಪೃಶ್ಯ ಕುಟುಂಬವೊಂದಕ್ಕೆ ಪ್ರವೇಶ ಪಡೆದಾಗ ಪಟ್ಟ ಗಾಬರಿಯನ್ನೇ ಈಗಲೂ ಅನುಭವಿಸತೊಡಗಿದ್ದರು. ಗಾಂಧಿ ತಮ್ಮ ಕಲ್ಪನೆಯ ಎಲ್ಲೆಗಳನ್ನು ಮೀರಿ ಹೋಗುತ್ತಿರುವುದನ್ನು ಕಸಿವಿಸಿಯಿಂದ ನೋಡುತ್ತಾ ಅವರು ಅಸಮಾಧಾನ ಮತ್ತು ಗೊಣಗಾಟಗಳನ್ನು ಆರಂಭಿಸಿದ್ದರು. ಸರಳಾದೇವಿಯವರ ಪ್ರಸಂಗ, ಮತ್ತೀಗ ಖಿಲಾಫತ್ ಚಳುವಳಿಯ ಹೆಸರಿನಲ್ಲಿ ಮುಸ್ಲಿಂ ರಾಜಕಾರಣದಲ್ಲಿ ಭಾಗವಹಿಸುವಿಕೆ ಅವರಲ್ಲಿ ಹಲವು ಪ್ರಶ್ನೆಗಳನ್ನೆಬ್ಬಿಸಿತ್ತು. ಇದಕ್ಕೆ ಪೂರಕವಾಗೆಂಬಂತೆ, ಗಾಂಧಿ ಆಶ್ರಮಕ್ಕೊಂದು ಕಾರು ಇದ್ದರೆ ಒಳ್ಳೆಯದೆಂದು ನೀಡಿದ ಸಲಹೆ, ಮಗನ್‌ಲಾಲರಲ್ಲಿ ಗಾಂಧಿಗೆ ವಯಸ್ಸಾಗುತ್ತಾ ದೈಹಿಕವಾಗಿ ದುರ್ಬಲರಾಗುತ್ತಿದ್ದಂತೆ ಹೆಚ್ಚು ಲೌಕಿಕರಾಗುತ್ತಾ ಆಧ್ಯಾತ್ಮಿಕ ಶಕ್ತಿಯನ್ನು

ಕಳೆದುಕೊಳ್ಳುತ್ತಿದ್ದಾರೆ ಎಂಬ ಅನಿಸಿಕೆಗೆ ಕಾರಣವಾಯಿತು. ಅದನ್ನು ಅವರು ಗಾಂಧಿಗೆ ಹೇಳಿಯೂಬಿಟ್ಟರು.

ಮಗನ್‌ಲಾಲರ ಎಲ್ಲ ಅನುಮಾನ ಆತಂಕಗಳಿಗೆ ವಿವರವಾಗಿ ಉತ್ತರ ಕೊಟ್ಟ ಗಾಂಧಿ 'ಹೌದು, ಅನಾರೋಗ್ಯದ ನಂತರ ನನ್ನ ದೈಹಿಕ ಶಕ್ತಿ ಸ್ವಲ್ಪ ಉಡುಗಿ ನನ್ನಲ್ಲಿನ ಆವೇಗ ಕುಂದಿದೆ. ಇದರಿಂದ ನನ್ನ ಆಲೋಚನಾ ಶಕ್ತಿ ಮತ್ತು ಕ್ರಮಕ್ಕೆ ಹೊಸ ಸ್ಪಷ್ಟತೆ ಮತ್ತು ಗತಿ ಒದಗಿದೆ. ಅದರಿಂದ ಲೌಕಿಕ ಸುಖ ಸವಲತ್ತುಗಳ ಬಗ್ಗೆ ತಿರಸ್ಕಾರ ಹೆಚ್ಚಾಗಿದೆ. ಕಾರು ಬೇಕೆಂದಿರುವುದು ಸುಖ ಸೌಲಭ್ಯಕ್ಕೆಂದಲ್ಲ; ಬದಲಿಗೆ ಈಗ ಆಶ್ರಮ ಸಾರಿಗೆ ವ್ಯವಸ್ಥೆಗಾಗಿ ಮಾಡುತ್ತಿರುವ ಖರ್ಚಿನಲ್ಲಿ ಉಳಿತಾಯ ಮಾಡುವುದಕ್ಕೆ.' ಎಂದು ವಿವರಿಸಿದರು.

ಇನ್ನು ರಾಜಕಾರಣ, ಅದರಲ್ಲೂ ಮುಸ್ಲಿಂ ರಾಜಕಾರಣದಲ್ಲಿನ ತಮ್ಮ ಪ್ರವೇಶದ ಬಗ್ಗೆ ವಿವರಣೆ ನೀಡಲು, ಇದು ಸಾರ್ವತ್ರಿಕ ಕುತೂಹಲ ಕೆರಳಿಸುವ ವಿಷಯವಾದ್ದರಿಂದ, ಅವರು ತಮ್ಮ ಹೆಚ್ಚಿನ ಅನುಯಾಯಿಗಳಿಂದ ಕೂಡಿದ ಓದುಗ ವರ್ಗವನ್ನು ಪಡೆದಿದ್ದ 'ಯಂಗ್ ಇಂಡಿಯಾ' ಪತ್ರಿಕೆಯನ್ನು ಆಯ್ದುಕೊಂಡರು. ಅದರ ೧೯೨೦ರ ಮೇ ೧೨ರ ಸಂಚಿಕೆಯಲ್ಲಿ, ತಮ್ಮ ಮೊದಲ ಜೀವನಚರಿತ್ರಕಾರ ಜೋಸೆಫ್ ಡೋಕ್ ಅವರು ತಮ್ಮನ್ನು ದೇಶಪ್ರೇಮಿ ಎಂಬುದಕ್ಕಿಂತ ಹೆಚ್ಚಾಗಿ ಮಾರ್ಗಪ್ರವರ್ತಕ ಎಂದು ಗುರುತಿಸಿದ್ದುದನ್ನು ಅವರು ನೆನಪಿಸುತ್ತಾ ಹೀಗೆ ಹೇಳಿದರು: 'ಧರ್ಮ ಅಥವಾ ಅಧ್ಯಾತ್ಮ ಎನ್ನುವುದು ಹಿಂದೂ ಅಥವಾ ಕ್ರಿಶ್ಚಿಯನ್ ಎಂಬ ನಿರ್ದಿಷ್ಟ ನಾಮಾಂಕಿತ ಧರ್ಮಗಳಾಚೆಯೂ ಮನುಷ್ಯನನ್ನು ಸತ್ಯಾನ್ವೇಷಣೆಗೆ ಕರೆದೊಯ್ಯಬಲ್ಲ ಶಕ್ತಿ. ರಾಜಕಾರಣವೆಂಬುದು ನಮ್ಮ ಸುತ್ತ ಸಿಂಬೆ ಸುತ್ತಿಕೊಂಡಿರುವ ಸರ್ಪದಂತೆ ಇರುವಾಗ, ಈ ಧರ್ಮ ಅಥವಾ ಅಧ್ಯಾತ್ಮ, ಅದರೊಡನೆ ಒಡನಾಡಬಾರದು ಎಂದರೆ ಏನರ್ಥ? ಆದರೆ ನನ್ನ ಬದುಕಿನ ಯಾವುದೇ ನಿರ್ಧಾರ ಈ ರಾಜಕಾರಣದ ಒಡನಾಟದಿಂದ ಮೂಡಿಲ್ಲ ಎಂದು ಧೈರ್ಯವಾಗಿ ಹೇಳಬಲ್ಲೆ... ಖಿಲಾಫತ್ ಚಳುವಳಿ ಭಾರತದ ಹಿಂದೂ-ಮುಸ್ಲಿಮರನ್ನು ಒಂದುಗೂಡಿಸಲು ನಡೆದಿರುವ ಮಹಾ ಪ್ರಯೋಗ. ಅದರಲ್ಲಿ ಭಾಗವಹಿಸುತ್ತಿರುವ ಬಗ್ಗೆ ನನಗೆ ಕಿಂಚಿತ್ತೂ ಪಶ್ಚಾತ್ತಾಪವಿಲ್ಲ. ಮುಖ್ಯ ಸಂಗತಿಯೆಂದರೆ, ನಾವು ಶುದ್ಧ ಹಾದಿ ಹಿಡಿದಿದ್ದೇವೆಯೋ ಇಲ್ಲವೋ ಎಂಬುದೇ ಹೊರತು ಅದು ಅದರ ಫಲಾಫಲಗಳ ಬಗ್ಗೆ ಅಲ್ಲ.'

■

೨೩

ಕಾಂಗ್ರೆಸ್ಸಿನ ಮುಖ ಚಹರೆ ಬದಲಿಸಿದ ಗಾಂಧಿ

ಈಗ ಗಾಂಧಿಯವರ ಮುಂದಿನ ಸವಾಲು ೧೯೨೦ರ ಡಿಸೆಂಬರ್‌ನಲ್ಲಿ ನಡೆಯಲಿದ್ದ ನಾಗಪುರ ಅಧಿವೇಶನವಾಗಿತ್ತು. ಅದಕ್ಕಾಗಿ ಅವರೀಗ ಉತ್ತರದ ಸಂಯುಕ್ತ ಪ್ರಾಂತ್ಯಗಳ ಪ್ರವಾಸ ಕೈಗೊಂಡರು. ಅಲಿಗಢಕ್ಕೆ ಹೋಗಿ ಅಲ್ಲಿನ ಮುಸ್ಲಿಂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ಮತ್ತು ಅಧ್ಯಾಪಕರನ್ನು ಉದ್ದೇಶಿಸಿ ಮಾತನಾಡಿದರು. ಆದರೆ ಕಾಲೇಜು ಬಹಿಷ್ಕರಿಸಲು ಅಲ್ಲಿ ಬಹಳ ಜನ ಸಿದ್ಧರಿರಲಿಲ್ಲ. ಅದು ಅಲಿ ಸೋದರರು ಓದಿದ ವಿಶ್ವವಿದ್ಯಾಲಯವಾಗಿತ್ತು. ಅವರು ಗಾಂಧಿಯೊಂದಿಗೆ ಸೇರಿ ಲಾಹೋರ್‌ನಲ್ಲಿದ್ದ ಕವಿ ಮಹಮ್ಮದ್ ಇಕ್ಬಾಲರಿಗೆ ತಾವು ತೆರೆಯಲುದ್ದೇಶಿಸಿರುವ ಹೊಸ ದೇಶಿ ಶಿಕ್ಷಣದ ವಿಶ್ವವಿದ್ಯಾಲಯಕ್ಕೆ ಕುಲಪತಿಯಾಗಿ ಬರಲು ಆಹ್ವಾನಿಸಿದರು. ಆದರೆ ಇಕ್ಬಾಲ್ ಬಡ ಮುಸ್ಲಿಮರಿಗೆ ಈಗ ಅತ್ಯಗತ್ಯವಾಗಿರುವುದು ಆಧುನಿಕ ಶಿಕ್ಷಣ ಎಂದು ಹೇಳಿ ಆಹ್ವಾನವನ್ನು ನಿರಾಕರಿಸಿದರು. ಛಲ ಬಿಡದ ಗಾಂಧಿ, ಮುಂದಿನ ದಿನಗಳಲ್ಲಿ ಭರವಸೆಯ ಶಿಕ್ಷಣತಜ್ಞ ಝಾಕೀರ್ ಹುಸೇನ್‌ರನ್ನು ಕುಲಪತಿಗಳನ್ನಾಗಿ ಮಾಡಿ ದೆಹಲಿಯಲ್ಲಿ ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದರು.

ಅಸ್ಪೃಶ್ಯತೆಯ ಪ್ರಶ್ನೆ–ಗಾಂಧಿ ಬೆಂಬಲಿಗರಿಂದಲೇ ಬಂಡಾಯ!

ಇದಕ್ಕೆ ಮೊದಲೇ ಗಾಂಧೀಜಿ ಅಹಮದಾಬಾದ್‌ನಲ್ಲಿ ಸ್ಥಾಪಿಸಿದ್ದ ದೇಶಿ ಶಿಕ್ಷಣದ ಶಾಲೆಯನ್ನು ಒಂದು ವಿಶ್ವವಿದ್ಯಾಲಯವಾಗಿ ವಿಸ್ತರಿಸಿ ಅದನ್ನು ಗುಜರಾತ್ ವಿದ್ಯಾಪೀಠವೆಂದು ಕರೆದಿದ್ದರು. ಅದು ಈಗ ಒಂದು ನಿರ್ಣಯವನ್ನು ಅಂಗೀಕರಿಸಿ ಅಸ್ಪೃಶ್ಯರಿಗೆ ಪ್ರವೇಶ ನಿರಾಕರಿಸುವ ಶಾಲೆಗಳಿಗೆ ಈ ವಿಶ್ವವಿದ್ಯಾಲಯದ ಮಾನ್ಯತೆ ನೀಡುವುದಿಲ್ಲ ಎಂದು ಪ್ರಕಟಿಸಿತು. ಇದರ ವಿರುದ್ಧ ಗಾಂಧಿಯ ಬೆಂಬಲಿಗರೇ ಬಂಡೆದ್ದರು. ಮೊದಲಿಗೆ ಇವರಿಗೆಲ್ಲ ಗಾಂಧಿ, ಖಿಲಾಫತ್ ಉಸಾಬರಿಗೆ ಹೋದದ್ದೇ ಇಷ್ಟವಿರಲಿಲ್ಲ. ಈಗ ಗಾಂಧಿ ಅಸಹಕಾರ ಚಳುವಳಿಗೆ ಜನರನ್ನು ಜಾಗೃತಗೊಳಿಸುವುದರ ಭಾಗವಾಗಿಯೇ, ಧರ್ಮ, ಜಾತಿ ಮತ್ತು ಅಸ್ಪೃಶ್ಯತೆಗಳ ಬಗ್ಗೆ ವಿಸ್ತಾರವಾಗಿ ಮಾತಾಡಬೇಕಾಯಿತು ಮತ್ತು ಬರೆಯಬೇಕಾಯಿತು. ಅಸ್ಪೃಶ್ಯರೂ ಸೇರಿದಂತೆ ವಿವಿಧ ಜಾತಿಗಳ ಜನರಿದ್ದ ತಮ್ಮ ಸತ್ಯಾಗ್ರಹ ಆಶ್ರಮದಲ್ಲಿ ಜಾರಿಯಲ್ಲಿದ್ದ ಸಾಮೂಹಿಕ ಭೋಜನದ ಬಗ್ಗೆ ಮತ್ತು ತಾವು ಲಕ್ಷ್ಮಿ ಎಂಬ ಅಸ್ಪೃಶ್ಯ ಬಾಲಕಿಯನ್ನು ಮಗಳಾಗಿ ದತ್ತು ತೆಗೆದುಕೊಂಡು ಅವಳು ಬಿಟ್ಟ ಆಹಾರವನ್ನು ಸೇವಿಸುತ್ತಿದ್ದುದರ ಬಗ್ಗೆ, ತಮ್ಮ ಕುಟುಂಬದ ಕೆಲ ಸದಸ್ಯರೂ ಸೇರಿದಂತೆ ಕೆಲ ಆಶ್ರಮವಾಸಿಗಳು ವ್ಯಕ್ತಪಡಿಸುತ್ತಿದ್ದ ಅಸಮಾಧಾನದ ಗುಸುಗುಸು ಅವರ ಗಮನಕ್ಕೆ ಬಂದಿತ್ತು. ಹಾಗಾಗಿ ಅವರು ಬಹು

ಎಚ್ಚರದಿಂದ ಈ ವಿಷಯಗಳ ಬಗ್ಗೆ ಮಾತಾಡಬೇಕಿತ್ತು ಮತ್ತು ಬರೆಯಬೇಕಿತ್ತು. 'ಅಸ್ಪೃಶ್ಯತೆಯಂತಹ ಅಮಾನವೀಯ ಮತ್ತು ಹೇಯ ಆಚರಣೆ ಹೇಗೆ ಧರ್ಮದ ಭಾಗವಾಗುತ್ತದೋ ನನಗೆ ತಿಳಿಯದು. ಅದರ ಬಗ್ಗೆ ಯೋಚಿಸಿದಾಗಲೆಲ್ಲ ನನ್ನ ಮೈ ನಡುಗುತ್ತದೆ ಮತ್ತು ನನ್ನ ಆತ್ಮ ಕುಗ್ಗುವಂತಾಗುತ್ತದೆ. ಹಿಂದೂ ಧರ್ಮದ ಮೈಮೇಲಿನ ಈ ವ್ರಣವನ್ನು ವಾಸಿ ಮಾಡಲು ನನ್ನ ಜೀವನವನ್ನೇ ಮುಡಿಪಾಗಿಡಬಯಸುವೆನಾದರೂ ಅದು ಸಾಧ್ಯವಾಗದ ಬಗ್ಗೆ ನನಗೆ ವಿಷಾದವಿದೆ' ಎಂದು ಸಭೆಗಳಲ್ಲಿ ಹೇಳುತ್ತಿದ್ದ ಗಾಂಧಿ 'ಅಸ್ಪೃಶ್ಯತೆ ನಿವಾರಣೆಯಾಗದೆ ಸ್ವರಾಜ್ಯ ಸಾಧ್ಯವಿಲ್ಲ' ಎಂದು ಜನರಿಗೆ ಎಚ್ಚರಿಕೆ ಕೊಡುವುದನ್ನು ಮರೆಯುತ್ತಿರಲಿಲ್ಲ.

ಜಾತಿ ಪದ್ಧತಿ : ಗಾಂಧಿ ವ್ಯಾಖ್ಯಾನ

ಗಾಂಧಿಯವರ ಈ ಮಾತುಗಳ ಬಗ್ಗೆ ಜನರಲ್ಲಿ ಚರ್ಚೆ ಶುರುವಾಗಿ ಅದರ ಕೆಲವು ಪ್ರಶ್ನೆಗಳು ಅವರನ್ನು ತಲುಪಿದಾಗ, ಅವರು ಡಿಸೆಂಬರ್ ಮೊದಲ ವಾರದ 'ಯಂಗ್ ಇಂಡಿಯಾ'ದಲ್ಲಿ ಜಾತಿ ಪದ್ಧತಿ ಕುರಿತ ತಮ್ಮ ವಿಚಾರವನ್ನು ವಿವರವಾಗಿ ಮಂಡಿಸಿದರು. ಅದರಲ್ಲಿ ಅವರು ಮುಖ್ಯವಾಗಿ ಹೇಳಿದ್ದೆಂದರೆ, ಜಾತಿ ವ್ಯವಸ್ಥೆ, ಹಿಂದೂ ಧರ್ಮ ವಿಘಟನೆಯಾಗದಂತೆ ತಡೆದಿರುವುದು ನಿಜವಾದರೂ, ಅದರ ಗ್ರಹಿಕೆ ದೋಷಪೂರ್ಣವಾಗಿದ್ದು, ಈ ವ್ಯವಸ್ಥೆಯಲ್ಲಿ ವರ್ಣಗಳು ಒಂದರ ಮೇಲೊಂದು ಇರದೆ ಒಂದರ ಪಕ್ಕ ಒಂದಿದ್ದು ಸಹಬಾಳ್ವೆಯನ್ನು ಪ್ರತಿಪಾದಿಸುತ್ತದೆ. ಉಣ್ಣುವುದು, ಉಡುವುದು, ಸಂಬಂಧ ಮಾಡುವುದು ಇವೆಲ್ಲ ವೈಯಕ್ತಿಕ ಆಯ್ಕೆ-ಅಭಿರುಚಿಗಳಿಗೆ ಸಂಬಂಧಿಸಿರುವುದರಿಂದ ಈ ವಿಷಯಗಳಲ್ಲಿ ಯಾರನ್ನೇ ಆಗಲೀ ಒತ್ತಾಯಿಸುವುದು ತರವಲ್ಲ. ಆದರೆ ನೆರೆಹೊರೆಯ ಮನುಷ್ಯರೊಂದಿಗೆ ಹೇಗೆ ವರ್ತಿಸಬೇಕೆಂಬುದಕ್ಕೆ ಆತ್ಮಸಾಕ್ಷಿ ಆಧಾರವಾಗಬೇಕೇ ಹೊರತು ಧರ್ಮಶಾಸ್ತ್ರಗಳಲ್ಲ. ಹಾಗಾಗಿ ಅಸ್ಪೃಶ್ಯತೆಯ ಪ್ರಶ್ನೆ ಕೇವಲ ಸಾಮಾಜಿಕ ಪ್ರಶ್ನೆಯಾಗಿರದೆ ನೈತಿಕ ಪ್ರಶ್ನೆಯೂ ಆಗಿದ್ದು ಅದರ ನಿವಾರಣೆ ಅನಿವಾರ್ಯವಾಗಿದೆ.

ಗಾಂಧಿ ಅವರಿಗೆ ತಮ್ಮ ಪ್ರವಾಸದುದ್ದಕ್ಕೂ ಮನವರಿಕೆಯಾದ ಹೊಸ ಸತ್ಯವೆಂದರೆ, ಸ್ವರಾಜ್ಯಕ್ಕೆ ಸ್ವದೇಶಿ ಮತ್ತು ಹಿಂದೂ-ಮುಸ್ಲಿಂ ಐಕ್ಯತೆಯ ಜೊತೆಗೇ ಅಸ್ಪೃಶ್ಯತೆಯ ನಿವಾರಣೆಯೂ ಅವಶ್ಯಕ ಎಂಬುದು. ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ ಮತ್ತೆ ದೇಶದ ಪಶ್ಚಿಮ ಮತ್ತು ಉತ್ತರ ಭಾಗಗಳ ಐವತ್ತಕ್ಕೂ ಹೆಚ್ಚು ಊರುಗಳಿಗೆ ಭೇಟಿ ನೀಡಿ ಸಾರ್ವಜನಿಕ ಸಭೆಗಳಲ್ಲಿ ಮಾತನಾಡಿದ ಗಾಂಧಿ ಅಸಹಕಾರದ ಸಂದೇಶವನ್ನು ಜನರಿಗೆ ಮುಟ್ಟಿಸುವ ಪ್ರಯತ್ನ ಮಾಡುತ್ತಾ ಸ್ವದೇಶಿ, ಹಿಂದೂ-ಮುಸ್ಲಿಂ ಐಕ್ಯತೆ ಮತ್ತು ಅಸ್ಪೃಶ್ಯತೆಯ ನಿವಾರಣೆಗಳನ್ನು ಅದರ ಅವಶ್ಯಕತೆಗಳು ಎಂದು ಪ್ರತಿಪಾದಿಸಿದರು. ಸಾರ್ವಜನಿಕ ಸಭೆಗಳ ನಂತರ ಅವರು ನಾಗಪುರ ಅಧಿವೇಶನದಲ್ಲಿ ಪ್ರತಿನಿಧಿಗಳಾಗಿ ಭಾಗವಹಿಸುವವರ ಸಭೆಗಳನ್ನು ಉದ್ದೇಶಿಸಿಯೂ ಮಾತನಾಡುತ್ತಿದ್ದರು.

ಐತಿಹಾಸಿಕ ನಾಗಪುರ ಅಧಿವೇಶನ

ಇಷ್ಟು ವ್ಯಾಪಕ ಸಿದ್ಧತೆಗಳೊಂದಿಗೆ ಗಾಂಧಿ ಕಾಂಗ್ರೆಸ್ ವಾರ್ಷಿಕ ಅಧಿವೇಶನಕ್ಕೆಂದು ಡಿಸೆಂಬರ್ ೨೨ರಂದು ನಾಗಪುರಕ್ಕೆ ಬಂದು ತಮ್ಮ ಗೆಳೆಯರೊಬ್ಬರ ಹೋಟೆಲೊಂದರಲ್ಲಿ ವಾಸ್ತವ್ಯ ಹೂಡಿದರು. ಮುಂದಿನ ಎರಡು ಮೂರು ದಿನಗಳ ಕಾಲ ಅಸಹಕಾರ

ನಿರ್ಣಯದ ಅಂತಿಮ ಕರಡು ಸಿದ್ಧಪಡಿಸುವುದರಲ್ಲಿ ತೊಡಗಿದ್ದರಲ್ಲದೆ, ಅಧಿವೇಶನಕ್ಕೆ ಪ್ರತಿನಿಧಿಗಳಾಗಿ ಬಂದಿದ್ದ ರೈತರ ಮತ್ತು ನೇಕಾರರ ಹಾಗೂ ಅಸ್ಪೃಶ್ಯರ ಸಭೆಗಳನ್ನು ಆಯೋಜಿಸಿ ಅವುಗಳನ್ನುದ್ದೇಶಿಸಿ ಮಾತನಾಡಿದರು. ಮೊದಲ ಸಭೆಯಲ್ಲಿ ತಮ್ಮನ್ನು ರೈತ-ನೇಕಾರ ಎಂದು ಕರೆದುಕೊಂಡ ಅವರು, ನಮ್ಮ ಅನ್ನ ಮತ್ತು ನಮ್ಮ ಬಟ್ಟೆಯನ್ನು ನಾವೇ ಉತ್ಪಾದಿಸಿಕೊಳ್ಳಲಾರಂಭಿಸುವುದೇ ಸ್ವರಾಜ್ಯಕ್ಕೆ ದಾರಿಯೆಂದೂ ಅಸಹಕಾರದ ಉದ್ದೇಶ ಇದೇ ಎಂದು ವಿವರಿಸುತ್ತಾ, ಸಭೆಯಲ್ಲಿದ್ದ ರೈತರು ಮತ್ತು ನೇಕಾರರು ವಿದೇಶಿ ಬಟ್ಟೆಗಳನ್ನು ತೊಟ್ಟಿರುವುದರ ಬಗ್ಗೆ ತಮ್ಮ ವಿಷಾದ ವ್ಯಕ್ತಪಡಿಸಿದರು. ನಂತರ ಅಸ್ಪೃಶ್ಯರ ಸಭೆಯನ್ನು ಉದ್ದೇಶಿಸಿ ಮಾತನಾಡಿ, ತಮ್ಮೆಲ್ಲ ತೀವ್ರ ಪ್ರಯತ್ನಗಳ ಹೊರತಾಗಿಯೂ ಅಸ್ಪೃಶ್ಯತೆಯ ವಿಷಯದಲ್ಲಿ ತಮ್ಮ ಹೆಂಡತಿಯ ಮನಸ್ಸನ್ನೇ ಪೂರ್ಣ ಬದಲಾಯಿಸಲಾಗಿಲ್ಲ ಎಂಬುದನ್ನು ಹೇಳುತ್ತಾ, ಅದರ ನಿವಾರಣೆ, ಹೇಳಿದಾಕ್ಷಣ ಆಗುವಂತದ್ದಲ್ಲ ಎಂಬುದನ್ನು ನೆನಪಿಟ್ಟುಕೊಂಡು ಕಾರ್ಯಪ್ರವೃತ್ತರಾಗಬೇಕೆಂದು ಕಾರ್ಯಕರ್ತರಿಗೆ ಕಿವಿಮಾತು ಹೇಳಿದರು. ಅವರಲ್ಲಿ ಕೆಲವರು, ಅಸ್ಪೃಶ್ಯರು ಹಿಂದೂಗಳು ಎನ್ನುವುದಾದರೆ ಎಲ್ಲ ದೇವಾಲಯುಗಳಲ್ಲೂ ಅವರಿಗೆ ಪ್ರವೇಶಕ್ಕಾಗಿ ಒತ್ತಾಯಿಸಬೇಕೆಂದಾಗ, ಎಲ್ಲಿಯವರೆಗೆ ವರ್ಣಾಶ್ರಮದ ಜಡ ಗ್ರಹಿಕೆ ಹಿಂದೂ ಜನಸಮುದಾಯದ ಮನಸ್ಸನ್ನು ಆಳುತ್ತಿರುವುದೋ ಅಲ್ಲಿಯವರೆಗೂ ಅದು ಸಾಧ್ಯವಾಗಲಾರದು. ಹಾಗಾಗಿ ಈ ಜಡ ಗ್ರಹಿಕೆಯ ನಿವಾರಣೆಗಾಗಿ ಪ್ರಯತ್ನಗಳನ್ನು ನಡೆಸುತ್ತಾ ಸಹನೆಯಿಂದ ಕಾಯಬೇಕು ಎಂದು ಹೇಳಿದರು.

ಡಿಸೆಂಬರ್ ೨೬ರಂದು ಸಿ. ವಿಜಯರಾಘವಾಚಾರ್ ಅವರ ಅಧ್ಯಕ್ಷತೆಯಲ್ಲಿ ಅಧಿವೇಶನ ಆರಂಭವಾದಾಗ ಚಪ್ಪರದಡಿ ದಾಖಲೆಯ ಸಂಖ್ಯೆಯ ಜನ ಸೇರಿದ್ದರು. ಪ್ರತಿನಿಧಿಗಳಾಗಿ ನೋಂದಾಯಿಸಿಕೊಂಡಿದ್ದರ ಸಂಖ್ಯೆ ೧೫ ಸಾವಿರದಷ್ಟಿತ್ತು. ಅವರಲ್ಲಿ ಗಣನೀಯ ಸಂಖ್ಯೆಯಲ್ಲಿ ಮುಸ್ಲಿಮರು, ಹಳ್ಳಿಗರು ಮತ್ತು ಮಹಿಳೆಯರಿದ್ದುದು ಈ ಅಧಿವೇಶನದ ಒಂದು ವೈಶಿಷ್ಟ್ಯ. ಮೊದಲ ಬಾರಿಗೆ ಕಾಂಗ್ರೆಸ್ ಸಾಮಾನ್ಯ ಜನರ ಸಂಸ್ಥೆಯಾಗಿ ಕಾಣತೊಡಗಿತ್ತು. ಗಾಂಧಿ ಅಸಹಕಾರ ಆಂದೋಲನಕ್ಕೆ ಅನುಮೋದನೆ ಕೋರಿ ಹನ್ನೊಂದು ಅಂಶಗಳ ನಿರ್ಣಯವೊಂದನ್ನು ಸಿದ್ಧಪಡಿಸಿ ಮಂಡಿಸಿದರು. ಅದರಲ್ಲಿ ಅಸಹಕಾರದ ಏಳು ಅಂಶಗಳಲ್ಲದೆ ಹಿಂದೂ-ಮುಸ್ಲಿಂ ಐಕ್ಯತೆ, ಜಾತಿ ಜಗಳಗಳಿಗೆ-ವಿಶೇಷವಾಗಿ ಮದ್ರಾಸ್ ಪ್ರಾಂತ್ಯದಲ್ಲಿ-ಕಾರಣವಾಗಿರುವ ಜಾತಿ ವ್ಯವಸ್ಥೆ ಕುರಿತ ತಪ್ಪು ತಿಳುವಳಿಕೆಯ ನಿವಾರಣೆ ಮತ್ತು ಅಸ್ಪೃಶ್ಯತೆಯ ನಿವಾರಣೆ ಹಾಗೂ ರೈತರು ಮತ್ತು ವ್ಯಾಪಾರಿಗಳಿಗೆ ಅನ್ಯಾಯವೆಸಗುತ್ತಾ ಭಾರತದ ಸಂಪತ್ತನ್ನು ಹೊರಕ್ಕೆ ಒಯ್ಯಲು ಅನುಕೂಲವಾಗಿರುವಂತಹ ನಾಣ್ಯ ವಿನಿಮಯ ದರದ ನ್ಯಾಯಯುತ ಪರಿಷ್ಕರಣೆ ಇವುಗಳಿಗೆ ಸಂಬಂಧಿಸಿತ್ತು. ಈ ಉದ್ದೇಶಗಳನ್ನೊಳಗೊಂಡ ಅಸಹಕಾರ ಚಳುವಳಿಯನ್ನು ಭಾರತೀಯರು ಯಶಸ್ವಿಗೊಳಿಸಿದಲ್ಲಿ ಇನ್ನೊಂದು ವರ್ಷದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಸಾಂವಿಧಾನಿಕ ಚೌಕಟ್ಟಿನೊಳಗೋ ಅಥವಾ ಹೊರಗೋ ಭಾರತದ ಗಣರಾಜ್ಯ ಸ್ಥಾಪಿತವಾಗಬಲ್ಲುದು ಎಂದು ಅದು ಹೇಳಿತ್ತು.

ಆಶ್ಚರ್ಯವೆಂದರೆ ಗಾಂಧಿಯವರ ಈ ನಿರ್ಣಯವನ್ನು ಮಂಡಿಸಲು ಮತ್ತು ಅನುಮೋದಕರಾಗಲು ಮುಂದೆ ಬಂದವರು ಕ್ರಮವಾಗಿ ಈವರೆಗೆ ಈ ವಿಷಯವಾಗಿ ಗೊಂದಲದಲ್ಲಿದ್ದ ಇಬ್ಬರು ತೀವ್ರವಾದಿಗಳೂ, ಹಿರಿಯ ನಾಯಕರೂ ಆಗಿದ್ದ ಸಿ.ಆರ್.

ದಾಸ್ ಮತ್ತು ಲಾಲಾ ಲಜಪತರಾಯ್! ಅದೋ, ಕಾಂಗ್ರೆಸ್‌ನ ಮುಖ ಚಹರೆ ಸಂಪೂರ್ಣ ಬದಲಾಗತೊಡಗಿತ್ತು. ಆದರೆ ಗಾಂಧಿಯವರ ಈ ಕಾರ್ಯಕ್ರಮಕ್ಕೆ ವಿರೋಧವಿರಲಿಲ್ಲವೆಂದಲ್ಲ. ಇದು ದೊಂಬಿಯ, ಅವ್ಯವಸ್ಥೆಯ ಗುರಿ ಹೊಂದಿದ ದ್ವೇಷಮಯ ವಾತಾವರಣ ನಿರ್ಮಾಣ ಮಾಡುವ ಒಂದು ಹತಾಶೆಯ ಪ್ರಯತ್ನವಾಗಿದ್ದು, ಇದು ಅರಾಜಕತೆಯಲ್ಲಿ ಕೊನೆಗೊಳ್ಳುವುದು ಎಂದು ಅಭಿಪ್ರಾಯಪಟ್ಟ ಅನಿಬೆಸೆಂಟ್, ಮದನಮೋಹನ ಮಾಳವೀಯ, ಮಹಮ್ಮದಾಲಿ ಜಿನ್ನಾ ಮುಂತಾದ ನಾಯಕರು ನಿರ್ಣಯವನ್ನು ಕಟುವಾಗಿ ವಿರೋಧಿಸಿ ಜನವನ್ನು ಎಚ್ಚರಿಸಿದರು. ಜಿನ್ನಾ ಅವರಂತೂ ಕಾಂಗ್ರೆಸ್ ಎಂದರೆ ಗಾಂಧಿ ಎನ್ನುವಂತಾಗಿದೆ ಎಂದು ತಮ್ಮ ಜಿಗುಪ್ಸೆಯನ್ನು ವ್ಯಕ್ತಪಡಿಸಿದರು. ಪ್ರತಿನಿಧಿಗಳು ಅವರ ಮಾತುಗಳಿಗೆ ಪದೇ ಪದೇ ಅಡ್ಡಿ ಉಂಟುಮಾಡಿ ಪ್ರತಿಭಟಿಸಿದರು. ಗಾಂಧಿಯವರ ನಿರ್ಣಯ ಮೂರನೇ ಎರಡರಷ್ಟು ಬಹುಮತದಿಂದ ಅಂಗೀಕಾರವಾಯಿತು. ಹಾಗೇ ಇದು ಜಿನ್ನಾ ಕಾಂಗ್ರೆಸ್‌ನ ನಡಾವಳಿಯಲ್ಲಿ ಭಾಗವಹಿಸಿದ ಕೊನೆಯ ಸಂದರ್ಭವೂ ಆಯಿತು. ಅಲ್ಲಿಂದಾಚೆ ಅವರು ಕಾಂಗ್ರೆಸ್ ರಾಜಕಾರಣದಿಂದ ದೂರವಾಗಿ ತಮ್ಮ ವಕೀಲ ವೃತ್ತಿಯ ಕಡೆ ಗಮನ ಹರಿಸಿದರು. ಮುಸ್ಲಿಂ ಲೀಗ್‌ನ ಶಾಶ್ವತ ಅಧ್ಯಕ್ಷರಾಗಿ ಔಪಚಾರಿಕವಾಗಿ ಮುಂದುವರೆದಿದ್ದ ಅವರು ೧೯೩೦ರ ಹೊತ್ತಿಗೆ ದೇಶದಲ್ಲಿ ಹಿಂದೂ ಮುಸ್ಲಿಂ ಒಡಕು ತೀವ್ರವಾಗಿ ಕಾಂಗ್ರೆಸ್‌ನಲ್ಲಿ ಗಾಂಧಿಯವರ ಪ್ರಭಾವ ಇಳಿಮುಖವಾಗುವ ಸಮಯದವರೆಗೂ ಸಾರ್ವಜನಿಕ ಜೀವನದಿಂದ ಹೆಚ್ಚೂ ಕಡಿಮೆ ದೂರವಾಗಿಯೇ ಉಳಿದಿದ್ದರು.

ಕಾಂಗ್ರೆಸ್‌ನ ಪುನರ್‌ಸಂಘಟನೆ

ಈ ಅಧಿವೇಶನದ ನಂತರ, ಕಾಂಗ್ರೆಸ್ ಎಲ್ಲ ನಿರ್ಧಾರಗಳನ್ನು ತೆಗೆದುಕೊಳ್ಳುವ ಕೆಲವು ಆಯ್ದ ಗಣ್ಯರ ಗುಂಪಿನ ರೂಪ ಕಳೆದುಕೊಂಡು, ನಾಲ್ಕಾಣೆ ಸದಸ್ಯತ್ವ ಶುಲ್ಕದ ಮೂಲಕ ಹದಿನೆಂಟು ವಯಸ್ಸಿಗೆ ಮೇಲ್ಪಟ್ಟ ಯಾರಾದರೂ ಅದರ ಈ ಸದಸ್ಯರಾಗಲು ಅವಕಾಶವಿರುವ ಜನಸಾಮಾನ್ಯರ ವೇದಿಕೆಯಾಯಿತು. ಪಕ್ಷದ ಈ ಸ್ವರೂಪದ ಕರಡನ್ನು ಸಿದ್ಧಪಡಿಸಿದವರು ಗಾಂಧಿಯವರೇ. ಈ ಕರಡನ್ನು ಆಧರಿಸಿದ ಪಕ್ಷದ ಸಂವಿಧಾನಕ್ಕಾಗಿ ಈ ಅಧಿವೇಶನದಲ್ಲಿ ಅನುಮೋದನೆ ಪಡೆದವರೂ ಅವರೇ. ಗ್ರಾಮ ಮಟ್ಟದಿಂದ ಹಿಡಿದು ಪ್ರತಿಹಂತದಲ್ಲೂ ಚುನಾವಣೆಗಳ ಮೂಲಕ ಪದಾಧಿಕಾರಿಗಳನ್ನು ಆಯ್ಕೆ ಮಾಡಿ ಸಮಿತಿಗಳನ್ನು ರಚಿಸುವ ಪದ್ಧತಿ ಆರಂಭವಾಯಿತು. ಪ್ರಾಂತೀಯ ಕಾಂಗ್ರೆಸ್ ಸಮಿತಿಗಳನ್ನು ಭಾಷಾವಾರು ಆಧಾರದ ಮೇಲೆ ಪುನಾರಚಿಸಲಾದದ್ದು ಆಧುನಿಕ ಭಾರತದ ಒಂದು ಪ್ರಮುಖ ಹಜ್ಜೆಯಾಗಿತ್ತು. ಇದಕ್ಕೆ ಕಾರಣ ಪ್ರಾಂತೀಯ ಕಾರ್ಯಕಲಾಪಗಳು ಆಯಾ ಪ್ರಾಂತ್ಯಗಳ ಪ್ರಮುಖ ಭಾಷೆಯಲ್ಲಿ ನಡೆಯಬೇಕೆಂಬುದಾಗಿತ್ತು. ಆ ಪ್ರಾಂತೀಯ ಸಮಿತಿಗಳು ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ತನ್ನ ಪ್ರತಿನಿಧಿಗಳನ್ನು ಆಯ್ದು ಕಳಿಸುವುದು. ಇದರಿಂದ ಆಯ್ದ ಸದಸ್ಯರನ್ನೊಳಗೊಂಡ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಪಕ್ಷದ ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು. ಇದರಿಂದಾಗಿ ಪಕ್ಷ ರೈತರ, ಕಾರ್ಮಿಕರ, ಮಹಿಳೆಯರ ಪಕ್ಷವಾಗಿ ಪರಿವರ್ತಿತವಾಗಿ ಒಂದು ವರ್ಷದ ಅವಧಿಯಲ್ಲೆ ೨೦ ಲಕ್ಷಕ್ಕೂ ಹೆಚ್ಚು ಸದಸ್ಯರನ್ನು ಪಡೆದು ಬೆಳೆಯಲು ಸಾಧ್ಯವಾಯಿತು.

■

೫೭

ಅಸಹಕಾರ ಚಳುವಳಿಯ ಆರಂಭ

ಕಾಂಗ್ರೆಸ್‌ನ ಸ್ವರೂಪವನ್ನೇ ಹೀಗೆ ಬದಲಿಸಿದ ಗಾಂಧಿ, ಈಗ ಅಸಹಕಾರ ಚಳುವಳಿಯ ಪ್ರಚಾರಕ್ಕಾಗಿ ಮತ್ತು ಪಕ್ಷದ ನಿಧಿ ಸಂಗ್ರಹಕ್ಕಾಗಿ ೧೯೨೧ ರ ಆರಂಭದಲ್ಲಿ ರಾಷ್ಟ್ರವ್ಯಾಪಿ ಪ್ರವಾಸ ಹೊರಟರು. ಈ ನಿಧಿಯನ್ನು 'ತಿಲಕ್ ಸ್ವರಾಜ್' ನಿಧಿಯೆಂದು ಕರೆಯಲಾಗಿದ್ದು ಇದಕ್ಕಾಗಿ ಒಂದು ಕೋಟಿ ರೂಪಾಯಿಗಳ ಗುರಿ ಇಟ್ಟುಕೊಳ್ಳಲಾಗಿತ್ತು. ಇದರ ಒಂದು ಗಣನೀಯ ಭಾಗವನ್ನು ಗಾಂಧಿಯವರು ಏಕಾಕಿಯಾಗಿ ಮುಂಬೈ ನಗರದ ಶ್ರೀಮಂತ ಉದ್ಯಮಿಗಳು, ಸಂಘ-ಸಂಸ್ಥೆಗಳು ಮತ್ತು ಜನಸಾಮಾನ್ಯರಿಂದ ಸಂಗ್ರಹಿಸುವಲ್ಲಿ ಯಶಸ್ವಿಯಾಗಿದ್ದರು. ಇದೇ ಹೊತ್ತಿನಲ್ಲಿ ಮೋತಿಲಾಲ್ ನೆಹರೂ, ಸರ್ದಾರ್ ವಲ್ಲಭಬಾಯಿ ಪಟೇಲ್, ರಾಜೇಂದ್ರ ಪ್ರಸಾದ್, ಸಿ.ಆರ್. ದಾಸ್, ಸಿ. ರಾಜ ಗೋಪಾಲಾಚಾರಿ ಮುಂತಾದ ಹಿರಿಯ ವಕೀಲರು ಆಕರ್ಷಕ ಸಂಪಾದನೆಯ ವಕೀಲ ವೃತ್ತಿಯನ್ನು ತ್ಯಜಿಸಿ ಇತರರಿಗೆ ಮಾದರಿಯಾದರು. ಆಗತಾನೇ ಇಂಗ್ಲೆಂಡ್‌ನಿಂದ ವಕೀಲಿ ಪದವಿ ಪಡೆದುಬಂದಿದ್ದ ತರುಣ ಸುಭಾಷ್ ಚಂದ್ರ ಬೋಸ್, ಗಾಂಧಿಯ ಮಾತಿನಂತೆ ಸಿ.ಆರ್. ದಾಸ್ ಅವರ ಅನುಯಾಯಿಯಾಗಿ, ಅವರು ಕಲ್ಕತ್ತಾದಲ್ಲಿ ತೆರೆದ ರಾಷ್ಟ್ರೀಯ ವಿದ್ಯಾಸಂಸ್ಥೆಯ ಉಸ್ತುವಾರಿ ವಹಿಸಿಕೊಂಡರು. ಪ್ರಾಂತ್ಯ ಮತ್ತು ಜಿಲ್ಲಾ ಮಟ್ಟದ ಸಾವಿರಾರು ವಕೀಲರೂ ವಕೀಲಿ ವೃತ್ತಿಗೆ ವಿದಾಯ ಹೇಳಿ ನ್ಯಾಯಾಲಯಗಳನ್ನು ಬಹಿಷ್ಕರಿಸಿದರು. ಹಾಗೇ ದೇಶಾದ್ಯಂತ ಸಾವಿರಾರು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಸರ್ಕಾರಿ ಶಾಲೆ ಮತ್ತು ಕಾಲೇಜುಗಳನ್ನು ತೊರೆದರು. ಹಾಗೆ ಪರೀಕ್ಷೆಯ ಹಿಂದಿನ ದಿನವೆ ಪಾಟ್ನಾದಲ್ಲಿ ಅಬುಲ್ ಕಲಾಂ ಆಜಾದರ ಭಾಷಣ ಕೇಳಿ ಕಾಲೇಜು ತೊರೆದ ತರುಣರಲ್ಲಿ, ಮುಂದೆ ಗಾಂಧಿಯವರ ಪ್ರಮುಖ ಶಿಷ್ಯರಲ್ಲಿ ಒಬ್ಬರಾದ ಜಯಪ್ರಕಾಶ್ ನಾರಾಯಣ್ ಸೇರಿದ್ದರು. ಹೀಗೆ ಶಾಲಾ ಕಾಲೇಜುಗಳನ್ನು ತೊರೆದವರಿಗಾಗಿ ಅನೇಕ ಕಡೆ ದೇಶೀಯ ಶಾಲಾ ಕಾಲೇಜುಗಳನ್ನು ಆರಂಭಿಸಲಾಯಿತು. ಇವನ್ನು ರಾಷ್ಟ್ರೀಯ(ನ್ಯಾಷನಲ್) ಶಾಲಾ ಕಾಲೇಜುಗಳೆಂದು ಕರೆಯಲಾಯಿತು.

ಗಾಂಧಿ ಗಳಸಿದ ಅಪೂರ್ವ ಜನಪ್ರೀತಿ

ಬಂಗಾಳ, ಬಿಹಾರ, ಪಂಜಾಬ್ ಮತ್ತು ಸಂಯುಕ್ತ ಪ್ರಾಂತ್ಯಗಳ ಪ್ರವಾಸ ಕೈಗೊಂಡ ಗಾಂಧಿಯವರ ಜೊತೆಗೆ ಸದಾ ಅಲಿ ಸೋದರರಲ್ಲೊಬ್ಬರು ಇರುತ್ತಿದ್ದರು. ಮೊಹಮ್ಮದಲಿಯವರಂತೂ ಗಾಂಧಿಯ ಬಗ್ಗೆ ಎಷ್ಟು ಪ್ರೀತಿ ವಿಶ್ವಾಸಗಳನ್ನು

ಬೆಳೆಸಿಕೊಂಡಿದ್ದರೆಂದರೆ, 'ಪ್ರವಾದಿ ಮಹಮ್ಮದರ ಆತ್ಮಕ್ಕೆ ಶಾಂತಿ ಕೋರುತ್ತಾ ನಾನೀಗ ಅವರ ನಂತರ ಗಾಂಧೀಜಿಯ ಆದೇಶಗಳನ್ನು ಪಾಲಿಸುವವನಾಗಿದ್ದೇನೆ' ಎಂದು ಘೋಷಿಸಿದ್ದರು. ಇದರಿಂದಾಗಿ ಪ್ರಚಾರ ಸಭೆಗಳಲ್ಲಿ ಜನ ಅಪಾರ ಸಂಖ್ಯೆಯಲ್ಲಿ ಸೇರುತ್ತಿತ್ತು. ಕೆಲವಡೆ ಜನ ರೈಲನ್ನು ಅಡ್ಡಗಟ್ಟಿ ಗಾಂಧಿ ದರ್ಶನ ಪಡೆಯುತ್ತಿದ್ದರು. ಒಂದೆಡೆಯಂತೂ ಒಂದು ಹಳ್ಳಿಯ ಜನ ನಡುರಾತ್ರಿ ಹಳಿಗಳ ಮೇಲೆ ಮಲಗಿ ಪ್ರಾಣತ್ಯಾಗ ಮಾಡುವ ಬೆದರಿಕೆ ಹಾಕಿ ತಮ್ಮೂರಿನಲ್ಲಿ ರೈಲು ನಿಲ್ಲುವಂತೆ ಮಾಡಿ ಗಾಢ ನಿದ್ರೆಯಲ್ಲಿದ್ದ ಗಾಂಧಿಯವರನ್ನು ಎಬ್ಬಿಸಿ ದರ್ಶನ ಪಡೆದರು. ಇನ್ನೊಂದು ಕಡೆ ಜನ ಮಹದೇವ ದೇಸಾಯಿಯವರ ಅಲ್ಪನಿದ್ರೆಗೂ ಭಂಗ ತರುವಷ್ಟು ಗಲಾಟೆಯಲ್ಲಿ ತೊಡಗಿದ್ದಾಗ, ಅವರನ್ನು ನಿಯಂತ್ರಿಸಲಾಗದ ಗಾಂಧಿ ಏನೂ ತೋಚದೆ ತಮ್ಮ ಕೆನ್ನೆಗಳಿಗೇ ಏಟು ಕೊಟ್ಟುಕೊಳ್ಳತೊಡಗಿದರು. ಇದನ್ನು ಕಂಡ ಜನ ಗಾಂಧಿಯವರ ಕೈ ಹಿಡಿದು 'ನಮಗೆಲ್ಲ ಬುದ್ಧಿ ಹೇಳಬೇಕಾದ ನೀವೇ ಹೀಗೆ ಕೋಪಿಸಿಕೊಂಡರೆ ಹೇಗೆ?' ಎಂದು ಅವರನ್ನು ಸಮಾಧಾನಿಸಬೇಕಾಯಿತು! ಬಂಗಾಳದಲ್ಲಂತೂ ಜನ ನಿಧಿಗೆ ಮುಗಿಬಿದ್ದು ದೇಣಿಗೆ ನೀಡಿದರು. ಕೆಲವು ಮಹಿಳೆಯರು ಮೈಮೇಲಿದ್ದ ಚಿನ್ನವನ್ನೇ ತೆಗೆದುಕೊಟ್ಟರು. ರಾಂಚಿ ಬಳಿ ಒಂದೆಡೆ ಮಹಿಳೆಯೊಬ್ಬಳು ಗಾಂಧಿಗೆ ಚಿನ್ನದ ಬಳೆಗಳನ್ನು ಕಳಚಿಕೊಟ್ಟಿದ್ದಲ್ಲದೆ, ಕಸ್ತೂರಬಾ ಅವರ ಕೊರಳಿಗೆ ತನ್ನ ಕತ್ತಿನ ಸರ ತೊಡಿಸಲೂ ಮುಂದಾದಾಗ, ಬಾ ಅದು ತಮಗೆ ಬೇಡವೆಂದು ಅದನ್ನು ಪಕ್ಷದ ನಿಧಿಗೇ ಅರ್ಪಿಸಿದರು. ದ.ಆಫ್ರಿಕಾದ ಆರಂಭದ ದಿನಗಳಲ್ಲಿ ಜನ ಗಾಂಧಿಗೆ ಕೊಟ್ಟ ಚಿನ್ನಾಭರಣಗಳ ಉಡುಗೊರೆಯನ್ನು ಅವರು ಹಿಂತಿರುಗಿಸಲು ನಿರ್ಧರಿಸಿದಾಗ ಅದನ್ನು ದೊಡ್ಡ ರಂಪ ಮಾಡಿ ವಿರೋಧಿಸಿದ್ದ ಕಸ್ತೂರಬಾ ಈಗ ಸಂಪೂರ್ಣ ಬದಲಾಗಿದ್ದರು. ಈ ವಿಷಯದಲ್ಲಿ ಗಂಡನ ಜೊತೆ ಹೆಜ್ಜೆ ಹಾಕತೊಡಗಿದ್ದರು.

ಗಾಂಧಿ ಸಭೆಗಳು ರಾಷ್ಟ್ರಾದ್ಯಂತ ತಮ್ಮ ಪ್ರತಿಧ್ವನಿಗಳನ್ನು ಹೇಗೆ ಮೊಳಗಿಸತೊಡಗಿದವೆಂದರೆ ಗುಜರಾತ್‌ನಲ್ಲಿ ಇಂದೂಲಾಲ್ ಯಾಜ್ಞಿಕ್, ಅಮೃತಲಾಲ್ ಥಕ್ಕರ್, ಜುಗತ್‌ರಾಂ ದವೆ ಮುಂತಾದ ಅವರ ಶಿಷ್ಯರು 'ನವಜೀವನ ಸಂಘ' ಎಂಬ ಹೆಸರಿನ ಸಂಸ್ಥೆಯನ್ನು ಕಟ್ಟಿ, ತನ್ನ ಸ್ವಯಂ ಸೇವಕರೊಂದಿಗೆ ಅಸ್ಪೃಶ್ಯರು ಮತ್ತು ಆದಿವಾಸಿಗಳು, ಅಫೀಮು ವ್ಯಸನಿಗಳು, ವೇಶ್ಯಾವೃತ್ತಿಗೆ ಬಲಿಯಾದವರ ನಡುವೆ ಜಾಗೃತಿಯ ಕೆಲಸ ಮಾಡುತ್ತಿದ್ದರು. ಆದಿವಾಸಿ ಪ್ರದೇಶಗಳಲ್ಲಿ ಆಶ್ರಮಗಳನ್ನು ಸ್ಥಾಪಿಸಿದರು. ಇಲ್ಲಿನ ಅನುಭವಗಳನ್ನು ತಿಳಿಯುತ್ತಿದ್ದ ಗಾಂಧಿ, ಅವುಗಳ ಆಧಾರದ ಮೇಲೆ ಸಭೆಗಳಲ್ಲಿ ಮಾತನಾಡುತ್ತಿದ್ದರು ಹಾಗೂ 'ಯಂಗ್ ಇಂಡಿಯಾ' ಮತ್ತು 'ನವಜೀವನ' ಪತ್ರಿಕೆಗಳಿಗೆ ಲೇಖನ ಬರೆಯುತ್ತಿದ್ದರು. ತಾವು ಅಸ್ಪೃಶ್ಯತೆಯ ವಿರುದ್ಧ ತೀವ್ರ ಕಾರ್ಯಕ್ರಮ ಹಾಕಿಕೊಂಡಿರಲು ಕ್ರಿಶ್ಚಿಯನ್ನರಾಗಿದ್ದ ಗೆಳೆಯ ಆ್ಯಂಡ್ರ್ಯೂಸ್‌ರಿಂದ ಪ್ರಭಾವಿತರಾಗಿದ್ದುದೇ ಕಾರಣವೆಂಬ ಮಾತು ಕೆಲ ಸವರ್ಣೀಯ ವಲಯಗಳಿಂದ ಕೇಳಿ ಬಂದಾಗ ಅಹಮದಾಬಾದ್ ಸಭೆಯೊಂದರಲ್ಲಿ ಅವರು ಹೀಗೆ ಘೋಷಿಸಿದರು: 'ನನಗೆ ಪುನರ್ಜನ್ಮವಿದ್ದದ್ದೇ ಆಗಿದ್ದರೆ ನಾನು ಅಸ್ಪೃಶ್ಯನಾಗಿ ಹುಟ್ಟಬಯಸುವೆ. ಹಾಗೆ ಹುಟ್ಟಿ ಅವರ ಸಂಕಷ್ಟ–ಅವಮಾನಗಳನ್ನು ಅನುಭವಿಸಿ ಅವರೊಡನೆಯ ನನ್ನ ಸಹಾನುಭೂತಿಗೆ ನೈತಿಕ ಅರ್ಹತೆಯನ್ನು ಪಡೆಯಬಯಸುವೆ. ಅವರನ್ನು ನೆಲಕ್ಕೆ ಮೂಗುಜ್ಜಿಕೊಳ್ಳುತ್ತಾ

ತೆವಳುವಂತೆ ಮಾಡುವ, ಅವರನ್ನು ರೈಲ್ವೇ ಡಬ್ಬಿಗಳಿಂದ ಹೊರದೂಡುವ ಜನರಿಗೆ, ಬ್ರಿಟಿಷ್ ಪ್ರಭುತ್ವದ ದೌರ್ಜನ್ಯಗಳನ್ನು ದೂಷಿಸುವ ಯಾವ ನೈತಿಕ ಅಧಿಕಾರವೂ ಇಲ್ಲ'

ವಾಸ್ತವವಾಗಿ ಆ್ಯಂಡ್ರ್ಯೂಸ್, ಗಾಂಧಿ ಅಸ್ಪೃಶ್ಯತೆಯ ಸಮಸ್ಯೆಯ ಬಗ್ಗೆ ಹೆಚ್ಚು ಆಸಕ್ತಿ ವಹಿಸಿರುವ ಬಗ್ಗೆ ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಿದ್ದರು. ಆದರೆ ಗಾಂಧಿ ಅವರಿಗೆ ಹೀಗೆ ಉತ್ತರಿಸಿದ್ದರು: 'ಈ ಸಮಸ್ಯೆಗೆ ನೀವು ಹೊರಗಿನವರು. ನಾನು ಒಳಗಿನವನು. ನನ್ನ ಬೇಗುದಿ ನಿಮಗೆ ಅರ್ಥವಾಗದು'. 'ಅಸ್ಪೃಶ್ಯರನ್ನು ನಾನು ಕೈಬಿಡಬೇಕಾದ ಕಾಲ ಬಂದರೆ 'ಸ್ವರಾಜ್ಯ'ದ ಕನಸನ್ನೂ ಕೈಬಿಟ್ಟೇನು'. ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ದುರಾಚಾರಗಳನ್ನು ಕುರಿತ ಗಾಂಧಿಯವರ ಇಂತಹ ಮಾತುಗಳಿಂದ ಪ್ರೇರಿತರಾದ ಪಂಜಾಬ್‌ನ ಸಿಕ್ಖರಿಗೆ, ತಮ್ಮ ಗುರುದ್ವಾರಗಳನ್ನು ಆಳುತ್ತಿದ್ದ ಸಿಖ್ ಪುರೋಹಿತಶಾಹಿಯ ವಿರುದ್ಧ ಬಂಡೇಳಲು ಸ್ಫೂರ್ತಿ ಒದಗಿಸಿತು. ಅಕಾಲಿ ಚಳುವಳಿಗೆ ನಾಂದಿಯಾಯಿತು. ಬಂಗಾಳದ ಪ್ರವಾಸದಲ್ಲಿದ್ದಾಗ ಗಾಂಧಿ ವೇಶ್ಯಾವೃತ್ತಿಗೆ ಬಲಿಯಾಗಿದ್ದ ಆದಿವಾಸಿ ಸಮೂಹದ ಮಧ್ಯೆ ಸ್ವಲ್ಪ ಕಾಲವಿದ್ದು ಅವರ ಅಳಲುಗಳನ್ನು ಕೇಳಿ ನೊಂದರು.

ಕಾಂಗ್ರೆಸ್ ಧ್ವಜ ರಚನೆ

ಗಾಂಧಿ ಆಂಧ್ರದಲ್ಲಿದ್ದಾಗ ವೆಂಕಯ್ಯ ಎಂಬ ಕಾಂಗ್ರೆಸ್ ಕಾರ್ಯಕರ್ತ, ತಮ್ಮ ಪಕ್ಷ ಕಟ್ಟಹೊರಟಿರುವ ರಾಷ್ಟ್ರಕ್ಕೊಂದು ಧ್ವಜ ಬೇಕೆಂದು ಆಗ್ರಹಿಸಿ ತನ್ನ ವಿನ್ಯಾಸವೊಂದನ್ನು ಗಾಂಧಿಯವರ ಮುಂದೆ ಮಂಡಿಸಿದ. ಅದರಿಂದ ತೃಪ್ತರಾಗದ ಗಾಂಧಿ ಇಡೀ ದೇಶದ ಜನತೆಗೆ ಸ್ಫೂರ್ತಿ ನೀಡಬಲ್ಲ ಸಂಕೇತವೊಂದು ಧ್ವಜದಲ್ಲಿರಬೇಕೆಂದು ಬಯಸಿದಾಗ, ಜಲಂಧರ್‌ನ ಲಾಲಾ ಹಂಸರಾಜ್ ಎಂಬುವವರು ಚರಕಾ ಅಂತಹ ಚಿಹ್ನೆಯಾಗಬಹುದೆಂದು ಸೂಚಿಸಿದರು. ಗಾಂಧಿ ಇದನ್ನು ಒಪ್ಪಿದ ಕೂಡಲೇ ಅವರ ಸಲಹೆಯಂತೆಯೇ ವೆಂಕಯ್ಯ, ಹಿಂದೂಗಳ ಸಂಕೇತವಾಗಿ ಕೇಸರಿ, ಮುಸ್ಲಿಮರ ಸಂಕೇತವಾಗಿ ಹಸಿರು ಮತ್ತು ಇತರರ ಸಂಕೇತವಾಗಿ ಬಿಳಿ ಬಣ್ಣಗಳ ನಡುವೆ ಚರಕಾ ಇರುವ ಧ್ವಜ ವಿನ್ಯಾಸವೊಂದನ್ನು ತಯಾರು ಮಾಡಿ ಗಾಂಧಿಗೆ ಒಪ್ಪಿಸಿ ಅವರ ಅನುಮೋದನೆ ಪಡೆದೇಬಿಟ್ಟರು. ಆದರೆ ಅದರಲ್ಲಿ ಅಂತಿಮವಾಗಿ ಸೂಚಿಸಿದ ಒಂದು ಬದಲಾವಣೆ ಕೇಸರಿ. ಎಲ್ಲ ಸಮುದಾಯಗಳ ಆಧಾರರೂಪವಾಗಿ ಕೆಳಗಿರಲಿ ಎಂಬುದು. ಈ ಕಾಂಗ್ರೆಸ್ ಧ್ವಜದ ಮಾದರಿಯಲ್ಲೇ ಮುಂದೆ ಸ್ವತಂತ್ರ ಭಾರತದ ರಾಷ್ಟ್ರಧ್ವಜವನ್ನೂ–ಚರಕಾದ ಬದಲಾಗಿ ಅಶೋಕ ಚಕ್ರವನ್ನಿರಿಸಿ–ರೂಪಿಸಲಾಯಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಈ ಮಧ್ಯೆ ತುರ್ಕಿಯಲ್ಲಿ ಆದ ಒಂದು ಹೊಸ ಬೆಳವಣಿಗೆ ಅಸಹಕಾರ ಚಳುವಳಿಯ ಒಂದು ಗುರಿಯಾಗಿದ್ದ ಖಿಲಾಫತ್ತಿನ ಮರುಸ್ಥಾಪನೆಯ ಉದ್ದೇಶಕ್ಕೆ ಆಘಾತ ನೀಡಿತ್ತು. ತುರ್ಕಿಯಲ್ಲಿ ಮುಸ್ತಫಾ ಕೆಮಾಲ್ ಎಂಬ ಆಧುನಿಕ ನಾಯಕನೊಬ್ಬ ಮೂಡಿದ್ದು ಮತಾತೀತವಾದ ಆತ ಬ್ರಿಟಿಷರ ಆದೇಶಗಳನ್ನೂ ಲೆಕ್ಕಿಸದೆ ತುರ್ಕಿಯ ಹೊಸ ಅಧಿಪತಿಯಾಗಿ ಜನರ ಮಾನ್ಯತೆ ಪಡೆಯತೊಡಗಿದ್ದ. ಆತ ಸೋತ ಸುಲ್ತಾನನೊಂದಿಗೆ ರಾಜಿ ಮಾಡಿಕೊಳ್ಳಲು ಒಪ್ಪದೆ ಖಿಲಾಫತ್ ಎನ್ನುವುದು ಮತ್ತೆ ಸಾಕಾರವಾಗುವ ಎಲ್ಲ

ಸೂಚನೆಗಳು ಕರಗಿ ಹೋದವು. ಈ ಸಂಬಂಧ ಗಾಂಧಿ, ಫೆಬ್ರುವರಿ ೧೯೨೧ರಲ್ಲಿ ನಡೆದ ಖಿಲಾಫತ್ ಸಮ್ಮೇಳನವೊಂದರಲ್ಲಿ ಕೆಮಾಲ್ ಮುಸ್ತಫಾಗೆ ಮಾಜಿ ಸುಲ್ತಾನನೊಂದಿಗೆ ರಾಜಿ ಮಾಡಿಕೊಳ್ಳಲು ಸಲಹೆ ನೀಡಿದರಾದರೂ, ಮುಸ್ತಫಾನಿಂದ ಯಾವುದೇ ಪ್ರತಿಕ್ರಿಯೆ ಬರದಿದ್ದಾಗ ಅಲಿ ಸೋದರರಲ್ಲಿ ಹತಾಶೆ ಶುರುವಾಯಿತು. ಅವರ ಮಾತುಗಳಲ್ಲಿ ವೀರಾವೇಶ ತುಂಬಿಕೊಳ್ಳತೊಡಗಿ, ಗಾಂಧೀ ಮತ್ತು ಬ್ರಿಟಿಷ್ ಪ್ರಭುತ್ವ ವಿಚಲಿತಗೊಳ್ಳುವಂತಹ ಮಾತುಗಳು ಅವರ ಬಾಯಿಂದ ಹೊರಬೀಳತೊಡಗಿದ್ದವು.

ಮೊಹಮ್ಮದಾಲಿಯವರ ವಿವಾದಾಸ್ಪದ ಹೇಳಿಕೆ

ಈ ಮಧ್ಯೆ ವಾಯುವ್ಯ ಪ್ರಾಂತ್ಯದ ಹಲವು ಮುಸ್ಲಿಮರು, ಖಿಲಾಫತ್ತಿನ ವಿರೋಧಿಯಾದ ಬ್ರಿಟಿಷ್ ಭಾರತ ಇಸ್ಲಾಂನ 'ಹಿಜ್ರತ್' ಪರಿಕಲ್ಪನೆಯ ಪ್ರಕಾರ ಮಲಿನವಾಗಿದೆ ಎಂದು ದೇಶಬಿಟ್ಟು ಆಫ್ಘನಿಸ್ತಾನಕ್ಕೆ ವಲಸೆ ಹೋಗಿದ್ದರು. ಆ ಪೈಕಿ ನೂರಾರು ಭಾರತೀಯ ಮುಸ್ಲಿಂ ಕುಟುಂಬಗಳು ಅಲ್ಲಿ ಅನೇಕ ಕಷ್ಟನಷ್ಟಗಳಿಂದಾಗಿ ನೆಲೆಸಲಾಗದೆ ಭಾರತಕ್ಕೆ ವಾಪಸು ಬರತೊಡಗಿರುವುದನ್ನೂ ಗಾಂಧಿ ಗಮನಿಸಿದ್ದರು. ಆದರೆ ಮುಸ್ಲಿಮರಿದ್ದ ಭಾರತವನ್ನು ಧಾರ್ಮಿಕವಾಗಿ ಮಲಿನಗೊಳಿಸಿದ ಬ್ರಿಟಿಷ್ ಪ್ರಭುತ್ವದ ವಿರುದ್ಧ ಆಫ್ಘನಿಸ್ತಾನವೇನಾದರೂ ಯುದ್ಧ ಹೂಡಿದರೆ ಭಾರತದ ಮುಸ್ಲಿಮರು ಆ ದೇಶದ ಪರವಾಗಿ ನಿಲ್ಲುವುದಾಗಿ ಮೊಹಮ್ಮದಲಿ ನೀಡಿದ ಹೇಳಿಕೆಗೆ, ಗಾಂಧಿ ವಿರೋಧ ವ್ಯಕ್ತಪಡಿಸಿದರಲ್ಲದೆ ಅಂತಹ ಸಂದರ್ಭದಲ್ಲಿ ಹಿಂದೂಗಳು ಬ್ರಿಟಿಷ್ ಪ್ರಭುತ್ವದ ಪರವಾಗಿ ನಿಲ್ಲುವರೆಂದು ಅವರಿಗೆ ಸ್ಪಷ್ಟವಾಗಿ ತಿಳಿಸಿದರು. ಆಫ್ಘನಿಸ್ತಾನದ ಅಮೀರನೊಂದಿಗೆ ಅಷ್ಟೇನೂ ಒಳ್ಳೆಯ ಸಂಬಂಧ ಹೊಂದಿರದ ಬ್ರಿಟಿಷ್ ಪ್ರಭುತ್ವ, ಅಲಿಯವರ ಈ ಹೇಳಿಕೆಯ ಬಗ್ಗೆ ಗಾಂಧಿಯವರಲ್ಲಿ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿತು, ಈ ಸಂಬಂಧವಾಗಿ ಭಾರತಕ್ಕೆ ಹೊಸ ವೈಸ್‌ರಾಯ್ ಆಗಿ ಬಂದಿದ್ದ ರೀಡಿಂಗ್‌ರನ್ನು ಶಿಮ್ಲಾದಲ್ಲಿ ಭೇಟಿ ಮಾಡಬೇಕಾಗಿ ಬಂದ ಗಾಂಧಿ, ಮೊಹಮ್ಮದಲಿ ತಮ್ಮ ಹೇಳಿಕೆಯನ್ನು ವಾಪಸ್ ತೆಗೆದುಕೊಂಡು ವಿಷಾದ ವ್ಯಕ್ತಪಡಿಸುವಂತೆ ಮಾಡಿದರು. ಇದರಿಂದಾಗಿ ಅಲಿ ಸೋದರರನ್ನು ಬಂಧಿಸಬೇಕೆಂದಿದ್ದ ಪ್ರಭುತ್ವ, ಮತ್ತಷ್ಟು ಕಾಲ ಕಾದು ನೋಡಲು ನಿರ್ಧರಿಸಿತು. ಗಾಂಧಿಯವರೊಡನೆ ಮಾತುಕತೆಯಿಂದ ಪ್ರಭಾವಿತರಾಗಿದ್ದ ವೈಸ್‌ರಾಯ್ ರೀಡಿಂಗ್, ಗಾಂಧಿ ಓರ್ವ ವಿಶ್ವಾಸಾರ್ಹ ಸಜ್ಜನ ಎಂಬ ಅಭಿಪ್ರಾಯ ತಾಳಿದ್ದರು.

ವಿದೇಶೀ ಬಟ್ಟೆಗಳಿಗೆ ಬೆಂಕಿ

ವಿದೇಶೀ ವಸ್ತುಗಳ ಬಹಿಷ್ಕಾರ ಅಸಹಕಾರ ಚಳುವಳಿಯ ಒಂದು ಮುಖ್ಯ ಕಾರ್ಯಕ್ರಮವಾಗಿತ್ತು. ಮುಖ್ಯವಾಗಿ ಭಾರತೀಯ ಬಡ ಕಸುಬುದಾರರಿಂದ ಕೆಲಸ ಮತ್ತು ಜೀವನೋಪಾಯವನ್ನು ಕಸಿದುಕೊಳ್ಳಲು ಕಾರಣವಾಗಿದ್ದ ವಿದೇಶಿ ಬಟ್ಟೆಯ ಬಹಿಷ್ಕಾರ ಈಗ ಗಾಂಧಿಯವರ ಬಹು ಕಾಳಜಿಯ ಕಾರ್ಯಕ್ರಮವಾಗಿತ್ತು. ಆದರೆ ವಿದೇಶೀ ಬಟ್ಟೆಗಳನ್ನು ಸುಡುವುದರ ಬಗ್ಗೆ–ಅದು ವಿದೇಶೀಯರ ಬಗ್ಗೆ ಹಗೆ ಹುಟ್ಟಿಸಲು ಕಾರಣವಾಗಬಹುದೆಂಬ ಅನುಮಾನದಿಂದ–ಅಷ್ಟೇನೂ ಒಲವಿಲ್ಲದಿದ್ದ ಅವರು, ಈಗ

ತಮ್ಮ ಕೆಲ ಅನುಯಾಯಿಗಳ ಒತ್ತಾಯದ ಮೇರೆಗೆ, ಅದರ ಬಗ್ಗೆ ಮರುಚಿಂತನೆ ಮಾಡಿ ಅದಕ್ಕೆ ಒಪ್ಪಿಗೆ ನೀಡಿದರು. ಅಷ್ಟೇ ಅಲ್ಲದೇ, ಜುಲೈ ೩೧ರಂದು ಬಾಂಬೆಯಲ್ಲಿ ತಿಲಕರ ಪುಣ್ಯತಿಥಿಯ ದಿನ ಒಂದು ಬೃಹತ್ ಸಭೆಯ ಮುಂದೆ ವಿದೇಶೀ ಬಟ್ಟೆಗಳ ರಾಶಿಗೆ ಬೆಂಕಿ ಇಡುವ ಕಾರ್ಯಕ್ರಮಕ್ಕೆ ತಾವೇ ಚಾಲನೆ ನೀಡಿದರು. ಗಾಂಧಿ ಈ ಸಂದರ್ಭದಲ್ಲಿ ಮಾತನಾಡುತ್ತಾ, ವಿದೇಶೀ ವಸ್ತ್ರದ ಜಾಗದಲ್ಲಿ ಸ್ವದೇಶದ ಹತ್ತಿ ಗಿರಣಿಗಳ ಬಟ್ಟೆ ಬಳಸದೆ ಖಾದಿ ಬಟ್ಟೆ ಧರಿಸಬೇಕೆಂದು ಜನರಿಗೆ ಕರೆಕೊಟ್ಟರು. ಇದು ಸಾಧ್ಯವಾಗಲು ಪ್ರತಿಯೊಬ್ಬರೂ ದಿನದ ಅರ್ಧ ಘಂಟೆ ಚರಕದಲ್ಲಿ ನೂಲುವ ಕೆಲಸವನ್ನು ಮಾಡಬೇಕೆಂದು ಕೋರಿದರು. ಚರಕಾ ತಿರುಗಿಸುವ ಅನುಭವ ಅದರ ಸದ್ದಿನೊಂದಿಗೆ ಧ್ಯಾನದ ಅನುಭವವೇ ಆಗಿ ಅದು ಸರ್ವಶಕ್ತನಾದ ಭಗವಂತನತ್ತ ನಮ್ಮ ಮನಸ್ಸು ತಿರುಗುವಂತೆ ಮಾಡುತ್ತದೆ ಎಂದು ತಮ್ಮ ಅನುಭವವನ್ನು ಜನರೊಂದಿಗೆ ಹಂಚಿಕೊಂಡರು. ಪ್ರಯಾಣದಲ್ಲಿಲ್ಲದ ಸಮಯದಲ್ಲಿ ಮಧ್ಯಾಹ್ನದ ಆಹಾರ ಸ್ವೀಕರಿಸುವ ಮುನ್ನ ಅರ್ಧ ತಾಸು ಚರಕದಲ್ಲಿ ನೂಲುವುದು ಅವರ ದಿನಚರಿಯಾಗಿತ್ತು.

ಬಾಂಬೆಯಲ್ಲಿ ನಡೆದ ವಿದೇಶೀ ವಸ್ತ್ರದಹನದ ಸುದ್ದಿಯಿಂದ ಉತ್ತೇಜಿತರಾದ ಹಲವು ಊರುಗಳ ದೇಶಭಕ್ತರು ತಮ್ಮೂರುಗಳಲ್ಲೂ ವಿದೇಶೀ ವಸ್ತ್ರಗಳಿಗೆ ಬೆಂಕಿ ಇಡುವ ಕಾರ್ಯಕ್ರಮಗಳನ್ನು ಆರಂಭಿಸಿದರು. ಇದರ ಜೊತೆಗೇ ಚುರುಕುಗೊಂಡ ಇನ್ನೊಂದು ಕಾರ್ಯಕ್ರಮವೆಂದರೆ ಮದ್ಯದಂಗಡಿಗಳ ಪ್ರತಿಬಂಧನ. ವಿಶೇಷವಾಗಿ ಹೆಂಗಸರು ಮತ್ತು ಮಕ್ಕಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಹೆಂಡದಂಗಡಿಗಳ ಮುಂದೆ ಧರಣಿ-ಪ್ರತಿಭಟನೆಗಳನ್ನು ನಡೆಸತೊಡಗಿದರು. ಇದು ದೇಶಾದ್ಯಂತ ಎಷ್ಟು ಪರಿಣಾಮಕಾರಿಯಾಯಿತೆಂದರೆ ಹಲವು ಪ್ರಾಂತ್ಯಗಳಲ್ಲಿ ಸರ್ಕಾರದ ಆದಾಯ ಗಣನೀಯವಾಗಿ ಕುಸಿಯತೊಡಗಿತು. ಈ ಸುದ್ದಿ ವೃತ್ತಪತ್ರಿಕೆಗಳಲ್ಲಿ ಹರಡತೊಡಗಿದಂತೆ ಜನ ಇನ್ನಷ್ಟು ಪ್ರಚೋದನೆಗೊಂಡು ಕಾಂಗ್ರೆಸ್ ಅಥವಾ ಗಾಂಧಿ ಸೂಚಿಸದಿದ್ದ ಕಾರ್ಯಕ್ರಮಗಳಲ್ಲೂ ತೊಡಗಿಕೊಂಡರು. ಉದಾ: ಕೆಲವೆಡೆ ರೈತರು ಭೂಗಂದಾಯ ನೀಡಲು ನಿರಾಕರಿಸಿದರು. ಇನ್ನು ಕೆಲವರು ಗಾಂಧಿಯವರ ಅಸಹಕಾರದ ಹೆಸರಿನಲ್ಲಿ ಟಿಕೆಟ್ ಇಲ್ಲದೆ ರೈಲು ಪ್ರಯಾಣ ಮಾಡತೊಡಗಿದರು.

■

೫೮

ರಾಷ್ಟ್ರೀಯತೆ: ಟ್ಯಾಗೋರ್-ಗಾಂಧಿ ಸಂವಾದ

ಇದೇ ವೇಳೆಗೆ ಶಾಂತಿನಿಕೇತನದ ಅಭಿವೃದ್ಧಿಗಾಗಿ ದೇಣಿಗೆ ಸಂಗ್ರಹಿಸಲು ಅಮೆರಿಕಾಗೆ ಹೋಗಿದ್ದ ರಬೀಂದ್ರನಾಥ ಟ್ಯಾಗೋರರು ಸೆಪ್ಟೆಂಬರ್‌ನಲ್ಲಿ ಮರಳಿ ಭಾರತಕ್ಕೆ ಬಂದರು. ಅವರು ಸ್ವತಃ ತಮ್ಮ ಶಾಂತಿನಿಕೇತನದ ಜನ ಅಸಹಕಾರ ಚಳುವಳಿಯ ವಿವಿಧ ಕಾರ್ಯಕ್ರಮಗಳ ಬಗ್ಗೆ ಉತ್ಸಾಹ-ಸಂಭ್ರಮಗಳಿಂದ ಮಾತಾಡುತ್ತಿದ್ದುದನ್ನು ಕಂಡು ದಿಗ್ಭ್ರಾಂತರಾದರು. ಆದರೆ ಇದಕ್ಕೆ ಬಹುಮುನ್ನವೇ ಅವರಿಗೆ ಅಸಹಕಾರದ ಸ್ವರೂಪದ ಪರಿಚಯವಾಗಿ ಅದರ ಬಗ್ಗೆ ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದರು. ಉದಾಹರಣೆಗೆ, ಗಾಂಧಿ ದೇಶೀ ಶಿಕ್ಷಣ ಕಾರ್ಯಕ್ರಮದ ಪ್ರಚಾರದ ಭಾಗವಾಗಿ ಬರೆದಿದ್ದ 'ಇಂಗ್ಲಿಷ್ ಶಿಕ್ಷಣ ಮಾಧ್ಯಮ' ಕುರಿತು ೧೯೨೧ ರ ಏಪ್ರಿಲ್ ೨೭ರ 'ಯಂಗ್ ಇಂಡಿಯಾ ಪತ್ರಿಕೆ'ಯಲ್ಲಿ ಬರೆದ ಒಂದು ಲೇಖನವನ್ನು ಓದಿದ್ದರು. ಅದರಲ್ಲಿ ಗಾಂಧಿ ರಾಜಾರಾಂ ಮೋಹನರಾಯ್ ಮತ್ತು ತಿಲಕರಂಥವರು ಇಂಗ್ಲಿಷ್ ಭಾಷೆಯಲ್ಲಿ ಚಿಂತಿಸಿ ತಮ್ಮ ವಿಚಾರಗಳನ್ನು ಮಂಡಿಸುವ ಸಮಸ್ಯೆಗೆ ಒಳಗಾಗಿರದಿದ್ದರೆ ಅವರು ಇನ್ನೂ ದೊಡ್ಡ ವಿದ್ವಾಂಸರಾಗಿರುತ್ತಿದ್ದರು ಮತ್ತು ಇಂಗ್ಲಿಷ್ ಶಿಕ್ಷಣವಿಲ್ಲದಿದ್ದರೆ ಸ್ವಾತಂತ್ರ್ಯದ ಪರಿಕಲ್ಪನೆ, ವಿಚಾರ ಶಿಸ್ತು, ನಿಖರ ಚಿಂತನೆಗಳು ಸಾಧ್ಯವಿಲ್ಲ ಎಂಬುದು ಮೌಢ್ಯಗಳಲ್ಲೇ ಅತ್ಯಂತ ಕೆಟ್ಟ ಮೌಢ್ಯವಾಗಿ, ಅದು ಭಾರತೀಯರ ಮನಸ್ಸು ಮತ್ತು ದೇಹಗಳೆರಡನ್ನೂ ಕುಗ್ಗಿಸಿದೆ ಎಂದು ಬರೆದಿದ್ದರು.

ಇದನ್ನು ಟ್ಯಾಗೋರರ ಗಮನಕ್ಕೆ ತಂದಿದ್ದವರು ಗಾಂಧಿಯವರ ಅಸಹಕಾರ ಚಳುವಳಿಯ ಬಗ್ಗೆ ಭಿನ್ನಾಭಿಪ್ರಾಯ ಹೊಂದಿದ್ದ ಸಿ.ಎಫ್. ಆ್ಯಂಡ್ರ್ಯೂಸ್ ಅವರು. ಅವರ ಪ್ರಕಾರ ವಿದೇಶೀ ವಸ್ತುಗಳ ಬಹಿಷ್ಕಾರ ಜನಾಂಗದ್ವೇಷಕ್ಕೆ ಕಾರಣವಾಗುವುದು. ಆದರೆ ಗಾಂಧಿ, ಅವರಿಗೆ ಉತ್ತರ ಬರೆದು, ತಮ್ಮ ಬಹಿಷ್ಕಾರ ನಮ್ಮ ಜನರ ಕೈಯಿಂದ ಕೆಲಸ ಕದ್ದು ಅವರನ್ನು ದರಿದ್ರಾವಸ್ಥೆಗೆ ತಳ್ಳಿರುವ ಬಟ್ಟೆ ಉದ್ಯಮಕ್ಕೆ ಮಾತ್ರ ಸಂಬಂಧಿಸಿದ್ದಾದ್ದರಿಂದ ಇದು ಜನಾಂಗದ್ವೇಷಕ್ಕೆ ಕಾರಣವಾಗುವುದಿಲ್ಲ ಎಂದು ವಿವರಿಸಿದ್ದರು. ಆದರೆ ತೃಪ್ತರಾಗದ ಆ್ಯಂಡ್ರ್ಯೂಸ್ ತಮ್ಮ ಅಳಲನ್ನು, ಗಾಂಧಿಯವರ ಈ ಲೇಖನವನ್ನು ಟ್ಯಾಗೋರರೊಂದಿಗೆ ಹಂಚಿಕೊಳ್ಳುವ ಮೂಲಕ ಅವರಿಗೆ ಮುಟ್ಟಿಸಿದ್ದರು.

ಗಾಂಧಿಯವರ ಈ ವಿಚಾರವನ್ನು ಒಪ್ಪದ ಟ್ಯಾಗೋರರು 'ರಾಜಾರಾಂ ಮೋಹನರಾಯ್ ಪೂರ್ವದ ವಿವೇಕದ ಪರಿಪೂರ್ಣ ಅಭ್ಯಾಸ ಮಾಡಿದ ನಂತರ ಪಶ್ಚಿಮದ ಭಾಷೆಗಳಿಗೆ, ವಿಚಾರಗಳಿಗೆ ತೆರೆದುಕೊಂಡು, ಅದರ ಪರಿಣಾಮವಾಗಿ ಭಾರತ

ತನ್ನ ಬಿಡುಗಡೆಗಾಗಿ ಪಶ್ಚಿಮದತ್ತ ನೋಡಬೇಕೆಂದುದು ಸರಿಯಾಗಿಯೇ ಇರುವುದರಿಂದ, ರಾಯ್‌ರಂತಹ ಆಧುನಿಕ ಚಿಂತಕರನ್ನು ಟೀಕಿಸುವುದು ಸಂಕುಚಿತ ರಾಷ್ಟ್ರೀಯತೆಯ ಫಲ ಮಾತ್ರವಾಗಿದೆ ಎಂದು ಪ್ರತಿಕ್ರಿಯಿಸಿದರು. ಅಲ್ಲದೆ ಗಾಂಧಿ ತಮ್ಮ ವಿಚಾರಗಳಿಂದ ತಾವೇ ಮೋಹಿತರಾಗಿ ಕುರುಡಾಗಿದ್ದಾರೆ; ಹಾಗಾಗಿಯೇ ಅವರ ಚಳುವಳಿಯ ಅಸಹಕಾರ ಎಂಬ ಹೆಸರಿನಲ್ಲಿಯೇ ನೇತ್ಯಾತ್ಮಕತೆ ಇದೆ ಎಂದೂ ಅವರು ಆ್ಯಂಡ್ರ್ಯೂಸ್‌ಗೆ ಬರೆದರು. ಇದನ್ನು ಅವರು ಪತ್ರಿಕೆಗಳಲ್ಲಿ ಪ್ರಕಟಿಸಿಯೂಬಿಟ್ಟರು.

ಎಲ್ಲ ಕಿಟಕಿಗಳೂ ತೆರದಿರಲಿ, ಆದರೆ...

ಇದಕ್ಕೆ ಮತ್ತೆ 'ಯಂಗ್ ಇಂಡಿಯಾ'ದಲ್ಲೇ ಪ್ರತಿಕ್ರಿಯಿಸಿದ ಗಾಂಧಿ, 'ನಮ್ಮ ಪ್ರಾಚೀನ ವಿವೇಕದ ಪ್ರತೀಕವಾದ ಉಪನಿಷತ್ತುಗಳಲ್ಲಿ ಸಕಾರಾತ್ಮಕತೆಯ ಪ್ರತಿರೂಪವಾದ ಭಗವಂತನ ಹತ್ತಿರ ಸಾರುವುದು 'ನೇತಿ' ಎಂಬ ನೇತ್ಯಾತ್ಮಕ ಅರ್ಥದ ಶಬ್ದದ ಮೂಲಕವೇ' ಎಂದು ಆರಂಭಿಸಿ, 'ಆ್ಯಂಡ್ರ್ಯೂಸ್‌ರಂತೆಯೇ ಹಲವು ಪಾಶ್ಚಾತ್ಯರನ್ನು ಸ್ನೇಹಿತರನ್ನಾಗಿ ಉಳ್ಳಂಥ ಅಸಹಕಾರ ಚಳುವಳಿಕಾರರು ಅನೇಕರಿದ್ದು, ಅವರ ಮೇಲೆ ಸಂಕುಚಿತ ರಾಷ್ಟ್ರೀಯತೆಯ ಆರೋಪ ಹೊರಿಸಲಾಗದು' ಎನ್ನುತ್ತಾ, ಈಗ ಬಹು ಪ್ರಸಿದ್ಧವಾಗಿರುವ ಈ ಸಾಲುಗಳೊಂದಿಗೆ ತಮ್ಮ ಉತ್ತರವನ್ನು ಮುಗಿಸಿದರು: 'ನಾನು ಆ ಮಹಾನ್ ಕವಿಯಂತೆಯೇ ಮುಕ್ತ ವಿಚಾರ ಪ್ರಸಾರದಲ್ಲಿ ಆಳವಾದ ನಂಬಿಕೆಯುಳ್ಳವನೇ ಎಂದು ಹೇಳಬಯಸುವೆ. ನನ್ನ ಮನೆ ಎಲ್ಲ ಕಡೆಯಿಂದ ಗೋಡೆಗಳಿಂದ ಸುತ್ತುವರಿಯಲ್ಪಟ್ಟು ಕಿಟಕಿಗಳು ಮುಚ್ಚಲ್ಪಟ್ಟಿರಬೇಕೆಂದು ಬಯಸುವವನು ನಾನಲ್ಲ. ನನ್ನ ಮನೆಗೆ ಎಲ್ಲ ನಾಡುಗಳ ಎಲ್ಲ ಸಂಸ್ಕೃತಿಗಳ ಪರಿಮಳ ಹೊತ್ತ ಗಾಳಿ ಮುಕ್ತವಾಗಿ ಬೀಸಲಿ. ಆದರೆ ಆ ಗಾಳಿ ನನ್ನನ್ನು ನನ್ನ ನೆಲದಿಂದಲೇ ಹೊತ್ತೊಯ್ಯುವುದನ್ನು ನಾನು ಬಯಸುವುದಿಲ್ಲ.'

ಈ ಸಂವಾದ ಗಾಂಧಿ, ಅಸಹಕಾರ ಚಳುವಳಿಯ ಸಂಬಂಧದ ತಮ್ಮ ಅಸ್ಸಾಂ ಮತ್ತು ಪೂರ್ವ ಬಂಗಾಳಗಳ ಪ್ರವಾಸ ಮುಗಿಸಿ ಆಂಧ್ರದತ್ತ ತೆರಳುವ ಮುನ್ನ ಸೆಪ್ಟೆಂಬರ್ ಮೊದಲ ವಾರದಲ್ಲಿ ಟ್ಯಾಗೋರರನ್ನು ಕಲ್ಕತ್ತಾದಲ್ಲಿ ಭೇಟಿಯಾಗಿ ನಡೆಸಿದ ಉಭಯ ಕುಶಲೋಪರಿಯ ಮಾತುಕತೆ ನಂತರವೂ ತೀವ್ರ ರೂಪದಲ್ಲಿ ಮುಂದುವರೆಯಿತು. ಅಸಹಕಾರ ಚಳುವಳಿಯ ಹಿಂದಿನ ರಾಷ್ಟ್ರೀಯತೆಯ ಭಾವನೆ ಕುರಿತ ತಮ್ಮ ಟೀಕೆಗೆ ಗಾಂಧಿ ನೀಡಿದ್ದ ಉತ್ತರದಿಂದ ತೃಪ್ತರಾಗದ ಟ್ಯಾಗೋರ್, ಅಕ್ಟೋಬರ್‌ನಲ್ಲಿ 'ಮಾರ್ಡನ್ ರಿವ್ಯೂ' ಎಂಬ ಪ್ರತಿಷ್ಠಿತ ಪತ್ರಿಕೆಯಲ್ಲಿ ಮತ್ತೆ ತಮ್ಮ ವಾದವನ್ನು ವಿವರವಾಗಿ ಮಂಡಿಸಿದರು. ತಾವು ತಮ್ಮ ವಿದೇಶ ಪ್ರವಾಸದಲ್ಲಿ ಅಲ್ಲಿನ ಜನ ರಾಷ್ಟ್ರೀಯತೆಯ ಬಂಧನಗಳಿಂದ ಬಿಡುಗಡೆಗೊಂಡು, ಮಾನವತೆಯ ಏಕತೆಗೆ ಪ್ರಯತ್ನಿಸುತ್ತಿರುವುದನ್ನು ಕಂಡರೆ, ಇಲ್ಲಿ ನಮ್ಮ ದೇಶದಲ್ಲಿ ಇತರರ ತಪ್ಪುಗಳನ್ನು ಹಳಿಯುತ್ತಾ ಅದರ ಮೇಲೆ 'ಸ್ವರಾಜ್ಯ'ದ ಕಟ್ಟಡವನ್ನು ಕಟ್ಟುವ ಪ್ರಯತ್ನ ನಡೆದಿರುವುದನ್ನು ಕಂಡು ತಮಗೆ ಖೇದವೆನಿಸಿದೆ ಎಂದು ಅವರು ಈ ಲೇಖನದಲ್ಲಿ ಬರೆದಿದ್ದರು. ಅಲ್ಲದೆ ರಾಷ್ಟ್ರೀಯತೆ ಮತ್ತು ಅನ್ಯ ಅಸಹಿಷ್ಣುತೆಯ ನಡುವೆ ಒಂದು ತೆಳುಗೆರೆ ಮಾತ್ರವಿದೆ ಎಂದು ಅಭಿಪ್ರಾಯಪಟ್ಟಿದ್ದ ಅವರು ನೂಲುವ, ನೇಯುವ ಮಾತುಗಳಿಂದ 'ಸ್ವರಾಜ್ಯ'

ಸಿದ್ಧಿಸಲಾಗದೆಂದು ಸೂಚಿಸಿದ್ದರ ಜೊತೆಗೆ, ವಿದೇಶಿ ಬಟ್ಟೆಗಳನ್ನು ಸುಡುವ ಕಾರ್ಯಕ್ರಮ ಅಂತಿಮ ಪರಿಣಾಮದಲ್ಲಿ ನಮ್ಮ ಜನಗಳ ಮಧ್ಯೆಯೇ ಜಗಳಗಂಟತನ ಮತ್ತು ಪರಸ್ಪರ ದ್ವೇಷ ಬೆಳೆಸುವ ಕೆಲಸವಾಗಲಿದೆ ಎಂದು ಜರಿದಿದ್ದರು. ಅವರ ಪ್ರಕಾರ ಬಟ್ಟೆ ಇಲ್ಲದವರ ದೇಶದ ಜನರಿಗೆ ಒದಗಿದ ಬಟ್ಟೆಯನ್ನೂ ಕಿತ್ತುಕೊಳ್ಳುವ ದುರಾಚಾರವೂ ಇದಾಗಿತ್ತು.

ಕವಿ ಮನಸ್ಸಿನ ದೋಷಗಳು!

ಇದಕ್ಕೆ ಅದೇ ಪತ್ರಿಕೆಯಲ್ಲಿ ಉತ್ತರ ನೀಡಿದ ಗಾಂಧಿ, ಟ್ಯಾಗೋರರ ಈ ಬರಹ ಕವಿಯೊಬ್ಬ ತನ್ನ ಕವಿತ್ವದ ಕಲ್ಪನಾಶೀಲತೆಯಿಂದ ಲೋಕವಾಸ್ತವಕ್ಕೆ ಎಚ್ಚರಾಗುವ ಶ್ಲಾಘನೀಯ ಪ್ರಯತ್ನ ಎಂದು ಬಣ್ಣಿಸುತ್ತಾ, ತಮ್ಮದು ಪ್ರತ್ಯೇಕವಾದಿ, ಆಕ್ರಾಮಕ ಅಥವಾ ವಿನಾಶಕಾರಿಯಾದ ರಾಷ್ಟ್ರೀಯತೆ ಅಲ್ಲ ಎಂದು ಸ್ಪಷ್ಟಪಡಿಸಿ, ಭಾರತ, ಜಗತ್ತನ್ನು ಅರ್ಥ ಮಾಡಿಕೊಳ್ಳುವ ಮೊದಲು ತನ್ನನ್ನು ತಾನು ಅರ್ಥ ಮಾಡಿಕೊಳ್ಳಲು ತನ್ನೊಳಗನ್ನೊಮ್ಮೆ ಅವಲೋಕಿಸಬೇಕಿದ್ದು, ಅದರ ಪ್ರಯತ್ನ ಈಗ ನಡೆದಿದೆ ಎಂದು ವಿವರಿಸಿದರು. ಟ್ಯಾಗೋರರ ಮಾತುಗಳು ಬೆಕ್ಕಿನ ಹಲ್ಲುಗಳ ನಡುವೆ ಸಿಕ್ಕಿಕೊಂಡಿರುವ ಇಲಿ ಹುತಾತ್ಮನಾಗಬೇಕೆಂದು ಬಯಸುವಂತಿದೆ ಎಂದ ಅವರು, ಭಾರತೀಯರು ಮಾನವತೆಗಾಗಿ ಪ್ರಾಣಕೊಡಲು ತಾವು ಮೊದಲು ಪ್ರಾಣ ರಕ್ಷಿಸಿಕೊಳ್ಳಬೇಕಿದೆ ಎಂದು ಸೂಚಿಸಿದರು. ಬಟ್ಟೆ ಸುಡುವುದು ದುರಾಚಾರ ಎಂಬ ಟ್ಯಾಗೋರರ ಟೀಕೆಗೆ ವಿವರವಾಗಿ ಪ್ರತಿಕ್ರಿಯಿಸಿದ ಅವರು ಹೀಗೆ ಬರೆದರು: ಕವಿ ಮುಂಜಾವಿನಲ್ಲಿ ಹಕ್ಕಿಗಳು ರೆಕ್ಕೆ ಬಡಿಯುತ್ತಾ ಹರ್ಷದಿಂದ ದಿನದ ಬದುಕಿಗೆ ಹಾರುವುದನ್ನು ಕಂಡು ರೋಮಾಂಚನಗೊಳ್ಳುವುದು ಸಹಜವಾದರೂ, ಅದು ಆ ಹಕ್ಕಿಗಳೆಲ್ಲ ಹಿಂದಿನ ರಾತ್ರಿ ಮಲಗುವ ಮುನ್ನ ಹೊಟ್ಟೆ ತುಂಬ ಉಂಡು ಸುಖವಾಗಿ ನಿದ್ರಿಸಿ ಈಗ ಹೊಸ ಹುರುಪಿನಿಂದ ಹಾರುತ್ತಿವೆ ಎಂಬ ನಂಬಿಕೆಯನ್ನು ಆಧರಿಸಿದೆ. ಆದರೆ ನಾನು ನೋಡುತ್ತಿರುವುದು ಊಟವಿಲ್ಲದೆ ರಾತ್ರಿ ಕಳೆಯುತ್ತಿರುವ ಹಕ್ಕಿಗಳನ್ನು. ಅನ್ನವಿಲ್ಲದವನಿಗೆ ಅನ್ನವೇ ದೇವರು. ಆ ದೇವರನ್ನು ಕಾಣದ ಜನ ಬದುಕಿಕೊಳ್ಳಲು ಕಳ್ಳರಾಗುತ್ತಾರೆ. ಹಾಗೆ ಭಾರತವಿಂದು ಕಳ್ಳರ ಒಂದು ದೊಡ್ಡ ಬಂದೀಖಾನೆಯಾಗಿದೆ. ಅವರನ್ನು ಅದರಿಂದ ಬಿಡುಗಡೆಗೊಳಿಸುವ ಏಕೈಕ ಮಾರ್ಗ, ಅವರ ಕೈಗೆ ಕೆಲಸಕೊಟ್ಟು ಅವರಿಗೆ ಅವರ ಘನತೆಯನ್ನು ಮರಳಿ ಕೊಡಿಸುವುದು. ಅವರನ್ನು ಮತ್ತೆ ಗುಲಾಮಗಿರಿಯ ಸೆರೆಮನೆಗೆ ತಳ್ಳುವ ಉಪಾಯವಾದ ವಿದೇಶೀ ಬಟ್ಟೆಯನ್ನು ಅವರಿಗೆ ನೀಡುವುದು ಈ ಘನತೆಗೆ ಕುಂದುಂಟು ಮಾಡುವ ಕೆಲಸ. ತನ್ನ ಅನ್ನ ಬಟ್ಟೆಗಳಂತಹ ಅವಶ್ಯಕತೆಗಳನ್ನು ಬೆವರಿಳಿಸಿ ಸಂಪಾದಿಸಿಕೊಳ್ಳುವ ದುಡಿಮೆಯ ತತ್ವವೂ ಇದರಲ್ಲಡಗಿದೆ. ವಸ್ತ್ರ ದಹನವು ವಿದೇಶೀಯರ ಮೇಲಿನ ಸಿಟ್ಟನ್ನು ಅವರ ಉತ್ಪನ್ನಗಳ ಕಡೆ ತಿರುಗಿಸುವ ಪ್ರಯತ್ನವೂ ಹೌದು. ತಮಗೆ ಬ್ರಿಟಿಷ್ ಜನರ ಮೇಲೆ ದ್ವೇಷವಿಲ್ಲ ಎಂಬುದಕ್ಕೆ ಕೆಲವು ತಿಂಗಳುಗಳ ಹಿಂದಷ್ಟೇ ತಾವು ದೆಹಲಿಯಲ್ಲಿ ಹಕೀಂ ಅಜ್ಮಲ್ ಖಾನ್ ಅವರು ಸ್ಥಾಪಿಸಿದ್ದ ರಾಷ್ಟ್ರೀಯ ವೈದ್ಯಕೀಯ ವಿದ್ಯಾಲಯದಲ್ಲಿ, ಸಜ್ಜನ ದಂಪತಿಗಳಾದ ಹಾರ್ಡಿಂಜ್ ಮತ್ತು ಶ್ರೀಮತಿ ಹಾರ್ಡಿಂಜರ ಭಾವ ಚಿತ್ರಗಳ ಅನಾವರಣ ಮಾಡಿರುವುದೇ ಸಾಕ್ಷಿ ಎಂದೂ ಅವರು ಹೇಳಿದರು.

ಟ್ಯಾಗೋರರನ್ನು ವಿರೋಧಿಸಿದ ಇಬ್ಬರು ಬಂಗಾಳಿ ಗಣ್ಯರು

ಈ ವಿಷಯದಲ್ಲಿ ಗಾಂಧಿಯವರಿಗೆ ಬಂಗಾಳದಿಂದಲೇ ಇಬ್ಬರು ಗಣ್ಯರ ಬೆಂಬಲ ದೊರೆಯಿತು. ಅವರೆಂದರೆ ರಬೀಂದ್ರರ ಅಣ್ಣ ಮತ್ತು ಬಂಗಾಳದ ಬಹು ಜನಪ್ರಿಯ ಕವಿ ಹಾಗೂ ಸಂಗೀತ ಸಂಯೋಜಕರಾಗಿದ್ದ ದ್ವಿಜೇಂದ್ರನಾಥ ಟ್ಯಾಗೋರ್ ಮತ್ತು ಖ್ಯಾತ ವಿಜ್ಞಾನಿ ಮತ್ತು ಉದ್ಯಮಿ ಪ್ರಫುಲ್ಲಚಂದ್ರ ರೇ. ಅಸಹಕಾರ ಚಳುವಳಿಯ ಆರಂಭದಿಂದಲೂ ಅದರ ಬೆಂಬಲಿಗರಾಗಿದ್ದ ದ್ವಿಜೇಂದ್ರರು, ತಮ್ಮ ರಬೀಂದ್ರರು ಈ ಚಳುವಳಿಯ ಬಗ್ಗೆ ತಳೆದಿರುವ ನಿಲುವು ಜಾಗತಿಕ ಭ್ರಾತೃತ್ವದ ಬೆಳವಣಿಗೆಗೆ ಮಾರಕವಾದದ್ದು ಎಂದಿದ್ದರಲ್ಲದೆ ನೀವೊಬ್ಬರೇ ಭಾರತದ ಇಂದಿನ ಆಶಾಕಿರಣ ಎಂದು ಗಾಂಧಿಯವರಿಗೆ ಪತ್ರದಲ್ಲಿ ತಿಳಿಸಿದ್ದರು. ಇನ್ನು ತಮ್ಮ ವೈಜ್ಞಾನಿಕ ಅನ್ವೇಷಣೆಗಳ ಮೂಲಕ ರೂಪಿಸಿಕೊಂಡಿದ್ದ ಹೊಸ ಉಪಕರಣ ಮತ್ತು ಉತ್ಪನ್ನಗಳ ತಯಾರಿಕೆಗೆ ಪದೇ ಪದೇ ಅಡ್ಡಿ ಉಂಟುಮಾಡುತ್ತಿದ್ದ ಬ್ರಿಟಿಷ್ ಪ್ರಭುತ್ವದ ಬಗ್ಗೆ ಜಿಗುಪ್ಸೆಗೊಂಡಿದ್ದ ಪಿ.ಸಿ.ರೇ ಅವರು, ತಮ್ಮ ಸಾರ್ವಜನಿಕ ಹೇಳಿಕೆಯಲ್ಲಿ ರಬೀಂದ್ರರು ದೇಶದ ಹಿತದ ವಿರುದ್ಧ ಮಾತಾಡದೆ ಮೌನವಾಗಿದ್ದರೇ ಒಳ್ಳೆಯದಿತ್ತು ಎಂದು ಅಭಿಪ್ರಾಯ ಪಟ್ಟು, ಅವರು ಗಾಂಧಿಯನ್ನು ಆಧುನಿಕ ಭಾರತದ ರಕ್ಷಕ ಮತ್ತು ಭವಿಷ್ಯದ ಭಾರತದ ನಿರ್ಮಾತೃ ಎಂದು ವರ್ಣಿಸಿದ್ದರು.

ದಕ್ಷಿಣಕ್ಕೆ ಪ್ರವಾಸ-ಕನಿಷ್ಠ ಉಡುಗೆಯ ನಿರ್ಧಾರ

ಕಲ್ಕತ್ತಾದಿಂದ ಗಾಂಧಿ ದಕ್ಷಿಣಕ್ಕೆ ಹೊರಟು ಸೆಪ್ಟೆಂಬರ್ ೧೪ರಂದು ವಾಲ್ಟೇರ್ ತಲುಪಿದಾಗ ಅಲ್ಲಿ ಕಾಯುತ್ತಿದ್ದ ಪೊಲೀಸರು, ಮೊಹಮ್ಮದಲಿ ಅವರನ್ನು ಅವರ ದೇಶವಿರೋಧಿ ಭಾಷಣಗಳ ಆರೋಪದ ಮೇಲೆ ಬಂಧಿಸಿತು. ಅವರ ಸೋದರ ಶೌಕತ್ ಅಲಿ ಅವರನ್ನು ಸಂಯುಕ್ತ ಪ್ರಾಂತ್ಯಗಳ ಸರ್ಕಾರ ಈ ಮೊದಲೇ ಬಂಧಿಸಿತ್ತು. ಇದೇ ಸಮಯದಲ್ಲಿ ಗಾಂಧಿಯವರನ್ನು ಬಂಧಿಸಲು ಸರ್ಕಾರ ಯೋಚಿಸಿತಾದರೂ, ಅವರ ಬಂಧನ, ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸೀತು ಎಂದು ಸುಮ್ಮನಾಯಿತು. ವಾಲ್ಟೇರ್‌ನಿಂದ ಮದ್ರಾಸ್‌ಗೆ ಒಂಟಿಯಾಗಿ ಬಂದ ಗಾಂಧಿ, ಮದ್ರಾಸ್‌ನಲ್ಲಿ ರಾಜಾಜಿಯವರನ್ನು ಕೂಡಿಕೊಂಡು ಆ ಪ್ರಾಂತ್ಯದ ಪ್ರವಾಸಕ್ಕೆ ಹೊರಟರು. ಅವರು ಸೆಪ್ಟೆಂಬರ್ ೨೨ರಂದು ಮಧುರೈನಲ್ಲಿ ತಂಗಿದ್ದಾಗ ತಮ್ಮ ಬದುಕಿನ ಒಂದು ದೊಡ್ಡ ನಿರ್ಧಾರ ಕೈಗೊಳ್ಳುವ ಮನಸ್ಸಾಯಿತು. ಅವರು ತಮ್ಮ ಉಡುಪನ್ನು ಕನಿಷ್ಠಗೊಳಿಸಿಕೊಳ್ಳಲು ತೀರ್ಮಾನಿಸಿದ್ದರು. ಅವರು ಬಂಗಾಳದ ಬರಿಸಾಲ್ ಪ್ರದೇಶದಲ್ಲಿ ವೇಶ್ಯಾವೃತ್ತಿಗೆ ಬಲಿಯಾಗಿದ್ದ ಹೆಂಗಸರೊಂದಿಗೆ ಮಾತಾಡುತ್ತಿದ್ದಾಗ, ಅವರ ಹರಿದ ಸೀರೆಗಳನ್ನು ನೋಡಿ, ಅವರಿಗೆ ಮಾನಮುಚ್ಚಿಕೊಳ್ಳಲು ಉಟ್ಟಿದ್ದ ಬಟ್ಟೆಯ ಹೊರತಾಗಿ ಇನ್ನೊಂದು ಬಟ್ಟೆಯ ತುಂಡಿಲ್ಲ ಎಂಬುದು ಗೊತ್ತಾಗುತ್ತಲೇ ತಮ್ಮ ಉಡುಪಿನ ಬಗ್ಗೆ ಪುನರಾಲೋಚನೆಗೆ ತೊಡಗಿದ್ದರು. ಮಧುರೈನಲ್ಲಿ ಖಾದಿ ಬಗ್ಗೆ ಚರ್ಚೆ ನಡೆದಾಗ ಯಾರೋ ಒಬ್ಬರು ಅಗತ್ಯವಿದ್ದಷ್ಟು ಖಾದಿ ಬಟ್ಟೆ ದೊರಕುತ್ತಿಲ್ಲ ಮತ್ತು ದೊರಕಿದರೂ ಅದನ್ನು ಕೊಳ್ಳುವಷ್ಟು ಹಣವಿಲ್ಲ ಎಂದಾಗ ಗಾಂಧಿ ತಾವು ತೊಡುತ್ತಿದ್ದ ಟೋಪಿ, ಧೋತರ ಮತ್ತು ಅಂಗಿಗಳನ್ನು ತೊರೆದು ಸೊಂಟಕ್ಕೊಂದು ಮಂಡಿವರೆಗಿನ ಮುಂಡು

ಮತ್ತು ಎದೆಯ ಮೇಲೆ ಒಂದು ತುಂಡು ಬಟ್ಟೆಗೆ ಸೀಮಿತವಾಗಲು ನಿರ್ಧರಿಸಿದರು. ಇದನ್ನು ಅತಿ ಎಂದು ರಾಜಾಜಿಯವರು ಸೇರಿದಂತೆ ಅವರ ಬಹುತೇಕ ಅನುಯಾಯಿಗಳು ವಿರೋಧಿಸಿದರೂ ಗಾಂಧಿ ನಿರ್ಧಾರ ಅಚಲವಾಗಿತ್ತು.

ಪ್ರವಾಸವನ್ನು ತಡೆದ ಮಾಪಿಳ್ಳೆ ದಂಗೆ

ಗಾಂಧಿ ಮಧುರೈನಿಂದ ಮುಂದೆ ಮಲೆಯಾಳ ನಾಡಿಗೆ ಹೊರಡ ಬಯಸಿದ್ದರಾದರೂ, ಮಲಬಾರ್‌ನಲ್ಲಿ ಮಾಪಿಳ್ಳೆಗಳ ದಂಗೆಯಿಂದಾಗಿ ಸರ್ಕಾರ ಅವರಿಗೆ ಅಲ್ಲಿಗೆ ಪ್ರವೇಶ ನಿರಾಕರಿಸಿತು. ನೌಕಾಯಾನದ ಮೂಲಕ ಭಾರತದ ಮಸಾಲೆ ಪದಾರ್ಥಗಳ ವ್ಯಾಪಾರಕ್ಕಾಗಿ ಅರಬ್ ದೇಶಗಳಿಂದ ಕೇರಳವನ್ನು ಪ್ರವೇಶಿಸಿದ ಆದಿ ಮುಸ್ಲಿಮರೆಂದು ಹೇಳಲಾಗುವ ಮಾಪಿಳ್ಳೆಗಳು ಮಸಾಲಾ ವ್ಯಾಪಾರ ಬ್ರಿಟಿಷ್ ಸರ್ಕಾರದ ನೆರವಿನಿಂದಾಗಿ ಕ್ರೈಸ್ತ ವ್ಯಾಪಾರಿಗಳ ಪಾಲಾದಾಗ ಬಡತನಕ್ಕೆ ಸಿಕ್ಕಿದರು. ಹೆಚ್ಚಿನವರು ಬಹುತೇಕ ಹಿಂದೂ ಮೇಲ್ಜಾತಿಗಳಿಗೆ ಸೇರಿದ್ದ ಭೂ ಮಾಲೀಕರ ಬಳಿ ಕೂಲಿಗೆ ನಿಂತರು. ಇವರು ಹೆಚ್ಚಾಗಿ ನೆಲೆಸಿದ್ದ ಉತ್ತರ ಕೇರಳದ ಭಾಗವಾದ ಮಲಬಾರ್‌ನ್ನು ಟಿಪ್ಪು ಸುಲ್ತಾನ ಆಕ್ರಮಿಸಿಕೊಂಡಾಗ ಈ ಭೂ ಕಾರ್ಮಿಕರಿಗೆ ಭೂ ಒಡೆತನದ 'ಸೌಲಭ್ಯ' ನೀಡಲಾಯಿತಾದರೂ ಆ ಪ್ರಾಂತ್ಯ ಮತ್ತೆ ಬ್ರಿಟಿಷರ ಕೈವಶವಾದಾಗ ಈ 'ಸೌಲಭ್ಯ'ವನ್ನು ಹಿಂತೆಗೆದುಕೊಳ್ಳಲಾಯಿತು. ಇದರಿಂದ ಮೊದಲೇ ಕೆರಳಿದ್ದ ಮಾಪಿಳ್ಳೆಗಳು ಖಿಲಾಫತ್ ಚಳುವಳಿಯ ಕರೆಯೇ ನೆಪವಾಗಿ ದಂಗೆಯೆದ್ದು ಸರ್ಕಾರದ ಆಸ್ತಿಪಾಸ್ತಿಗಳನ್ನು ನಾಶ ಮಾಡತೊಡಗಿದರು. ಈ ದಂಗೆಯನ್ನು ಅಡಗಿಸಲು ಸರ್ಕಾರ ನಿರ್ದಯ ಕ್ರಮಗಳನ್ನು ಕೈಗೊಂಡಾಗ ದಂಗೆ ದಿಕ್ಕು ತಪ್ಪಿ ಭೂಮಾಲೀಕರ ವಿರುದ್ಧ ತಿರುಗಿ ಕೋಮು ಸ್ವರೂಪ ಪಡೆಯಿತು. ನೂರಾರು ಹಿಂದೂ ಕುಟುಂಬಗಳ ಮಾರಣಹೋಮ ನಡೆಯಿತು. ಸ್ತ್ರೀಯರ ಮೇಲಿನ ಅತ್ಯಾಚಾರ ಮತ್ತು ಬಲವಂತದ ಮತಾಂತರ ವ್ಯಾಪಕವಾಯಿತು. ಸರ್ಕಾರ ಆಗ ಸೇನಾ ಕಾರ್ಯಾಚರಣೆ ನಡೆಸಿ ಈ ಬರ್ಬರ ಹಿಂಸಾಚಾರವನ್ನು ಕೊನೆಗಾಣಿಸಿತು. ಈ ಕಾರ್ಯಾಚರಣೆಯಲ್ಲಿ ಹತರಾದ ಮಾಪಿಳ್ಳೆಗಳ ಸಂಖ್ಯೆ ಎರಡು ಸಾವಿರಕ್ಕೂ ಹೆಚ್ಚು.

ಈ ದಂಗೆಯ ಆರಂಭದಲ್ಲಿ ಮಾಪಿಳ್ಳೆಗಳ ಧರ್ಮನಿಷ್ಠೆ ಮತ್ತು ಕೆಚ್ಚನ್ನು ಮೆಚ್ಚಿಕೊಂಡ ಗಾಂಧಿ ಮತ್ತು ಕಾಂಗ್ರೆಸ್, ಅದು ಕೋಮು ರೂಪ ತಳೆಯತೊಡಗಿದಾಗ ಅದನ್ನು ಖಂಡಿಸಿದರು. ಈ ಸಂದರ್ಭದಲ್ಲಿ ಗಾಂಧಿ ತಮ್ಮ ಹಿಂದೂ ಮುಸ್ಲಿಂ ಐಕ್ಯತೆಯ ಮತ್ತು ಅಹಿಂಸೆಯ ಸಂದೇಶ ಜನರನ್ನು ಪರಿಣಾಮಕಾರಿಯಾಗಿ ತಲುಪಿಲ್ಲ ಎಂಬುದನ್ನು ಮನಗಂಡರಾದರೂ, ಯಾವ ಗೌರವಾನ್ವಿತ ಮುಸ್ಲಿಮನೂ ಮಾಪಿಳ್ಳೆಗಳ ವರ್ತನೆಯನ್ನು ಮೆಚ್ಚಿಲ್ಲವಾದ್ದರಿಂದ ರಾಷ್ಟ್ರದ ಇತರೆಡೆ ಹಿಂದೂ ಮುಸ್ಲಿಂ ಐಕ್ಯತೆಗೆ ಭಂಗವಾಗದಂತೆ ಹಿಂದೂಗಳು ಉದ್ವಿಗ್ನರಾಗಬಾರದೆಂದು ಮನವಿ ಮಾಡಿದರು. ಈ ಮನವಿಗೆ ಮನ್ನಣೆ ನೀಡಿದ ಹಿಂದೂಗಳು ಎಲ್ಲೂ ಪ್ರತಿಹಿಂಸೆಯ ಪ್ರಯತ್ನ ಮಾಡಲಿಲ್ಲ.

ಆಶ್ರಮದಲ್ಲಿ ಗಾಂಧಿ: ಒಂದು ನೋಟ

ಗಾಂಧಿ ತಮ್ಮ ಪ್ರವಾಸವನ್ನು ಮೊಟಕುಗಳಿಸಿ ಅಹಮದಾಬಾದ್‌ಗೆ ಹಿಂದಿರುಗಿ

ಆಶ್ರಮದ ಕೆಲಸಗಳಲ್ಲಿ ತೊಡಗಿಕೊಂಡರು. ಆ ಸಮಯದಲ್ಲಿ ಅವರ ಆಪ್ತ ಕಾರ್ಯದರ್ಶಿ ಮಹದೇವ ದೇಸಾಯಿಯವರು, ಮೋತಿಲಾಲ್ ನೆಹರೂ ಅವರು ಆರಂಭಿಸಿದ್ದ 'ಇಂಡಿಪೆಂಡೆಂಟ್' ಎಂಬ ರಾಷ್ಟ್ರವಾದಿ ಪತ್ರಿಕೆಯ ತಯಾರಿಯಲ್ಲಿ ಅವರಿಗೆ ನೆರವಾಗಲು ಅಲಹಾಬಾದ್‌ಗೆ ಹೋಗಿದ್ದುದರಿಂದ ದೇಸಾಯಿಯವರ ಕೆಲಸವನ್ನು ಪ್ಯಾರೇಲಾಲ್ ನೋಡಿಕೊಳ್ಳುತ್ತಿದ್ದರು. ಇದೇ ಸಮಯದಲ್ಲಿ ಬಂಗಾಳದಿಂದ ಬಂದಿದ್ದ ಕೃಷ್ಣದಾಸ್ ಎಂಬುವವರು ಆಶ್ರಮಕ್ಕೆ ಬಂದು ಸ್ವಲ್ಪ ಕಾಲವಿದ್ದು ತಮ್ಮ ಅನುಭವಗಳನ್ನು ದಾಖಲಿಸಿದ್ದು, ಅವುಗಳಲ್ಲಿ ಕೆಲವನ್ನು ಆಯ್ದು ರಾಜಮೋಹನ ಗಾಂಧಿಯವರು ತಮ್ಮ 'ಮೋಹನದಾಸ' ಪುಸ್ತಕದಲ್ಲಿ ಸಂಗ್ರಹಿಸಿ ನೀಡಿದ್ದಾರೆ. ಅವುಗಳ ಸಾರಾಂಶವನ್ನು ಇಲ್ಲಿ ನೀಡುವುದು ಅಪ್ರಸ್ತುತವಾಗಲಾರದು:

ಗಾಂಧಿ ಎಷ್ಟು ಚುರುಕಾಗಿ ಯೋಚಿಸುತ್ತಿದ್ದರೆಂದರೆ ಹಲವು ವಿಷಯಗಳ ಬಗ್ಗೆ–ಅದು ಆಶ್ರಮಕ್ಕೆ ಸಂಬಂಧಿಸಿದ್ದೇ ಇರಲಿ ಅಥವಾ ಪತ್ರಿಕೆಗಳಿಗೆ ಸಂಬಂಧಿಸಿದ್ದೇ ಇರಲಿ ಅಥವಾ ಸತ್ಯಾಗ್ರಹಕ್ಕೆ ಸಂಬಂಧಿಸಿದ್ದೇ ಇರಲಿ–ಎಷ್ಟು ಪಟಪಟನೆ ನಿರ್ದೇಶನಗಳನ್ನು ನೀಡುತ್ತಿದ್ದರೆಂದರೆ, ಆಶ್ರಮವಾಸಿಗಳಿಗೆ ಅವನ್ನು ಪೂರ್ಣ ಅರಿತು ಪಾಲಿಸುವುದು ಒಮ್ಮೊಮ್ಮೆ ಕಷ್ಟವಾಗುತ್ತಿತ್ತು.

ಅವರು ತಮಗೆ ಬಂದ ಪತ್ರಗಳನ್ನು ಓದುವುದನ್ನು ಏಕಾಗ್ರತೆಯಿಂದ ಆಲಿಸುತ್ತಿದ್ದರು. ಮೆಚ್ಚುಗೆ, ಶ್ಲಾಘನೆಯ ಪತ್ರಗಳಾಗಿದ್ದರೆ ಮುಂದೆ ಹೋಗು ಎನ್ನುತ್ತಿದ್ದ ಅವರು ಟೀಕೆಯ, ಭಿನ್ನಾಭಿಪ್ರಾಯಗಳ ಪತ್ರಗಳಾದರೆ ವ್ಯವಧಾನದಿಂದ ಕೇಳಿಸಿಕೊಳ್ಳುತ್ತಿದ್ದರು. ದಿನಕ್ಕೆ ಬರುವ ಸರಾಸರಿ ಐವತ್ತು ಅರವತ್ತು ಪತ್ರಗಳಿಗೆ ಅವರೇ ಕೈಬರಹದಲ್ಲಿ ಉತ್ತರ ಬರೆದು, ನಂತರ ಒಮ್ಮೆ ಮೊದಲಿಂದ ಕೊನೆಯವರೆಗೆ ಓದಿ ಸುಸ್ತಾದವರಂತೆ ತಮ್ಮೆರಡೂ ಕಣ್ಣುಗಳ ಮಧ್ಯೆ ಬೆರಳಿಟ್ಟು ಒತ್ತಿಕೊಳ್ಳುತ್ತಾ ಕೂತಿದ್ದ ಹಾಗೇ ನೆಲಕ್ಕುರುಳಿಬಿಡುತ್ತಿದ್ದರು. ಅವರಿಗೆ ಹಾಸಿಗೆ–ದಿಂಬುಗಳ ಪರಿವೆಯೇ ಇರುತ್ತಿರಲಿಲ್ಲ.

ಕಸ್ತೂರಬಾ ಅವರ ವರ್ತನೆ: ಗಾಂಧಿಯವರ ನಿಷ್ಠುರ ನುಡಿಗಳು

ಆಶ್ರಮವಾಸಿಗಳ ಕ್ಷೇಮ ಸಮಾಚಾರದ ವಿಷಯದಲ್ಲಿ ಕಸ್ತೂರಬಾ ಏನಾದರೂ ಪಕ್ಷಪಾತ ತೋರುವುದು ಗಾಂಧಿಗೆ ಗೊತ್ತಾದರೆ ಅವರು ಸಿಡಿಮಿಡಿಗೊಳ್ಳುತ್ತಿದ್ದರು. ಒಮ್ಮೆ ಒಬ್ಬ ಆಶ್ರಮವಾಸಿ ಅಸ್ವಸ್ಥರಾಗಿದ್ದಾಗ ಕಸ್ತೂರಬಾ ಆತನ ಕ್ಷೇಮ ಸಮಾಚಾರವನ್ನು ವಿಚಾರಿಸಿಲ್ಲ ಎಂದು ಗೊತ್ತಾದಾಗ, ಆ ಬಗ್ಗೆ ಅವರು ಬಾ ಅವರನ್ನು ವಿಚಾರಿಸಿದರು. ಆಗ ಬಾ, ಅದು ತನಗೆ ಗೊತ್ತಾಗಲಿಲ್ಲವೆಂದಾಗ, ಗಾಂಧಿ ಎಲ್ಲರ ಮುಂದೆಯೇ ತಮ್ಮ ಪತ್ನಿಯನ್ನು ಹೀಗೆ ತರಾಟೆಗೆ ತೆಗೆದುಕೊಂಡರು: 'ದೇವದಾಸನಿಗೇನಾದರೂ ಅನಾರೋಗ್ಯವಾಗಿದ್ದರೆ ತಕ್ಷಣ ನಿನಗೆ ಗೊತ್ತಾಗಿ ಈ ಹೊತ್ತಿಗೆ ಮೂರು ಬಾರಿ ಅವನನ್ನು ವಿಚಾರಿಸಿಕೊಳ್ಳುತ್ತಿದ್ದೆಯಲ್ಲವೆ?'

ಇದೇ ಸಂದರ್ಭದಲ್ಲಿ, ಹಲವು ವರ್ಷಗಳ ನಂತರ ಕಸ್ತೂರಬಾ ಅವರಿಗೆ ಸಂಬಂಧಿಸಿದಂತೆಯೇ ನಡೆದ ಒಂದು ಘಟನೆಯನ್ನೂ ದಾಖಲಿಸುವುದು ಉಚಿತವಾದೀತು. ಅದು ೧೯೨೯. ಆಶ್ರಮಕ್ಕೆ ಭೇಟಿ ನೀಡಿದ್ದ ಒಬ್ಬರು ಆಶ್ರಮದ

ಖರ್ಚಿಗೆಂದು ನಾಲ್ಕು ರೂಪಾಯಿಗಳನ್ನು ಬಾ ಅವರಿಗೆ ನೀಡಿದ್ದರು. ಆದರೆ ಈ ಹಣವನ್ನು ಬಾ ಆಶ್ರಮದ ಲೆಕ್ಕಕ್ಕೆ ನೀಡದಿದ್ದುದು ಆ ತಿಂಗಳ ಖರ್ಚು ವೆಚ್ಚದ ಲೆಕ್ಕ ಪರಿಶೀಲಿಸುವಾಗ ಬೆಳಕಿಗೆ ಬಂತು. ಬಾ ತಪ್ಪೊಪ್ಪಿಕೊಂಡು ಆ ಹಣವನ್ನು ಲೆಕ್ಕಕ್ಕೆ ಸಂದಾಯ ಮಾಡಿದರಾದರೂ ಗಾಂಧಿಗೆ ತಮ್ಮ ಪ್ರಭಾವದಲ್ಲಿ ಬಾ ಸಾಕಷ್ಟು ಬದಲಾಗಿದ್ದರೂ ಇನ್ನೂ ಕಾಂಚನ ಮುಕ್ತರಾಗದಿರುವ ಬಗ್ಗೆ ತುಂಬ ವ್ಯಥೆಯಾಯಿತು. ಅವರು ಈ ಸಂಬಂಧದ ತಮ್ಮ ಅಳಲನ್ನು ತೋಡಿಕೊಂಡು 'ನವಜೀವನ' ಪತ್ರಿಕೆಯಲ್ಲಿ 'ನನ್ನ ದುಃಖ, ನನ್ನ ಲಜ್ಜೆಗೇಡಿತನ' ಎಂಬ ಲೇಖನವೊಂದನ್ನು ಬರೆದರು. ಅದರಲ್ಲಿ ಬಾ ಅವರ ನಡೆಯನ್ನು 'ಕಳ್ಳತನ'ವೆಂದು ವರ್ಣಿಸಿದ್ದರಲ್ಲದೆ ತಮ್ಮ ಪತ್ನಿಯ ಇನ್ನೊಂದು ಕಳ್ಳತನದ ಪ್ರಸಂಗವನ್ನೂ ಅಲ್ಲಿ ಪ್ರಸ್ತಾಪಿಸಿದ್ದರು. ಒಂದು ತಿಂಗಳ ಹಿಂದೆ ಆಶ್ರಮಕ್ಕೆ ಕನ್ನ ಹಾಕಿದ್ದ ಕಳ್ಳರ ಗುಂಪೊಂದು ಬಾ ಅವರ ಕೋಣೆಗೂ ನುಗ್ಗಿ ಅವರು ಬಚ್ಚಿಟ್ಟದ್ದ ಒಂದೆರಡು ನೂರು ರೂಪಾಯಿಗಳನ್ನು ಕದ್ದುಹೋಗಿದ್ದ ಪ್ರಸಂಗವದು. ಆ ಹಣ ಬಹು ಹಿಂದೆ ಯಾರೋ ಶ್ರೀಮಂತರು ಗಾಂಧಿ ಕುಟುಂಬಕ್ಕೆಂದು ನೀಡಿದ ಕೊಡುಗೆಯಾಗಿತ್ತಾದರೂ, ಯಾರೇ ಆಶ್ರಮವಾಸಿಯಾಗಲೀ ತಮ್ಮದೆನ್ನುವ ಏನನ್ನೂ ತಮ್ಮ ಬಳಿ ಖಾಸಗಿಯಾಗಿ ಇಟ್ಟುಕೊಳ್ಳಬಾರದೆಂಬ ಆಶ್ರಮದ ನಿಯಮಕ್ಕೆ ಇದು ವಿರುದ್ಧವಾಗಿತ್ತು.

ಸರ್ಕಾರಿ ನೌಕರರು ಮತ್ತು ಸೈನಿಕರಿಗೆ ಬಂಡಾಯದ ಕರೆ

ಈ ಮಧ್ಯೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆ ಅಕ್ಟೋಬರ್ ೫ರಂದು ಮುಂಬೈನಲ್ಲಿ ಸೇರಿತು. ಸಿ.ಆರ್. ದಾಸ್, ಮೋತಿಲಾಲ್, ಲಜಪತ್‌ರಾಯ್, ರಾಜಾಜಿ, ಸರೋಜಿನಿ ನಾಯ್ಡು ಮುಂತಾದವರನ್ನೊಳಗೊಂಡ ಈ ಸಭೆ ಅಸಹಕಾರ ಚಳುವಳಿಯನ್ನು ಬಿರುಸುಗೊಳಿಸಲು ಸೈನಿಕರು ಮತ್ತು ಸರ್ಕಾರಿ ನೌಕರರು ದೇಶದ ಜನರ ಹಿತದೃಷ್ಟಿಯಿಂದ ಸರ್ಕಾರದೊಡನೆ ಸಂಬಂಧ ಕಡಿದುಕೊಂಡು ಬೇರೆ ಜೀವನೋಪಾಯ ಕಂಡುಕೊಳ್ಳಬೇಕೆಂದು ಕರೆ ಕೊಡುವ ನಿರ್ಣಯವನ್ನು ಅಂಗೀಕರಿಸಿತು. ಗಾಂಧಿ ಅಸಹಕಾರ ಚಳುವಳಿಯನ್ನು ಸಾಮೂಹಿಕ ನೆಲೆಗೆ ಒಯ್ಯುವ ಕ್ರಮವಾಗಿ ವಿಠಲಭಾಯಿ ಮತ್ತು ವಲ್ಲಭಭಾಯಿ ಪಟೇಲರೊಡನೆ ಸಮಾಲೋಚಿಸಿ, ಈ ಸೋದರರ ಪ್ರಭಾವವಿದ್ದ ಬಾರ್ಡೋಲಿ ಮತ್ತು ಆಣಂದ್ ತಾಲ್ಲೂಕುಗಳಲ್ಲಿ ರೈತರ ಕರ ನಿರಾಕರಣೆಯ ಚಳುವಳಿ ಸಂಘಟಿಸುವ ನಿರ್ಧಾರಕ್ಕೆ ಬಂದರು.

ಈಗಾಗಲೇ ಶಾಲಾ ಕಾಲೇಜುಗಳ ಬಹಿಷ್ಕಾರ, ನ್ಯಾಯಾಲಯಗಳ ಬಹಿಷ್ಕಾರಗಳ ಜೊತೆಗೆ ಮದ್ಯದಂಗಡಿಗಳ ಮುತ್ತಿಗೆಗಳಿಂದಾಗಿ ಅಬಕಾರಿ ಆದಾಯ ಬಿದ್ದುಹೋಗಿದ್ದುದರಿಂದ ಕಂಗೆಟ್ಟಿದ್ದ ಸರ್ಕಾರ, ಈಗ ಸೈನಿಕರಿಗೆ ಮತ್ತು ಸರ್ಕಾರಿ ನೌಕರರಿಗೆ ಬಂಡೇಳಲು ಕೊಟ್ಟ ಕರೆ ಮತ್ತು ರೈತ ಸತ್ಯಾಗ್ರಹದ ಬೆದರಿಕೆಯಿಂದ ಕ್ರೋಧಗೊಂಡು ತನ್ನ ದಮನಶೀಲ ಕ್ರಮಗಳನ್ನು ತೀವ್ರಗೊಳಿಸಿತು. ರಾಷ್ಟ್ರೀಯ ಪತ್ರಿಕೆಗಳ ಮೇಲೆ ನಿರ್ಬಂಧಗಳನ್ನು ಹೇರಿ, ಅವುಗಳಿಗೆ ಸರ್ಕಾರಿ ಜಾಹೀರಾತುಗಳನ್ನು ನಿಲ್ಲಿಸಲಾಯಿತು. ದೇಶದ್ರೋಹ ಕಾನೂನಿನ ವಿವಿಧ ವಿಧಿಗಳನ್ನು ಬಳಸಿ ಚಳುವಳಿಕಾರರ ಬಂಧನವನ್ನು ಚುರುಕುಗೊಳಿಸಲಾಯಿತು.

೫೮

ಹಿಂಸಾಚಾರದತ್ತ ತಿರುಗಿದ ಅಸಹಕಾರ ಚಳುವಳಿ

ಇಂತಹ ಉದ್ವಿಗ್ನ ವಾತಾವರಣದ ಮಧ್ಯೆ ಸರ್ಕಾರ, ವೇಲ್ಸ್‌ನ ರಾಜಕುಮಾರನ(ಎಡ್ವರ್ಡ್ ಎಂಬ ಹೆಸರಿನಲ್ಲಿ ಮುಂದೆ ಇಂಗ್ಲೆಂಡ್‌ನ ದೊರೆಯಾದವನು) ಭಾರತ ಭೇಟಿ ಕಾರ್ಯಕ್ರಮವನ್ನು ಪ್ರಕಟಿಸಿತು. ಈ ಕಾರ್ಯಕ್ರಮದ ವಿವರ ತಿಳಿದುಕೊಂಡ ಗಾಂಧಿ, ಇದು ಬಡದೇಶದ ಜನರ ಹಣವನ್ನು ದುಂದುವೆಚ್ಚ ಮಾಡುವ ಆಡಂಬರದ ಪ್ರದರ್ಶನವೆಂದು ಬಣ್ಣಿಸಿ, ಅದರ ಬಹಿಷ್ಕಾರಕ್ಕೆ ಕರೆಕೊಟ್ಟರು. ಅಲ್ಲದೆ ಅಂದೇ ಬಾಂಬೆಯಲ್ಲಿ ವಿದೇಶೀ ವಸ್ತ್ರಗಳ ದಹನದ ಬೃಹತ್ ಕಾರ್ಯಕ್ರಮವನ್ನೂ ಪ್ರಕಟಿಸಿದರು. ೧೯೨೧ ರ ನವೆಂಬರ್ ೧೭ರಂದು ರಾಜಕುಮಾರ ಮುಂಬೈ ನಗರದ ಬಂದರಿನಲ್ಲಿಳಿದು ನಗರ ಪ್ರವೇಶ ಮಾಡಿದಾಗ ಬಹುತೇಕ ರಸ್ತೆಗಳು ಜನರಿಲ್ಲದೆ ಬಿಕೋ ಎನ್ನುತ್ತಿದ್ದರೆ, ಕೆಲವು ರಸ್ತೆಗಳಲ್ಲಿ ಜನ ಅವನನ್ನು ಸ್ವಾಗತಿಸಲು ಸ್ವಾಗತ ತೋರಣಗಳೊಂದಿಗೆ ಸೇರಿದ್ದರು. ಅವರಲ್ಲಿ ಬಹುತೇಕರು ಪಾರ್ಸಿಗಳು ಮತ್ತು ಆಂಗ್ಲೋ ಇಂಡಿಯನ್ನರು. ವಿದೇಶ ವಸ್ತ್ರ ದಹನಕ್ಕಾಗಿ ಮತ್ತು ಮದ್ಯದಂಗಡಿಗಳ ಮುಂದೆ ಪ್ರತಿಭಟನೆಗೆ ಸೇರಿದ್ದ ಚಳುವಳಿಕಾರರು, ಇದನ್ನು ಕಂಡು 'ಮಹಾತ್ಮ ಗಾಂಧೀಕಿ ಜೈ' ಎಂದು ಕೂಗುತ್ತಾ ಆ ಜನರ ಮೇಲೆ ಮುಗಿಬಿದ್ದರು. ಸಿಕ್ಕಸಿಕ್ಕವರನ್ನು ಹಿಡಿದು ಚಚ್ಚಿದರು. ಅಂಗಡಿಗಳಿಗೆ ಬೆಂಕಿ ಹಚ್ಚಿದರು. ಈ ಹಿಂಸಾಚಾರದಲ್ಲಿ ಐವರು ಪೊಲೀಸ್ ಪೇದೆಗಳು ಪ್ರಾಣ ಕಳೆದುಕೊಂಡರೆ, ಪರಿಸ್ಥಿತಿಯನ್ನು ತಹಬಂದಿಗೆ ತರಲು ನಡೆದ ಗೋಲೀಬಾರಿನಲ್ಲಿ ಐವತ್ತಮೂರು ಜನ ಚಳುವಳಿಕಾರರು(ಬಹುತೇಕರು ಹಿಂದುಗಳು ಮತ್ತು ಮುಸ್ಲಿಮರು) ಪ್ರಾಣ ಕಳೆದುಕೊಂಡರು.

ಅಂದು ಮುಂಬೈನಲ್ಲಿದ್ದ ಗಾಂಧಿ ಈ ಹಿಂಸಾಚಾರವನ್ನು ಕಣ್ಣಾರೆ ಕಂಡು ತತ್ತರಿಸಿದರು. ಈ ಮೊದಲು 'ಮಾಪಿಳ್ಳೆ ದಂಗೆ', ಈಗ ಈ ಹಿಂಸಾಚಾರ. ಧಾರ್ಮಿಕ ಐಕ್ಯತೆಯ ಅಹಿಂಸಾತ್ಮಕ ಹೋರಾಟದ ಮಾರ್ಗದ ಬಗ್ಗೆ ಗಾಂಧಿ, ಪುನರಾಲೋಚನೆ ಮಾಡುವಂತಾಯಿತು. ಇಂದು ಒಂದು ಕಾರಣಕ್ಕೆ ಹಿಂದೂ-ಮುಸ್ಲಿಮರು ಸೇರಿ ಕ್ರಿಶ್ಚಿಯನ್-ಪಾರ್ಸಿಗಳನ್ನು ಕೊಲ್ಲಬಹುದಾದರೆ ನಾಳೆ ಇಂತಹುದೇ ಇನ್ನೊಂದು ಕಾರಣಕ್ಕೆ ಹಿಂದೂ-ಮುಸ್ಲಿಮರೇ ಹೊಡೆದಾಡಿಕೊಳ್ಳಲಾರರೇ? ಎಂದು ಅವರು ಪ್ರಶ್ನಿಸಿಕೊಂಡರು. ಈ ಪರಿಸ್ಥಿತಿಯಲ್ಲಿ ಚಳುವಳಿಯನ್ನು ಬಿರುಸುಗೊಳಿಸಬಾರದೆಂದು ನಿರ್ಧರಿಸಿದ ಅವರು, ಬಾರ್ಡೋಲಿ ಸತ್ಯಾಗ್ರಹವನ್ನು ಸದ್ಯಕ್ಕೆ ರದ್ದುಗೊಳಿಸಲು ನಿರ್ಧರಿಸಿದರು. ಈ ಹಿಂಸಾಚಾರದ ಸಂಬಂಧವಾಗಿ 'ಯಂಗ್ ಇಂಡಿಯಾ'ಗೆ ಬರೆದ ಒಂದು ಲೇಖನದಲ್ಲಿ ಇಂಗ್ಲಿಷರ ಕೈಯಲ್ಲಿ ಮೆಶೀನ್ ಗನ್‌ಗಳಿವೆ ಎಂಬ ಎಚ್ಚರದಲ್ಲಿ

ನಾವು ವಿವಿಧ ಧರ್ಮೀಯರು ಪರಸ್ಪರ ಹಿಂಸಾಚಾರದಿಂದ ದೂರವಿರಬೇಕಾದ ಅಗತ್ಯವನ್ನು ಮನಗಾಣಬೇಕಿದೆ' ಎಂದು ಸೂಚಿಸಿದರು. ಈ ಸಂದರ್ಭದಲ್ಲಿ ಅವರು 'ಆತ್ಮ ನಿರೀಕ್ಷಣೆ'ಗೆಂದು ನವೆಂಬರ್ ೧೯ರಿಂದ ಐದು ದಿನಗಳ ಕಾಲ ಉಪವಾಸ ಆಚರಿಸುವುದಾಗಿ ಪ್ರಕಟಿಸಿದರು.

ಮುಂಬೈ ಹಿಂಸಾಚಾರದ ನಂತರ ಸರ್ಕಾರ ಕಾನೂನುಗಳನ್ನು ಇನ್ನಷ್ಟು ಬಿಗಿಗೊಳಿಸಿ ಜನ ಗುಂಪು ಸೇರಿದೆಡೆಯಲ್ಲೆಲ್ಲ ಲಾಠಿ ಬೀಸಿ ಬಂಧನಗಳನ್ನು ನಡೆಸಿ ಸಾರ್ವಜನಿಕ ಜೀವನವನ್ನು ಉಸಿರುಗಟ್ಟುವಂತೆ ಮಾಡಿತು. ಈಗ ಅದು ಗಾಂಧಿಯವರ ಹೊರತಾಗಿ ಇನ್ನೆಲ್ಲ ಹಿರಿಯ ಮುಖಂಡರನ್ನು ಬಂಧಿಸತೊಡಗಿತು. ಗಾಂಧಿ ಬಂಧನ, ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುವುದೆಂದು ತರ್ಕಿಸಿದ ಸರ್ಕಾರ, ಅವರ ಬಂಧನ ಅನಿವಾರ್ಯವೆಂಬ ಪರಿಸ್ಥಿತಿಯನ್ನು ಅವರೇ ಸೃಷ್ಟಿಸುವರೆಂಬ ನಿರೀಕ್ಷೆಯಲ್ಲಿ, ಖಾದಿ ಮಾರುತ್ತಿದ್ದರು, ಮದ್ಯದಂಗಡಿಗೆ ಮುತ್ತಿಗೆ ಹಾಕಿದ್ದರು, ಹರತಾಳದ ಕರಪತ್ರ ಹಂಚುತ್ತಿದ್ದರು, ಸರ್ಕಾರದ ವಿರುದ್ಧ ಬಂಡೇಳುವಂತೆ ಭಾಷಣ ಮಾಡುತ್ತಿದ್ದರು, ತಮ್ಮ ಪತ್ರಿಕೆಯಲ್ಲಿ ನಿಷೇಧಿತ ಸುದ್ದಿ ಪ್ರಕಟಿಸಿದ್ದರು ಇತ್ಯಾದಿ ಇತ್ಯಾದಿ ಆರೋಪಗಳ ಮೇಲೆ ಸಿ.ಆರ್. ದಾಸ್, ಮೋತಿಲಾಲ ನೆಹರೂ, ಮಹದೇವ ದೇಸಾಯಿ, ಲಾಲಾ ಲಜಪತ್ ರಾಯ್, ಅಬುಲ್ ಕಲಾಂ ಆಜ಼ಾದ್, ಜೆ.ಬಿ. ಕೃಪಲಾನಿ ಮುಂತಾದರನ್ನು ಬಂಧಿಸಿ ಸೆರೆಮನೆಗೆ ಕಳಿಸಿತು. ಈ ಬಾರಿ ಬಂಧಿತರಲ್ಲಿ ದಾಸ್ ಅವರ ಪತ್ನಿ ಮತ್ತು ಸೋದರಿಯೂ ಸೇರಿದಂತೆ ಹಲವು ಮಹಿಳೆಯರಿದ್ದುದು ಒಂದು ವಿಶೇಷವಾಗಿತ್ತು. ಹೀಗೆ ಶ್ರೀಮತಿ ವಾಸಂತಿದೇವಿ ದಾಸ್ ನಮ್ಮ ಸ್ವಾತಂತ್ರ್ಯ ಹೋರಾಟದ ಮೊದಲ ಮಹಿಳಾ ಕೈದಿಯೆನಿಸಿದರು.

ತವರೂರಿನಲ್ಲಿ ಅಧಿವೇಶನ–ಗಾಂಧಿಯವರ ಹೆಚ್ಚಿದ ಹುರುಪು

ದೇಶದ ತುಂಬ ಇದ್ದ ಈ ಬಿಗುವಿನ ವಾತಾವರಣದ ಮಧ್ಯವೇ ಕಾಂಗ್ರೆಸ್‌ನ ವಾರ್ಷಿಕ ಅಧಿವೇಶನ ಪೂರ್ವನಿಯೋಜಿತವಾದಂತೆ ಡಿಸೆಂಬರ್ ಐದರಂದು ಅಹಮದಾಬಾದ್‌ನಲ್ಲಿ ಏರ್ಪಾಟಾಯಿತು. ನಿಯೋಜಿತ ಅಧ್ಯಕ್ಷ ಸಿ.ಆರ್. ದಾಸ್ ಅವರು ಸೆರೆಮನೆ ಸೇರಿದ್ದುದರಿಂದ ಹಕೀಂ ಅಜ್ಮಲ್ ಖಾನ್ ಅವರನ್ನು ಅಧ್ಯಕ್ಷರನ್ನಾಗಿ ಆರಿಸಿ ಕಾರ್ಯಕಲಾಪಗಳನ್ನು ನಡೆಸಲಾಯಿತು. ಈ ಅಧಿವೇಶನದ ಸಂದರ್ಭದಲ್ಲಿ ಪ್ರಕಟವಾದ 'ಯಂಗ್ ಇಂಡಿಯಾ' ಸಂಚಿಕೆಯಲ್ಲಿ ಗಾಂಧಿ ಹಿಂದೂ–ಮುಸ್ಲಿಂ ಮತ್ತು ಇತರ ಧರ್ಮಗಳ ನಡುವಣ ಮಧುರ ಬಾಂಧವ್ಯ, ಅಸ್ಪೃಶ್ಯತೆಯ ನಿರ್ಮೂಲನೆ, ಖಾದಿ ಧಾರಣೆ ಮತ್ತು ಅಹಿಂಸೆಗೆ ಬದ್ಧತೆ ಇವುಗಳನ್ನು ಭಾರತದ ರಾಷ್ಟ್ರೀಯತೆಯ ನಾಲ್ಕು ಕಾಲುಗಳೆಂದು ಹೇಳುತ್ತಾ ಇವುಗಳಲ್ಲಿ ಒಂದು ಕಾಲು ಮುರಿದರೂ ರಾಷ್ಟ್ರೀಯತೆ ನಿಲ್ಲಲಾರದು ಎಂದು ವಿವರಿಸಿದ್ದರು. ಸುಮಾರು ಐದು ಸಾವಿರ ಜನ ಪ್ರತಿನಿಧಿಗಳು ಭಾಗವಹಿಸಿದ್ದ ಈ ಅಧಿವೇಶನ, ತಮ್ಮ ಕನಿಷ್ಠ ಉಡುಪಿನೊಂದಿಗೆ ಗಾಂಧಿ ವೇದಿಕೆ ಏರಿದಾಗ ಭಾರಿ ಕರತಾಡನದೊಂದಿಗೆ ಅವರನ್ನು ಸ್ವಾಗತಿಸಿತು. ಮೌಲಾನಾ ಹಸ್ರತ್ ಮೊಹಾನಿ ಎಂಬ ಮೌಲ್ವಿ ಅಸಹಕಾರ ಸತ್ಯಾಗ್ರಹದಲ್ಲಿ ಜನಸಂಖ್ಯೆಯ ಆಧಾರದಲ್ಲಿ ನೋಡಿದರೆ ಸೆರೆಮನೆಗೆ ಹೋದ ಮುಸ್ಲಿಮರ ಸಂಖ್ಯೆಯೇ ಹೆಚ್ಚೆಂದು ವಾದಿಸುತ್ತಾ, ಅದರಿಂದಾಗಿ ಕಾಂಗ್ರೆಸ್‌ನ ಎಲ್ಲ ನೀತಿ–ನಿಬಂಧನೆಗಳಿಂದ ಅಹಿಂಸೆಯ ಪಾಲನೆಯ

ಅಂಶವನ್ನು ತೆಗೆದುಹಾಕಬೇಕೆಂದು ಆಗ್ರಹಿಸಿದ. ಮೊಹಾನಿಯ ವಾದವನ್ನು ತಳ್ಳಿಹಾಕಿದ ಗಾಂಧಿ, ಕಾಂಗ್ರೆಸ್ ಎಂದೂ ಅಹಿಂಸೆಗೆ ಬದ್ಧವಾಗಿರಬಯಸುತ್ತದೆ ಎಂದು ಸ್ಪಷ್ಟಪಡಿಸಿದರು. ಈ ಮಾತನ್ನು ಒಪ್ಪುವಂತೆ ಅಧಿವೇಶನ ಗಾಂಧಿಯವರನ್ನು ಕಾಂಗ್ರೆಸ್‌ನ 'ಏಕಮಾತ್ರ ಕಾರ್ಯನಿರ್ವಾಹಕ'ನೆಂದು ಘೋಷಿಸುವ ನಿರ್ಣಯವನ್ನು ಅಂಗೀಕರಿಸಿತು. ಜೊತೆಗೆ ಜನವರಿಯಿಂದ ಬಾರ್ಡೋಲಿ ರೈತ ಸತ್ಯಾಗ್ರಹವನ್ನು ಆರಂಭಿಸಲೂ ಅವರಿಗೆ ಸಮ್ಮತಿ ನೀಡಿತು.

ತಮ್ಮೂರಿನಲ್ಲೇ ನಡೆದ ಕಾಂಗ್ರೆಸ್ ಅಧಿವೇಶನದ ಕಾರ್ಯಕಲಾಪಗಳು ಗಾಂಧಿಯನ್ನು ಕುರಿತ ವಿಶೇಷ ಪ್ರೀತಿಯ ಪ್ರದರ್ಶನದೊಂದಿಗೆ ನಡೆದಿದ್ದು, ಅದು ಗಾಂಧಿಯವರಲ್ಲಿ ಹೊಸ ಹುರುಪು ಹುಟ್ಟಿಸಿತು. ಈ ಹುರುಪಿನಲ್ಲೇ ಅವರು ಅಧಿವೇಶನದಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಈ ಎಚ್ಚರಿಕೆ ನೀಡಿದ್ದರು 'ನೀವು ನಮ್ಮನ್ನು ಯಾವುದೇ ರೀತಿಯಲ್ಲಿ ಹಿಂಸಿಸಿ ದಮನ ಮಾಡಿದರೂ, ಕೊನೆಗೆ ನೀವು ೩೦ ಕೋಟಿ ಜನರನ್ನು ಶಾಶ್ವತ ಶತ್ರುಗಳನ್ನಾಗಿ ಮಾಡಿಕೊಂಡ ಬಗ್ಗೆ ಕೈ ಕೈ ಹಿಸುಕಿಕೊಂಡು ಪಶ್ಚಾತ್ತಾಪ ಪಡುವುದು ಖಂಡಿತ. ಹಾಗಾಗಿ ಮತ್ತೆ ಮತ್ತೆ ಯೋಚಿಸಿ!' ಈ ಹೊತ್ತಿಗಾಗಲೇ ಇಪ್ಪತ್ತು ಸಾವಿರಕ್ಕೂ ಹೆಚ್ಚು ಜನ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆ ಸೇರಿದ್ದರು. ಮತ್ತಷ್ಟು ಜನ ತಂಡೋಪತಂಡವಾಗಿ ಭಾರತೀಯ ದಂಡಸಂಹಿತೆಯ ಕಾನೂನುಗಳನ್ನು ಉಲ್ಲಂಘಿಸುತ್ತಾ ಸೆರೆಮನೆಗಳನ್ನು ಸೇರುತ್ತಿದ್ದರು. ಸೆರೆಮನೆಗಳು ತುಂಬಿ ತುಳುಕತೊಡಗಿದ್ದವು. ಇವರಲ್ಲಿ ದಾಸ್, ನೆಹರೂ, ರಾಯ್‌ರಂತಹ ಹಿರಿಯರೂ, ವಾಸಂತಿದೇವಿಯವರೂ ಸೇರಿದಂತೆ ಕೆಲವು ಮಹಿಳೆಯರೂ ಬಂಧನವನ್ನು ಆಹ್ವಾನಿಸಿದ ಸಂಗತಿ ಗಾಂಧಿಯವರಲ್ಲಿ ರೋಮಾಂಚನವನ್ನುಂಟು ಮಾಡಿತ್ತು. ಈ ರೋಮಾಂಚನಕ್ಕೆ ಇನ್ನೂ ಮೂರು ವಿಶೇಷ–ವೈಯಕ್ತಿಕ–ಕಾರಣಗಳಿದ್ದವು. ಅವರ ಹಿರಿಯ ಮಗ ಹರಿಲಾಲ, ಅಸಹಕಾರ ಸತ್ಯಾಗ್ರಹದಲ್ಲಿ ಭಾಗವಹಿಸಿ ಕಲ್ಕತ್ತಾದಲ್ಲಿ ಸೆರೆಮನೆ ಸೇರಿದ್ದ. ಚಿಕ್ಕಮಗ ದೇವದಾಸ ಈಗಾಗಲೇ ಕರ ನಿರಾಕರಣೆ ಸತ್ಯಾಗ್ರಹದ ಸಿದ್ಧತೆಗಾಗಿ ಪಟೇಲ್ ಸೋದರರಿಗೆ ನೆರವಾಗಲು ಬಾರ್ಡೋಲಿಗೆ ಹೋಗಿದ್ದ. ದ.ಆಫ್ರಿಕಾದಲ್ಲಿದ್ದ ಇನ್ನಿಬ್ಬರು ಮಕ್ಕಳಾದ ಮಣಿಲಾಲ ಮತ್ತು ರಾಮದಾಸ ಭಾರತಕ್ಕೆ ಬರುತ್ತಿದ್ದು, ಅವರೂ ಸತ್ಯಾಗ್ರಹದಲ್ಲಿ ಭಾಗವಹಿಸುವ ನಿರೀಕ್ಷೆ ಇತ್ತು.

ರಾಜಿಗೆ ಒಪ್ಪದ ಗಾಂಧಿ–ಬಾರ್ಡೋಲಿ ಸತ್ಯಾಗ್ರಹಕ್ಕೆ ಸಿದ್ಧತೆ

ಈ ಮಧ್ಯೆ ವೈಸ್‌ರಾಯ್ ರೀಡಿಂಗ್ ಅವರು, ರಾಜಕುಮಾರ ಚಾರ್ಲ್ಸ್‌ನ ಭಾರತದ ಪ್ರವಾಸ ಯಾವುದೇ ಅಡ್ಡಿ ಆತಂಕಗಳಿಲ್ಲದೇ ಸುಗಮವಾಗಿ ನಡೆಯುವ ದೃಷ್ಟಿಯಿಂದ, ಮಾಳವೀಯ ಅವರ ಮೂಲಕ ಒಂದು ರಾಜಿ ಸೂತ್ರವನ್ನು ಕಾಂಗ್ರೆಸ್‌ನ ಮುಂದಿಟ್ಟರು. ಆ ಸೂತ್ರ ರಾಜಕುಮಾರನ ಪ್ರವಾಸದ ಮೇಲಿನ ಬಹಿಷ್ಕಾರವನ್ನು ಕಾಂಗ್ರೆಸ್ ಹಿಂತೆಗೆದುಕೊಳ್ಳುವುದಾದರೆ ಭಾರತದ ಜನತೆಯ ಸಮಸ್ಯೆಗಳ ಅಧ್ಯಯನ ಮತ್ತು ಪರಿಹಾರಕ್ಕಾಗಿ ಸರ್ಕಾರ ಒಂದು ಸಮಿತಿ ರಚಿಸಿ ಎಲ್ಲ ರಾಜಕೀಯ ಬಂದಿಗಳನ್ನೂ ಬಿಡುಗಡೆ ಮಾಡಲು ಸಿದ್ಧ ಎಂಬುದಾಗಿತ್ತು. ಇದನ್ನು ಸೆರೆಮನೆಯಲ್ಲಿದ್ದ ದಾಸ್ ಅವರು ಪರಿಶೀಲನೆಗೆ ಅರ್ಹವೆಂದು ಗಾಂಧಿಗೆ ತಿಳಿಸಿದರಾದರೂ, ಗಾಂಧಿ, ಮೊದಲು ಸಮಿತಿ ರಚನೆಯಾಗಬೇಕು ಮತ್ತು ಅಲಿ ಸಹೋದರರನ್ನು ಬಿಡುಗಡೆಗೊಳಿಸಬೇಕು ಎಂಬ

ಷರತ್ತುಗಳನ್ನು ಮುಂದಿಟ್ಟರು. ಸರ್ಕಾರ ಇವುಗಳನ್ನೊಪ್ಪದ ಕಾರಣ, ಬಾರ್ಡೋಲಿ ಸತ್ಯಾಗ್ರಹ ಸಂಘಟನೆಗೆಂದು ಗಾಂಧಿ ೧೯೨೨ರ ಜನವರಿ ೨೬ರಂದು ಆಶ್ರಮ ಬಿಟ್ಟು ಹೊರಟರು. ಹೊರಡುವ ಮುನ್ನ ತಮ್ಮ ಆಶ್ರಮವಾಸಿಗಳಿಗೆ ತಾವು ವಾಪಸ್ ಬರಲು ಎಷ್ಟು ದಿನ ಅಥವಾ ತಿಂಗಳು ಅಥವಾ ವರ್ಷಗಳಾಗಬಹುದೆಂದು ಹೇಳಲಾಗದು ಅಥವಾ ವಾಪಸ್ ಬರಲಾಗದ ಸಾಧ್ಯತೆಯೂ ಇದೆಯೆಂದು ಹೇಳಿದರು. ನಂತರ ಜಿನ್ನಾ ಕರೆ ಮೇರೆಗೆ ಮುಂಬೈಗೆ ಹೋದ ಅವರು, ಅಲ್ಲಿ ಏರ್ಪಾಡಾಗಿದ್ದ ಉದಾರವಾದಿ ಮತ್ತು ಸೌಮ್ಯವಾದಿಗಳ ಸಭೆಯಲ್ಲಿ ಭಾಗವಹಿಸಿದರು. ಅಲ್ಲಿ ಸರ್ಕಾರ ಮುಂದಿನ ದಿನಗಳಲ್ಲಿ ಕರೆಯಲಿರುವ ದುಂಡು ಮೇಜಿನ ಸಮ್ಮೇಳನದವರೆಗೆ ಕರ ನಿರಾಕರಣೆಯ ಬಾರ್ಡೋಲಿ ಸತ್ಯಾಗ್ರಹವನ್ನು ಮುಂದೂಡುವಂತೆ ಜಿನ್ನಾ ನೀಡಿದ ಸಲಹೆಯನ್ನು ಒಪ್ಪದ ಗಾಂಧಿ ನವೆಂಬರ್ ೨೯ರಂದು ಬಾರ್ಡೋಲಿ ತಲುಪಿದರು.

ದೇಶಾದ್ಯಂತ ಅಸಹಕಾರ ಚಳುವಳಿಯನ್ನು ಸಾಮೂಹಿಕ ನೆಲೆಗೆ ಒಯ್ಯುವ ಬದಲಾಗಿ, ಗಾಂಧಿ ೧೩೭ ಕುಗ್ರಾಮಗಳ ಸೀಮಿತ ಪ್ರದೇಶದಲ್ಲಷ್ಟೇ ನಡೆಸಲು ಏಕೆ ತೀರ್ಮಾನಿಸಿದರು? ಗಾಂಧಿ ಕರೆ ಕೊಟ್ಟಿದ್ದರೆ ದೇಶಾದ್ಯಂತ ಸಾಮೂಹಿಕ ಅಸಹಕಾರ ಆಂದೋಲನ ಆರಂಭವಾಗಬಹುದಿತ್ತು. ಅಷ್ಟು ಬೃಹದಾಕಾರದ ಜನಸ್ತೋಮ ಸರ್ಕಾರದ ವಿರುದ್ಧ ತಿರುಗಿ ಬಿದ್ದಾಗ ಸರ್ಕಾರ ನಡೆಸುವ ದಮನ ಅಷ್ಟೇ ಬೃಹತ್ತಾಗಿರುತ್ತದೆ. ಅದು ಜನರನ್ನು ರೊಚ್ಚಿಗೆಬ್ಬಿಸಿ ಉಂಟು ಮಾಡುವ ಹಿಂಸಾಚಾರವನ್ನು ತಡೆಯಬಲ್ಲವರಾರು? ಅಲ್ಲಿ ಎರಡೂ ಕಡೆ ಹುಟ್ಟುವ ದ್ವೇಷ, ಸೇಡುಗಳ ವಾತಾವರಣ ಮತ್ತು ಅದು ನಿರ್ಮಿಸಬಹುದಾದ ಸರ್ವಾಧಿಕಾರಿ ಧೋರಣೆ ಜಗತ್ತಿಗೆ ಕೆಟ್ಟ ಸಂದೇಶ ನೀಡುತ್ತದೆ. ಈ ಹೋರಾಟದಲ್ಲಿ ನಾವೇ ಗೆದ್ದರೂ, ಅದು ಸ್ವರಾಜ್ಯಕ್ಕೆ ಯೋಗ್ಯ ಜಯವಾಗಿರುವುದಿಲ್ಲ ಎಂಬುದು ಅವರ ವಿಚಾರವಾಗಿತ್ತು. ಆ ಜನರನ್ನು ನಿಧಾನವಾಗಿ, ಹಂತ ಹಂತವಾಗಿ ಸತ್ಯ ಮತ್ತು ಅಹಿಂಸೆಗಳಲ್ಲಿ ತರಬೇತುಗೊಳಿಸಿ ಸಮೂಹ ಹೋರಾಟವನ್ನು ರೂಪಿಸುವುದು ಅವರ ಯೋಜನೆಯಾಗಿತ್ತು.

೧೯೨೨ರ ಜನವರಿ ೨೯ರಂದು ಬಾರ್ಡೋಲಿಯಲ್ಲಿ ನಾಲ್ಕು ಸಾವಿರ ಖಾದಿಧಾರಿ ಜನರ, ಚಳುವಳಿಕಾರರ ಪಡೆಯೊಂದು ತಾನು ಏನೇ ಕಷ್ಟ ಬಂದರೂ, ಪ್ರಾಣ ತ್ಯಾಗದ ಸಂದರ್ಭ ಬಂದರೂ ಭೂ ಕಂದಾಯ ಪಾವತಿಸುವುದಿಲ್ಲ ಎಂಬ ಪ್ರತಿಜ್ಞೆಯನ್ನು ಸ್ವೀಕರಿಸಿತು. ಗಾಂಧಿ ಮತ್ತೆ ಅವರಿಗೆ ಹಿಂದೂ–ಮುಸ್ಲಿಂ ಐಕ್ಯತೆ, ಖಾದಿ, ಅಸ್ಪೃಶ್ಯತೆಯ ನಿವಾರಣೆ ಮತ್ತು ಅಹಿಂಸೆ ಈ ಚಳುವಳಿಯ ಆಧಾರ ಸ್ತಂಭಗಳು ಎಂದು ವಿವರಿಸಿದರು.

ಗಾಂಧಿ ಸರ್ಕಾರಕ್ಕೆ ಕೊನೆಯ ಎಚ್ಚರಿಕೆಯಾಗಿ ಫೆಬ್ರುವರಿ ೧ರಂದು, ಖಿಲಾಫತ್ ಮತ್ತು ಜಲಿಯನ್‌ವಾಲಾ ಬಾಗ್ ಕ್ರೌರ್ಯದ ವಿಷಯದಲ್ಲಿ ನ್ಯಾಯ ಒದಗಿಸಿರದ ಸರ್ಕಾರದ ವಿರುದ್ಧ ಸ್ವರಾಜ್ಯದ ನ್ಯಾಯ ಕೇಳಿ, ಜನ ನಡೆಸುತ್ತಿರುವ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದ ಎಲ್ಲ ಬಂದಿಗಳನ್ನೂ ಬಿಡುಗಡೆ ಮಾಡಿ, ಶಾಂತಿಯುತ ಪ್ರತಿಭಟನೆಗಳನ್ನು ತಡೆಯುವುದಿಲ್ಲವೆಂದು ಮತ್ತು ಪತ್ರಿಕೆಗಳ ಮೇಲೆ ಹೇರಿರುವ ನಿರ್ಬಂಧಗಳನ್ನು ತೆಗೆಯುವುದಾಗಿಯೂ ಸರ್ಕಾರ ಮಾತುಕೊಟ್ಟರೆ ಬಾರ್ಡೋಲಿ ಸತ್ಯಾಗ್ರಹವನ್ನು ಮುಂದೂಡಲಾಗುವುದು ಎಂದು ವೈಸ್‌ರಾಯ್‌ಗೆ ಪತ್ರ ಬರೆದರು.

■

೩೦

ಚೌರಿಚೌರ ಹಿಂಸಾಚಾರ: ಸ್ಥಗಿತಗೊಂಡ ಅಸಹಕಾರ ಚಳುವಳಿ

ಗಾಂಧಿಯವರ ಪತ್ರಕ್ಕೆ ಉತ್ತರ ಕೊಟ್ಟ ಸರ್ಕಾರ, ತಾನು ಕಾನೂನು ಮತ್ತು ಶಿಸ್ತು ಪಾಲನೆಯ ವಿಷಯದಲ್ಲಿ ಯಾವುದೇ ರಾಜಿ ಮಾಡಿಕೊಳ್ಳಲು ಸಿದ್ಧವಿಲ್ಲ ಎಂದು ಸ್ಪಷ್ಟಪಡಿಸಿತು. ಆದರೆ ಗಾಂಧಿ ಈ ಪತ್ರದ ಪರಿಣಾಮವಾಗಿ ಮುಂದಿನ ನಿರ್ಧಾರ ತೆಗೆದುಕೊಳ್ಳುವುದರೊಳಗಾಗಿ ದೇಶದ ಅತಿ ಮೂಲೆಯೊಂದರಿಂದ ಭಯಾನಕ ಸುದ್ದಿಯೊಂದು ಗಾಂಧಿಯವರ ಕಿವಿಗೆ ಬಿತ್ತು. ಅದೇಂದರೆ, ಸಂಯುಕ್ತ ಪ್ರಾಂತ್ಯದ ಗೋರಖಪುರ ಬಳಿಯ ಚೌರಿಚೌರ ಎಂಬ ಹಳ್ಳಿಯಲ್ಲಿ ೧೯೨೨ ರ ಫೆಬ್ರುವರಿ ೫ರಂದು ಅಸಹಕಾರ ಚಳುವಳಿಕಾರರು ಪೊಲೀಸ್ ಠಾಣೆಯೊಂದಕ್ಕೆ ಬೆಂಕಿ ಇಟ್ಟು ೨೩ ಜನ ಪೊಲೀಸರನ್ನು ಸಜೀವವಾಗಿ ದಹಿಸಿದ್ದರು. ಚಳುವಳಿಕಾರರ ಮೆರವಣಿಗೆಯನ್ನು ತಡೆದ ಪೊಲೀಸರ ಮೇಲೆ ದೊಣ್ಣೆ ಕಲ್ಲುಗಳಿಂದ ದಾಳಿ ಮಾಡಿದ ಜನರನ್ನು ನಿಯಂತ್ರಿಸಲು ಪೊಲೀಸರು ಗೋಲೀಬಾರ್ ಮಾಡಿದ ಕಾರಣದಿಂದಾಗಿ ಇಬ್ಬರು ಸತ್ತಾಗ, ಮತ್ತಷ್ಟು ಕುಪಿತರಾದ ಜನ ಮತ್ತಷ್ಟು ಜನರನ್ನು ಸೇರಿಸತೊಡಗಿದಾಗ ಅಸಹಾಯಕರಾದ ಪೊಲೀಸರು ಓಡಿ ಹೋಗಿ ಠಾಣೆಯಲ್ಲಿ ರಕ್ಷಣೆ ಪಡೆದುಕೊಂಡಿದ್ದರು. ಅತ್ತ ತೆರಳಿದ ಜನಜಂಗುಳಿ ಠಾಣೆಯನ್ನು ಸುತ್ತುವರೆದು ಅದರ ಮೇಲೆ, ಸುತ್ತ ಸೀಮೆ ಎಣ್ಣೆ ಎರಚಿ ಬೆಂಕಿ ಹಚ್ಚಿತ್ತು.

ಈ ದುರ್ಘಟನೆಯ ಸುದ್ದಿ ದೇಶದ ಎಲ್ಲೆಡೆ ತಲುಪಲು ಎರಡು ದಿನಗಳು ಬೇಕಾದವು. ಗಾಂಧಿಗೆ ಈ ಸುದ್ದಿ ಅಲಹಾಬಾದ್‌ನಲ್ಲಿದ್ದ ಮಗ ದೇವದಾಸ್ ಕಳಿಸಿದ್ದ ತಂತಿ ಸಂದೇಶದಿಂದ ತಿಳಿಯಿತು. ೮ ರಂದು ಬಾರ್ಡೋಲಿಯಲ್ಲಿ ಈ ಸುದ್ದಿ ಕೇಳಿದ ಗಾಂಧಿಗೆ ಆಘಾತವಾಯಿತು. ಅವರು ಕೂಡಲೇ ಮಗನಿಗೆ ಚೌರಿಚೌರಗೆ ಹೋಗಿ ಶಾಂತಿ ಸ್ಥಾಪನೆಯ ಪ್ರಯತ್ನಗಳಲ್ಲಿ ಕೈಜೋಡಿಸಲು ಹೇಳಿದರು. ಇದು ಅಸಹಕಾರ ಚಳುವಳಿಯ ಭಾಗವಾಗಿ ನಡೆದ ಮೂರನೆಯ ಭಯಂಕರ ಹಿಂಸಾಚಾರವಾಗಿತ್ತು. ಮೊದಲೆರಡು ಅಹಮದಾಬಾದ್ ಮತ್ತು ಬಾಂಬೆಯಲ್ಲಿ ನಡೆದಿದ್ದವು. ಗಾಂಧಿ ಕೂಡಲೇ ಬಾರ್ಡೋಲಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆ ಕರೆದರು. ಅಂದೇ ಬಾರ್ಡೋಲಿ ಸತ್ಯಾಗ್ರಹಕ್ಕೆ ಸಿದ್ಧರಾಗಿದ್ದ ಜನರನ್ನು ಸತ್ಯಾಗ್ರಹವನ್ನು ಆರಂಭಿಸದಿರುವುದು ಒಳ್ಳೆಯದಲ್ಲವೇ? ಎಂದು ಕೇಳಿದರು. ಆದರೆ ಬಹಳ ಜನ, ಎಲ್ಲ ಸಿದ್ಧತೆಗಳಾಗಿ ಇಡೀ ದೇಶ ತಮ್ಮತ್ತ ನೋಡುತ್ತಿದ್ದಾಗ ಇಂತಹ ನಿರ್ಧಾರ ದೇಶಕ್ಕೆ ತಪ್ಪು ಸಂದೇಶ ನೀಡುತ್ತದೆ ಎಂದು ಅಭಿಪ್ರಾಯಪಟ್ಟರು. ಗಾಂಧಿ ಮತ್ತೆ ಆಘಾತಗೊಂಡರು. ತಮ್ಮ ಅಹಿಂಸೆಯ

ಸಂದೇಶ ಇವರಾರ ಹೃದಯವನ್ನೂ ಪ್ರವೇಶಿಸಿಲ್ಲ ಎಂದು ನೊಂದರು. ಇದಕ್ಕೆ ಪೂರಕವಾಗಿ ಪಂಜಾಬ್, ಸಿಂಧ್ ಮುಂತಾದ ಪ್ರಾಂತ್ಯಗಳಿಂದಲೂ ಆ ಹೊತ್ತಿಗೆ ಚಳುವಳಿಕಾರರು ಅಲ್ಲಲ್ಲಿ ಬಿಡಿ ಬಿಡಿ ಹಿಂಸಾಕೃತ್ಯಗಳಿಗೆ ಇಳಿದಿರುವ ವರದಿಗಳು ಗಾಂಧಿಯವರಿಗೆ ತಲುಪಿದ್ದವು. ಜೊತೆಗೆ ಈ ಮಧ್ಯೆ ತುರ್ಕಿಯಲ್ಲಿ ಮುಸ್ತಫಾ ಕೆಮಾಲ್‌ನ ಪ್ರಯತ್ನಗಳು ನೆಲಕಚ್ಚಿ, ಅಲ್ಲಿಯೇ ಖಿಲಾಫತ್ ಮರುಸ್ಥಾಪನೆಯ ಸಾಧ್ಯತೆಗಳು ಮುಕ್ಕಾಗತೊಡಗಿದ್ದವು. ಗಾಂಧಿ ನಿಜವಾಗಿ ವಿಚಲಿತರಾಗಿದ್ದರು. ಅವರು ಬಾರ್ಡೋಲಿ ಸತ್ಯಾಗ್ರಹದ ನಿಲುಗಡೆಯನ್ನು ಘೋಷಿಸಿದರು.

ಫೆಬ್ರುವರಿ ೧೨ರಂದು ಸಭೆ ಸೇರಿದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಕೂಡಲೇ ಅಸಹಕಾರ ಚಳುವಳಿಯನ್ನು ಸದ್ಯಕ್ಕೆ ನಿಲ್ಲಿಸಬೇಕೆಂಬ ಗಾಂಧಿಯ ನಿರ್ಣಯವನ್ನು ಹಲವರ ಪ್ರಬಲ ವಿರೋಧಗಳ ನಡುವೆಯೇ ಅನುಮೋದಿಸಿತು. ಇದಲ್ಲದೆ ರೈತರು ಕಂದಾಯ ಪಾವತಿ ಮಾಡುವಂತೆ ಮತ್ತು ಯಾವುದೇ ಮೆರವಣಿಗೆ ಅಥವಾ ಸಭೆ ನಡೆಸದಂತೆ ಸೂಚಿಸುವ ನಿರ್ಣಯಗಳನ್ನೂ ಅಂಗೀಕರಿಸಿತು. ಇದರ ಜೊತೆಗೇ ಮುಂದಿನ ಚಳುವಳಿಯ ನಿರ್ಧಾರದವರೆಗೆ ಕಾಂಗ್ರೆಸ್ಸಿಗರಿಗೆ ಒಂದು ರಚನಾತ್ಮಕ ಕಾರ್ಯಕ್ರಮದ ಸೂಚಿಯನ್ನೂ ನೀಡಿತು. ಆ ಕಾರ್ಯಕ್ರಮಗಳೆಂದರೆ, ಪ್ರತಿ ಮನೆಯಲ್ಲೂ ಚರಕಾ ಕ್ರಿಯಾಶೀಲವಾಗುವಂತೆ ನೋಡಿಕೊಳ್ಳುವುದು ಮತ್ತು ನೂಲಲು ನಿರ್ದಿಷ್ಟ ಸಮಯ ಗೊತ್ತುಪಡಿಸುವುದು. ಹಾಗೇ ಅದರ ಸುತ್ತ ಗ್ರಾಮ ಕೈಗಾರಿಕೆಗಳು ಬೆಳೆಯುವಂತೆ ಪೋಷಿಸುವುದು, ಅಸ್ಪೃಶ್ಯರ ಮನೆಗಳಿಗೆ ಭೇಟಿ ನೀಡಿ, ಅವರ ಕಷ್ಟಗಳನ್ನು ವಿಚಾರಿಸಿ ಅಸ್ಪೃಶ್ಯತೆಯ ಆಚರಣೆ ಮತ್ತು ಮದ್ಯಪಾನದ ವಿರುದ್ಧ ಪ್ರಚಾರ ನಡೆಸುವುದು, ರಾಷ್ಟ್ರೀಯ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಲು ದುಡಿಯುವುದು ಮತ್ತು ಅವುಗಳಲ್ಲಿ ಅಸ್ಪೃಶ್ಯ ಮಕ್ಕಳಿಗೆ ಪ್ರವೇಶ ಸಿಗುವಂತೆ ವಾತಾವರಣ ನಿರ್ಮಿಸುವುದು, ಎಲ್ಲ ಕಡೆ ಗ್ರಾಮ ಪಂಚಾಯ್ತಿಗಳ ರಚನೆ ಮಾಡಿ, ಅಲ್ಲೇ ನ್ಯಾಯ ನಿರ್ಣಯದ ಪ್ರಯತ್ನ ಮಾಡುವುದು ಮತ್ತು ಕಾಂಗ್ರೆಸ್ ಸದಸ್ಯತ್ವದ ಆಂದೋಲನ ಆರಂಭಿಸಿ ಪ್ರತಿ ಸದಸ್ಯನಲ್ಲೂ ಸತ್ಯ ಮತ್ತು ಅಹಿಂಸೆಗಳ ಸಂದೇಶ ಬಿತ್ತುವುದು.

ಗಾಂಧಿಯವರ ಪ್ರಾಯಶ್ಚಿತ್ತ ಉಪವಾಸ

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನಿರ್ಧಾರದ ವಿರುದ್ಧ ದಾಸ್‌ರಿಂದ ಹಿಡಿದು ಜವಾಹರಲಾಲ್ ನೆಹರೂರವರೆಗೆ ಕಾಂಗ್ರೆಸ್ ನಾಯಕರು ಮತ್ತು ಸಾಮಾನ್ಯ ಕಾಂಗ್ರೆಸ್ಸಿಗರಿಂದ ತೀವ್ರ ಅಸಮಾಧಾನ ವ್ಯಕ್ತವಾಯಿತು. ಎಲ್ಲೋ ಒಂದು ಕಡೆ ಹಿಂಸಾಚಾರವಾದರೆ, ತಾವೇ ದೇಶಾದ್ಯಂತ ತುದಿಗಾಲಲ್ಲಿ ನಿಲ್ಲಿಸಿದ್ದ ಸಮೂಹ ಸತ್ಯಾಗ್ರಹದ ಕಾರ್ಯಕ್ರಮವನ್ನೇಕೆ ರದ್ದು ಮಾಡಬೇಕೆಂಬುದು ಅವರ ಪ್ರಶ್ನೆಯಾಗಿತ್ತು. ಆದರೆ ಗಾಂಧಿ ತಮ್ಮ ನಿರ್ಧಾರದಿಂದ ಕದಲುವ ಪ್ರಶ್ನೆಯೇ ಇರಲಿಲ್ಲ. ಅವರು ಫೆಬ್ರುವರಿ ೧೩ರ 'ಯಂಗ್ ಇಂಡಿಯಾ'ದ ಸಂಚಿಕೆಯಲ್ಲಿ ತಮ್ಮ ಮನದಾಳದ ಸಂಕಟವನ್ನು ಹೀಗೆ ತೋಡಿಕೊಂಡಿದ್ದರು: 'ಈ ನಿರ್ಧಾರ ನಾವು ಚಳುವಳಿಗಾಗಿ ಮಾಡಿಕೊಂಡಿದ್ದ ತಯಾರಿಯ ದೃಷ್ಟಿಯಿಂದ ಅವಿವೇಕದಿಂದ ಕೂಡಿದ್ದೆನಿಸಬಹುದು. ಆದರೆ ಧಾರ್ಮಿಕವಾಗಿ ಅತ್ಯಂತ ವಿವೇಕದಿಂದ ಕೂಡಿದ್ದು ಎಂದು ನನಗನ್ನಿಸಿದೆ...... ಬಾರ್ಡೋಲಿ, ದೇಶದ ಜನರ ಒಮ್ಮತದ ಶಾಂತಿಯುತ ಬೆಂಬಲವಿಲ್ಲದೆ

ಯಶಸ್ವಿಯಾಗದು. ಈ ದಿಸೆಯಲ್ಲಿ ಚೌರಿಚೌರ ಘಟನೆ ಒಂದು ಎಚ್ಚರಿಕೆಯ ಸೂಚನೆ. ಅಹಿಂಸೆಯ ತೆಳು ಪರದೆಯ ಹಿಂದೆ ಅಡಗಿರುವ ಹಿಂಸೆಯ ಸುಪ್ತ ಬಯಕೆಯನ್ನು ನಿವಾರಿಸಿಕೊಳ್ಳದೆ ಸತ್ಯಾಗ್ರಹದ ಮಾತಾಡುವುದು ಅಬದ್ಧವಾದೀತು. ನಮಗಿದು ಗರ್ವಭಂಗ ಎಂದು ಕೆಲವರಿಗೆ ಅನ್ನಿಸಬಹುದು. ಇದರಿಂದ ಸ್ಫೂರ್ತಿಗೊಂಡ ಸರ್ಕಾರ ನಮ್ಮ ಮೇಲೆ ಇನ್ನಷ್ಟು ನಿರ್ದಯವಾಗಿ ಬೀಳಬಹುದು. ಅದು ನಮ್ಮ ಸ್ವರಾಜ್ಯದ ಹಂಬಲವನ್ನು ಗಟ್ಟಿಗೊಳಿಸಿ ಇನ್ನಷ್ಟು ಧೀರರಾಗಿ ಎದ್ದು ನಿಲ್ಲಲು ಪ್ರೇರಣೆಯಾಗಬಹುದು. ಶಾಪವೇ ವರವಾದಾಗ ಆಗುವ ಪರಿಣಾಮವೇ ಬೇರೆ'.

ಇದೇ 'ಯಂಗ್ ಇಂಡಿಯಾ'ದ ಆಗಸ್ಟ್ ೧೧ರ ಸಂಚಿಕೆಯಲ್ಲಿ ಹಿಂಸೆ-ಅಹಿಂಸೆಗಳ ಚರ್ಚೆ ಮಾಡುತ್ತಾ ಗಾಂಧಿ ತಾವು ಶಾಂತಿಗಾಗಿ ಸೋಲನ್ನೊಪ್ಪಿಕೊಳ್ಳಲೂ ಸಿದ್ಧವೆನ್ನುತ್ತಾ, ಅದು ಹೇಡಿತನವಾಗದೆ ಧೀರತನವೆನಿಸಿಕೊಳ್ಳುತ್ತದೆ ಎಂದು ವಿವರಿಸಿದರು. ತಾವು ಅಂತಹ ಸಂದರ್ಭ ಬಂದರೆ ಹೇಡಿತನಕ್ಕೆ ಬದಲಾಗಿ ಹಿಂಸೆಯನ್ನೇ ಪ್ರತಿಪಾದಿಸುವುದಾಗಿ ಅವರು ಹೇಳಿದ್ದರು. ಮುಂದುವರೆದು ಅವರು ಹೀಗೂ ಬರೆದಿದ್ದರು: 'ಕತ್ತಿಯ ಮೂಲಕ ಬಹುಬೇಗನೇ ವಿಜಯ ಸಾಧಿಸಬಹುದೇನೋ. ಆದರೆ ಹಾಗೆ ವಿಜಯ ಗಳಿಸಿದ ಭಾರತದ ಬಗ್ಗೆ ನನ್ನ ಹೃದಯದಲ್ಲಿ ಹೆಮ್ಮೆ ಇರಲಾರದು. ನನ್ನ ಧರ್ಮಕ್ಕೆ ರಾಷ್ಟ್ರದ ಸೀಮೆಗಳ ಹಂಗಿಲ್ಲ. ಅದರಲ್ಲಿ ನನಗೆ ಜೀವಂತ ನಂಬಿಕೆ ಇದ್ದರೆ, ನನ್ನ ಪ್ರೀತಿ ಭಾರತದ ಗಡಿಯಾಚೆಗೂ ಹಬ್ಬಿರುತ್ತದೆ'. ತಮ್ಮ ಗಾಂಧಿ ಜೀವನ ಚರಿತ್ರೆ 'ದ ಲೈಫ್ ಆಫ್ ಮಹಾತ್ಮಾ ಗಾಂಧಿ'ಯಲ್ಲಿ ಈ ಮಾತುಗಳನ್ನು ಉಲ್ಲೇಖಿಸುವ ಲೂಯಿ ಫಿಶರ್, ಇವುಗಳ ಬೀಜಾರ್ಥವನ್ನು ಹೀಗೆ ಪ್ರಸ್ತುತಪಡಿಸುತ್ತಾರೆ: 'ಗಾಂಧಿ, ತಪ್ಪು ಮಾಡಲಿ, ಸರಿಯೇ ಮಾಡಲಿ, ಅದು ನನ್ನ ದೇಶಕ್ಕಾಗಿ ಎನ್ನುವಂಥ ಸಂಕುಚಿತ ರಾಷ್ಟ್ರವಾದಿತ್ವವಾಗಿರಲಿಲ್ಲ'.

ಈಗ ಗಾಂಧಿಯವರ ಪ್ರಕಾರ ಚೌರಿಚೌರಾದಲ್ಲಿ ಪೊಲೀಸರು ತಪ್ಪೆಸಗಿದ್ದರೂ, ಕೊನೆಗೆ ಅಸಹಾಯಕರಾಗಿದ್ದ ಅವರ ಮೇಲೆ ಎಸಗಿದ ಭಯಾನಕ ಹಿಂಸೆ ಹೇಡಿತನಕ್ಕಿಂತ ಹೇಯವಾಗಿತ್ತು. ಅವರು ಈ ಹಿಂಸಾಚಾರದ ಹೆಚ್ಚಿನ ಹೊಣೆ ಹೊತ್ತು ಪ್ರಾಯಶ್ಚಿತ್ತ ರೂಪವಾಗಿ ಐದು ದಿನಗಳ ಉಪವಾಸ ಆಚರಿಸುವುದಾಗಿ ಘೋಷಿಸಿದರು.

ಗಾಂಧಿಯವರ ಈ ಆಳದ ಚಿಂತನೆ ದಾಸ್, ನೆಹರೂರಂತಹ ನಾಯಕರ ಅಸಮಾಧಾನವನ್ನು ನಿವಾರಿಸಿತು. ದೇಶ ಕೂಡ ನಿಧಾನವಾಗಿ ಗಾಂಧಿಯವರ ಸಂದೇಶವನ್ನು ಅರಿಯಲಾರಂಭಿಸಿತು.

ಇವೆಲ್ಲದರ ಮಧ್ಯೆ ಬಾರ್ಡೋಲಿ ಸತ್ಯಾಗ್ರಹ ಪ್ರಕಟಣೆಯಾದ ಕೂಡಲೇ ಗಾಂಧಿಯವರನ್ನು ದೇಶದ್ರೋಹದ ಆಪಾದನೆಯ ಮೇಲೆ ಬಂಧಿಸಲು ಅದೇಶ ನೀಡಿದ್ದ ಸರ್ಕಾರ, ಕಾಂಗ್ರೆಸ್ಸಿನ ಈ ತೀರ್ಮಾನದ ನಂತರ ಅದನ್ನು ರದ್ದುಗೊಳಿಸಿತ್ತು. ಆದರೆ ಫೆಬ್ರುವರಿ ೨೪ರಂದು ದೆಹಲಿಯಲ್ಲಿ ಸಭೆ ಸೇರಿದ ಅಖಿಲ ಭಾರತ ಕಾಂಗ್ರೆಸ್ ಸಮಿತಿ, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನಿರ್ಧಾರಕ್ಕೆ ಒಪ್ಪಿಗೆ ನೀಡಿತಾದರೂ, ಅಸಹಕಾರ ಚಳುವಳಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆಯೆಂದಾಕ್ಷಣ ಅದು ಅನಿರ್ದಿಷ್ಟ ಕಾಲಕ್ಕೆ ಮುಂದೂಡಲಾಗಿದೆ ಎಂದರ್ಥವಲ್ಲ ಎಂದು ಹೇಳಿತು. ಸರ್ಕಾರ ಇದನ್ನು ಸಹಿಸಲು ಸಿದ್ಧವಿರಲಿಲ್ಲ. ಇದರ ಜೊತೆಗೆ ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ಕೂಡ ಗಾಂಧಿಯನ್ನು

ಈವರೆಗೆ ಬಂಧಿಸಿರದಿರುವುದರ ಬಗ್ಗೆ ಆಕ್ರೋಶ ವ್ಯಕ್ತವಾಗತೊಡಗಿತ್ತು. ಸರ್ಕಾರ ಗಾಂಧಿಯವರನ್ನು ಬಂಧಿಸಿ ವಿಚಾರಣೆಗೊಳಪಡಿಸಲು ನಿರ್ಧರಿಸಿತು.

ಗಾಂಧಿ ಬಂಧನಕ್ಕೆ ಹೆಚ್ಚಿದ ಒತ್ತಡ

ವೈಸ್‌ರಾಯ್ ರೀಡಿಂಗ್, ಗಾಂಧಿಯವರ ಬಂಧನವನ್ನು ಕೊನೆ ಕ್ಷಣದವರೆಗೂ ಮುಂದೂಡಲು ಕಾರಣವಿತ್ತು. ಒಂದು ಹೊರಗಿನ ಕಾರಣವಾಗಿದ್ದರೆ, ಮತ್ತೊಂದು ಒಳಗಿನ ಕಾರಣ. ಹೊರಗಿನ ಕಾರಣವೆಂದರೆ ಗಾಂಧಿಯ ಬಂಧನಕ್ಕೆ ಜನತೆ ಕೂಡ ಆಕ್ಷೇಪ ವ್ಯಕ್ತಪಡಿಸಲಾರದಂತಹ ಕಾರಣಗಳು ಉಂಟಾಗುವವರೆಗೂ ಕೈಗೊಳ್ಳಬಾರದೆಂಬ ಆಡಳಿತ ಕೌಶಲ್ಯಕ್ಕೆ ಸಂಬಂಧಪಟ್ಟಿದುದಾದರೆ, ಒಳಗಿನ ಕಾರಣ ಸ್ವಲ್ಪ ಸಂಕೀರ್ಣವಾಗಿತ್ತು. ರೀಡಿಂಗ್, ಸ್ವಭಾವತಃ ಧರ್ಮಬುದ್ಧಿಯ ಸಜ್ಜನನಾಗಿದ್ದು, ಮೂರು ಬಾರಿ ಗಾಂಧಿಯವರೊಂದಿಗೆ ನಡೆಸಿದ ಮಾತುಕತೆಯಲ್ಲಿ ಅವರ ಬಗ್ಗೆ ಅಪಾರ ಗೌರವ ಹೊಂದಿದ್ದನು. 'ಗಾಂಧಿ ಸರಳ, ನೇರ ಮತ್ತು ಪ್ರಾಮಾಣಿಕ ಮನುಷ್ಯ' ಎಂಬುದು ಆತನ ಅಭಿಪ್ರಾಯವಾಗಿತ್ತು. ಒಂದು ಭೇಟಿಯಲ್ಲಿ ಗಾಂಧಿ ಹೇಳಿದ್ದ ಈ ಮಾತುಗಳು ಆತನಿಗೆ ಆಳದಲ್ಲಿ ಕಾಡುತ್ತಿದ್ದವು: 'ನಮ್ಮದು, ರಾಜಕಾರಣವನ್ನು ಕಲುಷಿತಗೊಳಿಸಿರುವ ಸುಳ್ಳು, ಮೋಸ, ಭ್ರಷ್ಟಾಚಾರ ಮತ್ತು ಬಿಳಿಯರ ಶ್ರೇಷ್ಠತೆ ಎಂಬ ಕೆಡುಕುಗಳಿಂದ ಮುಕ್ತಗೊಳಿಸಿ ಸ್ವಚ್ಛಗೊಳಿಸುವ ಚಳುವಳಿ. ಇದು ಭಾರತವನ್ನು ಸ್ವಚ್ಛಗೊಳಿಸುವ ಕಾರ್ಯಕ್ರಮ. ಅದರ ಉಪಫಲವಾಗಿ ಬ್ರಿಟಿಷರು ಇಲ್ಲಿಂದ ಹೊರಹೋಗಬೇಕಾಗುತ್ತದೆ'. ಲೇಖನ ಬರೆದರೆ ದೇಶದ್ರೋಹವಾಗದು. ಕ್ರಿಯೆಯಲ್ಲಿ ಅದು ಸಾಬೀತಾಗಬೇಕೆಂಬುದು ರೀಡಿಂಗ್‌ರ ನಿಲುವಾಗಿತ್ತು. ಆದರೆ ಲಂಡನ್‌ನ ಬ್ರಿಟಿಷ್ ಸಾಮ್ರಾಜ್ಯ ಸರ್ಕಾರ, ವಿಶೇಷವಾಗಿ ಗಾಂಧಿಯವರ ಬಗ್ಗೆ ಸಹಾನುಭೂತಿಯನ್ನೇ ಹೊಂದಿದ್ದ, ಭಾರತದ ವ್ಯವಹಾರಗಳಿಗೆ ಸಂಬಂಧಪಟ್ಟ ವಿದೇಶಾಂಗ ಕಾರ್ಯದರ್ಶಿ ಲಾರ್ಡ್ ಮಾಂಟೆಗೋ ಅಂಥವರೂ ಒಂದು ಕಡೆಯಿಂದ ಮತ್ತು ಬಾಂಬೆ ಪ್ರಾಂತ್ಯದ ಗವರ್ನರ್ ಜಾರ್ಜ್ ಲಾಯ್ಡ್ ಇನ್ನೊಂದು ಕಡೆಯಿಂದ ಒತ್ತಡ ನಿರ್ಮಿಸತೊಡಗಿದಾಗ, ರೀಡಿಂಗ್, ಬಂಧನದ ತೀರ್ಮಾನ ಕೈಗೊಳ್ಳಬೇಕಾಯಿತು.

ಬಂಧನಕ್ಕೆ, ಗಾಂಧಿ 'ಯಂಗ್ ಇಂಡಿಯಾ'ದ ೧೯೨೧ರ ಸೆಪ್ಟೆಂಬರ್ ೧೯, ಡಿಸೆಂಬರ್ ೧೫ ಹಾಗೂ ೧೯೨೨ರ ಫೆಬ್ರುವರಿ ೨೩ರ ಸಂಚಿಕೆಗಳಲ್ಲಿ ಬರೆದ ಮೂರು 'ದೇಶದ್ರೋಹಿ' ಲೇಖನಗಳನ್ನು ಕಾರಣವೆಂದು ಆರೋಪ ಪತ್ರದಲ್ಲಿ ನಮೂದಿಸಲಾಗಿತ್ತು. ಈ ಮೂರೂ ಲೇಖನಗಳ ಮುಖ್ಯ ಮಾತುಗಳನ್ನು ಹೀಗೆ ಸಾರಾಂಶೀಕರಿಸಬಹುದು: 'ಸೈನಿಕನೇ ಆಗಲಿ, ಸರ್ಕಾರಿ ನೌಕರನೇ ಆಗಿರಲಿ, ಈ ಪ್ರಭುತ್ವದ ಸೇವೆ ಮಾಡುವುದು ಪಾಪದ ಕೆಲಸವೇ ಸರಿ ಎಂದು ಹೇಳಲು ನನಗೆ ಯಾವುದೇ ಸಂಕೋಚವಿಲ್ಲ. ದೇಶದ್ರೋಹ ಕಾಂಗ್ರೆಸ್‌ನ ಧರ್ಮವಾಗಿದೆ. ಆ ಧರ್ಮದ ಭಾಗವಾಗಿಯೇ ನಾವು ಈ ಸರ್ಕಾರವನ್ನು ಪದಚ್ಯುತಗೊಳಿಸಲು ಉದ್ದೇಶಿಸಿದ್ದೇವೆ. ಹಾಗಾಗಿ ಇದೊಂದು ನಮ್ಮ ಪಾಲಿನ ನೈತಿಕ ಹೋರಾಟವಾಗಿದೆ. ಸರ್ಕಾರ ನಮ್ಮ ಬಗ್ಗೆ ದಯೆ ತೋರುವ ಅಗತ್ಯವಿಲ್ಲ. ಅದು ಏನು ಮಾಡಲೂ ಸ್ವತಂತ್ರವಾಗಿದೆ... ರೀಡಿಂಗ್ ಅವರೇ, ನಾವು ಅಸಹಕಾರಿಗಳು ಸರ್ಕಾರದ ವಿರುದ್ಧ ಬಂಡಾಯ ಘೋಷಿಸಿದ್ದೇವೆ. ನೀವು ಏನು ಮಾಡಬಹುದೋ ಅದನ್ನು ಮಾಡಿ...... ಬಹುತೇಕ ಅಕ್ಕಿ ತಿಂದು ಬದುಕುವ ಬಡ ಭಾರತೀಯರು, ಯಾರ

ಹಂಗಿಗೂ ಸಿಗದೆ ನಿಃಶಸ್ತ್ರರಾಗಿ ಸಾಮ್ರಾಜ್ಯವೊಂದರ ವಿರುದ್ಧ ಯುದ್ಧಕ್ಕೆ ಹೊರಟಿದ್ದಾರೆ. ಇದು ಒಂದು ತಿಂಗಳು, ಒಂದು ವರ್ಷ ಅಥವಾ ಹಲವು ವರ್ಷಗಳೇ ನಡೆಯಬಹುದು. ಆದರೆ ಅಧಿಕಾರ ಮತ್ತು ದುರ್ಬಲ ಜನಾಂಗವೊಂದರ ಸಂಪತ್ತನ್ನು ಲೂಟಿ ಹೊಡೆದು ಅಧಿಕಾರದ ಕೆಂಪು ಮದ್ಯದಿಂದ ಮತ್ತೇರಿಸಿಕೊಂಡ ಯಾವುದೇ ಪ್ರಭುತ್ವ ಈ ಜಗತ್ತಿನಲ್ಲಿ ಬಹುಕಾಲ ಬಾಳಿಲ್ಲ...'

ಗಾಂಧಿ ಬಂಧನ

ಮಾರ್ಚ್ ೧೦ರಂದು ಗಾಂಧಿಯವರನ್ನು ಬಂಧಿಸಲು ಬಾಂಬೆ ಪೋಲೀಸ್ ನಿರ್ಧರಿಸಿತು. ಆದರೆ ೮ರಂದು ಅಜ್ಮೇರ್‌ನಲ್ಲಿ ರಾಷ್ಟ್ರೀಯವಾದಿ ಉಲೇಮಾಗಳ ಸಮ್ಮೇಳನವೊಂದರಲ್ಲಿ ಭಾಗವಹಿಸಲು ಹೋಗಿದ್ದ ಗಾಂಧಿ ಅಹಮದಾಬಾದ್‌ಗೆ ವಾಪಸ್ ಬರಲೆಂದು ಪೊಲೀಸರು ಕಾದರು. ೧೦ರಂದು ಅಹಮದಾಬಾದ್‌ನ ರೈಲ್ವೆ ನಿಲ್ದಾಣದಲ್ಲಿ ಇಳಿದ ಗಾಂಧಿಗೆ ಪ್ಲಾಟ್‌ಫಾರಂನಲ್ಲಿ ನಿಂತಿದ್ದ ರೈಲುಗಾಡಿಯ ಡಬ್ಬಿಯೊಂದರಿಂದ 'ಗಾಂಧೀ!' ಎಂಬ ಕೂಗು ಕೇಳಿಸಿತು. ಅವರು ತಿರುಗಿ ನೋಡಿದಾಗ ಡಬ್ಬಿಯಲ್ಲಿದ್ದ ಇಂಗ್ಲಿಷ್ ಸೈನಿಕನೊಬ್ಬ ಕಿಟಕಿಯಿಂದಲೇ ಕೈ ಚಾಚಿ 'ಗಾಂಧೀ, ನಿಮ್ಮ ಕೈ ಕುಲುಕಬಯಸುವೆ!' ಎಂದ. ಗಾಂಧಿ ಸಂತೋಷದಿಂದ ಕೈ ಕುಲುಕಿ ಅವನ ಕ್ಷೇಮ ಸಮಾಚಾರ ವಿಚಾರಿಸಿ ಸಬರ್ಮತಿ ಆಶ್ರಮ ತಲುಪಿದರು. ಅಲ್ಲಿ ಅವರಿಗೆ, ತಮ್ಮ ಮತ್ತು ಶಂಕರಲಾಲ್ ಬ್ಯಾಂಕರ್ ಅವರ ಬಂಧನಕ್ಕಾಗಿ ಪೊಲೀಸರು ಬರುತ್ತಿರುವ ಸುದ್ದಿ ತಿಳಿಯಿತು. ಗಾಂಧಿ ಇದು ನಿರೀಕ್ಷಿತ ಮತ್ತು ಖುಷಿಯ ವಿಚಾರ ಎಂದು ಹೇಳಿ ಬಂಧನಕ್ಕೆ ಸಿದ್ಧವಾದರು. ಆ ಹೊತ್ತಿಗೆ ಪೊಲೀಸರು ಬಂದೂ ಬಂದರು.

ಶಂಕರಲಾಲ್ ಬ್ಯಾಂಕರ್‌ರನ್ನು 'ನವಜೀವನ' ಪತ್ರಿಕೆಯ ಪ್ರಕಾಶಕರಾಗಿ ಅದರಲ್ಲಿ ದೇಶದ್ರೋಹದ ಲೇಖನ ಮತ್ತು ಸುದ್ದಿಗಳನ್ನು ಪ್ರಕಟಿಸಿದ್ದ ಆರೋಪದ ಮೇಲೆ ಬಂಧಿಸಲಾಗುತ್ತಿದೆ ಎಂದು ತಿಳಿಸಲಾಯಿತು. ಗಾಂಧಿ ಆಶ್ರಮವಾಸಿಗಳಿಗೆ ತಮಗೆ ಪ್ರಿಯವಾದ ನರಸಿಂಹ ಮೆಹ್ತಾರ 'ವೈಷ್ಣವ ಜನತೋ' ಗೀತೆಯನ್ನು ಹಾಡಲು ಕೋರಿದರು. ಗೀತೆಯ ನಂತರ ಜನರಿಗೆ ಶಾಂತಿ ಕಾಪಾಡುವಂತೆ ತಿಳಿಸಲು ಹೇಳಿದರು. ಜೊತೆಗೆ ಈ ಮಾತುಗಳನ್ನೂ ಹೇಳಿದರು: ನಾನು 'ಕೋಪವನ್ನು ನಿವಾರಿಸಿಕೊಂಡು ಪ್ರಾಯಶ್ಚಿತ್ತವನ್ನೂ ಕೈಗೊಂಡ ನಂತರವಷ್ಟೇ ನನ್ನನ್ನು ಬಂಧಿಸಲಾಗುತ್ತಿದೆ. ಭಾರತಕ್ಕೆ ಮತ್ತು ನನಗೆ ಇದಕ್ಕಿಂತ ದೊಡ್ಡ ಭಾಗ್ಯ ಇನ್ನೊಂದಾವುದಿದ್ದೀತು?' ಹೀಗೆ ಹೇಳಿ ಪೊಲೀಸರ ವಾಹನ ಹತ್ತಿದರು. ಕಸ್ತೂರಬಾ, ಅನುಸೂಯಾ ಬೆನ್ ಮತ್ತು ಕೃಷ್ಣದಾಸರು ಬಂಧಿತರೊಂದಿಗೆ ಸೆರೆಮನೆವರೆಗೆ ಹೋದರು.

ಸೆರೆಮನೆ ಸಬರ್ಮತಿ ಆಶ್ರಮದ ಸನಿಹದಲ್ಲೇ ಇತ್ತು. ಪೊಲೀಸರು ಗಾಂಧಿಯನ್ನು ಆಶ್ರಮದಲ್ಲೇ ಬಂಧಿಸಲು ಇದೇ ಕಾರಣವಾಗಿತ್ತು. ಗಾಂಧಿ ಮತ್ತು ಬ್ಯಾಂಕರ್ ಅವರಿಗೆ ಒಂದೊಂದು ಕೋಣೆ ನೀಡಲಾಗಿತ್ತು. ಅವುಗಳಲ್ಲಿ ಮಂಚ, ಹಾಸಿಗೆ, ಹೊದಿಕೆ ಮತ್ತು ದಿಂಬುಗಳ ಸೌಲಭ್ಯವಿದ್ದವು. ಕೃಷ್ಣದಾಸರು ಗಾಂಧಿಯವರ ಹಾಸಿಗೆ ಹೊದಿಕೆಗಳನ್ನು ಒದರಿ ಸಿದ್ಧಮಾಡಿಕೊಟ್ಟರು. ನಂತರ ಪೊಲೀಸರು ಬಂದಿಗಳ ಜೊತೆಗೆ ಬಂದಿದ್ದ ಮುವ್ವರನ್ನೂ ಆಶ್ರಮಕ್ಕೆ ಒಯ್ದು ಬಿಟ್ಟರು.

ಗಾಂಧಿ ಎದುರಿಸಿದ 'ಮಹಾನ್ ವಿಚಾರಣೆ'

ಮಾರನೆಯ ದಿನ ಆಪಾದಿತರಿಬ್ಬರನ್ನೂ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ನ್ಯಾಯಾಧೀಶರು ಗಾಂಧಿಯವರನ್ನು ನಿಮ್ಮ ಉದ್ಯೋಗವೇನು? ಎಂದು ಕೇಳಿದಾಗ ಅವರು 'ನೂಲುವುದು ಮತ್ತು ನೇಯುವುದು' ಎಂದು ಉತ್ತರ ಕೊಟ್ಟರು. ನ್ಯಾಯಾಧೀಶರು ಅವರನ್ನು ಆಶ್ಚರ್ಯಚಕಿತರಾಗಿ ದಿಟ್ಟಿಸಿ ನೋಡಿದರು. ಆಪಾದಿತರಿಬ್ಬರೂ ತಮ್ಮ ಮೇಲಿನ ಆರೋಪಗಳನ್ನು ಒಪ್ಪಿಕೊಂಡರು. ವಿಚಾರಣೆಯನ್ನು ಮಾರ್ಚ್ ೧೮ಕ್ಕೆ ನಿಗದಿಪಡಿಸಲಾಯಿತು.

ನಗರದ ಸರ್ಕೀಟ್ ಹೌಸ್‌ನಲ್ಲಿ 'ಮಹಾನ್ ವಿಚಾರಣೆ' ('ಗ್ರೇಟ್ ಟ್ರಯಲ್') ಎಂದೇ ಮುಂದೆ ಪ್ರಸಿದ್ಧವಾದ ವಿಚಾರಣೆ ಆರಂಭವಾಗುವ ಮುನ್ನವೇ ಅಲ್ಲಿ ಜನ ಕಿಕ್ಕಿರಿದಿದ್ದರು. ದೂರದೂರುಗಳಿಂದ ಜವಾಹರಲಾಲ್ ನೆಹರೂ, ಸರೋಜಿನಿ ನಾಯ್ಡು ಮತ್ತು ಮದನಮೋಹನ ಮಾಳವೀಯರೂ ಸೇರಿದಂತೆ ಅನೇಕ ಗಣ್ಯರು ಅಲ್ಲಿ ನೆರೆದಿದ್ದರು. ಕುತೂಹಲದ ಸಂಗತಿ ಎಂದರೆ ಸರಳಾದೇವಿ ಚೌಧುರಾಣಿಯವರೂ ಲಾಹೋರ್‌ನಿಂದ ಬಂದು ಕಸ್ತೂರಬಾ ಅವರು ಕೂತಿದ್ದ ಎರಡು ಕುರ್ಚಿಗಳಾಚೆ ಕೂತಿದ್ದರು. ಅವರಿಬ್ಬರೂ ಪರಸ್ಪರ ಏನಾದರೂ ಮಾತಾಡಿಕೊಂಡರೇ ಎಂಬುದರ ಬಗ್ಗೆ ತಿಳಿಯದು ಎಂದು ರಾಮಚಂದ್ರ ಗುಹಾ ತಮ್ಮ 'ಗಾಂಧಿ' ಎಂಬ ಪುಸ್ತಕದಲ್ಲಿ ತುಂಟ ಮಾತೊಂದನ್ನು ದಾಖಲಿಸಿದ್ದಾರೆ.

ವಿಚಾರಣೆಗೆ ಕುಳಿತಿದ್ದ ನ್ಯಾಯಾಧೀಶರು ನ್ಯಾಯಾಂಗದ ದೀರ್ಘ ಅನುಭವದ ಹಿನ್ನೆಲೆ ಹೊಂದಿದ ಬ್ರಿಟಿಷ್ ನಾಗರಿಕ ಸೇವೆಯ ಹಿರಿಯ ಅಧಿಕಾರಿಯಾಗಿದ್ದ ಸಿ.ಎನ್. ಬ್ರೂಮ್‌ಫೀಲ್ಡ್ ಅವರು. ವಿಚಾರಣೆಯ ಆರಂಭದಲ್ಲಿ ಸರ್ಕಾರದ ಪ್ರಧಾನ ವಕೀಲರು 'ಯಂಗ್ ಇಂಡಿಯಾ'ದಲ್ಲಿ ಗಾಂಧಿ ಬರೆದ ಲೇಖನಗಳನ್ನು ಉಲ್ಲೇಖಿಸಿ, ಇದು ಪ್ರಸಕ್ತ ಸರ್ಕಾರದ ಬಗ್ಗೆ ವೈರ ಹುಟ್ಟಿಸುವ ಒಂದು ವ್ಯವಸ್ಥಿತ ಪ್ರಚಾರ ಕಾರ್ಯಕ್ರಮದ ಭಾಗವಾಗಿದೆ ಎಂದೂ, ಆಪಾದಿತನು ಉನ್ನತ ವಿದ್ಯಾಭ್ಯಾಸ ಪಡೆದವನೂ, ಜನತೆಯ ನಡುವೆ ಮಾನ್ಯತೆ ಪಡೆದ ದೊಡ್ಡ ನಾಯಕನೂ ಆಗಿರುವುದರಿಂದ, ಈ ಪ್ರಚಾರ ಕಾರ್ಯಕ್ರಮದ ದುಷ್ಪರಿಣಾಮ ಹೆಚ್ಚು. ಇನ್ನು ಶಂಕರ್‌ಲಾಲ್ ಬ್ಯಾಂಕರ್ ಈ ಲೇಖನಗಳ ಪ್ರಕಾಶಕರಾಗಿ ತಪ್ಪಿತಸ್ಥರಾಗಿದ್ದಾರೆ' ಎಂದು ಮೊಕದ್ದಮೆಯನ್ನು ಮಂಡಿಸಿದ. ನಂತರ ನ್ಯಾಯಾಧೀಶರು ಗಾಂಧಿಯವರನ್ನು, ಅವರು ಏನಾದರೂ ಹೇಳುವುದಿದೆಯೇ? ಎಂದು ಕೇಳಿದರು. ಗಾಂಧಿ, ಪ್ರಧಾನ ವಕೀಲರು ಹೇಳಿರುವುದು ಸಂಪೂರ್ಣ ಸತ್ಯವೆಂದೂ, ತಮ್ಮ ಈ ಉದ್ದೇಶಪೂರ್ವಕ ಅಪರಾಧಕ್ಕಾಗಿ ಕಾನೂನು ಪ್ರಕಾರ ಅದೆಷ್ಟು ಹೆಚ್ಚಿನ ಶಿಕ್ಷೆ ಕೊಡಬಹುದೋ ಅದನ್ನು ನೀಡಬೇಕೆಂದು ಕೋರಿ, ತಾವು ಸಿದ್ಧಪಡಿಸಿ ತಂದಿದ್ದ ಒಂದು ಹೇಳಿಕೆಯನ್ನು ನ್ಯಾಯಾಧೀಶರ ಮುಂದೆ ಓದಿದರು. ಅದನ್ನು ಓದಲಾರಂಭಿಸುವ ಮುನ್ನ ಈ ಮಾತುಗಳನ್ನೂ ಆಡಿದರು: 'ನನ್ನ ಈ ಹೇಳಿಕೆಯನ್ನು ನಾನು ಓದಿ ಮುಗಿಸುವ ಹೊತ್ತಿಗೆ ನೀವು ನಿಮ್ಮ ಹುದ್ದೆಗೆ ರಾಜೀನಾಮೆ ನೀಡಲೂ ಬಯಸಬಹುದು. ಆದರೆ ಅಷ್ಟು ತ್ವರಿತ ಪರಿವರ್ತನೆಯನ್ನು ನಿರೀಕ್ಷಿಸದ ನಾನು, ಈ ಹೇಳಿಕೆಯ ಮೂಲಕ ಈ ಬೃಹತ್ ದುಸ್ಸಾಹಸವನ್ನು ಕೈಗೊಳ್ಳಲು ಕಾರಣವಾದ ನನ್ನ ಎದೆಯ ಸಂಕಟವನ್ನು ನ್ಯಾಯಾಲಯದ ಮುಂದೆ ನಿವೇದಿಸಬಯಸಿದ್ದೇನೆ' ಅದರ ಮುಖ್ಯಾಂಶ ಹೀಗಿತ್ತು:

'ನಾನು ದ.ಆಫ್ರಿಕಾದಲ್ಲಿದ್ದಾಗ ಅಲ್ಲಿನ ವರ್ಣಭೇದ, ಬಿಳಿಯರ ಆಡಳಿತದ ಒಂದು ಪ್ರಜ್ಞಾಪೂರ್ವಕ ಲೋಪ ಎಂದು ಭಾವಿಸಿ ಅದರ ವಿರುದ್ಧ ನನ್ನದೇ ರೀತಿಯ ಹೋರಾಟ ಮಾಡಿದ್ದೆನಲ್ಲದೆ, ಬ್ರಿಟಿಷರು ಮೂಲತಃ ನ್ಯಾಯಪರರು ಎಂದು ನಂಬಿ, ಅವರ ಪರವಾಗಿ ಯುದ್ಧಗಳಲ್ಲೂ ನನ್ನ ಮಿತಿಯಲ್ಲೇ ಸೇವೆ ಸಲ್ಲಿಸುವ ಮೂಲಕ ನನ್ನ ದೇಶಕ್ಕೆ ಸಾಮ್ರಾಜ್ಯದ ಚೌಕಟ್ಟಿನಲ್ಲೇ ಸಮಾನ ಗೌರವದ ಸ್ಥಾನ ಸಿಗುವುದೆಂದು ನಂಬಿದ್ದೆ. ಆದರೆ ರೌಲೆಟ್ ಕಾಯಿದೆ ಮೂಲಕ ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಕಸಿದುಕೊಂಡ ರೀತಿ ಮತ್ತು ನಂತರ ಪಂಜಾಬ್‌ನಲ್ಲಿ–ನಿರ್ದಿಷ್ಟವಾಗಿ ಜಲಿಯನ್‌ವಾಲಾ ಬಾಗ್‌ನಲ್ಲಿ–ನಡೆಸಿದ ಕ್ರೌರ್ಯ ನನ್ನ ನಂಬಿಕೆಯನ್ನು ಸಂಪೂರ್ಣ ಕುಸಿಯುವಂತೆ ಮಾಡಿದೆ. ನಿಜ, ಬ್ರಿಟಿಷ್ ಆಡಳಿತ ವ್ಯವಸ್ಥೆ ಜಗತ್ತಿನ ಅತಿಶ್ರೇಷ್ಠ ಆಡಳಿತ ವ್ಯವಸ್ಥೆಯೆಂದು ಹೆಸರಾಗಿದೆ. ಅದರ ಲಾಭವನ್ನು ಅತ್ಯಲ್ಪವಾದರೂ ಪಡೆಯುತ್ತಿದ್ದೇವೆ. ಆದರೆ ಈ ಪರಿಣಾಮಕಾರಿ ವ್ಯವಸ್ಥೆ ಒಂದು ಕಡೆಯಿಂದ, ಭಯೋತ್ಪಾದನೆ ಮತ್ತು ಬಲಪ್ರಯೋಗದಲ್ಲಿ ನಂಬಿಕೆ ಇಟ್ಟಿರುವುದರಿಂದಲೂ, ಇನ್ನೊಂದು ಕಡೆ ಲೂಟಿಗೊಂಡ ಜನ ಅದರ ವಿರುದ್ಧ ಉಸಿರೆತ್ತದಂತೆ ಅವರ ಹಕ್ಕುಗಳನ್ನು ದಮನ ಮಾಡಿರುವ ಕಾರಣದಿಂದಲೂ, ಅವರ ಸಂಕಟ ಸ್ಫೋಟಗೊಳ್ಳುವ ಅಪಾಯವನ್ನು ಎದುರಿಸುತ್ತಿರುವುದು ಅದಕ್ಕೆ ಗೊತ್ತಾದಂತೆ ಕಾಣುತ್ತಿಲ್ಲ. ಭಾರತ ಬ್ರಿಟಿಷ್ ಪ್ರಭುತ್ವದಡಿಯಲ್ಲಿ ಇತಿಹಾಸದಲ್ಲಿ ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಹಿಂದೆಂದೂ ಇಲ್ಲದಷ್ಟು ಅಸಹಾಯಕತೆಗೆ ಈಡಾಗಿದೆ. ಹಾಗಾಗಿ ಅಸಹಕಾರದ ಮೂಲಕ ಈ ಕೆಡುಕಿನ ವಿರುದ್ಧ ಹೋರಾಡುವುದು ಒಳಿತಿನ ಸಾಧನೆಯೆಂದೇ ನಾನು ಭಾವಿಸಿದ್ದೇನೆ.' ತಮ್ಮ ಈ ಹೇಳಿಕೆಯ ಕೊನೆಯಲ್ಲಿ ಅವರ ಈ ತಪ್ಪೊಪ್ಪಿಗೆಯ ಮಾತೂ ಇತ್ತು: 'ನಾನು ಬೆಂಕಿಯೊಂದಿಗೆ ಸರಸವಾಡುತ್ತಿದ್ದೇನೆ ಎಂಬುದು ನನಗೆ ಗೊತ್ತಿತ್ತು. ಅಹಿಂಸೆ ನನ್ನ ತತ್ವದ ಮೊದಲು ಮತ್ತು ಕೊನೆ ಆಗಿದ್ದರೂ, ನನ್ನ ಜನ ಕೋಪಾವೇಶಗಳಿಗೆ ಒಳಗಾಗಿ ಹಿಂಸೆಗೆ ಇಳಿದು ದೇಶಕ್ಕೆ ಅಪಾರ ಹಾನಿಯ ಅಪಚಾರವೆಸಗಿದ್ದಾರೆ. ಅದರ ಹೊಣೆಯನ್ನು ನಾನು ಹೊರಲೇಬೇಕಿದೆ'.

ನ್ಯಾಯಾಧೀಶರ ಮಹಾನ್ ತೀರ್ಪು

ಮೊಕದ್ದಮೆಯು ಆರೋಪಿಗಳು ತಮ್ಮ ಅಪರಾಧಗಳನ್ನು ನೇರವಾಗಿ ಒಪ್ಪಿಕೊಂಡಿದ್ದುದರಿಂದ ಸರಳವಾಗಿತ್ತಾದರೂ, ಗಾಂಧಿಯವರ ಹೇಳಿಕೆ ಅದನ್ನು ಸಂಕೀರ್ಣಗೊಳಿಸಿತ್ತು. ಮೊಕದ್ದಮೆಯ ಮಹತ್ವವನ್ನು ಸಾಕಷ್ಟು ಮನನ ಮಾಡಿಕೊಂಡ ನಂತರ ನ್ಯಾಯಾಧೀಶರು ತಮ್ಮ ತೀರ್ಪನ್ನು ಓದಿ ಹೇಳಿದರು: 'ನಾನು ವಿಚಾರಣೆ ಕೈಗೊಂಡ ಮತ್ತು ಮುಂದೆ ಕೈಗೊಳ್ಳಲಿರುವ ವ್ಯಕ್ತಿಗಳ ಪೈಕಿ ನೀವು ಅಸಾಧಾರಣರು ಎಂಬುದನ್ನು ನಾನು ನಿರ್ಲಕ್ಷಿಸುವಂತಿಲ್ಲ. ಹಾಗೇ ಕೋಟ್ಯಂತರ ಜನರ ಕಣ್ಣಲ್ಲಿ ನೀವೊಬ್ಬ ಅಪೂರ್ವ ದೇಶಪ್ರೇಮಿ ಮತ್ತು ಮಹಾನ್ ನಾಯಕ ಹಾಗೂ ನಿಮ್ಮ ರಾಜಕಾರಣವನ್ನು ಒಪ್ಪದವರ ಕಣ್ಣಿನಲ್ಲೂ ನೀವು ಒಬ್ಬ ಉನ್ನತ ಆದರ್ಶವಾದಿ ಮತ್ತು ಸಂತ ಗುಣ ಹೊಂದಿದವರು ಎಂಬುದನ್ನೂ ಅಲ್ಲಗಳೆಯಲಾಗದು... ಆದರೆ ಕಾನೂನಿಗೆ ವ್ಯಕ್ತಿ ಮುಖ್ಯವಲ್ಲ. ಹಾಗಾಗಿ ಈ ಮೊಕದ್ದಮೆಯಲ್ಲಿ ನ್ಯಾಯಯುತ ಶಿಕ್ಷೆಯನ್ನು ನಿರ್ಧರಿಸುವುದು ನನಗೆ ಕಷ್ಟವೆನಿಸಿದೆ. ನಿಮಗೆ ಆರು ವರ್ಷಗಳ ಸೆರೆಮನೆ ವಾಸದ

ಶಿಕ್ಷೆಯನ್ನು ವಿಧಿಸುತ್ತಿದ್ದೇನೆ. ಇದು ಇದೇ ಕಾನೂನಿನ್ವಯ ಬಾಲಗಂಗಾಧರ ತಿಲಕರಿಗೆ ವಿಧಿಸಲಾಗಿದ್ದ ಶಿಕ್ಷೆಯೇ ಆಗಿದ್ದು ಇದನ್ನು ನೀವು ಒಪ್ಪುವಿರಿ ಎಂದು ಭಾವಿಸುವೆ.... ಕಾನೂನು ಪ್ರಕಾರವೇನಾದರೂ ಈ ಶಿಕ್ಷೆ ಮೊಟಕುಗೊಂಡು ನೀವು ಈ ಅವಧಿಗಿಂತ ಮುಂಚೆ ಹೊರಬರುವಂತಾದರೆ ಅದಕ್ಕಾಗಿ ನನಗಿಂತ ಹೆಚ್ಚು ಸಂತೋಷಪಡುವವರು ಇನ್ನೊಬ್ಬರಿರಲಾರರು.'

ಇದು ಭಾರತದಲ್ಲೇನು, ಜಗತ್ತಿನ ನ್ಯಾಯಾಂಗ ಇತಿಹಾಸದಲ್ಲೇ ಅಪರಾಧಿಯ ಪರವಾಗಿ ಗೌರವಪೂರ್ವಕ ಸಹಾನುಭೂತಿಯೊಂದಿಗೆ ಪ್ರಕಟಿಸಿದ್ದ ತೀರ್ಪಾಗಿತ್ತು. ಗಾಂಧಿ ಕೂಡ ಇದನ್ನು ಗರಿಷ್ಠ ಔದಾರ್ಯದ ತೀರ್ಪು ಎಂದು ಬಣ್ಣಿಸಿದರು. ಪ್ರಕಾಶಕ ಬ್ಯಾಂಕರ್‌ಗೆ ಒಂದು ವರ್ಷದ ಸೆರೆಮನೆವಾಸದ ಶಿಕ್ಷೆ ವಿಧಿಸಲಾಗಿತ್ತು. ಸಬರ್ಮತಿ ಆಶ್ರಮದ ಬಳಿಯಿದ್ದ ಸೆರೆಮನೆಯಲ್ಲಿ ಬಂಧಿತರಾಗಿದ್ದ ಅವರಿಬ್ಬರನ್ನೂ, ಅಲ್ಲಿ ಅವರಿರುವುದು ಸೂಕ್ತವಲ್ಲವೆಂದು ಭಾವಿಸಿದ ಬಾಂಬೆ ಪ್ರಾಂತ್ಯದ ಪೊಲೀಸರು, ಎರಡು ದಿನಗಳ ನಂತರ ಅವರನ್ನು ಮಾರ್ಚ್ ೨೧ರಂದು ರೈಲಿನಲ್ಲಿ ಪೂನಾಗೆ ಒಯ್ದು ಯೆರವಾಡಾ ಸೆರೆಮನೆಯಲ್ಲಿ ಇರಿಸಿದರು.

ದೇವರಾಗಿದ್ದ ಗಾಂಧಿ!

ಗಾಂಧಿ ಆ ಹೊತ್ತಿಗೆ ದೇಶದಲ್ಲಿ ಏನು ಮಾಡಿದ್ದರು ಎಂಬುದನ್ನು ಪ್ರಭುತ್ವದ ದೃಷ್ಟಿಯಿಂದ ತಿಳಿಯಲು, ಅವರು ಸೆರೆಮನೆ ಸೇರಿದ ಆರು ತಿಂಗಳ ನಂತರ ಅಕ್ಟೋಬರ್ ಎರಡರಂದು–ಅವರ ಹುಟ್ಟು ಹಬ್ಬದ ದಿನ–ಅವರನ್ನು ಸಂದರ್ಶಿಸಲು ಬಂದ ಅಮೆರಿಕಾದ ಪತ್ರಕರ್ತ ಆಂಡ್ರ್ಯೂ ಪಿಯರ್ಸನ್ ಅವರಿಗೆ, ಭೇಟಿಯ ಅನುಮತಿಯನ್ನು ನಿರಾಕರಿಸಿದ ಬಾಂಬೆಯ ಗವರ್ನರ್ ಸರ್ ಜಾರ್ಜ್ ಲಾಯ್ಡ್ ಹೇಳಿದ ಈ ಮಾತುಗಳಿಂದ ತಿಳಿಯಬಹುದು:

'...ಈ ಮನುಷ್ಯ ೩೨ ಕೋಟಿ ಜನರನ್ನು ಮಂತ್ರಮುಗ್ಧಗೊಳಿಸಿ ತನಗೆ ಬೇಕಾದಂತೆ ಆಟವಾಡಿಸತೊಡಗಿದ್ದ. ಈತ ಎಂದೂ ಲೌಕಿಕ ಆಸೆಗಳತ್ತ ಒಲಿಯಲಿಲ್ಲ. ಆ ಜನರಿಗೆ ಈ ದೇಶದ ಆದರ್ಶ ಮತ್ತು ತತ್ವಗಳನ್ನು ಬೋಧಿಸಿದ. ಆದರೆ ದೇಶವನ್ನು ಆದರ್ಶಗಳಿಂದ ಆಳಲು ಸಾಧ್ಯವಿಲ್ಲ. ಆದರೆ ಆತ ಇವನ್ನೇ ಬಳಸಿ ದೇಶದ ಜನರ ಮೇಲೆ ಹಿಡಿತ ಸಾಧಿಸಿದ್ದ. ಆತ ಅವರ ದೇವರೇ ಆಗಿಬಿಟ್ಟಿದ್ದ. ಇಂಡಿಯಾಕ್ಕೆ ಯಾವಾಗಲೂ ಒಬ್ಬ ದೇವರು ಬೇಕೇ ಬೇಕು! ಈ ಮೊದಲು ತಿಲಕ್; ಈಗ ಗಾಂಧಿ! ನಾಳೆ ಇನ್ನೊಬ್ಬ ಮನುಷ್ಯ! ಈತ ನಿಜವಾಗಿ ನಮ್ಮನ್ನು ಬೆದರಿಸಿಬಿಟ್ಟಿದ್ದ. ಈತನ ಕಾರ್ಯಕ್ರಮದಿಂದಾಗಿ ನಮ್ಮ ಸೆರೆಮನೆಗಳು ಕೈದಿಗಳಿಂದ ತುಂಬಿಹೋದವು. ೩೨ ಕೋಟಿ ಜನರಿರುವ ಈ ದೇಶದಲ್ಲಿ ದಿನವೂ ದಸ್ತಗಿರಿ ಮಾಡುತ್ತಾ ಹೋದರೆ ನಾವು ಎಲ್ಲಿ ತಲುಪಿಯೇವು?! ಮುಂದಿನ ಕ್ರಮವಾಗಿ ಈ ಜನ ಕರ ನಿರಾಕರಣೆ ಕಾರ್ಯಕ್ರಮವನ್ನು ಆರಂಭಿಸಿದ್ದರೆ ನಮ್ಮ ಗತಿ ಏನಾಗುತ್ತಿತ್ತು, ಯೋಚಿಸಿ!! ಈ ಗಾಂಧಿ ಇತಿಹಾಸದ ಓರ್ವ ಪ್ರಚಂಡ ಮನುಷ್ಯ. ಆತನನ್ನು ಬಂಧಿಸಿರದಿದ್ದರೆ ತನ್ನ ಕೆಲಸದಲ್ಲಿ ಹೆಚ್ಚೂಕಡಿಮೆ ಯಶಸ್ವಿಯಾಗಿಬಿಡುತ್ತಿದ್ದ...'

■

೩೧

ಭಾರತದ ಸೆರೆಮನೆಯಲ್ಲಿ ಗಾಂಧಿ

ಯೆರವಾಡಾ ಸೆರೆಮನೆಯಲ್ಲಿ ಗಾಂಧಿ, ಒಂಟಿಕೋಣೆಯಲ್ಲಿ ಕೈದಿ ಸಂಖ್ಯೆ ೮೨೭ ಆಗಿ ದಾಖಲಾದರು. ಶಂಕರ್‌ಲಾಲ್ ಬ್ಯಾಂಕರ್‌ನನ್ನು ಸ್ವಲ್ಪ ದೂರದ ಕೋಣೆಯಲ್ಲಿ ಇಡಲಾಯಿತು. ಗಾಂಧಿ ಸೆರೆಮನೆಗೆ ಒಂದಷ್ಟು ಪುಸ್ತಕಗಳು ಮತ್ತು ಚರಕಾದೊಂದಿಗೆ ಬಂದಿದ್ದರು. ಗಾಂಧಿಯವರ ಕೋಣೆಗೆ ಗಾಳಿಯಾಡಲು ಎರಡು ಸಣ್ಣ ಕಿಟಕಿಗಳಿದ್ದುದರ ಹೊರತು ಓದು ಬರಹಕ್ಕೆ ಬೇಕಾದಷ್ಟು ಬೆಳಕಿರಲಿಲ್ಲ. ಶೌಚಕ್ಕಾಗಿ ಕೋಣೆಯೊಳಗೇ ಒಂದು ಮಲಭಾಂಡದ ವ್ಯವಸ್ಥೆ ಮಾಡಲಾಗಿತ್ತು. ಮಲಗಲು ಒಂದು ಸಣ್ಣ ಮಂಚ ಮತ್ತು ಎರಡು ಕಂಬಳಿಗಳಿದ್ದು ತಲೆದಿಂಬಿನ ಸೌಕರ್ಯವಿರಲಿಲ್ಲ. ಕೆಲದಿನ ಅವರು ಪುಸ್ತಕಗಳನ್ನು ತಲೆದಿಂಬಾಗಿ ಬಳಸುತ್ತಿದ್ದರು. ಗಾಂಧಿಯವರಿಗೆ ಈ ಸಂದರ್ಭದಲ್ಲಿ ಉಂಟಾದ ಇನ್ನೊಂದು ತೊಂದರೆ ಎಂದರೆ ಸೆರೆಮನೆ ಅಧಿಕಾರಿಗಳು ಚರಕಾವನ್ನು ಅವರಿಂದ ಕಸಿದುಕೊಂಡಿದ್ದುದು. ಹೀಗಾಗಿ ಆರಂಭದ ದಿನಗಳಲ್ಲಿ ಅವರು ಹೆಚ್ಚು ಕಾಲವನ್ನು ಬೆಳಗಿನ ಮತ್ತು ಸಂಜೆಯ ಪ್ರಾರ್ಥನೆ ಹಾಗೂ ತಾವು ತಂದಿದ್ದ ಮತ್ತು ಸೆರೆಮನೆಯ ಗ್ರಂಥಾಲಯಗಳಿಂದ ಪಡೆಯುತ್ತಿದ್ದ ಪುಸ್ತಕಗಳನ್ನು ಓದುವುದರಲ್ಲಿ ವ್ಯಯಿಸುತ್ತಿದ್ದರು. ಅವರು ತಂದಿದ್ದ ಪುಸ್ತಕಗಳಲ್ಲಿ ಮುಖ್ಯವಾದವುಗಳೆಂದರೆ, ಭಗವದ್ಗೀತೆ, ವಾಲ್ಮೀಕಿ ರಾಮಾಯಣ, ಖುರಾನ್, ಅಮೆರಿಕಾದ ಶಾಲಾ ವಿದ್ಯಾರ್ಥಿಗಳು ಕಳಿಸಿದ್ದ 'ಸರ್ಮನ್ಸ್ ಆನ್ ದ ಮೌಂಟ್' ಮತ್ತು ಒಂದು ಉರ್ದು ಶಬ್ದಕೋಶ. ಅವರು ಸೆರೆಮನೆವಾಸದ ಅವಧಿಯಲ್ಲಿ ಉರ್ದು ಕಲಿಯುವ ಸಂಕಲ್ಪ ಮಾಡಿದ್ದರು.

ಗಾಂಧಿ ತಮ್ಮ ಐದು ವರ್ಷಗಳ ಸೆರೆಮನೆವಾಸದ ಸಮಯದಲ್ಲಿ ನಾಲ್ಕೈದು ಪುಸ್ತಕಗಳನ್ನು ಬರೆಯುವ ಯೋಜನೆಯನ್ನೂ ಹಾಕಿಕೊಂಡು ಅದಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳತೊಡಗಿದರು. ಮುಖ್ಯವಾಗಿ ತಮ್ಮ ಆತ್ಮಚರಿತ್ರೆ ಮತ್ತು ದ.ಆಫ್ರಿಕಾದಲ್ಲಿನ ತಮ್ಮ ಸತ್ಯಾಗ್ರಹದ ದಿನಗಳ ನೆನಪುಗಳನ್ನು ದಾಖಲಿಸುವ ಇಚ್ಛೆ ಅವರದಾಗಿತ್ತು. ಅದಕ್ಕೆ ಆಧಾರವಾಗಬಹುದಾದ 'ಇಂಡಿಯನ್ ಒಪಿನಿಯನ್' ಮತ್ತು ಇತರ ವೃತ್ತಪತ್ರಿಕೆಗಳ ಭಾಗಗಳನ್ನು ಕಳಿಸುವಂತೆ ಅವರು ಮಣಿಲಾಲನಿಗೆ ತಿಳಿಸಿದ್ದರು. ಆದರೆ ಅವು ತಲುಪುವ ಮೊದಲೇ ಗಾಂಧಿ ಸೆರೆಮನೆ ಸೇರಿದ್ದರು. ಹಾಗಾಗಿ ಅವರು ಉರ್ದು ಬರವಣಿಗೆ ಕಲಿಕೆಗಾಗಿ ತಂದಿದ್ದ ಟಿಪ್ಪಣಿ ಪುಸ್ತಕದಲ್ಲೇ, ಸಬರ್ಮತಿ ಆಶ್ರಮದ ಮಕ್ಕಳಿಗಾಗಿ ಗುಜರಾತಿಯಲ್ಲಿ ಒಂದು ಬಾಲಬೋಧಿ ಕಿರುಪುಸ್ತಕವನ್ನು ಬರೆಯಲಾರಂಭಿಸಿದರು.

ಬಿಕ್ಕಿ ಬಿಕ್ಕಿ ಅತ್ತ ದೇವದಾಸ

ಗಾಂಧಿಯವರಿಗೆ ಎಲ್ಲ ಕೈದಿಗಳಿಗೆ ಅವಕಾಶವಿದ್ದಂತೆ ಮೂರು ತಿಂಗಳಿಗೊಮ್ಮೆ ಸಂದರ್ಶಕರನ್ನು ಭೇಟಿ ಮಾಡುವ ಮತ್ತು ರಾಜಕೀಯ ವಿಷಯಗಳ ಪ್ರಸ್ತಾಪವಿಲ್ಲದ ಒಂದು ಪತ್ರ ಬರೆಯುವ ಅವಕಾಶವಿತ್ತು. ತಾವು ಭೇಟಿ ಮಾಡಬಯಸುವ ಸಂದರ್ಶಕರ ಪಟ್ಟಿ ಕೊಡುವಂತೆ ಸೆರೆಮನೆ ಅಧಿಕಾರಿಗಳು ಗಾಂಧಿಯವರನ್ನು ಕೇಳಿದಾಗ ಅವರು ಕೊಟ್ಟ ಪಟ್ಟಿಯಲ್ಲಿ ಅವರ ಪತ್ನಿಯೂ ಸೇರಿದಂತೆ ಕುಟುಂಬದ ಯಾರ ಹೆಸರೂ ಇಲ್ಲದೇ ಹೊರಗಿನವರ ಹೆಸರುಗಳೇ ತುಂಬಿದ್ದವು. ಆ ಪಟ್ಟಿಯಲ್ಲಿದ್ದ ಮೊದಲ ಹೆಸರು ದೂಧಾಬಾಯಿಯ ಪುಟ್ಟ ಮಗಳು ಲಕ್ಷ್ಮಿ ಆಗಿದ್ದರೆ, ಎರಡನೆಯ ಹೆಸರು ಆಶ್ರಮದ ಮುಸ್ಲಿಂ ಬಾಲಕಿ ಅಮಿನಾ ಭೌಜೀರ್. ಏಪ್ರಿಲ್ ಒಂದರಂದು ಗಾಂಧಿಯವರನ್ನು ಭೇಟಿ ಮಾಡಲು ಮೊದಲ ಸಂದರ್ಶಕರ ತಂಡ ಬಂದಾಗ, ಅದರಲ್ಲಿ ಆಗತಾನೇ ಬಂಧನದಿಂದ ಬಿಡುಗಡೆಯಾಗಿದ್ದ ರಾಜಾಜಿಯವರ ಜೊತೆ ದೇವದಾಸ, ಆಶ್ರಮವಾಸಿ ಥಕ್ಕರ್ ಮೊದಲಾದವರಿದ್ದರು. ಈ ಭೇಟಿಯ ಸಂದರ್ಭದಲ್ಲಿ ಸೆರೆಮನೆ ಅಧಿಕಾರಿಗಳ ಸಮ್ಮುಖದಲ್ಲಿ, ಗಾಂಧಿಯವರು ಎಲ್ಲರೊಂದಿಗೆ ನಿಂತೇ ಮಾತಾಡಬೇಕಾದ ದೀನ ಸ್ಥಿತಿ ಕಂಡು ದೇವದಾಸನಿಗೆ ತುಂಬ ದುಃಖವಾಗಿ ಅವನು, ಜೋರಾಗಿ ಬಿಕ್ಕಿಬಿಕ್ಕಿ ಅಳುವುದಕ್ಕೇ ಆರಂಭಿಸಿದ. ಗಾಂಧಿ ಆತನಿಗೆ ತಾನೊಬ್ಬ ಕೈದಿ ಮಾತ್ರವೆಂಬುದನ್ನು ಮನಗಾಣಿಸಿ ಆತನನ್ನು ಸಮಾಧಾನಪಡಿಸಬೇಕಾಯಿತು.

ರಾಜಾಜಿ ಮತ್ತು ಅವರ ತಂಡದ ಈ ಭೇಟಿಯಿಂದ ಗಾಂಧಿಯವರ ಸೆರೆಮನೆವಾಸದ ಕೆಲವು ತೊಂದರೆಗಳು ಪರಿಹಾರವಾದವು. ಗಾಂಧಿಯವರ ಗೈರುಹಾಜರಿಯಲ್ಲಿ 'ಯಂಗ್ ಇಂಡಿಯಾ'ದ ಸಂಪಾದಕತ್ವ ವಹಿಸಿಕೊಂಡಿದ್ದ ರಾಜಾಜಿ ಗಾಂಧಿಯವರಿಗೆ ಸೆರೆಮನೆಯಲ್ಲಿ ಕನಿಷ್ಠ ಸೌಲಭ್ಯಗಳನ್ನೂ ಒದಗಿಸದ ಸರ್ಕಾರದ ನೀತಿಯ ಬಗ್ಗೆ ವಿಷಾದ ವ್ಯಕ್ತಪಡಿಸಿ ಲೇಖನ ಬರೆದಿದ್ದರು. ಇದನ್ನು ಗಮನಿಸಿದ ಸರ್ಕಾರ ಗಾಂಧಿಯವರ ಶೌಚಕ್ಕೆ ಒಂದು ಕಮೋಡ್ ಒದಗಿಸಿತಲ್ಲದೆ, ತಲೆದಿಂಬಿನ ಸೌಕರ್ಯವನ್ನೂ ಒದಗಿಸಿತು. ಜೊತೆಗೆ ಚರಕಾವನ್ನು ಹಿಂದಿರುಗಿಸಿ, ನೂಲಲು ಮತ್ತು ಹತ್ತಿ ಹಿಂಜಲು ಅನುಮತಿ ನೀಡಲಾಯಿತು. ಅಲ್ಲದೆ ರಾತ್ರಿ ಹೊರ ಆವರಣದಲ್ಲಿ ಮಲಗಲು ಅನುಮತಿ ನೀಡಲಾಯಿತು ಮತ್ತು ತಮ್ಮ ಕೋಣೆಯ ಮುಂದಿನ ಚಿಕ್ಕ ಪಡಸಾಲೆಗೆ ಮಾತ್ರ ಸೀಮಿತವಾಗಿದ್ದ ಅವರ ವಾಯುವಿಹಾರದ ಹಾದಿಯನ್ನು ಓರ್ವ ಪೊಲೀಸ್ ಪಹರೆಯೊಂದಿಗೆ ಇಡೀ ಸೆರೆಮನೆಯ ಆವರಣಕ್ಕೆ ವಿಸ್ತರಿಸಲಾಯಿತು. ಆದರೆ ವೃತ್ತಪತ್ರಿಕೆ ಮತ್ತು ನಿಯತಕಾಲಿಕೆಗಳು ಬೇಕೆಂಬ ಗಾಂಧಿಯವರ ಬೇಡಿಕೆಯನ್ನು ನಿರಾಕರಿಸಲಾಯಿತು.

ಪತ್ರ ವ್ಯವಹಾರದ ಮೇಲೆ ಸರ್ಕಾರದ ನಿಗಾ

ಮೂರು ತಿಂಗಳಿಗೊಮ್ಮೆ ಪತ್ರ ಬರೆಯುವ ಅವಕಾಶವನ್ನು, ಗಾಂಧಿ ಮೊದಲ ಬಾರಿಗೆ ಬಳಸಿದ್ದು ತಮ್ಮ ಗೆಳೆಯ ಮತ್ತು ಹಾಲಿ ಕಾಂಗ್ರೆಸ್ ವಾರ್ಷಿಕ ಅಧಿವೇಶನದ ಅಧ್ಯಕ್ಷರಾಗಿದ್ದ ಹಕೀಂ ಅಜ್ಮಲ್ ಖಾನರಿಗೆ ಏಪ್ರಿಲ್ ೧೪ರಂದು ಪತ್ರ ಬರೆಯುವ

ಮೂಲಕ. ಅದರಲ್ಲಿ ಅವರು ತಮ್ಮ ಸೆರೆಮನೆಯ ದಿನಚರಿಯನ್ನು ವಿವರಿಸಿದ್ದರು. ಜೊತೆಗೆ ದೇವದಾಸನ ಭೇಟಿಯ ಸಂದರ್ಭದಲ್ಲಾದ ಘಟನೆಯನ್ನು ಉಲ್ಲೇಖಿಸಿ ಕಸ್ತೂರಬಾಗೆ ಸೆರೆಮನೆಗೆ ಬರದಂತೆ ನೋಡಿಕೊಳ್ಳಬೇಕೆಂದು ಅವರು ಖಾನ್‌ರನ್ನು ಕೋರಿದ್ದರು. ಆದರೆ ಮೂರು ತಿಂಗಳ ನಂತರ ಅವರನ್ನು ಭೇಟಿ ಮಾಡಲು ಬಂದವರಲ್ಲಿ ಕಸ್ತೂರಬಾ ಮತ್ತು ಮೂರನೆಯ ಮಗ ರಾಮದಾಸ (ಆತ ದ.ಆಫ್ರಿಕಾದಿಂದ ಬಂದಿದ್ದನು) ಇದ್ದುದನ್ನು ಕಂಡು ಗಾಂಧಿ ಆಶ್ಚರ್ಯಪಟ್ಟರು. ವಿಚಾರಿಸಿದಾಗ ಗೊತ್ತಾಗಿದ್ದೆಂದರೆ ಖಾನ್‌ರಿಗೆ ಅವರು ಬರೆದ ಪತ್ರವನ್ನು ಸೆರೆಮನೆಯಲ್ಲಿ ತಡೆಹಿಡಿಯಲಾಗಿತ್ತು. ಗಾಂಧಿ ತಮ್ಮ ಮನೆಯವರಿಗೆ ಮಾತ್ರ ಪತ್ರ ಬರೆಯಬಹುದು ಎಂದು ಅವರಿಗೆ ಈಗ ತಿಳಿಸಲಾಯಿತು. ಇದರಿಂದ ಬೇಸರಗೊಂಡ ಗಾಂಧಿ ಪತ್ರಗಳನ್ನು ಬರೆಯಲು ನಿರಾಕರಿಸಿದರಾದರೂ ನಂತರ ತಮ್ಮ ಮಕ್ಕಳಿಗೆ ಒಂದೆರಡು ಪತ್ರಗಳನ್ನು ಬರೆದದ್ದುಂಟು. ಅವುಗಳಲ್ಲಿ ಅವರು ಮುವ್ವತ್ತರ ರಾಮದಾಸ್‌ಗೆ ಮದುವೆ ಮಾಡಿಕೊಳ್ಳಲು ಸೂಚಿಸಿದ್ದರಲ್ಲದೆ ಬಡವರ ಮನೆಯ ಹುಡುಗಿಯೊಬ್ಬಳನ್ನು ಆಯ್ದುಕೊಳ್ಳುವಂತೆ ಹೇಳಿದ್ದರು. ಆದರೆ ಯೌವ್ವನಾವಸ್ಥೆಯನ್ನು ದಾಟಿದ್ದ ಎರಡನೆಯ ಮಗ ಮಣಿಲಾಲ ಬ್ರಹ್ಮಚಾರಿಯಾಗಿ ಸಮಾಜಸೇವೆಯಲ್ಲಿ ತೊಡಗಬೇಕೆಂದು ಸಲಹೆ ನೀಡಿದ್ದರಾದರೂ, ಆತನಿಗೂ ತಮ್ಮ ಸಲಹೆ ಇಷ್ಟವಾಗದಿದ್ದರೆ ಮದುವೆಯಾಗಲು ತಮ್ಮ ಆಕ್ಷೇಪಣೆ ಏನಿಲ್ಲವೆಂದು ತಿಳಿಸಿದ್ದರು.

ಗಾಂಧಿ ಬರೆದ ಪತ್ರಗಳನ್ನು ಮತ್ತು ಅವರಿಗೆ ಬರುತ್ತಿದ್ದ ಎಲ್ಲ ಅಂಚೆಯನ್ನೂ ತಪಾಸಣೆ ಮಾಡಿಯೇ ಮುಂದೆ ಸಾಗಿಸುತ್ತಿದ್ದರು. ಹೀಗೆ ಅಂಚೆಯಲ್ಲೋ, ಕೈಯ್ಯಾರೆಯೋ ಸರಳಾದೇವಿ ಚೌಧುರಾಣಿ ಕಳಿಸಿದ್ದ ಒಂದು ದಸ್ತಾವೇಜು ಗಾಂಧಿಯವರಿಗೆ ತಲುಪದ ವಿಷಯ ಒಂದು ಪತ್ರದ ಮೂಲಕ ಗೊತ್ತಾದಾಗ, ಅವರು ಆ ಬಗ್ಗೆ ವಿಚಾರಿಸಿದರಾದರೂ ಅವರಿಗೆ ಯಾವುದೇ ಸ್ಪಷ್ಟ ಉತ್ತರ ದೊರೆಯಲಿಲ್ಲ. ಆದರೆ ಇದರಿಂದ ಒಂದು ಸಂಗತಿಯಂತೂ ಸ್ಪಷ್ಟವಾಗಿತ್ತು; ಗಾಂಧಿ ವಿದಾಯ ಹೇಳಿದ ಮೂರು ವರ್ಷಗಳ ನಂತರವೂ ಸರಳಾದೇವಿಯವರಿಗೆ ಗಾಂಧಿ ಕುರಿತ ಆಸಕ್ತಿ ಕುಂದಿರಲಿಲ್ಲ!

ಗಾಂಧಿಯ ದಿನಚರಿ–ವ್ಯಾಪಕ ಓದು

ಗಾಂಧಿ ಈಗ ತಮ್ಮ ಕಾಲವನ್ನು ಹೆಚ್ಚಿಗೆ ನೂಲುವುದು, ಓದುವುದು ಮತ್ತು ಬರೆಯುವುದರ ನಡುವೆ ಹಂಚಿಕೊಂಡು ನೆಮ್ಮದಿಯ ಬದುಕಿನ ಒಂದು ಯೋಜನೆಯನ್ನು ರೂಪಿಸಿಕೊಂಡರು. ಅವರು ಪ್ರತಿದಿನ ದಿನಚರಿ ಬರೆಯುತ್ತಾ ತಾವು ಆದಿನ ಓದಿದ ಪುಸ್ತಕಗಳಾವುವು, ತಾವು ನೂತದ್ದೆಷ್ಟು, ಬರೆದದ್ದೆಷ್ಟು ಎಂಬುದರ ವಿವರಗಳನ್ನು ನಮೂದಿಸುತ್ತಿದ್ದರು. ಈ ನಮೂದುಗಳ ಪ್ರಕಾರ ಅವರು ಸೆರೆಮನೆವಾಸದ ಮೊದಲ ವರ್ಷದಲ್ಲಿ ಓದಿದ ಮುಖ್ಯ ಪುಸ್ತಕಗಳೆಂದರೆ, ಸ್ಕಾಟ್ಲೆಂಡ್‌ನ ಇತಿಹಾಸ, ರೋಮನ್ ಸಾಮ್ರಾಜ್ಯದ ಇತಿಹಾಸದಿಂದ ಆಯ್ದ ಕಥೆಗಳು, ಎಡ್ವರ್ಡ್ ಬೆಲಮಿಯ ಕಲ್ಪನಾತ್ಮಕ ಕಾದಂಬರಿ 'ಈಕ್ವಾಲಿಟಿ', ಸ್ಟೀವನ್‌ಸನ್‌ನ ಡಾ. ಜೆಕಿಲ್ ಅಂಡ್ ಮಿ. ಹೈಡ್, ಕಿಪ್ಲಿಂಗ್‌ನ ದ ಜಂಗಲ್ ಬುಕ್, ಪುರಾತನ ರೋಮ್ ಕುರಿತ ಮೆಕಾಲೆಯ ಪುಸ್ತಕ, ವಾಲ್ಮೀಕಿ ರಾಮಾಯಣದ ಗುಜರಾತಿ ಆವೃತ್ತಿ, ತಿಲಕರ ಗೀತಾ ರಹಸ್ಯ, ಸರಸ್ವತಿಚಂದ್ರ

ಎಂಬ ಗುಜರಾತಿ ಕಾದಂಬರಿ ಸಂಪುಟಗಳಾದರೆ, ೧೯೨೩ರ ಅವರ ದಿನಚರಿಯಲ್ಲಿನ ವಿವರಗಳ ಪ್ರಕಾರ ಅವರು ಓದಿದ ಇನ್ನಷ್ಟು ಪುಸ್ತಕಗಳೆಂದರೆ, ಮ್ಯಾಕ್ಸ್‌ಮುಲ್ಲರ್‌ರ ಉಪನಿಷತ್ ಅನುವಾದಗಳು, ಪ್ಯಾಟ್ರಿಕ್ ಗೆಡೆಸ್ ಅವರ ನಗರಗಳ ವಿಕಾಸ, ಬರ್ನಾಡ್ ಷಾನ ಮ್ಯಾನ್ ಅಂಡ್ ಸೂಪರ್ ಮ್ಯಾನ್, ವಿಲಿಯಮ್ಸ್ ಜೇಮ್ಸ್‌ನ ಧರ್ಮಾನುಭವಗಳ ವೈವಿಧ್ಯ, ಕೊಲಂಬಸ್, ಕಬೀರ, ರಾಮಾನುಜಾಚಾರ್ಯರ ಜೀವನ ಚರಿತ್ರೆ, ಸಿಕ್ಖರ ಚರಿತ್ರೆ, ಭಾರತದ ಹಕ್ಕಿಗಳು, ಫ್ರಾಸ್ಟ್ ಮತ್ತು ಟ್ಯಾಗೋರರ ಹಲವು ಕೃತಿಗಳು, ಗಯಟೆಯ ಕಾವ್ಯ, ವಿವೇಕಾನಂದ, ಅರವಿಂದ, ದಯಾನಂದ ಸರಸ್ವತಿಯವರ ಧಾರ್ಮಿಕ/ಆಧ್ಯಾತ್ಮಿಕ ಕೃತಿಗಳು. ಇವಲ್ಲದೆ ಅವರು ತಮ್ಮ ಕಿರಿಯ ಗೆಳೆಯರಾದ ಕಾಕಾ ಕಾಲೇಲ್ಕರ್ ಮತ್ತು ಮಶ್ರುವಾಲಾರ ಪುಸ್ತಕಗಳನ್ನೂ ಓದಿದರು. ಜೊತೆಗೆ ಅಬುಲ್ ಕಲಾಂ ಅವರು ನೀಡಿದ್ದ ಉರ್ದು ಮಾರ್ಗದರ್ಶಿಯ ಮೂಲಕ ಉರ್ದು ಓದಿ ಬರೆಯುವುದನ್ನೂ ಕಲಿತು, ಆ ಭಾಷೆಯಲ್ಲಿನ ಧರ್ಮಗ್ರಂಥಗಳನ್ನೂ ಅಭ್ಯಾಸ ಮಾಡಿದರು. ಈ ಅಭ್ಯಾಸದ ನಂತರ ಅವರು ದಿನಚರಿಯಲ್ಲಿ ಹೀಗೆ ಬರೆದಿದ್ದಾರೆ: 'ಇಸ್ಲಾಂ ಹರಡಿದ್ದು ಖಡ್ಗದಿಂದ ಎಂಬುದು ಸರಿಯಲ್ಲ. ಈ ತಪ್ಪು ಕಲ್ಪನೆಗೆ ಪ್ರವಾದಿಯ ಅನುಯಾಯಿಗಳು ತಮ್ಮ ನಾಯಕನ ಶುದ್ಧ ಜೀವನ ತತ್ವಗಳನ್ನು ಕಟ್ಟುನಿಟ್ಟಾಗಿ ಪಾಲಿಸದಿದ್ದುದೇ ಕಾರಣ'. ಈ ದಿನಚರಿಯ ೧೯೨೩ರ ನವೆಂಬರ್ ೨೬ರ ನಮೂದಿನ ಪ್ರಕಾರ ಗಾಂಧಿ ತಮ್ಮ 'ದ.ಆಫ್ರಿಕಾದಲ್ಲಿ ಸತ್ಯಾಗ್ರಹ' ಕೃತಿಯ ಬರವಣಿಗೆ ಆರಂಭಿಸಿದರು.

ಕುಗ್ಗದ ಗಾಂಧಿ ಜನಪ್ರಿಯತೆ

ಚರಕಾದಲ್ಲಿ ನೂಲುವುದು ಅವರ ಅತ್ಯಂತ ಪ್ರಿಯ ಕೆಲಸವಾಗಿತ್ತು. ಚರಕಾದಲ್ಲಿ ನೂಲುತ್ತಾ ಕೂತರೆ ಒಂದು ಕೆಟ್ಟ ಯೋಚನೆಯೂ ಮನಸ್ಸನ್ನು ತಾಕದಷ್ಟು ಶಾಂತಿ ಸಿಗುತ್ತದೆ ಎನ್ನುತ್ತಿದ್ದ ಅವರು, ಕಸ್ತೂರಬಾ ಅವರ ಮನವಿಯ ಮೇರೆಗೆ ತಾವು ನೂತಿದ್ದ ಏಳು, ಹತ್ತು ಪೌಂಡುಗಳಷ್ಟು ತೂಗುವ ನೂಲಿನ ಉಂಡೆಗಳನ್ನು ಸಬರ್ಮತಿ ಆಶ್ರಮಕ್ಕೆ ಕಳಿಸಿದ್ದರು. ಇದು ಒಂದು ದೊಡ್ಡ ಸುದ್ದಿಯಾಗಿ ಪೂನಾದ 'ಕೇಸರಿ' ಪತ್ರಿಕೆ ಆ ನೂಲಿಗೆ ಹಣದ ಬೆಲೆ ಕಟ್ಟಲಾಗದೆಂದೂ, ಅದನ್ನು ಚಿನ್ನಕ್ಕೆ ಹರಾಜಿಡಬೇಕೆಂದೂ ಬರೆಯಿತು. ಇದರಿಂದ ಗಾಬರಿಯಾದ ಸರ್ಕಾರ, ಗಾಂಧಿ ನೂತ ನೂಲು ಸೆರೆಮನೆಯ ಹೊರಕ್ಕೆ ಕಳಿಸುವುದನ್ನು ನಿರ್ಬಂಧಿಸಿತು. ಆದರೆ ಹೊರಗಿದ್ದ ಜನತೆ ಸೆರೆಮನೆಯೊಳಗಿದ್ದ ಗಾಂಧಿಯನ್ನು ಮರೆತಿರಲಿಲ್ಲ ಎಂಬುದರ ದ್ಯೋತಕವಾಗಿತ್ತು. ಕಾಂಗ್ರೆಸ್ ಗಾಂಧಿಯವರಿಗೆ ಶಿಕ್ಷೆ ಪ್ರಕಟಿಸಿದ್ದ ಮಾರ್ಚ್ ೨೮ನ್ನು ಅವರು ಬಿಡುಗಡೆಗೊಳ್ಳುವವರೆಗೂ ಪ್ರತಿವರ್ಷ 'ಗಾಂಧಿ ದಿನ'ವೆಂದು ಆಚರಿಸಲು, ಅಂದು ಎಲ್ಲ ಧರ್ಮಗಳ ಮಂದಿರಗಳಲ್ಲಿ ಅವರ ಆಯುರಾರೋಗ್ಯ ಮತ್ತು ಅವರು ಹೋರಾಟ ಮಾಡುತ್ತಿರುವ ಗುರಿ ಸಾಧನೆಗಾಗಿ ಪ್ರಾರ್ಥನೆ ಸಲ್ಲಿಸಲು ಜನತೆಗೆ ಕರೆಕೊಟ್ಟಿತ್ತು. ಜೊತೆಗೆ ಈ ಅವಧಿಗಾಗಿ ಗಾಂಧಿ ಸೂಚಿಸಿದ್ದ ರಚನಾತ್ಮಕ ಕೆಲಸಗಳಾದ ಖಾದಿ ಪ್ರಚಾರ, ಅಸ್ಪೃಶ್ಯತಾ ನಿವಾರಣೆ, ಹಿಂದು-ಮುಸ್ಲಿಂ ಐಕ್ಯತೆಯ ಕೆಲಸಗಳಲ್ಲಿ ತೊಡಗಿಕೊಳ್ಳುವ ಸಂಕಲ್ಪವನ್ನು ಪ್ರಕಟಿಸಿತು. ಗಾಂಧಿಯವರ ಹುಟ್ಟು ಹಬ್ಬ ಅಕ್ಟೋಬರ್ ೨ರಂದು, ನೂರು ಜನ ಮಹಿಳೆಯರು ಬಾಂಬೆಯಿಂದ ಪೂನಾಗೆ ಬಂದು ಅವರಿಗೆ ಶುಭ ಕೋರಲು

ಯತ್ನಿಸಿದರಾದರೂ, ಅನುಮತಿ ಸಿಗದೆ ವಾಪಸ್ ಹೋಗಬೇಕಾಯಿತು. ಆದರೆ ಅವರು ತಂದಿದ್ದ ಹೂಗುಚ್ಛಗಳನ್ನು ಗಾಂಧಿಯವರಿಗೆ ತಲುಪಿಸಲಾಯಿತು. ಗಾಂಧಿಯವರ ಗೈರು ಹಾಜರಿಯಲ್ಲಿ ಕಸ್ತೂರಬಾ ಸಣ್ಣ ಪುಟ್ಟ ಸಭೆ ಸಮಾರಂಭಗಳಲ್ಲಿ ಭಾಷಣಗಳನ್ನು ಮಾಡಲು ಆರಂಭಿಸಿದರಲ್ಲದೆ 'ನವಜೀವನ'ಕ್ಕಾಗಿ ಗಾಂಧಿ ಕಾರ್ಯಕ್ರಮಗಳನ್ನು ಕುರಿತ ಪುಟ್ಟ ಲೇಖನಗಳನ್ನು ಬಾಯಲ್ಲಿ ಹೇಳಿ ಬರೆಸತೊಡಗಿದ್ದರು.

ಸೆರೆಮನೆಯಲ್ಲೂ ಉಪವಾಸ–ಮಾನವೀಯತೆ ಮೆರೆದ ಎರಡು ಪ್ರಸಂಗಗಳು

ಗಾಂಧಿಯವರ ಈ ಸೆರೆಮನೆವಾಸದ ಎರಡು ಗಮನಾರ್ಹ ಘಟನೆಗಳೆಂದರೆ, ಸೆರೆಮನೆಯ ಅಧಿಕಾರಿಗಳ ಸೂಚನೆಗಳನ್ನು ಪಾಲಿಸದ ಕೈದಿಗಳಿಗೆ ಚಾಟಿಯೇಟಿನ ಶಿಕ್ಷೆ ನೀಡುವುದರ ವಿರುದ್ಧ ಪ್ರತಿಭಟಿಸಿ ಉಪವಾಸ ಸತ್ಯಾಗ್ರಹ ಮಾಡಿದ್ದು. ಇದರ ಪರಿಣಾಮವಾಗಿ ಚಾಟಿಯೇಟು, ಅಧಿಕಾರಿಗಳ ಮೇಲೆ ಹಲ್ಲೆ ಮಾಡುವ ಕೈದಿಗಳಿಗಷ್ಟೇ ಸೀಮಿತವಾಯಿತು. ಇನ್ನು ಇಂದೂಲಾಲ್ ಯಾಜ್ಞಿಕ್ ಅವರು ವರದಿ ಮಾಡಿರುವ ಘಟನೆ ಹೀಗಿದೆ. ಒಂದು ಸಂಜೆ ಸೆರೆಮನೆಯ ಭದ್ರತಾ ಸಿಬ್ಬಂದಿಯಾಗಿದ್ದ ಸೋಮಾಲಿಯಾದ ಕಪ್ಪು ವರ್ಣೀಯನೊಬ್ಬನಿಗೆ ದೊಡ್ಡ ಚೇಳು ಕಚ್ಚಿ ಆತ ಏರುತ್ತಿದ್ದ ಅದರ ವಿಷದಿಂದ ಚೀರಾಡುತ್ತಾ ಪ್ರಜ್ಞೆ ಕಳೆದುಕೊಳ್ಳುವ ಸ್ಥಿತಿ ತಲುಪಿದ. ಆಗ ಅಲ್ಲಿಗೆ ಧಾವಿಸಿದ ಗಾಂಧಿ ವಿಷವನ್ನು ಹಿಂಡಿ ತೆಗೆಯಲು ಚಾಕುವೊಂದನ್ನು ತರಲು ಹೇಳಿದರು. ಆದರೆ ಆ ಚಾಕು ತುಕ್ಕು ಹಿಡಿದು ಕೊಳಕಾಗಿದ್ದುದನ್ನು ಗಮನಿಸಿದ ಅವರು, ಚೇಳು ಕಚ್ಚಿದ ಜಾಗವನ್ನು ನೀರಿನಲ್ಲಿ ತೊಳೆದು ಗಾಯಕ್ಕೆ ತಾವೇ ಬಾಯಿ ಹಾಕಿ ವಿಷಮಿಶ್ರಿತ ರಕ್ತವನ್ನು ಹೀರಿ ಹೊರ ಉಗುಳುತ್ತಾ ಹೋದರು. ಆ ಕಪ್ಪುವರ್ಣೀಯ ಸಿಬ್ಬಂದಿ ಪ್ರಾಣಾಪಾಯದಿಂದ ಪಾರಾದ.

ಅಸ್ವಸ್ಥರಾದ ಗಾಂಧಿ–ಶಸ್ತ್ರ ಚಿಕಿತ್ಸೆ

ಗಾಂಧಿಯವರ ಸೆರೆಮನೆವಾಸ ಎರಡು ವರ್ಷ ಮುಗಿಯುವ ಮುನ್ನವೇ ಅವರ ಆರೋಗ್ಯದಲ್ಲಿ ಕೆಲ ವ್ಯತ್ಯಾಸಗಳು ಕಂಡುಬರತೊಡಗಿದವು. ಒಂದೆರಡು ಬಾರಿ ಕಿಬ್ಬೊಟ್ಟೆ ನೋವಿನಿಂದ ನರಳಿದ್ದರೂ ಅದು ಆಹಾರ ವ್ಯತ್ಯಾಸಗಳಿಂದಾಗಿ ಆಗುತ್ತಿದ್ದ ಅಜೀರ್ಣ ಎಂದು ಭಾವಿಸಿ ನಿರ್ಲಕ್ಷಿಸುತ್ತಿದ್ದ ಗಾಂಧಿ, ೧೯೨೪ರ ಜನವರಿ ಎರಡನೇ ವಾರದ ಒಂದು ದಿನ, ನೋವಿನ ತೀವ್ರತೆಗೆ ಈಡಾಗಿ ಜ್ವರವೇರಿ ಮಲಗಿಬಿಟ್ಟರು. ಕೂಡಲೇ ಸೆರೆಮನೆ ಅಧಿಕಾರಿಗಳು, ಅವರನ್ನು ಪುಣೆಯ ಸಸೂನ್ ಆಸ್ಪತ್ರೆ ಸಾಗಿಸಿದರು. ಅಲ್ಲಿ ಅವರನ್ನು ಪರೀಕ್ಷಿಸಿದ ಸೇನಾವೈದ್ಯ ಕರ್ನಲ್ ಮಡ್ಡಾಕ್ಸ್ ತಕ್ಷಣ ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ ಮಾಡಬೇಕಾಗಿದೆ ಎಂದು ಸೂಚಿಸಿದರು. ಸುದ್ದಿ ತಿಳಿದ ಕಸ್ತೂರಬಾ, ದೇವದಾಸ, ಮಹದೇವ ದೇಸಾಯಿ ಮುಂತಾದವರು ಅಹಮದಾಬಾದ್‌ನಿಂದ ಧಾವಿಸಿ ಬಂದರು. ಆದರೆ ಶಸ್ತ್ರ ಚಿಕಿತ್ಸೆಯ ಸಂದರ್ಭದಲ್ಲಿ ಯಾರು ಹಾಜರಿರಬೇಕೆಂದು ವೈದ್ಯರು ಗಾಂಧಿಯನ್ನು ಕೇಳಿದಾಗ ಅವರು ಹೇಳಿದ ಎರಡು ಹೆಸರುಗಳೆಂದರೆ ಗೋಖಲೆ ಸಾರ್ವಜನಿಕ ಸಂಸ್ಥೆಯ ಎಸ್.ವಿ. ಶ್ರೀನಿವಾಸ ಶಾಸ್ತ್ರಿ ಮತ್ತು ಪುಣೆಯ ವೈದ್ಯ ಘಟಕ್! ಜನವರಿ ೨೨ರಂದು ಇವರ ಸಮ್ಮುಖದಲ್ಲಿ ಕ. ಮಡ್ಡಾಕ್ಸ್ ಶಸ್ತ್ರಚಿಕಿತ್ಸೆಯನ್ನು

ಯಶಸ್ವಿಯಾಗಿ ನೆರವೇರಿಸಿದರು.

ಗಾಂಧಿಯವರನ್ನು ಕಾಣಲು ಆಸ್ಪತ್ರೆಗೆ ಜನರ ಪ್ರವಾಹವೇ ಹರಿದುಬರತೊಡಗಿ ಅವರನ್ನು ನಿಯಂತ್ರಿಸಲು ವೈದ್ಯರು ಮತ್ತು ಆಸ್ಪತ್ರೆಯ ಇತರ ಸಿಬ್ಬಂದಿಗೆ ದುಸ್ಸಾಧ್ಯವಾಗತೊಡಗಿತು.

ಇದನ್ನು ಗಮನಿಸುತ್ತಿದ್ದ ಬಾಂಬೆ ಪ್ರಾಂತ್ಯ ಸರ್ಕಾರ ಗಾಂಧಿಯವರು ಸುಧಾರಿಸಿಕೊಂಡ ಮೇಲೆ ಅವರನ್ನು ಸೆರೆಮನೆಗೆ ವಾಪಸ್ ಕಳಿಸುವುದು ಜನರ ಆಕ್ರೋಶಕ್ಕೆ ಆಹ್ವಾನವಿತ್ತಂತೆ ಎಂಬ ಅಭಿಪ್ರಾಯಕ್ಕೆ ಬಂದಿತು. ಜೊತೆಗೆ ಗಾಂಧಿ ಸೆರೆಮನೆಯಲ್ಲಿದ್ದಾಗ ದೇಶದಲ್ಲಿ ಹೆಚ್ಚುತ್ತಿದ್ದ ಹಿಂಸಾಚಾರದ ಘಟನೆಗಳನ್ನು, ವಿಶೇಷವಾಗಿ ಅಲಿ ಸೋದರರ ಪ್ರಚೋದನಕಾರಿ ಚಟುವಟಿಕೆಗಳನ್ನು ನಿಯಂತ್ರಿಸಲು ಗಾಂಧಿಯವರನ್ನು ಬಿಡುಗಡೆ ಮಾಡಿ ಅವರ ಸಹಾಯ ಪಡೆಯುವುದೇ ಲೇಸೆಂಬ ಚರ್ಚೆಗಳೂ ಸರ್ಕಾರಿ ವಲಯದಲ್ಲಿ ಆರಂಭವಾಗಿದ್ದವು. ಆದರೆ ಭಾರತ ಸರ್ಕಾರ ಅವರ ಬಿಡುಗಡೆಗೆ ಒಪ್ಪಿಗೆ ನೀಡಲು ಹಿಂದುಮುಂದು ನೋಡಿತು. ಈ ಮಧ್ಯೆ ಜನವರಿ ೧೮ರ ಸಂಜೆ ಬಾಂಬೆ ನಗರದ ಚೌಪಾಟಿಯಲ್ಲಿ ಆಯೋಜಿಸಲ್ಪಟ್ಟ ಒಂದು ಸಾರ್ವಜನಿಕ ಸಭೆಯಲ್ಲಿ ಜಿನ್ನಾ, ಎಂ.ಆರ್. ಜಯಕರ್ ಸೇರಿದಂತೆ ಹಲವು ಗಣ್ಯರು ಮಾತನಾಡಿ ಗಾಂಧಿಯವರನ್ನು ಯಾವುದೇ ಕಾರಣಕ್ಕೂ ಸೆರೆಮನೆಗೆ ವಾಪಸ್ ಕಳಿಸಬಾರದೆಂದು ಆಗ್ರಹಿಸಿದರು.

ಇದರ ಜೊತೆಗೇ ಬಾಂಬೆಯ ಹತ್ತಿ ಗಿರಣಿ ಮತ್ತು ಇತರ ಕೈಗಾರಿಕಾ ಕಾರ್ಮಿಕರು ಗಾಂಧಿ ಬಗ್ಗೆ ಸಹಾನುಭೂತಿ ಹೊಂದಿದ್ದು, ಗಾಂಧಿಯವರನ್ನು ಮತ್ತೆ ಸೆರೆಮನೆಗೆ ಕಳಿಸಿದರೆ ಬಾಂಬೆ ನಗರದಲ್ಲಿ ಪರಿಸ್ಥಿತಿ ಹದಗೆಡುವುದೆಂದೂ ಬಾಂಬೆ ಸರ್ಕಾರ ವೈಸ್‌ರಾಯ್‌ಗೆ ವರದಿ ಮಾಡಿತು. ಇದೆಲ್ಲದರ ಪರಿಣಾಮವಾಗಿ ಒಲ್ಲದ ಮನಸ್ಸಿನಿಂದಲೇ ಗಾಂಧಿಯವರನ್ನು ಬೇಷರತ್ತಾಗಿ ಬಿಡುಗಡೆ ಮಾಡುತ್ತಿರುವುದಾಗಿ ೧೯೨೪ರ ಫೆಬ್ರುವರಿ ೪ರಂದು ಪ್ರಕಟಿಸಿತು. ಆದರೆ ಅವರು ಸುಧಾರಿಸಿಕೊಳ್ಳಲು ಇನ್ನಷ್ಟು ಕಾಲ ವೈದ್ಯರ ನಿಗಾದಲ್ಲಿ ಆಸ್ಪತ್ರೆಯಲ್ಲಿ ಇರಬೇಕಿತ್ತು. ಈ ಸಮಯದಲ್ಲಿ ಅಲಿ ಸೋದರರೂ ಸೇರಿದಂತೆ ಹಲವಾರು ಕಾಂಗ್ರೆಸ್ ನಾಯಕರು ಅವರನ್ನು ಭೇಟಿ ಮಾಡಿ ದೇಶದ ಪರಿಸ್ಥಿತಿಯ ಬಗ್ಗೆ ಮಾತನಾಡುತ್ತಿದ್ದರು. ಇದರಿಂದಾಗಿ ತಮ್ಮ ಗೈರು ಹಾಜರಿಯಲ್ಲಿ ದೇಶದ ಸಾರ್ವಜನಿಕ ಜೀವನದಲ್ಲಿ ಆದ ಹಲವು ಬದಲಾವಣೆಗಳು ಗಮನಕ್ಕೆ ಬಂದವು. ಮುಖ್ಯವಾಗಿ ಹಿಂದೂ–ಮುಸ್ಲಿಂ ಬಾಂಧವ್ಯ ಕೆಡುತ್ತಿರುವುದರ ಸೂಚನೆಗಳು ಅವರನ್ನು ಆತಂಕಿತರನ್ನಾಗಿ ಮಾಡಿತ್ತು. ಈ ಬಗ್ಗೆ ಅವರು ಈಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಮಹಮ್ಮದಲಿ ಜೌಹರ್ ಅವರಿಗೆ ದೀರ್ಘ ಪತ್ರವೊಂದನ್ನೂ ಬರೆದಿದ್ದರು. ಈ ಪತ್ರದಲ್ಲಿ ಖಾದಿ, ಅಸ್ಪೃಶ್ಯತಾ ನಿವಾರಣೆಯ ಕೆಲಸಗಳ ಕಡೆ ಕಾಂಗ್ರೆಸ್‌ನ ಗಮನ ಕಡಿಮೆಯಾಗುತ್ತಿರುವುದರ ಬಗ್ಗೆ ಕಳವಳ ವ್ಯಕ್ತಪಡಿಸಿದ್ದರಲ್ಲದೆ, ಸ್ಥಳೀಯ ಸಂಸ್ಥೆಗಳಲ್ಲದೆ ಪ್ರಾಂತೀಯ ಮತ್ತು ಕೇಂದ್ರ ಶಾಸನ ಸಭೆಗಳನ್ನು ಪ್ರವೇಶಿಸುವ ಕಾಂಗ್ರೆಸ್ಸಿಗರ ಬಯಕೆ ತೀವ್ರವಾಗುತ್ತಿರುವುದನ್ನೂ ತಾವು ಗಮನಿಸಿರುವುದಾಗಿ ತಿಳಿಸಿದ್ದರು. ಇದೆಲ್ಲದರ ಬಗ್ಗೆ

ಅವರು ತಮ್ಮನ್ನು ಭೇಟಿಯಾಗಿದ್ದ ರಾಜಾಜಿಯವರ ಜೊತೆಗೂ ಚರ್ಚಿಸಿದ್ದರು.

ಖಿಲಾಫತ್ ಚಳುವಳಿಯ ಅಂತ್ಯ

ಇದೇ ಸಮಯದಲ್ಲಿ ಟರ್ಕಿಯಲ್ಲಿ ಮತಾತೀತ ನಾಯಕ ಕೆಮಾಲ್ ಅತಾತುರ್ಕ್ ಪಾಶಾನ ಪ್ರಾಬಲ್ಯ ಹೆಚ್ಚಿ ಆತ ಅಧಿಕಾರಕ್ಕೆ ಬಂದ ಪರಿಣಾಮವಾಗಿ ಖಿಲಾಫತ್ ಚಳುವಳಿ ಅಂತ್ಯ ಕಂಡಿರುವ ಸುದ್ದಿಯನ್ನು ಗಾಂಧಿ ಪತ್ರಿಕೆಗಳಲ್ಲಿ ಓದಿದರು. ಪಾಶಾ ಎಲ್ಲರ ನಿರೀಕ್ಷೆಗೆ ವಿರುದ್ಧವಾಗಿ ಇಸ್ಲಾಮೀ ಧರ್ಮಗ್ರಂಥಗಳನ್ನು ಲ್ಯಾಟಿನೀಕರಿಸಿ, ಮುಖ ಮುಚ್ಚುವ ಬುರ್ಖಾವನ್ನು ನಿಷೇಧಿಸಿ ಇಸ್ಲಾಂನ್ನು ಆಧುನೀಕರಿಸುವ ಕ್ರಮಗಳನ್ನು ಕೈಗೊಂಡಿದ್ದ. ಕೂಡಲೇ ಅವರು ಮೊಹಮ್ಮದಲಿಯವರಿಗೆ ಪತ್ರ ಬರೆದು ಸಾಂತ್ವನ ಹೇಳಿದರಲ್ಲದೆ ಇಸ್ಲಾಂನ ಭವಿಷ್ಯವೀಗ ಭಾರತದ ಮುಸ್ಲಿಮರ ವರ್ತನೆಯನ್ನು ಅವಲಂಬಿಸಿದೆ ಎಂದು ಸೂಚಿಸಿದರು.

೧೯೨೪ರ ಮಾರ್ಚ್ ೧೧ರಂದು ಅಂತಿಮವಾಗಿ ಗಾಂಧಿಯವರನ್ನು ಆಸ್ಪತ್ರೆಯಿಂದ ಬಿಡುಗಡೆಗೊಳಿಸಲಾಯಿತು. ಅವರಿಗೆ ಸ್ವಲ್ಪ ಕಾಲ ಶುದ್ಧ ಹವೆಯ ಅಗತ್ಯವಿದೆಯೆಂದು ವೈದ್ಯರು ಹೇಳಿದ್ದರಿಂದ ಅವರು ಬಾಂಬೆಯ ಜುಹು ಸಮುದ್ರ ತೀರದಲ್ಲಿದ್ದ ನರೋತ್ತಮ ಮೊರಾರ್ಜಿ ಎಂಬ ಗುಜರಾತಿ ಕೈಗಾರಿಕೋದ್ಯಮಿಯೊಬ್ಬರ ಕುಟೀರದಲ್ಲಿರಲು ನಿರ್ಧರಿಸಿ ಆ ನಗರಕ್ಕೆ ರೈಲು ಗಾಡಿಯಲ್ಲಿ ತೆರಳಿದರು.

■

೬೨

ಕಾಂಗ್ರೆಸ್‌ನಲ್ಲಿ ತಳಮಳ-ಒಡಕು

ಗಾಂಧಿಯವರ ಸೆರೆಮನೆವಾಸದ ಮೊದಲ ವರ್ಷದಲ್ಲೇ, ಅಂದರೆ ೧೯೨೨ರ ಡಿಸೆಂಬರ್‌ನಲ್ಲಿ ಕಾಂಗ್ರೆಸ್‌ನ ವಾರ್ಷಿಕ ಅಧಿವೇಶನ ಬಿಹಾರದ ಗಯೆಯಲ್ಲಿ ಆಯೋಜಿತವಾಗಿತ್ತು. ಆ ಹೊತ್ತಿಗೆ ಕಾಂಗ್ರೆಸ್‌ನ ಬಹಳಷ್ಟು ನಾಯಕರು ಸೆರೆಮನೆಗಳಿಂದ ಬಿಡುಗಡೆಯಾಗಿದ್ದರು. ಈ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದವರು ಸೆರೆಮನೆಯಲ್ಲಿದ್ದ ಕಾರಣದಿಂದಾಗಿ ಕಳೆದ ಅಧಿವೇಶನದ ಅಧ್ಯಕ್ಷತೆಯಿಂದ ವಂಚಿತರಾಗಿದ್ದ ಬಂಗಾಳದ ಹಿರಿಯ ವಕೀಲ ಸಿ.ಆರ್. ದಾಸ್ ಅವರು. ಅವರು ತಮ್ಮ ಭಾಷಣದಲ್ಲಿ ಗಾಂಧಿಯವರನ್ನು ಜಗತ್ತು ಕಂಡಿರುವ ಅಪೂರ್ವ ನಾಯಕನೆಂದು ಹೊಗಳಿದರಾದರೂ, ಕಾಂಗ್ರೆಸ್ ಶಾಸನ ಸಭೆಗಳನ್ನು ಪ್ರವೇಶಿಸಬಾರದೆಂಬ ಈ ಹಿಂದಿನ ಕಾಂಗ್ರೆಸ್ ನಿರ್ಣಯವನ್ನು ರದ್ದು ಮಾಡುವ ಪ್ರಸ್ತಾವವನ್ನು ಮುಂದಿಟ್ಟರು. ಕಾಂಗ್ರೆಸ್ಸಿನವರು ಶಾಸನ ಸಭೆಗಳನ್ನು ಪ್ರವೇಶಿಸಿ ತಮ್ಮದೇ ರಾಷ್ಟ್ರಹಿತದ ಮಸೂದೆಗಳನ್ನೂ, ವಾದಗಳನ್ನೂ ಮಂಡಿಸಿ ಸರ್ಕಾರದ ಜನವಿರೋಧಿ ಕೆಲಸಗಳನ್ನು ಬಯಲು ಮಾಡುವ ಮೂಲಕ, ಮಾಂಟೆಫೋರ್ಡ್ ಸುಧಾರಣೆಗಳ ಹೆಸರಿನಲ್ಲಿ ಭಾರತಕ್ಕೆ ನೀಡಿರುವ ಹೊಸ ದ್ವಿಸ್ತರದ ಆಡಳಿತ ನಿಷ್ಪ್ರಯೋಜಕವೆಂದು ಜನರಿಗೆ ಮನಗಾಣಿಸಬಹುದೆಂಬುದು ದಾಸ್ ಅವರ ವಾದವಾಗಿತ್ತು. ಆದರೆ ಇದಕ್ಕೆ ವಲ್ಲಭಭಾಯಿ ಪಟೇಲರು 'ನೀವು ಎಷ್ಟೇ ಬಾಯಿ ಒಣಗಿಸಿಕೊಂಡು ಮಾತನಾಡಿದರೂ ಅದು ಔಪಚಾರಿಕ ಮಾತ್ರವಾಗಿ, ಸರ್ವ ಅಧಿಕಾರಗಳನ್ನೂ ಹೊಂದಿರುವ ಸರ್ಕಾರ, ತಾನು ಮಾಡಬಯಸುವುದನ್ನೇ ಮಾಡುವುದು ಎಂಬ ಪ್ರತಿವಾದ ಮಂಡಿಸಿದರು. ಕೊನೆಗೆ ದಾಸ್ ಅವರ ಪ್ರಸ್ತಾವ ಅಧಿವೇಶನದ ಪ್ರತಿನಿಧಿಗಳಿಂದ ತಿರಸ್ಕೃತವಾಯಿತು. ಇದರಿಂದ ಬೇಸರಗೊಂಡ ದಾಸ್ ಮತ್ತು ಅವರ ಬೆಂಬಲಿಗರಾದ ಮೋತಿಲಾಲ ನೆಹರೂ, ವಿಠಲಭಾಯಿ ಪಟೇಲ್ ಮುಂತಾದ ಹಿರಿಯ ನಾಯಕರು 'ಸ್ವರಾಜ್ ಪಕ್ಷ' ಎಂಬ ಹೊಸ ಪಕ್ಷವೊಂದನ್ನು ಸ್ಥಾಪಿಸಿಕೊಂಡರು. ಆದರೆ ಅವರು ತಾವೆಲ್ಲ ಕಾಂಗ್ರೆಸ್‌ನ ಭಾಗವೆಂದೂ ಘೋಷಿಸಿಕೊಂಡರು.

ಇದಾದ ಐದಾರು ತಿಂಗಳುಗಳ ನಂತರ, ಅಂದರೆ ೧೯೨೩ರ ಮೇನಲ್ಲಿ ಬಾಂಬೆಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಮತ್ತೊಮ್ಮೆ ತಮ್ಮ ಪ್ರಸ್ತಾವವನ್ನು ಮಂಡಿಸಿದ ದಾಸ್ ಅವರು, ಈ ಬಾರಿ ಬಂಗಾಳದ ಯುವ ಉತ್ಸಾಹಿ ನಾಯಕ ಸುಭಾಷ್‌ಚಂದ್ರ ಬೋಸರನ್ನು ತಮ್ಮೆಡೆಗೆ ಸೆಳೆದುಕೊಂಡದ್ದರ

ಫಲವಾಗಿ ತಮ್ಮ ಪ್ರಸ್ತಾವ ಅನುಮೋದನೆಗೊಳ್ಳುವಂತೆ ನೋಡಿಕೊಂಡರು. ಇದರಿಂದಾಗಿ ಕಾಂಗ್ರೆಸ್‌ನಲ್ಲಿ ಈಗ 'ಬದಲಾವಣೆಯ ಪರ' ಮತ್ತು 'ಬದಲಾವಣೆಯ ವಿರೋಧಿ' ಎಂಬ ಎರಡು ಗುಂಪುಗಳು ಸೃಷ್ಟಿಯಾದವು. ಬದಲಾವಣೆ ವಿರೋಧಿ ಗುಂಪಿನ ಮುಖ್ಯ ನಾಯಕರೆಂದರೆ ರಾಜೇಂದ್ರ ಪ್ರಸಾದ್, ಜಮ್ನಾಲಾಲ್ ಬಜಾಜ್, ಮಹದೇವ ದೇಸಾಯಿ, ಎಂ.ಎ. ಅನ್ಸಾರಿ, ಮೌಲಾನಾ ಅಬುಲ್ ಕಲಾಂ ಆಜ಼ಾದ್ ಮತ್ತು ರಾಜಾಜಿ.

ಕಾಂಗ್ರೆಸ್‌ನ ಈ ಒಡಕಿನಿಂದಾಗಿ ಮತ್ತು ಒಂದು ಗುಂಪು ಸರ್ಕಾರದೊಂದಿಗೆ ಸಹಕರಿಸಲು ಮುಂದಾಗಿದ್ದರಿಂದಾಗಿ ಪಕ್ಷ ಬದ್ಧವಾಗಿದ್ದ ಚರಕಾ, ಅಸ್ಪೃಶ್ಯತಾ ನಿವಾರಣಾ ಆಂದೋಲನಗಳು ಮತ್ತು ಹಿಂದೂ-ಮುಸ್ಲಿಂ ಐಕ್ಯತೆಯ ಕಾರ್ಯಕ್ರಮಗಳು ಹಿನ್ನೆಲೆಗೆ ಸರಿದಂತಾದವು. ಸ್ವಾಮಿ ಶ್ರದ್ಧಾನಂದರು ಅಸ್ಪೃಶ್ಯರ ಗೋಳನ್ನು ಕೇಳುವವರು ಯಾರೂ ಇಲ್ಲವೆಂದು ಕ್ರುದ್ಧರಾಗಿ ಕಾಂಗ್ರೆಸ್‌ನಿಂದ ದೂರವಾಗತೊಡಗಿದ್ದರು. ಖಿಲಾಫತ್ ಚಳುವಳಿ ಕುಸಿದುಬಿದ್ದಿದ್ದ ಮತ್ತು ಪಕ್ಷಕ್ಕೆ ಗಾಂಧಿ ನಾಯಕತ್ವವಿಲ್ಲದ ಈ ಸಂದರ್ಭದಲ್ಲಿ ಮುಸ್ಲಿಮರೂ ಮುಸ್ಲಿಂ ಲೀಗ್ ಕಡೆ ಹೊರಳತೊಡಗಿದರು. ಇದನ್ನು ಅರಿತೇ ವೈಸ್‌ರಾಯ್ ಎಐಸಿಸಿ ಅಧಿವೇಶನದ ತದನಂತರದಲ್ಲೇ ಲಂಡನ್‌ನ ಬ್ರಿಟಿಷ್ ಸಾಮ್ರಾಜ್ಯಾಧಿಪತಿಗಳಿಗೆ, ಭಾರತದಲ್ಲಿ ಆರಂಭವಾಗಿದ್ದ ಹಿಂದು-ಮುಸ್ಲಿಂ ಐಕ್ಯತೆಯ ದಿನಗಳು ಅಂತ್ಯಕ್ಕೆ ಬರುತ್ತಿವೆ ಎಂಬ ಸಂದೇಶ ಕಳಿಸಿದ್ದ.

ಮರುಕಳಿಸಿದ ಕಾಂಗ್ರೆಸ್ ಜಗಳ

ಆದರೆ ಈ ಮಧ್ಯೆ, ಈ ವಿಷಮ ಪರಿಸ್ಥಿತಿಯನ್ನು ಸುಧಾರಿಸಲೋ ಎಂಬಂತೆ, ೧೯೨೩ರ ಡಿಸೆಂಬರ್‌ನಲ್ಲಿ ಆಂಧ್ರದ ಕಾಕಿನಾಡಾದಲ್ಲಿ ನಡೆದ ಕಾಂಗ್ರೆಸ್ ವಾರ್ಷಿಕ ಅಧಿವೇಶನಕ್ಕೆ ಮೌಲಾನಾ ಮೊಹಮ್ಮದಲಿಯವರನ್ನು ಅಧ್ಯಕ್ಷರನ್ನಾಗಿ ಆರಿಸಲಾಗಿತ್ತು. ತಮ್ಮ ಅಧ್ಯಕ್ಷ ಭಾಷಣದಲ್ಲಿ ಅವರು ಕ್ರಿಶ್ಚಿಯನ್ನರಿಗಿಂತ ಹೆಚ್ಚು ಕ್ರಿಶ್ಚಿಯನ್ನರಾದ ಗಾಂಧಿಯಂಥವರನ್ನು ಒಂದು ಕ್ರಿಶ್ಚಿಯನ್ ಸರ್ಕಾರವಾದ ಭಾರತ ಸರ್ಕಾರ ಬಂಧಿಸಿಟ್ಟಿರುವುದು ನಾಚಿಕೆಗೇಡು ಎಂದು ಗುಡುಗಿದರು. ಈ ವೇಳೆಗೆ ಶಾಸನಸಭೆಗೆ ಆಯ್ಕೆಯಾಗಿದ್ದ ಸಿ.ಆರ್. ದಾಸ್, ವಿಠಲಭಾಯಿ ಪಟೇಲ್, ಜಿನ್ನಾ ಮುಂತಾದ ಬದಲಾವಣೆ ಪರ ಗುಂಪಿನ ಸದಸ್ಯರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದ ಈ ಅಧಿವೇಶನದಲ್ಲಿ ಮತ್ತೆ ಬದಲಾವಣೆ ಪರ ಮತ್ತು ವಿರೋಧಿ ಗುಂಪುಗಳ ನಡುವೆ ಮಾತಿನ ಚಕಮಕಿ ನಡೆದು ಒಂದು ರಾಜಿ ಪ್ರಯತ್ನವನ್ನು ಮಾಡಲಾಯಿತು. ಆದರೆ ಬದಲಾವಣೆ ಪರವಾದ ಸ್ವರಾಜ್ಯ ಪಕ್ಷದವರನ್ನು, ಕಾಂಗ್ರೆಸ್ ಪಕ್ಷದ ಪದಾಧಿಕಾರಗಳಿಂದ ದೂರವಿಡಬೇಕೆಂಬ ಬದಲಾವಣೆ ವಿರೋಧಿಗಳ ಗುಂಪಿನ ಹಠದಿಂದಾಗಿ ಫಲ ನೀಡದೆ ಅಧಿವೇಶನ ಗೊಂದಲದಲ್ಲಿ ಮುಕ್ತಾಯವಾಯಿತು.

ಇಂತಹ ಸಂದರ್ಭದಲ್ಲಿ ಗಾಂಧಿ ಸೆರೆಮನೆಯಿಂದ ಬಿಡುಗಡೆ ಹೊಂದಿದ್ದರು. ಹಾಗಾಗಿ ಆರೋಗ್ಯ ಸುಧಾರಣೆಗೆಂದು ಜುಹುವಿನಲ್ಲಿ ಇದ್ದ ಅವಧಿಯುದ್ದಕ್ಕೂ ಅವರ ಕುಟೀರ ವಿವಿಧ ಉದ್ದೇಶಗಳಿಗೆ ಅವರನ್ನು ಕಾಣಲು ಬರುತ್ತಿದ್ದ ಜನರಿಂದ ತುಂಬಿಹೋಗಿರುತ್ತಿತ್ತು. ಇದರ ಮಧ್ಯೆಯೇ ಗಾಂಧಿ ತಮ್ಮ ಮೇಲಲ್ಲದೆ ಆಸಕ್ತಿಯಿಂದ

ಮುಂದೆ ಬಂದ ಇತರರ ಮೇಲೂ ತಮ್ಮ ನಿಸರ್ಗ ಚಿಕಿತ್ಸೆಯ ಪ್ರಯೋಗಗಳನ್ನು ಕೈಗೊಂಡರು. ಇವುಗಳಲ್ಲಿ ಮಣ್ಣಿನ, ನೀರಿನ ಚಿಕಿತ್ಸೆ, ಆಹಾರ ವ್ರತಗಳು ಸೇರಿದ್ದವು. ಈ ಕೆಲಸಗಳು ಅವರಿಗೆ ಎಷ್ಟು ಸಂತೋಷ ಕೊಡುತ್ತಿದ್ದವೋ ಅಷ್ಟೇ ದುಃಖವನ್ನೂ ಅವರು ನಿತ್ಯ ಓದುತ್ತಿದ್ದ ಪತ್ರಿಕೆಗಳ ಸುದ್ದಿಗಳು ನೀಡುತ್ತಿದ್ದವು. ವಿಶೇಷವಾಗಿ ತಾವು ಕಷ್ಟಪಟ್ಟು ಸಾಧಿಸಿದ್ದ ಹಿಂದು-ಮುಸ್ಲಿಂ ಐಕ್ಯತೆಯ ಭಾವ, ನಿಧಾನವಾಗಿ ಕರಗಿ ಎರಡೂ ಸಮುದಾಯಗಳ ನಡುವೆ ದೇಶದ ವಿವಿಧ ಭಾಗಗಳಲ್ಲಿ ಕಾಣಿಸಿಕೊಳ್ಳತೊಡಗಿದ್ದ ಸಂಘರ್ಷ. ಇದರ ಜೊತೆಗೇ ಕಾಂಗ್ರೆಸ್‌ನಲ್ಲಿ ಉಂಟಾಗಿದ್ದ ಒಡಕು ಅವರ ಮನಸ್ಸನ್ನು ಕದಡಿತ್ತು. ರಾಜಾಜಿ ಬಂದು ಈ ಎರಡೂ ವಿಷಯಗಳ ಬಗ್ಗೆ ವಿಸ್ತೃತ ವರದಿ ನೀಡಿದ್ದರು. ಆರ್ಯ ಸಮಾಜ ಮತ್ತು ಹಿಂದೂ ಮಹಾಸಭಾ ಹೇಗೆ ಹಿಂದೂಗಳಲ್ಲಿ ಅಭದ್ರತೆಯ ಭಯ ಹುಟ್ಟಿಸಿ, ಮುಸ್ಲಿಮರ ಹಿಂಸಾಚಾರದ ವಿರುದ್ಧ ಹೋರಾಡಲು ಹಿಂದೂಗಳೂ ಗರಡಿಮನೆಗಳಿಗೆ ಹೋಗಿ ದೈಹಿಕವಾಗಿ ಬಲಿಷ್ಠವಾಗಿ, ಶಸ್ತ್ರಾಸ್ತ್ರ ತರಬೇತಿಯನ್ನೂ ಪಡೆಯಬೇಕೆಂದು ಪ್ರತಿಪಾದಿಸುತ್ತಿರುವುದನ್ನು ರಾಜಾಜಿಯವರಿಂದ ತಿಳಿದು ಅವರು ವಿಚಲಿತರಾದರು. ಹೀಗಾದರೆ ಇಡೀ ದೇಶವೇ ಒಂದು ಸ್ಫೋಟಕ ಶಸ್ತ್ರಾಗಾರವಾಗುವುದೆಂದು ಅಭಿಪ್ರಾಯಪಟ್ಟರು.

ಮಹಮ್ಮದರಿಗೆ ಕೇಳಿಸಿದ ದಿವ್ಯವಾಣಿ ಅಂತಿಮವಾದುದಲ್ಲ

ಗಾಂಧಿ ಈ ಬೆಳವಣಿಗೆಯಲ್ಲಿ ಎರಡೂ ಮತಗಳಲ್ಲಿನ ಸಮಸ್ಯೆಗಳನ್ನು ಕಂಡಿದ್ದರು. ಅವರ ಅನುಭವದ ಪ್ರಕಾರ ಮುಸ್ಲಿಮರು ಸ್ವಭಾವತಃ ಜೋರು ವ್ಯಕ್ತಿತ್ವದವರು. ಹಿಂದೂಗಳು ಸ್ವಭಾವತಃ ಪುಕ್ಕಲರು. ಪರಸ್ಪರ ವ್ಯತಿರಿಕ್ತವಾದ ಈ ಸ್ವಭಾವಗಳೇ ಎರಡೂ ಕಡೆಯವರ ವಿಕ್ಷಿಪ್ತ ವರ್ತನೆಗಳಿಗೆ ಕಾರಣವಾಗಿವೆ ಎಂದು ಭಾವಿಸಿದ್ದ ಅವರು ಅಹಿಂಸೆಯ ಅಗ್ನಿಪರೀಕ್ಷೆಯಲ್ಲಿ ಹಾದು ಈ ವ್ಯಕ್ತಿತ್ವಗಳಲ್ಲಿ ಹೊಸ ಧೀರತನದ ಹದವೊಂದು ಮೂಡುವುದು ಎಂದು ನಿರೀಕ್ಷಿಸಿದ್ದರು. ಆದರೆ ಅವರ ದೀರ್ಘ ಗೈರು ಹಾಜರಿ, ಈ ಪ್ರಯೋಗ ಅರ್ಧಕ್ಕೇ ನಿಂತು ಅನಾಹುತವನ್ನು ಉಂಟುಮಾಡಿತ್ತು. ಹಿಂದೂಗಳ ಆತಂಕಕ್ಕೆ ಮುಸ್ಲಿಮರ ವರ್ತನೆಗಳೂ ಕಾರಣವೆಂದು ಒಪ್ಪಿಕೊಂಡ ಅವರು, ಆ ಸಮುದಾಯ ಮಹಮ್ಮದರಿಗೆ ಕೇಳಿಸಿತೆಂದು ಹೇಳಲಾಗುವ ದಿವ್ಯವಾಣಿ ಎಲ್ಲ ಕಾಲಕ್ಕೂ ಅಂತಿಮವಾದುದಾಗಿರಲಾರದು ಎಂಬುದನ್ನು ಅರಿಯಬೇಕು ಮತ್ತು ಮಹಮ್ಮದರ ಸರಳ ಜೀವನ ಹಾಗೂ ತ್ಯಾಗ ಮನೋಭಾವವನ್ನು ಅನುಕರಿಸಬೇಕು ಎಂದು ಸೂಚಿಸಿದರು.

ವೈಕಂ ಸತ್ಯಾಗ್ರಹಕ್ಕೆ ಕರೆ

ಇದೇ ವೇಳೆಯಲ್ಲಿ ದಕ್ಷಿಣದ ತಿರುವಾಂಕೂರು ಸಂಸ್ಥಾನದಲ್ಲಿ ಹಿಂದೂಗಳ ನಡುವೆಯೇ ಒಂದು ಸಂಘರ್ಷ ಕಾಣಿಸಿಕೊಂಡಿತ್ತು. ಸಂಸ್ಥಾನದ ಏಳವ (ಈಡಿಗ) ಜಾತಿಯವರಲ್ಲಿ ನವ ಜಾಗೃತಿ ಉಂಟುಮಾಡಿದ್ದ ನಾರಾಯಣ ಗುರುಗಳ ಅನುಯಾಯಿಗಳು, ತಮ್ಮ ಗುರುಗಳ ಬೋಧನೆಯನುಸಾರ ಜಾತಿಭೇದವನ್ನು ತೊಡೆಯಲು ಅಂತರ್ಜಾತಿ ವಿವಾಹ, ಸಹಭೋಜನ ಮತ್ತು ದೇವಾಲಯ ಪ್ರವೇಶ

ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬೆಂಬಲ ಮಾರ್ಗದರ್ಶನಕ್ಕಾಗಿ ಗಾಂಧಿಯವರಿಗೆ ಪತ್ರ ಬರೆದಿದ್ದರು. ಗಾಂಧಿಯವರನ್ನು ಈ ಹಿಂದೆ ತಿರುನಲ್ವೇಲಿಯಲ್ಲಿ ಭೇಟಿಯಾಗಿದ್ದ ಟಿ.ಕೆ. ಮಾಧವನ್ ಎಂಬುವವರು ಬರೆದಿದ್ದ ಪತ್ರಕ್ಕೆ ಉತ್ತರ ಬರೆದಿದ್ದ ಗಾಂಧಿ, ಸಾಮಾಜಿಕ ಪರಿವರ್ತನೆಯ ಕೆಲಸಗಳಿಗೆ ಇಷ್ಟು ಆವೇಗ ಒಳ್ಳೆಯದಲ್ಲ ಎಂದು ಸೂಚಿಸಿ, ಅವರು ವೈಕಂ ಎಂಬಲ್ಲಿ ದೇವಾಲಯದ ಸುತ್ತಮುತ್ತಲಿನ ರಸ್ತೆಗಳಲ್ಲಿ ಏಳವ ಮುಂತಾದ ಕೆಳಜಾತಿಯವರ ಪ್ರವೇಶದ ಮೇಲೆ ಹೇರಲಾಗಿದ್ದ ನಿಷೇಧದ ವಿರುದ್ಧ ಅನಿರ್ದಿಷ್ಟ ಕಾಲ ಉಪವಾಸ ಆರಂಭಿಸಿದ್ದನ್ನು ಅವಸರದ ಕ್ರಮ ಎಂದು ಅಭಿಪ್ರಾಯಪಟ್ಟಿದ್ದರು. ಉಪವಾಸವನ್ನು ಮನಗೆಲ್ಲಲು ಅವಕಾಶವಿರುವ ಮಿತ್ರಭಾವದವರ ವಿರುದ್ಧ ಕೈಗೊಳ್ಳಬೇಕೇ ಹೊರತು ದಮನಕಾರಿಗಳ ವಿರುದ್ಧ ಅದನ್ನು ಬಳಸುವುದರಿಂದ ಪ್ರಯೋಜನವಿಲ್ಲ ಎಂದೂ ಅವರು ಒಂದು ತಂತಿ ಸಂದೇಶ ಕಳಿಸಿ ತಿಳಿ ಹೇಳಿದ್ದರು. ನಂತರದಲ್ಲೇ ವೈಕಂನಿಂದ ನಿಯೋಗವೊಂದು ಬಂದು ಗಾಂಧಿಯವರನ್ನು ಭೇಟಿ ಮಾಡಿ ಅವರನ್ನು ವೈಕಂಗೆ ಆಹ್ವಾನಿಸಿತು. ಅವರಿಗೆ ಗಾಂಧಿ, ಸತ್ಯಾಗ್ರಹದ ಜೊತೆಯಲ್ಲೇ ತಿರುವಾಂಕೂರು ಮಹಾರಾಜ ಮತ್ತು ಪ್ರಾಂತೀಯ ಸರ್ಕಾರಗಳಿಗೆ ಸಮಸ್ಯೆ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸುತ್ತಿರಬೇಕೆಂದು ಸಲಹೆ ನೀಡಿ ತಮ್ಮ ಆರೋಗ್ಯ ಸುಧಾರಿಸಿ ಬಿಡುವಾದ ಕೂಡಲೇ ಅಲ್ಲಿಗೆ ಬರುವುದಾಗಿ ತಿಳಿಸಿದ್ದರು.

ಈ ಮಧ್ಯೆ ಸ್ವರಾಜ್ ಪಕ್ಷದ ಮೋತಿಲಾಲ್ ನೆಹ್ರೂ ಮತ್ತು ಸಿ.ಆರ್.ದಾಸ್ ತಮ್ಮ ಕೆಲ ಬೆಂಬಲಿಗರೊಂದಿಗೆ ಬಂದು ಶಾಸನ ಸಭೆಗಳಲ್ಲಿ ಭಾಗವಹಿಸಿರುವ ತಮ್ಮ ನಿಲುವನ್ನು ವಿವರಿಸಿ ಗಾಂಧಿಯವರ ಬೆಂಬಲ ಕೋರಿದರು. ಅದಕ್ಕೆ ಗಾಂಧಿ ಈಗಲೂ ಅಸಹಕಾರ ತತ್ವಕ್ಕೆ ಬದ್ಧರಾಗಿ ಬ್ರಿಟಿಷ್ ಸರ್ಕಾರದಲ್ಲಿ ನಂಬಿಕೆ ಇಲ್ಲದ ತಮಗೆ ಕಾಂಗ್ರೆಸ್ಸಿಗರಾಗಿ ಸರ್ಕಾರ ನಡೆಸುವ ಚುನಾವಣೆಗಳಲ್ಲಿ ಭಾಗವಹಿಸಿ ಶಾಸನ ಸಭೆಗಳಲ್ಲಿ ಆಡಳಿತದ ಪಾಲುದಾರರಾಗುವ ಸಂಗತಿ ಒಪ್ಪಿಗೆ ಇಲ್ಲ ಎಂದು ಸ್ಪಷ್ಟಪಡಿಸಿದರು. ಆದರೆ ಸ್ವರಾಜ್ಯ ಪಕ್ಷದವರು ಶಾಸನ ಸಭೆಗಳ ಕಾರ್ಯಕಲಾಪಗಳ ಹೊರತಾಗಿ ಖಾದಿ ಪ್ರಚಾರ, ಅಸ್ಪೃಶ್ಯತಾ ನಿವಾರಣೆ ಮತ್ತು ಹಿಂದೂ ಮುಸ್ಲಿಂ ಐಕ್ಯತೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಕಾಂಗ್ರೆಸ್ಸಿಗರಾಗಿಯೂ ಉಳಿಯಬಯಸಿದರೆ ತಮ್ಮದೇನೂ ಅಭ್ಯಂತರವಿಲ್ಲ ಎಂದು ಹೇಳಿದರು. ಇದು ಗಾಂಧಿ–ದಾಸ್ ಒಡಂಬಡಿಕೆ ಎಂದು ಮುಂದೆ ಕೆಲಕಾಲ ಹೆಸರಾಯಿತು.

ಕುಸಿದು ಬಿದ್ದಿದ್ದ ಅಸಹಕಾರ ಕಾರ್ಯಕ್ರಮಗಳು

ಆದರೆ ಒಟ್ಟಾರೆ ರಾಜಕೀಯ ಪರಿಸ್ಥಿತಿ ನಿರಾಶಾದಾಯಕವಾಗಿತ್ತು. ಅಸಹಕಾರ ಚಳುವಳಿ ಕುಸಿದುಬಿದ್ದಿತ್ತು. ನ್ಯಾಯಾಲಯಗಳನ್ನು ಬಹಿಷ್ಕರಿಸಿದ್ದ ವಕೀಲರು ಮತ್ತೆ ನ್ಯಾಯಾಲಯಗಳಿಗೆ ಹೋಗಲಾರಂಭಿಸಿದ್ದರು. ಸರ್ಕಾರಿ ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿದ್ದ ವಿದ್ಯಾರ್ಥಿಗಳು ಹೆಚ್ಚಿನ ಕಡೆ ಬದಲಿ ರಾಷ್ಟ್ರೀಯ ವಿದ್ಯಾ ಸಂಸ್ಥೆಗಳು ಆರಂಭವಾಗದೆ ಅನಿವಾರ್ಯವಾಗಿ ಮತ್ತೆ ಸರ್ಕಾರಿ ವಿದ್ಯಾಸಂಸ್ಥೆಗಳಿಗೆ ಸೇರಿಕೊಳ್ಳತೊಡಗಿದ್ದರಲ್ಲದೆ, ಅವರಲ್ಲಿ ಕೆಲವರು ಮತ್ತು ಅವರ ಪೋಷಕರು

ವಿದ್ಯಾಭ್ಯಾಸಕ್ಕೆ ಅನಗತ್ಯವಾಗಿ ಅಡ್ಡಿಯಾದ ಗಾಂಧಿಯವರನ್ನು ನಿಂದಿಸದೆ ಇರಲಿಲ್ಲ. ತಮ್ಮ ಮಾತು ಕೇಳಿದರೆ ಇನ್ನೊಂದು ವರ್ಷದಲ್ಲಿ ಸ್ವರಾಜ್ಯ ಕೊಡಿಸುವುದಾಗಿ ಹೇಳಿದ್ದ ಗಾಂಧಿಯವರ ಮಾತು ಅವರಿಗೇ ತಿರುಗುಬಾಣವಾಗಿತ್ತು. ಆದರೆ ಜನ ಗಾಂಧಿಯವರ ಮಾತನ್ನು ಪೂರ್ಣ ಕೇಳಿದ್ದರೆ? ಅಹಿಂಸೆಯ ಪಾಲನೆ ಮಾಡಿದ್ದರೆ ಎಂಬುದು ಬೇರೆ ವಿಷಯವೇ ಆಗಿತ್ತು. ದೇಶದ ವಿವಿಧ ಭಾಗಗಳಿಂದ ಹಿಂದೂ ಮುಸ್ಲಿಮರಿಬ್ಬರೂ ಅವರಿಗೆ ಪತ್ರ ಬರೆದು, ಇಂದಿನ ಸ್ಥಿತಿಗೆ ಅವರನ್ನು ದೂಷಿಸತೊಡಗಿದ್ದರು. ಮುಸ್ಲಿಮರು ಅಲಿ ಸಹೋದರರರನ್ನು ಮುಸ್ಲಿಂ ಸಮುದಾಯದಿಂದ ಹಾರಿಸಿಕೊಂಡು ಹೋಗಿ, ಅಲಿಗಢ ವಿಶ್ವವಿದ್ಯಾಲಯ ಅನಾಥವಾಗಿ, ಸಮುದಾಯಕ್ಕೆ ಅನ್ಯಾಯ ಮಾಡಿದಿರಿ ಎಂದು ದೂಷಿಸಿದರೆ, ಹಿಂದೂಗಳು ಖಿಲಾಫತ್ ಹೆಸರಿನಲ್ಲಿ ಮುಸ್ಲಿಮರಿಗೆ ಸಾರ್ವಜನಿಕ ಜೀವನದಲ್ಲಿ ಇಲ್ಲದ ಪ್ರಾಧಾನ್ಯ ಒದಗಿಸಿ ಅವರನ್ನು ಕೊಬ್ಬಿಸಲಾಗಿದೆ ಎಂದು ದೂಷಿಸುತ್ತಿದ್ದರು. ಈ ಮಧ್ಯೆ ಮುಸ್ಲಿಂ ಸಮುದಾಯದ ಮಧ್ಯೆ ಮುಸ್ಲಿಮರಿಗೆ ಸರ್ಕಾರಿ ಉದ್ಯೋಗಗಳಲ್ಲಿ ನಿರ್ದಿಷ್ಟ ಮೀಸಲಾತಿಯ ಬೇಡಿಕೆಯ ಧ್ವನಿ ಎತ್ತಿದಾಗ ಗಾಂಧಿ ಅದು ಅನಗತ್ಯವೆಂದು ಹೇಳಿ ಕೆಲ ಮುಸ್ಲಿಂ ನಾಯಕರ ಸಿಟ್ಟಿಗೂ ಕಾರಣರಾದರು. ಜಗತ್ತಿನಾದ್ಯಂತ ಮುಸ್ಲಿಂ ಸಮುದಾಯದಲ್ಲಿ ಆಧುನಿಕ ಶಿಕ್ಷಣ ಪಡೆಯಲಾರಂಭಿಸಿದ್ದ ಮಧ್ಯಮ ವರ್ಗವೊಂದು ಸೃಷ್ಟಿಯಾಗುತ್ತಿದ್ದು, ಭಾರತದಲ್ಲಿ ಆ ಸಮುದಾಯದ ನಾಯಕತ್ವಕ್ಕೆ ಅದರ ಆಶೋತ್ತರಗಳಿಗೆ ಸ್ಪಂದಿಸಲಾಗದಿದ್ದುದು ಸದ್ಯದ ಹಿಂದೂ ಮುಸ್ಲಿಂ ವೈಷಮ್ಯ ಹೆಚ್ಚಲೂ ಕಾರಣವಾಗಿತ್ತು.

■

೬೩

ಹಿಂದೂ ಮುಸ್ಲಿಂ ಘರ್ಷಣೆಯ ಬೀಜಗಳು

ಹಿಂದೂ ಮಹಾಸಭಾ – ಹಿಂದುತ್ವ – ಸಾವರ್ಕರ್

ಹಾಗೆ ನೋಡಿದರೆ ಮಲಬಾರಿನಲ್ಲಿ ನಡೆದ ಮಾಪಿಳ್ಳೆ ದಂಗೆಯ ಸಮಯದಲ್ಲೇ ಹಿಂದೂ ಸಮುದಾಯದಲ್ಲಿ ತಳಮಳ ಆರಂಭವಾಗಿತ್ತು. ಈ ದಂಗೆಯ ಭಾಗವಾಗಿ ದೊಡ್ಡ ಸಂಖ್ಯೆಯಲ್ಲಿ ಹಿಂದೂಗಳನ್ನು ಬಲಾತ್ಕಾರದಿಂದ ಇಸ್ಲಾಂಗೆ ಮತಾಂತರ ಮಾಡಲಾಗಿದೆ ಎಂಬ ಸುದ್ದಿ ಉತ್ತರ ಭಾರತದ ಆರ್ಯ ಸಮಾಜದ ವಲಯಗಳಲ್ಲಿ ಎಚ್ಚರಿಕೆಯ ಘಂಟೆಯನ್ನು ಬಾರಿಸಿತ್ತು. ಆಗಲೇ ಆರ್ಯ ಸಮಾಜದ ಕಾರ್ಯಕರ್ತರು 'ಶುದ್ಧಿ ಮತ್ತು ಸಂಘಟನೆ'ಯ ಕಾರ್ಯಕ್ರಮಗಳನ್ನು ಅಲ್ಲಲ್ಲಿ ಆರಂಭಿಸಿದ್ದರು. ಶುದ್ಧಿ ಎಂದರೆ ಮತಾಂತರವಾಗಿದ್ದ ಮುಸ್ಲಿಮರನ್ನು ಶುದ್ಧೀಕರಣವೆಂಬ ಆಚರಣೆಯ ಮೂಲಕ ವಾಪಸ್ ಹಿಂದೂ ಧರ್ಮಕ್ಕೆ ಮತಾಂತರಿಸುವುದು. ಈ ಪ್ರಯತ್ನಗಳಿಗೆ ಸ್ಫೂರ್ತಿಯಾಗಿದ್ದುದು ೧೯೧೫ರಲ್ಲಿ ಆರಂಭವಾಗಿದ್ದ ಹಿಂದೂ ಮಹಾಸಭಾ ಎಂಬ ಸಂಘಟನೆ. ಇದು ೧೯೦೯ರಲ್ಲಿ ಮೋರ್ಲೆ–ಮಿಂಟೋ ಸಂವಿಧಾನ ಸುಧಾರಣಾ ಕ್ರಮದ ಭಾಗವಾಗಿ ಮುಸ್ಲಿಮರಿಗೆ ಪ್ರತ್ಯೇಕ ಮತಕ್ಷೇತ್ರಗಳಿಗೆ ಮತ್ತು ಮುಸ್ಲಿಂ ಅಲ್ಪ ಸಂಖ್ಯಾತ ಪ್ರಾಂತ್ಯಗಳ ಶಾಸನ ಸಭೆಗಳಲ್ಲಿ ಮುಸ್ಲಿಮರಿಗೆ ನಿರ್ದಿಷ್ಟ ಪ್ರಮಾಣದ ಮೀಸಲಾತಿಗೆ ಅವಕಾಶ ನೀಡಿದ್ದರ ಹಿನ್ನೆಲೆಯಲ್ಲಿ ಹಿಂದೂಗಳ ಹಿತ ಕಾಪಾಡಲು ಪಂಜಾಬ್‌ನ ಕೆಲ ಆರ್ಯ ಸಮಾಜದ ನಾಯಕರಿಂದ ರಚಿತವಾಗಿ ೧೯೨೪ರ ಹೊತ್ತಿಗೆ ದೇಶಾದ್ಯಂತ ತನ್ನ ಶಾಖೆಗಳನ್ನು ಹೊಂದಿತ್ತು. ಇದಕ್ಕೆ ಕಾಂಗ್ರೆಸ್ ನಾಯಕರಾದ ಲಾಲಾ ಲಜಪತರಾಯ್, ಮದನಮೋಹನ ಮಾಳವೀಯ ಮತ್ತು ಸ್ವಾಮಿ ಶ್ರದ್ಧಾನಂದರ ಆಶೀರ್ವಾದವೂ ಇತ್ತು. ಡಾ. ಬಿಎಸ್. ಮೂಂಜೆ ಎನ್ನುವವರು ಅದರ ಅಖಿಲ ಭಾರತ ನಾಯಕರಾಗಿದ್ದರು.

ಹಿಂದೂ ಮಹಾಸಭಾಕ್ಕೆ ಒಂದು ತಾತ್ವಿಕ ಭಿತ್ತಿ ಒದಗಿಸಿದ ವ್ಯಕ್ತಿ ಎಂದರೆ ವಿ.ಡಿ. ಸಾವರ್ಕರ್. ೧೯೦೯ರಷ್ಟು ಹಿಂದೆಯೇ ಲಂಡನ್‌ನ 'ಇಂಡಿಯಾ ಹೌಸ್'ನಲ್ಲಿ ಅಲ್ಲಿಗೆ ಭೇಟಿ ನೀಡಿದ್ದ ಗಾಂಧಿಯವರೊಂದಿಗೆ ಹಿಂಸೆ–ಅಹಿಂಸೆಗಳ ವಿಷಯದಲ್ಲಿ ಭಿನ್ನಾಭಿಪ್ರಾಯ ತಾಳಿ ಹಿಂಸಾ ಕೃತ್ಯಗಳ ಮೂಲಕ ಬ್ರಿಟಿಷ್ ಪ್ರಭುತ್ವವನ್ನು ಬೆದರಿಸಿ ಪದಚ್ಯುತಗೊಳಿಸ ಬಯಸಿದ್ದ ಉಗ್ರಗಾಮಿ ಗುಂಪಿನೊಂದಿಗೆ ಗುರುತಿಸಿಕೊಂಡಿದ್ದವರು ಇವರು. ನಾಸಿಕ್‌ನ ಕಲೆಕ್ಟರನೂ, ಸಂಸ್ಕೃತ ವಿದ್ವಾಂಸನೂ ಆಗಿದ್ದ ಜಾಕ್ಸನ್ ಎಂಬುವವರ ಕೊಲೆ ಮೊಕದ್ದಮೆಯಲ್ಲಿ ಸಾವರ್ಕರ್ ೧೯೧೧ರಲ್ಲಿ ಕರಿ ನೀರಿನ ಶಿಕ್ಷೆಗೆ ಒಳಗಾಗಿ

ಅಂಡಮಾನ್‌ನ ಸೆರೆಮನೆಯಲ್ಲಿದ್ದು ಕೊನೆಗೆ ಬ್ರಿಟಿಷ್ ಸರ್ಕಾರಕ್ಕೆ ನಿಷ್ಠಾವಂತರಾಗಿ ಉಳಿಯುವುದಾಗಿ ಹೇಳುವ, ಒಂದಲ್ಲ ಐದು ಕ್ಷಮಾಪಣಾ ಪತ್ರಗಳನ್ನು ಬರೆದುಕೊಟ್ಟು, ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆ ಸರಹದ್ದಿನಾಚೆ ಹೋಗಬಾರದೆಂಬ ಷರತ್ತಿಗೆ ಒಳಗಾಗಿ ೧೯೨೪ರಲ್ಲಿ ಬಿಡುಗಡೆ ಹೊಂದಿದ್ದರು. ಅವರು ಇದಕ್ಕೆ ಒಂದು ವರ್ಷ ಮುಂಚೆ ಬರೆದು, ಹಿಂದೂ ಮಹಾಸಭಾ ಮೂಲಕ ಪ್ರಚಾರ ಪಡೆದಿದ್ದ 'ಹಿಂದೂ ಯಾರು?' ಎಂಬ ಕಿರುಪುಸ್ತಕ, ಕೆಲ ಹಿಂದೂ ಗುಂಪುಗಳಲ್ಲಿ ಚರ್ಚೆಗೆ ಒಳಗಾಗಿ ಹಿಂದೂ ಮತೀಯ ಭಾವನೆಯನ್ನು ಪ್ರಚೋದಿಸಿತ್ತು. ಬ್ರಿಟಿಷ್ ವಿರೋಧಿಯಾಗಿ ಸೆರೆಮನೆ ಸೇರಿದ್ದ ಸಾವರ್ಕರ್ ಅಲ್ಲಿಂದ 'ಬಿಡುಗಡೆ' ಹೊಂದಿದಾಗ ಬ್ರಿಟಿಷ್ ಪರ ಮತ್ತು ಮುಸ್ಲಿಂ ವಿರೋಧಿಯಾಗಿ ಪರಿವರ್ತಿತವಾಗಿದ್ದುದು ಬಹು ಚೋದ್ಯದ ಸಂಗತಿಯಾಗಿತ್ತು. ಇದಕ್ಕೆ ಗಾಂಧಿ ಕುರಿತ ಅವರ ವೈರ ಭಾವನೆ ಮತ್ತು ಈಗ ಅವರ ನಾಯಕತ್ವದ ಜನಪ್ರಿಯತೆ ಬಿಕ್ಕಟ್ಟಿನಲ್ಲಿದ್ದ ಕಾರಣ ವಾತಾವರಣವನ್ನು ತಮ್ಮ ಪರವಾಗಿ ತಿರುಗಿಸಿಕೊಳ್ಳುವ ಇರಾದೆಯೂ ಇರಬಹುದು. ಅವರು ಮಾತೃಭೂಮಿ ಮತ್ತು ಪಿತೃಭೂಮಿಗಳೆಂಬ ಎರಡು ಪರಿಕಲ್ಪನೆಗಳನ್ನು ಸೃಷ್ಟಿಸಿ ಇವೆರಡೂ ಒಂದೇ ಆಗಿರದ, ಅಂದರೆ ಹಿಂದೂಸ್ಥಾನದ ಹೊರಗಿನ ಸ್ಥಳಗಳಿಂದ ಧಾರ್ಮಿಕ ಸ್ಫೂರ್ತಿ ಪಡೆಯುವರಾರೂ ದೇಶಪ್ರೇಮಿಗಳಾಗಿರಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದ್ದರು. ಇದನ್ನು ೧೯೨೩ರ ಆಗಸ್ಟ್‌ನಲ್ಲಿ ಅನುಮೋದಿಸಿದ ಹಿಂದೂ ಮಹಾ ಸಭಾ, ತನ್ನ 'ಶುದ್ಧಿ ಮತ್ತು ಸಂಘಟನ್' ಕೆಲಸಗಳನ್ನು ಚುರುಕುಗೊಳಿಸಿ ಹಿಂದೂ ರಕ್ಷಣಾ ದಳಗಳನ್ನು ರಚಿಸಲಾರಂಭಿಸಿತು.

ಇದಕ್ಕೆ ಪ್ರತಿಯಾಗಿ ಮುಸ್ಲಿಂ ಅತಿವಾದಿಗಳು 'ತಬ್ಲೀಕ್' ಮತ್ತು 'ತಾನ್ಜಿಮ್' ಎಂಬ ವೇದಿಕೆಗಳನ್ನು ರಚಿಸಿಕೊಂಡು ತಮ್ಮ 'ಧರ್ಮ ರಕ್ಷಣೆ'ಯ ಕ್ರಮಗಳಿಗೆ ಕೈಹಾಕಿದರು. ಈ ಮಧ್ಯೆ ಮೊಹಮ್ಮದಲಿ ಪ್ರಾರ್ಥನಾ ಸಭೆಯೊಂದರಲ್ಲಿ ಆಡಿದರೆಂದು ಹೇಳಲಾದ, 'ನಾನು ಗಾಂಧಿಯವರನ್ನು ಜಗತ್ತಿನ ಶ್ರೇಷ್ಠ ವ್ಯಕ್ತಿ ಎಂದು ಭಾವಿಸುವೆನಾದರೂ, ಇಸ್ಲಾಂ ಧರ್ಮಕ್ಕೆ ಸೇರಿದ ಯಾವನೇ ಅಧಮನಿಗಿಂತಲೂ ಅವರು ಶ್ರೇಷ್ಠರಾಗಿರಲು ಸಾಧ್ಯವಿಲ್ಲ' ಎಂಬ ಮಾತು ಹಿಂದೂ ಮಹಾಸಭಾದೊಂದಿಗೆ ಗುರುತಿಸಿಕೊಂಡಿದ್ದ ಲಜಪತ್‌ರಾಯ್, ಮಾಳವೀಯ ಮತ್ತು ಸ್ವಾಮಿ ಶ್ರದ್ಧಾನಂದ ಮುಂತಾದ ಕಾಂಗ್ರೆಸ್ ನಾಯಕರನ್ನು ರೇಗಿಸಿತು. ಇದರ ಬಗ್ಗೆ ಗಾಂಧಿ, ಅಲಿಯವರನ್ನು ವಿಚಾರಿಸಿದಾಗ 'ಇದು ನಾನು ನನ್ನ ಧರ್ಮದ ಶ್ರೇಷ್ಠತೆಯಲ್ಲಿ ಇಟ್ಟ ನಂಬಿಕೆಯ ಪುನರುಚ್ಚಾರದ ಮಾತಾಗಿತ್ತೇ ಹೊರತು, ಗಾಂಧಿಯವರ ಬಗ್ಗೆ ತೋರಿದ ಯಾವುದೇ ಅಗೌರವವಲ್ಲ ಎಂದು ಅವರು ವಿವರಣೆ ಕೊಟ್ಟರು ಮತ್ತು ಗಾಂಧಿ ಅದನ್ನು ಒಪ್ಪಿಕೊಂಡರಲ್ಲದೆ, ಅಲಿಯವರ ಹಿಂದೂ-ಮುಸ್ಲಿಂ ಐಕ್ಯತೆ ಕುರಿತ ಬದ್ಧತೆಯನ್ನು ಯಾರೂ ಅನುಮಾನಿಸಲಾರರು ಎಂದು ಘೋಷಿಸಿದರು. ಆದರೂ ಅಲಿಯವರ ವಿವರಣೆ ಹಿಂದೂ ನಾಯಕರನ್ನು ತೃಪ್ತಿಪಡಿಸಲಿಲ್ಲ.

ಕೋಮು ಸೌಹಾರ್ದತೆಗೆ ಗಾಂಧಿ ಪ್ರಯತ್ನ

ಹೀಗೆ ದೇಶದ ಇಡೀ ಸಾರ್ವಜನಿಕ ಜೀವನ ಪರಸ್ಪರ ಸಂಶಯ ಮತ್ತು ವೈಷಮ್ಯದಿಂದ ಕಲುಷಿತಗೊಂಡಿತ್ತು. ದಿನನಿತ್ಯ ಪತ್ರಿಕೆಗಳಲ್ಲಿ ವರದಿಯಾಗುತ್ತಿದ್ದ ಹಿಂದೂ ಮುಸ್ಲಿಂ ಗಲಭೆಗಳು, ಗಾಂಧಿಯವರನ್ನು ಚಿಂತೆಗೀಡು ಮಾಡಿದ್ದವು. ೧೯೨೩ರಲ್ಲೇ

ಅಮೇಥಿ, ಶಂಭರ್, ಗುಲ್ಬರ್ಗಾ ಸೇರಿದಂತೆ ದೇಶಾದ್ಯಂತ ಹನ್ನೊಂದು ಕಡೆ ಕೋಮು ಗಲಭೆಗಳು ನಡೆದಿದ್ದವು. (ಗಾಂಧಿ ನಿರ್ದಿಷ್ಟವಾಗಿ ಗುಲ್ಬರ್ಗಾ ಪರಿಸ್ಥಿತಿಯ ಬಗ್ಗೆಯೇ ೧೯೨೪ರ ಆಗಸ್ಟ್ ೨೮ರ 'ಯಂಗ್ ಇಂಡಿಯಾ' ಸಂಚಿಕೆಯಲ್ಲಿ 'ಹುಚ್ಚಾಗಿರುವ ಗುಲ್ಬರ್ಗಾ' ಎಂಬ ಲೇಖನ ಬರೆದಿದ್ದರು) ಆದರೆ ಇನ್ನೂ ಪೂರ್ಣ ಚೇತರಿಸಿಕೊಳ್ಳದಿದ್ದ ಗಾಂಧಿ ಏನೂ ಮಾಡಲಾಗದ ಅಸಹಾಯಕ ಸ್ಥಿತಿಯಲ್ಲಿದ್ದರು. ಗಲಭೆಗಳು ೧೯೨೪ರಲ್ಲಿಯೂ ಮುಂದುವರೆದಾಗ ಅವರು ತಮ್ಮ 'ಯಂಗ್ ಇಂಡಿಯಾ'ದ ಮೇ ೨೯ರ ಸಂಚಿಕೆಯನ್ನು ಹಿಂದೂ-ಮುಸ್ಲಿಂ ಐಕ್ಯತೆಯ ವಿಷಯಕ್ಕೆ ಮುಡಿಪಾಗಿಟ್ಟು ಅದರಲ್ಲಿ ಸ್ವತಃ ತಾವೇ 'ಹಿಂದೂ-ಮುಸ್ಲಿಂ ಬಿಗುವು: ಕಾರಣ ಮತ್ತು ಪರಿಹಾರ' ಎಂಬ ದೀರ್ಘ ಲೇಖನ ಬರೆದರು. ಅದರಲ್ಲಿ ಅವರು ತಮಗೆ ಹಿಂದೂ-ಮುಸ್ಲಿಮರಿಬ್ಬರೂ ಬರೆದಿದ್ದ ದೂಷಣೆಯ ಪತ್ರಗಳಿಗೆ ಉತ್ತರಕೊಡುತ್ತಾ, ತಾವು ಮಾಡಿರುವ ಕೆಲಸಗಳ ಬಗ್ಗೆ ತಮಗೆ ಕಿಂಚಿತ್ತೂ ಪಶ್ಚಾತ್ತಾಪವಿಲ್ಲವೆಂದು ಸ್ಪಷ್ಟಪಡಿಸಿ, ಹಿಂದೂ-ಮುಸ್ಲಿಮರಿಬ್ಬರೂ ಒಟ್ಟಿಗೆ ಸೇರಿ ಬ್ರಿಟಿಷ್ ಸರ್ಕಾರದ ವಿರುದ್ಧ ಹೋರಾಡಿದ ಸಂದರ್ಭದಲ್ಲಿ ಕಾಣಿಸಿಕೊಳ್ಳದ ಭಿನ್ನಾಭಿಪ್ರಾಯಗಳು ಮತ್ತು ಘರ್ಷಣೆಗಳು ಈಗೇಕೆ ಎಂದು ಪ್ರಶ್ನಿಸಿದರು. ಕೆಲವು ಹಿಂದೂಗಳು ಒಳ್ಳೆಯ ಕೆಲಸಕ್ಕಾಗಿ ಕೊಲ್ಲುವುದೂ ಸಮರ್ಥನೀಯವೇ ಎಂದು ಭಗವದ್ಗೀತೆಯಲ್ಲೇ ಹೇಳಲಾಗಿದೆ ಎಂಬ ಪ್ರಚಾರ ಕೈಗೊಂಡಿರುವ ಬಗ್ಗೆ ತಮ್ಮ ವಿಷಾದ ವ್ಯಕ್ತಪಡಿಸಿದ ಅವರು ನಮ್ಮೊಳಗಿನ ಕೇಡನ್ನು ನಿರ್ದಾಕ್ಷಿಣ್ಯವಾಗಿ ನಿರ್ಮೂಲನ ಮಾಡಿಕೊಳ್ಳಬೇಕೆಂಬ ಉಪದೇಶವನ್ನು ಹೀಗೆ ದುಷ್ಟತನವನ್ನು ಮರೆಮಾಚಿಕೊಳ್ಳಲು ಬಳಸಲಾಗುತ್ತಿದೆ ಎಂದು ಜನರಿಗೆ ವಿವರಿಸಿದರು. ಮುಸ್ಲಿಂ ಸಮುದಾಯದ ಆಕ್ರಮಣಶೀಲತೆಯನ್ನು ಖಂಡಿಸಿದ ಅವರು ಕೇಡಿಗರನ್ನು ಅಹಿಂಸೆಯ ಮೂಲಕ ಎದುರಿಸಬೇಕೆಂದು ತಾವು ಎಲ್ಲೂ ಹೇಳಿಲ್ಲವೆಂದು ಸ್ಪಷ್ಟಪಡಿಸಿ ಸ್ವರಾಜ್ಯ ಪಡೆಯಲು ಮಾತ್ರ ಅಹಿಂಸಾ ಮಾರ್ಗವನ್ನು ಪ್ರತಿಪಾದಿಸಿದ್ದಾಗಿ ಹೇಳಿದರು. ಹಿಂದೂ-ಮುಸ್ಲಿಂ ಗಲಭೆಗಳಿಗೆ ಗೋಹತ್ಯೆ ಮತ್ತು ಮಸೀದಿ ಮುಂದೆ ಹಿಂದೂಗಳ ಕುಚೇಷ್ಟೆಯ ಮೆರವಣಿಗೆಗಳೆಂಬ ಎರಡು ಮುಖ್ಯ ಕಾರಣಗಳನ್ನು ಗುರುತಿಸಿದ್ದ ಅವರು, ಗೋಹತ್ಯೆಯನ್ನು ಮುಸ್ಲಿಮರ ಸ್ನೇಹ-ಸಹಕಾರಗಳಿಂದಷ್ಟೇ ಪರಿಣಾಮಕಾರಿಯಾಗಿ ತಡೆಯಬಹುದೆಂಬುದನ್ನು ಹಿಂದಿನ ಅನುಭವಗಳು ಹೇಳುತ್ತಿವೆ ಎಂಬುದನ್ನು ಹಿಂದೂಗಳಿಗೆ ಮನನ ಮಾಡಲು ಪ್ರಯತ್ನಿಸುತ್ತಾ, ಗೋಹತ್ಯೆಯನ್ನು ನಿಲ್ಲಿಸಲು ಹೇಗೆ ಹಿಂದೂಗಳು ಮುಸಲ್ಮಾನರ ಮೇಲೆ ಜಬರ್ದಸ್ತು ಮಾಡಲಾಗದೋ ಹಾಗೆ ಹಿಂದೂಗಳು ಬೀದಿಗಳಲ್ಲಿ ಸಂಗೀತಮಯ ಹಾಡು-ಆರತಿಗಳನ್ನು ನಿಲ್ಲಿಸಬೇಕೆಂದು ಕತ್ತಿ ಹಿಡಿದು ಒತ್ತಾಯಿಸಲಾಗದು ಎಂದು ಮುಸ್ಲಿಮರಿಗೆ ಹೇಳಲು ಅವರು ಹಿಂಜರಿಯಲಿಲ್ಲ. ಕ್ರಿಶ್ಚಿಯನ್ನರಾದ ಬ್ರಿಟಿಷರೂ ಗೋಮಾಂಸ ತಿನ್ನುವವರಾಗಿದ್ದು ಅವರೂ ಮಾಂಸಕ್ಕಾಗಿ ಹಸುಗಳನ್ನು ಕೊಲ್ಲುತ್ತಿರುವಾಗ ಗೋಹತ್ಯೆಯ 'ಅಪರಾಧ'ವನ್ನು ಮುಸ್ಲಿಮರ ಮೇಲೆ ಮಾತ್ರ ಹೊರಿಸುತ್ತಿರುವುದರ ಉದ್ದೇಶವನ್ನೂ ಅವರು ಪ್ರಶ್ನಿಸದಿರಲಿಲ್ಲ. ದೊಣ್ಣೆ-ಕತ್ತಿಗಳ ಮೂಲಕ ಪರಿಹರಿಸಲಾಗದ ಸಂಗತಿಗಳನ್ನು ಸೌಹಾರ್ದ ಮಾತುಕತೆಗಳ ಮೂಲಕ ಮಾತ್ರ ಪರಿಹರಿಸಲು ಸಾಧ್ಯ ಎಂದು ಅವರು ಈ ಲೇಖನದಲ್ಲಿ ಸೂಚಿಸಿದ್ದರು.

ವೇದಿಕೆಯ ಮೇಲೆ ಅತ್ತ ಗಾಂಧಿ

ಇದೇ ಹೊತ್ತಿಗೆ ತಮ್ಮ ಜುಹು ವಾಸ್ತವ್ಯವನ್ನು ತೊರೆದು ಅಹಮದಾಬಾದ್‌ನ ತಮ್ಮ ಸಬರ್ಮತಿ ಆಶ್ರಮಕ್ಕೆ ಬಂದ ಗಾಂಧಿ ಆಶ್ರಮವಾಸಿಗಳಿಂದ ನಡೆದಿದ್ದ ನೂಲುವ ಮತ್ತು ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮಗಳನ್ನು ಕಂಡು ಸ್ವಲ್ಪ ಗೆಲುವಾದರು. ತಾವು ತೆರೆದಿದ್ದ ಗುಜರಾತ್ ವಿದ್ಯಾಪೀಠ ಈಗ ಬಾಲಕಿಯರೂ ಸೇರಿದಂತೆ ಸುಮಾರು ಮುವ್ವತ್ತು ಸಾವಿರ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಆಸರೆಯಾಗಿದ್ದ ೧೪೦೦ ವಿದ್ಯಾಸಂಸ್ಥೆಗಳೊಂದಿಗೆ ಹೆಮ್ಮರವಾಗಿ ಬೆಳೆದಿದ್ದುದನ್ನು ಕಂಡು ಹರ್ಷಿಸಿದರು. ಇಂತಹ ರಚನಾತ್ಮಕ ಕೆಲಸಗಳ ಮೂಲಕವೇ ಭಾರತ ಶುದ್ಧವಾಗಬೇಕು ಎಂದು ಭಾವಿಸಿದ್ದ ಗಾಂಧಿ, ಹಾಗೆ ಶುದ್ಧವಾದ ದಿನವೇ ಸ್ವರಾಜ್ಯದ ದಿನವೂ ಆಗಿರುತ್ತದೆ ಎಂದು ನಂಬಿದ್ದರು.

ಈ ನಂಬಿಕೆಯ ಆಧಾರದ ಮೇಲೇ ಅವರು ಜೂನ್‌ನಲ್ಲಿ ಅಹಮದಾಬಾದ್‌ನಲ್ಲಿ ನಡೆದ ಅಖಿಲಭಾರತ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಪ್ರತಿಯೊಬ್ಬ ಕಾಂಗ್ರೆಸ್ಸಿಗನೂ ಪ್ರಯಾಣವಿಲ್ಲದ ಪ್ರತಿ ದಿನವೂ ಅರ್ಧ ತಾಸು ನೂಲಬೇಕು ಮತ್ತು ಪ್ರತಿ ತಿಂಗಳು ಖಾದಿ ಮಂಡಳಿಗೆ ಹತ್ತು ತೊಲ ಒಳ್ಳೆಯ ಗುಣಮಟ್ಟದ ನೂಲನ್ನು ಕಳಿಸಬೇಕೆಂಬ ನಿರ್ಣಯವನ್ನು ಮಂಡಿಸಿದರು. ಇದು ಸ್ವರಾಜ್ ಪಕ್ಷದವರು ಕಾಂಗ್ರೆಸ್ಸಿಗರಾಗಿ ಮುಂದುವರೆಯಲು ಹಾಕಿದ್ದ ಷರತ್ತೂ ಆಗಿದ್ದುದರಿಂದ, ಆ ಪಕ್ಷದವರಿಂದ ವಿರೋಧ ವ್ಯಕ್ತವಾಗಿ ಕೊನೆಗೆ ಅದು ಅಲ್ಪಮತಗಳ ಅಂತರದಿಂದಷ್ಟೇ ಅನುಮೋದಿತವಾಗಿ ಗಾಂಧಿಯವರಿಗೆ ಕೇವಲ ತಾಂತ್ರಿಕವಾಗಿ ಮಾತ್ರ ಜಯ ಲಭಿಸಿತ್ತು. ಅವರಿಗೆ ಇದಕ್ಕಿಂತ ಆಘಾತ ಮಾಡಿದ ಸಂಗತಿ ಎಂದರೆ, ಕಲ್ಕತ್ತಾದಲ್ಲಿ ಇಂಗ್ಲಿಷನೊಬ್ಬನನ್ನು ಉಗ್ರ ರಾಷ್ಟ್ರೀಯವಾದಿಗಳು ಕೊಲೆ ಮಾಡಿದ್ದುದನ್ನು ಖಂಡಿಸಿ ಅವರು ಮಂಡಿಸಿದ ನಿರ್ಣಯಕ್ಕೆ ವಿರೋಧ ವ್ಯಕ್ತವಾದದ್ದು. ಈ ಸಂದರ್ಭದಲ್ಲಿ ಗಾಂಧಿ ಏನೂ ತೋಚದೆ ವೇದಿಕೆಯ ಮೇಲೇ ಜೋರಾಗಿ ಅತ್ತುಬಿಟ್ಟರು. 'ಈವರೆಗೆ ನಾವು ನಿಮ್ಮ ಮಾತು ಕೇಳಿದ್ದೇವೆ. ಈಗ ನೀವು ನಮ್ಮ ಮಾತು ಕೇಳಬೇಕು' ಎಂಬುದು ಬದಲಾವಣೆ ಪರ ಗುಂಪಿನ ವಾದವಾಗಿತ್ತು.

ಈ ಸಮಾವೇಶದಲ್ಲಿ ಗಾಂಧಿ ಎದುರಿಸಿದ ಇನ್ನೊಂದು ಇಕ್ಕಟ್ಟಿನ ಪ್ರಸಂಗವೆಂದರೆ, ಕೆಲ ಅತ್ಯುತ್ಸಾಹಿ ಪ್ರತಿನಿಧಿಗಳು ಬಹಿಷ್ಕಾರ ವಿದೇಶೀ ವಸ್ತ್ರಗಳ ಮೇಲೆ ಮಾತ್ರವೇಕೆ, ಎಲ್ಲ ವಿದೇಶೀ ಉತ್ಪನ್ನಗಳ ಮೇಲೂ ಘೋಷಿಸಬೇಕು ಎಂದು ಆಗ್ರಹಿಸಿದ್ದು. ಆದರೆ ಗಾಂಧಿ ಈ ವಿಷಯದ ಬಗ್ಗೆ ಸ್ಪಷ್ಟವಾಗಿದ್ದರು. ಎಲ್ಲ ವಿದೇಶೀ ಉತ್ಪನ್ನಗಳ ಬಹಿಷ್ಕಾರ ಅವ್ಯಾವಹಾರಿಕ ಮಾತ್ರವಲ್ಲ, ದ್ವೇಷ ಮತ್ತು ಹಿಂಸಾಚಾರಗಳಿಗೆ ದಾರಿ ಮಾಡಿಕೊಡುವುದೆಂದು ಅವರು ಭಾವಿಸಿದ್ದರು. ಭಾರತೀಯರಿಗೆ ಬೇಕಾದ ಕನಿಷ್ಠ ಬಟ್ಟೆಯನ್ನು ನಾವು ಉತ್ಪಾದಿಸಬಹುದು; ಆದರೆ ಎಲ್ಲ ಅಗತ್ಯ ವಸ್ತುಗಳನ್ನಲ್ಲ ಎಂದು ಅವರು ವಿವರಿಸಿ, ಪ್ರತಿನಿಧಿಗಳ ಈ ಆಗ್ರಹವನ್ನು ಶಮನಗೊಳಿಸಿದರು. ಇದೆಲ್ಲವೂ ಕಾಂಗ್ರೆಸ್‌ನಲ್ಲಿ ಈಗ ಗಾಂಧಿ ಪ್ರಶ್ನಾತೀತ ನಾಯಕರಾಗೇನೂ ಉಳಿದಿರಲಿಲ್ಲ ಎಂಬುದನ್ನು ಸೂಚಿಸಿತ್ತು.

■

೭೮

೨೧ ದಿನಗಳ ದೀರ್ಘ ಉಪವಾಸ

ಗಾಂಧಿ ಅಹಮದಾಬಾದ್‌ನ ಎಐಸಿಸಿ ಸಭೆಯ ನಂತರ ದೆಹಲಿ–ಬಂಗಾಳ–ಪೂನಾ ಹೀಗೆ ಪ್ರವಾಸ ಮಾಡಿ ಹಿಂದೂ–ಮುಸ್ಲಿಂ ನಾಯಕರನ್ನು ಭೇಟಿ ಮಾಡಿ ಸೌಹಾರ್ದ ಸಾಧನೆಯ ಪ್ರಯತ್ನಗಳನ್ನು ಮಾಡುತ್ತಿದ್ದಾಗಲೇ ಸೆಪ್ಟೆಂಬರ್ ಎರಡನೇ ವಾರದಲ್ಲಿ ಅವರ ಎದೆ ನಡುಗಿಸುವ ಸುದ್ದಿಯೊಂದು ಬಂತು. ವಾಯುವ್ಯ ಗಡಿ ಪ್ರಾಂತ್ಯದ ಕೋಹತ್ ಎಂಬ ಊರಿನಲ್ಲಿ ಕೋಮು ಗಲಭೆ ಭುಗಿಲೆದ್ದು ನೂರಕ್ಕೂ ಹೆಚ್ಚು ಜನರ ಆಹುತಿ ತೆಗೆದುಕೊಂಡಿತ್ತು. ಇಸ್ಲಾಂ ಮತ್ತು ಕುರಾನ್‌ಗೆ ಅವಮಾನ ಮಾಡುವಂತಹ ಕರಪತ್ರವೊಂದು ಆ ಊರಿನಲ್ಲಿ ಕಂಡುಬಂದದ್ದೇ ಕಾರಣವಾಗಿ ಮುಸ್ಲಿಮರು ಆ ಕರಪತ್ರದ ಮೂಲವೆಂದು ಅನುಮಾನಪಟ್ಟ ಹಿಂದೂ ಕುಟುಂಬಗಳಿದ್ದ ಕಟ್ಟಡವೊಂದಕ್ಕೆ ಮುತ್ತಿಗೆ ಹಾಕಿ ಅದಕ್ಕೆ ಬೆಂಕಿ ಹಚ್ಚಿದ್ದರು. ಒಳಗಿದ್ದವರು ಗುಂಡು ಹಾರಿಸಿ ಮುತ್ತಿಗೆ ಹಾಕಿದ್ದ ಮುಸ್ಲಿಮರಲ್ಲಿ ಕೆಲವರನ್ನು ಕೊಂದಾಗ ಮತ್ತಷ್ಟು ಸಿಟ್ಟಿಗೆದ್ದ ಮುಸ್ಲಿಮರು, ಎಲ್ಲ ಹಿಂದೂ ಮತ್ತು ಸಿಕ್ಖರ ಮನೆ ಅಂಗಡಿಗಳ ಮೇಲೆ ದಾಳಿ ಮಾಡಿದರು. ಮತ್ತಷ್ಟು ಹೆಣಗಳು ಬಿದ್ದವು. ದೇವಾಲಯ–ಗುರುದ್ವಾರಗಳು ಧ್ವಂಸಗೊಂಡವು ಇಲ್ಲವೇ ಅಪವಿತ್ರಗೊಂಡವು. ಕೊನೆಗೆ ಊರಿನಲ್ಲಿ ಅಲ್ಪಸಂಖ್ಯಾತರಾಗಿದ್ದ ಹಿಂದೂ–ಸಿಖ್ ಗಂಡಸರು ಊರು ಬಿಟ್ಟು ನೂರು ಮೈಲಿಯಾಚೆಯ ರಾವಲ್ಪಿಂಡಿಗೆ ಪರಾರಿಯಾದರು. ಊರಲ್ಲಿ ಉಳಿದ ಹಿಂದೂ–ಸಿಖ್ ಮಹಿಳೆಯರನ್ನು ಹೊತ್ತೊಯ್ದ ಮುಸ್ಲಿಮರು ಅವರನ್ನು ಮತಾಂತರಗೊಳಿಸಿ ಮರುಮದುವೆಗಳನ್ನು ಮಾಡಿದರು ಎಂಬ ಸುದ್ದಿಯೂ ಹರಡಿತ್ತು.

ಆಗ ಗಾಂಧಿ ಕೋಹತ್‌ಗೆ ಹೋಗುವ ಮಾರ್ಗವಾಗಿ ದೆಹಲಿಯಲ್ಲಿದ್ದು, ಮೊಹಮ್ಮದಲಿಯವರ ಮನೆಯಲ್ಲಿ ವಾಸ್ತವ್ಯ ಹೂಡಿದ್ದರು. ಆದರೆ ಸರ್ಕಾರ ಅವರು ಕೋಹತ್‌ಗೆ ಭೇಟಿ ಕೊಡಲು ಅನುಮತಿ ನೀಡಿರಲಿಲ್ಲ. ಈ ಸಂದರ್ಭವನ್ನು 'ದ ಲೈಫ್ ಆಫ್ ಮಹಾತ್ಮಾ ಗಾಂಧಿ' ಕೃತಿಯ ಲೂಯಿ ಫಿಶರ್ ವರ್ಣಿಸಿರುವುದು ಹೀಗೆ: 'ಗಾಂಧಿಯವರು ಪೂರ್ವ–ಪಶ್ಚಿಮಗಳ ಸಂಗಮವಾಗಿದ್ದರು. ಅವರು ಈವರೆಗೆ ಎರಡೂ ಸಮುದಾಯಗಳ ನಡುವೆ ಸೇತುವೆ ಕಟ್ಟಲು ಮಾತುಕತೆ–ಬರವಣಿಗೆಯ ಪಶ್ಚಿಮದ ಪರಿಕರಗಳನ್ನು ಬಳಸಿ ಸೋತಿದ್ದರು. ಈಗ ಅವರು ಧ್ಯಾನ–ಪ್ರಾಯಶ್ಚಿತ್ತ–ಪ್ರಾರ್ಥನೆಯ ಪೂರ್ವದ ಪರಿಕರಗಳನ್ನು ಬಳಸಲು ತೀರ್ಮಾನಿಸಿದ್ದರು'. ಅವರು ತಾವು ಸೆಪ್ಟೆಂಬರ್ ೧೭ ರಿಂದ ೨೧ ದಿನಗಳ 'ಪ್ರಾಯಶ್ಚಿತ್ತ ಮತ್ತು ಪ್ರಾರ್ಥನೆ'ಗಳ ಉಪವಾಸ

ಕೈಗೊಳ್ಳುವುದಾಗಿ ಪ್ರಕಟಿಸಿದರು.

ತಮ್ಮಲ್ಲಿ ಹಿಂದೂಗಳು ಇಟ್ಟಿದ್ದ ನಂಬಿಕೆ ಭಂಗವಾಗುವಂತಹ ಘಟನೆಗಳು ನಡೆಯುತ್ತಿವೆ ಎಂಬ ಅಭಿಪ್ರಾಯ ಗಾಂಧಿಯವರಲ್ಲಿ ಗಟ್ಟಿಗೊಳ್ಳತೊಡಗಿದ್ದೇ ಅವರು ಈ ಪ್ರಾಯಶ್ಚಿತ್ತದ ಉಪವಾಸ ಕೈಗೊಳ್ಳಲು ಪ್ರೇರಣೆಯಾಗಿತ್ತು. ಅದನ್ನು ಉಪವಾಸ ಪ್ರಕಟಿಸುವ ಮುನ್ನ ನೀಡಿದ ಹೇಳಿಕೆಯಲ್ಲೂ ಅವರು ಸೂಚಿಸಿದ್ದರು. ಜೊತೆಗೆ ಸೆಪ್ಟೆಂಬರ್ ೪ ರ 'ಯಂಗ್ ಇಂಡಿಯಾ'ದಲ್ಲೂ ತಮ್ಮನ್ನು ಪ್ರೀತಿಸಿದವರ ಎದೆಯಲ್ಲಿ ತಾವು ಪ್ರೀತಿಯ ಭರದಲ್ಲಿ ನೋವಿನ ಗಾಯ ಉಂಟುಮಾಡಿರುವ ಅರಿವು ತಮಗಾಗಿದೆ ಎಂದೂ ನಿವೇದಿಸಿದ್ದರು. ಪ್ರಾರ್ಥನೆ ಮುಸ್ಲಿಮರ ಆತ್ಮಾವಲೋಕನಕ್ಕಾಗಿ ಎಂದೂ ಅವರು ಹೇಳಿದ್ದರು. ಗಾಂಧಿ, ಅಲಿ ಸೋದರರಲ್ಲಿ ಇಟ್ಟಿದ್ದ ನಂಬಿಕೆ ಸುಳ್ಳಾಗಿದೆ ಎಂದು ಹಿಂದೂಗಳು ಭಾವಿಸತೊಡಗಿದ್ದಾರೆ ಎಂದು ಅವರು ಅಲಿ ಸೋದರರಿಗೆ ಹೇಳಿದರು. ಮೊಹಮ್ಮದಲಿ ಮತ್ತು ಗಾಂಧಿ ಭಕ್ತೆಯಾಗಿದ್ದ ಅವರ ತಾಯಿ ಎಷ್ಟೇ ಹೇಳಿದರೂ ಗಾಂಧಿ ಉಪವಾಸ ಕೈಬಿಡದಿರಲು ನಿರ್ಧರಿಸಿದರು. ೨೧ ದಿವಸಗಳ ಮುಂಚೆ ಏನಾದರೂ ತಮ್ಮ ಪ್ರಾಣ ಹೋಗುವಂತಹ ಸಂದರ್ಭ ಬಂದಲ್ಲಿ ಮಾತ್ರ ತಾವು ಉಪವಾಸ ನಿಲ್ಲಿಸುವುದಾಗಿ ಹೇಳಿದ ಅವರು ಬರೀ ನೀರು ಮತ್ತು ಅಗತ್ಯ ಬಿದ್ದರೆ ಉಪ್ಪು ಸಹಿತವಾದ ನೀರನ್ನು ಮಾತ್ರ ಸೇವಿಸುವುದಾಗಿ ಹೇಳಿ ೧೯೨೪ರ ಸೆಪ್ಟೆಂಬರ್ ೧೭ರಂದು ಅಲಿಯವರ ಮನೆಯಲ್ಲಿಯೇ ಉಪವಾಸ ಆರಂಭಿಸಿದರು.

ಅನುಯಾಯಿಗಳ ತಲ್ಲಣ

ಕೆಲ ದಿನಗಳ ಹಿಂದಷ್ಟೇ ಶಸ್ತ್ರ ಚಿಕಿತ್ಸೆಯ ನಂತರ ಶುಶ್ರೂಷೆ ಪಡೆದು ಸಾಮಾನ್ಯ ಜೀವನಕ್ಕೆ ಹಿಂದಿರುಗಿದ್ದ ಗಾಂಧಿಯ ದೇಹ ಇಷ್ಟು ದೀರ್ಘ ಉಪವಾಸವನ್ನು ತಡೆಯಬಲ್ಲದೇ ಎಂಬುದು ಎಲ್ಲರ ಆತಂಕವಾಗಿತ್ತು. ಆದರೆ ಗಾಂಧಿ, ಐವರು ಗಂಡಂದಿರೂ ಕೈಬಿಟ್ಟಾಗ ದ್ರೌಪದಿ ಬೇರೆ ದಾರಿ ಕಾಣದೆ ಭಗವಂತನಿಗೆ ಮೊರೆ ಇಟ್ಟ ಅಸಹಾಯಕತೆಯಲ್ಲೇ ತಾವು ಉಪವಾಸ ಆರಂಭಿಸಿರುವುದಾಗಿ ಹೇಳಿದರು. ಉಪವಾಸ ನಿಲ್ಲಿಸಬೇಕೆಂದು ಒತ್ತಾಯಿಸಿದ ಶೌಕತ್ ಅಲಿಯವರಿಗೆ ಅವರು 'ಇದು ನನ್ನ ಮತ್ತು ನನ್ನ ಕರ್ತೃವಿನ ನಡುವಣ ವಿಷಯ' ಎಂದು ಹೇಳಿದರಲ್ಲದೆ 'ಇತರರೊಂದಿಗೆ ಸ್ನೇಹ ಬಾಂಧವ್ಯ ಇಸ್ಲಾಂನಲ್ಲಿ ನಿಷಿದ್ಧವಾಗಿಲ್ಲದಿದ್ದರೆ ಅದರ ಅನುಯಾಯಿಗಳು ಹಿಂದೂಗಳೊಂದಿಗೆ ಸ್ನೇಹಕ್ಕಾಗಿ ಮುಂದಾಗಬೇಕು. ಅಂತಹ ಸ್ನೇಹ ಬಾಂಧವ್ಯ ತಮ್ಮ ಧರ್ಮಕ್ಕೆ ವಿರುದ್ಧವೆಂದು ಅವರು ಭಾವಿಸುವುದಾದರೆ ನಾನು ಬದುಕುವುದು ವ್ಯರ್ಥ' ಎಂಬ ಮಾರ್ಮಿಕ ಸಂದೇಶವನ್ನೂ ಅವರಿಗೆ ನೀಡಿದರು.

ಗಾಂಧಿಯವರನ್ನು ಕಾಣಲು ಕಸ್ತೂರಬಾ, ರಾಮದಾಸ್ ಮತ್ತು ಕೆಲ ಆಶ್ರಮವಾಸಿಗಳೂ, ಗಾಂಧಿಯವರ ಆಪ್ತ ಗೆಳೆಯ ಆ್ಯಂಡ್ರ್ಯೂಸ್ ಕೂಡ ಧಾವಿಸಿ ಬಂದರು. ಇಬ್ಬರು ಮುಸ್ಲಿಂ ವೈದ್ಯರು ಅವರ ಆರೋಗ್ಯದ ಮೇಲೆ ನಿಗಾ ಇಟ್ಟಿದ್ದರು. ಗಾಂಧಿ ಬೆಳಿಗ್ಗೆ ೪.೩೦ಕ್ಕೆ ಎದ್ದು ಎಲ್ಲರೊಂದಿಗೆ ಸರ್ವಧರ್ಮ ಪ್ರಾರ್ಥನೆ ಮಾಡುತ್ತಿದ್ದರು. ನಂತರ ಅರ್ಧ ತಾಸು ಚರಕಾದಲ್ಲಿ ನೂಲು ತೆಗೆಯುತ್ತಿದ್ದರು. ತದನಂತರ 'ಯಂಗ್

ಇಂಡಿಯಾ' ಮತ್ತು 'ನವಜೀವನ'ಗಳಿಗಾಗಿ ಲೇಖನಗಳನ್ನು ಹೇಳಿ ಬರೆಸುತ್ತಿದ್ದರು. ಬಂದ ಜನರೊಂದಿಗೆ ಮಾತನಾಡುತ್ತಿದ್ದರು ಹಾಗೂ ಬಂದ ಪತ್ರಗಳನ್ನು ಓದಿ ಉತ್ತರಗಳನ್ನು ಬರೆಸುತ್ತಿದ್ದರು. ಈ ಕೆಲಸಕ್ಕೆ ಹೇಗೂ ಮಹದೇವ ದೇಸಾಯಿ ಅವರೊಂದಿಗೆ ಸದಾ ಇರುತ್ತಿದ್ದರು. ಒಮ್ಮೊಮ್ಮೆ ಅವರು ಕಾರಿನಲ್ಲಿ ವಾಯುವಿಹಾರಕ್ಕೂ ಹೋಗಿ ಬರುತ್ತಿದ್ದರು. ಅವರಿದ್ದ ಮನೆಯ ಸುತ್ತ ಸದಾ ಜನ ಸೇರಿಯೇ ಇರುತ್ತಿದ್ದರು. ಉಪವಾಸದ ನಾಲ್ಕನೆಯ ದಿವಸ, ಅವರು ತಾವೇಕೆ ಮುಸ್ಲಿಮರೊಬ್ಬರ ಮನೆಯಲ್ಲಿ ಉಪವಾಸ ಕೈಗೊಂಡಿದ್ದೇನೆ ಎಂಬುದನ್ನು ವಿವರಿಸುತ್ತಾ, 'ಹಿಂದೂ ಧರ್ಮದ ಮನಸ್ಸಿನ ಒಳತೋಟಿಗಳು ನನಗೆ ಸಹಜವಾಗಿ ಅರ್ಥವಾಗುವುವು. ಆದರೆ ಮುಸ್ಲಿಮರ ಮನದ ಒಳತೋಟಿ ಅರಿಯಲು ನಾನು ಅತ್ಯುತ್ತಮ ಮುಸ್ಲಿಮನೋರ್ವನ ಮನಸ್ಸನ್ನು ಹತ್ತಿರದಿಂದ ಪರಿವೀಕ್ಷಿಸಿ ಅವರ ವ್ಯಕ್ತಿತ್ವ ಮತ್ತು ಕೃತ್ಯಗಳ ಬಗ್ಗೆ ಒಂದು ಹೆಚ್ಚು ನ್ಯಾಯಯುತವಾದ ಅಂದಾಜು ಮಾಡಬಹುದು' ಎಂದು ಹೇಳಿದ್ದರು.

ಗಾಂಧಿಯವರ ಉಪವಾಸಕ್ಕೆ ಪ್ರತಿಸ್ಪಂದನವಾಗಿ ದೆಹಲಿಯಲ್ಲಿ ಸೆಪ್ಟೆಂಬರ್ ೨೫ ಮತ್ತು ೨೭ರಂದು ಮೋತಿಲಾಲ್ ನೆಹ್ರೂ ಅಧ್ಯಕ್ಷತೆಯಲ್ಲಿ ಏಕತಾ ಸಮ್ಮೇಳನವೊಂದನ್ನು ಏರ್ಪಡಿಸಲಾಗಿತ್ತು. ಅದು ಯಾರೇ ಆಗಲಿ ಯಾರದ್ದೇ ಪೂಜಾ ಸ್ಥಳವನ್ನು ಯಾವುದೇ ಕಾರಣಕ್ಕೆ ಅಪವಿತ್ರಗೊಳಿಸುವುದರ ಮತ್ತು ಯಾರನ್ನೇ ಆಗಲಿ ಬಲಾತ್ಕಾರವಾಗಿ ಮತಾಂತರಿಸುವ ಅಥವಾ ತನ್ನ ಮತಾಚಾರಗಳನ್ನು ಇತರರ ಹಕ್ಕುಗಳನ್ನು ಲೆಕ್ಕಿಸದೆ ಅವರ ಮೇಲೆ ಹೇರುವುದರ ವಿರುದ್ಧ ನಿರ್ಣಯವನ್ನು ಅಂಗೀಕರಿಸಿತು.

ಉಪವಾಸದ ಹನ್ನೆರಡನೆಯ ದಿವಸ ಗಾಂಧಿಯವರು ಪ್ರಕಟಣೆಗಾಗಿ ಬರೆಸಿದ ಪುಟ್ಟ ಲೇಖನ ಹೀಗಿತ್ತು: 'ಸರ್ಕಾರದಲ್ಲಿರುವ ಇಂಗ್ಲಿಷರ ಮನಃಪರಿವರ್ತನೆಗಾಗಿ ಹಂಬಲಿಸಿ ಈವರೆಗೆ ಹೋರಾಟ ಮಾಡಿದ್ದೇನೆ. ಅದಿನ್ನೂ ಸಾಧ್ಯವಾಗಬೇಕಿದೆ. ಆದರೆ ನಮ್ಮ ಸದ್ಯದ ಹೋರಾಟ ಹಿಂದೂ ಮತ್ತು ಮುಸ್ಲಿಮರ ಹೃದಯ ಪರಿವರ್ತನೆಗಾಗಿ ನಡೆಯಬೇಕಿದೆ. ನಾವು ಸ್ವಾತಂತ್ರ್ಯದ ಕನಸನ್ನು ಕಾಣುವ ಸಾಹಸದ ಮೊದಲು ಒಬ್ಬರು ಇನ್ನೊಬ್ಬರನ್ನು ಪ್ರೀತಿಸುವ, ಸಹಿಸುವ, ಇನ್ನೊಬ್ಬರ ಧರ್ಮವನ್ನು ಅವುಗಳ ಪೂರ್ವಾಗ್ರಹಗಳು ಮತ್ತು ಮೂಢನಂಬಿಕೆಗಳೊಂದಿಗೂ ಕೂಡ ಗೌರವಿಸುವ ಮತ್ತು ಪರಸ್ಪರ ನಂಬುವ ದಿಟ್ಟತನ ತೋರಬೇಕು. ಇದಕ್ಕೆ ತನ್ನಲ್ಲಿ ತಾನು ನಂಬಿಕೆ ಇರಿಸಿಕೊಳ್ಳಬೇಕಾಗುತ್ತದೆ. ಅದೇ ದೈವ ಶ್ರದ್ಧೆ ಕೂಡ. ಅದೊಂದಿದ್ದರೆ ಇತರರ ಬಗ್ಗೆ ಭಯವೇ ಉಂಟಾಗದು.

ದೇವರ ಮೊರೆ ಹೊಕ್ಕ ಗಾಂಧಿ

ಉಪವಾಸ ಮೂರನೇ ವಾರಕ್ಕೆ ಕಾಲಿಡುತ್ತಿದ್ದಂತೆ ಅವರ ಆರೋಗ್ಯದ ಬಗ್ಗೆ ವೈದ್ಯರಲ್ಲಿ ಆತಂಕ ಶುರುವಾಯಿತು. ಅವರ ಮೂತ್ರದಲ್ಲಿ ವಿಷಕಾರಿ ಆಮ್ಲಗಳು ಕಾಣಿಸಿಕೊಂಡಿದ್ದವು. ವೈದ್ಯರು ನೂಲುವುದನ್ನು ನಿಲ್ಲಿಸಲು ಗಾಂಧಿಯನ್ನು ಕೋರಿದರು. ಆದರೆ ಅವರು ಚಿಂತೆ ಬೇಡ ಎಲ್ಲ ಸರಿ ಹೋಗುತ್ತದೆ ಎಂದು ಅವರ ಸಲಹೆಯನ್ನು ತಳ್ಳಿಹಾಕಿದರು. ಆಶ್ಚರ್ಯವೆಂದರೆ ಮಾರನೆಯ ದಿನ ಅವರ ಮೂತ್ರ ಪರೀಕ್ಷೆ ಮಾಡಿದಾಗ ಆ ವಿಷಕಾರಿ ಆಮ್ಲದ ಅಂಶಗಳು ಕಾಣೆಯಾಗಿದ್ದವು!

ಇಪ್ಪತ್ತನೆ ದಿವಸ ಅವರು ಪ್ರಾರ್ಥನಾ ರೂಪದ ಈ ಬರಹವೊಂದನ್ನು ಬರೆಸಿದರು: 'ಈಗ ಶಾಂತಿಯ ಲೋಕದಿಂದ ಅಶಾಂತಿಯ ಲೋಕದೆಡೆಗೆ ನಡೆದಿದ್ದೇನೆ. ಈ ಬಗ್ಗೆ ಯೋಚಿಸಿದಷ್ಟೂ ನಾನು ಅಸಹಾಯಕತೆಯಲ್ಲಿ ತೊಳಲಾಡುತ್ತೇನೆ. ನಾನೇನೂ ಮಾಡಲಾರೆನೆಂದು ನನಗೆ ಗೊತ್ತು. ದೇವರು ಎಲ್ಲವನ್ನೂ ಮಾಡಬಲ್ಲನು. ಓ ದೇವರೆ, ನನ್ನನ್ನು ನಿನ್ನ ಉಪಕರಣವನ್ನಾಗಿ ಮಾಡಿಕೊಂಡು ನಿನ್ನ ಇಚ್ಛೆಗೆ ತಕ್ಕಂತೆ ಬಳಸಿಕೋ! ಮನುಷ್ಯ ಏನೂ ಅಲ್ಲ. ನೆಪೋಲಿಯನ್ ಏನೆಲ್ಲ ನಕ್ಷೆ ಹಾಕಿದರೂ ಸೇಂಟ್ ಹೆಲೆನಾದ ಸೆರೆಮನೆ ಸೇರಬೇಕಾಯಿತು. ಮಹಾ ಬಲಶಾಲಿಯಾದ ಕೈಸರ್ ಯೂರೋಪ್‌ನ ಸಿಂಹಾಸನದ ಕನಸು ಕಂಡವನು ಕೇವಲ ಒಬ್ಬ ಸಾಮಾನ್ಯ ಪ್ರಜೆಯಾಗಿ ಬದುಕು ಕಳೆಯಬೇಕಾಯಿತು. ಇದು ದೇವರ ಇಚ್ಛೆ. ಇಂತಹ ಉದಾಹರಣೆಗಳ ಬಗ್ಗೆ ಧ್ಯಾನಿಸುತ್ತಾ ನಮ್ರರಾಗೋಣ. ಈ ಇಪ್ಪತ್ತು ದಿನಗಳು ದೈವ ಕೃಪೆಯ, ಸುಖದ, ಶಾಂತಿಯ ದಿನಗಳೇ ಆಗಿವೆ'. ಅಂದು ಅವರು ತುಳಸೀ ರಾಮಾಯಣದ, ಎಲ್ಲ ಪಾಪಗಳಿಂದ ಮುಕ್ತಗೊಳಿಸೆಂದು ಪಾಪಿಯೊಬ್ಬ ರಾಮನನ್ನು ಬೇಡುವ ಶ್ಲೋಕವೊಂದನ್ನು ಒಂದೇ ಸಮನೆ ಗುಣಗುಣಿಸುತ್ತಿದ್ದರು. ತಮ್ಮ ಎದೆಯ ಬೇಗುದಿಯನ್ನು ದೇವರು ಮಾತ್ರ ಅರಿಯಬಲ್ಲನೆಂಬ ಭಾವದಿಂದ ಅವರು ಆತನಲ್ಲಿ ಮೊರೆ ಇಡುವಂತಿತ್ತು.

ಅಂದು ಸಂಜೆ ಗಾಂಧಿಯ ಬಳಿ ಪ್ರಾರ್ಥನೆಗೆ ಬಂದ ಆ್ಯಂಡ್ರ್ಯೂಸ್, 'ಆ ಸಮಯದಲ್ಲಿ ಗಾಂಧಿ ಮುಖ ಚಂದ್ರನ ಬೆಳಕಲ್ಲಿ ಹೊಳೆಯುತ್ತಿತ್ತು. ಅವರು ತುಂಬ ಗೆಲುವಾಗಿದ್ದರು' ಎಂದು ಬರೆಯುತ್ತಾರೆ. ಮಾರನೆಯ ದಿವಸ ಅಕ್ಟೋಬರ್ ೯ ಉಪವಾಸದ ಕೊನೆಯ ದಿನ. ಅಂದು ಮಧ್ಯಾಹ್ನ ಹನ್ನೆರಡೂವರೆ ಘಂಟೆಗೆ ಡಾ. ಎಂ.ಎ. ಅನ್ಸಾರಿ ಅವರು ನೀಡಿದ ಒಂದು ಲೋಟ ಕಿತ್ತಳೆ ರಸವನ್ನು ಕುಡಿದು ತಮ್ಮ ಉಪವಾಸಕ್ಕೆ ಮುಕ್ತಾಯ ಹಾಡಿದರು. ಆ ಸಂದರ್ಭದಲ್ಲಿ ಗಾಂಧಿಯವರಿಗೆ ಪ್ರಿಯವಾದ ಕ್ರೈಸ್ತ ಮತ್ತು ಹಿಂದೂ ಧಾರ್ಮಿಕ ಗೀತೆಗಳನ್ನು ಹಾಡಲಾಯಿತಲ್ಲದೆ ಕುರಾನ್‌ನಿಂದ ಆಯ್ದ ಭಾಗಗಳ ಪಠಣವೂ ನಡೆಯಿತು. ಇದಕ್ಕೆ ಮೋತಿಲಾಲ್ ನೆಹರೂ, ಸಿ.ಆರ್. ದಾಸ್, ಅಲಿ ಸೋದರರು, ಸ್ವಾಮಿ ಶ್ರದ್ಧಾನಂದ, ಅನಸೂಯಾ ಬೆನ್, ಆ್ಯಂಡ್ರ್ಯೂಸ್, ದ.ಆಫ್ರಿಕಾದಲ್ಲಿನ ಗಾಂಧಿ ಗೆಳೆಯ ಇಮಾಂ ಅಬ್ದುಲ್ ಕಾದಿರ್ ಸೇರಿದಂತೆ ಒಂದು ದೊಡ್ಡ ಗುಂಪು ಸಾಕ್ಷಿಯಾಗಿತ್ತು. ಮೊಹಮ್ಮದಲಿಯವರು ಅಂದು ತಾವು ಕಟುಕನೊಬ್ಬನಿಂದ ಖರೀದಿಸಿ ತಂದಿದ್ದ ಹಸುವೊಂದನ್ನು ಗೋಶಾಲೆಗೆ ನೀಡಲು ಗಾಂಧಿಯವರಿಗೆ ಉಡುಗೊರೆಯಾಗಿ ನೀಡಿದರು.

ಈ ಉಪವಾಸ ಅನ್ಯರನ್ನು ಉದ್ದೇಶಿಸಿದಷ್ಟೇ ಗಾಂಧಿಯವರನ್ನೂ ಉದ್ದೇಶಿಸಿತ್ತು. ಅವರು ತಮ್ಮ ಇತ್ತೀಚಿನ ರಾಜಕೀಯ ಚಟುವಟಿಕೆಗಳ ಭರದಲ್ಲಿ ತಾವು ಇಟ್ಟ ಕೆಲ ಅವಸರದ ಹೆಜ್ಜೆಗಳು ಮತ್ತು ಆಡಿದ ಕೆಲವು ಮಾತುಗಳಿಂದಾಗಿ ಸಮೂಹದಿಂದ ಪರಿತ್ಯಕ್ತನಾಗಿಬಿಟ್ಟಿದ್ದೇನೆ ಎಂಬ ತೀವ್ರ ಪರಿತಾಪ ಅವರನ್ನು ಬಾಧಿಸುತ್ತಿತ್ತು. ಅದರಿಂದ ಬಿಡಿಸಿಕೊಂಡು, ಇನ್ನಷ್ಟು ವಿನಮ್ರತೆಯನ್ನು ರೂಢಿಸಿಕೊಳ್ಳುವ ಮಾರ್ಗವಾಗಿ ಈ ಉಪವಾಸ ಕೈಗೊಂಡಿದ್ದ ಗಾಂಧಿ, ತಮ್ಮ ಇತ್ತೀಚಿನ ರಾಜಕಾರಣದ ಮುಖ್ಯ ಕಾರ್ಯಕ್ರಮವಾಗಿದ್ದ ಹಿಂದೂ ಮುಸ್ಲಿಂ ಐಕ್ಯತೆಗಾಗಿ ಪ್ರಾಣಾರ್ಪಣೆಗೂ,

ಸಿದ್ಧರಾಗಬೇಕೆಂದು ಅಂದು ಅಲ್ಲಿ ನೆರೆದಿದ್ದವರಿಗೆ ಕರೆಕೊಟ್ಟರು. ಹಕೀಂ ಅಜ್ಮಲ್ ಖಾನ್, ಅನ್ಸಾರಿ ಮತ್ತು ಅಬುಲ್ ಕಲಾಂ ಅವರು ಇದಕ್ಕೆ ಸಿದ್ಧವೆಂದು ಗಾಂಧಿಯವರಿಗೆ ಆಶ್ವಾಸನೆ ನೀಡಿದರು. ಆದರೆ ಈ ವಿಷಯದಲ್ಲಿ ಅವರಿಗೆ ಭರವಸೆಯ ಮೂರ್ತಿಯಾಗಿ ಕಂಡವರು ಮೋತಿಲಾಲರ ಮಗ ತರುಣ ಜವಾಹರಲಾಲ್ ನೆಹರೂ ಅವರು. ಉಪವಾಸದ ಸಂದರ್ಭದಲ್ಲಿ ಅವರು ತಮ್ಮ ಮಗಳು ಬಾಲಕಿ ಇಂದಿರಾಳೊಂದಿಗೆ ಬಂದು ಗಾಂಧಿಯವರನ್ನು ಕಂಡಿದ್ದರು. ಗಾಂಧಿ ನೆಹರೂಗೆ ಒಂದು ಮಿಂಚಿನ ತಂಡ ರಚಿಸಿಕೊಳ್ಳಲು ಹೇಳಿ, ಅದು ಕೋಮು ಗಲಭೆ ನಡೆದ ಕಡೆ ತಡ ಮಾಡದೆ ತೆರಳಿ ಶಮನ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಲಹೆ ಮಾಡಿದರು.

ದೂರವಾದ ಅಲಿ ಸೋದರರು

ಉಪವಾಸದ ನಂತರ ಗಾಂಧಿ ಕೋಹತ್‌ಗೆ ಭೇಟಿ ನೀಡಲು ಪ್ರಯತ್ನಿಸಿದರಾದರೂ ಸರ್ಕಾರ, ಅಲ್ಲಿ ಇನ್ನೂ ಪರಿಸ್ಥಿತಿ ತಹಬಂದಿಗೆ ಬಂದಿಲ್ಲವೆಂದು ಅನುಮತಿ ನಿರಾಕರಿಸಿತು. ಆದರೆ ದಾಳಿಗೀಡಾಗಿದ್ದ ಹಿಂದೂಗಳು ಓಡಿಹೋಗಿ ಆಶ್ರಯ ಪಡೆದಿದ್ದ ರಾವಲ್ಪಿಂಡಿಗೆ ಹೋಗಲು ಅನುಮತಿ ಸಿಕ್ಕಿತು. ಅಲ್ಲಿಗೇ ಹೋದ ಗಾಂಧಿ ಹಿಂದೂ ನಿರಾಶ್ರಿತರನ್ನು ಭೇಟಿ ಮಾಡಿ ಗಲಭೆಯ ವಿವರಗಳನ್ನು ಅವರಿಂದ ತಿಳಿದುಕೊಂಡರಲ್ಲದೆ ಅವರಿಗೆ ಸಾಂತ್ವನ ಹೇಳಿ ಬಂದರು. ನಂತರ ಶೌಕತ್ ಅಲಿಯವರೊಂದಿಗೆ ಅಲ್ಲಿಗೆ ಭೇಟಿ ನೀಡಿ ಕೋಹತ್‌ನ ಮುಸ್ಲಿಮರ ಜೊತೆಗೂ ಮಾತನಾಡಿದರು. ನಂತರ ಗಾಂಧಿ ಮತ್ತು ಶೌಕತ್ ಕೋಹತ್ ಗಲಭೆಯ ಬಗ್ಗೆ ಒಂದೇ ತೀರ್ಮಾನಕ್ಕೆ ಬರಲಾಗದೆ, ಇಬ್ಬರೂ ಪ್ರತ್ಯೇಕ ವರದಿಗಳನ್ನು ಬರೆದರು. ಗಾಂಧಿ ಇವೆರಡನ್ನೂ ೧೯೨೫ರ ಮಾರ್ಚ್ ೨೫ರ 'ಯಂಗ್ ಇಂಡಿಯಾ'ದಲ್ಲಿ ಪ್ರಕಟಿಸಿದರು. ಗಾಂಧಿ ತಮ್ಮ ಲೇಖನದಲ್ಲಿ ಹಿಂದೂಗಳಿಂದ ಪ್ರಚೋದನೆ ಆದದ್ದು ನಿಜವಾಗಿದ್ದರೂ ಅದಕ್ಕೆ ಮುಸ್ಲಿಮರ ಪ್ರತಿಕ್ರಿಯೆ ಅತಿಯಾಗಿ ಸಾಮೂಹಿಕ ಹತ್ಯೆ, ಬಲಾತ್ಕಾರ, ಮತಾಂತರ ಮತ್ತು ದೇವಾಲಯ-ಗುರುದ್ವಾರಗಳ ಅಪವಿತ್ರೀಕರಣ ಅಕ್ಷಮ್ಯವೆಂದು ಹೇಳಿದ್ದರು. ಇದಕ್ಕೆ ಸರ್ಕಾರದ ಹೊಣೆಗೇಡಿತನವೂ ಕಾರಣವಾಗಿದ್ದು, ಸರ್ಕಾರದ ಕಡೆಯಿಂದ ಭದ್ರತೆಯ ಆಶ್ವಾಸನೆ ಇಲ್ಲದೆ ಹಿಂದೂಗಳೂ ಯಾರೂ ಕೋಹತ್‌ಗೆ ಹಿಂದಿರುಗಬಾರದೆಂದೂ ಅವರು ಸೂಚಿಸಿದ್ದರು. ಶೌಕತ್ ಅಲಿಯವರು ತಮ್ಮ ಬರಹದಲ್ಲಿ ಮುಸ್ಲಿಮರ ಕೃತ್ಯಗಳನ್ನು ಖಂಡಿಸಿದ್ದರಾದರೂ, ಇದಕ್ಕೆ ಹಿಂದೂಗಳ ಪ್ರಚೋದನಕಾರಿ ಕರಪತ್ರವೇ ಕಾರಣವೆಂದು ಒತ್ತಿ ಹೇಳಿದ್ದರು. ವಾಯುವ್ಯ ಗಡಿ ಪ್ರಾಂತ್ಯದಲ್ಲಿ ಹಿಂದೂ ವ್ಯಾಪಾರಿಗಳ ಹಾವಳಿ ಹೆಚ್ಚಾಗಿದ್ದು ಇದರಿಂದ ಮುಸ್ಲಿಂ ಸಮುದಾಯ ಚಿಂತಾಕ್ರಾಂತವಾಗಿರುವುದೂ ಈ ಗಲಭೆಗಳಿಗೆ ಕಾರಣವಾಗಿದ್ದರೆ ಆಶ್ಚರ್ಯವಿಲ್ಲ ಎಂದು ಅವರು ಅಭಿಪ್ರಾಯಪಟ್ಟಿದ್ದರು.

ಈ ಬರಹಗಳು ಗಾಂಧಿ ಮತ್ತು ಅಲಿ ಸೋದರರೀಗ ಸಮಾನ ಮನಸ್ಕರಾಗಿ ಉಳಿದಿಲ್ಲ ಎಂಬುದನ್ನು ಸೂಚಿಸುತ್ತಿತ್ತು. ನಂತರ ಘಟನೆಗಳೂ ಇದಕ್ಕೆ ಪೂರಕವಾಗಿ ನಡೆದು, ಇವರಿಬ್ಬರ ನಡುವೆ ಅಂತರ ಹೆಚ್ಚುತ್ತಾ ಹೋಯಿತು. ಭಿನ್ನಮತೀಯ ಅಹಮದೀಯನೊಬ್ಬನನ್ನು ಇಸ್ಲಾಮೀ ಕಾನೂನಿನ್ವಯ ಕಲ್ಲು ಹೊಡೆದು ಕೊಲ್ಲುವ ಸುದ್ದಿಯೊಂದು, ಕಾಬೂಲ್ ಪಟ್ಟಣದಿಂದ ಬಂದಾಗ ಗಾಂಧಿ ಅದನ್ನು ಖಂಡಿಸಿದರು.

ಆದರೆ ಇದಕ್ಕೆ ಮೌಲಾನಾ ಜಫರ್ ಅಲಿ ಖಾನ್ ಎಂಬುವವರು, ಗಾಂಧಿ ಅನ್ಯರ ಧರ್ಮದ ವಿಷಯದಲ್ಲಿ ತಲೆ ಹಾಕದಿರುವುದು ಲೇಸೆಂದು ಪ್ರತಿಕ್ರಿಯಿಸಿದಾಗ, ಗಾಂಧಿ ಬೆಂಬಲಕ್ಕೆ ಅಜ್ಮಲ್ ಖಾನ್, ಆಝಾದ್, ಅನ್ಸಾರಿ ಮತ್ತು ಅಬ್ದುಲ್ ಗಫಾರ್ ಖಾನ್‌ರಂತಹ ಬೆರಳೆಣಿಕೆಯ ಮುಸ್ಲಿಮರ ಹೊರತಾಗಿ ಇನ್ನಾರೂ ಬರದಾಗ ಪರಿಸ್ಥಿತಿ ನಿರ್ಣಾಯಕವೆನಿಸಿತು. ಈ ಒಂದು ಸಣ್ಣ ಗುಂಪಿನ ಹೊರತಾಗಿ ಬಹುತೇಕ ಮುಸ್ಲಿಂ ಸಮುದಾಯ ಗಾಂಧಿ, ಹಿಂದೂಗಳ ನಾಯಕ ಎಂದೇ ಭಾವಿಸತೊಡಗಿತು. ಅಸಹಾಯಕರಾದ ಗಾಂಧಿ ತಾವು ಸೆರೆಮನೆಯಿಂದ ಬಿಡುಗಡೆಯಾದಾಗಲೇ ಯೋಚಿಸಿದ್ದಂತೆ ಸ್ವಲ್ಪ ಕಾಲ ರಾಜಕೀಯದಿಂದ ದೂರವಿದ್ದು, ಖಾದಿ ಪ್ರಚಾರ ಮತ್ತು ಅಸ್ಪೃಶ್ಯತಾ ನಿವಾರಣೆಯ ಕಾರ್ಯಕ್ರಮಗಳಲ್ಲಿ ತೊಡಗಿಕೊಳ್ಳಲು ನಿಶ್ಚಯಿಸಿದರು. ಜೊತೆಗೆ ಅವರ ಬರವಣಿಗೆಯ ಹಲವು ಯೋಜನೆಗಳೂ ಹಾಗೇ ಬಾಕಿ ಇದ್ದವು. ಇದನ್ನು ಮುಂದೆ ತಿಳಿಸುವಂತೆ, ೧೯೨೫ರ ಡಿಸೆಂಬರ್‌ನಲ್ಲಿ ಕಾನ್ಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರಕಟಿಸಿಯೂಬಿಟ್ಟರು.

ರಾಜಕೀಯದಿಂದ ಈ ಬಿಡುವು ಪಡೆಯುವ ಮುನ್ನ ಅವರು ಎರಡು ಮುಖ್ಯ ರಾಜಕೀಯ ಘಟನೆಗಳಲ್ಲಿ ಭಾಗವಹಿಸಿದ್ದರು ಎಂಬುದನ್ನೂ ಇಲ್ಲಿ ದಾಖಲಿಸಬೇಕು. ಒಂದು ೧೯೨೪ರ ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ಆಯೋಜಿಸಲಾಗಿದ್ದ ವಾರ್ಷಿಕ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಬೇಕಾಗಿ ಬಂದದ್ದು. ತಾವೀಗ ಕಾಂಗ್ರೆಸ್ಸಿನ ಸರ್ವ ಸಮ್ಮತ ನಾಯಕರಲ್ಲವಾದ್ದರಿಂದ ತಮಗೆ ಬದಲಾಗಿ ಸರೋಜಿನಿ ನಾಯ್ಡು ಅವರನ್ನು ಅಧ್ಯಕ್ಷತೆಗೆ ಆಯ್ಕೆ ಮಾಡಬೇಕೆಂದು ಗಾಂಧಿ ಕೋರಿಕೊಂಡರೂ, ಅವರು ತಮ್ಮೆಲ್ಲರಿಗಿಂತ ಬಹುದೊಡ್ಡ ಜನನಾಯಕನೆಂದು ಅರಿತಿದ್ದ ಬದಲಾವಣೆ ಪರ ಗುಂಪಿನ ನಾಯಕರೂ ಸೇರಿದಂತೆ ಎಲ್ಲರೂ, ಅವರನ್ನು ಅಧಿವೇಶನದ ಅಧ್ಯಕ್ಷತೆಗೆ ಸರ್ವಾನುಮತದಿಂದ ಆರಿಸಿದ್ದರು. ಗಾಂಧಿ ಕಾಂಗ್ರೆಸ್‌ನಿಂದ ದೂರವಾಗುತ್ತಿದ್ದಾರೆಂಬ ಆತಂಕದಿಂದ ಅವರನ್ನು ಮತ್ತೆ ಪಕ್ಷದತ್ತ ಆಕರ್ಷಿಸುವ ಪ್ರಯತ್ನ ಇದಾಗಿತ್ತು. ತಮ್ಮ ಅಧ್ಯಕ್ಷ ಭಾಷಣದಲ್ಲಿ ಗಾಂಧಿ, ಹಿಂದೂ-ಮುಸ್ಲಿಮರ ನಡುವೆ ಹೆಚ್ಚುತ್ತಿರುವ ಬಿಗುವು ಮತ್ತು ಕಾಂಗ್ರೆಸ್ಸಿಗರಲ್ಲೇ ಹೆಚ್ಚುತ್ತಿರುವ ಈ ಬಗೆಗಿನ ಔದಾಸೀನ್ಯದ ಬಗ್ಗೆ ತಮ್ಮ ಅಸಮಾಧಾನ-ಆತಂಕಗಳನ್ನು ವ್ಯಕ್ತಪಡಿಸುತ್ತಾ, ಚರಕಾದ ಪ್ರತಿಯೊಂದು ಸುತ್ತೂ ನಮ್ಮನ್ನು ಸ್ವರಾಜ್ಯದ ಹತ್ತಿರಕ್ಕೆ ಕೊಂಡೊಯ್ಯುವುದೆಂಬುದನ್ನು ಅರ್ಥ ಮಾಡಿಕೊಳ್ಳಬೇಕೆಂದು ಕಾಂಗ್ರೆಸ್ಸಿಗರನ್ನು ಕೋರಿದರು.

ವೈಕಂ ಸತ್ಯಾಗ್ರಹ-ನಾರಾಯಣ ಗುರುಗಳ ಭೇಟಿ

ಈ ನಂತರ ಗಾಂಧಿ ಭಾಗವಹಿಸಿದ ಇನ್ನೊಂದು ಮುಖ್ಯ ಘಟನೆ ಎಂದರೆ ತಿರುವಾಂಕೂರು ಸಂಸ್ಥಾನದ ವೈಕಂಗೆ ಭೇಟಿ ನೀಡಿ ಅಲ್ಲಿ ನಡೆದಿದ್ದ ಜಾತಿ ಪದ್ಧತಿ ವಿರುದ್ಧವಾದ ಸತ್ಯಾಗ್ರಹದ ಭಾಗವಾಗಿ ನಾರಾಯಣ ಗುರುಗಳನ್ನು ಭೇಟಿ ಮಾಡಿದ್ದು. ಇದು ಈ ಹಿಂದೆ ವೈಕಂನಿಂದ ಬಂದು ತಮ್ಮನ್ನು ಭೇಟಿ ಮಾಡಿದ್ದ ನಿಯೋಗಕ್ಕೆ ನೀಡಿದ್ದ ಆಶ್ವಾಸನೆಯನ್ನು ಈಡೇರಿಸುವ ಪ್ರಯತ್ನವಾಗಿತ್ತು. ೧೯೨೫ರ ಫೆಬ್ರುವರಿಯಲ್ಲಿ ತಿರುವಾಂಕೂರು ಶಾಸನ ಸಭೆ, ವೈಕಂನ ದೇವಾಲಯದತ್ತ ಹೋಗುವ ನಾಲ್ಕೂ ದಿಕ್ಕುಗಳ

ರಸ್ತೆಗಳಲ್ಲಿ ಅಸ್ಪೃಶ್ಯರ ಪ್ರವೇಶವನ್ನು ನಿಷೇಧಿಸುವ ನಿರ್ಣಯವನ್ನು ಅಲ್ಪಮತದಿಂದ ಅಂಗೀಕರಿಸಿ ಅಲ್ಲಿ ನಡೆದಿದ್ದ ಸತ್ಯಾಗ್ರಹಕ್ಕೆ ಆಘಾತ ನೀಡಿತ್ತು. ಈಗ ಈ ಸತ್ಯಾಗ್ರಹದ ನೇತೃತ್ವ ವಹಿಸಿ ವೈಕಂ ವೀರ ಎಂದು ಪ್ರಸಿದ್ಧಿ ಪಡೆದಿದ್ದ ರಾಮಸ್ವಾಮಿ ಎಂಬುವವರು ಕೂಡಲೇ ಗಾಂಧಿಯವರನ್ನು ಸಂಪರ್ಕಿಸಿ ಅವರು ಅಲ್ಲಿಗೆ ತಡ ಮಾಡದೆ ಬರುವಂತೆ ಕೋರಿತು.

೧೯೨೫ರ ಮಾರ್ಚ್ ತಿಂಗಳಲ್ಲಿ ವೈಕಂಗೆ ಹೋದ ಗಾಂಧಿ ಅಲ್ಲಿ ಕಂಡ ದೃಶ್ಯದಿಂದ ಬೆರಗಾದರು. ಪ್ರತಿಭಟನಾಕಾರರು ನಿರ್ಬಂಧಿತ ರಸ್ತೆಗಳ ಪ್ರವೇಶ ಜಾಗಗಳಲ್ಲಿ ಕೂತು, ಕೆಲವರು ಚರಕಾಗಳಲ್ಲಿ ನೂಲುತ್ತಿದ್ದರೆ, ಇನ್ನು ಕೆಲವರು ಸಾಮೂಹಿಕ ಭಜನೆಗಳನ್ನು ಹಾಡುತ್ತಿದ್ದರು. ಗಾಂಧಿ ಮೊದಲು ಸತ್ಯಾಗ್ರಹಿಗಳಿಗೆ ಸತ್ಯಾಗ್ರಹದ ಪ್ರಾಥಮಿಕ ಪಾಠಗಳನ್ನು ಹೇಳಿದರು. ಎದುರು ಪಾಳೆಯದವರ ಜಾಗದಲ್ಲಿ ನಿಂತು ಅವರ ಮನೋಲಹರಿಯನ್ನು ಅರ್ಥ ಮಾಡಿಕೊಂಡರೆ, ಅರ್ಧ ಸಮಸ್ಯೆ ಪರಿಹಾರವಾಗುವುದೆಂದು ತಿಳಿಸಿದರು. ಇದಕ್ಕೆ ಸಮಸ್ಯೆಯ ರಾಜಕೀಯ ಆಯಾಮವನ್ನು ಸ್ವಲ್ಪ ಕಾಲ ಮರೆತು ಮೂರನೆಯವರಾಗಿ ಅದನ್ನು ಪರಿಶೀಲಿಸಬೇಕೆಂದು ಸೂಚಿಸಿದರು. ಇದರ ಪ್ರಾತ್ಯಕ್ಷಿಕೆಯಾಗಿ ಅವರು ಈ ಸಮಸ್ಯೆಗೆ ಕಾರಣರಾಗಿದ್ದ ದೇವಾಲಯದ ಉಸ್ತುವಾರಿ ವಹಿಸಿದ್ದ ನಂಬೂದರಿ ಬ್ರಾಹ್ಮಣರ ತಂಡವೊಂದರೊಡನೆ ಮಾತುಕತೆ ಆರಂಭಿಸಿದರು.

ಜಾತಿಯ ಹೆಸರಿನಲ್ಲಿ ಇಂತಹ ಕಠಿಣ ನಿಯಮವೇಕೆ ಎಂದು ಗಾಂಧಿ ನಂಬೂದರಿಗಳನ್ನು ಕೇಳಿದಾಗ, ಅವರು ಇದು ಕೆಳ ಜಾತಿಗಳ ಕರ್ಮಫಲ ಎಂದು ಉತ್ತರಿಸಿದರು. ಇದಕ್ಕೆ ಗಾಂಧಿ ಈ ಆಚರಣೆ ಜಲಿಯನ್‌ವಾಲಾ ಬಾಗ್‌ನಲ್ಲಿ ಜನರಲ್ ಡಯರ್ ನಡೆಸಿದ ಕೃತ್ಯಕ್ಕಿಂತ ಕ್ರೂರವಾಗಿದೆ ಎಂದು ಅವರನ್ನು ಎಚ್ಚರಿಸಿದಾಗ, ಅವರು ಈ ಆಚರಣೆ ಆದಿ ಶಂಕರಾಚಾರ್ಯರು ಆರಂಭಿಸಿದ್ದಾಗಿದ್ದು, ಇದು ತಮಗೆ ಪವಿತ್ರವಾಗಿದ್ದು, ಬಿಡಲಾಗದು ಎಂದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದರು. ಆಗ ಗಾಂಧಿ ಇದು ಪುರಾತನ ಧಾರ್ಮಿಕ ಆಚರಣೆಯೇ ಆಗಿದ್ದರೆ ದೇಶದ ಎಲ್ಲ ಕಡೆ ಏಕಿಲ್ಲ ಎಂದು ಪ್ರಶ್ನಿಸಿದಾಗ, ಅವರು ಕ್ಷಣವೂ ಕಣ್ಣು ಮಿಟುಕಿಸದೆ, 'ಎಲ್ಲ ಕಡೆಯೂ ಅಶ್ಪೃಶ್ಯತೆಯ ಆಚರಣೆ ಇದೆಯಲ್ಲ? ಇಲ್ಲಿ ಸ್ವಲ್ಪ ಹೆಚ್ಚು ಕಟ್ಟುನಿಟ್ಟಾಗಿದೆ ಅಷ್ಟೆ!' ಎಂದು ಉತ್ತರಿಸಿದರು. ಕೊನೆಗೆ ಗಾಂಧಿ, ಪ್ರಕರಣ ನ್ಯಾಯಾಲಯಕ್ಕೆ ಹೋಗಿ ತೀರ್ಪು ನಿಮ್ಮ ವಿರುದ್ಧ ಬಂದರೆ ಏನು ಮಾಡುವಿರಿ ಎಂದು ಪ್ರಶ್ನಿಸಿದಾಗ, ಅವರ ನಾಯಕ 'ನಾವು ದೇವಾಲಯವನ್ನೇ ಬಿಟ್ಟು ಹೋಗುತ್ತೇವೆ' ಎಂದಾಗ ಗಾಂಧಿ ಅಪ್ರತಿಭರಾದರು.

ನಂತರ ಗಾಂಧಿ ನಾರಾಯಣ ಗುರುಗಳನ್ನು ಭೇಟಿ ಮಾಡಿ, ಧರ್ಮ ಕುರಿತ ಅಭಿಪ್ರಾಯಗಳ ವಿನಿಮಯ ಮಾಡಿಕೊಂಡರು. 'ಮಾವಿನ ಮರದ ವಿವಿಧ ಆಕಾರಗಳ ಎಲೆಗಳಂತೆ ಜಗತ್ತಿನಲ್ಲಿ ಎಷ್ಟು ಜನರೋ ಅಷ್ಟು ಧರ್ಮಗಳು, ಅವು ಒಂದೇ ಮರದ ಎಲೆಗಳಂತೆ ಸಾಮರಸ್ಯದಿಂದ ಬಾಳಬೇಕು' ಎಂದರೆ, ನಾರಾಯಣ ಗುರುಗಳು, 'ಎಲೆಗಳು ಭಿನ್ನವಾಗಿದ್ದರೂ ಅವುಗಳ ರುಚಿ ಒಂದೇ ಇರುವಂತೆ ಮನುಷ್ಯರು ಆಕಾರದಲ್ಲಿ, ಬಣ್ಣದಲ್ಲಿ, ನಂಬಿಕೆಗಳಲ್ಲಿ ಬೇರೆಯಾಗಿ ಕಂಡರೂ ಅವರೆಲ್ಲ ಒಂದೇ ಎಂಬುದರ ಅರಿವೇ ಮಾನವತೆ ಕುರಿತ ನಮ್ಮ 'ಒಂದೇ ಜಾತಿ, ಒಂದೇ ಕುಲ, ಒಂದೇ

ದೈವ' ಎಂಬ ಸಂದೇಶದ ಸಾರವಾಗಿದೆ' ಎಂದು ವಿವರಿಸಿದರು.

ಗುರುಗಳ ಸನಿಹ ಮತ್ತು ಮಾತುಗಳಿಂದ ಪ್ರಭಾವಿತರಾದ ಗಾಂಧಿ, ತಿರುವನಂತಪುರದಲ್ಲಿ ಆಯೋಜಿಸಲಾದ ಸಾರ್ವಜನಿಕ ಸಮಾರಂಭವೊಂದರಲ್ಲಿ ಮಾತನಾಡಿ 'ನಾರಾಯಣ ಗುರುಗಳಂತಹ ಮಹಾತ್ಮರಿಗೆ ರಸ್ತೆಗಳನ್ನು ನಿಷೇಧಿಸಿರುವ ಆಚರಣೆ, ಧರ್ಮ, ಮಾನವತೆ ಮತ್ತು ರಾಷ್ಟ್ರೀಯತೆ ಕುರಿತ ತಮ್ಮ ಭಾವನೆಗಳನ್ನೇ ಅಲ್ಲಾಡಿಸಿದೆ' ಎನ್ನುತ್ತಾ, 'ಸತ್ಯಾಗ್ರಹಿಗಳು ಅಹಿಂಸೆಯ ಸಂಯಮದ ಹಾದಿ ಹಿಡಿದರೆ ಬಹುಸಂಖ್ಯಾತ ಅಬ್ರಾಹ್ಮಣರು ಮತ್ತು ಅಸ್ಪೃಶ್ಯರ ನೈತಿಕ ಬಲ ಅಲ್ಪಸಂಖ್ಯಾತ ಬ್ರಾಹ್ಮಣರ ಸ್ಥೈರ್ಯವನ್ನು ಕೆಡಿಸುವುದು ಖಂಡಿತ' ಎಂದು ಹೇಳಿದರು.

ನಂತರ ಸಂಸ್ಥಾನದ ಮಹಾರಾಣಿಯನ್ನು ಭೇಟಿ ಮಾಡಿದ ಗಾಂಧಿ ಈ ಅಸಂಬದ್ಧ ನಿಯಮವನ್ನು ರದ್ದುಪಡಿಸುವಂತೆ ಮಾನವಿ ಮಾಡಿದರು. ಕೆಲ ತಿಂಗಳುಗಳ ನಂತರ ನಾಲ್ಕು ರಸ್ತೆಗಳಲ್ಲಿ ಒಂದು ರಸ್ತೆಯನ್ನು ಬ್ರಾಹ್ಮಣರಿಗೆ ಬಿಟ್ಟುಕೊಟ್ಟು ಇತರ ಮೂರು ರಸ್ತೆಗಳನ್ನು ಎಲ್ಲರಿಗೂ ಮುಕ್ತಗೊಳಿಸಲಾಯಿತು. ಆದರೆ ದೇವಾಲಯ ಪ್ರವೇಶ ಮಾತ್ರ ಎಲ್ಲರಿಗೂ ಮುಕ್ತವಾಗಲಿಲ್ಲ. ಇದು ಗಾಂಧಿಯವರ ಮಾರ್ಗ ನಿರ್ಣಾಯಕವಾಗದಷ್ಟು ಮೃದು ಮತ್ತು ಹೊಂದಾಣಿಕೆಯದು ಎಂಬ ಟೀಕೆಗಳಿಗೂ ಕಾರಣವಾಗಿದ್ದು ನಿಜ. ಆದರೆ ಗಾಂಧಿ ಇದಕ್ಕೆ 'ಯಂಗ್ ಇಂಡಿಯಾ'ದಲ್ಲಿ, ತಮ್ಮದು 'ಸದ್ಯಕ್ಕೆ ಒಂದು ಹೆಜ್ಜೆ ಸಾಕು' ಎಂಬ ನೀತಿಯ ಪಯಣ ಎಂದು ಉತ್ತರಿಸಿದ್ದು ಬೇರೆ ವಿಷಯ.

ವಿದೇಶಗಳಲ್ಲಿ ಹೆಚ್ಚಿದ ವರ್ಚಸ್ಸು–ಮೀರಾ ಆಗಮನ

ಗಾಂಧಿ ಈ ಅವಧಿಯಲ್ಲಿ ಸ್ವದೇಶ ಬಾಂಧವರಿಂದ ಸಾಕಷ್ಟು ಭಿನ್ನಮತವನ್ನು ಎದುರಿಸಿದರಾದರೂ, ಭಾರತದ ಹೊರಗೆ ಅವರ ವರ್ಚಸ್ಸು ಬೆಳೆಯತೊಡಗಿತ್ತು. ಇದರ ಎರಡು ಉದಾಹರಣೆಗಳೆಂದರೆ, ಅಮೆರಿಕಾದ ವಿಸ್ಕಾನ್ಸಿನ್ ಮತ್ತು ಅಯೋವಾ ವಿಶ್ವವಿದ್ಯಾಲಯಗಳ ಸಮಾಜಶಾಸ್ತ್ರಜ್ಞರು ಅಂದಿನ ಭಾರತದ ಬಗ್ಗೆ ವಿಶೇಷ ಅಧ್ಯಯನಗಳನ್ನು ಕೈಗೊಂಡದ್ದು ಮತ್ತು ನೊಬೆಲ್ ಪ್ರಶಸ್ತಿ ಪುರಸ್ಕೃತ ಫ್ರೆಂಚ್ ಲೇಖಕ ರೊಮೈನ್ ರೊಲಾಂಡ್, ಗಾಂಧಿಯವರ ಬಗ್ಗೆ ಒಂದು ಗಮನಾರ್ಹ ಪುಸ್ತಕ ಬರೆದದ್ದು. ವಿಸ್ಕಾನ್ಸಿನ್ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ಪ್ರಾಧ್ಯಾಪಕರಾಗಿದ್ದ ರಾಸ್, ೧೯೨೪ರ ಕೊನೆಯಲ್ಲಿ ಭಾರತಕ್ಕೆ ಬಂದು, ಗಾಂಧಿ ಸೇರಿದಂತೆ ಸಮಾಜದ ವಿವಿಧ ವರ್ಗಗಳ ಜನರನ್ನು ಮಾತಾಡಿಸಿ, ಗಾಂಧಿಯವರ ಎಲ್ಲ ಸದುದ್ದೇಶಗಳ ಹೊರತಾಗಿಯೂ, ಭಾರತದ ಪ್ರತಿಷ್ಠಿತ ಮುಸ್ಲಿಂ ವರ್ಗ ತಾವು ಒಂದು ಕಾಲದಲ್ಲಿ ಈ ದೇಶವನ್ನು ಆಳಿದವರು ಎಂಬ ಭಾವನೆಯಿಂದ ಇನ್ನೂ ಹೊರಬರದಿರುವುದರಿಂದ, ಅವರ ಕನಸು ನನಸಾಗುವುದು ಕಷ್ಟ ಎಂದು ಅಭಿಪ್ರಾಯಪಟ್ಟರೆ, ಅಯೋವಾದ ವಿದ್ವಾಂಸರು ಗಾಂಧಿಯನ್ನು 'ಆಧ್ಯಾತ್ಮಿಕ ಪ್ರತಿರೋಧದ ಪ್ರವರ್ತಕ' ಎಂದು ಗುರುತಿಸಿ, ಲೆನಿನ್‌ರಂತೆ ಇವರೂ ವರ್ತಮಾನದ ಜಗತ್ತಿನ ಮಹಾ ಜನನಾಯಕರು ಎಂದು ಬಣ್ಣಿಸಿದರು. ಇದೇ ಹೊತ್ತಿನಲ್ಲಿ ಚಿಕಾಗೋದಲ್ಲಿ ಗಾಂಧಿಯವರ ಸಂಕ್ಷಿಪ್ತ ಜೀವನಚರಿತ್ರೆಯೊಂದು ಪ್ರಕಾಶಿತವಾಗಿತ್ತು. ಜೊತೆಗೆ ಕ್ರಿಶ್ಚಿಯನ್ ಧರ್ಮಗುರು ಜಾನ್ ಹೇನ್ಸ್ ಹೋಮ್ಸ್

ಎಂಬುವವರ ಪ್ರಸ್ತಾವನೆಯೊಂದಿಗೆ 'ಹಿಂದ್ ಸ್ವರಾಜ್' ಕೂಡ ಪ್ರಕಟವಾಗಿ, ಗಾಂಧಿ ಅಮೆರಿಕಾದ ಸಾರ್ವಜನಿಕರ ಗಮನ ಸೆಳೆದಿದ್ದರು.

ಇನ್ನು ಇದೇ ಹೋಮ್ಸ್‌ರ ಗೆಳೆಯರಾಗಿದ್ದ ರೊಮೈನ್ ರೊಲ್ಯಾಂಡ್, ಗಾಂಧಿ ೧೯೨೨ರಲ್ಲಿ ಸೆರೆಮನೆ ಸೇರುವವರೆಗಿನ ಬದುಕಿನ ಬಗ್ಗೆ ಸರ್ವ ಮಾಹಿತಿಯನ್ನೂ ಕಲೆ ಹಾಕಿ, ಕವಿ ರಬೀಂದ್ರನಾಥ ಟ್ಯಾಗೋರ್ ಮತ್ತು ಅನುಭಾವಿ ದಿಲೀಪ್‌ಕುಮಾರ್ ರಾಯ್ ಅವರೊಡನೆ ಮಾತಾಡಿ ಬರೆದ 'ಮಹಾತ್ಮ ಗಾಂಧಿ: ವಿಶ್ವಾತ್ಮಕ ಅಸ್ತಿತ್ವದಲ್ಲಿ ಒಂದಾದ ಮನುಷ್ಯ' ಎಂಬ ಪುಸ್ತಕದ ಮೂಲಕ ಇಡೀ ಜಗತ್ತು ಗಾಂಧಿಯತ್ತ ನೋಡುವಂತೆ ಮಾಡಿದ್ದರು. ಗಾಂಧಿ ಸೆರೆಮನೆ ಸೇರುವ ಮುನ್ನ ಎದುರಿಸಿದ 'ಮಹಾ ವಿಚಾರಣೆ'ಯೊಂದಿಗೆ ಮುಕ್ತಾಯವಾಗುವ ಈ ಪುಸ್ತಕ, 'ಕಳೆದ ಎರಡು ಸಾವಿರ ವರ್ಷಗಳ ಧಾರ್ಮಿಕ ಪರಂಪರೆಯ ಚೈತನ್ಯವನ್ನು ಮಾನವ ರಾಜಕಾರಣದೊಳಕ್ಕೆ ತುಂಬಿರುವ ಗಾಂಧಿ ಗೆಲ್ಲುವರು, ಇಲ್ಲವೇ ಬುದ್ಧ, ಏಸುಗಳ ಆಗಮನಕ್ಕೆ ಆ ಮುಂಚಿನ ಶತಮಾನಗಳಲ್ಲಿ ಜಾಗೃತವಾಗತೊಡಗಿದ್ದಂತಹ ನೈತಿಕ ಪ್ರಜ್ಞೆಯ ಸಾಕಾರ ಸಂಕೇತವಾಗುವರು' ಎಂಬರ್ಥದ ಸಾಲುಗಳೊಂದಿಗೆ ಮುಗಿಯುತ್ತದೆ.

ಆದರೆ ಈ ಪುಸ್ತಕಕ್ಕೆ ಪೆರುವಿನ ಮಾರ್ಕ್ಸ್‌ವಾದಿ ಚಿಂತಕ ಜೋಸ್ ಕಾರ್ಲೋಸ್ ಮೆರಿಯಾತರ್ಗಿ ಒಂದು ಪ್ರತಿಕ್ರಿಯೆ ಬರೆದು, ಗಾಂಧಿಯನ್ನು ಸಮಕಾಲೀನ ಜಗತ್ತಿನ ಅಪೂರ್ವ ವ್ಯಕ್ತಿಗಳಲ್ಲಿ ಒಬ್ಬರು ಎಂದು ಗುರುತಿಸಿದರಾದರೂ, ಅವರ ರಾಜಕಾರಣವನ್ನು ಒಪ್ಪಲು ನಿರಾಕರಿಸಿದರು. ಅಹಿಂಸೆ ಮತ್ತು ಯಂತ್ರ ನಾಗರೀಕತೆ ಕುರಿತ ಗಾಂಧಿಯವರ ವಿಮರ್ಶೆಯನ್ನು ಸಾರಾಸಗಟಾಗಿ ಒಪ್ಪಲಾಗದು ಎಂದಿದ್ದ ಈ ಚಿಂತಕ, ಅಸಹಕಾರ ಚಳುವಳಿಯನ್ನು ಚೌರಿಚೌರ ಘಟನೆಯ ನಂತರ ಹಿಂತೆಗೆದುಕೊಂಡದ್ದು ತಪ್ಪು ಎಂದು ಅಭಿಪ್ರಾಯಪಟ್ಟಿದ್ದರು. ಕ್ರಾಂತಿಯನ್ನು, ಉಪವಾಸ ಮತ್ತು ಅಹಿಂಸೆಗಳಿಂದ ಉಂಟು ಮಾಡಲಾಗದು; ಹಿಂಸೆಯನ್ನು ಅನುಭವಿಸಿ ಮತ್ತು ಬಳಸಿ ಕ್ರಾಂತಿಯನ್ನುಂಟು ಮಾಡಬಹುದು. ಈ ದೃಷ್ಟಿಯಿಂದ ಗಾಂಧಿಯವರ ಆದರ್ಶವಾದ ಮತ್ತು ಲೆನಿನ್‌ರ ವ್ಯಾವಹಾರಿಕತೆಗಳ ನಡುವಣ ಆಯ್ಕೆಯಲ್ಲಿ, ತನ್ನ ಆಯ್ಕೆ ಲೆನಿನ್ ಎಂದಿದ್ದರು ಈ ಪೆರುವಿನ ಲೇಖಕ-ಚಿಂತಕ.

ಇದೇ ವೇಳೆಯಲ್ಲಿ ರೊಲ್ಯಾಂಡರ ಪುಸ್ತಕವನ್ನು ಓದಿ, ಅದರ ಲೇಖಕರೊಂದಿಗೆ ಸಮಾಲೋಚಿಸಿದ ಪರಿಣಾಮವಾಗಿ, ಮುಂದೆ ಗಾಂಧಿಯವರಿಂದ ಮೀರಾ ಎಂದು ಹೊಸ ಹೆಸರು ಪಡೆದ ಶ್ರೀಮತಿ ಮೆಡಲೀನ್ ಸ್ಲೇಡ್ ಎಂಬ ಇಂಗ್ಲಿಷ್ ಮಹಿಳೆ, ೧೯೨೫ರ ನವೆಂಬರ್‌ನಲ್ಲಿ ಭಾರತಕ್ಕೆ ಬಂದು ಸಬರ್ಮತಿ ಆಶ್ರಮದಲ್ಲಿ ಕಾರ್ಯಕರ್ತೆಯಾಗಿ ಸೇರಿಕೊಂಡದ್ದು.

ಆರೆಸ್ಸೆಸ್‌ನ ಉದಯ

ವಿಪರ್ಯಾಸವೆಂದರೆ, ಗಾಂಧಿಯವರ ಹೋರಾಟ ಮತ್ತು ವಿಚಾರಗಳು ದೇಶ-ವಿದೇಶಗಳಲ್ಲಿ ಮಾನ್ಯತೆ ಪಡೆಯುತ್ತಿದ್ದ ಕಾಲದಲ್ಲೇ ಭಾರತದ ಮಧ್ಯಭಾಗದ ನಗರವೊಂದರಲ್ಲಿ ಗಾಂಧಿ ಹೋರಾಟ ಮತ್ತು ವಿಚಾರಗಳಿಗೆ ತದ್ವಿರುದ್ಧವಾದ ಹೋರಾಟ

ಮತ್ತು ವಿಚಾರಗಳ ಪ್ರಸಾರಕ್ಕಾಗಿ ಸಂಘಟನೆಯೊಂದು ಹುಟ್ಟಿಕೊಳ್ಳತೊಡಗಿತ್ತು. ಮೂಲತಃ ತಿಲಕರ ಉಗ್ರವಾದಿ ಕಾಂಗ್ರೆಸ್ ಗುಂಪಿಗೆ ಸೇರಿದ್ದ, ನಂತರ ಹಿಂದೂ ಮಹಾಸಭಾದ ಹುಟ್ಟಿಗೆ ಕಾರಣರಾದವರಲ್ಲಿ ಒಬ್ಬರಾದ ಡಾ.ಬಿ.ಎಸ್. ಮೂಂಜೆಯವರ ಶಿಷ್ಯ ಕೇಶವ ಬಲಿರಾಂ ಹೆಡ್ಗೆವಾರ್ ಎಂಬುವವರು ನಾಗಪುರದಲ್ಲಿ ೧೯೨೫ರ ಸೆಪ್ಟೆಂಬರ್ ೨೭ರಂದು, ಹಿಂದೂ ಧರ್ಮ ಮತ್ತು ಸಂಸ್ಕೃತಿಯ ಬಲವರ್ಧನೆಯ ಉದ್ದೇಶದ 'ರಾಷ್ಟ್ರೀಯ ಸ್ವಯಂಸೇವಕ ಸಂಘ'ವೆಂಬ ಸಂಘಟನೆಯೊಂದನ್ನು ಹುಟ್ಟು ಹಾಕಿದರು. ಬಂಗಾಳದ ಬ್ರಿಟಿಷ್ ವಿರೋಧಿ ಗುಪ್ತ ಚಟುವಟಿಕೆಗಳ ಕ್ರಾಂತಿಕಾರಿಗಳ ಸಂಘವಾಗಿದ್ದ 'ಅನುಶೀಲನ'ದಲ್ಲಿ ಭಯೋತ್ಪಾದನಾ ಚಟುವಟಿಕೆಗಳಲ್ಲಿ ತರಬೇತುಗೊಳ್ಳುತ್ತಾ ವೈದ್ಯಕೀಯ ವ್ಯಾಸಂಗವನ್ನೂ ಮುಗಿಸಲು ಮೂಂಜೆಯವರಿಂದ ಕಲ್ಕತ್ತಾಗೆ ಕಳಿಸಲ್ಪಟ್ಟಿದ್ದ ಹೆಡ್ಗೆವಾರ್, ಗಾಂಧಿಯವರ ಅಸಹಕಾರ ಚಳುವಳಿಯಲ್ಲೂ ಭಾಗವಹಿಸಿದ್ದರು. ಆದರೆ ಗಾಂಧೀಜಿಯ ಬಂಧನದ ನಂತರ ಕಾಂಗ್ರೆಸ್‌ನಲ್ಲಿ ಉಂಟಾದ ಗೊಂದಲ ಮತ್ತು ಕುಸಿದ ಹಿಂದೂ–ಮುಸ್ಲಿಂ ಬಾಂಧವ್ಯದ ಹಿನ್ನೆಲೆಯಲ್ಲಿ ನಡೆದ ಕೋಮು ಗಲಭೆಗಳ ಸಂದರ್ಭದಲ್ಲಿ ಹಿಂದೂ ಸಂಘಟನೆಯೊಂದನ್ನು ಕಟ್ಟುವ ಸುಸಂದರ್ಭವೊಂದನ್ನು ಕಂಡುಕೊಂಡಿದ್ದರು. ವಿ.ಡಿ.ಸಾವರ್ಕರ್ ಅವರ 'ಹಿಂದೂ ಯಾರು?' ಎಂಬ ಕಿರುಪುಸ್ತಕವನ್ನು ಓದಿ ಸ್ಫೂರ್ತಿಗೊಂಡಿದ್ದ ಹೆಡ್ಗೆವಾರ್ ರತ್ನಗಿರಿಯಲ್ಲಿ ಸಾವರ್ಕರ್‌ರನ್ನೂ ಕಂಡು ಚರ್ಚಿಸಿದ್ದರು.

ಆರೆಸ್ಸೆಸ್, ಹಿಂದುತ್ವಕ್ಕೆ ದೀಕ್ಷಾಬದ್ಧವಾದ ಕಾರ್ಯಕರ್ತರ ಶಿಸ್ತಿನ ದಂಡನ್ನು ಬ್ರಿಟಿಷ್ ಸೈನ್ಯದ ಸಮವಸ್ತ್ರವೂ ಸೇರಿದಂತೆ ಅದರ ಮಾದರಿಯಲ್ಲೇ ತಯಾರು ಮಾಡುವ ಉದ್ದೇಶದಿಂದ ಆರಂಭವಾಗಿತ್ತು. ಅದು ತನ್ನ ಈ ದಂಡನ್ನು ದೊಣ್ಣೆ, ಕತ್ತಿ, ಭರ್ಜಿ, ಚೂರಿ ಪ್ರಯೋಗಗಳಲ್ಲಿ ತರಬೇತುಗೊಳಿಸಿ ಒಂದು ಖಾಸಗಿ ಅರೆಸೈನಿಕ ದಳವನ್ನಾಗಿ ಬೆಳೆಸುವ ಉದ್ದೇಶವನ್ನು ಪ್ರಕಟಿಸಿ ಅದರಲ್ಲಿ ಕಾರ್ಯಪ್ರವೃತ್ತವೂ ಆಯಿತು. ಅದು ಮರಾಠಾ ಬ್ರಾಹ್ಮಣರ ಆಳ್ವಿಕೆಯ ಪೇಶ್ವೆ ಸಾಮ್ರಾಜ್ಯದ ಭಗವಾಧ್ವಜವನ್ನೇ ತನ್ನ ಲಾಂಛನಧ್ವಜವನ್ನಾಗಿ ಆರಿಸಿಕೊಂಡು ಅದರ ವಂದನೆಯೊಂದಿಗೇ ತನ್ನ ಎಲ್ಲ ಚಟುವಟಿಕೆಗಳನ್ನು ಆರಂಭಿಸುವ ನಿಯಮ, ಈ ಸಂಘಟನೆ ಎತ್ತಿಹಿಡಿಯುವ ಹಿಂದೂ ಧರ್ಮದ ಸ್ವರೂಪವನ್ನೂ ಸೂಚಿಸುವಂತಿತ್ತು. ಹೆಡ್ಗೆವಾರ್ ವಾರಕ್ಕೊಮ್ಮೆ ಬೌದ್ಧಿಕ್ ಎಂಬ ಚಿಂತನಾ ಕಾರ್ಯಕ್ರಮವನ್ನೂ ಆರಂಭಿಸಿ ಈ ಹಿಂದೂ ಧರ್ಮದ ಗತವೈಭವವನ್ನು ಮರುನಿರೂಪಿಸುವ ಕೆಲಸವನ್ನೂ ಆರಂಭಿಸಿದರು. ಗಾಂಧಿ, ಈ ಬೆಳವಣಿಗೆಯನ್ನು ಮತ್ತು ತಮ್ಮ ಅನುಯಾಯಿಗಳಲ್ಲಿ ಕೆಲವರು ಇದರ ಬಗ್ಗೆ ಸಹಾನುಭೂತಿ ಹೊಂದಿದ್ದಾರೆ ಎಂಬುದನ್ನು ಗಮನಿಸಿದರಾದರೂ, ಭಾರತದ ಜನಸಾಮಾನ್ಯರ ಶಕ್ತಿ ಸಾಗರದ ಮುಂದೆ ಈ ಹಿಂದೂ ಪ್ರತಿಷ್ಠಿತ ಗುಂಪಿನ ಈ ಪ್ರಯತ್ನ ಏನೂ ಪರಿಣಾಮ ಬೀರದೆಂದು ಭಾವಿಸಿರುವ ಸಾಧ್ಯತೆ ಇದೆ ಎನ್ನಬಹುದು. ಏಕೆಂದರೆ ಆರೆಸ್ಸೆಸ್ ಹುಟ್ಟಿನ ಬಗ್ಗೆ ಅವರು ಎಲ್ಲೂ ನಿರ್ದಿಷ್ಟ ಟೀಕೆ–ಟಿಪ್ಪಣಿ ಮಾಡಿದ ದಾಖಲೆಗಳಿಲ್ಲ. ಆದರೆ ಆ ದಿನಗಳಲ್ಲಿ ಅವರಿಂದ ಹಲವು ವಿಷಯಗಳಲ್ಲಿ ಆದಂತೆ ಅವರ ಅಂದಾಜು ತಪ್ಪಾಗಿತ್ತು.

■

೬೫

ರಾಜಕಾರಣದಿಂದ ಬಿಡುವು

ಗಾಂಧಿ ಶಸ್ತ್ರಚಿಕಿತ್ಸೆಯ ನಂತರ ಸೆರೆಮನೆವಾಸದಿಂದ ಬಿಡುಗಡೆಯಾದ ಸಂದರ್ಭದಲ್ಲಿ ತಮಗೆ ನ್ಯಾಯಾಧೀಶರು ವಿಧಿಸಿದ್ದ ನ್ಯಾಯಬದ್ಧವಾದ ಆರು ವರ್ಷಗಳ ಸೆರೆಮನೆವಾಸದ ಶಿಕ್ಷೆಯ ಅವಧಿ ತೀರುವವರೆಗೂ ಸರ್ಕಾರದ ವಿರುದ್ಧ ಯಾವುದೇ ಪ್ರತಿಭಟನಾತ್ಮಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಿಲ್ಲ ಎಂದು ತೀರ್ಮಾನಿಸಿದ್ದರಷ್ಟೆ. ಅದಕ್ಕನುಗುಣವಾಗಿ ಅವರು ೧೯೨೮ರ ಮಾರ್ಚ್ ೧೫ರವರೆಗೆ ಯಾವುದೇ ಹೋರಾಟಗಳನ್ನು ರೂಪಿಸದೆ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿದರು. ಇನ್ನೊಂದು ಮಹಾ ಹೋರಾಟಕ್ಕಾಗಿ ದೇಶದ ಜನರನ್ನು ಮಾನಸಿಕವಾಗಿ ಸಿದ್ಧಪಡಿಸುವ ಕೆಲಸವಾಗಿ ಅದನ್ನು ಅವರು ಯೋಜಿಸಿದ್ದರು. ಮುಖ್ಯವಾಗಿ ಖಾದಿ ಪ್ರಚಾರ, ಅಸ್ಪೃಶ್ಯತೆಯ ಆಚರಣೆಯ ನಿವಾರಣೆ ಮತ್ತು ಹಿಂದೂ ಮುಸ್ಲಿಂ ಐಕ್ಯತೆಯ ಕೆಲಸಗಳಾಗಿದ್ದವು. ಇವಕ್ಕಾಗಿ ಅವರು ಈ ಅವಧಿಯನ್ನು ಪ್ರವಾಸ, ಬರವಣಿಗೆ ಮತ್ತು ತಮ್ಮ ಆಶ್ರಮ ನಿರ್ವಹಣೆಯ ಕಾರ್ಯಗಳಲ್ಲಿ ತೊಡಗಿಕೊಂಡರು. ಇದೇ ಅವಧಿಯಲ್ಲಿ ಅವರು ತಮ್ಮ ವೈಯಕ್ತಿಕ ಕುಟುಂಬದ ಯೋಗಕ್ಷೇಮದ ಕಡೆಗೂ ಗಮನ ಹರಿಸಲು ಸಾಧ್ಯವಾಯಿತು. ಇದೇ ವೇಳೆಯಲ್ಲಿ ರಾಜಾಜಿಯವರು ತಿರುಚೆಂಗೋಡ್‌ನಲ್ಲಿ ಖಾದಿ ಮತ್ತು ಅಸ್ಪೃಶ್ಯತಾ ನಿವಾರಣಾ ಚಟುವಟಿಕೆಗಳಿಗಾಗಿ ಆಶ್ರಮವೊಂದನ್ನು ಸ್ಥಾಪಿಸಿ ಅಲ್ಲಿ ಕ್ರಿಯಾಶೀಲರಾದರು. ರಾಜೇಂದ್ರ ಪ್ರಸಾದರು, ಲಂಡನ್‌ನಲ್ಲಿ ಗಾಂಧಿ ಸಹಪಾಠಿಯಾಗಿದ್ದ ಮುಝ್ರುಲ್ ಹಕ್ ಅವರು ಪಾಟ್ನಾದಲ್ಲಿ ಸ್ಥಾಪಿಸಿದ್ದ ಸದಾಕತ್ ಆಶ್ರಮ ಸೇರಿದರು. ಜಮ್ನಾಲಾಲ್ ಬಜಾಜರು ಈ ಆಶ್ರಮಗಳ ಹಣಕಾಸಿನ ಹೊಣೆ ಹೊತ್ತಿದ್ದರು.

ದೇಶಬಂಧು ಸಿ.ಆರ್. ದಾಸ್ ನಿಧನ

ಈ ಅವಧಿಯಲ್ಲಿ ಗಾಂಧಿ, ಹಿಮಾಲಯವೂ ಸೇರಿದಂತೆ ಭಾರತದ ಸುಮಾರು ಎಲ್ಲ ಭಾಗಗಳಿಗೂ ಭೇಟಿ ಕೊಟ್ಟರಲ್ಲದೆ ಸಿಲೋನ್ (ಈಗಿನ ಶ್ರೀಲಂಕಾ) ದೇಶದ ಪ್ರವಾಸವನ್ನೂ ಮಾಡಿದರು. ೧೯೨೫ರ ಮೇನಲ್ಲೇ ಈ ಯಾತ್ರೆ ಆರಂಭವಾಗಿತ್ತೆನ್ನಬಹುದು. ಹಿಂದೂ-ಮುಸ್ಲಿಮರು ಹೆಚ್ಚೂ ಕಡಿಮೆ ಸಮ ಸಂಖ್ಯೆಯಲ್ಲಿದ್ದ ಬಂಗಾಳದ ವ್ಯಾಪಕ ಪ್ರವಾಸ ಕೈಗೊಂಡ ಅವರು ನೆರೆಯ ಬಿಹಾರದ ಬುಡಕಟ್ಟು ಪ್ರದೇಶವಾದ ಝಾರ್ಖಂಡ್‌ಗೂ ಹೋದರು. ಈ ಪ್ರವಾಸಕ್ಕೆ ಇನ್ನೊಂದು ನಿರ್ದಿಷ್ಟ ಉದ್ದೇಶವೂ ಇತ್ತು. ಅದು, ಕಾಂಗ್ರೆಸ್ ಸದಸ್ಯರಾಗಿ ಉಳಿಯಲು ನೂಲುವುದು ಮತ್ತು ಖಾದಿ ಪ್ರಚಾರ ಕಡ್ಡಾಯ ಎಂಬ ನಿಯಮದ ಬಗ್ಗೆ ವಿರೋಧ ತೋರಿದ್ದ ಸ್ವರಾಜ್

ಪಕ್ಷದ ನಾಯಕರಾಗಿದ್ದ ಸಿ.ಆರ್. ದಾಸ್ ಅವರನ್ನು ಭೇಟಿಯಾಗಿ ಅವರ ಮನಃಪರಿವರ್ತಿಸುವುದೂ ಆಗಿತ್ತು. ಅದರಂತೆ ಗಾಂಧಿ, ಆಗ ಡಾರ್ಜಿಲಿಂಗ್‌ನ ತಮ್ಮ ಬೇಸಿಗೆ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ದಾಸ್ ಅವರನ್ನು ಭೇಟಿಯಾಗಿ ಅವರಿಗೆ ಚರಕದಲ್ಲಿ ನೂಲುವುದನ್ನು ಕಲಿಸಿ ಅದರ ಆನಂದವನ್ನು ಮನದಟ್ಟು ಮಾಡುವಲ್ಲಿ ಯಶಸ್ವಿಯಾದರಾದರೂ ಅವರು ತಮ್ಮ ಪ್ರವಾಸದ ಮುಂದಿನ ಭಾಗವಾಗಿ ಖುಲ್ನಾಗೆ ತಲುಪುತ್ತಿದ್ದಂತೆ, ದಾಸ್ ಅವರ ಅಕಾಲಿಕ ನಿಧನದ ಸುದ್ದಿ ತಲುಪಿತು. ಕೂಡಲೇ ಕಲ್ಕತ್ತಾಗೆ ಬಂದು ದಾಸ್ ಅವರ ಪಾರ್ಥಿವ ಶರೀರಕ್ಕೆ ನಮನ ಸಲ್ಲಿಸಿ, ಶ್ರೀಮತಿ ದಾಸ್ ಅವರನ್ನು ಸಂತೈಸುವ ಕೆಲಸ ಮಾಡಿದರು. ಹಾಗೇ ದಾಸ್ ಅವರ ಸ್ಮರಣಾರ್ಥ ಕೆಲಸಗಳಿಗಾಗಿ ಒಂದು ನಿಧಿ ಸಂಗ್ರಹಿಸುವ ಕಾರ್ಯಕ್ರಮವನ್ನೂ ಘೋಷಿಸಿದರು. ಇದೆಲ್ಲವೂ ಬಂಗಾಳದಲ್ಲಿ ಗಾಂಧಿಯವರ ಬಗ್ಗೆ ಪ್ರೀತಿ–ಗೌರವಗಳನ್ನು ಹೆಚ್ಚಿಸಿತು.

ದೇವ ಪುರುಷರಾದ ಗಾಂಧಿ!

ಖಾದಿ ಮತ್ತು ಅಸ್ಪೃಶ್ಯತಾ ನಿವಾರಣಾ ಆಂದೋಲನಕ್ಕಾಗಿ ನಿಧಿ ಸಂಗ್ರಹದಲ್ಲಿ ತೊಡಗಿದ್ದ ಗಾಂಧಿ, ಈಗ ದಾಸ್ ಸ್ಮಾರಕ ನಿಧಿಗೂ ಹಣ ಸಂಗ್ರಹಕ್ಕಾಗಿ ಪ್ರವಾಸ ಮುಂದುವರೆಸಿದರು. ಈ ಪ್ರವಾಸದ ಸಂದರ್ಭದಲ್ಲಿ ಗಾಂಧಿಯವರಿಗೆ ದೊರೆತ ಜನಸ್ಪಂದನ ಕುರಿತು ತಮ್ಮ 'ದ ಲೈಫ್ ಆಫ್ ಮಹಾತ್ಮಾ ಗಾಂಧಿ' ಕೃತಿಯಲ್ಲಿ ಲೂಯಿ ಫಿಶರ್ ಅವರು ('ಫಂಡ್ಸ್ ಅಂಡ್ ಜ್ಯೂಯೆಲ್ಸ್' ಎಂಬ ಅಧ್ಯಾಯದಲ್ಲಿ) ನೀಡಿರುವ ವಿವರಗಳು ಕುತೂಹಲ ಹುಟ್ಟಿಸುವಂತಿವೆ. ಎಲ್ಲಿ ಹೋದರೂ ಸಾವಿರಾರು ಜನ ಅವರನ್ನು ಮುತ್ತಿ ಅವರನ್ನು ಮುಟ್ಟಲು ತಬ್ಬಿಕೊಳ್ಳಲು, ಕಾಲುಮುಟ್ಟಿ ನಮಸ್ಕರಿಸಲು ಮುಗಿಬೀಳುತ್ತಿದ್ದರು. ಒಮ್ಮೊಮ್ಮೆ ಜನಸಾಗರಕ್ಕೆ ಸಿಕ್ಕಿ ಅವರು ಅಪ್ಪಚ್ಚಿಯಾಗುವರೇನೋ ಎಂಬ ಆತಂಕವೂ ಉಂಟಾಗುತ್ತಿದ್ದುದುಂಟು. ಇದರಿಂದಾಗಿ ಅವರ ಕೆನ್ನೆ ಮತ್ತು ಕಾಲುಗಳ ತುಂಬಾ ರಕ್ತ ಒಸರುವ ಗೀರುಗಳು ತುಂಬಿರುತ್ತಿದ್ದವು. ರಾತ್ರಿ ಅವಕ್ಕೆ ಮುಲಾಮು ಹಚ್ಚಿ ಮಾರನೆಯ ದಿನಕ್ಕೆ ಅವರನ್ನು ಸಿದ್ಧಪಡಿಸಬೇಕಿತ್ತು. ಜನ ಅವರನ್ನು ಬುದ್ಧನಂತೆ, ರಾಮನಂತೆ ದೇವರ ಅವತಾರವೆಂದೇ ಭಾವಿಸಿದ್ದಂತೆ ತೋರುತ್ತಿತ್ತು. ಒಂದು ಕಡೆ ಗೊಂಡ ಬುಡಕಟ್ಟಿನವರು ತಮ್ಮನ್ನು ದೇವರೆಂದು ಪೂಜಿಸುತ್ತಿದ್ದಾರೆಂದು ಕೇಳಿದಾಗ ಗಾಂಧಿ ಹೌಹಾರಿದರು. ನನಗೆ ಈ ಮಹಾತ್ಮಗಿರಿ ಸಾಕಾಗಿದೆ ಎನ್ನುತ್ತಾ ರಕ್ತ, ಮಾಂಸಗಳಿಂದಾದ ಹುಲುಮಾನವನಿಗಿರುವ ಎಲ್ಲ ದೌರ್ಬಲ್ಯಗಳೂ ನನಗಿವೆ ಎಂದು ಘೋಷಿಸಿದರಲ್ಲದೆ, ಜನ ಇಂತಹ ಮೌಢ್ಯಗಳಿಂದ ದೂರ ಸರಿಯಬೇಕು ಎಂದು ಕೋರಿದರು.

ಢಾಕಾದಲ್ಲಿ ಗಾಂಧಿಯವರ ಚಿತ್ರವನ್ನು ಕೊರಳಿಗೆ ಕಟ್ಟಿಕೊಂಡಿದ್ದ ೭೦ ವರ್ಷಗಳ ಹಿರಿಯರೊಬ್ಬರು, ಅವರ ಕಾಲ ಮೇಲೆ ಬಿದ್ದು, ನಿಮ್ಮ ನಾಮಸ್ಮರಣೆಯಿಂದ ನನಗೆ ಹೊಡೆದಿದ್ದ ಲಕ್ವ ವಾಸಿಯಾಯಿತು ಎಂದಾಗ ಗಾಂಧಿಯವರಿಗೆ ಬೆಚ್ಚಿಬಿದ್ದಂತಾಗಿ 'ಮೊದಲು ಆ ಚಿತ್ರವನ್ನು ಕೊರಳಿಂದ ತೆಗೆದು ನನಗೆ ಉಪಕಾರ ಮಾಡುವಿರಾ?' ಎಂದು ಕೇಳಿಕೊಳ್ಳುತ್ತಾ 'ನಿಮಗೆ ಒಳ್ಳೆಯದಾಗಿರುವುದು ದೇವರ ಕೃಪೆಯಿಂದ ನನ್ನಿಂದಲ್ಲ' ಎಂದು ಆ ಹಿರಿಯರಿಗೆ ತಿಳಿ ಹೇಳಿದರು.

ಇನ್ನೊಂದು ದಿನ ಗಾಂಧಿ ಪ್ರಯಾಣಿಸುತ್ತಿದ್ದ ರೈಲುಗಾಡಿ ಗಕ್ಕನೆ ನಿಂತುಬಿಟ್ಟಿತು. ಕಾರಣ ವಕೀಲ ವೃತ್ತಿಯ ಪ್ರಯಾಣಿಕನೊಬ್ಬ ರೈಲುಡಬ್ಬಿಯಿಂದ ಜಾರಿ ತಲೆಕೆಳಗಾಗಿ ಬಿದ್ದುಬಿಟ್ಟಿದ್ದ. ಗಾಂಧಿ ಏನಾಯಿತೆಂದು ತಿಳಿಯಲು ತಮ್ಮ ಡಬ್ಬಿಯಿಂದ ಇಳಿದಾಗ ನೆಲಕ್ಕೆ ಬಿದ್ದಿದ್ದ ಆ ವಕೀಲ ಸಲೀಸಾಗಿ ಎದ್ದು ನಿಂತು, ಮಹಾತ್ಮರು ರೈಲಿನಲ್ಲಿದ್ದುದರಿಂದ ತನಗೇನೂ ಅಪಾಯವಾಗಿಲ್ಲವೆಂದು ಅವರಿಗೆ ನಮಿಸಿ ಮತ್ತೆ ಗಾಡಿ ಹತ್ತಿದ. ಏನೂ ತೋಚದ ಗಾಂಧಿಯವರೂ ಸುಮ್ಮನೆ ಗಾಡಿ ಹತ್ತಬೇಕಾಯಿತು!

ಚಿನ್ನಾಭರಣ ದೋಚುವ ಗಾಂಧಿ!

ಈ ಪ್ರವಾಸದಲ್ಲಿ ಗಾಂಧಿ ಹಣವನ್ನು ಮಾತ್ರವಲ್ಲ, ಸ್ತ್ರೀಯರಿಂದ ಆಭರಣಗಳನ್ನೂ 'ಕಸಿಯುವುದರಲ್ಲಿ' ಪರಿಣತಿ ಸಾಧಿಸಿದ್ದರು. ಬುರ್ದ್ವಾನ್ ಎಂಬಲ್ಲಿನ ವಸತಿ ಸಂದರ್ಭದಲ್ಲಿ, ರಾಣಿಬಾಲಾ ಎಂಬ ಹತ್ತು ವರ್ಷದ ಹುಡುಗಿಯೊಂದಿಗೆ ಆಟವಾಡುತ್ತಿದ್ದ ಗಾಂಧಿ, ಅವಳ ಕೈಗಳಲ್ಲಿದ್ದ ಚಿನ್ನದ ಬಳೆಗಳನ್ನು ನೋಡಿ ಪ್ರೀತಿಯಿಂದ 'ನಿನ್ನ ಪುಟ್ಟ ಕೈಗಳು ಈ ಭಾರವಾದ ಚಿನ್ನದ ಬಳೆಗಳನ್ನು ಹೇಗೆ ತಡೆಯುವವೋ!' ಎಂದರು. ಅವರ ಉದ್ದೇಶ ಅವನ್ನು ಪಡೆಯುವುದಾಗಿರದೆ ಹೆಣ್ಣು ಮಕ್ಕಳಲ್ಲಿ ಚಿನ್ನಾಭರಣಗಳನ್ನು ಕುರಿತು ವಿಕರ್ಷಣೆ ಹುಟ್ಟಿಸುವುದಾಗಿತ್ತಷ್ಟೆ. ಆದರೆ ಒಂದು ಕ್ಷಣ ಗಾಂಧಿಯ ಮುಖ ನೋಡಿದ ಆ ಹುಡುಗಿ ತನ್ನ ಕೈನ ಆರೂ ಬಳೆಗಳನ್ನು ಬಿಚ್ಚಿ ಅವರ ಕೈಗಿತ್ತಿತು. ಗಾಂಧಿ ಅಲ್ಲೇ ಇದ್ದ ಹುಡುಗಿಯ ತಾತನ ಕಡೆ ನೋಡಿದಾಗ ಅವರ ಸಮ್ಮತಿಯೂ ದೊರಕಿತ್ತು. ಆದರೆ ಗಾಂಧಿ ಅವನ್ನು ತಮ್ಮ ಥೈಲಿಗೆ ಹಾಕಿಕೊಳ್ಳಲು ಹಿಂಜರಿದರು. ಹುಡುಗಿಯ ತಾಯಿ ನೊಂದುಕೊಂಡರು. ಆದರೆ ಅಜ್ಜ, 'ಇಲ್ಲ, ಕೊಟ್ಟ ದಾನವನ್ನು ಹಿಂಪಡೆಯುವುದು ನಮಗೇ ಕೆಟ್ಟದ್ದು ಎಂದು ನಂಬಿರುವ ಕುಟುಂಬ ನಮ್ಮದು' ಎಂದ ಮೇಲೆ ಗಾಂಧಿಗೆ ಬೇರೆ ದಾರಿ ಉಳಿದಿರಲಿಲ್ಲ.

ಮುಂದೆ ಗಾಂಧಿ ಹೋದೆಡೆಯಲ್ಲೆಲ್ಲ ರಾಣಿಬಾಲಾಳ ಕಥೆ ಹೇಳತೊಡಗಿದರು. ಜೊತೆಗೆ ಈ ಚಿನ್ನ ಮಹಿಳೆಯರ ಸೌಂದರ್ಯವನ್ನು ಹೆಚ್ಚಿಸುವ ಬದಲಾಗಿ ಅದಕ್ಕೆ ಬಾಧಕವಾಗಿದ್ದು, ಮೈಮೇಲೆ ಕೊಳಕು ಸೇರಲೂ ಅದು ಕಾರಣವಾಗಿದೆ ಎನ್ನುತ್ತಿದ್ದರು. ಹೀಗೆ ಮಾತಾಡಿ ಪ್ರತಿಕ್ರಿಯೆಗೆ ಆತಂಕದಿಂದ ಕಾಯುತ್ತಿದ್ದಂತೆ, ಅವರು ಕೇಳದೆಯೇ ಹೆಂಗಸರು ಮಕ್ಕಳು ತಮ್ಮ ಕೈ, ಮೂಗು, ಕಿವಿ ಕೊರಳುಗಳಲ್ಲಿದ್ದ ಆಭರಣಗಳನ್ನು ಬಿಚ್ಚಿಕೊಡತೊಡಗಿದರು. ಅವರು ಮಹಿಳಾ ಸಭೆಗಳನ್ನು ಉದ್ದೇಶಿಸಿ ಮಾತಾಡಿದಾಗಲೆಲ್ಲ ಮಹಿಳೆಯರ ಮುಖದ ಮೇಲಿನ ಪರದೆಯನ್ನು ನೋಡಿ 'ನಿಮ್ಮ ಸೋದರನ ಮುಂದೆ ಪರದೆ ಬೇಡ' ಎಂದು ಅದನ್ನು ತೆಗೆಸುತ್ತಿದ್ದರು.

ಒಂದು ತುಂಡು ಬಟ್ಟೆಯ, ಕೆಲವೊಮ್ಮೆ ಬರಿಗಾಲಲ್ಲಿ ನಡೆದು ಬರುತ್ತಿದ್ದ ಈ ಫಕೀರನ ಹಿಂದೆ ಜನಜಂಗುಳಿ ನೆರೆದಿರುತ್ತಿತ್ತು. ಗಾಂಧಿ, ಅವರ ಕಾರ್ಯದರ್ಶಿ ಮಹದೇವ ದೇಸಾಯಿ ಮತ್ತು ಮಗ ದೇವದಾಸನನ್ನು ಒಳಗೊಂಡ ಈ ತಂಡ ಹೋದೆಡೆಯಲ್ಲೆಲ್ಲ ಖಾದಿ ಬಟ್ಟೆಗಳ ಹರಾಜು ಹಾಕುತ್ತಿತ್ತು. ನಿಧಿಗಾಗಿ ಡಬ್ಬವೊಂದನ್ನು ಸಭೆಯ ಮುಂಭಾಗದಲ್ಲಿ ಇಡಲಾಗುತ್ತಿತ್ತು. ಜನ ಎರಡಕ್ಕೂ ಧಾರಾಳವಾಗಿ ಕೊಡುಗೆ

ನೀಡುತ್ತಿದ್ದರು. ಫಿಶರ್, ಗಾಂಧಿಯ ಈ ಬನಿಯಾ ಜಾಣ್ಮೆಯ ಬಗ್ಗೆ ಬರೆಯುತ್ತಾ ತಮ್ಮದೇ ಒಂದು ಅನುಭವವನ್ನು ಹೇಳಿದ್ದಾರೆ: 'ಒಮ್ಮೆ ನಾನು ನನ್ನ ಅಮೆರಿಕನ್ ಗೆಳೆಯರೊಬ್ಬರಿಗಾಗಿ ಸಹಿ ಸಹಿತವಾದ ಗಾಂಧಿ ಚಿತ್ರವೊಂದಕ್ಕಾಗಿ ಬೇಡಿಕೆ ಇಟ್ಟು, ಆಶ್ರಮದಲ್ಲಿದ್ದ ಒಂದು ಪುಟ್ಟ ಚಿತ್ರದ ಕಡೆ ಅವರ ಗಮನ ಸೆಳೆದೆ. ಅವರು ತಕ್ಷಣ ಇಪ್ಪತ್ತು ರೂಪಾಯಿ ನನ್ನ ಹರಿಜನ ನಿಧಿಗೆ ಬೀಳುವುದಾದರೆ ನಿಮ್ಮ ಬೇಡಿಕೆ ಈಡೇರೀತು ಎಂದರು. ನಾನು ಹತ್ತು ರೂ. ಕೊಡುವೆನು ಎಂದೆ. ಆಯಿತು ಎಂದು ಅವರು ಸಹಿ ಹಾಕಿಕೊಟ್ಟರು! ದೇವದಾಸನ ಪ್ರಕಾರ ಐದು ಕೊಟ್ಟಿದ್ದರೂ ಸಾಕು ಬಾಪು ಸಹಿ ಹಾಕುತ್ತಿದ್ದರು!!'

ಅಸ್ಪೃಶ್ಯತಾ ನಿವಾರಣೆಯ ಪ್ರವಾಸದ ಭಾಗವಾಗಿ ಗಾಂಧಿ ಗುಜರಾತ್‌ನ ಹಲವು ಭಾಗಗಳಿಗೆ ಭೇಟಿ ನೀಡಿದರು. ಅವರ ಸಭೆಗಳಲ್ಲಿ ಅಸ್ಪೃಶ್ಯ ಸಮುದಾಯದವರು ಪ್ರತ್ಯೇಕವಾಗಿ ಕೂರುತ್ತಿದ್ದುದನ್ನು ಗಮನಿಸಿದ ಗಾಂಧಿ ಎಲ್ಲರೂ ಒಟ್ಟಿಗೆ ಕೂರುವ ವ್ಯವಸ್ಥೆ ಮಾಡಿದರು. ಕಛ್‌ನ ಮಾಂಡವಿ ಎಂಬಲ್ಲಿ ಅವರನ್ನು ಬರಮಾಡಿಕೊಂಡ ಅಸ್ಪೃಶ್ಯ ಸಮೂಹ, ಅವರಿಂದ ಬಹುದೂರ ನಿಂತೇ ಸ್ವಾಗತ ಭಾಷಣ ಮಾಡುತ್ತಿದ್ದುದನ್ನು ಗಮನಿಸಿದ ಗಾಂಧಿ ಅವರನ್ನು ಕರೆದು ಅಪ್ಪಿಕೊಂಡ ದೃಶ್ಯ, ಸ್ಥಳೀಯವಾಗಿ ದೊಡ್ಡ ಸುದ್ದಿಯಾಗಿ ದೊಡ್ಡ ಸಂಚಲನವನ್ನೇ ಉಂಟುಮಾಡಿತು. ಕೆಲವೆಡೆ ಇಂತಹ ಕಾರ್ಯಕ್ರಮಗಳಲ್ಲಿ, ತಾವು ಮತ್ತು ತಮ್ಮ ಸಂಗಡಿಗರು ಊಟ ತಿಂಡಿಗಳಿಗಾಗಿ ಬಳಸಿದ್ದ ಪಾತ್ರೆಗಳನ್ನು ಮೈಲಿಗೆಯಾಗಿದೆ ಎಂದು ಪ್ರತ್ಯೇಕವಿಡುತ್ತಿದ್ದುದನ್ನು ಗಮನಿಸಿದ ಗಾಂಧಿ ನೊಂದು ಸವರ್ಣೀಯರಿಗೆ ಬುದ್ಧಿ ಹೇಳಿದರು.

ದಣಿದ ಗಾಂಧಿ–ಒಂದು ವರ್ಷದ ವಿಶ್ರಾಂತಿಯ ಪ್ರಕಟಣೆ

ಗಾಂಧಿ ಖಾದಿ ನಿಧಿಗಾಗಿ ಹಣ ಸಂಗ್ರಹಿಸುತ್ತಿದ್ದರಲ್ಲದೆ ಚರಕಾದಲ್ಲಿ ನೂಲುವುದನ್ನೂ ಪ್ರಚುರಪಡಿಸುತ್ತಿದ್ದರು. ತಾವು ನೆಲೆಸಿದೆಡೆಯಲ್ಲೆಲ್ಲ ಸ್ವಲ್ಪ ಹೊತ್ತು ತಾವೇ ಕೂತು ನೂಲುತ್ತಿದ್ದರು. ಖಾದಿ ಬಡವ ಶ್ರೀಮಂತರಿಬ್ಬರ, ಮೇಲ್ಜಾತಿ–ಕೆಳಜಾತಿಗಳೆಲ್ಲರ ಉಡುಪೂ ಆಗಿ ಜಾತಿ–ವರ್ಗಗಳ ಅಂತರವನ್ನು ಕಡಿಮೆ ಮಾಡುವುದಲ್ಲದೆ, ಶ್ರಮದ ಬದುಕಿನ ಮೌಲ್ಯದ ಪ್ರತಿಪಾದನೆ ಮಾಡುತ್ತದೆ ಎನ್ನುತ್ತಿದ್ದರು. ಬ್ರಿಟಿಷರು ಬಂದು ಮೂಲೆಗುಂಪು ಮಾಡಿದ ನಮ್ಮ ಕಸುಬುಗಳ ಕೌಶಲ್ಯ ಮತ್ತು ಸ್ವಾವಲಂಬನೆಯನ್ನು ಖಾದಿ ಪುನರುಜ್ಜೀವನಗೊಳಿಸುವುದಲ್ಲದೆ ಬಡವರ ಜೀವನಾಧಾರವೂ ಆಗಬಲ್ಲುದು ಎಂದು ಅವರು ವಿವರಿಸುತ್ತಿದ್ದರು.

೧೯೨೫ರ ಡಿಸೆಂಬರ್‌ನಲ್ಲಿ ತಮ್ಮ ಉದ್ಯಮಿ ಗೆಳೆಯ ಜಮ್ನಾಲಾಲ್ ಬಜಾಜರ ಊರು ವರ್ಧಾಗೆ ಹೋಗಿದ್ದ ಗಾಂಧಿ, ಅಲ್ಲಿಂದ ಕಾನ್ಪುರದಲ್ಲಿ ಏರ್ಪಾಟಾಗಿದ್ದ ವಾರ್ಷಿಕ ಕಾಂಗ್ರೆಸ್ ಅಧಿವೇಶನಕ್ಕೆ ಹೊರಟರು. ಅವರೊಂದಿಗೆ ಮಹದೇವ ದೇಸಾಯಿ ಮತ್ತು ಮೀರಾಬೆನ್ ಇದ್ದರು. ಆ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದವರು ಕವಯತ್ರಿ ಸರೋಜಿನಿ ನಾಯ್ಡು ಅವರು. ಅವರ ಭಾಷಣದ ಮುಖ್ಯಾಂಶ, ಗಾಂಧಿಯವರ ಮನಸ್ಸನ್ನು ಕೊರೆಯುತ್ತಿದ್ದ, ಹೆಚ್ಚುತ್ತಿದ್ದ ಹಿಂದೂ ಮುಸ್ಲಿಂ ವೈಮನಸ್ಯವೇ ಆಗಿತ್ತು. ಈ ಅಧಿವೇಶನಕ್ಕೆ

ಗಾಂಧಿಯವರನ್ನು ಕಾಣುವ ಕುತೂಹಲದಿಂದ ಇಂಗ್ಲಿಷ್ ಲೇಖಕ ಆಲ್ಡಸ್ ಹಕ್ಸ್ಲಿ ಅವರು ಬಂದಿದ್ದರು. ಗುಂಪಿನಲ್ಲಿ ಎದ್ದು ಕಾಣದ ಗಾಂಧಿಯವರ ವ್ಯಕ್ತಿತ್ವದ ಸಾಮಾನ್ಯತೆ, ಅವರ ನಿರೀಕ್ಷೆಯನ್ನು ಹುಸಿಗೊಳಿಸಿತ್ತು. ಆದರೆ 'ಈ ಮನುಷ್ಯ' ಹುಡುಗನಂತೆ ಮೈತುಂಬಾ ನಗುವುದು ಮತ್ತು ಆತನ ಮುಗ್ಧ ಮಂದಹಾಸ ಯಾರನ್ನಾದರೂ ಸೆಳೆಯುವಂಥದ್ದು ಎಂದು ಹಕ್ಸ್ಲಿ ಅಂದಿನ ದೃಶ್ಯದ ಬಗ್ಗೆ ಟಿಪ್ಪಣಿ ಮಾಡಲು ಮರೆಯಲಿಲ್ಲ.

ಈ ಅಧಿವೇಶನದ ಕಾರ್ಯಕಲಾಪಗಳಲ್ಲಿ ಗಾಂಧಿ ಹೆಚ್ಚಿಗೇನೂ ತೊಡಗಿಕೊಂಡಿರಲಿಲ್ಲ. ಅದಕ್ಕೆ ಅವರ ದೀರ್ಘ ಪ್ರವಾಸವೂ ಕಾರಣವಾಗಿತ್ತೆನ್ನಬಹುದು. ಜೊತೆಗೆ ಅಧಿವೇಶನದ ಸಂದರ್ಭದಲ್ಲಿ ದರ್ಶನಾಕಾಂಕ್ಷಿಗಳಾದ ಜನಸಮೂಹದ ಒತ್ತಡ. ಗಾಂಧಿ ಸೋತು ಹೋಗಿದ್ದರು. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಸ್ವತಃ ವೈದ್ಯರಾಗಿದ್ದ ಎಂ.ಎ. ಅನ್ಸಾರಿಯವರು ಗಾಂಧಿಯವರನ್ನು ಪರೀಕ್ಷಿಸಿದರು. ಗಾಂಧಿಯವರ ನರ ಮಂಡಲ ಒತ್ತಡಕ್ಕೆ ಸಿಕ್ಕಿ ಬಹು ದುರ್ಬಲವಾಗಿತ್ತು. ಅವರಿಗೆ ಪುಷ್ಟಿಕರ ಆಹಾರ ಮತ್ತು ಪೂರ್ಣ ವಿಶ್ರಾಂತಿಯ ತುರ್ತು ಅಗತ್ಯವಿದೆಯೆಂದು ಅನ್ಸಾರಿ ಹೇಳಿದರು. ಗಾಂಧಿಯವರಿಗೂ ಹಾಗೇ ಅನ್ನಿಸಿದ್ದುದರಿಂದ ಅವರೂ ಇದಕ್ಕೆ ಒಪ್ಪಿದರು. ಖಾದಿ ಮತ್ತು ಅಸ್ಪೃಶ್ಯತೆ ನಿವಾರಣಾ ಪ್ರಚಾರಾಂದೋಲನದ ಪ್ರವಾಸವನ್ನು ಸದ್ಯಕ್ಕೆ ಸ್ಥಗಿತಗೊಳಿಸಿದರು. ತಾವಿನ್ನು ಒಂದು ವರ್ಷ ಎಲ್ಲೂ ಹೋಗದೆ ಸಬರ್ಮತಿ ಆಶ್ರಮದಲ್ಲಿ ಉಳಿಯುವುದಾಗಿ ಪ್ರಕಟಿಸಿದರು. ಇದರಿಂದ ಅಪಾರ ಸಂತೋಷ ಪಟ್ಟವರೆಂದರೆ ಮೀರಾಬಾಯಿ. ಅವರು ಭಾರತಕ್ಕೆ ಆಗಮಿಸಿದಾಗಿನಿಂದ ತಮ್ಮ ಆಕಾಂಕ್ಷೆಯಂತೆ ಗಾಂಧಿಯವರ ಸೇವೆ ಮಾಡುವ ಅವಕಾಶವೇ ದೊರೆತಿರಲಿಲ್ಲ. ಈಗ ಅದು ಈಡೇರುವ ಅವಕಾಶ ತೆರೆದಿತ್ತು.

■

೩೩
ಸಬರ್ಮತಿ ಆಶ್ರಮದಲ್ಲಿ ವಿಶ್ರಾಂತಿ

೧೯೨೬ರ ಇಡೀ ವರ್ಷ ಗಾಂಧಿ ಸಬರ್ಮತಿ ಸತ್ಯಾಗ್ರಹ ಆಶ್ರಮದಲ್ಲಿ ಉಳಿಯಲು ತೀರ್ಮಾನಿಸಿದ್ದರು. ಬೆಳಿಗ್ಗೆ ಮತ್ತು ಸಂಜೆ ಸಾಮೂಹಿಕ ಪ್ರಾರ್ಥನೆ, ನೂಲುವುದು, ಓದುವುದು, ಬರೆಯುವುದು, ಆಶ್ರಮವಾಸಿಗಳಿಗೆ ಉಪನ್ಯಾಸಗಳು, ಆಶ್ರಮ ಶಾಲೆಯ ಪರಿವೀಕ್ಷಣೆ, ಬಂದವರೊಡನೆ ಮಾತಾಡುವುದು, ಅತಿಥಿ ಸತ್ಕಾರ, ಪತ್ರ ವ್ಯವಹಾರ ಅವರ ನಿತ್ಯದ ದಿನಚರಿಯಾಗಿತ್ತು. ಈ ಸಾಮಾನ್ಯ ಚಟುವಟಿಕೆಗಳ ಮೂಲಕವೇ ಅವರು ಬದುಕಿನ ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳನ್ನು ಕುರಿತ ಆಳದ ಒಳನೋಟಗಳುಳ್ಳ ವ್ಯಾಖ್ಯಾನಗಳನ್ನೂ ಮಾಡಿದ್ದನ್ನು ನಾವು ಗಮನಿಸಬಹುದು.

ಆಶ್ರಮದಲ್ಲಿನ 'ಹೃದಯಕುಂಜ' ಎಂಬ ಅವರ ಕುಟೀರದ ಎದುರಿಗೇ ದೂರದಲ್ಲಿ ಸಬರ್ಮತಿ ನದಿ ಹರಿಯುತ್ತಿತ್ತು. ಮಧ್ಯೆ ವಿಶಾಲ ಬಯಲಿತ್ತು. ಈ ಬಯಲಲ್ಲಿಯೇ ಎರಡೂ ಹೊತ್ತು ಸರ್ವಧರ್ಮ ಪ್ರಾರ್ಥನೆ ನಡೆಯುತ್ತಿದ್ದುದು ಮತ್ತು ಗಾಂಧಿ ನೂಲುತ್ತಿದ್ದುದು ಕೂಡ. ಗಾಂಧಿ ತಮ್ಮ ಕುಟೀರದೊಳಗೆ ವಾಸಿಸಿದ್ದು ಕಡಿಮೆಯೆಂದೇ ಹೇಳಬೇಕು. ಅವರ ಕೆಲಸ ಕಾರ್ಯಗಳೆಲ್ಲವೂ ಹೊರಗಿನ ಜಗುಲಿಯ ಮೇಲೇ. ಮಳೆ ರಾತ್ರಿಗಳ ಹೊರತಾಗಿ ಅವರು ಮಲಗುತ್ತಿದ್ದುದೂ ಆ ಹೊರಾಂಗಣದಲ್ಲೇ.

ತಮ್ಮನ್ನು ಭೇಟಿ ಮಾಡಲು ಬಂದ ಮೋತಿಲಾಲ್ ನೆಹರೂ, ಸ್ವಾಮಿ ಶ್ರದ್ಧಾನಂದ ಹಾಗೂ ಜಮ್ನಾಲಾಲ್ ಬಜಾಜರೊಡನೆ ಮಾತುಕತೆ ಮಾಡಿದ್ದರ ಹೊರತಾಗಿ ೧೯೨೬ರ ಡಿಸೆಂಬರ್‌ವರೆಗೆ ಗಾಂಧಿ ಸಾರ್ವಜನಿಕ ಜೀವನದ ಬಗ್ಗೆ ಮಾತಾಡಿದ್ದು ಇಲ್ಲವೇ ಇಲ್ಲವೆನ್ನಬಹುದು. ಈಗ ಅವರು ಪ್ರತಿ ಸೋಮವಾರ ಮೌನವ್ರತ ಆಚರಿಸುತ್ತಿದ್ದುದರಿಂದ ಸಾರ್ವಜನಿಕ ಜೀವನದ ಬಗೆಗೆ ಇರಲಿ, ಆಶ್ರಮದ ಚಟುವಟಿಕೆಗಳ ಬಗೆಗೂ ಮಾತಾಡಿದ್ದು ಕಡಿಮೆ. ಇದರಿಂದ ಚಿಂತಾಕ್ರಾಂತರಾದ ಹಿಂದೂ, ಮುಸ್ಲಿಂ ಮತ್ತು ಕ್ರಿಶ್ಚಿಯನ್ನರು ಸೇರಿದಂತೆ ಕೆಲ ರಾಷ್ಟ್ರ ಚಿಂತಕರು ಸೆಪ್ಟೆಂಬರ್‌ನಲ್ಲಿ ಒಂದು ಸಾರ್ವಜನಿಕ ಹೇಳಿಕೆ ನೀಡಿ, ಗಾಂಧಿಯವರು ರಾಷ್ಟ್ರದ ಪ್ರಶ್ನಾತೀತ ನಾಯಕರಾಗಿದ್ದು, ಅವರು ತಮ್ಮ 'ಮೌನ'ವನ್ನು ಮುರಿದು ರಾಷ್ಟ್ರೀಯ ಚಳುವಳಿಯ ನೇತೃತ್ವ ವಹಿಸಿ ಮಾರ್ಗದರ್ಶನ ಮಾಡಬೇಕೆಂದು ಕೇಳಿಕೊಂಡರಾದರೂ ಗಾಂಧಿ ಅದಕ್ಕೆ ಕಿವಿಗೊಡಲಿಲ್ಲ. ಅವರಿಗೆ ಆ ಹೊತ್ತಿಗೆ ಡಿಸೆಂಬರ್‌ನಲ್ಲಿ ಆಯೋಜಿತವಾಗಿದ್ದ ಕಾಂಗ್ರೆಸ್‌ನ ವಾರ್ಷಿಕ ಅಧಿವೇಶನಕ್ಕೆ ಬರಬೇಕೆಂಬ ಒತ್ತಾಯಪೂರ್ವಕ ಆಹ್ವಾನವೂ ಬಂದಿತ್ತು. ಈ ಹಿನ್ನೆಲೆಯಲ್ಲಿ ಅವರು 'ಇಂದು ಒಡೆದು ಹೋಗಿರುವ ರಾಷ್ಟ್ರೀಯ ಆಂದೋಲನದ ಗುಂಪುಗಳನ್ನಾಗಲೀ, ಮನಸ್ಸುಗಳನ್ನಾಗಲೀ ಒಂದುಗೂಡಿಸುವ ಶಕ್ತಿ ನನಗಿದೆ ಎಂಬ ವಿಶ್ವಾಸ ನನ್ನಲ್ಲಿಲ್ಲ.

ಗೌಹಾತಿಗೆ ಹೋಗುವ ವಿಷಯ ಮನಕ್ಕೆ ಬಂದಾಗಲೆಲ್ಲ ಮನಸ್ಸು ಕುಗ್ಗುತ್ತದೆ' ಎಂದು ಹೇಳಿದರು. ಇದು ಕಾಂಗ್ರೆಸ್‌ನಲ್ಲಿ ಗಾಂಧಿಯವರ ನಿಯಂತ್ರಣ ತಪ್ಪಿ ಹೋಗಿತ್ತು ಎಂಬುದನ್ನು ಸೂಚಿಸುತ್ತದೆ. ಇದರ ಹಿಂದೆ ಸ್ವರಾಜ್ ಪಕ್ಷದ ಸದಸ್ಯರ ಅಧಿಕಾರ ಲಾಲಸೆಯ ವರ್ತನೆ, ಸ್ವಾಮಿ ಶ್ರದ್ಧಾನಂದ, ಮಾಳವೀಯ ಮತ್ತು ಲಜಪತ್‌ರಾಯ್ ಮತ್ತು ಅವರ ಅನುಯಾಯಿಗಳು ಹಿಂದೂವಾದಿ ಸಂಘಟನೆಗಳೊಂದಿಗೆ ಮೃದುವಾಗಿ ವರ್ತಿಸುತ್ತಾ ನಡೆಸಿದ್ದ ಗೊಂದಲ ಹುಟ್ಟಿಸುವ ಚಟುವಟಿಕೆಗಳು ಮತ್ತು ಮುಸ್ಲಿಂ ಲೀಗ್ ನಾಯಕರ ಪ್ರತ್ಯೇಕವಾದಿ ಬೇಡಿಕೆಗಳ ಪರಿದೃಶ್ಯವಿತ್ತೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಇವೆಲ್ಲ ತಹಬಂದಿಗೆ ಬರಲೆಂದು ಅವರು ಮೌನ ವಹಿಸಿದ್ದಂತಿತ್ತು. ಆದರೂ ಬಾಂಬೆಯ ಒಂದು ರಾಷ್ಟ್ರೀಯವಾದಿ ದಿನಪತ್ರಿಕೆ ನಡೆಸಿದ ಸಮೀಕ್ಷೆಯಲ್ಲಿ ಗಾಂಧಿಯವರೇ ಜನರಿಂದ ಅತಿ ಹೆಚ್ಚು ಮಾನ್ಯತೆ ಪಡೆದ ರಾಷ್ಟ್ರ ನಾಯಕರಾಗಿದ್ದರು. ನಂತರದ ಸ್ಥಾನಗಳಲ್ಲಿದ್ದವರೆಂದರೆ ರಬೀಂದ್ರನಾಥ ಟ್ಯಾಗೋರ್, ಸುಭಾಷ್ ಚಂದ್ರಬೋಸ್, ಮೋತಿಲಾಲ್ ನೆಹರೂ ಮುಂತಾದವರು.

ಸ್ವಾಮಿ ಶ್ರದ್ಧಾನಂದರ ಹತ್ಯೆ

ಈ ಮಧ್ಯೆ ಒಂದಿಬ್ಬರು ಅಮೆರಿಕನ್ ಪ್ರಜೆಗಳು ಮತ್ತು ಕ್ಯಾಥರಿನ್ ಮೇಯೋ ಎಂಬ ಲೇಖಕಿ ಗಾಂಧಿಯವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ನ್ಯೂಯಾರ್ಕ್‌ನ ಓರ್ವ 'ಸಾಂಸ್ಕೃತಿಕ ವಕ್ತಾರ' ಗಾಂಧಿಯವರನ್ನು ಶುಲ್ಕಾಧಾರಿತ ಉಪನ್ಯಾಸ ಮಾಲಿಕೆಗೆ ಅಮೆರಿಕಾಕ್ಕೆ ಆಹ್ವಾನಿಸಿದ್ದ! ೧೯೨೬ರ ಡಿಸೆಂಬರ್ ಎರಡನೇ ವಾರದಲ್ಲಿ ಗಾಂಧಿ ತಮ್ಮ ಇತ್ತೀಚಿನ ವಾರ್ಷಿಕ ಕಾರ್ಯಕ್ರಮದಂತೆ ಅಖಿಲ ಭಾರತ ನೂಲುವವರ ಸಂಘದ ಸಭೆಗಾಗಿ ವರ್ಧಾಗೆ ಹೋದರು. ಈ ಸಂಘದಲ್ಲಿ ೧೧೦ ಜನ ಸದಸ್ಯ ಸಂಸ್ಥೆಗಳ ಪ್ರತಿನಿಧಿಗಳಿದ್ದು ಒಟ್ಟು ಸುಮಾರು ೪೩ ಸಾವಿರ ನೂಲುಗಾರರು ಮತ್ತು ಮೂರೂವರೆ ಸಾವಿರ ನೇಕಾರರಿಗೆ ಅದು ಆಶ್ರಯ ನೀಡಿತ್ತು. ಈ ಸಭೆಯಿಂದ ಗಾಂಧಿ, ಹಲವರ ಒತ್ತಾಯದ ಮೇರೆಗೆ ಕಾಂಗ್ರೆಸ್ ಅಧಿವೇಶನಕ್ಕಾಗಿ ಗೌಹಾತಿಗೆ ರೈಲು ಹತ್ತಿದ ಸ್ವಲ್ಪ ಸಮಯದಲ್ಲೇ, ಮಾರ್ಗ ಮಧ್ಯದಲ್ಲಿ ಲಜಪತ್‌ರಾಯ್‌ರಿಂದ ಸ್ವಾಮಿ ಶ್ರದ್ಧಾನಂದರ ಕೊಲೆಯ ಸುದ್ದಿಯಿದ್ದ ತಂತಿ ತಲುಪಿತು. ಅಸ್ವಸ್ಥರಾಗಿ ದೆಹಲಿಯಲ್ಲಿ ಸುಧಾರಿಸಿಕೊಳ್ಳುತ್ತಿದ್ದ ಶ್ರದ್ಧಾನಂದರನ್ನು, ಅಬ್ದುಲ್ ರಶೀದ್ ಎಂಬ ಒಬ್ಬ ಮುಸ್ಲಿಂ ಉಗ್ರವಾದಿ ಗುಂಡಿಟ್ಟು ಕೊಂದಿದ್ದ. ಶ್ರದ್ಧಾನಂದರು ಆರ್ಯಸಮಾಜದ ನಾಯಕರಾಗಿ, ಮುಸ್ಲಿಮರನ್ನು ಹಿಂದೂ ಧರ್ಮಕ್ಕೆ ಪರಿವರ್ತಿಸುತ್ತಿದ್ದ ಕೆಲಸ ಈ ಕೊಲೆಗೆ ಕಾರಣವಾಗಿತ್ತು.

ಗಾಂಧಿ, ಸ್ವಾಮಿ ಶ್ರದ್ಧಾನಂದರ ಈ ಕಾರ್ಯಕ್ರಮವನ್ನು ಅಷ್ಟಾಗಿ ಇಷ್ಟಪಡುತ್ತಿರಲಿಲ್ಲವಾದರೂ, ಅವರು ಅಸ್ಪೃಶ್ಯತಾ ನಿವಾರಣೆಗಾಗಿ ಮಾಡುತ್ತಿದ್ದ ಚಟುವಟಿಕೆಗಳ ಬಗ್ಗೆ, ಅದನ್ನು ಕುರಿತ ಅವರ ಬದ್ಧತೆಯ ಬಗ್ಗೆ ಗೌರವವನ್ನು ಹೊಂದಿದ್ದರು. ಅವರು ಗೌಹಾತಿಯ ಅಧಿವೇಶನದಲ್ಲಿ ಸ್ವಾಮಿ ಶ್ರದ್ಧಾನಂದರಿಗೆ ಗೌರವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತಾ ಈ ಘಟನೆ ಇಸ್ಲಾಂಗೆ ನಾಚಿಕೆ ತರುವಂಥದ್ದಾಗಿದ್ದು, ಇದು ಹಿಂದೂ ಮುಸ್ಲಿಮರಿಬ್ಬರಿಗೂ ಅಗ್ನಿ ಪರೀಕ್ಷೆಯ ಸಮಯವಾಗಿದ್ದು, ಇದನ್ನು ಗೆಲ್ಲುವ ಶಕ್ತಿಯನ್ನು ಭಗವಂತ ಇಬ್ಬರು ಧರ್ಮೀಯರಿಗೂ

ಕೊಡಲಿ ಎಂದು ಪ್ರಾರ್ಥಿಸಿದರು.

ನಂತರ ಗಾಂಧಿ ಇದೇ ಮಾತುಗಳನ್ನು ವಿಸ್ತರಿಸಿ 'ಯಂಗ್ ಇಂಡಿಯಾ'ದಲ್ಲಿ ಒಂದು ಶ್ರದ್ಧಾಂಜಲಿ ಲೇಖನವನ್ನು ಬರೆದರು. ಇದಕ್ಕೆ ಪ್ರತಿಕ್ರಿಯಿಸಿದ ಓದುಗರೊಬ್ಬರು, ಗಾಂಧಿ ಶ್ರದ್ಧಾನಂದರ ಕೊಲೆಯನ್ನು, ಇಸ್ಲಾಂನಲ್ಲಿ ಅಂತರ್ಗತವಾಗಿರುವ ಹಿಂಸಾತ್ಮಕ ಗುಣದ ಪ್ರಸ್ತಾಪ ಮಾಡದೆ ಖಂಡಿಸಿರುವ ರೀತಿ ತುಂಬ ಮೃದುವಾಗಿದೆ ಎಂದೂ, ದುರದೃಷ್ಟವಶಾತ್ ಇಂಥದೇ ಕೃತ್ಯವನ್ನು ಹಿಂದೂವೊಬ್ಬ ಮಾಡಿದ್ದರೆ ಗಾಂಧಿ ಹಿಂದೂಗಳ ಪ್ರಾಯಶ್ಚಿತ್ತಕ್ಕಾಗಿ ಪರಿಪರಿಯಾದ ವಾದಗಳನ್ನು ಮಂಡಿಸುತ್ತಿದ್ದರು ಎಂದು ದೂರಿದರು.

ಓದುಗರ ಈ ಪ್ರತಿಕ್ರಿಯೆಯ ಪೂರ್ಣ ಪಾಠವನ್ನು 'ಯಂಗ್ ಇಂಡಿಯಾ'ದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿದ ಗಾಂಧಿ ಅದಕ್ಕೆ ಹೀಗೆ ಉತ್ತರಿಸಿದರು: ಶ್ರದ್ಧಾನಂದರ ಕೊಲೆಗೆ ಪತ್ರಿಕೆಗಳು ಮತ್ತು ಕೆಲ ಮೌಲ್ವಿಗಳು ಅವರ ಚಟುವಟಿಕೆಗಳ ಬಗ್ಗೆ ನಡೆಸಿದ ವಿಕ್ಷಿಪ್ತ ಚರ್ಚೆಯ ಪರಿಣಾಮವೇ ಹೊರತು ಇಸ್ಲಾಂನ ತಥಾಕಥಿತ ಹಿಂಸಾತ್ಮಕತೆಯಲ್ಲ. ಇಸ್ಲಾಂ ಹಿಂಸಾತ್ಮಕವಾಗಿದ್ದರೆ ಹಿಂದೂಗಳ ಅಸ್ಪೃಶ್ಯತಾ ಆಚರಣೆ ಕಡಿಮೆ ಹಿಂಸಾತ್ಮಕವೇ? ಇಸ್ಲಾಂನ ಅನುಯಾಯಿಗಳ ಬಗ್ಗೆ, ಅವರ ಖಡ್ಗಪ್ರಿಯತೆ ಮಿತಿಮೀರಿದೆ ಎಂದು ನಾನೀಗಾಗಲೇ ಹೇಳಿರುವೆ. ಆದರೆ ಇದಕ್ಕೆ ಪ್ರವಾದಿಯ ಉಪದೇಶ ಕಾರಣವೆಂದು ನಾನು ಒಪ್ಪುವುದಿಲ್ಲ. ಬದಲಾಗಿ ಅದು ಬೆಳೆದ ವಾತಾವರಣ ಹಾಗಿತ್ತು ಎನ್ನಬಹುದು. ಕ್ರೈಸ್ತ ಧರ್ಮದ ಚರಿತ್ರೆಯೇನೂ ಕಡಿಮೆ ರಕ್ತಸಿಕ್ತವಾಗಿಲ್ಲ. ಅದೇನೂ ಯೇಸುವಿನ ಉಪದೇಶದ ಪ್ರಕಾರವೇ ಹರಡಲಿಲ್ಲ. ಇವೆರಡೂ ಇನ್ನೂ ವಿಕಾಸವಾಗುತ್ತಿರುವ ಧರ್ಮಗಳು. ಹಾಗಾಗಿ ಮೌಲ್ವಿಗಳಾಗಲೀ, ಪಾದರಿಗಳಾಗಲೀ, ಮಹಮ್ಮದ್ ಅಥವಾ ಏಸುವಿನ ಉಪದೇಶಗಳಿಗೆ ಇದಮಿಥ್ಥಂ ಎಂಬ ಆತ್ಯಂತಿಕ ಅರ್ಥ ನೀಡುವುದು ತಪ್ಪು.

ಗೀತಾ ತಾತ್ಪರ್ಯ ಮತ್ತು ಧರ್ಮ ಸಮನ್ವಯ

ಗಾಂಧಿ ಸತ್ಯಾಗ್ರಹ ಆಶ್ರಮದಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ವರ್ಷದಲ್ಲೇ ಆಶ್ರಮವಾಸಿಗಳಿಗಾಗಿ ಭಗವದ್ಗೀತೆ, ನಂತರ ಗುಜರಾತ್ ವಿದ್ಯಾಪೀಠದಲ್ಲಿ ಬೈಬಲ್ ಕುರಿತು ಪ್ರವಚನಗಳನ್ನು ನೀಡಿದರು. ೧೯೨೬ರ ಮಾರ್ಚ್ ತಿಂಗಳಲ್ಲಿ ಆರಂಭವಾದ ಈ ಉಪನ್ಯಾಸ ಮಾಲೆ, ತಮ್ಮ ಬಾಲ್ಯದಿಂದಲೂ ನಿರಂತರವಾಗಿ ತಮಗೆ ಸ್ಫೂರ್ತಿಯಾಗಿ, ಮಾರ್ಗದರ್ಶಕ ಶಕ್ತಿಯಾಗಿ ಉಳಿದಿದ್ದ ಗೀತೆಯ ತಾತ್ಪರ್ಯವನ್ನು ತಾವು ಅರ್ಥ ಮಾಡಿಕೊಂಡಂತೆ ನಿರೂಪಿಸುತ್ತಾ ಹೋದರು. ಗೀತೆಯನ್ನು ಒಂದು ರೂಪಕವಾಗಿ ನೋಡಬೇಕೆಂದು ಹೇಳಿದ ಅವರು, ಇದರಲ್ಲಿ ಅರ್ಜುನನಿಗೆ ಎಲ್ಲದರ ಮೋಹವನ್ನೂ ತೊರೆದು ಸ್ಥಿತಪ್ರಜ್ಞನಾಗಲು ಹೇಳುವ ಕೃಷ್ಣ, ವಾಸ್ತವದಲ್ಲಿ ಯುದ್ಧವನ್ನು ಬೋಧಿಸಲಾರ ಎಂದು ಅಭಿಪ್ರಾಯಪಟ್ಟರು. ಅಲ್ಲಿ ಚಿತ್ರಿತವಾಗಿರುವ ಯುದ್ಧಭೂಮಿ ಮನೋಭೂಮಿಯಾಗಿದ್ದು, ಅಲ್ಲಿ ಬರುವ ಪಾತ್ರಗಳು ಮನುಷ್ಯನ ವಿವಿಧ ಮನೋವೃತ್ತಿಗಳ ಸಂಕೇತಗಳನ್ನಾಗಿ ಗ್ರಹಿಸಬೇಕೆಂದು ಅವರು ಹೇಳಿದರು. ಹಾಗಾಗಿ ಅಲ್ಲಿ ನಡೆಯುವ ಯುದ್ಧ, ವಿವಿಧ ಮನೋವೃತ್ತಿಗಳ ನಡುವಣ ಚಿತ್ರಣ ಮಾತ್ರವಾಗಿದ್ದು

ಯಾವ ಕಾರಣಕ್ಕೂ ಅದನ್ನು ಹಿಂಸಾಪರವಾದ ಭೌತಿಕ ಯುದ್ಧವೆಂದು ಪರಿಗಣಿಸಬಾರದೆಂಬುದು. ಅದರ ಒಟ್ಟು ವ್ಯಾಖ್ಯಾನಕ್ಕಾಗಿ ಅವರು ಬುದ್ಧ, ಯೇಸು, ಮಹಮ್ಮದ್, ಚೈತನ್ಯ ಮಹಾಪ್ರಭು, ಗುಜರಾತಿ ಕವಿ ನರಸಿಂಹ ಮೆಹತಾ, ಮುಂತಾದವರ ಉಪದೇಶಗಳನ್ನು ವ್ಯಾಪಕವಾಗಿ ಬಳಸಿದರು. ಗೀತೆಯಲ್ಲಿ ಉಲ್ಲೇಖವಾಗುವ ಕರ್ಮವೆಂದರೆ ಜೀವನೋಪಾಯಕ್ಕಾಗಿ ಮಾಡುವ ಕೆಲಸವಾಗಿರದೆ, ಜ್ಞಾನಾನ್ವೇಷಣೆಯ ಭಾಗವಾಗಿ ಮಾಡುವ ಕೆಲಸ ಎಂದು ಅರ್ಥೈಸಿದರು. ಹಾಗೇ ಯಜ್ಞವೆಂದರೆ ಪುರಾತನ ಕಾಲದಲ್ಲಿ ಯಾವುದೋ ಉದ್ದೇಶಕ್ಕಾಗಿ ದೇವತೆಗಳ ಸಂಪ್ರೀತಿಗೆಂದು ನಡೆಸಲಾಗುತ್ತಿದ್ದ ಪಶುಬಲಿಯ ಆಚರಣೆಯೆಂದು ಅರ್ಥೈಸದೆ, ಈಗ ಪ್ರಾಣಿದಯೆಯನ್ನು ರೂಢಿಸಿಕೊಂಡಿರುವ ನಾವು ಅದನ್ನು ಮಾನಸಿಕ ಸಂಕಲ್ಪದ ರೂಪದಲ್ಲಿ ಆಚರಿಸಬೇಕಾಗಿದೆ ಎಂದರು. ಗೀತೆ ರಚಿತವಾದ ಕಾಲದಲ್ಲಿ ಜನಕಲ್ಯಾಣಕ್ಕಾಗಿ ಕಾಡು ಕಡಿಯುವುದನ್ನು ಯಜ್ಞವೆಂದು ಕರೆಯಲಾಗುತ್ತಿತ್ತು. ಇಂದು ಜನಕಲ್ಯಾಣಕ್ಕಾಗಿ ಚರಕಾ ತಿರುಗಿಸುವುದು ಯಜ್ಞವಾಗಬೇಕು ಎಂದು ಪ್ರತಿಪಾದಿಸಿದ ಅವರು, ಚರಕಾ ತಿರುಗಿಸುವುದೇ ಇಂದು ಬ್ರಾಹ್ಮಣನ ನಿಜವಾದ ಕರ್ತವ್ಯ ಎನ್ನುತ್ತಾ ವ್ಯಾಸನ ಶಬ್ದಗಳಿಗೆ ನಮ್ಮ ಕಾಲಕ್ಕೆ ಅಗತ್ಯವಾದ ಅರ್ಥ ನೀಡುವುದು, ತಂದೆಯ ವಾರಸುದಾರಿಕೆಯನ್ನು ಮಗ ಸುಧಾರಿಸುವುದು ಹೇಗೆ ತಪ್ಪಾಗುವುದಿಲ್ಲವೋ ಹಾಗೆ ತಪ್ಪೆನಿಸುವುದಿಲ್ಲ ಎಂದು ಹೇಳಿದರು. ಗೀತೆ ಮನಸ್ಸಿಗೆ ಅಮೃತಪ್ರಾಯವಾಗಿದ್ದರೆ, ಚರಕ ದೇಹಕ್ಕೆ ಅಮೃತಪ್ರಾಯವಾಗಿದ್ದು, ಚರಕದ ಮೂಲಕವೇ ಸ್ವರಾಜ್ಯ ಸಾಧಿಸಬಹುದೆಂಬ ಕರೆಯೊಂದಿಗೆ ತಮ್ಮ ಉಪನ್ಯಾಸ ಮಾಲೆಯನ್ನು ಮುಕ್ತಾಯಗೊಳಿಸಿದರು. ಜೊತೆಗೆ ಆಶ್ರಮವಾಸಿಗಳೂ ಗೀತೆಯಿಂದ ಪ್ರೇರಣೆ ಪಡೆದು ತನ್ನದೆನ್ನುವ ಎಲ್ಲ ಮೋಹಗಳನ್ನೂ ತೊರೆದು ನಿಷ್ಕಾಮ ಕರ್ಮದಲ್ಲಿ ತೊಡಗಬೇಕೆಂದು ಸಲಹೆ ಮಾಡಿದರು.

ಭಗವದ್ಗೀತೆ ಕುರಿತ ಪ್ರವಚನದ ನಂತರ ಗಾಂಧಿ, ಆಗಸ್ಟ್‌ನಲ್ಲಿ ಗುಜರಾತ್ ವಿದ್ಯಾಪೀಠದ ವಿದ್ಯಾರ್ಥಿಗಳಿಗಾಗಿ ಗೀತೆಯ ನಂತರ ತಮಗೆ ಬಹುಪ್ರಿಯವಾಗಿದ್ದ ಧರ್ಮಗ್ರಂಥವಾಗಿದ್ದ ಬೈಬಲ್ ಕುರಿತು ಪ್ರವಚನ ಆರಂಭಿಸಿದರು. ಇದಕ್ಕೆ ಪತ್ರಿಕೆಯೊಂದರಲ್ಲಿ ಸಂಪ್ರದಾಯವಾದಿಗಳಿಂದ ತೀವ್ರ ವಿರೋಧ ವ್ಯಕ್ತವಾದಾಗ, ಗಾಂಧಿ ಇದನ್ನು ತಾವು ವಿದ್ಯಾರ್ಥಿಗಳ ಅಪೇಕ್ಷೆಯ ಮೇರೆಗೇ ಆರಂಭಿಸಿರುವುದಾಗಿ ಉತ್ತರಿಸುತ್ತಾ, ಅನ್ಯ ಧರ್ಮಗಳ ತಿಳುವಳಿಕೆ ಸ್ವಧರ್ಮದ ತಿಳುವಳಿಕೆಯನ್ನು ಹೇಗೆ ಹೆಚ್ಚಿಸುತ್ತದೆ ಎಂಬುದನ್ನು ವಿವರಿಸಿದರು. ತಾವೊಬ್ಬ ಸನಾತನ ಹಿಂದೂವಾಗಿರುವುದರಿಂದಲೇ ಇತರ ಧರ್ಮಗಳ ಗ್ರಂಥಗಳನ್ನು ಗೌರವಿಸಿ ಅಧ್ಯಯನ ಮಾಡುತ್ತಿರುವುದಾಗಿ ಹೇಳಿದ ಅವರು, ಪುರಾತನ ಗ್ರಂಥವೊಂದು ಅಥವಾ ಸಂಸ್ಕೃತದ ರಚನೆಯೊಂದು ಹೇಳಿದೆ ಎಂದು ಕೆಟ್ಟದ್ದನ್ನು ಒಳ್ಳೆಯದೆಂದು ಒಪ್ಪಿಕೊಳ್ಳುವ ಸಂಕುಚಿತ ಮನಸ್ಸಿನ ಪಾಶಂಡಿ ಸನಾತನ ಹಿಂದೂ ತಾವಲ್ಲ ಎಂದು ಘೋಷಿಸಿದರು. ಪರಲೋಕದಲ್ಲಿ ಹಿಂದು-ಮುಸ್ಲಿಂ-ಕ್ರಿಶ್ಚಿಯನ್ ಇತ್ಯಾದಿ ಹಣೆಪಟ್ಟಿಗಳಿರುವುದಿಲ್ಲವಾದರೂ, ಈ ಲೋಕದಲ್ಲಿ ಇಂತಹ ಹಣೆಪಟ್ಟಿಯೊಂದು ಅನಿವಾರ್ಯವಾಗಿರುವುದರಿಂದ, ತಾವು ತಮ್ಮ ಹಿರಿಯರ ಹಣೆಪಟ್ಟಿಯನ್ನು ಉಳಿಸಿಕೊಂಡಿದ್ದು, ಅದು ತಮ್ಮ ವ್ಯಕ್ತಿತ್ವದ ಬೆಳವಣಿಗೆ ಮತ್ತು ಇತರ ಧರ್ಮಗಳಲ್ಲಿನ

ಒಳ್ಳೆಯದನ್ನು ತನ್ನ ಧರ್ಮದೊಳಕ್ಕೆ ಅನುಸಂಧಾನ ಮಾಡಿಕೊಳ್ಳಲು ಅಡ್ಡಿಯಾಗದು ಎಂದು ಅವರು ಸ್ಪಷ್ಟಪಡಿಸಿದರು. ಯಾವುದೇ ಧರ್ಮ ಪರಿಪೂರ್ಣವಲ್ಲ; ಪ್ರತಿಯೊಂದರಲ್ಲೂ ದೋಷಗಳನ್ನು ಕಾಣಬಹುದು ಎಂದ ಗಾಂಧಿ, ಯಾವುದೇ ಧರ್ಮದ ಮನುಷ್ಯ ಇನ್ನೊಂದು ಧರ್ಮದಲ್ಲಿನ ಒಳ್ಳೆಯ ಅಂಶಗಳನ್ನು ಮೆಚ್ಚಿ ಅದಕ್ಕೆ ಮತಾಂತರವಾಗುವುದಕ್ಕಿಂತ ತಾನು ಮೆಚ್ಚಿದ ಆ ಧರ್ಮದ ಅಂಶಗಳನ್ನು ತನ್ನ ಧರ್ಮದೊಳಕ್ಕೆ ಅಳವಡಿಸಿಕೊಂಡು ತನ್ನ ಧರ್ಮದ ಉತ್ತಮ ಮನುಷ್ಯನಾಗುವುದೇ ಹೆಚ್ಚು ಸಾಧು ಎಂದು ಅಭಿಪ್ರಾಯಪಟ್ಟರು.

ಪ್ರಾಣಿ ಹತ್ಯೆ ಮತ್ತು ಅಹಿಂಸೆಯ ಅರ್ಥ

ಧರ್ಮ ಸಮನ್ವಯ ಕುರಿತ ಗಾಂಧಿಯವರ ಈ ಸಂಕಥನದಂತೆಯೇ ಅಹಿಂಸೆಯನ್ನು ಕುರಿತ ಅವರ ಸಂಕಥನದ ಸಂಕೀರ್ಣತೆ ಬಿಚ್ಚಿಕೊಳ್ಳುವ ಸಂಗರ್ಭಗಳು ಇದೇ ಅವಧಿಯಲ್ಲಿ ಒದಗಿ ಬಂದವು. ಒಮ್ಮೆ ಹತೋಟಿಗೆ ಸಿಗದ ಬಿಡಾಡಿ ನಾಯಿಗಳ ದೊಡ್ಡ ಹಿಂಡೊಂದು ಗಾಂಧಿಯವರ ಮಿತ್ರ ಅಂಬಾಲಾಲ್ ಸಾರಾಭಾಯಿಯವರ ಜವಳಿ ಗಿರಣಿಯ ಆವರಣದ ಗೋಡೆಗಳನ್ನು ಹಾರಿ ಬಂದು ಹಾವಳಿ ನಡೆಸತೊಡಗಿದವು. ಹಾವಳಿಯನ್ನು ತಡೆಯಲಾಗದ ಅಂಬಾಲಾಲ್ ಆ ನಾಯಿಗಳನ್ನು ಕೊಲ್ಲಿಸಿದರು. ಇದರಿಂದ ಕುಪಿತರಾದ ಕೆಲ ಜೈನರು ಅಂಬಾಲಾಲರ ಮೇಲೆ ಪ್ರಾಣಿ ಹಿಂಸೆಯ ಆರೋಪ ಹೊರಿಸಿ, ಗಾಂಧಿಯವರ ಮಧ್ಯಸ್ಥಿಕೆಯಲ್ಲಿ ಅಂಬಾಲಾಲರಿಗೆ ಶಿಕ್ಷೆ ತೀರ್ಮಾನಿಸಬಯಸಿದರು. ಆದರೆ ಅವರ ಆಶ್ಚರ್ಯಕ್ಕೆ ಗಾಂಧಿ, ಅಂಬಾಲಾಲರ ಕ್ರಮವನ್ನು ಸಮರ್ಥಿಸಿದರು. ಇದು ಬಹಳ ಜನರ ಆಶ್ಚರ್ಯ ಮತ್ತು ಕೆಲವರ ಅಸಮಾಧಾನಕ್ಕೆ ಕಾರಣವಾದಾಗ, ಅವರು 'ನವಜೀವನ' ಮತ್ತು 'ಯಂಗ್ ಇಂಡಿಯಾ' ಪತ್ರಿಕೆಗಳಲ್ಲಿ ತಮ್ಮ ಸಮರ್ಥನೆಯನ್ನು ವಿವರಿಸಿ ಲೇಖನಗಳನ್ನು ಬರೆದರು. ಅವರ ವಾದದ ಸಾರಾಂಶ ಹೀಗಿತ್ತು: ಒಂದು ತತ್ವದ ಪರಿಪೂರ್ಣತೆ, ಅಪರಿಪೂರ್ಣವಾದ ಲೋಕದಲ್ಲಿ ಮತ್ತು ಅಪರಿಪೂರ್ಣವಾದ ಮನುಷ್ಯರಿಂದ ಸದಾ ರಾಜಿಯ ಮಿತಿಗಳಿಗಾಗಿ ಹುಡುಕಾಟ ನಡೆಸುತ್ತಿರುತ್ತದೆ. ತತ್ವದ ಪರಿಪೂರ್ಣತೆ ಕಾಡಿನಲ್ಲಿರುವ ಬೈರಾಗಿಯೊಬ್ಬನಿಂದ ಸಾಧ್ಯವಾಗಬಹುದೇನೋ. ಆದರೆ ಪಟ್ಟಣದ ಜನ ಅದನ್ನು ಒಂದು ಮಿತಿಯಲ್ಲಿ ಮಾತ್ರ ಸಾಧಿಸಲು ಸಾಧ್ಯ. ನಾಯಿಗಳನ್ನು ಕೊಲ್ಲುವುದು ಪಾಪವೇ ಸರಿ. ಆದರೆ ಕೊಲ್ಲದಿರುವುದು ಇನ್ನೂ ದೊಡ್ಡ ಪಾಪದಲ್ಲಿ ಪರಿಣಮಿಸುವಂತಹ ಪರಿಸ್ಥಿತಿ ಉಂಟಾಗಿದೆ. ಅಹಮದಾಬಾದ್ ನಗರದ ಆಸ್ಪತ್ರೆಗಳಲ್ಲಿ ನಾಯಿ ಕಡಿತಗಳ, ವಿಶೇಷವಾಗಿ ಹುಚ್ಚುನಾಯಿ ಕಡಿತಗಳ ಪ್ರಮಾಣ ಗಣನೀಯವಾಗಿ ಏರಿ ಪರಿಸ್ಥಿತಿ ಆತಂಕ ಹುಟ್ಟಿಸಿದೆ.

ಇದೇ ಸಂದರ್ಭದಲ್ಲಿ, ಹಿಂದೊಮ್ಮೆ ಬೆಳೆ ಹಾಳು ಮಾಡುತ್ತಿದ್ದ ಕೋತಿಗಳನ್ನು ಬೇರೆ ನಿರ್ವಾಹವಿಲ್ಲದಿದ್ದಾಗ ಕೊಲ್ಲಲು ನೀಡಿದ್ದ ಗಾಂಧಿಯವರ ಸೂಚನೆಯನ್ನೂ ಮತ್ತು ಎರಡು ವರ್ಷಗಳ ನಂತರ, ಆಶ್ರಮದ ಒಂದು ಕರು ಗಾಯಗೊಂಡು ಬಹು ಕಾಲ ನರಳುತ್ತಿದ್ದುದನ್ನು ನೋಡಲಾಗದೆ ಅದಕ್ಕೆ ವೈದ್ಯರಿಂದ ಚುಚ್ಚುಮದ್ದು ನೀಡಿ ಸಾಯಿಸಿದ್ದ ಅವರ ಕ್ರಮವನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು. ಮನುಷ್ಯರ ಹೃದಯ ಪರಿವರ್ತನೆಯನ್ನು ನಿರೀಕ್ಷಿಸಬಹುದು; ಆದರೆ ಪ್ರಾಣಿಗಳ ವಿಷಯದಲ್ಲಿ ಅದಾಗದು

ಎಂದಿದ್ದ ಗಾಂಧಿ, ಕರುವನ್ನು ಕೊಲ್ಲಲು ನಿರ್ಧರಿಸಿದ್ದನ್ನು ಸಮರ್ಥಿಸಿಕೊಂಡದ್ದು ಹೀಗೆ: ಅಹಿಂಸೆ ಕುರಿತ ನಮ್ಮ ಜನರ ಕಲ್ಪನೆ ಎಷ್ಟು ಕುರುಡಾಗಿದೆ ಎಂದರೆ ಅದನ್ನು ಸರಿಯಾದ ಅರ್ಥದಲ್ಲಿ ಹರಡುವುದೇ ಕಷ್ಟವಾಗಿಬಿಟ್ಟಿದೆ. ಅಹಿಂಸೆ ಕುರಿತ ಈ ತಪ್ಪು ಗ್ರಹಿಕೆ ಎಂತಹ ಮನೋವಿಕಲತೆಯನ್ನು ಉಂಟುಮಾಡಿದೆ ಎಂದರೆ ಒರಟು ಮಾತು, ಹಗೆತನ, ಸೇಡು, ಕಟು ತೀರ್ಮಾನಗಳು ಮತ್ತು ಹಿಂಸಾ ವಕಾಲತ್ತುಗಳೆಲ್ಲ ಹಿಂಸೆ ಎಂಬ ಭಾವನೆಯನ್ನೇ ತೊಡೆದು ಹಾಕಿ ನಿಧಾನ ಹಿಂಸೆಯ ಅರಿವೇ ನಮಗೆ ಬಾರದಂತೆ ನಮ್ಮ ಸಂವೇದನೆಗಳನ್ನು ಮೊಂಡುಗೊಳಿಸಿಬಿಟ್ಟಿದೆ. ದುರ್ಬಲ ಜನರ ಹಸಿವು ಅವಮಾನ, ಶೋಷಣೆ, ಘನತೆ–ಗೌರವಗಳ ನಾಶಕ್ಕೆ ಕಾರಣವಾದ ನಮ್ಮ ದುರಾಸೆಯ ಜೀವನ ಕ್ರಮಗಳೂ ಹಿಂಸೆಯಲ್ಲವೆ?

ಈ ಬಗ್ಗೆ 'ನವಜೀವನ' ಮತ್ತು 'ಯಂಗ್ ಇಂಡಿಯಾ'ದಲ್ಲಿ ನಡೆದ ತೀವ್ರ ಬಿಸಿ ಬಿಸಿ ಚರ್ಚೆಯಲ್ಲಿ ಕೆಲವರು ಗಾಂಧಿಯನ್ನು ರೈತರ ಬೆಳೆಗಳನ್ನು ಹಾಳು ಮಾಡುವ ಕೀಟಗಳನ್ನು ಕೊಲ್ಲುವುದು ಅಹಿಂಸೆಯಾಗುವುದಾದರೆ ಸಾಮಾಜಿಕ ಅಪರಾಧಗಳಲ್ಲಿ ತೊಡಗುವ ಮಾನವ ಕೀಟಗಳನ್ನು ಕೊಲ್ಲುವುದು ಏಕೆ ಅಹಿಂಸೆಯಾಗಿ ಸಮರ್ಥನೀಯವೆನಿಸಬಾರದು ಎಂದು ಪ್ರಶ್ನಿಸಿದರು. ಅವರಿಗೆ ಗಾಂಧಿ ಈ ಹಿಂದೆ ತಾವು ಕೋತಿಗಳನ್ನು ಕೊಲ್ಲಲು ನೀಡಿದ್ದ ಕಾರಣವನ್ನು ಅವರಿಗೆ ಉತ್ತರವಾಗಿ ನೀಡಿ, ಮನುಷ್ಯರನ್ನು ಕೊಲ್ಲುವುದಕ್ಕೆ ಮನುಷ್ಯ–ಮನುಷ್ಯರ ನಡುವೆ ಸಾಧ್ಯವಾಗಬಲ್ಲ ಸಂವಾದದ ಅಗಾಧ ಸಾಧ್ಯತೆಗಳ ಮಾನವತೆಯ ಅರಿವು ಅವಕಾಶ ನೀಡುವುದಿಲ್ಲ ಎಂದು ಉತ್ತರಿಸಿದರು.

ಹಿಂದೂ ಮುಸ್ಲಿಂ ಗಲಾಟೆಗಳ ಸಂದರ್ಭದಲ್ಲಿ ಎದ್ದಿದ್ದ ಇದೇ ರೀತಿಯ ಚರ್ಚೆಗಳಲ್ಲಿ ಗಾಂಧಿ ಅಹಿಂಸೆಯ ಹೆಸರಿನಲ್ಲಿನ ಹೇಡಿತನಕ್ಕೆ ಬದಲಾಗಿ ರಕ್ಷಣಾತ್ಮಕ ಹಿಂಸೆಯನ್ನು ನಾನು ಎತ್ತಿ ಹಿಡಿಯುತ್ತೇನೆ ಎಂದಿದ್ದ ಮಾತನ್ನೂ, ಗೋಹತ್ಯೆಯ ವಿವಾದದ ಸಂದರ್ಭದಲ್ಲಿ ನಮ್ಮ ನಂಬಿಕೆಗಾಗಿ ನಾವು ಪ್ರಾಣತ್ಯಾಗ ಮಾಡಿ ಗೋವನ್ನು ಕಾಪಾಡಬೇಕೇ ಹೊರತು ಬೇರೆಯವರನ್ನು ಕೊಲ್ಲುವ ಮೂಲಕ ಅಲ್ಲ ಎಂಬ ಮಾತನ್ನೂ ಮತ್ತು ಓರ್ವ ಯುವತಿ ಒಮ್ಮೆ ಅತ್ಯಾಚಾರವೆಸಗಬಂದ ಗಂಡಸೊಬ್ಬನನ್ನು ಅಹಿಂಸಾತ್ಮಕವಾಗಿ ಎದುರಿಸುವುದು ಹೇಗೆ ಎಂದು ಕೇಳಿದ ಪ್ರಶ್ನೆಗೆ ಅವರು 'ಏಕೆ, ನಿನ್ನ ಬಳಿ ದೇವರು ಕೊಟ್ಟ ಉಗುರುಗಳಿಲ್ಲವೆ? ಎಂಬ ಮರುಪ್ರಶ್ನೆಯ ಮೂಲಕ ಕೊಟ್ಟ ಉತ್ತರವನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು. ಗಾಂಧಿಯವರ ಅಹಿಂಸೆ ಹಿಂಸಾರಾಹಿತ್ಯ ಎಂಬ ಸರಳಾರ್ಥದ ಪರಿಕಲ್ಪನೆಯಾಗಿರದೆ, ಅದರ ಸಂಕೀರ್ಣ ಅರ್ಥವನ್ನು ಅವರ 'ಅಹಿಂಸೆ ಎಂಬುದು ಈ ಜಗತ್ತಿನ ಸಾಗರ–ಪರ್ವತಗಳಷ್ಟೇ ಪುರಾತನವಾದದ್ದು' ಎಂಬ ಮಾತಿನಲ್ಲಿ ಅರಸಬೇಕು. ಈ ಮಾತಿನ ಮಥಿತಾರ್ಥದ ಪ್ರಕಾರ ಅಹಿಂಸೆ ಎಂದರೆ ಸಹಬಾಳ್ವೆಗೆ ಆಧಾರವಾದ ಆಂತರಿಕ ಸಮತೋಲನ, ಸಮಚಿತ್ತ ಎನ್ನಬಹುದು.

ಆಶ್ರಮದಲ್ಲಿ ಬ್ರಹ್ಮಚರ್ಯ ವ್ರತ–ಗಾಂಧಿಯವರ ಉಪವಾಸ!

ಅಹಿಂಸೆಯ ಜೊತೆಗೆ ಗಾಂಧಿಯವರ ಮುಖ್ಯ ಕಾಳಜಿ ಬ್ರಹ್ಮಚರ್ಯವಾಗಿತ್ತು.

ಮನುಷ್ಯನ ಕಾಮಾಸಕ್ತಿಗೂ ಅವನ ಹಿಂಸಾವೃತ್ತಿಗೂ ಸಂಬಂಧವಿದೆಯೆಂದು ಭಾವಿಸಿದ್ದ ಗಾಂಧಿ ಬ್ರಹ್ಮಚರ್ಯ ಪಾಲನೆಯನ್ನು ಅಹಿಂಸಾಚರಣೆಯ ಒಂದು ಅವಿಭಾಜ್ಯ ಅಂಗವೆಂದು ನಂಬಿದ್ದರು. ಇದನ್ನು ತಮ್ಮ ರಾಜಕೀಯ ಸಹೋದ್ಯೋಗಿಗಳು ಮತ್ತು ಶಿಷ್ಯರ ಮೇಲೆ ಹೇರದಿದ್ದರೂ ಆಶ್ರಮದಲ್ಲಿದ್ದ ತಮ್ಮ ಶಿಷ್ಯರು ಹಾಗೂ ಆಶ್ರಮ ಶಾಲೆಯ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಕಡ್ಡಾಯ ಆಚರಣೆಯಾಗಿ ಮಾಡಿದ್ದರು. ಈ ಸಂಬಂಧ ಅವರು ಒಮ್ಮೆ ಒಂದು ವಾರದ ಉಪವಾಸ ಮಾಡಬೇಕಾಯಿತು.

ತಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಅವರು ಗಂಡು–ಹೆಣ್ಣಿನ ಲೈಂಗಿಕ ಆಕರ್ಷಣೆಯ ಬಗ್ಗೆ ಹಲವು ಬಾರಿ ಪಾಠ ಹೇಳಿ ಕಾಮಾಸಕ್ತಿಯನ್ನು ಹತ್ತಿಕ್ಕಲು ಹುಡುಗ–ಹುಡುಗಿಯರು ಪರಸ್ಪರ ದೂರದಲ್ಲಿರಬೇಕು, ಪರಸ್ಪರ ಹರಟೆಯಲ್ಲಿ ತೊಡಗಬಾರದು ಮತ್ತು ಪರಸ್ಪರ ಮುಟ್ಟಿಸಿಕೊಳ್ಳಬಾರದು ಎಂಬ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದ್ದರು. ಯುವಕರಿಗೆ ವೀರ್ಯ ರಕ್ಷಣೆಯ ಮಹತ್ವವನ್ನು ಹೇಳಿ ಆಧ್ಯಾತ್ಮಿಕ ಉನ್ನತಿಗೆ, ಶ್ರೇಷ್ಠ ಮಟ್ಟದ ದೇಶಸೇವೆಗೆ ಅದು ಅನಿವಾರ್ಯವೆಂದು ಹೇಳುತ್ತಾ, ಸ್ವತಃ ತಾವು ಯೌವ್ವನಾವಸ್ಥೆಯಿಂದಲೂ ಬ್ರಹ್ಮಚರ್ಯ ಪಾಲನೆ ಮಾಡಿಕೊಂಡು ಬಂದಿದ್ದಲ್ಲಿ ಈಗಿಗಿಂತ ಹೆಚ್ಚಿನ ಗುಣಮಟ್ಟದ ದೇಶಸೇವೆ ಮಾಡಲು ಸಾಧ್ಯವಾಗುತ್ತಿತ್ತು ಎಂದು ಹೇಳಿಕೊಂಡರು. ಅವರು ಪಾಲಕರಿಗೂ ತಮ್ಮ ಮಕ್ಕಳನ್ನು ಈ ವಿಷಯದಲ್ಲಿ ಕಟ್ಟುನಿಟ್ಟಾದ ನೈತಿಕತೆಯೊಂದಿಗೆ ಬೆಳೆಸಬೇಕೆಂದೂ, ಸಾಧ್ಯವಾಗದಿದ್ದರೆ ಅವರನ್ನು ವಾಪಸ್ ಕರೆದುಕೊಂಡು ಹೋಗುವಂತೆ ಸೂಚಿಸಿದರು.

ಆದರೇನು, ಕಾಮನ ಬಾಣಕ್ಕೆ ಮಾತಿನ ಗೋಡೆ ಯಾವ ಲೆಕ್ಕ? ಆಶ್ರಮದ ಕೆಲವು ವಿದ್ಯಾರ್ಥಿಗಳು ಲೈಂಗಿಕ ದುರ್ವರ್ತನೆಯಲ್ಲಿ ತೊಡಗಿದ್ದಾರೆಂಬ ಸುದ್ದಿ ಕೇಳಿ ಗಾಂಧಿ ನೊಂದರು. ಆ ವಿದ್ಯಾರ್ಥಿಗಳಿಗೆ ತಮ್ಮ ತಪ್ಪನ್ನು ಮನಗಾಣಿಸಲು ತಾವು ಒಂದು ವಾರ ಉಪವಾಸ ಘೋಷಿಸಿದರು!

ಈ ಮಧ್ಯೆ ಗಾಂಧಿಯವರ ಇಬ್ಬರು ಹಿರಿಯ ಶಿಷ್ಯರೂ ಆಶ್ರಮವಾಸಿಗಳಾಗಿದ್ದರು. ರಾಜಗೋಪಾಲಾಚಾರಿಯವರು ತಮಿಳ್ನಾಡಿನ ತಿರುಚೆಂಗೋಡ್ ಎಂಬಲ್ಲಿ ಆಶ್ರಮವೊಂದನ್ನು ಸ್ಥಾಪಿಸಿದರು. ಗಾಂಧಿಯವರ ರಚನಾತ್ಮಕ ಕಾರ್ಯಕ್ರಮಗಳಾದ ನೂಲುವುದು, ನೇಯುವುದು, ಖಾದಿ ಪ್ರಚಾರ ಮತ್ತು ಅಸ್ಪೃಶ್ಯತಾ ನಿವಾರಣೆಯ ಕೆಲಸಗಳಿಗಾಗಿ ಸ್ವಯಂಸೇವಕರನ್ನು ತರಬೇತಿಗೊಳಿಸುವುದು ಅದರ ಉದ್ದೇಶವಾಗಿತ್ತು. ಇನ್ನು ರಾಜೇಂದ್ರ ಪ್ರಸಾದರು ಮುಜ್ರುಲ್ ಹಕ್ ಎಂಬುವವರು ಪಟ್ನಾದಲ್ಲಿ ೧೯೨೦ರಲ್ಲೇ ಸ್ಥಾಪಿಸಿದ್ದ ಸದಾಕತ್ ಆಶ್ರಮ ಸೇರಿದರು. ಹಕ್ ಅವರು ಗಾಂಧಿಯವರಿಗೆ ಅವರ ಲಂಡನ್ ವಿದ್ಯಾರ್ಥಿ ದಿನಗಳಿಂದಲೂ ಮಿತ್ರರಾಗಿ ಅವರ ಅನುಯಾಯಿಗಳಾಗಿದ್ದವರು.

ಗಾಂಧಿಯ ಕೆಲವು ಪತ್ರೋತ್ತರಗಳು

ಗಾಂಧಿ ಕಾಮದ ವಿಷಯದಲ್ಲಿ ತಮ್ಮ ಶಿಷ್ಯ ಅಥವಾ ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ತಮ್ಮ ಆಶ್ರಮಕ್ಕೆ ವೈಯಕ್ತಿಕ ಸಮಸ್ಯೆಗಳನ್ನು ಹೇಳಿಕೊಂಡು ದೇಶಾದ್ಯಂತದಿಂದ ಬರುತ್ತಿದ್ದ ಜನರಿಗೂ ಬ್ರಹ್ಮಚರ್ಯದ ಪಾಠ ಹೇಳುತ್ತಿದ್ದರು. ಕೆಲವರು ಅವರಿಗೆ ತಮ್ಮ

ಲೈಂಗಿಕತೆಯೂ ಸೇರಿದಂತೆ ಹಲವು ಸಮಸ್ಯೆಗಳನ್ನು ಹೇಳಿಕೊಂಡು ಸಲಹೆಗಳಿಗಾಗಿ ಪತ್ರ ಬರೆಯುತ್ತಿದ್ದರು. ಅವರೆಲ್ಲರಿಗೆ ಮುಖ್ಯವಾಗಿ ಅವರು ಸೂಚಿಸುತ್ತಿದ್ದುದು ವೀರ್ಯ ರಕ್ಷಣೆಯ ಮಹತ್ವವನ್ನೇ! ಕೆಲವರಿಗೆ ಕಥೆ-ಕಾದಂಬರಿಗಳನ್ನು ಓದುವುದನ್ನು ನಿಲ್ಲಿಸುವಂತೆ ಸೂಚಿಸುತ್ತಾ, ಬೆಳಿಗ್ಗೆ ಎದ್ದು ತಣ್ಣೀರ ಸ್ನಾನ ಮಾಡಿ ರಾಮನಾಮ ಜಪಿಸುವಂತೆ ಹೇಳಿದರೆ, ಇನ್ನು ಕೆಲವರಿಗೆ ಮುಷ್ಟಿಮೈಥುನ ಕಡಿಮೆ ಮಾಡಿ, ಭಗವದ್ಗೀತೆಯನ್ನು ಓದಲು, ಹಸಿ ಹಾಲನ್ನು ಕುಡಿಯಲು ಸೂಚಿಸಿದ್ದರು. ಅವರು ಕೆಲವರಿಗೆ ಸ್ವಪ್ನಸ್ಖಲನ ಸಹಜವೆಂದೂ, ಅದರ ಪಾಡಿಗೆ ಅದು ಹೋಗಲಿ, ತಲೆ ಕೆಡಿಸಿಕೊಳ್ಳದೆ ಅಧ್ಯಯನದ ಕಡೆ ಗಮನ ಹರಿಸಲು ಸಲಹೆ ನೀಡಿದ್ದರು.

ಗಾಂಧಿ, ಕಾಮ ಅಥವಾ ಲೈಂಗಿಕ ಸಮಸ್ಯೆಗಳಲ್ಲದೆ, ಹೆಣ್ಣು ಮಕ್ಕಳ ವೈವಾಹಿಕ ಸಮಸ್ಯೆಗಳು ಮತ್ತು ಸೈದ್ಧಾಂತಿಕ ರಾಜಕೀಯ ಪ್ರಶ್ನೆಗಳಿಗೂ ಉತ್ತರ ಕೊಡುತ್ತಿದ್ದರು. ಕೆಲವೊಮ್ಮೆ, ಅವು ಸಾರ್ವತ್ರಿಕ ಪ್ರಶ್ನೆಗಳಾಗಿದ್ದರೆ ಅವನ್ನು 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು.

ಲಕ್ಷ್ಮೀದೇವಿ ಎಂಬ ಹೆಣ್ಣುಮಗಳೊಬ್ಬಳು ತನ್ನ ಬದುಕಿನ ಬಿಕ್ಕಟ್ಟೊಂದರ ಬಗ್ಗೆ ಬರೆದಿದ್ದ ಪತ್ರಕ್ಕೆ ಗಾಂಧಿ ಬರೆದ ಪತ್ರ, ಹೆಣ್ಣನ್ನು ಕುರಿತ ಅವರ ಅತ್ಯಾಧುನಿಕ ನಿಲುವಿಗೆ ಸಾಕ್ಷಿಯಾಗಿ ನಮ್ಮ ಗಮನ ಸೆಳೆಯುತ್ತದೆ. ಆ ಹೆಣ್ಣುಮಗಳಿಗೆ ಅವರಪ್ಪ ಬಾಲ್ಯದಲ್ಲೆ ವಯಸ್ಸಾದ ಗಂಡಸೊಬ್ಬನಿಗೆ ಕೊಟ್ಟು ಮದುವೆ ಮಾಡಿಬಿಟ್ಟಿದ್ದರು. ಅವನಿಗೆ ಈಗಾಗಲೇ ಒಂದು ಮದುವೆಯಾಗಿತ್ತು. ಲಕ್ಷ್ಮೀದೇವಿ ಈಗ ತನ್ನೀ ಮುದಿ ಗಂಡನನ್ನು ತೊರೆದು ತಾನು ಇಷ್ಟಪಟ್ಟ ಹುಡುಗನನ್ನು ಮದುವೆಯಾಗಬಯಸಿ ಗಾಂಧಿಯವರ ಅಭಿಪ್ರಾಯ ಕೇಳಿ ಪತ್ರ ಬರೆದಿದ್ದಳು. ಗಾಂಧಿ ಆಕೆಗೆ ಉತ್ತರ ಬರೆದು, ಆಕೆಯ ಮೊದಲ ಮದುವೆ ಅವಳಿಗೆ ಬುದ್ಧಿ ಬಲಿಯುವ ಮುನ್ನ ಅವಳ ಒಪ್ಪಿಗೆ ಪಡೆಯದೆ ನಡೆದಿರುವುದರಿಂದ ಅದು ಧರ್ಮ ಸಮ್ಮತವಲ್ಲ. ಆದುದರಿಂದ ಆಕೆ ಮರುಮದುವೆಯಾಗ ಬಯಸಿರುವುದು ಉಚಿತವೇ ಆಗಿದೆ ಎಂದು, ಆ ಹೆಣ್ಣು ಮಗಳಿಗೆ ನೈತಿಕ ಬೆಂಬಲ ನೀಡಿದ್ದರಲ್ಲದೆ, ಆಕೆಯ ತಾಯಿಯಂತೆಯೇ ಆಕೆಯ ತಂದೆಯೂ ಅವಳಿಗೆ ಬೆಂಬಲವಾಗಿ ನಿಲ್ಲಬೇಕೆಂದು ಸೂಚಿಸಿದ್ದರು. ಈ ಪತ್ರ ಅಲ್ಲಿಗೇ ನಿಲ್ಲದೆ ಲಕ್ಷ್ಮೀದೇವಿಯ ಧೈರ್ಯವನ್ನು ಮೆಚ್ಚಿ ಇತರ ಹೆಣ್ಣು ಮಕ್ಕಳೂ ಈ ಧೈರ್ಯವನ್ನು ತೋರಬೇಕೆಂದು ಸಲಹೆ ಇತ್ತಿದ್ದರು.

ಇದೇ ಸಂದರ್ಭದಲ್ಲಿ, ಮುಂದೆ ತಾವು ಸಂಯುಕ್ತ ಪ್ರಾಂತ್ಯಗಳ ಪ್ರವಾಸದಲ್ಲಿದ್ದಾಗ ತಮ್ಮ ಆಶ್ರಮವಾಸಿಯಾಗಿದ್ದ ರೀಹಾನಾ ತ್ಯಾಬ್ಜಿ ಎಂಬ ಮುಸ್ಲಿಂ ಹೆಣ್ಣು ಮಗಳ ಪತ್ರವೊಂದಕ್ಕೆ ನೀಡಿದ ಉತ್ತರವನ್ನೂ ಇಲ್ಲಿ ದಾಖಲಿಸುವುದು ಉಚಿತವಾದೀತು. ತ್ಯಾಬ್ಜಿ ಆಧುನಿಕ ಶಿಕ್ಷಣ ಪಡೆದ ಗಾಯಕಿ ಮತ್ತು ಕವಯತ್ರಿಯಾಗಿದ್ದು, ಭಾರತೀಯ ಮಹಿಳೆ ಪರ್ದಾ/ಬುರ್ಖಾ ಪದ್ಧತಿಯಿಂದ ಹೊರಬರಲಾಗದ ದುಃಸ್ಥಿತಿಯಲ್ಲಿರುವ ಬಗ್ಗೆ ತನ್ನ ಖೇದವನ್ನು ವ್ಯಕ್ತಪಡಿಸಿ, ಗಾಂಧಿ ಈ ಬಗ್ಗೆ ಒಂದು ಬಲವಾದ ಲೇಖನ ಬರೆಯಲು ಕೋರಿದ್ದಳು. ಇದಕ್ಕೆ ಕೂಡಲೇ ಸ್ಪಂದಿಸಿದ ಗಾಂಧಿ, 'ಗಂಡಿನ ಮೇಲೆ ಇಲ್ಲದ ನಿರ್ಬಂಧಗಳು ಹೆಣ್ಣಿನ ಮೇಲೆ ಇರಲು ಯಾವ ಕಾರಣವೂ ಇಲ್ಲವೆಂದು ಹೇಳುತ್ತಾ, ಗಂಡಿನ ಕೀರ್ತಿ, ಅಧಿಕಾರ ಮತ್ತು ಸಂಪತ್ತಿನ ವ್ಯಾಮೋಹಗಳೇ ಹೆಣ್ಣಿನ ಅಬಲೆತನಕ್ಕೆ

ಕಾರಣವಾಗಿದ್ದು, ಗಂಡಸಿನ ಕಾಮ ಮತ್ತು ಆಸ್ತಿ ಒಡೆತನದ ಪ್ರವೃತ್ತಿಗಳನ್ನು ನಿಯಂತ್ರಿಸುವ ಮೂಲಕ ಮಾತ್ರ ಹೆಣ್ಣಿನ ಬಿಡುಗಡೆ ಸಾಧ್ಯವಿದ್ದು ಇದಕ್ಕಾಗಿ ಮಹಿಳೆಯರು ಹೆಚ್ಚುಹೆಚ್ಚಾಗಿ ಸಾರ್ವಜನಿಕ ಜೀವನವನ್ನು ಪ್ರವೇಶಿಸಿ ಅದನ್ನು ಈ ದುಷ್ಟ ಪ್ರವೃತ್ತಿಗಳಿಂದ ಶುದ್ಧಗೊಳಿಸಬೇಕು' ಎಂದು ಬರೆದಿದ್ದರು.

ಗಾಂಧಿ, ತಮ್ಮ ಅಹಿಂಸಾತ್ಮಕ ಹೋರಾಟದ ಮಾರ್ಗದ ವಿರುದ್ಧ ಬ್ರಿಟಿಷ್ ಪಾರ್ಲಿಮೆಂಟಿನ ಭಾರತೀಯ ಕ್ರಾಂತಿಕಾರಿ ಸದಸ್ಯರೊಬ್ಬರು 'ಗಾಂಧಿಗೊಂದು ಬಹಿರಂಗ ಪತ್ರ' ಎಂಬ ಶೀರ್ಷಿಕೆಯಡಿ ಪತ್ರಿಕೆಗಳಲ್ಲಿ ಬರೆದಿದ್ದ ಪತ್ರಕ್ಕೆ ನೀಡಿದ ಉತ್ತರವನ್ನೂ ಇಲ್ಲಿ ಪ್ರಸ್ತಾಪಿಸಬೇಕು. ಟಾಟಾ ಕಂಪನಿಯ ನಿರ್ದೇಶಕ ಹುದ್ದೆಯನ್ನು ತೊರೆದು ಕಮ್ಯೂನಿಸ್ಟ್ ತತ್ವಗಳಿಗೆ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದ 'ಕಾಮ್ರೇಡ್ ಸಾಕ್' ಎಂದೇ ಆಗ ಪ್ರಸಿದ್ಧರಾಗಿದ್ದ ಶಾಪೂರ್ಜೀ ಸಾಕಲತ್‌ವಾಲಾ ಎಂಬ ಈ ಪಾರ್ಸಿ ಮಹನೀಯರು ತಮ್ಮ ಈ ಪತ್ರದಲ್ಲಿ, ಗಾಂಧಿ ತಮ್ಮ ಹಾದಿ ತಪ್ಪಿದ ಭಾವನಾಮಯತೆಯಿಂದ ಚರಕ ಹಿಡಿದು, ಯಂತ್ರ ನಾಗರೀಕತೆ, ಭೌತ ವಿಜ್ಞಾನ ಮತ್ತು ಭೌತಿಕ ಪ್ರಗತಿಗಳ ವಿರುದ್ಧ ಪ್ರಚಾರಾಂದೋಲನ ಕೈಗೊಂಡು, ಭಾರತೀಯರನ್ನು ನಿರಂತರ ಬ್ರಿಟಿಷ್ ಗುಲಾಮಗಿರಿಯಲ್ಲಿ ಇರಿಸಿದ್ದಾರೆಂದು ದಾಳಿ ಮಾಡಿದ್ದರು. ಅಲ್ಲದೆ ಗಾಂಧಿ ಕೆಮಾಲ್ ಅತಾತುರ್ಕ್, ಸನ್ ಯಾಟ್ ಸೆನ್ ಮತ್ತು ಲೆನಿನ್‌ರಿಂದ ರಾಜಕೀಯ ಪಾಠ ಕಲಿಯಬೇಕಾಗಿದೆ ಎಂದೂ ಅವರು ಸೂಚಿಸಿದ್ದರು.

ಇದನ್ನು ತಮ್ಮ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಪೂರ್ಣವಾಗಿ ಪ್ರಕಟಿಸಿದ ಗಾಂಧಿ ಅಲ್ಲಿಯೇ ಒಂದು ದೀರ್ಘ ಪ್ರತಿಕ್ರಿಯೆ ಬರೆದರು. ಈ ಕಮ್ಯುನಿಸ್ಟ್ ಅನುಯಾಯಿಯ ಗಮನವೆಲ್ಲವೂ ನಗರಗಳ ಕಡೆಯೇ ಇದ್ದು, ಅವರಿಗೆ ಭಾರತದ ವಾಸ್ತವವಾದ ಹಳ್ಳಿಗಳ ಕಲ್ಪನೆಯೇ ಇಲ್ಲವಾಗಿದ್ದು, ಅದು ಅವರಲ್ಲಿ ಇದ್ದಿದ್ದಲ್ಲಿ ಈ ವಾಸ್ತವವನ್ನು ಬದಲಿಸುವ ಪ್ರಧಾನ ಸಾಧನವಾಗಬಲ್ಲ ಚರಕವನ್ನು ಅವರು ಹೀಗೆ ಹೀಗಳೆಯುತ್ತಿರಲಿಲ್ಲ ಎಂದು ತಮ್ಮ ಪ್ರತಿಕ್ರಿಯೆಯನ್ನು ಆರಂಭಿಸಿದ್ದ ಗಾಂಧಿ, ಕಮ್ಯೂನಿಸ್ಟರಂತೆ ಬಂಡವಾಳಕ್ಕೂ ದುಡಿಮೆಗೂ ಪರಸ್ಪರ ವಿರೋಧವಿದೆ ಎಂದು ತಾವು ನಂಬುವುದಿಲ್ಲವೆಂದೂ, ವಿಷದ ಹಾವನ್ನು ಕೊಲ್ಲಬಯಸದ ತಮಗೆ ಮನುಷ್ಯರನ್ನು ಕೊಲ್ಲುವ ರಕ್ತ ಕ್ರಾಂತಿ ಎಂದೂ ಒಪ್ಪಿಗೆಯಾಗದೆಂದೂ ವಿವರಿಸಿದ್ದರು. ಮಾನವ ಬದುಕಿನ ಗುರಿಗಳಾವುವು, ಅದರ ಸಾರ್ಥಕತೆ ಎಂದರೇನು ಎಂಬ ಮೂಲಭೂತ ತಾತ್ವಿಕ ಸಂಗತಿಗಳ ಬಗ್ಗೆಯೇ ಕಮ್ಯೂನಿಸ್ಟರೊಂದಿಗೆ ತಮ್ಮ ಭಿನ್ನಾಭಿಪ್ರಾಯವಿದ್ದು, ಮನುಷ್ಯನ ಆಸೆಗಳನ್ನೂ, ಆ ಮೂಲಕ ಯಂತ್ರ ಸಾಧನಗಳನ್ನೂ ಹೆಚ್ಚಿಸಿ ಮಾನವ ಬದುಕಿನ ಆತ್ಯಂತಿಕ ಗುರಿಯತ್ತ ಒಂದು ಹೆಜ್ಜೆಯನ್ನಾದರೂ ಇಡಬಹುದೆಂಬ ನಂಬಿಕೆ ತಮಗಿಲ್ಲವೆಂದು ಹೇಳಿದ ಅವರು, ಭೌತಿಕ ದೂರ ಮತ್ತು ಕಾಲಗಳನ್ನು ಕಡಿತಗೊಳಿಸುವ ಈ ಹುಚ್ಚು ರಭಸದ ನಡೆ, ಮನುಷ್ಯನ ಎಂದೂ ತಣಿಯದ ದಾಹವನ್ನು ತಣಿಸುವ ಗುರಿ ಮುಟ್ಟುವ ಬದಲು ಭೂಮಿಯ ಅಂತ್ಯದಲ್ಲಿ ಕೊನೆಗೊಂಡರೆ ಆಶ್ಚರ್ಯವಿಲ್ಲ ಎಂಬ ಎಚ್ಚರಿಕೆಯನ್ನು ನೀಡಿದ್ದರು.

ಮಕ್ಕಳಿಗೆ ಮದುವೆ–ಸ್ವಯಂಪ್ರೇರಿತ ಬಡತನದ ದೀಕ್ಷೆ

ಇದೇ ಸಂದರ್ಭದಲ್ಲಿ ಗಾಂಧಿ ತಮ್ಮ ಮಗನೊಬ್ಬನಿಗೆ ವಿಧಿಸಿದ್ದ ಬ್ರಹ್ಮಚರ್ಯ ಪರಿಪಾಲನೆಯ ವ್ರತ ಸಾಗದೆ, ಆತನಿಗೆ ತಾವೇ ಹೆಣ್ಣು ಗೊತ್ತು ಮಾಡಿ ಮದುವೆ ಮಾಡಬೇಕಾಗಿ ಬಂದ ಪ್ರಸಂಗವನ್ನೂ ಹೇಳುವುದೊಳಿತು. ಅವರು ದ.ಆಫ್ರಿಕಾದಲ್ಲಿದ್ದುಕೊಂಡು 'ಇಂಡಿಯನ್ ಒಪಿನಿಯನ್' ಪತ್ರಿಕೆ ಮತ್ತು ಫೀನಿಕ್ಸ್ ಆಶ್ರಮವನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ವಹಿಸಿದ್ದ ತಮ್ಮ ಎರಡನೆಯ ಮಗನನ್ನು, ಸಮಾಜಸೇವೆಗೆಂದು ಗುರುತಿಸಿ ಆತನಿಗೆ ಬ್ರಹ್ಮಚರ್ಯ ಪಾಲನೆಯ ವ್ರತವನ್ನು ವಿಧಿಸಿದ್ದರು. ಆದರೆ ಈ ಹಿಂದೆ ಹೇಳಿದಂತೆ ಹಲವು ಬಾರಿ ಅದನ್ನು ಪಾಲಿಸಲಾಗದವನಾಗಿ, ತಂದೆಯಲ್ಲಿ ತನ್ನ ಮದುವೆಯ ಪ್ರಸ್ತಾಪವನ್ನು ಪದೇ ಪದೇ ಮಾಡುತ್ತಲೇ ಮುವ್ವತ್ತಾರು ವರ್ಷ ವಯಸ್ಸನ್ನೂ ಮುಟ್ಟಿದ. ಕೊನೆಯ ಪ್ರಯತ್ನವೆಂಬಂತೆ ಆತ, ತಾನೆ ಒಂದು ಹುಡುಗಿಯನ್ನು ಪ್ರೇಮಿಸಿ, ಕಿರಿಯ ಸೋದರ ರಾಮದಾಸನ ಮೂಲಕ ೧೯೨೬ರಲ್ಲಿ ಮದುವೆಗೆ ಅನುಮತಿ ಕೇಳಿದ. ಆ ಹುಡುಗಿ ಗಾಂಧಿಯವರಿಗೆ ಪರಿಚಯವಿದ್ದ ಕೇಪ್‌ಟೌನ್‌ನ ಗೂಲ್ ಕುಟುಂಬದ ಮುಸ್ಲಿಂ ಹುಡುಗಿ. ಆಕೆ ಮಣಿಲಾಲನಿಗೋಸ್ಕರ ಹಿಂದೂ ಧರ್ಮಕ್ಕೆ ಮತಾಂತರವಾಗಲೂ ಸಿದ್ಧಳಿದ್ದಳು. ಆದರೆ ಗಾಂಧಿ ಈ ಮದುವೆಗೆ ಒಪ್ಪಿಗೆ ನೀಡಲು ನಿರಾಕರಿಸಿದರು. ಮದುವೆಗಾಗಿ ಮತಾಂತರವಾಗುವುದು ಧರ್ಮದ ಘನತೆಯನ್ನು ಕೆಡಿಸುವುದೆಂದರು. ಹಿಂದೂ–ಮುಸ್ಲಿಂ ಸಂಬಂಧದ ವಿಷಯದಲ್ಲಿ ತಾವು ಇಂದು ಎದುರಿಸುತ್ತಿರುವ ಸಂದಿಗ್ಧ ಪರಿಸ್ಥಿತಿಯಲ್ಲಿ ಈ ಮದುವೆ ರಾಜಕೀಯವಾಗಿ ತಪ್ಪು ಸಂದೇಶ ನೀಡುತ್ತದೆಂದು ಅಭಿಪ್ರಾಯಪಟ್ಟು, ಬ್ರಹ್ಮಚರ್ಯ ಪಾಲನೆಯ ಪ್ರಯತ್ನವನ್ನು ಮುಂದುವರೆಸಲು ಆಗ್ರಹಿಸಿದರು. ಆದರೆ ತಮ್ಮ ಪತ್ರದ ಕೊನೆಯ ವಾಕ್ಯವಾಗಿ, ಮದುವೆಯಾಗಲೇಬೇಕೆಂಬುದು ಆತನ ಇಚ್ಛೆಯಾಗಿದ್ದರೆ ತಾವು ಅಡ್ಡಿ ಬರುವುದಿಲ್ಲವೆಂದು ಹೇಳಿದರು.

ಮಣಿಲಾಲ ತನ್ನ ಮದುವೆಯ ಪ್ರಸ್ತಾಪವನ್ನು ತನ್ನ ತಾಯಿ ಕಸ್ತೂರಬಾ ಅವರೊಂದಿಗೆ ಚರ್ಚಿಸಿ ತೀರ್ಮಾನಿಸಬೇಕೆಂದು ಕೋರಿದ್ದರೂ, ಇದರಲ್ಲಿ ಧರ್ಮದ ವಿಷಯವೂ ಒಳಗೊಂಡಿದ್ದುದರಿಂದ ಈ ವಿಷಯದಲ್ಲಿ ಬಾ ಅವರ ಸೂಕ್ಷ್ಮ ಸಂವೇದನೆಯನ್ನು ಬಲ್ಲವರಾಗಿದ್ದ ಗಾಂಧಿ ಹಾಗೆ ಮಾಡಲು ಹಿಂಜರಿದಿದ್ದರು. ಆದರೆ ಈ ವಿಷಯ ಬಾ ಅವರಿಗೆ ಹೇಗೋ ಗೊತ್ತಾಗಿ ಅವರ ಮಾತೃಹೃದಯ, ಮಗನಿಗೊಂದು ಸೂಕ್ತ ಹೆಣ್ಣು ಹುಡುಕುವಂತೆ ತಮ್ಮ ಪತಿಯನ್ನು ಒತ್ತಾಯಿಸುವಂತೆ ಮಾಡಿತು. ಈ ವಿಷಯದಲ್ಲಿ ಹೆಂಡತಿಯ ಒತ್ತಾಯಕ್ಕೆ ಮಣಿದ ಗಾಂಧಿ, ತಮ್ಮ ಶಿಷ್ಯ ಕಿಶೋರಿಲಾಲ್ ಮಶ್ರೂವಾಲಾರ ಸೋದರ ಸೊಸೆ ಸುಶೀಲಾಳನ್ನು ಮಣಿಲಾಲನ ಪತ್ನಿಯಾಗಿ ಆರಿಸಿದರು. ಆಕೆಯ ಕುಟುಂಬ ಗುಜರಾತಿ ಬನಿಯಾ ಜಾತಿಯದ್ದೇ ಆದರೂ ಕಾಥೇವಾಡಿ ಆಗಿರಲಿಲ್ಲ. ಸುಶೀಲಾ ಶ್ರೀಮಂತ ಕುಟುಂಬಕ್ಕೆ ಸೇರಿದವಳಾಗಿದ್ದರೂ, ಆಶ್ರಮದಲ್ಲಿ ೧೯೨೭ರ ಮಾರ್ಚ್‌ನಲ್ಲಿ ನಡೆದ ಮದುವೆ ಕೆಲವೇ ಜನರ ಸಮ್ಮುಖದಲ್ಲಿ ಬಹುಸರಳವಾಗಿ ನಡೆಯಿತು. ಗಾಂಧಿ, ಸೊಸೆಗೆ ಭಗವದ್ಗೀತೆಯ ಒಂದು ಪ್ರತಿ ಹಾಗೂ

ಒಂದು ಚರಕವನ್ನು ಉಡುಗೊರೆಯಾಗಿ ನೀಡಿದರೆ ಮಗನಿಗೆ ಒಂದು ಸಲಹೆಯನ್ನು ಮಾತ್ರ ನೀಡಿದರು. ಅದೆಂದರೆ ಪತ್ನಿಯನ್ನು ಸಮಾನವಾಗಿ ಕಂಡು ಅವಳ ಅಪೇಕ್ಷೆಗಳನ್ನು ಅರಿತು ಸಂಸಾರ ನಡೆಸು ಎಂಬುದಾಗಿತ್ತು.

ಮಣಿಲಾಲನ ಮದುವೆಯ ನಂತರದ ಒಂದು ವರ್ಷದ ಒಳಗೇ – ೧೯೨೮ರ ಜನವರಿಯಲ್ಲಿ – ಗಾಂಧಿ ದಂಪತಿಗಳು – ಗಾಂಧಿಯ ಆರೋಗ್ಯ ಮತ್ತೆ ಹದಗೆಡಲಾರಂಭಿಸಿದ ಹಿನ್ನೆಲೆಯಲ್ಲಿ–ತಮ್ಮ ಮೂರನೆಯ ಮತ್ತು ಯಾವುದೇ ರಗಳೆ ಇಲ್ಲದೆ ತನ್ನ ಪಾಡಿಗೆ ತಾನಿದ್ದ ಮಗ ರಾಮದಾಸನ ಮದುವೆಯನ್ನೂ ಮಾಡಿ ಮುಗಿಸಿದರು. ದಂಪತಿಗಳೇ ಅವನಿಗಾಗಿ ಕಾಥೇವಾಡಿ ವೋರಾ ಮನೆತನದ ನಿರ್ಮಲಾ ಎಂಬ ವಧುವನ್ನು ಆರಿಸಿದ್ದರು. ಈ ಮದುವೆಯೂ ಮಣಿಲಾಲನ ಮದುವೆಯಂತೆಯೇ ಆಶ್ರಮದಲ್ಲಿ ಸರಳವಾಗಿ ನಡೆಯಿತು ಮತ್ತು ಗಾಂಧಿ ಈ ಸೊಸೆಗೆ ಕೊಟ್ಟ ಉಡುಗೊರೆಯೂ ಅದೇ ಆಗಿತ್ತು. ಆದರೆ ಈ ಮದುವೆಯ ಸಂದರ್ಭದಲ್ಲಿ ಅವರು ಸ್ವಲ್ಪ ಭಾವುಕರಾಗಿದ್ದಂತಿತ್ತು. ಅವರು ತಮ್ಮ ಭಾಷಣದಲ್ಲಿ ತಮ್ಮ ಮಕ್ಕಳಿಗೆ ತಾವು ನೀಡಿದ್ದ ಸ್ವಯಂಪ್ರೇರಿತ ಬಡತನದ ದೀಕ್ಷೆಯ ಬಗ್ಗೆ ಮಾತಾಡುವಾಗ ಅವರ ಕಣ್ಣುಗಳು ಒದ್ದೆಯಾಗಿದ್ದವು.

ನಂತರದ ಒಂದು ವರ್ಷದಲ್ಲೇ ನಾಲ್ಕನೆಯ ಮತ್ತು ಕೊನೆಯ ಮಗ ದೇವದಾಸನೂ ಸ್ವತಃ ತಾನೇ ಮದುವೆಯ ಸಿದ್ಧತೆ ಮಾಡಿಕೊಂಡಿದ್ದ ಸುದ್ದಿ ಗಾಂಧಿಗೆ ತಲುಪಿದಾಗ ಗಾಬರಿಗೊಂಡರು. ಆತ ಗಾಂಧಿಯವರ ಸೂಚನೆಯ ಮೇರೆಗೇ ಹಿಂದಿ ಪ್ರಚಾರಕ್ಕಾಗಿ ಆಗಾಗ್ಗೆ ದ.ಭಾರತದ ಪ್ರವಾಸ ಮಾಡುತ್ತಿದ್ದು, ಆ ಸಮಯದಲ್ಲಿ ರಾಜಾಜಿಯವರ ಮಗಳು ಲಕ್ಷ್ಮಿಯ ಪರಿಚಯವಾಗಿ ಇಬ್ಬರೂ ಗಂಡ–ಹೆಂಡಿರಾಗಲು ಪರಸ್ಪರ ಒಪ್ಪಿದ್ದರು. ಆದರೆ ಗಾಂಧಿ, ಈ ಪ್ರೇಮವನ್ನು ಪರೀಕ್ಷೆ ಮಾಡದೆ ಒಪ್ಪಲು ಸಿದ್ಧರಿರಲಿಲ್ಲ. ಜೊತೆಗೆ ಅದು, ರಾಜಾಜಿಯವರು ಬ್ರಾಹ್ಮಣರಾಗಿದ್ದುದರಿಂದ, ಆಗ ಅಸಾಮಾನ್ಯವಾಗಿದ್ದ ಅಂತರ್ಜಾತಿ ಸಂಬಂಧವಾಗಿತ್ತು. ಗಾಂಧಿ ರಾಜಾಜಿಯವರೊಂದಿಗೆ ಚರ್ಚಿಸಿ ಕೆಲ ವರ್ಷಗಳ ಕಾಲ ಕಾಯಲು, ಆನಂತರವೂ ಅವರ ಈ ಪ್ರೇಮ ಗಟ್ಟಿಯಾಗಿದ್ದರೆ ಮದುವೆ ಮಾಡುವುದು ಎಂದು ತೀರ್ಮಾನಿಸಿದರು. ಈ ಅವಧಿಯಲ್ಲಿ ಹುಡುಗ–ಹುಡುಗಿ ಪರಸ್ಪರ ಭೇಟಿಯಾಗಕೂಡದು ಮತ್ತು ಪತ್ರ ವ್ಯವಹಾರ ಮಾಡಬಾರದೆಂಬ ನಿರ್ಬಂಧವನ್ನೂ ವಿಧಿಸಲಾಯಿತು. ಈ ಘಟನೆ ನಡೆದದ್ದು, ಗಾಂಧಿ ಅನಾರೋಗ್ಯ ನಿಮಿತ್ತ ವಿಶ್ರಾಂತಿಗಾಗಿ ನಂದಿಬೆಟ್ಟದಲ್ಲಿ ಮೊಕ್ಕಾಂ ಮಾಡಿದ್ದ ಸಂದರ್ಭದಲ್ಲಿ.

ಹರಿಲಾಲನ ದುರಂತ

ಇನ್ನು ಗಾಂಧಿಯವರ ಮೊದಲ ಮಗ ಹರಿಲಾಲ್, ಗಾಂಧಿಯವರ ವಿರೋಧದ ನಡುವೆಯೂ ಪ್ರೇಮಿಸಿ ಮದುವೆಯಾಗಿದ್ದ ಹೆಂಡತಿಯನ್ನು ಕಳೆದುಕೊಂಡು ತಂದೆಯೊಂದಿಗೆ ಪ್ರೀತಿ–ದ್ವೇಷದ ಮಿಶ್ರ ಭಾವನೆಯ ಸಂಬಂಧ ಹೊಂದಿದವನಾಗಿ ತನ್ನದೇ ಸ್ವತಂತ್ರ ಜೀವನ ಕಟ್ಟಿಕೊಳ್ಳಲು ಹೆಣಗುತ್ತಾ ಅಜ್ಞಾತನಾಗಿದ್ದ. ಅವನು ಕಲ್ಕತ್ತಾದಲ್ಲಿ ತಾನು ಮಹಾತ್ಮ ಗಾಂಧಿಯ ಮಗನೆಂದು ಪರಿಚಯಿಸಿಕೊಂಡು ಹಲವರಿಂದ ಹಣ

ಸಂಗ್ರಹಿಸಿ ಕಂಪೆನಿಯೊಂದನ್ನು ತೆರೆದು, ಅದರಲ್ಲಿ ಯಶಸ್ವಿಯಾಗದೆ ಅಲೆದಾಡುತ್ತಿದ್ದ. ಅವನ ಕಂಪೆನಿಗೆ ಹಣ ಹಾಕಿ ಮೋಸ ಹೋದ ಉದ್ಯಮಿಯೊಬ್ಬರು ಈ ಬಗ್ಗೆ ಗಾಂಧಿಯವರಿಗೆ ದೂರು ಸಲ್ಲಿಸಿದಾಗ, ಆ ದೂರನ್ನು 'ಯಂಗ್ ಇಂಡಿಯಾ'ದಲ್ಲಿ ಪ್ರಕಟಿಸಿದ್ದ ಗಾಂಧಿ, ಈತ ತಮ್ಮ ಮಗನೆಂಬುದು ನಿಜವಾದರೂ, ಈ ಮಗ ಬಹು ವರ್ಷಗಳಿಂದಲೂ ತಮ್ಮಿಂದ ಪ್ರತ್ಯೇಕವಾಗಿ ಬದುಕುತ್ತಿದ್ದು, ತಾವು ಈತನಿಗೆ ಈ ಕಂಪೆನಿ ಆರಂಭಿಸಲು ಯಾವುದೇ ಒಪ್ಪಿಗೆ ನೀಡಿಲ್ಲವಾದ್ದರಿಂದ ಈ ವ್ಯವಹಾರಕ್ಕೂ ತಮಗೂ ಸಂಬಂಧವಿಲ್ಲವೆಂದು ಸ್ಪಷ್ಟಪಡಿಸಿದ್ದರಲ್ಲದೆ, ಹರಿಲಾಲ ಆದಷ್ಟು ಬೇಗ ಅವರಿಗೆ ಹಣ ಸಂದಾಯ ಮಾಡುವನೆಂಬ ಆಶಯ ವ್ಯಕ್ತಪಡಿಸಿದ್ದರು. ಇದೇ ಸಮಯದಲ್ಲಿ ಮಗ ಅಹಮದಾಬಾದ್ ಬಳಿಯ ನಡಿಯಾಡ್ ಮೂಲಕ ರೈಲಿನಲ್ಲಿ ಹಾದುಹೋಗುತ್ತಿದ್ದಾನೆ ಎಂದು ತಿಳಿದ ಗಾಂಧಿ, ಬಾ ಅವರ ಭಾವನೆಗೆ ಸ್ಪಂದಿಸಿ, ಮಧ್ಯರಾತ್ರಿಯಲ್ಲಿ ನಡಿಯಾಡ್ ರೈಲ್ವೇ ನಿಲ್ದಾಣಕ್ಕೆ ಹೋಗಿ, ನಿಂತಿದ್ದ ರೈಲಿನ ಬೋಗಿಗಳಲ್ಲಿ ಮಗನನ್ನು ಹುಡುಕಿ, ಆತ ಸುಖವಾಗಿ ನಿದ್ರಿಸುತ್ತಿದ್ದುದನ್ನು ಗಮನಿಸಿ ಅವನನ್ನು ಎಚ್ಚರಗೊಳಿಸದೆ ಅವನಿಗೆ ಆಶೀರ್ವಾದ ಮಾಡಿಬಂದ ಹೃದಯಸ್ಪರ್ಶಿ ಘಟನೆಯೂ ನಡೆದಿತ್ತು.

ಗಾಂಧಿಯವರ ವಿಸ್ತೃತ ಕುಟುಂಬ–ಮೀರಾಬೆನ್ ಆದ ಮೀರಾ

ಗಾಂಧಿ ದಂಪತಿಗಳಿಗೆ ತಮ್ಮ ಮಕ್ಕಳಷ್ಟೇ ಆತ್ಮೀಯರಾಗಿದ್ದವರು ಅಸ್ಪೃಶ್ಯ ಕುಟುಂಬದ ಮಗಳು ಲಕ್ಷ್ಮಿಯಲ್ಲದೆ, ಮಹದೇವ ದೇಸಾಯಿ, ಪ್ಯಾರೇಲಾಲ್ ಮತ್ತು ಅವರ ಸೋದರಿ ಸುಶೀಲಾ, ಮಗನ್‌ಲಾಲ್, ಛಗನ್‌ಲಾಲ್ ಮತ್ತು ಅವರ ಪರಿವಾರದವರು. ಜೊತೆಗೆ ಬಿಹಾರದ ತಮ್ಮ ಅನುಯಾಯಿ ಬ್ರಜ್‌ಕಿಶೋರ್ ಪ್ರಸಾದರ ಮಗಳು ಮತ್ತು ಆಗ ವಿದ್ಯಾಭ್ಯಾಸಕ್ಕಾಗಿ ಅಮೆರಿಕಾಗೆ ತೆರಳಿದ್ದ ಜಯಪ್ರಕಾಶ್ ನಾರಾಯಣರ ಪತ್ನಿ ಪ್ರಭಾವತಿ. ಇವರು ಹೆಣ್ಣುಮಕ್ಕಳಿಲ್ಲದ ಗಾಂಧಿ ದಂಪತಿಗಳಿಗೆ ಮಗಳಂತೆಯೇ ಇದ್ದು, ಆಕೆಗೆ ಗಾಂಧಿ ಬ್ರಹ್ಮಚರ್ಯದ ದೀಕ್ಷೆ ನೀಡಿ ದೇಶಸೇವೆಯ ಕೆಲಸಕ್ಕಾಗಿ ಸಿದ್ಧಪಡಿಸುತ್ತಿದ್ದರು. ಪ್ರಭಾವತಿಯವರಿಂದ ಬ್ರಹ್ಮಚರ್ಯದ ವಚನ ಪಡೆದಾಗ ಗಾಂಧಿ ಆಕೆಯ ಪತಿಯೊಂದಿಗೆ ಸಮಾಲೋಚಿಸಿರಲಿಲ್ಲ ಎಂಬುದು ಬೇರೆ ಮಾತು.

ಇವರ ಜೊತೆಗೆ ಈಗ ಮೀರಾ ಸೇರಿದ್ದರು. ಆಕೆ ಆಶ್ರಮ ಸೇರಿದಾಗ ಗಾಂಧಿ, ಆಕೆಯ ಮಾರ್ಗದರ್ಶಿಯಾಗಿದ್ದ ರೊಮೈನ್ ರೊಲ್ಯಾಂಡ್‌ರಿಗೆ ಪತ್ರ ಬರೆದು ಆಕೆ ಆಶ್ರಮಕ್ಕೊಂದು ಅಮೂಲ್ಯ ಕೊಡುಗೆ ಎಂದೂ, ಆಕೆಯನ್ನು ಗುರುವಾಗಿ ನೋಡಿಕೊಳ್ಳುವ ಶಕ್ತಿ ಇಲ್ಲದಿದ್ದರೂ, ತಂದೆಯಾಗಿ ಸಾಕುವುದಾಗಿ ಹೇಳಿದ್ದರು. ಮೀರಾ ಗಾಂಧಿಯವರ ಕುಟೀರದ ಪಕ್ಕದ ಸಣ್ಣ ಕುಟೀರದಲ್ಲಿ ವಾಸ ಮಾಡತೊಡಗಿ ಬಹುಬೇಗ ಆಶ್ರಮದ ಬದುಕಿಗೆ ಹೊಂದಿಕೊಂಡಿದ್ದರು. ಈಗ ಅವರು ಆಶ್ರಮ ನಿವಾಸಿಗಳಿಗೆ ಮೀರಾಬೆನ್ ಆಗಿದ್ದರು. ಗಾಂಧಿಯ ಸೇವೆ ಅವರ ಮೊದಲ ಆದ್ಯತೆಯಾಗಿದ್ದರೂ, ಶೌಚಾಲಯಗಳ ಸ್ವಚ್ಛತೆ ಮತ್ತು ನೂಲುವುದು ಅವರ ಕೆಲಸಗಳೆಂದು ನಿಗದಿ ಮಾಡಲಾಗಿತ್ತು. ಗಾಂಧಿಯವರ ಆಹಾರ ಸಿದ್ಧತೆ ಮತ್ತು ಅವರನ್ನು ಭೇಟಿ ಮಾಡಲು ಬರುವವರ ಪೂರ್ವ ಪರಿಶೀಲನೆ ಅವರ ಇತರ ಕೆಲಸಗಳಾಗಿದ್ದವು. ಫ್ರೆಂಚ್ ಸಾಹಿತ್ಯಪ್ರಿಯರಾಗಿದ್ದ ಮಹದೇವ ದೇಸಾಯಿ, ಮೀರಾರಿಂದ ಫ್ರೆಂಚ್ ಕಲಿಯಲು

ಆರಂಭಿಸಿದಾಗ ಅದನ್ನು ಅರಿತ ಗಾಂಧಿ, ದೇಸಾಯಿಯವರಿಗೆ, ಬಹುತೇಕ ಶ್ರೇಷ್ಠ ಫ್ರೆಂಚ್ ಸಾಹಿತ್ಯ ಇಂಗ್ಲಿಷ್‌ನಲ್ಲಿ ಲಭ್ಯವಿರುವಾಗ ಮತ್ತು ತಾವೆಲ್ಲ ಸಾವು-ಬದುಕಿನ ಹೋರಾಟದಲ್ಲಿ ತೊಡಗಿರುವಾಗ ಇದು ಅಗತ್ಯವಲ್ಲದ ಕೆಲಸವೆಂದು ಸೂಚಿಸಿ, ಮೀರಾಗೆ ಹಿಂದಿ ಕಲಿಸಲು ಆರಂಭಿಸಬೇಕೆಂದು ಸಲಹೆ ಇತ್ತರು. ಜೊತೆಗೆ ಸ್ವರಾಜ್ಯ ಬಂದ ಮೇಲೆ ಎಷ್ಟು ಭಾಷೆ ಬೇಕಾದರೂ ಕಲಿತು ಯಾವ ಸಾಹಿತ್ಯವನ್ನು ಬೇಕಾದರೂ ಓದಿಕೊಳ್ಳಬಹುದೆಂದು ಛೇಡಿಸಿದರು.

ಗಾಂಧಿ ಮೀರಾಬೆನ್‌ರನ್ನು ಹೆಚ್ಚು ಆಪ್ತತೆಯಿಂದ ನೋಡಿಕೊಳ್ಳುತ್ತಿದ್ದರಾದರೂ, ಬೇರೆಯವರ ಈರ್ಷೆಗೆ ಒಳಗಾಗಬಾರದೆಂಬ ದೃಷ್ಟಿಯಿಂದ ಕೆಲಬಾರಿ ಅವರನ್ನು ಉದ್ದೇಶಪೂರ್ವಕವಾಗಿ ಉಪೇಕ್ಷಿಸುತ್ತಿದ್ದರು. ಮೀರಾಬೆನ್ ಇದನ್ನು ಅರಿಯುವಷ್ಟು ಜಾಣೆಯಾಗಿದ್ದರಿಂದ ಹೆಚ್ಚು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ.

ಎರಡು ಕೃತಿಗಳ ರಚನೆ ಮತ್ತು ಪ್ರಕಾಶನ

ಗಾಂಧಿ ಸಬರ್ಮತಿ ಆಶ್ರಮದಲ್ಲಿ ವಿಶ್ರಾಂತಿ ಪಡೆಯುತ್ತಿರುವ ಈ ಅವಧಿಯಲ್ಲೇ ಅವರ ಎರಡು ಕೃತಿಗಳು 'ನವಜೀವನ' ಮತ್ತು 'ಯಂಗ್ ಇಂಡಿಯಾ' ಮೂಲಕ ಧಾರಾವಾಹಿಯಾಗಿ ಸಾರ್ವಜನಿಕರನ್ನು ತಲುಪತೊಡಗಿದವು. ಒಂದು 'ದ.ಆಫ್ರಿಕಾದಲ್ಲಿ ಸತ್ಯಾಗ್ರಹ' ಎಂಬ ನೆನಪುಗಳ ಪುಸ್ತಕವಾಗಿದ್ದರೆ ಇನ್ನೊಂದು ೧೯೨೦ರವರೆಗಿನ ಅವರ ಆತ್ಮಕತೆ 'ಸತ್ಯಾನ್ವೇಷಣೆ' ಅಥವಾ 'ಸತ್ಯದೊಡನೆ ನನ್ನ ಪ್ರಯೋಗಗಳ ಕಥೆ'

ಯೆರವಾಡಾ ಸೆರೆಮನೆಯಲ್ಲಿದ್ದಾಗಲೇ 'ದ.ಆಫ್ರಿಕಾದಲ್ಲಿ ಸತ್ಯಾಗ್ರಹ' ಎಂಬ ಪುಸ್ತಕದ ಮುವ್ವತ್ತು ಅಧ್ಯಾಯಗಳನ್ನು ತಮ್ಮ ಸಹಬಂದಿ ಇಂದೂಲಾಲ್ ಯಾಜ್ಞಿಕ್‌ರಿಗೆ ಗುಜರಾತಿಯಲ್ಲಿ ಹೇಳಿ ಬರೆಸಿದ್ದ ಗಾಂಧಿ ಜುಹು ಕುಟೀರದಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಸಮಯದಲ್ಲಿ ಪೂರ್ಣಗೊಳಿಸಿದ್ದರು. ಅದೀಗ 'ನವಜೀವನ'ದ ೧೯೨೪ರ ನವೆಂಬರ್ ೧೩ರ ಸಂಚಿಕೆಯಿಂದ ಆರಂಭವಾದಂತೆ ೧೯೨೫ರ ನವೆಂಬರ್ ೨೨ರ ಸಂಚಿಕೆಯವರೆಗೆ ಧಾರಾವಾಹಿಯಾಗಿ ಪ್ರಕಟವಾಯಿತು. ಗಾಂಧಿಯವರ ಇಂಗ್ಲಿಷ್ ಶಿಕ್ಷಕರಾಗಿದ್ದ ವಾಲ್ಜಿ ಗೋವಿಂದ್‌ಜಿ ದೇಸಾಯಿ ಅವರು ಅದನ್ನು ಇಂಗ್ಲಿಷ್‌ಗೆ ಅನುವಾದಿಸಿದರು. ಅದನ್ನು ರಾಷ್ಟ್ರೀಯವಾದಿ ಪ್ರಕಾಶನ ಸಂಸ್ಥೆಯಾದ ಗಣೇಶನ್ ಅಂಡ್ ಸನ್ಸ್ ೧೯೨೮ರಲ್ಲಿ ಪ್ರಕಟಿಸಿತು. ಇದನ್ನು ಅವರು ಈ ಮಧ್ಯೆ ನಿಧನರಾಗಿದ್ದ ತಮ್ಮ ಸೋದರ ಬಂಧು ಮತ್ತು ಪ್ರೀತಿಪಾತ್ರ ಸಹಾಯಕರಾಗಿದ್ದ ಮಗನ್‌ಲಾಲ್‌ಗೆ ಅರ್ಪಿಸಿದ್ದರು. ಇದು ಪ್ರಕಟವಾದಾಗ ಗಾಂಧಿಯವರ ದ.ಆಫ್ರಿಕಾದ ಆಪ್ತ ಗೆಳೆಯರಲ್ಲೊಬ್ಬರಾದ ಪೊಲಾಕ್ ಸೇರಿದಂತೆ ಹಲವರು, ಆ ಪುಸ್ತಕದಲ್ಲಿನ ಕೆಲವು ಲೋಪಗಳ ಬಗ್ಗೆ ಅವರ ಗಮನ ಸೆಳೆದರು. ಅಲ್ಲಿ ಸತ್ಯಾಗ್ರಹಕ್ಕೆ ನೆರವಾದ ಕೆಲವು ಮುಖ್ಯ ಹೆಸರುಗಳೇ ಬಿಟ್ಟು ಹೋಗಿವೆ ಎಂಬುದು ಅವರ ತಕರಾರಾಗಿತ್ತು. ಇನ್ನು ಅಲ್ಲಿ ಅವರ ಆಪ್ತ ಕಾರ್ಯದರ್ಶಿಯಾಗಿದ್ದ ಸೋನ್ಯಾ ಶ್ಲೆಸಿನ್ ತಮ್ಮ ಬಗ್ಗೆ ಕೆಲವು ತಪ್ಪು ವಿವರಗಳಿವೆ ಎಂದು ಸ್ವಲ್ಪ ತೀವ್ರವಾಗಿಯೇ ಗಾಂಧಿಯವರನ್ನು ತರಾಟೆಗೆ ತೆಗೆದುಕೊಂಡಿದ್ದಳು. ಅಗತ್ಯ ದಾಖಲೆಗಳು ಮತ್ತು ವೃತ್ತಪತ್ರಿಕೆಗಳ ಭಾಗಗಳನ್ನು ಆಧರಿಸಿ ಈ ನೆನಪುಗಳನ್ನು

ಬರೆಯಬೇಕೆಂದಿದ್ದ ಗಾಂಧಿ, ಅವುಗಳು ದ.ಆಫ್ರಿಕಾದಿಂದ ಸಕಾಲದಲ್ಲಿ ತಮಗೆ ತಲುಪದ ಕಾರಣ ತಮ್ಮ ನೆನಪುಗಳನ್ನೇ ನಂಬಿ ಈ ಪುಸ್ತಕ ಬರೆದಿದ್ದರು. ಜೊತೆಗೆ ಅವೆಲ್ಲ ಎಂಟು ವರ್ಷಗಳಿಗೂ ಹೆಚ್ಚಿನ ಕಾಲದ ಹಿಂದಿನ ನೆನಪುಗಳು. ಆದರೆ ಅಲ್ಲಿನ ಸತ್ಯಾಗ್ರಹದ ಕಥೆ ಹೇಳುವಲ್ಲಿ ಅವರೇನೂ ಹಾದಿ ತಪ್ಪಿರಲಿಲ್ಲವಾದ್ದರಿಂದ ಅವರು ಈ ಬಗ್ಗೆ ಏನೂ ಸ್ಪಷ್ಟೀಕರಣ ನೀಡಲು ಹೋಗಲಿಲ್ಲ.

ಗಾಂಧಿಯವರ ಆತ್ಮಕಥೆ ಮೂಲದಲ್ಲಿ ಗುಜರಾತಿಯಲ್ಲಿದ್ದು ಅದು 'ನವಜೀವನ'ದ ೧೯೨೫ರ ನವೆಂಬರ್ ೨೯ರ ಸಂಚಿಕೆಯಿಂದ ಆರಂಭವಾಗಿ ೧೯೨೮ರ ಫೆಬ್ರುವರಿ ೭ರ ಸಂಚಿಕೆಯವರೆಗೆ ಧಾರಾವಾಹಿಯಾಗಿ ಪ್ರಕಟವಾಯಿತು. ಇದರ ಹಿಂದೆಯೇ ಅದರ ಇಂಗ್ಲಿಷ್ ಅನುವಾದ, 'ಯಂಗ್ ಇಂಡಿಯಾ'ದ ೧೯೨೫ರ ಡಿಸೆಂಬರ್ ೩ರ ಸಂಚಿಕೆಯಿಂದ ಹಿಡಿದು ೧೯೨೯ರ ಫೆಬ್ರುವರಿ ೭ರ ಸಂಚಿಕೆಯವರೆಗೆ ಪ್ರಕಟವಾಯಿತು. ಅನುವಾದ ಕೈಗೊಂಡವರು ಮಹದೇವ ದೇಸಾಯಿ ಮತ್ತು ಅವರು ಲಭ್ಯವಿಲ್ಲದಿದ್ದಾಗ ಗಾಂಧಿಯವರ ಇನ್ನೋರ್ವ ಆಪ್ತ ಕಾರ್ಯದರ್ಶಿಯಾಗಿದ್ದ ಪ್ಯಾರೇಲಾಲ್‌ರು. ಆತ್ಮಕತೆಯ ಗುಜರಾತಿ ಮೂಲ, ಪುಸ್ತಕ ರೂಪದಲ್ಲಿ ನವಜೀವನ ಪ್ರಕಾಶನದಿಂದಲೇ ಎರಡು ಸಂಪುಟಗಳಲ್ಲಿ ೧೯೨೬ ಹಾಗೂ ೧೯೨೮ರಲ್ಲಿ ಪ್ರಕಟವಾದರೆ, ಅದರ ಇಂಗ್ಲಿಷ್ ಅನುವಾದವೂ ಎರಡು ಸಂಪುಟಗಳಲ್ಲಿ, ೧೯೨೭ ಹಾಗೂ ೧೯೨೯ರಲ್ಲಿ ಖಾದಿ ರಕ್ಷಾಪುಟಗಳೊಂದಿಗೆ ಪ್ರಕಟವಾದವು. ಇಂಗ್ಲಿಷ್ ಸಂಪುಟಗಳು ಬಾಂಬೆಯ ಕರ್ನಾಟಕ ಮುದ್ರಣಾಲಯದಲ್ಲಿ ಪ್ರಕಟವಾದುವೆಂಬುದು ಕನ್ನಡಿಗರಿಗೆ ಹೆಮ್ಮೆಯ ಸಂಗತಿಯಾಗಬಹುದು. ಆತ್ಮಕತೆಯ ಇಂಗ್ಲಿಷ್ ಆವೃತ್ತಿ ಭಾರತದಲ್ಲಿ ಮಾತ್ರವಲ್ಲದೆ ಜಗತ್ತಿನಾದ್ಯಂತದ ಓದುಗರ ಮತ್ತು ಪತ್ರಿಕೆಗಳ ಗಮನ ಸೆಳೆಯಿತು. ಕೆಲವರು ಗಾಂಧಿ ಈ ಕೃತಿಯಲ್ಲಿ ತಮ್ಮ ಪತ್ನಿಯೊಡನೆಯ ತಮ್ಮ ವರ್ತನೆ ಕುರಿತು ಮತ್ತು ತಮ್ಮ ಕೆಲವು ನಿರ್ಧಾರಗಳ ಬಗ್ಗೆ ನಿರ್ಭಿಡೆಯಿಂದ ಬರೆದಿರುವ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದರೆ, ಇನ್ನು ಕೆಲವರು–ವಿಶೇಷವಾಗಿ ಇಂಗ್ಲೆಂಡ್‌ನ ಪತ್ರಕರ್ತರು–ಅದನ್ನು ವಿಪರೀತ ಸ್ವಕೇಂದ್ರಿತ ವ್ಯಕ್ತಿಯೊಬ್ಬನ ವಿಚಿತ್ರ ಸ್ವಭಾವದ ನಿರೂಪಣೆ ಎಂದು ಟೀಕಿಸಿದ್ದರು. ಆದರೆ ಈ ಕೃತಿಯ ಜಾಗತಿಕ ಆವೃತ್ತಿಯ ಪ್ರಕಾಶನದ ಹಕ್ಕುಗಳಿಗಾಗಿ ಪಶ್ಚಿಮದ ಹಲವು ದಿಗ್ಗಜ ಪ್ರಕಾಶನ ಸಂಸ್ಥೆಗಳು ಮುಗಿಬಿದ್ದವೆಂಬುದೇ ಈ ಆತ್ಮಚರಿತ್ರೆಯ 'ಹೊಸತನ'ಕ್ಕೆ ಸಾಕ್ಷಿಯಾಗಿತ್ತು. ಗಾಂಧಿ ೧೯೨೦ರ ನಂತರದ ಅವಧಿಯ ತಮ್ಮ ಆತ್ಮಕಥೆಯನ್ನು ಬರೆಯುವ ಬಗ್ಗೆ ಯೋಚಿಸಿದರಾದರೂ, ಅವರ ವ್ಯಸ್ತ ಜೀವನದಿಂದಾಗಿ ಅದು ಸಾಧ್ಯವಾಗದೇ ಹೋಯಿತು. ಕೊನೆಗೆ ಅವರು, ಹೇಗೂ ತಮ್ಮ ಜೀವನ ತೆರೆದ ಪುಸ್ತಕವಾಗಿರುವುದರಿಂದ ಇದನ್ನು ಬರೆಯುವ ಅಗತ್ಯವಿಲ್ಲವೆಂದು ಪ್ರಕಟಿಸಿಯೂಬಿಟ್ಟರು.

■

೬೭

ವಿಶ್ರಾಂತಿಯ ನಂತರ ಮತ್ತೆ ದೇಶ ಪರ್ಯಟನೆ

ಗಾಂಧಿ ೧೯೨೬ರ ಡಿಸೆಂಬರ್‌ನಲ್ಲಿ ಗೌಹಾತಿ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ ಸಮಯದಲ್ಲೇ ಅವರ ಸ್ವಯಂಘೋಷಿತ ವಿಶ್ರಾಂತಿಯ ಅವಧಿ ಮುಗಿದಿತ್ತು. ಅಲ್ಲಿಂದಲೇ ಅವರು, ಅನಾರೋಗ್ಯದ ನಿಮಿತ್ತ ಅರ್ಧಕ್ಕೇ ನಿಲ್ಲಿಸಿದ್ದ ಖಾದಿ ನಿಧಿ ಸಂಗ್ರಹಣೆ ಮತ್ತು ಅಸ್ಪೃಶ್ಯತಾ ನಿವಾರಣಾ ಪ್ರಚಾರಾಂದೋಲನಕ್ಕಾಗಿ ದೇಶಪರ್ಯಟನೆಯ ಕೆಲಸವನ್ನು ಮುಂದುವರೆಸಿದರು. ಕಲ್ಕತ್ತಾಗೆ ಬಂದ ಅವರು ದಕ್ಷಿಣ ಬಿಹಾರದ ಹಲವು ಊರುಗಳಿಗೆ ಭೇಟಿ ನೀಡಿ, ನಂತರ ತಾವು ಮುಂದಾಳತ್ವ ವಹಿಸಿದ್ದ ಚಂಪಾರಣ್ ಸತ್ಯಾಗ್ರಹದ ಮೋತಿಹಾರಿ, ಬೆಟಿಯಾ ಊರುಗಳಿಗೆ ಹೋದರು. ಈ ಪ್ರವಾಸದಲ್ಲಿ ಅವರು ವಿಶೇಷವಾಗಿ ಭಾರತೀಯ ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ನಿಕಟ ಗಮನ ಹರಿಸಿದ್ದರು. ಪರ್ದಾ ಪದ್ಧತಿ ಅವರನ್ನು ತುಂಬಾ ನೋಯಿಸಿತು. ಅದು ಈ ದೇಶದ ಮಹಿಳೆಯರ ಗುಲಾಮಗಿರಿ ಸ್ಥಿತಿಯ ಸಾಕ್ಷಿಯಂತೆ ಅವರಿಗೆ ಕಂಡಿತು. ದಕ್ಷಿಣ ಭಾರತದಲ್ಲಿ ಮಹಿಳೆಯರು ಶಾಲಾ-ಕಾಲೇಜುಗಳಿಗೆ ಹೋಗುತ್ತಾ ಗಂಡಸಿನ ಸಮಾನವಾಗಿ ಬೆಳೆಯುವ ಛಾತಿ ತೋರುತ್ತಿದ್ದರೆ ಉತ್ತರ ಭಾರತದ ಮಹಿಳೆಯರಲ್ಲಿ ಜಾಗೃತಿಯೇ ಉಂಟಾಗದಿರುವುದು ಅವರಲ್ಲಿ ಆಶ್ಚರ್ಯ ಮತ್ತು ನೋವು ತಂದಿತು. ಈ ಬಗ್ಗೆ 'ಯಂಗ್ ಇಂಡಿಯಾ'ದಲ್ಲಿ ಬರೆದ ಲೇಖನವೊಂದರಲ್ಲಿ ಪುರುಷ ಮತ್ತು ಮಹಿಳೆಯರ ನಡುವಣ ಸಮಾನತೆಯನ್ನು ಎತ್ತಿ ಹಿಡಿದು ಮಹಿಳೆಯರು ಮುಕ್ತವಾಗಿ ಗಾಳಿ ಸೇವಿಸಲೂ ಬಿಡದ ಪರ್ದಾ ಪದ್ಧತಿಯ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು.

ಗಾಂಧಿಗೆ ಆದಿವಾಸಿಯೊಬ್ಬನ ವಿಚಿತ್ರ ಗೌರವ

ಗಾಂಧಿ ಆ್ಯಂಡ್ರ್ಯೂಸ್‌ರೊಂದಿಗೆ ಒರಿಸ್ಸಾದ ಆದಿವಾಸಿ ಪ್ರದೇಶವಾದ ಬೊಲಾಂಗೀರ್‌ಗೆ ಭೇಟಿ ಕೊಟ್ಟಾಗ, ಅಲ್ಲಿ ನಡೆದ ಒಂದು ಘಟನೆ ಕುತೂಹಲಕಾರಿಯಾಗಿದೆ. ಅದನ್ನು ಅವರು ೧೯೨೭ರ ಡಿಸೆಂಬರ್ ೨೨ರ 'ಯಂಗ್ ಇಂಡಿಯಾ'ದಲ್ಲಿ ನಿರೂಪಿಸಿದ್ದಾರೆ. ರೈಲ್ವೇ ನಿಲ್ದಾಣದಿಂದ ಸುಮಾರು ೪೫ ಕಿ. ಮೀ. ದೂರದಲ್ಲಿದ್ದ ಊರದು. ಅಲ್ಲೊಬ್ಬ ಕೊಳಕು ಪುಟಗೋಸಿ ಕಟ್ಟಿಕೊಂಡಿದ್ದ ಬಡಕಲು ದೇಹದ ವ್ಯಕ್ತಿಯೊಬ್ಬ, ಇವರ ಮುಂದೆ ಬಂದು ನಿಂತು, ಒಂದು ಒಣ ಹುಲ್ಲುಕಡ್ಡಿಯನ್ನು ಬಾಯಲ್ಲಿರಿಸಿಕೊಂಡು ಸಾಷ್ಟಾಂಗ ನಮಸ್ಕಾರ ಮಾಡುವಂತೆ ನೆಲಕ್ಕೆ ಧೊಪ್ಪನೆ ಬಿದ್ದು ಮತ್ತೆ ಎದ್ದು ಬಾಯಲ್ಲಿದ್ದ ಹುಲ್ಲುಕಡ್ಡಿಯನ್ನು ತಲೆಯಲ್ಲಿ ಸಿಗಿಸಿಕೊಂಡು, ನಂತರ

ಕೈಕಟ್ಟಿಕೊಂಡು ಬಾಗಿ ನಮಿಸಿದ. ಇದರಿಂದ ಮುಜುಗರಗೊಂಡು ಕುತೂಹಲಿತರಾದ ಗಾಂಧಿ, ಆ ವ್ಯಕ್ತಿಯನ್ನು ವಿಚಾರಿಸಿದಾಗ, ಆತ ಕಾಡಿನಿಂದ ಸೌದೆ ಕಡಿದು ಹೊತ್ತು ಮಾರಲು ಬಂದ ಓರ್ವ ದಲಿತ ಎಂದು ಗೊತ್ತಾಯಿತು. ಬಾಯಲ್ಲಿ ಹುಲ್ಲುಕಡ್ಡಿ ಸಿಗಿಸಿಕೊಂಡು ಮೇಲ್ಜಾತಿಯವರ ಮುಂದೆ ಬಾಗಿ ನಿಲ್ಲುವುದು, ತಾನವರ ಎತ್ತುಗಳಿಗೆ ಸಮಾನ ಎಂದು ಸೂಚಿಸುವ ಅಲ್ಲಿನ ಪದ್ಧತಿಯಂತೆ ಅದು. ಅವರು ಅವನಿಂದ ಅವನ ಬದುಕಿನ ಇನ್ನಷ್ಟು ವಿವರಗಳನ್ನು ಪಡೆದು ಬಹು ನೊಂದರು. ನಂತರ ಆತನಿಂದ ತಾನಿನ್ನು ಹೆಂಡ ಕುಡಿಯುವುದಿಲ್ಲ ಮತ್ತು ಹಾದಿಬೀದಿಯಲ್ಲಿ ಬಿದ್ದುದನ್ನು ಆಯ್ದು ತಿನ್ನುವುದಿಲ್ಲ ಎಂಬ ವಚನ ಪಡೆದರಂತೆ. ಹೀಗೆ ಗಾಂಧಿ ಪ್ರವಾಸದುದ್ದಕ್ಕೂ ತನ್ನ ಜನರ ಸಂಕಟಗಳ ವೈಚಿತ್ರ್ಯಗಳನ್ನು ಅರಿಯುವ ಪ್ರಯತ್ನಗಳನ್ನೂ ಮಾಡುತ್ತಿದ್ದರು.

ಈ ಪ್ರವಾಸದ ಮುಂದಿನ ಭಾಗವಾಗಿ ೧೯೨೭ರ ಏಪ್ರಿಲ್‌ನಲ್ಲಿ ಗಾಂಧಿ ಮಹಾರಾಷ್ಟ್ರದ ಸಾವಂತವಾಡಿ ಎಂಬಲ್ಲಿ ಇದ್ದಾಗ ಅವರು ಮತ್ತೆ ಅಸ್ವಸ್ಥರಾದರು. ಅವರನ್ನು ಅಲ್ಲಿ ಪರೀಕ್ಷಿಸಿದವರು, ಗಾಂಧಿ ಭಾರತಕ್ಕೆ ಮರಳುವ ಮುನ್ನ ಲಂಡನ್‌ನಲ್ಲಿದ್ದಾಗ ಅವರ ಪಕ್ಕೆ ನೋವಿಗೆ ಚಿಕಿತ್ಸೆ ನೀಡಿದ್ದ ಜೀವರಾಜ ಮೆಹ್ತಾ ಅವರೇ. ಗಾಂಧಿಯವರು, ದೀರ್ಘ ಪ್ರವಾಸ ಮತ್ತು ವಿಪರೀತ ಸಾರ್ವಜನಿಕ ಚಟುವಟಿಕೆಗಳ ಮೂಲಕ ದಣಿದಿದ್ದು, ಅವರಿಗೆ ಒಳ್ಳೆಯ ಗಿರಿಧಾಮದಲ್ಲಿ ನಿರ್ಮಲ ಗಾಳಿಯ ಅವಶ್ಯಕತೆ ಇದೆ ಎಂದು ಅವರು ಸೂಚಿಸಿದರು. ಗಾಂಧಿ ಆಗ ಆತ್ಮಚರಿತ್ರೆಯನ್ನು ಬರೆಯುತ್ತಿದ್ದುದರಿಂದ ಅವರ ಓದು-ಬರಹಗಳಿಗೆ ಅವಕಾಶ ನೀಡಿದ ವೈದ್ಯರು, ಅವರಿಗೆ ವಿಶ್ರಾಂತಿಗಾಗಿ ಸೂಚಿಸಿದ ಜಾಗ ಕರ್ನಾಟಕದ ನಂದಿ ಬೆಟ್ಟ. ಗಾಂಧಿ, ಅಲ್ಲಿಗೆ ತಮ್ಮ ಪತ್ನಿ ಕಸ್ತೂರಬಾ, ಮಗ ದೇವದಾಸ ಮತ್ತು ಆಪ್ತ ಕಾರ್ಯದರ್ಶಿ ಮಹದೇವ ದೇಸಾಯಿಯವರೊಂದಿಗೆ ಹೊರಟರು.

ಮೈಸೂರು ಸಂಸ್ಥಾನದ ಪ್ರವಾಸ

ಗಾಂಧಿ ನಂದಿಬೆಟ್ಟದಲ್ಲಿದ್ದಾಗ ಅವರ ಪರಿಚಾರಿಕೆಯ ಹೊಣೆ ಹೊತ್ತಿದ್ದವರು ರಾಜಾಜಿ. ಅವರಿಗೆ ಸಹಾಯಕರಾಗಿದ್ದವರು ದೇಶಪಾಂಡೆ ಗಂಗಾಧರರಾಯರು. ನಾಲ್ಕು ತಿಂಗಳ ಈ ಮೊಕ್ಕಾಂನಲ್ಲಿ ಗಾಂಧಿ, ಮೊದಲೆರಡು ತಿಂಗಳು ನಂದಿ ಬೆಟ್ಟದಲ್ಲೇ ಉಳಿದು ಆರೋಗ್ಯ ಸುಧಾರಣೆಯ ಕಡೆ ಗಮನ ಹರಿಸಿದರು. ಆದರೆ ದಿನವೂ ಬೇರೆ ಬೇರೆ ಕಡೆಯಿಂದ ಬೇರೆ ಬೇರೆ ವೃತ್ತಿ ಹಿನ್ನೆಲೆಗಳ ಜನ ಅವರನ್ನು ಭೇಟಿ ಮಾಡಲು ಬರುತ್ತಿದ್ದರು. ಇವರಲ್ಲಿ ಮೈಸೂರು ಸಂಸ್ಥಾನದ ದಿವಾನರಾದ ಮಿರ್ಜಾ ಇಸ್ಮಾಯಿಲ್ ಮತ್ತು ಮಾಜಿ ದಿವಾನರಾದ ಸರ್ ಎಂ. ವಿಶ್ವೇಶ್ವರಯ್ಯನವರೂ ಸೇರಿದ್ದರು. ವಿದ್ಯಾರ್ಥಿಗಳ ಮತ್ತು ಮಹಿಳೆಯರ ತಂಡಗಳೂ ಬಂದು ಗಾಂಧೀಜಿಯ ಆರೋಗ್ಯ ಸುಧಾರಿಸಲೆಂದು ಶುಭ ಕೋರಿ ತೆರಳುತ್ತಿದ್ದವು. ಆದರೆ ಗಾಂಧಿ, ಯಾರೇ ಬಂದರೂ ಅವರಿಂದ ತಮ್ಮ ಖಾದಿ ಪ್ರಚಾರ ನಿಧಿಗೆ ಕೊಡುಗೆಯನ್ನು ಪಡೆಯದೆ ಬಿಡುತ್ತಿರಲಿಲ್ಲ. ಒಬ್ಬ ವ್ಯಕ್ತಿ ತಾನು ತಂದಿದ್ದ ಹಣ್ಣನ್ನು ಗಾಂಧಿ ತಿನ್ನಬೇಕೆಂದು ಕೇಳಿಕೊಂಡಾಗ, ಅವರು, 'ನಾನು ತಿಂದರೆ ನೀವು ಖಾದಿ ನಿಧಿಗೆ ಎಷ್ಟು ಹಣ ಕೊಡುತ್ತೀರಿ?' ಎಂದು ಕೇಳಿ, ಅವರಿಂದ ದೇಣಿಗೆ ಪಡೆಯಲು ಹಿಂಜರಿಯಲಿಲ್ಲ.

ಜುಲೈ ತಿಂಗಳ ಹೊತ್ತಿಗೆ ಗಾಂಧಿಯವರ ಆರೋಗ್ಯ ಸುಧಾರಿಸಿದಂತೆ ಕಂಡಾಗ

ಮೈಸೂರು ಸಂಸ್ಥಾನದಲ್ಲಿ ಅವರ ಪ್ರವಾಸದ ಯೋಜನೆ ಸಿದ್ಧವಾಯಿತು. ಅವರಿಗೆ ಮತ್ತು ಅವರ ಪರಿವಾರಕ್ಕೆ ಬೆಂಗಳೂರಿನ ಕುಮಾರಕೃಪಾ ಅತಿಥಿ ಗೃಹದಲ್ಲಿ ವಾಸ್ತವ್ಯದ ವ್ಯವಸ್ಥೆ ಮಾಡಲಾಯಿತು. ಅಲ್ಲಿ ಗಾಂಧಿ ಮತ್ತೆ ನೂಲಲು ಆರಂಭಿಸಿದರು. ಬೆಂಗಳೂರಿನಲ್ಲಿ ದ.ಭಾರತ ಖಾದಿ ಪ್ರದರ್ಶನ ಮತ್ತು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭಾದ ಸಮ್ಮೇಳನಗಳಲ್ಲಿ ಭಾಗವಹಿಸಿದರು. ಅಸ್ಪೃಶ್ಯ ಜಾತಿಯ ವಿದ್ಯಾರ್ಥಿ ನಿಲಯಗಳಿಗೆ ಭೇಟಿ ನೀಡಿ ಅಲ್ಲಿನ ವಿದ್ಯಾರ್ಥಿಗಳಿಗೆ ಹಿತವಚನ ಹೇಳಿದರಲ್ಲದೆ ಅಲ್ಲಿನ ಅಡುಗೆ, ಊಟ ಮತ್ತು ಕಕ್ಕಸು ಮನೆಗಳ ಶುಚಿ ಪರೀಕ್ಷೆ ಮಾಡುತ್ತಿದ್ದರು. ಮಹಿಳಾ ಮಂಡಳಿ ಸಭೆಗಳಲ್ಲಿ ಬಾಲ್ಯ ಮತ್ತು ವಿಧವಾ ವಿವಾಹಗಳ ಬಗ್ಗೆ ಮಾತಾಡಿದರು. ಸಂಸ್ಕೃತ ಪಾಠಶಾಲೆಗೆ ಭೇಟಿ ನೀಡಿ ಸಂಸ್ಕೃತ ಭಾಷೆಯಲ್ಲಿರುವುದೆಲ್ಲವೂ ಸತ್ಯ ಮತ್ತು ಸಮ್ಮತಾರ್ಹವೆಂದು ನಂಬಬೇಡಿ ಎಂದು ಅಲ್ಲಿನ ಅಧ್ಯಾಪಕ-ವಿದ್ಯಾರ್ಥಿವೃಂದಕ್ಕೆ ಕಿವಿ ಮಾತು ಹೇಳಿದರಲ್ಲದೆ, ಚರಕಾದಲ್ಲಿ ವಿದ್ಯಾರ್ಥಿಗಳು ನೂಲುತ್ತಿರುವುದನ್ನು ಕಂಡು ಹರ್ಷಿಸಿ, 'ನೀವು ಬರೀ ನಿಮ್ಮ ಜನಿವಾರಗಳಿಗಾಗಿ ನೂತರೆ ಸಾಲದು, ಜನರ ಮೈಮುಚ್ಚುವ ಬಟ್ಟೆಗಾಗಿಯೂ ಸಾಕಷ್ಟು ನೂಲಬೇಕು' ಎಂದು ಹಾಸ್ಯ ಚಟಾಕಿ ಹಾರಿಸಿ ಖಾದಿ ಸಂದೇಶ ನೀಡಿದರು. ಭಾರತೀಯ ವಿಜ್ಞಾನ ಸಂಸ್ಥೆಗೆ ಭೇಟಿ ನೀಡಿದ ಅವರು ಅಲ್ಲಿನ ವಿಜ್ಞಾನಿ-ಅಧಿಕಾರಿ ವೃಂದಕ್ಕೆ, 'ಇಲ್ಲಿ ನನಗೆ ಅರ್ಥವಾಗುವಂಥದ್ದು ಏನೂ ಕಾಣುತ್ತಿಲ್ಲ. ಆದರೆ ಈ ಸಂಸ್ಥೆಯ ಮೇಲೆ ಟಾಟಾ ಮತ್ತು ಮೈಸೂರು ಸರ್ಕಾರ ಹಾಕಿರುವ ಹಣ ಬಡವರ ದುಡಿಮೆಯ ಮೂಲದಿಂದ ಬಂದ ಹಣ ಎಂಬುದನ್ನು ನೆನಪಿಟ್ಟುಕೊಂಡು, ಅವರ ಕಷ್ಟ ಕಾರ್ಪಣ್ಯಗಳನ್ನು ಕಡಿಮೆ ಮಾಡುವೆಡೆಗೆ ಗಮನ ಹರಿಸಿ ಕೆಲಸ ಮಾಡಿ ಎಂದು ಕರೆ ನೀಡಿದರು. ತಮ್ಮನ್ನು ಭೇಟಿ ಮಾಡಲು ಬಂದ ಮುಷ್ಕರನಿರತ ರಾಜಾಮಿಲ್‌ನ ಕಾರ್ಮಿಕರಿಗೆ, ಮಾಲೀಕರನ್ನು ಶತ್ರುಗಳಂತೆ ಕಾಣದೆ ತಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಿಕೊಳ್ಳುವಂತೆ ಸಲಹೆ ಮಾಡಿದರು.

ತಾರಾನಾಥರ ಅಭಿನಯ-ತಿರುಮಲೆ ರಾಜಮ್ಮನವರ ಸಂಗೀತ

ಗಾಂಧಿ ಕುರುಡು ಹುಡುಗಿಯೊಬ್ಬಳ ಸಂಗೀತ ಕೇಳಿ ಆನಂದಿಸಿದರು. ವೆಂಕಟಪ್ಪನವರ ಚಿತ್ರ ಕಲೆಯನ್ನು ನೋಡಿ ಮೆಚ್ಚಿದರು. ಪಂಡಿತ ತಾರಾನಾಥರು ಅಭಿನಯಿಸಿದ್ದ, ಹಿಂದಿ ಪ್ರಚಾರಾರ್ಥ ಆಯೋಜಿಸಿದ್ದ ನಾಟಕವನ್ನು ನೋಡಿ ಶುಭ ಕೋರಿದರು. ತಿರುಮಲೆ ರಾಜಮ್ಮನವರ ಸಂಗೀತ ಕೇಳಿದರು. ಕೃಷ್ಣಸ್ವಾಮಿಯವರ ವ್ಯಾಯಾಮ ಶಾಲೆಯನ್ನು ಉದ್ಘಾಟಿಸಿದರು. ಮೈಸೂರಿನಲ್ಲಿ ಕೌಟಿಲ್ಯನ ಅರ್ಥಶಾಸ್ತ್ರದ ಮೂಲ ಹಸ್ತಪ್ರತಿಯನ್ನು ಸಂಗ್ರಹಿಸಿದ ಡಾ. ಶಾಮಾಶಾಸ್ತ್ರಿಗಳನ್ನು ಕಂಡು ಮಾತಾಡಿದರು. ನಂತರ ಅವರು ಮೈಸೂರು, ತುಮಕೂರು, ಶಿವಮೊಗ್ಗ, ದಾವಣಗೆರೆ, ಹಾಸನ, ಚಿಕ್ಕಮಗಳೂರು ಜಿಲ್ಲೆಗಳ ಪ್ರವಾಸ ಕೈಗೊಂಡರು. ಇಲ್ಲೆಲ್ಲ ಅವರು ಜನರನ್ನು ನೂಲಲು ಮತ್ತು ಖಾದಿ ತೊಡಲು ಆಗ್ರಹಿಸಿದರು. ಖಾದಿ ನಿಧಿಗಾಗಿ ಹಣ ಕೂಡಿಸಿದರು. ಎಲ್ಲೆಡೆ ಅಸ್ಪೃಶ್ಯ ಸಮುದಾಯದ ಸಭೆಗಳನ್ನುದ್ದೇಶಿಸಿ ಮಾತನಾಡಿದರು. ಅವರಿಗೆ ಮದ್ಯಪಾನ ಮತ್ತು ಗೋಮಾಂಸ ವರ್ಜನೆಯ ಕರೆ ನೀಡಿದರು. ಹಲವೆಡೆಗಳಲ್ಲಿ ಹಲವು ದಲಿತ ಮುಖಂಡರು, ಗಾಂಧಿ ಸಮ್ಮುಖದಲ್ಲಿ ಅವರ ಕರೆಯನ್ನು ಮನ್ನಿಸುವುದಾಗಿ ಶಪಥವನ್ನೂ ಮಾಡಿದರು.

ತುಮಕೂರಿನಲ್ಲಿ ದಲಿತ ವಿದ್ಯಾರ್ಥಿ ನಿಲಯದ ಅಡುಗೆ ಮನೆಯಲ್ಲಿ ಸಿದ್ಧ ಮಾಡಿಟ್ಟಿದ್ದ ರಾಗಿ ರೊಟ್ಟಿಗಳನ್ನು ಕಂಡ ಗಾಂಧಿ, ಅವನ್ನು ತಮ್ಮೊಡನೆ ಬಂದಿದ್ದ ಎಲ್ಲರಿಗೂ ಬಡಿಸುವಂತೆ ಕೇಳಿದಾಗ ಕೆಲವರ ಮುಖ ಕೆಟ್ಟಿದ್ದಂತೂ ನಿಜ! ಗಾಂಧಿ ಶಿವಮೊಗ್ಗದಲ್ಲಿದ್ದಾಗ, ಅವರಿಗೆ ಸ್ವಲ್ಪ ಜ್ವರವಿದೆ ಎಂದು ತಿಳಿದ ರಾಜಾಜಿ, ಮಾರನೆಯ ದಿನದ ತೀರ್ಥಹಳ್ಳಿ ಭೇಟಿಯನ್ನು ರದ್ದುಗೊಳಿಸಿದಾಗ, ಬೆಳಿಗ್ಗೆ ಎದ್ದು ಇದನ್ನು ತಿಳಿದು ಸಿಟ್ಟಾದ ಗಾಂಧಿ, ಕಾಲ್ನಡಿಗೆಯಲ್ಲೇ ತೀರ್ಥಹಳ್ಳಿ ರಸ್ತೆಯನ್ನು ಕೇಳಿಕೊಂಡು ಆ ಊರ ಕಡೆ ನಡೆದೇ ಬಿಟ್ಟರು! ಇದನ್ನು ತಿಳಿದ ಪರಿವಾರದವರು ಮತ್ತು ಜನಸಮೂಹ ಅವರನ್ನು ಸೇರಿಕೊಳ್ಳಲು ಪರದಾಡಬೇಕಾಯಿತು! ಬೇಲೂರು-ಹಳೇಬೀಡುಗಳ ದೇವಾಲಯಗಳು ರಕ್ಷಣೆ ಇಲ್ಲದೆ ಹಾಳಾಗುತ್ತಿರುವುದನ್ನು ಕಂಡ ಅವರು, ಈ ಅಮೂಲ್ಯ ಕಲಾಸಂಪತ್ತನ್ನು ರಕ್ಷಿಸುವ ಕ್ರಮ ಕೈಗೊಳ್ಳುವಂತೆ ಪ್ರಾಚ್ಯವಸ್ತು ಸಂಶೋಧನಾ ಇಲಾಖೆಯನ್ನು ಆಗ್ರಹಿಸಿದರು. ಗಾಂಧಿ ಮೈಸೂರು ಸಂಸ್ಥಾನದ ಪ್ರಕೃತಿ ಸೌಂದರ್ಯ ಮತ್ತು ಕಲಾ ಸಂಪತ್ತನ್ನು ಮೆಚ್ಚಿಕೊಂಡರಾದರೂ 'ಇಲ್ಲಿನ ಜನ ಸೋಮಾರಿಗಳು. ಏಳು ಗಂಟೆಯಾದರೂ ಹಾಸಿಗೆ ಬಿಟ್ಟು ಏಳುವುದಿಲ್ಲ ಎಂದು ಕೇಳಿದ್ದೇನೆ!' ಎಂದು ಛೇಡಿಸದೆ ಬಿಡಲಿಲ್ಲ.

ಅಂದಹಾಗೆ ಗಾಂಧಿಯವರ ಈ ಮೈಸೂರು ಸಂಸ್ಥಾನದ ಪ್ರವಾಸದ ಸಂದರ್ಭದಲ್ಲೇ, ರಾಜಾಜಿಯವರ ಜೊತೆ ಬಂದಿದ್ದ ಅವರ ಮಗಳು ಲಕ್ಷ್ಮಿ ಮತ್ತು ಗಾಂಧಿಯವರ ಜೊತೆ ಬಂದಿದ್ದ ದೇವದಾಸ ಪರಸ್ಪರ ಮದುವೆಯ ಪ್ರಸ್ತಾಪ ಮಾಡಿ ದಂಪತಿಗಳಾಗಲು ನಿಶ್ಚಯಿಸಿದ್ದು.

ಗಾಂಧಿಗೆ ಬಂದ ಎರಡು ಪತ್ರಗಳು

ಗಾಂಧಿ ಕರ್ನಾಟಕ ಪ್ರವಾಸದಲ್ಲಿದ್ದಾಗ ಅವರಿಗೆ ಬಂದ ಎರಡು ಮುಖ್ಯ ಪತ್ರಗಳನ್ನು ಇಲ್ಲಿ ಉಲ್ಲೇಖಿಸಬೇಕು. ಒಂದು ಮಹಾರಾಷ್ಟ್ರದ ಮಹಾಡ್ ಎಂಬ ಊರಿನಿಂದ ಅವರ ಅಭಿಮಾನಿಯೊಬ್ಬ ಬರೆದಿದ್ದ ಪತ್ರ. ಆ ಪತ್ರ ಆ ಊರಿನ ಸಾರ್ವಜನಿಕ ಕೆರೆಯಿಂದ ನೀರು ಪಡೆಯಲು ಅಸ್ಪೃಶ್ಯರನ್ನು ಸವರ್ಣೀಯರು ನಿರ್ಬಂಧಿಸಿದ್ದರ ವಿರುದ್ಧ, ವಿದೇಶೀ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣ ಪಡೆದು ಬಂದಿದ್ದ ಡಾ. ಬಿ.ಆರ್. ಅಂಬೇಡ್ಕರ್ ಎಂಬ ಯುವಕನ ನೇತೃತ್ವದಲ್ಲಿ ಅಸ್ಪೃಶ್ಯರು ಆಯೋಜಿಸಿದ್ದ ಕೆರೆ ನೀರು ಮುಟ್ಟುವ ಕಾರ್ಯಕ್ರಮದ ಬಗ್ಗೆ ಬರೆಯಲಾಗಿತ್ತು. ಆ ಪತ್ರಕ್ಕೆ ಕೂಡಲೇ ಉತ್ತರ ಬರೆದ ಗಾಂಧಿ, ಅಂಬೇಡ್ಕರ್ ಅವರ ಕಾರ್ಯಕ್ರಮವನ್ನು ಬೆಂಬಲಿಸಿದರಲ್ಲದೆ, ಈ ಬಗ್ಗೆ 'ಯಂಗ್ ಇಂಡಿಯಾ'ಗೆ 'ಅಸ್ಪೃಶ್ಯತೆ ಮತ್ತು ಅವಿವೇಕ' ಎಂಬ ಶೀರ್ಷಿಕೆಯ ಲೇಖನವೊಂದನ್ನು ಬರೆದರು. ಇದರಲ್ಲಿ ಅವರು ಒಂದು ಅಮಾನವೀಯ ಆಚರಣೆಯಾಗಿರುವ ಅಸ್ಪೃಶ್ಯತೆ, ಈಗ ನಿಧಾನವಾಗಿ ಕುಸಿಯುತ್ತಿದ್ದು ಕೆಲವು ಸಂಪ್ರದಾಯವಾದಿ ಶಕ್ತಿಗಳ ಬಲದಿಂದ ಮಾತ್ರ ಅದು ಉಳಿದಿದೆ ಎಂದಿದ್ದರು.

ಗಾಂಧಿಯವರಿಗೆ ಬಂದ ಇನ್ನೊಂದು ಗಮನಾರ್ಹ ಪತ್ರವೆಂದರೆ ಮೋತಿಲಾಲ್ ನೆಹರೂ ಅವರದ್ದು. ಅವರು ತಮ್ಮ ಮಗ ಜವಾಹರಲಾಲ್ ನೆಹರೂ ಅವರನ್ನು ಕಾಂಗ್ರೆಸ್ಸಿನ ಮುಂದಿನ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಸೂಚಿಸಿ ಆ ಪತ್ರ ಬರೆದಿದ್ದರು. ತಮ್ಮ ಮತ್ತು ತಮ್ಮ ಬೆಂಬಲಿಗರ ಅಸಮ್ಮತಿಯ ನಡುವೆಯೂ ಮಾಂಟೆಫೋರ್ಡ್

ಸಂವಿಧಾನ ಸುಧಾರಣೆಗಳ ಅಡಿಯಲ್ಲಿ ಬ್ರಿಟಿಷ್ ಪ್ರಭುತ್ವದ ಶಾಸನ ಸಭೆಗಳ ಚುನಾವಣೆಗಳಲ್ಲಿ ಸ್ಪರ್ಧಿಸುವ ನಿಲುವು ತಳೆದು ಸಮಾನ ಮನಸ್ಕ ಕಾಂಗ್ರೆಸ್ಸಿಗರನ್ನು ಸಂಘಟಿಸಿ 'ಸ್ವರಾಜ್ಯ' ಎಂಬ ಪಕ್ಷದ ಅಡಿಯಲ್ಲಿ ಸ್ಪರ್ಧಿಸಿ, ಕೇಂದ್ರ ಶಾಸನ ಸಭೆಯನ್ನು ಪ್ರವೇಶಿಸಿದ್ದ ಮೋತಿಲಾಲರ ಮಹತ್ವಾಕಾಂಕ್ಷೆಯ ವ್ಯಕ್ತಿತ್ವವನ್ನು ಬಲ್ಲವರಾಗಿದ್ದ ಗಾಂಧಿ, ಮೋತಿಲಾಲರಿಗೆ ಒಂದು ಮಾರೋಲೆ ಬರೆದು ಅವರ ಕೋರಿಕೆಯನ್ನು ನಯವಾಗಿ ತಿರಸ್ಕರಿಸಿದರು. ತಮ್ಮ ಪತ್ರದಲ್ಲಿ ಕಾಂಗ್ರೆಸ್ ಈಗ ಒಳಜಗಳಗಳ ಗೂಡಾಗಿದ್ದು, ಈ ಪರಿಸ್ಥಿತಿಗೆ ಜವಾಹರರಂತಹ ಉತ್ಸಾಹಿ ಯುವಕನನ್ನು ಬಲಿಕೊಡಬಾರದೆಂದು ಅವರು ಹೇಳಿದ್ದರು. ಸ್ವತಃ ಜವಾಹರರೇ ಈ ಸ್ಥಾನ ಸದ್ಯಕ್ಕೆ ತಮಗೆ ಬೇಡವೆಂದು ಗಾಂಧಿಯವರಿಗೆ ಪತ್ರ ಬರೆದು, ಸದ್ಯದ ಹಿಂದೂ ಮುಸ್ಲಿಂ ವೈಮನಸ್ಯದ ಪರಿಹಾರದ ಪ್ರಯತ್ನವಾಗಿ ದೆಹಲಿಯ ವೈದ್ಯ ಡಾ. ಎಂ.ಎ.ಅನ್ಸಾರಿಯವರು ಕಾಂಗ್ರೆಸ್ ಅಧ್ಯಕ್ಷತೆಗೆ ಸೂಕ್ತ ಅಭ್ಯರ್ಥಿಯೆಂದು ಹೇಳಿದ್ದರು. ಗಾಂಧಿಯವರ ಒಲವೂ ಅದೇ ಆಗಿತ್ತು.

ಅಮೆರಿಕನ್ ಲೇಖಕಿಯ ಭಾರತದ ನಿಂದನೆ

ಇದೇ ಸಂದರ್ಭದಲ್ಲಿ ಪ್ರಕಟವಾದ ಕ್ಯಾಥರೀನ್ ಮೇಯೋ ಎಂಬ ಅಮೆರಿಕಾದ ಲೇಖಕಿಯ 'ಮದರ್ ಇಂಡಿಯ' ಪುಸ್ತಕ ದೇಶಾದ್ಯಂತ ಬಿರುಗಾಳಿಯನ್ನೆಬ್ಬಿಸತೊಡಗಿತ್ತು. ಗಾಂಧಿ, ಟ್ಯಾಗೋರ್ ಅವರೂ ಸೇರಿದಂತೆ ಹಲವು ಗಣ್ಯ ಭಾರತೀಯರನ್ನು ಭೇಟಿ ಮಾಡಿ, ಮತ್ತು ಭಾರತದ ವ್ಯಾಪಕ ಪ್ರವಾಸ ಮಾಡಿ ಬರೆಯಲ್ಪಟ್ಟಿದ್ದ ಈ ಪುಸ್ತಕ, ಭಾರತದಲ್ಲಿ ಪ್ರಚಲಿತವಿದ್ದ ಪ್ರಾಣಿ ಬಲಿ, ಮೂಢ ನಂಬಿಕೆಗಳು, ಜಡತೆ, ಜಾತಿ ಪದ್ಧತಿ, ಬಾಲ್ಯ ವಿವಾಹ, ಕೊಳಕು, ಬಡತನ ಮತ್ತು ವಿಧಿವಾದಗಳನ್ನು ವಿವರಿಸುತ್ತಾ, ಇಂತಹ ಪರಿಸ್ಥಿತಿಯಲ್ಲಿ ಬ್ರಿಟಿಷ್ ಅಧಿಕಾರಿಗಳ ಪ್ರಾಮಾಣಿಕ ಮತ್ತು ನಿಸ್ಪೃಹ ಸೇವೆ ಸಹಾನುಭೂತಿಗೆ ಅರ್ಹ ಎಂದಿತ್ತು. ಇದರಲ್ಲಿ ಅನೇಕರ ಮಾತುಗಳನ್ನು ತಿರುಚಿ ಬಳಸಿದ ಉದಾಹರಣೆಗಳಿದ್ದವು. ಲಾಲಾ ಲಜಪತ್‌ರಾಯ್, ಅನಿಬೆಸೆಂಟ್ ಮತ್ತು ಟ್ಯಾಗೋರರೂ ಸೇರಿದಂತೆ ಹಲವರು ಈ ಕೃತಿಯನ್ನು ಖಂಡಿಸಿ, ಐವತ್ತಕ್ಕೂ ಹೆಚ್ಚು ಪುಸ್ತಕ–ಕರಪತ್ರ–ಲೇಖನಗಳನ್ನು ಬರೆದು, ಇದೊಂದು ಬ್ರಿಟಿಷ್ ಪ್ರಭುತ್ವದ ಚೇಲಾಗಿರಿಯ ಪ್ರಯತ್ನವೆಂದು ಬಣ್ಣಿಸಿದರು. ಮೇಯೋ ಅವರ ಪುಸ್ತಕವನ್ನು ಬ್ರಿಟಿಷ್ ಪ್ರಭುತ್ವದ ಪರವಾಗಿ, ನಮ್ಮ ಚರಂಡಿಗಳ ಮೇಲ್ವಿಚಾರಣೆ ಮಾಡಲು ಬಂದ, ಚರಂಡಿ ಪರೀಕ್ಷಕರ ವರದಿ ಎಂದು ಕರೆದ ಗಾಂಧಿ, ಇದರಲ್ಲಿನ ಬ್ರಿಟಿಷ್ ಪ್ರಭುತ್ವದ ಸಮರ್ಥನೆ, ಅದನ್ನು ಓದಿದ ಬ್ರಿಟಿಷ್ ಅಧಿಕಾರಿಗಳೇ ನಾಚಿಕೊಳ್ಳುವಂತಿದೆ ಎಂದರು. ಜೊತೆಗೇ ಅವರು ಈ ಪುಸ್ತಕದಲ್ಲಿನ ಭಾರತೀಯ ಸಂಸ್ಕೃತಿ ಮತ್ತು ಜೀವನ ಕ್ರಮಗಳನ್ನು ಕುರಿತ ಮಾತುಗಳನ್ನು ತಳ್ಳಿ ಹಾಕದೆ, ಅವನ್ನು ನಾವು, ನಮ್ಮನ್ನು ನಾವು ತಿದ್ದಿಕೊಳ್ಳಲು ಪ್ರಚೋದನೆಗಳಾಗಿ ಸ್ವೀಕರಿಸಬೇಕೆಂದು ಸಲಹೆ ಮಾಡಿದರು.

ಗಾಂಧಿ ಮತ್ತು ಅವರ ಪರಿವಾರ, ಆಗಸ್ಟ್ ಕೊನೆಯ ವಾರದಲ್ಲಿ ಬೆಂಗಳೂರಿನಿಂದ ರೈಲು ಹತ್ತಿ ದೇಶದ ಇನ್ನಷ್ಟು ದಕ್ಷಿಣ ಭಾಗದತ್ತ ತಮ್ಮ ಪ್ರವಾಸ ಮುಂದುವರೆಸಿದರು. ಮದ್ರಾಸ್, ವೆಲ್ಲೂರು, ಚಿದಂಬರಂ, ತಂಜಾವೂರು, ಕುಂಭಕೋಣಂ, ನಾಗರಕೋಯಿಲ್‌ಗಳಿಗೆ ಭೇಟಿ ನೀಡಿ, ಅಲ್ಲೆಲ್ಲ ಸಾರ್ವಜನಿಕ ಸಭೆಗಳನ್ನುದ್ದೇಶಿಸಿ ಖಾದಿ ಮತ್ತು ಅಸ್ಪೃಶ್ಯತಾ ನಿವಾರಣೆಯ ಮಹತ್ವ ಕುರಿತು ಮಾತಾಡಿದರಲ್ಲದೆ, ಖಾದಿ ನಿಧಿಗಾಗಿ

ಹಣ ಸಂಗ್ರಹಿಸುವ ಕೆಲಸವನ್ನೂ ಮಾಡಿದರು. ಈ ಸಂದರ್ಭದಲ್ಲಿ ಶ್ರೀಮಂತ ಚೆಟ್ಟಿಯಾರ್‌ಗಳ ಮನೆಗಳಿಗೆ ಭೇಟಿ ನೀಡಿದ್ದ ಗಾಂಧಿ, ಆ ಮನೆಗಳೊಳಗೆ ಒಟ್ಟಿದ್ದ ಪೀಠೋಪಕರಣ ಮತ್ತು ಪ್ರದರ್ಶಿಸಿದ್ದ ಕಲಾಕೃತಿಗಳ ದಟ್ಟಣೆಯನ್ನು ನೋಡಿ ಗಾಬರಿಗೊಂಡು, ಅದನ್ನು ಉಸಿರುಗಟ್ಟಿಸುವ ಶ್ರೀಮಂತಿಕೆ ಮತ್ತು ದಾರಿತಪ್ಪಿದ ಸೌಂದರ್ಯ ಪ್ರಜ್ಞೆ ಎಂದು ಬಣ್ಣಿಸುತ್ತಾ, ಮನೆಯೊಡೆಯರಿಗೆ ತಾವು ತಮ್ಮ ವಾಸ್ತುಶಿಲ್ಪಿ ಗೆಳೆಯ ಕಲೆನ್‌ಬಾಕ್‌ರಿಂದ ಕಲಿತಿದ್ದ ಗೃಹಾಲಂಕರಣದ ಪಾಠಗಳನ್ನು ಹೇಳಿದರು. ನಾಗರಕೋಯಿಲ್‌ನಲ್ಲಿ ಮತ್ತೆ ಅವರು ಸಂಸ್ಕೃತ ಗ್ರಂಥಗಳಲ್ಲಿರುವುದನ್ನೆಲ್ಲ ಪವಿತ್ರವೆಂದು ಪರಿಗಣಿಸಬಾರದೆಂದು ಕರೆಕೊಡುತ್ತಾ, ಯಾವುದು ಎಷ್ಟೇ ಪುರಾತನವಾದರೂ ಮಾನವ ಕುಲದ ನೈತಿಕ ಪ್ರಜ್ಞೆಗೆ ಸರಿ ಎನ್ನಿಸದ್ದನ್ನು, ಶಾಸ್ತ್ರ ಎಂದು ಒಪ್ಪಬಾರದು ಎಂದು ಸೂಚಿಸಿದರು. ಮುಂದೆ ತಿರುವಾಂಕೂರು ಪ್ರಾಂತ್ಯವನ್ನು ಪ್ರವೇಶಿಸಿದ ಅವರು, ಕ್ವಿಲಾನ್‌ನಲ್ಲಿ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆ ಎಂಬುದು ಹಾಲಿನಲ್ಲಿ ಬೆರೆತ ಒಂದು ತೊಟ್ಟು ವಿಷದಂತೆ ಎಂದು ಜನರನ್ನು ಎಚ್ಚರಿಸಿದರು.

ಹೊಸ ವೈಸ್‌ರಾಯ್ ಲಾರ್ಡ್ ಇರ್ವಿನ್ ಭೇಟಿ

ಈ ಮಧ್ಯೆ ದೇಶಕ್ಕೆ ಹೊಸ ವೈಸ್‌ರಾಯ್ ನೇಮಕವಾಗಿದ್ದು, ರೀಡಿಂಗ್ ಅವರ ಜಾಗಕ್ಕೆ ಲಾರ್ಡ್ ಇರ್ವಿನ್‌ರೆಂಬ ಧರ್ಮಭೀರು ವ್ಯಕ್ತಿ ನೇಮಕವಾಗಿದ್ದು, ಅವರು ಗಾಂಧಿಯನ್ನು ಭೇಟಿ ಮಾಡಬಯಸಿ ಆಹ್ವಾನಿಸಿದರು. ಆಗ ಮಂಗಳೂರಿನಲ್ಲಿದ್ದ ಗಾಂಧಿ, ಅಲ್ಲಿಂದ ಮುಂಬೈಗೆ ದೋಣಿಯಲ್ಲಿ ಹೋಗಿ ಅಲ್ಲಿಂದ ರೈಲಿನಲ್ಲಿ, ಮತ್ತೆ ದೆಹಲಿಗೆ ಹೋದರೆ ವೈಸ್‌ರಾಯ್ ಕೇವಲ ಒಂದು ಪರಿಚಯದ ಭೇಟಿಗಾಗಿ ಆಹ್ವಾನಿಸಿತ್ತಿದ್ದರು ಎಂಬುದನ್ನು ತಿಳಿದು ನಿರಾಶರಾಗಿ ಮತ್ತೆ ದಕ್ಷಿಣ ಭಾರತದ ಪ್ರವಾಸಕ್ಕೆ ಹಿಂದಿರುಗಿದರು. ಭಾರತದಲ್ಲಿ ಹೆಚ್ಚು ಪ್ರಾತಿನಿಧಿಕವಾದ ಸರ್ಕಾರ ರಚಿಸಲು ಅಗತ್ಯವಾದ ಸಾಂವಿಧಾನಿಕ ಬದಲಾವಣೆಗಳನ್ನು ಸೂಚಿಸಲು, ಅಧ್ಯಯನಕ್ಕಾಗಿ ಬರಲಿದ್ದ ಸೈಮನ್ ಆಯೋಗದ ಬಗ್ಗೆ, ಈ ಸಂದರ್ಭದಲ್ಲಿ ವೈಸ್‌ರಾಯ್ ಗಾಂಧಿಗೆ ತಿಳಿಸಿದ್ದರು. ಅವರು ಈ ಸಂಬಂಧವಾಗಿ ಹಿಂದೂ-ಮುಸ್ಲಿಂ ಸಂಬಂಧದ ಸಮಸ್ಯೆಯ ಬಗ್ಗೆ ಮಾತಾಡುವ ಆಸಕ್ತಿ ತೋರಿದರೆ, ಗಾಂಧಿ ಭಾರತಕ್ಕೆ ಸ್ವಾಯತ್ತ ಆಶ್ರಯ ರಾಜ್ಯವ್ಯವಸ್ಥೆಯ (ಡೊಮಿನಿಯನ್) ಸ್ಥಾನಮಾನವನ್ನು ಆಗ್ರಹಿಸಿದ್ದರು. ಗಾಂಧಿಗೆ- ತಮ್ಮೊಬ್ಬ ಮಿತ್ರರಿಗೆ ತಿಳಿಸಿದಂತೆ- ವೈಸ್‌ರಾಯ್, ಅಧಿಕಾರದ ಹಮ್ಮು-ಬಿಮ್ಮುಗಳಿಲ್ಲದ ಒಳ್ಳೆಯ ಮನುಷ್ಯನಾಗಿ ಕಂಡರೆ, ವೈಸ್‌ರಾಯ್‌ಗೆ-ಆತ ತನ್ನ ತಂದೆಗೆ ಬರೆದ ಪತ್ರದಲ್ಲಿ ತಿಳಿಸಿದಂತೆ- ಗಾಂಧಿ, ಇನ್ನೊಂದು ಗ್ರಹದಿಂದ ಈ ಗ್ರಹಕ್ಕೆ ತಾತ್ಕಾಲಿಕ ಭೇಟಿ ನೀಡಿರುವ ಯಾತ್ರಿಕನಂತೆ ಕಂಡು ಕುತೂಹಲ ಹುಟ್ಟಿಸಿದ್ದರು.

ಗಾಂಧಿಯವರ ವಿಶಿಷ್ಟ ಮಾನವೀಯತೆ

ಗಾಂಧಿ ದೆಹಲಿಯಿಂದ ಅಹಮದಾಬಾದ್ ಮಾರ್ಗವಾಗಿ ದಕ್ಷಿಣಕ್ಕೆ ವಾಪಸಾಗುವ ಮುನ್ನ ನಡೆದ ಒಂದು ಹೃದಯಸ್ಪರ್ಶಿ ಘಟನೆಯನ್ನು, ಉದ್ಯಮಿ ಜಿ.ಡಿ. ಬಿರ್ಲಾ ಒಂದೆಡೆ ದಾಖಲಿಸಿದ್ದಾರೆ. ರೈಲು ಹತ್ತಲು ಗಾಂಧಿ ದೆಹಲಿ ನಿಲ್ದಾಣದಲ್ಲಿದ್ದಾಗ ಅವರನ್ನು ಭೇಟಿ ಮಾಡಿದ ಬಿರ್ಲಾ, ಸ್ವಲ್ಪ ದೂರದ ಕಾಡು ಪ್ರದೇಶದಲ್ಲಿ ವಾಸಿಸುವ ಓರ್ವ ವೃದ್ಧೆ,

ಮರಣಶಯ್ಯೆಯಲ್ಲಿದ್ದು ಆಕೆ ತಮ್ಮ ದರ್ಶನಕ್ಕಾಗಿ ಕಾಯುತ್ತಿದ್ದಾಳೆ ಎಂದಾಗ, ಗಾಂಧಿ ಮರುಮಾತಾಡದೆ ಆ ಚಳಿಗಾಲದ ರಾತ್ರಿ ಬಿರ್ಲಾರ ತೆರೆದ ಜೀಪ್‌ನಲ್ಲಿ ಆ ಕಾಡುಪ್ರದೇಶಕ್ಕೆ ಹೊರಟುಬಿಡುತ್ತಾರೆ. ಮರಣಶಯ್ಯೆಯಲ್ಲಿದ್ದ ವೃದ್ಧೆ, ಗಾಂಧಿ ದರ್ಶನದಿಂದ ತಾನು ಕೃತಾರ್ಥಳಾದೆ ಎಂದಾಗ, ಆಕೆಯನ್ನು ಸಂತೈಸಿ ಅಲ್ಲಿ ಕೆಲ ನಿಮಿಷಗಳಿದ್ದ ಗಾಂಧಿ, ಆ ಕೊರೆಯುವ ಚಳಿಯಲ್ಲೇ ಮತ್ತೆ ಬಿರ್ಲಾರ ಜೀಪಿನಲ್ಲಿ ಬಂದು, ರೈಲನ್ನು ಅದರ ಮುಂದಿನ ನಿಲ್ದಾಣದಲ್ಲಿ ಹಿಡಿದು ಪ್ರಯಾಣ ಕೈಗೊಳ್ಳುತ್ತಾರೆ.

ಸಿಲೋನ್ ಯಾತ್ರೆ

ಗಾಂಧಿ, ಮುಂದೆ ಪಯಣಿಸಿದ್ದು ಸಿಲೋನ್ (ಈಗ ಶ್ರೀಲಂಕಾ) ದೇಶಕ್ಕೆ, ೧೯೨೭ ರ ನವೆಂಬರ್‌ನಲ್ಲಿ, ಅವರು ಬೆಂಗಳೂರಿನಲ್ಲಿದ್ದಾಗ ಆ ದೇಶದ ಮುವ್ವರು ಯುವಕರು, ಅವರನ್ನು ತಮ್ಮ ದೇಶಕ್ಕೆ ಆಹ್ವಾನಿಸಿ ಪ್ರವಾಸದ ವ್ಯವಸ್ಥೆ ಮಾಡಿದ್ದರು. ಗಾಂಧಿ ಬೌದ್ಧ ಧರ್ಮೀಯರೇ ಹೆಚ್ಚಿರುವ ದ.ಸಿಲೋನ್ ಮತ್ತು ಹಿಂದೂ ತಮಿಳರು ಹೆಚ್ಚಿರುವ ಉತ್ತರದ ಜಾಫ್ನಾ ಪ್ರಾಂತ್ಯಗಳ ಪ್ರವಾಸ ಮಾಡಿದರು. ಅವರಿಗೆ ಹಲವು ನಗರ ಮತ್ತು ಪುರಸಭೆಗಳು ನಾಗರಿಕ ಸನ್ಮಾನ ಸಭೆಗಳನ್ನು ಏರ್ಪಡಿಸಿದ್ದವು. ಬೌದ್ಧ ಸಂನ್ಯಾಸಿಗಳ ಸಭೆಯೊಂದಕ್ಕೂ ಅವರನ್ನು ಆಹ್ವಾನಿಸಲಾಗಿತ್ತು. ತಮ್ಮ ಸಹಿಗಾಗಿ ಮುಗಿಬಿದ್ದ ಜನರಿಗೆ ಗಾಂಧಿ, ಖಾದಿ ತೊಡುವ ಮಾತು ಕೊಟ್ಟರೆ ಮಾತ್ರ ಸಹಿ ಎಂಬ ಷರತ್ತು ಹಾಕುತ್ತಿದ್ದರಲ್ಲದೆ, ಅವರಿಂದ ಶಕ್ತ್ಯಾನುಸಾರ ದೇಣಿಗೆಯನ್ನೂ ವಸೂಲು ಮಾಡುತ್ತಿದ್ದರು. ಬೌದ್ಧರ ಸಭೆಯಲ್ಲಿ ಅವರು, ಬುದ್ಧ ಹಿಂದೂ ಧರ್ಮವನ್ನು ತಿರಸ್ಕರಿಸಲಿಲ್ಲ. ಬದಲಿಗೆ ಆತ ಅದರ ಬುಡವನ್ನು ವಿಶಾಲಗೊಳಿಸಿ ಗಟ್ಟಿಗೊಳಿಸಿದ್ದು, ಈ ಎರಡೂ ಧರ್ಮಗಳ ನಡುವೆ ನಿಕಟ ಸಂವಾದ ಅಗತ್ಯವೆಂದು ಹೇಳಿದರು. ಆ ದ್ವೀಪ ದೇಶದಲ್ಲಿ ದೊಡ್ಡ ಸಂಖ್ಯೆಯಲ್ಲೇ ಇರುವ ಕ್ರಿಶ್ಚಿಯನ್ ಸಮುದಾಯವನ್ನು ಉದ್ದೇಶಿಸಿ ಮಾತನಾಡುತ್ತಾ 'ಪರ್ವತ ಪ್ರವಚನ'ದ ಮಟ್ಟಿಗೆ ತಾವು ಕ್ರಿಶ್ಚಿಯನ್ನರೇ ಹೌದು ಎಂದ ಗಾಂಧಿ, ಕ್ರಿಶ್ಚಿಯನ್ನರೇ ಇದನ್ನು ಅನುಸರಿಸುತ್ತಿಲ್ಲ ಎಂದು ವಿಷಾದಿಸಿದರು. ಜಾಫ್ನಾದಲ್ಲಿ ತಮಿಳು ಸಮುದಾಯವನ್ನು ಉದ್ದೇಶಿಸಿ ಮಾತನಾಡಿದ ಸಭೆಗಳಲ್ಲಿ ಅವರು, ಸಮಾಧಿ ಸೇರಿರುವ ಹಿಂದೂ ಸಂಪ್ರದಾಯಗಳನ್ನೆಲ್ಲ ಹೊರತೆಗೆದು ಭಾರತಕ್ಕಿಂತಲೂ ಇಲ್ಲಿ ಹೆಚ್ಚು ಕಟುವಾದ ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯನ್ನು ಆಚರಿಸುತ್ತಿರುವ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ಸುಮಾರು ೧೮ ದಿವಸಗಳ ಈ ಪ್ರವಾಸದಲ್ಲಿ ಗಾಂಧಿ, ಒಂದು ಲಕ್ಷ ರೂಪಾಯಿಗಳಿಗೂ ಹೆಚ್ಚು ದೇಣಿಗೆಯನ್ನು ಖಾದಿ ನಿಧಿಗಾಗಿ ಸಂಗ್ರಹಿಸಿದ್ದರು. ಇದಕ್ಕೆ ಅತ್ಯಂತ ಹೆಚ್ಚು ದೇಣಿಗೆ ನೀಡಿದವರು ಚೆಟ್ಟಿಯಾರರುಗಳೇ. ಆದರೆ ಇದರಲ್ಲಿ ಗಾಂಧಿ, ಅಮೂಲ್ಯವೆಂದು ಪರಿಗಣಿಸಿದ್ದು ಕೊಲಂಬೋದ ಕ್ಷೌರಿಕರು ಸಂಗ್ರಹಿಸಿ ನೀಡಿದ ನಾಲ್ಕು ನೂರು ರೂಪಾಯಿಗಳನ್ನು.

ಹದಗೆಟ್ಟ ಕೋಮು ಪರಿಸ್ಥಿತಿ–ಏಕತಾ ಸಮ್ಮೇಳನಗಳ ವೈಫಲ್ಯ

ಗಾಂಧಿ, ಖಾದಿ ಮತ್ತು ಅಸ್ಪೃಶ್ಯತಾ ನಿವಾರಣಾ ಪ್ರಚಾರಾಂದೋಲನದ ಭಾಗವಾಗಿ ದೇಶ ಪರ್ಯಟನೆಯಲ್ಲಿರುವಾಗಲೇ, ಸ್ವಾಮಿ ಶ್ರದ್ಧಾನಂದರ ಕೊಲೆಯಿಂದಾಗಿ ಮೊದಲೇ ಹದಗೆಟ್ಟಿದ್ದ ಹಿಂದೂ–ಮುಸ್ಲಿಂ ಸಂಬಂಧ, 'ರಂಗೀಲಾ ರಸೂಲ್' ಪ್ರಕರಣದಿಂದ

ಮತ್ತಷ್ಟು ಹದಗೆಟ್ಟಿತು. ಲಾಹೋರ್‌ನ ರಾಜಪಾಲ್ ಎಂಬ ಹಿಂದೂವೊಬ್ಬ ಪ್ರವಾದಿ ಮಹಮ್ಮದರ ಬಹುಪತ್ನಿತ್ವ ತತ್ವವನ್ನು ಹಂಗಿಸಿ ಪ್ರಕಟಿಸಿದ ಕರಪತ್ರಕ್ಕೆ ಇದು ಸಂಬಂಧಪಟ್ಟಿತ್ತು. ರಾಜಪಾಲ್‌ನನ್ನು ಕೆಳ ನ್ಯಾಯಾಲಯ ಶಿಕ್ಷೆಗೆ ಒಳಪಡಿಸಿತ್ತಾದರೂ ಲಾಹೋರ್ ನ್ಯಾಯಾಲಯ ಆ ಶಿಕ್ಷೆಯನ್ನು ರದ್ದುಗೊಳಿಸಿ ಅವನನ್ನು ಆರೋಪಮುಕ್ತಗೊಳಿಸಿದ್ದು ಉತ್ತರ ಭಾರತದ ಮುಸ್ಲಿಮರನ್ನು ರೇಗಿಸಿತು. ಅಲಿ ಸೋದರರು, ಮತನಿಂದನೆಗೆ ಸಂಬಂಧಿಸಿದ ಕಾನೂನು ಬದಲಾವಣೆಗೆ ಹಾಗೂ ಸ್ವಾಮಿ ಶ್ರದ್ಧಾನಂದರ ಕೊಲೆಯ ಸೇಡು ತೀರಿಸಿಕೊಳ್ಳುವಂತೆ ಹಿಂದೂಗಳಿಗೆ ಪ್ರಚೋದನೆ ನೀಡುತ್ತಿರುವ ಆರ್ಯಸಮಾಜದ ಮುಖವಾಣಿಗಳಂತಾಗಿರುವ ವೃತ್ತಪತ್ರಿಕೆಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಹೇಳಿಕೆಗಳನ್ನು ನೀಡಿದರು. ಪರಿಸ್ಥಿತಿಯನ್ನು ತಿಳಿಗೊಳಿಸಲು ಮಧ್ಯಪ್ರವೇಶಿಸುವಂತೆ ಗಾಂಧೀಜಿಗೆ ಪತ್ರ ಬರೆದರು. ಈ ಹಿನ್ನೆಲೆಯಲ್ಲಿ ೧೯೨೭ರ ಸೆಪ್ಟೆಂಬರ್ ಮತ್ತು ಅಕ್ಟೋಬರ್‌ಗಳಲ್ಲಿ ಸಿಮ್ಲಾ ಮತ್ತು ಕಲ್ಕತ್ತಾಗಳಲ್ಲಿ ಏಕತಾ ಸಮ್ಮೇಳನಗಳನ್ನು ಆಯೋಜಿಸಲಾಯಿತು. ಗಾಂಧಿ ಹೊರತಾಗಿ ಜಿನ್ನಾ, ಮಾಳವೀಯ, ಆಜಾದ್, ಅನ್ಸಾರಿ, ಮೋತಿಲಾಲ್ ನೆಹರೂ, ಸುಭಾಷ್‌ಚಂದ್ರ ಬೋಸ್‌ರಲ್ಲದೆ ಹಿಂದೂ ಮಹಾಸಭಾದ ಮದನಮೋಹನ ಮಾಳವೀಯ ಮತ್ತು ಮೂಂಜೆ ಮುಂತಾದವರು ಇವುಗಳಲ್ಲಿ ಭಾಗವಹಿಸಿದ್ದರಾದರೂ ಹಿಂದೂ ಮತ್ತು ಮುಸ್ಲಿಂ ಪ್ರತಿನಿಧಿಗಳ ಗುಂಪುಗಳೆರಡೂ ತಮ್ಮ ನಿಲುವುಗಳಿಗೆ ಅಂಟಿಕೊಂಡಿದ್ದರಿಂದ ಇವು ವಿಫಲವಾದವು. ಈ ಸಂದರ್ಭದಲ್ಲಿ ಗಾಂಧಿ 'ಯಂಗ್ ಇಂಡಿಯಾ'ದಲ್ಲಿ ಲೇಖನವೊಂದನ್ನು ಬರೆದು ಎರಡು ಸಮುದಾಯಗಳ ನಡುವೆ ಪರಸ್ಪರ ಸಂಶಯ, ಹಗೆ ಹೆಚ್ಚುತ್ತಿರುವ ಈ ಸಮಯದಲ್ಲಿ ಹಳೆಯ ಏಕತೆಯ ಸಾಮೂಹಿಕ ಪ್ರಯತ್ನಗಳಲ್ಲಿ ತಮಗೆ ನಂಬಿಕೆ ಹೋಗಿದೆಯೆಂದೂ, ಸದ್ಯಕ್ಕೆ ತಾವು ವೈಯಕ್ತಿಕ ಸಂಬಂಧ ಮತ್ತು ಪ್ರಾರ್ಥನೆಗಳ ವಿಧಾನಕ್ಕಷ್ಟೇ ಸೀಮಿತವಾಗಿರುವುದಾಗಿ ಹೇಳಿದರು.

ಮದ್ರಾಸ್ ಕಾಂಗ್ರೆಸ್ ಅಧಿವೇಶನ–ಸೈಮನ್ ಆಯೋಗದ ಬಹಿಷ್ಕಾರಕ್ಕೆ ಕರೆ

ಡಿಸೆಂಬರ್ ಅಂತ್ಯದಲ್ಲಿ ಮದ್ರಾಸ್‌ನಲ್ಲಿ ಡಾ. ಎಂ.ಎ. ಅನ್ಸಾರಿ ಅವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಷಿಕ ಕಾಂಗ್ರೆಸ್ ಅಧಿವೇಶನ (ಇದರಲ್ಲಿ ಗಾಂಧಿ ಭಾಗವಹಿಸಿರಲಿಲ್ಲ), ಹಿಂದೂಗಳು ಮತ್ತು ಮುಸ್ಲಿಮರಿಬ್ಬರೂ ಗೋಹತ್ಯೆ ಮತ್ತು ಮಸೀದಿಗಳ ಮುಂದೆ ಸಂಗೀತ ನುಡಿಸುವ ವಿಷಯದಲ್ಲಿ ಪರಸ್ಪರರ ಭಾವನೆಗಳನ್ನು ಅರಿತು ಸಂಯಮ ಪ್ರದರ್ಶಿಸಬೇಕೆಂದು ಕರೆಕೊಡುವ ನಿರ್ಣಯವನ್ನು ಅಂಗೀಕರಿಸಿತು. ಅದಕ್ಕಿಂತ ಮುಖ್ಯವಾಗಿ ಭಾರತದಲ್ಲಿನ ಬ್ರಿಟಿಷ್ ಆಡಳಿತದ ಸುಧಾರಣೆ, ಶಿಕ್ಷಣ ಕ್ಷೇತ್ರದ ಬೆಳವಣಿಗೆ ಮತ್ತು ಪ್ರಾತಿನಿಧಿಕ ಸಂಸ್ಥೆಗಳ ವಿಕಾಸದ ಬಗ್ಗೆ ಅಧ್ಯಯನ ಮಾಡಿ ವರದಿ ಸಲ್ಲಿಸಲು ಬ್ರಿಟಿಷ್ ಸಾಮ್ರಾಜ್ಯದ ಸರ್ಕಾರದಿಂದ ನೇಮಕವಾಗಿ ಬರಲಿದ್ದ ಸರ್ ಜಾನ್ ಸೈಮನ್ ಅಧ್ಯಕ್ಷತೆಯ ನಿಯೋಗವನ್ನು ಬಹಿಷ್ಕರಿಸುವ ನಿರ್ಣಯವನ್ನು ಅಧಿವೇಶನ ಅಂಗೀಕರಿಸಿತು. ಇದಕ್ಕೆ ಕಾರಣ, ಈ ನಿಯೋಗದಲ್ಲಿ ಭಾರತೀಯರಿಗೆ ಪ್ರಾತಿನಿಧ್ಯವಿಲ್ಲದೆ ಅದು ಸಂಪೂರ್ಣ ಶ್ವೇತಮಯವಾಗಿದ್ದುದು. ಮತ್ತೂ ಮುಖ್ಯವಾಗಿ ಆಯೋಗದ ಪರಿಶೀಲನಾ ಅಂಶಗಳಲ್ಲಿ ಭಾರತೀಯರ ಪ್ರಮುಖ ಬೇಡಿಕೆಯಾಗಿದ್ದ ಆಸ್ಟ್ರೇಲಿಯಾ ಮತ್ತು ಕೆನಡಾಗಳಿಗೆ ನೀಡಲಾಗಿದ್ದ ಸ್ವಾಯತ್ತ ಆಶ್ರಯ ರಾಜ್ಯದ ಸ್ಥಾನಮಾನದ ವಿಷಯ

ಸೇರಿಲ್ಲದಿದ್ದುದು. ಈ ಆಯೋಗಕ್ಕೆ ಪ್ರತಿಯಾಗಿ, ಕಾನೂನು ಪಂಡಿತರಾಗಿದ್ದ ಮೋತಿಲಾಲ್ ನೆಹರೂ ಅವರ ಅಧ್ಯಕ್ಷತೆಯಲ್ಲಿ ಭಾರತಕ್ಕಾಗಿ ಒಂದು ಸಂವಿಧಾನದ ಕರಡನ್ನು ಸಿದ್ಧಪಡಿಸಲು ಒಂದು ಸಮಿತಿಯನ್ನು ನೇಮಿಸಲಾಯಿತು.

ಈ ಸಮ್ಮೇಳನದಲ್ಲಿ ಜವಾಹರಲಾಲ್ ನೆಹರೂ ಅವರನ್ನು, ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ನಂತರದ ಅತಿ ಮಹತ್ವದ ಸ್ಥಾನವೆನಿಸಿದ ಕಾರ್ಯಕಾರಿ ಕಾರ್ಯದರ್ಶಿಯನ್ನಾಗಿ ನೇಮಿಸಲಾಯಿತು. ಈ ಕಿರಿಯ ನೆಹರೂ ಆಗತಾನೇ ಸೋವಿಯತ್ ರಷ್ಯಾದ ಪ್ರವಾಸ ಮಾಡಿಬಂದು ಕಾಂಗ್ರೆಸ್‌ನೊಳಗಿನ ಪ್ರಗತಿಶೀಲ ಗುಂಪಿನ ಕಣ್ಮಣಿಯಾಗಿದ್ದರು. ಇದನ್ನರಿತಿದ್ದ ಗಾಂಧಿ, ಈ ಸಂದರ್ಭದಲ್ಲಿ ಅವರಿಗೆ ಒಂದು ಪತ್ರ ಬರೆದು, ಕಾಂಗ್ರೆಸ್‌ನೊಳಗಿನ ಅತಿವಾದಿಗಳನ್ನು ಪ್ರೋತ್ಸಾಹಿಸುವಂತಹ ಯಾವುದೇ ಅತಿಗೆ ಹೋಗದಂತೆ ಅವರನ್ನು ಎಚ್ಚರಿಸಿದ್ದರು. ಇದಕ್ಕೆ ಆಗಿನ ಅತಿ ಹುರುಪಿನಲ್ಲೋ ಏನೋ ನೆಹರೂ ಬಹು ಖಾರವಾದ ಪತ್ರ ಬರೆದು ಹೀಗೆ ಹೇಳಿದ್ದರು: 'ನೀವು ಒಂದು ವರ್ಷದಲ್ಲಿ ಸ್ವರಾಜ್ಯ ಕೊಡಿಸುವುದಾಗಿ ಹೇಳಿದಾಗ ನಾವು ನಂಬಿದೆವು. ಅದು ಬರಲಿಲ್ಲ. ಸೆರೆಮನೆಯಿಂದ ಹೊರಗೆ ಬಂದಾಗಿನಿಂದ ನಿಮ್ಮಲ್ಲಿನ ಹೋರಾಟದ ಕಿಚ್ಚು ಆರಿ, ನೀವು ಹೆಚ್ಚು ಆಧ್ಯಾತ್ಮಿಕವಾಗಿ ನಮ್ಮಂಥ ನಾಸ್ತಿಕರನ್ನು ನಿರಾಶೆಗೊಳಿಸಿದ್ದೀರಿ. ದೇಶವೆಲ್ಲ ಖಾದಿಮಯವಾದಾಗ ಸ್ವರಾಜ್ಯ ತಾನಾಗಿ ಸಿಗುವುದೆಂಬ ನಿಮ್ಮ ಮಾತಿನಲ್ಲಿ ನನಗೆ ನಂಬಿಕೆ ಹೋಗಿದೆ.'

ಜವಾಹರರಲ್ಲಿ ತಮ್ಮ ರಾಜಕೀಯ ಉತ್ತರಾಧಿಕಾರಿಯನ್ನು ಕಾಣತೊಡಗಿದ್ದ ಗಾಂಧಿಯವರಿಗೆ ಈ ಉತ್ತರದಿಂದ ಆಘಾತವಾಯಿತು. ಅವರು ನಿರ್ಣಾಯಕವೆಂಬಂತೆ ಹೀಗೆ ಬರೆದರು; 'ನನ್ನ ಮತ್ತು ನಿಮ್ಮ ನಡುವೆ ಸಾಮ್ಯವೆನಿಸುವುದು ಏನೂ ಉಳಿದಿಲ್ಲ. ನಿಮ್ಮಂತಹ ದಿಟ್ಟ ಜಾಣ ಸಮರ್ಥ ಸಂಗಾತಿಯನ್ನು ಕಳೆದುಕೊಳ್ಳುತ್ತಿರುವ ಬಗ್ಗೆ ನನಗೆ ವಿಷಾದವಿದೆ.'

ಗಾಂಧಿ ಬ್ರಿಟಿಷ್ ಪ್ರಭುತ್ವದ ವಿರುದ್ಧ ನೇರ ಹೋರಾಟವನ್ನು ಮತ್ತೆ ಆರಂಭಿಸುವ ಒತ್ತಡಕ್ಕೆ ಒಳಗಾಗಿದ್ದರು. ಆದರೆ ಬ್ರಿಟಿಷ್ ಪ್ರಭುತ್ವ ವಿರೋಧಿ ನೇರ ಹೋರಾಟಕ್ಕೆ ಸೆರೆಮನೆವಾಸದಿಂದ ಶಸ್ತ್ರಚಿಕಿತ್ಸೆಯ ನಂತರ ಬಿಡುಗಡೆಯಾದ ಸಂದರ್ಭದಲ್ಲಿ ತಾವೇ ವಿಧಿಸಿಕೊಂಡಿದ್ದ ಆರು ವರ್ಷಗಳ ನಿರ್ಬಂಧ ಮುಗಿಯಲು ಅವರು ಮಾರ್ಚ್ ೧೯೨೮ರವರೆಗೆ ಕಾಯಬೇಕಿತ್ತು.

■

೭೮

ಮತ್ತೆ ಹೋರಾಟದ ರಾಜಕಾರಣಕ್ಕೆ

ಸಿಲೋನ್ ಪ್ರವಾಸದಿಂದ ಅಹಮದಾಬಾದ್‌ನ ಸತ್ಯಾಗ್ರಹ ಆಶ್ರಮಕ್ಕೆ ಹಿಂದಿರುಗಿದ ಗಾಂಧಿ, ಸ್ವಲ್ಪ ಕಾಲ ಆಶ್ರಮದಲ್ಲೇ ಇರಲು ನಿಶ್ಚಯಿಸಿದರು. ಅದಕ್ಕೆ ಅವರ ಆರೋಗ್ಯ ಸೂಕ್ಷ್ಮವಾಗಿದ್ದುದು ಒಂದು ಕಾರಣವಾಗಿದ್ದರೆ, ಆಶ್ರಮವೀಗ ಹೆಚ್ಚು ಬೆಳೆದಿದ್ದು, ಅದರ ಉಸ್ತುವಾರಿಯಲ್ಲಿ ಕೆಲವು ಬದಲಾವಣೆ ಅಗತ್ಯವಾಗಿದ್ದುದು. ಆಶ್ರಮದಲ್ಲೀಗ ೬೬ ಮಹಿಳೆಯರು ಮತ್ತು ೭೮ ಮಕ್ಕಳೂ ಸೇರಿದಂತೆ ಒಟ್ಟು ೨೭೭ ನಿವಾಸಿಗಳಿದ್ದರು. ೧೩೨ ಎಕರೆಗಳಷ್ಟು ವಿಸಾರವಾಗಿದ್ದ ಆ ಜಾಗದಲ್ಲಿ ಈ ಎಲ್ಲರಿಗೆ ಮನೆಗಳು, ಶಾಲೆ, ಕೃಷಿ, ನೂಲು, ನೇಯ್ಗೆ ಮರಗೆಲಸ ಇತ್ಯಾದಿ ಕಸುಬುಗಳಿಗಾಗಿ ಪ್ರತ್ಯೇಕ ವ್ಯವಸ್ಥೆ ಇತ್ತು. ಗಾಂಧಿ ಈಗ ಆಶ್ರಮದ ನಿಗದಿತ ಸ್ವಯಂಸೇವಕರ ವ್ಯವಸ್ಥೆಯನ್ನು ರದ್ದು ಮಾಡಿ, ಸ್ವಚ್ಛತೆ, ಅಡುಗೆ ಇತ್ಯಾದಿ ಕೆಲಸಗಳನ್ನು ತಂಡೋಪತಂಡವಾಗಿ ಎಲ್ಲ ಆಶ್ರಮವಾಸಿಗಳೂ ಮಾಡುವಂತೆ ನಿರ್ದೇಶಿಸಿದರು. ಪ್ರತ್ಯೇಕ ಅಡುಗೆ ವ್ಯವಸ್ಥೆಯನ್ನು ರದ್ದುಗೊಳಿಸಿ ಎಲ್ಲರಿಗೂ ಒಂದೇ ಅಡುಗೆಮನೆಯ ಏರ್ಪಾಟು ಮಾಡಿದರು. ಪ್ರಾರ್ಥನೆ, ನೂಲುವುದು ಮತ್ತು ಬರವಣಿಗೆಗಳಲ್ಲಿ ತೊಡಗಿಕೊಂಡಿದ್ದ ಗಾಂಧಿ, ಆಶ್ರಮದಿಂದಲೇ ಹೊರಗಣ ಪ್ರಪಂಚದ ಆಗುಹೋಗುಗಳನ್ನು ಗಮನಿಸುತ್ತಿದ್ದರು.

ಸೈಮನ್ ಆಯೋಗ, ೧೯೨೮ರ ಫೆಬ್ರುವರಿಯಲ್ಲಿ ಭಾರತಕ್ಕೆ ಬಂದಾಗ ಬಾಂಬೆಯಿಂದ ಆರಂಭವಾದಂತೆ, ಅದು ಹೋದೆಡೆಯಲ್ಲೆಲ್ಲ ಪ್ರತಿಭಟನೆಗಳು ನಡೆಯುತ್ತಿದ್ದುದನ್ನು ಗಾಂಧಿ ಗಮನಿಸುತ್ತಿದ್ದರು. ಅವರಿಗೆ ಆಶ್ಚರ್ಯ ತಂದ ವಿಷಯವೆಂದರೆ ಈವರೆಗೆ ಬ್ರಿಟಿಷ್ ಪ್ರಭುತ್ವದೊಡನೆ ಸಹಕರಿಸುವ 'ಸ್ವರಾಜ್ಯ' ಗುಂಪಿನ ನಾಯಕರಾಗಿದ್ದ ಮೋತಿಲಾಲ್ ನೆಹರೂ ಅವರು ಈ ಪ್ರತಿಭಟನೆಗಳ ನೇತೃತ್ವ ವಹಿಸಿದ್ದುದು ಮತ್ತು ಅವರ ಮಗ ಜವಾಹರ್ ಅದರ ಸಂಘಟನೆಯ ಹೊಣೆ ಹೊತ್ತಿದ್ದುದು.

ಮಗನ್‌ಲಾಲ್‌ರ ಸಾವು

ಇದೇ ಸಂದರ್ಭದಲ್ಲಿ ೧೯೨೮ ರ ಏಪ್ರಿಲ್ ಕೊನೆಯ ವಾರದಲ್ಲಿ ಗಾಂಧಿಯವರಿಗೆ ಆಘಾತವಾಗುವಂತಹ ದುರ್ವಾರ್ತೆಯೊಂದು ಪಾಟ್ನಾದಿಂದ ತಲುಪಿತು. ದ.ಆಫ್ರಿಕಾದ ದಿನಗಳಿಂದಲೂ ಅವರ ಮಕ್ಕಳಿಗಿಂತ ಹೆಚ್ಚಾಗಿ, ಅವರ ಆದರ್ಶಗಳ ನಿಷ್ಠಾವಂತ ಪಾಲಕನಾಗಿದ್ದ ಸೋದರ ಸಂಬಂಧಿ ಮಗನ್‌ಲಾಲ್‌ರ ನಿಧನದ ವಾರ್ತೆ ಅದಾಗಿತ್ತು.

ಗಾಂಧಿಯವರ ಸೂಚನೆಯ ಮೇರೆಗೆ ಚರಕ-ಮಗ್ಗಗಳ ಸ್ಥಾಪನೆಯ ಸಂಬಂಧವಾಗಿ, ಬಿಹಾರದ ಗ್ರಾಮಗಳ ಪ್ರವಾಸದಲ್ಲಿದ್ದ ಮಗನ್‌ಲಾಲ್ ವಿಷಮಶೀತ ಜ್ವರದ ಸೋಂಕಿಗೆ ಒಳಗಾಗಿ ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರು ಎಳೆದಿದ್ದರು. ದ.ಆಫ್ರಿಕಾದಲ್ಲಿ ಫೀನಿಕ್ಸ್ ಆಶ್ರಮ ಮತ್ತು ಅಹಮದಾಬಾದ್‌ನ ಸಬರ್ಮತಿ ಆಶ್ರಮದ ಸಂಪೂರ್ಣ ಜವಾಬ್ದಾರಿ ಹೊತ್ತು ಅವನ್ನು ಯಶಸ್ವಿಯಾಗಿ ನಿರ್ವಹಿಸಿದ್ದ ಆತ, – ಗಾಂಧಿ, ಅವರಿಗೆ ಸಲ್ಲಿಸಿದ ಶ್ರದ್ಧಾಂಜಲಿಯ ಮಾತುಗಳಲ್ಲೇ ಹೇಳುವುದಾದರೆ – ಗಾಂಧಿಯವರ ಕಣ್ಣು, ಕೈ, ಕಾಲುಗಳು ಎಲ್ಲವೂ ಆಗಿದ್ದರು. ಅವರ ಪ್ರಕಾರ ಮಗನ್‌ಲಾಲ್, ಆದರ್ಶ ರಚನಾತ್ಮಕ ಕಾರ್ಯಕರ್ತ, ಆದರ್ಶ ಸತ್ಯಾಗ್ರಹಿ ಮತ್ತು ಆದರ್ಶ ಬ್ರಹ್ಮಚಾರಿಯಾಗಿದ್ದರು. ಮಗನಲಾಲ್‌ರ ನಿಧನದಿಂದ ಅವರ ಪತ್ನಿಗಿಂತ ಹೆಚ್ಚಾಗಿ ತಾವು ಒಂಟಿಯಾಗಿರುವುದಾಗಿ ಹೇಳಿದ ಗಾಂಧಿ, ಅವರ ಪತ್ನಿಯ ಗೋಳಾಟದಿಂದ ಕನಲಿಹೋದರು. 'ಯಂಗ್ ಇಂಡಿಯಾ'ದಲ್ಲಿ ಬರೆದ ಶ್ರದ್ಧಾಂಜಲಿ ಬರಹದಲ್ಲಿ ಗಾಂಧಿ 'ನನ್ನನ್ನು ಲೋಕ, ಮಹಾತ್ಮ ಎಂದು ಕರೆಯುತ್ತದೆ. ಆದರೆ, ನನ್ನ ಮಹಾತ್ಮತನದ ಹಿಂದೆ ಎಷ್ಟೊಂದು ಅನಾಮಿಕ ಜನರ ಮೌನ, ಶ್ರದ್ಧೆ, ಪರಿಶ್ರಮ ಇರುತ್ತದೆಂಬುದು ಲೋಕಕ್ಕೆ ತಿಳಿಯದು. ಅಂಥಹವರಲ್ಲಿ ಶ್ರೇಷ್ಠರು ಮಗನ್‌ಲಾಲ್' ಎಂದು ಹೇಳಿದರು.

ಬಾರ್ಡೋಲಿ ರೈತ ಸತ್ಯಾಗ್ರಹ–'ಸರ್ದಾರ್'ರಾದ ಪಟೇಲರು!

ಅತ್ತ ಸೈಮನ್ ವಿರೋಧಿ ಪ್ರತಿಭಟನೆಗಳು ನಡೆದಿದ್ದರೆ ಹತ್ತಿರದಲ್ಲೇ, ದ.ಗುಜರಾತ್‌ನ ಬಾರ್ಡೋಲಿ ತಾಲ್ಲೂಕಿನಲ್ಲಿ ರೈತರ ಪ್ರತಿಭಟನೆ ಆರಂಭವಾಗಿತ್ತು. ಬಾರ್ಡೋಲಿ, ವಲ್ಲಭಭಾಯಿ ಪಟೇಲರ ತವರಾಗಿದ್ದು, ಅಲ್ಲಿ ಅವರು ಗಾಂಧಿಯವರ ರಚನಾತ್ಮಕ ಚಟುವಟಿಕೆಗಳ–ನೂಲುವುದು, ನೇಯುವುದು, ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ನಿರೋಧ, ಸಾಕ್ಷರತೆ ಇತ್ಯಾದಿ–ನಾಲ್ಕು ಆಶ್ರಮಗಳನ್ನು ಸ್ಥಾಪಿಸಿ, ರವಿಶಂಕರ್ ವ್ಯಾಸ್, ಮೋಹನಲಾಲ್ ಪಾಂಡ್ಯ, ಜುಗತ್‌ರಾಂ ದವೆ, ಸ್ವಾಮಿ ಆನಂದ್, ಅಬ್ಬಾಸ್ ತ್ಯಾಬ್ಜಿ ಮುಂತಾದವರನ್ನೊಳಗೊಂಡ ಸ್ವಯಂಸೇವಕರ ಒಂದು ದೊಡ್ಡ ತಂಡವನ್ನೇ ಸಿದ್ಧಗೊಳಿಸಿದ್ದರು. ೧೯೨೨ರಲ್ಲಿ ಇಲ್ಲಿ ಆರಂಭವಾಗಿದ್ದ ರೈತ ಸತ್ಯಾಗ್ರಹ, ಚೌರಿಚೌರ ಘಟನೆಯ ನಂತರ ಗಾಂಧೀಜಿಯ ತೀರ್ಮಾನದಂತೆಯೇ ಸ್ಥಗಿತಗೊಂಡಿತ್ತು. ಆಗ ಗಾಂಧಿ, ಬಾರ್ಡೋಲಿಯ ರೈತರಿಗೆ ಸಹಾಯಬೇಕಾದ ಯಾವ ಸಂದರ್ಭದಲ್ಲಾದರೂ ತಾವು ಮತ್ತು ಪಟೇಲ್ ಅಲ್ಲಿ ಹಾಜರಾಗುವುದಾಗಿ ಆಶ್ವಾಸನೆ ನೀಡಿದ್ದರು. ಈಗ, ೧೯೨೮ರ ಫೆಬ್ರುವರಿಯಲ್ಲಿ ಅಲ್ಲಿ ಹೆಚ್ಚಿದ ಭೂಕಂದಾಯದ ವಿರುದ್ಧ ರೈತರು ಅಶಾಂತಗೊಂಡು ಚಳುವಳಿಗೆ ತಯಾರಾಗಿದ್ದರು. ಅವರು ಗಾಂಧಿ ಆಶ್ರಮಗಳಿಗೆ ಈ ಸುದ್ದಿ ಮುಟ್ಟಿಸಿದರು. ಗಾಂಧಿಯವರ ಅನುಮತಿ ಪಡೆದೇ, ಅಹಮದಾಬಾದ್ ನಗರಸಭೆಯ ಅಧ್ಯಕ್ಷರಾಗಿದ್ದ ಪಟೇಲರು ಈಗ ಆ ಸ್ಥಾನಕ್ಕೆ ರಾಜೀನಾಮೆ ನೀಡಿ, ರೈತ ಚಳುವಳಿಯ ನೇತೃತ್ವ ವಹಿಸಲು ಬಾರ್ಡೋಲಿಗೆ ಧಾವಿಸಿ ಬಂದರು. ತಾಲ್ಲೂಕಿನ ೨೩ ಹಳ್ಳಿಗಳನ್ನು ಸರ್ಕಾರ, ವಿಶೇಷ ಆದಾಯದ ಹಳ್ಳಿಗಳೆಂದು ಪರಿಗಣಿಸಿ, ಅಲ್ಲಿ ಭೂಕಂದಾಯವನ್ನು ದುಪ್ಪಟ್ಟು ಮಾಡಿತ್ತು. ಸರ್ಕಾರದ ಲೆಕ್ಕಾಚಾರ ತಪ್ಪೆಂಬುದು ಹಳ್ಳಿಗರ ವಾದವಾಗಿತ್ತು. ಪಟೇಲರು ಹಳ್ಳಿಗರಿಗೆ ಕಂದಾಯ ನೀಡದಿರಲು ಕರೆಕೊಟ್ಟರು.

'ಮಲಗಿರುವ ಸಿಂಹವನ್ನು ಎಬ್ಬಿಸಿದರೆ ಏನಾಗುವುದೆಂದು ಈ ದುಷ್ಟ ಸರ್ಕಾರಕ್ಕೆ ಮನದಟ್ಟು ಮಾಡಬೇಕಿದೆ' ಎಂದವರು ರೈತರನ್ನು ಹುರಿದುಂಬಿಸಿದರು. ಗಾಂಧಿ ಕರ ಅಂದಾಜನ್ನು ಮರುಪರಿಶೀಲಿಸುವಂತೆ ಬಾಂಬೆ ಪ್ರಾಂತೀಯ ಸರ್ಕಾರವನ್ನು ಆಗ್ರಹಿಸಿದರು.

ಆದರೆ ಸರ್ಕಾರ, ರೈತರು ಮೊದಲು ಕಂದಾಯ ಕಟ್ಟಲಿ, ಆನಂತರ ಅಧ್ಯಯನ ಮಾಡೋಣ ಎಂದಿತು. ಆಗ ಗಾಂಧಿ, ರೈತರು ಪಟೇಲರನ್ನು ತಮ್ಮ ಸರ್ದಾರರಾಗಿ ಪರಿಗಣಿಸಿ ಅವರನ್ನು ಹಿಂಬಾಲಿಸುವಂತೆ ಕರೆಕೊಟ್ಟರು. ಈ ಕರೆಯಿಂದ ಆರಂಭವಾದಂತೆಯೇ ವಲ್ಲಭಭಾಯಿ ಪಟೇಲರ ಹೆಸರಿನೊಂದಿಗೆ 'ಸರ್ದಾರ್' ಎಂಬ 'ಬಿರುದು' ಕೂಡ ಶಾಶ್ವತವಾಗಿ ಸೇರಿಕೊಂಡಿತು.

ಹಠಕ್ಕೆ ಬಿದ್ದ ಸರ್ಕಾರ, ರೈತರ ಜಮೀನು ಮತ್ತು ಜಾನುವಾರುಗಳನ್ನು ಜಪ್ತಿ ಮಾಡಿ ಹರಾಜಿಗೆ ಇಟ್ಟಿತು. ಹಳ್ಳಿಗಳಿಗೆ ಬಂದ ಅಧಿಕಾರಿಗಳಿಗೆ ಯಾವ ನೆರವನ್ನೂ ನೀಡಬೇಡಿ ಎಂದು ಕರೆಕೊಟ್ಟರೆಂದು, ಪಟೇಲರ ತಂಡದ ಹಲವು ನಾಯಕರನ್ನು ಬಂಧಿಸಿ ಹಲವು ತಿಂಗಳುಗಳ ಸೆರೆಮನೆವಾಸದ ಶಿಕ್ಷೆ ವಿಧಿಸಲಾಯಿತು. ಗಾಂಧಿ, ಈ ಬಗ್ಗೆ 'ಯಂಗ್ ಇಂಡಿಯಾ'ದಲ್ಲಿ 'ಬಾರ್ಡೋಲಿ ರೈತರು ಆಸ್ತಿ ಕಳೆದುಕೊಂಡರಾದರೂ ಆತ್ಮಾಭಿಮಾನ ಕಳೆದುಕೊಳ್ಳಲು ನಿರಾಕರಿಸಿದ್ದಾರೆ' ಎಂದು ಬರೆದರು. ರೈತರು ಜಗ್ಗಲಿಲ್ಲ. ಸರ್ಕಾರವೂ ಮಣಿಯಲಿಲ್ಲ. ಸರ್ಕಾರದ ಈ ನಿಲುವಿಗೆ ಒಂದು ನಿರ್ದಿಷ್ಟ ಕಾರಣವೂ ಇತ್ತು. ಬಾರ್ಡೋಲಿಯನ್ನು ಗಾಂಧಿಯ ಭವಿಷ್ಯದ ರಾಷ್ಟ್ರವ್ಯಾಪಿ ಸತ್ಯಾಗ್ರಹಕ್ಕೆ, ಒಂದು ಪ್ರಾಯೋಗಿಕ ಕ್ಷೇತ್ರವನ್ನಾಗಿ ಬೆಳೆಸಲಾಗುತ್ತಿದೆ ಎಂಬ ವರದಿಯೊಂದು ಸರ್ಕಾರದ ಗಮನಕ್ಕೆ ಬಂದಿತ್ತು. ಅದು ನಿಜವೆಂಬಂತೆ ತಾಲ್ಲೂಕಿನ ಮಕ್ಕಳೂ ಮಹಿಳೆಯರೂ ಭೂಕಂದಾಯ ವಿರೋಧಿ ಸತ್ಯಾಗ್ರಹದಲ್ಲಿ ಸಾಮೂಹಿಕ ಹಾಡು-ನೃತ್ಯಗಳ ಮೂಲಕ ಸಕ್ರಿಯವಾಗಿ ಭಾಗವಹಿಸಿದ್ದರು. ಸೂರತ್, ಅಹಮದಾಬಾದ್‌ನ ಜನ ಕೂಡ ಉದಾರವಾಗಿ ದೇಣಿಗೆ ನೀಡಿ ಸತ್ಯಾಗ್ರಹವನ್ನು ಬೆಂಬಲಿಸಿದರು.

ರೈತರ ನೈತಿಕ ಸ್ಥೈರ್ಯ-ಮಣಿದ ಸರ್ಕಾರ

ರೈತರ ನೈತಿಕ ಸ್ಥೈರ್ಯಕ್ಕೆ ಸರ್ಕಾರ ಮಣಿಯಲೇ ಬೇಕಾಯಿತು. ಮಾತುಕತೆಗಾಗಿ ಸರ್ಕಾರ ಪಟೇಲರನ್ನು ಪೂನಾಗೆ ಆಹ್ವಾನಿಸಿತು. ಪಟೇಲರ ಅನುಪಸ್ಥಿತಿಯಲ್ಲಿ ರೈತರ ಮಾರ್ಗದರ್ಶನಕ್ಕಾಗಿ ಗಾಂಧಿ, ಬಾರ್ಡೋಲಿಗೆ ಹೋದರು. ಆಗಸ್ಟ್ ೨ರಂದು ಸರ್ಕಾರ ಬಾರ್ಡೋಲಿ ಕಂದಾಯ ನಿಯಮದ ವಿಚಾರಣೆಗೆ ಒಪ್ಪಿತು. ಸರ್ದಾರ್ ಪಟೇಲರು, 'ಚೌರಿಚೌರಾದ ನಂತರ ಮಹಾತ್ಮ ಗಾಂಧಿಯವರು ಹೇಳಿಕೊಟ್ಟ ಹೋರಾಟದ ವಿಧಾನ, ವಾಸ್ತವದಲ್ಲಿ ಜಾರಿಯಾಗಬಲ್ಲುದೋ, ಜನ ಅವರ ಮಾತನ್ನು ಕೇಳುತ್ತಾರೋ ಎಂದು ಹಲವರು ಸಂದೇಹ ವ್ಯಕ್ತಪಡಿಸಿದ್ದರು. ಆದರೆ ಈ ಸಂದೇಹವನ್ನು ಸುಳ್ಳು ಮಾಡುವ ಶಕ್ತಿ ಮತ್ತು ಅವಕಾಶವನ್ನು ಭಗವಂತ ನಮಗೆ ದಯಪಾಲಿಸಿದ್ದಾನೆ' ಎಂದು ಹರ್ಷದಿಂದ ಘೋಷಿಸಿದರು.

ನವೆಂಬರ್‌ನಲ್ಲಿ ಹಳ್ಳಿಗಳ ಪ್ರವಾಸ ಮಾಡಿದ ನ್ಯಾಯಾಧೀಶ ಬ್ರೂಂಫೀಲ್ಡ್ ಅವರ ತಂಡ, ರೈತರನ್ನು ಭೇಟಿ ಮಾಡಿ ಅವರ ಹೇಳಿಕೆಗಳನ್ನು ಪಡೆದು ಅಲ್ಲಿನ ಗ್ರಾಮೀಣ ಆರ್ಥಿಕತೆಯ ಅಧ್ಯಯನ ಮಾಡಿದರು. ಮಹದೇವ ದೇಸಾಯಿ ರೈತರ ಅಹವಾಲುಗಳನ್ನು ನ್ಯಾಯಾಧೀಶರ ತಂಡಕ್ಕೆ ಇಂಗ್ಲಿಷ್‌ಗೆ ಅನುವಾದಿಸಿ ಹೇಳಿದರು. ವಿಚಾರಣಾ ತಂಡ, ತಾಲ್ಲೂಕಿನ ಆದಾಯವನ್ನು ವಿಪರೀತ ಉತ್ಪ್ರೇಕ್ಷಿಸಿ ಲೆಕ್ಕಹಾಕಿ ಭೂಕಂದಾಯವನ್ನು ಅನುಚಿತವಾಗಿ ಹೆಚ್ಚಿಸಲಾಗಿದೆ ಎಂಬ ತೀರ್ಮಾನಕ್ಕೆ ಬಂದು, ಅದನ್ನು ಸರ್ಕಾರಕ್ಕೆ ತಿಳಿಸಿದರು. ಸರ್ಕಾರ ಭೂಕಂದಾಯ ಹೆಚ್ಚಳದ ಆದೇಶವನ್ನು ವಾಪಸ್ ಪಡೆಯಿತು. ಮಹದೇವ ದೇಸಾಯಿಯವರು ಈ ವಿಜಯವನ್ನು 'ಬಾರ್ಡೋಲಿಯ ರೈತರು ಸರ್ಕಾರಕ್ಕೆ ನೀಡಿರುವ ಈ ನೈತಿಕ ಹೊಡೆತ ದೇಶಾದ್ಯಂತದ ರೈತರ ನೈತಿಕ ಸ್ಥೈರ್ಯವನ್ನು ಹೆಚ್ಚಿಸಿದೆ' ಎಂದು ಹೇಳಿದರು. ವೈಸ್‌ರಾಯ್ ಇರ್ವಿನ್ ಕೂಡ 'ಈ ಸತ್ಯಾಗ್ರಹ ತಾವು ಈವರೆಗೆ ಎದುರಿಸಿದ ಅತಿ ಗಂಭೀರ ಸಂಕಟವಾಗಿತ್ತು' ಎಂದು ಒಪ್ಪಿಕೊಂಡರು.

ಸೈಮನ್ ಆಯೋಗ–ನೆಹರೂ ವರದಿ

ಸೈಮನ್ ಆಯೋಗ ಎಲ್ಲೆಲ್ಲೂ 'ಸೈಮನ್ ವಾಪಸ್ ಹೋಗಿ' ಎಂಬ ಘೋಷಣೆ ಮತ್ತು ಭಿತ್ತಿಪತ್ರಗಳ ಪ್ರತಿಭಟನೆಯನ್ನು ಎದುರಿಸುತ್ತಾ ತನ್ನ ಕೆಲಸಗಳನ್ನು ಮುಂದುವರೆಸುತ್ತಿರುವಾಗಲೇ, ಅದಕ್ಕೆ ಪರ್ಯಾಯವಾಗಿ, ಮದ್ರಾಸ್ ಕಾಂಗ್ರೆಸ್ ಅಧಿವೇಶನದಲ್ಲಿನ ನಿರ್ಣಯದಂತೆ, ಮೇ ೧೯ರಂದು ಬಾಂಬೆಯಲ್ಲಿ ಮೋತಿಲಾಲ್ ನೆಹರೂ ಅವರ ನೇತೃತ್ವದಲ್ಲಿ ಕೆಲವು ರಾಷ್ಟ್ರೀಯವಾದಿ ಭಾರತೀಯರು ಸ್ವತಂತ್ರ ಭಾರತಕ್ಕೊಂದು ಸಂವಿಧಾನದ ಕರಡು ರಚಿಸಲು ಸಿದ್ಧತಾ ಸಭೆ ನಡೆಸಿದರು. ಇದರಲ್ಲಿ ಹಿಂದೂ–ಮುಸ್ಲಿಂ ಸಿಖ್ ಪ್ರತಿನಿಧಿಗಳಲ್ಲದೆ ಹಿಂದೂ ಮಹಾಸಭಾದ ಸದಸ್ಯರೂ ಇದ್ದರು. ಈ ತಂಡ ಆಗಸ್ಟ್ ಹೊತ್ತಿಗೆ, ಬ್ರಿಟಿಷರು ಭಾರತ ಬಿಟ್ಟುಹೋದ ಮೇಲೆ ರಚಿತವಾಗಬೇಕಾದ ರಾಷ್ಟ್ರವೊಂದಕ್ಕೆ ಅಗತ್ಯವಾದ ಸಂವಿಧಾನ ಕರಡನ್ನು ಸಿದ್ಧಪಡಿಸಿತ್ತು. ೫೦೦ ಸದಸ್ಯರ ಕೇಂದ್ರ ಮತ್ತು ಜನಸಂಖ್ಯೆಯ ಆಧಾರದ ಸದಸ್ಯ ಬಲಗಳುಳ್ಳ ಪ್ರಾಂತೀಯ ಶಾಸನ ಸಭೆಗಳಿಗೆ ವಯಸ್ಕ ಮತದಾನದ ಮೂಲಕ ಸದಸ್ಯರನ್ನು ಆರಿಸುವ ಕ್ರಾಂತಿಕಾರಕ ಚುನಾವಣಾ ವಿಧಾನವನ್ನು ಸೂಚಿಸಿದ್ದ ಈ ಕರಡು, ಪ್ರಾಂತೀಯ ಶಾಸನ ಸಭೆಗಳು ಆಯ್ಕೆ ಮಾಡಿ ಕೇಂದ್ರ ಶಾಸನಸಭೆಯ ಭಾಗವಾಗುವ ಇನ್ನೊಂದು ಸದನವನ್ನೂ ಸಲಹೆ ಮಾಡಿತ್ತು. ಕೇಂದ್ರ ಸರ್ಕಾರ ರಕ್ಷಣೆ, ವಿದೇಶಾಂಗ, ಹಣಕಾಸು ನೀತಿ ಮತ್ತು ನ್ಯಾಯಾಂಗದ ಕೆಲವು ವಲಯಗಳ ಹೊರತಾಗಿ ಮಿಕ್ಕೆಲ್ಲ ಅಧಿಕಾರಗಳನ್ನು ಪ್ರಾಂತೀಯ ಸರ್ಕಾರಗಳು ಹೊಂದಿರಬೇಕೆಂದು ಹೇಳುವ ಒಕ್ಕೂಟ ರಾಷ್ಟ್ರದ ಸ್ವರೂಪವನ್ನು ಶಿಫಾರ್ಸು ಮಾಡಿತ್ತು. ನೂರಾರಿದ್ದ ರಾಜಸಂಸ್ಥಾನಗಳೊಡನೆಯ ಒಪ್ಪಂದಗಳನ್ನು ಗೌರವಿಸಲು ಸೂಚಿಸಿದ್ದ ಕರಡು, ಕ್ರಮೇಣ ಇವು ಹೊಸ ರಾಷ್ಟ್ರ ವ್ಯವಸ್ಥೆಯಲ್ಲಿ ವಿಲೀನವಾಗುತ್ತವೆ ಎಂಬ ಆಶಯವನ್ನು ವ್ಯಕ್ತಪಡಿಸಿತ್ತು. ವಯಸ್ಕರ ಮತದಾನ ಆಧಾರಿತ ಚುನಾವಣೆಗಳನ್ನು ಒಪ್ಪಿಕೊಂಡಿರುವುದರಿಂದ, ಮುಸ್ಲಿಂ ಪ್ರತ್ಯೇಕ ಮತಕ್ಷೇತ್ರಗಳ ಅಥವಾ ಮುಸ್ಲಿಂ ಬಹುಸಂಖ್ಯಾತ ಪ್ರಾಂತ್ಯಗಳಲ್ಲಿ ಶಾಸನಬದ್ಧ

ಮೀಸಲಾತಿಯ ಅಗತ್ಯವಿಲ್ಲ ಎಂದು ಅಭಿಪ್ರಾಯಪಟ್ಟಿತ್ತು. ಆದರೆ ಸಾರ್ವತ್ರಿಕವಾಗಿ ಮತೀಯ ಅಲ್ಪಸಂಖ್ಯಾತರಿಗೆ ರಕ್ಷಣೆ ಒದಗಿಸುವ ಉದ್ದೇಶದಿಂದ ಕೇಂದ್ರ ಶಾಸನ ಸಭೆಯಲ್ಲಿ ಮುಸ್ಲಿಮರಿಗೆ ಶೇ. ೨೫ ಮತ್ತು ಮುಸ್ಲಿಂ ಬಹುಸಂಖ್ಯಾತ ಪ್ರಾಂತ್ಯಗಳಲ್ಲಿ ಅಲ್ಪಸಂಖ್ಯಾತರಿಗೆ ಜನಸಂಖ್ಯೆಗನುಗುಣವಾದ ಒಂದು ಕನಿಷ್ಠ ಸ್ಥಾನ ಮೀಸಲಾತಿಯ ಸಲಹೆ ಮಾಡಿತ್ತು. ಈ ವರದಿಯ ಅನುಷ್ಠಾನಕ್ಕೆ ವೇದಿಕೆ ಸಿದ್ಧ ಮಾಡಲು ಅನುವು ಮಾಡಿಕೊಡುವ ಆಶ್ರಯ ರಾಜ್ಯ ವ್ಯವಸ್ಥೆಗೆ ಆಗ್ರಹಿಸಿತ್ತು.

ಲಾಠಿ ಏಟು – ಲಾಲಾ ಲಜಪತರಾಯ್ ಅವರ ಸಾವು

ನೆಹರೂ ವರದಿಯೆಂದೇ ಪ್ರಸಿದ್ಧವಾದ ಈ ಕರಡನ್ನು, ಗಾಂಧಿಯವರಿಗೆ ಕಳಿಸಿದಾಗ, ಅದನ್ನು ಓದಿದ ಗಾಂಧಿ, ಮೋತಿಲಾಲರ ಶ್ರಮವನ್ನು ಮೆಚ್ಚಿ, ಕರಡಿಗೆ ತಮ್ಮ ಒಪ್ಪಿಗೆ ಇದೆಯೆಂದು ತಿಳಿಸಿದರು. ಆದರೆ ನಿಜವಾದ ಸ್ವರಾಜ್ಯ, ಲಿಖಿತ ಸಂವಿಧಾನದ ಮೂಲಕ ಅಲ್ಲ, ಬಾರ್ಡೋಲಿಯಂತಹ ಸತ್ಯಾಗ್ರಹಗಳ ಮೂಲಕ ಮೂಡಬೇಕು ಎಂದೂ ಅವರು ಅಭಿಪ್ರಾಯಪಟ್ಟರು. ಆದರೆ ಸೈಮನ್ ಆಯೋಗ ತನ್ನ ಕೆಲಸ ಮುಂದುವರೆಸಿದ್ದು, ಇದರ ವಿರುದ್ಧದ ಪ್ರತಿಭಟನೆಗಳ ಸಮಯದಲ್ಲಿ ಪೊಲೀಸ್ ಕಾರ್ಯಾಚರಣೆಯಲ್ಲಿ ಹಲವರು ತೀವ್ರವಾಗಿ ಗಾಯಗೊಂಡರು. ಅಲಹಾಬಾದ್‌ನಲ್ಲಿ ಗೋವಿಂದವಲ್ಲಭ ಪಂತರು, ಜವಾಹರಲಾಲ್‌ಗೆ ಬೀಳಲಿದ್ದ ಲಾಠಿ ಏಟನ್ನು ತಪ್ಪಿಸಲು ಹೋಗಿ, ತಾವೇ ಆ ಏಟು ತಿನ್ನಬೇಕಾಗಿ ಬಂದು ಜೀವನಪೂರ್ತಿ ಅವರು ಅಂಗವಿಕಲತೆಗೆ ಈಡಾಗಬೇಕಾಯಿತು. ಇದಕ್ಕಿಂತ ಆಘಾತಕರ ಘಟನೆಯೆಂದರೆ, ಅಕ್ಟೋಬರ್ ೩೦ರಂದು ಲಾಹೋರ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ ಅಸ್ವಸ್ಥರಾಗಿದ್ದರೂ ಭಾಗವಹಿಸಿದ್ದ ಹಿರಿಯ ಕಾಂಗ್ರೆಸ್ ನಾಯಕ, ಲಾಲಾ ಲಜಪತರಾಯ್ ಪೊಲೀಸರ ಲಾಠಿ ಏಟಿನಿಂದ ಕುಸಿದುಬಿದ್ದು, ಮೂರು ವಾರಗಳ ನಂತರ, ನವೆಂಬರ್ ೧೭ರಂದು ಕೊನೆಯುಸಿರು ಎಳೆಯಬೇಕಾಗಿ ಬಂದದ್ದು. ಗಾಂಧಿ 'ಇವರ ಸಾವು ಸ್ವರಾಜ್ಯದ ನಮ್ಮ ಕೆಚ್ಚನ್ನು ದುಪ್ಪಟ್ಟು ಮಾಡಬೇಕು' ಎಂದು ಅವರಿಗೆ ತಮ್ಮ ಶ್ರದ್ಧಾಂಜಲಿ ಸಲ್ಲಿಸಿದರು. ಪೂನಾದಲ್ಲಿ ಸೈಮನ್ ಆಯೋಗದ ಮುಂದೆ ಹಾಜರಾಗಿದ್ದ ಬಿ.ಆರ್. ಅಂಬೇಡ್ಕರ್ ಅವರು ಅಸ್ಪೃಶ್ಯರು ಹಿಂದೂ ಧರ್ಮದ ವ್ಯಾಪ್ತಿಗೆ ಬರುವುದಿಲ್ಲವಾದ್ದರಿಂದ, ಆ ಸಮುದಾಯಕ್ಕೆ ಮುಸ್ಲಿಂ ಸಮುದಾಯದಂತೆಯೇ ಜನಸಂಖ್ಯಾ ಪ್ರಮಾಣಾನುಸಾರ ಶಾಸನಸಭೆಗಳಲ್ಲಿ ಮೀಸಲಾತಿ ಒದಗಿಸಬೇಕೆಂದು ಮನವಿ ಸಲ್ಲಿಸಿದ್ದರು. ಮಹಾಡ್ ಕೆರೆ ನೀರು ಸತ್ಯಾಗ್ರಹದ ಸಮಯದಲ್ಲಿ ಕಾಂಗ್ರೆಸ್ಸಿಗರಾಗಿದ್ದ ಅಂಬೇಡ್ಕರ್, ಆ ಪಕ್ಷದಲ್ಲಿನ ಅಧಿಕವಾದ ಗಾಂಧಿ ಪ್ರಭಾವವನ್ನು ಇಷ್ಟಪಡದೆ, ಅದರಿಂದ ಹೊರಬಿದ್ದು ತಮ್ಮದೇ ರಾಜಕೀಯ ಮಾರ್ಗದ ಸಂಘಟನೆಯಲ್ಲಿ ತೊಡಗಿದ್ದರು.

ದೂರ ಸರಿಯತೊಡಗಿದ ಅಸ್ಪೃಶ್ಯರು ಮತ್ತು ಮುಸ್ಲಿಮರು

ಒಂದು ಕಡೆ ಹೀಗೆ ಅಸ್ಪೃಶ್ಯರ ಒಂದು ಗುಂಪು ಕಾಂಗ್ರೆಸ್‌ನಿಂದ ದೂರವಾಗುತ್ತಿದ್ದಂತೆ, ಅಲಿ ಸೋದರರ ಚಟುವಟಿಕೆಗಳಿಂದಾಗಿ ಮುಸ್ಲಿಮರ ಒಂದು ಭಾಗ ಕಾಂಗ್ರೆಸ್‌ನಿಂದ ದೂರವಾಗತೊಡಗಿತ್ತು. ಮುಸ್ಲಿಂ ಲೀಗ್‌ನಲ್ಲೇ ಮೂರು ಗುಂಪುಗಳಾಗಿದ್ದವು. ಒಂದು

ಇಂಗ್ಲಿಷರ ಪರವಾಗಿದ್ದು ಸೈಮನ್ ಆಯೋಗವನ್ನು ಸ್ವಾಗತಿಸುತ್ತಿದ್ದರೆ, ಇನ್ನೊಂದು ಗುಂಪು ನೆಹರೂ ವರದಿಯ ಪರವಾಗಿತ್ತು. ಜಿನ್ನಾ-ಅಲಿ ಸೋದರರ ಮೂರನೆಯ ಗುಂಪು ಎಡಬಿಡಂಗಿಯಾಗಿತ್ತು. ಖಿಲಾಫತ್ ಕಾಲದ ಮುಸ್ಲಿಂ ಗೆಳೆಯರೊಬ್ಬರು, ಮುಸ್ಲಿಂ ಸಮುದಾಯವನ್ನು ಮತೀಯವಾದಿಗಳೆಂದು ತಿರಸ್ಕರಿಸುವ ಮುನ್ನ ಸಹನೆಯಿಂದ ಅವರ ವಾದವನ್ನು ಪೂರ್ಣ ಕೇಳಿ ಅವರನ್ನು ಈ ಪರಿಸ್ಥಿತಿಯಿಂದ ಪಾರು ಮಾಡುವಂತೆ ಗಾಂಧಿಯವರನ್ನು ಕೋರಿದ್ದರು. ಈ ಬಗ್ಗೆ ಅವರು ಯೋಚಿಸುತ್ತಿದ್ದಂತೆ, ನವೆಂಬರ್‌ನಲ್ಲಿ ಶೌಕತ್ ಅಲಿ ಕಾನ್‌ಪುರದಲ್ಲಿ ಮಾಡಿದ ಭಾಷಣ ಗಾಂಧಿಯವರ ಗಮನ ಸೆಳೆಯಿತು. ಆತ ಹಿಂದೂಗಳೊಂದಿಗೆ ಅಂತಿಮ ಹೋರಾಟದ ಮಾತನಾಡಿದ್ದರು. ಹಿಂದೂಗಳನ್ನು ಅಥವಾ ಸರ್ಕಾರವನ್ನು ನಂಬದೆ, ಧರ್ಮ ಮತ್ತು ಮಾತೃಭೂಮಿ ರಕ್ಷಣೆಗಾಗಿ ಹೋರಾಡಲು ಮುಸ್ಲಿಮರಿಗೆ ಅವರು ಕರೆ ನೀಡಿದ್ದರು. ಗಾಂಧಿ, ಅಲಿಯವರಿಗೆ ಪತ್ರ ಬರೆದು 'ಹಿಂದೂಗಳ ಅಕೃತ್ಯಗಳ ಬಗ್ಗೆ ನಿಮ್ಮಿಂದ ಕೇಳಲು ಸಿದ್ಧನಿದ್ದೇನೆ. ಆದರೆ ನಾನು ನೋಡಿದಂತೆ ಬಹುತೇಕ ಪ್ರಕರಣಗಳಲ್ಲಿ ಮುಸಲ್ಮಾನರೇ ಆಕ್ರಮಣಕಾರರಾಗಿದ್ದರೂ, ಅವರೇ ಯಾವಾಗಲೂ ಬಲಿಪಶುಗಳಂತೆ ವಾದಿಸಿ ಮತ ರಕ್ಷಣೆಯ ಮಾತಾಡುವುದು ತರವಲ್ಲ. ಒಂದು ಕಾಲದಲ್ಲಿ ನಾವಿಬ್ಬರೂ ಖಿಲಾಫತ್‌ಗಾಗಿ ಜನಸಂಘಟನೆ ಮಾಡುತ್ತಿದ್ದಾಗ ಅದರ ನಿಧಿಗೆ ಹಿಂದೂ ಮುಸ್ಲಿಮರಿಬ್ಬರೂ ಸಮಾನ ಉತ್ಸಾಹದಿಂದ ದೇಣಿಗೆ ನೀಡುತ್ತಿದ್ದುದನ್ನು ನೆನಪಿಸಿಕೊಳ್ಳಿ' ಎಂದು ಸಲಹೆ ಮಾಡಿದ್ದರು. ಆದರೆ ಅಲಿ ಸೋದರರು ಸ್ನೇಹದ ಮಾತುಗಳನ್ನು ಸಹಾನುಭೂತಿಯಿಂದ ಆಲಿಸಲಾಗದಷ್ಟು ಅವರಿಂದ ದೂರ ಸರಿದಿದ್ದರು. ನಂತರದಲ್ಲೇ ಲಜಪತರಾಯ್ ಅವರ ಸಾವಿನ ಸೇಡು ತೀರಿಸಿಕೊಳ್ಳಲು ಸ್ಯಾಂಡರ್ಸ್ ಎಂಬ ಬ್ರಿಟಿಷ್ ಪೊಲೀಸ್ ಅಧಿಕಾರಿಯನ್ನು ಗುಂಡಿಟ್ಟು ಕೊಂದ ಸುದ್ದಿ ಗೊತ್ತಾಗಿ ಗಾಂಧಿ ಇನ್ನಷ್ಟು ಖಿನ್ನರಾದರು.

ಡಿಸೆಂಬರ್ ೧೭ರಂದು ಲಾಹೋರ್‌ನಲ್ಲಿ ಈ ಘಟನೆ ನಡೆದಿತ್ತು. ಘಟನೆಯಲ್ಲಿ ಭಾಗಿಯಾಗಿದ್ದವರು 'ಹಿಂದೂಸ್ತಾನ್ ಸೋಷಲಿಸ್ಟ್ ರಿಪಬ್ಲಿಕ್ ಆರ್ಮಿ' (ಎಚ್‌ಎಸ್‌ಆರ್‌ಎ) ಎಂಬ ಉಗ್ರಗಾಮಿ ಸಂಘಟನೆಗೆ ಸೇರಿದ ಭಗತ್ ಸಿಂಗ್, ಶಿವರಾಮ್ ರಾಜಗುರು, ಸುಖದೇವ ಥಾಪರ್ ಮತ್ತು ಚಂದ್ರಶೇಖರ ಆಝಾದ್ ಎಂಬ ನಾಲ್ವರು ಯುವಕರು. ಸುಖದೇವ್ ಇದರ ಸೂತ್ರಧಾರನಾಗಿದ್ದರೆ ಗುಂಡು ಹಾರಿಸಿದವರು ರಾಜಗುರು ಮತ್ತು ಭಗತ್‌ಸಿಂಗ್. ಸ್ಯಾಂಡರ್ಸ್‌ನನ್ನು ಕೊಂದ ನಂತರ ಆಝಾದ್, ಓರ್ವ ಭಾರತೀಯ ಪೊಲೀಸ್ ಪೇದೆಯನ್ನು ಕೊಂದಿದ್ದ. ಈ ಯುವಕರು ಸ್ಯಾಂಡರ್ಸ್‌ನನ್ನು, ಅಂದು ಲಾಲಾ ಲಜಪತರಾಯರಿದ್ದ ಮೆರವಣಿಗೆಯ ಮೇಲಿನ ಲಾಠಿ ಪ್ರಹಾರದ ನೇತೃತ್ವ ವಹಿಸಿದ್ದ ಜೇಮ್ಸ್ ಎ ಸ್ಕಾಟ್ ಎಂಬ ಅಧಿಕಾರಿಯೊಂದಿಗೆ ಗೊಂದಲಗೊಳಿಸಿಕೊಂಡು ಕೊಂದು ಹಾಕಿದ್ದರು. ಕೊಂದು ತಪ್ಪಿಸಿಕೊಂಡು ಓಡಿದ್ದರು.

ಇದನ್ನು ತಮ್ಮ 'ಯಂಗ್ ಇಂಡಿಯಾ'ದ ಡಿಸೆಂಬರ್ ೨೭ರ ಸಂಚಿಕೆಯಲ್ಲಿ 'ಹತ್ಯೆ ಎಂಬ ಶಾಪ' ಎಂಬ ಶೀರ್ಷಿಕೆಯ ಲೇಖನವೊಂದರಲ್ಲಿ ಖಂಡಿಸಿದ್ದ ಗಾಂಧಿಯವರು, ದೇಶದ ಬಿಡುಗಡೆ ಹತ್ತಾರು ಸಾವಿರ ಪುರುಷರು ಮತ್ತು ಮಹಿಳೆಯರ ಸಹನೆ, ಜಾಣತನ ಮತ್ತು ರಚನಾತ್ಮಕ ಪ್ರಯತ್ನಗಳ ಮೂಲಕ ಸಾಧಿತವಾಗುತ್ತದೆಯೇ ಹೊರತು ಇಂತಹ

ಬಿಡಿ ವೀರಾವೇಶದ ಪ್ರದರ್ಶನಗಳಿಂದಲ್ಲ ಎಂದು ಹೇಳಿದ್ದರು. ದೇಶದಲ್ಲಿ ಹೆಚ್ಚುತ್ತಿದ್ದ ಅಸಹನೆ, ವೈಮನಸ್ಯ ಮತ್ತು ಹಿಂಸೆಯ ಮಾನಸಿಕತೆ ಅವರನ್ನು ಚಿಂತೆಗೀಡು ಮಾಡಿತ್ತು.

ಕಲ್ಕತ್ತಾ ಕಾಂಗ್ರೆಸ್ ಅಧಿವೇಶನ-ಪ್ರಭುತ್ವಕ್ಕೆ ಗಡುವು

ಪ್ರತಿವರ್ಷದಂತೆ, ೧೯೨೮ರ ವರ್ಷಾಂತ್ಯದಲ್ಲಿ ಕಾಂಗ್ರೆಸ್ ಅಧಿವೇಶನ ಏರ್ಪಾಟಾಯಿತು. ಬಾರ್ಡೋಲಿ ಸತ್ಯಾಗ್ರಹದ ಯಶಸ್ಸಿನಿಂದಾಗಿ ವಲ್ಲಭಭಾಯಿ ಪಟೇಲರು ಕಲ್ಕತ್ತಾದಲ್ಲಿ ಆಯೋಜಿತವಾಗಿದ್ದ ಈ ಅಧಿವೇಶನದ ಅಧ್ಯಕ್ಷರಾಗಬೇಕೆಂಬುದು ಮೋತಿಲಾಲ್ ನೆಹರೂ ಸೇರಿದಂತೆ ಬಹಳ ಜನ ಕಾಂಗ್ರೆಸ್ಸಿಗರ ಅಪೇಕ್ಷೆಯಾಗಿದ್ದರೂ, ಬಂಗಾಳದ, ನಿರ್ದಿಷ್ಟವಾಗಿ ಸುಭಾಷರ ಆಗ್ರಹದ ಮೇರೆಗೆ ಮತ್ತು ಗಾಂಧಿಯವರ ಶಿಫಾರ್ಸಿನ ಮೇರೆಗೆ ಮೋತಿಲಾಲ್ ನೆಹರೂ ಅವರನ್ನು ಅಧ್ಯಕ್ಷರನ್ನಾಗಿ ಆರಿಸಲಾಗಿತ್ತು.

ಈ ಅಧಿವೇಶನದ ಮುಖ್ಯ ಕಾರ್ಯಸೂಚಿ ಎಂದರೆ ನೆಹರೂ ವರದಿಗೆ ಒಪ್ಪಿಗೆ ಪಡೆಯುವುದಾಗಿತ್ತು. ಗಾಂಧಿ ಈ ವರದಿಯನ್ನು ಶ್ಲಾಘಿಸಿ ಅದರ ಪರವಾದ ನಿರ್ಣಯವನ್ನು ಮಂಡಿಸಿದರು. ಆದರೆ ಈ ವರದಿ ಭಾರತಕ್ಕೆ ಸ್ವಾಯತ್ತ ಆಶ್ರಯ ರಾಜ್ಯ ವ್ಯವಸ್ಥೆಯ ಸ್ಥಾನಮಾನ ಕೇಳುವುದಕ್ಕಷ್ಟೇ ಸೀಮಿತವಾಗಿರುವುದನ್ನು, ಜವಾಹರಲಾಲ್ ನೆಹರೂ ನೇತೃತ್ವದ ಯುವ ಕಾಂಗ್ರೆಸ್ಸಿಗರು ಪ್ರಬಲವಾಗಿ ವಿರೋಧಿಸಿ ಸಂಪೂರ್ಣ ಸ್ವಾತಂತ್ರ್ಯವನ್ನು ಆಗ್ರಹಿಸುವ ನಿರ್ಣಯಕ್ಕಾಗಿ ಆಗ್ರಹಿಸಿದರು. ಈ ಸಮ್ಮೇಳನದ ವ್ಯವಸ್ಥೆಯ ನೇತೃತ್ವ ವಹಿಸಿದ್ದ, ಸೇವಾದಳದ ನಿಯೋಜಿತ ಅಧ್ಯಕ್ಷರಾಗಿದ್ದ ತರುಣ ಸುಭಾಷ್‌ಚಂದ್ರ ಬೋಸ್ ಅವರು ಸೈನಿಕ ಸಮವಸ್ತ್ರ ತೊಟ್ಟು, ಎಲ್ಲರ ಗಮನ ಸೆಳೆಯುತ್ತಾ ಯುವ ಕಾಂಗ್ರೆಸ್ಸಿಗರಲ್ಲಿ ಹುರುಪು ತುಂಬಿದ್ದರು. ಆದರೆ ಸಂಪೂರ್ಣ ಸ್ವಾತಂತ್ರ್ಯದ ಆಗ್ರಹಕ್ಕೆ ಕಾಂಗ್ರೆಸ್ ಇನ್ನೂ ಸಿದ್ಧವಾಗಿಲ್ಲ ಎಂದು ಭಾವಿಸಿದ, ಮೋತಿಲಾಲರೂ ಸೇರಿದಂತೆ ಹಿರಿಯ ಕಾಂಗ್ರೆಸ್ಸಿಗರು ನಿರ್ಣಯವನ್ನು ಆಶ್ರಯ ರಾಜ್ಯ ವ್ಯವಸ್ಥೆಗೇ ಸೀಮಿತಗೊಳಿಸಬಯಸಿದರು. ಈ ಬಿಕ್ಕಟ್ಟನ್ನು ಪರಿಹರಿಸಲು ಗಾಂಧಿಯವರನ್ನು ಕೋರಿದಾಗ, ಅವರು ಒಂದು ರಾಜೀಸೂತ್ರವಾಗಿ, ಆಶ್ರಯ ರಾಜ್ಯ ಸ್ಥಾನಮಾನವನ್ನು ನೀಡಲು ಬ್ರಿಟಿಷ್ ಸರ್ಕಾರಕ್ಕೆ ಇನ್ನೆರಡು ವರ್ಷಗಳ ಗಡುವು ನೀಡಿ, ಅದು ಜಾರಿಯಾಗದಿದ್ದರೆ ಸಂಪೂರ್ಣ ಸ್ವಾತಂತ್ರ್ಯದ ಘೋಷಣೆಗೆ ಕಾಂಗ್ರೆಸ್ ಬದ್ಧವಾಗಬಹುದೆಂದು ಸೂಚಿಸಿದರು. ಆದರೆ ಇದನ್ನು ಕಿರಿಯ ನೆಹರೂ ಮತ್ತು ಬೋಸರ ಗುಂಪು ಒಪ್ಪದಿದ್ದಾಗ ಗಾಂಧಿ, ಗಡುವನ್ನು ಒಂದು ವರ್ಷಕ್ಕೆ ಇಳಿಸಿ ನಿರ್ಣಯವನ್ನು ಅನುಮೋದನೆಗಾಗಿ ಮಂಡಿಸಿದರು. ಆದರೆ ಬೋಸ್ ಅವರು ಅದಕ್ಕೊಂದು ತಿದ್ದುಪಡಿ ಸೂಚಿಸಿ, ಆಶ್ರಯ ರಾಜ್ಯಕ್ಕೆ ಬದಲಾಗಿ ಸಂಪೂರ್ಣ ಸ್ವಾತಂತ್ರ್ಯ ಎಂದು ಬದಲಿಸಲಿಚ್ಛಿಸಿದರು. ಅದಕ್ಕೆ ನೆಹರೂ ಅವರ ಬೆಂಬಲ ಸಿಕ್ಕಿತಾದರೂ, ಗಾಂಧಿ ಅಧಿವೇಶನದ ಪ್ರತಿನಿಧಿಗಳನ್ನುದ್ದೇಶಿಸಿ 'ಮಾತಿನ ಬಡಿವಾರದಿಂದ ಏನೂ ಆಗುವುದಿಲ್ಲ. ನಾವು ನಮ್ಮ ಮಿತಿಗಳ ಚೌಕಟ್ಟಿನಲ್ಲಿಯೇ ಪ್ರಭುತ್ವದೊಂದಿಗೆ ವ್ಯವಹರಿಸುವುದು ಸೂಕ್ತ' ಎಂದು ಬುದ್ಧಿ ಮಾತು ಹೇಳಿದ ನಂತರ, ತಿದ್ದುಪಡಿಯನ್ನು ಮತಕ್ಕೆ ಹಾಕಿದಾಗ ಅದು ಬಿದ್ದುಹೋಯಿತು. ಹಿಂದೂ-ಮುಸ್ಲಿಂ ವಿಭಜನೆ ಢಾಳಾಗಿ ಕಾಣುತ್ತಿರುವಾಗ ಯಾವ

ಸಿದ್ಧತೆಯೂ ಇಲ್ಲದೆ ಕಾಂಗ್ರೆಸ್ ಒಮ್ಮೆಗೇ ಸಂಪೂರ್ಣ ಸ್ವಾತಂತ್ರ್ಯದ ಘೋಷಣೆಗೆ ಆಗ್ರಹಿಸುವುದು ಸಮಸ್ಯೆಗಳನ್ನು ಆಹ್ವಾನಿಸಿದಂತೆ ಎಂಬುದು ಗಾಂಧಿಯವರ ವಿವೇಚನೆಯಾಗಿತ್ತು.

ನೆಹರೂ ವರದಿ: ಕಾಂಗ್ರೆಸ್– ಮುಸ್ಲಿಂ ಲೀಗ್ ಭಿನ್ನಮತ

ಗಾಂಧಿಯವರ ವಿವೇಚನೆ ನಿಜವೆನ್ನಿಸುವಂತೆ, ನೆಹರೂ ವರದಿಗೆ ಮುಸ್ಲಿಂ ಸಮುದಾಯದ ಪ್ರತಿಕ್ರಿಯೆ ಎಂಬಂತೆ, ಮುಸ್ಲಿಂ ಲೀಗ್‌ನ ಜಿನ್ನಾ ಮತ್ತು ಮೊಹಮ್ಮದಲಿಯವರು ದೆಹಲಿಯಲ್ಲಿ ಸಭೆ ಸೇರಿ ಕೆಲವು ತಿದ್ದುಪಡಿಗಳನ್ನು ಸಿದ್ಧಪಡಿಸಿ ತಂದು ಈ ಅಧಿವೇಶನದಲ್ಲಿ ಚರ್ಚೆಗಿಟ್ಟರು. ಅವರ ಸಲಹೆಗಳೆಂದರೆ ಸಿಂಧ್ ಪ್ರಾಂತ್ಯವನ್ನು ಬಾಂಬೆ ಪ್ರಾಂತ್ಯದಿಂದ ಪ್ರತ್ಯೇಕಿಸಿ, ಅದನ್ನು ಮುಸ್ಲಿಂ ಬಹುಸಂಖ್ಯಾತ ಪ್ರಾಂತ್ಯವೆಂದು ಗುರುತಿಸಿ, ಪಂಜಾಬ್ ಮತ್ತು ಬಂಗಾಳ ಪ್ರಾಂತ್ಯಗಳಂತೆಯೇ ಅಲ್ಲಿಯೂ ಬಹುಸಂಖ್ಯಾತರ ಶಾಸನಬದ್ಧ ಸರ್ಕಾರದ ಮಾನ್ಯತೆ ನೀಡಬೇಕು ಮತ್ತು ಕೇಂದ್ರ ಶಾಸನ ಸಭೆಯಲ್ಲಿ ಮುಸ್ಲಿಮರಿಗೆ ಶೇ. ೩೩ರ ಪ್ರಾತಿನಿಧ್ಯ ನೀಡಬೇಕು. ಸಿಖ್ ಪ್ರತಿನಿಧಿಗಳು ನೆಹರೂ ವರದಿಯಲ್ಲಿ ಯಾವ ಬದಲಾವಣೆಗೂ ಒಪ್ಪಲಾರೆವು ಎಂದು ಹೇಳಿದರೂ, ಕಾಂಗ್ರೆಸ್ ಸಿಂಧ್ ಪ್ರಾಂತ್ಯವನ್ನು ಬಾಂಬೆ ಪ್ರಾಂತ್ಯದಿಂದ ಪ್ರತ್ಯೇಕಿಸುವ ಬೇಡಿಕೆಗೆ ಒಪ್ಪಿ, ಕೇಂದ್ರ ಶಾಸನ ಸಭೆಯಲ್ಲಿ ಮುಸ್ಲಿಮರ ಪ್ರಾತಿನಿಧ್ಯವನ್ನು ಶೇ. ೨೫ರಿಂದ ಶೇ. ೨೭ಕ್ಕೆ ಹೆಚ್ಚಿಸಲು ಒಪ್ಪಿತಾದರೂ, ಮುಸ್ಲಿಂ ಬಹುಸಂಖ್ಯಾತ ಪ್ರಾಂತ್ಯಗಳಲ್ಲಿನ ಅಲ್ಪಸಂಖ್ಯಾತರ ಪ್ರಾತಿನಿಧ್ಯದ ಷರತ್ತನ್ನು ಕೈಬಿಡಲು ನಿರಾಕರಿಸಿತು. ಈ ಷರತ್ತು ಇದ್ದರೆ, ಬಂಗಾಳ ಮತ್ತು ಪಂಜಾಬ್‌ಗಳಲ್ಲಿ ಆಡಳಿತ ಮುಸ್ಲಿಮರ ಕೈತಪ್ಪಿಹೋಗಬಹುದೆಂಬ ಆತಂಕ ಮುಸ್ಲಿಂ ಲೀಗ್‌ನದಾಗಿತ್ತು. ಹೀಗಾಗಿ ನೆಹರೂ ವರದಿಯ ಬಗ್ಗೆ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವೆ ಒಮ್ಮತ ಮೂಡದೆ ಅಧಿವೇಶನ ಮುಕ್ತಾಯವಾಯಿತು.

ಇದರಿಂದ ಎಲ್ಲರಿಗಿಂತ ಹೆಚ್ಚು ನಿರಾಶೆಗೊಂಡವರೆಂದರೆ ಸರೋಜಿನಿ ನಾಯ್ಡು. ಮೊದಲಿನಿಂದಲೂ, ಜಿನ್ನಾ ಅವರ ಮತಾತೀತ ಜೀವನ ದೃಷ್ಟಿಯನ್ನು ಮೆಚ್ಚಿ ಅವರನ್ನು ಹಿಂದೂ–ಮುಸ್ಲಿಂ ಏಕತೆಯ ರಾಯಭಾರಿ ಎಂದು ಕರೆದಿದ್ದ ಅವರಿಗೆ ಈ ನಿರ್ಣಾಯಕ ಸಮಯದಲ್ಲಿ ಎರಡು ಸಮುದಾಯಗಳ ನಡುವೆ ಒಮ್ಮತ ಮೂಡದಿದ್ದುದು ಬೇಸರ ತರಿಸಿತ್ತು. ಇದಕ್ಕೆ ತಕ್ಕಂತೆ ಮೊಹಮ್ಮದಲಿ ಕಾಂಗ್ರೆಸ್ ತ್ಯಜಿಸಿದರಲ್ಲದೆ, ಮುಸ್ಲಿಮರಿಗೆ ಕಾಂಗ್ರೆಸ್ ಆಸೆ ಬಿಡುವಂತೆ ಕರೆಕೊಟ್ಟರು. ಜಿನ್ನಾ 'ಬೇರೆ ದಾರಿ'ಯ ಮಾತಾಡತೊಡಗಿದರು.

■

೨೯

ಹಿಂಸಾಕಾಂಡದ ನಡುವೆ ಗಾಂಧಿ

ಅಬ್ದುಲ್ ಗಫಾರ್ ಖಾನ್–ಜೆ.ಸಿ. ಕುಮಾರಪ್ಪ ಪ್ರವೇಶ

ಕಲ್ಕತ್ತಾ ಅಧಿವೇಶನದ ನಂತರ, ೧೯೨೯ರಲ್ಲಿ ಗಾಂಧಿಯವರನ್ನು ಭೇಟಿ ಮಾಡಿದ ಇಬ್ಬರು ಮಹನೀಯರ ಬಗ್ಗೆ ಮೊದಲು ತಿಳಿಸಿ ಮುಂದೆ ಹೋಗುವುದು ಸೂಕ್ತ. ಇವರಲ್ಲಿ ಒಬ್ಬರು ಮುಂದೆ ಗಡಿನಾಡ ಗಾಂಧಿ ಎಂದೇ ಪ್ರಸಿದ್ಧರಾದ ಅಬ್ದುಲ್ ಗಫಾರ್ ಖಾನ್. ವಾಯುವ್ಯ ಗಡಿ ಪ್ರಾಂತ್ಯದ ಈ ಪಠಾಣ, ಗಾಂಧಿ ೧೯೧೯ರಲ್ಲಿ ಅಸಹಕಾರ ಚಳುವಳಿಯ ಭಾಗವಾಗಿ ಕರೆಕೊಟ್ಟಿದ್ದ ಹರತಾಳದಲ್ಲಿ ಸಕ್ರಿಯವಾಗಿ ಭಾಗವಹಿಸಿ ಅವರ ಅಭಿಮಾನಿಯಾಗಿದ್ದರು. ನಂತರ ಹಲವು ಕಾಂಗ್ರೆಸ್ ಅಧಿವೇಶನಗಳಲ್ಲಿ ಪ್ರತಿನಿಧಿಯಾಗಿ ಹಾಜರಾಗಿದ್ದ ಅವರು, ಈಗ ಗಾಂಧಿಯವರ ಮೊಕ್ತಾ ಭೇಟಿಯನ್ನು ಹಂಬಲಿಸಿ ಲಕ್ನೋದಲ್ಲಿದ್ದ ಅವರನ್ನು ಹಿಂಬಾಲಿಸಿ ಬಂದಿದ್ದರು. ಹುಟ್ಟಿನಿಂದ ಕ್ಷಾತ್ರಗುಣದವರಾಗಿದ್ದ ಪಠಾಣರಿಗೆ ಬ್ರಿಟಿಷ್ ಪ್ರಭುತ್ವದ ಹಿಂಸಾಚಾರವನ್ನು ಎದುರಿಸಲು ಪ್ರತಿಹಿಂಸೆ ಸಹಜ ಆಯ್ಕೆಯಾಗಿತ್ತು. ಆದರೆ ಗಾಂಧಿಯವರ ಅಹಿಂಸಾತ್ಮಕ ಹೋರಾಟದ ವಿಧಾನಗಳಿಗೆ ಮಾರು ಹೋಗಿದ್ದ ಗಫಾರ್ ಖಾನರು, ಫಕ್ತೂನಿಸ್ತಾನದ ಜನರ ಸಂಕಷ್ಟಗಳನ್ನು ಹೇಳಿಕೊಂಡು ಪರಿಹಾರಗಳ ಬಗ್ಗೆ ಸಲಹೆಗಳನ್ನು ಕೇಳಲು ಜಲಾಲಾಬಾದ್‌ನಿಂದ ಗಾಂಧಿಯವರ ಬಳಿ ಬಂದಿದ್ದರು. ಗಾಂಧಿಯವರ ಸಲಹೆ ಮೇರೆಗೆ ಅವರು ಮುಂದೆ ತಮ್ಮ ನಾಡಿನಲ್ಲಿ 'ಖುದಾಯಿ ಖಿದ್ಮತ್‌ಗಾರ' (ಅಂದರೆ 'ದೇವರ ಮಕ್ಕಳು') ಎಂಬ ಸಂಘಟನೆ ಕಟ್ಟಿ ಬ್ರಿಟಿಷ್ ಪ್ರಭುತ್ವದ ವಿರುದ್ಧ ಅಹಿಂಸಾತ್ಮಕ ಹೋರಾಟ ನಡೆಸಿದರು.

೧೯೨೯ರ ಬೇಸಿಗೆಯಲ್ಲಿ ಗಾಂಧಿಯವರ ಬಳಿ ಬಂದ ಇನ್ನೋರ್ವ ಮಹನೀಯರೆಂದರೆ, ಗಾಂಧಿಯವರ ವಿಕೇಂದ್ರೀಕೃತ ರಾಜಕೀಯ ಅರ್ಥಶಾಸ್ತ್ರಕ್ಕೆ ಒಂದು ಖಚಿತ ತಾತ್ವಿಕ ಚೌಕಟ್ಟು ಒದಗಿಸಿ, ಮಗನ್ ಲಾಲರ ನಂತರ ಈ ವಿಷಯದಲ್ಲಿ ಗಾಂಧಿಯವರ ಬಲಗೈ ಬಂಟರಾಗಿ ಬೆಳೆದ ಜೆ.ಸಿ.ಕುಮಾರಪ್ಪ. ತಮಿಳ್ನಾಡಿನ ಪ್ರತಿಷ್ಠಿತ ಕ್ರಿಶ್ಚಿಯನ್ ಕುಟುಂಬದಲ್ಲಿ ಜನಿಸಿದ್ದ ಕುಮಾರಪ್ಪ, ಅಮೆರಿಕಾದ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ಮತ್ತು ವಾಣಿಜ್ಯ ಶಾಸ್ತ್ರಗಳನ್ನು ಓದಿ ಭಾರತಕ್ಕೆ ಬಂದು, ಒಣ ಒಣ ಎನಿಸುವ ತಮ್ಮ ಕೆಲಸದ ಬಗ್ಗೆ ಆಸಕ್ತಿ ಕಳೆದುಕೊಳ್ಳುತ್ತಿದ್ದಾಗ, ಗಾಂಧಿಯವರ ಹೊಸ ಅರ್ಥಶಾಸ್ತ್ರದ ಬಗ್ಗೆ ಕುತೂಹಲ ತಾಳಿ ಮೇ ೯ ರಂದು ಅವರ ಬಳಿ ಬಂದಿದ್ದರು. ಈ ಮೊದಲೇ ಕುಮಾರಪ್ಪನವರು ಕಳಿಸಿದ್ದ ಒಂದು ಪ್ರಬಂಧವನ್ನು ಓದಿ ಮೆಚ್ಚಿದ್ದ

ಗಾಂಧಿ, ಮೊದಲು ಅವರಿಗೆ ಗುಜರಾತ್‌ನ ಒಂದು ಗ್ರಾಮೀಣ ಪ್ರದೇಶದ ಸಾಮಾಜಿಕ-ಆರ್ಥಿಕ ಸಮೀಕ್ಷೆ ಮಾಡಲು ಹೇಳಿ, ಆ ಸಮೀಕ್ಷಾ ವರದಿಯಿಂದ ಪ್ರಭಾವಿತರಾಗಿ ಅವರನ್ನು ತಮ್ಮ ತಂಡದ ಸಕ್ರಿಯ ಸದಸ್ಯರನ್ನಾಗಿ ಮಾಡಿಕೊಂಡರು. ಮುಂದೆ ಗಾಂಧಿ ಅರ್ಥಶಾಸ್ತ್ರ ಎಂಬುದು ವ್ಯವಸ್ಥಿತ ಜ್ಞಾನಶಿಸ್ತಾಗಿ ರೂಪುಗೊಂಡಿದ್ದರೆ ಅದರ ಹಿಂದೆ ಇರುವುದು ಕುಮಾರಪ್ಪನವರೇ.

ಭಗತ್‌ಸಿಂಗ್‌ರ ಬಾಂಬ್!

ಆ ವರ್ಷ ಗಾಂಧಿ, ಖಾದಿ ಪ್ರಚಾರ ಮತ್ತು ಅಸ್ಪೃಶ್ಯತೆ ನಿವಾರಣಾ ಆಂದೋಲನಕ್ಕಾಗಿ ಆಂಧ್ರದ ಪ್ರವಾಸ ಕೈಗೊಂಡರು. ಆ ಬಿಸಿಲ ನಾಡಿನಲ್ಲಿ ಐದು ವಾರಗಳಲ್ಲಿ ಇನ್ನೂರಕ್ಕೂ ಹೆಚ್ಚು ಊರುಗಳನ್ನು, ವಿವಿಧ ರೀತಿಯ ವಾಹನಗಳ ಮೂಲಕ ತಲುಪಿದ್ದ ಅವರು, ಖಾದಿ ನಿಧಿಗಾಗಿ ಎರಡೂವರೆ ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿದ್ದರು. ಅವರು ಈ ಪ್ರವಾಸದಲ್ಲಿ ವಿಜಯವಾಡಾದಲ್ಲಿದ್ದಾಗ, ಭಗತ್ ಸಿಂಗ್, ಬಟುಕೇಶ್ವರ ದತ್ ಎಂಬ ತನ್ನ ಗೆಳೆಯನೊಬ್ಬನೊಂದಿಗೆ ಏಪ್ರಿಲ್ ೮ರಂದು, ದೆಹಲಿಯಲ್ಲಿನ ಕೇಂದ್ರ ಶಾಸನ ಸಭಾಭವನದಲ್ಲಿ ಸಭೆ ನಡೆಯುತ್ತಿದ್ದಾಗಲೇ ಬಾಂಬ್ ಎಸೆದ ಸುದ್ದಿ ಬಂತು. ಈ ಘಟನೆಯಲ್ಲಿ ಪ್ರಾಣಹಾನಿಯೇನೂ ಆಗಿರದಿದ್ದರೂ, ಗಾಂಧಿಯವರಿಗೆ ಇದು ಸ್ವರಾಜ್ಯ ಹೋರಾಟಕ್ಕೆ ದೊಡ್ಡ ಆಘಾತವಾಗಿ ಕಂಡಿತು. ಇದಕ್ಕೆ ಕೆಲವು ದಿನಗಳ ಮುಂಚೆ, ಮುಸ್ಲಿಂ ಯುವಕನೊಬ್ಬ ಲಾಹೋರ್‌ನಲ್ಲಿ 'ರಂಗೀಲಾ ರಸೂಲ್' ಕರಪತ್ರದ ಕರ್ತೃ ರಾಜಪಾಲ್‌ಗೆ ಚೂರಿ ಹಾಕಿ ಕೊಂದಿದ್ದ. ಗಾಂಧಿ ವಿಚಲಿತರಾಗಿದ್ದರು. 'ಯಂಗ್ ಇಂಡಿಯಾ'ದಲ್ಲಿ ಹಿಂಸೆಯ ಈ ಹುಚ್ಚು ತತ್ವದ ಬಗ್ಗೆ ತಮ್ಮ ಕಳವಳವನ್ನು ತೋಡಿಕೊಂಡ ಗಾಂಧಿ, ಈ ಎರಡೂ ಘಟನೆಗಳಿಗೆ ಕಾರಣರಾದವರು ಯಾವ ಆದರ್ಶಕ್ಕಾಗಿ ಅದನ್ನು ಮಾಡಿರುವುದಾಗಿ ತಿಳಿದಿದ್ದಾರೋ, ಅವರು ನಿಜವಾಗಿ ಅವಕ್ಕೆ ದ್ರೋಹವನ್ನೇ ಬಗೆದಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಆದರೆ ಆ ಇಬ್ಬರು ತರುಣರು ಬಾಂಬ್ ಎಸೆದು ಓಡಿಹೋಗದೆ, ತಮ್ಮ ಎಚ್‌ಎಸ್‌ಆರ್‌ಎ ಸಂಘಟನೆಯ ಕರಪತ್ರಗಳನ್ನು ತೂರಿ 'ಇಂಕ್ವಿಲಾಬ್ ಜಿಂದಾಬಾದ್', 'ಕ್ರಾಂತಿ ಜಿಂದಾಬಾದ್' ಎಂಬ ಘೋಷಣೆಗಳನ್ನು ಕೂಗುತ್ತಾ ಪೋಲೀಸರಿಂದ ಬಂಧನವನ್ನು ಆಹ್ವಾನಿಸಿದ್ದರು. ರಷ್ಯಾದ ಕ್ರಾಂತಿಯಿಂದ ಪ್ರಭಾವಿತರಾಗಿದ್ದ ಈ ಹುಡುಗರು ನ್ಯಾಯಾಲಯದಲ್ಲಿನ ತಮ್ಮ ಹೇಳಿಕೆಯಲ್ಲಿ, ದುಡಿಯುವ ವರ್ಗ ಅನುಭವಿಸುತ್ತಿರುವ ಶೋಷಣೆಯ ಬಗ್ಗೆ ಜಗತ್ತಿಗೆ ತಿಳಿಸಲು ಮತ್ತು ಬ್ರಿಟಿಷ್ ಪ್ರಭುತ್ವವನ್ನು, ಅದರ ಕನಸುಗಳಿಂದ ಎಚ್ಚರಗೊಳಿಸಲು ಈ ಕೃತ್ಯ ಕೈಗೊಂಡಿರುವುದಾಗಿ ತಿಳಿಸಿದರು. ಅವರು ಗಾಂಧಿಯ ಹೆಸರು ಹೇಳದೆ ಅವರ ಅಹಿಂಸಾ ತತ್ವವನ್ನು ಭ್ರಮಾತ್ಮಕವೆಂದು ಕರೆದು, ತಾವು ಗುರು ಗೋವಿಂದ ಸಿಂಗ್, ಶಿವಾಜಿ, ಕೆಮಾಲ್ ಪಾಶಾ, ಗ್ಯಾರಿಬಾಲ್ಡಿ, ವಾಷಿಂಗ್‌ಟನ್, ಲೆನಿನ್ ಮುಂತಾದ ವೀರರಿಂದ ಸ್ಫೂರ್ತಿ ಪಡೆದು ಮಾನವ ಜನಾಂಗದ ಆಜನ್ಮಸಿದ್ಧ ಹಕ್ಕಾದ ಕ್ರಾಂತಿಯನ್ನು ಎತ್ತಿ ಹಿಡಿದಿದ್ದೇವೆ' ಎಂಬ ವಿವರಣೆಯನ್ನೂ ನೀಡಿದ್ದರು.

ಹಿಮಾಲಯಕ್ಕೆ ಹೋದ ಗಾಂಧಿ

ಗಾಂಧಿ, ತಮ್ಮ ಖಾದಿ ಪ್ರಚಾರ ಕಾರ್ಯಕ್ರಮಕ್ಕಾಗಿ, ಆಂಧ್ರದಿಂದ ಸಂಯುಕ್ತ ಪ್ರಾಂತ್ಯಗಳ ಕಡೆ ಹೊರಟು, ಜೂನ್ ಹೊತ್ತಿಗೆ ಹಿಮಾಲಯ ಶ್ರೇಣಿಯ ಕೌಸಾನಿ ಎಂಬಲ್ಲಿಗೆ ತಲುಪಿದರು. ಆಂಧ್ರ ಮತ್ತು ಗಂಗಾ ಬಯಲಿನ ಬಿಸಿಲು ತಾಳಲಾಗದೆ ತಂಪನ್ನರಸಿ, ಕೆಲ ದಿನಗಳ ಮಟ್ಟಿಗೆಂದು ಅಲ್ಲಿಗೆ ಬಂದ ಅವರು, ಅಲ್ಲಿನ ಮಂಜು ಕವಿದ ಗಿರಿ ಶೃಂಗಗಳ ಅನುಪಮ ಸೌಂದರ್ಯಕ್ಕೆ ಮಾರು ಹೋಗಿ ಎರಡು ವಾರಗಳ ಕಾಲ ಅಲ್ಲಿಯೇ ನೆಲೆಸಿಬಿಟ್ಟರು. ೬೨೦೦ ಅಡಿಗಳ ಎತ್ತರದಲ್ಲಿ ಪೈನ್ ಮರಗಳ ದಟ್ಟ ಅರಣ್ಯದಿಂದ ಆವೃತವಾದ ಎರಡು ಕಣಿವೆಗಳ ನಡುವೆ ಇರುವ ಭವ್ಯ ಮನೋಹರ ಜಾಗವಿದು. ಗಾಂಧಿ ತಾವು 'ಅನಾಸಕ್ತಿಯೋಗ' ಎಂಬ ಶೀರ್ಷಿಕೆಯಲ್ಲಿ ಮಾಡಿದ್ದ, ಭಗವದ್ಗೀತೆಯ ಗುಜರಾತಿ ಅನುವಾದಕ್ಕೆ ಒಂದು ಪ್ರಸ್ತಾವನೆಯನ್ನು ಇಲ್ಲಿ ಬರೆದರು. ಅವರು ಇದನ್ನು ಬರೆಯುವಾಗ ತಂಗಿದ್ದ ಜಾಗ, ಈಗ ಅನಾಸಕ್ತಿಯೋಗ ಆಶ್ರಮ ಅಥವಾ ಗಾಂಧಿ ಆಶ್ರಮ ಎಂದೇ ಪ್ರಸಿದ್ಧವಾಗಿದೆ. 'ನವಜೀವನ'ದ ಜುಲೈ ೧೪ರ ಸಂಚಿಕೆಗೆ ಬರೆದ ಲೇಖನದಲ್ಲಿ ಗಾಂಧಿ ಹಿಮಾಲಯದ ಸೌಂದರ್ಯವನ್ನು ವಿವಿಧ ಧರ್ಮೀಯರ ಕಣ್ಣಿಗೆ ಹೇಗೆ ಕಾಣಬಹುದೆಂಬುದನ್ನು ಕಾವ್ಯಮಯವಾಗಿ ವರ್ಣಿಸಿದ್ದಾರೆ. ಈ ಲೇಖನದ ಕೊನೆಯಲ್ಲಿ ಅವರು 'ನಿಜವಾದ ಹಿಮಾಲಯ ನಮ್ಮ ಹೃದಯದಲ್ಲಿ, ಅಲ್ಲಿ ಆ ಹೃದಯ ಗುಹ್ವರದಲ್ಲಿ ಶಿವನ ಸಾಕ್ಷಾತ್ಕಾರವಾದಾಗ ಮಾತ್ರ ಹಿಮಾಲಯದ ದರ್ಶನವಾದಂತೆ' ಎಂದು ಬರೆಯುತ್ತಾರೆ.

ಲಾಹೋರ್ ಕಾಂಗ್ರೆಸ್ ಅಧಿವೇಶನಕ್ಕೆ ಸಿದ್ಧತೆ

ಭಗತ್‌ಸಿಂಗ್ ಮತ್ತವರ ಗೆಳೆಯರು ಕೈಗೊಂಡಿದ್ದ ಹಿಂಸಾತ್ಮಕ ಕಾರ್ಯಾಚರಣೆಗಳ ದಟ್ಟ ವಾಸನೆಯ ವಾತಾವರಣದ ಮಧ್ಯೆಯೇ ಲಾಹೋರ್‌ನಲ್ಲಿ ಡಿಸೆಂಬರ್‌ನಲ್ಲಿ ನಿಗದಿಯಾಗಿದ್ದ ಕಾಂಗ್ರೆಸ್ ಅಧಿವೇಶನಕ್ಕಾಗಿ ಸಿದ್ಧತೆಗಳು ನಡೆದಿದ್ದವು. ನೆಹರೂಗಳಿಬ್ಬರೂ ಸೇರಿದಂತೆ ಬಹುತೇಕ ಕಾಂಗ್ರೆಸ್ ನಾಯಕರು ಗಾಂಧಿಯೇ ಮುಂದಿನ ಕಾಂಗ್ರೆಸ್ ಅಧ್ಯಕ್ಷರಾಗಬೇಕೆಂದು ಬಯಸಿದ್ದರು. ಗಾಂಧಿಯವರೊಂದಿಗೆ ಈ ನಾಯಕರ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ, ತಮ್ಮ ಮತ್ತು ಜನರ ನಡುವಣ ಜೀವಂತ ಸಂಬಂಧ ಇರುವುದು ಗಾಂಧಿಯವರಿಂದಾಗಿಯೇ ಎಂಬ ಅರಿವು ಅವರಿಗಿತ್ತು. ಆದರೆ ಗಾಂಧಿ ಅಧ್ಯಕ್ಷತೆ ಒಲ್ಲೆನೆಂದರು. ಯುವಜನರು ಕಾಂಗ್ರೆಸ್ ಆಂದೋಲನವನ್ನು ಮುಂದೊಯ್ಯುವ ಕಾಲವೀಗ ಬಂದಿದೆ ಎಂದು ಅವರು ಹೇಳಿದರು. ಅವರ ಸೂಚನೆಯಂತೆಯೇ ಜವಾಹರಲಾಲ್ ನೆಹರೂ ಅವರನ್ನು–ಅವರ ಹಿಂಜರಿಕೆಯ ಮಧ್ಯೆಯೇ–ಮುಂದಿನ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಆರಿಸಲಾಯಿತು.

ಈ ಮಧ್ಯೆ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಾಯಕರ ನಡುವೆ ನೆಹರೂ ವರದಿಯ ಬಗ್ಗೆ ಒಮ್ಮತವೇರ್ಪಡಿಸಲು ಸರೋಜಿನಿ ನಾಯ್ಡು, ಗಾಂಧಿ–ಜಿನ್ನಾ ಮತ್ತವರ ಬೆಂಬಲಿಗರ ನಡುವೆ ಹಲವು ಸಭೆಗಳ ಪ್ರಯತ್ನ ಮಾಡಿದರಾದರೂ ಅವು ಸಫಲವಾಗಲಿಲ್ಲ. ಗಾಂಧಿ ಬೆಂಬಲಿಗ ಡಾ. ಅನ್ಸಾರಿಯವರು ಈ ಸಂಬಂಧ ಮಾಡಿದ

ಪ್ರಯತ್ನ ವಿಫಲವಾಯಿತು. ಮುಸ್ಲಿಮರನ್ನು ಒಳಗೊಂಡೇ, ಅವರ ಕಾಳಜಿಗಳನ್ನು ಪರಿಗಣಿಸಿಯೇ ಮುಂದಿನ ಹೋರಾಟದ ಹೆಜ್ಜೆಗಳನ್ನಿಡುವಲ್ಲಿ ನಂಬಿಕೆ ಇಟ್ಟು, ಇನ್ನೂ ಅದರ ಸಾಧ್ಯತೆಗಳ ನಿರೀಕ್ಷೆಯಲ್ಲಿದ್ದ ಗಾಂಧಿಯವರನ್ನು, ಮೋತಿಲಾಲರು, ಅಷ್ಟೇನೂ ಜನಬೆಂಬಲವಿಲ್ಲದ ಜಿನ್ನಾ ಗುಂಪನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿಲ್ಲವೆಂದು ಹೇಳಿ ಸಮಾಧಾನಪಡಿಸಲೆತ್ನಿಸಿದರು.

ಮೊದಲ ದುಂಡು ಮೇಜಿನ ಪರಿಷತ್ತಿಗೆ ಆಹ್ವಾನ

ಈ ಮಧ್ಯೆ ಗಾಂಧಿ, ಸಂಯುಕ್ತ ಪ್ರಾಂತ್ಯಗಳ ಜನರ ಆಹ್ವಾನಗಳ ಮೇರೆಗೆ, ಅಲ್ಲಿಯ ಪ್ರವಾಸದಲ್ಲಿದ್ದಾಗ ಅಕ್ಟೋಬರ್ ೩೧ರಂದು ವೈಸ್‌ರಾಯ್ ಇರ್ವಿನ್ನರು ಭಾರತದ ಸಂವಿಧಾನ ಸುಧಾರಣಾ ಪ್ರಕ್ರಿಯೆ ಬಗ್ಗೆ ಚರ್ಚಿಸಲು, ಬ್ರಿಟಿಷ್ ಸಾಮ್ರಾಜ್ಯ ಸರ್ಕಾರ, ಬರುವ ವರ್ಷ (೧೯೩೦ರ ನವೆಂಬರ್) ಲಂಡನ್‌ನಲ್ಲಿ ದುಂಡು ಮೇಜಿನ ಪರಿಷತ್ತೊಂದನ್ನು ಏರ್ಪಡಿಸಬಯಸಿದ್ದು ಸಂಬಂಧಪಟ್ಟ ಭಾರತೀಯ ನಾಯಕರನ್ನೆಲ್ಲ ಇದರಲ್ಲಿ ಭಾಗವಹಿಸಲು ಆಹ್ವಾನಿಸಲಾಗುವುದು ಎಂದು ಪ್ರಕಟಿಸಿದರು.

ಹಿಂದೂ ಮುಸ್ಲಿಂ ಪ್ರಾತಿನಿಧ್ಯದ ಸಮಸ್ಯೆಯನ್ನು ಬ್ರಿಟಿಷರ ಮುಂದೆ ಕೊಂಡೊಯ್ದು ಇತ್ಯರ್ಥ ಪಡಿಸಿಕೊಳ್ಳುವುದರ ಬಗ್ಗೆ ತಮ್ಮದೇ ಆತಂಕಗಳನ್ನು ಹೊಂದಿದ್ದ ಗಾಂಧಿ, ಲಂಡನ್‌ಗೆ ಹೋಗುವ ಬಗ್ಗೆ ಉತ್ಸಾಹವನ್ನೇನೂ ಪ್ರದರ್ಶಿಸಲಿಲ್ಲ. ಇದನ್ನರಿತ ಸರೋಜಿನಿ ನಾಯ್ಡು, ಜಿನ್ನಾರನ್ನು ಸಂಪರ್ಕಿಸಿ ವೈಸ್‌ರಾಯ್‌ರೊಂದಿಗೆ ಎಲ್ಲರನ್ನೊಳಗೊಂಡ ಪೂರ್ವಸಿದ್ಧತಾ ಸಭೆ ಏರ್ಪಡಿಸುವ ಸಲಹೆಯನ್ನಿಟ್ಟರು. ಕೇಂದ್ರ ಶಾಸನ ಸಭೆಯ ಪ್ರಮುಖ ಸದಸ್ಯರಾಗಿ ವೈಸ್‌ರಾಯ್‌ಗೆ ಆತ್ಮೀಯರಾಗಿದ್ದ ಜಿನ್ನಾ, ಈ ಸಭೆ ಏರ್ಪಡಿಸುವುದಾಗಿ ಹೇಳಿದರು. ಆಗ ಲಂಡನ್‌ನಲ್ಲಿದ್ದ ಗಾಂಧಿಯವರ ಹಳೆಯ ಗೆಳೆಯ ಹೆನ್ರಿ ಪೊಲಾಕ್ ಕೂಡ ಗಾಂಧಿಯವರಿಗೆ ಪತ್ರ ಬರೆದು, ಈಗ ಬ್ರಿಟನ್‌ನಲ್ಲಿ ಲೇಬರ್ ಪಕ್ಷದ ಸರ್ಕಾರ ಇರುವುದರಿಂದ ಮನಸ್ಸು ಮೃದು ಮಾಡಿಕೊಂಡು ಲಂಡನ್‌ಗೆ ಬಂದರೆ, ಸ್ವರಾಜ್ಯದ ಹಾದಿ ಸುಗಮವಾಗುವ ಎಲ್ಲ ಸಾಧ್ಯತೆಗಳಿವೆ ಎಂದು ಒತ್ತಾಯಿಸಿದರು.

ಇದೆಲ್ಲದರ ಪರಿಣಾಮವಾಗಿ, ಡಿಸೆಂಬರ್ ೨೩ರಂದು ವೈಸ್‌ರಾಯ್‌ರೊಂದಿಗೆ ಜಿನ್ನಾ ಏರ್ಪಡಿಸಿದ್ದ ಸಭೆಗೆ ಹಾಜರಾಗಲು ಮನಸ್ಸು ಮಾಡಿದ ಗಾಂಧಿ ಅಂದು ದೆಹಲಿ ತಲುಪಿದರು. ಅಂದು ವೈಸ್‌ರಾಯ್ ಹೊಸದಾಗಿ ಕಟ್ಟಲಾಗಿದ್ದ ಭವ್ಯ ವೈಸ್‌ರಾಯ್ ಹೌಸ್‌ನ್ನು (ಈಗಿನ ರಾಷ್ಟ್ರಪತಿ ಭವನ) ಪ್ರವೇಶಿಸುವ ದಿನವಾಗಿತ್ತು. ಆದರೆ ಪ್ರವಾಸದಲ್ಲಿದ್ದ ವೈಸ್‌ರಾಯ್ ಇರ್ವಿನ್, ವಿಶೇಷ ರೈಲಿನಲ್ಲಿ ದೆಹಲಿ ನಗರವನ್ನು ಪ್ರವೇಶಿಸುತ್ತಿದ್ದಂತೆ, ಅವರ ರೈಲು ಮಾರ್ಗದಲ್ಲಿ ಎರಡು ಬಾಂಬ್‌ಗಳು ಸ್ಫೋಟಿಸಿದವು. ಮುಂದಿದ್ದ ರೈಲ್ವೇ ಡಬ್ಬಿಗಳು ಹಳಿ ತಪ್ಪಿ ಮಗ್ಗುಲಾದವಾದರೂ, ವೈಸ್‌ರಾಯ್ ಯಾವುದೇ ಅಪಾಯವಿಲ್ಲದೆ ಪಾರಾದರು. ಅವರು ಸರಿಯಾದ ವೇಳೆಗೆ ವೈಸ್‌ರಾಯ್ ಹೌಸ್ ಪ್ರವೇಶಿಸಿ ಸಭೆಗೂ ಹಾಜರಾದರು.

ಗಾಂಧಿ, ಅಂದು ಬೆಳಿಗ್ಗೆ ನಡೆದ ವೈಸ್‌ರಾಯ್ ಅವರ ಕೊಲೆ ಯತ್ನದ ಬಗ್ಗೆ ತಮ್ಮ ಕಳವಳವನ್ನು ವ್ಯಕ್ತಪಡಿಸಿ ಮಾತುಗಳನ್ನಾರಂಭಿಸುತ್ತಾ, ಭಾರತಕ್ಕೆ ಸ್ವಾಯತ್ತ ರಾಜ್ಯ

ವ್ಯವಸ್ಥೆಯ ಸ್ಥಾನಮಾನ ನೀಡುವ ಆಶ್ವಾಸನೆ ಇಲ್ಲದ, ಉದ್ದೇಶಿತ ದುಂಡು ಮೇಜಿನ ಪರಿಷತ್ತಿನಲ್ಲಿ ತಮಗೆ ಆಸಕ್ತಿ ಇಲ್ಲವೆಂದು ಸ್ಪಷ್ಟವಾಗಿ ಹೇಳಿದರು. ವೈಸ್‌ರಾಯ್, ಭಾರತವನ್ನು ಚರಿತ್ರೆಯಲ್ಲಿ ಹಿಂದೆಂದೂ ಇಲ್ಲದಂತೆ ಒಗ್ಗೂಡಿಸಿರುವ ಬ್ರಿಟಿಷ್ ಸಾಮ್ರಾಜ್ಯದ ಸದುದ್ದೇಶ ಮತ್ತು ಉದಾರತೆಯ ಎದುರು, ಗಾಂಧಿಯವರ ನಿಲುವು ಕಠಿಣವಾಗಿ ಕಾಣಿಸುತ್ತಿದೆ ಎಂದಾಗ ಗಾಂಧಿ, ಬ್ರಿಟಿಷ್ ಪ್ರಭುತ್ವವು ಭಾರತದ ಭಾವನಾತ್ಮಕ ಐಕ್ಯತೆಗೆ ಏನೂ ಮಾಡಿಲ್ಲ ಎಂದು ಹೇಳಿದರು. ಆಗ ಜಿನ್ನಾ, ಇಂತಹ ಅನೈಕ್ಯತೆಯ ಸಂದರ್ಭದಲ್ಲಿ ಆಶ್ರಯ ರಾಜ್ಯ ಸ್ಥಾನಮಾನ ಕೇಳುವುದು ಹೇಗೆ ಉಚಿತವಾಗುತ್ತದೆ ಎಂದು ಗಾಂಧಿಯನ್ನು ಪ್ರಶ್ನಿಸಿದರು. ಆದರೆ ತಮ್ಮ ನಿಲುವನ್ನು ಬದಲಾಯಿಸಿಕೊಳ್ಳಲೊಲ್ಲದ ಗಾಂಧಿ ತಮ್ಮ ಹೊರತಾಗಿ ಇತರರು ಲಂಡನ್‌ಗೆ ಹೊರಡುವುದಾದರೆ ತಮ್ಮದೇನೂ ಅಭ್ಯಂತರವಿಲ್ಲವೆಂದು ಸ್ಪಷ್ಟಪಡಿಸಿದರು. ಅಲ್ಲಿಗೆ ಸಭೆ ಮುಗಿಯಿತು.

ಲಾಹೋರ್ ಕಾಂಗ್ರೆಸ್ ಅಧಿವೇಶನ–ಪೂರ್ಣ ಸ್ವರಾಜ್ಯದ ಮೊಳಗು

ಈ ಸಭೆಯ ನಂತರ ಗಾಂಧಿ, ಕಾಂಗ್ರೆಸ್‌ನ ವಾರ್ಷಿಕ ಸಮ್ಮೇಳನಕ್ಕಾಗಿ ಲಾಹೋರ್‌ಗೆ ಹೊರಟರು. ಡಿಸೆಂಬರ್ ೨೯ರಂದು ಆರಂಭವಾಗಲಿದ್ದ ಆ ಸಮ್ಮೇಳನಕ್ಕೆ, ರಾವಿ ನದಿಯ ದಂಡೆಯ ಮೇಲಿನ ಆ ಸಾಂಸ್ಕೃತಿಕ ನಗರಿ, ಸಂಭ್ರಮದ ಸಿದ್ಧತೆ ನಡೆಸಿತ್ತು. ಅದು ಲಾಲಾ ಲಜಪತ್ ರಾಯ್‌ರ ಸಾವಿಗೆ ಕಾರಣವಾದ ಮಾರಕ ಲಾಠಿ ಪ್ರಯೋಗ ನಡೆದ, ಕೇಂದ್ರ ಶಾಸನ ಸಭೆಯಲ್ಲಿ ಬಾಂಬ್ ಸ್ಫೋಟಿಸಿದ ಭಗತ್‌ಸಿಂಗ್ ಹುಟ್ಟಿ ಬೆಳೆದ ಮತ್ತು ಮುಸ್ಲಿಮನೊಬ್ಬನ ಚೂರಿ ಇರಿತಕ್ಕೆ ತುತ್ತಾದ ರಾಜ್‌ಪಾಲ್‌ನ ಊರೂ ಆಗಿ ಆತಂಕದಿಂದ ತಲ್ಲಣಿಸುತ್ತಿತ್ತು ಕೂಡ. ಆದರೆ 'ದೇಶ ಮೊದಲು, ನಂತರ ಧರ್ಮ', 'ಖಾದಿ ಬಿಟ್ಟು ಇನ್ನೇನನ್ನೂ ತೊಡಬೇಡಿರಿ', 'ಅಸ್ಪೃಶ್ಯತೆ ಎಂಬ ಪಿಡುಗನ್ನು ಹೊರದೂಡಿರಿ', 'ಭಾರತದ ಬಿಡುಗಡೆಯೇ ಜಾಗತಿಕ ಶಾಂತಿಗೆ ನಾಂದಿ' ಮುಂತಾದ ಘೋಷಣೆಗಳುಳ್ಳ ಭಿತ್ತಿ ಪತ್ರಗಳು ನಗರದ ತುಂಬ ರಾರಾಜಿಸುತ್ತಾ, ಈ ಆತಂಕ–ತಲ್ಲಣಗಳನ್ನು ದೂರ ಮಾಡುವಂತಿದ್ದವು. ಗಾಂಧಿ ಜನಜಂಗುಳಿಯನ್ನು ತಪ್ಪಿಸಿಕೊಳ್ಳಲು ನಗರದ ಹೊರ ವಲಯದ ನಿಲ್ದಾಣದಲ್ಲೇ ಇಳಿದರಾದರೂ, ಅವರನ್ನು ಗುರುತಿಸಿದ ಕೂಲಿಗಳೂ ಸೇರಿದಂತೆ ಜನರ ದೊಡ್ಡ ಗುಂಪು ಅವರ ಪಾದ ಮುಟ್ಟಲು ನುಗ್ಗಿಬಂತು. 'ಮಹಾತ್ಮ ಗಾಂಧಿ ಕೀ ಜೈ', 'ವಂದೇ ಮಾತರಂ', 'ಭಗತ್ ಸಿಂಗ್ ಕೀ ಜೈ' ಎಂಬ ಘೋಷಣೆಗಳು ಮುಗಿಲು ಮುಟ್ಟಿದವು. ಸಮ್ಮೇಳನದ ಅಧ್ಯಕ್ಷ ಜವಾಹರಲಾಲ್ ನೆಹರೂ ಅವರು ಬಂದಾಗಲೂ ಇದೇ ಪರಿಸ್ಥಿತಿ ಸೃಷ್ಟಿಯಾಯಿತು.

ಸುಮಾರು ೫೦ ಸಾವಿರ ಜನ ಭಾಗವಹಿಸಿದ್ದ ಈ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಜವಾಹರಲಾಲ್ ನೆಹರೂ, ತಮ್ಮ ಅಧ್ಯಕ್ಷ ಭಾಷಣದಲ್ಲಿ 'ಜಗತ್ತಿನಲ್ಲಿ ಯೂರೋಪಿನ ಪ್ರಭುತ್ವದ ಕೊನೆಯ ದಿನಗಳು ಆರಂಭವಾಗಿದ್ದು, ಇನ್ನು ಅಮೆರಿಕಾ ಮತ್ತು ಏಷ್ಯಾದ ಮುಂಬೆಳಗು ಆರಂಭವಾಗಿದೆ ಎನ್ನುತ್ತಾ, ಭಾರತವೀಗ ಈಜಿಪ್ಟ್, ಚೀನಾ, ತುರ್ಕಿ, ಪರ್ಷಿಯಾದಂತಹ ಹೊಸ ಹುರುಪಿನ ದೇಶಗಳ ಸಾಲಿನಲ್ಲಿ ನಿಂತು,

ತನ್ನ ರೈತರ ಮತ್ತು ಕಾರ್ಮಿಕರ ಹಿತ ಕಾಯಲು ಬದ್ಧವಾಗಿದೆ ಎಂದು ಘೋಷಿಸಿದರು. ಭಾರತದ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಮತೀಯ ಅಲ್ಪಸಂಖ್ಯಾತರ ಮತ್ತು ರಾಜ ಸಂಸ್ಥಾನಗಳ ಸಮಸ್ಯೆಗಳ ಬಗ್ಗೆಯೂ ಅವರು ಪ್ರತಿನಿಧಿಗಳ ಗಮನ ಸೆಳೆದರು.

ಕಲ್ಕತ್ತಾ ಅಧಿವೇಶನದಲ್ಲಿ ಸ್ವಾಯತ್ತ ಆಶ್ರಯ ರಾಜ್ಯ ಘೋಷಣೆಗಾಗಿ ಸರ್ಕಾರಕ್ಕೆ ನೀಡಿದ್ದ ಒಂದು ವರ್ಷದ ಗಡುವು ಡಿಸೆಂಬರ್ ೩೧ರಂದು ಮುಗಿದಿತ್ತು. ಈ ಗಡುವು ನಿಗದಿಗೆ ಗಾಂಧಿಯವರೇ ಕಾರಣರಾಗಿದ್ದುದರಿಂದ, ಸ್ವತಃ ಗಾಂಧಿಯವರೇ, ಪೂರ್ಣ ಸ್ವರಾಜ್ಯಕ್ಕೆ ಕಾಂಗ್ರೆಸ್ ಕರೆಕೊಡುತ್ತದೆಂಬ ನಿರ್ಣಯವನ್ನು ಅಧಿವೇಶನದ ಮುಂದೆ ಮಂಡಿಸಿದರು. ವೈಸ್‌ರಾಯ್‌ರ ರೈಲುಬಂಡಿಯ ಮೇಲೆ ನಡೆದ ಬಾಂಬ್ ದಾಳಿಯೂ ಸೇರಿದಂತೆ ಇತ್ತೀಚಿನ ಹಿಂಸಾಕೃತ್ಯಗಳನ್ನು, ಅವು ಕಾಂಗ್ರೆಸ್‌ನ ನಂಬಿಕೆಗೆ ವಿರುದ್ಧವಾಗಿದ್ದು, ಸ್ವಾತಂತ್ರ್ಯದತ್ತಣ ಅದರ ನಡಿಗೆಯನ್ನು ಕುಂಠಿತಗೊಳಿಸುವಂಥವು ಎನ್ನುತ್ತಾ ಖಂಡಿಸುವ ಸಾಲುಗಳೂ ಆ ನಿರ್ಣಯದಲ್ಲಿದ್ದವು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಹಾಗೇ ಕಾಂಗ್ರೆಸ್ಸಿಗರು ಶಾಸನಸಭೆಗಳನ್ನು ಬಹಿಷ್ಕರಿಸಿ, ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಮಾರ್ಗದರ್ಶನದಲ್ಲಿ ಸಾಧ್ಯವಾದೆಡೆಯಲ್ಲೆಲ್ಲ ರಚನಾತ್ಮಕ ಕಾರ್ಯಕ್ರಮಗಳು ಮತ್ತು ಕರ ನಿರಾಕರಣೆ ಸೇರಿದಂತೆ ಸವಿನಯ ಕಾನೂನುಭಂಗ ಚಳುವಳಿ ಆರಂಭಿಸುವಂತೆಯೂ ಈ ನಿರ್ಣಯ ಕರೆಕೊಟ್ಟಿತು.

ನಿರ್ಣಯವನ್ನು ಅಧಿವೇಶನ ಒಮ್ಮತದಿಂದ ಅಂಗೀಕರಿಸಿತು. ಕಾಂಗ್ರೆಸ್ ತನ್ನ ಹೋರಾಟದ ಹೊಸ ದಿಕ್ಕನ್ನು ಕಂಡುಕೊಂಡು ಮುನ್ನಡೆಯುವ ಸಂಕಲ್ಪ ಮಾಡಿದ ಈ ದಿನಗಳಲ್ಲೇ ಕಾನ್‌ಪುರದಲ್ಲಿ ನಡೆದ ಉಲೇಮಾಗಳ ಸಮ್ಮೇಳನವೊಂದರಲ್ಲಿ ಮೌಲಾನಾ ಮೊಹಮ್ಮದ್ ಅಲಿಯವರು 'ನೆಹರೂ ವರದಿ ಹಿಂದೂ ಪ್ರಭುತ್ವವನ್ನು ಪ್ರತಿಪಾದಿಸುತ್ತಿದ್ದು ಮುಸ್ಲಿಮರು ಅದಕ್ಕೆಂದೂ ತಲೆಬಾಗುವುದಿಲ್ಲ' ಎಂಬ ಘೋಷಣೆ ಮಾಡಿ, ಕಾಂಗ್ರೆಸ್ಸಿನ ಈ ಹೊಸ ದಿಕ್ಕಿನ ನಡಿಗೆಯ ಹಾದಿ ಕಲ್ಲು ಮುಳ್ಳುಗಳಿಂದಲೇ ತುಂಬಿರುತ್ತದೆ ಎಂಬ ಸೂಚನೆಯನ್ನು ನೀಡಿದ್ದರು.

■

೭೦

ಉಪ್ಪಿನ ಸತ್ಯಾಗ್ರಹ: ದಂಡಿ ಯಾತ್ರೆ

ಲಾಹೋರ್ ಅಧಿವೇಶನದಲ್ಲಿ ಪೂರ್ಣ ಸ್ವರಾಜ್ಯಕ್ಕಾಗಿ ಕರೆ ಕೊಡುವ ನಿರ್ಣಯವನ್ನು ಮಂಡಿಸಿ ಅನುಮೋದನೆ ಪಡೆದಿದ್ದ ಗಾಂಧಿ, ಲಾಹೋರ್‌ನಿಂದ ವಾಪಸಾದ ನಂತರ ಮುಂದಿನ ಕಾರ್ಯಕ್ರಮದ ಬಗ್ಗೆ ಯೋಚಿಸತೊಡಗಿದ್ದರು. ಜಾಗತಿಕ ಆರ್ಥಿಕ ಹಿಂಜರಿತದ ಪರಿಣಾಮವಾದ ಬೆಲೆ ಏರಿಕೆಯಿಂದ ದೇಶ, ನಿರ್ದಿಷ್ಟವಾಗಿ ರೈತರು ಮತ್ತು ಕಾರ್ಮಿಕರು ಕಂಗೆಟ್ಟು ಸರ್ಕಾರದ ವಿರುದ್ಧ ಅವರನ್ನು ಪ್ರಚೋದಿಸುವುದು ಸುಲಭವಾಗಿತ್ತಾದರೂ ದೇಶದ ವಾತಾವರಣದಲ್ಲಿ ವೈರ ಮತ್ತು ಹಿಂಸೆ ತುಂಬಿಕೊಂಡಿತ್ತು. ಒಂದು ಕಡೆ ಹಿಂದೂ–ಮುಸ್ಲಿಮರ ಸಂಬಂಧ ಹದಗೆಟ್ಟು ಹಿಂದೂ ಮಹಾಸಭಾ ಮತ್ತು ಮುಸ್ಲಿಂ ಲೀಗ್‌ನ ನಾಯಕರು ಇದನ್ನು ತಮ್ಮ ವಿಭಜನಕಾರಿ ರಾಜಕೀಯಕ್ಕೆ ಬಳಸಿಕೊಳ್ಳುವ ಪ್ರಯತ್ನಗಳನ್ನು ಮಾಡುತ್ತಿದ್ದರೆ, ಎಚ್‌ಎಸ್‌ಆರ್‌ಎ ಪಡೆಯ ಭಗತ್‌ಸಿಂಗ್ ಮತ್ತವರ ಯುವ ಕ್ರಾಂತಿಕಾರಿಗಳು ಮತ್ತು ಕಮ್ಯೂನಿಸ್ಟ್ ಪಕ್ಷದ ಸದಸ್ಯರು ಹಿಂಸೆಯ ಮೂಲಕ ಪ್ರಭುತ್ವವನ್ನು ಬೆದರಿಸಿ ಓಡಿಸುವ ಪ್ರಯತ್ನಗಳಲ್ಲಿ ತೊಡಗಿದ್ದರು. ಕಾಂಗ್ರೆಸ್‌ನಲ್ಲೇ ಸುಭಾಷ್‌ಚಂದ್ರ ಬೋಸರು ಆಗಾಗ್ಗೆ ಸೇನಾ ಸಮವಸ್ತ್ರದಲ್ಲಿ ಕಾಣಿಸಿಕೊಂಡು ಕಾಂಗ್ರೆಸ್‌ನ ಯುವಸದಸ್ಯರ ಸ್ಫೂರ್ತಿ ಕೇಂದ್ರವಾಗತೊಡಗಿದ್ದರು. ಆಗ ಕಾಂಗ್ರೆಸ್ ಕೂಡ ಒಡೆದ ಮನೆಯಾಗಿತ್ತು. ಜೊತೆಗೆ ಗಾಂಧಿಗೆ ಅಸಹಕಾರ ಸತ್ಯಾಗ್ರಹದಲ್ಲಿ ಸಂಭವಿಸಿದ ಮತ್ತು ಈ ಸತ್ಯಾಗ್ರಹವನ್ನು ಸ್ಥಗಿತಗೊಳಿಸಲು ಕಾರಣವಾಗಿದ್ದ ಹಿಂಸಾಕೃತ್ಯಗಳ ಕಹಿ ನೆನಪೂ ಇತ್ತು. ಈ ಹಿನ್ನಲೆಯಲ್ಲಿ ಅವರು 'ಯಂಗ್ ಇಂಡಿಯಾ'ದ ೧೯೩೦ರ ಮೊದಲ ಸಂಚಿಕೆಯಲ್ಲಿ ಅಹಿಂಸೆಯ ಅನಿವಾರ್ಯತೆಯ ಬಗ್ಗೆ ಬರೆಯುತ್ತಾ, ಬ್ರಿಟಿಷ್ ವಿರೋಧಿ ಹಿಂಸೆಯನ್ನು ಪ್ರತಿಪಾದಿಸುವವರು ಸ್ವಾತಂತ್ರ್ಯದ ನಂತರ ಒಂದಲ್ಲ ಒಂದು ಕಾರಣದ ಮೇಲೆ ದೇಶದ ಜನರ ವಿರುದ್ಧವೂ ಹಿಂಸೆಯನ್ನು ಪ್ರತಿಪಾದಿಸುವ ಎಲ್ಲ ಸಾಧ್ಯತೆಗಳಿವೆ ಎಂದು ಎಚ್ಚರಿಸಿ ಬರೆದ ಲೇಖನಕ್ಕೆ, ಭಗತ್‌ಸಿಂಗ್ ಮತ್ತು ಗೆಳೆಯರು ಬರೆದ ಉತ್ತರ ಅವರನ್ನು ಆಘಾತಗೊಳಿಸಿತ್ತು. ಅವರು ಸ್ನೇಹಿತರಿಗಾಗಿ ಅಗತ್ಯ ಬಿದ್ದರೆ ಪ್ರಾಣ ಕೊಡುವುದೂ, ವೈರಿಯನ್ನು ಸಾಧ್ಯವಾದರೆ ಕೊಲ್ಲುವುದೂ ಮಾನವನ ಸಹಜ ವರ್ತನೆಯಾಗಿದೆ. ಇದನ್ನು ಅರಿಯುವುದು ಯಾರಿಗೂ ಕಷ್ಟವಾಗಬಾರದು ಎಂದು ಅವರು ಬರೆದಿದ್ದರು.

ಪಂಜರದೊಳಗಿನ ಸಿಂಹ

ಹೀಗಾಗಿ ಗಾಂಧಿ ಬಹು ಎಚ್ಚರಿಕೆಯಿಂದ ತಮ್ಮ ಮುಂದಿನ ಕಾರ್ಯಕ್ರಮವನ್ನು

ರೂಪಿಸಬೇಕಿತ್ತು. ೧೯೩೦ ರ ಜನವರಿ ೧೮ ರಂದು ಸಬರ್ಮತಿ ಆಶ್ರಮಕ್ಕೆ ಬಂದ ಗುರುದೇವ ಟ್ಯಾಗೋರರು ಗಾಂಧಿಯವರನ್ನು 'ಮುಂದೇನು?' ಎಂದು ಕೇಳಿದಾಗ, ಅವರು ತಾವು ಹಗಲೂ ರಾತ್ರಿ ಯೋಚಿಸಿದರೂ ಈ ಕತ್ತಲೆಯಲ್ಲಿ ಏನೂ ಹೊಳೆಯುತ್ತಿಲ್ಲ ಎಂದು ಉತ್ತರಿಸಿದ್ದರು. ನಂತರ ಅವರು ತಮ್ಮ ಆಶ್ರಮವಾಸಿಗಳ ಒಂದು ಆಯ್ದ ತಂಡಕ್ಕೆ ಅಹಿಂಸಾತ್ಮಕ ಸತ್ಯಾಗ್ರಹದ ತರಬೇತಿ ನೀಡಿ, ಅದು ಮಿಕ್ಕವರಿಗೆ ಮಾದರಿಯಾಗಬೇಕೆಂಬ ಯೋಜನೆ ಹಾಕಿದರು. ಅವರ ಭಾಷೆಯಲ್ಲೇ ಹೇಳುವುದಾದರೆ, ಅವರು ಆಗ 'ಪಂಜರದೊಳಗಿನ ಸಿಂಹ'ದಂತಾಗಿದ್ದರು. ಹಾಗಾಗಿಯೇ ಮಿತ್ರ ಅನ್ಸಾರಿಯವರು, 'ಮುಸ್ಲಿಮರು ಕಾಂಗ್ರೆಸ್‌ನಿಂದ ದೂರಾಗಿರುವುದರಿಂದ ಸದ್ಯಕ್ಕೆ ಚಳುವಳಿ ಬೇಡ. ಹೇಗೂ ಲಂಡನ್‌ನಲ್ಲಿ ಭಾರತ ಸ್ನೇಹಿ ರಾಮ್ಸೆ ಮೆಕ್‌ಡೊನಾಲ್ಡ್ ನೇತೃತ್ವದ ಲೇಬರ್ ಪಕ್ಷದ ಸರ್ಕಾರ ಬಂದಿದ್ದು, ಕಾದು ನೋಡೋಣ' ಎಂದಾಗ ಗಾಂಧಿ ಅದನ್ನು ಒಪ್ಪದೆ, ಈ ವಾಸ್ತವ ಇಂಗ್ಲಿಷ್ ಪ್ರಭುತ್ವದ ದೈನಂದಿನ ವಾಸ್ತವವನ್ನು ಮರೆಸಬಾರದು ಎನ್ನುತ್ತಾ, ಎಲ್ಲರನ್ನೂ ಸಮಾನ ನೆಲೆಯಲ್ಲಿ ಕಾಣುವ ಕಾರ್ಯಕ್ರಮ ಯಾರನ್ನೂ ನೋಯಿಸದು ಎಂದು ವಿವರಿಸಿ, ಮುಂದಿನ ಕಾರ್ಯಾಚರಣೆಗೆ ಅವರನ್ನು ಸಿದ್ಧಪಡಿಸಿದರು. ಗಾಂಧಿಯವರಿಗೆ ಮುಂದಿನ ಕಾರ್ಯಾಚರಣೆಗೆ ನಿಜವಾದ ಹುಮ್ಮಸ್ಸು ನೀಡಿದ ಸಂಗತಿ ಎಂದರೆ, ಲಾಹೋರ್ ಕಾಂಗ್ರೆಸ್‌ನಲ್ಲಿ ನಿರ್ಧರಿಸಿದ್ದಂತೆ, ಪ್ರತಿ ಜನವರಿಯ ಕೊನೆಯ ಭಾನುವಾರ ಸ್ವಾತಂತ್ರ್ಯದ ಪ್ರತಿಜ್ಞೆ ಸ್ವೀಕರಿಸಿ ಆಚರಿಸಲು ನಿರ್ಧರಿಸಲಾಗಿದ್ದ ಸ್ವಾತಂತ್ರ್ಯ ದಿನಾಚರಣೆ, ಆ ಜನವರಿ ೨೬ರಂದು ದೇಶದ ವಿವಿಧ ಭಾಗಗಳಲ್ಲಿ ಅಪಾರ ಜನಬೆಂಬಲದೊಂದಿಗೆ ಕಾಂಗ್ರೆಸ್‌ನ ತ್ರಿವರ್ಣ ಧ್ವಜದ ಆರೋಹಣದ ಮೂಲಕ ಯಶಸ್ವಿಯಾಯಿತು ಎಂಬ ಸುದ್ದಿ ಬೇರೆ ಬೇರೆ ಊರುಗಳಿಂದ ಬಂದದ್ದು. ಈ ಸುದ್ದಿಗಳ ಪ್ರಕಾರ ಎಲ್ಲ ಹಿನ್ನೆಲೆಗಳಿಂದ ಬಂದಿದ್ದ ಅಪಾರ ಸಂಖ್ಯೆಯ ಜನ, ಗಾಂಧಿ ಸೂಚಿಸಿದ್ದಂತೆ ಜನರನ್ನು ಹಲವು ನೆಲೆಗಳಿಂದ ಸೂರೆ ಮಾಡುತ್ತಿದ್ದ ಬ್ರಿಟಿಷ್ ಸರ್ಕಾರದ ವಿರುದ್ಧದ ಹೋರಾಟವನ್ನು ಶಿಸ್ತು, ಸಂಯಮ ಮತ್ತು ಶಾಂತಿ ಪಾಲನೆಯ ಮೂಲಕವೇ ನಡೆಸುವ ಪ್ರತಿಜ್ಞೆ ಕೈಗೊಂಡಿದ್ದರು. ಕೆಲವರು ಆ ದಿನವನ್ನು ನೂಲುವ, ಅಸ್ಪೃಶ್ಯರ ಜೊತೆ ಒಡನಾಡುವ ರಚನಾತ್ಮಕ ಕಾರ್ಯಕ್ರಮಗಳ ಮೂಲಕ ಆಚರಿಸಿದ್ದರು.

ವೈಸ್‌ರಾಯ್‌ಗೆ ನೀಡಿದ ಕಾರ್ಯಸೂಚಿ–ಉಪ್ಪಿನ ಮೇಲೆ ಬಿದ್ದ ಕಣ್ಣು!

ಗಾಂಧಿ ಕೊನೆಗೂ ಹೋರಾಟವನ್ನು ಆರಂಭಿಸುವ ನಿಶ್ಚಯ ಮಾಡಿದರು. ಇದಕ್ಕೆ ಪೀಠಿಕೆಯಾಗಿ 'ಯಂಗ್ ಇಂಡಿಯಾ'ದ ಜನವರಿ ಕೊನೆಯ ಸಂಚಿಕೆಯಲ್ಲಿ, ವೈಸ್‌ರಾಯ್ ಮುಂದೆ, ಪಾನ ನಿರೋಧ, ಕಂದಾಯ ಕಡಿತ, ಉಪ್ಪಿನ ಮೇಲಿನ ತೆರಿಗೆ ರದ್ದತಿ, ಆಮದು ವಸ್ತುಗಳ ಮೇಲೆ ಹೆಚ್ಚಿನ ತೆರಿಗೆ, ಸೇನಾ ವೆಚ್ಚ ಮತ್ತು ಅಧಿಕಾರಿಗಳ ಸಂಬಳ–ಭತ್ಯೆಗಳ ಕಡಿತ ಮತ್ತು ರೂಪಾಯಿ–ಪೌಂಡ್ ವಿನಿಮಯ ದರದ ನ್ಯಾಯೋಚಿತ ಪರಿಷ್ಕಾರಗಳು ಸೇರಿದಂತೆ ಹನ್ನೊಂದು ಬೇಡಿಕೆಗಳನ್ನಿರಿಸಿದರು. ಇವನ್ನು ಪೂರೈಸಿದಲ್ಲಿ ಸತ್ಯಾಗ್ರಹದ ಮಾತಾಡದೆ ಕಾಂಗ್ರೆಸ್, ಮುಕ್ತ ಮಾತುಕತೆಗೆ ಅವಕಾಶವಿರುವ ಯಾವುದೇ ಸಮ್ಮೇಳನದಲ್ಲಿ ಭಾಗವಹಿಸಲು ಸಿದ್ಧ ಎಂದು ಪ್ರಕಟಿಸಿದರು.

ಇದಕ್ಕೆ ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆ ಬಾರದಾದಾಗ ಗಾಂಧಿ ಕಾಯಿದೆ ಭಂಗ ಚಳುವಳಿಗೆ ಸಿದ್ಧರಾದರು. ಇದರ ಚರ್ಚೆಗಾಗಿ ಫೆಬ್ರುವರಿ ೧೫ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆ ಕರೆಯಲಾಯಿತು. ಅಲ್ಲಿ ಅವರಿಗೆ ಹಲವರು ಹಲವು ಸಲಹೆಗಳನ್ನು ನೀಡಿದರು. ಗಾಂಧಿ ಉಪ್ಪಿನ ಮೇಲಿನ ತೆರಿಗೆ ವಿರುದ್ಧ ಸತ್ಯಾಗ್ರಹದ ಪ್ರಸ್ತಾಪ ಮಾಡಿದಾಗ ಹಲವರು ನಕ್ಕು ಅದನ್ನು ತಿರಸ್ಕರಿಸಿದರು. ಇದರ ಬದಲಿಗೆ, ಸುಭಾಷರು ಪರ್ಯಾಯ ಸರ್ಕಾರ ರಚನೆಯನ್ನು ಪ್ರಕಟಿಸೋಣ ಎಂದರೆ, ವಲ್ಲಭಭಾಯಿ ಪಟೇಲರು ಕರ, ಭೂಕಂದಾಯ ನಿರಾಕರಣೆಯನ್ನು ಸೂಚಿಸಿದರು. ಬಜಾಜರು ವೈಸ್‌ರಾಯ್ ಮನೆಗೆ ಮೆರವಣಿಗೆ ಹೋಗಿ ಧರಣಿ ಕೂರೋಣ ಎಂದರೆ, ರಾಜಾಜಿ ಪಾನನಿರೋಧ ಚಳುವಳಿ ಅತ್ಯುತ್ತಮ ಎಂದರು. ಆದರೆ ಗಾಂಧಿ ಇವೆಲ್ಲವನ್ನೂ ಮೀರಿದ, ಎಲ್ಲ ಜಾತಿ ಮತ ಪಂಥಗಳ ಜನರನ್ನೂ ಒಳಗೊಳ್ಳುವ ಒಂದು ಸಮಗ್ರ ಕಾರ್ಯಕ್ರಮದ ಹೊಳಹು ಕಾಣುತ್ತಿದ್ದರು. ಅದು ಉಪ್ಪಿನ ಸುತ್ತಲೇ ಗಿರಕಿ ಹೊಡೆಯುತ್ತಿತ್ತು. ಕೊನೆಗೆ ಕಾರ್ಯಕಾರಿ ಸಮಿತಿ ಗಾಂಧಿಯವರ ಪ್ರಸ್ತಾಪವನ್ನು ಅರ್ಧ ಮನಸ್ಸಿನಿಂದಲೇ ಆದರೂ ಒಪ್ಪಿತು.

ಉಪ್ಪು, ಜಾತಿ ಮತ ವರ್ಗಗಳ ಭೇದವಿಲ್ಲದ ಎಲ್ಲರ ನಿತ್ಯ ಬಳಕೆಯ ವಸ್ತುವಾಗಿತ್ತು. ಅದು ವಿಶೇಷವಾಗಿ ಬಡವರ ಕನಿಷ್ಠ ಮಸಾಲೆ ಪದಾರ್ಥವಾಗಿತ್ತು. ಆದರೆ ಅದರ ಮೇಲೆ ಏಕಸ್ವಾಮ್ಯ ಹೊಂದಿದ್ದ ಸರ್ಕಾರ, ಬಡವರು ತೆರಲಾರದಷ್ಟು ತೆರಿಗೆ ವಿಧಿಸಿತ್ತು. ಹಾಗೆ ನೋಡಿದರೆ ಬಹುಕಾಲದಿಂದಲೂ ಈ ಉಪ್ಪಿನ ಮೇಲಿನ ತೆರಿಗೆಯ ವಿಷಯ ಗಾಂಧಿಯವರ ಮನಸ್ಸನ್ನು ಬಾಧಿಸುತ್ತಿತ್ತು. ಬ್ರಿಟಿಷ್ ಸಂಸತ್ತಿನ ಕೆಲ ಸದಸ್ಯರೇ, ಭಾರತದಲ್ಲಿ ಉಪ್ಪಿನ ತೆರಿಗೆಯನ್ನು ನಾಚಿಕೆಗೇಡಿನ ವಿಷಯ ಎಂದು ಕರೆದಿದ್ದರು. ಉಪ್ಪಿನ ಅಕ್ರಮ ತಯಾರಿಕೆಗಾಗಿ ರೈತನೊಬ್ಬನನ್ನು ಬಂಧಿಸಿದ ಇಂಗ್ಲಿಷ್ ಅಧಿಕಾರಿಯೊಬ್ಬ, ತಾನು ಕಾನೂನು ಪ್ರಕಾರ ಕೈಗೊಂಡಿರುವೆನಾದರೂ ಈ ಕ್ರಮ ಅನೈತಿಕ ಮತ್ತು ಪಾಪಕರ ಎಂದು ದಾಖಲಿಸಿದ್ದನ್ನು ಅವರು ಗಮನಿಸಿದ್ದರು. ಗಾಳಿ ನೀರಿನಷ್ಟೇ ನಿಸರ್ಗದತ್ತವಾಗಿರುವ ಈ ವಸ್ತುವಿನ ಮೇಲೆ ಸರ್ಕಾರದ ಒಡೆತನ ಮತ್ತು ತೆರಿಗೆ ಅನ್ಯಾಯದ್ದು ಎಂದು ಗಾಂಧಿಗೂ ಅನಿಸಿತ್ತು. ಮಹದೇವ ದೇಸಾಯಿಯವರು ಒಂದೆಡೆ ದಾಖಲಿಸಿರುವಂತೆ ಗಾಂಧಿ, ೧೯೧೯ರಲ್ಲಿ ಮೂಲವ್ಯಾಧಿ ಶಸ್ತ್ರಚಿಕಿತ್ಸೆಯ ನಂತರ, ಗಾಢ ನಿದ್ರೆಯಲ್ಲಿದ್ದಾಗ ಕನವರಿಸಿದ ವಿಷಯಗಳಲ್ಲಿ ಉಪ್ಪಿನ ಮೇಲಿನ ತೆರಿಗೆಯೂ ಒಂದಾಗಿತ್ತು. ಅದೀಗ ಜಾಗೃತವಾಗಿ ಒಂದು ಐತಿಹಾಸಿಕ ಕಾರ್ಯಾಚರಣೆಯ ರೂಪ ತಳೆಯುವ ಸಂದರ್ಭ ಒದಗಿತ್ತು.

ಮಹಾಯಾತ್ರೆಗೆ ಪೂರ್ವ ಸಿದ್ಧತೆ

ನಂತರ ಗಾಂಧಿ, ಹೋರಾಟದ ಮುಂದಿನ ಹೆಜ್ಜೆಯಾಗಿ 'ಯಂಗ್ ಇಂಡಿಯಾ'ದ ಫೆಬ್ರುವರಿ ೨೭ರ ಸಂಚಿಕೆಯಲ್ಲಿ 'ನಾನು ದಸ್ತಗಿರಿಯಾದರೆ' ಎಂಬ ಶೀರ್ಷಿಕೆಯ ಸಂಪಾದಕೀಯ ಲೇಖನದಲ್ಲಿ ಸರ್ಕಾರದ ವಿರುದ್ಧ ಸತ್ಯಾಗ್ರಹ ಆರಂಭಿಸುವ ಸೂಚನೆಯನ್ನು ನೀಡಿ, ಇದಕ್ಕಾಗಿ ಜನ ವಿವಿಧ ಹಂತಗಳಲ್ಲಿ ಹೇಗೆ ಸಿದ್ಧರಾಗಿರಬೇಕು ಎಂಬುದನ್ನು ವಿವರಿಸಿದ್ದರು. ನಂತರ ಈ ಸತ್ಯಾಗ್ರಹದ ವಿಷಯವನ್ನು ಮಾರ್ಚ್ ೨ರಂದು ವೈಸ್‌ರಾಯ್‌ಗೆ ಕಳಿಸಿಕೊಟ್ಟ ಪತ್ರವೊಂದರಲ್ಲಿ, ಬ್ರಿಟಿಷ್ ಸರ್ಕಾರ ಭಾರತದ

ಜನಪದಕ್ಕೆ ಮಾಡಿರುವ ಹಾನಿಯನ್ನು ವಿವರಿಸಿ, ತಮ್ಮ ಸತ್ಯಾಗ್ರಹ ಕಾರ್ಯಕ್ರಮದ ಬಗ್ಗೆ ತಿಳಿಸಿದ್ದರು. ಅತ್ಯಂತ ಗೌರವಪೂರ್ವಕವಾಗಿ, ಆದರೆ ಅಷ್ಟೇ ಖಚಿತ ಭಾಷೆಯಲ್ಲಿ ಬರೆದಿದ್ದ ಈ ಪತ್ರದಲ್ಲಿ, ಬ್ರಿಟಿಷ್ ಆಳ್ವಿಕೆಯ ವಿಕ್ಷಿಪ್ತತೆಗೆ ಉದಾಹರಣೆಯಾಗಿ ಅವರು, ಬ್ರಿಟಿಷ್ ಪ್ರಧಾನಿಯು ಆ ದೇಶದ ಪ್ರತಿ ಪ್ರಜೆಯ ತಲಾ ಆದಾಯದ ತೊಂಬತ್ತು ಪಟ್ಟು ಸಂಬಳವನ್ನು ತೆಗೆದುಕೊಳ್ಳುತ್ತಿದ್ದರೆ, ಅದಕ್ಕೆ ಸಮಾನ ಹುದ್ದೆಯಲ್ಲಿರುವ ಭಾರತದ ವೈಸ್‌ರಾಯ್, ಈ ದೇಶದ ಪ್ರತಿ ಪ್ರಜೆಯ ತಲಾದಾಯದ ಐದು ಸಾವಿರ ಪಟ್ಟು ಸಂಬಳವನ್ನು ತೆಗೆದುಕೊಳ್ಳುತ್ತಿರುವುದನ್ನು ಅವರ ಗಮನಕ್ಕೆ ತಂದಿದ್ದರು.

ಈ ಕಾರ್ಯಕ್ರಮವನ್ನು ಅಂತಿಮಗೊಳಿಸುವ ಮುನ್ನ ಅವರು ಸಾಕಷ್ಟು ಪೂರ್ವ ಸಿದ್ಧತೆ ನಡೆಸಿದ್ದರು. ಉಪ್ಪು ಇಲಾಖೆಯ ನಿವೃತ್ತ ಅಧಿಕಾರಿಯೊಂದಿಗೆ ಸಮಾಲೋಚಿಸಿ ಉಪ್ಪಿನ ಲಭ್ಯತೆಯ ಜಾಗಗಳು, ಉಪ್ಪಿನ ತಯಾರಿಕೆ, ಅದರ ಮುಖ್ಯ ಕೇಂದ್ರಗಳು, ದಾಸ್ತಾನು ವ್ಯವಸ್ಥೆಯ ವಿವರಗಳೆಲ್ಲವನ್ನೂ ತಿಳಿದುಕೊಂಡು, ಅದಕ್ಕೆ ತಕ್ಕಂತೆ ಸತ್ಯಾಗ್ರಹದ ಕಾರ್ಯಕ್ರಮದ ವಿವರ ಸಿದ್ಧಪಡಿಸಿದ್ದರು. ಈ ವಿವರಗಳೇ ಈ ಸತ್ಯಾಗ್ರಹದ ಸ್ವರೂಪವನ್ನು ನಿರ್ಧರಿಸಿತೆಂದು ಹೇಳಬೇಕು. ಉಪ್ಪಿನ ಕಾನೂನನ್ನು ಮುರಿಯಲು ಪ್ರಶಸ್ತವಾದ ಸ್ಥಳವನ್ನು, ತಮ್ಮ ಶಿಷ್ಯರಾದ ರವಿಶಂಕರ ವ್ಯಾಸ್ ಮತ್ತು ಮೋಹನಲಾಲ್ ಪಾಂಡ್ಯರ ಮೂಲಕ ಪಡೆದ ಮಾಹಿತಿಯ ಮೂಲಕ ನಿರ್ಧರಿಸಿದರು. ಅದು ದ.ಗುಜರಾತ್‌ನ ಸೂರತ್ ಬಳಿಯ ಅರಬ್ಬೀ ಸಮುದ್ರದ ತಡಿಯ, ದಂಡಿ ಎಂಬ ಹಳ್ಳಿಯಾಗಿತ್ತು. ಅಲ್ಲಿ ಸಮುದ್ರದ ಅಲೆಗಳು ವಾಪಸ್ ಹೋಗುವಾಗ ನೈಸರ್ಗಿಕ ಉಪ್ಪಿನ ಉಂಡೆಗಳನ್ನು ಬಿಟ್ಟು ಹೋಗುತ್ತವೆ ಎಂಬ ಮಾಹಿತಿ ಪಡೆಯಲಾಗಿತ್ತು. ಆ ಹಳ್ಳಿ ಅಹಮದಾಬಾದ್‌ನಿಂದ ಸುಮಾರು ೨೮೦ ಕಿ.ಮೀ. ದೂರವಿದ್ದುದರಿಂದ ಸತ್ಯಾಗ್ರಹವನ್ನು ಒಂದು ತೀರ್ಥಯಾತ್ರೆಯಂತೆಯೇ ಕಲ್ಪಿಸಿಕೊಳ್ಳಲಾಯಿತು. ಈ ಯಾತ್ರೆ ಬ್ರಿಟಿಷ್ ಪ್ರಭುತ್ವ ವಿರೋಧಿ ಹೋರಾಟದ ಉದ್ದೇಶಗಳನ್ನೂ, ಸತ್ಯಾಗ್ರಹದ ಅರ್ಥವನ್ನೂ ಅತ್ಯಂತ ಹೆಚ್ಚು ಜನರಿಗೆ ತಲುಪಿಸುವ ಮತ್ತು ಇದು ಇಡೀ ದೇಶದ ಜನರ ಗಮನವನ್ನು ಸೆಳೆಯುವಂತಹ ಪರಿಣಾಮಕಾರಿ ರೀತಿಯಲ್ಲಿ ಆಯೋಜಿಸುವ ನಿರ್ಧಾರ ಮಾಡಲಾಯಿತು. ಹಾಗಾಗಿ ಯಾತ್ರೆಯನ್ನು ಯಾವ, ಎಂತಹ ಹಳ್ಳಿ-ಪಟ್ಟಣಗಳ ಮೂಲಕ ನಡೆಸಬೇಕೆಂಬ ಎಚ್ಚರಿಕೆಯ ಆಧಾರದ ಮೇಲೆ ಮಾರ್ಗವನ್ನು ನಿರ್ಧರಿಸಲಾಯಿತು. ಸರ್ಕಾರದ ಅಧಿಕಾರಿಗಳು ತ್ವರಿತವಾಗಿ ಮತ್ತು ಸುಲಭವಾಗಿ ತಲುಪಲಾಗದ ಮತ್ತು ಗಾಂಧಿಯವರ ರಚನಾತ್ಮಕ ಕಾರ್ಯಕ್ರಮಗಳ ಪ್ರಚಾರಕ್ಕೆ ಹದವಾಗಿ ಕಂಡ ಸ್ಥಳಗಳಿಗೆ ಪ್ರಾಶಸ್ತ್ಯ ನೀಡಲಾಗಿತ್ತು.

ದಂಡಿ ಯಾತ್ರೆಯ ಘೋಷಣೆ

ಮಾರ್ಚ್ ೫ರಂದು ಸಬರ್ಮತಿ ನದಿ ತೀರದಲ್ಲಿ ಸೇರಿದ್ದ ಆಶ್ರಮದ ಪ್ರಾರ್ಥನಾ ಸಭೆಯಲ್ಲಿ, ಉಪ್ಪಿನ ಮೇಲಿನ ತೆರಿಗೆ ರದ್ದತಿಗಾಗಿ ಸಂಬಂಧಿತ ಕಾನೂನು ಮುರಿಯುವ ಉದ್ದೇಶದ ದಂಡಿ ಯಾತ್ರೆಯ ಕಲ್ಪನೆಯನ್ನು ಸಾರ್ವಜನಿಕವಾಗಿ ಪ್ರಕಟಿಸಿದರು. ಮಾರ್ಚ್ ೧೨ರ ನಸುಕಿನಲ್ಲಿ ಸುಮಾರು ನೂರು ಜನ ಆಶ್ರಮವಾಸಿಗಳ ತಂಡದೊಂದಿಗೆ ತಾವು ಯಾತ್ರೆಯನ್ನು ಆರಂಭಿಸುವುದಾಗಿ ಅವರು ಘೋಷಿಸಿದರು. ಜಲಿಯನ್‌ವಾಲಾ

ಬಾಗ್ ಹತ್ಯಾಕಾಂಡದ (ಏಪ್ರಿಲ್ ೧೩) ವರ್ಷಾಚರಣೆಗಾಗಿ ಆಯೋಜಿಸಲಾಗಿರುವ ರಾಷ್ಟ್ರೀಯ ಸಪ್ತಾಹದ ಆರಂಭದ ದಿನ ಅಂದರೆ, ಏಪ್ರಿಲ್ ೬ರಂದು ಅವರು ದಂಡಿ ಮುಟ್ಟಿ ಕಾನೂನು ಮುರಿಯುವ ಹಾಗೆ ಇಡೀ ಯಾತ್ರೆಯನ್ನು ವಿನ್ಯಾಸಗೊಳಿಸಲಾಗಿತ್ತು. ಅದಕ್ಕೆ ಒಂದು ವಾರದ ಮುನ್ನ ದೇಶಾದ್ಯಂತ ರಾಷ್ಟ್ರೀಯ ಸಪ್ತಾಹ ಆಚರಣೆಯನ್ನು ಆರಂಭಿಸಿ ಈ ಕಾನೂನುಭಂಗ ಚಳುವಳಿಗೆ ಹುರುಪು ತುಂಬಬೇಕೆಂದೂ ಅವರು ಜನರಿಗೆ ಕರೆಕೊಟ್ಟರು.

ಗಾಂಧಿ, ಯಾತ್ರೆಯ ಮಾರ್ಗದ ಸಕಲ ವಿವರಗಳನ್ನೂ, ತಂಗುವ ಜಾಗಗಳನ್ನೂ ಆಶ್ರಮವಾಸಿಗಳ ಆಯ್ದ ಸದಸ್ಯರ ತಂಡದೊಂದಿಗೆ ಚರ್ಚಿಸಿ ಅಂತಿಮಗೊಳಿಸಿದರು. ಹಾಗೇ ಈ ವಿವರಗಳನ್ನು ಗುಜರಾತಿ ವೃತ್ತಪತ್ರಿಕೆಗಳ ಮೂಲಕ ಪ್ರಚಾರ ಮಾಡಿದರು. ತಮ್ಮ ಪಾದಯಾತ್ರೆಯ ತಂಡ ತಂಗುವ ಊರಿನವರು, ತಮಗೆ ಮಸಾಲೆ ಇಲ್ಲದ ಸರಳ ಆಹಾರ ಮತ್ತು ಮಲಗಲು ಸ್ವಚ್ಛವಾದ ಜಾಗ ಒದಗಿಸಿದರೆ ಸಾಕೆಂದು ಕೋರಿದರು. ಗುಜರಾತ್ ವಿದ್ಯಾಪೀಠದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಹದಿನೆಂಟು ಜನರ ಒಂದು ತಂಡವನ್ನು ರಚಿಸಿ, ತಮ್ಮ ಯಾತ್ರೆಯ ತಂಡ ಒಂದು ಊರನ್ನು ಮುಟ್ಟುವ ಮುನ್ನ ಆ ಊರಿನ ಜನಸಂಖ್ಯೆ, ಜಾತಿ ಮತ, ಕಸುಬು, ಶಿಕ್ಷಣ ವ್ಯವಸ್ಥೆ, ಅಸ್ಪೃಶ್ಯರ ಸಂಖ್ಯೆ ಮತ್ತು ಅವರ ಸ್ಥಿತಿಗತಿಗಳು ಇತ್ಯಾದಿ ವಿವರಗಳ ತಲುಪಿಸುವ ಹೊಣೆಯನ್ನು ಅದಕ್ಕೆ ವಹಿಸಿದರು. ಜೊತೆಗೆ ಈ ತಂಡಕ್ಕೆ ಪಾದಯಾತ್ರೆಯ ತಂಡದ ಊಟ, ವಿಶ್ರಾಂತಿ ಮತ್ತು ಪ್ರಾರ್ಥನೆಗಾಗಿ ಮಾಡಲಾಗಿರುವ ವ್ಯವಸ್ಥೆಯನ್ನು ಪರಿಶೀಲಿಸುವ ಹೊಣೆಯನ್ನೂ ನೀಡಲಾಗಿತ್ತು.

ಆಶ್ರಮದೊಳಗೆ ಮತ್ತು ಹೊರಗೆ ಹೀಗೆ ಎರಡೂ ಕಡೆಗಳಿಂದ ಗಾಂಧಿ ಜೊತೆ ಯಾತ್ರಿಕರಾಗಲು ಹಲವರು ಬಯಸಿದರಾದರೂ ಗಾಂಧಿ, ತಮಗೆ ವ್ಯಕ್ತಿಗತ ಪರಿಚಯವಿದ್ದ ಮತ್ತು ಸುದೀರ್ಘ ಯಾತ್ರೆಯ ಕಷ್ಟಗಳನ್ನು ಮಾನಸಿಕವಾಗಿ ಮತ್ತು ದೈಹಿಕವಾಗಿ ಸಹಿಸಬಲ್ಲವರೆಂದು ತಮಗೆ ಅನಿಸಿದ ೭೮ ಜನರನ್ನು ಆರಿಸಿದರು. ಆಶ್ರಮದ ಹೆಂಗಸರೂ, ಮಕ್ಕಳೂ ಯಾತ್ರೆಗೆ ಸಿದ್ಧವೆಂದು ಹೇಳಿದರಾದರೂ ಗಾಂಧಿ ಒಪ್ಪಿಗೆ ನೀಡಲಿಲ್ಲ. ಆದರೆ ದಾರಿ ಮಧ್ಯೆ ಯಾರು ಬೇಕಾದರೂ ಸೇರಿಕೊಂಡು ತಮಗೆ ಸಾಧ್ಯವಾದಷ್ಟು ದೂರ ತಂಡದೊಂದಿಗೆ ಹೆಜ್ಜೆ ಹಾಕಬಹುದೆಂದೂ, ಆದರೆ ಅಂಥವರಿಗೆ ಯಾವುದೇ ನಿಶ್ಚಿತ ವ್ಯವಸ್ಥೆ ಇರುವುದಿಲ್ಲವೆಂದೂ ತಿಳಿಸಿದರು. ಆಯ್ದ ಪಾದಯಾತ್ರಿ ತಂಡಕ್ಕೆ ಅವರು ಕೆಲವು ಮಾರ್ಗದರ್ಶನ ಸೂತ್ರಗಳನ್ನು ಬೋಧಿಸಿದರು. ಅವುಗಳಲ್ಲಿ ಮುಖ್ಯವಾದವುಗಳೆಂದರೆ, ಯಾತ್ರೆಯ ಸಂದರ್ಭದಲ್ಲಿ ಒದಗಬಹುದಾದ ಎಲ್ಲ ರೀತಿಯ ಯಾತನೆಗಳನ್ನು ಸಹಿಸಬೇಕು, ಯಾವ ಸಂದರ್ಭದಲ್ಲೂ ಪ್ರಚೋದಿತರಾಗದೆ ಸಮಚಿತ್ತವನ್ನು ಕಳೆದುಕೊಳ್ಳಬಾರದು, ಯಾವುದೇ ಕಾರಣಕ್ಕೂ ಶಪಿಸುವುದೂ ಸೇರಿದಂತೆ ಯಾವುದೇ ಹಿಂಸೆಗೆ ಕೈ ಹಾಕಬಾರದು, ಶುಚಿಯಾಗಿರದ ಮತ್ತು ವಿಶ್ವಾಸವಿಲ್ಲದೆ ನೀಡುವ ಆಹಾರವನ್ನು ಸ್ವೀಕರಿಸಬಾರದು, ಬಂಧನಕ್ಕೊಳಗಾದರೆ ಯಾವುದೇ ಹೆಚ್ಚಿನ ಸೌಲಭ್ಯಗಳಿಗೆ ಆಗ್ರಹಿಸದೆ ಸೆರೆಮನೆಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಮತ್ತು ತಮ್ಮ ಕುಟುಂಬಗಳಿಗೆ ಕಾಂಗ್ರೆಸ್‌ನಿಂದ ಯಾವುದೇ ಧನಸಹಾಯವನ್ನು ನಿರೀಕ್ಷಿಸಬಾರದು.

ಸರ್ಕಾರದ ತಪ್ಪು ಅಂದಾಜು–ವಲ್ಲಭಭಾಯಿ ಪಟೇಲರ ಬಂಧನ

ಉಪ್ಪಿನ ಸತ್ಯಾಗ್ರಹದ ಸುದ್ದಿ ಕೇಳಿದ ಕೆಲವರು ಅದನ್ನು ಅಪಹಾಸ್ಯ ಮಾಡಿದರು. ಕೆಲವರು ಗಾಂಧಿಗೆ ಉಪ್ಪೇ ಗತಿ ಎಂದರೆ, ಇನ್ನು ಕೆಲವರು ಅವರು ಉಪ್ಪು ತಿಂದು ನೀರು ಕುಡಿಯುವ ದಿನ ದೂರವಿಲ್ಲ ಎಂದರು. ಸರ್ಕಾರದ ಮುಖವಾಣಿಯಂತಿದ್ದ ಕಲ್ಕತ್ತಾದ 'ಸ್ಟೇಟ್ಸ್‌ಮನ್' ಪತ್ರಿಕೆ, ಈಗ ಗಾಂಧಿಯನ್ನು ನೋಡಿ ಜನ ಮುಸಿಮುಸಿ ನಗುತ್ತಿದ್ದಾರೆ ಎಂದು ಕುಹಕವಾಡಿತ್ತು. ವೈಸ್‌ರಾಯ್, ಗಾಂಧಿ ಬರೆದ ಪತ್ರಕ್ಕೆ ಉತ್ತರ ಕೊಡಲಿಲ್ಲವಾದರೂ ಅವರ ಖಾಸಗಿ ಕಾರ್ಯದರ್ಶಿ 'ಈ ಕಾರ್ಯಕ್ರಮದ ಮೂಲಕ ನೀವು ಶಾಂತಿ ಕೆಡಿಸಲು ಪ್ರಯತ್ನಿಸುತ್ತಿರುವುದು ವಿಷಾದಕರ' ಎಂದಷ್ಟೇ ಗಾಂಧಿಯವರಿಗೆ ಸಂದೇಶ ಕಳಿಸಿ ತಿಳಿಸಿದ್ದ. ಇದಕ್ಕೆ ಕಾರಣ, 'ಉಪ್ಪಿನ ವಿಷಯವನ್ನು ಯಾರೂ ಗಂಭೀರವಾಗಿ ಪರಿಗಣಿಸಲಾರರು ಮತ್ತು ಇದಕ್ಕೆ ಈ ಹಿಂದೆ ಈ ವಿಷಯದ ಬಗ್ಗೆ ನಡೆದಿದ್ದ ಚರ್ಚೆ ಎಲ್ಲಿಗೂ ಮುಟ್ಟದೆ ತಣ್ಣಗಾಗಿತ್ತು. ಇದರಿಂದ ಹೆಚ್ಚೆಂದರೆ ಸರ್ಕಾರದ ಆದಾಯಕ್ಕೆ ಸ್ವಲ್ಪ ಕಾಲ ಸಂಚಕಾರ ಆಗಬಹುದಷ್ಟೆ' ಎಂದು ಅಧಿಕಾರಿಗಳು ತಮ್ಮ ಒಂದು ಟಿಪ್ಪಣಿಯಲ್ಲಿ ವೈಸ್‌ರಾಯ್‌ಗೆ ತಿಳಿಸಿದ್ದುದು.

ಆದರೆ ಈ ಸತ್ಯಾಗ್ರಹವನ್ನು ರೂಪಿಸಿದ್ದ ಮತ್ತು ಅದಕ್ಕೆ ಜನರಿಂದ ದೊರೆಯಲಾರಂಭಿಸಿದ್ದ ಸ್ಪಂದನವನ್ನು ಗಮನಿಸಿದ್ದ ಗಾಂಧಿ, ಸರ್ಕಾರದ ಕಡೆಯಿಂದ ತೀವ್ರ ಕಾರ್ಯಾಚರಣೆಯನ್ನು ನಿರೀಕ್ಷಿಸಿದ್ದರು. ಹಾಗಾಗಿಯೇ ಅವರು ಈ ಸಂಬಂಧದ ತಮ್ಮ ಮೊದಲ ಲೇಖನಕ್ಕೆ 'ನಾನು ದಸ್ತಗಿರಿಯಾದರೆ' ಎಂಬ ಶೀರ್ಷಿಕೆಯನ್ನು ನೀಡಿದ್ದುದು. ಅವರು ಯಾತ್ರೆ ಆರಂಭವಾಗುವ ಮುನ್ನವೇ ತಮ್ಮ ಬಂಧನವಾಗಬಹುದೆಂದು ನಿರೀಕ್ಷಿಸಿದ್ದರಲ್ಲದೆ, ತಮ್ಮನ್ನು ಈ ಸತ್ಯಾಗ್ರಹ ನೇಣುಗಂಬಕ್ಕೆ ಒಯ್ಯಬಹುದೆಂದೂ ಅನುಮಾನಿಸಿದ್ದರು. ಹಾಗಾಗಿಯೇ ಈ ಸಮಯದಲ್ಲಿ ಅವರು ತಮ್ಮ ಕೆಲ ಗೆಳೆಯರಿಗೆ ಬರೆದ ಪತ್ರದಲ್ಲಿ ಇದು ತಮ್ಮ ಕೊನೆಯ ಪತ್ರವಾಗಬಹುದೆಂದೂ ಸೂಚಿಸಿದ್ದರು.

ಇದಕ್ಕೆ ತಕ್ಕಂತೆ, ಪಾದಯಾತ್ರೆಯ ಬಗ್ಗೆ ಜನರಿಗೆ ತಿಳುವಳಿಕೆ ನೀಡಲು ಹಳ್ಳಿಗಳ ಪ್ರವಾಸದಲ್ಲಿದ್ದ ವಲ್ಲಭಭಾಯಿ ಪಟೇಲರನ್ನು, ಬೊರ್ಸಾದ್ ಎಂಬ ಹಳ್ಳಿಯಲ್ಲಿ ನಿಷೇಧಾಜ್ಞೆಯನ್ನು ಉಲ್ಲಂಘಿಸಿ ಭಾಷಣ ಮಾಡಿದ್ದಕ್ಕಾಗಿ ಬಂಧಿಸಿ ಮೂರು ತಿಂಗಳ ಕಠಿಣ ಶಿಕ್ಷೆಗೆ ಗುರಿಪಡಿಸಲಾಯಿತು. ಈ ಸುದ್ದಿ ಜನರ ನಡುವೆ ತಲ್ಲಣವನ್ನುಂಟು ಮಾಡಿ, ಅಹಮದಾಬಾದ್ ನಗರದ ಹತ್ತಿ ಗಿರಣಿಗಳ ಕಾರ್ಮಿಕರು ಮುಷ್ಕರ ಹೂಡಿದರು. ಅಂದು ಸಂಜೆ ಸಬರ್ಮತಿ ನದಿ ತೀರದಲ್ಲಿ ಸೇರಿದ್ದ ಬೃಹತ್ ಕುಪಿತ ಜನಸ್ತೋಮವನ್ನು ಉದ್ದೇಶಿಸಿ ಮಾತನಾಡುತ್ತಾ, ಪಟೇಲರ ಬಂಧನದಿಂದ ತಮ್ಮ ಬಲಗೈ ಮುರಿದಂತಾಗಿದೆ ಎನ್ನುತ್ತಾ, ಪಟೇಲರು ಯಾವ ಉದ್ದೇಶಕ್ಕಾಗಿ ಸೆರೆಮನೆ ಸೇರಿದ್ದಾರೋ ಆ ಉದ್ದೇಶವಾದ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ದುಡಿಯುವ ಶಪಥ ಮಾಡುವಂತೆ ಕರೆನೀಡಿದರು. ಸಾವಿರಾರು ಜನ ಕೈಯೆತ್ತಿ ತಮ್ಮ ನಾಯಕನಿಗೆ ವಚನವಿತ್ತರು. ಯಾತ್ರೆಯ ಸಮಯದಲ್ಲಿ ತಮ್ಮ ದಸ್ತಗಿರಿಯಾದರೆ ಜವಾಹರಲಾಲ್ ನೆಹರೂ ಚಳುವಳಿಯ ನೇತೃತ್ವ ವಹಿಸುವರೆಂದೂ ಅವರು ಪ್ರಕಟಿಸಿದರು.

೧೯೩೦ರ ಮಾರ್ಚ್ ೧೨ರಂದು ಎಂದಿನಂತೆ ನಸುಕಿನಲ್ಲಿ ಎದ್ದ ಗಾಂಧಿ ನಿತ್ಯಕರ್ಮಗಳನ್ನು ಮುಗಿಸಿ ಪ್ರಾರ್ಥನೆ ಸಲ್ಲಿಸಿದರು. ನಂತರ ಆಶ್ರಮದಲ್ಲಿ ಸುತ್ತಾಡಿ ಅಸ್ವಸ್ಥರಾಗಿದ್ದ ಮತ್ತು ವಯಸ್ಸಾದ ಆಶ್ರಮವಾಸಿಗಳನ್ನು ಮಾತನಾಡಿಸಿದರು. ನಂತರ ಆಶ್ರಮವಾಸಿಗಳನ್ನುದ್ದೇಶಿಸಿ ಮಾತನಾಡುತ್ತಾ ತಾವು ಬಂಧಿಸಲ್ಪಟ್ಟು ಸೆರೆಮನೆ ಸೇರುವ ಸಾಧ್ಯತೆ ಇರುವುದರಿಂದ ಮತ್ತೆ ಆಶ್ರಮಕ್ಕೆ ಬರುವುದು ಬಹುತಡವಾಗಬಹುದು ಅಥವಾ ಬರದೇ ಇರಬಹುದೆಂದು ಹೇಳಿ ಎಲ್ಲಕ್ಕೂ ಸಿದ್ಧವಾಗಿರಬೇಕೆಂದು ಸೂಚಿಸಿದರು. ತದನಂತರ ಸಹ ಪಾದಯಾತ್ರಿಗಳನ್ನು ಸೇರಿಸಿದರು. ಅವರಲ್ಲಿ ೩೧ ಜನ ಗುಜರಾತ್‌ನವರಾದರೆ, ೧೧ ಜನ ಮಹಾರಾಷ್ಟ್ರದವರಾಗಿದ್ದರು, ಮಿಕ್ಕವರು ಸಂಯುಕ್ತ ಪ್ರಾಂತ್ಯ, ಪಂಜಾಬ್, ಸಿಂಧ್, ಬಂಗಾಳ, ಕೇರಳ ತಮಿಳ್ನಾಡು ಮತ್ತು ಕರ್ನಾಟಕಕ್ಕೆ ಸೇರಿದವರಾಗಿದ್ದರು. ಇವರಲ್ಲಿ ದ.ಆಫ್ರಿಕಾದಿಂದ ಬಂದಿದ್ದ ಗಾಂಧಿಯವರ ಎರಡನೆಯ ಮಗ ಮಣಿಲಾಲ ಮತ್ತು ಹಿರಿಯ ಮಗ ಹರಿಲಾಲನ ಇಪ್ಪತ್ತು ವರ್ಷದ ಮಗ ಕಾಂತಿ ಮತ್ತು ಕರ್ನಾಟಕದ ೧೯ ವರ್ಷ ವಯಸ್ಸಿನ ಮೈಲಾರ ಮಹದೇವ ಅವರೂ ಸೇರಿದ್ದರು. ಮಹದೇವ ದೇಸಾಯಿ ಆಶ್ರಮದ ಜವಾಬ್ದಾರಿಗಳನ್ನು ನೋಡಿಕೊಳ್ಳಲು ಅಲ್ಲಿಯೇ ಉಳಿದರೆ, ಯಾತ್ರೆಯ ಸಂದರ್ಭದಲ್ಲಿ ಅವರ ಜವಾಬ್ದಾರಿಗಳನ್ನು (ಗಾಂಧಿಯವರ ಪತ್ರ ವ್ಯವಹಾರ, ಪತ್ರಿಕಾ ಹೇಳಿಕೆ ಮತ್ತು ಲೇಖನಗಳ ಇಂಗ್ಲಿಷ್ ಅನುವಾದ ಇತ್ಯಾದಿಗಳಿಗಾಗಿ) ವಾಲ್ಜಿ ದೇಸಾಯಿ ಹೊರಟಿದ್ದರು. ೬೧ ವರ್ಷದ ಗಾಂಧಿ ಬಿಟ್ಟರೆ, ೩೫ ವರ್ಷದ ಇವರೇ ಯಾತ್ರಿಗಳಲ್ಲಿ ಹಿರಿಯರು. ಇವರ ಜೊತೆಗೆ ಆಶ್ರಮದ ಸಂಗೀತ ಉಪಾಧ್ಯಾಯ ನಾರಾಯಣ ಖರೆಯವರೂ ತಂಬೂರಿ ಹಿಡಿದು ಹೊರಟರು. ಎಲ್ಲ ಯಾತ್ರಿಗಳೂ ಖಾದಿ ತೊಟ್ಟಿದ್ದರು. ಗಾಂಧಿಯವರ ತಲೆಯ ಹೊರತಾಗಿ ಎಲ್ಲರ ತಲೆಗಳನ್ನೂ ಗಾಂಧಿ ಟೋಪಿ ಅಲಂಕರಿಸಿತ್ತು. ಹಾಗೇ ಪ್ರತಿಯೊಬ್ಬರ ಹೆಗಲಿನಲ್ಲೂ ಯಾತ್ರೆಯ ಸಮಯಕ್ಕೆ ಅಗತ್ಯವಾದ ವಸ್ತುಗಳಿದ್ದವು. ಒಂದು ತೆಳು ಹಾಸಿಗೆ ಸುರುಳಿ, ಒಂದು ಜೊತೆ ಬದಲಿ ಬಟ್ಟೆಗಳು, ನೂಲಲು ಒಂದು ತಕಲಿ, ದಿನಚರಿಯ ಒಂದು ಪುಟ್ಟ ಪುಸ್ತಕ, ಒಂದು ಸೀಸದ ಕಡ್ಡಿ, ಒಂದು ನೀರಿನ ಲೋಟ ಇವುಗಳಲ್ಲಿ ಸೇರಿದ್ದವು. ಗಾಂಧಿಯವರ ಸೊಂಟದಲ್ಲಿ ಮಾತ್ರ ಪುಟ್ಟ ಗಡಿಯಾರ ನೇತಾಡುತ್ತಿತ್ತು.

ಯಾತ್ರೆಯ ಆರಂಭ–ಹಿಂಬಾಲಿಸಿದ ಜನಸ್ತೋಮ

ಬೆಳಗ್ಗೆ ಸರಿಯಾಗಿ ಆರೂವರೆಗೆ ಪಾದಯಾತ್ರೆ ಹೊರಟಿತು. ಕಸ್ತೂರಬಾ, ಗಾಂಧಿಯ ಹಣೆಗೆ ತಿಲಕವಿಟ್ಟು ಕುತ್ತಿಗೆಗೆ ಖಾದಿ ನೂಲಿನ ಹಾರ ತೊಡಿಸಿದರು. ಆಶ್ರಮದ ತರುಣಿಯರು ಮಿಕ್ಕವರ ಹಣೆಗಳಿಗೆ ತಿಲಕವಿಟ್ಟು ನೂಲಿನ ಹಾರ ಹಾಕಿದರು. ಕಾಕಾ ಕಾಲೇಲ್ಕರರು ಗಾಂಧಿಯವರ ಕೈಗೆ ಒಂದು ಬಿದಿರ ಊರುಗೋಲು ನೀಡಿದರು. ಯಾತ್ರೆ ಆಶ್ರಮದಿಂದ ಎಡಕ್ಕೆ ತಿರುಗಿ ತಳಿರು ತೋರಣಗಳಿಂದ ಸಿಂಗರಿಸಲ್ಪಟ್ಟಿದ್ದ ರಸ್ತೆಯ ಇಕ್ಕೆಲಗಳಲ್ಲೂ ಕಿಕ್ಕಿರಿದು ನಿಂತಿದ್ದ ಜನಸ್ತೋಮದ 'ಮಹಾತ್ಮ ಗಾಂಧಿ ಕಿ ಜೈ', 'ವಂದೇ ಮಾತರಂ' ಘೋಷಗಳ ನಡುವೆ ಬಿರಬಿರನೆ ಹೆಜ್ಜೆಗಳನ್ನು ಹಾಕುತ್ತಾ ನಡೆಯಿತು. ಗಾಂಧಿ ನಡೆಯುತ್ತಿದ್ದಾರೋ ಓಡುತ್ತಿದ್ದಾರೋ ಎಂಬುದು ತಿಳಿಯದಂತಹ ವೇಗದಲ್ಲಿ ಮುಂದೆ ಸಾಗಿದ್ದರು. ತಂಡದ ಜೊತೆ ಸ್ವಲ್ಪ ದೂರದವರೆಗೆ ಸಾವಿರಾರು ಜನರೂ ನಡೆದು

ಪಾದಯಾತ್ರಿಗಳಲ್ಲಿ ಹುರುಪು ತುಂಬಿದರು.

ಮೊದಲ ದಿನ ಅಸಾಲಿ ಮತ್ತು ಎರಡನೆಯ ದಿನ ಬವೇಜಾ ಎಂಬ ಹಳ್ಳಿಗಳಲ್ಲಿ ತಂಗಿದ ತಂಡ ಮೂರನೆಯ ದಿವಸ ಗಾಂಧಿಯವರಿಗೆ ಉಂಟಾದ ಕಾಲು ನೋವಿನಿಂದ ಸ್ವಲ್ಪ ವಿಶ್ರಮಿಸಿ ಹೊರಟು ಐದನೇ ದಿನದ ತಂಗುದಾಣ ದಭಾನ್ ತಲುಪಿದಾಗ, ಯಾತ್ರೆ ೩೭ ಮೈಲಿಗಳನ್ನು ಸವೆಸಿತ್ತು. ಆ ಹಳ್ಳಿಯ ಮಂದಿರದ ಮಾರ್ಗವಾಗಿ ಅಸ್ಪೃಶ್ಯರ ಕೇರಿಯತ್ತ ಕಾಲು ಹಾಕಿದ ಗಾಂಧಿ, ಅಲ್ಲಿನ ಬಾವಿಯಿಂದ ಸ್ವತಃ ತಾವೇ ನೀರು ಸೇದಿಕೊಂಡು ಸ್ನಾನ ಮಾಡಿ, ಸವರ್ಣೀಯರ ಬಾವಿಯ ಬಳಿ ಗಾಂಧಿಯವರಿಗೆ ನೀರು ಸೇದಿಕೊಡಲು ಆಳೊಬ್ಬನನ್ನು ನೇಮಿಸಿದ್ದ, ಸವರ್ಣೀಯರಿಂದ ತುಂಬಿದ್ದ ಸ್ವಾಗತ ಸಮಿತಿಯ ಸದಸ್ಯರಿಗೆ ಮುಜುಗರ ಉಂಟು ಮಾಡಿದರು. ಯಾತ್ರೆ ಸಮುದ್ರ ದಿಕ್ಕಿನತ್ತ ತಿರುಗಿದಾಗ ಗಾಂಧಿ ಹೆಚ್ಚು ಹುರುಪುಗೊಂಡರು. ಜೊತೆಗೆ ಪ್ರತಿ ಊರಿನಲ್ಲೂ ಸ್ವಾಗತಕ್ಕಾಗಿ ಸೇರುತ್ತಿದ್ದ ನೂರಾರು, ಸಾವಿರಾರು ಜನರ ಜನಸ್ತೋಮ ತಂಡದ ಉತ್ಸಾಹವನ್ನು ಹೆಚ್ಚಿಸುತ್ತಿತ್ತು. ನಡಿಯಾಡ್‌ನಲ್ಲಿ ಗಾಂಧಿ ಮಾತನ್ನು ಕೇಳಲು ಸೇರಿದ್ದ ಜನರ ಸಂಖ್ಯೆ ೪೫ ಸಾವಿರವನ್ನೂ ಮೀರಿತ್ತೆಂದು ಪತ್ರಿಕೆಗಳು ಅಂದಾಜು ಮಾಡಿದ್ದವು. ಜಾಥಾದ ಜೊತೆಯಲ್ಲೇ ದೇಶೀ, ವಿದೇಶೀ ಪತ್ರಕರ್ತರ ತಂಡವೂ ಕೆಲವೊಮ್ಮೆ ವಾಹನಗಳಲ್ಲಿ, ಕೆಲವೊಮ್ಮೆ ನಡಿಗೆಗಳಲ್ಲೇ ಸಾಗಿತ್ತು.

ನೆಹರೂ–ಕಮಲಾದೇವಿ ಆಗಮನ

ಗಾಂಧಿ ಪ್ರತಿ ಊರಿನಲ್ಲೂ ಸ್ವಾಗತ ತಂಡದಲ್ಲಿ ಅಸ್ಪೃಶ್ಯರನ್ನು ಸೇರಿಸಿಕೊಳ್ಳಲಾಗಿದೆಯೇ ಎಂದು ಕೇಳಿ, ಇಲ್ಲವೆಂದರೆ ಸೇರಿಸಿಕೊಳ್ಳಲು ಆಗ್ರಹಿಸುತ್ತಿದ್ದರು. ಪ್ರತಿ ಊರಿನಲ್ಲಿ ಚರಕ ಎಷ್ಟಿವೆ, ಖಾದಿ ಹಾಕುವವರ ಪ್ರಮಾಣವೆಷ್ಟೆಂದು ಕೇಳಿ ಅದರ ಪ್ರಚಾರ ಮಾಡುತ್ತಿದ್ದರು. ಹಲವು ಊರುಗಳಲ್ಲಿ ಊರ ಪ್ರಮುಖರು ಗುಂಪಾಗಿ ಬಂದು ಸರ್ಕಾರಿ ನೌಕರಿಗೆ ರಾಜೀನಾಮೆ ಘೋಷಿಸುತ್ತಿದ್ದರು. ಕೆಲವೆಡೆ ಅಸ್ಪೃಶ್ಯ ಕುಟುಂಬಗಳು ಬಂದು ಮದ್ಯಪಾನ ತ್ಯಜಿಸುವುದಾಗಿ ಪ್ರಮಾಣ ಮಾಡಿದವು.

ದಂಡಿಯೆಡೆಗಿನ ಯಾತ್ರೆ, ನಂತರ ಆಣಂದ್, ರಾಸ್‌ಗಳನ್ನು ಮುಟ್ಟಿ ಮಹಿ ನದಿಯನ್ನು ದೋಣಿಯಲ್ಲಿ ದಾಟಿ ಭರೂಚ್ ಜಿಲ್ಲೆಯನ್ನು ಪ್ರವೇಶಿಸಿತು. ಅಂದು ಮಾರ್ಚ್ ೧೯, ಜವಾಹರಲಾಲ್ ನೆಹರೂ ಕಾರಿನಲ್ಲಿ ಬಂದು ಗಾಂಧಿಯವರನ್ನು ಮಾತನಾಡಿಸಿಕೊಂಡು, ಅವರ ಪತ್ರ ಮತ್ತು ಲೇಖನಗಳನ್ನು ಹೊತ್ತು ಅಹಮದಾಬಾದ್ ಕಡೆಗೆ ಪ್ರಯಾಣ ಮಾಡಿದರು. ಯಾತ್ರೆ ೨೩ರಂದು ಅಮೋದ್ ಎಂಬ ದೊಡ್ಡ ಊರೊಂದನ್ನು ತಲುಪಿದಾಗ, ಕಮಲಾದೇವಿ ಚಟ್ಟೋಪಾಧ್ಯಾಯ ಮತ್ತು ಯೂಸುಫ್ ಮೆಹ್ರೋಲಿ ಎಂಬ ಇಬ್ಬರು ಸಮಾಜವಾದಿ ಒಲವಿನ ಯುವತಿ–ಯುವಕರು ಗಾಂಧಿಯನ್ನು ಭೇಟಿ ಮಾಡಲು ಬಂದರು. ಕನ್ನಡತಿ ಕಮಲಾದೇವಿ ಚಳುವಳಿಯಲ್ಲಿ ಮಹಿಳೆಯರಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕೆಂದು ಆಗ್ರಹಿಸಿದಾಗ, ಗಾಂಧಿ ಅವರಿಗೆ ಸ್ವಲ್ಪ ಸಂಯಮದಿಂದ ಕಾದರೆ ಎಲ್ಲ ಸಾಧ್ಯವಾಗುವುದು ಎಂದು ತಿಳಿಸಿದರು. ಕಾರ್ಮಿಕ ಸಂಘಟನೆಯಲ್ಲಿ ತೊಡಗಿದ್ದ ಮೆಹ್ರೋಲಿ, ಮುಸ್ಲಿಮರನ್ನು ಮತೀಯ ನಾಯಕರ

ಪ್ರಭಾವದಿಂದ ತಪ್ಪಿಸಿ ಚಳುವಳಿಗೆ ತರುವ ಬಗೆಯ ಬಗ್ಗೆ ಕೇಳಿದಾಗ, ಅವರು ಉಪ್ಪಿನ ಪ್ರಶ್ನೆ ಎಲ್ಲರದಾಗಿದ್ದು ಅದರಲ್ಲಿ ಮುಸ್ಲಿಮರು ಭಾಗವಹಿಸುವಂತೆ ಕಾಂಗ್ರೆಸ್ಸಿಗರು ಪ್ರೇರೇಪಿಸಬೇಕು ಎಂದು ಸೂಚಿಸಿದರು. ಈ ಸಂದರ್ಭದಲ್ಲಿ ಮುಸ್ಲಿಮರ ಪ್ರಸ್ತಾಪ ಬರಲು ಒಂದು ಕಾರಣವೂ ಇತ್ತು. ಗಾಂಧಿಯ ಹಳೆಯ ಮುಸ್ಲಿಂ ಗೆಳೆಯ ಜೋಡಿಯಾಗಿದ್ದ ಅಲಿ ಸೋದರರು ಉಪ್ಪಿನ ಸತ್ಯಾಗ್ರಹವನ್ನು ಮುಸ್ಲಿಮರೊಂದಿಗೆ ಸಮಾಲೋಚಿಸದೆ ಆರಂಭಿಸಿರುವ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದರಲ್ಲದೆ, ಗಾಂಧಿ ಈಗ ಹಿಂದೂ ಮಹಾಸಭಾದ ಪ್ರಭಾವಕ್ಕೆ ಸಿಕ್ಕಿದ್ದಾರೆಂದು ಆರೋಪಿಸಿ ಉಪ್ಪಿನ ಸತ್ಯಾಗ್ರಹದಲ್ಲಿ ಮುಸ್ಲಿಮರಾರೂ ಭಾಗವಹಿಸದಂತೆ ಕರೆ ಕೊಟ್ಟಿದ್ದರು. ಇದರ ಪರಿಣಾಮವೋ ಎಂಬಂತೆ ಗುಜರಾತ್‌ನ ಹೊರಗೆ ಈ ಸತ್ಯಾಗ್ರಹಕ್ಕೆ ಮುಸ್ಲಿಮರ ಸ್ಪಂದನ ತುಂಬ ನಗಣ್ಯವಾಗಿತ್ತು.

ವೈಸ್‌ರಾಯ್‌ಗೆ ತಪ್ಪು ಮಾಹಿತಿ–ಕಸ್ತೂರಬಾರ ಭೇಟಿ

ಆದರೆ ದೇಶದಾದ್ಯಂತ ಪತ್ರಿಕೆಗಳ ತುಂಬ ಈ ಗಾಂಧಿ ಯಾತ್ರೆಯ ಸುದ್ದಿಯೇ ವಿಜೃಂಭಿಸಿ ಜನರ ಆಸಕ್ತಿ–ಕುತೂಹಲಗಳನ್ನು ಕೆರಳಿಸಿತ್ತು. ಮಾರ್ಚ್ ೨೧ರಂದು ಅಹಮದಾಬಾದ್‌ನಲ್ಲಿ ಸಭೆ ಸೇರಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ, ಈ ಯಾತ್ರೆಗೆ ಸಿಕ್ಕ ಜನಸ್ಪಂದನದಿಂದ ಚಕಿತವಾದಂತೆ, ತನ್ನೆಲ್ಲ ಪ್ರಾಂತೀಯ ನಾಯಕರು ಮತ್ತು ಕಾರ್ಯಕರ್ತರಿಗೆ ತಂತಮ್ಮ ಊರುಗಳಲ್ಲಿ ಕಾಯಿದೆ ಭಂಗ ಚಳುವಳಿ ಆರಂಭಿಸಲು ಕರೆ ನೀಡಿತು. ಆದರೆ ಸರ್ಕಾರದ ಪರವಾಗಿದ್ದ ಕೆಲ ಇಂಗ್ಲಿಷ್ ಪತ್ರಿಕೆಗಳು ಗಾಂಧಿ ಯಾತ್ರೆ ಸೋಲುತ್ತಿದೆ, ಹತಾಶೆ ಚಹರೆಗಳು ಕಾಣತೊಡಗಿವೆ, ಜನರ ನಿರಾಸಕ್ತಿ ಹೆಚ್ಚುತ್ತಿದೆ ಎಂದು ವರದಿ ಮಾಡಿ ಸರ್ಕಾರ ಯಾತ್ರೆಯ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳದಂತೆ ನೋಡಿಕೊಂಡವು. ಆದರೂ, ಯಾತ್ರೆಗೆ ಹತ್ತಿರದಲ್ಲಿದ್ದು ಪರಿಸ್ಥಿತಿಯನ್ನು ಗಮನಿಸುತ್ತಿದ್ದ ಬಾಂಬೆ ಗವರ್ನರ್ ಸೈಕಸ್, ಗಾಂಧಿಯ ಆರೋಗ್ಯ ಕೆಡುತ್ತಿದೆ ಎಂಬ ಸುದ್ದಿಯಿಂದ ಆತಂಕಿತನಾಗಿ ಅವರನ್ನು ಬಂಧಿಸಲು ವೈಸ್‌ರಾಯ್‌ರ ಅನುಮತಿ ಕೇಳಿದ. ಆದರೆ ಇರ್ವಿನ್‌ರ ಆಪ್ತ ಮಿತ್ರರಾಗಿದ್ದ ಕೇಂದ್ರ ಶಾಸನ ಸಭೆಯ ಅಧ್ಯಕ್ಷ ವಿಠಲಭಾಯಿ ಪಟೇಲ್ ಮತ್ತು ಅದರ ಪ್ರತಿಷ್ಠಿತ ಸದಸ್ಯರಾದ ಎಸ್.ವಿ. ಶ್ರೀನಿವಾಸ ಶಾಸ್ತ್ರಿ ಈ ಯಾತ್ರೆಯೊಂದು ತಮಾಷೆಯಾಗಿದ್ದು, ಗಾಂಧಿ ಹುತಾತ್ಮರಾಗುವ ಪ್ರಯತ್ನದಲ್ಲಿರುವುದರಿಂದ ಸರ್ಕಾರ ಮಧ್ಯಪ್ರವೇಶಿಸಿ ಅವರಿಗೆ ನೆರವಾಗಬಾರದೆಂದು ಸಲಹೆ ನೀಡಿ ಸರ್ಕಾರ ಗಾಂಧಿಯವರನ್ನು ಬಂಧಿಸದಂತೆ ನೋಡಿಕೊಂಡಿದ್ದರು.

ಆದರೆ ಗಾಂಧಿಗೆ, ಸರ್ಕಾರದ ಈ ನಿರ್ಲಕ್ಷ್ಯ ಆಶ್ಚರ್ಯ ಮತ್ತು ಕುತೂಹಲಗಳನ್ನುಂಟು ಮಾಡಿದ್ದವು. ಅವರ ತಂಡದ ಹದಿನೆಂಟು ಸದಸ್ಯರು ಬಳಲಿ ನೆಲಕಚ್ಚಿದ್ದರು. ಸ್ವತಃ ಗಾಂಧಿಯವರ ರಕ್ತದೊತ್ತಡ ಏರುಪೇರಾಗಿ ಹೃದಯ ಬಡಿತಗಳಲ್ಲಿ ವ್ಯತ್ಯಾಸಗಳು ಕಾಣತೊಡಗಿದ್ದವು. ಮಾರ್ಚ್ ೨೫ರಂದು ಕಸ್ತೂರಬಾ ಅಹಮದಾಬಾದ್‌ನಿಂದ ಬಂದು ಪತಿಯ ಆರೈಕೆ ಮಾಡಿದರು. ಬಳಲಿ ನೆಲಕಚ್ಚಿದ್ದವರನ್ನು ಸಂತೈಸಿದರು. ಗಾಂಧಿ ಈ ಅಪಾರ ಬಳಲಿಕೆಗೆ ಕಾರಣ ಅಶುದ್ಧ ನೀರನ್ನು ಕುಡಿದಿರುವುದು ಮತ್ತು ಪ್ರಾರ್ಥನೆಯಲ್ಲಿ ಮನಸ್ಸಿಟ್ಟು ಭಾಗವಹಿಸದಿರುವುದು

ಎಂದು ಸೂಚಿಸುತ್ತಾ, ಹೆಚ್ಚೆಚ್ಚು ಬಿಸಿ ನೀರು ಕುಡಿದು ದೇವರಲ್ಲಿ ನಂಬಿಕೆ ಇಟ್ಟು, ದಂಡಿಯ ಕಡೆ ಮುಖ ಮಾಡಿ ನಡೆಯಲು ಸಿದ್ಧರಾಗಲು ಹೇಳಿದರು. ಕಸ್ತೂರಬಾ ಅಂದೇ ಅಹಮದಾಬಾದ್‌ಗೆ ಹಿಂದಿರುಗಿದರು.

ಯಾತ್ರೆ ಮುಂದೆ ಕಿಂ ನದಿಯನ್ನು ಮರದ ಸೇತುವೆಯ ಮೇಲೆ ನಡೆದು ದಾಟಿ ಸೂರತ್ ಜಿಲ್ಲೆ ಪ್ರವೇಶಿತು. ಅಂದು ರಾತ್ರಿ ಕಾಡಿನಲ್ಲಿ ಮೊಕ್ಕಾಂ ಹೂಡಿ ಮುಂದೆ ಹಲವು ಹಳ್ಳಿಗಳನ್ನು ದಾಟಿ ಸೂರತ್ ನಗರದತ್ತ ಹೆಜ್ಜೆ ಹಾಕಿತು. ಏಪ್ರಿಲ್ ೧ರಂದು ಸೂರತ್ ನಗರವನ್ನು ತಲುಪಿದ ಗಾಂಧಿ ತಂಡವನ್ನು, ಅಲ್ಲಿ ಭಾರಿ ಜನಸ್ತೋಮ ಕೊಂಬು ಕಹಳೆಗಳೊಂದಿಗೆ ಭವ್ಯ ರೀತಿಯಲ್ಲಿ ಸ್ವಾಗತಿಸಿ ಆತಿಥ್ಯ ನೀಡಿತು. ಅಂದು ಸಂಜೆ ತಾಪಿ ನದಿಯ ಮರಳು ರಾಶಿಯ ಮೇಲೆ ಸೇರಿದ್ದ ಒಂದು ಲಕ್ಷಕ್ಕೂ ಹೆಚ್ಚಿದ್ದ ಜನಸ್ತೋಮ ತಾವಿದ್ದಲ್ಲೇ ಕಾಯ್ದೆ ಮುರಿಯುವಂತೆ ಕರೆಕೊಟ್ಟ ಗಾಂಧಿಯವರ ಭಾಷಣವನ್ನು ಸದ್ದಿಲ್ಲದೆ ಆಲಿಸಿತು. ಆ ಸಭೆಯಲ್ಲಿ ಸುತ್ತಮುತ್ತಲ ೧೭೦ ಹಳ್ಳಿಗಳ ಸರ್ಕಾರಿ ಪ್ರಮುಖರು ತಮ್ಮ ರಾಜೀನಾಮೆ ಪತ್ರಗಳನ್ನು ಗಾಂಧಿಯವರಿಗೆ ಸಲ್ಲಿಸಿದರು. ಅಂದಿನ ಪೊಲೀಸ್ ವರದಿ, 'ಗಾಂಧಿ ದೈಹಿಕವಾಗಿ ಬಳಲಿದ್ದಂತೆ ಕಂಡರೂ ಮಾನಸಿಕವಾಗಿ ಹುರುಪಿನಿಂದಿದ್ದಾರೆ' ಎಂದು ಬಾಂಬೆ ಗವರ್ನರ್‌ಗೆ ವರದಿ ಮಾಡಿತ್ತು.

ನಡಿಗೆಯ ಒಂದು ಕಲಾ ಪ್ರಯೋಗ!

ಸೂರತ್ ಗಡಿ ದಾಟುತ್ತಿದ್ದಂತೆ ಬ್ರಿಟಿಷ್ ಆಡಳಿತ ಪ್ರದೇಶ ಅಂತ್ಯಗೊಂಡು ಗಾಯಕವಾಡರ ಬರೋಡ ಪ್ರಾಂತ್ಯ ಆರಂಭವಾಗಿತ್ತು. ಅಲ್ಲಿನ ಮೊದಲ ಹಳ್ಳಿಯಲ್ಲೇ ಮುಸ್ಲಿಮರು ಗಾಂಧಿಯನ್ನು ಮುತ್ತಿದರು. ಮೌಲ್ವಿಗಳು ಗಾಂಧಿಯ ಬೆನ್ನ ಹಿಂದೆ ನಿಲ್ಲುವ ಪ್ರತಿಜ್ಞೆ ಕೈಗೊಂಡರು. ಮುಂದಿನ ಹಳ್ಳಿಗಳಲ್ಲೂ ಇದೇ ಪುನರಾವರ್ತನೆಯಾಯಿತು. ಗಾಂಧಿ ಏಪ್ರಿಲ್ ೩ರ ಸಂಜೆ ಪಾರ್ಸಿಗಳ ಶ್ರೀಮಂತ ಊರು ನವಸಾರಿಯನ್ನು ತಲುಪಿದಾಗ ಅವರಿಗೆ ಎಲ್ಲಿಲ್ಲದ ಉತ್ಸಾಹ. ಏಕೆಂದರೆ ಲಂಡನ್‌ನಲ್ಲಿನ ಅವರ ಯೌವ್ವನದ ದಿನಗಳಲ್ಲೇ ಅವರಲ್ಲಿ, ಅವರಿಗೆ ಗೊತ್ತಿಲ್ಲದಂತೆಯೇ ಬ್ರಿಟಿಷ್ ಸಾಮ್ರಾಜ್ಯಶಾಹಿ ಶೋಷಣೆ ಕುರಿತ ತಮ್ಮ ಆರ್ಥಿಕ ಅಧ್ಯಯನಗಳ ಮೂಲಕ ಬ್ರಿಟಿಷ್ ವಿರೋಧಿ ಹೋರಾಟದ ಕಿಚ್ಚು ಹೊತ್ತಿಸಿದ್ದ ದಾದಾಭಾಯಿ ನವರೋಜಿಯವರ ಹುಟ್ಟೂರು ಅದು. ಇದು ದಂಡಿಗೆ ಮುನ್ನ ಯಾತ್ರೆಯ ಕೊನೆಯ ತಂಗುದಾಣ. ಗಾಂಧಿ ತಂಡಕ್ಕೆ ಇಲ್ಲಿ ಸಿಕ್ಕಿದ ಸ್ವಾಗತದ ಸಂಭ್ರಮ ಮಿಕ್ಕೆಲ್ಲ ಸ್ವಾಗತಗಳನ್ನೂ ಮೀರಿತ್ತು. ಆದರೆ ಗಾಂಧಿ, ಇನ್ನು ಹತ್ತು ಹನ್ನೆರಡು ಮೈಲಿಗಳ ದೂರವಿದ್ದ ದಂಡಿ ತಲುಪಿ ಒಂದು ಸೂರ್ಯ ಮುಳುಗದ ಸಾಮ್ರಾಜ್ಯವೊಂದನ್ನು ಧಿಕ್ಕರಿಸಿ ನಿಲ್ಲುವ ಐತಿಹಾಸಿಕ ಸಾಹಸದ ಅಂತಿಮ ಕ್ಷಣದ ಕಾತುರತೆಯಲ್ಲಿದ್ದರು.

೪ರಂದು ನವಸಾರಿಯಿಂದ ಹೊರಟ ಗಾಂಧಿ ತಂಡ, ತನ್ನ ಯಾತ್ರೆಯ ಕೊನೆಯ ಪಾದವನ್ನು ಆರಂಭಿಸಿತ್ತು. ನವಸಾರಿ ಪುರಸಭೆ ಆ ಮಣ್ಣಿನ ರಸ್ತೆಯನ್ನು ಈ ಯಾತ್ರೆಗಾಗಿ ಹದಗೊಳಿಸಿ, ತಂಡ ರಸ್ತೆಯಲ್ಲಿ ಹಾದುಹೋಗುವ ಹೊತ್ತಿಗೆ ಸರಿಯಾಗಿ ನೀರು ಹನಿಸಿ ಮಣ್ಣನ್ನೂ ಗಾಳಿಯನ್ನೂ ತಂಪು ಮಾಡಿತ್ತು. ರಾಮಚಂದ್ರ ಗುಹಾ ತಮ್ಮ 'ಮಹಾತ್ಮ' ಪುಸ್ತಕದಲ್ಲಿ ಉಲ್ಲೇಖಿಸಿರುವ, ಈ ಕೊನೆಯ ಪಾದದ ಯಾತ್ರೆಯನ್ನು ಬಾಂಬೆ ಕ್ರಾನಿಕಲ್

ಎಂಬ ಪತ್ರಿಕೆಯಲ್ಲಿ ಪ್ರಕಟವಾದ ಪ್ರತ್ಯಕ್ಷದರ್ಶಿಯೊಬ್ಬನ ಲೇಖನದಿಂದ ಆಯ್ದ ಭಾಗ ಹೀಗಿದೆ: 'ಆಗ ತಾನೆ ಕೆಂಪು ಸೂರ್ಯ ಮೇಲೇಳುತ್ತಿದ್ದ. ಅದರ ಪ್ರಭೆ ಗಾಂಧಿಯ ಮುಖದ ಮೇಲೆ ಬಿದ್ದು ಅವರ ಇಡೀ ಆಕಾರ ಒಂದು ಅಲೌಕಿಕ ಕಳೆ ಪಡೆದಿತ್ತು. ಅವರು ಒಬ್ಬರೇ ಮುಂದೆ ಮುಂದೆ ನಡೆಯುತ್ತಿದ್ದರು. ಅವರ ಕೈಲಿದ್ದ ಕೋಲು ಕೇವಲ ಆಟಿಕೆಯಂತೆ ಅವರ ಕೈಯಲ್ಲಿ ಆಡುತ್ತಿತ್ತು. ಅವರ ಹಿಂದೆ ದೊಡ್ಡ ಜನ ಸಮೂಹವೇ ನಡೆದುಬರುತ್ತಿತ್ತು. ಅವರ ತಂಡ ಅದರಲ್ಲಿ ಲೀನವಾಗಿತ್ತು. ಹಳ್ಳಿ ದಾರಿಯಲ್ಲಿನ ಆ ಗಾಂಧಿ ನಡಿಗೆ ತನ್ನ ಅಂತಿಮ ಗುರಿಯೆಡೆಗೆ ಎಂತಹ ಆವೇಗವನ್ನು ಪಡೆದಿತ್ತು ಎಂದರೆ, ಅವರ ಉಸಿರಿನ ರಭಸ ಆ ವಾತಾವರಣವನ್ನೇ ಜೀವಂತಿಕೆಯಿಂದ ಮಿಡಿಯುವಂತೆ ಮಾಡಿ ಅಲ್ಲೊಂದು ನಡಿಗೆಯ ಕಲಾ ಪ್ರಯೋಗವೇ ನಡೆದಿದೆಯೇನೋ ಎಂಬಂತೆ ಭಾಸವಾಗುತ್ತಾ, ಈ ಮುದುಕ ತಾನೆಂತಹ ಸಹಜ ಕಲಾವಿದ ಎಂಬುದನ್ನು ಸಾಬೀತುಪಡಿಸಿದಂತಿತ್ತು'.

ಸಾಮ್ರಾಜ್ಯವನ್ನು ನಡುಗಿಸಿದ ಒಂದು ಹಿಡಿ ಉಪ್ಪು

ಶಿರಂದು ಗಾಂಧಿ, ದಂಡಿ ಎಂಬ ೨೦೦ ಮೀನುಗಾರ ಕುಟುಂಬಗಳ ಆ ಕುಗ್ರಾಮವನ್ನು ತಲುಪಿದಾಗ ಅದು ದೂರದೂರುಗಳಿಂದ ಬಂದ ಗಾಂಧಿ ಭಕ್ತರಿಂದ ಮತ್ತು ಜಗತ್ತಿನ ವಿವಿಧ ಭಾಗಗಳಿಂದ ಬಂದಿದ್ದ ಪತ್ರಕರ್ತರಿಂದ ತುಂಬಿ ಗಿಜಿಗುಡುತ್ತಿತ್ತು. ಇವರ ಜೊತೆಗೇ ಸರ್ಕಾರದ ಕಡೆಯಿಂದ ನೂರಾರು ಜನ ಪೊಲೀಸರು, ಗುಪ್ತಚರ ದಳದವರು, ಅಧಿಕಾರಿಗಳು, ಹಳ್ಳಿಯಲ್ಲಿ ಜನ ಜಾಗ ಕೊಡದಿದ್ದರಿಂದ ಊರ ಹೊರಗೆ ಗುಡಾರಗಳಲ್ಲಿ ತಂಗಿದ್ದರು. ಅವರು ಮುನ್ನೆಚ್ಚರಿಕೆಯಾಗಿ ಊರಿನ ಆಸುಪಾಸಿನಲ್ಲಿದ್ದ ಎಲ್ಲ ಉಪ್ಪಿನ ಗುಡ್ಡೆಗಳನ್ನೂ ಖಾಲಿ ಮಾಡಿ ದೂರಕ್ಕೆ ಸಾಗಿಸಿದ್ದರು!

ಆ ಊರಿನಲ್ಲಿ ಗಾಂಧಿ ಆತಿಥ್ಯ, ಸಮುದ್ರ ದಂಡೆಯಲ್ಲಿ ಶುದ್ಧ ಗಾಳಿ ಸೇವನೆಗೆಂದು ಒಂದು ಬಂಗಲೆ ಕಟ್ಟಿಸಿಕೊಂಡು ತಂಗಿದ್ದ ನಿಜಾಮುದ್ದೀನ್ ವಾಸಿಯದ್ದು. ಅಲ್ಲಿ ಗಾಂಧಿ ಮೈಗೆಲ್ಲ ಎಣ್ಣೆ ಹಚ್ಚಿಸಿಕೊಂಡು ಸ್ನಾನ ಮಾಡಿ ವಿಶ್ರಾಂತಿ ಪಡೆದರು. ಅಂದೇ ಒಂದು ಪತ್ರಿಕಾ ಹೇಳಿಕೆ ನೀಡಿ ತಮ್ಮ ಯಾತ್ರೆಗೆ ಧಕ್ಕೆ ತರದ ಸರ್ಕಾರದ ಅಹಿಂಸಾತ್ಮಕ ನಡೆಗಾಗಿ ಅದಕ್ಕೆ ವಂದನೆ ಸಲ್ಲಿಸಿದರು. ಹಾಗೇ ಮುಂದಿನ ಮುಂಜಾನೆ ಆರೂವರೆ ಘಂಟೆಗೆ ತಾವು ಉಪ್ಪು ಕಾಯಿದೆಯನ್ನು ಉಲ್ಲಂಘಿಸುವುದಾಗಿ ಪ್ರಕಟಿಸಿದರು. ಆ ಏಪ್ರಿಲ್ ೬, ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡದ ನೆನಪಿನ ರಾಷ್ಟ್ರೀಯ ಸಪ್ತಾಹದ ಆರಂಭದ ದಿನವಾಗಿದ್ದು, ಇದನ್ನು 'ಆತ್ಮವಿಮರ್ಶೆ ಮತ್ತು ಶುದ್ಧೀಕರಣ'ದ ದಿನವನ್ನಾಗಿ ಆಚರಿಸಲಾಗುವುದು ಎಂದೂ ಹೇಳಿದರು.

ಏಪ್ರಿಲ್ ೬ ರ ಬೆಳಿಗ್ಗೆ ಎದ್ದ ಗಾಂಧಿ, ಕಡಲಿನಲ್ಲೇ ಸ್ನಾನ ಮಾಡಿದರು. ನಂತರ ಸರಿಯಾಗಿ ಆರೂವರೆ ಘಂಟೆಗೆ ತೀರದತ್ತ ಬಂದ ಅವರು, ಬೆಳಗಿನ ಸಮುದ್ರದ ಅಲೆಗಳು ತೂರಿ ಹೋಗಿದ್ದ ಉಪ್ಪಿನ ಒಂದು ಗುಪ್ಪೆಯನ್ನು ಹಿಡಿಗೆ ತೆಗೆದುಕೊಂಡು ನೇರವಾಗಿ ನಿಂತು, ಅಲ್ಲಿ ಅದಕ್ಕಾಗಿಯೇ ಕಾಯುತ್ತಿದ್ದ ಸಾವಿರಾರು ಜನರಿಗೆ ಹಿಡಿಯನ್ನು ಮೇಲೆತ್ತಿ ತೋರಿಸಿದರು. ಅಲ್ಲೇ ಇದ್ದ ಸರೋಜಿನಿ ನಾಯ್ಡು ಅವರು 'ಕಾನೂನು ಭಂಗ ಮಾಡಿದ

ಮಹಾತ್ಮನಿಗೆ ಜಯವಾಗಲಿ!' ಎಂಬ ಘೋಷಣೆ ಕೂಗಿದರು. ಜಯಕಾರ ನೆರೆದಿದ್ದ ಜನಸ್ತೋಮದಿಂದ ಪ್ರತಿಧ್ವನಿಸಿತ್ತು. ಛಾಯಾಚಿತ್ರಕಾರರ ಮಿಂಚುಗಳು ಹೊಳೆದು ಮಾಯವಾದವು. ಜಗತ್ತಿನ ಎಲ್ಲ ಭಾಗಗಳಿಗೆ ಈ ಐತಿಹಾಸಿಕ ಕ್ಷಣದ ವಾರ್ತೆ ಪ್ರಸಾರವಾಗತೊಡಗಿತ್ತು. ಅಂದು ದಂಡಿ ಅಂಚೆ ಕಛೇರಿಯಿಂದ, ಸುಮಾರು ಎಂಟು ನೂರು ತಂತಿ ಸಂದೇಶಗಳು ಹೋಗಿದ್ದವು. ಇದಕ್ಕಾಗಿ ಬಾಂಬೆ ಪ್ರಾಂತ್ಯದ ಅಂಚೆ ಮೇಲಧಿಕಾರಿ ವಿಶೇಷ ವ್ಯವಸ್ಥೆ ಮಾಡಿದ್ದರಂತೆ. ಈ ಬಗ್ಗೆ ಸರ್ಕಾರ ಗರಂ ಆಗಿ ಪ್ರಶ್ನಿಸಿದಾಗ ಭಾರತೀಯನಾಗಿದ್ದ (ಬೇವೂರ್ ಎಂಬ ಹೆಸರಿನ ಕನ್ನಡಿಗನೂ ಆಗಿದ್ದ) ಆ ಅಧಿಕಾರಿ, ಇಲಾಖೆ ಇರುವುದೇ ಶುಲ್ಕ ಪಾವತಿಸಿಕೊಂಡು ಜನ ಕೇಳುವ ಸೇವೆ ಒದಗಿಸುವ ಮೂಲಕ ಸರ್ಕಾರದ ಆದಾಯ ಹೆಚ್ಚಿಸಲು ಅಲ್ಲವೇ? ಎಂದು ಉತ್ತರಿಸಿ ಸರ್ಕಾರದ ಬಾಯಿ ಮುಚ್ಚಿಸಿದರಂತೆ!!

ಗಾಂಧಿಯ ಈ ಅಸಹಕಾರ ಸತ್ಯಾಗ್ರಹ ಈವರೆಗೆ ಒಂದೂ ಅಶಾಂತಿಯ ಘಟನೆಗೆ ಕಾರಣವಾಗದೆ ಶಿಸ್ತುಬದ್ಧವಾಗಿ, ಜನರ ಪ್ರೀತಿ ವಿಶ್ವಾಸಗಳ ಮಹಾಪೂರದಲ್ಲಿ ಮಿಂದು ಸಂಪೂರ್ಣ ಯಶಸ್ವಿಯಾಗಿತ್ತು. ಗಾಂಧಿಯ ಆತಂಕ ಅಂತ್ಯಗೊಂಡಿತ್ತು. ಆರು ವರ್ಷಗಳ ರಚನಾತ್ಮಕ ಕಾರ್ಯಕ್ರಮಗಳ ದುಡಿಮೆ ಸಾರ್ಥಕವೆನಿಸಿತ್ತು ಗಾಂಧಿಗೆ. ಆರು ವರ್ಷಗಳ ಕಾಲ ಒಳಗೇ ಗದಗುಡುತ್ತಿದ್ದ ಗಾಂಧಿಯವರನ್ನು ಕುರಿತ ಜನರ ನಿರೀಕ್ಷೆಗಳು ಇಂದು ಹೊರಚಿಮ್ಮಿದಂತೆ ಎಲ್ಲೆಲ್ಲೂ ಹೊಸ ಉತ್ಸಾಹ-ಸಂಭ್ರಮಗಳು. ಈ ೨೪ ದಿನಗಳ ದೀರ್ಘ ಯಾತ್ರೆಯಲ್ಲಿ ಗಾಂಧಿಗೆ ಕಿರಿಕಿರಿ ಉಂಟು ಮಾಡಿದ ಘಟನೆಗಳು ಎರಡೇ ಎರಡು. ಒಂದು, ಅಮೆರಿಕಾದಿಂದ ಬಂದು ಆಶ್ರಮ ಸೇರಿ ಈ ಪಾದಯಾತ್ರಿಗಳ ತಂಡದ ಭಾಗವಾಗಿದ್ದ ಹರಿದಾಸ್ ಮಜುಂದಾರ್ ಎಂಬ ಯುವಕ, ಯಾತ್ರೆಯ ನಿಯಮಗಳನ್ನು ಮೀರಿ ಹಳ್ಳಿಯೊಂದರಲ್ಲಿ ಐಸ್‌ಕ್ರೀಮ್ ತಿಂದದ್ದು. ಇನ್ನೊಂದು, ತಂಡದ ಮುಂದೆ ಭಾರಿ ಪೆಟ್ರೋಮ್ಯಾಕ್ಸ್ ಹೊತ್ತು ನಡೆಯುತ್ತಿದ್ದ ಆಳಿಗೆ ವೇಗವಾಗಿ ನಡೆಯುವಂತೆ ಯಾತ್ರಿಕರೊಬ್ಬರು ಜೋರು ಮಾಡಿ, ಆತನು ಬಹುಕಷ್ಟದಿಂದ ಓಡುವಂತೆ ಮಾಡಿದ್ದು. ಈ ಘಟನೆಗಳ ಬಗ್ಗೆ ಕೇಳಿ ಗಾಂಧಿ ವ್ಯಥೆಪಟ್ಟರು ಮತ್ತು ಸಂಬಂಧಪಟ್ಟವರಿಗೆ ಎಚ್ಚರಿಕೆ ನೀಡಿದರು.

ಹರಡಿದ ಚಳುವಳಿ–ಬೆದರಿದ ಸರ್ಕಾರ

ಗಾಂಧಿ ಕೈಹಾಕಿ ಉಪ್ಪು ಎತ್ತಿದ ಜಾಗದಿಂದ, ನಂತರ ಮತ್ತಷ್ಟು ಉಪ್ಪು ಸಂಗ್ರಹಿಸಿ ಅದನ್ನು ದೇಶದ ಬೇರೆ ಬೇರೆ ಭಾಗಗಳಿಗೆ ಕಳಿಸಿಕೊಡಲಾಯಿತು. ಜೊತೆಗೆ ದಂಡಿಯಲ್ಲಿ ಗಾಂಧಿ ಉಪ್ಪಿಗೆ ಕೈ ಹಾಕಿದ ಸಮಯದಲ್ಲೇ, ದೇಶದ ತೀರ ಪ್ರದೇಶದ ಹಲವೆಡೆ ಜನ ಮುಗಿಬಿದ್ದು ಉಪ್ಪು ತಯಾರಿಕೆ, ಸಂಗ್ರಹ ಮತ್ತು ಮುಕ್ತ ಮಾರಾಟಕ್ಕೆ ತೊಡಗಿದರು. ಕೆಲವೆಡೆ ಉಪ್ಪಿನ ಕೋಠಿಗಳನ್ನು ದೋಚಿ ಪೇಟೆ ಬೀದಿಗಳಲ್ಲಿ ಮಾರುವ ಆಂದೋಲನ ಶುರುವಾಯಿತು. ಸರ್ಕಾರ ಜನರನ್ನು ಹೊಡೆದು ಓಡಿಸಲು ಯತ್ನಿಸಿ ವಿಫಲವಾದ ನಂತರ ಬಂಧಿಸಿ ಸೆರೆಮನೆಗಳಿಗೆ ದೂಡಲು ಆರಂಭಿಸಿತು. ಗಾಂಧಿ ಸತ್ಯಾಗ್ರಹದ ಸಾಧನವಾಗಿ ಉಪ್ಪನ್ನು ಆಯ್ದುಕೊಂಡದ್ದನ್ನು ಮತ್ತು ಅದರ ಕಾನೂನು ಮುರಿಯಲು

ಮೂರು ವಾರಗಳ ಕಾಲ ನೂರಾರು ಮೈಲುಗಳ ಯಾತ್ರೆಯನ್ನು ಆಯೋಜಿಸಿದ್ದರಲ್ಲಿ ತೋರಿದ ಕಲ್ಪನಾಶೀಲತೆಯನ್ನು ಜಗತ್ತಿನಾದ್ಯಂತ ಮಾಧ್ಯಮಗಳು ಅನುಪಮವೆಂದು ಹೊಗಳಿದವು. ಆರಂಭದಲ್ಲಿ ಇದೊಂದು ಹುಡುಗಾಟಿಕೆ ಎಂದು ವರ್ಣಿಸಿದ್ದ ಕಾಂಗ್ರೆಸ್ ನಾಯಕರೀಗ ಇದರ ಪರಿಣಾಮಗಳನ್ನು ನೋಡಿ ಬೆಕ್ಕಸಬೆರಗಾಗಿದ್ದರು. ಸುಭಾಷ್‌ಚಂದ್ರ ಬೋಸ್ ಅವರು ದಂಡಿಯಾತ್ರೆಯನ್ನು 'ಎಲ್ಬಾದಿಂದ ಪ್ಯಾರಿಸ್‌ಗೆ ನಡೆಸಿದ ವಿಜಯ ಯಾತ್ರೆ'ಗೆ ಹೋಲಿಸಿದರು. ಮದನಮೋಹನ ಮಾಳವೀಯರು ದೆಹಲಿಯಲ್ಲಿ ವಿಜಯೋತ್ಸವ ಸಭೆಯಲ್ಲಿ ಮಾತನಾಡಿದ ನಂತರ ಕಾನೂನು ಮೀರಿ ಮಾರಾಟವಾಗುತ್ತಿದ್ದ ಉಪ್ಪನ್ನು ಕೊಂಡರು.

ಪ್ರಾಂತೀಯ ಕಾಂಗ್ರೆಸ್ ಕಛೇರಿಗಳು ಉಪ್ಪು ತಯಾರಿಕಾ ಮತ್ತು ಮಾರಾಟ ಕೇಂದ್ರಗಳಾಗಿ ಪರಿವರ್ತಿತವಾಗಿದ್ದವು. ಹಾಗಾಗಿ ಪೊಲೀಸರು ಈ ಕಛೇರಿಗಳ ಮೇಲೇ ದಾಳಿ ಮಾಡಲಾರಂಭಿಸಿದರು. ಬಾಂಬೆ ಕಾಂಗ್ರೆಸ್ ಕಛೇರಿ ಮುಂದೆ ಅರವತ್ತು ಸಾವಿರ ಜನ ಸೇರಿದ್ದರು. ಅವರೆಲ್ಲರನ್ನೂ ಬಂಧಿಸಲಾಗದ ಸರ್ಕಾರ, ಸಾಲು ಸಾಲು ಜನರಿಗೆ ಕೈಗಳಿಗೆ ಹಗ್ಗ ಕಟ್ಟಿ ಬಂಧಿಸಿ ಎಳೆದುಕೊಂಡು ಹೋದರು. ಜನ ಪ್ರತಿರೋಧಿಸದೆ ಸೆರೆಮನೆಗೆ ಹೋಗಲಾರಂಭಿಸಿದರು. ಗಾಂಧಿ ತಾವು ಎತ್ತಿದ್ದ ಉಪ್ಪಿನ ಒಂದು ಭಾಗವನ್ನು ವಾಹನದ ಮೂಲಕ ಸಬರ್ಮತಿ ಆಶ್ರಮಕ್ಕೆ ಕಳಿಸಿದ್ದರು. ಅದನ್ನು ಮಹದೇವ ದೇಸಾಯಿ ಅವರು ಭಾಗ ಮಾಡಿ ಹಲವೆಡೆಗೆ ಮಾರಾಟಕ್ಕೆ ಕಳಿಸಿದ್ದರು. ಕಾಂಗ್ರೆಸ್ಸಿಗರು ಅದನ್ನು ದೇಣಿಗೆ ಪಡೆದು ಜನರಿಗೆ ಹಂಚಿದರು. ಅಹಮದಾಬಾದ್‌ನಲ್ಲಿ ಒಂದು ಉಪ್ಪಿನ ಹರಳನ್ನು ಹರಾಜಿಗೆ ಹಾಕಿದಾಗ ಡಾ. ಕನುಗ ಎಂಬುವವರು ಅದನ್ನು ಸಾವಿರದ ಆರು ನೂರು ರೂಪಾಯಿಗಳಿಗೆ ಕೂಗಿ ಕೊಂಡರು. ಜವಾಹರಲಾಲ್‌ಗೆ ಉಪ್ಪಿನ ಪೊಟ್ಟಣವೊಂದನ್ನು ಕಳಿಸಿದ ಮಹದೇವ ದೇಸಾಯಿ ಅದನ್ನು ಸಾವಿರ ರೂ.ಗಿಂತ ಕಡಿಮೆ ಇಲ್ಲದೆ ಮಾರಲು ಸೂಚಿಸಿದ್ದರು. ರಾಜಗೋಪಾಲಾಚಾರಿ ವೇದಾರಣ್ಯಂ ಎಂಬಲ್ಲಿ ಉಪ್ಪು ಸಂಗ್ರಹಿಸಿ ಪ್ರತಿಭಟನೆ ದಾಖಲಿಸಿದರು. ಕಮಲಾದೇವಿಯವರು ಬಾಂಬೆ ಷೇರುಪೇಟೆ ಕಛೇರಿಗೆ ಬಂದು ಅಲ್ಲಿ ತಾವು ಸಂಗ್ರಹಿಸಿದ್ದ ಉಪ್ಪನ್ನು ಹರಾಜಿಗೆ ಹಾಕಿದರು. ಜನ ಮುಗಿಬಿದ್ದು ಕೊಂಡರು. ಅಂದು ಕಮಲಾದೇವಿ ಸಂಗ್ರಹಿಸಿದ ಹಣ ನಾಲ್ಕು ಸಾವಿರ ರೂಪಾಯಿಗಳು! ಕರಾಚಿ, ರಾವಲ್ಪಿಂಡಿಗಳಲ್ಲೂ ಉಪ್ಪಿನ ಕಾಯಿದೆ ಭಂಗ ಚಳುವಳಿ ನಡೆದು, ಜನರ ಮೇಲೆ ಪೊಲೀಸರು ಗುಂಡು ಹಾರಿಸಿದರು. ಏಳು ಜನ ಚಳುವಳಿಕಾರರು ಸತ್ತು ನೂರಾರು ಜನ ಗಾಯಗೊಂಡರು. ಆದರೆ ಪೇಷಾವರ್‌ನಲ್ಲಿ ಅರೆಸೇನಾ ಪಡೆ, ಖಾನ್ ಅಬ್ದುಲ್ ಗಫಾರ್ ಖಾನ್‌ರ 'ಖುದಾಯಿ ಖಿದ್ಮತ್‌ಗಾರ್' ಕಾರ್ಯಕರ್ತರ ಮೇಲೆ ಗುಂಡು ಹಾರಿಸಲು ನಿರಾಕರಿಸಿ ಇತಿಹಾಸ ನಿರ್ಮಿಸಿದರು. ಬಿಹಾರದಲ್ಲಿ ರಾಜೇಂದ್ರ ಪ್ರಸಾದರ ನೇತೃತ್ವದಲ್ಲಿ ಕಾನೂನು ಭಂಗ ಚಳುವಳಿ ನಡೆದು ನೂರಾರು ಜನ ಸೆರೆಮನೆ ಸೇರಿದರು. ಆದರೆ ಬಂಗಾಳದ ಚಿತ್ತಗಾಂಗ್‌ನಲ್ಲಿ ಕೆಲವು ಕ್ರಾಂತಿಕಾರಿಗಳು, ಸರ್ಕಾರಿ ಶಸ್ತ್ರಾಗಾರದ ಮೇಲೆ ದಾಳಿ ಮಾಡಿ ಚಳುವಳಿಯ ಅಹಿಂಸಾತ್ಮಕತೆಗೆ ಚ್ಯುತಿ ತಂದ ಘಟನೆಯೂ ನಡೆಯಿತು. ಬಂಗಾಳಿ ಯುವಕರ ಈ ವರ್ತನೆಯ ಬಗ್ಗೆ ಗಾಂಧಿ ತಮ್ಮ ತೀವ್ರ ಖೇದವನ್ನು ಪ್ರಕಟಿಸಿದರು.

ಕರ್ನಾಟಕದ ಕರಾವಳಿಯುದ್ದಕ್ಕೂ, ಅಂಕೋಲಾ, ಕುಮುಟಾ, ಕುಂದಾಪುರ, ಮಂಗಳೂರು, ಪುತ್ತೂರು ಹೀಗೆ ಅನೇಕ ಊರುಗಳಲ್ಲಿ ಉಪ್ಪಿನ ತೆರಿಗೆಭಂಗ ಚಳುವಳಿ ನಡೆಯಿತು. ಅಂಕೋಲಾದಲ್ಲಿ ಎಂ.ಪಿ. ನಾಡಕರ್ಣಿ ಅವರ ನೇತೃತ್ವದಲ್ಲಿ ನಡೆದ ಚಳುವಳಿಯಲ್ಲಿ ೪೦ ಸಾವಿರ ಜನ ಭಾಗವಹಿಸಿದ್ದು, ೧೫೦೦ ಜನ ದಸ್ತಗಿರಿ ಆದರು.

ಖೇಡಾದಲ್ಲಿ ಕರ ನಿರಾಕರಣೆ–ವಿಚಲಿತರಾದ ಜಿನ್ನಾ

ಉಪ್ಪಿನ ಸತ್ಯಾಗ್ರಹದ ಜೊತೆಗೇ ಖೇಡಾ ಜಿಲ್ಲೆಯ ನೂರಾರು ಹಳ್ಳಿಗಳ ರೈತರು ಕರ ನಿರಾಕರಣೆಯ ಚಳುವಳಿಯನ್ನೂ ಆರಂಭಿಸಿದ್ದರು. ಗಾಂಧಿ ದಂಡಿ ಯಾತ್ರೆಯಲ್ಲಿ ಹಾದು ಹೋಗಿದ್ದ ರಾಸ್ ಗ್ರಾಮದ ರೈತ ಸಮೂಹ ವಲ್ಲಭಭಾಯಿ ಪಟೇಲರ ಬಂಧನಕ್ಕೆ ತಮ್ಮ ದುಡುಕಿನ ವರ್ತನೆಯೇ ಕಾರಣವೆಂದು ಭಾವಿಸಿ, ಅದಕ್ಕೆ ಪ್ರಾಯಶ್ಚಿತ್ತವಾಗಿ ಸರ್ಕಾರಕ್ಕೆ ಭೂ ಕಂದಾಯ ಪಾವತಿ ಮಾಡುವುದಿಲ್ಲವೆಂದು ಗಾಂಧಿಯವರಿಗೆ ಮಾತುಕೊಟ್ಟಿದ್ದರು. ಅದಕ್ಕನುಸಾರವಾಗಿ ಅವರು ರವಿಶಂಕರ್ ವ್ಯಾಸ್‌ರ ನೇತೃತ್ವದಲ್ಲಿ ಸುತ್ತಮುತ್ತಲ ಹಳ್ಳಿಗಳ ರೈತರನ್ನು ಸಂಘಟಿಸಿ ಕರ ನಿರಾಕರಣೆ ಆಂದೋಲನ ನಡೆಸಿದ್ದರು. ಇದರ ವಿರುದ್ಧ ಸರ್ಕಾರ ಕೈಗೊಂಡ ಕಠಿಣ ಕ್ರಮಗಳ ಫಲವಾಗಿ ಹಲವು ರೈತರು ತಮ್ಮ ಜಮೀನುಗಳನ್ನು ಕಳೆದುಕೊಂಡರು. ಇದರ ಪರಿಣಾಮವಾಗಿ ಸಾವಿರಾರು ರೈತರು ಜೀವನೋಪಾಯಗಳಿಗಾಗಿ ತಮ್ಮ ಊರುಗಳನ್ನು ತೊರೆದು ನೆರೆಯ ಬರೋಡಾ ಸಂಸ್ಥಾನದ ಹಳ್ಳಿಗಳಿಗೆ ಗುಳೆ ಹೋಗಬೇಕಾಯಿತು.

ಇದೇ ಹೊತ್ತಿನಲ್ಲಿ ಮಹಮ್ಮದಾಲಿ ಜಿನ್ನಾ ಈ ಸತ್ಯಾಗ್ರಹದ ಪರಿಣಾಮಗಳಿಂದ ವಿಚಲಿತರಾದಂತೆ ವೈಸ್‌ರಾಯ್‌ಗೆ ಪತ್ರವೊಂದನ್ನು ಬರೆದು, ಸದ್ಯದ ಕಣ್ಣು ಕುಕ್ಕುವ ವಿದ್ಯಮಾನಗಳನ್ನೇ ಆಧರಿಸಿ ಸಾಂವಿಧಾನಿಕ ಸುಧಾರಣೆಗಳ ವಿಷಯದಲ್ಲಿ ಸರ್ಕಾರ ಮುಂದುವರೆಯಬಾರದೆಂದೂ, ಇನ್ನೊಂದು ಬದಿಯಿಂದಲೂ ವಿವರಣೆಗಳನ್ನು ಪಡೆದು ಮುಂದಡಿ ಇಡಬೇಕೆಂದು ಕೋರಿದರು. ಗಾಂಧಿ ಹಿಡಿದಿರುವ ದಾರಿಯನ್ನು ಖಂಡಿಸಿ ಹೇಳಿಕೆ ನೀಡುವಂತೆ ವೈಸ್‌ರಾಯ್, ಅವರನ್ನು ಕೇಳಿದಾಗ ಜಿನ್ನಾ, ತಾವು ಎಂದಿನಿಂದಲೂ ಕಾನೂನು ಭಂಗ ಚಳುವಳಿಯ ವಿರೋಧಿಯಾಗಿದ್ದು, ಜನರಲ್ಲಿ ಕಾಂಗ್ರೆಸ್‌ನ ವಿಶ್ವಾಸಾರ್ಹತೆ ಹೆಚ್ಚುತ್ತಿರುವ ಈ ಸಮಯದಲ್ಲಿ ಗಾಂಧಿ ವಿರುದ್ಧ ಹೇಳಿಕೆ ಕೊಡುವುದು ಕಷ್ಟ ಎಂದು ತಿಳಿಸಿದರು.

ಗಾಂಧಿಯ ಬಂಧನ–ಮತ್ತೊಮ್ಮೆ ಯೆರವಾಡಾ ಸೆರೆಮನೆಗೆ

ಸರ್ಕಾರವೀಗ ಕ್ರಮ ಕೈಗೊಳ್ಳಲೇಬೇಕಾಯಿತು. ಉಪ್ಪು ತಯಾರಿಕೆ ಮತ್ತು ಮಾರಾಟದಲ್ಲಿ ತೊಡಗಿದ್ದ ಗಾಂಧಿಯವರ ಮಕ್ಕಳು ರಾಮದಾಸ ಮತ್ತು ದೇವದಾಸ್ ಸೇರಿದಂತೆ ಕಾಂಗ್ರೆಸ್‌ನ ಎಲ್ಲ ನಾಯಕರನ್ನೂ ಸರ್ಕಾರ ಬಂಧಿಸಿತು. ಇವರಲ್ಲಿ ಜವಾಹರಲಾಲ್ ನೆಹರೂ, ರಾಜೇಂದ್ರ ಪ್ರಸಾದ್, ರಾಜಾಜಿ, ಜಮ್ನಾಲಾಲ್ ಬಜಾಜ್, ಮಹದೇವ ದೇಸಾಯಿ ಸೇರಿದ್ದರು. ಗಾಂಧಿಯವರ ಬಂಧನಕ್ಕೆ ವೈಸ್‌ರಾಯ್ ಅನುಮತಿಗಾಗಿ ಬಾಂಬೆ ಸರ್ಕಾರ ಕಾಯುತ್ತಿರುವ ವೇಳೆಯಲ್ಲಿ ಗಾಂಧಿ, ಕಾಯಿದೆ ಭಂಗ ಚಳುವಳಿಗೆ ಜನರನ್ನು ಪ್ರಚೋದಿಸುತ್ತಾ ಕರಾವಳಿ ಹಳ್ಳಿಗಳ ಪ್ರವಾಸ ಕೈಗೊಂಡಿದ್ದರು.

ಜೊತೆಗೆ ಮಹಿಳೆಯರಿಗಾಗಿ, ಹೆಂಡದಂಗಡಿಗಳ ಮುತ್ತಿಗೆಯ ಮದ್ಯಪಾನ ನಿರೋಧ ಚಳುವಳಿಯನ್ನು ರೂಪಿಸಿಕೊಟ್ಟಿದ್ದರು. ಬಡ ಮಹಿಳೆಯರಲ್ಲದೆ ಶ್ರೀಮಂತ ಮನೆಗಳ ಮಹಿಳೆಯರೂ ದೇಶಾದ್ಯಂತ ಈ ಚಳುವಳಿಯಲ್ಲಿ ಭಾಗವಹಿಸತೊಡಗಿದ್ದರು. ಈಗ ಗಾಂಧಿ ಚಳುವಳಿಯನ್ನು ಉತ್ತುಂಗಕ್ಕೆ ಒಯ್ಯುವ ಕ್ರಮವಾಗಿ, ಧರ್ಸಾನಾ ಎಂಬಲ್ಲಿನ ಉಪ್ಪು ತಯಾರಿಕಾ ಮತ್ತು ದಾಸ್ತಾನು ಕೇಂದ್ರವನ್ನು ವಶಪಡಿಸಿಕೊಳ್ಳುವ ಕಾರ್ಯಕ್ರಮವನ್ನು ಪ್ರಕಟಿಸಿದರು. ಇದು ಬ್ರಿಟನ್, ಅಮೆರಿಕ ಸೇರಿದಂತೆ ಜಗತ್ತಿನಾದ್ಯಂತ ದೊಡ್ಡ ಸುದ್ದಿಯಾಯಿತು. ಇದೀಗ ವೈಸ್‌ರಾಯ್, ಗಾಂಧಿ ಮಿತಿ ಮೀರಿ ಹೋಗುತ್ತಿದ್ದಾರೆಂದು ತೀರ್ಮಾನಿಸಿ ಅವರ ಬಂಧನಕ್ಕೆ ಆದೇಶ ಹೊರಡಿಸಿದರು. ಗಾಂಧಿ ತಮ್ಮ ತೀರ್ಮಾನದ ಬಗ್ಗೆ ವೈಸ್‌ರಾಯ್‌ಗೆ ಬರೆದ ಪತ್ರ ಅವರನ್ನು ಮುಟ್ಟುವ ಮೊದಲೇ ಗಾಂಧಿ ಬಳಿಗೆ ಪೊಲೀಸರು ಬಂದಿದ್ದರು.

ಅದು ಮೇ ೪ರ ಮಧ್ಯರಾತ್ರಿ. ಕರಾಡ್ ಎಂಬ ಕರಾವಳಿ ಗ್ರಾಮದ ಮಾವಿನ ತೋಪಿನಲ್ಲಿ ತಮ್ಮ ಕೆಲ ಪಾದಯಾತ್ರಿಗಳೊಡನೆ ಗಾಂಧಿ ನೆಲದ ಮೇಲೆ ಮಲಗಿದ್ದರು. ಸೂರತ್ ನಗರದ ಮ್ಯಾಜಿಸ್ಟ್ರೇಟರ ನೇತೃತ್ವದಲ್ಲಿ ಬಂದ ಮುವ್ವತ್ತು ಜನರ ಪೊಲೀಸ್ ತಂಡ, ಗಾಂಧಿಯನ್ನು ಎಬ್ಬಿಸಿ ಸೆರೆಮನೆಗೆ ಹೊರಡಲು ತಯಾರಾಗಲು ಸೂಚಿಸಿತು. ಅದು ವಿಚಾರಣೆ ಇಲ್ಲದೆ ಬಂಧಿಸಿ, ಶಿಕ್ಷೆ ನೀಡುವ ೧೮೨೭ರ ಶಾಸನವೊಂದನ್ನು ಉಲ್ಲೇಖಿಸಿತು. ಹಲ್ಲುಜ್ಜಿ ಮುಖ ತೊಳೆದು ಬಂದ ಗಾಂಧಿ, ತಮ್ಮೊಡನಿದ್ದ ಸಂಗೀತ ಉಪಾಧ್ಯಾಯ ಹರಿದಾಸ ನಾರಾಯಣ ಖರೆಯವರಿಗೆ 'ವೈಷ್ಣವ ಜನತೋ' ಹಾಡಲು ಕೋರಿದರು. ಕಣ್ಣುಮುಚ್ಚಿ ಕೂತು ಧ್ಯಾನಿಸಿದ ಅವರು ಭಜನೆ ಮುಗಿದ ಕೂಡಲೇ, ಒಂದೆರಡು ತಕಲಿ ಮತ್ತು ಹತ್ತಿ ಲಡಿಗಳನ್ನು ಚೀಲಕ್ಕೆ ಹಾಕಿಕೊಂಡು ಪೊಲೀಸರು ತಂದಿದ್ದ ಲಾರಿಯೊಂದನ್ನು ಹತ್ತಿದರು. ಅಲ್ಲಿಂದ ಕೆಲವು ಮೈಲಿಗಳಾಚೆ ಇದ್ದ ರೈಲ್ವೇ ಲೆವಲ್ ಕ್ರಾಸಿಂಗ್ ಬಳಿ, ಪೂರ್ವ ಸೂಚನೆಯಂತೆ ನಿಂತ ಫ್ರಾಂಟಿಯರ್ ಮೇಲ್ ಗಾಡಿಗೆ ಗಾಂಧಿಯವರನ್ನು ಹತ್ತಿಸಿದ ಪೊಲೀಸರು, ಮಾರನೆಯ ಬೆಳಗ್ಗೆ ಬಾಂಬೆ ತಲುಪಿ, ಅಲ್ಲಿಂದ ಅವರನ್ನು ಜೀಪೊಂದರಲ್ಲಿ ಪೂನಾದ ಯೆರವಾಡಾ ಸೆರೆಮನೆಗೆ ಒಯ್ದು ದಾಖಲಿಸಿದರು.

ಧರ್ಸಾನಾದ ಪೊಲೀಸ್ ಹಿಂಸಾಕಾಂಡ

ಮಧ್ಯರಾತ್ರಿಯ ದಾಳಿಯಲ್ಲಿ ಒಂದು ತಾಸೂ ನಿದ್ದೆ ಮಾಡದಿದ್ದ ವೃದ್ಧ ಗಾಂಧಿಯವರನ್ನು ಏಕಾಏಕಿ ಬಂಧಿಸಿಕೊಂಡು ಹೋಗಿದ್ದ ಸರ್ಕಾರದ ಕ್ರಮದ ಬಗ್ಗೆ ತೀವ್ರ ಆತಂಕ ಮತ್ತು ಜಿಗುಪ್ಸೆಗೊಂಡ ಗಾಂಧಿ ತಂಡ, ಎಪ್ಪತ್ತೈದರ ಹಿರಿಯ ವಕೀಲ ಅಬ್ಬಾಸ್ ತ್ಯಾಬ್ಜಿಯವರ ನೇತೃತ್ವದಲ್ಲಿ ಹೆಚ್ಚಿನ ಕೆಚ್ಚಿನೊಂದಿಗೆ ಧರ್ಸಾನಾ ಕಡೆ ಹೊರಟಿತು. ಆದರೆ ಅವರನ್ನು ಅರ್ಧ ದಾರಿಯಲ್ಲೇ ತಡೆದ ಪೊಲೀಸರು ಬಂಧಿಸಿ ಸೆರೆಮನೆಗೆ ತಳ್ಳಿದರು. ಆದರೆ ಧರ್ಸಾನಾ ಕಾರ್ಯಾಚರಣೆಗೆ ಸರೋಜಿನಿ ನಾಯ್ಡು ಅವರ ಸಂಚಾಲಕತ್ವದ ೨೫೦೦ ಕಾರ್ಯಕರ್ತರ ಒಂದು ದೊಡ್ಡ ಪಡೆಯೇ ಸಿದ್ಧವಾಗಿತ್ತು. ಪ್ಯಾರೇಲಾಲ್, ಮಣಿಲಾಲ ಮತ್ತು ಇಮಾಮ್ ಭಾವ್‌ಜಿ ಅವರನ್ನೊಳಗೊಂಡ ಈ ಪಡೆ,

ಮೇ ೨೧ರಂದು ಧರ್ಸಾನಾಗೆ ಬಂತು. ಸತ್ಯಾಗ್ರಹದ ನಿಯಮಗಳಿಗನುಗುಣವಾಗಿ ಈ ಬಗ್ಗೆ ಸರ್ಕಾರಕ್ಕೆ ಪೂರ್ವ ಸೂಚನೆ ನೀಡಿದ್ದುದರಿಂದ ಅದು ಉಪ್ಪಿನ ಕೋಠಿಗಳ ಸುತ್ತ ಹಳ್ಳಗಳಲ್ಲಿ ನೀರು ಕಟ್ಟಿ ಮುಳ್ಳಿನ ಬೇಲಿ ಹಾಕಿ ಸಶಸ್ತ್ರ ಪೊಲೀಸರ ಕಾವಲು ಏರ್ಪಡಿಸಿತ್ತು.

ಬೆಳಗಿನ ಪ್ರಾರ್ಥನೆಯ ನಂತರ ಸರೋಜಿನಿ ನಾಯ್ಡು ಕಾರ್ಯಕರ್ತರನ್ನು ಸಣ್ಣ ತುಕಡಿಗಳನ್ನಾಗಿ ವಿಭಾಗಿಸಿ ಒಂದು ತುಕಡಿಯಾದ ನಂತರ ಇನ್ನೊಂದು ತುಕಡಿಯಂತೆ ಉಪ್ಪಿನ ಕೋಠಿಗಳತ್ತ ಸಾಗಬೇಕೆಂದೂ, ಈ ಕಾರ್ಯಾಚರಣೆ ಸಂಪೂರ್ಣ ಅಹಿಂಸಾತ್ಮಕವಾಗಿದ್ದು ಯಾರೊಬ್ಬರೂ ತಮಗೆ ಬೀಳಬಹುದಾದ ಏಟನ್ನು ತಪ್ಪಿಸಿಕೊಳ್ಳಲು ಯತ್ನಿಸಬಾರದು ಮತ್ತು ಪೊಲೀಸರ ಮೇಲೆ ಕೈ ಎತ್ತಬಾರದೆಂದು ಸೂಚನೆಗಳನ್ನು ನೀಡಿದರು. ಈ ಕಾರ್ಯಾಚರಣೆಗೆ ಸಾಕ್ಷಿಯಾಗಲು ಸಾವಿರಾರು ಜನರೊಂದಿಗೆ ದೇಶ ವಿದೇಶಗಳಿಂದ ಪತ್ರಕರ್ತರು ಬಂದಿದ್ದರು. ಅವರಲ್ಲಿ ಒಬ್ಬರಾದ ಯುನೈಟೆಡ್ ಪ್ರೆಸ್ ಇಂಟರ್‌ನ್ಯಾಷನಲ್‌ನ ಅಮೆರಿಕನ್ ಪತ್ರಕರ್ತ ವೆಬ್ ಮಿಲ್ಲರ್ ಎಂಬಾತ ಮಾಡಿರುವ ಪ್ರತ್ಯಕ್ಷದರ್ಶಿ ವರದಿ, ಅದರ ಹಲವು ಭಾಗಗಳನ್ನು ಸರ್ಕಾರ ಕತ್ತರಿಸಿತಾದರೂ, ಅದಷ್ಟೇ ಕೂಡ ಯಾರ ರಕ್ತವನ್ನಾದರೂ ತಣ್ಣಗೆ ಮಾಡುವಷ್ಟು ಭಯಾನಕವಾಗಿದೆ.

ಈ ಕತ್ತರಿಸಲ್ಪಟ್ಟ ವರದಿಯ ಪ್ರಕಾರವೇ, ಒಂದೊಂದೇ ತುಕಡಿ ಉಪ್ಪಿನ ಕೋಠಿಯತ್ತ ಸಾಗಿ ನೀರಿನ ಕಂದಕ ದಾಟಿ ಪೊಲೀಸ್ ಅಧಿಕಾರಿಯ ಮುನ್ನೆಚ್ಚರಿಕೆಯನ್ನು ಲೆಕ್ಕಿಸದೆ ಮುಳ್ಳಿನ ಬೇಲಿಯತ್ತ ಸಾಗುತ್ತಿದ್ದಂತೆ, ಭಾರತೀಯರಿಂದಲೇ ಕೂಡಿದ ಪೊಲೀಸ್ ದಳ ತನ್ನ ಉಕ್ಕಿನ ಟೋಪಿಗಳಿದ್ದ ಲಾಠಿಗಳನ್ನು ಸತ್ಯಾಗ್ರಹಿಗಳ ಮೇಲೆ ತಲೆ, ಕೈ, ಕಾಲು, ಹೊಟ್ಟೆ, ತೊಡೆ ಎನ್ನದೆ ಬೀಸತೊಡಗುತ್ತಿತ್ತು. ತಲೆ ಒಡೆದ, ಹೆಗಲು, ಕೈ ಕಾಲುಗಳನ್ನು ಮುರಿದುಕೊಂಡ ಸತ್ಯಾಗ್ರಹಿಗಳು ಯಾವುದೇ ಹಾಹಾಕಾರವಿಲ್ಲದೆ ಕುಸಿದು ಬೀಳುತ್ತಿದ್ದರು. ಇನ್ನೂ ಶಕ್ತಿ ಉಳಿಸಿಕೊಂಡವರು ಮುಂದಿನ ಹೆಜ್ಜೆ ಇಡುತ್ತಿದ್ದಂತೆ ಮತ್ತೆ ಲಾಠಿ ಏಟುಗಳ ಮಳೆಗರೆತವಾಗುತ್ತಿತ್ತು. ಅವರೆಲ್ಲ ಕುಸಿದುಬಿದ್ದ ಮೇಲೆ ಇದನ್ನೆಲ್ಲ ಉಸಿರು ಬಿಗಿಹಿಡಿದು ನೋಡುತ್ತಿದ್ದ ಇನ್ನೊಂದು ತುಕಡಿ ಯಾವುದೇ ಹಿಂಜರಿಕೆಯ ಭಾವನೆ ಇಲ್ಲದೆ ಕೋಠಿಗಳ ಕಡೆ ಸಾಗಲು ಮುಂದೆ ಬರುತ್ತಿತ್ತು. ಅದಕ್ಕೂ ಮತ್ತೆ ಅದೇ ಗತಿ. ಅಲ್ಲಿಯೇ ಸಿದ್ಧವಾಗಿದ್ದ ಮೀರಾಬೆನ್ ನೇತೃತ್ವದ ಶುಶ್ರೂಷಾ ತಂಡ ಕುಸಿದು ಬಿದ್ದವರನ್ನು ಎತ್ತಿ ಕಂಬಳಿಗಳಲ್ಲಿ ಮಲಗಿಸಿ ಪ್ರಥಮ ಚಿಕಿತ್ಸೆ ನೀಡುತ್ತಿದ್ದರಾದರೂ ಗಾಯಾಳುಗಳ ಸಂಖ್ಯೆ ಮಿತಿ ಮೀರಿದಾಗ ತುಕಡಿಗಳು, ಈಗ ಕೋಠಿಗಳ ಸುತ್ತ ಧರಣಿ ಕೂರಲಾರಂಭಿಸಿದವು. ಅದನ್ನೂ ಸಹಿಸದ ಪೊಲೀಸ್ ದಳ ಆ ತುಕಡಿಗಳ ಮೇಲೂ ದಾಳಿ ಮಾಡಿ ಒದ್ದು ಹೊಡೆದು ಹಿಂಸಿಸಿದರು.

ಬೆಳಿಗ್ಗೆ ಹನ್ನೊಂದಕ್ಕೆ ಸಮುದ್ರ ತೀರದ ಮೇ ಬಿಸಿಲು ರಾಚತೊಡಗಿತ್ತು. ಅಂದಿಗೆ ಕಾರ್ಯಾಚರಣೆ ಮುಗಿದಿತ್ತು. ಪಕ್ಕದಲ್ಲೇ ಸ್ಥಾಪಿಸಲಾಗಿದ್ದ ವೈದ್ಯಕೀಯ ಶಿಬಿರಕ್ಕೆ ಮಿಲ್ಲರ್ ಹೋದಾಗ ಆತ ೩೨೦ ಜನ ಗಾಯಾಳುಗಳನ್ನು ಕಂಡರು. ಅವರಲ್ಲಿ ಬಹಳ ಜನಕ್ಕೆ ಇನ್ನೂ ಪ್ರಜ್ಞೆ ಬಂದಿರಲಿಲ್ಲ. ಇನ್ನು ಕೆಲವರು ನೋವಿನಿಂದ ನರಳಾಡುತ್ತಿದ್ದರು. ಇಬ್ಬರು ಅಸು ನೀಗಿದ್ದರು. ಮಿಲ್ಲರ್ ಅವರ ಈ ವರದಿ ಜಗತ್ತಿನೆಲ್ಲೆಡೆ ಪ್ರಸಾರವಾಗಿ ನಾಗರಿಕ

ಜಗತ್ತಿನ ಎದೆ ಝಲ್ಲೆನ್ನುವಂತೆ ಮಾಡಿತು.

ಆದರೆ ಈ ಕಾರ್ಯಾಚರಣೆ ಇನ್ನೂ ಮುಗಿದಿರಲಿಲ್ಲ. ಇಡೀ ಸತ್ಯಾಗ್ರಹ ಪಡೆ ಕುಸಿದು ಬೀಳುವವರೆಗೂ ನಡೆಯಿತು. ಒಟ್ಟು ೨೮೬೬ ಜನ ಕಾರ್ಯಕರ್ತರು ಭಾಗವಹಿಸಿದ್ದ ಈ ಕಾರ್ಯಾಚರಣೆಯಲ್ಲಿ ೧೩೩೩ ಜನ ಗಂಭೀರವಾಗಿ ಗಾಯಗೊಂಡಿದ್ದರು. ನಾಲ್ವರು ಅಸು ನೀಗಿದ್ದರು. ಪೊಲೀಸ್ ಅಧಿಕಾರಿಯೊಬ್ಬ ಬಂದು, ಸರೋಜಿನಿ ನಾಯ್ಡು ಅವರ ಹೆಗಲು ಮುಟ್ಟಿ ನಿಮ್ಮನ್ನು ಬಂಧಿಸುತ್ತಿದ್ದೇವೆ ಎಂದಾಗ ಶ್ರೀಮತಿ ನಾಯ್ಡು 'ಕೈ ತೆಗೆ! ನನ್ನನ್ನು ಮುಟ್ಟ ಕೂಡದು ನೀನು!!' ಎಂದು ಅರಚಿ ಪೊಲೀಸ್ ವಾಹನ ಹತ್ತಿದರು. ಅವರೊಂದಿಗೆ ಮಣಿಲಾಲ್, ಪ್ಯಾರೇಲಾಲ್, ಇಮಾಂ ಭಾವ್‌ಜಿ ಕೂಡ ಬಂಧನಕ್ಕೊಳಗಾದರು. ಈ ಇಡೀ ಕಾರ್ಯಾಚರಣೆಯ ಬಗ್ಗೆ 'ಯಂಗ್ ಇಂಡಿಯಾ'ದ ಮೇ ೨೬ರ ಸಂಚಿಕೆಯಲ್ಲಿ ಲೇಖನವೊಂದನ್ನು ಬರೆದ ಗುಜರಾತ್ ವಿದ್ಯಾಪೀಠದಲ್ಲಿ ಅಧ್ಯಾಪಕರಾಗಿದ್ದ ಜೆ.ಸಿ. ಕುಮಾರಪ್ಪ ಅವರ ಪ್ರಕಾರ, ನಾವು ಒಂದು ಚಿಟಿಕೆ ಮಾತ್ರ ಉಪ್ಪನ್ನು ಪಡೆದಿರಬಹುದು. ಆದರೆ ಇದರಿಂದ ಬ್ರಿಟಿಷ್ ಸರ್ಕಾರದ ರಾಕ್ಷಸತನವನ್ನು ಜಗತ್ತಿಗೆ ಮನವರಿಕೆ ಮಾಡಿಕೊಡುವ ನಮ್ಮ ಉದ್ದೇಶ ಇಲ್ಲಿ ಯಶಸ್ವಿಯಾಗಿದೆ.

ಈ ಧರ್ಸಾನಾ ಪ್ರಕರಣ ಗಾಂಧಿ ಮಾರ್ಗದ ಬಗ್ಗೆ ಭಿನ್ನಾಭಿಪ್ರಾಯ ಹೊಂದಿದ್ದ ವಿಠಲಭಾಯಿ ಪಟೇಲರನ್ನೂ ತಲ್ಲಣಗೊಳಿಸಿತು. ಅವರು ಕೇಂದ್ರ ಶಾಸನ ಸಭೆಯ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು ಮತ್ತು ಒಂದು ಪತ್ರಿಕಾ ಹೇಳಿಕೆಯಲ್ಲಿ 'ಬ್ರಿಟಿಷ್ ಪ್ರಭುತ್ವದ ಈ ಪೈಶಾಚಿಕ ಕೃತ್ಯದಿಂದಾಗಿ ಭಾರತ ಮತ್ತು ಬ್ರಿಟಿಷ್ ಸಾಮ್ರಾಜ್ಯದ ನಡುವಣ ಸೇತುವೆ ಶಾಶ್ವತವಾಗಿ ಕುಸಿದು ಹೋಗಿದೆ' ಎಂದು ಘೋಷಿಸಿದರು.

ಮಳೆ ನಿಂತರೂ ಮರದ ನೀರು ತೊಟ್ಟಿಕ್ಕುವಂತೆ, ಈ ನಂತರವೂ ದೇಶದ ವಿವಿಧ ಭಾಗಗಳಲ್ಲಿ ಉಪ್ಪಿನ ಕಾಯಿದೆ ಭಂಗ ಮತ್ತು ಅದರ ಜೊತೆಗೆ ಭೂ ಕಂದಾಯವೂ ಸೇರಿದಂತೆ ಇತರ ರೀತಿಯ ಕರ ನಿರಾಕರಣೆಗಳ ಪ್ರಸಂಗಗಳು ನಡೆದೇ ಇದ್ದವು. ಮುಂಬೈನಲ್ಲಿ ನಡೆದ ಮೆರವಣಿಗೆಯೊಂದರ ಸಂದರ್ಭದಲ್ಲಿ ಸರ್ದಾರ್ಜಿಯೊಬ್ಬರು ರಸ್ತೆಯೊಂದರಲ್ಲಿ ಪೊಲೀಸರ ಲಾಠಿ ಏಟುಗಳನ್ನು ಪ್ರತಿಭಟಿಸದೆ ಅವನ್ನು ಆಹ್ವಾನಿಸುತ್ತಾ–ತನ್ನನ್ನು ದಾಳಿಯಿಂದ ರಕ್ಷಿಸಲು ಬಂದ ಹಿಂದೂ ಸೋದರರನ್ನು ದೂರ ತಳ್ಳುತ್ತಾ–ರಕ್ತಸಿಕ್ತನಾಗಿ ಸ್ಥಿರವಾಗಿ ನಿಂತೇ ಇದ್ದಂತಹ ಹಲವು ದೃಶ್ಯಗಳು, ಗಾಂಧಿ ಪ್ರಭಾವದ ಪ್ರತೀಕಗಳಾಗಿ ಪತ್ರಿಕಾ ವರದಿಗಳ ಮೂಲಕ ಜಗತ್ತಿನಾದ್ಯಂತ ಪ್ರಸಾರವಾದವು. ಉಪ್ಪಿನ ಸತ್ಯಾಗ್ರಹದ ಪರಿಣಾಮವಾಗಿ ದೇಶಾದ್ಯಂತ ಒಟ್ಟು ೬೦ ಸಾವಿರ ಜನ ಸೆರೆಮನೆ ಸೇರಿದ್ದರು. ಅವರಲ್ಲಿ ಒಬ್ಬರಾಗಿದ್ದ ಜವಾಹರಲಾಲ್ ನೆಹರೂ, ಇನ್ನೋರ್ವ ಸೆರೆಯಾಳಾಗಿದ್ದ ಗಾಂಧಿಯವರಿಗೆ ಈ ಸತ್ಯಾಗ್ರಹದ ಬಗ್ಗೆ ಜುಲೈ ೨೮ರಂದು ಬರೆದ ಪತ್ರವೊಂದರಲ್ಲಿ, ತಾವು ಮೊದಲು ಗಾಂಧಿ ಉಪ್ಪಿನ ಸತ್ಯಾಗ್ರಹದ ಪ್ರಸ್ತಾಪ ಮಾಡಿದಾಗ ಪರಿಹಾಸ್ಯ ಮಾಡಿದ್ದರ ಬಗ್ಗೆ ನಾಚಿಕೆ ವ್ಯಕ್ತಪಡಿಸುತ್ತಾ, 'ನಿಮ್ಮ ಮಾಂತ್ರಿಕ ಸ್ಪರ್ಶದಿಂದ ನಮ್ಮಂಥವರ ಗದ್ಯಮಯ ಬದುಕು ಮಹಾಕಾವ್ಯವೊಂದರ ಬೆಡಗನ್ನು ಪಡೆದುಕೊಂಡಿದೆ' ಎಂದು ಕೃತಜ್ಞತೆಗಳನ್ನು ಅರ್ಪಿಸಿದ್ದಾರೆ.

■

೭೧
ಸೆರೆಮನೆಯಲ್ಲೊಂದಿಷ್ಟು ನೆಮ್ಮದಿಯ ಜೀವನ

ಈ ಬಾರಿಯ ಗಾಂಧಿಯವರ ಸೆರೆಮನೆವಾಸ ಅಷ್ಟು ಕಠಿಣವಾದುದಾಗಿರಲಿಲ್ಲ. ಇದಕ್ಕೆ ಮುಖ್ಯ ಕಾರಣ, ಸ್ವತಃ ಬಹು ಧಾರ್ಮಿಕರಾಗಿದ್ದ ವೈಸ್‌ರಾಯ್ ಇರ್ವಿನ್ ಗಾಂಧಿಯ ವ್ಯಕ್ತಿತ್ವದ ಬಗ್ಗೆ ಸಹಾನುಭೂತಿ ಹೊಂದಿದ್ದುದು. ಸೆರೆಮನೆಗಳ ವರಿಷ್ಠಾಧಿಕಾರಿಯೇ ಗಾಂಧಿ ಬಳಿ ಬಂದು, ಅವರ ಅಗತ್ಯಗಳನ್ನು ವಿಚಾರಿಸಿಕೊಂಡು ಅವುಗಳನ್ನು ಪೂರೈಸುವ ಪ್ರಯತ್ನ ಮಾಡಿದ. ಗಾಂಧಿಯವರಿಗೆ ಒಂದು ಹಿತ್ತಿಲೂ ಇರುವ ಎರಡು ಕೋಣೆಗಳ ಕುಟೀರವನ್ನು ನೀಡಲಾಯಿತು. ಗಾಂಧಿ ಸೆರೆಮನೆಯಲ್ಲಿರುವ ಅಸಹಕಾರ ಚಳುವಳಿ ಸಂಬಂಧಿತ ಬಂದಿಗಳೆಲ್ಲರೊಡನೆ ಒಡನಾಟದ ಬೇಡಿಕೆ ಇಟ್ಟಾಗ ಅದನ್ನು ತಿರಸ್ಕರಿಸಲಾಯಿತಾದರೂ, ಗಾಂಧಿಯವರೊಂದಿಗೆ ಇರಲು ಅದೇ ಸೆರೆಮನೆಯಲ್ಲಿ ಬಂದಿಯಾಗಿದ್ದ ಅವರ ಗೌರವಾನ್ವಿತ ಗೆಳೆಯರೂ, ಗುಜರಾತ್ ವಿದ್ಯಾಪೀಠದ ಕುಲಪತಿಗಳೂ ಆಗಿದ್ದ ವಿದ್ವಾಂಸ ಕಾಕಾ ಕಾಲೇಲ್ಕರ್‌ಗೆ ಅವಕಾಶ ಮಾಡಿಕೊಡಲಾಯಿತು. ಗಾಂಧಿ ತಮ್ಮ ರಕ್ತ ಸಂಬಂಧಿಗಳನ್ನು ಕಾಣಲು ಎರಡು ಬಾರಿ ಅವಕಾಶವಿದ್ದು, ಇತರರ ಭೇಟಿಗೆ ವಿಶೇಷ ಮನವಿ ಸಲ್ಲಿಸಬೇಕಿತ್ತು. ಆದರೆ ಗಾಂಧಿ ರಕ್ತ ಸಂಬಂಧಿಗಳು ಮತ್ತು ಇತರರ ನಡುವೆ ಭೇದ ಭಾವ ಮಾಡುತ್ತಿರಲಿಲ್ಲವಾಗಿ, ತಾವು ಭೇಟಿ ಮಾಡಬಯಸುವ ಒಂದು ದೊಡ್ಡ ಪಟ್ಟಿಯನ್ನೇ ನೀಡಿದಾಗ ಸೆರೆಮನೆ ಅಧಿಕಾರಿ ಅದನ್ನು ಒಪ್ಪಲಿಲ್ಲ. ಇದನ್ನು ಪ್ರತಿಭಟಿಸಿ ಗಾಂಧಿ ಯಾರನ್ನೂ ಭೇಟಿ ಮಾಡದಿರಲು ನಿರ್ಧರಿಸಿದರು. ಬದಲಿಗೆ, ಪತ್ರ ವ್ಯವಹಾರಕ್ಕೆ ನಿರ್ಬಂಧವಿಲ್ಲದಿದ್ದುದರಿಂದ ಅವರೆಲ್ಲರೊಂದಿಗೆ ಪತ್ರ ವ್ಯವಹಾರದ ಸಂಬಂಧವನ್ನಿಟ್ಟುಕೊಂಡರು. ಇದರಿಂದಾಗಿ ವಾರವೊಂದರಲ್ಲಿ ಅವರು ಬರೆದ ಪತ್ರಗಳು ಎಪ್ಪತ್ತನ್ನೂ ಮೀರಿದ್ದವು. ಆದರೆ ಅವೆಲ್ಲವೂ ಸೆರೆಮನೆಯ ನಿಯಮಗಳ ಪ್ರಕಾರ ರಾಜಕೀಯೇತರ ವಿಷಯಗಳನ್ನೊಳಗೊಂಡ ವೈಯಕ್ತಿಕ ನೆಲೆಯ ಪತ್ರಗಳಾಗಿದ್ದವು.

ಗಾಂಧಿಯವರ ವೈವಿಧ್ಯಮಯ ಬರವಣಿಗೆ

ಗಾಂಧಿ ಹೀಗೆ ತಮ್ಮ ಪತ್ನಿ ಮತ್ತು ಮಕ್ಕಳೂ ಸೇರಿದಂತೆ ಆಶ್ರಮದ ಎಲ್ಲರಿಗೂ ಬರೆದ ಪತ್ರಗಳನ್ನೊಮ್ಮೆ ಅವಲೋಕಿಸಿದರೆ, ಅವರು ಸಾರ್ವಜನಿಕ ಜೀವನದ ಜೊತೆಗೇ ವೈಯಕ್ತಿಕ ಸಂಬಂಧಗಳಿಗೂ ಎಷ್ಟು ಮಹತ್ವ ಕೊಡುತ್ತಿದ್ದರು ಎಂಬುದು ತಿಳಿಯುತ್ತದೆ. ಆಶ್ರಮದ ಮಕ್ಕಳಿಗೆ ಕಥೆ ಹೇಳಿ ರಂಜಿಸಿದರೆ ಮೀರಾಬೆನ್‌ರೊಂದಿಗೆ ತಮ್ಮ ಸೆರೆಮನೆವಾಸದ ಸುಖ ಸಂತೋಷಗಳನ್ನು ಹಂಚಿಕೊಳ್ಳುತ್ತಾ ಕುಮಾರಪ್ಪನವರೊಂದಿಗೆ ಹೆಚ್ಚು ಜಗಳವಾಡದಿರಲು ಸೂಚಿಸುತ್ತಾರಲ್ಲದೆ ಅವರಿಗೆ ಊಟದೊಂದಿಗೆ ಇರಬೇಕಾದ

ತುಪ್ಪ ಮತ್ತು ಕಿತ್ತಳೆಯ ಪ್ರಮಾಣವನ್ನು ತಿಳಿಸುತ್ತಾರೆ. ತಮ್ಮ ಮರದ ಪಾದುಕೆಗಳನ್ನು ಪೂಜಿಸಲಿಚ್ಛಿಸುವ ಮಹಿಳಾ ಆಶ್ರಮವಾಸಿಯೊಬ್ಬರಿಗೆ ಅದು ಅರ್ಥಹೀನವೆಂದು ಹೇಳುತ್ತಾ, ತಾತ್ಕಾಲಿಕ ಸಮಾಧಾನ ಸಿಗುವುದಾದರೆ ಅವನ್ನು ಪಡೆಯಬಹುದು ಎಂದು ಸೂಚಿಸುತ್ತಾರೆ. ಕಸ್ತೂರಬಾ ಮತ್ತು ದೇವದಾಸರಿಗೆ ಪ್ರೀತಿಯ ನೆನಕೆಗಳನ್ನು ತಿಳಿಸುತ್ತಾರೆ. ಇದೇ ಸಮಯದಲ್ಲಿ ಗಾಂಧಿ ಆಶ್ರಮದ ವಿವಿಧ ಭಾಷೆಗಳ ಭಜನೆಗಳನ್ನು, ಮೀರಾಬೆನ್‌ರ ಬೇಡಿಕೆಯಂತೆ ಇಂಗ್ಲಿಷ್‌ಗೆ ಅನುವಾದ ಮಾಡುವ ಕೆಲಸವನ್ನೂ ಕೈಗೆತ್ತಿಕೊಳ್ಳುತ್ತಾರೆ.

ಇವೆಲ್ಲ ಕೆಲಸಗಳ ಜೊತೆಗೇ ಗಾಂಧಿ ಚರಕದಿಂದ ನೂಲು ತೆಗೆಯುವ ಕೆಲಸವನ್ನೂ ಮುಂದುವರೆಸಿದ್ದರು. ಜುಲೈನಿಂದ ಆರಂಭವಾದಂತೆ ಅವರು ಪ್ರತಿವಾರ ಆಶ್ರಮವಾಸಿಗಳಿಗಾಗಿ ಸತ್ಯಾಗ್ರಹಿ ಆಚರಿಸಬೇಕಾದ ಏಕಾದಶ (ಹನ್ನೊಂದು) ವ್ರತಗಳೂ ಸೇರಿದಂತೆ ಹದಿನೈದು ವಿಷಯಗಳ ಬಗ್ಗೆ ವಿವರವಾಗಿ ಹದಿನಾರು ಪತ್ರಗಳನ್ನು ಬರೆದರು. ಆ ವ್ರತಗಳೆಂದರೆ ಸತ್ಯ, ಅಹಿಂಸೆ ಅಥವಾ ಪ್ರೇಮ, ಬ್ರಹ್ಮಚರ್ಯ, ಆಸ್ವಾದ, ಆಸ್ತೇಯ, ಅಪರಿಗ್ರಹ, ಅಭಯ, ಅಸ್ಪೃಶ್ಯತಾ ನಿವಾರಣೆ, ಶರೀರ ಶ್ರಮ, ಸಹಿಷ್ಣುತೆ ಅಥವಾ ಸರ್ವಧರ್ಮ ಸಮಭಾವ, ನಮ್ರತೆ ಮತ್ತು ಸ್ವದೇಶಿ. ಇವುಗಳ ಜೊತೆ ವ್ರತಗಳ ಅವಶ್ಯಕತೆ ಮತ್ತು ಯಜ್ಞ ಎಂದರೇನು ಎಂಬ ವಿಷಯಗಳ ಬಗ್ಗೆಯೂ ಪತ್ರಗಳು ಇದ್ದವು. ಇವು ಮುಂದೆ 'ಯೆರವಾಡಾ ಮಂದಿರದಿಂದ' ಎಂಬ ಶೀರ್ಷಿಕೆಯಡಿ ಪುಟ್ಟ ಪುಸ್ತಕವಾಗಿ ಪ್ರಕಟವಾಗಿ ಹಲವು ಭಾಷೆಗಳಿಗೆ ಅನುವಾದವೂ ಆಯಿತು. ಈ ಸಂಬಂಧವಾಗಿ ಕುಮಾರಪ್ಪನವರು ವ್ರತಗಳನ್ನು ಹೊರಗಿಂದ ಬೋಧಿಸಿದರೆ ಪರಿಣಾಮಕಾರಿಯಾಗದು ಎಂದು ಬರೆದಾಗ ಗಾಂಧಿ, ಇವು ಬೋಧನೆಯ ವಿಷಯವಲ್ಲ; ಆಂತರಿಕ ಸಂಕಲ್ಪದ ವಿಷಯಗಳಾಗಬೇಕು ಎಂದು ಉತ್ತರಿಸಿದರು.

ಗಾಂಧಿಯವರಿಗೆ ತಮ್ಮ ಪರಿಚಿತರಿಂದ ಮಾತ್ರವಲ್ಲದೆ ಹಲವು ಸಮಸ್ಯೆಗಳನ್ನು ಹೇಳಿಕೊಂಡು, ಹಲವು ಸಲಹೆಗಳನ್ನು ನೀಡಿಯೂ ದೇಶ-ವಿದೇಶಗಳಿಂದ ಪತ್ರ ಬರುತ್ತಿದ್ದವು. ಇವುಗಳಲ್ಲಿ ಆಹಾರ ಪದ್ಧತಿ, ಹಿಂದೂ ಧರ್ಮದ ಸುಧಾರಣೆ, ವೈಯಕ್ತಿಕ ದುಃಖ ನಿವೇದನೆ ಇತ್ಯಾದಿ ವಿಷಯಗಳು ಸೇರಿದ್ದವು. ಒಂದಿಬ್ಬರು ಗಾಂಧಿಯವರೊಂದಿಗೆ ಹಲವು ವಿಷಯಗಳ ಬಗ್ಗೆ ಮಾತಾಡಲು, ಅವರ ಚಿತ್ರಗಳನ್ನು ರಚಿಸಲು ಒಂದಷ್ಟು ಕಾಲ ಸೆರೆಮನೆಯಲ್ಲಿರಲೂ ಬಯಸಿದ್ದರು! ಆದರೆ ಇದಕ್ಕೆ ಸರ್ಕಾರ ಅನುಮತಿ ನೀಡಲಿಲ್ಲವಷ್ಟೆ.

ತೀವ್ರಗೊಂಡ ಸತ್ಯಾಗ್ರಹ-ಮಾತುಕತೆಗೆ ಸಿದ್ಧತೆ

ಹೀಗೆ ಗಾಂಧಿ ನೆಮ್ಮದಿಯಿಂದ ಸೆರೆಮನೆಯಲ್ಲಿ ಇರುವಾಗ ಸರ್ಕಾರದ ನೆಮ್ಮದಿ ಕೆಡಲಾರಂಭಿಸಿತ್ತು. ಸೆರೆಮನೆಯ ಹೊರಗೆ ಅಸಹಕಾರ ಸತ್ಯಾಗ್ರಹ ನಡೆದೇ ಇತ್ತು. ಕಾರಾಗೃಹಗಳು ತುಂಬಿ ತುಳುಕುತ್ತಿದ್ದವು. ದೇಶದ ವಿವಿಧ ಭಾಗಗಳಲ್ಲಿ ಜನ ಪೊಲೀಸರನ್ನು ಧಿಕ್ಕರಿಸಿ ತ್ರಿವರ್ಣ ಧ್ವಜವನ್ನು ಹಾರಿಸುತ್ತಾ ಸ್ವಾತಂತ್ರ್ಯ ಘೋಷಣೆಯನ್ನು ಸ್ವತಃ ತಾವೇ ಮಾಡಿಕೊಳ್ಳತೊಡಗಿದ್ದರು. ಕೆಲವೆಡೆಗೆ ಸೇನೆಯನ್ನು ಕಳಿಸಿ ಪರಿಸ್ಥಿತಿಯನ್ನು ತಹಬಂದಿಗೆ ತರಬೇಕಾಯಿತು. ಇದರ ಜೊತೆಗೆ ಸರ್ಕಾರದ ಬೊಕ್ಕಸಕ್ಕೆ ಹಣದ ಹರಿವು ಗಣನೀಯವಾಗಿ ಕಡಿಮೆಯಾಗತೊಡಗಿತ್ತು. ವೈಸ್‌ರಾಯ್ ಇರ್ವಿನ್‌ಗೆ ಇದು ಬಹು

ಮುಜುಗರದ ಸಂದರ್ಭವಾಗಿತ್ತು. ಲಂಡನ್‌ನಲ್ಲಿ ಲೇಬರ್ ಪಕ್ಷದ ಸಾಮ್ರಾಜ್ಯ ಸರ್ಕಾರ, ಭಾರತಕ್ಕೆ ಸ್ವಾತಂತ್ರ್ಯ ನೀಡಬೇಕೆಂಬ ತನ್ನ ಬದ್ಧತೆಯ ದಿಕ್ಕಿನಲ್ಲಿ ಕ್ರಮ ಕೈಗೊಳ್ಳಬೇಕೆಂದು ಅವರ ಮೇಲೆ ಒತ್ತಡ ಹೇರುತ್ತಿದ್ದರೆ, ವಿರೋಧ ಪಕ್ಷದ ಮುಖಂಡ ವಿನ್‌ಸ್ಟನ್ ಚರ್ಚಿಲ್ ಎರಡು ತುಂಡು ಬಟ್ಟೆಯ ದರಿದ್ರನನ್ನು ಮಟ್ಟ ಹಾಕಲಾಗದ ಸರ್ಕಾರವನ್ನು ಕಟುವಾಗಿ ಟೀಕಿಸುವುದು ಮುಂದುವರೆದೇ ಇತ್ತು. ಐರ್ಲೆಂಡ್ ಹೆಚ್ಚೂ ಕಡಿಮೆ ಇಂಗ್ಲೆಂಡ್‌ನ ಕೈಬಿಟ್ಟಿತ್ತು. ಈಜಿಪ್ಟ್‌ನಲ್ಲಿ ಅದರ ವಸಾಹತು ಅಂತ್ಯಗೊಂಡಿತ್ತು. ಭಾರತವೂ ಕೈಬಿಟ್ಟರೆ ಬ್ರಿಟಿಷ್ ಸಾಮ್ರಾಜ್ಯ ಮುಳುಗುವುದು ಹೆಚ್ಚೂ ಕಡಿಮೆ ಖಾತ್ರಿಯಾಗಿತ್ತು. ಹಾಗಾಗಿ ಅದು ಲೇಬರ್ ಪಕ್ಷದ ಮುಖವಾಣಿಯಾಗಿದ್ದ ದ ಡೈಲಿ ಹೆರಾಲ್ಡ್ ಪತ್ರಿಕೆಯ ಭಾರತದ ಪ್ರತಿನಿಧಿ ಜಾರ್ಜ್ ಸ್ಲೊಕಾಂಬ್‌ರನ್ನು ಗಾಂಧಿಯವರನ್ನು ಸಂದರ್ಶಿಸಲು ಕಳಿಸಿತು.

ಮೇ ೨೦ರಂದು ಗಾಂಧಿಯವರನ್ನು ಸ್ಲೊಕಾಂಬ್, ಸೆರೆಮನೆಯಲ್ಲಿ ಭೇಟಿಯಾಗಿ ನಡೆಸಿದ ಮಾತುಕತೆಯಲ್ಲಿ ಗಾಂಧಿ ಸರ್ಕಾರದೊಡನೆ ಸಂಧಾನ ಆರಂಭಿಸಲು ಎರಡು ಷರತ್ತುಗಳನ್ನು ಹಾಕಿದರು. ಭಾರತ ಸಂಪೂರ್ಣ ಸ್ವತಂತ್ರವಾಗುವ ಹಕ್ಕನ್ನು ಬ್ರಿಟಿಷ್ ಸಾಮ್ರಾಜ್ಯ ಮಾನ್ಯ ಮಾಡಬೇಕು ಮತ್ತು ಉಪ್ಪಿನ ಮೇಲಿನ ತೆರಿಗೆಯನ್ನು ಸಂಪೂರ್ಣ ರದ್ದು ಮಾಡಬೇಕು ಎಂಬುವು ಈ ಷರತ್ತುಗಳಾಗಿದ್ದವು. ಇವನ್ನು ವೈಸ್‌ರಾಯ್ ಒಪ್ಪಿಕೊಳ್ಳಲು ಸಾಧ್ಯವಿರಲಿಲ್ಲವಾದ್ದರಿಂದ ಗಾಂಧಿಯವರೊಂದಿಗೆ ಮಾತುಕತೆಗಾಗಿ ಈ ಮೊದಲೇ ಆಗ್ರಹಿಸಿದ್ದ, ಕೇಂದ್ರ ಶಾಸನ ಸಭೆಯ ಇಬ್ಬರು ಮಧ್ಯಮ ಮಾರ್ಗಿ ಸದಸ್ಯರೆನಿಸಿದ್ದ ಸರ್ ತೇಜ್‌ಬಹಾದೂರ್ ಸಪ್ರು ಮತ್ತು ಎಂ.ಆರ್. ಜಯಕರ್ ಅವರಿಗೆ ಗಾಂಧಿಯವರನ್ನು ಭೇಟಿ ಮಾಡಲು ಅನುಮತಿ ನೀಡಲಾಯಿತು. ಮುಖ್ಯವಾಗಿ ಭಾರತದ ರಾಜಕೀಯ ಸಮಸ್ಯೆಯನ್ನು ಬಗೆಹರಿಸಲು ನವೆಂಬರ್ ೧೨ರಂದು ಲಂಡನ್‌ನಲ್ಲಿ ಏರ್ಪಾಡಾಗಿದ್ದ ದುಂಡು ಮೇಜಿನ ಪರಿಷತ್ತಿನಲ್ಲಿ ಗಾಂಧಿ ಭಾಗವಹಿಸುವಂತೆ ಮಾಡುವುದು ಇದರ ಉದ್ದೇಶವಾಗಿತ್ತು. ಜುಲೈ ಕೊನೆಯ ವಾರದಲ್ಲಿ ಸಪ್ರು ಮತ್ತು ಜಯಕರ್ ಗಾಂಧಿಯವರನ್ನು ಭೇಟಿ ಮಾಡಿದಾಗ ಅವರು ತಾವು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರೊಡನೆ ಸಮಾಲೋಚಿಸದೆ ಯಾವ ವಚನವನ್ನೂ ಕೊಡಲಾರೆ ಎಂದುಬಿಟ್ಟರು. ಕೂಡಲೇ ಸರ್ಕಾರ ಮೋತಿಲಾಲ್ ಮತ್ತು ಜವಾಹರಲಾಲ್ ನೆಹರೂ, ಸೈಯ್ಯದ್ ಮಹಮದ್‌ರನ್ನು ಅವರು ಸೆರೆಯಲ್ಲಿದ್ದ ಸಂಯುಕ್ತ ಪ್ರಾಂತ್ಯ ಮತ್ತು ಬಿಹಾರಗಳಿಂದ ವಿಶೇಷ ರೈಲುಗಳ ಮೂಲಕ ಪೂನಾಗೆ ಕರೆತರುವ ಏರ್ಪಾಡು ಮಾಡಿತು. ಯೆರವಾಡಾ ಸೆರೆಮನೆಯಲ್ಲೇ ಇದ್ದ ವಲ್ಲಭಭಾಯಿ ಪಟೇಲ್ ಮತ್ತು ಸರೋಜಿನಿ ನಾಯ್ಡು ಅವರೂ ಸಭೆಗೆ ಸೇರಿಕೊಂಡರು. ಆಗಸ್ಟ್ ೧೫ ಹಾಗೂ ೧೬ರಂದು ನಡೆದ ಈ ಸಮಾಲೋಚನಾ ಸಭೆ, ಸರ್ಕಾರ ಸಂಧಾನ ಸಾಧ್ಯವಿಲ್ಲದಷ್ಟು ಪರಿಸ್ಥಿತಿಯನ್ನು ಪ್ರತಿಕೂಲಗೊಳಿಸಿದೆ ಎಂದು ತೀರ್ಮಾನಿಸಿ ಬರ್ಖಾಸ್ತಾಯಿತು. ದುಂಡು ಮೇಜಿನ ಪರಿಷತ್ತಿನಲ್ಲಿ ಕಾಂಗ್ರೆಸ್ ಪ್ರಾತಿನಿಧ್ಯವಿರುವುದಿಲ್ಲವೆಂದು ಇದರಿಂದ ಸ್ಪಷ್ಟವಾಯಿತು.

ನಿಗದಿಯಾದಂತೆ ಲಂಡನ್‌ನಲ್ಲಿ ದುಂಡು ಮೇಜಿನ ಪರಿಷತ್ತು ನಡೆಯಿತು. ಜಿನ್ನಾ ಸೇರಿದಂತೆ ಮುಸ್ಲಿಂ ಲೀಗ್‌ನ ಹಲವು ನಾಯಕರು, ಎಸ್.ವಿ. ಶ್ರೀನಿವಾಸ ಶಾಸ್ತ್ರಿ, ಸಪ್ರು ಮತ್ತು ಜಯಕರರನ್ನೊಳಗೊಂಡ ಸುಧಾರಣಾವಾದಿ ಭಾರತೀಯ ರಾಜಕಾರಣಿಗಳು, ನಿಮ್ನ ವರ್ಗಗಳ ಪ್ರತಿನಿಧಿಗಳು, ರಾಜಸಂಸ್ಥಾನಗಳ ದೊರೆಗಳು ಮತ್ತು ಬ್ರಿಟಿಷ್

ಸಾಮ್ರಾಜ್ಯ ಸರ್ಕಾರದ ಮತ್ತು ಸಂಸತ್ತಿನ ಪ್ರತಿನಿಧಿಗಳು ಭಾಗವಹಿಸಿದ್ದ ಈ ಸಮ್ಮೇಳನವನ್ನು ಪ್ರಧಾನಿ ರ್‍ಯಾಮ್ಸೆ ಮೆಕ್‌ಡೊನಾಲ್ಡ್ ಉದ್ಘಾಟಿಸಿದರು. ಆದರೆ ಭಾರತದ ಪ್ರಮುಖ ರಾಜಕೀಯ ವೇದಿಕೆಯಾಗಿದ್ದ ಕಾಂಗ್ರೆಸ್ ಇದರಲ್ಲಿ ಭಾಗವಹಿಸದೇ ಇದ್ದುದರಿಂದ ಅದು ಯಾವುದೇ ಫಲಿತಾಂಶವಿಲ್ಲದೆ ಮುಕ್ತಾಯವಾಯಿತು.

ಕವಿ ಇಕ್ಬಾಲ್‌ರ ಅಪಸ್ವರ–ವಿಭಜನೆಯ ಮೊದಲ ದನಿ

ಇದು ನಿರೀಕ್ಷಿತವೇ ಆಗಿದ್ದರೂ, ನಂತರ ೧೯೩೦ ರ ಡಿಸೆಂಬರ್ ಕೊನೆಯ ವಾರದಲ್ಲಿ–ಹಲವು ಹಿರಿಯ ನಾಯಕರು ಇನ್ನೂ ಲಂಡನ್‌ನಲ್ಲೇ ಇದ್ದಾಗ–ಅಲಹಾಬಾದ್‌ನಲ್ಲಿ ನಡೆದ ಮುಸ್ಲಿಂ ಲೀಗ್‌ನ ವಾರ್ಷಿಕ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಕವಿ ಮತ್ತು ತತ್ವಶಾಸ್ತ್ರಜ್ಞ ಎಂದು ಹೆಸರಾಗಿದ್ದ ಇಕ್ಬಾಲರು ಮಾಡಿದ ಭಾಷಣ ಗಾಂಧಿಯವರಿಗೆ ಅನಿರೀಕ್ಷಿತವೂ, ಆಘಾತಕಾರಿಯೂ ಆಗಿತ್ತು. ಇಂಗ್ಲಿಷ್‌ನಲ್ಲಿ ಭಾಷಣ ಮಾಡಿದ್ದ ಇಕ್ಬಾಲ್ ಐರೋಪ್ಯ ರಾಷ್ಟ್ರ ಕಲ್ಪನೆ ಬಹುಧರ್ಮಗಳ ಭಾರತದಲ್ಲಿ ಸೂಕ್ತವಾಗುವುದಿಲ್ಲ ಎನ್ನುತ್ತಾ, ಗಣನೀಯ ಸಂಖ್ಯೆಯಲ್ಲಿರುವ ಭಾರತದ ಮುಸ್ಲಿಮರಿಗಾಗಿ ಒಂದು ಪ್ರತ್ಯೇಕ ರಾಜಕೀಯ ಘಟಕ ಅಗತ್ಯವಾಗಿದೆ ಎಂದೂ, ಮುಸ್ಲಿಂ ನಾಯಕತ್ವ ಇದನ್ನು ಆಗ್ರಹಿಸಬೇಕೆಂದೂ ಹೇಳಿದ್ದರು. ಅವರು ಅಷ್ಟಕ್ಕೇ ನಿಲ್ಲದೆ, ಪಶ್ಚಿಮ ಭಾರತದ ಮುಸ್ಲಿಮರಿಗಾಗಿ ಪಂಜಾಬ್, ಸಿಂಧ್, ವಾಯುವ್ಯ ಗಡಿ ಪ್ರಾಂತ್ಯಗಳನ್ನು ಒಳಗೊಂಡ ಒಂದು ಭೌಗೋಳಿಕ ಪ್ರದೇಶವನ್ನೂ ಈ ಘಟಕಕ್ಕಾಗಿ ಗುರುತಿಸಿದ್ದರು.

ಮುಸ್ಲಿಂ ನಾಯಕತ್ವ ಈವರೆಗೆ ಶಾಸನ ಸಭೆಗಳಲ್ಲಿ ಆಡಳಿತ ವ್ಯವಸ್ಥೆಯಲ್ಲಿ, ಸರ್ಕಾರಿ ಹುದ್ದೆಗಳಲ್ಲಿ ಹೆಚ್ಚಿನ ಪ್ರಾತಿನಿಧ್ಯ ಮತ್ತು ಮೀಸಲಾತಿಗಾಗಿ ಹೋರಾಟ ನಡೆಸಿತ್ತೇ ಹೊರತು ಪ್ರತ್ಯೇಕ ರಾಜಕೀಯ ಘಟಕದ ಮಾತಾಡಿರಲಿಲ್ಲ. ಗಾಂಧಿ ನೇತೃತ್ವದ ರಾಷ್ಟ್ರೀಯ ಹೋರಾಟದ ಜಟಿಲತೆಗೆ ಈಗ ಇನ್ನೊಂದು ಆಯಾಮ ದೊರಕಿದ್ದಂತಾಗಿತ್ತು. ಇದು ಗಾಂಧಿಯವರ ಚಿಂತೆಯನ್ನು ಹೆಚ್ಚಿಸಿದ್ದರೆ ಆಶ್ಚರ್ಯವಿಲ್ಲ.

ಈ ಮಧ್ಯೆ ಗಾಂಧಿಯವರ ಆತ್ಮ ಚರಿತ್ರೆ 'ಸತ್ಯಾನ್ವೇಷಣೆ'ಯು ಪಶ್ಚಿಮ ದೇಶಗಳ ಪ್ರಕಾಶಕರಿಂದ ಪ್ರಕಟಣೆಗೊಂಡು ವಿವಿಧ ದೇಶಗಳ ವಿವಿಧ ಹಿನ್ನೆಲೆಗಳ ವಿಮರ್ಶಕರಿಂದ ಅವಲೋಕನಕ್ಕೊಳಪಟ್ಟಿತು. ಕೆಲವರು ಸಸ್ಯಾಹಾರ, ಅಹಿಂಸೆ, ಬ್ರಹ್ಮಚರ್ಯ, ತಂತ್ರಜ್ಞಾನ ಮುಂತಾದ ವಿಷಯಗಳನ್ನು ಕುರಿತ ಗಾಂಧಿ ಚಿಂತನೆಗಳನ್ನು ವಿಪರೀತವಾದವುಗಳೆಂದು ಟೀಕಿಸಿದರೆ, ಇನ್ನು ಕೆಲವರು ಇಂತಹ ದೌರ್ಬಲ್ಯಗಳ ನಡುವೆಯೂ ಅವರು ದಮನಿತರೊಂದಿಗೆ ಗುರುತಿಸಿಕೊಳ್ಳುವ ಅವರ ರಾಜಕಾರಣಕ್ಕಾಗಿ ಮೆಚ್ಚಿದ್ದರು. ಮತ್ತೆ ಕೆಲವರು ಇದೊಂದು ತನ್ನ ಎಲ್ಲ ತಪ್ಪುಗಳನ್ನೂ, ದೌರ್ಬಲ್ಯಗಳನ್ನೂ ಬಹಿರಂಗವಾಗಿ ನಿವೇದಿಸುವ ಒಂದು ಅಪರೂಪದ ಮತ್ತು ತನ್ನದೇ ರೀತಿಯಲ್ಲಿ ವಿಶಿಷ್ಟವಾದ ಆತ್ಮಕತೆ ಎಂದು ಬಣ್ಣಿಸಿದರು. ಇದೇ ವೇಳೆಯಲ್ಲಿ ಅಮೆರಿಕಾದ 'ಟೈಮ್ಸ್' ಪತ್ರಿಕೆ ಗಾಂಧಿಯವರನ್ನು ತನ್ನ 'ವರ್ಷದ ವ್ಯಕ್ತಿ' ಎಂದು ಆಯ್ಕೆ ಮಾಡಿತು.

■

೨೨
ಗಾಂಧಿ–ಇರ್ವಿನ್ ಒಪ್ಪಂದ

ನಾಯಕರ ಬಿಡುಗಡೆ–ಮೋತಿಲಾಲರ ನಿಧನ

ಲಂಡನ್‌ನ ದುಂಡು ಮೇಜಿನ ಪರಿಷತ್ತಿನ ಸಮಾರೋಪ ಭಾಷಣ ಮಾಡಿದ ಇಂಗ್ಲೆಂಡ್‌ನ ಪ್ರಧಾನಿ ಮೆಕ್‌ಡೊನಾಲ್ಡರು, ಭಾರತದ ರಾಜಕೀಯ ಸಮಸ್ಯೆಯನ್ನು ಸೌಹಾರ್ದಯುತವಾಗಿ ಪರಿಹರಿಸುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾ, ಮುಂದಿನ ದುಂಡು ಮೇಜಿನ ಪರಿಷತ್ತಿನಲ್ಲಿ (೧೯೩೧) ಕಾಂಗ್ರೆಸ್ ಭಾಗವಹಿಸುವ ಆಶಯವನ್ನು ವ್ಯಕ್ತಪಡಿಸಿ ಅದಕ್ಕಾಗಿ ತಮ್ಮ ಸರ್ಕಾರ ಎಲ್ಲ ಅವಕಾಶಗಳನ್ನೂ ತೆರೆದಿಡುವುದು ಎಂದು ಘೋಷಿಸಿದ್ದರು. ಇದರ ದನಿಯನ್ನು ಸರಿಯಾಗಿ ಗುರುತಿಸಿದಂತೆ ವೈಸ್‌ರಾಯ್ ಇರ್ವಿನ್‌ರು, ಕಾಂಗ್ರೆಸ್ ಈಗಾಗಲೇ ಭಾರತದ ಸ್ವಾತಂತ್ರ್ಯ ದಿನ ಎಂದು ಕೆಲವು ವರ್ಷಗಳ ಹಿಂದೆಯೇ ಘೋಷಿಸಿ ಆಚರಿಸಿಕೊಂಡು ಬರುತ್ತಿದ್ದ ಜನವರಿ ೨೬ರಂದು (೧೯೩೧) ಗಾಂಧಿಯವರನ್ನು ಸೆರೆಮನೆಯಿಂದ ಬಿಡುಗಡೆಗೊಳಿಸುವ ಆಜ್ಞೆಯನ್ನು ಹೊರಡಿಸಿದರು. ಗಾಂಧಿಯವರ ಜೊತೆ ನೆಹರೂ, ಪಟೇಲ್ ಮುಂತಾದ ೨೦ ಜನ ಹಿರಿಯ ಕಾಂಗ್ರೆಸ್ ಮುಖಂಡರನ್ನೂ ಬಿಡುಗಡೆಗೊಳಿಸಲಾಗಿತ್ತು. ಆಶ್ಚರ್ಯವೆಂದರೆ ತಮ್ಮ ಈ ಬಿಡುಗಡೆಯನ್ನು ಗಾಂಧಿ ಆಶ್ರಮವಾಸಿ ನಾರಾಯಣ ದಾಸ್ ಎಂಬುವವರಿಗೆ ಬರೆದ ಪತ್ರದಲ್ಲಿ, 'ನನ್ನ ಶಾಂತಿ–ನೆಮ್ಮದಿಯ ದಿನಗಳು ಮುಗಿದವು. ಪ್ರಕ್ಷುಬ್ಧತೆಯ ದಿನಗಳು ಮತ್ತೆ ಆರಂಭವಾದಂತಿವೆ!' ಎಂದು ಬರೆದಿದ್ದಾರೆ! ಅದೇನೇ ಇರಲಿ, ಅವರು ಬಿಡುಗಡೆಯಾದ ನಂತರ ಹೊರಟಿದ್ದು ಅಲಹಾಬಾದ್‌ಗೆ. ಅಲ್ಲಿ ಮೋತಿಲಾಲ್ ನೆಹರೂ ತೀವ್ರ ಅಸ್ವಸ್ಥರಾಗಿದ್ದಾರೆಂಬ ವಾರ್ತೆ ಅವರನ್ನು ತಲುಪಿತ್ತು. ಗಾಂಧಿ ಅಲಹಾಬಾದ್ ತಲುಪಿ ಮೋತಿಲಾಲರನ್ನು ಕಂಡು ಮಾತಾಡಿಸಿದ ಒಂದೆರಡು ದಿನಗಳಲ್ಲೇ–ಫೆಬ್ರುವರಿ ಆರರಂದು–ಮೋತಿಲಾಲರು ನಿಧನ ಹೊಂದಿದರು. ತಮ್ಮ ಮಾತುಗಳನ್ನು ಉಲ್ಲಂಘಿಸಿ ಅಧಿಕಾರಕ್ಕಾಗಿ ಹಂಬಲಿಸಿಯೂ, ಮತ್ತೆ ತಮ್ಮೆಡೆಗೆ ಒಲಿದಿದ್ದ ಈ ಹಿರಿಯನ ಸಾವು ಗಾಂಧಿಗೆ ಆಘಾತ ತಂದಿತ್ತು. ಮೋತಿಲಾಲರಿಗೆ ಆಗ ಅರವತ್ತೊಂಬತ್ತು ವರ್ಷವಷ್ಟೆ. ಯಾತಕ್ಕಾಗಿ ಈ ಹೋರಾಟ? ಎಂಬ ಪ್ರಶ್ನೆಯೂ ಆಗ ಗಾಂಧಿಯವರನ್ನು ಕಾಡಿರಬೇಕು. ಇದೇ ಸಂದರ್ಭದಲ್ಲಿ ಲಂಡನ್‌ನಿಂದ ಹಳೆಯ ಗೆಳೆಯ ಹೆನ್ರಿ ಪೋಲಾಕ್ ಬರೆದ ಪತ್ರವೂ ಗಾಂಧಿಯವರನ್ನು ಯೋಚನೆಗೆ ಹಚ್ಚಿತ್ತು. ಆತ ಸದ್ಯದ ಬ್ರಿಟಿಷ್ ಸರ್ಕಾರ, ಭಾರತದ ಬಗ್ಗೆ ಹೊಂದಿರುವ ಪ್ರೀತಿ ವಿಶ್ವಾಸಗಳು ಇತ್ತೀಚಿನ ದುಂಡು ಮೇಜಿನ ಪರಿಷತ್ತಿನ ಕಲಾಪಗಳಲ್ಲಿ ವ್ಯಕ್ತವಾಗಿದ್ದು, ಭಾರತಕ್ಕೆ ಸ್ವಾತಂತ್ರ್ಯ ಖಚಿತ ಎಂಬ ವಾತಾವರಣವಿರುವ ಈ

ಸಂದರ್ಭದಲ್ಲಿ ಸಂಘರ್ಷದ ಹಾದಿ ಉಚಿತವಾಗಲಾರದು ಎಂದು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದ. ಗಾಂಧಿಗೆ ಏನನ್ನಿಸಿತೋ ಏನೋ, ಅವರು ವೈಸ್‌ರಾಯ್‌ರ ಸಂದರ್ಶನ ಕೋರಿ ತಂತಿ ಕಳಿಸಿಬಿಟ್ಟರು. ಇದಕ್ಕೇ ಕಾಯುತ್ತಿದ್ದಂತೆ ವೈಸ್‌ರಾಯ್ ಇರ್ವಿನ್‌ರೂ ಮರುವಾರವೇ ದೆಹಲಿಗೆ ಬರುವಂತೆ ಗಾಂಧಿಗೆ ಆಹ್ವಾನವಿತ್ತರು.

ಗಾಂಧಿ–ಇರ್ವಿನ್ ಮಾತುಕತೆ ಆರಂಭ

ಮಾತುಕತೆ, ಅಂತಾರಾಷ್ಟ್ರೀಯ ಖ್ಯಾತಿಯ ವಾಸ್ತುಶಿಲ್ಪಿ ಎಡ್ವಿನ್ ಲೂಟ್ಯೆನ್ಸ್ ನಿರ್ಮಿಸತೊಡಗಿದ್ದ ನವದೆಹಲಿಯ ಎತ್ತರದ ಹದಿನಾರು ಎಕರೆ ಪ್ರದೇಶದಲ್ಲಿ ಅಮೃತಶಿಲೆಯೂ ಸೇರಿದಂತೆ ಹಲವು ಬಣ್ಣಗಳ–ತೆಳು ಕೆಂಪು ಬಣ್ಣ ಪ್ರಧಾನವಾದ ಮರಳು ಕಲ್ಲುಗಳಿಂದ ಐದೂವರೆ ಎಕರೆಯಲ್ಲಿ ಕಟ್ಟಲಾಗಿದ್ದ ೩೪೦ ಕೋಣೆಗಳ ಬೃಹತ್ ಮತ್ತು ಭವ್ಯ ವೈಸ್‌ರಾಯ್ ಅರಮನೆಯಲ್ಲಿ ಏರ್ಪಾಡಾಗಿತ್ತು. ಗಾಂಧಿ ಅಲ್ಲಿಂದ ಏಳು ಕಿ.ಮೀ. ದೂರದ ದರಿಯಾಗಂಜ್‌ನಲ್ಲಿದ್ದ ಕಾಂಗ್ರೆಸ್ ಮುಖಂಡ ಎಂ.ಎ. ಅನ್ಸಾರಿಯವರ ಮನೆಯಲ್ಲಿ ತಂಗಲು ನಿರ್ಧರಿಸಿದರು. ಅಗತ್ಯಬಿದ್ದರೆ ಸಮಾಲೋಚನೆಗಾಗಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರನ್ನೂ ದೆಹಲಿಗೆ ಆಹ್ವಾನಿಸಿದರು. ಮಾತುಕತೆಗೆ ಹೋಗಿ ಬರಲು ಅವರು ವಾಹನ ಸೌಲಭ್ಯವನ್ನು ನಿರಾಕರಿಸಿ, ವೈಸ್‌ರಾಯ್ ಅರಮನೆಗೆ ನಡೆದೇ ಹೋಗಿಬರಲು ತೀರ್ಮಾನಿಸಿ ವೈಸ್‌ರಾಯ್‌ರನ್ನು ದಂಗುಬಡಿಸಿದ್ದರು. ಅಷ್ಟೇ ಅಲ್ಲ, ಮಾತುಕತೆಯ ಮಧ್ಯದ ಊಟಕ್ಕಾಗಿ ಮೀರಾಬೆನ್‌ರ ಮೂಲಕ ತಮ್ಮದೇ ವ್ಯವಸ್ಥೆ ಮಾಡಿಕೊಂಡಿದ್ದರು.

ಫೆಬ್ರುವರಿ ೧೭ರ ಮಧ್ಯಾಹ್ನ ಎರಡೂವರೆ ಘಂಟೆಗೆ ಮಾತುಕತೆ ಆರಂಭವಾಯಿತು. ಗಾಂಧಿಯವರಲ್ಲಿ ಆಧ್ಯಾತ್ಮಿಕ ಶಕ್ತಿಯನ್ನು ಕಂಡಿದ್ದ ಇರ್ವಿನ್ ಈ ಮಾತುಕತೆಯನ್ನು ಗಾಂಧಿಯವರೇ ಆಹ್ವಾನಿಸಿದ್ದು ಎಂಬ ಗರ್ವವಿಲ್ಲದೆ ಗೌರವಾನ್ವಿತವಾಗಿಯೇ ಆರಂಭಿಸಿದರು. ಗಾಂಧಿ ಕೂಡ ಆತ್ಮೀಯತೆಯಿಂದ ತಮಗೆ ಮೀರಾಬೆನ್‌ಳಂತಹ ಸಾಕುಮಗಳೂ ಸೇರಿದಂತೆ ಅನೇಕ ಒಳ್ಳೆಯ ಇಂಗ್ಲಿಷ್ ಸ್ನೇಹಿತರಿದ್ದು, ಇಂಗ್ಲಿಷರನ್ನು ದ್ವೇಷಿಸುವ ಪ್ರಶ್ನೆಯೇ ಇಲ್ಲವೆಂದು ಹೇಳಿ ಮಾತುಕತೆಗೆ ಒಂದು ಸೌಹಾರ್ದಯುತ ಅಡಿಪಾಯವನ್ನು ಹಾಕಿದರು. ಮಾತುಕತೆ ಕೆಲ ದಿನಗಳಲ್ಲಿ ಅರ್ಧ ದಿನ, ಕೆಲ ದಿನ ಕೆಲ ತಾಸುಗಳಷ್ಟೇ ನಡೆಯುತ್ತಾ, ಮಧ್ಯಂತರದಲ್ಲಿ ಒಂದು ವಾರ ಮಾತುಕತೆಗಳೇ ನಡೆಯದಂತಾಗಿ, ಒಟ್ಟು ಹದಿನಾರು ದಿನಗಳು ಸಾಗಿದವು. ಗಾಂಧಿ ಕೆಲ ದಿನ ಎರಡು ಬಾರಿ ಅನ್ಸಾರಿಯವರ ಮನೆಯಿಂದ ಹೋಗಿ ಬರಬೇಕಾಗಿ ಬಂದರೆ, ಒಮ್ಮೆಯಂತೂ ಬೆಳಗಿನ ಜಾವ ಎರಡು ಘಂಟೆಯವರೆಗೂ ಮಾತುಕತೆಗಳು ನಡೆದು, ಆ ಸರಿಹೊತ್ತಿನಲ್ಲಿ ಒಬ್ಬರೇ ದರಿಯಾಗಂಜ್‌ಗೆ ನಡೆದುಹೋದದ್ದೂ ಉಂಟು. ಈ ಮಾತುಕತೆಯ ಉದ್ದೇಶ ಇರ್ವಿನ್‌ರ ದೃಷ್ಟಿಯಿಂದ ಗಾಂಧಿಯವರನ್ನು ಮುಂದಿನ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸುವಂತೆ ಮಾಡುವುದಾಗಿದ್ದರೆ, ಗಾಂಧಿಯ ದೃಷ್ಟಿಯಿಂದ ಸಂಪೂರ್ಣ ಸ್ವಾತಂತ್ರ್ಯವನ್ನು ಖಚಿತಪಡಿಸುವ ಕ್ರಮಗಳ ಪ್ರಕಟಣೆಯನ್ನು ಸರ್ಕಾರದಿಂದ ಹೊರಡಿಸುವುದಾಗಿತ್ತು. ಮಾತುಕತೆಗಳ ಸಮಯದಲ್ಲಿ ಇರ್ವಿನ್ ಅವರಿಗೆ, ತಮ್ಮ

ಸರ್ಕಾರದ ಗವರ್ನರ್‌ಗಳು ಮತ್ತು ಇತರೆ ಉನ್ನತ ಅಧಿಕಾರಿಗಳು ಹಾಗೂ ಲಂಡನ್‌ನಲ್ಲಿನ ಬ್ರಿಟಿಷ್ ಸಾಮ್ರಾಜ್ಯದ ಸರ್ಕಾರದೊಂದಿಗೆ ಸಮಾಲೋಚಿಸುವ ಅಗತ್ಯ ಕಂಡುಬರುತ್ತಿದ್ದರೆ ಗಾಂಧಿಯವರಿಗೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರೊಂದಿಗೆ ಚರ್ಚಿಸುವ ಅಗತ್ಯ ಬೀಳುತ್ತಿತ್ತು.

ಗಾಂಧಿಯವರ ಬೋಸ್ಟನ್ ಟೀ ಪಾರ್ಟಿ!

ಈ ಗಂಭೀರ ಮಾತುಕತೆಗಳ ಮಧ್ಯೆ ಇಬ್ಬರ ನಡುವೆ ಲಘುಧಾಟಿಯ ಮಾತುಗಳ ಬಾಣಗಳೂ ಹೊರಹೊಮ್ಮುತ್ತಿದ್ದುದುಂಟು. 'ಎಲ್ಲ ಬಿಟ್ಟು ಉಪ್ಪಿನ ಮೇಲಿನ ತೆರಿಗೆ ವಿರುದ್ಧ ಹೋರಾಟ ರೂಪಿಸಿದ ನಿಮ್ಮ ಜಾಣ್ಮೆ ಮೆಚ್ಚುವಂಥದ್ದೇ!' ಎಂದು ಇರ್ವಿನ್ ಹೇಳಿದರೆ, 'ನನ್ನನ್ನು ಅಷ್ಟು ದಿನ ಬಂಧಿಸದ ನಿಮ್ಮ ಜಾಣ್ಮೆ ಕಡಿಮೆ ಏನಲ್ಲ!' ಎಂಬುದು ಗಾಂಧಿಯವರ ಉತ್ತರವಾಗಿತ್ತು! ಮಾತುಕತೆಗಳ ಮಧ್ಯೆ ಇರ್ವಿನ್, 'ಟೀ ಕುಡಿಯೋಣವೇ' ಎಂದಾಗ ಗಾಂಧಿ, 'ಧನ್ಯವಾದಗಳು. ಆದರೆ ಸ್ವಲ್ಪ ತಾಳಿ' ಎಂದು ತಾವು ಹೊದ್ದಿದ್ದ ದುಪ್ಪಟಿಯೊಳಕ್ಕೆ ಕೈ ಹಾಕಿ, ಒಂದು ಕಾಗದದ ಪೊಟ್ಟಣ ತೆಗೆದು ಅದರಲ್ಲಿದ್ದ ಉಪ್ಪಿನ ಒಂದೆರಡು ಹರಳುಗಳನ್ನು ಆಯ್ದು ತಮ್ಮ ಮುಂದಿದ್ದ ಚಹಾಗೆ ಅದನ್ನು ಹಾಕಿ, 'ಇದೀಗ, ನಮ್ಮ ಬೋಸ್ಟನ್ ಟೀ ಪಾರ್ಟಿ!' ಎಂದಾಗ ಇರ್ವಿನ್‌ರಿಗೆ ತಡೆಯಲಾರದಷ್ಟು ನಗು! ಹಾಗೇ ಒಮ್ಮೆ ಊಟದ ಹೊತ್ತಿನಲ್ಲಿ ಗಾಂಧಿ, ತಮ್ಮದು ಈಗ ಊಟದ ಸಮಯವೆಂದು ಪ್ರಕಟಿಸಿ, ಅಲ್ಲೇ ಇದ್ದ ಮೀರಾಬೆನ್‌ರಿಗೆ ಊಟ ಕೊಡಲು ಹೇಳಿದಾಗ ಇರ್ವಿನ್‌ಗೆ ಕಸಿವಿಸಿ. ಮೀರಾ ತಂದುಕೊಟ್ಟ ಒಂದು ಹಿಡಿ ಬಾದಾಮಿ ತಿಂದು, ಅರ್ಧ ಲೋಟ ಮೇಕೆ ಹಾಲು ಕುಡಿದು ಬಾಯೊರೆಸಿಕೊಂಡಾಗ ಇರ್ವಿನ್‌ರಿಗೆ 'ಇದು ಊಟವೇ?' ಎಂಬ ಗಾಬರಿ!

ಐತಿಹಾಸಿಕ ಒಪ್ಪಂದಕ್ಕೆ ಸಹಿ–ಚರ್ಚಿಲ್‌ರ ಹಾರಾಟ!

ಇದನ್ನೆಲ್ಲ ಪತ್ರಿಕೆಗಳ ಮೂಲಕ ತಿಳಿದ ಚರ್ಚಿಲ್ ಹೌಹಾರಿದ. 'ರಾಜದ್ರೋಹಿಯಾದ ಬೈರಾಗಿ ವೇಷದಲ್ಲಿನ ಈ ಇನ್ನರ್ ಟೆಂಪಲ್‌ನ ವಕೀಲ, ಬ್ರಿಟಿಷ್ ಸಾಮ್ರಾಜ್ಯದ ಪರಮ ಅಧಿಕಾರದ ಸಂಕೇತಗಳಲ್ಲೊಂದಾದ ವೈಸ್‌ರಾಯ್ ಅರಮನೆಯ ಮೆಟ್ಟಿಲೇರಿ, ಅದರ ಪರಮ ಅಧಿಪತಿಯೊಬ್ಬರೊಂದಿಗೆ ಸಮಾನವಾಗಿ ಕೂತು ಮಾತಾಡುವುದೆಂದರೇನು! ಬ್ರಿಟಿಷ್ ಮರ್ಯಾದೆಗೆ ಕುಂದುಂಟು ಮಾಡುವ ಈ ರಾಜಕೀಯ ಆಟವನ್ನು ಕೂಡಲೇ ನಿಲ್ಲಿಸಬೇಕೆಂದು ಆರ್ಭಟಿಸಿದ.

ಆದರೆ ಇದಾವ ಆರ್ಭಟವನ್ನೂ ಲೆಕ್ಕಿಸದೆ ಮಾರ್ಚ್ ೫ ರಂದು ಗಾಂಧಿ–ಇರ್ವಿನ್ ಮಾತುಕತೆಗಳು ಯಶಸ್ವಿಯಾಗಿ ಮುಗಿದು ಒಂದು ಒಪ್ಪಂದಕ್ಕೆ ಸಹಿ ಹಾಕಲಾಯಿತು. ಆಧುನಿಕ ಭಾರತದ ಇತಿಹಾಸದಲ್ಲಿ, ಭಾರತದ ಸ್ವಾತಂತ್ರ್ಯದ ಬಾಗಿಲು ತೆರೆದ ಒಪ್ಪಂದವೆಂದೇ ಗುರುತಿಸಲಾಗುವ ಇದು, ಮುಂದೆ 'ಗಾಂಧಿ–ಇರ್ವಿನ್ ಒಪ್ಪಂದ'ವೆಂದೇ ಹೆಸರಾಯಿತು. ಈ ಒಪ್ಪಂದ ಮೇಲ್ನೋಟಕ್ಕೆ ಪ್ರಭುತ್ವದ ಪರವಿದ್ದಂತೆಯೇ ಕಂಡರೂ, ಅದರಲ್ಲಿ ಅಡಕವಾಗಿದ್ದ ಭಾರತ ಕುರಿತ ಇಂಗ್ಲಿಷ್ ಪ್ರಭುತ್ವದ ಸೌಹಾರ್ದ, ಸ್ವಾತಂತ್ರ್ಯ ಘೋಷಣೆಯ ಖಚಿತ ಸಾಧ್ಯತೆಯನ್ನು ಸೂಚಿಸುತ್ತಿತ್ತು. 'ದ ಲೈಫ್ ಆಫ್ ಮಹಾತ್ಮ ಗಾಂಧಿ' ಕೃತಿಯಲ್ಲಿ ಲೂಯಿ ಫಿಶರ್ ಹೇಳುವ ಹಾಗೆ, ಈ

ಒಪ್ಪಂದದ ನಂತರದ ಹದಿನೇಳು ವರ್ಷಗಳಲ್ಲಿ ಭಾರತ ಸ್ವತಂತ್ರ ರಾಷ್ಟ್ರವಾಗಿ ಘೋಷಿತವಾದದ್ದು ಸುಲಭದ ಸಾಧನೆಯಲ್ಲ; ಏಕೆಂದರೆ ಮುನ್ನೂರು ವರ್ಷಗಳ ಗುಲಾಮಗಿರಿಯಲ್ಲಿದ್ದ ಸಾವಿರಾರು ವರ್ಷಗಳ ಪರಂಪರೆಯುಳ್ಳ ದೇಶವೊಂದರ ಇತಿಹಾಸದಲ್ಲಿ ಹದಿನೇಳು ವರ್ಷ ಏನೇನೂ ಅಲ್ಲ. ಒಪ್ಪಂದ, ಪೂರ್ಣ ಸ್ವರಾಜ್ಯ ಅಥವಾ ಸ್ವಾಯತ್ತ ಆಶ್ರಯ ಪ್ರಭುತ್ವದ ಭರವಸೆಯ ಮಾತಾಡಿರಲಿಲ್ಲವಾದರೂ, ಆ ಹಾದಿಯಲ್ಲಿನ ಭಾರತದ ದೃಢ ಹೆಜ್ಜೆಗಳನ್ನು ಪ್ರಭುತ್ವ ಸಹಾನುಭೂತಿಯಿಂದ ಗಮನಿಸಿತ್ತು. ಹಾಗಾಗಿಯೇ ಅದು ಅಸಹಕಾರ ಸತ್ಯಾಗ್ರಹ ಸಂಬಂಧದ ಎಲ್ಲ ಬಂದಿಗಳನ್ನೂ ಬೇಷರತ್ತಾಗಿ ಬಿಡುಗಡೆ ಮಾಡಲು, ಮುಟ್ಟುಗೋಲು ಹಾಕಿಕೊಂಡ ಆದರೆ ಮಾರಾಟವಾಗದ ಸತ್ಯಾಗ್ರಹಿಗಳ ಜಮೀನುಗಳನ್ನು ಹಿಂದಿರುಗಿಸಲು, ಮಾರಾಟವಾದ ಜಮೀನನ್ನು ಮರಳಿ ಪಡೆಯಲು ಬೇಕಾದ ನೆರವು ನೀಡಲು, ಕರಾವಳಿ ಪ್ರದೇಶದಲ್ಲಿ ಜನರು ಮುಕ್ತವಾಗಿ ಉಪ್ಪು ತಯಾರಿಸಿಕೊಳ್ಳಲು, ಕಾಂಗ್ರೆಸ್ ಘಟಕಗಳ ಮೇಲಿನ ನಿಷೇಧವನ್ನು ಹಿಂತೆಗೆದುಕೊಳ್ಳಲು ಮತ್ತು ಮದ್ಯ ಮತ್ತು ವಿದೇಶೀ ವಸ್ತ್ರ ಮಾರಾಟದಂಗಡಿಗಳ ಮುಂದೆ ಶಾಂತಿಯುತ ಪ್ರತಿಭಟನೆಗಳನ್ನು ಅಕ್ರಮವೆಂದು ಪರಿಗಣಿಸದಿರಲು ಸರ್ಕಾರ ಒಪ್ಪಿತ್ತು. ಸರ್ಕಾರದ ಈ ಉದಾರ ನಿರ್ಧಾರಗಳ ಬದಲಿಗೆ, ಕಾಂಗ್ರೆಸ್ ಮುಂದಿನ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿ, ಭಾರತದ ಪ್ರಸ್ತಾವಿತ ಸಂವಿಧಾನದ ಬಗ್ಗೆ ಚರ್ಚಿಸಲು ಒಪ್ಪಿಕೊಂಡಿತ್ತು.

ಸುಭಾಷರ ಶ್ಲಾಘನೆ–ಕಮ್ಯೂನಿಸ್ಟರ ಖಂಡನೆ

ಈ ಒಪ್ಪಂದಕ್ಕೆ ಜನರಿಂದ ಸಂಭ್ರಮದ ಸ್ವಾಗತವನ್ನು ಕಂಡ, ಗಾಂಧಿ ಮಾರ್ಗದ ಬಗ್ಗೆ ಅಸಮಾಧಾನವನ್ನು ಹೊಂದಿದ್ದ ಸುಭಾಷರೂ ಗಾಂಧಿ ಮತ್ತು ಇರ್ವಿನ್‌ರಿಬ್ಬರನ್ನೂ ಈ ಸಾಧನೆಗಾಗಿ ಅಭಿನಂದಿಸಿದರು. ವಿದೇಶಗಳಿಂದ ಕೂಡ ಈ ಒಪ್ಪಂದದ ಬಗ್ಗೆ ಶ್ಲಾಘನೆಯ ಸಂದೇಶಗಳು ಬಂದವು. ಇಂಗ್ಲೆಂಡ್‌ನ ಟೋರಿಗಳ ಹೊರತಾಗಿ ಮಿಕ್ಕೆಲ್ಲರೂ ಒಪ್ಪಂದದ ಬಗ್ಗೆ ಸಮಾಧಾನ–ಹರ್ಷ ವ್ಯಕ್ತಪಡಿಸಿದ್ದರು. ಅಮೆರಿಕಾದಿಂದ ಬಂದ ಸಂದೇಶವೊಂದರಲ್ಲಿ, ಅಲ್ಲಿನ ಕಪ್ಪು ಜನರ ಮೇಲಿನ ಅನ್ಯಾಯಗಳನ್ನು ತಡೆಯಲು ಗಾಂಧಿ ಮಾರ್ಗ ಅತ್ಯುತ್ತಮವಾದದ್ದೆಂದು ಹೇಳಿತ್ತು. ಕೆಲವು ಅಮೆರಿಕನ್ ಸಂಸ್ಥೆಗಳು ಗಾಂಧಿಯವರನ್ನು ಅಮೆರಿಕಾಗೆ ಬರಲು ಆಹ್ವಾನಿಸಿ, ಅವರ ವಿಚಾರಗಳ ಪ್ರಚಾರಕ್ಕಾಗಿ ಸರ್ವ ಸೌಲಭ್ಯಗಳನ್ನು ಒದಗಿಸುವುದಾಗಿ ಭರವಸೆ ನೀಡಿತ್ತು. ಆದರೆ ಗಾಂಧಿ ತಾವು ಭಾರತದಲ್ಲಿ ಕೈಗೊಂಡಿರುವ ಪ್ರಯೋಗ ಕೊನೆಗೊಳ್ಳುವವರೆಗೆ ಎಲ್ಲಿಗೂ ಬರುವುದಿಲ್ಲವೆಂದು ಉತ್ತರಿಸಿದರು. ಸತ್ಯ ಮತ್ತು ಅಹಿಂಸೆಗಳ ಈ ಪ್ರಯೋಗದ ಯಶಸ್ಸು ಇಡೀ ಜಗತ್ತು ಈಗ ಹಂಬಲಿಸುತ್ತಿರುವ ಶಾಂತಿ ಸ್ಥಾಪನೆಗೆ ನೆರವಾಗುವುದು ಎಂದು ಅವರು ಆಶಿಸಿದರು. ಇದೇ ಸಮಯದಲ್ಲಿ ಅವರು ಭಾರತ ಸರ್ಕಾರದ ಅಧಿಕಾರಿಗಳು ಮತ್ತು ಪೊಲೀಸರಿಗೆ, ಅವರು ಜನರ ಯಜಮಾನರಂತಲ್ಲ, ಸೇವಕರಂತೆ ವರ್ತಿಸಲು ಕರೆ ಕೊಟ್ಟರು.

ಗಾಂಧಿ–ಇರ್ವಿನ್ ಒಪ್ಪಂದದ ಬಗ್ಗೆ ಭಾರತದಲ್ಲಿ ಅಪಸ್ವರಗಳೇ ಇರಲಿಲ್ಲವೆಂದು ಹೇಳಲಾಗದು. ಭಾರತದ ಕಮ್ಯೂನಿಸ್ಟ್ ಪಕ್ಷ ಈ ಒಪ್ಪಂದವನ್ನು, ದುಡಿಯುವ ಜನರ ಬೆನ್ನಿಗೆ ಹಾಕಿದ ಚೂರಿ ಎಂದು ವರ್ಣಿಸಿದರೆ, ಭಗತ್ ಸಿಂಗ್ ಮತ್ತು ಅವರ ಸಹಚರರ ಅಭಿಮಾನಿಗಳು, ಅವರನ್ನು ಮರಣದಂಡನೆಯ ಶಿಕ್ಷೆಯಿಂದ ಪಾರುಮಾಡಲಾಗದ ರಾಜಿ

ಒಪ್ಪಂದವೆಂದು ಖಂಡಿಸಿದರು.

ಭಗತ್‌ಸಿಂಗ್‌ರ ರಕ್ಷಣೆಗೆ ಗಾಂಧಿ ಪ್ರಯತ್ನಗಳು

ಆದರೆ ಬಹಳ ಜನಕ್ಕೆ ತಿಳಿಯದಿದ್ದ ಸಂಗತಿ ಎಂದರೆ ಇರ್ವಿನ್‌ರೊಡನೆಯ ಮಾತುಕತೆಯುದ್ದಕ್ಕೂ ಗಾಂಧಿ ಭಗತ್‌ಸಿಂಗ್ ಮತ್ತವರ ಗೆಳೆಯರನ್ನು ಮರಣ ದಂಡನೆಯಿಂದ ಪಾರು ಮಾಡುವಂತೆ ಸರ್ಕಾರವನ್ನು ಕೋರಿದ್ದರು ಎಂಬುದು. ಕನಿಷ್ಠ ಅವರ ಮರಣ ದಂಡನೆಯನ್ನು ಮುಂದೂಡುವಂತಾದರೂ ಅವರು ಒತ್ತಾಯಿಸಿದ್ದರು. ಇದು ಸಾಧ್ಯವಾಗದಿದ್ದರೆ ಮಾತುಕತೆಯನ್ನು ಒಂದು ಇತ್ಯರ್ಥಕ್ಕೆ ತಲುಪಿಸುವ ತಮ್ಮ ಪ್ರಯತ್ನಕ್ಕೆ ಹಿಂಜರಿತವಾಗುವ ಪರಿಸ್ಥಿತಿ ಇದೆಯೆಂದೂ ಅವರು ವಿವರಿಸಿದ್ದರು. ಆದರೆ ಈ ಮರಣ ದಂಡನೆ, ಬ್ರಿಟಿಷ್ ಸಾಮ್ರಾಜ್ಯದ ಉನ್ನತ ಪ್ರಾಧಿಕಾರದಿಂದ ಸ್ಥಿರೀಕರಿಸಲ್ಪಟ್ಟ ನಿರ್ಣಯವಾದ್ದರಿಂದ, ನಿರ್ಧಾರ ತಮ್ಮ ಅಧಿಕಾರವನ್ನು ಮೀರಿದ್ದು ಎಂದು ಇರ್ವಿನ್ ತಮ್ಮ ಅಸಹಾಯಕತೆ ತೋಡಿಕೊಂಡಿದ್ದರಲ್ಲದೆ, ಅಹಿಂಸೆಯ ಪ್ರತಿಪಾದಕರಿಂದ ಹಿಂಸಾವಾದಿಗಳ ರಕ್ಷಣೆಯ ಕೋರಿಕೆಯನ್ನು ತಾವು ಮನ್ನಿಸುವುದು ಹೇಗೆಂದು ಗಾಂಧಿಯವರನ್ನೇ ಪ್ರಶ್ನಿಸಿದ್ದರು. ಒಪ್ಪಂದಕ್ಕೆ ಸಹಿ ಹಾಕಿದ ನಂತರ, ಬಂದಿಗಳ ಬಿಡುಗಡೆ ವಿಳಂಬವಾಗುತ್ತಿರುವ ಬಗ್ಗೆ ಚರ್ಚಿಸಲು ಮಾರ್ಚ್ ಎರಡನೆಯ ವಾರದಲ್ಲಿ ವೈಸ್‌ರಾಯ್‌ರನ್ನು ಭೇಟಿ ಮಾಡಿದಾಗಲೂ, ಗಾಂಧಿ, ಮಾರ್ಚ್ ೨೩ಕ್ಕೆ ನಿಗದಿಯಾಗಿದ್ದ ಭಗತ್‌ಸಿಂಗ್‌ರ ಗಲ್ಲು ಶಿಕ್ಷೆಯನ್ನು ಮುಂದೂಡಲು ಕ್ರಮ ಕೈಗೊಳ್ಳುವಂತೆ ವೈಸ್‌ರಾಯ್‌ರನ್ನು ಒತ್ತಾಯಿಸಿದರು. ಮರಣ ದಂಡನೆಯನ್ನು ರದ್ದು ಮಾಡುವ ಸಾಧ್ಯತೆಗಳು ಕಡಿಮೆಯಾದ್ದರಿಂದ, ಅದನ್ನು ಮುಂದೂಡಿಸುತ್ತಾ ಹೋಗುವುದೇ ವ್ಯಾವಹಾರಿಕ ಮಾರ್ಗವೆಂದು ಗಾಂಧಿ ಭಾವಿಸಿದ್ದರು. ಇದಕ್ಕೆ ಅವಕಾಶ ಮಾಡಬಹುದಾಗಿದ್ದ ಮೇಲ್ಮನವಿ ಸಲ್ಲಿಸಲು ಅಥವಾ ಕ್ಷಮಾಪಣಾ ಪತ್ರವನ್ನು ಬರೆದುಕೊಡಲು, ಭಗತ್‌ಸಿಂಗ್ ತಮ್ಮ ತಂದೆಯವರಿಗೂ ಅಡ್ಡಿ ಮಾಡಿದ ಕಾರಣ ಗಾಂಧಿಯವರ ಎಲ್ಲ ಪ್ರಯತ್ನಗಳೂ ವಿಫಲವಾಗಿದ್ದವು. ಆದರೆ ಇರ್ವಿನ್‌ರೊಡನೆಯ ತಮ್ಮ ಇಡೀ ಒಪ್ಪಂದವನ್ನು ಭಗತ್‌ಸಿಂಗ್ ಮತ್ತವರ ಸಹಚರರ ಬಿಡುಗಡೆಯ ಪ್ರಶ್ನೆಗೆ ಒತ್ತೆ ಇಡಬೇಕಿತ್ತೆಂಬ ಕ್ರಾಂತಿಕಾರಿಗಳ ಗುಂಪಿನ ವಾದವನ್ನು ಗಾಂಧಿ ಒಪ್ಪಲಿಲ್ಲ. ಅವರ ಪ್ರಕಾರ ಈ ಒಪ್ಪಂದ ಇನ್ನೂ ಹೆಚ್ಚಿನ ಘನ ಉದ್ದೇಶಗಳಿಂದ ಪ್ರೇರಿತವಾಗಿತ್ತು.

ಆದರೂ ಗಾಂಧಿ ಮಾರ್ಚ್ ೨೪ಕ್ಕೆ ಕರಾಚಿಯಲ್ಲಿ ಆರಂಭವಾಗಲಿದ್ದ ಕಾಂಗ್ರೆಸ್‌ನ ವಾರ್ಷಿಕ ಅಧಿವೇಶನಕ್ಕಾಗಿ ರೈಲು ಹತ್ತುವ ಮುನ್ನವೂ ವೈಸ್‌ರಾಯ್‌ಗೆ ಪತ್ರ ಬರೆದು, ಭಗತ್‌ಸಿಂಗ್‌ರನ್ನು ಉಳಿಸುವುದಾದರೆ, ತಾನು ಹಿಂಸೆಯಿಂದ ದೂರ ಸರಿಯುವುದಾಗಿ ಹೇಳಿದ್ದ ಅವರ ಪಕ್ಷದ ಮಾತನ್ನು ಉಲ್ಲೇಖಿಸಿದ್ದರು. ಭಗತ್‌ಸಿಂಗ್‌ರಿಗೆ ವಿಧಿಸಲಾಗಿರುವ ಗಲ್ಲು ಶಿಕ್ಷೆಯನ್ನು ರದ್ದುಗೊಳಿಸಬೇಕೆಂಬುದರ ಬಗೆಗಿನ ಜನಾಭಿಪ್ರಾಯ ಸರಿಯೋ ತಪ್ಪೋ, ಅದನ್ನು ಸದ್ಯಕ್ಕಾದರೂ ಮಾನ್ಯ ಮಾಡುವುದರಿಂದ ಯಾವ ತತ್ವ ನಷ್ಟವೂ ಆಗುವುದಿಲ್ಲವೆಂದು ಸೂಚಿಸಿದ್ದರು. ಅಲ್ಲದೆ ಗಲ್ಲು ಶಿಕ್ಷೆಯ ನಿರ್ಧಾರದಲ್ಲಿ ಮುಂದೊಂದು ದಿನ ತಪ್ಪು ಕಂಡರೆ ಅದಕ್ಕಾಗಿ ವಿಷಾದಪಡುವುದಕ್ಕಿಂತ, ಅದನ್ನು ಮತ್ತೊಮ್ಮೆ ಪರಿಶೀಲಿಸಲು ಅನುವಾಗುವಂತೆ ಶಿಕ್ಷೆಯನ್ನು ಮುಂದೂಡಬೇಕೆಂದು ಅವರು ಮನವಿ

ಮಾಡಿದ್ದರು. ಆದರೆ ಗಾಂಧಿ ರೈಲು ಪ್ರಯಾಣದ ಮಧ್ಯದಲ್ಲಿದ್ದಾಗಲೇ ಭಗತ್‌ಸಿಂಗ್, ಸುಖದೇವ್ ಮತ್ತು ರಾಜಗುರು ಅವರುಗಳನ್ನು ಲಾಹೋರ್ ಸೆರೆಮನೆಯಲ್ಲಿ ಗಲ್ಲಿಗೇರಿಸಲಾಯಿತು. ಮೂವ್ವರೂ 'ಇಂಕ್ವಿಲಾಬ್ ಜಿಂದಾಬಾದ್' ಎಂಬ ಘೋಷಣೆಗಳನ್ನು ಕೂಗುತ್ತಾ ನೇಣುಗಂಬವನ್ನೇರಿದ್ದರು. ತಾವು ಪ್ರಭುತ್ವದ ವಿರುದ್ಧ ಯುದ್ಧ ಘೋಷಿಸಿದ್ದಾಗಿ ನ್ಯಾಯಾಲಯ ಹೇಳಿರುವುದರಿಂದ, ತಮ್ಮನ್ನು ಯುದ್ಧ ಬಂದಿಗಳಂತೆ ಪರಿಗಣಿಸಿ ಸೇನೆಯ ಗುಂಡಿನಿಂದ ಕೊಲ್ಲಬೇಕೆಂಬ ಈ ಮುವ್ವರ ಕೊನೆಯ ಮನವಿಯನ್ನು ಸರ್ಕಾರ ತಿರಸ್ಕರಿಸಿತ್ತು. ಮಾರ್ಚ್ ೨೪ರಂದು ದೇಶಾದ್ಯಂತ ಹರತಾಳ ಆದರಿಸಲಾಯಿತು.

ಕರಾಚಿ ಕಾಂಗ್ರೆಸ್ ಅಧಿವೇಶನ–ದುಂಡು ಮೇಜಿನ ಪರಿಷತ್ತಿಗೆ ಒಪ್ಪಿಗೆ

ಮಾರ್ಚ್ ೨೫ರಂದು ಗಾಂಧಿ ಅಧಿವೇಶನದ ನಿಯೋಜಿತ ಅಧ್ಯಕ್ಷ ವಲ್ಲಭಭಾಯಿ ಪಟೇಲರೊಡನೆ ಕರಾಚಿ ತಲುಪಿದಾಗ ಭಗತ್ ಸಿಂಗ್ ಅಭಿಮಾನಿಗಳು, ಅವರ ಡಬ್ಬಿಯ ಕಿಟಕಿಯ ಗಾಜುಗಳನ್ನು ಒಡೆದು, ಗಾಂಧಿ ವಿರೋಧಿ ಘೋಷಣೆಗಳನ್ನು ಕೂಗಿದರು. ಕೆಲವರು ಡಬ್ಬಿಯ ಒಳನುಗ್ಗಿ ಗಾಂಧಿಯವರನ್ನು ಕೆಟ್ಟ ಮಾತುಗಳಲ್ಲಿ ದೂಷಿಸಿದರು. ಅವರಲ್ಲಿ ಒಬ್ಬ ಅವರಿಗೆ ಕಪ್ಪುಬಣ್ಣದ ಕಾಗದದ ಗುಲಾಬಿ ನೀಡಿ ಕರಾಚಿಗೆ 'ಸ್ವಾಗತ' ಕೋರಿದ. ಆದರೆ ಯಾರೂ ಗಾಂಧಿಯವರ ಮೇಲೆ ದೈಹಿಕ ಹಲ್ಲೆಗೆ ಯತ್ನಿಸಲಿಲ್ಲ ಎನ್ನುವುದು ಗಮನಾರ್ಹ. ಕಾಂಗ್ರೆಸ್ ಅಧಿವೇಶನ ಭಗತ್‌ಸಿಂಗ್ ಮತ್ತವರ ಗೆಳೆಯರ ಗಲ್ಲು ಮತ್ತು ಕೆಲ ದಿನಗಳ ಹಿಂದೆ ಕಾನ್‌ಪುರದಲ್ಲಿ ಪ್ರಮುಖ ಕಾಂಗ್ರೆಸ್ ಮುಖಂಡ ಗಣೇಶಶಂಕರ ವಿದ್ಯಾರ್ಥಿಯನ್ನು ಬಲಿತೆಗೆದುಕೊಂಡಿದ್ದ ಹಿಂದೂ–ಮುಸ್ಲಿಂ ಗಲಭೆಯ ಹಿನ್ನೆಲೆಯಲ್ಲಿ ಯಾವುದೇ ಸಂಭ್ರಮವಿಲ್ಲದೆ ಮಂಕು ಹಿಡಿದಂತೆ ನಡೆಯಿತು. ಈ ಅಧಿವೇಶನದಲ್ಲಿ ಮೊದಲ ಬಾರಿಗೆ, ಜಾತಿ, ಲಿಂಗ, ಪಂಗಡಗಳ ತಾರತಮ್ಯವಿಲ್ಲದ ಮೂಲಭೂತ ಹಕ್ಕುಗಳ ಮತ್ತು ಸರ್ಕಾರ ಧರ್ಮದ ವಿಷಯದಲ್ಲಿ ತಟಸ್ಥವಾಗಿರುವ, ಭಾಷೆ, ಸಂಸ್ಕೃತಿ ಮತ್ತು ಪತ್ರಿಕಾ ಸ್ವಾತಂತ್ರ್ಯವನ್ನು ಕಾಪಾಡುವ ಹಾಗೂ ಭಾರಿ ಕೈಗಾರಿಕೆಗಳನ್ನು ಸರ್ಕಾರ ವಶಪಡಿಸಿಕೊಳ್ಳುವ ಪ್ರಸ್ತಾವವನ್ನು ಅಂಗೀಕರಿಸಿತು. ಸಂಯುಕ್ತ ಪ್ರಾಂತಗಳ ಸಮಾಜವಾದಿ ಒಲವಿನ ಕಾಂಗ್ರೆಸ್ಸಿಗರು ಆಚಾರ್ಯ ನರೇಂದ್ರದೇವ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕಳಿಸಿದ್ದ ಕರಡು ನಿರ್ಣಯದ ಆಧಾರದ ಮೇಲೆ ಈ ಪ್ರಸ್ತಾವವನ್ನು ರೂಪಿಸಲಾಗಿತ್ತು. ಹಾಗೆಯೇ ಭಗತ್‌ಸಿಂಗ್ ಮತ್ತವರ ಗೆಳೆಯರ ಹೋರಾಟದ ಮಾರ್ಗವನ್ನು ಒಪ್ಪದಿದ್ದರೂ ಅವರ ತ್ಯಾಗವನ್ನು ಕೃತಜ್ಞತೆಯಿಂದ ನೆನೆಯುವ ನಿರ್ಣಯವನ್ನೂ ಅಂಗೀಕರಿಸಿತು. ಜೊತೆಗೆ ಗಾಂಧಿ–ಇರ್ವಿನ್ ಒಪ್ಪಂದಕ್ಕೆ ತನ್ನ ಒಪ್ಪಿಗೆಯನ್ನು ನೀಡಿತಲ್ಲದೆ ಮುಂದಿನ ದುಂಡು ಮೇಜಿನ ಪರಿಷತ್ತಿಗೆ ಗಾಂಧಿಯವರನ್ನು ಏಕಮೇವ ಪ್ರತಿನಿಧಿಯಾಗಿ ಕಳಿಸಲೂ ತೀರ್ಮಾನಿಸಿತು.

ಭಗತ್‌ಸಿಂಗ್ ಸಹಚರ ಸುಖದೇವ್ ಸೆರೆಮನೆಯಲ್ಲಿ ಗಾಂಧಿಗೆ ಬರೆದ 'ಬಹಿರಂಗ' ಪತ್ರವನ್ನು ಗಾಂಧಿ, 'ಯಂಗ್ ಇಂಡಿಯಾ'ದಲ್ಲಿ ಪ್ರಕಟಿಸಿದರು. ಆ ಪತ್ರದಲ್ಲಿ ಸುಖದೇವ್, ಗಾಂಧಿ ನಿಜವಾಗಿ ಕ್ರಾಂತಿಕಾರಿಗಳು ಹಿಂಸೆಯನ್ನು ಬಿಡಬೇಕೆಂದು ಭಾವಿಸಿದ್ದರೆ ಅವರು ಆ ಗುಂಪಿನೊಂದಿಗೆ ಮಾತಾಡಬೇಕಿತ್ತು ಎಂದು ಹೇಳುತ್ತಾ ಕ್ರಾಂತಿಕಾರಿ ದಾರಿಯೊಂದೇ

ಜನತೆಯ ದಮನ ಮತ್ತು ಶೋಷಣೆಗಳಿಗೆ ಪರಿಹಾರವೆಂದೂ ಬಹುಬೇಗನೇ ಜನ ಇವರನ್ನು ಹಿಂಬಾಲಿಸುವ ದಿನ ದೂರವಿಲ್ಲೆಂದೂ ಸೂಚಿಸಿದ್ದ. ಗಾಂಧಿ, ಇದಕ್ಕೊಂದು ಟಿಪ್ಪಣಿ ಬರೆದು, ಅಹಿಂಸೆ ಕುರಿತ ತಮ್ಮ ನಿಲುವು ಭಾವನಾತ್ಮಕವಲ್ಲವೆಂದೂ, ಅದು ವಾಸ್ತವ ಸಂಗತಿಗಳನ್ನು ಆಧರಿಸಿದ್ದೆಂದೂ ಹೇಳುತ್ತಾ, ಕ್ರಾಂತಿಕಾರಿಗಳು ಎಲ್ಲೂ ಜನಜಾಗೃತಿಯ ಕೆಲಸ ಮಾಡಿಲ್ಲವೆಂದೂ, ಅವರ ಚಟುವಟಿಕೆಗಳು ಜನರ ಹಣದ ಮೇಲೆ ನಡೆಯುವ ಸರ್ಕಾರದ ಸೇನಾ ನಿರ್ವಹಣಾ ವೆಚ್ಚವನ್ನು ಹೆಚ್ಚಿಸುತ್ತದೆ ಮತ್ತು ಸಾಮಾನ್ಯ ಜನರನ್ನು ಸರ್ಕಾರದಿಂದ ತೊಂದರೆಗಳಿಗೆ ಈಡು ಮಾಡುತ್ತದೆಂದು ವಿವರಿಸಿದರಲ್ಲದೆ, ಈ ಚಟುವಟಿಕೆಗಳು ನಮ್ಮನ್ನು ಸ್ವರಾಜ್ಯದತ್ತ ಒಂದು ಹೆಜ್ಜೆಯಷ್ಟೂ ಮುಂದೆ ಮುನ್ನಡೆಸಿಲ್ಲ ಎಂದು ಸೂಚಿಸಿದರು.

ಇರ್ವಿನ್‌ರ ನಿರ್ಗಮನ–ಗಾಂಧಿಯವರ ತಾಕಲಾಟ

ಇದೇ ಹೊತ್ತಿಗೆ ಲಾರ್ಡ್ ಇರ್ವಿನ್‌ರನ್ನು ವೈಸ್‌ರಾಯ್ ಹುದ್ದೆಯಿಂದ ಹಿಂದಕ್ಕೆ ಕರೆಸಿಕೊಂಡ ಲಂಡನ್, ಈ ಮುನ್ನ ಬಾಂಬೆ ಮತ್ತು ಮದ್ರಾಸ್ ಪ್ರಾಂತ್ಯಗಳ ಗವರ್ನರ್ ಆಗಿದ್ದ ಮತ್ತು ಈಗ ಕೆನಡಾದ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ವಿಲ್ಲಿಂಗ್‌ಡನ್‌ರನ್ನು ಅವರ ಜಾಗಕ್ಕೆ ನೇಮಿಸಿತು. ೧೯೩೧ರ ಏಪ್ರಿಲ್‌ನಲ್ಲಿ ಅಧಿಕಾರ ಸ್ವೀಕರಿಸಿದ ವಿಲ್ಲಿಂಗ್‌ಡನ್‌ಗೆ ಗಾಂಧಿ–ಇರ್ವಿನ್ ಒಪ್ಪಂದದ ಅನೇಕ ಅಂಶಗಳು ಒಪ್ಪಿಗೆಯಾಗಲಿಲ್ಲ. ಇದರಿಂದಾಗಿ ದೇಶದ ಅನೇಕ ಕಡೆ ಬಂದಿಗಳ ಬಿಡುಗಡೆ ಮತ್ತು ಗುಜರಾತ್‌ನ ರೈತ ಸತ್ಯಾಗ್ರಹಕ್ಕೆ ಸಂಬಂಧಿಸಿದಂತೆ, ರೈತರ ಭೂಮಿಯನ್ನು ವಾಪಸ್ ಕೊಡುವ ವಿಷಯದಲ್ಲಿ ಅನೇಕ ಅಡ್ಡಿ ಆತಂಕಗಳು ಉಂಟಾಗಿ, ಗಾಂಧಿ, ಎರಡನೇ ದುಂಡು ಮೇಜಿನ ಪರಿಷತ್ತಿಗೆ ಹೋಗುವುದರ ಬಗ್ಗೆ ಮರು ಆಲೋಚನೆ ಮಾಡುತ್ತಿರುವುದಾಗಿ ಹಲವೆಡೆ ಪ್ರಕಟಿಸಿಯೂ ಬಿಟ್ಟರು. ಆಗ ಬೇಸಿಗೆ ರಾಜಧಾನಿ ಸಿಮ್ಲಾದಲ್ಲಿದ್ದ ವಿಲ್ಲಿಂಗ್‌ಡನ್‌ರನ್ನೂ ಭೇಟಿ ಮಾಡಿ ಬಂದರು. ಆದರೂ ಗುಜರಾತ್‌ನ ರೈತ ಸತ್ಯಾಗ್ರಹದಲ್ಲಿ ಭಾಗವಹಿಸಿದವರ ಸಂಕಷ್ಟಗಳ ಪರಿಹಾರದ ಸೂಚನೆಗಳು ಕಾಣಲಿಲ್ಲ. ಅವರು ಈ ಬಗ್ಗೆ ವೈಸ್‌ರಾಯ್‌ಗೆ ತಂತಿ ಕಳಿಸಿದರು ಮತ್ತು ತಮ್ಮ ಸ್ನೇಹಿತರಿಗೆ ತಾವು ಲಂಡನ್‌ಗೆ ಹೋಗುವ ಸಾಧ್ಯತೆ ತೀರಾ ಕಡಿಮೆ ಎಂದು ಹೇಳಿದರು. ಆಗಸ್ಟ್ ೧೩ರಂದು ಬಾಂಬೆಯಲ್ಲಿ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯ ನಂತರವೂ ಅವರು ಸುದ್ದಿಗಾರರೊಂದಿಗೆ ಮಾತನಾಡುತ್ತಾ, ತಮ್ಮ ಲಂಡನ್ ಯಾತ್ರೆಯನ್ನು ರದ್ದುಪಡಿಸುವಂತಹ ಅನಿವಾರ್ಯ ಪರಿಸ್ಥಿತಿಗೆ ನನ್ನನ್ನು ಸರ್ಕಾರ ದೂಡಿದೆ ಎಂದು ತಿಳಿಸಿದರು.

ಅಂಬೇಡ್ಕರ್‌ರ ಪ್ರಚೋದನೆ–ಮಿರ್ಜಾ ಇಸ್ಮಾಯಿಲ್‌ರ ಪ್ರೇರಣೆ

ಆದರೆ ನಂತರದ ಒಂದು ವಾರದಲ್ಲಿಯೇ ಗಾಂಧಿ ಮನಸ್ಸು ಬದಲಾಯಿಸಿದ್ದರು. ನಿತ್ಯ ವ್ಯವಹಾರಗಳ ವಿಷಯಗಳ ಬಗ್ಗೆ ತಲೆ ಕೆಡಿಸಿಕೊಳ್ಳುವ ಕಾಲ ಇದಲ್ಲ. ನನ್ನ ವಚನವನ್ನು ನಾನು ಪಾಲಿಸಲು ಸಿದ್ಧನಿದ್ದೇನೆ ಎಂಬ ತಂತಿಯನ್ನು ವೈಸ್‌ರಾಯ್‌ಗೆ ಕಳಿಸಿ ತಮ್ಮ ಲಂಡನ್ ಯಾತ್ರೆಯನ್ನು ಖಚಿತಪಡಿಸಿದರಲ್ಲದೆ, ಈ ಸಂಬಂಧ ಸಿಮ್ಲಾದಲ್ಲಿ ವಿಲ್ಲಿಂಗ್‌ಡನ್‌ರನ್ನೂ ಭೇಟಿ ಮಾಡಿ ಮಾತುಕತೆ ನಡೆಸಿದರು. ಹೀಗೆ ಒಂದು ವಾರದಲ್ಲಿ

ಗಾಂಧಿ ಮನಸ್ಸು ಬದಲಿಸಲು ಕಾರಣಗಳೇನಿರಬಹುದು? ತಮ್ಮ 'ಗಾಂಧಿ' ಕೃತಿಯಲ್ಲಿ ರಾಮಚಂದ್ರ ಗುಹಾ, ಈ ಸಂಬಂಧ ಎರಡು ಕಾರಣಗಳನ್ನು ಊಹಿಸುತ್ತಾರೆ. ಒಂದು, ಆಗಸ್ಟ್ ೧೪ರಂದು ಡಾ. ಬಿ.ಆರ್. ಅಂಬೇಡ್ಕರ್ ಅವರು ಗಾಂಧಿಯನ್ನು ಭೇಟಿ ಮಾಡಿದ ನಂತರ ನೀಡಿದ ಹೇಳಿಕೆ. ಇನ್ನೊಂದು ತಮ್ಮ ಜನಪರ ಆಡಳಿತ ಶೈಲಿಗೆ ಹೆಸರಾಗಿದ್ದ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್‌ರು ಗಾಂಧಿಗೆ ಬರೆದ ಪತ್ರ. ಅಂಬೇಡ್ಕರ್ ಪ್ರಕಾರ ಗಾಂಧಿಯವರಿಗೆ ದೇಶದ ಅಸ್ಪೃಶ್ಯರ ಸಮಸ್ಯೆಗಳಿಗಿಂತ, ತಮ್ಮ ರಾಜ್ಯದ ಬಾರ್ಡೋಲಿ ರೈತರ ಸಮಸ್ಯೆ ದೊಡ್ಡದಾಗಿತ್ತು. ಗಾಂಧಿ ಅಸ್ಪೃಶ್ಯರ ಪ್ರತ್ಯೇಕ ಮತಕ್ಷೇತ್ರಗಳ ಬೇಡಿಕೆಯ ಪರಮವಿರೋಧಿಯಾಗಿದ್ದು, ತಾವು ಲಂಡನ್ ಸಮ್ಮೇಳನದಲ್ಲಿ ಪ್ರತ್ಯೇಕ ಮತಕ್ಷೇತ್ರದ ಬೇಡಿಕೆಯನ್ನು ಪ್ರಬಲವಾಗಿ ಪ್ರತಿಪಾದಿಸುವುದಾಗಿ ಹೇಳಿದ್ದರು. ಇನ್ನು ಗಾಂಧಿ ಬಹುವಾಗಿ ಗೌರವಿಸುತ್ತಿದ್ದ ಮಿರ್ಜಾ ಇಸ್ಮಾಯಿಲರು 'ನೀವು ಲಂಡನ್‌ಗೆ ಹೋಗಬೇಕು. ಅಲ್ಲಿನ ಜನ ನಿಮ್ಮನ್ನು ಖಂಡಿತ ಮೆಚ್ಚುತ್ತಾರೆ. ನಿಮ್ಮನ್ನು ಸ್ವಾಗತಿಸುವುದು ಗೌರವದ ಕೆಲಸವೆಂದು ಅವರು ಭಾವಿಸುತ್ತಾರೆ. ಎರಡು ದೇಶಗಳ ನಡುವೆ ಶಾಂತಿ ಮತ್ತು ಸಾಮರಸ್ಯವನ್ನು ಮೂಡಿಸುವ ಮತ್ತು ಈ ವಿಷಯದಲ್ಲಿ ಜಗತ್ತಿಗೊಂದು ನಿದರ್ಶನವಾಗುವ ಈ ಅವಕಾಶವನ್ನು ಕಳೆದುಕೊಳ್ಳದಿರಿ. ಇದು ನಿಮಗೆ ಮಾತ್ರ ಸಾಧ್ಯವಿರುವ ಕೆಲಸ' ಎಂದು ಪತ್ರ ಬರೆದು ಒತ್ತಾಯಿಸಿದ್ದರು.

ಲಂಡನ್ ನಗರ ಗಾಂಧಿಯವರ ನೆಚ್ಚಿನ ನಗರವಾಗಿತ್ತು. ಅಲ್ಲಿಗೆ ಭೇಟಿ ಕೊಡುವುದು ಅವರಿಗೆ ಸಂತೋಷದ ವಿಷಯವೇ ಆಗಿತ್ತು. ಆದರೆ ಅದಕ್ಕಿಂತ ಹೆಚ್ಚಾಗಿ ಅಂಬೇಡ್ಕರ್ ಅವರ ಮಾತುಗಳು ಅವರಲ್ಲಿ ಎಚ್ಚರಿಕೆಯ ಘಂಟೆಗಳನ್ನು ಮೊಳಗಿಸಿದ್ದವು ಎಂದೇ ಹೇಳಬೇಕು. ಹಾಗೇ ಗಾಂಧಿ, ತಮಗೆ ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರ ಒದಗಿಸುವುದು ಆತ್ಮಹತ್ಯಾಕಾರಿ ಎಂದು ಹೇಳಿದ್ದು ಅಂಬೇಡ್ಕರ್‌ಗೆ ಆಘಾತ ತಂದಿತ್ತು. ಹಾಗೆ ನೋಡಿದರೆ ಅಂಬೇಡ್ಕರ್, ತಾವು ವಿಧ್ಯುಕ್ತವಾಗಿ ಸಾರ್ವಜನಿಕ ಜೀವನವನ್ನು ಪ್ರವೇಶಿಸಿದ, ೧೯೨೭ರಲ್ಲಿ ಮಹಾಡ್ ಕೆರೆ ನೀರು ಮುಟ್ಟುವ ಚಳುವಳಿಯನ್ನು ಗಾಂಧಿಯವರ ಸ್ಫೂರ್ತಿಯಲ್ಲೇ, ಅವರ ಭಾವಚಿತ್ರವನ್ನು ಮುಂದಿಟ್ಟುಕೊಂಡೇ, ಸತ್ಯಾಗ್ರಹದ ಮಾದರಿಯಲ್ಲಿ ನಡೆಸಿದ್ದರು. ಆದರೆ ನಂತರದ ಈ ಮೂರು ವರ್ಷಗಳಲ್ಲಿ ಇಬ್ಬರ ದಾರಿ ಕವಲೊಡೆದಿತ್ತು. ಅದಕ್ಕೆ ಸದ್ಯದ ಭೇಟಿಯು ಒಂದು ನೆಪವಾಗಿದ್ದರೂ ಆಶ್ಚರ್ಯವಿಲ್ಲ. ಏಕೆಂದರೆ ಗಾಂಧಿಗೆ, ತಮಗಿಂತ ಇಪ್ಪತ್ತೆರೆಡು ವರ್ಷ ಚಿಕ್ಕವರಾಗಿದ್ದ ಅಂಬೇಡ್ಕರ್ ಬಗ್ಗೆ ಏನೂ ತಿಳಿದಿರಲಿಲ್ಲ. ಮುಖ್ಯವಾಗಿ, ಮಹಾರಾಷ್ಟ್ರದ ಹಲವು ಪ್ರಗತಿಶೀಲ ಬ್ರಾಹ್ಮಣರಂತೆ ಅಂಬೇಡ್ಕರ್‌ರೂ, ಅಸ್ಪೃಶ್ಯರ ಏಳಿಗೆಗೆ ಕೆಲಸ ಮಾಡಬಯಸಿರುವ ಓರ್ವ ಬ್ರಾಹ್ಮಣ ಯುವಕರಿರಬೇಕೆಂದು ಭಾವಿಸಿ, ಆ ಭೇಟಿಯ ಸಮಯದಲ್ಲಿ ಅವರನ್ನು ನಿರೀಕ್ಷಿತ ಗೌರವಾದರಗಳಿಂದ ಮಾತಾಡಿಸದೇ ಇರಬಹುದು. ಅಂಬೇಡ್ಕರ್ ಅವರ ಜನಪ್ರಿಯ ಜೀವನ ಚರಿತ್ರೆ ಬರೆದಿರುವ ಧನಂಜಯ ಖೀರ್ ಅವರ ಪುಸ್ತಕದಲ್ಲಿಯೂ ಈ ಭೇಟಿಯ ಬಗ್ಗೆ ಇಂತಹ ವರ್ಣನೆ ಇದೆ. ಅದೇನೇ ಇದ್ದರೂ, ಈ ಇಬ್ಬರು ಮಹಾ ನಾಯಕರ ನಡುವೆ ಮುಂದೆ ನಡೆದ ಐತಿಹಾಸಿಕ ವಾಗ್ವಾದದ ಆರಂಭ ಇಲ್ಲಿಂದಲೇ ಆಯಿತು ಎನ್ನಬಹುದು.

■

೭೩

ದುಂಡು ಮೇಜಿನ ಪರಿಷತ್ತು: ಲಂಡನ್‌ಗೆ ಪಯಣ

ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಹೊರಟ ಗಾಂಧಿಯವರ ಅಧಿಕೃತ ಪರಿವಾರದಲ್ಲಿ, ಅವರ ಇಬ್ಬರು ಆಪ್ತ ಕಾರ್ಯದರ್ಶಿಗಳಾದ ಮಹದೇವ ದೇಸಾಯಿ ಮತ್ತು ಪ್ಯಾರೇಲಾಲ್ ಹಾಗೂ ಕಿರಿಯ ಮಗ ದೇವದಾಸ ಮತ್ತು ದತ್ತು ಪುತ್ರಿ ಮೀರಾಬೆನ್ ಇದ್ದರು. ಇವರೊಂದಿಗೆ ಹೊರಟ ಇನ್ನೊಂದು ಖಾಸಗಿ ತಂಡದಲ್ಲಿ ಸರೋಜಿನಿ ನಾಯ್ಡು, ಮದನಮೋಹನ ಮಾಳವೀಯ, ಜಿ.ಡಿ. ಬಿರ್ಲಾ ಮತ್ತಿತರರು ಇದ್ದರು. ೧೯೩೧ರ ಆಗಸ್ಟ್ ೨೯ರಂದು ಎಸ್.ಎಸ್. ರಜಪುತಾಣ ಎಂಬ ಹಡಗಿನಲ್ಲಿ ಮುಂಬೈನಿಂದ ಈ ಎರಡು ವಾರಗಳ ಪ್ರಯಾಣ ಆರಂಭವಾಯಿತು. ಗಾಂಧಿ ತಮ್ಮ ಸಂಗಡಿಗರಿಗೆ ಮೂರನೇ ದರ್ಜೆ ಪ್ರಯಾಣಕ್ಕಾಗಿ ಅತ್ಯಂತ ಕಡಿಮೆ ಸಾಮಾನು-ಸರಂಜಾಮುಗಳೊಂದಿಗೆ ಸಿದ್ಧವಾಗಬೇಕೆಂದು ಹೇಳಿದ್ದರು. ಆದರೆ ಹಡಗು ಹತ್ತಿದಾಗ ತಮ್ಮ ಪರಿವಾರಕ್ಕೆ ಸೇರಿದ ಗುಡ್ಡದಷ್ಟು ಹೊರೆಯನ್ನು ನೋಡಿ ಅಸಮಾಧಾನಗೊಂಡ ಅವರು ಆಡೆನ್ ಬಂದರಿನಲ್ಲಿ, ಹಲವು ಸೂಟ್‌ಕೇಸುಗಳು ಮತ್ತು ಪೆಟ್ಟಿಗೆಗಳನ್ನು ಇಳಿಸಿ ಭಾರತಕ್ಕೆ ವಾಪಸು ಕಳಿಸಿದರು. ಆಡೆನ್ ಮತ್ತು ಮಾರ್ಸಿಲೆ ಬಂದರುಗಳಲ್ಲಿ ಸಾವಿರಾರು ಜನ ಗಾಂಧಿಯನ್ನು ನೋಡಲು, ಮಾತನಾಡಿಸಲು ಧಕ್ಕೆಯಲ್ಲಿ ಕಾದು ನಿಂತಿದ್ದರು. ಫಾಕ್ಸ್ ಚಿತ್ರಸಂಸ್ಥೆಯವರು ಒಂದು ಚಿತ್ರೀಕರಣ ತಂಡದೊಂದಿಗೇ ಬಂದಿದ್ದರು. ಅವರಿಗೆಲ್ಲ ನಮಸ್ಕರಿಸಿ ಮುಂದುವರೆದ ಗಾಂಧಿ, ತಮ್ಮ ನೌಕಾ ಪ್ರಯಾಣದುದ್ದಕ್ಕೂ ನೌಕೆಯ ಉಪ್ಪರಿಗೆಯ ಛಾವಣಿಯಲ್ಲೇ ಹೆಚ್ಚು ಕಾಲ ಕಳೆದರು. ಉಪಹಾರ-ಊಟ, ಓದು-ಬರವಣಿಗೆ, ನೂಲುವುದು, ಮಾತುಕತೆ, ಮಕ್ಕಳೊಂದಿಗೆ ಆಟ, ಕೊನೆಗೆ ಕೆಲವೊಮ್ಮೆ ನಿದ್ರೆ ಕೂಡ ಅಲ್ಲಿಯೇ. ಅವರು ಕೆಲಕಾಲ ಹಡಗಿನ ಚಾಲಕನ ಕೋಣೆಯಲ್ಲಿದ್ದು, ಚಾಲಕನ ಕೋರಿಕೆಯಂತೆ ಕ್ಷಣ ಕಾಲ ಹಡಗಿನ ಚಾಲನೆಯನ್ನೂ ಮಾಡಿದರು!

ಹಡಗು ಸೂಯೆಜ್ ಕಾಲುವೆಯ ಬಂದರಿಗೆ ಬಂದಾಗ ಗಾಂಧಿಯನ್ನು ಕಾಣಲು, ಈಜಿಪ್ಟ್‌ನ ಜನತೆ ಅತ್ತ ಹಿಂಡು ಹಿಂಡಾಗಿ ಹೊರಟಾಗ ಕವಿ ಶೌಕಿ, 'ಅವರು ಹಿಂದೂ ಮುಸ್ಲಿಂ ಎರಡೂ ಶಕ್ತಿಗಳನ್ನು ಒಗ್ಗೂಡಿಸುತ್ತಿರುವ ಅನುಭಾವಿ.' ಎಂದು ವರ್ಣಿಸಿ 'ಅವರ ದರ್ಶನಕ್ಕಿಂತ ಅವರ ಮಾರ್ಗದಲ್ಲಿ ನಡೆಯುವುದನ್ನು ಕಲಿಯಿರಿ' ಎಂದು ಸಲಹೆಯಿತ್ತರು.

ಮೇಕೆಗಳ ಹಿಂಡು–ಮಣ್ಣಿನ ರಾಶಿ

ಸೆಪ್ಟೆಂಬರ್ ೧೨ರಂದು ಗಾಂಧಿ ಲಂಡನ್ ತಲುಪಿದಾಗ ನೂರಾರು ಜನ ಪತ್ರಕರ್ತರು ಅವರನ್ನು ಮುತ್ತಿ, ಪ್ರಶ್ನೆಗಳ ಸುರಿಮಳೆಗರೆದರು. ಒಬ್ಬ 'ನೀವು ದೊರೆಯನ್ನು ಭೇಟಿ ಮಾಡುವಿರಾ? ಮಾಡಿದಲ್ಲಿ ಯಾವ ಉಡುಪಿನಲ್ಲಿ ಹೋಗುವಿರಿ?' ಅದಕ್ಕೆ ಗಾಂಧಿ ಕೊಟ್ಟ ಉತ್ತರ: 'ಅದು ಹವಾಮಾನದ ಮೇಲೆ ಅವಲಂಬಿಸಿರುತ್ತದೆ'. 'ಲಂಡನ್‌ನಲ್ಲಿನ ನಾಟಕ ಮಂದಿರಗಳಿಗೆ ನೀವು ಭೇಟಿ ನೀಡುವುದಿಲ್ಲವೆ?' ಒಬ್ಬ ಸುದ್ದಿಗಾರ ಕೇಳಿದ. 'ನನಗೆ ನಾಟಕ ಇಷ್ಟ, ವಿಶೇಷವಾಗಿ ಶೇಕ್ಸ್‌ಪಿಯರ್‌ನ ನಾಟಕಗಳು. ಇಲ್ಲಿ ಹಿಂದೆ ಅವನ್ನು ನೋಡಿದ್ದೆ. ಎಲೆನ್ ಟೆರಿ ನನ್ನ ಮೆಚ್ಚಿನ ನಟಿಯಾಗಿದ್ದಳು. ಹಾಗೆ ನೋಡಿದರೆ ನಾನು ಖುಷಿಯಾಗಿರಲು ಇಷ್ಟಪಡುವ ಮನುಷ್ಯ. ಅಂದ ಮಾತ್ರಕ್ಕೆ ನನ್ನನ್ನು ಭಲಾರೆ ಮುದುಕ ಎಂದುಕೊಳ್ಳಬೇಡಿ! ನನಗೀಗ ಪುರುಸೊತ್ತಿಲ್ಲ. ಕೈತುಂಬ ಕೆಲಸವಿದೆ.' ಅಂದಿನ ಒಂದು ಪತ್ರಿಕೆ, ಗಾಂಧಿ ಕುಡಿಯುವ ಹಾಲಿಗಾಗಿ ಮೇಕೆಗಳ ಒಂದು ಮಂದೆಯನ್ನೇ ಹಡಗಿನಲ್ಲಿ ಸಾಗಿಸಿ ತರಲಾಗಿದೆ ಎಂದು ಬರೆದಿದ್ದರೆ, ಇನ್ನೊಂದು ಪತ್ರಿಕೆ ಲಂಡನ್‌ನಲ್ಲಿ ಹಿಂದೂ ದೇವರುಗಳ ಮೂರ್ತಿಗಳನ್ನು ಪ್ರತಿಷ್ಠಾಪಿಸಲು ಗಂಗಾನದಿಯ ಒಂದು ದೊಡ್ಡ ರಾಶಿ ಮಣ್ಣನ್ನು ತರಲಾಗಿದೆ ಎಂದು ಬರೆದಿತ್ತು.

ಲಂಡನ್‌ನಲ್ಲಿ ಗಾಂಧಿ ಭಾರತೀಯರ ವಸತಿ ಪ್ರದೇಶದಲ್ಲಿದ್ದರೆ ಅನುಕೂಲವೆಂದು ಬಿರ್ಲಾ ಮತ್ತಿತರರು ನಗರದ ಆರ್ಯ ಸಮಾಜ ಭವನವನ್ನು ಸಜ್ಜುಗೊಳಿಸಿದ್ದರಾದರೂ, ಮತ್ತೆ ಕೆಲವರು ಕೆಲ ಸುಸಜ್ಜಿತ ಹೋಟೆಲ್‌ಗಳನ್ನು ಸೂಚಿಸಿದರಾದರೂ, ತಮಗಾಗಿ ಹೆಚ್ಚಿನ ಖರ್ಚು ಬೇಡವೆಂದ ಗಾಂಧೀಜಿ ಆಯ್ಕೆ ಮಾಡಿದ್ದು, ನಗರದ ಅತಿ ಬಡ ವಸತಿ ಪ್ರದೇಶವೆನಿಸಿದ್ದ ಈಸ್ಟ್ ಲಂಡನ್‌ನ ಕ್ವೇಕರ್ ಕಾಲೋನಿಯ ಕಿಂಗ್‌ಸ್ಲೆ ಭವನವನ್ನು. ಬಡವರ ಸೇವೆಗಾಗಿ ಜೀವನ ಮುಡಿಪಾಗಿಟ್ಟಿದ್ದ ಮ್ಯುರಿಲ್ ಲೆಸ್ಟರ್, ತನ್ನ ಸೋದರಿ ಡೆರಿಸ್ ಜೊತೆಯಲ್ಲಿ ಅಲ್ಲಿನ ಕೊಳಚೆ ಪ್ರದೇಶದ ಬಡವರಿಗಾಗಿ, ಯುದ್ಧದಲ್ಲಿ ಮೃತನಾದ ತನ್ನ ಸೋದರನ ಸ್ಮರಣೆಯಲ್ಲಿ, ಈ ಪುನರ್ವಸತಿ ಕೇಂದ್ರ ಮತ್ತು ಮಕ್ಕಳಿಗಾಗಿ ಶಾಲೆಯಿದ್ದ ಈ ಸಂಕೀರ್ಣವನ್ನು ಕಟ್ಟಿಸಿದ್ದಳು. ಗಾಂಧಿ ಅಭಿಮಾನಿಯಾಗಿದ್ದ ಆಕೆ, ಒಮ್ಮೆ ಭಾರತದಲ್ಲಿ ಗಾಂಧಿಯವರನ್ನು ಕಂಡು ಬಂದಿದ್ದಳು ಕೂಡ. ಗಾಂಧಿ, ಆ ಭವನದ ಒಂದು ಕುರ್ಚಿ, ಒಂದು ಮೇಜು ಮತ್ತು ಮಲಗಲು ಒಂದು ಮರದ ಹಲಗೆಯಿಂದ ಸಜ್ಜಾದ ಒಂದು ಚಿಕ್ಕ ಕೋಣೆಯಲ್ಲಿ ವಾಸ್ತವ್ಯ ಹೂಡಿದರು. ಡಿಸೆಂಬರ್ ೫ರಂದು ಲಂಡನ್‌ನನ್ನು ಬಿಡುವವರೆಗೂ ೮೪ ದಿನಗಳೂ ಅವರು ಅಲ್ಲಿಯೇ ಇದ್ದರು. ಅದು ದುಂಡುಮೇಜಿನ ಪರಿಷತ್ತು ನಡೆಯುವ ಸೇಂಟ್ ಜೇಮ್ಸ್ ಪ್ಯಾಲೇಸ್‌ನಿಂದ ಐದಾರು ಮೈಲಿಗಳಷ್ಟು ದೂರವಿದ್ದ ಕಾರಣ ಸುದ್ದಿ ಗೋಷ್ಠಿ, ಸಂದರ್ಶನ, ದಸ್ತಾವೇಜು ನಿರ್ವಹಣೆ, ಅಧಿಕೃತ ವ್ಯವಹಾರ, ಸಭಾ ಕಲಾಪಗಳ ನಡುವಣ ವಿಶ್ರಾಂತಿ ಇತ್ಯಾದಿಗೆಂದು ಆ ಜಾಗಕ್ಕೆ ಹತ್ತಿರವಾದ ನೈಟ್ಸ್‌ಬ್ರಿಡ್ಜ್ ಎಂಬಲ್ಲಿ ಒಂದು ಸಣ್ಣ ಕಛೇರಿಯನ್ನೂ ತೆರೆಯಲು ಒಪ್ಪಿಗೆ ಸೂಚಿಸಿದ್ದರು. ಆದರೆ ಲಂಡನ್‌ನಲ್ಲಿದ್ದಾಗಲೆಲ್ಲ ಅವರು ರಾತ್ರಿ ಎಷ್ಟೇ ಹೊತ್ತಾದರೂ ಕಿಂಗ್ಸ್‌ಲೇ ಭವನಕ್ಕೆ ಹಿಂತಿರುಗುತ್ತಿದ್ದರು.

ಗಾಂಧಿ ಮತ್ತು ಅವರ ಪರಿವಾರದ ರಕ್ಷಣೆಗಾಗಿ ಸ್ಕಾಟ್ಲೆಂಡ್ ಯಾರ್ಡ್ (ಬ್ರಿಟಿಷ್ ಪೋಲೀಸ್ ಇಲಾಖೆ) ಒಂದು ಪೋಲೀಸ್ ತಂಡವನ್ನೇ ಕಿಂಗ್ಸ್‌ಲೇ ಭವನದ ಬಳಿ ಇರಿಸಿತ್ತು. ಹಗಲಿರುಳೂ ಕ್ರಿಯಾಶೀಲವಾಗಿರುತ್ತಿದ್ದ ಈ ತಂಡ ತಮ್ಮನ್ನು ಸೆರೆಯಾಳನ್ನಾಗಿಸಿದೆ ಎಂದು ಗಾಂಧಿ ತಮಾಷೆ ಮಾಡುತ್ತಿದ್ದರಾದರೂ, ಪ್ರತಿದಿನ ತಂಡದ ಪ್ರತಿ ಸದಸ್ಯನ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದರು.

ಹೇ ಗಾಂಧಿ! ನಿಮ್ಮ ಚೆಡ್ಡಿ ಎಲ್ಲಿ?

ಪ್ರತಿ ಬೆಳಿಗ್ಗೆ ಗಾಂಧಿ ಕ್ವೇಕರ್ ಕಾಲೋನಿಯ ಬೀದಿಗಳಲ್ಲಿ ವಾಯುವಿಹಾರ ಮಾಡುತ್ತಿದ್ದರು. ವಿಚಿತ್ರ ಉಡುಪಿನ ಈ ವ್ಯಕ್ತಿಯನ್ನು ನೋಡಲು ಜನ ಕಿಟಕಿ ಬಾಗಿಲುಗಳ ಬಳಿ ಬಂದು ನಿಲ್ಲುತ್ತಿದ್ದರು. ನಿತ್ಯವೂ ಅವರನ್ನು ನೋಡುತ್ತಿದ್ದ ಹಾಲಿನವರು, ವೃತ್ತಪತ್ರಿಕೆಯ ಹುಡುಗರು ಅವರಿಗೆ 'ಗುಡ್ ಮಾರ್ನಿಂಗ್' ಹೇಳುತ್ತಿದ್ದರು. ಕೆಲವು ಮಕ್ಕಳು ಅವರನ್ನು ಹಿಂಬಾಲಿಸಿದರೆ ಇನ್ನು ಕೆಲವರು ಅವರ ಕೈ ಹಿಡಿದು ನಡೆಯುತ್ತಿದ್ದರು. ಒಬ್ಬ ಹುಡುಗ ಚೇಷ್ಟೆ ಮಾಡುತ್ತಾ 'ಹೇ ಗಾಂಧಿ! ನಿಮ್ಮ ಚೆಡ್ಡಿ ಎಲ್ಲಿ?' ಎಂದು ಕೂಗಿ, ಗಾಂಧಿ ಬಾಯ್ತುಂಬಾ ನಗಲು ಕಾರಣನಾದ. ಕೆಲ ಮನೆಯವರು ಗಾಂಧಿ ತಮ್ಮ ಮನೆಗೆ ಬರಲೆಂದು ಬಯಸಿದರು. ಗಾಂಧಿ ಕಷ್ಟದಲ್ಲಿದ್ದವರೆಂದು ಗೊತ್ತಾದ ಮನೆಗಳಿಗೆ ಹೋಗಿ ಯೋಗಕ್ಷೇಮ ವಿಚಾರಿಸಿ ಬಂದರು.

ಗಾಂಧಿ ಲಂಡನ್‌ನಲ್ಲಿ ನೆಲೆಸಿದ ದಿನವೇ, ಅಮೆರಿಕಾದ ಕೊಲಂಬಿಯಾ ಬ್ರಾಡ್‌ಕಾಸ್ಟಿಂಗ್ ಕಂಪೆನಿಗಾಗಿ ಅಮೆರಿಕಾದ ಜನರಿಗಾಗಿ ಒಂದು ನೇರ ರೇಡಿಯೋ ಪ್ರಸಾರ ಭಾಷಣ ಮಾಡಬೇಕಾಯಿತು. ಅದರಲ್ಲಿ ಅವರು ಈವರೆಗೆ ಜಗತ್ತಿನ ದೇಶಗಳು ತಮ್ಮ ಬಿಡುಗಡೆಗಾಗಿ ನಡೆಸಿದ, ಮನುಷ್ಯನ ಘನತೆಗೆ ತಕ್ಕುದಲ್ಲದ ಪಶುಬಲದ ರಕ್ತಸಿಕ್ತ ಹೋರಾಟಕ್ಕೆ ಪರ್ಯಾಯವಾದ, ಸತ್ಯ ಮತ್ತು ಅಹಿಂಸೆಗಳನ್ನು ಆಧರಿಸಿದ ತಮ್ಮ ಹೋರಾಟ ಜಗತ್ತಿನ ಗಮನ ಸೆಳೆದಿದೆ ಎಂದು ತಿಳಿಸಿದರಲ್ಲದೆ ಈ ಹೋರಾಟದಲ್ಲಿ ಈಗ ಕಂಡು ಬಂದಿರುವ ಹಿಂದೂ–ಮುಸ್ಲಿಂ ಒಡಕಿನ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಿದರು.

ಗಾಂಧಿ ನಡೆಸಿದ ನಿಜ ದುಂಡು ಮೇಜಿನ ಪರಿಷತ್ತು

ಗಾಂಧಿ ಈ ನಂತರದ ದಿನಗಳಲ್ಲಿ ತಾವು ತಮ್ಮ ಯೌವ್ವನದ ಮೂರು ವರ್ಷಗಳನ್ನು ಕಳೆದಿದ್ದ ಇಂಗ್ಲೆಂಡ್‌ನ ಅನೇಕ ಸ್ಥಳಗಳಿಗೆ ಭೇಟಿ ನೀಡಿ ಅನೇಕ ಜನರನ್ನು ಕಂಡರು. ಈ ಪಯಣ, ಭೇಟಿ ಮತ್ತು ಮಾತುಕತೆಗಳೇ ನಿಜವಾದ ದುಂಡು ಮೇಜಿನ ಪರಿಷತ್ತು ಎಂದ ಅವರು ಈ ಮೂಲಕ ಭಾರತದ ಪರ ಇಂಗ್ಲಿಷ್ ಜನರ ಸೌಹಾರ್ದ ಮತ್ತು ಅರಿವುಗಳನ್ನು ಹೆಚ್ಚಿಸುವ ಕೆಲಸ ಮಾಡಿದರು.

ಅವರು ಹೀಗೆ ಮೊದಲು ಭೇಟಿ ಮಾಡಿದ್ದು, ಸೆಪ್ಟೆಂಬರ್ ೧೩ರಂದು ಬ್ರಿಟನ್‌ನ ಪ್ರಧಾನಿ ರ್‍ಯಾಮ್ಸೆ ಮೆಕ್‌ಡೊನಾಲ್ಡ್ ಅವರನ್ನು. ಅವರೊಂದಿಗೆ ಬೆಳಗಿನ ವಾಯುವಿಹಾರ ಮಾಡಿದ ಗಾಂಧಿ, ಆರ್ಥಿಕ ಹಿಂಜರಿತದ ಆ ಕಾಲದಲ್ಲಿನ ಆಡಳಿತದ ಸಂಕಷ್ಟಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡರು. ನಂತರ ಅವರು ಭೇಟಿ ಮಾಡಿದ್ದು, ತಾವು

ಬಂಧನದಲ್ಲಿದ್ದಾಗ ತಮಗೆ ಅಪೆಂಡಿಸೈಟಿಸ್ ಶಸ್ತ್ರಚಿಕಿತ್ಸೆ ಮಾಡಿದ ಡಾ. ಮೆಡೋಕ್ಸ್ ಅವರನ್ನು. ಅವರ ತೋಟದಲ್ಲಿ ಅವರ ಕುಟುಂಬದೊಂದಿಗೆ ಕೆಲ ತಾಸು ಕಳೆದ ಅವರು, ನಂತರ ಭೇಟಿ ಮಾಡಿದ್ದು ದ.ಆಫ್ರಿಕಾದ ಮಾಜಿ ನಾಯಕ ಜ.ಸ್ಮಟ್ಸ್‌ರನ್ನು. ಆತ ಈಗ ನಗುತ್ತಾ 'ಆ ದಿನಗಳಲ್ಲಿ ನೀವು ನನಗೆ ಕೊಟ್ಟಷ್ಟು ಕಷ್ಟವನ್ನು ನಾನು ನಿಮಗೆ ನೀಡಲಿಲ್ಲ ಎಂದು ಭಾವಿಸುತ್ತೇನೆ' ಎಂದಾಗ ಗಾಂಧಿ ಮರುನಕ್ಕು, 'ಹೌದೆ? ಅದು ನನಗೆ ತಿಳಿಯದು!' ಎಂದು ಅವರ ಕೈಕುಲುಕಿದರು.

ಚಾರ್ಲಿ ಚಾಪ್ಲಿನ್–'ಸಣ್ಣ ಮಹಾತ್ಮ'!

ಎಂದೂ ಚಲನಚಿತ್ರಗಳನ್ನೇ ನೋಡದ ಗಾಂಧಿ, ಚಿತ್ರನಟ ಚಾರ್ಲಿ ಚಾಪ್ಲಿನ್‌ರನ್ನು ಭೇಟಿ ಮಾಡಲು ಇಷ್ಟಪಡಲಿಲ್ಲವಾದರೂ, ಚಾಪ್ಲಿನ್‌ರ ಆಹ್ವಾನವನ್ನು, ಆತ ಕಡುಬಡತನದ ಈಸ್ಟ್ ಎಂಡ್‌ನ ಹಿನ್ನೆಲೆಯಿಂದ ಬಂದವನು ಎಂಬ ಶಿಫಾರ್ಸಿನ ಮೇರೆಗೆ ಒಪ್ಪಿ ಭೇಟಿ ಮಾಡಿದರು. ಈ ಭೇಟಿಯಲ್ಲಿ ಎರಡೂ ಕಡೆಯಿಂದ ನಗುವಿನ ಹೊಳೆಗಳೇ ಹರಿದುಹೋದವೆಂದು ಹೇಳಬಹುದು. ಯಂತ್ರಗಳನ್ನು ಕುರಿತ ಗಾಂಧಿ ನಿಲುವಿನ ಬಗ್ಗೆ ಕೇಳಿದ್ದ ಚಾಪ್ಲಿನ್, ಆ ವಿಷಯದ ಬಗ್ಗೆ ಗಾಂಧಿಯವರ ಜೊತೆ ವಿಸ್ತೃತವಾಗಿ ಮಾತಾಡಿದ. ಈ ಮಾತುಕತೆಯೇ ಆತನ ಮುಂದಿನ 'ಮಾಡರ್ನ್ ಟೈಮ್ಸ್' ಚಲನಚಿತ್ರಕ್ಕೆ ಸ್ಫೂರ್ತಿಯಾಗಿದ್ದರೆ ಆಶ್ಚರ್ಯವಿಲ್ಲ. ಮಹಾ ಸ್ವಾಭಿಮಾನಿಯಾಗಿ ಸ್ವತಃ ಯಾರನ್ನೂ ಭೇಟಿಮಾಡಲು ಇಚ್ಛಿಸದ ಪ್ರಖ್ಯಾತ ನಾಟಕಕಾರ ಹಾಗೂ ವಿಚಾರವಾದಿ ಬರ್ನಾರ್ಡ್ ಶಾ, ಗಾಂಧಿಯನ್ನು ಭೇಟಿ ಮಾಡಿ ಅವರ ಕೈ ಹಿಡಿದು ಪ್ರೀತಿಯಿಂದ ಮಾತಾಡಿಸಿದರಲ್ಲದೆ, ತಮ್ಮ ವಿಶಿಷ್ಟ ವಿನೋದಮಯತೆಯಿಂದ ಅವರನ್ನು ನಕ್ಕುನಲಿಸಿದರು. ತಮ್ಮನ್ನು ಒಬ್ಬ 'ಸಣ್ಣ ಮಹಾತ್ಮ' ಎಂದು ಕರೆದುಕೊಂಡ ಶಾ, 'ನಾವಿಬ್ಬರೂ ಜಗತ್ತಿನ ಅತಿ ಸಣ್ಣ ಸಮುದಾಯದ ಸದಸ್ಯರು' ಎಂದು ಬೀಗಿದರು.

ಗಾಂಧಿ ಮತ್ತು ಕಪ್ಪು ಬೆಕ್ಕಿನ ಮರಿ

ಗಾಂಧಿ ಭೇಟಿ ನೀಡಿದವರಲ್ಲಿ ಮಾಜಿ ವೈಸ್‌ರಾಯ್ ಲಾರ್ಡ್ ಇರ್ವಿನ್ ಮತ್ತು ಬ್ರಿಟನ್‌ನ ಮಾಜಿ–ಯುದ್ಧ ಕಾಲದ– ಪ್ರಧಾನಿ ಡೇವಿಡ್ ಜಾರ್ಜ್ ಲಾಯ್ಡ್ ಅವರೂ ಸೇರಿದ್ದರು. ಲಾಯ್ಡ್ ಅವರ ತೋಟದ ಮನೆಯಲ್ಲಿ ನಡೆದ ಈ ಭೇಟಿಯ ಒಂದು ಸ್ವಾರಸ್ಯಕರ ಪ್ರಸಂಗವನ್ನು ಲೂಯಿ ಫಿಶರ್ ತಮ್ಮ 'ದ ಲೈಫ್ ಆಫ್ ಮಹಾತ್ಮಾ ಗಾಂಧಿ' ಪುಸ್ತಕದಲ್ಲಿ ಹೇಳುತ್ತಾರೆ. ಇದು ಸ್ವತಃ ಲಾಯ್ಡ್‌ರೇ ಫಿಶರ್ ಅವರಿಗೆ ಹೇಳಿದ ಘಟನೆ. ಗಾಂಧಿ, ಲಾಯ್ಡ್‌ರ ತೋಟದ ಮನೆಯ ಕುರ್ಚಿಯೊಂದರಲ್ಲಿ ಆಸೀನರಾಗಿದ್ದಾಗ ಅಲ್ಲಿ ಎಂದೂ ಕಾಣದ ಕರಿಯ ಬೆಕ್ಕಿನ ಮರಿಯೊಂದು ಕಿಟಕಿಯಿಂದ ಓಡಿ ಬಂದು ಗಾಂಧಿಯವರ ಮಡಿಲಲ್ಲಿ ಕೂತುಬಿಟ್ಟಿತಂತೆ. ಗಾಂಧಿ ಅದರ ತಲೆ ಸವರಿದರು. ನಂತರ ಗಾಂಧಿ ಅಲ್ಲಿಂದ ಹೋದ ನಂತರ ಆ ಕಪ್ಪು ಬೆಕ್ಕಿನ ಮರಿ ಕಾಣೆಯಾಯಿತಂತೆ. ಆದರೆ ಕೆಲ ದಿನಗಳ ನಂತರ ಮೀರಾಬೆನ್ ಅಲ್ಲಿಗೆ ಬಂದಾಗ ಆ ಬೆಕ್ಕಿನ ಮರಿ ಮತ್ತೆ ಪ್ರತ್ಯಕ್ಷವಾಗಿ ಆಕೆಯ ಮಡಿಲಲ್ಲಿ ಆಶ್ರಯ ಪಡೆಯಿತಂತೆ! ಮತ್ತೆ ಆ ನಂತರ ಆ ಬೆಕ್ಕಿನ ಮರಿ ಅಲ್ಲಿ ಕಂಡಿಲ್ಲವಂತೆ!

ಮಾಂಟೆಸ್ಸರಿಯಿಂದ ಆಕ್ಸ್‌ಫರ್ಡ್‌ವರೆಗೆ

ಗಾಂಧಿ ಲಂಡನ್‌ನಲ್ಲಿನ ಅನೇಕ ಸಂಘ ಸಂಸ್ಥೆಗಳಿಗೂ ಭೇಟಿ ನೀಡಿದರು. ಅವರು ಮಾಂಟೆಸ್ಸರಿ ಅವರ ಶಿಶುಮಂದಿರಕ್ಕೆ ಹೋಗಿ ಮಕ್ಕಳ ತೊದಲು ನುಡಿಯ ಹಾಡುಗಳನ್ನೂ, ತಿಪ್ಪ ತಿಪ್ಪ ಹೆಜ್ಜೆಗಳ ನರ್ತನವನ್ನೂ ನೋಡಿ ಆನಂದಪಟ್ಟರು. 'ನಮ್ಮ ಬಹು ದೊಡ್ಡ ಮಾಸ್ತರು' ಎಂದು ಪರಿಚಯಿಸಲ್ಪಟ್ಟ ಗಾಂಧಿ, ಅಲ್ಲಿ ಮಾತನಾಡುತ್ತಾ 'ನಿಜವಾದ ವಿವೇಕ ಮಗುವಿನದು' ಎಂಬ ಕ್ರಿಸ್ತನ ಮಾತನ್ನು ಉಲ್ಲೇಖಿಸುತ್ತಾ, 'ಮಕ್ಕಳನ್ನು ದಾರಿ ತಪ್ಪಿಸಿ ತುಂಟರನ್ನಾಗಿ ಮಾಡುವುದು ತಂದೆತಾಯಿಗಳ ವರ್ತನೆಯೇ ಎಂದರು. ಜವಾಹರಲಾಲ್ ನೆಹರೂ ಓದಿದ ಟ್ರಿನಿಟಿ ಕಾಲೇಜನ್ನು ನೋಡಲು ಹೋದ ಗಾಂಧಿ, ನಂತರ ಆಕ್ಸ್‌ಫರ್ಡ್ ಮತ್ತು ಕೇಂಬ್ರಿಡ್ಜ್ ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿ, ಎರಡು ವಾರಾಂತ್ಯಗಳನ್ನು ಡಾ. ಎಡ್ವರ್ಡ್ ಥಾಂಪ್ಸನ್, ಗಿಲ್ಬರ್ಟ್ ಮರ್ರೆ, ಮೈಕೆಲ್ ಸ್ಯಾಡ್ಲರ್ ಮುಂತಾದ ಆಕ್ಸ್‌ಫರ್ಡ್‌ನ ಪ್ರಾಧ್ಯಾಪಕ ವಿದ್ವಾಂಸರೊಂದಿಗೆ ಚರ್ಚೆಗಳಲ್ಲಿ ಕಳೆದರು. 'ನಾಗರಿಕ ಅಸಹಕಾರ' ಪರಿಕಲ್ಪನೆಯ ಸುತ್ತ ನಡೆದ ಈ ಚರ್ಚೆ ಘನವಾದದ್ದಾಗಿದ್ದು, ಇದರಲ್ಲಿ ಸಾಕ್ರೆಟಿಸ್ ಆದಿಯಾಗಿ ಜಗತ್ತಿನ ಎಲ್ಲ ಮಹಾ ದಾರ್ಶನಿಕರೂ ಹಾದುಹೋದರು ಎಂದು ಅಲ್ಲಿ ಹಾಜರಿದ್ದ ಮಹದೇವ ದೇಸಾಯಿ ತಮ್ಮ ನೆನಪುಗಳಲ್ಲಿ ದಾಖಲಿಸಿದ್ದಾರೆ. ಈ ಸಂದರ್ಭದಲ್ಲಿ ಗಾಂಧಿ, ಪ್ರೊ. ಲಿಂಡ್ಸೆ ಅವರ ನಿವಾಸದಲ್ಲಿ ತಂಗಿದ್ದು, ಅವರು ನಂತರ ಈ ದಿನಗಳನ್ನು 'ನಮ್ಮ ಮನೆಯಲ್ಲಿ ಎಳೆಯ ವಿದ್ಯಾರ್ಥಿಯಿಂದ ಹಿಡಿದು ಜಗತ್ಪ್ರಸಿದ್ಧ ವಿದ್ವಾಂಸ ಪ್ರಾಧ್ಯಾಪಕರವರೆಗೂ ಎಲ್ಲರನ್ನೂ ಸಮಾನ ಪ್ರೀತಿ-ಗೌರವಗಳಿಂದ ಕಾಣುತ್ತಿದ್ದ ಸಂತನೊಬ್ಬ ಇದ್ದ ಸುದಿನಗಳು' ಎಂದು ನೆನಪಿಸಿಕೊಂಡಿದ್ದಾರೆ.

ಗುರು-ಶಿಷ್ಯರ ಭೇಟಿ

ಗಾಂಧಿ ತಾವು ಈ ಹಿಂದೆ ಇಂಗ್ಲೆಂಡ್‌ನಲ್ಲಿ ಕಾನೂನು ವಿದ್ಯಾರ್ಥಿಯಾಗಿದ್ದಾಗ, ತಮ್ಮ ಮೇಲೆ ಸಸ್ಯಾಹಾರದ ಪುಸ್ತಕವೊಂದರ ಮೂಲಕ ಪ್ರಭಾವ ಬೀರಿದ್ದ ಹೆನ್ರಿ ಸಾಲ್ಟ್‌ರನ್ನೂ ಭೇಟಿ ಮಾಡಿದರು. ಈಗ ಸಾಲ್ಟ್, ಇಳಿವಯಸ್ಸಿನವರಾಗಿದ್ದು ಪ್ರಾಣಿಗಳ ಹಕ್ಕುಗಳ ಪ್ರತಿಪಾದನೆಯ ಕೆಲಸದಲ್ಲಿ ತೊಡಗಿದ್ದರು. ತಮ್ಮ ಶಿಷ್ಯನೀಗ ಜಗತ್ಪ್ರಸಿದ್ಧ ಮಹಾತ್ಮನಾಗಿರುವುದು ಸಾಲ್ಟ್‌ರಿಗೆ ಅತೀವ ಸಂತೋಷ ತಂದಿತ್ತು. ಗಾಂಧಿ, ಸಾಲ್ಟ್‌ರ ಪ್ರಾಣಿ ದಯಾ ಸಂಘಟನೆಯ ಸಭೆಯಲ್ಲಿ ಮಾತನಾಡಿ 'ಸಸ್ಯಾಹಾರ, ಪ್ರಾಣಿಗಳನ್ನು ಕುರಿತ ನಮ್ಮ ನೈತಿಕ ಕರ್ತವ್ಯ ಎಂಬುದನ್ನು ನನಗೆ ಕಲಿಸಿದವರು ಸಾಲ್ಟ್' ಎಂದು ತಮ್ಮ ಗುರುವಿಗೆ ಗೌರವ ಸಲ್ಲಿಸಿದರು.

ಗಾಂಧಿ, ಲಂಡನ್‌ನಲ್ಲಿ ಆರ್ಚ್‌ಬಿಷಪ್‌ಗಳ ಮತ್ತು ಪಾದ್ರಿಗಳ ಆತಿಥ್ಯವನ್ನೂ ಸ್ವೀಕರಿಸಿದರು. ಗಾಂಧಿ ಲಂಡನ್‌ನಲ್ಲಿದ್ದಾರೆಂದು ತಿಳಿದ ಹಲವು ಪ್ರವಾಸಿಗರು, ಯೂರೋಪ್‌ನ ವಿವಿಧ ದೇಶಗಳಿಂದ ಬಂದು ಅವರನ್ನು ಭೇಟಿಯಾಗಿ ಮಾತನಾಡಿದರು. ವಿಜ್ಞಾನಿ ಐನ್‌ಸ್ಟೀನ್, ಗಾಂಧಿ ಲಂಡನ್ ವಾಸ್ತವ್ಯದ ನಂತರ ಇತರ ಐರೋಪ್ಯ ದೇಶಗಳಿಗೂ ಬರುತ್ತಾರೆಂಬುದನ್ನು ತಿಳಿದು ಅವರನ್ನು ಬರ್ಲಿನ್‌ಗೆ

ಆಹ್ವಾನಿಸಿದರು. ಆದರೆ ಗಾಂಧಿ, ಕಿರು ಭೇಟಿ ಬೇಡವೆಂದು ಅವರನ್ನು ಭಾರತದಲ್ಲಿನ ತಮ್ಮ ಆಶ್ರಮಕ್ಕೆ ಬರಬೇಕೆಂದು ಆಹ್ವಾನಿಸಿದರು.

ಲಾಂಕಶೈರ್‌ನಲ್ಲಿ ದೊರೆತ ಸಂಭ್ರಮದ ಸ್ವಾಗತ

ಗಾಂಧಿ ಇಂಗ್ಲೆಂಡ್‌ನಲ್ಲಿ ನೀಡಿದ ಖಾಸಗಿ ಭೇಟಿಗಳಲ್ಲಿ ಅತ್ಯಂತ ಗಮನಾರ್ಹವಾದದ್ದೆಂದರೆ, ಜವಳಿ ಊರೆಂದೇ ಪ್ರಸಿದ್ಧವಾದ ಲಾಂಕಶೈರ್‌ಗೆ ನೀಡಿದ ಭೇಟಿ. ಗಾಂಧಿಯವರ ವಿದೇಶಿ ವಸ್ತ್ರ ಬಹಿಷ್ಕಾರ ಮತ್ತು ಖಾದಿ ಪ್ರಚಾರಗಳಿಂದಾಗಿ ಆರ್ಥಿಕ ಮುಗ್ಗಟ್ಟಿಗೆ ಸಿಕ್ಕಿ ವ್ಯಾಪಕ ನಿರುದ್ಯೋಗ ಮತ್ತು ಅಶಾಂತಿಗಳ ಆಗರವಾಗಿದ್ದ ಈ ಪ್ರದೇಶಕ್ಕೆ ಗಾಂಧಿ ಭೇಟಿ ನೀಡುವುದು ಬೇಡವೆಂಬ ಸೂಚನೆಯನ್ನು ಹಲವರು ನೀಡಿದರೂ, ಸಿ.ಎಫ್. ಆ್ಯಂಡ್ರ್ಯೂಸ್, ಸ್ಥಳೀಯ ಪತ್ರಿಕೆಗಳ ಮೂಲಕ ರೂಪಿಸಿದ್ದ ಗಾಂಧಿಯವರ ಪರವಾದ ಸೌಹಾರ್ದ ವಾತಾವರಣದಿಂದಾಗಿ ಈ ಭೇಟಿ ಅದ್ಭುತ ಯಶಸ್ಸನ್ನು ಕಂಡಿತು. ಸೆಪ್ಟೆಂಬರ್ ೨೫ರಂದು ಮೂರನೇ ದರ್ಜೆ ರೈಲು ಪ್ರಯಾಣದ ಮೂಲಕ ಆರಂಭವಾದ ಈ ಭೇಟಿ, ಅವರಿದ್ದ ರೈಲು ಡಬ್ಬಿ, ಅವರು ಇಳಿದ ರೈಲ್ವೇ ನಿಲ್ದಾಣದಿಂದ ಹಿಡಿದು, ಅವರು ತಂಗಿದ ಕಾರ್ಮಿಕರ ಕುಟೀರದವರೆಗಿನ ಎಲ್ಲ ಸ್ಥಳಗಳಲ್ಲೂ ಜನಜಂಗುಳಿಯನ್ನು ಸೆಳೆದು ಎಲ್ಲರಲ್ಲೂ ಆಶ್ಚರ್ಯವನ್ನುಂಟು ಮಾಡಿತು. ಗಾಂಧಿ ಹಲವು ಕಡೆ ಕಾರ್ಮಿಕ ಸಭೆಗಳನ್ನುದ್ದೇಶಿಸಿ ಮಾತನಾಡಿ, ತಾವೇಕೆ ವಿದೇಶಿ ವಸ್ತ್ರಗಳ ಬಹಿಷ್ಕಾರಕ್ಕೆ ಕರೆಕೊಡಬೇಕಾಯಿತು ಎಂದು ವಿವರಿಸಿದರು. ಅಂತಹ ಸಭೆಯೊಂದರಲ್ಲಿ ಎದ್ದುನಿಂತ ವ್ಯಕ್ತಿಯೊಬ್ಬ 'ನಾನು ನಿಮ್ಮಿಂದ ನಿರುದ್ಯೋಗಿಯಾದ ಒಬ್ಬ ಕಾರ್ಮಿಕ. ಆದರೆ ನಾನೇನಾದರೂ ಇಂದು ಭಾರತದಲ್ಲಿದ್ದರೆ ನೀವು ಹೇಳಿದ ಮಾತುಗಳನ್ನೇ ಹೇಳುತ್ತಿದ್ದೆ' ಎಂದಾಗ ಸಭೆ ಕರತಾಡನ ಮಾಡಿತು. ಡಾರ್ವೆನ್ ಬಳಿಯ ಗ್ರೀನ್‌ಫೀಲ್ಡ್‌ನ ಬಟ್ಟೆ ಗಿರಣಿಯ ಮಹಿಳೆಯರೇ ಹೆಚ್ಚು ಸಂಖ್ಯೆಯಲ್ಲಿದ್ದ ಕಾರ್ಮಿಕರು, ಗಾಂಧಿಯನ್ನು ಕುತ್ತಿಗೆಯಿಂದ ಹಿಡಿದು ಮೊಣಕಾಲವರೆಗೆ ಹತ್ತಿಯಿಂದ ಮುಚ್ಚಿ ಸುತ್ತುವರೆದು ಅವರಿಗೆ ಹಸ್ತಲಾಘವ ನೀಡುತ್ತಿರುವ ಚಿತ್ರವೊಂದನ್ನು ತೆಗೆಸಿಕೊಂಡು ತಮ್ಮ ಅಭಿಮಾನ ಪ್ರದರ್ಶಿಸಿದರು. ಅಲ್ಲಿ ಮಾತನಾಡಿದ ಗಾಂಧಿ 'ಭಾರತಕ್ಕೆ ಸ್ವಯಮಾಡಳಿತ ದೊರೆತ ನಂತರ ಅವಶ್ಯಕ ಆಮದುಗಳಲ್ಲಿ ಲಾಂಕಶೈರ್ ಬಟ್ಟೆಗಳಿಗೆ ಆದ್ಯತೆ ನೀಡುವಂತೆ ಶಿಫಾರ್ಸು ಮಾಡುವ ಭರವಸೆ ನೀಡಿದರು. ಕಾರ್ಮಿಕರು ಚಪ್ಪಾಳೆ ತಟ್ಟಿ ಅದನ್ನು ಸ್ವಾಗತಿಸಿದರು.

ನಂತರದ ಒಂದು ದಿನ ಗಾಂಧಿ, ಇಸ್ಲಿಂಗ್‌ಟನ್ ಎಂಬಲ್ಲಿನ ಪಶುಸಾಕಣಾ ಕೇಂದ್ರಕ್ಕೆ ಭೇಟಿ ನೀಡಿ ಜಾನುವಾರುಗಳೊಂದಿಗೆ ಚಿತ್ರ ತೆಗೆದುಕೊಂಡರು. ಅಲ್ಲಿನ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಜಾನುವಾರಿಗೆ 'ಮಹಾತ್ಮ ಗಾಂಧಿ' ಎಂದು ಹೆಸರಿಡಲಾಯಿತು! ಹೀಗೊಂದು ದಿನ ಗಾಂಧಿ, ಬ್ರಿಟಿಷ್ ಸಂಸತ್ತಿನ ಲೇಬರ್ ಪಕ್ಷದ ಸದಸ್ಯರನ್ನು ಉದ್ದೇಶಿಸಿ ಸಂಸದರ ಭವನದಲ್ಲಿ ಮಾತನಾಡಿದರು. ಸಭೆ ಸಂಜೆವರೆಗೂ ಮುಂದುವರೆದು ಗಾಂಧಿ ಪರಿವಾರಕ್ಕೆ ಪ್ರಾರ್ಥನಾ ಸಮಯವಾದ್ದರಿಂದ, ಸರಿಯಾಗಿ ರಾತ್ರಿ ಏಳು ಘಂಟೆಗೆ ಸಂಸತ್ ಭವನದಲ್ಲೇ ಸರ್ವಧರ್ಮ ಪ್ರಾರ್ಥನೆ ನಡೆಯುವಂತಾಯಿತು!

ಇಬ್ಬರ ಬಟ್ಟೆ ಒಬ್ಬರೇ ಉಟ್ಟಿದ್ದ ದೊರೆ!

ನವೆಂಬರ್ ೫ರಂದು ಗಾಂಧಿ, ಬ್ರಿಟನ್‌ನ ಅತ್ಯಂತ ಮುಖ್ಯ ವ್ಯಕ್ತಿಯಾದ ದೊರೆ ಐದನೇ ಜಾರ್ಜ್, ದುಂಡು ಮೇಜಿನ ಪರಿಷತ್ತಿನ ಪ್ರತಿನಿಧಿಗಳಿಗಾಗಿ ಏರ್ಪಡಿಸಿದ್ದ ಚಹಾಕೂಟದಲ್ಲಿ ಭಾಗವಹಿಸಿ ದೊರೆಯೊಂದಿಗೆ ಮಾತನಾಡುವ ಸಂದರ್ಭವೂ ಉಂಟಾಯಿತು. ಈ ಕೂಟಕ್ಕೆ ಒಂದು ವಸ್ತ್ರ ಸಂಹಿತೆಯನ್ನು ನಿಗದಿ ಮಾಡಲಾಗಿತ್ತಾದರೂ, ಅಲ್ಲಿ ಗಾಂಧಿಯವರ ಹಾಜರಿ ಮುಖ್ಯವೆನಿಸಿದ್ದರಿಂದ ಅವರಿಗೆ ಈ ಸಂಹಿತೆಯಿಂದ ವಿನಾಯಿತಿ ನೀಡಲಾಗಿತ್ತು. ಆದರೂ ದೊರೆ ಮತ್ತು ರಾಣಿ, ಗಾಂಧಿಯವರ ಉಡುಪಿನ ಬಗ್ಗೆ ತಮ್ಮ ಹಾವಭಾವಗಳ ಮೂಲಕ ಅಸಮಾಧಾನವನ್ನು ಸೂಚಿಸದೇ ಇರಲಿಲ್ಲ. ಕೂಟದಲ್ಲಿನ ಅನೌಪಚಾರಿಕ ಮಾತುಕತೆಗಳ ಸಂದರ್ಭದಲ್ಲಿ ದೊರೆ, ಗಾಂಧಿಯವರನ್ನು ನೀವೇಕೆ ನಮಗೆ ಇಷ್ಟು ತೊಂದರೆ ಕೊಡುತ್ತಿದ್ದೀರಿ? ಎಂದು ಪ್ರಶ್ನಿಸಿದಾಗ ಗಾಂಧಿ ಜಾಣತನದಿಂದ; 'ಇದು ರಾಜಕೀಯ ಮಾತಾಡುವ ಸಂದರ್ಭವಲ್ಲ' ಎಂಬ ಸಂಕ್ಷಿಪ್ತ ಉತ್ತರ ನೀಡಿ ಸಂಭಾಷಣೆಯನ್ನು ಅಲ್ಲಿಗೇ ಮೊಟಕುಗೊಳಿಸಿದರು. ಕೂಟದ ನಂತರ ಸುದ್ದಿಗಾರರು ಗಾಂಧಿಯವರನ್ನು 'ಇಷ್ಟು ಕಡಿಮೆ ಬಟ್ಟೆಯೊಂದಿಗೆ ದೊರೆಯನ್ನು ಹೇಗೆ ಭೇಟಿ ಮಾಡಿದಿರಿ?' ಎಂದು ಕೇಳಿದಾಗ ಅವರು 'ನಮಗಿಬ್ಬರಿಗೂ ಆಗುವಷ್ಟು ಬಟ್ಟೆಯನ್ನು ಅವರೊಬ್ಬರೇ ಹಾಕಿಕೊಂಡಿದ್ದರಲ್ಲ!' ಎಂದು ಉತ್ತರಿಸಿದರಂತೆ!

ಸಾಧ್ಯವಾಗದ ಎರಡು ಭೇಟಿಗಳು

ಗಾಂಧಿ ತಾವು ಇಂಗ್ಲೆಂಡ್‌ನಲ್ಲಿ ಭೇಟಿ ಮಾಡಬಯಸಿದ, ಆದರೆ ಭೇಟಿಯಾಗಲು ಸಾಧ್ಯವಾಗದ ಇಬ್ಬರು ವ್ಯಕ್ತಿಗಳೆಂದರೆ, ರಾಜಕಾರಣಿ ವಿನ್‌ಸ್ಟನ್ ಚರ್ಚಿಲ್ ಮತ್ತು 'ಡೈಲಿ ಮೇಲ್' ಪತ್ರಿಕೆಯ ಒಡೆಯ ಲಾರ್ಡ್ ರೊದೆರ್‌ಮಿಯರ್. ಲಂಡನ್‌ಗೆ ಬಂದ ಕೂಡಲೇ ಗಾಂಧಿ ಈ ಇಬ್ಬರ ಭೇಟಿಗಾಗಿ ಸಂದೇಶ ಕಳಿಸಿದರು. 'ನನ್ನನ್ನು ಸತತವಾಗಿ ವಿರೋಧಿಸುತ್ತಾ ಬಂದಿರುವ ಈ ಇಬ್ಬರು ಮಹನೀಯರನ್ನೂ ಕಂಡು ನಾನು ನನ್ನ ಮಾತುಗಳನ್ನು ಹೇಳಬೇಕಿದೆ' ಎಂದರು. ಆದರೆ ಈ ಇಬ್ಬರೂ ಅದಕ್ಕೆ ಒಪ್ಪಲಿಲ್ಲ. ಆದರೆ ಚರ್ಚಿಲ್‌ರ ಸೋದರ ಸಂಬಂಧಿ ಶಿಲ್ಪ ಕಲಾವಿದೆ ಕ್ಲೇರ್ ಶೆರಿಡನ್, ಗಾಂಧಿಯ ಶಿಲ್ಪ ಮಾಡಲು ರೂಪದರ್ಶಿಯಾಗಿ ಬರಲು ಆಹ್ವಾನಿಸಿದಾಗ, ಅಲ್ಲಿಗೆ ಹೋದವರು, ಆಕೆಗೆ 'ಚರ್ಚಿಲ್‌ಗೆ ಹೇಳಿ ಒಂದು ಸಮಯ ಕೊಡಿಸು, ನಾನು ಮಾತಾಡಲೂ ಅನರ್ಹನಾಗುವಷ್ಟು ಕೆಟ್ಟವನಲ್ಲ!' ಎಂದು ಹೇಳಿದ್ದೂ ಪ್ರಯೋಜನಕ್ಕೆ ಬರಲಿಲ್ಲ.

ಯಹೂದ್ಯರಿಗೆ ಸಲಹೆಗಳು

ಅಕ್ಟೋಬರ್ ೨ರಂದು ಗಾಂಧಿಯವರ ಹುಟ್ಟುಹಬ್ಬದ ಸಂಬಂಧವಾಗಿ ಜ್ಯೂಯಿಷ್ ಕ್ರಾನಿಕಲ್ ಪತ್ರಿಕೆ ಅವರ ಸಂದರ್ಶನವನ್ನೊಳಗೊಂಡ ವಿಶೇಷ ಲೇಖನವೊಂದನ್ನು ಪ್ರಕಟಿಸಿತ್ತು. ಸಂದರ್ಶನದಲ್ಲಿ ಗಾಂಧಿ, ದ.ಆಫ್ರಿಕಾದಲ್ಲಿನ ತಮ್ಮ ಹೋರಾಟದಲ್ಲಿ ಯಹೂದಿಗಳು ನೀಡಿದ ಸಹಕಾರ ಮತ್ತು ಬೆಂಬಲಗಳನ್ನು ಸ್ಮರಿಸುತ್ತಾ ಯಹೂದಿ ವಿರೋಧಿ ಮನಃಸ್ಥಿತಿಯು ಮಧ್ಯಕಾಲೀನ ಮನಃಸ್ಥಿತಿಯಾಗಿದ್ದು, ಯಹೂದಿಗಳು ತಮ್ಮ ತವರು ನೆಲ ಪ್ಯಾಲೆಸ್ತೇನ್‌ಗೆ ಹಿಂದಿರುಗುವುದನ್ನು ತಾವು ಬಯಸುವುದಾದರೂ, ಅದು

ಬ್ರಿಟಿಷರ ಬಂದೂಕಿನ ರಕ್ಷಣೆಯಲ್ಲಿ ನಡೆಯಬಾರದು ಎಂದಿದ್ದರು. ಹಾಗೇ ಯಹೂದಿಗಳು ಪವಿತ್ರವೆಂದು ಭಾವಿಸುವ ಜೆರೂಸಲೆಂ ಒಂದು ಭೌತಿಕ ಸ್ಥಳವಾಗಿರದೆ ಒಂದು ಮನಃಸ್ಥಿತಿಯಾಗಿದ್ದು, ಯಹೂದಿಗಳ, ಅರಬ್ಬರ ಪ್ರೇಮದೊಂದಿಗೆ ಪ್ಯಾಲೆಸ್ತೇನ್‌ಗೆ ಹಿಂದಿರುಗಬೇಕೆಂದು ಸಲಹೆ ಮಾಡಿದ್ದರು.

ಸುದ್ದಿಗಾರರ ಪ್ರಶ್ನೆಗಳು

ಗಾಂಧಿ ಲಂಡನ್‌ನಲ್ಲಿದ್ದಾಗ ಅಲ್ಲಿನ ಪತ್ರಿಕೆಗಳಿಗೆ ಹಲವಾರು ಲೇಖನಗಳನ್ನು ಬರೆದು ತಮ್ಮ ಚಳುವಳಿಯ ಆಶಯ ಉದ್ದೇಶಗಳನ್ನು ವಿವರಿಸಿದರು. ಅವರ ಲೇಖನಗಳು ಮುಖ್ಯವಾಗಿ ಚರಕದ ಆಶಯದ ಸುತ್ತ ಸುತ್ತುತ್ತಾ ಭಾರತದ ಆರ್ಥಿಕತೆ, ಬಡತನ, ಹಸಿವು, ನಿರುದ್ಯೋಗ, ಅಸ್ಪೃಶ್ಯತೆ, ಮಹಿಳೆ ಇತ್ಯಾದಿ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತಿತ್ತು. ಈ ಮಧ್ಯೆ ಅವರು, ಭಾರತ ನಡೆಸುತ್ತಿದ್ದ ಸಂಘರ್ಷದ ಬಗ್ಗೆ ಸಹಾನುಭೂತಿಯ ವರದಿ ಮತ್ತು ಲೇಖನಗಳನ್ನು ಬರೆಯುತ್ತಿದ್ದ ಏಕೈಕ ಬ್ರಿಟಿಷ್ ಪತ್ರಿಕೆ 'ಮ್ಯಾಂಚೆಸ್ಟರ್ ಗಾರ್ಡಿಯನ್' ಪತ್ರಿಕೆಯ ಸಂಪಾದಕ ಸಿ.ಪಿ. ಸ್ಕಾಟ್ ಅವರನ್ನು ಭೇಟಿ ಮಾಡಿ ಅವರಿಗೆ ಕೃತಜ್ಞತೆಗಳನ್ನು ತಿಳಿಸಿದರು. ಅವರು ಇದೇ ಸಂದರ್ಭದಲ್ಲಿ ಹಲವು ಸುದ್ದಿಗೋಷ್ಠಿಗಳಲ್ಲೂ ಭಾಗವಹಿಸಿದರು.

'ಭಾರತ, ಬ್ರಿಟಿಷ್ ಸಾಮ್ರಾಜ್ಯದಿಂದ ಎಷ್ಟು ಕತ್ತರಿಸಲ್ಪಡಬೇಕೆಂದು ನೀವು ಬಯಸುವಿರಿ?' ಒಬ್ಬ ಸುದ್ದಿಗಾರ ಪ್ರಶ್ನೆ ಕೇಳಿದ.

ಗಾಂಧಿಯ ಉತ್ತರ: 'ಸಂಪೂರ್ಣವಾಗಿ. ಆದರೆ ಅವರು ಅಷ್ಟಕ್ಕೇ ನಿಲ್ಲಿಸದೆ ಹೇಳಿದರು, 'ಕತ್ತರಿಸಲ್ಪಡಬೇಕಾದ್ದು ಸಾಮ್ರಾಜ್ಯದಿಂದ, ದೇಶದಿಂದಲ್ಲ. ಸಾಮ್ರಾಜ್ಯ ಹೋಗಬೇಕು. ಆಗ ನಾವು ಮತ್ತು ಇಂಗ್ಲಿಷ್ ಪ್ರಜೆಗಳು ಸಮಾನ ಪಾಲುದಾರರಾಗಿ ವ್ಯವಹರಿಸುತ್ತಾ ಕಷ್ಟ-ಸುಖಗಳೆರಡನ್ನೂ ಹಂಚಿಕೊಂಡು ಬಾಳಬಹುದು'. ತಮ್ಮ ಈ ಮಾತುಗಳನ್ನು ವಿವರಿಸುತ್ತಾ ಗಾಂಧಿ ಹೀಗೆ ಹೇಳಿದರು: 'ಜಗತ್ತಿಗೆ ಪೆಡಂಭೂತವಾಗಿ ಬೆದರಿಕೆ ಒಡ್ಡುವ ಒಂಟಿತನದ ಸ್ವಾತಂತ್ರ್ಯ ನಮಗೆ ಬೇಡ. ರೇಷ್ಮೆಯಂತೆ ನವಿರಾದ ಪರಸ್ಪರ ಸ್ನೇಹಸಂಬಂಧದ, ಪ್ರೇಮಪೂರ್ಣ ಪರಸ್ಪರಾವಲಂಬಿತನದ ಸ್ವಾತಂತ್ರ್ಯ ಬೇಕು. ಜಗತ್ತಿನಲ್ಲಿ ಯುದ್ಧ ನಡೆಯಲು ಆಸ್ಪದ ನೀಡದಂತಹ ಪರಸ್ಪರಾವಲಂಬಿತನದ ಸ್ವಾತಂತ್ರ್ಯ ಬೇಕು.'

'ಇರ್ವಿನ್‌ರೊಡನೆಯ ಒಪ್ಪಂದದಲ್ಲಿದ್ದ, ಬ್ರಿಟಿಷ್ ಪ್ರಭುತ್ವದಿಂದ ಮುಕ್ತವಾದ ಭಾರತದ ರಕ್ಷಣೆ, ವಿದೇಶ ವ್ಯವಹಾರ. ಅಲ್ಪಸಂಖ್ಯಾತರ ಸಮಸ್ಯೆ ಮತ್ತು ವಿದೇಶೀ ಸಾಲಗಳ ವಿಷಯದಲ್ಲಿ ಬ್ರಿಟಿಷ್ ಪ್ರಭುತ್ವದ್ದೇ ಪರಮಾಧಿಕಾರ ಎಂಬ ಸಾಂವಿಧಾನಿಕ ಷರತ್ತನ್ನು ಈಗ ನೀವು ವಿರೋಧಿಸುತ್ತಿರುವುದು ಸರಿಯೇ?' ಎಂಬುದು ಸುದ್ದಿಗಾರರ ಇನ್ನೊಂದು ಪ್ರಶ್ನೆ.

ಗಾಂಧಿಗೆ ಇದು ಮುಜುಗರವನ್ನುಂಟು ಮಾಡುವ ಪ್ರಶ್ನೆಯಾಗಿತ್ತು. ಗಾಂಧಿ ಹೇಳಿದರು: 'ಒಪ್ಪಂದದ ನಂತರ ನಡೆದ ಕರಾಚಿ ಕಾಂಗ್ರೆಸ್ ಸಮ್ಮೇಳನದಲ್ಲಿ ಈ ವಿಷಯದಲ್ಲಿ ಬದಲಾವಣೆ ಆಗಬೇಕೆಂದು ನನಗೆ ಸೂಚಿಸಲಾಗಿದೆ. ನಾನು ಅವರ

ದಾರಿಯಲ್ಲಿ ನಡೆಯಲು ಬದ್ಧನಾಗಿದ್ದೇನೆ. ನೀವೇ ಯೋಚಿಸಿ, ರಕ್ಷಣೆ, ವಿದೇಶ ವ್ಯವಹಾರ ಮತ್ತು ಹಣಕಾಸು ಅಧಿಕಾರಗಳಿಲ್ಲದ ಸ್ವಾತಂತ್ರ್ಯವನ್ನು ಸಂಪೂರ್ಣ ಸ್ವಾತಂತ್ರ್ಯವೆಂದು ಕರೆಯಬಹುದೇ?'

ಈ ಮಾತು ತಾಂತ್ರಿಕವಾಗಿ ಒಪ್ಪಂದದ ಉಲ್ಲಂಘನೆಯ ಮಾತೇ ಆಗಿದ್ದರೂ, ರಕ್ಷಣೆ, ಹಣಕಾಸು ಇತ್ಯಾದಿಗಳಿರಲಿ ಸಾಮಾನ್ಯ ಆಡಳಿತದ ಸ್ವಾತಂತ್ರ್ಯವೂ ಹತ್ತಿರದಲ್ಲಿ ದೊರೆಯುವ ಸೂಚನೆ ಇಲ್ಲದ ಆ ದಿನಗಳಲ್ಲಿ ಈ ಚರ್ಚೆ ಬರೀ ಒಣಮಾತಿನ ಚರ್ಚೆಯಷ್ಟೇ ಆಗಬಲ್ಲುದಾಗಿತ್ತು.

ಒಂದು ಸುದ್ದಿಗೋಷ್ಠಿಯಲ್ಲಿ ಗಾಂಧಿಯ ವಿಶಾಲ ಮನೋಭಾವನ್ನು ವರ್ಣಿಸುವ ಭರದಲ್ಲಿ ವಿಪರೀತಕ್ಕೆ ಹೋಗಿ, ವೇಲ್ಸ್‌ನ ರಾಜಕುಮಾರ ಭಾರತಕ್ಕೆ ಬಂದಿದ್ದಾಗ ಗಾಂಧಿ, ಅವನಿಗೆ ಸಾಷ್ಟಾಂಗ ನಮಸ್ಕಾರ ಮಾಡಿದ್ದರು ಎಂದು ಬರೆದಿದ್ದ ಜಾರ್ಜ್ ಸ್ಲೋಕೋಂಬ್ ಎಂಬ ಅಮೆರಿಕಾದ ಪತ್ರಕರ್ತನನ್ನು ತರಾಟೆಗೆ ತೆಗೆದುಕೊಂಡ ಗಾಂಧಿ, 'ಇದು ನಿಮ್ಮಂತಹ ಬುದ್ಧಿವಂತರ ಕಲ್ಪನಾಶೀಲತೆಗೂ ಅಪಚಾರ ಮಾಡುವಂತಹ ಚಿತ್ರಣ. ನಾನು ನನ್ನ ದೇಶದ ಬಡ ಅಸ್ಪೃಶ್ಯನ ಮುಂದೆ ಬಾಗಿ ನಿಲ್ಲುತ್ತೇನೆ. ಅವನ ಕಾಲ ಧೂಳನ್ನು ಕಣ್ಣಿಗೊತ್ತಿಕೊಳ್ಳುತ್ತೇನೆ. ಏಕೆಂದರೆ ಅವನನ್ನು ನಾನು ಶತಮಾನಗಳ ಕಾಲ ದಮನ ಮಾಡಿದ ಪರಿತಾಪದಿಂದ ನನಗೆ ಮುಕ್ತಿ ಸಿಗಬೇಕಿದೆ. ಆದರೆ ನಾನು ರಾಜಕುಮಾರನ ಮುಂದಿರಲಿ ರಾಜನ ಮುಂದೆಯೂ ಒಂದು ಅಂಗುಲವೂ ಬಾಗಿ ನಿಲ್ಲಲಾರೆ.' ಎಂದು ಛೇಡಿಸಿದರು.

ಅಪ್ರಾತಿನಿಧಿಕ ದುಂಡು ಮೇಜಿನ ಪರಿಷತ್ತು

ಭಾರತದ ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟ ಕಾರ್ಯಕಲಾಪಗಳಿಗಾಗಿ ದುಂಡು ಮೇಜಿನ ಪರಿಷತ್ತಿಗೆಂದು ಬಂದ ಗಾಂಧಿ, ಆ ಕಾರ್ಯಕಲಾಪಗಳ ಚೌಕಟ್ಟಿನ ಹೊರಗೇ ಈ ಎಲ್ಲ ಜನಸಂಪರ್ಕದ ಮೂಲಕ ಬ್ರಿಟನ್ ಮತ್ತು ಭಾರತವನ್ನು ಜನತೆಯ ನೆಲೆಯಲ್ಲಿ ಹತ್ತಿರ ತಂದಿದ್ದರು. ಅವರು ತಮ್ಮ ನಿಷ್ಕಳಂಕ ಪ್ರೀತಿ, ಸರಳ ನಡೆನುಡಿ ಮತ್ತು ಮಾನವೀಯ ಪ್ರತಿಸ್ಪಂದನಗಳ ಮೂಲಕ, ಚರ್ಚಿಲ್‌ನಂತವರು ಎಷ್ಟೇ ಅಡ್ಡಿಯಾದರೂ, ನಿರೀಕ್ಷೆಗಿಂತ ಮುನ್ನವೇ ಭಾರತ ಬ್ರಿಟಿಷ್ ಆಳ್ವಿಕೆಯಿಂದ ಮುಕ್ತವಾಗುವ ಭರವಸೆ ಹುಟ್ಟಿಸಿದ್ದರು. ಇದರ ಹಿಂದೆ ಇದ್ದುದು ಇಂಗ್ಲಿಷ್ ಜನ ಮೆಚ್ಚಿದ ಗಾಂಧಿಯವರ ಕ್ರೈಸ್ತ ಮನಸ್ಸು. ಅವರು ಇಂಗ್ಲಿಷ್ ಜನರ ಕ್ರೈಸ್ತ ಆತ್ಮಸಾಕ್ಷಿಯನ್ನು ಸ್ಪರ್ಶಿಸಿಬಿಟ್ಟಿದ್ದರು ಎನ್ನುತ್ತಾರೆ ಲೂಯಿ ಫಿಶರ್.

ಆದರೆ ದುಂಡು ಮೇಜಿನ ಪರಿಷತ್ತಿನ ಕಾರ್ಯಕಲಾಪಗಳು ಗಾಂಧಿಯವರ ಮಟ್ಟಿಗೆ ತದ್ವಿರುದ್ಧವಾಗಿದ್ದವು. ಅವರಿಲ್ಲಿ ಭಾರತದ ಇತರ ಪ್ರತಿನಿಧಿಗಳ ಮನಗೆಲ್ಲಬೇಕಾಗಿತ್ತು. ಅದು ಬಹು ಕಷ್ಟದಾಯಕ ಕೆಲಸವಾಗಿತ್ತು. ದುಂಡು ಮೇಜಿನ ಪರಿಷತ್ತು ಮೂಲತಃ ಭಾರತಕ್ಕೆ ಸ್ವಾತಂತ್ರ್ಯ ನೀಡುವ ಸಾಧ್ಯತೆಗಳನ್ನು ಪರಿಶೀಲಿಸುವ, ನೀಡಬಹುದಾದ ಸ್ವಾತಂತ್ರ್ಯದ ಸ್ವರೂಪ ಮತ್ತು ಪ್ರಕ್ರಿಯೆಯ ವಿವರಗಳನ್ನು ಚರ್ಚಿಸುವ, ಬ್ರಿಟಿಷ್ ಸರ್ಕಾರದ ಕಡೆಯಿಂದ ಮುಂದಾಗಿದ್ದ ಪ್ರಯತ್ನವಾಗಿತ್ತು. ಬ್ರಿಟಿಷ್ ಸರ್ಕಾರದ ಪ್ರಸ್ತಾವನೆಯ ಮಾತುಗಳಲ್ಲೇ ಹೇಳುವುದಾದರೆ 'ಬ್ರಿಟಿಷ್ ಹಿತಾಸಕ್ತಿಗಳನ್ನು ಬಲಿಗೊಡದೆ

ಭಾರತದ ಜನರ ಆಶೋತ್ತರಗಳನ್ನು ಸಾಕಾರಗೊಳಿಸುವ ನೀತಿಯನ್ನು ರೂಪಿಸುವುದು.' ಭಾರತ ಎಂಬುದು ಇನ್ನೂ ಒಂದು ಸಾಂವಿಧಾನಿಕ ಚೌಕಟ್ಟಿನ ರಾಷ್ಟ್ರ ವ್ಯವಸ್ಥೆಯಾಗಿಲ್ಲದಿದ್ದರಿಂದ ಭಾರತಕ್ಕೆ ಸ್ವಾತಂತ್ರ್ಯ ನೀಡುವುದು ಎಂದರೆ ಯಾರಿಗೆ ಅದನ್ನು ನೀಡುವುದು ಎಂಬುದು ಈ ಚರ್ಚೆಯ ಮುಖ್ಯ ಪ್ರಶ್ನೆಯಾಗಿತ್ತು. ಭಾರತ ದೇಶವೆಂಬುದು ಆಗ ರಾಜಕೀಯವಾಗಿ ಸಂಘಟಿತವಾದ ಏಕ ಸಮುದಾಯವನ್ನು ಪ್ರತಿನಿಧಿಸುತ್ತಿರಲಿಲ್ಲವಾದ್ದರಿಂದ ಹರಿದು ಹಂಚಿಹೋಗಿದ್ದ ವಿವಿಧ ಸಮುದಾಯಗಳ ಹಕ್ಕುಗಳ ಪ್ರಶ್ನೆಗಳನ್ನು ಆಲಿಸಿ ಸ್ವಾತಂತ್ರ್ಯ ನೀಡಿಕೆಯ ಪ್ರಶ್ನೆಯನ್ನು ಇತ್ಯರ್ಥಪಡಿಸಬೇಕಿತ್ತು. ಈ ಪ್ರಕ್ರಿಯೆಯಲ್ಲಿ ತಂತಮ್ಮ ಹಕ್ಕು ಸ್ಥಾಪಿಸಿ ಮಂಡಿಸಬಯಸಿದ ವಿವಿಧ ಜನಸಮುದಾಯಗಳ ಅಥವಾ ಸಂಘಟನೆಗಳ ಪ್ರತಿನಿಧಿಗಳನ್ನು ಈ ಸಮ್ಮೇಳನಕ್ಕೆ ಆಹ್ವಾನಿಸಲಾಗಿತ್ತು. ಈ ವಿಶಾಲ ಪ್ರತಿನಿಧಿ ಸಭೆ ಪರಸ್ಪರ ಸಮಾಲೋಚನೆ, ವಾದ-ವಿವಾದಗಳಿಗಾಗಿ ವೃತ್ತಾಕಾರದಲ್ಲಿ ಆಸೀನರಾಗುವುದು ಉತ್ತಮ ವ್ಯವಸ್ಥೆಯಾದುದರಿಂದ ಇದನ್ನು ದುಂಡು ಮೇಜಿನ ಪರಿಷತ್ತೆಂದು ಕರೆಯಲಾಗಿತ್ತು. ಕಳೆದ ಪರಿಷತ್ತಿನಲ್ಲಿ ಭಾಗವಹಿಸಲು ಭಾರತದ ಜನತೆಯ ಅತಿ ದೊಡ್ಡ ಸಂಘಟನೆಯಾದ ಕಾಂಗ್ರೆಸ್ ತನ್ನ ಪ್ರತಿನಿಧಿಯನ್ನು ಕಳಿಸಲು ನಿರಾಕರಿಸಿದ್ದರಿಂದಾಗಿ ಅದು ವಿಫಲವಾಗಿತ್ತು. ಕಾಂಗ್ರೆಸ್ ಈಗ ಗಾಂಧಿಯವರನ್ನು ಪ್ರತಿನಿಧಿಯಾಗಿ ಆಯ್ಕೆ ಮಾಡಿ ಕಳಿಸಿತ್ತು. ಆದರೆ ಈ ಓರ್ವ ಪ್ರತಿನಿಧಿಯ ಎದುರು ಇದ್ದವರು ಹಲವಾರು ಹಿತಾಸಕ್ತಿಗಳ ಪ್ರತಿನಿಧಿಗಳು.

ಗಾಂಧಿ-ಕಾಂಗ್ರೆಸ್ ಮಾಡಿದ ತಪ್ಪು

ಗಾಂಧಿಯವರಿಗೆ ಈ ವಿಷಯದಲ್ಲಿ ಕಾಂಗ್ರೆಸ್ ಮತ್ತು ತಾವು ಮಾಡಿದ್ದ ತಪ್ಪು ಈಗ ಅರಿವಾಗತೊಡಗಿತ್ತು. ಕರಾಚಿ ಕಾಂಗ್ರೆಸ್ ಅಧಿವೇಶನ ಈ ಸಮ್ಮೇಳನಕ್ಕೆ ತಮ್ಮನ್ನು ಏಕಮಾತ್ರ ಪ್ರತಿನಿಧಿಯಾಗಿ ಮಾಡಿದಾಗ, ತಾವು ಸ್ವಲ್ಪ ವ್ಯವಧಾನದಲ್ಲಿ ಯೋಚಿಸಬೇಕಿತ್ತು ಎಂದೀಗ ಅವರಿಗೆ ಅನ್ನಿಸತೊಡಗಿತ್ತು. ಏಕೆಂದರೆ ಸರ್ಕಾರವೇ ಕಾಂಗ್ರೆಸ್‌ನಿಂದ ೧೪ ಜನ ಪ್ರತಿನಿಧಿಗಳಿಗೆ ಅವಕಾಶ ನೀಡಿತ್ತು, ತಮ್ಮೊಂದಿಗೆ ಜವಾಹರಲಾಲ್ ನೆಹರೂ, ಕೃಪಲಾನಿ, ರಾಜೇಂದ್ರ ಪ್ರಸಾದ್ ಅಥವಾ ರಾಜಾಜಿಯವರನ್ನು ಅಧಿಕೃತ ಪ್ರತಿನಿಧಿಯಾಗಿ ಕರೆದೊಯ್ಯಬಹುದೆಂದು ಅವರಿಗೆ ಅನಿಸಿತ್ತಾದರೂ ಅವರೆಲ್ಲ ಸದ್ಯದ ಪರಿಸ್ಥಿತಿಯಲ್ಲಿ ಭಾರತ ಬಿಟ್ಟು ಬರುವುದು ಸೂಕ್ತವಲ್ಲವಾದ್ದರಿಂದ ಆಯ್ಕೆ ಕಷ್ಟವೆನ್ನಿಸಿ ಸುಮ್ಮನಾಗಿದ್ದರು. ಆದರೆ ಅಲ್ಲಿಗೆ ಬಂದ ಮೇಲೆ ಕಾರ್ಯಕಲಾಪಗಳ ವ್ಯಾಪ್ತಿ ನೋಡಿ, ಅಷ್ಟೊಂದು ಸಭೆಗಳಲ್ಲಿ ಭಾಗವಹಿಸಲು, ತಮಗೆ ಸಲಹೆ-ಸಹಾಯ ನೀಡಲು, ಸಮಿತಿಗಳ ಸಭೆಗಳಲ್ಲಿ ಸದಸ್ಯರನ್ನು ಪ್ರಭಾವಿಸಿ ಒತ್ತಡ ನಿರ್ಮಿಸಲು, ಮತ್ತು ಸಾರ್ವಜನಿಕ ಸಂಪರ್ಕದ ಕೆಲಸಗಳಿಗಾಗಿ ಕಾಂಗ್ರೆಸ್‌ನಿಂದ ಇನ್ನಷ್ಟು ಪ್ರತಿನಿಧಿಗಳನ್ನು ಕರೆದುಕೊಂಡು ಬರಬಹುದಿತ್ತು ಎಂದು ಈಗ ಅನ್ನಿಸತೊಡಗಿತ್ತು. ವಿಶೇಷವಾಗಿ ಇತ್ತೀಚಿನ ವರ್ಷಗಳಲ್ಲಷ್ಟೇ ಇಂಗ್ಲೆಂಡ್‌ನಲ್ಲಿ ಶಿಕ್ಷಣ ಪಡೆದು ಹಲವು ಗೆಳೆಯರನ್ನು ಸಂಪಾದಿಸಿಕೊಂಡಿದ್ದ ನೆಹರೂ ಮತ್ತು ನುರಿತ ವಕೀಲ ಬುದ್ಧಿಮತ್ತೆಯ ರಾಜಾಜಿಯವರಾದರೂ ತಮ್ಮ ಜೊತೆ ಇರಬೇಕಿತ್ತೆಂದೂ ಅವರಿಗೆ ಅನ್ನಿಸದಿರಲಿಲ್ಲ. ಸಮ್ಮೇಳನದಲ್ಲಿನ ವಾದ ಸರಣಿಗಳನ್ನು ನೋಡಿದ ಮೇಲೆ ಕನಿಷ್ಠ ಒಬ್ಬ ಮುಸ್ಲಿಂ, ಒಬ್ಬ

ಅಸ್ಪೃಶ್ಯ ಮತ್ತು ಒಬ್ಬ ಮಹಿಳಾ ಪ್ರತಿನಿಧಿ ಇರಬೇಕಿತ್ತು ಎಂಬ ತೀವ್ರ ಭಾವನೆಯೂ ಅವರಲ್ಲುಂಟಾಗಿತ್ತು. ಗಾಂಧಿ ಕೊನೆಯ ಗಳಿಗೆಯಲ್ಲಿ ಕಾಂಗ್ರೆಸ್ಸಿಗರೇ ಆಗಿದ್ದ ಡಾ. ಎಂ.ಎ. ಅನ್ಸಾರಿಯವರನ್ನು ರಾಷ್ಟ್ರವಾದಿ ಮುಸ್ಲಿಮರ ಪ್ರತಿನಿಧಿಯೆಂದು ಆಹ್ವಾನಿಸಬೇಕೆಂದು ವೈಸ್‌ರಾಯ್‌ರನ್ನು ಕೇಳಿಕೊಂಡರಾದರೂ, ಸರ್ಕಾರ ಅದನ್ನು ಒಪ್ಪಲಿಲ್ಲ. ಹೀಗಾಗಿ ಗಾಂಧಿ ಈ ಸಮ್ಮೇಳನದಲ್ಲಿ ಹೆಚ್ಚೂಕಡಿಮೆ ಒಂಟಿಯಾಗಿದ್ದರು. ಸಮ್ಮೇಳನಕ್ಕೆ ಹೋಗುವ ಬಗ್ಗೆ ಕೊನೆಯ ನಿಮಿಷದವರೆಗೂ ಅವರಲ್ಲಿ ತಾಕಲಾಟವಿದ್ದುದೂ ಇದಕ್ಕೆ ಕಾರಣವಾಗಿತ್ತು,

ಪರಿಷತ್ತಿನಲ್ಲಿ ಒಟ್ಟು ೧೧೨ ಜನ ಪ್ರತಿನಿಧಿಗಳಿದ್ದರು. ಅವರಲ್ಲಿ ೨೦ ಜನ ಬ್ರಿಟಿಷ್ ಸಾಮ್ರಾಜ್ಯದ ಪ್ರತಿನಿಧಿಗಳು, ೨೩ ಜನ ಮಹಾರಾಜರು, ರಾಜರು, ಸಾಮಂತರು, ನವಾಬರುಗಳನ್ನೊಳಗೊಂಡ ರಾಜ ಸಂಸ್ಥಾನಗಳ ಪ್ರತಿನಿಧಿಗಳು. ಇನ್ನು ೬೪ ಜನ ಬ್ರಿಟಿಷ್ ಆಳ್ವಿಕೆಯ ಭಾರತದ ಪ್ರತಿನಿಧಿಗಳು. ಗಾಂಧಿಯವರ ಹೊರತಾಗಿ ಇವರಲ್ಲಿ ಬಹುತೇಕರನ್ನು ವೈಸ್‌ರಾಯ್ ಕಛೇರಿಯೇ ಬಹು ಎಚ್ಚರಿಕೆಯಿಂದ ನಾಮನಿರ್ದೇಶನ ಮಾಡಿತ್ತು. ಅವರಲ್ಲಿ ಹಿಂದೂ (ಮಹಾ ಸಭಾ), ಮುಸ್ಲಿಂ (ಲೀಗ್), ಸಿಕ್ಖರು, ಅಸ್ಪೃಶ್ಯರು, ಆಂಗ್ಲೋ–ಇಂಡಿಯನ್ನರು, ಭಾರತದ ಯೂರೋಪಿಯನ್ನರು, ಪಾರ್ಸಿಗಳು, ಜಮೀನ್ದಾರರು, ಕಾರ್ಮಿಕವಾದಿಗಳು, ಮಹಿಳೆಯರು ಹೀಗೆ ಹತ್ತಾರು ಗುಂಪುಗಳ ಪ್ರತಿನಿಧಿಗಳು ಸೇರಿದ್ದರು. ಬಹುತೇಕ ಈ ಎಲ್ಲ ಗುಂಪುಗಳು ಶಾಸನ ಸಭೆಗಳ ಚುನಾವಣೆಗಳಲ್ಲಿ ಪ್ರತ್ಯೇಕ ಮತಕ್ಷೇತ್ರಗಳನ್ನು ಆಗ್ರಹಿಸಿದ್ದರು. ಇದನ್ನು ಒಮ್ಮತದಿಂದ ಒಂದು ಸಂಯೋಜನೆಗೆ ತರುವುದೇ ಈ ದುಂಡು ಮೇಜಿನ ಪರಿಷತ್ತಿನ ಮುಂದಿದ್ದ ಬಹು ದೊಡ್ಡ ಸವಾಲಾಗಿತ್ತು.

ಮೂರೇ ನಿಮಿಷದಲ್ಲಿ ಮಲಗಬಲ್ಲ ಗಾಂಧಿ!

ಗಾಂಧಿ ಈ ಸಮ್ಮೇಳನದ ಬಹುಭಾಗಗಳಲ್ಲಿ ಹಾಜರಿದ್ದರಾದರೂ, ಹಲವು ಔಪಚಾರಿಕ ಕಲಾಪಗಳು, ಸಮಿತಿ ಸಭೆಗಳು, ಪೂರ್ಣಾಧಿವೇಶನಗಳ ಔಪಚಾರಿಕ ಕಲಾಪಗಳು ಅವರಿಗೆ ಬೇಸರ ತರಿಸುತ್ತಿದ್ದವು. ಹಾಗಾಗಿ ಅವರು ಹಲವೊಮ್ಮೆ ಸುಮ್ಮನೆ ಕಣ್ಣು ಮುಚ್ಚಿ, ಆಗ ಕೆಲವೊಮ್ಮೆ ನಿದ್ದೆಯನ್ನೂ ಮಾಡಿಬಿಡುತ್ತಿದ್ದರು. ಅವರ ದಿನಚರಿಯನ್ನು ನೋಡಿದಾಗ ಅವರು ಹಲವು ದಿನಗಳಲ್ಲಿ ರಾತ್ರಿ ೨.೩೦ಕ್ಕೆ ಮಲಗಿ ೩.೪೫ಕ್ಕೆ ಏಳುತ್ತಿದ್ದುದುಂಟು. ಆರು ಗಂಟೆಗೆ ಬೆಳಗಿನ ಉಪಹಾರದ ನಂತರ ಮತ್ತೊಮ್ಮೆ ಒಂದು ತಾಸು ನಿದ್ರೆ ಮಾಡಿದರೆ ಮುಗಿಯಿತು, ಇನ್ನು ಇಡೀ ದಿನ ಅವರು ಪೂರ್ವ ನಿಗದಿತ ಕಾರ್ಯಕ್ರಮಗಳಲ್ಲಿ ವ್ಯಸ್ತರಾಗಿರಬೇಕಾಗಿತ್ತು. ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೊಡನೆಯ ಸಂವಾದ ಕಾರ್ಯಕ್ರಮ ತಡ ರಾತ್ರಿಯವರೆಗೂ ಮುಂದುವರೆದಾಗ ಗಾಂಧಿಯವರ ಆಪ್ತ ಕಾರ್ಯದರ್ಶಿ ಮಹದೇವ ದೇಸಾಯಿ 'ಇದು ಗಾಂಧಿ ಮಲಗಲೇಬೇಕಾದ ಸಮಯ' ಎಂದು ವಿದ್ಯಾರ್ಥಿಗಳನ್ನು ಎಚ್ಚರಿಸುತ್ತಾ, ಅವರ ಕುತೂಹಲಕ್ಕಾಗಿ, 'ಮಹಾತ್ಮ ಮೂರೇ ನಿಮಿಷದಲ್ಲಿ ನಿದ್ರೆಗೆ ಜಾರುವರೆಂಬುದು ನಿಮಗೆ ಗೊತ್ತೆ?' ಎಂದು ಕೇಳಿದರು. ಆಗ ಒಬ್ಬ ಹುಡುಗಿ 'ಹೌದೇ? ಅದು ಹೇಗೆ ಸಾಧ್ಯ!' ಎಂದು ಆಶ್ಚರ್ಯ ವ್ಯಕ್ತಪಡಿಸಿದಾಗ ತಕ್ಷಣ ಗಾಂಧಿ 'ಅದನ್ನೀಗ ಮಾಡಿ ತೋರಿಸಲೇನು?' ಎಂದು

ಚಟಾಕಿ ಹಾರಿಸಿ ಎಲ್ಲರನ್ನೂ ನಗಿಸಿದ್ದುಂಟು. ಆದರೆ ಅವರು ತಾವು ಮಾತಾಡಲೇಬೇಕಾದ ಸಂದರ್ಭಗಳಲ್ಲಿ ಸರ್ವರೀತಿಯಲ್ಲೂ ಜಾಗೃತರಾಗುತ್ತಿದ್ದರು.

ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರ: ಗಾಂಧಿ–ಅಂಬೇಡ್ಕರ್ ವಾಗ್ವಾದ

ಸೆಪ್ಟೆಂಬರ್ ೧೫ರಂದು ಮೊದಲ ಬಾರಿಗೆ ಗಾಂಧಿ, ಈ ಎರಡನೇ ದುಂಡು ಮೇಜಿನ ಪರಿಷತ್ತಿನಲ್ಲಿ ಮೊದಲ ಬಾರಿಗೆ ಮಾತನಾಡಿ, ಇಂಗ್ಲಿಷ್ ಮನುಷ್ಯನೊಬ್ಬನಿಂದ ಸ್ಥಾಪಿತವಾಗಿ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ, ಮಹಿಳಾ ಅಧ್ಯಕ್ಷರುಗಳನ್ನು ಹೊಂದಿದ ಇತಿಹಾಸವಿರುವ ಕಾಂಗ್ರೆಸ್ ಭಾರತೀಯರೆಲ್ಲರ ಧ್ವನಿಯಾಗಿದ್ದು ಅದು ಅಶ್ಪೃಶ್ಯರೆಂದು ಕರೆಯಲ್ಪಡುವ ಸಮುದಾಯದ ಅಭ್ಯುದಯದ ಜನಾಂದೋಲನವನ್ನೂ ನಡೆಸಿದೆ ಎನ್ನುತ್ತಾ, ನಗರದ ನಾಗರಿಕ ಜನರ ವೇದಿಕೆಯಾಗಿದ್ದ ಇದು, ಈಗ ಭಾರತದ ಮೂಲೆಮೂಲೆಯ ಹಳ್ಳಿಗೂ ತನ್ನ ಶಾಖೆಗಳನ್ನು ಚಾಚಿಕೊಂಡು ಸಾರತಃ ರೈತ ಸಂಘಟನೆಯಾಗಿ ಮಾರ್ಪಟ್ಟಿದೆ ಎಂದು ಹೇಳಿದರು. ಗಾಂಧಿ, ಮುಸ್ಲಿಮರಿಗೆ ಮತ್ತು ಸಿಕ್ಖರಿಗೆ ಪ್ರತ್ಯೇಕ ಮತಕ್ಷೇತ್ರಗಳ ವಿಷಯವನ್ನು ತಾತ್ವಿಕವಾಗಿ ಒಪ್ಪಿಕೊಂಡಿದ್ದರು. ಆದರೆ ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರದ ಕಲ್ಪನೆ ಅವರ ಗ್ರಹಿಕೆಗೆ ಸಿಗದಿದ್ದಾಗಿತ್ತು. ಈ ಕಲ್ಪನೆಯನ್ನು ಅಂಬೇಡ್ಕರ್ ಅವರು ಈಗಾಗಲೇ ಮೊದಲ ದುಂಡುಮೇಜಿನ ಪರಿಷತ್ತಿನಲ್ಲಿ ಪರಿಚಯಿಸಿ ಪ್ರಬಲವಾಗಿ ಮಂಡಿಸಿದ್ದರು. ಈ ಸಮ್ಮೇಳನದಲ್ಲೂ ಅವರು ಅದೇ ವಾದವನ್ನು ಮುಂದುವರೆಸಿದರು.

ಈ ಬಗ್ಗೆ ಸುದ್ದಿಗಾರರೊಬ್ಬರು ಗಾಂಧಿಯನ್ನು ಪ್ರಶ್ನಿಸಿದಾಗ ಅವರು, 'ಡಾ. ಅಂಬೇಡ್ಕರ್, ಇತರ ಯಾರೇ ಅಸ್ಪೃಶ್ಯರಂತೆ ನಮ್ಮ ಮುಖದ ಮೇಲೆ ಉಗುಳುವ ಹಕ್ಕನ್ನು ಹೊಂದಿದ್ದು, ಅದನ್ನು ಅವರು ಚಲಾಯಿಸಿದರೂ ಕೂಡ, ಅವರು ತಮ್ಮ ಪ್ರದೇಶದ ಜನರ ಧ್ವನಿಯಾಗಿರಬಹುದೇ ಹೊರತು ಇಡೀ ದೇಶದ ಧ್ವನಿಯಾಗಿಲ್ಲ ಎಂದು ನಾನು ಹೇಳಬಯಸುವೆ' ಎಂದು ಉತ್ತರಿಸಿದರು. ಜೊತೆಗೆ, ತಮಗೆ ದೇಶದ ಹಲವು ಭಾಗಗಳ ಅಸ್ಪೃಶ್ಯ ಸಮುದಾಯದವರಿಂದ ಅಂಬೇಡ್ಕರ್ ವಾದವನ್ನು ತಿರಸ್ಕರಿಸಿ ಮತ್ತು ತಮ್ಮ ನಿಷ್ಠೆಯನ್ನು ಕಾಂಗ್ರೆಸ್‌ನಲ್ಲಿ ದೃಢೀಕರಿಸಿ ಹಲವು ತಂತಿಗಳು ಬಂದಿವೆ ಎಂದೂ ಅವರು ಹೇಳಿದರು. ಪ್ರತ್ಯೇಕ ಮತಕ್ಷೇತ್ರಗಳು ಅಸ್ಪೃಶ್ಯರಿಗೆ ಅಪಾರ ಹಾನಿಯನ್ನು ಉಂಟು ಮಾಡಲಿದ್ದು ಅದು ಹಿಂದೂ ಸಮುದಾಯವನ್ನು ಸದಾ ಹೊಡೆದಾಡುವ ಸಶಸ್ತ್ರ ಗುಂಪುಗಳನ್ನಾಗಿ ಒಡೆಯುವ ಅಪಾಯವನ್ನು ಒಳಗೊಂಡಿದೆ ಎಂದು ಗಾಂಧಿ ಎಚ್ಚರಿಸಿದರು.

ಆದರೆ ಅಂಬೇಡ್ಕರ್, ಗಾಂಧಿ ಮತ್ತು ಕಾಂಗ್ರೆಸ್ ಅಸ್ಪೃಶ್ಯರ ಬಗ್ಗೆ ಸಹಾನುಭೂತಿ ಹೊಂದಿ ಅವರ ಏಳಿಗೆಗಾಗಿ ಕೆಲಸ ಮಾಡುತ್ತಿರುವುದು ನಿಜವಾದರೂ, ವಂಚಿತ ಸಮುದಾಯ ತನ್ನದೇ ಸಮುದಾಯದ ನಾಯಕತ್ವವನ್ನು ಹೊಂದಿದ್ದರೆ ಮಾತ್ರ ಅದರ ಸಬಲೀಕರಣ ಸಾಧ್ಯ ಎಂಬುದನ್ನು ಆಧುನಿಕ ಜಗತ್ತಿನ ರಾಜಕಾರಣ ಸಾಬೀತು ಮಾಡಿದೆ ಎನ್ನುತ್ತಾ ಬ್ರಿಟನ್‌ನ ಕಾರ್ಮಿಕರ ಸಬಲೀಕರಣಕ್ಕಾಗಿ ಲೇಬರ್ ಪಕ್ಷ ಉದಯವಾದುದನ್ನು ಉದಾಹರಿಸಿದರು.

ಈ ಮಧ್ಯೆ ಭಾರತದಿಂದ ಜವಾಹರಲಾಲ್ ನೆಹರೂ ಅವರಿಂದ ಗಾಂಧಿಯವರಿಗೆ ಪತ್ರ ಬಂದು ಸಂಯುಕ್ತ ಸಂಸ್ಥಾನ ಪ್ರಾಂತ್ಯದಲ್ಲಿ ರೈತರು ಭೂಕಂದಾಯ ಕಟ್ಟಲು ನಿರಾಕರಿಸುವ ಆಂದೋಲನ ಶುರು ಮಾಡಿದ್ದಾರೆಂದೂ ವೈಸ್‌ರಾಯ್ ಮಾಮೂಲಿ ಶಾಸನಗಳನ್ನು ರದ್ದುಗೊಳಿಸಿ, ತುರ್ತು ಪರಿಸ್ಥಿತಿ ಕಾನೂನುಗಳಡಿಯ ವಿಶೇಷಾಜ್ಞೆಗಳ ಮೂಲಕ ಆಡಳಿತ ನಡೆಸಲು ಶುರು ಮಾಡಿ, ರೈತರನ್ನು ಬಗ್ಗು ಬಡಿದು ಕಾಂಗ್ರೆಸ್ ನಾಯಕರನ್ನು ಒಬ್ಬೊಬ್ಬರನ್ನಾಗಿ ಬಂಧಿಸಲಾಗುತ್ತಿದೆ ಎಂದು ತಿಳಿಸಿದ್ದರು. ಗಾಂಧಿ ಮಾರುತ್ತರ ಬರೆದು ಇಂಗ್ಲೆಂಡ್‌ನಲ್ಲಿ ಲೇಬರ್ ಪಕ್ಷ ಇಬ್ಭಾಗವಾಗಿ ಪ್ರಧಾನಿ ಮೆಕ್‌ಡೊನಾಲ್ಡ್ ಕನ್ಸರ್ವೇಟೀವ್ ಪಕ್ಷದ ಸದಸ್ಯರ ದಾಕ್ಷಿಣ್ಯಕ್ಕೆ ಒಳಗಾಗಿದ್ದು, ಇದರ ಪರಿಣಾಮವಾಗಿ ಮುಸ್ಲಿಂ ಲೀಗ್ ಮತ್ತು ನಿಮ್ನವರ್ಗಗಳ ಪ್ರತಿನಿಧಿಗಳನ್ನು ತಮ್ಮ ವಿರುದ್ಧ ಎತ್ತಿ ಕಟ್ಟಿ ಭಾರತದ ಸ್ವಾತಂತ್ರ್ಯದ ಪ್ರಸ್ತಾವನೆಯನ್ನು ದಿಕ್ಕೆಡಿಸಲಾಗುತ್ತಿದೆ ಎಂದು ತಿಳಿಸಿದ್ದರು.

ಅಸ್ಪೃಶ್ಯರು ಪ್ರತ್ಯೇಕಗೊಂಡು ಬದುಕಬಲ್ಲರೇ? – ಗಾಂಧಿ ಪ್ರಶ್ನೆ

ಪ್ರತ್ಯೇಕ ಮತಕ್ಷೇತ್ರಗಳ ವಿಷಯ ಕುರಿತ ಚರ್ಚೆ ತೀವ್ರಗೊಂಡಾಗ, ನವೆಂಬರ್ ೧೩ರ ಸಭೆಯಲ್ಲಿ ಗಾಂಧಿ ಸಮ್ಮೇಳನದಲ್ಲಿ ಹೀಗೆ ಹೇಳಿದರು: 'ಪ್ರತ್ಯೇಕ ಮತಕ್ಷೇತ್ರಗಳನ್ನು ಕೇಳುತ್ತಿರುವವರಾರಿಗೂ ನಿಜವಾದ ಭಾರತವೇನೆಂಬುದು ಗೊತ್ತಿಲ್ಲ. ಡಾ. ಅಂಬೇಡ್ಕರ್‌ಗೆ ನನ್ನೆಲ್ಲ ಗೌರವ ಸಲ್ಲಿಸುತ್ತಾ, ಅವರು ನಿಮ್ನ ವರ್ಗಗಳ ಅಭ್ಯುದಯಕ್ಕಾಗಿ ಕೈಗೊಂಡಿರುವ ಎಲ್ಲ ಪ್ರಯತ್ನಗಳಿಗೆ ಪ್ರಣಾಮ ಸಲ್ಲಿಸುತ್ತಾ ನಾನು ಹೇಳಬಯಸುವುದೇನೆಂದರೆ, ಅವರು ಎದುರಿಸಿರಬಹುದಾದ ಅನೇಕ ಪ್ರತಿಕೂಲ ಪರಿಸ್ಥಿತಿಗಳ ಕಹಿ ಅನುಭವ, ಈ ವಿಷಯದಲ್ಲಿ ಇರಬೇಕಾದ ಅವರ ಸಮಚಿತ್ತವನ್ನು ಕೆಡಿಸಿಬಿಟ್ಟಿದೆ. ಅಸ್ಪೃಶ್ಯರ ನಿಜವಾದ ಪ್ರತಿನಿಧಿ ನಾನು ಎಂದು ಇಲ್ಲಿ ಹೇಳಬಯಸುವೆ. ಈಗ ಮತಸಂಗ್ರಹಣೆ ಮಾಡಿದರೂ ಅಸ್ಪೃಶ್ಯರ ಮಧ್ಯೆ ನನಗೇ ಹೆಚ್ಚು ಬೆಂಬಲ ಇರುವುದು ಕಂಡುಬರುವುದು ಖಚಿತ. ಪ್ರತ್ಯೇಕ ಮತಕ್ಷೇತ್ರಗಳ ಬೇಡಿಕೆ, ಸಮಸ್ಯೆಯನ್ನು ಪರಿಹರಿಸುವುದಕ್ಕಿಂತ ಹೆಚ್ಚಾಗಿ ಹದಗೆಡಿಸಲಿದೆ. ನನ್ನ ದೇಶದ ಸ್ವಾತಂತ್ರ್ಯದ ಹೆಸರಿನಲ್ಲಿ, ನನ್ನ ಅಸ್ಪೃಶ್ಯ ಸೋದರರ ಹಿತವನ್ನು ನಾನು ಬಲಿಗೊಡಲಾರೆ. ಮುಸಲ್ಮಾನರು ಸಿಕ್ಖರು ಪ್ರತ್ಯೇಕ ಮತಕ್ಷೇತ್ರಗಳ ಪರಿಣಾಮವಾದ ಪ್ರತ್ಯೇಕತೆಗಳಿಂದ ಬದುಕಿಕೊಳ್ಳಬಹುದೇನೋ. ಆದರೆ ಅಸ್ಪೃಶ್ಯರು ಪ್ರತ್ಯೇಕಗೊಂಡು ಬದುಕಿಕೊಳ್ಳಬಲ್ಲರೇ? ಇದು ಪ್ರತಿ ಹಳ್ಳಿಯನ್ನೂ ಒಡೆದು ಅಲ್ಲಿ ಹಿಂಸೆಯನ್ನು ಶಾಶ್ವತವಾಗಿ ನೆಲೆಗೊಳಿಸುತ್ತದೆ. ಆದ್ದರಿಂದ ನಾನು ಈ ವಿಷಯದಲ್ಲಿ ಒಂಟಿಯಾದರೂ ಸರಿ, ಇದನ್ನು ನನ್ನ ಜೀವ ತೆತ್ತಾದರೂ ವಿರೋಧಿಸುವೆ'

ಸಮ್ಮೇಳನದಲ್ಲಿ ಅಸ್ಪೃಶ್ಯರ ಪರವಾದ ಬೇಡಿಕೆಯಲ್ಲದೆ ಇತರ ಗುಂಪುಗಳ ಬೇಡಿಕೆಗಳ ಬಗ್ಗೆ ಒಮ್ಮತ ಮೂಡದ್ದರಿಂದ 'ಅಲ್ಪಸಂಖ್ಯಾತರ ಸಮಿತಿ'ಯೊಂದನ್ನು ರಚಿಸಿ ಪರಿಹಾರ ಹುಡುಕುವ ಜವಾಬ್ದಾರಿಯನ್ನು ಅದಕ್ಕೆ ನೀಡಲಾಯಿತು. ಆ ಸಮಿತಿಯ ಸದಸ್ಯರಾಗಿ ಮಾತನಾಡಿದ ಗಾಂಧಿ, ಕೋಮು ಇಬ್ಭಾಗದ ಸಮಸ್ಯೆಯನ್ನು ಪರಿಹರಿಸುವಲ್ಲಿ ತಾವು ವಿಫಲರಾಗಿರುವುದಾಗಿ ಒಪ್ಪಿಕೊಳ್ಳುತ್ತಾ, ಈ ಸಮ್ಮೇಳನವಾದರೂ ಅದಕ್ಕೊಂದು ಪರಿಹಾರ ಒದಗಿಸುವುದೆಂಬ ತಮ್ಮ ನಿರೀಕ್ಷೆಯೂ ಈ ಸಮ್ಮೇಳನಕ್ಕೆ ಬ್ರಿಟಿಷ್ ರಾಜಪ್ರಭುತ್ವ

ಸದಸ್ಯರ ನಾಮನಿರ್ದೇಶನ ಮಾಡಿರುವ ರೀತಿಯಿಂದ ಸುಳ್ಳಾಗಲಿದೆ ಎಂದು ನುಡಿದರು. ಬ್ರಿಟಿಷ್ ಆಳ್ವಿಕೆಯಲ್ಲಿ ಮತೀಯ ಪ್ರತ್ಯೇಕತೆಯ ಭಾವನೆ ಹೆಚ್ಚಾಗಿದೆ ಎಂದೂ ಅವರು ಹೇಳಿದರು.

ವಿಫಲವಾದ ಸಮ್ಮೇಳನ–ಮತ್ತೆ ಸತ್ಯಾಗ್ರಹದ ಇಂಗಿತ

ಗಾಂಧಿಯವರ ಈ ಮಾತನ್ನು ಪುಷ್ಟೀಕರಿಸುವಂತೆ ಸಮ್ಮೇಳನದ ಅಂತಿಮ ಪೂರ್ಣಾಧಿವೇಶನದಲ್ಲಿ ಗಾಂಧಿಯವರ ಪ್ರತಿಭಟನೆಯ ಹೊರತಾಗಿ (ಪ್ರಧಾನಿ) ಮೆಕ್‌ಡೊನಾಲ್ಡ್, ಅವರನ್ನು 'ಹಿಂದೂ' ಎಂದು ಕರೆಯುತ್ತಲೇ ಮಾತನಾಡಿದರು. ಹೀಗೆ ಈ ಸಮ್ಮೇಳನ ಅದರ ಆಯೋಜನೆಯ ಮೂಲನೆಲೆ–ಭಾವನೆಯಿಂದಲೇ ವೈಫಲ್ಯಕ್ಕೆ ಬದ್ಧವಾಗಿಯೇ ನಡೆದಿತ್ತು ಎನ್ನಬಹುದು. ವಿವಿಧ ಗುಂಪುಗಳಿಗೆ ಪ್ರತ್ಯೇಕ ಮತಕ್ಷೇತ್ರಗಳ ಪ್ರಶ್ನೆ ಒಮ್ಮತದ ಪರಿಹಾರ ಕಾಣದಿದ್ದುದರಿಂದ ಅದಕ್ಕೊಂದು ಪರಿಹಾರ ರೂಪಿಸುವ ಜವಾಬ್ದಾರಿಯನ್ನು ಬ್ರಿಟಿಷ್ ಸಾಮ್ರಾಜ್ಯದ ಸರ್ಕಾರಕ್ಕೇ ವಹಿಸಲು ನಿರ್ಧರಿಸಲಾಯಿತು.

ಈ ಪೂರ್ಣಾಧಿವೇಶನದಲ್ಲಿ ಮಾತನಾಡಿದ ಗಾಂಧಿ 'ಇಲ್ಲಿ ಪ್ರಾತಿನಿಧ್ಯ ಪಡೆದಿರುವ ಎಲ್ಲ ಗುಂಪುಗಳೂ ಖಂಡದೃಷ್ಟಿಯವಾಗಿದ್ದರೆ, ನಾನು ಪ್ರತಿನಿಧಿಸುವ ಕಾಂಗ್ರೆಸ್ ಇಡೀ ಭಾರತದ ಜನ ಸಮುದಾಯವನ್ನು ಒಟ್ಟಾರೆಯಾಗಿ ಪ್ರತಿನಿಧಿಸುತ್ತದೆ. ಆದರೂ ಅದು, ತಾನೇ ಸರ್ಕಾರ ರಚಿಸುವ ಉದ್ದೇಶ ಹೊಂದಿಲ್ಲ. ಅದು ಇತರ ಗುಂಪುಗಳೊಂದಿಗೆ ಸೇರಿಯೇ ಸರ್ಕಾರ ರಚನೆಯ ಪ್ರಯತ್ನ ಮಾಡುವುದು. ಆದರೆ ಸಂಘರ್ಷ, ಹಿಂಸೆ ಮೂಲಕ ಅಲ್ಲ. ಇಲ್ಲಿ ಹಲವರು ಭಾರತ ಇಂದು ಭಯಂಕರ ಹಿಂಸಾಚಾರದ ಅಂಚಿಗೆ ಬಂದು ನಿಂತಿದೆ ಎಂದಿದ್ದಾರೆ. ನಿಜ, ಚರಿತ್ರೆ ರಕ್ತಸಿಕ್ತವಾಗಿದೆ. ಅಲ್ಲಿ ಖಡ್ಗ, ಭರ್ಜಿ, ಚೂರಿ, ಬಂದೂಕು, ವಿಷ ಎಲ್ಲ ಬಳಕೆಯಾಗಿದೆ. ಆದರೆ ಅದರ ಬಗ್ಗೆ ಯಾರಿಗೂ ವಿಷಾದವಿದ್ದಂತಿಲ್ಲ. ಆದರೆ ಕಾಂಗ್ರೆಸ್ ಇತಿಹಾಸದಲ್ಲಿ ಹೊಸ ದಾರಿ ತೆರೆಯಲಿದೆ. ಅದು ನಾಗರಿಕ ಅಸಹಕಾರ ಸತ್ಯಾಗ್ರಹದ ಅಸ್ತ್ರ ಕಂಡುಕೊಂಡಿದೆ. ೩೫ ಕೋಟಿ ಜನರಿರುವ ದೇಶಕ್ಕೆ ಕೊಲೆಗಾರರ ಸಹಾಯ ಬೇಕಿಲ್ಲ. ಸತ್ಯಾಗ್ರಹ ಎದುರಾಳಿಯನ್ನು ಘಾಸಿಗೊಳಿಸದೆ ಮಣಿಸಬಲ್ಲುದು. ಅದೇ ನಮ್ಮ ಮುಂದಿನ ದಾರಿ' ಎನ್ನುತ್ತಾ ತಾವು ಭಾರತಕ್ಕೆ ಹಿಂದಿರುಗಿದೊಡನೆ ಮತ್ತೆ ಅಸಹಕಾರ ಸತ್ಯಾಗ್ರಹ ಆರಂಭಿಸುವುದು ಅನಿವಾರ್ಯ ಎಂಬ ಇಂಗಿತವನ್ನು ವ್ಯಕ್ತಪಡಿಸಿದರು. ಜೊತೆಗೆ ತಾವು ಅಸಂಖ್ಯ ಇಂಗ್ಲಿಷ್ ಜನರ ಪ್ರೀತಿ ವಿಶ್ವಾಸಗಳ ನೆನಪುಗಳೊಂದಿಗೆ ತೆರಳುತ್ತಿದ್ದು, ತಮ್ಮ ಅಸಹಕಾರ ಆಂದೋಲನ ಇವರಾರಿಗೂ ತೊಂದರೆ ಕೊಡದಂತಹ ಸ್ವಯಂಸಂಕಷ್ಟದ ಕಾರ್ಯಾಚರಣೆ ಯಾಗಿರುವುದೆಂದೂ ಭರವಸೆ ನೀಡಿದರು.

■

೭೪

ಗಾಂಧಿಯವರ ಯೂರೋಪ್ ಕಿರು ಪ್ರವಾಸ

ಗಾಂಧಿಯವರ ಭಾಷಣದ ನಂತರದಲ್ಲೇ ತಾವು ಭಾರತಕ್ಕೆ ಹಿಂದಿರುಗಿದೊಡನೆ ತಮ್ಮ ಬಂಧನ ಖಚಿತ ಎಂಬ ಸುದ್ದಿ ಅವರಿಗೆ ಅಧಿಕೃತ ವಲಯಗಳಿಂದಲೇ ಮುಟ್ಟಿತು. ಈ ಸುದ್ದಿಯನ್ನು ಮಹದೇವ ದೇಸಾಯಿಯವರು ವಲ್ಲಭಭಾಯಿ ಪಟೇಲರಿಗೆ ತಂತಿ ಮೂಲಕ ತಿಳಿಸಿದರು. ಪಟೇಲರು ನಾಯಕರ ಬಂಧನಗಳ ಸರಮಾಲೆಯನ್ನು ಊಹಿಸಿ ಅದಕ್ಕೆ ತಕ್ಕಂತೆ ಕಾಂಗ್ರೆಸ್ಸನ್ನು ಮುನ್ನಡೆಸುವ ಎರಡನೆ ಸಾಲಿನ, ಮೂರನೇ ಸಾಲಿನ ನಾಯಕರ ಪಟ್ಟಿಯೊಂದನ್ನು ಸಿದ್ಧಪಡಿಸಿದರು. ಗಾಂಧಿಯವರಿಗೆ ಈ ಲಂಡನ್ ಭೇಟಿಯ ಸಂದರ್ಭದಲ್ಲಿ ಅಮೆರಿಕಾ ಸೇರಿದಂತೆ ಹಲವು ದೇಶಗಳಿಂದ ಆಹ್ವಾನ ಬಂದಿತ್ತು. ಆದರೆ ಅವರು ಭಾರತಕ್ಕೆ ಹಿಂದಿರುಗುವ ತುರ್ತಿನಲ್ಲಿದ್ದರು. ಹಾಗಾಗಿ ಸಂಬಂಧಪಟ್ಟವರೆಲ್ಲರಿಗೂ 'ನನಗೆ ಭಾರತದಲ್ಲಿ ತುರ್ತು ಕರ್ತವ್ಯಗಳಿವೆ. ಇನ್ನೊಮ್ಮೆ ನೋಡೋಣ' ಎಂಬ ತಂತಿ ಕಳಿಸಿ ಒಂದು ವಾರದ ಕಿರುಪ್ರವಾಸಕ್ಕಾಗಿ ಡಿಸೆಂಬರ್‌ನಲ್ಲಿ ಪ್ಯಾರಿಸ್‌ಗೆ ಹೊರಟರು. ಜೊತೆಗೆ ತಮ್ಮ ಪರಿವಾರದೊಂದಿಗೆ ಈವರೆಗೆ ತಮಗೆ ಲಂಡನ್‌ನಲ್ಲಿ 'ರಕ್ಷಣೆ ನೀಡಿದ್ದ ಪೊಲೀಸ್ ತಂಡದ ಸಾರ್ಜೆಂಟ್‌ಗಳಾದ ಎವಾನ್ಸ್ ಮತ್ತು ರೋಜರ್ಸ್ ಎಂಬ ಇಬ್ಬರು ಪೊಲೀಸರನ್ನೂ, ಅವರ ಮೇಲಧಿಕಾರಿಗಳ ಅನುಮತಿಯೊಂದಿಗೆ ಕರೆದೊಯ್ದರು. ಈ ಇಬ್ಬರೂ ನನ್ನ ಕುಟುಂಬದ ಸದಸ್ಯರೇ ಆಗಿಬಿಟ್ಟು ಇನ್ನೂ ಸ್ವಲ್ಪಕಾಲ ಅವರೊಂದಿಗೆ ಇರಬೇಕೆನ್ನಿಸಿದೆ' ಎಂಬುದು ಅವರು ಇದಕ್ಕೆ ನೀಡಿದ ಕಾರಣ. ಸರ್ಕಾರ ಈ ಇಬ್ಬರು ಪೊಲೀಸರಿಗೆ, ಗಾಂಧಿಯವರನ್ನು ಭಾರತಕ್ಕೆ ಹಡಗು ಹತ್ತಿಸಿ ಲಂಡನ್‌ಗೆ ವಾಪಸ್ಸಾಗುವವರೆಗೂ ಸಂಬಳ ಸಹಿತ ರಜೆ ನೀಡಿತ್ತು.

ಪ್ಯಾರಿಸ್‌ನಲ್ಲಿ ಒಂದು ದಿವಸ ತಂಗಿ, ಅಲ್ಲಿನ ಜನರ ಅಪೇಕ್ಷೆಯ ಮೇರೆಗೆ ನರ್ತನಶಾಲೆಯೊಂದರಲ್ಲಿ 'ಶಾಂತಿ ಮತ್ತು ಅಹಿಂಸೆ'ಯ ಬಗ್ಗೆ ಭಾಷಣ ಮಾಡಿ ಸ್ವಿಟ್ಜರ್‌ಲೆಂಡ್‌ಗೆ ಪಯಣಿಸಿದರು. ಫ್ರೆಂಚ್ ಲೇಖಕ ರೊಮೈನ್ ರೊಲ್ಯಾಂಡ್‌ರ ಬಹುಕಾಲದ ಆಹ್ವಾನಕ್ಕೆ ಓಗೊಡುವುದು ಈ ಪಯಣದ ಉದ್ದೇಶವಾಗಿತ್ತು. ಅಲ್ಲಿಂದ ಅವರು ರೋಂ ನಗರಕ್ಕೆ ತೆರಳಿ ಇಟಲಿಯ ಸರ್ವಾಧಿಕಾರಿ ಮುಸೊಲೊನಿಯನ್ನು ಭೇಟಿ ಮಾಡಿ ಭಾರತಕ್ಕೆ ಹಿಂದಿರುಗುವುದು ಅವರ ಪೂರ್ವನಿಯೋಜಿತ ಕಾರ್ಯಕ್ರಮವಾಗಿತ್ತು.

ರೊಮೈನ್ ರೊಲ್ಯಾಂಡ್‌ರೊಂದಿಗೆ ಭೇಟಿ

ಈ ಮೊದಲೇ ದಾಖಲಿಸಿರುವಂತೆ, ರೊಮೈನ್ ರೊಲ್ಯಾಂಡ್ ನೊಬೆಲ್ ಪ್ರಶಸ್ತಿ ಪುರಸ್ಕೃತ ಲೇಖಕರಾಗಿದ್ದರು. ಮೀರಾಬೆನ್‌ರನ್ನು ಗಾಂಧಿ ಬಳಿ ತಂದ ಗಾಂಧಿ ಕುರಿತ ಪುಸ್ತಕದ ಕರ್ತೃವೂ ಆಗಿದ್ದರು. ಗಾಂಧಿಯವರ ಮಹಾ ಅಭಿಮಾನಿಯಾಗಿದ್ದ ಈ ಲೇಖಕ, ಗಾಂಧಿ–ಟಾಲ್‌ಸ್ಟಾಯ್–ಟ್ಯಾಗೋರ್‌ರನ್ನು ಹೋಲಿಕೆ ಮಾಡಿ, ಅವರಲ್ಲಿನ ಮಾನವ ಸತ್ವದ ಬಗ್ಗೆ ಕೆಲವು ಅದ್ಭುತ ಮಾತುಗಳನ್ನಾಡಿದ್ದಾನೆ. ದ.ಆಫ್ರಿಕಾದಲ್ಲಿ ಕಂಡಂತೆ,

ಬಾರ್ಡೋಲಿಯಲ್ಲಿ ಕಂಡಂತೆ, ಗಾಂಧಿ ಸಾಮಾನ್ಯ ಮನುಷ್ಯರನ್ನೂ ಅತಿ ಮಾನವರ ಮಟ್ಟಕ್ಕೆ ಏರಿಸಬಲ್ಲ ಮಾಂತ್ರಿಕ ಶಕ್ತಿ ಹೊಂದಿದ್ದರು. ಇದರ ಹಿಂದೆ ಇದ್ದುದು ಪ್ರತಿ ಮನುಷ್ಯನಲ್ಲೂ ಮಾನವತ್ವದ ಸೆಲೆ ಇದ್ದೇ ಇರುವುದು ಎಂಬ ಅವರ ನಂಬಿಕೆ. ಟ್ಯಾಗೋರ್‌ಗೆ ಹಿಂಸೆಯ ಬಗ್ಗೆ ಭಯವಿತ್ತು. ಹಾಗಾಗಿಯೇ ಅವರು ವಿದೇಶೀ ವಸ್ತ್ರದಹನವನ್ನು ಕಟುವಾಗಿ ವಿರೋಧಿಸಿದರು. ಆದರೆ ಗಾಂಧಿ, ಅಹಿಂಸೆಯಲ್ಲೇ ಹಿಂಸೆಯನ್ನು ಸೇರಿಸಿ ಅದನ್ನು ಗೆದ್ದಿದ್ದರು. ಟಾಲ್‌ಸ್ಟಾಯ್ ಉದ್ವಿಗ್ನತೆಯ ಮನುಷ್ಯ. ಹಾಗಾಗಿಯೇ ಆತ ತನ್ನ ಹೆಂಡತಿಯಿಂದ ಓಡಿ ಹೋದ. ಆದರೆ ಗಾಂಧಿ ಹಾಗೆ ಯಾರಿಂದಲೂ ದೂರ ಓಡಲಿಲ್ಲ. ಗಾಂಧಿಯ ಹೋರಾಟದಲ್ಲಿ ಧಾರ್ಮಿಕ ಪ್ರಶಾಂತಿ ಇದೆ. ಆದರೆ ಟಾಲ್‌ಸ್ಟಾಯ್‌ನ ಪ್ರತಿ ನಡೆಯಲ್ಲೂ ಗಲಭೆ ಇದೆ. ಅವನದು ಗರ್ವಕ್ಕೆ ಪ್ರತಿಗರ್ವ, ವೈರಕ್ಕೆ ಪ್ರತಿ ವೈರ. ಅವನ ಅಹಿಂಸೆಯೂ ಹಿಂಸಾತ್ಮಕವಾದದ್ದು. ಇದು ರೊಲ್ಯಾಂಡ್‌ರ ವ್ಯಾಖ್ಯಾನ.

ಡಿಸೆಂಬರ್ ಐದರಂದು ಗಾಂಧಿ ಲೆಮಾನ್ ಸರೋವರದ ತೀರದ ವಿಲೆನುವಾಗೆ ಬಂದಾಗ ರೊಲ್ಯಾಂಡ್‌ರನ್ನು ಗಾಂಧಿಯವರನ್ನು ಕಾಣಬಯಸಿದ ನೂರಾರು ಜನರ ಬೇಡಿಕೆಗಳು ಸುಸ್ತು ಮಾಡಿದ್ದವು. ಊರಿನ ಗೌಳಿಗರು ಗಾಂಧಿ ಅಲ್ಲಿರುವವರೆಗೂ ಹಾಲು ಮತ್ತು ಅದರ ಎಲ್ಲ ಉತ್ಪನ್ನಗಳನ್ನು ಪೂರೈಸಬಯಸಿದ್ದರು. ಸಂಗೀತ ವೃಂದದವರು ಗಾಂಧಿ ಮಲಗುವ ವೇಳೆ ಲಘು ವಾದ್ಯಗೋಷ್ಠಿಯಲ್ಲಿ ಪ್ರೇಮಗೀತೆಗಳನ್ನು ನುಡಿಸಬಯಸಿದ್ದರು. ಪತ್ರಕರ್ತರು ಸಂದರ್ಶನಗಳನ್ನು ಬಯಸಿದ್ದರು. ಇಟಲಿಯ ಓರ್ವ ಮಹಿಳೆ ಮುಂದಿನ ರಾಷ್ಟ್ರೀಯ ಲಾಟರಿ ಯಾವ ಸಂಖ್ಯೆಗೆ ಎಂದು ಗಾಂಧಿಯವರನ್ನು ಕೇಳಿ ತಿಳಿಸಲು ಪತ್ರ ಬರೆದಿದ್ದಳು!

ರೊಲ್ಯಾಂಡರೊಂದಿಗೆ ಸಂವಾದ

ಗಾಂಧಿ ಸ್ವಿಟ್ಜರ್‌ಲೆಂಡ್‌ನಲ್ಲಿದ್ದ ಐದು ದಿವಸವೂ, ಅವರು ರಾಜಕಾರಣ, ಕಲೆ, ಸಾಹಿತ್ಯ ಸಂಗೀತಗಳ ಬಗ್ಗೆ ರೊಲ್ಯಾಂಡ್‌ರ ಜೊತೆ ಮಾತನಾಡಿದರು. ಯೂರೋಪ್‌ನಲ್ಲಿ ಉಗ್ರಗೊಳ್ಳುತ್ತಿದ್ದ ರಾಷ್ಟ್ರೀಯತೆ ಮತ್ತು ಅದು ಸೃಷ್ಟಿಸತೊಡಗಿದ್ದ ಯುದ್ಧಗಳು, ಬ್ರಿಟನ್‌ನ ಶೋಷಕ ವಸಾಹತುಶಾಹಿ, ಇಟಲಿಯಲ್ಲಿ ತಲೆಯೆತ್ತಿದ್ದ ಫ್ಯಾಸಿಸಂ, ಸತ್ಯ ಮತ್ತು ಸೌಂದರ್ಯ, ಸಂಗೀತ ಮತ್ತು ಆಧ್ಯಾತ್ಮಿಕತೆ ಇತ್ಯಾದಿ ಅವರ ಮಾತುಕತೆಯ ವಸ್ತುಗಳಾಗಿದ್ದವು. ಈ ಮಾತುಕತೆಯಲ್ಲಿ ಗಾಂಧಿಯ ಮುಖ್ಯ ಮಾತು ಇದಾಗಿತ್ತು: 'ಚರಿತ್ರೆಯಿಂದ ಕಲಿಯಲು ಏನೂ ಇಲ್ಲ. ನಾನು ವರ್ತಮಾನದ ಸಾಕ್ಷ್ಯ, ನನ್ನ ವೈಯಕ್ತಿಕ ಅನುಭವವನ್ನು ಆಧರಿಸಿ ಚಿಂತಿಸುವವನು. ಇದು ಕೆಲವೊಮ್ಮೆ ನನ್ನನ್ನು ದಾರಿ ತಪ್ಪಿಸಬಹುದೇನೋ. ಆದರೆ ಆಗೆಲ್ಲ ಅಹಿಂಸೆ ಕುರಿತ ನನ್ನ ನಂಬಿಕೆ ನನ್ನ ಕೈಹಿಡಿಯುತ್ತದೆ ಎಂಬ ವಿಶ್ವಾಸ ನನಗಿದೆ'. ರೊಲ್ಯಾಂಡ್, ಗಾಂಧಿ ಮುಸೊಲೊನಿಯನ್ನು ನೋಡಲು ಹೋಗುತ್ತಿರುವುದನ್ನು ಇಷ್ಟಪಡಲಿಲ್ಲ. ಈ ಭೇಟಿ ಮುಸೊಲೊನಿಯ ಜಾಗತಿಕ ವಿಶ್ವಾಸಾರ್ಹತೆಯನ್ನು ಹೆಚ್ಚಿಸುತ್ತದೆ ಎಂಬುದು ಅವರ ಅಭಿಪ್ರಾಯ. ಆದರೆ ಗಾಂಧಿ, ಮುಸೊಲೊನಿ ರೈತರು ಮತ್ತು ಕಸುಬುದಾರರ ಬಾಳನ್ನು ಹಸನು ಮಾಡಿರುವ ವರದಿ ತಮ್ಮನ್ನು ಆಕರ್ಷಿಸಿದೆ ಎಂದರು. 'ಆದರೂ ಹುಷಾರು!' ಎಂಬುದು ರೊಲ್ಯಾಂಡರ ಎಚ್ಚರಿಕೆ!

ಸತ್ಯ-ಶಿವ-ಸೌಂದರ್ಯ

ಸ್ವಿಟ್ಜರ್‌ಲೆಂಡ್‌ನ ರಮಣೀಯ ಪ್ರಕೃತಿ ಸೌಂದರ್ಯ, ವಿಶೇಷವಾಗಿ ಅಲ್ಲಿನ ಹಳ್ಳಿಗಳ ಪ್ರಶಾಂತಿ, ಗಾಂಧಿಗೆ ತಮ್ಮನ್ನು ಈವರೆಗೆ ತಾಕಿರದ ಸೌಂದರ್ಯದ ಹೊಸ ಆಯಾಮವನ್ನು ಪರಿಚಯಿಸಿದೆ ಎನಿಸಿತು. ಅವರು ತಮ್ಮೊಡನಿದ್ದ ರೊಲ್ಯಾಂಡರಿಗೆ ಹೇಳಿದರು:

‘ಜಗತ್ತು, ದೇವರು ಸತ್ಯ, ಪ್ರೇಮ ಎಂದು ಈವರೆಗೆ ಹೇಳಿಕೊಂಡು ಬರುತ್ತಿದೆ. ಆದರೆ ಈಗ ನನಗೆ ಸತ್ಯವೇ ದೇವರು ಮತ್ತು ಪ್ರೇಮ’ ಎನಿಸುತ್ತಿದೆ.
ಆಗ ಸಂದರ್ಶಕ ಕೇಳಿದ: ‘ನಿಮ್ಮ ಪ್ರಕಾರ ಸತ್ಯವೆಂದರೇನು?’
‘ಇದು ಉತ್ತರಿಸಲು ಬಹು ಕಷ್ಟದ ಪ್ರಶ್ನೆ’, ಗಾಂಧಿ ಹೇಳಿದರು,
‘ನಿಮ್ಮ ಅಂತರಂಗದ ದನಿ ಅದು’
‘ಆದರೆ ಅಂತರಂಗದಲ್ಲಿ ಅನೇಕ ದನಿಗಳು ಕೇಳಿಬಂದರೆ?’ ಸಂದರ್ಶಕನ ಪ್ರಶ್ನೆ.
ಗಾಂಧಿ ಯೋಚಿಸಿ ಹೇಳಿದರು: ‘ಇಲ್ಲಿಯೇ ಅಹಿಂಸೆಯ ಪ್ರಶ್ನೆ ಬರುವುದು. ಅಹಿಂಸೆಯ ಜೊತೆಯಲ್ಲಿರುವುದೇ ಸತ್ಯ.’

ಸತ್ಯ ಮತ್ತು ದೇವರ ಪ್ರಶ್ನೆ ಗಾಂಧಿ ಮತ್ತು ರೋಲ್ಯಾಂಡ್‌ರ ಮಾತುಕತೆಯಲ್ಲಿ ವ್ಯಾಪಕ ಚರ್ಚೆಗೆ ಈಡಾಯಿತು. ‘ಸತ್ಯವೇ ದೇವರು ಎಂಬ ನಿಮ್ಮ ಸೂತ್ರದಲ್ಲಿನ ದೇವರಲ್ಲಿ ನನಗೊಂದು ಕೊರತೆ ಕಾಣುತ್ತದೆ. ದೇವರ ಭಾವನೆ ಆನಂದವನ್ನೂ ಉಂಟು ಮಾಡಬೇಕಲ್ಲವೆ?’. ಗಾಂಧಿ, ‘ಇದು ಕಲೆಗಾಗಿ ಕಲೆ ಎಂಬ ನಂಬಿಕೆಯಿಂದ ಮೂಡಿರುವ ಮಾತು. ಆದರೆ ಆ ನಂಬಿಕೆಯನ್ನು ನಾನು ಒಪ್ಪಲಾರೆ. ಸತ್ಯವನ್ನು ಬಿಂಬಿಸದ ಕಲೆ ನನ್ನ ಪ್ರಕಾರ ಕಲೆಯೇ ಅಲ್ಲ. ಸತ್ಯವನ್ನು ಬಿಂಬಿಸದ ಸೌಂದರ್ಯ ಅಸತ್ಯವಾದ್ದರಿಂದ ಅದನ್ನು ಆನಂದಿಸುವುದು ಹೇಗೆ? ಕಲೆ ಸತ್ಯವನ್ನು ಬಿಂಬಿಸುವುದಾದರೆ, ಅಲ್ಲಿ ಆನಂದವೂ ಇರುತ್ತದೆ. ಸತ್ಯ ಅಂದರೆ ಈಗ ಇರುವುದನ್ನು ಹೇಳುವುದಲ್ಲ. ನಿತ್ಯ ಇರಬಲ್ಲದ್ದನ್ನು ಹೇಳುವುದು’ ಇದು ಗಾಂಧಿಯ ಉತ್ತರವಾಗಿತ್ತು.

ಮಾರ್ಕ್ಸ್‌ವಾದದ ಬಗ್ಗೆ ಒಲವು ಬೆಳೆಸಿಕೊಂಡಿದ್ದ ರೊಲ್ಯಾಂಡ್, ಪ್ಯಾರಿಸ್‌ನ ಪ್ರೊಲೆಟೇರಿಯನ್ ರೆವಲ್ಯೂಷನ್ ಎಂಬ ಪತ್ರಿಕೆ ಕೇಳಿದ್ದ ಪ್ರಶ್ನೆಯೊಂದನ್ನು ಗಾಂಧಿಯವರ ಮುಂದಿರಿಸಿದಾಗ ಗಾಂಧಿ, ‘ಕಾರ್ಮಿಕರು ಸರಿಯಾಗಿ ಸಂಘಟಿತರಾದರೆ ಉದ್ಯೋಗದಾತನ ವರ್ತನೆಯನ್ನು ನಿಯಂತ್ರಿಸಬಹುದು’ ಎಂದು ಹೇಳಿದರು. ‘ಆದರೆ ಬಂಡವಾಳಶಾಹಿ, ಕಾರ್ಮಿಕರಲ್ಲಿ ಒಡಕು ಉಂಟು ಮಾಡಿದಾಗ, ಅವರು ಸರ್ವಾಧಿಕಾರ ಸ್ಥಾಪನೆಯ ಮೂಲಕ ತಮ್ಮ ಅನ್ಯಾಯಗಳನ್ನು ಸರಿಪಡಿಸಿಕೊಳ್ಳಬಹುದಲ್ಲವೆ?’ ಎಂದು ರೊಲ್ಯಾಂಡ್ ಮರುಪ್ರಶ್ನೆ ಹಾಕಿದಾಗ ಮಾತುಕತೆಯನ್ನು ಮುಂದುವರೆಸಲು ಆಸಕ್ತಿ ತೋರದ ಗಾಂಧಿ ‘ಅದು ಸರಿಯಾದ ಮಾರ್ಗವಲ್ಲ’ ಎಂದಷ್ಟೇ ಹೇಳಿ ಸುಮ್ಮನಾದರು.

ರೊಲ್ಯಾಂಡ್ ಮಾತು ಮುಂದುವರೆಸಿ ಕೇಳಿದರು: ‘ದೇವರು ಎಂದರೆ ಚೈತನ್ಯವೋ ಅಥವಾ ಅದಕ್ಕೆ ಒಂದು ವ್ಯಕ್ತಿತ್ವ ಇದೆಯೋ, ನಿಮ್ಮ ಪ್ರಕಾರ?’ ಗಾಂಧಿ ಉತ್ತರ: ‘ಉಹುಂ. ದೇವರಿಗೆ ವ್ಯಕ್ತಿತ್ವ ಇಲ್ಲ. ಅದೊಂದು ನಿತ್ಯ ತತ್ವ, ಹಾಗೆಂದೇ ನಾನು ಸತ್ಯವೇ ದೇವರು ಎನ್ನುವುದು. ನಾಸ್ತಿಕರು ಕೂಡ ಸತ್ಯವನ್ನು ನಿರಾಕರಿಸುವುದಿಲ್ಲ.’

ಬಿಥೋವನ್ ಸಂಗೀತ ಆಲಿಸಿದ ಗಾಂಧಿ

ಡಿಸೆಂಬರ್ ೧೧ರಂದು, ರೊಲ್ಯಾಂಡ್ ಭೇಟಿಯ ಕೊನೆಯ ದಿನ ಸಂಜೆ, ಗಾಂಧಿ, ರೊಲ್ಯಾಂಡರನ್ನು ಬಿಥೋವನ್ ಸಂಗೀತ ಕೇಳಿಸಲು ಕೋರಿದರು. ರೊಲ್ಯಾಂಡ್ ಗಾಂಧಿಯವರ ವ್ಯಕ್ತಿತ್ವಕ್ಕೆ ಸಮರಸವಾಗುವ ಐದನೇ ಸಿಂಫೋನಿಯ ಒಂದೆರಡು ಧಾರೆಗಳನ್ನು ಆಯ್ದು ತಮ್ಮ ಗ್ರಾಮಾಫೋನ್‌ನಲ್ಲಿ ಹಾಕಿದರು. ಮೊದಲನೆಯದು ಮನುಷ್ಯ ತನ್ನ ವಿಧಿಯೊಡನೆ ಸೆಣೆಸುವ, ಅದರೊಂದಿಗೆ ಸಮರಸವಾಗಿ ಬೆರೆತು ಸೋದರತೆಯ ಮೌಲ್ಯವನ್ನು ನಿರೂಪಿಸಿದರೆ, ಎರಡನೆಯದು ಪ್ರಶಾಂತವಾಗಿ ಹರಿಯುವ ನದಿಯ ಶಾಂತಿ–ಸಾವಧಾನಗಳ ಮಧುರ ಧಾರೆ. ಗಾಂಧಿ ಎರಡನ್ನೂ ಶಾಂತಿಯಿಂದ ಕೇಳಿ ಮೆಚ್ಚಿದರು.

ರೊಲ್ಯಾಂಡ್ ಮಾರನೆಯ ದಿನ ತಮ್ಮ ಅಸ್ವಸ್ಥತೆಯನ್ನು ಲೆಕ್ಕಿಸದೆ ಗಾಂಧಿ ಪರಿವಾರವನ್ನು ಬೀಳ್ಕೊಡಲು, ಸ್ವತಃ ತಾವೇ ರೈಲ್ವೇ ನಿಲ್ದಾಣಕ್ಕೆ ಬಂದು ಗಾಂಧಿ ಪರಿವಾರವನ್ನು ರೋಂಗೆ ಬೀಳ್ಕೊಟ್ಟರು. ಅದರ ನೆನಪನ್ನು ಅವರು ಹೀಗೆ ದಾಖಲಿಸಿದ್ದಾರೆ: 'ತಮ್ಮ ಕೊಕ್ಕರೆಯಂತಹ ಕಾಲುಗಳನ್ನು ಪಟಪಟನೆ ಮುಂದಕ್ಕೆ ಹಾಕುತ್ತಾ ರೈಲು ಡಬ್ಬಿಯ ಮೆಟ್ಟಿಲುಗಳನ್ನೇರುವ ಮುನ್ನ ಗಾಂಧಿ ನನ್ನನ್ನು ಗಾಢವಾಗಿ ಆಲಂಗಿಸಿಕೊಂಡರು. ಯಾವುದೋ ಅನಿರ್ವಚನೀಯ ಬಾಂಧವ್ಯದ ತಂತು ನಮ್ಮನ್ನು ಬೆಸದಿದ್ದ ಅನುಭವ ನನಗಾಯಿತು. ಕೊನೆಯ ಬಾರಿಗೆ ಅವರ ಬೋಳು ತಲೆ ನನ್ನ ಭುಜದ ಮೇಲೆ ಒರಗಿತು. ನನ್ನ ಕೆನ್ನೆಗಳಿಗೆ ಅದರ ಸ್ಪರ್ಶವಾಗಿ ನನ್ನಲ್ಲಿ ರೋಮಾಂಚನವನ್ನುಂಟು ಮಾಡಿತು. ಮೀರಾಳತ್ತ ಕೈಬೀಸಿ 'ಹೋಗಿ ಬನ್ನಿ' ಎಂದು ವಿದಾಯ ಹೇಳಿದೆ. ರೈಲುಗಾಡಿ ಕಣ್ಮರೆಯಾಗುವವರೆಗೂ ನಾನು ನಿಂತಲ್ಲೇ ನಿಂತಿದ್ದೆ. ಮನೆಗೆ ಬಂದಾಗ ಹೃದಯ ಭಾರವಾಗಿತ್ತು.'

ಇಟಲಿಯಲ್ಲಿ ಮುಸೋಲಿನಿ ಭೇಟಿಯ ವಿಚಿತ್ರ ಅನುಭವ!

ಇಟಲಿಯ ಸರ್ಕಾರ ಗಾಂಧಿ ಪರಿವಾರದ ವಾಸ್ತವ್ಯಕ್ಕೆ ರೋಂ ನಗರದಲ್ಲಿ ಎಲ್ಲ ಸಿದ್ಧತೆ ಮಾಡಿದ್ದರೂ, ಗಾಂಧಿ ಅದನ್ನು ನಿರಾಕರಿಸಿ ರೊಲ್ಯಾಂಡ್‌ರ ಮಿತ್ರರೊಬ್ಬರ ಮನೆಯಲ್ಲಿ ಬಿಡಾರ ಹೂಡಿದರು. ಅವರು ಡಿಸೆಂಬರ್ ೧೪ ರಂದು ಮುಸೋಲಿನಿಯನ್ನು ಕಂಡು ಬಂದದ್ದೇ ಒಂದು ವಿಶಿಷ್ಟ ಅನುಭವವಾಗಿತ್ತು. ಅವನ ಭವ್ಯ ನಿವಾಸದ ಮಹಾದ್ವಾರದಲ್ಲಿ ಸಶಸ್ತ್ರ ಸೈನಿಕರಿಂದ ಗೌರವ ವಂದನೆ ಸ್ವೀಕರಿಸಿದ ಗಾಂಧಿ, ಕತ್ತಿ ಚೂರಿ–ಈಟಿ ಬಂದೂಕು ಇತ್ಯಾದಿ ವೈವಿಧ್ಯಮಯ ಶಸ್ತ್ರಾಸ್ತ್ರಗಳಿಂದ ತುಂಬಿಕೊಂಡಿದ್ದ ಗೋಡೆಗಳ ನಡುವಣ ಒಂದು ಬಹು ದೀರ್ಘ ಓಣಿಯಲ್ಲಿ ನಡೆದುಹೋದ ನಂತರ ಎಲ್ಲ ದಿಕ್ಕುಗಳಲ್ಲೂ ನಡೆದಾಡುತ್ತಿದ್ದ ಶಸ್ತ್ರಸಜ್ಜಿತ ಭಟರ ನಡುವೆ, ಬೆಕ್ಕಿನ ಕಣ್ಣಿನ ಶಸ್ತ್ರರಹಿತ ಮುಸೊಲಿನಿ ಕಂಡ. ಇಬ್ಬರ ನಡುವೆ ಇಪ್ಪತ್ತು ನಿಮಿಷದ ಈ ಭೇಟಿಯಲ್ಲಿ ಏನು ಮಾತುಕತೆಯಾಯಿತೋ ಎಲ್ಲೂ ದಾಖಲಾಗಿಲ್ಲ. ಈ ಭೇಟಿಯ ಬಗ್ಗೆ ಗಾಂಧಿ ಬರೆದಿರುವುದು, ಮುಸೊಲಿನಿಯನ್ನು ಕಾಣಲು ಹೋದಾಗ ಕಂಡ 'ಭಯ ಹುಟ್ಟಿಸುವಂತಹ' ದೃಶ್ಯಗಳನ್ನಷ್ಟೇ! ಆದರೆ ಅವರಿಗೆ ಮುಸೊಲಿನಿಯ ಆಡಳಿತದ ಬಗ್ಗೆ ಒಳ್ಳೆಯ ಅಭಿಪ್ರಾಯವೇ ಇದ್ದಂತಿದೆ. ಅವರು ರೊಲ್ಯಾಂಡ್‌ಗೆ ಬರೆದ ಒಂದು ಪತ್ರದಲ್ಲಿ, 'ಮುಸೊಲೊನಿಯದು ಕಬ್ಬಿಣದ ಕೈ ನಿಜ. ಆದರೆ ಪಶ್ಚಿಮದ ಸಮಾಜವೇ ಹಿಂಸೆಯ ಮೇಲೆ ನಿಂತಿದೆಯಲ್ಲವೇ? ಆತ ಬಂಡವಾಳ

ಮತ್ತು ಕಾರ್ಮಿಕ ಶಕ್ತಿಯ ನಡುವೆ ಒಂದು ಸಮನ್ವಯ ಏರ್ಪಡಿಸಿ ದುಡಿಯುವ ಜನಸಮುದಾಯಕ್ಕೆ ಒಳ್ಳೆಯದನ್ನೇ ಮಾಡಿದ್ದಾನೆನಿಸುತ್ತದೆ. ಇಟಲಿಯ ಜನ ಕೂಡ ಆತನನ್ನು ಮೆಚ್ಚಿದ್ದಾರೆ ಎಂದು ಕಾಣುತ್ತದೆ' ಎಂದಿದ್ದಾರೆ. ರೊಲ್ಯಾಂಡ್ ಮುಸೊಲಿನಿಯ ಬಗ್ಗೆ ಗಾಂಧಿಯವರ ಬಳಿ 'ಆದರೂ ಹುಷಾರ್!' ಎಂದಿದ್ದುದು ವ್ಯರ್ಥವಾಗಿತ್ತು.

ಶಿಲುಬೆಯ ಮುಂದೆ ಅತ್ತ ಗಾಂಧಿ

ಗಾಂಧಿ, ವ್ಯಾಟಿಕನ್‌ನ ಪೋಪ್‌ರ ಸಂದರ್ಶನ ಕೇಳಿದ್ದರೂ ಪೋಪ್ ಅದಕ್ಕೆ ಒಪ್ಪಿರಲಿಲ್ಲ. ಗಾಂಧಿ ಬ್ರಿಟಿಷ್ ಪ್ರಭುತ್ವವನ್ನು ವಿರೋಧಿಸುತ್ತಿದ್ದುದೇ ಅದಕ್ಕೆ ಕಾರಣವಿರಬಹುದು. ಆದರೆ ಗಾಂಧಿ ವ್ಯಾಟಿಕನ್‌ನ ವಸ್ತುಸಂಗ್ರಹಾಲಯದ ವರ್ಣಚಿತ್ರಗಳ ವೈಭವವನ್ನು ಕಂಡು ಬೆರಗಾದರು. ಸಿಸ್ಟೈನ್ ಚರ್ಚ್‌ನಲ್ಲಿ ಶಿಲುಬೆಯೇರಿದ ಕ್ರಿಸ್ತನ ಶಿಲ್ಪವನ್ನು ಕಂಡು ಒಂದೆರಡು ಕ್ಷಣ ಮೂಕವಾಗಿ ನಿಂತಾಗ ಅವರಿಗೆ ಕಣ್ಣೀರು ತಡೆಯಲಾಗಲಿಲ್ಲ. ಅವರು ಅಂದು ಸಂಜೆ ಒಂದು ರಗ್ಬಿ ಪಂದ್ಯವನ್ನೂ, ಯುವದಳವೊಂದರ ಶಿಸ್ತುಬದ್ಧ ಪಥಸಂಚಲನವನ್ನೂ ನೋಡಿದರು. ಕ್ರೀಡಾಂಗಣಕ್ಕೆ ಹೋದಾಗ ಅವರನ್ನು ಕುಶಾಲು ತೋಪು ಸಿಡಿಸುವ ಮೂಲಕ ಸ್ವಾಗತಿಸಲಾಯಿತು! ಗಾಂಧಿ ಈ ಬಗ್ಗೆ ಆಶ್ರಮವಾಸಿಗಳಿಗೆ ಬರೆದ ಪತ್ರದಲ್ಲಿ, 'ರೋಂ ಒಂದನ್ನೇ ನೋಡಲು ಮೂರು ತಿಂಗಳು ಬೇಕಾದೀತು. ನನ್ನ ಒಂದೆರಡು ದಿನಗಳ ಭೇಟಿಯ ಬಗ್ಗೆ ಏನಾದರೂ ಬರೆಯುವುದೇ ವ್ಯರ್ಥ' ಎಂದು ತಿಳಿಸಿದ್ದಾರೆ.

ಟಾಲ್‌ಸ್ಟಾಯ್ ಮಗಳ ಭೇಟಿ–ಯೂರೋಪ್‌ಗೆ ವಿದಾಯ

ಗಾಂಧಿ ರೋಂ ನಗರವನ್ನು ಬಿಡುವ ಮುನ್ನ, ಅಲ್ಲಿ ವಾಸವಾಗಿದ್ದ ಟಾಲ್‌ಸ್ಟಾಯ್‌ರ ಹಿರಿಯ ಮಗಳ ಮನೆಗೆ ಭೇಟಿ ನೀಡಿದರು. ಅವರ ಮನೆಯ ಹಜಾರದಲ್ಲಿ ಕೂತು ಅವರು ನೂಲುತ್ತಿದ್ದಾಗ ಇಟಲಿಯ ರಾಜಕುಮಾರಿ ಸೇವಕಿಯೊಬ್ಬಳೊಂದಿಗೆ ಬಂದು, ತನ್ನ ತಂದೆಯ ಉಡುಗೊರೆಯೆಂದು ಒಂದು ಪುಟ್ಟಿ ಅಂಜೂರದ ಹಣ್ಣುಗಳನ್ನು ಕೊಟ್ಟು ಹೋದಳು.

ಡಿಸೆಂಬರ್ ೧೪ಕ್ಕೆ ಗಾಂಧಿ ಪರಿವಾರದ ಯೂರೋಪ್ ಪ್ರವಾಸ ಮುಕ್ತಾಯವಾಯಿತು. ಪರಿವಾರವನ್ನು ಸ್ಕಾಟ್‌ಲೆಂಡ್ ಯಾರ್ಡ್‌ನ ಇಬ್ಬರು ಸಾರ್ಜೆಂಟ್‌ಗಳು ಬ್ರಿಂಡಿಸಿಯಲ್ಲಿ ಬಂದರಿನಿಂದ ಮುಂಬೈಗೆ ಹೊರಟಿದ್ದ ಎಸ್.ಎಸ್. ಪಿಲ್ಸಾನಾ ಎಂಬ ಹಡಗಿನಲ್ಲಿ ನೆಲೆಗೊಳಿಸಿ ಬೀಳ್ಕೊಟ್ಟರು. ೧೪ ದಿನಗಳ ನಂತರ ಆ ಹಡಗು ಬಾಂಬೆ ಬಂದರನ್ನು ತಲುಪಿತು.

ಬಾಂಬೆ ತಲುಪಿದ ನಂತರ ಗಾಂಧಿ ಮಾಡಿದ ಮೊದಲ ಕೆಲಸಗಳಲ್ಲಿ ಒಂದೆಂದರೆ, ಸ್ಕಾಟ್‌ಲೆಂಡ್ ಯಾರ್ಡ್‌ನ ಇಬ್ಬರು ಸಾರ್ಜೆಂಟ್‌ಗಳಿಗೆ ಒಂದೊಂದು ಕೈಗಡಿಯಾರ ಕೊಂಡು ಅದರ ಮೇಲೆ 'ಪ್ರೀತಿಯಿಂದ' ಎಂದು ಕೆತ್ತಿಸಿ ಕಳಿಸಿಕೊಟ್ಟದ್ದು.

■

೭೫

ಅಂಬೇಡ್ಕರ್‌ರೊಂದಿಗೆ ಮುಖಾಮುಖಿ

ಗಾಂಧಿ ಯೂರೋಪ್‌ನಿಂದ ಬಾಂಬೆಗೆ ಬಂದ ಡಿಸೆಂಬರ್ ೨೮ ರ ದಿನವೇ ಹಲವು ಕಡೆಗಳಿಂದ ದೇಶದಲ್ಲಿನ ಬಿಗಡಾಯಿಸಿದ ಪರಿಸ್ಥಿತಿಯ ಬಗ್ಗೆ ಅವರಿಗೆ ವರದಿಗಳು ಬಂದವು. ತಮ್ಮನ್ನು ಭೇಟಿ ಮಾಡಲು ಬರುತ್ತಿದ್ದ ಜವಾಹರಲಾಲ್ ನೆಹರೂ ಅವರನ್ನು ಮಾರ್ಗ ಮಧ್ಯದಲ್ಲೇ ಬಂಧಿಸಲಾಗಿತ್ತು. ಲಂಡನ್‌ನಲ್ಲಿದ್ದಾಗಲೇ ಅಸಹಕಾರ ಸತ್ಯಾಗ್ರಹವನ್ನು ಪುನರಾರಂಭಿಸುವ ಇಂಗಿತ ವ್ಯಕ್ತಪಡಿಸಿದ್ದನ್ನು ಎಚ್ಚರಿಕೆಯ ಘಂಟೆಯಾಗಿ ಸ್ವೀಕರಿಸಿದ್ದ ವೈಸ್‌ರಾಯ್ ಲಾರ್ಡ್ ವಿಲ್ಲಿಂಗ್ಡನ್, ಕಠಿಣ ಕಾನೂನು ಕ್ರಮಗಳನ್ನು ಆರಂಭಿಸಿದ್ದನು. ಸಂಯುಕ್ತ ಪ್ರಾಂತ್ಯಗಳು, ಬಂಗಾಳ ಮತ್ತು ವಾಯುವ್ಯ ಗಡಿ ಪ್ರಾಂತ್ಯಗಳಲ್ಲಿ ರೈತರ ಕರ ನಿರಾಕರಣೆ ಸತ್ಯಾಗ್ರಹ ಆರಂಭವಾಗಿ ಸರ್ಕಾರ ರೈತರ ಆಸ್ತಿಪಾಸ್ತಿಗಳ ಮುಟ್ಟುಗೋಲು, ಕಾಂಗ್ರೆಸ್ ನಾಯಕರ ಬಂಧನ, ವಿಚಾರಣೆ ಇಲ್ಲದ ಸೆರೆಮನೆವಾಸದ ಶಿಕ್ಷೆ, ಕಛೇರಿಗಳ ಕಟ್ಟಡಗಳ ವಶ, ಬ್ಯಾಂಕ್ ಖಾತೆಗಳ ಸ್ಥಗಿತ ಮತ್ತು ಪತ್ರಿಕಾ ಹೇಳಿಕೆಗಳ ಮೇಲೆ ನಿಷೇಧ ಇತ್ಯಾದಿ ತುರ್ತು ಪರಿಸ್ಥಿತಿ ಕಾನೂನುಗಳನ್ನು ಜಾರಿಗೆ ತಂದಿದ್ದ.

ಅಂದು ಸಂಜೆ ತಮ್ಮನ್ನು ಸ್ವಾಗತಿಸಲು ಆಝಾದ್ ಮೈದಾನದಲ್ಲಿ ಸೇರಿದ್ದ ವಿಶಾಲ ಜನಸ್ತೋಮದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಗಾಂಧಿ, ಈ ವಿಷಯವನ್ನೆಲ್ಲ ಜನತೆಗೆ ಅರುಹಿ ಇದು ಕ್ರಿಶ್ಚಿಯನ್ನರಾದ ವಿಲ್ಲಿಂಗ್‌ಡನ್, ಭಾರತದ ಜನತೆಗೆ ನೀಡಿದ ಕ್ರಿಸ್ಮಸ್ ಕೊಡುಗೆಯೇ? ಎಂದು ಪ್ರಶ್ನಿಸುತ್ತಾ, ಕಾಂಗ್ರೆಸ್ ಈಗ ಸಹಕಾರ ಮತ್ತು ಸತ್ಯಾಗ್ರಹ ಎರಡಕ್ಕೂ ಸಿದ್ಧವಿದೆ ಎಂದು ಘೋಷಿಸಿದರು. ನಂತರ ವೈಸ್‌ರಾಯ್‌ಗೆ ತಂತಿ ಕಳಿಸಿ, ಅವರು ಮಾಡುತ್ತಿರುವುದು ಪರಿಸ್ಥಿತಿಯನ್ನು ಬಿಗಡಾಯಿಸುವಂತೆ ಮಾಡಿದೆ ಎಂದು ತಿಳಿಸಿ ಭೇಟಿಗಾಗಿ ಅನುಮತಿ ಕೇಳಿದರು. ಆದರೆ ಭೇಟಿ ಏನಿದ್ದರೂ ಗಾಂಧಿಯವರ ಅಹವಾಲುಗಳನ್ನು ಕೇಳಲೇ ಹೊರತು ಸಮಾಲೋಚನೆಗಳಿಗಾಗಿ ಸಾಧ್ಯವಿಲ್ಲ ಎಂದು ತಿಳಿಸಿದ ವೈಸ್‌ರಾಯ್, ಇರ್ವಿನ್‌ರೊಡನೆಯ ಒಪ್ಪಂದದ ನಂತರವೂ ಸತ್ಯಾಗ್ರಹ ಆರಂಭಿಸಿರುವುದರಿಂದ ತನ್ನ ಈ ಕ್ರಮಗಳು ಅನಿವಾರ್ಯವಾಗಿದೆ ಎಂದು ಹೇಳಿದ. ಅದಕ್ಕೆ ಮಾರುತ್ತರ ಬರೆದ ಗಾಂಧಿ, ಅನ್ಯಾಯಗಳ ವಿರುದ್ಧ ಅಹಿಂಸಾತ್ಮಕವಾಗಿ ಪ್ರತಿಭಟಿಸುವುದು ಜನರ ಆಜನ್ಮಸಿದ್ಧ ಹಕ್ಕಾಗಿದ್ದು, ತಾವು ಕಾಂಗ್ರೆಸ್‌ನ ಸ್ಥಳೀಯ ನಾಯಕರ ನಿರ್ಧಾರಗಳನ್ನು ತಳ್ಳಿ ಹಾಕಲಾಗುವುದಿಲ್ಲ ಎಂದು ತಿಳಿಸುವ ಮೂಲಕ

ಅಸಹಕಾರ ಸತ್ಯಾಗ್ರಹದ ಮುಂದುವರಿಕೆಗೆ ಹಸಿರು ನಿಶಾನೆ ತೋರಿದ್ದರು.

ಮತ್ತೆ ಬಂಧನ–ಯೆರವಾಡಾ ಸೆರೆಮನೆಗೆ ರವಾನೆ

ಈ ಮಧ್ಯೆ ಗಾಂಧಿ, ಮೆಹರ್ ಬಾಬಾ ಎಂಬ ಎಲ್ಲ ಧರ್ಮ ಮತ್ತು ಜಾತಿಗಳ ಜನರ ನಡುವೆ ಅನುಯಾಯಿಗಳನ್ನು ಹೊಂದಿದ್ದ ಮತ್ತು ಅಂಬೇಡ್ಕರ್‌ಗೆ ಪರಿಚಯವಿದ್ದ ಆಧ್ಯಾತ್ಮಿಕ ಗುರುವೊಬ್ಬರನ್ನು ಸಂಪರ್ಕಿಸಿ, ಏಳು ಕೋಟಿ ಅಸ್ಪೃಶ್ಯರ ಹಿತದೃಷ್ಟಿಯಿಂದ ಪ್ರತ್ಯೇಕ ಮತಕ್ಷೇತ್ರಗಳ ಆಗ್ರಹವನ್ನು ಕೈಬಿಡುವಂತೆ ಅಂಬೇಡ್ಕರ್ ಅವರ ಮನವೊಲಿಸಲು ಕೋರಿದ್ದರು.

೧೯೩೨ರ ಜನವರಿ ೪ರಂದು ಮುಂಜಾನೆ ಗಾಂಧಿಯವರು ನೆಲೆಸಿದ್ದ ಮಣಿಭವನದಿಂದ ಅವರನ್ನು ಬಂಧಿಸಿ ಕರೆದುಕೊಂಡು ಹೋಗಲಾಯಿತು. ಇದು ಈ ಹಿಂದಿನ ಬಂಧನದಂತೆಯೇ ವಿಚಾರಣೆ ಇಲ್ಲದೆ ಅನಿರ್ದಿಷ್ಟ ಕಾಲ ಸೆರೆಯಲ್ಲಿಡುವ ೧೮೨೮ರ ತುರ್ತು ಪರಿಸ್ಥಿತಿ ಕಾನೂನಿನನ್ವಯದ ಬಂಧನವಾಗಿತ್ತು. ದೀರ್ಘ ಅಗಲಿಕೆಯ ನಂತರ ಒಂದು ವಾರವಷ್ಟೇ ಪತಿಯೊಡನಿರಲು ಸಾಧ್ಯವಾಗಿದ್ದ ಕಸ್ತೂರಬಾ ಇದನ್ನು ತಿಳಿದು ಕಣ್ಣೀರಿಟ್ಟರು. ಪತಿಯನ್ನು ಕೊನೆಯ ಬಾರಿಗೆ ನೋಡುತ್ತಿರಬಹುದೆಂಬ ಆತಂಕದಿಂದ ಅವರ ಕೈ ಹಿಡಿದು 'ನಾನೇನಾದರೂ ನಿಮ್ಮನ್ನು ನೋಯಿಸಿದ್ದರೆ ಕ್ಷಮಿಸಿಬಿಡಿ' ಎಂದು ಕೇಳಿಕೊಂಡರು. ಅವರನ್ನು ಸಮಾಧಾನಪಡಿಸಿದ ಗಾಂಧಿ ತಮ್ಮ ಸಹಬಂಧಿ ಮಹದೇವ ದೇಸಾಯಿಯವರೊಂದಿಗೆ ಪೊಲೀಸರ ಜೊತೆ ಹೊರಟರು. ಪೊಲೀಸರು ವಲ್ಲಭಭಾಯಿ ಪಟೇಲರನ್ನು ನಗರದ ಮತ್ತೊಂದು ಕಡೆಯಿಂದ ಬಂಧಿಸಿದ್ದು ಮೂವರನ್ನೂ ಪೂನಾಗೆ ಕರೆದುಕೊಂಡು ಹೋಗಿ ಯೆರವಾಡಾ ಸೆರೆಮನೆಯಲ್ಲಿಟ್ಟರು. ಇದೇ ವೇಳೆಗೆ ಕಸ್ತೂರಬಾ ಮತ್ತು ಮೀರಾಬೆನ್‌ರನ್ನೂ ಹೆಂಡದಂಗಡಿಗಳ ಮುಂದೆ ಪ್ರದರ್ಶನ ಮಾಡಿದ್ದಕ್ಕಾಗಿ ಬಂಧಿಸಿ ಸಬರ್ಮತಿ ಸೆರೆಮನೆಯಲ್ಲಿ ಇಡಲಾಗಿದೆ ಎಂಬ ಸುದ್ದಿಯೂ ಬಂತು. ಮಗ ದೇವದಾಸ ಈಗಾಗಲೇ ಸಂಯುಕ್ತ ಪ್ರಾಂತ್ಯಗಳಲ್ಲಿ ಅಸಹಕಾರ ಸತ್ಯಾಗ್ರಹದಲ್ಲಿ ಭಾಗವಹಿಸಿ ಸೆರೆಮನೆ ಸೇರಿದ್ದ.

ಯೆರವಾಡಾ ಸೆರೆಮನೆ ಗಾಂಧಿಯವರಿಗೆ ಅಪರಿಚಿತ ಸ್ಥಳವೇನಾಗಿರಲಿಲ್ಲ. ಈ ಬಾರಿ ಅವರ ಮೇಲೆ ಹೆಚ್ಚಿನ ನಿರ್ಬಂಧಗಳನ್ನು ಹೇರಲಾಗಿರಲಿಲ್ಲ. ಬದಲಿಗೆ ಅವರಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸಲು ಆದೇಶಿಸಲಾಗಿತ್ತು. ಅವರು ಪತ್ರಿಕೆಗಳನ್ನು ಓದಬಹುದಾಗಿತ್ತು. ರಾಜಕೀಯೇತರ ವಿಷಯಗಳ ಬಗ್ಗೆ ಯಾರಿಗೆ ಬೇಕಾದರೂ ಎಷ್ಟು ಪತ್ರಗಳನ್ನಾದರೂ ಬರೆಯಬಹುದಿತ್ತು. ಗಾಂಧಿಯವರಿಗೆಂದು ಸೆರೆಮನೆಯ ಅಧಿಕಾರಿಯೊಬ್ಬ ಪಿಂಗಾಣಿ ಊಟೋಪಚಾರದ ಸಾಮಗ್ರಿಯನ್ನು ತಂದಿರಿಸಿದಾಗ ಅವರು ಪ್ರತಿಭಟಿಸಿ, ಜನರಿಂದ ಸರ್ಕಾರ ಸುಲಿದಿರುವ ಹಣದಿಂದ ತಮಗಾವ ವಿಶೇಷ ಸೌಲಭ್ಯವೂ ಬೇಡವೆಂದು ಅವನ್ನೆಲ್ಲ ಹಿಂದಕ್ಕೆ ಕಳಿಸಿದರಲ್ಲದೆ ತಮ್ಮ ಊಟೋಪಹಾರಗಳ ಮೇಲೆ ಯಾವುದೇ ವಿಶೇಷ ಖರ್ಚು ಮಾಡಬಾರದೆಂದು ಕಟ್ಟುನಿಟ್ಟಾಗಿ ಸೂಚಿಸಿದರು.

ಪಟೇಲರ ಚಟಾಕಿಗಳು–ಎರಗಿದ ಎರಡು ದುರ್ವಾರ್ತೆಗಳು

ಗಾಂಧಿಯವರ ಈ ಸೆರೆಮನೆವಾಸದ ಹೆಚ್ಚಿನ ನೆಮ್ಮದಿಗೆ ಕಾರಣವಾದದ್ದೆಂದರೆ, ಅವರಿಗೆ, ತಮಗೆ ಆಪ್ತರಾದ ಮಹದೇವ ದೇಸಾಯಿ ಮತ್ತು ಪಟೇಲರ ಜೊತೆ ಸಿಕ್ಕಿದ್ದು.

ಪಟೇಲರದಂತೂ ವಿಶೇಷ ವಿನೋದ ಪ್ರಜ್ಞೆ. ಅವರು ಗಾಂಧಿಯವರನ್ನು ತಮ್ಮ ಹಾಸ್ಯ ಚಟಾಕಿಗಳಿಂದ ನಗಿಸಿ ಸುಸ್ತು ಮಾಡಿಸುತ್ತಿದ್ದರು:

ಒಮ್ಮೆ ಗಾಂಧಿ ಯಾರೋ ಒಬ್ಬರು ಬರೆದಿದ್ದ 'ನಿಮ್ಮ ಕಾಲದಲ್ಲಿ ನಾನು ಬದುಕಬೇಕಾಗಿ ಬಂದಿರುವುದು ನನ್ನ ದೌರ್ಭಾಗ್ಯ' ಎಂಬ ಪತ್ರವನ್ನು ಪಟೇಲರಿಗೆ ತೋರಿಸಿ, ಇದಕ್ಕೆ ಏನು ಉತ್ತರ ಬರೆಯುವುದೆಂದು ಅವರನ್ನು ಕೇಳಿದರು.

ಪಟೇಲರ ಉತ್ತರ: 'ಅವನಿಗೆ ವಿಷ ಕುಡಿಯಲು ಹೇಳಿ'

ಗಾಂಧಿ: 'ಅಯ್ಯೋ ಅದಾಗದು! ನನಗೆ ವಿಷವುಣಿಸಲು ಹೇಳುವುದು ಸರಿ ಎನಿಸುತ್ತದೆ'

ಪಟೇಲ್: 'ಅದು ಅವನಿಗೆ ಅನ್ಯಾಯ ಮಾಡಿದಂತೆ. ಏಕೆಂದರೆ ಅವನ ವಿಷದಿಂದ ನೀವು ಸತ್ತರೆ ಅವನಿಗೆ ಮರಣ ದಂಡನೆಯಾಗಿ ಅವನು ಸತ್ತು ನಿಮ್ಮೊಡನೆ ಮರುಜನ್ಮ ಪಡೆದು ನಿಮ್ಮೊಂದಿಗೆ ಮತ್ತೆ ಬಾಳುವ ದೌರ್ಭಾಗ್ಯ ಅವನದಾಗುತ್ತದೆ, ಎಚ್ಚರ!'

ಗಾಂಧಿ ಒಮ್ಮೆ ಸರಸದ ಮಾತುಗಳ ಮಧ್ಯೆ ಪಟೇಲರನ್ನು: 'ಈಗ ಸ್ವರಾಜ್ಯ ಬಂದಿತೆನ್ನಿ. ನಮ್ಮ ಸರ್ಕಾರದಲ್ಲಿ ನಿಮಗೆ ಯಾವ ಖಾತೆ ಬೇಕು ಹೇಳಿ. ನಿಮಗೊಂದು ಪ್ರಮುಖ ಖಾತೆ ಮೀಸಲಿಡೋಣ! ಹಿಂದೊಮ್ಮೆ ದಾಸ್ ಮತ್ತು ಮೋತಿಲಾಲರು ಈ ಬಗ್ಗೆ ಚರ್ಚಿಸಿದಾಗ ಮೊಹಮ್ಮದಲಿ ಶಿಕ್ಷಣ ಖಾತೆ ಬಯಸಿದ್ದರೆ, ಶೌಕತ್ ಸೇನಾ ಖಾತೆ ಬಯಸಿದ್ದರಂತೆ!'

ಪಟೇಲರು ತಕ್ಷಣ ಉತ್ತರಿಸಿದರು: 'ಭಿಕ್ಷುಕರ ಖಾತೆ!'

ಪಟೇಲರ ಈ ಉತ್ತರದಲ್ಲಿ ಹಾಸ್ಯಕ್ಕಿಂತ ವ್ಯಂಗ್ಯದ ಮೊನಚಿತ್ತು ಎನ್ನಬಹುದೇನೋ. ಈ ಪ್ರಶ್ನೆಯನ್ನು ಗಾಂಧಿ ಪೂರಾ ಲಘುಶೈಲಿಯಲ್ಲಿ ಕೇಳಿರಬಹುದಾದರೂ, ತಮ್ಮನ್ನು ಪ್ರಧಾನಮಂತ್ರಿ ಸ್ಥಾನಕ್ಕಾಗಿ ಪರಿಗಣಿಸಲಾಗುತ್ತಿಲ್ಲ ಎಂಬ ಸೂಚನೆ ಅಲ್ಲಿ ಪಟೇಲರಿಗೆ ಸಿಕ್ಕಿತ್ತೇನೋ.

ಇದೇ ವೇಳೆಯಲ್ಲಿ ಎರಡು ದುರ್ವಾರ್ತೆಗಳು ಗಾಂಧಿಯವರಿಗೆ ಆಘಾತವನ್ನುಂಟು ಮಾಡಿದವು. ಒಂದು, ಹರಿಲಾಲ ಕುಡಿಯಲು ಆರಂಭಿಸಿದ್ದಾನೆ ಮತ್ತು ತನ್ನ ಮಕ್ಕಳನ್ನು ನೋಡಿಕೊಳ್ಳುತ್ತಿರುವ ನಾದಿನಿಯರಿಗೆ ಕಿರುಕುಳ ಕೊಡುತ್ತಿದ್ದಾನೆ ಎಂದು ಕಸ್ತೂರಬಾ ಬರೆದಿದ್ದರು. ಇದರಿಂದ ಘಾಸಿಗೊಂಡ ಗಾಂಧಿ ಹರಿಲಾಲನಿಗೆ ಛೀಮಾರಿ ಹಾಕಿ ಪತ್ರ ಬರೆದರಲ್ಲದೆ ಮಕ್ಕಳನ್ನು ಅವನಿಂದ ಕರೆದುಕೊಂಡು ಬಂದು, ಅವನನ್ನು ಎಲ್ಲರೂ ಬಹಿಷ್ಕರಿಸುವುದೊಂದೇ ಸದ್ಯಕ್ಕೆ ಪರಿಹಾರ ಎಂದು ಕಸ್ತೂರಬಾಗೆ ಬರೆದರು. ಆದರೆ ಎಂದಿನಂತೆ ಹರಿಲಾಲ ಗಾಂಧಿಯವರ ಮೇಲೇ ಹರಿಹಾಯ್ದು ಉತ್ತರ ಬರೆದ. ಆದರೆ ಗಾಂಧಿ ಇದು ಅಮಲಿನಲ್ಲಿ ಬರೆದ ಪತ್ರವೆಂದು ಅದಕ್ಕೆ ಉತ್ತರ ಬರೆಯಲಿಲ್ಲ.

ಈ ಸಂದರ್ಭದಲ್ಲಿ ಗಾಂಧಿ ಏಕೋ ಬಹು ವಿಷಣ್ಣತೆಯಿಂದ ಇನ್ನೋರ್ವ ಮಗ ನಾಗಪುರದಲ್ಲಿ ಖಾದಿ ಪ್ರಚಾರ ಮಾಡುತ್ತಿದ್ದ ರಾಮದಾಸನಿಗೆ ಹೀಗೆ ಪತ್ರ ಬರೆದಿದ್ದರು: 'ನಾನು ನಿಮ್ಮ ತಾಯಿಯೊಂದಿಗೆ ನಡೆದುಕೊಂಡ ರೀತಿ ನೀವು ನಿಮ್ಮ ಪತ್ನಿಯರೊಂದಿಗೆ ನಡೆದುಕೊಳ್ಳಲು ಮಾದರಿಯಾಗಬಾರದು. ನಾನು ಅನುಭವಿಸುತ್ತಿದ್ದ ಕಾರ್ಯ ಸ್ವಾತಂತ್ರ್ಯವನ್ನು ಅವಳಿಗೆ ನಾನು ನೀಡಲಿಲ್ಲ. ಅವಳಿಗೆ ನನ್ನ ಮೇಲೆ

ಅಸಮಾಧಾನಗೊಳ್ಳುವ ಎಲ್ಲ ಹಕ್ಕು ಇದೆ.'

ಉತ್ತರ ಭಾರತದ ಸೆರೆಮನೆಯೊಂದರಲ್ಲಿದ್ದ ಮಗ ದೇವದಾಸ ವಿಷಮಶೀತ ಜ್ವರದಿಂದ ಬಳಲುತ್ತಿದ್ದಾನೆಂದು ತಿಳಿದಾಗ ಗಾಂಧಿ ಆತಂಕದಿಂದ ಅವನಿಗೆ ಕೆಲ ಆಹಾರ ಪಥ್ಯ ಮತ್ತು ನೈಸರ್ಗಿಕ ಚಿಕಿತ್ಸೆಗಳನ್ನು ಸಲಹೆ ಮಾಡಿ ತಮ್ಮ ಆಶೀರ್ವಾದ ತಿಳಿಸಿ ಪತ್ರ ಬರೆದರು. ಅವರು ಕಸ್ತೂರಬಾಗೂ ಯೋಗಕ್ಷೇಮ ವಿಚಾರಿಸಿ ಪತ್ರಗಳನ್ನು ಬರೆದರು. ಬಾ ಅವರು ಉತ್ತರ ಬರೆದು ತಾವು ಗುಜರಾತಿ ಮತ್ತು ಹಿಂದಿ ಓದಿ ಬರೆಯುವುದನ್ನು ಕಲಿಯುವುದನ್ನು ಮುಂದುವರೆಸಿರುವುದಾಗಿಯೂ ಈಗ ಕೆಲವು ಗುಜರಾತಿ ಪುಸ್ತಕಗಳನ್ನು ಓದತೊಡಗಿರುವುದಾಗಿಯೂ ತಿಳಿಸಿದ್ದರಲ್ಲದೆ ತಮ್ಮ ಮಲಬದ್ಧತೆಯ ಸಮಸ್ಯೆಯನ್ನೂ ತೋಡಿಕೊಂಡು ಪರಿಹಾರಕ್ಕಾಗಿ ಗಾಂಧಿಯವರಿಂದ ಸಲಹೆ ಕೇಳಿದ್ದರು.

ಗಾಂಧಿಯವರನ್ನು ಮುಟ್ಟಿದ ಇನ್ನೊಂದು ಕೆಟ್ಟ ವಾರ್ತೆ ಎಂದರೆ ತಮ್ಮ ಬಹುಕಾಲದ ಮಿತ್ರ, ಮಾರ್ಗದರ್ಶಿ, ಕೊಡುಗೈ ದಾನಿ ಡಾ.ಪ್ರಾಣಜೀವನ ಮೆಹ್ತಾರ ಸಾವು. ಗಾಂಧಿ, ವಿದ್ಯಾರ್ಥಿಯಾಗಿ ಮೊದಲು ಲಂಡನ್‌ಗೆ ಹೋದಾಗಿನಿಂದ ಅವರ ಎಲ್ಲ ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತಾ ಅವರನ್ನು 'ಮಹಾತ್ಮ'ನೆಂದು ಗುರುತಿಸಿದ ಮೊದಲಿಗರಲ್ಲಿ ಒಬ್ಬರಾಗಿದ್ದ ಅವರ ಸಾವು ಗಾಂಧಿಯವರನ್ನು ಅನಾಥ ಭಾವನೆಗೆ ದೂಡಿದ್ದು ಸಹಜವಾಗಿತ್ತು.

ಓದು–ಬರಹ–ನಕ್ಷತ್ರ ವಿಹಾರ ಮತ್ತು ಉರ್ದು ಕಲಿಕೆ

ಗಾಂಧಿ ಈ ಬಾರಿ ಸೆರೆಮನೆಯ ಗ್ರಂಥಾಲಯದಿಂದ ಪಡೆದು ಓದಿದ ಪುಸ್ತಕಗಳು ಭಿನ್ನ ರುಚಿಯವಾಗಿದ್ದವು. ಅವುಗಳಲ್ಲಿ ಹಣಕಾಸು, ಹಸು, ಈಜಿಪ್ಟ್ ಮುಂತಾದ ವಿಷಯಗಳ ಜೊತೆ ಟ್ಯಾಗೋರರ ನಾಟಕಗಳು, ಮೈಥಿಲಿ ಶರಣ ಗುಪ್ತರ ಕಥೆಗಳು, ಸಿಂಕ್ಲೇರ್ ಮತ್ತು ಗೋಥೆಯ ಕಾದಂಬರಿಗಳೂ ಸೇರಿದ್ದವು. ಅವರು ಇದೇ ಸಂದರ್ಭದಲ್ಲಿ ತಮ್ಮ ಆಶ್ರಮವಾಸಿ ಮಿತ್ರರಿಗೆ ಊಟ, ಆರೋಗ್ಯ ಸೂತ್ರಗಳ ಬಗ್ಗೆ ಪತ್ರಗಳನ್ನು ಬರೆಯುವುದರ ಜೊತೆಗೆ ದೇವರ ಅಸ್ತಿತ್ವ ಮತ್ತು ಸ್ವರೂಪ ಕುರಿತಂತೆ ಪುಟ್ಟ ಪುಟ್ಟ ಸರಣಿ ಲೇಖನಗಳನ್ನೂ ಬರೆದರು. ಮುಂದೆ ಅದು ಈ ಹಿಂದಿನ 'ಯೆರವಾಡಾ ಮಂದಿರದಿಂದ' ಕಿರುಪುಸ್ತಕಕ್ಕೆ ಅನುಬಂಧವಾಗಿ ಸೇರಿಕೊಂಡಿತು. ಗಾಂಧಿಯವರ ಪ್ರಕಾರ ದೇವರು ಖಂಡಿತ ಇರುವನು. ಒಂದು ತತ್ವವಿಲ್ಲದೆ ಈ ಜಗತ್ತು ಇಷ್ಟು ವ್ಯವಸ್ಥಿತವಾಗಿ ನಡೆದು ಬರಲು ಸಾಧ್ಯವಿರಲಿಲ್ಲ. ಆ ತತ್ವವೇ ದೇವರು. ಆ ತತ್ವ ನಮ್ಮನ್ನೂ ನಡೆಸುತ್ತಿರುವುದರಿಂದ ಅದರ ಅಸ್ತಿತ್ವವನ್ನು ನಾವು ಆಂತರಿಕವಾಗಿ ಒಂದು ಅನುಭವವಾಗಿ ಗ್ರಹಿಸಬಹುದು. ಶಂಕರಾಚಾರ್ಯರು ಅದನ್ನು 'ಇದಲ್ಲ, ಇದಲ್ಲ' ಎಂಬ ನೇತಿ ಮಾರ್ಗದ ತರ್ಕದಲ್ಲಿ ಹಿಡಿದಿಡಲು ಯತ್ನಿಸಿದ್ದಾರೆ.

ಇದೆಲ್ಲದಕ್ಕೆ ಪೂರಕವಾಗಿ ಗಾಂಧಿ ಈ ಸಮಯದಲ್ಲಿ ರೂಢಿಸಿಕೊಂಡ ಇನ್ನೊಂದು ಹವ್ಯಾಸವೆಂದರೆ, ನಕ್ಷತ್ರ ವೀಕ್ಷಣೆ. ಸೆರೆಮನೆಯ ಕೋಣೆಯ ಭಾವಣಿಯಲ್ಲಿ ಮಲಗುತ್ತಿದ್ದ ಗಾಂಧಿ, ಆಗ ಯಾರೋ ಕೊಟ್ಟಿದ್ದ ಒಂದು ದುರ್ಬೀನಿನಲ್ಲಿ ನಕ್ಷತ್ರಗಳನ್ನು ನೋಡುತ್ತಾ ಸಂತೋಷಿಸುತ್ತಿದ್ದರು. ಈ ಸಂತೋಷದ ಬಗ್ಗೆ ಕಾಲೇಲ್ಕರ್ ಅವರಿಗೆ ಬರೆದಿರುವ ಒಂದು ಪತ್ರದಲ್ಲಿ, 'ಇವು ನಮ್ಮೊಂದಿಗೆ ಮೌನ ಸಂಭಾಷಣೆಯಲ್ಲಿವೆಯೇನೋ ಅನ್ನಿಸುತ್ತದೆ... ಅನಂತ ದೂರದಿಂದ ಅವು ದಿವ್ಯ ಸಂದೇಶಗಳನ್ನು ಕಳಿಸುತ್ತಿವೆಯೇನೋ ಎಂಬ ಭಾವನೆ

ನನ್ನಲ್ಲಿ ಉಂಟಾಗುತ್ತಿದೆ' ಎಂದಿದ್ದಾರೆ.

ಇದೇ ವೇಳೆಯಲ್ಲಿ ಗಾಂಧಿ, ತಾವು ಕಳೆದ ಸೆರೆಮನೆವಾಸದಲ್ಲಿ ಆರಂಭಿಸಿದ್ದ ಉರ್ದು ಕಲಿಕೆಯನ್ನು ಇಲ್ಲೂ ಒಂದು ಕೈಪಿಡಿಯ ಸಹಾಯದಿಂದ ಮುಂದುವರೆಸಿ ಬಂದಿಗಳೊಂದಿಗೆ, ನೌಕರರೊಂದಿಗೆ ಉರ್ದುವಿನಲ್ಲಿ ಮಾತಾಡಲು ಯತ್ನಿಸುತ್ತಿದ್ದುದು ಬಹು ಮೋಜಿನ ದೃಶ್ಯವಾಗಿರುತ್ತಿತ್ತು. ಅವರು ಉರ್ದು ಬರವಣಿಗೆ ಕೃಷಿಯನ್ನೂ ಆರಂಭಿಸಿದ್ದು, ತಾವು ಬರೆದುದನ್ನು ಆಶ್ರಮದಲ್ಲಿದ್ದ ಕವಯತ್ರಿ ರೀಹಾನಾ ತ್ಯಾಬ್ಜಿಗೆ ಕಳಿಸಿ ಮಾರ್ಗದರ್ಶನ ಪಡೆಯುತ್ತಿದ್ದರು.

ಸಂವಿಧಾನದಲ್ಲಿ ಪ್ರತ್ಯೇಕ ಮತಕ್ಷೇತ್ರಗಳಗೆ ಅವಕಾಶ

ಇದೆಲ್ಲದರ ಮಧ್ಯೆ ಗಾಂಧಿಯವರಿಗೆ ಲಂಡನ್‌ನ ಸಾಮ್ರಾಜ್ಯ ಸರ್ಕಾರ ಪ್ರತ್ಯೇಕ ಮತಕ್ಷೇತ್ರಗಳ ಬಗ್ಗೆ ಏನು ನಿರ್ಧಾರ ಪ್ರಕಟಿಸುವುದೋ ಎಂಬ ಚಿಂತೆಯೂ ಕಾಡುತ್ತಿತ್ತು. ಇದನ್ನು ಒಂದೆರಡು ಬಾರಿ ಪಟೇಲರೊಂದಿಗೂ ಹಂಚಿಕೊಂಡಿದ್ದರು. ಮೆಕ್‌ಡೊನಾಲ್ಡ್ ಲೇಬರ್ ಪಕ್ಷದ ನಾಯಕನಾದ್ದರಿಂದ ಆತ ತಮ್ಮ ಪರ ಸಹಾನುಭೂತಿ ಹೊಂದಿದ್ದಾನೆ ಎಂದು ಭಾವಿಸಿದ್ದರೆ, ಈಗ ಅಲ್ಲಿರುವುದು ಸಮ್ಮಿಶ್ರ ಸರ್ಕಾರವಾಗಿರುವುದರಿಂದ ಭಾರತದ ಒಗ್ಗಟ್ಟು ಅವರ ಹಿತಾಸಕ್ತಿಗೆ ವಿರುದ್ಧವಾಗಿದ್ದು, ಪ್ರತ್ಯೇಕ ಮತಕ್ಷೇತ್ರ ವ್ಯವಸ್ಥೆಗೆ ಒಪ್ಪುವ ಸಾಧ್ಯತೆಯೇ ಹೆಚ್ಚು ಎಂಬುದು ಪಟೇಲರ ಅಭಿಪ್ರಾಯವಾಗಿತ್ತು. ಮಾರ್ಚ್ ತಿಂಗಳ ಹೊತ್ತಿಗೆ ಕೆಲವು ಪತ್ರಿಕೆಗಳು ಬ್ರಿಟನ್ ಸರ್ಕಾರ, ಮುಸ್ಲಿಮರು, ಸಿಕ್ಖರ ಜೊತೆಗೆ ಅಸ್ಪೃಶ್ಯ ಸಮುದಾಯವನ್ನೂ 'ಅಲ್ಪ ಸಂಖ್ಯಾತರು' ಎಂದು ಪರಿಗಣಿಸಿ ಪ್ರತ್ಯೇಕ ಮತಕ್ಷೇತ್ರಗಳ ಅವಕಾಶ ಕಲ್ಪಿಸುತ್ತಿದೆ ಎಂಬ ವರದಿಯನ್ನು ಪ್ರಕಟಿಸಿದಾಗ ಗಾಂಧಿ ಆತಂಕಿತರಾದರು. ಕೂಡಲೇ ಅವರು ಬ್ರಿಟನ್ ಸರ್ಕಾರದ ಭಾರತೀಯ ವ್ಯವಹಾರಗಳ ಕಾರ್ಯದರ್ಶಿ ಸಾಮ್ಯುಯಲ್ ಹೋರೆಗೆ ಪತ್ರ ಬರೆದು, ಈ ಸುದ್ದಿ ನಿಜವಾಗಿದ್ದರೆ ಅದು ಹಿಂದೂ ಧರ್ಮವನ್ನು ಒಡೆದು ಚೂರು ಮಾಡುತ್ತದೆ. ಈ ಕ್ರಮ ಸವರ್ಣೀಯ ಹಿಂದೂಗಳ ಈವರೆಗಿನ ಪಾಪಗಳಿಗೆ ಪ್ರಾಯಶ್ಚಿತ್ತವನ್ನೂ ಪ್ರೇರಿಸುವುದಿಲ್ಲ ಮತ್ತು ನಿಮ್ನವರ್ಗಗಳಿಗೆ ಯಾವ ಪ್ರಯೋಜನವನ್ನೂ ಉಂಟು ಮಾಡುವುದಿಲ್ಲ. ಇದು ಕಾನೂನಾಗೇನಾದರೂ ಬಂದರೆ, ನನ್ನನ್ನು ಹುಚ್ಚನೆಂದು ಕರೆದರೂ ಸರಿಯೇ, ನಾನು ಆಮರಣಾಂತ ಉಪವಾಸದ ನಿರ್ಧಾರವನ್ನು ಪ್ರಕಟಿಸುವೆ. ನೀವು ನನ್ನನ್ನು ಸೆರೆಮನೆಯಿಂದ ಬಿಡುಗಡೆಗೊಳಿಸಿದರೂ ಅದು ನಿಲ್ಲುವುದಿಲ್ಲ. ಏಕೆಂದರೆ ನಾನು ನನ್ನ ಆತ್ಮಸಾಕ್ಷಿಯನ್ನು ದಮನ ಮಾಡಲಾರೆ. ಹೋರೆ ಇದಕ್ಕೆ ಉತ್ತರ ಬರೆದು, ಸದ್ಯಕ್ಕೆ ಯಾವುದೇ ತೀರ್ಮಾನಕ್ಕೆ ಬರಲಾಗಿಲ್ಲವೆಂದೂ, ಎಲ್ಲರ ವಾದಗಳ ಆಧಾರದ ಮೇಲೇ ಪ್ರಧಾನಿ ಇಂತಹ ಸಾಂವಿಧಾನಿಕ ವಿಷಯಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದೆಂದೂ ತಿಳಿಸಿದರು.

ಆದರೆ ಆಗಸ್ಟ್ ೧೭ರಂದು ಪ್ರಧಾನಿ ಮೆಕ್‌ಡೊನಾಲ್ಡ್ ನೀಡಿದ ಅಧಿಕೃತ ಪ್ರಕಟಣೆ, ಪತ್ರಿಕೆಗಳಲ್ಲಿ ಬಂದ ವರದಿಯನ್ನು ನಿಜ ಮಾಡಿತು. ಕೂಡಲೇ ಗಾಂಧಿ ಸೋಡಾ ಬೆರೆತ ನೀರಿನ ಹೊರತಾಗಿ ಇನ್ನೇನನ್ನೂ ಸೇವಿಸದ ತಮ್ಮ ಆಮರಣಾಂತ ಉಪವಾಸದ ತಮ್ಮ ನಿರ್ಧಾರವನ್ನು ಪ್ರಧಾನಿಗೆ ತಿಳಿಸಿ ಪತ್ರ ಬರೆದರು. ಆ ಪತ್ರವನ್ನು ಕಳಿಸುವ ಮುನ್ನ ಅದನ್ನು ಅವರು ಪಟೇಲರಿಗೆ ತೋರಿಸಿದರು. ಅವರು 'ನಿಮ್ನವರ್ಗದವರ ಬಗ್ಗೆ ಮಾತ್ರ ಏಕೆ ನಮ್ಮ

ವಿರೋಧ?' ಎಂದು ಪ್ರಶ್ನಿಸಿದರು. ಅದಕ್ಕೆ ಗಾಂಧಿ, 'ಇಲ್ಲ, ಯಾವುದಕ್ಕೂ ನನ್ನ ಒಪ್ಪಿಗೆಯಿಲ್ಲ, ಆದರೆ ಮುಸ್ಲಿಮರು ಬ್ರಿಟಿಷ್ ಸರ್ಕಾರದೊಂದಿಗೆ ಕೈಜೋಡಿಸುವಂತೆ ನಾವೀಗ ಮಾತಾಡಬಾರದು. ಒಮ್ಮೆ ಬ್ರಿಟಿಷರು ಇಲ್ಲಿಂದ ಹೋದ ಮೇಲೆ ಮುಸ್ಲಿಮರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬಹುದು. ಆದರೆ ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರ ಒಪ್ಪಿದಲ್ಲಿ ತಕ್ಷಣವೇ ಗಲಭೆ-ರಕ್ತಪಾತದ ಘಟನೆಗಳು ಆರಂಭವಾಗಬಹುದು, ಅದನ್ನು ತಡೆಯಬೇಕಿದೆ' ಎಂದು ಸಮಜಾಯಿಷಿ ನೀಡಿದರು.

ಗಾಂಧಿಯವರ ಪತ್ರಕ್ಕೆ ಉತ್ತರ ಬರೆದ ಮೆಕ್‌ಡೊನಾಲ್ಡ್, ನಿಮ್ನವರ್ಗಗಳ ನಿಜವಾದ ಪ್ರತಿನಿಧಿಗಳು ಆಯ್ಕೆಯಾಗಿ ಆ ವರ್ಗಗಳ ದನಿ ಶಾಸನಸಭೆಗಳಲ್ಲಿ ಕೇಳಬೇಕೆಂಬ ಸದುದ್ದೇಶದಿಂದ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ ಎಂದೂ, ಹಿಂದೂಗಳ ಸಾರ್ವತ್ರಿಕ ಮತಕ್ಷೇತ್ರಗಳಲ್ಲಿಯೂ ನಿಮ್ನವರ್ಗಗಳಿಗೆ ಮತಾಧಿಕಾರವಿರುವುದರಿಂದ ಹಿಂದೂ ಧರ್ಮದ ಏಕತೆಗೇನೂ ತೊಂದರೆಯಾಗುವುದಿಲ್ಲವೆಂದೂ ವಿವರಿಸಿ 'ನಿಮ್ಮ ಉಪವಾಸದ ಮಾತು ಆಶ್ಚರ್ಯವನ್ನೂ ಖೇದವನ್ನೂ ಉಂಟು ಮಾಡಿದೆ' ಎಂದು ತಿಳಿಸಿದರು.

ಆಮರಣಾಂತ ಉಪವಾಸದ ಪ್ರಕಟಣೆ

ನಿಮ್ನವರ್ಗಗಳ ನಾಯಕರಾಗಿದ್ದ ಎಂ.ಸಿ. ರಾಜಾ, ಸರ್ಕಾರದ ನಿರ್ಧಾರವನ್ನು ಸಮುದಾಯಗಳ ಪರಸ್ಪರ ವೈರ ಹುಟ್ಟಿಸುವ ಕುತ್ಸಿತ ನಿರ್ಧಾರವೆಂದು ವರ್ಣಿಸಿದರೆ, ಕೆಲವು ಭಾರತ ಪರ ಇಂಗ್ಲಿಷ್ ಪತ್ರಿಕೆಗಳೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದವು. ಗಾಂಧಿಯವರು ಹೋರೆ, ಮೆಕ್‌ಡೊನಾಲ್ಡ್ ಮತ್ತು ತಮ್ಮ ನಡುವಣ ಪತ್ರವ್ಯವಹಾರವನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿ ಸೆಪ್ಟೆಂಬರ್ ೨೦ರಿಂದ ತಮ್ಮ ಉಪವಾಸ ಆರಂಭ ಎಂದು ಪ್ರಕಟಿಸಿದರು. ಇದರಿಂದ ಗಾಬರಿಯಾದ ಮದನಮೋಹನ ಮಾಳವೀಯರು ದೆಹಲಿಯಲ್ಲಿ ಹಿಂದೂಗಳ ಮತ್ತು ನಿಮ್ನವರ್ಗಗಳ ಪ್ರತಿನಿಧಿಗಳ ಸಭೆಯೊಂದನ್ನು ಕರೆದರು. ಅಂಬೇಡ್ಕರ್ ಈ ಸಭೆಗೆ ಹಾಜರಾಗಲು ನಿರಾಕರಿಸಿ, ಸ್ವತಃ ಗಾಂಧಿಯವರಿಂದಲೇ ಏನಾದರೂ ಸಲಹೆಗಳು ಬಂದರೆ ಅವಕ್ಕೆ ಹದಿನೈದು ನಿಮಿಷಗಳಲ್ಲಿ ಉತ್ತರಿಸುವುದಾಗಿ ತಿಳಿಸಿದರು. ಗಾಂಧಿಯವರ ಉಪವಾಸದ ನಿರ್ಧಾರದ ಬಗ್ಗೆ ದಿಗ್ಭ್ರಮೆ ವ್ಯಕ್ತಪಡಿಸಿದ ಅವರು ಪ್ರತ್ಯೇಕ ಮತಕ್ಷೇತ್ರ ವ್ಯವಸ್ಥೆ ನೀಡುವ ಸಾಂವಿಧಾನಿಕ ರಾಜಕೀಯ ಅಧಿಕಾರವೊಂದೇ ನಿಮ್ನವರ್ಗಗಳು ತಲತಲಾಂತರಗಳಿಂದ ಬಹುಸಂಖ್ಯಾತರ ವ್ಯವಸ್ಥಿತ ದೌರ್ಜನ್ಯಗಳಿಂದ ಪಾರಾಗಲು ಇರುವ ಏಕೈಕ ಪರಿಹಾರ ಎಂದು ಪತ್ರಿಕಾ ಲೇಖನವೊಂದರಲ್ಲಿ ಸ್ಪಷ್ಟವಾಗಿ ಹೇಳಿದರು. ಬಹಳ ಜನ ಮಹಾತ್ಮರು ಅಸ್ಪೃಶ್ಯತೆಯನ್ನು ನಿವಾರಿಸಲು, ನಿಮ್ನವರ್ಗಗಳನ್ನು ಮೇಲೆತ್ತಲು ಪ್ರಯತ್ನಪಟ್ಟಿದ್ದಾರೆ. ಆದರೆ ಏನೂ ಆಗಿಲ್ಲ. ಮಹಾತ್ಮರು ಬರುತ್ತಾರೆ ಹೋಗುತ್ತಾರೆ. ಅಸ್ಪೃಶ್ಯತೆ ಮಾತ್ರ ಹಾಗೇ ಉಳಿದಿದೆ ಎಂದೂ ಅವರು ಹೇಳಿದ್ದರು. ಇದೇ ಲೇಖನದಲ್ಲಿ ಮುಂದುವರೆದು ಅಂಬೇಡ್ಕರ್, ಹಿಂದೂ ಮುಸ್ಲಿಂ ಗಲಭೆಗಳನ್ನು ನಿಲ್ಲಿಸಲು ಉಪವಾಸವೇಕೆ ಕೂರಲಿಲ್ಲವೆಂದು ಗಾಂಧಿಯವರನ್ನು ಪ್ರಶ್ನಿಸಿ, ಗಾಂಧಿ ತಮ್ಮ ಪ್ರಾಣ ಮತ್ತು ನಿಮ್ನವರ್ಗಗಳ ಏಳ್ಗೆಯ ನಡುವೆ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾದ ಅನಿವಾರ್ಯತೆಗೆ ತಮ್ಮನ್ನು ದೂಡಲಾರರು ಎಂದು ಆಶಿಸಿದರು.

ಆದರೆ ಗಾಂಧಿಯವರ ಆಮರಣಾಂತ ಉಪವಾಸದ ನಿರ್ಧಾರ ಅಚಲವಾಗಿತ್ತು. ಅವರು ಸೆಪ್ಟೆಂಬರ್ ೧೬ರಂದು ಒಂದು ಪತ್ರಿಕಾ ಹೇಳಿಕೆ ನೀಡಿ, 'ಈ ಸಂದರ್ಭದಲ್ಲಿ ಸಮಾಜ ಸುಧಾರಕರೆನಿಸಿಕೊಂಡವರು ಜೀವದ ಹಂಗು ತೊರೆದು ನಿಮ್ನವರ್ಗಗಳ ವಿಮೋಚನೆಗೆ ಇನ್ನೂ ಹೆಚ್ಚಿನ ಶಕ್ತಿ ಮತ್ತು ಇಚ್ಛಾಶಕ್ತಿಯಿಂದ ಕೆಲಸ ಮಾಡಬೇಕಿದೆ ಎಂದು ಕರೆಕೊಟ್ಟರು. ತಮ್ಮ ಉಪವಾಸದ ಉದ್ದೇಶವನ್ನು ವಿವರಿಸಿ ಕ್ವೇಕರ್ ಅಗಾಥಾ ಹ್ಯಾರಿಸನ್, ರಬೀಂದ್ರನಾಥ ಟ್ಯಾಗೋರ್, ರೊಮೈನ್ ರೊಲ್ಯಾಂಡ್ ಮುಂತಾದವರಿಗೆ ಪತ್ರ ಬರೆದು ಅವರ ನೈತಿಕ ಬೆಂಬಲವನ್ನು ಕೋರಿದರು. ಅವರು ಪತ್ರ ಬರೆದು ಮುಗಿಸುವ ಮುನ್ನವೇ ಟ್ಯಾಗೋರರಿಂದ 'ನಿಮ್ಮ ಆರ್ದ್ರ ಪ್ರಾಯಶ್ಚಿತ್ತ ಕಾರ್ಯವನ್ನು ನಾನು ಗೌರವ ಮತ್ತು ಪ್ರೀತಿಯ ಭಾವನೆಯಿಂದ ಗಮನಿಸುತ್ತೇನೆ' ಎಂದು ಬರೆದಿದ್ದರು. ಗಾಂಧಿ ತಮ್ಮ ಬಂಧು ಮಿತ್ರರಿಗೂ ಪತ್ರ ಬರೆದು ತಾವು ಈ ಉಪವಾಸದಲ್ಲಿ ಅಸು ನೀಗಿದರೆ ದುಃಖಿಸಬಾರದೆಂದು ಕೋರಿದ್ದರು. ಕಸ್ತೂರಬಾ ಮತ್ತು ಮೀರಾರಿಗೆ ಪತ್ರ ಬರೆಯುತ್ತಾ, 'ಈ ಸಂದರ್ಭದಲ್ಲಿ ನಿಮ್ಮ ನೆನಪೇ ನನ್ನನ್ನು ತಲ್ಲಣಿಸುವಂತೆ ಮಾಡಿದೆ. ನೀವು ಈಗ ಎಂತಹ ಸಂಕಟವನ್ನೂ ಮೀರಿ ನಿಲ್ಲುವ ಸಂಕಲ್ಪ ಮಾಡಬೇಕು. ಅಸ್ಪೃಶ್ಯತೆಯ ಶಾಪವನ್ನು ತೊಡೆದು ಹಾಕುವ ಪ್ರಯತ್ನದ ಮುಂದೆ ಯಾವ ನೋವು ಸಂಕಟಗಳೂ ದೊಡ್ಡವಲ್ಲ. ನನ್ನ ದೇಹ ಅಳಿದು ಹೋದರೂ ನಾನು ಚೈತನ್ಯವಾಗಿ ನಿಮ್ಮೊಡನೆ ಸದಾ ಇರುವೆ'. ಇದೇ ಸಂದರ್ಭದಲ್ಲಿ ಅವರು ದೇವದಾಸನ ಭಾವಿ ಪತ್ನಿ ಲಕ್ಷ್ಮಿಗೂ ಒಂದು ಪತ್ರ ಬರೆದು ಆಶೀರ್ವದಿಸಿದ್ದರು. ತಾವು ಯೂರೋಪ್‌ನಿಂದ ಬಂದ ಕೂಡಲೇ ಅವರಿಬ್ಬರ ಮದುವೆ ಮಾಡುವ ಸಿದ್ಧತೆಯಲ್ಲಿದ್ದರೂ ಅಷ್ಟು ಹೊತ್ತಿಗೆ ದೇವದಾಸನ ಬಂಧನವಾಗಿತ್ತು. ಈಗ ದೇವದಾಸನೂ ಉಪವಾಸದ ಸಮಯದಲ್ಲಿ ತಂದೆಯವರೊಡನಿರಲು ದೂರದ ಸೆರೆಮನೆಯಿಂದ ಅನುಮತಿ ಪಡೆದು ಬಂದಿದ್ದ. ಆತನಿಗೂ ಗಾಂಧಿ 'ಅಸ್ಪೃಶ್ಯರು ಅನುಭವಿಸುತ್ತಿರುವ ಅವಮಾನ-ಸಂಕಟಗಳ ಮುಂದೆ ಯಾವ ತ್ಯಾಗವೂ ದೊಡ್ಡದಲ್ಲ; ತಂದೆಗೆ ತಕ್ಕ ಮಗನಂತೆ ನೀನು ವರ್ತಿಸಬೇಕು' ಎಂದು ಸಾಂತ್ವನ ಹೇಳಿದರು.

ಉಪವಾಸ ಆರಂಭವಾಗುವ ಸೆಪ್ಟೆಂಬರ್ ೨೦ರ ಕೆಲ ದಿನಗಳ ಮುಂಚಿನಿಂದಲೇ ಅದಕ್ಕೆ ಸಿದ್ಧತೆಯಾಗಿ ಆಹಾರವನ್ನು ಕ್ರಮೇಣ ಕಡಿಮೆ ಮಾಡಿಕೊಂಡು ಬಂದಿದ್ದ ಗಾಂಧಿ, ೨೦ರ ಬೆಳಿಗ್ಗೆ ೭ ಘಂಟೆಗೆ ಹಣ್ಣು ಮತ್ತು ಹಸಿ ತರಕಾರಿಗಳ ಉಪಹಾರ ಸ್ವೀಕರಿಸಿ ಮಧ್ಯಾಹ್ನ ಹನ್ನೊಂದೂವರೆಗೆ ಜೇನುತುಪ್ಪ ಬೆರೆಸಿದ ಒಂದು ಲೋಟ ಬಿಸಿನೀರನ್ನು ಕುಡಿದು, ಸಬರ್ಮತಿ ಆಶ್ರಮದಿಂದ ಬಂದಿದ್ದ ರೀಹಾನಾ ತ್ಯಾಬ್ಜಿ ಅವರ ಒಂದು ಪದ್ಯದ ವಾಚನದೊಂದಿಗೆ ಸರಿಯಾಗಿ ಹನ್ನೆರಡು ಘಂಟೆಗೆ ಉಪವಾಸವನ್ನು ಆರಂಭಿಸಿದರು. ಇದು ಅವರ ಈ ಹಿಂದಿನ ಉಪವಾಸಗಳಂತೆ ನಿಗದಿತ ಅವಧಿಯ ಉಪವಾಸವಾಗಿರದೆ ಅನಿರ್ದಿಷ್ಟ-ಆಮರಣಾಂತ ಉಪವಾಸವಾಗಿತ್ತು. ಸೆರೆಮನೆಯ ಹೊರ ಬಯಲಿನ ಮಾವಿನ ಮರದ ನೆರಳಿನಲ್ಲಿ ಹಾಕಿದ್ದ ಚಾರ್ಪಾಯಿಯೊಂದರ ಮೇಲೆ ಈ ಉಪವಾಸ ಆರಂಭವಾಗಿತ್ತು. ಈಗ ಅವರೊಂದಿಗೆ ಇರಲು ಪತ್ನಿ ಕಸ್ತೂರಬಾ ಮತ್ತು ಮಗ ದೇವದಾಸನಿಗೆ ಅನುಮತಿ ನೀಡಲಾಗಿತ್ತು. ಅಂದು ರಾತ್ರಿ ತಮ್ಮನ್ನು ಭೇಟಿ ಮಾಡಿದ ಕೆಲ ಪತ್ರಕರ್ತರಿಗೆ ಅವರು ಈ ಉಪವಾಸ, ಅಸ್ಪೃಶ್ಯತೆಯನ್ನು ಬೇರು ಬಿಳಲುಗಳ ಸಹಿತ

ಕಿತ್ತೊಗೆಯುವ ರಾಷ್ಟ್ರೀಯ ಸಂಕಲ್ಪವನ್ನು ಪ್ರೇರಿಸಲು ನಡೆದಿದ್ದು, ಇದು ಹಿಂದೂ ಧರ್ಮದ ಕಳಂಕವನ್ನು ತೊಡೆಯುವ ಮಾನವ ಕುಲದ ಒಂದು ಅಶುದ್ಧತೆಯನ್ನು ನಿವಾರಿಸುವ ಒಂದು ಜಾಗತಿಕ ಮಟ್ಟದ ಪ್ರಯೋಗವಾಗಿದೆ ಎಂದರು. 'ನಾವು ಹಿಂದೂಗಳೆನಿಸಿಕೊಂಡಿರುವವರು ಈ ವಿಷಯದಲ್ಲಿ ಮಾಡಿರುವ ಪಾಪ, ನನ್ನೊಬ್ಬನ ಪ್ರಾಣತ್ಯಾಗದಿಂದಲ್ಲ, ಇಂತಹ ನೂರಾರು ಜನರ ಪ್ರಾಣತ್ಯಾಗದಿಂದಲೂ ತೊಳೆಯಲ್ಪಡದಂತಹದ್ದು' ಎಂದೂ ಅವರು ಅಭಿಪ್ರಾಯಪಟ್ಟರು.

ತೆರೆದುಕೊಂಡ ದೇವಾಲಯಗಳು–ಸಮಸ್ಯೆ ಇತ್ಯರ್ಥಕ್ಕೆ ಸೇರಿದ ಸಭೆ

ಗಾಂಧಿಯವರ ಉಪವಾಸ ಆರಂಭವಾಗುತ್ತಿದ್ದಂತೆ ದೇಶದಲ್ಲಿ ಒಂದು ಧಾರ್ಮಿಕ ಸಂಚಲನ ಉಂಟಾದಂತೆ, ವಾರಾಣಸಿ, ಕಲ್ಕತ್ತಾ, ಅಯೋಧ್ಯೆ, ಅಲಹಾಬಾದ್, ಬಾಂಬೆ, ಶಿರ್ಸಿ ಮುಂತಾದೆಡೆ ದೇವಾಲಯಗಳಿಗೆ ಎಲ್ಲರಿಗೂ ಮುಕ್ತ ಪ್ರವೇಶ ಘೋಷಿಸಿ ಗಾಂಧಿಯವರಿಗೆ ನೈತಿಕ ಬೆಂಬಲವನ್ನು ಪ್ರದರ್ಶಿಸಲಾಯಿತು. ಅಲಹಾಬಾದ್‌ನಲ್ಲಿ ನೆಹರೂ ಅವರ ಅತಿ ಸಂಪ್ರದಾಯಸ್ಥ ತಾಯಿ ಸ್ವರೂಪರಾಣಿಯವರು ಅಸ್ಪೃಶ್ಯನೊಬ್ಬನಿಂದ ಆಹಾರ ಸ್ವೀಕರಿಸಿ ಊಟ ಮಾಡಿದರು. ಇದು ಸುದ್ದಿಯಾಗಿ ಹರಡುತ್ತಿದ್ದಂತೆ ದೇಶದ ಹಲವು ಕಡೆ ಆಢ್ಯ ಮನೆತನದ ಮಹಿಳೆಯರು ಇದನ್ನು ಅನುಸರಿಸಿದರು. ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಆವರಣದಲ್ಲಿ ನೂರಾರು ಬ್ರಾಹ್ಮಣರು ಮತ್ತು ಝಾಡಮಾಲಿಗಳು ಒಟ್ಟಿಗೆ ಕೂತು ಊಟ ಮಾಡುವ ಕಾರ್ಯಕ್ರಮವೂ ಏರ್ಪಾಡಾಗಿತ್ತು. ದೇಶದ ಮೂಲೆ ಮೂಲೆಗಳ ಸಾವಿರಾರು ಹಳ್ಳಿ-ಪಟ್ಟಣಗಳಲ್ಲಿ ಊರ ದೇವಾಲಯಗಳನ್ನೂ, ಊರ ಬಾವಿಗಳನ್ನೂ ಅಸ್ಪೃಶ್ಯರಿಗೆ ತೆರದಿಡಲಾಯಿತು. ಅಸ್ಪೃಶ್ಯತಾ ನಿವಾರಣೆಯ ಶಪಥಗಳನ್ನು ಮಾಡಲಾಯಿತು. ಟ್ಯಾಗೋರರು ತಮ್ಮ ಶಾಂತಿನಿಕೇತನದಲ್ಲಿ ತಮ್ಮ ಅಧ್ಯಾಪಕ-ವಿದ್ಯಾರ್ಥಿಗಳೊಂದಿಗೆ ಪ್ರಾರ್ಥನಾಸಭೆ ನಡೆಸಿ 'ಇಂದಿನ ಜಗತ್ತಿನ ಅತಿ ದೊಡ್ಡ ಆಧ್ಯಾತ್ಮಿಕ ಶಕ್ತಿಯ ಮಹಾಪ್ರಯೋಗ'ಕ್ಕೆ ಶುಭ ಕೋರಿದರು. ಇವೆಲ್ಲ ವರದಿಗಳ ಪ್ರತಿಗಳು ಮಾರನೆಯ ದಿನ ಗಾಂಧಿಯವರ ಮುಂದೆ ಗುಡ್ಡದಷ್ಟು ಎತ್ತರವಾಗಿ ಪೇರಿಸಲ್ಪಟ್ಟಿತ್ತು.

ಅದೇ ದಿನ ಬಾಂಬೆಯಲ್ಲಿ ಉಪವಾಸಕ್ಕೆ ಪರಿಹಾರವನ್ನು ಹುಡುಕಲು ಮಾಳವೀಯರ ನೇತೃತ್ವದಲ್ಲಿ ತುರ್ತು ಸಮಾಲೋಚನಾ ಸಭೆಯೊಂದು ಆರಂಭವಾಯಿತು. ಇದರಲ್ಲಿ ರಾಜಾಜಿ, ರಾಜೇಂದ್ರ ಪ್ರಸಾದ್, ತೇಜ್‌ಬಹಾದುರ್ ಸಪ್ರು, ಜಯಕರ್, ಬಿರ್ಲಾ ಮುಂತಾದವರಿದ್ದರಲ್ಲದೆ, ಸಂಜೆಯ ಹೊತ್ತಿಗೆ ಒತ್ತಾಯದ ಮೇರೆಗೆ ಅಂಬೇಡ್ಕರ್ ಅವರೂ ಸೇರಿಕೊಂಡರು. ಸೆರೆಮನೆಯಿಂದ ಬಿಡುಗಡೆಗೊಂಡ ದೇವದಾಸನೂ ಬಂದ.

ಸಪ್ರು ಸೂತ್ರ–ಅಂಬೇಡ್ಕರ್ ಕೇಳಿದ 'ಪರಿಹಾರ'

ಸಂಜೆಯ ಹೊತ್ತಿಗೆ ಚತುರ ವಕೀಲರಾಗಿದ್ದ ಸಪ್ರು ಅವರು, ಎರಡೂ ಕಡೆಯವರ ವಾದಗಳ ತಿರುಳನ್ನು ಒಳಗೊಂಡ ಒಂದು ಸೂತ್ರವನ್ನು ರೂಪಿಸಿ ಸಭೆಯ ಮುಂದಿಟ್ಟರು. ಅದು ಹೀಗಿತ್ತು; ಒಂದು ಪ್ರಾಂತ್ಯದ ಎಲ್ಲ (ಇತರ ಧರ್ಮಗಳಿಗೆ ಮೀಸಲಿಟ್ಟ ಪ್ರತ್ಯೇಕ ಮತಕ್ಷೇತ್ರಗಳ ಹೊರತಾಗಿ) ಕ್ಷೇತ್ರಗಳ ಅಭ್ಯರ್ಥಿಗಳನ್ನು ಅಸ್ಪೃಶ್ಯರೂ ಸೇರಿದಂತೆ ಎಲ್ಲರೂ

ಆಯ್ಕೆ ಮಾಡುವುದರ ಜೊತೆಗೆ, ಈ ಕ್ಷೇತ್ರಗಳಲ್ಲೇ ಕೆಲವನ್ನು ಅಸ್ಪೃಶ್ಯ ಸಮುದಾಯಗಳಿಗೆ ಮೀಸಲಿಟ್ಟು, ಅವುಗಳಲ್ಲಿ ಒಂದು ಭಾಗವನ್ನು ಅಸ್ಪೃಶ್ಯರೂ ಸೇರಿದಂತೆ ಎಲ್ಲರೂ ಪರಸ್ಪರ ಸಮಾಲೋಚನೆಗಳ ಮೂಲಕ ತುಂಬುವುದು (ಅಂದರೆ ನಾಮನಿರ್ದೇಶನ ಮಾಡುವುದು) ಮತ್ತು ಇನ್ನೊಂದು ಭಾಗವನ್ನು ಅಸ್ಪೃಶ್ಯರು ಮಾತ್ರ ಮತದಾನ ಮಾಡಿ ಮೊದಲು ಮುವ್ವರನ್ನು ಪ್ರಾಥಮಿಕ ಅಭ್ಯರ್ಥಿಗಳೆಂದು ಆಯ್ಕೆ ಮಾಡಿದ ನಂತರ ಅವರಲ್ಲೊಬ್ಬರನ್ನು ಸವರ್ಣೀಯರೂ ಸೇರಿದಂತೆ ಎಲ್ಲರೂ ಸೇರಿ ಅಂತಿಮವಾಗಿ ಆಯ್ಕೆ ಮಾಡುವುದು. ಈ ಸೂತ್ರವನ್ನು ಅಂಬೇಡ್ಕರ್‌ರ ಮುಂದಿಟ್ಟಾಗ ಅವರು ಮೊದಲ ನೋಟಕ್ಕೆ ಅದರ ಬಗ್ಗೆ ಒಲವು ತೋರಿದರಾದರೂ ತಮ್ಮ ಸಂಗಾತಿಗಳೊಂದಿಗೆ ಚರ್ಚಿಸಿ ಅದಕ್ಕೆ ತಮ್ಮದೇ ರೂಪ ನೀಡುವುದಾಗಿ ತಿಳಿಸಿದರು. ಇದರಿಂದ ಪ್ರೋತ್ಸಾಹಿತರಾದ ಸಪ್ರು ಮತ್ತವರ ಗೆಳೆಯರು, ಈ ಸೂತ್ರದ ಬಗ್ಗೆ ಗಾಂಧಿಯವರ ಅಭಿಪ್ರಾಯ ತಿಳಿಯಲು ಪೂನಾಗೆ ಹೊರಟರು.

೨೧ರ ಬೆಳಿಗ್ಗೆ ಸಪ್ರು ಅವರು ತಮ್ಮ ಈ ಸೂತ್ರವನ್ನು ಗಾಂಧಿಯವರಿಗೆ ವಿವರಿಸಿದರು. ಗಾಂಧಿ ಕೆಲವು ಪ್ರಶ್ನೆಗಳನ್ನು ಕೇಳಿ ಸ್ಪಷ್ಟೀಕರಣಗಳನ್ನು ಪಡೆದ ನಂತರ ಎಲ್ಲವನ್ನೂ ಲಿಖಿತ ರೂಪದಲ್ಲಿ ಸಿದ್ಧಪಡಿಸಿ ನೀಡಿದರೆ ಪರಿಗಣಿಸಬಹುದು ಎಂದರು. ಆದರೆ ತಮ್ಮ ಅಂತಿಮ ತೀರ್ಮಾನ ನೀಡುವ ಮುನ್ನ ಅಂಬೇಡ್ಕರ್ ಮತ್ತು ರಾಜಾರೊಂದಿಗೆ ಮಾತಾಡಬಯಸಿದರು. ಕೂಡಲೇ ಅವರಿಬ್ಬರಿಗೂ ಕರೆ ಕಳಿಸಲಾಯಿತು.

೨೨ರ ಬೆಳಗ್ಗೆ ಅಂಬೇಡ್ಕರ್ ಯೆರವಾಡಾ ಸೆರೆಮನೆಗೆ ಬರುವ ಮುನ್ನವೇ ಗಾಂಧಿ ಈ ಸೂತ್ರವನ್ನು ಪರಾಮರ್ಶಿಸಿ, ಸಪ್ರು ಮತ್ತವರ ಗೆಳೆಯರಿಗೆ ತಮ್ಮ ತಕರಾರುಗಳನ್ನು ತಿಳಿಸಿದ್ದರು. ಅವರ ಪ್ರಕಾರ ಸೂತ್ರ ಅನಗತ್ಯ ಗೊಂದಲ ಹುಟ್ಟಿಸುವ ಕಸರತ್ತಾಗಿದ್ದು, ಮೀಸಲು ಕ್ಷೇತ್ರಗಳ ವಿಷಯದಲ್ಲಿ ಸವರ್ಣೀಯರ ಹಸ್ತಕ್ಷೇಪ ಬೇಡವಾಗಿತ್ತು. ನಿಮ್ನವರ್ಗಗಳ ಎಲ್ಲ ಪ್ರತಿನಿಧಿಗಳು ನೇರ ಚುನಾವಣೆಗಳ ಮೂಲಕವೇ ಆಯ್ಕೆಯಾಗಲಿ ಎಂದರು. ಸಪ್ರು ಮತ್ತಿತರ ಮಧ್ಯಸ್ಥಿಕೆದಾರರಿಗೆ ಇದು ಅನಿರೀಕ್ಷಿತವಾಗಿತ್ತು ಮತ್ತು ಈ ಸೂತ್ರಕ್ಕೆ ಅಂಬೇಡ್ಕರ್ ಅವರನ್ನು ಒಪ್ಪಿಸಲು ನೆರವಾಗುವುದೆಂದು ಖುಷಿಪಟ್ಟರು. ಮಧ್ಯಾಹ್ನದ ಹೊತ್ತಿಗೆ ಸೆರೆಮನೆಯ ಆವರಣಕ್ಕೆ ಬಂದ ಅಂಬೇಡ್ಕರ್, ಗಾಂಧಿಯವರು ಮಲಗಿದ್ದ ಚಾರ್ಪಾಯ್ ಬಳಿ ಕುಳಿತು ಅವರೊಂದಿಗೆ ಮಾತನಾಡತೊಡಗಿದರು. ಮಧ್ಯಸ್ಥಿಕೆಗಾರರಿಗೆ ಅವರು 'ನಾನು ಮಹಾತ್ಮರ ಪ್ರಾಣ ಉಳಿಸುವೆ. ಆದರೆ ಅದಕ್ಕೆ ತಕ್ಕ 'ಪರಿಹಾರ ನನಗೆ ಬೇಕು' ಎಂದರು. ಅಂಬೇಡ್ಕರ್, 'ನಾನು ಅಸ್ಪೃಶ್ಯತೆಯ ಕ್ರೌರ್ಯವನ್ನು ಅನುಭವಿಸಿದವನಾಗಿ ನನ್ನ ಭಾವನೆಗಳನ್ನು ನೀವು ಅರ್ಥ ಮಾಡಿಕೊಳ್ಳಬೇಕು' ಎಂದಾಗ ಗಾಂಧಿ, 'ನೀವು ಹುಟ್ಟು ಅಸ್ಪೃಶ್ಯರಿರಬಹುದು. ನಾನು ಅಸ್ಪೃಶ್ಯನಾಗಿ ಮತಾಂತರ ಹೊಂದಿದವನು. ಹೊಸದಾಗಿ ಮತಾಂತರ ಹೊಂದಿದವನಿಗೆ ಮತ ಪ್ರೀತಿ ಜಾಸ್ತಿ ಎಂಬುದನ್ನು ನೀವು ಒಪ್ಪಿಕೊಳ್ಳಬೇಕು' ಎಂದಾಗ ಅಂಬೇಡ್ಕರ್ ಒಂದು ಕ್ಷಣ ದಿಗ್ಮೂಢರಾಗಬೇಕಾಯಿತು!

ಗಾಂಧಿ, ಅಂದು ಅಂಬೇಡ್ಕರ್ ಅವರನ್ನಲ್ಲದೆ ಎಂ.ಸಿ. ರಾಜಾ, ಪಿ.ಎನ್. ರಾಜಭೋಜ್, ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದ್ದ ಕ್ರಿಕೆಟಿಗರಾಗಿದ್ದ ಬಾಲೂ ಮುಂತಾದ

ನಿಮ್ನವರ್ಗಗಳ ಇತರ ನಾಯಕರೊಂದಿಗೆ ಮಾತುಕತೆ ನಡೆಸಿದರು. ನಂತರ ಪರಿಣಿತ ಕಾನೂನು ತಜ್ಞರಾಗಿದ್ದುದಲ್ಲದೆ ಸಾಮ್ರಾಜ್ಯದ ಉನ್ನತ ಹಂತಗಳೊಂದಿಗೆ ಉತ್ತಮ ಸಂಪರ್ಕ ಹೊಂದಿದ್ದ ಸಪ್ರು ಮತ್ತು ಜಯಕರ್ ಅವರೊಂದಿಗೆ ಸಮಾಲೋಚಿಸಿದರು.

ನಿತ್ರಾಣಗೊಂಡ ಗಾಂಧಿ–ಅಂಬೇಡ್ಕರ್ ಮೇಲೆ ಹೆಚ್ಚಿದ ಒತ್ತಡ

ಚರ್ಚೆಗಳು ಮುಂದುವರೆದು ಉಪವಾಸ ನಾಲ್ಕನೇ ದಿನಕ್ಕೆ ಮುಂದುವರೆದಂತೆ ಚರ್ಚೆಗಳಲ್ಲಿ ಭಾಗವಹಿಸುವುದರ ಜೊತೆಗೆ ಪ್ರಾರ್ಥನೆ, ಚರಕಾದಲ್ಲಿ ನೂಲುವುದನ್ನೂ ಮಾಡುತ್ತಿದ್ದ ಗಾಂಧಿ ನಿತ್ರಾಣರಾಗತೊಡಗಿದ್ದರು. ಈ ಹಿಂದಿನ ಉಪವಾಸಗಳ ಸಮಯದಲ್ಲಿ ಅವರು ನಿಗದಿತ ಅವಧಿಗಳಲ್ಲಿ ನೀರು ಕುಡಿಯುತ್ತಿದ್ದರು. ಆದರೆ ಈ ಬಾರಿ ಒಂದೇ ಸಮನೆ ಸಮಾಲೋಚನೆಗಳಲ್ಲಿ ಭಾಗವಹಿಸಬೇಕಾದುದರಿಂದ ಅದು ತಪ್ಪಿಹೋಗಿತ್ತು. ಜೊತೆಗೆ ಈ ಹಿಂದಿನ ಉಪವಾಸಗಳ ಸಮಯದಲ್ಲಿ ಲಘು ಅಂಗಮರ್ದನ ಮಾಡಿಸಿಕೊಳ್ಳುತ್ತಿದ್ದ ಅವರು ಈ ಬಾರಿ ಅದನ್ನು ನಿರಾಕರಿಸಿದ್ದರು. ಆದರೆ ಅಂದು ಸಂಜೆಗೆ ಗಾಂಧಿಯವರ ಅದೃಷ್ಟವೆಂಬಂತೆ ಅವರ ಪತ್ನಿ ಕಸ್ತೂರಬಾ ಬಂದರು. ಅವರನ್ನು ಸಬರ್ಮತಿ ಸೆರೆಮನೆಯಿಂದ ಈ ಸೆರೆಮನೆಗೆ ತಾತ್ಕಾಲಿಕವಾಗಿ ವರ್ಗಾಯಿಸಲಾಗಿತ್ತು. ಬಾ ಗಾಂಧಿಯವರ ಬಳಿ ಬಂದು 'ಮತ್ತೆ ಅದೇ ಕಥೆ!' ಎಂದು ಚೇಷ್ಟೆ ಮಾಡಿದಾಗ, ಗಾಂಧಿ ಸುಮ್ಮನೆ ಮುಗುಳ್ನಕ್ಕರು. ಬಾ ತಮ್ಮ ಪತಿಯ ದೇಹದ ಅಂಗಮರ್ದನ ಆರಂಭಿಸಿದರು. ಗಾಂಧಿಯವರ ಮುಖದಲ್ಲಿ ಹರ್ಷ ಮೂಡಿತು.

೨೩ರ ಇಡೀ ದಿನ ಸವರ್ಣೀಯ ಮತ್ತು ಅಸ್ಪೃಶ್ಯರ ಗುಂಪು ಜಂಟಿ ಮತಕ್ಷೇತ್ರಗಳಲ್ಲಿ ಎಷ್ಟನ್ನು ಅಸ್ಪೃಶ್ಯರಿಗೆ ಮೀಸಲಿಡಬೇಕೆಂಬ ಬಗ್ಗೆ ಪರಸ್ಪರ ಬಿಗಿಯಾದ ಚೌಕಾಶಿಯ ಮಾತುಕತೆಯಲ್ಲಿ ತೊಡಗಿತ್ತು. ಅಂಬೇಡ್ಕರ್ ಪ್ರಸ್ತಾಪಿಸಿದ 'ಪರಿಹಾರ' ಈಗ ಸ್ಪಷ್ಟ ರೂಪ ಪಡೆದು ವ್ಯಕ್ತವಾಗತೊಡಗಿತ್ತು. ಗಾಂಧಿಪರ ಸಹಾನುಭೂತಿ ಹೊಂದಿದವರು ಅಂಬೇಡ್ಕರ್ ಪ್ರತ್ಯೇಕ ಮತಕ್ಷೇತ್ರಗಳ ಬೇಡಿಕೆಯನ್ನು ತ್ಯಜಿಸುವುದಾದರೆ, ಮೆಕ್‌ಡೊನಾಲ್ಡರು ಪ್ರಾಂತೀಯ ಶಾಸನ ಸಭೆಗಳಲ್ಲಿ ನೀಡಿದ್ದ ಒಟ್ಟು ೭೧ ಪ್ರತ್ಯೇಕ ಮತಕ್ಷೇತ್ರಗಳಿಗಿಂತ ಹೆಚ್ಚು ಮತಕ್ಷೇತ್ರಗಳನ್ನು ಮೀಸಲು ಕ್ಷೇತ್ರಗಳೆಂದು ಒಪ್ಪಲು ಸಿದ್ಧವೆಂದು ಸೂಚಿಸಿದಾಗ ಅಂಬೇಡ್ಕರ್ ೧೯೭ ಮೀಸಲು ಕ್ಷೇತ್ರಗಳಿಗೆ ತಮ್ಮ ಬೇಡಿಕೆಯನ್ನು ಮುಂದಿಟ್ಟರು. ಇದನ್ನು ಎದುರು ಪಕ್ಷದವರು ಅತಿ ಎಂದು ವರ್ಣಿಸಿ ಜನಸಂಖ್ಯಾಧಾರಿತವಾಗಿ ಈ ಕ್ಷೇತ್ರಗಳನ್ನು ಲೆಕ್ಕಹಾಕಬೇಕೆಂದು ಸಲಹೆ ಮಾಡಿದರು. ಅಂದು ಗಾಂಧಿಯವರನ್ನು ಪರೀಕ್ಷಿಸಿದ ವೈದ್ಯರು ಅವರು ಪ್ರಾಣಾಪಾಯದ ವಲಯ ಪ್ರವೇಶಿಸಿದ್ದಾರೆಂದು ವರದಿ ಸಲ್ಲಿಸಿ ಎಲ್ಲರ ಆತಂಕ ಹೆಚ್ಚಿಸಿದರು. ಅಂಬೇಡ್ಕರ್ ವಿಶೇಷ ಒತ್ತಡಕ್ಕೆ ಒಳಗಾದರು.

ಜಯಕರ್, ಸಪ್ರು ಮುಂತಾದ ಮಧ್ಯಸ್ಥಿಕೆದಾರರು, ಪ್ರತಿ ಪ್ರಾಂತ್ಯದಲ್ಲಿ ನಿಗದಿ ಮಾಡಬಹುದಾದ ಮೀಸಲು ಕ್ಷೇತ್ರಗಳನ್ನು ಲೆಕ್ಕ ಹಾಕಿ ಅಂಬೇಡ್ಕರ್ ಅವರ ಮುಂದಿಟ್ಟು ೧೪೮ ಮೀಸಲು ಕ್ಷೇತ್ರಗಳಿಗೆ ಒಪ್ಪುವಂತೆ ಅವರ ಮನವೊಲಿಸಿದರು. ಇದು ಪ್ರತ್ಯೇಕ ಮತಕ್ಷೇತ್ರಗಳ ಸಂಖ್ಯೆಗಿಂತ ಎರಡುಪಟ್ಟು ಹೆಚ್ಚಾಗಿತ್ತು. ಆದರೆ ಸಮಸ್ಯೆ ಇತ್ಯರ್ಥವಾಗಲಿಲ್ಲ. ಏಕೆಂದರೆ ಅಂಬೇಡ್ಕರ್ ಇತ್ಯರ್ಥಕ್ಕೆ ಇನ್ನೊಂದು ಷರತ್ತನ್ನು

ಮುಂದಿಟ್ಟಿದ್ದರು. ಅದೆಂದರೆ ಈ ವ್ಯವಸ್ಥೆಯ ಬಗ್ಗೆ ಕಾಲಕಾಲಕ್ಕೆ ಅಸ್ಪೃಶ್ಯರ ಮಧ್ಯೆ ಜನಮತಗಣನೆ ನಡೆದು ಅದು ಪುನರ್ವಿಮರ್ಶಿತವಾಗಬೇಕೆಂಬುದು. ಇದನ್ನು ಕಾಂಗ್ರೆಸ್ ಒಪ್ಪಲಿಲ್ಲ. ರಾತ್ರಿ ಎಷ್ಟು ಹೊತ್ತಾದರೂ ಈ ಬಗ್ಗೆ ಒಮ್ಮತಕ್ಕೆ ಬರಲಾಗಲಿಲ್ಲವಾದ್ದರಿಂದ ಬಿಕ್ಕಟ್ಟನ್ನು ಗಾಂಧಿಯವರ ಬಳಿಗೆ ಒಯ್ಯಲಾಯಿತು. ಸ್ವತಃ ಅಂಬೇಡ್ಕರ್, ಆ ರಾತ್ರಿ ಮರದ ಕೆಳಗೆ ಚಾರ್ಪಾಯ್ ಮೇಲೆ ಮಲಗಿದ್ದ ಗಾಂಧಿಯವರ ಪಕ್ಕ ಕೂತು ಜನಮತಗಣನೆಯ ಪ್ರಸ್ತಾವದ ಬಗ್ಗೆ ಮಾತಾಡಿದರು. ಗಾಂಧಿ, ಮತಗಣನೆಗೆ ತಮ್ಮ ಅಭ್ಯಂತರವೇನಿಲ್ಲ ಎಂದು ಹೇಳುತ್ತಿರುವಂತೆಯೇ ಅವರ ಧ್ವನಿ ಕುಸಿಯಿತು. ವೈದ್ಯರು ಮತ್ತೆ ಮಾತುಕತೆ ಮುಂದುವರೆಸುವುದು ಒಳ್ಳೆಯದಲ್ಲವೆಂದು ಹೇಳಿದ್ದರಿಂದ ಚರ್ಚೆ ಅಲ್ಲಿಗೇ ನಿಂತಿತು.

ರಾಜಾಜಿಯ ರಾಜಿ ಸೂತ್ರ–ಅಂತಿಮಗೊಂಡ ಒಪ್ಪಂದ

ಮಾರನೆಯ ಬೆಳಿಗ್ಗೆ ಮುಂದುವರೆದ ಚರ್ಚೆಯಲ್ಲಿ ಮಾಳವೀಯರ ನೇತೃತ್ವದ ಕಾಂಗ್ರೆಸ್ಸಿಗರು, ಇದು ಒಮ್ಮೆಗೇ ತೀರ್ಮಾನವಾಗಬೇಕು ಎಂದು ಹಠ ಹಿಡಿದರೆ, ಅಂಬೇಡ್ಕರ್ ಹತ್ತು ವರ್ಷದ ನಂತರ ಜನಮತಗಣನೆಯ ಆಧಾರದ ಮೇಲೆ ವ್ಯವಸ್ಥೆಯಿಂದ ಅಸ್ಪೃಶ್ಯರಿಗೆ ನ್ಯಾಯ ದೊರಕುವಂತಾಗಿದೆಯೇ ಎಂಬುದು ಗೊತ್ತಾಗುವಂತಾಗಿ ಅದರ ಪುನರ್ವಿಮರ್ಶೆಯಾಗಬೇಕು ಎಂದು ವಾದಿಸಿದರು. ಇದಕ್ಕೆ ಗಾಂಧಿ, 'ನಿಮಗೆ ಸವರ್ಣೀಯರ ಬಗ್ಗೆ ಅಷ್ಟು ಅಪನಂಬಿಕೆ ಇದ್ದಲ್ಲಿ ಹತ್ತು ವರ್ಷಗಳೇಕೆ ಐದು ವರ್ಷಗಳಿಗೆ ಜನಮತಗಣನೆ ನಡೆದು ಒಮ್ಮೆಗೇ ತೀರ್ಮಾನವಾಗಲಿ' ಎಂದರು. ಮತ್ತೆ ಚೌಕಾಶಿ ಮುಂದುವರೆದಾಗ ಗಾಂಧಿ, ಕೊನೆಯ ಮಾತೆಂಬಂತೆ 'ಐದು ವರ್ಷ ಅಥವಾ ನನ್ನ ಪ್ರಾಣ. ನೀವೇ ನಿರ್ಧರಿಸಿ' ಎಂದು ಹೇಳಿದರೆಂದು ಕೆಲವರು ದಾಖಲಿಸಿದ್ದಾರಾದರೂ ಅದು ಖಚಿತವಲ್ಲದ ಸಂಗತಿ ಎಂದೂ ಹೇಳಲಾಗುತ್ತದೆ. ಏಕೆಂದರೆ ಅಷ್ಟು ಹೊತ್ತಿಗೆ ಗಾಂಧೀಜಿಯ ಆರೋಗ್ಯ ತೀರಾ ಹದಗೆಟ್ಟು ಅವರ ಸಾವು ಯಾವಾಗಬೇಕಾದರೂ ಸಂಭವಿಸಬಹುದೆಂದು ವೈದ್ಯರು ಹೇಳಿದ್ದರು.

ಅಂಬೇಡ್ಕರ್ ಅವರಿಗೆ ಇದು ನಿಜವಾಗಿಯೂ ಇಕ್ಕಟ್ಟಿನ ಪರಿಸ್ಥಿತಿಯಾಗಿತ್ತು. ಇದೊಂದು ಐತಿಹಾಸಿಕ ನಿರ್ಧಾರದ ಸಂದರ್ಭವಾಗಿದ್ದು, ತಾವು ಯಾವ ರೀತಿಯಲ್ಲೂ ತಪ್ಪು ಹೆಜ್ಜೆ ಇಡಬಾರದೆಂಬ ಎಚ್ಚರದಲ್ಲೂ ಇದ್ದ ಅವರು ಮತ್ತೆ ತಮ್ಮ ಸಂಗಾತಿಗಳೊಂದಿಗೆ ಚರ್ಚಿಸಿ, ಮಧ್ಯಾಹ್ನ ಒಮ್ಮೆ ಗಾಂಧಿಯನ್ನು ಕಂಡು ಬಂದರು. ಆದರೂ, ಇದು ಬಗೆಹರಿಯದ ಸಮಸ್ಯೆಯಂತೆ ಕಂಡಾಗ ರಾಜಾಜಿ ಅಂಬೇಡ್ಕರ್‌ಗೆ ಈ ಜನಮತಗಣನೆ ಅತಿ ಎಚ್ಚರಿಕೆಯ, ವಿಪರೀತದ ಪ್ರಸ್ತಾವನೆಯಾಗಿದ್ದು, ಭವಿಷ್ಯದ ತಲೆಮಾರುಗಳಲ್ಲಿ ನಂಬಿಕೆ ಇಟ್ಟು ಈ ಜನಮತಗಣನೆಯ ಪ್ರಸ್ತಾವವನ್ನೇ ಕೈಬಿಡುವುದು ಒಳ್ಳೆಯದು ಎಂದು ಸಲಹೆ ನೀಡಿದರು. ಅಂಬೇಡ್ಕರ್ ಕ್ಷಣಕಾಲ ಯೋಚಿಸಿ, ಜನಮತಗಣನೆಯ ಷರತ್ತನ್ನು ಕೈಬಿಡಲು ಒಪ್ಪಿದರು. ಐತಿಹಾಸಿಕ ಒಪ್ಪಂದ ಈಗ ಸಿದ್ಧವಾಗಿತ್ತು. ರಾಜಾಜಿ, ತಕ್ಷಣ ಗಾಂಧಿಯವರ ಬಳಿ ಓಡಿದರು. ಎಲ್ಲ ಇತ್ಯರ್ಥವಾಗಿದೆ ಎಂದು ಜೋರಾಗಿ ಹೇಳಿದರು. ಅರೆಪ್ರಜ್ಞಾವಸ್ಥೆಯಲ್ಲಿದ್ದ ಗಾಂಧಿ 'ಏನು ಇತ್ಯರ್ಥವಾಗಿದೆ? ಎಲ್ಲ ಹೇಳಿ' ಎಂದರು. ರಾಜಾಜಿ ಎಲ್ಲವನ್ನೂ ಸಂಕ್ಷಿಪ್ತವಾಗಿ ಅರುಹಿದರು. ಗಾಂಧಿಯವರಿಗೆ ಆ ಸ್ಥಿತಿಯಲ್ಲಿ ಅದೆಲ್ಲ ಎಷ್ಟು ಅರ್ಥವಾಗಿತ್ತೋ. ಆದರೂ

ಕ್ಷೀಣ ದನಿಯಲ್ಲಿ 'ತುಂಬ ಒಳ್ಳೆಯದು. ಒಪ್ಪಿಕೊಳ್ಳಿ' ಎಂದರು.

೨೪ರ ಸಂಜೆ ೫ ಘಂಟೆಗೆ, ಮುಂದೆ ಪೂನಾ ಒಪ್ಪಂದವೆಂದೇ ಪ್ರಸಿದ್ಧವಾದ ಸಂಧಾನ ಪತ್ರಕ್ಕೆ ಎರಡೂ ಕಡೆಯವರು ಸಹಿ ಹಾಕಿದರು. ಸಹಿ ಹಾಕಿದವರಲ್ಲಿ ಅಂಬೇಡ್ಕರ್, ಮಾಳವೀಯ, ರಾಜಾಜಿ, ಎಂ.ಸಿ. ರಾಜಾ, ಬಾಲೂ, ಸಪ್ರು, ಜಯಕರ್ ಸೇರಿದ್ದರು. ಮಾರನೆಯ ದಿವಸ ಭಾನುವಾರ, ಮುಂಬೈನಲ್ಲಿ ಸೇರಿದ ಎಲ್ಲ ಮಧ್ಯಸ್ಥಿಕೆದಾರರ ಸಭೆ ಈ ಒಪ್ಪಂದವನ್ನು ಸ್ಥಿರೀಕರಿಸಿ ಒಪ್ಪಂದ ಪ್ರತಿ ಪ್ರಾಂತೀಯ ಶಾಸನ ಸಭೆಯಲ್ಲೂ, ಎಷ್ಟು ಮೀಸಲು ಕ್ಷೇತ್ರಗಳಿರಬೇಕೆಂಬುದನ್ನು ಒಳಗೊಂಡಿದ್ದಲ್ಲದೆ ಕೇಂದ್ರ ಶಾಸನ ಸಭೆಯಲ್ಲಿ ಅದರ ಬಲದ ಶೇ. ೧೮ರಷ್ಟು ಮೀಸಲು ಕ್ಷೇತ್ರಗಳು ಎಂಬುದನ್ನೂ ದಾಖಲಿಸಲಾಗಿತ್ತು. ಜೊತೆಗೆ ನಿಮ್ನವರ್ಗದವರಿಗೆ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳಲ್ಲೂ ನ್ಯಾಯಯುತ ಪ್ರಾತಿನಿಧ್ಯ ಒದಗಿಸಬೇಕೆಂಬ ವಿಧಿಯನ್ನೂ ಇದು ಒಳಗೊಂಡಿತ್ತು.

ಲಂಡನ್‌ನಿಂದ ಬಂದ ಅನುಮೋದನೆ–ಉಳಿದುಕೊಂಡ ಗಾಂಧಿ ಪ್ರಾಣ

ಆದರೆ ಗಾಂಧಿ ಉಪವಾಸ ಮುಂದುವರೆದಿತ್ತು. ಈ ಒಪ್ಪಂದಕ್ಕೆ ಬ್ರಿಟಿಷ್ ಸಾಮ್ರಾಜ್ಯ ಸರ್ಕಾರದ ಅನುಮೋದನೆಯ ಮುದ್ರೆ ಬೀಳುವವರೆಗೆ ಅದಕ್ಕೆ ಯಾವ ಮಾನ್ಯತೆಯೂ ಇಲ್ಲವೆಂಬುದು ಗಾಂಧಿಯವರ ಅಭಿಪ್ರಾಯವಾಗಿತ್ತು. ಹಾಗಾಗಿ ಸಪ್ರು ಮತ್ತವರ ಗೆಳೆಯರು ಇಡೀ ಒಪ್ಪಂದದ ಪೂರ್ಣ ಪಾಠವನ್ನು ಅಲ್ಲಿನ ಸರ್ಕಾರಕ್ಕೆ ತಂತಿ ಮೂಲಕ ಕಳಿಸಿ, ಅಲ್ಲಿದ್ದ ಸಿ.ಎಫ್. ಆ್ಯಂಡ್ರ್ಯೂಸ್ ಅವರಿಗೆ ತುರ್ತು ಕ್ರಮ ಕೈಗೊಳ್ಳಲು ಕೋರಲಾಯಿತು. ಆ್ಯಂಡ್ರ್ಯೂಸ್ ಅವರ ಜೊತೆಗೆ ಗಾಂಧಿಯವರ ಇನ್ನೋರ್ವ ಹಳೆಯ ಗೆಳೆಯ ಪೋಲಾಕ್ ಸೇರಿಕೊಂಡು, ಅಂದು ಭಾನುವಾರವಾಗಿದ್ದ ಕಾರಣ, ದೂರದ ಯಾವುದೋ ಊರಿನಲ್ಲಿ ಯಾವುದೋ ಖಾಸಗಿ ಕಾರ್ಯಕ್ರಮದಲ್ಲಿದ್ದ ಪ್ರಧಾನಿ ಮೆಕ್‌ಡೊನಾಲ್ಡ್ ಅವರಿಗೆ ತಿಳಿಸಿ, ಇದು ಗಾಂಧಿಯವರ ಸಾವು ಬದುಕಿನ ಕ್ಷಣ ಎಂದು ಎಚ್ಚರಿಸಿದರು. ತಕ್ಷಣವೇ ಲಂಡನ್‌ಗೆ ವಾಪಸ್ ಬಂದ ಪ್ರಧಾನಿ ಭಾರತದ ವ್ಯವಹಾರಗಳ ಕಾರ್ಯದರ್ಶಿ ಹೋರೆ ಮತ್ತು ತಮ್ಮ ಸಹಾಯಕ ಅಧಿಕಾರಿಗಳನ್ನು ಕಛೇರಿಗೆ ಕರೆಸಿ, ಅಂದು ಇಡೀ ರಾತ್ರಿ ಒಪ್ಪಂದದ ವಿವರಗಳನ್ನು ಪರಿಶೀಲಿಸಿ ಅದಕ್ಕೆ ತಮ್ಮ ಅನುಮೋದನೆಯನ್ನು ನೀಡಿದರು. ನವದೆಹಲಿಯಿಂದ ಅನುಮೋದನೆಯ ಸಂದೇಶ ಬಂದಿತು.

ಆದರೆ ಇತ್ತ ಭಾನುವಾರ ಮಧ್ಯರಾತ್ರಿಯ ಹೊತ್ತಿಗೆ ಅರ್ಧಜೀವವಾಗಿದ್ದ ಗಾಂಧಿ, ತಮ್ಮ ಅಂತಿಮ ಕ್ಷಣಕ್ಕೆ ತಯಾರಾಗುತ್ತಿದ್ದಂತೆ, ತಮ್ಮ ವೈಯಕ್ತಿಕ ಗಂಟುಮೂಟೆಗಳನ್ನು ಕಟ್ಟಿಕೊಂಡು ಸಿದ್ಧವಾಗುವಂತೆ ತಮ್ಮ ಪತ್ನಿಗೆ ಸೂಚಿಸಿದರು. ಮಾರನೆಯ ಮುಂಜಾವಿನ ಹೊತ್ತಿಗೆ ಕವಿ ರಬೀಂದ್ರರು ಬಂದು, ಗಾಂಧಿಯವರನ್ನು ನೋಡಿ ಅಪ್ಪಿಕೊಳ್ಳಲೆತ್ನಿಸಿದರು. ವೈದ್ಯರು ಗಾಂಧಿಯವರ ಸೂಕ್ಷ್ಮ ಸ್ಥಿತಿಯನ್ನು ತಿಳಿಸಿ ಅವರನ್ನು ದೂರ ಕರೆದುತಂದರು. ಆರ್ದ್ರರಾದ ಟ್ಯಾಗೋರರು ತಮ್ಮ ಗೀತೆಗಳನ್ನು ಹಾಡಲಾರಂಭಿಸಿದರು. ಪೂನಾದಿಂದ ಬಂದ ಕೆಲವರು ಭಜನೆಗಳನ್ನು ಹಾಡಲಾರಂಭಿಸಿದರು. ಸ್ವಲ್ಪ ಹೊತ್ತಿನಲ್ಲೇ ಒಪ್ಪಂದಕ್ಕೆ ಅಧಿಕೃತ ಮುದ್ರೆ ಬಿದ್ದಿರುವ ಸುದ್ದಿ ಸೆರೆಮನೆಯನ್ನು ತಲುಪಿತು. ಎಲ್ಲರ ಮೊಗದಲ್ಲಿ

ಸಂತೋಷ ಚಿಮ್ಮಿತು. ಕಸ್ತೂರಬಾ ಗಾಂಧಿಯವರಿಗೆ ಕಿತ್ತಳೆ ರಸ ನೀಡಿದರು. ರಾಜಾಜಿ, ದೇವದಾಸ, ಟ್ಯಾಗೋರ್ ಮುಂತಾದವರೊಂದಿಗೆ ಅಲ್ಲಿ ಪಟೇಲ್, ಮಹದೇವ ದೇಸಾಯಿ, ಸರೋಜಿನಿ ನಾಯ್ಡು ಮುಂತಾದವರು ಸೇರಿದ್ದರು. ಉಪವಾಸ ಮುಗಿದಿತ್ತು. ಗಾಂಧಿ ಬದುಕಿಕೊಂಡರು.

ಗಾಂಧಿಯವರಿಗೆ ಕೃತಜ್ಞತೆ ಹೇಳಿದ ಅಂಬೇಡ್ಕರ್–ಫಿಶರ್ ಅವರ ಒಂದು ಪ್ರತಿಕ್ರಿಯೆ

ಸೆಪ್ಟೆಂಬರ್ ೨೫ರಂದು ಒಪ್ಪಂದವನ್ನು ಮುಂಬೈನಲ್ಲಿ ಸ್ಥಿರೀಕರಿಸಿದ ಮಧ್ಯಸ್ಥಿಕೆದಾರರು ಏರ್ಪಡಿಸಿದ್ದ ಒಂದು ಸಮಾರಂಭದಲ್ಲಿ ಮಾತನಾಡಿದ್ದ ಅಂಬೇಡ್ಕರ್, 'ನಾನು ಗಾಂಧಿಯವರನ್ನು ಭೇಟಿ ಮಾಡಿದಾಗ ನನ್ನ ಮತ್ತು ಅವರ ನಡುವೆ ಎಷ್ಟು ವಿಷಯಗಳ ಬಗ್ಗೆ ಸಾಮ್ಯವಿದೆ ಎಂದು ತಿಳಿದು ನಿಜವಾಗಿ ಅಚ್ಚರಿಪಟ್ಟೆ. ಸಂಧಾನಗಳ ಸಮಯದಲ್ಲಿ ವಿವಾದಗಳುಂಟಾದಾಗ– ಆ ವಿವಾದಗಳು ಎಷ್ಟು ಕ್ಲಿಷ್ಟವಾದವುಗಳಾಗಿದ್ದುವೆಂಬುದನ್ನು ಈಗಾಗಲೇ ಸಪ್ರು ನಿಮಗೆ ತಿಳಿಸಿದ್ದಾರೆ–ಅವನ್ನು ನಾವು ಅವರಲ್ಲಿ ಒಯ್ದಾಗ, ದುಂಡು ಮೇಜಿನ ಪರಿಷತ್ತಿನಲ್ಲಿ ನನ್ನೊಡನೆ ಅಷ್ಟು ದೊಡ್ಡ ಭಿನ್ನಮತ ವ್ಯಕ್ತಪಡಿಸಿದ್ದ ಅವರು, ತಮ್ಮ ಪಕ್ಷದವರ ಕಡೆ ವಾಲದೆ ನಮ್ಮ ಬೆಂಬಲಕ್ಕೆ ನಿಂತರು. ನನ್ನನ್ನು ಬಹು ಸಂಕಷ್ಟದ ಪರಿಸ್ಥಿತಿಯಿಂದ ಕಾಪಾಡಿದ ಮಹಾತ್ಮಾಜೀಗೆ ನಾನು ಬಹು ಕೃತಜ್ಞನಾಗಿದ್ದೇನೆ..'. ತಮ್ಮ ಮಾತುಗಳನ್ನು ಮುಂದುವರಿಸಿದ ಅಂಬೇಡ್ಕರ್ ಅವರು, 'ಈ ಜಂಟಿ ಮತಕ್ಷೇತ್ರಗಳ ವ್ಯವಸ್ಥೆ ನಿಮ್ನವರ್ಗಗಳ ಸಮಸ್ಯೆಗೆ ಒಂದು ಸಂಪೂರ್ಣ ಅಥವಾ ಪರಿಪೂರ್ಣ ಪರಿಹಾರ ಎಂದು ಯಾರೂ ತಿಳಿಯಬಾರದು. ಈ ರಾಜಕೀಯ ವ್ಯವಸ್ಥೆಯಾಚೆಯೂ ಮಾಡಬೇಕಾದ ಕೆಲಸ ಬಹಳವಿದೆ. ನಿಮ್ನವರ್ಗಗಳು ಜನಸಮೂಹದ ಮಧ್ಯೆ ಗೌರವಾನ್ವಿತವಾದ, ಸಮಾನತೆಯ ಸ್ಥಾನಮಾನ ಕಂಡುಕೊಳ್ಳಲು ಅನುವಾಗುವಂತಹ ಅವಕಾಶಗಳನ್ನು ನಿರ್ಮಿಸಬೇಕಿದೆ. ಆದರೆ ಒಂದು ಮಾತು: ದುಂಡು ಮೇಜಿನ ಪರಿಷತ್ತಿನಲ್ಲಿ ಇದೇ ಉದಾರ ಮನೋಭಾವ ತೋರಿದ್ದರೆ, ಅವರ ಈ ಉಪವಾಸ ಮತ್ತು ನಮ್ಮ ಈ ಸಂಕಷ್ಟಗಳ ಅಗತ್ಯವೇ ಬೀಳುತ್ತಿರಲಿಲ್ಲ' ಎಂದೂ ಹೇಳಿದರು.

ಅಂಬೇಡ್ಕರ್ ಅವರ ಈ ಕೊನೆಯ ಮಾತನ್ನು ತಮ್ಮ 'ದ ಲೈಫ್ ಆಫ್ ಮಹಾತ್ಮ ಗಾಂಧಿ' ಕೃತಿಯಲ್ಲಿ ಪರಿಶೀಲನೆಗೆ ಒಡ್ಡುವ ಲೂಯಿ ಫಿಶರ್, ಉಪವಾಸ ಅಸ್ಪೃಶ್ಯರಿಗೆ ಮೀಸಲು ಪ್ರಾತಿನಿಧ್ಯ ಒದಗಿಸಿತು ಎಂದಷ್ಟೇ ಈ ಉಪವಾಸದ ಮಹತ್ವವನ್ನು ಅರ್ಥ ಮಾಡಿಕೊಳ್ಳುವವರಿಗೆ ಈ ಮಾತು ನಿಜವೆನ್ನಿಸಬಹುದು – ಆದರೆ ಗಾಂಧಿ ಅಸ್ಪೃಶ್ಯತೆಯನ್ನು ಧರ್ಮದ, ಸಮಾಜದ ಎಂತಹ ಒಂದು ದೊಡ್ಡ ಕಳಂಕ ಎಂದು ಭಾವಿಸಿ, ಅದರ ವಿರುದ್ಧ ಎಂತಹ ಹೋರಾಟವನ್ನು ರೂಪಿಸಿದರು ಎಂಬುದನ್ನು ಬಲ್ಲವರಿಗೆ ಈ ಉಪವಾಸ ನಿಜವಾಗಿ ಏನು ಮಾಡಿತು ಎಂದು ಅರ್ಥವಾಗುತ್ತದೆ ಎನ್ನುತ್ತಾರೆ. ಗಾಂಧಿ ಉಪವಾಸ ಆರಂಭಿಸಿದ ಕ್ಷಣದಿಂದ ಅವರ ಆರೋಗ್ಯ ಸ್ಥಿತಿಯ ಬಗ್ಗೆ, ಮಾತುಕತೆಗಳು ಮುಟ್ಟಿರುವ ಹಂತಗಳ ಬಗ್ಗೆ ದೇಶದ ಸಾಮಾನ್ಯ ಜನತೆ ರೇಡಿಯೋದಲ್ಲಿ ಪ್ರಸಾರವಾಗುತ್ತಿದ್ದ, ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ವಾರ್ತೆಗಳನ್ನು ಎಷ್ಟು

ತವಕ-ಕುತೂಹಲಗಳಿಂದ ಕಾದು ತಿಳಿಯಲೆತ್ನಿಸಿದ್ದರು ಮತ್ತು ಅವರಿಗೆ ಹೇಗೆ ಅಸಹಕಾರ ಚಳುವಳಿ, ಬ್ರಿಟಿಷ್ ಪ್ರಭುತ್ವ, ಸಂವಿಧಾನ ಇತ್ಯಾದಿ ವಿಷಯಗಳೆಲ್ಲ ಕ್ಷುಲ್ಲಕವಾಗಿ ಗಾಂಧಿಯವರ ಪ್ರಾಣ ಮಾತ್ರ ಮುಖ್ಯವೆನಿಸಿತ್ತು ಎಂಬುದನ್ನು ಗಮನಿಸಿದವರಿಗೆ, ಈ ಉಪವಾಸ ಹಿಂದೂ ಸಮುದಾಯದ ಆತ್ಮಸಾಕ್ಷಿಯ ಎಷ್ಟು ಆಳಕ್ಕಿಳಿದು ಪ್ರಭಾವಿಸಿತ್ತು ಎಂಬುದು ಅರಿವಾಗುತ್ತದೆ ಎನ್ನುತ್ತಾರೆ.

ಈ ಉಪವಾಸದಿಂದ ಅಸ್ಪೃಶ್ಯತೆ ಅಳಿದುಹೋಯಿತು ಎಂದು ಯಾರೂ ಹೇಳುವುದಿಲ್ಲ. ಆದರೆ ಅದೊಂದು ಸಂಸ್ಥೆಯಾಗಿ ತನ್ನ ಮಾನ್ಯತೆಯನ್ನು ಕಳೆದುಕೊಂಡು ಅದರ ಅಡಿಗಲ್ಲುಗಳು ಅಲ್ಲಾಡತೊಡಗಿದವು ಎಂಬುದು ಮಾತ್ರ ನಿಜ ಎನ್ನುತ್ತಾರೆ ಫಿಶರ್. ಇದಕ್ಕೆ ಪೂರಕವಾಗಿ ಜಿ.ಡಿ. ಬಿರ್ಲಾ ಮತ್ತು ಎ.ವಿ. ಥಕ್ಕರ್ ಮುಂತಾದ ಗಾಂಧಿ ಅನುಯಾಯಿಗಳು ಸೇರಿ 'ಅಸ್ಪೃಶ್ಯತಾ ವಿರೋಧಿ ಲೀಗ್' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅಸ್ಪೃಶ್ಯರನ್ನು ಸಮುದಾಯದ ಪ್ರಧಾನ ಲಹರಿಗೆ ತರುವ ಪ್ರಯತ್ನಗಳನ್ನು ಆರಂಭಿಸಿದರು. ಈ ಸಂಸ್ಥೆಯನ್ನು ಉದ್ದೇಶಿಸಿ ಮಾತನಾಡಿದ ಅಂಬೇಡ್ಕರ್, ಅಸ್ಪೃಶ್ಯರ ಕಡೆಯಿಂದಲೂ, ಪಾನ ವಿರೋಧ, ಶುಚಿ ನಿಯಮಗಳ ಪಾಲನೆ, ಶಾಲೆಗಳ ಪ್ರವೇಶ, ವಾಚನಾಭಿರುಚಿ ಇತ್ಯಾದಿಗಳು ಆಗಬೇಕಾಗಿದ್ದು, ಸವರ್ಣೀಯರು ಅಸ್ಪೃಶ್ಯರೊಂದಿಗೆ ಸಹಜವಾಗಿ ಬೆರೆಯುವ ಸಾಮಾಜಿಕ ಪ್ರಯತ್ನಗಳೂ ಆಗಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಚಾರ್ಲ್ಸ್ ಆಂಡ್ರ್ಯೂಸ್ ಗಾಂಧಿಯವರಿಗೆ ಪತ್ರ ಬರೆದು ಅಸ್ಪೃಶ್ಯತಾ ನಿವಾರಣೆ ಹೋರಾಟಕ್ಕೆಂದೇ ನಿಮ್ಮನ್ನು ನೀವೇಕೆ ತೆತ್ತುಕೊಳ್ಳಬಾರದು? ಎಂದು ಕೇಳಿದರು. ಆ ಪ್ರಶ್ನೆಗೆ ಅವರು ನೀಡಿದ ಉತ್ತರ ಅವರು ತಮ್ಮ ಬದುಕನ್ನು ಸಂಯೋಜಿಸಿಕೊಂಡಿದ್ದ ಸಮಗ್ರ ರೀತಿಯನ್ನು ಪರಿಚಯಿಸುವಂತಿತ್ತು: 'ನನ್ನ ಬದುಕನ್ನು ನಾನು ಕಂಡುಕೊಂಡಿರುವುದು ಒಂದು ಅವಿಭಾಜ್ಯ ಅಖಂಡ ರೂಪದ್ದಾಗಿ. ಅವುಗಳಲ್ಲಿ ಕೋಣೆಗಳಿಲ್ಲ. ಹಾಗಾಗಿ ಒಮ್ಮೆ ನನ್ನ ಬೆರಳು ಸತ್ಯಾಗ್ರಹದ ಮನೆ ಮೇಲೆ, ನಂತರ ಸವಿನಯ ಕಾನೂನು ಭಂಗದ ಮನೆಯ ಮೇಲೆ, ಆನಂತರ ಅಸ್ಪೃಶ್ಯತಾ ನಿವಾರಣೆಯ ಮನೆಯ ಮೇಲೆ, ತದನಂತರ ಹಿಂದು ಮುಸ್ಲಿಂ ಐಕ್ಯತೆಯ ಮನೆ ಮೇಲೆ-ಹೀಗೆ ಪಿಯಾನೋದ ವಿವಿಧ ಮನೆಗಳ ಮೇಲೆ ವಿವಿಧ ತೀವ್ರತೆಯ ಒತ್ತುಗಳಂತೆ-ಒಂದೇ ರಾಗದ ಪರಸ್ಪರ ಸಂಬಂಧಿಸಿದ ವಿವಿಧ ಸ್ವರಗಳ ಸಂಯೋಜನೆಯಂತೆ ನನ್ನ ಬದುಕು.'

'ಹರಿಜನ' ಶಬ್ದದ ಉದಯ-ಗಾಂಧಿ ಎದುರಿಸಿದ ಶಾಪ

ಪೂನಾ ಒಪ್ಪಂದದ ನಂತರ ಆದ ಇನ್ನೊಂದು ಬದಲಾವಣೆ ಎಂದರೆ ಗಾಂಧಿ ಅಸ್ಪೃಶ್ಯರನ್ನು 'ಹರಿಜನ'ರೆಂದು ಕರೆಯಲಾರಂಭಿಸಿದ್ದು. ಗುಜರಾತ್‌ನ ಗಾಂಧಿ ಅಭಿಮಾನಿಯೊಬ್ಬ ಈ ಹಿಂದೆಯೇ ಒಂದು ಪತ್ರ ಬರೆದು, ಅವರಿಗೆ ಬಹು ಪ್ರಿಯವಾಗಿದ್ದ 'ವೈಷ್ಣವ ಜನತೋ' ಗೀತೆ ಬರೆದಿದ್ದ ೧೫ನೇ ಶತಮಾನದ ಗುಜರಾತಿ ಕವಿ ನರಸೀ ಮೆಹ್ತಾ, ಈ ಪ್ರಯೋಗ ಮಾಡಿದ್ದಾರೆಂದು ತಿಳಿಸಿದ್ದ. ಈ ಪ್ರಯೋಗ ಗಾಂಧಿಯವರಿಗೂ ಬಹು ಇಷ್ಟವಾಗಿ ಮುಂದೆ ಆ ಪದವನ್ನೇ ಬಳಸಿ ಜನಪ್ರಿಯಗೊಳಿಸಿದರು. ಇದರ ಫಲವಾಗಿ ಬಿರ್ಲಾ-ಥಕ್ಕರ್ ಅವರ 'ಅಸ್ಪೃಶ್ಯತಾ ವಿರೋಧಿ ಲೀಗ್' ಈಗ 'ಹರಿಜನ ಸೇವಕ ಸಂಘ' ಎಂದು ಮರುನಾಮಕರಣ ಹೊಂದಿತು ಮತ್ತು ಸರ್ಕಾರದಿಂದ

ನಿಷೇಧಿತವಾಗಿದ್ದ 'ಯಂಗ್ ಇಂಡಿಯಾ'ಗೆ ಬದಲಾಗಿ ೧೯೩೩ರ ಫೆಬ್ರುವರಿಯಲ್ಲಿ ಗಾಂಧಿ ಆರಂಭಿಸಿದ ಹೊಸ ಸಾಪ್ತಾಹಿಕ 'ಹರಿಜನ್' ಎಂಬ ಶೀರ್ಷಿಕೆ ಪಡೆಯಿತು. ಇದರ ಮೊದಲ ಸಂಚಿಕೆಗೆ ಅವರು ಅಂಬೇಡ್ಕರ್ ಅವರ ಶುಭಾಶಯವನ್ನು ಕೋರಿದ್ದರು. ಆದರೆ ಗಾಂಧಿಯವರ ಕೋರಿಕೆಯನ್ನು ತಿರಸ್ಕರಿಸಿದ್ದ ಅಂಬೇಡ್ಕರ್, ಜಾತಿ ಹೋಗುವವರೆಗೂ ಅಸ್ಪೃಶ್ಯತೆ ಹೋಗುವುದಿಲ್ಲವೆಂದು ವಾದಿಸಿ ಒಂದು ಲೇಖನವನ್ನೇ ಬರೆದರು. ಅದರಲ್ಲಿ ತಾವು ಹಿಂದೂ ಧರ್ಮವನ್ನು ತ್ಯಜಿಸುವ ಸೂಚನೆಯನ್ನೂ ನೀಡಿದ್ದರು. ಅದನ್ನೇ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ ಗಾಂಧಿ, ತಪ್ಪಿರುವುದು ಜಾತಿಯಲ್ಲಲ್ಲ. ಅದರೊಂದಿಗೆ ಅಂಟಿಕೊಂಡು ಬಂದಿರುವ ಮೇಲು-ಕೀಳುಗಳ ಭಾವನೆಗಳಲ್ಲಿ. ಅಸ್ಪೃಶ್ಯತೆಯ ವಿರುದ್ಧದ ಹೋರಾಟ ಈ ಮೇಲು-ಕೀಳು ಭಾವನೆಗಳನ್ನು ತೊಡೆದು ಹಾಕುತ್ತದೆ ಎಂದು ಅಂಬೇಡ್ಕರ್‌ಗೆ ಉತ್ತರಿಸಿದ್ದರು.

ಪೂನಾ ಒಪ್ಪಂದವು ಚುನಾವಣಾ ಮತಕ್ಷೇತ್ರಗಳ ವಿಷಯದಾಚೆಯೂ ತನ್ನ ಪರಿಣಾಮ ಬೀರಿತ್ತು. ಅದು ಜಾತಿ ಪದ್ಧತಿಯ ಬಗ್ಗೆಯೇ ಕೆಲ ಪ್ರಶ್ನೆಗಳನ್ನು ಕೇಳಲಾರಂಭಿಸಿತ್ತು. ಏಕೆಂದರೆ ಪೂನಾ ಒಪ್ಪಂದ 'ಯಾರನ್ನೂ ಹುಟ್ಟಿನ ಆಧಾರದ ಮೇಲಾಗಲೀ, ಮತ್ತಾವುದೇ ಕಾರಣದಿಂದಾಗಲೀ ಅಸ್ಪೃಶ್ಯನೆಂದು ಪರಿಗಣಿಸುವಂತಿಲ್ಲ' ಎಂದು ಘೋಷಿಸಿತ್ತು. ಹಾಗಾಗಿ ಇದು ಕೆಲವರಲ್ಲಿ ತೀವ್ರ ಅಸಮಾಧಾನವನ್ನೂ ಉಂಟು ಮಾಡಿದ್ದು ನಿಜ. ಕೆಲ ಸಂಪ್ರದಾಯಸ್ಥ ಮೇಲ್ಜಾತಿಯವರು, ದೇವಾಲಯಗಳ ಅರ್ಚಕರು, ಪುರೋಹಿತರು ಮತ್ತು ಶಾಸ್ತ್ರ ಪಂಡಿತರು ಗಾಂಧಿಯವರನ್ನು ಶಪಿಸಿ ಪತ್ರಗಳನ್ನು ಬರೆದರು. ಇನ್ನು ಕೆಲವರು ಅವರನ್ನು ಭೇಟಿ ಮಾಡಿ ಅಸ್ಪೃಶ್ಯತೆ ಶಾಸ್ತ್ರವಿರುದ್ಧವೆಂದು ವಾದಿಸಿದರೆ, ಇನ್ನು ಕೆಲವರು ಅವರಿಗೆ ಅಷ್ಟೊಂದು ವಿನಾಯಿತಿ ಕೊಡುವ ಅಗತ್ಯವಿಲ್ಲವೆಂದು ಅಲವತ್ತುಕೊಂಡರು. ಮತ್ತೆ ಕೆಲವರು ಅಸ್ಪೃಶ್ಯರನ್ನು ಧ್ವಜಸ್ಥಂಭದವರೆಗೆ ಬಿಡಲು ಮಾತ್ರ ಒಪ್ಪಿಕೊಳ್ಳಬೇಕಿತ್ತೆಂದು ಹೇಳಿದರೆ, ಇನ್ನೂ ಮತ್ತೆ ಕೆಲವರು ದೇವಸ್ಥಾನಗಳ ಟ್ರಸ್ಟೀಗಳ ಅಧಿಕಾರದ ಅತಿಕ್ರಮಣ ಎಂದು ಹೌಹಾರಿದರು. ಕೆಲವೆಡೆ ಬ್ರಾಹ್ಮಣ ಸಮ್ಮೇಳನಗಳು ನಡೆದು, ಗಾಂಧಿಯವರ ನಿಲುವನ್ನೂ, ಹಿಂದೂ ಹೆಣ್ಣುಮಕ್ಕಳ ಮದುವೆಯ ಕನಿಷ್ಠ ವಯಸ್ಸನ್ನು ಹೆಚ್ಚಿಸಿದ್ದ ೧೯೩೦ರ 'ಸರ್ದಾ' ಶಾಸನವನ್ನೂ ಖಂಡಿಸಿ ನಿರ್ಣಯಗಳನ್ನು ಅಂಗೀಕರಿಸಿದರು. ಇವರಲ್ಲಿ ಕರ್ನಾಟಕ ಕುಲಪುರೋಹಿತರೆಂದು ಪ್ರಸಿದ್ಧರಾಗಿರುವ ಆಲೂರು ವೆಂಕಟರಾಯರು ಮತ್ತು ಅವರ ತಿಲಕ್ ಅನುಯಾಯಿ ಗೆಳೆಯರು ಸೇರಿದ್ದರು.

ಗಾಂಧಿ-ಅಂಬೇಡ್ಕರ್: ಮತ್ತೆ ಮೂರು ಭೇಟಿಗಳು

ಅದೇನೇ ಇರಲಿ, ಈ ಮಹಾ ಘಟನೆಯ ಮೂರು ವಾರಗಳ ನಂತರ ಅಂದರೆ ಅಕ್ಟೋಬರ್ ೧೭ರಂದು ಅಂಬೇಡ್ಕರ್ ಮತ್ತೆ ಗಾಂಧಿಯವರನ್ನು ಕಾಣಲು ಯೆರವಾಡಾ ಸೆರೆಮನೆಗೆ ಬಂದರು. ಇದರ ಮುಖ್ಯ ಉದ್ದೇಶ ಅವರು ನಾಗರಿಕ ಅಸಹಕಾರ ಸತ್ಯಾಗ್ರಹವನ್ನು ಹಿಂತೆಗೆದುಕೊಂಡು, ಲಂಡನ್‌ನಲ್ಲಿ ನಡೆಯಲಿದ್ದ ಮೂರನೇ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸುವಂತೆ ಕೋರಲು. 'ನಾನು ನಿಮ್ಮ ಮುಂದೆ ಬಹಳ ಚಿಕ್ಕವನು. ನೀವು ದುಂಡು ಮೇಜಿನ ಪರಿಷತ್ತಿಗೆ ಬರಬೇಕು. ನೀವು ಬರದಿದ್ದರೆ ಅಲ್ಲಿ

ಏನೂ ಆಣುವುದಿಲ್ಲ.. ಆ ಕವಿ ಇಕ್ಬಾಲ್ ದೇಶದ ಶತ್ರುವಾಗಿ ಮಾರ್ಪಾಡಾಗಿದ್ದು, ಅಂಥವರು ಎಂತಹ ಅನಾಹುತವನ್ನಾದರೂ ಮಾಡಬಲ್ಲರು' ಎಂದು ಅಂಬೇಡ್ಕರ್ ಈ ಭೇಟಿಯಲ್ಲಿ ಹೇಳಿದರೆಂದು ಮಹದೇವ ದೇಸಾಯಿಯವರ 'ನೆನಪುಗಳು' ಕೃತಿ ತಿಳಿಸುತ್ತದೆ. ಹಾಗೇ ಗಾಂಧಿ 'ನೀವು ಇದನ್ನು ಇನ್ನಷ್ಟು ವಿಸ್ತಾರವಾಗಿ ಸಾರ್ವಜನಿಕವಾಗಿ ದಾಖಲಿಸಿ. ಅದು ನನಗೆ ಯೋಚನೆ ಮಾಡಲು ಸಹಾಯವಾಗುವುದು' ಎಂದು ತಿಳಿಸಿದರೆಂದೂ, ಇದಕ್ಕೆ ಅಂಬೇಡ್ಕರ್, 'ವಿಸ್ತರಿಸಿದರೆ ನಾನು ಮುಸ್ಲಿಮರನ್ನು ನೋಯಿಸುವ ಬಹಳ ವಿಷಯಗಳನ್ನು ಹೇಳಬೇಕಾಗಿರುವುದರಿಂದ ಹಾಗೆ ಮಾಡಲಾರೆ' ಎಂದು ಉತ್ತರಿಸಿದರೆಂದೂ ಇದು ತಿಳಿಸುತ್ತದೆ.

ಗಾಂಧಿ ಯೆರವಾಡಾ ಸೆರೆಮನೆಯಲ್ಲಿರುವಾಗಲೇ, ಕೆಲ ತಿಂಗಳುಗಳ ನಂತರ ಅಂಬೇಡ್ಕರ್ ಮತ್ತೆ ಅವರನ್ನು ಎರಡು ಬಾರಿ ಭೇಟಿಯಾದರು. ಇಂತಹ ಮೊದಲ ಭೇಟಿ ೧೯೩೩ರ ಫೆಬ್ರುವರಿಯಲ್ಲಿ ನಡೆದು ಅದರಲ್ಲಿ ಅಂಬೇಡ್ಕರ್, ಪೂನಾ ಒಪ್ಪಂದದಿಂದ ರಾಜಕೀಯ ಸಮಾಧಾನ ದೊರೆತಿದೆಯೇ ಹೊರತು ಸಾಮಾಜಿಕ ಪರಿಹಾರ ಸಿಕ್ಕಿಲ್ಲ ಎಂದು ಹೇಳಿದರಲ್ಲದೆ ತಮ್ಮ ಸಮುದಾಯದವರನ್ನು ಸವರ್ಣೀಯರು ಸಮಾನವಾಗಿ ಕಾಣಲು ನಿಶ್ಚಯಿಸದಿದ್ದರೆ, ತಾವು ಹಿಂದೂ ಧರ್ಮ ತ್ಯಜಿಸುವುದು ಅನಿವಾರ್ಯವಾಗುತ್ತದೆ ಎಂದು ಗಾಂಧಿಯವರಿಗೆ ತಿಳಿಸಿದರು. ಆಗ ಗಾಂಧಿ ಈ ದೃಷ್ಟಿಯಿಂದಲೇ ತಾವು ಎಲ್ಲರನ್ನೂ ದೇವರ ಮುಂದೆ ಸಮಾನ ಎಂದು ಸಾರುವ 'ದೇವಸ್ಥಾನ ಪ್ರವೇಶ' ಆಂದೋಲನವನ್ನು ಆರಂಭಿಸುತ್ತಿರುವುದಾಗಿ ಹೇಳಿದರು. ನಂತರ ಮತ್ತೆ ಏಪ್ರಿಲ್‌ನಲ್ಲಿ ನಡೆದ ಭೇಟಿಯ ಉದ್ದೇಶ ಪೂನಾ ಒಪ್ಪಂದದಲ್ಲಿ ಒಂದು ಸಣ್ಣ ಬದಲಾವಣೆಗಾಗಿ ಕೋರಿಕೆ ಸಲ್ಲಿಸಲು. ಮೀಸಲು ಕ್ಷೇತ್ರದಿಂದ ಒಬ್ಬ ಪ್ರತಿನಿಧಿ ಆಯ್ಕೆಯಾಗಿದ್ದಾನೆಂದು ಘೋಷಿಸಲು ಆತ ಅಸ್ಪೃಶ್ಯರ ಕನಿಷ್ಠ ಇಂತಿಷ್ಟು ಮತ ಪಡೆದಿರಬೇಕೆಂಬ ಷರತ್ತು ಸೇರಿಸಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಸ್ವಲ್ಪ ಕಾಲ ಅವರೊಂದಿಗೆ ಚರ್ಚಿಸಿದ ಗಾಂಧಿ, ಇದು ಚುನಾವಣೆಗಳಲ್ಲಿ ಸವರ್ಣೀಯರ ಭಾಗವಹಿಸುವಿಕೆಯನ್ನು ನಗಣ್ಯಗೊಳಿಸುವ ಅಪಾಯವಿದೆ ಎಂದು ಅದನ್ನು ಒಪ್ಪಲು ನಿರಾಕರಿಸಿದರು. ಅಂಬೇಡ್ಕರ್, ಅಸ್ಪೃಶ್ಯರ ಸಾಮಾಜಿಕ ಸಬಲೀಕರಣಕ್ಕಾಗಿ ಗಾಂಧಿಯವರಿಗೆ ಹೇಳಿದ ಒಂದು ಮಾತು ಗಮನಾರ್ಹವಾಗಿದೆ: 'ದಯವಿಟ್ಟು ನೀವು ನಮ್ಮನ್ನು ಅಸ್ಪೃಶ್ಯರೆಂದು ಗುರುತಿಸಿ ನಿಮ್ಮೊಡನೆ ಊಟಕ್ಕೋ ಸಮಾರಂಭಗಳಿಗೋ ಕರೆದು ಮತ್ತೆ ನಮ್ಮನ್ನು ಅವಮಾನಿಸಬೇಡಿ. ಎಲ್ಲರನ್ನೂ ಕರೆಯುವಷ್ಟು ಸಹಜವಾಗಿ ನಮ್ಮನ್ನು ಕರೆಯಿರಿ, ಅಷ್ಟೆ.' ಅಂಬೇಡ್ಕರ್‌ಗೆ ಗಾಂಧಿ ಮತ್ತು ಅವರ ಅನುಯಾಯಿಗಳ ನಿಮ್ನವರ್ಗಗಳನ್ನು 'ಸಾಕಬಯಸುವ' ಮನೋಭಾವಕ್ಕೆ ವಿರೋಧವಿತ್ತು.

ಪೂನಾ ಒಪ್ಪಂದದ ಇನ್ನೊಂದು ಪರಿಣಾಮವೆಂದರೆ, ಗಾಂಧಿ ಹಿಂದೂ ಧರ್ಮದ ಏಕತೆ ಉಳಿಸಿದಂತೆ ಹಿಂದೂ-ಮುಸ್ಲಿಂ ಏಕತೆ ಉಳಿಸಲು ಪ್ರಯತ್ನಗಳನ್ನು ಮತ್ತೆ ಆರಂಭಿಸಬೇಕೆಂದು ಕೆಲ ಮುಸ್ಲಿಮರು ಗಾಂಧಿಯವರಿಗೆ ಪತ್ರ ಬರೆದದ್ದು.

■

೭೩

ಕಾಂಗ್ರೆಸ್‌ನಲ್ಲಿ ಅಸಮಾಧಾನದ ಹೊಗೆ: ಒಂಟಿಯಾದ ಗಾಂಧಿ

ಗಾಂಧಿಯವರಿಗೆ ಇದು ಕಷ್ಟದ ಕಾಲವಾಗಿತ್ತು. ವೈಸ್‌ರಾಯ್ ವಿಲ್ಲಿಂಗ್ಡನ್ ಕಠಿಣ ಮನಸ್ಸಿನ ವ್ಯಕ್ತಿಯಾಗಿದ್ದು ಗಾಂಧಿಯವರ ಯಾವ ಆಟವೂ ನಡೆಯದಂತೆ ನೋಡಿಕೊಳ್ಳಲು ನಿರ್ಧರಿಸಿದ್ದನು. ಈ ಮುಂಚಿನ ವೈಸ್‌ರಾಯ್ ಇರ್ವಿನ್ ಧರ್ಮನಿಷ್ಠನೂ, ಉದಾರಿಯೂ ಆಗಿದ್ದು, ಕ್ರಮೇಣವಾಗಿಯಾದರೂ ಭಾರತಕ್ಕೆ ಸ್ವಾತಂತ್ರ್ಯ ನೀಡುವುದರ ಪರವಾಗಿದ್ದರೆ, ಈತ ಭಾರತೀಯರು ಪ್ರಜಾಪ್ರಭುತ್ವಕ್ಕೆ ಅರ್ಹರಲ್ಲ ಎಂದು ನಂಬಿದ್ದ ಶಠನಾಗಿದ್ದನು. ಗಾಂಧಿ ಮತ್ತು ಅವರ ಸಹಚರರನ್ನೆಲ್ಲ ಬಂಧಿಸಿದ್ದ ಈತ ಕಾಂಗ್ರೆಸ್ ಕಛೇರಿಗಳಿಗೆ ಬೀಗಮುದ್ರೆ ಹಾಕಿಸಿ ಅದರ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿದ್ದನು. ಸಬರ್ಮತಿ ಆಶ್ರಮದ ಗತಿಯೂ ಇದೇ ಆಗಿತ್ತು. ಆಶ್ರಮವನ್ನು ಅದೂ ಕರ ನಿರಾಕರಣೆ ಚಳುವಳಿಯ ಭಾಗವಾಗಿದ್ದುದರಿಂದ ಸರ್ಕಾರ ವಶಪಡಿಸಿಕೊಳ್ಳುವ ಸುದ್ದಿಯೂ ಚಾಲ್ತಿಯಲ್ಲಿತ್ತು. ಕೆಲ ಆಶ್ರಮವಾಸಿಗಳು ಆಶ್ರಮವನ್ನು ಬಿಟ್ಟು ಹೊರಟಿದ್ದರು. ಇದರಿಂದ ನೊಂದ ಕಸ್ತೂರಬಾ, ಆಶ್ರಮವನ್ನು ಉಳಿಸಿಕೊಳ್ಳಲಾದರೂ ಅಸಹಕಾರ ಸತ್ಯಾಗ್ರಹವನ್ನು ಕೊನೆಗೊಳಿಸುವಂತೆ ಗಾಂಧಿಯವರಿಗೆ ಪತ್ರ ಬರೆದಿದ್ದರು. ಅವರ ಪ್ರಕಾರ ಆಶ್ರಮದಲ್ಲಿರುವ, ಬೆಳೆಯುವ ಮಕ್ಕಳು ಮತ್ತು ತರುಣ-ತರುಣಿಯರಿಗೆ ಬೇಕಾದ ಕನಿಷ್ಠ ಅಗತ್ಯಗಳನ್ನೂ ಪೂರೈಸಲಾಗದಿದ್ದರೆ ಅವರಾದರೂ ಏಕೆ ಅಲ್ಲಿರುವರು? ಕೊನೆಗೆ ವಿಲ್ಲಿಂಗ್‌ಡನ್, ಅಂಬೇಡ್ಕರ್ ಗಾಂಧಿಯವರನ್ನು ರಾಜಕೀಯವಾಗಿ 'ಮುಗಿಸುವರು' ಎಂದೂ ನಂಬಿದ್ದರು.

ಕಾಂಗ್ರೆಸ್ಸಿಗರ ಪ್ರಶ್ನೆಗಳು-ಗೊಂದಲಗಳು

ವೈಸ್‌ರಾಯ್‌ನ ನಂಬಿಕೆಯನ್ನು ನಿಜಗೊಳಿಸಲೋ ಎಂಬಂತೆ ಕಾಂಗ್ರೆಸ್‌ನೊಳಗೇ ಗಾಂಧಿಯವರ ಇತ್ತೀಚಿನ ನಡೆಗಳ ಬಗ್ಗೆ ಅಸಮಾಧಾನದ ಹೊಗೆ ಆರಂಭವಾಗಿತ್ತು. ಗಾಂಧಿ ರಾಷ್ಟ್ರ ಮಟ್ಟದ ಅಸಹಕಾರ ಆಂದೋಲನವನ್ನು ಮರೆತು ಬಾರ್ಡೋಲಿಯಂತಹ ಸಣ್ಣ ಪ್ರದೇಶದ ರೈತರ ಸತ್ಯಾಗ್ರಹದ ಕಡೆ ಗಮನ ಹರಿಸಿದರೆಂದೂ ಆಗಲೇ ಕೆಲವರು ಗೊಣಗಾಟ ಆರಂಭಿಸಿದ್ದರು. ಈಗ ನೋಡಿದರೆ ಇವರಿಗೆ ಅಸ್ಪೃಶ್ಯರ ಚಿಂತೆ! ಹೀಗಾದರೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಯುವುದಾದರೂ ಹೇಗೆ, ಸ್ವಾತಂತ್ರ್ಯ

ಸಿಗುವುದಾದರೂ ಹೇಗೆ? ಈಗ ನಡೆದಿರುವ ಅಸಹಕಾರ ಸತ್ಯಾಗ್ರಹ ಒಂದು ದಡ ಮುಟ್ಟುವುದಾದರೂ ಹೇಗೆ? ಜನರ ನೋವು, ಸಂಕಷ್ಟ, ತ್ಯಾಗಗಳಿಗೆ ಪ್ರತಿಫಲ ದೊರೆಯುವುದಾದರೂ ಹೇಗೆ? ನೆಹರೂ, ರಾಜೇಂದ್ರ ಪ್ರಸಾದರಂತಹ ಹಿರಿಯ ನಾಯಕರೂ ಸೇರಿದಂತೆ ಅನೇಕರು ವಿವಿಧ ಕಾಯಿದೆಗಳ ಭಂಗದ ಮೂಲಕ ಸತ್ಯಾಗ್ರಹ ಮುಂದುವರೆಸಿ ಮತ್ತೆ ಮತ್ತೆ ಸೆರೆಮನೆಗಳನ್ನು ತುಂಬುತ್ತಲೇ ಇದ್ದರು. ದೇಶದ ಬಡತನ ಮತ್ತು ಅನೈಕ್ಯತೆಯೇ ನಮ್ಮ ದಾಸ್ಯಕ್ಕೆ ಕಾರಣವಾಗಿದ್ದು, ಇವುಗಳ ಮೂಲ ಮತ್ತು ಪರಿಹಾರದ ಮಾರ್ಗಗಳನ್ನು ಕಂಡುಕೊಳ್ಳದೆ ಸ್ವಾತಂತ್ರ್ಯದ ಮಾತು ಅರ್ಥಹೀನ ಎಂಬ ಗಾಂಧಿಯವರ ವಿಚಾರ ಬಹಳ ಜನಕ್ಕೆ ಅರ್ಥವೇ ಆಗಿರಲಿಲ್ಲ. ಸ್ವತಃ ಜವಾಹರಲಾಲ್‌ರಂಥವರೇ ಗಾಂಧಿಯವರ ನಡೆಗಳಿಂದ ಕಳವಳ–ನಿರಾಸೆಗಳಿಗೆ ಒಳಗಾಗಿದ್ದರೆಂದರೆ ಇನ್ನೇನು ಹೇಳುವುದು?

ಈ ಮಧ್ಯೆ ೧೯೩೩ರ ಫೆಬ್ರುವರಿಯಲ್ಲಿ ಗಾಂಧಿ, ಕೇಂದ್ರ ಶಾಸನ ಸಭೆಯಲ್ಲಿ, ರಂಗ ಅಯ್ಯರ್ ಎಂಬ ಸುಧಾರಣಾವಾದಿ ಸದಸ್ಯರ ಮೂಲಕ ಅಸ್ಪೃಶ್ಯತೆಯ ಆಚರಣೆಗಳನ್ನು ನಿಷೇಧಿಸುವ ಮತ್ತು ಎಲ್ಲ ದೇವಾಲಯಗಳಿಗೆ ಹರಿಜನರಿಗೆ ಪ್ರವೇಶ ಒದಗಿಸುವುದಕ್ಕೆ ಅವಕಾಶ ಮಾಡಿಕೊಡುವ ಎರಡು ಮಸೂದೆಗಳನ್ನು ಮಂಡಿಸುವಂತೆ ಪ್ರೇರೇಪಿಸಿದರು. ಜೊತೆಗೆ ಕಾಂಗ್ರೆಸ್ಸಿಗರಿಗೆ ರಂಗ ಅಯ್ಯರ್ ಅವರ ಈ ಪ್ರಯತ್ನಕ್ಕೆ ನೈತಿಕ ಬೆಂಬಲ ನೀಡಬೇಕೆಂದು ಕರೆ ಕೊಟ್ಟರು. ಶಾಸನ ಸಭೆಗಳನ್ನೇ ಬಹಿಷ್ಕರಿಸಬೇಕೆಂದು ಹೇಳಿದ್ದ ಗಾಂಧಿಯವರ ಈ ನಿಲುವು ಅಸಂಬದ್ಧ ಎಂದು ಕೆಲ ಕಾಂಗ್ರೆಸ್ಸಿಗರು ವಾದಿಸಿದರೆ, ಗಾಂಧಿ ಅಸ್ಪೃಶ್ಯರ ಸಬಲೀಕರಣದ ವಿಷಯದಲ್ಲಿ ಅಂಬೇಡ್ಕರ್‌ರೊಂದಿಗೆ ಸ್ಪರ್ಧೆಗೆ ಇಳಿದಿದ್ದಾರೆ ಎಂದು ಭಾವಿಸಿ, ಇದು ಅಪಾಯಕಾರಿ ಸ್ಪರ್ಧೆ ಎಂದು ವಾದಿಸಿದರು. ಎರಡನೆಯ ರೀತಿ ವಾದ ಮಾಡಿದವರಲ್ಲಿ ಪಟೇಲ್ ಮತ್ತು ಮಹದೇವ ದೇಸಾಯಿಯವರೂ ಸೇರಿದ್ದರು. ಆದರೆ ಮೊದಲ ರೀತಿಯ ವಾದ ಮಾಡಿದ್ದವರಿಗೆ ಗೊತ್ತಿಲ್ಲದಿದ್ದ ಸಂಗತಿ ಎಂದರೆ, ಇರ್ವಿನ್‌ರೊಡನೆಯ ಒಪ್ಪಂದದ ನಂತರ ಪರಿಸ್ಥಿತಿ ಬದಲಾಗಿದ್ದು ಕಾಂಗ್ರೆಸ್ ಆದಷ್ಟೂ ಹೆಚ್ಚಿನ ಶಾಸನ ಸಭೆಗಳನ್ನು ಚುನಾವಣೆಗಳ ಮೂಲಕ ವಶಪಡಿಸಿಕೊಳ್ಳಬೇಕೆಂದು ಗಾಂಧಿ ಮತ್ತು ಪಟೇಲ್ ಯೆರವಾಡಾ ಸೆರೆಮನೆವಾಸದ ಮಾತುಕತೆಗಳ ಸಂದರ್ಭದಲ್ಲಿ ನಿರ್ಧರಿಸಿದ್ದರೆಂಬುದು.

ಈ ಎರಡೂ ಮಸೂದೆಗಳು ದೇಶಾದ್ಯಂತ ಬಿಸಿ ಬಿಸಿ ಚರ್ಚೆಗಳನ್ನು ಆರಂಭಿಸಿತು. ಪುರಿಯ ಜಗನ್ನಾಥ ದೇವಸ್ಥಾನವೂ ಸೇರಿದಂತೆ ದೇಶದ ಎಲ್ಲ ಹಿರಿ ಕಿರಿಯ ದೇವಸ್ಥಾನಗಳ ಕಾರುಬಾರಿಗಳು, ಪ್ರಸಿದ್ಧ ಮಠಗಳ ಸ್ವಾಮೀಜಿಗಳೂ, ಇದು ದೇವಸ್ಥಾನಗಳ ಆಂತರಿಕ ಆಡಳಿತದಲ್ಲಿ ಹಸ್ತಕ್ಷೇಪವೆಂದು ಪ್ರತಿಭಟಿಸಿದರೆ, ಮದನಮೋಹನ ಮಾಳವೀಯರೂ ಸೇರಿದಂತೆ ಕೆಲ ಕಾಂಗ್ರೆಸ್ ನಾಯಕರನ್ನೂ ಒಳಗೊಂಡ 'ಧಾರ್ಮಿಕ'ರು, ಗಾಂಧಿ ಹಿಂದೂ ಧರ್ಮವನ್ನು ತಮ್ಮ ಆತ್ಮಸಾಕ್ಷಿಯ ನೆಪದಲ್ಲಿ ಹಳಿ ತಪ್ಪಿಸುತ್ತಿದ್ದು, ಅದರ ಅನುಯಾಯಿಗಳನ್ನು ಧರ್ಮಬಾಹಿರರನ್ನಾಗಿ ಮಾಡುತ್ತಿದ್ದಾರೆ ಎಂದು ಟೀಕಿಸಿದರು. ಇದರಿಂದ ಬೆದರಿದ ರಂಗ ಅಯ್ಯರ್ ತಮ್ಮ ಮಸೂದೆಗಳನ್ನೇ ಹಿಂದಕ್ಕೆ ಪಡೆದರು.

ಆತ್ಮಶುದ್ಧೀಕರಣಕ್ಕಾಗಿ ೨೧ ದಿವಸಗಳ ಉಪವಾಸ

ಇದೇ ಸಮಯದಲ್ಲಿ ನಾಸಿಕ್ ಸೆರೆಮನೆಯಲ್ಲಿದ್ದ ಕೆಲ ಹಿರಿಯ ಕಾಂಗ್ರೆಸ್ಸಿಗರು ಒಂದು ಸಾಮೂಹಿಕ ಪತ್ರ ಬರೆದು, ಗಾಂಧಿ ಎಲ್ಲ ಮತಗಳನ್ನೊಳಗೊಂಡ ಆಂದೋಲನವೊಂದರಲ್ಲಿ, ಹಿಂದೂ ಧರ್ಮದ ಬಗ್ಗೆ ನಿರ್ದಿಷ್ಟ ಗುರಿಯಿಟ್ಟು ಕಾರ್ಯಕ್ರಮಗಳನ್ನು ರೂಪಿಸುವುದು ಮತ್ತು ಅದಕ್ಕೆ ವಿದೇಶಗಳ ಅನ್ಯ ಧರ್ಮೀಯರ ಕುಮ್ಮಕ್ಕು ಇರುವುದು ವಿಷಾದನೀಯವೆಂದೂ, ಇದು ಶೇ.೯೦ ರಷ್ಟು ಹಿಂದೂಗಳನ್ನು ಕಾಂಗ್ರೆಸ್‌ನಿಂದ ದೂರ ತಳ್ಳುವುದೆಂದೂ ಎಚ್ಚರಿಸಿದ್ದರಲ್ಲದೆ, ತಿಲಕ್, ರಾನಡೆ, ಗೋಖಲೆಯವರಂತೆ ಧರ್ಮದ ಗೊಡವೆ ಇಲ್ಲದೆ ರಾಜಕಾರಣದ ಅಗತ್ಯವನ್ನು ಗಾಂಧಿಯವರಿಗೆ ಮನಗಾಣಿಸುವ ಪ್ರಯತ್ನ ಮಾಡಿದ್ದರು.

ಗಾಂಧಿ ಈಗ ನಿಜವಾಗಿ ಚಿಂತಿತರಾಗಿದ್ದರು, ವ್ಯಾಕುಲಗೊಂಡಿದ್ದರು. ಎರಡು ಮೂರು ದಿನ ರಾತ್ರಿ ನಿದ್ರೆಯಿಲ್ಲದೆ ಒದ್ದಾಡಿದ್ದರು. ಏಪ್ರಿಲ್ ೨೯ರ ರಾತ್ರಿ ಅವರು ಇದಕ್ಕೊಂದು ಪರಿಹಾರ ಕಂಡುಕೊಂಡರು. ೨೧ ದಿನಗಳ ಉಪವಾಸ. ಉಪವಾಸ ಕೆಲವರು ಟೀಕಿಸುತ್ತಿದ್ದಂತೆ ಅವರ ವ್ಯಸನ ಅಥವಾ ಒಂದು ಗೀಳು ಆಗಿರಲಿಲ್ಲ. ಅವರ ಪ್ರಕಾರ ಉಪವಾಸ ತೀವ್ರವಾಗುತ್ತಿದ್ದಂತೆ ಮನುಷ್ಯನಿಗೆ ದೇವರು ಹತ್ತಿರವಾಗುತ್ತಾ ಹೋಗುತ್ತಾನೆ: ಹೊರಗಿನ ಗಲಭೆಗಳು ಅಡಗತೊಡಗಿ ಅಂತರ್ವಾಣಿ ಹೆಚ್ಚು ಸ್ಪಷ್ಟವಾಗಿ ಕೇಳಿಸತೊಡಗುತ್ತದೆ. ಇದನ್ನು ಅವರು ಆತ್ಮಶುದ್ಧೀಕರಣದ ಪ್ರಕ್ರಿಯೆ ಎಂದು ಕರೆದರು.

ಮೇ ೮ರಂದು ಉಪವಾಸ ಆರಂಭಿಸಲು ಅವರು ನಿರ್ಧರಿಸಿದರು. ಇದಕ್ಕೆ ಮುನ್ನ ಅವರು ಉಪವಾಸದ ಉದ್ದೇಶವನ್ನು ವಿವರಿಸಿ ಮಾಳವೀಯ, ನೆಹರೂ, ಶ್ರೀನಿವಾಸ ಶಾಸ್ತ್ರಿ, ಆ್ಯಂಡ್ರ್ಯೂಸ್, ಅನಸೂಯಾಬೆನ್ ಮತ್ತಿತರ ತಮ್ಮ ಶುಭಾಕಾಂಕ್ಷಿಗಳಿಗೆ ಪತ್ರ ಬರೆದರು: 'ಹಣ, ಸೇವಾಸಂಘಟನೆ ಅಥವಾ ರಾಜಕೀಯ ಸಬಲೀಕರಣಗಳಷ್ಟೇ, ಅಸ್ಪೃಶ್ಯತೆ ಎಂಬ ಪಿಡುಗನ್ನು ನಿವಾರಿಸಲಾರವು. ಈ ಮೂರನ್ನೂ ಒಗ್ಗೂಡಿಸಿ ಕ್ರಿಯಾಶೀಲ ಮಾಡಬಲ್ಲ ಸಂಕಲ್ಪ ಶಕ್ತಿ ನಮ್ಮಲ್ಲಿ ಜಾಗೃತವಾಗಬೇಕು. ಅದರ ಸಂಘಟನೆಗಾಗಿ ಈ ಉಪವಾಸ. ಇದು ನನ್ನ ಪ್ರಾಣವನ್ನು ಒಯ್ಯುವುದಿಲ್ಲ ಎಂಬ ದೃಢ ನಂಬಿಕೆ ನನಗಿದೆ'

ಕೆಲವು ತಿಂಗಳ ಹಿಂದಷ್ಟೇ ಆಮರಣಾಂತ ಉಪವಾಸ ಮಾಡಿ ಮೃತ್ಯುವಿನ ಬಾಗಿಲು ತಟ್ಟಿ ಬಂದಿದ್ದ ಗಾಂಧಿಯವರ ಈ ಇನ್ನೊಂದು ಉಪವಾಸದ ನಿರ್ಧಾರ ಎಲ್ಲರಲ್ಲೂ ಆತಂಕ ಉಂಟು ಮಾಡಿತು. ಇಂಗ್ಲೆಂಡ್‌ನ ಜ.ಸ್ಮಟ್ಸ್‌ನಿಂದ ಹಿಡಿದು ಭಾರತದ ಅನೇಕ ಮುಖಂಡರು ಮತ್ತು ಜನಸಾಮಾನ್ಯರು, ಈ ನಿರ್ಧಾರ ಬೇಡವೆಂದು ಪ್ರಾರ್ಥಿಸಿದರು. ಮಗ ದೇವದಾಸ ಗೊಳೋ ಎಂದು ಅತ್ತ. ಕಸ್ತೂರಬಾ, ಮೀರಾಬೆನ್ ಮೂಲಕ ತನ್ನ ಆತಂಕ ವ್ಯಕ್ತಪಡಿಸಿ ತಾರು ಕಳಿಸಿದರು. ಗಾಂಧಿ, ಇವರಿಗೆಲ್ಲ ಅಭಯ ನೀಡುತ್ತಾ ಕಸ್ತೂರಬಾಗೆ ಹೀಗೆ ತಿಳಿಸಲು ಮೀರಾಗೆ ಹೇಳಿದರು: 'ಇನ್ನಾವ ಹೆಂಗಸಾಗಿದ್ದರೂ ಈ ಹೊತ್ತಿಗೆ ಕುಸಿದುಬಿದ್ದಿರಬೇಕಾಗಿದ್ದಷ್ಟು ಭಾರಗಳ ಗಂಡನನ್ನು ಅವಳಪ್ಪ ಅವಳ ಮೇಲೆ ಹೇರಿದ್ದಾನೆ. ಅವಳ ಪ್ರೀತಿಯೇ ನನ್ನ ಶ್ರೀರಕ್ಷೆ'. ಈ ಸಂಬಂಧವಾಗಿ ಬಂದ ಸಂದೇಶಗಳಲ್ಲಿ

ಆಶ್ಚರ್ಯವೆಂದರೆ, ಗಾಂಧಿಗೆ ಹೆಚ್ಚು ಹರ್ಷ ತಂದ ಸಂದೇಶವೆಂದರೆ, ಮೊದಲ ಮಗ ಹರಿಲಾಲನದು. ಆತ ತಂತಿ ಕಳಿಸಿ 'ನಾನು ನಿಮ್ಮ ಪರವಾಗಿ ಉಪವಾಸವೇನು, ಯಾವ ತ್ಯಾಗವನ್ನು ಮಾಡಲೂ ಸಿದ್ಧನಿದ್ದೇನೆ. ದಯವಿಟ್ಟು ನೀವು ಉಪವಾಸ ಕೂರಬೇಡಿ' ಎಂದು ಬೇಡಿದ್ದ. ಕೂಡಲೇ ಗಾಂಧಿ 'ನೀನು ಇಲ್ಲಿಗೆ ಬಾ. ನೀನು ಏನು ಮಾಡಬಹುದು ಎಂದು ಹೇಳುತ್ತೇನೆ' ಎಂದು ಅವನಿಗೆ ತಂತಿ ಕಳಿಸಿದರು. ಆದರೆ ಹರಿಲಾಲ ಬರಲಿಲ್ಲ ಎಂಬುದು ಬೇರೆ ವಿಷಯ.

ಬಿಡುಗಡೆಯಾದ ಗಾಂಧಿ: ಮುಂದುವರೆದ ಉಪವಾಸ

ಮೇ ೮ರ ರಾತ್ರಿ ಉಪವಾಸ ಆರಂಭವಾಯಿತು. ಆದರೆ ಎಲ್ಲರಿಗೆ ಹರ್ಷ ತರುವಂತೆ ಸರ್ಕಾರ ಅನಿರೀಕ್ಷಿತ ಕ್ರಮವಾಗಿ ಗಾಂಧಿಯವರನ್ನು ಸೆರೆಮನೆಯಿಂದ ಬಿಡುಗಡೆ ಮಾಡುವ ಆದೇಶ ಹೊರಡಿಸಿಬಿಟ್ಟಿತು! ಗಾಂಧಿ ಸೆರೆಮನೆಯಲ್ಲಿ ಪ್ರಾಣ ಬಿಟ್ಟಾರೆಂಬ ಆತಂಕ ಸರ್ಕಾರದ್ದಾಗಿತ್ತು. ಆದರೆ ಗಾಂಧಿ ಸೆರೆಮನೆಯಿಂದ ಬಿಡುಗಡೆಗೊಂಡರೂ, ಉಪವಾಸ ನಿಲ್ಲಿಸಲಿಲ್ಲ. ಅವರು ತಮ್ಮೊಂದಿಗೆ ಬಿಡುಗಡೆಗೊಂಡ ಮಹದೇವ ದೇಸಾಯಿ ಮತ್ತು ಕಸ್ತೂರಬಾ ಹಾಗೂ ಇತರ ಪರಿವಾರದೊಂದಿಗೆ ಪೂನಾದ ತಮ್ಮ ಅಭಿಮಾನಿ ಲೇಡಿ ಥ್ಯಾಕರ್ಸೆ ಅವರ ಮನೆಗೆ ಬಂದು ನೆಲೆಸಿ ಅಲ್ಲಿ ಅದನ್ನು ಮುಂದುವರೆಸಿದರು. ಜೊತೆಗೇ ಆರು ವಾರಗಳ ಕಾಲ ಅಸಹಕಾರ ಸತ್ಯಾಗ್ರಹವನ್ನು ಸ್ಥಗಿತಗೊಳಿಸಲು ಕಾಂಗ್ರೆಸ್‌ನ ಹಂಗಾಮಿ ಅಧ್ಯಕ್ಷ ಡಾ. ಎಂ.ಎಸ್. ಆಣೆಯವರಿಗೆ ಸೂಚಿಸಿದರು. ಪಟೇಲರು ಯೆರವಾಡಾ ಸೆರೆಮನೆಯಲ್ಲೇ ಉಳಿದರು.

ಗಾಂಧಿಯವರ ಉಪವಾಸ, ಆ ಹೊತ್ತಿಗೆ ಸಬರ್ಮತಿ ಆಶ್ರಮಕ್ಕೆ ತೆರಳಿದ್ದ ಕಸ್ತೂರಬಾ ಅವರ, ಕೂಡಲೇ ತಮ್ಮ ಬಳಿಗೆ ಧಾವಿಸಿ ಬರಲು ಕಳಿಸಿದ್ದ ತುರ್ತು ಸಂದೇಶವನ್ನು ಲೆಕ್ಕಿಸದೆ, ೨೧ ದಿನಗಳ ಕಾಲ ಸಾಂಗೋಪಾಂಗವಾಗಿ ನಡೆದು ಮೇ ೨೯ರಂದು, ಮಧ್ಯಾಹ್ನದ ಹೊತ್ತಿಗೆ ಹರಿಜನ ಬಾಲಕನೊಬ್ಬ ಅವರಿಗೆ ಹಾರಾರ್ಪಣೆ ಮಾಡುವ ಮೂಲಕ ಮುಕ್ತಾಯವಾಯಿತು. ಅಂದು ಆ ಮನೆಯಲ್ಲಿ ಪೂನಾ ಮತ್ತು ಸುತ್ತುಮುತ್ತಲ ಊರುಗಳಿಂದ ಎಲ್ಲ ಜಾತಿಗಳ ಮತ್ತು ವರ್ಗಗಳ ಜನ ಕಿಕ್ಕಿರಿದು ಸೇರಿದ್ದರು. ಮಹದೇವ ದೇಸಾಯಿ ಕ್ರಿಸ್ತನ ಶಿಲುಬೆಯನ್ನು ಕುರಿತ ಒಂದು ಕ್ರೈಸ್ತ ಗೀತೆಯನ್ನು ಸುಶ್ರಾವ್ಯವಾಗಿ ಹಾಡಿ ಸಂದರ್ಭಕ್ಕೊಂದು ದಿವ್ಯ ಪ್ರಭೆಯನ್ನು ಒದಗಿಸಿದರು.

ನಂತರದ ಕೆಲದಿನಗಳಲ್ಲಿ ಡಾ. ಎಂ.ಎಸ್. ಆಣೆಯವರ ಅಧ್ಯಕ್ಷತೆಯಲ್ಲಿ ಗಾಂಧಿ ಮತ್ತು ರಾಜಾಜಿಯವರೂ ಸೇರಿದಂತೆ ಸೆರೆಮನೆಯ ಹೊರಗಿದ್ದ ಕಾಂಗ್ರೆಸ್ ನಾಯಕರ ಸಭೆ ನಡೆದು, ಸದ್ಯದ ಸತ್ಯಾಗ್ರಹ-ಪ್ರತಿಭಟನೆಗಳನ್ನು ಮುಂದುವರೆಸಿಕೊಂಡೇ ಮುಂಬರುವ ಚುನಾವಣೆಗಳಲ್ಲಿ ಸಾಧ್ಯವಾದೆಡೆಯಲ್ಲೆಲ್ಲ ಅಧಿಕಾರ ಹಿಡಿಯುವುದೊಂದೇ ಸ್ವರಾಜ್ಯದತ್ತ ಇಡಬಹುದಾದ ಮುಂದಿನ ಹೆಜ್ಜೆ ಎಂದು ಅಭಿಪ್ರಾಯಪಡಲಾಯಿತಲ್ಲದೆ, ವೈಸ್‌ರಾಯ್ ಪ್ರತಿಸ್ಪಂದಿಸಲಿ ಬಿಡಲಿ, ಸರ್ಕಾರದತ್ತ ಸಂಧಾನದ ಹಸ್ತ ಚಾಚಬೇಕೆಂದು ತೀರ್ಮಾನಿಸಿತು.

ದೇವದಾಸನ ಮದುವೆ ಹುಟ್ಟು ಹಾಕಿದ ವಿವಾದ

ಇದಾದ ಮೂರು ವಾರಗಳಲ್ಲಿ ಅಂದರೆ ಜೂನ್ ೧೬ರಂದು ಪೂನಾದ ಲೇಡಿ ಥ್ಯಾಕರ್ಸೇ ಅವರ ಮನೆಯಲ್ಲೇ ದೇವದಾಸ-ಲಕ್ಷ್ಮಿ ಅವರ ಮದುವೆ ಏರ್ಪಾಡಾಯಿತು. ಗಂಡು-ಹೆಣ್ಣು ಇಬ್ಬರೂ ತಂತಮ್ಮ ತಂದೆಯರ ಆಣತಿಯಂತೆ ಐದು ವರ್ಷಗಳ ಕಾಲ ತಮ್ಮ ಪ್ರೇಮವನ್ನು ಪರೀಕ್ಷೆಗೆ ಒಡ್ಡಿ ತೇರ್ಗಡೆಯಾಗಿದ್ದರು. ಇದು ವೈಶ್ಯ-ಬ್ರಾಹ್ಮಣ ಅಂತರ್ಜಾತಿ ಮದುವೆಯಾಗಿದ್ದುದರಿಂದ, ಮಹಾರಾಷ್ಟ್ರ ಸುಧಾರಣಾವಾದಿ ಪಂಥದ ಲಕ್ಷ್ಮಣಶಾಸ್ತ್ರಿ ಜೋಷಿ ಮದುವೆಯ ಔಪಚಾರಿಕತೆಗಳನ್ನು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ದಂಪತಿಗಳನ್ನು ಹರಸಿ ಮಾತನಾಡಿದ ಗಾಂಧಿ, ಈ ಮದುವೆಯನ್ನು ಯಾರಾದರೂ ಧರ್ಮ ವಿರೋಧಿ ಎಂದು ಕರೆದರೆ ಅವರಿಗೆ ಧರ್ಮದ ಅರ್ಥ ಗೊತ್ತಿಲ್ಲ ಎಂದು ಹೇಳಬೇಕಾಗುತ್ತದೆ ಎಂದರು.

ಆದರೆ ಈ ಮದುವೆ ಗಾಂಧಿ ಕುಟುಂಬದೊಳಗೇ ತಳಮಳಗಳನ್ನು ಉಂಟು ಮಾಡಿತಲ್ಲದೆ, ನಂತರ ಪೂನಾದ ತುಳಸಿಬಾಗ್‌ನಲ್ಲಿ ನಡೆದ ಸನಾತನವಾದಿಗಳ ಸಭೆಯಲ್ಲಿ ಖಂಡನೆಗೆ ಒಳಗಾಯಿತು. ಗಾಂಧಿಯ ನಿಜ ಬಣ್ಣ ಬಯಲಾಗಿದೆ ಎಂದು ಕೆಲವರು ಟೀಕಿಸಿದರೆ, ಇನ್ನು ಕೆಲವರು ಗಾಂಧಿಯ ವಿದೇಶೀ ಸಂಪರ್ಕವೇ ಈ ಅನಾಹುತಕ್ಕೆ ಕಾರಣವಾಗಿದೆ ಎಂದು ಅಭಿಪ್ರಾಯಪಟ್ಟರು. ಮತ್ತೊಬ್ಬರು ಗಾಂಧಿ ಸ್ವರಾಜ್ಯಕ್ಕಾಗಿನ ಹೋರಾಟದ ಹೆಸರಿನಲ್ಲಿ ಧರ್ಮದ್ರೋಹಕ್ಕೆಳಸಿ ತಮ್ಮನ್ನೆಲ್ಲ ಮೂರ್ಖರನ್ನಾಗಿಸಿದ್ದಾರೆ ಎಂದು ಕಿಡಿ ಕಾರಿದರು.

ಇದಾವುದನ್ನೂ ತಲೆಗೆ ಹಚ್ಚಿಕೊಳ್ಳದ ಗಾಂಧಿ, ಕಾಂಗ್ರೆಸ್ ನಾಯಕರ ಸಭೆ ತೀರ್ಮಾನಿಸಿದ್ದಂತೆ ವೈಸ್‌ರಾಯ್‌ನ ಭೇಟಿಗೆ ಸಮಯ ಕೇಳಿ ತಂತಿ ಕಳಿಸಿದರು. ನಿರೀಕ್ಷೆಯಂತೆಯೇ ಅದು ನಿರಾಕರಿಸಲ್ಪಟ್ಟಿತು. ಗಾಂಧಿ ಈಗ ದೀರ್ಘ ಉಸಿರೆಳೆದುಕೊಂಡು ಮುಂದಿನ ಹೋರಾಟದ ಹೆಜ್ಜೆ ಇಡಬೇಕಾಗಿತ್ತು. ಏಕೆಂದರೆ ಅವರು ಇತ್ತೀಚಿನ ವರ್ಷಗಳ ಬಹುಕಾಲ ಸೆರೆಮನೆಗಳಲ್ಲೇ ಇರಬೇಕಾಗಿ ಬಂದು ನೆಲ ಮಟ್ಟದ ಹೋರಾಟದ ಸಂಪರ್ಕ ತಪ್ಪಿ ಹೋಗಿತ್ತು. ಹೋರಾಟ ಕೂಡ ಸರ್ಕಾರದ ಕಠಿಣ ಕ್ರಮಗಳಿಂದಾಗಿ ವಿದಳನ ಹೊಂದಿ ಲಯ ತಪ್ಪಿತ್ತು. ವಿಠಲ್‌ಭಾಯಿ ಪಟೇಲ್ ಮತ್ತು ಸುಭಾಷ್‌ಚಂದ್ರ ಬೋಸ್ ಅವರ ಹೊರತಾಗಿ ಎಲ್ಲ ನಾಯಕರೂ ಸೆರೆಮನೆಗಳಲ್ಲಿದ್ದರು. ಅವರಿಬ್ಬರೂ ಗಾಂಧಿಯವರ ಹರಿಜನ ಆಂದೋಲನದಿಂದ ಬೇಸತ್ತು ಅವರ ನಾಯಕತ್ವವನ್ನು ನಿರಾಕರಿಸಿ ದೇಶ ಬಿಟ್ಟು ಹೋಗಿದ್ದರು. ವಿಠಲ್‌ಭಾಯಿ ಪಟೇಲರು, ನಂತರ ಅಕ್ಟೋಬರ್‌ನಲ್ಲಿ ಜಿನಿವಾದ ಆಸ್ಪತ್ರೆಯೊಂದರಲ್ಲಿ ನಿಧನ ಹೊಂದಿದ್ದರು.

ಹೊಸ ಹಾದಿಯ ಹುಟುಕಾಟ: ಸಬರ್ಮತಿ ಆಶ್ರಮದ ವಿಸರ್ಜನೆ

ಗಾಂಧಿ ಒಂಟಿಯಾಗಿದ್ದರು, ಅವರು ನಂಬಿದ್ದ 'ಸರ್ವಾಂತರ್ಯಾಮಿ'ಯ ಹೊರತಾಗಿ. ಅವರು ಈಗ ತಮ್ಮ ಹೋರಾಟದ ಬದುಕಿನಲ್ಲಿ ಹೊಸ ಲಯ ಕಂಡುಕೊಳ್ಳಬೇಕಿತ್ತು. ಅವರು, ತಾವು ಇತ್ತೀಚಿನ ದಿನಗಳಲ್ಲಿ ತಮ್ಮ ಮನಸ್ಸಿನಲ್ಲಿ ಹೊಯ್ದಾಡುತ್ತಿದ್ದ ವಿಚಾರವೊಂದರ ಬಗ್ಗೆ ಅಂತಿಮ ನಿರ್ಧಾರಕ್ಕೆ ಬಂದರು. ಸಬರ್ಮತಿ

ಆಶ್ರಮವನ್ನು ವಿಸರ್ಜಿಸಲು ತೀರ್ಮಾನಿಸಿ ಸರ್ಕಾರ ಅದನ್ನು ವಶಪಡಿಸಿಕೊಳ್ಳಲು ಕೋರಿದರು. ಹದಿನೆಂಟು ವರ್ಷಗಳ ಕಾಲ ಮಹತ್ವಾಕಾಂಕ್ಷೆಯಿಂದ ಕಟ್ಟಿದ್ದ ಆ ಸಂಸ್ಥೆಯನ್ನು ಪರಾಧೀನಗೊಳಿಸುವುದು ಅವರ ಮನಸ್ಸಿಗೆ ತುಂಬ ಭಾರವಾದ ವಿಷಯವಾಗಿತ್ತು. ಆದರೆ ಆಶ್ರಮದಲ್ಲಿ ತಮ್ಮ ದೀರ್ಘ ಗೈರು ಹಾಜರಿಯಲ್ಲಿ ನಡೆದಿದ್ದ ಹಲವು ಅಶಿಸ್ತಿನ ಘಟನೆಗಳು ಮತ್ತು ಜಾತಿ ಸಂಬಂಧಿತ ಜಗಳಗಳು ಅವರನ್ನು ಘಾಸಿಗೊಳಿಸಿದ್ದವು. ಕೆಲ ಹರಿಜನ ನಿವಾಸಿಗಳ ಹೊರತಾಗಿ ಆಶ್ರಮ ಹೆಚ್ಚೂ ಕಡಿಮೆ ಖಾಲಿಯಾಗಿತ್ತು. ಹಲವರು ಬಂಧನದಲ್ಲಿದ್ದರೆ ಮತ್ತೆ ಕೆಲವರು ದಿಕ್ಕುಗಾಣದೆ ಬಿಟ್ಟುಹೋಗಿದ್ದರು. ಸರ್ಕಾರದಿಂದ ಯಾವುದೇ ಉತ್ತರ ಬರದಾದಾಗ ಅವರು ಆಶ್ರಮವನ್ನು ಅದರ ಹರಿಜನ ನಿವಾಸಿಗಳನ್ನು ಧರ್ಮದರ್ಶಿಗಳನ್ನಾಗಿ ಮಾಡಿ ಅವರಿಗೆ ಒಪ್ಪಿಸಿದರು. ಅವರು ಭಾರತದ ಮಧ್ಯಭಾಗದಲ್ಲಿದ್ದ ವರ್ಧಾದಲ್ಲಿ ಕೈಗಾರಿಕೋದ್ಯಮಿ ಜಮ್ನಾಲಾಲ್ ಬಜಾಜ್‌ರ ಸಹಕಾರದೊಂದಿಗೆ ಹೊಸ ಆಶ್ರಮ ಸ್ಥಾಪಿಸುವ ಆಲೋಚನೆಯಲ್ಲಿದ್ದರು.

ಗಾಂಧಿ ಈಗ ತಮ್ಮ ಹೊಸ ಹೋರಾಟವನ್ನು ತಮ್ಮ ಹಳೆಯ ಹೋರಾಟ ನಿಂತಿದ್ದ ತಾಣದಿಂದಲೇ ಆರಂಭಿಸಬಯಸಿದ್ದರು. ಅವರು ಪೂನಾದಿಂದ ಬಾರ್ಡೋಲಿ ಸತ್ಯಾಗ್ರಹದ ಕಂಪನ ಕೇಂದ್ರವೆನಿಸಿದ್ದ ರಾಸ್ ಎಂಬ ಊರಿಗೆ ಯಾತ್ರೆಯನ್ನು ಪ್ರಕಟಿಸಿದರು. ಅದು ಕರ ನಿರಾಕರಣ ಚಳುವಳಿಯಿಂದಾಗಿ ಭೂಮಿಕಾಣಿ ಕಳೆದುಕೊಂಡ ರೈತರು, ದಾರುಣ ಸ್ಥಿತಿಯಲ್ಲಿದ್ದ ಊರಾಗಿತ್ತು. ದಂಡಿಯಾತ್ರೆಯ ಮಾರ್ಗವಾಗಿ ಅವರು ಆ ಊರಿನಲ್ಲಿ ತಂಗಿ ರೈತರ ಅಹವಾಲುಗಳನ್ನು ಆಲಿಸಿ ತಾವು ಮತ್ತೆ ಅಲ್ಲಿಗೆ ಬರುವುದಾಗಿ ಹೇಳಿ ಹೋಗಿದ್ದರು.

ಆಗಸ್ಟ್ ೧ರಂದು ಪಾದಯಾತ್ರೆಯನ್ನು ಗಾಂಧಿ ಈ ಬಾರಿ ಕಸ್ತೂರಬಾ ಅವರೊಂದಿಗೆ ಆರಂಭಿಸಲು ತೀರ್ಮಾನಿಸಿದ್ದರು. ಆದರೆ ಅಂದು ಬೆಳಿಗ್ಗೆಯೇ ಪೊಲೀಸರು ಅವರಿಬ್ಬರನ್ನೂ ಬಂಧಿಸಿ ಮತ್ತೆ ಯೆರವಾಡಾ ಸೆರೆಮನೆಗೆ ಒಯ್ದರು. ಅವರಿಗೆ ವಿಚಾರಣೆ ಇಲ್ಲದ ಒಂದು ವರ್ಷದ ಸೆರೆಮನೆವಾಸದ ಶಿಕ್ಷೆ ವಿಧಿಸಲಾಯಿತು. ಈಗ ಗಾಂಧಿಯವರ ಪರ ತುಟಕ್‌ಪಿಟಕ್ ಎನ್ನಲು ಯಾರೂ ಇರಲಿಲ್ಲ. ಭಾರತದ ಪ್ರವಾಸದಲ್ಲಿದ್ದ ಬ್ರಿಟಿಷ್ ಪತ್ರಕರ್ತ ಬ್ರೈಲ್ಸ್‌ಫೋರ್ಡ್‌ರ ಹೊರತಾಗಿ. ಅವರು ಗಾಂಧಿ ಮತ್ತು ನಾಗರಿಕ ಅಸಹಕಾರ ಸತ್ಯಾಗ್ರಹವನ್ನು ಬ್ರಿಟಿಷ್ ಸರ್ಕಾರ ಹಿಂಸೆಯ ಮೂಲಕ ಬಗ್ಗುಬಡಿದಿರುವ ರೀತಿ ಹಿಟ್ಲರನನ್ನೂ ನಾಚಿಸುವಂತಿದ್ದು ಇದು ಬ್ರಿಟಿಷ್ ಸಾಮ್ರಾಜ್ಯದ ಘನತೆಯನ್ನು ಕುಗ್ಗಿಸಿದೆ ಎಂದು ಬರೆದರು. ಗಾಂಧಿಯವರ ಬಂಧನ ಅವಿವೇಕದ ಕ್ರಮವಾಗಿದೆ ಎಂದು ಈಗಾಗಲೇ ಬ್ರಿಟಿಷ್ ಸಂಸತ್ತಿನಲ್ಲಿ ಕೆಲವರು ಸರ್ಕಾರದ ವಿರುದ್ಧ ಕಿಡಿ ಕಾರಿದ್ದರು. ಇದಕ್ಕೆ ವಿಲ್ಲಿಂಗ್ಡನ್ ಗಾಂಧಿಯವರ ಅಸಾಂವಿಧಾನಿಕ ವಿಧಾನಗಳೇ ಕಾರಣವೆಂದು ಹೇಳಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಬ್ರೈಲ್ಸ್‌ಫೋರ್ಡ್ ಅಹಿಂಸಾತ್ಮಕ ಹೋರಾಟದ ಮಾರ್ಗದ ಪರಿಚಯವೇ ಇಲ್ಲದವರಿಗೆ ಇದು ಅಸಾಂವಿಧಾನಿಕವಾಗಿ ಕಾಣುವುದು ಸಹಜ ಎಂದು ಟೀಕಿಸಿದರು.

ಮತ್ತೆ ಉಪವಾಸ–ಬೇಷರತ್ ಬಿಡುಗಡೆ

ಸೆರೆಮನೆಯಲ್ಲಿ ಗಾಂಧಿಯವರಿಗೆ ಈ ಬಾರಿ ಎಲ್ಲ ವಿಶೇಷ ಸೌಲಭ್ಯಗಳನ್ನೂ ನಿರಾಕರಿಸಲಾಗಿತ್ತು. ಅವರು ಯಾರನ್ನೂ ಭೇಟಿ ಮಾಡುವಂತಿರಲಿಲ್ಲ. ಲೇಖನಗಳನ್ನು ಬರೆಯುವಂತಿರಲಿಲ್ಲ. ತಮ್ಮ ಹರಿಜನ ಕಲ್ಯಾಣ ಕೆಲಸಗಳನ್ನು ಬರಹಗಳ ಮೂಲಕ ಅಲ್ಲಿಂದಲೇ ಆರಂಭಿಸಬೇಕಿದ್ದ ಗಾಂಧಿಗೆ ನಿರಾಶೆಯಾಯಿತು. ಅವರು ಈ ಬಾರಿ ಪ್ರತಿಭಟನೆಯಾಗಿ ಉಪವಾಸ ಆರಂಭಿಸಿದರು. ಕೆಲವೇ ದಿನಗಳಲ್ಲಿ ಅವರ ಸ್ಥಿತಿ ಚಿಂತಾಜನಕವಾಗಿತ್ತು. ಅವರು ಸೆರೆಮನೆಯ ಕೋಣೆಯಲ್ಲಿ ಕುಸಿದು ಬಿದ್ದರು. ಮತ್ತೊಮ್ಮೆ ಮೃತ್ಯುವಿನ ಹೆಜ್ಜೆ ಸಪ್ಪಳ ಕೇಳಲಾರಂಭಿಸಿತ್ತು. ಅವರು 'ಇನ್ನು ಎಲ್ಲ ಮುಗಿಯಿತು' ಎಂದು ತೀರ್ಮಾನಿಸಿ ತಮ್ಮ ಬಳಿಯಿದ್ದ ವಸ್ತುಗಳನ್ನೆಲ್ಲ ಸೆರೆಮನೆಯ ತಮ್ಮ ಶುಶ್ರೂಷಾ ಸಿಬ್ಬಂದಿಗೆ ನೀಡಿ ಕೊನೆಯ ನಮಸ್ಕಾರ ಹೇಳಿದರು. ಅವರ ಸಾವಿನ ಜವಾಬ್ದಾರಿಯಿಂದ ಪಾರಾಗಲು ಸರ್ಕಾರ ಕೂಡಲೇ ಅವರನ್ನು ಆಸ್ಪತ್ರೆಗೆ ದಾಖಲು ಮಾಡಿತು. ಗಾಂಧಿ ಮತ್ತೆ ಬದುಕಿಕೊಂಡರು. ಆಗಸ್ಟ್ ೨೩ರಂದು ಅವರನ್ನು ಬೇಷರತ್ತಾಗಿ ಸೆರೆಮನೆಯಿಂದ ಬಿಡುಗಡೆ ಮಾಡಲಾಯಿತು. ವಿಲ್ಲಿಂಗ್‌ಡನ್ ತಮ್ಮ ಸೋದರಿಗೆ ಈ ಸಂಬಂಧ ಬರೆದ ಪತ್ರದಲ್ಲಿ ಗಾಂಧಿಯವರನ್ನು 'ಮತ್ತೆ ಮತ್ತೆ ಹಸಿವಿನಿಂದ ಸಾಯಲು ಬಯಸುವ ತಲೆಕೆಟ್ಟ ಮನುಷ್ಯ' ಎಂದು ಕರೆದಿದ್ದ.

ಸೆರೆಮನೆಯ ಶಿಕ್ಷೆಯಿಂದ ಬೇಷರತ್ತಾಗಿ ಬಿಡುಗಡೆಯಾದ ಗಾಂಧಿ, ಕಸ್ತೂರಬಾ ಅವರೊಂದಿಗೆ ಲೇಡಿ ಥ್ಯಾಕರ್ಸೆ ಅವರ ಮನೆಯಲ್ಲಿ ಕೆಲ ದಿನಗಳ ಕಾಲ ಆರೋಗ್ಯ ಸುಧಾರಿಸಿಕೊಂಡರು. ನಂತರ ತಮ್ಮನ್ನು ಭೇಟಿ ಮಾಡಿದ ಪತ್ರಕರ್ತರಿಗೆ, ತಾವು ಸೆರೆಮನೆಯ ಶಿಕ್ಷೆಯನ್ನು ಪೂರ್ಣಗೊಳಿಸದೆ ಬಿಡುಗಡೆ ಹೊಂದಿರುವುದರಿಂದ, ಆ ಅವಧಿ ಮುಗಿಯುವ ೧೯೩೪ರ ಆಗಸ್ಟ್ ೩ರವರೆಗೆ ಯಾವುದೇ ಸರ್ಕಾರ ವಿರೋಧಿ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲವೆಂದೂ, ಈ ಅವಧಿಯನ್ನು ಹರಿಜನ ಕಲ್ಯಾಣ ಕಾರ್ಯಕ್ರಮಗಳಿಗಾಗಿ ವಿನಿಯೋಗಿಸುವುದಾಗಿಯೂ ತಿಳಿಸಿದರು. ಪತ್ರಕರ್ತರು 'ಹಾಗಾದರೆ ನಿಮ್ಮ ಸತ್ಯಾಗ್ರಹ ಸೋತು ಹೋದಂತಾಗಿದೆಯಲ್ಲವೇ?' ಎಂದು ಕೇಳಿದಾಗ ಅವರು 'ಸೋತಿರುವುದು ಸತ್ಯಾಗ್ರಹವಲ್ಲ, ನಾನು. ಆದರೆ ಸತ್ಯಾಗ್ರಹವನ್ನೇನೂ ಹಿಂತೆಗೆದುಕೊಂಡಿಲ್ಲವಲ್ಲ?' ಎಂದು ಉತ್ತರಿಸಿದರು.

■

೨೨

ಗಾಂಧಿಯವರ ‘ಹರಿಜನ ಪ್ರವಾಸ’

ನಂತರ ಗಾಂಧಿ ೧೯೩೩ರ ಸೆಪ್ಟೆಂಬರ್ ಹೊತ್ತಿಗೆ ವರ್ಧಾಗೆ ಹೊರಟರು. ಅಲ್ಲಿ ಹೊಸ ಆಶ್ರಮ ಸ್ಥಾಪನೆಯ ಸಿದ್ಧತೆಗಳು ನಡೆದಿದ್ದವು. ಅದು ಜಮ್ನಾಲಾಲ್ ಬಜಾಜ್ ನೆಲೆಸಿದ್ದ ಊರಾಗಿತ್ತು. ಜೊತೆಗೆ ಸಬರ್ಮತಿ ಆಶ್ರಮದ ಗಾಂಧಿಯವರ ನೆಚ್ಚಿನ ಶಿಷ್ಯ ವಿನೋಬಾ ಭಾವೆಯವರು ಆ ಊರನ್ನು ತಮ್ಮ ಸೇವಾ ಕೇಂದ್ರವನ್ನಾಗಿ ಮಾಡಿಕೊಂಡಿದ್ದರು.

ಇದರೊಡನೆ ಬಜಾಜರ ತೋಟದ ಮನೆ ಗಾಂಧಿಯವರ ಹೊಸ ನೆಲೆಯಾಯಿತು. ಅದರ ಸುತ್ತಲೇ ಹೊಸ ‘ಸತ್ಯಾಗ್ರಹ ಆಶ್ರಮ’ ಸ್ಥಾಪಿತವಾಗತೊಡಗಿದ್ದು, ಅವರು ಮುಂದೆ ತಮ್ಮ ವಿಳಾಸವನ್ನು ಸತ್ಯಾಗ್ರಹ ಆಶ್ರಮ, ವರ್ಧಾ ಎಂದೇ ನಮೂದಿಸಲಾರಂಭಿಸಿದ್ದರು. ಬಜಾಜರು ತಮ್ಮ ಕುಟುಂಬಕ್ಕಾಗಿ ಅಲ್ಲಿ ಕಟ್ಟಿಸಿದ್ದ ದೇವಾಲಯದಲ್ಲಿ ಹರಿಜನರೂ ಸೇರಿ ಎಲ್ಲರಿಗೂ ಪ್ರವೇಶವಿತ್ತು. ಗಾಂಧಿ ಬಜಾಜರ ಆತಿಥ್ಯದಲ್ಲಿ ಸುಮಾರು ಒಂದು ತಿಂಗಳು ವಿರಮಿಸಿಕೊಂಡು, ಭವಿಷ್ಯದ ಆಶ್ರಮದ ಯೋಜನೆಗಳನ್ನು ಸಿದ್ಧಪಡಿಸಿದರು. ನವೆಂಬರ್ ೭ರಂದು ತಮ್ಮ ‘ಹರಿಜನ ಪ್ರವಾಸ’ ಆರಂಭಿಸಲು ನಿರ್ಧರಿಸಿದರು. ಅದು ಮೊದಲು ದ.ಭಾರತದ ರಾಜ್ಯಗಳ ಮೂಲಕ ಹಾದು ಹೋಗಿ ಉತ್ತರಕ್ಕೆ ಸಾಗುವಂತೆ ಆಯೋಜಿಸಲಾಗಿತ್ತು. ಪ್ರವಾಸ ವರ್ಧಾ ಬಳಿಯ ಸೆಲು ಎಂಬ ಹಳ್ಳಿಯಲ್ಲಿ ಹರಿಜನರಿಗೆ ದೇವಾಲಯ ಪ್ರವೇಶವನ್ನು ಉದ್ಘಾಟಿಸುವ ಮೂಲಕ ಆರಂಭಿಸಿದರು. ಅವರೊಂದಿಗೆ ಸಹಾಯಕಿಯಾಗಿ ಮೀರಾಬೆನ್ ಹೊರಟಿದ್ದರು. ಜೊತೆಗೆ ವ್ಯವಸ್ಥಾಪಕರಾಗಿ ಜಮ್ನಾಲಾಲ್ ಬಜಾಜರೂ ಇದ್ದರು. ಕಸ್ತೂರಬಾ ಅವರಿಗೆ ದೀರ್ಘ ಪ್ರವಾಸ ಕಷ್ಟವೆಂದು ಅವರನ್ನು ಅಹಮದಾಬಾದ್‌ಗೆ ಕಳಿಸಲಾಯಿತು.

ಅಹಮದಾಬಾದ್ ತಲುಪಿದ ಕಸ್ತೂರಬಾ ತಮ್ಮ ಪತಿ ಪೂರ್ಣಗೊಳಿಸಲಾಗದಿದ್ದ ರಾಸ್‌ನ ರೈತರ ಸಮಸ್ಯೆಯನ್ನು ಆಲಿಸಲು ಅಲ್ಲಿಗೆ ಹೋಗುವುದಾಗಿ ಪ್ರಕಟಿಸಿದರು. ಸರ್ಕಾರ ಮತ್ತೆ ಅವರನ್ನು ಬಂಧಿಸಿ ಈ ಹಿಂದೆ ಅವರು ಬಿಡುಗಡೆಯಾದಾಗ ಉಳಿಸಿಕೊಂಡಿದ್ದ ಸೆರೆಮನೆವಾಸ ಶಿಕ್ಷೆಯನ್ನು ಪೂರ್ಣಗೊಳಿಸಲು ಮತ್ತೆ ಯೆರವಾಡಾ ಸೆರೆಮನೆಗೆ ಕಳಿಸಿತು. ಅಲ್ಲಿ ಸೆರೆಯಲ್ಲಿದ್ದ ಮಹದೇವ ದೇಸಾಯಿಯವರನ್ನು ಪಟೇಲರಿಂದ ದೂರ ಮಾಡಲು ಬೆಳಗಾವಿ ಸೆರೆಮನೆಗೆ ವರ್ಗಾಯಿಸಲಾಗಿತ್ತು. ಅವರು ಸಬರ್ಮತಿ ಆಶ್ರಮದ ವಿಸರ್ಜನೆಯ ಸುದ್ದಿ ಕೇಳಿ ಬಹು ನೊಂದರು.

ಗಾಂಧಿ ತಮ್ಮ ಪ್ರವಾಸದ ಸಭೆಗಳಲ್ಲಿ ಅಸ್ಪೃಶ್ಯತೆಯ ಅಮಾನವೀಯತೆಯ ಬಗ್ಗೆ ಮಾತಾಡುತ್ತಿದ್ದರಲ್ಲದೆ, ತಾವು ಸ್ಥಾಪಿಸಿದ್ದ ಹರಿಜನ ನಿಧಿಗಾಗಿ ಹಣ ಮತ್ತು ಆಭರಣಗಳನ್ನು ಸಂಗ್ರಹಿಸುತ್ತಿದ್ದರು. ಪ್ರತಿದಿನ ಕನಿಷ್ಠ ಐದು-ಆರು ಸಭೆಗಳಲ್ಲಿ ಮಾತನಾಡುತ್ತಿದ್ದರು. ಈ ಸಭೆಗಳಿಗೆ ಜನ ಕಿಕ್ಕಿರಿದು ಸೇರುತ್ತಿದ್ದುದನ್ನು ಗಮನಿಸಿದವರಿಗೆ ಸರ್ಕಾರದ ಎಲ್ಲ ದಮನ ನೀತಿಗಳ ಹೊರತಾಗಿಯೂ ಗಾಂಧಿಯವರ ಜನಪ್ರಿಯತೆ ಕುಗ್ಗಿರಲಿಲ್ಲ ಎಂಬುದು ಗೊತ್ತಾಗುವಂತಿತ್ತು. ಗಾಂಧಿ ಊರುಗಳಲ್ಲಿ ತಮಗೆ ನೀಡುತ್ತಿದ್ದ ಬಿನ್ನವತ್ತಳೆ ಮತ್ತು ಅವಕ್ಕೆ ಹಾಕಲಾಗುತ್ತಿದ್ದ ಬೆಳ್ಳಿ ಮತ್ತಿತರ ಲೋಹದ ಚೌಕಟ್ಟುಗಳನ್ನೂ ಹರಾಜು ಹಾಕಿ ಹಣ ಸಂಗ್ರಹಿಸುತ್ತಿದ್ದರು. ಕೆಲವೆಡೆ ತಾವು ಸಹಿ ಹಾಕಿದ ತಮ್ಮ ಫೋಟೋಗಳನ್ನೂ ಹರಾಜು ಹಾಕಿ ಹಣ ಸಂಗ್ರಹಿಸುತ್ತಿದ್ದರು. ಇನ್ನು ಕೆಲವು ಕಡೆ ತಮಗಿಂತ ನೆಹರೂ ಜನಪ್ರಿಯರೆಂದು ಗೊತ್ತಾದರೆ ಅವರ ಫೋಟೋಗಳನ್ನೂ ಹರಾಜಿಗೆ ಕೂಗಿ ಮಾರುತ್ತಿದ್ದರು.

ಮತ್ತೆ ಕರ್ನಾಟಕದಲ್ಲಿ ಗಾಂಧಿ

ಗಾಂಧಿ, ಆಂಧ್ರಪ್ರದೇಶ ಪ್ರವಾಸ ಮುಗಿಸಿ ೧೯೩೪ರ ಜನವರಿ ೪ರಂದು ಮೈಸೂರು ಸಂಸ್ಥಾನವನ್ನು ಪ್ರವೇಶಿಸಿದರು. ಅವರು ಕಡಪಾ-ಹಿಂದೂಪುರದ ಕಡೆಯಿಂದ ಸಂಸ್ಥಾನವನ್ನು ಪ್ರವೇಶಿಸಿ ಗೌರಿಬಿದನೂರಿನಲ್ಲಿ ಮೊದಲ ಭಾಷಣ ಮಾಡಿದರು. ಅಲ್ಲಿ ಅವರಿಗೆ ಐದು ನೂರು ರೂಪಾಯಿಗಳ ನಿಧಿ ಅರ್ಪಿಸಲಾಯಿತು. ನಂತರ ದೊಡ್ಡಬಳ್ಳಾಪುರ ಮಾರ್ಗವಾಗಿ ತುಮಕೂರು ತಲುಪಿದ ಗಾಂಧಿ, ನಂತರ ಮೈಸೂರು ಕಡೆ ಹೊರಟು ಮಂಡ್ಯ-ಮದ್ದೂರು-ಚನ್ನಪಟ್ಟಣಗಳ ಮಾರ್ಗದ ಮೂಲಕ ಬೆಂಗಳೂರು ತಲುಪಿದರು. ಎಲ್ಲ ಕಡೆ ಅವರಿಗೆ ಭವ್ಯ ಸ್ವಾಗತ ನೀಡಿ, ನಿಧಿ ಮತ್ತು ಬಿನ್ನವತ್ತಳೆಗಳನ್ನು ಅರ್ಪಿಸಲಾಯಿತು. ಚನ್ನಪಟ್ಟಣದಲ್ಲಿ ಹರಿಜನ ಸೇವಕ ಸಂಘದ ಆರ್ಯಮೂರ್ತಿಯವರು, ತಮ್ಮ 'ಅಭಯ' ಕುಟೀರದ ಬಳಿ ಗಾಂಧಿ ಭವನಕ್ಕೆ ಅರ್ಧ ಎಕರೆ ಭೂಮಿ ನೀಡಿದಾಗ ಸಂತೋಷಪಟ್ಟ ಗಾಂಧಿ, ಹನ್ನೊಂದು ದಿನದ ಅವರ ಮಗುವನ್ನೆತ್ತಿಕೊಂಡು ಮುದ್ದಿಸಿ ಅದಕ್ಕೆ ಅಭಯ ಕುಮಾರ ಎಂದು ಹೆಸರಿಟ್ಟರು. ನಂತರ ಬೆಂಗಳೂರಿಗೆ ಹೊರಟ ಗಾಂಧಿ, ಅಲ್ಲಿ ಮೂರು ದಿನ ತಂಗಿದ್ದರು. ಅಲ್ಲಿ ತಮ್ಮನ್ನು ಭೇಟಿ ಮಾಡಿದ ಹರ್ಡೇಕರ್ ಮಂಜಪ್ಪ, ಕೌಜಲಗಿ ಹನುಮಂತರಾಯರು, ಮಾಲೂರು ಸುಬ್ಬರಾಯರು ಮುಂತಾದ ತಮ್ಮ ಅನುಯಾಯಿಗಳಿಂದ ಸಂಸ್ಥಾನದಲ್ಲಿನ ಹರಿಜನ ಕಲ್ಯಾಣ ಕಾರ್ಯಕ್ರಮಗಳ ವಿವರ ಕೇಳಿ ತಿಳಿದರು. ಶಿವಮೊಗ್ಗದಲ್ಲಿ ಹರಿಜನ ಬಾಲಿಕಾಶ್ರಮದ ವಿಚಾರ ಕೇಳಿ ಸಂತೋಷಪಟ್ಟರು. ಗಾಂಧಿ, ತಾವು ಭೇಟಿ ನೀಡಿದ ಎಲ್ಲ ಊರುಗಳಲ್ಲಿ ಹರಿಜನ ಕೇರಿಗಳಿಗೆ ಭೇಟಿ ನೀಡಿ, ಅವರ ಕಷ್ಟ ಸುಖ ವಿಚಾರಿಸಿ ಸಲಹೆ ನೀಡುತ್ತಿದ್ದರು. ಕೆಲವೆಡೆ ಹರಿಜನರಿಗಾಗಿ ತೆರೆದಿದ್ದ ನೂಲು, ನೇಯ್ಗೆ ಕೇಂದ್ರಗಳಿಗೂ ಭೇಟಿ ನೀಡಿ ಪರಿಸ್ಥಿತಿಯನ್ನು ಪರೀಕ್ಷಿಸಿದರು. ಜೊತೆಗೆ ಖಾದಿ ಭಂಡಾರಗಳಿಗೂ ಭೇಟಿ ಕೊಡುತ್ತಿದ್ದರು.

ಬೆಂಗಳೂರಿನ ನಂತರ ಗಾಂಧಿ, ಮಲಬಾರ್‌ಗೆ ತೆರಳಿ ಅಲ್ಲಿಂದ ಕೊಡಗಿನ ಮೂಲಕ ಸುಳ್ಯ, ಪುತ್ತೂರು ಮಾರ್ಗವಾಗಿ ಮಂಗಳೂರು-ಉಡುಪಿ-ಕುಂದಾಪುರ-ಕುಮಟಾ-

ಶಿರ್ಸಿ–ಸಿದ್ಧಾಪುರಗಳಿಗೆ ತೆರಳಿದರು. ಅಲ್ಲಿಂದ ಹಾವೇರಿ–ದಾವಣಗೆರೆ–ಹರಪನಹಳ್ಳಿ–ಹೊಸಪೇಟೆ–ಬಳ್ಳಾರಿಗೆ ಭೇಟಿ ನೀಡಿದರು. ನಂತರ ಅವರ ಪ್ರವಾಸ ಗದಗ–ಹುಬ್ಬಳ್ಳಿ–ಧಾರವಾಡ–ಬೆಳಗಾವಿ–ಹುಕ್ಕೇರಿ–ಚಿಕ್ಕೋಡಿ ಮಾರ್ಗವಾಗಿ ಬಿಜಾಪುರ ಮತ್ತು ಇಳಕಲ್‌ವರೆಗೂ ವಿಸ್ತರಿಸಿತು. ಎಲ್ಲ ಕಡೆಗಳಂತೆ ಈ ಪ್ರವಾಸದಲ್ಲೂ ಗಾಂಧಿ ಅಸ್ಪೃಶ್ಯತೆಯ ವಿರುದ್ಧ ಜಾಗೃತಿ ಮೂಡಿಸುವ ಭಾಷಣ ಮಾಡಿದರು. ಹಣ–ಆಭರಣ ಸಂಗ್ರಹಿಸಿದರು, ಹರಿಜನ ಸೇವಕ ಸಂಘಗಳ ಸದಸ್ಯರೊಂದಿಗೆ ಸಮಾಲೋಚಿಸಿದರು ಮತ್ತು ಹರಿಜನ ಕೇರಿಗಳಿಗೆ ಭೇಟಿ ನೀಡಿದರು. ಈ ಪ್ರವಾಸದ ಎರಡು ಮೂರು ಮುಖ್ಯ ಘಟನೆಗಳನ್ನು ಇಲ್ಲಿ ನಿರೂಪಿಸಿದರೆ ಗಾಂಧಿಯವರ ಈ ಯಾತ್ರೆಯ ಸ್ಥೂಲ ಸ್ವರೂಪವಾದರೂ ಓದುಗರಿಗೆ ಗೊತ್ತಾಗಬಹುದು.

ಮೂರು ಮುಖ್ಯ ಘಟನೆಗಳು

ಕೊಡಗಿನ ಗುಂಡುಕಟ್ಟೆಯಲ್ಲಿ ಗಾಂಧಿ, ಒಬ್ಬರ ಮನೆಯಲ್ಲಿ ತಂಗಿದ್ದಾಗ ಪಕ್ಕದ ಮನೆಯ ಒಬ್ಬ ಹೆಣ್ಣುಮಗಳು ಗಾಂಧಿ ತಮ್ಮ ಮನೆಗೆ ಬರಲು ಊರ ಹಿರಿಯರು ಒಪ್ಪಿಲ್ಲ ಎಂದು ಮುನಿಸಿಕೊಂಡು ಉಪವಾಸ ಆರಂಭಿಸಿದ್ದಳು. ಇದನ್ನು ತಿಳಿದ ಗಾಂಧಿ, ಆ ತರುಣಿಯನ್ನು ಕರೆಸಿ ಕಿತ್ತಳೆ ಹಣ್ಣು ಕೊಟ್ಟು ಅವಳ ಉಪವಾಸ ಮುರಿದು, ತಾವು ಅವಳ ಮನೆಗೆ ಏಕೆ ಬರಬೇಕೆಂದು ಕೇಳಿದರು. ಆಕೆ ನಿಮಗೆ ನನ್ನ ಒಡವೆ ಕೊಡಬೇಕು ಎಂದಳು. ಗಾಂಧಿ ಹಿಂದು ಮುಂದು ನೋಡಿ, 'ಕೊಟ್ಟ ಒಡವೆ ಮತ್ತೆ ವಾಪಸ್ ಕೇಳಬಾರದು. ನಿಮ್ಮ ಮನೆಯವರು ಇದಕ್ಕೆ ಒಪ್ಪಿದ್ದಾರೆಯೋ?' ಎಂದು ಕೇಳಿದರು. ಆಕೆಯ ಗಂಡ ಮುಂದೆ ಬಂದು ಒಪ್ಪಿಗೆಯ ತಲೆಯಲ್ಲಾಡಿಸಿದರು. ಗಾಂಧಿ ಅವರ ಮನೆಗೆ ಹೋದರು. ಒಡವೆಗಳನ್ನು ಸ್ವೀಕರಿಸಿದರು. ಆ ಒಡವೆಗಳನ್ನು ಕೊಟ್ಟ ಹೆಣ್ಣು ಮಗಳು ಮತ್ತಾರೂ ಅಲ್ಲ, ಮುಂದೆ ಕನ್ನಡದ ಖ್ಯಾತ ಕಥೆಗಾರ್ತಿಯಾದ ಕೊಡಗಿನ ಗೌರಮ್ಮ!

ಶಿರ್ಸಿಯಲ್ಲಿ ಗಾಂಧಿಯವರಿಗೆ ಪುರಜನ ನೀಡಿದ ಬಿನ್ನವತ್ತಳೆಯಲ್ಲಿ, ಆ ಊರಿನ ಸುಪ್ರಸಿದ್ಧ ಮಾರಿಕಾಂಬ ದೇವಾಲಯ ಹರಿಜನರಿಗೆ ಪ್ರವೇಶ ನೀಡಿದೆ ಎಂದು ಹೆಮ್ಮೆಯಿಂದ ಹೇಳಿಕೊಂಡಿತ್ತು. ಆದರೆ ಆ ದೇವಾಲಯದಲ್ಲಿ ಕೋಣನ ಬಲಿ ಕೊಡಲಾಗುತ್ತದೆ ಎಂಬ ಸುದ್ದಿಯನ್ನು ಗಾಂಧಿಯವರಿಗೆ ಯಾರೋ ಮುಟ್ಟಿಸಿದ್ದರು. ಅವರು ಬಿನ್ನವತ್ತಳೆಗೆ ಉತ್ತರ ನೀಡುತ್ತಾ, ದೇವಸ್ಥಾನದೊಳಕ್ಕೆ ಹರಿಜನ ಪ್ರವೇಶದ ಸಂಗತಿಯ ಬಗ್ಗೆ ಸಂತೋಷ ವ್ಯಕ್ತಪಡಿಸಿ, ಪ್ರಾಣಿ ಬಲಿ ಪದ್ಧತಿ ಇರುವ ಜಾಗ ಎಂದೂ ದೇವರ ಸ್ಥಾನವಾಗದು, ಪವಿತ್ರ ಎನ್ನಿಸಿಕೊಳ್ಳದು ಎಂದರಲ್ಲದೆ ಅದನ್ನು ಕೂಡಲೇ ನಿಲ್ಲಿಸಲು ಮನವಿ ಮಾಡಿದರು. ನಂತರದ ವರ್ಷದಿಂದ ಅಲ್ಲಿ ಕೋಣನ ಬಲಿ ನಿಂತಿತು.

ಸಿದ್ಧಾಪುರದಲ್ಲಿ ನಡೆದ ಘಟನೆ ಇದು. ಆ ಊರಿನಲ್ಲಿ ನಿಲೇಕಣಿ ವೆಂಕಟರಾಯರ ಸುಬ್ರಹ್ಮಣ್ಯ ದೇವಸ್ಥಾನವನ್ನು ಹರಿಜನರ ಪ್ರವೇಶಕ್ಕಾಗಿ ಉದ್ಘಾಟಿಸಿದ ಗಾಂಧೀಜಿ, ಕಾರವಾರದಿಂದ ತಮ್ಮ ಪರಿವಾರದೊಂದಿಗೆ ಬರುತ್ತಿದ್ದ ಹೆಣ್ಣುಮಗಳೊಬ್ಬಳನ್ನು ಇಲ್ಲಿ ನೋಡಿದಾಗ ಆಕೆ ತಲೆ ಬೋಳಿಸಿಕೊಂಡಿದ್ದನ್ನು ಕಂಡು ಆಶ್ಚರ್ಯಪಟ್ಟರು. ವಿಚಾರಿಸಿದಾಗ ಆ ಮಹಿಳೆ ವಿಧವೆಯಾಗಿದ್ದು, ಗಾಂಧಿಯವರ ಅಸಹಕಾರ ಸತ್ಯಾಗ್ರಹದಲ್ಲಿ ಭಾಗವಹಿಸಿ ಸೆರೆಮನೆ ಸೇರಿ ಈಗ

ಬಿಡುಗಡೆಯಾಗಿದ್ದಳು. ಸೆರೆಮನೆಯಲ್ಲಿದ್ದಾಗ ಕೂದಲು ಬೆಳೆಸಿಕೊಂಡಿದ್ದ ಮಹಾದೇವಿ ಎಂಬ ಆ ಮಹಿಳೆ ತನ್ನ ತವರೂರು ಸಿದ್ಧಾಪುರಕ್ಕೆ ಬಂದಾಗ ತನ್ನ ತಂದೆ ತಾಯಿಗಳ ಆದೇಶದ ಮೇರೆಗೆ ತಲೆ ಬೋಳಿಸಿಕೊಳ್ಳಬೇಕಾಯಿತು. ವಿಷಯ ತಿಳಿದ ಗಾಂಧಿ ಆಕೆಯ ತಂದೆ ಯಾರೆಂದು ವಿಚಾರಿಸಿದಾಗ ಆತ ಗಾಂಧಿ ಸ್ವಾಗತ ಸಮಿತಿಯ ಸದಸ್ಯರಲ್ಲೊಬ್ಬರು ಎಂದು ಗೊತ್ತಾಯಿತು. ಗಾಂಧಿ, ಇದು ಕಂದಾಚಾರ, ಕ್ರೌರ್ಯ ಎಂದೆಲ್ಲ ಆ ಮನುಷ್ಯನಿಗೆ ತಿಳಿ ಹೇಳಿದರೂ ಆತ 'ನಮ್ಮ ಸಮಾಜದಲ್ಲಿ ಅದು ನಡೆಯುವುದಿಲ್ಲ' ಎಂದು ಬಿಟ್ಟ. ಗಾಂಧಿ ವರ್ಧಾಶ್ರಮಕ್ಕೆ ಹೋಗಲು ಸಿದ್ಧವೇ ಎಂದು ಆ ಮಹಿಳೆಯನ್ನು ಕೇಳಿದರು. ಆಕೆ ಒಪ್ಪಿದಾಗ, ಆಕೆಯ ತಂದೆಯ ಅನುಮತಿ ಕೇಳಿದರು. ಜೊತೆಗೆ 'ಆಕೆ ಅಲ್ಲಿ ಕೂದಲು ಬೆಳೆಸಿಕೊಂಡರೆ ಮತ್ತು ನೀವು ಮತ್ತೆ ಕರೆದರೆ ಬರದಿರಬಹುದು' ಎಂಬ ಷರತ್ತುಗಳಿಗೂ ಒಪ್ಪಿಗೆ ಪಡೆದರು. ನಂತರ ಬಜಾಜರೊಂದಿಗೆ ಸಮಾಲೋಚಿಸಿ ವರ್ಧಾದಲ್ಲಿ ಆಕೆಯ ವಸತಿಗೆ ಏರ್ಪಾಡು ಮಾಡಿದರು.

ಗಾಂಧಿ ಮೇಲೆ ಹಲ್ಲೆ–ಕೊಲೆ ಪ್ರಯತ್ನಗಳು

ಈ ಯಾತ್ರೆಯಲ್ಲಿ ಅವರು ದಕ್ಷಿಣದಿಂದ ಉತ್ತರಕ್ಕೆ, ಪೂರ್ವದಿಂದ ಪಶ್ಚಿಮಕ್ಕೆ ದೇಶದ ಉದ್ದಗಲಕ್ಕೂ ಪ್ರಯಾಣ ಮಾಡಿದರು. ಅವರ ಪ್ರಯಾಣವೆಲ್ಲ ಮೂರನೇ ದರ್ಜೆ ರೈಲು ಡಬ್ಬಿಯಲ್ಲಿ, ರೈಲು ಮಾರ್ಗವಿಲ್ಲದೆಡೆ ಸ್ಥಳೀಯ ಆತಿಥ್ಯ ವಹಿಸಿಕೊಂಡವರು ವ್ಯವಸ್ಥೆ ಮಾಡುವ ರಸ್ತೆ ಸಾರಿಗೆಯಲ್ಲಿ, ಕೆಲವೆಡೆ ಕಾಲ್ನಡಿಗೆಯಲ್ಲಿ. ಈ ಪ್ರವಾಸದಲ್ಲಿ ಅವರು ಹರಿಜನರು ಮತ್ತು ಸವರ್ಣೀಯರ ನಡುವೆ ಬಾವಿ ನೀರು, ಉಡುಪಿನ ಮಾದರಿ, ಗುಡಿ ಪ್ರವೇಶ ಇತ್ಯಾದಿ ವಿಷಯಗಳ ಬಗ್ಗೆ ಇದ್ದ ವ್ಯಾಜ್ಯಗಳಿಗೆ ತಮ್ಮ ಪರಿಹಾರಗಳನ್ನು ಸೂಚಿಸಿದರು. ಕೆಲವೆಡೆ ಅವನ್ನು ಒಪ್ಪಿಕೊಳ್ಳಲಾಯಿತು. ಕೆಲವೆಡೆ ಅವಕ್ಕೆ ವಿರೋಧವೂ ವ್ಯಕ್ತವಾಯಿತು.

ಹೀಗಾಗಿ ಅವರ ಈ ಪ್ರವಾಸ ಒಂದು ಮಟ್ಟದಲ್ಲಿ ಜನಸಾಮಾನ್ಯರ ಸಾಮಾಜಿಕ ಪ್ರಜ್ಞೆಯನ್ನು ಜಾಗೃತಗೊಳಿಸಿತು ಎಂದು ಹೇಳಬಹುದಾದರೂ, ಅವರ ಪ್ರವಾಸ ಸುಗಮವಾಗಿತ್ತೆಂದೇನೂ ಹೇಳಲಾಗದು. ಅಂಬೇಡ್ಕರ್ ಅನುಯಾಯಿಗಳು ಕೆಲವೆಡೆ ಅವರನ್ನು ಪ್ರಶ್ನಿಸಿ, ಕೊನೆಗೆ ಹಾರ ಹಾಕಿ ಕಳಿಸಿದರೆ, ಸಂಪ್ರದಾಯವಾದಿ ಹಿಂದೂ ಸಂಸ್ಥೆಗಳು ಮತ್ತು ಗುಂಪುಗಳು ಅವರ ಸಭೆಗಳನ್ನು ಕೆಡಿಸುವ, ಅವರ ಮೇಲೆ ಹಲ್ಲೆ ಮಾಡುವ, ಕೊನೆಗೆ ಕೊಲೆ ಮಾಡುವ ಪ್ರಯತ್ನಗಳನ್ನೂ ನಡೆಸಿದವು. ಸ್ವಾಮಿ ಲಾಲ್‌ನಾಥ್ ಎಂಬ ಧರ್ಮಗುರುವೊಬ್ಬ ತನ್ನ ಅನುಯಾಯಿಗಳೊಂದಿಗೆ ಗಾಂಧಿಯವರ ಸಭೆಗಳಲ್ಲಿ ನುಸುಳಿ ಕುಚೇಷ್ಟೆಯ ಪ್ರಶ್ನೆಗಳನ್ನು ಕೇಳುತ್ತಾ ಸಭೆಯ ಶಾಂತಿ ಕೆಡಿಸಲು ಪ್ರಯತ್ನಿಸಿದರೆ ವಾರಾಣಸಿಯಲ್ಲಿ ಅವರ ಚಿತ್ರಕ್ಕೆ ಬೆಂಕಿ ಇಡಲಾಯಿತು. ಪುರಿಯಲ್ಲಿ ಅವರಿಗೆ ಪುರೋಹಿತರು ಪ್ರಾಣ ಬೆದರಿಕೆ ಒಡ್ಡಿದರು. ಬಿಹಾರದಲ್ಲಿ ಅವರ ವಾಹನದ ಕಿಟಕಿ ಗಾಜುಗಳನ್ನು ಒಡೆದು ಅವರ ಮೇಲೆ ಹಲ್ಲೆಗೆ ಪ್ರಯತ್ನಿಸಲಾಯಿತು. ಕರಾಚಿಯಲ್ಲಿ ಒಬ್ಬ, ಗಾಂಧಿಯನ್ನು ಕೊಲ್ಲಲು ಕೊಡಲಿ ಹಿಡಿದು ನುಗ್ಗಿದ್ದ. ಅವನನ್ನು ಪೊಲೀಸರು ಬಂಧಿಸಿದರು. ಪೂನಾದಲ್ಲಿ ಗಾಂಧಿ ಪ್ರಯಾಣಿಸುತ್ತಿರುವ ಕಾರು ಎಂದು ಭಾವಿಸಿ ಅದರ ಮೇಲೆ ಬಾಂಬ್ ಎಸೆಯಲಾಯಿತು.

ಹರಿಜನ ನಿಧಿ ವಿತರಣೆ

ಈ ಪ್ರವಾಸದಲ್ಲಿ ಹರಿಜನ ನಿಧಿಗಾಗಿ ಸಂಗ್ರಹವಾದ ಒಟ್ಟು ಹಣ ಸುಮಾರು ಎರಡು ಕೋಟಿ ರೂಪಾಯಿಗಳು. ಹಣ ಸಂಗ್ರಹವಾಗುತ್ತಿದ್ದಂತೆ ಆಯಾ ವಾರದ ಸಂಗ್ರಹಣೆಯ ಮತ್ತು ಖರ್ಚಿನ ಪ್ರತಿ ವಿವರವನ್ನೂ ಗಾಂಧಿ 'ಹರಿಜನ'ದಲ್ಲಿ ಪ್ರಕಟಿಸುತ್ತಿದ್ದರು. ಯಾತ್ರೆಯ ಮುಕ್ತಾಯದ ನಂತರ ೧೯೩೪ರ ಮಾರ್ಚ್ ೨ರ ಸಂಚಿಕೆಯಲ್ಲಿ ಅವರು, ಈ ನಿಧಿಯ ವಿತರಣೆಗಾಗಿ ನಿಯಮ ಮತ್ತು ಮಾರ್ಗದರ್ಶಿ ಸೂತ್ರಗಳನ್ನು ಪ್ರಕಟಿಸಿದ್ದರು. ಇದರ ಎರಡು ಮುಖ್ಯಾಂಶಗಳೆಂದರೆ ಈ ಹಣ ಹರಿಜನ ಕ್ಷೇಮಾಭ್ಯುದಯ ಚಟುವಟಿಕೆಗಳಿಗಾಗಿಯೇ ಖರ್ಚಾಗಬೇಕು ಮತ್ತು ಸಂಗ್ರಹವಾದ ಹಣದ ಶೇ.೮೦ ರಷ್ಟು ಅದು ಸಂಗ್ರಹವಾದ ನೆರೆಹೊರೆಯಲ್ಲೇ ಖರ್ಚಾಗಬೇಕು. ಈ ಹಣದಿಂದ ದೇಶದ ಹಲವೆಡೆ ಹರಿಜನ ಕೇರಿಗಳಲ್ಲಿ ಶಾಲೆಗಳು ಮತ್ತು ವಿದ್ಯಾರ್ಥಿ ನಿಲಯಗಳು ಮತ್ತು ಕೈಕಸುಬು ಕೇಂದ್ರಗಳು ಆರಂಭವಾಗಲು ಸಾಧ್ಯವಾಯಿತು. ಒಂದಿಷ್ಟು ಹಣವನ್ನು ಹರಿಜನ ಸೇವಕ ಸಂಘಕ್ಕೂ ನೀಡಲಾಯಿತು.

ಈ ಯಾತ್ರೆಯ ಸಮಯದಲ್ಲಿ ಗಾಂಧಿ, ತಮ್ಮ ಕುಟುಂಬವನ್ನು ಮರೆತಿರಲಿಲ್ಲ. ಪ್ರತಿವಾರ ಕಸ್ತೂರಬಾಗೆ ಪತ್ರ ಬರೆದು ತಮ್ಮ ಯೋಗಕ್ಷೇಮವನ್ನು ತಿಳಿಸುತ್ತಿದ್ದರಲ್ಲದೆ, ಬಾ ಮತ್ತು ಮಕ್ಕಳು–ಸೊಸೆಯಂದಿರು ಮತ್ತು ಮೊಮ್ಮಕ್ಕಳ ಯೋಗಕ್ಷೇಮದ ಸುದ್ದಿಗಳನ್ನು ಪಡೆಯುತ್ತಿದ್ದರು. ಗಾಂಧಿ ಪತ್ರವ್ಯವಹಾರದಲ್ಲಿ ತಿಳಿಸಿದ್ದ ಬಹುಮುಖ್ಯವಾದ ಒಂದು ಅಂಶವೆಂದರೆ, ಇನ್ನು ಮುಂದೆ ಸತ್ಯಾಗ್ರಹದಲ್ಲಿ ತಾವೊಬ್ಬರೇ ಭಾಗವಹಿಸುವುದಾಗಿಯೂ, ಕುಟುಂಬದ ಇನ್ನಾವ ಸದಸ್ಯರನ್ನೂ ಭಾಗಿಯಾಗಿಸುವುದಿಲ್ಲವೆಂದೂ ಹೇಳಿದ್ದುದು. ಈ ಅವಧಿ ಗಾಂಧಿ ಕುಟುಂಬಕ್ಕೆ ಬಹು ನೋವು–ಸಂಕಷ್ಟಗಳ ಅವಧಿಯಾಗಿತ್ತು.

ಬಿಹಾರದ ಭೂಕಂಪ: ಪಾಪದ ಫಲ ಎಂದ ಗಾಂಧಿ

ಗಾಂಧಿ ಹರಿಜನ ಪ್ರವಾಸದಲ್ಲಿದ್ದಾಗಲೇ, ೧೯೩೪ರ ಜನವರಿ ಮೂರನೇ ವಾರದಲ್ಲಿ ಬಿಹಾರದ ಹಲವು ಕಡೆ ಭೀಕರ ಭೂಕಂಪ ಸಂಭವಿಸಿ ಅಪಾರ ಪ್ರಾಣ ಮತ್ತು ಆಸ್ತಿ ಹಾನಿಯುಂಟಾಯಿತು. ಆಗ ತಮಿಳ್ನಾಡಿನ ತಿರುನಲ್ವೇಲಿಯಲ್ಲಿದ್ದ ಗಾಂಧಿ, ಬಿಹಾರದ ಭೂಕಂಪ ನಾವು ಆಚರಿಸುತ್ತಿರುವ ಅಸ್ಪೃಶ್ಯತೆಯ ಪಾಪದ ಫಲ ಎಂದು ಹೇಳಿದರು. ಇದು ದೇಶಾದ್ಯಂತ ಬಿಸಿ ಬಿಸಿ ಚರ್ಚೆಗೆ ಕಾರಣವಾಯಿತು. ಗಾಂಧಿಯವರ ಹೇಳಿಕೆಯನ್ನು ಮೌಢ್ಯಾಚಾರದ ಮಾತು, ಅವೈಜ್ಞಾನಿಕ ಎಂದು ಟೀಕಿಸಲಾಯಿತು. ಇದರ ನಾಯಕತ್ವವನ್ನು ವಹಿಸಿದವರು ಗುರುವರ್ಯ ರಬೀಂದ್ರನಾಥ ಟ್ಯಾಗೋರರು. ಅವರು 'ನಮ್ಮನ್ನು ಭಯ ಮತ್ತು ಕ್ಲೈಬ್ಯಗಳಿಂದ ಬಿಡುಗಡೆ ಮಾಡಿ ನಮ್ಮ ಕೃತಜ್ಞತೆಗೆ ಪಾತ್ರವಾಗಿರುವ ಮಹಾತ್ಮರು, ತಮ್ಮನ್ನು ನಂಬಿರುವ ಜನತೆಯ ತಲೆಗೆ ಇಂತಹ ವಿವೇಚನೆ ಇಲ್ಲದ ಅವೈಜ್ಞಾನಿಕ ವಿಚಾರಗಳನ್ನು ತುಂಬಹೊರಟಿರುವುದು ಆಘಾತಕರ' ಎಂಬ ಸಾರ್ವಜನಿಕ ಹೇಳಿಕೆಯ ಮೂಲಕ ಗಾಂಧಿಯವರ ಮಾತುಗಳನ್ನು ಟೀಕಿಸಿದರು. ಆದರೆ ಗಾಂಧಿ, ತೂತ್ತುಕುಡಿಯಲ್ಲಿ ನಡೆದ ತಮ್ಮ ಮುಂದಿನ ಸಭೆಯಲ್ಲಿ ತಾವು ಮೂಢರಾಗಿಯೇ ಇರಬಯಸಿದ್ದು, ನಮ್ಮ ಪಾಪಗಳಿಗೆ ಪ್ರತಿಫಲ ಅನುಭವಿಸುವ ನಿಯಮವನ್ನು ಅರಿಯಬಯಸುತ್ತೇನೆ ಎಂದು ಉತ್ತರಿಸಿದರು. ಅವರ ಪ್ರಕಾರ ಜಗತ್ತಿನ

ಭೌತವಸ್ತು ಮತ್ತು ಚೈತನ್ಯಗಳ ನಡುವೆ ಅವಿನಾ ಸಂಬಂಧವಿದ್ದು, ಆ ಸಮೀಕರಣದಂತೆ ಜಗತ್ತಿನಲ್ಲಿ ಘಟನೆಗಳು ಸಂಭವಿಸುತ್ತವೆ.

ಆದರೆ ಗಾಂಧಿ ಇದನ್ನು ಕರ್ಮಫಲವೆಂದು ಹೇಳಿ ಸುಮ್ಮನಾಗಲಿಲ್ಲ. ನಂತರದ ಪ್ರತಿ ಊರಿನಲ್ಲಿಯೂ ಹರಿಜನ ನಿಧಿಯ ಜೊತೆಗೇ ಬಿಹಾರ ಭೂಕಂಪ ಸಂತ್ರಸ್ತರ ನಿಧಿಗೂ ಹಣ ಕೂಡಿಸತೊಡಗಿದರು. ಹೇಗಾದರೂ ಬಿಹಾರ ಅವರ ಮೂಲ ಕರ್ಮಭೂಮಿಯಲ್ಲವೇ? ಭಾರತಕ್ಕೆ ಬಂದೊಡನೆ ಅವರು ಪ್ರಥಮ ಸತ್ಯಾಗ್ರಹ ನಡೆಸಿ ಯಶಸ್ವಿಯಾಗಿದ್ದು ಬಿಹಾರದ ಚಂಪಾರಣ್‌ನಲ್ಲೇ ಅಲ್ಲವೇ? ಮಾರ್ಚ್ ಮೂರನೇ ವಾರದಲ್ಲಿ ಬಿಹಾರಕ್ಕೆ ಬಂದ ಗಾಂಧಿ, ಅಲ್ಲಿ ಆಗಿದ್ದ ವಿನಾಶವನ್ನು ಕಂಡು ಗಾಬರಿಯಾದರು. ಆಗತಾನೇ ಸೆರೆಮನೆಯಿಂದ ಬಿಡುಗಡೆಯಾಗಿ ಬಂದು, ಭೂಕಂಪ ಸಂತ್ರಸ್ತರ ಪುನರ್ವಸತಿ ಕಾರ್ಯಗಳ ಉಸ್ತುವಾರಿ ವಹಿಸಿದ್ದ ರಾಜೇಂದ್ರ ಪ್ರಸಾದರ ಜೊತೆ ಕೈಜೋಡಿಸಿದರು. ತಾವು ಇದಕ್ಕಾಗಿ ಸಂಗ್ರಹಿಸಿ ತಂದಿದ್ದ ಹಣವನ್ನು ಅವರಿಗೆ ಹಸ್ತಾಂತರಿಸಿದರು.

ಅಸಹಕಾರ ಸತ್ಯಾಗ್ರಹ ನಿಲ್ಲಿಸೋಣ: ಗಾಂಧಿ ಸಲಹೆ

ಗಾಂಧಿ ಇಲ್ಲಿ ತಮ್ಮ ಭಾಷಣಗಳಲ್ಲಿ ಮತ್ತೆ ಕರ್ಮಫಲದ ಮಾತನ್ನು ಆಡಿದರು. ಸಂಪ್ರದಾಯವಾದಿಗಳು ಅವರ ವಿರುದ್ಧ ಕಪ್ಪು ಬಟ್ಟೆ ಪ್ರದರ್ಶನ ನಡೆಸಿದರು. ಇದಕ್ಕಿಂತ ಮುಖ್ಯವಾದ ಸಂಗತಿ ಎಂದರೆ ಅಲ್ಲೆಲ್ಲ ಗಾಂಧಿ ಜನತೆಗೆ ಸರ್ಕಾರದೊಡನೆ ಸಹಕರಿಸಲು ಕರೆಕೊಟ್ಟರು. ಇದೇ ಆಲೋಚನಾ ಕ್ರಮ ಮುಂದುವರೆದು ಸಹರ್ಸಾದಲ್ಲಿನ ಸಾರ್ವಜನಿಕ ಸಭೆಯಲ್ಲಿ ಗಾಂಧಿ ಹೀಗೆ ಹೇಳಿದರು: ನಾನು ಬಹುಕಾಲ ನನ್ನೊಳಗೇ ಆಲೋಚಿಸಿ ಹೇಳುತ್ತಿರುವೆ. ಅಸಹಕಾರ ಸತ್ಯಾಗ್ರಹ ಬೆಳಕು ಕಾಣದ ಒಂದು ತುದಿಗೆ ಬಂದು ಮುಟ್ಟಿದೆ. ಇದಕ್ಕೆ ನಾನೇ ಕಾರಣ. ಏಕೆಂದರೆ ಇಡೀ ಜವಾಬ್ದಾರಿಯನ್ನು ನನ್ನ ಮೇಲೆ ಹೊರಿಸಲಾಗಿತ್ತು. ಈ ಜವಾಬ್ದಾರಿ ಹೊತ್ತು ಕಾಂಗ್ರೆಸ್ಸಿಗರಿಗೆ ನಾನು ನೀಡಬಯಸುವ ಸಲಹೆ ಎಂದರೆ ನಾಗರಿಕ ಸತ್ಯಾಗ್ರಹವನ್ನು ನಿಲ್ಲಿಸಬೇಕು. ನನ್ನ ಮಾತನ್ನು ನಂಬಿ. ಸ್ವಾತಂತ್ರ್ಯದೆಡೆಗೆ ನಮ್ಮ ಮುಂದಿನ ಹೆಜ್ಜೆಗೆ ಇದೇ ಅತ್ಯುತ್ತಮ ನಾಂದಿ'.

ಈ ಹೇಳಿಕೆಯ ಬೆನ್ನಲ್ಲೇ ಗಾಂಧಿ ಸತ್ಯಾಗ್ರಹಿಗಳು ಹೋರಾಟದ ಮನಃಸ್ಥಿತಿಯಿಂದ ಹೊರಬಂದು ಉದ್ಯೋಗಗಳಿಗೆ ಮರಳಲು ಅಥವಾ ಹೊಸ ಉದ್ಯೋಗಗಳನ್ನು ಕಂಡುಕೊಳ್ಳಲು ಸಲಹೆ ಮಾಡಿದರು. ಸಬರ್ಮತಿ ಆಶ್ರಮದ ಅಳಿದುಳಿದ ನಿವಾಸಿಗಳಿಗೂ ಇದನ್ನೇ ಹೇಳಿದರು. ಆದರೆ ಹೋರಾಟದ ಕಾಲ ಬರಲಿದೆ. ಆಗ ಬನ್ನಿರಿ ಎಂದೂ ಸೂಚಿಸಿದರು.

ಗಾಂಧಿಯ ಈ ದಿಢೀರ್ ಮಾರ್ಗ ಬದಲಾವಣೆ ಕಾಂಗ್ರೆಸ್ ವಲಯಗಳಲ್ಲಿ ಅಚ್ಚರಿ ಹುಟ್ಟಿಸಿತ್ತು. ಮುಖ್ಯ ನಾಯಕರಾದ ನೆಹರೂ, ಪಟೇಲ್, ರಾಜಾಜಿ, ಅಬ್ದುಲ್ ಗಫಾರ್ ಖಾನ್ ಮುಂತಾದವರು ಇನ್ನೂ ಸೆರೆಮನೆಯಲ್ಲಿದ್ದರು. ಆದರೆ ಗಾಂಧಿಯವರ ಈ ಹೊಸ ಧೋರಣೆಯ ಹಿಂದೆ ಒಂದು ನಿಶ್ಚಿತ ಯೋಜನೆ ಇತ್ತು. ಅದರ ಸುಳಿವನ್ನು ಅವರು ಈ ಹಿಂದೆಯೇ ಕೇಂದ್ರ ಶಾಸನ ಸಭೆಯಲ್ಲಿ ಅಸ್ಪೃಶ್ಯತೆಗೆ ಸಂಬಂಧಿಸಿದ ಎರಡು

ಮಸೂದೆಗಳು ಮಂಡಿತವಾಗುವಂತೆ ಮಾಡಿದ ರಾಜಕಾರಣದ ಮೂಲಕ ನೀಡಿದ್ದರು. ಇದು ಯೆರವಾಡಾ ಸೆರೆಮನೆಯಲ್ಲಿ ತಾವು ಮತ್ತು ಪಟೇಲರು ಜೊತೆಯಾಗಿ ಆಲೋಚಿಸಿದ ಧೋರಣೆಯಾಗಿತ್ತು. ಪ್ರಾಂತ್ಯ ಮತ್ತು ಕೇಂದ್ರ ಶಾಸನ ಸಭೆಗಳಲ್ಲಿ ಅಧಿಕಾರ ಹಿಡಿದು ಹೋರಾಟದಲ್ಲಿ ಭಾಗವಹಿಸಿ ಕಂಗಾಲಾಗಿರುವ ಜನರಿಗೆ ನ್ಯಾಯ ಒದಗಿಸುವುದು. ಬಾರ್ಡೋಲಿ, ಸಂಯುಕ್ತ ಸಂಸ್ಥಾನ ಮತ್ತು ಬಂಗಾಳಗಳಲ್ಲಿ ನಡೆದ ರೈತ ಸತ್ಯಾಗ್ರಹಗಳಲ್ಲಿ ಮನೆಮಠ ಕಳೆದುಕೊಂಡ ಅಸಂಖ್ಯಾತ ರೈತರಿಗೆ ಅವರ ಜೀವನೋಪಾಯದ ಆಸ್ತಿಗಳು ಮತ್ತೆ ದೊರಕಿಸಿಕೊಡಲಾಗದ ಪಾಪಪ್ರಜ್ಞೆ ಅವರನ್ನು ಬೆಂಬಿಡದೆ ಕಾಡುತ್ತಿತ್ತು.

ಇದಕ್ಕೆ ಪೂರಕವಾಗಿ ಬ್ರಿಟಿಷ್ ಸಾಮ್ರಾಜ್ಯ ಸರ್ಕಾರ, ಭಾರತದ ರಾಜಕೀಯ ಸುಧಾರಣೆಗಳನ್ನು ಕುರಿತಂತೆ ಒಂದು ಶ್ವೇತಪತ್ರ ಹೊರಡಿಸಿ ಶಾಸನ ಸಭೆಗಳಿಗೆ ವ್ಯಾಪಕ ಅಧಿಕಾರಗಳನ್ನು ನೀಡಿತ್ತು. ಸ್ವರಾಜ್ಯ ಪಕ್ಷದ ಕಾಂಗ್ರೆಸ್ಸಿಗರು ಈಗಾಗಲೇ ಚುನಾವಣೆಗೆ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದ್ದರು. ಆದರೆ ಕಾಂಗ್ರೆಸ್ ಸಂಸ್ಥೆಯ ಮೇಲೆ ಸರ್ಕಾರ ಹೇರಿದ್ದ ನಿಷೇಧ ತೆರವುಗೊಳ್ಳದೆ ಕಾಂಗ್ರೆಸ್ಸಿಗರು ಚುನಾವಣೆಗಳಿಗೆ ಸ್ಪರ್ಧಿಸುವಂತಿರಲಿಲ್ಲ. ಕಾಂಗ್ರೆಸ್ ಅಸಹಕಾರ ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳದೆ ಅದರ ಮೇಲಿನ ನಿಷೇಧವನ್ನು ಸರ್ಕಾರ ಹಿಂತೆಗೆದುಕೊಳ್ಳುವುದಿಲ್ಲ. ಆದರೆ ಗಾಂಧಿ ೧೯೩೪ರ ಆಗಸ್ಟ್ ೩ರವರೆಗೆ ತಾವು ಯಾವುದೇ ರಾಜಕಾರಣದಲ್ಲಿ ಭಾಗವಹಿಸುವುದಿಲ್ಲ ಎಂಬ ಪ್ರತಿಬಂಧವನ್ನು ತಮ್ಮ ಮೇಲೆ ತಾವೇ ಹೇರಿಕೊಂಡಿದ್ದರು. ಹಾಗಾಗಿ ಈ ಸಂಬಂಧದ ರಾಜಕೀಯ ಚಲನೆಗಳು ಆ ದಿನಾಂಕದವರೆಗೆ ಕಾಯಲೇಬೇಕಿತ್ತು.

■

೭೮

ಗಾಂಧಿ ಮನದ ತಳಮಳ: ಕಾಂಗ್ರೆಸ್‌ನಿಂದ ನಿವೃತ್ತಿ

ಕಾಂಗ್ರೆಸ್ ಸಮಾಜವಾದಿ ಪಕ್ಷದ ಉದಯ

ಅಸಹಕಾರ ಸತ್ಯಾಗ್ರಹವನ್ನು ಸ್ಥಗಿತಗೊಳಿಸಬೇಕೆಂಬ ಗಾಂಧಿಯವರ ಮಾತು ಕಾಂಗ್ರೆಸ್‌ನ ಕೆಲವು ವಲಯಗಳಲ್ಲಿ ಖುಷಿಯನ್ನೂ, ಕೆಲವು ವಲಯಗಳಲ್ಲಿ ಅಚ್ಚರಿಯನ್ನೂ ಉಂಟು ಮಾಡಿದಂತೆ ಇನ್ನು ಕೆಲವು ವಲಯಗಳಲ್ಲಿ ತೀವ್ರ ಅಸಮಾಧಾನವನ್ನೂ ಉಂಟು ಮಾಡಿತ್ತು; ವಿಶೇಷವಾಗಿ, ಕಾಂಗ್ರೆಸ್ಸಿನ ಯುವ ವಲಯದಲ್ಲಿ. ಕರಾಚಿ ಕಾಂಗ್ರೆಸ್ ಅಧಿವೇಶನದಲ್ಲಿ ಜವಾಹರಲಾಲ್ ನೆಹರೂ ನೇತೃತ್ವದಲ್ಲಿ ಪಕ್ಷ ಸಮಾಜವಾದಿ ಎಂದು ಕರೆಯಬಹುದಾದ ಕಾರ್ಯಸೂಚಿಯನ್ನು ಅಂಗೀಕರಿಸುವಲ್ಲಿ ಕಾರ್ಯನಿರ್ವಹಿಸಿದ್ದವರು ಕಾಶಿ ವಿದ್ಯಾಪೀಠದ ಇಬ್ಬರು ಅಧ್ಯಾಪಕರಾದ ಆಚಾರ್ಯ ನರೇಂದ್ರ ದೇವ ಮತ್ತು ಸಂಪೂರ್ಣಾನಂದರು. ಇವರ ಮಾರ್ಗದರ್ಶನದ ಒಂದು ಎಡಪಂಥೀಯ ಗುಂಪು, ಈಗ ಗಾಂಧಿಯವರ ಮಾರ್ಗ ಬದಲಾವಣೆಯ ವಿರುದ್ಧ ತನ್ನ ಅಸಮಾಧಾನವನ್ನು ಬಹಿರಂಗವಾಗಿಯೇ ವ್ಯಕ್ತಪಡಿಸತೊಡಗಿತ್ತು. ಅದರ ನೇತೃತ್ವ ವಹಿಸಿದ್ದವರು, ಅಮೇರಿಕಾದಲ್ಲಿ ವಿದ್ಯಾಭ್ಯಾಸಕ್ಕಾಗಿ ಹೋಗಿ ಪ್ರಖರ ಮಾರ್ಕ್ಸ್‌ವಾದಿಯಾಗಿ ಹಿಂತಿರುಗಿದ್ದ ಬಿಹಾರದ ತರುಣ ಜಯಪ್ರಕಾಶ ನಾರಾಯಣರು. ಅವರಾಗ ಅಸಹಕಾರ ಸತ್ಯಾಗ್ರಹದಲ್ಲಿ ಭಾಗವಹಿಸಿ ನಾಸಿಕ್ ಸೆರೆಮನೆಯಲ್ಲಿದ್ದರು. ಅವರೊಂದಿಗೆ ಇದ್ದ ಸಹಮನಸ್ಕ ತರುಣರೆಂದರೆ, ಮಿನೂ ಮಸಾನಿ, ಅಚ್ಯುತ ಪಟವರ್ಧನ್, ಅಶೋಕ ಮೆಹ್ತಾ, ಎನ್.ಜಿ. ಗೋರೆ, ಯೂಸುಫ್ ಮೆಹ್ರೋಲಿ ಮುಂತಾದವರು. ಅವರೆಲ್ಲ ಸೆರೆಮನೆಯಲ್ಲಿ ದಿನವೂ ಪರಸ್ಪರ ಸಮಾಲೋಚಿಸಿ, ಕಾಂಗ್ರೆಸ್‌ಗೆ ಒಂದು ಎಡಪಂಥೀಯ ದಿಕ್ಕು ನಿರ್ದೇಶಿಸಲು ಕಾಂಗ್ರೆಸ್‌ನೊಳಗೇ ಒಂದು ಉಪ ಪಕ್ಷವನ್ನು ಸಂಘಟಿಸಲು ನಿರ್ಧರಿಸಿದ್ದರು.

ಬಹುತೇಕ ಇವರೆಲ್ಲರೂ ಮಾರ್ಕ್ಸ್‌ವಾದಿಗಳಾಗಿದ್ದರೂ ಕಮ್ಯೂನಿಸ್ಟ್ ಪಕ್ಷ ಸೇರುವ ಒಲವು ತೋರಿರಲಿಲ್ಲ. ಅದಕ್ಕೆ ಮುಖ್ಯ ಕಾರಣ, ಆಗ ಭಾರತದಾದ್ಯಂತ ಹರಡಿದ್ದ ದಟ್ಟ ಗಾಂಧಿ ಪ್ರಭಾವ ಮತ್ತು ಕಮ್ಯೂನಿಸ್ಟ್ ಪಕ್ಷ ಗಾಂಧಿಯವರನ್ನು ಬಂಡವಾಳಶಾಹಿ-ಜಮೀನ್ದಾರಿ ಶಕ್ತಿಗಳ ಪ್ರತಿನಿಧಿಯೆಂದು ಟೀಕಿಸುತ್ತಾ, ಬಹಿರಂಗ ರಾಜಕಾರಣ ಮಾಡದೆ ಭೂಗತ ಚಟುವಟಿಕೆಗಳಲ್ಲೇ ತೊಡಗಿದ್ದುದು. ಇದರ ಜೊತೆಗೇ ಇದ್ದ ಇನ್ನೊಂದು ಕಾರಣವೆಂದರೆ, ಈ ತರುಣರ ಹಿರಿಯರೆಲ್ಲ ಗಾಂಧಿ ಭಕ್ತರಾಗಿದ್ದುದು. ಉದಾಹರಣೆಗೆ ಜಯಪ್ರಕಾಶ ನಾರಾಯಣ್(ಜೆಪಿ) ಅವರ ಮಾವ ಬ್ರಜ್‌ಕಿಶೋರ್ ಪ್ರಸಾದ್, ರಾಜೇಂದ್ರ

ಪ್ರಸಾದರ ಹತ್ತಿರದ ಬಂಧುವಾಗಿ ಬಿಹಾರ ಕಾಂಗ್ರೆಸ್‌ನ ಅಧ್ಯಕ್ಷರೂ ಆಗಿ ಕೆಲಸ ಮಾಡಿದ್ದರು. ಗಾಂಧಿಯವರ ಚಂಪಾರಣ್ ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಹಾಗಾಗಿಯೇ ಅವರು, ತಮ್ಮ ಮಗಳು ಪ್ರಭಾವತಿಯವರನ್ನು ಜೆಪಿಗೆ ಮದುವೆ ಮಾಡಿಕೊಟ್ಟ ನಂತರ ಜೆಪಿ, ಉನ್ನತ ಶಿಕ್ಷಣಕ್ಕಾಗಿ ಅಮೆರಿಕಾಗೆ ಹೊರಟಾಗ, ಅವರು ತಮ್ಮ ಮಗಳನ್ನು ಗಾಂಧಿಯವರ ಆಶ್ರಮದಲ್ಲಿ ಸ್ವಯಂಸೇವಕಿಯಾಗಿರಲು ಕಳಿಸಿದ್ದರು. ಆದರೆ ಜೆಪಿ ೧೯೩೦ರ ಹೊತ್ತಿಗೆ ಅಮೆರಿಕಾದಿಂದ ವಾಪಸ್ ಬಂದು, ಗಾಂಧಿ ಆಶ್ರಮದಲ್ಲಿದ್ದ ತಮ್ಮ ಪತ್ನಿಯನ್ನು ನೋಡಹೋಗುವ ಹೊತ್ತಿಗೆ ಪ್ರಭಾವತಿ ಗಾಂಧಿಯವರಿಂದ ಸ್ವಯಂಇಚ್ಛೆಯಿಂದ ದೀಕ್ಷೆ ಪಡೆದ ಬ್ರಹ್ಮಚಾರಿಯಾಗಿದ್ದರು! ಹಾಗಾಗಿಯೇ ಯಾರಾದರೂ ಜೆಪಿ ತೀವ್ರವಾದಿಯಾಗುತ್ತಿದ್ದಾರೆ ಎಂದು ಗಾಂಧಿ ಬಳಿ ದೂರು ಸಲ್ಲಿಸಿದರೆ ಅವರು 'ಹೆದರಬೇಡಿ. ಅವನ ಹೆಂಡತಿ ಒತ್ತೆಯಾಳಾಗಿ ನನ್ನ ಬಳಿ ಇದ್ದಾಳೆ!' ಎನ್ನುತ್ತಿದ್ದರು. ಇನ್ನು ಈ ಗುಂಪನ್ನು ಸೇರಿಕೊಂಡ ಮತ್ತೋರ್ವ ಪ್ರಮುಖರಾಗಿದ್ದ ರಾಮಮನೋಹರ ಲೋಹಿಯಾ ಅವರ ತಂದೆ ಹೀರಾಲಾಲ್, ಗಾಂಧಿಯವರ ಆಪ್ತ ಅನುಯಾಯಿಗಳಲ್ಲೊಬ್ಬರಾಗಿ, ಖಾದಿ ಮತ್ತು ಹಿಂದಿ ಪ್ರಚಾರ ಕಾರ್ಯಗಳಲ್ಲಿ ತೊಡಗಿಕೊಂಡಿದ್ದು, ಮಗನನ್ನು ಬಾಲ್ಯದಿಂದಲೇ ಗಾಂಧಿಯವರಿಗೆ ಪರಿಚಯಿಸುತ್ತಾ ಬಂದಿದ್ದರು.

ಗಾಂಧಿ ಮತ್ತು ಸಮಾಜವಾದಿಗಳ ಸಂವಾದ : ಕಾಂಗ್ರೆಸ್‌ನಲ್ಲಿ ತಾತ್ವಿಕ ಒಡಕು

ಜೆಪಿ ಈಗಾಗಲೇ ನೆಹರೂ ಅವರ ಆಪ್ತ ಗೆಳೆಯರಾಗಿ, ಗಾಂಧಿಯವರೊಂದಿಗೆ ಅವರ ಸತ್ಯಾಗ್ರಹ ಮಾರ್ಗದ ಬಗ್ಗೆ ಅಸಮಾಧಾನಗೊಳ್ಳುತ್ತಾ ಬಿಸಿಬಿಸಿ ಚರ್ಚೆ ಮಾಡುತ್ತಲೇ ಗಾಂಧಿಯವರ ಪ್ರೀತಿಗೆ ಪಾತ್ರರಾಗಿ ಅವರ ಆಪ್ತ ಶಿಷ್ಯರಲ್ಲೊಬ್ಬರಾಗಿ ಬೆಳೆದಿದ್ದರು. ಜೆಪಿ ಸೆರೆಮನೆಯಿಂದ ಬಿಡುಗಡೆಯಾದ ನಂತರ ೧೯೩೪ರ ಮೇನಲ್ಲಿ ಪಾಟ್ನಾದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಸಂದರ್ಭದಲ್ಲೇ ಸಮಾಜವಾದಿ ಒಲವಿನ ಗೆಳೆಯರನ್ನೆಲ್ಲ ಸೇರಿಸಿ ಹಿರಿಯರಾದ ಆಚಾರ್ಯ ನರೇಂದ್ರ ದೇವ ಅವರ ಅಧ್ಯಕ್ಷತೆಯಲ್ಲಿ 'ಕಾಂಗ್ರೆಸ್ ಸಮಾಜವಾದಿ ಪಕ್ಷ'ದ ಅಸ್ತಿವಾರ ಹಾಕಿದ್ದರು. ಸೆರೆಮನೆಯ ಗುಂಪಿನ ಸಮಾಜವಾದಿ ಗೆಳೆಯರೊಂದಿಗೆ ಈಗ ಸೇರಿಕೊಂಡವರಲ್ಲಿ ಪ್ರಮುಖರಾದವರೆಂದರೆ, ಜರ್ಮನಿಯಿಂದ ಆಗತಾನೇ ವಿದ್ಯಾಭ್ಯಾಸ ಮುಗಿಸಿ ಬಂದಿದ್ದ ರಾಮಮನೋಹರ ಲೋಹಿಯಾ, ಕರ್ನಾಟಕದ ದಿಟ್ಟಹೆಣ್ಣು ಕಮಲಾದೇವಿ, ಮುಂಬೈನ ಅರುಣಾ ಅಸಫ್ ಅಲಿ, ಪುರುಷೋತ್ತಂ ತ್ರಿಕಂ ದಾಸ್, ಚಾರ್ಲ್ಸ್ ಮೆಸ್ಕರಾನ್ಸ್, ಮುಂತಾದವರು. ಈ ಪಕ್ಷ ವರ್ಗಹೋರಾಟ, ಖಾಸಗಿ ಆಸ್ತಿಯ ಮುಟ್ಟುಗೋಲು, ಭಾರಿ ಕೈಗಾರಿಕೆಗಳ ರಾಷ್ಟ್ರೀಕರಣ, ರೈತರು ಮತ್ತು ಅಸ್ಪೃಶ್ಯರೂ ಸೇರಿದಂತೆ ದುಡಿಯುವ ವರ್ಗಗಳ ಸರ್ವಾಧಿಕಾರ ಇತ್ಯಾದಿಗಳನ್ನು ತನ್ನ ಗುರಿಯೆಂದು ಘೋಷಣೆ ಮಾಡಿತ್ತು. ಇದಕ್ಕೆ ಹಿಂದೆ ನಡೆದ ಕಾಂಗ್ರೆಸ್ ಅಧಿವೇಶನ, ನಾಗರಿಕ ಅಸಹಕಾರ ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳಬೇಕೆಂಬ ಗಾಂಧಿಯವರ ಸಲಹೆಗೆ ಅನುಮೋದನೆ ನೀಡಿದ್ದ ಹಿನ್ನೆಲೆಯಲ್ಲಿ, ಹೋರಾಟದ ಹೊಸ ಕಾವು ಏರತೊಡಗಿದ ಸಂದರ್ಭವೂ ಇದಾಗಿತ್ತು.

ಕರಾಚಿ ಸಮ್ಮೇಳನದ ಘೋಷಣೆಯ ಗಾಯದ ಮೇಲೆ ಉಪ್ಪು ಸವರುವ

ಪ್ರಯತ್ನದಂತಿದ್ದ ಕಾಂಗ್ರೆಸ್ ಸಮಾಜವಾದಿಗಳ ಈ ಕಾರ್ಯಸೂಚಿ, ಕಾಂಗ್ರೆಸ್ ಪಕ್ಷದ ಹಿರಿಯ ಸದಸ್ಯರಾದ ಪಟೇಲ್, ರಾಜೇಂದ್ರ ಪ್ರಸಾದ್, ರಾಜಾಜಿ ಮುಂತಾದವರನ್ನು ವಿಚಲಿತಗೊಳಿಸಿತ್ತು. ಆದರೆ ಗಾಂಧೀಜಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಉದಯವನ್ನು ಸ್ವಾಗತಿಸಿಯೇ ಮಾತನಾಡಿದ್ದರು. ಅವರು ಈ ಗುಂಪಿನ ನಾಯಕರೆಂದು ನೆಹರೂ ಅವರನ್ನು ಗುರುತಿಸಿ, ಅವರನ್ನೂ ಸೇರಿಸಿ 'ಇದೊಂದು ಉತ್ತಮ ಚಾರಿತ್ರ್ಯದ ದಿಟ್ಟ ಜನರ' ಗುಂಪು ಎಂದು ಶ್ಲಾಘಿಸಿದ್ದರು. ಅವರು ಮಿನೂ ಮಸಾನಿಯವರು ತಮ್ಮನ್ನು ಭೇಟಿ ಮಾಡಿ ನೀಡಿದ್ದ ಕಾಂಗ್ರೆಸ್ ಸಮಾಜವಾದಿ ಪಕ್ಷದ ಪ್ರಣಾಳಿಕೆಯನ್ನು ವಿವರವಾಗಿ ಅಭ್ಯಸಿಸಿದ್ದರು. ಅದು ಭಾರತದ ಸಂದರ್ಭವನ್ನು ಅರ್ಥ ಮಾಡಿಕೊಳ್ಳದೆ ರೂಪಿಸಲ್ಪಟ್ಟ ಕಾರ್ಯಸೂಚಿ ಎಂದು ಟೀಕಿಸಿದ್ದರು, ಬಂಡವಾಳ ಮತ್ತು ಕಾರ್ಮಿಕ ಶಕ್ತಿಯ ನಡುವೆ ಮಾರ್ಕ್ಸ್‌ವಾದ ಹೇಳುವ ವೈರುಧ್ಯವೇನೂ ಇಲ್ಲವೆಂದೂ, ಅವರೆಡೂ ಪರಸ್ಪರ ಸಹಕರಿಸಿ ಸಮಾಜದ ಒಳಿತನ್ನು ಸಾಧಿಸಬಹುದೆಂದು ಅಭಿಪ್ರಾಯಪಟ್ಟಿದ್ದರು. ಜೊತೆಗೆ ಉತ್ಪಾದನಾ ಸಾಧನಗಳ ಮೇಲೆ ಸರ್ಕಾರದ ನಿಯಂತ್ರಣ ಮತ್ತು ಬಲಾತ್ಕಾರದ ಪರಿವರ್ತನಾ ವಿಧಾನಗಳ ಬಗ್ಗೆ ಅವರ ವಿರೋಧವಿತ್ತು. ಆದರೆ ಅವರು ಸಮಾಜವಾದಿಗಳ ಸಾಮಾಜಿಕ ಬದ್ಧತೆ, ಕೆಚ್ಚು ಮತ್ತು ಚಾರಿತ್ರ್ಯಗಳ ಬಗ್ಗೆ ನಂಬಿಕೆ ಇಟ್ಟು, ಮುಂದೆ ಕೂಡ ಅವರೊಂದಿಗೆ ಸಂವಾದಗಳಲ್ಲಿ ತೊಡಗಿ, ಅವರನ್ನು ವೈಚಾರಿಕವಾಗಿ ಮಾಗಿಸಿದ್ದನ್ನೂ ನಾವು ಕಾಣಬಹುದು. ಇದರ ಫಲವಾಗಿಯೇ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸಂಘಟನೆ ಮತ್ತು ಚಿಂತನೆಗಳ ಪ್ರತೀಕದಂತಿದ್ದ ಜೆಪಿ ಮತ್ತು ಲೋಹಿಯಾ ಕಾಲಕ್ರಮೇಣ ಮಾರ್ಕ್ಸ್‌ವಾದ ತ್ಯಜಿಸಿ ಗಾಂಧಿ ವಿಚಾರಗಳತ್ತ ತಿರುಗಿ ದೊಡ್ಡ ಜನನಾಯಕರೆನಿಸಿಕೊಂಡದ್ದು.

ರಷ್ಯಾದ ಕ್ರಾಂತಿಯಿಂದ ಉತ್ತೇಜಿತರಾಗಿದ್ದ ಜೆಪಿಗೆ ಗಾಂಧಿ ಹೇಳಿದ್ದು: 'ನನ್ನ ಕ್ರಾಂತಿ ನಿನ್ನ ರಷ್ಯಾದ ಕ್ರಾಂತಿಗಿಂತ ದೊಡ್ಡದು ಮತ್ತು ಆಳವಾದದ್ದು. ಮನ ಗೆಲ್ಲುವ ಮೂಲಕ ನಾನು ಬಂಡವಾಳಿಗರ ಹಣವನ್ನು ಮಾತ್ರವಲ್ಲ, ಅವರ ವ್ಯವಹಾರ ಚಾತುರ್ಯ, ಅನುಭವ ಸಂಪತ್ತು ಮತ್ತು ವಾಣಿಜ್ಯ ಜ್ಞಾನ ಮತ್ತು ವಿಶೇಷ ಪರಿಣತಿಯನ್ನೆಲ್ಲ ಪಡೆಯುತ್ತೇನೆ. ನನ್ನ ಅಹಿಂಸಾ ತತ್ವದಡಿಯಲ್ಲಿ ಉನ್ನತ ಆದರ್ಶಕ್ಕಾಗಿ ನಮ್ಮ ವಿರೋಧಿಯಿಂದ ಆತ್ಮಾರ್ಪಣೆಯನ್ನೂ ನಿರೀಕ್ಷಿಸಬಹುದು. ಅದಕ್ಕಾಗಿ ಅವನನ್ನು ಆಗ್ರಹಿಸುವ ಶಕ್ತಿಯೂ ನಮಗೆ ಬರುತ್ತದೆ'. ಇನ್ನು ಪಕ್ಷದ ಮುಖವಾಣಿಯಾಗಿದ್ದ 'ಕಾಂಗ್ರೆಸ್ ಸೋಶಲಿಸ್ಟ್' ಪತ್ರಿಕೆಯ ಸಂಪಾದಕರಾಗಿದ್ದ ಲೋಹಿಯಾ ಅವರಂತಹವರು ಗಾಂಧಿಯವರೊಂದಿಗೆ ಆರಂಭದಲ್ಲಿ ಅವರ ಖಾದಿ-ಗ್ರಾಮದ್ಯೋಗದ ಮೂಲಕ ಸ್ವಾತಂತ್ರ್ಯ ಎಂಬ ಅವರ ಕಲ್ಪನೆಯನ್ನು ಗೇಲಿ ಮಾಡುತ್ತಲೇ ತಮ್ಮ ವಾಗ್ವಾದಗಳನ್ನು ಆರಂಭಿಸಿ, ಅದರ ಪರಿಣಾಮವಾಗಿ ಬಹುಬೇಗನೇ 'ತಮ್ಮನ್ನು ಗಾಂಧಿ ಸಮಾಜವಾದಿ' ಎಂದು ಗುರುತಿಸಿಕೊಳ್ಳತೊಡಗಿದ್ದರು. ಹೇಗೂ ಗಾಂಧಿ ಇವರನ್ನೆಲ್ಲ 'ಕಲಿತ ಸಮಾಜವಾದಿ'ಗಳೆಂದು ಕರೆದು ತಮ್ಮನ್ನು 'ಹುಟ್ಟು ಸಮಾಜವಾದಿ' ಎಂದು ಗುರುತಿಸಿಕೊಳ್ಳುತ್ತಿದ್ದರಲ್ಲ! ಅದೇನೇ ಇದ್ದರೂ, ಕಾಂಗ್ರೆಸ್ ಪಕ್ಷದಲ್ಲಿ ಈ ಬೆಳವಣಿಗೆ ಈವರೆಗೆ ಕಾಣದ ತಾತ್ವಿಕ ಒಡಕೊಂದನ್ನು ಉಂಟು ಮಾಡಿತ್ತು. ಬಹುಶಃ ಮುಂದೆ ಪಕ್ಷದಲ್ಲಿ ಎದ್ದು ಕಾಣತೊಡಗಿದ ನೆಹರೂ ಗುಂಪು ಮತ್ತು ಪಟೇಲ್ ಗುಂಪು ಎಂಬ

ವಿಭಾಗೀಕರಣಕ್ಕೂ ಕಾರಣವಾಯಿತೆನ್ನಬಹುದು.

ಕಾಂಗ್ರೆಸ್‌ನಿಂದ ನಿವೃತ್ತಿ: ಗಾಂಧಿ ಘೋಷಣೆ

೧೯೩೪ ರ ಆಗಸ್ಟ್‌ನಲ್ಲಿ ಖಾನ್ ಅಬ್ದುಲ್ ಗಫಾರ್ ಖಾನ್‌ರು ಸೆರೆಮನೆಯಿಂದ ಬಿಡುಗಡೆಯಾದರು. ಅವರು ನೇರ ವರ್ಧಾಗೆ ಬಂದು ಗಾಂಧಿಯವರ ಜೊತೆ ಸ್ವಲ್ಪ ದಿನಗಳು ಇದ್ದರು. ಆಗ ಗಾಂಧಿ ಅವರನ್ನು, ಬರುವ ಅಕ್ಟೋಬರ್ ೨೦ರಂದು ಬಾಂಬೆಯಲ್ಲಿ ನಡೆಯಲಿರುವ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸುವಂತೆ ಕೋರಿದರು. ಆದರೆ ಅಖಿಲ ಭಾರತ ಜವಾಬ್ದಾರಿಯನ್ನು ಹೊರಲೊಲ್ಲದ ಖಾನ್ ಸಾಹೇಬರು ಗಾಂಧಿಯವರ ಈ ಕೋರಿಕೆಯನ್ನು ಒಪ್ಪಲಿಲ್ಲ. ನಂತರ ರಾಜಾಜಿಯವರನ್ನು ಪರಿಗಣಿಸಿ ಅವರಿಗೆ ಹಿಂದಿ ಬರುವುದಿಲ್ಲ ಎಂಬ ಕಾರಣದ ಮೇಲೆ, ಭೂಕಂಪ ಪರಿಹಾರ ಕಾರ್ಯದಲ್ಲಿ ತೊಡಗಿದ್ದರೂ ರಾಜೇಂದ್ರ ಪ್ರಸಾದರನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತು. ಈ ಪ್ರಕ್ರಿಯೆ ಬಹುಶಃ ಗಾಂಧಿಯವರಿಗೆ ಕಿರಿಕಿರಿ ಎನ್ನಿಸಿಯೋ ಏನೋ, ಈ ಸಂದರ್ಭದಲ್ಲಿ ನೆಹರೂ ತಮ್ಮೊಡನಿರಬೇಕೆಂದು ಅನಿಸಿತ್ತು. ಅದನ್ನು ಏಕೋ ಪಟೇಲರಿಗೂ ಒಂದು ಪತ್ರದ ಮೂಲಕ ತಿಳಿಸಿ, ನೆಹರೂ ಅವರನ್ನು ಭವಿಷ್ಯದ ನಾಯಕ ಎಂದು ಗುರುತಿಸಿದ್ದರು. ಇದು ಪಟೇಲರ ಮೇಲೆ ಏನು ಪ್ರಭಾವ ಬೀರಿತೋ ತಿಳಿಯದು. ಆದರೆ ಇದಾದ ಕೆಲವೇ ದಿನಗಳಲ್ಲಿ ಗಾಂಧಿ, ಕಾಂಗ್ರೆಸ್ ಪಕ್ಷದಿಂದ ನಿವೃತ್ತಿ ಹೊಂದಬಯಸುವುದಾಗಿ ಘೋಷಿಸಿದರು.

ಇದು ಕಾಂಗ್ರೆಸ್‌ಗೆ ಅನಿರೀಕ್ಷಿತ ಆಘಾತವಾಗಿತ್ತು. ಈ ಸಂಬಂಧವಾಗಿ ಅವರು ಪಟೇಲರಿಗೆ ಬರೆದ ಪತ್ರದಲ್ಲಿ ಕಾಂಗ್ರೆಸ್‌ನೊಳಗಿನ ವಿಭಿನ್ನ ಗುಂಪುಗಳ ಮೇಲೆ ತಮಗೆ ಯಜಮಾನಿಕೆ ಮಾಡಲಾಗುವುದಿಲ್ಲವೆಂದೂ, ಅದೂ ಒಂದು ರೀತಿಯ ಹಿಂಸೆಯೆಂದೂ ತಿಳಿಸಿದ್ದರು. ಆದರೆ ಅವರು ಕಾಂಗ್ರೆಸ್‌ನಿಂದ ಸಂಬಂಧ ಕಡಿದುಕೊಳ್ಳಲು ಇದೊಂದೇ ಕಾರಣವಾಗಿರಲಿಲ್ಲ. ಬಹುಶಃ ಅವರಿಗೆ ಈವರೆಗೆ ಕಾಂಗ್ರೆಸ್ ಮೂಲಕ ಮಾಡಿದ ರಾಜಕಾರಣದಿಂದ ದಣಿವಾಗಿತ್ತು; ತಾನು ಸೋತಿದ್ದೇನೆ ಎಂದೂ ಅನ್ನಿಸಿರಬಹುದು. ಜೊತೆಗೆ ಅವರ ಮೇಲೆ ಇತ್ತೀಚೆಗೆ ನಡೆದಿದ್ದ ಕೊಲೆಯ ಪ್ರಯತ್ನಗಳೂ ಅವರನ್ನು ತಾವು ಜನರಿಗೇ ಬೇಡವಾದ ವ್ಯಕ್ತಿಯೇನೋ ಎಂಬ ಸಂದೇಹವನ್ನೂ ಉಂಟು ಮಾಡಿದ್ದರೂ ಆಶ್ಚರ್ಯವಿಲ್ಲ. ಹೇಗಿದ್ದರೂ ಅವರಿಗೆ ಭಾರತದ ಸ್ವಾತಂತ್ರ್ಯ ಎನ್ನುವುದು ಒಂದು ರಾಜಕೀಯ ವಿಮೋಚನೆಯ ಬೋಳು ಸಂಗತಿಯಾಗಿರಲಿಲ್ಲ. ಅದು ಅವರ 'ಹಿಂದ್ ಸ್ವರಾಜ್'ನಲ್ಲಿ ನಿರೂಪಿಸಿದ್ದಂತೆ ಆತ್ಯಂತಿಕವಾಗಿ ಮನಸ್ಸಿನಲ್ಲಿ ನಿರ್ಮಾಣವಾಗಬೇಕಿದ್ದ 'ಸ್ವರಾಜ್ಯ'ವಾಗಿತ್ತು. ಅದು ಪ್ರತಿಯೊಬ್ಬನ ಆಧ್ಯಾತ್ಮಿಕ ಬಿಡುಗಡೆಯಾಗಿತ್ತು. ಒಂದು ಬದುಕಿನ ಕ್ರಮ ಮತ್ತು ಪದ್ಧತಿಗಳನ್ನು ಪುನರಾವಿಷ್ಕರಿಸಿಕೊಳ್ಳುವ ಹೋರಾಟವೂ ಆಗಿತ್ತು. ಅವರ ಎಂಟು ತಿಂಗಳ ಕಾಲದ 'ಹರಿಜನ ಯಾತ್ರೆ'ಯಿಂದ, ಈಗ ತಾವು ಮಾಡಬೇಕಾದ ಕೆಲಸ ಬೇರೆ ಇದೆ; ಬಹಳಷ್ಟಿದೆ ಎನ್ನಿಸಿರಬೇಕು. ಅಸ್ಪೃಶ್ಯತಾ ನಿವಾರಣೆ, ಖಾದಿ ಮತ್ತು ಗ್ರಾಮೋದ್ಯೋಗ ಸ್ಥಾಪನೆ, ಹಿಂದೂ–ಮುಸ್ಲಿಂ ಐಕ್ಯತೆ ಇತ್ಯಾದಿ.

ಗಾಂಧಿ ಬಾಂಬೆ ಕಾಂಗ್ರೆಸ್ ಅಧಿವೇಶನಕ್ಕೆ ಬಂದರು. ಸಮಾಜವಾದಿ ಕಾಂಗ್ರೆಸ್ಸಿಗರು

ಅಸಹಕಾರ ಸತ್ಯಾಗ್ರಹವನ್ನು ಹಿಂತೆಗೆದುಕೊಂಡದ್ದಕ್ಕಾಗಿ ಗಾಂಧಿಯವರನ್ನು ಟೀಕಿಸಿದರು. ಗಾಂಧಿ ಅವರಿಗೆ, ಹೋರಾಟ ಎಂದರೆ ಸೆರೆಮನೆಗೆ ಹೋಗುವುದಷ್ಟೇ ಅಲ್ಲ. ಹಳ್ಳಿಗಳಿಗೆ ಹೋಗಿ ಹರಿಜನರ, ಬಡವರ, ಸ್ತ್ರೀ ಸಮೂಹದ ಸಬಲೀಕರಣಕ್ಕಾಗಿ ಕೆಲಸ ಮಾಡುವುದು. ಅದೂ ಸ್ವಾತಂತ್ರ್ಯ ಹೋರಾಟವೇ ಎಂದು ಸೂಚಿಸಿದರು. ಅಲ್ಲದೆ, ಈಗ ಹಿಂತೆಗೆದುಕೊಂಡಿರುವುದು ಸಾಮೂಹಿಕ ಸತ್ಯಾಗ್ರಹವನ್ನು ಮಾತ್ರ. ವೈಯಕ್ತಿಕ ಸತ್ಯಾಗ್ರಹ ಮಾಡಬಯಸುವವರು ಮಾಡಬಹುದು ಎಂದರು. ಅಧಿವೇಶನ ಗಾಂಧಿಯವರ ನಾಯಕತ್ವದಲ್ಲಿ ಪೂರ್ಣ ವಿಶ್ವಾಸ ವ್ಯಕ್ತಪಡಿಸಿ, ಕಾಂಗ್ರೆಸ್‌ನಿಂದ ದೂರವಾಗದಂತೆ ಅವರನ್ನು ಕೋರುವ ನಿರ್ಣಯವನ್ನು ಅಂಗೀಕರಿಸಿತು. ತಮ್ಮ ಹರಿಜನ ಪ್ರವಾಸದ ಅನುಭವ ಮತ್ತು ಆಲೋಚನೆಗಳನ್ನು ಅಧಿವೇಶನದ ಪ್ರತಿನಿಧಿಗಳಿಗೆ ವಿವರಿಸಿದ ಗಾಂಧಿ, ನಿರ್ಣಯವನ್ನು ವಾಪಸ್ ತೆಗೆದುಕೊಳ್ಳುವಂತೆ ಮನವಿ ಮಾಡಿದರು. ಜೊತೆಗೆ, ಸಂಸ್ಥೆಗೆ ಅವಶ್ಯಕತೆ ಬಿದ್ದಾಗ ಖಂಡಿತ ವಾಪಸ್ ಬರುವುದಾಗಿಯೂ ಭರವಸೆ ನೀಡಿದರು.

ನಂತರ ತಮ್ಮ ನಿವೃತ್ತಿಯ ಬಗ್ಗೆ ಎದ್ದ ಊಹಾಪೋಹಗಳನ್ನು ನಿರಾಕರಿಸಿ ಒಂದು ಪತ್ರಿಕಾ ಹೇಳಿಕೆ ನೀಡಿದ ಗಾಂಧಿ, ತಾವು ಬೇಸರದಿಂದ ಪಕ್ಷವನ್ನು ಬಿಡುತ್ತಿಲ್ಲವೆಂದೂ, ತಮ್ಮ ನಿವೃತ್ತಿಯ ಮೂಲಕ ಅದು ಸ್ವತಂತ್ರವಾಗಿ ಕೆಲಸ ಮಾಡತೊಡಗಿ ಇನ್ನಷ್ಟು ಬಲಶಾಲಿಯಾಗುವುದೆಂದೂ ತಿಳಿಸಿದರಲ್ಲದೆ, ಸ್ವಾತಂತ್ರ್ಯ ಬಂದಾಗ ಆ ಯಶಸ್ಸಿನ ದೊಡ್ಡ ಪಾಲು ಕಾಂಗ್ರೆಸ್ಸಿನದೇ ಆಗಿರುವುದನ್ನು ಇತಿಹಾಸ ಗುರುತಿಸುವುದೆಂದು ತಿಳಿಸಿದರು.

ನಂತರದಲ್ಲೇ ನವೆಂಬರ್‌ನಲ್ಲಿ ಕೇಂದ್ರ ಶಾಸನಸಭೆಗೆ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿತು. ಅಸ್ಪೃಶ್ಯರಿಗೆ ಮೀಸಲಿದ್ದ ಕ್ಷೇತ್ರಗಳ ಬಹುತೇಕ ಕಡೆಯೂ ಈ ಪಕ್ಷದ ಅಭ್ಯರ್ಥಿಗಳೇ ಗೆದ್ದಿದ್ದರು. ರಾಜ ಮಹಾರಾಜರ ಪ್ರತಿನಿಧಿಗಳು, ಜಮೀನ್ದಾರರು, ಯೂರೋಪಿಯನ್ನರು, ಅಧಿಕಾರಿಗಳು ಇತ್ಯಾದಿ ಗುಂಪುಗಳಿಂದ ಆಯ್ದ ಪ್ರತಿನಿಧಿಗಳ ಸಮೂಹ ಎರಡನೆಯ ಸ್ಥಾನದಲ್ಲಿದ್ದರೆ ಮುಸ್ಲಿಂ ಲೀಗ್ ಮೂರನೇ ಸ್ಥಾನ ಪಡೆದು ಜಿನ್ನಾರಿಗೆ ನಿರಾಸೆ ಮೂಡಿಸಿತ್ತು. ಆದರೆ ಇದಿನ್ನೂ ತಾನೇ ಆಯ್ದ ನಾಮಕಾವಸ್ತೆ ಸಮಾಲೋಚನೆಯ ಮಂಡಳಿ ಮೂಲಕ ವೈಸ್‌ರಾಯ್ ಅಧಿಕಾರ ನಡೆಸುವ ವ್ಯವಸ್ಥೆಯಾಗಿತ್ತಷ್ಟೆ.

ಅಖಿಲ ಭಾರತ ಗ್ರಾಮ ಕೈಗಾರಿಕೆಗಳ ಸಂಘದ ಸ್ಥಾಪನೆ

ಕಾಂಗ್ರೆಸ್‌ನ ಕಾರ್ಯ ಚಟುವಟಿಕೆಗಳಿಂದ ದೂರವಾದ ನಂತರ ಗಾಂಧಿ ಮಾಡಿದ ಮೊದಲ ಕೆಲಸವೆಂದರೆ ೧೯೩೪ರ ಡಿಸೆಂಬರ್ ೧೪ರಂದು ಅಖಿಲ ಭಾರತ ಗ್ರಾಮ ಕೈಗಾರಿಕೆಗಳ ಸಂಘವನ್ನು ಸ್ಥಾಪಿಸಿದ್ದು. ತಮ್ಮ ಇತ್ತೀಚಿನ ಹಳ್ಳಿಗಾಡಿನ ಯಾತ್ರೆಯ ಸಂದರ್ಭದಲ್ಲಿ ಅವರು ಭಾರತದ ಹಳ್ಳಿಗಳ ಬಡತನವನ್ನು ನೋಡಿ ನೊಂದಿದ್ದರು. ಎಲ್ಲಕ್ಕೂ ಯಂತ್ರಗಳು ಬರಲಾರಂಭಿಸಿ ಹಳ್ಳಿಗಳ ಕೈಕಸುಬುಗಳು ನಾಶವಾಗಿ ಅವರಲ್ಲಿ ಬಂಡವಾಳವಿಲ್ಲದೆ, ಆದಾಯ ಸೃಷ್ಟಿಸುವ ಯಾವ ಸಾಹಸವನ್ನೂ ಮಾಡಲಾಗದ ದಿಕ್ಕೆಟ್ಟಿರುವ ದಾರುಣ ಸ್ಥಿತಿಯನ್ನು ಕಂಡರು. ಆಗ ಅವರ ಮನಸ್ಸಿನಲ್ಲಿ ಹೊಳೆದದ್ದು, ಅಲ್ಪ ಬಂಡವಾಳ ಬೇಡುವ ಕುಟೀರ ಕೈಗಾರಿಕೆಗಳು. ಅವರು ಗ್ರಾಮೀಣ ಆರ್ಥಿಕತೆಯ ಬಗ್ಗೆ

ಅಧ್ಯಯನ ಮಾಡತೊಡಗಿದ್ದ ಜೆ.ಸಿ ಕುಮಾರಪ್ಪ ಅವರೊಡನೆ ಸಮಾಲೋಚಿಸಿ, ನಮ್ಮ ಗ್ರಾಮೀಣ ಕಸುಬುಗಳನ್ನು ದೇಸಿ ತಂತ್ರಜ್ಞಾನದ ಮೂಲಕವೇ ಸುಧಾರಿಸಿ ಪುನರುಜ್ಜೀವನಗೊಳಿಸುವ ಮೂಲಕ ಒಕ್ಕಲುತನದ ಬಿಡುವಿನ ವೇಳೆಯಲ್ಲಿ ದುಡಿದು ಒಂದಿಷ್ಟು ಪೂರಕ ಆದಾಯ ಗಳಿಸುವಂತಹ ಯೋಜನೆಯೊಂದನ್ನು ಸಿದ್ಧಪಡಿಸಿದರು. ನೂಲುವ, ನೇಯುವ, ಕುಟ್ಟುವ, ಅರೆಯುವ ಇತ್ಯಾದಿ ಗ್ರಾಮೀಣ ಬದುಕಿನ ಕೆಲಸ ಕಾರ್ಯಗಳಿಗಾಗಿ ಸುಲಭ ಸಾಧನಗಳ ಆವಿಷ್ಕಾರ ಇದರ ಉದ್ದೇಶವಾಗಿತ್ತು. ಹಾಗೇ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿ ಹೆಚ್ಚು ಕುಶಲತೆಯಿಂದ, ಬೆಲ್ಲ, ಕಾಗದ, ಸಾಬೂನು, ಬುಡ್ಡಿದೀಪ, ಬೆಂಕಿಪೊಟ್ಟಣ ಇತ್ಯಾದಿ ದಿನನಿತ್ಯದ ಅಗತ್ಯಗಳನ್ನು ತಯಾರಿಸುವ ಘಟಕಗಳನ್ನು ಸ್ಥಾಪಿಸುವುದೂ ಇದರ ಗುರಿಯಾಗಿತ್ತು. ಇದು ಅವರಿಗೆ ಯಂತ್ರಸಂಸ್ಕೃತಿಯ ಆಕ್ರಮಣದಿಂದಾಗಿ ವಿಚಲಿತಗೊಂಡಿದ್ದ ಗ್ರಾಮೀಣ ಬದುಕನ್ನು ಕೃಷಿಕೇಂದ್ರಿತವಾಗಿ ಪುನರ್‌ಸಂಘಟಿಸಿ ಅದರ ನೈತಿಕತೆಯನ್ನು ಕಾಪಾಡುವ ಒಂದು ಆಧ್ಯಾತ್ಮಿಕ ನೆಲೆಯ ಕೆಲಸವೂ ಆಗಿತ್ತು. ಜಮ್ನಾಲಾಲ್ ಬಜಾಜ್ ಅವರು ಇದಕ್ಕೆ ಹಣಕಾಸು ಒದಗಿಸಿ, ವರ್ಧಾ ಬಳಿಯೇ ಇಪ್ಪತ್ತು ಎಕರೆ ಕಿತ್ತಳೆ ತೋಟವನ್ನು ಬಿಟ್ಟುಕೊಟ್ಟರು. ೧೯೩೪ರ ಡಿಸೆಂಬರ್‌ನಲ್ಲಿ ಸ್ಥಾಪಿತವಾದ ಈ ಸಂಸ್ಥೆಯ ಕಾರ್ಯದರ್ಶಿ ಮತ್ತು ಉಸ್ತುವಾರಿ ಜೆ.ಸಿ. ಕುಮಾರಪ್ಪ ಅವರದ್ದಾಗಿತ್ತು. ಕವಿ ರಬೀಂದ್ರನಾಥ ಟ್ಯಾಗೋರ್, ವಿಜ್ಞಾನಿಗಳಾದ ಸಿ.ವಿ. ರಾಮನ್ ಮತ್ತು ಪ್ರಫುಲ್ಲಚಂದ್ರ ರೇ ಇದರ ಸಲಹಾಮಂಡಳಿಯ ಸದಸ್ಯರಾಗಿದ್ದರು. ಗಾಂಧಿ ಈ ಪ್ರಯೋಗ ಕ್ಷೇತ್ರಕ್ಕೆ, ಫೀನಿಕ್ಸ್ ಮತ್ತು ಸಬರ್ಮತಿ ಆಶ್ರಮಗಳಲ್ಲಿ ತಾವು ಇಂತಹದ್ದೇ ಪ್ರಯೋಗಗಳನ್ನು ಮಾಡಲು ನೆರವಾಗಿದ್ದ ದಿ. ಮಗನ್‌ಲಾಲ್‌ರ ಹೆಸರಿನಲ್ಲಿ ಮಗನ್‌ವಾಡಿ ಎಂದು ನಾಮಕರಣ ಮಾಡಲಾಯಿತು.

ಗಾಂಧಿ ಈಗ ರಾಷ್ಟ್ರೀಯ ಹೋರಾಟಕ್ಕೆ ರಾಷ್ಟ್ರ ನಿರ್ಮಾಣದ ಆಯಾಮವನ್ನು ಸೇರಿಸುವ ಪ್ರಯತ್ನದಲ್ಲಿದ್ದರು.

'ಹರಿಜನ್' ಪತ್ರಿಕೆಯ ಮೂಲಕ ವಿಚಾರ ಮಂಡನೆ–ಜನ ಶಿಕ್ಷಣ

ಈ ದಿಕ್ಕಿನ ಅವರ ಎಲ್ಲ ಚಿಂತನೆಗಳೂ ಈ ಪ್ರಯೋಗ ಕ್ಷೇತ್ರದ ಹಿಂದಿನ ಪರಿಕಲ್ಪನೆ ಮತ್ತು ಅನುಭವಗಳಿಂದಲೇ ಸ್ಫೂರ್ತಿಗೊಳ್ಳುತ್ತಿದ್ದವು. ಅವರು ಯಂತ್ರಸಂಸ್ಕೃತಿ ರೂಪಿಸತೊಡಗಿದ್ದ ಜೀವನಕ್ರಮ ಮತ್ತು ಜೀವನದೃಷ್ಟಿಗಳಿಗೆ ಪರ್ಯಾಯವಾದ ಒಂದು ಕಾರ್ಯಕ್ರಮವನ್ನು ರಾಷ್ಟ್ರ ನಿರ್ಮಾಣದ ಭಾಗವಾಗಿ ರೂಪಿಸತೊಡಗಿದರು. ಇದು ಮುಂದೆ ಹತ್ತು ವರ್ಷಗಳ ಕಾಲ ಸತತವಾಗಿ 'ಹರಿಜನ್' (ಮತ್ತು ಅದರ ಹಿಂದಿ ಆವೃತ್ತಿ 'ಹರಿಜನ ಬಂಧು') ಸಂಚಿಕೆಗಳಲ್ಲಿ ನೂರಾರು ಸರಣಿ ಲೇಖನಗಳ ರೂಪದಲ್ಲಿ ಹೊರಹೊಮ್ಮಿತು. ಈ ಲೇಖನಗಳ ಮೂಲಕ ಅವರು ಗ್ರಾಮೀಣ ಬದುಕನ್ನು ಹಸನುಗೊಳಿಸುವ, ಸಮೃದ್ಧಗೊಳಿಸುವ, ಶಾಂತಿ–ನೆಮ್ಮದಿಗಳಲ್ಲಿಡುವ ಅನೇಕ ಸಂಗತಿಗಳನ್ನು ನಿರೂಪಿಸಿದರು. ಆದರೆ ಅವರು ಈ ಸಂಗತಿಗಳು ಕೆಲವೊಮ್ಮೆ ಸ್ವಯಂಸ್ಫೂರ್ತಿಯಿಂದ, ಇನ್ನು ಕೆಲವೊಮ್ಮೆ ಸಂದರ್ಭಾನುಸಾರ, ಮತ್ತೆ ಕೆಲವೊಮ್ಮೆ ಪತ್ರಿಕೆಗಳಿಗಾಗಿ ಬರೆದುದರಿಂದ ಅವು ಕಾಲದಲ್ಲಿ ಹರಿದು ಹಂಚಿಹೋಗಿವೆ.

ಮೊದಲಿಗೆ ತಾವು ವಿಜ್ಞಾನ ಮತ್ತು ತಂತ್ರಜ್ಞಾನದ ವಿರೋಧಿ ಎಂಬ ಅಭಿಪ್ರಾಯದ ಬಗ್ಗೆ ಪ್ರತಿಕ್ರಿಯಿಸುತ್ತಾ, ಜನರನ್ನು ವಿವೇಚನಾಶೀಲರನ್ನಾಗಿ ಮಾಡುವ ಜ್ಞಾನ, ವಿಜ್ಞಾನವೆನಿಸಿಕೊಳ್ಳುತ್ತದೆ ಎಂದು ಸೂಚಿಸಿದ ಅವರು, ಜನರ ಶೋಷಣೆಗೆ ಕಾರಣವಾಗುವ ಜ್ಞಾನ ತಂತ್ರಜ್ಞಾನವಾಗದು ಎಂದರು. ತಂತ್ರಜ್ಞಾನ ದುಡಿಮೆಯನ್ನು, ಅದರ ಸಂತೋಷವನ್ನು ವ್ಯಕ್ತಿಯಿಂದ ಅಪಹರಿಸಿ ಯಂತ್ರ ಮತ್ತು ಅದರ ಮಾಲೀಕನ ಕೈಗೆ ಕೊಟ್ಟು ಬಡವರ ಇಬ್ಬಗೆಯ ಶೋಷಣೆಗೆ ಕಾರಣವಾಗಿದೆ ಎಂದು ವಿವರಿಸಿದರು. ಚರಕವೇನು, ಹಲ್ಲಿನ ಸಂದಿ ತೆಗೆಯುವ ಕಡ್ಡಿಯೂ ಯಂತ್ರವೇ ಅಂದ ಅವರು, ಅದು ಶ್ರಮಾಧಾರಿತವೂ, ಸ್ವಾಯತ್ತವೂ ಆಗಿರಬೇಕೆಂದು ಅಭಿಪ್ರಾಯಪಟ್ಟರು.

'ಪಶ್ಚಿಮ ದೇಶಗಳ ರೀತಿಯಲ್ಲಿ ಭಾರತವೂ ಕೈಗಾರಿಕೀಕರಣಗೊಂಡರೆ ನಮ್ಮನ್ನು ದೇವರೇ ಕಾಪಾಡಬೇಕು. ಒಂದು ಚಿಕ್ಕ ದ್ವೀಪವಾಗಿರುವ ಆರ್ಥಿಕ ಸಾಮ್ರಾಜ್ಯಶಾಹಿ, ಇಡೀ ಅರ್ಧ ಜಗತ್ತಿಗೆ ಕೈಕೋಳ ತೊಡಿಸಿದೆ. ಇನ್ನು ಈ ಮುವ್ವತ್ತೈದು ಕೋಟಿ ಜನರ ದೇಶ ಕೈಗಾರಿಕೀಕರಣಗೊಂಡರೆ ಎಂತಹ ಭಯಂಕರ ಅನಾಹುತವಾಗಬೇಡ!' (ಜನವರಿ ೨೮, ೧೯೩೯) ಎಂದು ಗಾಬರಿ ವ್ಯಕ್ತಪಡಿಸುವ ಗಾಂಧಿ, ೧೯೪೨ರ ಜುಲೈ ೨೬ರ ಸಂಚಿಕೆಯಲ್ಲಿ ಬರೆದ 'ನನ್ನ ಆದರ್ಶ ಗ್ರಾಮ' ಎಂಬ ಬರಹದಲ್ಲಿ ತಮ್ಮ ಕಲ್ಪನೆಯ ಭಾರತದ ಆರ್ಥಿಕತೆಯ ಮೂಲ ಘಟಕಗಳ ಒಂದು ನೀಲ ನಕ್ಷೆಯನ್ನು ನೀಡುತ್ತಾರೆ: ಅವರು 'ಹಿಂದ್ ಸ್ವರಾಜ್'ನಲ್ಲಿ 'ಗ್ರಾಮಸ್ವರಾಜ್ಯ'ವನ್ನು ಪ್ರತಿಪಾದಿಸಿದಾಗ ಅದರಲ್ಲಿನ ಗ್ರಾಮ, ಬಹಳ ಜನರು ತಿಳಿದಂತೆ ಮತ್ತು ಟೀಕಿಸಿದಂತೆ, ಅದು ಅವರಿದ್ದ ಕಾಲದ ಗ್ರಾಮವಾಗಿರಲಿಲ್ಲ. ಅದು ರಾಷ್ಟ್ರ ನಿರ್ಮಾಣದ ಭಾಗವಾಗಿ ನಾವು ಕಟ್ಟಬೇಕಾದ ಕನಸಿನ ಗ್ರಾಮವಾಗಿತ್ತು. ಅದು ತನ್ನೆಲ್ಲ ಮೂಲಭೂತ ಅಗತ್ಯಗಳನ್ನು ತಾನೇ ಪೂರೈಸಿಕೊಳ್ಳಬಲ್ಲ ಸಂಪೂರ್ಣ ಸ್ವತಂತ್ರ ಗಣರಾಜ್ಯವಾಗಿದ್ದು, ಇತರ ಅಗತ್ಯಗಳಿಗೆ ಮಾತ್ರ ತನ್ನ ನೆರೆಹೊರೆಯ ಹಳ್ಳಿಗಳನ್ನು ಅವಲಂಬಿಸಿರುವ ಅಂತರಾವಲಂಬಿಯಾಗಿರುತ್ತದೆ. ಅದು ತನ್ನ ಪ್ರಜೆಗಳಿಗಾಗಿ ಬೇಕಾದ ಆಹಾರವನ್ನು ತಾನೇ ಬೆಳೆದುಕೊಳ್ಳುತ್ತದೆ ಮತ್ತು ಊರಿನ ಜಾನುವಾರುಗಳಿಗಾಗಿ ಒಂದು ಕಾಪು ಅರಣ್ಯ ಹಾಗೂ ಯುವಜನ ಮತ್ತು ಮಕ್ಕಳಿಗಾಗಿ ಆಟದ ಮೈದಾನ ಹೊಂದಿರುತ್ತದೆ. ಹೆಚ್ಚಿನ ಭೂಮಿ ಲಭ್ಯವಿದ್ದರೆ ಹೊಗೆಸೊಪ್ಪು, ಗಾಂಜಾ, ಅಫೀಮು ಇತ್ಯಾದಿ ಮಾದಕ ಬೆಳೆಗಳನ್ನು ಬಿಟ್ಟು ವಾಣಿಜ್ಯ ಬೆಳೆಗಳನ್ನು ಬೆಳೆಯಬಹುದು. ಹಳ್ಳಿ, ಮೂಲ ಶಿಕ್ಷಣ ಒದಗಿಸುವ ತನ್ನದೇ ಶಾಲೆ, ಆಸ್ಪತ್ರೆ, ಒಂದು ರಂಗಮಂದಿರ, ಒಂದು ಸಮುದಾಯ ಭವನ, ತಂತಿ ಸೌಲಭ್ಯವಿರುವ ಅಂಚೆ ಕಛೇರಿ ಮತ್ತು ಕೆರೆ ಬಾವಿಗಳಿಂದ ಪೂರೈಸಲಾಗುವ ಸ್ವಚ್ಛ ಕುಡಿಯುವ ನೀರಿನ ಪೂರೈಕೆ ವ್ಯವಸ್ಥೆ ಹೊಂದಿರಬೇಕು. ಪ್ರತಿ ಮನೆಗೂ ವಿದ್ಯುತ್ ಪೂರೈಕೆ ಇರಬೇಕು.

'ಗ್ರಾಮ ತನಗೆ ಬೇಕಾದುದನ್ನು ಮಾತ್ರ ಬೆಳೆಯಬೇಕು ಮತ್ತು ಉತ್ಪಾದನೆ ಮಾಡಬೇಕು. ಈ ನಿಯಮ ಪಾಲಿಸಿದರೆ ಜನ ಆಧುನಿಕ ಯಂತ್ರೋಪಕರಣಗಳನ್ನು ಬಳಸಿದರೂ ತೊಂದರೆ ಇಲ್ಲ ಎಂಬುದು ಅವರ ಗ್ರಾಮ ಸೂತ್ರ. ಅಂದರೆ ಗ್ರಾಮ ಜೀವನವೆಂಬುದು ಒಂದು ಲಾಭೋದ್ಯಮವಾಗಬಾರದು' (ಆಗಸ್ಟ್ ೨೯, ೧೯೩೬)

ಆದರೆ ಇಂತಹ ಹಳ್ಳಿಯ ಒಡೆಯರಾರು? ಇದು ಸಹಕಾರ ತತ್ವದ ಮೇಲೆ

ನಡೆಯುವುದರಿಂದ ಒಡೆತನದ ಪ್ರಶ್ನೆ ಬರುವುದಿಲ್ಲ ಎನ್ನುತ್ತಾರೆ ಗಾಂಧಿ. ಭೂಮಿಯ ವಿಷಯದಲ್ಲಿ ಅವರು ಹೇಳುವುದು, 'ದುಡಿಯುವವನೇ ಒಡೆಯ. ಇದರಲ್ಲಿ ಸಮಾನತೆಯ ಪ್ರಶ್ನೆ ಬರುವುದಿಲ್ಲ. ಎಂತಹ ಆದರ್ಶ ಸಮಾಜದಲ್ಲೂ ಅಸಮಾನತೆಗಳು ಇರದಿರಲು, ಒಬ್ಬ ಇನ್ನೊಬ್ಬನಿಗಿಂತ ಸ್ವಲ್ಪವಾದರೂ ಅನುಕೂಲಸ್ಥನಾಗದಿರಲು ಸಾಧ್ಯವಿಲ್ಲ. ಆದ್ದರಿಂದ ಕಹಿ ಇಲ್ಲದೆ ಪರಸ್ಪರ ಸಹಾನುಭೂತಿ, ಸಹಕಾರಗಳಿಂದ ಒಟ್ಟಿಗೆ ಬಾಳುವುದನ್ನು ಕಲಿಯಬೇಕು' ('ಹರಿಜನ್', ಜನವರಿ ೨, ೧೯೩೭). ಅವರು ಜಮೀನ್ದಾರರಿಗೆ ಹೇಳಿದ್ದು: 'ರೈತರಿಗೆ ಒಂದು ನಿಗದಿತ ಅವಧಿಯ ಒಡೆತನ ನೀಡಿ, ಅವರ ಕಷ್ಟ–ಸುಖಗಳಲ್ಲಿ ಭಾಗಿಯಾಗಿ, ಅವರ ಹಿತ ಚಿಂತಕರು ಎಂಬ ವಿಶ್ವಾಸ ಹುಟ್ಟಿಸಬೇಕು. ಬಡವರ ಕಷ್ಟಗಳನ್ನು ಕೆಲವು ಶ್ರೀಮಂತರನ್ನು ನಿರ್ನಾಮ ಮಾಡುವ ಮೂಲಕ ಅಲ್ಲ, ಬಡವರ ಅಜ್ಞಾನವನ್ನು ತೊಡೆದು, ಅವರು ಶೋಷಣೆಯ ವಿರುದ್ಧ ಅಸಹಕಾರ ತೋರುವುದನ್ನು ಕಲಿಸುವ ಮೂಲಕ ಪರಿಹರಿಸಬೇಕು. ಆಗ ಶ್ರೀಮಂತರೂ ಬದಲಾಗತೊಡಗುತ್ತಾರೆ. ರೈತರು ಮತ್ತು ಕಾರ್ಮಿಕರು 'ಆಗಲ್ಲ' ಎನ್ನುವ ಶಬ್ದವೊಂದಿದೆ ಎಂಬುದನ್ನು ತಿಳಿಯಬೇಕು ಹಾಗೂ 'ಆಯಿತು' ಮತ್ತು 'ಆಗಲ್ಲ' ಶಬ್ದಗಳನ್ನು ಯಾವಾಗ ಬಳಸಬೇಕು ಎಂಬುದನ್ನು ಅರಿಯಬೇಕು' (ಜುಲೈ ೨೮, ೧೯೪೦)

ಬ್ರಿಟಿಷ್ ಸರ್ಕಾರ, ಆದಾಯದ ಮೇಲೆ ಶೇ. ೭೦ರವರೆಗೆ ತೆರಿಗೆ ಹಾಕುತ್ತಿದೆ ಎಂಬ ಸುದ್ದಿಯನ್ನು ಪ್ರಸ್ತಾಪಿಸುತ್ತಾ ಗಾಂಧಿ, ಆ ದರ ಇನ್ನೂ ಹೆಚ್ಚಾಗಬೇಕು. ಅಗತ್ಯಬಿದ್ದರೆ ಶ್ರೀಮಂತರ ಮೇಲೆ ಸಾವಿನ ತೆರಿಗೆಯನ್ನೂ ಹಾಕಬೇಕು ಎನ್ನುತ್ತಾರೆ! (ಜುಲೈ ೩೧, ೧೯೩೭) ತಮ್ಮ ಟ್ರಸ್ಟೀಶಿಪ್ ಕಲ್ಪನೆಯ ಬಗ್ಗೆ ಸ್ಪಷ್ಟನೆ ನೀಡುತ್ತಾ, ಅವರು, 'ಟ್ರಸ್ಟೀಗಳಿಗೆ ಉತ್ತರಾಧಿಕಾರಿಗಳು ಇರುವುದಿಲ್ಲ; ಶ್ರೀಮಂತರ ಆಸ್ತಿ, ಪುಕ್ಕಟೆ ಸಿಕ್ಕಿದ್ದನ್ನು ಕೂತು ತಿಂದು ಹಾಳು ಮಾಡುವ ಅವರ ಮಕ್ಕಳಿಗೆ ಹೋಗಕೂಡದು. ಅದು ಸಮುದಾಯಕ್ಕೆ ಸೇರಬೇಕು. ಸ್ವಾತಂತ್ರ್ಯ ದೊರೆತೊಡನೆ ಮೊಟ್ಟಮೊದಲು ಮಾಡಬೇಕಾದ ಕೆಲಸವೆಂದರೆ ಇಂತಹ ಹಣವನ್ನು ಹರಿಜನರಿಗೆ ಅನುದಾನವಾಗಿ ಕೊಡುವುದು.' (ಏಪ್ರಿಲ್ ೧೩, ೧೯೩೮)

ಗಾಂಧಿ ಇಂತಹ ನೀತಿ ವಿಷಯಗಳ ಬಗ್ಗೆ ಮಾತ್ರವಲ್ಲದೆ, ಹಳ್ಳಿಗರ ದಿನನಿತ್ಯದ ಸಂಗತಿಗಳ ಬಗ್ಗೆಯೂ ಸಲಹೆಗಳನ್ನು ನೀಡುವರು. 'ಹಾಲು ಮತ್ತು ಬಾಳೆ ಹಣ್ಣು ಎರಡೇ ಒಳ್ಳೆಯ ಊಟವಾದೀತು' ಎನ್ನುವ ಅವರು, ವಿವಿಧ ಸೊಪ್ಪುಗಳ ಬಳಕೆಯನ್ನು ಶಿಫಾರ್ಸು ಮಾಡುವರು. (ಫೆಬ್ರುವರಿ ೧೫, ೧೯೩೫). ಮತ್ತೊಂದು ಲೇಖನದಲ್ಲಿ ಹಸುವಿನ ಹಾಲು ಮತ್ತು ಎಮ್ಮೆಯ ಹಾಲುಗಳ ವ್ಯತ್ಯಾಸಗಳ ಬಗ್ಗೆ ಬರೆಯುವರು. ಮಾವಿನ ಓಟೆಯನ್ನು ಜೀವಸತ್ವ ಪೂರೈಕೆಗಾಗಿ ಹೇಗೆ ಬಳಸಬಹುದು ಎಂದು ವಿವರಿಸುವರು. ಪಾಲಿಷ್ ಮಾಡದ ಅಕ್ಕಿಯಲ್ಲಿನ ಪುಷ್ಟಿದಾಯಕತ್ವದ ಬಗ್ಗೆಯೂ ಬರೆಯುವ ಗಾಂಧಿ, ಬಿತ್ತನೆ ಬೀಜಗಳ ಆಯ್ಕೆಯಿಂದ ಹಿಡಿದು ತಿಪ್ಪೆ ಗೊಬ್ಬರದ ತಯಾರಿಕೆಯವರೆಗೆ ಮತ್ತು ಗೊಬ್ಬರದ ಬಳಕೆಯ ಬಗ್ಗೆ ಸಕಲ ವಿವರ ನೀಡಿ ರೈತರಿಗೆ ತಿಳಿ ಹೇಳುವರು. ಹಾವು ಕಡಿತಕ್ಕೆ ಮದ್ದನ್ನೂ ಸೂಚಿಸುವರು! (ಜನವರಿ ೨೮, ೧೯೩೬)

■

೭೯
ಗಾಂಧಿ ಎದುರಿಸಿದ ಅಗ್ನಿಪರೀಕ್ಷೆಗಳು

ಗಾಂಧಿಗೆ ನಿರಾಕರಿಸಲ್ಪಟ್ಟ ನೊಬೆಲ್ ಪುರಸ್ಕಾರ

ಗಾಂಧಿ ಭಾರತದ ಹಳ್ಳಿಗಾಡಿನ ಧೂಳು ತುಂಬಿದ ರಸ್ತೆಗಳಲ್ಲಿ ಏಳುಬೀಳಿನ ಪಯಣ ಮಾಡಿ ದಣಿಯುತ್ತಿರುವ ಸಮಯದಲ್ಲೇ ವಿದೇಶಗಳಲ್ಲಿ ಅವರ ಹೋರಾಟದ ದಾರಿ ಅನೇಕರ ಗಮನ ಸೆಳೆದಿತ್ತು. ಅಮೆರಿಕಾದ ಸಮಾಜಶಾಸ್ತ್ರ ಅಧ್ಯಾಪಕರೂ, ಅಂತಾರಾಷ್ಟ್ರೀಯ ಖ್ಯಾತಿಯ ಎಡಪಂಥಿಯ ಚಿಂತಕರೂ ಆಗಿದ್ದ ಜೆರೋಮ್ ಡೇವಿಸ್ ಎಂಬುವವರು ನೊಬೆಲ್ ಪುರಸ್ಕಾರ ಸಮಿತಿಯ ನಾಮಕರಣ ಮಂಡಳಿಯ ಸದಸ್ಯರೊಬ್ಬರಿಗೆ ಗಾಂಧಿಯವರನ್ನು ನೋಬೆಲ್ ಶಾಂತಿ ಪುರಸ್ಕಾರಕ್ಕೆ ನಾಮನಿರ್ದೇಶನ ಮಾಡುವಂತೆ, ೧೯೩೭ರಿಂದ ಸತತ ಮೂರು ವರ್ಷಗಳ ಕಾಲ ಮನವಿ ಮಾಡಿದರು. ಒಮ್ಮೆ ತಮಗೇ ಅವಕಾಶ ಸಿಕ್ಕಾಗ ನಾಮನಿರ್ದೇಶನ ಮಾಡಿದರು. 'ಸದ್ಯಕ್ಕೆ ಜಗತ್ತಿನಲ್ಲಿ ಈ ಪುರಸ್ಕಾರಕ್ಕೆ ಇವರಿಗಿಂತ ಯೋಗ್ಯರು ಇನ್ನೊಬ್ಬರಿಲ್ಲ' ಎಂದು ವಿವರಿಸಿದರು. ಆದರೆ ಈ ಯಾವ ಪ್ರಯತ್ನಗಳೂ ಫಲ ನೀಡಲಿಲ್ಲ. ಇನ್ನು, ಹಿಟ್ಲರ್‌ನ ರಾಜಕಾರಣದ ವಿರುದ್ಧ ಹೋರಾಡುತ್ತಿದ್ದ ಜರ್ಮನಿಯ ಡೀಟ್ರಿಚ್ ಬೋನ್ಹೋಫರ್ ಎಂಬ ಪಾದ್ರಿಯೊಬ್ಬರು, ಮತ್ತೊಂದು ಯುದ್ಧದೆಡೆಗೆ ಜಗತ್ತನ್ನು ನೂಕುತ್ತಿರುವ ಪಶ್ಚಿಮದ ಜೀವನ ಕ್ರಮಕ್ಕೆ, 'ಪರ್ವತದ ಮೇಲಿನ ಪ್ರವಚನ'ದ ಸರಿಯಾದ ವ್ಯಾಖಾನ ಮಾಡುವ ಮೂಲಕ ಸರಿದಾರಿ ತೋರಿಸಬಲ್ಲ ನಿಜವಾದ ಕ್ರೈಸ್ತ ಎಂದರೆ ಗಾಂಧಿ' ಎಂಬ ತೀರ್ಮಾನಕ್ಕೆ ಬಂದು, ಗಾಂಧಿಯವರೊಂದಿಗೆ ಮಾತಾಡಲು ಅವಕಾಶ ಕೋರಿ ಪತ್ರ ಬರೆದಿದ್ದರು. ಅದಕ್ಕೆ ಗಾಂಧಿ, ಪ್ರಯಾಣದ ಖರ್ಚುವೆಚ್ಚ ಮತ್ತು ಭಾರತದಲ್ಲಿ ತಂಗುವಷ್ಟು ಅವಧಿಯ ಖರ್ಚುಗಳನ್ನು ಬೋನ್ಹೋಫರ್ ಅವರೇ ಭರಿಸುವುದಾದರೆ ಬರಬಹುದು. ಆದರೆ ತಾವು ಮಾತುಕತೆಗೆ ದಿನಗಟ್ಟಲೆ ಆರಾಮವಾಗಿ ಸಿಗುವುದನ್ನು ಖಚಿತ ಪಡಿಸಲಾರೆ, ನಾನು ಸೆರೆಮನೆಗೂ ಹೋಗಬೇಕಾಗಿ ಬರಬಹುದು ಎಂದು ಬರೆದಿದ್ದರು. ಯಾವ ಕಾರಣದಿಂದಲೋ ಏನೋ ಬೋನ್ಹೋಫರ್ ಬರಲಿಲ್ಲ.

ಇದೇ ಸಮಯದಲ್ಲಿ ಗಾಂಧಿಯವರತ್ತ ಆಕರ್ಷಿತೆಯಾದ ಭಾರತೀಯ ಮಹಿಳೆ ಎಂದರೆ ಕಪುರ್ತಲಾದ ರಾಜಮನೆತನಕ್ಕೆ ಸೇರಿದ ರಾಜಕುಮಾರಿ ಅಮೃತಾ ಕೌರ್, ಹುಟ್ಟಿನಿಂದ ಸಿಖ್ ಆಗಿದ್ದರೂ ಕ್ರೈಸ್ತ ಮತಕ್ಕೆ ಮತಾಂತರಗೊಂಡಿದ್ದ ಅವರು ಚೆಲುವಿನ ಖನಿಯೇ ಆಗಿದ್ದರು. ಬ್ರಿಟನ್‌ನಲ್ಲಿ ಓದಿ, ಟೆನ್ನಿಸ್ ಆಟಗಾರ್ತಿಯಾಗಿ ಖ್ಯಾತಿ ಪಡೆದಿದ್ದ ಅವರು, ಸಿಮ್ಲಾದಲ್ಲಿ ತಂಗಿ ವೈಭವೋಪೇತ ಶೈಲಿಯ ಜೀವನ ನಡೆಸುತ್ತಿದ್ದರು. ಆದರೆ

ಮುವ್ವತ್ತರ ಹರೆಯದ ಹೊತ್ತಿಗೆ ಕಮಲಾದೇವಿ ಚಟ್ಟೋಪಾಧ್ಯಾಯ, ಸರೋಜಿನಿ ನಾಯ್ಡು ಮುಂತಾದವರು ರಚಿಸಿಕೊಂಡಿದ್ದ 'ಅಖಿಲ ಭಾರತ ಮಹಿಳಾ ಸಮ್ಮೇಳನ'ದ ಸಂಪರ್ಕಕ್ಕೆ ಬಂದ ನಂತರ ಶ್ರೀಮಂತಿಕೆಯ ಜೀವನ ಬೇಸರವಾಗಿ, ಗಾಂಧಿ ಆಶ್ರಮದಲ್ಲಿ ಕಾರ್ಯಕರ್ತೆಯಾಗಿ ಸೇರಿಕೊಂಡರು.

ಗಾಂಧಿ-ಅಂಬೇಡ್ಕರ್ ಮತ್ತೊಂದು ವಾಗ್ವಾದ

ಇದೇ ವೇಳೆಯಲ್ಲಿ ಗಾಂಧಿ, ತಮಗೆ ತಮ್ಮದೇ ರೀತಿಯಲ್ಲಿ ಸವಾಲೊಡ್ಡಿದ್ದ ಇಬ್ಬರು ವ್ಯಕ್ತಿಗಳನ್ನು ಮತ್ತೊಮ್ಮೆ ಮುಖಾಮುಖಿಯಾಗಬೇಕಾಯಿತು. ಅವರಲ್ಲಿ ಒಬ್ಬರು ಅಂಬೇಡ್ಕರ್ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ೧೯೩೫ರ ಅಕ್ಟೋಬರ್‌ನಲ್ಲಿ ಗುಜರಾತ್‌ನ ಕವಿತಾ ಎಂಬ ಹಳ್ಳಿಯಲ್ಲಿ, ಹರಿಜನರು ತಮ್ಮ ಮಕ್ಕಳನ್ನು ಸಾರ್ವಜನಿಕ ಶಾಲೆಗಳಿಗೆ ಸೇರಿಸುವ ಪ್ರಯತ್ನ ಮಾಡಿದಾಗ, ಆ ಊರಿನ ಮೇಲ್ಜಾತಿಗಳು ಅವರ ಜೀವನಕ್ಕೇ ತೊಂದರೆಯಾಗುವಂತೆ ಎಲ್ಲ ವಿಷಯಗಳಲ್ಲೂ ಅವರ ಮೇಲೆ ಬಹಿಷ್ಕಾರ ಹೇರಿದರು. ಇದನ್ನು ಸುದ್ದಿ ಮಾಡಿದವರೂ ಗಾಂಧಿ ಅನುಯಾಯಿಯಾಗಿದ್ದ ಎ.ವಿ. ಥಕ್ಕರ್ ಅವರೇ. ಸುದ್ದಿ ತಿಳಿದ ಗಾಂಧಿ, ಮೇಲ್ಜಾತಿ ಜನರ ಜೀವನವನ್ನೂ ದೀರ್ಘಕಾಲಿಕವಾಗಿ ದುಸ್ತರಗೊಳಿಸುವ ಪ್ರತಿಕ್ರಮವಾಗಿ ಎಲ್ಲ ಹರಿಜನರೂ ಊರು ಖಾಲಿ ಮಾಡಿ, ಜೀವನೋಪಾಯ ಕಂಡುಕೊಳ್ಳುವಂತೆ ಸೂಚಿಸಿದರು. ಇದು ಅಂಬೇಡ್ಕರರನ್ನು ರೇಗಿಸಿತು. ಗಾಂಧಿ ಹರಿಜನರ ಸಮಸ್ಯೆಯ ಬುಡವನ್ನು ಮುಟ್ಟದೆ ಮೇಲ್ಮೈ ಮಟ್ಟದ ಪರಿಹಾರ ನೀಡುತ್ತಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರಲ್ಲದೆ, ಇದು ಹಿಂದೂ ಧರ್ಮದ ಪರಿಹಾರವಾಗದ ಸಮಸ್ಯೆಯಾಗಿದ್ದು, ಹರಿಜನರು ಈ ಧರ್ಮವನ್ನು ತ್ಯಜಿಸುವುದೇ ಇದಕ್ಕೆ ಅವರಿಗಿರುವ ನಿಜವಾದ ಪರಿಹಾರ ಎಂಬ ಹೇಳಿಕೆ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಗಾಂಧಿ, ಅಂಬೇಡ್ಕರ್‌ರಂತಹ ವಿದ್ವಾಂಸ ಮಹಾಪುರುಷರ ನೋವನ್ನು ತಾವು ಅರ್ಥ ಮಾಡಿಕೊಳ್ಳುವುದಾಗಿಯೂ, ಆದರೆ ಸಮಸ್ಯೆಯ ಪರಿಹಾರ ಪ್ರಕ್ರಿಯೆ ಆರಂಭವಾಗಿದೆ ಎಂಬುದನ್ನು ಅವರು ಅರಿಯಬೇಕೆಂದು ಅವರನ್ನು ಕೇಳಿಕೊಂಡರು. ಈ ಹಿಂದೆ ಇಂತಹ ಘಟನೆಗಳ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳದಿದ್ದು, ಈಗ ಇದು ಒಂದು ದೊಡ್ಡ ಸುದ್ದಿಯಾಗಿ ಜನರ ಮನಸ್ಸನ್ನು ಮುಟ್ಟಿರುವುದೇ ಇದಕ್ಕೆ ಸಾಕ್ಷಿ ಎನ್ನುತ್ತಾ, ಧರ್ಮ ನಮ್ಮ ಅಸ್ತಿತ್ವದ ಆಳದಲ್ಲೇ ಬೆರೆತುಹೋಗಿರುವ ಸಂಗತಿಯಾಗಿರುವುದರಿಂದ, ಅದನ್ನು ಮನೆ ಅಥವಾ ಬಟ್ಟೆ ಬದಲಾಯಿಸಿದಂತೆ ಬದಲಾಯಿಸಲಾಗದೆಂದೂ, ಹಿಂದೂ ಧರ್ಮವನ್ನು ಸುಧಾರಿಸುವುದೊಂದೇ ಇದಕ್ಕೆ ಪರಿಹಾರವೆಂದೂ ಹೇಳಿದರು.

ಗಾಂಧಿ ತಾವು ಹೇಳಿದ ಹಿಂದೂ ಧರ್ಮ ಸುಧಾರಣೆಯ ಪ್ರಯತ್ನವಾಗಿ ಜಾತಿ ಪದ್ಧತಿ ಕುರಿತ ತಮ್ಮ ನಿಲುವಿನಲ್ಲಿ ಇನ್ನೂ ಒಂದು ಹೆಜ್ಜೆ ಮುಂದಿಟ್ಟರು. 'ಜಾತಿ ತೊಲಗಬೇಕು' ಎಂಬ ಶೀರ್ಷಿಕೆಯಲ್ಲಿ 'ಹರಿಜನ್'ಗೆ ಬರೆದ ಒಂದು ಲೇಖನದಲ್ಲಿ ಅಂತರ್ಜಾತಿ ಭೋಜನದ ಜೊತೆಗೆ, ಅಂತರ್ಜಾತಿ ಮದುವೆಗಳಿಗೂ ತಮ್ಮ ಬೆಂಬಲ ವ್ಯಕ್ತಪಡಿಸಿದರು. ಈ ಸಂಬಂಧವಾಗಿ ಧರ್ಮ ಸುಧಾರಣಾವಾದಿಗಳು ಸಂಪ್ರದಾಯವಾದಿಗಳ ಬಹಿಷ್ಕಾರಗಳನ್ನು ಧಿಕ್ಕರಿಸಿ ಮುಂದುವರೆಯಬೇಕೆಂದು

ಸೂಚಿಸಿದರು.

ಈ ಮಧ್ಯೆ ಧರ್ಮ ಬಿಡಬಾರದೆಂದು ಕೋರಲು ತಮ್ಮನ್ನು ಭೇಟಿ ಮಾಡಿದ ಪ್ರಗತಿಪರ ಹಿಂದೂಗಳ ನಿಯೋಗದೊಂದಿಗೆ ಮಾತನಾಡಿದ ಅಂಬೇಡ್ಕರ್, ತಮ್ಮ ಕರ್ತವ್ಯ ಸದ್ಯದ ಸಂದರ್ಭದಲ್ಲಿ ಇಡೀ ಭಾರತದ ಜನರ ಸಮಸ್ಯೆಯ ಕುರಿತಾಗಿರದೆ ತಾವು ಹುಟ್ಟಿರುವ ಜನಾಂಗದ ದಾರುಣ ಸಮಸ್ಯೆಯ ಕುರಿತಾಗಿದೆ ಎಂದು ಹೇಳುತ್ತಾ, 'ಈ ದೇಶಕ್ಕೆ, ಮುಟ್ಟಲು ಅತಿ ದುಸ್ತರವೆನ್ನಿಸುವ ಇಸ್ಲಾಂ ಧರ್ಮವನ್ನು ತಹಬಂದಿಗೆ ತಂದಿರುವ ಟರ್ಕಿಯ ಕೆಮಾಲ್ ಪಾಶಾನಂತಹ ಸರ್ವಾಧಿಕಾರಿಯ ಅಗತ್ಯವಿದೆ. ಗಾಂಧಿ ಅಂತಹ ಸರ್ವಾಧಿಕಾರಿಯಾಗಿಲ್ಲ ಎಂಬುದೇ ಗಾಂಧಿಯವರನ್ನು ಕುರಿತ ನನ್ನ ಆಕ್ಷೇಪಣೆ' ಎಂದರು.

ಅಂಬೇಡ್ಕರ್‌ರ 'ಜಾತಿ ವಿನಾಶ' ಪ್ರಬಂಧ

ಗಾಂಧಿ–ಅಂಬೇಡ್ಕರ್ ನಡುವಣ ಈ ವಾಗ್ವಾದ ತನ್ನ ಅಂತಿಮ ರೂಪ ಕಂಡುಕೊಂಡದ್ದು, ಅಂಬೇಡ್ಕರ್ ಅವರ 'ಜಾತಿ ವಿನಾಶ' ಎಂಬ ಲೇಖನದ ಬಗ್ಗೆ ಪರಸ್ಪರ ನಡೆದ ಚರ್ಚೆಗಳಲ್ಲಿ. ಆರ್ಯ ಸಮಾಜದ ಆಲೋಚನೆಗಳಿಂದ ತೀವ್ರವಾಗಿ ಪ್ರಭಾವಿತವಾಗಿದ್ದ ಲಾಹೋರ್‌ನ 'ಜಾತ್ ಪಾತ್ ತೋಡಕ್ ಮಂಡಲ್' (ಜಾತಿಪಾತಿ ಒಡೆಯುವ ಮಂಡಲ) ೧೯೩೬ರ ಮೇನಲ್ಲಿ ಆಯೋಜಿಸಲು ಉದ್ದೇಶಿಸಿದ್ದ ಸಮ್ಮೇಳನವೊಂದರ ಸರ್ವಾಧ್ಯಕ್ಷತೆಗೆ ಮಂಡಲದ ಪದಾಧಿಕಾರಿಗಳು ಅಂಬೇಡ್ಕರ್ ಅವರನ್ನು ಆಹ್ವಾನಿಸಿದ್ದರು ಮತ್ತು ಆ ಆಹ್ವಾನವನ್ನು ಅಂಬೇಡ್ಕರ್ ಒಪ್ಪಿಕೊಂಡಿದ್ದರು. ಆದರೆ ಅಂಬೇಡ್ಕರ್ ಅವರು ಇದಕ್ಕಾಗಿ ತಯಾರಿಸಿದ್ದ ಭಾಷಣದಲ್ಲಿನ 'ಇದು ಹಿಂದೂವಾಗಿ ನನ್ನ ಕೊನೆಯ ಭಾಷಣ' ಎಂಬ ವಾಕ್ಯವನ್ನು ತೆಗೆಯಬೇಕೆಂದು ಮಂಡಲವು ಮಾಡಿದ ಕೋರಿಕೆಯನ್ನು ಅಂಬೇಡ್ಕರ್ ಒಪ್ಪದಿದ್ದಾಗ, ಅದು ಆ ಸಮ್ಮೇಳನವನ್ನು ರದ್ದುಪಡಿಸಿತು. ಆದರೆ 'ಜಾತಿ ವಿನಾಶ' ಎಂದು ಮುಂದೆ ಪ್ರಸಿದ್ಧವಾದ ಆ ಭಾಷಣವನ್ನು, ಅಂಬೇಡ್ಕರ್ ತಾವೇ ಪ್ರಕಟಿಸಿ ಸಾರ್ವಜನಿಕವಾಗಿ ಬಿಡುಗಡೆ ಮಾಡಿದರು. ಜಾತಿಪದ್ಧತಿಯನ್ನು ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ಒಂದು ಶಾಸ್ತ್ರೀಯ ವಿಶ್ಲೇಷಣೆಗೆ ಒಳಪಡಿಸಿದ್ದ ಅಂಬೇಡ್ಕರ್, ಸಾಮಾಜಿಕ ಅಧಿಕಾರ ಪಡೆದ ಒಂದು ಸ್ವಾರ್ಥಿ ವರ್ಗ, ಸಾಮಾಜಿಕವಾಗಿ ತಮ್ಮ ಕೆಳಗಿದ್ದ ವರ್ಗದ ಮೇಲೆ ಹೇರಿದ ಒಂದು ಕ್ರೂರ ಸಾಮಾಜಿಕ ವ್ಯವಸ್ಥೆಯಾಗಿದ್ದು, ಇದಕ್ಕೆ ಧರ್ಮದ ಹೆಸರಿನಲ್ಲಿ ಮಾನ್ಯತೆ ನೀಡಿರುವ ಶಾಸ್ತ್ರಗ್ರಂಥಗಳನ್ನು ಅಮಾನ್ಯ ಮಾಡಬೇಕೆಂದೂ, ಹಿಂದೂ ಧರ್ಮದಲ್ಲಿ ಇಂತಹ ವಿಕ್ಷಿಪ್ತ ವ್ಯವಸ್ಥೆಯ ಸಮರ್ಥನೆಯ ಹೊರತಾಗಿ ಜಗತ್ತು ಮಾನ್ಯ ಮಾಡಬಲ್ಲ ಆಧ್ಯಾತ್ಮಿಕವೆನ್ನುವುದು ಏನೂ ಇಲ್ಲವೆಂದು ಟೀಕಿಸಿದ್ದರು. ಹಿಂದೂ ಧರ್ಮ ಸುಧಾರಕರೆಂದು ಕರೆದುಕೊಳ್ಳಬಯಸುವವರು ಅಂತರ್ಭೋಜನ, ಅಂತರ್ ವಿವಾಹದಂತಹ ಸಣ್ಣ ರಿಪೇರಿ ಕೆಲಸಗಳ ಬದಲು, ಜಾತಿ ವ್ಯವಸ್ಥೆಗೆ ಒಂದು ಪಾವಿತ್ರ್ಯ ಒದಗಿಸಿರುವ ಶಾಸ್ತ್ರಗ್ರಂಥಗಳ ಅಧಿಕಾರ ಕೇಂದ್ರಗಳನ್ನು ತಿರಸ್ಕರಿಸಿ, ನಾಶ ಮಾಡುವ ಕೆಲಸವನ್ನು ಕೈಗೆತ್ತಿಕೊಳ್ಳಬೇಕೆಂದೂ ಅವರು ಕರೆಕೊಟ್ಟಿದ್ದರು. ಆರ್ಥಿಕ ಸಬಲೀಕರಣ ಜಾತಿಯನ್ನು ಅಪ್ರಸ್ತುತಗೊಳಿಸುವುದೆಂಬ ಸಮಾಜವಾದಿ ದೃಷ್ಟಿಕೋನವನ್ನೂ

ತಿರಸ್ಕರಿಸಿದ್ದ ಅವರು, ಫ್ರೆಂಚ್ ಕ್ರಾಂತಿಯ ಆದರ್ಶಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಯ ಮೌಲ್ಯಗಳ ಆಧಾರದ ಮೇಲಿನ ಹೋರಾಟವೇ ಇದಕ್ಕೆ ಪರಿಹಾರವೆಂದು ಸೂಚಿಸಿದ್ದರು.

ಈ ಪ್ರಬಂಧದ ಮುದ್ರಿತ ಪ್ರತಿಯನ್ನು ಮೇ ಕೊನೆಯ ವಾರದಲ್ಲಿ ಮುಂಬೈನಲ್ಲಿ ಆಯೋಜಿಸಲಾಗಿದ್ದ ನಿಮ್ನವರ್ಗಗಳ ಸಮ್ಮೇಳನವೊಂದರಲ್ಲಿ ಬಿಡುಗಡೆ ಮಾಡಿ ಮಾತನಾಡಿದ ಅಂಬೇಡ್ಕರ್, ನಿಮ್ನವರ್ಗಗಳು ಹಿಂದೂ ದೇವರುಗಳನ್ನು ತಿರಸ್ಕರಿಸಿ ಹಿಂದೂ ಹಬ್ಬಗಳನ್ನು ಆಚರಿಸುವುದನ್ನು ನಿಲ್ಲಿಸಬೇಕೆಂದು ಸೂಚಿಸುತ್ತಾ, ಈ ಇಡೀ ಸಮುದಾಯ ಹಿಂದೂ ಧರ್ಮ ತ್ಯಜಿಸಲು ಸಿದ್ಧರಾಗಬೇಕೆಂದು ಕರೆಕೊಟ್ಟರು.

ಗಾಂಧಿ ಈ ಪ್ರಬಂಧವನ್ನು ಗಮನಿಸಿ ಅದನ್ನು ತಮ್ಮ 'ಹರಿಜನ' ಪತ್ರಿಕೆಯ ೧೯೩೬ರ ಜುಲೈ ೧೧ರ ಸಂಚಿಕೆಯಲ್ಲಿ ಪ್ರಕಟಿಸಿದ್ದಲ್ಲದೆ, ಅದಕ್ಕೊಂದು ಪ್ರತಿಕ್ರಿಯೆಯನ್ನೂ ಬರೆದರು. ಇದರಲ್ಲಿ ಗಾಂಧಿ ಸವರ್ಣ ಹಿಂದೂಗಳಿಂದ ಅಮಾನವೀಯವಾದ ಅವಮಾನ-ದೌರ್ಜನ್ಯಗಳನ್ನು ಪಾರಂಪರಿಕವಾಗಿ ಅನುಭವಿಸಿಕೊಂಡು ಬರುತ್ತಿರುವ ಸಮುದಾಯಕ್ಕೆ ಸೇರಿದ ಅಂಬೇಡ್ಕರ್ ಅವರ ಈ ವಿಚಾರಗಳನ್ನು ಯಾವ ಸುಧಾರಕನೂ ಉದಾಸೀನ ಮಾಡುವಂತಿಲ್ಲ ಎನ್ನುತ್ತಾರಲ್ಲದೆ, ಸಂಪ್ರದಾಯವಾದಿಗಳು ಇದನ್ನು ಓದಿದರೆ ಪ್ರಯೋಜನ ಪಡೆಯುವರು ಎಂದು ಹೇಳುತ್ತಾರೆ. ಇದು ಭಾರತದ ಎಲ್ಲ ಭಾಷೆಗಳಿಗೂ ಅನುವಾದವಾಗಬೇಕು ಮತ್ತು ಇದರ ಬೆಲೆ ಈಗಿರುವ ಹನ್ನೆರಡಾಣೆಗಿಂತ ಕಡಿಮೆಯಾಗಬೇಕು; ಎರಡಾಣೆಗೆ, ಹೆಚ್ಚೆಂದರೆ ನಾಲ್ಕಾಣೆಗೆ ಇದು ಸಾಮಾನ್ಯ ಜನರಿಗೆ ಸಿಗುವಂತಾಗಬೇಕು ಎಂದೂ ಅವರು ಸೂಚಿಸುತ್ತಾರೆ. ಆದರೆ ಅಂಬೇಡ್ಕರ್ ಜಾತಿ ಕುರಿತು ಮಂಡಿಸಿರುವ ವಿಚಾರಗಳನ್ನಾಗಲೀ ಅದರ ಆಧಾರದ ಮೇಲೆ ಅವರು ತಮ್ಮ ಅನುಯಾಯಿಗಳೊಂದಿಗೆ ಹಿಂದೂ ಧರ್ಮವನ್ನು-ಆ ಮೂಲಕ ಒಂದು ಪರಂಪರೆಯ ವಾರಸುದಾರಿಕೆಯನ್ನು-ತೊರೆದುಹೋಗುವ ನಿರ್ಧಾರವನ್ನು ಸಮರ್ಥಿಸಲು ಮಂಡಿಸಿರುವ ವಾದವನ್ನು ಒಪ್ಪುವುದಿಲ್ಲ.

ಜಾತಿಗೂ ಧರ್ಮಕ್ಕೂ ಸಂಬಂಧವಿಲ್ಲ: ಹಿಂದೂ ಧರ್ಮ ಶಾಸ್ತ್ರಧರ್ಮವಲ್ಲ; ಸಾಧು-ಸಂತರ ಧರ್ಮ

ಜಾತಿಗೂ ಧರ್ಮಕ್ಕೂ ಸಂಬಂಧವಿಲ್ಲ ಎಂದು ಹೇಳುವ ಗಾಂಧಿ, ಯಾವುದೋ ಕಾಲದ ಶಾಸ್ತ್ರಗಳ ಆಧಾರದ ಮೇಲೆ ಜಾತಿಗೆ ಧರ್ಮದ ಸಮ್ಮತಿ ಇದೆ ಎಂಬ ವಾದ ಮನುಷ್ಯನ ವಿವೇಚನಾ ಶಕ್ತಿಗೆ ವಿರುದ್ಧವಾದದ್ದು. ಹಿಂದೂ ಧರ್ಮದ ಶಾಸ್ತ್ರ ಗ್ರಂಥಗಳೆಂದು ಹೇಳಲಾಗುವ ವೇದಗಳು, ಉಪನಿಷತ್ತುಗಳು, ಪುರಾಣಗಳು, ರಾಮಾಯಣ-ಮಹಾಭಾರತಗಳು, ಶೃತಿ ಮತ್ತು ಸ್ಮೃತಿಗಳು ಒಂದೇ ಕಾಲದಲ್ಲಿ ರಚಿತವಾದುವಲ್ಲ. ಅವು ಒಂದಕ್ಕೊಂದರ ಕಾಲಾನುಕಾಲದ ವಿಮರ್ಶೆಗಳಾಗಿ ಬಂದಿವೆ ಎನ್ನುತ್ತಾರೆ. ಹಾಗಾಗಿ ಅವುಗಳಲ್ಲಿರುವುದೆಲ್ಲವನ್ನೂ ವಿವೇಚನೆ-ವಿಮರ್ಶೆಯಿಲ್ಲದೆ ಧಾರ್ಮಿಕ ಸತ್ಯಗಳೆಂದು ಒಪ್ಪುವ ಅಗತ್ಯವಿಲ್ಲ. ಬರೆದಿಟ್ಟ ಅಥವಾ ಮುದ್ರಿತವಾದುದೆಲ್ಲವೂ ಪವಿತ್ರವೂ ಅಲ್ಲ, ಮಾನ್ಯವೂ ಅಲ್ಲ. ವಿಶೇಷವಾಗಿ ಸ್ಮೃತಿಗಳಲ್ಲಿರುವುದನ್ನು ಎಲ್ಲ ಕಾಲಕ್ಕೂ

ಅನ್ವಯವಾಗುವುದೆಂದು ಒಪ್ಪಲಾಗುವುದಿಲ್ಲ ಎಂದೂ, ಧರ್ಮಗ್ರಂಥಗಳ ಪಟ್ಟಿ ಎಲ್ಲೂ ಸ್ಥಗಿತಗೊಳ್ಳದೆ ಅನಂತವಾಗಿ ಮುಂದುವರೆಯುತ್ತದೆ ಎಂದು ಗಾಂಧಿ ಅಭಿಪ್ರಾಯಪಡುತ್ತಾರೆ. ಧರ್ಮದ ಹೆಸರಿನಲ್ಲಿ ಯಾರೋ ಕೆಲವರು ನಡೆಸಿದ ದೌರ್ಜನ್ಯವನ್ನು ಮತ್ತು ಕೆಲ ಕೆಟ್ಟ ಉದಾಹರಣೆಗಳ ಹೊಣೆಯನ್ನು ಇಡೀ ಧರ್ಮದ ಮೇಲೆ ಹೊರಿಸಿ ಧರ್ಮ ಬಿಟ್ಟು ಹೊರಹೋಗುವುದು ಉಚಿತವಲ್ಲ. ಇಡೀ ಅಸ್ಪೃಶ್ಯ ಸಮುದಾಯ ಹಾಗೆ ಭಾವಿಸಿಲ್ಲ. ಅಂಬೇಡ್ಕರ್‌ರದ್ದು ಅಲ್ಪಸಂಖ್ಯಾತ ಅಭಿಪ್ರಾಯ. ಹಿಂದೂ ಧರ್ಮವನ್ನು ಸಹಾನುಭೂತಿಯಿಂದ ಅರ್ಥಮಾಡಿಕೊಳ್ಳಬಯಸುವ ಹಲವರು ಅಸ್ಪೃಶ್ಯರಲ್ಲಿದ್ದಾರೆ ಎಂದು ರಾವ್ ಬಹಾದುರ್ ಎಂ.ಸಿ. ರಾಜಾ ಮತ್ತು ದಿವಾನ್ ಬಹಾದುರ್ ಶ್ರೀನಿವಾಸನ್ ಅವರ ಉದಾಹರಣೆಗಳನ್ನು ನೀಡುತ್ತಾರೆ. ಹಿಂದೂ ಧರ್ಮ ಬೆಳೆದಿರುವುದು ಶಾಸ್ತ್ರಗ್ರಂಥಗಳ ನೀತಿ-ನಿಯಮಗಳ ಆಧಾರದ ಮೇಲಲ್ಲ. ಬದಲಿಗೆ, ಕಾಲಾನುಕಾಲದಲ್ಲಿ ಬಾಳಿ ಹೋದ ಸಮಾಜ ಸುಧಾರಕ ಸಂತರು ಅವುಗಳ ಬಗ್ಗೆ ಮಾಡಿದ ವ್ಯಾಖ್ಯಾನಗಳು ಮತ್ತು ಉಪದೇಶಗಳ ಮೂಲಕ ಎಂದು ಅವರು ಜ್ಞಾನದೇವ, ಏಕನಾಥ, ತುಕಾರಾಮ, ಕಬೀರ, ಚೈತನ್ಯ, ತಿರುವಳ್ಳುವರ್ ಮುಂತಾದವರ ಉದಾಹರಣೆಗಳನ್ನು ನೀಡುತ್ತಾರೆ ಮತ್ತು ಇಂತಹ ಮಹಾತ್ಮರು ಹಾಗೂ ರಾಜಾರಾಂ ಮೋಹನ ರಾಯ್, ಮಹರ್ಷಿ ದೇವೇಂದ್ರನಾಥ ಟ್ಯಾಗೋರ್, ರಾಮಕೃಷ್ಣ ಪರಮಹಂಸ, ವಿವೇಕಾನಂದರಂಥ ಮಹಾಪುರುಷರಿಂದ ಪ್ರತಿಪಾದಿಸಲ್ಪಟ್ಟ ಧರ್ಮವು ಬರೀ ದೋಷಗಳಿಂದ ತುಂಬಿ ತಿರಸ್ಕರಣೀಯವಾಗಿದೆ ಎಂದು ನಂಬಲಾಗದು ಎನ್ನುತ್ತಾರೆ ಗಾಂಧಿ. ಹೀಗೆ ಗಾಂಧಿ ಒಂದರ್ಥದಲ್ಲಿ ಓರ್ವ ಶ್ರಮಣರಂತೆ ಹಿಂದೂ ಧರ್ಮವನ್ನು ಒಂದು ಶ್ರಮಣ ಧರ್ಮವನ್ನಾಗಿ ಪ್ರಸ್ತುತಪಡಿಸಲು ಯತ್ನಿಸುತ್ತಾರೆ.

ಇದಕ್ಕೆ ಅಂಬೇಡ್ಕರ್ ಒಂದು ವಿವರವಾದ-ದೀರ್ಘ-ಉತ್ತರ ನೀಡುತ್ತಾರೆ. ಗಾಂಧಿಯವರ ವಾದದ ಪ್ರತಿ ಅಂಶವನ್ನೂ ಎತ್ತಿಕೊಂಡು ಉದಾಹರಣೆಗಳ ಸಮೇತ ಅವರ ವಾದವನ್ನು ತಿರಸ್ಕರಿಸುತ್ತಾ, ಮೊದಲ ಬಾರಿಗೆ ಅವರು ಗಾಂಧಿಯವರ ಮೇಲೆ ವೈಯಕ್ತಿಕ ನೆಲೆಯ ದಾಳಿ ಮಾಡುತ್ತಾರೆ. ಅವರನ್ನು ಆತ್ಮದ್ರೋಹಿಯೆಂದೂ, ಯೋಚನಾ ಶಕ್ತಿಯೇ ಇಲ್ಲದವರೆಂದೂ, ಕೊನೆಗೆ ಹಿಂದೂ ಧರ್ಮದ ಶತ್ರುವೆಂದೂ ಟೀಕಿಸುತ್ತಾರೆ. ಆದರೆ ಈ ಉತ್ತರದ ಗಮನಾರ್ಹ ಭಾಗವೆಂದರೆ, ಅವರು ಗಾಂಧಿಯವರ ರಾಜಕಾರಣವನ್ನು ಒಂದು ಸಮಗ್ರ ವಿಮರ್ಶೆಗೆ ಒಳಪಡಿಸುವ ಈ ಸಾಲುಗಳು: 'ಮಹಾತ್ಮರು ರಾಜಕಾರಣ ಅಥವಾ ಧರ್ಮ ಇವುಗಳಲ್ಲಿ ಒಂದನ್ನು ಆರಿಸಿಕೊಂಡರೆ ಒಳ್ಳೆಯದಿತ್ತು. ಆದರೆ ಅವರು ರಾಜಕಾರಣವನ್ನು ಅಧ್ಯಾತ್ಮೀಕರಿಸಲು ಹೋಗಿ ಅದನ್ನು ವ್ಯಾಪಾರೀಕರಿಸಿಬಿಟ್ಟಿದ್ದಾರೆ. ಪೂರ್ಣ ಸತ್ಯ ಹೇಳಬಾರದೆಂಬುದು ರಾಜಕಾರಣಿಗೆ ಗೊತ್ತಿರಬೇಕು. ಏಕೆಂದರೆ ಸಮಾಜ ಅದನ್ನು ತಡೆದುಕೊಳ್ಳಲಾರದು. ಆದರೆ ಅವರು ಪೂರ್ಣ ಸತ್ಯ ಹೇಳುತ್ತಾ ಕೆಟ್ಟ ರಾಜಕಾರಣ ಮಾಡುತ್ತಿದ್ದಾರೆ. ಮಹಾತ್ಮರು ಪ್ರತಿಬಾರಿಯೂ ಮೇಲ್ಜಾತಿಗಳ ಪರ ವಕಾಲತ್ತು ವಹಿಸುವುದೇಕೆಂದರೆ, ಅವರ ಬೆಂಬಲ ತಮಗೆ ಇಲ್ಲದೇ ಹೋದರೆ ರಾಜಕಾರಣದಲ್ಲಿ ತಾವು ಜಾಗ ಖಾಲಿ ಮಾಡಬೇಕೆಂಬುದು ಅವರಿಗೆ ಗೊತ್ತಿದೆ'.

ಅಂಬೇಡ್ಕರ್ ಮುಂದಿನ ಮೂರು ಆಯ್ಕೆಗಳು

ಈ ಸಮಯದಲ್ಲಿ ಹಿಂದೂ ಮಹಾಸಭಾದ ಮೂಂಜೆಯವರು ಅಂಬೇಡ್ಕರ್ ಅವರನ್ನು ಭೇಟಿ ಮಾಡಿ, ಅವರು ಹಿಂದೂ ಧರ್ಮವನ್ನು ಬಿಡುವುದಾದರೆ ಹಿಂದೂ ಸಂಸ್ಕೃತಿಯ ವ್ಯಾಪ್ತಿಗೆ ಸೇರುವ ಸಿಖ್ ಧರ್ಮಕ್ಕೆ ಮತಾಂತರವಾಗುವಂತೆಯೂ, ಹಾಗೆ ಮಾಡಿದಲ್ಲಿ, ಆ ಧರ್ಮದಲ್ಲೂ ಹೊಸ ಮತಾಂತರಿಗಳ ಮೀಸಲು ವ್ಯವಸ್ಥೆಗೆ ಸಹಾಯ ಮಾಡುವುದಾಗಿಯೂ ತಿಳಿಸುತ್ತಾರೆ. ಆದರೆ ಅಂಬೇಡ್ಕರ್ ಸಿಖ್ ಧರ್ಮ ಒಂದು ಸಣ್ಣ ಸಮುದಾಯದ ಧರ್ಮವಾಗಿದ್ದು, ನಿಮ್ನವರ್ಗವನ್ನು ಸಲಹುವಷ್ಟು ಆರ್ಥಿಕವಾಗಿ ಸಬಲವಾಗಿಲ್ಲವೆಂದೂ ಭಾವಿಸುತ್ತಾರೆ. ಆದರೆ ಹಿಂದೂಗಳಿಗೆ ಆಘಾತ ಮಾಡಲು, ಹಣಕಾಸಿನ ವಿಷಯದಲ್ಲಿ ಸಬಲವಾಗಿರುವ ಇಸ್ಲಾಂ ಅಥವಾ ಕ್ರೈಸ್ತ ಧರ್ಮ ಸೇರುವ ಆಯ್ಕೆಯನ್ನು, ಆ ಧರ್ಮಗಳ ಮೌಲ್ವಿ–ಪಾದರಿಗಳ ಕೋರಿಕೆಯನ್ನು ಪರಿಗಣಿಸಿ ಪರಿಶೀಲಿಸುವರಾದರೂ, ಇಸ್ಲಾಂಗೆ ಸೇರಿದರೆ ಮುಸ್ಲಿಮರ ಜನಸಂಖ್ಯೆ ದುಪ್ಪಟ್ಟಾಗಿ ದೇಶಕ್ಕೆ ಅಪಾಯ ಹೆಚ್ಚುವ ಮತ್ತು ಕ್ರೈಸ್ತ ಧರ್ಮಕ್ಕೆ ಸೇರಿದರೆ ಬ್ರಿಟಿಷ್ ಸರ್ಕಾರದ ಕೈ ಬಲಪಡಿಸುವ ಸಾಧ್ಯತೆಯ ಕಾರಣದಿಂದಾಗಿ ಅವರು, ಈ ಮೂರೂ ಆಯ್ಕೆಗಳನ್ನೂ ಕೈಬಿಡುತ್ತಾರೆ.

ಫಲ ಕೊಟ್ಟ ವೈಕಂ ಸತ್ಯಾಗ್ರಹ: ಹರ್ಷಗೊಂಡ ಗಾಂಧಿ

ಇದೇ ಸಂದರ್ಭದಲ್ಲಿ ಜಾತಿ ಪ್ರತ್ಯೇಕತೆಗೆ ಸಂಬಂಧಿಸಿದ ಇನ್ನೆರಡು ಪ್ರಸಂಗಗಳನ್ನೂ ನಿರೂಪಿಸುವುದು ಉಚಿತ. ೧೯೩೬ರ ನವೆಂಬರ್ ಎರಡನೇ ವಾರದಲ್ಲಿ ತಿರುವಾಂಕೂರು ಸಂಸ್ಥಾನದ ದೊರೆ ತನ್ನ ಸಂಸ್ಥಾನದ ಎಲ್ಲ ದೇವಾಲಯಗಳಿಗೂ ಎಲ್ಲ ಜಾತಿ ಜನರ ಮುಕ್ತ ಪ್ರವೇಶದ ಆದೇಶ ಹೊರಡಿಸಿದ. ಇದು ಈ ಹಿಂದೆ ಗಾಂಧಿ ಭಾಗವಹಿಸಿದ್ದ ವೈಕಂ ಸತ್ಯಾಗ್ರಹದ ಪರಿಣಾಮವೇ ಆಗಿತ್ತು. ಆ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ವ್ಯಕ್ತಿಯೊಬ್ಬರು ತಮ್ಮ ಸಂತೋಷ ಸಂಭ್ರಮಗಳನ್ನು ಹಂಚಿಕೊಂಡು ಗಾಂಧಿಯವರಿಗೆ ತಂತಿ ಕಳಿಸಿದರು. ಆ ತಂತಿಯ ಪಠ್ಯವನ್ನು ತಮ್ಮ 'ಹರಿಜನ್' ಪತ್ರಿಕೆಯಲ್ಲಿ ಪ್ರಕಟಿಸಿ ಸಂಸ್ಥಾನದ ಪುರೋಹಿತ ವರ್ಗದ ಹೃದಯ ವೈಶಾಲ್ಯವನ್ನು ಕೊಂಡಾಡಿ ಒಂದು ಟಿಪ್ಪಣಿಯನ್ನೂ ಬರೆದರು. ಇದು ಅವರ ಸತ್ಯಾಗ್ರಹದ ವಿಜಯವೂ ಆಗಿತ್ತು.

ಗಾಂಧಿ ಈ ಪರಿವರ್ತನೆಯನ್ನು, ಸಂತೋಷ ಸಂಭ್ರಮಗಳನ್ನು ಕಣ್ಣಾರೆ ನೋಡಲು ತಿರುವಾಂಕೂರಿಗೆ ಹೊರಟರು. ಅಲ್ಲಿ ಅವರು ಇಪ್ಪತ್ತೈದು ಸ್ಥಳಗಳಲ್ಲಿ ದೇವಸ್ಥಾನ ಪ್ರವೇಶ ಆಚರಣೆಯ ಸಭೆಗಳಲ್ಲಿ ಭಾಗವಹಿಸಿದರು. ಸಂಸ್ಥಾನದ ಸುಧಾರಣಾವಾದಿ ದೊರೆಯನ್ನು ಮನಸಾರೆ ಹೊಗಳಿದರು. ಹಾಗೇ ತಮಗೆ ಸ್ವಾಗತ ಕೋರಿದ ಭಿತ್ತಿಪತ್ರದಲ್ಲಿ ಈಳವ ಸಮುದಾಯದ ಹೆಸರು ಮಾತ್ರ ಇದ್ದುದನ್ನು ಗಮನಿಸಿ, ಹರಿಜನರಿಗೆ ಜಾಗವಿಲ್ಲದೆಡೆ ತಮಗೂ ಜಾಗವಿಲ್ಲ ಎಂದು ಸ್ಪಷ್ಟಪಡಿಸಿದರು. ತಿರುವಾಂಕೂರಿನ ಹರಿಜನ ವಿದ್ಯಾರ್ಥಿ ನಿಲಯಗಳಿಗೆ ಭೇಟಿಕೊಟ್ಟ ಗಾಂಧಿ, ಅದರ ಮೇಲ್ಜಾತಿ ವ್ಯವಸ್ಥಾಪಕ ವಿದ್ಯಾರ್ಥಿಗಳೊಂದಿಗೆ ಊಟ ಮಾಡುತ್ತಿರುವುದನ್ನು ಖಚಿತಪಡಿಸಿಕೊಂಡರು. ಪಕ್ಕದ ಸಂಸ್ಥಾನವಾದ ಕೊಚ್ಚಿನ್‌ನಲ್ಲೂ ದೇವಾಲಯಗಳನ್ನು ಎಲ್ಲರಿಗೆ ಮುಕ್ತವಾಗಿಡುವ ಕಾಲ

ದೂರವಿಲ್ಲ ಎಂಬ ಆಶಯ ವ್ಯಕ್ತಪಡಿಸಿದರು. ಮಲೆಯಾಳ ನಾಡಿನ ಬಹುಮುಖ್ಯ ದೇವಸ್ಥಾನವಾದ ಗುರುವಾಯೂರು ಶ್ರೀಕೃಷ್ಣ ದೇವಾಲಯವಿದ್ದುದು ಅಲ್ಲೇ.

ಪುರಿಯಲ್ಲಿ ಕಸ್ತೂರಬಾ ದೇವಾಲಯ ಪ್ರವೇಶ: ಅಸ್ವಸ್ಥರಾದ ಗಾಂಧಿ

ದೇವಸ್ಥಾನ ಪ್ರವೇಶಕ್ಕೆ ಸಂಬಂಧಪಟ್ಟ ಗಾಂಧಿಯವರ ನೀತಿಯನ್ನು ಸ್ಪಷ್ಟಪಡಿಸುವ ಇನ್ನೊಂದು ಘಟನೆ ನಡೆದದ್ದು ೧೯೩೮ರ ಮಾರ್ಚ್ ಕೊನೆಯಲ್ಲಿ. ಒರಿಸ್ಸಾದಲ್ಲಿ ದೆಲಾಂಗ್ ಎಂಬ ಸಣ್ಣ ಊರೊಂದರಲ್ಲಿ ಗ್ರಾಮೀಣ ಕೈಗಾರಿಕೆಗಳ ವಸ್ತು ಪ್ರದರ್ಶನವೊಂದನ್ನು ಉದ್ಘಾಟಿಸಿ ಮಾತನಾಡಿದ ಗಾಂಧಿ, ಸನಿಹದ ಪುರಿ ಜಗನ್ನಾಥ ದೇವಾಲಯಕ್ಕೆ ಹರಿಜನರ ಪ್ರವೇಶವನ್ನು ನಿಷೇಧಿಸಲಾಗಿದೆ ಎಂಬುದು ಖೇದದ ವಿಷಯ ಎಂದು ಹೇಳಿದರಲ್ಲದೆ, ಎಲ್ಲಿ ಹರಿಜನರಿಗೆ ಪ್ರವೇಶವಿಲ್ಲವೋ ಅಲ್ಲಿ ನಾನು ಪ್ರವೇಶಿಸಲಾರೆ ಎಂದು ಘೋಷಿಸಿದರು. ಆಗ ಅಲ್ಲಿ ಕಸ್ತೂರಬಾ, ಮಹದೇವ ದೇಸಾಯಿ, ಅವರ ಪತ್ನಿ ದುರ್ಗಾ ಮತ್ತು ಅವರ ಮಗ ನಾರಾಯಣ ಇದ್ದರು. ಮಾರನೆಯ ದಿನ ಗಾಂಧಿ ಮತ್ತು ಮಹದೇವ ದೇಸಾಯಿ ಹರಿಜನ ಕಾರ್ಯಕರ್ತರೊಂದಿಗೆ ಸಭೆ ನಡೆಸುತ್ತಿದ್ದಾಗ ಆ ಇಬ್ಬರು ಮಹಿಳೆಯರು ಮತ್ತು ಆ ಹುಡುಗ ಹತ್ತಿರದಲ್ಲೇ ಇದ್ದ ಪುರಿಯತ್ತ ನಡೆದರು. ಇಬ್ಬರು ಮಹಿಳೆಯರು ಜಗನ್ನಾಥ ದೇವಾಲಯವನ್ನು ಪ್ರವೇಶಿಸಲು ಹೆಜ್ಜೆ ಇಡುತ್ತಿದ್ದಂತೆ ಬಾಲಕ ನಾರಾಯಣ, ಗಾಂಧಿಯವರ ಮಾತನ್ನು ಅವರಿಗೆ ನೆನಪಿಸಿದ. ಆ ಇಬ್ಬರು ಮಹಿಳೆಯರು ಅದನ್ನು ಲೆಕ್ಕಿಸದೆ ದೇವಸ್ಥಾನದೊಳಕ್ಕೇ ಹೋಗಿ ದೇವರ ದರ್ಶನ ಮಾಡಿಕೊಂಡು ಬಂದರು.

ವಾಪಸ್ ಬಂದ ಮಹಿಳೆಯರನ್ನು ಗಾಂಧಿ ಎಲ್ಲಿಗೆ ಹೋಗಿದ್ದಿರಿ? ಎಂದು ಕೇಳಿದರು. ನಾರಾಯಣ ಎಲ್ಲವನ್ನೂ ಹೇಳಿಬಿಟ್ಟ. ಗಾಂಧಿಗೆ ಸಿಡಿಲೇ ಬಡಿದಂತಾಯಿತು. ಅವರ ಕಣ್ಣು ಕೆಂಪಾಯಿತು, ತುಟಿಗಳು ಅಲುಗಿದವು, ಮೈ ನಡುಗಿತು. ಅವರಿಗೆ ತನ್ನ ಮಾತುಗಳು ತಮ್ಮ ಹತ್ತಿರದವರಿಗೇ ಮುಟ್ಟುತ್ತಿಲ್ಲ ಎಂಬ ದುಃಖ ಉಮ್ಮಳಿಸಿ ಬಂತು. ಇಬ್ಬರು ಹೆಂಗಸರಿಗೂ ಛೀಮಾರಿ ಹಾಕತೊಡಗಿದರು. ಮಧ್ಯಪ್ರವೇಶಿಸಿದ ಮಹದೇವ ದೇಸಾಯಿಯವರು ತಾವೇ ಮಹಿಳೆಯರಿಗೆ ಅಭಯ ನೀಡಿ ಕಳಿಸಿದ್ದು ಎಂದು ತಿಳಿಸಿದಾಗ ಗಾಂಧಿ ಬೆಚ್ಚಿಬಿದ್ದರು. ಮಹದೇವ ಅವರ ಮೇಲೆ ಕೂಗಾಡಿದರು. ಮಹಿಳೆಯರು ಕಣ್ಣೀರಿಟ್ಟು ಗಾಂಧಿಯವರ ಕ್ಷಮೆ ಕೇಳಿದರೆ, ದೇಸಾಯಿ ತಾವು ಅವರ ಆಪ್ತ ಕಾರ್ಯದರ್ಶಿ ಆಗಲು ಅರ್ಹನಲ್ಲವೆಂದು ಹೇಳಿ ಅವರಿಂದ ದೂರಾಗುವ ಮಾತನಾಡಿದರು.

ಗಾಂಧಿಯವರ ರಕ್ತದೊತ್ತಡ ವಿಪರೀತ ಏರಿ ಅಸ್ವಸ್ಥರಾಗಿದ್ದರು. ಅವರಿಗೆ ವಿಶ್ರಾಂತಿ ಬೇಕಿತ್ತು. ವಿಶ್ರಾಂತಿಯ ನಂತರ ಅವರು ಮಹದೇವ ದೇಸಾಯಿಯವರಿಗೆ ದುಡುಕಬಾರದಾಗಿ ಹೇಳಿದರು. ಅವರಿಲ್ಲದೆ ತಮ್ಮ ಬಾಳು ಲಂಗರು ಕಳೆದುಕೊಳ್ಳುವುದೆಂದು ಹೇಳಿ ಅವರು ನಿರ್ಧಾರವನ್ನು ಬದಲಿಸುವಂತೆ ಒತ್ತಾಯಿಸಿದರು. ಮಣಿದ ದೇಸಾಯಿ ಈ ಇಡೀ ಘಟನೆಯನ್ನು 'ಹರಿಜನ್' ಪತ್ರಿಕೆಯ ೧೯೩೮ರ ಏಪ್ರಿಲ್ ೯ರ ಸಂಚಿಕೆಯಲ್ಲಿ ವಿವರಿಸಿ, ಕೊನೆಗೆ ಹೀಗೆ ಬರೆದರು.

ದೇವಲೋಕದ ಸಂತರ ಸಹವಾಸ ಆನಂದಮಯವೇ ಹೌದು.

ಆದರೆ ಭೂಲೋಕದ ಸಂತರ ಸಹವಾಸ ಯಾರಿಗೂ ಬರಬಾರದು!

ಹರಿಲಾಲನ ಮುಗಿಯದ ರಗಳೆ

ಗಾಂಧಿ ೧೯೩೪ರ ಆಸುಪಾಸಿನ ವರ್ಷಗಳಲ್ಲಿ ತಮ್ಮನ್ನು ಕಂಗೆಡಿಸಿದ ಇನ್ನೊಂದು ಸವಾಲೆಂದರೆ, ತಮ್ಮ ಹಿರಿಯ ಮಗ ಹರಿಲಾಲನದು. ಇತ್ತೀಚಿನ ವರ್ಷಗಳಲ್ಲಿ ಕುಡಿತ ಮತ್ತು ವ್ಯಭಿಚಾರಗಳಿಗೆ ಬಲಿಯಾಗಿದ್ದ ಅವನು ಇವುಗಳಿಗಾಗಿ ಹಣವಿಲ್ಲದೆ ಪರದಾಡುತ್ತಾ ಮಾನಸಿಕವಾಗಿ ಡೋಲಾಯಮಾನ ಸ್ಥಿತಿಯಲ್ಲಿದ್ದ. ಮತ್ತೆ ಆತ ೧೯೩೪ರ ಸೆಪ್ಟೆಂಬರ್‌ನಲ್ಲಿ ವರ್ಧಾದಲ್ಲಿದ್ದ ತಂದೆಯ ಬಳಿ ಬಂದು, ತಾನೀಗ ಬದಲಾಗಿರುವುದಾಗಿಯೂ, ಪೋರ್‌ಬಂದರ್‌ನಲ್ಲಿ ಒಂದು ಅಂಗಡಿ ಹಾಕಿಕೊಂಡು ತಾನು ತನ್ನ ಮಕ್ಕಳೊಂದಿಗೆ ಸ್ವತಂತ್ರವಾಗಿ ಬಾಳುವುದಾಗಿಯೂ, ಮರು ಮದುವೆಯಾಗಬಯಸುವುದಾಗಿಯೂ ತಿಳಿಸಿದ. ಅವನ ಸ್ಥಿತಿಯನ್ನು ನೋಡಿ ಕರಗಿದ ಗಾಂಧಿ, ಅವನಿಗೆ ಎಲ್ಲ ಸಹಾಯ ಮಾಡುವುದಾಗಿಯೂ, ವಿಧವೆಯೊಬ್ಬಳನ್ನು ಆಯ್ಕೆ ಮಾಡಿಕೊಳ್ಳುವುದಾದರೆ ಮರುಮದುವೆಯನ್ನು ತಾವೇ ನಿಂತು ಮಾಡಿಸುವುದಾಗಿಯೂ ಹೇಳಿದರಲ್ಲದೆ, ಅವನ ತೊಡೆಯ ಮೇಲೆ ತಲೆಯಿಟ್ಟು ತಾವು ಪ್ರಾಣಬಿಡಬಯಸುವುದಾಗಿ ಅವನಿಗೆ ತಿಳಿಸಿದರು. ಹಾಗಾಗಿ ಹರಿಲಾಲನಿಗೆ ಒಂದು ದುಡಿಮೆಯ ಮಾರ್ಗ ತೋರಿಸಲು ಅವರು ತಮ್ಮ ಹಿರಿಯ ಬಂಧು ನಾರಾಯಣದಾಸ್ ಅವರಿಗೂ ಪತ್ರ ಬರೆದಿದ್ದರು.

ಆದರೆ ಹರಿಲಾಲ ನಿಜವಾಗಿಯೂ ಬದಲಾಗಿದ್ದಾನೆಯೇ ಎಂಬ ಬಗ್ಗೆ ಗಾಂಧಿಯವರಿಗೆ ಅನುಮಾನಗಳಿದ್ದವು. ಹಾಗಾಗಿ ಅವನು ಈಗ ಸ್ವಲ್ಪ ಕಾಲ ಇರಲು ಹೋಗಿದ್ದ ರಾಜಕೋಟೆಯ ತಮ್ಮ ಬಂಧುಗಳಿಗೆ ಪತ್ರ ಬರೆದು ವಿಚಾರಿಸಿದರು. ಆದರೆ ಅವನು ಕಿಂಚಿತ್ತೂ ಬದಲಾಗಿಲ್ಲವೆಂದು ತಿಳಿಯಿತು. ಕೂಡಲೇ ಅವರು ನಾರಾಯಣದಾಸ್‌ರಿಗೆ ಪತ್ರ ಬರೆದು ಹರಿಲಾಲ ಸಂಪೂರ್ಣ ದಾರಿ ತಪ್ಪಿದ್ದು ಅವನನ್ನು ಸಂಪೂರ್ಣ ತೊರೆಯಲು ತಾವು ನಿರ್ಧರಿಸಿರುವುದಾಗಿಯೂ, ಅವನಿಗೆ ಯಾವ ಸಹಾಯವನ್ನೂ ಮಾಡಬಾರದೆಂದು ಸೂಚಿಸಿದರು. ಇದನ್ನು ತಿಳಿದ ಹರಿಲಾಲ ತಂದೆಯ ಮೇಲೆ ಹಲವು ಆರೋಪಗಳನ್ನು ಪುನರಾವರ್ತಿಸಿ ಒಂದು ಕೋಪೋದ್ರಿಕ್ತ ಪತ್ರ ಬರೆದ.

ನಂತರ ಒಂದು ವರ್ಷದ ಕಾಲ ಹರಿಲಾಲನ ಸುದ್ದಿ ಇರಲಿಲ್ಲ. ೧೯೩೬ರ ಏಪ್ರಿಲ್‌ನಲ್ಲಿ ಗಾಂಧಿ ದಂಪತಿಗಳು ನಾಗಪುರದಲ್ಲಿದ್ದಾಗ ಅವರನ್ನು ಭೇಟಿ ಮಾಡಿದ್ದ ಹರಿಲಾಲ, ಅನ್ಯಧರ್ಮ ಪ್ರಚಾರಕರು ಪದೇ ಪದೇ ತನ್ನನ್ನು ಭೇಟಿಯಾಗಿ ಮತಾಂತರಕ್ಕೆ ಪ್ರೇರೇಪಿಸುತ್ತಿದ್ದಾರೆಂದು ತಿಳಿಸಿದ್ದ.

ಅನ್ಸಾರಿಯವರ ನಿಧನ–ಹರಿಲಾಲನ ಮತಾಂತರ

ಆದರೆ ಗಾಂಧಿ, ೧೯೩೬ರ ಜೂನ್‌ನಲ್ಲಿ ಅನಾರೋಗ್ಯದ ಕಾರಣ (ಎರಡನೇ

ಬಾರಿಗೆ) ನಂದಿ ಬೆಟ್ಟದಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದ ಪಟೇಲರನ್ನು ಕಾಣಲು ಹೋಗಿದ್ದಾಗ, ಗಾಂಧಿಯವರಿಗೆ ತಮ್ಮ ಆಪ್ತ ಮುಸ್ಲಿಂ ಅನುಯಾಯಿ ಡಾ.ಎಂ.ಎ.ಅನ್ಸಾರಿ ಅವರ ನಿಧನದ ದುಃಖ ವಾರ್ತೆಯ ಜೊತೆಗೆ ತಮ್ಮ ಹಿರಿಮಗನ ಮತಾಂತರದ ಆಘಾತಕರ ಸುದ್ದಿಯೂ ತಲುಪಿತು. ಅನ್ಸಾರಿಯವರ ಅನಿರೀಕ್ಷಿತ ಸಾವು ಅವರಿಗೆ ರಾಜಕೀಯವಾಗಿ ಆಘಾತಕರವಾಗಿದ್ದರೆ, ಹರಿಲಾಲನನ್ನು ಕುರಿತ ಸುದ್ದಿ, ವೈಯಕ್ತಿಕವಾಗಿ ಆಘಾತಕಾರಿಯಾಯಿತು. ಆತ ಬಾಂಬೆಯಲ್ಲಿ ಇಸ್ಲಾಂಗೆ ಮತಾಂತರವಾಗಿ, ಅಬ್ದುಲ್ಲಾ ಆಗಿ ಮರುನಾಮಕರಣ ಹೊಂದಿದ್ದ. ಆಘಾತ-ಮುಜುಗರಗಳ ಮಧ್ಯೆಯೇ ಅವರು ಒಂದು ಸಾರ್ವಜನಿಕ ಹೇಳಿಕೆ ನೀಡಿ, ಅವನು ಯಾವುದೇ ಆಮಿಷಗಳಿಗೆ ಒಳಗಾಗದೆ ಮುಕ್ತ ಮನಸ್ಸಿನಿಂದ ಮತಾಂತರವಾಗಿದ್ದಲ್ಲಿ, ನಾನು ನನ್ನ ಧರ್ಮದಷ್ಟೇ ಗೌರವಿಸುವ ಇಸ್ಲಾಂ ಮತಕ್ಕೆ ಸೇರಿರುವ ಬಗ್ಗೆ ನನ್ನ ಯಾವ ಆಕ್ಷೇಪವೂ ಇಲ್ಲ ಎಂದು ತಿಳಿಸಿದರು. ಆದರೆ ಅದೇ ವೇಳೆಯಲ್ಲಿ, ಸರ್ವಶಕ್ತನಾದ ಭಗವಂತ ಅವನಿಗೆ ತನ್ನ ನಿರ್ಧಾರದ ಬಗ್ಗೆ ಪಶ್ಚಾತ್ತಾಪವಾಗುವಂತಹ ಬುದ್ಧಿಯನ್ನು ದಯಪಾಲಿಸುವನೆಂಬ ಆಶಯವನ್ನೂ ವ್ಯಕ್ತಪಡಿಸಿದ್ದರು. ಸಾಲದಲ್ಲಿ ಮುಳುಗಿಹೋಗಿ ಪಠಾಣರಿಂದ ಹಲವು ಬಾರಿ ಬೆದರಿಕೆಗೆ ಒಳಗಾಗಿದ್ದ ಹರಿಲಾಲ, ಆಮಿಷಗಳಿಗೆ ಬಲಿಯಾಗಿರುವ ಅನುಮಾನ ಅವರಿಗೆ ಇದ್ದೇ ಇತ್ತು. ಅವರು ಬಾಂಬೆಯಲ್ಲಿನ ತಮ್ಮ ಕೆಲವು ಮುಸ್ಲಿಂ ಗೆಳೆಯರಿಗೆ ಈ ಬಗ್ಗೆ ವಿಚಾರಿಸಲು ತಿಳಿಸಿದರು. ಹರಿಲಾಲ ಬಾಂಬೆಯ ಕೆಲ ಮುಸ್ಲಿಂ ಗುಂಪುಗಳ ಮಧ್ಯೆ 'ಹೀರೋ' ಆಗಿ ಆರಾಧಿಸಲ್ಪಡುತ್ತಿದ್ದ.

ಹರಿಲಾಲನ ಮತಾಂತರದ ಸುದ್ದಿಯಿಂದ ಗಾಂಧಿಯವರಿಗಿಂತ ಹೆಚ್ಚು ಆಘಾತಗೊಂಡವರು, ಆಗ ದೆಹಲಿಯ ತಮ್ಮ ಕಿರಿಯ ಮಗ ದೇವದಾಸನ ಮನೆಯಲ್ಲಿದ್ದ ಕಸ್ತೂರಬಾ ಅವರು. ಅವರಿಗೆ ದುಃಖ ತಡೆಯಲಾಗದೆ, ದೇವದಾಸನ ಸಲಹೆಯಂತೆ ಹರಿಲಾಲನಿಗೆ ಒಂದು ಬಹಿರಂಗ ಪತ್ರ ಬರೆಯುವ ಮೂಲಕ ತಮಗಾಗಿರುವ ಮುಜುಗರ-ಸಂಕಟಗಳನ್ನು ಹೊರಹಾಕಿದರು. ಸೆಪ್ಟೆಂಬರ್ ೨೭ರ ಪತ್ರಿಕೆಗಳಲ್ಲಿ ಅದು ಪ್ರಕಟವಾಯಿತು. ಅದರಲ್ಲಿ ಬಾ ಅವರು ಹರಿಲಾಲನನ್ನು 'ನನ್ನ ಪ್ರೀತಿಯ ಕಂದ' ಎಂದು ಸಂಭೋಧಿಸಿ ಹೀಗೆ ಬರೆದಿದ್ದರು:

"ನೀನು ನನ್ನ ಬದುಕಿನ ಕೊನೆಯ ದಿನಗಳಲ್ಲಿ ನನಗೆ ತುಂಬ ಕಷ್ಟ ತಂದೊಡ್ಡಿ, ಜೀವನ ದುಸ್ತರವೆನ್ನುವಂತೆ ಮಾಡಿದ್ದೀಯಾ. ನಿನ್ನ ವರ್ತನೆಯಿಂದ ನಿಮ್ಮ ತಂದೆಯ ಎದೆ ಒಡೆದುಹೋಗದಿರುವುದು ಆಶ್ಚರ್ಯ. ಅವರದೋ ಕಷ್ಟಗಳ ಪರಂಪರೆಯನ್ನು ಎದುರಿಸಿ ಗಟ್ಟಿಯಾದ ಹೃದಯ. ಆದರೆ ನಾನೇನು ಮಾಡಲಿ? ನಿನ್ನಿಂದಾಗಿ ನಿಮ್ಮ ತಂದೆ ಎಷ್ಟು ಕಟು ಟೀಕೆಗಳನ್ನೂ ಅಪವಾದಗಳನ್ನೂ ಎದುರಿಸುತ್ತಿದ್ದಾರೆಂದು ನಿನಗೆ ಗೊತ್ತಿದೆಯಾ? ಅವರು ಎಷ್ಟು ಅವಮಾನಗೊಂಡರೂ ನಿನ್ನನ್ನು ಕ್ಷಮಿಸುತ್ತಲೇ ಬಂದಿದ್ದಾರೆ. ನಿನ್ನ ಮಕ್ಕಳೂ, ಅಳಿಯನೂ ನಿನ್ನ ವರ್ತನೆಗಳಿಂದ ಅವಮಾನ ಅನುಭವಿಸುತ್ತಿದ್ದಾರೆ".

ನಾನು ಇತ್ತೀಚೆಗೆ, ಪ್ರತಿದಿನ ಬೆಳಿಗ್ಗೆ ಬಹು ಆತಂಕದಿಂದಲೇ ಏಳುತ್ತಿದ್ದೇನೆ. ಏಕೆಂದರೆ ಪ್ರತಿ ದಿನದ ಪತ್ರಿಕೆಯಲ್ಲಿ ನಿನ್ನ ಬಗ್ಗೆ ಒಂದಲ್ಲ ಒಂದು ದುರ್ವರ್ತನೆಯ ಸುದ್ದಿ ಇರುತ್ತದೆ. ಇತ್ತೀಚೆಗೆ ನಿನ್ನನ್ನು ಪಾನಮತ್ತತೆಯ ಕಾರಣದಿಂದ ನ್ಯಾಯಾಲಯದ ಮುಂದೆ

ಹಾಜರುಪಡಿಸಿದಾಗ, ನಿನ್ನನ್ನು ಗಾಂಧಿಯವರ ಮಗ ಎಂದು ಹಾಗೇ ಬಿಟ್ಟುಬಿಟ್ಟರು ಎಂಬುದು ನಿನಗೆ ನಾನು ನೆನಪಿಸಬೇಕೆ?

ನೀನು ಮತಾಂತರವಾಗಿರುವುದು ನಿನ್ನ ವೈಯಕ್ತಿಕ ವಿಷಯ ನಿಜ. ನೀನು ಆಮೇಲಾದರೂ ಸಾತ್ವಿಕ ಬದುಕು ನಡೆಸುತ್ತೀಯೆಂದು ನಾನು ಒಳಗೊಳಗೇ ಸಂತೋಷ ಕೂಡ ಪಟ್ಟಿದ್ದೆ. ಆದರೆ ನೀನು ಹಣ ತೆಗೆದುಕೊಂಡು ಹೆಂಡ ಕುಡಿದು ಧರ್ಮ ಬೋಧನೆ ಮಾಡುತ್ತಿರುವೆ ಎಂದು ಕೇಳಿ ಆಘಾತಗೊಂಡಿದ್ದೇನೆ. ಆದರೆ ನಿನ್ನನ್ನು ಕಾಣುವ ಹಂಬಲ ತೀವ್ರವಾಗುತ್ತಿದೆ. ನೀನು ಎಲ್ಲಿದ್ದಿಯೋ ತಿಳಿಯದು.

ಕಸ್ತೂರಬಾ ಈ ಪತ್ರದ ಕೊನೆಯಲ್ಲಿ ಮುಸ್ಲಿಂ ಬಂಧುಗಳಿಗೂ ಒಂದು ಸಂದೇಶ ನೀಡಿದ್ದರು: "ಆಲೋಚನಾ ಶಕ್ತಿ ಇರುವ ಮತ್ತು ನಮ್ಮ ಕುಟುಂಬದ ಸ್ನೇಹದಲ್ಲಿರುವ ಯಾವ ಮುಸ್ಲಿಮರೂ ಈ ಬೆಳವಣಿಗೆಯನ್ನು ಒಪ್ಪಲಾರರು, ನಿಜ. ಮುಸ್ಲಿಮರು ನನ್ನಂತಹ ತಾಯಿಯ ವೇದನೆಯನ್ನು ಅರ್ಥ ಮಾಡಿಕೊಂಡು ಅವನೀಗ ಮಾಡಿರುವುದು ಅಲ್ಲಾ ಮೆಚ್ಚದ ವಿಚಾರ ಎಂದು ತಿಳಿಯುವರು ಎಂದು ನಾನು ನಂಬಿದ್ದೇನೆ."

ಈ ಪತ್ರವನ್ನು ಹರಿಲಾಲನ ಗಮನಕ್ಕೆ ತಂದಾಗ, ಆತ ಈ ಪತ್ರ ನನ್ನ ತಾಯಿ ಬರೆದದ್ದಲ್ಲ ಎಂದು ಅದನ್ನು ತಿರಸ್ಕರಿಸಿದ. ಅದು ನಿಜವೂ ಇರಬಹುದು. ಏಕೆಂದರೆ ಅದರಲ್ಲಿ ದೇವದಾಸ ಮತ್ತು ಕುಟುಂಬದ ಇತರರ ಕೈವಾಡವೂ ಇದ್ದೀತು. ಆದರೆ ಅದು ಬಾ ಅವರ ಒಪ್ಪಿಗೆಯನ್ನು ಪಡೆದಿತ್ತು. ಇದರ ಬಗ್ಗೆ ಕಿಂಚಿತ್ತೂ ಯೋಚಿಸಲಾಗದಿದ್ದ ಹರಿಲಾಲ, 'ನನ್ನಪ್ಪ, ಅಮ್ಮ ಇಬ್ಬರೂ ಮುಸ್ಲಿಮರಾಗಿ ಮತಾಂತರ ಹೊಂದಿದರೆ ತಾನು ಎಲ್ಲ ದುಶ್ಚಟಗಳನ್ನು ಬಿಡುವುದಾಗಿ' ಹೇಳಿ ಎಲ್ಲರನ್ನೂ ಇನ್ನಷ್ಟು ಮುಜುಗರಕ್ಕೆ ಸಿಲುಕಿಸಿದ.

ಆದರೆ ಇದಾದ ಐದಾರು ತಿಂಗಳಲ್ಲೇ ಹರಿಲಾಲ ಮತ್ತೆ ಹಿಂದೂ ಧರ್ಮಕ್ಕೆ ವಾಪಸ್ ಬರಬಯಸಿದ್ದಾನೆ ಎಂಬ ಸುದ್ದಿ ಹರಡಿತು. ಗಾಂಧಿ ಅದಕ್ಕೆ, 'ಬಹುಶಃ ಅವನ ಮುಸ್ಲಿಂ ಗೆಳೆಯರ ಬಳಿಯ ಹಣ ಖಾಲಿಯಾಗಿದೆ ಅಥವಾ ಅವನ ಅಮ್ಮನ ಪತ್ರ ಕೊನೆಗೂ ಪರಿಣಾಮ ಬೀರಿರಬಹುದು' ಎಂದು ಪ್ರತಿಕ್ರಿಯಿಸಿದರು. ಈ ಕಾರಣಗಳಿಗಾಗಿಯೋ ಅಥವಾ ಮತ್ತಾವ ಕಾರಣದಿಂದಲೋ ಗೊತ್ತಿಲ್ಲ ಇದಾದ ಆರು ತಿಂಗಳಲ್ಲಿ ಹರಿಲಾಲ ಆರ್ಯ ಸಮಾಜದಿಂದ ದೀಕ್ಷೆ ಪಡೆದು ಮತ್ತೆ ಹಿಂದೂ ಆಗಿದ್ದ. ಈಗ ಅವನ ಹೆಸರು ಹೀರಾಲಾಲ್!

'ಮಾತಾ ಕಸ್ತೂರಬಾ ಕಿ ಜೈ'

ಇದಾದ ಕೆಲವೇ ದಿನಗಳಲ್ಲಿ ಹರಿಲಾಲನ ದರ್ಶನ, ಅವನ ಅಪ್ಪ-ಅಮ್ಮನಿಗೆ ಆಯಿತು. ಅದೊಂದು ರೈಲ್ವೇ ನಿಲ್ದಾಣದಲ್ಲಿ. ಗಾಂಧಿ ದಂಪತಿಗಳು ರೈಲಿನಲ್ಲಿ ವರ್ಧಾಗೆ ಬರುತ್ತಿದ್ದಾಗ, ರೈಲು ಒಂದು ನಿಲ್ದಾಣದಲ್ಲಿ ನಿಂತಿದ್ದಾಗ, 'ಮಾತಾ ಕಸ್ತೂರಬಾ ಕಿ ಜೈ!' ಎಂಬ ಘೋಷಣೆ ಕೂಗಿ ಕೇಳಿಬಂತು. ಎಲ್ಲಿಂದ ಎಂದು ತಿರುಗಿ ನೋಡಿದರೆ ಹರಿಲಾಲ ಪ್ಲಾಟ್‌ಫಾರಂ ಮೇಲೆ ನಿಂತಿದ್ದ. ಗಾಂಧಿ ದಂಪತಿಗಳು ಅವನ ಬಳಿಗೆ ಓಡಿದರು. ಅವನು ಬಳಲಿ ಕೃಶನಾಗಿದ್ದ. ಕಣ್ಣುಗಳು ಇಂಗಿಹೋದಂತಾಗಿದ್ದವು. ಕೂದಲು ಬೆಳ್ಳಗಾಗಿತ್ತು.

ತಾಯಿಗೆ ಹೃದಯ ತುಂಬಿ ಬಂತು. ಅದಕ್ಕೆ ಸ್ಪಂದಿಸಿದಂತೆ ಅವನು ಕುರ್ತಾದೊಳಗಿಂದ ಒಂದು ಕಿತ್ತಳೆ ಹಣ್ಣು ತೆಗೆದು, 'ಅಮ್ಮಾ, ಇದು ನಿನಗಾಗಿ. ತಿನ್ನು' ಎಂದ. ಗಾಂಧಿ ತಮ್ಮ ಮೌನ ಮುರಿಯಲು 'ನನಗೇನೂ ತಂದಿಲ್ಲವೆ?' ಎಂದು ಕೇಳಿದರು. ಅವನು ಗುಡುಗಿದ: 'ಇಲ್ಲ. ನಿನಗೇನೂ ಇಲ್ಲ. ನೀವು ಈವರೆಗೆ ಸಾಧಿಸಿದ್ದೆಲ್ಲ ಅಮ್ಮನ ಸಹಕಾರದಿಂದ ಎಂಬುದು ನಿಮಗೆ ತಿಳಿದಿರಲಿ'. 'ಹೌದಪ್ಪ, ಅದರಲ್ಲಿ ಸಂದೇಹವಿಲ್ಲ. ಆದರೆ ಈಗ ನಮ್ಮೊಂದಿಗೆ ಬಂದುಬಿಡು' ಎಂದರು ಗಾಂಧಿ. ಅವನು 'ಆಗದು. ನಾನು ಹಿಂದಿರುಗಲಾರೆ. ನನ್ನ ದಾರಿ ಬೇರೆ.' ಎಂದು ದೃಢವಾಗಿ ಹೇಳುತ್ತಾ, ಕಸ್ತೂರಬಾರಿಗೆ 'ಹಣ್ಣು ತಿನ್ನು, ಇಲ್ಲ ನನಗೆ ವಾಪಸ್ ಕೊಟ್ಟು ಬಿಡು' ಎಂದ. ಅವನ ಮಾತು ಕಟುವಾಗಿತ್ತು. ಕಸ್ತೂರಬಾ 'ಇಲ್ಲಪ್ಪ, ತಿನ್ನುತ್ತೇನೆ' ಎಂದು ಹಣ್ಣನ್ನು ತಮ್ಮ ಸೀರೆಯ ಸೆರಗಿಗೆ ಹಾಕಿಕೊಳ್ಳುತ್ತಿರುವಂತೆ ರೈಲು ಹೊರಡುವ ಸೂಚನೆ ಬಂತು. ಗಾಂಧಿ ದಂಪತಿಗಳು ರೈಲು ಹತ್ತಿದರು. ರೈಲು ಹೊರಟಿತು. ದೂರದಿಂದ ಮತ್ತೆ 'ಮಾತಾ ಕಸ್ತೂರಬಾ ಕಿ ಜೈ' ಘೋಷ ಕೇಳಿಬರುತ್ತಿತ್ತು.

ವ್ಯಕ್ತಿತ್ವದ ಪರಿಪೂರ್ಣತೆಗಾಗಿ ಲೈಂಗಿಕ ಪ್ರಯೋಗಗಳು

ಗಾಂಧಿಯವರಿಗೆ ಈ ಕಾಲಘಟ್ಟದಲ್ಲಿ, ತಮ್ಮ ವ್ಯಕ್ತಿತ್ವದ ಒಳಸತ್ವದ ಬಗ್ಗೆ ಸಂದೇಹ ಶುರುವಾದಂತಿತ್ತು. ತಾವು ನಿಜವಾಗಿ ಏನು ಎಂಬುದರ ಬಗ್ಗೆ ಅನುಮಾನಗಳು ಆರಂಭವಾಗಿದ್ದವು. ಹೊರಗಿನ ಅಧಿಕಾರ ರಚನೆಗಳು ತಮ್ಮ ಆತ್ಮವನ್ನು ದಮನ ಮಾಡುವಲ್ಲಿ ಯಶಸ್ವಿಯಾಗುತ್ತಿವೆ ಎನಿಸತೊಡಗಿತ್ತು. ತಮ್ಮ ಇತ್ತೀಚಿನ ಆಸ್ತೇಯ, ಅಪರಿಗ್ರಹ, ಅಭಯ, ಆತ್ಮಶುದ್ಧೀಕರಣದ ಪ್ರಯತ್ನಗಳೆಲ್ಲ ವ್ಯರ್ಥವಾಗಿವೆ ಎನಿಸತೊಡಗಿತ್ತು. ಅರವತ್ತೈದರ ಆಸುಪಾಸಿನ ಈ ವಯಸ್ಸಿನಲ್ಲೂ, ಬ್ರಹ್ಮಚರ್ಯ ವ್ರತ ಪಾಲನೆಯ ಎರಡು ದಶಕಗಳ ನಂತರವೂ, ಅವರಿಗೆ ಆಗಾಗ್ಗೆ ಸ್ವಪ್ನ ಸ್ಖಲನವಾಗುತ್ತಿತ್ತು. ಇದು ತಮಗಿನ್ನೂ ಮನೋಶುದ್ಧಿಯಾಗದಿರುವುದರ ಸೂಚನೆ ಎಂದು ಅವರು ಭಾವಿಸಿದರು. ತಮ್ಮ ವ್ಯಕ್ತಿತ್ವದಲ್ಲಿನ ಈ ಸುಪ್ತ ದೌರ್ಬಲ್ಯವೇ ತಮ್ಮ ಸಂಕಲ್ಪ ಶಕ್ತಿಯ ಇತ್ತೀಚಿನ ಏಳುಬೀಳುಗಳಿಗೆ ಕಾರಣವೆಂದು ಅವರು ವಿಶ್ಲೇಷಿಸಿದರು. ಅವರಿಗೆ ತಮ್ಮಲ್ಲಿ 'ಗಂಡುತನ'ದ ಅಂಶ 'ಹೆಣ್ಣುತನ'ದ ಅಂಶದ ಮೇಲೆ ಸವಾರಿ ಮಾಡುತ್ತಿದೆ ಎಂದೆನಿಸಿ ತಾವು ಇನ್ನಷ್ಟು ಹೆಣ್ಣಾಗಬೇಕೆಂಬ ನಿರ್ಧಾರಕ್ಕೆ ಅವರು ಬಂದರು. ಅದನ್ನು ಸಾಧಿಸುವುದು ಮತ್ತು ಪರೀಕ್ಷಿಸಿಕೊಳ್ಳುವುದು ಹೇಗೆ?

ಅವರು ಸಬರ್ಮತಿ ಆಶ್ರಮದಲ್ಲಿದ್ದಾಗ ಹೆಣ್ಣುಮಕ್ಕಳ ಹೆಗಲ ಮೇಲೆ ಕೈಹಾಕಿಕೊಂಡು ಮಾತನಾಡುತ್ತಾ ನಡೆದಾಡುತ್ತಿದ್ದರು. ಅದು ಅವರು ಲೈಂಗಿಕತೆಯನ್ನು ಒಂದು ಸಮಸ್ಥಿತಿಗೆ ತಂದುಕೊಳ್ಳುವ ಪ್ರಯತ್ನವಾಗಿ ಮಾಡುತ್ತಿದ್ದರು. ಇಂತಹ ಪ್ರಯೋಗಗಳನ್ನು ಫೀನಿಕ್ಸ್ ಆಶ್ರಮದ ಮಕ್ಕಳನ್ನು ಬೆಳೆಸುವ ವಿಷಯದಲ್ಲೂ ಮಾಡಿದ್ದರು. ಆದರೆ ಅಲ್ಲಿನಂತೆ ಇಲ್ಲಿಯೂ ಒಂದು ದುರ್ವರ್ತನೆಯ ಪ್ರಸಂಗ ನಡೆದಾಗ ಅದನ್ನು ನಿಲ್ಲಿಸಿದ್ದರು. ಆದರೆ ಈಗ ಇದು ತಮ್ಮ ಬದುಕಿನ ಸೋಲು ಗೆಲುವುಗಳನ್ನು ಒರೆಗೆ ಹಚ್ಚುವ, ಅವರ ಮಾತಿನಲ್ಲೇ ಹೇಳುವುದಾದರೆ, ತಮ್ಮ ಪಾಲಿನ ಸತ್ಯಾನ್ವೇಷಣೆ ಎಂಬ 'ಯಜ್ಞ'ದ ನಿರ್ಣಾಯಕ ಘಟ್ಟವಾಗಿತ್ತು, ನಾವು ತಾಯಿ, ಅಕ್ಕ-ತಂಗಿಯರೊಂದಿಗೆ ಲೈಂಗಿಕ ಭಾವನೆ

ಇಲ್ಲದೆ ಸಹಬಾಳ್ವೆ ಮಾಡಬಲ್ಲೆವಾದರೆ ಪರಸ್ತ್ರೀಯರೊಂದಿಗೆ ಏಕೆ ಹಾಗಿರಲಾಗುವುದಿಲ್ಲ? ಇದಕ್ಕಾಗಿ ಮನಸ್ಸನ್ನು ತರಬೇತುಗೊಳಿಸುವುದು ಹೇಗೆ? ಈ ಪ್ರಶ್ನೆ ಅವರನ್ನು ಒಂದು ವಿವಾದಾಸ್ಪದ ಪ್ರಯೋಗ ಮಾಡುವತ್ತ ಪ್ರೇರೇಪಿಸಿತು. ಇದು ಅವರು ತಾವು ಸೋದರಿ ಎಂದು, ಮಗಳೆಂದು ಭಾವಿಸಿಕೊಂಡಿದ್ದ ತಮ್ಮ ಆಪ್ತ ಆಶ್ರಮವಾಸಿಗಳೊಂದಿಗೆ ಪರಸ್ಪರ ಬೆತ್ತಲೆಗೊಳಿಸಿಕೊಂಡು ಅಕ್ಕಪಕ್ಕ ಮಲಗಿ ಲೈಂಗಿಕ ಸಂಯಮ ಪರೀಕ್ಷೆ ಮಾಡಿಕೊಳ್ಳುವ ಪ್ರಯೋಗ. ಇದಕ್ಕಾಗಿ ಅವರು ತಮ್ಮಲ್ಲಿ ವಿಶ್ವಾಸವುಳ್ಳ ಐದಾರು ಮಂದಿ ಹೆಣ್ಣು ಮಕ್ಕಳೊಂದಿಗೆ ಮಾತಾಡಿ, ಅವರ ಒಪ್ಪಿಗೆ ಪಡೆದರು. ಗಾಂಧಿಯವರ ಈ ಅತ್ಯಂತ ವಿವಾದಾಸ್ಪದ ಮತ್ತು ಸಾಮಾನ್ಯರಿಗೆ ಅರ್ಥ ಮಾಡಿಕೊಳ್ಳಲು ಕ್ಲಿಷ್ಟವಾಗಿ ಜಿಗುಪ್ಸೆ ಪಡಬಹುದಾದ ಪ್ರಯೋಗದಲ್ಲಿ ಭಾಗವಹಿಸಿದವರೆಂದರೆ, ಪ್ಯಾರೇಲಾಲ್‌ರ ತಂಗಿ, ಇಪ್ಪತ್ತೆರಡರ ತರುಣಿ ಡಾ.ಸುಶೀಲಾ ನಯ್ಯರ್, ಜಯಪ್ರಕಾಶರ ಮುವ್ವತ್ತರ ಹರೆಯದ ಬ್ರಹ್ಮಚರ್ಯ ವ್ರತಸ್ಥೆಯಾದ ಪತ್ನಿ ಪ್ರಭಾವತಿ, ನಲವತ್ತೇಳು ವರ್ಷ ವಯಸ್ಸಿನ ರಾಜಕುಮಾರಿ ಅಮೃತಾ ಕೌರ್, ಮುಸ್ಲಿಂ ರಾಜಮನೆತನಕ್ಕೆ ಸೇರಿದ ಅಮ್ತಾಸ್ ಸಲಾಂ ಸೇರಿದ್ದರೆಂದು ರಾಜ್‌ಮೋಹನ್ ಗಾಂಧಿ ತಮ್ಮ 'ಮೋಹನದಾಸ' ಕೃತಿಯಲ್ಲಿ ಹೇಳುತ್ತಾರೆ. ಅಲ್ಲದೆ ವರ್ಧಾ ಆಶ್ರಮದ ಕೋಣೆಯಲ್ಲಿ ತಾವು, ಕಸ್ತೂರಬಾ ಅಲ್ಲದೆ, ಬಜಾಜರ ಮಗಳು ಉಮಾ ಮತ್ತು ಜರ್ಮನಿಯ ಮಾರ್ಗರೆಟ್ ಸ್ಪಿಗಲ್ ಸೇರಿದಂತೆ ಹಲವರು ಒಟ್ಟಿಗೆ ಮಲಗುತ್ತಿರುವುದಾಗಿ ಪ್ರೇಮಾ ಕಂಟಕ್ ಅನ್ನುವವರಿಗೆ ೧೯೩೫ರ ಸೆಪ್ಟೆಂಬರ್‌ನಲ್ಲಿ ಬರೆದ ಪತ್ರದಲ್ಲಿ ತಿಳಿಸಿದ್ದಾರೆಂದೂ ಗಾಂಧಿಯವರ ಈ ಮೊಮ್ಮಗ ತಿಳಿಸಿದ್ದಾರೆ.

ವರ್ಧಾದಿಂದ ಸೇಗಾಂವ್‌ಗೆ

ಗಾಂಧಿಯವರ ಈ ಪ್ರಯೋಗ ಎಷ್ಟು ಕಾಲ ನಡೆಯಿತು ಮತ್ತು ಗಾಂಧಿ ಅದರಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿಯಾದರು ಎಂಬುದು ಎಲ್ಲೂ ದಾಖಲಾದಂತಿಲ್ಲ. ಆದರೆ ರಾಜ್‌ಮೋಹನ್ ಗಾಂಧಿ, ತಮ್ಮ ಪುಸ್ತಕದಲ್ಲಿ ಈ ಪ್ರಯೋಗದ ಮುಂದುವರಿಕೆಯಂತೆ ತೋರುವ ೧೯೩೭-೩೮ರ ಕೆಲವು ಘಟನೆಗಳನ್ನು ದಾಖಲಿಸುತ್ತಾರೆ. ವರ್ಧಾದಲ್ಲಿ ಗಾಂಧಿ ವಾಸವಾಗಿದ್ದ ತೋಟದ ಮನೆ, ಈಗ ಮಗನ್‌ವಾಡಿ ಹೆಸರಿನಲ್ಲಿ ಅಖಿಲ ಭಾರತ ಗ್ರಾಮ ಕೈಗಾರಿಕೆಗಳ ಸಂಘವಾಗಿ ಅಭಿವೃದ್ಧಿಗೊಳ್ಳತೊಡಗಿತು. ಅಲ್ಲಿ ಕುಮಾರಪ್ಪ ಮತ್ತು ಅವರ ತಂಡದ ಪ್ರಯೋಗಗಳು ಆರಂಭವಾದವು. ಗಾಂಧಿ ಈಗ ಅಲ್ಲಿ ವಾಸ ಮಾಡಲು ಇಷ್ಟಪಡಲಿಲ್ಲ. ಹತ್ತಿರದ ವರೋದಾ ಎಂಬ ಸಣ್ಣ ಹಳ್ಳಿಯಲ್ಲಿ ಗುಡಿಸಲು ಕಟ್ಟಿಕೊಂಡು ವಾಸ ಮಾಡುತ್ತಿದ್ದ ಮೀರಾಬೆನ್‌ಗೆ ತಮಗೂ ಅಂತಹದೊಂದು ಕುಟೀರದ ಅಗತ್ಯವಿದ್ದು, ಒಂದು ಸೂಕ್ತ ಜಾಗ ಆರಿಸಲು ಕೋರುತ್ತಾರೆ. ಮೀರಾ, ವರ್ಧಾಗೆ ಐದು ಮೈಲಿಗಳ ದೂರದ ಸೇಗಾಂವ್ ಎಂಬ ಹಳ್ಳಿಯನ್ನು ಆಯ್ಕೆ ಮಾಡಿ ಗಾಂಧಿಯವರಿಗೆ ತೋರಿಸುತ್ತಾರೆ. ಆ ಹಳ್ಳಿ ಪೂರಾ ಹರಿಜನರ ಹಳ್ಳಿಯಾಗಿದ್ದು, ಗಾಂಧಿ ಅಲ್ಲಿ ತಮಗೊಂದು ನೂರು ರೂಪಾಯಿಗಳ ಕೂಲಿ ಖರ್ಚನ್ನು ಮೀರದಷ್ಟು ಸರಳವಾದ ಸಣ್ಣ ಕುಟೀರವನ್ನು ಕಟ್ಟಿಸಿಕೊಡುವಂತೆ ಬಜಾಜರನ್ನು ಕೋರುತ್ತಾರೆ. ೧೯೩೬ರ ಏಪ್ರಿಲ್‌ನಲ್ಲಿ ಅವರು, ವರ್ಧಾ ಬಿಟ್ಟು ಸೇಗಾಂವ್‌ಗೆ ಪಾದಯಾತ್ರೆ ಮೂಲಕ ಹೊರಡುತ್ತಾರೆ. ಇದು

ವರ್ಧಾಶ್ರಮದ ಕೆಲವರಿಗೆ ಮಹಾಭಾರತ ಯುದ್ಧದ ನಂತರ ಯುಧಿಷ್ಠಿರನ ಸ್ವರ್ಗಾರೋಹಣ ಯಾತ್ರೆಯಂತೆ ಕಂಡಿತೆಂದು ಮಹದೇವ ದೇಸಾಯಿ ಬರೆಯುತ್ತಾರೆ. ಒಬ್ಬ ಆಶ್ರಮವಾಸಿಗೆ ಗಾಂಧಿಯವರ ಈ ಸ್ಥಳಾಂತರ 'ಹಾಳುಗುಡಿಯಲ್ಲಿ ಹೊಕ್ಕಂತೆ' ಎನಿಸಿ ಅದನ್ನು ಹೇಳಿದಾಗ, ಗಾಂಧಿ, 'ಈವರೆಗೆ ನಾನು ಬರೀ ಸಿದ್ಧಾಂತ ಹೇಳುತ್ತಿದ್ದೆ. ಈಗ ಅದನ್ನು ಮಾಡಿ ತೋರಿಸಲು ಅಲ್ಲಿಗೆ ಹೋಗುತ್ತಿದ್ದೇನೆ' ಎಂದು ಉತ್ತರಿಸಿದರು.

ಅಲ್ಲಿ ಬಜಾಜರು ಸುಮಾರು ೨೫ ಅಡಿ ಅಗಲ ಮತ್ತು ೨೦ ಅಡಿ ಉದ್ದದ ಮಳೆನೀರು ನಿರೋಧಕ ಮಣ್ಣಿನ ಗೋಡೆಗಳ ಕುಟೀರವೊಂದನ್ನು ಕಟ್ಟಿಕೊಟ್ಟಿದ್ದರು. ಗಾಂಧಿ ಕುಟುಂಬ ಮತ್ತು ಒಂದಿಬ್ಬರು ಮುವ್ವರು ಮಹಿಳಾ ಕಾರ್ಯಕರ್ತೆಯರು ಅಲ್ಲಿ ವಾಸ ಮಾಡತೊಡಗಿದರು.

ಗಾಂಧಿ ಆ ಹಳ್ಳಿಯ ಜನರ ಜೊತೆ ಬೆರೆತರು. ಆಹಾರ ಮತ್ತು ಆರೋಗ್ಯದ ಬಗ್ಗೆ ಪಾಠ ಹೇಳಿದರು ಮತ್ತು ತಾವೂ ಅವರ ಜೊತೆಯಲ್ಲಿ ಈ ವಿಷಯಗಳಲ್ಲಿ ಕೆಲಸ ಮಾಡಿದರು. ವಿಶೇಷವಾಗಿ ನೈಸರ್ಗಿಕ ಚಿಕಿತ್ಸೆಯ ಮಣ್ಣಿನ ಲೇಪ, ಕಟಿ ಸ್ನಾನ, ಪೋಲ್ಟೀಸ್ ಕಟ್ಟುವುದು, ಬಸ್ತಿ ಇತ್ಯಾದಿಗಳನ್ನು ಅವರಿಗೆ ಕಲಿಸಿದರು. ಹಳ್ಳಿಗೆ ಮಲೇರಿಯಾ ತಗುಲಿದಾಗ ಕ್ವಿನೈನ್ ಪ್ರಯೋಗ ಮಾಡಿದರು. ಜೊತೆಗೆ ಅಯೋಡಿನ್, ಪೊಟಾಶಿಯಂ ಪರ್ಮಾಂಗನೇಟ್‌ಗಳ ಬಳಕೆಯನ್ನು ಪರಿಚಯಿಸಿದರು. ಈ ಸಮಯದಲ್ಲಿ ಸ್ವತಃ ಗಾಂಧಿಯವರಿಗೂ ಮಲೇರಿಯಾ ತಗುಲಿ ನಿಧಾನವಾಗಿ ಚೇತರಿಸಿಕೊಂಡರು.

ನಂತರದ ದಿನಗಳಲ್ಲಿ ಗಾಂಧಿ ಸೇಗಾಂವ್‌ನಲ್ಲಿ ನೂಲುವ ಮತ್ತು ನೇಯುವ ತರಬೇತಿ ಆರಂಭಿಸಿದರು. ಖಾದಿಯ ಮಹತ್ವ ತಿಳಿಸಿದರು. ಶ್ರಮದಾನದ ಮೂಲಕ ಹಳ್ಳಿಗೆ ರಸ್ತೆ ನಿರ್ಮಿಸಿದರು ಅಸ್ಪೃಶ್ಯತೆಯ ವಿರುದ್ಧ ಜಾಗೃತಿ ಮೂಡಿಸಿದರು. ಇದರ ಫಲವಾಗಿ ಹಳ್ಳಿಯ ಉತ್ತಮಕುಲದ ಯಜಮಾನ ಗಾಂಧಿ ಕುಟೀರದಲ್ಲಿ ಹರಿಜನರು ಮಾಡುತ್ತಿದ್ದ ಅಡಿಗೆಯನ್ನು ಉಣ್ಣಲು ಶುರು ಮಾಡಿದನು.

ಸೇಗಾಂವ್‌ಗೆ ಹೊರಗಿನವರು ಬರುವುದು ಕಷ್ಟವಿತ್ತು. ಪಕ್ಕಾ ರಸ್ತೆ ಇಲ್ಲದ ಅದಕ್ಕೆ ಅತಿಥಿಗಳು ಬಂದುಹೋಗಲು ಬಜಾಜರು ಎತ್ತುಗಳು ಎಳೆಯುವ ಹಳೆಯ ಕಾರೊಂದರ ವ್ಯವಸ್ಥೆ ಮಾಡಿದ್ದರು. ಮಳೆಗಾಲದಲ್ಲಿ ಎತ್ತಿನ ಗಾಡಿಯಲ್ಲೇ ಹೋಗಿಬರಬೇಕಿತ್ತು. ಗಾಂಧಿಯವರನ್ನು ಭೇಟಿ ಮಾಡಲು ಬಂದ ನೆಹರೂ, ಪಟೇಲ್, ಅಬ್ದುಲ್ ಗಫಾರ್ ಖಾನ್, ಆಂಡ್ರ್ಯೂಸ್ ಸೇರಿದಂತೆ ದೇಶ ವಿದೇಶಗಳ ಗಣ್ಯ ಅತಿಥಿಗಳೆಲ್ಲ ಇದೇ ಸಾರಿಗೆಯನ್ನು ಬಳಸಿ ಆ ಮಣ್ಣಿನ ಕುಟೀರದಲ್ಲೇ ಇದ್ದು ಹೋದರು. ಈ ಹಳ್ಳಿಯೇ ಮುಂದೆ ಬೆಳೆದು ಸೇವಾಗ್ರಾಮವೆಂದು ಹೆಸರಾಯಿತು.

ಹೊಸ ರೂಪ ಪಡೆದ ಪ್ರಯೋಗ

ಸಾಮಾನ್ಯವಾಗಿ ತಮ್ಮ ಕುಟೀರದ ಹೊರಗೆ ಮಲಗುತ್ತಿದ್ದ ಗಾಂಧಿಯವರಿಗೆ ೧೯೩೭ರಲ್ಲಿ ಅನಾರೋಗ್ಯ ಉಂಟಾದಾಗ ವೈದ್ಯರ ಸಲಹೆಯ ಮೇರೆಗೆ ಅವರು

ಕುಟೀರದ ಒಳಗೆ ಕೋಣೆಯೊಂದರಲ್ಲಿ ಮಲಗುತ್ತಿದ್ದರು. ಅವರೊಂದಿಗೆ ಇಬ್ಬರು ಮುವ್ವರು ಮಹಿಳೆಯರೂ ಅಲ್ಲಿ ಮಲಗುತ್ತಿದ್ದರು. ಗಾಂಧಿಗೆ ಆಗಾಗ್ಗೆ ಮೈ ನಡುಕ ಬಾಧಿಸುತ್ತಿತ್ತು. ಅವರ ಜೀವನದ ಈ ಘಟ್ಟದಲ್ಲಿ ಅದು ಹೆಚ್ಚಾಗಿತ್ತು. ಚಳಿಗಾಲದಲ್ಲಿ ಅದು ವಿಪರೀತವಾಗುತ್ತಿತ್ತು. ಆಗ ಅವರಿಗೆ ಯಾವ ಹೊದಿಕೆಯೂ ಸಾಲದೆ, ಅವರ ಕೋಣೆಯಲ್ಲಿ ಮಲಗುತ್ತಿದ್ದ ಮಹಿಳೆಯರು ಅವರನ್ನು ಒತ್ತಿಕೊಂಡು ಅಪ್ಪಿ ಮಲಗಬೇಕಿತ್ತು. ಆಗ ಅವರ ನಡುಕ ನಿಲ್ಲುತ್ತಿತ್ತು. ಇದು ಕಸ್ತೂರಬಾ ಅವರಿಗೆ ಗೊತ್ತಿಲ್ಲದ ಸಂಗತಿಯೇನೂ ಆಗಿರಲಿಲ್ಲ ಮತ್ತು ಅದಕ್ಕೆ ಅವರ ಆಕ್ಷೇಪಣೆಯೂ ಇರಲಿಲ್ಲ. ಏಕೆಂದರೆ ಈ ಸಮಯದಲ್ಲಿ ಅವರು ಇನ್ನೊಂದು ಚಿಕ್ಕ ಕೋಣೆಯಲ್ಲಿ ಮೊಮ್ಮಗ (ಹರಿಲಾಲನ ಮಗ) ಕಾಂತಿಯೊಂದಿಗೆ ಮಲಗಿರುತ್ತಿದ್ದರು.

ಗಾಂಧಿ ಆಗ ಹೆಚ್ಚಿನ ಬಾರಿ ನಡುಕಗಳಿಗೆ ಒಳಗಾಗಲು ಅವರ ಮನಸ್ಸಿನಲ್ಲಿನ ಸುಪ್ತ ನೋವುಗಳೇ ಕಾರಣವಿರಬಹುದೆಂದು ರಾಜ್‌ಮೋಹನ ಗಾಂಧಿ ಬರೆಯುತ್ತಾರೆ. ಅಸಹಕಾರ ಸತ್ಯಾಗ್ರಹವನ್ನು ಸ್ಥಗಿತಗೊಳಿಸಬೇಕಾಗಿ ಬಂದ ಪರಿಸ್ಥಿತಿ, ಅಂಬೇಡ್ಕರರ ಸವಾಲು, ಹರಿಲಾಲನ ರಗಳೆಗಳಲ್ಲದೆ, ಈಗ ಮಹದೇವ ದೇಸಾಯಿ ತಮ್ಮನ್ನು ಬಿಟ್ಟು ಹೋಗುವ ಮಾತಾಡುತ್ತಿದ್ದುದು ಅವರ ಧೃತಿಗೆಡಿಸಿತ್ತು. ಜೊತೆಗೆ ತಮ್ಮ ಜೀವನದ ಆತ್ಯಂತಿಕ ಸೋಲು ಗೆಲುವುಗಳನ್ನು ನಿರ್ಧರಿಸಲಿದ್ದ ಅಧಿಕಾರ ವರ್ಗಾವಣೆಯ ವಿಷಯದಲ್ಲಿ, ಬ್ರಿಟಿಷರೊಂದಿಗೆ ಸಂಧಾನ ನಡೆಸುವಲ್ಲಿ, ತಮ್ಮ ಕೈ ಬಲಪಡಿಸಬಹುದಾದ ಹಿಂದೂ-ಮುಸ್ಲಿಂ ಏಕತೆಗಾಗಿ ಜಿನ್ನಾ ಜೊತೆಗೆ ನಿಗದಿಯಾಗಿದ್ದ ಮಾತುಕತೆಯ ಯಶಸ್ಸಿನ ಬಗೆಗಿನ ಆತಂಕ(ಇದರ ವಿವರಗಳಿಗಾಗಿ ಮುಂದಿನ ಅಧ್ಯಾಯ ನೋಡಿ) ಅವರ ಮನಸ್ಸನ್ನು ಕಾಡುತ್ತಿದ್ದ ದಿನಗಳವು. ಅದೇನೇ ಇರಲಿ, ಇಂತಹ ಒಂದು ನಡುಕದ ರಾತ್ರಿ-ಅದು ಚಳಿಗಾಲವೇನೂ ಅಲ್ಲದ, ೧೯೩೮ರ ಏಪ್ರಿಲ್ ೭ರಂದು-ಅವರಿಗೆ ಇದ್ದಕ್ಕಿದ್ದಂತೆ ವೀರ್ಯಸ್ಖಲನವಾಯಿತು. ಗಾಬರಿ-ನಾಚಿಕೆಗಳಿಂದ ಎದ್ದ ಅವರು ತಾವು ಪರೀಕ್ಷೆಯಲ್ಲಿ ಸೋಲುತ್ತಿರುವ ಅರಿವಾಗಿ ಆಘಾತಗೊಂಡರು. ಅವರು ಅಂದು ಮುಂಜಾವಿನ ಪ್ರಾರ್ಥನಾ ಸಭೆಯ ನಂತರ, ತಮ್ಮೊಂದಿಗೆ ಮಲಗಿದ್ದ ಆ ಇಬ್ಬರು ಮಹಿಳೆಯರಿಗೆ, ಈ ಪ್ರಯೋಗ ಇನ್ನು ಸಾಕು ಎಂದರು. ಆದರೆ ಆ ಮಹಿಳೆಯರು (ಸುಶೀಲಾ ನಯ್ಯರ್ ಮತ್ತು ಪ್ರಭಾವತಿ) ಇದು ಸಂಬಂಧದ ಪಾವಿತ್ರ್ಯಕ್ಕೆ ಕಳಂಕ ಹಚ್ಚಬಹುದಾದ ಕೆಟ್ಟ ನಿರ್ಧಾರ ಎಂದರು. ಇದರಿಂದಾಗಿ ಮನೋ ಚಿಕಿತ್ಸೆಯೋ ಅಥವಾ ಮಾನಸಿಕ ತರಬೇತಿಯೋ ಆಗಿದ್ದ ಈ ಪ್ರಯೋಗ ಮುಂದುವರೆಯಿತು. ಆದರೆ ಮತ್ತೆ ಏಪ್ರಿಲ್ ೧೪ರಂದು ಅದು ಪುನರಾವರ್ತನೆ ಆಯಿತು. ಇದನ್ನು ಮೀರಾಬೆನ್‌ಗೆ ಹೇಳಿಕೊಂಡ ಗಾಂಧಿ, ಅದನ್ನು 'ನನ್ನ ಕಲ್ಪಿತ ಸ್ವರ್ಗದಿಂದ ನನ್ನ ಕೊಳಕುತನಕ್ಕಾಗಿ ನರಕಕ್ಕೆ ನೂಕಿದಂತಹ ಅನುಭವ' ಎಂದು ವರ್ಣಿಸಿದರು. ಆದರೆ ತಾವು ಈ ಪತನದಿಂದ ಮೇಲೇಳುವ ತಮ್ಮ ಸಂಕಲ್ಪವನ್ನೂ ಹೇಳದೆ ಇರಲಿಲ್ಲ.

ಆದರೆ ಈ ಘಟನಾವಳಿ, ರಾಮಚಂದ್ರ ಗುಹಾ ಅವರ 'ಗಾಂಧಿ' ಪುಸ್ತಕದಲ್ಲಿ ಬೇರೊಂದು ರೂಪದಲ್ಲಿ ನಿರೂಪಿತವಾಗಿದೆ. ಇದರಲ್ಲಿ ನಡುಕ ಅಥವಾ ಮಹಿಳೆಯರ ಪ್ರಸ್ತಾಪವಿಲ್ಲ. ಹಾಗೇ ಏಪ್ರಿಲ್ ೧೪ರ ಘಟನೆಯನ್ನು ಗಾಂಧಿ ಮೀರಾಬೆನ್‌ರೊಂದಿಗೆ

ಚರ್ಚಿಸಿದರೆಂದು ರಾಜಮೋಹನರು ಬರೆದರೆ, ಗುಹಾ, ಅಮೃತ ಕೌರ್ ಅವರೊಂದಿಗೆ ಚರ್ಚಿಸಿದರೆಂದು ಬರೆಯುತ್ತಾರೆ. ಹಾಗೇ ಈ ಸಂಗತಿಗಳನ್ನೆಲ್ಲ ಸೂಕ್ಷ್ಮವಾಗಿಯಾದರೂ, 'ಹರಿಜನ್' ಮೂಲಕ ಸಾರ್ವಜನಿಕರಿಗೆ ನಿವೇದಿಸಬೇಕೆಂದಿದ್ದ ಗಾಂಧಿಯವರನ್ನು ರಾಜಾಜಿಯವರು ತಡೆದರೆಂದು ಗುಹಾ ಅವರು ಹೇಳಿದರೆ, ರಾಜಮೋಹನ್ ಅವರ ಪುಸ್ತಕದಲ್ಲಿ ಈ ಪ್ರಸ್ತಾಪವೇ ಇಲ್ಲ. ಆದರೆ ರಾಜ್‌ಮೋಹನ್ ಅವರು, ಗಾಂಧಿ ಸಮಗ್ರ ಸಾಹಿತ್ಯ ಸಂಪುಟಗಳ ಅ-ಪರಿಷ್ಕೃತ ಆವೃತ್ತಿಯ ಭಾಗಗಳನ್ನು ಉಲ್ಲೇಖಿಸಿ ಈ ಘಟನೆಗಳನ್ನು ನಿರೂಪಿಸಿರುವುದರಿಂದ, ಅವನ್ನೇ ಹೆಚ್ಚು ವಿಶ್ವಸನೀಯ ಎಂದು ಭಾವಿಸಬಹುದು. ಆದರೆ ಘಟನಾವಳಿಯ ವಿವರಗಳಲ್ಲಿ ಗೊಂದಲ ಇದೆಯೆಂಬುದಂತೂ ನಿಜ. ಈ ಗೊಂದಲವನ್ನು ಪರಿಹರಿಸಿಕೊಳ್ಳಲು, ತೆಂಡೂಲ್ಕರ್ ಅವರ 'ಮಹಾತ್ಮ'ದ ಸಂಪುಟಗಳು ಮತ್ತು ನಾರಾಯಣ ದೇಸಾಯಿಯವರ 'ಮೈ ಲೈಫ್ ಈಸ್ ಮೈ ಮೆಸೇಜ್' ಸಂಪುಟಗಳನ್ನು ತೆಗೆದು ನೋಡಿದರೆ, ಅವುಗಳಲ್ಲಿ ಈ ಪ್ರಯೋಗಗಳ ಪ್ರಸ್ತಾಪವೇ ಇಲ್ಲ. ಲೂಯಿ ಫಿಶರ್ ಅವರ 'ದ ಲೈಫ್ ಆಫ್ ಮಹಾತ್ಮ ಗಾಂಧಿ' ಕೃತಿಯಲ್ಲೂ ಇದರ ಸುದ್ದಿ ಇಲ್ಲ. ತೆಂಡೂಲ್ಕರ್ ಅವರ ನಾಲ್ಕನೇ ಸಂಪುಟದಲ್ಲಿ ಈ ಅವಧಿಯಲ್ಲಿ ತಮ್ಮನ್ನು ಭೇಟಿ ಮಾಡಿದ್ದ ಜನನ ನಿಯಂತ್ರಣ ಆಂದೋಲನದ ಮುಖಂಡರಾದ ಮಾರ್ಗರೆಟ್ ಸ್ಯಾಂಗರ್ ಅವರೊಂದಿಗೆ ಗಂಡು ಹೆಣ್ಣಿನ ಲೈಂಗಿಕ ಸಂಬಂಧದ ಬಗ್ಗೆ ಮಾತಾಡುವಾಗ, ಗಾಂಧಿ, ತಮ್ಮ 'ಖಾಸಗಿ ಅನುಭವ'ಗಳನ್ನು ಉಲ್ಲೇಖಿಸಿದರು ಎಂಬ ಪ್ರಸ್ತಾಪ ಮಾತ್ರವಿದೆ. ವಿವರಗಳಿಲ್ಲ.

ದೇಹ-ಮನಸ್ಸುಗಳ ಸಂಬಂಧದ ಸೂಕ್ಷ್ಮಗಳು

ರಾಜ್‌ಮೋಹನ್ ಅವರ ನಿರೂಪಣೆಗಳ ಪ್ರಕಾರ ಗಾಂಧಿ, ಲೈಂಗಿಕತೆಯ ಕುರಿತ ತಮ್ಮ ಪ್ರಯೋಗದಲ್ಲಿ ತಮ್ಮ ಬ್ರಹ್ಮಚರ್ಯ ವ್ರತದ ಸೋಲು ಸಾಬೀತಾಗಿದೆ ಎಂದು ಕಂಡುಕೊಂಡರಲ್ಲದೆ ಅದರ ಬಗ್ಗೆ ವಿಹ್ವಲರಾದರು ಕೂಡ. ಗಾಂಧಿಯವರ ಪ್ರಕಾರ ಹಿಂಸೆಯ ಬೇರುಗಳು ಲೈಂಗಿಕತೆಯಲ್ಲಿದ್ದು ಬ್ರಹ್ಮಚರ್ಯದ ಪರಿಪೂರ್ಣತೆಯಲ್ಲಿ ಅಹಿಂಸೆಯನ್ನು ಸಾಧಿಸಬಹುದಾಗಿತ್ತು. ಆದರೆ ಈ ಪರೀಕ್ಷೆಯಲ್ಲಿ ಕಂಡುಕೊಂಡಂತೆ ಅವರ ಬ್ರಹ್ಮಚರ್ಯ ವ್ರತ ಪಾಲನೆ ಪರಿಪೂರ್ಣವಾಗಿರಲಿಲ್ಲ. ಲೈಂಗಿಕತೆಯ ಪಸೆ ಎಲ್ಲೋ ಅಪ್ರಜ್ಞಾಪೂರ್ವಕವಾಗಿ ಅವರ ಮನಸ್ಸಿನಾಳದಲ್ಲಿ ಉಳಿದುಹೋಗಿತ್ತು. ಗಾಂಧಿ ಇದನ್ನು ಈ ಪ್ರಯೋಗದಲ್ಲಿ ಭಾಗಿಯಾದ ಮಹಿಳೆಯರೂ ಸೇರಿದಂತೆ ಖಾಸಗಿಯಾಗಿ, ಆಶ್ರಮದ ತಮ್ಮ ಆಪ್ತರೊಂದಿಗೆ ಚರ್ಚಿಸಿದರು. ತಮ್ಮ ಸೋಲನ್ನು ನಿರ್ಭಿಡೆಯಿಂದ ಹೇಳಿಕೊಂಡರು. ಇದು ತಮ್ಮ 'ಪತನ'ವೆಂದು ತಾವೇ ಒದ್ದಾಡಿಕೊಂಡರು. ಈ ಪ್ರಯೋಗದಲ್ಲಿ ಯಾರಿಗಾದರೂ ನೋವಾಗುವಂತೆ ತಾವು ವರ್ತಿಸಿದ್ದರೆ ಅದನ್ನು ಬಹಿರಂಗವಾಗಿ ಹೇಳಿಕೊಳ್ಳುವಂತೆಯೂ ಅವರು ಹೇಳಿದರು.

ಗಾಂಧಿಯ ವಿಹ್ವಲತೆಗೆ ಕಾರಣವಿತ್ತು. ಅವರು ಊಟ ಬಡಿಸುವ, ಮೈಗೆ ಎಣ್ಣೆ ತಿಕ್ಕುವ, ಸ್ನಾನಕ್ಕೆ ನೆರವಾಗುವ (ಗಾಂಧಿ ಎಲ್ಲರ ಮುಂದೆ ಬೆತ್ತಲೆ ಸ್ನಾನ ಮಾಡುತ್ತಿದ್ದರೆಂದೂ ಹೇಳಲಾಗುತ್ತದೆ.) ವಾಯುವಿಹಾರದ ಸಮಯದಲ್ಲಿ ಹೆಗಲು

ಕೊಡುವ ವಿಷಯಗಳಲ್ಲಿ, ಅವರು ತಮ್ಮ ಮಹಿಳಾ ಅನುಯಾಯಿಗಳ ಸೇವೆಯನ್ನು ಪಡೆಯುತ್ತಿದ್ದರು. ಈ ಹೆಣ್ಣು ಸ್ಪರ್ಶ ಅವರ ಜೀವಶಕ್ತಿ ಮತ್ತು ಕಾಂತಿಯನ್ನು ಹೆಚ್ಚಿಸುತ್ತಿತ್ತೆಂದು ಅವರಿಗೆ ಅನ್ನಿಸಿತ್ತು. ಹಾಗಾಗಿಯೇ ಇತ್ತೀಚಿನ ಅತಿ ಪ್ರಯೋಗದಲ್ಲಿ ಕಂಡುಕೊಂಡ ಸೋಲಿನ ನಂತರ ಚರ್ಚೆಗಳಲ್ಲಿ ಅವರ ವಿಹ್ವಲತೆಯನ್ನು ಕಂಡೋ ಏನೋ, ಅಮೃತಾ ಕೌರ್ ಅವರು, ಹೆಣ್ಣಿನ ದೈಹಿಕ ಸಾಮೀಪ್ಯತೆಯನ್ನು ತೊರೆಯುವಂತೆ ಸಲಹೆ ಮಾಡಿದರು. ಆದರೆ ಗಾಂಧಿ, ಲೈಂಗಿಕತೆಯ ಪ್ರಯೋಗಗಳನ್ನು ತೊರೆಯಲು ನಿರ್ಧರಿಸಿದ್ದರೇ ಹೊರತು ಮಹಿಳೆಯರ ಇತರ ಸೇವೆಗಳನ್ನು ನಿರಾಕರಿಸುವುದು ಉಚಿತವಲ್ಲವೆಂದು ಭಾವಿಸಿದರು. ಇದರಿಂದ ಆ ಮಹಿಳೆಯರಿಗೂ ಸಂತೋಷವಾಯಿತು.

ಏಕೆಂದರೆ ಈ ಮಹಿಳೆಯರಾರೂ ಗಾಂಧಿಯನ್ನು ಲೈಂಗಿಕವಾಗಿ 'ಗಂಡು' ಎಂದು ಭಾವಿಸಿ ಅವರ ಸೇವೆಯಲ್ಲಿ ತೊಡಗಿರಲಿಲ್ಲ. ಗಾಂಧಿ ಅವರನ್ನು ಪುತ್ರಿಯರಂತೆಯೇ ಕಾಣುತ್ತಾ ಅವರ ಸೇವೆ ಪಡೆಯುತ್ತಿದ್ದರು. ಆದರೆ ಈ 'ಭಾವಿಸುವ' ಮತ್ತು 'ಕಾಣುವ' ಮಾನಸಿಕತೆಯ ಮರೆಯಲ್ಲಿ ನಡೆಯುವ ಮನೋದೈಹಿಕ ವೃತ್ತಿಗಳ ನಿಗೂಢತೆಯನ್ನು ಅರಿಯಲು ಗಾಂಧಿ ತಮ್ಮ ಬ್ರಹ್ಮಚರ್ಯ ವ್ರತವನ್ನು ಪರೀಕ್ಷೆಗೊಡ್ಡುವ ಮೂಲಕ ಮುಂದಾಗಿದ್ದರು ಎಂದು ತೋರುತ್ತದೆ. ಅದು ಮನುಷ್ಯನ ಪ್ರಜ್ಞಾಪೂರ್ವಕತೆ ಮತ್ತು ಅಪ್ರಜ್ಞಾಪೂರ್ವಕತೆಗಳ ನಡುವಣ ಅಥವಾ ಸಂಕಲ್ಪ ಶಕ್ತಿ ಮತ್ತು ನೈಸರ್ಗಿಕ ಶಕ್ತಿಗಳ ನಡುವಣ ಸಂಬಂಧದ ಸೂಕ್ಷ್ಮತೆಗಳನ್ನು ಅರಿಯುವ ಪ್ರಯತ್ನವೂ ಆಗಿರಬಹುದು. ಬಹುಶಃ ಹಾಗಾಗಿಯೇ ರಾಜಾಜಿ ಈ ವಿಷಯವನ್ನು ಬಹಿರಂಗ ಚರ್ಚೆಗೆ ಒಡ್ಡಬಾರದೆಂದು–ಏಕೆಂದರೆ ಅದನ್ನು ಅರಿಯಲು ಒಂದು ಕನಿಷ್ಠ ಪ್ರಬುದ್ಧತೆ ಬೇಕೆಂದು–ಗಾಂಧಿಯವರಿಗೆ ಸಲಹೆ ಮಾಡಿದ್ದರೆಂದು ತೋರುತ್ತದೆ. ಆದರೂ ಗಾಂಧಿ ಕಾಲದಲ್ಲೇ ಈ ಮುಂಚೆ ಪ್ರಸ್ತಾಪಿಸಿದಂತೆ ಮಾರ್ಗರೆಟ್ ಸ್ಯಾಂಗರ್ ಮತ್ತು ಮಾರ್ಟಿನ್ ಗ್ರೀನ್‌ರಂತಹ ಗಾಂಧಿಯವರ ಮಹಿಳಾ ಜೀವನ ಚರಿತ್ರಕಾರರು ಈ ವಿಷಯವನ್ನು ಚರ್ಚಿಸಿರುವುದನ್ನು ನಾವು ಗಮನಿಸಬಹುದು. ಬಾಲ್ಯದಲ್ಲಿ ತಾಯಿಗೆ ಬಹು ನೆಚ್ಚಿನ ಮಗುವಾಗಿ, ಮಗನಾಗಿ ಬೆಳೆದು ಇಂಗ್ಲೆಂಡ್‌ನಲ್ಲಿದ್ದಾಗ ತಾಯಿಯನ್ನು ಕಳೆದುಕೊಂಡ ಮತ್ತು ಹೆಣ್ಣುಮಕ್ಕಳಿಲ್ಲದ ಗಾಂಧಿಗೆ, ಅವರು ಆಗಾಗ್ಗೆ ಒಳಗಾಗುತ್ತಿದ್ದ ಮಾನಸಿಕ ಕ್ಷೋಭೆಯ ಸಂದರ್ಭದಲ್ಲಿ, ತಾಯಿಯ ಬೆಚ್ಚನೆಯ ಅಪ್ಪುಗೆಯ ನೆನಪು ಮತ್ತು ನಿರೀಕ್ಷೆಗಳ ಸುಪ್ತ ಅಭಿವ್ಯಕ್ತಿ, ಹೀಗೆ ತಮ್ಮ ರೂಪಗಳನ್ನು ಕಂಡುಕೊಳ್ಳುತ್ತಿದ್ದಿರಬಹುದೆಂದು ರಾಜ್‌ಮೋಹನ್ ಭಾವಿಸುತ್ತಾರೆ. ಈ ದೃಷ್ಟಿಯಿಂದ ಎರಿಕ್ ಎರಿಕ್ಸನ್ ಅವರ 'ಗಾಂಧೀಸ್ ಟ್ರುತ್ಸ್' ಪುಸ್ತಕ ಅಧ್ಯಯನ ಯೋಗ್ಯವಾಗಿದೆ.

ಈ ಸಂಬಂಧವಾಗಿ ಚರ್ಚಿಸಬಹುದಾದ ಕೊನೆಯ ಪ್ರಶ್ನೆ: ಗಾಂಧಿ ಇಂತಹ ಪ್ರಯೋಗಗಳಿಗೆ ತಮ್ಮನ್ನು ಒಡ್ಡಿಕೊಳ್ಳಬಲ್ಲಷ್ಟು ಸುಪುಷ್ಟ ದೇಹವನ್ನು ಹೊಂದಿದ್ದರೆ ಎಂಬುದು. ಸ್ಥೂಲ ಹೊರನೋಟಕ್ಕೆ ಅವರು ಅಗಲ ಕಿವಿಗಳ ದಪ್ಪ ತುಟಿಯ ಕುರೂಪಿ ಕಪ್ಪು ಮನುಷ್ಯರಾಗಿ ಕಾಣುತ್ತಿದ್ದರು. ಆದರೆ ಅವರ ಉಪಸ್ಥಿತಿಯನ್ನು ಆನಂದದಾಯಕ ಮಾಡುವ ಮಾಂತ್ರಿಕತೆ ಹೊಳೆವ ಕಣ್ಣುಗಳನ್ನು ಹೊಂದಿದ್ದ ಅವರ ಭೌತಿಕ ದೇಹಕ್ಕಿತ್ತೆಂದು

ಅವರನ್ನು ಭೇಟಿ ಮಾಡಿದವರು ಹೇಳುತ್ತಾರೆ. ಅವರು ಕೂರುವ ಭಂಗಿಯಲ್ಲೇ ತಮ್ಮ ಇಡೀ ಚೈತನ್ಯವನ್ನು ಹಿಡಿದಿಟ್ಟುಕೊಂಡಿರುವಂತೆ ಭಾಸವಾಗುತ್ತಿತ್ತೆಂದು ಇನ್ನು ಕೆಲವರು ಹೇಳಿದ್ದಾರೆ. ನೆಹರೂ ಪ್ರಕಾರ ಅವರು ಬಂದರೆ ಮಂದಮಾರುತ ಬೀಸಿದಂತಾಗುತ್ತಿತ್ತು. ಗರ್ಭಿಣಿ ಸ್ತ್ರೀಯಂತೆ, ಯಾವಾಗಲೂ ಪುಷ್ಟಿದಾಯಕ ಆಹಾರವನ್ನು ಸೇವಿಸುತ್ತಾ, ದಿನವೂ ಮೈಲಿಗಟ್ಟಲೆ ನಡೆಯುತ್ತಾ, ನೂರಾರು ಸುತ್ತು ಚರಕ ತಿರುಗಿಸುತ್ತಾ ತಮ್ಮ ಕೈಕಾಲುಗಳನ್ನು ಹುರಿ ಮಾಡಿಟ್ಟುಕೊಳ್ಳುತ್ತಿದ್ದ ಗಾಂಧಿ, ಅವರ ಅಭಿಮಾನಿಗಳಿಗೆ ಸುಂದರ ವ್ಯಕ್ತಿಯೇ ಆಗಿದ್ದರು. ಗಾಂಧಿ, ತಮ್ಮ ಹೊಟ್ಟೆಯಲ್ಲಿ 'ಸ್ವರಾಜ್ಯ'ದ ಶಿಶು ಬೆಳೆಯುತ್ತಿದ್ದು ತಾವು ಗರ್ಭಿಣಿಯೇ ಹೌದೆಂದು ಹೇಳಿಕೊಳ್ಳುತ್ತಿದ್ದರು!

ಆದಾಗ್ಯೂ ಮಹಿಳೆಯರ ಬಗ್ಗೆ ಗಾಂಧಿ ಪಡೆಯುತ್ತಿದ್ದ 'ಸೇವೆ'ಗಳ ಬಗ್ಗೆ ಆಶ್ರಮದಲ್ಲೇ ಗುಸುಗುಸು ಆರಂಭವಾಗಿ ಅದು ಹಿಂದೂ ಮಹಾಸಭಾದ ಪರವಾಗಿದ್ದ ಒಂದು ಮರಾಠಿ ಪತ್ರಿಕೆ ಗಾಂಧಿ ಚಾರಿತ್ರ್ಯ ಹನನ ಮಾಡಲು ಸಾಮಗ್ರಿ ಒದಗಿಸಿತು. ಅದರಲ್ಲಿ ಗಾಂಧಿಯವರ ಬ್ರಹ್ಮಚರ್ಯವನ್ನು ಢೋಂಗಿ ಎಂದು ಕರೆಯಲಾಗಿತ್ತಲ್ಲದೆ ಡಾ. ಸುಶೀಲಾ ನಯ್ಯರ್ ಅವರನ್ನು ಕುರಿತು ಕೀಳಾಗಿ ಬರೆಯಲಾಗಿತ್ತು. ಗಾಂಧಿ ಇದರಿಂದ ಬಹು ನೊಂದರು. ತಮ್ಮ ಕಾರಣದಿಂದ ನೋವು ಅನುಭವಿಸುವಂತೆ ಆಗಿದ್ದಕ್ಕಾಗಿ ನಯ್ಯರ್ ಅವರ ಕ್ಷಮೆ ಕೇಳಿದರು. ಇದೆಲ್ಲವೂ ತಾವು ಅಸ್ಪೃಶ್ಯತೆಯ ನಿವಾರಣೆಗಾಗಿ ನಡೆಸುತ್ತಿರುವ ಪ್ರಯತ್ನಗಳ ಫಲ ಎಂದು ಹೇಳಿಕೆ ನೀಡಿದರು.

ಈ ಇಡೀ ವಿದ್ಯಮಾನದ ಮೇಲೆ ಬೆಳಕು ಚೆಲ್ಲುವ ಮಹದೇವ ದೇಸಾಯಿಯವರ ಒಂದು ಮಾತಿನೊಂದಿಗೆ ಈ ಅಧ್ಯಾಯವನ್ನು ಮುಗಿಸಬಹುದೆಂದು ಕಾಣುತ್ತದೆ. ಗಾಂಧಿಯವರ ಜೀವನ ಚರಿತ್ರೆಕಾರ ಲೂಯಿ ಫಿಶರ್ 'ಗಾಂಧಿಯವರ ಬದುಕಿನ ಇಷ್ಟೊಂದು ತೀವ್ರತೆಗೆ ಏನು ಕಾರಣವಿರಬಹುದು?' ಎಂಬ ಪ್ರಶ್ನೆಗೆ ದೇಸಾಯಿಯವರು ಕೊಟ್ಟ ಉತ್ತರ ಇದು: ಕಾಮ ಮತ್ತು ಕೋಪಗಳನ್ನು ಸೃಜನಶೀಲ ಶಕ್ತಿಗಳನ್ನಾಗಿ ಪರಿವರ್ತಿಸಲು ಅವರು ಮಾಡುತ್ತಿರುವ ಸತತ ಪ್ರಯತ್ನಗಳು.'

■

೮೦

ಆರಂಭವಾದ ಅಧಿಕಾರ ಪರ್ವ: ಮೂಡಲಾರಂಭಿಸಿದ ವಿಭಜನೆಯ ರೇಖೆಗಳು

ಗಾಂಧಿ ತಮ್ಮ ಬದುಕಿನ ಈ ಕಷ್ಟದ–ಸವಾಲಿನ ಮತ್ತು ಅಗ್ನಿ ಪರೀಕ್ಷೆಗಳ ದಿನಗಳನ್ನು ಹಾದುಹೋಗುತ್ತಿದ್ದ ಸಂದರ್ಭದಲ್ಲೇ ಅನೇಕ ವಿದೇಶೀಯರು, ಅವರ ಸಂದರ್ಶನಗಳಿಗಾಗಿ, ಮಾತುಕತೆಗಳಿಗಾಗಿ ಮತ್ತು ಒಡನಾಟಕ್ಕಾಗಿ ವರ್ಧಾ ಮತ್ತು ಸೇವಾಗ್ರಾಮಕ್ಕೆ ಬಂದು ಹೋದರು. ಸಂದರ್ಶನಕ್ಕಾಗಿ ಬಂದವರಲ್ಲಿ ಮುಖ್ಯರೆಂದರೆ ಜನನ ನಿಯಂತ್ರಣ ಪ್ರಚಾರಾಂದೋಲನದ ರೂವಾರಿ ಅಮೆರಿಕಾದ ಮಾರ್ಗರೆಟ್ ಸ್ಯಾಂಗರ್ ಮತ್ತು ಅಮೆರಿಕಾದವರೇ ಆದ ಕಪ್ಪು ಜನಾಂಗದ ಬುದ್ಧಿಜೀವಿ ಡಾ. ತುರ್ಮನ್ ದಂಪತಿಗಳು. ಶ್ರೀಮತಿ ಸ್ಯಾಂಗರ್ ಜನನ ನಿಯಂತ್ರಣ ಆಂದೋಲನಕ್ಕೆ ಗಾಂಧಿಯವರ ಬೆಂಬಲ ಪಡೆಯಲು ೧೯೩೫ರ ಡಿಸೆಂಬರ್‌ನಲ್ಲಿ ಬಂದಿದ್ದರು. ಅವರು ಎರಡು ದಿವಸ ಗಾಂಧಿಯವರೊಂದಿಗೆ ಬೆಳಗಿನ ವಾಯುವಿಹಾರದ ಸಂದರ್ಭವೂ ಸೇರಿದಂತೆ ಅನೇಕ ತಾಸುಗಳ ಕಾಲ ಗಂಡು ಹೆಣ್ಣಿನ ಸಂಬಂಧದ ಪ್ರೇಮ–ಕಾಮದ ಆಯಾಮಗಳು, ಜನನ ನಿಯಂತ್ರಣ ಮತ್ತು ಅದರ ಸಾಧನಗಳ ಅಗತ್ಯ–ಅನಿವಾರ್ಯತೆಗಳ ಬಗ್ಗೆ ಮುಕ್ತ ಚರ್ಚೆ ನಡೆಸಿದರು.

ಚಿಕ್ಕ ಕುಟುಂಬ: ಕಾಮ ಮತ್ತು ಪ್ರೇಮ ಸಂಬಂಧ!

ಚಿಕ್ಕ ಸಂಸಾರದ ಅಗತ್ಯವನ್ನು ಗಾಂಧಿ ಒಪ್ಪಿದರಾದರೂ, ಅದಕ್ಕಾಗಿ ಹೊರಗಿನ ನಿಯಂತ್ರಣ ಸಾಧನಗಳನ್ನು ಬಳಸುವುದಕ್ಕೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ಅವು ಮುಕ್ತ ಕಾಮಜೀವನಕ್ಕೆ ಅವಕಾಶ ಮಾಡಿಕೊಟ್ಟು ಸಂತತಿ ಮುಂದುವರೆಯಲು ಇರುವ ನಿಸರ್ಗದ ಕೊಡುಗೆಯನ್ನು ದುರುಪಯೋಗ ಮಾಡಿಕೊಂಡಂತಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು. ಅವರ ಪ್ರಕಾರ ಸಂಯಮದ ಮೂಲಕವೇ ಚಿಕ್ಕ ಕುಟುಂಬವನ್ನು ಸಾಧಿಸಬಹುದು. ಇದು ಸಾಧ್ಯವೇ ಎಂದು ಸ್ಯಾಂಗರ್ ಕೇಳಿದಾಗ, ಗರ್ಭಧಾರಣೆಯ ಸಾಧ್ಯತೆ ಇಲ್ಲದ 'ಸುರಕ್ಷೆ'ಯ ದಿನಗಳಲ್ಲಿ ಗಂಡು ಹೆಣ್ಣು ಸೇರಬಹುದು ಎಂದರು. ಆದರೆ ಕಾಮಾಭಿವ್ಯಕ್ತಿಯೂ ಒಂದು ಆಧ್ಯಾತ್ಮಿಕ ಅನುಭವವೇ ಅಲ್ಲವೆ? ಎಂದು ಸ್ಯಾಂಗರ್ ಗಾಂಧಿಯವರನ್ನು ಪ್ರಶ್ನಿಸಿದಾಗ, ತಾವು ಬ್ರಹ್ಮಚರ್ಯ ಪಾಲನೆ ಆರಂಭಿಸಿದ ನಂತರ ತಮ್ಮ ಮತ್ತು ತಮ್ಮ ಪತ್ನಿಯ ನಡುವಣ ಸಂಬಂಧ ಹೆಚ್ಚು ಮಧುರವಾಗಿ ಆಧ್ಯಾತ್ಮಿಕತೆಯನ್ನು ಪಡೆಯಿತು ಎಂದು ಗಾಂಧಿ ಹೇಳಿದರು. ಆದರೆ ಅದು

ಎಲ್ಲರ ಅನುಭವವಾಗಲಾರದು ಎನ್ನುತ್ತಾ ಸ್ಯಾಂಗರ್, ಕಾಮವನ್ನು ನಿರಾಕರಿಸಿದ ಕಾರಣಗಳಿಗಾಗಿ ಅನೇಕ ದಾಂಪತ್ಯಗಳು ಒಡೆದುಹೋಗಿ ಹೆಣ್ಣು ಕಷ್ಟಕ್ಕೆ ಸಿಕ್ಕಿದ ಅನೇಕ ಉದಾಹರಣೆಗಳಿವೆ ಎಂದು ತಮ್ಮ ಮಾತನ್ನು ವಿವರಿಸಿದಾಗ ಗಾಂಧಿ, ಸ್ಯಾಂಗರ್ ಅವರ ಪ್ರಚಾರಾಂದೋಲನಕ್ಕೆ ತಮ್ಮ ಮಿತಿಯಲ್ಲೇ ಒಂದು ಪ್ರೋತ್ಸಾಹಕ ಕ್ರಮವೆಂಬಂತೆ ನಿಯಂತ್ರಣ ಸಾಧನವನ್ನು ಹೆಣ್ಣಿನ ಮೇಲೆ ಹೇರದೆ, ಆಕ್ರಮಣಕಾರಿ ಗಂಡನ್ನು ಸಂತಾನಹರಣ ಶಸ್ತ್ರಚಿಕಿತ್ಸೆಗೆ ಒಳಪಡಿಸಬಹುದು ಎಂದರು. ನಂತರ ಸ್ಯಾಂಗರ್, ಮನುಷ್ಯರ ಬಾಳಿನಲ್ಲಿ ಬಹುಸಂಗಾತಿಗಳ ಸಾಧ್ಯತೆ-ಅಗತ್ಯಗಳ ಬಗ್ಗೆ ಮಾತನಾಡುತ್ತಾ ಗಂಡು ಹೆಣ್ಣುಗಳ ನಡುವೆ ದಾಂಪತ್ಯದ ಹೊರತಾದ ಆತ್ಮೀಯ ಸಂಬಂಧವನ್ನು ನೀವು ನಿರಾಕರಿಸುತ್ತೀರಾ? ಎಂದು ಪ್ರಶ್ನಿಸಿದಾಗ ಅವರು ತಾವೂ ಒಮ್ಮೆ ಅಂತಹ ಸಂಬಂಧದ (ಸರಳಾದೇವಿಯವರ) ಮೋಹಪಾಶದಲ್ಲಿ ಸಿಲುಕಿಕೊಂಡು ಇನ್ನೇನು ಜಾರಿಬೀಳುವ ಹಂತ ತಲುಪಿದಾಗ, ತಮ್ಮ ಕಿರಿಯ ಗೆಳೆಯರ (ರಾಜಾಜಿ, ಮಹದೇವ ದೇಸಾಯಿ ಮತ್ತಿತರರ) ನೆರವಿನಿಂದ ಪಾರಾದ ಸಂಗತಿಯನ್ನು ಹೇಳಿದಾಗ ಸ್ಯಾಂಗರ್ ಪಿಳಿಪಿಳಿ ಕಣ್ಣು ಬಿಟ್ಟಿರಬೇಕು.

ಸ್ಯಾಂಗರ್ ತಮ್ಮ ಈ ಗಾಂಧಿ ಸಂದರ್ಶನ ಕುರಿತು ಬರೆದ ಪುಸ್ತಕದಲ್ಲಿ ಗಾಂಧಿಯವರ ಪ್ರೀತಿಪೂರ್ವಕತೆ ಮತ್ತು ಮುಕ್ತ ಅಭಿವ್ಯಕ್ತಿಯ ಬಗ್ಗೆ ಮೆಚ್ಚಿ ಬರೆದಿರುವರಾದರೂ, ಕಾಮವನ್ನು ಕುರಿತ ಗಾಂಧಿಯವರ ಆಲೋಚನೆಗಳು ಅವರ ತಂದೆಯ ಸಾವಿನ ಸಂದರ್ಭದ ಘಟನೆಯನ್ನು ಕುರಿತ ಅವರ ಪಾಪಪ್ರಜ್ಞೆಯಿಂದ ರೂಪುಗೊಂಡಂತಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಕಪ್ಪು ಅಮೆರಿಕನ್ನರಿಗೆ ಗಾಂಧಿ ಸಂದೇಶ

ಸ್ಯಾಂಗರ್ ಬಂದು ಹೋದ ಎರಡು ತಿಂಗಳುಗಳ ನಂತರ, ಅಂದರೆ ೧೯೩೬ರ ಫೆಬ್ರುವರಿಯಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ತುರ್ಮನ್ ದಂಪತಿಗಳು ಬಂದಿದ್ದರು. ಅವರು ಬಾಲ್ಯದಿಂದಲೇ, ನೀಗ್ರೋ ಪರ ಅಮೆರಿಕನ್ ಪತ್ರಿಕೆಗಳಲ್ಲಿ, ಗಾಂಧಿಯವರನ್ನು ಕುರಿತ ಬರಹಗಳನ್ನು ಓದುತ್ತಾ ಬೆಳೆದಿದ್ದರು. ಮುಖ್ಯವಾಗಿ ಹ್ಯೂಬರ್ಟ್ ಹ್ಯಾರಿಸನ್, ಬೋಯಿಸ್, ಮಾರ್ಕಸ್ ಗಾರ್ವೆ ಅವರ ಬರಹಗಳು ಗಾಂಧಿಯವರನ್ನು 'ಮಾನವ ಇತಿಹಾಸದ ಅಪೂರ್ವ ಸಾಧು ಸಂತ' ಎಂದು ವರ್ಣಿಸಿದ್ದವು. ಈ ಬರಹಗಳು 'ನಮ್ಮದೇ ಸಾಧು ಸಂತರನ್ನು ನಾವು ಪಡೆಯುವುದು ಯಾವಾಗ, ಹೇಗೆ?' ಎಂಬ ಪ್ರಶ್ನೆಯನ್ನೂ ಹಾಕಿದ್ದವು.

ಅಸ್ಪೃಶ್ಯತೆಯ ನಿವಾರಣೆಯ ಬಗ್ಗೆ ತುಂಬ ತಲೆ ಕೆಡಿಸಿಕೊಂಡಿದ್ದ ಗಾಂಧಿ, ಅದನ್ನು ಕಪ್ಪು ಜನರ ಗುಲಾಮಗಿರಿಯ ಜೊತೆ ಹೋಲಿಸಿಕೊಂಡು ಯೋಚಿಸಿದ್ದರು. ಹಾಗಾಗಿ ತುರ್ಮನ್ ದಂಪತಿಗಳನ್ನು ವಿಶೇಷ ಆದರದಿಂದ ಬರಮಾಡಿಕೊಂಡ ಅವರು, ಆ ಕಪ್ಪು ದಂಪತಿಗಳ ಎಲ್ಲ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿದರು. ಕ್ರೈಸ್ತ ಧರ್ಮದ ಬಹುಮುಖ್ಯ ಆಶಯವಾದ ಪ್ರೀತಿಗೆ ಇರುವ ಹಲವು ಅರ್ಥಗಳು ತಮ್ಮ ಸತ್ಯಾಗ್ರಹ ಕಲ್ಪನೆಯಲ್ಲಿ ಮಿಳಿತವಾಗಿವೆ ಎಂದು ಹೇಳಿದ ಗಾಂಧಿ, ಸಮಸ್ಯೆಯ ಪರಿಹಾರಕ್ಕಾಗಿ ಚರಿತ್ರೆಯಲ್ಲಿ

ಈವರೆಗೆ ಬಳಸಲಾಗಿರುವ ಕ್ರೋಧಕ್ಕೆ ಪರ್ಯಾಯವಾಗಿ ಸತ್ಯಾಗ್ರಹ ಪ್ರೀತಿಯನ್ನು ಬಳಸುತ್ತದೆ ಎಂದರು. ವ್ಯಕ್ತಿಗಳಿಗೆ ಮತ್ತು ಸಮೂಹಗಳಿಗೆ ಸತ್ಯಾಗ್ರಹದ ತರಬೇತಿ ಕೊಡುವುದು ಹೇಗೆ ಎಂದು ತುರ್ಮನ್ ಪ್ರಶ್ನಿಸಿದಾಗ ಗಾಂಧಿ, ದಿನನಿತ್ಯದ ವ್ಯವಹಾರಗಳಲ್ಲಿ ಅದನ್ನು ಬಳಸತೊಡಗುವುದೇ ನಿಜವಾದ ತರಬೇತಿ ಎಂದು ಉತ್ತರಿಸಿದರು. ಗಾಂಧಿ ಅಮೆರಿಕಾದಲ್ಲಿನ ಜನಾಂಗವಾದದ ಆಚರಣೆಯ ವಿವಿಧ ಬಗೆಗಳ ಬಗ್ಗೆ ಬಹಳ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದುಕೊಂಡರು. ತುರ್ಮನ್, ಗಾಂಧಿಯವರು ಅಮೆರಿಕಾಗೆ ಬಂದು ನೀಗ್ರೋ ಜನರೊಂದಿಗೆ ಮಾತಾಡಬೇಕೆಂಬ ಕೋರಿಕೆ ಸಲ್ಲಿಸಿದಾಗ ಅವರು, 'ಮೊದಲು ನಾನು ಇಲ್ಲಿ ಎದುರಿಸುತ್ತಿರುವ ಪರೀಕ್ಷೆಯಲ್ಲಿ ತೇರ್ಗಡೆಯಾದ ನಂತರವಲ್ಲವೆ ಹೊರಗೆ ಬಂದು ಮಾತಾಡುವ ಅರ್ಹತೆ ಪಡೆಯುವುದು?' ಎಂದು ತಮಗೆ ತಾವೇ ಪ್ರಶ್ನೆ ಹಾಕಿಕೊಂಡು ಉತ್ತರಿಸಿದರು. ಹಾಗೇ ಜಗತ್ತಿಗೇನಾದರೂ 'ಅಹಿಂಸೆಯೇ ಬಿಡುಗಡೆಯ ದಾರಿ' ಎಂಬ ಸಂದೇಶ ತಲುಪಿಸಬಲ್ಲವರಿದ್ದರೆ ಅವರು ನೀಗ್ರೋ ಜನ ಮಾತ್ರ' ಎಂಬ ಆಶಯವನ್ನೂ ಗಾಂಧಿ ವ್ಯಕ್ತಪಡಿಸಿದರು. ಗಾಂಧಿಯವರ ಕೋರಿಕೆಯ ಮೇರೆಗೆ ಶ್ರೀಮತಿ ತುರ್ಮನ್, ಶಿಲುಬೆ ಮೇಲಿನ ಕ್ರಿಸ್ತನನ್ನು ಕುರಿತ ಎರಡು ಭಕ್ತಿಗೀತೆಗಳನ್ನು ಹಾಡಿ, ಅವರನ್ನು ಧ್ಯಾನಸ್ಥರನ್ನಾಗಿ ಮಾಡಿದರು. ತುರ್ಮನ್ ದಂಪತಿಗಳು ಹೊರಟು ನಿಂತಾಗ, ಗಾಂಧಿ ಅವರಿಗೆ ಒಂದು ಬುಟ್ಟಿ ಕಿತ್ತಳೆ ಹಣ್ಣನ್ನು ಉಡುಗೊರೆಯಾಗಿ ನೀಡಿದರು. ಆಗ ತುರ್ಮನ್, ತಮಗೆ ವೈಯಕ್ತಿಕ ಉಡುಗೊರೆ ಬೇಕೆಂದೂ, ಅದು ಸ್ವತಃ ಗಾಂಧಿಯವರೇ ನೂತ ನೂಲಿನ ಬಟ್ಟೆ ಆದರೆ ಚೆನ್ನವೆಂದು ಕೋರಿದರು. ಅವರ ಕೋರಿಕೆಯನ್ನು ಪ್ರೀತಿಯಿಂದ ಮನ್ನಿಸಿದ ಗಾಂಧಿ, ಕೆಲ ಕಾಲದಲ್ಲೇ ಅವರ ಅಮೆರಿಕಾದ ವಿಳಾಸಕ್ಕೆ ಅಂತಹ ಒಂದು ವಸ್ತ್ರವನ್ನು ಅಂಚೆ ಮೂಲಕ ಕಳಿಸಿಕೊಟ್ಟರು. ಈ ಸಂದರ್ಶನಕ್ಕೆ ಸಾಕ್ಷಿಯಾಗಿದ್ದ ಮಹದೇವ ದೇಸಾಯಿಯವರು, ಇದು ತಾವು ಕಂಡಂತೆ ಗಾಂಧಿಯವರು ನೀಡಿದ ಅತ್ಯಂತ ಪ್ರೀತಿಪೂರ್ವಕ ಸಂದರ್ಶನ ಎಂದು 'ಹರಿಜನ್'ನಲ್ಲಿ (೧೪ ಮಾರ್ಚ್, ೧೯೩೬) ದಾಖಲಿಸಿದ್ದಾರೆ.

ತುರ್ಮನ್ ದಂಪತಿಗಳ ನಂತರ, ವಿದೇಶಗಳ ಅನೇಕ ಪ್ರಾಧ್ಯಾಪಕರೂ, ಕ್ರೈಸ್ತ ಪಾದ್ರಿಗಳೂ ಗಾಂಧಿಯವರೊಡನೆ ಸಂಕ್ಷಿಪ್ತ ಮಾತುಕತೆ ನಡೆಸಿ ಹೋದರು. ಅವರಲ್ಲೊಬ್ಬರು, 'ನೀವು ಕ್ಯಾಥೊಲಿಕ್ ಧರ್ಮಕ್ಕೆ ಸೇರಿದರೆ ನೀವು ಸಂತ ಫ್ರಾನ್ಸಿಸ್‌ನಷ್ಟೇ ಪ್ರಭಾವಳಿ ಪಡೆಯುವಿರಿ' ಎಂದಾಗ, ಗಾಂಧಿ ನಾನು ಬಡ ಹಿಂದೂವಾಗಿದ್ದುಕೊಂಡೇ, ನಿಮ್ಮ ಪ್ರಕಾರ ಹಾಗೆ ಆಗಲಾರೆ ಎಂಬುದೇ ನಿಜವಾದ ಸಮಸ್ಯೆ' ಎಂದು ಉತ್ತರಿಸಿದರು.

ಜರ್ಮನಿಯ ಹುಡುಗ ಹರ್ಬರ್ಟ್ ಫಿಶರ್

ಈ ಸಂದರ್ಭದಲ್ಲಿ ಬಂದು ಗಾಂಧಿಯವರೊಂದಿಗೆ ಬಹಳ ಕಾಲ ಇದ್ದ ಜರ್ಮನಿಯ ಯುವಕ ಹರ್ಬರ್ಟ್ ಫಿಶರ್‌ನ ಪ್ರಸಂಗ ತುಂಬ ಕುತೂಹಲಕಾರಿಯಾಗಿದೆ. ನಾಝಿ ಜರ್ಮನಿಯಲ್ಲಿದ್ದೂ 'ತಾವೋ' ಎಂಬ ಪತ್ರಿಕೆಯ ಮೂಲಕ ಗಾಂಧಿ ಬಗ್ಗೆ ಓದಿಕೊಂಡು ಸಸ್ಯಾಹಾರಿಯೂ, ಸಾವಯವ ಕೃಷಿಯಲ್ಲಿಯೂ ಆಸಕ್ತಿ ಬೆಳೆಸಿಕೊಂಡಿದ್ದ ಈ ಯುವಕ, 'ಮಹಾತ್ಮ ಗಾಂಧಿ, ಇಂಡಿಯಾ' ಎಂಬ ವಿಳಾಸಕ್ಕೆ

ಪತ್ರ ಬರೆದು, ತಾನು ತಮ್ಮಲ್ಲಿಗೆ ಬಂದು ಇರಬಹುದೇ ಎಂದು ಕೇಳಿದ್ದ. ಗಾಂಧಿ, ಆಶ್ರಮದ ನಿಯಮಗಳನ್ನೆಲ್ಲ ತಿಳಿಸಿ, ಇವನ್ನು ಪಾಲಿಸುವುದಾದರೆ ಬರಬಹುದು ಎಂದು ಉತ್ತರ ಬರೆದಿದ್ದರು. ಆತ ಬಂದೇ ಬಿಟ್ಟ. ೧೯೩೬ರ ಡಿಸೆಂಬರ್‌ನಲ್ಲಿ ಆತ ಬಂದಾಗ ಗಾಂಧಿ ಫೈಜ್ಪುರ ಕಾಂಗ್ರೆಸ್ ಅಧಿವೇಶನದಲ್ಲಿದ್ದರು. ಆ ಹುಡುಗ ಅಲ್ಲಿಗೇ ಹೋದ. ಅಲ್ಲಿ ಪಾಸ್‌ಪೋರ್ಟ್ ಮತ್ತಿತರ ದಾಖಲೆಗಳೂ ಸೇರಿದಂತೆ ಆತನ ವಸ್ತುಗಳು ಕಳುವಾದವು. ಆಗ ಎರಡನೇ ಮಹಾಯುದ್ಧದ ಕಾರ್ಮೋಡಗಳು ಕವಿಯತೊಡಗಿ ಬ್ರಿಟನ್ ಮತ್ತು ಜರ್ಮನಿ ಎದುರುಬದುರಾಗಿ ನಿಲ್ಲತೊಡಗಿದ್ದ ಕಾಲ. ಜರ್ಮನಿಯ ರಾಯಭಾರ ಕಚೇರಿ ಫಿಶರ್ ಸ್ವದೇಶಕ್ಕೆ ಹಿಂತಿರುಗುವುದಾದರೆ, ಹೊಸ ಪಾಸ್‌ಪೋರ್ಟ್ ಕೊಡುವುದಾಗಿ ಹೇಳಿತು. ಆದರೆ ಹಿಟ್ಲರನ ಜರ್ಮನಿಗೆ ಹೋಗಲೊಲ್ಲದ ಹುಡುಗ ಗಾಂಧಿಯೊಂದಿಗೆ ಸೇವಾಗ್ರಾಮಕ್ಕೆ ಬಂದ. ಗಾಂಧಿ ಆತನನ್ನು ಮಗನ್‌ವಾಡಿಯ ಗ್ರಾಮೀಣ ಕೈಗಾರಿಕೆಗಳ ಸಂಘದ ಪ್ರಧಾನ ಕಾರ್ಯದರ್ಶಿ ಜೆ.ಸಿ. ಕುಮಾರಪ್ಪ ಅವರ ಸುಪರ್ದಿಗೆ ಒಪ್ಪಿಸಿದರು.

ಫಿಶರ್ ಹಗಲು ಕುಮಾರಪ್ಪನವರಿಗೆ ಸಹಾಯಕನಾಗಿ ಕೆಲಸ ಮಾಡಿ ಸಂಜೆಗೆ ಸೇವಾಗ್ರಾಮಕ್ಕೆ ಹಿಂತಿರುಗಿ, ಏನಾದರೂ ಓದುವುದು ಅಥವಾ ಗಾಂಧಿಯವರೊಂದಿಗೆ ಯಾವುದಾದರೂ ವಿಷಯದ ಬಗ್ಗೆ ವಾದಿಸುವುದರಲ್ಲಿ ತೊಡಗಿರುತ್ತಿದ್ದ. ಆತನಿಗೆ ಊಟಕ್ಕೆ ಮೊಟ್ಟೆ ಕೊಡಿಸಲು ಮುಂದಾದಾಗ ತನ್ನ ಸಸ್ಯಾಹಾರ ವ್ರತ ಅಚಲ ಎಂದ! ಆತ ಗಾಂಧಿಯವರನ್ನು ತುಂಬ ವಿವರವಾಗಿ ಗಮನಿಸುತ್ತಿದ್ದ. ಸೇವಾಗ್ರಾಮದ ಆ ಮಣ್ಣಗೋಡೆಯ ದೊಡ್ಡ ಹಜಾರಕ್ಕೆ ಆರು ಬಾಗಿಲುಗಳಿದ್ದು ಜನ ಅವುಗಳ ಮೂಲಕ ಸದಾ ಓಡಾಡುತ್ತಿದ್ದರೂ, ಕೆಲವರು ಮೂಲೆಗಳಲ್ಲಿ ಕೂತು ಜೋರಾಗಿ ಓದುತ್ತಲೋ ಅಥವಾ ಯಾವುದೋ ವಾದ್ಯವನ್ನು ನುಡಿಸುತ್ತಲೋ ಇದ್ದರೂ, ಗಾಂಧಿ ಅದರಿಂದ ಏಕಾಗ್ರತೆ ಕಳೆದುಕೊಳ್ಳದೆ ಓದುವುದು, ಬರೆಯುವುದು, ಮಾತಾಡುವುದು ಅಥವಾ ನೂಲುವುದನ್ನು ಮಾಡುತ್ತಿದ್ದುದನ್ನು ಕಂಡರೆ ಆತನಿಗೆ ಅಚ್ಚರಿ. ಇನ್ನೊಬ್ಬರೊಂದಿಗೆ ಮಾತಾಡುತ್ತಿರುವಾಗಲೇ ಗಾಂಧಿ ಕನ್ನಡಿ ಇಲ್ಲದೆ ಮುಖಕ್ಷೌರ ಮಾಡಿಕೊಳ್ಳುತ್ತಿದ್ದರಂತೆ! ಆತನ ಪ್ರಕಾರ ಗಾಂಧಿ ವಿಕಾಸಶೀಲವಾದ ವ್ಯಕ್ತಿತ್ವ. ಅವರ ಆಲೋಚನೆಗಳು–ಅಭಿಪ್ರಾಯಗಳು ಸ್ಥಗಿತಗೊಂಡವಲ್ಲ. ಅಕ್ಷರಾರ್ಥಗಳಿಗೆ ಜೋತುಬಿದ್ದವೂ ಅಲ್ಲ. ಹೆಚ್ಚಾಗಿ ಪ್ರಾಯೋಗಿಕವಾದವುಗಳು. ಹಾಗಾಗಿಯೇ ಅಹಿಂಸಾವಾದಿಯಾಗಿದ್ದ ಅವರು, ಒಮ್ಮೆ ಆಶ್ರಮದಲ್ಲಿ ಕಂಡ ವಿಷಕಾರಿ ಹಾವನ್ನು ಕೊಲ್ಲಲು ಹೇಳಿದಾಗ ಅವನಿಗೆ ಆಶ್ಚರ್ಯವಾಗಲಿಲ್ಲ. ತಮ್ಮೊಂದಿಗೆ ಪ್ರತಿ ವಿಷಯದ ಬಗ್ಗೆಯೂ ತರ್ಕಬದ್ಧವಾಗಿ ವಾದಿಸುತ್ತಿದ್ದ ಫಿಶರ್‌ನನ್ನು ಕಂಡರೆ ಗಾಂಧಿಗೆ ಬಹುಪ್ರೀತಿ.

ಯುದ್ಧ ಆರಂಭವಾದಾಗ ಫಿಶರ್‌ನನ್ನು ಬ್ರಿಟಿಷ್ ಸರ್ಕಾರ ಬಂಧಿಸಿ ಸೆರೆಮನೆಯಲ್ಲಿಟ್ಟಿತು. ಯುದ್ಧ ಮುಗಿದು, ಅವನ ಬಿಡುಗಡೆಯಾದಾಗ ಹಿಟ್ಲರ್‌ನಿಂದ ಮುಕ್ತವಾಗಿದ್ದ ಜರ್ಮನಿಗೆ ಆತ ವಾಪಸಾದ. ಅಲ್ಲಿ ಗಾಂಧಿ ಆಶ್ರಮದ ತನ್ನ ನೆನಪುಗಳನ್ನು ದಾಖಲಿಸಿದ.

ಗಾಂಧಿಯವರನ್ನು ಬಹುಬಾರಿ ಭೇಟಿ ಮಾಡಿ ಮಾತುಕತೆ ನಡೆಸಿದ ಪಾದ್ರಿ ಜಾನ್ ಆರ್ ಮಾಟ್ ಅವರ ಕೆಲವು ಪ್ರಶ್ನೆಗಳಿಗೆ ಗಾಂಧಿ ಕೊಟ್ಟ ಉತ್ತರಗಳು ಕುತೂಹಲಕಾರಿಯಾಗಿವೆ:

'ನಿಮ್ಮ ಮನಸ್ಸನ್ನು ಈಗ ಕಾಡುತ್ತಿರುವ ಬಹು ಮುಖ್ಯ ಸಂಗತಿ ಯಾವುದು?'

'ಬಡವರ ಬಗ್ಗೆ, ದೀನ ದರಿದ್ರರ ಬಗ್ಗೆ ಮಿಡಿಯದ ಮನುಷ್ಯನ ಕಲ್ಲು ಹೃದಯ'

'ನಿಮ್ಮ ಬದುಕಿನಲ್ಲಿ ಮೌನದ ಸ್ಥಾನವೇನು?'

'ಅದು ಭಗವಂತನೊಂದಿಗೆ ಸಂಭಾಷಿಸುವ ಕಾಲ'

'ದೇವರು ಕಷ್ಟಕಾಲದಲ್ಲಿ ನಿಮ್ಮ ಮೊರೆ ಕೇಳುವನೆ?'

'ಆ ವಿಶ್ವಾಸವೇ ನನ್ನನ್ನು ಸದಾ ಆಶಾವಾದಿಯನ್ನಾಗಿ ಕಾಪಾಡಿರುವುದು'

ಭಾರತಕ್ಕೆ ಹೊಸ ಸಂವಿಧಾನ–ಸ್ವಯಮಾಡಳಿತದ ಮೊದಲ ಹಂತ

ಈ ಎಲ್ಲ ವಿದ್ಯಮಾನಗಳ ನಡುವೆಯೇ, ಹಲವು ಮಹತ್ವದ ರಾಜಕೀಯ ಬೆಳವಣಿಗೆಗಳು ನಡೆದುಹೋಗಿದ್ದವು. ೧೯೩೫ರ ಆಗಸ್ಟ್‌ನಲ್ಲಿ ಬ್ರಿಟಿಷ್ ಸಂಸತ್ತು, ಎರಡನೇ ದುಂಡು ಮೇಜಿನ ಪರಿಷತ್ತಿನಲ್ಲಿ ನಡೆದ ಸಂಧಾನಗಳ ಫಲಶೃತಿಯಾಗಿ, ಮುಂದೆ ಭಾರತದ ೧೯೩೫ರ ಕಾಯಿದೆ ಎಂದೇ ಪ್ರಸಿದ್ಧವಾದ ಭಾರತಕ್ಕೆ ಹೆಚ್ಚು ಸಾಂವಿಧಾನಿಕ ಅಧಿಕಾರಗಳನ್ನು ನೀಡುವ ಕಾಯಿದೆಯೊಂದನ್ನು ಅಂಗೀಕರಿಸಿತ್ತು. ಇದರ ಪ್ರಕಾರ ಭಾರತದ ಶಾಸನ ಸಭೆಗಳಲ್ಲಿ ಐರೋಪ್ಯರ ಮತ್ತು ಬ್ರಿಟಿಷ್ ಅಧಿಕಾರಿಗಳ ಸಂಖ್ಯೆಯನ್ನು ಕಡಿಮೆ ಮಾಡಿ ಭಾರತೀಯ ಪ್ರತಿನಿಧಿಗಳಿಗೆ ಹೆಚ್ಚು ಅವಕಾಶಗಳನ್ನು ಕಲ್ಪಿಸಲಾಗಿತ್ತು. ಮುಖ್ಯವಾದ ಸಂಗತಿ ಎಂದರೆ, ಪ್ರಾಂತೀಯ ಶಾಸನ ಸಭೆಗಳಿಗೆ ಬಹುಮತದ ಆಧಾರದ ಮೇಲೆ ಸರ್ಕಾರಗಳನ್ನು ರಚಿಸಿ, ಮಂತ್ರಿಮಂಡಲಗಳ ಮೂಲಕ ಒಳಾಡಳಿತ, ಶಿಕ್ಷಣ, ಹಣಕಾಸು, ಆರೋಗ್ಯ ಮುಂತಾದ ಇಲಾಖೆಗಳ ಆಡಳಿತ ನಡೆಸಬಹುದಾಗಿತ್ತು. ನಾಗರಿಕ ಸೇವಾ ಅಧಿಕಾರಿಗಳು ಈ ಮಂತ್ರಿಮಂಡಲದ ಕೈ ಕೆಳಗೆ ಕೆಲಸ ಮಾಡಬೇಕಿತ್ತು. ಆದರೆ ಈ ಮಂತ್ರಿಮಂಡಲಗಳು ತೆಗೆದುಕೊಳ್ಳಬಹುದಾದ ನಿರ್ಧಾರಗಳನ್ನು ಅಮಾನ್ಯ ಮಾಡುವ ಮತ್ತು ಅನಿವಾರ್ಯವಾದಾಗ ಸರ್ಕಾರಗಳನ್ನು ವಜಾ ಮಾಡುವ ಅಧಿಕಾರವನ್ನು ವೈಸ್‌ರಾಯ್‌ಗೆ ನೀಡಿತ್ತು ಮತ್ತು ಕೇಂದ್ರ ಶಾಸನ ಸಭೆಗೆ ಸರ್ಕಾರ ರಚಿಸುವ ಅಧಿಕಾರ ನೀಡಿರಲಿಲ್ಲ. ಈ ಶಾಸನ, ಭಾರತೀಯರ ಸ್ವಯಮಾಡಳಿತದ ಬೇಡಿಕೆಗೆ ಗಣನೀಯ ಮಟ್ಟದಲ್ಲಿ ಸ್ಪಂದಿಸಿತ್ತಾದರೂ, ಕಾಂಗ್ರೆಸ್ ನಿರೀಕ್ಷಿಸಿದ್ದ ಕೆನಡಾ, ಆಸ್ಟ್ರೇಲಿಯಾಗಳು ಹೊಂದಿದ್ದಂತಹ, ಆಶ್ರಯ ಸ್ವಾಯತ್ತತೆಯ (ಡೊಮಿನಿಯನ್) ಸ್ಥಾನಮಾನ ನೀಡಿರಲಿಲ್ಲ. ೧೯೩೭ರ ಫೆಬ್ರುವರಿಯಲ್ಲಿ ಪ್ರಾಂತೀಯ ಶಾಸನ ಸಭೆಗಳಿಗೆ ಚುನಾವಣೆಗಳು ನಡೆಯಲಿವೆ ಎಂದು ಸರ್ಕಾರ ತಿಳಿಸಿತು.

ಈ ಕಾಯಿದೆಯ ಪ್ರಕಟಣೆ ಕಾಂಗ್ರೆಸ್ ಪಕ್ಷದಲ್ಲಿ ಬಿಸಿಬಿಸಿ ಚರ್ಚೆಗೆ ಕಾರಣವಾಗಿ ಅದರಲ್ಲಿ ಮೂರು ಗುಂಪುಗಳು ಸೃಷ್ಟಿಯಾದವು. ಕಾಯಿದೆಯನ್ನು ಒಪ್ಪಿಕೊಂಡು ಅಧಿಕಾರ ಪಡೆಯಬೇಕೆಂಬುದು ಸುಧಾರಣಾವಾದಿ ಸ್ವರಾಜ್ಯ ಗುಂಪಿನ ಅಭಿಪ್ರಾಯವಾದರೆ, ಯುವ ಕಾಂಗ್ರೆಸ್ಸಿಗರ ನಿಲುವು ಕಾಯಿದೆಯನ್ನು ತಿರಸ್ಕರಿಸಬೇಕೆಂಬುದಾಗಿತ್ತು. ಮೂರನೆಯ ಗುಂಪು ಚುನಾವಣೆಗಳಲ್ಲಿ ಸ್ಪರ್ಧಿಸಿ ಗೆದ್ದು ಪಕ್ಷದ ಬಲಪ್ರದರ್ಶನ ಮಾಡಬೇಕೆಂದು, ಆದರೆ ಸರ್ಕಾರ ರಚಿಸಬಾರದೆಂದು

ವಾದಿಸಿತು. ಗಾಂಧಿ ಕಾಂಗ್ರೆಸ್ ಪಕ್ಷದಿಂದ ನಿವೃತ್ತರಾಗಿದ್ದರಾದರೂ, ಅದರ ಹಿಂದೆ, ಕಾಂಗ್ರೆಸ್ ಅಧಿಕಾರ ಹಿಡಿದು, ಅಸಹಕಾರ ಸತ್ಯಾಗ್ರಹದ ಸಮಯದಲ್ಲಿ ಜನರಿಗೆ ನೀಡಿದ್ದ ಕೆಲ ಆಶ್ವಾಸನೆಗಳನ್ನಾದರೂ ಈಡೇರಿಸಬೇಕೆಂಬ ಆಲೋಚನೆ ಇದ್ದುದರಿಂದ, ಪಕ್ಷದ ಈ ಗೊಂದಲವನ್ನು ಪರಿಹರಿಸಲು ಚುನಾವಣೆಗೆ ಸ್ಪರ್ಧಿಸುವುದು ಬೇಡವೆಂದು ವಾದಿಸುತ್ತಿದ್ದ ಯುವ ಗುಂಪಿನಲ್ಲಿ ಜನಪ್ರಿಯರಾಗಿದ್ದ ನೆಹರೂ ಅವರ ಮಧ್ಯಸ್ಥಿಕೆಯನ್ನು ಕೋರಿದರು. ತಮ್ಮ ಪತ್ನಿ ಕಮಲಾ ಅವರ ತೀವ್ರ ಅಸ್ವಸ್ಥತೆಗೆ ಚಿಕಿತ್ಸೆ ಕೊಡಿಸಲು ಸೆರೆಮನೆಯಿಂದ ಬಿಡುಗಡೆ ಹೊಂದಿ, ಯೂರೋಪ್‌ನಲ್ಲಿದ್ದ ನೆಹರೂಗೆ ಈ ಸಂದಿಗ್ಧ ಸಮಯದಲ್ಲಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸ್ಥಾನ ವಹಿಸಿಕೊಳ್ಳುವಂತೆ ಸಂದೇಶ ಕಳಿಸಿದರು. ನೆಹರೂ ಅದನ್ನು ಒಪ್ಪಿಕೊಂಡರು.

ವೈಸ್‌ರಾಯ್ ಬದಲಾವಣೆ–ನೆಹರೂ ಮತ್ತು ಪಟೇಲರ ಜಗಳ

ಈ ಮಧ್ಯೆ ದೆಹಲಿಯಲ್ಲಿ ೧೯೩೬ರ ಏಪ್ರಿಲ್ ಹೊತ್ತಿಗೆ ವೈಸ್‌ರಾಯ್ ಬದಲಾಗಿದ್ದರು. ವಿಲ್ಲಿಂಗ್ಡನ್ ಸ್ಥಾನಕ್ಕೆ ಲಾರ್ಡ್ ಲಿನ್‌ಲಿತ್‌ಗೋ ಎಂಬುವವರನ್ನು ನೇಮಕ ಮಾಡಲಾಗಿತ್ತು. ಈತ ವಿಲ್ಲಿಂಗ್ಡನ್‌ನಂತೆ ಕನ್ಸರ್‌ವೇಟಿವ್ ಪಕ್ಷದ ಹಿನ್ನೆಲೆಯಿಂದ ಬಂದರೂ ಆತನಷ್ಟು ಕಠಿಣನಾಗಿರಲಿಲ್ಲ. ಆದರೆ ಕಾಂಗ್ರೆಸ್–ಗಾಂಧಿ ಬಗೆಗೆ ಮೃದು ಹೃದಯಿಯೂ ಆಗಿರಲಿಲ್ಲ. ಹಾಗಾಗಿಯೇ ಹಲವರು ಆತನಿಗೆ ಗಾಂಧಿಯವರನ್ನು ಭೇಟಿ ಮಾಡಲು ಸೂಚಿಸಿದರೂ, ಚುನಾವಣಾ ಸಮಯವಾದ್ದರಿಂದ ತಾನು ಎಲ್ಲ ಗುಂಪುಗಳಿಂದ ಸಮದೂರದಲ್ಲಿ ಇರಬಯಸುವುದಾಗಿ ಹೇಳಿದ.

ನೆಹರೂ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ೧೯೩೬ರ ಮಾರ್ಚ್‌ನಲ್ಲಿ ಲಕ್ನೋದಲ್ಲಿ ಪಕ್ಷದ ಸಮ್ಮೇಳನ ನಡೆಯಿತು. ಇದರಲ್ಲಿ ನೆಹರೂ ಅವರ ಅಭಿಪ್ರಾಯಕ್ಕೆ ವಿರುದ್ಧವಾಗಿ ಪ್ರಾಂತೀಯ ಚುನಾವಣೆಗಳಲ್ಲಿ ಭಾಗವಹಿಸಲು ಪಕ್ಷ ಒಪ್ಪಿಗೆ ನೀಡಿತು. ಆದರೆ ನೆಹರೂ ತಮ್ಮ ಅಧ್ಯಕ್ಷ ಭಾಷಣದಲ್ಲಿ ಪ್ರಸ್ತಾಪಿಸಿದ ಭೂ ಸುಧಾರಣೆ, ಕಾರ್ಮಿಕ ಕಲ್ಯಾಣ ಇತ್ಯಾದಿ ಸಮಾಜವಾದಿ ಆಶಯಗಳ ವಿರುದ್ಧ ಪಟೇಲ್, ರಾಜಾಜಿ ಮತ್ತು ರಾಜೇಂದ್ರ ಪ್ರಸಾದ್ ಪ್ರತಿಭಟಿಸಿದರು. ಈ ಭಿನ್ನಾಭಿಪ್ರಾಯ ಅಲ್ಲಿಗೇ ಮುಗಿಯದೆ ಜುಲೈನಲ್ಲಿ ನೆಹರೂ ತಮ್ಮ ಕಾರ್ಯಕಾರಿ ಸಮಿತಿಯನ್ನು ಪ್ರಕಟಿಸುತ್ತಿದ್ದಂತೆ ಪಕ್ಷದಲ್ಲಿ ಪಟೇಲ್ ನೇತೃತ್ವದಲ್ಲಿ ಒಂದು ದೊಡ್ಡ ಭಿನ್ನಮತವೇ ಸ್ಫೋಟಿಸಿತು. ಕಾರ್ಯಕಾರಿ ಸಮಿತಿಯಲ್ಲಿ ಪಕ್ಷದ ಹಿರಿಯರನ್ನು ಕಡೆಗಣಿಸಿ ಹೊಸಬರನ್ನು (ಹೆಚ್ಚಾಗಿ ಸಮಾಜವಾದಿ ಕಾಂಗ್ರೆಸ್ ಪಕ್ಷದ ಸದಸ್ಯರನ್ನು) ಸೇರಿಸಿಕೊಳ್ಳಲಾಗಿದೆ ಎಂಬುದು ಪಟೇಲ್ ಮತ್ತು ಅವರ ಸಹಮನಸ್ಕ ಗೆಳೆಯರ ಆರೋಪವಾಗಿತ್ತು. ಮತ್ತೆ ಗಾಂಧಿಯವರ ಮಧ್ಯಸ್ಥಿಕೆಯನ್ನು ಕೋರಲಾಯಿತು. ಅವರು ಪಟೇಲರ ಸಂಚಾಲಕತ್ವದಲ್ಲಿ ಹಿರಿಯರು ಮತ್ತು ಕಿರಿಯರನ್ನೊಳಗೊಂಡ ಹೊಸ ಕಾರ್ಯಕಾರಿ ಸಮಿತಿಯನ್ನು ರಚಿಸಿ ನೆಹರೂ ಮುಂದಿಟ್ಟರು. ಅದರಲ್ಲಿ ಪಟೇಲ್, ರಾಜಾಜಿ, ಪ್ರಸಾದರಂತಹ ಹಿರಿಯರ ಜೊತೆಗೆ ಆಚಾರ್ಯ ನರೇಂದ್ರದೇವ, ಜೆಪಿ ಮತ್ತು ಅಚ್ಯುತ ಪಟವರ್ಧನ್‌ರಂತಹ ಸಮಾಜವಾದಿಗಳೂ ಇದ್ದರು. ಜೊತೆಗೆ ಬ್ರಿಟಿಷ್ ಸರ್ಕಾರದ ಅನುಮತಿ ನಿರಾಕರಣೆಯ ಹೊರತಾಗಿಯೂ, ವಿದೇಶದಿಂದ ಭಾರತಕ್ಕೆ ಬಂದು ಸೆರೆಮನೆ ಸೇರಿದ್ದ ಸುಭಾಷ್ ಚಂದ್ರ

ಬೋಸ್ ಅವರನ್ನೂ ಗಾಂಧಿ ಸಮಿತಿಗೆ ಸೇರಿಸಿದ್ದರು. ಇದನ್ನು ತಾವು ಒಲ್ಲದ ಮನಸ್ಸಿನಿಂದಲೇ ಒಪ್ಪಿಕೊಳ್ಳುತ್ತಿರುವುದಾಗಿ ನೆಹರೂ ಪ್ರಕಟಿಸಿದಾಗ, ಮತ್ತೆ ಪಟೇಲರ ಗುಂಪು ಪ್ರತಿಭಟಿಸಿತು. ಅವರ ಕೆಲ ಬೆಂಬಲಿಗರು ಕಾರ್ಯಕಾರಿ ಸಮಿತಿಗೆ ರಾಜೀನಾಮೆ ನೀಡಿದರು. ಇದರಿಂದ ಬೇಸರಗೊಂಡ ಗಾಂಧಿ, ಪಕ್ಷ ಜನರ ಮನರಂಜನೆಗೆ ವಸ್ತುವಾಗಬಾರದೆಂದು ಎರಡೂ ಕಡೆಯವರನ್ನು ಎಚ್ಚರಿಸಿ ಎರಡೂ ಗುಂಪುಗಳ ಮಧ್ಯೆ ರಾಜಿ ಮಾಡಿಸಿದರು ಮತ್ತು ನೆಹರೂ ಅವರಿಗೆ ಇನ್ನು ಮುಂದೆ ಪರಿಣಾಮಗಳ ಬಗ್ಗೆ ಯೋಚಿಸಿ ಮಾತನಾಡುವಂತೆ ಸೂಚಿಸಿದರು.

ಮುಂದುವರೆದ ನೆಹರೂ–ಪಟೇಲ್ ಜಗಳ: ಮತ್ತೆ ಗಾಂಧಿ ಮಧ್ಯಸ್ಥಿಕೆ

ಆದರೆ ಕಾಂಗ್ರೆಸ್ ಪಕ್ಷ ೧೯೩೭ನ್ನು ಪ್ರವೇಶಿಸಿ ಚುನಾವಣೆಗಳ ಬಿಸಿ ಆರಂಭವಾಗುತ್ತಿದ್ದಂತೆ ಇನ್ನೊಂದು ಬಿಕ್ಕಟ್ಟನ್ನು ಎದುರಿಸಬೇಕಾಯಿತು. ನೆಹರೂ ತಮ್ಮ ಎಂಟು ತಿಂಗಳ ಅಧ್ಯಕ್ಷಾವಧಿಯಲ್ಲಿ ಪಕ್ಷವನ್ನು ಚುನಾವಣೆಗೆ ಸಂಘಟಿಸಲು ಸಾಧ್ಯವಾಗಿಲ್ಲವೆಂದೂ, ತಾವು ಇನ್ನೊಂದು ಅವಧಿಗೆ ಅಧ್ಯಕ್ಷರಾಗಿ ಮುಂದುವರೆಯಬಯಸುವುದಾಗಿಯೂ ಹೇಳಿದರು. ಇದು ಪಟೇಲರನ್ನು ರೇಗಿಸಿತು. ಇದು ದುರಾಸೆ ಎಂದರು. ಅವರು ಅಧ್ಯಕ್ಷ ಸ್ಥಾನ ವಹಿಸಿಕೊಳ್ಳಲು ರಾಜಾಜಿಯವರನ್ನು ಕೋರಲು ಗಾಂಧಿಯವರನ್ನು ಕೇಳಿದರು. ನೆಹರೂ ಅವರ ಆಕಾಂಕ್ಷೆಯ ಬಗ್ಗೆ ಸಹಾನುಭೂತಿಯನ್ನೇನೂ ಹೊಂದದ ಗಾಂಧಿ ರಾಜಾಜಿಯವರನ್ನು 'ಮುಳ್ಳಿನ ಕಿರೀಟ' ಹೊತ್ತುಕೊಳ್ಳಲು ಕೋರಿದರು. ಆದರೆ ಬರಲಿರುವ ಚುನಾವಣೆಗಳಲ್ಲಿ ಸ್ಪರ್ಧಿಸಿ ಮದ್ರಾಸ್ ಪ್ರಾಂತ್ಯದ ಪ್ರಧಾನ ಮಂತ್ರಿಯಾಗಲು ಸಿದ್ಧತೆ ನಡೆಸುತ್ತಿರುವಂತೆ ತೋರುತ್ತಿದ್ದ ರಾಜಾಜಿ ಒಲ್ಲೆನೆಂದರು. ಈಗ ಪಟೇಲರು ಚುನಾವಣೆ ನಡೆಯಲಿ ಎಂದು ಘೋಷಿಸಿ ತಮ್ಮ ಸ್ಪರ್ಧೆಯನ್ನು ಪ್ರಕಟಿಸಿದರು. ನೆಹರೂ ಕೂಡ ತಾವು ಸಮಾಜವಾದಿ ಎಂಬ ಕಾರಣಕ್ಕೇ ತಮ್ಮನ್ನು ಇನ್ನೊಂದು ಅವಧಿಗಾಗಿ ಆರಿಸಬೇಕೆಂದು ಕರೆಕೊಟ್ಟರು ಮತ್ತು ಗಾಂಧಿಯವರನ್ನು ಭೇಟಿ ಮಾಡಿ ಮುಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಿಕೊಡುವ ಹೊಣೆ ತಮ್ಮದೆಂದು ಹೇಳಿ ಅಧ್ಯಕ್ಷಾವಧಿಯ ವಿಸ್ತರಣೆಗೆ ಅವರ ಮನವೊಲಿಸಿದರು. ಗಾಂಧಿಯವರು ಕೂಡ ಅವರಿಂದ ಸಾಮೂಹಿಕ ನಿರ್ಧಾರಗಳ ಮಾತು ತೆಗೆದುಕೊಂಡು, ಪಟೇಲರು ಸ್ಪರ್ಧೆಯಿಂದ ಹಿಂದೆಗೆಯುವಂತೆ ಅವರ ಮನವೊಲಿಸಿದರು. ಗಾಂಧಿಯವರ ಇಚ್ಛೆಯಂತೆ ಪಟೇಲರು ಒಂದು ಹೇಳಿಕೆ ನೀಡಿ ತಮ್ಮ ಮತ್ತು ನೆಹರೂ ನಡುವೆ ನೀತಿ ನಿರ್ಧಾರಗಳ ಬಗ್ಗೆ ಹಲವು ಭಿನ್ನಾಭಿಪ್ರಾಯಗಳಿದ್ದರೂ, ಪಕ್ಷದ ಶ್ರೇಯೋಭ್ಯುದಯದ ವಿಷಯದಲ್ಲಿ ಇಬ್ಬರೂ ಸಮಾನಮನಸ್ಕರೇ ಎಂದು ಹೇಳಿದರು. ನೆಹರೂ ಕೂಡ 'ಇದು ಯಾರ ವಿಜಯವೂ ಅಲ್ಲ, ಪಕ್ಷದ ಐಕ್ಯತೆಯ ಪ್ರತೀಕ' ಎಂದು ತಿಳಿಸಿದರು.

೧೯೩೬ರ ವರ್ಷಾಂತ್ಯದ ಕಾಂಗ್ರೆಸ್ ಸಮ್ಮೇಳನ ಬಾಂಬೆ ಪ್ರಾಂತ್ಯದ ಫೈಜ್‌ಪುರದಲ್ಲಿ ಆಯೋಜಿಸಲಾಗಿತ್ತು. ಅದೊಂದು ಸಣ್ಣ ಹಳ್ಳಿಯಾಗಿದ್ದು, ಗಾಂಧಿಯವರ ಅಪೇಕ್ಷೆಯ ಮೇರೆಗೆ ಅಧಿವೇಶನ ಅಲ್ಲಿ ಏರ್ಪಾಡಾಗಿತ್ತು. ಬಾಂಬೆಯ ಮ್ಹಾತ್ರೆ ಮತ್ತು ಶಾಂತಿನಿಕೇತನದ ಕಲಾವಿದ ನಂದಲಾಲ್ ಬೋಸ್‌ರು ಸೇರಿ ಅಧಿವೇಶನದ ಜಾಗವನ್ನು

ಒಂದು ಅದ್ಭುತ ಗ್ರಾಮೀಣ ಕಲಾ ಸೌಂದರ್ಯದ ತಾಣವಾಗಿ ಪರಿವರ್ತಿಸಿದ್ದರು. ಗಾಂಧಿ ಇದನ್ನೆಲ್ಲ ನೋಡಿ ತುಂಬ ಸಂತೋಷಪಟ್ಟರು. ಅವರು ಅಧಿವೇಶನದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ವಸ್ತುಪ್ರದರ್ಶನವೊಂದನ್ನು ಉದ್ಘಾಟಿಸಿ ಮಾತನಾಡುತ್ತಾ, ತಾವು ಈಗ ಗ್ರಾಮ ಪುನಾರಚನೆಯ ಕೆಲಸಕ್ಕೆ ಅರ್ಪಿಸಿಕೊಂಡಿದ್ದು, ಕಾಂಗ್ರೆಸ್ ಪಕ್ಷದ ಪೂರಾ ಜವಾಬ್ದಾರಿಯನ್ನು ನೆಹರೂ-ಪಟೇಲರಿಗೆ ಒಪ್ಪಿಸಿ ನಿಸೂರಾಗಿದ್ದೇನೆ ಎಂದು ಹೇಳಿದರು.

೧೯೩೭ರ ಜನವರಿಯಲ್ಲಿ ಚುನಾವಣೆಗಳ ಘೋಷಣೆಯಾಯಿತು. ಕಾಂಗ್ರೆಸ್ ಸಂಸದೀಯ ಮಂಡಳಿಯ ಅಧ್ಯಕ್ಷರಾದ ಪಟೇಲರು ಅಭ್ಯರ್ಥಿಗಳ ಆಯ್ಕೆ ಮತ್ತು ಹಣಕಾಸು ಸಂಗ್ರಹದ ಜವಾಬ್ದಾರಿ ಹೊತ್ತರೆ, ನೆಹರೂ ಪ್ರಚಾರದ ಹೊಣೆ ಹೊತ್ತರು. ರಾಜಾಜಿಯವರ ಪ್ರಕಾರ ಪಟೇಲರು ಹಣವಂತರನ್ನು ಹೇಗೆ ದೋಚಿದ್ದರೆಂದರೆ 'ಸರ್ಕಾರದ ಬೊಕ್ಕಸಕ್ಕೆ ಕೊಡಲು ಅವರಲ್ಲಿ ಏನೂ ಉಳಿದಿರಲಿಲ್ಲ!' ನೆಹರೂ, ದೇಶಾದ್ಯಂತ ರೈಲು, ಕಾರು, ಎತ್ತಿನಗಾಡಿಗಳಲ್ಲಿ ೫೦ ಸಾವಿರ ಮೈಲಿಗಳಷ್ಟು ತಿರುಗಾಡಿ ಹತ್ತುಕೋಟಿ ಜನರನ್ನುದ್ದೇಶಿಸಿ ಮಾತನಾಡಿದ್ದರು. ಕಾಂಗ್ರೆಸ್ ವಿರುದ್ಧ, ಮುಸ್ಲಿಂ ಲೀಗ್ ಪರವಾಗಿ ಪ್ರಚಾರ ಮಾಡಲು ಮಹಮ್ಮದಾಲಿ ಜಿನ್ನಾ ಮತ್ತೆ ಆ ಪಕ್ಷದ ನೇತೃತ್ವ ವಹಿಸಿದ್ದರು. ಗಾಂಧಿ ಅಸಹಕಾರ ಸತ್ಯಾಗ್ರಹ ಆರಂಭಿಸಿ ಮೇಲುಗೈ ಸಾಧಿಸುತ್ತಿದ್ದಂತೆ, ರಾಜಕಾರಣದಲ್ಲಿ ಆಸಕ್ತಿ ಕಳೆದುಕೊಂಡು ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದ್ದ ಅವರು, ಎರಡನೇ ದುಂಡು ಮೇಜಿನ ಪರಿಷತ್ತಿನ ನಂತರ ರಾಜಕೀಯದಿಂದ ನಿವೃತ್ತರಾಗಿ ಲಂಡನ್‌ನಲ್ಲಿ ವಕೀಲಿ ವೃತ್ತಿಯಲ್ಲಿ ತೊಡಗಿಕೊಂಡಿದ್ದರು. ಅವರ ವೈಯಕ್ತಿಕ ಜೀವನದಲ್ಲೂ ದುರಂತಗಳು ಸಂಭವಿಸಿದ್ದವು. ವಿಚ್ಛೇದನ ಪಡೆದಿದ್ದ ಹೆಂಡತಿ ಕ್ಯಾನ್ಸರ್‌ಗೆ ತುತ್ತಾಗಿದ್ದಳು. ಈಗ ಅಖಿಲ ಭಾರತ ಮುಸ್ಲಿಂ ಲೀಗ್‌ನ ನಾಯಕರ ಕರೆಯ ಮೇರೆಗೆ, ಆ ಪಕ್ಷದ ಶಾಶ್ವತ ಅಧ್ಯಕ್ಷರಾಗಿ ನೇಮಕಗೊಂಡಿದ್ದರು. ಮುಸ್ಲಿಂ ಲೀಗ್ ಬಿಟ್ಟರೆ ಕಾಂಗ್ರೆಸ್ ವಿರುದ್ಧ ಇದ್ದ ಇತರ ಪಕ್ಷಗಳೆಂದರೆ ಬಂಗಾಲದಲ್ಲಿ ಫಜ್ಲುಲ್ ಹಕ್ ಅವರ ನೇತೃತ್ವದ ರೈತರ ಪಕ್ಷವಾದ ಕೃಷಿಕ್ ಪ್ರಜಾ ಪಾರ್ಟಿ, ಮದ್ರಾಸ್ ಪ್ರಾಂತ್ಯದಿಂದ ಬ್ರಾಹ್ಮಣ ವಿರೋಧಿ ಜಸ್ಟೀಸ್ ಪಾರ್ಟಿ ಮತ್ತು ಪಂಜಾಬ್‌ನ ಹಯಾತ್ ಖಾನ್ ನೇತೃತ್ವದ ಎಲ್ಲ ಧರ್ಮಗಳಿಗೆ ಸೇರಿದ್ದ ಜಮೀನ್ದಾರರ ಯೂನಿಯನಿಸ್ಟ್ ಪಕ್ಷ ಮತ್ತು ಮಹಾರಾಷ್ಟ್ರದಲ್ಲಿ ಅಂಬೇಡ್ಕರ್ ನೇತೃತ್ವದ ಇಂಡಿಪೆಂಡೆಂಟ್ ಲೇಬರ್ ಪಾರ್ಟಿ. ಹಿಂದೂ ಮಹಾಸಭಾ ಮತ್ತು ಲಿಬರಲ್ ಪಾರ್ಟಿಗಳು ಆಟಕ್ಕಿದ್ದರೂ ಲೆಕ್ಕಕ್ಕೆ ಇರಲಿಲ್ಲ ಎನ್ನಬಹುದು.

ಕಾಂಗ್ರೆಸ್ ಜಯಭೇರಿ-ನಿರಾಶೆಗೊಂಡ ಜಿನ್ನಾ

ಫಲಿತಾಂಶಗಳು ಬಂದಾಗ ಬಹುತೇಕ ಕಡೆ ಕಾಂಗ್ರೆಸ್ ಜಯಭೇರಿ ಬಾರಿಸಿತ್ತು. ಬ್ರಿಟಿಷ್ ಭಾರತದ ಒಟ್ಟು ೧೫೮೫ ಸ್ಥಾನಗಳಲ್ಲಿ (ಇವುಗಳಲ್ಲಿ ಕೆಲವನ್ನು ಐರೋಪ್ಯರು ಮತ್ತು ಆಂಗ್ಲೋ-ಇಂಡಿಯನ್ನರಿಗೆ ಮೀಸಲಾಗಿರಿಸಲಾಗಿತ್ತು) ೭೦೭ ಸ್ಥಾನಗಳನ್ನು ಗೆದ್ದಿತ್ತು. ಮುಸ್ಲಿಂ ಜನಬಾಹುಳ್ಯವಿದ್ದ ಮತ್ತು ಮುಸ್ಲಿಂ ಮೀಸಲು ಕ್ಷೇತ್ರಗಳಲ್ಲೂ ಮುಸ್ಲಿಂ ಲೀಗ್ ಜನ ಬೆಂಬಲ ಗಳಿಸಲಾಗದೆ ೧೧೦೬ ಸ್ಥಾನಗಳನ್ನು ಗಳಿಸಿ ಎರಡನೇ ಸ್ಥಾನ ಪಡೆದಿತ್ತು. ಸಂಯುಕ್ತ ಪ್ರಾಂತ್ಯಗಳು, ಮಧ್ಯ ಪ್ರಾಂತ್ಯಗಳು, ವಾಯುವ್ಯ ಗಡಿ ಪ್ರಾಂತ್ಯ, ಬಿಹಾರ, ಒರಿಸ್ಸಾ, ಮುಂಬೈ ಮತ್ತು ಮದ್ರಾಸ್ ಪ್ರಾಂತ್ಯಗಳಲ್ಲಿ ಕಾಂಗ್ರೆಸ್‌ಗೆ ಬಹುಮತ

ದೊರಕಿ ಸ್ವತಂತ್ರವಾಗಿ ಸರ್ಕಾರ ರಚಿಸಬಹುದಾಗಿತ್ತು. ಅಸ್ಸಾಂನಲ್ಲಿ ಅದು ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿ ಸರ್ಕಾರ ರಚಿಸುವ ಪ್ರಯತ್ನ ಮಾಡುವ ಸ್ಥಿತಿಯಲ್ಲಿತ್ತು. ಪಂಜಾಬ್‌ನಲ್ಲಿ ಯೂನಿಯನಿಸ್ಟ್ ಪಾರ್ಟಿಗೆ ಬಹುಮತ ದೊರಕಿತ್ತು. ಬಂಗಾಳದ ಕೃಷಿಕ್ ಪ್ರಜಾ ಪಕ್ಷದ ಹೊರತಾಗಿ ಮತ್ತಾವ ಪಕ್ಷವೂ ಲೆಕ್ಕಕ್ಕೆ ಬರಬಹುದಾದ ಸಾಧನೆ ಮಾಡಿರಲಿಲ್ಲ. ಬಾಂಬೆ ಪ್ರಾಂತ್ಯದಲ್ಲಿ ಅಂಬೇಡ್ಕರ್ ಮತ್ತು ಜಿನ್ನಾ ಪ್ರತ್ಯೇಕವಾಗಿ ಕಾಂಗ್ರೆಸ್ ವಿರುದ್ಧ ಪ್ರಚಾರ ಮಾಡಿದ್ದರೂ ಅಲ್ಲಿ ಕಾಂಗ್ರೆಸ್ ಬಹುಮತ ಗಳಿಸಿತ್ತು. ಸಿಂಧ್ ಪ್ರಾಂತ್ಯದಲ್ಲಿ ಮಾತ್ರ ಯಾವ ಪಕ್ಷಕ್ಕೂ ಬಹುಮತ ದೊರೆಯದೆ ಅತಂತ್ರ ಸ್ಥಿತಿ ಉಂಟಾಗಿತ್ತು.

ಒಟ್ಟಿನಲ್ಲಿ ಫಲಿತಾಂಶಗಳು ಜಿನ್ನಾಗೆ ನಿರಾಶೆಯನ್ನುಂಟು ಮಾಡಿದ್ದವು. ಅವರೀಗ ತಮ್ಮ ಧೋರಣೆಯನ್ನು ಪುನರ್ವಿಮರ್ಶಿಸುವ ಅಗತ್ಯವನ್ನು ಕಂಡುಕೊಂಡವರಂತೆ, ಬಾಂಬೆ ಪ್ರಾಂತ್ಯದ ಬಿ.ಜಿ. ಖೇರ್ ಅವರ ಮೂಲಕ ಗಾಂಧಿಯವರಿಗೆ ಒಂದು ಸಂದೇಶ ಕಳಿಸಿ, ಸದ್ಯದ ಪರಿಸ್ಥಿತಿಯಲ್ಲಿ ಹಿಂದೂ ಮುಸ್ಲಿಂ ಏಕತೆಯ ಪ್ರಯತ್ನ ಮಾಡುವುದು ಅಗತ್ಯವೆಂದು ತಿಳಿಸಿದ್ದರು. ಸಾಧ್ಯವಾದೆಡೆ ಕಾಂಗ್ರೆಸ್-ಲೀಗ್ ಒಗ್ಗೂಡಿದ ಸಮ್ಮಿಶ್ರ ಸರ್ಕಾರಗಳ ರಚನೆಯೂ ಅವರ ಇಂಗಿತವಾಗಿರಬಹುದು. ಆದರೆ ಗಾಂಧಿ, ಜಿನ್ನಾ ಅವರ ಈ ಆಹ್ವಾನಕ್ಕೆ ಪ್ರೋತ್ಸಾಹದಾಯಕವಾಗಿ ಸ್ಪಂದಿಸಲಿಲ್ಲ. ಪರಿಸ್ಥಿತಿ ಈಗ ಅದಕ್ಕೆ ಅನುಕೂಲಕರವಾಗಿಲ್ಲ ಎಂದು ಅವರು ಜಿನ್ನಾರಿಗೆ ಹೇಳಿಕಳಿಸಿದ್ದರು. ಜೊತೆಗೆ, ಕಾಂಗ್ರೆಸ್ ಇನ್ನೂ ಅಧಿಕಾರ ಸ್ವೀಕರಿಸುವ ಬಗ್ಗೆ ಒಂದು ನಿರ್ಧಾರಕ್ಕೆ ಬರದಿರುವುದೂ ಈ ಔದಾಸೀನ್ಯಕ್ಕೆ ಕಾರಣವಾಗಿರಬಹುದು. ಗಾಂಧಿ, ಚುನಾವಣಾ ಪ್ರಚಾರದಲ್ಲಿ ಭಾಗವಹಿಸದಿದ್ದರೂ, ಕಾಂಗ್ರೆಸ್ ಗಾಂಧಿ ಹೆಸರಿನಲ್ಲೇ ಮತ ಯಾಚಿಸಿ ಗೆದ್ದಿದ್ದುದೂ, ಜಿನ್ನಾ ಅವರ ಸಂದೇಶವನ್ನು ಗಂಭೀರವಾಗಿ ಪರಿಗಣಿಸದಷ್ಟು ಅವರ ಆತ್ಮವಿಶ್ವಾಸವನ್ನು ಹೆಚ್ಚಿಸಿರಲಿಕ್ಕೂ ಸಾಕು.

ಮಾರ್ಚ್ ಮೂರನೇ ವಾರದಲ್ಲಿ ದೆಹಲಿಯಲ್ಲಿ ಸಭೆ ಸೇರಿದ ಅಖಿಲ ಭಾರತ ಕಾಂಗ್ರೆಸ್ ಸಮಿತಿ, ಮತ್ತೆ ನೆಹರೂ ಮತ್ತವರ ಅನುಯಾಯಿಗಳ ವಿರೋಧದ ನಡುವೆಯೂ ಅಧಿಕಾರ ಸ್ವೀಕರಿಸುವ ನಿರ್ಣಯವನ್ನು ಅಂಗೀಕರಿಸಿತು. ಕಾಂಗ್ರೆಸ್‌ನ ಸಂಪೂರ್ಣ ಸ್ವರಾಜ್ಯ ಬೇಡಿಕೆಯ ರೂವಾರಿಯಾಗಿದ್ದ ನೆಹರೂ, ಈ ಗುರಿ ಈಡೇರುವವರೆಗೂ ಅಧಿಕಾರ ಸ್ವೀಕರಿಸುವುದು, ಜನರ ಕಣ್ಣಲ್ಲಿ ಕಾಂಗ್ರೆಸ್‌ನ ಘನತೆಯನ್ನು ಕುಗ್ಗಿಸುತ್ತದೆ ಎಂದು ಅಭಿಪ್ರಾಯಪಟ್ಟರೆ, ರಾಜಾಜಿ, ಪಟೇಲ್ ಮುಂತಾದವರು ಅಧಿಕಾರ ಸ್ವೀಕರಿಸಿ ಜನಹಿತ ಕಾರ್ಯ ಕೈಗೊಂಡು ಜನರ ವಿಶ್ವಾಸ ಗಳಿಸಬಹುದು ಎಂದು ಭಾವಿಸಿದರು. ಅಧಿಕಾರ ಸ್ವೀಕಾರ ನಿರ್ಧಾರಕ್ಕೆ ಇದ್ದ ಇನ್ನೊಂದು ತೊಡಕೆಂದರೆ, ವೈಸ್‌ರಾಯ್, ತನಗೆ ಸರಿ ಕಂಡಾಗ ಸರ್ಕಾರಗಳನ್ನು ವಜಾ ಮಾಡಲು ಇದ್ದ ಅಧಿಕಾರ. ಈ ಕಾರಣದಿಂದಾಗಿ ಬಹುಮತವಿದ್ದರೂ ನೆಹರೂ ಅವರ ಪ್ರಾಂತ್ಯವಾದ ಸಂಯುಕ್ತ ಪ್ರಾಂತ್ಯದಲ್ಲಿ ಕಾಂಗ್ರೆಸ್, ಸರ್ಕಾರ ರಚಿಸಲು ಹಿಂತೆಗೆಯಿತು. ಆಗ ಗಾಂಧಿ, ಸರ್ಕಾರವು ಈ ಅಧಿಕಾರವನ್ನು ಸುಲಭಕ್ಕೆ ಚಲಾಯಿಸುವುದಿಲ್ಲ ಎಂದು ವೈಸ್‌ರಾಯ್ ಆಶ್ವಾಸನೆ ನೀಡಿದರೆ, ಕಾಂಗ್ರೆಸ್ ಅಧಿಕಾರ ಗ್ರಹಣ ಮಾಡಬಹುದು ಎಂಬ ಸಲಹೆ ನೀಡಿದರು.

ಎಲ್ಲರ ಆಶ್ಚರ್ಯಕ್ಕೆ ವೈಸ್‌ರಾಯ್ ಕೂಡಲೇ ಸ್ಪಂದಿಸಿ, ಗವರ್ನರ್‌ಗಳು ಕೂಡ ಸರ್ಕಾರಗಳು ಕೆಲಸ ಮಾಡಬೇಕಾದ ಸಂವಿಧಾನದ ಕಟ್ಟುನಿಟ್ಟಿನ ವಿಧಿ ವಿಧಾನಗಳ ಚೌಕಟ್ಟಿನಲ್ಲೇ ವರ್ತಿಸಬೇಕಿರುವುದರಿಂದ, ಸರ್ಕಾರಗಳ ವಜಾ ಅಷ್ಟು ಸುಲಭವಲ್ಲ ಎಂಬ ಹೇಳಿಕೆ ನೀಡಿದರು. ಇದರ ಆಧಾರದ ಮೇಲೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಜುಲೈ ೭ರ ಸಭೆಯಲ್ಲಿ ಅಧಿಕಾರ ಸ್ವೀಕಾರದ ನಿರ್ಣಯವನ್ನು ಸ್ಥಿರೀಕರಿಸಿತು. ಇದಾದ ನಂತರ ವಿವಿಧ ಪ್ರಾಂತ್ಯಗಳಲ್ಲಿ ಕಾಂಗ್ರೆಸ್, ಸರ್ಕಾರಗಳನ್ನು ರಚಿಸುವ ಪ್ರಕ್ರಿಯೆ ಆರಂಭವಾಯಿತು. ಸಂಯುಕ್ತ ಪ್ರಾಂತ್ಯಗಳಲ್ಲಿ ಜಿ.ಬಿ.ಪಂತ್, ಮದರಾಸ್ ಪ್ರಾಂತ್ಯದಲ್ಲಿ ಸಿ. ರಾಜ ಗೋಪಾಲಾಚಾರಿ, ಮಧ್ಯ ಪ್ರಾಂತ್ಯದಲ್ಲಿ ಎನ್.ಬಿ. ಖರೆ, ಬಿಹಾರದಲ್ಲಿ ಶ್ರೀಕೃಷ್ಣ ಸಿನ್ಹಾ, ಒರಿಸ್ಸಾದಲ್ಲಿ ವಿಶ್ವನಾಥ ದಾಸ್ ಮತ್ತು ವಾಯುವ್ಯ ಗಡಿ ಪ್ರಾಂತ್ಯದಲ್ಲಿ ಅಬ್ದುಲ್ ಗಫಾರ್ ಖಾನರ ಅಣ್ಣ ಡಾ. ಖಾನ್ ಸಾಹೇಬರು ಕಾಂಗ್ರೆಸ್ ಸರ್ಕಾರಗಳ ಪ್ರಧಾನ ಮಂತ್ರಿಗಳಾದರು. ಸ್ವಲ್ಪ ಕಾಲದ ನಂತರ ಅಸ್ಸಾಂನಲ್ಲೂ ಕಾಂಗ್ರೆಸ್ ಸರ್ಕಾರ ರಚನೆಯಾಗಿ ಅಲ್ಲಿ ಗೋಪಿನಾಥ ಬರ್ದೋಲಾಯಿ ಮುಖ್ಯಮಂತ್ರಿಯಾದರು.

ಕೆರಳಿದ ಜಿನ್ನಾ– ಆರಂಭವಾದ ವಿಘಟನೆಯ ಕೂಗು

ಇದರಿಂದಾಗಿ ಬಹತೇಕ ಕಡೆ ಸರ್ಕಾರಗಳಲ್ಲಿ ತಮ್ಮ ಮುಸ್ಲಿಂ ಲೀಗ್‌ನ ಪ್ರತಿನಿಧಿಗಳೇ ಇಲ್ಲದಂತಾಗತೊಡಗಿದಾಗ ಗಾಬರಿಯಾದ ಜಿನ್ನಾ, ಬಾಂಬೆ ಪ್ರಾಂತ್ಯದ ಸರ್ಕಾರದಲ್ಲಿ ಇಬ್ಬರು ಮುಸ್ಲಿಂ ಲೀಗ್‌ನ ಶಾಸಕರಿಗೆ ಸಚಿವ ಸ್ಥಾನಕ್ಕೆ ಅವಕಾಶ ಮಾಡಿಕೊಡುವಂತೆ ಪಟೇಲರನ್ನು ಕೋರಿದರು. ಆಗ ಪಟೇಲರು, ಲೀಗ್‌ನ ಶಾಸಕಾಂಗ ಪಕ್ಷ ಕಾಂಗ್ರೆಸ್ ಶಾಸಕಾಂಗ ಪಕ್ಷದಲ್ಲಿ ಲೀನವಾಗುವುದಾದರೆ ಇದು ಸಾಧ್ಯವಾಗಬಹುದು ಎಂದರು. ಇದು ಜಿನ್ನಾಗೆ ಒಪ್ಪಿಗೆಯಾಗುವ ಮಾತೇ ಆಗಿರಲಿಲ್ಲ. ಇನ್ನು ಸಂಯುಕ್ತ ಪ್ರಾಂತ್ಯಗಳ ಸರ್ಕಾರದಲ್ಲಿಯೂ ಕಾಂಗ್ರೆಸ್, ತನ್ನಲ್ಲಿ ಉಂಟಾದ ಆಂತರಿಕ ಕಲಹದ ಹೊರತಾಗಿಯೂ ಇಬ್ಬರು ಲೀಗ್‌ನ ಶಾಸಕರಿಗೆ ಮಂತ್ರಿ ಸ್ಥಾನ ನೀಡಲು ಒಪ್ಪಿತ್ತಾದರೂ, ಲೀಗ್ ಶಾಸಕಾಂಗ ಪಕ್ಷವನ್ನು ಕಾಂಗ್ರೆಸ್ ಶಾಸಕಾಂಗ ಪಕ್ಷದೊಳಗೆ ಲೀನಗೊಳಿಸಲು ಇಲ್ಲೂ ಜಿನ್ನಾ ಒಪ್ಪದ್ದರಿಂದ, ಈ ಹೊಂದಾಣಿಕೆಯ ಪ್ರಯತ್ನವೂ ವಿಫಲವಾಯಿತು. ಕೆರಳಿದ ಜಿನ್ನಾ ಕೊನೆಗೆ ಬಂಗಾಳದಲ್ಲಿ ಕಾಂಗ್ರೆಸ್ ಅತ್ಯಧಿಕ ಸ್ಥಾನಗಳನ್ನು ಪಡೆದ ಪಕ್ಷವಾಗಿದ್ದರೂ, ಕೃಷಿಕ್ ಪ್ರಜಾ ಪಾರ್ಟಿಯ (ಇದೊಂದು ತೀವ್ರಗಾಮಿ ಪಕ್ಷವೆಂದು ಅದರೊಂದಿಗೆ ಮೈತ್ರಿಯನ್ನು ಸ್ಥಳೀಯ ಕಾಂಗ್ರೆಸ್ ನಾಯಕರು ವಿರೋಧಿಸಿದ್ದರಿಂದ) ನಾಯಕ ಫಜ್ಲುಲ್ ಹಕ್‌ಗೆ ಪ್ರಧಾನಿ ಸ್ಥಾನವನ್ನು ಬಿಟ್ಟುಕೊಟ್ಟು ಆ ಪಕ್ಷದೊಂದಿಗೆ ಮುಸ್ಲಿಂ ಲೀಗ್ ಸಮ್ಮಿಶ್ರ ಸರ್ಕಾರ ರಚಿಸುವಂತೆ ವ್ಯವಸ್ಥೆ ಮಾಡಿದರು. ಹಾಗೇ ಪಂಜಾಬ್‌ನಲ್ಲೂ ಎರಡೇ ಸ್ಥಾನ ಗಳಿಸಿದ್ದರೂ, ಯೂನಿಯನಿಸ್ಟ್ ಪಾರ್ಟಿಯ ಸರ್ಕಾರದಲ್ಲಿ ಮುಸ್ಲಿಂ ಲೀಗ್ ಪಾಲ್ಗೊಳ್ಳುವಂತಹ ವ್ಯವಸ್ಥೆಯನ್ನೂ ಅವರು ಮಾಡಿದರು. (ಇಲ್ಲಿ ಕಾಂಗ್ರೆಸ್‌ನ ಎಡಪಂಥೀಯರು ಯೂನಿಯನಿಸ್ಟ್ ಪಕ್ಷದೊಡನೆ ಮೈತ್ರಿಗೆ ತಮ್ಮ ವಿರೋಧ ವ್ಯಕ್ತಪಡಿಸಿದ್ದರು.)

ಬಹುಶಃ ಇಲ್ಲಿಂದಲೇ ಎಲ್ಲ ಕಡೆಯಿಂದಲೂ ರಾಷ್ಟ್ರ ವಿಭಜನೆಯ ಅಡಿಗಲ್ಲು ಹಾಕುವ ಕೆಲಸ ಆರಂಭವಾಯಿತು ಎಂದು ಹೇಳಬಹುದು. ಏಕೆಂದರೆ ಇಲ್ಲಿಂದ ಜಿನ್ನಾ,

ಕಾಂಗ್ರೆಸ್‌ನ್ನು ಹಿಂದೂ ಹಿತಾಸಕ್ತಿಗಳ ಪಕ್ಷವೆಂದು ವರ್ಣಿಸಲಾರಂಭಿಸಿ, ಅದಕ್ಕೆ ವಿರುದ್ಧವಾಗಿ ಮುಸ್ಲಿಂ ಹಿತಾಸಕ್ತಿಗಳ ರಾಜಕೀಯ ಸಂಘಟನೆಯಲ್ಲಿ ಗಂಭೀರವಾಗಿ ತೊಡಗಿಕೊಂಡರು. ಇದರ ಭಾಗವಾಗಿ ಬಂಗಾಳದ ಪ್ರಧಾನಮಂತ್ರಿ ಫಜ್ಲುಲ್ ಹಕ್ ಮತ್ತು ಪಂಜಾಬ್‌ನ ಪ್ರಧಾನ ಮಂತ್ರಿ ಹಯಾತ್ ಖಾನ್‌ರನ್ನೂ ಅಕ್ಟೋಬರ್‌ನಲ್ಲಿ ಲಕ್ನೋದಲ್ಲಿ ನಡೆದ ಮುಸ್ಲಿಂ ಲೀಗ್ ಅಧಿವೇಶನಕ್ಕೆ ಆಹ್ವಾನಿಸಿ ಮುಸ್ಲಿಂ ರಾಜಕೀಯ ಸಂಘಟನೆಯ ದೀಕ್ಷೆ ಬೋಧಿಸುವಲ್ಲಿ ಯಶಸ್ವಿಯಾದರು.

ಇದರ ಜೊತೆಯಲ್ಲೇ ಹಿಂದೂ ಮಹಾಸಭಾ, ಗಾಂಧೀಜಿ ಓರ್ವ ಪರಿಪೂರ್ಣ ಹಿಂದೂವಲ್ಲ ಎಂಬ ಪ್ರಚಾರ ಕಾರ್ಯ ಆರಂಭಿಸಿ ಕಾಂಗ್ರೆಸ್‌ನಿಂದ ಹಿಂದೂಗಳ ಹಿತಾಸಕ್ತಿಗಳ ರಕ್ಷಣೆ ಸಾಧ್ಯವಿಲ್ಲ ಎಂಬ ಪ್ರಚಾರ ಆರಂಭಿಸಿತು. ಹಿಂದೂ ಮಹಾಸಭಾದ ಒಂದು ಸಭೆಯಲ್ಲಿ ವಿ.ಡಿ. ಸಾವರ್ಕರ್, ಭಾರತವೀಗ ಏಕಧರ್ಮ ರಾಷ್ಟ್ರವಾಗುಳಿಯದೆ ಹಿಂದೂ ಮತ್ತು ಮುಸ್ಲಿಂ ಎಂಬ ಎರಡು ರಾಷ್ಟ್ರಗಳಾಗಿ ವಿಭಜನೆಗೊಳ್ಳುತ್ತಿದೆ ಎಂದು ಹೇಳುತ್ತಾ, ಹಿಂದೂ ರಾಷ್ಟ್ರದ ನಿರ್ಮಾಣಕ್ಕೆ ಹಿಂದೂಗಳು ಪಣತೊಡಬೇಕೆಂದು ಕರೆಕೊಟ್ಟರು.

ಕಾಂಗ್ರೆಸ್ ಸರ್ಕಾರಗಳಿಗೆ ಗಾಂಧಿ ಮಾರ್ಗದರ್ಶನ ಸೂತ್ರಗಳು

ಈ ವಿಘಟನಕಾರಿ ಕೂಗುಗಳ ನಡುವೆಯೇ ಗಾಂಧಿ, ಕಾಂಗ್ರೆಸ್ ಸರ್ಕಾರಗಳಿಗೆ ಕೆಲವು ಮಾರ್ಗದರ್ಶನ ಸೂತ್ರಗಳನ್ನು ನೀಡಿದರು. ಗಾಂಧಿಯವರ ದೃಷ್ಟಿಯಲ್ಲಿ ಪ್ರಾಂತೀಯ ಸರ್ಕಾರಗಳ ರಚನೆ ಯಾವುದೇ ರೀತಿಯಲ್ಲಿ ಅಂತಿಮ ಗುರಿಯ ಪೂರ್ಣ ಈಡೇರಿಕೆ ಅಲ್ಲದಿದ್ದರೂ, ಆ ದಾರಿಯ ಒಂದು ಬಹುಮುಖ್ಯ ಹೆಜ್ಜೆಯಾಗಿತ್ತು. ಇದು ಭಾರತದ ಇತಿಹಾಸದಲ್ಲೇ ಆರಂಭವಾಗಿದ್ದ ಪ್ರಜಾಪ್ರಭುತ್ವದ ಮೊದಲ ಪ್ರಯೋಗವಾಗಿತ್ತು ಮತ್ತು ಬ್ರಿಟಿಷ್ ಪ್ರಭುತ್ವ, ಭಾರತ ಇನ್ನೂ ಪ್ರಜಾಪ್ರಭುತ್ವಕ್ಕೆ ಯೋಗ್ಯವಾದ ದೇಶವಾಗಿಲ್ಲ ಎಂದಿತ್ತು. ಹಾಗಾಗಿ ಈ ಹೆಜ್ಜೆ ದೃಢವಾಗಿರುವಂತೆ ಖಚಿತಪಡಿಸಿಕೊಳ್ಳಲು ಅವರು ಈ ಸೂತ್ರಗಳನ್ನು ನೀಡಿದ್ದರು. ಅವುಗಳೆಂದರೆ ಪಾನ ನಿರೋಧ ಮತ್ತು ಶಿಕ್ಷಣವನ್ನು ಅಬ್ಕಾರಿ ಆದಾಯದ ಆಶ್ರಯದಿಂದ ಹೊರತಂದು ಸ್ವತಂತ್ರ ನಿರ್ವಹಣೆಗೆ ಅನುವು ಮಾಡಿಕೊಡುವುದು. ಮಂತ್ರಿಗಳು ತಮ್ಮ ಖರ್ಚು ವೆಚ್ಚಗಳ ವಿಷಯದಲ್ಲಿ ಬ್ರಿಟಿಷ್ ವ್ಯವಸ್ಥೆಯನ್ನು ಅನುಕರಿಸದೆ, ಸರಳ ಜೀವನ ನಡೆಸಬೇಕು. ಅವರ ಸಂಬಳ ೫೦೦ ರೂ.ಗೆ, ಭತ್ಯೆಗಳು ರೂ. ೨೫೦ಕ್ಕೆ ಸೀಮಿತವಾಗಬೇಕು. ವಾಸಕ್ಕೆ ದೊಡ್ಡ ಬಂಗಲೆಗಳಿಗೆ ಹೋಗಬಾರದು. ಮಂತ್ರಿಗಳು ಮತ್ತು ಶಾಸಕರು ಬ್ರಿಟಿಷ್ ಸರ್ಕಾರ ಏರ್ಪಡಿಸುವ ಔತಣಕೂಟಗಳಿಗೆ ಹೋಗಬಾರದು ಮತ್ತು ಪ್ರಧಾನಮಂತ್ರಿಯ ಅನುಮತಿ ಇಲ್ಲದೆ ಮಂತ್ರಿಗಳು ಗವರ್ನರನ್ನು ಭೇಟಿ ಮಾಡಕೂಡದು. ಮೂರನೆಯ ಮಾರ್ಗದರ್ಶನ ಸೂತ್ರವೆಂದರೆ, ಜಾತಿ ಮತ್ತು ಮತಗಳ ಪರಿಗಣನೆ ಇಲ್ಲದೆ ಎಲ್ಲರನ್ನೂ ಸಮಾನವಾಗಿ ನೋಡುವ ಆಡಳಿತ ಶೈಲಿಯನ್ನು ರೂಢಿಸಿಕೊಂಡು, ಮುಖ್ಯವಾಗಿ ಹಿಂದೂ–ಮುಸ್ಲಿಂ ಒಡಕನ್ನು ನಿವಾರಿಸುವುದು. ಬ್ರಿಟಿಷ್ ಪ್ರಭುತ್ವದ ಪರವಾದ ಪತ್ರಿಕೆಗಳು, ಕಾಂಗ್ರೆಸ್ ಆಡಳಿತದ ಪ್ರಾಂತ್ಯಗಳನ್ನು 'ಹಿಂದೂ ಪ್ರಾಂತ್ಯಗಳು' ಎಂದೂ, ಮಿಕ್ಕವನ್ನು 'ಮುಸ್ಲಿಂ ಪ್ರಾಂತ್ಯ'ಗಳೆಂದೂ ಕರೆಯುತ್ತಿದ್ದುದು

ಗಾಂಧಿಯವರಿಗೆ ತಮ್ಮ ರಾಜಕೀಯ ಧರ್ಮಕ್ಕೆ ಮಾಡಲಾಗುತ್ತಿರುವ ಅಪಚಾರದಂತೆ ಕಾಣುತ್ತಿತ್ತು. ಈ ಅಪಚಾರವನ್ನು ಕೊನೆಗಾಣಿಸಲು ಅವರು ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದ್ದರು.

ಜಿನ್ನಾರ ವಾಗ್ದಾಳಿ–ಗಾಂಧಿ ಕೇಳಿದ ಪ್ರಶ್ನೆ

ಈ ಮಧ್ಯೆ ಜಿನ್ನಾರ ಕಾಂಗ್ರೆಸ್ ವಿರೋಧಿ ಮಾತುಗಳು ಬಿರುಸಾಗತೊಡಗಿದ್ದವು. ಅವರು ಕಾಂಗ್ರೆಸ್‌ನ್ನು ಹಿಂದೂಗಳ ಪಕ್ಷವೆಂದೂ, ಹಾಗಾಗಿ ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳಲ್ಲಿನ ಮುಸ್ಲಿಮರು ಅವುಗಳಿಂದ ಯಾವುದೇ ನ್ಯಾಯವನ್ನೂ ಪಡೆಯಲಾರರು ಎಂದು ಹೇಳತೊಡಗಿದರಲ್ಲದೆ, ಮುಸ್ಲಿಂ ಲೀಗ್ ಮಾತ್ರ ಮುಸ್ಲಿಮರ ಹಿತ ಕಾಪಾಡಬಲ್ಲುದು ಎಂಬ ಪ್ರಚಾರ ಆರಂಭಿಸಿದ್ದರು. ಇನ್ನೂ ಅನಾಹುತಕಾರಿ ಸಂಗತಿ ಎಂದರೆ ಶಾಲೆಗಳಲ್ಲಿ 'ವಂದೇ ಮಾತರಂ' ಗೀತೆಯನ್ನು ಮಕ್ಕಳಿಂದ ಹಾಡಿಸಬಾರದು ಎಂಬ ಬೇಡಿಕೆಯನ್ನು ಮಂಡಿಸಿದರು. ಆ ಗೀತೆಯಲ್ಲಿ ಹಿಂದೂ ದೇವತೆಗಳ ವರ್ಣನೆ ಮತ್ತು ಸಂಬೋಧನೆ ಬರುವುದರಿಂದ, ಇದನ್ನು ಮುಸ್ಲಿಂ ಮಕ್ಕಳು ಹಾಡುವದು ಅವರ ಧರ್ಮಕ್ಕೆ ವಿರುದ್ಧವಾಗುತ್ತದೆ ಎಂಬ ವಿವರಣೆಯನ್ನು ಅವರು ಮಂಡಿಸಿದರಲ್ಲದೆ, ಈ ಗೀತೆಯ ಗಾಯನವನ್ನು ಶಾಲೆಗಳಲ್ಲಿ ಜಾರಿಗೆ ತಂದಿರುವುದು ಕಾಂಗ್ರೆಸ್ ಆಡಳಿತದ ವಿರುದ್ಧದ ತಮ್ಮ ಆರೋಪಕ್ಕೆ ಸಾಕ್ಷಿ ಎಂದರು. ಈ ವಿವಾದವನ್ನು ಮತೀಯ ಒಡಕಿಗೆ ಸಾಧನವನ್ನಾಗಿ ಮುಸ್ಲಿಂ ಲೀಗ್ ಬಳಸಬಹುದೆಂದು ಆತಂಕಪಟ್ಟ ಗಾಂಧಿ 'ವಂದೇ ಮಾತರಂ' ಗೀತೆಯ ಪಾಠದ ಪೂರ್ಣ ಅಧ್ಯಯನ ಮಾಡಿ, ಅದರ ಮೊದಲೆರಡು ಚರಣಗಳಲ್ಲಿ ಯಾವುದೇ ಧರ್ಮದ ದೇವತೆಯ ಪ್ರಸ್ತಾಪವಿಲ್ಲದಿರುವುದರಿಂದ ಶಾಲೆಗಳಲ್ಲಿ, ಆ ಗೀತೆಯ ಗಾಯನವನ್ನು ಅಷ್ಟಕ್ಕೇ ಸೀಮಿತಗೊಳಿಸಬಹುದೆಂದು ಸಲಹೆ ಮಾಡಿ, ಆ ವಿವಾದವನ್ನು ತಣ್ಣಗಾಗಿಸಲು ಯತ್ನಿಸಿದರು. ಹಾಗೇ ಜಿನ್ನಾಗೆ ಒಂದು ಪತ್ರ ಬರೆದು, 'ನೀವು ನಮ್ಮ ಮೇಲೆ ಯುದ್ಧವನ್ನೇ ಘೋಷಿಸಿದಂತಿದೆ. ನಾನು ದ.ಆಫ್ರಿಕಾದಿಂದ ಬಂದಾಗ ಕಂಡ, ೧೯೧೫ರ ರಾಷ್ಟ್ರೀಯವಾದಿ ಜಿನ್ನಾ ನೀವೇನಾ?' ಎಂದು ಪ್ರಶ್ನಿಸಿದರು. ಇದಕ್ಕೆ ಅದೇ ಶೈಲಿಯಲ್ಲಿ ಉತ್ತರಿಸಿದ ಜಿನ್ನಾ, '೧೯೧೫ರಲ್ಲಿ ನಿಮ್ಮ ಬಗ್ಗೆ ಜನ ಏನು ಹೇಳುತ್ತಿದ್ದರು ಮತ್ತು ಈಗ ಏನು ಹೇಳುತ್ತಿದ್ದಾರೆ ಎಂಬುದನ್ನು ನೀವು ಯಾರನ್ನಾದರೂ ಕೇಳಿ ತಿಳಿಯಬಹುದು. ರಾಷ್ಟ್ರೀಯತೆ ಎನ್ನುವುದು ಯಾರೊಬ್ಬರ ಸ್ವತ್ತಲ್ಲ. ರಾಷ್ಟ್ರೀಯತೆ ಅಂದರೇನೆಂಬುದನ್ನೂ ಈ ದಿನಗಳಲ್ಲಿ ವಿವರಿಸುವುದು ಕಷ್ಟ' ಎಂದರು. ಮೊದಲು ಮತಾತೀತವಾಗಿ ಎಲ್ಲರ ಪರವಾಗಿ ಮಾತನಾಡುತ್ತಿದ್ದ ರಾಷ್ಟ್ರೀಯವಾದಿ ಜಿನ್ನಾ, ಈಗ ಮುಸ್ಲಿಮರ ಪರ ವಕಾಲತ್ತು ವಹಿಸಿ ಹಿಂದೂ ಸರ್ಕಾರಗಳ ಪಕ್ಷಪಾತದ ಆತಂಕ ಹುಟ್ಟಿಸಿ ಮಾತನಾಡತೊಡಗಿದಾಗ ಆ ಸಮುದಾಯದ ಜನಸಾಮಾನ್ಯರ ಮಧ್ಯೆ, ಅವರ ಜನಪ್ರಿಯತೆ ದಿನೇ ದಿನೇ ಹೆಚ್ಚತೊಡಗಿತ್ತು. ಇದರಿಂದಾಗಿ ಈ ಮೊದಲು ಗಾಂಧಿಯವರ ಬೆಂಬಲಿಗರಾಗಿದ್ದ ಇಸ್ಲಾಮೀ ವಿದ್ವಾಂಸರು ಮತ್ತು ವ್ಯಾಪಾರಿಗಳು ನಿಧಾನವಾಗಿ ಜಿನ್ನಾರತ್ತ ತಿರುಗತೊಡಗಿದ್ದರು. ಇದರ ಜೊತೆಗೆ ಈ ಹಿಂದೆ ಜಿನ್ನಾರ ಗೈರು ಹಾಜರಿಯಲ್ಲಿ ಮುಸ್ಲಿಂ ಲೀಗ್‌ನ ಸಮ್ಮೇಳನದ ಅಧ್ಯಕ್ಷತೆ ವಹಿಸಿ,

ಮುಸ್ಲಿಮರ ಪ್ರತ್ಯೇಕ ರಾಷ್ಟ್ರದ ಪ್ರಸ್ತಾಪ ಮಾಡಿದ್ದ ಕವಿ ಇಕ್ಬಾಲರೂ ಅವರ ಕಿವಿಯೂದತೊಡಗಿದ್ದರು.

ಹೀಗೆ ಇಬ್ಬರ ನಡುವೆ ಕೆಲಕಾಲ ಪತ್ರ ವ್ಯವಹಾರ ನಡೆದು ಅದು ನಿರರ್ಥಕ ಎನ್ನಿಸಿದಾಗ ಗಾಂಧಿ 'ಎಲ್ಲ ಅನುಮಾನಗಳನ್ನು ಮಾತಾಡಿ ಪರಿಹರಿಸಿಕೊಳ್ಳೋಣ ಬನ್ನಿ' ಎಂದು ಜಿನ್ನಾರನ್ನು ಸೇಗಾಂವ್‌ಗೆ ಆಹ್ವಾನಿಸಿದರು. ಆದರೆ ಜಿದ್ದಿಗೆ ಬಿದ್ದಂತಿದ್ದ ಜಿನ್ನಾ, ಮೊದಲು ಅಖಿಲ ಭಾರತ ಮುಸ್ಲಿಂ ಲೀಗ್‌ನ್ನು ಭಾರತದ ಮುಸ್ಲಿಮರ ಏಕಮಾತ್ರ ಪ್ರತಿನಿಧಿ ಎಂದೂ, ನಿಮ್ಮನ್ನು ಕಾಂಗ್ರೆಸ್ ಮತ್ತು ಇಡೀ ಭಾರತದ ಹಿಂದೂಗಳ ಪ್ರತಿನಿಧಿ ಎಂದೂ ಒಪ್ಪಿಕೊಂಡರೆ ಮಾತ್ರ ಮಾತುಕತೆಗೆ ಒಂದು ದಿಕ್ಕು ದೊರೆಯಬಹುದು' ಎಂದಾಗ ಗಾಂಧಿಗೆ ಮಾತುಕತೆ ಅಸಾಧ್ಯವೆನಿಸತೊಡಗಿತು. ಅವರು ಕಾಂಗ್ರೆಸ್ ಸರ್ಕಾರಗಳು ತುರ್ತಾಗಿ ಮಾಡಬೇಕಾದ ಕೆಲಸಗಳ ಕಡೆ ಗಮನ ಹರಿಸಿದರು.

ಅಸಹಕಾರ ಸತ್ಯಾಗ್ರಹ ಸಮಯದಲ್ಲಿ ವಶಪಡಿಸಿಕೊಂಡಿದ್ದ ರೈತರ ಭೂಮಿ ಮತ್ತು ಆಸ್ತಿಪಾಸ್ತಿಗಳನ್ನು ಸಂಬಂಧಪಟ್ಟವರಿಗೆ ಮರಳಿಸಲಾಯಿತು. ಭೂ ಸುಧಾರಣೆ ಕಾಯಿದೆಗಳು ಮಂಡಿತವಾದವು. ದೇವಾಲಯಗಳಿಗೆ ಎಲ್ಲರ ಮುಕ್ತ ಅವಕಾಶದ ಆದೇಶ ಹೊರಡಿಸಲಾಯಿತು. ಸೆರೆಮನೆಗಳಲ್ಲಿ ಬಂದಿಗಳ ಆಹಾರದ ಗುಣಮಟ್ಟದ ಸುಧಾರಣೆಗೆ ಕ್ರಮ ಕೈಗೊಳ್ಳಲಾಯಿತು. ಎಲ್ಲ ರಾಜಕೀಯ ಬಂದಿಗಳ ಬಿಡುಗಡೆಗೆ ಗವರ್ನರುಗಳು ಒಪ್ಪದಿದ್ದಾಗ ಗಾಂಧಿ ರಾಜೀನಾಮೆ ನೀಡುವಂತೆ ಸರ್ಕಾರಗಳಿಗೆ ಸೂಚಿಸಿದರು. ಗಾಬರಿಯಾದ ವೈಸ್‌ರಾಯ್, ಎಲ್ಲ ರಾಜಕೀಯ ಬಂದಿಗಳ ಬಿಡುಗಡೆಗೆ ಅನುಮತಿ ನೀಡಿದಾಗ ಪರಿಸ್ಥಿತಿ ಮಾಮೂಲಿ ಸ್ಥಿತಿಗೆ ಬಂದಿತು.

ಈ ಮಧ್ಯೆ ಗಾಂಧಿ ಬಂಗಾಳದ ವೈಸ್‌ರಾಯ್ ಮತ್ತು ಗವರ್ನರ್‌ರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಈ ಭೇಟಿಗಳಲ್ಲಿ ಅವರು, ಸದ್ಯದ ೧೯೩೫ರ ಕಾಯಿದೆಯಿಂದ ತಮಗೆ ತೃಪ್ತಿಯಾಗಿಲ್ಲವೆಂದೂ, ಪೂರ್ಣ ಪ್ರಮಾಣದ ಭಾರತದ ಒಕ್ಕೂಟದ ರಚನೆಗೆ ಬ್ರಿಟಿಷ್ ಸರ್ಕಾರ ತಾನಾಗಿ ಕ್ರಮ ಕೈಗೊಳ್ಳದಿದ್ದರೆ ಭಾರತದ ಜನ ಮತ್ತೊಮ್ಮೆ ಬಂಡೇಳುವುದು ಖಂಡಿತವೆಂದು ಸ್ಪಷ್ಟ ಶಬ್ದಗಳಲ್ಲಿ ತಿಳಿಸಿದ್ದರು.

ಕಾಂಗ್ರೆಸ್ ಅಧ್ಯಕ್ಷರಾದ ಸುಭಾಷ್–ಅಧಿವೇಶನದಲ್ಲಿ ಜೇಬುಗಳ್ಳರ ಕಾಟ!

೧೯೩೮ರ ಕಾಂಗ್ರೆಸ್‌ನ ವಾರ್ಷಿಕ ಅಧಿವೇಶನ ಫೆಬ್ರುವರಿ ಕೊನೆಯ ವಾರದಲ್ಲಿ ಗುಜರಾತ್‌ನ ಬಾರ್ಡೋಲಿ ಬಳಿಯ ಹರಿಪುರದಲ್ಲಿ ಏರ್ಪಾಡಾಗಿತ್ತು. ಮತ್ತೆ ಫೈಜ್‌ಪುರದಂತೆ ಇಲ್ಲಿಯೂ ಅಧಿವೇಶನಕ್ಕಾಗಿ ಸಕಲ ನಾಗರಿಕ ಸೌಲಭ್ಯಗಳನ್ನೊಳಗೊಂಡ ಒಂದು ಪರ್ಯಾಯ ನಗರವನ್ನೇ ನಿರ್ಮಿಸಲಾಗಿತ್ತು. ಇಲ್ಲಿ ನಂದಲಾಲ್ ಬೋಸರ ಜೊತೆ ಕೆಲ ಗುಜರಾತಿ ಕಲಾವಿದರೂ, ವಾಸ್ತುಶಿಲ್ಪಿಗಳೂ ಸೇರಿ ನಗರವನ್ನು ಅಲಂಕರಿಸಿದ್ದರು. ಈ ಅಧಿವೇಶನದಲ್ಲಿ ಎರಡು ಸಾವಿರ ಜನ ಬಾಣಸಿಗರು ತಯಾರಿಸಿದ ಭಕ್ಷ್ಯ ಭೋಜ್ಯಗಳನ್ನು ೨೫ ಸಾವಿರ ಜನ ಉಂಡರು ಮತ್ತು ಊಟಕ್ಕೆ ಗಾಂಧಿಯವರ ಸೂಚನೆಯ ಮೇರೆಗೆ ಕೆಂಪಕ್ಕಿ ಅನ್ನ ಮತ್ತು ಕೈಯಲ್ಲಿ ಕುಟ್ಟಿದ ಹಿಟ್ಟಿನ ರೋಟಿಗಳನ್ನೂ, ಹಸುವಿನ (ಎಮ್ಮೆಯ ಅಲ್ಲ!) ಹಾಲು ಮತ್ತು ತುಪ್ಪವನ್ನು ನೀಡಲಾಗಿತ್ತೆಂದು ಫಿಶರ್

ಬರೆಯುತ್ತಾರೆ. ಈ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದವರು ಸುಭಾಷ್‌ಚಂದ್ರ ಬೋಸ್ ಅವರು. ಇವರ ಆಯ್ಕೆ ಪಟೇಲ್ ಮತ್ತು ರಾಜಾಜಿಯವರ ವಿರೋಧದ ಹೊರತಾಗಿಯೂ ಗಾಂಧಿಯವರ ಅಪೇಕ್ಷೆ ಮೇರೆಗೆ ನಡೆಯಿತೆಂದು ರಾಜ್‌ಮೋಹನ್ ಗಾಂಧಿ ಹೇಳಿದರೆ, ಗಾಂಧಿಯವರ ಒಲವು ಆಂಧ್ರದ ಪಟ್ಟಾಭಿ ಸೀತಾರಾಮಯ್ಯನವರ ಕಡೆಗಿದ್ದರೂ, ಕಾಂಗ್ರೆಸ್‌ನಲ್ಲಿ ಬಹುಜನರ ಒಲವು ಸುಭಾಷರ ಕಡೆಗಿದ್ದದ್ದರಿಂದ ಅವರು ಆಯ್ಕೆಯಾದರೆಂದು ರಾಮಚಂದ್ರ ಗುಹಾ ಹೇಳುತ್ತಾರೆ. ಅದೇನೇ ಇರಲಿ, ಈ ಅಧಿವೇಶನದ ಕಾರ್ಯಕಲಾಪಗಳ ಹಿನ್ನೆಲೆಯಲ್ಲಿ ನಡೆದುವೆಂದು ಗುಹಾ ಹೇಳುವ ಎರಡು ಘಟನೆಗಳು ಸ್ವಾರಸ್ಯಕರವಾಗಿವೆ. ಪಂಜಾಬ್‌ನಿಂದ ಅಧಿವೇಶನಕ್ಕೆ ಬಂದಿದ್ದ ವೃದ್ಧರೊಬ್ಬರು ಗಾಂಧಿಯವರ ದರ್ಶನ ಪಡೆಯಲು ಅವಸರವಸರವಾಗಿ ಬಂದು ಅವರಿಗೆ ಒಂದು ಲಕೋಟೆ ನೀಡಿ, ಅದರಲ್ಲಿ ನೂರು ರೂಪಾಯಿಗಳಿವೆ ಎಂದಾಗ ಗಾಂಧಿ, ಇದನ್ನು ಕೊಡಲು ಇಷ್ಟೇಕೆ ಅವಸರವೆಂದು ಕೇಳಿದರು. ಆಗ ಆ ವೃದ್ಧ ಕೊಟ್ಟ ಉತ್ತರ: 'ಈ ಅಧಿವೇಶನದಲ್ಲಿ ತುಂಬ ಜನ ಜೇಬುಗಳ್ಳರಿದ್ದಾರೆ ಎಂದು ಯಾರೋ ಹೇಳಿದರು. ಅದಕ್ಕೇ ಆದಷ್ಟೂ ಬೇಗನೇ ನಿಮಗೆ ಒಪ್ಪಿಸಲು ಬಂದೆ!'

ಒರಿಸ್ಸಾದ ಒಬ್ಬ ರೈತ ತನ್ನ ಜಮೀನಿನಲ್ಲಿ ಬೆಳೆದ ಹಣ್ಣಿನ ಮೂಟೆಯೊಂದನ್ನು ಸಾಗಿಸಿಕೊಂಡು ಗಾಂಧಿಯವರ ಕುಟೀರದ ಮುಂದೆ ಇಟ್ಟಾಗ ಗಾಂಧಿ, ಇದನ್ನು ತರಲು ತುಂಬ ಶ್ರಮ ಮತ್ತು ಹಣ ಖರ್ಚಾಗಿರಬೇಕು ಎಂದು ವಿಚಾರಿಸಿದರು. ಆತ ನಿಮ್ಮ ದರ್ಶನ ಭಾಗ್ಯದ ಮುಂದೆ ಅದೆಲ್ಲ ಹೆಚ್ಚಲ್ಲ ಎಂದು ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದ.

ಇನ್ನೋರ್ವ ಗಾಂಧಿ ಭಕ್ತರು ಗಾಂಧಿಗೆ ಅರ್ಪಿಸಲೆಂದು ತಾವೇ ನೂತಿದ್ದ, ಒಂದು ಲಕ್ಷ ಇಪ್ಪತ್ತೈದು ಸಾವಿರ ಗಜಗಳಷ್ಟು ಖಾದಿ ನೂಲು ತಂದಿದ್ದರು!

ಅಧಿವೇಶನದಲ್ಲಿ ಮುಖ್ಯವಾಗಿ ಬ್ರಿಟಿಷರ ಕಡೆ ವಾಲುವಂತೆ ತೋರುತ್ತಿದ್ದ ವಿವಿಧ ಸಂಸ್ಥಾನಗಳ ರಾಜ ಮಹಾರಾಜರುಗಳಿಗೆ, ಪ್ರಜಾಸತ್ತಾತ್ಮಕ ಹಕ್ಕುಗಳ ಬಗ್ಗೆ ಜನರಲ್ಲಿ ಅರಿವು ಹೆಚ್ಚುತ್ತಿರುವ ಈ ದಿನಗಳಲ್ಲಿ ಮುಂದಿನ ಹೆಜ್ಜೆ ಇಡಿ ಎಂದು ಸಲಹೆ ನೀಡಲಾಯಿತು. ಸುಭಾಷರಿಗೆ ಚುರುಕು ಮುಟ್ಟಿಸಲೋ ಎಂಬಂತೆ ಪಟೇಲರು ಎಡಪಂಥೀಯತೆಯನ್ನು ಕಟುವಾಗಿ ಟೀಕಿಸಿದ್ದನ್ನು ಗಾಂಧಿ ಸುತರಾಂ ಇಷ್ಟಪಡಲಿಲ್ಲ. ಅಧಿವೇಶನದ ನಂತರ ಅವರು ಪಟೇಲರಿಗೆ ಪತ್ರ ಬರೆದು ಸಮಾಜವಾದಿಗಳನ್ನು ಒಲಿಸಿಕೊಳ್ಳುವ ಮಾರ್ಗಬಿಟ್ಟು ಅವರನ್ನು ನೋಯಿಸುವ ಮಾರ್ಗ ಹಿಡಿದಿರುವುದು ಒಳ್ಳೆಯದಲ್ಲ ಎಂದು ಎಚ್ಚರಿಸಿದರು.

ಹಿಂದೂ-ಮುಸ್ಲಿಂ ಏಕತೆಗಾಗಿ ಗಾಂಧಿ-ಜಿನ್ನಾ ಮಾತುಕತೆ

ಆದರೆ ಗಾಂಧಿಯವರನ್ನು ನಿಜವಾಗಿ ಈಗ ಬಾಧಿಸುತ್ತಿದ್ದ ಚಿಂತೆ ಮುಸ್ಲಿಮರು ಕಾಂಗ್ರೆಸ್‌ನಿಂದ ದೂರವಾಗುತ್ತಿದ್ದಾರೆ ಮತ್ತು ಜಿನ್ನಾ ಮುಸ್ಲಿಂ ಪ್ರತ್ಯೇಕತೆಯ ಜಾಗದಲ್ಲಿ ಮುಸ್ಲಿಂ ರಾಷ್ಟ್ರೀಯತೆಯ ಬಗ್ಗೆ ಮಾತಾಡತೊಡಗಿದ್ದಾರೆ ಎಂಬುದು. ಹೀಗಾಗಿ ಅವರೊಂದಿಗೆ ಮಾತಾಡುವ ಒತ್ತಡ ಅವರೊಳಗೇ ಸೃಷ್ಟಿಯಾಗುತ್ತಿತ್ತಾದರೂ, ಜಿನ್ನಾರ

ವಾದ ತಲುಪಿರುವ ಹಂತ, ಹಾಕಿರುವ ಷರತ್ತುಗಳು ಮತ್ತು ಅವುಗಳ ಕಟುತ್ವ ಅವರನ್ನು ಹಿಂಜರಿಯುವಂತೆ ಮಾಡುತ್ತಿತ್ತು. ಅಲ್ಲದೆ ಮಾತುಕತೆಗೆ ತಮ್ಮೊಂದಿಗೆ ಅಬ್ದುಲ್ ಕಲಾಂ ಆಜಾದರನ್ನೂ ತಾವು ಕರೆತರುವುದಾಗಿ ತಿಳಿಸಿದಾಗ, ಅದಕ್ಕೆ ಬಂದ 'ನನ್ನ ಹೊರತಾಗಿ ಇನ್ನಾರನ್ನೂ ಭಾರತದ ಮುಸ್ಲಿಮರ ನಾಯಕ ಎಂದು ನೀವು ಮಾನ್ಯ ಮಾಡಿದರೆ ಮಾತುಕತೆಗೆ ನಾನು ಸಿದ್ಧನಿಲ್ಲ' ಎಂಬ ಜಿನ್ನಾರ ಕಟುನುಡಿಯ ಮಾರುತ್ತರ ಅವರನ್ನು ಧೃತಿಗೆಡಿಸಿತ್ತು. ಹಿಂದಿನ ಅಧ್ಯಾಯದಲ್ಲಿ ಲೈಂಗಿಕತೆ ಕುರಿತ ಗಾಂಧಿಯವರ ಪ್ರಯೋಗಗಳ ಸಂದರ್ಭದಲ್ಲಿ ಪ್ರಸ್ತಾಪಿತವಾದ ಒತ್ತಡ ಇದೇ ಆಗಿತ್ತು.

ಜಿನ್ನಾ–ಗಾಂಧಿ ಪತ್ರ ವ್ಯವಹಾರದ ಮಧ್ಯೆಯೇ ಜಿನ್ನಾ–ನೆಹರೂ ಪತ್ರ ವ್ಯವಹಾರವೂ ನಡೆದಿತ್ತು. ನೆಹರೂ ಮುಸ್ಲಿಂ ಲೀಗ್‌ನ್ನು ಮುಸ್ಲಿಮರ ಏಕಮಾತ್ರ ಪ್ರತಿನಿಧಿ ಎಂದು ಒಪ್ಪಿಕೊಳ್ಳಲು ನಿರಾಕರಿಸಿ ಇತರ ರಾಜಕೀಯ ಸಂಸ್ಥೆಗಳಂತೆ ಅದನ್ನೂ ಒಂದು ಸಂಸ್ಥೆಯಾಗಿ ಮಾತ್ರ ಪರಿಗಣಿಸುವುದಾಗಿ ಹೇಳಿದಾಗ ಕೆರಳಿದ ಜಿನ್ನಾ, ಮುಸ್ಲಿಮರ ರಾಜಕೀಯ ಹಕ್ಕುಗಳ ಜೊತೆ ಅವರ ಭಾಷೆ–ಸಂಸ್ಕೃತಿ–ಪರಂಪರೆಗಳಿಗೂ ಕಾಂಗ್ರೆಸ್ ಆಡಳಿತಗಳಿಂದ ಅಪಾಯವೊದಗಿದೆ ಎಂಬ ಹುಯ್ಲೆಬ್ಬಿಸಿದ್ದರು ಮತ್ತು ಈ ಬಗ್ಗೆ ತಮಗೆ ವರದಿ ಸಲ್ಲಿಸಲು ಮುಸ್ಲಿಂ ಲೀಗ್ ಪರವಾಗಿ ಒಂದು ಸಮಿತಿಯನ್ನೂ ನೇಮಿಸಿದ್ದರು. ಆ ಸಮಿತಿ ವಿಗ್ರಹಾರಾಧನೆಯನ್ನು ಪ್ರಚೋದಿಸುವ 'ವಂದೇ ಮಾತರಂ' ಗಾಯನವನ್ನು ಕಡ್ಡಾಯ ಮಾಡಿರುವುದೂ, ಗಾಂಧಿಯವರ ಒತ್ತಾಯದಂತೆ ದನದ ಮಾಂಸ ಮತ್ತು ಗೋಹತ್ಯೆ ಹಾಗೂ ಉರ್ದು ಲಿಪಿಯ ವಿರುದ್ಧ ಪ್ರಚಾರಾಂದೋಲನ ಆರಂಭಿಸಲಾಗಿದೆ ಎನ್ನುತ್ತಾ, ಇದು ಇಸ್ಲಾಂ ಸಂಸ್ಕೃತಿ ಮತ್ತು ಸಂವೇದನೆಗಳನ್ನು ಘಾಸಿಗೊಳಿಸುವ ಪ್ರಯತ್ನಗಳೆಂದೂ, ಆಡಳಿತ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಮುಸ್ಲಿಂ ಪ್ರಾತಿನಿಧ್ಯ ಕುಸಿತಗೊಂಡಿದೆ ಎಂದೂ ವರದಿ ಸಲ್ಲಿಸಿತ್ತು.

ಈ ಅಪಪ್ರಚಾರ ಮುಂದುವರೆಯಬಾರದೆಂದು ಭಾವಿಸಿದ ಗಾಂಧಿ, ಸೇಗಾಂವ್‌ಗೆ ಬರಲು ನಿರಾಕರಿಸಿದ್ದ ಜಿನ್ನಾರನ್ನು, ಅವರ ಊರು ಬಾಂಬೆಯಲ್ಲೇ ಭೇಟಿ ಮಾಡಬಯಸುವುದಾಗಿ ತಿಳಿಸಿದರು. ಆದರೆ ತಮ್ಮ ಬ್ರಹ್ಮಚರ್ಯ ನಿಷ್ಠೆಯ ತಮ್ಮದೇ ಶೈಲಿಯ ಪ್ರಯೋಗ–ಪರೀಕ್ಷೆಯೊಂದರಲ್ಲಿ ತಾವು ಸೋತಿರುವುದಾಗಿ ಭಾವಿಸಿದ್ದ ಅವರು, ಈ ಭೇಟಿಯ ಬಗ್ಗೆ ನೀಡಿದ ಹೇಳಿಕೆಯ ಜೊತೆಗೆ 'ಸತ್ಯ ಮತ್ತು ಅಹಿಂಸೆಗಳ ಪ್ರತಿಪಾದನೆ ಮಾಡುವ ನನ್ನ ಯೋಗ್ಯತೆಯ ಬಗ್ಗೆ ನನಗೇ ಅನುಮಾನ ಮೂಡುವಂತಹ ಒಂದು ಕೊರತೆ ನನ್ನಲ್ಲಿ ಕಂಡು ಬಂದು ನನ್ನನ್ನು ಅಧೀರನನ್ನಾಗಿಸಿದೆ' ಎಂದೂ ಹೇಳಿ ಸಾರ್ವಜನಿಕರನ್ನು ಗೊಂದಲಕ್ಕೆ ತಳ್ಳಿದ್ದರು. ಅಂತೂ ೧೯೩೮ರ ಏಪ್ರಿಲ್ ೨೮ರಂದು ಬಾಂಬೆಯಲ್ಲಿ ಗಾಂಧಿ–ಜಿನ್ನಾ ಭೇಟಿಯಾಯಿತು. ಮೂರೂವರೆ ತಾಸುಗಳ ಕಾಲ ನಡೆದ ಈ ಮಾತುಕತೆಯ ನಂತರ 'ಹಿಂದೂ ಮುಸ್ಲಿಂ ಏಕತೆ ಕುರಿತು ಸೌಹಾರ್ದಯುತ ಮಾತುಕತೆ ನಡೆದವು' ಎಂಬ ಸಂಕ್ಷಿಪ್ತ ಹೇಳಿಕೆ ನೀಡಿ 'ಫ್ರಾಂಟಿಯರ್ ಮೇಲ್' ಹತ್ತಿದ ಗಾಂಧಿ, ಪೇಷಾವರದತ್ತ ಹೊರಟುಬಿಟ್ಟರು. ಅವರಿಗೀಗ ಅಬ್ದುಲ್ ಗಫಾರ್ ಖಾನ್‌ರಂತಹ ಸಂತ ಮನಸ್ಸಿನ ನಾಯಕರ ಒಡನಾಟ, ಸಾಂತ್ವನ ಮತ್ತು ಸಲಹೆ ಬೇಕಿತ್ತೆಂದು ಕಾಣುತ್ತದೆ. ಅಲ್ಲಿಂದ ಒಂದು ವಾರದೊಳಗೆ ವಾಪಸ್ಸಾದ ಗಾಂಧಿ, ಮತ್ತೆ

ಬಾಂಬೆಯಲ್ಲಿ ಜಿನ್ನಾರೊಡನೆ ಮಾತುಕತೆ ನಡೆಸಿದರು. ಆದರೆ ಈ ಮಾತುಕತೆಯಿಂದ ಯಾವುದೇ ಪ್ರಯೋಜನವಾಗಿಲ್ಲವೆಂದು ಅವರು ರಾಜಾಜಿಗೆ ಬರೆದ ಪತ್ರದಲ್ಲಿ ತಿಳಿಸಿದರು. 'ಆತನೊಬ್ಬ ತುಂಬ ಜಿಗುಟು ಮನುಷ್ಯ. ಆದರೆ ಈ ವಿಷಯದಲ್ಲಿ ಪೂರಾ ಆಸೆ ಬಿಡುವಂತೆಯೂ ಇಲ್ಲ' ಎಂದು ಅವರು ಅಭಿಪ್ರಾಯಪಟ್ಟಿದ್ದರು.

ನಂತರ ಗಾಂಧಿ ಮತ್ತೊಮ್ಮೆ ವಾಯುವ್ಯ ಗಡಿ ಪ್ರಾಂತ್ಯಕ್ಕೆ ಹೊರಟರು.

ವಾಯುವ್ಯ ಗಡಿ ಪ್ರಾಂತ್ಯದಲ್ಲಿ ಗಾಂಧಿ – ಪಠಾಣರಿಗೆ ಅಹಿಂಸೆಯ ಬೋಧನೆ

ತಮ್ಮ ಪ್ರಿಯ ಶಿಷ್ಯ ಖುದಾಯಿ ಖಿದ್ಮತ್‌ಗಾರ್ (ದೇವರ ಸೇವಕರು) ಸಂಘಟನೆಯ ನಾಯಕ ಗಫಾರ್ ಖಾನ್‌ರ ನಾಡಿಗೆ ಭೇಟಿ ನೀಡಬೇಕೆಂಬುದು ಗಾಂಧಿ ಅವರ ಬಹುದಿನಗಳ ಆಸೆಯಾಗಿತ್ತು. ಎರಡು ಬಾರಿ ಪ್ರಯತ್ನಿಸಿದ್ದರೂ ಸರ್ಕಾರದ ಅನುಮತಿ ಇಲ್ಲದೆ ಅದು ಸಾಧ್ಯವಾಗಿರಲಿಲ್ಲ. ಈಗ ಗಫಾರ್ ಖಾನ್‌ರ ಅಣ್ಣನೇ ಆ ಪ್ರಾಂತ್ಯದ ಪ್ರಧಾನ ಮಂತ್ರಿ. ಈ ಪ್ರಾಂತ್ಯದ ಪಠಾಣರ ಬಗ್ಗೆ ಗಾಂಧಿ ಅವರಿಗೆ ಎಲ್ಲಿಲ್ಲದ ಕುತೂಹಲ. ಗಫಾರ್ ಖಾನರ ಪ್ರಕಾರವೇ 'ಒಬ್ಬರ ಕತ್ತನ್ನು ಕೊಯ್ಯಲು ಇನ್ನೊಬ್ಬರು ಸದಾ ಸಿದ್ಧವಿರುವ' ಈ ಜನ ಹೇಗೆ ತಮ್ಮ ಅಹಿಂಸಾತ್ಮಕ ಹೋರಾಟದ ಅನುಯಾಯಿಗಳಾಗಿ ತಮ್ಮ ಭಕ್ತರೇ ಆಗಿಬಿಟ್ಟಿದ್ದಾರೆಂದು ಕಂಡು ಕೇಳಿ ತಿಳಿಯುವ ಕುತೂಹಲ ಅವರದು. ಅವರು ಈಗಾಗಲೇ ದ.ಆಫ್ರಿಕಾದಲ್ಲಿ ಪಠಾಣರ ಸ್ನೇಹದ ರುಚಿ 'ಸವಿ'ದಿದ್ದವರೇ! ಈಗ ಬಾದ್‌ಶಾ ಖಾನರೆಂದೇ ಜನರ ಮಧ್ಯೆ ಪ್ರಸಿದ್ಧರಾಗಿದ್ದ ಗಫಾರ್ ಖಾನರೂ ಭೂಮಿಯ ಮೇಲಿನ ಸ್ವರ್ಗದಂತಿರುವ ತಮ್ಮ ನಾಡು, ಹಿಂಸೆಯ ನಾಡೂ ಆಗಿದ್ದುದನ್ನು ಗಾಂಧಿ ಬೋಧಿಸಿದ ಮಾರ್ಗ ಹೇಗೆ ಬದಲಾಯಿಸಿದೆ ಎಂಬುದನ್ನು ಸ್ವತಃ ಗಾಂಧಿಯವರಿಗೆ ತೋರಿಸಲು ಉತ್ಸುಕರಾಗಿದ್ದರು. ಅವರ ಪ್ರಕಾರ ಈಗ ಅಲ್ಲಿ ಹಿಂದಿನಂತೆ ಯಾರೂ ಬ್ರಿಟಿಷರ ಆಯುಧ ಬಲಕ್ಕೆ ಹೆದರುತ್ತಿಲ್ಲ. 'ಈಗ ಅಹಿಂಸಾತ್ಮಕ ಪಠಾಣನೇ ಹಿಂಸಾತ್ಮಕ ಪಠಾಣನಿಗಿಂತ ಅಪಾಯಕಾರಿಯಾಗಿದ್ದಾನೆ!'

ಗಾಂಧಿ, ಈ ಪ್ರಾಂತ್ಯಕ್ಕೆ ಐದು ವಾರಗಳ ಈ ಎರಡನೇ ಪ್ರವಾಸದ ನಂತರ ೧೯೩೮ ರ ಜುಲೈನಲ್ಲಿ ಕಸ್ತೂರಬಾ ಅವರೊಂದಿಗೆ ಮೂರನೇ ಪ್ರವಾಸ ಕೈಗೊಂಡರು. ಈ ಪ್ರವಾಸಗಳಲ್ಲಿ ಅವರು ಆ ಪರ್ವತ ಪ್ರಾಂತ್ಯದ ಗಿರಿ ಶಿಖರಗಳನ್ನು ಏರಿ ಇಳಿದರು. ಹಳ್ಳಿಗಳಲ್ಲಿ ತಂಗಿದರು. ತಂಪಾದ ಸ್ವಚ್ಛಗಾಳಿಯನ್ನು ಸವಿದರು. ಜನಸಾಮಾನ್ಯರು, ವಿದ್ವಾಂಸರು ಮತ್ತು ಅಲ್ಲಿನ ಅಲ್ಪಸಂಖ್ಯಾತರಾದ ಹಿಂದೂ-ಸಿಖ್‌ರ ಮಧ್ಯೆ ಬೆರೆತು ಮಾತನಾಡಿದರು. ಗಂಡು-ಹೆಣ್ಣಿನ ಸಂಬಂಧ, ಹಿಂಸೆ-ಅಹಿಂಸೆ, ಧಾರ್ಮಿಕ ಸಾಮರಸ್ಯ ಇತ್ಯಾದಿ ವಿಷಯಗಳ ಬಗ್ಗೆ ಅವರು ವ್ಯಾಪಕವಾಗಿ ಮಾತನಾಡಿದರು. ಹಿಂಸೆಯನ್ನೇ ಜೀವನಶೈಲಿಯನ್ನಾಗಿ ಮಾಡಿಕೊಂಡಿದ್ದ ಅಲ್ಲಿನ ಗಂಡಸರಿಗೆ (ಅದು ರಂಜಾನ್ ಕಾಲವಾಗಿದ್ದು ಪ್ರತಿ ಸಂಜೆ ಉಪವಾಸ ಮುಗಿಸಿ ಊಟಕ್ಕೆ ಅಣಿಯಾಗುವ ಸಂದರ್ಭದಲ್ಲಿ ಪಠಾಣ ಗಂಡಸರು ತಮ್ಮ ಹೆಂಡತಿಯರ ಮೇಲೆ ಮಾಡುತ್ತಿದ್ದ ದಬ್ಬಾಳಿಕೆಯನ್ನು ಗಾಂಧಿ ಗಮನಿಸಿದ್ದರು.) ತಮ್ಮದೇ ಅನುಭವದ ಮಾತುಗಳನ್ನು ಹೀಗೆ ಹೇಳಿದರು: 'ನಾನು ನನ್ನ ಹೆಂಡತಿಗೆ, ನನ್ನ ನಂಬಿಕೆಗಳಿಗಾಗಿ ಕೊಡಬಾರದ ಹಿಂಸೆಯನ್ನೆಲ್ಲ ನೀಡಿದ್ದೇನೆ. ಆದರೆ

ಶಿಕ್ಷಣ ಇಲ್ಲದ ಸಂಪ್ರದಾಯಗಳ ಆಕೆ ನನ್ನನ್ನು ಸೈರಿಸಿಕೊಂಡಳು. ನನಗೆ ಜ್ಞಾನೋದಯವನ್ನುಂಟು ಮಾಡಿ ನನ್ನ ಗುರುವಾದಳು. ಅಹಿಂಸೆ ಎಂದರೆ ನಿಜವಾಗಿ ಏನೆಂದು ಅವಳು ನನಗೆ ಕಲಿಸಿದಳು. ನೀವು ನಿಮ್ಮ ಕುಟುಂಬಗಳ ಮಹಿಳೆಯರಿಂದ ಕಲಿಯುವ ಅಹಿಂಸೆಯೇ ನಿಮ್ಮನ್ನು ನಿಜವಾಗಿ ಕಾಪಾಡುವುದು.'

ಅಬಿಸೀನಿಯಾದ ಮೇಲಿನ ಮುಸೊಲಿನಿಯ ಆಕ್ರಮಣದ ಮೂಲಕ ಎರಡನೇ ಮಹಾಯುದ್ಧದ ತೆರೆ ಏಳುತ್ತಿದ್ದ ಕಾಲವದು. ಈ ಹಿನ್ನೆಲೆಯಲ್ಲಿ ಯುದ್ಧ ರೂಪದ ಹಿಂಸೆಯನ್ನು ಅಹಿಂಸೆಯ ಮೂಲಕ ಎದುರಿಸಲು ಸಾಧ್ಯವೇ ಎಂದು ಗಾಂಧಿ ಅವರನ್ನು ಕೇಳಿದಾಗ ಅವರು 'ಶುದ್ಧ ಮನಸ್ಸಿನ ಪ್ರಾಣಾರ್ಪಣೆಯ ಮೂಲಕ ಎದುರಿಸಬಹುದು' ಎಂದರಾದರೂ, ತಮ್ಮ ಅಹಿಂಸೆಯ ತತ್ವ ಇನ್ನೂ ಅಪೂರ್ಣವಾಗಿದೆ ಎಂದು ಒಪ್ಪಿಕೊಂಡರು. ಇಸ್ಲಾಮೀ ವಿದ್ವಾಂಸರಿಗೆ ಅವರು ಹೇಳಿದ್ದು: 'ಇಸ್ಲಾಂನ ಹೆಮ್ಮೆಯ ಸಂದೇಶವಾದ ಸೋದರತೆ ಕೇವಲ ಮುಸ್ಲಿಂ ಸಮುದಾಯಕ್ಕೆ ಸೀಮಿತವಾಗದೆ ಇಡೀ ಮಾನವ ಕುಲಕ್ಕೆ ಅನ್ವಯವಾಗಬೇಕು'. ಹಿಂದೂ-ಸಿಖ್ ವ್ಯಾಪಾರಿ ಸಮುದಾಯಕ್ಕೆ ಅವರ ಸಂದೇಶ: 'ವ್ಯಾಪಾರದಲ್ಲಿ ಎಲ್ಲಕ್ಕಿಂತ ಮುಖ್ಯವಾದ ಸರಕೆಂದರೆ ಪ್ರೀತಿ. ಅದನ್ನು ಈ ಗುಡ್ಡಗಾಡು ಜನರಿಗೆ ಹಂಚಿ. ಅವರಿಂದ ಅದರೆರಡರಷ್ಟು ನಿಮಗೆ ದೊರೆಯುತ್ತದೆ.' ಅವರು ಈ ಪ್ರವಾಸದಲ್ಲಿ ಆಡಿದ ಇನ್ನೂ ಕೆಲವು ಅಮೂಲ್ಯ ಮಾತುಗಳೆಂದರೆ: 'ಜಗತ್ತು ಬದಲಾಗಲು ಮಹಾನಾಯಕರೇ ಬೇಕಿಲ್ಲ. ತನ್ನ ಕೆಲಸದಲ್ಲಿ ಸಂಪೂರ್ಣ ಶ್ರದ್ಧೆಯಿರುವ ಸಾಮಾನ್ಯನ ಒಂದು ಸಣ್ಣ ಕಾರ್ಯವೂ ಜಗತ್ತಿನ ಬದಲಾವಣೆಗೆ ಪ್ರೇರಕವಾಗಬಹುದು'. 'ಈ ಜಗತ್ತಿನಲ್ಲಿ ಶ್ರೇಷ್ಠವಾದುದೆಲ್ಲವೂ ಮನುಷ್ಯ ಪ್ರಯತ್ನವಿಲ್ಲದೆ ಸಂಭವಿಸಿಲ್ಲ. ದೇವರು ಯಾರನ್ನು ಯಾವಾಗ ಯಾವ ಕೆಲಸಕ್ಕೆ ನಿಮಿತ್ತ ಮಾಡಿಕೊಳ್ಳುವನೋ ಯಾರಿಗೆ ಗೊತ್ತು? ಅದಕ್ಕಾಗಿ ಪ್ರಾರ್ಥಿಸಿ ಫಲವಿಲ್ಲ. ಆದರೆ ಅವನ ಸೇವೆಗೆ ನಾವೆಲ್ಲ ನಿತ್ಯ ಕಟಿಬದ್ಧರಾಗಿ ನಿಂತಿರಬೇಕು. ಆದ್ದರಿಂದ ನನ್ನೊಬ್ಬನನ್ನೇ ನಂಬಿ ಕೂರಬೇಡಿ'.

ಗಾಂಧಿ ಆ ಮೂಲೆಯ ಪರ್ವತ ಪ್ರದೇಶದಲ್ಲಿ ಪ್ರೀತಿಯ, ಅಹಿಂಸೆಯ ಸಂದೇಶ ಸಾರುತ್ತಿರುವ ಹೊತ್ತಿನಲ್ಲೇ ಯೂರೋಪಿನಲ್ಲಿ ಯುದ್ಧದ ಕಾರ್ಮೋಡಗಳು ಆವರಿಸುತ್ತಿದ್ದವು. ಆ ಖಂಡದ ಪ್ರವಾಸದಲ್ಲಿದ್ದ ನೆಹರೂ ಹಿಟ್ಲರ್‌ನ ತಲೆಹೋಕತನ ಜಗತ್ತಿಗೇ ಕಂಟಕಪ್ರಾಯವಾಗುವ ಅಪಾಯದ ಬಗ್ಗೆಯೂ, ಬ್ರಿಟಿಷ್ ಸಾಮ್ರಾಜ್ಯದ ಧೋರಣೆ ಅನುಮಾನಾಸ್ಪದವಾಗಿದ್ದು ಇದು ಬ್ರಿಟಿಷ್ ಸಾಮ್ರಾಜ್ಯದ ಅವನತಿಗೆ ಕಾರಣವಾಗಬಹುದೆಂದೂ ಪತ್ರ ಬರೆದು, 'ಮುಂದಿನ ದಿನಗಳಲ್ಲಿ ನಾವು ಕೆಲವು ಮುಖ್ಯ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗಬಹುದು' ಎಂದು ತಿಳಿಸಿದ್ದರು.

ಯಹೂದಿಗಳಿಗೆ ಗಾಂಧಿ ಹೇಳಿದ ಸತ್ಯಾಗ್ರಹದ ಪಾಠ

ಆರ್ಯ ಜನಾಂಗದ ಸರ್ವಶ್ರೇಷ್ಠತೆಯನ್ನು ಪ್ರತಿಷ್ಠಾಪಿಸಲು ಪಣತೊಟ್ಟಿದ್ದ ಜರ್ಮನಿಯ ಛಾನ್ಸಲರ್ ಅಡಾಲ್ಫ್ ಹಿಟ್ಲರ್ ಜರ್ಮನ್ ಮಹಾಸಾಮ್ರಾಜ್ಯದ ನಿರ್ಮಾಣಕ್ಕಾಗಿ ಅಕ್ಕಪಕ್ಕದ ದೇಶಗಳ ಮೇಲೆ ಆಕ್ರಮಣ ಮಾಡತೊಡಗಿದ್ದ. ಮೊದಲು ಅವನು ಆಕ್ರಮಣ ಮಾಡಿದ್ದು ಜೆಕೊಸ್ಲೊವಾಕಿಯಾದ ಮೇಲೆ, ೧೯೩೯ರ ಮಾರ್ಚ್‌ನಲ್ಲಿ.

ಆ ದೇಶದಲ್ಲಿದ್ದ ಜರ್ಮನರಿಗೆ ಅಲ್ಲಿನ ಸರ್ಕಾರ ಕಿರುಕುಳ ಕೊಡುತ್ತಿದೆ ಎಂಬ ನೆಪವೊಡ್ಡಿ ಅವನು ಆಕ್ರಮಣ ಮಾಡಿದ್ದ. ಬ್ರಿಟನ್ ತನ್ನ ಹಿತರಕ್ಷಣೆಯ ದೃಷ್ಟಿಯಿಂದ ಜರ್ಮನಿಯೊಂದಿಗೆ ಮಾಡಿಕೊಂಡಿದ್ದ (ಮ್ಯುನಿಚ್) ಒಪ್ಪಂದದಿಂದಾಗಿ ಅದು ಹಿಟ್ಲರನ ಈ ಆಕ್ರಮಣವನ್ನು ಸಹಿಸುತ್ತಿದೆ ಮತ್ತು ಇದು ಬ್ರಿಟಿಷ್ ಸಾಮ್ರಾಜ್ಯಕ್ಕೆ ಮುಳುವಾಗಲಿದೆ ಎಂದು ಅಭಿಪ್ರಾಯಪಟ್ಟಿದ್ದರು. ಇದನ್ನು ತಿಳಿದ ಗಾಂಧಿ, ಜೆಕ್ ಜನರಿಗೆ ಒಂದು ಸಂದೇಶ ಕಳಿಸಿ ಹಿಟ್ಲರನ ಸೇನೆಯ ವಿರುದ್ಧ ಸತ್ಯಾಗ್ರಹ ಆರಂಭಿಸುವಂತೆ ಕರೆಕೊಟ್ಟರು. ಇದಕ್ಕೆ ಸಾರ್ವಜನಿಕರಿಂದ ಉದಾರವಾದಿ ಮೌಲ್ಯಗಳ ಬ್ರಿಟಿಷ್ ಪ್ರಭುತ್ವದ ವಿರುದ್ಧ ಸತ್ಯಾಗ್ರಹ ಯಶಸ್ವಿಯಾಗಬಹುದೇ ಹೊರತು, ದಯೆ ಎಂಬುದೇ ಇಲ್ಲದ ಹಿಟ್ಲರನ ವಿರುದ್ಧ ಆಗಲಾರದು ಎಂಬ ಪ್ರತಿಕ್ರಿಯೆ ವ್ಯಕ್ತವಾದಾಗ ಅವರು, ಸತ್ಯಾಗ್ರಹಿಗೆ ತನ್ನ ಘನತೆಯ ರಕ್ಷಣೆಯೇ ಮುಖ್ಯವೇ ಹೊರತು ಎದುರಾಳಿ ಯಾರೆಂಬುದಲ್ಲವೆಂದು ಹೇಳುತ್ತ ಸತ್ಯಾಗ್ರಹ ಹೇಡಿಯ ಅಸ್ತ್ರವಾಗಿರದೆ, ಏನೇ ಎದುರಾದರೂ ಎದುರಿಸಬಲ್ಲ ಮಹಾದಿಟ್ಟತನದ ಅಸ್ತ್ರವಾಗಿದೆ ಎಂದು ವಿವರಿಸುವ ಪ್ರಯತ್ನ ಮಾಡಿದರು.

ಗಾಂಧಿಯವರ ಈ ವಿವರಣೆ, ಜೆಕ್ ಜನರ ಕಿವಿಗೆ ಬಿತ್ತೋ ಇಲ್ಲವೋ ಎಂಬುದು ಮಾತ್ರ ತಿಳಿಯದು. ಆದರೆ ಜರ್ಮನಿಯಲ್ಲಿ ಹಿಟ್ಲರನ ರಾಕ್ಷಸ ಹಿಂಸೆ ತಾಳಲಾರದೆ ಪ್ಯಾಲೆಸ್ತೇನ್‌ನತ್ತ ಹೊರಟ ಯೆಹೂದಿಗಳಿಗೆ ನೀಡಿದ ಕರೆಗೆ ಮಾತ್ರ ಹಲವು ಯಹೂದಿಗಳಿಂದ ಆಘಾತದ, ಕ್ರೋಧದ ಪ್ರತಿಕ್ರಿಯೆಗಳು ಬಂದವು. 'ಹರಿಜನ್'ನ ೧೯೩೮ರ ನವೆಂಬರ್ ೨೬ರ ಸಂಚಿಕೆಯಲ್ಲಿ ಯೆಹೂದಿಗಳನ್ನು ಕ್ರೈಸ್ತ ಸಮುದಾಯದ ಅಸ್ಪೃಶ್ಯರು ಎಂದು ಕರೆದಿದ್ದ ಗಾಂಧಿ, ಅವರು ಹಿಟ್ಲರನ ಹಿಂಸಾಚಾರದ ವಿರುದ್ಧ ಸತ್ಯಾಗ್ರಹ ಬಳಸಬೇಕೆಂದು ಕರೆಕೊಟ್ಟಿದ್ದರಲ್ಲದೆ, ಅವರು ತಾವು ಹುಟ್ಟಿ ಬೆಳೆದ ದೇಶಗಳನ್ನೇ ತಾಯ್ನಾಡೆಂದು ಬಗೆದು, ಅರಬ್ಬರ ನಾಡಾದ ಪ್ಯಾಲೆಸ್ತೇನನ್ನು ವಶಪಡಿಸಿಕೊಳ್ಳುವ ಪ್ರಯತ್ನ ಮಾಡಬಾರದು ಎಂದು ಸೂಚಿಸಿದ್ದರು. ಆದರೆ ಸ್ವತಃ ಗಾಂಧಿಯ ಅಭಿಮಾನಿಯಾಗಿದ್ದ ಮಾರ್ಟಿನ್ ಬ್ಯೂಬರ್ ಮತ್ತು ಜೆ.ಎಲ್ ಮ್ಯಾಗ್ನೆಸ್ ಮುಂತಾದ ಯೆಹೂದಿ ಲೇಖಕ-ಬುದ್ಧಿಜೀವಿಗಳು ಗಾಂಧಿಯವರ ಸಲಹೆಯನ್ನು ವಿಷಾದನೀಯ ಎಂದು ವರ್ಣಿಸುತ್ತಾ, ಭಾರತದ ಜನ ಬ್ರಿಟಿಷ್ ವಸಹಾತುದಾರರಿಂದ ಅನುಭವಿಸುತ್ತಿರುವ ಹಿಂಸೆ, ಯೂರೋಪ್‌ನಲ್ಲಿ ಯೆಹೂದಿಗಳು ಅನುಭವಿಸುತ್ತಿರುವ ಪ್ರಭುತ್ವ ಪ್ರಾಯೋಜಿತವಾದ ಸಾಮೂಹಿಕ ಹತ್ಯೆ, ಕಿರುಕುಳ, ಹಿಂಸೆ ಮತ್ತು ದಮನದ ಪೂರ್ವಸಿದ್ಧ ಕಾರ್ಯಕ್ರಮಗಳ ಮುಂದೆ ಏನೇನೂ ಅಲ್ಲವೆಂದು ಹೇಳುತ್ತಾ, ಇಂತಹ ಸನ್ನಿವೇಶದಲ್ಲಿ ಸತ್ಯಾಗ್ರಹವನ್ನು ಪರಿಹಾರವಾಗಿ ಸೂಚಿಸುವುದು ಒಂದು ಕ್ರೂರ ವ್ಯಂಗ್ಯ ಮಾತ್ರವಾಗುತ್ತದೆ ಎಂದು ತಿಳಿಸಿದರು. ಅಲ್ಲದೆ ಪ್ಯಾಲೆಸ್ತೇನ್ ಎಂದೂ ಪೂರ್ಣ ಅರಬ್ ನಾಡಾಗಿರದೆ ದ್ವಿಜನಾಂಗೀಯ ರಾಷ್ಟ್ರವಾಗಿದೆ ಎಂಬುದನ್ನು ಗಾಂಧಿಯವರ ಗಮನಕ್ಕೆ ತಂದಿದ್ದರು. ಇದನ್ನು ಗಮನಿಸಿದ ಗಾಂಧಿ, ಸರ್ವಾಧಿಕಾರಿಗಳನ್ನು ಅಹಿಂಸೆಯ ಮೂಲಕ ಎದುರಿಸುವುದು ಹೆಚ್ಚು ಕಷ್ಟಕರ ಎಂಬುದನ್ನು ಒಪ್ಪಿದರಾದರೂ, ಹಿಂಸೆಯ ಮೂಲಕ ಎಂದೂ ಪರಿಹಾರ ಸಿಗುವ ಯಾವ ಭರವಸೆಯೂ ಇಲ್ಲದಿರುವುದರಿಂದ ಪ್ರಯತ್ನಗಳನ್ನು ಮುಂದುವರೆಸಬೇಕು ಎಂದು ಸಲಹೆ ಇತ್ತರು. ಅವರ ಪ್ರಕಾರ ಇಂತಹ

ಪ್ರಯತ್ನಗಳ ಫಲ, ನಮ್ಮ ತಲೆಮಾರಿನಲ್ಲೇ ಕಾಣದೇ ಹೋಗಬಹುದಾದರೂ ಅಂತಿಮವಾಗಿ ಮಾನವತೆಯನ್ನು ಉಳಿಸುವುದು ಅದೇ ಎಂದು ಅಭಿಪ್ರಾಯಪಟ್ಟರು.

ಭಾರತದ ಸಮಸ್ಯೆಗೆ ಹಿಟ್ಲರ್ ಸೂಚಿಸಿದ್ದ ಪರಿಹಾರ

ಹಿಟ್ಲರ್, ಮ್ಯುನಿಚ್ ಒಪ್ಪಂದದ ಪ್ರಕ್ರಿಯೆಯ ಸಮಯದಲ್ಲಿ, ಬ್ರಿಟಿಷ್ ಸರ್ಕಾರಕ್ಕೆ ಅದರ ಓರ್ವ ಸಚಿವರ ಮೂಲಕ ನೀಡಿದ್ದ 'ಆ ಗಾಂಧಿಯನ್ನು ಗುಂಡಿಟ್ಟು ಕೊಲ್ಲಿ. ಜೊತೆಗೆ ಒಂದಿಬ್ಬರು ಕಾಂಗ್ರೆಸ್ ನಾಯಕರಿಗೂ ಗುಂಡಿಡಿ. ಅಲ್ಲಿಗೆ ನಿಮ್ಮ ಭಾರತದ ಸಮಸ್ಯೆ ಬಗೆಹರಿಯುತ್ತದೆ' ಎಂಬ ಸಲಹೆ ಗಾಂಧಿಯವರಿಗೆ ಗೊತ್ತಿರಲಿಲ್ಲ. ಅಥವಾ ಗೊತ್ತಿದ್ದರೂ ಅವನ ವಿರುದ್ಧದ ಸತ್ಯಾಗ್ರಹದ ಸಲಹೆಯನ್ನೇನೂ ಅವರು ಬದಲಿಸುತ್ತಿರಲಿಲ್ಲ. ಏಕೆಂದರೆ ಅವರು ಮನುಷ್ಯನ ಅಸ್ತಿತ್ವ ಮೂಲತಃ ಆಧ್ಯಾತ್ಮಿಕ ನೆಲೆಯದ್ದು ಎಂದು ಭಾವಿಸಿದ್ದರು.

ಅದೇನೇ ಇರಲಿ, ಗಾಂಧಿ ಜಗತ್ತಿನಾದ್ಯಂತದ ಹಲವು ಮಿತ್ರರ ಒತ್ತಾಯದ ಮೇರೆಗೆ ೧೯೩೯ರ ಜುಲೈ ೨೩ರಂದು ವಾಯುವ್ಯ ಗಡಿ ಪ್ರಾಂತ್ಯದಿಂದ ಹಿಟ್ಲರ್‌ಗೆ ಒಂದು ಪತ್ರ ಬರೆದಿದ್ದರು. ತಮ್ಮ ಈ ಪತ್ರವನ್ನು ಅವನು ಗಂಭೀರವಾಗಿ ಪರಿಗಣಿಸುವನೋ ಇಲ್ಲವೋ ಎಂಬ ಅಳುಕಿನೊಂದಿಗೇ ಬರೆಯಲಾಗಿದ್ದ ಈ ಪತ್ರದಲ್ಲಿ 'ಮಾನವ ಕುಲಕ್ಕೇ ಕಂಟಕಪ್ರಾಯವಾಗುತ್ತಿರುವ ಸದ್ಯದ ಯುದ್ಧವನ್ನು ನೀವು ಮಾತ್ರ ತಡೆಯಬಲ್ಲವರಾಗಿದ್ದು, ತಡೆಯಲಾಗದಿದ್ದರೆ ಅದಕ್ಕೆ ಬೆಲೆ ತೆರಬೇಕಾದವರು ನೀವೇ ಆಗಿರುತ್ತೀರಲ್ಲವೆ? ಪ್ರಜ್ಞಾಪೂರ್ವಕವಾಗಿ ಸಂಘರ್ಷದ ಹಾದಿಯನ್ನು ತೊರೆದು, ಅದರಲ್ಲಿ ಸಾಕಷ್ಟು ಯಶಸ್ಸನ್ನೂ ಕಂಡಿರುವ ಈ ಯುದ್ಧವಿರೋಧಿ ಶಾಂತಿವಾದಿಯ ಕೋರಿಕೆಯನ್ನು ಮಾನ್ಯ ಮಾಡುವಿರೆಂದು ನಂಬಿರುವೆ' ಎಂಬ ಮುಖ್ಯ ಒಕ್ಕಣೆ ಇತ್ತು. ಆದರೆ ಈ ಪತ್ರವನ್ನು ಮುಟ್ಟುಗೋಲು ಹಾಕಿಕೊಂಡ ಬ್ರಿಟಿಷ್ ಸರ್ಕಾರ ಅದನ್ನು ಕೊನೆಗೂ ಹಿಟ್ಲರ್‌ಗೆ ತಲುಪಿಸಲಿಲ್ಲ.

■

೮೧

ಗಾಂಧಿ ಎದುರಿಸಿದ ಎರಡು ಆಂತರಿಕ ಸವಾಲುಗಳು

ಗಾಂಧಿ ೧೯೩೮-೩೯ ರ ವರ್ಷಗಳಲ್ಲಿ ಜಾಗತಿಕ ಮಟ್ಟದ ರಾಜಕೀಯ ವಿದ್ಯಮಾನಗಳಲ್ಲಿ ಮಗ್ನರಾಗಿರುವ ಹೊತ್ತಿನಲ್ಲೇ, ಅವರು ತಮ್ಮ ನಾಡಿನಲ್ಲೇ ಎರಡು ರಾಜಕೀಯ ಬಿಕ್ಕಟ್ಟುಗಳನ್ನು ಎದುರಿಸುತ್ತಿದ್ದರು. ಒಂದು, ಭಾರತದ ಸ್ವಾತಂತ್ರ್ಯಕ್ಕೆ ಮುನ್ನೆಲೆಯೊಂದನ್ನು ಸೃಷ್ಟಿಸುವ ಅವರ ಪ್ರಯತ್ನದ ಹಾದಿಯಲ್ಲಿ ಎದುರಾದ ಬಿಕ್ಕಟ್ಟಾಗಿದ್ದರೆ, ಇನ್ನೊಂದು, ಕಾಂಗ್ರೆಸ್ ಪಕ್ಷದ ನಾಯಕತ್ವ ತಮ್ಮ ನಿಯಂತ್ರಣ ಮೀರಿ ಹೋಗಲೆತ್ನಿಸಿದಾಗ ಉಂಟಾದ ಬಿಕ್ಕಟ್ಟು. ಅವರು ಹರಿಪುರದ ಕಾಂಗ್ರೆಸ್ ಅಧಿವೇಶನದ ನಿರ್ಣಯಕ್ಕನುಗುಣವಾಗಿಯೇ ಭವಿಷ್ಯದ ಭಾರತದ ಒಕ್ಕೂಟದ ಚೌಕಟ್ಟಿನಲ್ಲಿ ರಾಜಸಂಸ್ಥಾನಗಳನ್ನೂ ಒಳಗೊಳ್ಳುವಂತೆ ಮಾಡಲು, ಆ ಸಂಸ್ಥಾನಗಳಲ್ಲಿ ಪ್ರಜಾಮಂಡಳಿಗಳು ಆರಂಭವಾಗಬೇಕೆಂದು ಕರೆಕೊಟ್ಟಿದ್ದರು. ಇದು ಬ್ರಿಟಿಷ್ ಭಾರತದ ಪ್ರಾಂತ್ಯಗಳಲ್ಲಿ, ೧೯೩೫ರ ಭಾರತದ ಕಾಯಿದೆ ಪ್ರಕಾರ ಚುನಾವಣೆ ನಡೆದು, ಜನರ ಪ್ರಾತಿನಿಧಿಕ ಸರ್ಕಾರಗಳು ಸ್ಥಾಪಿತವಾದ ನಂತರ, ಕೆಲ ಸಂಸ್ಥಾನಗಳಲ್ಲಿ ಜನ, ತಮ್ಮ ಸಂಸ್ಥಾನಗಳಲ್ಲೂ ಪ್ರಾತಿನಿಧಿಕ ಆಡಳಿತ ಬೇಕು ಎಂದು ಆರಂಭಿಸಿದ್ದ ಚಳುವಳಿಗಳಿಗೆ ಅವರು ನೀಡಿದ್ದ ಸ್ಪಂದನೆಯಾಗಿತ್ತು.

ರಾಜಕೋಟೆ ಸಂಸ್ಥಾನದ ಬಿಕ್ಕಟ್ಟು–ಮತ್ತೊಂದು ಉಪವಾಸ

ಮೈಸೂರು, ತಿರುವಾಂಕೂರು ಮತ್ತು ರಾಜಪುತಾಣ ಸಂಸ್ಥಾನಗಳಲ್ಲಿ ಈ ಚಳುವಳಿಗಳನ್ನು ಅಲ್ಲಿನ ಸಂಸ್ಥಾನಾಧೀಶರು ನಿಯಂತ್ರಿಸುವಲ್ಲಿ ಯಶಸ್ವಿಯಾಗಿದ್ದರೆ, ಗಾಂಧಿಯವರ ಮೂಲಸ್ಥಾನವಾದ ರಾಜಕೋಟೆ ಸಂಸ್ಥಾನದಲ್ಲಿ ಆ ಚಳುವಳಿ, ಯು.ಎನ್ ಧೇಬರ್ ಎಂಬ ಯುವ ನಾಯಕನ (ಇವರು ಮುಂದೆ, ೫೦ರ ದಶಕದಲ್ಲಿ ಕಾಂಗ್ರೆಸ್ ಅಧ್ಯಕ್ಷರಾದರು) ನೇತೃತ್ವದಲ್ಲಿ ೧೯೩೮ರ ಸೆಪ್ಟೆಂಬರ್ ಹೊತ್ತಿಗೆ ಬಿರುಸಾಗಿ ನಡೆದು, ಸಂಸ್ಥಾನಗಳ ಬಗ್ಗೆ ಮೃದು ಧೋರಣೆಯನ್ನೇ ತಾಳಿದ್ದ ಪಟೇಲರ ಮಧ್ಯಸ್ಥಿಕೆಯಿಂದಾಗಿ, ಅಲ್ಲಿನ ದೊರೆ ಧರ್ಮೇಂದ್ರ ಸಿನ್ಹ ಮತ್ತು ಜನತಾ ಚಳುವಳಿಯ ನಡುವೆ ಒಂದು ಒಪ್ಪಂದವೇರ್ಪಟ್ಟಿತ್ತು. ಆದರೆ ಸಂಸ್ಥಾನದ ದಿವಾನ ವೀರವಾಲನ ಪಿತೂರಿಯ ಪರಿಣಾಮವಾಗಿ ಕೆಲವೇ ದಿನಗಳಲ್ಲಿ ಈ ಒಪ್ಪಂದವನ್ನು ದೊರೆ ಅಮಾನ್ಯ ಮಾಡಿದಾಗ, ಗಾಂಧಿ ಮಧ್ಯೆ ಪ್ರವೇಶಿಸಬೇಕಾಯಿತು. ಇದಕ್ಕೆ ಮುಖ್ಯವಾಗಿ ಎರಡು ಕಾರಣಗಳಿದ್ದವು. ಒಂದು, ಐದುನೂರಕ್ಕೂ ಹೆಚ್ಚಿದ್ದ ಮತ್ತು ಬ್ರಿಟಿಷ್ ಸರ್ಕಾರದ ನೇರ ಅಧೀನದಲ್ಲಿದ್ದ ಭಾರತದ ಮೂರನೇ ಒಂದರಷ್ಟು ಭಾಗವನ್ನು ಆಕ್ರಮಿಸಿಕೊಂಡಿದ್ದ ಈ ಸಂಸ್ಥಾನಗಳ ರಾಜರು, ಬಿಕಾನೇರ್‌ನ ದೊರೆಯ ಅಧ್ಯಕ್ಷತೆಯಲ್ಲಿ, ೧೯೩೯ರ ಜನವರಿಯಲ್ಲಿ ಸಭೆ ಸೇರಿ, ಜನಾಡಳಿತ ಬೇಡಿಕೆಯ ಚಳುವಳಿಗಳನ್ನು ಬಗ್ಗುಬಡಿಯಲು

ಸಂಯುಕ್ತ ಪೊಲೀಸ್ ದಳವೊಂದನ್ನು ರಚಿಸುವ ನಿರ್ಧಾರ ಕೈಗೊಂಡಿದ್ದರು. ಇದು ಗಾಂಧಿಯವರಿಗೆ ಬಹು ಅಪಾಯಕಾರಿಯಾಗಿ ಕಂಡಿತ್ತು. ಎರಡನೆಯ ಕಾರಣವೆಂದರೆ ರಾಜಕೋಟೆ ಚಳುವಳಿಯಲ್ಲಿ ಪಟೇಲರ ಮಗಳು, ಮಣಿಬೆನ್ ಪಟೇಲ್ ಭಾಗವಹಿಸಿ ಸೆರೆಮನೆಗೆ ಸೇರಿದ್ದು, ಅವರಿಗೆ ಬೆಂಬಲ ನೀಡಲು ಮೃದುಲಾ ಸಾರಭಾಯಿಯವರೊಂದಿಗೆ ದೆಹಲಿಯಿಂದ ಬಂದಿದ್ದ ಕಸ್ತೂರಬಾ ಅವರನ್ನು ಸೆರೆಮನೆಗೆ ದೂಡಲಾಗಿತ್ತು.

ಈ ಬಿಕ್ಕಟ್ಟನ್ನು ಪರಿಹರಿಸಲು ತಾವು ನಡೆಸಿದ ಮಾತುಕತೆ ಫಲಪ್ರದವಾಗದಾಗ ಗಾಂಧಿ, ದೊರೆಯ ಹಠಮಾರಿತನದ ವಿರುದ್ಧ, ೧೯೩೯ರ ಮಾರ್ಚ್ ೩ರಂದು ಅನಿರ್ದಿಷ್ಟ ಕಾಲದ ಉಪವಾಸ ಆರಂಭಿಸಿದರು. ಕೂಡಲೇ ಕಸ್ತೂರಬಾ, ಮಣಿಬೆನ್ ಮತ್ತು ಮೃದುಲಾರ ಬಿಡುಗಡೆಯಾಯಿತು. ಈ ಸಂದರ್ಭದಲ್ಲಿ ಗಾಂಧಿ, ತಾವು ರಾಜಕೋಟೆಯಲ್ಲಿದ್ದ ಕಾರಣದಿಂದಲೋ ಏನೋ, ಅವರು ತಮ್ಮ ತಾಯಿ, ಕಷ್ಟ ಅಥವಾ ಸಂದಿಗ್ಧ ಸಂದರ್ಭಗಳಲ್ಲಿ ಉಪವಾಸ ಮಾಡುತ್ತಿದ್ದ ತಮ್ಮ ಬಾಲ್ಯದ ನೆನಪುಗಳನ್ನು ಪತ್ರಕರ್ತರೊಂದಿಗೆ ಹಂಚಿಕೊಂಡರು. ಉಪವಾಸ ನಾಲ್ಕನೇ ದಿನ ಮುಟ್ಟಿದಂತೆ ಗಾಬರಿಯಾದ ವೈಸ್‌ರಾಯ್ ಲಿನ್‌ಲಿತ್‌ಗೋ ಮಧ್ಯಪ್ರವೇಶಿಸಿ, ಬಿಕ್ಕಟ್ಟಿನ ಪರಿಹಾರದ ಹೊಣೆಯನ್ನು ದೇಶದ ಪ್ರಧಾನ ನ್ಯಾಯಾಧೀಶರಾದ ಸರ್ ಮಾರಿಸ್ ಗೇಯರ್ ಅವರಿಗೆ ಒಪ್ಪಿಸುವ ಮೂಲಕ, ಗಾಂಧಿ ಉಪವಾಸ ನಿಲ್ಲಿಸುವಂತೆ ನೋಡಿಕೊಂಡರು. ಈ ಬಿಕ್ಕಟ್ಟಿನಲ್ಲಿ ವೈಸ್‌ರಾಯ್ ಮಧ್ಯಪ್ರವೇಶಿಸಲೂ ಒಂದು ಮುಖ್ಯ ಕಾರಣವಿತ್ತು. ಅದು ಹಿಟ್ಲರ್‌ನ ಮೇಲೆ ನಂಬಿಕೆ ಕಳೆದುಕೊಳ್ಳಲಾರಂಭಿಸಿದ್ದ ಬ್ರಿಟಿಷ್ ಸಾಮ್ರಾಜ್ಯ, ಜರ್ಮನಿಯನ್ನು ತನ್ನ ಶತ್ರು ದೇಶವೆಂದು ಘೋಷಿಸಿ ಯುದ್ಧಕ್ಕೆ ಸನ್ನದ್ಧವಾಗತೊಡಗಿತ್ತು. ಈ ಸಂಬಂಧವಾಗಿ ಬ್ರಿಟಿಷ್ ಸಾಮ್ರಾಜ್ಯಕ್ಕೆ ಭಾರತದ ಬೆಂಬಲ ಬೇಕಿದ್ದು ಅದಕ್ಕಾಗಿ ಗಾಂಧಿಯವರನ್ನು ರಕ್ಷಿಸಿಕೊಂಡು ಓಲೈಸಬೇಕಿತ್ತು. ಇಲ್ಲಿ ದಾಖಲಿಸಬೇಕಾದ ಇನ್ನೊಂದು ಗಮನಾರ್ಹ ಸಂಗತಿ ಎಂದರೆ, ಗಾಂಧಿ, ಈ ಸಂದರ್ಭದ ತಮ್ಮ ಉಪವಾಸ, ಒತ್ತಡ ಹೇರುವ ಉದ್ದೇಶದಿಂದ ಕೂಡಿದ್ದರಿಂದ ಅದು ತಮ್ಮಿಂದಾಗಿರುವ ನೈತಿಕ ಲೋಪವೆಂದು ಹೇಳಿದ್ದು.

ಅದೇ ವೇಳೆಯಲ್ಲಿ ರಾಜಕೋಟೆಯ ಜನತಾ ಪ್ರಾತಿನಿಧ್ಯ ಸಂಬಂಧಿತ ಚಳುವಳಿಯ ವಿವಾದಿತ ಒಪ್ಪಂದ, ಹಿಂದೂ ಮೇಲ್ಜಾತಿಗಳ ಹಿತಾಸಕ್ತಿ ಕಾಪಾಡುವ ಒಪ್ಪಂದ ಎಂಬ ಪ್ರಚಾರ ಆರಂಭವಾಗಿ, ರಾಜಪರಿವಾರದ ದಳವಾಯಿಗಳ ಜೊತೆ ಮುಸ್ಲಿಮರೂ, ಅಂಬೇಡ್ಕರ್ ಬೆಂಬಲಿತ ನಿಮ್ನವರ್ಗದವರೂ ಸೇರಿ ದೊಂಬಿ ಆರಂಭಿಸಿದ್ದರು. ಈ ಸಂದರ್ಭದಲ್ಲಿ ಅಂಬೇಡ್ಕರ್ ಕೂಡ ರಾಜಕೋಟೆಗೆ ಬಂದು 'ಬದಲಾಗದ ಗಾಂಧಿ' ವಿರುದ್ಧ ಕಿಡಿ ಕಾರಿ ಹೋಗಿದ್ದರು. ಈ ಮಧ್ಯೆ ದಳವಾಯಿಗಳ ಪಡೆಯಿಂದ ಗಾಂಧಿಯವರ ಮೇಲೆ ಹಲ್ಲೆಯ ಪ್ರಯತ್ನವೂ ನಡೆದು, ಗಾಂಧಿ ಶಾಂತ ಚಿತ್ತದಿಂದ ಈ ಹಲ್ಲೆಕೋರರನ್ನು ಎದುರಿಸಿ, ಅವರಿಂದ ಪವಾಡಸದೃಶ ರೀತಿಯಲ್ಲಿ ಪಾರಾಗಿದ್ದರು. ಇದಾದ ನಂತರ ಬಿಕ್ಕಟ್ಟು, ಜಾತಿ ಮತ್ತು ಕೋಮು ಬಣ್ಣ ಪಡೆಯುತ್ತಿರುವುದನ್ನು ಗಮನಿಸಿದ ಅವರು, ಈ ಸಮಸ್ಯೆಯನ್ನು ಸಂಸ್ಥಾನದೊಳಗೇ ಸೌಹಾರ್ದಯುತವಾಗಿ ಪರಿಹರಿಸಿಕೊಳ್ಳಲು ಸೂಚಿಸಿ, ಅದರಿಂದ ತಾವಾಗಿ ದೂರವಾದರು. ಅವರೀಗ ಈ

ಯುದ್ಧ ಸಮಯದಲ್ಲಿ, ತಾವು ಬಲಿಷ್ಠ ಸ್ಥಾನದಲ್ಲಿದ್ದು, ಬ್ರಿಟಿಷ್ ಸರ್ಕಾರದೊಡನೆಯ ಸಂಧಾನಗಳಲ್ಲಿ, ಕಾಂಗ್ರೆಸ್ ಪರವಾಗಿ ತಮಗೆ ಸಮರ್ಪಕ ಅನಿಸಿದ್ದನ್ನು ಆಗ್ರಹಿಸಲು ಅಗತ್ಯವಾದ ವಾತಾವರಣ ಕಾಂಗ್ರೆಸ್ ಪಕ್ಷದಲ್ಲಿ ನಿರೀಕ್ಷಿಸಿದ್ದರು. ಆದರೆ ಅಲ್ಲಿ ಪರಿಸ್ಥಿತಿ ಹೀಗೆ ಇರಲಿಲ್ಲ.

ಅಧ್ಯಕ್ಷತೆಯ ಎರಡನೆಯ ಅವಧಿ ಬಯಸಿದ ಸುಭಾಷರು

ರಾಜಕೋಟೆ ಬಿಕ್ಕಟ್ಟಿನ ಪರಿಹಾರದಲ್ಲಿ ತೊಡಗಿಕೊಂಡಿದ್ದುದರಿಂದ, ಗಾಂಧಿ ಕಾಂಗ್ರೆಸ್ ಪಕ್ಷದ ರಾಜಕಾರಣ, ತಮ್ಮ ಕಣ್ಣೋಟವನ್ನು ಮೀರಿ ಹೋಗುತ್ತಿರುವುದನ್ನು ಗಮನಿಸಿ ಕಳವಳಗೊಂಡಿದ್ದರು. ಹರಿಪುರ ಅಧಿವೇಶನದಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ಸುಭಾಷರು, ೧೯೩೮ರ ಅಂತ್ಯದ ವೇಳೆಗೆ ತಾವು ಇನ್ನೂ ಒಂದು ವರ್ಷ ಅಧ್ಯಕ್ಷರಾಗಿ ಮುಂದುವರೆಯುವ ಬಯಕೆ ವ್ಯಕ್ತಪಡಿಸಿದ್ದರು. ಜೊತೆಗೆ ಎರಡನೇ ಅವಧಿಗೆ ಅಂದಿನ ರಾಜಕಾರಣದ ನಿರ್ಣಾಯಕವಾದ ಸಂದರ್ಭದಲ್ಲಿ, ತಮಗೆ ಹೆಚ್ಚಿನ ಕಾರ್ಯಕಾರಿ ಅಧಿಕಾರ ಬೇಕೆಂದು ಕೇಳಿದ್ದರು. ಅವರು ಪೂರ್ಣ ಸ್ವರಾಜ್ಯದ ಬೇಡಿಕೆಗೆ ಸಂಬಂಧಿಸಿದಂತೆ ಬ್ರಿಟಿಷ್ ಸರ್ಕಾರದೊಡನೆಯ ಮಾತುಕತೆಯಲ್ಲಿ ಇನ್ನೂ ಹೆಚ್ಚು ಅಧಿಕಾರಯುತವಾಗಿ ಭಾಗವಹಿಸುವ ಇಚ್ಛೆ ಹೊಂದಿದ್ದರು. ಹಿಂದೊಮ್ಮೆ ಅವರು ಇಂತಹ ಮಾತುಕತೆಯಲ್ಲಿ ಇನ್ನೂ ಹೆಚ್ಚು ಆಕ್ರಮಣಕಾರಿಯಾಗಿರಬೇಕೆಂದು ಗಾಂಧಿಯವರಿಗೆ ಸಲಹೆ ಮಾಡಿದ್ದರು. ಮ್ಯೂನಿಚ್ ಒಪ್ಪಂದದ ಮೂಲಕ ಜರ್ಮನಿ ಮತ್ತು ಇಟಲಿಗಳಿಗೆ ಮಣಿದು, ಜಾಗತಿಕವಾಗಿ ದುರ್ಬಲವಾಗಿದ್ದ ಬ್ರಿಟನ್‌ನ ಮೇಲೆ ಹೆಚ್ಚಿನ ಒತ್ತಡ ಹೇರಿ, ಭಾರತ ಪೂರ್ಣ ಸ್ವಯಮಾಡಳಿತದ ಅಧಿಕಾರ ಪಡೆಯುವ ಯತ್ನ ಮಾಡಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಈಗ ಎರಡನೇ ಅವಧಿಯ ತಮ್ಮ ಬಯಕೆಗೆ ಬೆಂಬಲ ನೀಡಬೇಕೆಂದು ಗಾಂಧಿಯವರನ್ನು ಕೋರಿದ್ದರು. ಸುಭಾಷರು ಪಕ್ಷದ ಎಡ ಮತ್ತು ಯುವ ವರ್ಗದ ನಡುವೆ ಜನಪ್ರಿಯರಾಗಿದ್ದರೂ ಪಕ್ಷದ ಒಂದು (ಹಿರಿಯರ) ವರ್ಗಕ್ಕೆ ಅವರ ಬಗ್ಗೆ ಒಲವಿರಲಿಲ್ಲ ಎಂಬುದು ಗಾಂಧಿಯವರಿಗೆ ಗೊತ್ತಿತ್ತು. ಜೊತೆಗೆ ಕಾಂಗ್ರೆಸ್‌ನಲ್ಲಿ ಅನಿರೀಕ್ಷಿತ ಅಥವಾ ಅನಿವಾರ್ಯ ಸಂದರ್ಭಗಳ ಹೊರತಾಗಿ ಯಾವ ಅಧ್ಯಕ್ಷರಿಗೂ ಎರಡನೇ ಅವಧಿ ದೊರೆತಿರಲಿಲ್ಲ. ಹೀಗಾಗಿ ಸುಭಾಷರಿಗೆ ಎರಡನೇ ಅವಧಿ ನೀಡುವುದು ಗಾಂಧಿಯವರ ಮನಸ್ಸಿಗೆ ಒಪ್ಪಿಗೆಯಾಗಲಿಲ್ಲ. ಸುಭಾಷರು ಸ್ಪರ್ಧೆಗೆ ತಯಾರಾದರು.

ಸುಭಾಷರ ಜರ್ಮನಿ ಸಂಪರ್ಕ–ಆತಂಕಗೊಂಡ ಗಾಂಧಿ

ಇದಕ್ಕೆ ಇನ್ನೂ ಕೆಲವು ಸೂಕ್ಷ್ಮ ಕಾರಣಗಳಿದ್ದವು. ಸುಭಾಷರು ಕಲ್ಕತ್ತಾದ ಜರ್ಮನಿಯ ರಾಯಭಾರ ಕಛೇರಿಯೊಂದಿಗೆ ಸಂಪರ್ಕದಲ್ಲಿದ್ದಾರೆ ಎಂಬ ಗುಪ್ತಚರ ಇಲಾಖೆಯ ಮಾಹಿತಿಯೊಂದು, ಬಾಂಬೆ ಸರ್ಕಾರದ ಕಡೆಯಿಂದ ಗಾಂಧಿಯವರಿಗೆ ತಲುಪಿತ್ತು. ಜೊತೆಗೆ ಸುಭಾಷರು ಮುಸೊಲಿನಿಯ ಅಭಿಮಾನಿಯಾಗಿದ್ದರು ಎಂಬುದು ಎಲ್ಲರಿಗೂ ಗೊತ್ತಿದ್ದ ವಿಷಯವಾಗಿತ್ತು. ಹಿಟ್ಲರನ ಜರ್ಮನಿ ಮತ್ತು ಇಟಲಿಯ ಮುಸೊಲಿನಿ, ಜಗತ್ತಿನ ಮತ್ತು ಅಹಿಂಸಾ ತತ್ವದ ಪರಮ ಜೋಡಿ ಶತ್ರುಗಳಾಗಿ ಪರಿಣಮಿಸಿದ್ದಾರೆ ಎಂಬ ಅಭಿಪ್ರಾಯಕ್ಕೆ ಬಂದಿದ್ದ ಗಾಂಧಿಗೆ ಇದರಿಂದ ಆತಂಕ

ಉಂಟಾಗಿತ್ತು. ಅವರಿಗೆ ಬೋಸ್‌ರನ್ನು ಎರಡನೇ ಅವಧಿಗೆ ಬೆಂಬಲಿಸದಿರಲು ಇನ್ನೊಂದು ಕಾರಣವೂ ಇತ್ತು. ಜಿನ್ನಾ, ಮುಸ್ಲಿಂ ಸಮುದಾಯದ ನಡುವೆ ಹೆಚ್ಚೆಚ್ಚು ಜನಪ್ರಿಯರಾಗುತ್ತಾ ಆ ಸಮುದಾಯವನ್ನು ಕಾಂಗ್ರೆಸ್‌ನಿಂದ ದೂರ ಒಯ್ಯುತ್ತಿದ್ದ ನಷ್ಟವನ್ನು ಸರಿದೂಗಿಸಲು ಅಬುಲ್ ಕಲಾಂ ಆಜ಼ಾದರನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮಾಡಬೇಕೆಂಬುದು ಅವರ ಆಲೋಚನೆಯಾಗಿತ್ತು. ಆದರೆ ಗಾಂಧಿ–ಪಟೇಲರ ಕೋರಿಕೆಯನ್ನು ಮೊದಲು ಒಪ್ಪಿ ನಾಮಪತ್ರ ಸಲ್ಲಿಸಿದ್ದ ಆಜ಼ಾದರು, ಸುಭಾಷರ ಜನಪ್ರಿಯತೆಯನ್ನು ಕಂಡು ಚುನಾವಣಾ ಪ್ರಕ್ರಿಯೆಯ ಕೊನೆಯ ಹಂತದಲ್ಲಿ ನಾಮಪತ್ರ ವಾಪಸ್ ತೆಗೆದುಕೊಂಡರು.

ಸುಭಾಷರ ಗೆಲುವು–ಇದು ತಮ್ಮ ಸೋಲು ಎಂದ ಗಾಂಧಿ

ಆಗ ಬೋಸರ ವಿರುದ್ಧ ಸ್ಪರ್ಧೆಯಲ್ಲಿದ್ದ ಅಭ್ಯರ್ಥಿಯೆಂದರೆ, ಆಂಧ್ರ ಕಾಂಗ್ರೆಸ್ ಸಮಿತಿಯಿಂದ ನಿಲ್ಲಿಸಲ್ಪಟ್ಟಿದ್ದ ಡಾ. ಪಟ್ಟಾಭಿ ಸೀತಾರಾಮಯ್ಯ ಎಂಬ ಅಷ್ಟೇನೂ ಪರಿಚಿತವಲ್ಲದ ವ್ಯಕ್ತಿ. ಅವರು ನಾಮಪತ್ರ ವಾಪಸ್ ತೆಗೆದುಕೊಳ್ಳದಂತೆ ಅವರ ಮನವೊಲಿಸುವಂತೆ ಗಾಂಧಿ, ಪಟೇಲ್–ಪ್ರಸಾದರಿಗೆ ಹೇಳಿದರು. ಸೀತಾರಾಮಯ್ಯ ಸ್ಪರ್ಧೆಯಲ್ಲಿ ಉಳಿದರು. ಚುನಾವಣೆಯಲ್ಲಿ ಯೂರೋಪಿನ ಸದ್ಯದ ರಾಜಕಾರಣದ ವಿಷಯದಲ್ಲಿ, ಬೋಸ್‌ರ ದೃಷ್ಟಿಕೋನಕ್ಕೆ ವಿರುದ್ಧ ನಿಲುವು ತಳೆದಿದ್ದ ನೆಹರು ಮತ್ತವರ ಬೆಂಬಲಿಗ ಸಮಾಜವಾದಿ ಗುಂಪು ತಟಸ್ಥವಾಗಲು ನಿರ್ಧರಿಸಿತು. ಬೋಸ್ ಅವರು ಕಾಂಗ್ರೆಸ್‌ನ ಹಿರಿಯರ ಗುಂಪು ಪೂರ್ಣ ಸ್ವರಾಜ್ಯದ ವಿಷಯದಲ್ಲಿ ಬ್ರಿಟಿಷ್ ಪ್ರಭುತ್ವದೊಂದಿಗೆ ರಾಜಿಗೆ ಸಿದ್ಧವಾಗಿದೆ ಎಂದು ಆರೋಪ ಮಾಡುತ್ತಾ ಮತ ಕೇಳಿದರು. ಈ ಬಗ್ಗೆ ಪಟೇಲ್–ಪ್ರಸಾದ್–ರಾಜಾಜಿ ಮುಂತಾದವರು ತಮ್ಮ ಗಾಬರಿ ವ್ಯಕ್ತಪಡಿಸಿದರು. ಚುನಾವಣೆ ನಡೆದಾಗ ಗಾಂಧಿ, ಯಾರ ಪರವಾಗಿಯೂ ಮತ ಯಾಚಿಸದೆ ದೂರ ಉಳಿದರು. ೧೯೩೯ ರ ಜನವರಿ ೨೯ರಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರು ಭಾಗವಹಿಸಿದ್ದ ಚುನಾವಣೆ ನಡೆದಾಗ, ಅವರು ದೂರದ ಬಾರ್ಡೋಲಿಯಲ್ಲಿದ್ದರು. ಫಲಿತಾಂಶ ಪ್ರಕಟವಾದಾಗ ನಿಕಟ ಸ್ಪರ್ಧೆಯಲ್ಲಿ ಅಲ್ಪ ಅಂತರದಿಂದ ಸುಭಾಷ್ ಗೆದ್ದಿದ್ದರು.

ಸುಭಾಷರಿಗೆ ಶುಭ ಹಾರೈಸಿದ ಗಾಂಧಿ, ಇದು ಪಟ್ಟಾಭಿಯವರ ಸೋಲಲ್ಲ; ತಮ್ಮ ಸೋಲಷ್ಟೆ ಎಂಬ ಹೇಳಿಕೆ ನೀಡಿದರಲ್ಲದೆ ಸುಭಾಷರು ತಮಗೆ ಅನುಕೂಲವಾದಂತಹ ಕಾರ್ಯಕಾರಿ ಸಮಿತಿಯನ್ನು ರಚಿಸಿಕೊಳ್ಳಲು ಸ್ವತಂತ್ರರು ಎಂದು ತಿಳಿಸಿದರು. ಆದರೆ ಬೋಸ್, ಗಾಂಧಿಯವರನ್ನು ಕುರಿತ ತಮ್ಮ ಗೌರವ ಪ್ರಶ್ನಾತೀತವಾಗಿದ್ದು, ತಾವು ಯಾವುದೇ ಗುಂಪಿನ ನಾಯಕ ಅಲ್ಲ ಎಂದು ಘೋಷಿಸಿದರು. ಆದರೆ ಗಾಂಧಿ ಅನುಯಾಯಿಗಳಿಗೆ ಇದು ನುಂಗಲಾರದ ತುತ್ತೇ ಆಗಿತ್ತು. ಹಾಗಾಗಿ ಪರಸ್ಪರ ಬಿಗುವು ಮುಂದುವರಿಯಿತು.

ಈ ಬಿಗುವು ಸ್ಫೋಟಗೊಂಡದ್ದು, ಮಾರ್ಚ್‌ನಲ್ಲಿ ತಪತಿ ನದಿಯ ದಂಡೆಯಲ್ಲಿದ್ದ ಮಧ್ಯಪ್ರಾಂತ್ಯದ ತ್ರಿಪುರಿಯಲ್ಲಿ ನಡೆದ ಕಾಂಗ್ರೆಸ್ ವಾರ್ಷಿಕ ಅಧಿವೇಶನದಲ್ಲಿ. ಈ ಅಧಿವೇಶನದಲ್ಲಿ ಸಂಯುಕ್ತ ಪ್ರಾಂತ್ಯಗಳ ಮುಖ್ಯಮಂತ್ರಿ ಜಿ.ಬಿ. ಪಂತರು, ಕಾಂಗ್ರೆಸ್

ಅಧ್ಯಕ್ಷರು, ನಿರ್ಣಾಯಕವಾದ ಮುಂದಿನ ದಿನಗಳಲ್ಲಿ, ನಮಗೆ ಏಕೈಕ ಮಾರ್ಗದರ್ಶಕರಾಗಿ ಮುನ್ನಡೆಸಬೇಕಾದ ಗಾಂಧೀಜಿಯವರ ಸಲಹೆಯ ಮೇರೆಗೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯನ್ನು ರಚಿಸುವುದು ಅಗತ್ಯ ಎಂದು ಸೂಚಿಸುವ ನಿರ್ಣಯವೊಂದನ್ನು ಮಂಡಿಸಿದರು. ಆ ನಿರ್ಣಯ ಅಧಿವೇಶನದಿಂದ ಅನುಮೋದಿತವಾಯಿತು. ಇದರರ್ಥ ಸುಭಾಷರು ಸ್ವತಂತ್ರವಾಗಿ-ತಮ್ಮ ಆಲೋಚನೆಗಳಿಗೆ ಅನುಗುಣವಾಗಿ – ಕೆಲಸ ಮಾಡದಂತೆ ನಿಯಂತ್ರಿಸುವುದೇ ಆಗಿತ್ತು. ಇದನ್ನೊಲ್ಲದ ಸುಭಾಷರು ಗಾಂಧಿಯವರ ಮೂಲಕವೇ ಪಕ್ಷದಲ್ಲಿ ಒಮ್ಮತ ಸಾಧಿಸುವ ಪ್ರಯತ್ನ ಮಾಡಿ ಅದರಲ್ಲಿ ವಿಫಲವಾದಾಗ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದರು.

ಸುಭಾಷರನ್ನು ಪಟೇಲ್ ವಿರೋಧಿಸಲು ಕಾರಣಗಳೇನು?

ಸುಭಾಷರ ಬಗ್ಗೆ ಅತ್ಯಂತ ಹೆಚ್ಚು ವಿರೋಧ ವ್ಯಕ್ತಪಡಿಸಿ ಅವರ ವಿರುದ್ಧ ಕಾರ್ಯಾಚರಣೆ ನಡೆಸಿದವರು ಪಟೇಲರು. ಇದಕ್ಕೆ ಸುಭಾಷರು ೧೯೩೫ರಲ್ಲಿ ಬರೆದಿದ್ದ 'ದ ಇಂಡಿಯನ್ ಸ್ಟ್ರಗಲ್' ಎಂಬ ಪುಸ್ತಕದಲ್ಲಿ ಗಾಂಧಿಯವರ ಅಹಿಂಸೆಯನ್ನು ಅಸಂಬದ್ಧವೆಂದು ಕರೆದಿದ್ದರು ಎಂಬ ತಾತ್ವಿಕ ಕಾರಣಕ್ಕಿಂತ ಹೆಚ್ಚಾಗಿ ವೈಯಕ್ತಿಕ ಕಾರಣವೂ ಇತ್ತೆಂದು ರಾಮಚಂದ್ರ ಗುಹಾ ತಮ್ಮ 'ಗಾಂಧಿ' ಪುಸ್ತಕದಲ್ಲಿ ಬರೆಯುತ್ತಾರೆ. ತಮ್ಮ ಸೋದರ ವಿಠಲಭಾಯಿ ಪಟೇಲರನ್ನು, ದಾರಿ ತಪ್ಪಿಸಿ ವಿದೇಶಕ್ಕೆ ಒಯ್ದವರು ಸುಭಾಷರೇ ಎಂದು ಪಟೇಲರು ಭಾವಿಸಿದರು. ಅಲ್ಲದೆ ವಿಠಲಭಾಯಿ ನಿಧನರಾದಾಗ ಅವರು ತಮ್ಮ ಉಯಿಲಿನಲ್ಲಿ ತಮ್ಮ ಅರ್ಧ ಆಸ್ತಿಯನ್ನು ದೇಶಕ್ಕಾಗಿ ಖರ್ಚು ಮಾಡಲು ಸುಭಾಷರ ಹೆಸರಿಗೆ ಬರೆಯುವಂತೆ ಮಾಡಿದ್ದು ಅವರೇ ಎಂಬುದು ಪಟೇಲರ ನಂಬಿಕೆಯಾಗಿತ್ತು. ಅಷ್ಟೇ ಅಲ್ಲ, ಈ ಉಯಿಲಿನ ಸಾಧುತ್ವವನ್ನು ಪ್ರಶ್ನಿಸಿದ ಪಟೇಲರು, ಅದನ್ನು ರದ್ದು ಮಾಡಿಸುವಲ್ಲಿಯೂ ಯಶಸ್ವಿಯಾಗಿದ್ದರು ಎಂದೂ ಗುಹಾ ಹೇಳುತ್ತಾರೆ. ಏನೇ ಆಗಲಿ, ಸುಭಾಷರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರಲಿಲ್ಲ ಎಂಬುದು ಎಲ್ ಗೊರ್ಡಾನ್ ಬರೆದಿರುವ ಅವರ ಜೀವನ ಚರಿತ್ರೆಯಿಂದ ಸ್ಪಷ್ಟವಾಗುತ್ತದೆ. ಸುಭಾಷರ ಪ್ರಕಾರ ಜಗತ್ತಿನ ಚರಿತ್ರೆಯ ಭವಿಷ್ಯದ ರಾಜಕೀಯ ಪದ್ಧತಿ ಸಮಾಜವಾದ ಮತ್ತು ಫ್ಯಾಸಿವಾದದ ಮಿಶ್ರಣವಾಗಿರುತ್ತದೆ!

ಕುತೂಹಲದ ಸಂಗತಿ ಎಂದರೆ ಇದೆಲ್ಲದರ ನಡುವೆಯೇ, ಅಮೆರಿಕಾದ ಅಂತಾರಾಷ್ಟ್ರೀಯ ಪತ್ರಿಕೆ 'ರೀಡರ್ಸ್ ಡೈಜೆಸ್ಟ್'ನಲ್ಲಿ (ಡಿಸೆಂಬರ್, ೧೯೩೮) ಖ್ಯಾತ ಲೇಖಕ ಜಾನ್ ಗುಂಥರ್, ಗಾಂಧಿಯವರನ್ನು ಕ್ರಿಸ್ತನಿಗೆ ಹೋಲಿಸುತ್ತಾ, ಬುದ್ಧನ ನಂತರ ಜಗತ್ತು ಕಂಡ ಅಪೂರ್ವ ವ್ಯಕ್ತಿ ಎಂದು ವರ್ಣಿಸಿ, ಒಂದು ದೀರ್ಘ ಲೇಖನ ಬರೆದು, ಜಾಗತಿಕ ಯುದ್ಧದ ಸಮಯದಲ್ಲಿ ಅವರ ಪ್ರಸ್ತುತತೆಯ ಬಗ್ಗೆ ಜಗತ್ತಿನ ಗಮನ ಸೆಳೆದಿದ್ದರು.

ಸರಿ ಸುಮಾರು ಇದೇ ವೇಳೆಯಲ್ಲಿ ಗಾಂಧಿಯವರ ೭೦ನೇ ಹುಟ್ಟು ಹಬ್ಬದ ಸಂದರ್ಭದಲ್ಲಿ ತತ್ವಶಾಸ್ತ್ರ ವಿದ್ವಾಂಸ ಡಾ. ಎಸ್ ರಾಧಾಕೃಷ್ಣನ್ ಅವರು ಸಂಪಾದಿಸಿದ್ದ ಗೌರವ ಗ್ರಂಥವೂ ಹೊರಬಂತು. ಅದರಲ್ಲಿ ಆಲ್ಬರ್ಟ್ ಐನ್‌ಸ್ಟೀನ್‌ರಿಂದ ಹಿಡಿದು ಜಗತ್ತಿನ ಸರ್ವ ಕ್ಷೇತ್ರಗಳ ಅತ್ಯುತ್ತಮ ಮನಸ್ಸುಗಳ ಲೇಖನಗಳಿದ್ದು ಗಾಂಧಿಯವರನ್ನು ಯುಗಪುರುಷ ಎಂದು ಬಣ್ಣಿಸಲಾಗಿತ್ತು.

■

೮೨
ಪ್ರತ್ಯೇಕ ರಾಷ್ಟ್ರದ ಬಹಿರಂಗ ಕೂಗು

೧೯೩೯ರ ಸೆಪ್ಟೆಂಬರ್ ೨ರಂದು ಜರ್ಮನಿ ಪೋಲೆಂಡ್‌ನ ಮೇಲೆ ದಾಳಿ ನಡೆಸಿತು. ಪೋಲೆಂಡ್ ಜರ್ಮನಿಯ ಗಡಿಯಲ್ಲಿ ಯುದ್ಧ ಚೇಷ್ಟೆಗಳನ್ನು ಮಾಡುತ್ತಿದ್ದು ಸ್ವರಕ್ಷಣೆಗಾಗಿ ಯುದ್ಧ ಅನಿವಾರ್ಯವೆಂದು ಹಿಟ್ಲರ್ ವಿವರಣೆ ನೀಡಿದ್ದ. ಈಗ ಅಕ್ಕಪಕ್ಕದ ರಾಷ್ಟ್ರಗಳಾದ ಫ್ರಾನ್ಸ್ ಮತ್ತು ಬ್ರಿಟನ್ ಬೆದರಿದವು. ಬ್ರಿಟನ್ ಜರ್ಮನಿಯ ಮೇಲೆ ಯುದ್ಧ ಘೋಷಿಸುವುದು ಅನಿವಾರ್ಯವಾಯಿತು. ಬ್ರಿಟಿಷ್ ಸಾಮ್ರಾಜ್ಯದ ಭಾಗವಾಗಿದ್ದ ಬ್ರಿಟಿಷ್ ಭಾರತವೂ ಸಹಜವಾಗಿ ಈ ಯುದ್ಧದಲ್ಲಿ ಪಾಲುದಾರನಾಗಬೇಕಾಯಿತು. ಈ ಬಗ್ಗೆ ವಿವರಣೆ ನೀಡಲು ಮತ್ತು ಯುದ್ಧ ಸಂಬಂಧಿ ಸಮಾಲೋಚನೆಗಾಗಿ ವೈಸ್‌ರಾಯ್ ಲಿನ್‌ಲಿತ್‌ಗೋ, ಗಾಂಧಿ ಮತ್ತು ದೇಶದ ಇತರ ಕೆಲ ಮುಖ್ಯ ನಾಯಕರಿಗೆ ಅಂದೇ ಒಂದು ತಂತಿ ಕಳಿಸಿ ಸಿಗುವ ಮೊದಲ ರೈಲುಗಾಡಿ ಹಿಡಿದು ತಾವಿರುವ ಸಿಮ್ಲಾಗೆ ನಾಲ್ಕರಂದು ಬರಬೇಕೆಂದು ತಿಳಿಸಿದ.

ಗಾಂಧಿ ಸೆಪ್ಟೆಂಬರ್ ೪ರಂದು ವೈಸ್‌ರಾಯ್‌ನನ್ನು ಭೇಟಿ ಮಾಡಿದರು. ಜೊತೆಗೆ ಪಟೇಲರೂ ಇದ್ದರು. ಗಾಂಧಿ ಬ್ರಿಟನ್‌ನ ಜನತೆಯ ಪರವಾಗಿ ಸಹಾನುಭೂತಿ ವ್ಯಕ್ತಪಡಿಸಿದರು. ಹಿಟ್ಲರ್ ಯುದ್ಧದ ಹೆಸರಲ್ಲಿ ನಡೆಸಿದ್ದ ವಿನಾಶಕಾರಿ ಕೃತ್ಯಗಳ ಬಗ್ಗೆ ಕೇಳಿ ಅರಿತಿದ್ದ ಅವರು ತಾವು ಭಾವನಾತ್ಮಕ ಸಂಬಂಧ ಹೊಂದಿದ್ದ ಲಂಡನ್ ನಗರ ನಾಶವಾಗುವ ಸಾಧ್ಯತೆಯ ಬಗ್ಗೆ ಕಳವಳ ವ್ಯಕ್ತಪಡಿಸಿದರು. ವಿಶೇಷವಾಗಿ ತಾವು ಗೌರವಿಸುತ್ತಿದ್ದ ಬ್ರಿಟಿಷ್ ಸಂಸತ್ ಭವನ ಮತ್ತು ವೆಸ್ಟ್‌ಮಿನಿಸ್ಟರ್ ಅಬ್ಬೆ ಚರ್ಚ್ ಮೇಲೆ ಬಾಂಬ್ ಬೀಳುವುದನ್ನು ಊಹಿಸಿ ಕಣ್ಣೀರ್ಗರೆದರು. ವೈಯಕ್ತಿಕವಾಗಿ ತಾವು ಯುದ್ಧದಲ್ಲಿ ಬ್ರಿಟನ್‌ಗೆ ನೈತಿಕ ಬೆಂಬಲ ನೀಡುವುದಾಗಿ ಹೇಳಿದರು. ಆದರೆ ಸೆಪ್ಟೆಂಬರ್ ೯ರಂದು ವರ್ಧಾದಲ್ಲಿ ಸೇರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ತೆಗೆದುಕೊಳ್ಳುವ ನಿರ್ಧಾರಕ್ಕೆ ತಾವು ಬದ್ಧರಾಗಿರುವುದಾಗಿಯೂ ಅವರು ನಂತರ ಪತ್ರಕರ್ತರಿಗೆ ತಿಳಿಸಿದರು.

ಯುದ್ಧ: ಗಾಂಧಿ ನಿಲುವನ್ನು ಒಪ್ಪದ ಕಾಂಗ್ರೆಸ್

ಸೆಪ್ಟೆಂಬರ್ ೯ರಂದು ವರ್ಧಾದಲ್ಲಿ ಸಭೆ ಸೇರಿದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಭಾರತದ ಜನರನ್ನು-ಅರ್ಥಾತ್ ಆಡಳಿತ ನಡೆಸುತ್ತಿದ್ದ ಸರ್ಕಾರಗಳನ್ನು- ಕೇಳದೆ ಭಾರತವನ್ನು ಯುದ್ಧದಲ್ಲಿ ಭಾಗಿಯಾಗಿಸಿಕೊಂಡು ಅದರ ಸಾಧಕ ಬಾಧಕಗಳಿಗೆ ಅದರ ಜನರನ್ನು ಒಡ್ಡಿರುವ ವೈಸ್‌ರಾಯ್‌ನ ಏಕಪಕ್ಷೀಯ ನಿರ್ಧಾರವನ್ನು ಖಂಡಿಸಿತು. ಪಟೇಲರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪ್ರಸಾದ್, ಜೆಪಿ, ಸುಭಾಷ್ ಮುಂತಾದವರು ಭಾಗವಹಿಸಿದ್ದು, ರಾಮಮನೋಹರ ಲೋಹಿಯಾ ನೇತೃತ್ವದ ಕಾಂಗ್ರೆಸ್ ವಿದೇಶ ವ್ಯವಹಾರಗಳ ವಿಭಾಗ ಸಿದ್ಧಪಡಿಸಿದ್ದ ಮತ್ತು ನೆಹರೂ ಮುಖೇನ ಮಂಡಿತವಾದ

ನಿರ್ಣಯವನ್ನು ಚರ್ಚಿಸಿತ್ತು. ಜರ್ಮನಿಯ ಫ್ಯಾಸಿವಾದ ಮತ್ತು ಬ್ರಿಟನ್‌ನ ಸಾಮ್ರಾಜ್ಯವಾದಗಳೆರಡನ್ನೂ ತಾನು ವಿರೋಧಿಸುವುದಾಗಿ ಕಾಂಗ್ರೆಸ್ ಈ ನಿರ್ಣಯದಲ್ಲಿ ಹೇಳಿದ್ದು, ಈ ಯುದ್ಧದಲ್ಲಿ ತಾನು ಬ್ರಿಟಿಷ್ ಸರ್ಕಾರಕ್ಕೆ ಜನ ಅಥವಾ ಹಣ ಒದಗಿಸಲು ನಿರಾಕರಿಸುವುದಾಗಿ ಸ್ಪಷ್ಟಪಡಿಸಿತು. ಜೊತೆಗೆ ಪ್ರಜಾಸತ್ತೆಯ ರಕ್ಷಣೆಯ ಹೆಸರಿನಲ್ಲಿ ಯುದ್ಧದಲ್ಲಿ ಪಾಲ್ಗೊಂಡಿರುವ ಬ್ರಿಟನ್, ಅದೇ ಪ್ರಜಾಸತ್ತೆಯ ವಿಷಯದಲ್ಲಿ ಭಾರತ ಮತ್ತು ಇತರ ತನ್ನ ವಸಾಹತು ಬಡದೇಶಗಳ ಬಗ್ಗೆ ಯಾವ ನಿಲುವು ತಳೆಯಲಿದೆ ಎಂಬುದನ್ನೂ ಅದು ತಿಳಿಯಬಯಸಿತ್ತು. ಬ್ರಿಟನ್‌ಗೆ 'ಅಹಿಂಸಾತ್ಮಕ' ನೈತಿಕ ಬೆಂಬಲ ಪ್ರಕಟಿಸಬೇಕೆಂಬ ತಮ್ಮ ಕೋರಿಕೆಯನ್ನು ಕಾರ್ಯಕಾರಿ ಸಮಿತಿ ನಿರಾಕರಿಸಿದರೂ, ಗಾಂಧೀಜಿ ಈ ನಿರ್ಣಯಕ್ಕೆ ತಮ್ಮ ಅನುಮೋದನೆ ವ್ಯಕ್ತಪಡಿಸಿದರಲ್ಲದೆ, ನಿರ್ಣಯದಲ್ಲಿ ರಾಷ್ಟ್ರೀಯತೆ ಮತ್ತು ಅಂತಾರಾಷ್ಟ್ರೀಯತೆಗಳು ಹದವಾಗಿ ಬೆರೆತು ಸೃಷ್ಟಿಯಾಗಿರುವ 'ಸಂಕೀರ್ಣ ಸೌಂದರ್ಯ'ದ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯದ ಭರವಸೆ ನೀಡಿ ಅದಕ್ಕೆ ಪೂರ್ವಭಾವಿಯಾಗಿ ಸಂವಿಧಾನ ಸಭೆಯೊಂದನ್ನು ರಚಿಸಲು ಮುಂದಾದರೆ ಯುದ್ಧದಲ್ಲಿ ಸಹಕರಿಸಲು ಸಿದ್ಧ ಎಂಬ ನಿರ್ಣಯದ ಮುಂದಿನ ಭಾಗವನ್ನೂ ಅನುಮೋದಿಸಿದ ಗಾಂಧಿ, ಸದ್ಯಕ್ಕೆ ಬ್ರಿಟನ್ ಭಾರತದ ಕೇಂದ್ರ ಶಾಸನ ಸಭೆಯಲ್ಲಿನ ಶಾಸಕರಿಗೆ ಆಡಳಿತಾಧಿಕಾರವನ್ನು ನೀಡಬೇಕೆಂದು ಬಯಸಿದ್ದರು. ಬ್ರಿಟನ್‌ನೊಂದಿಗೆ ಯುದ್ಧದಲ್ಲಿ ಯಾವುದೇ ರೀತಿಯಲ್ಲಿ ಸಹಕರಿಸಬಾರದೆಂಬುದು ಜನಸಾಮಾನ್ಯರ, ಕಾಂಗ್ರೆಸ್ ಕಾರ್ಯಕರ್ತರ ಅಭಿಪ್ರಾಯವಾಗಿತ್ತು ಎಂಬುದನ್ನು ಗಾಂಧಿ ಸಿಮ್ಲಾಗೆ ಹೋಗಿಬಂದ ರೈಲುಪ್ರಯಾಣದುದ್ದಕ್ಕೂ ತಮ್ಮನ್ನು ಭೇಟಿ ಮಾಡಿದ ಜನಸಮೂಹಗಳ ಮೂಲಕ ತಿಳಿದುಕೊಂಡಿದ್ದರು.

ಆದರೆ ಪಂಜಾಬ್ ಮತ್ತು ವಾಯುವ್ಯ ಗಡಿ ಪ್ರಾಂತ್ಯದಲ್ಲಿ ಭಾರತೀಯರು, ವಿಶೇಷವಾಗಿ ಮುಸ್ಲಿಮರು ಸಾವಿರಾರು ಸಂಖ್ಯೆಯಲ್ಲಿ ಸೇನೆಗೆ ಸೇರಲು ಮುಂದಾಗುತ್ತಿರುವುದನ್ನು ಅರಿತ ವೈಸ್‌ರಾಯ್, ಕಾಂಗ್ರೆಸ್ ನಿರ್ಣಯವನ್ನು ಗಂಭೀರವಾಗಿ ಪರಿಗಣಿಸದೆ, ಯುದ್ಧದಲ್ಲಿ ಸಹಕರಿಸಿದರೆ, ಯುದ್ಧದ ನಂತರ ಸ್ವಾತಂತ್ರ್ಯದ ಪ್ರಶ್ನೆಯ ಬಗ್ಗೆ ಚರ್ಚಿಸಬಹುದು ಎಂದು ಪ್ರತಿಕ್ರಿಯಿಸಿದ. ರಾಜ ಮಹಾರಾಜರುಗಳು ಮತ್ತು ಕಾಂಗ್ರೆಸ್ಸೇತರ ಪಕ್ಷಗಳ ಸಮಾಲೋಚನಾ ಸಭೆಯಲ್ಲಿ, ಕಾಂಗ್ರೆಸ್ ನಿಲುವಿಗೆ ವಿರುದ್ಧವಾಗಿ, ಬ್ರಿಟಿಷ್ ಸರ್ಕಾರಕ್ಕೆ ಬೆಂಬಲ ವ್ಯಕ್ತವಾಗಿದ್ದುದೂ ಇದಕ್ಕೆ ಕಾರಣವಾಗಿತ್ತು. ನಂತರ ಗಾಂಧಿ ಮತ್ತು ನೆಹರೂ, ಜಿನ್ನಾರನ್ನೂ ಭೇಟಿ ಮಾಡಿ ನಂತರ ಒಟ್ಟಿಗೇ ವೈಸ್‌ರಾಯ್‌ರನ್ನು ಕಂಡು ಚರ್ಚಿಸಿದರಾದರೂ ಪ್ರಯೋಜನವಾಗಲಿಲ್ಲ. ಬ್ರಿಟನ್ ಯುದ್ಧಾನಂತರ ಮುಸ್ಲಿಂ ಲೀಗ್‌ಗೆ ಸಲ್ಲಬೇಕಾದ ರಾಜಕೀಯ ಗೌರವವನ್ನು ಸಲ್ಲಿಸುವುದು ಎಂಬ ಆಶಯ ವ್ಯಕ್ತಪಡಿಸಿದ ಜಿನ್ನಾ, ಯುದ್ಧದಲ್ಲಿ ಸಹಕಾರ ನೀಡಲು ಅದನ್ನೊಂದು ಷರತ್ತಾಗಿ ಹಾಕಲು ಇಷ್ಟಪಡಲಿಲ್ಲ. ಇದೆಲ್ಲವೂ ಲಂಡನ್ ಸರ್ಕಾರದ ಭಾರತ ವ್ಯವಹಾರಗಳ ಕಾರ್ಯದರ್ಶಿ ಜೆಟ್‌ಲ್ಯಾಂಡ್ ಕಾಂಗ್ರೆಸ್‌ನ್ನು ಒಂದು ಹಿಂದೂಗಳ ಸಂಸ್ಥೆ ಎಂದು ಕರೆಯಲು ಪ್ರೇರೇಪಿಸಿ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತು. ಗಾಂಧಿ, ಕಾಂಗ್ರೆಸ್ ಹೇಗೆ ಸರ್ವ ಜಾತಿ, ಧರ್ಮ, ಪಂಥಗಳ

ಪ್ರಾತಿನಿಧಿಕ ಸಂಸ್ಥೆಯಾಗಿದೆ ಎಂದು ವಿವರಿಸಿ ಪ್ರತಿಭಟಿಸಿದರಾದರೂ ಪ್ರಯೋಜನವಾಗಲಿಲ್ಲ.

ಕಾಂಗ್ರೆಸ್ ಸರ್ಕಾರಗಳ ರಾಜೀನಾಮೆ: ಸಂಭ್ರಮಿಸಿದ ಜಿನ್ನಾ ಮತ್ತವರ ಗೆಳೆಯರು

ಸಾಮ್ರಾಜ್ಯ ಸರ್ಕಾರ ಭಾರತದ ಪ್ರಾಂತೀಯ ಸರ್ಕಾರಗಳ ಅಧಿಕಾರಗಳನ್ನು ನಿರ್ಬಂಧಿಸಿ ಆದೇಶ ಹೊರಡಿಸಿತು. ಜೊತೆಗೇ ಪತ್ರಿಕೆ ಮತ್ತು ಇತರ ಸಾರ್ವಜನಿಕ ಸಂವಹನ ಮಾಧ್ಯಮಗಳ ಮೇಲೆ ನಿರ್ಬಂಧಗಳನ್ನು ಹೇರುವ ವಿಶೇಷಾಧಿಕಾರದ ಕಾನೂನುಗಳನ್ನು ಜಾರಿಗೆ ತಂದಿತು. ಅಕ್ಟೋಬರ್ ೨೭ರಂದು ಪ್ರಾಂತೀಯ ಕಾಂಗ್ರೆಸ್ ಸರ್ಕಾರಗಳು ಪಕ್ಷದ ಕಾರ್ಯಕಾರಿ ಸಮಿತಿಯ ಸೂಚನೆಯ ಮೇರೆಗೆ ರಾಜೀನಾಮೆ ನೀಡಿದವು. ಮುಸ್ಲಿಂ ಲೀಗ್, ಅಂಬೇಡ್ಕರ್ ಪಕ್ಷ ಮತ್ತು ತಮಿಳ್ನಾಡಿನ ರಾಮಸ್ವಾಮಿ ನಾಯ್ಕರ್‌ರ ಜಸ್ಟೀಸ್ ಪಕ್ಷ ಇದನ್ನು ಸಂಭ್ರಮದಿಂದ ಸ್ವಾಗತಿಸಿ, ಮುಸ್ಲಿಂ ಸಮುದಾಯದ ಪ್ರಾರ್ಥನಾ ದಿನವಾದ ಡಿಸೆಂಬರ್ ೨೨ರಂದು ಒಟ್ಟಿಗೆ 'ವಿಮೋಚನಾ ದಿನ'ವನ್ನಾಗಿ ಆಚರಿಸಿದವು. ಅಂದು ಬಾಂಬೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ, ಒಂದು ಪಕ್ಕ ತಮ್ಮ ಮಾವ ಪಾರ್ಸಿ ಶ್ರೀಮಂತ ದೀನ್‌ಶಾ ಪೆಟಿಟ್ ಮತ್ತು ಇನ್ನೊಂದು ಪಕ್ಕ ಅಂಬೇಡ್ಕರ್‌ರನ್ನು ಕೂರಿಸಿಕೊಂಡು ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಜಿನ್ನಾ 'ಇದೊಂದು ಭಾರತದ ಇತಿಹಾಸದಲ್ಲಿ ಅಲ್ಪಸಂಖ್ಯಾತರು ಒಂದೇ ವೇದಿಕೆಯಲ್ಲಿ ಒಗ್ಗೂಡಿರುವ ಒಂದು ಅಪೂರ್ವ ದಿನ'ವೆಂದು ಬಣ್ಣಿಸಿದರು. ಕಾಂಗ್ರೆಸ್ ವಿರೋಧಿ ರಂಗ ರಚಿಸಲು ತಾವು ಅಂಬೇಡ್ಕರ್, ರಾಮಸ್ವಾಮಿ ನಾಯ್ಕರ್‌ರನ್ನಲ್ಲದೆ ಹಿಂದೂ ಮಹಾಸಭಾದ ಸಾವರ್ಕರರನ್ನೂ ಭೇಟಿ ಮಾಡಬಯಸುವುದಾಗಿಯೂ ಅವರು ತಿಳಿಸಿದರು. ಕಾಂಗ್ರೆಸ್ ಸರ್ಕಾರಗಳು ರಾಜೀನಾಮೆ ನೀಡಿದ ಪ್ರಾಂತ್ಯಗಳಲ್ಲಿ ಪರ್ಯಾಯ ಸರ್ಕಾರಗಳನ್ನು ರಚಿಸುವುದು ಇದರ ಉದ್ದೇಶವಾಗಿತ್ತು. ಇಂತಹ ಸಭೆಗಳು ದೇಶಾದ್ಯಂತ ವಿವಿಧ ಊರುಗಳಲ್ಲಿ ನಡೆದು ದೇಶದ ಸಾಮಾಜಿಕ ವಾತಾವರಣದಲ್ಲಿ ಒಂದು ಪ್ರಕ್ಷುಬ್ಧತೆ ಎದ್ದು ಕಾಣತೊಡಗಿತು. ವೈಸ್‌ರಾಯ್‌ಗೂ ಇದೇ ಬೇಕಾಗಿತ್ತು.

ಆದರೆ ಗಾಂಧಿ ಈ ಬೆಳವಣಿಗೆಯನ್ನು ಬೇರೆ ರೀತಿಯಲ್ಲೇ ನೋಡಿದ್ದರು. 'ಹರಿಜನ್'ನಲ್ಲಿ ಈ ಬಗ್ಗೆ ಬರೆದ ಲೇಖನವೊಂದರಲ್ಲಿ, ಕಾಂಗ್ರೆಸ್ಸೇತರ ರಾಜಕೀಯ ರಂಗ ಸ್ಥಾಪಿತವಾದರೆ ಅದು ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಒಳ್ಳೆಯದನ್ನೇ ಮಾಡಲಿದೆ ಎಂದಿದ್ದ ಅವರು, ಅದು ಬೆಳೆದು ಬಲಿಷ್ಠವಾಗಿ ಕಾಂಗ್ರೆಸ್‌ಗೆ ಸೆಡ್ಡು ಹೊಡೆಯುವುದಾದರೆ ತಾವೂ ಸೇರಿ ಇಡೀ ದೇಶ ಖೈದ್-ಎ-ಅಜ಼ಂ ಜಿನ್ನಾರಿಗೆ ಜೈಕಾರ ಹಾಕುವುದು ಎಂದಿದ್ದರು. ಆದರೆ ಅದು ಕಾಂಗ್ರೆಸ್‌ನಂತೆ ಬಹು ಜಾತಿ, ಧರ್ಮ, ಪಂಥಗಳ ಒಂದು ರಾಜಕೀಯ ಅಭಿಪ್ರಾಯ ಸಂಘಟಿತಗೊಂಡಿರುವ ರಂಗವಾಗಿರಬೇಕು. ಇಲ್ಲದಿದ್ದರೆ ಅದು ಅನಾಹುತಕಾರಿ ಎಂದು ಅವರು ಹೇಳಿದ್ದರು. ಈ ದಿನಗಳಲ್ಲಿ ಗಾಂಧಿ, ಜಿನ್ನಾರನ್ನು ಮುಸ್ಲಿಂ ಲೀಗ್ ಸಭೆಗಳಲ್ಲಿ ಸಂಬೋಧಿಸಲಾಗುತ್ತಿದ್ದಂತೆ 'ಖೈದ್-ಎ-ಅಜ಼ಂ' (ಮಹಾ ನಾಯಕ) ಎಂದು ಕರೆಯಲಾರಂಭಿಸಿದ್ದರು.

ಇದಕ್ಕೆ ಉತ್ತರ ನೀಡಿದ್ದ ಜಿನ್ನಾ, ಕಾಂಗ್ರೆಸ್ ವಿರೋಧಿ ರಂಗದ ಗುಂಪುಗಳು ಒಂದು

ಸಾಮಾನ್ಯ ವೇದಿಕೆಯಡಿ ಒಗ್ಗೂಡುವ ಪ್ರಕ್ರಿಯೆಯಲ್ಲೇ ಒಂದು ಸಾಮಾನ್ಯ ರಾಜಕೀಯ ಅಭಿಪ್ರಾಯವನ್ನೂ ರೂಪಿಸಿಕೊಳ್ಳಲಿದೆ ಎನ್ನುತ್ತಾ, ಗಾಂಧಿಗೆ ಆಘಾತವಾಗುವ ಈ ಒಂದು ಮಾತನ್ನೂ ಆಡಿದ್ದರು: 'ಭಾರತ ಒಂದು ದೇಶವೂ ಅಲ್ಲ, ರಾಷ್ಟ್ರವೂ ಅಲ್ಲ. ಅದು ಹಲವು ರಾಷ್ಟ್ರೀಯತೆಗಳ ಒಂದು ಉಪಖಂಡ'

ತಕ್ಷಣ ಗಾಂಧಿ ಅವರಿಗೆ ನೆನಪಾದದ್ದು ಪಂಜಾಬ್‌ನ ಶಾಲಾ ಶಿಕ್ಷಕನೊಬ್ಬ ಬರೆದಿದ್ದ ಪತ್ರ. ಅದರಲ್ಲಿ ಗಾಂಧಿಯವರನ್ನು ಮುಸ್ಲಿಮರ ಗೆಳೆಯ ಎಂದು ಆತ ಹೊಗಳುತ್ತಾ, ಹಾಗಿದ್ದ ಪಕ್ಷದಲ್ಲಿ ಮುಸ್ಲಿಮರನ್ನು ಒಂದು ಪ್ರತ್ಯೇಕ ರಾಷ್ಟ್ರವೆಂದು ಪರಿಗಣಿಸಿ ಅವರಿಗೆ ನ್ಯಾಯ ಒದಗಿಸಬೇಕು ಎಂದು ಕೋರಿದ್ದ. ಈಗ ನೋಡಿದರೆ, ಜಿನ್ನಾ ಆ ಬೇಡಿಕೆಯನ್ನು ಮಾನ್ಯ ಮಾಡುವಂತಿತ್ತು!

ಗಾಂಧಿ ಆಗಲೇ (ಹರಿಜನ್, ೨೮ ಅಕ್ಟೋಬರ್ ೧೯೩೯) ಪ್ರತ್ಯೇಕ ರಾಷ್ಟ್ರವನ್ನು ಕೋರಿದ್ದ ಪತ್ರಕ್ಕೆ ಉತ್ತರ ನೀಡಿದ್ದರು: 'ಮೊಘಲ್ ಭಾರತ ಒಂದು ರಾಷ್ಟ್ರವಾಗಿರಬಹುದಾಗಿದ್ದರೆ ಈಗೇಕೆ ಆಗದು? ಈಗ ಎರಡು ರಾಷ್ಟ್ರವೇಕೆ? ಕ್ರಿಶ್ಚಿಯನ್ನರಿಗೊಂದು, ಪಾರ್ಸಿಗಳಿಗೊಂದು ರಾಷ್ಟ್ರ ಬೇಡವೆ? 'ಬದುಕು, ಉಳಿದವರನ್ನೂ ಬದುಕಗೊಡು' ಇದನ್ನೇ ನಾವು ಕುರಾನ್, ಬೈಬಲ್, ಝೆಂದ್‌ವೆಸ್ತಾ, ಗೀತೆಗಳಿಂದ ಕಲಿಯಬೇಕಾದ್ದಲ್ಲವೆ?'

ರಾಷ್ಟ್ರೀಯ ಏಕತೆಗಾಗಿ ಆಜಾದರ ಕರೆ

ದಿನೇ ದಿನೇ ಮುಸ್ಲಿಮರು ಕಾಂಗ್ರೆಸ್‌ನಿಂದ ದೂರವಾಗುತ್ತಿರುವ ಸಂಗತಿ ಗಾಂಧಿಯವರ ಧೃತಿಗೆಡಿಸಿತ್ತು. ರಾಜಾಜಿ ಗಾಂಧಿಯವರಿಗೆ 'ಈ ವಿಷಯದಲ್ಲಿ ನೀವು ಏನನ್ನಾದರೂ ಮಾಡದಿದ್ದಲ್ಲಿ ನೀವು ಈವರೆಗೆ ನಿಮ್ಮ ಬದುಕಿನಲ್ಲಿ ಪೋಷಿಸಿಕೊಂಡು ಬಂದಿರುವ ಘನತರವಾದ ಎಲ್ಲ ಮೌಲ್ಯಗಳೂ ಮಣ್ಣುಗೂಡಲಿವೆ' ಎಂದು ಎಚ್ಚರಿಸಿದರು. ಇದಕ್ಕೆ ತಕ್ಕಂತೆ ಪ್ರತಿದಿನ ಗಾಂಧಿಯವರಿಗೆ ಮುಸ್ಲಿಮರಿಂದ 'ಮುಸ್ಲಿಂ ಹಿತಾಸಕ್ತಿ ಮತ್ತು ಸಂವೇದನೆಗಳಿಗೆ ಘಾಸಿ ಉಂಟು ಮಾಡುವುವು ಎಂದು ಹೇಳಲಾದ ಕಾಂಗ್ರೆಸ್ಸಿಗರ ಕೃತ್ಯಗಳ ಬಗ್ಗೆ ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ನೂರಾರು ಪತ್ರಗಳು ಬರತೊಡಗಿದ್ದವು. ಉದಾ: ಮುಸ್ಲಿಮರ ವಸತಿ ಪ್ರದೇಶದ ಉದ್ಯಾನದಲ್ಲಿ ಗಾಂಧಿ ಪ್ರತಿಮೆ ಸ್ಥಾಪಿಸುವ ಮತ್ತು ಮುಸ್ಲಿಮರು ಓಡಾಡುವ ಬೀದಿಗಳಲ್ಲಿ ಗಾಂಧಿ ಚಿತ್ರಗಳನ್ನು ಅಂಟಿಸುವ ಮೂಲಕ ವಿಗ್ರಹ ವಿರೋಧಿ ಇಸ್ಲಾಂ ತತ್ವಕ್ಕೆ ಅಪಚಾರವೆಸಗಲಾಗುತ್ತಿದೆ.

ಇಂತಹ ಬಿಗುವಿನ ವಾತಾವರಣದಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ತಮ್ಮ ವಾರ್ಷಿಕ ಸಮ್ಮೇಳನಗಳನ್ನು ನಡೆಸಿದವು. ಮುಸ್ಲಿಂ ಲೀಗ್ ಕಾಂಗ್ರೆಸ್‌ನಿಂದ ಬಹುಹಿಂದೆಯೇ ಬೇರಾಗಿದ್ದರೂ, ಅದರ ಬಹುತೇಕ ಸದಸ್ಯರು ಕಾಂಗ್ರೆಸ್ ಸದಸ್ಯರಾಗಿಯೂ ಮುಂದುವರೆದಿದ್ದರು. ಹಾಗಾಗಿಯೇ ಲಕ್ನೋ ಒಪ್ಪಂದದ ನಂತರ ಎರಡೂ ಸಂಘಟನೆಗಳ ಸಮ್ಮೇಳನಗಳು ಒಂದೇ ಊರಿನಲ್ಲಿ ಅಕ್ಕಪಕ್ಕದ ದಿನಾಂಕಗಳಂದು ನಡೆಯುತ್ತಿದ್ದವು. ಆದರೆ ಎರಡೂ ಪಕ್ಷಗಳ ನಡುವೆ ಈಗ ಉಂಟಾಗಿದ್ದ ಆಳದ ಕಂದಕವನ್ನು ಸೂಚಿಸುವಂತೆ ಈ ಸಂಪ್ರದಾಯವನ್ನು ೧೯೪೦ರ ವರ್ಷದಲ್ಲಿ ಮುರಿಯಲಾಯಿತು. ಕಾಂಗ್ರೆಸ್ ಅಧಿವೇಶನ ಬಿಹಾರದ ರಾಮಗಢದಲ್ಲಿ

೧೯೪೦ರ ಮಾರ್ಚ್ ೧೮ರಂದು ಆರಂಭವಾಗಿ ೨೦ಕ್ಕೆ ಮುಗಿದರೆ, ಲೀಗ್‌ನ ಸಮ್ಮೇಳನ ೨೨ಕ್ಕೆ ಲಾಹೋರ್‌ನಲ್ಲಿ ಆರಂಭವಾಯಿತು. ಗಾಂಧಿಯವರ ಸಲಹೆಯಂತೆ ಕಾಂಗ್ರೆಸ್‌ನ ಬಹುಧರ್ಮೀಯ ಸ್ವರೂಪದ ಪ್ರತೀಕವಾಗಿ ರಾಜೇಂದ್ರ ಪ್ರಸಾದರ ಜಾಗದಲ್ಲಿ ಅಬುಲ್ ಕಲಾಂ ಆಜ಼ಾದರನ್ನು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಆರಿಸಲಾಗಿತ್ತು. ಆಜ಼ಾದರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಭಾರತದ ದೇಶವು ಪ್ರಾಚೀನ ಕಾಲದಿಂದಲೂ ಹಲವು ಕುಲ ಸಂಪ್ರದಾಯ ಧರ್ಮಗಳನ್ನು ಆಹ್ವಾನಿಸಿ ಅವನ್ನು ತನ್ನವನ್ನಾಗಿ ಮಾಡಿಕೊಂಡಿದ್ದು, ಇಸ್ಲಾಂ ಈ ಸರಣಿಯ ಇತ್ತೀಚಿನ ಪ್ರವೇಶವಾಗಿದ್ದು, ಅದು ಕೂಡ ಈಗ ಜನಮನದಲ್ಲಿ ಸಮನ್ವಯಗೊಂಡು ದೇಶಿ ಆಗಿದೆ ಎಂದು ಹೇಳಿದರಲ್ಲದೆ, ಈ ಸತ್ಯವನ್ನು ಯಾರೇ ಆಗಲೀ ಯಾವುದೇ ಕಾರಣದಿಂದ ನಿರಾಕರಿಸಿ ಜನಮನವನ್ನು ದೇಶವನ್ನು ಒಡೆಯಬಾರದು ಎಂದು ಕರೆಕೊಟ್ಟರು.

ಮುಸ್ಲಿಂ ಲೀಗ್‌ನ ಪ್ರತ್ಯೇಕ ರಾಷ್ಟ್ರದ ನಿರ್ಣಯ–ಕೈ ಜೋಡಿಸಿದ ಆರೆಸ್ಸೆಸ್ ಮತ್ತು ಹಿಂದೂ ಮಹಾಸಭಾ

ಇದಕ್ಕೆ ವಿರುದ್ಧವಾಗಿ ಲಾಹೋರ್‌ನಲ್ಲಿ ನಡೆದ ಸಮ್ಮೇಳನದಲ್ಲಿ, ಬಂಗಾಳದ ಪ್ರಧಾನ ಮಂತ್ರಿ ಫಜ್ಲುಲ್‌ಹಕ್‌ರಿಂದ ಮಂಡಿಸಲ್ಪಟ್ಟು ಅನುಮೋದಿತವಾದ ನಿರ್ಣಯದಲ್ಲಿ, ಮುಸ್ಲಿಂ ಬಹುಸಂಖ್ಯಾತ ಪ್ರದೇಶಗಳಾಗಿರುವ ದೇಶದ ಪಶ್ಚಿಮ ಮತ್ತು ಪೂರ್ವ ಪ್ರದೇಶಗಳನ್ನೊಳಗೊಂಡ ಒಂದು ಅಥವಾ ಅಗತ್ಯಬಿದ್ದರೆ ಅದಕ್ಕಿಂತ ಹೆಚ್ಚು ಪ್ರತ್ಯೇಕ ಸಾರ್ವಭೌಮ ರಾಷ್ಟ್ರ ಮುಸ್ಲಿಮರ ಬೇಡಿಕೆಯಾಗಿದ್ದು, ಅದರ ಹೊರತಾಗಿ ಇನ್ನಾವ ಪರಿಹಾರಕ್ಕೂ ಅವರು ಸಿದ್ಧರಿಲ್ಲವೆಂದು ಘೋಷಿಸಿತು. ಈ ಪ್ರತ್ಯೇಕತೆಯ ಎಲ್ಲೆಗಳನ್ನು ಖಚಿತವಾಗಿ ಗುರುತಿಸಿರಲಿಲ್ಲವಾದರೂ, ವಾಯುವ್ಯ ಗಡಿ ಪ್ರಾಂತ್ಯ, ಸಿಂಧ್, ಪಂಜಾಬ್ ಮತ್ತು ಬಂಗಾಳಗಳನ್ನಲ್ಲದೆ, ಇಸ್ಲಾಂನ ಸಾಂಸ್ಕೃತಿಕ ಕೇಂದ್ರಗಳೆಂದು ದೆಹಲಿ ಮತ್ತು ಅಲಿಗಢಗಳನ್ನು ಗುರುತಿಸಿ ಅವುಗಳನ್ನೂ ಈ ಪ್ರತ್ಯೇಕತೆಯಲ್ಲಿ ಒಳಗೊಳ್ಳುವ ಇಂಗಿತ ವ್ಯಕ್ತವಾಗಿತ್ತು.

ನಿರ್ಣಯವನ್ನು ಅನುಮೋದಿಸಿದ ಮುಸ್ಲಿಂ ಲೀಗ್‌ನ ಶಾಶ್ವತ ಅಧ್ಯಕ್ಷ ಜಿನ್ನಾ, ಪ್ರಾಣ ತೆತ್ತಾದರೂ ಪ್ರತ್ಯೇಕ ರಾಷ್ಟ್ರ ಪಡೆದೇವು ಎಂದು ಘೋಷಿಸಿದಾಗ, ಪ್ರತಿನಿಧಿಗಳ ಕರತಾಡನ ಮುಗಿಲುಮುಟ್ಟಿತ್ತು. ಅವರ ಪ್ರಕಾರ ಹಿಂದೂ ಮತ್ತು ಇಸ್ಲಾಂ ಶುದ್ಧ ಅರ್ಥದಲ್ಲಿ ಧರ್ಮಗಳಾಗಿರದೆ ಎರಡು ವಿಭಿನ್ನ ಸಾಮಾಜಿಕ ವ್ಯವಸ್ಥೆಗಳಾಗಿದ್ದು, ತದ್ವಿರುದ್ಧ ಜೀವನ ದೃಷ್ಟಿಕೋನಗಳು. ಅವೆರಡೂ, ದೀರ್ಘ ಕಾಲದ ಒಡನಾಟದಲ್ಲಿ ಒಂದು ಹೊಸ ನಾಗರಿಕತೆಯನ್ನು ರೂಪಿಸುತ್ತವೆ ಎಂಬುದು ಶುದ್ಧ ಕನಸಾಗಿ ಮಾತ್ರ ಉಳಿದಿದ್ದು, ನಮ್ಮದು ಒಂದೇ ರಾಷ್ಟ್ರ ಎಂಬ ಅಸಂಬದ್ಧ ಕಲ್ಪನೆ ಈ ದೇಶವನ್ನು ವಿನಾಶದತ್ತ ಮಾತ್ರ ಒಯ್ಯಬಲ್ಲುದು. ಕಾಂಗ್ರೆಸ್ ಸಲಹೆ ಮಾಡಿರುವ ಸಂವಿಧಾನ ಸಭೆ ಏನಾದರೂ ರಚನೆಯಾದರೆ, ಅದರಲ್ಲಿ ಅಲ್ಪಸಂಖ್ಯಾತರಾದ ಮುಸ್ಲಿಮರಿಗೆ ಜನಸಂಖ್ಯಾ ಪ್ರಮಾಣಾನುಸಾರ ಮಾತ್ರ ಪ್ರಾತಿನಿಧ್ಯ ದೊರಕುವುದರಿಂದ, ಅದರಿಂದಲೂ ಅವರಿಗೆ ನ್ಯಾಯ ಸಿಗಲು ಸಾಧ್ಯವಿಲ್ಲವೆಂದೂ ಅವರು ಎಚ್ಚರಿಸಿದ್ದರು.

ಸರಿಯಾಗಿ ಹತ್ತು ವರ್ಷಗಳ ಹಿಂದೆ ಮುಸ್ಲಿಂ ಲೀಗ್‌ನ ಲಕ್ನೋ ಸಮ್ಮೇಳನದ ಅಧ್ಯಕ್ಷರಾಗಿ ಕವಿ ಇಕ್ಬಾಲ್ ಹಾಕಿದ್ದ ಪ್ರತ್ಯೇಕ ರಾಷ್ಟ್ರ ಕಲ್ಪನೆಯ ಬೀಜ ಈಗ ಚಿಗುರೊಡೆದು

ನಿಂತಿತ್ತು. ನಂತರದ ದಿನಗಳಲ್ಲಿ ಇದು ಖ್ವಾಜಾ ಅಬ್ದುಲ್ ರಹೀಂ ಎನ್ನುವವರ ಮೂಲಕ ಪವಿತ್ರ ತಾಣ ಎಂಬ ಅರ್ಥದ 'ಪಾಕಿಸ್ತಾನ' ಎಂಬ ಹೆಸರು ಪಡೆದು, ಕೆಲ ಮುಸ್ಲಿಮರ ನಡುವೆ ಮಂದ್ರ ಸ್ತರದಲ್ಲಷ್ಟೇ ಚಲಾವಣೆಯಲ್ಲಿತ್ತಾದರೂ, ಈ ಗಿಡ ಬೆಳೆದು ಫಲ ಕೊಡುವ ಹಾದಿ ಅಷ್ಟು ಸುಗಮವಾಗಿರಲಿಲ್ಲ. ಏಕೆಂದರೆ ಪಂಜಾಬ್‌ನ ಪ್ರಧಾನಮಂತ್ರಿ ಹಯಾತ್ ಖಾನ್ ಅವರಿಗೆ ಮುಸ್ಲಿಂ ಲೀಗ್‌ನ ಪ್ರತ್ಯೇಕ ರಾಷ್ಟ್ರದ ಬೇಡಿಕೆ ಅಸಂಗತವಾಗಿ ಕಂಡಿತ್ತು. ಹಾಗೇ ವಾಯುವ್ಯ ಗಡಿ ನಾಡಿನ ಗಫಾರ್ ಖಾನ್‌ರು ಅದನ್ನು ಕಟುವಾಗಿ ವಿರೋಧಿಸಿದರು. ಇದು ಒಂದು ಕಡೆ, ಗಾಂಧಿಯವರಿಗೆ ಸಮಾಧಾನ ತಂದಿತ್ತಾದರೂ, ಇನ್ನೊಂದು ಕಡೆ ಹಿಂದೂ ಸಂಘಟನೆಗಳೂ ಪ್ರತ್ಯೇಕ ರಾಷ್ಟ್ರದ ಕೂಗನ್ನು ಪುಷ್ಟೀಕರಿಸುವಂತಹ ವಾದಗಳನ್ನು ಮಂಡಿಸತೊಡಗಿ ಅವರನ್ನು ಸಂದಿಗ್ಧಕ್ಕೆ ಸಿಲುಕಿಸತೊಡಗಿದ್ದವು. ಉದಾಹರಣೆಗೆ, ಆಗ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾಗಿದ್ದ ಎಂ.ಎಸ್. ಗೋಳ್ವಲ್ಕರ್ 'ನಾವು ಮತ್ತು ನಮ್ಮ ರಾಷ್ಟ್ರೀಯತೆಯ ಸ್ವರೂಪ' ('ದಿಸ್ ಈಸ್ ವಿ ಆರ್ ಅವರ್ ನೇಷನ್‌ಹುಡ್ ಡಿಫೈನ್ಡ್') ಎಂಬ ತಮ್ಮದೊಂದು ಪುಸ್ತಕದಲ್ಲಿ, ಸಾವರ್ಕರ್ ಅವರ ಹಿಂದೂಗಳು ಮತ್ತು ಮುಸ್ಲಿಮರು ಪ್ರತ್ಯೇಕ ರಾಷ್ಟ್ರೀಯತೆಗಳೇ ಹೌದೆಂದು ಮಂಡಿಸಿದ್ದ ವಾದವನ್ನು ಮುಂದುವರೆಸುತ್ತಾ, ವಿದೇಶೀ ಜನಾಂಗಗಳು ಈ ದೇಶದ ಮೂಲ ಧರ್ಮವಾದ ಹಿಂದೂ ಧರ್ಮ ಮತ್ತು ಮೂಲ ಸಂಸ್ಕೃತಿಯಾದ ಹಿಂದೂ ಸಂಸ್ಕೃತಿಯನ್ನು ಗೌರವಿಸಿ ಅದರ ಭಾಗವಾಗಿ ಹಿಂದೂ ರಾಷ್ಟ್ರ ಕಲ್ಪನೆಯನ್ನು ಮಾನ್ಯ ಮಾಡದಿದ್ದರೆ ಜರ್ಮನಿಯ ವಿದ್ಯಮಾನ ಇಲ್ಲಿಯೂ ಪುನರಾವರ್ತನೆಯಾದೀತು ಎಂದು ಎಚ್ಚರಿಸಿದ್ದರು. ಇದು ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸುವಂತೆ ಮಾಡಿತು ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ವಿಪರ್ಯಾಸವೆಂದರೆ ಜಿನ್ನಾರ ಕಾಂಗ್ರೆಸ್ ವಿರೋಧಿ ರಂಗ ಸೇರಿದ ಸಾವರ್ಕರ್ ಅಧ್ಯಕ್ಷತೆಯ ಹಿಂದೂ ಮಹಾ ಸಭಾ ತನ್ನ ಗಾಂಧಿ ವಿರೋಧಿ ರಾಜಕಾರಣದ ಭಾಗವಾಗಿ ಕ್ರಮೇಣ ಸಿಂಧ್, ವಾಯುವ್ಯ ಗಡಿ ಮತ್ತು ಬಂಗಾಳ ಪ್ರಾಂತ್ಯಗಳಲ್ಲಿನ ಸರ್ಕಾರಗಳಲ್ಲಿ ಪಾಲ್ಗೊಂಡಿತು. ಸಿಂಧ್‌ನ ಸರ್ದಾರ್ ಔರಂಗಜೇಬ್ ಖಾನ್‌ರ ಮುಸ್ಲಿಂ ಲೀಗ್ ಸರ್ಕಾರದಲ್ಲಿ ಅದರ ಅಭ್ಯರ್ಥಿ ಮೆಹರ್‌ಚಂದ್ ಖನ್ನಾ ಹಣಕಾಸು ಮಂತ್ರಿಯೂ ಆದರು! ಅಷ್ಟೇ ಅಲ್ಲ, ಈ ವಿಧಾನಸಭೆಯು ಪ್ರತ್ಯೇಕ ಪಾಕಿಸ್ತಾನದ ಪರವಾದ ನಿರ್ಣಯವನ್ನು ಅಂಗೀಕರಿಸಿದ ಮೇಲೂ ಅದು ಸರ್ಕಾರದಲ್ಲಿ ಉಳಿದಿತ್ತು.

ಆಜ಼ಾದರಿಗೆ ಜಿನ್ನಾರ ಕಟು ಉತ್ತರ–ಆ್ಯಂಡ್ರ್ಯೂಸರ ನಿಧನ

ಅಬುಲ್ ಕಲಾಂ ಆಜ಼ಾದರು ಕಾಂಗ್ರೆಸ್ ಅಧ್ಯಕ್ಷರಾಗಿ ಮುಸ್ಲಿಂ ಲೀಗ್‌ನೊಂದಿಗೆ ರಾಷ್ಟ್ರೀಯ ಐಕ್ಯತೆಯ ಸಾಧ್ಯತೆಗಳನ್ನು ಚರ್ಚಿಸುವ ಪ್ರಯತ್ನದ ಭಾಗವಾಗಿ ಜಿನ್ನಾರಿಗೆ ಪತ್ರವೊಂದನ್ನು ಬರೆದು, ಯುದ್ಧ ಸಮಯದಲ್ಲಿ ಒಂದು ಬಹುಪಕ್ಷೀಯ ರಾಷ್ಟ್ರೀಯ ಸರ್ಕಾರ ರಚನೆಯ ಪರವಾಗಿದ್ದು ಅದರಲ್ಲಿ ಅವರ ಪಕ್ಷ ಭಾಗವಹಿಸಬಯಸುವುದೇ ಎಂದು ಕೇಳಿದರು. ಆದರೆ ಅದಕ್ಕೆ ಬಹು ಒರಟಾದ ಉತ್ತರ ಬರೆದ ಜಿನ್ನಾ, ಆಜ಼ಾದರನ್ನು ಕಾಂಗ್ರೆಸ್‌ನ ಕೈಗೊಂಬೆಯೆಂದೂ ಮುಸ್ಲಿಂ ಸಮುದಾಯದ ಶತ್ರುವೆಂದೂ ನಿಂದಿಸಿ ಅವರೊಡನೆ ಯಾವುದೇ ಚರ್ಚೆಗೆ ತಾನು ಸಿದ್ಧವಿಲ್ಲವೆಂದು ತಿಳಿಸಿದರು.

ಈ ಉತ್ತರವನ್ನು ಜಿನ್ನಾ ಪತ್ರಿಕೆಗಳಿಗೂ ನೀಡಿ, ಅದಕ್ಕೆ ಪ್ರಚಾರ ಸಿಗುವಂತೆ ನೋಡಿಕೊಂಡಿದ್ದರು. ಜೊತೆಗೆ ಅವರು ತಮ್ಮ ಸಾರ್ವಜನಿಕ ಭಾಷಣಗಳಲ್ಲಿ 'ಪಾಕಿಸ್ತಾನ' ಎಂಬ ಹೆಸರನ್ನು ನಿರ್ದಿಷ್ಟವಾಗಿ ಪ್ರಸ್ತಾಪಿಸುತ್ತಿರಲಿಲ್ಲವಾದರೂ, ಅದರ ಕಲ್ಪನೆಯ ಕಿಚ್ಚನ್ನು ಮುಸ್ಲಿಂ ಯುವಜನರಲ್ಲಿ ಹಚ್ಚಿಬಿಟ್ಟಿದ್ದರು.

ಈ ಎಲ್ಲ ಬೆಳವಣಿಗೆಗಳು ಗಾಂಧಿಯವರನ್ನು ದಿಗ್ಮೂಢತೆಗೆ ತಳ್ಳಿಬಿಟ್ಟಿತ್ತು. ಆ ಅವಧಿಯ 'ಹರಿಜನ್' ಪತ್ರಿಕೆಯ ಸಂಚಿಕೆಗಳಲ್ಲಿ 'ಮೊಘಲರ ಆಳ್ವಿಕೆಯಲ್ಲಿ ಒಡೆಯದೆ ಉಳಿದ ರಾಷ್ಟ್ರ, ಈಗ ಹೇಗೆ ಒಡೆಯಲು ಸಾಧ್ಯ?' ಎಂದವರು ಕೇಳಿದರು. 'ಜಿನ್ನಾರೊಡನೆ ಒಡನಾಡಿದವರಾರಿಗೂ ಅವರ ಪೂರ್ಣ ಹೆಸರು ತಿಳಿಯುವ ಮುನ್ನ ಅವರು ಮುಸ್ಲಿಂ ಎಂದು ಗೊತ್ತಾಗದು' ಎಂದು ಉದಾಹರಣೆ ನೀಡಿದರು. 'ಧರ್ಮ ಅಂತರಂಗದ ವಿಷಯ. ಬಾಹ್ಯ ವ್ಯವಹಾರಗಳಿಗೂ ಅದಕ್ಕೂ ಸಂಬಂಧವಿರುವುದಿಲ್ಲ' ಎಂದು ವಿವರಿಸಿದರು. ಕೊನೆಗೆ, ಹತಾಶೆಯಿಂದ 'ಅವರು ಪ್ರತ್ಯೇಕವಾಗಲು ನಿರ್ಧರಿಸಿಯೇ ಬಿಟ್ಟರೆ ನಾವೇನೂ ಮಾಡಲಾರೆವು' ('ಹರಿಜನ್' ೩೦ ಮಾರ್ಚ್, ೧೯೪೦) ಎಂದು ಆರಂಭವಾದ ಅವರ ಈ ಪತ್ರಿಕೆಯ ಮುಕ್ತಾಯದ ಮಾತುಗಳು 'ಅವರು ಪ್ರತ್ಯೇಕವೆಂದು ಹೇಳಿಕೊಂಡರೇನಂತೆ, ನಾನದನ್ನು ಮಾನ್ಯಮಾಡುವುದಿಲ್ಲ ('ಹರಿಜನ್' ೪ ಮೇ, ೧೯೪೦) ಎಂಬ ಸೌಮ್ಯ ವಿರೋಧಕ್ಕೆ ತಿರುಗಿ, ಕೊನೆಗೆ '೭೦೦ ವರ್ಷಗಳ ಮುಸ್ಲಿಂ ಆಳ್ವಿಕೆಯಲ್ಲೂ ಸಾಧ್ಯವಾಗದ ಕೃತ್ಯವನ್ನು ಮಾಡಹೊರಟಿರುವವರು, ಮೊದಲು ನನ್ನನ್ನು ತುಂಡು ತುಂಡು ಮಾಡಿ ಆನಂತರ ದೇಶವನ್ನು ತುಂಡು ಮಾಡಲಿ' ('ಹರಿಜನ್ ಸೇವಕ್', ೧೬ ಸೆಪ್ಟೆಂಬರ್, ೧೯೪೦ರಲ್ಲಿ ಉದ್ಧೃತ) ಎಂಬ ನಿರ್ಣಾಯಕ ಹಂತವನ್ನು ತಲುಪಿತ್ತು.

ಈ ಮಧ್ಯೆ ಗಾಂಧಿಯವರನ್ನು 'ಮೋಹನ್' ಎಂದು ಹೆಸರಿಡಿದು ಕರೆಯುತ್ತಿದ್ದ ಮತ್ತು ಅವರೂ ಅಷ್ಟೇ ಪ್ರೀತಿಯಿಂದ ಚಾರ್ಲಿ ಎಂದು ಆತ್ಮೀಯವಾಗಿ ಕರೆಯುತ್ತಿದ್ದ ಗೆಳೆಯ ಇಂಗ್ಲಿಷ್ ಸಜ್ಜನ ಸಿ.ಎಫ್. ಆ್ಯಂಡ್ರ್ಯೂಸ್, ಕಲ್ಕತ್ತಾದಲ್ಲಿ ನಿಧನ ಹೊಂದಿದ್ದರು. ಹುಟ್ಟಿನಿಂದ ಇಂಗ್ಲಿಷ್‌ನವರಾದರೂ ಬಿಳಿಯರ ಪ್ರಭುತ್ವದ ವಿರುದ್ಧದ ತಮ್ಮ ಹೋರಾಟದ ಜೀವನದುದ್ದಕ್ಕೂ ತಮಗೆ ಆಸರೆಯಾಗಿ ನಿಂತಿದ್ದ ಈ ಗೆಳೆಯನ ಅಗಲಿಕೆಯ ನೋವನ್ನು ಭರಿಸಲು ಗಾಂಧಿಯವರಿಗೆ ಕಷ್ಟವಾಯಿತು. ಆದರೆ ಆ ನೋವನ್ನು ಮರೆಸಲು ಬಂದಂತೆ ಅವರ ಮತ್ತೋರ್ವ ಆಪ್ತ ಗೆಳೆಯ ಕಲೆನ್‌ಬಾಕ್, ಈಗ ಭಾರತದ ಪ್ರವಾಸಕ್ಕೆ ಬಂದು ಸೇವಾಗ್ರಾಮದಲ್ಲಿ ತಂಗಿದ್ದ.

ರಾಜಕೀಯದ ಮಧ್ಯೆ ಬಿಡುವಿನಲ್ಲಿ

ಕಟು ಸವಾಲುಗಳನ್ನು ಎದುರಿಸುತ್ತಿದ್ದ ಈ ಕಾಲಘಟ್ಟದಲ್ಲೂ, ರಾಜಕಾರಣಕ್ಕೆ ಹೊರತಾದ ರಚನಾತ್ಮಕ ಚಟುವಟಿಕೆಗಳಲ್ಲಿ ಗಾಂಧಿಯವರ ಆಸಕ್ತಿಯೇನೂ ಕಡಿಮೆಯಾಗಿರಲಿಲ್ಲ. ಅವರು ವೈಸ್‌ರಾಯ್‌ನನ್ನು ಭೇಟಿ ಮಾಡಲು ಆಗಾಗ್ಗೆ ಸಿಮ್ಲಾಗೆ ಹೋಗುತ್ತಿದ್ದಾಗ ಸಬರ್ಮತಿ ಆಶ್ರಮದ ಹಿಂದಿನ ನಿವಾಸಿ, ಪಾರ್ಚುರೆ ಶಾಸ್ತ್ರಿ ಎಂಬುವವರು ಈಗ ಸಿಮ್ಲಾದಲ್ಲಿದ್ದಾರೆಂದು ತಿಳಿದು ಬಂತು. ಶಾಸ್ತ್ರಿ, ಗಾಂಧಿಯವರು ೧೯೩೨ರಲ್ಲಿ ಯೆರವಾಡ ಸೆರೆಮನೆಯಲ್ಲಿ ಉಪವಾಸ ಸತ್ಯಾಗ್ರಹ ಕೈಗೊಂಡಾಗ, ಅವರೊಂದಿಗೆ ಸಹಬಂದಿಯಾಗಿದ್ದರು. ಆದರೀಗ ಶಾಸ್ತ್ರಿ ಕುಷ್ಠರೋಗದಿಂದ

ನರಳುತ್ತಿದ್ದರು. ಗಾಂಧಿ ಈಗ ಅವರನ್ನು ವರ್ಧಾ ಆಶ್ರಮಕ್ಕೆ ಕರೆತಂದು ೧೯೪೪ರಲ್ಲಿ ಅವರು ನಿಧನರಾಗುವವರೆಗೂ ಸ್ವತಃ ತಾವೇ ಅವರ ಶುಶ್ರೂಶೆ ಮಾಡುತ್ತಿದ್ದರು. ಇದು ಅಲ್ಲಿ ಕುಷ್ಠರೋಗಿಗಳ ಚಿಕಿತ್ಸೆ ಮತ್ತು ಪುನರ್ವಸತಿ ಕೇಂದ್ರವೊಂದನ್ನು ತೆರೆಯಲೂ ಕಾರಣವಾಯಿತು.

ಈ ಕಾಲಘಟ್ಟದಲ್ಲಿ ಸೇವಾಗ್ರಾಮಕ್ಕೆ ಎಂದಿನಂತೆ ಸಂದರ್ಶಕರ ಪ್ರವಾಹ ಹರಿದೇ ಇತ್ತು. ಅವರಲ್ಲಿ ಭಾರತೀಯರೂ, ವಿದೇಶೀಯರೂ ಸೇರಿರುತ್ತಿದ್ದರು. ಇವರಲ್ಲಿ ಭೀಷಮ್ ಮತ್ತು ಬಲರಾಜ ಸಾಹ್ನಿಯವರಂತಹ ಲೇಖಕ–ಕಲಾವಿದರೂ ಇರುತ್ತಿದ್ದರು. ಬಲರಾಜ್ ಆಶ್ರಮವಾಸಿಯೇ ಆಗಿದ್ದರೆ ಭೀಷಮ್ ಆಗಾಗ ಬಂದು ಹೋಗುತ್ತಿದ್ದರು. ನಾಗಪುರದಲ್ಲಿ ನಡೆದ ಆರ್ಥಿಕ ತಜ್ಞರ ಸಮ್ಮೇಳನಕ್ಕೆ ಬಂದ ಕೆಲವರು ವರ್ಧಾಗೂ ಬಂದು ಗಾಂಧಿಯವರನ್ನು ಭೇಟಿ ಮಾಡಿ, ಕೆಲವು ಪ್ರಶ್ನೆಗಳನ್ನು ಹಾಕಿ ಉತ್ತರ ಪಡೆದರು:

'ನೀವು ಸಾಮೂಹಿಕ–ಬೃಹತ್–ಉತ್ಪಾದನೆಯನ್ನು ವಿರೋಧಿಸುತ್ತೀರಂತೆ ಹೌದಾ?'

'ಹೌದು. ಆದರೆ ಅಂತಹ ವಸ್ತುಗಳನ್ನು ಹಳ್ಳಿಗಳಲ್ಲಿ ಉತ್ಪಾದನೆ ಮಾಡಲು ಸಾಧ್ಯವಿದ್ದ ಸಂದರ್ಭದಲ್ಲಿ ಮಾತ್ರ'

'ಗ್ರಾಮ ಮತ್ತು ಕುಟೀರ ಕೈಗಾರಿಕೆಗಳನ್ನೂ ರಾಷ್ಟ್ರೀಕರಿಸಬಹುದೇ?'

'ಖಂಡಿತ, ಅಂತಹ ಕ್ರಮದಿಂದ ಹಳ್ಳಿ ಜನರಿಗೆ ಪ್ರಯೋಜನವಾಗುವಂತಿದ್ದರೆ. ಆದರೆ ಹಳ್ಳಿಗಳಲ್ಲಿ ಉತ್ಪಾದನೆ ಸಾಧ್ಯವಿರುವ ಯಾವ ವಸ್ತುವನ್ನೂ ನಗರಗಳಲ್ಲಿ ಉತ್ಪಾದಿಸಲು ಬಿಡಬಾರದೆಂಬುದೇ ನನ್ನ ಆಗ್ರಹ'

ಇದೇ ವೇಳೆಯಲ್ಲಿ ಆಶ್ರಮಕ್ಕೆ ಆಗಮಿಸಿದ ಕ್ಯಾಪ್ಟನ್ ಸ್ಟಂಕ್ ಎಂಬ ನಾಜಿವಾದಿ ಪತ್ರಕರ್ತ, ಗಾಂಧಿಯವರಿಗೆ ಹಲವು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದ:

'ನಿಮ್ಮ ಪ್ರಕಾರ ಸ್ವಾತಂತ್ರ್ಯ ಎಂದರೇನು?'

'ಜಗತ್ತಿನ ಯಾರೂ ಯಾರ ಅಡಿಯಾಳಾಗಿ ಬಾಳದಂತಿರುವ ಸ್ಥಿತಿ. ನಮ್ಮ ಇಂತಹ ಸ್ವಾತಂತ್ರ್ಯಕ್ಕಾಗಿ ಭಾರತೀಯರು ಹೋರಾಟದಲ್ಲಿ ಸತ್ತಾರೇ ಹೊರತು ಯಾರನ್ನೂ ಸಾಯಿಸಲೊಲ್ಲರು. ಸ್ವಾತಂತ್ರ್ಯಕ್ಕಾಗಿ ರಕ್ತ ಚೆಲ್ಲಾಡುವುದನ್ನು ನಾವು ಒಪ್ಪುವುದಿಲ್ಲ. ಮನುಷ್ಯನ ಘನತೆಯಲ್ಲಿ ನಂಬಿಕೆ ಇಟ್ಟು ನಾವು ನಡೆಸುತ್ತಿರುವ ಪ್ರಯೋಗವಿದು. ಆದರೆ ಮನುಷ್ಯನ ಘನತೆಯಲ್ಲಿ ನಂಬಿಕೆ ಇಡದ ನಿಮ್ಮ ಹಿಟ್ಲರ್‌ಗೆ ನಮ್ಮ ಮಾರ್ಗ ಹಾಸ್ಯಾಸ್ಪದವಾಗಿ ಕಂಡಿದ್ದರೆ ಆಶ್ಚರ್ಯವಿಲ್ಲ'

'ನೀವು ಪಶ್ಚಿಮದ ಔಷಧ ಪದ್ಧತಿಯನ್ನು ವಿರೋಧಿಸುವುದೇತಕ್ಕೆ?'

'ನಾನು ಇಡಿಯಾಗಿ ಆ ಪದ್ಧತಿಯ ಟೀಕಾಕಾರನಲ್ಲ. ಹೆರಿಗೆ ಮತ್ತು ಶಿಶುಪಾಲನೆಯ ಕ್ಷೇತ್ರಗಳಲ್ಲಿ ನಿಮ್ಮಿಂದ ಕಲಿಯುವುದು ಬಹಳವಿದೆ. ಆದರೆ ಮನುಷ್ಯನ ಮರ್ತ್ಯಜೀವನವನ್ನು ಅನಗತ್ಯವಾಗಿ ಮತ್ತು ಕೃತಕವಾಗಿ ವಿಸ್ತರಿಸಬಯಸುವ ಅದರ ಔಷಧಗಳ ಬಗ್ಗೆ ನನ್ನ ವಿರೋಧವಿದೆ. ಯುದ್ಧಗಳ ಮೂಲಕ ಜನರನ್ನು ಸಾವಿನ ದವಡೆಗೆ ತಳ್ಳುವ ನೀವು, ನೈಸರ್ಗಿಕವಾಗಿ ಸಾವಿನ ಮನೆ ಪ್ರವೇಶಿಸಿರುವವರನ್ನು ಕೃತಕ ಮದ್ದುಗಳ ಮೂಲಕ ಬದುಕಿಸಿಕೊಳ್ಳಲು ಮಾಡುವ ನಿಮ್ಮ ಸಾಹಸಗಳು ಮಾತ್ರ ನನಗೆ ವಿಪರ್ಯಾಸವೆನಿಸುತ್ತದೆ.'

ಆ ನಾಜ಼ಿವಾದಿ ಪತ್ರಕರ್ತನಿಗೆ ಗಾಂಧಿ, ಆಗ ತಮ್ಮೊಡನಿದ್ದ ಯೆಹೂದಿ ಮಿತ್ರ ಕಲೆನ್‌ಬಾಕ್‌ರನ್ನು ಪರಿಚಯಿಸಿದಾಗ ಮುಜುಗರಗೊಂಡ ಆತ, 'ಮೊದಲ ಮಹಾಯುದ್ಧದ ನಂತರ ಎಲ್ಲ ಕ್ಷೇತ್ರಗಳನ್ನೂ ಯಹೂದಿಗಳು ಆಕ್ರಮಿಸಿಕೊಂಡು ಮೂಲ ಜರ್ಮನರನ್ನು ಅನಾಥರನ್ನಾಗಿ ಮಾಡಿದ್ದರ ಪ್ರತಿಕ್ರಿಯೆಯಾಗಿ ಈಗ ಯಹೂದ್ಯರ ವಿರುದ್ಧ ಕಾರ್ಯಾಚರಣೆ ನಡೆದಿದೆ' ಎಂಬ ವಿವರಣೆ ಕೊಟ್ಟನಾದರೂ, ಇದೀಗ ಅದು ವಿಪರೀತಕ್ಕೆ ಹೋಗಿದೆ ಎಂದು ಕಳವಳಿಸಿದ.

ಕಾಂಗ್ರೆಸ್‌ಗೆ ಶ್ರೀಮಂತರ ಹಣ: ಒಂದು ಪ್ರಶ್ನೋತ್ತರ

ಸರಿಸುಮಾರು ಇದೇ ಕಾಲಾವಧಿಯಲ್ಲಿ ಗಾಂಧಿಯವರನ್ನು, ಅವರ ಜೀವನ ಚರಿತ್ರೆ ಬರೆಯಲು ಸಿದ್ಧತೆ ನಡೆಸಿದ್ದ ಲೂಯಿ ಫಿಶರ್, ವರ್ಧಾದಲ್ಲಿ ಅವರ ಸಂದರ್ಶನಗಳನ್ನು ಮಾಡುತ್ತಿದ್ದರು. ಅಂತಹ ಒಂದು ಸಂದರ್ಶನದ ಪ್ರಶ್ನೋತ್ತರಗಳನ್ನೂ ಇಲ್ಲಿ ದಾಖಲಿಸಬಹುದು:

'ಕಾಂಗ್ರೆಸ್ ಸಂಸ್ಥೆ ದೊಡ್ಡ ಉದ್ಯಮಪತಿಗಳ ಕೈಯಲ್ಲಿದೆ ಮತ್ತು ಸ್ವತಃ ನೀವು ಬಾಂಬೆ ಗಿರಣಿ ಮಾಲೀಕರಿಂದ ನೆರವು ಪಡೆಯುತ್ತಿರುವಿರಿ ಎಂದು ಕೇಳಿರುವೆ. ಇದೆಷ್ಟು ನಿಜ?'

'ದುರದೃಷ್ಟವಶಾತ್ ಅದು ಸಂಪೂರ್ಣ ನಿಜ. ಕಾಂಗ್ರೆಸ್ ಬಳಿ ತನ್ನ ಕೆಲಸ ಕಾರ್ಯಗಳಿಗೆ ಬೇಕಾದಷ್ಟು ಹಣವಿಲ್ಲ. ಮೊದಲು ಅದು ಪ್ರತಿ ಸದಸ್ಯರಿಂದ ವರ್ಷಕ್ಕೆ ನಾಲ್ಕಾಣೆ ಸದಸ್ಯತ್ವ ಶುಲ್ಕ ಪಡೆದು ಎಲ್ಲ ನಿಭಾಯಿಸಬಹುದು ಎಂದುಕೊಂಡಿತ್ತು. ಆದರೆ ಅದು ಸಾಧ್ಯವಾಗುತ್ತಿಲ್ಲ.'

'ಕಾಂಗ್ರೆಸ್‌ನ ಖರ್ಚು ವೆಚ್ಚಗಳಲ್ಲಿ ಎಷ್ಟು ಭಾಗ ಶ್ರೀಮಂತರಿಂದ ಬರುತ್ತದೆ?'

'ಬಹುತೇಕ ಎಲ್ಲ ಅವರಿಂದಲೇ ಬರುತ್ತದೆ ಎನ್ನಬಹುದು. ನಾವು ಆಶ್ರಮದಲ್ಲಿ ಈಗ ಬದುಕುತ್ತಿರುವುದಕ್ಕಿಂತ ಹೆಚ್ಚು ಬಡತನದಲ್ಲಿ ಬದುಕಲು ಸಾಧ್ಯವಿದೆ. ಆದರೆ ಶ್ರೀಮಂತರಿಂದ ಹಣ ಬರುತ್ತಿರುವುದರಿಂದ ಅದು ಸಾಧ್ಯವಾಗುತ್ತಿಲ್ಲ.'

'ಗಾಂಧಿಯವರನ್ನು ಬಡತನದಲ್ಲಿಡುವ ಕೆಲಸ ತುಂಬ ದುಬಾರಿಯಾದದ್ದು' ಎಂಬ ಸರೋಜಿನಿ ನಾಯ್ಡು ಅವರ ನಗೆಹನಿಯನ್ನೂ, ಅದನ್ನು ಕೇಳಿ ಗಾಂಧಿ ಬಾಯ್ತುಂಬಾ ನಕ್ಕಿದ್ದನ್ನೂ ಫಿಶರ್ ಇಲ್ಲಿ ದಾಖಲಿಸುತ್ತಾ ಮುಂದುವರೆಯುತ್ತಾರೆ:

'ಇದು ಕಾಂಗ್ರೆಸ್ ರಾಜಕಾರಣದ ಮೇಲೆ ಪರಿಣಾಮ ಬೀರುವುದಿಲ್ಲವೆ? ಒಂದು ನೈತಿಕ ಸಂದಿಗ್ಧತೆಗೆ ತಳ್ಳುವುದಿಲ್ಲವೆ?'

'ನಿಜ, ಇದು ಒಂದು ರೀತಿಯ ಸುಪ್ತ ಸಾಲವನ್ನು ಸೃಷ್ಟಿಸುತ್ತದೆ. ಆದರೆ ವಾಸ್ತವದಲ್ಲಿ ನಾವು ಅವರ ಆಲೋಚನೆಗಳಿಂದ ಕಿಂಚಿತ್ತೂ ಪ್ರಭಾವಿತರಾಗುವುದಿಲ್ಲ. ನಿಜ ಹೇಳಬೇಕೆಂದರೆ ನಮ್ಮ ಪೂರ್ಣ ಸ್ವಾತಂತ್ರ್ಯದ ಬೇಡಿಕೆ ಅವರಲ್ಲಿ ಆತಂಕವನ್ನೇ ಉಂಟು ಮಾಡಿದೆ. ಶ್ರೀಮಂತರ ಮೇಲಿನ ಕಾಂಗ್ರೆಸ್‌ನ ಅವಲಂಬನೆ ದುರದೃಷ್ಟಕರ. 'ದುರದೃಷ್ಟಕರ' ಎಂಬ ಶಬ್ದವನ್ನು ನಾನು ಬಳಸುತ್ತಿರುವೆ ಎಂಬುದನ್ನು ನೀವು ಗಮನಿಸಬೇಕು. ಆದರೆ ಈ ಅವಲಂಬನೆ ನಮ್ಮ ನೀತಿ ನಿರ್ಣಯಗಳನ್ನೇನೂ ವಿಕ್ಷಿಪ್ತಗೊಳಿಸಿಲ್ಲ ಎಂದು ನಾನು ಭಾವಿಸಿದ್ದೇನೆ'.

■

೮೩

ಬಿರುಗಾಳಿಯ ಮುನ್ನಾ ದಿನಗಳು

ಭಾರತದಲ್ಲಿ ವಿಭಜನೆಯ ರಾಜಕಾರಣದ ಕಾವು ಏರುತ್ತಿದ್ದಂತೆ ಯೂರೋಪ್‌ನಲ್ಲಿ ಯುದ್ಧರಂಗದಲ್ಲಿ ಹಿಟ್ಲರ್ ಸಂಪೂರ್ಣ ಮೇಲುಗೈ ಸಾಧಿಸತೊಡಗಿದ್ದ. ಆತ ಪೋಲೆಂಡ್ ನಂತರ ನಾರ್ವೆ, ಡೆನ್ಮಾರ್ಕ್ ಮತ್ತು ಫ್ರಾನ್ಸ್‌ಗಳನ್ನು ವಶಪಡಿಸಿಕೊಂಡು ಬ್ರಿಟನ್ನಿನ ಮೇಲೂ ವಾಯುದಾಳಿ ಆರಂಭಿಸಿದ್ದ. ತನ್ನ ಅಸ್ತಿತ್ವಕ್ಕೇ ಸಂಚಕಾರ ಉಂಟಾಗಿದ್ದ ಈ ಪರಿಸ್ಥಿತಿಯನ್ನು ನಿರ್ಣಾಯಕವಾಗಿ ಎದುರಿಸಲು ಬ್ರಿಟಿಷ್ ಸಾಮ್ರಾಜ್ಯ, ತನ್ನ (ಸರ್ವ ಪಕ್ಷಗಳ) ರಾಷ್ಟ್ರೀಯ ಸರ್ಕಾರದ ಪ್ರಧಾನ ಮಂತ್ರಿ ಸ್ಥಾನದಲ್ಲಿ ನೆವಿಲ್ಲೆ ಚೇಂಬರ್‌ಲೇನ್‌ಗೆ ಬದಲಾಗಿ, ಗಟ್ಟಿ ನಿರ್ಧಾರಗಳಿಗೆ ಹೆಸರಾಗಿದ್ದ ವಿನ್‌ಸ್ಟನ್ ಚರ್ಚಿಲ್‌ನನ್ನು ನೇಮಕ ಮಾಡಿತ್ತು. ಕಠಿಣ ಮಾತುಗಳ ಚರ್ಚಿಲ್‌ರನ್ನೂ ಯುದ್ಧದ ಆಘಾತಗಳು ಸ್ವಲ್ಪ ಮೃದು ಮಾಡಿದ್ದವು. ಆತ ಲಂಡನ್‌ನಲ್ಲಿ ತನ್ನನ್ನು ಭೇಟಿಯಾಗಿದ್ದ ಭಾರತದ ಉದ್ಯಮಿ ಜಿ.ಡಿ. ಬಿರ್ಲಾರ ಬಳಿ 'ಗಾಂಧಿಯ ಬಗ್ಗೆ ತಪ್ಪು ತಿಳಿದಿದ್ದೆ. ಅವರು ಅಸ್ಪೃಶ್ಯರ ಬಗ್ಗೆ ತಳೆದಿರುವ ನಿಲುವು ಮತ್ತು ಮಾಡುತ್ತಿರುವ ಕೆಲಸಗಳ ಬಗ್ಗೆ ತಿಳಿದ ಮೇಲೆ ನನಗೆ ಅವರ ಬಗ್ಗೆ ಗೌರವ ಮೂಡಿದೆ' ಎಂದು ಹೇಳಿದರು.

ಹಿಟ್ಲರನ ವಿರುದ್ಧ ಅಹಿಂಸೆಯ ಅಸ್ತ್ರ: ಗಾಂಧಿ ಸಲಹೆ

ಈ ಸಂದರ್ಭದಲ್ಲಿ ಗಾಂಧಿ ವೈಸ್‌ರಾಯ್‌ರನ್ನು ಭೇಟಿ ಮಾಡಿ ಬ್ರಿಟನ್ ಮತ್ತು ಅದರ ಮಿತ್ರ ದೇಶಗಳು ಜರ್ಮನಿಯೊಂದಿಗೆ ಶಾಂತಿ ಮಾತುಕತೆಗೆ ಮುಂದಾಗುವಂತೆ ಸೂಚಿಸಿದರು. ಅಗತ್ಯಬಿದ್ದರೆ ತಾವು ಇದಕ್ಕಾಗಿ ಏನು ಮಾಡಲೂ ಸಿದ್ಧವೆಂದು ಹೇಳಿದರು. ಬ್ರಿಟಿಷರು ಜರ್ಮನಿಯ ದಾಳಿಯನ್ನು ಅಹಿಂಸಾತ್ಮಕವಾಗಿ ಎದುರಿಸಬೇಕೆಂದೂ ಅವರು ಸೂಚಿಸಿದರು. ಅಂದರೆ ಬ್ರಿಟನ್ ಜನ ಮತ್ತು ಸರ್ಕಾರ ತಮ್ಮ ಮನೆ-ಮಠ ಮತ್ತು ಕಟ್ಟಡಗಳನ್ನು ತೆರವುಗೊಳಿಸಿ ಹಿಟ್ಲರನ ಸೇನೆಗೊಪ್ಪಿಸಿ ಆತ್ಮಾರ್ಪಣೆಯನ್ನು ಆರಂಭಿಸಬೇಕೆಂಬುದು ಅವರ ಸಲಹೆಯಾಗಿತ್ತು. ಈ ಮೂಲಕ ತಾವು ಪಶುಬಲಕ್ಕೆ ಶರಣಾಗಲು ಇಚ್ಛಿಸದೆ ಅವನ ಆಕ್ರಮಣಶೀಲತೆಯನ್ನು ಧಿಕ್ಕರಿಸಿ, ಮನುಷ್ಯ ನಾಗರೀಕತೆಯಲ್ಲಿ ಆತ್ಮಗೌರವದ ಪಾರಮ್ಯವನ್ನು ಸಾರುವ ಮೂಲಕ ಜರ್ಮನ್ ಜನರ ಆತ್ಮಸಾಕ್ಷಿಯನ್ನು ಸ್ಪರ್ಶಿಸುವಂತಾಗುತ್ತದೆ ಎಂಬುದು ಅವರ ಭಾವನೆಯಾಗಿತ್ತು. ಹಾಗೇ, ಹಿಟ್ಲರ್ ಎಲ್ಲವನ್ನೂ ವಶಪಡಿಸಿಕೊಂಡು ಏನು ಮಾಡಬಲ್ಲ? ಹೆಚ್ಚೆಚ್ಚು ದೇಶಗಳನ್ನು ವಶಪಡಿಸಿಕೊಂಡಷ್ಟೂ ಅವನ್ನು ಆಳುವ ತಲೆನೋವು ಹೆಚ್ಚುತ್ತಾ ಹೋಗಿ ಅವನ ಉತ್ಸಾಹ, ರಣಕೆಚ್ಚು ಮತ್ತು ಚೈತನ್ಯಗಳು ಕುಸಿಯುತ್ತಾ ಹೋಗಿ ಕೊನೆಗೆ ಅವನು ದಣಿದು ಬಟ್ಟ ಬರಿದಾಗುತ್ತಾನೆ ಎಂಬುದು ಅವರ ಅಹಿಂಸಾತ್ಮಕ ಪ್ರತಿರೋಧದ ಆಲೋಚನಾ ಲಹರಿಯಾಗಿತ್ತು.

ಗಾಂಧಿಯವರ ಸಲಹೆಯನ್ನು, ಯುದ್ಧ ಪರಿಸ್ಥಿತಿ ಇಂತಹ ಸಂಧಾನ ಅಥವಾ ಪರಿಹಾರಗಳ ಸಾಧ್ಯತೆಗಳನ್ನು ಮೀರಿ ಹೋಗಿದೆ ಎಂದು ತಳ್ಳಿ ಹಾಕಿದ ಬ್ರಿಟಿಷ್ ಸರ್ಕಾರ, ತನ್ನ ಅತಿ ಕಷ್ಟದ ಈ ಕಾಲದಲ್ಲಿ ಕಾಂಗ್ರೆಸ್ ಯುದ್ಧದಲ್ಲಿ ಸಹಕರಿಸುವುದಾದರೆ ಯುದ್ಧಾನಂತರದ ಒಂದು ವರ್ಷದಲ್ಲಿ ಭಾರತಕ್ಕೆ ರಾಜ ಸಂಸ್ಥಾನಗಳ ಮತ್ತು ಅಲ್ಪಸಂಖ್ಯಾತರ ಒಪ್ಪಿಗೆಗಳನ್ನನುಸರಿಸಿ ಮತ್ತು ಬ್ರಿಟಿಷ್ ವ್ಯಾಪಾರಿ ಹಿತಾಸಕ್ತಿಗಳನ್ನು ಗಮನಿಸಿಕೊಂಡು ಸ್ವಾಯತ್ತ ಆಶ್ರಯ ರಾಷ್ಟ್ರದ ಸ್ಥಾನಮಾನ ನೀಡುವುದಾಗಿ ಹೇಳಿತು. ಗಾಂಧಿ ಪೂರ್ಣ ಸ್ವಾತಂತ್ರ್ಯವನ್ನು ಆಗ್ರಹಿಸಿದರು. ಆದರೆ ವೈಸ್‌ರಾಯ್ ತನ್ನ ಕಾರ್ಯನಿರ್ವಾಹಕ ಆಡಳಿತ ಮಂಡಳಿಗೆ ಹೆಚ್ಚು ಭಾರತೀಯರನ್ನು ಸೇರಿಸಿಕೊಳ್ಳುವ ರಿಯಾಯಿತಿವರೆಗೆ ಮಾತ್ರ ತಾನು ಹೆಜ್ಜೆ ಇಡಬಲ್ಲೆ ಎಂದು ಹೇಳಿದ.

ಆದರೆ ಯುದ್ಧದ ಪರಿಣಾಮಗಳು ಜನರ ಮೇಲೆ ಒತ್ತಡಗಳನ್ನು ನಿರ್ಮಿಸಿ ಅವರ ಅಶಾಂತಿಯನ್ನು ಹೆಚ್ಚಿಸತೊಡಗಿತ್ತು. ಬಲಾತ್ಕಾರದ ಕರ ಸಂಗ್ರಹಣೆ ಮತ್ತು ಯುದ್ಧ ನಿಧಿ ವಸೂಲಿ, ಯುದ್ಧ ಲಾಟರಿ ಟಿಕೆಟ್ ಮತ್ತು ಪ್ರೋತ್ಸಾಹ ಚೀಟಿಗಳ ಹೇರಿಕೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಯುದ್ಧ ರಂಗದಲ್ಲಿನ ಬ್ರಿಟಿಷ್ ಯೋಧರಿಗೆ ಆಹಾರ ಒದಗಿಸಲು ಹೆಚ್ಚಿದ ಗೋಹತ್ಯೆಗಳು ಅವರನ್ನು ಪ್ರಭುತ್ವದ ವಿರುದ್ಧ ಬಂಡೇಳಲು ಸಿದ್ಧಗೊಳಿಸಿದ್ದವು.

ಅಹಿಂಸೆಯ ವ್ರತ: ಕಾಂಗ್ರೆಸ್‌ನಿಂದ ದೂರ ಕಾಪಾಡಿಕೊಂಡ ಗಾಂಧಿ

ಇಂತಹ ನಾಜೂಕಿನ ಪರಿಸ್ಥಿತಿಯ ಹಿನ್ನೆಲೆಯಲ್ಲಿ ೧೯೪೦ರ ಜುಲೈನಲ್ಲಿ ದೆಹಲಿಯಲ್ಲಿ ಸಭೆ ಸೇರಿದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ, ರಾಜಾಜಿಯವರು ಸಿದ್ಧಪಡಿಸಿದ್ದ ನಿರ್ಣಯದ ಬಗ್ಗೆ ಚರ್ಚಿಸಿ ಅದನ್ನು ಅಂಗೀಕರಿಸಿತು. ಅದು ಯುದ್ಧಾನಂತರ ಸಂಪೂರ್ಣ ಸ್ವಾತಂತ್ರ್ಯದ ಘೋಷಣೆಗೆ ಬದ್ಧವಾಗಿ, ಈಗ ಕೇಂದ್ರ ಶಾಸನ ಸಭೆಯಲ್ಲಿನ ಚುನಾಯಿತ ಸದಸ್ಯರನ್ನೊಳಗೊಂಡ ರಾಷ್ಟ್ರೀಯ ಸರ್ಕಾರ ರಚಿಸಲೊಪ್ಪುವುದಾದರೆ, ಕಾಂಗ್ರೆಸ್ ಯುದ್ಧಕ್ಕೆ ಎಲ್ಲ ರೀತಿಯ ಸಹಕಾರ ನೀಡುವುದಾಗಿ ಹೇಳಿತ್ತು. ಗಾಂಧಿ ಈ ನಿರ್ಣಯದಲ್ಲಿನ ಯುದ್ಧಕ್ಕೆ ಎಲ್ಲ ರೀತಿಯ ಸಹಕಾರದ ಮಾತುಗಳನ್ನು, ಅದರಲ್ಲಿ ಯುದ್ಧದ ಹಿಂಸೆಯನ್ನು ಮಾನ್ಯ ಮಾಡಲಾಗಿದೆ ಎಂಬ ಕಾರಣಕ್ಕೆ ತಾವು ಒಪ್ಪುವುದಿಲ್ಲವೆಂದು ಹೇಳಿದರು. ಆದರೆ ನೆಹರೂ, ಪಟೇಲ್ ಮತ್ತು ರಾಜಾಜಿ ಎಂಬ ಅವರ ಪ್ರಿಯ ತ್ರಿಮೂರ್ತಿ ಶಿಷ್ಯರನ್ನೊಳಗೊಂಡಂತೆ ಕಾರ್ಯಕಾರಿ ಸಮಿತಿ ಗಾಂಧಿಯವರ ಆಕ್ಷೇಪಣೆಯನ್ನು ತಿರಸ್ಕರಿಸಿತು. ಗಾಂಧಿ, ತಾವು ಹಾಗಾದರೆ ಈ ನಿರ್ಣಯದಿಂದ ದೂರವಿರುವುದಾಗಿ ತಿಳಿಸಿದರು. ಬಹುಶಃ ಇದು ಕಾಂಗ್ರೆಸ್‌ನ ನೀತಿ ನಿರ್ಧಾರಗಳ ಪ್ರಕ್ರಿಯೆಯಿಂದ ಗಾಂಧಿ ಕ್ರಮೇಣ ದೂರವಾಗತೊಡಗಿದ ನಿರ್ಣಾಯಕ ಸಂದರ್ಭವೂ ಆಗಿತ್ತೆನ್ನಬಹುದು. ಈ ಸಂದರ್ಭವನ್ನು ರಾಜ್‌ಮೋಹನ್ ಗಾಂಧಿಯವರು ತಮ್ಮ 'ಮೋಹನದಾಸ' ಕೃತಿಯಲ್ಲಿ ವಿವರಿಸಿರುವುದು ಹೀಗೆ: 'ಕಾಂಗ್ರೆಸ್, ಗಾಂಧಿಯವರಿಂದ ಬ್ರಿಟಿಷ್ ಸರ್ಕಾರದೆಡೆಗೆ, ಚರಕದಿಂದ ಸಿಡಿಮದ್ದಿನೆಡೆಗೆ ಚಲಿಸಿದಂತಿತ್ತು. ಅದರ ನಾಯಕರಿಗೆ ತಮಗೆ ವಯಸ್ಸಾಗುತ್ತಿದೆ, ಪರಿಸ್ಥಿತಿ ಕೈಮೀರಿ ಹೋಗಿ, ಅಧಿಕಾರದ ಆಸೆ ಕೈಬಿಟ್ಟ ಹಂತ ತಲುಪುತ್ತಿದ್ದೇವೆ ಎಂಬ ಕಳವಳ ಅವರನ್ನು ಕಾಡುತ್ತಿರುವಂತಿತ್ತು'. ಈ ಸಂದರ್ಭದಲ್ಲಿ ಗಾಂಧಿ ನೀಡಿದ ಹೇಳಿಕೆಯೆಂದು ರಾಜ್‌ಮೋಹನರು ಉಲ್ಲೇಖಿಸುವ ಈ ಮಾತುಗಳೂ ಗಮನಾರ್ಹವಾಗಿವೆ: 'ನನಗೆ ಈಗ

ನಿಜವಾಗಿ ದೂರದ ಪ್ರಶಾಂತ ಜಾಗವೊಂದಕ್ಕೆ ಓಡಿ ಹೋಗಬೇಕೆನಿಸುತ್ತಿದೆ, ಬೇಸರ ಜಿಗುಪ್ಸೆಗಳನ್ನು ಕಳೆಯುವ ವಿಶ್ರಾಂತಿಗಲ್ಲ, ನಾನು ಇಂದು ಏನಾಗಿ ಹೋಗಿದ್ದೇನೆ, ಎಲ್ಲಿ ಬಂದು ನಿಂತಿದ್ದೇನೆ ಎಂದು ಅರಿಯಲು ಮತ್ತು ನನ್ನ ಮುಂದಿನ ಹೆಜ್ಜೆಯ ಬಗ್ಗೆ ಈಗ ಕ್ಷೀಣವಾಗಿ ಹೋಗಿರುವ ನನ್ನ ಅಂತರಂಗದ ದನಿಯನ್ನು ಎಚ್ಚರದಿಂದ ಆಲಿಸಲು' ಅವರಿಗೆ ತಮ್ಮ ಎಲ್ಲ ಸಂದಿಗ್ಧ ಸಂದರ್ಭಗಳಲ್ಲೂ ಆಪ್ತ ಸಖನಂತಿದ್ದ ರಾಜಾಜಿಯೂ ಈಗ ತಮಗೆ ವಿರೋಧವಾಗಿರುವುದು ಅವರಿಗೆ ಹೆಚ್ಚಿನ ನೋವನ್ನುಂಟು ಮಾಡಿತ್ತು.

ಈ ಮಧ್ಯೆ ಕಾಂಗ್ರೆಸ್‌ನ ನಿರ್ಣಯದ ವಿರುದ್ಧ ಇಬ್ಬರು ಯುವನಾಯಕರಿಂದ ವಿರೋಧ ಧ್ವನಿಗಳೂ ಕೇಳಿ ಬಂದಿದ್ದವು. ಆದರೆ ಈ ವಿರೋಧ ಗಾಂಧಿಯವರ ನಿಲುವಿಗೆ ಸಹಾನುಭೂತಿಯನ್ನು ವ್ಯಕ್ತಪಡಿಸುವಂಥವೇನೂ ಆಗಿರಲಿಲ್ಲ. ಆ ಧ್ವನಿಗಳು ಕೇಳಿ ಬಂದದ್ದು, ಸೆರೆಮನೆಯಲ್ಲಿದ್ದ ಸುಭಾಷ್‌ಚಂದ್ರ ಬೋಸ್ ಮತ್ತು ಜಯಪ್ರಕಾಶ್ ನಾರಾಯಣರಿಂದ. ಅವರು ಸರ್ಕಾರದತ್ತ ಕಾಂಗ್ರೆಸ್ ಚಾಚಿದ್ದ ಸಹಕಾರ ಹಸ್ತವನ್ನು ಖಂಡಿಸಿ ಕೂಡಲೇ ಸರ್ಕಾರದ ವಿರುದ್ಧ ಅಸಹಕಾರ ಸತ್ಯಾಗ್ರಹವನ್ನು ಆರಂಭಿಸುವಂತೆ ಆಗ್ರಹಿಸಿದ್ದರು.

ವೈಸ್‌ರಾಯ್‌ನಿಂದ ಮುಖಭಂಗ : ಮತ್ತೆ ಗಾಂಧಿಗೆ ಶರಣಾದ ಕಾಂಗ್ರೆಸ್

ಅದೇನೇ ಇದ್ದರೂ ವೈಸ್‌ರಾಯ್, ಕಾಂಗ್ರೆಸ್‌ನ ಈ ಸಹಕಾರ ಹಸ್ತವನ್ನು ಒಪ್ಪಿಕೊಳ್ಳಲು ನಿರಾಕರಿಸಿದನಲ್ಲದೆ ಗಾಯದ ಮೇಲೆ ಉಪ್ಪು ಸವರಿದಂತೆ, ದೇಶದಲ್ಲೀಗ ಕಾಂಗ್ರೆಸ್ ಹೊರತಾಗಿ ತಾನು ಆಲಿಸಬೇಕಾದ ಹಲವು ಪ್ರಮುಖ ಧ್ವನಿಗಳಿವೆ ಎಂದು ತಿಳಿಸಿದ್ದ. ಇದರಿಂದ ವ್ಯಗ್ರವಾದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ, ಮತ್ತೆ ಗಾಂಧಿಯವರಿಗೇ ಶರಣಾಗಿ ಪರ್ಯಾಯ ಮಾರ್ಗ ಸೂಚಿಸುವಂತೆ ಅವರನ್ನು ಕೋರಿತು. ಹಿಟ್ಲರನ ಪಾಶವೀ ನೀತಿ ಮತ್ತು ಕ್ರೌರ್ಯ ಮತ್ತು ಅದರ ವಿನಾಶಕಾರಿ ಪರಿಣಾಮಗಳನ್ನು ಮುನ್ನೋಡಬಲ್ಲವರಾಗಿ, ಇದರ ವಿರುದ್ಧ ಸೆಣಸಾಡುತ್ತಿದ್ದ ಬ್ರಿಟನ್ ಬಗ್ಗೆ ಸಹಜ ಸಹಾನುಭೂತಿ ಹೊಂದಿದ್ದ ಗಾಂಧಿ, ಅದೇ ವೇಳೆಯಲ್ಲಿ ತನ್ನ ದೇಶದ ಜನರ ಹಿತಾಸಕ್ತಿಯನ್ನೂ ಕಾಪಾಡಬೇಕಿದ್ದುದರಿಂದ, ಸರ್ಕಾರದ ವಿರುದ್ಧ ಸಾಂಕೇತಿಕ ಅಸಹಕಾರ ಸತ್ಯಾಗ್ರಹ ಆರಂಭಿಸುವ ಸಲಹೆ ನೀಡಿದರು. ಅದನ್ನು ವೈಯಕ್ತಿಕ ಸತ್ಯಾಗ್ರಹ ಎಂದು ಕರೆದರು. ಇದು ಕಾಯಾ ವಾಚಾ ಮನಸಾ ಸಂಯಮಪೂರ್ಣ ಮತ್ತು ಅಹಿಂಸಾತ್ಮಕವಾಗಿರಬೇಕೆಂಬುದು ಗಾಂಧಿಯವರ ಸೂಚನೆಯಾಗಿತ್ತು. ಏಕೆಂದರೆ ಅದು ಎಲ್ಲಿಯಾದರೂ ಹದ ತಪ್ಪಿ ಹಿಂಸೆಗೆ ಕಾರಣವಾಗಿ ಮೊದಲೇ ಅಪಾಯದ ಸ್ಥಿತಿಯಲ್ಲಿರುವ ಬ್ರಿಟಿಷ್ ಸರ್ಕಾರಕ್ಕೆ ಮಿತಿಮೀರಿದ ಕಿರಿಕಿರಿಯನ್ನುಂಟು ಮಾಡಿದರೆ, ಅದನ್ನು ನಾವೇ ಮುಸ್ಲಿಂ ಲೀಗ್ ಮತ್ತದರ ಮಿತ್ರ ಪಕ್ಷಗಳತ್ತ ದೂಡಿದಂತಾಗುತ್ತದೆ ಎಂಬುದು ಅವರ ಚಿಂತನೆಯಾಗಿತ್ತು. ಎಲ್ಲಕ್ಕಿಂತ ಮೊದಲು ತಾನು ಸತ್ಯಾಗ್ರಹ ನಡೆಸಲಿರುವ ಆಯ್ದ ಜಾಗಗಳನ್ನು ಜಿಲ್ಲಾ ಮ್ಯಾಜಿಸ್ಟ್ರೇಟರುಗಳಿಗೆ ತಿಳಿಸಿ ಸತ್ಯಾಗ್ರಹದ ಭಾಗವಾಗಿ ಜನರಿಗೆ ಅಲ್ಲಿನ ಪ್ರಾಂತೀಯ ಭಾಷೆಯಲ್ಲಿ ಈ ಕರೆಯನ್ನು ನೀಡಬೇಕಿತ್ತು: 'ಯುದ್ಧಕ್ಕೆ ಪೂರಕವಾಗಿ ಹಣ ಅಥವಾ ಜನರ ರೂಪದಲ್ಲಿ ಬ್ರಿಟಿಷ್ ಸರ್ಕಾರಕ್ಕೆ ನೆರವಾಗುವುದು ತಪ್ಪು. ಈ ವಿಷಯದಲ್ಲಿ ನಾವು ಮಾಡಬಹುದಾದ ಅತ್ಯುತ್ತಮ ಕೆಲಸವೆಂದರೆ ಎಲ್ಲ ಯುದ್ಧ ಸಾಹಸಗಳನ್ನೂ ಅಹಿಂಸಾತ್ಮಕ ಮಾರ್ಗದ ಮೂಲಕ

ಪ್ರತಿರೋಧಿಸುವುದು.' ಜೊತೆಗೆ ಸತ್ಯಾಗ್ರಹಿ, ಈ ಮಾತುಗಳನ್ನೂ ಹೇಳಬೇಕಿತ್ತು: 'ಬ್ರಿಟಿಷ್ ಜನರು ಬದುಕುಳಿಯಬೇಕು ಎಂಬುದು ನಮ್ಮ ಇಚ್ಛೆಯೂ ಆಗಿದ್ದು, ಆದರೆ ಅವರು ಮಾನವ ಜನಾಂಗದ ಜೊತೆಯಾಗಿ ಬದುಕುವುದೂ ಮುಖ್ಯವೆಂಬುದು ನಮ್ಮ ಭಾವನೆಯಾಗಿದೆ.'

ವೈಯಕ್ತಿಕ ಸತ್ಯಾಗ್ರಹ ಆರಂಭ–ಸೆರೆಮನೆ ಸೇರಿದ ನಾಯಕರು

೭೧ ವರ್ಷಗಳ ವಯಸ್ಸನ್ನು ಮುಟ್ಟಿದ್ದ ಗಾಂಧಿ, ಇದು ತಮ್ಮ ಜೀವಿತದ ಕೊನೆಯ ಸತ್ಯಾಗ್ರಹ ಎಂದು ಭಾವಿಸಿ ಅದನ್ನು ಆದಷ್ಟೂ ಅದರ ಪರಿಪೂರ್ಣತೆಯಲ್ಲಿ ಅನುಷ್ಠಾನಗೊಳಿಸಲು ನಿರ್ಧರಿಸಿದರು. ಅದಕ್ಕಾಗಿ ಮೊದಲ ವೈಯಕ್ತಿಕ ಸತ್ಯಾಗ್ರಹಿಯಾಗಿ ಆರಿಸಿದ್ದು ತಮ್ಮ ವಿಧೇಯ ಶಿಷ್ಯ ವಿನೋಬಾ ಭಾವೆಯವರನ್ನು. ವಿನೋಬಾ ಭಾವೆಯವರು ಅಕ್ಟೋಬರ್ ೧೭ರಂದು ಈ ವೈಯಕ್ತಿಕ ಸತ್ಯಾಗ್ರಹವನ್ನು ಹಳ್ಳಿಯಿಂದ ಹಳ್ಳಿಗೆ ಸಂಚರಿಸಿ ಯುದ್ಧದ ಕೆಡುಕುಗಳನ್ನು ವಿವರಿಸುತ್ತಾ, ಯುದ್ಧಕ್ಕಾಗಿ ಜನ ಯಾವುದೇ ರೀತಿಯ ಸಹಕಾರ ನೀಡಬಾರದೆಂದು ಭಾಷಣಗಳನ್ನು ಮಾಡತೊಡಗಿದರು. ಅಂದೇ ಅವರನ್ನು ಬಂಧಿಸಲಾಯಿತು. ಮಾರನೆಯ ದಿನ 'ಹರಿಜನ್' ಪತ್ರಿಕೆಯ ಪ್ರಕಟಣೆಯನ್ನು ನಿಷೇಧಿಸಿ ಸರ್ಕಾರ ಆಜ್ಞೆ ಹೊರಡಿಸಿತು. ಗಾಂಧಿ, ಪತ್ರಿಕೆಯ ಹಿಂದಿ ಮತ್ತು ಗುಜರಾತಿ ಆವೃತ್ತಿಗಳಾದ 'ಹರಿಜನ್ ಬಂಧು' ಮತ್ತು 'ಹರಿಜನ್ ಸೇವಕ್' ಪತ್ರಿಕೆಗಳ ಪ್ರಕಟಣೆಗಳನ್ನೂ ನಿಲ್ಲಿಸಿ, ಜನರೇ ಮೌಖಿಕ ಪತ್ರಿಕೆಗಳಾಗಿ ಕೆಲಸ ಮಾಡಬೇಕಾದ ಕಾಲವೀಗ ಬಂದಿದೆ ಎಂದು ಕರೆ ಕೊಟ್ಟರು ಮತ್ತು ಎರಡನೆಯ ವೈಯಕ್ತಿಕ ಸತ್ಯಾಗ್ರಹಿಯಾಗಿ ಜವಾಹರಲಾಲ್ ನೆಹರೂ ಅವರನ್ನು ಆರಿಸಿದರು. ಸರ್ಕಾರ ಅವರನ್ನು, ಅವರು ಈ ಮುನ್ನ ಮಾಡಿದ್ದರೆಂದು ಹೇಳಲಾದ ರಾಜದ್ರೋಹದ ಭಾಷಣಗಳನ್ನು ಉಲ್ಲೇಖಿಸಿ, ಬಂಧಿಸಿ ನಾಲ್ಕು ವರ್ಷಗಳ ಶಿಕ್ಷೆ ವಿಧಿಸಿತು. ಇದರಿಂದ ಕೊಂಚ ಅಧೀರರಾದ ಗಾಂಧಿ, ಈ ಸಂಬಂಧ ಉಪವಾಸ ಆರಂಭಿಸಬೇಕೆಂದಿದ್ದವರು, ಮಾಡಬೇಕಾದ ತುರ್ತು ಕೆಲಸಗಳನ್ನು ನೆನೆದು ವೈಯಕ್ತಿಕ ಸತ್ಯಾಗ್ರಹಕ್ಕಾಗಿ ಅರ್ಹರ ಪಟ್ಟಿಯನ್ನು ಸಿದ್ಧಪಡಿಸತೊಡಗಿದರು. ಈ ಸತ್ಯಾಗ್ರಹ ಮಾಡುವವರು ನಾಲ್ಕು ಅಂಶಗಳಿಗೆ ಬದ್ಧರಾಗಿರಬೇಕಿತ್ತು. ಅವೆಂದರೆ: ಅಹಿಂಸೆ, ನೂಲುವುದು, ಹಿಂದೂ–ಮುಸ್ಲಿಂ ಸೌಹಾರ್ದ ಮತ್ತು ಜಾತಿ ತಾರತಮ್ಯ ಹಾಗೂ ಅಸ್ಪೃಶ್ಯತೆಗೆ ವಿರೋಧ.

ಇದರೊಂದಿಗೆ ದೇಶಾದ್ಯಂತ ವಿವಿಧ ಪ್ರಾಂತ್ಯಗಳಲ್ಲಿಯೂ ವೈಯಕ್ತಿಕ ಕಾನೂನು ಭಂಗ ಚಳುವಳಿ ಆರಂಭವಾಗಿ ನೂರಾರು, ಸಾವಿರಾರು ಜನ ಬಂಧಿತರಾಗತೊಡಗಿ ಮತ್ತೆ ಸೆರೆಮನೆಗಳು ತುಂಬತೊಡಗಿದವು. ವರ್ಷಾಂತ್ಯದ ವೇಳೆಗೆ ಪಟೇಲ್, ಪ್ರಸಾದ್, ರಾಜಾಜಿಯಂತಹ ಮೊದಲ ಸಾಲಿನ ರಾಷ್ಟ್ರೀಯ ನಾಯಕರಲ್ಲದೆ ಎರಡನೆಯ ಸಾಲಿನ ನಾಯಕರೆನಿಸಿದ ಜೆಪಿ, ಲೋಹಿಯಾ ಮತ್ತಿತರ ಸಮಾಜವಾದಿಗಳ ದಂಡೂ ಯುದ್ಧವಿರೋಧಿ ಭಾಷಣಗಳನ್ನು ಮಾಡಿ, ಒಟ್ಟು ೧೫ ಸಾವಿರಕ್ಕೂ ಮೀರಿದ ಸಂಖ್ಯೆಯ ಸತ್ಯಾಗ್ರಹಿಗಳೊಂದಿಗೆ ಸೆರೆಮನೆ ಸೇರಿದ್ದರು. ಇವರಲ್ಲಿ ಬಹುಪಾಲು ಪ್ರಾಂತೀಯ ಶಾಸನ ಸಭೆಗಳ ಕಾಂಗ್ರೆಸ್ ಸದಸ್ಯರಿದ್ದರು. ಲೋಹಿಯಾರಂತಹ ಕೆಲವರು ನ್ಯಾಯಾಲಯಗಳಲ್ಲಿ ತಮ್ಮ ಪರ ತಾವೇ ವಾದ ಮಂಡಿಸಿ ಗೆದ್ದು ಸೆರೆಮನೆಗಳಿಂದ ಹೊರಗೆ ಬಂದಿದ್ದುದೂ ಉಂಟು.

೧೯೪೦ರ ಡಿಸೆಂಬರ್ ಕೊನೆಯ ವಾರದಲ್ಲಿ ಗಾಂಧಿ ಕ್ರಿಸ್‌ಮಸ್ ಮತ್ತು ಹೊಸವರ್ಷಾಚರಣೆಗಾಗಿ ಅಧಿಕಾರಿಗಳಿಗೆ ಬಿಡುವು ಕೊಡುವ ದೃಷ್ಟಿಯಿಂದ, ಹತ್ತು ದಿನಗಳ ಕಾಲ ಸತ್ಯಾಗ್ರಹವನ್ನು ಸ್ಥಗಿತಗೊಳಿಸಿರುವುದಾಗಿ ಪ್ರಕಟಿಸಿದರು. ನಂತರದಲ್ಲೇ ಅವರು ಹಿಟ್ಲರ್‌ನಿಗೊಂದು ಬಹಿರಂಗ ಪತ್ರ ಬರೆದು ಶಾಂತಿಗಾಗಿ ಮನವಿ ಮಾಡಿದರು. 'ಇತಿಹಾಸದಲ್ಲಿ ನಿನ್ನ ಜನ ತಲೆ ಎತ್ತಿ ತಿರುಗುವಂತಹ ಯಾವ ಮೌಲ್ಯವನ್ನೂ ನೀನು ಉಳಿಸಿಲ್ಲ. ನಿಜ, ಜರ್ಮನಿ ಈಗ ಯುದ್ಧ ತಂತ್ರಜ್ಞಾನದಲ್ಲಿ ಪರಿಣತಿ ಸಾಧಿಸಿದೆ. ಆದರೆ ಅದನ್ನು ಮೀರಿದ ಪರಿಣತಿಯನ್ನು ಇನ್ನೊಂದು ದೇಶ ಎಂದಾದರೂ ಸಾಧಿಸಿಯೇ ಸಾಧಿಸುತ್ತದೆ. ಆಗ ಜರ್ಮನಿಯ ಗತಿ ಏನಾಗಬೇಡ, ಯೋಚಿಸು.' ಎಂದು ಅವರು ಬರೆದಿದ್ದರು. ಈ ಪತ್ರವನ್ನೂ ಬ್ರಿಟಿಷ್ ಸರ್ಕಾರ ತಡೆಹಿಡಿಯಿತು. ಇದೇ ಸಂದರ್ಭದಲ್ಲಿ ಮಹದೇವ ದೇಸಾಯಿ ಮತ್ತು ವೈಸ್‌ರಾಯ್‌ರ ಖಾಸಗಿ ಕಾರ್ಯದರ್ಶಿ ಗಿಲ್ಬರ್ಟ್ ಲೈತ್‌ವೈಟ್ ಪರಸ್ಪರ ಭೇಟಿಯಾಗಿ ಮಾತುಕತೆ ನಡೆಸಿದ್ದರು. ಆ ಮಾತುಕತೆಯಲ್ಲಿ ಮಹದೇವ ದೇಸಾಯಿಯವರು ಅಂತಾರಾಷ್ಟ್ರೀಯ ಸಮುದಾಯವನ್ನು ಅಹಿಂಸೆಗೆ ಬದ್ಧರನ್ನಾಗಿಸುವುದೇ ಗಾಂಧಿಯವರ ಗುರಿಯಾಗಿದೆ ಎಂದು ಲೈತ್‌ವೈಟ್‌ಗೆ ತಿಳಿಸಿದರು.

ಸುಭಾಷರ ಪರಾರಿ–ಜಯಪ್ರಕಾಶರ ಕೋಪ!

೧೯೪೧ರ ಜನವರಿಯಲ್ಲಿ, ಗೃಹಬಂಧನದಲ್ಲಿದ್ದ ಸುಭಾಷರು ಕಾಣೆಯಾದ ಸುದ್ದಿ ಹೊರಬಂತು. ಅವರು ಜರ್ಮನಿಯ ಮಿತ್ರರಾಷ್ಟ್ರ ಜಪಾನ್‌ಗೆ ಪಲಾಯನ ಮಾಡಿರುವ ವದಂತಿಯೂ ಹರಡಿತು. ಜೂನ್‌ನಲ್ಲಿ ಜರ್ಮನಿ ರಷ್ಯಾದ ಮೇಲೆ ಆಕ್ರಮಣ ಮಾಡಿದಾಗ, ಕಮ್ಯೂನಿಸ್ಟರ ಅಂತಾರಾಷ್ಟ್ರೀಯ ನಿರ್ಧಾರದಂತೆ ಭಾರತದ ಕಮ್ಯೂನಿಸ್ಟ್ ಪಕ್ಷ ತನ್ನ ನಿಲುವು ಬದಲಿಸಿ ಬ್ರಿಟಿಷ್ ಸರ್ಕಾರಕ್ಕೆ, ಆ ಮೂಲಕ ಯುದ್ಧಕ್ಕೆ ತನ್ನ ಬೆಂಬಲ ಸಹಕಾರ ಪ್ರಕಟಿಸಿತು. ದೇವಲಿ ಸೆರೆಮನೆಯಲ್ಲಿದ್ದ ಜೆಪಿ, ಗಾಂಧಿಗೆ ಕಟುವಾದ ಪತ್ರ ಬರೆದು, ಯುದ್ಧಕ್ಕೆ ಕಾಂಗ್ರೆಸ್‌ನ ಅರ್ಧಮನಸ್ಸಿನ ವಿರೋಧವನ್ನು ಟೀಕಿಸಿ, ಬೃಹತ್ ಪ್ರಮಾಣದ ಸಾಮೂಹಿಕ ಚಳುವಳಿಗೆ ಒತ್ತಾಯಿಸಿದ್ದರು. ಅವರು ಅಕ್ಟೋಬರ್‌ನಲ್ಲಿ ಸೆರೆಮನೆಯಿಂದ ತಪ್ಪಿಸಿಕೊಳ್ಳಲು ಯತ್ನಿಸಿದಾಗ, ಗಾಂಧಿ, ಸತ್ಯಾಗ್ರಹ ಶಿಸ್ತಿನ ಸಿಪಾಯಿಯಾಗಿ ಅದನ್ನು ಮಾಡಬಾರದಿತ್ತು ಎಂದರೂ, ಸದ್ಯದ ಯುದ್ಧದ ಅನೈತಿಕತೆಯ ಹಿನ್ನೆಲೆಯಲ್ಲಿ ಅದು ತಪ್ಪೇನಲ್ಲ ಎಂದೂ ಹೇಳಿ ಜೆಪಿಯವರನ್ನು ಓರ್ವ ದಿಟ್ಟ ದೇಶಭಕ್ತ ಎಂದು ಹೊಗಳಿದ್ದರು. ಅವರ ಈ ಮಾತು ಸುಭಾಷರಿಗೂ ಅನ್ವಯಿಸುತ್ತಿತ್ತು ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಸುಭಾಷರು ಗಾಂಧಿಯವರ ಆಶೀರ್ವಾದ ಪಡೆದೇ ಕಾಂಗ್ರೆಸ್ ತ್ಯಜಿಸಿದ್ದರು. ಆದರೆ ಆನಂತರ ಫಾರ್ವರ್ಡ್ ಬ್ಲಾಕ್ ಎಂಬ ಹೊಸ ಪಕ್ಷ ಸ್ಥಾಪಿಸಿ ಸಶಸ್ತ್ರ ಹೋರಾಟದ ಹಾದಿ ಹಿಡಿದಿದ್ದರು.

ಈ ಎಲ್ಲ ಕೋಲಾಹಲದ ಮಧ್ಯೆಯೇ ಗಾಂಧಿಯವರನ್ನು ಬಾಧಿಸುತ್ತಿದ್ದ ಮುಖ್ಯ ಸಂಗತಿ ಎಂದರೆ ದಿನೇ ದಿನೇ ಹೆಚ್ಚುತ್ತಿದ್ದ ಹಿಂದೂ–ಮುಸ್ಲಿಂ ವೈಮನಸ್ಯದ ಸಮಸ್ಯೆ. ಅವರ ಮುಸ್ಲಿಂ ಸ್ನೇಹಿತರೂ ಸೇರಿದಂತೆ ಹಲವರು ಅವರಿಗೆ ಪತ್ರ ಬರೆದು ಮುಂದಿನ ಅನಾಹುತಗಳನ್ನು ತಪ್ಪಿಸಲು ಏನಾದರೂ ಮಾಡಬೇಕೆಂದು ಅವರನ್ನು ಒತ್ತಾಯಿಸುತ್ತಿದ್ದರು. ಢಾಕಾ, ಅಹಮದಾಬಾದ್‌ಗಳಲ್ಲಿ ಕೋಮು ದಂಗೆಗಳು ನಡೆದಿದ್ದವು. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿದ್ದು, ಬಿಹಾರದಲ್ಲಿ ತಾವು ಅಸಹಾಯಕ

ರಾಗುತ್ತಿರುವುದಾಗಿ ಸೆರೆಮನೆಯಿಂದ ಬಿಡುಗಡೆಯಾಗಿ ಹೊರ ಬಂದಿದ್ದ ರಾಜೇಂದ್ರ ಪ್ರಸಾದರು ಗಾಂಧಿಗೆ ಹೇಳಿದರು. ಅವರ ಪ್ರಕಾರ ಹಿಂದೂ ಮುಸ್ಲಿಮರಿಬ್ಬರೂ ಹೆಚ್ಚೆಚ್ಚು ಆಕ್ರಮಣಶೀಲರಾಗುತ್ತಿದ್ದಾರೆ ಎಂದು ವರದಿ ಒಪ್ಪಿಸಿದ್ದರು. 'ಪಾಕಿಸ್ತಾನ' ಎಂಬ ಹೆಸರಿನ ಚಲಾವಣೆಯಿಂದಲೇ ಯುವ ಮುಸ್ಲಿಮರು ಸ್ಫೂರ್ತಿಗೊಂಡಂತೆ ಕೋಮುವಾದಿ ಗುಂಪುಗಳನ್ನು ಕಟ್ಟತೊಡಗಿದ್ದರು. ಇದರಿಂದ ಪ್ರಚೋದನೆಗೊಂಡು ಹಿಂದೂ ಮಹಾಸಭಾ ತಾನೂ ಹಿಂದೂ ಗುಂಪುಗಳನ್ನು ಸಂಘಟಿಸುತ್ತಾ ಹೆಚ್ಚು ಜನಪ್ರಿಯ ಮತ್ತು ಬಲಿಷ್ಠವಾಗುತ್ತಿತ್ತು. ಅದರ ನಾಯಕ ಸಾವರ್ಕರ್, ಮುಸ್ಲಿಮರನ್ನು ಕುರಿತ ಗಾಂಧಿಯವರ ಧೋರಣೆಯನ್ನು 'ಅತಿ' ಎಂದು ವರ್ಣಿಸುತ್ತಾ ಹಿಂದೂಗಳಿಗೆ ಆಯುಧಸನ್ನದ್ಧರಾಗಲು ಕರೆಕೊಡಲಾರಂಭಿಸಿದ್ದರು.

ಈ ಮಧ್ಯೆ ಪಂಜಾಬ್‌ನ ಪ್ರಧಾನಮಂತ್ರಿ ಹಯಾತ್ ಖಾನ್ ಕಾಂಗ್ರೆಸ್-ಮುಸ್ಲಿಂ ಲೀಗ್ ಹೊಂದಾಣಿಕೆಯ ಪ್ರಯತ್ನಗಳನ್ನು ಮಾಡುತ್ತಾ ಸೆರೆಮನೆಯಲ್ಲಿದ್ದ ರಾಜಾಜಿಯವರೊಂದಿಗೆ ಪತ್ರ ವ್ಯವಹಾರ ನಡೆಸಿದ್ದರು. ಇದು ಗೊತ್ತಾಗಿ ವೈಸ್‌ರಾಯ್ ರಾಜಾಜಿಯವರಿದ್ದ ತಿರುಚಿನಾಪಳ್ಳಿ ಸೆರೆಮನೆಯಿಂದ ಯಾವುದೇ ಪತ್ರ ರವಾನೆಯಾಗದಂತೆ ನೋಡಿಕೊಳ್ಳಲು ಮದ್ರಾಸ್ ಪ್ರಾಂತ್ಯದ ಗವರ್ನರ್‌ಗೆ ಸೂಚನೆ ನೀಡಿದ ಮತ್ತು ಇಂತಹ ಪ್ರಯತ್ನ ಕೈಬಿಡುವಂತೆ ಹಯಾತ್ ಖಾನ್‌ರ ಮೇಲೆ ಒತ್ತಡಗಳನ್ನು ಹೇರಿದ. ಇದಕ್ಕೆ ಪೂರಕವೆಂಬಂತೆ ಗಾಂಧಿ ಬ್ರಿಟಿಷ್ ಸೇನೆಗೆ ಅತ್ಯಂತ ಹೆಚ್ಚು ಸೈನಿಕರನ್ನು ಒದಗಿಸುತ್ತಿದ್ದ ಪಂಜಾಬ್‌ನ ಜನರನ್ನು ದೇಶ ಮರೆತ ಹಣದಾಹದ ಜನರು ಎಂದು ಟೀಕಿಸಿದರೆಂಬ ಮಾತು ಹರಡಿ ಹಯಾತ್ ಖಾನ್ ಗಾಂಧಿಯವರ ಬಗ್ಗೆ ಮುನಿಸಿಕೊಂಡರು.

ಕವಿ ರಬೀಂದ್ರರ ನಿಧನ

ವೈಯಕ್ತಿಕ ಅಸಹಕಾರ ಸತ್ಯಾಗ್ರಹ ಆರಂಭವಾದಾಗಿನಿಂದಲೂ ಸೇವಾಗ್ರಾಮದಲ್ಲೇ ಅಚಲವಾಗಿ ನೆಲೆಸಿ, 'ಇಲ್ಲಿದ್ದರೇ ನನಗೆ ಹೆಚ್ಚು ಶಾಂತಿ ಮತ್ತು ಸ್ಪಷ್ಟ ಆಲೋಚನೆಗೆ ಅವಕಾಶ' ಎಂದಿದ್ದ ಗಾಂಧಿ, ಈಗ ಅಲ್ಲಿಯೇ ಇದ್ದರೂ ನಿಜವಾಗಿ ಚಿಂತಿತರಾಗಿದ್ದರು. ಈ ಚಿಂತೆಯ ಜೊತೆಗೆ ಒಂದು ದುಃಖದ ವಾರ್ತೆಯೂ ಅವರನ್ನು ತಲುಪಿತ್ತು. ಆಗಸ್ಟ್ ೭ರಂದು ಅವರ ಹಿತೈಷಿ ಮತ್ತು ಅವರನ್ನು 'ಮಹಾತ್ಮ' ಎಂದು ಗುರುತಿಸಿದ್ದ ಕವಿ ರಬೀಂದ್ರನಾಥ ಟ್ಯಾಗೋರ್ ತಮ್ಮ ೮೦ನೇ ವಯಸ್ಸಿನಲ್ಲಿ ತೀರಿಕೊಂಡಿದ್ದರು. ಕೆಲ ವರ್ಷಗಳ ಹಿಂದಷ್ಟೇ ಕವಿವರ್ಯರು ತಮ್ಮ ವೃದ್ಧಾಪ್ಯದಲ್ಲೂ, ತಮ್ಮ ಶಾಂತಿನಿಕೇತನದ ಅಡಿಯಲ್ಲಿ 'ವಿಶ್ವಭಾರತಿ' ಎಂಬ ಉನ್ನತ ಅಧ್ಯಯನ ಮತ್ತು ಸಂಶೋಧನೆಗೆ ಮೀಸಲಿಟ್ಟ ವಿಶ್ವವಿದ್ಯಾನಿಲಯವೊಂದರ ಸ್ಥಾಪನೆಗಾಗಿ ನಿಧಿ ಸಂಗ್ರಹಿಸಲು ದೇಶಾದ್ಯಂತ ತಿರುಗಾಡುತ್ತಿದ್ದುದನ್ನು ಕಂಡು ವ್ಯಥೆಪಟ್ಟಿದ್ದ ಗಾಂಧಿ, ತಾವೇ ಸ್ವಯಂಪ್ರೇರಣೆಯಿಂದ ಅರವತ್ತು ಸಾವಿರ ರೂಪಾಯಿಗಳನ್ನು ಸಂಗ್ರಹಿಸಿ ಅವರಿಗೆ ನೀಡಿದ್ದರು. ತಾವು ಬಿಕ್ಕಟ್ಟಿನಲ್ಲಿದ್ದಾಗಲೆಲ್ಲ ತಮಗೆ ಜೊತೆಯಾಗುತ್ತಿದ್ದ ಮಹಾನ್ ವ್ಯಕ್ತಿಯೊಬ್ಬರ ಅಗಲಿಕೆ, ಗಾಂಧಿಯವರ ದುಃಖದ ಭಾರವನ್ನು ಹೆಚ್ಚಿಸಿತ್ತು. ವಿಶೇಷವಾಗಿ ಅದು ಇನ್ನೊಂದು ಮಹಾ ಬಿಕ್ಕಟ್ಟಿನ ಸಂದರ್ಭದಲ್ಲಿ ಸಂಭವಿಸಿದ್ದರಿಂದಾಗಿ.

■

ಗಾಂಧಿ ಕಥನ ಗಾಂಧಿ ಕಥನ ಗಾಂಧಿ ಕಥನ
ಗಾಂಧಿ ಕಥನ ಗಾಂಧಿ ಕಥನ ಗಾಂಧಿ ಕಥನ
ಗಾಂಧಿ ಕಥನ ಗಾಂಧಿ ಕಥನ ಗಾಂಧಿ ಕಥನ
ಗಾಂಧಿ ಕಥನ ಗಾಂಧಿ ಕಥನ ಗಾಂಧಿ ಕಥನ
ಗಾಂಧಿ ಕಥನ ಗಾಂಧಿ ಕಥನ ಗಾಂಧಿ ಕಥನ
ಗಾಂಧಿ ಕಥನ ಗಾಂಧಿ ಕಥನ ಗಾಂಧಿ ಕಥನ
ಗಾಂಧಿ ಕಥನ ಗಾಂಧಿ ಕಥನ ಗಾಂಧಿ ಕಥನ
ಗಾಂಧಿ ಕಥನ ಗಾಂಧಿ ಕಥನ ಗಾಂಧಿ ಕಥನ
ಗಾಂಧಿ ಕಥನ ಗಾಂಧಿ ಕಥನ ಗಾಂಧಿ ಕಥನ
ಗಾಂಧಿ ಕಥನ ಗಾಂಧಿ ಕಥನ ಗಾಂಧಿ ಕಥನ
ಗಾಂಧಿ ಕಥನ ಗಾಂಧಿ ಕಥನ ಗಾಂಧಿ ಕಥನ

ಗಾಂಧಿ ಕಥನ

ಹೆಜ್ಜೆ
೨

೮೪

ಭಾರತ ಬಿಟ್ಟು ತೊಲಗಿ!

ಯುದ್ಧ ಯೂರೋಪ್‌ನ್ನು ದಾಟಿ ಬ್ರಿಟನ್ ಮತ್ತು ಫ್ರಾನ್ಸ್‌ನ ವಸಾಹತುಗಳಿದ್ದ ಏಷ್ಯಾ ಮತ್ತು ಆಫ್ರಿಕಾ ಖಂಡಗಳಿಗೆ ವ್ಯಾಪಿಸುತ್ತಿದ್ದಂತೆ ದೇಶ ದೇಶಗಳ ನಡುವೆ ಹೊಸ ಹೊಂದಾಣಿಕೆ-ಒಪ್ಪಂದಗಳು ಆರಂಭವಾದವು. ೧೯೪೧ರ ಆಗಸ್ಟ್‌ನಲ್ಲಿ ಬ್ರಿಟನ್‌ನ ಪ್ರಧಾನಿ ಮತ್ತು ಅಮೆರಿಕಾದ ಅಧ್ಯಕ್ಷರ ನಡುವೆ ಅಟ್ಲಾಂಟಿಕ್ ಒಪ್ಪಂದಕ್ಕೆ ಸಹಿ ಬಿತ್ತು. ಈ ಒಪ್ಪಂದದ ಸನ್ನದಿನಲ್ಲಿ ಯಾವುದೇ ದೇಶದ ಜನ ತಾವು ಬಯಸಿದ ಅಥವಾ ಯಾರ ಅಧೀನದಲ್ಲಿ ಇರಬಯಸುವರೋ ಆ ಸರ್ಕಾರಗಳನ್ನು ಆಯ್ಕೆ ಮಾಡಿಕೊಳ್ಳುವ ಆ ದೇಶದ ಜನರ ಹಕ್ಕನ್ನು ಮಾನ್ಯ ಮಾಡುವುದಾಗಿ ಹೇಳಲಾಗಿತ್ತು. ಹಾಗೇ ಸ್ವಯಮಾಡಳಿತ ಬಯಸುವ ಅಧೀನ ರಾಷ್ಟ್ರಗಳ ಜನರ ಸ್ವಯಮಾಧಿಕಾರ ಮತ್ತು ಸಾರ್ವಭೌಮತ್ವದ ಹಕ್ಕುಗಳನ್ನೂ ಮಾನ್ಯ ಮಾಡಲಾಗಿತ್ತು. ಆದರೆ ನಂತರದಲ್ಲೇ ಇದು ಭಾರತಕ್ಕೆ ಅನ್ವಯಿಸದೆಂದು ಚರ್ಚಿಲ್ ಸಾರಿದ!

ಜಾಗತಿಕವಾಗಿ ಹರಡಿದ ಯುದ್ಧ-ಮೃದುವಾದ ಬ್ರಿಟನ್

೧೯೪೧ರ ಡಿಸೆಂಬರ್ ೭ರಂದು ಜಪಾನ್ ಯುದ್ಧ ವಿಮಾನಗಳು ಅಮೆರಿಕಾದ ಪರ್ಲ್ ಹಾರ್ಬರ್ ಮೇಲೆ ಬಾಂಬ್ ಹಾಕಿದವು. ಈಗ ಈವರೆಗೆ ಬ್ರಿಟನ್ ಮತ್ತದರ ಮಿತ್ರ ರಾಷ್ಟ್ರಗಳಿಗೆ ಪರೋಕ್ಷ ಬೆಂಬಲ ನೀಡುತ್ತಿದ್ದ ಅಮೆರಿಕಾ ನೇರವಾಗಿ ಯುದ್ಧರಂಗವನ್ನು ಪ್ರವೇಶಿಸಿತು. ಇದರಿಂದ ಯುದ್ಧ ಇನ್ನಷ್ಟು ವ್ಯಾಪಕತೆ ಮತ್ತು ತೀವ್ರತೆಯನ್ನು ಪಡೆಯಿತು. ಭಾರತದ ರಕ್ಷಣೆಯ ಪ್ರಶ್ನೆ ಗಂಭೀರವಾಯಿತು. ಇದನ್ನು ಗಮನಿಸಿದ ಕಾಂಗ್ರೆಸ್ ಡಿಸೆಂಬರ್ ಕೊನೆಯ ವಾರದಲ್ಲಿ ಬಾರ್ಡೋಲಿಯಲ್ಲಿ ಸಭೆ ಸೇರಿತು. ಮತ್ತೆ ಅದು ಯುದ್ಧಾನಂತರ ಭಾರತಕ್ಕೆ ಸ್ವಾತಂತ್ರ್ಯ ಘೋಷಿಸುವುದಾದರೆ, ಕಾಂಗ್ರೆಸ್ ಯುದ್ಧ ಎದುರಿಸುವುದರಲ್ಲಿ ಸಂಪೂರ್ಣ ಸಹಕಾರ ನೀಡುವುದಾಗಿ ಸರ್ಕಾರಕ್ಕೆ ಹೇಳಿತು. ಇದು ನಿರ್ಣಯ ರೂಪ ತಾಳಿ ಅಂತಿಮವಾಗಿ ಅನುಮೋದಿತವಾಗುವ ಮುನ್ನ ೧೯೪೨ರ ಜನವರಿಯಲ್ಲಿ ವರ್ಧಾದಲ್ಲಿ ನಡೆದ ಕಾಂಗ್ರೆಸ್ ನಾಯಕರ ಸಭೆಯಲ್ಲಿ ಸರ್ಕಾರಕ್ಕೆ ಸಹಾಯ ನೀಡುವ ವಿಷಯದಲ್ಲಿ ಹಾಕಿದ್ದ ಷರತ್ತಿನ ಬಗ್ಗೆ ತೀವ್ರ ಭಿನ್ನಮತ ಉಂಟಾದಾಗ ಗಾಂಧಿ ಮಧ್ಯಪ್ರವೇಶಿಸಿ, ಪರ್ಲ್ ಹಾರ್ಬರ್ ಮೇಲಿನ ದಾಳಿಯ ಜಾಗತಿಕ ಪರಿಣಾಮಗಳನ್ನು ಗಮನಿಸಿ, ತಾವೂ ಈ ನಿರ್ಣಯವನ್ನು ಬೆಂಬಲಿಸುವುದಾಗಿ ಹೇಳುವ ಮೂಲಕ ಭಿನ್ನಮತವನ್ನು ಶಮನಗೊಳಿಸಿದರು. ಪ್ರಚಲಿತ ಜಾಗತಿಕ ಸಂದರ್ಭದಲ್ಲಿ

ಅನಿವಾರ್ಯವಾಗಿ ಬ್ರಿಟನ್‌ನತ್ತ ಸ್ನೇಹ ಹಸ್ತ ಚಾಚಲು ಹಿಂಸೆಯ ಒಂದು ಸಣ್ಣ ಕಿಂಡಿಯನ್ನಷ್ಟೇ ಮಾಡಿಕೊಳ್ಳಲಾಗಿದೆ ಎಂದು ಇದನ್ನು ವ್ಯಾಖ್ಯಾನಿಸಿದರು. ಇನ್ನು ಯಾರೂ ಅಹಿಂಸೆಯ ಕಾರಣ ಕೊಟ್ಟು ಯುದ್ಧದ ಸಹಕಾರವನ್ನು ನಿರಾಕರಿಸಲಾಗುತ್ತಿದೆ ಎಂದು ತಮ್ಮನ್ನು ದೂರುವಂತಿಲ್ಲ ಎಂದೂ ಅವರು ಹೇಳಿದರು. ಜೊತೆಗೇ ವೈಯಕ್ತಿಕ ಸತ್ಯಾಗ್ರಹವನ್ನು ಸ್ಥಗಿತಗೊಳಿಸುವುದಾಗಿ ವೈಸ್‌ರಾಯ್‌ಗೆ ತಿಳಿಸಿದರು. ಈ ಹೊತ್ತಿಗೆ ಸತ್ಯಾಗ್ರಹಿಗಳ ಶಿಕ್ಷೆಯ ಅವಧಿ ಮುಗಿದಿದ್ದು ಸರ್ಕಾರ ಎಲ್ಲರನ್ನೂ ಬಿಡುಗಡೆ ಮಾಡತೊಡಗಿತ್ತು. ಹೆಚ್ಚಿನ ಶಿಕ್ಷೆಗೆ ಒಳಗಾಗಿದ್ದ ನೆಹರೂ ಅವರನ್ನು ಉದಾರತೆಯಿಂದ ಬಿಡುಗಡೆಗೊಳಿಸಲಾಯಿತು. 'ಹರಿಜನ್' ಮತ್ತು ಅದರ ಸೋದರ ಪತ್ರಿಕೆಗಳ ಮೇಲಿನ ನಿರ್ಬಂಧಗಳನ್ನು ತೆಗೆಯಲಾಯಿತು.

ಬಜಾಜರ ನಿಧನ– ಚಿಯಾಂಗ್ ಕೈ ಶೇಕ್ ಭೇಟಿ

ಫೆಬ್ರುವರಿ ತಿಂಗಳಲ್ಲಿ ಜಮ್ನಾಲಾಲ್ ಬಜಾಜರು ತಮ್ಮ ೫೨ನೇ ವಯಸ್ಸಿನಲ್ಲೇ ಮೆದುಳು ರಕ್ತಸ್ರಾವದಿಂದಾಗಿ ನಿಧನ ಹೊಂದಿದರು. ಇದರಿಂದ ಗಾಂಧಿ ಆಘಾತಗೊಂಡರು. ಈ ಉದ್ಯಮಿ ತನ್ನ ಸಂಪತ್ತನ್ನೆಲ್ಲ ಗಾಂಧಿ ಕಾರ್ಯಕ್ರಮಗಳಿಗೆ ಮುಕ್ತವಾಗಿ ತೆರೆದಿಟ್ಟಿದ್ದರಲ್ಲದೆ, ಅವರ ಸತ್ಯಾಗ್ರಹ–ಪ್ರತಿಭಟನೆಗಳಲ್ಲೂ ಪಾಲ್ಗೊಂಡು ಸೆರೆಮನೆವಾಸವನ್ನೂ ಅನುಭವಿಸಿದ್ದರು. ಸ್ವತಃ ದುಃಖಿತಪ್ತರಾಗಿದ್ದ ಗಾಂಧಿ ಬಜಾಜರ ದುಃಖತಪ್ತ ಮಕ್ಕಳಿಗೆ ಸಾಂತ್ವನ ಹೇಳಿ ಅವರ ಉದ್ಯಮದ ಮುಂದಿನ ಹಾದಿಯ ಬಗ್ಗೆ ಮಾರ್ಗದರ್ಶನವನ್ನೂ ಮಾಡಿದರು.

ಇದೇ ಸಮಯದಲ್ಲಿ ಮಹದೇವ ದೇಸಾಯಿ ಮತ್ತು ಕಸ್ತೂರಬಾ ಅವರೂ ಅಸ್ವಸ್ಥರಾಗಿ ಹಾಸಿಗೆ ಹಿಡಿದಿದ್ದರು. ಅದರ ಮಧ್ಯದಲ್ಲೂ ಗಾಂಧಿ ಚೀನಾದ ನಾಯಕ ಚಿಯಾಂಗ್ ಕೈ ಶೇಕ್‌ರನ್ನು ಭೇಟಿ ಮಾಡಲು ಕಲ್ಕತ್ತಾಗೆ ಹೋಗಬೇಕಾಯಿತು. ಜಪಾನ್ ದಾಳಿಗೆ ಒಳಗಾಗಿದ್ದ ಚೀನಾದ ನಾಯಕ ಭಾರತ ಮತ್ತು ಬ್ರಿಟನ್‌ನೊಡನೆ ರಕ್ಷಣಾ ಒಪ್ಪಂದ ಮಾಡಿಕೊಳ್ಳಲು ಬಂದಿದ್ದರು. ಅವರು, ಅಹಿಂಸೆಯ ಪರಿಹಾರ ಹೇಳಿದ ಗಾಂಧಿಯವರಿಗೆ ಅದು ಬ್ರಿಟನ್‌ನೊಂದಿಗೆ ನಡೆದೀತೇ ಹೊರತು ಜಪಾನ್‌ನೊಂದಿಗಲ್ಲ ಎಂದು ಹೇಳಿ ಭಾರತ ಬ್ರಿಟನ್‌ನೊಂದಿಗೆ ಸಹಕರಿಸಬೇಕೆಂದು ಮನವಿ ಮಾಡಿದರು.

ಸ್ಟಾಫರ್ಡ್ ಕ್ರಿಪ್ಸ್ ಆಗಮನ–ಚರ್ಚಿಲ್‌ನ ಕುಣಿದಾಟ!

ಇತ್ತ ಈ ಮಾತುಕತೆ ನಡೆಯುತ್ತಿದ್ದಂತೆ ಅತ್ತ ಜಪಾನ್ ಭಾರತದ ಗಡಿಯತ್ತ ಮುನ್ನಡೆದಿತ್ತು. ಸಿಂಗಪುರ ಪತನವಾಗಿ ಡಚ್ ವಸಾಹತು ಜಾವಾ ವಶವಾಗಿ, ರಂಗೂನ್ ಮೇಲೆ ಬಾಂಬ್ ದಾಳಿ ಶುರುವಾಗಿತ್ತು. ಆದರೂ ಕಾಂಗ್ರೆಸ್ ನೀಡಿದ್ದ ಸಹಕಾರ ಹಸ್ತದ ಬಗ್ಗೆ ಸರ್ಕಾರ ಯಾವ ಪ್ರತಿಕ್ರಿಯೆಯನ್ನೂ ನೀಡಲು ನಿರಾಕರಿಸಿತ್ತು. ಇದಕ್ಕೆ ಮುಖ್ಯ ಕಾರಣ, ಭಾರತ ಕುರಿತ ಚರ್ಚಿಲ್‌ನ ಉಡಾಫೆ ಧೋರಣೆ. ಭಾರತ ಇದ್ದ ಹಾಗೆ ಇದ್ದುಕೊಂಡಿರಲಿ, ಅಲ್ಲಿ ಏನು ಮಾಡುವುದೂ ಬೇಡ ಎಂಬುದು ಅವನ ಧೋರಣೆಯಾಗಿತ್ತು. ಆದರೆ ರಾಷ್ಟ್ರೀಯ ಸರ್ಕಾರದ ಪಾಲುದಾರ ಪಕ್ಷವಾಗಿದ್ದ ಲೇಬರ್ ಪಕ್ಷದ ತೀವ್ರವಾದಿ ಗುಂಪು ಭಾರತದ ಸ್ವಾತಂತ್ರ್ಯಕ್ಕೆ ಬದ್ಧವಾಗಿದ್ದು, ಆ ದಿಸೆಯಲ್ಲಿ ತುರ್ತು

ಕಾರ್ಯಾಚರಣೆಗೆ ಒತ್ತಾಯಿಸಿತು. ಜಾರ್ಜ್ ಆರ್ವೆಲ್ ಮತ್ತು ಸಹಮನಸ್ಕ ಸಂಸದರು ಭಾರತದ ವಿಷಯದಲ್ಲಿ ಉದಾರವಾಗಿ ವರ್ತಿಸಿ ಈ ಸಂದರ್ಭದಲ್ಲಿ ಅದರ ಮನ ಗೆಲ್ಲುವುದು ಅಗತ್ಯವಾಗಿದೆ ಎಂದು ಬಲವಾಗಿ ಪ್ರತಿಪಾದಿಸಿದರು. ಇದರ ಫಲವಾಗಿ ಭಾರತದ ಬಗ್ಗೆ ಉದಾರವಾಗಿದ್ದ ಲೇಬರ್ ಸಂಸದ ಸ್ಟಾಫರ್ಡ್ ಕ್ರಿಪ್ಸ್‌ರನ್ನು ಭಾರತದ ಸಮಸ್ಯೆಗೆ ಒಂದು ಮಧ್ಯಂತರ ಪರಿಹಾರ ರೂಪಿಸಲು ಕಳಿಸುವ ತೀರ್ಮಾನವಾಯಿತು. ಆತನಿಗೆ ನೀಡಲಾಗಿದ್ದ ಕಾರ್ಯಸೂಚಿ ಈ ಮೂರು ಮುಖ್ಯ ಅಂಶಗಳನ್ನು ಒಳಗೊಂಡಿತ್ತು:

೧. ಭಾರತಕ್ಕೆ ಕೂಡಲೇ ಸ್ವಾಯತ್ತ ಆಶ್ರಯ ರಾಷ್ಟ್ರದ ಸ್ಥಾನಮಾನ ನೀಡುವುದು.

೨. ಯುದ್ಧದವರೆಗೆ ಮುಖ್ಯ ಪಕ್ಷಗಳ ನಾಯಕರನ್ನು ರಾಷ್ಟ್ರೀಯ ಸರ್ಕಾರ ರಚಿಸಲು ಆಹ್ವಾನಿಸುವುದು.

೩. ಭಾರತ, ಬ್ರಿಟನ್ ಮತ್ತದರ ಮಿತ್ರ ದೇಶಗಳೊಂದಿಗೆ ರಕ್ಷಣಾ ಒಪ್ಪಂದಗಳಿಗೆ ಸಹಿ ಹಾಕುವುದು.

೧೯೪೨ ರ ಮಾರ್ಚ್ ೨೩ರಂದು ಭಾರತಕ್ಕೆ ಬಂದ ಕ್ರಿಪ್ಸ್ ದೇಶದ ಎಲ್ಲ ನಾಯಕರನ್ನೂ ಭೇಟಿ ಮಾಡಿದರು. ಕ್ರಿಪ್ಸ್‌ರನ್ನು ಭೇಟಿ ಮಾಡಿ ಅವರ ಸಲಹೆಗಳ ವಿವರಗಳನ್ನು ತಿಳಿದ ಮೇಲೆ ಗಾಂಧಿ, ಕ್ರಿಪ್ಸ್‌ರಿಗೆ 'ನೀವು ಕೂಡಲೇ ಮುಂದಿನ ವಿಮಾನ ಹತ್ತಿ ವಾಪಸಾಗುವುದು ಒಳ್ಳೆಯದು' ಎಂದು ಹೇಳಿದ್ದರು. ಕಾರಣ, ಕ್ರಿಪ್ಸ್ ತಂದಿದ್ದ ಸಲಹೆಗಳ ಪ್ರಕಾರ ಸ್ವಾಯತ್ತ ಆಶ್ರಯ ರಾಷ್ಟ್ರದ ಭಾರತಕ್ಕೆ ರಾಜಸಂಸ್ಥಾನಗಳು ಸೇರಿಕೊಳ್ಳುವ ಆಯ್ಕೆಯನ್ನು ಆಯಾ ಸಂಸ್ಥಾನಾಧೀಶರಿಗೇ ನೀಡಲಾಗಿತ್ತು. ಇಷ್ಟಪಟ್ಟರೆ ಅವರು ಸ್ವತಂತ್ರರಾಗಿಯೂ ಉಳಿಯಬಹುದಿತ್ತು. ಇದೇ ಸ್ವಾತಂತ್ರ್ಯದ ಆಯ್ಕೆಯನ್ನು ಬ್ರಿಟಿಷ್ ಭಾರತದ ಪ್ರಾಂತ್ಯಗಳಿಗೂ ನೀಡಲಾಗಿತ್ತು. ಅಂದರೆ ಬ್ರಿಟನ್ ದಯಪಾಲಿಸಲು ಮುಂದಾಗಿದ್ದ ಸ್ವಾಯತ್ತ ಭಾರತ ಒಂದು ಹರುಕು ಮುರುಕು ಭಾರತವೇ ಆಗಲಿತ್ತು. ಆದರೂ ನೆಹರೂ, ರಾಜಾಜಿ ಮತ್ತು ಆಝಾದ್ ಕ್ರಿಪ್ಸ್‌ರೊಂದಿಗೆ ವ್ಯಾಪಕ ಮಾತುಕತೆ ನಡೆಸಿದರು. ಆದರೆ ಸ್ವಾಯತ್ತ ಆಶ್ರಯ ರಾಷ್ಟ್ರದಲ್ಲಿ ವೈಸ್‌ರಾಯ್‌ನ ಅಧಿಕಾರ ವ್ಯಾಪ್ತಿ ಮತ್ತು ಮಧ್ಯಂತರ ರಾಷ್ಟ್ರೀಯ ಸರ್ಕಾರದಲ್ಲಿ ರಕ್ಷಣಾ ಖಾತೆಯ ಜವಾಬ್ದಾರಿಯ ವಿಷಯದಲ್ಲಿ ತೀವ್ರ ಮತಬೇಧ ಉಂಟಾದ್ದರಿಂದ ಮಾತುಕತೆ ವಿಫಲವಾಯಿತು. ಜಿನ್ನಾ ಕೂಡ ಯುದ್ಧಾನಂತರವೂ ಪ್ರತ್ಯೇಕ ಮುಸ್ಲಿಂ ರಾಷ್ಟ್ರದ ಭರವಸೆ ಕಾಣದ್ದರಿಂದ ಅವರೂ ಮಾತುಕತೆಯಿಂದ ಹಿಂಜರಿದರು. ಹೀಗಾಗಿ ಕ್ರಿಪ್ಸ್, ಗಾಂಧಿ ಹೇಳಿದಂತೆ ಬರಿಗೈಯಲ್ಲಿ ಊರಿಗೆ ವಾಪಸಾಗಬೇಕಾಯಿತು. ಇದನ್ನು ಕೇಳಿ ಚರ್ಚಿಲ್ ಹರ್ಷದಿಂದ ಕುಣಿದಾಡಿದನಂತೆ!

ಭಾರತದ ಬಾಗಿಲಿಗೇ ಬಂದ ಯುದ್ಧ–ಗಾಂಧಿಯ ಪ್ರತಿತಂತ್ರ

ಕ್ರಿಪ್ಸ್ ತೆರಳಿದ ಬೆನ್ನಲ್ಲೇ ವಿಶಾಖಪಟ್ಟಣ ಮತ್ತು ಕಾಕಿನಾಡ ಬಂದರುಗಳ ಮೇಲೆ ಜಪಾನೀ ಸೇನೆಯ ಬಾಂಬುಗಳು ಬಿದ್ದವು. ಯುದ್ಧವು ಈಗ ಭಾರತದ ಹೊಸ್ತಿಲು ದಾಟಿ

ಒಳಗೆ ಬಂದಿತ್ತು. ಬಾಂಬ್ ದಾಳಿಯಿಂದ ತತ್ತರಿಸಿದ್ದ ಬರ್ಮಾದಿಂದ ಸಾವಿರಾರು ಭಾರತೀಯರು ಅಸ್ಸಾಂ–ಬಂಗಾಳಗಳ ಕಡೆ ಓಡಿ ಬರುತ್ತಿದ್ದರು. ಅವರಲ್ಲಿ ಬಹುತೇಕ ಜನ ಅನ್ನ ನೀರಿಲ್ಲದೆ ದಾರಿಯಲ್ಲೇ ಸಾಯತೊಡಗಿದ್ದರು. ಅಲ್ಲಿನ ಬಿಳಿಯ ಸಮುದಾಯವನ್ನು ಜೋಪಾನವಾಗಿ ಹಡಗಿನಲ್ಲಿ ಭಾರತದತ್ತ ಸಾಗಿಸಲು ತುರ್ತು ಕ್ರಮ ಕೈಗೊಂಡ ಸರ್ಕಾರ, ಭಾರತೀಯರತ್ತ ಕಣ್ಣೆತ್ತಿಯೂ ನೋಡಲಾಗದ ಸ್ಥಿತಿ ಉಂಟಾಗಿತ್ತು. ಜೊತೆಗೆ ಬ್ರಿಟಿಷ್ ಸೇನೆಗೆ ನೆರವಾಗಲು ಅಮೆರಿಕನ್ ಪಡೆಗಳು ಭಾರತಕ್ಕೆ ಬರತೊಡಗಿದವು. ಜಪಾನೀ ಪಡೆ ಸಮುದ್ರದ ಮೂಲಕ ಭಾರತಕ್ಕೆ ನುಗ್ಗಿದರೆ ಅವರ ಆಸರೆ ಮತ್ತು ಮುನ್ನಡೆಗೆ ಏನೂ ಸಿಗದಂತೆ ಪೂರ್ವ ಕರಾವಳಿಯಂಚಿನ ಆಸ್ತಿಪಾಸ್ತಿಗಳನ್ನೂ, ಬೆಳೆಗಳನ್ನೂ, ದೋಣಿ–ತೆಪ್ಪಗಳನ್ನೂ ನಾಶ ಮಾಡುವಂತೆ ಸರ್ಕಾರ ಆದೇಶ ಹೊರಡಿಸಿತ್ತು. ಇನ್ನು ನೆಹರೂ, ಜಪಾನೀ ಪಡೆಗಳ ವಿರುದ್ಧ ಗೆರಿಲ್ಲಾ ಹೋರಾಟ ಶುರು ಮಾಡುವಂತೆ ಜನರಿಗೆ ಕರೆಕೊಟ್ಟರು. ಆದರೆ ತನ್ನನ್ನು ಲೂಟಿ ಮಾಡಿ ಆಳುತ್ತಿರುವ ಬ್ರಿಟಿಷ್ ಸೇನೆಯ ಸೋಲನ್ನು ಸಂಭ್ರಮಿಸತೊಡಗಿದ್ದ ಸಾಮಾನ್ಯ ಭಾರತೀಯರ ಅಭಿಪ್ರಾಯ ಜಪಾನೀ ಸೇನೆಯ ಪರವಾಗಿ ಮೂಡತೊಡಗಿತ್ತು. ಅದಕ್ಕೆ ಸುಭಾಷ್‌ಚಂದ್ರ ಬೋಸ್ ಜರ್ಮನಿಯ ಹಿಟ್ಲರ್ ಮತ್ತು ಜಪಾನ್ ಟೋಜೋರಿಂದ ಬೆಂಬಲ ಪಡೆದು ಬ್ರಿಟಿಷ್ ಸರ್ಕಾರದ ಪತನಕ್ಕೆ ಸಿದ್ಧತೆ ನಡೆಸಿದ್ದಾರೆ ಎಂಬ ಸುದ್ದಿಯೂ ಕಾರಣವಾಗಿತ್ತು.

ಗಾಂಧಿ ಆತಂಕಿತರಾಗಿದ್ದರು. ಪರದೇಶಗಳ ಸೇನೆಗಳ ಕಾದಾಟಕ್ಕೆ ನಮ್ಮ ನೆಲ ವೇದಿಕೆಯಾಗಿ ಜನರನ್ನು ಪ್ರಾಣಭೀತಿಯಿಂದ ಕಂಗಾಲು ಮಾಡಿ, ಈ ದೇಶದ ಸಂಪತ್ತನ್ನೆಲ್ಲ ನಾಶಗೈಯುತ್ತಿರುವ ಈ ವಿದ್ಯಮಾನ ಅವರ ಊಹೆಗೂ ಮೀರಿದ್ದಾಗಿತ್ತು. ತಮ್ಮ ಜೀವನದ ಹೋರಾಟ ಮತ್ತು ಮೌಲ್ಯಗಳೆಲ್ಲವೂ ತಮ್ಮ ಕೊನೆಯ ವರ್ಷಗಳಲ್ಲಿ ಇದ್ದಕ್ಕಿದ್ದಂತೆ ಮಣ್ಣುಪಾಲಾಗುವ ದುರಂತ ಚಿತ್ರ ಅವರ ಕಣ್ಣುಗಳನ್ನು ಆವರಿಸಿತ್ತು. ಬ್ರಿಟಿಷರು ಯುದ್ಧಮಾಡಿ ಸೋತೋ, ಗೆದ್ದೋ ಅಂತೂ ಎಲ್ಲ ಕಳೆದುಕೊಂಡು ಸುಸ್ತಾಗಿ ದೇಶ ಬಿಟ್ಟು ಹೋಗುವ ಕಾಲ ಬರುತ್ತಿದೆ ಎಂದು ಭಾವಿಸಿದ್ದ ಅವರಿಗೆ ಈ ಪರಿಸ್ಥಿತಿ ಅನಿರೀಕ್ಷಿತವಾಗಿತ್ತು. ಇದಕ್ಕೆಲ್ಲ ಕಾರಣವಾಗಿರುವ ಬ್ರಿಟಿಷರು ಕೂಡಲೇ ಈ ದೇಶ ಬಿಟ್ಟುಹೋಗುವಂತೆ ಮಾಡುವ ತುರ್ತು ಅಗತ್ಯ ಅವರಿಗೆ ಕಾಣಬರತೊಡಗಿತು. ಅದಕ್ಕಾಗಿ ಅವರಲ್ಲಿ ಬಹುದೊಡ್ಡ ಜನಾಂದೋಲನದ ಕಲ್ಪನೆ ಸಾಕಾರಗೊಳ್ಳತೊಡಗಿತ್ತು. ಅದನ್ನು ಅವರು, ಮುಂದಿನ ಕ್ರಮ ಚರ್ಚಿಸಲು, ಏಪ್ರಿಲ್ ೨೭ರಂದು ಅಲಹಾಬಾದ್‌ನಲ್ಲಿ ಏರ್ಪಾಡಾಗಿದ್ದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಮಾವೇಶಕ್ಕೆ, ಮೀರಾಬೆನ್ ಅವರ ಮೂಲಕ ಒಂದು ನಿರ್ಣಯದ ರೂಪದಲ್ಲಿ ಕಳಿಸುವ ಮೂಲಕ ಚಾಲೂ ಮಾಡಿದ್ದರು. ಆ ನಿರ್ಣಯ ಬ್ರಿಟಿಷರು ಕೂಡಲೇ ಭಾರತ ಬಿಟ್ಟು ಹೋಗಬೇಕು ಮತ್ತು ಜಪಾನ್ ಆಕ್ರಮಣ ಮಾಡಿದರೆ ಜನತೆ ಆ ಸೇನೆಯೊಂದಿಗೆ ಸಹಕರಿಸಕೂಡದು ಎಂದು ಕರೆಕೊಟ್ಟಿತ್ತು.

ಗಾಬರಿಯಾದ ನೆಹರೂ–ತಿರುಗಿಬಿದ್ದ ಸಮಾಜವಾದಿಗಳು

ಇದನ್ನು ನೋಡಿ ನೆಹರೂ ಗಾಬರಿಯಾದರು. ಇದು ಜಪಾನಿ ಸೇನೆಯ ಆಕ್ರಮಣಕ್ಕೆ

ಪ್ರತಿರೋಧವಿಲ್ಲದೆ ಅದನ್ನು ಮುಗ್ಧವಾಗಿ ಆಹ್ವಾನಿಸುತ್ತಿರುವಂತೆ ಕಂಡಿತು. ಅದನ್ನು ಸಭೆಗೆ ಹೇಳಿದಾಗ ಬಹುತೇಕ ಎಐಸಿಸಿ ಸದಸ್ಯರು ಪ್ರತಿಭಟಿಸಿದರು. ಅವರೆಲ್ಲರೂ ಗಾಂಧಿ ನಿರ್ಣಯದ ಪರವಾಗಿದ್ದರು. ಅವರಿಗೆಲ್ಲ ಮೊದಲು ಬ್ರಿಟನ್ ದೇಶ ಬಿಟ್ಟುಹೋಗಬೇಕಿತ್ತು. ಇವರಲ್ಲಿ ಬಹುಪಾಲು ಜನ, ನೆಹರೂ ಅವರೇ ನೆಚ್ಚಿಕೊಂಡಿದ್ದ ಸಮಾಜವಾದಿ ಯುವ ಪಡೆಗೆ ಸೇರಿದ್ದವರಾಗಿದ್ದರು! ಅವರಿಗೆಲ್ಲ ಅಮೆರಿಕನ್ ಪಡೆಗಳ ಆಗಮನ ಸರ್ವನಾಶದ ಸೂಚನೆಯಾಗಿ ಕಂಡಿತ್ತು. ಹಿರಿಯ ನಾಯಕರೆಲ್ಲ ಹೋರಾಡಿ ಸುಸ್ತಾಗಿ ಯಾವುದೋ ಒಂದು ರಾಜಿಗೆ ಸಿದ್ಧವಾಗುತ್ತಿದ್ದರೆ, ಈ ಯುವ ಪಡೆ ಸರ್ಕಾರದ ವಿರುದ್ಧ ಇನ್ನೊಂದು ಹೋರಾಟಕ್ಕಾಗಿ ಗಾಂಧಿಯವರ ಕರೆಗೆ ಕಾಯುತ್ತಿದ್ದಂತಿತ್ತು!

ಆದರೆ ಏಪ್ರಿಲ್ ೨೬ರ 'ಹರಿಜನ್'ನಲ್ಲಿ 'ನಾಜ಼ಿಗಳು, ಫ್ಯಾಸಿಸ್ಟರುಗಳು ದಾಳಿ ಮಾಡಿ ನಮ್ಮನ್ನು ಅಧೀನಪಡಿಸಿಕೊಳ್ಳಲು ಯತ್ನಿಸಿದರೆ ಅವರಿಗೇ ಕಷ್ಟವಾಗುವುದು. ಅವರು ಮುಳ್ಳುಬೇಲಿಯಲ್ಲಿ ಸಿಕ್ಕಿಕೊಂಡು ಒದ್ದಾಡುವಂತಾಗುತ್ತದೆ. ಅವರ ಕೊರಳಿಗೆ ಅವರೇ ಉರುಳು ಹಾಕಿಕೊಂಡಂತೆ' ಎಂದು ಬರೆದಿದ್ದ ಗಾಂಧಿಯವರಿಗೆ, ತಮ್ಮ ನಿಲುವಿನ ಬಗ್ಗೆ ಸ್ಪಷ್ಟತೆ ಇತ್ತು. ಮೇಲಾಗಿ ಅವರು, ಜಪಾನೀ ಸೇನೆಯ ಪ್ರವೇಶವಾಗುವುದೆಂದು ನಿರೀಕ್ಷಿಸಲಾಗಿದ್ದ ಒರಿಸ್ಸಾ ಕರಾವಳಿಗೆ ಮೀರಾಬೆನ್‌ರನ್ನು ಕಳಿಸಿ 'ಯಾರೂ ಯಾವ ಕಾರಣಕ್ಕೂ ಜಪಾನೀ ಪಡೆಗಳಿಗೆ ಶರಣಾಗಬಾರದು. ಅವರಿಗೆ ಅನ್ನಾಹಾರ ಯಾವುದನ್ನೂ ಪೂರೈಸಬಾರದು. ಎಚ್ಚರದಪ್ಪಿ ಯಾರೂ ಬಾಣಲೆಯಿಂದ ಬೆಂಕಿಗೆ ಹಾರುವ ಪ್ರಯತ್ನ ಮಾಡಬಾರದು' ಎಂಬ ಸಂದೇಶವನ್ನು ಜನರಿಗೆ ನೀಡಿದ್ದರು. ಅಲ್ಲದೆ ಸುಭಾಷ್‌ಚಂದ್ರ ಬೋಸ್‌ರು ಜಪಾನ್‌ನ ಜಲಾಂತರ್ಗಾಮಿ ನೌಕೆಯೊಂದರ ಮೂಲಕ ಭಾರತವನ್ನು ಬ್ರಿಟಿಷರಿಂದ ಮುಕ್ತಗೊಳಿಸಲು ಜಪಾನೀ ಪಡೆಗಳೊಂದಿಗೆ ಬರಲಿದ್ದಾರೆ ಎಂಬ ಸುದ್ದಿಯ ಬಗ್ಗೆ ಪ್ರತಿಕ್ರಿಯಿಸಿದ್ದ ಗಾಂಧಿ, ಅದನ್ನು 'ಅನಪೇಕ್ಷಣೀಯ' ಮತ್ತು 'ಅನಾಹುತಕಾರಿ' ಎಂದು ವರ್ಣಿಸಿದ್ದರು.

ಅಹಿಂಸೆ : ರಾಜಿಯಾದ ಗಾಂಧಿ – ರೂಸ್‌ವೆಲ್ಟ್‌ಗೆ ಪತ್ರ

ಮೇ ೧೭ರಂದು ಗಾಂಧಿ 'ಬ್ರಿಟಿಷ್ ಪ್ರಜೆಗಳಿಗೊಂದು ಬಿನ್ನಹ'ವನ್ನು 'ಹರಿಜನ್'ದಲ್ಲಿ ಪ್ರಕಟಿಸಿ, ದ.ಆಫ್ರಿಕಾದಲ್ಲಿನ ಭಾರತೀಯರ ಹಕ್ಕುಗಳಿಗಾಗಿ ನಡೆಸಿದ ಹೋರಾಟವನ್ನು ಅವರಿಗೆ ನೆನಪಿಸಿ, ಅದರಲ್ಲಿ ತಾವು ಯಶಸ್ವಿಯಾದುದಕ್ಕೆ ಕಾರಣರಾದ ಬಿಳಿಯರೇ ಈಗ ಭಾರತ ಬಿಟ್ಟು ಹೊರಟು ತಮ್ಮ ಇಂದಿನ ಅಂಥಹುದೇ ಹೋರಾಟದೊಂದಿಗೆ ಸಹಕರಿಸಬೇಕೆಂದು ಕೋರಿದರು. ನಂತರ ತಮ್ಮನ್ನು ಭೇಟಿ ಮಾಡಿದ 'ನ್ಯೂಸ್ ಕ್ರಾನಿಕಲ್' ಎಂಬ ಬ್ರಿಟಿಷ್ ಪತ್ರಿಕೆಯ ಬಾತ್ಮೀದಾರ ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ, 'ಬ್ರಿಟಿಷರು ನಮ್ಮನ್ನು ದೇವರ ಕೈಯಲ್ಲಿ ಹಾಕಿ ಹೋಗಬೇಕು. ಅದು ಅರಾಜಕತೆ ಆದರೂ ಚಿಂತೆಯಿಲ್ಲ. ಒಳಜಗಳ, ಹೊಡೆದಾಟ, ಲೂಟಿ ಏನೆಲ್ಲ ನಡೆಯಬಹುದು. ಆಗಲಿ. ಅದರಿಂದಲೇ ನಿಜ ಭಾರತ ಹುಟ್ಟಲಿದೆ. ಆದರೆ ಈಗಿರುವ ಹುಸಿ ಭಾರತ ಮಾತ್ರ ಬೇಡ.' ರಾಮಚಂದ್ರ ಗುಹಾ ತಮ್ಮ 'ಗಾಂಧಿ' ಪುಸ್ತಕದಲ್ಲಿ ಈ ಸಂದರ್ಭವನ್ನು ವ್ಯಾಖ್ಯಾನಿಸುತ್ತಾ, 'ತಮ್ಮ ಸುತ್ತಲಿನ ಒಬ್ಬೊಬ್ಬರೇ ಸಾವಿಗೀಡಾಗುತ್ತಿದ್ದ ಮತ್ತು ಹೆಚ್ಚುತ್ತಿದ್ದ ಮಹದೇವ

ದೇಸಾಯಿ ಮತ್ತು ಕಸ್ತೂರಬಾ ಅವರ ಅನಾರೋಗ್ಯದ ಆತಂಕ, ಅವರಲ್ಲಿ ತಮ್ಮ ಅಂತ್ಯವೂ ಸಮೀಪಿಸುತ್ತಿದೆ ಎಂಬ ಭಾವನೆಯನ್ನುಂಟು ಮಾಡಿ, ತಾವೆತ್ತಿಕೊಂಡಿರುವ ಮಹಾಕಾರ್ಯವು ತಮ್ಮ ಕಣ್ಣಮುಂದೆಯೇ ಒಂದು ಇತ್ಯರ್ಥಕ್ಕೆ ಬರಲಿ ಎಂಬ ಅವಸರದಲ್ಲಿದ್ದಂತೆ ತೋರುತ್ತದೆ ಎಂದಿದ್ದಾರೆ.

ಆದರೆ ಈ ಅವಸರದಲ್ಲಿ ಹಲವರು ತಿಳಿದಂತೆ ಅವಿವೇಕವೇನೂ ಇರಲಿಲ್ಲ. ನೆಹರೂ ತಮ್ಮನ್ನು ವರ್ಧಾದಲ್ಲಿ ಭೇಟಿಯಾಗಿ ಪರಿಸ್ಥಿತಿಯ ನಾಜೂಕುತನ ಕುರಿತು ಮತ್ತಷ್ಟು ಚರ್ಚೆ ನಡೆಸಿದ ನಂತರ, ಗಾಂಧಿ ತಮ್ಮ ನಿಲುವಿನಲ್ಲಿ ಒಂದು ಸಣ್ಣ ಬದಲಾವಣೆಗೆ ಸಿದ್ಧರಾದರು. ಅವರು ಚಿಯಾಂಗ್ ಕೈ ಶೇಕ್ ಅವರೂ ಸೇರಿದಂತೆ ಹಲವರಿಗೆ ಹೀಗೆ ತಿಳಿಸಿದರು: 'ಬ್ರಿಟಿಷರು ಹೋಗಬೇಕು' ಎಂದರೆ ಜಪಾನೀಯರು ಬರಲಿ ಎಂದಲ್ಲ. ಅವರಿಗೆ ಇಲ್ಲಿ ಎಂದೂ ಸ್ವಾಗತವಿಲ್ಲ. ಬ್ರಿಟಿಷರು ತಕ್ಷಣ ಭಾರತ ಬಿಟ್ಟು ಹೋಗಲು ಒಪ್ಪಿದರೆ ಏಷ್ಯಾದಲ್ಲಿ ಜಪಾನೀ ಪಡೆಗಳ ಮುನ್ನಡೆಯನ್ನು ತಡೆಯಲು ಅಥವಾ ಚೀನಾಕ್ಕೆ ರಕ್ಷಣಾ ಬೆಂಬಲ ನೀಡಲು ಬ್ರಿಟಿಷ್-ಅಮೆರಿಕನ್ ಸೈನಿಕ ತುಕಡಿಗಳು ಭಾರತದಲ್ಲಿ ಉಳಿಯಲು ನನ್ನ ಒಪ್ಪಿಗೆ ಇದೆ'. ಅಂದರೆ ಕೊನೆಗೂ ಸೇನಾ ಕಾರ್ಯಾಚರಣೆಯ ಆಯ್ಕೆಗೆ ಒಪ್ಪಿದಂತಾಗಿತ್ತು. ಇದು ಅವರು ತಾವು ಕಲ್ಪಿಸಿಕೊಳ್ಳಲಾಗದಿದ್ದ ತಮ್ಮ ನಿಯಂತ್ರಣವಿಲ್ಲದ ಸಂದರ್ಭದಲ್ಲಿ ಸಿಕ್ಕಿಕೊಂಡಿರುವುದಕ್ಕಾಗಿ ತಾವು ತೆರಬೇಕಾಗಿ ಬಂದಿರುವ ಬೆಲೆ ಎಂದು ಭಾವಿಸಿದರು.

ಅಹಿಂಸೆ ಕುರಿತ ತಮ್ಮ ಸದ್ಯದ ಈ ನಿಲುವನ್ನು ಮುಂದಿಟ್ಟು, ಗಾಂಧಿ ಅಮೆರಿಕಾದ ಅಧ್ಯಕ್ಷ ಫ್ರಾಂಕ್ಲಿನ್ ರೂಸ್‌ವೆಲ್ಟ್‌ರಿಗೂ ಒಂದು ಪತ್ರ ಬರೆದು, ಥೋರೋ, ಎಮರ್ಸನ್ ಮುಂತಾದ ಅಮೆರಿಕಾದ ಮಹಾ ದಾರ್ಶನಿಕರಿಂದ ತಾವು ಪ್ರಭಾವಿತರಾಗಿರುವುದಾಗಿ ಹೇಳುತ್ತ, ವ್ಯಕ್ತಿ ಸ್ವಾತಂತ್ರ್ಯ, ನಾಗರಿಕ ಹಕ್ಕುಗಳು ಮತ್ತು ಪ್ರಜಾಪ್ರಭುತ್ವದ ಆಶಯಗಳಿಗಾಗಿ ಹೋರಾಡುತ್ತಿರುವುದಾಗಿ ಹೇಳಿಕೊಳ್ಳುತ್ತಿರುವ ಬ್ರಿಟನ್ ಮತ್ತು ಅಮೆರಿಕಾ, ಭಾರತದ ಜನತೆಯ ವಿಷಯದಲ್ಲಿ ಈ ಹಕ್ಕುಗಳನ್ನು ದಮನ ಮಾಡುತ್ತಿರುವುದು ನ್ಯಾಯವಲ್ಲ ಎಂದು ತಿಳಿಸಿದ್ದರು. ಅಹಿಂಸೆಯಲ್ಲಿ ತಮಗೆ ಇರುವಂತಹ ಜೀವಂತ ನಿಷ್ಠೆ ಜಗತ್ತಿನಲ್ಲಿ ಎಲ್ಲರಿಗೂ ಇಲ್ಲವಾಗಿರುವುದರಿಂದ ಈ ವಿಷಯದಲ್ಲಿ ತಾವೀಗ ಸ್ವಲ್ಪಮಟ್ಟಿಗೆ ರಾಜಿ ಮಾಡಿಕೊಳ್ಳುವುದು ಅನಿವಾರ್ಯವಾಗಿದೆ ಎಂದೂ ಅವರು ರೂಸ್‌ವೆಲ್ಟ್‌ರಿಗೆ ತಿಳಿಸಿದ್ದರು. ಈ ಪತ್ರವೆಲ್ಲಿ ಎರಡೂ ಕಡೆಯ ಸರ್ಕಾರಗಳಿಂದ ತಡೆ ಹಿಡಿಯಲ್ಪಡುತ್ತದೋ ಎಂಬ ಅನುಮಾನದಿಂದ ಅವರು ಅದನ್ನು ತಮ್ಮನ್ನು ಭೇಟಿ ಮಾಡಲು ಬಂದು ಅಮೆರಿಕಾಗೆ ಹೊರಟಿದ್ದ (ಅವರ ಜೀವನ ಚರಿತ್ರಕಾರ) ಲೂಯಿ ಫಿಶರ್ ಮೂಲಕ ಕಳಿಸಿಕೊಟ್ಟರು.

ಯುದ್ಧ-ಗಾಂಧಿ-ನೆಹರೂ-ಲೋಹಿಯಾ

ಗಾಂಧಿಯವರ ಈ ರಾಜಿಯಿಂದ, ಜುಲೈ ೧೪ರಂದು ವರ್ಧಾದಲ್ಲಿ ಸಭೆ ಸೇರಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಮಾಧಾನದ ನಿಟ್ಟುಸಿರು ಬಿಡುತ್ತಿರುವಂತೆಯೇ, ಈ ರಾಜಿಗೆ ತೆರಬೇಕಾದ ಬೆಲೆಯನ್ನೂ ತಿಳಿಸಿದರು: 'ಬ್ರಿಟನ್ ಜಾಗ ಖಾಲಿ ಮಾಡದಿದ್ದರೆ

ಇನ್ನೊಂದು ಬೃಹತ್ ಅಸಹಕಾರ ಸತ್ಯಾಗ್ರಹಕ್ಕೆ ಸಿದ್ಧರಾಗಬೇಕು'. ನೆಹರೂ ಆಜ಼ಾದ್ ಮುಂತಾದವರು ಇದಕ್ಕೆ ವಿರೋಧವಿದ್ದರೆ ಪಟೇಲ್-ಪ್ರಸಾದ್‌ರು ಪರವಿದ್ದರು. ಬಿರುಸಿನ ಚರ್ಚೆಯ ನಂತರ ಕಾರ್ಯಕಾರಿ ಸಮಿತಿ ಇದನ್ನು ಒಪ್ಪಿ ಸರ್ಕಾರಕ್ಕೆ ಕೊನೆಯ ಎಚ್ಚರಿಕೆಯ ರೂಪದಲ್ಲಿ ಹೀಗೆ ತಿಳಿಸಿತು: ಜರ್ಮನಿ-ಜಪಾನ್ ನೇತೃತ್ವದ ಕೂಟ ದೇಶಗಳ ಪಡೆಯ ಮುನ್ನಡೆಯನ್ನು ತಡೆಯಲು ಮಾಡಿಕೊಡಲಾಗಿರುವ ಈ ಅನುಕೂಲಗಳೊಂದಿಗೆ, ಕೂಡಲೇ ಸ್ವಾತಂತ್ರ್ಯ ಘೋಷಿಸಿ. ಇಲ್ಲವೇ ಮತ್ತೊಂದು ಸಾಮೂಹಿಕ ಅಸಹಕಾರ ಸತ್ಯಾಗ್ರಹ ಎದುರಿಸಿ.

ಗಾಂಧಿಯವರ ಈ ಹೊಸ ಅಸಹಕಾರ ಸತ್ಯಾಗ್ರಹದ ವಿಚಾರದ ಹಿಂದೆ ಕಾಂಗ್ರೆಸ್ ಸಮಾಜವಾದಿಗಳ ಒತ್ತಡವೂ ಕೆಲಸ ಮಾಡಿತ್ತು ಎಂದು ಹೇಳಲಾಗುತ್ತದೆ. ವಿಶೇಷವಾಗಿ ಆಗ ವರ್ಧಾದಲ್ಲಿ ಗಾಂಧೀಜಿಯವರೊಂದಿಗೆ ಮೂರು ದಿನಗಳ ಕಾಲ ತಂಗಿದ್ದ ಲೋಹಿಯಾರ ಆಲೋಚನೆಗಳು ಎಂದು ಹೇಳಬಹುದು. ಏಕೆಂದರೆ ಕಾಂಗ್ರೆಸ್‌ನ ವಿದೇಶ ವ್ಯವಹಾರಗಳ ವಿಭಾಗದ ಮುಖ್ಯಸ್ಥರಾಗಿದ್ದ ಅವರು, ಜಾಗತಿಕ ರಾಜಕಾರಣದ ಆಳದ ಜ್ಞಾನ ಹೊಂದಿದ್ದಾರೆಂಬುದು ಗಾಂಧಿಯವರಿಗೆ ಗೊತ್ತಿತ್ತು. ಯುದ್ಧಗಳೆಂದರೆ ಶಸ್ತ್ರಾಸ್ತ್ರಗಳ ರಾಜಕಾರಣವೆಂದು ವಿಶ್ಲೇಷಿಸಿದ್ದ ಲೋಹಿಯಾ ಅವರ ಲೇಖನವೊಂದನ್ನು, ಗಾಂಧಿ 'ಹರಿಜನ್'ನ ಜೂನ್ ಸಂಚಿಕೆಯೊಂದರಲ್ಲಿ ಪ್ರಕಟಿಸಿದ್ದರು. ಈ ಲೇಖನದಲ್ಲಿ ಲೋಹಿಯಾ 'ಬಂಡವಾಳವಾದ, ಫ್ಯಾಸಿಸಂ ಮತ್ತು ಸಾಮ್ರಾಜ್ಯವಾದ ಒಂದು ವಿಚಾರಧಾರೆಯ ಮೂರು ಮುಖಗಳಾಗಿದ್ದು, ಬಂಡವಾಳದಾರರ ಹುನ್ನಾರ ಸ್ವದೇಶಗಳಲ್ಲಿ ಫ್ಯಾಸಿಸಮ್ಮನ್ನೂ, ವಿದೇಶಗಳಲ್ಲಿ ಸಾಮ್ರಾಜ್ಯವಾದವನ್ನೂ ಹುಟ್ಟು ಹಾಕುತ್ತದೆ' ಎಂದು ವಾದಿಸಿದ್ದರು. ಈ ಲೇಖನಕ್ಕಾಗಿ ಅವರು ಬಂಧಿತರಾಗಿ ಶಿಕ್ಷೆಗೆ ಒಳಪಟ್ಟು, ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿ, ತಾವೇ ವಾದ ಮಾಡಿ ಗೆದ್ದು ಬಿಡುಗಡೆ ಹೊಂದಿದ್ದರು. ಲೋಹಿಯಾರ ಬಂಧನವಾದಾಗ ಗಾಂಧಿ ಅದನ್ನು ಕಟುವಾಗಿ ಟೀಕಿಸಿದ್ದರು ಕೂಡ.

ಈಗ ಜುಲೈನಲ್ಲಿ ಯುದ್ಧ ಕುರಿತ ಗಾಂಧಿ ನಿಲುವಿಗೆ ಬಹು ಹತ್ತಿರವಾದದ್ದೆಂದು ಅಥವಾ ಗಾಂಧಿಯವರನ್ನು ಬಹುವಾಗಿ ಪ್ರಭಾವಿಸಿರಬಹುದಾದ್ದೆಂದು ಹೇಳಬಹುದಾದ ಲೇಖನದಲ್ಲಿ ಲೋಹಿಯಾ ಅವರು ಹೀಗೆ ಹೇಳಿದ್ದರು: 'ಮಹಾತ್ಮ ಗಾಂಧಿ ಮತ್ತು ನನ್ನ ಪರಂಪರೆಯ ಸತ್ವಶೀಲತೆಯಿಂದ ನಾನು ಪ್ರಭಾವಿತನಾಗಿರದಿದ್ದಲ್ಲಿ ದಮನ ಮತ್ತು ಶೋಷಣೆಗಳಿಗೊಳಗಾದ ಏಷ್ಯಾದ ಜನಾಂಗಕ್ಕೆ ಸೇರಿದ ನಾನು, ಬ್ರಿಟನ್‌ಗೆ ಮಣ್ಣು ಮುಕ್ಕಿಸುತ್ತಿರುವ ಜಪಾನ್‌ನ ಮಿಲಿಟರಿ ನಾಯಕ ಟೋಜೋನನ್ನು ಎತ್ತಿ ಹಿಡಿಯುತ್ತಿದ್ದೇನೋ...ಆದರೆ ಟೋಜೋ, ಕ್ರೌರ್ಯದಲ್ಲಿ ಹಿಟ್ಲರ್‌ನನ್ನು ಮೀರಿಸುತ್ತಿರುವಂತಿದೆ. ಟೋಜೋ-ಚರ್ಚಿಲ್-ಹಿಟ್ಲರ್ ಈ ಮೂವರಲ್ಲಿ ಯಾರನ್ನು ಆಯ್ಕೆ ಮಾಡಿಕೊಂಡರೂ ನಾವು ಕಟ್ಟಬೇಕೆಂದು ಕನಸು ಕಾಣುತ್ತಿರುವ ಉತ್ತಮ ಪ್ರಪಂಚವನ್ನು ಕಟ್ಟಲಾರೆವು'. ಈ ಸಂದರ್ಭದಲ್ಲೇ ಲೋಹಿಯಾ, ತಮ್ಮ ಆದರ್ಶ ನಾಯಕನೆಂದು ಅನುಸರಿಸಿಕೊಂಡು ಬಂದಿದ್ದ ನೆಹರೂ ಅವರಿಂದ ದೂರವಾಗತೊಡಗಿದ್ದು. ಯುದ್ಧದ ವಿಷಯದಲ್ಲಿ ನೆಹರೂರವರ ಬ್ರಿಟನ್ ಪರವಾದ

ನಿಲುವು ಲೋಹಿಯಾಗೆ ಅನುಮಾನಾಸ್ಪದವಾಗಿ ಕಂಡಿತು. ಹಾಗಾಗಿಯೇ ಅವರು, 'ದೇಶ ಈವರೆಗೆ ಇಬ್ಬರ ಮಾತನ್ನು ನಂಬಿ ನಡೆಯುತ್ತಿತ್ತು. ಆದರೆ ಇನ್ನು ಮುಂದೆ ಮಹಾತ್ಮ ಗಾಂಧಿಯವರ ಮಾತನ್ನು ಮಾತ್ರ ನಂಬಿ ನಡೆಯಬೇಕಾಗಿದೆ' ಎಂಬ ಸಾರ್ವಜನಿಕ ಹೇಳಿಕೆಯನ್ನೂ ನೀಡಿದರು.

ಕಾಂಗ್ರೆಸ್ ತ್ಯಜಿಸಿದ ರಾಜಾಜಿ–ಜಿನ್ನಾ, ಅಂಬೇಡ್ಕರ್ ವಿರೋಧ

ಅದೇನೇ ಇರಲಿ, ಕಾರ್ಯಕಾರಿ ಸಮಿತಿಯಲ್ಲಿ ಹಾಜರಿರದ ರಾಜಾಜಿ, ಈ ಸಂದರ್ಭದಲ್ಲಿ ಯಾವುದೇ ಕಾರಣದಿಂದ ಅಕಸ್ಮಾತ್ತೇನಾದರೂ ಬ್ರಿಟಿಷರು ಜಾಗ ಖಾಲಿ ಮಾಡಿದರೆ, ಆಡಳಿತ ನಡೆಯುವುದು ಹೇಗೆ ಎಂದು ಗಾಬರಿಯಾಗಿ, ಜಿನ್ನಾ ಅವರನ್ನು ಭೇಟಿಯಾಗಿ ಕಾಂಗ್ರೆಸ್‌ನೊಂದಿಗೆ ರಾಷ್ಟ್ರೀಯ ಸರ್ಕಾರ ರಚಿಸಲು ಒಪ್ಪಿಗೆಯನ್ನು ಕೇಳಿದ್ದರು. ಅದಕ್ಕೆ ಜಿನ್ನಾ ಯುದ್ಧಾನಂತರ ಪ್ರತ್ಯೇಕ ಮುಸ್ಲಿಂ ರಾಷ್ಟ್ರ ರಚನೆ ಕುರಿತ ಜನಾಭಿಪ್ರಾಯ ಸಂಗ್ರಹಣೆಗೆ ಒಪ್ಪುವುದಾದರೆ ತಾವು ಸಿದ್ಧವೆಂದರು. ಆದರೆ ಗಾಂಧಿ, ಇದರರ್ಥ ರಾಷ್ಟ್ರ ವಿಭಜನೆಗೆ ನಾವೂ ಒಪ್ಪಿಕೊಂಡಂತೆಯೇ ಆದೀತು ಎಂದು ಅದನ್ನು ತಿರಸ್ಕರಿಸಿದ್ದರು. ಆದರೆ ರಾಜಾಜಿಗೆ ಜಪಾನೀಯರ ಆಕ್ರಮಣ, ಸರ್ವನಾಶದ ಭಯ ಹುಟ್ಟಿಸಿತ್ತು. ಮೊದಲ ಬಾರಿಗೆ ಅವರು, ಗಾಂಧಿಯ ಸಂತತನದ ಬಗ್ಗೆ ಅನುಮಾನ ವ್ಯಕ್ತಪಡಿಸಿದರು. ನಂತರ ಕಾರ್ಯಕಾರಿ ಸಮಿತಿಯ ನಿರ್ಣಯದಿಂದ ತಮ್ಮ ಮದ್ರಾಸ್ ಪ್ರಾಂತ್ಯಕ್ಕೆ ವಿನಾಯಿತಿ ದೊರಕಿಸಿಕೊಳ್ಳಲು ವಿಫಲರಾಗಿ ಮದ್ರಾಸ್ ಶಾಸನ ಸಭೆಯ ತಮ್ಮ ಸದಸ್ಯತ್ವಕ್ಕೆ ಮತ್ತು ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ನೀಡಿದರು.

ಗಾಂಧಿ ತಮ್ಮ ಕೊನೆಯ ಕ್ರಮಕ್ಕೆ ಅಂತಿಮವಾಗಿ ಎಐಸಿಸಿಯ ಒಪ್ಪಿಗೆ ಪಡೆಯುವ ಮುನ್ನ, ಯಾವ ಕಡೆಯಿಂದಲೂ ಆಕ್ಷೇಪಣೆ ಬರಬಾರದೆಂಬ ಮುನ್ನೆಚ್ಚರಿಕೆಯಲ್ಲಿ ಮತ್ತು ತಮ್ಮ ಆತ್ಮಸಾಕ್ಷಿಯ ಸ್ಪಷ್ಟತೆಗಾಗಿ ಜಪಾನ್ ಮತ್ತು ಅಮೆರಿಕಾದ ಪ್ರಜೆಗಳಿಗೂ ಒಂದು ಬಹಿರಂಗ ಪತ್ರ ಬರೆದರು. ತಮ್ಮ ಪತ್ರಕ್ಕೆ ರೂಸ್‌ವೆಲ್ಟ್‌ರಿಂದ ಉತ್ತರ ಬರದಿದ್ದುದರ ಬಗ್ಗೆ ಅವರಿಗೆ ಆಶ್ಚರ್ಯವಾಗಿತ್ತು. ಜಪಾನ್ ಜನತೆಯನ್ನು ಉದ್ದೇಶಿಸಿ ಬರೆದ ಪತ್ರದಲ್ಲಿ ಅವರು 'ಜಪಾನ್‌ನ ಮಹಾ ಅಭಿಮಾನಿಯಾಗಿ ದ.ಆಫ್ರಿಕಾದಲ್ಲಿನ ನನ್ನ ಎರಡೂ ಆಶ್ರಮಗಳಲ್ಲಿ ಹಲವು ಜಪಾನಿ ಬೈರಾಗಿಗಳ ಜೊತೆ ಆತ್ಮೀಯವಾಗಿ ಒಡನಾಡಿರುವ ನನಗೆ, ಜಗತ್ತಿನ ಅಗ್ರಮಾನ್ಯ ದೇಶಗಳಲ್ಲಿ ಜಪಾನ್ ಕೂಡ ಒಂದಾಗಲು ಬಯಸುವುದರಲ್ಲಿ ನನಗೆ ಅನುಚಿತವಾದ್ದೇನೂ ಕಂಡಿಲ್ಲ. ಆದರೆ ಆ ಪ್ರಯತ್ನದಲ್ಲಿ ಚೀನಾದಂತಹ ಪುರಾತನ ಪರಂಪರೆಯ ದೇಶದ ಮೇಲೆ ದಾಳಿ ಮಾಡಿ, ಅದನ್ನು ನಾಶಪಡಿಸುತ್ತಿರುವುದು ಅಕ್ಷಮ್ಯ. ಜಪಾನ್ ಏನಾದರೂ ತನಗೆ ಅಲ್ಲಿ ಸ್ವಾಗತವಿದೆ ಎಂದು ಭಾವಿಸಿ, ಭಾರತದ ಮೇಲೆ ದಾಳಿ ಮಾಡಿದರೆ ಅದಕ್ಕೆ ಭ್ರಮನಿರಸನವಾಗುವುದು ಖಂಡಿತ'. ಇನ್ನು ಅಮೆರಿಕಾದ ಪ್ರಜೆಗಳನ್ನು ಉದ್ದೇಶಿಸಿ ಬರೆದ ಪತ್ರದಲ್ಲಿ 'ಹಿಟ್ಲರನ ನಾಝಿವಾದದ ವಿರುದ್ಧ ಹೋರಾಡುತ್ತಿರುವ ಮೂರು ದೇಶಗಳ, ಮೂರು ಪ್ರಮುಖ ಲೇಖಕರಾದ ರಸ್ಕಿನ್, ಥೋರೋ ಮತ್ತು ಟಾಲ್‌ಸ್ಟಾಯ್‌ರ ಅಭಿಮಾನಿಯಾಗಿರುವ ನನ್ನನ್ನು ಯಾರೂ ನಾಝಿವಾದ ಅಥವಾ ಫ್ಯಾಸಿಸಂನ್ನು ಸಮ್ಮತಿಸುವವ ಎಂದು

ಆರೋಪಿಸಲಾರರು; ನನ್ನನ್ನು ಆತ್ಮದ್ರೋಹಿ ಎಂದು ಕರೆಯಲಾರರು. ಆದರೆ ಬ್ರಿಟನ್‌ನೊಡನೆ ಮೈತ್ರಿ ಹೊಂದಿರುವ ನೀವು, ಆ ದೇಶ ಭಾರತೀಯರಿಗೆ ಮಾಡುತ್ತಿರುವ ಅನ್ಯಾಯ ಮತ್ತು ದ್ರೋಹಗಳ ಹೊಣೆಯಿಂದ ತಪ್ಪಿಸಿಕೊಳ್ಳಲಾರಿರಿ. ನೀವು ಭಾರತದ ಸ್ವಾತಂತ್ರ್ಯ ಘೋಷಣೆಯನ್ನು ಒಂದು ಯುದ್ಧ ಪರಿಹಾರದ ತುರ್ತು ಕ್ರಮವೆಂದು ಭಾವಿಸಬೇಕು' ಎಂದು ಕರೆಕೊಟ್ಟಿದ್ದರು.

ನಂತರ ಗಾಂಧಿ, ಜಿನ್ನಾ ಅವರಿಗೂ ನೇರವಾಗಿ ಮನವಿ ಮಾಡಿದರು. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಾಯಕರು, ಪರಸ್ಪರ ಜಗಳ ಪರಿಹಾರವಾಗದವರೆಗೆ ಮೇಲೇಳುವುದಿಲ್ಲವೆಂದು ಹಠ ಮಾಡಿ ಕೂತು ಜಗಳ ಪರಿಹರಿಸಿಕೊಳ್ಳಬೇಕೆಂದು ಅವರು ಹೇಳಿದರು. ಇದಕ್ಕೆ ಉತ್ತರವಾಗಿ ಜಿನ್ನಾ, 'ಗಾಂಧಿ ಬ್ರಿಟಿಷ್ ಸರ್ಕಾರಕ್ಕೆ ಕೊಟ್ಟಿರುವ ಅಂತಿಮ ಎಚ್ಚರಿಕೆ ಅಧಿಕಾರವನ್ನು ತನಗೆ ಮಾತ್ರ ಹಸ್ತಾಂತರಿಸಿಕೊಳ್ಳುವ ಕಾಂಗ್ರೆಸ್ಸಿನ ಇತ್ತೀಚಿನ ಮಹಾತಂತ್ರವಾಗಿದ್ದು, ಇದರ ಹಿಂದೆ ಮುಸ್ಲಿಮರು ಮತ್ತು ಇತರ ಅಲ್ಪಸಂಖ್ಯಾತರನ್ನು ಹಿಂದೂಗಳ ಅಡಿಯಾಳುಗಳನ್ನಾಗಿ ಮಾಡಿಕೊಳ್ಳುವ ಸಂಚಿದೆ' ಎನ್ನುತ್ತಾ, ಗಾಂಧಿಯವರ ಮನವಿಯನ್ನು ತಳ್ಳಿ ಹಾಕಿದರು. ಇನ್ನು ಈಗ ವೈಸ್‌ರಾಯ್ ಆಡಳಿತ ಮಂಡಳಿಯಲ್ಲಿ ಸ್ಥಾನ ಗಳಿಸಿದ್ದ ಅಂಬೇಡ್ಕರ್, ಕಾಂಗ್ರೆಸ್ ಯೋಚಿಸಿರುವ ಸಾಮೂಹಿಕ ಅಸಹಕಾರ ಆಂದೋಲನವು ಅರಾಜಕತೆ ಸೃಷ್ಟಿಸುವ ಮೂಲಕ ದೇಶವನ್ನು ಶತ್ರುಗಳಿಗೆ ಒಪ್ಪಿಸುವ ಅನಾಹುತಕಾರಿ ಕಾರ್ಯಕ್ರಮವಾಗಿದ್ದು, ಇದು ಯಶಸ್ವಿಯಾಗಲು ಯಾವುದೇ ದೇಶಪ್ರೇಮಿ ಅವಕಾಶ ಕೊಡಬಾರದು' ಎಂದು ಕರೆಕೊಟ್ಟರು.

ಬ್ರಿಟಿಷ್ ಸರ್ಕಾರದ ಅಪಪ್ರಚಾರ – ಎಐಸಿಸಿ ಅಧಿವೇಶನ ಆರಂಭ

ಈ ಇಬ್ಬರ ಜೊತೆಗೇ ಬ್ರಿಟಿಷ್ ಸರ್ಕಾರದ ವಾರ್ತಾ ಇಲಾಖೆ, ದೇಶದ ಹೊರಗೆ ಮತ್ತು ಒಳಗೆ ಕಾಂಗ್ರೆಸ್‌ನ 'ಭಾರತ ಬಿಟ್ಟು ತೊಲಗಿ' ನಿರ್ಣಯದ ವಿರುದ್ಧ ಅಪಪ್ರಚಾರದ ಒಂದು ದೊಡ್ಡ ಕಾರ್ಯಕ್ರಮವನ್ನೇ ನಡೆಸಿತ್ತು. ಈ ನಿರ್ಣಯದ ಕರಡಿನ ಬಗ್ಗೆ ಅಲಹಾಬಾದ್ ಸಭೆಯಲ್ಲಿ ನೆಹರೂ, ವಿರೋಧ ವ್ಯಕ್ತಪಡಿಸಿ ಮಾಡಿದ್ದ ಟೀಕೆಗಳನ್ನು ತಿರುಚಿ, ಜನರ ಮನಸ್ಸಿನಲ್ಲಿ ಗಾಂಧಿಯವರ ವಿರುದ್ಧ ನೆಹರೂ ಅವರನ್ನು ಎತ್ತಿಕಟ್ಟುವ ಮೂಲಕ ಅಸಹಕಾರ ಆಂದೋಲನವನ್ನು ವಿಫಲಗೊಳಿಸುವ ಪ್ರಯತ್ನಗಳನ್ನು ನಡೆಸಿತ್ತು. ಗಾಂಧಿ ಈಗ ಜನರ ವಿಶ್ವಾಸ ಕಳೆದುಕೊಂಡಿರುವ ವ್ಯಕ್ತಿಯೆಂದು ಚರ್ಚಿಲ್, ರೂಸ್‌ವೆಲ್ಟ್‌ರಿಗೆ ತಿಳಿಸಿ, ಅವರು ಗಾಂಧಿಗೆ ಉತ್ತರ ಬರೆಯದಂತೆ ನೋಡಿಕೊಂಡಿದ್ದ. ಸರ್ಕಾರ, ಕಾಂಗ್ರೆಸ್ ಮುಂದಿನ ಹೆಜ್ಜೆ ಇಡದಂತೆ ಅದನ್ನು ಬಗ್ಗು ಬಡಿಯಲು ಎಲ್ಲ ಸಿದ್ಧತೆ ನಡೆಸಿತ್ತು. ಸರ್ದಾರ್ ಪಟೇಲರು ಈಗಾಗಲೇ ಗುಜರಾತ್‌ನಲ್ಲಿ ರೈತರು ಮತ್ತು ವಿದ್ಯಾರ್ಥಿಗಳ ಬೃಹತ್ ಸಭೆಗಳನ್ನು ಉದ್ದೇಶಿಸಿ ಮಾತನಾಡಿ, 'ಇದು ಗಾಂಧೀಜಿಯ ಕೊನೆಯ ಆಂದೋಲನ. ಎಲ್ಲರೂ ಅವರು ಹೇಳಿದಂತೆ ನಡೆಯಲು ಸಿದ್ಧರಾಗಿ. ನಾಯಕರೆಲ್ಲ ಬಂಧಿಸಲ್ಪಡುವ ಸಾಧ್ಯತೆ ಇರುವುದರಿಂದ, ಆನಂತರ ಪ್ರತಿಯೊಬ್ಬರೂ ತಾವೇ ನಾಯಕರಾಗಿ ಏನು ಮಾಡಬಹುದೋ ಅದನ್ನೆಲ್ಲ ಮಾಡಿ' ಎಂದು ಕರೆಕೊಟ್ಟು ದೇಶಾದ್ಯಂತ ಏಳಲಿರುವ ಬಿರುಗಾಳಿಯ ಸೂಚನೆ ನೀಡಿದ್ದರು. ಆದರೆ ಈ ಯುದ್ಧವನ್ನು ಸಾಮ್ರಾಜ್ಯಶಾಹಿಗಳ ಯುದ್ಧ ಎಂದು ಬಣ್ಣಿಸಿ ಮಿತ್ರ ರಾಷ್ಟ್ರಗಳ ವಿರುದ್ಧ ನಿಂತಿದ್ದ ಭಾರತದ

ಕಮ್ಯುನಿಸ್ಟ್ ಪಕ್ಷ, ಹಿಟ್ಲರ್ ರಷ್ಯಾದ ಮೇಲೆ ದಾಳಿ ಮಾಡಿದ ನಂತರದಲ್ಲಿ, ತನ್ನ ನಿಲುವು ಬದಲಿಸಿ, ಇದು ಜನತೆಯ ಯುದ್ಧ ಎಂದು ಬಣ್ಣಿಸುವ ಮೂಲಕ ಬ್ರಿಟಿಷ್ ಸರ್ಕಾರಕ್ಕೆ ತನ್ನ ಬೆಂಬಲವನ್ನು ಘೋಷಿಸಿತ್ತು. ಇನ್ನು ಸಾವರ್ಕರ್, ಗೋಳ್ವಲ್ಕರ್, ಮೂಂಜೆ ಮುಂತಾದ ಹಿಂದೂ ಮಹಾಸಭಾ ಮತ್ತು ಆರೆಸ್ಸೆಸ್ ನಾಯಕರೂ ಬ್ರಿಟಿಷರಿಗೆ ತಮ್ಮ ಬೆಂಬಲವನ್ನು ಘೋಷಿಸಿ ಕಾಂಗ್ರೆಸ್‌ನ 'ಭಾರತ ಬಿಟ್ಟು ತೊಲಗಿ' ಆಂದೋಲನಕ್ಕೆ ಜನ ಬೆಂಬಲ ನೀಡಬಾರದೆಂದು ಕರೆ ಕೊಟ್ಟಿದ್ದರು.

ಈ ಹಿನ್ನೆಲೆಯಲ್ಲಿ ೧೯೪೨ ರ ಆಗಸ್ಟ್ ಏಳು ಮತ್ತು ಎಂಟರಂದು ಬಾಂಬೆ ನಗರದ ಗೊವಾಳಿಯ ಕೆರೆ ಮೈದಾನದಲ್ಲಿ ಅಂತಿಮ ಕರೆಗಾಗಿ ಎಐಸಿಸಿ ಸಮಾವೇಶವನ್ನು ಏರ್ಪಡಿಸಲಾಗಿತ್ತು. ಆಗಸ್ಟ್ ಮೂರರಂದು ಬಾಂಬೆಗೆ ಬಂದ ಗಾಂಧಿ, ಕಾಂಗ್ರೆಸ್ ನಾಯಕರೊಂದಿಗೆ ಹಲವು ಸಭೆಗಳನ್ನು ನಡೆಸಿ ಅಸಹಕಾರ ಆಂದೋಲನದ ಸ್ವರೂಪ ಮತ್ತು ವಿವರಗಳ ಬಗ್ಗೆ ಚರ್ಚಿಸಿದರು. ಅವುಗಳ ಮುಖ್ಯಾಂಶಗಳೆಂದರೆ,

೧. ಹಿಂಸೆ ಮತ್ತು ಬ್ರಿಟಿಷರನ್ನು ಕುರಿತ ದ್ವೇಷಕ್ಕೆ ಇಲ್ಲಿ ಅವಕಾಶವಿಲ್ಲ.

೨. ಆದಷ್ಟೂ ಬಂಧನಕ್ಕೊಳಗಾಗದಂತೆ ನೋಡಿಕೊಂಡು ಸತ್ಯಾಗ್ರಹವನ್ನು ಪೋಷಿಸಬೇಕು.

೩. ಜನ ಕಟ್ಟುನಿಟ್ಟಾಗಿ ಕರ ನಿರಾಕರಣೆ ಮಾಡಬೇಕು.

೪. ವ್ಯಾಪಾರ ವಾಣಿಜ್ಯ ವಹಿವಾಟುಗಳನ್ನು ಸ್ಥಗಿತಗೊಳಿಸಬೇಕು.

೫. ವಿದ್ಯಾರ್ಥಿಗಳು ಬ್ರಿಟಿಷರು ಭಾರತದಿಂದ ಹೊರಹೋಗುವವರೆಗೂ ಕಾಲೇಜುಗಳನ್ನು ಬಹಿಷ್ಕರಿಸಬೇಕು.

೬. ಸರ್ಕಾರಿ ನೌಕರರು ಸಾಮೂಹಿಕ ರಾಜೀನಾಮೆ ನೀಡಬೇಕು

೭. ಚೀನಾ ಮತ್ತು ರಷ್ಯಾಗಳ ರಕ್ಷಣಾ ಕಾರ್ಯಾಚರಣೆಗಳನ್ನು ಬೆಂಬಲಿಸಬೇಕು.

ಆಗಸ್ಟ್ ೬ರಂದು ಪತ್ರಕರ್ತರೊಂದಿಗೆ ಮಾತನಾಡಿದ ಗಾಂಧಿ, ತಾವು ತಮ್ಮ ಈ ಇಡೀ ಯೋಜನೆಯ ಬಗ್ಗೆ ವೈಸ್‌ರಾಯ್‌ಗೆ ಪತ್ರ ಬರೆಯುವುದಾಗಿಯೂ, ಕಾಂಗ್ರೆಸ್ ನಿರ್ಣಯದ ಘೋಷಣೆ ಮತ್ತು ಆಂದೋಲನದ ಆರಂಭದ ನಡುವೆ ಸ್ವಲ್ಪ ಸಮಯವಿರಲಿದ್ದು, ಅಷ್ಟರಲ್ಲಿ ವೈಸ್‌ರಾಯ್ ತಮ್ಮ ನಿರ್ಧಾರ ತೆಗೆದುಕೊಳ್ಳಬಹುದು ಎಂದು ತಿಳಿಸಿದರು.

'ಮಾಡು ಇಲ್ಲವೆ ಮಡಿ': ಗಾಂಧಿ ಕರೆ–ಚರ್ಚಿಲ್‌ನ ಬಡಾಯಿ!

ಆಗಸ್ಟ್ ೭ರಂದು ಜನರಿಂದ ಕಿಕ್ಕಿರಿದಿದ್ದ ಎಐಸಿಸಿ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಗಾಂಧಿ, 'ಇದು ನನ್ನ ಬದುಕಿನ ಅತಿ ದೊಡ್ಡ ಸತ್ಯಾಗ್ರಹವಾಗಿದ್ದು, ಇದರಲ್ಲಿ ಬ್ರಿಟಿಷರ ಬಗ್ಗೆಯಾಗಲೀ, ಇನ್ನಾರ ಬಗ್ಗೆಯಾಗಲೀ ಕಿಂಚಿತ್ ದ್ವೇಷ ಮತ್ತು ಹಿಂಸೆಯ ಸೋಂಕಿರಬಾರದು. ಹಾಗೇ ಚೀನಾ ಮತ್ತು ರಷ್ಯಾಗಳಂತಹ ಮಹಾನ್ ದೇಶಗಳ ಅಸ್ತಿತ್ವಕ್ಕೇ ಸಂಚಕಾರ ತಂದಿರುವ ಜರ್ಮನಿ–ಜಪಾನ್ ಕೂಟ ಪಡೆಗಳಿಗೆ ಕಿಂಚಿತ್ತೂ

ಸಹಾನುಭೂತಿ ಇರಬಾರದು' ಎಂದು ಹೇಳಿದರು. ಮಾರನೆಯ ದಿನದ ಸಭೆಯಲ್ಲಿ ಅವರು ಮುಸ್ಲಿಂ ಲೀಗ್‌ನ ವಿಭಜನಾ ರಾಜಕಾರಣದ ಬಗ್ಗೆ ಖೇದ ವ್ಯಕ್ತಪಡಿಸುತ್ತಾ, 'ಇಡೀ ದೇಶವೇ ಪ್ರತಿ ಮುಸ್ಲಿಮನ ನಾಡಾಗಿರುವಾಗ ಅವರಿಗಾಗಿ ಪ್ರತ್ಯೇಕ ನಾಡಿಗಾಗಿ ಬೇಡಿಕೆ ಸಲ್ಲಿಸಿರುವುದೇತಕ್ಕೆ?' ಎಂದು ಪ್ರಶ್ನಿಸಿದರು. ಕೆಲವೇ ವರ್ಷಗಳ ಹಿಂದೆ ತಮ್ಮನ್ನು ಸ್ನೇಹಿತನೆಂದು ಆಲಂಗಿಸಿಕೊಂಡಿದ್ದ ಮುಸ್ಲಿಂ ಸಮುದಾಯ, ಈಗ ತಮ್ಮ ಮತ್ತು ಆಝಾದರ ಚಾರಿತ್ರ್ಯವಧೆ ಮಾಡುತ್ತಿರುವ ಬಗ್ಗೆ ಬೇಸರ ವ್ಯಕ್ತಪಡಿಸಿದ ಅವರು, 'ಅವರ ಮುಸ್ಲಿಂ ಬಹುಸಂಖ್ಯಾತ ರಾಷ್ಟ್ರದ ಕಲ್ಪನೆಯನ್ನು ಒಪ್ಪದ ನಾವು, ಹಿಂದೂ ಬಹುಸಂಖ್ಯಾತವಾದಿ ರಾಷ್ಟ್ರವನ್ನೂ ಒಪ್ಪುವುದಿಲ್ಲ. ಸಾವರ್ಕರ್, ಮೂಂಜೆ ಮುಂತಾದವರ, ತಾವು ಮುಸ್ಲಿಮರನ್ನು ಕತ್ತಿಯಡಿ ಇರಿಸಿ ದೇಶದಲ್ಲಿಟ್ಟುಕೊಳ್ಳುವ ಸಿದ್ಧಾಂತವನ್ನು ನಂಬುವುದಿಲ್ಲ. ಯಾರ ದಮನವನ್ನೂ ನಾವು ಒಪ್ಪುವುದಿಲ್ಲ' ಎಂದು ಹೇಳಿದರಲ್ಲದೆ, 'ಮುಸ್ಲಿಂ ಲೀಗ್ ಏನಾದರೂ ನಮ್ಮ ಈ ಸತ್ಯಾಗ್ರಹದಲ್ಲಿ ಭಾಗವಹಿಸುವುದಾದರೆ, ಬ್ರಿಟಿಷ್ ಸರ್ಕಾರದ ಸರ್ವ ಅಧಿಕಾರಗಳನ್ನೂ ರಾಷ್ಟ್ರೀಯ ಸರ್ಕಾರದ ರಚನೆಯಲ್ಲಿ ಅದಕ್ಕೆ ಹಸ್ತಾಂತರಿಸಲು ನಾವು ಸಿದ್ಧರಿದ್ದೇವೆ' ಎಂದು ಘೋಷಿಸಿದರು.

ನಂತರ ಕಾಂಗ್ರೆಸ್ ಕಾರ್ಯಕಾರಿ ಸಮಿತಿ 'ಭಾರತ ಬಿಟ್ಟು ತೊಲಗಿ' ನಿರ್ಣಯಕ್ಕೆ ತನ್ನ ಒಪ್ಪಿಗೆ ನೀಡಿ ಅದರ ನಾಯಕತ್ವವನ್ನು ಗಾಂಧಿಯವರಿಗೆ ನೀಡುವ ನಿರ್ಣಯವನ್ನು ಅಂಗೀಕರಿಸಿತು. ಈ ನಿರ್ಣಯ, ಬ್ರಿಟಿಷರು ಭಾರತ ಬಿಟ್ಟೊಡನೆ ಭಾರತವು ಮಿತ್ರ ರಾಷ್ಟ್ರಗಳೊಂದಿಗೆ ಸೇರಿ, ಜಗತ್ತಿನ ಎಲ್ಲ ಜನರ ಸ್ವಾತಂತ್ರ್ಯ ರಕ್ಷಣೆಯ ಹೋರಾಟದಲ್ಲಿ ಅವುಗಳೊಂದಿಗೆ ಕಷ್ಟ ಸುಖಗಳನ್ನು ಹಂಚಿಕೊಳ್ಳುವುದೆಂದೂ, ಭಾರತಕ್ಕೆ ದೊರೆಯುವ ಸ್ವಾತಂತ್ರ್ಯ ಇತರೆಲ್ಲ ಅಧೀನ ದೇಶಗಳ ಸ್ವಾತಂತ್ರ್ಯಕ್ಕೆ ನಾಂದಿಗೀತೆ ಹಾಡಿದೆ ಎಂದೂ ಹೇಳಿತ್ತು. 'ಇದು ನಿರ್ಣಾಯಕ ಹೋರಾಟ' ಎಂದಿದ್ದ ಈ ನಿರ್ಣಯವು ಜನರಿಗೆ 'ಮಾಡು ಇಲ್ಲವೇ ಮಡಿ' ಎಂದು ಕರೆಕೊಟ್ಟಿತ್ತು. ನೆಹರೂ ಅವರು ಮಂಡಿಸಿದ ಈ ನಿರ್ಣಯವನ್ನು ಪಟೇಲರು ಅನುಮೋದಿಸಿದರು.

'ಭಾರತ್ ಮಾತಾ ಕಿ ಜೈ' ಮತ್ತು 'ಮಹಾತ್ಮ ಗಾಂಧಿ ಕಿ ಜೈ' ಘೋಷಣೆಗಳ ಮಧ್ಯೆ ಭಾರಿ ಕರತಾಡನದೊಂದಿಗೆ ಸಮಾವೇಶ ಇದಕ್ಕೆ ತನ್ನ ಒಪ್ಪಿಗೆಯನ್ನು ಸೂಚಿಸಿತು. ಸತ್ಯಾಗ್ರಹವನ್ನು ನಡೆಸಲು ಸಿದ್ಧಪಡಿಸಲಾಗಿದ್ದ ಏಳು ಅಂಶಗಳ ಮಾರ್ಗದರ್ಶನ ಸೂತ್ರವನ್ನು ದೇಶದ ಜನರಿಗಾಗಿ ಓದಿ ಹೇಳಲಾಯಿತು. ದೇಶ ೧೯೨೦ರ ಅಸಹಕಾರ ಸತ್ಯಾಗ್ರಹದಂತಹ ಮತ್ತೊಂದು ಬೃಹತ್ ಚಳುವಳಿಗೆ ಸಿದ್ಧವಾಗಿತ್ತು.

ಆ ಸಂದರ್ಭದಲ್ಲಿ ಗಾಂಧಿ, ತಮ್ಮ ಆಪ್ತ ಪರಿವಾರದೊಂದಿಗೆ ಬಿರ್ಲಾ ಭವನದಲ್ಲಿ ನೆಲೆಸಿದ್ದರು. ಮಾರನೆಯ ಬೆಳಿಗ್ಗೆ ಅಂದರೆ ಆಗಸ್ಟ್ ೯ರಂದು ಬೆಳಕು ಹರಿಯುವ ಮುನ್ನವೇ ಬಾಂಬೆ ಪೊಲೀಸರು ಗಾಂಧಿಯವರ ಕೋಣೆಯ ಬಾಗಿಲು ಬಡಿದರು. ಅವರು ಗಾಂಧಿ ಮತ್ತು ಅವರ ಪರಿವಾರದ ಬಂಧನಕ್ಕಾಗಿ ಬಂದಿದ್ದರು. ಗಾಂಧಿ ಪ್ರಾರ್ಥನೆ ಮತ್ತು ಉಪಹಾರಕ್ಕಾಗಿ ಅರ್ಧ ತಾಸು ಸಮಯ ಕೇಳಿದರು. ಅದಕ್ಕೆ ಅವಕಾಶ ಮಾಡಿಕೊಡಲಾಯಿತು. 'ವೈಷ್ಣವ ಜನತೋ' ಹಾಡಲಾಯಿತು. ಗಾಂಧಿ ಗೀತೆಯ ಒಂದು

ಪುಸ್ತಕ, ಒಂದು ಉರ್ದು ಮಾರ್ಗದರ್ಶಿ ಹಾಗೂ ಚರಕದೊಂದಿಗೆ ಹೊರಟು ನಿಂತರು. ಅವರೊಂದಿಗೆ ಮಹದೇವ ದೇಸಾಯಿ, ಸರೋಜಿನಿ ನಾಯ್ಡು ಮತ್ತು ಮೀರಾಬೆನ್‌ರನ್ನೂ ಬಂಧಿಸಲಾಯಿತು. ಕಸ್ತೂರಬಾ ಕೆಮ್ಮುತ್ತಲೇ ಗಾಂಧಿಯವರನ್ನು 'ನಿಮಗೆ ಆರೋಗ್ಯ ಸರಿ ಇಲ್ಲ. ನಾನೂ ಬರುತ್ತೇನೆ' ಎಂದರು. ಗಾಂಧಿ, 'ಇಂದು ಸಂಜೆಗೆ ನೀನು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಬೇಕೆಂಬುದು ನನ್ನ ಇಚ್ಛೆ. ಆದರೆ ಕೊನೆಯ ತೀರ್ಮಾನ ನಿನ್ನದೇ' ಎಂದರು. ಬಾ ಯೋಚಿಸಿದರು. ತಾವು ಇಂದು ಸಂಜೆ ಭಾಷಣ ಮಾಡಿದರೆ ತಮ್ಮ ಬಂಧನವೂ ಖಂಡಿತ. ನಂತರ ತಮ್ಮನ್ನು ಯಾವ ಸೆರೆಮನೆಗೆ ಒಯ್ಯುವರೋ ಖಚಿತವಿಲ್ಲ. ಹಾಗೆ ಯೋಚಿಸಿದ ಅವರು 'ಈ ಬಾರಿ ಸೆರೆಮನೆ ವಾಸ ಎಷ್ಟು ಕಾಲವೋ! ನಾನೂ ನಿಮ್ಮೊಂದಿಗೆ ಬರುತ್ತೇನೆ.' ಎಂದು ಹೇಳುತ್ತಾ ತಾವೂ ಗಾಂಧಿಯೊಂದಿಗೆ ಹೊರಟರು. ಗಾಂಧಿ ಪ್ಯಾರೇಲಾಲರರನ್ನು ಹತ್ತಿರ ಕರೆದು 'ಪ್ರತಿ ಸತ್ಯಾಗ್ರಹಿಯೂ ಒಂದು ಕಾಗದದ ಚೀಟಿಯ ಮೇಲೆ 'ಮಾಡು ಇಲ್ಲವೇ ಮಡಿ ('ಕರೋ ಯಾ ಮರೋ') ಎಂದು ಬರೆದುಕೊಂಡು ಅದನ್ನು ತನ್ನ ಉಡುಪಿಗೆ ಸಿಕ್ಕಿಸಿಕೊಳ್ಳಲಿ. ಚಳುವಳಿಯಲ್ಲೇನಾದರೂ ಆತ ಸತ್ತರೆ ಅವನನ್ನು ಸತ್ಯಾಗ್ರಹಿ ಎಂದು ಗುರುತಿಸಬಹುದು' ಎಂದು ಒಂದು ಟಿಪ್ಪಣಿ ಬರೆಸಿದರು. ನಂತರದಲ್ಲೇ ಪ್ಯಾರೇಲಾಲರನ್ನೂ ಪ್ರತ್ಯೇಕವಾಗಿ ಬಂಧಿಸಲಾಯಿತು ಎಂಬುದು ಬೇರೆ ವಿಷಯ. ಇನ್ನು ಮಹದೇವ ದೇಸಾಯಿಯವರ ಮಗ ನಾರಾಯಣ ದೇಸಾಯಿ ಆರ್ದ್ರನಾಗಿ 'ಕಾಕಾ, ನಾವಿನ್ನು ಮತ್ತೆ ಭೇಟಿಯಾಗುವುದು ಸ್ವತಂತ್ರ ಭಾರತದಲ್ಲೇ!' ಎಂದು ಅವರ ಕೈಹಿಡಿದ. ಮಹದೇವ ದೇಸಾಯಿ ಮಗನ ಕೆನ್ನೆಗೆ ಮುತ್ತಿಟ್ಟು ಎಲ್ಲರೊಂದಿಗೆ ಪೊಲೀಸ್ ವಾಹನ ಹತ್ತಿದರು.

ಅವರನ್ನು ಬಾಂಬೆ ವಿ.ಟಿ. ರೈಲ್ವೇ ನಿಲ್ದಾಣಕ್ಕೆ ಕರೆದೊಯ್ಯಲಾಯಿತು. ಅಲ್ಲಿ ನೋಡಿದರೆ ನೆಹರೂ, ಪಟೇಲ್, ಆಝಾದ್ ಮುಂತಾದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರನ್ನೂ ಬಂಧಿಸಿ ಕರೆತರಲಾಗಿತ್ತು. ಇನ್ನೊಂದೆಡೆ ಅಶೋಕ ಮೆಹ್ತಾ, ಯೂಸುಫ್ ಮೆಹ್ರೋಲಿ, ಎನ್. ಜಿ. ಗೋರೆ ಮುಂತಾದ ಯುವ ಸಮಾಜವಾದಿಗಳ ತಂಡವನ್ನು ಬಂಧಿಸಿ ಕೂರಿಸಲಾಗಿತ್ತು. ಅವರನ್ನೆಲ್ಲ ಪೂನಾ ಕಡೆ ಹೊರಟ ರೈಲು ಗಾಡಿಗೆ ಹತ್ತಿಸಲಾಯಿತು. ಪಟೇಲ್ ಗಾಂಧಿ ಕೂತಿದ್ದ ಡಬ್ಬಿಗೆ ಬಂದು ಮಾತಾಡತೊಡಗಿದಾಗ ಅವರನ್ನು ಅವರ ಡಬ್ಬಿಗೆ ಮರಳಲು ಪೊಲೀಸರು ಸೂಚಿಸಿದರು. ಕಿಟಕಿ ಬಳಿ ಕೂತಿದ್ದ ಕಸ್ತೂರಬಾ ರೈಲು ನಿಲ್ದಾಣದಲ್ಲಿ ನಡೆದಿದ್ದ ಜನಜೀವನವನ್ನು ತದೇಕಚಿತ್ತದಿಂದ ಗಮನಿಸಿದರು. ಗಾಡಿಗಳು ಬರುತ್ತಿದ್ದವು, ಹೋಗುತ್ತಿದ್ದವು. ಜನ ಇಳಿದು ಹತ್ತುತ್ತಿದ್ದರು. ಕೂಲಿಗಳು ಪ್ರಯಾಣಿಕರೊಂದಿಗೆ ಕೂಲಿ ವಿಷಯದಲ್ಲಿ ವಾದ ಮಾಡುತ್ತಿದ್ದರು. ಪೊಲೀಸರು ಬೀಡಿ ಸಿಗರೇಟು ಸೇದುತ್ತಾ, ಪಾನ್ ಅಗಿಯುತ್ತಾ ತಮ್ಮ ಕಷ್ಟ ಸುಖಗಳನ್ನು ಮಾತಾಡಿಕೊಳ್ಳುತ್ತಾ ನಿಂತಿದ್ದರು. ಅಲ್ಲಿದ್ದ ಇಡೀ ಜನಸ್ತೋಮ ಪೊಲೀಸ್ ಕಾರ್ಯಾಚರಣೆಯ ಗಮನವೇ ಇಲ್ಲದೆ ತಮ್ಮ ಪಾಡಿಗೆ ತಾವು ಸರಬರನೆ ಓಡಾಡುತ್ತಾ ತಾವು ಬಂದ ಕೆಲಸಗಳಲ್ಲಿ ತೊಡಗಿದ್ದರು. ಕಸ್ತೂರಬಾಗೆ ಏನನ್ನಿಸಿತೋ ಏನೋ ಅವರು ಪಕ್ಕದಲ್ಲಿದ್ದ ಸುಶೀಲಾ ನಯ್ಯರ್‌ಗೆ, 'ನೋಡೇ ಸುಶೀಲಾ, ಜಗತ್ತು ಹೇಗೆ ತನ್ನ ಪಾಡಿಗೆ ತಾನು ಯಾವ ತಕರಾರೂ ಇಲ್ಲದೆ ಸುಮ್ಮನೆ ನಡೆಯುತ್ತಿದೆ! ನಿಮ್ಮ ಗಾಂಧಿ ಇವರಿಗೆ

ಪೂರ್ಣ ಸ್ವರಾಜ್ಯ ಕೊಡಿಸಲು ಹೊರಟಿದ್ದಾರೆ!' ಎಂದು ಹಣೆ ಚಚ್ಚಿಕೊಂಡರು.

ರೈಲು ಹೊರಟಿತು. ಗಾಂಧಿ ಗುಂಪನ್ನು ಚಿಂಚವಾಡಾ ನಿಲ್ದಾಣದಲ್ಲಿ ಇಳಿಸಿ ಮತ್ತೊಂದು ವಾಹನದಲ್ಲಿ ಅವರನ್ನೆಲ್ಲ ಹತ್ತಿರದ ಆಗಾಖಾನ್ ಅರಮನೆ ಕಟ್ಟಡದಲ್ಲಿ ಸೆರೆಯಾಳುಗಳಾಗಿ ಇಡಲಾಯಿತು. ಸಮಾಜವಾದಿಗಳ ಗುಂಪನ್ನು ಕರೆದೊಯ್ದು ಯೆರವಾಡಾ ಸೆರೆಮನೆಯಲ್ಲಿ ಕೂಡಿಡಲಾಯಿತು. ನೆಹರೂ, ಪಟೇಲ್, ಆಜ಼ಾದ್ ಮುಂತಾದ ಇತರೆ ಹಿರಿಯ ನಾಯಕರನ್ನು ಅಹಮದ್‌ನಗರಕ್ಕೆ ಕೊಂಡೊಯ್ದು ಅಲ್ಲಿನ ಕೋಟೆಯ ಸೆರೆಮನೆಯಲ್ಲಿ ಬಂಧಿಸಿಡಲಾಯಿತು.

ಮಾರನೆಯ ದಿವಸ ಅಂದರೆ ಆಗಸ್ಟ್ ೯ರಂದು ಸರ್ಕಾರ, ದೇಶದ ಇಡೀ ಜನಸಮುದಾಯದ ಪ್ರತಿನಿಧಿಯೇನೂ ಆಗಿರದ 'ಕಾಂಗ್ರೆಸ್'ನ 'ಭಾರತ ಬಿಟ್ಟು ತೊಲಗಿ' ನಿರ್ಣಯವನ್ನು ಫ್ಯಾಸಿಸ್ಟ್ ಶಕ್ತಿಗಳಿಗೆ ಕೊಡಲಾದ ಬೆಂಬಲ ಎಂದು ವರ್ಣಿಸಿ, ಕಾಂಗ್ರೆಸ್ ಮತ್ತು ಅದರ ಎಲ್ಲ ಅಂಗ ಸಂಸ್ಥೆಗಳ ಮೇಲೆ ನಿಷೇಧ ಹೇರಿ ಅವುಗಳ ಕಛೇರಿಗಳಿಗೆ ಬೀಗಮುದ್ರೆ ಹಾಕಿತು.

ಆ ದಿನ ಲಂಡನ್‌ನಲ್ಲಿ ಔತಣಕೂಟವೊಂದರಲ್ಲಿ ಭಾಗವಹಿಸಿದ್ದ ಚರ್ಚಿಲ್ ಈ ಸುದ್ದಿ ಕೇಳಿ 'ಗಾಂಧಿಯನ್ನು ನಾವು ಸೆರೆಮನೆಗೆ ತಳ್ಳಿದ್ದೇವೆ' ಎಂದು ಹರ್ಷದಿಂದ ಘೋಷಣೆ ಮಾಡಿದನಂತೆ. ಆಗ ಆ ಕೂಟಕ್ಕೆ ಆಹ್ವಾನಿತನಾಗಿದ್ದ ಜ. ಸ್ಮಟ್ಸ್ 'ನೀವು ತಪ್ಪು ಮಾಡಿದ್ದೀರಿ' ಎಂದನಂತೆ. ಹೇಗೆಂದು ಚರ್ಚಿಲ್ ಆಶ್ಚರ್ಯದಿಂದ ನೋಡುತ್ತಿದ್ದಾಗ ಸ್ಮಟ್ಸ್ ಹೇಳಿದ್ದು, 'ಗಾಂಧಿ ಓರ್ವ ದೇವತಾ ಪುರುಷ. ಅವರು ಧರ್ಮ ಗುರು'. ಅದನ್ನು ಲೆಕ್ಕಿಸದೆ ಚರ್ಚಿಲ್ ಮಾತು ಮುಗಿಸಿದ್ದು ಈ ಮಾತಿನೊಂದಿಗೆ: 'ಅಯ್ಯೋ, ನಾನು ನನ್ನ ಅಧಿಕಾರಾವಧಿಯಲ್ಲಿ ಇಂತಹ ಹಲವು ಧರ್ಮಗುರು(ಬಿಷಪ್)ಗಳನ್ನು ನೇಮಿಸಿರುವವನು ಬಿಡಿ!'

■

೮೫

ಸಾವಿನ ಮನೆಯಾದ ಸೆರೆಮನೆ

ಗಾಂಧಿ ಮತ್ತು ಇತರ ನಾಯಕರ ಬಂಧನದ ಸುದ್ದಿ ಹಬ್ಬುತ್ತಿದ್ದಂತೆ ಬಾಂಬೆ ನಗರ ಅಶಾಂತವಾಯಿತು. ಜನಜೀವನ ಅಸ್ತವ್ಯಸ್ತ ಮಾಡುವ ಘಟನೆಗಳು ಶುರುವಾದವು. ಜನ, ವಿಶೇಷವಾಗಿ ಯುವ ಜನತೆ ಬೀದಿಗಿಳಿದರು. ಗುಂಪುಗಳು ಸರ್ಕಾರಿ ಕಛೇರಿಗಳ ಮೇಲೆ ದಾಳಿ ಮಾಡಲು ಶುರು ಮಾಡಿದವು. ರೈಲು ಗಾಡಿಗಳ ಕಿಟಕಿಗಳನ್ನು ಒಡೆಯತೊಡಗಿದರು. ಆಸನಗಳನ್ನು ಕಿತ್ತು ಹಾಕಿದರು. ರೈಲ್ವೇ ನಿಲ್ದಾಣಗಳಿಗೆ ನುಗ್ಗಿ ಅವುಗಳ ಕಾರ್ಯ ನಿರ್ವಹಣೆಯನ್ನು ಅಸ್ತವ್ಯಸ್ತಗೊಳಿಸಿದರು. ಅಂಚೆ ಡಬ್ಬಿಗಳನ್ನು ಕಿತ್ತೆಸೆದರು. ಅಂಚೆ ಚೀಲಗಳನ್ನು ಸುಟ್ಟರು. ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸಿದರು. ಸೇತುವೆಗಳನ್ನು ಸ್ಫೋಟಿಸಿದರು. ಸರ್ಕಾರಿ ಕಛೇರಿಗಳಿಂದ ನೌಕರರನ್ನು ಹೊರ ದಬ್ಬಿದರು. ಕಟ್ಟಡಗಳಿಗೆ ಬೆಂಕಿ ಹಚ್ಚಿ ದಾಖಲೆಗಳನ್ನು ಸುಟ್ಟರು. ಮಿಲಿಟರಿ ಸಾಮಗ್ರಿಗಳನ್ನೊಯ್ಯುತ್ತಿದ್ದ ರೈಲುಗಾಡಿಗಳನ್ನು ತಡೆದರು. ಊರು ಅಲ್ಲೋಲಕಲ್ಲೋಲವಾಯಿತು. ಒಟ್ಟಿನಲ್ಲಿ ಸರ್ಕಾರದ ಆಡಳಿತವನ್ನು ಅಸ್ತವ್ಯಸ್ತಗೊಳಿಸುವುದೇ ಈ ಪ್ರತಿಭಟನೆಗಳ ಉದ್ದೇಶವಾಗಿತ್ತು.

ಭುಗಿಲೆದ್ದ ಪ್ರತಿಭಟನೆಯ ಜ್ವಾಲೆ–ಸಮಾಜವಾದಿಗಳ ಭೂಗತ ಹೋರಾಟ

ಬಾಂಬೆ ನಗರದಲ್ಲಿ ಶುರುವಾದ ಅಶಾಂತಿ ಜೀವಂತ ಜ್ವಾಲೆಯಾಗಿ ದೇಶದಾದ್ಯಂತ ಹಬ್ಬಿತು. ಬಾಂಬೆ ನಗರದ ವಿಧ್ವಂಸಕ ಕೃತ್ಯಗಳೆ ಜನರಿಗೆ ಎಲ್ಲ ಕಡೆ ಮಾದರಿಯಾಯಿತು. ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳನ್ನು ಬಹಿಷ್ಕರಿಸಿ ಬೀದಿಗಿಳಿದರು. ಮೆರವಣಿಗೆ ತೆಗೆದರು. ಸಿಕ್ಕ ಸಿಕ್ಕ ಕಟ್ಟಡಗಳ ಮೇಲೆ ತ್ರಿವರ್ಣ ಧ್ವಜ ಹಾರಿಸಿ 'ವಂದೇ ಮಾತರಂ' ಹಾಡಿದರು. ಕರ್ನಾಟಕದ ಈಸೂರಿನಂತಹ ಕೆಲವು ಊರುಗಳು ತಮ್ಮ ಸ್ವಾತಂತ್ರ್ಯವನ್ನು ಘೋಷಿಸಿಕೊಂಡವು. ಧಾರವಾಡದಲ್ಲಿ ಇಬ್ಬರು ವಿದ್ಯಾರ್ಥಿನಿಯರು ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯಕ್ಕೆ ನುಗ್ಗಿ ಆ ನ್ಯಾಯಾಧೀಶರನ್ನು 'ವಜಾ ಮಾಡುವ' ಆಜ್ಞೆಯನ್ನು ಓದಿ ಹೇಳಿದರು!

ಹಲವು ಕಡೆ ವ್ಯಾಪಕ ಲಾಠಿ ಪ್ರಹಾರ ಮತ್ತು ಗೋಲೀಬಾರುಗಳು ನಡೆದು ಜನ ಗಾಯಗೊಂಡರು, ಸತ್ತರು. ನಾಲ್ಕು ದಿನಗಳ ಅವಧಿಯಲ್ಲೇ ಆರು ನೂರಕ್ಕೂ ಹೆಚ್ಚು ಜನ ಅಸುನೀಗಿದರು. ಒಂದು ಲಕ್ಷಕ್ಕೂ ಹೆಚ್ಚು ಜನ ಸೆರೆಮನೆ ಸೇರಿದ್ದರು. ಸರ್ಕಾರದ ಅಂಕಿ ಅಂಶಗಳ ಪ್ರಕಾರವೇ ಈ ಚಳುವಳಿಯಲ್ಲಿ ಸತ್ತವರ ಸಂಖ್ಯೆ ಒಂದು ಸಾವಿರ. ಜನ ಗಾಂಧಿಯವರ 'ಮಾಡು ಇಲ್ಲವೇ ಮಡಿ' ಎಂಬ ಕರೆಗೆ ಅಕ್ಷರಶಃ ಓಗೊಟ್ಟಿದ್ದರು.

ಈ ಬಾರಿಯ ಈ ಅಸಹಕಾರ ಚಳುವಳಿಯ ವೈಶಿಷ್ಟ್ಯವೆಂದರೆ, ಹಲವು ಗುಂಪುಗಳು ಬಂಧನ ತಪ್ಪಿಸಿಕೊಂಡು ಭೂಗತವಾಗಿದ್ದು. ಸರ್ಕಾರ ಎಲ್ಲ ಕಡೆ ಪ್ರತಿಭಟನೆಯ ನಾಯಕತ್ವ ವಹಿಸಬಹುದಾದ ಎಲ್ಲ ನಾಯಕರನ್ನು ಬಂಧಿಸತೊಡಗಿದಂತೆ ಭೂಗತರಾದ ಈ ಗುಂಪುಗಳು, ತಮ್ಮದೇ ಜಾಲಗಳನ್ನು ನಿರ್ಮಿಸಿಕೊಂಡು ನಿರ್ದೇಶನಗಳನ್ನು ನೀಡುತ್ತಾ ಪ್ರತಿಭಟನೆ ಮುಂದುವರೆಯುವಂತೆ ನೋಡಿಕೊಳ್ಳುತ್ತಿದ್ದವು. ಇವರು ಹೆಚ್ಚಾಗಿ ಕಾಂಗ್ರೆಸ್ ಸಮಾಜವಾದಿಗಳಾಗಿದ್ದರು. ಇವರಲ್ಲಿ ವ್ಯವಸ್ಥಿತವಾಗಿ ಗುಪ್ತ ಕಾರ್ಯಾಚರಣೆಗಳನ್ನು ನಡೆಸಿದವರೆಂದರೆ ರಾಮಮನೋಹರ ಲೋಹಿಯಾ, ಕಮಲಾದೇವಿ ಚಟ್ಟೋಪಾಧ್ಯಾಯ, ಅಚ್ಯುತ ಪಟವರ್ಧನ್. ಅರುಣಾ ಅಸಫ್ ಅಲಿ, ಪೂರ್ಣಿಮಾ ಬ್ಯಾನರ್ಜಿ, ರಮಾನಂದ ಮಿಶ್ರ, ಸಾಣೆ ಗುರೂಜಿ ಮತ್ತು ಉಷಾಮೆಹ್ತಾ. ಆಗಸ್ಟ್ ೯ರಂದು ಭೂಗತರಾದ ಇವರು ವೇಷ ಮರೆಸಿಕೊಂಡು ಊರೂರು ಅಲೆದು ತಮಗೆ ನೆರವಾಗಬಹುದಾದ ಸಾಮಾನ್ಯ ಜನರ, ವ್ಯಾಪಾರಿಗಳ ಮತ್ತು ಅಧಿಕಾರಿಗಳ ಗುಪ್ತ ಸಂಪರ್ಕಗಳನ್ನು ಸಾಧಿಸಿಕೊಂಡು ಸರ್ಕಾರದ ವಿರುದ್ಧ ಕರಪತ್ರಗಳನ್ನು ಬರೆದು, ಮುದ್ರಿಸಿ ಹಂಚುತ್ತಾ ಪ್ರತಿಭಟನೆಗಳನ್ನು ಸಂಘಟಿಸುತ್ತಾ ಅವು ನಿಲ್ಲದೆ ಮುಂದುವರೆಯುವಂತೆ ನೋಡಿಕೊಳ್ಳುತ್ತಿದ್ದರು. 'ಹೋರಾಟದ ಮುನ್ನಡೆ', 'ಸ್ವಯಮಾಡಳಿತ ಹೇಗೆ?', 'ಕ್ರಾಂತಿಗಾಗಿ ಸಿದ್ಧತೆ' ಇವು ಈ ಸಮಯದಲ್ಲಿ ಲೋಹಿಯಾ ಬರೆದ ಮುಖ್ಯ ಕರಪತ್ರಗಳು.

ಲೋಹಿಯಾ ಗೆಳೆಯರ ರೇಡಿಯೋ ಕೇಂದ್ರ-ಸೆರೆಮನೆಯ ಗೋಡೆ ಹಾರಿದ ಜೆಪಿ ಸಾಹಸ

ಈ ಗುಂಪಿನ ಗಮನಾರ್ಹ ಸಾಧನೆ ಎಂದರೆ, ಮುಂಬೈ ಮತ್ತು ಕಲ್ಕತ್ತಾ ಬಳಿ 'ಕಾಂಗ್ರೆಸ್ ರೇಡಿಯೋ' ಎಂಬ ಒಂದು ರೇಡಿಯೋ ಕೇಂದ್ರವನ್ನು ಸ್ಥಾಪಿಸಿ, ಅದರ ಪ್ರಸಾರ ಭಾಷಣ ಮತ್ತು ಕರೆ-ಘೋಷಣೆಗಳ ಮೂಲಕ, 'ಭಾರತ ಬಿಟ್ಟು ತೊಲಗಿ' ಚಳುವಳಿಯನ್ನು ಜೀವಂತವಾಗಿಟ್ಟದ್ದುದು. ಇದಕ್ಕಾಗಿ ಅವರು ಕಲ್ಕತ್ತಾದ ಖ್ಯಾತ ವಿಜ್ಞಾನಿ ಮೇಘಾನಾ ಸಹಾ ಅವರ ಸಹಕಾರವನ್ನು ಪಡೆದಿದ್ದರು. ವಾಯುದಳದ ಮಜುಂದಾರ್ ಎಂಬ ಹಿರಿಯ ಅಧಿಕಾರಿಯೂ ಇವರಿಗೆ ನೆರವಾಗಿದ್ದರು. ಬ್ಯಾಂಕಾಕ್‌ನಿಂದ ಸುಭಾಷರ ಭಾಷಣವನ್ನು ಧ್ವನಿಮುದ್ರಿಸಿಕೊಂಡು, ಗಾಂಧಿ ಹುಟ್ಟುಹಬ್ಬದ ಪ್ರಯುಕ್ತ ಅಕ್ಟೋಬರ್ ೨ರಂದು ಈ ಕೇಂದ್ರದ ಮೂಲಕ ಪ್ರಸಾರ ಮಾಡಲಾಯಿತು. ಅದರಲ್ಲಿ ಸುಭಾಷರು ಮಹಾತ್ಮ ಗಾಂಧಿಯವರನ್ನು, ನಮಗೆ ರಾಷ್ಟ್ರೀಯ ಆತ್ಮಗೌರವ ಮತ್ತು ಆತ್ಮವಿಶ್ವಾಸವನ್ನು ಕಲಿಸಿದ, ಭಾರತದ ಜನರಿಗೆ ಅವರು ಸಲ್ಲಿಸಿರುವ ಸೇವೆಗಾಗಿ ಮತ್ತು ಅವರು ಸ್ವಾತಂತ್ರ್ಯ ಸಾಧನೆಗಾಗಿ ಇಡಲು ನಮಗೆ ಕಲಿಸಿರುವ ದೃಢ ಹೆಜ್ಜೆಗಳಿಗಾಗಿ, ಭಾರತದ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಬೇಕಾದಂತಹ ಅಮೂಲ್ಯ ಕೊಡುಗೆಯನ್ನು ಸಲ್ಲಿಸಿರುವ ಮಹಾನ್ ವ್ಯಕ್ತಿ ಎಂದು ವರ್ಣಿಸಿದ್ದರು. ಮುಂದುವರೆದ ಅವರು 'ಈಗ ತಮ್ಮ ದೇಶಭಕ್ತ ಸಂಗಾತಿಗಳೊಂದಿಗೆ ಸೆರೆಮನೆಯಲ್ಲಿ ಕೊಳೆಯುತ್ತಿರುವ ವಿಷಾದನೀಯ ಸಂದರ್ಭದಲ್ಲಿ, ಅವರ ಕನಸನ್ನು ನನಸು ಮಾಡಲು ದೇಶದೊಳಗಿನ ಮತ್ತು ಹೊರಗಿನ ಅವರ ಅಭಿಮಾನಿಗಳು ಎಲ್ಲ ತ್ಯಾಗಗಳಿಗೆ ಸಿದ್ಧರಾಗಬೇಕಿದೆ' ಎಂದು ಕರೆಕೊಟ್ಟಿದ್ದರು. ಈ ಕೇಂದ್ರ, ನವೆಂಬರ್ ಮಧ್ಯದ ಹೊತ್ತಿಗೆ ಪೊಲೀಸರ ಸುಳಿವಿಗೆ ಸಿಕ್ಕಾಗ, ಈ ಭೂಗತ

ಗುಂಪು ಅಸ್ಸಾಂನ್ನು ಪ್ರವೇಶಿಸಿ, ಅಲ್ಲಿ ಸುಭಾಷರ 'ಆಝಾದ್ ಹಿಂದ್ ಫೌಜ್'ನ ಸಂಪರ್ಕಕ್ಕೆ ಪ್ರಯತ್ನಿಸಿ ವಿಫಲವಾಗಿ ಗೂಢಚಾರ ದಳದಿಂದ ತಲೆ ತಪ್ಪಿಸಿಕೊಂಡು ಬಿಹಾರದತ್ತ ಓಡಿತು. ಅಲ್ಲಿ ಅವರಿಗೆ ಹಜಾರಿಬಾಗ್ ಸೆರೆಮನೆಯ ಗೋಡೆ ನೆಗೆದು ಪರಾರಿಯಾಗಿ ಬಂದಿದ್ದ ಜೆಪಿಯವರ ಸಂಪರ್ಕ ಸಿಕ್ಕಿ, ಬಿಹಾರ–ನೇಪಾಳ ಗಡಿ ಪ್ರದೇಶದ ದಟ್ಟ ಅರಣ್ಯ ಪ್ರದೇಶದಲ್ಲಿ 'ಆಝಾದ್ ದಸ್ತಾ' ಎಂಬ ಸರ್ಕಾರ ವಿರೋಧೀ ಪಡೆಯೊಂದನ್ನು ಅವರು ಸಂಘಟಿಸಿದರು. ಹಲವೆಡೆ ಹಳ್ಳಿಗಳಲ್ಲಿ ಜನರನ್ನು ಹುರಿದುಂಬಿಸಿ ಅಲ್ಲೆಲ್ಲ ಸ್ವತಂತ್ರ ಆಡಳಿತವನ್ನು ಸ್ಥಾಪಿಸಿದರು. ಅಲ್ಲಿಗೂ ಪೋಲೀಸರು ಮುತ್ತಿಗೆ ಹಾಕಿದಾಗ ಲೋಹಿಯಾ, ಕಲ್ಕತ್ತಾ ಕಡೆ ಕಾಲು ಕಿತ್ತರೆ, ಜೆಪಿ ದೆಹಲಿ ಕಡೆ ಸಾಗಿದರು. ಬ್ರಿಟಿಷ್ ಸರ್ಕಾರಕ್ಕೆ ಭಾರೀ ತಲೆನೋವಾಗಿದ್ದ ಇವರಿಬ್ಬರ ಸುಳಿವು ನೀಡಿದವರಿಗೆ ಸರ್ಕಾರ, ಭಾರೀ ಮೊತ್ತದ ಹಣದ ಬಹುಮಾನಗಳನ್ನು ಘೋಷಿಸಿತ್ತು. ಕಮ್ಯೂನಿಸ್ಟ್ ಮತ್ತು ಹಿಂದೂ ಮಹಾಸಭಾದ ಕಾರ್ಯಕರ್ತರು ಇಂತಹವರ ಸುಳಿವುಗಳನ್ನು ಸರ್ಕಾರದ ಗುಪ್ತಚರ ಇಲಾಖೆಗೆ ನೀಡುವಲ್ಲಿ ನಿರತರಾಗಿದ್ದರು.

ಹೀಗೆ ನಂತರದಲ್ಲಿ ಲೋಹಿಯಾ ಕಲ್ಕತ್ತಾದಿಂದ ಮುಂಬೈಗೆ ಬಂದು ಹಬೀಬುಲ್ಲಾ ಎಂಬುವವರ ಮನೆಯಲ್ಲಿದ್ದಾಗ ಬೇಹುಗಾರರಿಗೆ ಅವರ ಸುಳಿವು ಸಿಕ್ಕಿ, ೧೯೪೪ರ ಮೇ ೧೯ರಂದು ಅವರು ದಸ್ತಗಿರಿಯಾದರು. ಅತ್ತ ದೆಹಲಿ ತಲುಪಿದ್ದ ಜೆಪಿ ಅಬ್ದುಲ್ ಗಫಾರ್ ಖಾನ್‌ರನ್ನು ಸಂಪರ್ಕಿಸಲು ಮಾರುವೇಷದಲ್ಲಿ ರಾವಲ್ಪಿಂಡಿಗೆ ರೈಲು ಗಾಡಿಯಲ್ಲಿ ಹೊರಟಿದ್ದಾಗ ಬೇಹುಗಾರರು ಅವರನ್ನು ದಸ್ತಗಿರಿ ಮಾಡಿದರು. ಲೋಹಿಯಾ ಮತ್ತು ಜೆಪಿ ಇಬ್ಬರನ್ನೂ ಲಾಹೋರ್‌ಗೆ ಕರೆದೊಯ್ದ ಪೋಲೀಸರು, ಅವರನ್ನು ಲಾಹೋರ್ ಕೋಟೆಯ ಸೆರೆಮನೆಯಲ್ಲಿ ಬಂಧಿಸಿಟ್ಟಿತು. ಅದೊಂದು ಚಕ್ರವ್ಯೂಹದಂತಹ ಭದ್ರಕೋಟೆಯಿಂದ ಸುತ್ತುವರೆಯಲ್ಪಟ್ಟ ಕಗ್ಗತ್ತಲ ಸೆರೆಮನೆ. ಅಲ್ಲಿ ಇವರಿಬ್ಬರಿಗೂ ಕೈ ಕಾಲುಗಳಿಗೆ ಬೇಡಿಗಳನ್ನು ಹಾಕಿ ಒಂಟಿ ಕೋಣೆಗಳಲ್ಲಿ ಕೂಡಿ ಹಾಕಿ ದೇಶಾದ್ಯಂತ ಇನ್ನೂ ನಡೆದಿದ್ದ ವಿಧ್ವಂಸಕ ಚಟುವಟಿಕೆಗಳ ಬಗ್ಗೆ ಬೇಕಾದ ವಿವರಗಳನ್ನು ಪಡೆಯಲು ಅವರನ್ನು ಚಿತ್ರಹಿಂಸೆಗೆ ಒಳಪಡಿಸಲಾಯಿತು.

ಅಚ್ಯುತ ಪಟವರ್ಧನ್, ಅರುಣಾ ಅಸಫ್ ಅಲಿ ಮತ್ತವರ ಗೆಳೆಯರು ಈಗ ದಕ್ಷಿಣದತ್ತ ಧಾವಿಸಿದ್ದರು. ಮಹಾರಾಷ್ಟ್ರದ ಸತಾರಾದಲ್ಲಿ ಹಲವು ಕಡೆ 'ಸ್ವರಾಜ್ಯ' ಘೋಷಣೆಯಾಯಿತು. ಹಾಗೇ ನಮ್ಮ ಈಸೂರೂ ಸೇರಿದಂತೆ ದೇಶದ ವಿವಿಧೆಡೆ 'ಸ್ವರಾಜ್ಯ'ಗಳು ಘೋಷಣೆಯಾದವು. ಆದರೆ ಚಳುವಳಿಗೆ ಈ ಜನಬೆಂಬಲ ನೋಡಿ ಹಿಂದೂ ಮಹಾಸಭಾದ ಕಾರ್ಯಕರ್ತರು ಬೆಪ್ಪಾದರು. ಜಿನ್ನಾ ಮೌನಕ್ಕೆ ಶರಣಾದರು. ಅಂಬೇಡ್ಕರ್ 'ಹಿಂದೂ ಕಾಂಗ್ರೆಸ್‌ನ ಈ ಸ್ವಾತಂತ್ರ್ಯಕ್ಕಾಗಿನ ಹೋರಾಟ ಮೇಲ್ಜಾತಿ ಹಿಂದೂಗಳ ಸ್ವಾತಂತ್ರ್ಯಕ್ಕಾಗಿ ಮಾತ್ರ ನಡೆದಿರುವ ಹೋರಾಟ'ವೆಂದು ಬಣ್ಣಿಸುತ್ತಾ, 'ಅಮೆರಿಕಾದಲ್ಲಿನ ನಾಗರಿಕ ಹೋರಾಟ, ಕಪ್ಪು ಜನರ ಸಂಘಟನೆಗೆ ಕಾರಣವಾದರೆ ಗಾಂಧಿಯವರ ಈ ಹೋರಾಟ ಮೇಲ್ಜಾತಿ ಹಿಂದೂಗಳ ಸಂಘಟನೆಗೆ ಕಾರಣವಾಗುತ್ತಿದೆ' ಎಂದು ಟೀಕಿಸಿದರು. ಗಾಂಧಿಯವರ ಮಿತ್ರ ಹೆನ್ರಿ ಪೊಲಾಕ್ ಮತ್ತು ಬ್ರಿಟಿಷ್ ಸಂಸತ್ತಿನ ಲೇಬರ್ ಪಕ್ಷದ ಸದಸ್ಯರೂ ಈ ಚಳುವಳಿಗೆ ಕಾರಣವಾದ ಗಾಂಧಿಯವರನ್ನು ಅವರ 'ಅಕಾಲಿಕ' ನಿರ್ಧಾರಕ್ಕಾಗಿ ಟೀಕಿಸಿದರು.

ಸೆರೆಮನೆಯಿಂದ ವೈಸ್‌ರಾಯ್‌ಗೆ ಪತ್ರ–ಮಹದೇವ ದೇಸಾಯಿಯವರ ನಿಧನ

ಧೂಳು ತುಂಬಿ ಪಾಳು ಬಿದ್ದಿದ್ದ ಆಗಾಖಾನ್ ಅರಮನೆಯ ಸುತ್ತ ಭದ್ರ ಬೇಲಿ ಹಾಕಿ, ಹದಿನಾಲ್ಕು ಕಡೆ ಪಹರೆ ಬತೇರಿಗಳನ್ನು ನಿರ್ಮಿಸಿ, ಗಾಂಧಿ ಪರಿವಾರಕ್ಕಾಗಿ ಅದನ್ನು ಒಂಬತ್ತು ಕೋಣೆಗಳ ಸೆರೆಮನೆಯನ್ನಾಗಿ ಪರಿವರ್ತಿಸಲಾಗಿತ್ತು. ಇನ್ನು ನೆಹರೂ, ಪಟೇಲ್, ಆಜ಼ಾದ್, ಕೃಪಲಾನಿ ಮುಂತಾದವರನ್ನು ಮಹಾರಾಷ್ಟ್ರದ ಅಹಮದ್‌ನಗರ ಕೋಟೆ ಅರಮನೆಯಲ್ಲಿ ಇರಿಸಲಾಗಿತ್ತು. ಗಾಂಧಿಯವರ ಜೊತೆ ಅವರ ವೈದ್ಯರಾದ ಸುಶೀಲಾ ನಯ್ಯರ್ ಮತ್ತು ಗಿಲ್ಡರ್ ಅವರನ್ನೂ, ಆಪ್ತ ಸಹಾಯಕ ಪ್ಯಾರೇಲಾಲ್‌ರನ್ನೂ ಬಂಧಿಸಿ ಇರಿಸಲಾಗಿತ್ತು. ಗಾಂಧಿಯವರಿಗೆ ಈ ಅರಮನೆಯ ವಿಶಾಲತೆ ಮತ್ತು ಭವ್ಯತೆ ಕಿರಿಕಿರಿಯನ್ನುಂಟು ಮಾಡಿತ್ತು. ಸೆರೆಮನೆಗೆ ಬಂದೊಡನೆ ಅವರು ವೈಸ್‌ರಾಯ್‌ಗೆ ಒಂದು ಪತ್ರ ಬರೆದು, ಅಹಿಂಸಾತ್ಮಕವಾಗಿ ಆಯೋಜಿತವಾಗಿದ್ದ ಈ ಚಳುವಳಿಯನ್ನು, ಅದು ಆರಂಭವಾಗುವ ಮುನ್ನವೇ ದಮನ ಮಾಡಿದ್ದು, ಪರಿಸ್ಥಿತಿಯನ್ನು ಬಿಗಡಾಯಿಸುವಂತೆ ಮಾಡಿದೆ ಎಂದು ತಿಳಿಸಿದರಲ್ಲದೆ, ತಮ್ಮ ವಿರುದ್ಧ ವಾದಿಸುತ್ತಾ, ಬ್ರಿಟಿಷರ ಪರವಾಗಿ ಸಹಾನುಭೂತಿಯಿದ್ದ ನೆಹರೂ ಅವರನ್ನು ಬಂಧಿಸಿರುವುದು, ಬ್ರಿಟಿಷರು ತಮಗೆ ತಾವೇ ಮಾಡಿಕೊಂಡಿರುವ ಅನ್ಯಾಯವಾಗಿದೆ ಎಂದು ಸೂಚಿಸಿದ್ದರು.

೧೯೪೨ ಆಗಸ್ಟ್ ೧೫ರ ಬೆಳಿಗ್ಗೆ ಗಾಂಧಿಯವರೊಂದಿಗೆ ವಾಯುವಿಹಾರ ಮುಗಿಸಿಕೊಂಡು ಬಂದ ಮಹದೇವ ದೇಸಾಯಿ ಸ್ವಲ್ಪ ಹೊತ್ತಿನಲ್ಲೇ ಕುಸಿದು ಬಿದ್ದರು. ಅವರಿಗೆ ಹೃದಯಾಘಾತವಾಗಿ ಕೊನೆಯುಸಿರೆಳೆದಿದ್ದರು. ಗಾಂಧಿಯವರಿಗೆ ಪ್ರಾಣಾಘಾತವಾದಂತಾಯಿತು. ಕೇವಲ ೫೨ ವರ್ಷ ವಯಸ್ಸಿನ ದೇಸಾಯಿ, ಕಳೆದ ೨೫ ವರ್ಷಗಳಿಂದ ಗಾಂಧಿಯವರನ್ನೇ ತನ್ನ ಆರಾಧ್ಯ ದೈವವನ್ನಾಗಿ ಮಾಡಿಕೊಂಡು, ಅವರಿಗಾಗಿ ತಮ್ಮ ಜೀವವನ್ನೇ ತೇಯ್ದಿದ್ದರು. ಸೆರೆಮನೆಗೆ ಬಂದಾಗಿನಿಂದ ಗಾಂಧಿಯವರ ಮುಖ ಚಹರೆಯನ್ನು ಗಮನಿಸುತ್ತಾ, ಅವರೆಲ್ಲಿ ಸರ್ಕಾರದ ವಿರುದ್ಧ ಆಮರಣಾಂತ ಉಪವಾಸ ಆರಂಭಿಸುವರೋ ಎಂಬ ಆತಂಕದಲ್ಲಿದ್ದ ಅವರನ್ನು, ಈ ಚಿಂತೆಯೇ ಬಲಿತೆಗೆದುಕೊಂಡಿತೆಂದು ಅವರ ಸಹಬಂದಿ ಸರೋಜಿನಿ ನಾಯ್ಡು ಅಭಿಪ್ರಾಯಪಟ್ಟರು. ಸ್ವತಃ ಗಾಂಧಿಯವರೇ ಮುಂದೆ ನಿಂತು ದೇಸಾಯಿಯವರ ದೇಹಕ್ಕೆ ಸ್ನಾನ ಮಾಡಿಸಿ, ಗಂಧ ಲೇಪಿಸಿ ಅರಮನೆಯ ಆಯ್ದ ಜಾಗವೊಂದರಲ್ಲಿ ಅಗ್ನಿ ಸಂಸ್ಕಾರವನ್ನೂ ಅವರೇ ನೆರವೇರಿಸಿದರು. ದೇಸಾಯಿಯವರ ಮೈ ಒರೆಸಿದ್ದ ಬಟ್ಟೆಯನ್ನು ಮಾತ್ರ ಅವರು ಜೋಪಾನವಾಗಿರಿಸಿ ಅದನ್ನು, ಅವರ ಮಗ ನಾರಾಯಣ ದೇಸಾಯಿಗೆ ತಲುಪಿಸುವ ವ್ಯವಸ್ಥೆ ಮಾಡುವುದನ್ನು ಅವರು ಮರೆಯಲಿಲ್ಲ.

ಮಾರನೆಯ ದಿವಸ ದೇಸಾಯಿಯವರ ಪೆಟ್ಟಿಗೆಯನ್ನು ತೆರೆದಾಗ ಅದರಲ್ಲಿದ್ದ ವೈವಿಧ್ಯಮಯ ವಿಷಯಗಳನ್ನು ಕುರಿತ ಗುಜರಾತಿ ಮತ್ತು ಇಂಗ್ಲಿಷ್ ಪುಸ್ತಕಗಳು ಅವರ ಬಹುಶ್ರುತತೆಯನ್ನು ಸಾರುತ್ತಿದ್ದವು. ಗಾಂಧಿಯವರ ಮಾತುಗಳಲ್ಲೆ ಹೇಳುವುದಾದರೆ ಅವರು ಅವರ ರೆಕ್ಕೆಗಳಾಗಿದ್ದರು. ಅವರ ಗೆಳೆಯ ವೆರಿಯರ್ ಎಲ್ವಿನ್‌ನ ಮಾತುಗಳಲ್ಲಿ ಹೇಳುವುದಾದರೆ ಅವರು ಗಾಂಧಿಯವರ ಗೃಹ ಮತ್ತು ವಿದೇಶಾಂಗ ಈ ಎರಡೂ ವಿಷಯಗಳಿಗೆ ಸಂಬಂಧಪಟ್ಟ ಕಾರ್ಯದರ್ಶಿಯಾಗಿದ್ದರು. ಸಹಜವಾಗಿಯೇ ಅವರ

ನಿಧನಕ್ಕೆ ಅಹಮದಾಬಾದ್ ಮತ್ತು ಬಾಂಬೆಗಳಲ್ಲಿ ಬಂದ್ ಆಚರಿಸಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಗಾಂಧಿಯವರ ಮೇಲೆ ಆರೋಪ ಪಟ್ಟಿ–೨೧ ದಿನಗಳ ಉಪವಾಸ

೧೯೪೩ರ ಫೆಬ್ರುವರಿ ತಿಂಗಳಿನಲ್ಲಿ ಪತ್ರಿಕೆಗಳಲ್ಲಿ ಗಾಂಧಿ ಮತ್ತಿತರ ನಾಯಕರ ಬಂಧನದ ನಂತರ ನಡೆದ ವ್ಯಾಪಕ ಹಿಂಸಾಚಾರ ಪೂರ್ವನಿಯೋಜಿತವಾದುದಾಗಿತ್ತೆಂದೂ, ಇದರ ರೂವಾರಿ ಗಾಂಧಿಯೇ ಎಂದು ಸರ್ಕಾರದ ಮೂಲಗಳು ಹೇಳುತ್ತಿವೆ ಎಂಬ ವರದಿಗಳು ಪ್ರಕಟವಾಗತೊಡಗಿದವು. ಜೊತೆಗೆ ಗಾಂಧಿ, ಜಪಾನ್‌ನೊಂದಿಗೆ ರಹಸ್ಯ ಸಂಪರ್ಕ ಸಾಧಿಸಿಕೊಂಡಿದ್ದು, ಅದರ ಪಡೆಗಳನ್ನು ಸ್ವಾಗತಿಸಲು ಕಾತುರರಾಗಿದ್ದರೆಂಬುದನ್ನು ಸೂಚಿಸುವ ಮಾಹಿತಿ ಸರ್ಕಾರದ ಬಳಿ ಇದೆಯೆಂದೂ ಅದು ಹೇಳಿತ್ತು. ನಂತರದ ದಿನಗಳಲ್ಲೇ ಸರ್ಕಾರ '೧೯೪೨–೪೩ರ ಗಲಭೆಗೆ ಯಾರು ಕಾರಣ?' ಎಂಬ ಕಿರುಪುಸ್ತಕವನ್ನೂ ಪ್ರಕಟಿಸಿ ಅದರಲ್ಲಿ ಗಾಂಧಿಯವರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿತ್ತು. ಆದರೆ ಈ ಪುಸ್ತಕ ಯಾವುದೇ ಖಚಿತ ಆಧಾರಗಳನ್ನು ನೀಡದೆ ಕೇವಲ ವದಂತಿ, ಸುದ್ದಿ ಮತ್ತು ಊಹಾಪೋಹ ಹಾಗೂ ವ್ಯಾಖ್ಯಾನಗಳಿಂದಷ್ಟೇ ತುಂಬಿ ಹೋಗಿತ್ತು. ಪತ್ರಿಕಾ ವರದಿಗಳನ್ನು ಓದಿದ ಗಾಂಧಿ ನೊಂದರು, ಆಘಾತಗೊಂಡರು. ಸ್ವಲ್ಪ ಕಾಲ ಯೋಚಿಸಿ ವೈಸ್‌ರಾಯ್‌ಗೊಂದು ಪತ್ರ ಬರೆದು, ತಾವು ಮತ್ತು ಕಾಂಗ್ರೆಸ್ ಎಂದೂ ಅಹಿಂಸೆಯ ದಾರಿಯಿಂದ ಅಕ್ಕಪಕ್ಕ ಸರಿದಿಲ್ಲವೆಂದೂ, 'ಭಾರತ ಬಿಟ್ಟು ತೊಲಗಿ' ನಿರ್ಣಯ ಕೂಡ ಹಿಂಸೆಯ ವಿರುದ್ಧ ಎಚ್ಚರಿಕೆ ನೀಡಿತ್ತೆಂದೂ ಅವರ ಗಮನ ಸೆಳೆದಿದ್ದರಲ್ಲದೆ, ತಾವೆಂದೂ ಫ್ಯಾಸಿಸಂನ ಯಾವ ಅಂಶವನ್ನೂ ಸಮ್ಮತಿಸಿಲ್ಲವೆಂದು ತಿಳಿಸಿದರು. ಜೊತೆಗೆ ಬಂಗಾಳ ಮತ್ತು ಇತರೆಡೆ ಉಂಟಾಗಿರುವ ಕ್ಷಾಮ ತಮಗೆ ತುಂಬಾ ನೋವನ್ನುಂಟು ಮಾಡಿದ್ದು, ಒಂದು ಜವಾಬ್ದಾರಿ ಸರ್ಕಾರವಿದ್ದಿದ್ದಲ್ಲಿ ಇದಕ್ಕೆ ಸೂಕ್ತ ಪರಿಹಾರ ಕಲ್ಪಿಸಬಹುದಾಗಿತ್ತು ಎಂದು ಅಲವತ್ತುಕೊಳ್ಳುತ್ತಾ, ಈ ಎಲ್ಲ ಇಂದಿನ ಸ್ಥಿತಿಗೆ ವೈಸ್‌ರಾಯ್ ಕುರಿತಂತೆ ತಮ್ಮ ಮನಸ್ಸಿನೊಳಗೆ ಸಂಚಿತವಾಗಿದ್ದ ಕ್ರೋಧ ಉಂಟು ಮಾಡಿದ ಮನೋಕ್ಲೇಶವೇ ಕಾರಣವೆಂದೂ, ಅದರ ಶುದ್ಧಿಗಾಗಿ ತಾವು ೨೧ ದಿನಗಳ ಉಪವಾಸ ಮಾಡುವುದಾಗಿಯೂ ತಿಳಿಸಿದರು. ಈ ಉಪವಾಸ ಘೋಷಣೆಯ ಮೂಲಕ ಬಹುಶಃ ಗಾಂಧಿಯವರು ಸ್ಥಗಿತಗೊಂಡಿದ್ದ ಅಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಒಂದು ಚಲನೆಯನ್ನುಂಟು ಮಾಡಬಯಸಿರಲೂಬಹುದು.

ಇದಕ್ಕೆ ಉತ್ತರಿಸಿದ ವೈಸ್‌ರಾಯ್, ಹಿಂಸಾಚಾರಕ್ಕೆ ಗಾಂಧಿ ಮತ್ತು ಕಾಂಗ್ರೆಸ್‌ಗಳೇ ಕಾರಣವೆಂದು ಹೇಳಲು ತಮ್ಮಲ್ಲಿ ಪುರಾವೆಗಳಿವೆ ಎಂದೂ, ಈಗ ಗಾಂಧಿಯವರ ಉದ್ದೇಶಿತ ಉಪವಾಸವೂ ಒಂದು ಹಿಂಸಾಚಾರವೇ ಎಂದು ಹೇಳಿದ್ದ. ಗಾಂಧಿ ಫೆಬ್ರುವರಿ ೧೦ರಂದು ಉಪವಾಸ ಆರಂಭಿಸುವುದಾಗಿಯೂ, ಆದರೆ ಇದರಲ್ಲಿ ತಾವು ಸಾಯುವ ಇಚ್ಛೆ ಇಲ್ಲವೆಂದೂ, ಹಾಗಾಗಿ ತಾವು ಉಪವಾಸದ ಸಮಯದಲ್ಲಿ ನಿಂಬೆ ರಸ ಬೆರೆಸಿದ ನೀರನ್ನು ಕುಡಿಯಲು ಇಚ್ಛಿಸಿ ಪ್ರಕಟಿಸಿದರು. ಇದರಿಂದ ಸೆರೆಮನೆಯಲ್ಲಿದ್ದ ಇಡೀ ಗಾಂಧಿ ಪರಿವಾರ ಗಾಬರಿಯಾಯಿತು. ಡಾ. ಸುಶೀಲಾ ನಯ್ಯರ್ ಉಪವಾಸ ಅವಧಿಯಲ್ಲಿ ಗಾಂಧಿಯವರ ಆರೋಗ್ಯವನ್ನು ಪರಿವೀಕ್ಷಿಸಲು ಇಬ್ಬರು ಪರಿಣಿತ ವೈದ್ಯರು

ಅಗತ್ಯವೆಂದು ಸರ್ಕಾರವನ್ನು ಕೋರಿದರು. ಸರ್ಕಾರಕ್ಕೂ ಗಾಂಧಿ ತಮ್ಮ ವಶದಲ್ಲಿದ್ದಾಗ ಅಸುನೀಗುವುದು ಬೇಕಿರಲಿಲ್ಲ. ನಂತರದ ಪರಿಣಾಮಗಳನ್ನು ಎದುರಿಸುವ ಧೈರ್ಯವೂ ಇರಲಿಲ್ಲ. ಹೇಗೂ ಸೆರೆಮನೆಯಲ್ಲೇ ಇದ್ದ ಡಾ. ಗಿಲ್ಡರ್ ಜೊತೆಗೆ ಕಲ್ಕತ್ತೆಯಿಂದ ಡಾ. ಬಿ. ಸಿ. ರಾಯ್ ಅವರನ್ನು ಈ ಕೆಲಸಕ್ಕೆ ನಿಯುಕ್ತಿಗೊಳಿಸಲಾಯಿತು. ಉಪವಾಸದ ಐದನೇ ದಿವಸ ಗಾಂಧಿ ನಿತ್ರಾಣಗೊಂಡರು. ಗೀತಾ ಪಠಣವೂ ಅವರ ಚೈತನ್ಯಕ್ಕೆ ಭಾರವೆನಿಸಿ ಬೇಡವೆಂದು ಹೇಳಿಬಿಟ್ಟರು. ಎಲ್ಲರೂ ಗಾಬರಿಯಾದರು. ವೈಸ್‌ರಾಯ್‌ರ ಕಾರ್ಯನಿರ್ವಾಹಕ ಮಂಡಳಿಯ ಭಾರತೀಯ ಸದಸ್ಯರಾಗಿದ್ದ ಆಣೆ, ಸರ್ಕಾರ್ ಮತ್ತು ಹೆಚ್.ಪಿ.ಮೋದಿ, ಗಾಂಧಿಯವರನ್ನು ಬಂಧನದಿಂದ ಮುಕ್ತಗೊಳಿಸುವಂತೆ ವೈಸ್‌ರಾಯ್‌ರನ್ನು ಕೋರಿದರು. ಸರ್ಕಾರ ಅದಕ್ಕೊಪ್ಪದಿದ್ದಾಗ ಅವರೆಲ್ಲ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು. ಸುದ್ದಿ ಕೇಳಿ ನಾಗಪುರ ಮತ್ತು ದೆಹಲಿಗಳಿಂದ ದೇವದಾಸ್ ಮತ್ತು ರಾಮದಾಸ ಓಡಿ ಬಂದರು. ಲಾಹೋರ್‌ನಿಂದ ಸರಳಾದೇವಿ ಚೌಧುರಾಣಿಯವರೂ ಬಂದರು. ಆ ದಿನ ಏನೂ ಅನಾಹುತವಾಗದೆ ಗಾಂಧಿ ಸುರಕ್ಷಿತವಾಗಿ ಉಳಿದರು.

ಹದಿಮೂರನೆಯ ದಿವಸ ಮತ್ತೆ ಆತಂಕ ಉಂಟಾಯಿತು. ನೀರನ್ನು ನೋಡಿದರೂ ವಾಂತಿ ಬರುವಂತಾಗಿ ಅವರು ದಣಿವು ಮತ್ತು ಅಶಾಂತಿಗೆ ಈಡಾದರು. ಅವರ ನಾಡಿ ಕ್ಷೀಣವಾಗಿತ್ತು. ಗಾಂಧಿ ಉಳಿಯುವುದಿಲ್ಲ ಎಂಬ ಭಾವನೆ ಎಲ್ಲರಲ್ಲೂ ಉಂಟಾಯಿತು. ವೈಸ್‌ರಾಯ್ ಗಾಂಧಿ ನಿಧನರಾದರೆ, ಅವರು ಅಪರಾಧಿಯಾಗಿ ಸರ್ಕಾರದ ಬಂಧನದಲ್ಲಿರುವುದರಿಂದ, ಯೂನಿಯನ್ ಜಾಕ್ ಧ್ವಜವನ್ನು ಅರ್ಧ ಮಟ್ಟಕ್ಕೆ ಇಳಿಸುವ ಅಥವಾ ಶ್ರದ್ಧಾಂಜಲಿ ಸಂದೇಶ ನೀಡುವ ಅಗತ್ಯವಿಲ್ಲವೆಂದು ಎಲ್ಲ ಪ್ರಾಂತ್ಯಗಳ ಗವರ್ನರ್‌ಗಳಿಗೆ ತಿಳಿಸಿದನು. ಆದರೆ ಪಕ್ಕದಲ್ಲಿ ಕಸ್ತೂರಬಾ ಇದ್ದು ಪ್ರೀತಿಯಿಂದ ನೋಡಿಕೊಂಡು ಗಾಂಧಿಯವರನ್ನು ಅಪಾಯದಿಂದ ಪಾರು ಮಾಡಿದರು: ೨೧ನೇ ದಿವಸದವರೆಗೂ ಅವರ ಉಪವಾಸ ಹೆಚ್ಚು ಆತಂಕಕ್ಕೆ ಕಾರಣವಾಗದಂತೆ ಅವರನ್ನು ಗುರಿ ಮುಟ್ಟಿಸಿದರು. ಗಾಂಧಿ ಉಪವಾಸದ ಸಮಯದಲ್ಲಿ ತಮ್ಮನ್ನು ಭೇಟಿ ಮಾಡಿದ ಹೊರೇಸ್ ಅಲೆಕ್ಸಾಂಡರ್ ಎಂಬ ಓರ್ವ ಕ್ವೇಕರ್ ಅಭಿಮಾನಿಗೆ ಹೇಳಿದಂತೆ, ತಮ್ಮ ಮೇಲಿನ, ಹಿಂಸೆ ಮತ್ತು ಫ್ಯಾಸಿಸ್ಟ್ ಒಲವಿನ ಕಳಂಕವನ್ನು ತೊಳೆದುಕೊಳ್ಳುವುದೇ ಅವರ ಈ ಉಪವಾಸದ ಮುಖ್ಯ ಉದ್ದೇಶವಾಗಿತ್ತು. ಆದರೆ ಗಾಂಧಿಗೆ ಒಂದು ಅಸಮಾಧಾನ ಉಳಿದೇ ಇತ್ತು. ಅದು ನಿಂಬೆ ರಸ ಕುಡಿದು ಮಾಡುವ ಉಪವಾಸ ನಿಜವಾದ ಉಪವಾಸವಲ್ಲ ಎಂಬುದಾಗಿತ್ತು!

ಉಪವಾಸಕ್ಕೆ ಅಂಬೇಡ್ಕರ್–ಚರ್ಚಿಲ್‌ರ ಪ್ರತಿಕ್ರಿಯೆಗಳ ಪರಿ

ಗಾಂಧಿ ೨೧ ದಿನಗಳ ಉಪವಾಸವನ್ನು ಯಶಸ್ವಿಯಾಗಿ ಮುಗಿಸಿದ್ದುದು ಕೆಲವರಿಗೆ ಆಶ್ಚರ್ಯವನ್ನೂ ಕೆಲವರಿಗೆ ನಿರಾಸೆಯನ್ನೂ ಉಂಟು ಮಾಡಿತ್ತು. ಉಪವಾಸದ ನಂತರ ವೈಸ್‌ರಾಯ್ ಕಾರ್ಯನಿರ್ವಾಹಕ ಮಂಡಳಿಯ ಸದಸ್ಯರಾಗಿದ್ದ ಅಂಬೇಡ್ಕರ್ ಉಪವಾಸದ ಸಮಯದಲ್ಲಿನ ಗಾಂಧಿಯವರ ದಿನವಹಿ ತೂಕದ ವಿವರಗಳನ್ನು ಪಡೆದುಕೊಂಡಿದ್ದರು. ಬ್ರಿಟಿಷ್ ಪ್ರಧಾನಿ ಚರ್ಚಿಲ್, ವೈಸ್‌ರಾಯ್‌ಗೆ ಪತ್ರ ಬರೆದು

ಗಾಂಧಿಗೆ ಮರೆಮಾಚಿ ಗ್ಲೂಕೋಸ್ ಕೊಟ್ಟಿರುವ ಸಾಧ್ಯತೆಗಳ ಬಗ್ಗೆ ತನಿಖೆ ಮಾಡಿ ವರದಿ ಕಳಿಸುವಂತೆ ತಿಳಿಸಿದ್ದನು. ಗಾಂಧಿ ಓರ್ವ ಕಪಟಿಯಾದರೂ, ಅಂತಹುದೇನೂ ನಡೆದಿರುವುದಕ್ಕೆ ಸಾಕ್ಷಿ ಇಲ್ಲವೆಂದು ವೈಸ್‌ರಾಯ್ ಬರೆದಾಗ ಚರ್ಚಿಲ್ 'ಆ ಮುದಿ ಪುಂಡನನ್ನು (ಓಲ್ಡ್ ರ್‍ಯಾಸ್ಕಲ್) ಈಗ ಹಿಡಿಯುವವರೇ ಇಲ್ಲ!' ಎಂದನಂತೆ!

ಗಾಂಧಿಯವರ ಉಪವಾಸ ಸಂದರ್ಭದ ಇನ್ನೊಂದು ಘಟನೆಯನ್ನು ರಾಮಚಂದ್ರ ಗುಹಾ ತಮ್ಮ ಪುಸ್ತಕದಲ್ಲಿ ಹೇಳಿದ್ದಾರೆ. ಈ ಸಮಯದಲ್ಲಿ, ಸಂಯುಕ್ತ ಪ್ರಾಂತ್ಯಗಳ ಗವರ್ನರ್‌ನ ಭೇಟಿ ಗೌರವಾರ್ಥ ದೆಹಲಿಯ ಇಂಪೀರಿಯಲ್ ಹೋಟೆಲ್‌ನಲ್ಲಿ ಸರ್ ಜೆ.ಪಿ. ಶ್ರೀವಾಸ್ತವ ಎಂಬ ಹಿರಿಯ ಐಸಿಎಸ್ ಅಧಿಕಾರಿ ಅಧಿಕೃತ ಔತಣಕೂಟವೊಂದನ್ನು ಏರ್ಪಡಿಸಿದ್ದರು. ಆ ಕೂಟಕ್ಕೆ ಆಹ್ವಾನಿತರಾದವರಲ್ಲಿ ಅರ್ಧಕ್ಕರ್ಧದಷ್ಟು ಜನ ಬಂದಿರಲಿಲ್ಲ. ಆ ಕೂಟಕ್ಕೆ ಓರ್ವ ಆಹ್ವಾನಿತರಾಗಿ ಹೋಗಿದ್ದ ವೈಸ್‌ರಾಯ್ ಮಂಡಳಿಯ ಸದಸ್ಯ ಅಂಬೇಡ್ಕರ್, ಇದೇಕೆಂದು ಕೇಳಿದಾಗ ಗಾಂಧಿಯವರ ಉಪವಾಸದ ಬಗ್ಗೆ ಸರ್ಕಾರ ತಳೆದಿರುವ ಹಠಮಾರಿ ನಿಲುವೇ ಇದಕ್ಕೆ ಕಾರಣವೆಂದು ಉತ್ತರಿಸಲಾಯಿತು. ಇದರಿಂದ ಚಕಿತರಾದ ಅಂಬೇಡ್ಕರ್, ಅದಾವ ದೊಡ್ಡ ವಿಷಯವೆಂದು ಈ ಜನ ಹೀಗೆ ಪ್ರತಿಕ್ರಿಯಿಸುತ್ತಾರೋ ಎಂಬ ತಮ್ಮ ಅಸಮಾಧಾನ ವ್ಯಕ್ತಪಡಿಸುತ್ತಾ, ಸರ್ಕಾರ ಇನ್ನೇನೂ ಮಾಡುವಂತಿರಲಿಲ್ಲ ಎಂದು ಹೇಳಿದರಂತೆ. ಈ ಕೂಟಕ್ಕೆ ಆಹ್ವಾನಿತರಾಗಿ ಹೋಗಿದ್ದ ಅಮೆರಿಕಾದ ಅಧ್ಯಕ್ಷ ರೂಸ್‌ವೆಲ್ಟ್‌ರ ಪ್ರತಿನಿಧಿ ವಿಲಿಯಂ ಫಿಲಿಪ್ಸ್, ಈ ಘಟನೆಯನ್ನು ದಾಖಲಿಸಿದ್ದು, ಅದರಲ್ಲಿ ಅಂದಿನ ಆ ಔತಣ ಕೂಟದ ಆತಿಥೇಯರಾಗಿದ್ದ ಶ್ರೀವಾಸ್ತವ, ತಾವೂ ಮತ್ತು ತಮ್ಮ ಪತ್ನಿ ಹಾಗೂ ಇಬ್ಬರು ಹೆಣ್ಣುಮಕ್ಕಳೂ ಅ ಕೂಟದಲ್ಲಿ ಆಹಾರ ಸ್ವೀಕರಿಸುವುದಿಲ್ಲ ಎಂದು ತಮಗೆ ಹೇಳಿದರೆಂದೂ ತಿಳಿಸಿದ್ದಾರೆ. ಫಿಲಿಪ್ಸ್ ಭಾರತದಲ್ಲಿ ಜನಸಾಮಾನ್ಯರ ನಡುವೆ ಗಾಂಧಿಯವರ ಬಗ್ಗೆ ಏನು ಅಭಿಪ್ರಾಯವಿದೆ ಎಂದು ತಿಳಿದು ಬರಲು ರೂಸ್‌ವೆಲ್ಟ್ ಕಳಿಸಿದ್ದ ಅಮೆರಿಕಾದ ಹಿರಿಯ ಅಧಿಕಾರಿಯಾಗಿದ್ದರು.

ಮತ್ತೆ ಜಿನ್ನಾ ಜೊತೆ ಮಾತುಕತೆಯ ಪ್ರಯತ್ನ-ಮತ್ತೆ ಎದುರಾದ ನಿರಾಸೆ

ಈ ಮಧ್ಯೆ ಉಪವಾಸದ ಸಂದರ್ಭದಲ್ಲೇ ಗಾಂಧಿಯವರನ್ನು ಭೇಟಿ ಮಾಡಿದ್ದ ರಾಜಾಜಿ, ಪಶ್ಚಿಮದ ಮುಸ್ಲಿಂ ಬಾಹುಳ್ಯದ ಪ್ರದೇಶ ಮತ್ತು ಪೂರ್ವದ ಅಂತಹ ಪ್ರದೇಶಗಳನ್ನೊಳಗೊಂಡ ಸೀಮಿತ ಅಧಿಕಾರಗಳ ಪಾಕಿಸ್ತಾನ್ ಕಲ್ಪನೆಗೆ ಗಾಂಧಿಯವರು ತಾತ್ವಿಕವಾಗಿಯಾದರೂ ಒಪ್ಪುವುದಾದರೆ ಮುಸ್ಲಿಂ ಲೀಗ್ ಕಾಂಗ್ರೆಸ್ ಜೊತೆ ರಾಷ್ಟ್ರೀಯ ಸರ್ಕಾರ ರಚಿಸಲು ಜಿನ್ನಾರನ್ನು ತಾವು ಒಪ್ಪಿಸುವುದಾಗಿ ಹೇಳಿ, ಅವರ ಒಪ್ಪಿಗೆ ಪಡೆದು ಹೋಗಿದ್ದರು. ಜಿನ್ನಾರನ್ನೂ ಭೇಟಿ ಮಾಡಿ ಮಾತುಕತೆಗೆ ಒಪ್ಪಿಸಿದ್ದರು. ಇದರ ವರದಿಗಳನ್ನು ಪತ್ರಿಕೆಗಳಲ್ಲಿ ನೋಡಿದ್ದ ಗಾಂಧಿ, ಜಿನ್ನಾ ಅವರನ್ನು ಮಾತುಕತೆಗೆ ಆಹ್ವಾನಿಸಿದ್ದರು. ಆದರೆ ಆ ಆಹ್ವಾನದ ಪತ್ರವನ್ನು ಸರ್ಕಾರ ತಡೆಹಿಡಿಯಿತು. ಇದು ವಿವಾದ ಹುಟ್ಟಿಸಿದಾಗ, ಸರ್ಕಾರ ರಾಜಕೀಯ ಬಂದಿಗಳಾದವರು ರಾಜಕೀಯ ಪತ್ರ ವ್ಯವಹಾರ ನಡೆಸುವ ಹಕ್ಕನ್ನು ಕಳೆದುಕೊಳ್ಳುತ್ತಾರೆ ಎಂಬ ಸ್ಪಷ್ಟೀಕರಣ ನೀಡಿತು. ಇದೇ ವೇಳೆಯಲ್ಲಿ ಜಿನ್ನಾ ಒಂದು ಹೇಳಿಕೆ ನೀಡಿ 'ಇದೆಲ್ಲ ಗಾಂಧಿ ಹೇಗಾದರೂ ಬಂಧನದಿಂದ ಬಿಡುಗಡೆ ಪಡೆಯಲು ಹೂಡಿರುವ ತಂತ್ರವಷ್ಟೆ' ಎಂದು ಟೀಕಿಸಿದರು. ಈ ಮಧ್ಯೆ ಮುಸ್ಲಿಂ ಲೀಗ್‌ನೊಂದಿಗೆ ಮೈತ್ರಿ ಸರ್ಕಾರ ರಚಿಸಿಕೊಂಡಿದ್ದರೂ ರಾಷ್ಟ್ರವಿಭಜನೆಯ

ವಿರೋಧಿಯಾಗಿದ್ದ ಪಂಜಾಬ್‌ನ ಪ್ರಧಾನ ಮಂತ್ರಿ ಹಯಾತ್ ಖಾನ್ ಹಠಾತ್ತಾಗಿ ನಿಧನ ಹೊಂದಿದ್ದರು. ಅಸ್ಸಾಂ ಮತ್ತು ಸಿಂಧ್ ಪ್ರಾಂತ್ಯಗಳಲ್ಲಿ ಮುಸ್ಲಿಂ ಲೀಗ್ ಹಿಂದೂ ಮಹಾಸಭಾ ಸೇರಿದಂತೆ ಹಲವು ಪಕ್ಷಗಳ ಸಮ್ಮಿಶ್ರ ಸರ್ಕಾರಗಳನ್ನು ರಚಿಸಿಕೊಂಡು ಅಧಿಕಾರದ ಗದ್ದುಗೆ ಏರಿತ್ತು.

ಗಾಂಧಿ ಬಂಗಾಳದ ಕ್ಷಾಮದ ಬಗ್ಗೆ ಬಹು ಚಿಂತಿತರಾಗಿದ್ದರು. ಇಂತಹ ವೇಳೆಯಲ್ಲಿ ತಮ್ಮ ಮತ್ತು ತಮ್ಮ ಪರಿವಾರದ ಕಾವಲು ಮತ್ತು ಆಹಾರೋಪಚಾರಗಳಿಗಾಗಿ ಸರ್ಕಾರ ಮಾಡುತ್ತಿರುವ ಖರ್ಚು ದುಬಾರಿಯೆನ್ನಿಸತೊಡಗಿತ್ತು. ಜೊತೆಗೆ ಇತರ ಕಾಂಗ್ರೆಸ್ ನಾಯಕರ ಮೇಲೆ ಮಾಡಲಾಗುತ್ತಿದ್ದ ಖರ್ಚಿನ ಬಗ್ಗೆಯೂ ಅವರು ಚಿಂತಿತರಾಗಿದ್ದರು. ವೈಸ್‌ರಾಯ್ ಹಲವು ಬಾರಿ ಗಾಂಧಿಯವರನ್ನು 'ಭಾರತ ಬಿಟ್ಟು ತೊಲಗಿ' ನಿರ್ಣಯವನ್ನು ಮರುಪರಿಶೀಲಿಸಿದರೆ ಮಾತ್ರ ಮುಂದಿನ ಕ್ರಮದ ಬಗ್ಗೆ ಯೋಚಿಸಬಹುದು ಎಂದಾಗ, ಇದನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಮಾತ್ರ ಮಾಡಬಹುದೆಂದೂ, ತಮ್ಮನ್ನು ಕಾರ್ಯಕಾರಿ ಸಮಿತಿಯ ಸದಸ್ಯರಿರುವ ಸೆರೆಮನೆಗೆ ಸ್ಥಳಾಂತರಿಸಿದರೆ ಇದು ಸಾಧ್ಯವಾಗಬಹುದು ಎಂದು ಹೇಳಿದರು. ಇದನ್ನು ಸರ್ಕಾರ ಒಪ್ಪದಿದ್ದಾಗ ಅವರು ವೈಸ್‌ರಾಯ್‌ನನ್ನು 'ನನ್ನೊಬ್ಬನ ದುಷ್ಟಬುದ್ಧಿಯಿಂದಲೇ ಎಲ್ಲ ಅನಾಹುತವಾಗಿದೆ ಎಂಬುದು ನಿಮ್ಮ ಅಭಿಪ್ರಾಯವಾಗಿದ್ದರೆ, ನನ್ನನ್ನು ಎಷ್ಟುಕಾಲವಾದರೂ ಬಂಧಿಸಿಡಿ. ಆದರೆ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಬಿಡುಗಡೆ ಮಾಡಿ ಅವರು ಕ್ಷಾಮಪೀಡಿತ ಜನರ ಸೇವೆ ಮಾಡಲು ಅವಕಾಶ ಮಾಡಿಕೊಡಿ' ಎಂದು ೧೯೪೩ರ ಅಕ್ಟೋಬರ್‌ನಲ್ಲಿ ಬರೆದ ಪತ್ರವೊಂದರಲ್ಲಿ ಮನವಿ ಮಾಡಿದ್ದರು. ಆದರೆ ಸರ್ಕಾರ ಈ ಮನವಿಗೆ ಓಗೊಡಲಿಲ್ಲ.

ಅಹಮದ್‌ನಗರ ಕೋಟೆಯ ಬಂದಿಗಳು–ಗಾಂಧಿಯಿಂದ ದೂರ ಕಾಪಾಡಿಕೊಳ್ಳಲು ನಿರ್ಧಾರ

ಇತ್ತ ಆಗಾಖಾನ್ ಅರಮನೆಯ ಸೆರೆಮನೆಯ ಪರಿಸ್ಥಿತಿ ಹೀಗಿದ್ದರೆ, ಅಹಮದ್‌ನಗರ ಕೋಟೆಯಲ್ಲಿನ ಸೆರೆಮನೆಯ ಬಂದಿಗಳ ಪರಿಸ್ಥಿತಿ ಇದಕ್ಕಿಂತ ಉತ್ತಮವಾಗೇನಿರಲಿಲ್ಲ. ನೆಹರೂ, ಪಟೇಲ್, ಆಜ಼ಾದ್, ಕೃಪಲಾನಿ, ಆಚಾರ್ಯ ನರೇಂದ್ರ ದೇವ, ಪಟ್ಟಾಭಿ ಸೀತಾರಾಮಯ್ಯ, ಹರೇಕೃಷ್ಣ ಮೆಹತಾಬ್, ಅಸಫ್ ಅಲಿ ಸೇರಿದಂತೆ, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಹದಿನಾರು ಸದಸ್ಯರಲ್ಲಿ ಹನ್ನೆರಡು ಜನ ಅಲ್ಲಿ ಬಂಧಿತರಾಗಿದ್ದರು. ರಾಜೇಂದ್ರ ಪ್ರಸಾದರು ಅನಾರೋಗ್ಯ ಪೀಡಿತರಾಗಿ ಬಿಹಾರದ ಸೆರೆಮನೆಯೊಂದರಲ್ಲಿದ್ದರು. ಈ ಹನ್ನೆರಡು ಜನಕ್ಕೂ ಅನ್ಯ ಜನರ ಸಹವಾಸವಿಲ್ಲದೆ ತಲೆ ಕೆಟ್ಟಂತಾಗಿತ್ತು. ಪತ್ರಿಕೆಗಳನ್ನು ಓದುವುದು, ಬೇಸರವಾದಾಗ ತೋಟದಲ್ಲಿ ಕೆಲಸ ಮಾಡುವುದನ್ನು ಬಿಟ್ಟು ಬೇರೇನೂ ಚಟುವಟಿಕೆಗಳಿಗೆ ಅವಕಾಶವಿಲ್ಲದೆ ಅವರ ಮನ ಜಡಗೊಳ್ಳಲಾರಂಭಿಸಿತ್ತು. ಅವರೀಗ ಏನೂ ತೋಚದೆ ಬಹಳ ದಿನಗಳಿಂದ ತಮ್ಮ ಮನಸ್ಸಿನಲ್ಲಿ ಉಳಿದಿದ್ದ ವಿಚಾರಗಳನ್ನು ಪುಸ್ತಕ ರೂಪದಲ್ಲಿ ಬರೆಯತೊಡಗಿದರು. ಇವುಗಳಲ್ಲಿ ಮುಖ್ಯವಾದವುಗಳೆಂದರೆ ನೆಹರೂ ಅವರ 'ಡಿಸ್ಕವರಿ ಆಫ್ ಇಂಡಿಯಾ' (ಮಗಳು ಇಂದಿರಾಗೆ ಬರೆದ ಪತ್ರಗಳ ಮಾಲೆಯನ್ನು ಆಧರಿಸಿದ್ದು), ಕೃಪಲಾನಿಯವರ

'ಗಾಂಧಿ: ಎ ಸ್ಟಡಿ' ಮತ್ತು ಆಜ಼ಾದರ 'ಎ ಕಲೆಕ್ಷನ್ ಆಫ್ ಅನ್‌ಡೆಲಿವರ್ಡ್ ಲೆಟರ್ಸ್'. ಇದೇ ಸಮಯದಲ್ಲಿ ಆಜ಼ಾದರ ಪತ್ನಿ ಜುಲೇಖಾರ ನಿಧನದ ಸುದ್ದಿಯೂ ತಲುಪಿತ್ತು.

ಈ ಗೆಳೆಯರ ಗುಂಪಿನ ನಡುವೆ ಸದಾ ಚರ್ಚೆಗೆ ಬರುತ್ತಿದ್ದ ವಿಷಯವೆಂದರೆ ಗಾಂಧಿ ಮಂಡಿಸಿದ 'ಭಾರತ ಬಿಟ್ಟು ತೊಲಗಿ' ನಿರ್ಣಯ. ನೆಹರೂ, ಆಜ಼ಾದರು ಇದು ತಪ್ಪು ನಿರ್ಣಯ ಎಂದರೆ, ಪಟೇಲ್ ಮತ್ತು ಆಚಾರ್ಯ ನರೇಂದ್ರ ದೇವ ಸರಿಯಾದ ನಿರ್ಣಯ ಎನ್ನುತ್ತಿದ್ದರು. ಮಿಕ್ಕವರದ್ದು ಮಿಶ್ರ ಪ್ರತಿಕ್ರಿಯೆ. ಹೀಗಾಗಿ ಕೆಲವೊಮ್ಮೆ ಚರ್ಚೆ, ಸ್ನೇಹದ ಗಡಿ ದಾಟಿ ಜಗಳಗಳಿಗೂ, ಕೆಲಕಾಲದ ಮುನಿಸುಗಳಿಗೂ ಕಾರಣವಾಗುತ್ತಿತ್ತು. ರಾಜ್‌ಮೋಹನ್ ಗಾಂಧಿಯವರ ಪ್ರಕಾರ, ಇದರ ಪರಿಣಾಮವೆಂದರೆ ಇವರೆಲ್ಲರೂ ಇನ್ನು ಮುಂದೆ ಗಾಂಧಿಯವರಿಂದ ಸ್ವಲ್ಪ ದೂರ ಕಾಯ್ದುಕೊಳ್ಳಲಾರಂಭಿಸಿ, ಅವರ ನಿರ್ಣಯಗಳ ಬಗ್ಗೆ ಎರಡಲ್ಲ ಹತ್ತು ಬಾರಿ ಯೋಚಿಸಿ ನಿರ್ಧಾರಗಳನ್ನು ಕೈಗೊಳ್ಳಬೇಕೆಂಬ ತೀರ್ಮಾನಕ್ಕೆ ಬಂದದ್ದು.

ಲಿನ್‌ಲಿತ್‌ಗೋ ನಿರ್ಗಮನ–ವೇವೆಲ್ ಆಗಮನ

೧೯೪೩ರ ಸೆಪ್ಟೆಂಬರ್‌ನಲ್ಲಿ ವೈಸ್‌ರಾಯ್ ಲಾರ್ಡ್ ಲಿನ್‌ಲಿತ್‌ಗೋನ ಅವಧಿ ಮುಗಿದಿತ್ತು. ಹೊಸ ವೈಸ್‌ರಾಯ್ ಆಗಿ ಲಾರ್ಡ್ ವೇವೆಲ್ ಬಂದಿದ್ದರು. ಸೆಪ್ಟೆಂಬರ್ ೨೭ರಂದು ಲಿನ್‌ಲಿತ್‌ಗೋಗೆ ಒಂದು ವಿದಾಯ ಪತ್ರ ಬರೆದ ಗಾಂಧಿ, 'ನಾನು ಕಂಡ ಎಲ್ಲ ಬ್ರಿಟಿಷ್ ಅಧಿಕಾರಿಗಳ ಪೈಕಿ ನನಗೆ ಹೆಚ್ಚು ದುಃಖವನ್ನು ತಂದವರು ನೀವೇ ಎಂದು ತಿಳಿಸಲು ವಿಷಾದಿಸುತ್ತೇನೆ. ನಿಮ್ಮನ್ನು ವ್ಯವಸ್ಥೆ, ಅಸತ್ಯವನ್ನು ಆಲಂಗಿಸುವ ಘೋರ ಪ್ರಮಾದಕ್ಕೆ ತಳ್ಳಿಬಿಟ್ಟಿತ್ತು. ಮುಂದೆ ನಿಮ್ಮ ಈ ಪ್ರಮಾದದ ಅರಿವನ್ನು ಭಗವಂತ ನಿಮಗೆ ಮಾಡಿಸುತ್ತಾನೆ ಎಂದು ನಾನು ನಂಬಿದ್ದೇನೆ' ಎಂದು ತಿಳಿಸಿದರು. ಈತನ ನೇತೃತ್ವದಲ್ಲೇ ತಮ್ಮ ಮೇಲೆ, ಹಿಂಸೆ ಮತ್ತು ಫ್ಯಾಸಿಸ್ಟರೊಡನೆ ಸಂಚಿನ ಖೊಟ್ಟಿ ಆರೋಪ ಪಟ್ಟಿ ಸಿದ್ಧವಾದದ್ದು ಎಂಬುದು ಅವರಿಗೆ ತೀವ್ರ ನೋವನ್ನುಂಟು ಮಾಡಿತ್ತು. ಹಾಗಾಗಿಯೇ ಅವರು ಪ್ಯಾರೇಲಾಲರ ಜೊತೆ ಕೂತು ಈ ಸಂಬಂಧದ ಸರ್ಕಾರದ ಆರೋಪ ಮತ್ತು ದಾಖಲೆಗಳನ್ನೊಳಗೊಂಡ ಕಿರುಪುಸ್ತಕದ ಸಕಲ ಅಂಶಗಳಿಗೂ ಉತ್ತರಗಳನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಕಳಿಸಿದ್ದರು.

ಗಾಂಧಿಯವರ ಪತ್ರಕ್ಕೆ ಉತ್ತರ ನೀಡಿದ್ದ ಲಿನ್‌ಲಿತ್‌ಗೋ 'ನೀವು ಬರೆದದ್ದು ನಿಜವೇ ಆಗಿದ್ದರೆ ನನಗೆ ವ್ಯಥೆಯಾಗುವುದು ಖಂಡಿತ. ಆದರೆ ಸಂಗತಿಗಳನ್ನು ನೀವು ನೋಡುವ ದೃಷ್ಟಿ, ನನಗೆ ಅರ್ಥವಾಗದಂಥದ್ದು. ಶಾಶ್ವತವಾದದ್ದರ ಜೊತೆಗೇ ಸದ್ಯದ ಮೌಲ್ಯಗಳೂ ಮುಖ್ಯವೆಂದು ನಾನು ಭಾವಿಸಿದ್ದೇನೆ' ಎಂದು ಬರೆದಿದ್ದನು.

ನಂತರದಲ್ಲಿ ವೇವೆಲ್‌ನೊಂದಿಗೆ ಗಾಂಧಿಯವರ ಪತ್ರ ವ್ಯವಹಾರ ಶುರುವಾಯಿತು. ಆದರೆ ವೇವೆಲ್‌ನದೂ ಅದೇ ರಾಗವೇ: 'ಆಗಸ್ಟ್ ೮ರ ನಿರ್ಣಯ ವಾಪಸ್ ಪಡೆದು ಸಂಧಾನದ ಮಾತನಾಡಿ'. ಮೀರಾಬೆನ್ ಸೆರೆಮನೆಯಲ್ಲಿ ತೀವ್ರ ಅಸ್ವಸ್ಥಳಾದಾಗ ಗಾಂಧಿ ೧೯೪೪ರ ಮಾರ್ಚ್ ೯ರಂದು 'ನಾನು ಅಸಾಧ್ಯ ಮನುಷ್ಯನಿರಬಹುದು. ಆದರೆ ನಿಮ್ಮ ಸೇನೆಯ ಓರ್ವ ದಂಡನಾಯಕರ ಮಗಳಾದ ಮೀರಾಬೆನ್‌ಗೇಕೆ ಈ ನೋವಿನ ಶಿಕ್ಷೆ? ನೀವೇ ಬಂದು ಆಕೆಯ ಸ್ಥಿತಿ ನೋಡಿ ಆಕೆಯನ್ನು ಬಿಡುಗಡೆ ಮಾಡಿ' ಎಂದು

ವೈಸ್‌ರಾಯ್‌ನನ್ನು ಕೋರಿದ್ದರು. ಆದರೆ ಆ ಕಡೆಯಿಂದ ಯಾವ ಉತ್ತರವೂ ಬರಲಿಲ್ಲ.

ಸೆರೆಮನೆಯ ಶೂನ್ಯತೆ–ಅಸ್ವಸ್ಥರಾದ ಕಸ್ತೂರಬಾ

ಈ ಮಧ್ಯೆ ಕಸ್ತೂರಬಾ ತೀವ್ರ ಅಸ್ವಸ್ಥರಾಗಿದ್ದರು. ೧೯೪೩ರ ಡಿಸೆಂಬರ್‌ನಲ್ಲೇ ಅವರಿಗೆ ಎರಡು ಬಾರಿ ಲಘು ಹೃದಯಾಘಾತಗಳಾಗಿದ್ದವು. ಅವರು ಉಸಿರಾಟದ ತೀವ್ರ ತೊಂದರೆಯಿಂದ ನರಳಲಾರಂಭಿಸಿದ್ದರು. ದೇವದಾಸ್ ಮತ್ತು ರಾಮದಾಸ್ ಸೆರೆಮನೆಗೆ ಬಂದು ಅವರನ್ನು ಕಂಡುಹೋದರು. ಡಾ. ಎಂ.ಡಿ. ಗಿಲ್ಡರ್, ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿದ್ದರಾದರೂ ಡಾ. ಸುಶೀಲಾ ನಯ್ಯರ್ ಅವರ ಎಲ್ಲ ಸೇವೆ ಮಾಡುತ್ತಿದ್ದರಾದರೂ, ಬಾ ಅವರು ಭಾವನಾತ್ಮಕ ಸಮಸ್ಯೆಗಳಿಂದ ಬಾಧಿತರಾಗಿದ್ದಾರೆಂಬುದು ಗಾಂಧಿಯವರಿಗೆ ಗೊತ್ತಿತ್ತು. ಮಕ್ಕಳು–ಮೊಮ್ಮಕ್ಕಳು ಮತ್ತು ಇತರ ಬಂಧು ಬಾಂಧವರಿಂದ ದೂರಾಗಿ, ಸೆರೆಮನೆಯ ಒಂಟಿತನದಿಂದ ಬೇಸತ್ತು ಒಮ್ಮೆ ಬಾ ಗಾಂಧಿಯವರಿಗೆ 'ಈ ಇಂಗ್ಲಿಷ್‌ನವರೊಂದಿಗೆ ಎಷ್ಟು ದಿನ ಕಾದಾಡುವಿರಿ? ಇಬ್ಬರೂ ಒಟ್ಟಿಗೆ ಇರುವ ಒಪ್ಪಂದವನ್ನೇಕೆ ಮಾಡಿಕೊಳ್ಳಬಾರದು?' ಎಂದು ಕೇಳಿದ್ದರು. ಅದಕ್ಕೆ ಗಾಂಧಿ, 'ಅವರು ಆಳುವವರಾಗದೆ ಸೋದರರಂತೆ ಒಟ್ಟಿಗೆ ಬಾಳಲು ಸಿದ್ಧರಾದರೆ ನಾನೂ ಸಿದ್ಧ. ನೀನೇ ಒಪ್ಪಂದ ಮಾಡಿಸು' ಎಂದಾಗ ಬಾ ಜೋರಾದ ಮುಗ್ಧ ನಗೆ ನಕ್ಕು ಸುಮ್ಮನಾಗಿದ್ದರು.

ಗಾಂಧಿ, ಬಾಗೆ ಪ್ರತಿದಿನ ಐದನೆಯ ತರಗತಿಯ ಗುಜರಾತಿ ಪಠ್ಯಪುಸ್ತಕವನ್ನಿಟ್ಟುಕೊಂಡು ಓದು ಬರಹ ಕಲಿಸುತ್ತಿದ್ದರು. ಸಾಮಾನ್ಯ ಜ್ಞಾನ ಹೇಳಿಕೊಡುತ್ತಿದ್ದರು. ಇಬ್ಬರಿಗೂ ಬೇಸರವಾದಾಗ ರಾತ್ರಿ ಇಬ್ಬರೂ ಪಠ್ಯಪುಸ್ತಕದ ಪದ್ಯಗಳನ್ನು ಒಟ್ಟಿಗೆ ಹಾಡುತ್ತಾ ಕಾಲ ಕಳೆಯುತ್ತಿದ್ದರು. ಗಾಂಧಿ ಹೇಗೋ ಪ್ರಾರ್ಥನೆ, ಎಣ್ಣೆ ಸ್ನಾನ, ಪತ್ರಿಕೆ ಓದು, ನೂಲುವುದು, ಪ್ಯಾರೇಲಾಲ್ ಮತ್ತು ಸುಶೀಲಾ ನಯ್ಯರ್‌ರೊಂದಿಗೆ ರಾಜಕೀಯ ಚರ್ಚೆ ಇತ್ಯಾದಿಗಳಲ್ಲಿ ಕಾಲ ಕಳೆಯುತ್ತಿದ್ದರಾದರೂ ಬಾಗೆ ಸೆರೆಮನೆ ಬಿಡುಗಡೆಯ ಬೆಳಕೇ ಕಾಣದ ಕಗ್ಗತ್ತಲ ಜಗತ್ತಾಗಿ ಕಂಡು, ತಾನಿನ್ನು ಹೊರಜಗತ್ತನ್ನು ಕಾಣಲಾರೆನೇನೋ ಎಂದು ಭಯವಿಹ್ವಲರಾಗಿದ್ದರು. ಗಾಂಧಿ ಇದನ್ನು ಅರಿತು, ಬಾ ಅವರನ್ನು ಕಾಣಲು ಆಕೆಯ ಬಂಧುಗಳಿಗೆ ಹೆಚ್ಚಿನ ಅವಕಾಶ ನೀಡಬೇಕೆಂದು ಮತ್ತು ಬಾಗೆ ಪ್ರಿಯರಾದ ಪ್ರಭಾವತಿ ದೇವಿ (ಜೆಪಿಯವರ ಪತ್ನಿ), ಮನು ಗಾಂಧಿಯನ್ನು (ಮಗನ್‌ಲಾಲರ ಸೋದರ ಸಂಬಂಧಿ) ಅವಳ ಉಪಚಾರಕ್ಕಾಗಿ ಕರೆಸಿಕೊಳ್ಳಲು ಅನುಮತಿ ನೀಡಬೇಕೆಂದು ಸೆರೆಮನೆಯ ಮೇಲ್ವಿಚಾರಕರನ್ನು ಕೋರಿದರು. ಬಾ ರಾತ್ರಿಯೆಲ್ಲ ಒಂದು ಮರದ ಸ್ಟೂಲಿನ ಮೇಲೆ ತಲೆ ಇಟ್ಟುಕೊಂಡು ಏದುಸಿರುಬಿಡುತ್ತಾ, ಕೆಮ್ಮುತ್ತಾ ನಿದ್ರೆಗೆ ಪ್ರಯತ್ನಿಸುತ್ತಿರುವುದನ್ನು ಕಂಡು, ಗಾಂಧಿ ಆಕೆ ಮುಕ್ತಿಗಾಗಿ ಹಾತೊರೆಯುತ್ತಿದ್ದಾಳೆ ಎಂದು ಭಾವಿಸಿ ಪತ್ನಿಯ ಸಾಂತ್ವನಕ್ಕಾಗಿ ರಾಮ್‌ಧುನ್ ಹಾಡುತ್ತಿದ್ದರು. ಆಗೆಲ್ಲ ಬಾ ಶಾಂತಿಯಿಂದ ಮಲಗುತ್ತಿದ್ದರು. ಬಾ ಅವರನ್ನು ಬಂಧನದಿಂದ ಬಿಡುಗಡೆ ಮಾಡಿ ಸೇವಾಗ್ರಾಮಕ್ಕೆ ಸ್ಥಳಾಂತರಿಸುವ ಸಲಹೆಯೊಂದನ್ನು ಸರ್ಕಾರ ಪರಿಶೀಲಿಸಿತಾದರೂ, ಅದು ಗಾಂಧಿಯವರ ತಾತ್ಕಾಲಿಕ ಬಿಡುಗಡೆಯನ್ನೂ ಅನಿವಾರ್ಯವಾಗಿಸಿ ಪರಿಸ್ಥಿತಿ ಜಟಿಲವಾಗುವುದೆಂದು ಆ ಸಲಹೆಯನ್ನು ತಿರಸ್ಕರಿಸಿತು. ಗಾಂಧಿ ಕೂಡ ಪತ್ನಿಯ ಬಿಡುಗಡೆಗಾಗಿ ಅರ್ಜಿ ಸಲ್ಲಿಸಲು ನಿರಾಕರಿಸಿದರು.

ಬಾಗೆ ಮೂರನೆಯ ಬಾರಿಗೆ ಹೃದಯಾಘಾತವಾಗಿ ಅವರ ಅಂತ್ಯ ಸಮೀಪಿಸುತ್ತಿದೆ ಎನ್ನುವಾಗ ಪ್ರಭಾವತಿ ಮತ್ತು ಮನು ಗಾಂಧಿ, ಬಾ ಅವರ ಉಪಚಾರಕ್ಕಾಗಿ ಸೆರೆಮನೆಗೆ ಬರಲು ಅನುಮತಿ ನೀಡಲಾಯಿತು. ಗಾಂಧಿಯವರ ಮನವಿಯ ಮೇರೆಗೆ ಆಯುರ್ವೇದ ವೈದ್ಯ ಶಿವಶರ್ಮ ಮತ್ತು ನಿಸರ್ಗ ಚಿಕಿತ್ಸಾ ತಜ್ಞ ದೀನ್‌ಶಾ ಮೆಹ್ತಾ ಬಂದು ರೋಗಿಯನ್ನು ಪರೀಕ್ಷಿಸಿ ಕೆಲ ಸಲಹೆಗಳನ್ನು ನೀಡಿದರು. ಎಲ್ಲ ಚಿಕಿತ್ಸೆಗಳಿಗಿಂತ ಹೆಚ್ಚಾದ ಚಿಕಿತ್ಸೆ ಬಾಗೆ ಮಕ್ಕಳ ದರ್ಶನ ಮತ್ತು ಕನು ಹಾಡುವ ಸುಶ್ರಾವ್ಯ ಭಜನೆಗಳಿಂದ ದೊರಕುತ್ತಿತ್ತು. ಆದರೆ ಹರಿಲಾಲ ಬಂದಾಗ ಅವರು ಭಾವಾವೇಶಕ್ಕೆ ಒಳಗಾಗುತ್ತಿದ್ದರು. ಒಮ್ಮೆ ಅವನು ಪಾನಮತ್ತನಾಗಿಯೇ ಬಂದಾಗ ಅವರು ತೀವ್ರ ಅಶಾಂತರಾಗಿದ್ದರು.

ಕಸ್ತೂರಬಾ ನಿಧನ–ಕಲ್ಲಾಗಿ ಕೂತ ಗಾಂಧಿ

ಬಾಗೆ ಶ್ವಾಸಕೋಶದ ತೀವ್ರ ಸೋಂಕು ಉಂಟಾಗಿತ್ತು, ದೇವದಾಸ್ ಆಗ ಮಾರುಕಟ್ಟೆಯಲ್ಲಿ ಅಲಭ್ಯವಾಗಿದ್ದ ಪೆನ್ಸಿಲಿನ್‌ನ್ನು ಕಷ್ಟಪಟ್ಟು ಹುಡುಕಿ ತಂದಿದ್ದ. ಆದರೆ ಗಾಂಧಿ ಅದರ ಪ್ರಯೋಗ ಬೇಡವೆಂದರು. 'ಸಾವಿನೆಡೆಗೆ ಸಾಗುತ್ತಿರುವ ಜೀವಕ್ಕೆ ದಿನಕ್ಕೆ ಮೂರು ಬಾರಿ ಅದನ್ನು ಚುಚ್ಚಿ ಅನಗತ್ಯ ನೋವು ತರುವಿರೇಕೆ?' ಎಂದು ಅವರು ಕೇಳಿದರು. ಅಲ್ಲಿದ್ದ ವೈದ್ಯರುಗಳಿಗೂ ಆ ಪ್ರಶ್ನೆ ಹಾಕಿದರು. ಆದರೆ ಇತರ ಆಧುನಿಕ ಚಿಕಿತ್ಸೆಗೆ ಅವರು ಅಡ್ಡಿ ಬರಲಿಲ್ಲ. ಬಾ ಯಾವ ಚಿಕಿತ್ಸೆಗೂ ಸ್ಪಂದಿಸದೆ ಅರೆ ಪ್ರಜ್ಞಾವಸ್ಥೆಗೆ ಜಾರಿದರು. ಅಂದು ೧೯೪೪ರ ಫೆಬ್ರುವರಿ ೨೨. ಶಿವರಾತ್ರಿಯ ದಿನ. ಸಂಜೆ ಸುಮಾರು ಆರು ಘಂಟೆಯ ಹೊತ್ತಿಗೆ ಬಾ ಗಾಂಧಿಯವರಿಗೆ ಹತ್ತಿರ ಬರಲು ಸನ್ನೆ ಮಾಡಿದರು. ಆತಂಕದಿಂದ ಗಾಂಧಿ ತಮ್ಮ ಪತ್ನಿಯ ಭುಜ ಎತ್ತಿ ತಮ್ಮ ಎದೆಗೆ ಆನಿಸಿಕೊಂಡರು. ಆ ಕ್ಷಣದಲ್ಲೇ ಬಾ ಅವರ ಪ್ರಾಣ ಪಕ್ಷಿ ಹಾರಿಹೋಗಿತ್ತು. ವೈದ್ಯರು ನಾಡಿ ನೋಡಿ ಪರೀಕ್ಷಿಸಿ ಸಾವನ್ನು ಖಚಿತ ಪಡಿಸಿದರು. ದೇವದಾಸ ಅಮ್ಮನನ್ನು ತಬ್ಬಿ ಸಣ್ಣ ಮಗುವಿನಂತೆ ರೋದಿಸತೊಡಗಿದ. ಅವನನ್ನು ತಡೆಯುವ ಮನಸ್ಸು ಅಲ್ಲಿ ಯಾರಿಗೂ ಇರಲಿಲ್ಲ.

ಬಾ ಅವರ ದೇಹಕ್ಕೆ ಸ್ನಾನ ಮಾಡಿಸಲು ಹೊರಟಾಗ ಗಾಂಧಿ ಯಾರ ಮಾತನ್ನೂ ಒಪ್ಪದೆ, ತಾವೂ ಅದರಲ್ಲಿ ಸೇರಿಕೊಂಡರು. ನಂತರ ಗಾಂಧಿ ನೂತಿದ್ದ ನೂಲಿನಿಂದಲೇ ನೇಯ್ದಿದ್ದ ಖಾದಿ ಸೀರೆಯೊಂದನ್ನು ಆಯ್ದು ಮೃತ ದೇಹಕ್ಕೆ ಉಡಿಸಲಾಯಿತು. ಖಾದಿ ಹಾರವೊಂದನ್ನು ತೊಡಿಸಲಾಯಿತು.

ಬಾ ಅವರ ಅಂತಿಮ ಸಂಸ್ಕಾರಕ್ಕೆ, ಆ ಅರಮನೆಯ ಬಯಲಿನ ಒಂದೆಡೆ ಸಿದ್ಧತೆಗಳು ನಡೆದಿದ್ದಾಗ ಗಾಂಧಿ ದೇಹದ ಬಳಿ ಕಲ್ಲಿನಂತೆ ಕೂತಿದ್ದರು. ಅಂತಿಮ ಸಂಸ್ಕಾರಕ್ಕಾಗಿ ದೇಹವನ್ನು ಒಯ್ದು ಮೇಲೂ ಅವರು ತಾಸುಗಟ್ಟಲೆ ಅಲ್ಲಿಯೇ ಹಾಗೇ ಕುಳಿತಿದ್ದರು. ಅರವತ್ತು ವರ್ಷಗಳ ದಾಂಪತ್ಯವದು. ಪೋರ್‌ಬಂದರ್, ರಾಜಕೋಟೆ, ಬಾಂಬೆ, ಜೊಹಾನ್ಸ್‌ಬರ್ಗ್, ಫೀನಿಕ್ಸ್, ಟಾಲ್‌ಸ್ಟಾಯ್ ಆಶ್ರಮ, ಸಬರ್ಮತಿ, ವರ್ಧಾ ಹೀಗೆ ಹಲವೆಡೆ ನೆಲೆಯೂರಿ ಬಾಳುವೆ ಮಾಡಿದ್ದ ಜೋಡಿಯದು. ಗಾಂಧಿಯವರ ಹಲವು ಹುಚ್ಚಾಟಗಳನ್ನೂ, ಚಿತ್ರವಿಚಿತ್ರ ವ್ರತಗಳನ್ನೂ, ಸರ್ವ ದಿಕ್ಕುಗಳಿಂದಲೂ ಬರುತ್ತಿದ್ದ ನೂರಾರು ನೈತಿಕ ನಿಯಮಗಳನ್ನೂ ಸಹಿಸಿಯೋ, ಮೆಚ್ಚಿಯೋ, ಅವುಗಳೊಂದಿಗೆ

ಹೊಂದಿಕೊಂಡೋ ಹಣ್ಣಾಗಿದ್ದ ಮುಗ್ಧ ಜೀವವದು. ಒಂದು ಹಂತದ ನಂತರ ಗಂಡನ ಉಪಚಾರದ ಹೊಣೆಯನ್ನು ಯಾವುದೇ ಕಹಿ ಇಲ್ಲದೆ ಇತರ ಹೆಣ್ಣುಮಕ್ಕಳಿಗೆ ಬಿಟ್ಟುಕೊಟ್ಟಿದ್ದ ಉದಾರಿ ಸ್ತ್ರೀ ಹೃದಯವದು. ಹಲವಾರು ಬಾರಿ ಗಂಡನೊಡನೆ ಹೋರಾಟಗಳಲ್ಲಿ ಸೇರಿಕೊಂಡು ಸೆರೆಮನೆಗೂ ಹೋಗಿ ಬರುತ್ತಾ, ಈಗ ಸೆರೆಮನೆಯಲ್ಲೇ ಮಣ್ಣಾದ ತ್ಯಾಗಶೀಲ ವ್ಯಕ್ತಿತ್ವವದು.

ಹೊರಗೆ ದೇವದಾಸ ತಮ್ಮ ತಾಯಿಯ ಪಾರ್ಥಿವ ಶರೀರಕ್ಕೆ ಅಗ್ನಿಸ್ಪರ್ಶ ಮಾಡಿಯಾಗಿತ್ತು. ಗಾಂಧಿ ಎದ್ದು, ಬಾ ರಾತ್ರಿ ಕೆಮ್ಮಲು ಸರಾಗವಾಗಿ ಉಸಿರಾಡಲು ಬಳಸುತ್ತಿದ್ದ ಮರದ ಸ್ಟೂಲನ್ನು ಒಮ್ಮೆ ಆತ್ಮೀಯವಾಗಿ ಸವರಿ ಒಂದು ಕಡೆ ಎತ್ತಿಟ್ಟುಕೊಂಡರು. ಅದು ಅವರು ಬದುಕಿರುವವರೆಗೂ ಅವರ ಊಟದ ಪುಟ್ಟ ಮೇಜಾಯಿತು.

ಅಹಮದಾಬಾದ್, ಬಾಂಬೆ, ಸೂರತ್, ನಾಸಿಕ್, ಮೀರಜ್, ಜಬ್ಬಲಪುರ ಸೇರಿದಂತೆ ದೇಶದ ನೂರಾರು ಊರುಗಳಲ್ಲಿ ಬಂದ್ ಆಚರಿಸಿ ಬಾ ಅವರ ಆತ್ಮಕ್ಕೆ ಶಾಂತಿ ಕೋರಲಾಯಿತು. ಡರ್ಬಾನ್ ಮತ್ತು ಜೊಹಾನ್ಸ್‌ಬರ್ಗ್‌ಗಳಲ್ಲೂ ಜನ ಸಭೆ ಸೇರಿ ಶ್ರದ್ಧಾಂಜಲಿ ಅರ್ಪಿಸಿದರಲ್ಲದೆ, ಫೀನಿಕ್ಸ್ ಆಶ್ರಮದ ಆವರಣದಲ್ಲಿ ಬಾ ಸ್ಮರಣಾರ್ಥ ಬಾಲಿಕೆಯರ ಶಾಲೆಯೊಂದನ್ನು ಸ್ಥಾಪಿಸಲು ಆ ಸಭೆಯಲ್ಲೇ ಐದು ಸಾವಿರ ಪೌಂಡ್‌ಗಳ ನಿಧಿ ಸಂಗ್ರಹಿಸಲಾಯಿತು. ಜಗತ್ತಿನ ಮೂಲೆ ಮೂಲೆಗಳಿಂದ ಶೋಕ ಮತ್ತು ಸಂತಾಪ ಸೂಚಕ ಸಂದೇಶಗಳು ಬಂದವು. ಆದರೆ ಈ ಯಾವ ಶೋಕ–ಸಂತಾಪ ಸಂದೇಶಗಳೂ ಭರಿಸಲಾಗದ ಶೂನ್ಯ ಗಾಂಧಿಯವರನ್ನು ಆವರಿಸಿತ್ತು. ಅವರು ವೈಸ್‌ರಾಯ್ ವೇವೆಲ್ ಮತ್ತು ಅವರ ಪತ್ನಿ ಕಳಿಸಿದ್ದ ಸಂದೇಶಕ್ಕೆ ಉತ್ತರಕೊಡುತ್ತಾ, 'ಅವಳು ಕೊನೆಯುಸಿರೆಳೆದಾಗ ಅವಳು ಯಾತನೆಯಿಂದ ಮುಕ್ತಳಾದಳೆಂದು ಸಮಾಧಾನಪಟ್ಟುಕೊಂಡಿದ್ದೆ. ಆದರೆ ಈಗ ಅವಳ ವಿಯೋಗ ನಾನೆಣಿಸಿದ್ದಕ್ಕಿಂತ ಎಷ್ಟು ದೊಡ್ಡ ಅವಗಢ ಎಂದು ಗೊತ್ತಾಗುತ್ತಿದೆ. ಅವಳ ದೃಢ ಮನಸ್ಕತೆ, ಸಂಕಲ್ಪ ಶಕ್ತಿಗಳಿಂದ ನಾನು 'ನಿರಾಕರಣೆ'ಯ ಶಕ್ತಿ ಎಂಥದು ಎಂಬುದನ್ನು ಅರಿತೆ. ಅವಳು ನನಗೆ ಗುರುವಾಗಿದ್ದಳು' ಎಂದು ಬರೆದಿದ್ದುದರಲ್ಲೇ ಇದು ಸುಸ್ಪಷ್ಟವಾಗಿ ವ್ಯಕ್ತವಾಗಿತ್ತು.

ಬಾ ಅವರ ಸಾವು ಗಾಂಧಿಯವರನ್ನು ಹೇಗೆ ತಾಕಿತ್ತು ಎಂಬುದನ್ನು ತಿಳಿಯಲು ದೇವದಾಸ್ ತನ್ನ ತಾಯಿಯ ಬಗ್ಗೆ 'ಹಿಂದೂಸ್ತಾನ್ ಟೈಮ್ಸ್' ಗೆ ಬರೆದ ಲೇಖನದ ಈ ಕೊನೆಯ ಸಾಲುಗಳಿಂದ ತಿಳಿಯಬಹುದು: 'ನನ್ನ ತಂದೆ ಏನಾಗಿದ್ದರೋ ಅದಕ್ಕೆ ಬಹುಪಾಲು ಕಾರಣ ನನ್ನಮ್ಮ ಆಗಿದ್ದರು. ಹಾಗಾಗಿಯೇ ಅವರು ಶೂನ್ಯ ಆವರಿಸಿದಂತೆ ಒಂದು ಸ್ತಬ್ಧ ಚಿತ್ರದಂತೆ ಕೂತುಬಿಟ್ಟಿದ್ದರು. ಸುತ್ತಲ ದುಃಖದ ವಾತಾವರಣ ಅವರನ್ನು ತಾಗದಂತೆ ಅವರು ಒಂದು ದಟ್ಟ ಆಳದ ಮನದಲ್ಲಿ ಮುಳುಗಿಹೋಗಿದ್ದರು. ಆದರೆ ಎಲ್ಲ ಮುಗಿದು ನಾವು ಸೋದರರೆಲ್ಲ ೨೫ರಂದು ಸೆರೆಮನೆ ಬಿಟ್ಟು ಹೊರಟಾಗ, ಅವರು ತಮ್ಮ ಎಂದಿನ ಹಾಸ್ಯ ಚಟಾಕಿಗಳನ್ನು ಹಾರಿಸಲು ಶುರು ಮಾಡಿದ್ದರು. ಅವು ಕಣ್ಣೀರಿನ ಹನಿಗಳನ್ನು ತಡೆಯಲು ಮಾಡಿಕೊಂಡಿದ್ದ ಉಪಾಯವೆಂದು ನಮಗೆ ಗೊತ್ತಿತ್ತು'.

ಇಂತಹ ಆರ್ದ್ರ ಸಂದರ್ಭದ ಘಟ್ಟದಲ್ಲೂ ರಾಜ್‌ಮೋಹನ್‌ಗಾಂಧಿ, ತಮ್ಮ ತಾತನನ್ನು ಕುರಿತ ಕಟುನಿಷ್ಠುರ ವಿಮರ್ಶೆಯ ಜವಾಬ್ದಾರಿಯನ್ನು ತಮ್ಮ

'ಮೋಹನದಾಸ' ಕೃತಿ ರಚನೆಯಲ್ಲಿ ಮರೆಯುವುದಿಲ್ಲ. ಗಾಂಧಿಯವರಿಗೆ ಪ್ರಭಾವತಿ ಮತ್ತು ಮನೂಳನ್ನು ಸೆರೆಮನೆಯಲ್ಲೇ ಉಳಿಸಿಕೊಳ್ಳುವ ಅಪೇಕ್ಷೆ ಇತ್ತಾದರೂ, ಅದಕ್ಕೆ ಸೆರೆಮನೆಯ ನಿಯಮಗಳಲ್ಲಿ ಅವಕಾಶವಿಲ್ಲವೆಂದು ಮತ್ತು ಅದು ತಮ್ಮ ದೌರ್ಬಲ್ಯವಾಗುವುದೆಂದೂ ಸುಮ್ಮನಾದರು ಎಂದು ಬರೆಯುತ್ತಾರೆ. ಈ ಬಗ್ಗೆ ಮನುಗೆ 'ತಾಯ್ತನ'ದ ಸ್ಪರ್ಶದೊಂದಿಗೆ ಬರೆದ ಪತ್ರಗಳನ್ನು ಉಲ್ಲೇಖಿಸುತ್ತಾರೆ. ಮುಂದೆ ಮನು, ಗಾಂಧಿಯವರ ಬ್ರಹ್ಮಚರ್ಯ ವ್ರತನಿಷ್ಠೆಯ ಪರೀಕ್ಷೆಯ ಸಂಗಾತಿಯಾಗಿದ್ದಳೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕಿದೆ.

ಇದೇ ಸಂದರ್ಭದಲ್ಲಿ, ರಾಜ್‌ಮೋಹನ್ ತಮ್ಮ ಇದೇ ಪುಸ್ತಕದಲ್ಲಿ ೧೯೪೭ರ ಜೂನ್‌ನಲ್ಲಿ ಗಾಂಧಿ ತಮ್ಮನ್ನು ಭೇಟಿ ಮಾಡಿದ ಮಣಿಲಾಲಾಲನ ಮಗಳು ಸೀತಾಳೊಂದಿಗೆ ಮಾತನಾಡುತ್ತಾ ಆಕೆಯ ಅಜ್ಜಿ ಕಸ್ತೂರಬಾ ಬಗ್ಗೆ ಆಡಿದ ಮಾತುಗಳೆಂದು ದಾಖಲಿಸಿರುವ ಮಾತುಗಳೂ ಉಲ್ಲೇಖಾರ್ಹ. ಅವನ್ನು ಆ ಸಂದರ್ಭದಲ್ಲಿ ಹಾಜರಿದ್ದ ಮನೂ ತನ್ನ ದಿನಚರಿಯಲ್ಲಿ ದಾಖಲಿಸಿದ್ದಾಳೆಂದು ರಾಜ್‌ಮೋಹನ ಗಾಂಧಿ ಹೇಳುವ ಆ ಮಾತುಗಳು ಹೀಗಿವೆ:

'ಬಾ ನನಗಿಂತ ದುರ್ಬಲಳೇನಾಗಿರಲಿಲ್ಲ. ಗಟ್ಟಿಮುಟ್ಟಾಗಿಯೇ ಇದ್ದಳು. ಅವಳಿಲ್ಲದಿದ್ದರೆ ನನ್ನ ಬದುಕಿನಲ್ಲಿ ನಾನು ಮುಳುಗಿಯೇ ಹೋಗುತ್ತಿದ್ದೆ. ಅನಕ್ಷರಸ್ಥಳಾಗಿದ್ದ ಈ ಮಹಿಳೆ ನನ್ನ ನಿರ್ಧಾರ–ಸಂಕಲ್ಪಗಳೆಲ್ಲ ಯಶಸ್ವಿಯಾಗಿ ಈಡೇರಲು ಸಹಕರಿಸಿದಳು. ರಾಜಕಾರಣದಲ್ಲೂ ಅವಳು ಧೈರ್ಯವಂತಳಾಗಿದ್ದಳು ಮತ್ತು ಅದರಲ್ಲಿ ತನ್ನದೇ ರೀತಿಯಲ್ಲಿ ಭಾಗವಹಿಸಿದ್ದಳು.

ನರಸಿಂಹ ಮೆಹ್ತಾರ 'ವೈಷ್ಣವ ಜನತೋ' ಭಜನೆಯಲ್ಲಿ ಬರುವ ವರ್ಣನೆಗೆ ತಕ್ಕ ವೈಷ್ಣವ ಶ್ರದ್ಧಾಳುವಾಗಿದ್ದ ಬಾ ದೇವದಾಸನ ಮಗಳು ತಾರಾಳನ್ನು ಪ್ರೀತಿಸಿದಷ್ಟೇ ಅಸ್ಪೃಶ್ಯ ಬಾಲೆ ಲಕ್ಷ್ಮಿಯನ್ನೂ ಪ್ರೀತಿಸುತ್ತಿದ್ದಳು. ಬಹು ದಿಟ್ಟೆಯಾಗಿದ್ದ ಅವಳು ೧೯೪೩ರ ಉಪವಾಸದ ಸಂದರ್ಭಲ್ಲಿ ನಾನು ಸಾವಿನ ಬಾಗಿಲು ತಟ್ಟಿದಾಗಲೂ ಧೈರ್ಯಗುಂದದೆ ಇತರರಿಗೆ ಧೈರ್ಯ ಹೇಳಿದಳು. ಇಂದು ನಾನು ಏನಾಗಿದ್ದೇನೋ ಅದಕ್ಕೆ ಅವಳು ಕಾರಣಳು. ಅವಳ ಉಜ್ವಲ ಮುಖವನ್ನು ನಾನೀಗಲೂ ಕಾಣುತ್ತಿರುತ್ತೇನೆ.'

ಗಾಂಧಿ ಪರಿವಾರದ ಬಿಡುಗಡೆ–ಸಿಟ್ಟಾದ ಚರ್ಚಿಲ್

ಬಾ ಅವರ ನಿಧನದ ನಂತರ ಗಾಂಧಿಯವರನ್ನು ಖಿನ್ನತೆ ಆವರಿಸಿತು. ಅವರ ರಾಮನಾಮ ಜಪ ಹೆಚ್ಚಾಯಿತು. ಆದರೆ ಅವರ ಆರೋಗ್ಯ ತೀವ್ರಗತಿಯಲ್ಲಿ ಕೆಡಲಾರಂಭಿಸಿತ್ತು. ಅವರು ರಕ್ತಹೀನತೆ ಮತ್ತು ರಕ್ತದೊತ್ತಡಗಳಿಂದ ಬಳಲುತ್ತಿದ್ದಾರೆಂದೂ, ಇದು ಮೂತ್ರಪಿಂಡಗಳ ದೌರ್ಬಲ್ಯ ಅಥವಾ ಹೃದಯಾಘಾತಗಳಿಗೆ ಎಡೆ ಮಾಡಿಕೊಡಬಹುದೆಂದೂ ಅವರನ್ನು ಪರೀಕ್ಷಿಸುತ್ತಿದ್ದ ವೈದ್ಯರು ವರದಿಗಳಲ್ಲಿ ತಿಳಿಸಿದ್ದರು. ಇದು ತನ್ನ ಗಮನಕ್ಕೆ ಬಂದಾಗ ವೈಸ್‌ರಾಯ್ ವೇವೆಲ್, ಗಾಂಧಿ ಮತ್ತವರ ಸಹಬಂಧಿಗಳನ್ನು ಬಿಡುಗಡೆ ಮಾಡಲು ನಿರ್ಧರಿಸಿದರು. ೧೯೪೪ರ ಮೇ ೬ರಂದು ಬಿಡುಗಡೆ ಮಾಡುವ ಆದೇಶ ಹೊರಡಿಸಿದರು. ಇದನ್ನು ತಿಳಿದ ಗಾಂಧಿ, ಮಹದೇವ ದೇಸಾಯಿ ಮತ್ತು ಕಸ್ತೂರಬಾ ಸಮಾಧಿಗಳ ಸ್ಥಳಗಳನ್ನು

ಸಾರ್ವಜನಿಕ ಸ್ಥಳಗಳೆಂದು ಘೋಷಿಸಿ, ಆ ಇಬ್ಬರ ಬಂಧುಗಳು ಯಾವಾಗಬೇಕಾದರೂ ಬಂದು ತಮ್ಮ ಗೌರವ ಸಲ್ಲಿಸುವ ಅವಕಾಶಕ್ಕಾಗಿ ಕೋರಿಕೆ ಸಲ್ಲಿಸಿದರು. ಅಲ್ಲಿ ಪ್ರತಿದಿನ ಪ್ರಾರ್ಥನೆಯ ವ್ಯವಸ್ಥೆ ತಾವು ಮಾಡುವುದಾಗಿಯೂ ಅವರು ತಿಳಿಸಿದರು.

೧೯೪೪ರ ಮೇ ೬ರ ಬೆಳಿಗ್ಗೆ ಗಾಂಧಿ ಪರಿವಾರ ಬಂಧನದಿಂದ ಬಿಡುಗಡೆ ಹೊಂದಿ ಹೊರಟು ನಿಂತಾಗ, ಸೆರೆಮನೆಯ ಪಹರೆ ಸಿಬ್ಬಂದಿಯೆಲ್ಲ ಅವರ ಸುತ್ತ ಸೇರಿ ಗಾಂಧಿಗೆ ಗೌರವ ಸಲ್ಲಿಸಿದರು. ಪ್ರಧಾನ ಕಾವಲುಗಾರ ಪಾರ್ಸಿ ಕಾಟೆಲ್, ಗಾಂಧಿಯವರ ಕಾಲಿಗೆರಗಿ ಆಶೀರ್ವಾದ ಪಡೆದನಲ್ಲದೆ ಕಾವಲುಗಾರರ ಪರವಾಗಿ ಗಾಂಧಿ ಕೆಲಸಗಳಿಗೆಂದು, ಅವರ ಎಪ್ಪತ್ತೈದು ವರ್ಷ ವಯಸ್ಸನ್ನು ಸೂಚಿಸುವಂತೆ ಅವರಿಗೆ ಎಪ್ಪತ್ತೈದು ರೂಪಾಯಿಗಳ ಕಾಣಿಕೆಯನ್ನೂ ನೀಡಿದ. ನಂತರ ಗಾಂಧಿ ಪರಿವಾರ ಮಹದೇವ ದೇಸಾಯಿ ಮತ್ತು ಕಸ್ತೂರಬಾ ಅವರ ಸಮಾಧಿಗಳ ಬಳಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಪೂನಾ ಬಳಿಯ ಗುಡ್ಡವೊಂದರ ಮೇಲಿನ ಶ್ರೀಮತಿ ಥ್ಯಾಕರ್ಸೆ ಅವರ ಭವ್ಯ ಬಂಗಲೆ 'ಪರ್ಣಕುಟಿ'ಯತ್ತ ಪಯಣ ಬೆಳೆಸಿತು.

ಗಾಂಧಿಯವರ ಬಿಡುಗಡೆಯ ಸುದ್ದಿಯನ್ನು ಕೇಳಿ ವ್ಯಗ್ರನಾದ ಚರ್ಚಿಲ್ 'ಗಾಂಧಿ ಇನ್ನೂ ಏಕೆ ಸತ್ತಿಲ್ಲ?' ಎಂಬ ಪ್ರಶ್ನೆ ಕೇಳಿ ವೇವೆಲ್‌ಗೆ ತಂತಿ ಕಳಿಸಿದ. ಆದರೆ ಬಂಗಾಲದ ಕ್ಷಾಮ ಪೀಡಿತ ಜನರನ್ನು ಉಳಿಸಲು ಆಹಾರ ಧಾನ್ಯ ಕಳಿಸಲು ಕೋರಿದಾಗ, 'ಮೊದಲು ಯೂರೋಪಿನ ನಮ್ಮ ಜನ ತಿಂದುಂಡು ಬದುಕಲಿ' ಎಂದು ಹೇಳಿ ಆಹಾರ ಪೂರೈಸಲು ನಿರಾಕರಿಸಿದ್ದ ಚರ್ಚಿಲ್‌ನ ಕ್ರೌರ್ಯ ಗೊತ್ತಿದ್ದ ವೇವೆಲ್, ಅದಕ್ಕೇನೂ ಪ್ರತಿಕ್ರಿಯೆ ವ್ಯಕ್ತಪಡಿಸಲು ಹೋಗಲಿಲ್ಲ.

■

೮೩
ರಾಷ್ಟ್ರ ವಿಭಜನೆಯ ಸದ್ದುಗಳು

ಸೆರೆಮನೆಯಿಂದ ಬಿಡುಗಡೆ ಹೊಂದಿ ಶ್ರೀಮತಿ ಥ್ಯಾಕರ್ಸೆ ಅವರ ಮನೆಯಲ್ಲಿ ಒಂದು ವಾರ ಸುಧಾರಿಸಿಕೊಂಡ ಗಾಂಧಿ ಸಮುದ್ರದ ಗಾಳಿ ಬಯಸಿ ಬಾಂಬೆಗೆ ಹೋದರು. ಅಲ್ಲಿ ಜುಹು ಸಮುದ್ರ ತೀರದಲ್ಲಿದ್ದ ಮೊರಾರ್ಜಿ ದೇಸಾಯಿಯವರ ಮನೆಯಲ್ಲಿ ಒಂದು ತಿಂಗಳ ಕಾಲ ತಂಗಿದರು. ಅಲ್ಲಿನ ಪ್ರಾರ್ಥನಾ ಸಭೆಗಳಿಗೆ ಜನ ಕಿಕ್ಕಿರಿದು ಸೇರಲಾರಂಭಿಸಿದಾಗ ಗಾಂಧಿಯವರ ವಿಶ್ರಾಂತಿಗೆ ತೊಂದರೆಯಾಗ ತೊಡಗಿತು. ಜೊತೆಗೆ ಅವರನ್ನು ಈ ಹಿಂದೆ ಬಾಧಿಸಿದ್ದ ಮಲೇರಿಯಾದ ಲಕ್ಷಣಗಳು ಮತ್ತೆ ಹೊರ ಕಾಣಲಾರಂಭಿಸಿದ್ದವು. ಅವರು ಪೂನಾದ ಮಿತ್ರ ದೀನ್‌ಶಾ ಮೆಹ್ತಾರ ನಿಸರ್ಗ ಚಿಕಿತ್ಸಾ ಕೇಂದ್ರಕ್ಕೆ ಹೋಗಬಯಸಿದರು.

ಸಮಾಜವಾದಿಗಳಿಗೆ ಛೀಮಾರಿ–ಪ್ರಭಾವತಿಯವರ ಬಗ್ಗೆ ಮೆಚ್ಚುಗೆ

ಅಷ್ಟರಲ್ಲಿ ಗಾಂಧಿ ಜುಹುವಿನಲ್ಲಿ ಇದ್ದ ಸುದ್ದಿ ಗೊತ್ತಾಗಿ, ಭೂಗತರಾಗಿದ್ದ ಕೆಲವು ಸಮಾಜವಾದಿಗಳು ರಚನಾತ್ಮಕ ಕೆಲಸಗಳ ಕಾರ್ಯಕರ್ತ ಎಂಬ ಹಣೆಪಟ್ಟಿಯ ಕಾರಣ ಬಂಧಮುಕ್ತರಾಗಿದ್ದ ಆರ್.ಆರ್. ದಿವಾಕರರ ಮೂಲಕ ಗಾಂಧಿಯವರನ್ನು ಸಂಪರ್ಕಿಸಿದರು. ಅವರಲ್ಲಿ ಮುಖ್ಯರು ಅರುಣಾ ಅಸಫ್ ಅಲಿ ಮತ್ತು ಅಚ್ಯುತ ಪಟವರ್ಧನ್. ಅವರು ಸಮಾಜವಾದಿಗಳು ಭೂಗತರಾಗಿ ನಡೆಸುತ್ತಿದ್ದ 'ಕ್ರಾಂತಿಕಾರಕ' ಚಟುವಟಿಕೆಗಳಿಗೆ ಗಾಂಧಿಯವರ ಆಶೀರ್ವಾದ ಮತ್ತು ಬೆಂಬಲ ಕೋರಿದ್ದರು. ಹರಿದ ಬಟ್ಟೆಗಳಲ್ಲಿದ್ದ ಅವರ ಬಾಡಿದ ಮುಖಗಳ ಮೇಲೆ ಪೋಲೀಸರ ಲಾಠಿ ಪೆಟ್ಟಿನ ಗುರುತುಗಳು ಎದ್ದು ಕಾಣುತ್ತಿದ್ದವು ಎಂದು ದಿವಾಕರ್ ಗಾಂಧಿಗೆ ಹೇಳಿದರು. ಗಾಂಧಿ, ಅವರ ದಿಟ್ಟತನ ಮತ್ತು ಸಾಹಸಗಳ ಬಗ್ಗೆ ಮೆಚ್ಚುಗೆಯ ಮಾತನ್ನಾಡಿದರಾದರೂ, ಅವರ ಮರೆಮಾಚಿದ ಹೋರಾಟದ ಮಾರ್ಗವನ್ನು ಒಪ್ಪುವುದಿಲ್ಲವೆಂದು ತಿಳಿಸಿದರು. ಪ್ರತಿರೋಧವೇನಿದ್ದರೂ ಬಹಿರಂಗವಾಗಿರಬೇಕು. ಗುಟ್ಟಾದ ಯಾವ ಚಟುವಟಿಕೆಯೂ ದೀರ್ಘ ಕಾಲದ ಫಲ ನೀಡುವುದಿಲ್ಲವೆಂದು ಅವರಿಗೆ ವಿವರಿಸುತ್ತಾ, ಅವರ ಅಥವಾ ಜೆಪಿ ಮತ್ತು ಲೋಹಿಯಾರ ಹೋರಾಟಗಳಿಗಿಂತ ಜೆಪಿಯವರ ಪತ್ನಿ ಪ್ರಭಾವತಿಯವರ ಹೋರಾಟವನ್ನು ತಾವು ಹೆಚ್ಚು ಮೆಚ್ಚುವುದಾಗಿ ತಿಳಿಸಿದ್ದರು. ಬಿಹಾರ ಮಹಿಳಾ ಕಾಂಗ್ರೆಸ್ ಬ್ರಿಗೇಡ್‌ನ ನಾಯಕಿಯಾಗಿದ್ದ ಅವರು ಬಾಂಬೆಯಿಂದ ತಪ್ಪಿಸಿಕೊಂಡು ಹೋಗಿ ಪಾಟ್ನಾದಲ್ಲಿನ ಕದಂಕುವಾ ಕುಟೀರದ ವಿವಾಹಿತ ಮಹಿಳೆಯರ ನೂಲಿನ ಕೇಂದ್ರ ಸೇರಿ ಅಲ್ಲಿ ಪ್ರತಿಭಟನೆ ಮಾಡಿ ದಸ್ತಗಿರಿಯಾಗಿದ್ದರು. ಕಸ್ತೂರಬಾ ಅವರ ಕೊನೆಯ ದಿನಗಳಲ್ಲಿ ಅವರೊಡನಿದ್ದು ಶುಶ್ರೂಷೆ ಮಾಡಲು ಅವರನ್ನು ದರ್ಭಾಂಗಾ ಸೆರೆಮನೆಯಿಂದ

ಆಗಾಖಾನ್ ಅರಮನೆಯ ಸೆರೆಮನೆಗೆ ಕರೆತರಲಾಗಿತ್ತಾದರೂ ಬಾ ಅವರ ನಿಧನದ ನಂತರ ಮತ್ತೆ ದರ್ಭಾಂಗಾ ಸೆರೆಮನೆಗೆ ಒಯ್ಯಲಾಗಿತ್ತು.

ಗಾಂಧಿ ಸಮಾಜವಾದಿಗಳ ವಿಧ್ವಂಸಕ ಕೃತ್ಯಗಳಿಗಾಗಿ ಅವರಿಗೆ ಛೀಮಾರಿ ಹಾಕಿದರು. ಸಾರ್ವಜನಿಕ ಆಸ್ತಿಪಾಸ್ತಿ ಸರ್ಕಾರದ ಆಸ್ತಿಪಾಸ್ತಿಯಲ್ಲ; ಜನರ ಆಸ್ತಿಪಾಸ್ತಿ. ಅದನ್ನು ಹಾಳುಗೆಡಹುವುದು ಎಂದರೆ ಜನರಿಗೆ ಅನ್ಯಾಯ ಮಾಡಿದಂತೆ ಎಂದು ವಿವರಿಸಿದರು. ಅಚ್ಯುತ ಪಟವರ್ಧನ್ ಮತ್ತು ಅರುಣಾ ಇಬ್ಬರ ಮೇಲೂ ತಲೆತಪ್ಪಿಸಿಕೊಂಡ ಅಪರಾಧಿಗಳು ಎಂದು ಘೋಷಿಸಲಾಗಿದ್ದೂ, ಅವರ ಸುಳಿವು ಕೊಟ್ಟವರಿಗೆ ದೊಡ್ಡ ಮೊತ್ತದ ಬಹುಮಾನವನ್ನೂ ಸರ್ಕಾರ ಘೋಷಿಸಿತ್ತು. ಇದನ್ನು ತಿಳಿದ ಗಾಂಧಿ, ಅವರಿಬ್ಬರಿಗೂ ಪೊಲೀಸರಿಗೆ ಶರಣಾಗಿ ಬಹುಮಾನದ ಮೊತ್ತವನ್ನು ತಾವೇ ಪಡೆದು, ಅದನ್ನು ತಮ್ಮ ಹರಿಜನ ಸೇವಕ ನಿಧಿಗೆ ದೇಣಿಗೆಯಾಗಿ ಕೊಡಬೇಕೆಂದು ಸಲಹೆ ನೀಡಿದರು. ಆದರೆ ಅವರ ಈ ಸಲಹೆಯನ್ನು ಒಪ್ಪದ ಈ ಸಮಾಜವಾದಿಗಳು ತಮ್ಮ ಭೂಗತ ಜೀವನವನ್ನು ಮುಂದುವರೆಸಿದರು.

ನಂತರ ಪೂನಾಗೆ ಹೋದ ಗಾಂಧಿ, ಮೆಹ್ತಾ ಅವರ ಬಳಿ ನಿಸರ್ಗ ಚಿಕಿತ್ಸೆ ಪಡೆದು ಮಹಾಬಳೇಶ್ವರ ಬಳಿಯ ಗಿರಿಧಾಮ ಪಂಚಾಗ್ನಿಗೆ ಹೊರಟರು. ಈ ಮುನ್ನ ಅವರು ಎರಡು ಬೇಸರದ ಸಂಗತಿಗಳನ್ನು ಎದುರಿಸಬೇಕಾಯಿತು. ಒಂದು, ಅವರು ಭೇಟಿಗೆ ಸಮಯ ಕೇಳಿ ವೈಸ್‌ರಾಯ್‌ಗೆ ಬರೆದ ಪತ್ರಕ್ಕೆ, ಆ ಕಡೆಯಿಂದ ನಿರಾಕರಣೆಯ ಉತ್ತರ ಬಂದಿತ್ತು. ಒಂದು ನಿರ್ದಿಷ್ಟ ನಿಲುವು ಮತ್ತು ಕಾರ್ಯಸೂಚಿ ಇಲ್ಲದೆ ಸಂದರ್ಶನ ಸಾಧ್ಯವಿಲ್ಲ ಎಂದು ವೈಸ್‌ರಾಯ್ ಕಛೇರಿಯಿಂದ ಪತ್ರ ಬಂದಿತ್ತು. ಅವರ ಬೇಸರಕ್ಕೆಡೆ ಮಾಡಿದ ಇನ್ನೊಂದು ಸಂಗತಿ ಎಂದರೆ, ಮೀರಾಬೆನ್ ಪೃಥ್ವಿ ಸಿಂಗ್ ಎಂಬ ಓರ್ವ ಕಮ್ಯೂನಿಸ್ಟ್ ನಾಯಕನನ್ನು ವಿವಾಹವಾಗಬಯಸಿ ಗಾಂಧಿಯವರ ಅನುಮತಿ ಕೇಳಿದ್ದು. ಗಾಂಧಿ ಇದಕ್ಕೆ ಆಶೀರ್ವಾದವಿಲ್ಲವೆಂದು ಹೇಳಿದರಲ್ಲದೆ, ಈ ಮದುವೆ ನಡೆದರೆ ತಮ್ಮ ಆಶ್ರಮಕ್ಕೂ ಮೀರಾಗೂ ಯಾವುದೇ ಸಂಬಂಧವಿರುವುದಿಲ್ಲವೆಂದು ಸಾರ್ವಜನಿಕವಾಗಿ ಪ್ರಕಟಿಸುವುದು ಅನಿವಾರ್ಯವೆಂದು ತಿಳಿಸಿದರು. ಕಮ್ಯೂನಿಸ್ಟ್ ಪಕ್ಷ ಅಹಿಂಸೆಗೆ ಬದ್ಧವಾದ ಪಕ್ಷವಾಗಿರದೆ, ಆಕೆಯನ್ನು ತನ್ನ ರಾಜಕಾರಣಕ್ಕಾಗಿ ದುರುಪಯೋಗ ಮಾಡಿಕೊಳ್ಳಬಹುದೆಂದೂ ಅವರು ಎಚ್ಚರಿಸಿದರು. ಸ್ವಲ್ಪ ಕಾಲದಲ್ಲೇ ಮೀರಾ ಪ್ರೇಮ ಪ್ರಕರಣ ಪೃಥ್ವಿ ಸಿಂಗ್ ಕಡೆಯಿಂದ ಅಂತ್ಯಗೊಂಡಾಗ, ಮೀರಾ ತನ್ನ ಬಹು ದಿನದ ಆಸೆಯಂತೆ, ನಂತರದ ದಿನಗಳಲ್ಲಿ ಹಿಮಾಲಯದತ್ತ ನಡೆದು ಅದರ ತಪ್ಪಲಿನಲ್ಲೊಂದು ಗೋಶಾಲೆ ಸಹಿತವಾದ ಆಶ್ರಮ ಸ್ಥಾಪಿಸಿಕೊಂಡು ನೆಲೆಸಿದರು. ಗಾಂಧಿ ಆ ಆಶ್ರಮಕ್ಕೆ ಶುಭಾಶಯ ಕೋರಿದರು.

ಕಸ್ತೂರಬಾ ಸ್ಮಾರಕ ಟ್ರಸ್ಟ್ ಸ್ಥಾಪನೆ– ಹಿಂದೂ ಮಹಾಸಭಾದ ವಿರೋಧ

ಪಂಚಾಗ್ನಿಯ ತಂಪು ಹವೆ ಗಾಂಧಿ ಬಹುಬೇಗನೆ ಚೇತರಿಸಿಕೊಳ್ಳುವಂತೆ ಮಾಡಿತು. ಅವರು ಮತ್ತೆ ಚುರುಕಾದರು. ಜಿನ್ನಾ ಮತ್ತು ವೈಸ್‌ರಾಯ್ ಜೊತೆ ಪತ್ರ ವ್ಯವಹಾರ ಆರಂಭಿಸಿದರು. ತಮ್ಮನ್ನು ಭೇಟಿಯಾಗಿ ಜಿನ್ನಾರೊಂದಿಗೆ ಈ ಹಿಂದೆ ತಾವು ನಡೆಸಿದ್ದ ಮಾತುಕತೆಗೆ ಪೂರಕವಾಗಿ, ಜಿನ್ನಾರನ್ನು ಭೇಟಿಯಾಗಲು ರಾಜಾಜಿಯವರ ಒತ್ತಾಯದ

ಮೇರೆಗೆ, ಅವರು ಜಿನ್ನಾಗೆ ಗುಜರಾತಿಯಲ್ಲೇ (ಉರ್ದು ಅನುವಾದದೊಂದಿಗೆ!) ಪತ್ರ ಬರೆದರು. ತಮ್ಮಿಬ್ಬರ ಆತ್ಮೀಯ ಸಂಬಂಧದ ಹಳೆಯ ನೆನಪುಗಳನ್ನು ಪ್ರಸ್ತಾಪಿಸಿ, ತಾವು ಎಂದೂ ಮುಸ್ಲಿಮರ ಶತ್ರುವಾಗಿರದೆ ಇಡೀ ಜಗತ್ತಿನ ಸೇವಕನಾಗಿರುವೆನಾದ್ದರಿಂದ, ತಮ್ಮನ್ನು ತಿರಸ್ಕರಿಸಬಾರದೆಂದು ಮತ್ತು ಭೇಟಿಗಾಗಿ ಅನುಕೂಲವಾದ ದಿನವನ್ನು ತಿಳಿಸಲು ಅವರು ಕೋರಿದ್ದರು. ಹಾಗೇ ವೈಸ್‌ರಾಯ್‌ಗೂ ಒಂದು ಪತ್ರ ಬರೆದು, ಕೇಂದ್ರ ಶಾಸನ ಸಭೆಗೆ ಜವಾಬ್ದಾರವಾಗಿರುವ ರಾಷ್ಟ್ರೀಯ ಸರ್ಕಾರದ ರಚನೆಗೆ ಮತ್ತು ಜಪಾನ್ ವಿರುದ್ಧದ ಯುದ್ಧ ಕಾರ್ಯಾಚರಣೆಯ ವೆಚ್ಚವನ್ನು ಭಾರತದ ಮೇಲೆ ಹೇರದಿರಲು ಒಪ್ಪಿದಲ್ಲಿ, ಕಾಂಗ್ರೆಸ್ ತನ್ನ 'ಭಾರತ ಬಿಟ್ಟು ತೊಲಗಿ' ನಿರ್ಣಯವನ್ನು ಹಿಂತೆಗೆದುಕೊಂಡು ಯುದ್ಧದಲ್ಲಿ ಸಂಪೂರ್ಣವಾಗಿ ಸಹಕರಿಸುವ ಭರವಸೆ ನೀಡಬಲ್ಲುದು ಎಂದು ತಿಳಿಸಿದ್ದರು. ಜಿನ್ನಾರೇನೋ ಭೇಟಿಗೆ ಒಪ್ಪಿ ಪತ್ರ ಬರೆದರು. ಆದರೆ ವೈಸ್‌ರಾಯ್, ಯುದ್ಧ ಸಮಯದಲ್ಲಿ ಜವಾಬ್ದಾರಿಗಳ ಹಂಚಿಕೆ ಅನಾಹುತಗಳಿಗೆ ಕಾರಣವಾದೀತೆಂದು ಹೇಳಿ ಗಾಂಧಿಯವರ ಸಲಹೆಯನ್ನು ತಳ್ಳಿ ಹಾಕಿದ್ದ.

ಒಂದು ತಿಂಗಳ ವಾಸ್ತವ್ಯದ ನಂತರ ತಮ್ಮ ವೈದ್ಯರ ಸಲಹೆಯಂತೆ, ಗಾಂಧಿ ೧೯೪೪ರ ಆಗಸ್ಟ್ ಮೊದಲ ವಾರದ ಹೊತ್ತಿಗೆ ಸೇವಾಗ್ರಾಮಕ್ಕೆ ವಾಪಸಾದರು. ಅಲ್ಲಿ ಈಗಾಗಲೇ ಕಸ್ತೂರಬಾ ಅವರ ಅಭಿಮಾನಿಗಳ ಸಲಹೆ ಮತ್ತು ಒತ್ತಾಯದ ಮೇರೆಗೆ ಚಾಲ್ತಿಯಲ್ಲಿದ್ದ ಕಸ್ತೂರಬಾ ಸ್ಮಾರಕ ಟ್ರಸ್ಟ್‌ವೊಂದರ ಸ್ಥಾಪನೆಯ ವಿಚಾರವನ್ನು ಸಾಕಾರಗೊಳಿಸಲು ಸಮ್ಮತಿಸಿದರು. ಗ್ರಾಮೀಣ ಮಹಿಳೆಯರ ಮತ್ತು ಮಕ್ಕಳ ಆರೋಗ್ಯ ಸ್ವಚ್ಛತೆ, ಶಿಕ್ಷಣ, ಉದ್ಯೋಗ ತರಬೇತಿ ಹಾಗೂ ಹೆರಿಗೆ ಸೌಲಭ್ಯಗಳ ಸ್ಥಾಪನೆ ಈ ಟ್ರಸ್ಟ್‌ನ ಮುಖ್ಯ ಧ್ಯೇಯಗಳೆಂದು ನಿರ್ಧರಿಸಲಾಯಿತು. ಈ ಸಂದರ್ಭದಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ ಅವರಿಗೆ ಬರೆದ ಒಂದು ಪತ್ರದಲ್ಲಿ ಗಾಂಧಿ 'ಈವರೆಗೆ ಸ್ತ್ರೀಯರನ್ನು ಪುರುಷರು ಕೈಹಿಡಿದು ನಡೆಸಿದ್ದಾಯಿತು. ಇನ್ನು ಮುಂದೆ ಸ್ತ್ರೀಯರು ಪುರುಷರನ್ನು ಕೈಹಿಡಿದು ನಡೆಸಬೇಕಾಗಿದೆ' ಎಂದು ಬರೆದಿದ್ದಾರೆ ಎಂಬುದನ್ನು ನಾವು ಗಮನಿಸಬಹುದು.

ಈ ಟ್ರಸ್ಟ್‌ನ ಸುದ್ದಿ ಪ್ರಕಟವಾಗುತ್ತಿದ್ದಂತೆ ಹಿಂದೂ ಮಹಾಸಭಾದ ಸಾವರ್ಕರ್, ಅದರ ವಿರುದ್ಧ ಒಂದು ದೊಡ್ಡ ಪ್ರಚಾರವನ್ನೇ ಆರಂಭಿಸಿದರು. ಹಿಂದೂಗಳಾರೂ ಈ ಕಾಂಗ್ರೆಸ್ ಸಂಸ್ಥೆಗೆ ಬಿಡಿಗಾಸನ್ನೂ ಕೊಡಬಾರದೆಂದು ಕರೆಕೊಟ್ಟ ಅವರು ದೇಶಕ್ಕಾಗಿ ನೇಣುಗಂಬ ಏರಿದ, ಗುಂಡಿಟ್ಟು ಕೊಲ್ಲಲ್ಪಟ್ಟ, ಗಡೀಪಾರಾದ ಅಥವಾ ಚಿತ್ರಹಿಂಸೆಗೆ ಒಳಗಾದ ಹುತಾತ್ಮ ಪುರುಷರಿಗಾಗಲೀ, ಮಹಿಳೆಯರಿಗಾಗಲೀ ಸಲ್ಲದ ಮರ್ಯಾದೆ, ಇವರಿಗೆ ಹೋಲಿಸಿದಂತೆ ಅಂತಹ ಯಾವ ತ್ಯಾಗವನ್ನೂ ಮಾಡದ ಕಸ್ತೂರಬಾಗೆ ಸಲ್ಲಿಸಹೊರಟಿರುವುದು ಆ ಎಲ್ಲ ಹುತಾತ್ಮರಿಗೆ ಮಾಡುವ ಅವಮಾನವೆಂದು ಹೇಳಿದರು. ಬಾ ಹೆಸರಲ್ಲಿ ಸಂಗ್ರಹವಾದ ಹಣವನ್ನು ಹಿಂದೂ ಮಹಾಸಭಾ ಕಟುವಾಗಿ ವಿರೋಧಿಸುವ ಹಿಂದೂ-ಮುಸ್ಲಿಂ ಐಕ್ಯತೆಯ ಪ್ರಯತ್ನಗಳಿಗೆ ಬಳಸಲ್ಪಡುವುದು ಎಂದೂ ಎಚ್ಚರಿಸಿದರು. ಕಂಡೀಕರ್ ಎಂಬ ಇವರ ಶಿಷ್ಯನೊಬ್ಬನ ವಾದ ಈ ವಿರೋಧದ ನಿಜ ತಾತ್ವಿಕತೆಯ ಪ್ರತೀಕದಂತಿತ್ತು. ಆತನ ಪ್ರಕಾರ ಕಸ್ತೂರಬಾ ಆದರ್ಶ ಭಾರತೀಯ ನಾರಿಯಾಗಿ ಅನಕ್ಷರಸ್ಥೆಯಾಗಿ ಗಂಡನ ಸೇವೆಗೆ ತನ್ನ ಬದುಕನ್ನು ಮುಡಿಪಾಗಿಟ್ಟಿರುವ

ಮಹಿಳೆಯಾಗಿದ್ದು, ಅಂತಹವರ ನೆನಪಿನಲ್ಲಿ ಹೆಣ್ಣು ಮಕ್ಕಳಿಗಾಗಿ ಶಾಲೆಗಳನ್ನು ತೆರೆಯುವುದು ಅನುಚಿತವಾದ ಕೆಲಸವಾಗಿತ್ತು! ಆದರೆ ಈ ವಾದವನ್ನು ಒಪ್ಪದ ದೇಶದ ಜನ ಈ ಟ್ರಸ್ಟ್‌ಗೆ ಸುಮಾರು ೭೫ ಲಕ್ಷ ರೂಪಾಯಿಗಳ ದೇಣಿಗೆ ನೀಡಿತು.

ಗಾಂಧಿ–ಜಿನ್ನಾ ಮಾತುಕತೆ: ಅಂಬೇಡ್ಕರ್– ಸಾವರ್ಕರ್ ಆಕ್ಷೇಪ

ಗಾಂಧಿ–ಜಿನ್ನಾ ಮಾತುಕತೆ ಜಿನ್ನಾರ ಅನಾರೋಗ್ಯದ ಕಾರಣ ಒಂದಷ್ಟು ಕಾಲ ಮುಂದೂಡಲ್ಪಟ್ಟಿತಾದರೂ, ೧೯೪೪ರ ಸೆಪ್ಟೆಂಬರ್ ೯ರಂದು ಆರಂಭವಾಯಿತು. ಈ ಹಿಂದೆ ರಾಜಾಜಿ ರೂಪಿಸಿದ್ದ ಸೂತ್ರದ ಆಧಾರದ ಮೇಲೆ ಮಾತುಕತೆಗಳು ಆರಂಭವಾದವು. ಅವು ಮುಂದುವರೆದಂತೆ ಅಂಬೇಡ್ಕರ್ ಮಧ್ಯೆ ಪ್ರವೇಶಿಸಿದರು. ಅವರು ಮದ್ರಾಸ್‌ನಲ್ಲಿ ತಮ್ಮ ಅನುಯಾಯಿಗಳ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಾ, 'ದೇಶದ ಮುಂದಿರುವ ಸಮಸ್ಯೆ, ಕೇವಲ ಹಿಂದೂ–ಮುಸ್ಲಿಮರಿಗೆ ಸಂಬಂಧಿಸಿರದೆ ಅಸ್ಪೃಶ್ಯರು, ಕ್ರಿಶ್ಚಿಯನ್ನರು ಇತ್ಯಾದಿ ಅಲ್ಪಸಂಖ್ಯಾತ ಸಮುದಾಯಗಳ ಹಕ್ಕುಗಳ ಸಮಸ್ಯೆಗಳಿಗೂ ಸಂಬಂಧಿಸಿದೆ' ಎನ್ನುತ್ತಾ, ಗಾಂಧಿ, ಜಿನ್ನಾರ ಬೇಡಿಕೆಗಳಿಗೆ ಒಂದು ಮಿತಿಯನ್ನು ಮೀರಿ ಮಣಿಯಬಾರದು ಎಂದರು. ಜೊತೆಯಲ್ಲೇ ಗಾಂಧಿಯವರನ್ನು ಯಾವುದೇ ದರ್ಶನವಿಲ್ಲದ, ಜ್ಞಾನವಿಲ್ಲದ, ತರತಮಗಳ ಅರಿವಿಲ್ಲದ, ಎಲ್ಲ ವಿಷಯಗಳಲ್ಲೂ ಸೋತು ಸುಣ್ಣವಾಗಿರುವ ಮನುಷ್ಯ ಎಂದು ಬಣ್ಣಿಸಿದರು.

ಗಾಂಧಿ ಪಂಚಾಗ್ನಿಯಲ್ಲಿದ್ದಾಗಲೇ, ಗಾಂಧಿ–ಜಿನ್ನಾ ನಡುವಣ ಮಾತುಕತೆಯ ಸಾಧ್ಯತೆಗಳ ವಾಸನೆ ಹಿಡಿದಿದ್ದ ಅಂಬೇಡ್ಕರ್, ಗಾಂಧಿಯವರಿಗೆ ಪತ್ರ ಬರೆದು, ಹಿಂದೂ–ನಿಮ್ನವರ್ಗಗಳ ನಡುವಣ ಸಮಸ್ಯೆ ಪರಿಹರಿಸಲು ತಾವು ಒಪ್ಪಂದವೊಂದನ್ನು ರೂಪಿಸಿಕೊಡಲು ಸಿದ್ಧವೆಂದು ತಿಳಿಸಿದ್ದರು. ಆದರೆ ಗಾಂಧಿ, ಅಂಬೇಡ್ಕರ್ ಅವರ ಸಾಮರ್ಥ್ಯವನ್ನು ಶ್ಲಾಘಿಸುತ್ತಲೇ, ತಮ್ಮೆಲ್ಲ ಪ್ರಯತ್ನಗಳ ಹೊರತಾಗಿಯೂ ತಮ್ಮಿಬ್ಬರ ನಡುವಣ ಸಂಬಂಧ ಕುದುರದೆ, ಮಾತುಕತೆಗಳಿಗೆ ಯಾವುದೇ ಸಾಮಾನ್ಯ ಭೂಮಿಕೆ ಕಾಣುತ್ತಿಲ್ಲವೆಂದು ಅವರಿಗೆ ಉತ್ತರಿಸಿ, ಆ ವಿಷಯುವನ್ನು ಅಲ್ಲಿಗೇ ಮುಕ್ತಾಯಗೊಳಿಸಿದ್ದರು. ಆದರೆ ಗಾಂಧಿ–ಜಿನ್ನಾ ಮಾತುಕತೆ ಈಗಾಗಲೇ ಸಿದ್ಧಪಡಿಸಲಾಗಿದ್ದ ರಾಜಾಜಿ ಸೂತ್ರವೆಂಬ ಸಾಮಾನ್ಯ ಭೂಮಿಕೆಯ ಆಧಾರದ ಮೇಲೆ ನಡೆದು ಅದು ಮೂರನೇ ವಾರಕ್ಕೆ ಪ್ರವೇಶಿಸಿದ್ದರೂ, ಯಾವುದೇ ಇತ್ಯರ್ಥದ ಸೂಚನೆ ಕಾಣದಾಗಿತ್ತು. ಇದಕ್ಕೆ ಮುಖ್ಯ ಕಾರಣ, ಗಾಂಧಿ ಮತ್ತು ಕಾಂಗ್ರೆಸ್ ಪ್ರತಿನಿಧಿಸುವುದು ಹಿಂದೂಗಳನ್ನು ಮಾತ್ರ ಎಂದು ವಾದಿಸುತ್ತಾ ತಾನೇ ಇಡೀ ಮುಸ್ಲಿಂ ಸಮುದಾಯದ ಏಕಮಾತ್ರ ಪ್ರತಿನಿಧಿಯೆಂಬ ಮಾನ್ಯತೆಗಾಗಿ ಮತ್ತು ಮುಸ್ಲಿಂ ಬಹುಸಂಖ್ಯಾತ ಪ್ರದೇಶಗಳನ್ನೊಳಗೊಂಡ ಪಾಕಿಸ್ತಾನ ಸರ್ವರೀತಿಯಲ್ಲಿಯೂ ಒಂದು ಸಾರ್ವಭೌಮ ರಾಷ್ಟ್ರವಾಗಿರಬೇಕೆಂದು ಜಿನ್ನಾ ಹಠ ಹಿಡಿದದ್ದು. ಗಾಂಧಿ, ಮುಸ್ಲಿಂ ಬಹುಸಂಖ್ಯಾತ ಪ್ರದೇಶದ ಪ್ರಾಂತ್ಯಗಳ ಪ್ರತ್ಯೇಕತೆಯನ್ನು ಒಪ್ಪಿದರಾದರೂ ಅದು ಭಾರತದೊಂದಿಗೆ ರಕ್ಷಣೆ, ವಿದೇಶಾಂಗ, ಸಂಪರ್ಕ ಇತ್ಯಾದಿ ವಿಷಯಗಳಲ್ಲಿ ಅಧಿಕಾರದ ಸಾರ್ವಭೌಮತೆಯನ್ನು ಹಂಚಿಕೊಂಡಿರಬೇಕೆಂದು ಮತ್ತು ಮುಸ್ಲಿಂ ಪ್ರತ್ಯೇಕತೆಯನ್ನು ಆಯಾ ಪ್ರದೇಶಗಳ ಮುಸ್ಲಿಮರು ಮಾತ್ರ ಭಾಗವಹಿಸುವ ಜನಮತಗಣನೆಯ ಮೂಲಕ ದೃಢೀಕರಿಸಬೇಕೆಂಬ ಜಿನ್ನಾರ ಬೇಡಿಕೆಗೆ ಪ್ರತಿಯಾಗಿ, ಜನಮತಗಣನೆ ಆಯಾ ಪ್ರದೇಶದ

ಎಲ್ಲ ಧರ್ಮಗಳ ಜನರ ಭಾಗವಹಿಸುವಿಕೆಯೊಂದಿಗೆ ದೃಢೀಕರಣಗೊಳ್ಳಬೇಕು ಎಂಬ ಹಠದಿಂದಾಗಿ ಮಾತುಕತೆ ಅಂತಿಮವಾಗಿ ವಿಫಲವಾಯಿತು. ಗಾಂಧಿ ಭಾವನೆಗಳಿಗೆ ವಿರುದ್ಧವಾಗಿ ಜಿನ್ನಾ, ಮುಸ್ಲಿಂ ಸಮುದಾಯವೆಂದರೆ ಅದೊಂದು ಬೇರೆ ರಾಷ್ಟ್ರೀಯತೆ ಮಾತ್ರವಲ್ಲ, ಅದು ಬೇರೊಂದು ಪರಂಪರೆ, ಸಂಸ್ಕೃತಿ, ಮೌಲ್ಯ ವ್ಯವಸ್ಥೆ ಮತ್ತು ನಾಗರಿಕತೆಯೂ ಆಗಿದೆ ಎಂದರು. ಇದಕ್ಕೆ ಮೊದಲು ಈ ಮಾತುಕತೆಗೆ ತಮ್ಮ ವಿರೋಧವಿದೆಯೆಂದು ಸೂಚಿಸಿದ್ದ ಹಿಂದೂ ಮಹಾಸಭಾ, ಗಾಂಧಿಯವರನ್ನು ಮಾತುಕತೆಗೆ ಹೋಗದಂತೆ ದೈಹಿಕವಾಗಿ ತಡೆಯಲು ಗೋಡ್ಸೆ ಮತ್ತು ಥಟ್ಟೆ ಎಂಬ ಇಬ್ಬರು ಕಾರ್ಯಕರ್ತರನ್ನು ಸೇವಾಗ್ರಾಮಕ್ಕೆ ಕಳಿಸಿತ್ತು. ಆದರೆ ಪೊಲೀಸರು ಅವರನ್ನು ತಡೆದರು. ಥಟ್ಟೆಯ ಬಳಿ ಚೂರಿಯೊಂದು ಪತ್ತೆಯಾಗಿತ್ತು. ಆ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಯೊಬ್ಬ, ಥಟ್ಟೆಗೆ ಇಂತಹ ವಿಷಯಗಳ ಪರಿಹಾರ ಕ್ರಮಗಳಿಗೆ ನಿಮ್ಮ ನಾಯಕ ಸಾವರ್ಕರ್ ಬರಬೇಕು ಎಂದಾಗ, ಆತ 'ಈ ಗಾಂಧಿಗೆ ಸಾವರ್ಕರ್ ಏಕೆ ಬೇಕು? ನಮ್ಮ ಗೋಡ್ಸೆಯೊಬ್ಬನೇ ಸಾಕು' ಎಂದಿದ್ದನು ಎಂದು ರಾಜ್‌ಮೋಹನ್ ಗಾಂಧಿ ತಮ್ಮ ಪುಸ್ತಕದಲ್ಲಿ ತಿಳಿಸಿದ್ದಾರೆ.

ಕಲೆನ್‌ಬಾಕ್ ಸಾವು ತಂದ ಆಘಾತ-ಜಾತಿ ಕುರಿತು ಬದಲಾದ ಗಾಂಧಿ ನಿಲುವು - ಶಿಷ್ಯನಾದ ನಾಸ್ತಿಕವಾದಿ ಗೋರಾ

೧೯೪೪ರ ಅಂತ್ಯದ ಹೊತ್ತಿಗೆ ಮತ್ತೆ ಗಾಂಧಿಯವರ ಆರೋಗ್ಯ ಹದಗೆಡಲಾರಂಭಿಸಿತ್ತು. ಸೇವಾಗ್ರಾಮ ಯಾರಿಲ್ಲದೆ ಬಿಕೋ ಎನ್ನುತ್ತಿತ್ತು. ಅವರು ಮತ್ತೆ ರಾಜಾಜಿಯ ಸಲಹೆ ಮೇರೆಗೆ ಒಂದು ತಿಂಗಳು ಯಾವುದೇ ಚಟುವಟಿಕೆ-ಚಿಂತನೆಗಳಲ್ಲಿ ತೊಡಗದೆ ಸಂಪೂರ್ಣ ವಿಶ್ರಾಂತಿ ಪಡೆದರು. ಸ್ವಲ್ಪ ಚೇತರಿಸಿಕೊಂಡ ನಂತರ ಬಂಗಾಳದ ಕ್ಷಾಮಪೀಡಿತ ಪ್ರದೇಶಗಳಿಗೆ ಭೇಟಿ ನೀಡಬಯಸಿದರು. ಆದರೆ ಅವರ ೭೫ ವಯಸ್ಸಿನ ವೃದ್ಧಾಪ್ಯದಲ್ಲಿ ಮತ್ತು ಆರೋಗ್ಯ ಪೂರ್ಣ ಸುಧಾರಿಸದ ಈ ಸಂದರ್ಭದಲ್ಲಿ ಅದು ಬೇಡವೆಂಬ ಹಲವರ ಒತ್ತಾಯದ ಮೇರೆಗೆ ಆ ಬಯಕೆಯನ್ನು ಕೈಬಿಟ್ಟರು. ಆ ವರ್ಷವೂ ದೇಶಾದ್ಯಂತ ಬಿಗುವಿನ ವಾತಾವರಣ ಮುಂದುವರೆದಿದ್ದರೂ ಹಲವು ಕಡೆ ೧೯೪೫ರ ಜನವರಿ ೨೬ರಂದು ಜನ 'ಸ್ವಾತಂತ್ರ್ಯ ದಿನ'ವನ್ನು ಆಚರಿಸಿದ ಸುದ್ದಿ ತಿಳಿದು ಗಾಂಧಿ ಸ್ವಲ್ಪ ಗೆಲುವಾದರು. ಆದರೆ ಸ್ವಲ್ಪ ಕಾಲದಲ್ಲೇ ಗೆಳೆಯ ಕಲೆನ್‌ಬಾಕ್ ಜೊಹಾನ್ಸ್‌ಬರ್ಗ್‌ನಲ್ಲಿ ನಿಧನನಾದ ಸುದ್ದಿ ಕೇಳಿ ದುಃಖದಲ್ಲಿ ಮುಳುಗಿದರು. ಆತ ಅವರ ದ.ಆಫ್ರಿಕಾದ ಬದುಕಿನುದ್ದಕ್ಕೂ ಜೀವದ ಗೆಳೆಯನಾಗಿದ್ದುಕೊಂಡು ಅವರೆಲ್ಲ ಸಾಹಸ-ಹೋರಾಟಗಳಲ್ಲಿ ಮರುಮಾತಾಡದೆ ಭಾಗಿಯಾಗಿ, ಅವರಿಗೆ ಸದಾ ಅಂಟಿಕೊಂಡೇ ಇದ್ದ ಸಂಗಾತಿಯಾಗಿದ್ದ. ಆತ ಗಾಂಧಿಯವರೊಂದಿಗೆ ಭಾರತಕ್ಕೆ ಬಂದು, ಅವರೊಡನೆ ನೆಲೆಸುವ ಇಚ್ಛೆ ಹೊಂದಿ ಹೊರಟಿದ್ದನಾದರೂ, ಯುದ್ಧ ಅಡ್ಡಬಂದು ಆತನಿಗೆ ಈ ದೇಶಕ್ಕೆ ರಹದಾರಿ ಸಿಗದಂತಾಗಿತ್ತು. ಎರಡನೆಯ ಮಹಾಯುದ್ಧ ಆರಂಭವಾಗುವ ಸ್ವಲ್ಪ ಮುಂಚೆ, ಭಾರತಕ್ಕೆ ಬಂದು ಸ್ವಲ್ಪ ಕಾಲ ಸೇವಾಗ್ರಾಮದಲ್ಲಿ ತಂಗಿದ್ದನಾದರೂ ಯುದ್ಧ ಆರಂಭವಾದಾಗ ದೇಶ ಬಿಟ್ಟು ಹೋಗಬೇಕಾಯಿತು. ಈತನ ಸಾವಿನೊಂದಿಗೆ ಬದುಕಿನೊಡನೆಯ ಗಾಂಧಿಯವರ ಇನ್ನೊಂದು ಕೊಂಡಿ ಕಳಚಿದಂತಾಗಿತ್ತು.

ಆದರೆ ಇದೇ ಸಮಯದಲ್ಲಿ ಅವರಿಗೆ ಒಂದು ಸಂತೋಷದ ಸುದ್ದಿಯೂ ತಲುಪಿತ್ತು.

ಹರಿಲಾಲ ಈಗ ಮೈಸೂರಿನಲ್ಲಿ ವೈದ್ಯನಾಗಿದ್ದ ತನ್ನ ಮಗ ಕಾಂತಿಯ ಮನೆಯಲ್ಲಿ ನೆಲೆಸಿದ್ದಾನೆಂದು ತಿಳಿದು, ಅವರು ಅವನಿಗೆ ಅಲ್ಲಿಯೇ ನೆಮ್ಮದಿಯಿಂದ ನೆಲೆಸುವಂತೆ ತಿಳಿಸಿದರು. ಆದರೆ ಈ ಬಾರಿಯೂ ಅವನು ತನ್ನ ತಂದೆಯ ನಿರೀಕ್ಷೆಯನ್ನು ಹುಸಿಗೊಳಿಸಿ ಒಂದೆರಡು ತಿಂಗಳಲ್ಲೇ ಮೈಸೂರಿನಿಂದ ಕಾಣೆಯಾಗಿದ್ದ.

ಈ ಮಧ್ಯೆ ಗಾಂಧಿಯವರ ಅಭಿಮಾನಿ ಉದ್ಯಮಿ ಬಾಂಬೆಯ ಸಾರಾಭಾಯಿ ಅಂಬಾಲಾಲ್, ತಮ್ಮ ಗಿರಣಿಯಲ್ಲಿ ಈವರೆಗೆ (ನೂಲಿಗೆ ಎಂಜಲು ಸವರಬೇಕಾದ ಕಾರಣಕ್ಕೆ) ಅಸ್ಪೃಶ್ಯರಿಂದ ವಂಚಿತವಾಗಿದ್ದ ಹೆಚ್ಚಿನ ವೇತನದ ನೇಕಾರಿಕೆ ಉದ್ಯೋಗವನ್ನು ಅವರಿಗೆ ನೀಡುವುದಕ್ಕೆ ಮುನ್ನ ಪ್ರಯೋಗವಾಗಿ ಗಿರಣಿಯ ಉಪಹಾರ ಗೃಹದೊಳಕ್ಕೆ ಅಸ್ಪೃಶ್ಯರಿಗೂ ಪ್ರವೇಶ ನೀಡುವ ಕ್ರಮ ಕೈಗೊಂಡು ಸವರ್ಣೀಯ ಕಾರ್ಮಿಕರ ಗಲಭೆಯನ್ನು ಎದುರಿಸಿದ್ದರು. ಈ ವಿಷಯದಲ್ಲಿ ಅವರು ಗಾಂಧಿಯ ಮಧ್ಯಪ್ರವೇಶ ಕೋರಿದಾಗ ಅವರು ಅಂಬಾಲಾಲರ ಪ್ರಯತ್ನವನ್ನು ಬೆಂಬಲಿಸಿ ಕಾರ್ಮಿಕರಿಗೆ ಒಂದು ಮನವಿಯನ್ನು ಬರೆದುಕೊಟ್ಟಿದ್ದರು. ಇದೇ ಸಮಯದಲ್ಲಿ, ಈ ಹಿಂದೆ ಜಾತಿ ಪದ್ಧತಿ ಬಗ್ಗೆ ಗಾಂಧಿ ಬರೆದಿದ್ದ ಕಿರುಪುಸ್ತಕವನ್ನು ಮರುಮುದ್ರಿಸ ಬಯಸಿದ ಪ್ರಕಾಶಕರು, ಈ ಆವೃತ್ತಿಗೆ ಒಂದು ಮುನ್ನುಡಿ ಬರೆದುಕೊಡಲು ಕೇಳಿದಾಗ, ಅವರು ಅದನ್ನು ಮತ್ತೆ ಓದುವ ಮನಸ್ಸಿಲ್ಲವೆಂದು ಹೇಳಿ ಜಾತಿಪದ್ಧತಿ ಕುರಿತ ತಮ್ಮ ಹೊಸ ನಿಲುವನ್ನು ವಿವರಿಸುವ ಒಂದು ಹೊಸ ಬರಹವೊಂದನ್ನೇ ಬರೆದುಕೊಟ್ಟರು. ಅದರಲ್ಲಿ ಅವರು ಇಂದು ಇರುವುದು ಬ್ರಿಟಿಷರ ಸೇವೆ ಮಾಡುತ್ತಿರುವ ಶೂದ್ರ ವರ್ಣವೊಂದೇ; ಅದರಲ್ಲೂ ಮತ್ತೆ ಹರಿಜನ ಅಥವಾ ಅಸ್ಪೃಶ್ಯರೆಂಬ ಅತಿಶೂದ್ರ ಎಂಬ ವಿಂಗಡಣೆ ಮಾಡಿ, ಶಾಸ್ತ್ರಗ್ರಂಥಗಳನ್ನು ಉಲ್ಲೇಖಿಸಿ ತಾರತಮ್ಯವೆಸಗುವುದು ಧರ್ಮವೆನಿಸಿಕೊಳ್ಳದೆ ಅಧರ್ಮವೆನಿಸಿಕೊಳ್ಳುವುದು ಎಂದು ಹೇಳಿದ್ದರು. ಅಲ್ಲದೆ ತಾವು ಈ ವಿಷಯದಲ್ಲಿ, ಹಿಂದಿನ ನಿಲುವಿಗಿಂತ ಎಷ್ಟು ದೂರ ಸಾಗಿ ಬಂದಿದ್ದೇನೆ ಎಂಬುದನ್ನೂ ಗಮನಿಸಬೇಕೆಂದು ಸೂಚಿಸಿದ್ದರು.

ಗಾಂಧಿಯವರ ಈ ಬದಲಾದ ನೀತಿಯ ಹಿಂದಿದ್ದ ಹಲವು ಕಾರಣಗಳಲ್ಲಿ ೧೯೪೪ರ ನವೆಂಬರ್‌ನಲ್ಲಿ ಅವರ ಆಶ್ರಮಕ್ಕೆ ಬಂದು ಆಶ್ರಮವಾಸಿಯೇ ಆದ ಆಂಧ್ರದ ನಾಸ್ತಿಕವಾದಿ ಗೋರಾ (ಗೋಪರಾಜು ರಾಮಚಂದ್ರ ರಾವ್) ಅವರೊಡನೆ ಅವರು ನಡೆಸಿದ ನಿರಂತರ ಸಂವಾದದ ಪಾತ್ರವೂ ಇದ್ದೀತು. ಜಾತಿಪದ್ಧತಿ, ಅಸ್ಪೃಶ್ಯತೆ ಮತ್ತು ಮೂಢ ನಂಬಿಕೆಗಳ ವಿರುದ್ಧ ಬಂಡೆದ್ದು ನಿರೀಶ್ವರವಾದಿಯಾದ ಪರಿಣಾಮವಾಗಿ ತಮ್ಮ ಉಪನ್ಯಾಸಕ ವೃತ್ತಿಯಿಂದ ಹೊರಹಾಕಲ್ಪಟ್ಟಿದ್ದ ಇವರು ೧೯೩೦ರಿಂದಲೂ ಗಾಂಧಿಯೊಂದಿಗೆ ಪತ್ರ ವ್ಯವಹಾರ ಮಾಡುತ್ತಾ ಬಂದಿದ್ದು ಈಗ ಮನುಷ್ಯ ನಾಸ್ತಿಕನಾಗಿದ್ದೂ ನೈತಿಕನಾಗಿರಲು ಸಾಧ್ಯ ಎಂದು ಅವರಿಗೆ ಮನವರಿಕೆ ಮಾಡಿ ಅವರ ಮೆಚ್ಚಿನ ಶಿಷ್ಯರಲ್ಲೊಬ್ಬರಾಗಿದ್ದರು.

ಬಿಡುಗಡೆಗೊಂಡ ಕಾಂಗ್ರೆಸ್ ನಾಯಕರು–ಮುಂದುವರೆದ ಜಿನ್ನಾ ಹಠ

ಆಶ್ಚರ್ಯವೆಂಬಂತೆ ೧೯೪೫ರ ಜೂನ್ ೧೪ರಂದು ಸರ್ಕಾರ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಬಿಡುಗಡೆ ಮಾಡಿತು. ಯುದ್ಧದಲ್ಲಿ ಬ್ರಿಟನ್ ಮತ್ತು ಮಿತ್ರ ದೇಶಗಳು ಮೇಲುಗೈ ಸಾಧಿಸತೊಡಗಿದ್ದು, ಯುದ್ಧ ಶೀಘ್ರದಲ್ಲೇ

ಅಂತ್ಯಗೊಳ್ಳುವುದೆಂಬ ನಿರೀಕ್ಷೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿತ್ತು ಎನ್ನಬಹುದು. ವೈಸ್‌ರಾಯ್ ವೇವೆಲ್, ಪ್ರಧಾನಿ ಚರ್ಚಿಲ್‌ನ ಇಚ್ಛೆಗೆ ವಿರುದ್ಧವಾಗಿ ಕ್ರಮ ಕೈಗೊಂಡಿದ್ದು, ಯುದ್ಧ ಸಾಮ್ರಾಜ್ಯಶಾಹಿಯನ್ನೂ ಅಂತ್ಯಗೊಳಿಸುವುದೆಂಬ ಅರಿವಿನಲ್ಲಿ, ಭಾರತಕ್ಕೆ ಸಂಬಂಧಪಟ್ಟಂತೆ ಬ್ರಿಟನ್‌ನ ಆಸಕ್ತಿಗಳನ್ನು ಎಷ್ಟು ಸಾಧ್ಯವೋ ಅಷ್ಟನ್ನೂ ರಕ್ಷಿಸಿಕೊಳ್ಳುವುದು ಇದರ ಉದ್ದೇಶವಾಗಿತ್ತು. ಬ್ರಿಟನ್‌ನೊಡನೆ ಸಂಬಂಧ ಕಡಿದುಕೊಳ್ಳಲು ಹೆಚ್ಚಿನ ಸಂಖ್ಯೆಯ ಭಾರತೀಯರು ಕಾತುರರಾಗಿದ್ದಾರೆಂದೂ, ಬ್ರಿಟಿಷ್ ಸೈನ್ಯದಲ್ಲೂ ಈ ಬಗ್ಗೆ ಸಹಾನುಭೂತಿ ಹೆಚ್ಚುತ್ತಿರುವುದಾಗಿಯೂ ವೈಸ್‌ರಾಯ್‌ಗೆ ವರದಿಗಳು ತಲುಪಿದ್ದವು. ಹಾಗಾಗಿಯೇ ಆತ ಭಾರತದ ಎಲ್ಲ ಸಾರ್ವಜನಿಕ ಅಭಿಪ್ರಾಯಗಳ ಪ್ರತಿನಿಧಿಗಳ ಸಮ್ಮೇಳನವೊಂದನ್ನು ಸಿಮ್ಲಾದಲ್ಲಿ ಕರೆದು ಅದರ ಉದ್ದೇಶವನ್ನು ಹೀಗೆ ವಿವರಿಸಿದ್ದ: ಭಾರತದ ಸದ್ಯದ ಸಮಸ್ಯೆಯನ್ನು ಇತ್ಯರ್ಥಪಡಿಸಲು ಇಲ್ಲಿನ ಕೋಮು ವಿವಾದವೇ ಒಂದು ದೊಡ್ಡ ಅಡಚಣೆಯಾಗಿದ್ದು, ಅದರ ಪರಿಹಾರಕ್ಕಾಗಿ ಭಾರತೀಯರಿಂದಷ್ಟೇ ಕೂಡಿದ ವೈಸ್‌ರಾಯ್ ಸಲಹಾ ಮಂಡಳಿಯನ್ನು ರಚಿಸುವುದು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರು ತಮ್ಮ ಬಿಡುಗಡೆಯಾದ ಕೂಡಲೇ, ಪಂಚಾಗ್ನಿಗೆ ತಮ್ಮ ವಾಸ್ತವ್ಯ ಬದಲಾಯಿಸಿದ್ದ ಗಾಂಧಿಯವರನ್ನು ಭೇಟಿಯಾದರು. ಅವರಿಗೆಲ್ಲ ಬಿಡುಗಡೆ ಒಂದು ಅನಿರೀಕ್ಷಿತ ಸಂಭ್ರಮವನ್ನು ತಂದಿತ್ತು. ಮೂರು ವರ್ಷಗಳ ಸೆರೆವಾಸ ಅವರನ್ನು ಮನುಷ್ಯ ಪ್ರಪಂಚದಿಂದಲೇ ಬೇರ್ಪಡಿಸಿ, ತಮ್ಮ ಬದುಕಿನ ಭವಿಷ್ಯದ ಬಗ್ಗೆ ಆತಂಕ ಸೃಷ್ಟಿಸಿತ್ತು. ಇದ್ದುದರಲ್ಲಿ ಪಟೇಲರಷ್ಟೇ 'ಭಾರತ ಬಿಟ್ಟು ತೊಲಗಿ' ನಿರ್ಣಯ ಒಂದು ರಚನಾತ್ಮಕ ಹೆಜ್ಜೆ ಎಂದು ಭಾವಿಸಿ ಆಸೆ ಕಳೆದುಕೊಂಡಿರಲಿಲ್ಲ ಎನ್ನಬಹುದು. ಗಾಂಧಿ ಸಿಮ್ಲಾ ಸಮ್ಮೇಳನಕ್ಕೆ ತಾವು ಆಹ್ವಾನಿತರಾಗಿದ್ದರೂ, ವಿಧ್ಯುಕ್ತವಾಗಿ ಭಾಗವಹಿಸುವುದಿಲ್ಲವೆಂದು ಆಝಾದರನ್ನು ಪಕ್ಷದ ನಿಯೋಗದ ನೇತೃತ್ವ ವಹಿಸಬೇಕೆಂದು ಸೂಚಿಸಿದರು. ಆಝಾದ್‌ರ ಹೆಸರು ಆಗ ಆಹ್ವಾನಿತರ ಪಟ್ಟಿಯಲ್ಲಿ ಇರಲಿಲ್ಲವಾದ್ದರಿಂದ ಸ್ವತಃ ಗಾಂಧಿಯವರೇ ಈ ಲೋಪದ ಬಗ್ಗೆ ವೈಸ್‌ರಾಯ್‌ಗೆ ಪತ್ರ ಬರೆದು, ಅವರ ಹೆಸರು ಆಹ್ವಾನಿತರ ಪಟ್ಟಿಯಲ್ಲಿ ಸೇರುವಂತೆ ನೋಡಿಕೊಂಡರು. ಹೀಗೆ ಗಾಂಧಿ ನಿಧಾನವಾಗಿ ಕಾಂಗ್ರೆಸ್‌ನ ನಿರ್ಣಾಯಕ ಜವಾಬ್ದಾರಿಗಳಿಂದ ಕಳಚಿಕೊಳ್ಳುವ ಪ್ರಯತ್ನ ಮಾಡಿದ್ದರು. ಆದರೆ ಸಂಪರ್ಕ ಕಳೆದುಕೊಳ್ಳಲಿಚ್ಛಿಸದೆ ಸಿಮ್ಲಾಗೆ ಹೋಗಿ, ಹತ್ತಿರದ ಮೇನರ್ ಎಂಬ ಹಳ್ಳಿಯಲ್ಲಿದ್ದ ರಾಜಕುಮಾರಿ ಅಮೃತಾ ಕೌರ್ ಅವರ ಕುಟೀರದಲ್ಲಿ ಇಳಿದುಕೊಂಡರು. ಅಲ್ಲಿ ಬಂದು ತಮ್ಮನ್ನು ಭೇಟಿ ಮಾಡಿದ ಕಾಂಗ್ರೆಸ್ ನಿಯೋಗಕ್ಕೆ ಹೊಸದಾಗಿ ರಚಿತವಾಗಿರುವ ವೈಸ್‌ರಾಯ್ ಮಂಡಳಿಯಲ್ಲಿ ಹಿಂದೂ-ಮುಸ್ಲಿಮರ ಸಮಾನ ಪ್ರಾತಿನಿಧ್ಯ, ಇತರೆ ಅಲ್ಪಸಂಖ್ಯಾತ ಸಮುದಾಯಗಳ ಮತ್ತು ವ್ಯಕ್ತಿಗತ ಪ್ರತಿಭಾಶಾಲಿಗಳ ಪ್ರಾತಿನಿಧ್ಯಕ್ಕೆ ತೊಡಕಾಗದಂತೆ ನೋಡಿಕೊಳ್ಳಲು ಹೇಳಿದರು.

ಆದರೆ ಜುಲೈ ೧೪ರಂದು ಮುಕ್ತಾಯವಾದ ಈ ಸಮ್ಮೇಳನ ಒಮ್ಮತ ಸಾಧಿಸಲು ವಿಫಲವಾಗಿತ್ತು. ಅದಕ್ಕೆ ಮುಖ್ಯ ಕಾರಣ ವೈಸ್‌ರಾಯ್ ಮಂಡಳಿಯಲ್ಲಿ ಇರಬಹುದಾದ ಎಲ್ಲ ಮುಸ್ಲಿಮರೂ ಮುಸ್ಲಿಂ ಲೀಗ್ ನಾಮಕರಣ ಮಾಡಿದವರೇ ಆಗಿರಬೇಕೆಂಬ ಜಿನ್ನಾರ ಹಠವೇ ಆಗಿತ್ತು. ಈ ಸಮ್ಮೇಳನದಲ್ಲಿ ಜಿನ್ನಾ ಎಷ್ಟು ಕಠಿಣರಾಗಿದ್ದರೆಂದರೆ,

ಕಾಂಗ್ರೆಸ್ ನಿಯೋಗದ ನಾಯಕರಾಗಿದ್ದ ಆಜ಼ಾದರಿಗಾಗಲೀ ಅಥವಾ ಅದರ ಸದಸ್ಯರಾಗಿದ್ದ ವಾಯುವ್ಯ ಗಡಿ ಪ್ರಾಂತ್ಯದ ಡಾ. ಖಾನ್ ಸಾಹೇಬರಿಗಾಗಲೀ ಹಸ್ತಲಾಘವ ನೀಡಲು ನಿರಾಕರಿಸಿದ್ದರು. ಖಾನ್ ಸಾಹೇಬರೀಗ ಅವರ ಪ್ರಾಂತ್ಯದಲ್ಲಿ ಮುಸ್ಲಿಂ ಲೀಗ್ ಇತ್ತೀಚೆಗೆ ಅಪಮಾರ್ಗದಿಂದ ರಚಿಸಿಕೊಂಡಿದ್ದ ಸರ್ಕಾರವನ್ನು ಬೀಳಿಸಿ ತಾವು ಪ್ರಧಾನಿಯಾಗುವ ಹಾದಿಯಲ್ಲಿದ್ದರು.

ಸ್ವತಂತ್ರರಾದ ಪಟೇಲ್–ಸಡಿಲಗೊಂಡ ಗಾಂಧಿ ಹಿಡಿತ

ಅದೇನೇ ಇರಲಿ, ಈ ಸಮ್ಮೇಳನದ ವೈಫಲ್ಯವನ್ನು ಮುಸ್ಲಿಂ ಲೀಗ್ ಮೇಲೆ ಹಾಕಬಾರದೆಂಬ ಲಂಡನ್ ಸರ್ಕಾರದ ಸೂಚನೆ ಮೇರೆಗೆ ಅದರ ಜವಾಬ್ದಾರಿಯನ್ನು ವೈಸ್‌ರಾಯ್ ತಾವೇ ವಹಿಸಿಕೊಂಡರು. 'ಭಾರತ ಬಿಟ್ಟು ತೊಲಗಿ' ಚಳುವಳಿಯ ಸಂದರ್ಭದಲ್ಲಿ ಮುಸ್ಲಿಂ ಲೀಗ್ ತನಗೆ ನೀಡಿದ ಬೆಂಬಲವನ್ನು ಬ್ರಿಟಿಷ್ ಸಾಮ್ರಾಜ್ಯ ಕಳೆದುಕೊಳ್ಳಲು ಇಷ್ಟಪಡಲಿಲ್ಲ. ಆದರೆ ಈ ಸಮ್ಮೇಳನದ ವೈಫಲ್ಯದ ಒಂದು ನಿರ್ಣಾಯಕ ಪರಿಣಾಮವೆಂದರೆ ಪಟೇಲರು, ಗಾಂಧಿಯವರನ್ನು ತಮ್ಮ ಮಾರ್ಗದರ್ಶಿ ಎಂದು ಇನ್ನು ಮುಂದೆ ಸಾರಾಸಗಟಾಗಿ ಒಪ್ಪಿಕೊಂಡು ನಡೆಯದಿರಲು ನಿರ್ಧರಿಸಿದ್ದು. ಪಟೇಲರ ಪ್ರಕಾರ ಸಮ್ಮೇಳನದಲ್ಲಿನ ಜಿನ್ನಾರ ಹಠಕ್ಕೆ ಗಾಂಧಿ ಇತ್ತೀಚೆಗೆ ಅವರೊಂದಿಗೆ ಮಾತುಕತೆ ನಡೆಸಲು ಸತತ ಪ್ರಯತ್ನ ಮಾಡುತ್ತಾ, ಅವರಿಗೆ ಸಲ್ಲದ ವಿಶೇಷ ಮಾನ್ಯತೆ ಒದಗಿಸಿದ್ದುದೇ ಆಗಿತ್ತು. ಈ ಮಾತುಕತೆಗಳಲ್ಲಿ ಗಾಂಧಿ ಜಿನ್ನಾರಿಗೇನೂ ಯಾವ ವಿಷಯದಲ್ಲೂ ಮಣಿದಿರಲಿಲ್ಲ ಎಂಬುದು ಬೇರೆ ಮಾತಾಗಿತ್ತಾದರೂ, ಪಟೇಲರು ಅಹಮದ್‌ನಗರದ ಕೋಟೆಯ ಸೆರೆಮನೆಯ ಬಂದಿಯಾಗಿ ತಮ್ಮ ಸಹಬಂದಿಗಳೊಡನೆ, ಗಾಂಧಿ ಬಗ್ಗೆ ಇನ್ನು ಮುಂದೆ ತಳೆಯಬೇಕಾದ ನಿಲುವಿನ ಬಗ್ಗೆ ಬಂದಿದ್ದ ತೀರ್ಮಾನವನ್ನು ಜಾರಿಗೆ ತರಲು ಇದೊಂದು ನೆಪವಾಗಿ ಒದಗಿದಂತಿತ್ತು. ಗಾಂಧಿ ಕೂಡ ಇದನ್ನು ಗಮನಿಸಿ, ಪಟೇಲರು ತಮ್ಮನ್ನು ಬತೇರಿಯೇರಿ ಬೇಕಾದರೂ ಖಂಡಿಸಲು ಸ್ವತಂತ್ರರು ಎಂದು ತಿಳಿಸಿದ್ದರು. ಗಾಂಧಿ ಪ್ರಕಾರ ಈ ಸಮ್ಮೇಳನದ ವೈಫಲ್ಯಕ್ಕೆ ಜಿನ್ನಾರ ಹಠಕ್ಕಿಂತ ಹೆಚ್ಚಾಗಿ ಬ್ರಿಟಿಷ್ ಸರ್ಕಾರದಲ್ಲಿನ ಅಧಿಕಾರಶಾಹಿಗೆ ಅಧಿಕಾರ ಹಸ್ತಾಂತರದ ಬಗ್ಗೆ ಪ್ರಾಮಾಣಿಕ ಬದ್ಧತೆ ಇಲ್ಲದಿದ್ದುದು ಕಾರಣ.

ಆದರೆ ಸ್ವತಃ ವೈಸ್‌ರಾಯ್ ವೇವೆಲ್ ಈ ಸಮ್ಮೇಳನದ ವೈಫಲ್ಯದ ಬಗ್ಗೆ ಲಂಡನ್ ಸರ್ಕಾರಕ್ಕೆ ಹೀಗೆ ವರದಿ ಮಾಡಿದ್ದರು: 'ಈ ವೈಫಲ್ಯಕ್ಕೆ ಜಿನ್ನಾರ ಹಠಮಾರಿತನವೇ ಕಾರಣವಾಗಿದ್ದರೂ, ಅದರ ಹಿಂದೆ ಜಿನ್ನಾರ ಬೆಂಬಲಿಗರೇನೂ ಅಲ್ಲದ ಇತರೆ ಗುಂಪುಗಳ ನಾಯಕರಲ್ಲಿ ಇರುವ ಹಿಂದೂ ಪ್ರಾಬಲ್ಯದ ಆಡಳಿತ ಆತಂಕವನ್ನು ನಾವು ನಿರಾಕರಿಸಲಾಗದು.'

ಇದೆಲ್ಲದರ ಪರಿಣಾಮವೆಂದರೆ ಭಾರತದ ಸಾರ್ವಜನಿಕ ವ್ಯವಹಾರಗಳ ವಿಷಯದಲ್ಲಿ ಕಳೆದ ಮೂರು ದಶಕಗಳ ಕಾಲ ಗಾಂಧಿ ಸಾಧಿಸಿದ್ದ ಹಿಡಿತ ನಿಧಾನವಾಗಿ ಸಡಿಲಗೊಳ್ಳಲಾರಂಭಿಸಿತ್ತು. ಇದಕ್ಕೂ ಮುಖ್ಯವಾದ ಸಂಗತಿ ಎಂದರೆ ಇದಕ್ಕೆ ಕಾಂಗ್ರೆಸ್ ಪಕ್ಷದ ನಿಲುವೂ ಪೂರಕವಾಗತೊಡಗಿತ್ತು.

■

೮೭
ಸ್ವರಾಜ್ಯದ ಹಾದಿಯ ಅಕ್ಕಪಕ್ಕದ ನೋಟಗಳು

ಪರ್ಲ್ ಹಾರ್ಬರ್ ಮೇಲೆ ಜಪಾನ್ ೧೯೪೧ರ ಡಿಸೆಂಬರ್ ೭ರಂದು ಬಾಂಬ್ ಹಾಕಿದ ಹಂತದಿಂದಾಚೆಗೆ ಅಮೆರಿಕವೂ ಬ್ರಿಟನ್ ಜೊತೆ ಸೇರಿದ ಕಾರಣ ಯುದ್ಧದಲ್ಲಿ ಮಿತ್ರ ರಾಷ್ಟ್ರಗಳ ಮೇಲುಗೈ ಮುಂದುವರೆದು, ೧೯೪೫ರ ಆಗಸ್ಟ್ ೬ರಂದು ಜಪಾನ್‌ನ ಹಿರೋಶಿಮಾ ನಾಗಸಾಕಿಗಳ ಮೇಲೆ ಅಮೆರಿಕಾದಿಂದ ಅಣುಬಾಂಬುಗಳು ಬಿದ್ದ ನಂತರ ಯುದ್ಧ ಮುಗಿದಿತ್ತು. ಜಪಾನ್ ಅಮೆರಿಕಾಕ್ಕೆ ಶರಣಾಗಿತ್ತು. ಹಿಟ್ಲರ್ ಅಸಹಾಯಕನಾಗಿ ಆತ್ಮಹತ್ಯೆ ಮಾಡಿಕೊಂಡಿದ್ದ. ಆದರೆ ಯುದ್ಧದ ಈ ವಿಧ್ಯುಕ್ತ ಅಂತ್ಯದ ಒಂದು ತಿಂಗಳ ಮೊದಲೇ ಬ್ರಿಟನ್‌ನಲ್ಲಿ ಒಂದು ದೊಡ್ಡ ರಾಜಕೀಯ ಬಾಂಬ್ ಸ್ಫೋಟಿಸಿತ್ತು. ಜುಲೈನಲ್ಲಿ ಸಂಸತ್ತಿಗೆ ನಡೆದ ಚುನಾವಣೆಗಳಲ್ಲಿ ಯುದ್ಧದ ರಾಜಕೀಯ ಸೇನಾನಿ ಎಂದೇ ಖ್ಯಾತನಾಗಿದ್ದ ಪ್ರಧಾನಿ ಚರ್ಚಿಲ್‌ನನ್ನು ಬ್ರಿಟಿಷ್ ಮತದಾರರು ಸೋಲಿಸಿದ್ದರು! ಅವರ ಕನ್ಸರ್ವೆಟೀವ್ ಪಕ್ಷ ಭಾರೀ ಸೋಲಿಗೆ ಗುರಿಯಾಗಿತ್ತು. ಬ್ರಿಟಿಷ್ ಜನತೆ ದೇಶದ ಯುದ್ಧೋತ್ತರ ಆರ್ಥಿಕತೆಯ ಪುನರ್ನಿರ್ಮಾಣಕ್ಕಾಗಿ, ಕಲ್ಯಾಣ ರಾಜ್ಯದ ಸಮಾಜವಾದಿ ತತ್ವವನ್ನು ನಂಬಿದ್ದ ಲೇಬರ್ ಪಕ್ಷಕ್ಕೆ ಬಹುಮತ ನೀಡಿತ್ತು. ಭಾರತಕ್ಕೆ ಸ್ವಾತಂತ್ರ್ಯ ನೀಡುವುದರ ಪರ ಇದ್ದ ಕ್ಲೆಮೆಂಟ್ ಆ್ಯಟ್ಲೀ ಪ್ರಧಾನ ಮಂತ್ರಿಯಾಗಿ ಆಯ್ಕೆಯಾಗಿದ್ದರು. ಅವರ ನೀತಿಯ ಪ್ರಕಾರ ಭಾರತಕ್ಕೆ ಸ್ವಾತಂತ್ರ್ಯ ನೀಡುವ ಪ್ರಕ್ರಿಯೆಯ ಮೊದಲ ಹೆಜ್ಜೆಯಾಗಿ ಪ್ರಾಂತೀಯ ಮತ್ತು ಕೇಂದ್ರ ಶಾಸನ ಸಭೆಗಳಿಗೆ ಪ್ರತಿನಿಧಿಗಳನ್ನು ಆಯಲು ಚುನಾವಣೆಗಳನ್ನು ಘೋಷಿಸಲಾಯಿತು. ತಮ್ಮ ಹೆಂಡತಿಯ ಉಪನಾಮವನ್ನು ತಮ್ಮ ಹೆಸರಿಗೆ ಜೋಡಿಸಿಕೊಂಡಿದ್ದ ಸ್ತ್ರೀವಾದಿ ಸಮಾಜವಾದಿ ಎಂದೇ ಹೆಸರಾಗಿದ್ದ ಫೆಡ್ರಿಕ್ ಪೆಥಿಕ್-ಲಾರೆನ್ಸ್‌ರನ್ನು ಭಾರತದ ವ್ಯವಹಾರಗಳ ವಿದೇಶ ಕಾರ್ಯದರ್ಶಿಯನ್ನಾಗಿ ನೇಮಿಸಲಾಯಿತು.

೧೯೪೫ರಲ್ಲಿ ಪ್ರಾಂತೀಯ ಶಾಸನ ಸಭೆಗಳಿಗೂ, ೧೯೪೬ರ ಜನವರಿಯಲ್ಲಿ ಕೇಂದ್ರ ಶಾಸನ ಸಭೆಗೂ ಚುನಾವಣೆಗಳನ್ನು ನಡೆಸಲಾಗುವುದೆಂದು ವೈಸ್‌ರಾಯ್ ವೇವೆಲ್ ಘೋಷಿಸಿದರು. ಚುನಾವಣೆಯ ನಂತರದಲ್ಲೇ ಹೊಸ ಸಂವಿಧಾನ ರಚನೆಯ ಪ್ರಕ್ರಿಯೆಯೂ ಆರಂಭವಾಗುವುದೆಂದೂ ಅವರು ಭರವಸೆ ನೀಡಿದರು. ಹಾಗಾಗಿ ಈಗ ನಡೆಯಲಿರುವುದು ಮಧ್ಯಂತರ ಸರ್ಕಾರಗಳ ರಚನೆಗಾಗಿ ಚುನಾವಣೆಗಳಾಗಿದ್ದವು.

ಸ್ವರಾಜ್ಯದ ಸ್ವರೂಪ: ನೆಹರೂಗೆ ಗಾಂಧಿ ಹೇಳಿದ ಶಾಶ್ವತ ಅರ್ಥಶಾಸ್ತ್ರದ ಪಾಠಗಳು

ಚುನಾವಣೆಯ ಸಂಬಂಧವಾಗಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸೆಪ್ಟೆಂಬರ್‌ನಲ್ಲಿ ಪೂನಾದಲ್ಲಿ ಸಭೆ ಸೇರಿತು. ಈ ಸಭೆಯಲ್ಲಿ ಚುನಾವಣಾ ಪ್ರಣಾಳಿಕೆಯನ್ನು ಸಿದ್ಧಪಡಿಸುವ ಜವಾಬ್ದಾರಿಯನ್ನು ನೆಹರೂ ಅವರಿಗೆ ನೀಡಲಾಯಿತು. ಚುನಾವಣೆಯ ನಿರ್ವಹಣೆಯ ಜವಾಬ್ದಾರಿ ಪಟೇಲರಿಗೆ ವಹಿಸಲಾಯಿತು. ಈಗ ದೇಶದ ಭವಿಷ್ಯದ ಪ್ರಧಾನ ಮಂತ್ರಿ ಯಾರೆಂಬುದು ಹೆಚ್ಚೂಕಡಿಮೆ ಸ್ಪಷ್ಟವಾಗಿತ್ತು. ಗಾಂಧಿ ಮೊದಲೇ ತಮ್ಮ ರಾಜಕೀಯ ಉತ್ತರಾಧಿಕಾರಿಯ ಬಗ್ಗೆ ವ್ಯಕ್ತಪಡಿಸಿದ್ದ ಇಂಗಿತಕ್ಕನುಗುಣವಾಗಿ ಅವರು ವಯಸ್ಸಾದ ಕಾಂಗ್ರೆಸ್ಸಿಗರ ನಡುವೆ ಚಿಕ್ಕವರೇ ಆಗಿದ್ದ ನೆಹರೂ ಅವರೇ ಆಗಲಿದ್ದರು. ಹೀಗಾಗಿ ಗಾಂಧಿ ಭವಿಷ್ಯದ ರಾಷ್ಟ್ರವನ್ನು ಕಟ್ಟುವ ಬಗೆಗಳ ಬಗ್ಗೆ ನೆಹರೂ ಅವರೊಂದಿಗೆ ಗಂಭೀರ ಚರ್ಚೆಯನ್ನು ಬಯಸಿದ್ದರು. ಏಕೆಂದರೆ, ಹಲವು ಸಾಮಾಜಿಕ-ರಾಜಕೀಯ ವಿಷಯಗಳಲ್ಲಿ ನೆಹರೂ ಗಾಂಧಿಯ ಬೆಂಬಲಿಗರೇ ಆಗಿದ್ದರೂ, ಆರ್ಥಿಕ ನೀತಿಯ ವಿಷಯದಲ್ಲಿ ತಮ್ಮಿಬ್ಬರ ನಡುವೆ ತೀವ್ರ ಭಿನ್ನಮತವಿತ್ತೆಂದು ಗಾಂಧಿಗೆ ಗೊತ್ತಿತ್ತು.

ಕೈಗಾರಿಕೀಕೃತ ಪಶ್ಚಿಮದ ದೇಶಗಳ ವ್ಯಾಪಕ ಪ್ರವಾಸ ಮಾಡಿದ್ದ ಮತ್ತು ವಿಜ್ಞಾನ-ತಂತ್ರಜ್ಞಾನಗಳ ಮಹಾ ಅಭಿಮಾನಿಯಾಗಿದ್ದ ನೆಹರೂ, ರಷ್ಯಾದ ಅಭಿವೃದ್ಧಿ ಮಾದರಿಯ ಬಗ್ಗೆ ಒಲವು ಹೊಂದಿದ್ದವರೂ ಆಗಿದ್ದರು. ಆದರೆ ಗಾಂಧಿ, ಹಳ್ಳಿಗಳ ರಾಷ್ಟ್ರವಾದ ಭಾರತಕ್ಕೆ ಆಧುನಿಕ ತಂತ್ರಜ್ಞಾನಗಳನ್ನು ಅನ್ವಯಿಸಿಕೊಂಡ ಸರಳ ಸಾಧನಗಳ ಅಭಿವೃದ್ಧಿ ಮಾದರಿ ಮಾತ್ರ ಜನರಿಗೆ ನ್ಯಾಯ ಒದಗಿಸುವುದೆಂದು ನಂಬಿದ್ದವರು. ಅವರ 'ಹಿಂದ್ ಸ್ವರಾಜ್' ಇದಕ್ಕೊಂದು ತಾತ್ವಿಕ ಮಾರ್ಗದರ್ಶಿಯಂತೆಯೇ ಇತ್ತು. ಹಾಗಾಗಿ ಅವರ ಪ್ರಕಾರ ದೇಶದ ಅಭಿವೃದ್ಧಿಯ ಮುಖ್ಯ ನೆಲೆ ಗ್ರಾಮವೇ ಆಗಬೇಕಿತ್ತು. ಈ ದಿಸೆಯಲ್ಲಿ ಅವರು ಜೆ.ಸಿ. ಕುಮಾರಪ್ಪನವರ ಮೂಲಕ ಶಾಶ್ವತ ಅರ್ಥಶಾಸ್ತ್ರ ಎಂಬ ಒಂದು ಹೊಸ ಅರ್ಥಶಾಸ್ತ್ರೀಯ ಸಿದ್ಧಾಂತವನ್ನೇ ಸಿದ್ಧಪಡಿಸಿದರಲ್ಲದೆ ಮಗನ್‌ವಾಡಿಯಲ್ಲಿನ ಖಾದಿ ಮತ್ತು ಗ್ರಾಮೋದ್ಯೋಗ ಸಂಘದ ಮೂಲಕ ಈ ಅರ್ಥಶಾಸ್ತ್ರದ ಅನ್ವಯ ಸಾಧನ-ಮಾದರಿಗಳನ್ನೂ ಸಿದ್ಧಪಡಿಸಿದ್ದರು. ಅಹಿಂಸೆ ಇದೆಲ್ಲದರ ಆಧಾರ ತತ್ವವಾಗಿತ್ತು. ಗಾಂಧಿಯವರ ಸ್ಫೂರ್ತಿಯಲ್ಲಿ ಕುಮಾರಪ್ಪನವರು ರೂಪಿಸಿದ್ದ ಶಾಶ್ವತ ಅರ್ಥಶಾಸ್ತ್ರದ ಪ್ರಕಾರ, ವಿಶ್ವವು ಒಂದು ನಿಯಮ ವ್ಯವಸ್ಥೆಯ ಪ್ರಕಾರ ನಡೆಯುತ್ತಿದ್ದು ಆ ನಿಯಮಗಳ ಅನುಸಾರವೇ ಮಾನವ ಚಟುವಟಿಕೆಗಳು ನಡೆದರೆ ಮಾತ್ರ ಮನುಷ್ಯನಿಗೆ, ಅವನ ಬದುಕಿನ ಆತ್ಯಂತಿಕ ಗುರಿಯಾದ ಶಾಂತಿ ದೊರೆಯಬಲ್ಲುದು. ಏಕೆಂದರೆ, ಈ ನಿಯಮಗಳ ವಿರುದ್ಧ ಹೋಗುವುದೇ ಹಿಂಸೆಯ ಮೂಲ. ಮನುಷ್ಯ ತನ್ನ ಜೀವನ ನಿರ್ವಹಣೆಗಾಗಿ ನಡೆಸುವ ಯಾವ ಚಟುವಟಿಕೆಯೂ ಇದಕ್ಕೆ ವ್ಯತಿರಿಕ್ತವಾಗಬಾರದು. ಅದರೆ ಅರ್ಥಶಾಸ್ತ್ರವೂ ಈ ನಿಯಮಗಳಿಗೆ ಬದ್ಧವಾಗಿರಬೇಕು. ಇಲ್ಲದಿದ್ದರೆ ಹಿಂಸೆ ಮತ್ತು ಅಶಾಂತಿ ಸಹಜ.

ಕುಮಾರಪ್ಪನವರ ಶಾಶ್ವತ ಅರ್ಥಶಾಸ್ತ್ರ-ಗಾಂಧಿಯವರ ಗ್ರಾಮ ಸ್ವರಾಜ್ಯ

ಆದರೆ ಆಧುನಿಕ ಅರ್ಥಶಾಸ್ತ್ರದ ಪ್ರಭಾವಕ್ಕೆ ಸಿಕ್ಕ ಮನುಷ್ಯ ಮೂಲಭೂತ

ಅಗತ್ಯಗಳನ್ನು ಮೀರಿ ಹೆಚ್ಚಿನ ಸುಖಗಳಿಗಾಗಿ ಪ್ರಕೃತಿಯ ನಿಯಮಗಳನ್ನು ಲೆಕ್ಕಿಸದೆ ಅದನ್ನು ತನ್ನ ಆಸ್ತಿಯಂತೆ ಲಾಭಕ್ಕಾಗಿ ಹೂಡಿಕೆಯಂತೆ ಬಳಸಿ ಹಲವು ರೂಪಗಳ ಹಿಂಸೆಗೆ ಕಾರಣನಾಗುತ್ತಿದ್ದಾನೆ. ಅದಕ್ಕೆ ಬದಲಾಗಿ, ಭೂಮಿಯನ್ನು ವಾಸಿಸಲು ಮಾತ್ರ ತಮಗೆ ವಿಶ್ವ ಶಕ್ತಿಯಿಂದ ದಕ್ಕಿರುವ ನೆಲೆಯೆಂದು ಭಾವಿಸಿ ಈ ವಾಸದ ಪಾವಿತ್ರ್ಯತೆ ಹಾಳಾಗದಂತೆ ಬದುಕಲು, ಅಂದರೆ ಯಾವ ಏಕ ಮಾತ್ರ ಶಾಶ್ವತ ಶಕ್ತಿಯ ಕೃಪೆಯಿಂದ ನಾವಿಲ್ಲಿ ಅಸ್ತಿತ್ವ ಪಡೆದಿದ್ದೇವೆಯೋ ಅದಕ್ಕೆ ವಿಧೇಯವಾಗಿ ನಮ್ಮ ಚಟುವಟಿಕೆಗಳನ್ನು ನಡೆಸಲು ಕಲಿಸುವ ಅರ್ಥಶಾಸ್ತ್ರವೇ ಶಾಶ್ವತ ಅರ್ಥಶಾಸ್ತ್ರ. ಇದೇ ನಿಜವಾದ ವಿಜ್ಞಾನವೂ ಹೌದು. ಹಾಗೇ ಮನುಷ್ಯ ತನ್ನ ವಾಸಸ್ಥಾನದ ಪ್ರಾಕೃತಿಕತೆಯನ್ನು ನಾಶ ಮಾಡದೆ, ತನ್ನ ಆಹಾರ, ವಸತಿ ಮತ್ತು ಬಟ್ಟೆಗಳನ್ನು ಹೇಗೆ ಪಡೆಯಬಹುದೆಂಬುದೇ ಈ ಶಾಶ್ವತ ಅರ್ಥಶಾಸ್ತ್ರದ ತಂತ್ರಜ್ಞಾನ. ಅಂದರೆ ಜೀವನ ಕ್ರಮ ಗ್ರಾಮಮೂಲದ್ದೇ ಆಗಿ ಉಳಿದು ನಗರದ ಕಲ್ಪನೆಯನ್ನು ನಿಯಂತ್ರಿಸುವುದೇ ಆಗಿತ್ತು. ಇದನ್ನೇ ಗಾಂಧಿ 'ಗ್ರಾಮ ಸ್ವರಾಜ್ಯ' ಎಂದು ಕರೆದದ್ದು. ಇದರ ರಾಜಕಾರಣವನ್ನೇ 'ಸ್ವದೇಶಿ' ಎಂದು ಕರೆದದ್ದು. ಈ ತತ್ವವನ್ನು ಒಂದು ಸಿದ್ಧಾಂತವಾಗಿ ರೂಪಿಸಿಕೊಟ್ಟಿದ್ದ ಜೆ.ಸಿ.ಕುಮಾರಪ್ಪ ಹೊಸ ಕಾಲದ ಬೇಡಿಕೆಗಳಿಗೆ ತಕ್ಕಂತೆ, ಆದರೆ ಪ್ರಕೃತಿಗೆ ಧಕ್ಕೆಯಾಗದಂತೆ ಇದನ್ನು ಸುಧಾರಿಸಿದರು. ಬಹುಶಃ ಈ ಹಿನ್ನೆಲೆಯಲ್ಲೇ ಗಾಂಧಿಯವರ 'ಈ ಭೂಮಿ ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲುದೇ ಹೊರತು ಎಲ್ಲರ ಆಸೆಗಳನ್ನಲ್ಲ' ಎಂಬ ಪ್ರಸಿದ್ಧ ಹೇಳಿಕೆ ರೂಪುಗೊಂಡದ್ದು.

ನೆಹರೂ ಅವರ ಪ್ರತಿವಾದ–ಆಧುನಿಕ ತಂತ್ರಜ್ಞಾನದ ಪ್ರತಿಪಾದನೆ

ಆದರೆ ನೆಹರೂ, ಇದನ್ನೆಲ್ಲ ಎಷ್ಟು ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳಲೆತ್ನಿಸಿದರೋ ತಿಳಿಯದು. ಏಕೆಂದರೆ ಗಾಂಧಿ ತನ್ನ 'ಹಿಂದ್ ಸ್ವರಾಜ್ಯ' ಕೃತಿಯ ನೆನಪು ಮಾಡಿದಾಗ, ಅವರು ಅದರ ಮಸುಕು ನೆನಪನ್ನಷ್ಟೇ ಮಾಡಿಕೊಂಡು ಅದು ಇಂದಿನ ಜಗತ್ತಿನಲ್ಲಿ ಅಪ್ರಸ್ತುತ ಎನ್ನುತ್ತಾರೆ. ಹೆಚ್ಚುತ್ತಿರುವ ಜನಸಂಖ್ಯೆಯ ಮೂಲಭೂತ ಅಗತ್ಯಗಳನ್ನು ಪೂರೈಸಲು ಮತ್ತು ಮೂಡುತ್ತಿರುವ ಸ್ಪರ್ಧಾತ್ಮಕ ಜಗತ್ತಿನಲ್ಲಿ ದೇಶ ತನ್ನದೇ ಘನತೆ ಮತ್ತು ಸಾರ್ವಭೌಮತೆಯಿಂದ ಬಾಳಲು ಆಧುನಿಕ ವಿಜ್ಞಾನ ವಿಚಾರಗಳು ಮತ್ತು ತಂತ್ರಜ್ಞಾನದ ಸಾಧನ ಸಲಕರಣೆಗಳು ಅನಿವಾರ್ಯ ಎನ್ನುತ್ತಾರೆ. ಗಾಂಧಿ ಪ್ರಸ್ತಾಪಿಸುವ ಗ್ರಾಮವನ್ನು ಅವರು ಕೊಳಕು ಮತ್ತು ಮೂಢನಂಬಿಕೆಗಳಿಂದ ಕೂಡಿದ ಹಿಂದುಳಿದಿರುವಿಕೆಯ ಪ್ರತೀಕವಾಗಿದ್ದು, ಅವು ಭವಿಷ್ಯದ ಭಾರತದ ಅಭಿವೃದ್ಧಿಯ ಮೂಲ ಘಟಕಗಳಾಗಲಾರವು ಎಂದು ತಳ್ಳಿ ಹಾಕುತ್ತಾರೆ. ಆದರೆ ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳ ಅಗತ್ಯವನ್ನೂ ಒಪ್ಪುವ ಅವರು, ಅವನ್ನು ಹಳ್ಳಿ ಮತ್ತು ಸಣ್ಣ ಊರುಗಳಲ್ಲಿ ಸಹಕಾರಿ ತತ್ವದ ಆಧಾರದ ಮೇಲೆ ಸ್ಥಾಪಿಸಬಹುದು ಎನ್ನುತ್ತಾರೆ.

ಆದರೆ ಗಾಂಧಿ ನೆಹರೂಗೆ ಹೀಗೆ ಸ್ಪಷ್ಟಪಡಿಸುತ್ತಾರೆ: 'ನಾನು ಹೇಳುತ್ತಿರುವುದು ಸದ್ಯ ಇರುವ ಹಳ್ಳಿಯ ಬಗ್ಗೆ ಅಲ್ಲ. ಭವಿಷ್ಯದಲ್ಲಿ ನಾವು ನಿರ್ಮಿಸಬೇಕಾದ ಹಳ್ಳಿಯ ಬಗ್ಗೆ. ಅಲ್ಲಿ ಎಲ್ಲ ಮೂಲಭೂತ ನಾಗರಿಕ ಸೌಲಭ್ಯಗಳಿದ್ದು, ಜನ ಜಾಗೃತರಾಗಿರುತ್ತಾರೆ.' ಇಂತಹ ಹಳ್ಳಿ ಆರ್ಥಿಕವಾಗಿ ಮಾತ್ರವಲ್ಲ, ರಾಜಕೀಯವಾಗಿಯೂ ಸ್ವಾವಲಂಬಿಯಾಗಬೇಕೆಂಬ ತಮ್ಮ ಕೇಂದ್ರ ವಿಚಾರವನ್ನು ಹೀಗೆ ಮಂಡಿಸುತ್ತಾರೆ: 'ಪಾಲನೆ, ಪೋಷಣೆಯ ಎಲ್ಲ

ಸಾಧನ ಸಲಕರಣೆಗಳು ಜನರ ನೇರ ಹತೋಟಿಯಲ್ಲಿರಬೇಕು. ಅಂದರೆ ಕನಿಷ್ಠ ಸರ್ಕಾರ. ವ್ಯಕ್ತಿ ತನ್ನದೇ ಹತೋಟಿಯಲ್ಲಿ ಘನತೆಯಿಂದ ಇರಲು ಇದು ಅನಿವಾರ್ಯ. ಎಷ್ಟಾದರೂ ಜಗತ್ತು ಎಂದರೆ ವ್ಯಕ್ತಿಗಳಿಂದಾದದ್ದೇ ಅಲ್ಲವೆ?' ಗಾಂಧಿ, ಅಕ್ಟೋಬರ್-ನವೆಂಬರ್‌ನಲ್ಲಿ ನಡೆದ ಈ (ಪತ್ರ) ಸಂವಾದವನ್ನು, ತಮ್ಮ ಮತ್ತು ನೆಹರೂ ಅವರ ನಡುವಣ ಪ್ರೀತಿ ವಿಶ್ವಾಸಗಳನ್ನೆ ನೆಚ್ಚಿ ಮುಕ್ತಾಯಗೊಳಿಸುತ್ತಾರೆ.

ಸುಭಾಷರ ನಿಧನ-ಗಾಂಧಿಯವರ ಮತ್ತೊಂದು ಪ್ರವಾಸ

ಈ ಮಧ್ಯೆ ಸುಭಾಷ್‌ಚಂದ್ರ ಬೋಸರ ನಿಧನದ ಸುದ್ದಿ ಗಾಂಧಿಯವರಿಗೆ ಖಚಿತವಾಗಿ, ಅವರು ತಮ್ಮ ಇನ್ನೊಬ್ಬ ಕಿರಿಯ ಮಿತ್ರನ ಅಗಲಿಕೆಯ ನೋವಿಗೆ ತುತ್ತಾದರು. ಜಪಾನ್‌ನ ಸೋಲಿನ ನಂತರ ಆಗಸ್ಟ್ ೧೮ ರಂದು, ತೈವಾನ್‌ನಿಂದ ರಷ್ಯಾಗೆ ಹೊರಟಿದ್ದ ಬೋಸ್ ಅವರ ವಿಮಾನ ಆಕಸ್ಮಿಕಕ್ಕೆ ತುತ್ತಾಗಿ ಅವರು ಸಾವನ್ನಪ್ಪಿದ ಸುದ್ದಿಯನ್ನು ಆ ವಿಮಾನದ ಚಾಲಕ ಕರ್ನಲ್ ಹಬೀಬುರ್ ರೆಹಮಾನ್‌ರೆ ಖುದ್ದಾಗಿ ಗಾಂಧಿಗೆ ತಿಳಿಸುತ್ತಾರೆ. ಬೋಸ್, ಗಾಂಧಿಯವರ ಹೋರಾಟದ ಮಾರ್ಗದ ಬಗ್ಗೆ ಭಿನ್ನಾಭಿಪ್ರಾಯ ತಳೆದು ಬೇರೆ ಮಾರ್ಗವನ್ನೇ ಹಿಡಿದಿದ್ದರೂ, ತಮ್ಮ ಪ್ರಯತ್ನಗಳೆಲ್ಲ ಅವರಿಗೆ ಕಾಣಿಕೆ ಸಲ್ಲಿಸಲೆಂದೇ ನಡೆದಿರುವುದು ಎಂದು ಹೇಳುತ್ತಿದ್ದರು. ೧೯೪೪ರ ಜುಲೈ ೬ರಂದು ಆಗ್ನೇಯ ಏಷ್ಯಾದ ಅಜ್ಞಾತ ಸ್ಥಳವೊಂದರಿಂದ ರೇಡಿಯೋ ಭಾಷಣವನ್ನು 'ಮಹಾತ್ಮಾಜೀ' ಎಂದೇ ಸಂಬೋಧಿಸುತ್ತಾ ಆರಂಭಿಸಿ ಅವರಿಗೇ ಅರ್ಪಿಸಿದ್ದರು. 'ಭಾರತ ಬಿಟ್ಟು ತೊಲಗಿ' ಚಳುವಳಿ ಈ ಇಬ್ಬರನ್ನೂ ಹತ್ತಿರಕ್ಕೆ ತಂದಿತ್ತು.

ನಂತರ ಗಾಂಧಿ, ಚುನಾವಣೆಗಳನ್ನು ಕಾಂಗ್ರೆಸ್ಸಿಗರಿಗೇ ಬಿಟ್ಟು ತಾವು ಬಹುದಿನಗಳಿಂದ ಭೇಟಿ ನೀಡಬಯಸಿದ್ದ, ಆದರೆ ಅನಾರೋಗ್ಯದಿಂದ ಸಾಧ್ಯವಾಗದಿದ್ದ ಕ್ಷಾಮಪೀಡಿತ ಬಂಗಾಳದತ್ತ ಹೊರಟರು. ತಮ್ಮ ನಿಡುಗಾಲದ ಗೆಳೆಯ ಸತೀಶ್ಚಂದ್ರ ದಾಸ್‌ಗುಪ್ತ ಸ್ಥಾಪಿಸಿದ್ದ ಕಲ್ಕತ್ತಾ ಬಳಿಯ ಸೋದೇಪುರ ಆಶ್ರಮದಲ್ಲಿ ತಂಗಿ, ಕ್ಷಾಮ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಜನರನ್ನು ಮಾತನಾಡಿಸಿದರು, ಸಭೆಗಳನ್ನು ನಡೆಸಿದರು. 'ಭಾರತ ಬಿಟ್ಟು ತೊಲಗಿ' ಚಳುವಳಿಯ ಸಂದರ್ಭದಲ್ಲಿ ಪರ್ಯಾಯ ಸರ್ಕಾರವನ್ನೇ ರಚಿಸಿದ್ದ ಮಿಡ್ನಾಪುರ ಜಿಲ್ಲೆಗೂ ಭೇಟಿ ನೀಡಿದ ಅವರು, ಅಲ್ಲಿನ ಜನರ ಶೌರ್ಯ ಸಾಹಸಗಳನ್ನು ಮೆಚ್ಚಿದರಾದರೂ, ಹಿಂಸಾಚಾರದಿಂದ ಒಳ್ಳೆಯದಾಗದು ಎಂದರು. ನಂತರ ಅವರು ಕಲ್ಕತ್ತಾಗೆ ತೆರಳಿ ಪ್ರಾಂತ್ಯದ ಗವರ್ನರ್ ಕೇಸಿ ಅವರನ್ನು ಭೇಟಿ ಮಾಡಿ ಬಂಗಾಳದ ಸಂಕಷ್ಟಗಳ ಬಗ್ಗೆ ಹಲವು ಸುತ್ತಿನ ಮಾತುಕತೆಗಳನ್ನು ನಡೆಸಿದರು. ಗಾಂಧಿಯವರ ವಿಚಾರಗಳ ಬಗ್ಗೆ ಸಹಾನುಭೂತಿಯಿದ್ದ ಆ ಗವರ್ನರ್, ಗ್ರಾಮೋದ್ಯೋಗದ ಪೋಷಣೆಗೆ ತಾನು ಬದ್ಧ ಎಂದು ಭರವಸೆ ನೀಡಿದನು. ಗಾಂಧಿಯವರ ಬಗ್ಗೆ ಪೂಜ್ಯ ಭಾವನೆಯನ್ನೇ ಬೆಳೆಸಿಕೊಂಡ ಕೇಸಿ 'ಅವರಲ್ಲಿ ಸ್ತ್ರೀತನದ ಒಂದು ಸೆಳಕಿತ್ತು ಎಂದು ತನ್ನ ದಿನಚರಿಯಲ್ಲಿ ದಾಖಲಿಸುತ್ತಾನಲ್ಲದೆ ತಾನು ಗಮನಿಸಿದ ಇನ್ನೊಂದು ಅಂಶವನ್ನು ಹೀಗೆ ದಾಖಲಿಸಿದ್ದಾನೆ: 'ಪ್ರತಿ ಸಂಜೆ ನನ್ನ ನಿವಾಸಕ್ಕೆ ಬಂದು ಮಾತನಾಡಿ ಹಿಂದಿರುಗುವಾಗಲೂ ಹಿಂದೂ ಮುಸ್ಲಿಮರಿಬ್ಬರಿಂದಲೂ ಕೂಡಿದ್ದ ನನ್ನ ೧೫೦ಕ್ಕೂ ಹೆಚ್ಚಿದ್ದ ಸೇವಕರು ಒಟ್ಟುಗೂಡಿ ಅವರು ನಡೆದುಹೋಗುತ್ತಿದ್ದ ಮೊಗಸಾಲೆಯ

ಎರಡೂ ಬದಿ ಸಾಲಾಗಿ ನಿಂತು ಗೌರವಪೂರ್ವಕವಾಗಿ ವಂದಿಸುತ್ತಿದ್ದ ದೃಶ್ಯ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದಂತಿದೆ'

ಆದರೆ ಈ ಸಂದರ್ಭದಲ್ಲಿ ಗಾಂಧಿಯವರನ್ನು ಪೆಚ್ಚು ಮಾಡಿದ ಒಂದು ಘಟನೆಯೂ ನಡೆಯಿತು. ಗಾಂಧಿಯವರ ಬಂಗಾಳದ ಈ ಪ್ರವಾಸದಲ್ಲಿ ಅವರ ಜೊತೆಗೆ ದ.ಆಫ್ರಿಕಾದಿಂದ ಬಂದಿದ್ದ ಮಗ ಮಣಿಲಾಲನೂ ತನ್ನ ಗೆಳೆಯನೊಬ್ಬನೊಂದಿಗೆ ಬಂದಿದ್ದನು. ಗಾಂಧಿ ಅವರಿಬ್ಬರನ್ನೂ ಶಿಲ್ಲಾಂಗ್ ನಗರವನ್ನು ನೋಡಿ ಬರಲು ಕಳಿಸಿದ್ದರು. ಆ ನಗರದಲ್ಲಿ ಅವರು ತಂಗಲು ಹೋದ ಹೋಟೆಲ್‌ನಲ್ಲಿ 'ಬಿಳಿಯರಿಗೆ ಮಾತ್ರ ಪ್ರವೇಶ' ಎಂಬ ಫಲಕ ನೋಡಿ ಬೇಸರಗೊಂಡು ಕಲ್ಕತ್ತಾಗೆ ಬಂದ ಮೇಲೆ ಮಣಿಲಾಲ ಗಾಂಧಿಗೆ ಹೀಗೆ ಹೇಳಿದ, 'ನಮ್ಮ ದ.ಆಫ್ರಿಕಾವೇ ನಿಮ್ಮ ಭಾರತಕ್ಕಿಂತ ಹೆಚ್ಚು ಸುಸಂಸ್ಕೃತವಾಗಿದೆ'. ಇದನ್ನು ಕೇಳಿ ಗಾಂಧಿ ಪೆಚ್ಚಾದರಾದರೂ, ಮಣಿಲಾಲನ ಮಾತಿನಲ್ಲಿ ಒಂದು ತಪ್ಪಿತ್ತು ಎಂಬುದನ್ನು ನಾವು ಗಮನಿಸಬೇಕು. ಅದು ಆ ಸುಸಂಸ್ಕೃತ ದ.ಆಫ್ರಿಕಾ ಅವನದಾಗಿರದೆ, ಗಾಂಧಿಯದಾಗಿತ್ತು ಎಂಬುದು.

'ಜೀವಂತ ರಾಮ'ನ ದರ್ಶನ – ದೇವಾಲಯ ಪ್ರವೇಶಿಸಿದ ಗಾಂಧಿ

ಗಾಂಧಿ ಬಂಗಾಳದಿಂದ ಹೊರಟು ೧೯೪೬ ರ ಜನವರಿ ತಿಂಗಳಲ್ಲಿ ತಲುಪಿದ್ದು ಮದ್ರಾಸ್‌ನ್ನು. ಅಲ್ಲಿಗೆ ಅವರು ಹೋದದ್ದು, ದ.ಭಾರತದಲ್ಲಿ ಹಿಂದೂಸ್ತಾನಿಯನ್ನು ದೇಶದ ಸಂಪರ್ಕ ಭಾಷೆಯಾಗಿ ಪ್ರಚಾರ ಮಾಡುವ ಕೆಲಸಕ್ಕಾಗಿ. ಈ ಕೆಲಸಗಳ ಮಧ್ಯೆಯೇ ಅವರು ತೀವ್ರ ಅಸ್ವಸ್ಥರಾಗಿ ಹಾಸಿಗೆ ಹಿಡಿದಿದ್ದ ಎಸ್.ವಿ. ಶ್ರೀನಿವಾಸ ಶಾಸ್ತ್ರಿ ಅವರನ್ನು ಕಾಣಲು ಅವರಿದ್ದ ಆಸ್ಪತ್ರೆಗೆ ಹೋದರು. ಗಾಂಧಿ ಬಗ್ಗೆ ಶಾಸ್ತ್ರಿಗಳಿಗೆ ಹಲವು ತೀವ್ರ ಭಿನ್ನಾಭಿಪ್ರಾಯಗಳಿದ್ದುವಾದರೂ ಇತ್ತೀಚೆಗೆ ಅವರ ಬಗ್ಗೆ ಸದಭಿಪ್ರಾಯ ಮೂಡಲಾರಂಭಿಸಿತ್ತು. ಗಾಂಧಿಯನ್ನು ಕಂಡು ಭಾವಾವಿಷ್ಟರಾದ ಅವರು, 'ನನಗೆ ಇಂದು ಜೀವಂತ ರಾಮನ ದರ್ಶನವಾಗಿದೆ' ಎನ್ನುತ್ತಾ ಎದ್ದು ಅವರನ್ನು ತಬ್ಬಿಕೊಳ್ಳುವ ವಿಫಲ ಪ್ರಯತ್ನ ಮಾಡಿದರು. ಗಾಂಧಿ ಅವರನ್ನು ಸಂತೈಸುತ್ತಾ 'ಅಂತಹ ಹೋಲಿಕೆ ವಿಪರೀತವಾಯಿತು' ಎಂದಾಗ ಶಾಸ್ತ್ರಿಗಳು 'ನೀವು ನನ್ನ ಸ್ನೇಹಿತರಾದ ಮಾತ್ರಕ್ಕೆ, ನೀವು ಈಗ ಜಗತ್ತಿನ ಅತಿ ಶ್ರೇಷ್ಠ ವ್ಯಕ್ತಿ ಎಂಬುದು ಸುಳ್ಳಾಗುವುದಿಲ್ಲ' ಎಂದು ತಮ್ಮ ಮಾತನ್ನು ಸಮರ್ಥಿಸಿಕೊಂಡರು.

ಗಾಂಧಿ ಮದ್ರಾಸ್‌ನಿಂದ ನೇರ ಹೋದದ್ದು ೧೯೪೬ ರ ಫೆಬ್ರವರಿ ೩ ರಂದು ಮಧುರೈಗೆ. ಅಲ್ಲಿನ ಮೀನಾಕ್ಷಿ ದೇವಾಲಯ ಅರ್ಧ ಮನಸ್ಸಿನಲ್ಲೇ ತನ್ನ ಬಾಗಿಲುಗಳನ್ನು ಹರಿಜನರಿಗೆ ತೆರೆಯಲು ನಿರ್ಧರಿಸಿತ್ತು. ಅಲ್ಲಿ ಸೇರಿದ್ದ ಜನಸಮೂಹವನ್ನುದ್ದೇಶಿಸಿ ಮಾತನಾಡಿ, ತಾವು ತಮ್ಮ ಪ್ರಾರ್ಥನೆಯನ್ನು ಸದಾ ನೀಲಿ ಆಕಾಶದ ತಾರಸಿಯ ಕೆಳಗೆ ತೆರೆದ ಆವರಣದಲ್ಲಿ ಮಾಡುವುದಾದರೂ, ಇಂದು ದೇವಾಲಯದೊಳಗೆ ಸವರ್ಣೀಯರೊಂದಿಗೆ ಹರಿಜನರೂ ದೈವದರ್ಶನ ಮಾಡುವ ಸಾರ್ಥಕ ಘಳಿಗೆಗಳಲ್ಲಿ ಪಾಲ್ಗೊಳ್ಳಲು ತಾವು ದೇವಾಲಯದಲ್ಲಿ ಪ್ರಾರ್ಥನೆ ಸಲ್ಲಿಸಲು ಹೋಗುತ್ತಿರುವುದಾಗಿ ತಿಳಿಸಿದರು. ಆದರೆ ತಮ್ಮೊಂದಿಗೆ ದೇವಾಲಯದೊಳಕ್ಕೆ ಯಾರೂ ಬರಬಾರದೆಂದು ಕೋರಿದ ಅವರು, ತಾವು ಹರಿಜನನಾಗಿ ದೇವಾಲಯವನ್ನು ಪ್ರವೇಶಿಸಿ ಪ್ರಾರ್ಥಿಸುವ

ಅನುಭವವನ್ನು ಆಳಕ್ಕೆ ಹೀರಿಕೊಳ್ಳಲು ಈ ಕೋರಿಕೆ ಎಂದು ತಿಳಿಸಿದರು.

ಚುನಾವಣಾ ಫಲಿತಾಂಶಗಳು: ಜಿನ್ನಾರ ಜಯಭೇರಿ–ಅಂಬೇಡ್ಕರ್‌ಗೆ ನಿರಾಶೆ

ಗಾಂಧಿ ಬಂಗಾಳ ಮತ್ತು ಮದ್ರಾಸ್ ಪ್ರಾಂತ್ಯಗಳ ಒಂಬತ್ತು ವಾರಗಳ ಪ್ರವಾಸ ಮುಗಿಸಿ ಸೇವಾಗ್ರಾಮಕ್ಕೆ ಮರಳುವ ಹೊತ್ತಿಗೆ ಪ್ರಾಂತೀಯ ಮತ್ತು ಕೇಂದ್ರ ಶಾಸನ ಸಭಾ ಚುನಾವಣೆಗಳು ಮುಗಿದು ಫಲಿತಾಂಶಗಳು ಪ್ರಕಟವಾಗಿದ್ದವು. ಶಿಕ್ಷಣ ಮಟ್ಟ ಮತ್ತು ಆಸ್ತಿಯ ಪ್ರಮಾಣದ ಪರಿಗಣನೆಯ ಮೇಲೆ ಮತದಾನದ ಹಕ್ಕನ್ನು ಮಾನ್ಯ ಮಾಡಲಾಗಿದ್ದ ಈ ಚುನಾವಣೆಗಳಲ್ಲಿ ೬೦ ಲಕ್ಷ ಮಹಿಳೆಯರೂ ಸೇರಿದಂತೆ ಸುಮಾರು ನಾಲ್ಕು ಕೋಟಿ ಮತದಾರರು ನೊಂದಾಯಿಸಲ್ಪಟ್ಟಿದ್ದರು. ಈ ಬಾರಿಯ ಫಲಿತಾಂಶಗಳ ಗಮನಾರ್ಹ ವೈಶಿಷ್ಟ್ಯಗಳೆಂದರೆ ಬಹುತೇಕ ಮುಸ್ಲಿಮರು ಮುಸ್ಲಿಂ ಲೀಗ್ ಪರ ಮತ ಹಾಕಿ, ಆ ಸಮುದಾಯಕ್ಕೆ ಮೀಸಲಿಟ್ಟಿದ್ದ ಸ್ಥಾನಗಳಿಗೆ ಮುಸ್ಲಿಂ ಲೀಗ್‌ನ ಅಭ್ಯರ್ಥಿಗಳನ್ನೇ ಆಯ್ಕೆ ಮಾಡಿದ್ದುದು ಮತ್ತು ಅಂಬೇಡ್ಕರ್ ಅವರ ಪರಿಶಿಷ್ಟ ಜಾತಿಗಳ ಒಕ್ಕೂಟ ಸಂಪೂರ್ಣ ಪರಾಭವಗೊಂಡಿದ್ದುದು. ಭಾರತದ ಬಹುತೇಕ ಮುಸ್ಲಿಮರು ಕಾಂಗ್ರೆಸ್‌ನ್ನು ಕೈಬಿಟ್ಟು ಮುಸ್ಲಿಂ ಲೀಗ್‌ನ್ನು ಆಯ್ಕೆ ಮಾಡಿಕೊಂಡಿದ್ದರು. ಕೇವಲ ಜಮೀನ್ದಾರರ ಮತ್ತು ಶ್ರೀಮಂತ ಮುಸ್ಲಿಮರ ಪಕ್ಷವಾಗಿದ್ದ ಮುಸ್ಲಿಂ ಲೀಗ್, ಈಗ ಮುಸ್ಲಿಂ ಜನಸಾಮಾನ್ಯರ ಪಕ್ಷವೂ ಆಗಿತ್ತು. ಯುದ್ಧದ ಅವಧಿಯಲ್ಲಿ ಕಾಂಗ್ರೆಸ್ಸಿಗರು ಸೆರೆಮನೆಯಲ್ಲಿದ್ದಾಗ, ಮುಸ್ಲಿಂ ಲೀಗ್ ಬಲಿಷ್ಠವಾಗಿ ಸುಸಂಘಟಿತಗೊಂಡಿತ್ತು. ಜಿನ್ನಾ ಪಾಕಿಸ್ತಾನ ನಿರ್ಮಾಣದ ವಿಷಯದ ಆಧಾರದ ಮೇಲೇ ಚುನಾವಣಾ ಪ್ರಚಾರ ಮಾಡಿದ್ದುದರಿಂದ ಈ ಫಲಿತಾಂಶಗಳನ್ನು ಪಾಕಿಸ್ತಾನ ನಿರ್ಮಾಣಕ್ಕೆ ದೊರೆತ ಬೆಂಬಲವೆಂದೇ ವ್ಯಾಖ್ಯಾನಿಸಬಹುದಾಗಿತ್ತು. ಹೀಗಾಗಿ, ತಾನು ಎಲ್ಲ ಭಾರತೀಯರ ಪ್ರತಿನಿಧಿ ಎಂದು ಹೇಳಿಕೊಳ್ಳುತ್ತಿದ್ದ ಕಾಂಗ್ರೆಸ್‌ನ ಬಾಯಿ ಕಟ್ಟಿದಂತಾಗಿತ್ತು. ಹಾಗೇ ತಾವೊಬ್ಬರೇ ನಿಮ್ನ ವರ್ಗಗಳ ನಾಯಕನೆಂದು ಹೇಳಿಕೊಳ್ಳುತ್ತಿದ್ದ ಅಂಬೇಡ್ಕರ್ ಅವರ ಬಾಯಿಯೂ ಕಟ್ಟಿದಂತಾಗಿತ್ತು. ನಿಮ್ನ ಅಥವಾ ಅಸ್ಪೃಶ್ಯ ವರ್ಗಗಳಿಗೆ ಮೀಸಲಿಟ್ಟಿದ್ದ ಒಟ್ಟು ೧೫೧ ಸ್ಥಾನಗಳಲ್ಲಿ, ಕಾಂಗ್ರೆಸ್ ೧೪೨ನ್ನು ಗೆದ್ದುಕೊಂಡಿದ್ದರೆ, ಅಂಬೇಡ್ಕರ್ ಅವರ ಪಕ್ಷ ೨ ಸ್ಥಾನಗಳನ್ನು ಮಾತ್ರ ತನ್ನದನ್ನಾಗಿಸಿಕೊಂಡಿತ್ತು.

ಆದರೆ ಬಂಗಾಳ, ಪಂಜಾಬ್ ಮತ್ತು ಸಿಂಧ್‌ಗಳ ಹೊರತಾಗಿ ಮಿಕ್ಕೆಲ್ಲ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಬಹುಮತ ಗಳಿಸುವಲ್ಲಿ ಯಶಸ್ವಿಯಾಗಿತ್ತು. ವಾಯುವ್ಯ ಗಡಿ ಪ್ರಾಂತ್ಯದಲ್ಲಿ ಮುಸ್ಲಿಂ ಲೀಗ್ ಮತ್ತು ಖಾನ್ ಅಬ್ದುಲ್ ಗಫಾರ್ ಖಾನ್‌ರ ಖುದಾಯಿ ಖಿದ್ಮತ್‌ಗಾರ್ ಪಕ್ಷಗಳು ಸಮಾನ ಬಲ ಪ್ರದರ್ಶನ ಮಾಡಿದ್ದವು.

ನಿಸರ್ಗ ಚಿಕಿತ್ಸೆಯತ್ತ ಗಾಂಧಿ – ಹರಿಜನ ಕಾಲೋನಿಯಲ್ಲಿ ತಂಗುವ ನಿರ್ಧಾರ

ದೀರ್ಘ ಪ್ರವಾಸದಿಂದ ದಣಿದಿದ್ದ ೭೬ ವರ್ಷಗಳ ಗಾಂಧಿ, ಈ ಫಲಿತಾಂಶಗಳ ಬಗ್ಗೆ ಯಾವ ಅಭಿಪ್ರಾಯವನ್ನೂ ವ್ಯಕ್ತಪಡಿಸದೆ ತಮ್ಮ ಪಾಡಿಗೆ ತಾವು ಕೆಲ ದಿನಗಳ ಕಾಲ

ಸೇವಾಗ್ರಾಮದಲ್ಲಿದ್ದು ದಣಿವಾರಿಸಿಕೊಂಡರು. ಆಗ ಆಶ್ರಮದಲ್ಲಿ ಇತರ ಮಹಿಳಾ ಕಾರ್ಯಕರ್ತೆಯರ ಜೊತೆಗೆ ಬಂದು ಸೇರಿದ್ದವರಲ್ಲಿ ಪಟಿಯಾಲಾದ ಆಢ್ಯ ಕುಟುಂಬವೊಂದರಿಂದ ಬಂದ ಅಮ್ತಾಸ್ ಸಲಾಂ ಮತ್ತು ಗಾಂಧಿಯವರ ಸೋದರ ಸಂಬಂಧಿ ಮೊಮ್ಮಕ್ಕಳಾದ ಮನೂ ಹಾಗೂ ಅಭಾ ಕೂಡ ಇದ್ದರು. ಸೇವಾಗ್ರಾಮದಲ್ಲಿ ಈ ಮಹಿಳೆಯರ ಸೇವೆ ಪಡೆದು ದಣಿವಾರಿಸಿಕೊಂಡ ನಂತರ, ಗಾಂಧಿ ತಮ್ಮ ಹಳೆಯ ಆಸಕ್ತಿಯಾದ ನಿಸರ್ಗ ಚಿಕಿತ್ಸೆಯಲ್ಲಿ ಒಂದಷ್ಟು ಅನುಭವ ಪಡೆಯುವ ಉದ್ದೇಶದಿಂದ ಫೆಬ್ರುವರಿ ೧೮ರಂದು ಪೂನಾ ಬಳಿಯ ಉರುಲಿ ಕಾಂಚನ್ ಎಂಬ ಹಳ್ಳಿಯಲ್ಲಿದ್ದ ಒಂದು ನಿಸರ್ಗ ಚಿಕಿತ್ಸಾ ಕೇಂದ್ರಕ್ಕೆ ತೆರಳಿ ರೋಗಿಗಳಿಗೆ ಮಣ್ಣಿನ ಪಟ್ಟಿ, ಕಟಿ ಸ್ನಾನ, ಸೂರ್ಯ ಸ್ನಾನ, ಇತ್ಯಾದಿ ಚಿಕಿತ್ಸಾ ಕ್ರಮಗಳ ಪ್ರಯೋಗಗಳಲ್ಲಿ ತೊಡಗಿಸಿಕೊಂಡರು. ನಿಸರ್ಗ ಚಿಕಿತ್ಸೆಗೆ ಬಗ್ಗದ ತೊಂದರೆಗಳ ನಿವಾರಣೆಗಾಗಿ ಅವರು ಅಲೋಪತಿ ಚಿಕಿತ್ಸೆಯನ್ನು ಶಿಫಾರ್ಸು ಮಾಡುತ್ತಿದ್ದರು. ಈ ಚಿಕಿತ್ಸಾ ಕೇಂದ್ರದ ಶುಶ್ರೂಷಕಿಯಾಗಿದ್ದ ರಂಭಾಳಿಂದ ರಾಮನಾಮ ಜಪ ಅಭ್ಯಾಸ ಮಾಡಿದ ಗಾಂಧಿ, ಆ ಬಗ್ಗೆ ಹೀಗೆ ಹೇಳಿದರು: 'ರಾಮನಾಮ, ಮುರಿದ ಮೂಳೆಯನ್ನು ಜೋಡಿಸದಿರಬಹುದು. ಆದರೆ ಮುರಿದ ಮನವನ್ನು ಶಾಂತಗೊಳಿಸಬಹುದು. ಅದರಿಂದ ಮೃತ್ಯು ಭಯವನ್ನೂ ಮೀರಬಹುದು' ಈ ರಾಮನಾಮದ ರಾಮನ ಬಗ್ಗೆ ಅವರು ಮುಂದೆ ಏಪ್ರಿಲ್ ೪ರಂದು, ಅಧಿಕಾರ ಹಸ್ತಾಂತರದ ವಿಧಾನಗಳ ಬಗ್ಗೆ ಚರ್ಚಿಸಲು ನಿಯುಕ್ತವಾಗಿದ್ದ ಬ್ರಿಟಿಷ್ ಸರ್ಕಾರದ ಸಂಪುಟ ನಿಯೋಗದೊಂದಿಗೆ ಮಾತುಕತೆಯಾಡಲು ದೆಹಲಿಗೆ ಬಂದು ಅಲ್ಲಿನ ಹರಿಜನ ಕಾಲೋನಿಯಲ್ಲಿ ತಂಗಿದ್ದಾಗ ಸಂಜೆಯ ಪ್ರಾರ್ಥನಾ ಸಭೆಯಲ್ಲಿ ಆಡಿದ ಈ ಕುತೂಹಲಕಾರಿ ಮಾತುಗಳನ್ನೂ ಇಲ್ಲಿಯೇ ದಾಖಲಿಸುವುದು ಉಚಿತವಾದೀತು:

'ನನ್ನ ರಾಮ ಅಯೋಧ್ಯೆಯ ರಾಜ ದಶರಥನ ಪುತ್ರ ರಾಮನಲ್ಲ. ಅವನು ಚರಿತ್ರೆಯ ರಾಮನಲ್ಲ. ಅವನು ಸ್ವಯಂಭೂ, ಅಜಾತ ಮತ್ತು ಕಾಲಾತೀತನಾದ ಶಾಶ್ವತ ರಾಮ. ಅವನನ್ನು ಮಾತ್ರ ನಾನು ಸ್ಮರಿಸುವುದು, ಅವನಿಂದ ಮಾತ್ರ ಕೃಪೆ ಬೇಡುವುದು... ಮುಸಲ್ಮಾನರಿಂದ ಅಲ್ಲಾ, ಖುದಾ ಎಂದು ಕರೆಯಲ್ಪಡುವವನೂ ಅವನೇ... ಹಾಗಾಗಿ ಯಾವ ಮತದವರಾದರೂ ಅವನ ಜಪ ಮಾಡಬಹುದು, ಅವನ ಕೃಪೆಗಾಗಿ ಪ್ರಾರ್ಥಿಸಬಹುದು.'

ಉರುಲಿ ಕಾಂಚನ್‌ನ ನಿಸರ್ಗ ಚಿಕಿತ್ಸಾ ಕೇಂದ್ರದಲ್ಲಿದ್ದಾಗಲೇ, ಗುಜರಾತ್‌ನ ಕರಾಡಿ ಎಂಬಲ್ಲಿ ಹರಿಜನರಿಗೆ ಪ್ರತ್ಯೇಕ ದೇವಾಲಯ ಮತ್ತು ಬಾವಿ ನಿರ್ಮಿಸಲಾಗಿದೆ ಎಂದು ಗೊತ್ತಾದಾಗ, ಗಾಂಧಿ ತಾವಿನ್ನು ಸಾರ್ವಜನಿಕ ವ್ಯವಹಾರಗಳಿಗಾಗಿ ಹೊರ ಊರುಗಳಿಗೆ ಹೋದಾಗ ಹರಿಜನ ಕಾಲೋನಿಗಳಲ್ಲೇ ಮೊಕ್ಕಾಂ ಮಾಡುವುದಾಗಿ ಪ್ರಕಟಿಸುತ್ತಾರೆ. ಇದೇ ಸಂದರ್ಭದಲ್ಲಿ ಹಲವು ಪತ್ರಿಕಾ ಸಂದರ್ಶನಗಳನ್ನು ನೀಡಿದ ಗಾಂಧಿ, ತಮ್ಮ ಮುಂದಿನ ಜೀವನದ ಬಗ್ಗೆ ಕೇಳಿದ ಪ್ರಶ್ನೆಗಳು ಮತ್ತು ಸಲಹೆಗಳಿಗೆ ಪ್ರತಿಕ್ರಿಯಿಸುತ್ತಾ, ತಮ್ಮನ್ನು ತಿದ್ದಲು ಹೊರಗಿನ ಯಾರಿಗೂ ಸಾಧ್ಯವಿಲ್ಲ ಎನ್ನುತ್ತಾ, ಸ್ವಂತ ಅನುಭವಗಳಿಂದ–ಸೋಲುಗಳು ಮತ್ತು ಎಡವುಗಳಿಂದ–ಪಾಠ ಕಲಿಯಬಯಸುತ್ತೇನೆ ಎಂದು ಸ್ಪಷ್ಟಪಡಿಸುತ್ತಾರೆ. 'ಗುಜರಾತ್ ಸಮಾಚಾರ್' ಪತ್ರಿಕೆಯ ವರದಿಗಾರನ ಪ್ರಶ್ನೆಯೊಂದಕ್ಕೆ ಉತ್ತರ ನೀಡುತ್ತಾ, ತಾವು ೧೨೫ ವರ್ಷಗಳ ಕಾಲ

ಬದುಕಬಯಸುವುದಾಗಿಯೂ, ಭಗವಂತನ ಕೃಪೆಯಿಂದ ಅಷ್ಟು ಕಾಲ ಬದುಕಲು ಸಾಧ್ಯವಾದರೆ ಭಾರತದಲ್ಲಿ ಹೊಸದೊಂದು ನೈತಿಕ ಜಗತ್ತನ್ನು ತಾವು ನಿರ್ಮಿಸುವುದಾಗಿಯೂ ತಿಳಿಸುತ್ತಾರೆ.

ಅಲ್ಲಿ ತಮ್ಮನ್ನು ಭೇಟಿ ಮಾಡಿದ ಕಸ್ತೂರಬಾ ಸ್ಮಾರಕ ಟ್ರಸ್ಟ್‌ನ ಮಹಿಳಾ ಸದಸ್ಯರ, ಟ್ರಸ್ಟ್‌ನ ಜವಾಬ್ದಾರಿಯನ್ನು ಪೂರ್ಣವಾಗಿ ಮಹಿಳೆಯರಿಗೇ ವಹಿಸಬೇಕೆಂಬ ಬೇಡಿಕೆಯನ್ನು ಅನುಮೋದಿಸಿದರು. ಅದರ ಜೊತೆಗೇ ಈ ಎಚ್ಚರಿಕೆಯನ್ನೂ ನೀಡಿದರು: 'ಆದರೆ ನೀವು ನನ್ನ ಕಾಟದಿಂದ ತಪ್ಪಿಸಿಕೊಳ್ಳಲಾರಿರಿ. ಹಾಗೆ ನೋಡಿದರೆ ನಾನು ನನ್ನನ್ನು ಸ್ತ್ರೀಯೆಂದೇ ಪರಿಭಾವಿಸಿಕೊಂಡಿದ್ದೇನೆ ಮತ್ತು ನಿಮ್ಮ ಸ್ತ್ರೀತ್ವದ ಕಾಳಜಿ-ಕಳಕಳಿಗಳನ್ನು ಅರ್ಥ ಮಾಡಿಕೊಳ್ಳಬಲ್ಲವನಾಗಿದ್ದೇನೆ.'

ಉರುಲಿ ಕಾಂಚನ್ ಚಿಕಿತ್ಸಾ ಕೇಂದ್ರದಲ್ಲಿ ಒಂದೆರಡು ವಾರಗಳಿದ್ದ ಗಾಂಧಿ, ನಂತರ ಪೂನಾದ ವೈದ್ಯ ಗೆಳೆಯ ದೀನ್‌ಶಾ ಮೆಹ್ತಾರ ಬಳಿ ಹೋಗಿ ಇಬ್ಬರೂ ಸೇರಿ ಹಳ್ಳಿಯೊಂದರಲ್ಲಿ ನಿಸರ್ಗ ಚಿಕಿತ್ಸಾಲಯವನ್ನು ತೆರೆದು ಜನಸೇವೆ ಮಾಡುವುದರ ಬಗ್ಗೆ ಪ್ರಸ್ತಾಪ ಮಾಡಿದರು. ಆದರೆ ಮೆಹ್ತಾ ಒಪ್ಪದಿದ್ದಾಗ ನಿರಾಶೆ ಹೊಂದಿದರು. ಗಾಂಧಿ ತಮ್ಮ ಮುಂದಿನ ಜೀವನವನ್ನು ಗ್ರಾಮಾಂತರ ಜನರ ಸೇವೆಯಲ್ಲಿ ತೊಡಗಿಸಿಕೊಳ್ಳ ಬಯಸಿದ್ದರಾದರೂ, ಅವರು ಆರಂಭಿಸಿದ ರಾಷ್ಟ್ರನಿರ್ಮಾಣದ ಕೆಲಸ ಇನ್ನೂ ಪೂರ್ಣವಾಗದಿದ್ದುದರಿಂದ ಅವರು ಈ ಬಗ್ಗೆ ಯಾವುದೇ ನಿರ್ಧಾರ ಕೈಗೊಳ್ಳಲಾಗಿರಲಿಲ್ಲ. ಈ ಮಧ್ಯೆ ತಮ್ಮನ್ನು ಬಾರ್ಡೋಲಿಗೆ ಕರೆದುಕೊಂಡು ಹೋಗಲು ಬರಬೇಕಿದ್ದ ಪಟೇಲರು ಬೇರೆ ಕೆಲಸಗಳಲ್ಲಿ ವ್ಯಸ್ತರಾಗಿ ಬರದೇಹೋದಾಗ ಗಾಂಧಿ ಅವರಿಗೆ ಹೀಗೆ ಪತ್ರ ಬರೆದರು: 'ನೀವು ನನ್ನ ಮರೆತರೂ ಚಿಂತೆ ಇಲ್ಲ. ರಾಷ್ಟ್ರದ ಕೆಲಸಕ್ಕೆ ಆದ್ಯತೆ ನೀಡಿ'. ಇದರಲ್ಲಿ ತನ್ನ ಪಾಡಿಗೆ ತಾನಿರುವ ನಿಶ್ಚಯದ ಭಾವವಿತ್ತೋ ಅಥವಾ ಎಲ್ಲರೂ ನನ್ನನ್ನು ಕೈಬಿಡುತ್ತಿದ್ದಾರೆ ಎಂಬ ಹತಾಶೆ ಇತ್ತೋ ಯಾರು ಬಲ್ಲರು?

ನೌಕಾದಳದಲ್ಲೊಂದು ಪುಟ್ಟ ಬಂಡಾಯ – ಬಲಗೊಂಡ 'ಹರಿಜನ್' ಪರಿವಾರ

ಆದರೆ ಇದೇ ವೇಳೆಯಲ್ಲಿ ೧೯೪೬ರ ಫೆಬ್ರುವರಿಯಲ್ಲಿ ಬ್ರಿಟಿಷ್ ಭಾರತದ ನೌಕಾದಳದಲ್ಲಿ ಹಿಂದೂ-ಮುಸ್ಲಿಂ ಸೈನಿಕರು ಒಟ್ಟುಗೂಡಿ ಅಧಿಕಾರಿಗಳ ದಬ್ಬಾಳಿಕೆಯ ವಿರುದ್ಧ ಬಂಡೆದ್ದ ಘಟನೆಯೂ ಬಾಂಬೆ, ಕಲ್ಕತ್ತಾ, ಕರಾಚಿಗಳಲ್ಲಿ ನಡೆದಿತ್ತು. ಬಂಡಾಯಗಾರರಿಗೆ 'ಭಾರತ ಬಿಟ್ಟು ತೊಲಗಿ' ಚಳುವಳಿಯೇ ಸ್ಫೂರ್ತಿಯಾಗಿತ್ತು ಮತ್ತು ಮಹಾತ್ಮ ಗಾಂಧಿಯವರೇ ನಾಯಕರಾಗಿದ್ದರು. ಈ ಬಂಡಾಯಕ್ಕೆ ಜನಬೆಂಬಲವನ್ನು ಸಂಘಟಿಸಿ ಕೊಟ್ಟವರು ಇನ್ನೂ ಭೂಗತರೇ ಆಗಿದ್ದ ಸಮಾಜವಾದಿಗಳಾದ ಅರುಣಾ ಅಸಫ್ ಅಲಿ ಮತ್ತು ಅಚ್ಯುತ ಪಟವರ್ಧನ್ ಹಾಗೂ ಕೆಲ ಸ್ಥಳೀಯ ಕಮ್ಯೂನಿಸ್ಟ್ ನಾಯಕರು. ಈ ಬಂಡಾಯ, ಹಲವು ಸಾವು ನೋವುಗಳು ಮತ್ತು ಆಸ್ತಿಪಾಸ್ತಿ ಹಾನಿಯನ್ನು ಒಳಗೊಂಡಿದ್ದುದರಿಂದ, ಗಾಂಧಿ ಇದನ್ನು ಸಾರಾಸಗಟಾಗಿ ಬೆಂಬಲಿಸಲು ನಿರಾಕರಿಸಿದರಾದರೂ ಇದರಲ್ಲಿ ವ್ಯಕ್ತವಾಗಿದ್ದ ಹಿಂದೂ-ಮುಸ್ಲಿಂ-ಸಿಖ್ ಐಕ್ಯತೆಯನ್ನು ಮೆಚ್ಚಿಕೊಂಡರು. ಪಟೇಲರು ಬಂಡಾಯವೆದ್ದಿದ್ದ ಸೈನಿಕರ ಬಗ್ಗೆ ಸಹಾನುಭೂತಿ

ವ್ಯಕ್ತಪಡಿಸಿದರಾದರೂ ಅವರೆಲ್ಲ ಶರಣಾಗತರಾಗಬೇಕೆಂದೂ, ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ಮೇಲೆ ಅವರಿಗೆ ನ್ಯಾಯ ಒದಗಿಸುವುದಾಗಿಯೂ ಭರವಸೆ ನೀಡಿದರು.

ಗಾಂಧಿ ಈಗ ತಮ್ಮನ್ನು ಗಂಭೀರವಾಗಿ ತೊಡಗಿಸಿಕೊಂಡಿದ್ದುದು 'ಹರಿಜನ್' ಪತ್ರಿಕೆಯಲ್ಲಿ. ಈಗ ಆ ಪತ್ರಿಕೆ ಮೇಲೆ ಹೇರಿದ್ದ ನಿರ್ಬಂಧಗಳನ್ನು ಸರ್ಕಾರ ಹಿಂತೆಗೆದುಕೊಂಡಿದ್ದರಿಂದ, ಅದು ಮತ್ತು ಅದರ ಗುಜರಾತಿ ಮತ್ತು ಹಿಂದಿ ಆವೃತ್ತಿಗಳಾದ 'ಹರಿಜನ ಬಂಧು' ಮತ್ತು 'ಹರಿಜನ ಸೇವಕ'ಗಳು ಪುನರಾರಂಭವಾದವು. ಪತ್ರಿಕೆಗಳು ಮೂರು ವರ್ಷ ಬಂದ್ ಆಗಿದ್ದರಿಂದ ಮತ್ತು ಈ ಅವಧಿಯಲ್ಲಿನ 'ಭಾರತ ಬಿಟ್ಟು ತೊಲಗಿ' ಚಳುವಳಿ ಹುಟ್ಟಿಸಿದ್ದ ರಾಷ್ಟ್ರೀಯತೆಯ ಹೊಸ ಕಾವಿನಿಂದಾಗಿ ಈ ಪತ್ರಿಕೆಗಳ ಬಗ್ಗೆ ಜನರ ಕುತೂಹಲ-ತವಕ-ಪ್ರೀತಿಗಳು ಹೆಚ್ಚಿದ್ದವು. ಈಗ 'ಹರಿಜನ್'ಗೆ ದೇಶಾದ್ಯಂತ ೬೦ ಸಾವಿರ ಪ್ರತಿಗಳ ಬೇಡಿಕೆ ಇತ್ತು. ಜೊತೆಗೆ 'ಹರಿಜನ್ ಬಂಧು'ಗೆ ೪೦ ಸಾವಿರ ಮತ್ತು 'ಹರಿಜನ್ ಸೇವಕ್'ಗೆ ೨೫ ಸಾವಿರ ಪ್ರತಿಗಳ ಬೇಡಿಕೆ ಇತ್ತು. ಗಾಂಧಿಯವರಿಗೆ ಈಗ ತಮ್ಮ ವಿಕಾಸಶೀಲ ವಿಚಾರಗಳನ್ನು ಜನರೊಂದಿಗೆ ಹಂಚಿಕೊಳ್ಳಲು ಈ ಪತ್ರಿಕೆಗಳು ಪರ್ಯಾಯ ವೇದಿಕೆಗಳೇ ಆಗಿ ಪರಿಣಮಿಸಿದ್ದವು. ಯುದ್ಧೋತ್ತರ ಅಂತಾರಾಷ್ಟ್ರೀಯ ರಾಜಕಾರಣದ ಬಗ್ಗೆ ಅವರು ಈಗ ಬರೆಯಲಾರಂಭಿಸಿದ್ದರು. ಅಣುಬಾಂಬ್, ಪ್ಯಾಲೆಸ್ತೇನ್, ಸ್ಟಾಲಿನ್‌ನ ರಷ್ಯಾ, ಸೋತ ಜಪಾನ್ ಕಲಿಯಬೇಕಾದ ಪಾಠಗಳು, ಇವು ಅವರು ಆಗ ಬರೆದ ವಿಷಯಗಳಲ್ಲಿ ಕೆಲವು. ಇವುಗಳ ಜೊತೆಗೆ ತಾವು ಭೇಟಿ ನೀಡಿದ ಊರುಗಳಲ್ಲಿ ಮಂಡಿಸಿದ ವಿಚಾರಗಳು ಮತ್ತು ಓದುಗರು ಕೇಳಿದ ಪ್ರಶ್ನೆಗಳಿಗೆ ಉತ್ತರಗಳೂ ಇರುತ್ತಿದ್ದವು. ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯ ನೀಡುವ ಸಂಬಂಧವಾಗಿ ಮಾತುಕತೆಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಪೂರ್ಣ ಸ್ವರಾಜ್ಯ ಎಂಬುದು ಹೇಗಿರಬೇಕು ಎಂಬುದನ್ನು ೧೯೪೬ರ ಜುಲೈ ೨೮ರ 'ಹರಿಜನ್' ಸಂಚಿಕೆಯಲ್ಲಿ ಅವರು ವಿವರಿಸಿದ್ದು ಹೀಗೆ:

'ಸ್ವರಾಜ್ಯ ಅತ್ಯಂತ ತಳಮಟ್ಟದಲ್ಲಿ ಗ್ರಾಮದಿಂದ ಆರಂಭವಾಗುತ್ತದೆ. ಗ್ರಾಮವು ಪೂರ್ಣ ಸ್ವರಾಜ್ಯದ ಒಂದು ಪುಟ್ಟ ಮಾದರಿಯಾಗಿರುತ್ತದೆ. ಆಸುಪಾಸಿನ ಗ್ರಾಮಗಳೆಲ್ಲ ಸೇರಿ ಒಂದು ಸ್ವರಾಜ್ಯ ವಲಯವಾಗಿರುತ್ತದೆ. ಇದರಿಂದ ಅಧಿಕಾರ, ಗ್ರಾಮ ವಿಸ್ತಾರವನ್ನು ಮೀರಿದ ವಲಯಗಳಿಗೆ ಹರಿಯುತ್ತಾ ಹೋಗಿ ಅತ್ಯಂತ ಮೇಲಿನ ವಲಯಕ್ಕೆ/ಸಂಸ್ಥೆಗೆ ಅತ್ಯಂತ ಕನಿಷ್ಠ ಆಡಳಿತಾಧಿಕಾರ ಉಳಿದಿರುತ್ತದೆ. ಇಂತಹ ಗಣರಾಜ್ಯದ ಕೇಂದ್ರ, ವ್ಯಕ್ತಿಯಾಗಿರುತ್ತಾನೆ. ಅದು ಅವನ ಸ್ವಾತಂತ್ರ್ಯ ಮತ್ತು ಘನತೆಗಳ ಕೇಂದ್ರ ಸ್ಥಾನವಾಗಿರುತ್ತದೆ. ವ್ಯಕ್ತಿಗೆ ಅಷ್ಟು ಮಹತ್ವ ಕೊಟ್ಟಾಗ ಅವನು ತನ್ನ ಹಳ್ಳಿಗಾಗಿ ಅಥವಾ ತನ್ನ ದೇಶಕ್ಕಾಗಿ ಯಾವ ತ್ಯಾಗಕ್ಕೂ ಸಿದ್ಧನಾಗುತ್ತಾನೆ ಮತ್ತು ಸಮಾಜ ಕೂಡ ಅದನ್ನು ಅವನಿಂದ ಬಯಸಬಹುದಾಗಿರುತ್ತದೆ. ಇದನ್ನು ಕೆಲವರು ಅಮೂರ್ತ-ಆದರ್ಶ ಚಿಂತನೆ ಎನ್ನಬಹುದು. ಆದರೆ ಅಮೂರ್ತ-ಆದರ್ಶ ಎಂದು ಅದರ ಬಗ್ಗೆ ಚಿಂತನೆಯನ್ನು ಮಾಡಬೇಡಿ ಎನ್ನಲಾಗುತ್ತದೆಯೆ? ಯೂಕ್ಲಿಡ್‌ನ ಜ್ಯಾಮಿತಿಯಲ್ಲಿ ಬಿಂದು ಎಂಬುದನ್ನು ಅಮೂರ್ತ ಎಂಬ ಕಾರಣಕ್ಕೆ ಅವನ ಇಡೀ ಜ್ಯಾಮಿತಿ ಶಾಸ್ತ್ರವನ್ನೇ ನಿರಾಕರಿಸಲಾಗುತ್ತದೆಯೇ?'

■

೮೮
ಅಧಿಕಾರ ಹಸ್ತಾಂತರದ ಎಡರು ತೊಡರುಗಳು

ಬ್ರಿಟನ್‌ನ ಪ್ರಧಾನಿ ಆ್ಯಟ್ಲಿಯವರು ಸಂಸತ್‌ನಲ್ಲಿ ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ನೀಡುವ ಕಾಲವೀಗ ಬಂದಿದ್ದು, ಇದು ಏಷ್ಯಾಕ್ಕೇ ಬೆಳಕು ಮೂಡಿಸುವ ಮಹಾ ಘಟನೆಯಾಗಲಿದೆ ಎಂದು ಹೇಳಿದ ಬೆನ್ನಲ್ಲೇ ಅವರ ಸರ್ಕಾರದ ಮುವ್ವರು ಸಚಿವರನ್ನೊಳಗೊಂಡ ಆಯೋಗ ೧೯೪೬ರ ಮಾರ್ಚ್ ಮೂರನೆ ವಾರದಲ್ಲಿ ಭಾರತಕ್ಕೆ ಬಂದಿತು. ಈ ಮುವ್ವರು ಸಚಿವರೆಂದರೆ, ಗಾಂಧಿಯವರಿಗೆ ಪರಿಚಿತವಿದ್ದ ಫ್ರೆಡ್ರಿಕ್ ಪೆಥಿಕ್ ಲಾರೆನ್ಸ್ ಮತ್ತು ಸ್ಟಾಫರ್ಡ್ ಕ್ರಿಪ್ಸ್ ಹಾಗೂ ಕಾರ್ಮಿಕ ಚಳುವಳಿಯ ನೇತಾರರಾಗಿದ್ದ ಎ.ವಿ.ಅಲೆಕ್ಸಾಂಡರ್. ಆಯೋಗ ಕಾಂಗ್ರೆಸ್ ನಾಯಕರೊಂದಿಗೆ ಮಾತುಕತೆಗೆ ಸಮಯ ನೀಡುವ ಹೊತ್ತಿನಲ್ಲಿ ಅಗತ್ಯ ಸಮಾಲೋಚನೆಗಳಿಗಾಗಿ ಗಾಂಧಿ, ಆಯೋಗದ ಆಹ್ವಾನದ ಮೇರೆಗೆ ದೆಹಲಿಗೆ ಹೊರಟರು. ಉದ್ಯಮಿ ಜಿ.ಡಿ. ಬಿರ್ಲಾ ಗಾಂಧಿಯವರನ್ನು ತಮ್ಮ ಮನೆಯಲ್ಲೇ ಬಂದಿರಲು ಆಹ್ವಾನಿಸಿದರಾದರೂ, ಅವರು ತಾವು ಕಿಂಗ್ಸ್‌ವೇ ಕ್ಯಾಂಪ್ ಬಳಿಯ (ಈಗ ಅದು ಮಂದಿರ ಮಾರ್ಗ ಆಗಿದೆ) ಹರಿಜನ ಕಾಲೋನಿಯೊಂದರಲ್ಲಿ ತಂಗುವುದಾಗಿ ಹೇಳಿದರು. ಬಿರ್ಲಾ ಗಾಂಧಿ ತಂಗುವ ಅಲ್ಲಿನ ಮನೆಯೊಂದಕ್ಕೆ ನೀರು ಮತ್ತು ವಿದ್ಯುತ್‌ನ ಸೌಲಭ್ಯ ಒದಗಿಸಲು ಮುಂದಾದಾಗ, ತಾವು ಅಲ್ಲಿಂದ ತೆರಳಿದ ನಂತರವೂ ಅಲ್ಲಿ ಸೌಲಭ್ಯಗಳು ಮುಂದುವರೆಯುವಂತಿದ್ದಲ್ಲಿ ಮಾತ್ರ ಅವನ್ನು ಒದಗಿಸಬಹುದು ಎಂಬ ಷರತ್ತಿನ ಮೇಲೆ ಅವನ್ನು ಒಪ್ಪಿಕೊಂಡು ಏಪ್ರಿಲ್ ೧ರಿಂದ ಆರಂಭವಾದಂತೆ ಅಲ್ಲಿ ಹೋಗಿ ಬಿಡಾರ ಮಾಡಿದರು.

ಹಿಂದೂ–ಮುಸ್ಲಿಂ ಐಕ್ಯತೆಯ ದಿನಗಳನ್ನು ನೆನಪಿಸಿದ ಗಾಂಧಿ

ಏಪ್ರಿಲ್ ೨ರಂದು ಆಯೋಗದ ಸದಸ್ಯ ಪೆಥಿಕ್‌ಗೆ ಪತ್ರ ಬರೆದ ಗಾಂಧಿ, ಮಾತುಕತೆಗಳು ಸೌಹಾರ್ದದಿಂದ ನಡೆಯಲು ಅನುವಾಗುವಂತೆ ಜೆಪಿ–ಲೋಹಿಯಾರೂ ಸೇರಿದಂತೆ ಎಲ್ಲ ರಾಜಕೀಯ ಬಂದಿಗಳನ್ನೂ ಬಿಡುಗಡೆ ಮಾಡಬೇಕೆಂದೂ ಉಪ್ಪಿನ ಮೇಲಿನ ತೆರಿಗೆಯನ್ನು ರದ್ದು ಮಾಡಬೇಕೆಂದೂ ಸೂಚಿಸಿದರು. ಎಲ್ಲ ರಾಜಕೀಯ ಬಂದಿಗಳ ಬಿಡುಗಡೆಗೆ ಒಪ್ಪಿತಾದರೂ ಉಪ್ಪಿನ ಮೇಲಿನ ತೆರಿಗೆಯ ಬಗೆಗಿನ ನಿರ್ಧಾರ ಸದ್ಯಕ್ಕೆ ಕಷ್ಟವೆಂದು ಹೇಳಿತು. ಮಾರನೆಯ ದಿವಸ ಆಯೋಗದ ಸದಸ್ಯರೇ ಗಾಂಧಿಯವರು ನೆಲೆಸಿದ್ದ ಕಾಲೋನಿಗೆ ಬಂದು ಅವರೊಡನೆ ಸೌಹಾರ್ದಪೂರ್ಣವಾದ ಮಾತುಕತೆ ನಡೆಸಿದರು. ಗಾಂಧಿ ತಾವು ಕಾಂಗ್ರೆಸ್‌ನ ಪ್ರತಿನಿಧಿ

ಅಲ್ಲವೆಂದೂ, ತಮ್ಮದೇನಿದ್ದರೂ ಅನೌಪಚಾರಿಕ ಸಲಹೆಗಳು ಮಾತ್ರವಾಗಿರುತ್ತವೆಂದೂ, ಅಧಿಕೃತ ಮಾತುಕತೆಗಳನ್ನೇನಿದ್ದರೂ ಕಾಂಗ್ರೆಸ್‌ನ ಅಧಿಕೃತ ಪ್ರತಿನಿಧಿಗಳೊಂದಿಗೆ ನಡೆಸಬೇಕೆಂದು ಸೂಚಿಸಿದರು. ಆಯೋಗ ತಾನು ಭಾರತ ಬಿಟ್ಟು ಹೊರಡುವ ಮುನ್ನ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಅಧಿಕಾರ ಹಸ್ತಾಂತರದ ವಿಧಿ ವಿಧಾನಗಳಿಗೆ ಸಂಬಂಧಿಸಿದಂತೆ ಒಂದು ಒಪ್ಪಂದಕ್ಕೆ ಬರುವುದಾದಲ್ಲಿ ತಾನು ಅಂತಿಮ ಶಿಫಾರ್ಸುಗಳನ್ನು ರೂಪಿಸಲು ಸಹಾಯವಾಗುತ್ತದೆ ಎಂದು ಹೇಳಿತು. ಗಾಂಧಿ ಅದರ ಸಾಧ್ಯತೆ ತುಂಬ ಕಡಿಮೆ ಎಂದೂ, ಅದಕ್ಕಾಗಿ ಭಾರತದ ಜನತೆ ಭಗವಂತನನ್ನು ಪ್ರಾರ್ಥಿಸುವುದೊಂದೇ ದಾರಿ ಎಂದು ಆಯೋಗಕ್ಕೆ ತಿಳಿಸಿದರು.

ಗಾಂಧಿ ಪ್ರತಿದಿನ ಸಂಜೆ ಆ ಹರಿಜನ ಕಾಲೋನಿಯಲ್ಲಿ ಬಹಿರಂಗ ಪ್ರಾರ್ಥನಾ ಸಭೆಗಳನ್ನು ನಡೆಸುತ್ತಿದ್ದರು. ಏಪ್ರಿಲ್ ೬ ರ ಸಭೆಯಲ್ಲಿ ೨೭ ವರ್ಷಗಳ ಹಿಂದೆ ಇದೇ ದಿನದಂದು ರೌಲೆಟ್ ಕಾಯಿದೆ ವಿರುದ್ಧ ಹಿಂದೂ ಮುಸ್ಲಿಮರಿಬ್ಬರೂ ಒಂದೇ ರಾಷ್ಟ್ರದಂತೆ ಬಂಡೆದ್ದು ಆರಂಭಿಸಿದ ಚಳುವಳಿಯನ್ನು ನೆನಪು ಮಾಡಿ, ಅಂತಹದೇ ಭಾವನೆ ಇಂದು ಅನಿವಾರ್ಯವಾಗಿದೆ ಎನ್ನುತ್ತಾ ಸ್ವಾಮಿ ಶ್ರದ್ಧಾನಂದರು ಜುಮ್ಮಾ ಮಸೀದಿಯ ಆವರಣದಲ್ಲಿ ಬೃಹತ್ ಜನಸ್ತೋಮವನ್ನುದ್ದೇಶಿಸಿ ಮಾತಾಡಿದ ಐತಿಹಾಸಿಕ ಘಟನೆ ಈಗ ಎಲ್ಲರಿಗೂ ಸ್ಫೂರ್ತಿದಾಯಕವಾಗಬೇಕು ಎಂದು ಕರೆ ನೀಡಿದರು.

ಆಯೋಗದ ಹಲವು ಸಲಹೆಗಳು–ಪಾಕಿಸ್ತಾನದ ಪಟ್ಟು ಬಿಡದ ಜಿನ್ನಾ

ಆಯೋಗದೊಂದಿಗೆ ಕಾಂಗ್ರೆಸ್‌ನ ಪರವಾಗಿ ನೆಹರೂ, ಪಟೇಲ್, ಆಜ಼ಾದ್ ಮತ್ತು ಅಬ್ದುಲ್ ಗಫಾರ್ ಖಾನ್ ಮಾತುಕತೆ ನಡೆಸಿದ್ದರೆ ಮುಸ್ಲಿಂ ಲೀಗ್ ಪರವಾಗಿ ಜಿನ್ನಾ ಮತ್ತು ಅವರ ತಂಡ ಮಾತುಕತೆಯಲ್ಲಿ ಭಾಗವಹಿಸಿತ್ತು. ಈ ಹಿಂದೆ ರಾಜಾಜಿ ರೂಪಿಸಿದ್ದ ಕರಡು ಸೂತ್ರವನ್ನು ಆಧರಿಸಿ ಆಯೋಗ ಈ ಪ್ರಸ್ತಾವನೆಯನ್ನು ಮುಂದಿಟ್ಟಿತು: 'ರಕ್ಷಣೆ, ವಿದೇಶಾಂಗ ಮತ್ತು ಸಂಪರ್ಕ ಖಾತೆಗಳ ಅಧಿಕಾರಗಳನ್ನು ಮಾತ್ರವುಳ್ಳ ಕೇಂದ್ರ ಸರ್ಕಾರ ಮತ್ತು ಇತರೆಲ್ಲ ಅಧಿಕಾರಗಳನ್ನುಳ್ಳ ಪ್ರಾಂತೀಯ ಸರ್ಕಾರಗಳ ಒಕ್ಕೂಟ ವ್ಯವಸ್ಥೆಯೊಂದನ್ನು ತತ್ಕಾಲಕ್ಕೆ ರೂಪಿಸಿ ಎರಡೂ ಕಡೆಯವರ ಸಮಾನ ಸಂಖ್ಯೆ ಪ್ರತಿನಿಧಿಗಳು ಆಯೋಗದೊಡನೆ ಕೂತು ಅಂತಿಮ ಸಂವಿಧಾನ ರಚನೆಯ ವಿವರಗಳನ್ನು ಸಿದ್ಧಪಡಿಸಬಹುದು'. ಈ ಪ್ರಸ್ತಾವನೆಯಲ್ಲಿ ರಾಜ ಸಂಸ್ಥಾನಗಳು ಐದು ವರ್ಷಗಳ ನಂತರ ತಾವು ಈ ಒಕ್ಕೂಟದಲ್ಲಿ ಉಳಿಯುವ ಅಥವಾ ಬಿಡುವ ಆಯ್ಕೆಯ ಸ್ವಾತಂತ್ರ್ಯವನ್ನು ಅವಕ್ಕೆ ನೀಡಬೇಕೆಂದು ಜಿನ್ನಾ ಸಲಹೆ ಮಾಡಿದಾಗ, ಕಾಂಗ್ರೆಸ್‌ನ ಕಡೆಯಿಂದ ನೆಹರೂ ಅದಕ್ಕೆ ಒಪ್ಪುವ ಸೂಚನೆ ನೀಡುತ್ತಿದ್ದಂತೆ ಪಟೇಲರು ಆಕ್ಷೇಪವೆತ್ತಿದರು. ಈ ಮಧ್ಯೆ ಈ ಮೂಲ ಪ್ರಸ್ತಾವನೆಯನ್ನೂ, ಆ ಕುರಿತ ಎರಡೂ ಕಡೆಯ ವಾದಗಳನ್ನೂ ಗಾಂಧಿಯವರ ಗಮನಕ್ಕೆ ತಂದಾಗ ಅವರು ಹಿಂದೂ ಬಹುಸಂಖ್ಯಾತ ಪ್ರಾಂತ್ಯಗಳೆಂದು ಗುರುತಿಸಲಾಗಿರುವ ಸಂಯುಕ್ತ ಪ್ರಾಂತ್ಯಗಳು, ಮಧ್ಯ ಪ್ರಾಂತ್ಯಗಳು, ಒರಿಸ್ಸಾ, ಬಿಹಾರ ಮತ್ತು ಮದ್ರಾಸ್ ಪ್ರಾಂತ್ಯಗಳ ಜನಸಂಖ್ಯೆ, ಮುಸ್ಲಿಂ ಬಹುಸಂಖ್ಯಾತ ಪ್ರಾಂತ್ಯಗಳೆಂದು ಗುರುತಿಸಲಾಗಿರುವ ಪಂಜಾಬ್, ಸಿಂಧ್, ವಾಯುವ್ಯ

ಗಡಿ ಪ್ರಾಂತ್ಯ ಮತ್ತು ಬಂಗಾಳ-ಅಸ್ಸಾಂಗಳಲ್ಲಿನ ಒಟ್ಟು ಜನಸಂಖ್ಯೆಯ ದುಪ್ಪಟ್ಟಿಗಿಂತ ಹೆಚ್ಚಿರುವುದರಿಂದ ಎರಡೂ ಪಕ್ಷಗಳ ಸಮಾನ ಸಂಖ್ಯೆಯ ಪ್ರತಿನಿಧಿಗಳ ಪ್ರಸ್ತಾವ ಅನ್ಯಾಯಕ್ಕೆ ದಾರಿ ಮಾಡಿಕೊಡುವುದೆಂದು ಅಭಿಪ್ರಾಯಪಟ್ಟರು. ಆದರೆ ಜಿನ್ನಾ ಮತ್ತವರ ಗೆಳೆಯರು ಈಗ ಈ ಯಾವುದೇ ಅಭಿಪ್ರಾಯ ಅಥವಾ ಆಕ್ಷೇಪಗಳು ಯಾವುದೇ ಲೆಕ್ಕಕ್ಕೆ ಬಾರದಂತಹ ವಾದಕ್ಕೆ ಕಟ್ಟು ಬಿದ್ದರು. ಅದು ಮುಸ್ಲಿಂ ಬಹುಸಂಖ್ಯಾತ ಪ್ರಾಂತ್ಯಗಳನ್ನೊಳಗೊಂಡ ಸಂಪೂರ್ಣ ಸ್ವತಂತ್ರವಾದ ಸಾರ್ವಭೌಮ ಪಾಕಿಸ್ತಾನ ರಾಷ್ಟ್ರ ರಚನೆಯಾಗಿತ್ತು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸ್, ಮುಸ್ಲಿಂ ಬಹುಸಂಖ್ಯಾತ ಪ್ರಾಂತ್ಯಗಳೆಂದು ಗುರುತಿಸಲಾಗಿರುವ ಪಂಜಾಬ್, ಬಂಗಾಳ ಮತ್ತು ಅಸ್ಸಾಂಗಳಲ್ಲಿ ಗಣನೀಯ ಸಂಖ್ಯೆಯ ಹಿಂದೂಗಳಿರುವುದರಿಂದ ಆ ಪ್ರಾಂತ್ಯಗಳ ಅಂತಹ ಪ್ರದೇಶಗಳನ್ನು ಅವುಗಳಿಂದ ಬೇರ್ಪಡಿಸಬೇಕಾಗುತ್ತದೆಂದು ತಿಳಿಸಿತು. ಆದರೆ ಅದು ಮತ್ತಷ್ಟು ಅನಾಹುತಗಳಿಗೆ ಕಾರಣವಾಗುವುದೆಂದು ಸಚಿವ ಆಯೋಗ ಅದನ್ನು ತಳ್ಳಿ ಹಾಕಿ, ಈ ಪ್ರಾಂತ್ಯಗಳನ್ನು ಹೊರತುಪಡಿಸಿದ ಪಾಕಿಸ್ತಾನವನ್ನು ಒಪ್ಪಬೇಕೆಂದು ಜಿನ್ನಾರನ್ನು ಕೇಳಲಾಯಿತು. ಆದರೆ ಜಿನ್ನಾ ಇದಕ್ಕೆ ಸಿದ್ಧರಿರಲಿಲ್ಲ.

ಮೂಡದ ಒಮ್ಮತ-ಮೂರು ಪ್ರಾಂತೀಯ ಗುಂಪುಗಳ ಒಕ್ಕೂಟದ ಅಂತಿಮ ಪ್ರಸ್ತಾವನೆ

ಆನಂತರ ಮಾತುಕತೆಗಳ ಸ್ಥಳವನ್ನು ಬ್ರಿಟಿಷ್ ಸರ್ಕಾರದ ಬೇಸಿಗೆಯ ರಾಜಧಾನಿಯಾಗಿದ್ದ ಸಿಮ್ಲಾಗೆ ವರ್ಗಾಯಿಸಿ ಭಾರತದ ಮುಸ್ಲಿಂ ಅಥವಾ ಹಿಂದೂ ಸಮುದಾಯಕ್ಕಾಗಲೀ ಅಥವಾ ಬ್ರಿಟನ್‌ಗಾಗಲೀ ಸೇರದ ಓರ್ವ ತಟಸ್ಥ 'ಅಂಪೈರ್'ನ ಸಮ್ಮುಖದಲ್ಲಿ ಮಾತುಕತೆ ನಡೆಯಲಿ ಎಂಬ ನೆಹರೂ ಅವರ ಸಲಹೆಯೂ ಸೇರಿದಂತೆ ಮತ್ತಷ್ಟು ಪ್ರಸ್ತಾವನೆಗಳನ್ನು ದಿನಗಟ್ಟಲೆ ಚರ್ಚಿಸಲಾಯಿತಾದರೂ ಒಂದು ಒಪ್ಪಂದಕ್ಕೆ ಬರಲಾಗಲಿಲ್ಲ. ಈಗ ಸಿಮ್ಲಾದ ಬಳಿ ರಾಜಕುಮಾರಿ ಅಮೃತಾ ಕೌರ್ ಅವರ ಪುರಾತನ ಬಂಗಲೆಯಲ್ಲಿ ತಂಗಿದ್ದ ಗಾಂಧಿ, ಏಪ್ರಿಲ್ ೨೯ರಂದು ಕ್ರಿಪ್ಸ್ ಅವರಿಗೆ ಒಂದು ಪತ್ರ ಕಳಿಸಿ, ಈ ಮಾತುಕತೆಗಳು ಮುಂದುವರೆದಂತೆ ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ನಡುವೆ ಬಿಗುವು ಮತ್ತು ಕಹಿ ಹೆಚ್ಚುತ್ತಿದ್ದು, ಇದು ಒಪ್ಪಂದದ ಆಶಯವನ್ನೇ ಭಂಗಗೊಳಿಸುವಂತಿದೆ ಎಂದು ವಿಷಾದಿಸಿದ್ದರು. ಮಾತುಕತೆಗಳ ಜಂಜಾಟದಿಂದ ದೂರ ಉಳಿಯಲು ನಿರ್ಧರಿಸಿದ ಅವರು, ತಮ್ಮ ಪರಿವಾರವನ್ನು ಸೇವಾಗ್ರಾಮಕ್ಕೆ ವಾಪಸ್ ಕಳಿಸಿ ಏಕಾಂತಕ್ಕೆ ಜಾರಿದರು. ಅವರಿಗೆ ಸಚಿವರ ಆಯೋಗ, ಅವಸರದಲ್ಲಿ ತನ್ನ ಸಲಹೆಗಳನ್ನು ಒಪ್ಪಿಕೊಳ್ಳುವಂತೆ ಕಾಂಗ್ರೆಸ್ ಪ್ರತಿನಿಧಿಗಳ ಮೇಲೆ ಒತ್ತಡ ಹೇರುತ್ತಿದ್ದಂತೆ ಮತ್ತು ಅವರು ಭವಿಷ್ಯದ ಅಧಿಕಾರ ಸ್ಥಾನಗಳನ್ನು ಪಡೆಯುವ ಆತುರಕ್ಕೊಳಗಾಗಿ ಆ ಒತ್ತಡಕ್ಕೆ ಮಣಿಯುತ್ತಿರುವಂತೆಯೂ ಕಂಡು ಖಿನ್ನರಾಗಿದ್ದರು. ಕಾಂಗ್ರೆಸ್ ನಾಯಕರಿಗೆ ಈಗ ತಮಗಿಂತ ಬ್ರಿಟಿಷ್ ಆಯೋಗವೇ ಆಪ್ತವಾಗಿದ್ದಂತೆಯೂ ಅವರಿಗೆ ಕಂಡಿತು. ಅವರೀಗ ಎಮರ್ಸನ್‌ನ ಅನ್ಯರ ಬೆಂಬಲವನ್ನು ನೆಚ್ಚದೆ ಒಂಟಿಯಾಗಿ ಚಿಂತಿಸಿದಾಗ ಕಾಣುವುದೇ ಸರಿಯಾದ ಮಾರ್ಗ ಎಂಬ ಉಕ್ತಿಯ ಮೊರೆಹೋಗಿದ್ದರು. ಇದೇ ವೇಳೆಯಲ್ಲಿ ಅವರು

ಗಫಾರ್ ಖಾನರಿಗೆ ಸಿಮ್ಲಾದ ಹರಿಜನ ಕೇರಿಗಳ ಪರಿಸ್ಥಿತಿಯನ್ನು ಕಂಡು ತಮಗೆ ವರದಿ ಮಾಡಲೂ ಸೂಚಿಸಿದ್ದರು. ಖಾನರು ಅಲ್ಲಿಗೆ ಭೇಟಿ ನೀಡಿ ಆ ಕೇರಿಗಳು, ಪ್ರಾಣಿಗಳ ವಾಸಕ್ಕೂ ಯೋಗ್ಯವಲ್ಲದ ಸ್ಥಿತಿಯಲ್ಲಿವೆ ಎಂದು ವರದಿ ಮಾಡಿದಾಗ ಅವರು ಇನ್ನಷ್ಟು ಖಿನ್ನತೆಗೆ ಒಳಗಾದರು.

ಸಚಿವ ಆಯೋಗಕ್ಕೆ ಈ ಮಾತುಕತೆ ಎಲ್ಲಿಗೂ ಸಾಗುತ್ತಿಲ್ಲವೆನ್ನಿಸಿ, ಮೇ ೧೬ರಂದು ಎರಡೂ ಪಕ್ಷಗಳ ಮುಂದೆ ಸ್ವತಃ ತಾನೇ ಒಂದು ಪ್ರಸ್ತಾವನೆಯನ್ನು ಮುಂದಿಟ್ಟು ಲಂಡನ್‌ಗೆ ವಾಪಸಾಗಲು ಸಿದ್ಧತೆ ನಡೆಸಿತು. ಆ ಪ್ರಸ್ತಾವನೆಯ ಪ್ರಕಾರ, ಪ್ರತ್ಯೇಕ ಸಾರ್ವಭೌಮ ಪಾಕಿಸ್ತಾನ ನಿರ್ಮಾಣದ ಬಗ್ಗೆ ಯಾವುದೇ ಒಮ್ಮತಕ್ಕೆ ಬರಲಾಗಿಲ್ಲವಾದ್ದರಿಂದ ಈ ಮೊದಲೇ ಉಲ್ಲೇಖಿತವಾದ ಮೂರು ಅಧಿಕಾರಗಳಿಗೆ ಸೀಮಿತವಾದ ಮಧ್ಯಂತರ ಕೇಂದ್ರ ಸರ್ಕಾರಕ್ಕೆ ಅವಕಾಶವಿರುವುದರೊಂದಿಗೆ ಪ್ರಾಂತ್ಯಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಲಾಗಿತ್ತು. ಹಿಂದೂ ಬಹುಸಂಖ್ಯಾತವಾದ ಪ್ರಾಂತ್ಯಗಳ ಒಂದು ಗುಂಪು, ಮುಸ್ಲಿಂ ಬಹುಸಂಖ್ಯಾತವಾದ ಪ್ರಾಂತ್ಯಗಳ ಒಂದು ಗುಂಪು ಮತ್ತು ಈ ಎರಡೂ ಗುಂಪುಗಳಿಗೆ ಸೇರಿಸಲಾಗದ – ಎರಡೂ ಧರ್ಮಗಳ ಜನರ ಸಂಖ್ಯೆ ಸರಿ ಸುಮಾರಾಗಿ ಸಮನಾಗಿರುವ ಬಂಗಾಳ ಮತ್ತು ಅಸ್ಸಾಂ–ಪ್ರಾಂತ್ಯಗಳ ಒಂದು ಗುಂಪು. ಹತ್ತು ವರ್ಷಗಳ ನಂತರ ಗುಂಪು ಬದಲಾಯಿಸುವ ಆಯ್ಕೆಯ ಸ್ವಾತಂತ್ರ್ಯವನ್ನೂ ಹೊಂದಿರುವ ಈ ಗುಂಪುಗಳ ಪ್ರಾಂತ್ಯಗಳ ಶಾಸನಸಭೆಗಳು ಗುಂಪುವಾರು ಸಭೆ ಸೇರಿ ತಂತಮ್ಮ ಗುಂಪು ಮತ್ತು ಪ್ರಾಂತ್ಯಗಳ ಹಾಗೂ ಕೇಂದ್ರಕ್ಕೆ ಅಗತ್ಯವಾದ ಸಂವಿಧಾನಗಳನ್ನು ರಚಿಸಲು ತಂತಮ್ಮ ಶಾಸನ ಸಭೆಗಳಿಂದ ಆಯ್ದ ಪ್ರತಿನಿಧಿಗಳ ಸಂವಿಧಾನ ರಚನಾ ಸಭೆಗಳನ್ನು ರಚಿಸಬೇಕು.

ಸಚಿವ ಆಯೋಗ ಈ ಪ್ರಸ್ತಾವನೆಯನ್ನು, ಜಿನ್ನಾ ಗುಂಪಿಗೆ ಇದು ಪಾಕಿಸ್ತಾನ ರಚನೆಗೆ ಅಸ್ತಿಭಾರ ಹಾಕಿರುವ ಕ್ರಮವೆಂದೂ, ಕಾಂಗ್ರೆಸ್ಸಿಗರಿಗೆ ಇದು ಪಾಕಿಸ್ತಾನದ ನಿರ್ಮಾಣದ ಸಲಹೆಯನ್ನು ಸದ್ಯಕ್ಕೆ ತಡೆ ಹಿಡಿದಿರುವುದಲ್ಲದೆ ಎರಡೂ ಪಕ್ಷಗಳಿಗೆ ಸಮಾನ ಸ್ಥಾನಮಾನವನ್ನು ನಿರಾಕರಿಸುವ ಕ್ರಮವೆಂದೂ ವಿವರಿಸುವ ಮೂಲಕ ಎರಡೂ ಪಕ್ಷಗಳು ಈ ಪ್ರಸ್ತಾವನೆಯನ್ನು ಒಪ್ಪುವಂತೆ ಪುಸಲಾಯಿಸುವ ಪ್ರಯತ್ನಗಳು ನಡೆದವು. ಆದರೆ ಗಾಂಧಿ, ಸಚಿವ ಆಯೋಗ ಏನೂ ಮಾಡಲಾಗದೆ ಸುಸ್ತಾಗಿ ರೂಪಿಸಿರುವಂತೆ ತೋರುವ ಈ ಗೊಂದಲಮಯ ಗುಂಪು ವ್ಯವಸ್ಥೆ ಸಾರತಃ ಕೋಮುವಾದಿಯಾಗಿದ್ದು ಕಾಂಗ್ರೆಸ್‌ನ ಬಹುಧರ್ಮ ಸ್ವರೂಪಕ್ಕೇ ಭಂಗ ತರುವುದೆಂದೂ ಇದನ್ನು ಸರಿಪಡಿಸುವ ಅವಕಾಶವಿದ್ದ ರಾಷ್ಟ್ರೀಯ ಸರ್ಕಾರದ ರಚನೆಗೆ ಇಲ್ಲಿ ಅವಕಾಶ ಕಲ್ಪಿಸಿಲ್ಲವಾದ್ದರಿಂದ, ಈ ಪ್ರಸ್ತಾವನೆಗೆ ತಮ್ಮ ಒಪ್ಪಿಗೆ ಇಲ್ಲವೆಂದು ಆಯೋಗದ ತಮ್ಮ ಗೆಳೆಯ ಸದಸ್ಯ ಕ್ರಿಪ್ಸ್‌ಗೆ ಬರೆದರು. ಇದರಲ್ಲಿ ಕಾಂಗ್ರೆಸ್ ಸರ್ಕಾರ ರಚನೆಗೆ ಮುಸ್ಲಿಂ ಲೀಗ್‌ನಿಂದ ತೊಡಕುಂಟಾಗುವುದಾದರೆ ಮುಸ್ಲಿಂ ಲೀಗ್‌ನದೇ ಸರ್ಕಾರ ರಚನೆಗೆ ಅವಕಾಶ ನೀಡಬಹುದಾಗಿದೆ ಎಂದೂ ಸೂಚಿಸಿದ್ದರು. ಆದರೆ ಬ್ರಿಟನ್‌ನ ಭಾರತೀಯ ವ್ಯವಹಾರಗಳ ವಿದೇಶಾಂಗ ಕಾರ್ಯದರ್ಶಿ, ಗಾಂಧಿಯವರ ಅಭಿಪ್ರಾಯವನ್ನು ಮಾನ್ಯ ಮಾಡಲು ನಿರಾಕರಿಸಲಾಗಿದೆ ಎಂಬ ಎರಡು ಸಾಲಿನ ಉತ್ತರವನ್ನು ಬರೆದ. ಈ ಉತ್ತರ,

ತಾವು ಅಳಿದುಹೋಗಿದೆ ಎಂದು ಭಾವಿಸಿದ್ದ ಸಾಮ್ರಾಜ್ಯಶಾಹಿ ಹಮ್ಮಿಗೆ ತಕ್ಕನಾಗಿಯೇ ಇದೆ ಎಂದು ಮಾರುತ್ತರ ನೀಡಿದರು.

ಗಾಂಧಿ ಮಾತನ್ನು ಕೇಳದ ಕಾಂಗ್ರೆಸ್– ಸಮಾಜವಾದಿಗಳ ವಿರೋಧ

ಗಾಂಧಿಯವರ ಈ ಮಾತು ಒಂದು ರೀತಿಯಲ್ಲಿ ನಿಜವೇ ಆಗಿತ್ತು. ಏಕೆಂದರೆ ಈಗ ಕ್ರಿಪ್ಸ್ ಮತ್ತು ಅವರ ಗೆಳೆಯರು ಗಾಂಧಿಯವರನ್ನು ಕೈಬಿಟ್ಟು ನೆಹರೂ–ಪಟೇಲರನ್ನು ತಮ್ಮ ಯೋಜನೆಯಲ್ಲಿ ಒಳಗೊಳ್ಳಿಸಿಕೊಳ್ಳುವ ಪ್ರಯತ್ನವನ್ನೂ ನಡೆಸಿದ್ದರು. ಆದರೆ ಆಯೋಗದ ಈ ಯಾವ ಪ್ರಯತ್ನವೂ ದಡ ಮುಟ್ಟದೆ, ಅದು ಜೂನ್ ಮಧ್ಯದ ಹೊತ್ತಿಗೆ ಮಾತುಕತೆ ವಿಫಲವಾಗಿದೆ ಎಂದು ಘೋಷಿಸಿತು. ಆದರೆ ಅಧಿಕಾರ ಹಸ್ತಾಂತರದ ಒಂದು ವ್ಯವಸ್ಥೆಯನ್ನು ರೂಪಿಸಲು ಬದ್ಧರಾಗಿಯೇ ಬಂದಿದ್ದ ಸಚಿವ ಆಯೋಗ ಈಗ ಒಂದು ಮಧ್ಯಂತರ ಸರ್ಕಾರದ ಪ್ರಯತ್ನಕ್ಕೆ ಮುಂದಾಯಿತು. ಇದಕ್ಕೆ ಕೆಲವು ಷರತ್ತುಗಳ ಆಧಾರದ ಮೇಲೆ ಅಧಿಕಾರಕ್ಕಾಗಿ ಕಾತುರರಾಗಿದ್ದ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ನ ನಾಯಕರನ್ನೂ ಒಪ್ಪಿಸುವಲ್ಲಿ ಯಶಸ್ವಿಯಾಯಿತು. ಜೂನ್ ೧೬ರಂದು ಹೊರಡಿಸಿದ ಈ ಸೂಚನೆಯ ಪ್ರಕಾರ ವೈಸ್‌ರಾಯ್ ಸಲಹಾ ಮಂಡಳಿಯು ಸಚಿವ ಸಂಪುಟದಂತೆ ಕೆಲಸ ಮಾಡುವ ಅಧಿಕಾರ ಹೊಂದಿರುವ ಈ ಸರ್ಕಾರ ಸಂಪೂರ್ಣವಾಗಿ ಭಾರತೀಯರಿಂದ ಕೂಡಿರುವುದು.

ಆದರೆ ಈ ಪ್ರಯತ್ನ ಕೂಡ ಕೈಗೂಡುವ ಲಕ್ಷಣ ಕಾಣಲಿಲ್ಲ. ಏಕೆಂದರೆ ಈ ಸಚಿವ ಸಂಪುಟದಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗೆ ಸಮಾನ ಸಂಖ್ಯೆಯ ಪ್ರಾತಿನಿಧ್ಯವಿರಬೇಕು ಮತ್ತು ಕಾಂಗ್ರೆಸ್ ಸೂಚಿಸುವ ಮಂತ್ರಿಗಳಲ್ಲಿ ಮುಸ್ಲಿಮರಿರಬಾರದು ಎಂಬ ಜಿನ್ನಾರ ಷರತ್ತನ್ನು ಗಾಂಧಿ ಒಪ್ಪಲಿಲ್ಲ. ಅವರು ಕಾಂಗ್ರೆಸ್ ಪಕ್ಷವು ಸಚಿವ ಸಂಪುಟವನ್ನು ಸೇರಲು ನಿರ್ಧರಿಸಿದರೆ ಅದು ತನ್ನ ಧಾರ್ಮಿಕ ಬಹುತ್ವ ಮತ್ತು ಸ್ತ್ರೀ ಸಬಲೀಕರಣದ ಆದರ್ಶಗಳಿಗನುಗುಣವಾಗಿ ಓರ್ವ ರಾಷ್ಟ್ರೀಯವಾದಿ ಮುಸ್ಲಿಮನನ್ನೂ, ಓರ್ವ ಮಹಿಳೆಯನ್ನೂ ಅದರಲ್ಲಿ ಸೇರಿಸಿಕೊಳ್ಳಬೇಕೆಂದು ಸಲಹೆ ಮಾಡಿದರು. (ನಿಮ್ನ ವರ್ಗಗಳ ಪ್ರತಿನಿಧಿಯನ್ನು ವೈಸ್‌ರಾಯ್‌ನೇ ನಾಮಕರಣ ಮಾಡುವನೆಂದು ಅವರು ಭಾವಿಸಿದ್ದರು) ಇದನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಗೆ ಪ್ಯಾರೇಲಾಲರ ಕೈಯಲ್ಲಿ ಕಳಿಸಿದ ಪತ್ರದ ಮೂಲಕ ತಿಳಿಸಿಯೂ ಇದ್ದರು. ಆದರೆ ಆಜ಼ಾದರೇ ಅಧ್ಯಕ್ಷರಾಗಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಗಾಂಧಿಯವರ ಆಶಯವನ್ನು ಲೆಕ್ಕಿಸದೆ ಸಚಿವ ಸಂಪುಟವನ್ನು ಸೇರಲು ನಿರ್ಧರಿಸಿ ಜೂನ್ ೧೬ರ ಸೂಚನೆಯ ಪ್ರಕಾರ ವೈಸ್‌ರಾಯ್ ವೇವೆಲ್ ಸಲಹೆ ಮಾಡಿದ ನೆಹರೂ, ಪಟೇಲ್, ಪ್ರಸಾದ್, ರಾಜಾಜಿ ಮತ್ತು ಹರೇಕೃಷ್ಣ ಮೆಹ್ತಾಬ್‌ರೊಂದಿಗೆ ಕಾಂಗ್ರೆಸ್‌ನ ಯುವ ಹರಿಜನ ನಾಯಕ ಜಗಜೀವನರಾಂರ ಹೆಸರುಗಳನ್ನು ಅನುಮೋದಿಸಿತು. ಈ ನಿರ್ಧಾರಕ್ಕೆ, ಹಿಂದೆ ಸಚಿವ ಸಂಪುಟದ ನಾಯಕತ್ವವನ್ನು ಉಪಾಧ್ಯಕ್ಷ ಎಂಬ ಸ್ಥಾನ ಕಲ್ಪಿಸಿ (ಅಧ್ಯಕ್ಷತೆ ಪದನಿಮಿತ್ತವಾಗಿ ವೈಸ್‌ರಾಯ್‌ನದೇ ಆಗಿದ್ದಿತು) ಅದನ್ನು ಕಾಂಗ್ರೆಸ್‌ನ ನೆಹರೂಗೆ ನೀಡಲಾಗಿದ್ದುದೂ ಒಂದು ಕಾರಣವಿರಬಹುದು. ಹಾಗೇ ಸಂಪುಟದಲ್ಲಿ ಮುಸ್ಲಿಂ ಲೀಗ್‌ನ ಜಿನ್ನಾ ಮತ್ತು

ಅವರ ಪಕ್ಷದ ಇನ್ನೂ ನಾಲ್ವರು ಸದಸ್ಯರಲ್ಲದೆ ಸಿಖ್ ಸಮುದಾಯದ ಪ್ರತಿನಿಧಿಯಾಗಿ ಬಲದೇವ್ ಸಿಂಗ್ ಮತ್ತು ಕ್ರೈಸ್ತ ಸಮುದಾಯದ ಪರವಾಗಿ ಮಥಾಯ್ ಎಂಬುವವರೂ ಇರಲಿರುವುದರಿಂದ ಸಚಿವ ಸಂಪುಟದ ನಿರ್ಧಾರಗಳ ಸಮಯದಲ್ಲಿ ಈ ಇಬ್ಬರೂ ಕಾಂಗ್ರೆಸ್ ಪರವಾಗಿ ಮತ ಹಾಕುವರು ಎಂಬ ನಂಬಿಕೆಯೂ ಕೆಲಸ ಮಾಡಿತ್ತು. ಸಂಪುಟಕ್ಕೆ ನಿಯೋಜಿತವಾಗಿದ್ದ ಪಾರ್ಸಿ ಪ್ರತಿನಿಧಿಯನ್ನೇನೂ ಕಾಂಗ್ರೆಸ್ ಪೂರ್ಣವಾಗಿ ನೆಚ್ಚಿದಂತಿರಲಿಲ್ಲವೆಂಬುದು ಬೇರೆ ಮಾತು.

ಕಾಂಗ್ರೆಸ್ ಪಕ್ಷಕ್ಕೆ ಹೊಸ ಅಧ್ಯಕ್ಷರು–ನೆಹರೂಗೆ ಗಾಂಧಿ ಶಿಫಾರ್ಸು

ಈ ಮಧ್ಯೆ ಕಾಂಗ್ರೆಸ್ ಪಕ್ಷಕ್ಕೆ ಹೊಸ ಅಧ್ಯಕ್ಷರ ಆಯ್ಕೆ ಮಾಡಬೇಕಾದ ಸಂದರ್ಭವೂ ಒದಗಿಬಂದಿತ್ತು. 'ಭಾರತ ಬಿಟ್ಟು ತೊಲಗಿ' ಚಳುವಳಿ ಮತ್ತು ಆ ನಂತರದ ನಾಯಕರ ದೀರ್ಘ ಕಾಲದ ಬಂಧನದ ಕಾರಣದಿಂದಾಗಿ ಆಜ಼ಾದರೇ ಆರು ವರ್ಷಗಳ ಕಾಲ ಪಕ್ಷದ ಅಧ್ಯಕ್ಷರಾಗಿ ಮುಂದುವರೆದಿದ್ದರು. ಈಗ ಅಧ್ಯಕ್ಷ ಸ್ಥಾನಕ್ಕೆ ಜೆ.ಬಿ. ಕೃಪಲಾನಿಯವರು ಅಭ್ಯರ್ಥಿಯಾಗಬಯಸಿದ್ದರು. ಆದರೆ ೧೫ ಪ್ರಾಂತೀಯ ಕಾಂಗ್ರೆಸ್ ಸಮಿತಿಗಳ ಪೈಕಿ ೧೨ ಸಮಿತಿಗಳು ಪಟೇಲರ ಹೆಸರನ್ನು ಶಿಫಾರ್ಸು ಮಾಡಿದ್ದವು. ಗಾಂಧಿ ಇವರಿಬ್ಬರನ್ನೂ ಬಿಟ್ಟು ನೆಹರೂ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ಸಲಹೆ ಮಾಡಿದರು. ಇದನ್ನು ಪಟೇಲರೂ ಸೇರಿದಂತೆ ಕಾರ್ಯಕಾರಿ ಸಮಿತಿಯ ಎಲ್ಲರೂ ಒಪ್ಪಿದರು. ಇದಕ್ಕೆ ಹಲವು ಕಾರಣಗಳಿದ್ದವು. ಗಾಂಧಿ ನೀಡಿದ ಹಲವು ಕಾರಣಗಳಲ್ಲಿ ಮುಖ್ಯವಾದುದೆಂದರೆ, ಭಾರತ ಸ್ವಾತಂತ್ರ್ಯದ ಹೊಸ್ತಿಲಿನಲ್ಲಿದ್ದು, ಕಾಂಗ್ರೆಸ್ ಅಧ್ಯಕ್ಷರಾಗಿರುವವರೇ ದೇಶದ ಪ್ರಧಾನಿಯೂ ಆಗುವ ಸಾಧ್ಯತೆ ಇರುವುದರಿಂದ ಸ್ವತಂತ್ರ ಭಾರತವು ನಿಕಟ ಭವಿಷ್ಯದಲ್ಲಿ ಜಾಗತಿಕ ರಾಜಕಾರಣದಲ್ಲಿ ಮಹತ್ವದ ಪಾತ್ರ ವಹಿಸಬೇಕಾಗಿದ್ದು, ಅಂತಾರಾಷ್ಟ್ರೀಯ ರಾಜಕಾರಣದ ತಿಳುವಳಿಕೆ ಮತ್ತು ಸಂಪರ್ಕಗಳಿದ್ದ ನೆಹರೂ ಆ ಸ್ಥಾನಕ್ಕೆ ಉಚಿತ ಅಭ್ಯರ್ಥಿ ಎಂಬುದು. ಅವರು ನೀಡಿದ ಇನ್ನಿತರ ಕಾರಣಗಳೆಂದರೆ ಈ ಸಂದರ್ಭದಲ್ಲಿ ಹಿಂದೂ–ಮುಸ್ಲಿಂ ಸಂಬಂಧ ಬಹು ನಾಜೂಕಾಗಿದ್ದು, ಪದೇ ಪದೇ 'ದಂಡಂ ದಶಗುಣಂ' ಎನ್ನುವ ಪಟೇಲರಿಗಿಂತ ಮುಸ್ಲಿಂರ ಮಧ್ಯೆ ವಿಶ್ವಾಸ ಉಳಿಸಿಕೊಂಡಿರುವ ನೆಹರೂ ಸದ್ಯಕ್ಕಾದರೂ ಉಪಯುಕ್ತ ಅಭ್ಯರ್ಥಿಯಾದಾರು ಮತ್ತು ಪಟೇಲರು ದೇಶದ ಉತ್ತರ ಮತ್ತು ಪಶ್ಚಿಮ ಭಾಗಗಳಿಗಷ್ಟೇ ಹೆಚ್ಚು ಪರಿಚಿತರಾದ ನಾಯಕರು ಎಂಬುದು.

ಇದೇ ವೇಳೆಯಲ್ಲಿ ಜೂನ್ ೨೮ರಂದು ಪಂಚಾಗ್ನಿಯಿಂದ ಬಾಂಬೆಗೆ ವಾಪಸಾಗಲು ಗಾಂಧಿ ಪ್ರಯಾಣಿಸುತ್ತಿದ್ದ ರೈಲು ಚಾಲಕನ ಮುಂಜಾಗ್ರತೆಯಿಂದಾಗಿ ದೊಡ್ಡ ಅಪಘಾತದಿಂದ ಪಾರಾಗಿತ್ತು. ಬಾಂಬೆ ನಗರದ ಬಳಿ ಹಳಿಯ ಮೇಲೆ ದೊಡ್ಡ ಕಲ್ಲುಗಳನ್ನಿರಿಸಿ ರೈಲು ಗಾಡಿಯನ್ನು ಉರುಳಿಸುವ ಸಂಚು ನಡೆದಿತ್ತು. ಇದರ ಉದ್ದೇಶ ಗಾಂಧಿಯವರನ್ನು ಕೊಲ್ಲುವುದೇ ಆಗಿತ್ತೆಂದು ತನಿಖೆಯಿಂದ ಗೊತ್ತಾಯಿತು. ಹಳಿಗಳ ಮೇಲಿನ ಕಲ್ಲುಗಳನ್ನು ತೆಗೆದು ರೈಲಿನ ಹಾದಿ ಸುಗಮಗೊಳಿಸುವ ಒಂದೂವರೆ ತಾಸಿನ ಅವಧಿಯ ಕಾರ್ಯಾಚರಣೆಯುದ್ದಕ್ಕೂ ಇದಾವುದರ ಅರಿವೇ ಇಲ್ಲದಂತೆ ಗಾಂಧಿ ತಮ್ಮ ಬೋಗಿಯಲ್ಲಿ ಗಾಢ ನಿದ್ರೆಯಲ್ಲಿದ್ದರು. ಈ ಘಟನೆಯನ್ನು ನಂತರ ಯಾರೋ ಅವರಿಗೆ

ತಿಳಿಸಿದಾಗ ಅವರು, 'ಮನುಷ್ಯ ಮೃತ್ಯುವಿನಿಂದ ಪಾರಾಗಲು ಹೋರಾಡುತ್ತಿರುವಾಗಲೇ ತನಗೆ ಗೊತ್ತಿಲ್ಲದಂತೆ ಅದರ ತೊಡೆಯ ಮೇಲೇ ಮಲಗಿರುತ್ತಾನೆ ಎಂಬುದಕ್ಕೆ ಇದೊಂದು ರೂಪಕ' ಎಂದು ನಸುನಕ್ಕರಂತೆ!

ಬದಲಾದ ಗಾಂಧಿ ನಿಲುವು– ವಿಫಲವಾದ ಸರ್ಕಾರ ರಚನೆಯ ಪ್ರಯತ್ನ

ಮಧ್ಯಂತರ ಸರ್ಕಾರದಲ್ಲಿ ಪಾಲ್ಗೊಳ್ಳುವ ಮತ್ತು ಸಂವಿಧಾನ ರಚನೆ ಪ್ರಕ್ರಿಯೆಗೆ ಒಪ್ಪಿಗೆ ನೀಡುವ ಕಾರ್ಯಕಾರಿ ಮಂಡಳಿಯ ನಿರ್ಧಾರವನ್ನು ಸ್ಥಿರೀಕರಿಸಲು ಜುಲೈ ೭ರಂದು ಎಐಸಿಸಿ ಅಧಿವೇಶನ ಕರೆಯಲಾಗಿತ್ತು. ಈ ಅಧಿವೇಶನದಲ್ಲಿ ಸಮಾಜವಾದಿಗಳಿಂದ ಕಾರ್ಯಕಾರಿ ಸಮಿತಿಯ ನಿರ್ಧಾರಕ್ಕೆ ಪ್ರಬಲ ವಿರೋಧ ವ್ಯಕ್ತವಾಯಿತು. ಈ ವಿರೋಧದ ನಾಯಕತ್ವ ವಹಿಸಿದವರು, ಆಗ ತಾನೇ ಸೆರೆಮನೆಯಿಂದ ಬಿಡುಗಡೆ ಹೊಂದಿ, 'ಭಾರತ ಬಿಟ್ಟು ತೊಲಗಿ' ಚಳುವಳಿಯನ್ನು ಭೂಗತರಾಗಿ ತಮ್ಮ ಅನುಪಮ ಸಾಹಸಗಳ ಮೂಲಕ ಜೀವಂತವಿಟ್ಟುದುದಕ್ಕಾಗಿ ಯುವ ಜನತೆಯ ಕಣ್ಮಣಿಗಳಾಗಿದ್ದ ಜೆಪಿ ಮತ್ತು ಲೋಹಿಯಾ. ಶಿಕ್ಷಣ ಮತ್ತು ಆಸ್ತಿ ಪ್ರಮಾಣದ ಆಧಾರದ ಮೇಲೆ ಸಿದ್ಧಗೊಳಿಸಲಾಗಿದ್ದ ಸೀಮಿತ ಮತದಾರರ ಪಟ್ಟಿಯ ಮೇಲೆ ಆಯ್ಕೆಯಾಗಿರುವ ಶಾಸಕರಿಂದೊಡಗೂಡಿದ ಸಂವಿಧಾನ ರಚನಾ ಸಭೆ, ಇಡೀ ಭಾರತದ ಜನತೆಯ ನಿಜವಾದ ಆಶೋತ್ತರಗಳನ್ನು ಪ್ರತಿಬಿಂಬಿಸುವ ಸಂವಿಧಾನವನ್ನು ರೂಪಿಸಲಾರದು ಎಂದು ಜೆಪಿ ವಾದಿಸಿದರು. ಆದರೆ ಅವರನ್ನು ಸಮಾಧಾನಪಡಿಸಿದ ಗಾಂಧಿ, ಜೆಪಿ–ಲೋಹಿಯಾರಂತಹ ಧೀರ ನಾಯಕರು ಸಂವಿಧಾನ ರಚನೆಯಲ್ಲಿ ಸಂಭವಿಸಬಹುದಾದ ಯಾವುದೇ ಲೋಪದೋಷಗಳನ್ನು ಮುಂದಿನ ದಿನಗಳಲ್ಲಿ ಸರಿಪಡಿಸುವ ಸಾಮರ್ಥ್ಯ ಹೊಂದಿದ್ದಾರೆ ಎಂದು ಹೇಳುತ್ತ, ಕಾರ್ಯಕಾರಿ ಸಮಿತಿಯ ನಿರ್ಧಾರಕ್ಕೆ ಅಧಿವೇಶನದ ಬೆಂಬಲ ಕೋರಿದರು. ಬಹುಶಃ ಅಧಿಕಾರ ಹಸ್ತಾಂತರ ಪ್ರಕ್ರಿಯೆಗೆ ತಾವು ತೊಡಕಾಗಬಾರದೆಂದು ಗಾಂಧಿ, ತಮ್ಮ ಮಾತನ್ನು ಕೇಳದ ಕಾರ್ಯಕಾರಿ ಸಮಿತಿಯ ವರ್ತನೆಯನ್ನು ಕ್ಷಮಿಸಿದ್ದರೆಂದು ಕಾಣುತ್ತದೆ. ಈ ಚರ್ಚೆಯ ವೇಳೆಯಲ್ಲಿ ಲೋಹಿಯಾರಿಗೆ, ಪಟೇಲರು 'ಇದೆಲ್ಲ ಹೋರಾಟ ನಿಮ್ಮಂತಹ ತರುಣ ಜನಾಂಗಕ್ಕಾಗಿ ಎಂಬುದನ್ನು ಅರ್ಥ ಮಾಡಿಕೊಳ್ಳಿ' ಎಂದಾಗ ಲೋಹಿಯಾ 'ಹೋರಾಟ ನಿಮ್ಮದು ಮಾತ್ರವಲ್ಲ; ನಿಮ್ಮ ಹಿಂದೆ ನಿಂತು ನಾವೂ ಹೋರಾಟ ಮಾಡಿದ್ದೇವೆ ಎಂಬುದನ್ನು ಮರೆಯಬೇಡಿ' ಎಂದು ತಿರುಗೇಟು ನೀಡಿದ್ದೂ ನಡೆಯಿತು!

ಆದರೆ ವೈಸ್‌ರಾಯ್ ಕಳಿಸಿದ್ದ ಕಾಂಗ್ರೆಸ್ ಮಂತ್ರಿಗಳ ಪಟ್ಟಿಯನ್ನು ಗಾಂಧಿಯವರ ಸಲಹೆಯ ಮೇರೆಗೆ ಕಾಂಗ್ರೆಸ್ ಒಪ್ಪುವುದಿಲ್ಲ; ಹಾಗಾಗಿ ಒಪ್ಪಂದದ ಒಂದು ವಿಧಿಯ ಪ್ರಕಾರ ತಮ್ಮನ್ನೇ ಸರ್ಕಾರ ರಚಿಸಲು ಆಹ್ವಾನಿಸಲಾಗುವುದು ಎಂಬ ನಿರೀಕ್ಷೆಯಲ್ಲಿದ್ದ ಜಿನ್ನಾರಿಗೆ ಮತ್ತು ಗಾಂಧಿಯವರ ಮೇಲಿನ ಸಿಟ್ಟಿನಿಂದಾಗಿ (ಯುದ್ಧದ ಸಮಯದಲ್ಲಿ ಬ್ರಿಟಿಷ್ ಸೇನೆಯ ಓರ್ವ ದಂಡನಾಯಕನಾಗಿದ್ದ ವೇವೆಲ್‌ಗೆ ಗಾಂಧಿಯ 'ಭಾರತ ಬಿಟ್ಟು ತೊಲಗಿ' ಚಳುವಳಿ ಒಂದು ಕಿರಿಕಿರಿಯಾಗಿ ಕಾಡಿದ್ದೇ ಈ ಸಿಟ್ಟಿಗೆ ಮುಖ್ಯ ಕಾರಣವಾಗಿತ್ತು) ಅಂತಹ ಆಹ್ವಾನ ನೀಡಲು ಸಂತೋಷದಿಂದ ಸಿದ್ಧನಿದ್ದ

ವೈಸ್‌ರಾಯ್‌ಗೆ ನಿರಾಶೆಯಾಯಿತು. ಜಿನ್ನಾ ಸಚಿವ ಸಂಪುಟದಲ್ಲಿ ತನ್ನ ಪಕ್ಷಕ್ಕೆ ಸಮಾನ ಪ್ರಾತಿನಿಧ್ಯವಿಲ್ಲವೆಂದು (ಮತ್ತು ಬಹುಶಃ ಸಂಪುಟದ ನಾಯಕತ್ವ ಕಾಂಗ್ರೆಸ್‌ನ ನೆಹರೂಗೆ ವಹಿಸಲಾಗಿದೆ ಎಂಬ ಕಾರಣದಿಂದಲೂ) ಹೇಳಿ ಸಂಪುಟ ಸೇರಲು ನಿರಾಕರಿಸಿದರು. ಇಲ್ಲಿಗೆ ಈ ಪ್ರಯತ್ನವೂ ವಿಫಲವಾಯಿತು. ಆಯೋಗದ ಸದಸ್ಯರು ಜೂನ್ ಕೊನೆಯ ವಾರದಲ್ಲಿ ಲಂಡನ್‌ಗೆ ವಾಪಸಾದರು.

ಕಾಂಗ್ರೆಸ್‌ನೊಂದಿಗೆ ಮೈತ್ರಿಗೆ ಅಂಬೇಡ್ಕರ್ ಪ್ರಯತ್ನ– ಪಟೇಲರೊಂದಿಗೆ ಪತ್ರ ವ್ಯವಹಾರ

ಇದೇ ವೇಳೆಯಲ್ಲಿ ಚುನಾವಣೆಗಳಲ್ಲಿ ಭಾರೀ ಸೋಲನ್ನು ಅನುಭವಿಸಿದ್ದ ಕಾರಣದಿಂದಾಗಿ ಆ ಸಂದರ್ಭದ ಯಾವ ರಾಜಕೀಯ ವ್ಯವಹಾರಗಳಲ್ಲೂ ಮಹತ್ವದ ಪಾತ್ರ ವಹಿಸಲು ಸಾಧ್ಯವಾಗದಿದ್ದ ಅಂಬೇಡ್ಕರ್, ಈಗ ಕಾಂಗ್ರೆಸ್‌ನೊಂದಿಗೆ ಮೈತ್ರಿ ಬಯಸಿ ಜುಲೈ ಸುಮಾರಿಗೆ ಎನ್.ಎಂ. ಜೋಷಿ ಎಂಬ ಕಾರ್ಮಿಕ ನಾಯಕರ ಮೂಲಕ ಪಟೇಲರನ್ನು ಸಂಪರ್ಕಿಸಿ ಮಾತುಕತೆ ನಡೆಸಿದರು. ಈ ಮಾತುಕತೆಯಲ್ಲಿ ಅಂಬೇಡ್ಕರ್, ಭವಿಷ್ಯದ ಚುನಾವಣೆಗಳಲ್ಲಿ ಒಟ್ಟು ಸ್ಥಾನಗಳಲ್ಲಿ ತಮ್ಮ ಶೆಡ್ಯೂಲ್ಡ್ ಕ್ಯಾಸ್ಟ್ಸ್ ಫೆಡರೇಶನ್ ಪಕ್ಷಕ್ಕೆ ಶೇ. ೨೦ರಷ್ಟು ಸ್ಥಾನಗಳನ್ನು ನೀಡಬೇಕೆಂದು ಕೇಳಿದ್ದರು. ಅಂಬೇಡ್ಕರ್ ಈ ಹಿಂದೆ ಜಿನ್ನಾರ ಜೊತೆ ಸೇರಿ ಕಾಂಗ್ರೆಸ್‌ಗೆ ಉಂಟು ಮಾಡಿದ್ದ ತೊಂದರೆಯ ಹಿನ್ನೆಲೆಯಲ್ಲಿ, ಅಂಬೇಡ್ಕರ್‌ರನ್ನು ಜಿನ್ನಾರಿಂದ ಸೆಳೆಯಲು ಇದೇ ಅವಕಾಶವೆಂದು ಬಗೆದು, ಪಟೇಲರು ಈ ಬಗ್ಗೆ ಗಾಂಧಿಯವರಿಗೆ ಪತ್ರ ಬರೆದರು. ಇದಕ್ಕೆ ಉತ್ತರ ಬರೆದ ಗಾಂಧಿ, ಯಾವುದೇ ತತ್ವಕ್ಕೆ ಅಂಟಿಕೊಳ್ಳದೆ ತನ್ನ ಉದ್ದೇಶಕ್ಕಾಗಿ ಯಾವ ಮಾರ್ಗವನ್ನು ಅನುಸರಿಸಲೂ ಸಿದ್ಧವೆಂದು ತೋರಿರುವ ಮತ್ತು ಯಾವುದೇ ನಿರ್ದಿಷ್ಟ ಪರಿಗಣನೆ ಇಲ್ಲದೆ ಇಸ್ಲಾಂ, ಕ್ರೈಸ್ತ ಅಥವಾ ಸಿಖ್ ಧರ್ಮಕ್ಕೆ ಸೇರುವುದಾಗಿ ಬೆದರಿಸುವ ವ್ಯಕ್ತಿಯ ಸಹವಾಸ ಕಷ್ಟವಾಗಬಹುದು, ಯೋಚಿಸಿ ಎಂದು ತಿಳಿಸಿದರಲ್ಲದೆ, ನಿಮ್ನವರ್ಗಗಳ ಕಲ್ಯಾಣಕ್ಕೆ ಕಟಿಬದ್ಧರಾಗಿರುವ ಅಂಬೇಡ್ಕರ್, ಅಸ್ಪೃಶ್ಯರಿಗೆ ಎಲ್ಲ ರೀತಿಯ ಕಿರುಕುಳ ಕೊಡುತ್ತಿರುವ ಜನ ಹೆಚ್ಚಾಗಿ ಕಾಂಗ್ರೆಸ್ಸಿಗರೇ ಆಗಿರುವ ವಾಸ್ತವದ ಹಿನ್ನೆಲೆಯಲ್ಲಿ ಕಾಂಗ್ರೆಸ್‌ನ ಸ್ನೇಹವನ್ನು ಎಷ್ಟು ಕಾಲ ಉಳಿಸಿಕೊಂಡಾರು ಎಂಬುದನ್ನೂ ಯೋಚಿಸಬೇಕಾಗಿದೆ ಎಂದು ವಿವರಿಸಿದರು. ಆ ಪತ್ರದಲ್ಲಿ ಗಾಂಧಿ ಸವರ್ಣೀಯ ಹಿಂದೂಗಳ ಮನಸ್ಸು ಮೃದುವಾಗುವವರೆಗೂ ಅಂಬೇಡ್ಕರ್ ಕಾಯಲು ಸಿದ್ಧರಿರಲಾರರು ಎನ್ನುತ್ತಾ, ಅಂತಿಮ ತೀರ್ಮಾನವನ್ನು ಪಟೇಲರಿಗೇ ಬಿಟ್ಟಿದ್ದರು.

ಪಟೇಲರು ಮೈತ್ರಿಯ ಸಾಧ್ಯತೆಗಳನ್ನು ಪರಿಶೀಲಿಸಬಹುದೆಂದೂ, ಅದಕ್ಕಾಗಿ ಒಂದು ಕಾರ್ಯಸೂಚಿಯನ್ನು ಸಿದ್ಧಪಡಿಸಬಹುದೆಂದೂ ಅಂಬೇಡ್ಕರ್‌ಗೆ ಪತ್ರ ಬರೆದರು. ಉತ್ತರ ಬರೆದ ಅಂಬೇಡ್ಕರ್ ಈಗ ಒಂದು ಕಾರ್ಯಸೂಚಿಯನ್ನು ಮುಂದಿಟ್ಟಿದ್ದರು. ಅದರಲ್ಲಿ ಸರ್ಕಾರಿ ಸೇವೆಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಒಂದು ನಿರ್ದಿಷ್ಟ ಮೀಸಲಾತಿ, ಪರಿಶಿಷ್ಟ ಜಾತಿಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದೇಶೀ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿ ವೇತನ ಇತ್ಯಾದಿ ಸೂಚಿಗಳೊಂದಿಗೆ ತಮ್ಮ ಹಳೆಯ ಪ್ರತ್ಯೇಕ

ಮತಕ್ಷೇತ್ರಗಳ ಸಲಹೆಯ ಜಾರಿಗೂ ಒತ್ತಾಯಿಸಿದ್ದರು. ಕಳೆದ ಚುನಾವಣೆಗಳಲ್ಲಿನ ತಮ್ಮ ಪಕ್ಷದ ಭಾರೀ ಸೋಲಿಗೆ ಪೂನಾ ಒಪ್ಪಂದವೇ ಕಾರಣವೆಂದು ತಿಳಿಸಿದ್ದರು.

ಇದಕ್ಕೆ ಉತ್ತರ ಬರೆದ ಪಟೇಲರು, ಅಂಬೇಡ್ಕರ್ ಅವರ ಸೂಚಿಗಳು ಗಂಭೀರ ಪರಿಶೀಲನೆಗೆ ಅರ್ಹವೇ ಆಗಿದ್ದರೂ, ಈ ಹಿಂದೆ ಅವರು ಕಾಂಗ್ರೆಸ್‌ನ ಮೇಲೆ, ನಿರ್ದಿಷ್ಟವಾಗಿ ತಮ್ಮ ನಾಯಕ ಗಾಂಧಿಯವರ ಮೇಲೆ ಮಾಡಿದ ಜಿಗುಪ್ಸೆಕರ ದಾಳಿ, ತಮ್ಮ ಮನಸ್ಸಿನಲ್ಲಿ ಮಾಡಿರುವ ಗಾಯಗಳು ಇನ್ನೂ ಮಾಯಬೇಕಿವೆ ಎಂಬುದನ್ನೂ ಅವರ ಗಮನಕ್ಕೆ ತರಬಯಸುವುದಾಗಿ ತಿಳಿಸಿದ್ದರು. ಈ ಪತ್ರ ಅಂಬೇಡ್ಕರ್‌ರನ್ನು ಕೆರಳಿಸಿತು. ತಾವು ಕಳಿಸಿದ್ದು ಮೈತ್ರಿಯ ಸಂದೇಶವನ್ನೇ ಹೊರತು ಶರಣಾಗತಿಯ ಸಂದೇಶವನ್ನಲ್ಲ ಎಂದು ತಮ್ಮ ಪತ್ರವನ್ನು ಆರಂಭಿಸಿದ ಅವರು, ತಾವು ಕಾಂಗ್ರೆಸ್ ಮತ್ತು ಗಾಂಧಿಯವರ ಮೇಲೆ ಮಾಡಿದ ದಾಳಿ ವಿನಾಕಾರಣವಾದದ್ದಾಗಿರಲಿಲ್ಲವೆಂದೂ, ಗಾಂಧಿಯನ್ನು ಶಪಿಸುವವರು ತಾವೊಬ್ಬರೇ ಆಗಿರದೆ ಹಲವರಿದ್ದಾರೆಂದೂ ತಿಳಿಸಿದ್ದರು. ಜೊತೆಗೆ, ತಾವು ಯಾವುದೇ ರಾಷ್ಟ್ರೀಯವಾದಿಗಿಂತ ಹೆಚ್ಚಿನ ರಾಷ್ಟ್ರೀಯವಾದಿಯಾಗಿದ್ದು, ತಾವು ತಮ್ಮ ಈ ರಾಷ್ಟ್ರೀಯತೆಯನ್ನು ಪೂರ್ಣ ಪ್ರಮಾಣದಲ್ಲಿ ಪ್ರದರ್ಶಿಸಲಾಗಿರದಿದ್ದರೆ ಅದಕ್ಕೆ ಗಾಂಧಿಯವರ ವಿಶ್ವಾಸದ್ರೋಹವೇ ಕಾರಣವೆಂದು ತಿಳಿಸುತ್ತಾ, ಪಟೇಲರು ನೀಡಿದ್ದ ಮಾತುಕತೆಯ ಆಹ್ವಾನವನ್ನು 'ನಿಷ್ಪ್ರಯೋಜಕ' ಎಂದು ತಿರಸ್ಕರಿಸಿದ್ದರು.

ದಯವಿಟ್ಟು ಗಾಂಧಿಯನ್ನು ಅಮೆರಿಕಾಗೆ ಆಮದು ಮಾಡಿಕೊಳ್ಳಿ!

ಹೆಚ್ಚು ಪ್ರಚಲಿತವಿಲ್ಲದ ಕಾಂಗ್ರೆಸ್‌ನೊಡನೆಯ ಅಂಬೇಡ್ಕರ್ ಅವರ ಮೈತ್ರಿಯ ಈ ಪ್ರಸಂಗವನ್ನು ತಮ್ಮ 'ಗಾಂಧಿ' ಕೃತಿಯಲ್ಲಿ ವಿವರವಾಗಿ ನಿರೂಪಿಸಿರುವ ರಾಮಚಂದ್ರ ಗುಹಾ ಅವರು, ಗಾಂಧಿಯವರನ್ನು ಅಂಬೇಡ್ಕರ್ ಅವರು ಎಷ್ಟು ಕಾಡಿದ್ದರೋ ಅಂಬೇಡ್ಕರ್‌ರನ್ನೂ ಗಾಂಧಿ ಅಷ್ಟೇ ಕಾಡಿದ್ದರ ಒಂದೆರಡು ದೃಷ್ಟಾಂತಗಳನ್ನೂ ನೀಡಿದ್ದಾರೆ. ಅಂಬೇಡ್ಕರ್ ಒಮ್ಮೆ ತಮ್ಮ ಪುಸ್ತಕಗಳ ಪ್ರಕಾಶಕರಾಗಿದ್ದ ಬಾಂಬೆಯ ಥ್ಯಾಕರ್ಸ್ ಅಂಡ್ ಕಂ. ಕಛೇರಿಗೆ ಹೋಗಲು ಮೆಟ್ಟಿಲುಗಳನ್ನು ಹತ್ತುತ್ತಿದ್ದಾಗ, ಆ ಪ್ರಕಾಶಕರೇ ಪ್ರಕಟಿಸುತ್ತಿದ್ದ ಗಾಂಧಿಯವರ ಪುಸ್ತಕವೊಂದರ ಪ್ರಚಾರ ಭಿತ್ತಿಪತ್ರ ಕಣ್ಣಿಗೆ ಬಿದ್ದು ಅವರು 'ಈ ಹಾಳು ಮುದುಕನ ಬಗ್ಗೆ ಎಷ್ಟು ಪುಸ್ತಕಗಳನ್ನು ಬರೆದರೂ ಈ ಜನಕ್ಕೆ ಸಾಕಾಗುತ್ತಿಲ್ಲ! ನಿಜವಾಗಿ ನನ್ನ ಉಸಿರು ಕಟ್ಟಿಸುತ್ತಿದ್ದಾನೆ ಈ ಮುದುಕ!!' ಎಂದು ಗೊಣಗಿದರಂತೆ. ಇನ್ನೊಮ್ಮೆ, ವಿನ್ಸೆಂಟ್ ಶೀನ್ ಎಂಬ ಅಮೆರಿಕನ್ ಪತ್ರಕರ್ತ ಎದುರಾದಾಗ, 'ನೋಡಿ, ನೀವು ಅಮೆರಿಕನ್ನರಿಗೆ ಸದಾ ಆ ಗಾಂಧಿಯ ಬಗ್ಗೆ ಬರೆಯುತ್ತಲೇ ಇರುವಷ್ಟು ಪ್ರೀತಿಯುಂಟಾಗಿದ್ದರೆ ದಯವಿಟ್ಟು ಆತನನ್ನು ಅಮೆರಿಕಾಕ್ಕೆ ಆಮದು ಮಾಡಿಕೊಂಡು ನಾವು ಸ್ವಲ್ಪ ನಿರಾಳವಾಗಿ ಉಸಿರಾಡಲು ಬಿಡಿ!' ಎಂದರಂತೆ!

■

೮೯

ನೌಖಾಲಿ ಎಂಬ ಪ್ರಯೋಗ ಶಾಲೆ

ಮಹಮ್ಮದಾಲಿ ಜಿನ್ನಾ ಈಗ ಹತಾಶರಾಗಿದ್ದರು. ಗಾಂಧಿ ಮತ್ತು ಕಾಂಗ್ರೆಸ್ ಮೇಲಿನ ಜಿದ್ದು, ಎಂದೂ ನಿಷ್ಠಾವಂತ ಮುಸ್ಲಿಮನಾಗಿಲ್ಲದ ಮತ್ತು ಸಂಪೂರ್ಣ ಪಾಶ್ಚಾತ್ತ್ಯೀಕರಣಗೊಂಡ ಜೀವನಕ್ರಮಕ್ಕೆ ಒಲಿದಿದ್ದ ಅವರನ್ನು ಇಸ್ಲಾಮಿನ 'ಪವಿತ್ರ ಭೂಮಿ' ಎಂಬರ್ಥದ ಪಾಕಿಸ್ತಾನದ ಕಲ್ಪನೆಯ ಭೂತ ಆವರಿಸಿತ್ತು. ಕಳೆದ ಚುನಾವಣೆಗಳ ಫಲಿತಾಂಶಗಳು ಸಾಬೀತುಪಡಿಸಿದ್ದಂತೆ ಭಾರತದ ಮುಸ್ಲಿಂ ಸಮುದಾಯದ ಬಹುಭಾಗ ಅವರ ಹಿಂದಿತ್ತು. ಆದರೆ ಅಧಿಕಾರ ಹಸ್ತಾಂತರದ ಈ ಹೊತ್ತಿನಲ್ಲಿ ಅವರ ಅಖಂಡ ಸಾರ್ವಭೌಮ ಪಾಕಿಸ್ತಾನದ ಕಲ್ಪನೆ ಸಾಕಾರಗೊಳ್ಳಲು ಅನೇಕ ಅಡ್ಡಿಗಳು ಎದುರಾಗಿದ್ದವು. ಲಂಡನ್‌ನಿಂದ ಬಂದಿದ್ದ ಸಚಿವ ಆಯೋಗವೂ ಅವರ ನೆರವಿಗೆ ಬಂದಿರಲಿಲ್ಲ. ಜೊತೆಗೆ ತಮ್ಮ ಮುಸ್ಲಿಂ ಸಮುದಾಯದ ರಾಜಕೀಯ ಏಕಸ್ವಾಮ್ಯ ನೀತಿಗೆ ಸೊಪ್ಪು ಹಾಕದ ಕಾಂಗ್ರೆಸ್‌ನ ರಾಜಕಾರಣ, ತಾವು ಮಧ್ಯಂತರ ಸರ್ಕಾರದಲ್ಲಿ ಸಮಾನ ಸ್ಥಾನಮಾನದೊಂದಿಗೆ ಅಧಿಕಾರ ಚಲಾಯಿಸುವ ಅವಕಾಶಕ್ಕೂ ಕಲ್ಲು ಹಾಕಿತ್ತು. ಅವರ ರಾಜಕಾರಣಕ್ಕೀಗ ದಿಕ್ಕೇ ಇಲ್ಲವಾಗಿತ್ತು. ಆಗ ಅವರ ಮನಸ್ಸಿಗೆ ಬಂದದ್ದೇ 'ನೇರ ಕಾರ್ಯಾಚರಣೆ'ಯ ಕಲ್ಪನೆ. ಅಂದರೆ ಜನರನ್ನು ಬೀದಿಗೆ ನುಗ್ಗಿಸಿ ಪ್ರತಿಭಟನೆಗಳನ್ನು ಏರ್ಪಡಿಸುವುದು.

ಹಾಗೆ ನೋಡಿದರೆ ಜಿನ್ನಾ ಮೊದಲಿಂದಲೂ ಸಾಂವಿಧಾನಿಕ ಮಾರ್ಗಗಳ ಮೂಲಕ ಹೋರಾಟದಲ್ಲಿ ಅಚಲ ನಂಬಿಕೆ ಇಟ್ಟವರು. ಅವರು ಎಂದೂ ಬೀದಿ ಮತ್ತು ಜನ ಹೋರಾಟಗಳನ್ನು ಇಷ್ಟಪಟ್ಟವರಲ್ಲ. ಅವರು ೧೯೨೦ರಲ್ಲಿ ಕಾಂಗ್ರೆಸ್‌ನಿಂದ ದೂರವಾಗತೊಡಗಿದ್ದೇ ಗಾಂಧಿ ಜನ ಕಟ್ಟಿಕೊಂಡು ಸತ್ಯಾಗ್ರಹದ ಹೆಸರಿನಲ್ಲಿ ಬೀದಿಗಿಳಿದಾಗಿನಿಂದಲೇ. ಆದರೆ ಈಗ ಹತಾಶರಾಗಿದ್ದ ಅವರು, ದೇಶಾದ್ಯಂತ ಪಾಕಿಸ್ತಾನದ ಬೇಡಿಕೆಗಾಗಿ ಬೀದಿಗಿಳಿದು ಪ್ರದರ್ಶನ ಮಾಡುವಂತೆ ಕರೆಕೊಟ್ಟರು. ಈ ನೇರ ಕಾರ್ಯಾಚರಣೆ ೧೯೪೬ ರ ಆಗಸ್ಟ್ ೧೬ರಂದು ನಡೆಯುವುದೆಂದು ಮುಸ್ಲಿಂ ಲೀಗ್ ಪ್ರಕಟಿಸಿತು. ಈ ಕಾರ್ಯಾಚರಣೆ ಅಹಿಂಸಾತ್ಮಕವಾಗಿರುವುದೋ ಎಂಬ ಪತ್ರಕರ್ತರ ಪ್ರಶ್ನೆಗೆ ಜಿನ್ನಾ ನೀಡಿದ 'ನೀತಿಶಾಸ್ತ್ರ ಹೇಳಲು ನನಗೀಗ ಪುರುಸೊತ್ತಿಲ್ಲ' ಎಂಬ ಉತ್ತರದಲ್ಲೇ ಎರಗಲಿರುವ ಅನಾಹುತಗಳ ಸೂಚನೆ ಇದ್ದಂತಿತ್ತು.

ಮುಸ್ಲಿಂ ಲೀಗ್‌ನ 'ನೇರ ಕಾರ್ಯಾಚರಣೆ'–ಹಬ್ಬಿದ ಹಿಂಸಾಚಾರ

ಲೀಗ್ ದೇಶಾದ್ಯಂತ ಪ್ರತಿಭಟನೆಗೆ ಕರೆಕೊಟ್ಟಿತ್ತಾದರೂ ಎಲ್ಲರ ಕಣ್ಣು ನೆಟ್ಟಿದ್ದುದು ಆ

ಪಕ್ಷ ಸ್ವತಂತ್ರವಾಗಿ ಅಧಿಕಾರದಲ್ಲಿದ್ದ ಬಂಗಾಳದ ಮೇಲೆ. ವಿಶೇಷವಾಗಿ ಅದರ ರಾಜಧಾನಿ ಕಲ್ಕತ್ತಾದ ಮೇಲೆ. ಅಂದು ನಿರೀಕ್ಷಿಸಿದಂತೆಯೇ ಆಯಿತು. ನಿರೀಕ್ಷೆಯನ್ನು ಮೀರಿಯೇ ನಗರದ ಬೀದಿ ಬೀದಿಗಳಲ್ಲಿ ಹಿಂಸಾಚಾರ ತಾಂಡವವಾಡಿತು. ಮುಖ್ಯಮಂತ್ರಿ ಸುಹ್ರವರ್ದಿ ಮತ್ತಿತರ ಲೀಗ್ ನಾಯಕರ ಭಾಷಣಗಳನ್ನು ಕೇಳಲು ಗುಂಪು ಕಟ್ಟಿ ಹೊರಟ ಲೀಗ್ ಬೆಂಬಲಿಗರು, ತಮ್ಮ ಕರೆಗೆ ಓಗೊಡದೆ ತೆರೆದಿದ್ದ ಅಂಗಡಿ–ಮುಂಗಟ್ಟುಗಳಿಗೆ ಕಲ್ಲು ತೂರಿದರು. ಪೆಟ್ರೋಲ್ ಸುರಿದ ಬಟ್ಟೆಯ ಬೆಂಕಿಯ ಉಂಡೆಗಳನ್ನು ಎಸೆದರು. ನಗರ ಅಶಾಂತವಾಯಿತು. ಅವರೆಲ್ಲ ಉನ್ಮತ್ತ ಭಾಷಣಗಳನ್ನು ಕೇಳಿ ಉನ್ಮತ್ತರಾಗಿ ಬರುವಾಗ ಇನ್ನಷ್ಟು ಹಿಂಸಾಚಾರಕ್ಕೆ ಸಿದ್ಧವಾಗಿಯೇ ಬಂದಿದ್ದರು. ಈಗ ಚೂರಿ, ಕತ್ತಿ, ಕಬ್ಬಿಣದ ಸಲಾಕೆಗಳು ಮತ್ತು ಬಾಂಬ್‌ಗಳು ಕೂಡ ಬಳಕೆಯಾದವು. ಆ ದಿನ ಇಡೀ ಸಂಜೆ–ರಾತ್ರಿ ನಡೆದ ಹಿಂಸಾಚಾರದಲ್ಲಿ ಉತ್ತರ ಕಲ್ಕತ್ತಾದ ಹಲವು ಕಡೆ ಹೆಣ ಬಿದ್ದವು.

ಮಾರನೆಯ ಬೆಳಿಗ್ಗೆಯ ಹೊತ್ತಿಗೆ ಇಡೀ ನಗರ ಕೆರಳಿ ನಿಂತಿತ್ತು. ಸಾವು ನೋವುಗಳ ಬಗ್ಗೆ ವಾಸ್ತವ ಸಂಗತಿಗಳ ಜತೆಗೆ ಉತ್ಪ್ರೇಕ್ಷಿತ ವದಂತಿಗಳೂ ಹಬ್ಬಿದ್ದುವು. ಕಲ್ಕತ್ತಾ ಹಿಂದೂಗಳು ಬಹುಸಂಖ್ಯೆಯಲ್ಲಿದ್ದ ನಗರ. ಜೊತೆಗೆ ಹಿಂದೂ ಮಹಾಸಭಾದ ದಟ್ಟ ಪ್ರಭಾವಕ್ಕೆ ಒಳಗಾಗಿದ್ದ ನಗರ ಕೂಡ. ಹಾಗಾಗಿ ಈಗ ಹಿಂದೂಗಳ ಪ್ರತೀಕಾರದ ಹಿಂಸಾಚಾರ ಆರಂಭವಾಗಿತ್ತು. ಇಡೀ ನಗರವೇ ಹೊತ್ತಿ ಉರಿಯಿತು. ಬೀದಿಗಳಲ್ಲಿ ಹೆಣ ಬೀಳಲಾರಂಭಿಸಿದವು. ಮೂರು ದಿನಗಳ ಕಾಲ ಊರು ಉರಿದು ಸ್ಮಶಾನವಾದ ನಂತರ ಸೇನೆ ನಗರವನ್ನು ಪ್ರವೇಶಿಸಿ ಪರಿಸ್ಥಿತಿಯನ್ನು ತನ್ನ ಹತೋಟಿಗೆ ಪಡೆಯಲು ಯತ್ನಿಸಿತು. ಆದರೆ ಆ ಹೊತ್ತಿಗೆ ಕೋಮು ಹಿಂಸೆ ರಾಜಧಾನಿಯನ್ನು ದಾಟಿ ಇಡೀ ಪ್ರಾಂತ್ಯಕ್ಕೆ ಹಬ್ಬಿತ್ತು.

ಸೇವಾಗ್ರಾಮದಲ್ಲಿದ್ದ ಗಾಂಧಿ ಹಿಂಸಾಚಾರದ ಸುದ್ದಿ ಕೇಳಿ ತಲ್ಲಣಿಸಿದರು. ಪಾಕಿಸ್ತಾನಕ್ಕೆ ಹೋಗುವ ದಾರಿ ಇದಾಗಬಾರದು ಎಂದು ದುಃಖದಿಂದ ಹೇಳಿದ ಅವರು 'ಎರಡೂ ಕಡೆ ಸಂಯಮ ಕೆಲಸ ಮಾಡಬೇಕಿದೆ ಮತ್ತು ಮುಸ್ಲಿಂ ಲೀಗ್ ನಾಯಕರ ಜವಾಬ್ದಾರಿ ಹೆಚ್ಚಿದೆ' ಎಂದು ಕರೆ ನೀಡಿದರು. ವೈಸ್‌ರಾಯ್ ವೇವೆಲ್ ಕೂಡ ಈ ಹಿಂಸಾಚಾರದಿಂದ ವಿಚಲಿತನಾಗಿ ಭಾರತೀಯರ ಕೈಗೇ ಅಧಿಕಾರ ಒಪ್ಪಿಸುವ ಮತ್ತೊಂದು ಪ್ರಯತ್ನವಾಗಿ ಗಾಂಧಿಯವರ ಮಧ್ಯಸ್ಥಿಕೆಯಲ್ಲಿ ಮಧ್ಯಂತರ ಸರ್ಕಾರ ರಚಿಸುವ ಸಂಬಂಧವಾಗಿ ದೆಹಲಿಯಲ್ಲಿ ಆಗಸ್ಟ್ ೨೪ರಂದು ಸಭೆಯೊಂದನ್ನು ಕರೆದ. ಇದರ ಪರಿಣಾಮವಾಗಿ ಸೆಪ್ಟೆಂಬರ್ ೨ರಂದು ನೆಹರೂ ನೇತೃತ್ವದ ಮಂತ್ರಿಮಂಡಲವೊಂದು ಅಧಿಕಾರ ಸ್ವೀಕರಿಸಿತು. ಇದರಲ್ಲಿ ಪಟೇಲ್, ರಾಜಾಜಿ, ಪ್ರಸಾದ್, ಶರತ್‌ಚಂದ್ರ ಬೋಸ್(ಸುಭಾಷರ ಸೋದರ), ಜಗಜೀವನರಾಂರ ಜೊತೆಗೆ ಅಸಫ್ ಅಲಿಯವರೂ ರೈಲ್ವೇ ಮಂತ್ರಿಯಾಗಿ ಸೇರಿದ್ದರು. ಸಿಖ್‌ರ ಪ್ರತಿನಿಧಿಯಾಗಿ ಬಲದೇವ ಸಿಂಗ್ ರಕ್ಷಣಾ ಮಂತ್ರಿಯಾಗಿದ್ದರು. ಪ್ರಮಾಣ ವಚನ ಸ್ವೀಕಾರಕ್ಕಿಂತ ಮುಂಚೆ ಪಟೇಲ್, ಬೋಸ್, ಪ್ರಸಾದ್, ಜಗಜೀವನ ರಾಮ್ ಮುಂತಾದವರು ಗಾಂಧಿಯವರ ಆಶೀರ್ವಾದ ಪಡೆಯಲು ಅವರು ತಂಗಿದ್ದ ಹರಿಜನ ಕಾಲೋನಿಗೆ ಹೋದಾಗ ಅಂದು ಸೋಮವಾರವಾಗಿದ್ದು ಗಾಂಧಿಯವರ ಮೌನ ದಿನವಾಗಿತ್ತು. ಅವರ ಸಹಾಯಕಿ ಅಮೃತಾ ಕೌರ್ ಬಂದಿದ್ದ ಅತಿಥಿಗಳಿಗೆ ಖಾದಿ ಹಾರ ಹಾಕಿ ಸತ್ಕರಿಸಿದರು. ಗಾಂಧಿ

ಒಂದು ಚೀಟಿಯಲ್ಲಿ ಈ ಸಂದೇಶ ಬರೆದು ನೀಡಿದರು: 'ದಂಡಿ ಯಾತ್ರೆ ನಿಮ್ಮ ಮನಸ್ಸಿನಲ್ಲಿ ಸದಾ ಅಚ್ಚೊತ್ತಿರಲಿ. ಉಪ್ಪಿನ ಮೇಲಿನ ತೆರಿಗೆ ರದ್ದು ಮಾಡಿ. ಹಿಂದೂ-ಮುಸ್ಲಿಂ ಏಕತೆ ಮತ್ತು ಅಸ್ಪೃಶ್ಯತಾ ನಿವಾರಣೆ ನಿಮ್ಮ ಮೊದಲ ಕಾಳಜಿಗಳಾಗಿರಲಿ. ಖಾದಿಗೆ ನಿಮ್ಮ ಬದ್ಧತೆ ಸದಾ ಇರಲಿ.'

ನೆಹರೂ, ಮಂತ್ರಿಮಂಡಲದ ನೇತೃತ್ವ ವಹಿಸಿಕೊಂಡ ನಂತರ ಕಾಂಗ್ರೆಸ್ ಅಧ್ಯಕ್ಷ ಪದವಿಗೆ ರಾಜೀನಾಮೆ ನೀಡಿದರು. ಆ ಸ್ಥಾನಕ್ಕೆ ಜೆ.ಬಿ. ಕೃಪಲಾನಿಯವರನ್ನು ನೇಮಿಸಲಾಯಿತು.

ಸರಿಸುಮಾರು ಇದೇ ದಿನಗಳಲ್ಲಿ ಗಾಂಧಿಯವರನ್ನು ಭೇಟಿ ಮಾಡಿದ ಕ್ರೈಸ್ತ ಧರ್ಮಗುರುವೊಬ್ಬರು, ಭಾರತ ಸ್ವತಂತ್ರವಾದ ಮೇಲೆ ಅದಕ್ಕೊಂದು ಅಧಿಕೃತ ಧರ್ಮ ಘೋಷಣೆಯಾಗುವುದೇ ಎಂದು ಕೇಳಿದಾಗ, ಅವರು ಹೀಗೆ ಉತ್ತರಿಸಿದರು: 'ನನಗೆ ಸರ್ವಾಧಿಕಾರ ನೀಡಿದಲ್ಲಿ ಆಡಳಿತ ಮತ್ತು ಧರ್ಮಗಳನ್ನು ಸಂಪೂರ್ಣ ಬೇರ್ಪಡಿಸುವ ಕೆಲಸ ಮೊದಲು ಮಾಡುವೆ. ನಾನೊಬ್ಬ ಆಳದ ಧರ್ಮಶ್ರದ್ಧೆಯುಳ್ಳವನಾಗಿ ಹೇಳುವುದೇನೆಂದರೆ, ಧರ್ಮ ವೈಯಕ್ತಿಕ ನಂಬಿಕೆ ಅಥವಾ ಆಚರಣೆಯಾಗಿದ್ದು, ದೇಶ ಮತ್ತು ಜನರ ಒಳಿತಿನ ಆಡಳಿತಾತ್ಮಕ ಕ್ರಮಗಳಿಗೂ ಅದಕ್ಕೂ ಏನೂ ಸಂಬಂಧವಿರಲಾರದು. ಸಂಬಂಧ ಉಂಟಾದರೆ ಒಳಿತಿಗೆ ತೊಂದರೆಯಾದೀತು.'

ಗಾಂಧಿ ಸರ್ವಾಧಿಕಾರಿಯಾದರೆ ಏನು ಮಾಡಬಯಸುವರು ಎಂಬ ವಿಷಯವಾಗಿ ಇರುವ ಇನ್ನೊಂದು ಘಟನೆಯನ್ನೂ ಇಲ್ಲಿ ದಾಖಲಿಸುವುದು ಉಚಿತವೇನೋ. ಬ್ರಿಟಿಷ್ ಸಚಿವ ಆಯೋಗದ ಮೇ ೧೬ರ ಪ್ರಸ್ತಾವನೆಯ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಮಸ್ಸೂರಿಯಲ್ಲಿ ಸಭೆ ಸೇರಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ, ಹಲವು ದಿನಗಳ ಕಾಲ ಯಾವುದೇ ನಿರ್ಧಾರಕ್ಕೆ ಬರದಿದ್ದಾಗ, ಸಭೆಯಲ್ಲಿ ನಡೆದಿದ್ದ ಚರ್ಚೆಯ ದಿಕ್ಕಿನ ಸೂಚನೆ ಪಡೆಯಲು ಪತ್ರಕರ್ತರು ಗಾಂಧಿಯವರನ್ನು 'ನಿಮಗೆ ಸರ್ವಾಧಿಕಾರ ಕೊಟ್ಟರೆ ಮೊದಲ ದಿನ ನೀವು ಮಾಡಬಯಸುವ ಕೆಲಸವೇನು?' ಎಂದು ಕೇಳಿದಾಗ ಅವರು 'ನಾನು ಹರಿಜನ ಕೇರಿಗಳ ಬೀದಿ ಗುಡಿಸಿ ಸ್ವಚ್ಛ ಮಾಡಬಯಸುತ್ತೇನೆ' ಎಂದರಂತೆ. ತಮಗೆ ಬೇಕಾದ ಉತ್ತರ ಸಿಗದೆ ನಿರಾಶರಾದ ಪತ್ರಕರ್ತರು ಅವರನ್ನು ಅಷ್ಟಕ್ಕೇ ಬಿಡದೆ, 'ಆಯಿತು. ಎರಡನೇ ದಿನ ಏನು ಮಾಡುವಿರಿ?' ಎಂದು ಕೇಳಿದರು. ಅದಕ್ಕೆ ಗಾಂಧಿ ಹೀಗೆ ಉತ್ತರಿಸಿದರು: 'ಎರಡನೇ ದಿನವೂ ಅದೇ ಮಾಡುತ್ತೇನೆ. ಅದೇನು ಒಂದು ದಿನದಲ್ಲಿ ಮುಗಿಯುವ ಕೆಲಸವೇ?'

ಗಾಂಧಿಯವರ ರಾಜಿ ಹೇಳಿಕೆ–ಸರ್ಕಾರವನ್ನು ಸೇರಿದ ಮುಸ್ಲಿಂ ಲೀಗ್

ಮುಸ್ಲಿಂ ಲೀಗ್ ಮಧ್ಯಂತರ ಸರ್ಕಾರದಲ್ಲಿ ಭಾಗವಹಿಸದೇ ಹೋದರೆ ಕೋಮು ಪರಿಸ್ಥಿತಿಯನ್ನು ತಹಬಂದಿಗೆ ತರುವುದಾಗಲೀ, ಅಧಿಕಾರ ಹಸ್ತಾಂತರ ಪ್ರಕ್ರಿಯೆ ಸುಗಮವಾಗುವುದಾಗಲೀ ಸಾಧ್ಯವಿಲ್ಲ ಎಂದು ಮನಗಂಡ ವೈಸ್‌ರಾಯ್, ಇದಕ್ಕೆ ನೆರವಾಗಲು ಗಾಂಧಿಯವರನ್ನೇ ಕೋರಿದ. ಗಾಂಧಿ ಭೂಪಾಲದ ನವಾಬನ ಸಲಹೆ ಪಡೆದು ಜಿನ್ನಾರಿಗೆ ಸಮಾಧಾನ ತರಬಲ್ಲ ಒಂದು ಜಂಟಿ ಹೇಳಿಕೆ ಸಿದ್ಧಪಡಿಸಿ ಬಿಡುಗಡೆ

ಮಾಡಿದರು. ಆ ಹೇಳಿಕೆ ಹೀಗಿತ್ತು. 'ಮುಸ್ಲಿಂ ಲೀಗ್ ಭಾರತದ ಮುಸ್ಲಿಂ ಸಮುದಾಯದ ಬಹುತೇಕ ಭಾಗದ ನಿಜವಾದ ಪ್ರತಿನಿಧಿಯಾಗಿದ್ದು, ಆ ಸಮುದಾಯದ ಆಶೋತ್ತರಗಳನ್ನು ಪ್ರತಿನಿಧಿಸುವ ಅದರ ಹಕ್ಕು ಪ್ರಶ್ನಾತೀತ ಎಂಬುದನ್ನು ಕಾಂಗ್ರೆಸ್ ಒಪ್ಪುತ್ತದೆ. ಆದರೆ ಅದೇ ವೇಳೆಯಲ್ಲಿ ಸರ್ಕಾರದಲ್ಲಿ ಕಾಂಗ್ರೆಸ್‌ನ ಪ್ರತಿನಿಧಿಗಳು ಯಾರಾಗಿರಬೇಕೆಂಬ ನಿರ್ಧಾರದ ಹಕ್ಕು ಪೂರ್ಣ ಕಾಂಗ್ರೆಸ್ಸಿನದೇ ಆಗಿರುತ್ತದೆ'. ಈ ಹೇಳಿಕೆ ಜಿನ್ನಾರ ಹಠವನ್ನು ಮೃದುಗೊಳಿಸಿತು. ಐದು ಜನ ಮುಸ್ಲಿಂ ಲೀಗ್‌ನ ಸದಸ್ಯರು ಮಧ್ಯಂತರ ಸರ್ಕಾರದಲ್ಲಿ ಮಂತ್ರಿಗಳಾಗಿ ಸೇರಿಕೊಂಡರು. ಆದರೆ ಹರಿಜನರ ಮೇಲಿನ ಗಾಂಧಿಯವರ ಹಕ್ಕನ್ನು ಪ್ರಶ್ನಿಸುವಂತೆ, ಜಿನ್ನಾ ತಮ್ಮ ಪಕ್ಷದ ಆ ಐವರಲ್ಲಿ ಬಂಗಾಳದ ಜೋಗೇಂದ್ರನಾಥ್ ಮಂಡಲ್ ಎನ್ನುವ ಅಸ್ಪೃಶ್ಯ ಜಾತಿಯವರೊಬ್ಬರನ್ನು ಸೇರಿಸಿದ್ದರು.

ಆ ವರ್ಷದ ಅಕ್ಟೋಬರ್ ೨ಕ್ಕೆ ಗಾಂಧಿ ೭೭ನೇ ವರ್ಷವನ್ನು ಪ್ರವೇಶಿಸಿದರು. ಜಗತ್ತಿನಾದ್ಯಂತದಿಂದ ಅವರಿಗೆ ಶುಭಾಶಯ ಸಂದೇಶಗಳು ಬಂದವು. ಅದೇ ಸಮಯದಲ್ಲಿ ಬಾಂಬೆ ಸರ್ಕಾರ ಅಸ್ಪೃಶ್ಯತೆಯ ಯಾವುದೇ ರೂಪದ–ಸಾರ್ವಜನಿಕ ಬಾವಿ, ಕೆರೆ, ಶಾಲೆ, ದೇವಸ್ಥಾನ, ಸ್ಮಶಾನ ಇತ್ಯಾದಿಗಳಿಗೆ ಪ್ರವೇಶ ತಡೆಯುವ–ಆಚರಣೆಯನ್ನು ನಿಷೇಧಿಸಿ ಅದನ್ನು ಶಿಕ್ಷಾರ್ಹ ಅಪರಾಧವನ್ನಾಗಿ ಮಾಡುವ ಶಾಸನವನ್ನು ಅಂಗೀಕರಿಸಿರುವ ಸುದ್ದಿ ಬಂತು. ಆದರೆ ಇವಾವುವೂ ಗಾಂಧಿ ಅವರಿಗೆ ಹೆಚ್ಚಿನ ಸಂತೋಷವನ್ನೇನೂ ಉಂಟು ಮಾಡಿರಲಿಲ್ಲ. ಏಕೆಂದರೆ ಬಂಗಾಳದ ಕೋಮು ಹಿಂಸಾಚಾರ ಇನ್ನೂ ತಹಬಂದಿಗೆ ಬಂದಿರಲಿಲ್ಲ. ಅದು ಗ್ರಾಮೀಣ ಪ್ರದೇಶಕ್ಕೂ ಹಬ್ಬಿ ದಿನನಿತ್ಯದ ಕೊಲೆ, ಲೂಟಿ, ಮಹಿಳೆಯರ ಅಪಹರಣ, ಅತ್ಯಾಚಾರ ಮತ್ತು ಮತಾಂತರಗಳ ಸುದ್ದಿಗಳು ಅವರನ್ನು ಬಾಧಿಸುತ್ತಿದ್ದವು. ಆದರೆ ಗಾಂಧಿ ಅಧಿಕಾರ ಹಸ್ತಾಂತರದ ಪ್ರಕ್ರಿಯೆಗೆ ಸಂಬಂಧಪಟ್ಟ ತುರ್ತು ಕೆಲಸಗಳಿಗಾಗಿ ಕಾಂಗ್ರೆಸ್ ಮತ್ತು ವೈಸ್‌ರಾಯ್‌ನ ಕೋರಿಕೆಗಳ ಮೇರೆಗೆ ದೆಹಲಿಯಲ್ಲೇ ಇರಬೇಕಿತ್ತು.

ನಿಲ್ಲದ ಹಿಂಸಾಚಾರ–ಗಾಂಧಿಯವರ ಆತ್ಮ ವಿಮರ್ಶೆ

ಆದರೆ ನೌಖಾಲಿ ಎಂಬಲ್ಲಿನ ನಿಲ್ಲದ ಹಿಂಸಾಚಾರದ ಭೀಭತ್ಸ ಸುದ್ದಿಗಳು ಅವರನ್ನು ತಲುಪತೊಡಗಿದಾಗ ಅವರಿಗೆ ದೆಹಲಿಯಲ್ಲಿ ಉಳಿಯುವುದು ಅಸಾಧ್ಯವಾಯಿತು. ಕಲ್ಕತ್ತಾದಲ್ಲಿ ಬಹುಸಂಖ್ಯಾತ ಹಿಂದೂಗಳು ನಡೆಸಿದ ಹಿಂಸಾಚಾರಗಳಿಗೆ ಮುಸ್ಲಿಂ ಬಹುಸಂಖ್ಯಾತ ನೌಖಾಲಿಯಲ್ಲಿ ಸೇಡು ತೀರಿಸಿಕೊಳ್ಳುವ ಹಿಂಸಾಕಾಂಡ ನಡೆದಿತ್ತು. ಅಲ್ಲಿ ಪರಿಹಾರ ಕಾರ್ಯ ಕೈಗೊಂಡಿದ್ದ ಹೊರೇಸ್ ಅಲೆಕ್ಸಾಂಡರ್ ನೇತೃತ್ವದ ಕ್ವೇಕರ್‌ಗಳ ತಂಡ ಕೂಡ, ಗಾಂಧಿ ಮಾತ್ರ ಆ ಹಿಂಸಾಕಾಂಡವನ್ನು ತಡೆಯಲು ಸಾಧ್ಯವೆಂದು ತಿಳಿಸಿ, ಅವರ ತುರ್ತು ಆಗಮನಕ್ಕಾಗಿ ಆಗ್ರಹಿಸಿ ತಂತಿ ಕಳಿಸಿತ್ತು. ಗಾಂಧಿಯವರ ಮನಸ್ಸು ಅಲ್ಲೋಲಕಲ್ಲೋಲವಾಗಿತ್ತು. ಕೋಮು ಗಲಭೆ, ಹತ್ಯೆ, ಅತ್ಯಾಚಾರ, ಹಿಂಸಾಚಾರಗಳು, ಸತ್ಯದೊಡನೆ ತಾವು ನಡೆಸಿದ್ದ ಅಹಿಂಸೆಯ ಪ್ರಯೋಗದ ಸೋಲಿನ ಸೂಚನೆಯೇ ಎಂಬ ಪ್ರಶ್ನೆ ಅವರನ್ನು ಕಾಡಿ ಕಂಗೆಡಿಸತೊಡಗಿತ್ತು. ಇಡೀ ಪರಿಸ್ಥಿತಿ ತನ್ನ ಕೈ ಮೀರಿ ಹೋಗುತ್ತಿರಲು ಕಾರಣವೇನು ಎಂದವರು ಚಿಂತಿತರಾಗಿದ್ದರು. ಸತ್ಯ–ಅಹಿಂಸೆಗಳನ್ನು ಕುರಿತ ತಮ್ಮ ನಿಷ್ಠೆ ಪರಿಪೂರ್ಣವಲ್ಲವೇನೋ, ಈ ಸಂಬಂಧವಾಗಿ ಯಾವುದೋ

ನಿಗೂಢ ಲೋಪ, ಕೊರತೆ ತಮ್ಮ ಸಾಧನೆಯೊಳಗೆ ಉಳಿದಿದೆ ಎಂಬ ಆಲೋಚನೆ ಅವರನ್ನು ಬೆಂಬತ್ತಿತ್ತು. ೧೯೩೧ರ ಕಾನ್ಪುರದ ಕೋಮು ಗಲಭೆಯಲ್ಲಿ ಶಾಂತಿ-ಸೌಹಾರ್ದಗಳ ರಾಯಭಾರಿಗಳಾಗಿದ್ದ ಗಣೇಶ ಶಂಕರ ವಿದ್ಯಾರ್ಥಿಯನ್ನೂ, ಅಹಮದಾಬಾದ್‌ನಲ್ಲಿ ಅಜಬಾಲಿ ಮತ್ತು ವಸಂತರಾವ್‌ರನ್ನೂ ಬಲಿ ತೆಗೆದುಕೊಂಡೇ ಶಾಂತವಾದಂತೆ, ಬಂಗಾಳದ ಗಲಭೆಗಳೂ ಒಬ್ಬ ಶಾಂತಿ-ಸೌಹಾರ್ದಗಳ ರಾಯಭಾರಿಯೊಬ್ಬನ ಬಲಿ ತೆಗೆದುಕೊಂಡೇ ಶಾಂತವಾಗಬೇಕಿದೆಯೇ ಎಂದೂ ಅವರು ಯೋಚಿಸಿ ತಾವೇ ಆ ಬಲಿಯಾಗಲೂ ಸಿದ್ಧಗೊಂಡರು.

ಈ ಆಧ್ಯಾತ್ಮಿಕ ಆಲೋಚನಾ ಲಹರಿಯ ಜತೆಗೇ ಜಿನ್ನಾ ಜೋಗೇಂದ್ರನಾಥ್ ಮಂಡಲ್‌ರನ್ನು ಮುಸ್ಲಿಂ ಲೀಗ್‌ನ ಮಂತ್ರಿಯಾಗಿ ಮಾಡುವ ಮೂಲಕ ಬಂಗಾಳದಲ್ಲಿ ಹಿಂದೂಗಳನ್ನು ಒಡೆದು, ಅಖಂಡ ಪಾಕಿಸ್ತಾನದ ಅಸ್ತಿಭಾರವನ್ನು ಬಲಗೊಳಿಸುತ್ತಿರುವ ಶಂಕೆಯೂ ಶುರುವಾಗಿ ಅವರು ನೌಖಾಲಿ ಯಾತ್ರೆಯನ್ನು ತಮ್ಮ ಬದುಕಿನ ಅಂತಿಮ ಪ್ರಯೋಗಶಾಲೆಯಂತೆಯೇ ಪರಿಗಣಿಸಿ ಅಲ್ಲಿಗೆ ಹೊರಡಲು ನಿರ್ಧರಿಸಿದರು. ನವೆಂಬರ್‌ನಲ್ಲಿ ಮೀರತ್‌ನಲ್ಲಿ ನಡೆಯಲಿರುವ ಕಾಂಗ್ರೆಸ್‌ನ ಪೂರ್ಣಾಧಿವೇಶನದಲ್ಲಿ ಅವರ ಉಪಸ್ಥಿತಿ ಬಹುಮುಖ್ಯ ಎಂದು ನೆಹರೂ-ಪಟೇಲ್ ಎಷ್ಟೇ ಕೋರಿಕೊಂಡರೂ ಒಪ್ಪದೆ, ತಮ್ಮ ಪ್ರಯಾಣದ ಸಿದ್ಧತೆಯಲ್ಲಿ ತೊಡಗಿಕೊಂಡರು. ಕಾಂಗ್ರೆಸ್ ಬಗ್ಗೆ ಅವರ ಭ್ರಮನಿರಸನದ ಸೂಚನೆಗಳು ಕಾಣತೊಡಗಿತ್ತು. ಇದೇ ಹೊತ್ತಿಗೆ ಬಂಗಾಳದ ನೆರೆಯ ರಾಜ್ಯವಾದ ಬಿಹಾರದಲ್ಲೂ ಹಿಂದೂ-ಮುಸ್ಲಿಂ ದಂಗೆಗಳು ಆರಂಭವಾಗಿದ್ದವು. ಬಂಗಾಳದಲ್ಲಿ ಮುಸ್ಲಿಂ ಲೀಗ್ ಸರ್ಕಾರದ ಪಕ್ಷಪಾತ ಧೋರಣೆ ಮುಸ್ಲಿಮರ ಕೈ ಬಲಪಡಿಸಿದ್ದರೆ ಬಿಹಾರದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರದ ಪಕ್ಷಪಾತದ ಧೋರಣೆಯಿಂದಾಗಿ ಹಿಂಸಾಚಾರದಲ್ಲಿ ಹಿಂದೂಗಳ ಕೈ ಮೇಲಾಗಿತ್ತು. ಜೆಪಿ ಕಾಂಗ್ರೆಸ್ ಸರ್ಕಾರವನ್ನು ಎಚ್ಚರಿಸುವಂತೆ ಮತ್ತು ಬಿಹಾರಕ್ಕೆ ಬರುವಂತೆ ಗಾಂಧಿಯನ್ನು ಕೋರಿದ್ದರು. ಆದರೆ ಗಾಂಧಿಯವರ ಬಂಗಾಳ ಪ್ರವಾಸ ನಿಗದಿಯಾಗಿತ್ತು. ಅವರು ಬಿಹಾರದ ಜನತೆಗೆ ಶಾಂತಿ ಕಾಪಾಡುವಂತೆ ಕೋರುವುದರ ಹೊರತಾಗಿ ಮತ್ತೇನೂ ಮಾಡುವ ಸ್ಥಿತಿಯಲ್ಲಿ ಇರಲಿಲ್ಲ. ರಾಷ್ಟ್ರದ ಹೊಸ ನಾಯಕತ್ವವನ್ನು ಸಿದ್ಧಪಡಿಸಲು ಅವರು ತಮ್ಮ ಕಣ್ಣುಗಳನ್ನು ಅತ್ತಿತ್ತ ಹೊರಳಿಸತೊಡಗಿದ್ದರು.

ನೌಖಾಲಿಯತ್ತ ಪಯಣ-ಬಿಹಾರದಲ್ಲಿ ಭುಗಿಲೆದ್ದ ಹಿಂಸಾಚಾರ

೧೯೪೬ರ ಅಕ್ಟೋಬರ್ ೨೮ರಂದು ಗಾಂಧಿ ಕಲ್ಕತ್ತಾ ಮಾರ್ಗವಾಗಿ ನೌಖಾಲಿಗೆ ಹೊರಟರು. ಈ ವಯಸ್ಸಿನಲ್ಲಿ ಪ್ರತಿಕೂಲ ವಾತಾವರಣವಿರುವಲ್ಲಿ ಹೋಗಬಾರದೆಂದು ಪ್ಯಾರೇಲಾಲ್ ಎಷ್ಟೇ ಕೋರಿಕೊಂಡರೂ, ಅವರು ಮನಸ್ಸು ಬದಲಿಸಲು ನಿರಾಕರಿಸಿದರು. ಕೊನೆಗೆ ಅವರೂ, ತಮ್ಮ ಸೋದರಿ ಸುಶೀಲಾ ನಯ್ಯರ್ ಮತ್ತು ಬೀಬಿ ಅಮ್ತುಸ್ ಸಲಾಂ ಅವರೊಂದಿಗೆ ಹೊರಟರು. ಗಾಂಧಿ, ಕೃಪಲಾನಿಯವರ ಬಂಗಾಳಿ ಪತ್ನಿ ಸುಚೇತಾ ಅವರನ್ನು ತಮಗೆ ನೆರವಾಗಲು ಆಹ್ವಾನಿಸಿದರು. ಗಾಂಧಿ ಪರಿವಾರ ಹೊರಟಿದ್ದ ರೈಲು ಸಂಯುಕ್ತ ಪ್ರಾಂತ್ಯ ಮತ್ತು ಬಿಹಾರದ ಮೂಲಕ ಹಾದು ಹೋಗುತ್ತಿದ್ದಂತೆ, ಎಲ್ಲ ನಿಲ್ದಾಣಗಳಲ್ಲಿ ಜನ ಗಾಂಧಿಯವರ ದರ್ಶನಕ್ಕಾಗಿ ಕಿಕ್ಕಿರಿದು ನಿಂತಿರುತ್ತಿದ್ದರು. ಜನ

ಕೂಗುತ್ತಿದ್ದ 'ಮಹಾತ್ಮ ಗಾಂಧೀ ಕಿ ಜೈ' ಎಂಬ ಘೋಷಣೆ, ಅವರಿಗೆ ಈ ಸಂದರ್ಭದಲ್ಲಿ ಆಭಾಸಕರವಾಗಿ ಕೇಳಿಸಿ ಅವರು ಕಿವಿ ಮುಚ್ಚಿಕೊಳ್ಳುತ್ತಿದ್ದರು. ರೈಲು ನಿಲ್ಲದ ಕೆಲವೆಡೆಗಳಲ್ಲಿ ಮಾರ್ಗದಲ್ಲಿ ಅಡ್ಡನಿಂತು ಜನ ಅವರ ದರ್ಶನಕ್ಕಾಗಿ ಹಾತೊರೆಯುತ್ತಿದ್ದರು. ರಾತ್ರಿ ಜನರ ಕಿರಿಕಿರಿ ತಾಳಲಾರದೆ ಒಬ್ಬರು ಬೋಗಿಯ ದೀಪ ಆರಿಸಿ ಎಂದಾಗ ಗಾಂಧಿ, ಜನ ನನ್ನನ್ನು ನೋಡುವ ಮೂಲಕ ಶಾಂತಿ ಪಡೆಯುವುದಾದರೆ ನೋಡಿ ಪಡೆಯಲಿ. ದೀಪ ಆರಿಸುವುದು ಬೇಡವೆಂದರು.

ಅಕ್ಟೋಬರ್ ೨೯ರಂದು ಕಲ್ಕತ್ತಾ ತಲುಪಿದ ಗಾಂಧಿಯವರನ್ನು, ಪ್ರಾಂತ್ಯದ ಪ್ರಧಾನಮಂತ್ರಿ ಸುಹ್ರವರ್ದಿ ಮತ್ತವರ ಸಂಪುಟದ ಹಿರಿಯ ಸಹೋದ್ಯೋಗಿಗಳು ಬರಮಾಡಿಕೊಂಡರು. ಪ್ರಧಾನಮಂತ್ರಿ ಸುಹ್ರವರ್ದಿಯವರ ಕೋರಿಕೆಯ ಮೇರೆಗೆ, ವಿಪರೀತಕ್ಕೆ ಹೋಗಿರುವ ಪರಿಸ್ಥಿತಿಯ ಕಾರಣ ನೌಖಾಲಿಯಿರುವ ಪೂರ್ವ ಬಂಗಾಳದತ್ತ ತೆರಳುವ ಮುನ್ನ ಎರಡು ದಿನ ಕಲ್ಕತ್ತಾದಲ್ಲೇ ಉಳಿದರು. ನಗರದಲ್ಲಿ ಸುತ್ತಾಡಿ ಯುದ್ಧದ ನಂತರದ ದೃಶ್ಯಗಳಂತಿದ್ದ ನಗರದ ಪಾಳುಬಿದ್ದ ಕಟ್ಟಡಗಳಿಂದ ತುಂಬಿ ಹೋಗಿದ್ದ ಬೀದಿಗಳನ್ನು ನೋಡಿ ಗಾಬರಿಯಾದರು. ಮನೆ-ಮಠ ಮತ್ತು ಅಂಗಡಿ ಮುಂಗಟ್ಟುಗಳನ್ನಲ್ಲದೆ, ಮಂದಿರ ಮಸೀದಿಗಳನ್ನೂ ಹೊಡೆದುರುಳಿಸಲಾಗಿತ್ತು.

ಇದೇ ಸಮಯದಲ್ಲಿ ಬಿಹಾರದಿಂದ ಕೋಮು ದಂಗೆಗಳ ಸುದ್ದಿ ಬರುತ್ತಲೇ ಇತ್ತು. ಅವರು 'ಬಿಹಾರಿಗಳಿಗೆ ಒಂದು ಬಹಿರಂಗ ಪತ್ರ' ಬರೆದು ಸಾರ್ವಜನಿಕವಾಗಿ ಬಿಡುಗಡೆ ಮಾಡಿದರು. ಅದರಲ್ಲಿ ಅವರು ಸೇಡಿನ ಹಿಂಸಾಚಾರ ಮನುಷ್ಯನನ್ನೂ, ದೇಶವನ್ನೂ ಅಧಃಪತನಕ್ಕೆ ಕೊಂಡೊಯ್ಯುವುದು ಎಂದು ಎಚ್ಚರಿಸುತ್ತಾ, ಪೂರ್ವ ಬಂಗಾಳದತ್ತ ಹೊರಟಿರುವ ತಮ್ಮ ಬಗ್ಗೆ ಯಾರೂ ಆತಂಕಗೊಳ್ಳುವ ಅಥವಾ ನೆರವಿಗೆ ಧಾವಿಸಿ ಬರುವ ಅಗತ್ಯವಿಲ್ಲವೆಂದೂ, ತಮ್ಮ ಬಗ್ಗೆ ಸಹಾನುಭೂತಿ ಉಳ್ಳವರು ಬಿಹಾರದಲ್ಲಿ ಅಲ್ಪಸಂಖ್ಯಾತ ಮುಸ್ಲಿಂ ಸಂತ್ರಸ್ತರ ಪುನರ್ವಸತಿ ಕಾರ್ಯದಲ್ಲಿ ತೊಡಗಬೇಕೆಂದೂ ಕರೆಕೊಟ್ಟಿದ್ದರು. ಇದರ ಜೊತೆಗೇ ಈ ಇನ್ನೊಂದು ವಿಷಯವನ್ನೂ ತಿಳಿಸಿದ್ದರು: ತಾವು ಬಿಹಾರದ ಹಿಂಸಾಚಾರದ ಸುದ್ದಿ ಕೇಳಿದಾಗಿನಿಂದ ಪ್ರಾಯಶ್ಚಿತ್ತವಾಗಿ ಅತಿ ಕಡಿಮೆ ಆಹಾರವನ್ನು ಸೇವಿಸುತ್ತಾ ಅದನ್ನು ದಿನೇ ದಿನೇ ಮತ್ತಷ್ಟು ಕಡಿಮೆ ಮಾಡಿಕೊಳ್ಳುತ್ತಿದ್ದು, ಹಿಂಸಾಚಾರ ನಿಲ್ಲದಿದ್ದಲ್ಲಿ ಇದನ್ನೇ ಆಮರಣಾಂತ ಉಪವಾಸವಾಗಿ ಪರಿವರ್ತಿಸುವೆ. ಇದರ ಪರಿಣಾಮವೋ ಎಂಬಂತೆ ಗೃಹಮಂತ್ರಿ ಪಟೇಲ್ ಮತ್ತು ಮುಸ್ಲಿಂ ಲೀಗ್‌ನ ಇಬ್ಬರು ಮಂತ್ರಿಗಳು ಬಿಹಾರಕ್ಕೆ ಭೇಟಿ ನೀಡಿ ಪರಿಹಾರ ಕಾರ್ಯಕ್ರಮಗಳ ಉಸ್ತುವಾರಿ ವಹಿಸಿಕೊಂಡರು. ಪರಿಸ್ಥಿತಿ ತಹಬಂದಿಗೆ ಬರತೊಡಗಿತು. ಗಾಂಧಿ ಪರಿವಾರ ನವೆಂಬರ್ ಆರರಂದು ಬಂಗಾಳದ ಸರ್ಕಾರ ವ್ಯವಸ್ಥೆ ಮಾಡಿದ್ದ ವಿಶೇಷ ರೈಲು ಗಾಡಿಯಲ್ಲಿ ನೌಖಾಲಿಯತ್ತ ಹೊರಟಿತು. ಅವರೊಂದಿಗೆ ಇಬ್ಬರು ಸಚಿವರೂ ಇದ್ದರು. ಗಾಂಧಿ ಪರಿವಾರ ಗೊಲಾಂಡೋ ಎಂಬಲ್ಲಿ ರೈಲು ಗಾಡಿ ಇಳಿದು, ೧೨೦ ಕಿ.ಮೀ. ದೂರದ ನೌಖಾಲಿಗೆ ಉಗಿದೋಣಿಯೊಂದರಲ್ಲಿ ಹೊರಟಿತು. ಸೊಟ್ಟಪಟ್ಟವಾದ ನೀರ್ಗಾಲುವೆಗಳ ಮೂಲಕ ಹಾದು ಹೋದ ಆ ದೋಣಿ ಗಾಂಧಿಯವರಿಗೆ ಪೂರ್ವ ಬಂಗಾಳದ ಅನುಪಮ ನಿಸರ್ಗ ಸೌಂದರ್ಯವನ್ನು ಬಿಚ್ಚಿಡುತ್ತಾ ಅವರನ್ನು ಮಂತ್ರಮುಗ್ಧಗೊಳಿಸಿತು.

ಲಂಡನ್, ದೆಹಲಿ ಮತ್ತು ಮೀರತ್‌ಗಳಲ್ಲಿ ದೇಶದ ಭವಿಷ್ಯದ ರೂಪುರೇಷೆಗಳನ್ನು ಸಿದ್ಧಪಡಿಸುತ್ತಿದ್ದ ಈ ಸಮಯದಲ್ಲಿ, ದೇಶವನ್ನು ಅಲ್ಲಿಗೆ ಕರೆತಂದು ನಿಲ್ಲಿಸಿದ್ದ ಗಾಂಧಿ, ಈಗ ಅದೆಲ್ಲದರಿಂದ ದೂರವಾದ ನಿಗೂಢ ನೀರವ ಸ್ಥಳವೊಂದರತ್ತ ನಡೆದಿದ್ದರು. ನೌಖಾಲಿ ಜಿಲ್ಲೆಯ ಮೊದಲ ಊರು ಚಂದಾಪುರ. ಮೊದಲ ದಿನ ಗಾಂಧಿ ಪರಿವಾರ ಅಲ್ಲಿ ಬಿಡಾರ ಹೂಡಿತು.

ಸಾಂತ್ವನ–ಪುನರ್ವಸತಿ ಕೆಲಸ ಆರಂಭ–ಶ್ರೀರಾಂಪುರದಲ್ಲಿ ನೆಲೆ ನಿಂತ ಗಾಂಧಿ

ನೌಖಾಲಿ ಜಿಲ್ಲೆ ಮುಸ್ಲಿಂ ಬಹುಸಂಖ್ಯಾತ ಜಿಲ್ಲೆಯಾಗಿತ್ತು. ಹಾಗೇ ಅದು ಇಸ್ಲಾಮೀ ಶಾಸ್ತ್ರಾಧ್ಯಯನದ ಹಲವು ಕೇಂದ್ರಗಳ ಮತ್ತು ಮೌಲ್ವಿಗಳ ಬೀಡೂ ಆಗಿತ್ತು. ಅಲ್ಲಿ ಹಿಂದೂಗಳು ಅಲ್ಪಸಂಖ್ಯಾತರು. ಆದರೆ ಅನುಕೂಲಸ್ಥ ಜಮೀನ್ದಾರರು. ಮುಸ್ಲಿಮರಲ್ಲಿ ಬಹಳ ಜನ ಅವರ ಗೇಣಿ ರೈತರಾಗಿದ್ದರು. ಈ ಎರಡು ಕಾರಣಗಳೇ ಅಲ್ಲಿನ ಕೋಮು ಹಿಂಸಾಚಾರಕ್ಕೆ ಸಾಕಾಗಿದ್ದವು. ಹಿಂದೂಗಳೇ ಹಿಂಸಾಚಾರದ ಹೆಚ್ಚಿನ ಬಲಿಪಶುಗಳಾಗಿದ್ದರು. ಅವರ ದೇವಾಲಯಗಳನ್ನು ಧ್ವಂಸಗೊಳಿಸಲಾಗಿತ್ತು. ಅವರ ಕುಟುಂಬಗಳ ಸ್ತ್ರೀಯರನ್ನು ಅಪಹರಿಸಿ ಬಲಾತ್ಕರಿಸಲಾಗಿತ್ತು ಮತ್ತು ಮತಾಂತರಗೊಳಿಸಲಾಗಿತ್ತು. ಗಾಂಧಿ, ದೋಣಿ ಪ್ರಯಾಣದಲ್ಲಿದ್ದಾಗಲೇ ಇದನ್ನೆಲ್ಲ ಹಿಂದೂ ಪ್ರಯಾಣಿಕರಿಂದ ಕೇಳಿದ್ದರು. ಹಾಗೇ ಗಾಂಧಿ ಕೂಡ ಅವರನ್ನು 'ಆಗ ನೀವು ಪುರುಷರಂತೆ ವರ್ತಿಸಿದಿರಾ?' ಎಂದು ಕೇಳಿ ಅವರನ್ನು ಬೆಚ್ಚಿಬೀಳಿಸಿದ್ದರು. ಇದೇ ಸಮಯದಲ್ಲಿ ಮುಸ್ಲಿಂ ಪ್ರಯಾಣಿಕರೂ ಅವರ ಬಳಿ ಬಂದು ತಪ್ಪಿತಸ್ಥರಂತೆ ಮುಸ್ಲಿಮರಲ್ಲಿ ಒಂದು ಸಣ್ಣಭಾಗ ಮಾತ್ರ ದಂಗೆಯಲ್ಲಿ ಭಾಗವಹಿಸಿತ್ತು ಎಂದು ತಿಳಿಸಿತ್ತು. ಇದು ಗಾಂಧಿಯವರಲ್ಲಿ ಸಮಾಧಾನ ತಂದು, ತಾವು ಮುಂದೆ ಮಾಡಬೇಕಾದ ಕೆಲಸಗಳ ಬಗ್ಗೆ ಆತ್ಮವಿಶ್ವಾಸವನ್ನು ಹೆಚ್ಚಿಸಿತಾದರೂ ಅವರಿಗೆ ಹೀಗೆ ಹೇಳಿದರು: 'ಜನರ ಒಂದು ಸಣ್ಣ ಭಾಗ ಕೆಡುಕಿನಲ್ಲಿ ನಿರತವಾಗಿರುವಾಗ ಒಂದು ದೊಡ್ಡ ಭಾಗ ನಿಷ್ಕ್ರಿಯವಾಗಿ ಅದನ್ನು ನೋಡುವುದೂ ಕೆಡುಕಿನ ಒಂದು ಭಾಗವೇ ಆಗುತ್ತದೆ.'

ಗಾಂಧಿ ಪರಿವಾರ ಒಂದು ವಾರ ಅಕ್ಕಪಕ್ಕದ ಹಳ್ಳಿಗಳಿಗೆ ಭೇಟಿ ನೀಡಿ ಸಂತ್ರಸ್ತರಿಗೆ ಸಾಂತ್ವನ ಹೇಳಿತು. ಇಸ್ಲಾಂ ಎಂದರೆ ಶಾಂತಿ ಎಂಬ ಅರ್ಥವಿದೆ ಎಂದು ಮುಸ್ಲಿಮರಿಗೆ ತಿಳಿಹೇಳಿದರು. ತಾವೂ ಮುಸ್ಲಿಮರಂತೆಯೇ ವಿಗ್ರಹಾರಾಧನೆಯಲ್ಲಿ ನಂಬಿಕೆ ಇಲ್ಲದವರಾಗಿದ್ದರೂ, ವಿಗ್ರಹಾರಾಧನೆ ಮಾಡುವ ಜನರ ನಂಬಿಕೆಯನ್ನೂ ಗೌರವಿಸುವುದು ಧರ್ಮದ ಒಂದು ಕರ್ತವ್ಯವಾಗಿರುತ್ತದೆ ಎಂದು ತಿಳಿಹೇಳಿದರು. ಅವರು ಪ್ರತಿ ಊರಿನಲ್ಲಿ ನಡೆಸುತ್ತಿದ್ದ ಪ್ರಾರ್ಥನಾ ಸಭೆಗಳಲ್ಲಿ ಕಿಕ್ಕಿರಿದಿರುತ್ತಿದ್ದ ಜನಸ್ತೋಮದಲ್ಲಿ ಮುಸ್ಲಿಮರೇ ಹೆಚ್ಚಿರುತ್ತಿದ್ದರು. ಗಾಂಧಿಯವರ ಈ ತಿರುಗಾಟ, ಸಭೆಗಳಿಗೆ ನೆರವಾಗಲು ಸುಭಾಷರ ಭಾರತದ ರಾಷ್ಟ್ರೀಯ ಸೇನೆಯ ಮಾಜಿ ಯೋಧರಾದ ನಿರಂಜನ ಸಿಂಗ್ ಮತ್ತು ಜೀವನ್ ಸಿಂಗ್ ಎಂಬ ಇಬ್ಬರು ಬಲಿಷ್ಠ ಸಿಖ್‌ರ ನೇತೃತ್ವದ ಒಂದು ಪಡೆಯೇ ಗಾಂಧಿಯವರ ಹಿಂದೆ ಬಂದಿತ್ತು. ಪಾಳು ಸ್ವಚ್ಛಗೊಳಿಸುವ, ಸಾಮಾನು ಸರಂಜಾಮು ಸಾಗಿಸುವ, ತಾತ್ಕಾಲಿಕ ಶಿಬಿರಗಳನ್ನು ನಿರ್ಮಿಸುವ,

ಗಾಂಧಿಯವರ ಸಭೆಗಳಿಗಾಗಿ ಚಪ್ಪರ, ವೇದಿಕೆ ಹಾಕುವ, ಅಗತ್ಯ ಬಿದ್ದಾಗ ಮೋಟಾರು ವಾಹನ ಓಡಿಸುವ, ಹೀಗೇ ಶ್ರಮದ ಯಾವ ಕೆಲಸಗಳಿಗೂ ಇವರು ಸಿದ್ಧರಾಗಿದ್ದರು. ಜೊತೆಗೆ ಸೋದೆಪುರದ ಆಶ್ರಮದ ಸತೀಶ್‌ಚಂದ್ರ ದಾಸ್‌ಗುಪ್ತ ನೇತೃತ್ವದ 'ನೌಖಾಲಿ ರಕ್ಷಣಾ, ಪರಿಹಾರ ಮತ್ತು ಪುನರ್ವಸತಿ ಸಮಿತಿ'ಯೂ ನಿರಾಶ್ರಿತರ ಶಿಬಿರಗಳನ್ನು ನಡೆಸುವ, ಮನೆಮಠಗಳ ಮರುನಿರ್ಮಾಣ ಇತ್ಯಾದಿ ಕೆಲಸಗಳಲ್ಲಿ ತೊಡಗಿ, ಗಾಂಧಿ ಪರಿವಾರದ ಕೆಲಸಗಳಿಗೆ ಹಾದಿ ಸುಗಮಗೊಳಿಸುತ್ತಿತ್ತು.

ಗಾಂಧಿ ತಮ್ಮ ನೌಖಾಲಿ ಯಾತ್ರೆಯ ಶಾಶ್ವತ ಬಿಡಾರವನ್ನು ಮುಸ್ಲಿಮರೇ ಹೆಚ್ಚಾಗಿದ್ದ ಶ್ರೀರಾಂಪುರ ಎಂಬ ಹಳ್ಳಿಯಲ್ಲಿ ಸ್ಥಾಪಿಸಿಕೊಳ್ಳುವ ಮುನ್ನ ತಮ್ಮ ಪರಿವಾರದ ಸದಸ್ಯರನ್ನೆಲ್ಲ ಪರಿಹಾರ ಕಾರ್ಯಗಳನ್ನು ಸಂಘಟಿಸಲು, ಮುಖ್ಯವಾಗಿ ನಿರಾಶ್ರಿತರಿಗೆ ಅನ್ನ-ಆಸರೆ ಮತ್ತು ಧೈರ್ಯ ಒದಗಿ ಅವರನ್ನು ಸ್ವಸ್ಥಾನಗಳಿಗೆ ಕರೆತರಲು ಬೇರೆ ಬೇರೆ ಊರುಗಳಿಗೆ ಅಟ್ಟಿದರು. ಇವರಲ್ಲಿ ಈಗ ಅಭಾ, ಕನು ಗಾಂಧಿ, ಸುಶೀಲಾ ಪೈ, ಥಕ್ಕರ್ ಬಾಪು ಮುಂತಾದವರೂ ಸೇರಿದ್ದರು. ಶ್ರೀರಾಂಪುರದಲ್ಲಿ ಗಾಂಧಿಯವರೊಂದಿಗೆ ನೆಲೆಸಿದವರೆಂದರೆ ಅವರ ಶೀಘ್ರಲಿಪಿಕಾರ ಕೇರಳದ ಪರಶುರಾಂ ಮತ್ತು ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಮಾನವ ಶಾಸ್ತ್ರ ಪ್ರಾಧ್ಯಾಪಕರಾಗಿದ್ದ ನಿರ್ಮಲಕುಮಾರ್ ಬೋಸ್. ಬೋಸ್ ಗಾಂಧಿಗೆ ಬಂಗಾಳಿ ಹೇಳಿಕೊಡುತ್ತಾ ಅವರ ದುಭಾಷಿಯಾಗಿಯೂ ಕೆಲಸ ಮಾಡುತ್ತಿದ್ದರು. ನವೆಂಬರ್ ೨೦ರಂದು ಶ್ರೀರಾಂಪುರದಲ್ಲಿ ನೆಲೆಸಿದ ದಿನವೇ ಗಾಂಧಿ ಒಂದು ಪತ್ರಿಕಾ ಹೇಳಿಕೆ ನೀಡಿ, ಇಡೀ ಪೂರ್ವ ಬಂಗಾಳದಲ್ಲಿ ಮುಸ್ಲಿಮರೂ ಹಿಂದೂಗಳೂ ಹಳ್ಳಿಗಳಲ್ಲಿ ಮೊದಲಿನಂತೆ ಸಹಬಾಳ್ವೆ ನಡೆಸತೊಡಗಿ ಶಾಂತಿ ನೆಲೆಸಿದೆಯೆಂದು ತಮಗೆ ಖಚಿತವಾಗುವವರೆಗೆ ತಾವು ಅಲ್ಲಿಂದ ಹೊರಡುವುದಿಲ್ಲವೆಂದು ಪ್ರಕಟಿಸಿದರು. ಇದು ಸಾಧಿತವಾಗುವವರೆಗೂ ಪಾಕಿಸ್ತಾನವೂ ಇಲ್ಲ, ಹಿಂದೂಸ್ತಾನವೂ ಇಲ್ಲ; ಇರುವುದು ಗುಲಾಮಿಸ್ತಾನ ಎಂದು ಅವರು ಎಚ್ಚರಿಸಿದರು. ಆ ಪ್ರದೇಶದಲ್ಲಿ ಸೋಮವಾರ ಸಂತೆಯ ದಿನ ಎಂದು ತಿಳಿದ ಗಾಂಧಿ, ಜನರೊಡನೆ ಸಂವಾದದ ಅವಕಾಶಗಳು ತಪ್ಪದಂತೆ ತಮ್ಮ ಮೌನದ ದಿನವನ್ನು ಸೋಮವಾರದಿಂದ ಭಾನುವಾರಕ್ಕೆ ಬದಲಾಯಿಸಿಕೊಂಡರು.

ಬರಿಗಾಲ ಯಾತ್ರೆ–ಮನೂಳ ಆಗಮನ

ಗಾಂಧಿ ಪ್ರತಿದಿನ ಶ್ರೀರಾಂಪುರದಿಂದ ಸುತ್ತಮುತ್ತ ಹಳ್ಳಿಗಳಿಗೆ ಪಾದಯಾತ್ರೆಗಳನ್ನು ಆರಂಭಿಸಿದರು. ಒಂದು ಬಿದಿರು ಕೋಲು ಹಿಡಿದು ಬರಿಗಾಲಿನಲ್ಲಿ ಪಟಪಟನೆ ಹೆಜ್ಜೆಹಾಕುತ್ತಾ ನಡೆಯುತ್ತಿದ್ದರು. ಅವರ ಪಾದಗಳಲ್ಲಿ ಬೊಬ್ಬೆ ಎದ್ದಿದ್ದನ್ನು ನೋಡಿದವರು ಬರಿಗಾಲಲ್ಲಿ ನಡೆಯುವುದು ಬೇಡ ಎಂದಾಗ ಅವರು, 'ಇದು ಪವಿತ್ರ ಯಾತ್ರೆ. ನೀವು ಪವಿತ್ರ ಕ್ಷೇತ್ರಗಳಲ್ಲಿ ಚಪ್ಪಲಿ ಬಿಟ್ಟು ನಡೆಯುತ್ತೀರಲ್ಲಾ, ಇದು ಹಾಗೆ' ಎಂದು ವಿವರಿಸುತ್ತಿದ್ದರು. ಗಾಂಧಿ ಪಾದಯಾತ್ರೆ ಮೂಲಕ ತಲುಪುವ ಪ್ರತಿ ಹಳ್ಳಿಯಲ್ಲೂ ಅವರ ಪ್ರಾರ್ಥನಾ ಸಭೆಗಾಗಿ ಸತೀಶ್‌ಚಂದ್ರ ದಾಸ್‌ಗುಪ್ತ ಚಪ್ಪರ-ವೇದಿಕೆಯ ವ್ಯವಸ್ಥೆ ಮಾಡುತ್ತಿದ್ದರು. ಗಾಂಧಿ ಪಾದಯಾತ್ರೆ ಹೊರಟರೆಂದರೆ, ಅವರ ನೂರು ಗಜ ಮುಂದೆ ಬಂಗಾಳದ ಒಂದು ಪೊಲೀಸ್ ದಳ–ಗಾಂಧಿ ಒಲ್ಲೆನೆಂದರೂ ಬಿಡದೆ – ನಡೆದಿರುತ್ತಿತ್ತು.

ಇನ್ನು ಅವರ ಇಕ್ಕೆಲಗಳಲ್ಲಿ ಹಳ್ಳಿಯ ಜನ ಸಾಲಾಗಿ ನಡೆದಿರುತ್ತಿದ್ದರು. ಮುಂದಿನ ಎರಡು ತಿಂಗಳ ಕಾಲ ನಡೆದ ಈ ಪಾದಯಾತ್ರೆ ಬಂಗಾಳದ ಇತಿಹಾಸದಲ್ಲೇ ಒಂದು ಐತಿಹಾಸಿಕ ಘಟನೆಯಾಗಿತ್ತು. ಅದರ ಪರಿಣಾಮದ ದೃಷ್ಟಿಯಿಂದಲೂ.

ಗಾಂಧಿ ಶ್ರೀರಾಂಪುರದಲ್ಲಿ ನೆಲೆಸಿದ ಒಂದು ತಿಂಗಳ ನಂತರದಲ್ಲೇ ಡಿಸೆಂಬರ್ ಮೊದಲ ವಾರದಲ್ಲಿ ಅವರ ದತ್ತುಪುತ್ರಿ ಮನು ಗಾಂಧಿಯೂ ಅಲ್ಲಿಗೆ ಬಂದು ಸೇರಿಕೊಂಡಳು. ಮನು ಮತ್ತು ಅವಳ ತಂದೆ ಜಯಸುಖಲಾಲ್‌ರ ಒಪ್ಪಿಗೆಯ ಮೇರೆಗೆ, ಗಾಂಧಿಯವರು ಅವಳನ್ನು ಅಲ್ಲಿಗೆ ಬರಲು ಹೇಳಿದ್ದರು. ತಾಯಿ ಇಲ್ಲದ ಮನು, ಸಬರ್ಮತಿ ಆಶ್ರಮದಲ್ಲಿ ಗಾಂಧಿ ದಂಪತಿಗಳ ಪ್ರೀತಿಯ ಆಶ್ರಯದಲ್ಲಿ ಬೆಳೆದು ಆ ದಂಪತಿಗಳ ಪುತ್ರಿಯೇ ಆಗಿದ್ದಳು. ಆಗಾಖಾನ್ ಅರಮನೆಯ ಸೆರೆಮನೆಗೆ ಬಂದಿದ್ದ ಅವಳು, ಬಾ ಅವರ ಕೊನೆಯ ದಿನಗಳಲ್ಲಿ ಅವರ ಸೇವೆ ಮಾಡಿ ಕೃತಾರ್ಥಳಾಗಿದ್ದಳು. ಈಗ ಶ್ರೀರಾಂಪುರದಲ್ಲಿ ಗಾಂಧಿಯವರ 'ವಿಶಿಷ್ಟ' ಸೇವೆಗಾಗಿ ಬಂದಿದ್ದಳು. ಗಾಂಧಿ ತಾವು ನೌಖಾಲಿಗೆ ಹೊರಟಾಗ ಅವರ ಮನಸ್ಸಿನಲ್ಲೆದ್ದ ಅಲ್ಲೋಲ ಕಲ್ಲೋಲದ ಮಧ್ಯೆ ಇದ್ದುದು, ಸತ್ಯ ಅಹಿಂಸೆಗಳ ತಮ್ಮ ಪ್ರಯೋಗದಲ್ಲಿ ತಾನೇಕೆ ವಿಫಲತೆಯನ್ನು ಕಾಣುತ್ತಿದ್ದೇನೆ? ಎಂಬ ಪ್ರಶ್ನೆ. ತಾನು ಈ ಪ್ರಯೋಗದಲ್ಲಿ ಪರಿಶುದ್ಧನಾಗಿ ಭಾಗವಹಿಸುತ್ತಿಲ್ಲವೇನೋ ಎಂಬ ಸಂದೇಹ ಅವರಿಗೆ. ಈ ಪರಿಶುದ್ಧತೆ ಪರೀಕ್ಷೆಗೆ ತಮ್ಮ ಬ್ರಹ್ಮಚರ್ಯ ಪಾಲನೆಯ ಪರಿಪೂರ್ಣತೆಯನ್ನು ಮಾನದಂಡವಾಗಿರಿಸಿಕೊಂಡಿದ್ದ ಅವರು, ಈ ಪರೀಕ್ಷೆಗೆ ಬಹಳ ದಿನಗಳಿಂದ ಮನುವನ್ನು ಸಾಧನವನ್ನಾಗಿ ತಯಾರು ಮಾಡಿದ್ದರು. ಗಾಂಧಿ, ತನಗೆ ತಂದೆ ಮತ್ತು ತಾಯಿ ಎರಡೂ ಆಗಿದ್ದು, ಈ ಪರೀಕ್ಷೆಯಲ್ಲಿ ತಾನು ಭಾಗವಹಿಸುವ ಮೂಲಕ ತನ್ನ ಬ್ರಹ್ಮಚರ್ಯದ ಪರಿಶುದ್ಧತೆಯೂ ಪರೀಕ್ಷೆಗೊಳಪಡುತ್ತದೆ ಎಂದು ಭಾವಿಸಿದ್ದಳು.

ಗಾಂಧಿ ಮಲಗುತ್ತಿದ್ದ ಮಂಚ ಸಾಕಷ್ಟು ದೊಡ್ಡದಿದ್ದು, ಅದರ ಮೇಲೆ ಗಾಂಧಿಯವರೊಂದಿಗೆ ಇಬ್ಬರು ಮಲಗಬಹುದಿತ್ತು. ಹಳ್ಳಿ ಸುತ್ತಿ ಬರುತ್ತಿದ್ದ ಸುಶೀಲಾ ನಯ್ಯರ್, ಅಲ್ಲಿ ಒಂದು ಕಡೆ ಮಲಗಿ ನಿದ್ರಿಸುತ್ತಿದ್ದರೆ ಮನೂ ಇನ್ನೊಂದು ಕಡೆ ಕೂತೋ ಮಲಗಿಯೋ ಗಾಂಧಿ ಮಾತುಗಳನ್ನು ಕೇಳುತ್ತಲೋ, ಬರೆದುಕೊಳ್ಳುತ್ತಲೋ ಇರುತ್ತಿದ್ದುದನ್ನು, ನಿರ್ಮಲ ಕುಮಾರ್ ಬೋಸ್ ತಮ್ಮ 'ಮೈ ಡೇಯ್ಸ್ ವಿತ್ ಗಾಂಧಿ' ಪುಸ್ತಕದಲ್ಲಿ ದಾಖಲಿಸಿದ್ದಾರೆ. ಜೊತೆಗೆ ಗಾಂಧಿ ವಾಸಿಸುತ್ತಿದ್ದ ಮನೆಯ ಬಾಗಿಲು ಯಾವಾಗಲೂ ತೆರೆದಿರುತ್ತಿತ್ತು ಎಂದೂ ಅವರು ತಿಳಿಸಿದ್ದಾರೆ. ಆದರೆ ಬೋಸ್ ಗಾಂಧಿಯವರ ಈ ವರ್ತನೆಯನ್ನು ಎಷ್ಟು ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳಲೆತ್ನಿಸಿದರೂ ಯಾಕೋ ಇದೆಲ್ಲ ಅವರಿಗೆ ಸರಿ ಎನಿಸಲಿಲ್ಲ. ಅದನ್ನು ಗಾಂಧಿಯವರಿಗೆ ಹೇಳಿಯೂ ಹೇಳಿದರು. ಇನ್ನು ಕಾರ್ಯದರ್ಶಿಯಾಗಿದ್ದ ಪರಶುರಾಂಗೆ ಇದನ್ನು ಸಹಿಸಲು ಸಾಧ್ಯವೇ ಆಗಲಿಲ್ಲ. ಮನೂ ಬಂದ ಕೆಲವೇ ದಿನಗಳಲ್ಲಿ ಆತ ಗಾಂಧಿಯಿಂದ ದೂರವಾದ. ಗಾಂಧಿ ಆತನಿಗೆ ಪತ್ರ ಬರೆದು, ಆತನ ನಿರ್ಧಾರ ತಮಗೆ ಬೇಸರವನ್ನೇನೂ ಉಂಟು ಮಾಡಿಲ್ಲವೆಂದು ಹೇಳುತ್ತಾ, ಆತನ ಭವಿಷ್ಯ ಜೀವನದ ಬಗ್ಗೆ ತಮ್ಮ ಕಾಳಜಿಯನ್ನು ವ್ಯಕ್ತಪಡಿಸಿ, ಈ ಬಗ್ಗೆ ಆಗಾಗ್ಗೆ ತಮಗೆ ಪತ್ರ ಬರೆಯುತ್ತಿರುವಂತೆ ತಿಳಿಸಿದ್ದರು. ಜೊತೆಗೇ ತಮ್ಮೊಡನಿದ್ದ ದಿನಗಳಲ್ಲಿ ತನಗೆ ಸರಿ

ಎನಿಸದ ಎಲ್ಲ ಸಂಗತಿಗಳನ್ನೂ ಆತ ಸಾರ್ವಜನಿಕವಾಗಿ ಹೇಳುವ ಸ್ವಾತಂತ್ರ್ಯವನ್ನು ಹೊಂದಿದ್ದಾನೆಂದೂ ತಿಳಿಸಿದ್ದರು.

ಮನೂಳೊಡನೆ ಸಂಬಂಧ–ಗಾಂಧಿ ನೀಡಿದ ವಿವರಣೆ

ಗಾಂಧಿ ಮತ್ತು ಮನೂಳ ಸಂಬಂಧದ ಸೂಕ್ಷ್ಮಗಳನ್ನು ಅರಿಯಲು ಅವಳ ಆ ಕಾಲದ ದಿನಚರಿಯ ಟಿಪ್ಪಣಿಗಳನ್ನು ಗಮನಿಸಬೇಕು. ಉದಾಹರಣೆಗೆ, ಟಿಪ್ಪೇರಾ ಜಿಲ್ಲೆಯ ಅಲೂನಿಯಾ ಎಂಬ ಹಳ್ಳಿಗೆ, ಅಲ್ಲಿನ ಚಲಿಸಲಾಗದಷ್ಟು ಹಣ್ಣು ಹಣ್ಣಾದ ಮುದುಕನೊಬ್ಬನಿಗೆ ಆತನ ಹಂಬಲದಂತೆ ದರ್ಶನ ನೀಡಿ, ಪ್ರಾರ್ಥನಾ ಸಭೆಯ ನಂತರ ಗಾಂಧಿ ನದಿಯ ಮೇಲೆ ದೋಣಿಯಲ್ಲಿ ವಾಪಸಾಗುತ್ತಿದ್ದ ಸಂದರ್ಭದ ಬಗೆಗಿನ ಮನೂಳ ಟಿಪ್ಪಣಿ ಹೀಗಿದೆ: 'ಅದೊಂದು ದಟ್ಟ ಹಸಿರು ಕಾನನದ ಮಧ್ಯ ಹರಿದಿದ್ದ ತೊರೆ. ಗಾಂಧಿ ಮುಖ ದರ್ಶನಕ್ಕಾಗಿ ಆಸುಪಾಸಿನ ಹಳ್ಳಿಗಳ ಜನ ನದಿಯ ಎರಡೂ ಬದಿ ಕಿಕ್ಕಿರಿದಿದ್ದರು. ಅಂಬಿಗ ಹುಟ್ಟು ಹಾಕುತ್ತಾ ದೋಣಿಯನ್ನು ನಿಧಾನ ಗತಿಯಲ್ಲಿ ಮುನ್ನಡೆಸಿದ್ದ. ಇಂತಹ ಮನೋಹರ ದೃಶ್ಯದ ಮಧ್ಯೆ ಜಗತ್ತಿನ ಮಹಾತ್ಮನೊಬ್ಬ ನನ್ನ ತೊಡೆಯ ಮೇಲೆ ತಲೆಯಿಟ್ಟು ಸುಖವಾಗಿ ನಿದ್ರಿಸುತ್ತಿದ್ದ. ನಾನು ಈ ಮಹಾತ್ಮನ ಹಣೆಯ ಮೇಲೆ ಕೈ ಇರಿಸಿ ನನ್ನ ಬದುಕಿನ ಸಾರ್ಥಕ ಕ್ಷಣಗಳ ರೋಮಾಂಚನವನ್ನು ಅನುಭವಿಸುತ್ತಿರುವೆ...'

ಗಾಂಧಿ ತಮ್ಮ ಮತ್ತು ಮನೂಳ ಸಂಬಂಧವನ್ನು ಗುಟ್ಟಾಗಿ ಇಟ್ಟಿರಲಿಲ್ಲ; ಇಡುವಂತಹ ವ್ಯಕ್ತಿತ್ವವೂ ಅವರದಾಗಿರಲಿಲ್ಲ. ಅವರು ಈ ಬಗ್ಗೆ ಬಿರ್ಲಾಗೆ, ನೆಹರೂ, ಪಟೇಲರು, ಕೃಪಲಾನಿ, ವಿನೋಬ ಭಾವೆ ಮತ್ತು ಮಕ್ಕಳಾದ ಮಣಿಲಾಲ, ರಾಮದಾಸ ಮತ್ತು ದೇವದಾಸರಿಗೂ ಪತ್ರ ಬರೆದೇ ತಿಳಿಸಿದ್ದರು. ಬಿರ್ಲಾ ಏನೂ ಪ್ರತಿಕ್ರಿಯಿಸದಿದ್ದರೂ, ಕೃಪಲಾನಿ 'ಇದು ಸಾಮಾನ್ಯರು ಅರ್ಥ ಮಾಡಿಕೊಳ್ಳಲು ಕಷ್ಟವಾಗುವ ಪ್ರಯೋಗ. ತಪ್ಪು ತಿಳುವಳಿಕೆಗೆ ಅವಕಾಶದ ಎಲ್ಲ ಸಾಧ್ಯತೆಗಳಿವೆ' ಎನ್ನುತ್ತಾ, 'ನಿಮ್ಮ ವ್ಯಕ್ತಿತ್ವದ ಪರಿಶುದ್ಧತೆಯನ್ನು ನಂಬಿದ ನಮ್ಮಂಥವರಾರೂ ತಪ್ಪು ತಿಳಿಯಲಾರರು' ಎಂದು ಬರೆದಿದ್ದರು. ನೆಹರೂ ಕೂಡ ಇದೇ ಅಭಿಪ್ರಾಯದವರಾಗಿದ್ದರು. ಆದರೆ ಪಟೇಲರಿಗೆ ಈ ವಿಷಯ ಎಲ್ಲಿ ಜಿನ್ನಾರ ಕೈಯಲ್ಲಿ ರಾಜಕೀಯ ದುರುಪಯೋಗಕ್ಕೀಡಾಗುವುದೋ ಎಂಬ ಆತಂಕವಿತ್ತು. ವಿನೋಬಾ ಭಾವೆಯವರು ಬ್ರಹ್ಮಚರ್ಯ ಸಾಧನೆಗೆ ಇದು ಅಗತ್ಯವಿಲ್ಲ ಎಂದು ಉತ್ತರಿಸಿದ್ದರು. ಆದರೆ ಗಾಂಧಿಗೆ ಅದು ಆತ್ಮಸಾಕ್ಷಿಯ ನಿಕಷದಲ್ಲಿ ಮಾತ್ರ ತೀರ್ಮಾನವಾಗುವ ವಿಷಯವಾಗಿತ್ತು. ಅವರು ಈ ವಿಷಯದಲ್ಲಿ ಹಿಂದೆ ಕೂಡ ಕಿಂಚಿತ್ತೂ ವಿಚಲಿತರಾಗಿರಲಿಲ್ಲ. ಸಬರ್ಮತಿ ಆಶ್ರಮದಲ್ಲಿ ಅವರ ಆಪ್ತ ಸಂಗಾತಿಗಳಾಗಿದ್ದ ಮಶ್ರೂವಾಲಾ, ನರಹರಿ ಪಾರೀಖ್ ಮುಂತಾದವರು ಈ ಸಂಬಂಧವಾಗಿಯೇ ಅವರನ್ನು ತೊರೆದು ಹೋಗಿದ್ದರು. ಇಂತಹ ಸಂದರ್ಭದಲ್ಲಿಯೂ ವಿದೇಶೀಯರೂ ಸೇರಿದಂತೆ ಅವರನ್ನು ಭೇಟಿ ಮಾಡಿದ ಹಲವರ ಮಾತುಗಳ ಮೂಲಕ ಇದು ನಮಗೆ ತಿಳಿದುಬರುತ್ತದೆ. ಕ್ವೇಕರ್ ಹೊರೇಸ್ ಅಲೆಕ್ಸಾಂಡರ್ ತಮ್ಮ ಭೇಟಿಯಲ್ಲಿ, ಅವರನ್ನು ಕಾಣಲು ಎಡೆಬಿಡದೆ ಬರುತ್ತಿದ್ದ ಜನಪ್ರವಾಹದ ಮಧ್ಯೆಯೂ ಕ್ಷಣಮಾತ್ರವೂ

ಅಶಾಂತರಾಗದ ಪ್ರಶಾಂತ ವ್ಯಕ್ತಿತ್ವದ ಗಾಂಧಿಯನ್ನು ಕಂಡಿದ್ದಾರೆ. ಹಾರ್ವರ್ಡ್‌ನಿಂದ ಬಂದಿದ್ದ ಸ್ಟುವರ್ಟ್ ನೆಲ್ಸನ್ ಮತ್ತು ಅವರ ಗೆಳೆಯರಿಗೆ ಅವರು 'ಸರಳ, ನಿರಾಳ ಮತ್ತು ಸಹಜ ಸ್ಫೂರ್ತಿಯ ಚಿಲುಮೆ'ಯಾಗಿದ್ದರು. ಇದಕ್ಕೆ ಕಾರಣ, ಅವರ ಮನಸ್ಸು ಸರ್ವಮುಕ್ತವಾಗಿದ್ದುದು. ಅವರು ಈ ವಿಷಯವಾಗಿ ತಪ್ಪು ಸುದ್ದಿ ಹರಡಲಾಗುತ್ತಿದೆ ಎಂದು ಗೊತ್ತಾದಾಗ, ಅವರು ಮಿಷಾಪಾರಾ ಎಂಬ ಹಳ್ಳಿಯಲ್ಲಿ ಸಾರ್ವಜನಿಕರಿಗೆ ಹೀಗೆ ಹೇಳಿದರು: ನನ್ನ ಜೊತೆ ನನ್ನ ಮೊಮ್ಮಗಳಿದ್ದಾಳೆ. ಅವಳೇ ನನಗೆ ಚೈತನ್ಯದಾಯಿ. ಅವಳು ನನ್ನ ಹಾಸಿಗೆಯಲ್ಲೇ ಮಲಗುತ್ತಾಳೆ. ಪ್ರವಾದಿ ಹುಟ್ಟು ನಪುಂಸಕರನ್ನು ತಿರಸ್ಕರಿಸಿದ್ದರೂ ನಪುಂಸಕತೆಯನ್ನು ಸಾಧನೆ ಮಾಡಿ ಪಡೆದವರನ್ನು ಅತಿ ಗೌರವದಿಂದ ಕಂಡಿದ್ದಾರೆ ಎಂಬುದು ನಿಮಗೆ ಗೊತ್ತಿರಬೇಕು. ನನ್ನ ಸಾಧನೆಯ ಬಗ್ಗೆ ನನ್ನ ಹಲವು ಮಿತ್ರರು ಟೀಕೆ-ವಿಮರ್ಶೆಗಳನ್ನು ಮಾಡುತ್ತಿದ್ದಾರೆ. ಅಂದಾಕ್ಷಣ ನಾನು ನನ್ನ ಸಾಧನೆಯ ಪರೀಕ್ಷೆಯನ್ನು ಕೈ ಬಿಡಲಾರೆ.

ಗಾಂಧಿ ಲೋಕವನ್ನು ತಾವು ಸತ್ಯವೆಂದು ನಂಬಿದ ಆದರ್ಶಗಳ ಎರಕದಲ್ಲಿ ಮರುರೂಪಿಸುವ ಹಠಕ್ಕೆ ಬಿದ್ದಿದ್ದರು. ಅದಕ್ಕೆ ಹಲವು ಅಡ್ಡಿ ಆತಂಕಗಳಿಗೆ ತಮ್ಮ ಅಪರಿಶುದ್ಧತೆಯೇ ಕಾರಣವೆಂದು ಭಾವಿಸಿ, ತ್ರಿಕರಣ ಶುದ್ಧಿಗಾಗಿ ದೇಹ-ಮನಸ್ಸು-ಚೈತನ್ಯಗಳ ಸಂಪೂರ್ಣ ನಿಯಂತ್ರಣದ ಸಾಧನೆ ನಡೆಸಿದ್ದರು. ಗಾಂಧಿ ಮನೂಗೆ ಈ ಸಂಗತಿಯನ್ನು ಮನವರಿಕೆ ಮಾಡಿಯೇ ಅವಳನ್ನು ಪ್ರಯೋಗಕ್ಕೆ ಸಿದ್ಧಪಡಿಸಿದ್ದರು. ಮನೂ ಈ ಸಂಬಂಧ ಗಾಂಧಿಯವರ ಈ ಮಾತುಗಳನ್ನು ತನ್ನ ದಿನಚರಿಯಲ್ಲಿ ದಾಖಲಿಸಿದ್ದಾಳೆ: 'ದೇಹವನ್ನು ದೇವಮಂದಿರದಂತೆ ಕಾಪಿಟ್ಟುಕೊಳ್ಳುವವರ ಬದುಕು ಪರಿಪೂರ್ಣ ಆಧ್ಯಾತ್ಮಿಕ ಸೌಂದರ್ಯದಿಂದ ನಳನಳಿಸುವ ಕಾವ್ಯವಾಗುತ್ತದೆ. ಅದು ಪರಿಪೂರ್ಣವಾಗಿ ಅರಳಿದ ಹೂವಿನಂತೆ ತನ್ನ ಪರಿಮಳದಿಂದಲೇ, ಕೋಮುದ್ವೇಷವೂ ಸೇರಿದಂತೆ ಲೋಕದ ಎಲ್ಲ ಮಾಲಿನ್ಯಗಳನ್ನು ತೊಳೆಯುವ ಶಕ್ತಿಯನ್ನು ಗಳಿಸಿರುತ್ತದೆ.' ಆದರೆ ಸಾಮಾನ್ಯರು ಇದರ ಅನುಕರಣೆ ಮಾಡಲಾರಂಭಿಸಿದರೆ ಏನು ಗತಿ? ಎಂದು ಅವರ ಗೆಳೆಯ ಥಕ್ಕರ್ ಬಾಪ ಕೇಳಿದ್ದ ಪ್ರಶ್ನೆಗೆ ಅವರು, 'ಹಾಗಾಗದು. ಅಂಥವರು ಬಹುಬೇಗ ಬಯಲಾಗಿ ವಿಫಲರಾಗುತ್ತಾರೆ' ಎಂದು ಉತ್ತರಿಸಿದ್ದರು. ಆದರೆ ಥಕ್ಕರ್ ಬಾಪಾ ಮನೂಳನ್ನು ಭೇಟಿಯಾಗಿ ಈ ಪ್ರಯೋಗವನ್ನು ನಿಲ್ಲಿಸುವಂತೆ ಗಾಂಧಿಗೆ ಹೇಳು ಎಂದು ಕೋರಿದರು. ಅದರಂತೆ ಮನೂ ಗಾಂಧಿಗೆ ತಿಳಿಸಿದಳು. ಗಾಂಧಿ ಅವಳ ಮಾತಿಗೆ ಮನ್ನಣೆ ಕೊಟ್ಟು ಈ ಪ್ರಯೋಗವನ್ನು ನಿಲ್ಲಿಸಿದರು.

ಇಪ್ಪತ್ತರ ಹರೆಯದ ಮನೂಳಿಂದ ಪ್ಯಾರೇಲಾಲ್ ಆಕರ್ಷಿತರಾಗಿದ್ದರು. ಪ್ರೇಮಭಿಕ್ಷೆಯನ್ನೂ ಯಾಚಿಸಿದ್ದರು. ಆದರೆ ಮನೂಗೆ ಒಪ್ಪಿಗೆ ಇರಲಿಲ್ಲ. ಮನೂಳನ್ನು ಅವಳ ಅಪೇಕ್ಷೆಯ ಮೇರೆಗೇ ಕಠಿಣ ಬ್ರಹ್ಮಚಾರಿಯನ್ನಾಗಿ ರೂಪಿಸತೊಡಗಿದ್ದ ಗಾಂಧಿಯವರೂ ಇದನ್ನು ಇಷ್ಟಪಡಲಿಲ್ಲ. ಕೊನೆಗೆ ಪ್ಯಾರೇಲಾಲ್ ನೌಖಾಲಿಯ ಯಾತ್ರೆಯ ಸಂದರ್ಭದಲ್ಲಿ ಒಂದು ಹೆಣ್ಣು ಹುಡುಕಿ ಮದುವೆಯಾದರು.

ಜನರ ಮಧ್ಯೆ ಗಾಂಧಿ-ಉತ್ಸವವಾದ ಯಾತ್ರೆ

ಗಾಂಧಿ ಪ್ರತಿ ಹಳ್ಳಿಯಲ್ಲೂ ವಿಚಾರಿಸಿ ಬಡವರ, ಕೆಳ ಜಾತಿಗಳ ಮತ್ತು ಮುಸ್ಲಿಮರ

ಮನೆಯಲ್ಲಿ ತಂಗಿ ಆಹಾರ ಪಡೆಯುತ್ತಿದ್ದರು. ಅವರ ಮಾತುಕತೆ ಹೆಚ್ಚಾಗಿ ಸಂತ್ರಸ್ತ ಮಹಿಳೆಯರೊಂದಿಗಿರುತ್ತಿತ್ತು. ಮುಸ್ಲಿಂ ಮಹಿಳೆಯರು ಮತ್ತು ಮಕ್ಕಳೊಂದಿಗೂ ಒಡನಾಡುತ್ತಾ ಅವರ ಆರೋಗ್ಯದ ಬಗ್ಗೆ ಕಾಳಜಿಯಿಂದ ಮಾತಾಡಿ ಸಲಹೆಗಳನ್ನು ನೀಡುತ್ತಿದ್ದರು. ಹಳ್ಳಿಯ ಹಾದಿ ಬೀದಿಯಲ್ಲಿರುತ್ತಿದ್ದ ಮಲಮೂತ್ರ ಇತ್ಯಾದಿ ಕೊಳಕನ್ನು ಅವರು ತಮ್ಮ ಸಂಗಡಿಗರ ಜೊತೆ ಸೇರಿ ಸ್ವಚ್ಛ ಮಾಡುತ್ತಿದ್ದರು. ಜಾತಿಭೇದ ಮತ್ತು ಅಸ್ಪೃಶ್ಯತೆಗಳೆಂಬ ಕೇಡುಗಳ ಬಗ್ಗೆ ತಿಳಿ ಹೇಳುತ್ತಿದ್ದರು. ಜಾತಿಭೇದ ಮಾಡಿರದಿದ್ದರೆ ಮತ್ತು ಅಸ್ಪೃಶ್ಯತೆಯನ್ನು ಆಚರಿಸದಿದ್ದರೆ ಹಿಂದೂಗಳಿಗೆ ಈ ಗತಿ ಬರುತ್ತಿರಲಿಲ್ಲವೆಂದೂ, ಧರ್ಮಾಂಧ ಮುಸ್ಲಿಮರ ಗುಂಪುದಾಳಿಯನ್ನು ಒಟ್ಟಾಗಿ ಎದುರಿಸಬಹುದಿತ್ತೆಂದೂ ಅವರು ಹೇಳಿದರು. 'ಈಗಲೂ ತಡವಾಗಿಲ್ಲ. ಪ್ರತಿದಿನ ಹರಿಜನರೊಂದಿಗೆ ಒಡನಾಡಿರಿ. ಅವರನ್ನು ಊಟಕ್ಕೆ ಕರೆದು ಸತ್ಕರಿಸಿ. ಅವರು ನಿಮ್ಮನ್ನು ಕಾಪಾಡುತ್ತಾರೆ' ಎಂದೂ ಗಾಂಧಿ ಹೇಳುತ್ತಿದ್ದರು. ಈ ಮಧ್ಯೆ ಗಾಂಧಿ ಸುಹ್ರವರ್ದಿಯವರಿಗೆ ಒಂದು ಪತ್ರ ಬರೆದು ತಮ್ಮೆಲ್ಲ ಪ್ರಯತ್ನಗಳ ಹೊರತಾಗಿಯೂ ಅಪಹರಿಸಲ್ಪಟ್ಟ ಹಿಂದೂ ಮಹಿಳೆಯರ ಸುಳಿವು ಕಾಣುತ್ತಿಲ್ಲ, ನಿಮ್ಮಾಡಳಿತ ಇನ್ನೂ ಚುರುಕಾಗಬೇಕು ಎಂದು ಸೂಚಿಸಿದರು. ಇದರಿಂದ ಕೆರಳಿದ ಸುಹ್ರವರ್ದಿ, 'ಇಲ್ಲಿ ನಿಮ್ಮ ಕೆಲಸ ಸುಗಮವಾಗಿರದಿದ್ದರೆ ನೀವು ಕೂಡಲೇ ಬಿಹಾರಕ್ಕೆ ಹೋದರೆ ಒಳ್ಳೆಯದು. ಅಲ್ಲಿ ನಿಮಗೆ ಸಾಕಷ್ಟು ಕೆಲಸವಿದೆ' ಎಂದು ಉತ್ತರ ಬರೆದು, ಗಾಂಧಿಯನ್ನು ನಿರಾಶೆಗೊಳಿಸಿದ್ದರು. ಮೌಲ್ವಿಯೊಬ್ಬರು ಗಾಂಧಿ ಪದೇ ಪದೇ ಕುರಾನ್‌ನ್ನು ಉಲ್ಲೇಖಿಸುವುದನ್ನು ಕಂಡು 'ಅನ್ಯ ಮತದವರು ಕುರಾನ್ ಶ್ಲೋಕಗಳನ್ನು ಹೇಳುವಂತಿಲ್ಲ' ಎಂದು ಕೂಗಾಡಿದ್ದನ್ನೂ ಇಲ್ಲಿ ದಾಖಲಿಸಬಹುದು.

ಇಂತಹ ಎಲ್ಲ ಪ್ರತಿಕೂಲತೆಗಳ ನಡುವೆಯೂ ಗಾಂಧಿಯವರ ಪಾದಯಾತ್ರೆ ಒಂದು ಉತ್ಸವದಂತೆ ನಡೆದಿತ್ತು. ಜನ ವಿವಿಧ ವಾದ್ಯಗಳ ಮೇಳದಲ್ಲಿ ಜನಪದ ಮತ್ತು ಭಜನಾ ಗೀತೆಗಳನ್ನು ಹಾಡುತ್ತಿದ್ದರು. ಇವರ ಜೊತೆ ಗಾಂಧಿಯೂ ಸೇರಿಕೊಳ್ಳುತ್ತಿದ್ದರು. ಮುರುಕಲು ಸೇತುವೆ ದಾಟುವಾಗ ಭಯಗ್ರಸ್ತರಾದಂತೆ ಅಭಿನಯಿಸುತ್ತಾ ಗಾಂಧಿ ನಾಟ್ಯ ಮಾಡುತ್ತಾ ನಡೆಯುವುದನ್ನು ಜನ ಚಪ್ಪಾಳೆ ತಟ್ಟಿ ಆನಂದಿಸುತ್ತಿದ್ದರು. ಮನೂ ಒಳ್ಳೆಯ ಗಾಯಕಿಯಾಗಿದ್ದಳು. ಅವಳು ಗಾಂಧಿಯವರ ಎಲ್ಲ ಸಭೆಗಳಲ್ಲಿ ಭಜನೆ-ಕೀರ್ತನೆಗಳನ್ನು ಹಾಡುತ್ತಿದ್ದಳು. ಅವಳು ೧೯೪೭ರ ಜನವರಿಯಲ್ಲಿ ಪಾಣಿಯಾಲಾ ಎಂಬ ಗ್ರಾಮದಲ್ಲಿ ಮೊದಲ ಬಾರಿಗೆ ಹಾಡಿದ 'ರಘುಪತಿ ರಾಘವ ರಾಜಾರಾಂ/ ಪತಿತ ಪಾವನ ಸೀತಾರಾಂ/ ಈಶ್ವರ ಅಲ್ಲಾ ತೇರೇ ನಾಮ್' ಎಂಬ ಗೀತೆ ನೆರೆದಿದ್ದ ಹಿಂದೂ ಮುಸ್ಲಿಂ ಜನಸ್ತೋಮದ ಮಧ್ಯೆ ರೋಮಾಂಚನವನ್ನುಂಟು ಮಾಡಿತು. ಅಲ್ಲಿಂದ ಆ ಗೀತೆ ಗಾಂಧಿಯವರ ಪ್ರಿಯ ಗೀತೆಯಾಗಿ ದೇಶಾದ್ಯಂತ ಅನುರಣಿಸಲಾರಂಭಿಸಿತು. ಗಾಂಧಿ ತಮ್ಮ ಸಭೆಗಳಲ್ಲಿ ಈ ಗೀತೆ ಮತ್ತು 'ವೈಷ್ಣವ ಜನತೊ' ಜೊತೆಗೆ ಕುರಾನ್ ಪಠಣ ಮತ್ತು ಕ್ರೈಸ್ತ ಗೀತೆಗಳನ್ನೂ ಹಾಡುವುದನ್ನು ಕಡ್ಡಾಯಗೊಳಿಸಿದ್ದರು. ತಮ್ಮ ಪರಿವಾರದವರು ಮುಸ್ಲಿಮರು ನೀಡುವ ಸಸ್ಯಾಹಾರ ಊಟ-ತಿಂಡಿಗಳನ್ನು ಪ್ರೀತಿಯಿಂದ ಸ್ವೀಕರಿಸುವಂತೆ ಸೂಚಿಸಿದ್ದರು.

ಗಾಂಧಿ ಸಭೆಗಳಿಗೆ ಮುಸ್ಲಿಮರ ಮಿಶ್ರ ಪ್ರತಿಕ್ರಿಯೆ ಕಂಡು ಬರುತ್ತಿತ್ತು. ಕೆಲವೆಡೆ ಅವರೇ ಬಹುಸಂಖ್ಯೆಯಲ್ಲಿದ್ದರೆ, ಇನ್ನು ಕೆಲವಡೆ ಬೆರಳೆಣಿಕೆಯ ಜನ ಮಾತ್ರವಿರುತ್ತಿದ್ದರು. ಒಂದು

ಊರಿನಲ್ಲಿ ಯಾರೋ ಒಬ್ಬ ಹಿಂದು ಗಾಂಧಿ ಟೋಪಿ ಧರಿಸಿ ಸಭೆಗೆ ಬಂದಿದ್ದನು. ಮುಂದಿನ ಸಭೆಗಳಲ್ಲಿ ಹಿಂದೂ ಮುಸ್ಲಿಮರಿಬ್ಬರೂ ಗಾಂಧಿ ಟೋಪಿ ಧರಿಸಿ ಬರಲಾರಂಭಿಸಿದರು. ಗಾಂಧಿ ತಮ್ಮ ಸಭೆಗಳಲ್ಲಿ ಧಾರ್ಮಿಕ ಸಾಮರಸ್ಯದ ಮಾತುಗಳ ಜೊತೆಗೆ ಲೌಕಿಕ ಅಭ್ಯುದಯದ ಮಾತುಗಳನ್ನೂ ಆಡುತ್ತಿದ್ದರು. ಪೂರ್ವ ಬಂಗಾಳದ ಕಾಡು–ನೆಲ–ನೀರುಗಳ ಅದ್ಭುತ ಪ್ರಕೃತಿ ಸೌಂದರ್ಯ ಅವರನ್ನು ಮಂತ್ರಮುಗ್ಧರನ್ನಾಗಿಸಿತ್ತು. ಅವರು ಹೇಳಿದರು: 'ಭಗವಂತನ ಈ ಕೊಡುಗೆಯನ್ನು ನಾವು ಜೋಪಾನವಾಗಿ ಕಾಪಾಡಿಕೊಂಡು ನಮ್ಮ ಬದುಕನ್ನು ಹಸನುಗೊಳಿಸಿ ಕೊಳ್ಳಬೇಕು. ಪ್ರತಿ ಊರಿಗೆ ಸ್ವಚ್ಛ ಗಂಗೆಯ ನೀರು ಪೂರೈಕೆಯಾಗಬೇಕು. ಮನೆ ಬೀದಿಗಳನ್ನು ಚೊಕ್ಕಟವಾಗಿರಿಸಿಕೊಳ್ಳಬೇಕು. ಈ ಮಣ್ಣನ್ನು ಆಹಾರ ಧಾನ್ಯಗಳ ಹೆಚ್ಚಳಕ್ಕಾಗಿ ವಿವೇಕಶಾಲಿಯಾಗಿ ಬಳಸಿಕೊಳ್ಳಬೇಕು. ಸೂರ್ಯರಶ್ಮಿಯನ್ನು ಮೈ ಮನಗಳ ಚೇತರಿಕೆಗೆ ಉಪಯೋಗಿಸಿಕೊಳ್ಳಬೇಕು. ತಲೆಯ ಮೇಲಿನ ಅನಂತಾನಂತ ನೀಲಿ ಆಕಾಶದಿಂದ ಗರಿಷ್ಠ ಪ್ರಾಣವಾಯುವನ್ನು ಪಡೆಯುವ ತಂತ್ರಗಳನ್ನು ರೂಪಿಸಿಕೊಳ್ಳಬೇಕು.'

ಡಿಸೆಂಬರ್ ಕೊನೆಯ ಹೊತ್ತಿಗೆ ನೆಹರು ಮತ್ತು ಕೃಪಲಾನಿಯವರು ಶ್ರೀರಾಂಪುರಕ್ಕೆ ಬಂದು ಗಾಂಧಿಯವರನ್ನು ಭೇಟಿ ಮಾಡಿ ಅಧಿಕಾರ ಹಸ್ತಾಂತರದ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಅವರೊಂದಿಗೆ ಚರ್ಚೆ ಮಾಡಿದ್ದಲ್ಲದೆ, ಇಂತಹ ನಿರ್ಣಾಯಕ ಸಮಯದಲ್ಲಿ ಅವರು ದೆಹಲಿಯಲ್ಲಿರಬೇಕು ಎಂದು ಆಗ್ರಹಿಸಿ ಆಹ್ವಾನಿಸಿ ಹೋಗಿದ್ದರು. ಪಟೇಲರೂ ಒಂದು ಪತ್ರ ಬರೆದು, ಕೂಡಲೇ ದೆಹಲಿಗೆ ವಾಪಸಾಗುವಂತೆ ಒತ್ತಾಯಿಸಿದ್ದರು. ಪಟೇಲ್, ಮೀರತ್ ಎಐಸಿಸಿ ಸಮ್ಮೇಳನದಲ್ಲಿ ಮುಸ್ಲಿಂ ಲೀಗ್ ವಿರುದ್ಧ 'ಖಡ್ಗಕ್ಕೆ ಖಡ್ಗ' ಎಂಬ ವೀರಾವೇಶದ ಮಾತಾಡಿ ಪರಿಸ್ಥಿತಿಯನ್ನು ಬಿಗಡಾಯಿಸುವಂತೆ ಮಾಡಿದ್ದಾರೆ ಎಂದು ಕೆಲವರು, ಪಟೇಲರು ಪಾಕಿಸ್ತಾನ ನಿರ್ಮಾಣವೇ ಸದ್ಯದ ಬಿಕ್ಕಟ್ಟಿಗೆ ಮದ್ದು ಎಂಬ ತೀರ್ಮಾನಕ್ಕೆ ಬಂದಂತಿದೆ ಎಂದು ಇನ್ನು ಕೆಲವರೂ, ಗಾಂಧಿಗೆ ದೂರಿ ಪತ್ರಗಳನ್ನು ಬರೆದಿದ್ದರು. ಇನ್ನು ಮುಸ್ಲಿಂ ಲೀಗ್‌ನ ಪತ್ರಿಕೆ 'ಡಾನ್', ಬಂಗಾಳದ ಪ್ರಧಾನಮಂತ್ರಿ ಮೊದಲು ಗಾಂಧಿಯನ್ನು ಪ್ರಾಂತ್ಯದಿಂದ ಹೊರಹಾಕಬೇಕೆಂದು ಬರೆದಿತ್ತು. ಆದರೆ ಇದಾವುದರಿಂದಲೂ ವಿಚಲಿತರಾಗದ ಗಾಂಧಿ, ಫೆಬ್ರುವರಿ ಮಧ್ಯಭಾಗದವರೆಗೆ ತಮ್ಮ ಯಾತ್ರೆಯನ್ನು ಮುಂದುವರೆಸಿದರು. ಅವರು ಯಾತ್ರೆಯ ಆರಂಭದಲ್ಲಿ ಹೇಳಿದ್ದ ಹಾಗೆ ಪರಿಸ್ಥಿತಿ ಸಾಮಾನ್ಯವಾಗುವವರೆಗೆ ಅವರು ಹಿಂದಿರುಗದಿರಲು ತೀರ್ಮಾನಿಸಿದ್ದರು.

ಶ್ರೀರಾಂಪುರದಿಂದ ಹೊರಟ ಗಾಂಧಿ–ಪರಿವಾರದ ಕೆಲಸಗಳ ಪರಿವೀಕ್ಷಣೆ

ಶ್ರೀರಾಂಪುರದಲ್ಲಿ ತಮ್ಮ ೪೩ ದಿನಗಳ ಸತತ ಬಿಡಾರದ ನಂತರ ಜನವರಿ ೨ರಂದು ಗಾಂಧಿ ತಾವು ವಿವಿಧ ದಿಕ್ಕುಗಳ ಹಳ್ಳಿಗಳಿಗೆ ಅಟ್ಟಿದ್ದ ತಮ್ಮ ಶಿಷ್ಯ–ಶಿಷ್ಯೆಯರ ಕೆಲಸಗಳನ್ನು ನೋಡಲು ಹೊರಟರು. ಅವರು ಗ್ರಾಮ ಬಿಟ್ಟು ಹೊರಟದ್ದಂತೆ ಓರ್ವ ಮುಸ್ಲಿಂ ವೃದ್ಧ ಅವರ ಬಳಿ ಬಂದು ನಾಲ್ಕು ಕಿತ್ತಳೆ ಹಣ್ಣುಗಳನ್ನು ನೀಡಿ ನಮಸ್ಕರಿಸಿ ಅವರನ್ನು ಬೀಳ್ಕೊಟ್ಟ. ಗಾಂಧಿಯವರೊಂದಿಗೆ ನಿರಂಜನ ಸಿಂಗ್ ಅವರ ಸಿಖ್ ಪರಿವಾರವೂ ಅವರ

ಸೇವಾ ನಿರತವಾಗಿ ಹೊರಟಿತು. ಸತೀಶ್‌ಚಂದ್ರ ದಾಸ್‌ಗುಪ್ತ ಗಾಂಧಿಯವರಿಗಾಗಿ ಒಂದು ಸರಳ ಜಂಗಮ ಕುಟೀರವನ್ನೇ ವಿನ್ಯಾಸ ಮಾಡಿಕೊಟ್ಟಿದ್ದರು. ಸಿಖ್ ಪಡೆ ಅದನ್ನು ಗಾಂಧಿ ಹೋದೆಡೆಯಲ್ಲೆಲ್ಲ ಹೊತ್ತು ತಂದು ಸ್ಥಾಪಿಸುತ್ತಿತ್ತು. ಗಾಂಧಿ ಶಿಷ್ಯ-ಶಿಷ್ಯೆಯರು ತಾವಿದ್ದ ಹಳ್ಳಿಗಳನ್ನು ದತ್ತು ತೆಗೆದುಕೊಂಡಂತೆ ಅವುಗಳ ಸಾಮಾಜಿಕ ಸ್ವರೂಪವನ್ನೇ ಬದಲಾಯಿಸುವಲ್ಲಿ ಯಶಸ್ವಿಯಾಗಿದ್ದರು. ಗಲಭೆಯ ಸಮಯದಲ್ಲಿ ಓಡಿ ಹೋಗಿದ್ದ ಹಿಂದೂಗಳು ವಾಪಸ್ ಬಂದಿದ್ದರು. ಅವರನ್ನು ಓಡುವಂತೆ ಮಾಡಿದ್ದ ಮುಸ್ಲಿಮರು ಪಶ್ಚಾತ್ತಾಪದಿಂದ ಹಿಂತಿರುಗಿದ ಹಿಂದೂ ಸೋದರರ ಪುನರ್ವಸತಿಗೆ ನೆರವಾಗುತ್ತಿದ್ದರು. ಭಾಟಿಯಾಲ್ಪುರ ಎಂಬಲ್ಲಿ ಮುರಿದು ಹಾಕಿದ್ದ ಹಿಂದೂ ವಿಗ್ರಹದ ಪ್ರತಿಷ್ಠಾಪನೆಯನ್ನು ಗ್ರಾಮಸ್ಥರ ಕೋರಿಕೆಯ ಮೇರೆಗೆ ಸ್ವತಃ ಗಾಂಧಿಯವರೇ ನೆರವೇರಿಸಿದರು. ಈ ಸಂದರ್ಭದಲ್ಲಿ ಮುಸ್ಲಿಂ ಗ್ರಾಮಸ್ಥರೂ ಹಾಜರಿದ್ದು ಈ ವಿಗ್ರಹ ಮತ್ತು ಹಿಂದೂ ಸೋದರರ ರಕ್ಷಣೆಯ ಹೊಣೆ ತಮ್ಮದೆಂದು ಗಾಂಧಿಯವರಿಗೆ ಮಾತುಕೊಟ್ಟರು. ಸುಶೀಲಾ ನಯ್ಯರ್ ಚಾನ್‌ಗಿರಗಾಂವ್‌ನಲ್ಲಿ ತಮ್ಮ ವೈದ್ಯಕೀಯ ಸೇವೆಯ ಮೂಲಕ ಜನರ ಮನ ಗೆದ್ದು, ಲೂಟಿಯಾದ ವಸ್ತುಗಳನ್ನು ಸಂಬಂಧಪಟ್ಟವರಿಗೆ ಮರಳುವಂತೆ ಮಾಡಿದ್ದರು. ಪಕ್ಕದ ಕರಪಾರಾದಲ್ಲಿ ವಾಸವಾಗಿದ್ದ ಸುಶೀಲಾ ಪೈ, ಶಾಲೆಗಳ ಪುನರಾರಂಭ ಮಾಡಿಸಿ ವಾರದ ಸಂತೆ ನಡೆಯುವಂತೆ ಹಿಂದೂ-ಮುಸ್ಲಿಂ ರೈತರು ಮತ್ತು ವ್ಯಾಪಾರಿಗಳ ನಡುವೆ ರಾಜಿ ಮಾಡಿಸಿದ್ದರು. ಕನು ಮತ್ತು ಆತನ ಹೆಂಡತಿ ಅಭಾ ಛಾಯಾಚಿತ್ರೀಕರಣ, ಚಿತ್ರಕಲೆ ಮುಂತಾದ ಸಾಮೂಹಿಕ ಕಲಾ ಚಟುವಟಿಕೆಗಳ ಮೂಲಕ ಯುವಜನರನ್ನು ಸಂಘಟಿಸಿ ರಾಮದೇವರಪುರ ಮತ್ತು ಹೈಮಾಚರ್ ಗ್ರಾಮಗಳಲ್ಲಿ ಶಾಂತಿ ಮರಳುವಂತೆ ಮಾಡಿದ್ದರು. ಹೈಮಾಚರ್‌ನಲ್ಲೇ ಅಸ್ಪೃಶ್ಯ ಕುಟುಂಬವೊಂದರ ಜೊತೆ ವಾಸಿಸಿದ್ದ ಥಕ್ಕರ್ ಬಾಪಾ ಗ್ರಾಮ ನೈರ್ಮಲ್ಯ ಚಟುವಟಿಕೆಗಳಲ್ಲಿ ತೊಡಗಿ ಊರೂರುಗಳಲ್ಲಿ ಶೌಚಗೃಹಗಳನ್ನು ಕಟ್ಟಿದ್ದರು. ಇವರ ಜೊತೆಗೆ ರೇಣುಕಾ ರಾಯ್, ಅಶೋಕ್ ಗುಪ್ತಾ, ಸ್ನೇಹಾರಾಣಿ ಮುಂತಾದ ಸ್ಥಳೀಯ ಸಮಾಜಸೇವಾ ಕಾರ್ಯಕರ್ತರೂ ಕೈ ಜೋಡಿಸಿದ್ದರು.

ಇನ್ನು ಸಿರಂಡಿಯಾ ಗ್ರಾಮಕ್ಕೆ ಗಾಂಧಿ, ಜನವರಿ ೨೦ರಂದು ಬಂದಾಗ, ಅಲ್ಲಿ ತಮ್ಮ ಪ್ರಿಯ ಮುಸ್ಲಿಂ ಶಿಷ್ಯೆ ಅಮ್ತುಸ್ ಸಲಾಂ ಬೀಬಿ ೨೫ ದಿನಗಳಿಂದ ಉಪವಾಸ ಕೂತಿರುವುದನ್ನು ಕಂಡು ಗಾಬರಿಯಾದರು. ಆ ಊರಿನ ಗುಡಿಯಲ್ಲಿ ಮೂರು ಕತ್ತಿಗಳು ಗಲಭೆಯ ಹೊತ್ತಿನಲ್ಲಿ ಕಾಣೆಯಾಗಿದ್ದು, ಇನ್ನೂ ಗುಡಿಗೆ ಮರಳದೆ ಇದ್ದುದು ಈ ಉಪವಾಸಕ್ಕೆ ಕಾರಣವಾಗಿತ್ತು. ಪೊಲೀಸರು ಹಳ್ಳಿಗರ ಒಂದು ಸಭೆ ಕರೆದು ತಪಾಸಣೆಯ ಬೆದರಿಕೆ ಹಾಕಿದಾಗ, ಇಬ್ಬರು ಮುಸ್ಲಿಂ ಯುವಕರು, ತಾವು ಕದ್ದ ಎರಡು ಕತ್ತಿಗಳನ್ನು ವಾಪಸ್ ತಂದುಕೊಟ್ಟರು. ಆದರೆ ಮೂರನೆಯ ಕತ್ತಿಯ ಸುಳಿವಿರಲಿಲ್ಲ. ಜ್ವರ ಮತ್ತು ಕೆಮ್ಮುಗಳಿಂದ ನಿತ್ರಾಣರಾಗಿದ್ದ ಅಮ್ತುಸ್‌ಗೆ ಕುರಾನ್ ಮತ್ತು ಗೀತಾ ಪಠಣಗಳೆ ಪ್ರಾಣತಂತುವಾಗಿದ್ದವು. ಗಾಂಧಿ ಎಷ್ಟೇ ಹೇಳಿದರೂ ಆಕೆ ಉಪವಾಸ ಮುರಿಯಲು ಸಿದ್ಧಳಾಗಲಿಲ್ಲ. ಕೊನೆಗೆ ಅವರು, ಅಮ್ತುಸ್‌ಳ ಉದ್ದೇಶ, ಆ ಹಳ್ಳಿಗಳ ಜನರಲ್ಲಿ ಕೋಮು ಸೌಹಾರ್ದ ಮೂಡಿಸುವುದೇ ಆಗಿರುವುದರಿಂದ, ಸುತ್ತಲ ನಾಲ್ಕೂ ಹಳ್ಳಿಗಳ ನಿವಾಸಿಗಳ ಒಂದು ಸಭೆ ಕರೆದು, ಅವರಿಂದ ತಾವು ಇನ್ನು ಮುಂದೆ ಅನ್ಯರ ಧರ್ಮಗಳನ್ನು ತಮ್ಮ

ಧರ್ಮಗಳಂತೆಯೇ ಗೌರವಿಸುವುದಾಗಿಯೂ, ಇತರ ಧರ್ಮಗಳ ಆಚರಣೆಗಳಲ್ಲಿ ಹಸ್ತಕ್ಷೇಪ ಮಾಡುವುದಿಲ್ಲವೆಂದೂ ಭಗವಂತನ ಸಾಕ್ಷಿಯಾಗಿ ಪ್ರತಿಜ್ಞೆ ಮಾಡುತ್ತಿರುವುದಾಗಿ ಹೇಳುವ ಮತ್ತು ಬೀಬಿ ಅಮ್ತುಸ್ ಕೂಡಲೇ ಉಪವಾಸ ಮುರಿಯಬೇಕೆಂಬುದು ತಮ್ಮೆಲ್ಲರ ಇಚ್ಛೆಯಾಗಿದೆಯೆಂದೂ ತಿಳಿಸುವ ಹೇಳಿಕೆಗೆ ಅವರೆಲ್ಲರ ಸಹಿ/ಹೆಬ್ಬೆಟ್ಟಿನ ಗುರುತು ಹಾಕಿಸಿ ಅಮ್ತುಸ್‌ಗೆ ನೀಡಿದರು. ಅಮ್ತುಸ್ ಉಪವಾಸ ನಿಲ್ಲಿಸಿದರು.

ಮನೂ–ಅಂಬೇಡ್ಕರ್–ಹರಿಲಾಲರ ಉಪಕಥೆಗಳು

ಗಾಂಧಿಯವರ ನೌಖಾಲಿ ಯಾತ್ರೆಯ ಕಥೆಯನ್ನು ಪೂರ್ಣಗೊಳಿಸುವ ಮುನ್ನ ಮೂರು ಸಂಗತಿಗಳನ್ನಿಲ್ಲಿ ದಾಖಲಿಸಬೇಕು. ಗಾಂಧಿಯವರ ಉಟೋಪಹಾರ–ಸ್ನಾನ ಇತ್ಯಾದಿಗಳನ್ನು ನೋಡಿಕೊಳ್ಳುತ್ತಿದ್ದ ಮನು, ಒಮ್ಮೆ ಊರಿಂದೂರಿಗೆ ಹೋಗುವ ಯಾತ್ರೆಯ ಭರಾಟೆಯಲ್ಲಿ ಭಾಟಿಯಾಲ್ಪುರ ಎಂಬಲ್ಲಿ ಗಾಂಧಿ ಸ್ನಾನ ಮಾಡುವಾಗ ಮೈಯುಜ್ಜಿಕೊಳ್ಳಲು ಬಳಸುತ್ತಿದ್ದ ಕಲ್ಲೊಂದನ್ನು ಅಲ್ಲಿಯೇ ಬಿಟ್ಟು ಬಂದುಬಿಟ್ಟಿದ್ದಳು. ಶ್ರೀರಾಂಪುರದಲ್ಲಿ ಅಂದು ಸಂಜೆ ಸ್ನಾನದ ಹೊತ್ತಿನಲ್ಲಿ ಗಾಂಧಿ ಅದನ್ನು ಕೇಳಿದಾಗಲೇ ಅದು ಗೊತ್ತಾದದ್ದು. ಆ ಕಲ್ಲನ್ನು ಗಾಂಧಿಗೆ ಮೀರಾ ಕೊಟ್ಟಿದ್ದುದು. ಅದನ್ನು ಅವರು ಎಷ್ಟೋ ವರ್ಷಗಳಿಂದ ಜೋಪಾನವಾಗಿ ಕಾಪಾಡಿಕೊಂಡು ಬಂದಿದ್ದರು. ಹಾಗಾಗಿ ಗಾಂಧಿಗೆ ಮನೂಳ ಈ ನಿರ್ಲಕ್ಷ್ಯ ಕ್ಷಮಾರ್ಹವೆನಿಸಲಿಲ್ಲ. ಗಾಂಧಿ ಕೂಡಲೇ ಆ ಊರಿಗೆ ಹೋಗಿ ಆ ಕಲ್ಲನ್ನು ಹುಡುಕಿಕೊಂಡು ತರಬೇಕೆಂದು ಆಜ್ಞಾಪಿಸಿದರು. ಅದು ಸಂಜೆ. ಕಾಡಿನ ದಾರಿ ಬೇರೆ. ಆದರೂ ಗಾಂಧಿ ಜಗ್ಗಲಿಲ್ಲ. ಮನು ಹೊರಟಳು. ಹೋಗಿ ಒಂದು ತಾಸಿನಲ್ಲಿ ಆ ಕಲ್ಲನ್ನು ಹುಡುಕಿ, ವಾಪಸ್ ತಂದು 'ತೆಗೆದುಕೊಳ್ಳಿ ನಿಮ್ಮ ಕಲ್ಲು' ಎಂದು ಗಾಂಧಿಯ ಮುಂದೆ ಎಸೆದಳು. ಗಾಂಧಿ ಸುಪ್ರಸನ್ನರಾಗಿ ಹೇಳಿದರು: 'ನೀನು ದಾರಿ ನೆನೆದು ಭಯಗೊಂಡು ಹೋಗಲಾರೆ ಎಂದಿದ್ದರೆ ನನಗೆ ನಿನ್ನ ಮೇಲೆ ನಂಬಿಕೆಯೇ ಹೋಗುತ್ತಿತ್ತು. ನಿನ್ನನ್ನು ಕಾಡುಮೃಗವೋ, ಕಳ್ಳಕಾಕರೋ ಕೊಂದು ಹಾಕಿದ್ದರೂ ನನಗೇನೂ ದುಃಖವಾಗುತ್ತಿರಲಿಲ್ಲ! ನೀನು ಯಾವಾಗಲೂ ಹಾಡಿ ಎಲ್ಲರನ್ನೂ ಮೆಚ್ಚಿಸುವ 'ಏಕ್ಲೆ ಚಲೋ' (ಒಂಟಿಯಾಗಿಯೇ ನಡೆ) ಎಂಬ ಹಾಡು ನಿನಗೆ ಬರೀ ಹಾಡೋ ಅಥವಾ ಆಳದ ನಂಬಿಕೆಯೋ ಎಂಬುದನ್ನು ನಾನು ಪರೀಕ್ಷೆ ಮಾಡಬೇಕಿತ್ತು'

ಇದು ಗಾಂಧಿಯವರಿಗೆ ಮೀರಾ ಬಗೆಗಿದ್ದ ಪ್ರೀತಿಯ ಪ್ರತೀಕ ಹೇಗೋ ಮನೂಳನ್ನು ಕಟು ನಿಷ್ಠುರತೆಯ ಪರೀಕ್ಷೆಗೊಡ್ಡಿ ತಮ್ಮ ಬಗ್ಗೆ ಅವಳಿಗಿದ್ದ ನಿಷ್ಠೆ–ಪ್ರೀತಿಗಳನ್ನು ಖಚಿತಪಡಿಸಿಕೊಳ್ಳುವ ಪ್ರಯತ್ನವೂ ಆಗಿತ್ತು ಎಂದು ಹೇಳಬಹುದು.

ನೌಖಾಲಿಯಲ್ಲಿರುವಾಗಲೇ ಗಾಂಧಿಯವರಿಗೆ ಲಂಡನ್‌ನಿಂದ ಒಂದು ಪತ್ರ ಬಂದಿತ್ತು. ಬರೆದವರು ಕಾರ್ಲ್ ಹೀತ್ ಎಂಬ ಕ್ವೇಕರ್ ಕೂಟದ ಗಾಂಧಿ ಅಭಿಮಾನಿ. ಅವರನ್ನು ಇತ್ತೀಚೆಗೆ ಡಾ. ಅಂಬೇಡ್ಕರ್ ಭೇಟಿಯಾಗಿ ಅಸ್ಪೃಶ್ಯರ ಬಗ್ಗೆ ಗಾಂಧಿಯವರ 'ವಿವಾದಾತ್ಮಕ' ನಿಲುವನ್ನು ವಿವರಿಸಿದ್ದರ ಪರಿಣಾಮವಾಗಿತ್ತು. ಅವರು ಗಾಂಧಿಗೆ ಬರೆದ ಪತ್ರದಲ್ಲಿ 'ಇಷ್ಟರಲ್ಲೇ ಅಂಬೇಡ್ಕರ್ ಭಾರತಕ್ಕೆ ವಾಪಸಾಗಲಿದ್ದು, ಅವರೇ ನಿಮಗೆ ಮೊದಲು ಪತ್ರ ಬರೆಯುವ ಸಾಧ್ಯತೆ ಇಲ್ಲವೆಂದು ನನಗೆ ಅನ್ನಿಸಿರುವುದರಿಂದ ಅವರ

ಸಮುದಾಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ನೀವೇ ಅವರನ್ನು ಆಹ್ವಾನಿಸಿ ಪತ್ರ ಬರೆಯಬೇಕೆಂದು' ಕೋರಿದ್ದರು. ಅದಕ್ಕೆ ಗಾಂಧಿ ಹೀಗೆ ಉತ್ತರಿಸಿದ್ದರು: 'ಅಂಬೇಡ್ಕರ್ ಅವರ ಗುರಿ ಶ್ಲಾಘನೀಯವಾದರೂ ಅದನ್ನು ಮುಟ್ಟಲು ಅವರು ಅನುಸರಿಸಿರುವ ಮಾರ್ಗ ದ್ವೇಷಮಯವಾಗಿದ್ದು ಪ್ರಶ್ನಾರ್ಹವೂ ಆಗಿದೆ. ಅವರ ಇತ್ತೀಚಿನ 'ಅಸ್ಪೃಶ್ಯರಿಗೆ ಗಾಂಧಿ ಮತ್ತು ಕಾಂಗ್ರೆಸ್ ಮಾಡಿರುವುದೇನು?' ಎಂಬ ಪುಸ್ತಕವೇ ಇದಕ್ಕೆ ಉದಾಹರಣೆ. ಬರೀ ಸುಳ್ಳುಗಳಿಂದ ತುಂಬಿ ಹೋಗಿರುವ ಈ ಪುಸ್ತಕವನ್ನು ಬರೆಯುವ ಮುನ್ನ ಸಾಕಷ್ಟು ನಿಂದನೆ ಮತ್ತು ಅವಮಾನಗಳಿಂದ ನೊಂದಿರುವ ಸಮುದಾಯಕ್ಕೆ ಸೇರಿದ ಈ ವ್ಯಕ್ತಿ, ಅವನ್ನು ಇತರರ ಮೇಲೆ ಪ್ರಯೋಗಿಸುವುದರ ಪರಿಣಾಮಗಳನ್ನು ಕುರಿತು ಯೋಚಿಸಲಾಗದಷ್ಟು ಧಾವಂತದಲ್ಲಿರುವಾಗ ನೀವು ಹೇಳಿರುವಂತೆ ನಾನೇ ಆತನನ್ನು ಸಂಪರ್ಕಿಸುವುದು, ಈಗ ಆತ ಹಿಡಿದಿರುವ ದಾರಿಯನ್ನು ಇನ್ನಷ್ಟು ಬಲಗೊಳಿಸುತ್ತದೆ. ಇದು ನನ್ನ ಪ್ರತಿಷ್ಠೆಯ ಅರಿವಿನಿಂದಲ್ಲ, ನನ್ನ ಕರ್ತವ್ಯದ ಅರಿವಿನಿಂದ ಮೂಡಿರುವ ನಿರ್ಧಾರವಾಗಿದೆ.'

ಗಾಂಧಿ ನೌಖಾಲಿಯಲ್ಲಿದ್ದಾಗಲೇ ಅವರು ಹರಿಲಾಲನಿಗೂ ಒಂದು ಪತ್ರ ಬರೆದಿದ್ದರು. ಇದು ಅವನು ಯಾರ ಬಳಿಯೋ ಕಳಿಸಿದ್ದ ಪತ್ರಕ್ಕೆ ಉತ್ತರವಾಗಿತ್ತು. ಪತ್ರ ತಂದವರು, ಹರಿಲಾಲ ತನ್ನ ಐವತ್ತೆಂಟು ವರ್ಷಗಳನ್ನು ಮೀರಿದ ವೃದ್ಧನಂತೆ ಕಾಣುತ್ತಿದ್ದಾನೆಂದೂ, ಅವನು ತನ್ನ ಬದುಕಿನ ದಿಕ್ಕನ್ನು ಬದಲಾಯಿಸಬಯಸಿದ್ದಾನೆ ಎಂದೂ ತಿಳಿಸಿದ್ದರು. ಗಾಂಧಿ, ಹರಿಲಾಲನಿಗೆ, 'ನೀನು ಬದಲಾಗಲು ಇಚ್ಛಿಸಿರುವುದು ಸಂತೋಷ. ನೀನು ಶುದ್ಧನೂ, ಪವಿತ್ರನೂ ಆಗುವುದಾದರೆ ನಿನ್ನ ಕಷ್ಟ-ಕ್ಲೇಶಗಳೆಲ್ಲ ತೀರುವುವು. ಅದಕ್ಕೆ ನೌಖಾಲಿಯಲ್ಲಿ ಅವಕಾಶವಿದೆ ಬಾ' ಎಂದು ಪತ್ರ ಬರೆದಿದ್ದರು. ಆದರೆ ಅವನು ನೌಖಾಲಿಗೆ ಬರಲಿಲ್ಲವೆಂಬುದು ಬೇರೆ ವಿಷಯ.

ಗಾಂಧಿ ಕಂಡ ಕಸ್ತೂರಬಾ ದರ್ಶನ

ಗಾಂಧಿ ಬಂಗಾಳ ಬಿಟ್ಟು, ತಮಗೆ ಕರೆ ಬಂದಿದ್ದ ಬಿಹಾರಕ್ಕೆ ಹೊರಡುವ ಮಾರ್ಗದಲ್ಲಿ, ಫೆಬ್ರುವರಿ ೧೯ರಂದು ಬಿರಾಂಪುರದಲ್ಲಿದ್ದರು. ಅಂದು ಶಿವರಾತ್ರಿ. ಕಸ್ತೂರಬಾ ಅವರ ಮರಣದ ದಿನ. ಅಂದು ಗಾಂಧಿ ಕೋರಿಕೆಯಂತೆ ಮನೂ ಇಡೀ ಭಗವದ್ಗೀತೆಯನ್ನು ಓದಿದಳು. ನಂತರ ಗಾಂಧಿ, ಮನೂಳ ಸೋದರಿಯರಿಗೆ ಬರೆದ ಪತ್ರದಲ್ಲಿ ಹೀಗೆ ತಿಳಿಸಿದ್ದರು: 'ಎಂಟನೆಯ ಅಧ್ಯಾಯದ ನಂತರ ನನಗೆ ಸ್ವಲ್ಪ ಆಯಾಸವಾದಂತಾಗಿ ಕಾಲು ಚಾಚಿ ಪವಡಿಸಿದೆ. ಆಗ ಕಸ್ತೂರಬಾ ಬಂದು ನನ್ನ ತೊಡೆಯ ಮೇಲೆ ತಲೆ ಇಟ್ಟು ಮಲಗಿದ ಅನುಭವ ನನಗಾಯಿತು'.

ಗಾಂಧಿ ನೌಖಾಲಿಯಿಂದ ಈಗ ಕರೆ ಬಂದಿದ್ದ ಬಿಹಾರದತ್ತ ಹೊರಟಿದ್ದರು. ಇನ್ನೊಂದು ಅಗ್ನಿ ಪರೀಕ್ಷೆಯ ಪಯಣದ ಹಾದಿಯಲ್ಲಿ. ಅವರೇ ಮೀರಾಗೆ ಬರೆದ ಒಂದು ಪತ್ರದಲ್ಲಿ ಬರೆದಂತೆ 'ಸತ್ಯದ ಹಾದಿ ತುಂಬ ಅಸ್ಥಿಪಂಜರಗಳೇ ತುಂಬಿವೆ. ಆದರೇನು, ನಾವು ಧೈರ್ಯದಿಂದ ಹೆಜ್ಜೆ ಹಾಕಲೇ ಬೇಕು.'

■

೬೦

ಅಗ್ನಿ ಕುಂಡದಲ್ಲಿ ಜನಿಸಿದ ಭಾರತದ ಸ್ವಾತಂತ್ರ್ಯ

ಗಾಂಧಿ ನೌಖಾಲಿಯಲ್ಲಿ ಇನ್ನೂ ಹಳ್ಳಿ ಹಳ್ಳಿ ತಿರುಗುತ್ತಿದ್ದಾಗಲೇ, ಭಾರತದ ರಾಜಕಾರಣದಲ್ಲಿ ಹಲವು ನಿರ್ಣಾಯಕ ಬೆಳವಣಿಗೆಗಳು ನಡೆದಿದ್ದವು. ಬ್ರಿಟಿಷ್ ಸಾಮ್ರಾಜ್ಯ ಸರ್ಕಾರ ಸಂವಿಧಾನ ರಚನಾ ಸಭೆಗೆ ನಡೆಸಿದ್ದ ಸಿದ್ಧತೆಗಳ ಭಾಗವಾಗಿ ವಾಯುವ್ಯ ಗಡಿ ಪ್ರಾಂತ್ಯ ಮತ್ತು ಅಸ್ಸಾಂಗಳನ್ನು ಮುಸ್ಲಿಂ ಬಹುಸಂಖ್ಯಾತ ಪ್ರಾಂತ್ಯಗಳ ಗುಂಪಿಗೆ ಸೇರಿಸಿ ಆಜ್ಞೆ ಹೊರಡಿಸಿತ್ತು. ೧೯೪೬ ರ ಡಿಸೆಂಬರ್ ಮೊದಲ ವಾರದಲ್ಲಿ ಲಂಡನ್‌ನಲ್ಲಿ ಕಾಂಗ್ರೆಸ್ ಪರವಾಗಿ ನೆಹರೂ, ಮುಸ್ಲಿಂ ಲೀಗ್ ಪರವಾಗಿ ಜಿನ್ನಾ ಮತ್ತು ಕ್ರಿಪ್ಸ್ ಸಚಿವ ಆಯೋಗದ ಸದಸ್ಯರು ಮತ್ತು ವೈಸ್‌ರಾಯ್ ವೇವೆಲ್ ಭಾಗವಹಿಸಿದ್ದ ಸಭೆಯ ನಂತರವೇ ಈ ಆಜ್ಞೆ ಹೊರಬಿದ್ದಿತ್ತು. ಈ ಸಭೆಗೆ ಮುನ್ನ ನೆಹರೂ ಮತ್ತು ಕೃಪಲಾನಿಯವರು ಸಮಾಲೋಚನೆಗಾಗಿ ಗಾಂಧಿಯವರನ್ನು ದೆಹಲಿಗೆ ಬರಬೇಕೆಂದು ಕೋರಿದ್ದರಾದರೂ, ಗಾಂಧಿ ಅವರ ಕೋರಿಕೆಗೆ ಓಗೊಟ್ಟಿರಲಿಲ್ಲ.

ಪಾಕಿಸ್ತಾನ ನಿರ್ಮಾಣದ ಪರ ಪಟೇಲರ ನಿರ್ಧಾರ–ಅಧಿಕಾರ ಹಸ್ತಾಂತರದ ಪ್ರಕಟಣೆ

ಈ ಹೊತ್ತಿಗೆ ಈಗ ಕೇಂದ್ರ ಶಾಸನ ಸಭೆಯಲ್ಲಿ ಸಾಕಷ್ಟು ರೇಜಿಗೆಯನ್ನುಂಟು ಮಾಡುತ್ತಿರುವ ಮುಸ್ಲಿಂ ಲೀಗ್‌ನ ತಂಟೆಯನ್ನು ನಿವಾರಿಸಬಹುದು ಮತ್ತು ಕೇಂದ್ರ ಶಾಸನ ಸಭೆ ಸುಗಮವಾಗಿ ಕಾರ್ಯ ನಿರ್ವಹಿಸಬಹುದೆಂಬ ಕಾರಣಕ್ಕೆ ಭಾರತದ ವಿಭಜನೆಯನ್ನು ತಾತ್ವಿಕವಾಗಿ ಒಪ್ಪಿದ್ದ ಪಟೇಲರು, ಈ ಆಜ್ಞೆಯನ್ನು ಪ್ರಬಲವಾಗಿ ವಿರೋಧಿಸಿದರು. ಗಾಂಧಿ ಈ ಸಂಬಂಧ ತಮ್ಮನ್ನು ಭೇಟಿ ಮಾಡಿದ ಅಸ್ಸಾಮಿನ ಕಾಂಗ್ರೆಸ್ಸಿಗರಿಗೆ 'ನೀವು ಕಾಂಗ್ರೆಸ್‌ನಿಂದ ಹೊರಬಿದ್ದು ಮುಸ್ಲಿಂ ಪ್ರಾಂತ್ಯಗಳ ಗುಂಪಿನಿಂದ ಹೊರಬರಬೇಕು' ಎಂದು ಸೂಚಿಸಿದ್ದರು. ಜೊತೆಗೆ ಪಟೇಲರು ಸ್ವತಂತ್ರ ಸಾರ್ವಭೌಮ ಪಾಕಿಸ್ತಾನ ನಿರ್ಮಾಣದ ಪರವಾಗಿದ್ದಾರೆ ಎಂಬ ಸುದ್ದಿಯ ಬಗ್ಗೆಯೂ ಆತಂಕ ವ್ಯಕ್ತಪಡಿಸಿ, ಅವರು ನೆಹರೂಗೆ ಕಾಂಗ್ರೆಸ್ ತಮ್ಮೊಡನೆ ಸಮಾಲೋಚಿಸದೆ ಒಂದು ಅಭಿಪ್ರಾಯಕ್ಕೆ ಬರುತ್ತಿರುವುದರ ಬಗ್ಗೆ ತಮ್ಮ ಬೇಸರವನ್ನೂ ವ್ಯಕ್ತಪಡಿಸಿ ಪತ್ರ ಬರೆದಿದ್ದರು. ಇದೇ ವೇಳೆಗೆ ಜಿನ್ನಾ ಚಿಕ್ಕದೋ ದೊಡ್ಡದೋ, ಆದರೆ ಸ್ವತಂತ್ರ ಸಾರ್ವಭೌಮ ಪಾಕಿಸ್ತಾನವಾದರೆ ತಮಗೆ ಸಾಕು ಎಂದು ವೈಸ್‌ರಾಯ್‌ಗೆ ತಿಳಿಸಿದ್ದರು.

ಈ ಎಲ್ಲ ಬೆಳವಣಿಗೆಗಳಿಗೆ ಕಿರೀಟವಿಟ್ಟಂತೆ ಗಾಂಧಿ ಇನ್ನೂ ನೌಖಾಲಿಯಲ್ಲಿ ಇರುವಾಗಲೇ, ೧೯೪೭ರ ಫೆಬ್ರವರಿ ೨೦ರಂದು ಲಂಡನ್‌ನಲ್ಲಿ ಆ ದೇಶದ ಪ್ರಧಾನ

ಮಂತ್ರಿ ಆ್ಯಟ್ಲಿಯವರು ಒಂದು ಪ್ರಕಟಣೆ ಹೊರಡಿಸಿ, ೧೯೪೭ರ ಜೂನ್ ತಿಂಗಳನ್ನು ಬ್ರಿಟಿಷರು ಭಾರತವನ್ನು ತ್ಯಜಿಸುವ ಗಡುವಾಗಿ ನಿಗದಿ ಮಾಡಿ, ಆ ಮುನ್ನವೇ ಬ್ರಿಟಿಷ್ ಸರ್ಕಾರ, ಆ ಹೊತ್ತಿಗೆ ಅಧಿಕಾರ ಹಸ್ತಾಂತರ ಸುಗಮವಾಗಿ ನಡೆಯಬಲ್ಲ ವ್ಯವಸ್ಥೆ ನಿರ್ಮಾಣವಾಗುವ ನಿರೀಕ್ಷೆಯನ್ನೂ ವ್ಯಕ್ತಪಡಿಸಿದ್ದರು. ಇಂತಹ ವ್ಯವಸ್ಥೆಯ ಮೇಲುಸ್ತುವಾರಿಗಾಗಿ ಎರಡನೇ ಮಹಾಯುದ್ಧದಲ್ಲಿ ದಕ್ಷಿಣಪೂರ್ವ ಏಷ್ಯಾದಲ್ಲಿ ಮಿತ್ರ ರಾಷ್ಟ್ರಗಳ ಸೇನೆಯ ಪ್ರಧಾನ ದಂಡನಾಯಕರಾಗಿದ್ದ ನೌಕಾ ಸೇನಾನಿ ಲಾರ್ಡ್ ಲೂಯಿಸ್ ಅಡ್ಮಿರಲ್ ಮೌಂಟ್‌ಬೇಟನ್‌ರನ್ನು ವೇವೆಲ್‌ನ ಜಾಗದಲ್ಲಿ ವೈಸ್‌ರಾಯ್ ಆಗಿ ನೇಮಿಸಲಾಗಿದ್ದು, ಅವರು ಮಾರ್ಚ್ ಮೂರನೇ ವಾರದಲ್ಲಿ ಅಧಿಕಾರ ಸ್ವೀಕರಿಸಲಿದ್ದರು.

ಇದನ್ನು ಪತ್ರಿಕೆಗಳಲ್ಲಿ ಓದಿದ ಗಾಂಧಿಯವರಿಗೆ ಅಧಿಕಾರ ಹಸ್ತಾಂತರ ರಾಷ್ಟ್ರವಿಭಜನೆಯೊಂದಿಗೆ ನಡೆಸಲು ಬ್ರಿಟಿಷರು ಸಿದ್ಧತೆ ನಡೆಸಿದ್ದಾರೆ ಎಂಬ ದಟ್ಟ ವಾಸನೆ ಬಡಿದಿತ್ತು. ಹಾಗೇ ಪ್ರಕಟಣೆ, ಸಹಜವಾಗಿಯೇ ಭಾರತದ ರಾಜಕೀಯ ವಲಯಗಳಲ್ಲಿ ಒಂದು ದೊಡ್ಡ ಸಂಚಲನವನ್ನೇ ಉಂಟು ಮಾಡಿತ್ತು. ದೇಶ ವಿಭಜನೆ ಸಮೀಪಿಸುತ್ತಿದೆ ಎಂಬ ಭಾವನೆ ಎಲ್ಲ ಪಕ್ಷಗಳಲ್ಲಿಯೂ ಮೂಡತೊಡಗಿ ತಂತಮ್ಮ ಕಡೆಯ ಪಟ್ಟುಗಳನ್ನು ಸಿದ್ಧಪಡಿಸಿಕೊಳ್ಳತೊಡಗಿದರು. ಹೇಗೂ ಈಗ ಬಂಗಾಳ, ಸಿಂಧ್ ಮತ್ತು ಬಲೂಚಿಸ್ತಾನ ಮುಸ್ಲಿಂ ಲೀಗ್‌ನ ಆಡಳಿತದಲ್ಲಿವೆ. ಅವು ಪಾಕಿಸ್ತಾನ ಸೇರುವುದು ಸಹಜವೇ. ಆದರೆ ಬಂಗಾಳದಲ್ಲಿ ಹಿಂದೂ ಜನಸಂಖ್ಯೆ ಗಣನೀಯವಾಗಿದ್ದುದರಿಂದ, ಅದನ್ನು ಇಡಿಯಾಗಿ ಪಾಕಿಸ್ತಾನಕ್ಕೆ ಒಪ್ಪಿಸುವುದಕ್ಕೆ ಹಲವರ ವಿರೋಧ ವ್ಯಕ್ತವಾಯಿತು. ಮುಖ್ಯವಾಗಿ ಬಂಗಾಳದ ಹಿಂದೂ ಮಹಾಸಭಾದ ನಾಯಕ ಶ್ಯಾಮಪ್ರಸಾದ್ ಮುಖರ್ಜಿಯವರಿಂದ. ಆಗ ಬಂಗಾಳದ ಹೈಮಾಚರ್ ಎಂಬ ಹಳ್ಳಿಯಲ್ಲಿದ್ದ ಗಾಂಧಿಯವರನ್ನು ಈ ಬಗ್ಗೆ ಕೇಳಿದಾಗ ಅವರು, ಯಾರನ್ನೂ ಬಲವಂತದಿಂದ ಎಲ್ಲಿಯೂ ಸೇರಿಸಬಾರದೆಂಬುದು ತಮ್ಮ ಅಭಿಪ್ರಾಯವಾಗಿದೆಯೆಂದೂ, ತಾವು ಅಖಂಡ ಭಾರತ ಮತ್ತು ಅಖಂಡ ಬಂಗಾಳದ ಪರವಾಗಿರುವುದಾಗಿ ಹೇಳಿದರಲ್ಲದೆ ಹಿಂದೂ–ಮುಸ್ಲಿಮರು ಪ್ರೀತಿ–ಸೌಹಾರ್ದಗಳೊಡನೆ ಬಾಳುವ ಅಂತಿಮ ನಿಶ್ಚಯದ ಕಾಲವೀಗ ಬಂದಿದೆ ಎಂದರು.

ಬಿಹಾರದಲ್ಲಿ ಪಕ್ಷಪಾತಿ ಕಾಂಗ್ರೆಸ್ ಸರ್ಕಾರ–ಪಂಜಾಬ್‌ನಲ್ಲಿ ವಿಭಜನೆಯ ಗಲಭೆಗೆ ಮಣಿದ ಕಾಂಗ್ರೆಸ್

ಮಾರ್ಚ್ ಮೊದಲವಾರದಲ್ಲಿ ಬಂಗಾಳದಿಂದ ಬಿಹಾರಕ್ಕೆ ಬಂದ ಗಾಂಧಿ, ಆ ರಾಜ್ಯದಲ್ಲಿ ನಡೆದಿದ್ದ ಕೋಮು ದಂಗೆಗಳನ್ನು ನಿಲ್ಲಿಸಲು ವಿವಿಧ ಊರುಗಳನ್ನು ಸುತ್ತಾಡತೊಡಗಿದರು. ಜನರೊಡನೆ ಮಾತಾಡಿದರು. ಸಭೆ ನಡೆಸಿದರು. ಈ ಸಂಬಂಧ ಈಗಾಗಲೇ ಕಾರ್ಯನಿರತರಾಗಿದ್ದ ಜೆಪಿ, ಈ ರಾಜ್ಯದಲ್ಲಿ ಆಕ್ರಮಣ ಹಿಂದೂಗಳದ್ದೇ ಆಗಿದ್ದು, ಬಹುತೇಕ ಬಲಿಪಶುಗಳು ಮುಸ್ಲಿಮರೇ ಆಗಿದ್ದಾರೆಂದೂ, ಶ್ರೀಕೃಷ್ಣ ಸಿನ್ಹಾರ ಕಾಂಗ್ರೆಸ್ ಸರ್ಕಾರ ದಂಗೆಯನ್ನು ಅಡಗಿಸುವಲ್ಲಿ ನಿಷ್ಪಕ್ಷಪಾತವಾಗಿ ವರ್ತಿಸುತ್ತಿಲ್ಲವೆಂದೂ ದೂರಿದ್ದರು. ಗಾಂಧಿ ತಮ್ಮ ಸುತ್ತಾಟ ಮತ್ತು ಮಾತುಕತೆಗಳಲ್ಲಿಯೂ ಇದನ್ನೇ ಕೇಳಿದ್ದರು. ಅವರು ಕಾಂಗ್ರೆಸ್ಸಿಗರು ಕೋಮುವಾದಿಗಳೂ, ಅಪ್ರಾಮಾಣಿಕರೂ ಆಗಿರುವುದು ಖೇದಕರವೆಂದು ಹೇಳಿ ಪ್ರಾಂತೀಯ ಸರ್ಕಾರಕ್ಕೆ ಛೀಮಾರಿ ಹಾಕಿದರು. ಆದರೂ ಆ

ಹೊತ್ತಿಗೆ ಸಾವಿರಾರು ಜನರ ಮಾರಣಹೋಮವಾಗಿತ್ತು. ಅಷ್ಟೇ ಇನ್ನಷ್ಟು ಜನ ಮನೆಮಠ ಕಳೆದುಕೊಂಡು ನಿರ್ಗತಿಕರಾಗಿದ್ದರು. ಇವರಲ್ಲಿ ಹೆಚ್ಚಿನವರು ಮುಸ್ಲಿಮರೇ ಆಗಿದ್ದರು.

ಇತ್ತ ಮುಸ್ಲಿಂ ಲೀಗ್, ತನ್ನ ಸರ್ಕಾರವಿರದ, ಆದರೆ ಮುಸ್ಲಿಂ ಜನಬಾಹುಳ್ಯವಿರುವ ವಾಯುವ್ಯ ಗಡಿ ಪ್ರಾಂತ್ಯ ಮತ್ತು ಪಂಜಾಬ್‌ಗಳು ಎಲ್ಲಿ ತನ್ನ ಕೈ ಜಾರಿ ಹೋಗುವುವೋ ಎಂಬ ಆತಂಕದಿಂದ, ಆ ಸರ್ಕಾರಗಳು ಅಪವಿತ್ರ ಮೈತ್ರಿಯ ಅಸ್ಥಿರ ಸರ್ಕಾರಗಳಾಗಿರುವುದರಿಂದ ಅವನ್ನು ವಜಾ ಮಾಡಬೇಕೆಂದು ಆಯಾ ಪ್ರಾಂತ್ಯಗಳ ಗವರ್ನರ್‌ಗಳನ್ನು ಒತ್ತಾಯಿಸಿತಲ್ಲದೆ ಪಂಜಾಬ್‌ನಲ್ಲಿ ತನ್ನ ಬೇಡಿಕೆಯನ್ನು ಒತ್ತಾಯಿಸಿ ಗಲಭೆ ಗದ್ದಲಗಳನ್ನೆಬ್ಬಿಸಿತು. ಎಲ್ಲೆಲ್ಲೂ ಮುಸ್ಲಿಂ ಲೀಗ್‌ನ ಧ್ವಜಗಳು ಹಾರಾಡಿದವು. ಜನಜೀವನ ಅಸ್ತವ್ಯಸ್ತಗೊಂಡಿತು. ಪಂಜಾಬ್‌ನಲ್ಲಿ ಕಾಂಗ್ರೆಸ್ ಮತ್ತು ಅಕಾಲಿ ಸಿಖ್‌ರೊಂದಿಗೆ ಮೈತ್ರಿ ಸರ್ಕಾರ ರಚಿಸಿದ್ದ ಯೂನಿಯನಿಸ್ಟ್ ಪಕ್ಷದ ಖಿಜ಼ಾರ್‌ರನ್ನು, ಇಸ್ಲಾಂ ದ್ರೋಹಿ ಎಂದು ಕರೆದು ಅವರಲ್ಲಿ ಆತಂಕ ಹುಟ್ಟಿಸಲಾಯಿತು. ಒತ್ತಡ ತಾಳಲಾರದೆ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು. ನಂತರದಲ್ಲೇ ಗವರ್ನರ್ ವಿರೋಧ ಪಕ್ಷವಾಗಿದ್ದ ಮುಸ್ಲಿಂ ಲೀಗ್‌ಗೆ ಸರ್ಕಾರ ರಚಿಸಲು ಆಹ್ವಾನ ನೀಡಿದರು. ಮಾರ್ಚ್ ೪ರಂದು ಶಾಸನ ಸಭೆ ಸಮಾವೇಶಗೊಂಡಾಗ, ಹೊರಗೆ ಹೊಸ ಸರ್ಕಾರದ ವಿರುದ್ಧ ಘೋಷಣೆ ಕೂಗುವ ಭಾರಿ ಜನಸಮೂಹವೇ ಸೇರಿತ್ತು. ಇದನ್ನು ತಿಳಿದ ಅಕಾಲಿ ನಾಯಕ ಮಾಸ್ಟರ್ ತಾರಾ ಸಿಂಗ್ ಕತ್ತಿ ಹಿರಿಯುತ್ತಾ ಬಂದು ಸಿಕ್ಖರನ್ನು ಯಾರೂ ಬಗ್ಗುಬಡಿಯಲು ಸಾಧ್ಯವಿಲ್ಲ ಎಂದು ಎಚ್ಚರಿಕೆ ನೀಡಿದರು. ಕಾಂಗ್ರೆಸ್ ಮತ್ತು ಅಕಾಲಿಗಳು ಜಂಟಿಯಾಗಿ 'ಪಾಕಿಸ್ತಾನ್ ವಿರೋಧಿ ದಿನ'ದ ಆಚರಣೆಗಾಗಿ ಕರೆ ನೀಡಿದರು.

ಮರುದಿನವೇ ಪ್ರಾಂತ್ಯದಾದ್ಯಂತ ಗಲಭೆಗಳು ಆರಂಭವಾದವು. ಎರಡನೇ ಮಹಾಯುದ್ಧದಲ್ಲಿ ಸೈನಿಕರಾಗಿ ಹೋರಾಡಿದ್ದ ಮುಸ್ಲಿಂ ಮತ್ತು ಸಿಖ್ ಪಂಜಾಬಿಗಳು ಗಲಭೆಗಳನ್ನು ಒಂದು ದಾರುಣ ಹತ್ಯಾಕಾಂಡವನ್ನಾಗಿ ಪರಿವರ್ತಿಸಿದರು. ಇದರ ಪರಿಣಾಮವಾಗಿ ಆ ಪ್ರಾಂತ್ಯದ ಮುಸ್ಲಿಂ ಲೀಗ್ ಸರ್ಕಾರ ರಾಜೀನಾಮೆ ನೀಡಿತು. ಅಲ್ಲಿ ಮಾರ್ಚ್ ೫ರಂದು ಗವರ್ನರ್ ಆಡಳಿತವನ್ನು ಹೇರಲಾಯಿತು. ಒಂದು ವಾರದಲ್ಲಿ ಪ್ರಾಂತ್ಯದಾದ್ಯಂತ ಒಂದು ಸಾವಿರಕ್ಕೂ ಹೆಚ್ಚು ಜನರ ಹತ್ಯೆಯಾಗಿತ್ತು. ಇದರಲ್ಲಿ ವೈಸ್‌ರಾಯ್ ವೇವೆಲ್ ಮತ್ತು ಗೃಹಮಂತ್ರಿ ಪಟೇಲರ ನಿಷ್ಕ್ರಿಯತೆಯೂ ಕೆಲಸ ಮಾಡಿತ್ತು. ಇದಕ್ಕೆ ಪಟೇಲರ ಪ್ರತಿಕ್ರಿಯೆ, ಪಂಜಾಬ್‌ನ್ನು ಹಿಂದೂ ಮತ್ತು ಮುಸ್ಲಿಂ ಪಂಜಾಬ್‌ಗಳಾಗಿ ಒಡೆಯಬೇಕೆಂಬ ಬೇಡಿಕೆಯಾಗಿತ್ತು. ಅವರು ಮಾರ್ಚ್ ೪ರಂದು ತಮ್ಮ ಹಿಂದೂವಾದಿ ಗೆಳೆಯ ಕಾನ್ಜಿ ದ್ವಾರಕಾದಾಸ್ ಅವರಿಗೆ ಬರೆದ ಪತ್ರದಲ್ಲಿ ಪಾಕಿಸ್ತಾನ ನಿರ್ಮಾಣ ಅನಿವಾರ್ಯವೇ ಆದರೆ, ಬಂಗಾಳ ಮತ್ತು ಪಂಜಾಬ್‌ಗಳ ವಿಭಜನೆಯೂ ಅನಿವಾರ್ಯವೆಂದು ಅಭಿಪ್ರಾಯಪಟ್ಟಿದ್ದರು. ಪಂಜಾಬ್‌ನ ಹಿಂದೂಗಳು ಮತ್ತು ಸಿಕ್ಖರದ್ದೂ ಇದೇ ಅಭಿಪ್ರಾಯವಾಗಿತ್ತು. ಇದನ್ನನುಸರಿಸಿ ಮಾರ್ಚ್ ೯ ರಂದು ದೆಹಲಿಯಲ್ಲಿ ಸಭೆ ಸೇರಿದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ, ಪಂಜಾಬ್ ವಿಭಜನೆಯನ್ನು ಆಗ್ರಹಿಸಿ ನಿರ್ಣಯ ಕೈಗೊಂಡಿತು.

ಬಿಹಾರದಲ್ಲಿದ್ದ ಗಾಂಧಿ, ಇದನ್ನು ಪತ್ರಿಕೆಗಳಲ್ಲಿ ಓದಿ ವಿಷಾದ ಪಟ್ಟರು. ಇದು ಮುಸ್ಲಿಂ ಲೀಗ್‌ನ ಹಿಂಸಾಚಾರಕ್ಕೆ ಕಾಂಗ್ರೆಸ್ಸಿನ ಶರಣಾಗತಿಯ ಸೂಚನೆಯಾಗಿದೆ ಎಂದರು. ಅಲ್ಲದೆ

ಪಾಕಿಸ್ತಾನ ನಿರ್ಮಾಣಕ್ಕೆ ಕಾಂಗ್ರೆಸ್ಸಿನ ಒಪ್ಪಿಗೆಯ ಸೂಚನೆಯಾಗಿಯೂ ಕಂಡಿತು. ಅವರು ಹೀಗೆ ಒಂದು ಹೇಳಿಕೆ ನೀಡಿದ್ದರು: 'ನನ್ನ ಆಪ್ತ ಮಿತ್ರರಾದ ಜಿನ್ನಾ ಸಾಹೇಬರು, ಪಾಕಿಸ್ತಾನವನ್ನು ನೀವು ಒಪ್ಪಿಕೊಳ್ಳದಿದ್ದರೆ, ನಿಮ್ಮನ್ನು ಕೊಂದಾದರೂ ಅದನ್ನು ದಕ್ಕಿಸಿಕೊಂಡೇನು ಎಂದು ಹೇಳಿದರೆ ನಾನು ಆಗಬಹುದು ಎನ್ನುತ್ತೇನೆ. ಆದರೆ ಹಾಗೆ ಮಾಡುವ ಮುನ್ನ ಪಾಕಿಸ್ತಾನದ ಕಲ್ಪನೆ ರಾಜಕೀಯವಾಗಿ ಸಮರ್ಪಕವೂ, ಯೋಗ್ಯವಾದದ್ದೂ ಮತ್ತು ಇದನ್ನು ಹಿಂದೂಗಳು ನಿಷ್ಕಾರಣವಾಗಿ ವಿರೋಧಿಸುತ್ತಿದ್ದಾರೆ ಎಂಬುದನ್ನು ನನಗೆ ಮನವರಿಕೆ ಮಾಡಿಕೊಡಬೇಕು, ಹಾಗೇ ತಮ್ಮನ್ನು ಭೇಟಿ ಮಾಡಿದ ಅಬ್ದುಲ್ ಗಫಾರ್ ಖಾನರಿಗೆ ಕೂಡ ಇದೇ ಧಾಟಿಯಲ್ಲಿ 'ಪಾಕಿಸ್ತಾನ ನಿರ್ಮಾಣವಾಗುವುದಾದರೆ ಅದಕ್ಕೆ ಸೇರಬೇಕಾದ ಪ್ರದೇಶಗಳ ಜನರ ಒಲವಿನ ಆಧಾರದ ಮೇಲೆ ನಿರ್ಮಾಣವಾಗಬೇಕು. ಬಲಾತ್ಕಾರ-ಹಿಂಸಾಚಾರಗಳ ಮೂಲಕ ಅಲ್ಲ. ಅದು ಹಾಗೆ ನಿರ್ಮಾಣವಾಗದಿದ್ದರೆ ಅದೊಂದು ಶಾಪವೇ ಆದೀತು' ಎಂದಿದ್ದರು.

ಜಿನ್ನಾಗೆ ಅಧಿಕಾರ ನೀಡಿ, ದೇಶ ಉಳಿಸಿ–ಗಾಂಧಿ ಸಲಹೆ

ಗಾಂಧಿ, ಪಂಜಾಬ್ ವಿಭಜನೆ ಕುರಿತ ಕಾಂಗ್ರೆಸ್ ನಿರ್ಣಯದ ಅಗತ್ಯ ಮತ್ತು ಅನಿವಾರ್ಯತೆಯನ್ನು ತಮಗೆ ವಿವರಿಸುವಂತೆ ನೆಹರೂ ಮತ್ತು ಪಟೇಲರಿಗೆ ಪತ್ರ ಬರೆದರು. ಅವರಿಬ್ಬರೂ ಉತ್ತರ ಬರೆದು ಕಾರ್ಯಕಾರಿ ಸಮಿತಿ ಸಾಕಷ್ಟು ಯೋಚಿಸಿ ಒಮ್ಮತದಿಂದ ತೆಗೆದುಕೊಂಡ ನಿರ್ಣಯವಿದೆಂದು ತಿಳಿಸಿದ್ದರು. ಪಟೇಲರು ತಮ್ಮ ಪತ್ರದಲ್ಲಿ, ಪಂಜಾಬ್‌ನ ಬೆಂಕಿ ದೆಹಲಿಯ ಬಾಗಿಲಿಗೇ ಬರುವ ಆತಂಕವಿದೆಯೆಂದೂ, ಇದರ ವಿವರಗಳನ್ನೆಲ್ಲ ದೂರದ ನೌಖಾಲಿಯೋ ಬಿಹಾರದಲ್ಲೋ ಇರುವ ಗಾಂಧಿಯವರಿಗೆ ತಿಳಿಸಿ ಅಭಿಪ್ರಾಯ ಪಡೆಯುವ ವ್ಯವಧಾನ ಇರಲಿಲ್ಲವೆಂದೂ ತಿಳಿಸಿದ್ದರು. ಈ ಉತ್ತರಗಳು ಗಾಂಧಿಯವರಿಗೆ ಸಂಪೂರ್ಣ ಒಪ್ಪಿಗೆಯಾಗಲಿಲ್ಲ.

ಈ ಮಧ್ಯೆ ಗಾಂಧಿಯವರ ಹಲವಾರು ಸ್ನೇಹಿತರು ಪಂಜಾಬ್ ಪರಿಸ್ಥಿತಿಯನ್ನು ವಿವರಿಸಿ, ಅವರು ಮಾತ್ರ ಈ ಪರಿಸ್ಥಿತಿಯನ್ನು ತಹಬಂದಿಗೆ ತರಬಹುದೆಂದು ತಿಳಿಸಿ, ಅವರು ಬಹುಬೇಗ ಬಿಹಾರದಿಂದ ವಾಪಸ್ ಬರಬೇಕೆಂದು ಆಗ್ರಹಿಸಿದ್ದರು. ಇದೇ ವೇಳೆಯಲ್ಲಿ, ಮಾರ್ಚ್ ೨೨ರಂದು ಮೌಂಟ್‌ಬೇಟನ್ ದೆಹಲಿಗೆ ಬಂದು, ಹೊಸ ವೈಸ್‌ರಾಯ್ ಆಗಿ ಅಧಿಕಾರ ವಹಿಸಿಕೊಂಡರು. ನಂತರ ಅವರು ಮಾಡಿದ ಮೊದಲ ಕೆಲಸವೆಂದರೆ ಅಧಿಕಾರ ಹಸ್ತಾಂತರದ ವಿಧಿ ವಿಧಾನಗಳನ್ನು ಕುರಿತ ಸಮಾಲೋಚನೆಗಳಿಗಾಗಿ ಆದಷ್ಟು ಬೇಗ ದೆಹಲಿಗೆ ಬರುವಂತೆ ಗಾಂಧಿಯವರಿಗೆ ತಂತಿ ಕಳಿಸಿದ್ದು.

ಏಪ್ರಿಲ್ ೧ ಹಾಗೂ ೨ ರಂದು ದೆಹಲಿಯಲ್ಲಿ, ನೆಹರೂ ಅವರ ಪ್ರಯತ್ನದಿಂದಾಗಿ, ಏಷ್ಯಾದ ನಾಯಕರ ಸಮ್ಮೇಳನವೊಂದು ಏರ್ಪಾಡಾಗಿತ್ತು ಮತ್ತು ಅದನ್ನು ಗಾಂಧಿಯವರೇ ಉದ್ಘಾಟಿಸಬೇಕಿತ್ತು. ಹಾಗಾಗಿ ಮಾರ್ಚ್ ೩೧ ರಂದು ಪಾಟ್ನಾದಿಂದ ಹೊರಟ ಗಾಂಧಿ, ಏಪ್ರಿಲ್ ೧ ರಂದು ದೆಹಲಿ ತಲುಪಿದರು. ಅವರನ್ನು ರೈಲ್ವೇ ನಿಲ್ದಾಣದಲ್ಲಿಯೇ ಭೇಟಿ ಮಾಡಿದ ಪಟೇಲರು, ಇತ್ತೀಚಿನ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿದರು. ಅಂದು ಬೆಳಿಗ್ಗೆಯೇ ಮೌಂಟ್‌ಬೇಟನ್‌ರನ್ನು ಭೇಟಿ ಮಾಡಿದ ಗಾಂಧಿ,

ಹೊಸ ಪರಿಚಯದ ಉಭಯ ಕುಶಲೋಪರಿಯಾದ ನಂತರ, ಅಧಿಕಾರ ಹಸ್ತಾಂತರದ ಸಮಸ್ಯೆಯ ಬಗ್ಗೆ ಚರ್ಚಿಸಿದರು. ಪಾಕಿಸ್ತಾನ ನಿರ್ಮಾಣ ಮತ್ತು ಅದರ ರಾಜಕೀಯ ಸ್ವರೂಪದ ಬಗ್ಗೆ ವಿವಾದವಿರುವುದರಿಂದ ಮತ್ತು ಜಿನ್ನಾರೇ ಈ ಸಮಸ್ಯೆ-ವಿವಾದಗಳ ಕೇಂದ್ರವಾಗಿರುವುದರಿಂದ, ಅವರಿಗೇ ಸ್ವತಂತ್ರ ಭಾರತದ ಅಧಿಕಾರದ ಚುಕ್ಕಾಣಿ ವರ್ಗಾಯಿಸಿ ಈ ಸಮಸ್ಯೆಯನ್ನು ಬಗೆಹರಿಸಬಹುದೆಂದು ಗಾಂಧಿ ಸಲಹೆ ನೀಡಿದರು. ಈ ಸಲಹೆಯನ್ನು ಕೇಳಿ ನಿಬ್ಬೆರಗಾದ ಹೊಸ ವೈಸರಾಯ್, ತಮ್ಮ ಸಲಹೆಯನ್ನು ಬರಹ ರೂಪದಲ್ಲಿ ನೀಡಬೇಕೆಂದು ಕೋರಿದರು. ಅದಕ್ಕೊಪ್ಪಿ ಗಾಂಧಿ, ತಮ್ಮ ಸಲಹೆಯನ್ನು ಹೀಗೆ ನಿರೂಪಿಸಿದರು: 'ಜಿನ್ನಾ ಸಾಹೇಬರು ಅಧಿಕಾರ ವಹಿಸಿಕೊಂಡು ತಮಗೆ ಸರಿಕಂಡ ರೀತಿಯಲ್ಲಿ ತಮ್ಮ ಸಚಿವ ಸಂಪುಟವನ್ನು ರಚಿಸಿಕೊಳ್ಳಬಹುದು. ಕೇಂದ್ರ ಶಾಸನ ಸಭೆಯಲ್ಲಿ ಬಹುಮತದಲ್ಲಿರುವ ಕಾಂಗ್ರೆಸ್, ಅವರು ಒಟ್ಟಾರೆ ಭಾರತದ ಜನತೆಯ ಹಿತಕ್ಕಾಗಿ ತೆಗೆದುಕೊಳ್ಳುವ ಎಲ್ಲ ನಿರ್ಧಾರಗಳನ್ನೂ ಮುಕ್ತವಾಗಿ ಮತ್ತು ನಿಷ್ಠೆಯಿಂದ ಬೆಂಬಲಿಸುತ್ತದೆ. ಈ ವಿಷಯವಾಗಿ ಯಾವುದೇ ವಿವಾದ ಉಂಟಾದರೂ, ಅದು ವೈಸ್‌ರಾಯ್ ಮಧ್ಯಸ್ಥಿಕೆಯಲ್ಲಿ ಪರಿಹಾರವಾಗತಕ್ಕದ್ದು. ಇದನ್ನು ಜಿನ್ನಾ ಸಾಹೇಬರು ಒಪ್ಪದಿದ್ದಲ್ಲಿ ಇದೇ ಆಹ್ವಾನವನ್ನು ಕಾಂಗ್ರೆಸ್ಸಿಗೆ ನೀಡತಕ್ಕದ್ದು'.

ಈ ಸಲಹೆಯನ್ನು ನೀಡಿದ ನಂತರದ ಮಾರನೆಯ ದಿನವೂ ಗಾಂಧಿ ಮೌಂಟ್‌ಬೇಟನ್‌ರನ್ನು ಭೇಟಿ ಮಾಡಿದರು. ತಮ್ಮ ಸಲಹೆಯ ಕಾರ್ಯಸಾಧ್ಯತೆಯ ಬಗ್ಗೆ ಅನುಮಾನ ವ್ಯಕ್ತಪಡಿಸಿದ ವೈಸ್‌ರಾಯ್‌ಗೆ, ಗಾಂಧಿ ತಾವು ಜಿನ್ನಾರಿಗೂ ಇದರ ಅಮೂಲ್ಯತೆಯನ್ನು ಮನವರಿಕೆ ಮಾಡಿಕೊಡುವುದಾಗಿಯೂ, ದೇಶಾದ್ಯಂತ ಪ್ರವಾಸ ಮಾಡಿ ಈ ಬಗ್ಗೆ ಜನರ ಮನವೊಲಿಸುವುದಾಗಿಯೂ ತಿಳಿಸಿದರು. ನಂತರದ ದಿನಗಳಲ್ಲಿ ಮೌಂಟ್‌ಬೇಟನ್ ನೆಹರೂ ಅವರನ್ನ ಭೋಜನಕೂಟಕ್ಕೆ ಆಹ್ವಾನಿಸಿ, ಗಾಂಧಿಯವರ ಸಲಹೆಯ ಬಗ್ಗೆ ಅವರ ಅಭಿಪ್ರಾಯ ಕೋರಿದರು. ನಂತರದ ದಿನಗಳಲ್ಲಿ ಗಾಂಧಿಯವರೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಭೇಟಿ ಮಾಡಿ ತಮ್ಮ ಸಲಹೆಯನ್ನು ವಿವರಿಸಿದರು. ಆದರೆ ಗಫಾರ್‌ಖಾನರ ಹೊರತಾಗಿ ಮತ್ತಾರೂ ಅದನ್ನು ಒಪ್ಪಲು ಸಿದ್ಧರಿರಲಿಲ್ಲ. ಕಾರ್ಯಕಾರಿ ಸಮಿತಿ ಗಾಂಧಿಯವರ ಸಲಹೆಯನ್ನು ಅಧಿಕೃತವಾಗಿ ತಿರಸ್ಕರಿಸುವ ನಿರ್ಣಯವನ್ನು ಕೈಗೊಂಡಿತು. ಅಲ್ಲಿಗೆ ಭಾರತದ ಏಕತೆಯನ್ನು ಉಳಿಸಿ ದೇಶದಲ್ಲಿ ಶಾಂತಿ ಸ್ಥಾಪಿಸುವ ಗಾಂಧಿಯವರ ಕೊನೆಯ ಪ್ರಯತ್ನ ವಿಫಲವಾಗಿತ್ತು.

ಏಷ್ಯಾ ನಾಯಕರಿಗೆ ಗಾಂಧಿ ಸಂದೇಶ

ಗಾಂಧಿ, ಏಪ್ರಿಲ್ ೧ ಹಾಗೂ ೨ರಂದು ಏಷ್ಯಾದ ನಾಯಕ ಸಮ್ಮೇಳನದಲ್ಲಿ ಭಾಷಣ ಮಾಡಿದರು. ಅದರಲ್ಲಿ ಏಷ್ಯಾ, ಪಶ್ಚಿಮದ ದೇಶಗಳಿಗೆ ದಾರ್ಶನಿಕವಾಗಿ ಮಾರ್ಗದರ್ಶಿಯಾಗಬಲ್ಲ ಘನವಾದ ಪರಂಪರೆಯನ್ನೇ ಹೊಂದಿದೆ ಎಂದು ಹೇಳಿದ ಅವರು, ಜಗತ್ತಿನ ಆಧ್ಯಾತ್ಮಿಕತೆಯನ್ನು ರೂಪಿಸಿದ ಝರತೂಷ್ಟ್ರ, ನಂತರ ಬುದ್ಧ, ಆನಂತರ ಮೋಸೆಸ್, ಯೇಸು, ತದನಂತರ ಮಹಮ್ಮದ್ ಪೈಗಂಬರ್‌ವರೆಗೆ ಎಲ್ಲರೂ ಏಷ್ಯನ್ನರೇ ಎಂದು ವಿವರಿಸಿದರು. ಕ್ರಿಸ್ತನ ಧರ್ಮ, ಏಷ್ಯಾ ಬಿಟ್ಟು ಪಶ್ಚಿಮದ ಕಡೆ ಸಾಗಿದಾಗ ಅದು

ಹಿಂಸಾತ್ಮಕವಾಯಿತು ಎಂದ ಅವರು, ಪಶ್ಚಿಮ ಇಂದು ಅಣುಬಾಂಬಿನ ಪ್ರತೀಕವಾಗಿದ್ದು, ಅದನ್ನು ಅನುಕರಿಸುವುದು ಅನಾಹುತಕಾರಿಯಾದೀತು ಎಂದು ಎಚ್ಚರಿಸಿದರು. ಭಾರತದ ಆ ಸಂದರ್ಭದ ಕೋಮು ಗಲಭೆಗಳ ಹಿನ್ನೆಲೆಯಲ್ಲಿಯೂ ಯಾವ ಮುಜುಗರವನ್ನೂ ವ್ಯಕ್ತಪಡಿಸದೆ, ಇಂದಿನ ಜಾಗತಿಕ ಸಂದರ್ಭದಲ್ಲಿ ಏಷ್ಯಾ, ಪ್ರೀತಿ ಪ್ರೇಮಗಳ ಸಂದೇಶವನ್ನು ನೀಡಬೇಕಾಗಿದೆ ಎಂದೂ ಅವರು ಹೇಳಿದರು. ಅಂದಿನ ಗಲಭೆಗಳನ್ನು ಅವರು ನಿರ್ವಹಿಸುತ್ತಿದ್ದ ರೀತಿ ನೀತಿಗಳ ಹಿನ್ನೆಲೆಯಲ್ಲಿ ಅವರಿಗೆ, ಹೀಗೆ ಹೇಳುವ ಎಲ್ಲ ಅಧಿಕಾರವಿತ್ತು ಕೂಡ.

ಈ ಸಂದರ್ಭದಲ್ಲಿಯೇ ಅರಬ್ ದೇಶದ ಕವಿ ಮಿಕೇಲ್ ನೋಯ್ಮಾ ಹೀಗೊಂದು ಪದ್ಯ ಬರೆದು ಗಾಂಧಿಗೆ ಅರ್ಪಿಸಿದ್ದರು:

> ಗಾಂಧಿ ಕೈನ ತಕಲಿ ಕತ್ತಿಯನು ಸೋಲಿಸುವುದು
> ಅವರ ಮೇಲುಡುಗೆಯೇ
> ಸಮುದ್ರ ಸೇನಾನಿಗಳ ದಾಳಿಗೆ ಗುರಾಣಿಯಾಗುವುದು
> ಬ್ರಿಟಿಷರ ಸಿಂಹ ಕೂಡ ಗಾಂಧಿಯ ಮೇಕೆಯನ್ನು ಕಂಡು ಓಡಿಹೋಗುವುದು!

ಪ್ರಾರ್ಥನಾ ಸಭೆಯಲ್ಲಿ ಪ್ರತಿಭಟನೆ–ಬಿಹಾರದಲ್ಲಿ ಗಮನ ಸೆಳೆದ ಪರಿಹಾರ ಕಾರ್ಯ

ಅದೇನೇ ಇದ್ದರೂ, ಭಾರತದ ಅಂದಿನ ರಾಜಕೀಯ ಪರಿಸ್ಥಿತಿಗೆ ಸಂಬಂಧಿಸಿದಂತೆ ಗಾಂಧಿ ನಿರಾಶರಾಗಿಯೇ ಬಿಹಾರ್‌ಗೆ ಹಿಂದಿರುಗಿದ್ದರು. ಆದರೆ ಅವರು ಮತ್ತು ಕಾಂಗ್ರೆಸ್‌ನ ಇತರ ಮುಖಂಡರಾರಿಗೂ ಗೊತ್ತಾಗದಂಥ ಒಂದು ಸಂಗತಿ ಎಂದರೆ, ಮೌಂಟ್‌ಬೇಟನ್ ಗಾಂಧಿಯವರ ಸಲಹೆಯನ್ನು ಜಿನ್ನಾರೊಂದಿಗೆ ನಡೆಸಿದ ಸಭೆಯಲ್ಲಿ ಮುಂದಿಟ್ಟಾಗ, ಒಂದು ಕ್ಷಣ ಅವರ ಮುಖದಲ್ಲಿ ಮಂದಹಾಸವೊಂದು ಹಾದು ಹೋಗಿ, ಅವರು ಅದನ್ನು ಒಪ್ಪಿಕೊಳ್ಳುವ ಎಲ್ಲ ಸೂಚನೆಗಳೂ ವ್ಯಕ್ತವಾಗಿದ್ದವು ಎಂಬುದು. ಜಿನ್ನಾರ ಜೀವನ ಚರಿತ್ರಕಾರ ಸ್ಟಾನ್ಲಿ ವೊಲ್ಪೆಟ್ ಕೂಡ ಇದಕ್ಕೆ ಪುಷ್ಟಿ ನೀಡಿದ್ದಾರೆ ಎಂಬುದೂ ಇಲ್ಲಿ ಗಮನಾರ್ಹ.

ಗಾಂಧಿ ದೆಹಲಿಯಲ್ಲಿದ್ದಾಗ ಅವರನ್ನು ವಿಚಲಿತಗೊಳಿಸಿದ ಇನ್ನೊಂದು ಸಂಗತಿಯೂ ಇತ್ತು. ಅವರು ವಾಸಿಸುತ್ತಿದ್ದ ಹರಿಜನ ಕಾಲೋನಿಯಲ್ಲಿ ಪ್ರತಿ ಸಂಜೆ ನಡೆಸುತ್ತಿದ್ದ ಪ್ರಾರ್ಥನಾ ಸಭೆಗಳಲ್ಲಿ ಕುರಾನ್ ಪಠಣದ ವಿರುದ್ಧ ಪ್ರತಿಭಟನೆಗಳು ನಡೆದಿದ್ದವು. ಅವರು ಬಿಹಾರಕ್ಕೆ ಹೋದ ನಂತರವೂ ಕಲ್ಕತ್ತಾದ ವಕೀಲರೊಬ್ಬರು ನೌಖಾಲಿಯಲ್ಲಿ ಮುಸ್ಲಿಮರ ಹಿಂಸಾಚಾರವನ್ನು ಅಹಿಂಸಾತ್ಮಕವಾಗಿ ತಡೆಯಲಾಗದಿದ್ದರೆ ಹಿಂದೂಗಳು ಆತ್ಮಾರ್ಪಣೆಯ ಮೂಲಕ ಎದುರಿಸಬೇಕು ಎಂದು ಗಾಂಧಿ ಉಪದೇಶಿಸಿದ್ದಾರೆಂದು ಟೀಕಿಸಿ, ಗೀತೆಯ ಸಂದೇಶಕ್ಕೆ ವಿರುದ್ಧ ಸಂದೇಶವಿರುವ ಕುರಾನ್‌ಗೆ ನಿಮ್ಮಿಂದ ಮಾನ್ಯತೆ ಏಕೆ ಎಂದು ಪ್ರಶ್ನಿಸಿದ್ದರು. ಅದಕ್ಕೆ ಗಾಂಧಿ ತಾವು ನೌಖಾಲಿಯಲ್ಲಿ ಹಿಂದೂಗಳಿಗೆ ಹೇಳಿದ್ದನ್ನೇ ಬಿಹಾರದ ಮುಸ್ಲಿಮರಿಗೆ ಹೇಳುತ್ತಿರುವುದಾಗಿಯೂ, ಗೀತೆ–ಕುರಾನ್ ಸಂಬಂಧ ತಮ್ಮ ಓದಿನ ಫಲವಾಗಿದ್ದು,

ಅದನ್ನು ಒಪ್ಪುವುದು ಬಿಡುವುದು ಅವರಿಗೆ ಸೇರಿದ್ದೆಂದು ಉತ್ತರ ಬರೆದಿದ್ದರು.

ಮತ್ತೆ ಬಿಹಾರದ ಕೋಮು ಗಲಭೆಗಳ ಪರಿಹಾರ ಕಾರ್ಯಗಳಲ್ಲಿ ತೊಡಗಿಕೊಂಡ ಗಾಂಧಿ, ಇದಕ್ಕಾಗಿ ತಾವು ಬಿಹಾರಕ್ಕೆ ಬರುವ ಮೊದಲೇ ಸುಭಾಷರ ಆಜ಼ಾದ್ ಹಿಂದ್ ಫೌಜ಼್‌ನಲ್ಲಿ ಸೇನಾಧಿಕಾರಿಯಾಗಿದ್ದ, ಷಾ ನವಾಜ಼್ ಖಾನ್ ಮತ್ತವರ ತಂಡವೊಂದನ್ನು ಈ ಕಾರ್ಯಕ್ಕಾಗಿ ಕಳಿಸಿದ್ದರು. ಆದರೆ ಅಲ್ಲಿನ ಸರ್ಕಾರಿ ಅಧಿಕಾರಿಗಳು ಅವರಿಗೆ ಯಾವ ಸಹಕಾರವನ್ನೂ ನೀಡುತ್ತಿರಲಿಲ್ಲ. ಆದರೆ ಅಂತಹ ಕಡೆಗಳಿಗೆಲ್ಲ ಗಾಂಧಿ ಹೋದ ನಂತರ ಅಧಿಕಾರಿಗಳ ಧೋರಣೆ ಬದಲಾಯಿತು. ಗಾಂಧಿ ಹೋದೆಡೆಯಲ್ಲೆಲ್ಲ ಬಹುಸಂಖ್ಯಾತ ಜನ ಅವರಿಗೆ ಸ್ಪಂದಿಸುತ್ತಿದ್ದುದೇ ಇದಕ್ಕೆ ಕಾರಣವಾಗಿತ್ತು. ಇದು ಹೇಗೆ ಸಾಧ್ಯವಾಗುತ್ತಿತ್ತೆಂಬುದನ್ನು ಆ ಸಂದರ್ಭದಲ್ಲಿ ಗಾಂಧಿಯವರೊಡನಿದ್ದ ಅಂಬಾಲಾಲ್ ಸಾರಾಭಾಯಿಯವರ ಮಗಳು ಮೃದುಲಾ ಸಾರಾಭಾಯಿ ವಿವರಿಸಿದ್ದಾರೆ: ಗಾಂಧಿ, ಪ್ರತಿ ಸಭೆಯಲ್ಲೂ ತಾವು ಸೇವಾಗ್ರಾಮದಲ್ಲಿದ್ದಾಗ ತಮ್ಮೊಂದಿಗೆ ಕೆಲ ದಿನ ತಂಗಿದ್ದ ಜಪಾನ್‌ನ ಬೌದ್ಧ ಭಿಕ್ಷುವೊಬ್ಬ ತಮಗೆ ಕಲಿಸಿದ್ದ ಮಂತ್ರವೊಂದನ್ನು ಪಠಿಸುವರು. ಅದು ಇಡೀ ಸಭೆಯ ವಾತಾವರಣವನ್ನೇ ಆಧ್ಯಾತ್ಮಿಕಗೊಳಿಸುವುದು. ನಂತರ ಜ಼ೆಂದವೆಸ್ತಾ, ಕುರಾನ್, ಗೀತೆ, ಬೈಬಲ್‌ನ ಆಯ್ದ ಭಾಗಗಳ ಪಠಣವಾಗುವುದು. ಕೊನೆಗೆ 'ಈಶ್ವರ ಅಲ್ಲಾ ತೇರೇ ನಾಮ್/ ಸಬ್‌ಕೋ ಸನ್ಮತಿ ದೇ ಭಗವಾನ್' ಎಂದು ಕೊನೆಗೊಳ್ಳುವ ರಾಮ್‌ದುನ್ ಮುಗಿಯುವ ಹೊತ್ತಿಗೆ ಮುಂದೆ ಗಾಂಧಿ ಹೇಳುವ ಮಾತುಗಳು, ಜನರಿಗೆ ಪ್ರವಾದಿಯ ಮಾತುಗಳಂತೆ ಕೇಳುವಂತಹ ಮಾಂತ್ರಿಕತೆ ಇಡೀ ಸಭೆಯನ್ನು ಆವರಿಸುತ್ತಿತ್ತು. ನಂತರ ಗಾಂಧಿ ಗಲಭೆ ನಡೆದ ಸ್ಥಳಗಳತ್ತ ನಡೆಯುತ್ತಿದ್ದರು. ಸಾಮಾನ್ಯವಾಗಿ ಅಂತಹುದೇನೂ ನಡೆದಿಲ್ಲವೆನ್ನುತ್ತಿದ್ದ ಅಧಿಕಾರಿಗಳ ಮಾತುಗಳಿಗೆ ಕಿವಿಗೊಡದೆ ತೀವ್ರ ತನಿಖೆ ನಡೆಸುತ್ತಿದ್ದರು. ಒಂದೆಡೆ ನೂರಾರು ಮುಸ್ಲಿಮರ ಹತ್ಯೆಯಾಗಿದೆ ಎಂಬ ಖಚಿತ ಮಾಹಿತಿ ಪಡೆದಿದ್ದ ಜಾಗದಲ್ಲಿ ಮ್ಯಾಜಿಸ್ಟ್ರೇಟರ ವಿರೋಧದ ನಡುವೆಯೂ ನೆಲವನ್ನು ಅಗೆಸಿದಾಗ, ಕೊಳೆತ ಶವಗಳ ರಾಶಿಯೊಂದು ಪತ್ತೆಯಾಗಿ ಗಾಂಧಿ ಮತ್ತು ಅವರೊಂದಿಗಿದ್ದವರು ಗರ ಬಡಿದಂತಾದರು.

ಹಿಂದೂ ಧರ್ಮದ ಕಳಂಕ–ಜಾತಿ ಕುರಿತ ಕ್ರಾಂತಿಕಾರಿ ನಿಲುವು

ಬಿಹಾರದ ಮುಸ್ಲಿಂ ವಿರೋಧಿ ಕೋಮು ಹಿಂಸೆ ಬಂಗಾಳದ ಹಿಂದೂ ವಿರೋಧಿ ಕೋಮು ಹಿಂಸೆಗೆ ಪ್ರತಿಕ್ರಿಯೆಯಾಗಿ ಮುಸ್ಲಿಮರನ್ನು ಪಾಕಿಸ್ತಾನವಾಗಲಿರುವ ನೆರೆಯ ಬಂಗಾಳಕ್ಕೆ ಓಡಿಸಲು, ಹಿಂದೂ ಮಹಾಸಭಾ ಪ್ರಚೋದಿಸಿರುವ ಕಾರ್ಯಾಚರಣೆ ಎಂಬ ಮಾತು ಗಾಂಧಿ ಕಿವಿಗೆ ಬಿತ್ತು. ಅದಕ್ಕೆ ಪ್ರತಿಕ್ರಿಯಿಸಿದ ಗಾಂಧಿ ಹಿಂದೂ ಧರ್ಮಕ್ಕೆ ಹಚ್ಚಲಾಗಿರುವ ಈ ಕಳಂಕವನ್ನು ಬಿಹಾರದ ಪರಿಹಾರ ಮತ್ತು ಪುನರ್ವಸತಿ ಕೆಲಸಗಳ ಮೂಲಕ ಅಳಿಸಿಕೊಂಡು ಗಲಭೆ ಪೀಡಿತವಾಗಿರುವ ಬಂಗಾಳ, ಪಂಜಾಬ್ ಮತ್ತು ವಾಯವ್ಯ ಪ್ರಾಂತ್ಯಗಳಿಗೆ ಅಹಿಂಸೆಯ ಸಂದೇಶ ಕಳಿಸುವುದೇ ಹಿಂದೂ ಧರ್ಮವನ್ನು ಉಳಿಸುವ ಅತ್ಯುತ್ತಮ ಮಾರ್ಗವಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಗಾಂಧಿ, ಹಿಂದೂ ಧರ್ಮವನ್ನು ರಕ್ಷಿಸುವ, ಉಳಿಸುವ ಬಗೆಗಳ ಬಗ್ಗೆ ಹಲವು ಸಭೆಗಳಲ್ಲಿ ಮಾತನಾಡಿದರು. ಪಾಟ್ನಾದಲ್ಲಿ ಏಪ್ರಿಲ್ ೨೪ರಂದು

ನಡೆದ ಸಭೆಯೊಂದರಲ್ಲಿ ಸಭಿಕರೊಬ್ಬರ ಪ್ರಶ್ನೆಗೆ ಉತ್ತರ ಕೊಡುತ್ತಾ, ಜಾತಿ ಪದ್ಧತಿಯನ್ನು ಕುರಿತ ತಮ್ಮ ಕ್ರಾಂತಿಕಾರಿ ನಿಲುವೊಂದನ್ನು ಪ್ರಕಟಿಸಿದರು: 'ಇನ್ನು ಮುಂದೆ ನನ್ನ ಆಶ್ರಮದಲ್ಲಿ ಅಂತರ್ಜಾತಿ ವಿವಾಹಗಳಿಗೆ ಮಾತ್ರ ಅವಕಾಶವಿರುವುದು. ಇಂತಹ ಮದುವೆಗಳಲ್ಲಿ ನಾನು ಮೊಖ್ತಾ ಹಾಜರಿದ್ದು ವಧೂ-ವರರಿಗೆ ಆಶೀರ್ವಾದ ಮಾಡಬೇಕೆಂದಿದ್ದರೆ ಆ ಮದುವೆಯ ವಧೂ-ವರರಲ್ಲಿ ಒಬ್ಬರು ಅಸ್ಪೃಶ್ಯ ಜಾತಿಯವರಾಗಿರಬೇಕು'.

ಕಾಣದ ಪರ್ಯಾಯ ನಾಯಕತ್ವ-ಸಮಾಜವಾದಿಗಳಿಗೆ ಗಾಂಧಿ ಪಾಠಗಳು

ಮೇ ತಿಂಗಳ ಕೊನೆಯ ಹೊತ್ತಿಗೆ ರಾಷ್ಟ್ರ ವಿಭಜನೆ ಮತ್ತು ಸ್ವಾತಂತ್ರ್ಯ ಘೋಷಣೆಯ ಸಕಲ ಸಿದ್ಧತೆಗಳು ಪೂರ್ಣಗೊಳ್ಳುತ್ತಿದ್ದ ಸಂದರ್ಭದಲ್ಲಿ ಪಟೇಲರು ಸಮಾಲೋಚನೆಗಳಿಗಾಗಿ ಬಿಹಾರದಿಂದ ದೆಹಲಿಗೆ ಬರುವಂತೆ ಗಾಂಧಿಯವರನ್ನು ಒತ್ತಾಯಿಸಿದರು. ಒಂದು ವಾರದ ಮಟ್ಟಿಗೆ ದೆಹಲಿಗೆ ಬಂದಿದ್ದ ಅವರು, ಪ್ರಮುಖ ಕಾಂಗ್ರೆಸ್ ನಾಯಕರನ್ನಲ್ಲದೆ ಜಿನ್ನಾ ಮತ್ತು ಮೌಂಟ್‌ಬೇಟನ್‌ರನ್ನೂ ಭೇಟಿ ಮಾಡಿದರು. ಆದರೆ ರಾಷ್ಟ್ರ ವಿಭಜನೆಯ ಪ್ರಕ್ರಿಯೆಯ ವಿವರಗಳು ಅಂತಿಮಗೊಂಡಿದ್ದು, ತಮ್ಮ ಪಾತ್ರವನ್ನು ಔಪಚಾರಿಕತೆಗಾಗಿ ಮಾತ್ರ ಬಳಸಿಕೊಳ್ಳಲಾಗುತ್ತಿದೆ ಎಂಬುದು ಅವರಿಗೆ ಮನವರಿಕೆಯಾಗಿತ್ತು. ಮೇ ೭ ರಂದೇ ಗಾಂಧಿ, ತಾವು ಅಶುಭಕರ ಕ್ರಮವಾದ ಬಂಗಾಳ ಮತ್ತು ಪಂಜಾಬ್‌ನ ವಿಭಜನೆಯನ್ನು ಅನಿವಾರ್ಯವಾಗಿಸುವ ರಾಷ್ಟ್ರವಿಭಜನೆಯ ನಿರ್ಧಾರದಲ್ಲಿ ಪಾಲ್ಗೊಳ್ಳಬಯಸುವುದಿಲ್ಲವೆಂದು ಕಟ್ಟುನಿಟ್ಟಾಗಿ ಹೇಳಿಬಿಟ್ಟರು. ಆದರೂ ದೆಹಲಿಗೆ ಬಂದು ಕೊನೆಯ ಕ್ಷಣದ ಪ್ರಯತ್ನಗಳನ್ನು ಮಾಡಲು ಹಿಂಜರಿಯಲಿಲ್ಲ.

ನೆಹರೂ, ಪಟೇಲ್, ಪ್ರಸಾದ್ ಮತ್ತು ತಮ್ಮ ಕಿರಿಯ ಸಂಗಡಿಗರು ಈಗ ತಮ್ಮ ಮಾತುಗಳನ್ನು ಕೇಳಲು ನಿರಾಕರಿಸುತ್ತಿದ್ದ ಸಂದರ್ಭದಲ್ಲೂ ಗಾಂಧಿ, ಮಾತಿನಲ್ಲಾಗಲೀ, ಕೃತಿಯಲ್ಲಾಗಲೀ ಅವರ್‍ಯಾರ ವಿಶ್ವಾಸವನ್ನು ಕಳೆದುಕೊಳ್ಳದಂತೆ ಎಚ್ಚರವಹಿಸಿದರು. ಏಕೆಂದರೆ ಈ ನಾಯಕರ ಹೊರತಾಗಿ ದೇಶದಲ್ಲಿ ಇದಕ್ಕಿಂತ ಉತ್ತಮವಾದ ಮತ್ತಾವ ನಾಯಕತ್ವವೂ ಅವರಿಗೆ ಕಂಡಿರಲಿಲ್ಲ. ಕಾಂಗ್ರೆಸ್ ಸಮಾಜವಾದಿಗಳತ್ತ ಒಮ್ಮೆ ಅವರು ಕಣ್ಣಾಡಿಸಿದ್ದರಾದರೂ, ಅವರ ಬದ್ಧತೆ ಮತ್ತು ಪ್ರಾಮಾಣಿಕತೆಗಳ ಬಗ್ಗೆ ಮೆಚ್ಚುಗೆ ಇದ್ದರೂ, ಅವರಿನ್ನೂ ಚಿಂತನೆಯಲ್ಲಿ ಪ್ರಬುದ್ಧರಾಗಬೇಕೆಂದು ಭಾವಿಸಿದ್ದರು. ಫೆಬ್ರುವರಿ ಕೊನೆಯಲ್ಲಿ ಕಾನ್‌ಪುರದಲ್ಲಿ ರಾಮಮನೋಹರ ಲೋಹಿಯಾರ ಅಧ್ಯಕ್ಷತೆಯಲ್ಲಿ ನಡೆದಿದ್ದ ಈ ಸಮಾಜವಾದಿಗಳ ಸಮ್ಮೇಳನದ ಕಾರ್ಯಕಲಾಪಗಳು, ಇನ್ನೂ 'ಭಾರತ ಬಿಟ್ಟು ತೊಲಗಿ' ಚಳುವಳಿಯ ಮನೋಲಹರಿಯಲ್ಲಿಯೇ ಇದ್ದುದನ್ನು ಪ್ರತಿಬಿಂಬಿಸುತ್ತಿದ್ದುದನ್ನು ಅವರು ಗಮನಿಸಿದ್ದರು. ಹಾಗಾಗಿ ಮೇ ೨೭ರಂದು, ಅಂದರೆ ರಾಷ್ಟ್ರ ವಿಭಜನೆಯ ಅಂತಿಮ ಸೂತ್ರಕ್ಕೆ ಅನುಮೋದನೆ ನೀಡಲು ಮೇ ೩೧ರಿಂದ ಆರಂಭವಾಗಲಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯ ಮೂರು ದಿನಗಳ ಮುನ್ನ, ಗಾಂಧಿಯವರನ್ನು ಭಂಗಿ ಕಾಲೋನಿಯಲ್ಲಿ ಭೇಟಿ ಮಾಡಿ, ಅವರನ್ನು ದಾರಿ ತಪ್ಪಿರುವ ಕಾಂಗ್ರೆಸ್ ಸಹವಾಸ ತೊರೆದು ತಮ್ಮ ಪಕ್ಷದ ನಾಯಕತ್ವ ವಹಿಸಿಕೊಳ್ಳುವಂತೆ ಕೋರಲು ಬಂದಿದ್ದ ಜೆಪಿ ನೇತೃತ್ವದ ಸಮಾಜವಾದಿಗಳ ನಿಯೋಗವೊಂದರ ಮನವಿಯನ್ನು ತಿರಸ್ಕರಿಸಿದ್ದರು.

ಸಂವಿಧಾನ ರಚನಾ ಸಭೆಯಲ್ಲೂ-ಅದರ ರಚನೆ ಸೀಮಿತ ಮತದಾರ ಪಟ್ಟಿಯ ಆಧಾರದ ಮೇಲೆ ನಡೆದಿದೆ ಎಂಬ ಕಾರಣಕ್ಕೆ - ಭಾಗವಹಿಸಲು ನಿರಾಕರಿಸಿದ್ದ ಸಮಾಜವಾದಿಗಳು ರಾಷ್ಟ್ರ ವಿಭಜನೆಯನ್ನು ಕಟುವಾಗಿ ವಿರೋಧಿಸಿ, ಇನ್ನೂ ಪ್ರಜಾಪ್ರಭುತ್ವಕ್ಕೆ ಪಕ್ವವಾಗದ ಹಂತದಲ್ಲಿರುವ ಈ ದೇಶಕ್ಕೆ ಈಗಲೇ ಸ್ವಾತಂತ್ರ್ಯ ಬೇಡ ಎಂದಿದ್ದರು. ಅವರಿಗೆಲ್ಲ ಕಾಯಲು ಇನ್ನೂ ವಯಸ್ಸಿತ್ತು, ಹೋರಾಡಲು ಹುಮ್ಮಸ್ಸೂ ಇತ್ತು. ಅವರ ಪ್ರಕಾರ ಇನ್ನೂ ಎರಡು ವರ್ಷಗಳ ಕಾಲ ಗಾಂಧಿ ದೇಶಾದ್ಯಂತ ಪ್ರವಾಸ ಮಾಡಿ, ಜನರನ್ನು ಪ್ರಜಾಪ್ರಭುತ್ವದ ಅಗತ್ಯಗಳಿಗೆ ಜಾಗೃತಗೊಳಿಸಿ ನಂತರ ಸ್ವಾತಂತ್ರ್ಯಕ್ಕೆ ಒತ್ತಾಯಿಸಬೇಕು. ಈ ಜಾಗೃತಿ ಅಭಿಯಾನದಲ್ಲಿ ಸಾಥ್ ನೀಡಲು ಸಮಾಜವಾದಿಗಳ ಪಡೆ ಸದಾ ಸಿದ್ಧವಿತ್ತು. ಗಾಂಧಿ ಇವರ ಈ ಹುರುಪಿನ ಮನವಿಯನ್ನು ತಿರಸ್ಕರಿಸುತ್ತಾ ಹೀಗೆ ಹೇಳಿದ್ದರು:

'ಜೆಪಿ, ಲೋಹಿಯಾ, ಅರುಣಾ ಅಸಫ್ ಅಲಿ, ಅಚ್ಯುತ ಪಟವರ್ಧನ್ ಮುಂತಾದವರ ದಿಟ್ಟತನ ಮತ್ತು ತ್ಯಾಗಶೀಲತೆಗಳನ್ನು ನಾನು ಮೆಚ್ಚುವೆನಾದರೂ ಅಹಿಂಸೆಗೆ ಬದ್ಧರಾಗದ ನಿಮ್ಮ ನೀತಿಗೆ ನನ್ನ ಅಸಮ್ಮತಿ ಇದೆ. 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಭೂಗತರಾಗಿ ನೀವು ಬಿತ್ತಿದ ಹಿಂಸೆಯ ಬೀಜ, ಇಂದು ದೇಶಾದ್ಯಂತದ ಹಿಂಸಾಚಾರದ ರೂಪದಲ್ಲಿ ಫಲಕೊಡುತ್ತಿದೆ. ನೀವು ಹಿಂಸೆಗೊಂದು ಜನಮಾನ್ಯತೆಯನ್ನು ದೊರಕಿಸಿಕೊಟ್ಟದ್ದೇ ಇದಕ್ಕೆ ಕಾರಣ. ನಿಮ್ಮ ಸಿದ್ಧಾಂತ ನಿಮಗೇ ಅರ್ಥವಾಗಬೇಕು. ಜನ ನಿಮ್ಮ ಮಾತು ಕೇಳರೆಂಬುದು ನಿಶ್ಚಿತ. ನಿಮ್ಮದು ಕಲಿತ ಸಮಾಜವಾದ. ಜನರ ಸಮಾಜವಾದವಲ್ಲ. ಗೀತೆಯಲ್ಲೇ ಸಮಾಜವಾದದ ಸಂದೇಶವಿದೆ. ಅದನ್ನು ಅರಿತಿರುವ ಹುಟ್ಟು ಸಮಾಜವಾದಿ ನಾನು. ನೀವು ಎಲ್ಲರಿಗೂ ಕಾರು ಬಂಗ್ಲೆಗಳನ್ನೊದಗಿಸುವ ರಾಜಕಾರಣದ ಸೈದ್ಧಾಂತಿಕ ಕನಸು ಕಾಣುತ್ತಿದ್ದೀರಿ. ಆದರೆ ಭಾರತದ ವಾಸ್ತವ ಪರಿಸ್ಥಿತಿಯಾಗಲೀ, ಅದರ ಜೀವ ರಕ್ಷಕ ಅಗತ್ಯಗಳಾಗಲೀ ನಿಮಗೆ ಗೊತ್ತಾಗಿಲ್ಲ. ನೀವೆಲ್ಲ ಮೊದಲು ಹಳ್ಳಿಗಳಿಗೆ ಹೋಗಬೇಕು. ಹಳ್ಳಿಗಳ ಜನರ ಜೊತೆ ಬೆರೆತು ದುಡಿಯಬೇಕು. ಅವರ ಕಷ್ಟಗಳನ್ನು, ತುರ್ತು ಅಗತ್ಯಗಳನ್ನು ಅರಿಯಬೇಕು. ನಿಮ್ಮಲ್ಲಿ ಮದುವೆಯಾಗುವ ಬಯಕೆಯವರು ಯಾರಾದರೂ ಇದ್ದರೆ ಅವರು ಆ ಹಳ್ಳಿಗಳ ಹುಡುಗಿ-ಹುಡುಗರನ್ನು ಮದುವೆಯಾಗಬೇಕು. ನನಗೇನಾದರೂ ಸರ್ವಾಧಿಕಾರ ದೊರೆತರೆ, ಹಿಟ್ಟಿನ ಗಿರಣಿಯಿಲ್ಲದ, ತಮ್ಮ ಆಹಾರಕ್ಕಾಗಿ ತಾವೇ ಧಾನ್ಯಗಳನ್ನು ಕುಟ್ಟಿ ಹಿಟ್ಟು ಮಾಡಿಕೊಳ್ಳುವ, ಹತ್ತಿ ಬೆಳೆದು ನೂಲು ತೆಗೆದು ತಮ್ಮ ಬಟ್ಟೆಗಳನ್ನು ತಾವೇ ತಯಾರಿಸಿಕೊಳ್ಳುವ ಸರ್ವ ಸ್ವಾವಲಂಬಿ ಹಳ್ಳಿಗಳಿಗೆ ಬಹುಮಾನ ನೀಡಿ ಪ್ರೋತ್ಸಾಹಿಸ ಬಯಸುತ್ತೇನೆ.

ಕಾಂಗ್ರೆಸ್, ಪಾಶ್ಚಿಮಾತ್ಯ ದೇಶಗಳಲ್ಲಿರುವಂತಹ ಪಕ್ಷಗಳಂತೆ ಕಟ್ಟುನಿಟ್ಟಾದ ಪಕ್ಷವಲ್ಲ. ಅದು ಈ ದೇಶದ ಜನರ ಎಲ್ಲ ಅಭಿಪ್ರಾಯಗಳನ್ನು ಪ್ರತಿನಿಧಿಸುವ ಪಕ್ಷ. ಅದರೊಂದಿಗೆ ಜಗಳ ಆಡುವ ಸಂದರ್ಭವಲ್ಲ ಇದು. ನಿಮ್ಮ ಚಳುವಳಿ, ಮುಷ್ಕರಗಳ ಮಾತು ಈಗ ಸಲ್ಲದು. ನೀವೀಗ ಕಾಂಗ್ರೆಸ್‌ನೊಂದಿಗೆ ಸಹಕರಿಸಬೇಕು. ಹಾಗೆ ನೋಡಿದರೆ ನನ್ನ ಶತ್ರುಗಳು, ನನ್ನ ಮಾರ್ಗಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವ ನೀವೇ. ನನ್ನ ಈ ಮಾತುಗಳು ನಿಮಗೆ ಈಗ ಅರ್ಥವಾಗದಿರಬಹುದು. ಆದರೆ ನನ್ನ ಮರಣಾನಂತರ ನಿಮ್ಮ ಸಭೆಗಳಿಗೆ ಜನರಿಲ್ಲದೆ ಭಣಗುಟ್ಟತೊಡಗಿದಾಗ ನಿಮಗೆ ಅರ್ಥವಾಗುವುದು'.

ಕಾರ್ಯಕಾರಿ ಸಮಿತಿಯಲ್ಲಿ ಚಕಮಕಿ–ಗಾಂಧಿ ಬೆಂಬಲಕ್ಕೆ ನಿಂತ ಸಮಾಜವಾದಿಗಳು

ಇಷ್ಟಾದರೂ ಗಾಂಧಿಯವರಿಗೆ ಬರಲಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ, ವಿಶೇಷ ಆಹ್ವಾನಿತರಾಗಿ ಹಾಜರಿರುವ ಜೆಪಿ ಮತ್ತು ಲೋಹಿಯಾರಿಂದ ತಮ್ಮ ನಿಲುವಿಗೆ ಬೆಂಬಲ ದೊರಕುವ ಭರವಸೆ ಇತ್ತು. ಅಷ್ಟೇ ಅಲ್ಲ, ಜೆಪಿಯವರನ್ನು ಓರ್ವ ಪ್ರಬುದ್ಧ ನಾಯಕರನ್ನಾಗಿ ಬೆಳೆಸಲು ಮತ್ತು ಕಾಂಗ್ರೆಸ್‌ನ್ನು ಸರಿದಾರಿಗೆ ತರಲು, ಅವರನ್ನು ೧೯೪೪೮ರ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮಾಡಲೂ ಅವರು ಪ್ರಯತ್ನಿಸಲಿದ್ದರು. ಆದರೆ ಆ ಪ್ರಯತ್ನ ಬೇರೆ ಬೇರೆ ಕಾರಣಗಳಿಂದಾಗಿ, ನೆಹರೂ ಮತ್ತು ಪಟೇಲರ ವಿರೋಧದಿಂದಾಗಿ ಸಾಧ್ಯವಾಗಲಿಲ್ಲ. (ಜೆಪಿಯವರನ್ನು ಪಟೇಲರು ಇಷ್ಟಪಡುವುದಿಲ್ಲವೆಂದು ಅಭಿಪ್ರಾಯಪಟ್ಟ ನೆಹರೂ, ಇನ್ನೋರ್ವ ಸಮಾಜವಾದಿ ಆಚಾರ್ಯ ನರೇಂದ್ರ ದೇವ ಅವರ ಹೆಸರನ್ನು ಸೂಚಿಸಿದಾಗ ಪಕ್ಷವನ್ನು ಎಡಪಂಥೀಯರಿಗೆ ಒಪ್ಪಿಸುವುದನ್ನು ಬಯಸದ ಪಟೇಲ್, ಅವರ ಹೆಸರನ್ನೂ ತಳ್ಳಿ ಹಾಕಿದರೆಂದು ಜೆಪಿಯವರ ಸಮಾಜವಾದಿ ಮಿತ್ರರಾಗಿದ್ದ ಮಿನೂ ಮಸಾನಿ ತಮ್ಮ 'ಈಸ್ ಜೆಪಿ ದ ಆನ್ಸರ್?' ಎಂಬ ತಮ್ಮ ಪುಸ್ತಕದಲ್ಲಿ ಬರೆಯುತ್ತಾರೆ.)

೧೯೪೭ ರ ಮೇ ೩೧ರಂದು ಆರಂಭವಾದ ಕಾರ್ಯಕಾರಿ ಸಭೆಯಲ್ಲಿ ನೆಹರೂ, ರಾಷ್ಟ್ರ ವಿಭಜನೆಯ ವಿವರಗಳನ್ನೊಳಗೊಂಡ ನಿರ್ಣಯವನ್ನು ಮಂಡಿಸಿದಾಗ ಅದನ್ನೊಪ್ಪದ ಗಾಂಧಿಯವರ ಬೆಂಬಲಕ್ಕೆ ನಿಂತವರು ಲೋಹಿಯಾ ಮತ್ತು ಅಬ್ದುಲ್ ಗಫಾರ್ ಖಾನ್ ಇಬ್ಬರೇ. ನೆಹರೂ ಅವರ ಆಪ್ತ ಗೆಳೆಯರಾಗಿದ್ದ ಜೆಪಿ, ನಿರ್ಣಯದ ವಿರುದ್ಧವಾಗಿ ಒಮ್ಮೆ ಮಾತ್ರ ಸಂಕ್ಷಿಪ್ತವಾಗಿ ಸ್ಫೋಟಿಸಿ, ಮಿಕ್ಕಂತೆ ಇಡೀ ದಿನ ಮೌನವಹಿಸಿದ್ದರೆಂದೂ, ಇದು ತಮಗೆ ಹಲವಾರು ಬಾರಿ ಕಿರಿಕಿರಿ ಉಂಟುಮಾಡಿ, ಜಗಳಗಳಿಗೆ ಕಾರಣವಾಗಿರುವ ಅವರ ಸಮನ್ವಯ ಗುಣದ ವ್ಯಕ್ತಿತ್ವಕ್ಕೆ ತಕ್ಕುದಾಗಿತ್ತೆಂದೂ ಲೋಹಿಯಾ, ತಮ್ಮ 'ಗಿಲ್ಟಿ ಮೆನ್ ಆಫ್ ಇಂಡಿಯಾಸ್ ಪಾರ್ಟಿಶನ್'(ಭಾರತದ ವಿಭಜನೆಯ ತಪ್ಪಿತಸ್ಥರು) ಪುಸ್ತಕದಲ್ಲಿ ಬರೆಯುತ್ತಾರೆ. ವಿಭಜನೆಯ ವಿವರಗಳಿಗೆ ವೈಸ್‌ರಾಯ್ ತಮ್ಮ ಒಪ್ಪಿಗೆಯನ್ನು ನೀಡುವ ಮುನ್ನ ತಮಗೆ ಏಕೆ ತಿಳಿಸಲಿಲ್ಲವೆಂದು ಕೇಳಿದ ಸಂದರ್ಭದಲ್ಲಿ, ನೆಹರೂ ಸ್ವಲ್ಪ ಉದ್ವಿಗ್ನರಾಗಿ 'ತಿಳಿಸಲಾಗಿತ್ತು' ಎಂದಾಗ, ಗಾಂಧಿ, ಅದು ಸ್ಥೂಲ ಮಾಹಿತಿ ಮಾತ್ರ ಆಗಿತ್ತು ಎಂದರು. ಇದರಿಂದ ಸ್ವಲ್ಪ ಮೆತ್ತಗಾದ ನೆಹರೂ, 'ನೀವು ಬಹುದೂರದ ನೌಖಾಲಿಯಲ್ಲಿದ್ದುದರಿಂದ ಎಲ್ಲವನ್ನೂ ಸ್ಪಷ್ಟವಾಗಿ ತಿಳಿಸಲು ದುಸ್ಸಾಧ್ಯವಾಗಿತ್ತು' ಎಂದು ಉತ್ತರಿಸಿದರು. ಇದಕ್ಕೆ ಗಾಂಧಿ 'ಆಯಿತು. ನೀವು ಮತ್ತು ಪಟೇಲ್ ವೈಸ್‌ರಾಯ್‌ಗೆ ಮಾತು ಕೊಟ್ಟಿದ್ದಲ್ಲಿ ಅದನ್ನು ಮುರಿಯಲು ನಾನು ಹೇಳಲಾರೆ. ಆದರೆ ಆ ವಿಭಜನೆ, ಬ್ರಿಟಿಷರು ಇಲ್ಲಿಂದ ಹೋದಮೇಲೆ ನಡೆಯಲಿ ಎಂದು ಸೂಚಿಸಬಹುದಲ್ಲವೆ?' ಎಂದು ಸಭೆಯನ್ನು ಕೇಳಿದರು. ಲೋಹಿಯಾ, ಈ ಸಂದರ್ಭವನ್ನು, ತಾವೀಗ ನೋಡುತ್ತಿರುವುದು ಸಂತನೊಬ್ಬ ರಾಜಕಾರಣಿಯಾಗಿ ಮಾರ್ಪಾಡಾಗುತ್ತಿರುವ ಬೆರಗನ್ನೋ ಅಥವಾ ರಾಜಕಾರಣಿಯೊಬ್ಬ ಸಂತನಾಗಿ ಮಾರ್ಪಾಡಾಗುತ್ತಿರುವ ಬೆರಗನ್ನೋ ಎಂದು ಗಲಿಬಿಲಿಗೊಂಡೆ ಎಂದೆನ್ನುವ ಮೂಲಕ

ವರ್ಣಿಸುತ್ತಾರೆ. ತಟ್ಟಿ ಎಬ್ಬಿಸಿದರೂ ತನಗೆ ತಲೆನೋವು ಎನ್ನುತ್ತಾ ಏಳಲಿಚ್ಛಿಸದ ಕಾಂಗ್ರೆಸ್ ಅಧ್ಯಕ್ಷ ಕೃಪಲಾನಿಯವರೂ ಸೇರಿದಂತೆ ಎಲ್ಲರೂ ಸುಮ್ಮನಿದ್ದಾಗ ತಾವೊಬ್ಬರು ಎಷ್ಟೇ ಮಾತಾಡಿದರೂ ಪ್ರಯೋಜನವಾಗಲಿಲ್ಲ ಎಂದು ಲೋಹಿಯಾ ಹೇಳುತ್ತಾರೆ. ವಾಯುವ್ಯ ಗಡಿ ಪ್ರಾಂತ್ಯದಲ್ಲಿ ಜನಮತ ಸಂಗ್ರಹಣೆಗೆ ಒಪ್ಪುವ ಮೂಲಕ ತಮ್ಮನ್ನು ಕೈಬಿಡಬೇಡಿರೆಂದು ಖಾನ್ ಸಹೋದರರು ಯಾಚಿಸಿದರೂ ಅದಕ್ಕೆ ಸ್ಪಂದಿಸಲಾಗದಷ್ಟು ಕಲ್ಲಿನಂತಹ ದೃಢ ನಿರ್ಧಾರಕ್ಕೆ ನೆಹರೂ-ಪಟೇಲ್ ದ್ವಯರು ಬಂದಿದ್ದರೆಂದು ಲೋಹಿಯಾ ಬರೆಯುತ್ತಾರೆ. ಈ ಸಭೆಯಲ್ಲಿ ನೆಹರೂ-ಪಟೇಲರಿಬ್ಬರೂ ಗಾಂಧಿಯವರ ಬಗ್ಗೆ ಪದೇ ಪದೇ ಏರಿದ ದನಿಯಲ್ಲಿ ಒರಟಾಗಿ ಪ್ರತಿಕ್ರಿಯಿಸುತ್ತಿದ್ದುದಕ್ಕೆ ಹಲವು ಕಾರಣಗಳಿದ್ದವು ಎಂಬ ಲೋಹಿಯಾರ ಮಾತುಗಳು, ಅವು ವ್ಯಕ್ತಿನಿಷ್ಠವಾಗಿರಬಹುದು ಎಂಬ ಕಾರಣಕ್ಕೆ ಇಲ್ಲಿ ಉಲ್ಲೇಖಿಸುವ ಅಗತ್ಯವಿಲ್ಲ. ಆದರೆ ಒಟ್ಟಾರೆಯಾಗಿ ಈ ಸಭೆಯ ಅನುಮೋದನೆಯೊಡನೆ ನಡೆದ, ಭಾರತದ ವಿಭಜನೆಗೆ ಅವರು ನೀಡಿರುವ ಈ ಕ್ರಮಶಃ ಕಾರಣಗಳನ್ನು ಒಪ್ಪದಿರಲಾಗದೇನೋ: 'ನಿರ್ಣಾಯಕ ಹಂತ ತಲುಪಿದ್ದ ಬ್ರಿಟಿಷರ ಒಡೆದಾಳುವ ಕುತ್ಸಿತತೆ, ಕಾಂಗ್ರೆಸ್ ನಾಯಕರ ಇಳಿವಯಸ್ಸಿನ ದಣಿವು, ಹಿಂದೂ-ಮುಸ್ಲಿಂ ಗಲಭೆಗಳ ವಸ್ತುನಿಷ್ಠ ವಾಸ್ತವ, (೧೯೪೨ರ ಚಳುವಳಿಯ ನಂತರ ಕಾಣಲಾರಂಭಿಸಿದ್ದ) ಜನತೆಯಲ್ಲಿನ ದೃಢನಿಶ್ಚಯ ಮತ್ತು ನಿಜಕಸುವಿನ ಕೊರತೆ, ಗಾಂಧೀಜಿಯ ಅಹಿಂಸೆ, ಮುಸ್ಲಿಂ ಲೀಗ್‌ನ ಪ್ರತ್ಯೇಕತಾವಾದಿ ಹಠ, ಅವಕಾಶಗಳನ್ನು ಬಳಸಿಕೊಳ್ಳುವ ರಾಜಕೀಯ ನಾಯಕತ್ವದ ಅಸಾಮರ್ಥ್ಯ ಮತ್ತು ಹಿಂದೂ ಗರ್ವ'.

ಗಾಂಧಿ ಅಸಮ್ಮತಿಯ ನಡುವೆಯೂ ವಿಭಜನೆಗೆ ಒಪ್ಪಿಗೆ-ಅನಾಥರಾದ ಖಾನ್ ಸೋದರರು

ಕಾಂಗ್ರೆಸ್ ಕಾರ್ಯಕಾರಿ ಸಮಿತಿ, ಕೊನೆಗೂ ಜಿನ್ನಾರ, ಬ್ರಿಟಿಷ್ ಸರ್ಕಾರದ ಮೂಲಕ ಮಂಡಿಸಲ್ಪಟ್ಟಿದ್ದ ಎರಡು ರಾಷ್ಟ್ರಗಳ ಸಿದ್ಧಾಂತವನ್ನು ಒಪ್ಪಿಕೊಂಡಿತ್ತು. ಈ ರಾಷ್ಟ್ರ ವಿಭಜನೆಯ ಯೋಜನೆಯ ಪ್ರಕಾರ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗಳು ಸ್ವತಂತ್ರವಾಗಿ ಅಧಿಕಾರದಲ್ಲಿದ್ದ ಪ್ರಾಂತ್ಯಗಳು ಕ್ರಮವಾಗಿ ನವ ಭಾರತ ಮತ್ತು ಪಾಕಿಸ್ತಾನಕ್ಕೆ ಸೇರುವುವು. ಆದರೆ ಕೋಮು ಗಲಭೆ ಪೀಡಿತ ಪ್ರಾಂತ್ಯಗಳಾದ ಪಂಜಾಬ್ ಮತ್ತು ಬಂಗಾಳಗಳನ್ನು, ಒಂದು ಆಯೋಗ ರಚಿಸಿ ಅದರ ಶಿಫಾರ್ಸುಗಳ ಮೂಲಕ ಹಿಂದೂ ಬಾಹುಳ್ಯ ಮತ್ತು ಮುಸ್ಲಿಂ ಬಾಹುಳ್ಯದ ಎರಡು ಭಾಗಗಳಾಗಿ ವಿಭಜಿಸಿ, ಅವನ್ನು ಸಂಬಂಧಪಟ್ಟ ಹೊಸ ರಾಷ್ಟ್ರಗಳಲ್ಲಿ ವಿಲೀನಗೊಳಿಸಲಾಗುವುದು. ಇನ್ನು ಅಸ್ಸಾಂನ ಮಿಶ್ರ ಕೋಮುಗಳ ಜಿಲ್ಲೆ ಮತ್ತು ವಾಯುವ್ಯ ಗಡಿ ಪ್ರಾಂತ್ಯವನ್ನು ಭಾರತದ ಪರ ಅಥವಾ ಪಾಕಿಸ್ತಾನದ ಪರ ಎಂಬ ಎರಡು ಆಯ್ಕೆಗಳಿರುವ ಜನಮತಗಣನೆಯ ಮೂಲಕ ಅವುಗಳು ಎಲ್ಲಿಗೆ ಸೇರಬೇಕೆಂಬುದನ್ನು ನಿರ್ಧರಿಸಲಾಗುವುದು. ವಾಯುವ್ಯ ಗಡಿ ಪ್ರಾಂತ್ಯ, ಖಾನ್ ಸೋದರರ ನೇತೃತ್ವದ ಕಾಂಗ್ರೆಸ್ ಸರ್ಕಾರವಿದ್ದರೂ ಮುಸ್ಲಿಂ ಬಾಹುಳ್ಯದ ಕಾರಣ ಅದನ್ನು ಜನಮತಗಣನೆಗೆ ಒಳಪಡಿಸುವ ಕ್ರಮ, ವಿಭಜನೆಗೆ ಕೋಮುವಾದವೇ ಆಧಾರವಾಗಿತ್ತು ಎಂಬುದನ್ನು ಸ್ಪಷ್ಟಪಡಿಸುವಂತಿತ್ತು. ಬ್ರಿಟಿಷ್ ಸರ್ಕಾರದ ಈ ಸೂಚನೆಯನ್ನು ನೆಹರೂ-ಪಟೇಲರಾದಿಯಾಗಿ ಕಾಂಗ್ರೆಸ್ ನಾಯಕರು ಒಪ್ಪಿದ್ದುದು ಖಾನ್ ಸೋದರರಿಗೆ ಆಘಾತ ತಂದಿತ್ತು. ಮುಸ್ಲಿಂ ಲೀಗ್ ಅಲ್ಲಿ ಆಗಲೇ ಕೋಮು

ಪ್ರಚೋದನಾ ಚಟುವಟಿಕೆಗಳನ್ನು ಆರಂಭಿಸಿ ಖಾನ್ ಸೋದರರನ್ನು ಇಸ್ಲಾಂ ದ್ರೋಹಿಗಳೆಂದು ಬಿಂಬಿಸಿ ಅಲ್ಲಿನ ಸರ್ಕಾರವನ್ನು ಅಸ್ಥಿರಗೊಳಿಸಿತ್ತು. ಇಂತಹ ಸಂದರ್ಭದಲ್ಲಿ ಈ ಎರಡೇ ಆಯ್ಕೆಗಳ ಜನಮತಗಣನೆಯಲ್ಲಿ ಜನ ಪಾಕಿಸ್ತಾನವನ್ನು ಆಯ್ದುಕೊಳ್ಳುವ ಸಾಧ್ಯತೆಯೇ ಹೆಚ್ಚಿತ್ತು. ಇದನ್ನು ಇಷ್ಟಪಡದ ಖಾನ್ ಸೋದರರು ಜನಮತಗಣನೆಯ ಎರಡು ಆಯ್ಕೆಗಳ ಜೊತೆಗೆ ಫಕ್ತೂನಿಸ್ತಾನವೆಂಬ ಸ್ವತಂತ್ರ ರಾಷ್ಟ್ರದ ಆಯ್ಕೆಯನ್ನು ಸೇರಿಸಬೇಕೆಂದೂ, ಇದನ್ನು ಕಾಂಗ್ರೆಸ್ ಅನುಮೋದಿಸಬೇಕೆಂದೂ ಪರಿಪರಿಯಾಗಿ ಬೇಡಿಕೊಂಡರು. ಗಾಂಧಿ ಕೂಡ ಅವರ ಪರ ವಹಿಸಿ ಮಾತನಾಡಿದರು. ಆದರೆ ಕಾಂಗ್ರೆಸ್ ನಾಯಕರಾರೂ ಜಗ್ಗಲಿಲ್ಲ. ತಾವು ಈಗಾಗಲೇ ಈ ಸಂಬಂಧ ವೈಸ್‌ರಾಯ್‌ಗೆ ಮಾತುಕೊಟ್ಟಿರುವುದರಿಂದ ಇದು ಸಾಧ್ಯವಿಲ್ಲ ಎಂಬುದು ಅವರ ವಾದವಾಗಿತ್ತು.

ರಾಷ್ಟ್ರ ಒಡೆವ ದಿನಾಂಕ ಘೋಷಣೆ–ಗಾಂಧಿಯನ್ನು ಕಾಡಿದ ಏಕಾಂಗಿತನ

ವಿಭಜನೆಯ ಈ ಯೋಜನೆಯ ಇನ್ನೊಂದು ಅಂಶವೆಂದರೆ ಸುಮಾರು ೬೦೦ರಷ್ಟಿದ್ದ ರಾಜಸಂಸ್ಥಾನಗಳೊಂದಿಗೆ ಬ್ರಿಟಿಷ್ ಸರ್ಕಾರ ತನ್ನ ಸಂಬಂಧಗಳನ್ನು ಕಳಚಿಕೊಳ್ಳಲಿದ್ದು, ಸಂಸ್ಥಾನಗಳು ಈಗ ರಚಿತವಾಗಲಿರುವ ಯಾವುದೇ ರಾಷ್ಟ್ರ ಸೇರಲು ಅಥವಾ ಸ್ವತಂತ್ರವಾಗಿರುವ ಆಯ್ಕೆಯನ್ನು ಹೊಂದಲಿವೆ ಎಂಬುದು. ಜೂನ್ ೩ ರಂದು ಈ ಎಲ್ಲ ಅಂಶಗಳನ್ನು ಒಳಗೊಂಡ ಅಧಿಕೃತ ಪ್ರಕಟಣೆಯನ್ನು ನೀಡಿದ ವೈಸ್‌ರಾಯ್ ಕಛೇರಿ, ದೇಶದ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಭಾರತ ಮತ್ತು ಪಾಕಿಸ್ತಾನದ ಗಡಿ ರೇಖೆಗಳನ್ನು ನಿರ್ಧರಿಸಲು ಸಿರಿಲ್ ರ್‍ಯಾಡ್‌ಕ್ಲಿಫ್ ಎಂಬ ಭಾರತದ ಬಗ್ಗೆ ಯಾವ ಜ್ಞಾನವೂ ಇಲ್ಲದ ಬ್ರಿಟನ್‌ನ ನ್ಯಾಯಾಧೀಶರ ನೇಮಕವನ್ನೂ ಅದರಲ್ಲಿ ತಿಳಿಸಲಾಗಿತ್ತು. ಇನ್ನೂ ಮುಖ್ಯವಾದ ಸಂಗತಿ ಎಂದರೆ, ಪಾಕಿಸ್ತಾನಕ್ಕೆ ಬರುವ ಆಗಸ್ಟ್ ೧೪ ರಂದೂ, ಭಾರತಕ್ಕೆ ಮಾರನೆಯ ದಿನ ಅಂದರೆ, ಆಗಸ್ಟ್ ೧೫ ರಂದೂ ಅಧಿಕಾರ ಹಸ್ತಾಂತರ ಮಾಡಿ ಸ್ವಾತಂತ್ರ್ಯ ಘೋಷಿಸಲಾಗುವುದೆಂದು ಪ್ರಕಟಿಸಲಾಗಿತ್ತು. ಇದರಿಂದ ಪಾಕಿಸ್ತಾನ ನಿರ್ಮಾಣ ಖಚಿತಗೊಂಡಿದ್ದರಿಂದಾಗಿ, ಎರಡು ದೇಶಗಳ ಭವಿಷ್ಯದ ಜನ ಮತ್ತು ನಾಯಕರಿಗೆ ಗಾಂಧಿ ಈ ಸಂದೇಶ ನೀಡಿದರು: ಪಾಕಿಸ್ತಾನದಲ್ಲಿನ ಹಿಂದೂಗಳನ್ನು ಅಲ್ಲಿನ ಸರ್ಕಾರವೂ, ಭಾರತದಲ್ಲಿನ ಮುಸ್ಲಿಮರನ್ನು ಇಲ್ಲಿನ ಸರ್ಕಾರವೂ ಯಾವುದೇ ಭೇದಭಾವಗಳಿಲ್ಲದೆ ಸಮಾನವಾಗಿ ನಡೆಸಿಕೊಳ್ಳುವ ಜವಾಬ್ದಾರಿಯನ್ನು ನಿರ್ವಹಿಸುವುದೊಂದೇ ಈ ದುರದೃಷ್ಟಕರ ವಿಭಜನೆಯ ಹಾನಿಯನ್ನು ತಪ್ಪಿಸುವ ಏಕೈಕ ಮಾರ್ಗ. ಅಷ್ಟೇ ಅಲ್ಲದೆ ತಾವು ಯಾವೊಂದೇ ರಾಷ್ಟ್ರದ ಪ್ರಜೆಯಾಗಿರದೆ, ಎರಡೂ ರಾಷ್ಟ್ರಗಳ ನಡುವೆ ಓಡಾಡಿಕೊಂಡಿರುವ ದ್ವಿರಾಷ್ಟ್ರ ಪ್ರಜೆಯಾಗಿರಬಯಸುವುದಾಗಿಯೂ ಘೋಷಿಸಿದರು. ಆದರೂ ಅವರ ಮನಸ್ಸು ಅಗ್ನಿಕುಂಡವಾಗಿತ್ತು. ತಾನು ಯಾರಿಗೂ ಬೇಡವಾಗಿದ್ದೇನೆ ಎಂಬ ಭಾವನೆ ಅವರನ್ನು ಬಾಧಿಸುತ್ತಿತ್ತು. ೧೨೫ ವರ್ಷ ಬದುಕಿ ಮಾನವ ಕುಲದ ಸೇವೆ ಮಾಡಬೇಕೆಂಬ ಅವರ ಆಸೆಯೂ ಬತ್ತತೊಡಗಿತ್ತು. 'ಹರಿಜನ್' ಪರಿವಾರದ ಪತ್ರಿಕೆಗಳ ಪ್ರಕಟಣೆಯನ್ನು ನಿಲ್ಲಿಸುವ ಆಲೋಚನೆಯೂ ಅವರ ಮನಸ್ಸಿನಲ್ಲಿ ಹಾದು ಹೋಯಿತು. ಈಗ ತಮ್ಮವರದ್ದೇ ಸರ್ಕಾರವಿದ್ದು ಅವರು ತಮ್ಮ ಮಾತು ಕೇಳಲು ನಿರಾಕರಿಸುತ್ತಿರುವಾಗ ಅವರ ನೀತಿ ನಿರ್ಧಾರಗಳ ವಿರುದ್ಧ ಬರೆದು ಅವರ ವಿರುದ್ಧ

ಜನರ ಭಾವನೆಗಳನ್ನು ಸಂಘಟಿಸುವುದನ್ನು ಅವರ ಮನಸ್ಸು ಒಪ್ಪುವ ಸ್ಥಿತಿಯಲ್ಲಿರಲಿಲ್ಲ. ಈ ಸಂದರ್ಭದಲ್ಲಿ ನವವಿವಾಹಿತರಾಗಿ ನೌಖಾಲಿಯಲ್ಲಿದ್ದ ಪ್ಯಾರೇಲಾಲರ ಅನುಪಸ್ಥಿತಿಯಲ್ಲಿ ಅವರ ಆಪ್ತ ಕಾರ್ಯದರ್ಶಿಯಂತೆ ಕೆಲಸ ಮಾಡುತ್ತಿದ್ದ ಮನೂ, ಗಾಂಧಿಯವರ ಮನದ ಮಾತುಗಳನ್ನು ತನ್ನ ಜೂನ್ ೧ ರ ದಿನಚರಿಯಲ್ಲಿ ಹೀಗೆ ದಾಖಲಿಸಿದ್ದಾಳೆ:

'ನಾನು ಏಕಾಂಗಿಯಾಗಿದ್ದೇನೆ. ನೆಹರೂ ಪಟೇಲರೂ ನನ್ನ ಆಲೋಚನೆಗಳು ದೋಷಪೂರ್ಣವಾದುದು ಎಂದು ಹೇಳತೊಡಗಿದ್ದಾರೆ. ವಿಭಜನೆಯಾದರೆ ಹಿಂಸೆ ನಿಲ್ಲುವುದೆಂದು ಅವರು ಭಾವಿಸಿದ್ದಾರೆ... ನಾನು ಏಕಾಂಗಿಯಾಗಿದ್ದರೂ ನನ್ನ ಮನಸ್ಸು ಸ್ವಚ್ಛವಾಗಿದೆ. ದೇವರ ಬೆಳಕು ಕಾಣುತ್ತಿದೆ. ನನ್ನ ಮುಂದಿನ ಹೋರಾಟಕ್ಕೆ ಈ ಬೆಳಕೇ ದಾರಿ... ನಿಮ್ಮ ಕೆಲಸ ಮುಗಿಯಿತು ನೀವಿನ್ನು ಕಾಶಿಗೋ, ಹಿಮಾಲಯಕ್ಕೋ ಹೊರಡುವುದು ಲೇಸೆಂದು ಕೆಲವರು ನನಗೆ ಹೇಳುತ್ತಿದ್ದಾರೆ. ನನಗೆ ನಗು ಬರುತ್ತದೆ. ನನ್ನ ಪ್ರಾಯಶ್ಚಿತ್ತದ ತೀರ್ಥಕ್ಷೇತ್ರವಿರುವುದು ಕಾಶಿ ಅಥವಾ ಹಿಮಾಲಯಗಳಲ್ಲಿ ಅಲ್ಲ. ಕಷ್ಟಕೋಟಲೆಗಳ ನಡುವೆ ದುಃಖಿತರಾಗಿರುವ ಬಡಜನರ ಕಣ್ಣೀರಿನ ಜಾಗಗಳಲ್ಲಿ. ಈ ದೇಶದ ಹೆಂಗಸರು, ಮಕ್ಕಳು ಮತ್ತು ದೀನ ದಲಿತರೆಲ್ಲರಿಗೆ ಮರ್ಯಾದೆಯ ಬಾಳು ಸಿಗುವಂತಾಗುವವರೆಗೆ ನನಗೆ ಬಿಡುವಿರುವುದಿಲ್ಲ. ಯಾರಿಗೆ ಗೊತ್ತು ಅವರೇ ಸರಿ ಇರಬಹುದೇನೋ. ನಾನೇ ಕತ್ತಲಲ್ಲಿ ತಡಕಾಡುತ್ತಿರಬಹುದೇನೋ.'

ಪಂಜಾಬ್‌ನಲ್ಲಿ ಕಪ್ಪುಬಟ್ಟೆ ಪ್ರದರ್ಶನ–ಕಾಶ್ಮೀರದಲ್ಲಿ ಸಂಭ್ರಮದ ಸ್ವಾಗತ

ಈ ಮಧ್ಯೆ ನೌಖಾಲಿ, ಪಂಜಾಬ್ ಮತ್ತು ಬಿಹಾರಗಳಿಂದ ಗಾಂಧಿಯವರಿಗೆ ರಕ್ಷಣೆಗೆ ಬರುವಂತೆ ಗಲಭೆ ಪೀಡಿತರಿಂದ ಕರೆಗಳು ಬರುತ್ತಲೇ ಇದ್ದವು. ಅವರು ಬಿಹಾರಕ್ಕೆ ಭೇಟಿ ನೀಡುವ ಮುನ್ನ ಪಂಜಾಬ್‌ನಲ್ಲೇ ಹುಟ್ಟಿದ್ದ ಡಾ. ಸುಶೀಲಾ ನಯ್ಯರ್‌ರನ್ನು ಪಂಜಾಬ್‌ಗೆ ಕಳಿಸಿ ಕಲ್ಕತ್ತಾಗೂ ಒಮ್ಮೆ ಹೋಗಿಬಂದಿದ್ದರು. ಅಲ್ಲಿ ಪ್ರಧಾನಿ ಸುಹ್ರವರ್ದಿ ತಮ್ಮ ಪಕ್ಷ ಮುಸ್ಲಿಂ ಲೀಗ್‌ನಲ್ಲಿ ಭಿನ್ನಮತೀಯರಾಗಿ, ಸುಭಾಷರ ಸೋದರ ಶರತ್‌ಚಂದ್ರ ಬೋಸರ ಜೊತೆಗೂಡಿ 'ಒಂದು ಭಾಷೆ–ಒಂದು ಸಂಸ್ಕೃತಿ' ಘೋಷಣೆಯ ಆಧಾರದ ಮೇಲೆ ಅವಿಭಜಿತ ಸ್ವತಂತ್ರ ಬಂಗಾಳದ ಸಲಹೆಯನ್ನು ಮುಂದಿಟ್ಟು ಗಾಂಧಿಯವರ ಬೆಂಬಲ ಕೋರಿದ್ದರು. ಇದನ್ನು ಗಾಂಧಿ ಸಹಾನುಭೂತಿಯಿಂದ ಪರಿಗಣಿಸಿದರಾದರೂ, ಹಿಂದೂ ಮಹಾಸಭಾ, ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸ್ ಮೂರೂ ಅದನ್ನು ಒಪ್ಪದಿದ್ದಾಗ ಅದನ್ನು ಕೈಬಿಟ್ಟರು. ನಂತರ ಹೊರಟದ್ದು ಪಂಜಾಬ್ ಮೂಲಕ ಕಾಶ್ಮೀರಕ್ಕೆ. ಜುಲೈ ೩೧ರಂದು ರೈಲು ಪಂಜಾಬ್ ಮೂಲಕ ರಾವಲ್ಪಿಂಡಿ ತಲುಪುವವರೆಗೂ ಪ್ರತಿ ನಿಲ್ದಾಣದಲ್ಲೂ ಗಾಂಧಿಯವರಿಗೆ ಕಪ್ಪುಬಟ್ಟೆ ಪ್ರದರ್ಶಿಸಲು ಜನ ಗುಂಪುಗೂಡಿ ನಿಂತಿದ್ದುದನ್ನು ಕಂಡ ಅವರ ಸಹಾಯಕ ಬ್ರಿಜ್‌ಕೃಷ್ಣ ಚಂಡಿವಾಲ್, ತಮ್ಮ ಆಶ್ಚರ್ಯವನ್ನು ಹೀಗೆ ವ್ಯಕ್ತಪಡಿಸಿದರು: 'ಜಲಿಯನ್‌ವಾಲಾ ಬಾಗ್ ಆಸುಪಾಸಿನ ವರ್ಷಗಳಲ್ಲಿ ಪಂಜಾಬ್‌ನ ವೀರಾಗ್ರಣಿಯ ರೂಪದಲ್ಲಿ ಹಿಂದೂ ಮುಸ್ಲಿಮರಿಬ್ಬರಿಂದಲೂ ಆರಾಧನೆಗೊಳಪಟ್ಟಿದ್ದ ಗಾಂಧಿ, ಈಗ ೨೮ ವರ್ಷಗಳ ನಂತರ ಜನಕ್ಕೆ ಬೇಡದವರಾಗಿದ್ದು ಹೇಗೆ?' ಒಂದು ತಲೆಮಾರಿನ ಅಂತರದಲ್ಲೇ ರಾಷ್ಟ್ರೀಯತೆಯ ಅರ್ಥ ಬದಲಾಗಿತ್ತು! ಅಲ್ಲಿನ ಭಯಾನಕ

ಸ್ಥಿತಿಯನ್ನರಿತೇ ನೆಹರೂ, ಗಾಂಧಿ ಹಲವು ಬಾರಿ ಪಂಜಾಬ್‌ಗೆ ಹೋಗಿ ಕೋಮು ಸೌಹಾರ್ದದ ಮತ್ತು ಪರಿಹಾರ ಕೆಲಸಗಳನ್ನು ಆರಂಭಿಸುವ ಇಚ್ಛೆ ವ್ಯಕ್ತಪಡಿಸಿದ್ದರೂ, ಅದನ್ನು ತಡೆದಿದ್ದರು.

ರಾವಲ್ಪಿಂಡಿಯಲ್ಲಿ ಸುಶೀಲಾರನ್ನು ಕಂಡ ಗಾಂಧಿ, ಅಲ್ಲಿ ತನ್ನ ತಂಡದೊಡನೆ ಕೈಲಾದಷ್ಟನ್ನೂ ಮಾಡುವಂತೆ ಹೇಳಿ, ಅಲ್ಲಿಂದ ರಸ್ತೆ ಮೂಲಕ ಶ್ರೀನಗರಕ್ಕೆ ಹೊರಟರು. ನೆಹರೂ ಅವರ ಕೋರಿಕೆಯ ಮೇರೆಗೆ ಗಾಂಧಿ ಕಾಶ್ಮೀರಕ್ಕೆ ಹೋಗಿದ್ದರು. ಭಾರತಕ್ಕೋ ಪಾಕಿಸ್ತಾನಕ್ಕೋ ಸೇರಿಕೊಳ್ಳಿ ಎಂದು ಮೌಂಟ್‌ಬೇಟನ್ ರಾಜಸಂಸ್ಥಾನಗಳಿಗೆ ಮಾಡಿದ್ದ ಮನವಿಗೆ ಸ್ಪಂದಿಸದಿದ್ದ ಎರಡು ಸಂಸ್ಥಾನಗಳಲ್ಲಿ ಕಾಶ್ಮೀರವೂ ಒಂದಾಗಿತ್ತು (ಇನ್ನೊಂದು ಹೈದರಾಬಾದ್ ಸಂಸ್ಥಾನವಾಗಿತ್ತು) ಅದರ ಮಹಾರಾಜ ಹರಿಸಿಂಗ್ ತಾನು ಸ್ವತಂತ್ರವಾಗಿರಲು ಅಪೇಕ್ಷಿಸಿದ್ದ. ಆದರೆ ಅಲ್ಲಿ ಷೇಕ್ ಅಬ್ದುಲ್ಲಾ ಜನನಾಯಕರಾಗಿ ಪ್ರಜಾತಂತ್ರದ ಸ್ಥಾಪನೆಗಾಗಿ ಜನಹೋರಾಟ ರೂಪಿಸಿದ ಪರಿಣಾಮವಾಗಿ ಸೆರೆಮನೆಯಲ್ಲಿ ಬಂಧನದಲ್ಲಿದ್ದರು. ಮೂಲತಃ ಕಾಶ್ಮೀರದವರಾಗಿದ್ದ ನೆಹರೂ, ತಮ್ಮ ತವರು ಮುಸ್ಲಿಂ ಜನಬಾಹುಳ್ಯದ ಸಂಸ್ಥಾನವಾಗಿದ್ದರೂ ಭಾರತಕ್ಕೆ ಸೇರಬೇಕೆಂಬ ಅಪೇಕ್ಷೆಯುಳ್ಳವರಾಗಿದ್ದು, ಅಲ್ಲಿಗೆ ಹೋಗಿ ತಮ್ಮ ಸಮಾನಮನಸ್ಕ ಸಮಾಜವಾದಿ ಗೆಳೆಯ ಷೇಕ್‌ಅಬ್ದುಲ್ಲಾರೊಡನೆ ಈ ಸಂಬಂಧವಾಗಿ ಮಾತುಕತೆ ನಡೆಸಲು ಉತ್ಸುಕರಾಗಿದ್ದರೂ ಬಂಧನದ ಆತಂಕದಿಂದ ಮೌಂಟ್‌ಬೇಟನ್‌ರಿಂದ ತಡೆಹಿಡಿಯಲ್ಪಟ್ಟಿದ್ದರು. ಹಾಗಾಗಿ ಗಾಂಧಿ ಅಲ್ಲಿಗೆ ಹೋಗಿದ್ದರು. ಅವರನ್ನು ನೋಡಲು ಇಡೀ ಶ್ರೀನಗರವೇ ಸಭೆ ಸೇರಿತ್ತು. ಝೀಲಂ ನದಿಯ ಮೇಲಿನ ಸೇತುವೆ ಜನರಿಂದ ತುಂಬಿಹೋಗಿದ್ದುದರಿಂದ, ಗಾಂಧಿ ದೋಣಿಯೊಂದರಲ್ಲಿ ಪಯಣಿಸಿ ನಗರವನ್ನು ಪ್ರವೇಶಿಸಬೇಕಾಯಿತು. ನಗರದ ತುಂಬ 'ಮಹಾತ್ಮ ಗಾಂಧೀ ಕಿ ಜೈ' ಘೋಷಣೆಗಳು ಮೊಳಗಿದವು. ಗಾಂಧಿ ಮಹಾರಾಜನನ್ನೂ, ಷೇಕ್ ಅಬ್ದುಲ್ಲಾರ 'ನ್ಯಾಷನಲ್ ಕಾನ್ಫರೆನ್ಸ್' ಪಕ್ಷದ ಉಪನಾಯಕರಾಗಿದ್ದ ಭಕ್ಷಿ ಗುಲಾಂ ಮಹಮ್ಮದರನ್ನೂ ಭೇಟಿ ಮಾಡಿ ಮಾತುಕತೆ ನಡೆಸಿದರು. ಭಕ್ಷಿ, ಷೇಕ್ ಅವರು ಬಿಡುಗಡೆ ಹೊಂದಿ ಜನಮತಗಣನೆ ನಡೆದರೆ ಕಾಶ್ಮೀರದ ಜನತೆ ಭಾರತವನ್ನು ಆಯ್ಕೆ ಮಾಡಿಕೊಳ್ಳುವುದು ಖಂಡಿತವೆಂದು ತಿಳಿಸಿದರು.

ಗಾಂಧಿ ಕಲ್ಕತ್ತಾದಲ್ಲಿ ಮಾಡಿದ ಪವಾಡ–ಕಲ್ಕತ್ತಾದಲ್ಲಿ ಸ್ವಾತಂತ್ರ್ಯೋತ್ಸವ

ಗಾಂಧಿ ಮೂರು ದಿವಸ ಕಾಶ್ಮೀರ ಕಣಿವೆಯಲ್ಲೂ, ಎರಡು ದಿವಸ ಜಮ್ಮುವಿನಲ್ಲೂ ತಂಗಿ ರಾವಲ್ಪಿಂಡಿಗೆ ವಾಪಸ್ಸಾದರು. ಅವರೀಗ ತುರ್ತಾಗಿ ಮತ್ತೆ ನೌಖಾಲಿಗೆ, ಅಲ್ಲಿನ ಜನರ ಕರೆಯ ಮೇರೆಗೆ, ಹೊರಟಿದ್ದರು. ಸುಶೀಲಾರನ್ನು ರಾವಲ್ಪಿಂಡಿಯಲ್ಲೇ ಇದ್ದು ಸಂತ್ರಸ್ತರ ಸೇವೆಗೈಯ್ಯಲು ಹೇಳಿ ಕಲ್ಕತ್ತಾಕ್ಕೆ ಹೊರಟುಬಿಟ್ಟರು. ದೆಹಲಿಯಲ್ಲಿ ತಮ್ಮನ್ನು ಕೂಡಿಕೊಳ್ಳುವಂತೆ ಆಗ ತಾನೇ ಗೋವಾ ವಿಮೋಚನೆಯ ಹೋರಾಟದಲ್ಲಿ ತೊಡಗಿ ಗಾಂಧಿಯವರ ಮಧ್ಯಸ್ಥಿಕೆಯಲ್ಲಿ ಪೋರ್ಚುಗೀಸ್ ಸರ್ಕಾರದಿಂದ ಬಿಡುಗಡೆಹೊಂದಿದ್ದ ರಾಮಮನೋಹರ ಲೋಹಿಯಾರಿಗೆ ತಂತಿ ಕೊಟ್ಟಿದ್ದರು. ಇದಕ್ಕೆ ಎರಡು ಕಾರಣಗಳಿದ್ದವು. ಒಂದು ಕಲ್ಕತ್ತಾದಲ್ಲೇ ತಮ್ಮ ಕಾಲೇಜು ಶಿಕ್ಷಣ ಮುಗಿಸಿದ್ದ ಲೋಹಿಯಾಗೆ ಅಲ್ಲಿ ವಿದ್ಯಾರ್ಥಿ ನಾಯಕರಾಗಿದ್ದ ಕಾಲದಿಂದ ಮಾತ್ರವಲ್ಲದೆ, ಅವರು ಜರ್ಮನಿಯಿಂದ ಬಂದನಂತರ ಅಲ್ಲಿಯೇ ಸಾಕಷ್ಟು ಕಾಲವಿದ್ದು ಸಮಾಜವಾದಿ

ಚಟುವಟಿಕೆಗಳಲ್ಲಿ ತೊಡಗಿದ್ದ ಕಾಲದಿಂದಲೂ ಬಂಗಾಳದಾದ್ಯಂತ ನಿಷ್ಠಾವಂತ ಗೆಳೆಯರಿದ್ದುದು. ಇನ್ನೊಂದು ಕಳೆದ ನೌಖಾಲಿ ಯಾತ್ರೆಯ ಸಮಯದಲ್ಲೂ ಲೋಹಿಯಾ ಕೋರಿಕೆಯ ಮೇರೆಗೆ ಅವರ ಅನೇಕ ಗೆಳೆಯರು ನೌಖಾಲಿಗೆ ಹೋಗಿ ಗಾಂಧಿ ಪರಿಹಾರದ ಕೆಲಸಗಳಿಗೆ ನೆರವಾಗಿದ್ದುದು. ಈ ಸಂದರ್ಭದಲ್ಲಿ ಗಾಂಧಿಯವರ ಪರಿವಾರಕ್ಕೆ ಸೇರ್ಪಡೆಗೊಂಡ ಲೋಹಿಯಾ ನಂತರವೂ ದೆಹಲಿಯಲ್ಲಿ ಅವರ ಹತ್ಯೆಯಾಗುವವರೆಗೆ ಅವರೊಡನಿದ್ದರು. (ಆದರೆ ಈ ಕೃತಿಯ ನಾಲ್ಕನೇ ಮುದ್ರಣದ ಹೊತ್ತಿಗೆ ಈ ಲೇಖಕನಿಗೆ 'ಮೀಡಿಯಾ ವಿಜಿಲ್' ಎಂಬ ಜಾಲತಾಣದಲ್ಲಿ ದೊರೆತ ಒಂದು ಸುದ್ದಿ ತುಣುಕಿನ ಪ್ರಕಾರ ನೌಖಾಲಿಯಲ್ಲಿ ಪರಿಸ್ಥಿತಿ ಸಾಮಾನ್ಯ ಸ್ಥಿತಿಗೆ ಮರಳಿದ ನಂತರ ಲೋಹಿಯಾ ಅಲ್ಲಿಗೆ ಭೇಟಿ ನೀಡಿ ಹಲವು ಕಡೆ ಕೋಮು ಸೌಹಾರ್ದದ ಪರ ಭಾಷಣಗಳನ್ನು ಮಾಡಿದರು. ಅವರು ಚಿತ್ತಗಾಂಗ್ ನಗರ ಪುರಭವನದಲ್ಲಿ ಮಾಡಿದ ಭಾಷಣಕ್ಕಾಗಿ ಮುಸ್ಲಿಂ ಲೀಗ್ ಅವರ ತಲೆ ಕಡಿದು ತಂದುಕೊಟ್ಟವರಿಗೆ ಹತ್ತು ಸಾವಿರ ರೂಪಾಯಿಗಳ ಬಹುಮಾನ ಘೋಷಿಸಿತ್ತು).

ಆದರೆ ಗಾಂಧಿ ಆಗಸ್ಟ್ ೯ರಂದು ಕಲ್ಕತ್ತಾಗೆ ಹೋಗುವ ಹೊತ್ತಿಗೆ, ಆ ನಗರ ಹೊತ್ತಿ ಉರಿಯುತ್ತಿತ್ತು. ಬಂಗಾಳದ ಮಾಜಿ ಪ್ರಧಾನಿ ಎಚ್.ಎಸ್. ಸುಹ್ರವರ್ದಿಯವರನ್ನು ಕರೆದುಕೊಂಡು ನಗರದ ತುಂಬ ಓಡಾಡಿ, ಮುಸ್ಲಿಂ ಹವೇಲಿಯೊಂದರಲ್ಲಿ ನೆಲೆಯೂರಿ, ಸಿಟ್ಟಾಗಿ ಬಂದ ಹಿಂದೂ ನಿಯೋಗಗಳನ್ನು ಭೇಟಿಯಾಗಿ ಪರಿಸ್ಥಿತಿಯನ್ನು ಮತ್ತೆ ತಹಬಂದಿಗೆ ತರುವ ಹೊತ್ತಿಗೆ ದೇಶಕ್ಕೆ ಸ್ವಾತಂತ್ರ್ಯ ಬಂದಾಗಿತ್ತು. ಅಂದು ಹಿಂದೂ ಮುಸ್ಲಿಮರಿಬ್ಬರೂ ಸೇರಿಕೊಂಡು ತ್ರಿವರ್ಣ ಧ್ವಜ ಹಾರಿಸಿ ಸಂಭ್ರಮಿಸಿದುದನ್ನು ಕೇಳಿ ಸಮಾಧಾನ ತಾಳಿದರು. ಆದರೆ ಸ್ವತಃ ಅವರಲ್ಲಿ ಸಂಭ್ರಮವೇನೂ ಇರಲಿಲ್ಲ. ಸ್ವಾತಂತ್ರ್ಯ ದಿನವನ್ನು ಹೇಗೆ ಆಚರಿಸಬೇಕೆಂದು, ಈಗ ಹೊಸದಾಗಿ ರೂಪುಗೊಂಡಿದ್ದ ಪಶ್ಚಿಮ ಬಂಗಾಲದ ಮುಖ್ಯಮಂತ್ರಿ ಪಿ.ಸಿ.ಘೋಷ್ ಕೇಳಿದಾಗ ಅವರು 'ಸುತ್ತಲೂ ಬೆಂಕಿ ಹತ್ತಿಕೊಂಡು ಲಕ್ಷಾಂತರ ಜನರು ಅನ್ನ ನೀರಿಲ್ಲದೆ ಸಾಯುತ್ತಿರುವಾಗ ಆಚರಣೆ ಎಲ್ಲಿ ಬಂತು? ಉಪವಾಸ ಮಾಡಿ ಪ್ರಾರ್ಥನೆ ಸಲ್ಲಿಸಿ ನೂಲುವುದೇ ಅಂದಿನ ಆಚರಣೆಯಾಗಬೇಕು' ಎಂದು ಉತ್ತರಿಸಿದರು.

ಆದರೆ ಇಲ್ಲಿ ಎಲ್ಲರಿಗೂ ಆಶ್ಚರ್ಯ ತಂದ ಸಂಗತಿ ಎಂದರೆ ಹೊತ್ತಿ ಉರಿಯುತ್ತಿದ್ದ ನಗರ, ನಾಲ್ಕೇ ದಿನದಲ್ಲಿ ಹೇಗೆ ಶಾಂತ ಸ್ಥಿತಿಗೆ ಬಂತು ಎಂಬುದು. ಮಹಾತ್ಮರ ನಿಷ್ಕಲ್ಮಶ ಆತ್ಮದ ಮೊರೆ ಜನರ ಹೃದಯವನ್ನು ಮುಟ್ಟಿದ್ದೇ ಇದಕ್ಕೆ ಕಾರಣವೆಂದು ಆ ಅವಧಿಯಲ್ಲಿ ಗಾಂಧಿಯವರೊಂದಿಗಿದ್ದ ಕ್ವೇಕರ್ ಅಲೆಕ್ಸಾಂಡರ್ ಹೊರೇಸ್ ಅವರ ಅನಿಸಿಕೆ. ಇದೇ ಅಭಿಪ್ರಾಯ ರಾಜ್ಯದ ಹೊಸ ರಾಜ್ಯಪಾಲ ರಾಜಾಜಿಯವರ ಬಾಯಿಂದ ಬೇರೆ ರೂಪದಲ್ಲಿ ಹೊರಬಂದದ್ದು ಹೀಗೆ: 'ಮಹಾತ್ಮರು ಇಂದು ಮತ್ತೊಂದು ಪವಾಡ ಮಾಡಿ ತೋರಿದ್ದಾರೆ.'

ಅಂಬೇಡ್ಕರ್‌ಗೆ ಸಚಿವ ಸ್ಥಾನ – ರಾಷ್ಟ್ರಪತಿ ಸ್ಥಾನಕ್ಕೆ ದಲಿತ ಮಹಿಳೆ ಸಲಹೆ

ಗಾಂಧಿ ಕಲ್ಕತ್ತಾದಲ್ಲಿ ಹೀಗೆ ಪವಾಡ ಮೆರೆಯುತ್ತಿದ್ದ ಹೊತ್ತಿನಲ್ಲೇ ದೆಹಲಿಯಲ್ಲಿಯೂ ಒಂದು ಪವಾಡ ನಡೆದಿತ್ತು. ಪ್ರಧಾನಮಂತ್ರಿ ನೆಹರೂ ಅವರ ಸಚಿವ ಸಂಪುಟದಲ್ಲಿ

ಕಾಂಗ್ರೆಸ್‌ನ ಪರಮ ವಿರೋಧಿ ಎನಿಸಿದ್ದ ಡಾ. ಬಿ.ಆರ್. ಅಂಬೇಡ್ಕರ್ ಕಾನೂನು ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು! ಕಾಂಗ್ರೆಸ್‌ನ ಪ್ರಮುಖರಾರೂ ಮಂತ್ರಿಮಂಡಲ ಸೇರದೆ ಜನತೆ ಮತ್ತು ಸರ್ಕಾರದ ನಡುವೆ ಸೇತುವೆಯಾಗಬೇಕೆಂಬ ಗಾಂಧಿಯವರ ಸಲಹೆ, ಅವರ ಇತ್ತೀಚಿನ ಎಲ್ಲ ಸಲಹೆಗಳಂತೆ ಕಾಂಗ್ರೆಸ್‌ನಿಂದ ತಿರಸ್ಕೃತವಾಗಿತ್ತು. ಹಾಗೇ ಮೌಂಟ್‌ಬೇಟನ್‌ರ ಎಲ್ಲ ಔಪಚಾರಿಕ ಜವಾಬ್ದಾರಿಗಳೂ ಮುಗಿದ ನಂತರ, ರಾಷ್ಟ್ರದ ಹೊಸ ಅಧ್ಯಕ್ಷ ಪದವಿಯಾದ ರಾಷ್ಟ್ರಪತಿ ಸ್ಥಾನಕ್ಕೆ ಚಕ್ರಯ್ಯ ಎಂಬ ಆಂಧ್ರದ ತಮ್ಮ ದಲಿತ ಶಿಷ್ಯನನ್ನು ಸೂಚಿಸಲಿದ್ದ ಗಾಂಧಿ, ಆತ ಆಕಸ್ಮಿಕವಾಗಿ ನಿಧನ ಹೊಂದಿದ ಹಿನ್ನೆಲೆಯಲ್ಲಿ ಆ ಸ್ಥಾನಕ್ಕೆ ಒಬ್ಬ ಅಸ್ಪೃಶ್ಯ ಮಹಿಳೆಯನ್ನು ಆರಿಸಬೇಕೆಂದೂ, ಹಾಗೆ ಆರಿಸಿದರೆ ತಾವು ಆಕೆಯ ಜವಾನನಾಗಿ ಕೆಲಸ ಮಾಡುತ್ತಾ ಸಂಭ್ರಮಿಸುತ್ತೇನೆ ಎಂದು ಹೇಳಿದರು. ಆದರೆ ಅವರ ಈ ಮಾತು ಯಾರ ಕಿವಿಗೂ ಬಿದ್ದಂತಿರಲಿಲ್ಲ. ಆದರೆ ಅಂಬೇಡ್ಕರ್‌ಗೆ ಕಾನೂನು ಮಂತ್ರಿ ಸ್ಥಾನ ಹೇಗೆ ಒಲಿದು ಬಂದಿತ್ತು? ಇದರ ಹಿಂದೆ ಒಂದು ದೊಡ್ಡ ಕಥೆಯೇ ಇತ್ತು.

೧೯೪೬ರಲ್ಲಿ ಅಂಬೇಡ್ಕರ್ ಚುನಾವಣೆಗಳಲ್ಲಿ ಸೋತು ದಾರಿಗಾಣದೆ ನಿರಾಶರಾಗಿದ್ದಾಗ, ಬಂಗಾಳದಿಂದ ಕೇಂದ್ರ ಶಾಸನಸಭೆಯಲ್ಲಿ ಜಿನ್ನಾರ ಕೃಪೆಯಿಂದ ಮುಸ್ಲಿಂ ಲೀಗ್ ಮಂತ್ರಿಯಾಗಿ ಗಾಂಧೀಜಿಗೆ ಮುಜುಗರವನ್ನುಂಟು ಮಾಡಿದ್ದ ಅಸ್ಪೃಶ್ಯರ ನಾಯಕ ಜೋಗೇಂದ್ರನಾಥ್ ಮಂಡಲ್, ಅವರನ್ನು ಬಂಗಾಳದಿಂದ ಸಂವಿಧಾನ ಸಭೆಗೆ ಆರಿಸಿ ಕಳಿಸುವ ವ್ಯವಸ್ಥೆ ಮಾಡಿದ್ದರು. ಅನುಪಮ ಕಾನೂನು ಪಂಡಿತರಾಗಿದ್ದ ಅಂಬೇಡ್ಕರ್, ಸಂವಿಧಾನ ಸಭೆಯ ಚರ್ಚೆಗಳಲ್ಲಿ ತಮ್ಮ ವಿದ್ವತ್ಪೂರ್ಣ ಮಂಡನೆಗಳಿಂದ ಹಲವರ ಗಮನ ಸೆಳೆದಿದ್ದರು. ಗಾಂಧೀಜಿಗೆ ಆಪ್ತರಾಗಿದ್ದ ಅಮೃತಾ ಕೌರ್ ಅಂಥವರಲ್ಲಿ ಒಬ್ಬರಾಗಿದ್ದರು. ಜೊತೆಗೆ ಅವರು ಅವರಿವರ ಬಳಿ ತಾವೊಬ್ಬ ನಿಜ ರಾಷ್ಟ್ರೀಯವಾದಿಯೆಂದೂ, ಜಿನ್ನಾರ ದಾರಿ ತಮಗೆ ಇಷ್ಟವಾಗಲಿಲ್ಲವೆಂದೂ ಹೇಳಿದ್ದೂ ಕಾಂಗ್ರೆಸ್ ವಲಯದ ಕಿವಿಗಳಿಗೂ ಮುಟ್ಟಿತ್ತು. ಅವರೀಗ ಕಾಂಗ್ರೆಸ್‌ನೊಡನೆ ಸಹಕರಿಸಿ ಸ್ವತಂತ್ರ ಭಾರತದ ಸೇವೆ ಮಾಡಬಯಸುವುದಾಗಿ, ಗಾಂಧಿಗೆ ಆಪ್ತರಾಗಿದ್ದ ಮತ್ತು ಗಾಂಧಿ ದುಂಡುಮೇಜಿನ ಪರಿಷತ್ತಿಗೆ ಹೋದಾಗ ಲಂಡನ್‌ನಲ್ಲಿ ಅವರನ್ನು ಉಳಿಸಿಕೊಂಡಿದ್ದ, ಕ್ವೇಕರ್ ಮ್ಯೂರಿಯಲ್ ಲೆಸ್ಟರ್ ಬಳಿ ಹೇಳಿಕೊಂಡಿದ್ದರೆಂಬುದು ಅಂಬೇಡ್ಕರ್‌ರ ಜೀವನ ಚರಿತ್ರಕಾರರಲ್ಲೊಬ್ಬರಾದ ಖೈರ್‌ಮೋಡ್ ಪ್ರಕಾರ ತಿಳಿದು ಬರುತ್ತದೆ. ಲೆಸ್ಟರ್ ಅವರ ಶಿಫಾರ್ಸು ಮತ್ತು ಅಮೃತಾ ಕೌರ್‌ರ ಸಲಹೆ ಗಾಂಧಿಯನ್ನು ಪ್ರಭಾವಿಸಿ ಅಂಬೇಡ್ಕರ್‌ರನ್ನು ಸಚಿವ ಸಂಪುಟ ಸೇರುವಂತೆ ಆಹ್ವಾನಿಸಲು ಅವರು ನೆಹರೂಗೆ ಸೂಚಿಸಿರಬಹುದು. ಏಕೆಂದರೆ ಗಾಂಧಿಯವರ ಮೇಲೆ ವೈಯಕ್ತಿಕ ದಾಳಿ ಮಾಡಿದ್ದ ವ್ಯಕ್ತಿಯನ್ನು ಗಾಂಧಿಯವರ ಒಪ್ಪಿಗೆ ಇಲ್ಲದೆ ನೆಹರೂ ಅಥವಾ ಪಟೇಲ್ ಸಂಪುಟದಲ್ಲಿ ಸೇರಿಸಿಕೊಳ್ಳುವ ಸಂಭವ ಇರದು. ಇದರ ಜೊತೆಗೇ ಕಾಂಗ್ರೆಸ್‌ನ ಇನ್ನೊರ್ವ ಅಸ್ಪೃಶ್ಯರ ನಾಯಕ ಜಗಜೀವನರಾಂ ಅವರು ಗಾಂಧಿಯವರನ್ನು ಒಂದೆರಡು ಬಾರಿ ಭೇಟಿ ಮಾಡಿ ತಮ್ಮ ಜೊತೆ ಅಂಬೇಡ್ಕರ್ ಅವರೂ ಇದ್ದರೆ ಅಸ್ಪೃಶ್ಯತಾ ನಿವಾರಣೆಯ ಕೆಲಸಗಳಿಗೆ ನೆರವಾಗಬಹುದು ಎಂದು ಸೂಚಿಸಿದ್ದರು ಎಂದು ಹೇಳಲಾಗುತ್ತದೆ. ಜಗಜೀವನರಾಂ ಅವರ ಪತ್ನಿ ತಮ್ಮ ಪತಿಯ ಬಗ್ಗೆ ಬರೆದಿರುವ ಪುಸ್ತಕವೊಂದರಲ್ಲಿ ಇದರ ಉಲ್ಲೇಖವಿದೆ.

ಆದರೆ ಗಾಂಧಿಯ ಸಮ್ಮತಿಯ ನಂತರವೂ ಅಂಬೇಡ್ಕರ್ ಸಚಿವ ಸಂಪುಟ ಸೇರಲು ಒಂದು ತಾಂತ್ರಿಕ ತೊಡಕು ಇತ್ತು. ಅದೆಂದರೆ ಅವರು ಬಂಗಾಳ ವಿಭಜನೆಯಾಗಿ ತಮ್ಮನ್ನು ಭಾರತದ ಸಂವಿಧಾನ ಸಭೆಗೆ ಆಯ್ಕೆ ಮಾಡಿದ್ದ ಪೂರ್ವ ಬಂಗಾಳವು ಪಾಕಿಸ್ತಾನಕ್ಕೆ ಸೇರಿದ್ದರಿಂದಾಗಿ ಸಂವಿಧಾನ ಸಭೆಯ ಅವರ ಸದಸ್ಯತ್ವ ರದ್ದಾಗಿತ್ತು. ಆದರೆ ಆ ಸದಸ್ಯತ್ವವಿಲ್ಲದೆ ಅವರು ಸಚಿವರಾಗುವ ಹಾಗಿರಲಿಲ್ಲ. ಇದಕ್ಕಾಗಿ ಗಾಂಧಿ ಪಟೇಲರಿಗೆ ಹೇಳಿ, ಬಾಂಬೆ ಪ್ರಾಂತ್ಯದ ಒಬ್ಬ ಸದಸ್ಯರಿಂದ ರಾಜೀನಾಮೆ ಕೊಡಿಸಿ, ಆ ಸ್ಥಾನದಿಂದ ಅಂಬೇಡ್ಕರ್‌ರನ್ನು ಆಯ್ಕೆ ಮಾಡಿಕಳಿಸುವ ವ್ಯವಸ್ಥೆ ಮಾಡಲು ಸೂಚಿಸಿದರು. ಪಟೇಲರು ಆ ವ್ಯವಸ್ಥೆ ಮಾಡಿ ಕೊನೆಗೂ ಅಂಬೇಡ್ಕರ್ ಸ್ವತಂತ್ರ ಭಾರತದ ಮೊದಲ ಕಾನೂನು ಮಂತ್ರಿಯಾಗಿ ದೇಶದ ಸಂವಿಧಾನ ರಚನೆಯಲ್ಲಿ ಮಹತ್ವದ ಪಾತ್ರ ವಹಿಸಲು ದಾರಿ ಮಾಡಿಕೊಟ್ಟರು. ಆದರೆ ಗಮನಾರ್ಹ ಸಂಗತಿ ಎಂದರೆ ಅವರು ಮಂತ್ರಿ ಸ್ಥಾನವನ್ನು ಸ್ವೀಕರಿಸುವ ಹೊತ್ತಿಗೆ, ಅದನ್ನು ಸ್ವೀಕರಿಸಲು ಅಮೃತಾ ಕೌರ್ ಬಳಿ ಮಂಡಿಸಿದ್ದ ತಮ್ಮ ಹಳೆಯ ಬೇಡಿಕೆಯಾದ ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನು ಒದಗಿಸಬೇಕೆಂಬ ಷರತ್ತನ್ನು ಕೈಬಿಟ್ಟಿದ್ದರು ಎಂಬುದು.

ಅಂಬೇಡ್ಕರ್‌ರಂತೆಯೇ ರಾಷ್ಟ್ರದ ಜನಾಭಿಪ್ರಾಯದ ವಿವಿಧ ಧಾರೆಗಳನ್ನು ಪ್ರತಿನಿಧಿಸುವಂತೆ ಜಸ್ಟಿಸ್ ಪಾರ್ಟಿಯ ನಾಯಕ ಮತ್ತು ಹಣಕಾಸು ಪರಿಣತ ಆರ್.ಕೆ ಷಣ್ಮುಗ ಚೆಟ್ಟಿಯವರನ್ನೂ, ಹಿಂದೂ ಮಹಾಸಭಾದ ಶ್ಯಾಮಪ್ರಸಾದ್ ಮುಖರ್ಜಿಯವರನ್ನೂ, ಅಕಾಲಿ ದಳದ ಬಲವಂತ್ ಸಿಂಗ್ ಅವರನ್ನೂ, ಕ್ರೈಸ್ತ ಸಮುದಾಯದ ಪರವಾಗಿ ಜಾನ್ ಮಥಾಯ್ ಅವರನ್ನೂ, ಪಾರ್ಸಿ ಸಮುದಾಯದ ಪರವಾಗಿ ಸಿ.ಎಚ್. ಭಾಭಾ ಅವರನ್ನೂ, ಮಹಿಳಾ ಪ್ರತಿನಿಧಿಯಾಗಿ ಅಮೃತಾ ಕೌರ್ ಅವರನ್ನು ಗಾಂಧಿಯವರ ಸಲಹೆಯ ಮೇರೆಗೆ ಸಂಪುಟಕ್ಕೆ ಸೇರಿಸಿಕೊಂಡು, ಒಂದು ರಾಷ್ಟ್ರೀಯ ಸರ್ಕಾರವನ್ನು ರಚಿಸಲಾಗಿತ್ತು. ಇವರೆಲ್ಲರೂ ಕಾಂಗ್ರೆಸ್ಸೇತರರಾಗಿದ್ದರು. ಮಂತ್ರಿ ಮಂಡಲದಲ್ಲಿದ್ದ ಕಾಂಗ್ರೆಸ್ಸಿಗರೆಂದರೆ, ಪ್ರಧಾನಿ ನೆಹರೂ, ಉಪಪ್ರಧಾನಿ ಪಟೇಲ್, ರಾಜೇಂದ್ರ ಪ್ರಸಾದ್ (ರಾಷ್ಟ್ರಪತಿ ಆಗುವವರೆಗೆ), ಅಬುಲ್ ಕಲಾಂ ಆಜ಼ಾದ್, ರಫೀಕ್ ಅಹಮದ್ ಕಿದ್ವಾಯಿ ಮತ್ತು ಜಗಜೀವನ ರಾಮ್.

ಈ ಅಧ್ಯಾಯವನ್ನು ಈ ನಿರ್ಣಾಯಕ ಐತಿಹಾಸಿಕ ಸಂದರ್ಭದ ಮತ್ತು ಈ ಸಂದರ್ಭದಲ್ಲಿನ ಗಾಂಧಿಯವರ ಮಾನಸಿಕತೆಗೆ ಪ್ರತೀಕದಂತಿರುವ, ಹೊಸ ವೈಸ್‌ರಾಯ್ ಮೌಂಟ್‌ಬೇಟನ್‌ರಿಂದ ಆಹ್ವಾನಿತರಾಗಿ ಬಿಹಾರದಿಂದ ದೆಹಲಿಗೆ ಏಪ್ರಿಲ್ ೧ರಂದು ಬಂದಿದ್ದ ಅವರು ಅಂದು ಸಂಜೆ ಭಂಗಿ ಕಾಲೋನಿಯಲ್ಲಿ ಜರುಗಿದ ಪ್ರಾರ್ಥನಾ ಸಭೆಯಲ್ಲಿ ಆಡಿದ ಈ ಮಾತುಗಳೊಂದಿಗೆ ಮುಗಿಸುವುದು ಉಚಿತವಾದೀತು: 'ಈಗ ಕಾಂಗ್ರೆಸ್ ಏನನ್ನು ನಿರ್ಧರಿಸುತ್ತದೋ ಅದು ಆಗುತ್ತದೆ. ನಾನು ಹೇಳಿದಂತೆ ಏನೂ ನಡೆಯುವುದಿಲ್ಲ. ನನ್ನ ಮಾತಿಗೆ ಕಿಮ್ಮತ್ತಿದ್ದರೆ ಬಿಹಾರ ಮತ್ತು ನೌಖಾಲಿ ದುರಂತಗಳು ಸಂಭವಿಸುತ್ತಿರಲಿಲ್ಲ. ಈಗ ಯಾರೂ ನನ್ನ ಮಾತು ಕೇಳುವುದಿಲ್ಲ'

■

೬೧

ಹೊತ್ತು ಇಳಿಯುವ ಮುನ್ನ...

ಕಲ್ಕತ್ತಾದಲ್ಲಿ ಶಾಂತಿ ನೆಲೆಸಿದ ನಂತರ, ಗಾಂಧಿ ಮುಸ್ಲಿಂ ಸಮುದಾಯದ ಆಹ್ವಾನದ ಮೇರೆಗೆ ಆ ಸಮುದಾಯದ ಮೊಹಲ್ಲಾಗಳಿಗೆ ಭೇಟಿ ನೀಡಿದರು. ಬೀದಿ ಬೀದಿಗಳಲ್ಲಿ ಮುಸ್ಲಿಮರು, ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳು ಕಿಕ್ಕಿರಿದು ಅವರಿಗೆ ಹೂ ಎರಚುವ ಮೂಲಕ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸಿದರು. ಗಾಂಧಿಯವರಿಗೆ ಕಲ್ಕತ್ತಾ ಪುರಸಭೆ ನಾಗರಿಕ ಸನ್ಮಾನವೇರ್ಪಡಿಸಿ ಗೌರವಿಸಿತು. ಮಹಮ್ಮಡನ್ ಸ್ಪೋರ್ಟಿಂಗ್ ಕ್ಲಬ್‌ನ ಮೈದಾನದಲ್ಲಿ ಸೇರಿದ್ದ ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯ ಜನರನ್ನುದ್ದೇಶಿಸಿ ಗಾಂಧಿ ಮಾತನಾಡಿದ ಸಭೆಯಲ್ಲಿ ಸುಹ್ರವರ್ದಿ ಸೇರಿದಂತೆ ಹಲವು ಮುಸ್ಲಿಂ ಮತ್ತು ಹಿಂದೂ ನಾಯಕರು ಕೋಮು ಸೌಹಾರ್ದದ ಅಗತ್ಯವನ್ನು ಕುರಿತು ಮಾತನಾಡಿದರು. ಆ ಸಂದರ್ಭದಲ್ಲಿ ಈದ್ ಮಿಲಾದ್ ಕೂಡ ಬಂದು, ಈ ಸೌಹಾರ್ದ ಪ್ರದರ್ಶನಕ್ಕೆ ಹೆಚ್ಚಿನ ಅವಕಾಶವಾಯಿತು. ಜಂಟಿ ಭೋಜನಕೂಟಗಳು ನಡೆದವು. ಈ ಸಂದರ್ಭದಲ್ಲಿ ಹಲವು ವ್ಯಾಜ್ಯಗಳನ್ನೂ ಪರಿಹರಿಸಲಾಯಿತು. ಖುಲ್ನಾ ಜಿಲ್ಲೆಯ ಒಂದು ಊರು ವಿಭಜನಾ ರೇಖೆಯ ಪ್ರಕಾರ ಪಾಕಿಸ್ತಾನಕ್ಕೆ ಸೇರಿತ್ತಾದರೂ ಆ ಊರಿನ ಹಿಂದೂಗಳು ಅದನ್ನು ಪ್ರತಿಭಟಿಸಿದ್ದರು. ಈ ದೂರು ಗಾಂಧಿಯವರ ಬಳಿ ಬಂದಾಗ ಈ ರೇಖೆ ಒಂದು ಒಪ್ಪಂದದ ಪ್ರಕಾರ ತೀರ್ಮಾನವಾಗಿರುವುದರಿಂದ ಅದನ್ನು ಒಪ್ಪಿಕೊಂಡು ಪಾಕಿಸ್ತಾನದ ಧ್ವಜಾರೋಹಣ ಮಾಡಲು ಹಿಂದೂಗಳಿಗೆ ಹೇಳಿದರು. ಸರ್ಕಾರಿ ಕಛೇರಿಯೊಂದರ ಅಧಿಕಾರಿಯೊಬ್ಬ ತನ್ನ ಧರ್ಮದ ಜನರಿಗೆ ಪಕ್ಷಪಾತ ಮಾಡುತ್ತಿದ್ದಾನೆ ಎಂಬ ದೂರು ಬಂದಾಗ ಸರ್ಕಾರದ ನೌಕರ, ತನ್ನ ಸೇವೆಯ ಸಂದರ್ಭದಲ್ಲಿ ಯಾವ ಧರ್ಮಕ್ಕೂ ಸೇರದವನಂತೆ ವರ್ತಿಸಬೇಕು ಎಂದು ಸೂಚಿಸಿದರು.

ಪಂಜಾಬ್‌ನಲ್ಲಿ ಹತೋಟಿಗೆ ಸಿಗದ ಹಿಂಸಾಚಾರ–ಕಲ್ಕತ್ತಾದಲ್ಲಿ ಮತ್ತೆ ಭುಗಿಲೆದ್ದ ಕೋಮು ಗಲಭೆ

ಇದರ ಮಧ್ಯೆಯೇ ಅವರು ಪಂಜಾಬ್‌ನಲ್ಲಿ ಮುಂದುವರೆದಿದ್ದ ಹಿಂಸಾಚಾರದ ವರದಿಗಳನ್ನು ಪ್ರತಿನಿತ್ಯ ಪತ್ರಿಕೆಗಳಲ್ಲಿ ಓದಿ ಪ್ರಧಾನಮಂತ್ರಿ ನೆಹರೂಗೆ ತಂತಿ ಕಳಿಸಿ ತಾವು ಪಂಜಾಬ್‌ಗೆ ಹೋಗುವ ಕಾತರವನ್ನು ವ್ಯಕ್ತಪಡಿಸಿದ್ದರು. ಅಲ್ಲಿ ವಿಭಜನೆಯ ಗಡಿರೇಖೆಯ ಎರಡೂ ಬದಿಗಳಲ್ಲಿ ಕೋಮು ದಂಗೆಗಳು ನಡೆದಿದ್ದು, ದಿನವಹಿ ನೂರಾರು ಜನರ ಹತ್ಯೆ ಮತ್ತು ಸ್ತ್ರೀಯರ ಅಪಹರಣಗಳ ಭೀಕರ ಸುದ್ದಿಗಳು ಅವರನ್ನು ಕಂಗೆಡಿಸಿದ್ದವು. ಗಡಿಯ ಪೂರ್ವ ಭಾಗದಿಂದ ಲಕ್ಷಾಂತರ ಜನ ಮುಸ್ಲಿಮರೂ, ಪಶ್ಚಿಮ ಭಾಗದಿಂದ ಲಕ್ಷಾಂತರ ಜನ ಹಿಂದೂಗಳು ಮತ್ತು ಸಿಕ್ಖರೂ ಎತ್ತಿನ ಗಾಡಿ, ಮೋಟರು

ಗಾಡಿ ಮತ್ತು ರೈಲು ಗಾಡಿಗಳಲ್ಲಿ ತಮ್ಮ ಕುಟುಂಬವನ್ನು ಸಾಧ್ಯವಾದಷ್ಟು ತಮ್ಮ ಚರಾಸ್ತಿಗಳನ್ನೂ ತುಂಬಿಕೊಂಡು ಗಡಿ ದಾಟಲಾರಂಭಿಸಿದ್ದರು. ವಿಭಜನೆ ಭೌಗೋಳಿಕ ವಿಭಜನೆಯಾಗಿದ್ದರೂ, ವಿಭಜನೆ ಹಿಂದಿನ ರಾಜಕಾರಣ, ಜನರು ತಮ್ಮ ತವರೂರುಗಳಲ್ಲಿ ಇರಲಾಗದಂತಹ ಹಿಂಸಾಚಾರಕ್ಕೆ ಕಾರಣವಾಗಿತ್ತು. ದುರಂತವೆಂದರೆ ಪಯಣದ ಹಾದಿಯಲ್ಲೂ ಹಿಂಸೆಯ ಬೆಂಕಿ ಹೊತ್ತಿ ಉರಿದಿತ್ತು. ಅದು ಹೊಸದಾಗಿ ರಚಿಸಲಾಗಿದ್ದ ೫೫ ಸಾವಿರ ಜನರ ಹಿಂದೂ-ಮುಸ್ಲಿಂ-ಸಿಖ್ ಗಡಿ ರಕ್ಷಣಾ ದಳದ ಹತೋಟಿಗೆ ಸಿಗದೆ ಪರಿಸ್ಥಿತಿ ದಿನೇ ದಿನೇ ಭೀಭತ್ಸವಾಗತೊಡಗಿದಾಗ ನೆಹರೂ ಮತ್ತು ಪಟೇಲರಿಬ್ಬರೂ ಗಾಂಧಿ ಅಲ್ಲಿಗೆ ಹೋಗುವುದು ಸದ್ಯಕ್ಕೆ ಬೇಡವೆಂದು ಕೋರಿಕೊಂಡರು.

ಈಗ ಗಾಂಧಿ ತಮ್ಮ ಪೂರ್ವಯೋಜನೆಯಂತೆ ನೌಖಾಲಿಯತ್ತ ಹೊರಡಲು ಸಿದ್ಧರಾಗುತ್ತಿದ್ದಂತೆ ಆಗಸ್ಟ್ ೩೧ ರಂದು ಕಲ್ಕತ್ತಾದಲ್ಲಿ ಮತ್ತೆ ಕೋಮು ದಂಗೆ ಸ್ಫೋಟಿಸಿತು. ಅಂದು ರಾತ್ರಿ ಹತ್ತು ಗಂಟೆಯ ಹೊತ್ತಿಗೆ ಹಿಂದೂಗಳ ಗುಂಪೊಂದು ಆಯುಧ ಸನ್ನದ್ಧವಾದ ಮೆರವಣಿಗೆ ತೆಗೆದುಕೊಂಡು ಬಂದು ಗಾಂಧಿ ಪರಿವಾರ ನೆಲೆಸಿದ್ದ ಹೈದರಿ ಮಂಜ಼ಿಲ್ ಕಟ್ಟಡದ ಮೇಲೆ ದಾಳಿ ನಡೆಸಿದರು. ಕಟ್ಟಡದ ಕಿಟಕಿಯ ಗಾಜುಗಳು ಪುಡಿಪುಡಿಯಾದವು. ಬಾಗಿಲು ಬಡಿಯುತ್ತಿದ್ದ ಗುಂಪಿನೊಂದಿಗೆ ಮಾತಾಡಲು ಮನೂ ಮತ್ತು ಅಭಾ ಬಾಗಿಲು ತೆಗೆದಾಗ ಪುಂಡರು ಒಳನುಗ್ಗಿ ಗಾಂಧಿ ಮತ್ತು ಅವರ ಸಹಾಯಕರಿಬ್ಬರ ಮೇಲೂ ಹಲ್ಲೆ ನಡೆಸಿದರು. ಗಾಂಧಿಯವರೊಡನಿದ್ದ ಇಬ್ಬರು ಪೊಲೀಸರು ಮಧ್ಯೆ ಪ್ರವೇಶಿಸಿ ಗುಂಪನ್ನು ನಿಯಂತ್ರಿಸಿದರು. ನಂತರ ಬಂದ ಪೊಲೀಸು ಅಧಿಕಾರಿಯೊಬ್ಬರು, ಗುಂಪು ಅಲ್ಲಿಂದ ಚದುರುವಂತೆ ಕ್ರಮ ಕೈಗೊಂಡರು. ಈ ಇಡೀ ಕ್ಷಿಪ್ರ ಘಟನೆಯಲ್ಲಿ ಅನುಪಮ ಧೈರ್ಯ ತೋರಿದ ಇಬ್ಬರು ಆ ಮಹಿಳಾ ಸಂಗಾತಿಗಳನ್ನು ಶ್ಲಾಘಿಸಿದ ಗಾಂಧಿ, ನಂತರ ಏನೂ ಆಗದವರಂತೆ ಆ ರಾತ್ರಿ ಶಾಂತವಾಗಿ ನಿದ್ರಿಸಿದರು. ಬೆಳಗಿನ ಝಾವದ ಪ್ರಾರ್ಥನೆ ಮತ್ತು ಲಘು ಉಪಹಾರದ ನಂತರ ಗಾಂಧಿ ಎಂದಿನಂತೆ ವಾಯುವಿಹಾರ ನಡೆಸಿದರು. ನಂತರ ರಾತ್ರಿ ನಗರದ ಕೆಲವೆಡೆ ಗಲಭೆಗಳು ನಡೆದಿವೆ ಎಂಬ ಸುದ್ದಿ ಕೇಳಿ ತಕ್ಷಣ ತಮ್ಮ ಸಹಾಯಕರೊಂದಿಗೆ ನಗರ ಪ್ರದಕ್ಷಿಣೆಗೆ ಹೊರಟರು. ರಾತ್ರಿ ಗಲಭೆಗಳಿಗೆ ಬಲಿಯಾದ ಒಂದೆರಡು ಜನ ಬಡ ಮುಸ್ಲಿಮರ ಹೆಣಗಳೂ ಅವರ ಕಣ್ಣಿಗೆ ಬಿದ್ದು ಅವರು ಚಿಂತಿತರಾದರು. ನಂತರದಲ್ಲೇ, ಗಲಭೆಗಳು ನಗರದ ಹಲವು ಕಡೆ ಹರಡಿದ್ದು ಹತ್ತಾರು ಜನರ ಹತ್ಯೆಯಾಗಿದೆ ಎಂಬ ಸುದ್ದಿ ಅವರನ್ನು ತಲುಪಿತ್ತು.

ಮತ್ತೊಮ್ಮೆ ಉಪವಾಸ-'ಜಗ್ಗು'ವನ್ನು ಬಗ್ಗಿಸಿದ ಲೋಹಿಯಾ

ಆ ಹೊತ್ತಿಗೇ ಅನಿರೀಕ್ಷಿತವೆಂಬಂತೆ, ಅವರೊಬ್ಬರು ಮಾತ್ರ ಈಗ ಪಂಜಾಬ್‌ನಲ್ಲಿ ಮಾನವತೆಯನ್ನು ಮರಳಿಸಲು ಸಾಧ್ಯವಿರುವುದರಿಂದ ಕೂಡಲೇ ಹೊರಟು ಬರುವಂತೆ ನೆಹರೂ ಅವರಿಂದ ತಂತಿ ಬಂದಿತ್ತು. ಗಾಂಧಿ ಒಂದು ಕ್ಷಣ ಯೋಚಿಸಿ ಸದ್ಯಕ್ಕಾದರೂ ತಾವಿರಬೇಕಾದದ್ದು ಇಲ್ಲಿಯೇ ಎಂದು ನಿರ್ಧರಿಸಿ, ಈ ಬಗ್ಗೆ ನೆಹರೂಗೆ ತಂತಿ ಕಳಿಸಿದರು. ಹಾಗೇ ಕಲ್ಕತ್ತಾದಲ್ಲಿ ತಮ್ಮ ಕರ್ತವ್ಯ ಮುಗಿದ ನಂತರದಲ್ಲೇ ತಾವು ತುರ್ತಾಗಿ ಪಂಜಾಬ್‌ಗೆ ಹೋಗಬೇಕಾಗಿರುವುದರಿಂದ, ಸದ್ಯಕ್ಕೆ ನೌಖಾಲಿಯ ಪ್ರವಾಸವನ್ನು ರದ್ದು

ಮಾಡಿರುವುದಾಗಿಯೂ ಪೂರ್ವ ಪಾಕಿಸ್ತಾನದ ಮುಖ್ಯಮಂತ್ರಿಗೆ ತಂತಿ ಕಳಿಸಿದರು. ಜೊತೆಗೇ, ಅಂದು ಸಂಜೆಯಿಂದಲೇ ತಾವು ನಗರದಲ್ಲಿ ಶಾಂತಿ ಮತ್ತು ಸುಭದ್ರತೆ ನೆಲೆಸುವವರೆಗೆ ಉಪವಾಸ ವ್ರತ ಕೈಗೊಳ್ಳುವುದಾಗಿ ಪ್ರಕಟಿಸಿದರು. ಇದರಿಂದ ಗಾಬರಿಗೊಂಡ ರಾಜ್ಯಪಾಲ ರಾಜಾಜಿಯವರು, ಹೈದರಿ ಮಂಝಿಲ್‌ಗೆ ಓಡೋಡಿ ಬಂದರು. 'ಪುಂಡರ ವಿರುದ್ಧ ನಿಮ್ಮ ಉಪವಾಸವೇ?' ಎಂದವರು ಗಾಂಧಿಯವರನ್ನು ಕೇಳಿದರು. ಗಾಂಧಿ 'ಪುಂಡರ ಹಿಂದಿರುವ ಜನರ ಹೃದಯವನ್ನು ಮುಟ್ಟಲಾದೀತೇನೋ ನೋಡುವ ಸಾಹಸವಿದು' ಎಂದು ಉತ್ತರಕೊಟ್ಟರು. ಆದರೆ ರಾಜಾಜಿ 'ನೀವು ಈ ಉಪವಾಸದಲ್ಲಿ ಅಸುನೀಗಿದ ಪಕ್ಷದಲ್ಲಿ ಉಂಟಾಗುವ ಪರಿಸ್ಥಿತಿ ಭೀಕರ. ಅದನ್ನಾಗಲೀ, ಪಂಜಾಬ್‌ನ ಪರಿಸ್ಥಿತಿಯನ್ನಾಗಲೀ ನಿಭಾಯಿಸುವರಾರು?' ಎಂದು ಗಾಬರಿಯಲ್ಲೇ ಪ್ರಶ್ನಿಸಿದರು. ಗಾಂಧಿ, 'ಅದನ್ನೆಲ್ಲ ನೋಡಲು ನಾನಿರುವುದಿಲ್ಲ ಸದ್ಯ! ನನ್ನ ಕೈಲಾದ್ದನ್ನಷ್ಟೇ ಸದ್ಯಕ್ಕೆ ಮಾಡಬಲ್ಲೆ' ಎಂದು ಉತ್ತರಿಸಿ ಸೆಪ್ಟೆಂಬರ್ ೧ ರ ರಾತ್ರಿ ಎಂಟೂ ಕಾಲು ಘಂಟೆಗೆ ತಮ್ಮ ಉಪವಾಸ ಆರಂಭವನ್ನು ಘೋಷಿಸಿದರು. ಲೋಹಿಯಾ ಮತ್ತು ಮತ್ತಿತರ ತಮ್ಮ ಸಹಾಯಕರಿಗೆ ಮುಸ್ಲಿಂ ಮೊಹಲ್ಲಾಗಳಿಗೆ ತೆರಳಿ ಸಂಪರ್ಕಗಳನ್ನು ಸಾಧಿಸಿ, ಮುಸ್ಲಿಮರಲ್ಲಿ ವಿಶ್ವಾಸ ತುಂಬುವಂತೆ ಸಲಹೆ ಮಾಡಿದರು. ಆ ದಿನ ಮುಸ್ಲಿಂ ಬೀದಿಗಳ ಕಾವಲು ಕಾಯುತ್ತಿದ್ದ ಮತ್ತು ಶಾಂತಿ ಮೆರವಣಿಗೆಯ ಮುಂಚೂಣಿಯಲ್ಲಿದ್ದ ಇಬ್ಬರು ಹಿಂದೂ ಯುವಕರ ಕೊಲೆಯಾಗಿತ್ತು ಎಂಬುದು ಗಾಂಧಿಗೆ ಗೊತ್ತಿರದಿರಲಿಲ್ಲ.

ಆಶ್ಚರ್ಯವೆಂಬಂತೆ, ಗಾಂಧಿ ಉಪವಾಸ ಆರಂಭಿಸಿದ ಸುದ್ದಿ ಹರಡುತ್ತಿದ್ದಂತೆಯೇ ನಗರ ಶಾಂತವಾಗತೊಡಗಿತು. ಅಂದು ಮಧ್ಯರಾತ್ರಿಯ ಹೊತ್ತಿಗೇ ಕೆಲವು ಹಿಂದೂ ಮತ್ತು ಮುಸ್ಲಿಂ ಗುಂಪುಗಳು ಬಂದು ಗಾಂಧಿಯವರ ಬಳಿ ತಮ್ಮಲ್ಲಿದ್ದ ಆಯುಧಗಳನ್ನು ಇಟ್ಟು ಉಪವಾಸ ಮುಕ್ತಾಯಗೊಳಿಸುವಂತೆ ಕೋರಿದವು. ಆದರೆ ಗಾಂಧಿ ಒಪ್ಪಲಿಲ್ಲ. ಗಲಭೆಗಳು ನಡೆದೇ ಇದ್ದವು.

ಲೋಹಿಯಾ ಅವರು ತಮ್ಮ 'ಸಮ್ ಅನೆಕ್‌ಡೋಟ್ಸ್ ಆಫ್ ಮಹಾತ್ಮ ಗಾಂಧಿ' ('ಮಹಾತ್ಮ ಗಾಂಧಿಯವರನ್ನು ಕುರಿತ ಕೆಲವು ಪ್ರಸಂಗಗಳು') ಎಂಬ ಲೇಖನದಲ್ಲಿ ತಿಳಿಸಿರುವ ಹಾಗೆ, ಆ ದಿನಗಳಲ್ಲಿ ಹಿಂದೂ ಮೊಹಲ್ಲಾಗಳಿಗೆ ಯಾರೇ ಮುಸ್ಲಿಮನಾಗಲೀ ಅಥವಾ ಮುಸ್ಲಿಂ ಮೊಹಲ್ಲಾಗಳಿಗೆ ಯಾರೇ ಹಿಂದೂವಾಗಲೀ ಹೋಗುವುದು ಪ್ರಾಣಾಂತಿಕವಾಗಿತ್ತು. ಆದರೆ ಎರಡೂ ಕಡೆಯ ದುಡಿವ ಬಡಜನರ ಜೀವನ ನಡೆಯಬೇಕಲ್ಲ? ಎರಡೂ ಕಡೆಯವರು ಬೆಳಕು ಹರಿಯುವ ಮುನ್ನವೇ ಎರಡೂ ಮೊಹಲ್ಲಾಗಳೂ ಕೂಡುವ ಕಡೆ ಮೀನು, ಹಣ್ಣು, ತರಕಾರಿ ಮತ್ತು ಇತರ ನಿತ್ಯೋಪಯೋಗಿ ಮಾರಾಟದ ವಸ್ತುಗಳನ್ನು ಇಟ್ಟು ಹೋಗುತ್ತಿದ್ದರಂತೆ. ಮಾರನೆಯ ಮುಂಜಾವಿನ ಹೊತ್ತಿಗೆ ಅದರೆಲ್ಲ ವಿನಿಮಯದ ಸಾಮಗ್ರಿ ಅಥವಾ ಹಣ ಅಲ್ಲಿ ಇರುತ್ತಿತ್ತಂತೆ. ಈ ಒಂದು ಮಾನವೀಯ ಅವಕಾಶವನ್ನು ಬಳಸಿಕೊಂಡು ಲೋಹಿಯಾ ತಮ್ಮ ಹಳೆಯ ಮುಸ್ಲಿಂ ಗೆಳೆಯರ ಸಂಪರ್ಕ ಸಾಧಿಸಿಕೊಂಡು ಜನರನ್ನು ಭೇಟಿಯಾದರು. ಆ ಮೂಲಕ ಗಲಭೆಗಳ ಮೂಲ ಕೇಂದ್ರಗಳ ಸುಳಿವು ಪಡೆಯುವಲ್ಲಿ ಅವರು ಯಶಸ್ವಿಯಾದರು. ಮುಸ್ಲಿಂ ಮೊಹಲ್ಲಾಗಳ ಮೇಲೆ ಸಶಸ್ತ್ರ ದಾಳಿ ನಡೆಸುತ್ತಿದ್ದ

ಗುಂಪಿನ ನೇತೃತ್ವ ವಹಿಸುತ್ತಿದ್ದ ಜಗಮೋಹನ ಬೋಸ್ ಅಲಿಯಾಸ್ ಜಗ್ಗ ಎಂಬ ಬಹು ದೃಢಕಾಯನಾದ ಹಿಂದೂ ಯುವಕನ ಪರಿಚಯವಾಯಿತು. ಆತ ಲೋಹಿಯಾ ಜಗ್ಗು ಎಂದು ಕರೆಯುತ್ತಿದ್ದ ಅವರ ಹಳೆಯ ಶಿಷ್ಯನೇ ಆಗಿದ್ದು, ಸಂಪರ್ಕ ತಪ್ಪಿಹೋದನಂತರ ಹಿಂದೂ ರಾಷ್ಟ್ರವಾದಿ ಗುಂಪಿಗೆ ಸೇರಿದ್ದ. ಅವನು ಆಗ ಗಲಭೆಗಳಲ್ಲಿ ಮಗಳನ್ನು ಕಳೆದುಕೊಂಡ ದುಃಖ ಮತ್ತು ಸೇಡಿನ ಬೆಂಕಿಗೆ ಸಿಕ್ಕಿ ಬೇಯುತ್ತಿದ್ದ. ಆತನೊಂದಿಗೆ ಮಾತನಾಡಿದ ಲೋಹಿಯಾ, ಹಿಂಸಾಚಾರ ನಿಲ್ಲಿಸಲು ಅವನನ್ನು ಒಪ್ಪಿಸಿದರು. ಆದರೆ ಆತ ತನಗೊಬ್ಬ ಯಜಮಾನನಿದ್ದಾನೆಂತಲೂ ಅವನನ್ನು ಭೇಟಿಯಾಗಿ ಒಪ್ಪಿಸಿದರೆ ಮಾತ್ರ ಇದು ಸಾಧ್ಯವಾದೀತೆಂದೂ ತಿಳಿಸಿದ. ಜಗ್ಗುವಿನೊಂದಿಗೆ ಹೋಗಿ ನಿಗೂಢ ಸ್ಥಳವೊಂದರ ಸುಸಜ್ಜಿತ ಕಟ್ಟಡದ ಮಹಡಿಯಲ್ಲಿದ್ದ, ಭೂಗತ ಜಾಗತಿಕ ಅಪರಾಧ ಲೋಕದ ಕಾಲ್ಪನಿಕ ಚಿತ್ರವನ್ನು ಹೋಲುವ, ಧಡೂತಿ ದೇಹದ ನಯವಂಚಕ ಮುಖ ಚಹರೆಯ ಆ ಯಜಮಾನನನ್ನು ಕಂಡು ತಾವು ನಡುಗಿ ಹೋಗಿದ್ದಾಗಿ ಲೋಹಿಯಾ ತಿಳಿಸುತ್ತಾರೆ.

ಜಗ್ಗು ಆತನೊಡನೆ ಸ್ವಲ್ಪ ಕಾಲ ಮಾತನಾಡಿದ ನಂತರ, ಆತ ಲೋಹಿಯಾರನ್ನು ಹಿಂದೂಗಳಿಗೆ ತೊಂದರೆಯಾದರೆ ಮತ್ತೆ ಶಸ್ತ್ರಾಸ್ತ್ರಗಳನ್ನು ಎಲ್ಲಿಂದ ತರುವುದು? ಎಂದು ಕೇಳಿದ. ಅದಕ್ಕೆ ಅವರು ಅವನ್ನು ಬಳಸಿಯೇ ಹಿಂದೂ ಹಿತಸಾಧನೆಯಾಗಬೇಕಾಗಿ ಬಂದ ಕಾಲಕ್ಕೆ, ಅವನ್ನು ಬಳಸಲು ಬಯಸುವ ಮನಸ್ಸೇ ದಾರಿ ತೋರುತ್ತದೆ ಎಂದು ಉತ್ತರಿಸಿದಾಗ, ಅ ಯಜಮಾನ ಲೋಹಿಯಾರನ್ನು ಸಣ್ಣದಾಗಿ ಶಪಿಸುತ್ತಾ ಆಯುಧಗಳ ಸಂಗ್ರಹವನ್ನು ಒಯ್ಯಲು ಜಗ್ಗನಿಗೆ ಅನುಮತಿ ನೀಡಿದ. ಅವುಗಳಲ್ಲಿ ಗ್ರೆನೇಡ್, ಬಾಂಬುಗಳು, ಪಿಸ್ತೂಲುಗಳು ಇದ್ದವು. ಅವನ್ನೆಲ್ಲ ಗಾಡಿಯಲ್ಲಿ ಒಯ್ದು, ಜಗ್ಗ ಗಾಂಧಿಯ ಮುಂದಿರಿಸಿ ನಮಸ್ಕರಿಸಿ ಸಿಟ್ಟಿನಲ್ಲೇ ಉಪವಾಸ ನಿಲ್ಲಿಸುವಂತೆ ಅವರನ್ನು ಕೇಳಿಕೊಂಡ.

ಕಲ್ಕತ್ತಾದಲ್ಲಿ ಶಾಂತಿ ಸ್ಥಾಪನೆ–ಉಪವಾಸ ಅಂತ್ಯ

ಆ ಹೊತ್ತಿಗಾಗಲೇ ಹಲವು ಹಿಂದೂ ಮುಸ್ಲಿಂ ಗುಂಪುಗಳು ಬಂದು ತಮ್ಮೆಲ್ಲ ಆಯುಧ ಸಂಗ್ರಹಗಳನ್ನು ಗಾಂಧಿಯವರ ಮುಂದೆ ತಂದಿರಿಸಿ, ಅವರು ಉಪವಾಸದ ಅಂತ್ಯಕ್ಕಾಗಿ ಕಾಯುತ್ತಿದ್ದರು. ಈ ಮಧ್ಯೆ ಆಯುಧಗಳನ್ನು ಒಪ್ಪಿಸಿ ಲೋಹಿಯಾರೊಂದಿಗೆ ಊಟಕ್ಕೆ ಹೋಗಿದ್ದ ಜಗ್ಗ ಇದ್ದಕ್ಕಿದ್ದಂತೆ ನೆನಪಾದವನಂತೆ ಗ್ರೆನೇಡುಗಳಲ್ಲಿ ಕೆಲವು ಜೀವಂತವಾಗಿವೆ ಎಂದು ಹೇಳಿ ಮತ್ತೆ ಹೈದರಿ ಮಂಜಿಲ್‌ಗೆ ವಾಪಸ್ ಓಡಿ ಬಂದು ಅವನ್ನು ನೀರಿನ ಬಕೆಟ್‌ನಲ್ಲಿ ಮುಳುಗಿಸಿ ಹೋದನಂತೆ! ಒಂದೆರಡು ದಿನಗಳ ಕಾಲ ಸತತವಾಗಿ ನಡೆದ ಈ ಬೆಳವಣಿಗೆಗಳ ಮಧ್ಯೆಯೇ ನಗರದ ಅನೇಕ ಗಣ್ಯರು ಬಂದು ಗಾಂಧಿಯವರೊಂದಿಗೆ ಉಪವಾಸ ಆರಂಭಿಸಿದರು.

ಸೆಪ್ಟೆಂಬರ್ ೪ರಂದು ಊರು ಶಾಂತ ಪರಿಸ್ಥಿತಿಗೆ ಮರಳಿತ್ತು. ಅಂದು ಸಂಜೆ ನಗರದ ಹಿಂದೂ ಮುಸ್ಲಿಂ ಸಮುದಾಯಗಳೆರಡರ ಪ್ರಮುಖ ನಾಯಕರೂ ಬಂದು, ತಾವು ನಗರದಾದ್ಯಂತ ಸುತ್ತಾಡಿ ಬಂದಿದ್ದು ಎಲ್ಲಿಯೂ ಗಲಭೆಯ ಸುಳಿವಿಲ್ಲವೆಂದೂ, ಮುಂದೆ ಕೂಡಾ ಅದು ಸುಳಿಯದಂತೆ ನೋಡಿಕೊಳ್ಳುವುದಾಗಿ ಗಾಂಧಿಗೆ ಭರವಸೆ ನೀಡಿ ಅವರು ಉಪವಾಸವನ್ನು ಅಂತ್ಯಗೊಳಿಸುವಂತೆ ಕೇಳಿಕೊಂಡರು. ಪೊಲೀಸರು ನಗರ ಸಂಪೂರ್ಣ ಸಾಮಾನ್ಯ ಸ್ಥಿತಿಗೆ ಬಂದಿದೆ ಎಂಬ ವರದಿ ನೀಡಿದ ನಂತರ ಗಾಂಧಿ, ತಮ್ಮ

ನೆಚ್ಚಿನ ಈ ಊರು ಮುಂದೆಂದೂ ತಮ್ಮ ಮೇಲೆ ಉಪವಾಸವನ್ನು ಹೇರದು ಎಂಬ ಆಶ್ವಾಸನೆಯನ್ನು ಆ ಮುಖಂಡರಿಂದ ಪಡೆದು, ನಿಂಬೆ ರಸ ಬೆರೆಸಿದ ನೀರನ್ನು ಕುಡಿಯುವ ಮೂಲಕ ತಮ್ಮ ಉಪವಾಸವನ್ನು ಅಂತ್ಯಗೊಳಿಸಿದರು.

ಮಾರನೆಯ ದಿನ ನಗರದಲ್ಲಿ ಶಾಂತಿ ಸೇನೆಯೊಂದರ ಸ್ಥಾಪನೆಯಾಯಿತು. ಆ ಸಂದರ್ಭದಲ್ಲಿ ಗಾಂಧಿಯವರ ಸಂದೇಶವೇನು ಎಂದು ಕೇಳಿದಾಗ, ಅವರು ಕೊಟ್ಟ ಸಂದೇಶ: 'ನನ್ನ ಬದುಕೇ ನನ್ನ ಸಂದೇಶ'

ಸೆಪ್ಟೆಂಬರ್ ೮ರಂದು ಗಾಂಧಿ, ತಮ್ಮ ಪರಿವಾರದೊಂದಿಗೆ ಪಂಜಾಬ್‌ಗೆ ಹೋಗುವ ಮಾರ್ಗವಾಗಿ ದೆಹಲಿಗೆ ರೈಲು ಹತ್ತಿದರು. ಆದರೆ ಅವರಿಗೆ ದೆಹಲಿ ಮುಖ್ಯ ನಿಲ್ದಾಣದವರೆಗೆ ಪ್ರಯಾಣಿಸದೆ, ನಗರದ ಹೊರವಲಯದ ಶಹದಾರಾ ನಿಲ್ದಾಣದಲ್ಲಿಯೇ ಇಳಿಯುವಂತೆ ಸರ್ಕಾರದ ಕಡೆಯಿಂದ ಸಂದೇಶ ಬಂದಿತ್ತು. ಗಾಂಧಿ ಅಲ್ಲಿ ಇಳಿದಾಗ ಅವರನ್ನು ಎದುರುಗೊಳ್ಳಲು ಬಂದಿದ್ದ ಗೃಹ ಮಂತ್ರಿ ಪಟೇಲರು ಮತ್ತು ಅವರ ಸಹಾಯಕ ಪೊಲೀಸು ಸಿಬ್ಬಂದಿಯ ಜೋಲು ಮುಖ ನೋಡಿ ಗಾಂಧಿ ಗಾಬರಿಯಾದರು. ಪಂಜಾಬ್‌ನ ಕೋಮು ದಳ್ಳುರಿ, ದೆಹಲಿ ನಗರಕ್ಕೂ ಹಬ್ಬಿ ಪರಿಸ್ಥಿತಿ ನಿಯಂತ್ರಣಕ್ಕೆ ಸಿಕ್ಕದಷ್ಟು ತೀವ್ರವಾಗಿದೆ ಎಂದು ಪಟೇಲರು ವಿವರಿಸಿದರು. ಈಗ ಗಾಂಧಿ ದೆಹಲಿಯಲ್ಲಿದ್ದಾಗ ಉಳಿದುಕೊಳ್ಳುತ್ತಿದ್ದ ಭಂಗಿ ಕಾಲೋನಿಯೂ ಹಿಂದೂ ನಿರಾಶ್ರಿತರಿಂದ ತುಂಬಿ ಹೋಗಿದ್ದು, ಅವರನ್ನು ಈಗ ತಮ್ಮ ಮತ್ತು ನೆಹರೂ ಅವರ ಅಧಿಕೃತ ನಿವಾಸಗಳಿಗೆ ಸಮೀಪವಾಗಿರುವ ಬಿರ್ಲಾ ಭವನದಲ್ಲಿ ಇರಿಸಲು ಕೊಂಡೊಯ್ಯುತ್ತಿರುವುದಾಗಿಯೂ ತಿಳಿಸಿದರು. ಗಾಂಧಿ ತೀರಾ ವ್ಯಾಕುಲಗೊಂಡರು.

ಹೊತ್ತಿ ಉರಿದ ಪಂಜಾಬ್ ಮತ್ತು ದೆಹಲಿ–ಆರೆಸ್ಸೆಸ್‌ನೊಡನೆ ಸಂವಾದ

ಪಂಜಾಬ್ ಮತ್ತು ದೆಹಲಿಗಳಲ್ಲಿ ಪರಿಸ್ಥಿತಿ ಗಾಂಧಿ ಕಲ್ಪಿಸಿಕೊಂಡುದಕ್ಕಿಂತ ಭೀಕರವಾಗಿತ್ತು, ಭೀಭತ್ಸವಾಗಿತ್ತು ಎಂಬುದೇ ಸರಿಯಾದ ವರ್ಣನೆಯಾಗಿತ್ತು. ಎರಡೂ ಕಡೆ ಲಕ್ಷ ಲಕ್ಷ ಜನರನ್ನು ಮಹಿಳೆ ಮಕ್ಕಳೆನ್ನದೆ ಚೂರಿ, ಕತ್ತಿ, ಭರ್ಜಿ, ಬಂದೂಕು ಎನ್ನದೆ ಸಿಕ್ಕ ಸಿಕ್ಕ ಆಯುಧಗಳಿಂದ ಕೊಲ್ಲಲಾಗುತ್ತಿತ್ತು. ದೆಹಲಿಯ ನಿವಾಸಿಗಳಾದ ಲಕ್ಷಾಂತರ ಜನ ಮುಸ್ಲಿಂರ ಮನೆ ಮಠಗಳನ್ನು ಲೂಟಿ ಮಾಡಿ ಕೊಲೆಗಳ ಸರಮಾಲೆಯೇ ನಡೆದಿತ್ತು. ಕಾಂಗ್ರೆಸ್ ಮುಖಂಡ ದಿ. ಡಾ. ಅನ್ಸಾರಿಯವರ ಮಗಳು ಮತ್ತು ಕುಟುಂಬ ಸೇರಿದಂತೆ ಅನೇಕ ಮುಸ್ಲಿಂ ಕುಟುಂಬಗಳು ತಲೆಮರೆಸಿಕೊಂಡು ದೆಹಲಿ ಬಿಡುವಂತಾಗಿತ್ತು. ರೈಲಿನಲ್ಲಿ ನಡೆದ ಹತ್ಯಾಕಾಂಡವೊಂದರಲ್ಲಿ ಜಾಮಿಯಾ ಮಿಲಿಯಾದ ಕುಲಪತಿ ಡಾ.ಝಾಕೀರ್ ಹುಸೇನರು ಹಿಂದೂ ಸಹಪ್ರಯಾಣಿಕರೊಬ್ಬರ ಧೈರ್ಯ ಸಾಹಸದಿಂದ ಕೊಲೆಯಾಗದೆ ಪಾರಾಗಿದ್ದರು. ಲಕ್ಷಾಂತರ ಮುಸ್ಲಿಮರು ಹುಮಾಯೂನ್ ಗೋರಿ ನಿಝಾಮುದ್ದೀನ್ ಗೋರಿಗಳ ಆವರಣಗಳಲ್ಲಿ ಹುಳುಗಳಂತೆ ಜಮಾಯಿಸಿ ರಕ್ಷಣೆ ಪಡೆದಿದ್ದರು. ಮಸೀದಿಗಳನ್ನು ಸಿಖ್ ನಿರಾಶ್ರಿತರು ಆಕ್ರಮಿಸಿಕೊಂಡಿದ್ದರು. ಕೆಲವು ಮಸೀದಿಗಳಿಗೆ ಬೆಂಕಿ ಹಚ್ಚಲಾಗಿತ್ತು. ಜಗತ್ತಿನ ನಾಗರಿಕ ಇತಿಹಾಸದ ಅತ್ಯಂತ ದೊಡ್ಡ ಮತ್ತು ದಾರುಣ ವಲಸೆ ಇದಾಗಿದ್ದು, ಸುಮಾರು ಒಂದು ಕೋಟಿಗೂ ಹೆಚ್ಚು ಜನ ಅತ್ತಿಂದಿತ್ತ ವಲಸೆ ಹೋಗಬೇಕಾಯಿತೆಂದು ಹೇಳಲಾಗುತ್ತದೆ. ಎರಡೂ ಕಡೆ ಹತ್ಯೆಯಾದ

ಮಾನವ ಜೀವಿಗಳ ಸಂಖ್ಯೆ ಐದು ಲಕ್ಷವೆಂದು ಅಂದಾಜು ಮಾಡಲಾಗಿದೆ.

ಗಾಂಧಿ ವರ್ತಮಾನದ ವಿವರಗಳನ್ನು ಕೇಳುತ್ತಾ ತತ್ತರಿಸಿ ಹೋದರು. ತಾವು ಪಂಜಾಬ್‌ಗೆ ಹೋಗದೆ ದೆಹಲಿಯಲ್ಲೇ ಉಳಿದು ಅಲ್ಲಿಂದಲೇ ಪರಿಸ್ಥಿತಿಯನ್ನು ನಿಯಂತ್ರಿಸಿ ಶಾಂತಿ ಸ್ಥಾಪನೆಯ ಪ್ರಯತ್ನಗಳನ್ನು ಮಾಡುವುದಾಗಿ ತಿಳಿಸಿದರು. ಆದರೆ ನಗರದ ಬಹುಭಾಗ ಹಿಂದೂ ಪರ ಸಂಘಟನೆಗಳ ಕೈವಶವಾದಂತಿತ್ತು. ಇದಕ್ಕೆ ಗೃಹಮಂತ್ರಿ ಪಟೇಲರು ಹಿಂದೂ ಮತ್ತು ಸಿಕ್ಖರ ರಕ್ಷಣೆಯ ಕಡೆಗಷ್ಟೇ ಒಲವು ತೋರುತ್ತಿದ್ದಾರೆ ಎಂಬ ಸುದ್ದಿಯ ಕುಮ್ಮಕ್ಕೂ ಇತ್ತು. ಈ ವಿಷಯದಲ್ಲಿ ನೆಹರೂ-ಪಟೇಲರ ಮಧ್ಯೆ ಮತಭೇದವುಂಟಾಗಿದೆಯೆಂದೂ ಪ್ರಧಾನಿ ತಮ್ಮ ಗೃಹಖಾತೆಯ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರ ಹೊಂದಿಲ್ಲವೆಂದೂ ವಾದಿಸಿದ ಪಟೇಲರು ರಾಜೀನಾಮೆ ಕೊಡಲೂ ಸಿದ್ಧರಾಗಿದ್ದಾರೆಂಬ ಸುದ್ದಿಯೂ ವ್ಯಾಪಕವಾಗಿ ಹರಡಿತ್ತು. ನಗರದ ಹಲವು ಭಾಗಗಳಲ್ಲಿ ಆರೆಸ್ಸೆಸ್ ಕಾರ್ಯಕರ್ತರ ಪಡೆ ಲಾಠಿ ಬೀಸುತ್ತಾ ಪಥ ಸಂಚಲನ ಮಾಡುತ್ತಿದ್ದುದನ್ನು ಹಲವು ಪ್ರತ್ಯಕ್ಷದರ್ಶಿಗಳು ವರದಿ ಮಾಡಿದ್ದರು. ಜೊತೆಗೆ ಹಿಂದೂ-ಸಿಖ್ ನಿರಾಶ್ರಿತರ ತಾತ್ಕಾಲಿಕ ಪುನರ್ವಸತಿಯತ್ತಲೂ ಅವರು ಮುತುವರ್ಜಿ ವಹಿಸಿದ್ದುದೂ ಕಂಡು ಬಂದಿತ್ತು.

೧೯೪೭ರ ಮಾರ್ಚ್‌ನಲ್ಲಿ ಆರೆಸ್ಸೆಸ್‌ನ ಮುಖ್ಯಸ್ಥ ಎಂ.ಎಸ್.ಗೋಳ್ವಲ್ಕರ್ ಭಾಷಣದ ಸ್ಫೂರ್ತಿಯೊಂದಿಗೆ ನಗರದಲ್ಲಿ ನಡೆದ ಒಂದು ಲಕ್ಷ ಜನ ಸ್ವಯಂ ಸೇವಕರ ಬೃಹತ್ ರ್‍ಯಾಲಿಯೊಂದರ ಮೂಲಕವೇ ನಗರದಲ್ಲಿ ಕೋಮು ಧೃವೀಕರಣದ ವ್ಯವಸ್ಥಿತ ಪ್ರಯತ್ನಗಳು ನಡೆದಿದ್ದವೆಂದೂ, ನಗರದ ಶ್ರೀಮಂತ ವ್ಯಾಪಾರಿಗಳ ಮನೆಗಳಲ್ಲಿ ನಡೆದ ಗುಪ್ತ ಸಭೆಗಳಲ್ಲಿ ಭಾರಿ ಹಣ ಸಂಗ್ರಹಣೆ ನಡೆದಿದ್ದಾಗಿಯೂ ಪೊಲೀಸ್ ವರದಿಗಳು ತಿಳಿಸಿದ್ದವು.

ಗಾಂಧಿ, ಮೂರೂ ಧರ್ಮಗಳ ನಿರಾಶ್ರಿತರ ಶಿಬಿರಗಳಿಗೆ ಭೇಟಿ ನೀಡಿ ಸಮಸ್ಯೆಗಳನ್ನು ಆಲಿಸುತ್ತಿದ್ದರು. ಸಾರ್ವಜನಿಕ ಗಣ್ಯರಿಂದ ಕೂಡಿದ ಆಹಾರ ಸಮಿತಿಯನ್ನು ರಚಿಸಿ ನಿರಾಶ್ರಿತರೆಲ್ಲರಿಗೂ ಆಹಾರ ಸಿಗುವಂತೆ ನೋಡಿಕೊಂಡಿದ್ದರು. ಸಂಜೆ ಬಿರ್ಲಾ ಭವನದ ಹುಲ್ಲುಗಾವಲಿನ ಮೇಲೆ ಕಟ್ಟಲಾಗಿದ್ದ ಪುಟ್ಟ ವೇದಿಕೆಯ ಮೇಲೆ ಕೂತು ಪ್ರಾರ್ಥನಾ ಸಭೆಗಳನ್ನು ನಡೆಸುತ್ತಾ ಜನರನ್ನುದ್ದೇಶಿಸಿ ಮಾತನಾಡುತ್ತಿದ್ದರು.

'ಇದು ಹಲವು ಧರ್ಮಗಳ ಜನ ಹುಟ್ಟಿ ಜೊತೆಯಾಗಿ ಬೆಳೆದು ಒಂದು ಸುಮನೋಹರವಾದ ಸಂಸ್ಕೃತಿಯನ್ನು ಕಟ್ಟಿರುವ ದೇಶ. ಅದನ್ನು ಹಾಳುಗೆಡುವುದರಿಂದ ಹಾನಿ ನಮಗೇ. ಮುಸ್ಲಿಮರನ್ನು ಸಂಪೂರ್ಣವಾಗಿ ನೀವು ಹೊರಗಟ್ಟಿದರೆ ಅಥವಾ ದಮನ ಮಾಡಿದರೆ ಉಂಟಾಗುವ ವಾತಾವರಣ ಉಸಿರುಗಟ್ಟಿಸುವ ಸಂಕುಚಿತತೆಯ ವಾತಾವರಣವಾದೀತು. ನಾನು ಪಾಕಿಸ್ತಾನಕ್ಕೂ ಹೋಗುವೆ. ಅಲ್ಲಿಯೂ ಇದೇ ಮಾತುಗಳನ್ನು ಹೇಳುವೆ. ಪಾಕಿಸ್ತಾನದ ಮುಸ್ಲಿಮರು ಪಶುಗಳಂತೆ ವರ್ತಿಸಿದರೆ ನಾವೂ ಹಾಗೇ ವರ್ತಿಸಬೇಕೆ? ಅದು ಹಿಂದೂ ಧರ್ಮಕ್ಕೆ ಕಳಂಕ ಹಚ್ಚಿದಂತೆ.' ಇವು ಬಿರ್ಲಾ ಭವನದಲ್ಲಲ್ಲದೆ ನಗರದ ವಿವಿಧೆಡೆ ಏರ್ಪಡಿಸಲಾಗುತ್ತಿದ್ದ ಪ್ರಾರ್ಥನಾ ಸಭೆಗಳಲ್ಲಿ ಗಾಂಧಿ ಆಡುತ್ತಿದ್ದ ಮಾತುಗಳ ಸಾರವಾಗಿರುತ್ತಿತ್ತು. ಗಾಂಧಿ, ವಲಸೆ ಬಂದ ಹಿಂದೂಗಳೂ

ಸಿಕ್ಖರೂ ಮತ್ತೆ ತಮ್ಮ ಊರಿಗೆ ಮರಳಬೇಕೆಂಬುದೂ, ಪಾಕಿಸ್ತಾನಕ್ಕೆ ಹೋದ ಮುಸ್ಲಿಮರು ಭಾರತಕ್ಕೆ ಬರಬೇಕೆಂಬುದೂ, ಪರಸ್ಪರ ವಶಪಡಿಸಿಕೊಂಡ ಆಸ್ತಿಪಾಸ್ತಿಗಳನ್ನು ಅವರವರಿಗೆ ಮರಳಿಸುವ ವ್ಯವಸ್ಥೆಯಾಗಬೇಕೆಂಬುದೂ ಗಾಂಧಿಯವರ ಇಚ್ಛೆಯಾಗಿತ್ತು. ಈ ಸಂಬಂಧವಾಗಿ ಅವರು ಸುಹ್ರವರ್ದಿಯವರ ಮೂಲಕ ಸಂಧಾನ ನಡೆಸಿದ್ದರು. ಸುಹ್ರವರ್ದಿ ಎರಡೂ ಕಡೆಯ ಸಂದೇಶಗಳನ್ನು ಹೊತ್ತು, ದೆಹಲಿ ಮತ್ತು ಲಾಹೋರ್‌ಗಳ ನಡುವೆ ಓಡಾಡುತ್ತಿದ್ದರು. ಇದರ ಜೊತೆಗೇ ನೆಹರೂ ಮತ್ತು ಪಟೇಲರೂ ಒಮ್ಮೆ ಲಾಹೋರ್‌ಗೆ ಹೋಗಿ ಜಿನ್ನಾರೊಡನೆ ಮಾತುಕತೆಯಾಡಿ ಬಂದಿದ್ದರು. ಆದರೆ ಎರಡೂ ಕಡೆ ಎಗ್ಗಿಲ್ಲದೆ ನಡೆಯುತ್ತಿದ್ದ ವಿಧ್ವಂಸಕ ಕೃತ್ಯಗಳ ನಡುವೆ ಈ ಪ್ರಯತ್ನಗಳಾವುವೂ ಕೊನೆಮುಟ್ಟದವಾಗಿದ್ದವು.

ಆರೆಸ್ಸೆಸ್ ಶಿಬಿರದಲ್ಲಿ ಗಾಂಧಿ

ದೆಹಲಿಯ ಹಿಂಸಾಚಾರಗಳ ಹಿಂದೆ ಆರೆಸ್ಸೆಸ್‌ನ ಕೈವಾಡವಿದೆ ಎಂಬ ಸುದ್ದಿ ಹರಡಿದ್ದ ಹಿನ್ನೆಲೆಯಲ್ಲಿ, ಗಾಂಧಿ ಆ ಸಂಘಟನೆಯ ಮುಖ್ಯಸ್ಥ ಎಂ.ಎಸ್. ಗೋಳ್ವಲ್ಕರ್‌ರೊಡನೆ ಮಾತಾಡಿದರು. ಗೋಳ್ವಲ್ಕರ್ ಮುಸ್ಲಿಮರ ಹತ್ಯೆಗೆ ತಮ್ಮ ಸಂಘಟನೆ ಕಾರಣವಲ್ಲವೆಂದೂ, ಅಂತಹ ಕೃತ್ಯಗಳನ್ನು ತಾವು ಬೆಂಬಲಿಸುವುದಿಲ್ಲವೆಂದು ಗಾಂಧಿಗೆ ತಿಳಿಸಿದಾಗ, ಗಾಂಧಿ ಹಾಗೆಂದು ಸಾರ್ವಜನಿಕ ಹೇಳಿಕೆ ನೀಡಲು ಅವರನ್ನು ಕೋರಿದರು. ಆದರೆ ಹಾಗೆ ಮಾಡಲು ನಿರಾಕರಿಸಿದ ಗೋಳ್ವಲ್ಕರ್ ತಮ್ಮ ಪರವಾಗಿ ಗಾಂಧಿಯವರೇ ಆ ಹೇಳಿಕೆ ನೀಡಬಹುದಾಗಿ ತಿಳಿಸಿದರು. ಗೋಳ್ವಲ್ಕರ್ ಅವರ ಈ ಮಾತುಗಳನ್ನು ಸಂಜೆಯ ಪ್ರಾರ್ಥನಾ ಸಭೆಯಲ್ಲಿ ಪ್ರಸ್ತಾಪಿಸಿದ ಗಾಂಧಿ, ಅವರ ಈ ಮಾತುಗಳನ್ನು ತಾವು ನಂಬಲಾಗುತ್ತಿಲ್ಲ ಎಂದೂ ತಿಳಿಸಿದರು.

ಸೆಪ್ಟೆಂಬರ್ ೧೬ ರಂದು ಗಾಂಧಿಯವರನ್ನು ಭಂಗಿ ಕಾಲೋನಿಯೊಂದರಲ್ಲಿ ಏರ್ಪಡಿಸಲಾಗಿದ್ದ ಆರೆಸ್ಸೆಸ್ ಶಿಬಿರವೊಂದಕ್ಕೆ ಆಹ್ವಾನಿಸಲಾಯಿತು. ಸರಸಂಘಚಾಲಕ ಗೋಳ್ವಲ್ಕರ್ ಕೂಡ ಅಲ್ಲಿದ್ದರು. ಆರೆಸ್ಸೆಸ್ ಸ್ವಯಂ ಸೇವಕರ ತ್ಯಾಗಬುದ್ಧಿಯನ್ನೂ, ಅಸ್ಪೃಶ್ಯತೆಯ ವಿರೋಧವನ್ನೂ ಶ್ಲಾಘಿಸಿದ ಗಾಂಧಿ, ತ್ಯಾಗದ ಜೊತೆ ಹೃದಯಶುದ್ಧಿ ಇರಬೇಕೆಂದು ಹೇಳಿದರು. ಈ ಸಂಘಟನೆಯು ಮುಸ್ಲಿಮರ ವಿರೋಧಿ ಎಂಬ ಭಾವನೆ ಇದೆ ಎಂಬುದನ್ನು ಪ್ರಸ್ತಾಪಿಸಿದ ಗಾಂಧಿ, ಹಿಂದೂ ಧರ್ಮ ಒಂದು ಮುಚ್ಚಿದ ಧರ್ಮವಾಗಿರದೇ, ಎಲ್ಲ ಕಡೆಯಿಂದ ವಿಚಾರಗಳನ್ನು ಹೀರಿಕೊಂಡು ಸದಾ ಸಮೃದ್ಧವಾಗಿರುವ ಧರ್ಮವಾಗಿದೆ ಎಂಬುದನ್ನು ಸ್ವಯಂಸೇವಕರ ಗಮನಕ್ಕೆ ತಂದರು. ಶಿಬಿರದಲ್ಲಿ ಸ್ವಯಂ ಸೇವಕರು ಗಾಂಧಿಯವರಿಗೆ ಹಲವು ಪ್ರಶ್ನೆಗಳನ್ನು ಕೇಳಿದ್ದರು. ಓರ್ವ ಕಾರ್ಯಕರ್ತ ಮುಗ್ಧನಾಗಿ ಹಿಂದೂ ಧರ್ಮದಲ್ಲಿ ಶಿಷ್ಟರನ್ನು ರಕ್ಷಿಸುವ ಮತ್ತು ದುಷ್ಟರನ್ನು ವಧಿಸುವ ಸಂದೇಶವಿದೆಯಲ್ಲವೆ ಎಂದು ಪ್ರಶ್ನೆ ಕೇಳಿದ್ದ. ಅದಕ್ಕೆ, ದುಷ್ಟರಾರು ಮತ್ತು ಶಿಷ್ಟರಾರೆಂದು ನಿರ್ಣಯಿಸುವ ಅಧಿಕಾರ ವ್ಯಕ್ತಿಗಳಿಗೆ, ಗುಂಪುಗಳಿಗೆ ಇದೆಯೆಂದು ಹಿಂದೂ ಧರ್ಮ ಹೇಳುವುದಿಲ್ಲವೆಂದು ವಿವರಿಸಿದ ಗಾಂಧಿ, ವಕೀಲನೂ, ನ್ಯಾಯಾಧೀಶನೂ, ಶಿಕ್ಷೆ ಜಾರಿಗೆ ತರುವವನೂ ಒಬ್ಬನೇ ಆದರೆ ಅದನ್ನು ನ್ಯಾಯವೆಂದು, ಧರ್ಮವೆಂದು ಕರೆಯಲಾದೀತೆ ಎಂದು ಪ್ರಶ್ನಿಸಿದರು. ಆಧುನಿಕ ಕಾಲದಲ್ಲಿ

ಪ್ರಜಾಸತ್ತಾತ್ಮಕವಾಗಿ ಸ್ಥಾಪಿಸಲ್ಪಟ್ಟ ಸಂಸ್ಥೆಗಳಿದ್ದು, ಅವಕ್ಕೆ ನ್ಯಾಯ ಪರಿಪಾಲನೆಯ ಜವಾಬ್ದಾರಿಯನ್ನು ಬಿಡುವುದೇ ಇಂದಿನ ನಿಜವಾದ ಧರ್ಮವೆಂದು ಅವರು ಸೂಚಿಸಿದರು.

ಇದೇ ಸಂದರ್ಭದಲ್ಲಿ ಆರೆಸ್ಸೆಸ್‌ನ ಮುಖವಾಣಿ 'ಆರ್ಗನೈಸರ್' ಪ್ರಕಟಿಸಿದ ಒಂದು ಲೇಖನ, ಮಹಾತ್ಮ ಗಾಂಧಿಯವರು ಕಲ್ಕತ್ತಾದಿಂದ ದೆಹಲಿಯವರೆಗೆ ಅಲ್ಲಾನ ಭಜನೆ ಮಾಡುತ್ತಿದ್ದರೆ, ಅದಕ್ಕೆ ಮೂರು ಕಾಸಿನ ಕಿಮ್ಮತ್ತೂ ನೀಡದ ಮುಸ್ಲಿಮರು ಪಂಜಾಬ್‌ನಲ್ಲಿ ಹಿಂದೂಗಳ ಮಾರಣಹೋಮ ನಡೆಸುತ್ತಿದ್ದಾರೆ ಎಂದು ಜರಿಯುತ್ತಾ, ಮಹಾತ್ಮರು ಹಿಂದೂಗಳ ಮಾನ್ಯ ನಾಯಕರಾಗಿ ಅವರನ್ನು ಮತ್ತು ಹಿಂದೂಸ್ತಾನವನ್ನು ಜಗತ್ತಿನ ಅಪ್ರತಿಮ ರಾಷ್ಟ್ರವನ್ನಾಗಿ ಸಂಘಟಿಸಲು ಇದು ಅತ್ಯುತ್ತಮ ಅವಕಾಶವಾಗಿದೆ ಎಂದು ಕರೆಯನ್ನೂ ಕೊಟ್ಟಿತ್ತು! ನವೆಂಬರ್‌ನಲ್ಲಿ ಮತ್ತೆ ದೆಹಲಿಗೆ ಭೇಟಿ ನೀಡಿದ ಗೋಳ್ವಲ್ಕರ್ ಮತ್ತಷ್ಟು ಹಣ ಸಂಗ್ರಹ ಮತ್ತು ಸದಸ್ಯತ್ವ ಅಭಿಯಾನ ನಡೆಸಿ ಹೋದುದನ್ನು ಗಮನಿಸಿದ್ದ ಸರ್ಕಾರದ ಗುಪ್ತಚರ ಇಲಾಖೆ, ಈ ಹೊಸ ಸದಸ್ಯರು ಹೆಚ್ಚಾಗಿ ಪಶ್ಚಿಮ ಪಂಜಾಬ್‌ನಿಂದ ಬಂದ ಹಿಂದೂ ನಿರಾಶ್ರಿತರಾಗಿದ್ದು, ಇವರ ಮೂಲಕ ನಗರದಲ್ಲಿ ಮುಸ್ಲಿಮರ ಮೇಲೆ ಮತ್ತೊಂದು ದಾಳಿ ನಡೆಸುವ ಸಾಧ್ಯತೆಯನ್ನು ವರದಿ ಮಾಡಿತ್ತು. ಗಾಂಧಿ, ನಗರದಲ್ಲಿ ಇರುವವರೆಗೆ ಇದು ಸಾಧ್ಯವಾಗದೆಂಬ ಅಭಿಪ್ರಾಯ ಆರೆಸ್ಸೆಸ್ ವಲಯದಲ್ಲಿ ವ್ಯಕ್ತವಾಗಿದೆಯೆಂದೂ ಅದು ಹೇಳಿತ್ತು. ಇದಕ್ಕೆ ಪ್ರತಿಕ್ರಿಯೆಯೋ ಎಂಬಂತೆ ಗಾಂಧಿ ಬಿರ್ಲಾ ಮಂದಿರದ ತಮ್ಮ ಪ್ರಾರ್ಥನಾ ಸಭೆಯೊಂದರಲ್ಲಿ (ಸೆಪ್ಟೆಂಬರ್, ೧೮) ಹೀಗೆ ಹೇಳಿದರು: 'ನಾನು ಪಾಕಿಸ್ತಾನಕ್ಕೂ ಹೋಗುತ್ತೇನೆ. ಅಲ್ಲಿ ಅವರನ್ನು ಸುಮ್ಮನೆ ಬಿಡುವುದಿಲ್ಲ. ಹಿಂದೂ ಮತ್ತು ಸಿಖ್ ಪರವಾಗಿ ನಾನಲ್ಲಿ ಪ್ರಾಣಾರ್ಪಣೆ ಮಾಡಲೂ ಹಿಂಜರಿಯುವುದಿಲ್ಲ. ಎಲ್ಲಿ ಸಾವು ಬಂದರೂ ಸುಖವೇ'.

ಡಿಸೆಂಬರ್ ೭ರಂದು ಆರೆಸ್ಸೆಸ್‌ನ ವಾರ್ಷಿಕ ಸಮ್ಮೇಳನಕ್ಕೆ ದೆಹಲಿಗೆ ಬಂದ ಗೋಳ್ವಲ್ಕರ್, ರಾಮಲೀಲಾ ಮೈದಾನದಲ್ಲಿ ಬೃಹತ್ ಸಭೆಯನ್ನು ಉದ್ದೇಶಿಸಿ ಮಾತನಾಡಿ, ತಮ್ಮ ಈ ಸಂಘಟನೆ ಈಗ ಬೃಹತ್ತಾಗಿ ಬೆಳೆದಿದ್ದು ಅದು ಶಿವಾಜಿ ರಾಣಾಪ್ರತಾಪರ ಪರಂಪರೆಯಲ್ಲಿ, ಹಿಂದೂ ಸಂಸ್ಕೃತಿಯನ್ನು ಕಾಪಾಡಲು ಬದ್ಧವಾಗಿದೆ ಎಂದು ಘೋಷಿಸಿದರು. ಅದೇ ದಿನ ಸಂಜೆ ರೋಹ್ತಕ್ ರಸ್ತೆಯಲ್ಲಿನ ಸಂಘದ ಆವರಣದಲ್ಲಿ ನಡೆದ ಎರಡು ಸಾವಿರ ಜನ 'ಪ್ರಮುಖ'ರ ಸಭೆಯಲ್ಲಿ ಮಾತನಾಡಿದ ಅವರು, ಹಿಂದೂಗಳು ಶಿವಾಜಿಯ ಗೆರಿಲ್ಲಾ ಯುದ್ಧ ತಂತ್ರವನ್ನನುಸರಿಸಿ ಪಾಕಿಸ್ತಾನವನ್ನು ನಾಶ ಮಾಡಬೇಕಾಗಿದೆ ಎಂದೂ, ಇದಕ್ಕೆ ಅಡ್ಡಿ ಬರುವ ಯಾರನ್ನೂ ಸಹಿಸಲು ಸಾಧ್ಯವಿಲ್ಲವೆಂದೂ ಹೇಳಿದರು. ಈ ಸಭೆಯ ಬಗ್ಗೆ ಸರ್ಕಾರವನ್ನು ತಲುಪಿದ ಗುಪ್ತಚರ ಇಲಾಖೆಯ ವರದಿ ಪ್ರಕಾರ, ಈ ದೇಶದಲ್ಲಿ ಯಾವ ಮುಸ್ಲಿಮನೂ ಇರದಂತೆ ನೋಡಿಕೊಳ್ಳುವುದು ಸಂಘದ ಉದ್ದೇಶವಾಗಿದೆ ಎಂದೂ, ಕಾಂಗ್ರೆಸ್‌ನ ಚುನಾವಣಾ ಗೆಲುವಿಗಾಗಿ ಗಾಂಧಿ, ಮುಸ್ಲಿಮರು ಈ ದೇಶದಲ್ಲಿ ಇರುವಂತೆ ನೋಡಿಕೊಳ್ಳುತ್ತಿದ್ದಾರೆಂದೂ ಸಭೆ ಅಭಿಪ್ರಾಯಪಟ್ಟು ಹಿಂದೂ ಧರ್ಮ ವಿರೋಧಿಗಳಲ್ಲದವರನ್ನು ಮುಟ್ಟುವುದು ತನ್ನ ಸಂಪ್ರದಾಯವಲ್ಲವೆಂದೂ, ಆದರೆ ಅಂತಹವರ ವರ್ತನೆ ಮಿತಿ ಮೀರಿ ಹೋದರೆ ಈ ಸಂಪ್ರದಾಯವನ್ನು

ಮುರಿಯಬೇಕಾಗುತ್ತದೆ ಎಂದು ತೀರ್ಮಾನಿಸಿತು.

ಚರ್ಚಿಲ್‌ಗೆ ಉತ್ತರ–ಕಾಂಗ್ರೆಸ್ ವಿಸರ್ಜನೆಗೆ ಸಲಹೆ

ಈ ಮಧ್ಯೆ ಅಕ್ಟೋಬರ್ ೨ರಂದು ಗಾಂಧಿಯವರ ೭೮ನೇ ಹುಟ್ಟುಹಬ್ಬವನ್ನು ಹಿಮಾಲಯದ ತಪ್ಪಲಿನ ತನ್ನ ಆಶ್ರಮದಿಂದ ಬಂದಿದ್ದ ಮೀರಾಬೆನ್‌ಳ ನೇತೃತ್ವದಲ್ಲಿ ಸರಳವಾಗಿ ಆಚರಿಸಲಾಯಿತು. ಜಗತ್ತಿನ ವಿವಿಧ ಭಾಗಗಳಿಂದ ವಿವಿಧ ಗಣ್ಯರ ಶುಭಾಶಯ ಸಂದೇಶಗಳು ಬಂದವು. ಗುಜರಾತಿ ಸಮಾಜ ಅವರಿಗೆ ನಿಧಿಯೊಂದನ್ನು ಅರ್ಪಿಸಿತು. ಗಾಂಧಿ ಈಗ ತಮಗೆ ಇನ್ನು ಹೆಚ್ಚು ಕಾಲ ಬದುಕುವ ಆಸೆ ಇಲ್ಲವೆಂದರು. ಜಗತ್ತಿಗೆ ಅಹಿಂಸೆಯ ಜೀವನ ಮಾರ್ಗ ತರುವ ಭಾರತದ ದಿವ್ಯ ಯೋಜನೆಯನ್ನು ವಿಫಲಗೊಳಿಸುವುದೇ ಈಗ ನಡೆದಿರುವ ವ್ಯಾಪಕ ಹಿಂಸಾಚಾರದ ಉದ್ದೇಶವೆಂದು ಗಾಂಧಿ ಅಭಿಪ್ರಾಯಪಟ್ಟಿದ್ದರು. ಇದಕ್ಕೆ 'ಹರಿಜನ್' ಪತ್ರಿಕೆಯಲ್ಲಿ ಓದುಗರೊಬ್ಬರು ಪ್ರತಿಕ್ರಿಯಿಸುತ್ತಾ, ಮಹಾತ್ಮರು ಆ ದಿವ್ಯ ಯೋಜನೆಯ ಏಕೈಕ ಸಾಧನವಾಗಿದ್ದು, ಹಾಗೆ ಭಾವಿಸದೆ ತಮ್ಮ ಪ್ರಯತ್ನಗಳನ್ನು ಮುಂದುವರೆಸಬೇಕೆಂದು ಕೋರಿದ್ದರು. ಅದಕ್ಕೆ ಉತ್ತರಿಸಿದ್ದ ಗಾಂಧಿ, ತಮಗಿಂತ ಸಮರ್ಥರಾದವರು, ನಿಷ್ಕಳಂಕ ಚಿತ್ತರಾದವರು ಈ ಪ್ರಯತ್ನವನ್ನು ಮುಂದುವರೆಸುತ್ತಾರೆಂಬ ಆಶಯವನ್ನು ವ್ಯಕ್ತಪಡಿಸಿದರು.

ಇದೇ ವೇಳೆ ಬ್ರಿಟಿಷ್ ಸಂಸತ್ತಿನಲ್ಲಿ ಭಾರತದಲ್ಲಿನ ಕೋಮು ಹಿಂಸಾಚಾರದ ಪ್ರಸ್ತಾಪ ಮಾಡಿದ ವಿರೋಧ ಪಕ್ಷದ ನಾಯಕ ಚರ್ಚಿಲ್, ಭಾರತೀಯರು ಸ್ವಾತಂತ್ರ್ಯಕ್ಕೆ ಅರ್ಹರಲ್ಲದ ಅನಾಗರಿಕ ಜನ ಎಂಬ ತನ್ನ ಮಾತು ನಿಜವಾಗಿದೆ ಎಂದು ಜಂಭ ಕೊಚ್ಚಿಕೊಂಡಿದ್ದ. ಇದಕ್ಕೆ ತಮ್ಮ ಪ್ರಾರ್ಥನಾ ಸಭೆಯಲ್ಲಿ ಪ್ರತಿಕ್ರಿಯಿಸಿದ ಗಾಂಧಿ, ಈ ಹಿಂಸಾಚಾರಕ್ಕೆ ತಾನೆಷ್ಟು ಕಾರಣನೆಂದು ಬ್ರಿಟಿಷ್ ಪ್ರಭುತ್ವ ಆತ್ಮಾವಲೋಕನ ಮಾಡಿಕೊಳ್ಳಬೇಕೆಂದು ಸೂಚಿಸುತ್ತಾ, ಒಂದಾಗಿದ್ದ ದೇಶವನ್ನು ಒಡೆದಾಳುವ ಅದರ ನೀತಿಯ ಅಂತಿಮ ಫಲವೇ ಇಂದಿನ ಹಿಂಸಾಚಾರವೆಂದು ಬಣ್ಣಿಸಿದರು. ಜೊತೆಗೆ ಚರ್ಚಿಲ್‌ನ ಮಾತನ್ನು ಹುಸಿ ಮಾಡುವಂತೆ ಜನ ವರ್ತಿಸಬೇಕೆಂದು ಆಗ್ರಹಿಸಿದರು.

ನವೆಂಬರ್ ಮಧ್ಯ ಭಾಗದಲ್ಲಿ ನಡೆದ ಎಐಸಿಸಿ ಅಧಿವೇಶನದಲ್ಲಿ ಮಾತನಾಡಿದ ಗಾಂಧಿ, ಭಾರತ ಹಿಂದೂಗಳಿಗೆ ಮಾತ್ರ ಸೇರಿದ ದೇಶವಲ್ಲ; ಹಾಗೆಯೇ ಪಾಕಿಸ್ತಾನ ಮುಸ್ಲಿಮರಿಗೆ ಮಾತ್ರ ಸೇರಿದ ರಾಷ್ಟ್ರವಲ್ಲ ಎಂಬುದು ಕಾಂಗ್ರೆಸ್ಸಿಗರ ತತ್ವವಾಗಿದ್ದು, ಅದಕ್ಕಾಗಿ ಕಾಂಗ್ರೆಸ್ಸಿಗರು ಈಗ ತುರ್ತಾಗಿ ದುಡಿಯುವ ಕಾಲ ಬಂದಿದೆ ಎಂದರು. ಶೇ.೩೩ರಷ್ಟು ಮುಸ್ಲಿಂ ಜನಸಂಖ್ಯೆಯುಳ್ಳ ದೆಹಲಿಯಲ್ಲಿ ಕ್ಷಿಪ್ರಗತಿಯಲ್ಲಿ ೧೩೦ ಮಸೀದಿಗಳಿಗೆ ಹಾನಿಯುಂಟು ಮಾಡಿರುವುದು ಬಹುಸಂಖ್ಯಾತರಾದ ಹಿಂದೂಗಳ ಧರ್ಮಕ್ಕೆ ಮರ್ಯಾದೆ ತರುವಂತಹ ಕೆಲಸವಲ್ಲವೆಂದು ವಿಷಾದಿಸಿದರು. ಈ ಗಲಭೆಗಳ ಅವಧಿಯಲ್ಲಿ ೪೦ ಸಾವಿರ ಮಹಿಳೆಯರನ್ನು ಅಪಹರಿಸುವ ಅನಾಗರಿಕ ಮತ್ತು ಬರ್ಬರ ಕೆಲಸಗಳಿಗೆ ಕೈಹಾಕುವ ಪಾಶವೀ ಪ್ರವೃತ್ತಿ ಬೆಳೆದಿರುವುದನ್ನು ಪ್ರಸ್ತಾಪಿಸಿದ ಅವರು, ಮೃದುಲಾ ಸಾರಾಭಾಯಿ, ಕಮಲಾದೇವಿ ಚಟ್ಟೋಪಾಧ್ಯಾಯ, ರಾಮೇಶ್ವರಿ ನೆಹರೂರಂತಹ ಜಾಗೃತ ಮಹಿಳೆಯರು ಸಂತ್ರಸ್ತ ಮಹಿಳೆಯರನ್ನು ಅವರವರ ಮೂಲ ಕುಟುಂಬಗಳಿಗೆ ತಲುಪಿಸುವ ಕಾರ್ಯದಲ್ಲಿ ತೊಡಗಿದ್ದು, ಅವರೊಂದಿಗೆ

ಸಹಕರಿಸಬೇಕೆಂದು ಕಾಂಗ್ರೆಸ್ಸಿಗರಿಗೆ ಕರೆ ನೀಡಿದರು. ಇದೇ ಸಂದರ್ಭದಲ್ಲಿ ಅವರಾಡಿದ ಈ ಮಾತೊಂದು ಅಂದಿನ ರಾಜಕೀಯ ಒಲವು ನಿಲುವುಗಳನ್ನು ಸೂಕ್ಷ್ಮವಾಗಿ ಪ್ರತಿಬಿಂಬಿಸುವಂತಿತ್ತು: 'ಕಾಂಗ್ರೆಸ್ ಮುಸ್ಲಿಮರಿಗೆ ಶರಣಾಗಿದೆ ಎಂಬ ಪ್ರಚಾರ ನಡೆದಿದೆ. ಸೋತು ಸುಣ್ಣವಾಗಿರುವ ಗಾಂಧಿ ಅದಕ್ಕೆ ತಕ್ಕನಂತೆ ಆಡುತ್ತಿದ್ದು, ಅವರನ್ನು ಹಾಗೇ ಬಿಟ್ಟರೆ ಒಳ್ಳೆಯದೆಂದೂ ಕೆಲವರು ಮಾತಾಡುತ್ತಿರುವುದೂ ನನಗೆ ಗೊತ್ತಿದೆ. ಇನ್ನು ನೆಹರೂ ಪರವಾಯಿಲ್ಲವಷ್ಟೆ; ಉತ್ತಮ ನಾಯಕನೇನಲ್ಲ. ಆದರೆ ಸರ್ದಾರ್ ಪಟೇಲರಲ್ಲಿ ನಾಯಕತ್ವ ಗುಣ ಉಳಿದಿದೆ. ಏಕೆಂದರೆ ಆತ ಇನ್ನೂ ಹಿಂದೂವಾಗಿ ಉಳಿದಿದ್ದಾನೆ. ಆದರೇನು ಮಾಡುವುದು, ಆತ ಇನ್ನೂ ಕಾಂಗ್ರೆಸ್ಸಿಗನೇ ಆಗಿದ್ದಾನೆ!'

ಕಾಂಗ್ರೆಸ್ ಮತ್ತು ಸರ್ಕಾರದ ನಾಯಕತ್ವದ ಮಟ್ಟದಲ್ಲಿ ಬಿರುಕು ಕಾಣಸಿಕೊಂಡಿದ್ದುದು ಗಾಂಧಿಯವರ ಗಮನಕ್ಕೆ ಬಂದಿತ್ತು. ಅವರು ನೆಹರೂ–ಪಟೇಲರ ನಡುವೆ ದೀರ್ಘ ಕಾಲದ ಸಂಧಾನಗಳನ್ನು ನಡೆಸಿಯೂ ಇದ್ದರು. ಇದಕ್ಕೆ ಪರಿಹಾರೋಪಾಯವಾಗಿ ಜೆಪಿಯವರನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮಾಡಿ ಪಕ್ಷಕ್ಕೆ ಚೈತನ್ಯ ನೀಡುವ ಪ್ರಸ್ತಾಪ ಮಾಡಿ ವಿಫಲವಾಗಿದ್ದರು. ಇದೇ ಸಂದರ್ಭದಲ್ಲಿ ಅವರಿಗೆ ಏನನ್ನಿಸಿತೋ ಏನೋ ಹೀಗೆ ನುಡಿದರು: 'ಕಾಂಗ್ರೆಸ್ಸಿಗೆ ಇನ್ನು ತೇಪೆ ಹಾಕಲು ಹೋಗಿ ಪ್ರಯೋಜನವಿಲ್ಲ. ಅದು ಇನ್ನಷ್ಟು ಕೊಳೆತು ನಾರುವ ಮುನ್ನ ತಾನಾಗಿ ವಿಸರ್ಜನೆಗೊಳ್ಳುವುದು ಒಳ್ಳೆಯದು. ಅದರಿಂದ ದೇಶದ ರಾಜಕೀಯದಲ್ಲಿ ಹೊಸ ಗಾಳಿ ಬೀಸಲು ಸಹಾಯಕವಾಗುವುದು. ಆದರೆ ನನ್ನ ಈ ಮಾತು ಯಾರಿಗೂ ಅರ್ಥವಾಗುತ್ತಿಲ್ಲ.'

ನಂತರದ ಕೆಲವೇ ದಿನಗಳಲ್ಲಿ ನಡೆದ ಸಾಮಾಜಿಕ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಗಾಂಧಿ ಕಾಂಗ್ರೆಸ್ಸಿಗರಿಗೆ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಆಸಕ್ತಿ ಕಡಿಮೆಯಾಗುತ್ತಿದ್ದು, ಅಧಿಕಾರ ಅವರ ವ್ಯಕ್ತಿತ್ವಗಳಿಗೆ ತುಕ್ಕು ಹಿಡಿಸುತ್ತಿದೆ ಎಂದು ವಿಷಾದಿಸಿದರು. ಗ್ರಾಮಗಳ ಸಬಲೀಕರಣಕ್ಕಾಗಿ ಇಂದು ರಚನಾತ್ಮಕ ಚಟುವಟಿಕೆಗಳು ನಡೆಯಬೇಕಿದ್ದು, ಅದಕ್ಕೆ ಸರ್ಕಾರಗಳು ಅಡ್ಡಿ ಬಂದರೆ ಅವುಗಳ ವಿರುದ್ಧ ಜನಸಂಘಟನೆ ಮಾಡಿ ಅವನ್ನು ಕಿತ್ತೊಗೆಯಬೇಕು ಎಂದೂ ಅವರು ಸಲಹೆ ಮಾಡಿದರು.

ನವೆಂಬರ್ ೨೨ರಂದು ಗಾಂಧಿ ತಮ್ಮನ್ನು ಭೇಟಿ ಮಾಡಿದ ರಾಮಮನೋಹರ ಲೋಹಿಯಾ ಅವರೊಂದಿಗೆ ಆತ್ಮೀಯ ಮತ್ತು ದೀರ್ಘ ಮಾತುಕತೆ ನಡೆಸಿ, ಧೀರರೂ, ಬುದ್ಧಿಶಾಲಿಯೂ, ಶೀಲವಂತರೂ ಆದ ಲೋಹಿಯಾರಂತಹವರು ಮುಂದಿನ ದಿನಗಳಲ್ಲಿ ಒಂದು ದೊಡ್ಡ ಜವಾಬ್ದಾರಿ ನಿರ್ವಹಿಸಬೇಕಾಗಿದೆ ಎಂದು ಸೂಚಿಸುತ್ತಾ ಇದಕ್ಕಾಗಿ ಅವರು ಸಾಮಾನ್ಯ ಜನರೊಂದಿಗೆ ಗುರುತಿಸಿಕೊಳ್ಳಲು, ಧೂಮಪಾನ, ಚಹಾಪಾನ, ನಾಸ್ತಿಕತೆ ಇತ್ಯಾದಿಗಳನ್ನು ತ್ಯಜಿಸಬೇಕೆಂದು ಸಲಹೆ ಮಾಡಿದರು. ದೇವರಲ್ಲಿ ನಂಬಿಕೆ ಇಲ್ಲದವನು ಒಳ್ಳೆಯ ಸತ್ಯಾಗ್ರಹಿಯಾಗಬಲ್ಲನೆ? ಎಂಬುದು ಅವರ ಪ್ರಶ್ನೆಯಾಗಿತ್ತು. ಇದೆಲ್ಲದರ ವಿವರಗಳ ಬಗ್ಗೆ ಮಾತಾಡಲು ಬಹುಬೇಗ ಭೇಟಿಯಾಗೋಣವೆಂದೂ ಅವರು ಲೋಹಿಯಾರಿಗೆ ತಿಳಿಸಿದರು.

■

೯೨

ಹೇ! ರಾಮ್!!

೧೯೪೮: ಹೊಸ ವರ್ಷ ಉದಯವಾಗಿತ್ತು. ಪರಿಸ್ಥಿತಿ ಮಾತ್ರ ಹಾಗೇ ಉದ್ವಿಗ್ನವಾಗಿತ್ತು. ರಾಜಸ್ಥಾನ ಗಡಿಯ ಮೇವಾರ ಮುಸ್ಲಿಮರನ್ನು ಪಾಕಿಸ್ತಾನಕ್ಕೆ ಓಡಿಸುವ ಪ್ರಯತ್ನಗಳು ನಡೆದಿದ್ದವು. ಜುನಾಗಢ ಸಂಸ್ಥಾನದ ನವಾಬ ಜನಮತಗಣನೆ ಭಾರತದ ಪರವಾದಾಗ ಪಾಕಿಸ್ತಾನಕ್ಕೆ ಓಡಿಹೋಗಿದ್ದ. ಪೂರ್ವಪಂಜಾಬ್‌ನ ಪಾಣಿಪತ್‌ನ ಪುರಾತನ ನಿವಾಸಿಗಳಾಗಿದ್ದ ಮುಸ್ಲಿಮರು ಪಶ್ಚಿಮ ಪಂಜಾಬ್‌ನಿಂದ ಬಂದ ಹಿಂದೂ-ಸಿಖ್ ನಿರಾಶ್ರಿತರ ದೊಡ್ಡ ಸಮೂಹ ತಮ್ಮೂರಿನಲ್ಲಿ ಬಿಡಾರ ಹೂಡಿದಾಗ ಹೆದರಿ ಪಾಕಿಸ್ತಾನಕ್ಕೆ ವಲಸೆ ಹೊರಟರು. ವಾಯುವ್ಯ ಗಡಿ ಪ್ರಾಂತ್ಯದಲ್ಲಿ ಖಾನ್ ಸೋದರರನ್ನು ಸ್ಥಾನಬದ್ಧತೆಯಲ್ಲಿರಿಸಲಾಗಿತ್ತು ಮತ್ತು ಅಲ್ಲಿನ ಹಿಂದೂ ಹಾಗೂ ಸಿಕ್ಖರನ್ನು ಅಲ್ಲಿಂದ ಓಡಿಸುವ ಪ್ರಯತ್ನಗಳು ನಡೆದಿದ್ದವು. ಈ ಮಧ್ಯೆ ವಿಭಜನೆಯಲ್ಲಿ ಯಾವ ದೇಶದ ಭಾಗವಾಗಲೂ ನಿರಾಕರಿಸಿದ್ದ ಕಾಶ್ಮೀರದ ಮೇಲೆ ಪಾಕಿಸ್ತಾನದ ಕಡೆಯಿಂದ ಆಫ್ರಿದಿ ಆದಿವಾಸಿಗಳ ದಾಳಿ ನಡೆದಿತ್ತು. ಭಾರತದ ಸೇನೆ ಅದನ್ನು ಹಿಮ್ಮೆಟ್ಟಿಸಿ, ಗಾಂಧಿಯವರ ಸಲಹೆಯ ಮೇರೆಗೆ, ಅಲ್ಲಿನ ಜನನಾಯಕ ಷೇಕ್ ಅಬ್ದುಲ್ಲಾರ ಮಧ್ಯಸ್ಥಿಕೆಯಲ್ಲಿ ಆ ಪ್ರಾಂತ್ಯವನ್ನು ಅದರ ಹಿಂದೂ ದೊರೆಯೊಡನೆ ನಡೆದ ಸಂಧಾನಗಳಲ್ಲಿ ಪರಸ್ಪರ ಒಪ್ಪಿತವಾದ ಕೆಲವು ಷರತ್ತುಗಳ ಮೇಲೆ ಭಾರತದ ಭಾಗವಾಗಿ ಮಾಡಿಕೊಳ್ಳುವ ಪ್ರಕ್ರಿಯೆ ನಡೆದಿತ್ತು. ಈ ವಿಷಯದಲ್ಲಿ ನೆಹರೂ ಮತ್ತು ಪಟೇಲರ ನಡುವೆ ಭಿನ್ನಮತ ಉಂಟಾಗಿ ವಿವಾದವನ್ನು ನೆಹರೂ ವಿಶ್ವಸಂಸ್ಥೆಗೆ ಒಯ್ದಿದ್ದರು. ಇದನ್ನೊಪ್ಪದ ಗಾಂಧಿ ಇದು ದ್ವಿಪಕ್ಷೀಯವಾಗಿ ತೀರ್ಮಾನವಾಗಬೇಕಾಗಿದ್ದ ವಿಷಯ ಎಂದು ಅಭಿಪ್ರಾಯಪಟ್ಟರು. ಆದರೆ ಇದೆಲ್ಲದರ ಹಿನ್ನೆಲೆಯಲ್ಲಿ ಪಟೇಲರು ಸ್ವಾತಂತ್ರ್ಯ ಘೋಷಣೆಯ ಪ್ರಕಟಣೆಯ ಭಾಗವಾಗಿ ಒಪ್ಪಂದವಾಗಿದ್ದಂತೆ ಭಾರತದ ಖಜಾನೆಯಿಂದ ಪಾಕಿಸ್ತಾನದ ಪಾಲೆಂದು ನೀಡಬೇಕಿದ್ದ ೫೫ ಕೋಟಿ ರೂಪಾಯಿಗಳನ್ನು ನೀಡಬಾರದೆಂದು ಸಲಹೆ ನೀಡಿದಾಗ ಗಾಂಧಿ ಅದನ್ನು ಒಪ್ಪಲಿಲ್ಲ. ಕಾಶ್ಮೀರ ಇನ್ನೂ ಅಂತಿಮ ಇತ್ಯರ್ಥಕ್ಕೆ ಬರಬೇಕಾದ ವಿಷಯವಾಗಿರುವುದರಿಂದ ಅದನ್ನು ವಚನಭಂಗಕ್ಕೆ ನೆಪವನ್ನಾಗಿ ಮಾಡಿಕೊಳ್ಳಬಾರದೆಂದು ಅಭಿಪ್ರಾಯಪಟ್ಟರು.

ಸಾಮಾನ್ಯವಾಗದ ಜನಜೀವನ–ಮತ್ತೊಂದು ಉಪವಾಸದ ನಿರ್ಧಾರ

ಈ ಎಲ್ಲ ಸಮಸ್ಯೆಗಳ ನಡುವೆ ಪಂಜಾಬ್‌ಗೆ ಹೋಗಬೇಕೆಂಬ, ಪಾಕಿಸ್ತಾನಕ್ಕೆ ಹೋಗಬೇಕೆಂಬ ಗಾಂಧಿಯವರ ಯೋಜನೆ ಅಂತಿಮಗೊಳ್ಳಲು ಸಾಧ್ಯವಾಗಲೇ ಇಲ್ಲ. ಡಿಸೆಂಬರ್ ಚಳಿಯಲ್ಲಿ ತಮ್ಮ ಪರಿವಾರದೊಂದಿಗೆ ಬಿರ್ಲಾಮಂದಿರದ ಕೆಳ ಹಜಾರದಲ್ಲಿ ಚಾಪೆಗಳನ್ನು ಹಾಸಿಕೊಂಡು ಮಲಗುತ್ತಿದ್ದು, ಅವರು ಜ್ವರ ಮತ್ತು ಕೆಮ್ಮುಗಳಿಂದ

ಬಾಧಿತರಾಗಿದ್ದರಾದರೂ ಹೊಸ ವರ್ಷದ ಆರಂಭದ ಹೊತ್ತಿಗೆ ಸುಧಾರಿಸಿಕೊಂಡಿದ್ದರು. ವಿಷಮಶ್ವೀತ ಜ್ವರದಿಂದ ನರಳುತ್ತಿದ್ದ ಬ್ರಿಟನ್‌ನ ತಮ್ಮೋರ್ವ ಕ್ವೇಕರ್ ಗೆಳೆಯರೊಬ್ಬರ ಶುಶ್ರೂಷೆಯನ್ನೂ ಮಾಡಿದ್ದ ಅವರು, ಆ ಕ್ವೇಕರ್ ಗೆಳೆಯನ ಕ್ರಿಸ್ಮಸ್ ಆಚರಣೆಗೂ ವ್ಯವಸ್ಥೆ ಮಾಡಿ ಸಾಂಪ್ರದಾಯಿಕ ವೈನ್ ಸೇವನೆಗೂ ನಕ್ಕು 'ಅನುಮತಿ' ನೀಡಿದ್ದರು. ಬಹು ದಿನಗಳ ನಂತರ ಪ್ಯಾರೇಲಾಲ್ ನೌಖಾಲಿಯಿಂದ ಗಾಂಧಿ ಬಳಿಗೆ ವಾಪಸಾಗಿದ್ದರು. ಆ ಸಂದರ್ಭದಲ್ಲಿ ದೇವದಾಸ ಪ್ಯಾರೇಲಾಲರನ್ನು ತಮ್ಮ ಮನೆಗೆ ಊಟಕ್ಕೆ ಕರೆದಾಗ ಅಲ್ಲೇ ಇದ್ದ ಗಾಂಧಿ, 'ಇದೆಂಥಹ ವಿಚಿತ್ರ ನೋಡಿ! ಈ ನನ್ನ ಮಗ ತನ್ನ ಅಪ್ಪನನ್ನು ಮಾತ್ರ ಎಂದೂ ಊಟಕ್ಕೆ ಕರೆದಿಲ್ಲ!!' ಎಂದು ಹಾಸ್ಯ ಚಟಾಕಿ ಹಾರಿಸಿದರು. ಸುತ್ತಲಿದ್ದ ಜನ ಈ ವೃದ್ಧನ ಸ್ಥೈರಣೆ ಮತ್ತು ಚಿತ್ತ ಸಮತೋಲನಗಳ ಸಾಮರ್ಥ್ಯ ಕಂಡು ಬೆರಗಾಗಿದ್ದರು.

ಆದರೆ ಗಾಂಧಿಯ ಅಂತರಂಗ ಮೇಲ್ನೋಟಕ್ಕೆ ಕಂಡಷ್ಟೇನೂ ಶಾಂತವಾಗಿರಲಿಲ್ಲ. ಕೋಮು ಪರಿಸ್ಥಿತಿ ಇನ್ನೂ ಉದ್ವಿಗ್ನವಾಗಿಯೇ ಇತ್ತು. ಮುಸ್ಲಿಮರು ದೆಹಲಿಯ ಬೀದಿಗಳಲ್ಲಿ ಓಡಾಡಲು ಇನ್ನೂ ಭಯಪಡುತ್ತಿದ್ದರು. ಪಲಾಯನ ಮಾಡಿದ್ದ ಮುಸ್ಲಿಂ ಕುಟುಂಬಗಳು ತಮ್ಮ ನೆಲೆಗಳಿಗೆ ವಾಪಸಾಗಲು ಹೆದರಿದ್ದವು. ಪಾಕಿಸ್ತಾನದಿಂದ ಬಂದಿದ್ದ ಲಕ್ಷಾಂತರ ಹಿಂದೂ-ಸಿಖ್ ನಿರಾಶ್ರಿತರು ತಮ್ಮ ನೆಲೆಗಳಿಗೆ ವಾಪಸ್ ಹೋಗಲು ನಿರಾಕರಿಸಿದ್ದಲ್ಲದೆ, ನಗರದ ಜನಜೀವನ ಸಾಮಾನ್ಯವಾಗಲು ಅಡ್ಡಿಯಾಗುವಂತಹ ಸುದ್ದಿಗಳನ್ನು ಹರಡುತ್ತಾ ಮುಸ್ಲಿಂ ದ್ವೇಷದ ಕ್ರೋಢೀಕರಣದಲ್ಲಿ ತೊಡಗಿದ್ದರು. ಅವರ ಪ್ರಾರ್ಥನಾ ಸಭೆಗಳಲ್ಲಿ ಗಾಂಧಿಯವರನ್ನು ಮುಸ್ಲಿಂ ಪರ ಎಂದು ನಿಂದಿಸಲಾಗುತ್ತಿತ್ತು. ಕೆಲವರು ಬಹಿರಂಗವಾಗಿ ಅವರ ಸಾವನ್ನೂ ಹಾರೈಸತೊಡಗಿದ್ದರು. ಇದೆಲ್ಲ ಸೇರಿದಂತೆ ಗಾಂಧಿಯವರ ದುಃಖ ಮತ್ತೊಂದು ಮಹಾ ಉಪವಾಸದ ಪ್ರಕಟಣೆಯ ಮೂಲಕ ಸ್ಫೋಟಿಸಿತ್ತು. ದೆಹಲಿ ಹೊರವಲಯದ ಮೆಹ್ರೋಲಿ ಎಂಬ ಹಳ್ಳಿಯಲ್ಲಿದ್ದ ಖ್ವಾಜಾ ಭಕ್ತಿಯಾರ್ ಎಂಬ ೧೩ನೇ ಶತಮಾನದ ಸೂಫಿ ಸಂತನ ಗೋರಿಯನ್ನು ಕಾಪಾಡಿಕೊಂಡಿದ್ದ ಮುಸ್ಲಿಂ ಕುಟುಂಬವನ್ನು ಅಲ್ಲಿಂದ ಓಡಿಸಿ ಆ ಆವರಣವನ್ನು ಹಿಂದೂ ಆಕ್ರಮಣಕಾರರು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆಂಬ ಸುದ್ದಿ ಇದಕ್ಕೊಂದು ನೆಪವಾಯಿತು. ಧರ್ಮಭೇದವಿಲ್ಲದೆ ಸಾವಿರಾರು ಜನ ಬಂದು ಹರಕೆ ಮಾಡಿಕೊಂಡು ಹೋಗುತ್ತಿದ್ದ ಈ ಸರ್ವಧರ್ಮ ಶ್ರದ್ಧಾ ಕೇಂದ್ರ ಈಗ ಮುಚ್ಚಲ್ಪಟ್ಟಿತ್ತಲ್ಲದೆ ಇಷ್ಟರಲ್ಲೇ ಅಲ್ಲಿ ಆರಂಭವಾಗಬೇಕಿದ್ದ ವಾರ್ಷಿಕ ಉರುಸ್ ಅನಿಶ್ಚಿತವಾಗಿತ್ತು.

ದೆಹಲಿ ನಗರ ಮತ್ತು ಸುತ್ತಮುತ್ತ ಗಲಭೆಗಳನ್ನು ಅಡಗಿಸಲಾಗಿತ್ತಾದರೂ, ಶಾಂತಿ ನೆಲೆಸಿರಲಿಲ್ಲ. ಆಗಾಗ್ಗೆ ಅಲ್ಲಿ ಸ್ಫೋಟಿಸುತ್ತಿದ್ದ ಗಲಭೆಗಳು ಹೃದಯಗಳ ಬೆಸುಗೆ ದೂರದ ವಿಷಯವೇ ಆಗಿದೆ ಎಂಬುದನ್ನು ಸೂಚಿಸುತ್ತಿತ್ತು. ಎಲ್ಲ ಧರ್ಮಗಳ ಜನ ಒಟ್ಟಿಗೆ ಬಾಳುವ ದೇಶದ ಅವರ ಕನಸು, ವಿಭಜನೆಯ ನಂತರದ ಸಂದರ್ಭದಲ್ಲೂ ಛಿದ್ರವಾಗಿತ್ತು. ಅವರಿಗೆ ತಾವು ಬದುಕಿನುದ್ದಕ್ಕೂ ಅನೇಕ ಪ್ರಯೋಗಗಳ ಮೂಲಕ ಸಿದ್ಧಗೊಳಿಸಿಕೊಂಡಿದ್ದ ದೇವರು ಒಬ್ಬನೇ ಎಂಬ ಸತ್ಯವೇ ಅನುಮಾನಕ್ಕೀಡಾಗಿತ್ತು. ಅವರ ಪ್ರಕಾರ ದೇವರೇ ಆಗಿದ್ದ ಆ ಸತ್ಯವನ್ನು ಪರೀಕ್ಷೆಗೊಡ್ಡಲು ಅವರು ನಿರ್ಧರಿಸಿದ್ದರು. ಅವರು ಜನವರಿ ೧೨ರಂದು, ತಮ್ಮ ಬೆಳಗಿನ ಪ್ರಾರ್ಥನಾ ಸಭೆಯಲ್ಲಿ ನಾಳೆ ತಾವು ಉಪವಾಸ ಆರಂಭಿಸುತ್ತಿರುವುದಾಗಿ ಪ್ರಕಟಿಸಿದರು. ಈ ಸಂದರ್ಭದಲ್ಲಿ ಅವರು ಹೀಗೆ ಹೇಳಿದರು:

'ಭಾರತದ ಅವನತಿಯನ್ನು, ಹಿಂದೂ, ಮುಸ್ಲಿಂ, ಸಿಖ್ ಧರ್ಮಗಳ ಅವನತಿಯನ್ನು ನೋಡುತ್ತಾ ಕೂರುವುದಕ್ಕೆ ಬದಲು ನನಗೆ ಮರಣವೇ ಲೇಸಾಗಿ ಕಾಣುತ್ತಿದೆ. ವಿವಿಧ ಧರ್ಮಗಳ ಜನರ ಪ್ರಾಣ-ಮಾನ-ಆಸ್ತಿಗಳನ್ನು ರಕ್ಷಿಸಲಾಗದಿದ್ದಲ್ಲಿ, ಎಲ್ಲರನ್ನೂ ಸಮಾನವಾಗಿ ಕಾಣದಿದ್ದಲ್ಲಿ ಪಾಕಿಸ್ತಾನವೂ ನಾಶ ಹೊಂದಲಿದೆ. ಪಾಕಿಸ್ತಾನವನ್ನು ಅನುಸರಿಸಹೊರಟಿರುವ ಭಾರತವೂ ನಾಶವಾಗುವುದು ಖಂಡಿತ. ಆದರೆ ನೆನಪಿರಲಿ, ಇಸ್ಲಾಂ ಭಾರತದಾಚೆಯೂ ಇದ್ದರೆ ಹಿಂದೂ ಮತ್ತು ಸಿಖ್ ಧರ್ಮಗಳು ಭಾರತದಲ್ಲಿ ಮಾತ್ರ ಇರುವುವು.

'ದಯವಿಟ್ಟು ಯಾರೂ ಇಲ್ಲಿಗೆ ಬಂದು ನನ್ನ ಮನ ಒಲಿಸುವ ಪ್ರಯತ್ನ ಮಾಡಬೇಡಿರಿ. ಬದಲಿಗೆ ನಿಂನಿಮ್ಮ ಆತ್ಮಪರೀಕ್ಷೆ ಮಾಡಿಕೊಳ್ಳಿ. ದೇಶ, ಕನಿಷ್ಠ ದೆಹಲಿ ನಗರಕ್ಕೆ ನನ್ನ ಆತ್ಮದ ಮೊರೆ ಕೇಳಿಸಿದಲ್ಲಿ ಈ ಉಪವಾಸ ಬೇಗನೆ ನಿಲ್ಲಬಹುದು. ಇಲ್ಲದಿದ್ದರೆ ಅದು ನಿಲ್ಲುವುದೇ ಇಲ್ಲ. ಹಾಗೆಂದು ಸರ್ಕಾರ ನನ್ನನ್ನು ಉಳಿಸಲು ಜನರನ್ನು ನಿರ್ದಯವಾಗಿ ದಂಡಿಸಕೂಡದು'.

ಎಪ್ಪತ್ತೆಂಟರ ವೃದ್ಧರು ಆಮರಣಾಂತ ಉಪವಾಸ ಕೂರುವ ಸಂಗತಿ ಇಡೀ ದೇಶವನ್ನೇ ತಲ್ಲಣಗೊಳಿಸಿತು. ಮಗ ದೇವದಾಸ ಪರಿಪರಿಯಾಗಿ ಬೇಡಿಕೊಂಡ. ನೆಹರೂ ತಾಸುಗಟ್ಟಲೆ ಕೂತು ಚರ್ಚಿಸಿದರು. ಪಟೇಲರು ಕುಸಿದೇ ಹೋಗಿದ್ದರು. ರಾಜಾಜಿ ಮಾತ್ರ ಜಗತ್ತಿನ ಶ್ರೇಷ್ಠ ಮನಸ್ಸಿನ ಈ ನಿರ್ಧಾರಕ್ಕೆ ನಾನು ಎದುರಾಡಲಾರೆ ಎಂದರು. ಗಾಂಧಿ ಗವರ್ನರ್ ಜನರಲ್ ಮೌಂಟ್‌ಬೇಟನ್‌ರನ್ನು ಕಂಡು ತಮ್ಮ ಉಪವಾಸ ನಿರ್ಧಾರದ ವಿಷಯ ತಿಳಿಸಿದರು. ಅವರು ಅದರಿಂದ ದೇಶಕ್ಕೆ ಒಳ್ಳೆಯದಾಗುವುದಾದರೆ ಆಗಲಿ ಎಂದರು.

ಜನವರಿ ೧೩ರಂದು ಮೇಕೆ ಹಾಲು, ಬೇಯಿಸಿದ ತರಕಾರಿ ಮತ್ತು ಹಣ್ಣಿನ ರಸ ಸೇರಿದ ಊಟ ಮುಗಿಸಿದ ಗಾಂಧಿ ತಮ್ಮನ್ನು ಭೇಟಿ ಮಾಡಲು ಬಂದ ಪಟೇಲರೊಂದಿಗೆ ಸುದೀರ್ಘವಾಗಿ ಮಾತನಾಡಿದರು. ತಮ್ಮ ಉಪವಾಸ ಯಾವ ದೃಷ್ಟಿಯಿಂದಲೂ ಅವರ ಧೋರಣೆಗಳ ವಿರುದ್ಧವಲ್ಲ ಎಂದು ಸ್ಪಷ್ಟಪಡಿಸಿ ಅವರನ್ನು ಸಮಾಧಾನ ಮಾಡಿ ಕಳಿಸಿದರು. ಸರಿಯಾಗಿ ಮಧ್ಯಾಹ್ನ ಹನ್ನೊಂದೂವರೆ ಘಂಟೆಗೆ ಉಪವಾಸ ಆರಂಭಿಸಿರುವುದಾಗಿ ಘೋಷಿಸಿದರು. ತಾವು ಈ ಅನಿರ್ದಿಷ್ಟ ಕಾಲದ ಉಪವಾಸದ ಸಮಯದಲ್ಲಿ ನೀರು ಅಥವಾ, ಸ್ವಲ್ಪ ಉಪ್ಪು ಅಥವಾ ನಿಂಬೆ ರಸ ಬೆರೆತ ನೀರನ್ನು ಮಾತ್ರ ಸೇವಿಸುವುದಾಗಿ ತಿಳಿಸಿದ ಅವರು, ಯಾವ ಬಾಹ್ಯ ಒತ್ತಡವೂ ಇಲ್ಲದೆ ಕೇವಲ ಕರ್ತವ್ಯ ಪ್ರಜ್ಞೆಯಿಂದ ಎಲ್ಲ ಸಮುದಾಯಗಳ ನಡುವೆ ಹೃದಯ ಸಂವಾದ ಆರಂಭವಾಗಿದೆ ಎಂಬುದು ತಮಗೆ ಮನವರಿಕೆಯಾದ ನಂತರ ಈ ಉಪವಾಸವನ್ನು ನಿಲ್ಲಿಸುವುದಾಗಿ ಹೇಳಿದರು.

ಗಾಂಧಿ ವಿರುದ್ಧ ಘೋಷಣೆ-ಸುಧಾರಿಸಲಾರಂಭಿಸಿದ ಪರಿಸ್ಥಿತಿ

ಗಾಂಧಿಯವರು ಉಪವಾಸ ಆರಂಭಿಸುತ್ತಿದ್ದಂತೆ ಭಾರತದಲ್ಲಿ ಮಾತ್ರವಲ್ಲ, ಪಾಕಿಸ್ತಾನದಲ್ಲೂ ವಾತಾವರಣ ಬದಲಾಗತೊಡಗಿತು. ದೆಹಲಿಯಲ್ಲಿ ಸರ್ವಧರ್ಮ ಪ್ರಾರ್ಥನೆಗಳು ಆರಂಭವಾಗಿದ್ದವು. ಮುಸ್ಲಿಂ ಮಹಿಳೆಯರೂ ಬುರ್ಖಾ ಧರಿಸಿಯೇ ಪ್ರಾರ್ಥನೆಗೆ ಬಂದಿದ್ದರು. ಕೆಲವು ಹಿಂದೂ ಮತ್ತು ಸಿಖ್ ನಿರಾಶ್ರಿತರ ಶಿಬಿರಗಳಲ್ಲಿ

ಗಾಂಧಿಯವರಿಗೆ ಬೆಂಬಲವಾಗಿ ಉಪವಾಸ ಆಚರಿಸಲಾಯಿತು. ಮುಸ್ಲಿಮರ ಪ್ರವೇಶವನ್ನು ನಿಷೇಧಿಸಲಾಗಿದ್ದ ಕೆಲ ಪ್ರದೇಶಗಳಿಗೀಗ ಮುಕ್ತ ಪ್ರವೇಶ ಘೋಷಿಸಲಾಯಿತು. ಪಾಕಿಸ್ತಾನದ ಗವರ್ನರ್ ಜನರಲ್ ಮಹಮ್ಮದಾಲಿ ಜಿನ್ನಾ, ಎರಡೂ ರಾಷ್ಟ್ರಗಳ ಒಳಿತಿಗಾಗಿ ಗಾಂಧಿ ಇನ್ನೂ ಬಹುಕಾಲ ಬದುಕಬೇಕೆಂದು ಆಶಿಸಿ ಸಂದೇಶ ಕಳಿಸಿದ್ದರು. ಪಾಕಿಸ್ತಾನದ ಇಬ್ಬರು ಸಚಿವರೂ ಗಾಂಧಿಯವರನ್ನು ಜಗತ್ತಿನ ಧರ್ಮಗುರುಗಳ ನಂತರದ ಮಹಾನ್ ವ್ಯಕ್ತಿಯೆಂದು ಬಣ್ಣಿಸಿ, ಇವರ ಉಪವಾಸ ಎರಡೂ ದೇಶಗಳ ನಾಯಕರು ಕೂಡಲೇ ಭೇಟಿಯಾಗಿ ಶಾಂತಿ ಸ್ಥಾಪನೆಗಾಗಿ ಪ್ರಾಮಾಣಿಕ ಪ್ರಯತ್ನಗಳನ್ನು ಆರಂಭಿಸಲು ಪ್ರೇರಣೆ ನೀಡಲೆಂದು ಹಾರೈಸಿದರು. ಪಶ್ಚಿಮ ಪಂಜಾಬ್‌ನ ವಿಧಾನ ಸಭೆ, ಗಾಂಧಿಯವರ ಉಪವಾಸವನ್ನು ಕೋಮು ಸೌಹಾರ್ದದ ಮಹಾ ಪ್ರಯತ್ನವೆಂದು ಕರೆದು ಅವರಿಗೆ ತನ್ನ ಕೃತಜ್ಞತೆ ಸಲ್ಲಿಸಿತು. ಪಾಟಿಯಾಲಾದ ಮಹಾರಾಜ, ಗಾಂಧಿಯವರು ತಮ್ಮ ಉಪವಾಸವನ್ನು ಆದಷ್ಟು ಬೇಗ ಮುಗಿಸುವ ರೀತಿಯಲ್ಲಿ ತಮ್ಮ ವರ್ತನೆ ಇರಬೇಕೆಂದು ಸಿಖ್ ಸಮುದಾಯಕ್ಕೆ ಕರೆಕೊಟ್ಟರು. ಆದರೆ ಅದೇ ವೇಳೆಯಲ್ಲಿ ದೆಹಲಿಯಲ್ಲಿ ಮುಸ್ಲಿಂ ನಿರಾಶ್ರಿತರ ಮೇಲೆ ದಾಳಿಗಳ ಕೆಲ ಘಟನೆಗಳೂ ವರದಿಯಾಗಿದ್ದವು.

ಮಾರನೆಯ ದಿನ ಗಾಂಧಿಯವರನ್ನು ವಾಯುವ್ಯ ಗಡಿ ಪ್ರಾಂತ್ಯದ ನಿರಾಶ್ರಿತರ ತಂಡವೊಂದು ಭೇಟಿ ಮಾಡಿ ತನ್ನ ಅಳಲನ್ನು ತೋಡಿಕೊಂಡಿತು. ಪಾಟಿಯಾಲಾದ ಮಹಾರಾಜ ಮತ್ತು ಉದ್ಯಮಿ ಜಿ.ಡಿ. ಬಿರ್ಲಾ ಬಂದು ಹೋದರು. ನಗರದ ಎರಡು ಕಡೆ ಪಾಕಿಸ್ತಾನದ ಕಡೆಯ ರೈಲು ಹತ್ತಲು ಹೋಗಿ, ಜಾಗ ಸಿಗದೆ ವಾಪಸಾಗುತ್ತಿದ್ದ ಮುಸ್ಲಿಂ ನಿರಾಶ್ರಿತರ ಮೇಲೆ ಹಲ್ಲೆಗಳು ನಡೆದು ಕಾಂಗ್ರೆಸ್ ಕಾರ್ಯಕರ್ತರು ಅವರನ್ನು ಸಂತೈಸಿ ಕ್ಷೇಮವಾಗಿ ನಿರಾಶ್ರಿತರ ಶಿಬಿರಗಳಿಗೆ ಮುಟ್ಟಿಸಿದ್ದರು.

ಆ ೧೪ರ ಸಂಜೆಯೇ ಸೈಕಲ್ ಮೇಲೆ ಬಿರ್ಲಾ ಭವನಕ್ಕೆ ಬಂದ ಉದ್ರಿಕ್ತ ಜನರ ಸಮೂಹವೊಂದು ಗಾಂಧಿ ವಿರುದ್ಧ ಘೋಷಣೆಗಳನ್ನು ಕೂಗಿತು. ಇದನ್ನು ಕೇಳಿ ಒಳಗೆ ಗಾಂಧಿಯವರೊಂದಿಗೆ ಮಾತನಾಡುತ್ತಿದ್ದ ನೆಹರೂ–ಪಟೇಲ್–ಆಝಾದರು ಹೊರಬಂದಾಗ ನಾಲ್ಕೈದು ಜನರ ಆ ಗುಂಪು 'ಗಾಂಧಿ ಸಾಯಲಿ ಬಿಡಿ' ಎಂದು ಕೂಗಿದರು. ಇದರಿಂದ ಕೋಪೋದ್ರಿಕ್ತರಾದ ನೆಹರೂ 'ಅವರು ಸಾಯುವ ಮುನ್ನ ನನ್ನನ್ನು ಕೊಲ್ಲಿ' ಎಂದು ಅವರತ್ತ ನುಗ್ಗಿದರು. ಗುಂಪು ಚದುರಿತು. ನೆಹರೂ ಮತ್ತವರ ಸಚಿವರ ತಂಡ ತೆರಳಿದ ನಂತರ ಮತ್ತೆ ಸೇರಿದ ಈ ಗುಂಪು ಮತ್ತೆ ತನ್ನ ಘೋಷಣೆಗಳನ್ನು ಕೂಗಲಾರಂಭಿಸಿತು.

ಆ ಸಂಜೆ ಪ್ರಾರ್ಥನಾ ಸಭೆಯಲ್ಲಿ ಗಾಂಧಿ, ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾತರ ಮೇಲೆ ನಡೆದಿರುವ ಹಲ್ಲೆ ಮತ್ತು ಅತ್ಯಾಚಾರಗಳ ಬಗ್ಗೆ ಮಾತನಾಡುತ್ತಾ, ಅಲ್ಲಿ ಪರಿಸ್ಥಿತಿ ಹಾಗೇ ಮುಂದುವರೆದರೆ ಇಲ್ಲಿ ಪರಿಸ್ಥಿತಿಯನ್ನು ನಿಭಾಯಿಸುವುದು ಕಷ್ಟವಾಗುತ್ತದೆ ಎಂಬ ತಮ್ಮ ಅಸಹಾಯಕತೆಯನ್ನು ತೋಡಿಕೊಂಡರು. ಆದರೆ ಭಾರತದ ಬದುಕಿನ ಸೌಂದರ್ಯವನ್ನು ಹೆಚ್ಚಿಸಿರುವ ಅದರ ಮಿಶ್ರ ಸಂಸ್ಕೃತಿಯನ್ನು ಹಾಳುಗೆಡಹದಂತೆ ಜನರನ್ನು ಕೇಳಿಕೊಂಡರು. ಭಾರತವನ್ನು ಮುಸ್ಲಿಮರಿಂದ ಮುಕ್ತಗೊಳಿಸಿ ಸ್ವಚ್ಛಗೊಳಿಸುವ ಹಿಂದೂ ಮಹಾಸಭಾ ಮತ್ತು ಆರೆಸ್ಸೆಸ್‌ನ ಮಾತುಗಳಿಗೆ

ಪ್ರತಿಕ್ರಿಯಿಸುತ್ತಾ, 'ಮೂರುವರೆ ಕೋಟಿ ಮುಸ್ಲಿಮರನ್ನು ಕೊಂದಾದ ಮೇಲೆ ಭಾರತ ಪವಿತ್ರವಾದೀತೆ? ನಂತರದ ಸರದಿ ಪಾರ್ಸಿಗಳದ್ದು, ಕ್ರೈಸ್ತರದ್ದು, ನಂತರ ಯಾರ ಸರದಿ?' ಎಂದು ಕೇಳಿದರು. ಇದು ಧರ್ಮ ರಕ್ಷಣೆಯಲ್ಲ, ವಿನಾಶ ಎಂದರು.

೧೫ರ ಹೊತ್ತಿಗೆ ಗಾಂಧಿ ನಿತ್ರಾಣಗೊಂಡಿದ್ದರು. ಆದರೂ ಅವರ ಹಾಸ್ಯಪ್ರಜ್ಞೆ ಕುಂದಿರಲಿಲ್ಲ. ಅವರು ತಮ್ಮ ಸಹಾಯಕರಿಗೆ ಹೀಗೆ ಹೇಳಿ ಬರೆಸಿದರು: 'ನನಗೆ ಉಸಿರೇ ನಿಂತು ಹೋದಂತಾದಾಗ ಒಂದು ಗುಟುಕು ಬಿಸಿ ನೀರು ಕುಡಿದು ಪ್ರಾಣ ಉಳಿಸಿಕೊಳ್ಳುತ್ತೇನೆ ಮತ್ತು ಇದನ್ನು ನಾನು ಉಪವಾಸವೆಂದು ಕರೆದುಕೊಳ್ಳುತ್ತೇನೆ. ಕೆಲ ಮುಗ್ಧರು ಅದನ್ನು ನಂಬುತ್ತಲೂ ಇದ್ದಾರೆ!' ಅಂದು ಸಂಜೆ ಪ್ರಾರ್ಥನಾ ಸಭೆಯಲ್ಲಿ ಅವರ ಮಾತುಗಳು ಧ್ವನಿವರ್ಧಕದ ಮೂಲಕವೂ ಕೇಳಲಾಗದಷ್ಟು ಕ್ಷೀಣವಾದಾಗ, ಅವರು ತಮ್ಮ ಸಂದೇಶವನ್ನು ಬರೆಸಿ ಓದಿಸಿದರು. ಅದರಲ್ಲಿ ಅವರು ತಮ್ಮ ಈ ಉಪವಾಸ ಎರಡೂ ದೇಶಗಳ ಅಲ್ಪಸಂಖ್ಯಾತರ ಪರವಾಗಿ ಮತ್ತು ಬಹುಸಂಖ್ಯಾತರ ವರ್ತನೆಗೆ ವಿರುದ್ಧವಾಗಿದೆ ಎಂದು ಹೇಳಿದರು.

ಜನವರಿ ೧೬ರಂದು ಪ್ರಧಾನಿ ನೆಹರೂ ದೆಹಲಿಯಲ್ಲಿ ಒಂದು ಲಕ್ಷಕ್ಕೂ ಮೀರಿದ ಸಂಖ್ಯೆಯ ಜನಸ್ತೋಮವನ್ನು ಉದ್ದೇಶಿಸಿ ಮಾತನಾಡಿ ಗಾಂಧಿಗೆ ಇನ್ನು ಹೆಚ್ಚು ಕಷ್ಟ ಕೊಡದ ರೀತಿಯಲ್ಲಿ ಜನಜೀವನವನ್ನು ಸಾಮಾನ್ಯ ಸ್ಥಿತಿಗೆ ತರಲು ಎಲ್ಲರ ಸಹಕಾರ ಕೋರಿದರು. ಸಿಕ್ಖರ ರಾಜಕೀಯ ಪಕ್ಷವಾದ ಅಕಾಲಿ ದಳ ದೇಶಾದ್ಯಂತ ಸಿಕ್ಖರು ಯಾವುದೇ ಪ್ರಚೋದನೆಗೆ ಒಳಗಾಗದೆ ಶಾಂತಿಯನ್ನು ಕಾಪಾಡಿಕೊಳ್ಳುವ ಮೂಲಕ ಗಾಂಧಿಯವರನ್ನು ಉಳಿಸಿಕೊಳ್ಳಬೇಕಾಗಿದೆ ಎಂಬ ಸಾರ್ವಜನಿಕ ಪ್ರಕಟಣೆ ನೀಡಿತು. ಮೇವಾರ ಮುಸ್ಲಿಮರ ಸಂಘಟನೆ ಜಿನ್ನಾಗೆ ತುರ್ತು ಸಂದೇಶ ಕಳಿಸಿ, ಗಾಂಧಿ ಭಾರತದಲ್ಲಿ ಮುಸ್ಲಿಮರ ರಕ್ಷಣೆಯ ಬದ್ಧತೆಯನ್ನು ಪ್ರದರ್ಶಿಸುತ್ತಿರುವಂತೆ ಅವರೂ ಪಾಕಿಸ್ತಾನದಲ್ಲಿ ಹಿಂದೂ-ಸಿಕ್ಖರ ರಕ್ಷಣೆಗೆ ತುರ್ತು ಕ್ರಮಗಳನ್ನು ಕೈಗೊಳ್ಳಬೇಕೆಂದು ಆಗ್ರಹಿಸಿತು. ಕರಾಚಿ ಕಡೆ ಪಲಾಯನ ಮಾಡಿದ್ದ ದೆಹಲಿಯ ಕೆಲವು ಮುಸ್ಲಿಂ ಕುಟುಂಬಗಳಿಗೆ ದೆಹಲಿಗೆ ವಾಪಸಾಗುವಂತೆ ಮತ್ತು ಅವುಗಳಿಗೆ ಎಲ್ಲ ಪುನರ್ವಸತಿ ಮತ್ತು ಭದ್ರತೆ ಒದಗಿಸುವುದಾಗಿ ದೆಹಲಿಯ ವ್ಯಾಪಾರಿಗಳ ಸಂಘವೊಂದು ತಂತಿ ಮೂಲಕ ಮನವಿ ಮಾಡಿತು.

ಉಪವಾಸ ನಿಲ್ಲಿಸಲು ಗಾಂಧಿ ಹಾಕಿದ ಷರತ್ತುಗಳು-ಉಪವಾಸ ಅಂತ್ಯ

ಜನವರಿ ೧೭ರಂದು ಗಾಂಧಿಯವರ ಆರೋಗ್ಯ ಕ್ಷೀಣಿಸತೊಡಗಿತ್ತು. ಸುಸ್ತು, ತಲೆ ಭಾರ ವಿಪರೀತವಾಗಿತ್ತು. ಆದರೆ ಮೂತ್ರಪಿಂಡಗಳಿಗೆ ತೊಂದರೆಯಾಗಿಲ್ಲ ಎಂದು ವೈದ್ಯರು ತಿಳಿಸಿದರು. ಅಂದು ತಮ್ಮನ್ನು ಭೇಟಿ ಮಾಡಿದ ಆಜ಼ಾದರ ಪ್ರಶ್ನೆಗೆ ಉತ್ತರಿಸಿದ ಗಾಂಧಿ, ತಾವು ಯಾವ ಪರಿಸ್ಥಿತಿಯಲ್ಲಿ ಮಾತ್ರ ಉಪವಾಸ ನಿಲ್ಲಿಸಬಯಸುವುದಾಗಿ ವಿವರಿಸಿದರು: 'ಮೆಹ್ರೋಲಿಯ ಸೂಫಿ ಮಂದಿರದ ಉರುಸ್ ಪ್ರತಿ ವರ್ಷದಂತೆ ನಿಗದಿತ ದಿನಾಂಕದಲ್ಲಿ ನಡೆಯುವಂತಾಗಬೇಕು. ಹಿಂದೂ-ಸಿಕ್ಖರಿಂದ ವಶಪಡಿಸಿಕೊಳ್ಳಲ್ಪಟ್ಟು, ಈಗ ದೇವಸ್ಥಾನ ಮತ್ತು ಗುರುದ್ವಾರಗಳನ್ನಾಗಿ ಪರಿವರ್ತಿಸಲಾಗಿರುವ ದೆಹಲಿಯ ನೂರಕ್ಕೂ ಹೆಚ್ಚು ಮಸೀದಿಗಳನ್ನು ಮೂಲ ವಾರಸುದಾರರಿಗೆ ಒಪ್ಪಿಸಬೇಕು. ಮುಸ್ಲಿಮರು ದೆಹಲಿಯ ಬೀದಿಗಳಲ್ಲಿ ಮುಕ್ತವಾಗಿ ಓಡಾಡಬಲ್ಲ ಪರಿಸ್ಥಿತಿ ನಿರ್ಮಾಣವಾಗಬೇಕು.

ಪಾಕಿಸ್ತಾನಕ್ಕೆ ಓಡಿಹೋಗಿದ್ದ ಮುಸ್ಲಿಮರು ಮತ್ತೆ ತಂತಮ್ಮ ಮನೆಗಳಿಗೆ ವಾಪಸಾಗಲು ಮತ್ತು ಅವರ ರೈಲು ಪ್ರಯಾಣದಲ್ಲಿ ಯಾವುದೇ ಅಪಾಯ ಉಂಟಾಗದಂತೆ ನೋಡಿಕೊಳ್ಳಬೇಕು. ಮುಸ್ಲಿಮರೊಡನೆಯ ವ್ಯಾಪಾರದ ಮೇಲೆ ಹಾಕಿರುವ ಬಹಿಷ್ಕಾರವನ್ನು ಹಿಂತೆಗೆದುಕೊಳ್ಳಬೇಕು. ಮುಸ್ಲಿಮರ ವಾಸದ ಜಾಗಗಳಲ್ಲಿ ಮುಸ್ಲಿಮೇತರರ ಪುನರ್ವಸತಿಯನ್ನು ಮುಸ್ಲಿಂರ ಸಮ್ಮತಿಯೊಂದಿಗೆ ಮಾತ್ರ ಮಾಡಬೇಕು.'

ಗಾಂಧಿಯವರ ಮಾತುಗಳು ನಗರದಲ್ಲಿ ಹರಡುತ್ತಿದ್ದಂತೆ ಪರಿಸ್ಥಿತಿ ನಿಧಾನವಾಗಿ ಬದಲಾಗತೊಡಗಿತು. ಮುಸ್ಲಿಮರಿಗೆ ಕಿರುಕುಳ ನೀಡಿದ್ದ ಸಬ್ಜಿ ಮಂಡಿ, ಪಹಾಡ್‌ಗಂಜ್ ಮತ್ತು ಕರೋಲ್‌ಬಾಗ್ ಮುಂತಾದ ಪ್ರದೇಶಗಳ ಹಿಂದೂ-ಸಿಖ್ ಸಮುದಾಯಗಳು ಮುಸ್ಲಿಮರನ್ನು ತಮ್ಮ ಮಧ್ಯಕ್ಕೆ ವಾಪಸ್ ಬರಲು ಕರೆಕೊಟ್ಟವು. ಮೆಹ್ರೋಲಿ ಗ್ರಾಮಸ್ಥರು ಗಾಂಧಿಯವರನ್ನು ಭೇಟಿ ಮಾಡಿ ತಮ್ಮೂರಿನಲ್ಲಿ ಯಾವುದೇ ಬಾಧೆಗಳಿಲ್ಲದೆ ನಿಗದಿತ ದಿನಗಳಂದೇ ಉರುಸ್ ನಡೆಸಲು ಎಲ್ಲ ವ್ಯವಸ್ಥೆ ಮಾಡಿರುವುದಾಗಿ ತಿಳಿಸಿದರು. ದೆಹಲಿಯ ಸರ್ವಧರ್ಮಗಳಿಗೆ ಸೇರಿದ ಎರಡು ಲಕ್ಷ ಜನರು ಇತರೆಲ್ಲ ಪ್ರಜೆಗಳಂತೆಯೇ ಮುಸ್ಲಿಮರೂ ನಿರಾತಂಕವಾಗಿ ಮತ್ತು ಘನತೆಯಿಂದ ಸಮಾನ ಪ್ರಜೆಗಳಾಗಿ ಬಾಳಿ ಈ ದೇಶದ ಪ್ರಗತಿಗೆ ಕೊಡುಗೆ ನೀಡುವ ಅವರ ಎಲ್ಲ ಹಕ್ಕುಗಳನ್ನೂ ರಕ್ಷಿಸುವುದಾಗಿ ತಿಳಿಸುವ ಪ್ರತಿಜ್ಞಾ ಪತ್ರವೊಂದಕ್ಕೆ ಸಹಿ ಹಾಕಿ ಗಾಂಧಿಯವರಿಗೆ ಅರ್ಪಿಸಿದರು. ಅಂದು ಗಾಂಧಿಯವರಿಗೆ ಪಾಕಿಸ್ತಾನ ಸೇರಿ ಜಗತ್ತಿನ ಹಲವು ಕಡೆಗಳಿಂದ ಉಪವಾಸ ನಿಲ್ಲಿಸುವಂತೆ ಕೋರಿ, ಶುಭಾಶಯ ತಿಳಿಸುವ ನೂರಾರು ಸಂದೇಶಗಳು ಬಂದವು. ಗಾಂಧಿ ಕಷ್ಟದಿಂದಲೇ ಮಾತನಾಡುತ್ತಾ ತಮ್ಮ ಈ ಉಪವಾಸ ಯಾವುದೇ ರಾಜಕೀಯ ಉದ್ದೇಶದಿಂದ ಪ್ರೇರಿತವಾಗಿರದೆ ಅಂತರ್ಯಾಮಿಯ ದನಿಗೆ ಓಗೊಟ್ಟಿರುವುದರ ಫಲ ಮಾತ್ರವಾಗಿದೆ ಎಂದು ತಿಳಿಸಿದರು.

ಮಾರನೆಯ ಬೆಳಿಗ್ಗೆ ಅಂದರೆ ೧೮ ರಂದು ರಾಜೇಂದ್ರ ಪ್ರಸಾದರ ನೇತೃತ್ವದ ನೂರು ಜನರ ನಿಯೋಗವೊಂದು ಬಿರ್ಲಾ ಭವನಕ್ಕೆ ಬಂದಿತು. ಅದು ತಾನು ಗಾಂಧಿಯವರು ವಿವರಿಸಿರುವ ಪರಿಸ್ಥಿತಿಯ ನಿರ್ಮಾಣಕ್ಕೆ ಕಟಿಬದ್ಧವಾಗಿ ಕೆಲಸ ಮಾಡುತ್ತಿರುವುದಾಗಿ ತಿಳಿಸುವ ಪತ್ರಕ್ಕೆ ಸಹಿ ಹಾಕಿ, ಅವರಿಗೆ ನೀಡಿ ಉಪವಾಸವನ್ನು ಅಂತ್ಯಗೊಳಿಸಲು ಕೋರಿಕೊಂಡಿತು. ತಾವಿದನ್ನು ಪೊಲೀಸ್ ಅಥವಾ ಸೇನೆಯ ಸಹಾಯವಿಲ್ಲದೆಯೇ, ಜನ ಸ್ವಯಂಪ್ರೇರಣೆಯಿಂದ ಬದಲಾಗುವ ರೀತಿಯಲ್ಲಿ ಕಾರ್ಯ ನಿರ್ವಹಿಸುವುದಾಗಿಯೂ ನಿಯೋಗದ ಸದಸ್ಯರು ಆ ಪತ್ರದಲ್ಲಿ ತಿಳಿಸಿದ್ದರು. ಇವರಲ್ಲಿ ಹಿಂದೂ ಮಹಾಸಭಾ ಮತ್ತು ಆರೆಸ್ಸೆಸ್‌ನ ವಕ್ತಾರ ಎಂದು ಹೇಳಿಕೊಂಡ ಗಣೇಶ್ ದತ್, ದೆಹಲಿಯ ಆಡಳಿತಾಧಿಕಾರಿ ಮತ್ತು ಪಾಕಿಸ್ತಾನದ ರಾಯಭಾರಿಯೂ ಸೇರಿದ್ದರು.

ಗಾಂಧಿ ಉಪವಾಸ ನಿಲ್ಲಿಸಲು ಒಪ್ಪಿದರು. ಆದರೆ ಅವರೆಲ್ಲ ಮಾತಿಗೆ ತಪ್ಪಿದರೆ ತಾವು ಮತ್ತೆ ಉಪವಾಸ ಆರಂಭಿಸುವುದಾಗಿ ಹೇಳುತ್ತಲೇ, ಆಜಾದರು ನೀಡಿದ ಕಿತ್ತಳೆ ರಸ ಬೆರೆಸಿದ ನೀರನ್ನು ಗುಟುಕರಿಸುವ ಮೂಲಕ ತಮ್ಮ ಉಪವಾಸವನ್ನು ಅಂತ್ಯಗೊಳಿಸಿದರು. ಅಲ್ಲಿ ಹಾಜರಿದ್ದ ನೆಹರೂ ಅವರ ಮುಖದಲ್ಲಿ ಮಂದಹಾಸ ಮಿನುಗಿತು. 'ಮಹಾತ್ಮ ಗಾಂಧಿ ಕಿ ಜೈ' ಘೋಷಣೆಗಳು ಭವನದ ತುಂಬ ಮೊಳಗಿದವು. ಆ ಸಂದರ್ಭದಲ್ಲಿ ಅಲ್ಲಿ

ಪಟೇಲರು ಹಾಜರಿರಲಿಲ್ಲ. ಅವರು ಗಾಂಧಿಯವರ ಅನುಮತಿಯೊಂದಿಗೇ ಕಾಠೇವಾಡದ ಪೋರ್‌ಬಂದರ್, ರಾಜಕೋಟೆ, ಭಾವನಗರ ಮುಂತಾದ ರಾಜಸಂಸ್ಥಾನಗಳನ್ನು ಭಾರತಕ್ಕೆ ವಿಲೀನಗೊಳಿಸಿಕೊಳ್ಳುವ ಕೆಲಸಗಳಿಗಾಗಿ ಗುಜರಾತ್‌ಗೆ ತೆರಳಿದ್ದರು.

ಅಂದು ಸಂಜೆ ಬೃಹತ್ ಸಭೆಯೊಂದರಲ್ಲಿ ಮಾತನಾಡಿದ ನೆಹರೂ, ಇಂದು ದೇಶದಲ್ಲಿ ಸದಾ ಸರಿಯಾದ ಮಾರ್ಗದಲ್ಲಿ ಹಠ ಹಿಡಿದವರಂತೆ ನಡೆದವರು ಮಹಾತ್ಮ ಗಾಂಧಿಯೊಬ್ಬರೇ ಎಂದು ಹೇಳುತ್ತಾ, 'ನಾವೆಲ್ಲ ಆಗಾಗ್ಗೆ ದಾರಿ ತಪ್ಪಿದ್ದು ನಿಜ' ಎಂದು ಒಪ್ಪಿಕೊಂಡರು. ಈಗಾಗಲೇ ಪಟೇಲರೂ ಇದೇ ಮಾತನ್ನು ಬಾಂಬೆಯಲ್ಲಿ ಇನ್ನೊಂದು ರೂಪದಲ್ಲಿ ಹೀಗೆ ಹೇಳಿದ್ದರು: 'ಮಹಾತ್ಮರು ದಾರ್ಶನಿಕರಾಗಿ ದೂರದೃಷ್ಟಿಯ ನಿರ್ಧಾರ ತೆಗೆದುಕೊಳ್ಳುತ್ತಾರೆ. ನಾವು ರಾಜಕಾರಣಿಗಳಾದರೋ ಯಾವಾಗಲೂ ಅಲ್ಪ ದೃಷ್ಟಿಯವರು'. ಗಾಂಧಿಯವರೂ ಅಂದು ಸಂಜೆ ಪ್ರಾರ್ಥನಾ ಸಭೆಯಲ್ಲಿ ಈ ಆಶಯವನ್ನು ವ್ಯಕ್ತಪಡಿಸಿದ್ದರು: 'ನಾವೆಲ್ಲರೂ ಇಂದು ಸತ್ಯದೆಡೆಗೆ, ಭಗವಂತನೆಡೆಗೆ ಮುಖ ಮಾಡಿ ಹೊರಟಿದ್ದೇವೆ. ಸತ್ಯದ ಹೆಸರಿನಲ್ಲೇ ನಡೆಸಲಾದ ಕೊಲೆ, ಅಪಹರಣ, ಅತ್ಯಾಚಾರ, ಬಲಾತ್ಕಾರದ ಮತಾಂತರಗಳ ನೆನಪನ್ನು ಅಳಿಸಿಕೊಂಡು ಪ್ರಾಯಶ್ಚಿತ್ತವಾಗಿ ಸತ್ಯದ ನಿಜರೂಪವಾದ ಭಗವಂತನೆಡೆಗೆ ಮುಖ ಮಾಡಿ ಹೊರಟಿರುವ ಈ ಪಯಣ ಮತ್ತೆ ದಿಕ್ಕು ತಪ್ಪಲಾರದು.'

ಆದರೆ ಮಾರನೆಯ ದಿವಸವೇ ಹಿಂದೂ ಮಹಾಸಭಾ ಒಂದು ಹೇಳಿಕೆ ನೀಡಿ ಗಾಂಧಿಯವರ ಪ್ರಾಣ ಉಳಿದದ್ದು ತನಗೆ ಸಂತೋಷ ತಂದಿದೆಯಾದರೂ, ಪಾಕಿಸ್ತಾನದಲ್ಲಿ ಪರಿಸ್ಥಿತಿ ಹೇಗಾದರೂ ಇರಲಿ, ಭಾರತದಲ್ಲಿ ಮಾತ್ರ ಅಲ್ಪಸಂಖ್ಯಾತರ ಸುರಕ್ಷತೆ ಮುಖ್ಯ ಎಂಬ ಗಾಂಧಿಯವರ ಧೋರಣೆಯನ್ನು ತಾನು ಒಪ್ಪುವುದಿಲ್ಲ ಎಂದು ಪ್ರಕಟಿಸಿತು.

ಪ್ರಾರ್ಥನಾಸಭೆಯಲ್ಲಿ ಬಾಂಬ್ ಸ್ಫೋಟ–'ಲೋಕ ಸೇವಕ ಸಂಘ'ದ ಪ್ರಸ್ತಾಪ

ಈ ಹೇಳಿಕೆ ಬಂದ ಮಾರನೆಯ ದಿವಸ ಅಂದರೆ ೨೦ ರಂದು ಗಾಂಧಿ, ಪ್ರಾರ್ಥನಾ ಸಭೆಯಲ್ಲಿ ತಮ್ಮ ಪಾಕಿಸ್ತಾನ ಭೇಟಿಯ ಸಾಧ್ಯತೆಗಳ ಬಗ್ಗೆ ಮಾತಾಡುತ್ತಿರುವಾಗಲೇ ದೊಡ್ಡದೊಂದು ಸ್ಫೋಟದ ಶಬ್ದ ಕೇಳಿ ಬಂದು ಇಡೀ ಸಭೆ ಸ್ತಬ್ಧವಾಯಿತು. ಮರುಕ್ಷಣವೇ ಗಾಂಧಿ ಏನೂ ಆಗದಂತೆ ತಮ್ಮ ಮಾತು ಮುಂದುವರೆಸಿದರು.

ಆ ಶಬ್ದ ಬಿರ್ಲಾ ಭವನದ ಸೇವಕರ ವಸತಿ ಪ್ರದೇಶದಲ್ಲಿ ಬಾಂಬ್‌ವೊಂದು ಸ್ಫೋಟಗೊಂಡ ಶಬ್ದವಾಗಿತ್ತು. ಆ ಸಂಬಂಧ ವ್ಯಕ್ತಿಯೊಬ್ಬನನ್ನು ಕಾವಲು ಸಿಬ್ಬಂದಿ ವಶಪಡಿಸಿಕೊಂಡಿತ್ತು. ಅವನೊಂದಿಗೆ ಬಂದಿದ್ದ ತಂಡದ ಉಳಿದವರು ತಪ್ಪಿಸಿಕೊಂಡು ಓಡಿಹೋಗಿದ್ದರು. ವಶಕ್ಕೊಳಗಾದ ವ್ಯಕ್ತಿ ಪಶ್ಚಿಮ ಪಂಜಾಬ್‌ನಿಂದ ಓಡಿಸಲ್ಪಟ್ಟಿದ್ದ ಮದನ್‌ಲಾಲ್ ಪಹ್ವಾ ಎಂಬ ಯುವಕನಾಗಿದ್ದನು. ಅವನು ತಾನು ತನ್ನೂರು ಮಾಂಟೆಗೊಮರಿಯಲ್ಲಿ ಎಲ್ಲ ಕಳೆದುಕೊಂಡು ದೆಹಲಿಗೆ ಬಂದು ಒಂದು ಮಸೀದಿಯಲ್ಲಿ ನೆಲೆಸಿದ್ದಾಗಿಯೂ, ಈಗ ಗಾಂಧಿಯವರ ಉಪವಾಸದಿಂದಾಗಿ ಅಲ್ಲಿಂದಲೂ ಹೊರಹಾಕಲ್ಪಟ್ಟಿರುವುದಾಗಿಯೂ ತಿಳಿಸಿದ. ನಂತರ ಅವನ ವಿಚಾರಣೆಯಿಂದ ಗೊತ್ತಾದ ವಿಚಾರವೆಂದರೆ ಅವನೊಂದಿಗೆ ನಾಲ್ಕೈದು ಜನ ಹಸಿರು ಕಾರೊಂದರಲ್ಲಿ ಬಂದು ತಮ್ಮ

ಕುಕೃತ್ಯಗಳಿಗಾಗಿ ಸ್ಥಳ ತಪಾಸಣೆ ಮಾಡಿದ್ದರೆಂಬುದು. ಆ ಕ್ಷಣವೇ ಬಿರ್ಲಾ ಭವನಕ್ಕೆ ಬಂದ ನೆಹರೂ ಪೊಲೀಸರೊಂದಿಗೆ ಚರ್ಚಿಸಿ ಅಲ್ಲಿ ಬಿಗಿ ಭದ್ರತೆಯ ಕ್ರಮಗಳ ವ್ಯವಸ್ಥೆ ಮಾಡಿದರು.

ಗಾಂಧಿ ಇದಾವುದರ ಬಗ್ಗೆ ತಲೆ ಕೆಡಿಸಿಕೊಳ್ಳದೆ ಬಾಕಿ ಇದ್ದ ತಮ್ಮ ರಾಶಿ ರಾಶಿ ಪತ್ರ ವ್ಯವಹಾರದಲ್ಲಿ ಮುಳುಗಿದರು. ಅವರು ಪಾಕಿಸ್ತಾನಕ್ಕೆ ಪಯಣಿಸುವ ಮುನ್ನ ಆದಷ್ಟು ಬೇಗ ಸೇವಾಗ್ರಾಮಕ್ಕೆ ಹೋಗಿಬರಬಯಸಿದ್ದರು. ಅಲ್ಲಿಗೆ ಅವರು ಹೋಗಿ ವರ್ಷಗಟ್ಟಲೆಯೇ ಆಗಿಹೋಗಿತ್ತು. ಅವರ ಫೀನಿಕ್ಸ್ ಆಶ್ರಮದ ಗೆಳೆಯ ಜರ್ಮನ್ ಪಾದ್ರಿ ಜಾನ್ ಕೊರ್ಡೆಸ್ ತಾನು ಹುಡುಕಿಕೊಂಡು ಹೋಗಿದ್ದ ಥಿಯೋಸಫಿ ಮತ್ತು ಜಿಡ್ಡು ಕೃಷ್ಣಮೂರ್ತಿಯವರ ಸಹವಾಸದಿಂದಲೂ ಭ್ರಮನಿರಸನ ಹೊಂದಿದ ನಂತರ ಎಲ್ಲೆಲ್ಲೋ ಅಲೆದು ಏನೇನೋ ಕೆಲಸಗಳನ್ನು ಮಾಡಿ ಕೊನೆಗೆ ಮತ್ತೆ ಗಾಂಧಿಯವರ ಒಡನಾಟ ಬಯಸಿ ಸೇವಾಗ್ರಾಮಕ್ಕೆ ಬಂದಿದ್ದ. ವಯಸ್ಸಾದ ಹೆನ್ರಿ ಪೊಲಾಕ್ ಈಗ ಮಾಗಿ ಕಸ್ತೂರಬಾರ ಮಾತೃ ಹೃದಯವನ್ನು ನೆನಪಿಸಿಕೊಂಡು ಕಾಗದ ಬರೆದಿದ್ದ. ವೈದ್ಯರು ಗಾಂಧಿ ಅವರಿಗೆ ಕನಿಷ್ಠ ಹದಿನೈದು ದಿನಗಳ ವಿಶ್ರಾಂತಿ ಸೂಚಿಸಿದ್ದರು. ಪಾಕಿಸ್ತಾನ ಸರ್ಕಾರ ಅನುಮತಿ ನೀಡಿದರೆ ಫೆಬ್ರುವರಿ ಎರಡನೇ ವಾರದಲ್ಲಿ ಅವರು ಅಲ್ಲಿಗೆ ಹೋಗುವ ಕಾರ್ಯಕ್ರಮವನ್ನು ಸಿದ್ಧಪಡಿಸಲಾಯಿತು. ಗಾಂಧಿಯವರ ಭೇಟಿಯನ್ನು ಸ್ವಾಗತಿಸಿದ್ದ ಪಾಕಿಸ್ತಾನ ಸರ್ಕಾರ ಎರಡು ಷರತ್ತುಗಳನ್ನು ಹಾಕಿತ್ತು. ಒಂದು: ಗಾಂಧಿ ಎರಡೂ ದೇಶಗಳ ಪುನರೇಕೀಕರಣದ ಮಾತು ಆಡಬಾರದು. ಎರಡು: ಗಾಂಧಿ ಪಾಕಿಸ್ತಾನಿ ಪೊಲೀಸರ ರಕ್ಷಣೆಯಲ್ಲೇ ತಿರುಗಾಡಬೇಕು. ಗಾಂಧಿ ಎರಡನೇ ಷರತ್ತನ್ನು ಒಪ್ಪದ ಕಾರಣ ಈ ಸಂಬಂಧದ ಪತ್ರ ವ್ಯವಹಾರ ಮುಂದುವರೆದಿತ್ತು.

ಈ ಮಧ್ಯೆ ಕಾಂಗ್ರೆಸ್ ಸರ್ಕಾರಗಳ ಭ್ರಷ್ಟಾಚಾರ ಮತ್ತು ಅದಕ್ಷತೆಗಳ ಬಗ್ಗೆ ಗಾಂಧಿಯವರಿಗೆ ಒಂದೇ ಸಮನೆ ಪತ್ರಗಳು ಬರಲಾರಂಭಿಸಿದ್ದವು. ನೆಹರೂ–ಪಟೇಲ್ ಜಗಳ ತಾರಕ ಹಂತವನ್ನು ಮುಟ್ಟಿ ಯಾರಾದರೊಬ್ಬರು ಮಾತ್ರ ಸರ್ಕಾರದಲ್ಲಿ ಉಳಿಯುವ ಹಂತ ತಲುಪಿತ್ತು. ಜೊತೆಗೆ ತಮ್ಮ ಸ್ವಾವಲಂಬಿ ಗ್ರಾಮಗಳ ವಿಕೇಂದ್ರೀಕೃತ ಗ್ರಾಮಸ್ವರಾಜ್ಯದ ಕನಸು ಕಾಂಗ್ರೆಸ್ಸಿನ ಯಾರಿಂದಲೂ ಗಂಭೀರ ಪರಿಗಣನೆಗೆ ಒಳಗಾಗದ ಸಂಗತಿಯೂ ಅವರನ್ನು ಕಾಡುತ್ತಿತ್ತು. ಕಾಂಗ್ರೆಸ್ಸನ್ನು ವಿಸರ್ಜಿಸಲು ಕರೆ ನೀಡುವ ತುರ್ತು ಅಗತ್ಯ ಅವರ ಮನಸ್ಸನ್ನೀಗ ಆವರಿಸಿತು. ಅದಕ್ಕಾಗಿ ಅವರು ಕಾಂಗ್ರೆಸ್ಸನ್ನು ಗ್ರಾಮೀಣ ಜನರಿಗೆ ಕೃಷಿ, ಉದ್ಯೋಗ, ಅಕ್ಷರತೆ, ಆರೋಗ್ಯ, ಶುಚಿ ಇತ್ಯಾದಿಗಳ ಬಗ್ಗೆ ತಿಳುವಳಿಕೆ ನೀಡಿ ಅವರನ್ನು ಪಕ್ವ ಮತದಾರರನ್ನಾಗಿ ಮಾಡುವ 'ಲೋಕಸೇವಕ ಸಂಘ' ಎಂಬ ಸಂಘಟನೆಯಾಗಿ ಪರಿವರ್ತಿಸುವ ಪ್ರಸ್ತಾಪವಿರುವ ಟಿಪ್ಪಣಿಯೊಂದನ್ನೂ ಸಿದ್ಧಪಡಿಸಿದರು. ಒಂದೆರಡು ತಿಂಗಳ ಹಿಂದೆ ಲೋಹಿಯಾ ಅವರೊಂದಿಗೆ ನಡೆಸಿದ್ದ ಮಾತುಕತೆಯ ಉದ್ದೇಶವೂ ಇದೇ ಇದ್ದೀತು. ಅಂದೇ ಅವರು ಅಮೆರಿಕಾದ ಹಲವು ಪತ್ರಕರ್ತರಿಗೆ ಸಂದರ್ಶನ ನೀಡಿದರು. ಅವರಲ್ಲಿ ಮುಖ್ಯರೆಂದರೆ ಮುಂದೆ ಗಾಂಧಿಯವರ ಬಗ್ಗೆ ತುಂಬ ಒಳನೋಟಗಳುಳ್ಳ ಸಚಿತ್ರ ಪುಸ್ತಕ ಬರೆದ ಮಾರ್ಗರೆಟ್ ಬರ್ಕ್‌ವೈಟ್ ಮತ್ತು ವಿನ್ಸೆಂಟ್ ಶೀನ್. ಶೀನ್‌ಗೆ ಅವರು ತಮಗೆ ಪ್ರಿಯವಾದ ಈಶೋಪನಿಷತ್ತಿನ 'ತೇನ ತ್ಯಕ್ತೇನ ಭುಂಜೀತಾಃ' ಶ್ಲೋಕವನ್ನು ಉಲ್ಲೇಖಿಸಿ ಅದರ

ಅನ್ವಯ ಮಾತ್ರ ಜಗತ್ತನ್ನು ಉಳಿಸಬಲ್ಲುದು ಎಂದಿದ್ದರು. ಎಲ್ಲವನ್ನೂ ದೇವರಿಗೆ ಅರ್ಪಿಸಿ ನಂತರ ಅದನ್ನು ತನ್ನದಲ್ಲವೆಂಬ ಭಾವದಿಂದ ಸೇವಿಸು ಎಂಬ ಅದರ ಅರ್ಥವನ್ನು ವಿವರಿಸುತ್ತಾ ತನ್ನದಲ್ಲದ್ದು ಎಂಬ ಭಾವ, ಸೇವನೆಗೆ ಒಂದು ಮಿತಿ ಹಾಕುತ್ತದೆ ಎಂಬ ಸೂಕ್ಷ್ಮವನ್ನೂ ತಿಳಿ ಹೇಳಿದ್ದರು.

ಅಂದು ಸಂಜೆ ಪ್ರಾರ್ಥನಾ ಸಭೆಗೆ ಮುನ್ನ ಸಮಯವಿಲ್ಲದಿದ್ದರೂ ಗುಜರಾತ್‌ನ ಸಿಂಧ್‌ನಿಂದ ಬಂದಿದ್ದ ಹಿಂದೂ ನಿರಾಶ್ರಿತರ ಗುಂಪೊಂದು ಗಾಂಧಿಯವರನ್ನು ಕಾಣಲೇಬೇಕೆಂಬ ಒತ್ತಾಯದೊಂದಿಗೆ ಅವರನ್ನು ಸುತ್ತುವರೆಯಿತು. ಆ ಗುಂಪು ತಮ್ಮ ವಲಸೆಯ ಹಾದಿಯಲ್ಲಿ ಮುಸ್ಲಿಂ ದಾಳಿಕೋರರ ಹಿಂಸೆಗಳಿಂದ ತತ್ತರಿಸಿ ತನ್ನ ಗುಂಪಿನ ಹಲವರನ್ನು ಕಳೆದುಕೊಂಡು ದುಃಖ – ಕೋಪ – ಹತಾಶೆಗಳಿಂದ ಕುದಿಯುತ್ತಿತ್ತು. ಆ ಗುಂಪಿನಲ್ಲೊಬ್ಬ 'ನೀವು ನಮ್ಮನ್ನು ನಾಶ ಮಾಡಿದಿರಿ..... ನೀವಿನ್ನು ಹಿಮಾಲಯಕ್ಕೆ ಹೋಗಿ ನೆಲೆಸುವುದು ಒಳ್ಳೆಯದು..... ನಿಮ್ಮ ಜನಸೇವೆ ನಮ್ಮನ್ನು ದುಃಖದ ದಳ್ಳುರಿಗೆ ನೂಕಿದೆ...' ಎಂದು ಕಿರುಚಿದ. ಅದಕ್ಕೆ ಗಾಂಧಿ ಸಮಾಧಾನದಿಂದಲೇ, 'ನನ್ನ ದುಃಖ ನಿಮ್ಮದಕ್ಕಿಂತ ಕಡಿಮೆಯೇನೂ ಇಲ್ಲ ಎಂಬುದನ್ನು ಅರಿಯಲು ಪ್ರಯತ್ನಿಸಿ...' ಎಂದಷ್ಟೇ ಪ್ರತಿಕ್ರಿಯಿಸಿದರು.

ಗುಂಪು ಕೂಗಾಡಿ ಹೋದ ಮೇಲೆ ಗಾಂಧಿ ಪ್ರಾರ್ಥನಾ ಸಭೆಯತ್ತ ತೆರಳಿದರು. ಪ್ರಾರ್ಥನೆಯ ನಂತರ ಅವರು ಮಾತನಾಡುತ್ತಾ ಹೀಗೆ ಹೇಳಿದರು: 'ಇಂದು, ಆತ ನಿರಾಶ್ರಿತನೋ ಅಲ್ಲವೋ ಗೊತ್ತಿಲ್ಲ, ನಿಮ್ಮ ಸೇವೆ ಸಾಕು, ನೀವಿನ್ನು ಹಿಮಾಲಯಕ್ಕೆ ನಡೆಯಿರಿ ಎಂದು ನನಗೆ ಹೇಳಿದ. ಆದರೆ ನಾನು ಯಾರೋ ಹೇಳಿದರೆಂದು ಜನಸೇವೆ ಆರಂಭಿಸಲಿಲ್ಲ. ದೇವರು ಹೇಳಿದನೆಂದು ಮಾಡುತ್ತಿರುವೆ. ಆತನ ಇಚ್ಛೆಯಂತೆ ಎಲ್ಲ ನಡೆಯುತ್ತದೆ... ಆತನೇ ಇಚ್ಛಿಸಿ ನನ್ನನ್ನು ಇಲ್ಲಿಂದ ಕರೆದೊಯ್ಯಬಹುದು, ಯಾರಿಗೆ ಗೊತ್ತು? ನನ್ನ ಹಿಮಾಲಯ ಇಲ್ಲಿಯೇ, ಜನರ ಸಂಕಷ್ಟಗಳ ಮಧ್ಯೆ ಇದೆ... ನೀವೇ ಹೇಳಿ, ನಾನು ಮುಸ್ಲಿಮರ ಸ್ನೇಹಿತನಾದ ಮಾತ್ರಕ್ಕೆ ಹಿಂದೂಗಳ ಶತ್ರುವೆಂದು ಭಾವಿಸುವುದೇತಕ್ಕೆ?'.

ಅಂದು ರಾತ್ರಿ ಗಾಂಧಿ ತುಂಬಾ ಆಯಾಸಗೊಂಡವರಂತೆ ಕಂಡರು. ಮನೂಳೊಂದಿಗೆ ಮಾತಾಡುತ್ತಾ. 'ನನ್ನ ತಲೆ ವಿಪರೀತ ತಿರುಗುತ್ತಿದೆ. ನಾನೆಲ್ಲಿದ್ದೇನೆ? ಏನು ಮಾಡುತ್ತಿದ್ದೇನೆ? ಎಂಬುದು ನನಗೇ ಗೊತ್ತಾಗುತ್ತಿಲ್ಲ' ಎಂದು ಹೇಳುತ್ತಿರುವಂತೆಯೇ ಕೆಮ್ಮು ಆರಂಭವಾಗಿ ಬಹುಕಾಲ ಅದು ನಿಲ್ಲದೇ ಹೋಯಿತು. ಇದರಿಂದ ಗಾಬರಿಯಾದ ಮನೂ ಪೆನ್ಸಿಲಿನ್ ಮದ್ದು ನೀಡಲು ಮುಂದೆ ಬಂದಾಗ ಅದನ್ನು ನಿರಾಕರಿಸಿದ ಗಾಂಧಿ ಒಂದು ಕಟ್ಟುನಿಟ್ಟಿನ ಧ್ವನಿಯಲ್ಲಿ ಮನೂಗೆ ಹೀಗೆ ಹೇಳಿದರು: 'ನಾನೇನಾದರೂ ಖಾಯಿಲೆಯಿಂದ ನರಳಿ ಸತ್ತರೆ ಜನರ ಮಾತಿಗೆ ಹೆದರದೆ ನೀನು ಬಹಳ ಜನ ನಂಬಿದಂತೆ ಗಾಂಧಿ ದೇವರ ಮನುಷ್ಯನಲ್ಲ ಎಂದು ಜಗತ್ತಿಗೆ ಸಾರಿ ಹೇಳಬೇಕು... ಬಾಂಬ್ ಎಸೆದು ನನ್ನನ್ನು ಕೊಲ್ಲುವ ಪ್ರಯತ್ನ ಮಾಡಿದಂತೆ ಯಾರಾದರೂ ನನ್ನನ್ನು ಗುಂಡಿಟ್ಟು ಕೊಂದರೆ, ನನ್ನ ಕೊನೆಯುಸಿರಿನಲ್ಲಿ ನಾನು ದೇವರ ಹೆಸರು ಉಚ್ಚರಿಸಿದರೆ ಮಾತ್ರ ನಾನು ದೇವರ ಮನುಷ್ಯನೆನಿಸಿಕೊಂಡೇನು...'

ಹಂತಕನ ಸಂಚು–'ಹೇ ರಾಮ್!'

ಜನವರಿ ೩೦ರಂದು ಎಂದಿನಂತೆ ಬೆಳಗಿನ ಝಾವ ೩.೩೦ಕ್ಕೆ ಎದ್ದ ಗಾಂಧಿ ಶೌಚಕರ್ಮಗಳನ್ನು ಮುಗಿಸಿ ಪ್ರಾರ್ಥನಾ ಸಭೆ ನಡೆಸಿ ಬೆಳಗಿನ ಉಪಹಾರ ಸ್ವೀಕರಿಸಿದರು. ಬಂಗಾಳಿ ಕಲಿಕೆಯ ಪಾಠಗಳ ಪುನರಾವರ್ತನೆ ಮಾಡಿಕೊಂಡರು. ಸ್ವಲ್ಪ ಹೊತ್ತು ಮಲಗಿದರು. ಮತ್ತೆ ಎದ್ದು ಮಧ್ಯಾಹ್ನದ ಮೇಕೆ ಹಾಲು, ಬೇಯಿಸಿದ ತರಕಾರಿ ಮತ್ತು ಹಣ್ಣುಗಳ ಊಟ ಮಾಡಿದರು. ತಮ್ಮನ್ನು ಭೇಟಿ ಮಾಡಲು ಬಂದಿದ್ದ ಹಲವಾರು ಜನರೊಂದಿಗೆ ಮಾತಾಡಿದರು. ಫೆಬ್ರವರಿ ೨ರಂದು ಸೇವಾಗ್ರಾಮದಲ್ಲಿ ಆಯೋಜಿಸಲಾಗಿದ್ದ ರಚನಾತ್ಮಕ ಕಾರ್ಯಕರ್ತರ ಸಭೆಯ ಸಿದ್ಧತೆ ಬಗ್ಗೆ ಮತ್ತು ಮಹದೇವ ದೇಸಾಯಿಯವರ ಜೀವನ ಚರಿತ್ರೆ ಬರೆಯುವ ಮತ್ತು ಅವರ ದಿನಚರಿಗಳನ್ನು ಸಂಕಲಿಸುವ ಕೆಲಸಗಳ ಬಗ್ಗೆ ಸಂಬಂಧಪಟ್ಟವರೊಂದಿಗೆ ಚರ್ಚಿಸಿದರು. ಸಂಜೆ ನಾಲ್ಕೂವರೆಗೆ ಪಟೇಲರು ಸರ್ಕಾರದಲ್ಲಿನ ಸಮಸ್ಯೆಗಳನ್ನು ಕುರಿತು ಚರ್ಚಿಸಲು ಬರುವವರಿದ್ದರು. ಅದಕ್ಕೆ ಮುಂಚೆ ಅವರು ಕಾಂಗ್ರೆಸ್ ವಿಸರ್ಜನೆ ಕುರಿತ ತಮ್ಮ ಟಿಪ್ಪಣಿಗೆ ಅಂತಿಮ ರೂಪ ನೀಡುವ ಕೆಲಸ ಮಾಡಿದರು. ಅದನ್ನು ಪರಿಶೀಲಿಸುವಂತೆ ಪ್ಯಾರೇಲಾಲರಿಗೆ ನೀಡಿದರು. ಪಟೇಲರೊಡನೆ ಮಾತುಕತೆಯ ನಂತರ ಸಂಜೆಯ ಪ್ರಾರ್ಥನಾ ಸಭೆ ನಡೆದು, ಆನಂತರ ನೆಹರೂ ಗಾಂಧಿಯವರನ್ನು ಭೇಟಿ ಮಾಡುವ ಕಾರ್ಯಕ್ರಮವೂ ಇತ್ತು.

ಪಟೇಲರೊಡನೆ ಮಾತುಕತೆ ಸುದೀರ್ಘವಾಗುತ್ತಾ ಹೋಗಿ ಐದು ಘಂಟೆಗೆ ಆರಂಭವಾಗಬೇಕಿದ್ದ ಪ್ರಾರ್ಥನಾ ಸಭೆಗೆ ತಡವಾಗತೊಡಗಿದಾಗ ಗಾಂಧಿಯವರಿಗೆ ಹೆಗಲು ಕೊಡುವ ಸಂಗಾತಿಗಳಾಗಿದ್ದ ಮನೂ ಮತ್ತು ಅಭಾ, ಅವರನ್ನು ಅವಸರ ಮಾಡಿ ಎಬ್ಬಿಸಿ ಬಿರ್ಲಾಭವನದ ಹೊರಗಿನ ಹುಲ್ಲುಗಾವಲಿನ ಕಡೆ ನಡೆಸಿಕೊಂಡು ಹೊರಟರು. ಆಗ ಸಂಜೆ ಐದೂ ಕಾಲು. ಪ್ರಾರ್ಥನಾ ಸಭೆಗೆ ಜನ ಕಿಕ್ಕಿರಿದಿದ್ದರು. ಗಾಂಧಿ ವೇದಿಕೆ ಏರಲು ಇದ್ದ ಎರಡು ಸಣ್ಣ ಮೆಟ್ಟಿಲುಗಳ ಕಡೆ ಹೆಜ್ಜೆ ಹಾಕುತ್ತಿದ್ದಂತೆ ಖಾಕಿ ಷರಾಯಿ ತೊಟ್ಟಿದ್ದ ಓರ್ವ ಮಧ್ಯ ವಯಸ್ಸಿನ ವ್ಯಕ್ತಿ ಗಾಂಧಿಯವರಿಗೆ ನಮಸ್ಕರಿಸಲು ಪ್ರಯತ್ನಪಟ್ಟವನಂತೆ ಅವರ ಸಮೀಪಕ್ಕೆ ಬಂದ. ಈಗಾಗಲೇ ಪ್ರಾರ್ಥನೆಗೆ ತಡವಾಗಿದ್ದರಿಂದ ಅಭಾ ಆತನನ್ನು ದೂರ ಸರಿಸಲು ಯತ್ನಿಸಿದಾಗ ಆತ ಅವಳನ್ನು ನೂಕಿ ಗಾಂಧಿಯವರ ಎದುರಿಗೆ ನೇರ ನಿಂತ. ಗಾಬರಿಯಾದ ಅಭಾ ಸಾವರಿಸಿಕೊಂಡು ನೆಲಕ್ಕೆ ಬಿದ್ದಿದ್ದ ಗಾಂಧಿಯವರ ಟಿಪ್ಪಣಿ ಪುಸ್ತಕ, ಜಪಮಣಿಗಳನ್ನು ಎತ್ತಿಕೊಳ್ಳಲು ಬಾಗುತ್ತಿದ್ದಂತೆ ಆ ವ್ಯಕ್ತಿ ತನ್ನ ಬೊಗಸೆಯಲ್ಲಿ ಮರೆಮಾಚಿಕೊಂಡಿದ್ದ ಪಿಸ್ತೂಲನ್ನು ತೆಗೆದು ಗಾಂಧಿಯವರ ಎದೆಗೆ ಗುರಿ ಇಟ್ಟು ಮೂರು ಗುಂಡುಗಳನ್ನು ಹಾರಿಸಿದ.

ಗಾಂಧಿ ಕ್ಷಣದಲ್ಲೇ 'ಹೇ... ರಾಮ್!' ಎಂದು ಎರಡು ಬಾರಿ ಕ್ಷೀಣ ದನಿಯಲ್ಲಿ ಉದ್ಗರಿಸುತ್ತಾ ನೆಲಕ್ಕೊರಗಿದರು. ಅವರ ಮೇಲುಹೊದಿಕೆಯೊಳಗಿಂದ ರಕ್ತ ನಿಧಾನವಾಗಿ ಜಿನುಗತೊಡಗಿತ್ತು. ಅಭಾ ಅವರ ತಲೆಯನ್ನೆತ್ತಿ ತನ್ನ ತೊಡೆಯ ಮೇಲಿಟ್ಟುಕೊಂಡಳು. ಒಂದೇ ಸಮನೆ ರೋಧಿಸತೊಡಗಿದಳು. ಗಾಂಧಿಯ ಹಿಂದೆ ಸದಾ ಇರುತ್ತಿದ್ದ ಅವರ ಟ್ಯಾಕ್ಸಿಯ ಚಾಲಕನೂ ಆಗಿ ಆತ್ಮೀಯ ಒಡನಾಡಿಯೂ ಆಗಿದ್ದ ಬ್ರಿಜ್‌ಕೃಷ್ಣ ಚಂಡಿವಾಲ್ ಓಡೋಡಿ ಬಂದು ಅವರ ಇಡೀ ದೇಹವನ್ನು ಅಪ್ಪಿಕೊಂಡು ರೋಧಿಸತೊಡಗಿದ.

ಗುಂಡಿನ ಸಪ್ಪಳ ಕೇಳಿ ಗಾಬರಿಯಾದ ಜನ ಅತ್ತಿಂದಿತ್ತ ಓಡತೊಡಗಿದರು. ಕೆಲವರು ಹಂತಕನು ತಪ್ಪಿಸಿಕೊಳ್ಳದಂತೆ ಅವನ ಮೇಲೆ ಮುಗಿಬಿದ್ದು ಹಿಡಿದು ಅವನನ್ನು ಪೊಲೀಸರಿಗೆ ಒಪ್ಪಿಸಿದರು.

ಸುದ್ದಿ ನಗರಾದ್ಯಂತ, ದೇಶಾದ್ಯಂತ, ಜಗತ್ತಿನಾದ್ಯಂತ ಬೆಂಕಿಯಂತೆ ಹರಡಿತು. ನೆಹರೂ, ಪಟೇಲ್, ಆಜ಼ಾದರು ಧಾವಿಸಿ ಬಂದರು. ಏನೂ ತೋಚದಂತಾಗಿದ್ದ ಅವರು ಶೂನ್ಯವನ್ನು ದಿಟ್ಟಿಸುತ್ತಾ ಕೂತರು. ಆ ಹೊತ್ತಿಗೆ ಗಾಂಧಿಯವರ ಪಾರ್ಥಿವ ಶರೀರವನ್ನು ಬಿರ್ಲಾಭವನದೊಳಕ್ಕೆ ತಂದು ರಕ್ತಸಿಕ್ತ ಬಟ್ಟೆಯನ್ನು ತೆಗೆದು ಶುಭ್ರ ಖಾದಿ ವಸ್ತ್ರವೊಂದನ್ನು ತೊಡಿಸಿ ಬಿದಿರಿನ ತಡಿಕೆಯ ಮೇಲಿನ ಖಾದಿ ಹಾಸಿನ ಮೇಲೆ ಸಾರ್ವಜನಿಕ ದರ್ಶನಕ್ಕೆ ಇಡಲಾಯಿತು. ಕಿರಿಯ ಮಗ ದೇವದಾಸ ತಂದೆಯ ದೇಹವನ್ನು ಅಪ್ಪಿಕೊಂಡು, 'ಬಾಪು ಮಾತಾಡಿ, ನೀವೇಕೆ ಮಾತಾಡುತ್ತಿಲ್ಲ? ಬಾಪು ಮಾತಾಡಿ' ಎಂದು ರೋಧಿಸುವ ಧ್ವನಿ ಭವನವನ್ನು ತುಂಬಿಕೊಂಡಿತ್ತು.

ಬೆಳಗಿನ ಝಾವ ಎರಡು ಘಂಟೆಯ ಹೊತ್ತಿಗೆ ಬ್ರಿಜ್‌ಕೃಷ್ಣ, ಗಾಂಧಿಯವರ ದೇಹಕ್ಕೆ ಸ್ನಾನ ಮಾಡಿಸಿ ಕಳೆದ ಅಕ್ಟೋಬರ್ ೨ರಂದು ಗಾಂಧಿ ತಮ್ಮ ಹುಟ್ಟುಹಬ್ಬದ ಸಂದರ್ಭದಲ್ಲಿ ನೇಯ್ದಿದ್ದ ಖಾದಿ ವಸ್ತ್ರವನ್ನು ಅವರ ದೇಹಕ್ಕೆ ತೊಡಿಸಿದರು. ಕೊರಳಿಗೆ ಖಾದಿ ಹಾರ ಮತ್ತು ಅವರ ರಾಮನಾಮ ಜಪಮಣಿಯನ್ನು ತೊಡಿಸಿ ಹಣೆಗೆ ತಿಲಕವಿಟ್ಟರು. ಬೆಳಕು ಹರಿಯುವ ಮುನ್ನವೇ ಸಾವಿರಾರು ಜನ ಅಂತಿಮ ದರ್ಶನಕ್ಕಾಗಿ ಸಾಲುಗಟ್ಟಿ ನಿಂತಿದ್ದರು. ಗವರ್ನರ್ ಜನರಲ್, ಸೇನಾಪಡೆಯ ದಂಡನಾಯಕರು ಮತ್ತು ವಿವಿಧ ದೇಶಗಳ ರಾಯಭಾರಿಗಳು ಹಾಗೂ ಇತರ ಗಣ್ಯರು ಬಂದು ತಮ್ಮ ಶ್ರದ್ಧಾಂಜಲಿ ಸಲ್ಲಿಸಿದರು. ಸುಮಾರು ಮಧ್ಯಾಹ್ನ ಹನ್ನೊಂದೂವರೆ ಹೊತ್ತಿಗೆ ಪಾರ್ಥಿವ ಶರೀರವನ್ನು ಅಲಂಕೃತ ಸೇನಾವಾಹನವೊಂದರಲ್ಲಿ ಇಡಲಾಯಿತು. ನೆಹರೂ, ಪಟೇಲ್, ಕೃಪಲಾನಿ ಮತ್ತು ರಾಜ್‌ಕುಮಾರಿ ಅಮೃತಾ ಕೌರ್ ಶವವಾಹನವನ್ನು ಹತ್ತಿದರು. ಅಷ್ಟು ಹೊತ್ತಿಗೆ ಸರಿಯಾಗಿ ರಾವಲ್ಪಿಂಡಿಯಲ್ಲಿದ್ದ ಸುಶೀಲಾ ನಯ್ಯರ್ ದೆಹಲಿ ತಲುಪಿ ವಾಹನವೇರಿದರು. ಪಟೇಲ್ ಗಾಂಧಿಯವರ ದೇಹದ ಪಾದದ ಬಳಿ ತಲೆ ತಗ್ಗಿಸಿ ಕೂತಿದ್ದರೆ, ನೆಹರೂ ತಲೆಯ ಬಳಿ ತಲೆ ತಗ್ಗಿಸಿ ಕೂತಿದ್ದರು.

ಜನಸಾಗರದ ಮಧ್ಯೆ ಅಂತಿಮ ಯಾತ್ರೆ–ಮೂಡಿದ ಹೊಸ ಬೆಳಕು

೩೧ ರ ಹನ್ನೊಂದು ಮುಕ್ಕಾಲರ ಹೊತ್ತಿಗೆ ಅಂತಿಮ ಶವಯಾತ್ರೆ ಹೊರಟಿತು. ಅದರ ಹಿಂದೆ 'ಮಹಾತ್ಮ ಗಾಂಧಿ ಕೀ ಜೈ', 'ಗಾಂಧೀಜಿ ಅಮರ್ ರಹೇಂ' ಎಂಬ ಮುಗಿಲುಮುಟ್ಟುವ ಘೋಷಣೆಗಳನ್ನು ಕೂಗುತ್ತಾ ಜನಸಾಗರವೇ ಹೊರಟಿತು. ದಾರಿಯುದ್ದಕ್ಕೂ ಜನ ಸೇರಿಕೊಳ್ಳುತ್ತಾ ಹೊರಟಂತೆ ಮೆರವಣಿಗೆಯ ಉದ್ದ ಒಂದು ಮೈಲನ್ನೂ ಮೀರಿ ಬೆಳೆದಿತ್ತು. ವೈಸ್‌ರಾಯ್‌ಭವನದ ಸಮೀಪ ಹಾದುಹೋದ ಮೆರವಣಿಗೆ ಯುದ್ಧ ಸ್ಮಾರಕವಾದ ಇಂಡಿಯಾಗೇಟ್ ತಲುಪಿದಾಗ ಮೆರವಣಿಗೆಯಲ್ಲಿದ್ದ ಶೋಕತಪ್ತ ಜನರ ಸಂಖ್ಯೆ ಹತ್ತು ಲಕ್ಷವನ್ನು ಮೀರಿತ್ತೆಂದು ಮೆರವಣಿಗೆಯ ಉಸ್ತುವಾರಿ ವಹಿಸಿದ್ದ ಸೇನಾಧಿಕಾರಿಯೊಬ್ಬರ ಒಂದು ಅಂದಾಜಾಗಿತ್ತು. ಯಾತ್ರೆಯ ದಾರಿಯ ಇಕ್ಕೆಲಗಳಲ್ಲೂ ಜನ ಪಾರ್ಥಿವ ಶರೀರದ ಒಂದು ಇಣುಕುನೋಟವಾದರೂ ಸಿಗಬಹುದೆಂದು, ಸಾಧ್ಯವಿರುವ ಕಟ್ಟಡಗಳ ಮೇಲೆ, ಮರಗಳ ಮೇಲೆ ಜಮಾಯಿಸಿತ್ತು.

ಗಾಂಧಿಯವರ ಪಾರ್ಥಿವ ಶರೀರದ ಅಂತಿಮ ಯಾತ್ರೆ ಯಮುನಾ ನದೀ ತೀರದ ಅಂತಿಮ ಸಂಸ್ಕಾರದ ಜಾಗ ತಲುಪುವ ಹೊತ್ತಿಗೆ ಸಂಜೆ ನಾಲ್ಕೂವರೆಯಾಗಿತ್ತು. ಮರದ ಎತ್ತರದ ಅಟ್ಟಣಿಗೆಯ ಮೇಲೆ ಗಂಧದ ಮರದ ತುಂಡುಗಳ ಮಧ್ಯೆ ಪಾರ್ಥಿವ ಶರೀರವನ್ನು ಇಡಲಾಯಿತು. ಜೇನು, ಎಳೆನೀರಿನ ಅಭಿಷೇಕವಾಯಿತು. ಗಾಂಧಿಯವರ ಹಿರಿಯ ಮಗ ಹರಿಲಾಲನ ಪತ್ತೆ ಇರಲಿಲ್ಲ. ಎರಡನೆಯ ಮಗ ಮಣಿಲಾಲ ದ.ಆಫ್ರಿಕಾದಿಂದ ಬರಲಾಗಿರಲಿಲ್ಲ. ಹಾಗಾಗಿ ಮೂರನೆಯ ಮಗ ರಾಮದಾಸ್ ತಂದೆಯ ಚಿತೆಗೆ ಅಗ್ನಿಸ್ಪರ್ಶ ಮಾಡಿದರು. ಜನಸಾಗರ ಮತ್ತೆ 'ಮಹಾತ್ಮ ಗಾಂಧಿ ಕೀ ಜೈ' ಎಂಬ ಮುಗಿಲುಮುಟ್ಟುವ ಘೋಷಣೆಗಳನ್ನು ಕೂಗಿ ಕೂಗಿ, ಎದೆಯಲ್ಲಿ ತುಂಬಿಕೊಂಡಿದ್ದ ತನ್ನೆಲ್ಲ ದುಃಖ-ಪರಿತಾಪಗಳನ್ನು ಹೊರಹಾಕುವ ಪ್ರಯತ್ನ ಮಾಡಿತು. ಮುಗಿಲಿಂದ ಹೂ ರಾಶಿಯ ಮಳೆಯೇ ಆದಂತೆ ಲಕ್ಷಾಂತರ ಜನ ಹೂ-ಹಾರಗಳನ್ನು ಉರಿಯುತ್ತಿದ್ದ ಚಿತೆಯತ್ತ ಎಸೆದರು. ಸಂಜೆಯ ಪಶ್ಚಿಮ ದಿಕ್ಕಿನಲ್ಲಿ ದಿನಮಣಿಯ ಕೆಂಪು ಜ್ವಾಲೆ ಭೂಮಿಯಂಚಿನಲ್ಲಿ ಅಡಗುತ್ತಿದ್ದಂತೆ ಮಹಾತ್ಮ ಗಾಂಧಿಯವರ ಚಿತೆಯ ಬೆಂಕಿಯ ಬೆಳಕು ಆ ಜಗತ್ತನ್ನು ಕತ್ತಲೆಯಿಂದ ಬಿಡುಗಡೆಗೊಳಿಸಲು ಹವಣಿಸುತ್ತಿದ್ದಂತಿತ್ತು.

ಕಾನೂನು ಮಂತ್ರಿ ಡಾ. ಬಿ.ಆರ್. ಅಂಬೇಡ್ಕರ್ ಅಂತಿಮ ಯಾತ್ರೆ ಹೊರಡುವ ಮುನ್ನ ಬಿರ್ಲಾ ಭವನಕ್ಕೆ ಬಂದು ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದಿದ್ದರು. ಗಾಂಧಿಯವರ ಶವ ನೋಡಿ ಅವರಿಗೆ ದುಃಖವೂ ಆಗಿತ್ತು. ನಂತರ ಅವರು ಅಂತಿಮ ಯಾತ್ರೆಗೆ ಸೇರಿಕೊಳ್ಳಲು ಮನೆಯಿಂದ ಬಂದರು. ಮೆರವಣಿಗೆ ದೂರ ಸಾಗಿತ್ತು. ಅದರತ್ತ ಸ್ವಲ್ಪ ದೂರ ನಡೆದು ದಣಿವಾಗಿ ಮನೆಗೆ ಹಿಂದಿರುಗಿದರು.

ಅಂತಿಮ ಯಾತ್ರೆಯ ರೀತಿ ನೀತಿಗಳ ಬಗ್ಗೆ ಲೋಹಿಯಾ ಬೇಸರಗೊಂಡಿದ್ದರು. ಶಾಂತಿದೂತನ ಪಾರ್ಥಿವ ಶರೀರವನ್ನು ಸೇನಾವಾಹನದಲ್ಲಿಟ್ಟು ಮೆರವಣಿಗೆಯಲ್ಲಿ ಕೊಂಡೊಯ್ದದ್ದು ಗಾಂಧಿ ಬೆಳಗಿಸಿದ ಜೀವನ ಮೌಲ್ಯಕ್ಕೆ ಮಾಡಿದ ಅಪಚಾರವೆಂದು ಲೋಹಿಯಾ ನಂತರ ಟೀಕಿಸಿ ಬರೆದರು. ಹಾಗೇ ನೆಹರೂ, ಪಾದರಕ್ಷೆಗಳೊಂದಿಗೆ ಶವವಾಹನವೇರಿದ್ದನ್ನೂ ಅವರು ಅಕ್ಷಮ್ಯ ಎಂದು ಹೇಳಿದ್ದರು.

ದಿಗ್ಭ್ರಮೆಗೊಂಡ ಜಗತ್ತು-ಹರಿದು ಬಂದ ಶೋಕ ಸಂದೇಶಗಳು

ಗಾಂಧಿಯವರ ಹತ್ಯೆಯಿಂದ ಜಗತ್ತು ದಿಗ್ಭ್ರಮೆಗೊಂಡಿತ್ತು. ಅಂತಿಮ ಸಂಸ್ಕಾರದ ದಿನದ ರಾತ್ರಿ ನೆಹರೂ ಮತ್ತು ಪಟೇಲರಿಬ್ಬರೂ ಆಕಾಶವಾಣಿ ಮೂಲಕ ಪ್ರಸಾರ ಭಾಷಣ ಮಾಡಿ ತಮ್ಮ ಶ್ರದ್ಧಾಂಜಲಿಗಳನ್ನು ಅರ್ಪಿಸಿದರು. ನೆಹರೂ: 'ಬೆಳಕಿನ ದೀಪ ಆರಿ ಹೋಗುವುದೇ? ಇಲ್ಲ, ಅದು ಆಗದು. ಬೆಳಕಿನ ದೀಪ ಆರಿಲ್ಲ. ಇಷ್ಟು ವರ್ಷಗಳ ಕಾಲ ಈ ದೇಶಕ್ಕೆ ದಾರಿ ತೋರಿದ ಆ ಬೆಳಕು ಮುಂದಿನ ಸಾವಿರ ವರ್ಷಗಳವರೆಗೂ ಭಾರತಕ್ಕೆ ಮಾತ್ರವಲ್ಲ, ಜಗತ್ತಿಗೂ ಬೆಳಕು ತೋರುವಷ್ಟು ಪ್ರಜ್ವಲವಾಗಿ ಉರಿಯುತ್ತದೆ' ಎಂದರು. ಪಟೇಲರು, 'ಇದು ದೇಶಕ್ಕೆ ದುಃಖದ ದಿನ, ಯಾತನೆಯ ದಿನವಾಗಿದೆ. ಮತಿಗೆಟ್ಟ ಮನುಷ್ಯನೊಬ್ಬ ಅವರನ್ನು ಹತ್ಯೆಗೈಯ್ಯುವ ಮೂಲಕ ಅವರ ಉದಾತ್ತ ಧ್ಯೇಯೋದ್ದೇಶಗಳನ್ನು ನಾಶಮಾಡಿದ್ದೇನೆ ಎಂದು ತಿಳಿದಿದ್ದರೆ ಅದು ತಪ್ಪು. ಅವರ ಸಾವಿನ ಮೂಲಕವೇ ಅವರ ಆ ಧ್ಯೇಯೋದ್ದೇಶಗಳು ಬೆಳಗಬೇಕೆಂಬುದು ವಿಧಿಲೀಲೆ ಇದ್ದರೂ ಇದ್ದೀತು.' ಎಂದರು.

ಆಶ್ಚರ್ಯವೆಂದರೆ ಪಾಕಿಸ್ತಾನವೂ ಗಾಂಧಿಯವರ ಹತ್ಯೆಯಿಂದ ದುಃಖತಪ್ತವಾಗಿತ್ತು. ಜಿನ್ನಾ ಗಾಂಧಿಯವರನ್ನು 'ಹಿಂದೂ ಸಮುದಾಯದಲ್ಲಿ ಹುಟ್ಟಿದ ಅಪೂರ್ವ ಗುಣಗಳ ಮಹೋನ್ನತ ನಾಯಕ' ಎಂದು ಬಣ್ಣಿಸಿದರೆ ಪ್ರಧಾನಿ ಲಿಯಾಖತ್ ಅಲಿ ಖಾನ್ 'ಗಾಂಧಿ ನಮ್ಮ ಕಾಲದ ಅತ್ಯುನ್ನತ ನಾಯಕ' ಎಂದು ಕರೆದಿದ್ದರು. ಬ್ರಿಟನ್‌ನ ಪ್ರಧಾನಿ ಕ್ಲೆಮೆಂಟ್ ಆ್ಯಟ್ಲೀ ತಮ್ಮ ಶ್ರದ್ಧಾಂಜಲಿ ಸಂದೇಶದಲ್ಲಿ 'ಒಂದು ಜನಾಂಗ ಇನ್ನೊಂದು ಜನಾಂಗವನ್ನು ಆಳುವುದರ ವಿರುದ್ಧದ ಬಂಡಾಯದ ಪ್ರತಿನಿಧಿಯಾಗಿದ್ದ ಗಾಂಧಿ, ಪಶ್ಚಿಮದ ನಾಗರೀಕತೆಯ ಕಟು ಟೀಕಾಕಾರರಾಗಿ ಸರಳ ಬದುಕಿನ ಸಂದೇಶಕರೂ ಆಗಿದ್ದರು' ಎಂದರು. ಫ್ರಾನ್ಸ್‌ನ ಸಮಾಜವಾದಿ ನಾಯಕ ಲಿಯೋನ್ ಬಲ್ಮ್ 'ನಾನು ಗಾಂಧಿಯನ್ನು ನೋಡಿಲ್ಲ. ಅವರ ನಾಡಿಗೆ ಕಾಲಿಟ್ಟಿಲ್ಲ. ಅವರ ಭಾಷೆ ಗೊತ್ತಿಲ್ಲ. ಆದರೂ ಇಂದು ನಾನು ನನಗೆ ಪ್ರಿಯರಾದವರೊಬ್ಬರನ್ನು, ಸಮೀಪವಾದವರೊಬ್ಬರನ್ನು, ಪಶ್ಚಿಮದ ಅತ್ಯುತ್ತಮವಾದುದನ್ನು ಹೀರಿಕೊಂಡಿದ್ದ ವ್ಯಕ್ತಿಯ ಅಗಲಿಕೆಯ ಭಾರವನ್ನು ಅನುಭವಿಸುತ್ತಿದ್ದೇನೆ' ಎಂದರೆ, ದ.ಆಫ್ರಿಕಾದಲ್ಲಿ ಬಹುಕಾಲ ಗಾಂಧಿಯವರ ಎದುರಾಳಿಯಾಗಿದ್ದ ಜ. ಸ್ಮಟ್ಸ್, 'ನಮ್ಮ ನಡುವೆ ಎಷ್ಟೇ ಭಿನ್ನಮತವಿದ್ದರೂ, ನನ್ನಂದಾಜಿನಲ್ಲಿ ತಮ್ಮ ಗೌರವವನ್ನು ಹೆಚ್ಚಿಸಿಕೊಳ್ಳುತ್ತಲೇ ಹೋದ ನಮ್ಮ ಕಾಲದ ಮಾನವ ಹಕ್ಕುಗಳ ಮಹಾನ್ ಹೋರಾಟಗಾರ ಮತ್ತು ಮನುಕುಲದ ಚಿರ ರಾಜಕುಮಾರ' ಎಂದು ವರ್ಣಿಸಿದ್ದರು. ಅಮೆರಿಕದ ಖ್ಯಾತ ಲೇಖಕ ಎಡ್ಗರ್ ಸ್ನೋ 'ಓರ್ವ ಸಂತ ಮತ್ತು ಸಮಾಜವಾದಿ ಎರಡೂ ಆಗಿದ್ದ ಗಾಂಧಿ, ಜಗತ್ತಿನ ಒಂದು ಜನಾಂಗ ಇನ್ನೊಂದು ಜನಾಂಗವನ್ನು ಆಳುವುದರ ವಿರುದ್ಧ ಬಂಡೆದ್ದ ಧೀರ' ಎಂದು ವರ್ಣಿಸಿದರೆ, ಡಾ. ಅಂಬೇಡ್ಕರ್, 'ಗಾಂಧಿಗೆ ನಾನು ಯಾವುದೇ ರೀತಿಯಲ್ಲೂ ಋಣಿಯಲ್ಲವಾದರೂ, ಅವರ ಸಾವು ನನಗೆ ನೋವು ತಂದಿದೆ. ಅವರಿಂದ ದೇಶಕ್ಕೆ ಒಳ್ಳೆಯದೂ ಆಗಿದೆ, ಕೆಲವು ವಿಷಯಗಳಲ್ಲಿ ತೊಂದರೆಯೂ ಆಗಿದೆ. ಇನ್ನು ನಮ್ಮಂತವರು ಸರಾಗವಾಗಿ ಉಸಿರಾಡಬಹುದಾಗಿದೆ' ಎಂದು ತಮ್ಮ ಸಂಗಾತಿಗೆ ಬರೆದ ಪತ್ರವೊಂದರಲ್ಲಿ ತಿಳಿಸಿದ್ದರು.

ರೈತಮಕ್ಕಳ ಸಾರ್ಥಕ ಶ್ರದ್ಧಾಂಜಲಿ ಕಂಡ ಲೋಹಿಯಾ

ಇವರಲ್ಲದೆ ಜಗತ್ತಿನ ಇನ್ನೂ ಅನೇಕರು, ಅನೇಕ ಪತ್ರಿಕೆಗಳು ಗಾಂಧಿಯವರಿಗೆ ಶ್ರದ್ಧಾಂಜಲಿ ಬರಹಗಳನ್ನು ಬರೆದರು. ಅನೇಕ ಕಡೆ ಚರ್ಚ್‌ಗಳಲ್ಲಿ ಸ್ಮರಣ ಸಭೆಗಳನ್ನು ನಡೆಸಲಾಯಿತು. ಫೆಬ್ರವರಿ ೧೨ರ ಗುರುವಾರ ಗಾಂಧಿಯವರ ಚಿತಾಭಸ್ಮವನ್ನು ಹನ್ನೆರಡು ಕುಂಭಗಳಲ್ಲಿ ತುಂಬಿ, ನದಿ ಸಂಗಮ ಮತ್ತು ಸಮುದ್ರಗಳಲ್ಲಿ ಲೀನಗೊಳಿಸಲು ಕಳಿಸಲಾಯಿತು. ಕರ್ನಾಟಕದ ಶ್ರೀರಂಗಪಟ್ಟಣದ ಬಳಿಯ ಪಶ್ಚಿಮ ವಾಹಿನಿಯೂ ಅಂತಹ ತಾಣಗಳಲ್ಲಿ ಒಂದು. ಅಲಹಾಬಾದ್‌ನ ತ್ರಿವೇಣಿ ಸಂಗಮಕ್ಕೆ ಚಿತಾಭಸ್ಮವನ್ನು ಒಯ್ಯುತ್ತಿದ್ದ ರೈಲುಗಾಡಿಯಲ್ಲಿ ಕೂತಿದ್ದ ಲೋಹಿಯಾ ಮಾರ್ಗದುದ್ದಕ್ಕೂ ಹೊಲ ಗದ್ದೆಗಳಲ್ಲಿನ ರೈತರು, ಈ ಗಾಡಿಯತ್ತ ಹೂ ಎರಚುತ್ತಿದ್ದುದನ್ನು ಕಂಡು ಇದಕ್ಕಿಂತ ಸಾರ್ಥಕ ಶ್ರದ್ಧಾಂಜಲಿ ಬಾಪುಗೆ ಮತ್ತಾವುದೂ ಇರಲಾರದು ಎಂದು ಉದ್ಗರಿಸಿದರು.

■

೬೩

ಮುಗಿಸುವ ಮುನ್ನ

೧೯೪೮ರ ಜನವರಿ ೩೦ರ ಸಂಜೆ ಮಹಾತ್ಮ ಗಾಂಧಿಯವರನ್ನು ಗುಂಡಿಟ್ಟು ಕೊಂದ ಹಂತಕನ ಹೆಸರು ನಾಥೂರಾಂ ವಿನಾಯಕ ಗೋಡ್ಸೆ. ಈತ ಸಾವರ್ಕರ್ ಸೇರಿದಂತೆ ಇತರ ಏಳು ಜನರೊಂದಿಗೆ ಸೇರಿ ಪಿತೂರಿ ನಡೆಸಿ ಗಾಂಧಿಯ ಹತ್ಯೆ ಮಾಡಿದ್ದನೆಂದು ಆರೋಪಿಸಲಾಗಿತ್ತಾದರೂ, ಈ ಹತ್ಯೆಯ ವಿಚಾರಣೆಗಾಗಿ ನೇಮಿಸಲಾಗಿದ್ದ ವಿಶೇಷ ನ್ಯಾಯಾಲಯದ ವಿಶೇಷ ನ್ಯಾಯಾಧೀಶ ಆತ್ಮಚರಣ ಖೋಸ್ಲಾ, ೧೯೪೮ರ ಜೂನ್‌ನಿಂದ ಡಿಸೆಂಬರ್‌ವರೆಗೆ ನಡೆದ ವಿಚಾರಣಾ ಕಾರ್ಯಕಲಾಪಗಳ ನಂತರ ೧೯೪೯ರ ಫೆಬ್ರುವರಿ ೧೦ರಂದು ನೀಡಿದ ತೀರ್ಪಿನಲ್ಲಿ ಸಾವರ್ಕರ್ ವಿರುದ್ಧ ಸಾಕ್ಷ್ಯ ಸಾಲದೆಂದು ಅವರನ್ನು ಬಿಡುಗಡೆ ಮಾಡಿ, ಮೊದಲ ಆರೋಪಿ ನಾಥೂರಾಮ ವಿನಾಯಕ ಗೋಡ್ಸೆ ಮತ್ತು ಎರಡನೆಯ ಆರೋಪಿ ನಾರಾಯಣ ದತ್ತಾತ್ರೇಯ ಆಪ್ಟೆಗೆ ಗಲ್ಲು ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದರು. ಇತರ ಆರೋಪಿಗಳಾದ ವಿಷ್ಣು ರಾಮಚಂದ್ರ ಕರ್ಕರೆ, ಮದನ್‌ಲಾಲ್ ಪಹ್ವಾ, ಶಂಕರ್ ಕಿಷ್ಟಯ್ಯ, ಗೋಪಾಲ ವಿನಾಯಕ ಗೋಡ್ಸೆ (ನಾಥೂರಾಮನ ತಮ್ಮ) ಹಾಗೂ ಸದಾಶಿವ ದತ್ತಾತ್ರೇಯ ಪರಚೂರೆ ಇವರಿಗೆ ಜೀವಾವಧಿ ಶಿಕ್ಷೆ ವಿಧಿಸಲಾಯಿತು. ಇನ್ನೋರ್ವ ಆರೋಪಿ ದಿಗಂಬರ ಬಾಡ್ಗೆ ಮಾಫಿ ಸಾಕ್ಷಿಯಾದ ಕಾರಣ ಅವನಿಗೆ ಶಿಕ್ಷೆಯಿಂದ ವಿನಾಯಿತಿ ನೀಡಲಾಯಿತು. ಎಲ್ಲ ಅಪರಾಧಿಗಳನ್ನೂ ಗಾಂಧಿ ಕುಟುಂಬ ಕ್ಷಮಿಸಿದ್ದು ಅವರಿಗೆ ಶಿಕ್ಷೆ ಬೇಡವೆಂದು ಮಣಿಲಾಲ್ ಮತ್ತು ರಾಮದಾಸ್ ಸರ್ಕಾರಕ್ಕೆ ಮನವಿ ಸಲ್ಲಿಸಿದರಾದರೂ ಸರ್ಕಾರ ಅದನ್ನು ತಿರಸ್ಕರಿಸಿತು.

ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ, ಗಾಂಧಿಯವರ ಪ್ರಾರ್ಥನಾ ಸಭೆಯ ಬಳಿ ಬಾಂಬ್ ಸ್ಫೋಟವಾದ ನಂತರವಾದರೂ ಪೊಲೀಸ್ ತನಿಖೆ ಇನ್ನಷ್ಟು ಎಚ್ಚರದಿಂದ ನಡೆದಿದ್ದಲ್ಲಿ ಈ ದುರಂತವನ್ನು ತಪ್ಪಿಸಬಹುದಿತ್ತು ಎಂದು ಅಭಿಪ್ರಾಯಪಟ್ಟರು. ಈ ದುರಂತದ ಎಷ್ಟೋ ವರ್ಷಗಳ ನಂತರ, ಅಂದರೆ ೧೯೬೪ರಲ್ಲಿ ಗೋಪಾಲ ಗೋಡ್ಸೆ ಮತ್ತು ಆತನ ಸಹಚರರು ಜೀವಾವಧಿ ಶಿಕ್ಷೆ ಮುಗಿಸಿ ಬಿಡುಗಡೆಯಾದ 'ಸಂಭ್ರಮ'ವನ್ನು ಆಚರಿಸಲು ಆ ವರ್ಷದ ನವೆಂಬರ್ ೧೨ರಂದು ಪುಣೆಯಲ್ಲಿ ಏರ್ಪಡಿಸಲಾಗಿದ್ದ ಸಮಾರಂಭವೊಂದರಲ್ಲಿ ಗಾಂಧಿ ಹತ್ಯೆಯ ಪೂರ್ವ ಮಾಹಿತಿಯನ್ನು ಸರ್ಕಾರಕ್ಕೆ ನೀಡಲಾಗಿತ್ತು ಎಂಬ ಮಾಹಿತಿ ಹೊರಬಿದ್ದಾಗ ಒತ್ತಡಕ್ಕೆ ಸಿಕ್ಕ ಸರ್ಕಾರ ನೇಮಿಸಿದ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ಜೀವನಲಾಲ್ ಕಪೂರ್ ಅವರ ಏಕಸದಸ್ಯ ಆಯೋಗವೂ ಬಾಂಬೆಯಿಂದ ದೆಹಲಿವರೆಗಿನ ಉನ್ನತ ಅಧಿಕಾರವರ್ಗದವರೆಗೆ ಹತ್ಯೆಯ ಪಿತೂರಿಯ ಸುಳಿವು ಸಿಕ್ಕಿತ್ತು ಎನ್ನುತ್ತಾ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿತು. ಈ ಆಯೋಗ, ತನಗೆ ಲಭ್ಯವಾದ ಈ ಪಿತೂರಿಯಲ್ಲಿನ ಸಾವರ್ಕರ್ ಅವರ ಪಾತ್ರವನ್ನು ಸಾಬೀತುಪಡಿಸಬಹುದಾಗಿದ್ದ ಸಾಕ್ಷ್ಯವನ್ನು ಮೂಲ ವಿಚಾರಣಾ ನ್ಯಾಯಾಲಯದಿಂದ

ಮರೆಮಾಚಲಾಗಿತ್ತು ಎಂದೂ ಹೇಳಿತು. ಅದೇನೇ ಇರಲಿ, ಆರೋಪಿಗಳು ವಿವಿಧ ನೆಲೆಗಳ ಮೇಲೆ ಪೂರ್ವ ಪಂಜಾಬ್ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದಾಗ ವಿಚಾರಣೆ ನಡೆಸಿದ ಆ ನ್ಯಾಯಾಲಯ ಶಂಕರ್ ಕಿಷ್ಟಯ್ಯ ಮತ್ತು ಪರಚೂರೆ ಅವರನ್ನು ಆರೋಪ ಮುಕ್ತಗೊಳಿಸಿ ಬಿಡುಗಡೆ ಮಾಡಿತು.

ಈ ನಾಥೂರಾಮ ವಿನಾಯಕ ಗೋಡ್ಸೆ ಮಹಾರಾಷ್ಟ್ರದ ಪೇಶ್ವೆಗಳ ಪಾಳೆಯವೆನಿಸಿದ ಪೂನಾದ ಒಂದು ಸಂಪ್ರದಾಯಸ್ಥ (ಚಿತ್ಪಾವನ) ಬ್ರಾಹ್ಮಣ ಕುಟುಂಬಕ್ಕೆ ಸೇರಿದವನು. ಆತನ ಕುಟುಂಬ ಸಂಪ್ರದಾಯಸ್ಥ; ಆದರೆ ಕರ್ಮಠವಲ್ಲದ, ಉದಾರ ನಂಬಿಕೆಗಳ ಕುಟುಂಬವೇ ಆಗಿತ್ತು. ಆದರೆ ಅದು ಹಿಂದೂ ಧರ್ಮ ಅದರ ಶಾಸ್ತ್ರಗ್ರಂಥಗಳ ಪಾವಿತ್ರ್ಯದಲ್ಲಿ ಅಡಗಿದೆ ಎಂದು ನಂಬಿತ್ತು ಮತ್ತು ಅದರ ರಕ್ಷಣೆ ಎಂದರೆ, ಅದನ್ನು ಇತರ ಧರ್ಮಗಳ, ವಿಶೇಷವಾಗಿ ಇಸ್ಲಾಂ ಧರ್ಮದ ಆಕ್ರಮಣದಿಂದ ರಕ್ಷಿಸುವುದೇ ಆಗಿತ್ತು. ಗೋಡ್ಸೆ ಸಾವರ್ಕರ್‌ರ ಹಿಂದುತ್ವ ಸಿದ್ಧಾಂತದ ಆರಾಧಕನಾಗಿ ಬೆಳೆದು, ಹಿಂದೂಗಳಲ್ಲದವರನ್ನು ಭಾರತದ ಮೂಲ ಪ್ರಜೆ ಎಂದು ಪರಿಗಣಿಸಲು ನಿರಾಕರಿಸುವ ತತ್ವಕ್ಕೆ ಬದ್ಧನಾಗಿದ್ದನು. 'ಅಗ್ರಣಿ' ಎಂಬ ಪತ್ರಿಕೆಯನ್ನೂ ನಡೆಸುತ್ತಿದ್ದ ಆತ, ಹಿಂದೂ ಮಹಾ ಸಭಾ ಮತ್ತು ಆರೆಸ್ಸೆಸ್‌ನಲ್ಲಿದ್ದನಾದರೂ, ನಂತರ ಅವು ಹಿಂದುತ್ವದ ವಿರೋಧಿ ಶಕ್ತಿಗಳನ್ನು ಸಮರ್ಥವಾಗಿ ಎದುರಿಸಲಾರವೆಂದು ಭಾವಿಸಿ ತನ್ನದೇ ಒಂದು ಸಂಘಟನೆಯನ್ನು ಕಟ್ಟತೊಡಗಿದ್ದನು. ಅದಕ್ಕಾಗಿ 'ಹಿಂದೂ ರಾಷ್ಟ್ರ' ಎಂಬ ಹೊಸ ಪತ್ರಿಕೆಯನ್ನೂ ಆರಂಭಿಸಿದ್ದನು. ಈತನ ಈ ಎಲ್ಲ ಪ್ರಯತ್ನಗಳಿಗೆ ಸಾವರ್ಕರ್ ಅವರ ನೈತಿಕ ಮತ್ತು ದೊಡ್ಡ ಮೊತ್ತಗಳ ದೇಣಿಗೆಗಳ ಬೆಂಬಲವೂ ಇತ್ತು. ಗಾಂಧಿ ರಾಜಕಾರಣವನ್ನು, ಅದು ಮುಸ್ಲಿಮರ ಓಲೈಕೆಯ ಹಿಂದೂ ವಿರೋಧಿ ರಾಜಕಾರಣವಾಗಿದೆ ಎಂದು ಟೀಕಿಸುವುದೇ ಪತ್ರಿಕೆಯ ಮುಖ್ಯ ಉದ್ದೇಶವಾಗಿತ್ತು.

ಹೀಗೆ ಗಾಂಧಿ ರಾಜಕಾರಣದ ವಿರುದ್ಧ ಕಿಡಿಕಾರುವುದನ್ನೇ ಉದ್ಯೋಗ ಮಾಡಿಕೊಂಡಿದ್ದ ಗೋಡ್ಸೆ, ಯಾವಾಗ ಗಾಂಧಿಯನ್ನು ಕೊಲ್ಲಲು ತೀರ್ಮಾನಿಸಿದ ಎಂಬುದು ಅಸ್ಪಷ್ಟ. ಈತನ ತಮ್ಮ ಗೋಪಾಲ ಗೋಡ್ಸೆ ತನ್ನ ಶಿಕ್ಷೆ ಮುಗಿಸಿ ಸೆರೆಮನೆಯಿಂದ ಹೊರಗೆ ಬಂದ ನಂತರ, ನಾಥೂರಾಮ ಗೋಡ್ಸೆ ಪರವಾಗಿ ವಾದಿಸಿ ಬರೆದಿರುವ 'ನಾನೇಕೆ ಗಾಂಧೀಜಿಯವರ ಹತ್ಯೆ ಮಾಡಿದೆ?' ಎಂಬ ಪುಸ್ತಕದ ಪ್ರಕಾರ, ಪಾಕಿಸ್ತಾನಕ್ಕೆ ವಿಭಜನೆಯ ಒಪ್ಪಂದದ ಅನ್ವಯ ಐವತ್ತೈದು ಕೋಟಿ ರೂಪಾಯಿಗಳನ್ನು ಕೊಡಲೇಬೇಕೆಂದು ಗಾಂಧಿ ಹಠಹಿಡಿದು ಉಪವಾಸ ಕೂರುವ ಸುದ್ದಿ, 'ಹಿಂದೂ ರಾಷ್ಟ್ರ' ಪತ್ರಿಕೆಯ ಕಛೇರಿಯ ಟೆಲಿಪ್ರಿಂಟರ್‌ನಲ್ಲಿ ಪ್ರಕಟವಾದ ಕ್ಷಣದಲ್ಲೇ, ನಾಥೂರಾಮ ಗಾಂಧಿಯ ಕೊಲೆಯ ನಿರ್ಧಾರ ಮಾಡಿದ್ದ ಎಂದು ಬರೆಯುತ್ತಾರೆ. ಆದರೆ ಮೊದಲಾಗಿ ಗಾಂಧಿ, ತಮ್ಮ ಉಪವಾಸವನ್ನು ಈ ಕಾರಣಕ್ಕೆ ಆರಂಭಿಸಿದರೆಂದು ಯಾವ ದಾಖಲೆಯೂ ಸೂಚಿಸುತ್ತಿಲ್ಲ. ಅಲ್ಲದೆ, ಗೋಡ್ಸೆ ನ್ಯಾಯಾಲಯದ ಮುಂದೆ ನೀಡಿದ ಹೇಳಿಕೆಯಲ್ಲಿ, ತಾನು ಮತ್ತು ತನ್ನ ಗೆಳೆಯರು ಬಿರ್ಲಾ ಭವನದಲ್ಲಿ ಶಾಂತಿಯುತ ಪ್ರತಿಭಟನೆ ಮಾಡುವ ಉದ್ದೇಶದಿಂದಷ್ಟೇ ದೆಹಲಿಗೆ ಹೊರಟಿದ್ದಾಗಿ ಹೇಳಿಕೊಂಡಿದ್ದಾನೆ. ಹೌದು, ಗೋಡ್ಸೆ ಗೆಳೆಯರು ಬಿರ್ಲಾ ಭವನದಲ್ಲಿ ಗಾಂಧಿ ವಿರುದ್ಧ ಘೋಷಣೆ ಕೂಗಿದ್ದರು. ಆದರೆ ಅವರ ಕಾರ್ಯಾಚರಣೆ ಅಷ್ಟಕ್ಕೇ ನಿಲ್ಲಲಿಲ್ಲ. ಅವರು ಸಹ ಆರೋಪಿಗಳ ಊರುಗಳಾದ ಪೂನಾದಿಂದ ಗ್ವಾಲಿಯರ್‌ಗೆ, ನಂತರ ದೆಹಲಿಯಿಂದ ಕಾನ್‌ಪುರಕ್ಕೆ ಹೋದರು. ಅಲ್ಲಿಂದ ಬಾಂಬೆಗೆ ಬಂದು ಮತ್ತೆ ದೆಹಲಿಗೆ ಹೋಗಿ ಹೋಟೆಲ್‌ನಲ್ಲಿ ಉಳಿದುಕೊಳ್ಳುತ್ತಾರೆ. ನಂತರ ಹಲವು ದಿನಗಳ ಕಾಲ

ಪ್ರತಿ ದಿನ ಬಿರ್ಲಾ ಭವನಕ್ಕೆ ಬಂದು ಸ್ಥಳ ತಪಾಸಣೆ ಮಾಡಿ ಹೋಗಿರುತ್ತಾರೆ. ಈ ಮಧ್ಯೆ ಗಾಂಧಿ ಪ್ರಾರ್ಥನಾ ಸಭೆಯ ಸಮೀಪದಲ್ಲೇ ನಡೆದ ಬಾಂಬ್ ಸ್ಫೋಟದಲ್ಲಿ ಇವರೂ ಭಾಗಿಯಾಗಿರುತ್ತಾರೆ. ಹಾಗಾಗಿ, ನಿರಾಶ್ರಿತರ ಶಿಬಿರದಲ್ಲಿದ್ದ ಶಸ್ತ್ರಾಸ್ತ್ರ ಮಾರಾಟಗಾರನೊಬ್ಬನಿಂದ ಪಿಸ್ತೂಲ್ ಖರೀದಿಸಿದ ಮೇಲಷ್ಟೇ ಗಾಂಧಿಯ ಹತ್ಯೆಯ ಯೋಚನೆ ತನ್ನಲ್ಲಿ ಮೂಡಿತೆಂಬ ನಾಥೂರಾಮ ಗೋಡ್ಸೆಯ ಹೇಳಿಕೆಯನ್ನು ನ್ಯಾಯಾಲಯ ಒಪ್ಪದಿದ್ದುದು ಸಹಜವೇ.

ನ್ಯಾಯಾಲಯ ತೀರ್ಪು ಕೊಟ್ಟು ಆರೋಪಿಗಳಿಗೆ ಶಿಕ್ಷೆಯೂ ಆಗಿದೆ. ಆದರೆ ಗೋಪಾಲ ಗೋಡ್ಸೆಯ 'ನಾನೇಕೆ ಗಾಂಧೀಜಿಯವರ ಹತ್ಯೆ ಮಾಡಿದೆ?' ಪುಸ್ತಕ, ನಾಥೂರಾಮ ನ್ಯಾಯಾಲಯದ ಮುಂದೆ ನೀಡಿದ ಹೇಳಿಕೆಯನ್ನು ನಾಟಕೀಯವಾಗಿ ವೈಭವೀಕರಿಸಿ, ಗಾಂಧಿ ಹತ್ಯೆಗೆ ಒಂದು ಸಮರ್ಥನೆಯನ್ನು ಒದಗಿಸಲು ಮಾಡಿರುವ ಪ್ರಯತ್ನ, ಹೊಸ ತಲೆಮಾರಿನ ಜನರನ್ನು ಪ್ರಭಾವಿಸುತ್ತಿರುವ ರೀತಿ, ತಲ್ಲಣವನ್ನು ಉಂಟು ಮಾಡುವಂಥದ್ದಾಗಿದೆ. ಇತ್ತೀಚೆಗೆ ಮಹಾರಾಷ್ಟ್ರ ಮತ್ತು ಕರ್ನಾಟಕಗಳಲ್ಲಿ ನಡೆದ ವಿಚಾರವಾದಿಗಳ, ವಿದ್ವಾಂಸರ ಮತ್ತು ಪತ್ರಕರ್ತರ ಕೊಲೆಗಳು ಇದಕ್ಕೆ ಸಾಕ್ಷಿಯಂತಿವೆ. ಗೋಪಾಲ ಗೋಡ್ಸೆಯ ಪುಸ್ತಕ ಒಂದು ಕೊಲೆ ಯೋಜನೆಯ ಎಲ್ಲ ರೋಚಕತೆಯೊಂದಿಗೆ ಓದುಗರ ಕುತೂಹಲವನ್ನು ಕಾಯ್ದಿಟ್ಟುಕೊಳ್ಳುತ್ತಾ, ತನ್ನದೇ ನೀತಿ-ಧರ್ಮಗಳ ಕಲ್ಪನೆಗಳನ್ನು ಮುಂದಿಡುತ್ತಾ, ನಾಥೂರಾಮನನ್ನು ಹಿಂದೂಗಳನ್ನು ಗಾಂಧಿಯ ಅಹಿಂಸಾತ್ಮಕ ರಾಜಕಾರಣದಿಂದ ಪಾರುಮಾಡಿ, ಮುಸ್ಲಿಮರ ಆಕ್ರಮಣದಿಂದ ರಕ್ಷಿಸಲೆತ್ನಿಸಿದ ಧೀರನೆಂಬಂತೆ, ವೀರ ಯೋಧನಂತೆ ಚಿತ್ರಿಸುವ ಪ್ರಯತ್ನವೊಂದನ್ನು ಮಾಡಿದೆ. ಆದರೆ ಇದನ್ನು ಚರಿತ್ರೆಯ ನಿಜ ಸಂಗತಿಗಳ ಸಂಕೀರ್ಣತೆಯ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ, ಗೋಡ್ಸೆಯ ವಾದ ಸರಣಿ, ಅನ್ಯಮತಗಳಿಂದ ಭಯಭೀತನಾದವನೊಬ್ಬನ ಅಸಹಾಯಕ ಆಕ್ರಂದನದಂತೆ ಮಾತ್ರ ಕೇಳಿಸುತ್ತದೆ ಎಂಬುದನ್ನು ನಾವು ಗಮನಿಸಬಹುದಾಗಿದೆ. ಏಕೆಂದರೆ ಈ ಆಕ್ರಂದನದ ಹಿನ್ನೆಲೆಯಲ್ಲಿ ದೇಶವಿಭಜನೆಯ, ಅಂದರೆ ತನ್ನದು ಮಾತ್ರ ಆಗಿದ್ದ ದೇಶವನ್ನು ಇತರರೊಂದಿಗೆ ಹಂಚಿಕೊಳ್ಳಬೇಕಾಗಿದ್ದರ ಬಗ್ಗೆ ಆಕ್ರೋಶವಿದೆ. ಆದರೆ ಇದಕ್ಕೆ ಗಾಂಧಿಯವರೇ ಕಾರಣವೆಂಬ ಚರಿತ್ರೆಯ ಸರಳೀಕೃತ ಗ್ರಹಿಕೆ ಇದೆ. ಇದರಲ್ಲಿ ತನ್ನದು ಮಾತ್ರ ಆದ ನೆಲ ಎಂಬ, ಚರಿತ್ರೆಯ ಚಲನಶೀಲತೆಯನ್ನು ನಿರಾಕರಿಸುವ, ಸ್ಥಗಿತಗೊಂಡ ಗ್ರಹಿಕೆಯಿಂದಷ್ಟೇ ಹುಟ್ಟಿದ ಕಲ್ಪನೆ ಇದೆ ಮತ್ತು ಈ ವಿಭಜನೆಗೆ ತನ್ನ ಸಿದ್ಧಾಂತದ ಕೊಡುಗೆಯ ಬಗೆಗಿನ ಜಾಣ ಮರೆವೂ ಇದ್ದಂತಿದೆ. 'ಭಾರತ ಬಿಟ್ಟು ತೊಲಗಿ' ಚಳುವಳಿಯೂ ಸೇರಿದಂತೆ ಪ್ರಜಾಸತ್ತಾತ್ಮಕ ರಾಷ್ಟ್ರೀಯ ಹೋರಾಟದಿಂದ ಸಂಪೂರ್ಣ ಗೈರು ಹಾಜರಾಗಿದ್ದ ಗೋಡ್ಸೆ ಮತ್ತು ಆತನ ಸಹಮನಸ್ಕರು ಗಾಂಧಿಯವರನ್ನೇ ತಮ್ಮೆಲ್ಲ ಗೋಳುಗಳಿಗೆ ಗುರಿಯನ್ನಾಗಿಸಿಕೊಂಡು ನಡೆಸಿದ ಹತ್ಯೆ ಪಲಾಯನವಾದವನ್ನೇ ವಿಜಯೋತ್ಸವವೆಂದು ಆಚರಿಸಿಕೊಳ್ಳುವ ಆತ್ಮದ್ರೋಹಿ ವಿಕ್ಷಿಪ್ತ ವರ್ತನೆ ಮಾತ್ರವೆನಿಸಿಕೊಳ್ಳುತ್ತದೆ.

ಗಾಂಧಿಯವರ, ಭಾರತವನ್ನು ಸರ್ವಧರ್ಮಗಳ ಸಹಬಾಳ್ವೆಯ ಸ್ವತಂತ್ರ ರಾಷ್ಟ್ರವಾಗಿ ಪುನಾರಚಿಸುವ ಮಹಾಪ್ರಯೋಗವನ್ನು ಮುಸ್ಲಿಮರ ಓಲೈಕೆ ರಾಜಕಾರಣವೆಂದು ಗ್ರಹಿಸುವುದು, ಹಿಂದೂ ಧರ್ಮ ಕುರಿತ ಏಕಸ್ವಾಮ್ಯತೆಯ ಗರ್ವ ಮತ್ತು ಮತಾಂಧತೆ ಮಾತ್ರವೆನಿಸಿಕೊಳ್ಳುತ್ತದೆ.

ಗೋಡ್ಸೆ, ಗೀತೆಯ 'ನನ್ನನ್ನು ಸ್ಮರಿಸುತ್ತಾ ಯುದ್ಧ ಮಾಡು' ಎಂಬ ಮಾತನ್ನು

ಉಲ್ಲೇಖಿಸುತ್ತಾನೆ. ಭಗವಂತನು ಶಿಶುಪಾಲನನ್ನು ಯಜ್ಞಭೂಮಿಯಲ್ಲಿ ಕೊಲ್ಲಲಿಲ್ಲವೆ? ಎಂದು ಕೇಳುತ್ತಾ, ತಾನು ಮಾಡಿದ ಹತ್ಯೆ ಧರ್ಮದ ಕೆಲಸ, ನೀತಿಯ ಕೆಲಸವೇ ಆಗಿದೆ ಎಂದು ವಾದಿಸುತ್ತಾನೆ. ಮತ್ತು ಅದಕ್ಕೊಂದು ಭಾವನಾತ್ಮಕ ಪರಿವೇಶವನ್ನು ತನ್ನ ವಾದದಲ್ಲಿ ಕಟ್ಟಿಕೊಡುತ್ತಾನೆ. ಈ ಹುಸಿ ಭಾವನಾತ್ಮಕ ಪರಿವೇಶವೇ ಆತನೊಳಗಿನ ತಪ್ಪಿತಸ್ಥನ ಮನೋಭಾವವನ್ನು ಹೊರಗೆಡಹುವಂತಿದೆ. ಮೇಲಾಗಿ, ಗಾಂಧೀಜಿ ತಮ್ಮ ಹತ್ಯೆಗೆ ಸ್ವಲ್ಪ ಮುನ್ನ ಆರೆಸ್ಸೆಸ್ ಸಭೆಯೊಂದರಲ್ಲಿನ ಸಂವಾದದಲ್ಲಿ ವಿವರಿಸಿದಂತೆ, ತಾನೇ ಭಗವಂತನೆಂದು ಅಥವಾ ಭಗವಂತನಿಂದ ಆಜ್ಞಾಪಿಸಲ್ಪಟ್ಟವನಂತೆ ಧರ್ಮಾಧರ್ಮಗಳ ನಿರ್ಣಯದ ಅಧಿಕಾರವನ್ನು ತಾನೇ ಪಡೆದುಕೊಂಡು, ಜೀವ ಹತ್ಯೆ ಮಾಡುವ ವರ್ತನೆ ಮಾನಸಿಕ ಅನಾರೋಗ್ಯದ ಪರಿಣಾಮ ಮಾತ್ರ ಎನಿಸಿಕೊಳ್ಳುತ್ತದೆ. ಗಾಂಧಿ ಪ್ರಜಾಸತ್ತಾತ್ಮಕ ಸರ್ಕಾರವೊಂದರ ಕಲಾಪಗಳಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆಂದು ಆಪಾದಿಸುವ ಗೋಡ್ಸೆ, ಹತ್ಯೆಗೆ ಸಮರ್ಥನೆಯನ್ನು ಕಂಡುಕೊಂಡಿರುವುದು ಮಾತ್ರ ಪೌರಾಣಿಕ ಯುಗದ ರಾಜಕಾರಣದಲ್ಲಿ.

ಗಾಂಧಿ ತಪ್ಪೇ ಮಾಡಿಲ್ಲ ಎಂದು ಯಾರೂ ಹೇಳುತ್ತಿಲ್ಲ. ಅವರ ಕಾಂಗ್ರೆಸ್‌ನೊಳಗೇ ಅವರಿಗೆ ಹಲವು ರೀತಿಯ ವಿರೋಧಗಳಿದ್ದವು. ಆದರೆ ಆ ತಪ್ಪುಗಳು ಒಬ್ಬ ಮಹಾಪುರುಷ, ಬರೀ ಹಿಂದೂಗಳ ಮಾತ್ರವಲ್ಲ, ಇಡೀ ಮಾನವಕುಲದ ಆಲೋಚನಾ ಕ್ರಮವನ್ನೇ ಕ್ರಾಂತಿಕಾರಿಯಾಗಿ ಬದಲಾಯಿಸುವ ಒಂದು ಮಹಾಪ್ರಯೋಗದಲ್ಲಿ ನಿರತನಾಗಿದ್ದಾಗ ಸಂಭವಿಸಿದ ತಪ್ಪುಗಳು ಅವು. ಪ್ರಯೋಗದಲ್ಲಿ ತಪ್ಪುಗಳಾಗದೆ ಇನ್ನೆಲ್ಲಿ ಆದಾವು? ಆದರೆ ಸ್ಥಗಿತಗೊಂಡ ಮನಸ್ಸುಗಳಿಗೆ ಈ ಪ್ರಶ್ನೆ ಕೇಳಿ ಪ್ರಯೋಜನವಿಲ್ಲ. ಹೀಗಾಗಿ ನಾಥೂರಾಮನ ಇಡೀ 'ನೈತಿಕ' ವಾದವು, ವೈಚಾರಿಕವಾಗಿ ಸಂಕುಚಿತವಾದ, ಭಾವನೆಗಳ ಇಕ್ಕಟ್ಟಿನಲ್ಲಿ ಸಿಲುಕಿಕೊಂಡ ಒಂದು ಎಳಸು ಮನಸ್ಸಿನ ಸ್ಫೋಟದಂತೆ ಮಾತ್ರ ಕೇಳಿಸುತ್ತದೆ.

ಇಂದು ಗೋಡ್ಸೆ ಗುಡಿ ಕಟ್ಟುವ ಜನ ಹುಟ್ಟಿಕೊಂಡಿದ್ದಾರೆ. ಗೋಡ್ಸೆ ದೇಶಭಕ್ತ ಎಂದು ಘೋಷಿಸುವವರೂ ನಮ್ಮ ಶಾಸನ ಸಭೆಗಳನ್ನು ಪ್ರವೇಶಿಸಿದ್ದಾರೆ. ಗೋಡ್ಸೆಯ ಕಲ್ಪನೆಯ ದೇಶವನ್ನು ಕಟ್ಟುವ ಕನಿಷ್ಠ ಗುಪ್ತ ಆಸೆಯನ್ನಾದರೂ ಉಳ್ಳವರು ಅಧಿಕಾರಕ್ಕೆ ಬಂದಿರುವಾಗ ಇದು ಆಶ್ಚರ್ಯವೇನಲ್ಲ. ಇದಕ್ಕೆ ಅವರನ್ನು ದೂಷಿಸಿ ಫಲವಿಲ್ಲ. ಏಕೆಂದರೆ ಅವರು ಪ್ರಜಾಸತ್ತಾತ್ಮಕ ವಿಧಾನದ ಮೂಲಕವೇ ಅಧಿಕಾರ ಹಿಡಿದಿದ್ದಾರೆ. ಆದರೆ ಇದಕ್ಕೆ ದಾರಿ ಮಾಡಿಕೊಟ್ಟ ರಾಜಕಾರಣ, ಗಾಂಧಿ ಬಹು ಹಿಂದೆಯೇ ಮುನ್ನೋಡಿದ ರಾಜಕಾರಣವೇ ಆಗಿತ್ತು ಎಂಬುದನ್ನು ನಾವು ಮರೆಯುವಂತಿಲ್ಲ. ಅವರು ತಮ್ಮ ಕೊನೆಯ ದಿನಗಳಲ್ಲಿ ಮಾಡಿದ್ದ 'ಕಾಂಗ್ರೆಸ್‌ನ್ನು ವಿಸರ್ಜಿಸಿ' ಎಂಬ ಸಲಹೆ, ಯಾರ ಕಿವಿಗೂ ಬೀಳದಷ್ಟು ಅವರ ಶಿಷ್ಯಗಣ ಅಧಿಕಾರ ಲೋಕದಲ್ಲಿ ಮುಳುಗಿದ್ದುದರ ಫಲವಿದು. ಗಾಂಧಿ ಬದುಕಿದ್ದಾಗಲೇ ಅವರನ್ನು ನಿರ್ಲಕ್ಷಿಸತೊಡಗಿದ್ದ ಕಾಂಗ್ರೆಸ್, ಅವರ ನಿರ್ಗಮನದ ನಂತರ ವಿವಿಧ ರೂಪಗಳನ್ನು ತಳೆದು ನಡೆದ ತಪ್ಪು ದಾರಿಯ ಕೊನೆಯನ್ನಿಂದು ನಾವು ಕಂಡಿದ್ದೇವೆ.

ಗಾಂಧಿ ನಿರ್ಗಮಿಸಿಲ್ಲ. ಕಾಲದ ಹೊಡೆತಗಳಿಗೆ ಸಿಕ್ಕಿ ಅವರ ಚಿತ್ರ ವಿರೂಪಗೊಂಡಿದೆ. ಬೇಕಾದವರು ಅವರ ಕಾಲಾತೀತ ಮೌಲ್ಯಗಳ ರೂಪದಲ್ಲಿ ಸಾಕಾರಗೊಳಿಸಿಕೊಳ್ಳುವ ಅವಕಾಶ ಇದ್ದೇ ಇದೆ.

■

ಗ್ರಂಥ ಋಣ

೧. **ಆತ್ಮ ಕಥೆ ಅಥವಾ ನನ್ನ ಸತ್ಯಾನ್ವೇಷಣೆ:** ಮಹಾತ್ಮ ಗಾಂಧಿ
ಕನ್ನಡಕ್ಕೆ: ಗೊರೂರು ರಾಮಸ್ವಾಮಿ ಅಯ್ಯಂಗಾರ್

೨. **ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ:** ಮಹಾತ್ಮ ಗಾಂಧಿ
ಕನ್ನಡಕ್ಕೆ: ಎಸ್.ವಿ. ಕೃಷ್ಣಮೂರ್ತಿ ರಾವ್

೩. **ಮಹಾತ್ಮ ಗಾಂಧಿಯವರ ಆಯ್ದ ಕೃತಿಗಳ ಸಂಪುಟಗಳು–೩ ರಿಂದ ೫**
(ಈ ಎಲ್ಲ ಕೃತಿಗಳ ಪ್ರಕಾಶಕರು: ನವಜೀವನ ಪ್ರಕಾಶನ ಮಂದಿರ ಅಹಮದಾಬಾದ್)

೪. **ಗಾಂಧಿ ಮತ್ತು ಕರ್ನಾಟಕ:** ಸಂ: ಸಿದ್ಧವನಳ್ಳಿ ಕೃಷ್ಣಶರ್ಮ
ಪ್ರ: ಕರ್ನಾಟಕ ರಾಜ್ಯ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು

೫. **ಮಹಾತ್ಮ ಗಾಂಧಿ ಅಂತಿಮ ಹಂತ:** ಸಂಪುಟ ೧ ಮತ್ತು ೨
ಮೂಲ: ಪ್ಯಾರೇಲಾಲ್: ಕನ್ನಡಕ್ಕೆ: ಕೆ.ವಿ. ಶಂಕರಗೌಡರು,
ಪ್ರ: ಗಾಂಧಿ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೬. **ಗಾಂಧಿ ಚರಿತ ಮಾನಸ** ಸಂ: ೧ ಮತ್ತು ೨: ಪಿ. ವೆಂಕೋಬ ರಾವ್
ಜೀವನ ವಿಕಾಸ ಸಾಹಿತ್ಯ, ಬೆಂಗಳೂರು (೨೦೦೧)

೭. **ನಾನೇಕೆ ಗಾಂಧೀಜಿಯವರ ಹತ್ಯೆ ಮಾಡಿದೆ?** ಲೇ: ಗೋಪಾಲ ಗೋಡ್ಸೆ
ಪ್ರ: ಗೋಪಾಲ ಗೋಡ್ಸೆ, ಪುಣೆ

೮. **Gandhi before India** : Ramachandra Guha
Allen Lane (Penguin Books) (2013)

೯. **Gandhi (1914 to 1948)**: Ramachandra Guha
Allen Lane (Penguin Books) (2018)

೧೦. **The life of Mahatma Gandhi:** Louis Fischer
Harper Collins (2007)

೧೧. **Mohan Das:** Rajmohan Gandhi
University of California Press (2008)

೧೨. **My Life is my Message:** Volumes: 1 to 4
Narayana Desai: Orient Blackswan ((2009)

೧೩. **The story of my experiments with Truth**
Mahatma Gandhi: Introduced with notes by Tridip Suhrud
Penguin Books (2018)

೧೪. **Mahatma Gandhi**: D.G. Tendulkar Volumes 1 to 8
Publications Division, Govt of India (2016)

೧೫. **Mahatma Gandhi, the last 200 days** (From the pages of The Hindu) Ed: V. Ramamurthy: Kasturi and Sons Ltd.(2003)

೧೬. **Gandhi: A Very Short Introduction:** Bhikhu Parekh
Oxford University Press (2001)

೧೭. **Two Saints:** Arun Shourie: Harper Collins (2017)

೧೮. **Music of the spinnig wheel**: Sudheendra Kulkarni
Amaryllis, New Delhi(2012)

೧೯. **JP: His Biography:** Alen and Wendy Scarfe
Oreint Longman Ltd. (1975)

೨೦. **Is JP the Answer?**: Minoo Masani
The Macmillan Company (1975)

೨೧. **Marx Gandhi and Socialism:** Rammanohar Lohia
Rammanohar Lohia Samata vidyalaya Nyas (1978)

೨೨. **The Guilty men of India's partition:** Rammanohar Lohia
Rammanohar Lohia Samata Vidyalaya Nyas (1978)

೨೩. **Dr. Rammanohar Lohia** : His life and Philosophy
Indumati Kelkar: Prestige Publications, Pune (1966)

೨೪. **Web of freedom: J.C. Kumarappa and Gandhi's struggle for economic justice**: Venu Madhav Govindu and Deepak Malghan
Oxford University Press (2016)

೨೫. **Assassination of Mahatma Gandhi:** Trial and Verdict: 1948-49
Ed.: Suresh Nambath: THG Publishing Private Ltd., Chennai (2020)

■

ಅನುಬಂಧ-1

ಪೂರಕ ಗಾಂಧಿ ಸಾಹಿತ್ಯ

ಗಾಂಧಿ ಎಂದರೆ ಒಂದೆಡೆ ದೇವನೂರ ಮಹಾದೇವ ಹೇಳಿದಂತೆ, ದಣಿವಿಲ್ಲದೆ ಸದಾ ತಿರುಗುತ್ತಿರುವ ಭೂಮಿಯಂತೆ. ಚಲನೆ ಅವರ ಬದುಕಿಗೆ ಇನ್ನೊಂದು ಹೆಸರು. ಯಾತ್ರೆಗಳು, ಭೇಟಿಗಳು, ಮಾತುಕತೆ, ಹೇಳಿಕೆಗಳು-ಭಾಷಣಗಳು-ಸತ್ಯಾಗ್ರಹ-ಉಪವಾಸಗಳಂತೆ ಬರವಣಿಗೆಯೂ ಇಂತಹ 'ಚಲನೆ'ಗಳಲ್ಲಿ ಒಂದು. ಅವರ ಬರಹ ಭೂಮಿ ಮತ್ತು ಆಕಾಶಗಳ ನಡುವೆ ಅವರು ಕಣ್ಣು ನೆಟ್ಟ, ಕೈಚಾಚಿದ ಎಲ್ಲ ಸಂಗತಿಗಳನ್ನೂ ಕುರಿತಾಗಿದ್ದು ಅಪಾರ ವೈವಿಧ್ಯಮಯತೆಯಿಂದ ಕೂಡಿದೆ. ಅವರು ತಮ್ಮದೇ 'ಇಂಡಿಯನ್ ಒಪಿನಿಯನ್', ನಂತರ 'ಯಂಗ್ ಇಂಡಿಯಾ', ಆನಂತರ 'ಹರಿಜನ್' ಪತ್ರಿಕೆಗಳಿಗೆ ನಿಯಮಿತವಾಗಿ ಬರೆಯುತ್ತಿದ್ದರು. 'ಹಿಂದ್ ಸ್ವರಾಜ್', ಆತ್ಮಕತೆ 'ನನ್ನ ಸತ್ಯಾನ್ವೇಷಣೆ', 'ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ' ಎಂಬ ಪುಸ್ತಕಗಳನ್ನು ಬರೆದರು. ಭಗವದ್ಗೀತೆಯನ್ನೂ, ಜಾನ್ ರಸ್ಕಿನ್‌ನ 'ಅನ್‌ಟು ದಿಸ್ ಲಾಸ್ಟ್' ಪುಸ್ತಕವನ್ನು ಗುಜರಾತಿಗೆ ಅನುವಾದ ಮಾಡಿದರು. ಸಬರಮತಿಯ 'ಸತ್ಯಾಗ್ರಹ ಆಶ್ರಮ'ದಲ್ಲಿ ಗೀತೆಯ ಬಗ್ಗೆ ಮಾಡಿದ ಉಪನ್ಯಾಸ ಮಾಲಿಕೆಯನ್ನು 'ಗೀತಾ ಬೋಧೆ' ಎಂಬ ಹೆಸರಿನಲ್ಲಿ ಬರಹ ರೂಪದಲ್ಲಿ ದಾಖಲಿಸಿದರು. ಈ ಬಗ್ಗೆ ಆಶ್ರಮದ ಕೆಲ ಶಿಷ್ಯರು ಮತ್ತಷ್ಟು ಸ್ಪಷ್ಟನೆಗಳನ್ನು ಕೇಳಿದಾಗ ಮುಂದೆ ಯೆರವಾಡ ಸೆರೆಮನೆಯಲ್ಲಿದ್ದಾಗ ಗೀತೆಯ ಅಧ್ಯಾಯವಾರು ವ್ಯಾಖ್ಯಾನಗಳನ್ನು ಬರೆದರು. ಹಾಗೆಯೇ ಅಲ್ಲಿಯೇ ಸತ್ಯಾಗ್ರಹಿಗಳು ಅವಶ್ಯವಾಗಿ ಪಾಲಿಸಬೇಕಾದ ಏಕಾದಶ (ಹನ್ನೊಂದು) ವ್ರತಗಳ ಬಗ್ಗೆ ಪತ್ರ ರೂಪದಲ್ಲಿ ಲೇಖನಗಳನ್ನು ಬರೆದರು. (ಈ ಪುಸ್ತಕದ ೭೧ನೇ ಅಧ್ಯಾಯ ನೋಡಿ) ಇದೆಲ್ಲವೂ 'ಯೆರವಾಡ ಮಂದಿರದಿಂದ' ಎಂಬ ಶೀರ್ಷಿಕೆಯಡಿ ಮುಂದೆ ಪುಸ್ತಕ ರೂಪದಲ್ಲಿ ಪ್ರಕಟವಾಯಿತು. ಈ ಶೀರ್ಷಿಕೆಯು ಗಾಂಧಿ ಸೆರೆಮನೆಯನ್ನು ಏನೆಂದು ಭಾವಿಸಿ ಅಲ್ಲಿನ ಬದುಕನ್ನು ಹೇಗೆ ಕಳೆದರು ಎಂಬುದನ್ನೂ ಸೂಚಿಸುವಂತಿದೆ.

ಇನ್ನು ಮುವ್ವತ್ತರ ದಶಕದ ಮಧ್ಯ ಭಾಗ ಗಾಂಧಿ ಬದುಕಿನ ಜಟಿಲತೆಗಳು ಆರಂಭವಾದ ಕಾಲ. ಒಂದು ಕಡೆ ಅಂಬೇಡ್ಕರ್ ಅವರ ವ್ಯಕ್ತಿತ್ವ ಮತ್ತು ವಿಚಾರಗಳಿಗೆ ಗಂಭೀರ ಸವಾಲೊಡ್ಡಿದ್ದರೆ, ಇನ್ನೊಂದು ಕಡೆ ರಾಷ್ಟ್ರದ ವಿಮೋಚನೆಯ ಮುನ್ನವೇ ವಿಭಜನೆಗೊಂದು ತಾತ್ವಿಕ ನೆಲೆ ರೂಪಿಸತೊಡಗಿದ್ದ ಜಿನ್ನಾ ಅವರ ರಾಜಕಾರಣ ತಾವು ಈವರೆಗೆ ಸಾಧಿಸಿದ್ದೆಲ್ಲವೂ ಟೊಳ್ಳೇನೋ ಎಂಬ ಅನುಮಾನ ಹುಟ್ಟಿಸಿತ್ತು. ಇದರ ಜೊತೆಗೇ ಇದಕ್ಕೆ ಪೂರಕವಾದ ಸಾವರ್ಕರ್ ನೇತೃತ್ವದ ಹಿಂದೂ ಮಹಾಸಭಾದ ಹಿಂದೂವಾದಿ ರಾಜಕಾರಣ ಅವರನ್ನು ಚಿಂತೆಗೀಡು ಮಾಡಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ಈವರೆಗೆ ಪ್ರಶ್ನಾತೀತವಾಗಿದ್ದ ಕಾಂಗ್ರೆಸ್ ಮೇಲಿನ ಅವರ ಹಿಡಿತ, ಸುಭಾಷ್‌ಚಂದ್ರ ಬೋಸ್ ಗಾಂಧಿಯವರ ಸಲಹೆಯನ್ನು ಧಿಕ್ಕರಿಸಿ ಎರಡನೇ ಅವಧಿಗೆ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ ಗೆಲ್ಲುವ ಮೂಲಕ ಸಡಿಲವಾಗತೊಡಗಿದ್ದೂ ಅವರನ್ನು ವಿಚಲಿತಗೊಳಿಸಿತ್ತು. ಇದೇ ಸಮಯದಲ್ಲಿ ಎದುರಾದ ಎರಡನೇ ಮಹಾಯುದ್ಧದಲ್ಲಿ ಭಾಗಿಯಾದ ಭಾರತದ ಬ್ರಿಟಿಷ್ ಸರ್ಕಾರದ ಬಗೆಗಿನ ನಿಲುವನ್ನು ಕುರಿತಂತೆ ಕಾಂಗ್ರೆಸ್‌ನೊಳಗಿನ ಗೊಂದಲವೂ ಸೇರಿ ಗಾಂಧಿಯವರನ್ನು ದೈನಂದಿನ ರಾಜಕಾರಣದ ಬಗ್ಗೆ ಆಸಕ್ತಿ ಕಳೆದುಕೊಳ್ಳುವಂತೆ ಮಾಡಿತ್ತು. (ಈ ಪುಸ್ತಕದ ೭೨ನೇ ಅಧ್ಯಾಯ ನೋಡಿ)

ಹೀಗಾಗಿ ಅವರು ನಿಧಾನವಾಗಿ ಕಾಂಗ್ರೆಸ್ ರಾಜಕಾರಣದಿಂದ ನಿವೃತ್ತಿ ಘೋಷಿಸಿ ವರ್ಧಾದಲ್ಲಿನ ಹೊಸ ಆಶ್ರಮದಲ್ಲಿ ನೆಲೆಸಿ ಖಾದಿ ಮತ್ತು ಗ್ರಾಮೋದ್ಯೋಗ ಮುಂತಾದ ರಚನಾತ್ಮಕ ಕಾರ್ಯಕ್ರಮಗಳಲ್ಲಿ ತೊಡಗಿಕೊಳ್ಳಲು ಮತ್ತು ತಮ್ಮ ಅನುಯಾಯಿಗಳನ್ನೂ ಅವುಗಳಲ್ಲಿ ತೊಡಗಿಸಲು ನಿಶ್ಚಯಿಸಿದರು. ಆಡಳಿತ ವಿರುದ್ಧದ ಶಾಸನೋಲ್ಲಂಘನೆಯ ರಾಜಕಾರಣ ಪೂರ್ಣವೆನಿಸುವುದು, ಅದರ ಜೊತೆ ರಚನಾತ್ಮಕ ಕಾರ್ಯಕ್ರಮಗಳಲ್ಲಿ ತೊಡಗಿಕೊಂಡಾಗ ಮಾತ್ರ ಎಂದು ಬಹುಶಃ ಅವರಿಗೆ ಅನಿಸಿರಬೇಕು. ಈ ಉದ್ದೇಶದಿಂದ ೧೯೪೧ರಲ್ಲಿ ಸೇವಾಗ್ರಾಮದಲ್ಲಿನ ವಾಸದ ಸಮಯದಲ್ಲಿ 'ನಿರ್ಮಾಣ ಕಾರ್ಯಕ್ರಮ' ಎಂಬ ಶೀರ್ಷಿಕೆಯಡಿ ಕರಡು ರೂಪದಲ್ಲಿ ಬರೆದ ಈ ಹಸ್ತಪ್ರತಿಯನ್ನು ಅವರು ೧೯೪೨ರ 'ಭಾರತ ಬಿಟ್ಟು ತೊಲಗಿ' ಚಳುವಳಿಯ ಸಂಬಂಧವಾಗಿ ಪುಣೆಯ ಆಗಾಖಾನ್ ಅರಮನೆಯ ಸೆರೆವಾಸದ ನಂತರ ೧೯೪೫ರಲ್ಲಿ ತಿದ್ದಿ ಅದಕ್ಕೆ ಅಂತಿಮ ರೂಪ ನೀಡಿ ಪ್ರಕಟಿಸಿದರು.

ಈ ಕಾರ್ಯಕ್ರಮಗಳಲ್ಲಿ ಮುಖ್ಯವಾದವುಗಳೆಂದರೆ ಮತೀಯ ಐಕ್ಯತೆ, ಅಸ್ಪೃಶ್ಯತಾ ನಿವಾರಣೆ, ಪಾನ ನಿರೋಧ, ಖಾದಿ ಪ್ರಚಾರ, ಇತರೆ ಗ್ರಾಮೋದ್ಯೋಗ, ಗ್ರಾಮ ನೈರ್ಮಲ್ಯ, ನಯೀ ತಾಲೀಮು (ಆಧುನಿಕ ಶಿಕ್ಷಣಕ್ರಮಕ್ಕೆ ಪರ್ಯಾಯವಾದ ದೇಸೀ ಮೂಲಶಿಕ್ಷಣಕ್ರಮದ ಪಾಠಗಳು-'ಹೊಸ ಅಭ್ಯಾಸ ಕ್ರಮ'), ವಯಸ್ಕರ ಶಿಕ್ಷಣ, ಮಹಿಳೆಯರ ಸಬಲೀಕರಣ, ಆರೋಗ್ಯ-ಶುಚಿ ಪಾಲನೆ, ದೇಶ ಭಾಷೆಗಳ ಪೋಷಣೆ, ರಾಷ್ಟ್ರ ಭಾಷೆಯ ಸಂಯೋಜನೆ, ಆರ್ಥಿಕ ಸಮತೆ, ರೈತ ಮತ್ತು ಕಾರ್ಮಿಕರ ಹಿತ ರಕ್ಷಣೆ, ವಿದ್ಯಾರ್ಥಿಗಳ ಸಮಸ್ಯೆಗಳು, ಕುಷ್ಠ ರೋಗಿಗಳ ಚಿಕಿತ್ಸೆ, ಶಾಸನೋಲ್ಲಂಘನದ ಸ್ಥಾನ. ಈ ಪಟ್ಟಿಗೆ ಮಿತ್ರರೊಬ್ಬರ ಸಲಹೆಯ ಮೇರೆಗೆ ಗೋಸಂವರ್ಧನೆಯನ್ನೂ ಸೇರಿಸಬಹುದು ಎಂದರು.

ಈ ಪುಸ್ತಿಕೆಯಲ್ಲಿ ರಾಷ್ಟ್ರದ ಸ್ವಾತಂತ್ರ್ಯ ಸಾಧನೆಯ ಪ್ರಯತ್ನಗಳಿಗೂ ಈ ಎಲ್ಲ ಕಾರ್ಯಕ್ರಮಗಳಿಗೂ ಇರುವ ಸಂಬಂಧವನ್ನು ವಿವರಿಸುವ ಗಾಂಧಿ, ಇವನ್ನೆಲ್ಲ ಕೈಗೆತ್ತಿಕೊಳ್ಳಬಹುದಾದ ಬಗೆಯನ್ನೂ ವಿವರಿಸುತ್ತಾರೆ. ಅಷ್ಟೇ ಅಲ್ಲದೆ ಈ ಕಾರ್ಯಕ್ಕಾಗಿ ಕಾರ್ಯಕರ್ತರ ಬಲ ಒದಗಿಸಬಹುದಾದ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆ ಭ್ರಷ್ಟಾಚಾರದ ಹಾದಿ ಹಿಡಿದಿರುವುದನ್ನೂ ಗಮನಿಸಿ ರಾಷ್ಟ್ರ ಸೇವಕರ ಸಂಘಟನೆಯ ಈ ಕಾರ್ಯದಲ್ಲಿ ಎಚ್ಚರದ ಅಗತ್ಯವನ್ನೂ ಸೂಚಿಸುತ್ತಾರೆ.

'ಆರೋಗ್ಯ ರಹಸ್ಯ' ಗಾಂಧಿಯವರ ಇನ್ನೊಂದು ಮಹತ್ವದ ಸಂಕಲನ. ದಕ್ಷಿಣ ಆಫ್ರಿಕಾದಲ್ಲಿದ್ದಾಗ 'ಇಂಡಿಯನ್ ಒಪಿನಿಯನ್' ಪತ್ರಿಕೆಗಾಗಿ ಮನುಷ್ಯ ಶರೀರ, ಗಾಳಿ, ನೀರು, ಆಹಾರ, ಮಾದಕ ಪದಾರ್ಥಗಳು, ಬ್ರಹ್ಮಚರ್ಯ, ಕಾಮಕ್ರಿಯೆ ಎಂಬ ಉಪಶೀರ್ಷಿಕೆಗಳಡಿ ಆರೋಗ್ಯದ ಸೂಕ್ಷ್ಮಗಳನ್ನೂ ಭೂಮಿ-ನೀರು-ಆಕಾಶಗಳೆಂಬ ಮುಂದಿನ ಮೂರು ಭಾಗಗಳಲ್ಲಿ ಆರೋಗ್ಯ ರಕ್ಷಣೆಗಾಗಿ ತಾವು ಪ್ರಯೋಗಿಸಿರುವ ವೈವಿಧ್ಯಮಯ ನಿಸರ್ಗ ಚಿಕಿತ್ಸೆಗಳನ್ನು ಸೂಚಿಸುತ್ತಾರೆ. ಇವೆಲ್ಲವುಗಳ ವಿಸ್ತಾರ ವಿವರಣೆ ವಿಶ್ಲೇಷಣೆಗಳನ್ನು ಗಾಂಧಿ ೧೯೪೨ರಲ್ಲಿ ಆಗಾಖಾನ್ ಅರಮನೆಯ ಸೆರೆಯಲ್ಲಿದ್ದಾಗ ಬರೆಯುತ್ತಾರೆ. ಮನುಷ್ಯ ಶರೀರದ ಸಕಲ ಅಂಗಾಂಗಗಳ ಶುಚಿ, ಆರೋಗ್ಯ ಕುರಿತ ಒಂದು ಸಮಗ್ರ ಚಿತ್ರಣ ಇದರಲ್ಲಿದೆ. ಗಾಂಧಿ ಅವರ ರಾಜಕಾರಣದ ಪರಿಕಲ್ಪನೆ ಹೇಗೆ ಅಂಡಾಂಡ-ಬ್ರಹ್ಮಾಂಡ ಸಮೀಕರಣದ ನೆಲೆಯಲ್ಲಿ ಸಾವಯವವಾಗಿ ಒಂದು ಧಾರ್ಮಿಕ ಸಂಕಥನವೇ ಆಗಿತ್ತು ಎಂಬುದನ್ನು ಇಲ್ಲಿ ಸೂಕ್ಷ್ಮವಾಗಿ ಗಮನಿಸಬಹುದಾಗಿದೆ.

ಗಾಂಧಿ ಸಾಹಿತ್ಯ ಮಾಲೆಯ ಮತ್ತೊಂದು ಪರಿಮಳದ ಪುಷ್ಪವೆಂದರೆ ಅವರು

ತಮ್ಮ ಸಾರ್ವಜನಿಕ ಜೀವನದುದ್ದಕ್ಕೂ ವಿವಿಧ ಸಂದರ್ಭಗಳಲ್ಲಿ, ವಿವಿಧ ಕಾರಣಗಳಿಗಾಗಿ ತಮ್ಮ ಕುಟುಂಬದ ಸದಸ್ಯರಿಂದ ಹಿಡಿದು ದೇಶದ, ಜಗತ್ತಿನ ಮಹಾ ಚಿಂತಕರು ಮತ್ತು ನಾಯಕರಿಗೆ ಬರೆದ ಪತ್ರರಾಶಿ. ಈ ಸಂಗ್ರಹದಲ್ಲಿ ಈ ಪತ್ರಗಳಲ್ಲಿ ಆಯ್ದ ಕೆಲವನ್ನು ಪೂರ್ಣವಾಗಿ, ಮತ್ತೆ ಕೆಲವುಗಳ ಆಯ್ದ ಭಾಗಗಳನ್ನು ನೀಡಲಾಗಿದೆ. ಈ ಪತ್ರಗಳ ಓದು ಗಾಂಧಿಯವರ ಬದುಕು ಎಷ್ಟೊಂದು ದಿಕ್ಕುಗಳಲ್ಲಿ ಚಾಚಿತ್ತು, ಎಷ್ಟು ಆಳದ ಸಂಕೀರ್ಣತೆ ಹೊಂದಿತ್ತು ಮತ್ತು ಅವರು ತಮ್ಮ ಕಾಲದ ಜಗತ್ತನ್ನು ಎಷ್ಟು ಆವೃತವಾಗಿ ನೋಡುತ್ತಿದ್ದರು ಎಂಬುದನ್ನು ಪರಿಚಯಿಸುತ್ತದೆ. ಜೊತೆಯಲ್ಲೇ, ಇದಕ್ಕಾಗಿ ಅವರು ನಂಬಿದ್ದ ಸತ್ಯ ಮತ್ತು ಅಹಿಂಸೆ ಎಂಬ ಮೌಲ್ಯಗಳು ಅಷ್ಟು ತಮ್ಮ ಅಮೂರ್ತತೆಯನ್ನು ಕಳಚಿಕೊಂಡು ಮೂರ್ತ ರೂಪ ಪಡೆಯಬಲ್ಲವಾಗಿದ್ದವು ಎಂಬುದನ್ನೂ ಸೂಚಿಸುತ್ತದೆ.

'ಸತ್ಯವಾಣಿ' ಗಾಂಧಿ ಸಾಹಿತ್ಯದ ಇನ್ನೊಂದು ಸಂಕಲನ. ಇದು 'ಬನಾರಸ್'ನ ಬಂಡಾಯದ ಭಾಷಣದಿಂದ ಆರಂಭವಾದಂತೆ ಗಾಂಧಿಯವರ ಬಹುಮುಖ್ಯ ಏಳು ಸಾರ್ವಜನಿಕ ಭಾಷಣಗಳನ್ನೂ 'ಯಂಗ್ ಇಂಡಿಯಾ' ಮತ್ತು 'ಹರಿಜನ್' ಪತ್ರಿಕೆಗಳಲ್ಲಿ ಕಾಲಾನುಕಾಲದಲ್ಲಿ ಸಂದರ್ಭಾನುಸಾರ ತಮ್ಮ ಹೋರಾಟದ ಹಾದಿಯಲ್ಲಿ ವಿವಿಧ ವಿಷಯಗಳ ಬಗ್ಗೆ ಬರೆದ ಲೇಖನಗಳ ಆಯ್ದ ಒಟ್ಟು ೮೧ ಭಾಗಗಳನ್ನು ಒಳಗೊಂಡಿದೆ. ಗಾಂಧಿ ದರ್ಶನದ ಒಂದು ವಿರಾಟ್ ಸ್ವರೂಪದ ಕಿರು ದರ್ಶನ ಇಲ್ಲಿ ಸಿಗುತ್ತದೆ. ಇವುಗಳೆಲ್ಲದರ ವಿಚಾರಧಾರೆ ಮತ್ತು ಕಾರ್ಯಕ್ರಮಗಳಲ್ಲಿ ಇವೊತ್ತಿನ ಜಾಗತೀಕರಣದ ವಿಕಾರಗಳು ಮತ್ತು ಅಶ್ಲೀಲತೆಗಳಿಗೆ ಪರಿಹಾರವಾಗಬಹುದಾದ ಹೊಳಹುಗಳು ಇದ್ದು ಅವು ಒಂದು ಸೂತ್ರವಾಗಿ ನಮ್ಮನ್ನು ಈ ವಿಕಾರಗಳು ಮತ್ತು ಅಶ್ಲೀಲತೆಗಳಿಂದ ಪಾರು ಮಾಡುವಷ್ಟು ಸರಳವೂ, ಪರಿಣಾಮಕಾರಿಯೂ ಆಗಿದೆ. ಅದು ನಮ್ಮನ್ನು ಏಳು ನಿರ್ದಿಷ್ಟ ಪಾತಕಗಳ ಕಡೆ ಗಮನ ಸೆಳೆದು ನಮ್ಮನ್ನು ಎಚ್ಚರಿಸುವಂತಿದೆ. ಇದನ್ನು 'ಸಪ್ತ ಪಾತಕಗಳ ಸೂತ್ರ' ಎಂದು ಕರೆಯಲಾಗಿದ್ದು ಅದು ಗಾಂಧಿ ಕಂಡ ಬದುಕಿನ ದರ್ಶನದಲ್ಲಿ ನಂಬಿಕೆ ಇಟ್ಟವರು ಇಂದು ಪಾಲಿಸಬಹುದಾದ, ಪಾಲಿಸಬೇಕಾದ ಬದುಕಿನ ಸೂತ್ರ, ಪಾತಕಗಳ ಬಗೆಗಿನ ಎಚ್ಚರಗಳ ಒಂದು ಪಟ್ಟಿ:

೧. ದುಡಿಮೆ ಇಲ್ಲದ ಸಂಪತ್ತು.

೨. ಆತ್ಮಸಾಕ್ಷಿ ಇಲ್ಲದ ಭೋಗ

೩. ಚಾರಿತ್ರ್ಯವಿಲ್ಲದ ಶಿಕ್ಷಣ

೪. ನೀತಿ ಇಲ್ಲದ ವ್ಯಾಪಾರ

೫. ಮಾನವತೆಯ ಸ್ಪರ್ಶವಿಲ್ಲದ ವಿಜ್ಞಾನ

೬. ತ್ಯಾಗವಿಲ್ಲದ ಧರ್ಮ

೭. ತತ್ವವಿಲ್ಲದ ರಾಜಕಾರಣ

ಬದುಕಿನ ಅಧಃಪತನದ ಮೆಟ್ಟಿಲುಗಳನ್ನು ಬಹು ಪರಿಣಾಮಕಾರಿಯಾಗಿ ಮತ್ತು ಬಹು ಸಂಕ್ಷಿಪ್ತವಾಗಿ ನಿರೂಪಿಸುವ ಈ ಪಾತಕಗಳ ಪಟ್ಟಿಯನ್ನು ಗಾಂಧಿ 'ಯಂಗ್ ಇಂಡಿಯಾ' ಪತ್ರಿಕೆಯ ೧೯೨೫ರ ಅಕ್ಟೋಬರ್ ೨೨ರ ಸಂಚಿಕೆಯಲ್ಲಿ ನೀಡಿದ್ದರು.

ಗಾಂಧಿ ತಮ್ಮ ಬದುಕಿನ ಅಂತಿಮ ದಿನದ ಕೆಲವೇ ತಾಸುಗಳ ಮುನ್ನ ತಮ್ಮ ಮೊಮ್ಮಗ ಅರುಣ್ ಗಾಂಧಿಗೆ ತಮ್ಮ ಅಂತಿಮ ಸಂದೇಶದಂತೆ ಒಂದು ಸಣ್ಣ ಕಾಗದದ ತುಂಡಿನಲ್ಲಿ ಬರೆದುಕೊಟ್ಟಿದ್ದೂ ಇದನ್ನೇ.

'ಗಾಂಧಿ ಕಥನ' ಎಂಬ ಸದರಿ ಗ್ರಂಥದ ಜೊತೆಗೆ ಈ ಮೇಲೆ ಹೆಸರಿಸಿ ಪರಿಚಯಿಸಿರುವ ಗಾಂಧಿ ಸಾಹಿತ್ಯ ರಾಶಿಯ ಈ ಐದೂ ಕೃತಿಗಳನ್ನು ಓದುವುದಾದರೆ ಗಾಂಧಿ ಓದು-ಮನನ ಒಂದು ಮಟ್ಟಿಗೆ ಪೂರ್ಣವಾಗುವುದು ಎಂಬ ಕಾರಣದಿಂದ ಈ ಅನುಬಂಧವನ್ನು ಇಲ್ಲಿ ನೀಡಲಾಗಿದೆ. ಹಿರಿಯ ಗಾಂಧಿವಾದಿ ಮತ್ತು ಚಿಂತಕ ಶ್ರೀಮನ್ ನಾರಾಯಣ ಅವರ ಪ್ರಧಾನ ಸಂಪಾದಕತ್ವದಲ್ಲಿ ಅಹಮದಾಬಾದ್‌ನ ನವಜೀವನ ಪ್ರಕಾಶನ ಮಂದಿರದವರ 'ಮಹಾತ್ಮ ಗಾಂಧಿಯವರ ಆಯ್ದ ಕೃತಿಗಳು' ಎಂಬ ಶೀರ್ಷಿಕೆಯಡಿ ಈ ಐದೂ ಸಂಪುಟಗಳ ಒಂದು ಕಟ್ಟು ಗಾಂಧಿ ಸ್ಮಾರಕ ನಿಧಿಯ ಮೂಲಕ ಎಲ್ಲೆಡೆ ಸುಲಭ ಬೆಲೆಯಲ್ಲಿ ವಿತರಿಸಲ್ಪಡುತ್ತಿದೆ. ಈ ಸಂಪುಟಗಳ ಕನ್ನಡ ಆವೃತ್ತಿಗಳೂ ಲಭ್ಯವಿದ್ದು ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮ, ಎಸ್. ವಿ. ಕೃಷ್ಣಮೂರ್ತಿರಾವ್, ಹನುಮಂತರಾವ್ ಮಾಂಜ್ರೇಕರ್, ಸಿ. ಸೀತಾರಾಮ್, ಗೊರೂರು ರಾಮಸ್ವಾಮಿ ಅಯ್ಯಂಗಾರ್, ನೀಲತ್ತಹಳ್ಳಿ ಕಸ್ತೂರಿ ಮುಂತಾದ ಸಮರ್ಥ ಅನುವಾದಕರು ಇವನ್ನು ಸಿದ್ಧಪಡಿಸಿದ್ದಾರೆ. ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಕಛೇರಿ ಇರುವ ಬೆಂಗಳೂರಿನ ಗಾಂಧಿ ಭವನದ ಪುಸ್ತಕದಂಗಡಿಯಲ್ಲಿ ಈ ಸಂಪುಟಗಳು ದೊರೆಯುವುವು.

– ಡಿ.ಎಸ್. ನಾಗಭೂಷಣ

ಅನುಬಂಧ-2

ಗಾಂಧಿ ಕಥನದ ಪಯಣ - ಕಥನಕಾರನ ಮರಣ

ಗಾಂಧಿ ಎಂಬ ಬೀಜ ಎದೆಗೆ ಬಿದ್ದದ್ದು ಬಾಲಕನಾಗಿದ್ದಾಗಲೇ ಎಂದು ನಾಗಭೂಷಣ ಅವರು ಹಲವು ಸಲ ಹೇಳಿಕೊಂಡಿದ್ದರು. ಅದಕ್ಕೆ ನೀರು ಗೊಬ್ಬರ ಹಾಕಿ ಬೆಳೆಸಿದ್ದು ನಾನೇ ಎಂದು ಇವರಿಗೆ ಹಲವು ಸಲ ಹೇಳಿ ಛೇಡಿಸುತ್ತಿದ್ದೆ! ನಾವು ಮೈಸೂರಿನಿಂದ ಶಿವಮೊಗ್ಗಕ್ಕೆ ಬಂದಿದ್ದು ೨೦೦೬ರಲ್ಲಿ, ಇವರು ಮೈಸೂರಿನಲ್ಲಿ ಆಕಾಶವಾಣಿ ಉದ್ಯೋಗದಿಂದ ಸ್ವಯಂ ನಿವೃತ್ತಿ ಪಡೆದ ಮೇಲೆ. ೨೦೧೦ರಲ್ಲಿ ನಾನು ಶಿವಮೊಗ್ಗೆಯ ನಮ್ಮ ಮನೆ 'ನುಡಿ'ಯ ಪಕ್ಕದಲ್ಲೇ 'ಗಾಂಧಿಗಿರಿ' ಎಂಬ ಪುಟ್ಟ ಪುಸ್ತಕದಂಗಡಿ ತೆರೆದು ಅಂಗಡಿಗಾಗಿ ಹಲವೆಡೆಗಳಿಂದ ಗಾಂಧಿ ಸಮಗ್ರ ಸಾಹಿತ್ಯದ ಪುಸ್ತಕಗಳನ್ನು ತರಿಸತೊಡಗಿದೆ. ದೊಡ್ಡ ದೊಡ್ಡ ಪುಸ್ತಕದ ಕಟ್ಟುಗಳು ಮನೆಗೆ ಬಂದು ಬೀಳುತ್ತಿದ್ದವು. ಆಗೆಲ್ಲಾ ನಾನು ನಾಗಭೂಷಣ ಅವರಿಗೆ 'ನೋಡಿ, ಈಗ ಮನೆಗೆ ಬಂದಿರುವ ಪುಸ್ತಕಗಳ ಮೇಲೆ ಒಮ್ಮೆ ಕಣ್ಣಾಡಿಸಿ, ಆಮೇಲೆ ಅಂಗಡಿಗೆ ಸಾಗಿಸುವೆ, ಅವು ಮಾರಾಟ ಆಗಿಹೋದ ಮೇಲೆ, 'ನಾನು ಪುಸ್ತಕ ನೋಡಲಿಲ್ಲ, ಆ ಪುಸ್ತಕ ಕೊಡು, ಈ ಪುಸ್ತಕ ಕೊಡು' ಎಂದು ನನ್ನನ್ನು ಪೀಡಿಸಬೇಡಿ, ಗಾಂಧಿ ಪುಸ್ತಕದ ಮೊದಲ ಫಲಾನುಭವಿ ನೀವೇ ಆಗಿರಿ' ಎಂದೆನ್ನುತ್ತಿದ್ದೆ. ಆಗೆಲ್ಲ ತುಂಬಾ ಆಸ್ಥೆಯಿಂದ ಪುಸ್ತಕ ಮಗುಚಿ ಹಾಕುತ್ತಾ 'ಓಹೋ ಗಾಂಧಿ ಪುಸ್ತಕ ಕೊಳ್ಳಲು 'ಗಾಂಧಿಗಿರಿ'ಯ ಮುಂದೆ ದೊಡ್ಡ ಸರತಿಯ ಸಾಲು ಇದೆಯೇನೊ' ಎಂದು ಛೇಡಿಸುತ್ತಿದ್ದರು. ಒಮ್ಮೆ ಹೀಗಾಯಿತು, ಸಂಜೆ 'ಗಾಂಧಿಗಿರಿ'ಗೆ ಹೋಗಿ ಮನೆಗೆ ಮರಳಿದ ಮೇಲೆ ಅಲ್ಲಿ ನಡೆದ ಘಟನೆಯೊಂದನ್ನು ಹೀಗೆ ನಿರೂಪಿಸಿದೆ. "ಇವತ್ತು ಒಬ್ಬ ಹದಿಹರೆಯದ ಹುಡುಗ ಅಂಗಡಿಗೆ ಬಂದು ಪುಸ್ತಕ ಕೇಳಿದ ಕಣ್ರೀ, ಅಲ್ಲಿ ಜೋಡಿಸಿದ್ದ ಎಲ್ಲಾ ಪುಸ್ತಕಗಳನ್ನು ಮುಟ್ಟುತ್ತಾ ಪ್ರತಿಯೊಂದು ಪುಸ್ತಕಕ್ಕೂ ತಾನೆ ಬೆಲೆ ಕಟ್ಟುತ್ತಿದ್ದ. ನೋಡಿದರೆ ಬುದ್ಧಿ ಮಾಂದ್ಯನ ಹಾಗೆ ಕಾಣುತ್ತಿದ್ದ!, ಗಾಂಧಿಯ ಆತ್ಮಕತೆ 'ನನ್ನ ಸತ್ಯಾನ್ವೇಷಣೆ' ಕಪಾಟಿನಿಂದ ತೆಗೆದು ನನ್ನ ಮುಖದ ಮುಂದೆ ಹಿಡಿದು 'ಇದಕ್ಕೆ ಎಷ್ಟು ಬೆಲೆ?' ಎಂದು ಕೇಳಿದ. ನೋಡಿದರೆ ಹುಚ್ಚನಂತೆ ಕಾಣುತ್ತಿದ್ದ. ನಾನು ಹೆದರಿ ಉಗುಳು ನುಂಗುತ್ತಾ ಕೇವಲ ಮೂವತ್ತು ರೂಪಾಯಿ ಅಂದೆ. ಅವನು ಅಲ್ಲಿದ್ದ ಎಲ್ಲಾ ಪುಸ್ತಕಗಳತ್ತ ಕೈದೋರಿ ಇಲ್ಲಿರುವ ಎಲ್ಲ ಪುಸ್ತಕಗಳಿಗಿಂಥ ಈ ಪುಸ್ತಕದ ಬೆಲೆ ಹೆಚ್ಚು, ನೀವು ಸುಳ್ಳು ಹೇಳುತ್ತಿರುವಿರಿ, ಇದರ ಬೆಲೆ ಮೂವತ್ತಲ್ಲ ಇಪ್ಪತ್ತು ಸಾವಿರ ಎಂದು ಪುಸ್ತಕವನ್ನು ನನ್ನ ಮುಂದಿಟ್ಟು ನಾನು ಉತ್ತರಿಸುವ ಮೊದಲೇ ಹೊರಟು ಹೋದ." ಈ ಪ್ರಸಂಗವನ್ನು ಕೇಳಿ ನಾಗಭೂಷಣ ಅವರು ಗಾಂಧಿಯ ಪುಸ್ತಕಕ್ಕೆ ನಿಜವಾದ ಬೆಲೆಯನ್ನು ಹುಚ್ಚರು ಮಾತ್ರ ಕಟ್ಟಬಲ್ಲರು ನೋಡು ಎಂದು ಆಳವಾದ ಯೋಚನೆಯಲ್ಲಿ ಮುಳುಗಿದರು.

ಬೆಂಗಳೂರಿನ ಗಾಂಧಿಭವನದಿಂದ ಒಮ್ಮೆ ದೊಡ್ಡ ಪೆಟ್ಟಿಗೆ ತುಂಬಾ ಗಾಂಧಿ ಸಮಗ್ರ ಸಾಹಿತ್ಯ ಬಂದಾಗಲಂತೂ ನಾಗಭೂಷಣ ಅವರು ರಾತ್ರಿ-ಹಗಲು ಅವುಗಳ ಮೇಲೆ ಕಣ್ಣಾಡಿಸಿದ್ದು ನೆನಪಿದೆ. ತದನಂತರ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ-೨೦೧೧ ರಲ್ಲಿ ಶುರುಮಾಡಿದ ಮೇಲೆ ಅವರು ಆಯೋಜಿಸುತ್ತಿದ್ದ ಕಮ್ಮಟ-ಶಿಬಿರಗಳ ಕೇಂದ್ರ

ಬಿಂದು ಗಾಂಧಿಯೇ ಆಗಿರುತ್ತಿದ್ದರು. ಗಾಂಧಿಯವರ 'ಹಿಂದ್-ಸ್ವರಾಜ್' ಅವರ ಮೆಚ್ಚಿನ ಪುಸ್ತಕವೂ ಅಗಿ ಅವಕಾಶ ಸಿಕ್ಕಾಗಲೆಲ್ಲಾ ಆ ಪುಸ್ತಕವನ್ನು ಕೇಂದ್ರವಾಗಿಟ್ಟುಕೊಂಡೇ ಕಮ್ಮಟಗಳನ್ನು ಆಯೋಜಿಸತೊಡಗಿದರು. ಅನೇಕ ಸಲ ಯಾವುದಾದರೂ ವಿಚಾರಸಂಕಿರಣಕ್ಕೆ ಅವರನ್ನು ಆಹ್ವಾನಿಸಿದಾಗ ಉದ್ದೇಶಪೂರ್ವಕವಾಗಿ ಗಾಂಧಿಯವರ ಹಿಂದ್-ಸ್ವರಾಜ್ ವಿಷಯವನ್ನೇ ಆಯ್ದುಕೊಳ್ಳುತ್ತಿದ್ದರು. ಎಷ್ಟು ಓದಿದರೂ ಮತ್ತೂ ಮತ್ತೂ ಗಾಂಧಿ ಬೇಕೆನಿಸುತ್ತಿದೆ, ಸಾಕೆನಿಸುತ್ತಿಲ್ಲ ಅನ್ನುತ್ತಿದ್ದರು. ಇದೇ ಸಮಯಕ್ಕೆ ಬೆಂಗಳೂರಿನ ಗಾಂಧಿ ಭವನದಲ್ಲಿ ಕಾರ್ಯದರ್ಶಿಯಾಗಿದ್ದ ಗೆಳೆಯ ಶ್ರೀ ಜಿ.ಬಿ. ಶಿವರಾಜು ಮೂಲಕ ಪರಿಚಯವಾದ ಎಂ.ಸಿ. ನರೇಂದ್ರ ಅವರು ನಾಗಭೂಷಣ ಅವರಿಗೆ ಹತ್ತಿರವಾಗತೊಡಗಿದ್ದರು. ಗಾಂಧಿ ವಿದ್ವಾಂಸ ಶ್ರೀ ರಾಮಚಂದ್ರ ಗುಹಾ ಅವರೊಡನೆಯ ಈ-ಮೈಲ್ ಸಂವಾದ-ಭೇಟಿ, ಚರ್ಚೆ, ಸ್ನೇಹ, ಬೆಂಗಳೂರಿನ ರಾಗಿಕಣದಲ್ಲಿ 'ಭೂ'ದಿನದಂದು ಪ್ರಸನ್ನ ಅವರು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು – ಆ ದಿನ ನರೇಂದ್ರ ಅವರ ರಾಮಕೃಷ್ಣ ವಿದ್ಯಾಲಯಕ್ಕೆ ನೀಡಿದ ಭೇಟಿ, ನರೇಂದ್ರ ಅವರು, ನಾಗಭೂಷಣ ಅವರಿಗೆ ಮಕ್ಕಳಿಗಾಗಿ ಗಾಂಧಿ ಪುಸ್ತಕ ಬರೆದುಕೊಡುವಂತೆ ಮಾಡಿದ ಪ್ರಸ್ತಾಪ ನಾಗಭೂಷಣ ಅವರು ಒಪ್ಪಿ ನೀಡಿದ ವಚನ, 'ಮತ್ತೆ ಮತ್ತೆ ಗಾಂಧಿ' ಕಿರು ಪುಸ್ತಕದ ಪ್ರಕಟಣೆ ಹೀಗೆ ಗೊತ್ತಿಲ್ಲದ ಹಾಗೆಯೇ ಗಾಂಧಿ ಕಥನದ ಪುಸ್ತಕ ಹೊರಹೊಮ್ಮಲು ವೇದಿಕೆ ಸಜ್ಜಾಗುತ್ತಿತ್ತು.

ಎಲ್ಲವೂ ಹೇಳಿಯಾಗಿದೆ, ಹೊಸದಾಗಿ ಹೇಳುವುದೇನಿದೆ? ಎನ್ನುತ್ತಲೇ ತಮ್ಮ ಬರವಣಿಗೆಯನ್ನು ಜನವರಿ ೨೦೧೯ರ ಆಸುಪಾಸಿನಲ್ಲಿ ಶುರುಮಾಡಿದಂತೆ ನೆನಪು. ತದನಂತರ ಹತ್ತು-ಹಲವು ಪುಸ್ತಕಗಳನ್ನು ತಡವುತ್ತಾ ತಡವುತ್ತಾ ನಾಗಭೂಷಣ ಅವರು ಸಂಪೂರ್ಣ ಅದರಲ್ಲಿ ಮುಳುಗಿ ಹೋಗುತ್ತಿರುವುದನ್ನು ನಾನು ಗಮನಿಸಿದೆ. ಇವರು ಬರೆಯುತ್ತಿದ್ದ ಗಾಂಧಿ ಕಥನ ಯಾವ ಸ್ವರೂಪ ಪಡೆಯಬಹುದೆಂಬ ಅಂದಾಜು ಇರಲಿಲ್ಲ. 'ನೀವು ಬರೆಯುವ ಪುಸ್ತಕ ದೊಡ್ಡವರಿಗಾದರೂ ಮಕ್ಕಳಿಗೂ ಅರ್ಥವಾಗುವಂತಹ ಸರಳಗನ್ನಡದಲ್ಲಿ ಬರೆಯಿರಿ. ಕನ್ನಡದಲ್ಲೇ ಆಲೋಚಿಸಿ ಕನ್ನಡದಲ್ಲೇ ಬರೆಯಿರಿ. ನಿಮ್ಮ ವಿಮರ್ಶೆಯ ಪರಿಭಾಷೆ ಪಕ್ಕಕ್ಕಿಟ್ಟು ಬರೆಯಿರಿ' ಎಂದು ಅವರು ಬರೆದಂತೆಲ್ಲಾ ಓದಿ ಪ್ರತಿಕ್ರಿಯಿಸುತ್ತಿದ್ದೆ. ಬರೆಯುವ ಕಷ್ಟ ಅರಿತವಳಾಗಿ ಅಬ್ಬಾ ಇಷ್ಟೆಲ್ಲಾ ಪುರಾಣ ಅದ್ಹೇಗೆ ಬರೆದಿರಿ ಎಂದು ಮೆಚ್ಚುಗೆ ವ್ಯಕ್ತ ಪಡಿಸುತ್ತಿದ್ದೆ. ಕಣ್ಣಿನ ಸಮಸ್ಯೆ ಇದ್ದುದರಿಂದ ಸಣ್ಣ ಕೋಣೆಯೊಳಗೆ ಮೂರು ಪ್ರಖರವಾದ ದೀಪಗಳನ್ನು ಹಾಕಿಕೊಂಡು ಒಂದೇ ಬೆರಳಿನಿಂದ, ಒಂದೇ ಉಸಿರಿನಲ್ಲಿ ಕಂಪ್ಯೂಟರ್‌ನಲ್ಲಿ ರಾತ್ರಿ-ಹಗಲು ಟೈಪ್ ಮಾಡುತ್ತಿದ್ದರು. ಗಾಂಧಿ ಕಥನ ಮುಗಿಯುವ ಹೊತ್ತಿಗೆ ಅರೆ-ಬರೆ ಕಾಣಿಸುತ್ತಿದ್ದ ಇದ್ದ ಕಣ್ಣೊಂದೂ 'ಹೊಟ್ಟೆ' ಹೋದರೆ ಆಶ್ಚರ್ಯವಿಲ್ಲ ಎಂದು ಆತಂಕ ವ್ಯಕ್ತಪಡಿಸುತ್ತಿದ್ದೆ.

ಈಗ ಗಾಂಧಿ ದಕ್ಷಿಣ ಆಫ್ರಿಕಾದಲ್ಲಿ, ಈಗ ಇಂಗ್ಲೆಂಡ್‌ನಲ್ಲಿ, ಈಗ ದಂಡಿಯಲ್ಲಿ, ಈಗ ನೌಖಾಲಿಯಲ್ಲಿ 'ಗಾಂಧಿ ಗಾಂಧಿ' ಎಂದು ಅದರಲ್ಲಿಯೇ ಕಳೆದುಹೋದಾಗ ನಾನು ಸಿಟ್ಟಿನಿಂದ ಕಂಪ್ಯೂಟರ್ ಆಫ್ ಮಾಡಿ 'ಮನುಷ್ಯರು ಇಷ್ಟು ವ್ಯಾಮೋಹಕ್ಕೆ ಬೀಳಬಾರದು, ಇದು ಗಾಂಧಿಗೆ ವಿರುದ್ಧ, ನೀವೇನು ಬದುಕಬೇಕೆಂದು ಇರುವಿರೋ, ಸಾಯಬೇಕು ಅಂತ ಹೊರಟಿರುವಿರೋ' ಎಂದು ಜಗಳವಾಡಿ ನಂತರ ತಣ್ಣಗಾಗಿ

ಇನ್ನಾದರೂ ಮಲಗಬಾರದೇ ಎಂದು ಕೇಳಿಕೊಳ್ಳುತ್ತಿದ್ದೆ. ರಾತ್ರಿ ೮–೯ ಗಂಟೆಗೆ ಚಹಾ, ಮಧ್ಯರಾತ್ರಿ ೧೨.೩೦ಕ್ಕೆ ಊಟ, ಸರಿರಾತ್ರಿ ೩–೪ ಗಂಟೆಗೆ ಮತ್ತೆ ಚಹಾ ಮಾಡಿಕೊಡುತ್ತಿದ್ದುದೂ ಉಂಟು, ಒಮ್ಮೊಮ್ಮೆ ರಾತ್ರಿ ೧೨ ಗಂಟೆಗೆ ಕುಕ್ಕರ್ ಕೂಗಿಸುವ ಪ್ರಮೇಯವೂ ಬರುತ್ತಿತ್ತು. ರಾತ್ರಿ ಇಡೀ ಲೈಟು ಉರಿಸುವ ನಮ್ಮ ಬಗ್ಗೆ ಅಕ್ಕ–ಪಕ್ಕದ ಮನೆಯವರು ಏನು ತಿಳಿದುಕೊಳ್ಳುವರೋ ಎಂದು ಅನಿಸುತ್ತಿತ್ತು. ಬೆಳಿಗ್ಗೆ ೧೦ ಗಂಟೆಗೆ ಕಂಪ್ಯೂಟರ್ ಮುಂದೆ ಕುಳಿತರೆ ಮುಂದಿನ ಬೆಳಗಿನ ಜಾವದವರೆಗೂ ಇವರ ಕಥನ ಮುಂದುವರಿಯುತ್ತಿತ್ತು. ‘ಲಿಂಕ್ ತಪ್ಪಿ ಹೋಗುತ್ತೆ ಕಣೆ ನಿನಗೆ ಅರ್ಥವಾಗುವುದಿಲ್ಲ. ನಿನ್ನ ನಾಕು ಸಾಲಿನ ಪದ್ಯದ ತರ ಅಲ್ಲ’ ಎಂದು ರೇಗಿಸುತ್ತಿದ್ದರು. ಇದು ಸರಿಸುಮಾರು ೮ ತಿಂಗಳ ತನಕ ಹೀಗೆಯೇ ಸಾಗಿರಲು ನಾನು ‘ನಿಮಗೆ ಗಾಂಧಿ ಹುಚ್ಚು ಹಿಡಿದಿದೆ, ನೀವು ಖಂಡಿತಾ ಕಷ್ಟಕ್ಕೇ ಸಿಕ್ಕಿಹಾಕಿಕೊಳ್ಳುವಿರಿ, ನಿಮಗೆ ‘ಗಾಂಧಿ’ ಮಾತ್ರ ಬೇಕಾಗಿರಬಹುದು, ಆದರೆ ನನಗೆ ನೀವು ಬೇಕಲ್ಲವೇ? ಈಗಲೇ ನಿಲ್ಲಿಸಿ’ ಎಂದು ಪಟ್ಟು ಹಿಡಿಯುತ್ತಿದ್ದೆ. ಆಗ ‘ನಿನಗೆ ಅರ್ಥವಾಗುವುದಿಲ್ಲ, ಕಂಟಿನ್ಯೂಟಿ ತಪ್ಪಿಹೋಗುತ್ತದೆ, ನಾನೀಗ ಗಾಂಧಿ ಕಾಲಕ್ಕೆ ಸಂದುಹೋಗಿರುವೆ. ಮರಳಿ ಈ ಪ್ರಪಂಚಕ್ಕೆ ಬರಲು ಒಂದು ಅರ್ಧ ಗಂಟೆ ಸಮಯ ಕೊಡು, ಒಂದಿಷ್ಟು ಘಟನೆಗಳ ಬಗ್ಗೆ ಗೊಂದಲವಿದೆ, ಬೇರೆ ಬೇರೆ ಪುಸ್ತಕ ನೋಡಿ ಇಸವಿಗಳನ್ನು ಹುಡುಕಿ ತಾಳೆ ನೋಡು’ ಎಂದು ನನ್ನನ್ನು ಗಾಂಧಿಯ ಕಾಲಕ್ಕೆ ಕರೆದೊಯ್ಯುತ್ತಿದ್ದರು.

ಈಯಪ್ಪ ಬೇರೆ ಇಷ್ಟಿಷ್ಟು ದಪ್ಪ ದಪ್ಪ ಪುಸ್ತಕ ಬರೆದು ಇಟ್ಟವನೆ. ಇದನ್ನು ಎತ್ತುವುದು ಆಚೀಚೆ ಇಡುವುದು ಕಷ್ಟ ಎಂದು ನಾನು ಗುಹಾ ಅವರ ಪುಸ್ತಕಗಳನ್ನು ಮಗುಚಿಹಾಕುತ್ತಾ, ಅಬ್ಬಾ ಎಷ್ಟು ವಿಷಯಗಳನ್ನು ಸಂಗ್ರಹಿಸಿದ್ದಾರೆ! ಇವರು ಅಂತಾರಾಷ್ಟ್ರೀಯ ಖ್ಯಾತಿಯ ಲೇಖಕರು, ಇವರ ಪ್ರಪಂಚ ಬೇರೆ, ಇವರಿಗೆ ಎಷ್ಟೆಲ್ಲಾ ಮಂದಿ ವಿಷಯ ಸಂಗ್ರಹಣೆ, ವೆರಿಫಿಕೇಶನ್, ಕ್ರಾಸ್ ಚೆಕ್ ಮಾಡಲು ಸಹಾಯಕರು ನೆರವಾಗಿರುವರೋ? ನಿಮಗೋ ನಾನು, ರೇಖಾಂಬ, ರಾಜಾ ಸಿರಿಗೆರೆ ಇಷ್ಟೇ ಮಂದಿ! ನನ್ನದಂತೂ ಬರೀ ಚಹಾ ಮಾಡಿಕೊಡುವ, ಪುಸ್ತಕ ಎತ್ತಿಡುವ ಕೂಲಿ ಕೆಲಸದ ಸಹಾಯ! ಬಡಪಾಯಿ ಕಣ್ರೀ ನೀವು ಎನ್ನುತ್ತಿದ್ದೆ. ದೊಡ್ಡ–ದೊಡ್ಡ ಬಾನಿಗಳಲ್ಲಿ ಅನುಕ್ರಮದಲ್ಲಿ ಇತರರು ಗಾಂಧಿಯ ಬಗ್ಗೆ ಬರೆದ ಪುಸ್ತಕಗಳನ್ನು ತುಂಬಿ ಅವರ ಬರೆಯುವ ಕೋಣೆಯಲ್ಲಿ ಸಾಲಾಗಿ ಜೋಡಿಸುತ್ತಿದ್ದೆ. ಕೇಳಿದ ಕೂಡಲೇ ಕೈಗೆ ಸಿಗುವಂತಾಗಲಿ ಎಂದು ನೆಲದ ಮೇಲೆ ಹರಡಿ ಇಡುತ್ತಿದ್ದೆ. ಕೇಳಿದ ಕೂಡಲೇ ಕೇಳಿದ ಪುಸ್ತಕ ಕೆಲವೇ ಕ್ಷಣಗಳಲ್ಲಿ ಹುಡುಕಿಕೊಡದಿದ್ದರೆ ಇವರು ಸಿಟ್ಟಾಗುತ್ತಿದ್ದರು. ಎಲ್ಲವೂ ತತ್‌ಕ್ಷಣ ಸಂಭವಿಸಬೇಕು! ತಡವಾದರೆ ಕತ್ತೆಯನ್ನು ಕಟ್ಟಿಕೊಂಡಿರುವೆ! ಎಂದು ರೇಗುವರು. ಇದು ಅವರ ಸ್ವಭಾವ. ನಾನೋ ನಿಧಾನಿ, ಅವರ ಸ್ವಭಾವಕ್ಕೆ ತದ್ವಿರುದ್ಧ ಪ್ರತಿಕ್ರಿಯೆ ನೀಡುವ ನಡೆ–ನುಡಿ ನನ್ನದು. ಅವರು ಅತಿ ಅವಸರ ಮಾಡಿದಾಗೆಲ್ಲ ನಾನು ನಿಧಾನವಾಗಿ ಬೇರೆ ಬೇರೆ ಪುಸ್ತಕಗಳನ್ನು ತಡವುತ್ತಾ ‘ನಿಧಾನಿಸಿ, ನನಗೆ ಗಾಂಧಿ ಸಾಯುವುದು ಇಷ್ಟವಿಲ್ಲ, ಬರವಣಿಗೆ ನಿಲ್ಲಿಸಿ’ ಎಂದು ಹೇಳುತ್ತಿದ್ದೆ. ಗಾಂಧಿಯನ್ನು ಮುಗಿಸಲು, ಗೋಡ್ಸೆಗಿಂತ ನಿಮಗೇ ಅವಸರ ಇದ್ದಂತಿದೆ ಎನ್ನುತ್ತಿದ್ದೆ. ಅನೇಕ ಹಿಂದಣ ಹಿರಿಯರ ಪುಸ್ತಕಗಳಲ್ಲಿ ನಿರೂಪಿತವಾದ ಹೊಸ ಹೊಸ ಸಂಗತಿಗಳು ಗೋಚರಿಸಲಾಗಿ ಅರೆ! ಇದನ್ನು ಸೇರಿಸದಿದ್ದರೆ ಕಥನ ಅಪೂರ್ಣವಾಗುತ್ತದೆ. ಇದನ್ನು ನೀವು

ಸೇರಿಸಲೇಬೇಕಾಗುತ್ತದೆ, ಇಲ್ಲದಿದ್ದರೆ ಗಾಂಧಿಗೆ ಅನ್ಯಾಯವಾಗುತ್ತದೆ ಎನ್ನುತ್ತಿದ್ದೆ. ಆಗೆಲ್ಲ ಅವರ ಸಿಟ್ಟು ಕರಗಿ ನನ್ನ ಮೇಲೆ ಪ್ರೀತಿ ಉಕ್ಕಿ ಬರುತ್ತಿತ್ತು. 'ಬಹುಶಃ ಗಾಂಧಿಕಥನ ಬರೆಯಲೆಂದೇ ನನ್ನನ್ನು ಬದುಕಿಸಿಕೊಂಡಿರುವೆ. ನಾನು ೧೯೯೮ರಲ್ಲೇ ಮಾರಣಾಂತಿಕ ಕಾಯಿಲೆ 'deep vein thrombosis'ಗೆ ಒಳಗಾಗಿ ಅಂದೇ ಸಾವಿನ ಮನೆ ತಟ್ಟಿ ಬಂದವನಲ್ಲವೇ?' ಎನ್ನುವರು.

ಸರಿರಾತ್ರಿ ೩ ಗಂಟೆಗೆ ಚಹಾ ಮಾಡಿಕೊಂಡು ಇಬ್ಬರೂ ಕುಡಿಯುತ್ತಾ ಅಂದಿನ ಬರವಣಿಗೆಯ ತಪ್ಪು-ಒಪ್ಪುಗಳನ್ನು ಚರ್ಚಿಸುತ್ತಾ ನಡುವೆ ಒಮ್ಮೆ 'ನನ್ನೀ ಬರಹ ಗ್ರೇಟ್ ವರ್ಕ್ ಅನಿಸುತ್ತಾ? ಟೀಕೆ-ಟಿಪ್ಪಣಿ ಅತ್ತಲಿಡು, ನಿಜವಾಗಿ ಹೇಳು' ಅನ್ನುವರು. ನಾನು 'ಹೌದೌದು, ಇದೊಂದು 'ದೊಡ್ಡ ಕುಂಬಳಕಾಯಿ' ನನಗೆ ಗೊತ್ತಿಲ್ಲ, ಕಾಲವೇ ಉತ್ತರಿಸಬೇಕು' ಎಂದಿದ್ದೆ. 'ಗಾಂಧಿ' ನಾವು ತಿಳಿದುಕೊಂಡಿರುವುದಕ್ಕಿಂತಲೂ ಆಳದ-ಎತ್ತರದ ಮನುಷ್ಯ. ಈ ಕಥನ ಕನ್ನಡದಲ್ಲಿ ಸಂಭವಿಸಿದೆ, ಮತ್ತು ನಿಮ್ಮ ೫೦ ವರುಷದ ಓದು, ಹಲವು ಚಿಂತಕರ ಒಡನಾಟ-ಚರ್ಚೆ ಇದರ ಬೆನ್ನಿಗಿದೆ, ಇದನ್ನು ಜನರು ಹೇಗೆ ಸ್ವೀಕರಿಸುವರೋ ನನಗೆ ತಿಳಿಯದು. ಓರ್ವ ಓದುಗಳಾಗಿ (ಹೆಂಡತಿಯಾಗಿ ಅಲ್ಲ) ಹೇಳುವುದಾದರೆ ಪೂರ್ಣ ಓದಬೇಕು ಅನ್ನುವಷ್ಟು ಸುಗಮ-ಸರಳ ಪರಿಣಾಮಕಾರಿಯಾಗಿದೆ. ಮೊದಲು ಬರವಣಿಗೆ ಮುಗಿಸಿರಿ, 'ನೀವೇ ಮುಗಿದುಹೋಗುವ ಮುನ್ನ' ಎಂದು ಹೇಳುತ್ತಿದ್ದೆ.

ಕೊನೆಯ ೩-೪ ಅಧ್ಯಾಯಗಳ ಬರವಣಿಗೆ ಬಾಕಿ ಇರುವಾಗಲೇ ಹಠಾತ್ತಾಗಿ ಸೆಪ್ಟೆಂಬರ್ ೨೦೧೯ರ ಮೊದಲ ವಾರದಲ್ಲಿ ಅಸ್ವಸ್ಥರಾದಾಗ ನಾನು ಆತಂಕಿತಳಾಗಿ ನರೇಂದ್ರ ಮತ್ತು ಶಿವರಾಜು ಅವರಿಗೆ ಕರೆಮಾಡಿ ಗಾಂಧಿಕಥನ ಪುಸ್ತಕದ ಬಿಡುಗಡೆಯ ದಿನಾಂಕ ಸಪ್ಟೆಂಬರ್ ೨೯ ಎಂದು ನಿಗದಿಪಡಿಸಿ ಆಮಂತ್ರಣ ಪತ್ರಿಕೆ ಬೇರೆ ಮುದ್ರಿಸಿ ಹಂಚಿರುವಿರಿ, ಇವರ ಆರೋಗ್ಯಸ್ಥಿತಿಯೋ ಶೋಚನೀಯವಾಗಿದೆ, ಇವರು 'ಗಾಂಧಿ ಕಥನ' ಮುಗಿಸದೇ ಹೋಗುವರೋ ಏನೋ, ಪರಿಸ್ಥಿತಿ ತುಂಬಾ ಸೂಕ್ಷ್ಮವಾಗಿದೆ, ಏನು ಹೇಳಬೇಕೋ ತೋಚುತ್ತಿಲ್ಲ, ಕೂಡಲೇ ಬನ್ನಿ ಎಂದು ಫೋನಾಯಿಸಲು, ಅವರಿಬ್ಬರೂ ಎರಡೇ ದಿನದಲ್ಲಿ ಹಾಜರಾಗಿ ಇಡೀ ದಿನ ಇವರೊಂದಿಗೆ ಇದ್ದು ಮರು ಜೀವ ತುಂಬಿದರೆನ್ನಿ. ಗಾಂಧಿ ಕಥನದ ೨೫ನೇ ಮುದ್ರಣವನ್ನು ಅಣಿಮಾಡುತ್ತಿರುವ ಈ ಹೊತ್ತಿನಲ್ಲಿ ಗಾಂಧಿ ಕಥನದ ಕೃತಿಕಾರನೇ ಇಲ್ಲವಾಗಿ ದೊಡ್ಡ ನಿರ್ವಾತ ಸೃಷ್ಟಿಯಾಗಿ ಎಲ್ಲವೂ ಮತ್ತೆ ಕಣ್ಮುಂದೆ ಬರುತ್ತಿದೆ. ಎಲ್ಲವೂ ನಾವು ಅಂದುಕೊಂಡಂತೆ ಆಗಿದ್ದಿದ್ದರೆ ೨೦೨೨ರ ಜೂನ್ ೨೫ರಂದು ಗಾಂಧಿ ಕಥನದ ೨೫ನೇ ಮುದ್ರಣ ಬೆಂಗಳೂರಿನಲ್ಲಿ ಬಿಡುಗಡೆಯಾಗಬೇಕಿತ್ತು. ಇವರಿಗೆ ಏಪ್ರಿಲ್ ಮೊದಲ ವಾರದಲ್ಲಿ ಶ್ವಾಸಕೋಶದ ನಂಜಿನಿಂದ ಉಸಿರಾಟದ ಸಮಸ್ಯೆ ಶುರುವಾಯಿತಷ್ಟೆ. ತೀವ್ರವಾದ ಕಣ್ಣಿನ ಸಮಸ್ಯೆಯಿಂದಾಗಿ, 'ಹೊಸ ಮನುಷ್ಯ' ಪತ್ರಿಕೆಯನ್ನು ಮಾರ್ಚ್ ೨೦೨೨ರಲ್ಲಿ ನಿಲ್ಲಿಸಿದ್ದರಷ್ಟೆ. ಇದ್ದ ಒಂದೇ ಕಣ್ಣು ಪೂರ್ಣ ಹೋಯಿತು. ಇನ್ನು ಓದು-ಬರಹ ಯಾವುದೂ ಸಾಧ್ಯವಾಗುವುದಿಲ್ಲ ಎಂದು ಖಿನ್ನರಾಗಿ ತಮ್ಮ ನೋವನ್ನು ವ್ಯಕ್ತಪಡಿಸಿದಾಗೆಲ್ಲ ನಾನು ನಾಗಭೂಷಣ ಅವರಿಗೆ 'ನಿಮಗೀಗ ೭೦ ವಯಸ್ಸು. ವಿಶ್ವವಿದ್ಯಾಲಯದಂತೆ ಕೆಲಸ ಮಾಡಿರುವಿರಿ. ಬಯಸಿದಂತೆ ಬದುಕಿ, ಸಾರ್ಥಕ ಜೀವನ

ನಡೆಸಿರುವಿರಿ, ೨೫ ವರುಷಗಳ ಅಸ್ವಸ್ಥತೆ ಮೀರಿ, ಪತ್ರಿಕೆ, ಪ್ರತಿಷ್ಠಾನ ಮುನ್ನಡೆಸಿರುವಿರಿ. ಇದಕ್ಕಿಂತ ಇನ್ನೇನು ಬೇಕು?' ಎನ್ನುತ್ತಿದ್ದೆ. 'ಯಾರನ್ನೂ ಬಿಡದೆ ನೀವು ಟೀಕೆ-ಟಿಪ್ಪಣಿ ಬರೆದವರು, ನೇರಾನೇರ ಮುಖದ ಮೇಲೆ ಹೇಳಿ ಹಲವರು ಕುಪಿತರಾಗುವಂತೆ ನಡೆದುಕೊಂಡವರು. ಅದಾಗ್ಯೂ ನಿಮ್ಮ ಗಾಂಧಿ ಕಥನ ೨೪ ಮುದ್ರಣ ಕಂಡು ನೀವು ನಿರೀಕ್ಷಿಸದೇ ಇದ್ದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಪಾತ್ರವಾಗಿದೆ. ಮುಖದ ಮೇಲೇ ಹೇಳುವ, ಕೊಂಕು ನುಡಿಯುವ ನಿಮ್ಮ ಸ್ವಭಾವದ ಕಾರಣದಿಂದಾಗಿ ನಿಮಗೆ ಸಿಗಬೇಕಾದಷ್ಟು ಮಾನ್ಯತೆಯನ್ನು ನೀವು ಪಡೆಯದಿದ್ದರೂ ಇದಾವುದರ ಅರಿವಿಲ್ಲದ ಸಾಮಾನ್ಯ ಓದುಗರು ಪೂರ್ವಗ್ರಹವಿಲ್ಲದೇ 'ಗಾಂಧಿ ಕಥನ'ವನ್ನು ಎರಡೇ ವರುಷಗಳಲ್ಲಿ ೨೫ ಮುದ್ರಣಗಳನ್ನು ಕಾಣುವಂತೆ ಮಾಡಿರುವರಲ್ಲವೇ? ಇದಕ್ಕಿಂತ ದೊಡ್ಡ ಸಮ್ಮಾನ ಬೇಕೇ?' ಎನ್ನುತ್ತಿದ್ದೆ. ಆಗೆಲ್ಲಾ ಈ 'ಗಾಂಧಿ' ಎಂಬ ಮನುಷ್ಯ ನನ್ನ ಟೀಕೆ-ಟಿಪ್ಪಣಿ ತಡೆದುಕೊಂಡು ನನ್ನನ್ನು ಈ ಮಟ್ಟಿಗೆ ತಂದು ನಿಲ್ಲಿಸಿರುವನಲ್ಲ, ಈ ಪ್ರಶಸ್ತಿ ನಿಜವಾಗಿ ಗಾಂಧಿಯ ವ್ಯಕ್ತಿತ್ವಕ್ಕೆ ಸಿಕ್ಕ ಮನ್ನಣೆ, ನನ್ನಂತಹ ಅಲ್ಪನಿಂದ ದೊಡ್ಡ ಜೀವಕ್ಕೆ ಸಂದ ಗೌರವ ಎಂದು ಭಾವುಕವಾಗಿ ಗಾಂಧಿ ಕಥನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದ ಸಂದರ್ಭದಲ್ಲಿ ನುಡಿದಿದ್ದರು.

ಗಾಂಧಿ ಕಥನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಘೋಷಣೆಯಾಗಿ ಅಭಿನಂದನೆಗಳ ಸುರಿಮಳೆ ಆದಾಗ ಇದು ಗಾಂಧಿ ಬಳಗಕ್ಕೆ ಸಂದ ಪ್ರಶಸ್ತಿ. ಅಂತೂ ನನ್ನಂತವನಿಗೂ ಪ್ರಶಸ್ತಿ ನೀಡುವ ಕಾಲ ಬಂತಲ್ಲ, ಘನವಾದುದನ್ನು ಗುರುತಿಸುವ ಕಾಲ -ಜನ ಇರುವರಲ್ಲ ಎಂದು ಅಚ್ಚರಿಪಟ್ಟಿದ್ದರು. ಪುಸ್ತಕದ ಪ್ರಕಾಶಕರೂ, ಮಿತ್ರರೂ ಆದ ಎಂ. ಸಿ. ನರೇಂದ್ರ, ಗೆಳೆಯ ಜಿ.ಬಿ. ಶಿವರಾಜು, ಗದಗದ ಗಾಂಧಿವಾದಿ ಶ್ರೀ ಡಿ.ಆರ್. ಪಾಟೀಲರು ಮನೆಗೆ ಬಂದು, ಮನೆಯಲ್ಲಿಯೇ ಪುಟ್ಟ ಸಮಾರಂಭ ಏರ್ಪಡಿಸಿ ನಾಗಭೂಷಣ ಅವರ ಆಪ್ತರ ಸಮ್ಮುಖದಲ್ಲಿ ಅಭಿನಂದಿಸಿದ್ದು, ಡಿ.ಎಸ್.ಎನ್. ಸ್ನೇಹಬಳಗ ಶಿವಮೊಗ್ಗ, ಕರ್ನಾಟಕ ಸಂಘ ಶಿವಮೊಗ್ಗ ಇವರು ಸಾರ್ವಜನಿಕ ಸಮಾರಂಭ ಏರ್ಪಡಿಸಿ ಅಭಿನಂದಿಸಿದ್ದು ನಾಗಭೂಷಣ ಅವರ ಜೀವನದ ಕೊನೆಯ ದಿನಗಳಲ್ಲಿ ನೆಮ್ಮದಿ ನೀಡಿದ ಅಪರೂಪದ ಕ್ಷಣಗಳು.

ಅನಾರೋಗ್ಯ-ಕಾಲಿನ ಸಮಸ್ಯೆಯಿಂದಾಗಿ ನಡಿಗೆ-ಪ್ರವಾಸ ಕಷ್ಟಕರವಾದ್ದರಿಂದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಸ್ವೀಕರಿಸಲು ನಾಗಭೂಷಣ ಅವರು ದೆಹಲಿಗೆ ಹೋಗಲಿಲ್ಲ. ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಿಕೊಡುವೆವು ಎಂದು ಹೇಳಿ ಅಕಾಡೆಮಿಯವರು ಒತ್ತಾಯಿಸಿದ್ದರೂ 'ಅಲ್ಲೆಲ್ಲ ಪ್ರೊಟೊಕಾಲ್ ಇರುವುದು, ಅದೆಲ್ಲ ನನಗೆ ಒಗ್ಗಿ ಬರುವುದಿಲ್ಲ' ಎಂದು ದೆಹಲಿಗೆ ಹೋಗದೆ ಉಳಿದಿದ್ದರು. ಗಾಂಧಿ ಕಥನದ ೨೫ನೇ ಮುದ್ರಣದ ಬಿಡುಗಡೆ ಸಮಾರಂಭ ಬೆಂಗಳೂರಿನಲ್ಲಿ ಜರುಗಿದಾಗ ಬೆಂಗಳೂರಿಗೆ ಬಂದು ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಫಲಕ-ಪ್ರಶಸ್ತಿ ಪತ್ರ ಪಡೆದುಕೊಳ್ಳುವೆ ಎಂದು ತಿಳಿಸಿದ್ದರು. ಆ ದಿನ ಬರಲೇ ಇಲ್ಲವೇ?!

ಆಗಸ್ಟ್ ೨೦೨೧ರಲ್ಲಿ ನಾಗಭೂಷಣ ಅವರು vertigo ಎಂಬ ಆರೋಗ್ಯ ಸಮಸ್ಯೆಯಿಂದಾಗಿ ತುಮಕೂರಿನ ವೈದ್ಯಮಿತ್ರ ಡಾ.ಬಸವರಾಜು ಅವರ ನರ್ಸಿಂಗ್ ಹೋಮ್‌ನಲ್ಲಿ ಇದ್ದು ಎಲ್ಲಾ ರೀತಿಯ ತಪಾಸಣೆ ಮಾಡಿಸಿಕೊಂಡು ಅವೆಲ್ಲಾ ವಯೋಸಹಜ ಆರೋಗ್ಯ ಸಮಸ್ಯೆಗಳೆಂದು ಹೇಳಲಾಗಿ ಸೂಕ್ತ ಪರಿಹಾರ ಪಡೆದು

ನೆಮ್ಮದಿಯಿಂದ ಊರಿಗೆ ಮರಳಿದ್ದರು. ಮೈಸೂರಿನ ಡಯಾಬಿಟಿಷಿಯನ್ ವಿಜಯಾನಂದರು, ಮಲ್ಲಾಡಿಹಳ್ಳಿಯ ಆಯುರ್ವೇದ ವೈದ್ಯ ಪೂರ್ವಾಚಾರ್, ಶ್ರೀರಂಗಪಟ್ಟಣದ ವೈದ್ಯರಾದ ಫಿಜಿಷಿಯನ್ ಡಾ. ಸುಜಯ್ ಕುಮಾರ್, ಮೈಸೂರಿನ ಹೋಮಿಯೋಪತಿ ವೈದ್ಯ ಸುಪ್ರಜ್, ಬೆಂಗಳೂರಿನ ಶ್ವಾಸಕೋಶ ತಜ್ಞ ಶ್ರೀ ರುದ್ರೇಶ್, ಶಿವಮೊಗ್ಗೆಯ ವೈದ್ಯರಾದ ಡಾ. ಸಂತೋಷ್, ಡಾ. ಅಭಿಷೇಕ್, ಡಾ. ಕೆ.ಎಸ್. ಗಂಗಾಧರ್ ಸಕಾಲದಲ್ಲಿ ಆರೋಗ್ಯ ಸಲಹೆ ನೀಡಿ ಧೈರ್ಯ ತುಂಬಿದರೂ ನಾಗಭೂಷಣರನ್ನು ಉಳಿಸಲಾಗಲಿಲ್ಲ. ವೈದ್ಯರ ಅಭಯ, ಔಷಧೋಪಚಾರ ಹಿತೈಷಿಗಳ ಪ್ರಾರ್ಥನೆ ಯಾವುದೂ ಫಲ ನೀಡಲಿಲ್ಲ.

೬ ತಿಂಗಳ ಹಿಂದಷ್ಟೇ ಕೋವಿಡ್‌ನಿಂದ ತೀರಿಕೊಂಡ ತಂಗಿ, ಬಂಧುಗಳ ಸಾಲು-ಸಾಲು ಮರಣ. ಏಪ್ರಿಲ್ ಕೊನೆಯ ವಾರದಲ್ಲಿ ತೀರಿಕೊಂಡ ಅಣ್ಣನ ಮರಣದಿಂದ ನಾಗಭೂಷಣ ಅವರು ಒಳಗೊಳಗೇ ಜರ್ಜರಿತರಾಗಿದ್ದರು. ಶ್ವಾಸಕೋಶದ ನಂಜಿನಿಂದಾಗಿ ಉದ್ಭವಿಸಿದ ಉಸಿರಾಟದ ತೊಂದರೆಯಿಂದಾಗಿ ಸರಿಯಾಗಿ ನಿದ್ರಿಸಲಾಗದೆ ಹೈರಾಣಾಗಿದ್ದರು. ಇಷ್ಟಾಗಿಯೂ ಸಾವು ಹೊಸ್ತಿಲಲ್ಲಿ ಬಂದು ನಿಂತಿದೆ ಎಂದು ಅವರಿಗೂ ಅನಿಸಿರಲಿಲ್ಲ, ನನಗೂ ಅನಿಸಿರಲಿಲ್ಲ. ಕಳೆದ ೨೫ ವರ್ಷಗಳಲ್ಲಿ ಹಲವು ಸಲ ಅವರು ಸಾವಿನ ಮನೆಯ ಬಾಗಿಲನ್ನು ತಟ್ಟಿ ವಾಪಸ್ಸು ಬಂದಿದ್ದರಷ್ಟೆ. ಈ ಸಲವೂ ಅವರಿಗೆ ಏನೂ ಆಗದು ಎಂದು ನಾನು ನಂಬಿದ್ದೆ. ನಾಗಭೂಷಣ ಅವರು ಮನೆಯಲ್ಲಿಯೇ ಚಿಕಿತ್ಸೆ ಪಡೆಯಲು ನಿರ್ಧರಿಸಿದ್ದರಿಂದ ವೈದ್ಯರು ಮನೆಗೇ ಬಂದು ಚಿಕಿತ್ಸೆ, ಔಷಧ, ಅಭಯ ನೀಡುತ್ತಿದ್ದರು. ಮೇ ಮೊದಲ ವಾರದಲ್ಲಿ ಎಂದು ತೋರುತ್ತದೆ, ಇದ್ದಕ್ಕಿದ್ದ ಹಾಗೆ ಅವರ ಆರೋಗ್ಯದಲ್ಲಿ ಸುಧಾರಣೆ ಕಂಡಿತು. ಉಸಿರಾಟದ ಸಮಸ್ಯೆ ಕಡಿಮೆಯಾಗಿ ನಿದ್ರಿಸಲು ಸಾಧ್ಯವಾಗುತ್ತಿತ್ತು. ನಾನು ವೈದ್ಯರಿಗೆ ಕರೆ ಮಾಡಿ ಅವರು ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಸಂತಸದಿಂದ ಹೇಳಿ, 'ಆದರೆ ಹೊಸ ಸಮಸ್ಯೆ ಶುರುವಾಗಿದೆ, ನಾಲಗೆ ಏಕೋ ಒಮ್ಮೊಮ್ಮೆ ಮರಗಟ್ಟಿದಂತೆ ಆಗುತ್ತದೆ ಎಂದು ಹೇಳುತ್ತಿರುವರು, ದಯವಿಟ್ಟು ಒಮ್ಮೆ ಮನೆಗೆ ಬಂದು ನೋಡಿರಿ' ಎಂದು ಹೇಳಿದೆ. ಗಾಂಧಿ ಕಥನದ ೨೫ನೇ ಮುದ್ರಣವನ್ನು ಜೂನ್ ೨೫ ರಂದು ಬಿಡುಗಡೆ ಮಾಡುವುದು ಎಂದು ಯೋಜಿಸಿದ್ದೆವಷ್ಟೆ. 'ಬಿಡುಗಡೆ ಸಮಾರಂಭದಲ್ಲಿ ಏನು ಮಾತಾಡಲಿ? ನಾಲಗೆ ಬೇರೆ ಮರಗಟ್ಟಿದಂತಾಗುತ್ತಿದೆ. ಮಾತು ತೊದಲುತ್ತಿದೆ' ಎಂದಿದ್ದರು. ನಾನು 'ಗಾಂಧಿ ಕಥನದ ಮೊದಲ ಮುದ್ರಣ ಬಿಡುಗಡೆಯಾದ ಮೇಲೆ ಓದುಗರು ಅದಕ್ಕೆ ನೀಡಿದ ಪ್ರತಿಕ್ರಿಯೆ ಕುರಿತು ನಾಲ್ಕು ಮಾತನಾಡಿರಿ, ಬೇಕಾದರೆ ನಿಮ್ಮ ಮಾತುಗಳನ್ನು ಹೀಗೆಯೇ ಒಂದೈದು ನಿಮಿಷ ಅಭ್ಯಾಸ ಮಾಡಿರಿ, ಮರಗಟ್ಟಿದ ನಾಲಗೆ ಸರಿಯಾಗಬಹುದು, ಔಷಧಿಯ ಪರಿಣಾಮಗಳಿಂದ ಹಾಗಾಗಿರಬಹುದು, ಈಗ ನಿದ್ರೆ ಬರುತ್ತಿದೆಯಲ್ಲವೇ? ಇನ್ನು ನೀವು ಗೆದ್ದಹಾಗೆ' ಎಂದು ಹೇಳಿದೆ. ಮಾರನೆಯ ದಿನವೇ ನಾನು ಅಡಿಗೆಮನೆಯಲ್ಲಿದ್ದಾಗ ಇವರು ಮಲಗಿದ್ದ ರೂಮಿನಿಂದ ನಿರಂತರವಾಗಿ ಯಾರೊಂದಿಗೋ ಮಾತನಾಡಿದ ಹಾಗೆ ಕೇಳುತ್ತಿತ್ತು. ಅರೆ! ಯಾರು ಬಂದಿರುವರು? ಯಾರೊಂದಿಗೆ ಮಾತನಾಡುತ್ತಿರುವರು? ಎಂದು ರೂಮಿನೊಳಗೆ ಇಣುಕಿದೆ. ನಾಗಭೂಷಣ ಅವರು ನಿದ್ದೆಯಲ್ಲಿದ್ದರು. ಗಾಂಧಿ, ಕುವೆಂಪು ಎಂದು ಮಾತನಾಡುತ್ತಿದ್ದರು. ಮಾತು ತೊದಲುತ್ತಿದ್ದುದರಿಂದ ಅದೇನೆಂದು ನನಗೆ ಸ್ಪಷ್ಟವಾಗಿ

ತಿಳಿಯುಲಿಲ್ಲ. ಅದೇನೋ ಭಾಷಣ ಮಾಡುತ್ತಿರುವಂತೆ ನನಗೆ ಭಾಸವಾಯಿತು. ನಾನು ಮೈ ಕುಲುಕಿ ಎಬ್ಬಿಸಿ 'ಏನಾಗುತ್ತಿದೆ ನಿಮಗೆ? ಗಾಂಧಿ-ಕುವೆಂಪು ಎಂದು ಹೇಳುತ್ತಿರುವಿರಿ, ಎಚ್ಚರವಾಗಿ' ಎಂದು ಹೇಳಿದೆನು. ಅವರು ಎದ್ದು ಕುಳಿತು 'ಹೌದಾ ನನಗೆ ಗೊತ್ತಿಲ್ಲವಲ್ಲಾ, ನನಗೆ ಏನಾಗುತ್ತಿದೆ, ತಿಳಿಯುತ್ತಿಲ್ಲವಲ್ಲಾ?' ಎಂದರು. ನಾನು 'ನೀವು ಗಾಂಧಿ-ಕುವೆಂಪು ಎಂದು ಮತ್ತೆ ಮತ್ತೆ ಉಚ್ಚರಿಸುತ್ತಾ ಭಾಷಣ ಮಾಡಿದಂತೆ ತೋರುತ್ತಿತ್ತು. ರಮಣರು ನೆನಪಾಗಲಿಲ್ಲವೇ? ದಯವಿಟ್ಟು ಅವರನ್ನು ನೆನೆಪಿಸಿಕೊಳ್ಳಿ, ಯಾಕೋ ನನಗೆ ಭಯವಾಗುತ್ತಿದೆ,' ಎಂದೆನು. ಅದಕ್ಕವರು 'ನೋಡು, ನನಗೆ ನನ್ನ ಸುಪ್ತಪ್ರಜ್ಞೆಯೊಳಗೆ ಗಾಂಧಿ ಮತ್ತು ಕುವೆಂಪು ಮಾತ್ರ ಇರುವರೇನೋ, ರಮಣರ ಬಗ್ಗೆ ನನಗೆ ಇರುವ ವಿಶ್ವಾಸ ಅಷ್ಟು ಆಳವಲ್ಲದ್ದು, ಮೇಲ್ಪದರದ್ದು ಎಂದು ತೋರುತ್ತದೆ. ನಾವು ನಮ್ಮ ಬಗ್ಗೆ ಅಂದುಕೊಂಡಿರುವುದು ನಿಜವಲ್ಲದಿರಬಹುದು' ಎಂದು ತಮ್ಮಲ್ಲಿಯೇ ಮುಳುಗಿಹೋದರು.

ಅಂದು ಅಂದರೆ ದಿನಾಂಕ ೧೮.೫.೨೦೨೨ರ ಸಂಜೆ ಡಾ. ಅಭಿಷೇಕ್ ಅವರು ನಾಗಭೂಷಣ ಅವರನ್ನು ಪರೀಕ್ಷಿಸಿ ಕೆಲವು ಔಷಧ ಬದಲಾಯಿಸಿ ಒಂದೆರಡು ವಾರಗಳಲ್ಲಿ ಸುಧಾರಣೆ ಆಗುವುದು ಎಂದು ಹೇಳಿ ನಾಗಭೂಷಣ ಅವರ ಹತ್ತಿರ ಲೋಕಾಭಿರಾಮ ಮಾತಾಡಿ ಹೋಗಿದ್ದರು. ಎಂದಿನಂತೆ ರಾತ್ರಿ ೧೦ ಗಂಟೆಗೆ ಊಟವಾದ ನಂತರ ನಾಗಭೂಷಣ ಅವರಿಗೆ ಮಲಗುವ ವ್ಯವಸ್ಥೆ ಮಾಡಿದೆ. ಅವತ್ತು ಶಿವಮೊಗ್ಗೆಯಲ್ಲಿ ರುದ್ರ ಭಯಂಕರ ಮಳೆ. ಕಳೆದ ನೂರು ವರ್ಷಗಳಲ್ಲಿ ಕಂಡಿಲ್ಲದಷ್ಟು ಮಳೆ. ಮೊದಲೇ ಥಂಡಿಯ ಪ್ರಕೃತಿ. ನನಗೆ ಹೇಗೋ ಏನೋ ಎಂಬ ಚಿಂತೆ. ನಾಗಭೂಷಣ ಅವರಿಗೆ ಉಸಿರಾಟದ ಸಮಸ್ಯೆ ಇದ್ದುದರಿಂದ ನಾನು ದಿಂಬುಗಳನ್ನು ಎತ್ತರಕ್ಕೆ ಜೋಡಿಸಿ 'ಇನ್ನು ನೀವು ಮಲಗಬಹುದು' ಎಂದೆನು. ಯಾಕೋ ನಿದ್ರೆ ಬರುತ್ತಿಲ್ಲ, ನಾನು ಹೀಗೆಯೇ ಕುಳಿತುಕೊಳ್ಳುವೆ, ಮಲಗಿದರೆ ಉಸಿರಾಟ ತೊಂದರೆ, ನೀನು ಮಲಗು ಎಂದರು. ನಾನು ಮಲಗಿದೆ, ರಾತ್ರಿ ಸುಮಾರು ೧೨ ಗಂಟೆಗೆ 'ಸವಿತಾ ನೀರು' ಎಂದರು. 'ನೋಡಿ, ಪಕ್ಕದಲ್ಲಿಯೇ ಸ್ಟೂಲಿನಲ್ಲಿ ಇಟ್ಟಿರುವೆ, ತೆಗೆದುಕೊಳ್ಳಿ' ಎಂದೆ. ಮಂದವಾದ ಬೆಡ್ ಲೈಟ್‌ನಲ್ಲಿ ಕಾಣಲಿಲ್ಲ ಎಂದು ತೋರುತ್ತದೆ, 'ಕನ್ನಡಕ ಹಾಕಿಲ್ಲವಲ್ಲ, ಕಾಣುತ್ತಿಲ್ಲ' ಎಂದರು. 'ಅಯ್ಯೋ ಹೌದಲ್ಲ' ಎಂದು ನಾನು ಕೂಡಲೇ ಎದ್ದು ಲೋಟಕ್ಕೆ ಬಗ್ಗಿಸಿ ನೀರು ನೀಡಿದೆ. ಒಂದೆರಡು ಗುಟುಕು ನೀರು ಕುಡಿದು ನೀರು ಸಾಕೆಂದರು. ಧೋ ಎಂದು ಮಳೆ ಸುರಿಯುತ್ತಿತ್ತು. ನಾನು 'ಇಡೀ ಜಗತ್ತೇ ಮಲಗಿದೆ, ನೀವೇಕೆ ಕುಳಿತಿರುವಿರಿ? ಮಲಗಬಾರದೇ?' ಎಂದು ಹೇಳಿದೆ. 'ಯಾಕೋ ಎದೆ ಹಿಡಿದ ಹಾಗಾಗುತ್ತಿದೆ, ಉಸಿರಾಟ ಕಷ್ಟವಾಗುತ್ತಿದೆ' ಎಂದರು. ಉಸಿರಾಟ ಕಷ್ಟವಾದಾಗ ಇನ್‌ಹೇಲರ್ ತೆಗೆದುಕೊಳ್ಳಲು ವೈದ್ಯರು ಸೂಚಿಸಿದರಷ್ಟೆ. ನಾನು ಅದನ್ನು ನೀಡಿ 'ಈಗ ಹೇಗಿದೆ?' ಎಂದು ಕೇಳಿದೆ. ಪರವಾಗಿಲ್ಲ ಎಂಬಂತೆ ತಲೆ ಅಲ್ಲಾಡಿಸಿದರು. ಸರಿ, ಈಗ ಮಲಗಿ ಎಂದು ಎತ್ತರಕ್ಕೆ ದಿಂಬುಗಳನ್ನು ಜೋಡಿಸಿದೆ. ಮಕ್ಕಳಿಗೆ ಇಡುವಂತೆ ಟವಲೊಂದನ್ನು ಸಿಂಬಿಯಂತೆ ಸುತ್ತಿ ತಲೆ ಇಡಲು ಅನುಕೂಲವಾಗುವಂತೆ ಇಟ್ಟು 'ಈಗ ಮಲಗಿ, ಮಲಗಿದರಲ್ಲವೇ ಕಾಯಿಲೆ ವಾಸಿಯಾಗುವುದು? ಕಾಲುಗಳನ್ನು ಇಳಿಬಿಟ್ಟು ಕೂತು ಬಾವು ಬಂದಿದೆ. ಇನ್ನೊಂದು ೧೫ ದಿನ ಎಲ್ಲಾ ಸರಿಹೋಗುವುದು' ಎಂದೆ. ಇನ್ನೂ ಕುಳಿತೇ ಇದ್ದರು. 'ಹ್ಞಾಂ ಹೀಗೆ, ಹ್ಞಾಂ ಹೀಗೆ, ದಿಂಬಿನ ಮೇಲೇ ತಲೆ ಇಡಿ' ಎಂದೆ. ನಿಧಾನವಾಗಿ ದಿಂಬಿನ ಮೇಲೇ ತಲೆ

ಇಟ್ಟು ಕಣ್ಣುಮುಚ್ಚಿದರಷ್ಟೆ. ಕಳೆದ ೧೫ ದಿನಗಳಲ್ಲಿ ಅವರು ಹೀಗೆ ಮಲಗಿರಲಿಲ್ಲವಷ್ಟೆ? ನಾನು ಸಂತಸದಿಂದ 'ಎಷ್ಟು ಚೆನ್ನಾಗಿ ಮಲಗಿರುವಿರಿ, ಉಸಿರು ಸಿಲುಕಿಕೊಳ್ಳುವುದು ಎಂಬುದು ಕೇವಲ ಭಯ. ಹಾಗೇನೂ ಆಗುತ್ತಿಲ್ಲವಲ್ಲ' ಎಂದು ಮಾತಾಡುತ್ತಾ ಹೋದೆನು. ಅವರಿಂದ ಯಾವ ಪ್ರತಿಕ್ರಿಯೆಯೂ ಇರಲಿಲ್ಲ. ಎಷ್ಟು ಥಂಡಿ ಇದೆ ಎನ್ನುತ್ತಾ ಅವರ ತಲೆಗೆ ಟೋಪಿ ಹಾಕಿದೆನು. ಎಷ್ಟು ಮಳೆ? ಎಷ್ಟು ಥಂಡಿ ಎನ್ನುತ್ತಾ ಹತ್ತಿಯ ಸಣ್ಣ ಉಂಡೆಗಳನ್ನು ಮಾಡಿ ನೀಲಗಿರಿ ಎಣ್ಣೆಯಲ್ಲಿ ಅದ್ದಿ ಕಿವಿಯಲ್ಲಿ ಇಟ್ಟೆನು. ದಪ್ಪನೆಯ ಕೌದಿ ಹೊಚ್ಚಿ 'ಚೆನ್ನಾಗಿ ಮಲಗಿರಿ' ಎಂದೆನು. ಯಾವ ಪ್ರತಿಕ್ರಿಯೆಯೂ ಇಲ್ಲ! ಹಾಗೆಲ್ಲ ಪ್ರತಿಕ್ರಿಯೆ ನೀಡದ ಮನುಷ್ಯರೇ ಅಲ್ಲ ಅವರು. ಚೆನ್ನಾಗಿದೆ ಅಂತಲೋ, ಇದೆಲ್ಲಾ ಯಾಕೆ ಮಾಡುತ್ತಿದ್ದೀಯ ಅಂತಲೋ, ಅದೆಷ್ಟು ಮಾತನಾಡುತ್ತೀಯಾ ಅಂತಲೋ ಅವರು ಹೇಳಲೇಬೇಕು. ಒಂದೂ ಸೊಲ್ಲಿಲ್ಲ, ನನಗೆ ಗಾಬರಿಯಾಯಿತು. ಪ್ರಜ್ಞೆ ತಪ್ಪಿರುವುದೇನೋ ಅಂದುಕೊಂಡೆ. ಮೈಮುಟ್ಟಿ ನೋಡಿದರೆ ಬೆಚ್ಚಗಿತ್ತು. ನಾನು ಕೂಡಲೇ ವೈದ್ಯ ಮಿತ್ರರಾದ ಡಾ. ಕೆ. ಎಸ್. ಗಂಗಾಧರ್ ಅವರಿಗೆ ಕರೆ ಮಾಡಿ ನಾಗಭೂಷಣ ಅವರ ಪ್ರಜ್ಞೆ ತಪ್ಪಿದಂತಿದೆ, ಕೂಡಲೇ ಬನ್ನಿ ಎಂದೆ. ಅವರು ೧೦ ನಿಮಿಷಗಳಲ್ಲೆ ಬಂದು ನಾಗಭೂಷಣ ಅವರ ನಾಡಿಮಿಡಿತ, ಕಣ್ಣು ಪರೀಕ್ಷಿಸಿ 'ಇಲ್ಲ ಮೇಡಂ, ಇಲ್ಲ' ಎಂದು ತಲೆ ತಗ್ಗಿಸಿದರು.

ಅಸೀಮ ಶಾಂತಿಯಿಂದ ನಾಗಭೂಷಣ ಅವರ ಮಲಗಿದ ಭಂಗಿ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಕೊನೆಯ ಉಸಿರು ಹಾರಿಹೋಗುವಾಗ ನಾನು ಅವರ ಕಣ್ಣೆದುರಿನಲ್ಲಿಯೇ ಇದ್ದೆ. ಬಹುಶಃ ಯಮದೇವತೆ ತನ್ನನ್ನು ಪ್ರೀತಿಯಿಂದ ಉಪಚರಿಸುತ್ತಿದ್ದಾಳೆ ಎಂದುಕೊಂಡರೋ ನನಗೆ ಗೊತ್ತಿಲ್ಲ! ಅಸೀಮ ಶಾಂತಿಯಿಂದ ಗಾಢ ನಿದ್ದೆಗೆ ಸಂದು ಹೋದಂತೆ ಮಲಗಿದ್ದರು. ಅಷ್ಟೆ. ಅಷ್ಟೇ.

ಶಿವಮೊಗ್ಗ **ಸವಿತಾ ನಾಗಭೂಷಣ**
ಜುಲೈ ೧೮, ೨೦೨೨ ಮೊ: ೯೪೪೮೧೩೫೧೦೭೯

ಇದೇ ಲೇಖಕರ ಇತರ ಕೃತಿಗಳು

ಗಮನ (ಸಾಹಿತ್ಯ ವಿಮರ್ಶೆ-ವಿಚಾರ)

ಅನೇಕ (ಸಾಹಿತ್ಯ ವಿಮರ್ಶೆ-ವಿಚಾರ)

ಕುವೆಂಪು ಸಾಹಿತ್ಯ ದರ್ಶನ (ಕುವೆಂಪು ಸಾಹಿತ್ಯಾವಲೋಕನ)

ಈ ಭೂಮಿಯಿಂದ ಆ ಆಕಾಶದವರೆಗೆ (ಸಾಹಿತ್ಯ ವಿಮರ್ಶೆ-ವಿಚಾರ)

ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ (ವ್ಯಕ್ತಿ ಹಾಗೂ ಸಾಹಿತ್ಯ ಪರಿಚಯ)

ಸಮತೆಯ ಸಾಕಾರಮೂರ್ತಿ ರಮಣ ಮಹರ್ಷಿ (ರಮಣ ದರ್ಶಿಕೆ)

ರೂಪರೂಪಗಳನು ದಾಟ (ಈವರೆಗಿನ ಸಾಹಿತ್ಯ ವಿಮರ್ಶೆಗಳ ಸಂಗ್ರಹ)

ಭೂಮಿಯನ್ನು ಹಂಚಿಕೊಳ್ಳುವ ಬಗೆಗಳು (ಆಧುನಿಕತೆ, ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ ಕುರಿತ ಲೇಖನಗಳು)

ಕನ್ನಡ ಮನಸ್ಸು ಮತ್ತು ಇತರ ಲೇಖನಗಳು (ಸಂಕೀರ್ಣ)

ಇಂದಿಗೆ ಬೇಕಾದ ಗಾಂಧಿ (ಗಾಂಧಿ ಪ್ರಸ್ತುತತೆ ಕುರಿತ ಬರಹಗಳು)

ಕಾಲಕ್ರಮ ('ಹೊಸ ಮನುಷ್ಯ' ಪತ್ರಿಕೆಯ ಸಂಪಾದಕೀಯ ಮತ್ತು ಕೆಲ ಪೂರಕ ಬರಹಗಳು)

ನೀರೆಲ್ಲವೂ ತೀರ್ಥ (ಸಾಹಿತ್ಯಿಕ-ಸಾಂಸ್ಕೃತಿಕ ಟಿಪ್ಪಣಿಗಳು)

ಬಹುಮುಖ (ಸಮಕಾಲೀನ ರಾಜಕೀಯ ಮತ್ತು ಸಾಂಸ್ಕೃತಿಕ ಬರಹಗಳು)

ಲೋಹಿಯಾ ಸಮಾಜವಾದ ದರ್ಶನ (ಸಮಾಜವಾದ ಪರಿಚಯ, ವಿಶ್ಲೇಷಣೆ)

ಜಯಪ್ರಕಾಶ್ ನಾರಾಯಣ: ಒಂದು ಅಪೂರ್ಣ ಕ್ರಾಂತಿಯ ಕಥೆ (ಜೀವನ ಚಿತ್ರ)

ಮರಳಿ ಬರಲಿದೆ ಸಮಾಜವಾದ! (ಸಮಾಜವಾದಿ ವಿಚಾರ ವೈವಿಧ್ಯ)

ಬೇರು ಬಿಳಲು (ಸಮಾಜವಾದಿ ಸಂಕಥನಗಳು-೧)

ಇದು ಭಾರತ! ಇದು ಭಾರತ!! (ಸಮಾಜವಾದಿ ಸಂಕಥನಗಳು-೨)

ವಸಿಷ್ಠರು ಮತ್ತು ವಾಲ್ಮೀಕಿಯರು (ಸಮಾಜವಾದಿ ಸಂಕಥನಗಳು-೩)

ಇಲ್ಲಿ ಯಾವುದೂ ಅಮುಖ್ಯವಲ್ಲ (ಸಮಾಜವಾದಿ ಸಂಕಥನಗಳು-೪)

ಕಂಡದ್ದು ಕಾಡಿದ್ದು (ಸಮಾಜವಾದಿ ಸಂಕಥನಗಳು-೫)

ಲೋಹಿಯಾ ಜೊತೆಯಲ್ಲಿ (ಲೋಹಿಯಾ-ಗಾಂಧಿ-ಅಂಬೇಡ್ಕರ್-ಮಾರ್ಕ್ಸ್ ಚಿಂತನೆಗಳು)

ಕನ್ನಡ-ಕರ್ನಾಟಕ: ಸಂಕಥನಗಳು (ಕನ್ನಡ ನಾಡು ನುಡಿ ಚಿಂತನೆಗಳು)

ರೈತ ಭಾರತ: ಅವಸಾನದ ಅಂಚಿನಲ್ಲಿ (ರೈತರ ಆತ್ಮಹತ್ಯೆ ವಿಶ್ಲೇಷಣೆ)

ಒಂದನೇ ತರಗತಿಯಿಂದ ಇಂಗ್ಲಿಷ್ ಏಕೆ ಬೇಡ? (ಭಾಷಾ ನೀತಿ ಜಿಜ್ಞಾಸೆ)

ವಿಧ ವಿಧ (ರಾಜಕೀಯ-ಸಾಮಾಜಿಕ-ಸಾಂಸ್ಕೃತಿಕ ಲೇಖನಗಳು)

ಲೋಹಿಯಾ ಕೈಪಿಡಿ

ಲೋಹಿಯಾ ವಾಣಿ

ಜೆಪಿ ಕೈಪಿಡಿ

ಸಂಪಾದನೆ:

ರಸಿಕ ರುದ್ರತಪಸ್ವಿ ಲೋಹಿಯಾ (ಲೋಹಿಯಾರ ವ್ಯಕ್ತಿತ್ವ – ತತ್ವ ಮೀಮಾಂಸೆ ಕುರಿತ ಲೇಖನಗಳ ಸಂಪುಟ)
ಮಹಾತ್ಮ ಗಾಂಧಿಯವರ 'ಹಿಂದ್ ಸ್ವರಾಜ್': ಒಂದು ಪ್ರವೇಶಿಕೆ
ಸಮಾಜವಾದದ ಸಾಲುದೀಪಗಳು (ರಾಷ್ಟ್ರಮಟ್ಟದ ಸಮಾಜವಾದಿ ನಾಯಕರ ಪರಿಚಯ ಲೇಖನಗಳ ಸಂಗ್ರಹ)
ನಮ್ಮ ಸಮಾಜವಾದಿಗಳು (ಸಮಾಜವಾದಿ ನಾಯಕರ ಪರಿಚಯ ಲೇಖನಗಳು)
ಲೋಹಿಯಾ: ವ್ಯಕ್ತಿ–ವಿಚಾರ–ವಿಮರ್ಶೆ (ಲೋಹಿಯಾ ಕುರಿತ ಅಧ್ಯಯನ)
ಕುವೆಂಪು: ಒಂದು ಪುನರನ್ವೇಷಣೆ (ಶತಮಾನೋತ್ಸವ ಸಂಪುಟ)
ಆ ಗಣರಾಜ್ಯ ಈ ಕರ್ನಾಟಕ (ಸುವರ್ಣ ಕರ್ನಾಟಕ ಸಂಪುಟ)
ಮಲೆಗಳಲ್ಲಿ ಮದುಮಗಳು–೫೦ (ಕಾದಂಬರಿಯ ಅರ್ಧ ಶತಮಾನೋತ್ಸವ ಸಂಪುಟ)
ಒಲವು (ಅಂತರ್ಜಾತಿ ವಿವಾಹಿತರ ಮೊದಲ ಸಮಾವೇಶದ ಸ್ಮರಣ ಸಂಪುಟ)
'ಹೊಸ ಮನುಷ್ಯ' ಮಾಸಿಕ (ಸಮಾಜವಾದಿ ಚಿಂತನೆಯ ನಿಯತಕಾಲಿಕ)

ಸಹ ಸಂಪಾದನೆ:

ಕಾಡಿನ ಹುಡುಗ ಕೃಷ್ಣ (ಶ್ರೀಕೃಷ್ಣ ಆಲನಹಳ್ಳಿ ನೆನಪಿನ ಸಂಪುಟ)
ಮಾಸ್ತಿ ಸಾಹಿತ್ಯ: ಸಮಗ್ರ ದರ್ಶನ (ಶತಮಾನೋತ್ಸವ ಸಂಪುಟ)
ಹಣತೆ (ಡಾ. ಜಿ. ಎಸ್ ಶಿವರುದ್ರಪ್ಪ ಅಭಿನಂದನ ಗ್ರಂಥ)
ಉರಿದ ಪಂಜು (ಕೆ. ರಾಮದಾಸ್ ಸ್ಮರಣ ಸಂಪುಟ)
ನಮ್ಮ ಶಾಮಣ್ಣ (ಕಡಿದಾಳು ಶಾಮಣ್ಣ ಗೌರವ ಗ್ರಂಥ)
ಸಾಹಿತ್ಯ ಸಂವಾದ (ಸಾಹಿತ್ಯ ದ್ವೈಮಾಸಿಕ)

ಅನುವಾದ:

ಜೆಪಿ ಸೆರೆಮನೆ ದಿನಚರಿ

ಡಿ.ಎಸ್. ನಾಗಭೂಷಣ ಅವರ ಸಂಕ್ಷಿಪ್ತ ಪರಿಚಯ
(೧.೨.೧೯೫೨ - ೧೯.೫.೨೦೨೨)

ಪ್ರಾಥಮಿಕ ಶಾಲಾ ಮಾಸ್ತರಾಗಿದ್ದ ಶ್ರೀ ಸಿ. ಎಚ್. ಸೂರಾಚಾರ್ ಮತ್ತು ಶ್ರೀಮತಿ ಗೌರಮ್ಮ ದಂಪತಿಗಳ ಎರಡನೆಯ ಮಗನಾಗಿ ೧೯೫೨ರ ಫೆಬ್ರುವರಿ ಒಂದರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ತಿಮ್ಮಸಂದ್ರ ಗ್ರಾಮದಲ್ಲಿ ಜನಿಸಿದ ಡಿ.ಎಸ್. ನಾಗಭೂಷಣ ಅವರು ತಮ್ಮ ಶಾಲಾ ಶಿಕ್ಷಣವನ್ನು ಪೂರೈಸಿದ್ದು ನೆಲಮಂಗಲ ತಾಲ್ಲೂಕಿನ ತ್ಯಾಮಗೊಂಡ್ಲುವಿನಲ್ಲಿ.

ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಗಣಿತಶಾಸ್ತ್ರದಲ್ಲಿ ಆನರ್ಸ್ ಮತ್ತು ಸ್ನಾತಕೋತ್ತರ ಪದವಿಗಳನ್ನು ಪಡೆದ ನಾಗಭೂಷಣ ಅವರು ೧೯೭೪ ರಲ್ಲಿ ದೆಹಲಿ ಆಕಾಶವಾಣಿ ವಾರ್ತಾವಿಭಾಗದಲ್ಲಿ ತಮ್ಮ ವೃತ್ತಿಜೀವನ ಆರಂಭಿಸಿದರು. ನಂತರ ಸತತವಾಗಿ ಆ ಸಂಸ್ಥೆಯಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ ಮೈಸೂರು ಆಕಾಶವಾಣಿ ಕೇಂದ್ರದಲ್ಲಿ ನಿಲಯ ನಿರ್ದೇಶಕರಾಗಿದ್ದಾಗ ೨೦೦೫ ರಲ್ಲಿ ಸ್ವಯಂ ನಿವೃತ್ತಿ ಪಡೆದರು. ಇವರ ಪತ್ನಿ ಸವಿತಾ ನಾಗಭೂಷಣ ಅವರು ಕನ್ನಡದ ಚಿರಪರಿಚಿತ ಕವಯತ್ರಿಯಾಗಿದ್ದಾರೆ.

ನಾಡಿನ ಹಿರಿಯ ಸಾಹಿತ್ಯ ವಿಮರ್ಶಕರೂ, ಸಮಾಜವಾದಿ ಚಿಂತಕರೂ ಆದ ಡಿ.ಎಸ್.ನಾಗಭೂಷಣ ಅವರು ೪೦ಕ್ಕೂ ಮೀರಿ ಕೃತಿಗಳನ್ನು ರಚಿಸಿರುವರು. ೧೫ ಕೃತಿಗಳ ಸಂಪಾದಕರು/ಸಹ ಸಂಪಾದಕರು ಆಗಿರುವರು. ಜೆ.ಪಿ. ಸೆರೆಮನೆ ದಿನಚರಿಯನ್ನು ಅನುವಾದಿಸಿರುವರು. ಹಾಗೂ 'ಹೊಸ ಮನುಷ್ಯ' ಎಂಬ ಸಮಾಜವಾದಿ – ಸಾಂಸ್ಕೃತಿಕ ಚಿಂತನೆಯ ಮಾಸಿಕ ಪತ್ರಿಕೆಯನ್ನು ಹತ್ತು ವರ್ಷಗಳ ಕಾಲ ಸಂಪಾದಿಸಿ ಪ್ರಕಟಿಸಿರುವರು. ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ(ರಿ)ವನ್ನು ಸ್ಥಾಪಿಸಿ, ಹತ್ತು ವರ್ಷಗಳ ಕಾಲ ಅದರ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುವರು.

ಡಿ.ಎಸ್. ನಾಗಭೂಷಣ ಅವರ 'ಗಾಂಧಿ ಕಥನ' ಕೃತಿ ೨೦೨೧ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನವಾಗಿದೆ. ಇವರ ಕುವೆಂಪು ಸಾಹಿತ್ಯ ದರ್ಶನ ಕೃತಿ ೨೦೦೭ರ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಪುರಸ್ಕಾರ ಪಡೆದಿದೆ. ಜಿಎಸ್ ಶಿವರುದ್ರಪ್ಪ ಪ್ರತಿಷ್ಠಾನ ಪ್ರಶಸ್ತಿ (೨೦೧೮), ಎಸ್.ವಿ.ಪರಮೇಶ್ವರ ಭಟ್ಟ ಪ್ರಶಸ್ತಿ (೨೦೧೯)ಗಳು ಇವರಿಗೆ ಸಂದಿವೆ. ತ್ಯಾಮಗೊಂಡ್ಲುವಿನಲ್ಲಿ ಆಯೋಜಿಸಲಾಗಿದ್ದ ನೆಲಮಂಗಲ ತಾಲ್ಲೂಕು ಹತ್ತನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀಯುತರು ಕರ್ನಾಟಕ ಸರ್ಕಾರವು ಕಳೆದ ರಾಜ್ಯೋತ್ಸವ ಸಂದರ್ಭದಲ್ಲಿ ಪ್ರಕಟಿಸಿದ ಪ್ರತಿಷ್ಠಿತ ರಾಜ್ಯೋತ್ಸವ ಪ್ರಶಸ್ತಿಯನ್ನು ಸ್ವೀಕರಿಸಲು ನಿರಾಕರಿಸಿದ್ದನ್ನೂ ಇಲ್ಲಿ ಸ್ಮರಿಸಬಹುದು. ರಾಜ್ಯ ಸರ್ಕಾರ ಕರ್ನಾಟಕದಲ್ಲಿ ಎಲ್ಲ ಮಕ್ಕಳಿಗೆ ಸಮಾನ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತರುವುದರ ಭಾಗವಾಗಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಕನ್ನಡದಲ್ಲಿ ಒದಗಿಸುವ ವಿಷಯದಲ್ಲಿ ಔದಾಸೀನ್ಯ ತೋರುತ್ತಿದೆ ಎಂಬ ಕಾರಣಕ್ಕೆ ಇವರು ಈ ಪ್ರಶಸ್ತಿಯನ್ನು ಸ್ವೀಕರಿಸಲು ನಿರಾಕರಿಸಿದ್ದರು.

ಹೊಂರ್ಯ— ದಂಡಿಸಿ ಅವರನ್ನ.....

ನಾ ಬಂದಿಲ್ಲ ಅವರು ಹತರಾದ ಕಥೆ ಅಳಲೆಂದು,
ಬಂದಿರುವೆ ಬದುಕುಳಿದಿರುವ ನಿಮ್ಮೆಲ್ಲರೊಂದಿಗೆ ಮಾತಾಡಲೆಂದು.
ನಾ ಮಾತಾಡುವೆ ನಿಮ್ಮೊಂದಿಗೆ. ನನ್ನೊಂದಿಗೆ.

ಹಿಂದೆ, ಇವರಿಗಿಂತ ಹಿಂದೆ ಅವರೆಲ್ಲ ಸತ್ತದ್ದನ್ನು, ನೆನಪಿದೆ ತಾನೆ?
ಹೌದು, ನೀವು ಮರೆಯುವಿರಾ?
ಅವರೆಲ್ಲ ಇವರಂತಹವರೇ, ನಿಮ್ಮಂತಹವರೇ, ನಿಮ್ಮ ಕುಲದವರೇ.
ಮಳೆ ಹಿಡಿದ ಬ್ಲಾಂಕಮೆನಲ್ಲಿ, ಸಾನ್‌ಕ್ರೀಗೋರಿನಲ್ಲಿ,
ಬಂಜರು ರಾಂಚಲ್‌ನಲ್ಲಿ, ರಾಜ್ಯದ ಬಿರುಗಾಳಿಗೆ ಬಲಿಯಾದವರು,
ಇತ್ತೀಚಿನ ಎಲ್ಲವ ಮರ್ಯಾಡಿಯಲ್ಲಿ ಉಸಿರುಕಟ್ಟಿಕೊಂಡವರು,
ಅಧ್ವಾಂಬದ್ಧ ಹೊತ್ತು ಹೋದವರು:
ಕಡಲ ತಡಿಯುದ್ದಕ್ಕೂ, ಮರಳುಗಾಡಿನ ನಡಿಯುದ್ದಕ್ಕೂ
ಹೊಗೆಯುಗುಳು ರೈಲು ಹಾದಿನ ಬದಿಯಲ್ಲೇ
ಕುರುಚಲು ನೆಲದ ನಡುವಿಂದ ನಡುಗಡ್ಡೆಗಳವರೆಗೆ
ನಡೆದು ಹೋದವರು ಕೊಲೆಯಾದರಲ್ಲೇ.....

ನಿಮ್ಮದೇ ಹೆಸರಿನೋರು, ಅಂಥನಿಯೋ ಮುಂತಾಗಿ
ಹೆಸರಿಟ್ಟುಕೊಂಡೋರು,
ಮೀನುಗಾರರು, ಕಮ್ಮಾರರು, ನಿಮ್ಮಂತೆ ದುಡಿಯುತ್ತಿದ್ದೋರು;
ಚಿಲಿಯ ಮೂಳೆ, ಚಿಲಿಯ ಮಾಂಸ: ಆ ಮುಖಗಳು.
ಗಾಳಿ ಹೊಡೆತಕ್ಕೆ ಸಿಕ್ಕ ಕರಗಾದ ಆ ಮುಖಗಳು.
ಕುರುಚಲು ನೆಲದ ಹಾಗೆ ಬಳಚಿಕೊಂಡವುಗಳು,
ನೋವಿನ ದಟ್ಟ ಹೊಮ್ಮ ಮುಖಗಳು.

ನನ್ನ ಜನರೇ, ಇಲ್ಲೇ ಅಲ್ಲವೇ ನೀವು
ಆ ಕುರುಚಲ ಸೀಮೆಯ ಕುಗ್ಗದ ಗ್ರಾಮೀಣರಂಗೆ ಒಗ್ಗಿಬಿದ್ದು;
ಗಂಡಸು, ಹೆಂಗಸು, ಮಕ್ಕಳು – ಎಲ್ಲರನ್ನ ಕರೆದದ್ದು
ಈ ಚಾಕಕ್ಕೆ, ಒಂದು ವರ್ಷದ ಕೆಲಸಕ್ಕೆ.

ಇಲ್ಲ, ಇಲ್ಲೇ ಅಲ್ಲವೇ ನಿಮ್ಮ ರಕ್ತದ ಕಾಲುವೆ ಹರಿದಿದ್ದು,
ನಾಡಿನ ನಡುಮಧ್ಯವೇ ನಿಮ್ಮ ರಕ್ತ ಚೆಲ್ಲಿದ್ದು –
ಅರಮನೆಯ ಮುಂದೆ, ಕಾಲಬೀದಿಯ ನಡುವೆ
– ಜಗತ್ತು ನೋಡಲಿ ಎಂದು.
ಯಾರು ಒರೆಸಿಹಾಕಬಲ್ಲರು ಇದನ್ನೆಲ್ಲಾ:
ನಿಮ್ಮ ಕೆಂಪು ಕಲೆಗಳು ಇನ್ನೂ ಉಳಿದಿವೆಯಲ್ಲಾ
ಉರಿಯುತ್ತ, ಸೇಡಿಗಾಗಿ ಕಾಯುತ್ತ ನಕ್ಷತ್ರಗಳ ಹಾಗೆ

ಚಿಲಿಯ ಕೈಗಳು ಒಂದರ ಹಿಂದೊಂದು
ಕುರುಚಲ ನೆಲದೆಡೆಗೆ ಬೊಟ್ಟು ಮಾಡುತ್ತಿದ್ದಾಗ,
'ಒಗ್ಗಟ್ಟಾಗಿ' ಎಂದು ಕೂಗಿಹೇಳುವ ಘೋಷಗಳು ನಿಮ್ಮ
ಹೃದಯದಿಂದೆದ್ದು ಬರುತ್ತಿದ್ದಾಗ,

ಜನರೇ, ನನ್ನ ಜನರೇ, ನಿಮ್ಮ ಚೌಕದಲ್ಲೇ ನೀವು
ಮೆರವಣಿಗೆ ಹೊರಟಿದ್ದಾಗ
ಕಂಬನಿ, ಅಳಲು, ನೋವುಗಳು ತುಂಬಿದ ಈ ಮಬ್ಬುಗಳ ಹಾಡುತ್ತ,
ಆಗಲೇ ಆಗಲೇ ಈ ಹಂತಕರು
ಚೌಕವನ್ನು ತುಂಬಿದ್ದು ರಕ್ತದಿಂದ.

ಡಿ ಎಸ್ ನಾಗಭೂಷಣ

(ಪಾಬ್ಲೊ ನೆರುಡ ಅವರ ಕವಿತೆಯ ಅನುವಾದ –
ಡಿ.ಎಸ್. ನಾಗಭೂಷಣ ಹಸ್ತಾಕ್ಷರದಲ್ಲಿ)

ಡಿ.ಎಸ್.ಎನ್. ಬಳಗದ ಛಾಯಚಿತ್ರಗಳು



ತಂದೆ, ತಾಯಿ, ಅಣ್ಣ, ಅತ್ತಿಗೆ ಮತ್ತು ಇಬ್ಬರು ತಂಗಿಯರೊಂದಿಗೆ ಡಿಎಸ್ಸೆನ್.



ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ 'ಗಾಂಧಿ ಕಥನ' ಪುಸ್ತಕದ ಮೊದಲ ಮುದ್ರಣದ ಬಿಡುಗಡೆ ಸಮಾರಂಭ



'ಗಾಂಧಿ ಕಥನ'ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದ ಸಂದರ್ಭದಲ್ಲಿ
ಶಿವಮೊಗ್ಗದ ಕರ್ನಾಟಕ ಸಂಘದಿಂದ ಅಭಿನಂದನಾ ಸಮಾರಂಭ



ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಾಂಧಿ ಕಥನಕ್ಕೆ ಬಂದಾಗ ಡಿ.ಆರ್. ಪಾಟೀಲ್, ಎಂ.ಸಿ. ನರೇಂದ್ರ,
ಜಿ.ಬಿ. ಶಿವರಾಜು, ಗದುಗಿನ ಗಾಂಧಿ ಬಳಗ ನಾಗಭೂಷಣ ಅವರನ್ನು ಮನೆಗೆ ಬಂದು ಅಭಿನಂದಿಸಿದ ಸಂದರ್ಭ.




'ಗಾಂಧಿ ಕಥನ'ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದ ಸಂದರ್ಭದಲ್ಲಿ
ಶಿವಮೊಗ್ಗದ ಸ್ನೇಹ ಬಳಗದಿಂದ ಅಭಿನಂದನಾ ಸಮಾರಂಭ



'ಹೊಸ ಮನುಷ್ಯ' ಬಳಗದಿಂದ ಪತ್ರಿಕೆಯ ಕಟ್ಟಕಡೆಯ ಸಂಚಿಕೆಯನ್ನು ಅಂಚೆಗೆ ಕಳಿಸುವ ತಯಾರಿ

ಗಾಂಧಿ ಚಿತ್ರಸಂಪುಟ






ಮಹಾತ್ಮ ಗಾಂಧಿಯವರ ತಂದೆ
ಕರಮಚಂದ ಗಾಂಧಿ



ಮಹಾತ್ಮ ಗಾಂಧಿಯವರ ತಾಯಿ
ಪುತಲೀಬಾಯಿ



ಬಾಲಕ ಗಾಂಧಿ



ಯುವಕ ಗಾಂಧಿ



ಗಾಂಧಿ ದಂಪತಿ



ನಾಲ್ಕೂ ಮಕ್ಕಳೊಂದಿಗೆ ಕಸ್ತೂರಬಾ



ದ.ಆಫ್ರಿಕಾದಲ್ಲಿ ರಹದಾರಿ ಪತ್ರಗಳ ವಿರುದ್ಧ ಮೊದಲ ಸತ್ಯಾಗ್ರಹ (1906)



ಟಾಲ್‌ಸ್ಟಾಯ್ ಆಶ್ರಮದಲ್ಲಿ ಪೊಲಾಕ್, ಕಲೆನ್‌ಬಾಕ್ ಮತ್ತು ಇತರರೊಂದಿಗೆ ಗಾಂಧಿ



ಆಪ್ತ ಕಾರ್ಯದರ್ಶಿ ಶ್ಲೇಷಿನ್ ಮತ್ತು ಆಪ್ತ ಗೆಳೆಯ ಕಲೆನ್‌ಬಾಕ್‌ರೊಂದಿಗೆ ಗಾಂಧಿ



ದ.ಆಫ್ರಿಕಾದಲ್ಲಿ ಗೋಖಲೆಯವರೊಂದಿಗೆ ಗಾಂಧಿ ಮತ್ತು ಸಂಗಡಿಗರು (1912)



ದ.ಆಫ್ರಿಕಾದಲ್ಲಿ ಅಂತಿಮ ವಿಜಯದತ್ತ ಮಹಾಯಾತ್ರೆ



ಭಾರತದಲ್ಲಿ ಗಾಂಧಿ ದಂಪತಿ (1915)



ಚಂಪಾರಣ್ ರೈತರ ಮಧ್ಯೆ ಗಾಂಧಿ



ಸಬರಮತಿ ಆಶ್ರಮದಲ್ಲಿ ಗಾಂಧಿ



ಸರಳಾದೇವಿ ಚೌಧುರಾಣಿ



ಟ್ಯಾಗೋರರೊಂದಿಗೆ ಗಾಂಧಿ



ಗಾಂಧೀಜಿಯ ದಂಡಿಯಾತ್ರೆ



ಮಹದೇವ ದೇಸಾಯಿಯೊಂದಿಗೆ ಗಾಂಧೀಜಿ



ಮೀರಾ ಬೆನ್‌ರೊಂದಿಗೆ ಗಾಂಧಿ



ನೆಹರು, ಪಟೇಲ್, ಗಫಾರ್ ಖಾನ್, ಆಜಾದ್‌ರೊಂದಿಗೆ ಗಾಂಧಿ



ದುಂಡುಮೇಜಿನ ಪರಿಷತ್ತಿನಲ್ಲಿ ಅಂಬೇಡ್ಕರ್‌ರೊಂದಿಗೆ (ಎದುರಿನ ಸಾಲಿನಲ್ಲಿ) ಗಾಂಧಿ




ಲಂಡನ್‌ನಲ್ಲಿ ಚಾರ್ಲಿ ಚಾಪ್ಲಿನ್ ಮತ್ತಿತರರೊಂದಿಗೆ ಗಾಂಧಿ, ಸರೋಜಿನಿ ನಾಯ್ಡು, ಅಮೃತಾ ಕೌರ್



ಲಾಂಕಶೈರ್ ಹತ್ತಿ ಗಿರಣಿಗಳ ಮಹಿಳಾ ಕಾರ್ಮಿಕರ ನಡುವೆ ಗಾಂಧಿ



ರಾಜಾಜಿಯವರೊಂದಿಗೆ ಗಾಂಧಿ



ವಾಯುವ್ಯ ಗಡಿ ಪ್ರಾಂತ್ಯದಲ್ಲಿ ಖಾನ್ ಸಹೋದರರು ಮತ್ತು
ಇತರ ಪಠಾಣರ ಸಭೆಯಲ್ಲಿ ಗಾಂಧಿ




ಕಾಂಗ್ರೆಸ್ ಅಧಿವೇಶನದಲ್ಲಿ ಸುಭಾಷರೊಂದಿಗೆ ಗಾಂಧಿ




ಗಾಂಧಿಯವರೊಂದಿಗೆ ಲೋಹಿಯಾ



ನೌಖಾಲಿಯಲ್ಲಿ ಒಂಟಿ ಪಯಣಿಗ



ಮಹಮ್ಮದಾಲಿ
ಜಿನ್ನಾ
ಅವರೊಂದಿಗೆ
ಗಾಂಧಿ



ಮನು
ಮತ್ತು
ಅಭಾರೊಂದಿಗೆ
ಗಾಂಧಿ



ರಾಜೇಂದ್ರ
ಪ್ರಸಾದರೊಂದಿಗೆ
ಗಾಂಧಿ



ಅಮೃತಾ ಕೌರ್, ಸುಶೀಲಾ ನಯ್ಯರ್ ಮತ್ತು ಪ್ಯಾರೇಲಾಲ್ ಅವರೊಂದಿಗೆ ಗಾಂಧಿ



ಹೇ! ರಾಮ್!!



ಗಾಂಧಿ ಅಂತಿಮ ದರ್ಶನಕ್ಕಾಗಿ ಸೇರಿದ್ದ ಜನಸ್ತೋಮ

ಗಾಂಧಿಯವರ ನಾಲ್ವರು ಮಕ್ಕಳು



ಹರಿಲಾಲ್ ಗಾಂಧಿ




ಮಣಿಲಾಲ್ ಗಾಂಧಿ



ರಾಮದಾಸ್ ಗಾಂಧಿ



ದೇವದಾಸ್ ಗಾಂಧಿ



ಇಂತಹ ಒಂದು ಚೈತನ್ಯ ದೇಹಧಾರಿಯಾಗಿ ಈ ಭೂಮಿಯ ಮೇಲೆ ನಡೆದಾಡಿತ್ತು ಎಂದು ಮುಂದಿನ ಜನಾಂಗ ನಂಬಲಾರದಂತಹ ವ್ಯಕ್ತಿ.

– ಆಲ್ಬರ್ಟ್ ಐನ್‌ಸ್ಟಿನ್

ಗಾಂಧಿ ಈ ಜಗತ್ತಿನ ಜೀವಸತ್ವ, ಅವರಿಲ್ಲದ ಜಗತ್ತು ಉಳಿಯದು.

– ಮಾರ್ಟಿನ್ ಲೂಥರ್ ಕಿಂಗ್

ದುಃಖಭರಿತ ಜಗತ್ತಿಗೆ ಸುಖ ಶಾಂತಿಗಳ ಭರವಸೆಯ ಪ್ರತಿರೂಪತಾದವರು.

– ಪರ್ಲ್ ಎಸ್.ಬಕ್

ಬಹುಶಃ ಬುದ್ಧನ ನಂತರ ಜಗತ್ತು ಕಂಡ ಅಪೂರ್ವ ವ್ಯಕ್ತಿ.

– ಜಾನ್ ಗುಂಥರ್

ಅವರನ್ನು ಮೊದಲ ಬಾರಿಗೆ ಕಂಡಾಗ ಅವರು ನನಗೆ ಜ್ಯೋತಿಯಂತೆ ಕಂಡರು.

– ಮೆಡಿಲಿನಾ ಸ್ಲೇಡ್ (ಮೀರಾಬೆನ್)

ದೀನ ದಲಿತರ ಗುಡಿಸಲುಗಳ ಮುಂದೆ ತಲೆಬಾಗಿ ನಿಂತ ಮಹಾತ್ಮನೀತ.

– ರವೀಂದ್ರನಾಥ ಟ್ಯಾಗೋರ್

ದೇವರು ಮತ್ತು ಹೆಣ್ಣು ಇವರೆಡರ ಮಿಂಚುಗಳು ಒಟ್ಟಿಗೆ ಪ್ರಕಾಶಿಸುತ್ತಿದ್ದ ಮನುಷ್ಯ.

– ರಾಮಮನೋಹರ ಲೋಹಿಯಾ

ಗಾಂಧಿಯವರ ಸಮಸ್ಯೆ ಎಂದರೆ ಅವರು ಪೂರ್ಣ ಸತ್ಯವನ್ನು ಹೇಳುತ್ತಾರೆ. ಅದನ್ನು ತಡೆದುಕೊಳ್ಳುವ ಶಕ್ತಿ ಸಮಾಜಕ್ಕೆ ಇಲ್ಲ.

– ಡಾ.ಬಿ.ಆರ್. ಅಂಬೇಡ್ಕರ್



Gandhi, a man who cannot be killed.

ಯಾಕೆಂದರೆ, ಅವರು ನಿತ್ಯ ಸತ್ಯಗಳನ್ನು ಹೇಳಿದರು. ಅವರ ಜೀವನದ ಮುಖ್ಯ ಉದ್ದೇಶವೇ ಅವರೇ ಹೇಳಿಕೊಂಡ ಹಾಗೆ 'ಸತ್ಯಾನ್ವೇಷಣೆ'. **`Seeking truth'**, **`Truth** ಅಂದ್ರೆ ಏನು?' ಅಂತ ಒಬ್ಬರು ಅವರನ್ನು ಒಂದು ಸಲ ಕೇಳಿದ್ರು. ಆಗ ಗಾಂಧಿ 'ನಿನ್ನ ನಿರ್ಮಲ ಮನಸ್ಸು ಏನು ಹೇಳುತ್ತೋ ಆತ್ಮಸಾಕ್ಷಿ ಏನು ಹೇಳುತ್ತೋ- ನೀನು ಒಬ್ಬನೇ ಇದ್ದಾಗ ನೀನು ಕೇಳಿಕೊಂಡಾಗ ಏನು ಒಳಗಡೆ ಉತ್ತರ ಸಿಗುತ್ತೋ ಅದೇ ಸತ್ಯ' ಅಂದ್ರು. 'ನಿನ್ನ ಒಳಮನಸ್ಸಲ್ಲಿ ಎರಡು ಮೂರು ಸತ್ಯ ಇದ್ದಾಗ ಏನು ಮಾಡುತ್ತೀರಿ ನೀವು?' ಅಂತ ಪ್ರಶ್ನೆ ಕೇಳಿದ್ರು ಅದಕ್ಕೆ ಅವರು 'ಯಾವುದು ಅಹಿಂಸೆಯ ಜೊತೆಯಲ್ಲಿರುತ್ತದೆ, ಅದು ಸತ್ಯ' ಅಂತ ಅಂದ್ರು. ಆ ಕಾರಣದಿಂದಾಗಿ ಅಹಿಂಸೆ ಮತ್ತು ಸತ್ಯ ಇದೆಯಲ್ಲ. ಅದೂ ಗಾಂಧಿಯವರ ಭಾಷೆಯಲ್ಲಿ ಹೇಳೋದಾದ್ರೆ ಪರ್ವತ ಸಾಗರದಷ್ಟೆ ಪುರಾತನ, ಅದು ಪುರಾತನದ ಬಗ್ಗೆ ಹೇಳುತ್ತಾ ಇರುವ ಮಾತಲ್ಲ, ಸಾಗರ ಮತ್ತು ಪರ್ವತ ಎರಡೂ ಒಟ್ಟಿಗೆ ಇರುವಂತಹ ಶಕ್ತಿ ಕೊಟ್ಟಿರುವುದು ಇದೆಯಲ್ಲ, ಪರ್ವತದಲ್ಲಿ ಸಾಗರವು ಕೂಡ ಇದೆಯಲ್ಲ, ಎರಡು ಒಟ್ಟಿಗೆ ಇದೆಯಲ್ಲ ಸಹನೆ. ಸಹನೆ ಅಂದ್ರೆ ಅಹಿಂಸೆ ಕೂಡ. ಅಹಿಂಸೆಗೆ ಹಲವಾರು ಅರ್ಥಗಳಿವೆ. ಅದು ಇವತ್ತು ಬೇಕಾಗಿದೆ. ಬುದ್ಧ ಹೇಳಿದ ಕರುಣಾ ಕೂಡ ಅದೇನೆ. ಕರುಣಾ ಅಂದ್ರೆ ಎಲ್ಲವನ್ನು ಒಟ್ಟಿಗೆ ನೋಡುವ ಒಂದು ದೃಷ್ಟಿಕೋನ. ಕರುಣೆ ಅಲ್ಲ ಅದು- **not looking down upon** ಕರುಣೆ ಅಲ್ಲ-ಕರುಣಾ ಅದು. ಕರುಣಾ **is different from** ಕರುಣೆ. ಅದನ್ನು ತಿಳ್ಕೋಬೇಕು. ಆದ್ದರಿಂದ ಎಲ್ಲಿಯವರೆಗೆ ಜಗತ್ತು ಅವಿಭಾಜ್ಯವಾಗಿರುವುದಕ್ಕೆ ತುಡಿಯುತ್ತಾ ಇರುತ್ತದೆಯೋ, ಸತ್ಯ ಮತ್ತು ಅಹಿಂಸೆಯ ಮೂಲಕ ಅಲ್ಲಿಯವರೆಗೆ ಗಾಂಧಿ ಇರ್ತಾರೆ. ಬದುಕು ನಿಂತಿರೋದೇ, ಜಗತ್ತು ನಿಂತಿರೋದೇ ಅದರ ಮೇಲೆ. ಆದ್ದರಿಂದ **Gandhi cannot be killed**. ನಾವು ತಾತ್ಕಾಲಿಕವಾಗಿ ಸಣ್ಣಪುಟ್ಟ ಲಾಭ-ಉದ್ದೇಶಗಳಿಗೋಸ್ಕರ, ಸಣ್ಣ ರಾಜಕಾರಣಕ್ಕೋಸ್ಕರ ಹೊಡೆದಾಡಿಕೊಂಡು ಗಾಂಧಿಯನ್ನು ತುಂಬಾ ಸಣ್ಣಕಣ್ಣುಗಳಿಂದ- ಮನಸ್ಸಿಂದ ನೋಡ್ತಾ ಇದೀವಿ. ಅದಷ್ಟೇ ಪ್ರಾಬ್ಲಂ. ನೀವು ಮೆಚ್ಯೂರ್ ಆದ್ಹಂಗೆ, ಮಾಗಿದ ಹಾಗೆ ಗಾಂಧಿ ನಿಮಗೆ ಹತ್ತಿರವಾಗುತ್ತಾರೆ. ಆ ವಿಶ್ವಾಸವಂತೂ ನನಗಿದೆ.

-ಡಿ.ಎಸ್. ನಾಗಭೂಷಣ

(ಸಂದರ್ಶನವೊಂದರಲ್ಲಿ ಆಡಿದ ಮಾತುಗಳು)

₹ 450/-

ಎಂ. ಮೂನಿಸ್ವಾಮಿ ಅಂಡ್ ಸನ್ಸ್
ಪುಸ್ತಕ ಪ್ರಕಾಶಕರು ಮತ್ತು ವಿತರಕರು
ಬಸವನಗುಡಿ, ಬೆಂಗಳೂರು – 560 004.